ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ

ಮಹಾಭಾರತತಾತ್ಪರ್ಯನಿರ್ಣಯ

(ಸಂಸ್ಕೃತಮೂಲ, ಕನ್ನಡ ಅನುವಾದ, ವಿವರಣೆ ಹಾಗೂ
ಟಿಪ್ಪಣಿಗಳಲ್ಲಿನ ವಿಶೇಷಾಂಶಗಳೊಂದಿಗೆ)

ಸಂಪುಟ - ೨

(ಅಧ್ಯಾಯ : ೧೦೮ರಿಂದ ೧೭೮ರವರೆಗೆ)



ಸಂಪಾದನೆ, ಅನುವಾದ, ವಿವರಣೆ:

ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ

ಪ್ರಕಾಶಕರು:

ಶ್ರೀವ್ಯಾಸಮಧ್ವ ಸಂಶೋಧನ ಪ್ರತಿಷ್ಠಾನ

'ಪಾಜಕ', ನಂ. 67, 50 ಅಡಿ ರಸ್ತೆ, ಹನುಮಂತನಗರ,
ಬೆಂಗಳೂರು - 560 019.

Śrīmadānandatīrthabhagavatpāda-praṇīta MAHĀBHĀRATATĀTPARYANIRṆAYA (Volume 2 : Adhyāya 10 to 17) — critically edited with Kannada rendering, explanatory notes and extracts from various Sanskrit Glosses — by Vidyāvācaspati, Darśanaratnam, Sacchāstravicakṣaṇaratnam, Pravacanācārya, Śāstrapravacanakesari, Madhvamatavardhana, Vidvaccūḍāmaṇi, Vedavidyāvicakṣaṇa, Paṇḍitaratnam, Vidyāvāridhi, Sacchāstrapravacanapraviṇa, Gītāratnākara, Tattvavācaspati, Jnānaratnākara (and Recipient of Karnataka State Sanskrit Award-1999 & Karnataka Rajyotsava Award-2002 and Śrī Vidyāmānya-Mahāpraśasti of Śrī Pejavar Mutt, Udupi) **Dr.Vyasanakere Prabhanjanacharya**, M.A., Ph.D., D.Litt., F.I.B.R., F.U.W.A., Principal (Rtd.), Govt. First Grade College, K.R.Puram, Bangalore and Published by **Aitareya Prakāśana Vyasanakere**, Publication wing of **Śrī VyāsaMadhva Samśodhana Pratiṣṭhāna** "Pajaka",No.67, Fifty Feet Road, Hanumanthanagar, Bangalore - 560019.

Phone : 2660 2802
2662 2345

Internet : www.vyasamadhwa.org

E-mail : info@vyasamadhwa.org

First Edition : 2004
Pages : 720 (xxxii+678+10)

© Dr. Vyasanakere Prabhanjanacharya

Typeset by :
Rayiprāṇa Impressions and
Śrī VyāsaMadhva Samśodhana Pratiṣṭhāna

Printed at :
Rāṣṭrotthāna Mudraṇālaya,
Bangalore -19.

ವಿಷಯ ಸೂಚೀ

ಮುನ್ನುಡಿ xxi-xxxii

ಮಹಾಭಾರತತಾತ್ಪರ್ಯನಿರ್ಣಯ ೧ – ೬೭೮
(ಅಧ್ಯಾಯ ೧೦ ರಿಂದ ೧೭)

ಅಧ್ಯಾಯ – ೧೦ (ಶ್ರೀವೇದವ್ಯಾಸಾವತಾರನಿರೂಪಣ) ೧ – ೭೧
(ಸಮುದ್ರಮಥನ, ಶ್ರೀವ್ಯಾಸಾವತಾರ, ವೇದವಿಭಾಗ ಇತ್ಯಾದಿ)

ವ್ಯಾಸಾವತಾರಕ್ಕಾಗಿ ದೇವತೆಗಳ ಪ್ರಾರ್ಥನೆ (ಶ್ಲೋಕ ೧) ೧
ದುರ್ವಾಸರ ಶಾಪದಿಂದ ಇಂದ್ರನ ಐಶ್ವರ್ಯನಾಶ (೪) ೩
ಮಂದರೋದ್ಧಾರ (೫) ೪
ಕ್ಷೀರಸಮುದ್ರಮಥನ (೯) ೭
ಶ್ರೀಹರಿಯ ಕೂರ್ಮಾವತಾರ (೧೧) ೧೦
ಅಜಿತರೂಪದಿಂದ ಸಮುದ್ರಮಥನ (೧೨) ೧೧
ಕಾಲಕೂಟದ ಉತ್ಪತ್ತಿ (೧೩) ೧೨
ನೀಲಕಂಠನೆನ್ನಿಸಿದ ಶಿವ (೧೫) ೧೪
ಶ್ರೀವಾಯುದೇವರಿಂದ ಕಾಲಕೂಟಪಾನ (೧೬) ೧೫
ಉಚ್ಚೈಃಶ್ರವಸ್ ಹಾಗೂ ಐರಾವತಾದಿಗಳ ಜನ್ಮ (೧೯) ೧೮
ಮಹಾಲಕ್ಷ್ಮಿ ಹಾಗೂ ಧನ್ವಂತರಿಯ ಪ್ರಾದುರ್ಭಾವ (೨೧) ೨೦
ಅಸುರರಿಂದ ಅಮೃತದ ಅಪಹರಣ (೨೨) ೨೧
ಶ್ರೀಹರಿಯ ಮೋಹಿನೀರೂಪ (೨೩) ೨೨
ರಾಹುವಿನ ಶಿರ ಹೋಯಿತು (೨೯) ೨೮
ರಾಹುಗ್ರಹದ ವಿವರ (೩೧) ೩೦
ಕಲಿಯ ಪ್ರಭಾವ (೩೨) ೩೧
ಅಮೃತಪ್ರಾಶನಪ್ರಸಂಗದ ಆಂತರ್ಯ (೩೪) ೩೩
ಕಲಿಯಿಂದಾದ ತತ್ತ್ವವಿಪ್ಲವ (೩೬) ೩೫

ದೇವತಾಪ್ರಾರ್ಥನೆಯ ಪರಿಸಮಾಪ್ತಿ (೪೦) ೩೬
ಪರಾಶರಮುನಿಯ ಹಿನ್ನೆಲೆ (೪೨) ೩೮
ಸತ್ಯವತಿಯ ಪೂರ್ವಾಪರ (೪೩) ೩೮
ಪರಾಶರ-ಸತ್ಯವತಿ ಸಂಗಮ (೪೭) ೪೧
ಶ್ರೀವ್ಯಾಸಾವತಾರ (೪೮) ೪೩
ಶ್ರೀವೇದವ್ಯಾಸರ ವರ್ಣನೆ (೫೧) ೪೬
ವೇದವ್ಯಾಸರ ಉಪನಯನ ಹಾಗೂ ಅವರಿಂದ ವರಪ್ರದಾನ (೫೬) ೪೮
ವೇದೋದ್ಧಾರ, ಬ್ರಹ್ಮಸೂತ್ರಾದಿಶಾಸ್ತ್ರನಿರ್ಮಾಣ (೫೭) ೪೯
ಮಹಾಭಾರತ ರಚನೆ (೫೯) ೫೦
ಕಲಿಯ ವಿನಾಶ (೬೦) ೫೧
ಭಾಗವತ ರಚನೆ (೬೧) ೫೨
ಕಿರೀಟ ಹೊತ್ತ ಕೀಟ (೬೩) ೫೩
ಶ್ರೀವ್ಯಾಸವೈಭವ (೬೮) ೫೭
ಶ್ರೀಶುಕಮುನಿಯ ಅವತಾರ (೬೯) ೫೮
ಘೃತಾಚಿಯ ನಿಮಿತ್ತದಿಂದ ಶುಕಮುನಿಯ ಅವತಾರ (೭೧) ೫೯
ಪ್ರಮುಖ ವ್ಯಾಸಶಿಷ್ಯರು (೭೪) ೬೨
ಋಗಾದಿಶಾಸ್ತ್ರಗಳ ಪ್ರವರ್ತನೆ (೭೬) ೬೩
ಕರ್ಮಯೋಗಾದಿಪ್ರವರ್ತಕರು (೮೨) ೬೬
ಮೂರು ಬಗೆಯ ಪುರಾಣಗಳು (೮೪) ೬೮
ಶ್ರೀವೇದವ್ಯಾಸರ ಅನುಪಮಜ್ಞಾನಕಾರ್ಯ (೮೬) ೭೦

ಅಧ್ಯಾಯ - ೧೧ (ಶ್ರೀಭಗವದವತಾರಪ್ರತಿಜ್ಞಾನಮ್) ೭೨ - ೨೨೬
(ಶಂತನು ಭೀಷ್ಮರ ವೃತ್ತಾಂತ, ಧೃತರಾಷ್ಟ್ರಾದಿಗಳ ಜನನ ಇತ್ಯಾದಿ)

ಚಂದ್ರವಂಶದ ಪ್ರಮುಖರು (೧) ೭೨
ಕಾರ್ತವೀರ್ಯಾರ್ಜುನ ಹಾಗೂ ಇತರರು (೩) ೭೩
ಯದುವಂಶ ಹಾಗೂ ಪುರುವಂಶ (೪) ೭೪

ಕುರುವಂಶದ ವಿವರ (೫)	೭೫
ಬಾಹ್ಲೀಕರಾಜ (೭)	೭೬
ಪ್ರಹ್ಲಾದ ಬಾಹ್ಲೀಕರಲ್ಲಿ ವಾಯುದೇವರ ಆವೇಶ (೮)	೭೮
ಬಾಹ್ಲೀಕನ ಅಗಾಧಬಲ (೯)	೭೮
ಸೋಮದತ್ತನ ಪುತ್ರರು; ಭೂರಿಶ್ರವಸ್ಸಿನ ಹಿರಿಮೆ (೧೧)	೭೯
ಶಂತನುವಿನ ಪೂರ್ವೋತ್ತರ (೧೬)	೮೧
ಮಹಾಭಿಷನ ಅಪರಾಧ; ಶಂತನುವಾಗಿ ಜನನ (೧೯)	೮೪
ಅಷ್ಟವಸುಗಳ ಗೋಹರಣಪ್ರಯತ್ನ (೨೨)	೮೬
ಅಷ್ಟವಸುಗಳಿಗೆ ಬ್ರಹ್ಮಶಾಪ (೨೫)	೯೦
ವರಾಂಗಿಗೆ ಬ್ರಹ್ಮಶಾಪ (೨೬)	೯೦
ದ್ಯು ವಸುವಿಗೆ ಬ್ರಹ್ಮಶಾಪ (೨೭)	೯೧
ಬ್ರಹ್ಮನಲ್ಲಿ ವಸುಗಳ ಅರಿಕೆ (೨೯)	೯೨
ವಸುಗಳಿಂದ ಗಂಗಾಪ್ರಾರ್ಥನೆ (೩೦)	೯೩
ಗಂಗೆಯ ಸಮ್ಮತಿ (೩೧)	೯೩
ಪ್ರತೀಪನಿಂದ ಗಂಗೆಗೆ ವಚನ (೩೨)	೯೪
ಗಂಗೆಯ ನಿಬಂಧನೆ (೩೪)	೯೬
ಗಂಗೆಯಿಂದ ವಸುಗಳ ಕೋರಿಕೆಯ ಪೂರೈಕೆ (೩೭)	೯೯
ಗಂಗೆಯ ನಿರ್ಗಮನ (೩೮)	೧೦೦
ಗಂಗೆಯ ನಿರ್ಗಮನಕ್ಕೆ ಕಾರಣ (೪೨)	೧೦೨
ದೇವವ್ರತನ ವೇದಾಧ್ಯಯನ (೪೬)	೧೦೪
ಪರಶುರಾಮರ ಬಳಿ ತತ್ತ್ವಶ್ರವಣ ಹಾಗೂ ಅಸ್ತ್ರಾಭ್ಯಾಸ (೪೭)	೧೦೫
ದೇವವ್ರತ-ಶಂತನು ಸಮಾಗಮ (೪೮)	೧೦೬
ಮುಂದುವರೆದ ದೇವವ್ರತನ ಅಧ್ಯಯನ (೫೪)	೧೦೯
ಕೃಪ-ಕೃಪಿಯರ ಜನನ (೫೬)	೧೧೧
ಕೃಪಾಚಾರ್ಯರ ಸಾಧನೆ (೫೮)	೧೧೨
ದ್ರೋಣರ ಉತ್ಪತ್ತಿ (೬೪)	೧೧೪

ದ್ರೋಣನಾದ ಬೃಹಸ್ಪತಿ (೬೫) ೧೧೫
ದ್ರುಪದನ ಜನನ (೬೭) ೧೧೭
ದ್ರೋಣರ ವಿಶಿಷ್ಟಜೀವನಕ್ರಮ (೭೦) ೧೧೮
ವಿರಾಟರಾಜನ ಪರಿಚಯ (೭೨) ೧೨೦
ಶಂತನು - ಸತ್ಯವತಿ ವಿವಾಹ (೭೩) ೧೨೧
ದೇವವ್ರತ 'ಭೀಷ್ಮ'ನಾದ (೭೮) ೧೨೫
ಭೀಷ್ಮರಿಗೆ ಸ್ವಚ್ಛಂದಮೃತ್ಯುತ್ವವರ (೮೧) ೧೨೮
ಚಿತ್ರಾಂಗದನ ವಧೆ (೮೬) ೧೩೨
ವಿಚಿತ್ರವೀರ್ಯನ ವಿವಾಹ; ಅಂಬೆಯ ವೃತ್ತಾಂತ (೮೭) ೧೩೩
ಭೀಷ್ಮರಿಗೆ ಪರಶುರಾಮಾನುಗ್ರಹ (೯೩) ೧೩೬
ಪರಶುರಾಮ ಅಶಕ್ತಿ ಮೊದಲಾದ ಸರ್ವದೋಷರಹಿತ (೯೪) ೧೩೭
ಶಿಖಂಡಿಯಾಗಿ ಅಂಬೆಯ ಜನನ (೯೭) ೧೩೯
ಅಂಬೆಯ ತಪಸ್ಸು; ಶಿವನಿಂದ ವರಪ್ರಾಪ್ತಿ (೧೦೦) ೧೪೧
ಅಂಬೆಗೆ ಶಿವ ನೀಡಿದ ಮಾಲೆ (೧೦೧) ೧೪೨
ದ್ರುಪದನ ತಪಸ್ಸು; ಶಿವನ ವರ (೧೦೩) ೧೪೪
ಶಿಖಂಡಿನಿಯ ವಿವಾಹ (೧೦೫) ೧೪೫
ಶಿಖಂಡಿನಿಗೆ ತುಂಬುರುವಿನ ಪುರುಷದೇಹ (೧೧೧) ೧೪೭
ಸ್ತ್ರೀಯರಿಗೆ ಸರ್ವಥಾ ಪುರುಷತ್ವವಿಲ್ಲ (೧೧೨) ೧೪೭
ತುಂಬುರುವಿಗೆ ಕುಬೇರನ ಶಾಪ (೧೧೭) ೧೫೦
ವಿಚಿತ್ರವೀರ್ಯನ ನಿರ್ಯಾಣ (೧೨೨) ೧೫೩
ಶ್ರೀವೇದವ್ಯಾಸರ ಆಗಮನ (೧೨೩) ೧೫೪
ಸತ್ಯವತಿಯ ಕೋರಿಕೆ (೧೨೪) ೧೫೪
ಶ್ರೀವೇದವ್ಯಾಸರ ಆದೇಶ (೧೨೬) ೧೫೫
ಧೃತರಾಷ್ಟ್ರನ ಜನನ (೧೨೯) ೧೫೭
ಪಾಂಡುವಿನ ಜನನ (೧೫೧) ೧೫೮
ದಾಸಿ ಮಾಡಿದ ವ್ಯಾಸಸೇವೆ (೧೩೫) ೧೬೦

ವಿದುರನ ಜನನ, ಜನನದ ಹಿನ್ನೆಲೆ (೧೩೬) ೧೬೧
ಸಂಜಯನ ಜನನ (೧೪೩) ೧೬೮
ಶಕುನಿ-ಗಾಂಧಾರಿಯರು (೧೪೫) ೧೬೯
ಕುಂತಿಗೆ ದುರ್ವಾಸರಿಂದ ಮಂತ್ರಪ್ರಾಪ್ತಿ (೧೪೭) ೧೭೧
ಕರ್ಣನಾಗಿ ಸೂರ್ಯನ ಜನನ (೧೫೧) ೧೭೪
ಕುಂತಿಯಿಂದ ಕರ್ಣನ ಪರಿತ್ಯಾಗ (೧೫೭) ೧೭೭
ಕರ್ಣ ಸೂತಪುತ್ರನಾದ (೧೫೮) ೧೭೮
ಪಾಂಡು ಮತ್ತು ವಿದುರರ ವಿವಾಹ (೧೬೦) ೧೮೦
ಶಲ್ಯ, ಮಾದ್ರಿಯರ ಜನನ (೧೬೧) ೧೮೦
ಪಾಂಡುವಿನ ರಾಜ್ಯಭಾರ (೧೬೫) ೧೮೨
ಸತ್ಯವತಿಯ ವ್ಯಾಸಾಶ್ರಮಗಮನ (೧೬೮) ೧೮೪
ಸತ್ಯವತಿಗೆ ಸದ್ಗತಿ (೧೬೯) ೧೮೪
ವಿದುರನ ತಾಯಿಯ ಭಾಗ್ಯ (೧೭೦) ೧೮೫
ಅಂಬಿಕಾ, ಅಂಬಾಲಿಕೆಯರಿಗೂ ಸದ್ಗತಿ (೧೭೧) ೧೮೬
ಪಾಂಡುವಿನ ಬದರೀವಾಸ (೧೭೨) ೧೮೭
ಪಾಂಡುವಿಗೆ ಶಾಪಪ್ರಾಪ್ತಿ (೧೭೪) ೧೮೮
ಪಾಂಡುವಿನ ವಿರಕ್ತಜೀವನ (೧೭೫) ೧೮೯
ವಿಷ್ಣುವಿನ ಬಳಿ ಬ್ರಹ್ಮಾದಿದೇವತೆಗಳು (೧೭೭) ೧೯೦
ದೇವಾಸುರರ ಅದ್ಭುತ ಸಂಗ್ರಾಮ (೧೮೦) ೧೯೩
ದೇವತೆಗಳಿಂದ ದೈತ್ಯಸೈನ್ಯದ ನಾಶ (೧೮೨) ೧೯೪
ಇಂದ್ರನಿಂದ ಶಂಬರಾಸುರವಧೆ (೧೮೩) ೧೯೫
ಮುಖ್ಯಪ್ರಾಣನಿಂದ ವಿಪ್ರಚಿತ್ತಿಯ ವಧೆ (೧೮೭) ೧೯೭
ವಿಷ್ಣುವಿನಿಂದ ಕಾಲನೇಮಿಯ ವಧೆ (೧೯೦) ೧೯೮
ಭೂಮಿಯಲ್ಲಿ ದೈತ್ಯರ ಅವತಾರ (೧೯೩) ೧೯೯
ದೈತ್ಯರನ್ನು ದುರ್ಮಾರ್ಗದಲ್ಲಿ ತೊಡಗಿಸಲು ಪ್ರಾರ್ಥನೆ (೧೯೪) ೨೦೦
ಕಂಸನಾಗಿ ಕಾಲನೇಮಿ (೧೯೭) ೨೦೨

ಜರಾಸಂಧನ ಬಲ (೨೦೧) ೨೦೪
ಹಂಸಡಿಭಿಕರಾಗಿ ಮಧುಕೈಟಭರು (೨೦೩) ೨೦೫
ಜನಿಸಿರುವ ಮತ್ತೆ ಕೆಲವು ಅಸುರರು (೨೦೪) ೨೦೫
ಶಿಶುಪಾಲದಂತವಕ್ರರಾಗಿ ಜಯವಿಜಯರು (೨೦೯) ೨೦೮
ಸಾಲ್ವರಾಜನಾಗಿ ಅಸುರಬಲಿ (೨೧೧) ೨೦೯
ಕೀಚಕನಾಗಿ ಬಾಣಾಸುರ (೨೧೬) ೨೧೬
ಮೇರುಪರ್ವತದಲ್ಲಿ ಮಂತ್ರಾಲೋಚನೆ (೨೨೦) ೨೧೩
ವಸುದೇವನಾಗಿ ಕಶ್ಯಪಮುನಿಯ ಅವತಾರ (೨೨೧) ೨೧೫
ನಂದಗೋಪ, ಯಶೋದೆಯರು (೨೨೪) ೨೧೬
ಸಾತ್ಯಕಿ ಕೃತವರ್ಮರ ಅವತಾರ (೨೩೧) ೨೨೩

ಅಧ್ಯಾಯ - ೧೨ (ಶ್ರೀಕೃಷ್ಣಾವತಾರ ಪಾಂಡವೋತ್ಪತ್ತಿಃ) ೨೨೭ - ೩೨೪
(ಕುರುಪಾಂಡವರ ಜನನ, ಶ್ರೀಕೃಷ್ಣಾವತಾರ, ಪೂತನಾವಧ ಇತ್ಯಾದಿ)

ದೇವಕಿಯ ಪರಿಚಯ (೧) ೨೨೭
ಕಂಸನ ಕಿವಿಗೆ ಬಿದ್ದ ಸಾವಿನ ಸುದ್ದಿ (೩) ೨೨೮
ವಸುದೇವನ ಇತರ ಪತ್ನಿಯರು (೬) ೨೩೧
ಪೌಂಡ್ರಕ-ಶೃಗಾಲವಾಸುದೇವರ ಜನನ (೭) ೨೩೧
ದೇವಾವತಾರರೆಲ್ಲ ವ್ಯಾಸಶಿಷ್ಯರೇ (೧೧) ೨೩೪
ದೇವಕಿಯ ಮೊದಲ ಆರು ಪುತ್ರರ ಹಿನ್ನೆಲೆ (೧೨) ೨೩೪
ಪಾಂಡುರಾಜನಿಗೆ ಮುನಿಗಳ ಆದೇಶ (೧೫) ೨೩೫
ಗಾಂಧಾರೀ ಬಸಿರಿನಲ್ಲಿ ಕಲ್ಯಾದಿದೈತ್ಯರ ಪ್ರವೇಶ (೧೯) ೨೪೩
ಸಂತತಿ ಪಡೆಯಲು ಪಾಂಡುರಾಜನ ನಿರ್ಧಾರ (೨೦) ೨೪೪
ದೇವತಾಸ್ತ್ರೀಯರ ಪಾತಿವ್ರತ್ಯವಿಚಾರ (೨೪) ೨೪೬
ಯುಧಿಷ್ಠಿರನ ಜನನ (೩೧) ೨೫೦
ದುರ್ಯೋಧನಾದಿಗಳ ಜನನ (೩೪) ೨೫೧
ಶ್ರೀವೇದವ್ಯಾಸರಿಂದ ಗರ್ಭರಕ್ಷಣೆ (೩೫) ೨೫೨

ಕಲಿಯೇ ದುರ್ಯೋಧನ (೩೮) ೨೫೪
ದುರ್ಯೋಧನನದು ವಜ್ರಕಾಯ (೪೧) ೨೫೬
ದುಃಶಾಸನಾದಿಗಳ ಜನನ (೪೨) ೨೫೬
ಯುಯುತ್ಸುವಿನ ಜನನ (೪೮) ೨೫೯
ಭೀಮಾವತಾರದ ಹಿನ್ನೆಲೆ (೫೦) ೨೫೯
ಭೀಮಾವತಾರ (೫೩) ೨೬೨
'ಭೀಮಸೇನ' ಶಬ್ದದ ಅರ್ಥ (೫೪) ೨೬೩
'ಗಿರಿ ಒಡೆದು ಶತಶೃಂಗವೆಂದೆನಿಸಿತು' (೫೫) ೨೬೪
ಬಲರಾಮನಾಗಿ ಶೇಷ (೫೭) ೨೬೭
ಶ್ರೀಕೃಷ್ಣಾವತಾರ (೫೯) ೨೬೮
ಶ್ರೀಕೃಷ್ಣನಿಗೆ ಪ್ರಾಕೃತದೇಹವಿಲ್ಲ (೬೦) ೨೬೯
ದುರ್ಗಾವತಾರ (೬೭) ೨೭೪
ಗೋಕುಲಕ್ಕೆ ಶ್ರೀಕೃಷ್ಣ, ಮಧುರೆಗೆ ದುರ್ಗೆ (೬೮) ೨೭೫
ಕಂಸನಿಗೆ ದುರ್ಗೆಯ ಎಚ್ಚರಿಕೆ (೭೦) ೨೭೬
ಕಂಸನ ಪಶ್ಚಾತ್ತಾಪ (೭೩) ೨೭೮
ಕಂಸ ನಡೆಸಿದ ಶಿಶುಹತ್ಯೆ (೭೪) ೨೭೯
ಕೃಷ್ಣನನ್ನು ಕಂಡು ನಂದಯಶೋದೆಯರ ಸಂಭ್ರಮ (೭೬) ೨೮೦
ಪೂತನಾ ಸಂಹಾರ (೮೨) ೨೮೩
ಪೂತನಿಗೆ ತಮಸ್ಸು; ಊರ್ವಶಿಗೆ ಸ್ವರ್ಗ (೮೭) ೨೮೫
ಊರ್ವಶೀಶಾಪದ ಹಿನ್ನೆಲೆ (೮೮) ೨೮೬
ಉಪನಿಷ್ಕ್ರಮಣಸಂಸ್ಕಾರ (೮೯) ೨೮೦
ಶಕಟಾಸುರವಧೆ (೯೦) ೨೯೦
ಅರ್ಜುನನ ಜನ್ಮ (೯೪) ೨೯೨
ಉದ್ಧವನ ಜನನ (೧೦೦) ೨೯೬
ಚೇಕಿತಾನನ ಅವತಾರ ಹಾಗೂ ವಯೋಮಾನದ ಅಂತರ (೧೦೩) ೨೯೮
ಅಶ್ವತ್ಥಾಮನ ಜನನ (೧೦೪) ೨೯೮

ಬಲರಾಮನು ಅಣ್ಣನಾಗಲು ಕಾರಣ (೧೦೬) ೩೦೦
ಬಲರಾಮನ ಜನ್ಮಕ್ರಮದ ವಿಶ್ಲೇಷಣೆ (೧೦೭) ೩೦೩
ಬಲರಾಮ ಇಬ್ಬರ ಪುತ್ರನಾದ ಹಿನ್ನೆಲೆ (೧೧೦) ೩೦೪
ಯಶೋದೆಗೆ ವಿಶ್ವರೂಪದರ್ಶನ (೧೧೩) ೩೦೬
ತೃಣಾವರ್ತನ ವಧೆ (೧೧೬) ೩೦೯
ಕೃಷ್ಣನ ನವನೀತಚೌರ್ಯ (೧೧೯) ೩೧೦
ಶ್ರೀಕೃಷ್ಣಜಯಂತೀ (೧೨೦) ೩೧೧
ಮಂತ್ರೋಪದೇಶಕ್ಕಾಗಿ ಮಾದ್ರಿಯ ಪ್ರಾರ್ಥನೆ (೧೨೧) ೩೧೩
ಕುಂತಿಯಿಂದ ಮಾದ್ರಿಗೆ ಮಂತ್ರೋಪದೇಶ (೧೨೨) ೩೧೩
ನಕುಲ ಸಹದೇವರ ಜನನ (೧೨೫) ೩೧೫
ಇತರ ಪಾಂಡವರಲ್ಲಿ ವಾಯುವಿನ ಆವೇಶ (೧೨೯) ೩೧೮
ಪಾಂಡವರು ಪಂಚೇಂದ್ರರು (೧೩೫) ೩೨೧
ಪಾಂಡವರು ಶ್ರುತಿಪ್ರತಿಪಾದ್ಯರು (೧೩೬) ೩೨೩

ಅಧ್ಯಾಯ - ೧೩ (ಕಂಸವಧಃ) **೩೨೫ - ೪೧೭**

(ಶ್ರೀಕೃಷ್ಣನ ಬಾಲಲೀಲೆಗಳು - ಕಂಸವಧಪರ್ಯಂತ)

ಗರ್ಗಮುನಿಯಿಂದ ಕೃಷ್ಣರಾಮರಿಗೆ ಕ್ಷತ್ರಿಯೋಚಿತಸಂಸ್ಕಾರಗಳು (೧) ೩೨೫
ಗರ್ಗಮುನಿಯಿಂದ ಕೃಷ್ಣನ ಸ್ವರೂಪೋದ್ಘಾಟನೆ (೨) ೩೨೬
ಕೃಷ್ಣರಾಮರ ಗೋಕುಲಸಂಚಾರ(೩) ೩೨೬
ಮತ್ತೊಮ್ಮೆ ವಿಶ್ವರೂಪಪ್ರದರ್ಶನ (೪) ೩೨೬
ಗಡಿಗೆ ಒಡೆದು ಬೆಣ್ಣೆ ಮೆದ್ದ ಮಹಿಮೆ (೭) ೩೨೮
ಬಾಲಲೀಲೆಗಳ ಆಂತರ್ಯ (೯) ೩೩೦
ದಾಮೋದರನಾದ ಕೃಷ್ಣ (೧೮) ೩೩೪
ಯಮಳಾರ್ಜುನಭಂಜನ (೧೯) ೩೩೪
ಧುನಿ ಮೊದಲಾದವರಿಗೆ ಪಾರ್ವತಿಯ ವರ (೨೦) ೩೩೫
ತೋಳಗಳ ಸೃಷ್ಟಿ (೨೬) ೩೩೮

ವೃಂದಾವನದಲ್ಲಿವೃಂದಾರಕವಂದ್ಯ (೨೮) ೩೩೯
ವತ್ಸಪಾಲನಾದ ಸರ್ವಪಾಲ (೨೯) ೩೩೯
ವತ್ಸಾಸುರ ಬಕಾಸುರರ ಸಂಹಾರ (೩೦) ೩೪೦
ಕಾಲಿಯಮಥನ (೩೪) ೩೪೨
ಉಗ್ರಾಸುರ ವಧೆ (೪೪) ೩೫೧
ನೀಲೆಯೊಂದಿಗೆ ವಿವಾಹ ಹಾಗೂ ಸಂಗಮ (೪೮) ೩೫೩
ಗೋಪಿಯರ ಸಂಗಕ್ಕೆ ಕಾರಣ (೫೦) ೩೫೫
ಧೇನುಕಾಸುರನ ವಧೆ (೫೧) ೩೫೫
ಪ್ರಲಂಬಾಸುರವಧೆ (೫೫) ೩೫೮
ಮತ್ತೊಮ್ಮೆ ದಾವಾಗ್ನಿಪಾನ (೫೭) ೩೬೦
ವಿಪ್ರಪತ್ನಿಯರ ಕೃಷ್ಣಸೇವೆ (೫೮) ೩೬೨
ಗೋವರ್ಧನೋದ್ಧರಣ (೬೨) ೩೬೫
ಇಂದ್ರನಿಂದ ಉಪೇಂದ್ರನಿಗೆ ಪಟ್ಟಾಭಿಷೇಕ (೭೦) ೩೭೨
ಗೋಪಿಯರೊಂದಿಗೆ ರಾಸಕ್ರೀಡೆ (೭೩) ೩೭೫
ನಾರಾಯಣೀ ಸೇನೆ (೭೪) ೩೭೬
ಶಂಖಚೂಡವಧೆ (೭೬) ೩೭೮
ಕೇಶವನಿಂದ ಕೇಶಿಯ ಸಂಹಾರ (೮೦) ೩೮೨
ವ್ಯೋಮಾಸುರವಧೆ (೮೨) ೩೮೪
ವಸುದೇವದೇವಕಿಯರು ಮರಳಿ ಕಂಸನ ಬಂಧನದಲ್ಲಿ (೮೩) ೩೮೪
ಅಕ್ರೂರನ ಪರಿಚಯ (೮೫) ೩೮೬
ಗೋಕುಲದಲ್ಲಿ ಅಕ್ರೂರ (೮೭) ೩೮೭
ಮಧುರೆಗೆ ಕೃಷ್ಣನ ಪ್ರಯಾಣ (೯೧) ೩೯೯
ಅಕ್ರೂರನಿಗೆ ವಿಶ್ವರೂಪದರ್ಶನ (೯೨) ೩೯೯
ಅಕ್ರೂರನನ್ನು ಬೀಳ್ಕೊಟ್ಟು ಮಧುರಾಪ್ರವೇಶ (೯೬) ೪೦೨
ರಜಕಸಂಹಾರ (೯೭) ೪೦೨
ಕ್ಷೌರಿಕನ ಹರಿಸೇವೆ (೯೯) ೪೦೪

ಮೂಲಕಾರನ ಉದ್ಧಾರ (೧೦೦) ೩೯೫
ತ್ರಿವಕ್ರೆಯ ಉದ್ಧಾರ (೧೦೧) ೩೯೬
ಶಿವಧನುರ್ಭಂಗ (೧೦೩) ೩೯೮
ಕಂಸಸೇನೆಯ ವಧೆ ಹಾಗೂ ರಾತ್ರಿಯಲ್ಲಿ ಕ್ಷೀರಾನ್ನಭೋಜನ (೧೦೬) ೪೦೦
ಸಭೆಯಲ್ಲಿ ಕಂಸ (೧೦೭) ೪೦೦
ಕಂಸಪರಿವಾರದ ವಿವರ (೧೦೮) ೪೦೧
ಕುವಲ್ಯಾಪೀಡವಧೆ (೧೧೨) ೪೦೩
ಚಾಣೂರನ ವಧೆ (೧೧೭) ೪೦೫
ಮುಷ್ಟಿಕನ ವಧೆ (೧೨೧) ೪೦೭
ಕೂಟಕೋಸಲಾದಿಗಳ ವಧೆ (೧೨೨) ೪೦೮
ಕಂಸನಿಂದ ಸೇನೆಯ ಪ್ರೇಷಣೆ (೧೨೩) ೪೦೮
ಇಂದ್ರನಿಂದ ರಥಸಮರ್ಪಣೆ (೧೨೫) ೪೦೯
ಕೃಷ್ಣನಿಂದ ಕಂಸಸೇನೆಯ ವಿನಾಶ (೧೨೬) ೪೧೦
ಕಂಸವಧೆ (೧೨೭) ೪೧೦
ಕಂಸನಲ್ಲಿ ಜೀವದ್ವ್ಯಾವೇಶ (೧೩೧) ೪೧೨
ಕಂಸಾದಿಗಳಿಗೆ ಅಂಧಂತಮಸ್ಸು (೧೩೨) ೪೧೩

ಅಧ್ಯಾಯ - ೧೪ (ಉದ್ಧವಪ್ರತಿಯಾನಮ್) ೪೧೪ - ೪೯೫

(ಕೃಷ್ಣನ ಗುರುಕುಲವಾಸ, ಜರಾಸಂಧನ ಪರಾಭವ, ಪಾಂಡುವಿನ ನಿರ್ಯಾಣ, ಪಾಂಡವರ ಹಸ್ತಿನಾಪುರಗಮನ, ಭೀಮನ ಬಾಲಲೀಲೆ ಇತ್ಯಾದಿ)

ಕಂಸವಧೆಯ ಅನಂತರ (೧) ೪೧೪
ನಂದನ ವೃಂದಾವನಪಯಣ (೨) ೪೧೬
ಕೃಷ್ಣಬಲರಾಮರ ಗುರುಕುಲವಾಸ (೩) ೪೧೬
ಗುರುಕುಲವಾಸದ ಆಂತರ್ಯ (೪) ೪೨೧
ಶ್ರೀಕೃಷ್ಣನೀಡಿದ ಅಪೂರ್ವಗುರುದಕ್ಷಿಣೆ (೫) ೪೨೨
ಶ್ರೀಕೃಷ್ಣನಿಂದಾಗಿ ಮಧುರೆಯ ವೈಭವ (೬) ೪೨೩

ಜರಾಸಂಧನಿಂದ ಜರೆಯ ಹತ್ಯೆ (೯) ೪೨೫
ತಾಯಿಯೊಂದಿಗೆ ಗದೆಯನ್ನೂ ಕಳೆದುಕೊಂಡ ಪಾಪಿ (೧೫) ೪೩೦
ಜರಾಸಂಧನಿಂದ ಮಥುರೆಯ ಆಕ್ರಮಣ (೧೬) ೪೩೧
ಜರಾಸಂಧನ ಮೂರ್ಖಸಂದೇಶ (೧೭) ೪೩೧
ಶ್ರೀಕೃಷ್ಣನ ಪ್ರತಿಸಂದೇಶ (೧೯) ೪೩೩
ಧರೆಗಿಳಿದ ಹರಿಯ ರಥ ಆಯುಧಗಳು (೨೧) ೪೩೪
ಉಗ್ರಸೇನನ ಮೂಲಕ ಜರಾಸಂಧನ ಪರಾಭವ (೨೫) ೪೩೬
ಶ್ರೀಕೃಷ್ಣನಿಂದ ಜರಾಸಂಧನ ಪರಾಭವ (೨೯) ೪೩೮
ಜರಾಸಂಧನ ಅನುಯಾಯಿಗಳ ಶೋಚನೀಯ ಸ್ಥಿತಿ (೩೧) ೪೩೯
ಬಲರಾಮನಿಂದ ಜರಾಸಂಧನ ಪರಾಭವ (೩೫) ೪೪೦
ಪ್ರದ್ಯುಮ್ನನ ಜನನ (೩೯) ೪೪೨
ಪ್ರದ್ಯುಮ್ನನಿಂದ ಏಕಲವ್ಯನ ಪರಾಭವ (೪೦) ೪೪೩
ಅರ್ಜುನನ ಹದಿನಾಲ್ಕನೆಯ ಹುಟ್ಟುಹಬ್ಬ (೪೪) ೪೪೫
ಪಾಂಡುರಾಜನ ನಿರ್ಯಾಣ (೪೫) ೪೪೬
ಮಾದ್ರಿಯ ಸಹಗಮನ (೫೦) ೪೪೯
ಪಾಂಡುವಿಗೆ ಸದ್ಗತಿ (೫೪) ೪೫೩
ಹಸ್ತಿನಾಪುರಕ್ಕೆ ಪಾಂಡವರು (೫೫) ೪೫೪
ಶ್ರೀವೇದವ್ಯಾಸರಿಂದ ಪಾಂಡವರ ಸ್ವೀಕಾರ (೫೯) ೪೫೭
ಭೀಮಸೇನನ ಬಾಲಲೀಲೆಗಳು (೬೧) ೪೫೯
ಬಾಲಲೀಲೆಗಳ ಉದ್ದೇಶ (೬೫) ೪೬೨
ಭೀಮನಿಗೆ ಅಂಜಿದ ಕೌರವರ ಮಂತ್ರಾಲೋಚನೆ (೬೬) ೪೬೩
ಭೀಮನಿಗೆ ಕಾಲಕೂಟಪ್ರಯೋಗ (೭೦) ೪೬೫
ಕಾಲಕೂಟ ಗೆದ್ದ ಭೀಮನ ಪ್ರತಾಪ (೭೧) ೪೬೬
ಪ್ರಮಾಣಕೋಟಿಯಿಂದ ಹೊರಬಂದ ಮುಖ್ಯಪ್ರಾಣ (೭೨) ೪೬೭
ದುರ್ಯೋಧನನ ವಿಷಸರ್ಪಪ್ರಯೋಗ (೭೫) ೪೭೧
ಭೀಮನಿಂದ ವಿಷಸರ್ಪಮರ್ದನ (೭೫) ೪೭೨

ಪ್ರಹ್ಲಾದನಿಗಿಂತ ಭೀಮ ಮಿಗಿಲು (೭೮) ೪೭೩
ಕೃಷ್ಣದ್ವೇಷದಲ್ಲಿ ಪರ್ಯವಸಾನಗೊಂಡ ಭೀಮದ್ವೇಷ (೮೧) ೪೭೫
ಶ್ರೀಕೃಷ್ಣನಿಂದ ದುರ್ಯೋಧನಪ್ರೇಷಿತರಾದ ರಾಜರ ಪರಾಭವ (೮೩) ೪೭೬
ಶ್ರೀಕೃಷ್ಣ ವಿಜಯದ ಸಂಭ್ರಮ (೮೬) ೪೭೮
ಭೀಮನ ಅಪೂರ್ವ ದಿಗ್ವಿಜಯ (೮೭) ೪೭೮
ಅರ್ಜುನದಿಗ್ವಿಜಯ (೯೩) ೪೮೩
ಭೀಮಾರ್ಜುನವಿಜಯದ ಪ್ರಭಾವ (೯೪) ೪೮೪
ಕೃಷ್ಣನಿಂದ ಧೃತರಾಷ್ಟ್ರನ ಬಳಿಗೆ ಅಕ್ರೂರನ ಪ್ರೇಷಣೆ (೯೫) ೪೮೪
ಅಕ್ರೂರ ತಿಳಿಸಿದ ಕೃಷ್ಣಸಂದೇಶ (೯೮) ೪೮೬
ಧೃತರಾಷ್ಟ್ರನ ಅವಿವೇಕದ ಉತ್ತರ (೧೦೦) ೪೮೮
ಅಕ್ರೂರ ಮರಳಿ ಮಧುರೆಗೆ (೧೦೧) ೪೮೮
ಭೀಮಾರ್ಜುನರಿಗೆ ಕೃಷ್ಣೋಪದೇಶ (೧೦೨) ೪೮೯
ಕೃಷ್ಣೋದ್ಧವರ ಬಳಿ ಅರ್ಜುನಸಹದೇವರ ವಿದ್ಯಾಭ್ಯಾಸ(೧೦೪) ೪೯೦
ನಂದಗೋಕುಲಕ್ಕೆ ಉದ್ಧವಪ್ರೇಷಣ (೧೦೫) ೪೯೧
ಕೃಷ್ಣನಿಂದ ನಂದಮೋಚನೆಯ ಕಥೆ (೧೦೭) ೪೯೨
ವರುಣಬಂಧನದಿಂದ ನಂದನ ಮೋಚನೆ (೧೧೦) ೪೯೪

ಅಧ್ಯಾಯ - ೧೫ (ಪಾಂಡವಾದೀನಾಮಸ್ತ್ರವಿದ್ಯಾಭ್ಯಾಸಃ) ೪೯೬ - ೫೪೦

(ದ್ರೋಣವೃತ್ತಾಂತ, ಕುರುಪಾಂಡವರ ಅಸ್ತ್ರಾಭ್ಯಾಸ, ಏಕಲವ್ಯಕರ್ಣರ ವೃತ್ತಾಂತ)

ಭೀಮಾದಿಗಳು ಮರಳಿ ಹಸ್ತಿನಾಪುರಕ್ಕೆ (೧) ೪೯೬
ತ್ರಿವಕ್ರೆಯ ಪೂರ್ವಾಪರ (೨) ೪೯೬
ಭೀಮಸೇನನ ವ್ಯಾಸಶಿಷ್ಯತ್ವ (೩) ೪೯೭
ಭೀಮನ ವೈಷ್ಣವ ಆಳ್ವಿಕೆ (೪) ೪೯೮
ರಮಾದಿಗಳೆಲ್ಲ ವಿಷ್ಣ್ವಾಶ್ರಿತರು (೫) ೪೯೯
ಪಂಚಪಾಂಡವರೂ ವ್ಯಾಸಶಿಷ್ಯರು (೬) ೫೦೦
ಅಶ್ವತ್ಥಾಮರು ಕುಡಿದ ಹಾಲು (೭) ೫೦೧

ಗೋವಿಗಾಗಿ ಗೋವಿಂದನ ಬಳಿಗೆ ದ್ರೋಣರು (೧೦) ೫೦೩
ದ್ರೋಣರ ಅವತಾರಕಾರ್ಯ (೧೨) ೫೦೫
ಪರಶುರಾಮರ ಬಳಿ ದ್ರೋಣರ ಅಸ್ತ್ರಾಭ್ಯಾಸ (೧೬) ೫೦೭
ದ್ರುಪದನ ಬಳಿಗೆ ದ್ರೋಣರು (೨೧) ೫೧೧
ದ್ರುಪದನನ್ನು ಮಣಿಸಲು ದ್ರೋಣರ ಶಪಥ (೨೩) ೫೧೨
ಕುರುಪಾಂಡವರ ಬಳಿಗೆ ದ್ರೋಣರು (೨೫) ೫೧೪
ಆಳದ ಬಾವಿಗೆ ಬಿದ್ದ ಚೆಂಡು ಮುದ್ರಿಕೆಗಳು (೨೬) ೫೧೪
ದ್ರೋಣರಿಂದ ಅವುಗಳ ಉದ್ಧರಣ (೩೦) ೫೧೬
ದ್ರೋಣಶಿಷ್ಯರಾಗಿ ಕುರುಪಾಂಡವರು (೩೪) ೫೧೮
ಗುರುದಕ್ಷಿಣೆ ನೀಡುವ ಅರ್ಜುನನ ಪ್ರತಿಜ್ಞೆ (೩೫) ೫೧೯
ಭೀಮನು ಪ್ರತಿಜ್ಞೆ ಮಾಡದಿರಲು ಕಾರಣ (೩೭) ೫೨೦
ದ್ರೋಣರಿಂದ ಅರ್ಜುನನಿಗೆ ವಿಶೇಷಶಿಕ್ಷಣ (೩೯) ೫೨೨
ಅರ್ಜುನನಿಗೆ ಭೀಮ ನೀಡಿದ ಅವಕಾಶ (೪೧) ೫೨೩
ರಾಜಪುತ್ರರೆಲ್ಲ ದ್ರೋಣಶಿಷ್ಯರೇ (೪೩) ೫೨೪
ಕರ್ಣ ಮತ್ತು ಏಕಲವ್ಯರಿಗೆ ಅಸ್ತ್ರೋಪದೇಶ ಮಾಡದಿರಲು ಕಾರಣ (೪೬) ೫೨೬
ಪರಶುರಾಮನ ಬಳಿ ಕರ್ಣನ ಅಸ್ತ್ರಾಭ್ಯಾಸ (೪೭) ೫೨೭
ಕರ್ಣನಿಗೆ ಅಸ್ತ್ರನೀಡಲು ಕಾರಣ (೪೯) ೫೨೮
ಕೀಟದ ಮೂಲಕ ಇಂದ್ರ ತೀರಿಸಿದ ಸೇಡು (೫೧) ೫೩೦
ಪರಶುರಾಮನಿಂದ ಕರ್ಣನ ಭರ್ತ್ಸನೆ (೫೩) ೫೩೨
ಸ್ವರ್ಗವೇರಿದ ಕೀಟ (೫೬) ೫೩೪
ಕರ್ಣನಿಗೆ ಪರಶುರಾಮರ ನಿಗ್ರಹ ಅನುಗ್ರಹ (೫೭) ೫೩೫
ಬೇಟೆಗಾಗಿ ಕುರುಪಾಂಡವರು (೬೦) ೫೩೬
ಏಕಲವ್ಯನ ಅಸ್ತ್ರಕೌಶಲ (೬೧) ೫೩೭
ಏಕಲವ್ಯನ ಗುರುಭಕ್ತಿ (೬೩) ೫೩೭
ಏಕಾಂತದಲ್ಲಿ ಏಕಲವ್ಯನಿಗೆ ದ್ರೋಣರಿಂದ ಅಸ್ತ್ರೋಪದೇಶ (೬೬) ೫೪೦

ಅಧ್ಯಾಯ – ೧೬ (ಸೃಗಾಲವಧಃ) ೫೪೧ – ೫೬೫

(ಗೋಮಂತದಲ್ಲಿ ಕೃಷ್ಣಬಲರಾಮರ ಪರಾಕ್ರಮ, ಸೃಗಾಲವಧೆ)

ಮರಳಿ ಜರಾಸಂಧನ ಆಕ್ರಮಣ, ಮಧುರೆಯಿಂದ ಕೃಷ್ಣನ ನಿರ್ಗಮನ (೧) ೫೪೧

ಕೃಷ್ಣನ ನಿರ್ಗಮನಕ್ಕೆ ಕಾರಣ (೨) ೫೪೧

ಪರಶುರಾಮಸಂದರ್ಶನ, ಗೋಮಂತಗಮನ (೩) ೫೪೨

ಬಲಿಚಕ್ರವರ್ತಿಯಿಂದ ಕಿರೀಟಾಪಹರಣದ ಕಥೆ (೪) ೫೪೩

ಗರುಡನಿಂದ ಬಲಿಯ ಪರಾಭವ (೬) ೫೪೫

ಗರುಡನಿಂದ ಕೃಷ್ಣನಿಗೆ ಕಿರೀಟದ ಸಮರ್ಪಣೆ (೮) ೫೪೬

ಕಿರೀಟಪ್ರಸಂಗದ ಅಂತರಾರ್ಥ (೯) ೫೪೬

ಮರಳಿ ದಿವ್ಯಾಯುಧಗಳ ಆಗಮನ, ಪತ್ನಿಯರೊಂದಿಗೆ ಬಲರಾಮನ ವಿಹಾರ (೧೦) ೫೪೮

ಜರಾಸಂಧನಿಂದ ಗೋಮಂತಕ್ಕೆ ಅಗ್ನಿಸ್ಪರ್ಶ (೧೩) ೫೫೧

ಅಪೂರ್ವರೀತಿಯಲ್ಲಿ ಅಗ್ನಿಯ ಉಪಶಮನ (೧೪) ೫೫೨

ಕೃಷ್ಣನಿಂದ ಹಂಸಡಿಬಿಕಾದಿಸಕಲದೈತ್ಯರುಗಳ ಪರಾಭವ (೧೫) ೫೫೩

ದ್ರುಪದಾದಿಸಾತ್ವಿಕರಾಜರ ಪರಾಭವ (೧೬) ೫೫೪

ಬಲರಾಮ, ಜರಾಸಂಧರ ಘೋರಸಮರ (೨೦) ೫೫೬

ಜರಾಸಂಧನ ಮೃತ್ಯು ಭೀಮನಿಂದ ಎಂಬ ಅಶರೀರವಾಣಿಯ ಸೂಚನೆ (೨೪) ೫೫೮

ಶ್ರೀಕೃಷ್ಣನಿಂದ ಜರಾಸಂಧಾದಿಸರ್ವರ ಪರಾಭವ (೨೬) ೫೫೯

ದಮಘೋಷನ ಪ್ರಾರ್ಥನೆಯಂತೆ ಕೊಲ್ಹಾಪುರಕ್ಕೆ ನಡೆದ ಕೃಷ್ಣ (೨೮) ೫೬೦

ದಮಘೋಷನ ಸ್ವರೂಪ (೩೦) ೫೬೨

ಸೃಗಾಲವಾಸುದೇವನ ಸಂಹಾರ (೩೧) ೫೬೩

ಶಕ್ರದೇವನಿಗೆ ಪಟ್ಟಾಭಿಷೇಕ (೩೨) ೫೬೪

ಪಲಾಯನನಾಟಕದ ರಾಜನೀತಿ (೩೩) ೫೬೪

ಸಪ್ತದಶೋಽಧ್ಯಾಯಃ (ಹಂಸಡಿಬಿಕವಧಃ) ೫೬೬ - ೬೭೮

(ರುಗ್ಮಿಣೀಸ್ವಯಂವರ, ಸ್ಯಮಂತಕೋಪಾಖ್ಯಾನ, ಹಂಸಡಿಬಿಕವಧ ಇತ್ಯಾದಿ)

ರುಗ್ಮಿಣೀಸ್ವಯಂವರದ ಸಿದ್ಧತೆ (೧) ೫೬೬
ರುಗ್ಮಿಣೀಸ್ವಯಂವರಕ್ಕೆ ರುಗ್ಮಿಯ ವಿರೋಧ (೨) ೫೬೬
ರುಗ್ಮಿಣೀಸ್ವಯಂವರಕ್ಕೆ ಜರಾಸಂಧಾದಿಗಳ ಪ್ರಯಾಣ (೩) ೫೬೭
ಶ್ರೀಕೃಷ್ಣನ ಆಗಮನ (೪) ೫೬೭
ಗರುಡನ ರೆಕ್ಕೆಯ ಗಾಳಿಯಿಂದ ರಾಜರ ಪತನ; ಅವರ ಮಂತ್ರಾಲೋಚನೆ (೫) ೫೬೮
ಶಿಶುಪಾಲದಂತವಕ್ರರಿಂದ ಶರಣಾಗತಿಗೆ ಸಲಹೆ (೧೧) ೫೬೯
ಸಾಲ್ವನಿಂದ ಶಿಶುಪಾಲದಂತವಕ್ರರ ಭರ್ತ್ಸನೆ (೧೬) ೫೭೧
ಜರಾಸಂಧಾದಿಗಳ ಯುದ್ಧನಿಶ್ಚಯ (೨೦) ೫೭೨
ಶಿಶುಪಾಲದಂತವಕ್ರರಿಂದ ಕ್ಷಮಾಯಾಚನೆ (೨೧) ೫೭೨
ಕೃಷ್ಣನನ್ನು ಅವಮಾನಿಸಲು ಜರಾಸಂಧಾದಿಗಳ ಯೋಜನೆ (೨೨) ೫೭೩
ಕ್ರಥಕೈಶಿಕರ ಕೃಷ್ಣಭಕ್ತಿ (೩೦) ೫೭೬
ಜರಾಸಂಧಾದಿಗಳಿಗೆ ಇಂದ್ರನ ಸಂದೇಶ (೩೨) ೫೭೬
ಇಂದ್ರನಿಂದ ವಜ್ರಾಯುಧಪ್ರಯೋಗದ ಎಚ್ಚರಿಕೆ (೩೫) ೫೭೭
ಇಂದ್ರಸಂದೇಶದಿಂದ ಜರಾಸಂಧಾದಿಗಳ ಚಿಂತೆ (೩೬) ೫೭೮
ಕೃಷ್ಣಾಭಿಷೇಕಕ್ಕೆ ಜರಾಸಂಧಾದಿಗಳ ನಿಶ್ಚಯ (೪೦) ೫೭೯
ಕಬಂಧನಂತಾಗದಿರಲು ದುಷ್ಟರಾಜರ ನಿಶ್ಚಯ (೪೧) ೫೭೯
ಮರಳಿ ಇಂದ್ರಸಂದೇಶ (೪೩) ೫೮೦
ಶ್ರೀಕೃಷ್ಣಾಭಿಷೇಕವೈಭವ (೪೬) ೫೮೨
ಭೀಷ್ಮಕನಿಗೆ ಕೃಷ್ಣಸಂದೇಶ (೫೧) ೫೮೩
ಭೀಷ್ಮಕನಿಗೆ ವಿಶ್ವರೂಪದರ್ಶನ (೫೪) ೫೮೪
ರುಗ್ಮಿಣಿಯ ಅನಂತರೂಪ (೫೭) ೫೮೫
ವರುಣ-ಜನಕರು ಮಾಡಿದ ಸ್ವಯಂವರದ ಮರ್ಮ (೬೦) ೫೮೭
ಮತ್ತೊಮ್ಮೆ ಜರಾಸಂಧಾದಿಗಳ ದುರಾಲೋಚನೆ (೬೨) ೫೮೮
ಸಾಲ್ವ ನೀಡಿದ ಸಲಹೆ (೭೨) ೫೯೨

ಕಾಲಯವನನ ಪೂರ್ವಾಪರ; ಗರ್ಗಾಚಾರ್ಯರ ಕೃಷ್ಣವೈರ (೭೫) ೫೯೩
ಗರ್ಗಾಚಾರ್ಯರ ಪಶ್ಚಾತ್ತಾಪ; ಶ್ರೀಕೃಷ್ಣನಲ್ಲಿ ಶರಣಾಗತಿ (೮೪) ೫೯೭
ಕಾಲಯವನನ ಹುಟ್ಟು; ಸೈನ್ಯಸಂಪತ್ತಿ (೮೭) ೫೯೯
ಜರಾಸಂಧನ ಖಿನ್ನತೆ (೯೧) ೬೦೦
ಸಾಲ್ವನಿಂದ ಸಾಂತ್ವನ (೯೫) ೬೦೧
ಕಾಲಯವನನ ಬಳಿಗೆ ಸಾಲ್ವ (೧೦೧) ೬೦೩
ಕಾಲಯವನನ ಜರಾಸಂಧಭಕ್ತಿ (೧೦೨) ೬೦೪
ಮಥುರೆಯ ಆಕ್ರಮಣ (೧೦೪) ೬೦೪
ದ್ವಾರಕಾನಿರ್ಮಾಣ (೧೦೭) ೬೦೬
ದ್ವಾರಕೆಯ ವೈಭವ (೧೧೩) ೬೦೮
ಮಥುರೆಯಿಂದ ದ್ವಾರಕೆಗೆ (೧೧೭) ೬೧೧
ಕಾಲಯವನನಿಗೆ ಕೃಷ್ಣಸಂದೇಶ (೧೨೦) ೬೧೨
ಶ್ರೀಕೃಷ್ಣನಿಂದ ಕಾಲಯವನನ ಸೇನೆಯ ನಾಶ (೧೨೪) ೬೧೬
ಮುಚುಕುಂದನಿಗೆ ಶ್ರೀಕೃಷ್ಣಾನುಗ್ರಹ (೧೨೭) ೬೧೭
ಕಾಲಯವನ ಬೂದಿಯಾದ (೧೩೨) ೬೨೦
ಮುಚುಕುಂದನಿಗೆ ಸದ್ಗತಿ (೧೩೫) ೬೨೧
ಶ್ರೀಕೃಷ್ಣನಿಂದ ಜರಾಸಂಧಾದಿಗಳ ಪರಾಜಯ (೧೩೭) ೬೨೨
ರುಗ್ಮಿಣಿಯ ಪ್ರೇಮಸಂದೇಶ (೧೪೧) ೬೨೪
ವಿದರ್ಭಿಗೆ ಶ್ರೀಕೃಷ್ಣನ ಪ್ರಯಾಣ (೧೪೩) ೬೨೫
ಶ್ರೀಕೃಷ್ಣನಿಂದ ರುಗ್ಮಿಣೀಹರಣ (೧೪೪) ೬೨೫
ಕೃಷ್ಣನಿಂದ ಜರಾಸಂಧಾದಿಗಳ ಪರಾಭವ (೧೪೬) ೬೨೬
ಬಲರಾಮನ ಅದ್ಭುತಪರಾಕ್ರಮ (೧೪೭) ೬೨೬
ಸಾತ್ಯಕಿಯಿಂದ ಶಿಶುಪಾಲನ ಪರಾಭವ (೧೫೦) ೬೨೭
ಶ್ರೀಕೃಷ್ಣನಿಂದ ರುಗ್ಮಿ ಮೊದಲಾದವರ ಪರಾಭವ (೧೫೪) ೬೨೮
ಶ್ರೀಕೃಷ್ಣನಿಂದ ರುಗ್ಮಿಯ ವಿರೂಪಕರಣ (೧೫೯) ೬೨೯
ರುಗ್ಮಿಯೊಂದಿಗೆ ಶ್ರೀಕೃಷ್ಣರುಗ್ಮಿಣಿಯರ ವಿನೋದ (೧೬೩) ೬೩೧

ಶ್ರೀಕೃಷ್ಣನಿಂದ ಸಾಲ್ವಪರಾಭವ (೧೬೪)	೬೩೧
ಶ್ರೀಕೃಷ್ಣರುಗ್ಮಿಣಿಯರ ದ್ವಾರಕಾಪ್ರವೇಶ (೧೬೭)	೬೩೨
ಬಲರಾಮನೊಂದಿಗೆ ರೇವತಿಯ ವಿವಾಹ (೧೬೮)	೬೩೨
ರೇವತಿಯಲ್ಲಿ ಶಠ ಉಲ್ಮುಕರ ಜನನ (೧೭೫)	೬೩೫
ಶ್ರೀಕೃಷ್ಣರುಗ್ಮಿಣಿಯರ ವಿವಾಹ (೧೭೬)	೬೩೬
ಪ್ರದ್ಯುಮ್ನೋತ್ಪತ್ತಿ (೧೮೧)	೬೩೭
ಪ್ರದ್ಯುಮ್ನನ ಹಿರಿಮೆ (೧೮೨)	೬೩೮
ಶಂಬರಾಸುರನಿಂದ ಪ್ರದ್ಯುಮ್ನನ ಹರಣ (೧೮೩)	೬೩೮
ಶಂಬರಾಸುರನ ಬಳಿ ರತಿದೇವಿ (೧೮೭)	೬೪೦
ರತಿಯಿಂದ ಪ್ರದ್ಯುಮ್ನನ ಪೋಷಣೆ (೧೯೦)	೬೪೦
ಪ್ರದ್ಯುಮ್ನರತಿಯರ ಸಮಾಗಮ (೧೯೩)	೬೪೨
ರತಿಯಿಂದ ಪ್ರದ್ಯುಮ್ನನಿಗೆ ಮಂತ್ರೋಪದೇಶ (೧೯೪)	೬೪೨
ಪ್ರದ್ಯುಮ್ನ ಶಂಬರರ ಯುದ್ಧ (೧೯೫)	೬೪೩
ಶಂಬರಾಸುರ ವಧೆ (೧೯೮)	೬೪೪
ದ್ವಾರಕೆಗೆ ರತಿಮನ್ಮಥರ ಆಗಮನ (೧೯೯)	೬೪೪
ಸ್ಯಮಂತಕೋಪಾಖ್ಯಾನ (೨೦೨)	೬೪೫
ಸತ್ರಾಜಿತನ ಲೋಭ (೨೦೩)	೬೪೬
ಸಿಂಹದಿಂದ ಪ್ರಸೇನನ ವಧೆ (೨೦೪)	೬೪೬
ಸ್ಯಮಂತಕಮಣಿ ತರಲು ಕೃಷ್ಣನ ಪ್ರಯಾಣ (೨೦೫)	೬೪೬
ಶ್ರೀಕೃಷ್ಣನಿಂದ ಗುಹಾಪ್ರವೇಶ (೨೦೭)	೬೪೮
ಶ್ರೀಕೃಷ್ಣ ಜಾಂಬವಂತರ ಯುದ್ಧ (೨೦೮)	೬೪೮
ಶ್ರೀಕೃಷ್ಣರಾಮರ ಅಭೇದ (೨೧೦)	೬೪೯
ಜಾಂಬವಂತನ ಶರಣಾಗತಿ; ಜಾಂಬವತೀ ಕಲ್ಯಾಣ (೨೧೧)	೬೪೯
ಜಾಂಬವಂತನಿಗೆ ಯೌವನಪ್ರಾಪ್ತಿ (೨೧೨)	೬೫೦
ಸತ್ಯಭಾಮಾ ಕಲ್ಯಾಣ (೨೧೬)	೬೫೨
ರುಗ್ಮಿಣೀ ಸತ್ಯಭಾಮೆಯರು ಸಾಕ್ಷಾತ್ ಮಹಾಲಕ್ಷ್ಮಿ (೨೧೮)	೬೫೨

ಹಂಸಡಿಬಿಕರ ಸಂದೇಶ (೨೨೧) ೬೫೪
ಸಾಲ್ವನ ರಾಜಸೂಯಸಿದ್ಧತೆ (೨೨೯) ೬೫೬
ಸಾತ್ಯಕಿಯ ಮೂಲಕ ಶ್ರೀಕೃಷ್ಣನ ಸಂದೇಶ (೨೩೪) ೬೫೮
ಹಂಸಡಿಬಿಕರಿಂದ ದುರ್ವಾಸರಿಗೆ ಅಪಚಾರ (೨೩೮) ೬೫೯
ದುರ್ವಾಸರ ಕೃಷ್ಣಶರಣಾಗತಿ (೨೪೦) ೬೬೦
ಪುಷ್ಕರಕ್ಕೆ ಹಂಸಡಿಬಿಕರ ಪ್ರಯಾಣ (೨೪೩) ೬೬೨
ವಿಚಕ್ರ ಹಿಡಿಂಬಾಸುರರ ಪರಿಚಯ (೨೪೫) ೬೬೨
ಹಂಸಡಿಬಿಕರೊಂದಿಗೆ ಶ್ರೀಕೃಷ್ಣನ ಯುದ್ಧ (೨೪೯) ೬೬೩
ಭೂತಗಳು ಮರಳಿ ಕೈಲಾಸಕ್ಕೆ (೨೫೬) ೬೬೫
ಬಲರಾಮನಿಂದ ಹಿಡಿಂಬಾಸುರ ಪರಾಭವ (೨೫೯) ೬೬೬
ಸಾತ್ಯಕಿಡಿಬಿಕರ ಖಡ್ಗಯುದ್ಧ (೨೬೯) ೬೬೯
ಹಂಸಡಿಬಿಕರ ಪಲಾಯನ (೨೭೨) ೬೭೦
ಪುಷ್ಕರದಲ್ಲಿ ಶ್ರೀಕೃಷ್ಣನ ರಾತ್ರಿವಾಸ (೨೭೪) ೬೭೦
ಯಮುನಾತೀರದಲ್ಲಿ ಮುಂದುವರೆದ ಯುದ್ಧ (೨೭೫) ೬೭೧
ಸಾತ್ಯಕಿಯಿಂದ ಬ್ರಹ್ಮದತ್ತನ ವಧೆ (೨೮೫) ೬೭೩
ಶ್ರೀಕೃಷ್ಣನಿಂದ ಹಂಸನ ಪರಾಭವ (೨೯೦) ೬೭೪
ಹಂಸನ ದುರಂತ (೨೯೨) ೬೭೫
ಡಿಬಿಕನ ಅಂತ್ಯ (೨೯೪) ೬೭೬
ಬ್ರಹ್ಮಾದಿಗಳಿಂದ ಶ್ರೀಕೃಷ್ಣಜಯದ ಸಂಸ್ತುತಿ (೨೯೭) ೬೭೭
ದ್ವಾರಕೆಯಲ್ಲಿ ಶ್ರೀಕೃಷ್ಣವೈಭವ (೨೯೮) ೬೭೮

ಪರಿಶಿಷ್ಟ **೬೭೯ - ೬೮೮**

೧. ಇತರ ವ್ಯಾಖ್ಯಾನಗಳಲ್ಲಿನ ವಿಶೇಷಾಂಶಗಳು ೬೭೯ - ೬೮೩
೨. ಶ್ರೀವೇದಾಂಗತೀರ್ಥರ ವ್ಯಾಖ್ಯಾನದಲ್ಲಿನ ಕೆಲವು ವಿಶೇಷಾಂಶಗಳು ೬೮೪ - ೬೮೬
೩. ಸಪ್ತೇಂದ್ರರ ಉಲ್ಲೇಖದ ಶ್ಲೋಕದ ವಿವರಣೆಗೆ ಉಪಯುಕ್ತವಾದ ಮನು ಇಂದ್ರಾದಿಗಳ ಮಾಹಿತಿ ೬೮೭ - ೬೮೮

*****

ಮುನ್ನುಡಿ

ಇತಿಹಾಸಪುರಾಣಭ್ದೇರ್ಭವಚ್ಚಿತ್ತಾದ್ರಿಲೋಡಿತಾತ್ ।
ಜಾತಾಂ ಭಾರತತಾತ್ಪರ್ಯಸುಧಾಂ ಕಃ ಸನ್ನ ಸೇವತೇ ॥ –ಸು.ವಿ.(೧೫/೭೬)

ಮಹಾಭಾರತ ಶ್ರೀವೇದವ್ಯಾಸರ ಮೇರುಕೃತಿಯಾಗಿರುವಂತೆ ಮಹಾಭಾರತ–ತಾತ್ಪರ್ಯನಿರ್ಣಯ ಆಚಾರ್ಯ ಶ್ರೀಮಧ್ವ(ಕ್ರಿ.ಶ.೧೨೦೦–೧೨೭೯)ರ ಮೇರುಕೃತಿಯಾಗಿದೆ. ಸಂಶೋಧನೆ, ಸಂಗ್ರಹ, ವಿಮರ್ಶೆ, ವಿಶ್ಲೇಷಣೆ ಮೊದಲಾದ ಸಕಲದೃಷ್ಟಿಗಳಿಂದಲೂ ಮಹಾಭಾರತದ ಮಹತ್ತ್ವವನ್ನು ಅತ್ಯಂತಸಮರ್ಥವಾಗಿ ವಿವರಿಸುವ ವಿಶಿಷ್ಟಕೃತಿ ಎಂಬುದು ಮಹಾಭಾರತತಾತ್ಪರ್ಯನಿರ್ಣಯದ ವೈಶಿಷ್ಟ್ಯ.

ಇದರ ಮೊದಲ ಅಧ್ಯಾಯದಲ್ಲಿ ಸಕಲಶಾಸ್ತ್ರಾರ್ಥನಿರ್ಣಯದ ನಿರೂಪಣೆಯಿದ್ದರೆ, ದ್ವಿತೀಯಾಧ್ಯಾಯದಲ್ಲಿ ಆ ನಿರ್ಣಯಕ್ಕೆ ಸಾಧಕವಾದ ಮಹಾಭಾರತವಾಕ್ಯಗಳ ಸಂಗ್ರಹವಿದೆ. ಮೂರನೆಯ ಅಧ್ಯಾಯದಲ್ಲಿ ಜಗತ್ಸೃಷ್ಟಿಯ ಕ್ರಮ, ಬ್ರಹ್ಮಾಂಡಸೃಷ್ಟಿ, ದೇವತಾಸೃಷ್ಟಿಗಳು ನಿರೂಪಿತವಾಗಿದ್ದು ಭಗವಂತನ ವರಾಹಾದಿ ಅವತಾರಗಳ ವಿವರವೂ ಬಂದಿದ್ದು ರಾಮಾವತಾರದ ನಿರೂಪಣೆಯೊಂದಿಗೆ ಅದು ಮುಕ್ತಾಯವಾಗಿದೆ. ನಾಲ್ಕನೆಯ ಅಧ್ಯಾಯದಿಂದ ರಾಮಕಥೆ ಮುಂದುವರೆದು ಒಂಭತ್ತನೆಯ ಅಧ್ಯಾಯದಲ್ಲಿ ಮುಕ್ತಾಯಗೊಂಡಿದೆ. ಆ ಒಂಭತ್ತು ಅಧ್ಯಾಯಗಳ ಅನುವಾದ ಪ್ರಥಮಸಂಪುಟದಲ್ಲಿ ಬಂದಿದೆ.

ಇದು ಮಹಾಭಾರತತಾತ್ಪರ್ಯನಿರ್ಣಯಕೃತಿಯ ಅನುವಾದದ ದ್ವಿತೀಯಸಂಪುಟ. ಇದರಲ್ಲಿ ಹತ್ತನೆಯ ಅಧ್ಯಾಯದಿಂದ ಹದಿನೇಳನೆಯ ಅಧ್ಯಾಯದವರೆಗಿನ ಒಟ್ಟು ಎಂಟು ಅಧ್ಯಾಯಗಳು ಅನುವಾದಸಮೇತ ಸೇರಿವೆ.

ರಾಮಾಯಣದ ಕಥಾನಿರ್ಣಯವನ್ನು ಮಾಡಿದ ಶ್ರೀಮದಾಚಾರ್ಯರು ಹತ್ತನೆಯ ಅಧ್ಯಾಯದಿಂದ ಶ್ರೀಮಹಾಭಾರತದ ಕಥಾನಿರ್ಣಯವನ್ನು ಪ್ರಾರಂಭಿಸಿರುವರು. ಹತ್ತನೆಯ ಅಧ್ಯಾಯದಲ್ಲಿ ಮಹಾಭಾರತವನ್ನು ರಚಿಸಿದ ಶ್ರೀವೇದವ್ಯಾಸರ ಅವತಾರಪ್ರಸಂಗವನ್ನು ನಿರೂಪಿಸಿರುವರು.

ಹತ್ತನೆಯ ಅಧ್ಯಾಯ (ಶ್ಲೋಕಸಂಖ್ಯೆ : ೮೭)

ಶ್ರೀವೇದವ್ಯಾಸರು ಬ್ರಹ್ಮರುದ್ರಾದಿದೇವತೆಗಳ ಪ್ರಾರ್ಥನೆಯಂತೆ ಅವತರಿಸಿದ ಶ್ರೀಮಹಾವಿಷ್ಣುವಿನ ಮತ್ತೊಂದು ಅವತಾರ. ದುರ್ವಾಸರ ಶಾಪದಿಂದ ಇಂದ್ರಾದಿದೇವತೆಗಳೆಲ್ಲ ಐಶ್ವರ್ಯಭ್ರಷ್ಟರಾದಾಗ ಸಮುದ್ರಮಥನ ಮಾಡಿ ಐಶ್ವರ್ಯವನ್ನೂ ಅದರೊಂದಿಗೆ

ಅಮೃತವನ್ನೂ ಪಡೆಯಲು ಶ್ರೀಹರಿ ಅವರಿಗೆ ಆದೇಶಿಸಿದ. ಮಥನಕಾರ್ಯಕ್ಕೆಂದು ಮಂದರಪರ್ವತವನ್ನು ತಾನೇ ಒಂದೇ ಕೈಯಿಂದ ಎತ್ತಿ ಅದನ್ನು ಗರುಡನ ಮೇಲಿರಿಸಿ ಕ್ಷೀರಸಮುದ್ರಕ್ಕೆ ತಲುಪಿಸಿದ. ಕೂರ್ಮರೂಪದಿಂದ ಅದನ್ನು ತನ್ನ ಹೆಗಲ ಮೇಲೆ ಧರಿಸಿದ. ಅಜಿತರೂಪದಿಂದ ಸುರಾಸುರರ ಜೊತೆಯಲ್ಲಿದ್ದು ತಾನೇ ಮಥಿಸಿದ. ಕಾಲಕೂಟದಂತಹ ಜಗ–ನ್ನಾಶಕವಾದ ವಿಷ ಉದ್ಭವಿಸಿದಾಗ ಅದನ್ನು ಕುಡಿಯುವಂತೆ ಶ್ರೀವಾಯುದೇವರಿಗೆ ಆದೇಶ ನೀಡಿ ಜಗತ್ತನ್ನು ಪಾಲಿಸಿದ. ಸಮುದ್ರದಿಂದ ಉದ್ಭವಿಸಿದ ದಿಗ್ಗಜಗಳನ್ನು, ಕಾಮಧೇನು, ಚಿಂತಾಮಣಿ ಮೊದಲಾದವುಗಳನ್ನು ದೇವತೆಗಳಿಗೆ ನೀಡಿದ. ಕೌಸ್ತುಭಮಣಿಯನ್ನು ತಾನೇ ಧರಿಸಿದ. ಮಹಾಲಕ್ಷ್ಮಿ–ಯನ್ನು ವರಿಸಿದ. ಧನ್ವಂತರಿರೂಪದಿಂದ ಅಮೃತಕಲಶವನ್ನು ತಂದ. ಮೋಹಿನೀರೂಪದಿಂದ ಅದನ್ನು ಸುರರಿಗೆ ಮಾತ್ರ ನೀಡಿ ವಂಚಕರಾದ ಅಸುರರನ್ನು ಸದೆಬಡಿದ. ಹೀಗೆ ನಷ್ಟೈಶ್ವರ್ಯರಾದ ಸುರರನ್ನು ಪಾಲಿಸಿದಂತೆ ಗೌತಮಶಾಪಾದಿಗಳಿಂದ ನಷ್ಟಜ್ಞಾನರಾದ ಸಜ್ಜನರನ್ನು ಪಾಲಿಸಲು ದೇವತೆಗಳು ಪ್ರಾರ್ಥಿಸಿದಾಗ ಶ್ರೀಹರಿ ಶ್ರೀವೇದವ್ಯಾಸರೂಪದಿಂದ ಪ್ರಾದುರ್ಭವಿಸಿದ.

ವೇದವ್ಯಾಸರೂಪವು ಕೆಲವರು ತಿಳಿದಿರುವಂತೆ ಸಾಮಾನ್ಯ ಋಷಿರೂಪವಲ್ಲ; ಮತ್ಸ್ಯ, ಕೂರ್ಮಾದಿರೂಪಗಳಂತೆ ಶ್ರೀಹರಿಯ ಸಾಕ್ಷಾದ್ರೂಪ. ಮುಂದೆ ಪರಾಶರ ಸತ್ಯವತಿಯರಿಗೆ ದಿವ್ಯಜ್ಞಾನವಿತ್ತು ವೈಶಂಪಾಯನ, ಜೈಮಿನಿ ಮೊದಲಾದವರಲ್ಲಿ ನೆಲೆಸಿ ತನ್ನ ಶಿಷ್ಯತ್ವ ವಹಿಸಿದ ಸುರರಿಗೂ ವಿಶೇಷಜ್ಞಾನವನ್ನಿತ್ತ ಆದಿಸೃಷ್ಟಿಯಲ್ಲಿದ್ದಂತೆ ಸಕಲ ವೇದಗಳನ್ನೂ ಪುನಃ ಅಭಿವ್ಯಕ್ತಿಗೊಳಿಸಿದ. ಋಗಾದಿರೂಪದಿಂದ ಅವುಗಳನ್ನು ವಿಭಾಗಿಸಿದ. ಅವುಗಳ ಅರ್ಥ–ನಿರ್ಣಯಕ್ಕಾಗಿ ಮಹಾಭಾರತದಂತಹ ಸರ್ವೋನ್ನತಕೃತಿಯನ್ನೂ, ಶ್ರೀಮದ್ಭಾಗವತ ಮೊದಲಾದ ಪುರಾಣಗಳನ್ನೂ ರಚಿಸಿದ. ಸರ್ವಶಾಸ್ತ್ರನಿರ್ಣಾಯಕವಾದ ಬ್ರಹ್ಮಸೂತ್ರಗಳನ್ನೂ ರಚಿಸಿದ. ಶುಕರೂಪದಿಂದ ತನ್ನ ಪುತ್ರನಾಗಿ ಅವತರಿಸಿದ ಶಿವನನ್ನು ಶ್ರೀಮದ್ಭಾಗವತಪುರಾಣದ ಪ್ರವರ್ತಕನನ್ನಾಗಿಸಿದ. ಶೇಷಪೈಲರ ಮೂಲಕ ದೈವೀಮೀಮಾಂಸೆಯ ಮಧ್ಯಭಾಗವನ್ನು ಬರೆಸಿದ; ಅದರ ಆದ್ಯಂತವನ್ನು ತಾನೇ ರಚಿಸಿದ. ಜೈಮಿನಿಯ ಮೂಲಕ ಕರ್ಮಮೀಮಾಂಸೆಯನ್ನೂ ಬರೆಸಿದ. ಮಹಾಭಾರತ ಪ್ರಸಾರಕ್ಕೆ ವೈಶಂಪಾಯನರನ್ನು ಪುರಾಣಾದಿಗಳ ಪ್ರಸಾರಕ್ಕೆ ರೋಮ–ಹರ್ಷಣಸೂತನನ್ನೂ ನೇಮಿಸಿದ. ತನ್ನ ದೃಷ್ಟಿಗೆ ಬಿದ್ದ ಕೀಟವೊಂದನ್ನು ರಾಜನನ್ನಾಗಿಸಿದ. ಆ ಮೂಲಕ ತನ್ನ ಕೃಪಾದೃಷ್ಟಿಯ ಫಲ ಎಷ್ಟು ಅದ್ಭುತವೆಂಬುದನ್ನೂ ತೋರಿದ. ಹೀಗೆ ವ್ಯಾಸಾವತಾರದಿಂದ ಪೂರ್ಣಪ್ರಮಾಣದ ಜ್ಞಾನ ಬ್ರಹ್ಮಾದಿದೇವತೆಗಳಿಂದ ಪ್ರಾರಂಭಿಸಿ ಮನುಷ್ಯ ಪಿತೃಪಕ್ಷಿಗಳವರೆಗಿನ ಸಮಸ್ತ ಯೋಗ್ಯಚೇತನರಿಗೂ ಲಭಿಸುವಂತಾಯಿತು. ರಮಾಬ್ರಹ್ಮಾದಿ ಸಮಸ್ತರ ಜ್ಞಾನವೂ ವೇದವ್ಯಾಸರ ಜ್ಞಾನದ ಮಹಾಕಾಶದಲ್ಲಿನ ಒಂದು ಪರಮಾಣು ಮಾತ್ರ ಎಂಬುದು ವಿಶೇಷ.

ಹೀಗೆ ವೇದವ್ಯಾಸರೂಪ ಜ್ಞಾನಾಮೃತವನ್ನು ಸುಜನರಿಗೆ ನೀಡಿದ ಅದ್ಭುತರೂಪ ಎಂಬುದು ಹತ್ತನೇ ಅಧ್ಯಾಯದ ಸಾರ. ವೇದವ್ಯಾಸರೂಪದ ಸಮಗ್ರ ಪರಿಚಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಪುರಾಣೇತಿಹಾಸಗಳ ಸಾರರೂಪದಲ್ಲಿ ನೀಡಿರುವುದು ಈ ಅಧ್ಯಾಯದ ಹಿರಿಮೆ. ಸಮಗ್ರ ಸಂಸ್ಕೃತಸಾಹಿತ್ಯದಲ್ಲಿಯೇ ಈ ಬಗೆಯ ವ್ಯಾಸವೈಭವದ ಹಿರಿಮೆ ಮತ್ತೊಂದೆಡೆ ಕಾಣಸಿಗದು. ಇದರಲ್ಲಿ ಬಂದಿರುವ ವೇದವ್ಯಾಸರೂಪದ ವರ್ಣನೆಯಂತೂ ಅನನ್ಯವಾದುದು :

ದ್ವೀಪೇ ಭಗಿನ್ಯಾಸ್ತು ಯಮಸ್ಯ ವಿಶ್ವಕೃತ್ ಪ್ರಕಾಶತೇ ಜ್ಞಾನಮರೀಚಿಮಂಡಲಃ ।
ಪ್ರಭಾಸಯನ್ನಂಡಬಹಿಸ್ತಥಾಽಂತಃ ಸಹಸ್ರಲಕ್ಷಾಮಿತಭಾನುದೀಧಿತಿಃ ॥

ಅಗಣ್ಯದಿವ್ಯೋರುಗುಣಾರ್ಣವಃ ಪ್ರಭುಃ ಸಮಸ್ತವಿದ್ಯಾಧಿಪತಿರ್ಜಗದ್ಗುರುಃ ।
ಅನಂತಶಕ್ತಿರ್ಜಗದೀಶ್ವರೇಶ್ವರಃ ಸಮಸ್ತದೋಷಾತಿವಿದೂರವಿಗ್ರಹಃ ॥

ಶುಭಮರತಕವರ್ಣೋ ರಕ್ತಪಾದಾಬ್ಜನೇತ್ರಾಧರಕರನಖರಸನಾಗ್ರಶ್ಚಕ್ರಶಂಖಾಬ್ಜರೇಖಃ ।
ರವಿಕರವರಗೌರಂ ಚರ್ಮ ಚೈಣಂ ವಸಾನಸ್ತಟಿದಮಲಜಟಾಸಂದೀಪ್ತಚೂಡಂ ದಧಾನಃ ॥

ವಿಸ್ತೀರ್ಣವಕ್ಷಾಃ ಕಮಲಾಯತಾಕ್ಷೋ ಬೃಹದ್ಭುಜಃ ಕಂಬುಸಮಾನಕಂಠಃ ।
ಸಮಸ್ತವೇದಾನ್ ಮುಖಿತಃ ಸಮುದ್ಗಿರನ್ನನಂತಚಂದ್ರಾಧಿಕಕಾಂತಿಸನ್ಮುಖಃ ॥

ಪ್ರಬೋಧಮುದ್ರಾಭಯದೋರ್ದ್ವಯಾನ್ವಿತೋ ಯಜ್ಞೋಪವೀತಾಜಿನಮೇಖಲೋಲ್ಲಸನ್ ।
ದೃಶಾ ಮಹಾಜ್ಞಾನಭುಜಂಗದಷ್ಟಮುಜ್ಜೀವಯಾನೋ ಜಗದತ್ಯರೋಚತ ॥

– (೧೦/೫೧-೫೫)

ಕಾಲಕೂಟದ ಬಹುಭಾಗವನ್ನು ಪಾನ ಮಾಡಿ, ಪೂರ್ಣವಾಗಿ ಜೀರ್ಣಿಸಿಕೊಂಡದ್ದು ಶ್ರೀವಾಯುದೇವರು ಎಂಬುದು ಈ ಅಧ್ಯಾಯದಲ್ಲಿ ನಿರೂಪಿತವಾಗಿರುವ ಮತ್ತೊಂದು ಅಪೂರ್ವವಿಷಯ :

ತದಾ ಜಗದ್ಗ್ರಾಸಿ ವಿಷಂ ಸಮುತ್ಥಿತಂ ತ್ವದಾಜ್ಞಯಾ ವಾಯುರಧಾತ್ ಕರೇ ನಿಜೇ ॥
ಕಲೇಃ ಸ್ವರೂಪಂ ತದತೀವ ದುಃಸಹಂ ವರಾದ್ವಿಧಾತುಃ ಸಕಲೈಶ್ಚ ದುಃಸ್ಪೃಶಮ್ ।
ಕರೇ ವಿಮಥ್ಯಾಸ್ತಬಲಂ ವಿಧಾಯ ದದೌ ಸ ಕಿಂಚಿದ್ಗಿರಿಶಾಯ ವಾಯುಃ ॥

ಸ ತತ್ ಪಿಬನ್ ಕಂಠಗತೇನ ತೇನ ನಿಪಾತಿತೋ ಮೂರ್ಛಿತ ಆಶು ರುದ್ರಃ ।
ಹರೇಃ ಕರಸ್ಪರ್ಶಬಲಾತ್ ಸ ಸಂಜ್ಞಾಮವಾಪ ನೀಲೋಽಸ್ಯ ಗಲಸ್ತದಾಽಽಸೀತ್ ॥

ಅಥ ತ್ವದಾಜ್ಞಾಂ ಪುರತೋ ನಿಧಾಯ ನಿಧಾಯ ಪಾತ್ರೇ ತಪನೀಯರೂಪೇ ।
ಸ್ವಯಂ ತ್ವನಿರ್ಮಥ್ಯ ಬಲೋಪಪನ್ನಂ ಪಪೌ ಸ ವಾಯುಸ್ತದುತಾಸ್ಯ ಜೀರ್ಣಮ್ ॥

ಅತ್ಯಲ್ಪಪಾನಾಚ್ಚ ಬಭೂವ ಶೂಲಾ ಶಿವಸ್ಯ ಶೀರ್ಷ್ಣಶ್ಚ ಕರಾವಶಿಷ್ಟಮ್ ।
ಅಭೂತ್ ಕಲಿಃ ಸರ್ವಜಗತ್ಸುಪೂರ್ಣಂ ಪೀತ್ವಾ ವಿಕಾರೋ ನ ಬಭೂವ ವಾಯೋಃ ॥

–(೧೦/೧೩-೧೭)

ಹನ್ನೊಂದನೆಯ ಅಧ್ಯಾಯ (ಶ್ಲೋಕಸಂಖ್ಯೆ : ೨೩೫)

ಮಹಾಭಾರತದ ಮುಖ್ಯಕಥೆಯನ್ನು ಚಂದ್ರವಂಶದ ವಿವರಗಳೊಂದಿಗೆ ಈ ಅಧ್ಯಾಯದಿಂದ ಪ್ರಾರಂಭಿಸಿರುವರು. ಯಯಾತಿಯ ಕಿರಿಯ ಮಗ ಪುರುವಿನಿಂದ ಬೆಳೆದ ವಂಶದಲ್ಲಿ ಮುಂದೆ ದುಷ್ಮಂತಪುತ್ರನಾದ ಭರತಚಕ್ರವರ್ತಿ, ಕುರುಕ್ಷೇತ್ರನಿರ್ಮಾಪಕನಾದ ಕುರುಚಕ್ರವರ್ತಿ ಜನಿಸಿದರು. ಕುರುವಂಶದ ಪ್ರತೀಪರಾಜನ ಕಿರಿಯ ಪುತ್ರ ಶಂತನು, ಅವರ ಪುತ್ರ ಭೀಷ್ಮರ ಪೂರ್ವೇತಿಹಾಸ, ಪರಶುರಾಮರ ಬಳಿ ಅವರ ವಿಶೇಷವಿದ್ಯಾಭ್ಯಾಸ, ದೇವವ್ರತನೆನ್ನಿಸಿದ್ದ ಅವರು ಭೀಷ್ಮರೆನ್ನಿಸಿದ ಹಿನ್ನೆಲೆ, ದ್ರೋಣ, ಕೃಪ, ದ್ರುಪದ, ವಿರಾಟರ ಉತ್ಪತ್ತಿ, ಶಂತನು ಸತ್ಯವತಿಯರ ವಿವಾಹ, ಚಿತ್ರಾಂಗದ ವಿಚಿತ್ರವೀರ್ಯರ ಜನನ, ಚಿತ್ರಾಂಗದಗಂಧರ್ವನಿಂದ ಚಿತ್ರಾಂಗದನ ವಧೆ, ಕಾಶಿರಾಜನ ಪುತ್ರಿಯರೊಂದಿಗೆ ವಿಚಿತ್ರವೀರ್ಯನ ವಿವಾಹ, ಶಿಖಂಡಿಯಾಗಿ ಅಂಬೆಯ ಜನನ, ವಿಚಿತ್ರವೀರ್ಯನ ಮರಣ ಧೃತರಾಷ್ಟ್ರ, ಪಾಂಡು, ವಿದುರರ ಉತ್ಪತ್ತಿ, ಅವರ ವಿವಾಹ, ಕುಂತಿಗೆ ಸೇವಾಫಲವಾಗಿ ದುರ್ವಾಸರಿಂದ ಮಂತ್ರೋಪದೇಶ, ಕರ್ಣನ ಜನನ,ಪಾಂಡುರಾಜನ ಬದರೀವಾಸ, ಕಿಂದಮಮುನಿಯಿಂದ ಒದಗಿದ ಶಾಪ, ಕೃಷ್ಣಾವತಾರಕ್ಕಾಗಿ ಬ್ರಹ್ಮಾದಿದೇವತೆಗಳ ಪ್ರಾರ್ಥನೆ, ಇವು ಹನ್ನೊಂದನೆಯ ಅಧ್ಯಾಯದಲ್ಲಿ ಬಂದಿರುವ ವಿವರಗಳು. ಆದಿಪರ್ವದ ಪ್ರಾರಂಭದ ಅನೇಕ ವಿವರಗಳು ಸ್ಪುಟವಾಗಿ ನಿರೂಪಿತವಾಗಿರುವುದು ಇಲ್ಲಿಯ ವಿಶೇಷ.

ಗಂಗೆ ಶಂತನುವನ್ನು ತೊರೆಯಲು ಮುಖ್ಯ ಕಾರಣವನ್ನು ಇಲ್ಲಿ ನಿರೂಪಿಸಿರುವರು. ಗಂಗೆ ವರುಣಾವತಾರನಾದ ಶಂತನುವಿನ ನಿಯತ ಪತ್ನಿಯೇ ಆಗಿದ್ದರೂ ಅವನಂತೆ ಇವಳು ಅವತರಿಸಿ ಬಂದಿರದೇ ದೇವಕಾರ್ಯಕ್ಕಾಗಿ ಮೂಲರೂಪದಿಂದಲೇ ಅವನ ಪತ್ನಿಯಾಗಿದ್ದಳು. ಅದರಿಂದಾಗಿ ದೇವತಾಶರೀರದ ಅವಳು ಮನುಷ್ಯಶರೀರದಲ್ಲಿದ್ದ ಅವನೊಂದಿಗೆ ಬಹುಕಾಲ ನೆಲೆಸಲು ಬಯಸಿರಲಿಲ್ಲ. ಅದರಂತೆ ತಮ್ಮಸ್ವರೂಪ ಬಹಿರಂಗಗೊಂಡಮೇಲೆ ದೇವತೆಗಳು ಭೂಲೋಕದಲ್ಲಿ ನೆಲೆಸಲು ಬಯಸುವುದಿಲ್ಲ ಎಂಬ ವಿಶೇಷವಿವರವೂ ಇಲ್ಲಿದೆ :

ಅವಸ್ಥಿತಿರ್ನಾತಿಸುಖಾಯ ಮಾನುಷೇ ಯತಃ ಸುರಾಣಾಮತ ಏವ ಗಂತುಮ್ ।
ಐಚ್ಛನ್ನ ತಸ್ಯಾ ಹಿ ಬಭೂವ ಮಾನುಷೋ ದೇಹೋ ನರೋತ್ತೋ ಹಿ ತದಾऽऽಸ ಶಂತನೋಃ ॥

ನ ಧರ್ಮೋ ದೇವತಾನಾಂ ಹಿ ಜ್ಞಾತವಾಸಶ್ಚಿರಂ ನೃಷು ।
ಕಾರಣಾದೇವ ಹಿ ಸುರಾ ನೃಷು ವಾಸಂ ಪ್ರಕುರ್ವತೇ ॥

ಕಾರಣಾಪಗಮೇ ಯಾಂತಿ ಧರ್ಮೋऽಪ್ಯೇಷಾಂ ತಥಾವಿಧಃ ।
ಅದೃಶ್ಯತ್ವಮಸಂಸ್ಪರ್ಶೋ ಹ್ಯಸಂಭಾಷಣಮೇವ ಚ ॥

ಸುರೈರಪಿ ನೃಜಾತೈಸ್ತು ಗುಹ್ಯಧರ್ಮೋ ದಿವೌಕಸಾಮ್ ।
ಅತಃ ಸಾ ವರುಣಂ ದೇವಂ ಪೂರ್ವಭರ್ತಾರಮಪ್ಯಮುಮ್ ।
ನೃಜಾತಂ ಶಂತನುಂ ತ್ಯಕ್ತ್ವಾ ಪ್ರಯಯೌ ವರುಣಾಲಯಮ್ ॥ – (೧೧/೩೮, ೪೨-೪೪)

ಜೀವರು ಸ್ವರೂಪದಲ್ಲೂ ಸಹ ಪುರುಷರು, ಸ್ತ್ರೀಯರು ಎಂಬ ವಿಭಾಗವನ್ನು ಹೊಂದಿರುವರು. ಸಾಮಾನ್ಯವಾಗಿ ಪುರುಷ ಜೀವರು ಪುರುಷರಾಗಿಯೇ ಹುಟ್ಟುವರು. ವರ, ಶಾಪಾದಿ ವಿಶೇಷಕಾರಣದಿಂದಾಗಿ ಪುರುಷಜೀವರು ಸ್ತ್ರೀದೇಹವನ್ನು ಹೊಂದಿಯೂ ಹುಟ್ಟಬಹುದು. ಆ ಕಾರಣಗಳು ಕಳೆಯುತ್ತಿದ್ದಂತೆ ಪುನಃ ಅವರು ಎಂದಿನಂತೆ ಪುರುಷರೇ ಆಗುವರು. ಆದರೆ ಸ್ತ್ರೀಜೀವರು ಮಾತ್ರ ಸದಾ ಸ್ತ್ರೀದೇಹದಿಂದಲೇ ಜನಿಸುವರು. ಎಂತಹ ಪ್ರಬಲ–ಕಾರಣದಿಂದಲೂ ಅವರಿಗೆ ಪುರುಷ ದೇಹ ಸರ್ವಥಾ ಲಭಿಸದು ಎಂಬ ವಿಶೇಷ ಪ್ರಮೇಯ ಈ ಅಧ್ಯಾಯದಲ್ಲಿ ನಿರೂಪಿತವಾಗಿದೆ:

ಪುಂಸಾಂ ಸ್ತ್ರೈತ್ವಂ ಭವೇತ್ ಕ್ವಾಪಿ ತಥಾಽಪ್ಯಂತೇ ಪುಮಾನ್ ಭವೇತ್ ।
ಸ್ತ್ರೀಣಾಂ ನೈವ ಹಿ ಪುಂಸ್ತ್ವಂ ಸ್ಯಾದ್ಬಲವತ್ಕಾರಣೈರಪಿ ॥ – (೧೧/೧೧೨)

ಶಂತನು ಮೊದಲಾದವರು ಸಹ ಆ ಕಾಲದಲ್ಲಿ ಇಚ್ಛಾಮರಣಿಗಳಾಗಿದ್ದವರು ಎಂಬುದು ಇಲ್ಲಿಯ ಮತ್ತೊಂದು ಅಪೂರ್ವವಿವರ :

ಸ್ವೇಚ್ಛಯಾ ವರುಣತ್ವಂ ಸ ಪ್ರಾಪ ನಾನಿಚ್ಛಯಾ ತನುಃ ।
ತಸ್ಮಿನ್ ಕಾಲೇ ತ್ಯಜ್ಯತೇ ಹಿ ಬಲವದ್ಭಿರ್ವಧಂ ವಿನಾ ॥
ಅತಿಸಕ್ತಾಸ್ತಪೋಹೀನಾಃ ಕಥಂಚಿನ್ಮೃತಿಮಾಪ್ನುಯುಃ ॥ –(೧೧/೮೩,೮೪)

ಅಧ್ಯಾಯದ ಕೊನೆಯಲ್ಲಿ ಬರುವ ದೇವತಾಸ್ತೋತ್ರದಲ್ಲಿ ದೇವಾಸುರಸಂಗ್ರಾಮದ ವಿವರ, ಯುದ್ಧದಲ್ಲಿ ಮಡಿದ ಕಾಲನೇಮಿ ಮೊದಲಾದ ಅಸುರರು ಭೂಲೋಕದಲ್ಲಿ ಕಂಸಾದಿಗಳಾಗಿ ಜನಿಸಿದ ವಿವರ ಇಲ್ಲಿದೆ. ಮಹಾಭಾರತಕ್ಕೆ ಪೂರಕವಾದ ವಸುದೇವನ ಪೂರ್ವವೃತ್ತಾಂತ, ಸತ್ಯವತಿಯ ಪೂರ್ವವೃತ್ತಾಂತ ಮೊದಲಾದವುಗಳನ್ನು ಮಹಾಭಾರತದ ಖಿಲಭಾಗವಾದ ಹರಿವಂಶದಿಂದ ಇಲ್ಲಿ ನೀಡಿರುವರು. ದಿಕ್ಪಾಲಕನಾದ ಕುಬೇರ ನರಕಾಸುರ ಅಪಹರಿಸಿದ ತನ್ನ ಸುಪ್ರತೀಕ ಆನೆಗೋಸ್ಕರ ಭಗದತ್ತನಾಗಿ ಹುಟ್ಟಿದ ರೋಚಕ ವಿವರದೊಂದಿಗೆ ಈ ಅಧ್ಯಾಯ ಮುಕ್ತವಾಗಿದೆ. ಅಧ್ಯಾಯದ ಕೊನೆಯ ಶ್ಲೋಕದಲ್ಲಿ ವಿಷ್ಣುಭಕ್ತಿ ದೇವಸ್ವಭಾವದ ಪ್ರಧಾನಲಕ್ಷಣ, ವಿಷ್ಣುದ್ವೇಷ, ದೈತ್ಯಸ್ವಭಾವದ ಪ್ರಧಾನಲಕ್ಷಣ ಎಂಬ ಮುಖ್ಯ ಪ್ರಮೇಯ ನಿರೂಪಿತವಾಗಿದೆ (೧೧/೨೩೫) :

ಲಿಂಗಂ ಸುರಾಣಾಂ ಹಿ ಪರೈವ ಭಕ್ತಿರ್ವಿಷ್ಣೌ ತದನ್ಯೇಷು ಚ ತತ್ಪ್ರತೀಪತಾ ।
ಅತೋಽತ್ರ ಯೇ ಯೇ(ऽ)ಹರಿಭಕ್ತತತ್ಪರಾಸ್ತೇ ತೇ(ऽ)ಸುರಾಸ್ತದ್ಚರಿತಾ ವಿಶೇಷತಃ ॥

ಹನ್ನೆರಡನೆಯ ಅಧ್ಯಾಯ (ಶ್ಲೋಕ ಸಂಖ್ಯೆ : ೧೩೬)

ಕೃಷ್ಣಾವತಾರದ ಹಿನ್ನೆಲೆಯಾಗಿ ಕಂಸನಿಂದ ದೇವಕಿಯ ಆರುಪುತ್ರರ ಸಂಹಾರದ ಕಥೆಯೊಂದಿಗೆ ಪ್ರಾರಂಭವಾಗುವ ಈ ಅಧ್ಯಾಯದಲ್ಲಿ ಮುಂದೆ ಪಾಂಡುರಾಜ ಕುಂತಿಗೆ ಆದೇಶ ನೀಡಿ ಅವಳು ದುರ್ವಾಸರು ನೀಡಿದ್ದ ಮಂತ್ರಬಲದಿಂದ ಯಮಧರ್ಮ, ವಾಯು ಹಾಗೂ ಇಂದ್ರರಿಂದ ಕ್ರಮವಾಗಿ ಯುಧಿಷ್ಠಿರ, ಭೀಮಸೇನ, ಅರ್ಜುನ ಎಂಬ ಮೂವರು ಪುತ್ರರನ್ನು ಮತ್ತು ಕುಂತಿ ನೀಡಿದ ಮಂತ್ರದ ಬಲದಿಂದ ಮಾದ್ರಿಯು ಅಶ್ವಿನಿದೇವತೆಗಳಿಂದ ನಕುಲ ಸಹದೇವರೆಂಬ ಇಬ್ಬರು ಪುತ್ರರನ್ನು ಪಡೆದ ವಿವರ, ಗಾಂಧಾರಿಯು ಕಲಿ ಮೊದಲಾದ ದೈತ್ಯರ ಅವತಾರರಾದ ದುರ್ಯೋಧನಾದಿ ನೂರುಜನ ಕೌರವರನ್ನು ಪಡೆದ ವಿವರ, ಭೀಮಾವತಾರದ ಅನಂತರ ಬಲರಾಮ, ಕೃಷ್ಣರ ಅವತಾರ, ಕೃಷ್ಣನಿಂದ ನಡೆದ ಪೂತನಾಸಂಹಾರ, ಶಕಟಾಸುರಸಂಹಾರ, ತೃಣಾವರ್ತಸಂಹಾರ, ಯಶೋದೆಗೆ ಕೃಷ್ಣವಿಶ್ವರೂಪ ಪ್ರದರ್ಶನಮಾಡಿದ ವಿವರ ಮೊದಲಾದ ಅನೇಕ ವಿವರಗಳು ನಿರೂಪಿತವಾಗಿವೆ. ಕೃಷ್ಣಾವತಾರಕ್ಕೆ ಸಂಬಂಧಿಸಿದ ವಿವರಗಳು ಭಾಗವತ ಹಾಗೂ ಹರಿವಂಶಗಳ ಹಿನ್ನೆಲೆಯಲ್ಲಿ ಸಮಗ್ರವಾಗಿ ನಿರೂಪಿತವಾಗಿರುವುದು ಮತ್ತೊಂದು ವಿಶೇಷ.

ಈ ಅಧ್ಯಾಯದಲ್ಲಿ ಪಾಂಡುರಾಜನ ಪ್ರಸಂಗವನ್ನು ನಿರೂಪಿಸುವಾಗ ಸಂತತಿಹೀನರಿಗೂ ತತ್ತ್ವಜ್ಞಾನದ ಬಲದಿಂದ ಮೋಕ್ಷವಾಗುವುದು ಖಚಿತ ಎಂಬ ವಿಶೇಷ ಪ್ರಮೇಯ ನಿರೂಪಿತವಾಗಿದೆ:

ಯದರ್ಥಮೇಷ ಜಾಯತೇ ಪುಮಾನ್ ಹಿ ತಸ್ಯ ಸೋಽಕೃತೇಃ ।
ಶುಭಾಂ ಗತಿಂ ನ ತು ವ್ರಜೇದ್ಧ್ರುವಂ ತತೋ ನ್ಯವಾರಯನ್ ॥
ಅತೋಽನ್ಯಥಾ ಸುತಾನೃತೇ ವ್ರಜಂತಿ ಸದ್ಗತಿಂ ನರಾಃ ।
ಯಥೈವ ಧರ್ಮಭೂಷಣೋ ಜಗಾಮ ಸಂಧ್ಯಕಾಸುತಃ ॥ – (೧೨/೧೬, ೧೮)

ಅದರಂತೆ ದೇವತಾಸ್ತ್ರೀಯರು ತಮ್ಮ ನಿಯತಪತಿಗಳ ಹೊರತು ಅನ್ಯರ ಸಂಪರ್ಕ ಮಾಡಿದರೆ ಆಗುವ ಅನರ್ಥದ ಜಿಜ್ಞಾಸೆಯೂ ಬಂದಿದೆ :

ಸುರಸ್ತ್ರಿಯೋಽತಿಕಾರಣೈರ್ಯದಾಽನ್ಯಥಾ ಸ್ಥಿತಾಸ್ತದಾ ।
ದುರನ್ವಯಾಃ ಸುದುಃಸಹಾ ವಿಪತ್ ತತೋ ಭವಿಷ್ಯತಿ ॥ – (೧೨/೨೯)

ಮಾದ್ರಿಯ ಪ್ರಸಂಗದಲ್ಲಿ ಅಶ್ವಿನಿದೇವತೆಗಳ ನಾಮಸಾಮ್ಯದೊಂದಿಗೆ ಇತರ ಬಹುಬಗೆಯ ಸಾಮ್ಯವೂ ಸಹ ಚರ್ಚಿಸಲ್ಪಟ್ಟಿದೆ (೧೨/೧೨೮):

ವಿಶೇಷನಾಮ್ನೈವ ಸಮಾಹುತಾಃ ಸುತಾನ್ ದದ್ಯುಃ ಸುರಾ ಇತ್ಯವಿಶೇಷಿತಂ ಯಯೋಃ ।
ವಿಶೇಷನಾಮಾಪಿ ಸಮಾಹ್ವಯತ್ ತೌ ಮಂತ್ರಾವೃತ್ತಿರ್ನಾಮಭೇದೇಽಸ್ಯ ಚೋಕ್ತಾ ॥

ಇವುಗಳೆಲ್ಲ ಮಹಾಭಾರತದ ಆ ಪ್ರಸಂಗವನ್ನು ತಾತ್ವಿಕವಾಗಿ ಅರ್ಥಮಾಡಿ–ಕೊಳ್ಳುವುದಕ್ಕೆ ನೀಡುವ ನೆರವು ಅಪಾರ.

ಹದಿಮೂರನೆಯ ಅಧ್ಯಾಯ (ಶ್ಲೋಕ ಸಂಖ್ಯೆ : ೧೩೮)

ಶ್ರೀಕೃಷ್ಣನ ಬಾಲಲೀಲೆಗಳು, ಮತ್ತೊಮ್ಮೆ ಯಶೋದೆಗೆ ವಿಶ್ವರೂಪದರ್ಶನ, ಯಮ–ಲಾರ್ಜುನಭಂಜನ, ಕಾಲೀಯಮರ್ದನ, ನೀಲಾದೇವಿಯ ಪರಿಣಯ, ಧೇನುಕ ಮೊದಲಾದ ಅನೇಕ ಅಸುರರ ಸಂಹಾರ, ಗೋವರ್ಧನೋದ್ಧಾರ, ಅರಿಷ್ಟ, ಕೇಶಿ ಮೊದಲಾದವರ ಹನನ, ವ್ಯೋಮಾಸುರ ಮೊದಲಾದವರ ಪ್ರಸಂಗ, ಕಂಸನಿಂದ ಅಕ್ರೂರನ ಪ್ರೇಷಣ, ಶ್ರೀಕೃಷ್ಣ–ಬಲರಾಮರ ಮಧುರಾಗಮನ, ರಜಕನ ಸಂಹಾರ, ತ್ರಿವಕ್ರೆ ಮೊದಲಾದವರ ಉದ್ಧಾರ, ಶಿವ–ಧನುರ್ಭಂಗ, ಕುವಲಯಾಪೀಡಾದಿಗಳ ವಧೆ, ಚಾಣೂರ ಮುಷ್ಟಿಕಾದಿಗಳ ವಧೆ ಹಾಗೂ ಕಂಸವಧೆ ನಿರೂಪಿತವಾಗಿದೆ. ಒಟ್ಟಾಗಿ ಕಂಸವಧೆಯವರೆಗಿನ ಕೃಷ್ಣಲೀಲಾವಿಲಾಸವಾಗಿ ಈ ಅಧ್ಯಾಯ ಹೊರಟಿದೆ. ಇಲ್ಲೂಸಹ ಶ್ರೀಮದ್ಭಾಗವತ ದಶಮಸ್ಕಂಧೋಕ್ತವಾದ ವಿವರಗಳೊಂದಿಗೆ ಹರಿವಂಶ, ವಿಷ್ಣುಪುರಾಣ ಮೊದಲಾದ ಇತರ ಆಕರಗಳಿಂದಲೂ ವಿಷಯಗಳು ಸಮಗ್ರ ಸಂಕಲಿತವಾಗಿವೆ.

ಕಂಸವಧೆಯೊಂದಿಗೆ ಅಧ್ಯಾಯವನ್ನು ಮುಕ್ತಾಯಗೊಳಿಸುತ್ತ ಅದರ ಸಾರಸರ್ವಸ್ವವಾಗಿ ಶ್ರೀಹರಿ ಹಾಗೂ ರಮಾಬ್ರಹ್ಮಾದಿಗಳಲ್ಲಿ ತಾರತಮ್ಯಕ್ರಮವಾಗಿ ಭಕ್ತಿಮಾಡದವನು ಇತರ ಸಕಲ ಧರ್ಮಗಳನ್ನು ಸಮಗ್ರವಾಗಿ ಪಾಲಿಸಿದರೂ, ಅನ್ಯದೇವತೆಗಳನ್ನು ಎಷ್ಟೇ ಭಕ್ತಿಯಿಂದ ಆರಾಧಿಸಿ–ದರೂ ಅಧೋಗತಿಗೆ ತೆರಳುವುದು ನಿಶ್ಚಿತ ಎಂಬ ಪ್ರಮೇಯವನ್ನು ತಿಳಿಸಿರುವರು (೧೩/೧೩೩):

ನಿತ್ಯಾತಿದುಃಖಮನಿವೃತ್ತಿ ಸುಖವ್ಯಪೇತಮಂಧಂತಮೋ ನಿಯತಮೇತಿ ಹರಾವಭಕ್ತಃ ।
ಭಕ್ತೋಽಪಿ ಕಂಜಜಗಿರೀಶಮುಖೇಷು ಸರ್ವಧರ್ಮಾರ್ಣವೋಽಪಿ ನಿಖಿಲಾಗಮನಿರ್ಣಯೇನ ॥

ಕೃಷ್ಣನಿಗೆ ಆನಂದವೆಂಬುದು ನಿತ್ಯವಾದುದು. ಆದರೂ ಅವನು ಆನಂದಿಸಿದ ಎಂಬುದಾಗಿ ಶಾಸ್ತ್ರಗಳು ತಿಳಿಸುವುದು ಸದೋದಿತನಾದ ಸೂರ್ಯನಿಗೆ ಉದಯ ಹೇಳುವಂತೆ ಲೋಕದೃಷ್ಟಿಗೆ ಮಾತ್ರ ಎಂಬ ವಿಶೇಷ ವಿವರವು ಈ ಅಧ್ಯಾಯದ ಉಪಸಂಹಾರದಲ್ಲಿ ಬಂದಿದೆ:

ಸದೈವ ಮೋದರೂಪಿಣೋ ಮುದೋಕ್ತಿರಸ್ಯ ಲೌಕಿಕೇ ।
ಯಥೋದಯೋ ರವೇರ್ಭವೇತ್ ಸದೋದಿತಸ್ಯ ಲೋಕತಃ ॥ –(೧೩/೧೩೭)

ಹದಿನಾಲ್ಕನೆಯ ಅಧ್ಯಾಯ (ಶ್ಲೋಕಸಂಖ್ಯೆ : ೧೧೨)

ಉಗ್ರಸೇನನಿಗೆ ರಾಜ್ಯಾಭಿಷೇಕ, ಕೃಷ್ಣನ ರಕ್ಷಣೆಯಲ್ಲಿನಡೆದ ಅವನ ರಾಜ್ಯಭಾರದ ವೈಭವ, ಕೃಷ್ಣನ ಮೇಲೆ ಜರಾಸಂಧ ಗದೆಯನ್ನು ಪ್ರಯೋಗಿಸಲು ಹೊರಟು ಅದರಿಂದ ಅವನ ತಾಯಿಯಾದ

ಜರೆಯನ್ನು ಕೊಂದದ್ದು, ಶಿವ ನೀಡಿದ್ದ ಆ ಗದೆಯು ಕೈಲಾಸಕ್ಕೆ ಮರಳಿದ್ದು; ಜರಾಸಂಧನಿಂದ ಮಧುರೆಯ ಆಕ್ರಮಣ, ಆಗ ನಡೆದ ಯುದ್ಧದಲ್ಲಿ ವೈಕುಂಠದಿಂದ ಕೃಷ್ಣಬಲರಾಮರ ಆಯುಧಗಳು ಇಳಿದುಬಂದದ್ದು, ಏಕಲವ್ಯನನ್ನು ಪರಾಭವಗೊಳಿಸಲು ಕೃಷ್ಣ ಮಾಡಿದ ಪ್ರದ್ಯುಮ್ನನ ಅಪೂರ್ವ ಸೃಷ್ಟಿ, ಜರಾಸಂಧನ ಸಮಗ್ರ ಸೈನ್ಯದ ವಿನಾಶ, ಪಾಂಡುರಾಜನ ನಿರ್ಯಾಣ, ಮಾದ್ರಿಯ ಸಹಗಮನ, ಪಾಂಡವರ ಹಸ್ತಿನಾಪುರದ ಪ್ರವೇಶ, ಭೀಮಸೇನನ ಅದ್ಭುತ ಬಾಲಲೀಲೆಗಳು, ಭೀಮ ಕಾಲಕೂಟವನ್ನೂ ಜೀರ್ಣಿಸಿಕೊಂಡ ಹಿರಿಮೆ, ಭೀಮಾರ್ಜುನರು ಮಾಡಿದ ಅಪೂರ್ವ ದಿಗ್ವಿಜಯ, ಕೃಷ್ಣನಿಂದ ಪ್ರೇಷಿತನಾದ ಅಕ್ರೂರ ಧೃತರಾಷ್ಟ್ರನಿಗೆ ನೀಡಿದ ಸಂದೇಶ, ಧೃತರಾಷ್ಟ್ರನ ಮಲತಾಯಿಧೋರಣೆ, ಅಕ್ರೂರ ತನ್ನೊಂದಿಗೆ ಭೀಮ ಅರ್ಜುನ ಹಾಗೂ ಸಹದೇವರನ್ನು ಕರೆದೊಯ್ದದ್ದು, ಅಲ್ಲಿ ಅರ್ಜುನ ಕೃಷ್ಣನಿಂದ ವಿಶೇಷವಾದ ಅಸ್ತ್ರಗಳನ್ನು ಉಪದೇಶ ಪಡೆದದ್ದು, ಸಹದೇವ ಉದ್ಧವನಿಂದ ನೀತಿಶಾಸ್ತ್ರವನ್ನು ಕಲಿತದ್ದು, ಭೀಮ ಲೋಕದೃಷ್ಟಿಯಿಂದ ಬಲರಾಮನ ಬಳಿ ಗದಾಯುದ್ಧವನ್ನು ಅಭ್ಯಸಿಸಿದ್ದು, ಕೃಷ್ಣ ನಂದನನ್ನು ಅಜಗರನಿಂದ ಬಿಡುಗಡೆ ಮಾಡಿದ್ದು, ಅಜಗರರೂಪದ ವಿದ್ಯಾಧರನ ಉದ್ಧಾರ ಮೊದಲಾದವುಗಳು ನಿರೂಪಿತವಾಗಿವೆ.

ಕೃಷ್ಣಭಕ್ತ ನೆಲೆಸಿರುವ ಸ್ಥಳದಲ್ಲೇ ಸಕಲ ಸಮೃದ್ಧಿ ಒದಗುವಾಗ, ಸಾಕ್ಷಾತ್ ಕೃಷ್ಣನೇ ನೆಲೆಸಿದ ಮಧುರೆಯ ವೈಭವ ವರ್ಣನಾತೀತ ಎಂಬ [೧]ನಿರೂಪಣೆ, ಜರಾಸಂಧ ಮಧುರೆಯತ್ತ ಗದೆ ಬೀಸುವಾಗ ತೋರಿದ ಅವಿವೇಕದ [೨]ವಿಶ್ಲೇಷಣೆ, ಸಹಗಮನಕ್ಕಾಗಿ ಕುಂತಿ ಮಾದ್ರಿಯರಲ್ಲಿ ನಡೆದ ಸ್ಪರ್ಧೆ, ಭೀಮಸೇನನು [೩]ಬಾಲಲೀಲೆಯ ಪ್ರಸಂಗದಲ್ಲಿ ಕೌರವರನ್ನು ಲೀಲಾಜಾಲವಾಗಿ

---

೧. ಕೃಷ್ಣಾಶ್ರಯೋ ವಸತಿ ಯತ್ರ ಜನೋऽಪಿ ತತ್ರ ವೃದ್ಧಿರ್ಭವೇತ್ ಕಿಮು ರಮಾಧಿಪತೇರ್ನಿವಾಸೇ।
ವೃಂದಾವನಂ ಯದಧಿವಾಸತ ಆಸ ಸಂಧ್ಯಜ್ ಮಾಹೇಂದ್ರಸದ್ಮಸದೃಶಂ ಕಿಮು ತತ್ರ ಪುರ್ಯಾಮ್ ॥
– (೧೪/೭)

೨. ರಾಜಾ ಸ್ವಮಾತೃತ ಉತೋ ಗದಯಾ ಚ ಹೀನಃ ಕ್ರೋಧಾತ್ ಸಮಸ್ತನೃಪತೀನಭಿಸನ್ನಿಪಾತ್ಯ।
ಅಕ್ಷೌಹಿಣೀತ್ಯಧಿಕವಿಂಶಯುತೋऽತಿವೇಲಂ ದರ್ಪೋದ್ಧತಃ ಸಪದಿ ಕೃಷ್ಣಪುರೀಂ ಜಗಾಮ ॥ – (೧೪/೧೫)

೩. ಯುದ್ಧೇ ನಿಯುದ್ಧ ಉತ ಧಾವನ ಉತ್ಪ್ಲವೇ ಚ ವಾರಿಪ್ಲವೇ ಚ ಸಹಿತಾನ್ ನಿಖಿಲಾನ್ ಕುಮಾರಾನ್।
ಏಕೋ ಜಿಗಾಯ ತರಸಾ ಪರಮಾರ್ಯಕರ್ಮಾ ವಿಷ್ಣೋಃ ಸುಪೂರ್ಣಸದನುಗ್ರಹತಃ ಸುನಿತ್ಯಾತ್ ॥
ಸರ್ವಾನ್ ಪ್ರಗೃಹ್ಯ ವಿನಿಮಜ್ಜತಿ ವಾರಿಮಧ್ಯೇ ಶ್ರಾಂತಾನ್ ವಿಸೃಜ್ಯ ಹಸತಿ ಸ್ಮ ಸ ವಿಷ್ಣುಪದ್ಯಾಮ್।
ಸರ್ವಾನುದೂಹ್ಯ ಚ ಕದಾಚಿದುರುಪ್ರವಾಹಾಂ ಗಂಗಾಂ ಸುತಾರಯತಿ ಸಾರಸುಪೂರ್ಣಪೌಂಸ್ಯಃ ॥
ದ್ವೇಷಂ ಹ್ಯೃತೇ ನ ಹಿ ಹರೌ ತಮಸಿ ಪ್ರವೇಶಃ ಪ್ರಾಣೇ ಚ ತೇನ ಜಗತೀಮನು ತೌ ಪ್ರಪನ್ನೌ।
ತತ್ಕಾರಣಾನ್ಯಕುರುತಾಂ ಪರಮೌ ಕರಾಂಸಿ ದೇವದ್ವಿಷಾಂ ಸತತವಿಸ್ತೃತಸಾರಪೌಂಸ್ಯೌ ॥ –(೧೪/೬೩-೬೫)

ಸೋಲಿಸುತ್ತಿದ್ದ ಪರಿ, ಭೀಮು ಮಲಗಿದ್ದೇ ಅಪಾರ ಸಂಖ್ಯೆಯ ಮಹಾಸರ್ಪಗಳನ್ನು ದೂರಕ್ಕೆಸೆದ ಅದ್ಭುತಹಿರಿಮೆ[೧] — ಇವು ಈ ಅಧ್ಯಾಯದಲ್ಲಿ ಬಂದಿರುವ ವಿಶೇಷಾಂಶಗಳು.

ಹಿರಣ್ಯಕಶಿಪುವಿನಿಂದ ಪ್ರಹ್ಲಾದನಿಗೆ ಒದಗಿದ ಪೀಡೆಗಳನ್ನು ದುರ್ಯೋಧನಾದಿಗಳಿಂದ ಭೀಮಸೇನನಿಗೆ ಒದಗಿದ ಪೀಡೆಗಳೊಂದಿಗೆ ಹೋಲಿಸಿ ಭೀಮು ಹಾಗೂ ಪ್ರಹ್ಲಾದ ಇಬ್ಬರೂ ಅವುಗಳಿಂದ ಸುರಕ್ಷಿತವಾಗಿ ಪಾರಾದರೂ, ಪ್ರಹ್ಲಾದನ ಯಶಸ್ಸಿನಲ್ಲಿ ಅವನು ತನ್ನ ಸಂರಕ್ಷಣೆಗಾಗಿ ಪ್ರತಿಪ್ರಸಂಗದಲ್ಲೂ ಶ್ರೀಹರಿಯನ್ನು ಪ್ರಾರ್ಥಿಸುತ್ತಿದ್ದ ಅಂಶ ಕಾರಣವಾಗಿದ್ದರೆ ಭೀಮಸೇನನ ಯಶಸ್ಸು ಮಾತ್ರ ಅವನ ಸಹಜ ಹಿರಿಮೆಯಾಗಿತ್ತು ಎಂಬ ವಿಶೇಷ ನಿರ್ಣಯ ಬಂದಿದೆ. ಇದು ಈ ಅಧ್ಯಾಯದಲ್ಲಿ ಬಂದಿರುವ ಅತ್ಯಂತ ವಿಶೇಷವಾದ ಪ್ರಮೇಯ:

ಸ್ವಾತ್ಮಾವಸಾರ್ಥಮಧಿಕಾಂ ಸ್ತುತಿಮೇವ ಕೃತ್ವಾ ವಿಷ್ಣೋಃ ಸ ದೈತ್ಯತನಯೋ ಹರಿಣಾऽವಿತೋऽಭೂತ್ ।
ನ ತ್ವೌರಸಂ ಬಲಮಮುಷ್ಯ ಸ ಕೃಷ್ಯತೇ ಹಿ ಭೃತ್ಯೈರ್ಬಲಾತ್ ಸ್ವಪಿತುರೌರಸಮಸ್ಯ ವೀರ್ಯಮ್ ॥
– (೧೪/೮೦)

ಅದರಂತೆ ಭೀಮಸೇನ ಬಲರಾಮನ ಬಳಿ ಮಾಡಿದ ಗದಾಯುದ್ಧದ ಅಧ್ಯಯನದ ಹಿನ್ನೆಲೆಯ ವಿಶ್ಲೇಷಣೆಯೂ ತುಂಬ ಅಪೂರ್ವವಾದುದು (೧೪/೧೦೩):

ಪ್ರತ್ಯುದ್ಯಮೋ ಭಗವತೋऽಪಿ ಭವೇದ್ಗದಾಯಾಃ ಶಿಕ್ಷಾ ಯದಾ ಭಗವತಾ ಕ್ರಿಯತೇ ನ ಚೇಮಮ್ ।
ಕುರ್ಯಾದಿತಿ ಸ್ಮ ಭಗವತ್ಸಮನುಜ್ಞಯೈವ ರಾಮಾದಶಿಕ್ಷದುರುಗಾಯಪುರಃ ಸ ಭೀಮಃ ॥

ಹದಿನೈದನೆಯ ಅಧ್ಯಾಯ (ಶ್ಲೋಕಸಂಖ್ಯೆ : ೬೬)

ಶ್ರೀಕೃಷ್ಣನ ವಿಶೋಕನೆಂಬ ಪುತ್ರ ಭೀಮನಿಗೆ ಸಾರಥಿಯಾಗಿ ಶ್ರೀಕೃಷ್ಣನಿಂದಲೇ ನಿಡಲ್ಪಟ್ಟಿದ್ದು, ಪಾಂಡವರು ಶ್ರೀವೇದವ್ಯಾಸರ ಶಿಷ್ಯರಾಗಿ ಅಧ್ಯಯನ ಮಾಡಿದ್ದು, ದ್ರೋಣರ ಶಿಲೋಂಛವೃತ್ತಿಯ ಅದ್ಭುತಧಾರ್ಮಿಕ ಜೀವನ, ಅಶ್ವತ್ಥಾಮರಿಗೆ ಹಾಲನ್ನು ನೀಡುವ ಮೂಲಕ ದುರ್ಯೋಧನ ಅವರ ಮನಸ್ಸನ್ನು ಹಾಲಾಹಲವನ್ನಾಗಿಸಿದ್ದು, ಗೋಸಂಪಾದನೆಗಾಗಿ ದ್ರೋಣರು ಪರಶುರಾಮರ ಬಳಿ ತೆರಳಿದ್ದು, ಪರಶುರಾಮರ ಬಳಿ ದ್ರೋಣರ ಅಸ್ತ್ರಾಭ್ಯಾಸ, ದ್ರುಪದ ದ್ರೋಣರಿಗೆ ಮಾಡಿದ ಅಪಮಾನ, ಕೆರಳಿದ ದ್ರೋಣರು ದ್ರುಪದನ ಸೊಕ್ಕನ್ನು ಮುರಿಯಲು ಕೈಗೊಂಡ ನಿರ್ಧಾರ, ಅದಕ್ಕಾಗಿ ಅವರು ಕುರುಪಾಂಡವರ ಬಳಿ ತೆರಳಿ ಅವರಿಗೆ ಅಸ್ತ್ರಾಭ್ಯಾಸ

---

೧. ಕ್ಷಿಪ್ತ್ವಾ ಸುದೂರಮುರುನಾಗವರಾನಥಾಷ್ಟೌ ತದ್ವಂಶಜಾನ್ ಸ ವಿನಿಹತ್ಯ ಪಿಪೀಲಿಕಾವತ್ ।
ಜಘ್ನೇ ಚ ಸೂತಮಪಹಸ್ತ ಏವ ಭೀಮಃ ಸುಷ್ವಾಪ ಪೂರ್ವವದನುತ್ಥಿತ ಏವ ತಲ್ಪಾತ್ ॥ – (೧೪/೭೭)

ಮಾಡಿಸತೊಡಗಿದ್ದು, ಕರ್ಣ ಮತ್ತು ಏಕಲವ್ಯರಿಗೆ ವಿಶೇಷವಾದ ಅಸ್ತ್ರಗಳನ್ನು ಉಪದೇಶಿಸಲು ದ್ರೋಣರು ಉಪದೇಶಿಸಿದ್ದು, ಪರಶುರಾಮರ ಬಳಿ ಕರ್ಣನ ಅಸ್ತ್ರಅಭ್ಯಾಸ, ಪರಶುರಾಮರಿಂದ ಕರ್ಣನಿಗೆ ದೊರೆತ ವರಶಾಪಗಳು, ಏಕಲವ್ಯನ ಗುರುಭಕ್ತಿ, ಅವನು ನೀಡಿದ ಗುರುದಕ್ಷಿಣೆ, ರಹಸ್ಯವಾಗಿ ಅವನಿಗೆ ದ್ರೋಣರು ನೀಡಿದ ಅಸ್ತ್ರವಿದ್ಯೆ. ಇವು ಈ ಅಧ್ಯಾಯದ ಮುಖ್ಯ ವಿಷಯಗಳು.

ಪರಶುರಾಮರು ದ್ರೋಣರಿಗೆ ಅಸ್ತ್ರೋಪದೇಶ ಮಾಡಲು ಕಾರಣ ಇಲ್ಲಿಯ ಮತ್ತೊಂದು ವಿಶೇಷನಿರೂಪಣೆ :

> ದೃಷ್ಟ್ವೈವ ತಂ ಜಾಮದಗ್ನ್ಯೋಽಪ್ಯಚಿಂತಯತ್ ದ್ರೋಣಂ ಕರ್ತುಂ ಕ್ಷಿತಿಭಾರಾಪನೋದೇ
> ಹೇತುಂ ಸುರಾಣಾಂ ನರಯೋನಿಜಾನಾಂ ಹಂತಾ ಚಾಯಂ ಸ್ಯಾತ್ ಸಹ ಪುತ್ರೇಣ ಚೇತಿ ॥
>
> ತೇಷಾಂ ವೃದ್ಧಿಃ ಸ್ಯಾತ್ ಪಾಂಡವಾರ್ಥೇ ಹತಾನಾಂ ಮೋಕ್ಷೇಽಪಿ ಸೌಖ್ಯಸ್ಯ ನ ಸಂತತಿಶ್ಚ ।
> ಯೋಗ್ಯಾ ಸುರಾಣಾಂ ಕಲಿಜಾಃ ಸುಪಾಪಾಃ ಪ್ರಾಯೋ ಯಸ್ಮಾತ್ ಕಲಿಜಾಃ ಸಂಭವಂತಿ ॥
>
> ನ ದೇವಾನಾವಗಾಶತಂ ಪೂರುಷಾ ಹಿ ಸಂತಾನಜಾಃ ಪ್ರಾಯಶಃ ಪಾಪಯೋಗ್ಯಾಃ ।
> ನಾಕಾರಣಾತ್ ಸಂತತೇರಪ್ಯಭಾವೋ ಯೋಗ್ಯಃ ಸುರಾಣಾಂ ಸದಮೋಘರೇತಸಾಮ್ ॥
>
> ಅವ್ಯುಚ್ಛಿನ್ನೇ ಸಕಲಾನಾಂ ಸುರಾಣಾಂ ತಂತೌ ಕಲಿರ್ನೋ ಭವಿತಾ ಕಥಂಚಿತ್ ।
> ತಸ್ಮಾದುತ್ಪಾದ್ಯಾಃ ಸರ್ವ ಏತೇ ಸುರಾಂಶಾ ಏತೇನ ಸಾಕಂ ತನಯೇನ ವೀರಾಃ ॥
>
> – (೧೫/೧೨-೧೫)

ಕುರುಪಾಂಡವರ ಬಳಿಗೆ ತೆರಳಿದ ದ್ರೋಣರು ಅಪೂರ್ವ ರೀತಿಯಲ್ಲಿ ಮುದ್ರಿಕೆ ಹಾಗೂ ಚೆಂಡುಗಳನ್ನು ಬಾವಿಯಿಂದ ಮೇಲೆತ್ತಿಕೊಟ್ಟ ಪ್ರಸಂಗ, ಭೀಷ್ಮನು ಅಸ್ತ್ರವಿದ್ಯಾಭ್ಯಾಸಕ್ಕೆ ತೊಡಗದಿರಲು [೧]ವಿಶೇಷಕಾರಣ, ಕರ್ಣನಿಗೆ ಪರಶುರಾಮರು ಮಾಡಿದ ವಿಶೇಷಾನುಗ್ರಹದ ನಿರೂಪಣೆ, ಏಕಲವ್ಯನ ಗುರುಭಕ್ತಿಯ ವಿಶ್ಲೇಷಣೆ, ಈ ಅಧ್ಯಾಯದ ಇತರ ಕೆಲವು ಪ್ರಮುಖ ಘಟ್ಟಗಳು.

ಹದಿನಾರನೆಯ ಅಧ್ಯಾಯ (ಶ್ಲೋಕಸಂಖ್ಯೆ : ೩೩)

ಜರಾಸಂಧ ಮತ್ತೊಮ್ಮೆ ಮಧುರೆಯನ್ನು ಆಕ್ರಮಿಸಿದಾಗ ರಾಜನೀತಿಯ ಪ್ರದರ್ಶನಕ್ಕಾಗಿ ಕೃಷ್ಣ ಗೋಮಂತ ಪರ್ವತಕ್ಕೆ ತೆರಳಿದ್ದು, ಅಲ್ಲಿದ್ದಾಗ ಬಲಿಚಕ್ರವರ್ತಿ ಅಪಹರಿಸಿದ್ದ ನಾರಾಯಣನ

---

೧. ನ ಬುದ್ಧಿಪೂರ್ವಂ ವರ ಇಂದಿರಾಪತೇರನ್ಯತ್ರ ಮೇ ಗ್ರಾಹ್ಯ ಇತಿ ಸ್ಮ ಜಿಷ್ಣುಃ ।
ಕರೋತು ಗುರ್ವರ್ಥಮಿತಿ ಸ್ಮ ಚಿಂತಯನ್ ಭೀಮಃ ಪ್ರತಿಜ್ಞಾಂ ನ ಚಕಾರ ತತ್ರ ॥ – (೧೫/೩೮)

ಕಿರೀಟವನ್ನು ಗರುಡ ಶ್ರೀಕೃಷ್ಣನ ಶಿರಸ್ಸಿನ ಮೇಲೆ ಸಮರ್ಪಿಸಿದ್ದು, ಗೋಮಂತದಲ್ಲಿ ಬಲರಾಮನ ವಿಹಾರ, ಜರಾಸಂಧನಿಂದ ಗೋಮಂತಕ್ಕೆ ಅಗ್ನಿಸ್ಪರ್ಶ, ಅದನ್ನು ಕೃಷ್ಣಬಲರಾಮರು ಉಪಶಮನಗೊಳಿಸಿದ ಅಪೂರ್ವರೀತಿ, ಶ್ರೀಕೃಷ್ಣನಿಂದ ಸಪರಿವಾರನಾದ ಜರಾಸಂಧನ ಪರಾಭವ, ದಮಘೋಷನ ಪ್ರಾರ್ಥನೆಯಂತೆ ಕೃಷ್ಣನ ಕೊಲ್ಲಾಪುರ ಸಂದರ್ಶನ, ಅಲ್ಲಿ ಶ್ರೀಕೃಷ್ಣನಿಂದ ಸೃಗಾಲವಾಸುದೇವನ ವಧೆ — ಇವು ಈ ಅಧ್ಯಾಯದ ಮುಖ್ಯ ವಿಷಯಗಳು. ಹಿಂದಿನಂತೆ ಇಲ್ಲಿಯೂ ಸಹ ಹರಿವಂಶೋಕ್ತವಾದ ವಿಶೇಷವಾದ ಕೃಷ್ಣನ ಕಥೆ ನಿರೂಪಿತವಾಗಿದೆ.

ಗರುಡ ಶ್ರೀಕೃಷ್ಣನಿಗೆ ಕಿರೀಟ ಸಮರ್ಪಿಸಿದ ಪ್ರಸಂಗ ಶ್ರೀಹರಿಯ ರೂಪರೂಪಗಳಲ್ಲಿ ಅಭೇದವನ್ನು ಸಮರ್ಥಿಸುವುದು ಎಂಬ ವಿವರ, ಈ ಅಧ್ಯಾಯದ ಅತ್ಯಂತ ರೋಚಕ ಘಟ್ಟ :

ಕಿರೀಟಂ ತತ್ ಕೃಷ್ಣಮೂರ್ಧ್ನಿ ಪ್ರವಿಷ್ಟಂ ತತ್ತುಲ್ಯಮಾಸೀತ್ ತಸ್ಯ ರೂಪೇಷ್ವಭೇದಾತ್ ।
ತದಿಚ್ಛಯಾ ಚೈವ ನಾರಾಯಣಸ್ಯ ಶೀರ್ಷ್ಣ್ಯಪ್ಯಾಸೀದ್ಯುಗಪದ್ದುರ್ಗವಾರ್ಧ್ಯೌ ॥ –(೧೬/೯)

ಹದಿನೇಳನೆಯ ಅಧ್ಯಾಯ (ಶ್ಲೋಕಸಂಖ್ಯೆ : ೨೯೮)

ರುಗ್ಮಿಣೀ ಸ್ವಯಂವರಕ್ಕಾಗಿ ಜರಾಸಂಧಾದಿಗಳ ಪ್ರಯಾಣ, ಅಲ್ಲಿಗೆ ಆಗಮಿಸಿದ ಕೃಷ್ಣನ ವೈಭವ, ಗರುಡನ ರೆಕ್ಕೆಯ ಬಡಿತಕ್ಕೆ ಜರಾಸಂಧಾದಿಗಳ ಸೈನ್ಯ ಧೂಳೀಪಟವಾದದ್ದು, ಜರಾ–ಸಂಧಾದಿಗಳ ಸಮಾಲೋಚನೆ, ಕೃಷ್ಣನನ್ನು ಅವಮಾನಿಸುವ ಅವರ ದುರಾಲೋಚನೆ, ಕೃಷ್ಣನಿಗೆ ರತ್ನಾಭಿಷೇಕ ಮಾಡಲೆಂದು ಇಂದ್ರನಿಂದ ಆದೇಶ, ಜರಾಸಂಧಾದಿಗಳ ವ್ಯಥೆ, ಭೀಷ್ಮಕನ ತಮ್ಮಂದಿರಾದ ಕ್ರಥ ಕೈಶಿಕರ ಕೃಷ್ಣಭಕ್ತಿ, ಶ್ರೀಕೃಷ್ಣನಿಂದ ಭೀಷ್ಮಕನಿಗೆ ವಿಶ್ವರೂಪ ಪ್ರದರ್ಶನ, ಕಾಲಯವನ ವೃತ್ತಾಂತ, ಗರ್ಗಾಚಾರ್ಯರ ಪಶ್ಚಾತ್ತಾಪ, ಕಾಲಯವನ, ಜರಾಸಂಧರಿಂದ ಮಧುರೆಯ ಆಕ್ರಮಣ, ಶ್ರೀಕೃಷ್ಣನ ಆದೇಶದಿಂದ ವಿಶ್ವಕರ್ಮನಿಂದ ದ್ವಾರಕಾನಿರ್ಮಾಣ, ಕೃಷ್ಣನಿಂದ ಜರಾಸಂಧನ ಸೇನೆಯ ಸಂಹಾರ, ಜರಾಸಂಧನ ಪಲಾಯನ, ಮುಚುಕುಂದನಿಂದ ಕಾಲಯವನನ ಸಂಹಾರ, ಶ್ರೀಕೃಷ್ಣನಿಂದ ಮುಚುಕುಂದನ ಉದ್ಧಾರ, ರುಗ್ಮಿಣೀಸ್ವಯಂವರ, ರುಗ್ಮಿಯ ಪರಾಭವ, ರೇವತೀಕಲ್ಯಾಣ, ರುಗ್ಮಿಣೀಕಲ್ಯಾಣ, ಸ್ಯಮಂತಕೋಪಾಖ್ಯಾನ, ಜಾಂಬವತೀ–ಕಲ್ಯಾಣ, ಸತ್ಯಭಾಮಾಕಲ್ಯಾಣ, ಪ್ರದ್ಯುಮ್ನಾದಿಗಳ ಜನನ, ಜನಾರ್ದನನೆಂಬ ವಿಪ್ರನ ಮೂಲಕ ಶ್ರೀಕೃಷ್ಣನಿಗೆ ಹಂಸಡಿಭಿಕರ ಧೂರ್ತಸಂದೇಶ, ಪುಷ್ಕರದಲ್ಲಿ ನಡೆದ ಶ್ರೀಕೃಷ್ಣನೇತೃತ್ವದ ಯಾದವರೊಂದಿಗೆ ಹಂಸಡಿಭಿಕರ ಯುದ್ಧ, ಅಂದು ರಾತ್ರಿ ಪುಷ್ಕರಕ್ಷೇತ್ರದಲ್ಲಿ ಶ್ರೀಕೃಷ್ಣನ ವಾಸ, ವಿಚಕ್ರನ ಸಂಹಾರ, ಶಿವನ ಭೂತಗಳನ್ನು ಕೃಷ್ಣ ಮರಳಿ ಕೈಲಾಸಕ್ಕೆ ಕಳುಹಿಸಿದ್ದು, ಬಲರಾಮನಿಂದ ಹಿಡಿಂಬಾಸುರನ ಪರಾಭವ, ಯಮುನಾತೀರದಲ್ಲಿ ಮುಂದುವರೆದ ಯುದ್ಧ, ಸಾತ್ಯಕಿಯಿಂದ

ಬ್ರಹ್ಮದತ್ತನ ವಧೆ, ಶ್ರೀಕೃಷ್ಣನಿಂದ ಹಂಸಡಿಭಿಕರ ಸಂಹಾರ — ಇವು ಈ ಅಧ್ಯಾಯದ ಮುಖ್ಯ ವಿಷಯಗಳು.

ಜರಾಸಂಧನ ನೇತೃತ್ವದ ದುರಾಲೋಚನೆಯ ಸಭೆ, ಕೃಷ್ಣನಿಗೆ ರಾಜರಿಂದ ನಡೆದ ಅದ್ಭುತ ರತ್ನಾಭಿಷೇಕ, ಶ್ರೀಕೃಷ್ಣರುಗ್ಮಿಣಿಯರ ವಿಶ್ವರೂಪ ಪ್ರದರ್ಶನ, ಕಾಲಯವನನ ಬಳಿಗೆ ಕೃಷ್ಣ ಕೃಷ್ಣಸರ್ಪದ ಮೂಲಕ ಕಳುಹಿಸಿದ ಸಂದೇಶ, ದ್ವಾರಕಾನಿರ್ಮಾಣದ ವೈಭವ, ಮುಚುಕುಂದನ ಉದ್ಧಾರ, ಸ್ಯಮಂತಕೋಪಾಖ್ಯಾನದ ನಿರೂಪಣೆ, ಹಂಸಡಿಭಿಕರಿಂದ ದುರ್ವಾಸರಿಗೆ ನಡೆದ ಅಪಚಾರ, ಕೃಷ್ಣ ಶಿವನ ಭೂತಗಳನ್ನು ಕೈಲಾಸಕ್ಕೆ ಅಟ್ಟಿದ ಅಪೂರ್ವ ರೀತಿ, ಸಾತ್ಯಕಿಡಿಭಿಕರ ನಡುವೆ ನಡೆದ ಅಪೂರ್ವ ಖಡ್ಗಯುದ್ಧ, ಹಂಸಡಿಭಿಕರ ವಿಚಿತ್ರಸಾವು ಈ ಅಧ್ಯಾಯದ ರೋಚಕ ಘಟ್ಟಗಳು. ಇಡೀ ಅಧ್ಯಾಯ ಪ್ರಮಾಣಿಕಾವೃತ್ತದಲ್ಲಿ ರಚಿತವಾಗಿದ್ದು ಕಥೆಯ ಓಟ ಪರ್ವತದಿಂದ ಧುಮ್ಮಿಕ್ಕುವ ಜಲಧಾರೆಯಂತೆ ಅತ್ಯಂತ ಮನೋಹರ. ಇಲ್ಲಿ ಬಂದಿರುವ ರುಗ್ಮಿಣಿಸ್ವಯಂವರದ ಕಥೆ ಪ್ರಧಾನವಾಗಿ ಹರಿವಂಶವನ್ನಾಧರಿಸಿದ್ದು ಭಾಗವತದಲ್ಲಿ ಬರುವ ನಿರೂಪಣೆಯೊಂದಿಗೆ ಸಮ–ನ್ವಯಗೊಳಿಸಲ್ಪಟ್ಟಿದೆಯೆಂಬುದೂ ಗಮನಾರ್ಹ.

ಹಿಂದಿನ ಸಂಪುಟದಂತೆ ಈ ಸಂಪುಟದಲ್ಲೂ ಮೂಲಶ್ಲೋಕಗಳು, ಅದರ ಅನುವಾದ, ವಿವರಣೆ, ಸಂವಾದಿಯಾದ ಮೂಲಗ್ರಂಥಗಳ ಶ್ಲೋಕಗಳು, ಅಡಿಟಿಪ್ಪಣಿಯಲ್ಲಿ ವ್ಯಾಖ್ಯಾನಗಳ ವಿಶೇಷಾಂಶಗಳು ಮೊದಲಾದವುಗಳನ್ನು ಕೊಡಲಾಗಿದೆ. ಇತರ ವಿಶೇಷಾಂಶಗಳನ್ನು ಕೊನೆಯ ಸಂಪುಟದ ಮುನ್ನುಡಿಯಲ್ಲಿ ಕಾಣಬಹುದು.

******

ಪ್ರಸುತ್ತ ಸಂಪುಟದ ಪ್ರಕಾಶನಕ್ಕೂ ಶ್ರೀಮತಿ ಶುಭಾ ರಂಗನಾಥ್ ಮತ್ತು ಶ್ರೀ ಡಿ.ಎಸ್.ರಂಗನಾಥ್ ದಂಪತಿಗಳು ತಮ್ಮ ಸುಪುತ್ರ ದಿ|| ಶ್ರೀನಿವಾಸ ಶ್ರೇಯಸ್‌ನ ಶ್ರೇಯಸ್ಸಿಗಾಗಿ ಆರ್ಥಿಕವಾಗಿ ಸೇವೆ ಸಲ್ಲಿಸಿ, ವಿಶೇಷಪುಣ್ಯಭಾಗಿಗಳಾಗಿರುವರು. ಇಂತಹ ಅನುಪಮ ಪುಣ್ಯಕಾರ್ಯಕ್ಕಾಗಿ ಈ ದಂಪತಿಗಳನ್ನು ನಮ್ಮ ಪ್ರತಿಷ್ಠಾನವು ಹೃತ್ಪೂರ್ವಕವಾಗಿ ಅಭಿನಂದಿಸುತ್ತಾ ಅವರ ಸುಪುತ್ರನ ಸದ್ಗತಿಪ್ರಾಪ್ತಿಗಾಗಿ ಪ್ರಾರ್ಥಿಸುವಲ್ಲಿ ತಾನೂ ಭಾಗಿಯಾಗಿದೆ.

ಬೆಂಗಳೂರು ವ್ಯಾಸನಕೆರೆ ಪ್ರಭಂಜನಾಚಾರ್ಯ

ತಾರಣ – ಬಲಿಪ್ರತಿಪತ್(ದೀಪಾವಳಿ)

೧೩–೧೧–೨೦೦೪, ಶನಿವಾರ

ಅಧ್ಯಾಯ - ೧೦

(ಶ್ರೀವೇದವ್ಯಾಸಾವತಾರನಿರೂಪಣ)

(ಸಮುದ್ರಮಥನ, ಶ್ರೀವ್ಯಾಸಾವತಾರ, ವೇದವಿಭಾಗ ಇತ್ಯಾದಿ)

ವ್ಯಾಸಾವತಾರಕ್ಕಾಗಿ ದೇವತೆಗಳ ಪ್ರಾರ್ಥನೆ

ದ್ವಾಪರೇಽಥ ಯುಗೇ ಪ್ರಾಪ್ತೇ ತ್ವಷ್ಟಾವಿಂಶತಿಮೇ ಪುನಃ ।
ಸ್ವಯಂಭುಶರ್ವಶಕ್ರಾದ್ಯಾ ದುಗ್ಧಾಬ್ಧೇಸ್ತೀರಮಾಯಯುಃ ॥ ೧ ॥

ಅ: ಅನಂತರ ಇಪ್ಪತ್ತೆಂಟನೆಯ ದ್ವಾಪರಯುಗವು ಬಂದಾಗ ಬ್ರಹ್ಮರುದ್ರಾದಿದೇವತೆ-ಗಳೆಲ್ಲ ಪುನಃ ಕ್ಷೀರಸಮುದ್ರದ ತೀರಕ್ಕೆ ತೆರಳಿದರು.

ವಿ: ೧) ಇಲ್ಲಿ 'ಪುನಃ' ಎಂಬುದು ಹಿಂದೆ ಸಮುದ್ರಮಥನಕಾಲದಲ್ಲಿ ಶ್ರೀಹರಿಯನ್ನು ಮೊರೆ-ಹೊಕ್ಕಿದ್ದಂತೆ, ಈಗ ಗೌತಮಶಾಪದ ಪರಿಹಾರಕ್ಕೋಸ್ಕರವಾಗಿ ಮತ್ತೊಮ್ಮೆ ಮೊರೆಹೊಕ್ಕರು ಎಂಬ ಅರ್ಥದಲ್ಲಿಯೂ ಹಾಗೂ ಹಿಂದೆ ಕೆಲವು ಸಲ ವ್ಯಾಸರೂಪದಿಂದ ಅವತರಿಸಿದ್ದ ನಾರಾಯಣನು ಪುನಃ ಅವತರಿಸಲೆಂದು ಪ್ರಾರ್ಥಿಸಲು ಎಂಬ ಅರ್ಥದಲ್ಲಿಯೂ ಪ್ರಯೋಗಿಸಲ್ಪಟ್ಟಿದೆ.[೧]

೨) ಶ್ರೀಹರಿಯು ವ್ಯಾಸರೂಪದಿಂದ ಮೂರು, ಏಳು, ಹದಿನಾರು ಹಾಗೂ ಇಪ್ಪತ್ತೈದನೆಯ ದ್ವಾಪರಗಳಲ್ಲಿ ಅವತರಿಸಿದ್ದ ಉಲ್ಲೇಖ [೨]ಭಾಗವತತಾತ್ಪರ್ಯದಲ್ಲಿದೆ.

೩) 'ದ್ವಾಪರೇ ಪ್ರಾಪ್ತೇ' ಎಂಬುದಕ್ಕೆ 'ದ್ವಾಪರಯುಗದ ಕೊನೆಯ ಭಾಗ ಬರುತ್ತಿರಲು' [೩]ಎಂದರ್ಥ.

೪) ಕ್ಷೀರಸಾಗರವು ಮೂವತ್ತೆರಡು ಲಕ್ಷ ಯೋಜನ ವಿಸ್ತಾರ ಹೊಂದಿರುವಂತಹುದು. ಅದರ ಮಧ್ಯದಲ್ಲಿ ಶ್ವೇತದ್ವೀಪವಿದೆ. ಇಲ್ಲಿ ತೀರ ಎಂದರೆ ದಕ್ಷಿಣಕ್ಷೀರಸಮುದ್ರಪ್ರವಾಹದ ಉತ್ತರತೀರ[೪] ಎಂದು ಭಾವ.

---

೧. ಪೂರ್ವಂ ಚತುರ್ವಾರಂ ವ್ಯಾಸಾವತಾರಾರ್ಥಂ ಕೃತಸ್ತುತ್ಯಪೇಕ್ಷಯಾ ಪುನರಿತ್ಯುಕ್ತಮ್ । – (ಜ.)

ರಾಮಾವತಾರಾರ್ಥಂ ಗಮನಾಪೇಕ್ಷಯಾ ಪುನಃಶಬ್ದಃ । ಅಥವಾ ಪೂರ್ವೇ ವ್ಯಾಸಾವತಾರಾರ್ಥಂ ಗಮನಾಪೇಕ್ಷಯಾ ಪುನಃಶಬ್ದಃ । – (ತಿ.)

೨. ತೃತೀಯೇ ಸಪ್ತಮೇ ಚೈವ ಷೋಡಶೇ ಪಂಚವಿಂಶಕೇ ।
ಅಷ್ಟಾವಿಂಶೇ ಯುಗೇ ಕೃಷ್ಣಃ ಸತ್ಯವತ್ಯಾಮಜಾಯತ ।
ವ್ಯಾಸಾಚಾರ್ಯಸ್ತು ಪೂರ್ವೇಷು ಚರಮೇ ಸ್ವಯಮೇವ ತು ।
ವಿವ್ಯಾಸ ವೇದಾಂಶ್ಚಕ್ರೇ ಚ ಭಾರತಂ ವೇದಸಂಮಿತಮ್' ಇತಿ ಚ ॥ – ಭಾ.ತಾ. (೩/೭/೩೬)

೩. ದ್ವಾಪರೇ ಯುಗೇ ಪ್ರಾಪ್ತೇ ಪ್ರಕರ್ಷೇಣಾಪ್ತೇ ಪ್ರಾಪ್ತೇ ಸಮಾಪ್ತಪ್ರಾಯೇ ಸತಿ । – (ಜ.)

ಪಯೋಬ್ಧೇರುತ್ತರಂ ತೀರಮಾಸಾದ್ಯ ವಿಬುಧರ್ಷಭಾಃ ।
ತುಷ್ಟುವುಃ ಪುಂಡರೀಕಾಕ್ಷಮಕ್ಷಯಂ ಪುರುಷೋತ್ತಮಮ್ ॥ ೨ ॥

ಅ: ಕ್ಷೀರಸಾಗರದ [೧]ಉತ್ತರತೀರವನ್ನು ಸೇರಿ, ದೇವಶ್ರೇಷ್ಠರು ಕಮಲದಂತೆ ಕಣ್ಣುಳ್ಳ, ನಾಶರಹಿತನಾದ, ಪುರುಷೋತ್ತಮನಾದ ಶ್ರೀಹರಿಯನ್ನು [೨]ಸ್ತುತಿಸಿದರು.

ನಮೋ ನಮೋಽಗಣ್ಯಗುಣೈಕಧಾಮ್ನೇ
ಸಮಸ್ತವಿಜ್ಞಾನಮರೀಚಿಮಾಲಿನೇ ।
ಅನಾದ್ಯವಿಜ್ಞಾನತಮೋನಿಹಂತ್ರೇ
ಪರಾಮೃತಾನಂದಪದಪ್ರದಾಯಿನೇ ॥ ೩ ॥

ಅ: ''ಎಣಿಕೆ ಇರದ ಗುಣಗಳಿಗೆ ಮುಖ್ಯನೆಲೆಯಾದವನೂ, ಪರಿಪೂರ್ಣವಾದ ವಿಜ್ಞಾನಕಿರಣಗಳ ಧಾರಕನೂ, ಅನಾದಿಯಾದ ಅಜ್ಞಾನದ ಕತ್ತಲನ್ನು ಸಂಪೂರ್ಣ ನಾಶಮಾಡುವವನೂ, ಸಾತ್ತ್ವಿಕಜೀವರಿಗೆ ಶಾಶ್ವತ ಆನಂದರೂಪವಾದ ಮೋಕ್ಷಪದವಿಯನ್ನು ನೀಡುವವನೂ ಆದ ಶ್ರೀಹರಿಗೆ ನಮಸ್ಕಾರವು, ನಮಸ್ಕಾರವು.

ವಿ: ೧) ಪರಮಾತ್ಮನ ಅನಂತಗುಣಗಳನ್ನು ಸ್ತುತಿಸಿ, ಪುನಃ ಜ್ಞಾನಪೂರ್ಣ, ಅಜ್ಞಾನ–ಪರಿಹಾರಕ, ಮುಕ್ತಿದಾಯಕ ಎಂದು ಪ್ರತ್ಯೇಕ ಸ್ತುತಿಸುತ್ತಿರುವುದು ಈಗ ಅಜ್ಞಾನ ಪರಿಹರಿಸಿ, ಸುಜ್ಞಾನ ನೀಡಿ, ಮೋಕ್ಷ ಕರುಣಿಸು ಎಂಬ ವಿಶೇಷಪ್ರಾರ್ಥನೆ ಸಲ್ಲಿಸಲು[೩] ಎಂದರ್ಥ.

---

೪. ದ್ವಾತ್ರಿಂಶಲ್ಲಕ್ಷಯೋಜನವಿಸ್ತೃತಕ್ಷೀರಸಮುದ್ರಮಧ್ಯೇ ಶ್ವೇತದ್ವೀಪಃ । ಸ ಚ ದಕ್ಷಿಣಕ್ಷೀರಸಮುದ್ರ-ಪ್ರವಾಹಸ್ಯೋತ್ತರತೀರ ಇತಿ ಭಾವಃ। - (ವಾ.)

೧. 'ಪಯೋಬ್ಧೇರುತ್ತರಂ ತೀರಮಾಸಾದ್ಯ' ಇತ್ಯತ್ರೋತ್ತರಮುತ್ತಮಂ ತೀರಮಿತ್ಯಸ್ಯ ವಿಶೇಷಣಮ್ । ಲೋಕೋತ್ತರಮಿತಿವತ್ । ಯದ್ವಾ ಉತ್ ಊರ್ಧ್ವಂ ತಾರಯತಿ ಸಂಸಾರಾದುದ್ಧೃತ್ಯ ಊರ್ಧ್ವಲೋಕಂ ನಯತೀತಿ ಉತ್ತರೋ ಭಗವಾನಿತ್ಯರ್ಥಃ । 'ಪುಂಡರೀಕಾಕ್ಷಂ ತುಷ್ಟುವು'ರಿತಿ । ಅಥವಾ ಕ್ಷೀರಸಮುದ್ರಸ್ತು ದ್ವಾತ್ರಿಂಶಲ್ಲಕ್ಷವಿಸ್ತೃತಃ । ತತ್ಪರತಃ ಭೂಭಾಗಃ ಷಡ್ಲಕ್ಷವಿಸ್ತೃತಃ ತತ್ಪಶ್ಚಾದ್ಭಾಗೇಽಪಿ ದುರ್ಗಾಭಿಧೋ ಭಾಗಃ ಷಡ್ಲಕ್ಷವಿಶಾಲಃ । ಕ್ಷೀರಸಮುದ್ರೇಽಪಿ ಶ್ವೇತದ್ವೀಪಪುರತಃ ಪಶ್ಚಾದಪಿ ಪೃಥಕ್ ಷಡ್ಲಕ್ಷವಿಸ್ತೃತಃ ಮೇರುಸದನಾದಾಗತಾ ದೇವಾಃ ಪುರತಃ ಸ್ಥಿತಷಡ್ಲಕ್ಷಾತ್ಮಕಮೇಕಂ ಸಮುದ್ರಭಾಗಮತಿಕ್ರಮ್ಯ ಭೂಭಾಗೇ ಸ್ಥಿತ್ವಾ ಪುರುಷೋತ್ತಮಂ ತುಷ್ಟುವುರಿತಿ । – (ರಾ.)

೨. 'ಸುಪರ್ಣಾ ಋಷಯೋ ವ್ಯಾಸಂ ನಾಥಮಾನಾ ಯಯುಃ ಸದಾ ।
ಧ್ವಾಂತಂ ನಿವಾರಯಾಸ್ಮಾಕಂ ಮುಮುಗ್ಧೀತಿ ಚ ವಾದಿನಃ' ಇತಿ ವ್ಯಾಸತಂತ್ರೇ॥ – ಭಾ. ತಾ.(೧೧/೪/೧೯)

೩. ಯದ್ಯಪಿ ಅಗಣ್ಯಗುಣೈಕಧಾಮ್ನ ಇತ್ಯತ್ರೈವ ಸಮಸ್ತಗುಣಾನಾಮಪಿ ಪ್ರವೇಶಃ । ತಥಾಽಪಿ ಜ್ಞಾನೇನಾಜ್ಞಾನಂ ನಿಹತ್ಯ ಸಜ್ಜನಾನಾಂ ಮೋಕ್ಷದಾನಾಯ ತ್ವಾಮರ್ಥಯಿತುಮಾಗತಾ ಇತಿ ಸೂಚನಾಯ ಗುಣತ್ರಯಸ್ಯ ವಿಶಿಷ್ಯ ಕಥನಮ್ । – (ವಾ.)

೨) ಗೌತಮಶಾಪದಿಂದ ಒದಗಿದ್ದ ಅಜ್ಞಾನವನ್ನು ಪರಿಹರಿಸುವ ಸಾಮರ್ಥ್ಯವು ಸಮಸ್ತವಿಜ್ಞಾನಮರೀಚಿಮಾಲಿಯಾದ ಭಗವಂತನಿಗೆ ಸುಲಭಸಾಧ್ಯವೆಂಬುದು 'ಅನಾದ್ಯವಿಜ್ಞಾನ–ತಮೋನಿಹಂತ್ರೇ' ಎಂಬ ಪದದಿಂದ ಸೂಚಿತ[೧].

ದುರ್ವಾಸರ ಶಾಪದಿಂದ ಇಂದ್ರನ ಐಶ್ವರ್ಯನಾಶ

[೨]ಸ್ವದತ್ತಮಾಲಾಭುವಿಪಾತಕೋಪತೋ
ದುರ್ವಾಸಸಃ ಶಾಪತ ಆಶು ಹಿ ಶ್ರಿಯಾ ।
ಶಕ್ರೇ ವಿಹೀನೇ ದಿತಿಜೈಃ ಪರಾಜಿತೇ
ಪುರಾ ವಯಂ ತ್ವಾಂ ಶರಣಂ ಗತಾಃ ಸ್ಮಃ ॥ ೪ ॥

ಅ: ಹಿಂದೆ ತಾವಿತ್ತ ಮಾಲೆಯನ್ನು ಭೂಮಿಗೆ ಬೀಳಿಸಿದ್ದರಿಂದಾಗಿ ಕೋಪಗೊಂಡಂತಹ ದುರ್ವಾಸರ ಶಾಪದಿಂದ ಇಂದ್ರ ಕೂಡಲೆ ಸಂಪತ್ತಿನಿಂದ ಹೀನನಾದ; ದೈತ್ಯರಿಗೆ ಸೋತ; ಆಗ ನಾವು ನಿನ್ನನ್ನು ಶರಣುಹೊಕ್ಕಿದ್ದೆವು.

ವಿ: ೧) ಈಗ ಮತ್ತೊಮ್ಮೆ ಉಪಕಾರ ಮಾಡು ಎಂದು ಪ್ರಾರ್ಥಿಸಲೆಂದು ಹಿಂದಿನ ಉಪಕಾರವನ್ನು ಸ್ಮರಿಸುತ್ತಿರುವರು[೨].

೨) ಕೋಪಗೊಂಡ ಋಷಿಯ ಶಾಪಕ್ಕೆ ಸಂಪತ್ತನ್ನು ನಾಶಪಡಿಸುವ ಶಕ್ತಿ ಇದೆ ಎಂಬುದನ್ನು 'ಹಿ' ಶಬ್ದದಿಂದ ಸೂಚಿಸಿರುವರು[೩].

೩) ವಿಷ್ಣುಪುರಾಣದಲ್ಲಿ ಬಂದಿರುವಂತೆ ಶಾಪಪ್ರಸಂಗ ಹೀಗಿದೆ. ಇಂದ್ರನೊಮ್ಮೆ ಐರಾವತದ ಮೇಲೆ ಪಯಣಿಸುತ್ತಿದ್ದಾಗ ಅಲ್ಲಿಗೆ ಆಗಮಿಸಿದ ದುರ್ವಾಸಮುನಿಗಳು ಅವನಿಗೊಂದು ಹೂಮಾಲೆ ನೀಡಿದರು. ಅದನ್ನು ಇಂದ್ರ ಇದೊಂದು ಅರ್ಕಪುಷ್ಪಮಾಲೆ ಎಂಬ ಅವಜ್ಞೆಯಿಂದ ಐರಾವತಕ್ಕೆ ಮುಡಿಸಿದ. ಐರಾವತವು ಅದನ್ನು ಸೊಂಡಿಲಿನಿಂದೆತ್ತಿ ನೆಲಕ್ಕೆ ಬಿಸಾಡಿತು. ಅದರಿಂದ ಕೋಪಗೊಂಡ ದುರ್ವಾಸರು ಇಂದ್ರನ ಸಂಪತ್ತಿನ ಮದವೇ ಅಂತಹ ದ್ರೋಹಕ್ಕೆ ಕಾರಣವಾದ್ದರಿಂದ ಅದೆಲ್ಲ ನಾಶವಾಗಲಿ ಎಂದು [೪]ಶಪಿಸಿದರು.

---

೧. ಅನಾದಿಪದಂ ಸಾದಿಗೌತಮಶಾಪಜಾಜ್ಞಾನನಿರ್ಹರಣಶಕ್ತಿಃ ಕಿಂ ವಾಚ್ಯೇತಿ ಸೂಚನಾಯ । –(ವಾ.)

೨. ಕರಿಷ್ಯಮಾಣೋಪಕಾರೇ ರುಚ್ಯುತ್ಪಾದನಾಯ ಪ್ರಾಕ್ ಕೃತಮುಪಕಾರಮನುವದಂತಿ- ಸ್ವದತ್ತೇತ್ಯಾದಿನಾ । ಸ್ವದತ್ತಮಾಲಾಭುವಿಪಾತಕೋಪತ ಇತ್ಯತ್ರ । ವನೇಚರ ಇತಿವತ್ ಸಪ್ತಮ್ಯಾ ಅಲುಕ್ ।

೩. ಶ್ರಿಯಾ ವಿಹೀನೇ ಸತಿ ಹೀತಿ ಹಿಶಬ್ದೇನ ಕುಪಿತರ್ಷಿಶಾಪಸ್ಯ ಸಂಪದ್ವಿಮೋಚನಶಕ್ತಿಪ್ರಸಿದ್ಧಿಂ ಸೂಚಯತಿ ॥ –(ವಾ.)

೪) ದುರ್ವಾಸರು ನೀಡಿದ್ದು ಹರಿನಿರ್ಮಾಲ್ಯ. ಅದನ್ನು ಅವರು ಇಂದ್ರನಿಗೆ ನೀಡಲು ಕಾರಣ ಆತ ಅವರ ಶಿವರೂಪದ ಶಿಷ್ಯ. ಅದಕ್ಕೆ ದ್ರೋಹವೆಸಗಿದ್ದಕ್ಕಾಗಿ ಇಂದ್ರನಿಗೆ ಅಂತಹ ಶಾಪ. ಹರಿನಿರ್ಮಾಲ್ಯಕ್ಕೆ ಮಾಡುವ ಅಪಚಾರ ಐಶ್ವರ್ಯನಾಶಕ ಎಂಬುದು ಇಲ್ಲಿಯ ತತ್ತ್ವ. ಆದರವಿಲ್ಲದವರಿಗೆ ಶ್ರೀಹರಿಯ ನಿರ್ಮಾಲ್ಯಾದಿಗಳನ್ನು ನೀಡಬಾರದು ಎಂದು ಅದಕ್ಕೇ ಶಾಸ್ತ್ರದ ಆದೇಶ. ಇಲ್ಲಿ ದುರ್ವಾಸರು ನೀಡಿದ್ದು ಶಿಷ್ಯ ಎಂಬ ವಾತ್ಸಲ್ಯಬುದ್ಧಿಯಿಂದ. ಅದನ್ನರಿಯದೇ ದ್ರೋಹವೆಸಗಿದ್ದು ಇಂದ್ರನ ಅಪರಾಧ. ಅವನ ಈ ತಪ್ಪಿಗೆ ಮುಖ್ಯಕಾರಣ ಪ್ರಾರಬ್ಧಕರ್ಮವೆಂದು ತಿಳಿಯಬೇಕು.

ಮಂದರೋದ್ಧಾರ

ತ್ವದಾಜ್ಞಯಾ [೫]ಬಲಿನಾ ಸಂದಧಾನಾ
ವರಾದ್ಗಿರೀಶಸ್ಯ ಪರೈರಚಾಲ್ಯಮ್ ।
ವೃಂದಾರಕಾ ಮಂದರಮೇತ್ಯ ಬಾಹುಭಿ-
ರ್ನ ಶೇಕುರುದ್ಧರ್ತುಮಿಮೇ ಸಮೇತಾಃ [೬] ॥ ೫ ॥

ಅ: ನಿನ್ನ ಆದೇಶದಂತೆ ದೇವತೆಗಳು ಬಲಿ ಚಕ್ರವರ್ತಿಯೊಂದಿಗೆ ಸಂಧಿ ಮಾಡಿಕೊಂಡು ಮಂದರಪರ್ವತವನ್ನು ಸಮೀಪಿಸಿದರು. ಅದು ಶಿವನ ವರದಿಂದಾಗಿ ಬೇರೆಯವರಿಂದ ಅಲುಗಾಡಿಸಲೂ ಅಸಾಧ್ಯವಾಗಿತ್ತು. ಅವರೆಲ್ಲ ಒಟ್ಟಾಗಿ ಪ್ರಯತ್ನಿಸಿದರೂ, ತಮ್ಮ ಕೈಗಳಿಂದ ಅದನ್ನು ಮೇಲೆತ್ತಲು [೬]ಸಮರ್ಥರಾಗಲಿಲ್ಲ.

---

೪. ಇಂದ್ರೋ ಇಯಂ ಅರ್ಕಪುಷ್ಪಮಾಲೇತ್ಯುದಾಸೀನಬುದ್ಧ್ಯಾ ಐರಾವತಕುಂಭೇ ನಿಧಾಯ ಗಚ್ಛತಿ ಸತಿ ಭುವಿ ಪಾತಿತಾಂ ಮಾಲಾಂ ದೃಷ್ಟ್ವಾ ಶಶಾಪೇತಿ ಪೌರಾಣಿಕೀಕಥಾನುಸಂಧೇಯಾ । – (ಜ.)

ಆದಾಯಾಮರರಾಜಾಯ ಚಿಕ್ಷೇಪೋನ್ಮತ್ತವನ್ಮುನಿಃ ।
ಗೃಹೀತ್ವಾऽಮರರಾಜೇನ ಸ್ವಗೈರಾವತಮೂರ್ಧನಿ ॥
ನ್ಯಸ್ತಾ ರರಾಜ ಕೈಲಾಸಶಿಖರೇ ಜಾಹ್ನವೀ ಯಥಾ ।
ಮದಾಂಧಕಾರಿತಾಕ್ಷೋऽಸೌ ಗಂಧಾಕೃಷ್ಟೇನ ವಾರಣಃ ॥
ಕರೇಣಾಘ್ರ್ಯಾಯ ಚಿಕ್ಷೇಪ ತಾಂ ಸ್ರಜಂ ಧರಣೀತಲೇ ।
ತತಶ್ಚುಕ್ರೋಧ ಭಗವಾನ್ ದುರ್ವಾಸಾ ಮುನಿಸತ್ತಮಃ ॥
– ವಿಷ್ಣುಪುರಾಣ (೧/೯/೮-೧೧) (ಜ., ತಿ. ಉದಾಹೃತ)

೫. ಬಲಿನಾ ಕರ್ಮದೇವಬಲಿನಾ ನ ತು ಬಲಿನಾಮ್ನಾऽಸುರೇಣ । – (ಜ.)

೬. ಸಮುದ್ಧರ್ತುಮಶಕ್ತಾ ವೈ ಸರ್ವೇ ದೇವಗಣಾಸ್ತದಾ ।
ವಿಷ್ಣುಮಾಸೀನಮಭ್ಯೇತ್ಯ ಬ್ರಹ್ಮಾಣಂ ಚೇದಮಬ್ರುವನ್ ॥ – ಭಾರತ (ಆದಿ. ೧೬/೪)

ವಿ: ಮಂದರಪರ್ವತವು ಸಪ್ತಕುಲಪರ್ವತಗಳಲ್ಲಿ ಒಂದು :

ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನ್ ಋಕ್ಷವಾನಪಿ ।
ವಿಂಧ್ಯಶ್ಚ ಪಾರಿಯಾತ್ರಶ್ಚ ಸಪ್ತೈತೇ ಕುಲಪರ್ವತಾಃ ॥ – ಭಾರತ(ಭೀಷ್ಮ.೯/೧೧)

ತದಾ ತ್ವಯಾ ನಿತ್ಯಬಲತ್ವಹೇತುತೋ
ಯೋಽನಂತನಾಮಾ ಗರುಡಸ್ತದಂಸಕೇ ।
ಉತ್ಪಾಟ್ಯ ಚೈಕೇನ ಕರೇಣ ಮಂದರೋ
ನಿಧಾಪಿತಸ್ತಂ ಸ ಸಹ ತ್ವಯಾಽವಹತ್ ॥ ೬ ॥

ಅ: ಆಗ ನಿತ್ಯಶಕ್ತಿಸಂಪನ್ನನಾದ ನೀನು, ಒಂದೇ ಕೈಯಿಂದ ಮಂದರವನ್ನು ಮೇಲೆತ್ತಿ ಅನಂತ ಎಂಬ ಹೆಸರಿನ ಗರುಡನ ಹೆಗಲಿನ ಮೇಲೆ ಇರಿಸಿದೆ. ಅವನು ನಿನ್ನೊಂದಿಗೆ ಅದನ್ನೂ ಹೊತ್ತ.

ವಿ: ೧) ಭಾಗವತದಲ್ಲಿ ದೇವತೆಗಳೇ ಮಂದರವನ್ನು ಎತ್ತಿದರು ಎಂಬ ಅರ್ಥದ ಮಾತಿದೆ. ಶಿವವರವಿದ್ದದ್ದರಿಂದ ಅದನ್ನು ಎತ್ತಲು ಇತರ ದೇವತೆಗಳಿಗೆ ಸಾಧ್ಯವೇ ಇರಲಿಲ್ಲ. ಆದ್ದರಿಂದ ಶ್ರೀಹರಿಯೇ ಅದನ್ನು ಎತ್ತಿದನು. ಭಾಗವತದಲ್ಲಿ ಬಂದಿರುವ ಉಲ್ಲೇಖ ಮಾರ್ಗಮಧ್ಯದಲ್ಲಿ ಶ್ರೀಹರಿ ನೀಡಿದ ಪರ್ವತವನ್ನು ಅವರೆಲ್ಲ ಎತ್ತಿಕೊಂಡ ಪ್ರಸಂಗ. ಆದ್ದರಿಂದ ಅದನ್ನು ಕಿತ್ತಿ ಮೇಲೆತ್ತಿದ್ದು ಮಾತ್ರ ಶ್ರೀಹರಿಯೇ ಎಂಬುದು ನಿರ್ಣಯ. ಹರನ ವರವಿದ್ದ ಪರ್ವತವನ್ನು ಎತ್ತಿದ ಹರಿಯು ಹರನಿಗಿಂತ ಮಿಗಿಲು ಎಂಬುದೂ ಇದರಿಂದ ಸೂಚಿತ.

೨) ಮಹಾಭಾರತದಲ್ಲಿ **'ಅಚೋದಯದಮೇಯಾತ್ಮಾ ಫಣೀಂದ್ರಂ ಪದ್ಮಲೋಚನಃ'** ಎಂಬುದಾಗಿ ಮಂದರ ಹೊತ್ತಿದ್ದು ಫಣೀಂದ್ರ ಎಂದರೆ ಅನಂತ ಎಂದು ಹೇಳಲಾಗಿದೆ. ಅದು ಹೇಗೆ ಸಮಂಜಸ? ಎಂಬ ಪ್ರಶ್ನೆಗೆ ಆಚಾರ್ಯರು ಇಲ್ಲಿ ಉತ್ತರ ನೀಡಿರುವರು. ಅಲ್ಲಿ ಫಣೀಂದ್ರ ಎಂಬುದಾಗಿ ಪ್ರಸ್ತಾಪಿತನಾದ ಅನಂತನೂ ಗರುಡನೇ. ಮಂದರ ಎತ್ತಿದ ಪ್ರಸಂಗ ರೈವತ ಹಾಗೂ ವೈವಸ್ವತ ಎಂಬ ಎರಡು ಮನ್ವಂತರಗಳಲ್ಲಿ ನಡೆದಿದೆ. ರೈವತಮನ್ವಂತರದಲ್ಲಿ ಮಂದರ ಹೊತ್ತಿದ್ದು ಸುಪರ್ಣನಾಮಕಗರುಡ; ವೈವಸ್ವತಮನ್ವಂತರದಲ್ಲಿ ಅನಂತನಾಮಕಗರುಡ. ಆದ್ದರಿಂದ ಎರಡೂ ಪಕ್ಷದಲ್ಲಿಯೂ ಅದನ್ನು ಹೊತ್ತಿದ್ದು ಗರುಡನೇ[೨].

---

೧. 'ತತಸ್ತೇ ಮಂದರಗಿರಿಮೋಜಸೋತ್ಪಾಟ್ಯ ದುರ್ಮದಾಃ' – ಭಾಗವತ (೮/೬/೩೩)

೨. 'ಅನಂತೋಽಥೋ ಮಂದರಸ್ತು ಯದಾ ವೈವಸ್ವತಾಂತರಮ್ ।
ಅಮೃತಾರ್ಥಂ ಸುಪರ್ಣೋಽಥೋ ರೈವತಸ್ಯಾಂತರೇ ಮನೋಃ' ಇತಿ ಬ್ರಾಹ್ಮೇ ॥
– ಭಾ.ತಾ. (೮/೬/೩೯)

೩) ಫಣೀಂದ್ರ ಎಂಬುದು ಗರುಡನ ಅಪೂರ್ವನಾಮ ಎಂಬುದನ್ನು ಶ್ರೀವಾದಿರಾಜರು ಲಕ್ಷಾಲಂಕಾರದಲ್ಲಿ [೧]ವಿವರಿಸಿರುವರು.

ಪುನಃ ಪರೀಕ್ಷದ್ಧಿರಸೌ ಗಿರಿಃ ಸುರೈಃ
ಸಹಾಸುರೈರುನ್ನಮಿತಸ್ತದಂಸತಃ ।
ವ್ಯಚೂರ್ಣಯತ್ ತಾನಖಿಲಾನ್ ಪುನಶ್ಚ ತೇ
ತ್ವದೀಕ್ಷಯಾ ಪೂರ್ವವದುತ್ಥಿತಾಃ ಪ್ರಭೋ ॥ ೭ ॥

ಅ: ಪ್ರಭುವೆ! ಪುನಃ ಸುರರೂ, ಅಸುರರೂ ಪರೀಕ್ಷಿಸಲೆಂದು ಗರುಡನ ಭುಜದ ಮೇಲಿಂದ ಬೆಟ್ಟವನ್ನು ಎತ್ತಿಕೊಂಡರು. ಆಗ ಬೆಟ್ಟ ಅವರನ್ನೆಲ್ಲ ಪುಡಿ ಮಾಡಿತು. ಬಳಿಕ ಅವರು ನಿನ್ನ ನೋಟದಿಂದ ಮುಂಚಿನಂತಾಗಿ ಮೇಲೆದ್ದರು.

---

೧. ಅಚೋದಯದಮೇಯಾತ್ಮಾ ಫಣೀಂದ್ರಂ ಪದ್ಮಲೋಚನ ಇತ್ಯತ್ರ 'ಈಕಾರೋಽಬ್ಜದಲೇ ಲಕ್ಷ್ಮ್ಯಾಂ ವಾಣ್ಯಾಂ ಕಮಲಕೇಸರ' ಇತ್ಯಭಿಧಾನಾತ್ ಫಣಿನಾಂ ಈ ಐಶ್ವರ್ಯಂ ದ್ರಾವಯತೀತಿ ವ್ಯುತ್ಪತ್ತ್ಯಾಪುಂವತ್ಯಾಸೇನ ವಾ ಫಣೀಂದ್ರೋ ಗರುಡಃ । ತಸ್ಯೈವ ನ ವಿದ್ಯತೇ ಹರ್ಯಾವೇಶವಶಾದ್ಬಲಸ್ಯಾಂತೋ ಯಸ್ಯೇತಿ ವ್ಯುತ್ಪತ್ತ್ಯಾ ಅನಂತ ಇತ್ಯಪಿ ನಾಮ । ಮಿಲಿತೈರ್ದೇವಾಸುರೈರನುದ್ವಾಹ್ಯಗಿರ್ಯುದ್ವಹನೇ ಶಕ್ತಸೂಚನಾಯ ಫಣೀಂದ್ರ ಇತಿ ಅನಂತ ಇತಿ ಚಾಪೂರ್ವಂ ನಾಮೈವೋಕ್ತಮ್ । ಅನ್ಯಥಾ - 'ಗಿರಿಮಾರೋಪ್ಯ ಗರುಡೇ ಹಸ್ತೇನೈಕೇನ ಲೀಲಯಾ' ಇತಿ ಭಾಗವತೋಕ್ತಿವಿರೋಧಾತ್ ॥ (ನನು) 'ವಿವಶಾ ವಿಜಹುಃ ಪಥಿ' ಇತಿ ಭಾಗವತ ಏವೋಕ್ತೇಃ ಮಾರ್ಗ ಏವ ಗರುಡೋಪರ್ಯಾರೋಪಣಂ, ನ ತೂದ್ಧರಣಕಾಲ ಇತಿ ಚೇತ್, ಸತ್ಯಮ್ । 'ಸಮುದ್ಧರ್ತುಮಶಕ್ತಾ ವೈ ಸರ್ವೇ ದೇವಗಣಾಸ್ತದಾ । ವಿಷ್ಣುಮಾಸೀನಮಭ್ಯೇತ್ಯ ಬ್ರಹ್ಮಾಣಂ ಚೇದಮಬ್ರುವನ್ನಿ'ತಿ ಭಾರತ ಏವ ಸ್ಪಷ್ಟಂ ದೇವಾನಾಂ ಗಿರ್ಯುದ್ಧರಣಾಶಕ್ತೇರಪ್ಯುಕ್ತತ್ವಾತ್, 'ಏಕತ್ರ ನಿರ್ಣೀತಃ ಶಾಸ್ತ್ರಾರ್ಥೋಽಪರತ್ರಾಪಿ' ಇತಿ ನ್ಯಾಯೇನ ಅತ್ರಾಪಿ ಹರಿಹಸ್ತೇನೈವೋದ್ಧರಣಂ ಗರುಡೋಪರ್ಯಾರೋಪಣಂ ಚ ವಕ್ತವ್ಯಮ್ । ಭೂಮೌ ಪತಿತಮಾತ್ರಸ್ಯ ಗಿರೇರುದ್ಧರಣೇ ಹರಿಹಸ್ತಮಪೇಕ್ಷಮಾಣೋ ಗರುಡಃ ಏಕಾದಶಸಹಸ್ರಯೋಜನಪರ್ಯಂತಂ ಕೀಲತಯಾ ಗಿರಿಸಂಧೌ ಖಚಿತಂ ಪರ್ವತಮುದ್ಧರ್ತುಂ ಕಥಂ ನ ತಮಪೇಕ್ಷತೇ । ಅತ ಏವ 'ಅನಂತೋ ಭಗವಾನ್ ದೇವೋ ಯತೋ ನಾರಾಯಣಃ ಸ್ಥಿತಃ' ಇತಿ ಉಪರ್ಯನಂತಪದೇನ ಭಗವತೋಽಪ್ಯಾಹೂತತ್ವಾತ್ ಅತ್ರಾಪಿ 'ತತೋಽನಂತಃ ಸಮುತ್ಥಾಯ.' ಇತಿ ವಚನಾತ್ ಅನಂತಾಖ್ಯೋ ಭಗವಾನಪಿ ಅಗ್ರತೋ ಗರುಡಮಾಜ್ಞಾಪ್ಯ ಸ್ವಯಮಪಿ ಗರುಡಮಾರುಹ್ಯ ತತ್ರಾಗತಃ । ಏತದರ್ಥಮಪ್ಯನಂತಪದಪ್ರಯೋಗ ಇತಿ ಚಾನುಸಂಧೇಯಮ್ ।'ತತಸ್ತೇ ಮಂದರಗಿರಿಮೋಜಸೋತ್ಪಾಟ್ಯ ದುರ್ಮದಾಃ' ಇತಿ ಭಾಗವತೋಕ್ತೇಃ ಕಾ ಗತಿರಿತಿ ಚೇತ್, ಸತ್ಯಮ್ । ಭಾರತೇ ಉದ್ಧರಣಾಶಕ್ತೇಃ ಸ್ಪಷ್ಟಮುಕ್ತತ್ವಾತ್ ಓಜಸೋತ್ಪಾಟ್ಯೇತ್ಯತ್ರಾಪಿ ಓಜಸಾ ಭಗವದೋಜಸಾ ಇತ್ಯೇವ ವಕ್ತವ್ಯತ್ವಾತ್ । ಅತ ಏವ ಓಜಸೇತಿ ಸಾಮಾನ್ಯತ ಏವೋಕ್ತಂ, ನ ತು ಸ್ವೌಜಸೇತಿ । ಕಥಂ ತರ್ಹಿ ಮಧ್ಯೇಮಾರ್ಗಂ ಗಿರೇರ್ನಿಪತನಮಿತಿ ಚೇತ್, ಗರುಡೋಪರಿ ಸ್ಪರ್ಧಯಾ ವಯಮೇವ (ಭಾರಂ) ವಹಾಮ ಇತಿ ದೇವೈರುಕ್ತೇ ಮಾರ್ಗೇಽಪಿ ಕಿಂಚಿತ್ಕಾಲಮುದ್ವಹನಸಂಭವಾತ್ । ಏತತ್ಸರ್ವಮನುಸಂಧಾಯ 'ತದಾ ತ್ವಯಾ ನಿತ್ಯಬಲತ್ವಹೇತುತೋ ಯೋಽನಂತನಾಮಾ ಗರುಡಸ್ತದಂಸಕೇ । ಉತ್ಪಾಟ್ಯ ಚೈಕೇನ ಕರೇಣ ಮಂದರೋ ನಿಧಾಪಿತಸ್ತಂ ಸಹ ಸ ತ್ವಯಾಽವಹತ್' ಇತಿ 'ಪುನಃ ಪರೀಕ್ಷದ್ಧಿರಥೋ ಗಿರಿಃ ಸುರೈಃ ಸಹಾಸುರೈರುನ್ನಮಿತಸ್ತದಂಸತಃ' ಇತಿ ಚ ಪ್ರಾಹುಃ ಪೂರ್ವಾಚಾರ್ಯಾಃ ॥ –ಲಕ್ಷಾಲಂಕಾರ (ಆದಿ. ಅ.೪, ಪ್ರ.೪೦)

ವಿ: ೧) ಶಿವ, ಗರುಡರು ಸಮರಾದ್ದರಿಂದ ಶಿವನ ವರವಿದ್ದರೂ, ಗರುಡನಿಗೆ ಮಂದರವನ್ನು ಹೊರಲು ಸಾಧ್ಯವಾಯಿತು. ಇತರ ದೇವತೆಗಳಿಗೆ ಸಾಧ್ಯವಾಗಲಿಲ್ಲ. ಈ ವಿವರಣೆಯಿಂದ ದೇವತಾತಾರತಮ್ಯಾದಿಪ್ರಮೇಯವೂ ವಿವರಿಸಲ್ಪಟ್ಟಿದೆ.

೨) ನುಜ್ಜುಗೊಜ್ಜಾದ ಅವರನ್ನೆಲ್ಲ ತನ್ನ ನೋಟದಿಂದಲೇ ಶ್ರೀಹರಿ ಮೊದಲಿನಂತಾಗಿಸಿದ ಎಂಬಲ್ಲಿ ಶ್ರೀಹರಿಯ ಅಪಾರಮಹಿಮೆ ನಿರೂಪಿತವಾಗಿದೆ.

ಪುನಶ್ಚ[೧] ವಾಮೇನ ಕರೇಣ ವೀಶ್ವರೇ
ನಿಧಾಯ ತಂ ಸ್ಕಂಧಗತಸ್ತ್ವಮಸ್ಯ ।
ಅಗಾಃ ಪಯೋಬ್ಧಿಂ ಸಹಿತಃ ಸುರಾಸುರೈ-
ರ್ಮಥ್ನಾ ಚ ತೇನಾಬ್ಧಿಮಥಾಪ್ಯಮಥ್ನಾಃ[೨] ॥ ೮ ॥

ಅ: ಮತ್ತೆ ನೀನು ಎಡಗೈಯಿಂದ ಆ ಮಂದರವನ್ನೆತ್ತಿ ಪಕ್ಷಿರಾಜನ ಮೇಲಿರಿಸಿ, ಅವನ ಹೆಗಲೇರಿ ದೇವಾಸುರರೊಂದಿಗೆ ಕೂಡಿಕೊಂಡು ಕ್ಷೀರಸಮುದ್ರಕ್ಕೆ ತೆರಳಿದೆ. ಅದನ್ನೇ ಕಡೆಗೋಲನ್ನಾಗಿ ಮಾಡಿಕೊಂಡು ಅವರೊಂದಿಗೆ ನೀನೂ ಸಮುದ್ರವನ್ನು ಕಡೆಯತೊಡಗಿದೆ.

ವಿ: ಸುರಾಸುರರೆಲ್ಲ ಸೇರಿಯೂ ಎತ್ತಲಾಗದ ಆ ಮಂದರವನ್ನು ಶ್ರೀಹರಿಯು ಎಡಗೈಯಿಂದ ಲೀಲೆಯಿಂದ ಮೇಲೆತ್ತಿ ಗರುಡನ ಮೇಲಿರಿಸಿದ ಎಂಬುದು ಅವನ ಅಗಾಧಸಾಮರ್ಥ್ಯಕ್ಕೆ ದ್ಯೋತಕ.

ಕ್ಷೀರಸಮುದ್ರಮಥನ

ಕೃತಶ್ಚ[೩] ಕದ್ರೋಸ್ತನಯೋಽತ್ರ[೪] ವಾಸುಕಿ-
ರ್ನೇತ್ರಂ[೫] ತ್ವಯಾ ಕಶ್ಯಪಜಃ ಸ ನಾಗರಾಟ್ ।
ಮಮಂಥುರಬ್ಧಿಂ ಸಹಿತಾಸ್ತ್ವಯಾ ಸುರಾಃ
ಸಹಾಸುರಾ ದಿವ್ಯಪಯೋಘೃತಾಧಿಕಮ್[೬] ॥ ೯ ॥

---

೧. ಚಶಬ್ದೇನ ಉತ್ಪಾಟ್ಯ ಚೈಕೇನ ಕರೇಣೇತ್ಯತ್ರಾಪಿ ವಾಮೇನ ಕರೇಣೇತಿ ಸಮುಚ್ಚಿನೋತಿ । ಸುರಾಸುರೈರಪಿ ಸಹಿತಃ ಅಮಥ್ನಾ ಇತಿ ಅಪಿಶಬ್ದೇನ ನಿಸ್ಸೀಮಬಲಸ್ಯ ಹರೇಃ ಸ್ವಸಹಾಯಂ ಗರ್ಹಯತಿ ॥ – (ವಾ.)

೨. ನಾನೌಷಧೀಃ ಸಮಾನೀಯ ದೇವದೈತೇಯದಾನವಾಃ ।
ಕ್ಷಿಪ್ತ್ವಾ ಕ್ಷೀರಾಬ್ಧಿಪಯಸಿ ಶರದಭ್ರಾಮಲತ್ವಿಷಿ ।
ತತೋ ಮಥಿತುಮಾರಬ್ಧಾ ಮೈತ್ರೇಯ ತರಸಾऽಮೃತಮ್ ॥ – ವಿಷ್ಣುಪುರಾಣ (೧/೯/೮೩)

ಅ: ಕಶ್ಯಪರಿಂದ ಕದ್ರುವಿಗೆ ಮಗನಾಗಿ ಜನಿಸಿದ ನಾಗರಾಜನಾದ ವಾಸುಕಿಯನ್ನು ನೀನು ಅದಕ್ಕೆ ಕಡೆಯುವ ಹಗ್ಗವನ್ನಾಗಿಸಿದೆ; ನಿನ್ನೊಡನೆ ಕೂಡಿ ಸುರರು ಅಸುರರೊಂದಿಗೆ ಹೆಚ್ಚು ಘೃತದಿಂದ ಕೂಡಿದ್ದ ಆ ದಿವ್ಯವಾದ ಕ್ಷೀರಸಮುದ್ರವನ್ನು ಕಡೆಯತೊಡಗಿದರು.

ವಿ: ಇದು 'ಮಥ್ನನ್ ಮಥ್ನಾ ಪ್ರತಿಗಿರಿರಿವಾಶೋಭತಾಸೌ ಘೃತಾಬ್ಧಿಮ್' (ಭಾಗವತ) ಎಂಬಲ್ಲಿನ 'ಘೃತಾಬ್ಧಿಂ' ಎಂಬುದಕ್ಕೆ ವಿವರಣೆ; ಇದರಿಂದಾಗಿ ಅದು ತುಪ್ಪದ ಸಮುದ್ರ ಎಂಬ ವಿರೋಧದ ಪರಿಹಾರ.

ನೈಚ್ಛಂತ ಪುಚ್ಛಂ ದಿತಿಜಾ ಅಮಂಗಲಂ
ತದಿತ್ಯಥಾಗ್ರಂ ಜಗೃಹುರ್ವಿಷೋಲ್ಬಣಮ್ ।
ಶ್ಯಾಂತಾಸ್ತು ತೇಽತೋ ವಿಬುಧಾಸ್ತು ಪುಚ್ಛಂ
ತ್ವಯಾ ಸಮೇತಾ ಜಗೃಹುಸ್ತ್ವದಾಶ್ರಯಾಃ ॥ ೧೦ ॥

---

೩. 'ಆಜ್ಞಯೈವ ಮಹಾವಿಷ್ಣೋಃ ಕಾರ್ಯಾರ್ಥಮಪಿ ಚ ಕ್ವಚಿತ್ ।
ನೀಚಾನಪಿ ಚ ಯಾಚಂತೇ ಸ್ವಾತ್ಮನೋ ಗುಣವತ್ತರಾಃ ।
ನೀಚವಾಕ್ಯಂ ವದೇಯುಶ್ಚ ಸುರಾ ನೈತಾವತಾ ಕ್ವಚಿತ್ ।
ತೇಜಃ ಕ್ಷತಿರ್ಭವೇದೇಷಾಂ ಜನಕಸ್ಯ ಯಥಾ ಽರ್ಭಕಾತ್' ಇತಿ ತಂತ್ರಮಾಲಾಯಾಮ್ ॥
– ಭಾ.ತಾ.(೬/೧೦/೬)

೪. ಅಷ್ಟಕುಲಸರ್ಪಶ್ರೇಷ್ಠೇಷು ಅಯಮಷ್ಟೇಕತಮಃ ಸರ್ಪಶ್ರೇಷ್ಠಃ ನಾಮ್ನಾ ವಾಸುಕಿರಿತಿ ಪ್ರಸಿದ್ಧಃ । – (ಜ.)

೫. ನೇತ್ರಂ – ಇತಸ್ತತೋ ಮಂಥಾನಂ ನಯತೀತಿ ನೇತ್ರಂ ರಜ್ಜುಃ ಕೃತಃ । ತ್ರಾಂತತ್ವೇನ ನಿತ್ಯನಪುಂಸಕತ್ವಾತ್ ಪುಲ್ಲಿಂಗೇನ ಸಂಬಂಧಃ । – (ವಾ.)

ಪರಿವರ್ತನಗುಣೋ ನೇತ್ರಃ – (ಜ.)

೬. **ದಿವ್ಯಪಯೋಘೃತಾಧಿಕಮ್ :**

ದಿವ್ಯಪಯಸಿ ಘೃತಮಧಿಕಂ ಯಸ್ಯೇತಿ ವಿಗ್ರಹಃ । – (ವಾ.)

ದಿವ್ಯೇ ನಿರ್ವಿಕಾರೇ ಪಯೋಘೃತೇ ಕ್ಷೀರಾಜ್ಯೇ ತಾಭ್ಯಾಮಧಿಕಃ ಶ್ರೇಷ್ಠಃ । – (ಜ.)

ದಿವ್ಯಾಭ್ಯಾಂ ವಿಕಾರರಹಿತಾಭ್ಯಾಂ ಪಯೋಘೃತಾಭ್ಯಾಮಧಿಕಂ ಪ್ರಚುರಮ್ । – (ವ.)

ದಿವ್ಯಂ ಪಯೌ ಯಸ್ಮಿನ್ನಸೌ ದಿವ್ಯಪಯಃ । ಘೃತೇನಾಧಿಕೋ ಘೃತಾಧಿಕಃ । ದಿವ್ಯಪಯಶ್ಚಾಸೌ ಘೃತಾಧಿಕಶ್ಚೇತಿ ವಿಗ್ರಹಃ । – (ತಾ.)

ದಿವ್ಯಂ ಚ ತತ್ಪಯಶ್ಚ ತಾದೃಶಮಬ್ಧಿಂ ಘೃತಾಧಿಕಮಿತಿ ಕ್ರಿಯಾವಿಶೇಷಣಮ್ । ಅಧಿಕಂ ಘೃತಂ ಯಥಾ ಭವತಿ ತಥಾ ಮಮಂಥುರಿತಿ । 'ತತಸ್ತಸ್ಯ ಸಮುದ್ರಸ್ಯ ತಜ್ಜಾತಮುದಕಂ ಪಯಃ । ರಸೋತ್ತಮೈರ್ವಿಮಿಶ್ರಂ ಚ ತತಃ ಕ್ಷೀರಾದಭೂದ್ಘೃತಮ್' ಇತ್ಯಾದಿಪರ್ವಣ್ಯಸ್ತೀಕೇ ಭಾರತವಚನಾತ್ (ಆದಿ. ೧೮/೨೮) ॥ – (ಶ್ರೀ.)

ಅ: ಅಮಂಗಲವೆಂಬ ಭಾವನೆಯಿಂದ ದೈತ್ಯರು ವಾಸುಕಿಯ ಬಾಲವನ್ನು ಹಿಡಿಯಲು ಒಪ್ಪದಾದರು. ವಿಷದಿಂದ ಕ್ರೂರವಾಗಿದ್ದ ಅದರ ಹೆಡೆಯನ್ನೇ ಹಿಡಿದರು. ಅದರಿಂದಾಗಿ ಬಹಳವಾಗಿ ನೊಂದರು. ನಿನ್ನನ್ನು ನಂಬಿದ ದೇವತೆಗಳು ನಿನ್ನೊಂದಿಗೆ ಅದರ ಬಾಲವನ್ನು ಹಿಡಿದರು.

ವಿ: ೧) ವಿಷದಿಂದ ತುಂಬಿದ್ದ ಹೆಡೆಯನ್ನು ಹಿಡಿದದ್ದು ದೈತ್ಯರ ಮೂರ್ಖಪ್ರತಿಷ್ಠೆಯ ಫಲ. ಆದರೆ ದೇವತೆಗಳು ಶ್ರೀಹರಿಯನ್ನು ನಂಬಿ, ವಿಷವಿಲ್ಲದ ಬಾಲವನ್ನು ಹಿಡಿದದ್ದು ಅವರ [೧]ವಿವೇಕದ ಫಲ.

೨) ಇಲ್ಲಿ ಹಾವು ಎಂದರೆ ಬ್ರಹ್ಮಸೂತ್ರ ಎಂದೂ, ಅದರ ಮುಖ ಎಂದರೆ ಮೇಲ್ನೋಟದ ಅರ್ಥ ಎಂದೂ, ಬಾಲ ಎಂದರೆ ಅಂತರಾರ್ಥ ಎಂದೂ ಸಹ ತಿಳಿಯಬೇಕು. ದುರ್ಭಾಷ್ಯಕಾರರು ಬ್ರಹ್ಮಸೂತ್ರಾದಿಗಳ ಮೇಲ್ನೋಟದ ಅರ್ಥವನ್ನು ತಿಳಿದು, ಗೊಂದಲಕ್ಕೊಳಗಾಗುತ್ತಾರೆ. ಆದರೆ ಸಾತ್ತ್ವಿಕರು ಅದರ ಅಂತರಾರ್ಥವನ್ನು ತಿಳಿದು ಆನಂದಿಸುತ್ತಾರೆ[೨] ಎಂಬ ತತ್ತ್ವ ಇದರಿಂದ ಸೂಚಿತ.

೩) ಮುಖವು ಉಪಕ್ರಮಕ್ಕೂ, ಬಾಲವು ಉಪಸಂಹಾರಕ್ಕೂ ದ್ಯೋತಕ. ತಾತ್ಪರ್ಯನಿರ್ಣಾಯಕಲಿಂಗಗಳಲ್ಲಿ ಉಪಕ್ರಮಕ್ಕಿಂತ ಉಪಸಂಹಾರ ಪ್ರಬಲವೆಂಬುದು ನಿರ್ಣಯ[೩]. 'ಉಪಕ್ರಮಪರಾಕ್ರಮ' ಎಂಬ ಅಪ್ಪಯ್ಯದೀಕ್ಷಿತರ ಕೃತಿಗೆ 'ಉಪಸಂಹಾರವಿಜಯ' ಎಂಬ ಶ್ರೀವಿಜಯೀಂದ್ರತೀರ್ಥರ ಉತ್ತರರೂಪಕೃತಿ ಇರುವುದನ್ನು ಇಲ್ಲಿ ಗಮನಿಸಬಹುದು.

೪) ಎಳೆಯುವ ನೋವಿನಿಂದಾಗಿ ವಾಸುಕಿಯು ನಿಟ್ಟುಸಿರಿಟ್ಟಾಗ, ಅದರ ಬೇಗೆಗೆ ಅಸುರರು ತಲ್ಲಣಿಸಿದರು. ಆದರೆ ವಾಸುಕಿಯ ನಿಟ್ಟುಸಿರಿನಿಂದ ಚೆದುರಿದ ಮೋಡಗಳು ಕರೆದ ತಂಪಾದ ಮಳೆ ಹಿಂಭಾಗದಲ್ಲಿದ್ದ ಸುರರ ಮೇಲೆ ಬಿದ್ದು ಅವರಿಗೆ ಹಾಯೆನಿಸಿತು ಎಂಬ ವಿಶೇಷಾರ್ಥ ವಿಷ್ಣುಪುರಾಣದಲ್ಲಿದೆ[೪].

---

೧. ತುಶಬ್ದೇನ ದೇವಾನಾಂ ಬುದ್ಧಿವಿಶೇಷವತ್ತ್ವಂ ಸೂಚಯತಿ। – (ವಾ.)

೨. ಶ್ರೀವೇದಾಂತಮಹಾಚಲಂ ಹಿ ಪರಿತಃ ಸಂಯೋಜ್ಯ ಸೂತ್ರಾಹಿಪಂ
ಸದ್ಭಾತಾಗಮಪೋಷಿತಾತ್ಮಹೃದಯಂ ತತ್ಪೂರ್ವಪಕ್ಷಾಸುರೈಃ।
ಸಿದ್ಧಾಂತೋಕ್ತಿಸುರೇಶ್ವರೈಶ್ಚ ಮಥಿತೋ ಯಃ ಕೃಷ್ಣದುಗ್ಧಾಂಬುಧಿಃ
ಸ್ವೀಯಾನಾಮಮೃತಂ ಪ್ರಯಚ್ಛತಿ ಸ ಮಾಂ ಪಾಯಾದ್ಭುಗ್ನೋದ್ಯನ್ನಣಿಃ॥
— ಎಂಬ ರುಕ್ಮಿಣೀಶವಿಜಯ(೧/೧)ದ ಶ್ಲೋಕ ಸಮುದ್ರಮಥನದ ಅಂತರಾರ್ಥದ ವಿವೇಚನೆಯಾಗಿದೆ.

೩. ಉಪಪತ್ತಿವಿಹೀನಸ್ಯ ವಾಕ್ಯಸ್ಯಾರ್ಥೋ ನ ಗಮ್ಯತೇ।
ಉಪಕ್ರಮಾದಿಲಿಂಗಾನಾಂ ಬಲೀಯೋ ಹ್ಯುತ್ತರೋತ್ತರಮ್॥ – ಅನುವ್ಯಾಖ್ಯಾನ (೩/೪/೧೯೪॥

೫) ಅಸುರರು ತಾವು ಮುಖದ ಭಾಗವನ್ನೇ ಹಿಡಿಯುವ ಹಟವನ್ನು ಸಾಧಿಸಿ, ಮೇಲ್ನೋಟಕ್ಕೆ ಗೆದ್ದಂತೆ ಕಂಡರು; ಆದರೆ ವಿಷದ ಬಾಧೆಗೆ ತುತ್ತಾಗಿ ನೊಂದರು; ಸೋತಂತೆ ಕಂಡ ದೇವತೆಗಳು ಯಾವ ನೋವೂ ಇಲ್ಲದೆ ಸುಖಿಸಿದರು. [೫]ಸಾತ್ತ್ವಿಕಸುಖವೆಂದರೆ ಇದು. ಮೊದಲು ದುಃಖದಂತೆ ಕಂಡರೂ, ಪರಿಣಾಮದಲ್ಲಿ ಹಿತ.

೬) 'ತ್ವಯಾ ಸಮೇತಾ ವಿಬುಧಾಃ' ಎಂಬ ಮಾತಿನಿಂದ ಹರಿಯು ಸುರರಿಗೆ ಮಾತ್ರ ಸಹಾಯಕ; ಅಸುರರಿಗಲ್ಲ ಎಂಬುದು ಸೂಚಿತ[೬].

ಶ್ರೀಹರಿಯ ಕೂರ್ಮಾವತಾರ

ಅಥಾತಿಭಾರಾದವಿಶತ್ ಸುಕಾಂಚನೋ
ಗಿರಿಃ ಸ ಪಾತಾಲಮಥ ತ್ವಮೇವ ।
ತಂ ಕಚ್ಛಪಾತ್ಮಾ ತ್ವಭರಃ [೭]ಸ್ವಪೃಷ್ಠೇ
ಹ್ಯನನ್ಯಧಾರ್ಯಂ ಪುರುಲೀಲಯೈವ ॥ ೧೧ ॥

ಅ: ಆಗ ಅತಿಯಾದ ಭಾರದಿಂದಾಗಿ ಆ ಸುವರ್ಣಗಿರಿಯಾದ ಮಂದರವು ಪಾತಾಲವನ್ನು ಹೊಕ್ಕಿತು. ಆಗ ಬೇರಾರೂ ಹೊರಲಾಗದ ಆ ಬೆಟ್ಟವನ್ನು ನೀನು ಕೂರ್ಮರೂಪದಿಂದ ನಿನ್ನ ಬೆನ್ನ ಮೇಲೆ ಲೀಲಾಜಾಲವಾಗಿ ಹೊತ್ತೆ.

---

೪. ತೇ ತಸ್ಯ ಮುಖನಿಃಶ್ವಾಸವಹ್ನಿತಾಪಹತತ್ವಿಷಃ ।
ನಿಸ್ತೇಜಸೋऽಸುರಾಃ ಸರ್ವೇ ಬಭೂವುರಮಿತೌಜಸಃ ॥
ತೇನೈವ ಮುಖನಿಃಶ್ವಾಸವಾಯುನಾಸ್ತಬಲಾಹಕೈಃ ।
ಪುಚ್ಛಪ್ರದೇಶೇ ವರ್ಷದ್ಭಿಸ್ತದಾ ಚಾಪ್ಯಾಯಿತಾಃ ಸುರಾಃ ॥ – ವಿಷ್ಣುಪುರಾಣ (೧/೯/೮೬,೮೭)

೫. ಯತ್ ತದಗ್ರೇ ವಿಷಮಿವ ಪರಿಣಾಮೇऽಮೃತೋಪಮಮ್ ।
ತತ್ ಸುಖಂ ಸಾತ್ತ್ವಿಕಂ ಪ್ರೋಕ್ತಮಾತ್ಮಬುದ್ಧಿಪ್ರಸಾದಜಮ್॥ – ಗೀತಾ(೧೮/೩೭)

೬. ತ್ವಯಾ ಸಹಿತಾಃ ಸಹಾಸುರಾ ಇತಿ ಸಾಮಾನ್ಯೋಕ್ತ್ಯಾ ಉಭಯೋರಪಿ ಹರಿಸಹಾಯತ್ವಭ್ರಮಂ ನಿವಾರಯಿತುಮುಕ್ತಂ ತ್ವಯಾ ಸಮೇತಾ ವಿಬುಧಾ ಇತಿ ॥ – (ವಾ.)

೭. ಸ್ವಪೃಷ್ಠ ಇತ್ಯಸ್ಯ ಸ್ವಾತಂತ್ರ್ಯಕದಿಗುಣಯುಕ್ತಪೃಷ್ಠ ಇತ್ಯರ್ಥಃ । ಏತೇನ ಪರಪೃಷ್ಠಪ್ರಸಕ್ತೇರಭಾವಾತ್ । ಸ್ವಪೃಷ್ಠ ಇತ್ಯತ್ರ ಸ್ವೇತ್ಯೇತದ್ವ್ಯರ್ಥಮಿತಿ ದೂಷಣಂ ನಿರಸ್ತಮ್ । ಭಗವತ ಇವ ಭಗವದಂಗಾನಾಮಪಿ ಸ್ವಾತಂತ್ರ್ಯಕದಿ-ಗುಣಯುಕ್ತತ್ವಮಸ್ತೀತಿ ಜ್ಞಾಪಯಿತುಂ ಸ್ವಾತಂತ್ರ್ಯವಾಚಕೇನ ಸ್ವಶಬ್ದೇನ ಲಕ್ಷಣಯಾ ಸ್ವಾತಂತ್ರ್ಯಕದಿಗುಣಯುಕ್ತತ್ವಂ ಕೂರ್ಮಪೃಷ್ಠಸ್ಯೋಚ್ಯತ ಇತ್ಯಭ್ಯುಪಗಮಾತ್ ॥ – (ಸ.)

ಅಜಿತರೂಪದಿಂದ ಸಮುದ್ರಮಥನ

[೧]ಉಪರ್ಯಧಶ್ಚಾತ್ಮನಿ[೨] ನೇತ್ರಗೋತ್ರಯೋ-
ಸ್ತ್ವಯಾ ಪರೇಣಾವಿಶತಾ ಸಮೇಧಿತಾಃ ।
ಮಮಂಥುರಬ್ಧಿಂ ತರಸಾ ಮದೋತ್ಕಟಾಃ
ಸುರಾಸುರಾಃ ಕ್ಷೋಭಿತನಕ್ರಚಕ್ರಮ್ ॥ ೧೨ ॥

ಅ: ಕಡೆಯುವ ಹಗ್ಗದ ರೂಪದಲ್ಲಿದ್ದ ವಾಸುಕಿ ಹಾಗೂ ಆ ಮಂದರಪರ್ವತಗಳ ಮೇಲೆ, ಕೆಳಗೆ ಹಾಗೂ ಒಳಗೆ ಹೊಕ್ಕ ಸರ್ವೋತ್ತಮನಾದ ನಿನ್ನಿಂದ ದೇವಾಸುರರ ಬಲ ಹೆಚ್ಚಿತು. ಅವರೆಲ್ಲ ಸೊಕ್ಕಿನಿಂದ ಬೀಗುತ್ತಾ ಒಳಗಿನ ಜಲಚರಗಳ ಗುಂಪು ಕ್ಷೋಭೆಗೊಳ್ಳುವಂತೆ ವೇಗದಿಂದ ಆ ಸಮುದ್ರವನ್ನು ಕಡೆಯತೊಡಗಿದರು.

ವಿ: ೧) ಭಾರದಿಂದ ಕೆಳಕ್ಕೆ ಕುಸಿಯದಂತೆ, ಕಡೆಯುವ ಒತ್ತಡದಿಂದ [೩]ವಾಗಿದ ವಾವಿನ ಬೀಜದಂತೆ ಮೇಲಕ್ಕೆ ಹಾರದಂತೆ ಶ್ರೀಹರಿ ಮಂದರವನ್ನು ಧರಿಸಿದ. ಶಿವನ ವರದಿಂದ ಅಸಾಧ್ಯವಾಗಿದ್ದ ಆ ಬೆಟ್ಟದಿಂದ ಶ್ರಮವಾಗದಿರಲು ವಾಸುಕಿಯೊಳಗೆ ಪ್ರವೇಶಿಸಿದ. ಕಡೆಯಲು ಸಾಧ್ಯವಾಗಲೆಂದು ಕಡೆಯುವವರೊಳಗೆಲ್ಲ ಪ್ರವೇಶಿಸಿದ.

೨) ಕೂರ್ಮರೂಪದಿಂದ ಹೊತ್ತಿದ್ದನ್ನು ಹೊರತು ಇತರ ಯಾವುದನ್ನೂ ಅವರಾರೂ [೪]ಗಮನಿಸಲಿಲ್ಲ.

---

೧. ಉಪರ್ಯಧಶ್ಚತಿ ನೇತ್ರಗೋತ್ರಯೋಃ ಪರೇಣ ತೇ ಪ್ರಾವಿಶತಾ ಸಮೇಧಿತಾಃ ।
ಮಮಂಥುರಬ್ಧಿಂ ತರಸಾ ಮದೋತ್ಕಟಾ ಮಹಾದ್ರಿಣಾ ಕ್ಷೋಭಿತನಕ್ರಚಕ್ರಮ್ ॥– ಭಾಗವತ(೮/೭೧/೧೩)

೨. ಪರಿವರ್ತಪಾಶಪರ್ವತಯೋಃ । – (ಜ.)

೩. ಮಥನಭರೇಣ **ಚೂತಪಕ್ವಬೀಜವತ್** ಉದ್ಗಮನಪರಿಹಾರಾಯ ಉಪರಿ ಹರೇರವಸ್ಥಾನಮ್ ।
ಚೂರ್ಣೀಭಾವಪರಿಹಾರಾಯ ಗೋತ್ರೇ ಗಿರೌ ಪ್ರವೇಶ ಇತಿ ಭಾವಃ ॥ – (ವಾ.)

೪. ರೂಪೇಣಾನ್ಯೇನ ದೇವಾನಾಂ ಮಧ್ಯೇ ಚಕ್ರಗದಾಧರಃ ।
ಚಕರ್ಷ ನಾಗರಾಜಾನಂ ದೈತ್ಯಮಧ್ಯೇऽಪರೇಣ ಚ ।
ಉಪರ್ಯಾಕ್ರಾಂತವಾನ್ ಶೈಲಂ ಬೃಹದ್ರೂಪೇಣ ಕೇಶವಃ ।
ತಥಾಪರೇಣ ಮೈತ್ರೇಯ ಯನ್ನ ದೃಷ್ಟಂ ಸುರಾಸುರೈಃ ।
ತೇಜಸಾ ನಾಗರಾಜಾನಂ ತಥಾऽऽಪ್ಯಾಯಿತವಾನ್ ಹರಿಃ ।
ಅನ್ಯೇನ ತೇಜಸಾ ದೇವಾನುಪಬೃಂಹಿತವಾನ್ ಪ್ರಭುಃ ॥ – ವಿಷ್ಣುಪುರಾಣ (೧/೯/೮೯-೯೧)

ಕಾಲಕೂಟದ ಉತ್ಪತ್ತಿ

ಶ್ರಾಂತೇಷು ತೇಷ್ವೇಕ ಉರುಕ್ರಮಸ್ತ್ವಂ
ಸುಧಾರಸಾಪ್ಯೈ ಮುದಿತೋ ಹ್ಯಮಥ್ನಾಃ[೧]।
ತದಾ ಜಗದ್ಗ್ರಾಸಿ ವಿಷಂ ಸಮುತ್ಥಿತಂ
ತ್ವದಾಜ್ಞಯಾ ವಾಯುರಧಾತ್ ಕರೇ ನಿಜೇ[೨] ॥ ೧೩ ॥

ಅ: ಅವರೆಲ್ಲ ಬಳಲಿದಾಗ ಉರುಕ್ರಮನಾದ ನೀನೊಬ್ಬನೇ ಸಂಭ್ರಮದಿಂದ ಅಮೃತ-ರಸದ ಪ್ರಾಪ್ತಿಗಾಗಿ ಕಡೆಯತೊಡಗಿದೆ. ಆಗ ಜಗತ್ತನ್ನೇ ಕಬಳಿಸುವ ವಿಷ ಮೇಲೆದ್ದಿತು. ನಿನ್ನ ಆದೇಶದಂತೆ ವಾಯು ಅದನ್ನು ತನ್ನ ಕೈಗೆತ್ತಿಕೊಂಡ.

ವಿ: ೧) ಅಷ್ಟು ಜನ ಸುರಾಸುರರು ಕೊನೆಗೂ ಶ್ರಮಪಟ್ಟಿದ್ದಷ್ಟೇ! ಸಮುದ್ರದಿಂದ ಅಮೃತವಿರಲಿ, ಏನೂ ಬಂದಿರಲಿಲ್ಲ. ಆಗ ಶ್ರೀಹರಿಯೊಬ್ಬನೇ ಮಥಿಸತೊಡಗಿದ. ಸಮುದ್ರಮಥನ ಮಾಡಿದ ಆ ಶ್ರೀಹರಿಯ ರೂಪವನ್ನು 'ಅಜಿತ' ಎಂಬುದಾಗಿ [೩]ಭಾಗವತ ವರ್ಣಿಸಿದೆ. ಭಗವಂತನ ಅನಂತರೂಪಗಳಲ್ಲಿ ಈ ಅಜಿತರೂಪ ಮೊದಲನೆಯದು.

---

೧. ಹಿಶಬ್ದೇನ ಹರೇಃ ''ಕಿಂಸ್ವಿದಾಸೀದಧಿಷ್ಠಾನಮ್''(ಋ.೧೦/೮೧/೨) ಇತ್ಯಾದಿಶ್ರುತ್ಯುಕ್ತಾಸಹಾಯತ್ವಪ್ರಸಿದ್ಧಿಂ ಸೂಚಯತಿ ॥ – (ವಾ.)

೨. ನಿಜ ಇತ್ಯನೇನ ಕರಸ್ಯ ವಾಯುಸಂಬಂಧಿತ್ವೋಕ್ತ್ಯಾವಿಷಗ್ರಹಣಸಾಮರ್ಥ್ಯಂ ಸೂಚಯತಿ । ಏತೇನ ವಾಯುಃ ಕರೇಽಧಾದಿತ್ಯುಕ್ತ್ಯೈವ ಕರಸ್ಯ ವಾಯುಸಂಬಂಧಿತ್ವಲಾಭಾನ್ನಿಜ ಇತ್ಯೇತದ್ವ್ಯರ್ಥಮಿತಿ ದೂಷಣಂ ಪರಾಸ್ತಮ್ । ಅನ್ಯಕರಾಪೇಕ್ಷಯಾ ವಾಯುಕರಸ್ಯ ಮಹಾಸಾಮರ್ಥ್ಯಮಿತಿ ಸೂಚನಾರ್ಥಂ ಕರಸ್ಯ ವಾಯುಸಂಬಂಧಿತ್ವಮುಕ್ತಮಿತ್ಯಭ್ಯುಪಗಮಾತ್ ॥ – (ಸ.)

೩. ಮಥ್ಯಮಾನಾತ್ ತಥಾ ಸಿಂಧೋರ್ದೇವಾಸುರವರೂಥಪೈಃ ।
ಯದಾ ಸುಧಾ ನ ಜಾಯೇತ ನಿರ್ಮಮಂಥಾಜಿತಃ ಸ್ವಯಮ್ ॥

ಮೇಘಶ್ಯಾಮಃ ಕನಕಪರಿಧಿಃ ಕರ್ಣವಿದ್ಯೋತವಿದ್ಯು-
ನ್ಮೌರ್ಧ್ವಿ ಭ್ರಾಜದ್ವಿಲುಲಿತವನಸ್ರಗ್ಧರೋ ರಕ್ತನೇತ್ರಃ ।
ಜೈತ್ರೈರ್ದೋರ್ಭಿರ್ಜಗದಭಯದೈರ್ದಂದಶೂಕಂ ಗೃಹೀತ್ವಾ
ಮಥ್ನನ್ಮಥ್ನಾ ಪ್ರತಿಗಿರಿರಿವಾಶೋಭತಾಥೋ ಧೃತಾದ್ರಿಃ ॥ – ಭಾಗವತ (೮/೭/೧೭, ೧೮)

ತದುಕ್ತಂ– 'ದೇವಾನಾಂ ಮಧ್ಯತಃ ಸ್ಥಿತ್ವಾ ಮಮಂಥ ಪುರುಷೋತ್ತಮಃ' ಇತಿ ರಾಮಾಯಣೇ । – (ಛ.)

೨) ಶ್ರೀಹರಿಯು [೧]ವಾಯುದೇವರಿಗೆ ಆಜ್ಞೆ ನೀಡಿದ ವಿವರ ಬ್ರಹ್ಮಾಂಡಪುರಾಣದಲ್ಲಿದೆ:

'ರುದ್ರಸ್ಯ ಯಶಸೋಽರ್ಥಾಯ ಸ್ವಯಂ ವಿಷ್ಣುರ್ವಿಷಂ ಪ್ರಭುಃ ।
ನ ಸಂಜಹ್ರೇ ಸಮರ್ಥೋಽಪಿ ವಾಯುಂ ಚೋಚೇ ಪ್ರಶಾಂತಯೇ ॥'

– ಭಾ.ತಾ.(೮/೭/೧೯)

೩) ದ್ವಾದಶಸ್ತೋತ್ರದ ಏಳನೆಯ ಅಧ್ಯಾಯವು ಈ ಅಜಿತರೂಪದ ಸ್ತೋತ್ರ.

---

೧. ಮಹಾವಿಷಂ ಮಹಾಘೋರಂ ಸಂವರ್ತಾಖ್ಯಸಮಪ್ರಭಮ್ ।
ದೃಷ್ಟ್ವಾ ಪ್ರದುದ್ರುವುಃ ಸರ್ವೇ ಭಯಾರ್ತಾ ಚೈವ ಮಾನವಾಃ ॥

ತತಸ್ತಾನ್ ವಿದ್ರುತಾನ್ ದೃಷ್ಟ್ವಾ ಬ್ರಹ್ಮಾ ಲೋಕಪಿತಾಮಹಃ ।
ಜಗಾದ ವಾಯುಂ ತರಸಾ ಹರೇರಾಜ್ಞಾಪುರಸ್ಕೃತಃ ॥

ನಿಃಶೇಷಂ ಕುರು ವಾಯೋ ತ್ವಂ ಲೋಕಸಂಹಾರಕಂ ವಿಷಮ್ ।
ತ್ವದನ್ಯೋ ನಾಸ್ತಿ ಚ ತ್ರಾತುಂ ಸರ್ವಭೂತಹಿತಂ ಕುರು ॥

ಇತಿ ಧಾತುರ್ವಚಃ ಶ್ರುತ್ವಾ ದಶಪ್ರಮತಿರಬ್ರವೀತ್ ।
ಭಕ್ಷಯಾಮಿ ಹರೇರಾಜ್ಞಾಂ ಪುರಸ್ಕೃತ್ಯ ವಿಧೇರ್ವಚಃ ॥

ಹರೇರ್ನಾಮೋಚ್ಚಾರಣೇನ ತದ್ಭಕ್ತ್ಯಾ ಚ ವಿಶೇಷತಃ ॥
ಸರ್ವವ್ಯಾಪಿವಿಷಂ ಘೋರಂ ಪಾತ್ರೇ ನ್ಯಸ್ಯ ಕರೇ ದಧತ್ ।

ಬಿಂದುಮಾತ್ರಂ ಪೃಥಗ್ಗೃಹ್ಯ ತದ್ವಿಷಂ ಮರ್ದಯತ್ ತತಃ ॥
ಪರೀಕ್ಷಾರ್ಥಂ ತಥಾಽನ್ಯೇಷಾಂ ದೇವಾದೀನಾಂ ಚ ಪಾರ್ವತಿ ।

ಮಮ ಹಸ್ತೇ ದದೌ ಕಿಂಚಿತ್ ಭಕ್ಷಸ್ವೇತಿ ಸಮಾದೃತಃ ॥
ನಾಮತ್ರಯೇಣ ಸಹಿತಂ ಮಂತ್ರಾನುಗ್ರಹಮಾದಿಕೃತ್ ।

ತದ್ವಿಷಪ್ರಾಶನಾದೇವ ಮಮ ದಾಹೋಽಭ್ಯವರ್ಧತ ॥
ಜಿಹ್ವಾಗ್ರಧಾರಣಾದೇವ ಮಮ ಪ್ರಾಣಾ ವಿನಿರ್ಗತಾಃ ।

ಕೃಪಯಾ ಪವಮಾನಸ್ಯ ತಥಾ ನಾಮತ್ರಯೇಣ ಚ ॥
ಅಚ್ಯುತಾನಂತಗೋವಿಂದನಾಮಮಾಹಾತ್ಮ್ಯತಃ ಶುಭೇ ।

ಜೀವಿತೋಽಸ್ಮಿ ತದಾ ಕಾಲೇ ವಿಷ್ಣೋರ್ನಾಮತ್ರಯಾದಹೋ ॥
ಪಶ್ಚಾತ್ ತು ತದ್ವಿಷಂ ಸರ್ವಂ ವಿಕೀರ್ಯೈಕತ್ರ ಸ ಪಾತ್ರಕೇ ।

ಅನಾಯಾಸಾತ್ ಪಪೌ ವಾಯುಃ ಸರ್ವೇಷಾಂ ರಕ್ಷಣಾಯ ಚ ॥
ಹರೇಃ ಸಂಪ್ರೀತಯೇ ದೇವೋ ಬ್ರಹ್ಮಣೋ ವಚನಾತ್ ತಥಾ ।

ಋತಂ ಬ್ರುವಂತಿ ವೇದಸ್ಯ ಕೇಶೀತಿ ಬ್ರಹ್ಮವಾದಿನಃ ॥
ಇತ್ಥಂ ವಾಯೋರ್ಮಹತ್ವಂ ಹಿ ವಿಷ್ಣುಭಕ್ತಸ್ಯ ಪಾರ್ವತಿ ॥

– ಇತಿ ಪದ್ಮಪುರಾಣೇ ಉತ್ತರಖಂಡೇ ಪಾರ್ವತೀಂ ಪ್ರತಿ ಶಿವವಚನಮ್ ॥

— ಈ ಶ್ಲೋಕಗಳು ಪ್ರಮಾಣಸಂಗ್ರಹ ಮೊದಲಾದ ಅನೇಕಟೀಕೆಗಳಲ್ಲಿ ಉದಾಹರಿಸಲ್ಪಟ್ಟಿವೆ.

ಕಲೇಃ[೧] ಸ್ವರೂಪಂ ತದತೀವ ದುಃಸಹಂ
ವರಾದ್ವಿಧಾತುಃ ಸಕಲೈಶ್ಚ ದುಃಸ್ಪೃಶಮ್ ।
ಕರೇ ವಿಮಥ್ಯಾಸ್ತಬಲಂ ವಿಧಾಯ
ದದೌ ಸ ಕಿಂಚಿದ್ಗಿರಿಶಾಯ ವಾಯುಃ ॥ ೧೪ ॥

ಅ: ಕಾಲಕೂಟ ಕಲಿಯ ಸ್ವರೂಪ; ಬ್ರಹ್ಮವರದಿಂದಾಗಿ ಯಾರಿಗೂ ತಡೆಯಲಾಗದ್ದು; ಮುಟ್ಟಲೂ ಆಗದ್ದು. ವಾಯುವು ಅದರ ಸ್ವಲ್ಪಭಾಗವನ್ನು ಕೈಗೆತ್ತಿಕೊಂಡು, ಹಿಂಡಿ, ಅದರ ಶಕ್ತಿಯನ್ನು ಕುಂದಿಸಿ, ಶಿವನಿಗೆ ನೀಡಿದ.

ವಿ: ೧) ಕಾಲಕೂಟವೆಂದರೆ ಇದೇ; ಕಲಿಯೇ ಅದಕ್ಕೆ ಅಭಿಮಾನಿದೈತ್ಯ. ಬ್ರಹ್ಮವರದಿಂದಾಗಿ ಅದು ಇತರರಿಂದ ಸಹಿಸಲಾಗದ್ದು ಹಾಗೂ ಮುಟ್ಟಲಾಗದ್ದು.

೨) ಶ್ರೀಹರಿಯ ಆಜ್ಞೆಯಂತೆ ಅದರ ಸ್ವಲ್ಪಭಾಗವನ್ನು ಕೈಯಲ್ಲಿ ಹಾಕಿಕೊಂಡು, ಮಥಿಸಿ, ಅದರ ಶಕ್ತಿಯನ್ನು ಕುಂದಿಸಿ, ಶ್ರೀವಾಯುದೇವರು ಶಿವನಿಗಿತ್ತರು. ಬ್ರಹ್ಮವರದಿಂದಾಗಿ ಅದು ಶಿವನಿಗೂ ದುಃಸಹ ಹಾಗೂ ದುಃಸ್ಪೃಶ. ಅದರಿಂದಾಗಿಯೇ ವಾಯುದೇವರು ಅದನ್ನು ಮಥಿಸಿ, ಶಕ್ತಿ ಕುಂದಿಸಿದರು ಎಂದು ತಿಳಿಯಬೇಕು.

ನೀಲಕಂಠನೆನ್ನಿಸಿದ ಶಿವ

ಸ ತತ್ ಪಿಬನ್[೨] ಕಂಠಗತೇನ ತೇನ
ನಿಪಾತಿತೋ ಮೂರ್ಛಿತ ಆಶು ರುದ್ರಃ ।
ಹರೇಃ ಕರಸ್ಪರ್ಶಬಲಾತ್ ಸ ಸಂಜ್ಞಾ-
ಮವಾಪ ನೀಲೋಽಸ್ಯ ಗಲಸ್ತದಾऽऽಸೀತ್ ॥ ೧೫ ॥

ಅ: ಶಿವನು ಅದನ್ನು ಕುಡಿದು, ಅದು ಕತ್ತಿನ ಬಳಿ ಬರುತ್ತಲೇ ಮೂರ್ಛಿತನಾಗಿ ಬಿದ್ದು-ಬಿಟ್ಟನು. ಶ್ರೀಹರಿಯ ಹಸ್ತಸ್ಪರ್ಶದ ಬಲದಿಂದ ಎಚ್ಚೆತ್ತು ಕುಳಿತ. ಆಗ ಅವನ ಕತ್ತು ಕಪ್ಪಾಯಿತು.

ವಿ: ೧) ಶಿವ ಕುಡಿದದ್ದು ಅತ್ಯಲ್ಪ. ಅದು ಉದರ ಸೇರುವಷ್ಟಿರಲಿಲ್ಲ. ಅದರಿಂದಾಗಿಯೇ ಅದು ಕಂಠದಲ್ಲೇ ನಿಂತಿತು. ಅದರ ಪ್ರಭಾವದಿಂದಾಗಿ ಅವನಿಗೆ ಮೂರ್ಛೆಯೂ ಬಂತು; ಕಂಠ ಕಪ್ಪು ಆಯಿತು. ಅಂದಿನಿಂದ ಅವನು ನೀಲಕಂಠನೆನ್ನಿಸಿದ.

---

೧. ಕಲಿನಾ ಅಭಿಮನ್ಯಮಾನತ್ವಾತ್ 'ಕಲೇಃ ಸ್ವರೂಪಮ್' ಇತ್ಯುಕ್ತಮ್ ॥ – (ವಾ.)

೨. ಪಿಬದಿತಿ ವಾ ಪಾಠಃ । ಛಾಂದಸತ್ವಾನ್ನುಮಾಭಾವಃ । – (ಜ.)

೨) ಶಿವನಿಗೆ ಕಾಲಕೂಟಪಾನದಿಂದ ವ್ಯಥೆ ಉಂಟಾದದ್ದನ್ನು [೧]'ರುದ್ರ' ಎಂಬ ಶಬ್ದದಿಂದ ಸೂಚಿಸಿರುವರು.

೩) ಅದು ವಾಯುದೇವರ ಕರಸ್ಪರ್ಶದಿಂದ ಬಂದದ್ದು ಎಂಬ ಶ್ರದ್ಧೆ ಶಿವನಿಗಿತ್ತು. ಆದ್ದರಿಂದಲೇ ಅದು ಅಮೃತದಂತಾಗಿ ಅವರ ಉಳಿವಿಗೆ ಕಾರಣವಾಯಿತು. ಇದು ಶಿವನ ವಾಯುಭಕ್ತಿಗೂ, ವಾಯುದೇವರ ಅಮೃತಸ್ಪರ್ಶಕ್ಕೂ ನಿದರ್ಶನ. ಅವರು ಮಧ್ವರೂಪದಿಂದ ನೀಡಿದ ಹುಣಸೆ-ಬೀಜಗಳು ಧನಿಕನಿಗೆ ಚಿನ್ನದ ಬೀಜಗಳಂತೆ [೨]ಅಮೃತಹೇತುವಾದದ್ದನ್ನು ಇಲ್ಲಿಗಮನಿಸಬಹುದು.

ಶ್ರೀವಾಯುದೇವರಿಂದ ಕಾಲಕೂಟಪಾನ

ಅಥ ತ್ವದಾಜ್ಞಾಂ ಪುರತೋ ನಿಧಾಯ
ನಿಧಾಯ ಪಾತ್ರೇ ತಪನೀಯರೂಪೇ ।
ಸ್ವಯಂ [೩]ತ್ವನಿರ್ಮಥ್ಯ ಬಲೋಪಪನ್ನಂ
ಪಪೌ ಸ ವಾಯುಸ್ತದುತಾಸ್ಯ ಜೀರ್ಣಮ್ ॥೧೬॥

ಅ: ಅನಂತರ ನಿನ್ನಾಜ್ಞೆಯನ್ನು ಮುಂದಿರಿಸಿಕೊಂಡು ವಾಯುದೇವರು ಚಿನ್ನದ ಪಾತ್ರೆಯಲ್ಲಿರಿಸಿಕೊಂಡು, ಅದನ್ನು ಮಥಿಸದೆ ಸಹಜಶಕ್ತಿಯಿಂದ ಕೂಡಿದ್ದ ಆ ವಿಷವನ್ನು ತಾವೇ ಕುಡಿದರು; ಅದು ಅವರಿಗೆ [೪]ಜೀರ್ಣವಾಯಿತು.

ವಿ: ೧) ಭಾರತ, ಭಾಗವತಾದಿಗ್ರಂಥಗಳಲ್ಲಿ ಕಾಲಕೂಟವಿಷವನ್ನು ಶಿವನೇ ಕುಡಿದನೆಂಬಂತೆ ತೋರುತ್ತದೆ. ಆದರೆ ವಾಸ್ತವವಾಗಿ ಕಾಲಕೂಟವಿಷದ ಬಹುಭಾಗವನ್ನು ಕುಡಿದದ್ದು ವಾಯುದೇವರು ಎಂಬ ವಿಶೇಷಾಂಶವನ್ನು ಇಲ್ಲಿ ನಿರೂಪಿಸಿರುವರು. ಇದಕ್ಕೆ ಆಧಾರವಾಗಿ ಋಗ್ವೇದದ ಮಾತನ್ನು ಅವರು ತಮ್ಮ ಋಗ್ಭಾಷ್ಯದಲ್ಲಿ ಉಲ್ಲೇಖಿಸಿದ್ದಾರೆ:

'ವಾಯುರಸ್ಮಾ ಉಪಾಮಂಥತ್ ಪಿನಷ್ಟಿ ಸ್ಮಾ ಕುನನ್ನಮಾ ।
ಕೇಶೀ ವಿಷಸ್ಯ ಪಾತ್ರೇಣ ಯದ್ರುದ್ರೇಣಾಪಿಬತ್ ಸಹ ॥' (ಋ.೧೦/೧೩೬/೭)

(ಸುಖರೂಪನಾದ ಶ್ರೀಹರಿಯನ್ನು ಸ್ವಾಮಿಯಾಗಿ ತನ್ನೊಳಗೆ ಸದಾ ಇರಿಸಿಕೊಂಡಿರುವ, ಕಲ್ಯಾದಿಕುತ್ಸಿತವ್ಯಕ್ತಿಗಳನ್ನು ಅಂಧಂತಮಸ್ಸಿನಲ್ಲಿ ಬೀಳಿಸುವ ವಾಯುದೇವರು ಶಿವನಿಗಾಗಿ

---

೧. 'ಸೋಽರೋದೀದ್ಯದರೋದೀತ್ ತದ್ರುದ್ರಸ್ಯ ರುದ್ರತ್ವಮ್' – ಶ್ರುತಿ

೨. ಬೀಜಚ್ಛಲೇನ ಪುರುಷಾರ್ಥಮಹೋ ವಿಶಿಷ್ಟಮ್ ॥ – ಸುಮಧ್ವವಿಜಯ (೨/೫೨).

೩. ತುಶಬ್ದೇನ ವಾಯೋಃ ಶಕ್ತಿವಿಶೇಷೋಽಸ್ತೀತಿ ಸೂಚಿತಮ್ । – (ವಾ.)

೪. ಯಸ್ಯ ತ್ರಿಲೋಕಜನನೀ ಜನನೀ ವಿಷೇಽಪಿ ಪೀತೇ ನ ವಿಸ್ಮಯಮವಾಪ ಸಮಸ್ತಶಕ್ತೇಃ ॥ – ಮ.ವಿ.(೨/೪೧)

ಕಾಲಕೂಟವನ್ನು ಮಥಿಸಿ, ದುರ್ಬಲವನ್ನಾಗಿಸಿ ಕೊಟ್ಟರು. ಆದರೆ ತಾವು ಆ ವಿಷವನ್ನು ಆ ಪಾತ್ರೆಯಿಂದ ನೇರವಾಗಿಯೇ [೧]ಕುಡಿದರು.)

[೨]ಅತ್ಯಲ್ಪಪಾನಾಚ್ಚ ಬಭೂವ ಶೂಲಾ
ಶಿವಸ್ಯ ಶೀರ್ಷ್ಣಶ್ಚ[೩] ಕರಾವಶಿಷ್ಟಮ್ ।
ಅಭೂತ್ ಕಲಿಃ ಸರ್ವಜಗತ್ಸುಪೂರ್ಣಂ
ಪೀತ್ವಾ ವಿಕಾರೋ ನ ಬಭೂವ ವಾಯೋಃ ॥ ೧೭ ॥

---

೧. ಅಸ್ಯಾಃ ಶ್ರುತೇರಯಮರ್ಥಃ — ಕೇಶೀ = ಪ್ರಶಸ್ತಕೇಶವಾನ್ ಸುಖರೂಪನಾರಾಯಣಾಖ್ಯೇಶವಾಂಶ್ಚ ಕುನನ್ನಮಾ = ಕುತ್ಸಿತಕಲ್ಯಾದೀನ್ ವಿಶೇಷೇಣ ನಮಯತ್ಯಧಃ ಪಾತಯತೀತಿ ಅಂಧೇ ತಮಸಿ ಮಜ್ಜಯತಿ ಇತಿ ಕುನನ್ನಮಾ = ವಾಯುಃ ವಿಷಸ್ಯ ಪಾತ್ರೇಣ = ಸುವರ್ಣಪಾತ್ರೇಣ ಧೃತಂ ಯದ್ವಿಷಂ ರುದ್ರೇಣ ಸಹ ಅಪಿಬತ್ ತದ್ವಿಷಂ ಅಸ್ಯೈ ರುದ್ರಾಯ ಉಪಾಮಂಥತ್ = ಉಪ ಉಪಪನ್ನಂ ಪಾನಾರ್ಹಂ ಯಥಾ ಭವತಿ ತಥಾ ಅಮಥ್ನಾತ್ । ಪಿನಷ್ಟಿ ಸ್ಮ = ಪಿಷ್ಟಮಕರೋಚ್ಚ। ಅಸ್ಯೈ ಉಪಾಮಂಥದಿತ್ಯುಕ್ತ್ಯಾಸ್ವಸ್ಯೈ ಮಥನಂ ನೇತಿ ಸಿದ್ಧಮ್ । ಪಾತ್ರ ಏವ ಮಥನಂ ಚೇತ್ ಸ್ವಸ್ಮಾ ಅಪಿ ಮಥನಂ ಸ್ಯಾತ್ । ಅತಃ ಪಾತ್ರಾದನ್ಯತ್ರೈವ ಮಥನಂ ಸಿದ್ಧಮ್ । ತಚ್ಚ ಯೋಗ್ಯತಯಾ ಕರ ಏವೇತಿ ಭಾವೇನಾಹ - ಕರೇ ವಿಮಥ್ಯೇತಿ । ಪಾನಯೋಗ್ಯಂ ಯಥಾ ಭವತಿ ತಥೇತ್ಯುಕ್ತ್ಯಾ ವಿಷಸ್ಯಾತ್ಯುಗ್ರತಾ ನಿರಸ್ತೇತಿ ಗಮ್ಯತೇ ಇತಿ ಭಾವೇನಾಹುಃ ಅಸ್ತಬಲಂ ವಿಧಾಯೇತಿ । ಅಸ್ಮಾ ಉಪಾಮಂಥದಿತ್ಯುಕ್ತ್ಯಾನತು ಸ್ವೇನ ಪೀಯಮಾನಮಷ್ಯಮಥ್ನಾದಿತಿ ಲಭ್ಯತೇ । ಅತ ಏವ ಸ್ವಯಂ ತ್ವನಿರ್ಮಥ್ಯೇತ್ಯಾಹುಃ । ರುದ್ರೇಣ ಸಹ ವಾಯು- ರಪಿಬದಿತ್ಯುಕ್ತ್ಯಾ ವಾಯೋರೇವ ಮುಖ್ಯಪಾತೃತ್ವಂ ರುದ್ರಸ್ಯ ತ್ವಮುಖ್ಯತಃ ಪಾತೃತ್ವಂ ಚ ಲಭ್ಯತೇ । ಸಹಯೋಗೇ ಅಪ್ರಾಧಾನ್ಯಸ್ಯ ಶಿಷ್ಯೇಣ ಸಹಾಗತೋ ಗುರುರಿತ್ಯಾದೌ ದರ್ಶನಾತ್ । ಅನುಶಾಸನಾಚ್ಚ । ಅತ ಏವ ಕಿಂಚಿದ್ಗಿರಿಶಾಯ ದದಾವಿತ್ಯಾಹುಃ । ವಿಷಪಾನೇನಾಪಿ ರುದ್ರಸ್ಯ ರೋದನಮಾಸೀದಿತಿ ಸೂಚನಾಯ ರುದ್ರಪದಮ್ । 'ಸೋ೨ರೋದೀದ್ಯದರೋದೀತ್ತದ್ರುದ್ರಸ್ಯ ರುದ್ರತ್ವಮ್' ಇತಿ ಹಿ ಶ್ರುತಿಃ। ಏತದೇವಾಭಿಪ್ರೇತ್ಯಾಹುಃ 'ಸ ತತ್ಪಿಬತ್ಕಂಠಗತೇನ ತೇನ ನಿಪಾತಿತೋ ಮೂರ್ಚ್ಛಿತ ಆಶು ರುದ್ರಃ' ಇತಿ । ಸುಖರೂಪನಾರಾಯಣಸ್ಯ ಸ್ವಹೃದಿ ಧಾರಣಾತ್ ಕುನನ್ನಮತ್ವಾಚ್ಚ ವಾಯೋಸ್ತು ವಿಷಪಾನೇನ ದುಃಖಿಲೇಶೋ೨ಪಿ ನಾಭೂದಿತಿ ಸೂಚನಾಯ ಕೇಶೀ ಕುನನ್ನಮೇತಿ ಚೋಕ್ತಮ್ । ತದಾ ಗಮನಾದಿಸಾಮರ್ಥ್ಯಸ್ಯ ನೇಷದಪಿ ಹಾನಿರಿತಿ ಸೂಚನಾಯ ವಾಯು- ರಿತ್ಯುಕ್ತಮ್ । 'ವಯ ಗತಾ'ವಿತಿ ಧಾತುಃ । ಏತದಪ್ಯಾಹುಃ ತದುತಾಸ್ಯ ಜೀರ್ಣಮಿತಿ । ಗೋಪ್ತೃತ್ವಾದಯಮರ್ಥಃ ನತು ಪುರಾಣಾದೌ ಸ್ಪಷ್ಟಮುದಿತಃ । ಸರ್ವಜ್ಞತ್ವಾದ್ದೇವಾಃ ಶ್ರುತ್ಯುಕ್ತಮಿಮಂ ಸರ್ವಮೇಕೀಕೃತ್ಯ ಅಸ್ತುವನ್ನಿತಿ ಗ್ರಂಥಕಾರಸ್ಯ ಭಾವಃ ॥ – (ವಾ.)

೨. ಅತ್ಯಲ್ಪಪಾನಾದಪಿ ಶಿವಸ್ಯ ಶೀರ್ಷ್ಣಿ ಶೂಲಾ ಬಭೂವ । ಅತ ಏವಾಭಿಷೇಕಪ್ರಿಯಃ ಶಿವಃ ಚಂದ್ರಶೇಖರಶ್ಚಾಭೂತ್ । ಅಸ್ಯ ಶಿವಸ್ಯ ಕರಾವಶಿಷ್ಟಂ ಅತ್ಯಲ್ಪಪಾನಾದೇವ ಮೂರ್ಚ್ಛಿತಶಿವಸ್ಯ ಕರೇ ಉರ್ವರಿತಂ ವಿಷಂ ಸರ್ವಜಗತ್ಸುಪೂರ್ಣಂ ಸತ್ ಕಲಿರಭೂತ್ । ಅಭಿಮಾನ್ಯಭಿಮನ್ಯಮಾನಯೋರೈಕ್ಯವ್ಯಪದೇಶಾತ್ ಕಲ್ಯಭಿಮನ್ಯಮಾನಮಭೂದಿತ್ಯರ್ಥಃ ॥ – (ವಾ.)

ಅಲ್ಪತ್ವಾತ್ ಕಂಠೇ ಲಗ್ನಂ ಸತ್ ತತ್ರೈವ ಸ್ಥಿತಂ। ಉದರಂ ಪ್ರಾಪ್ತಮಿತಿ ಭಾವಃ । – (ಜ.)

೩. ಶೀರ್ಷ್ಣರ್ಕಸ್ಯ (ಪಾಠಾಂತರ)

ಅ : ಶಿವನಿಗೆ ಆ ಕಾಲಕೂಟದ ಅತ್ಯಲ್ಪಪಾನದಿಂದಾಗಿ ತಲೆಯಲ್ಲಿ ನೋವು ಉಂಟಾಯಿತು. ಅವರ ಕೈಯಲ್ಲುಳಿದಿದ್ದ ವಿಷದಲ್ಲಿ ನೆಲೆಸಿದ್ದ ಕಲಿ ಇಡೀ ಜಗತ್ತನ್ನು ವ್ಯಾಪಿಸಿದ. ವಾಯುದೇವರಿಗೆ ಅದನ್ನು ಕುಡಿದು ಯಾವ ವಿಕಾರವೂ ಉಂಟಾಗಲಿಲ್ಲ.

ವಿ: ೧) ಶಿವನಿಗೆ ವಾಯು ಕೊಟ್ಟ ವಿಷದ ಪ್ರಮಾಣ ತುಂಬಾ ಕಡಿಮೆ; ಅದನ್ನು ಕೊಟ್ಟದ್ದು ಸಹ ನಿರ್ವೀರ್ಯಗೊಳಿಸಿಯೇ. ಹಾಗೆ ಕೊಟ್ಟದ್ದರಲ್ಲೂ ಶಿವ ಕುಡಿದದ್ದು ಸ್ವಲ್ಪವನ್ನು ಮಾತ್ರ. ಅಷ್ಟಕ್ಕೇ ಅವರಿಗೆ ತಲೆನೋವು, ಮೂರ್ಛೆ ಮೊದಲಾದ ಅನೇಕವಿಕಾರಗಳು ಉಂಟಾದವು. ಅದ–ಕ್ಕಾಗಿಯೇ ಶಿವ **'ಅಭಿಷೇಕಪ್ರಿಯ'**('ಅಭಿಷೇಕಪ್ರಿಯೋ ರುದ್ರಃ' – ಪುರಾಣವಚನ) ಎನ್ನಿಸಿದ. ಆದರೆ ವಿಷದ ಸಿಂಹಪಾಲನ್ನು ನಿರ್ವೀರ್ಯಗೊಳಿಸದೆ, ಪೂರ್ಣ ಕುಡಿದ ವಾಯುದೇವರಿಗೆ ಯಾವ ವಿಕಾರವೂ ಉಂಟಾಗಲೇ ಇಲ್ಲ. ಅದು ಅವರಿಗೆ ಪೂರ್ಣವಾಗಿ ಜೀರ್ಣವಾಯಿತು. ಸ್ವಲ್ಪ ಕುಡಿದೂ ವಿಕಾರಗೊಂಡು ನೀಲಕಂಠನಾದ ಶಿವನಿಗಿಂತ ಎಲ್ಲ ಕುಡಿದೂ ಯಾವ ವಿಕಾರವನ್ನೂ ಹೊಂದದ ವಾಯು ಉತ್ತಮನೆಂಬುದು ಇಲ್ಲಿಯ ತತ್ತ್ವ.

೨) ಕಾಲಕೂಟದ ಅಭಿಮಾನಿ ದೈತ್ಯ ಕಲಿ. ಅವನಿಗೆ ಬ್ರಹ್ಮನ ವರ. ಅದಕ್ಕೆಂದೇ ಶಿವನಿಗೆ ಅದರಿಂದ ವಿಕಾರ. ಆದರೆ ವಾಯು ಭಾವಿಬ್ರಹ್ಮ. ಆದ್ದರಿಂದಲೇ ಅವರಿಗೆ ಅದು ಸುಲಭವಾಗಿ ಜೀರ್ಣವಾಯಿತು.

ಕಲೇಃ ಶರೀರಾದಭವನ್ ಕುನಾಗಾಃ
ಸವೃಶ್ಚಿಕಾಃ ಶ್ವಾಪದಯಾತುಧಾನಾಃ ।
ಅಥ ತ್ವಯಾऽಬ್ಧೌ ತು ವಿಮಥ್ಯಮಾನೇ
ಸುರಾऽಭವತ್ ತಾಮಸುರಾ ಅವಾಪುಃ ॥ ೧೮ ॥

ಅ: ಕಲಿಯ ದೇಹವಾದ ಆ ಉಳಿದ ವಿಷದಿಂದ ಕೆಟ್ಟ ಸರ್ಪಗಳು, ಚೇಳುಗಳು, ಹುಲಿ, ತೋಳ ಮೊದಲಾದ ಪ್ರಾಣಿಗಳು, ರಾಕ್ಷಸರು ಜನಿಸಿದರು. ಅನಂತರ ನಿನ್ನಿಂದ ಸಮುದ್ರವು ಕಡೆಯಲ್ಪಡುತ್ತಿದ್ದಂತೆ ಸುರೆ ಹುಟ್ಟಿತು. ಅದನ್ನು ಅಸುರರು ತೆಗೆದುಕೊಂಡರು.

ವಿ: ೧) ಉಳಿದ ಕಾಲಕೂಟದಿಂದಲೇ ವಿಷಸರ್ಪಾದಿಕ್ರೂರಜಂತುಗಳು ಹುಟ್ಟಿದವು. ಅವುಗಳ ವಂಶದಲ್ಲಿ ಬಂದ ಜಂತುಗಳು ಸಹ ಇಂದೂ ಮಾರಕ. ಎಂದ ಮೇಲೆ ಆ ವಿಷದ ಪ್ರಭಾವ ಎಷ್ಟು ತೀಕ್ಷ್ಣ ಎಂಬುದು ತಿಳಿಯುವುದು.

೨) ಕಾಲಕೂಟದ ಅನಂತರ ಬಂದಿದ್ದು ಸುರೆ. ಅದನ್ನು ತೆಗೆದುಕೊಂಡದ್ದು ಅಸುರರು. ಸುರೆ ಪಡೆದ ಅಸುರರಿಗೆ ಸುಧೆ ಇಲ್ಲವಾಯಿತು. ಸುರಾಪಾನಾದಿಗಳನ್ನು ಮಾಡುವ ದುರಾಚಾರಿಗಳಿಗೆ

ಸುಧಾದಿಗ್ರಂಥಗಳ ಅಧ್ಯಯನದ ಅರ್ಹತೆ ತಪ್ಪುವುದು, ಅವುಗಳ ಮರ್ಮ ತಿಳಿಯದಾಗುವುದು ಎಂಬುದಕ್ಕೆ ಇದು ಸೂಚಕ.

ಉಚ್ಚೈಃಶ್ರವಸ್ ಹಾಗೂ ಐರಾವತಾದಿಗಳ ಜನ್ಮ

ಉಚ್ಚೈಃಶ್ರವಾ ನಾಮ ತುರಂಗಮೋಽಭೂತ್
ಕರೀ ತಥೈರಾವತನಾಮಧೇಯಃ ।
ಅನ್ಯೇ ಚ ದಿಕ್ಪಾಲಗಜಾ ಬಭೂವು-
ರ್ವರಂ ತಥೈವಾಪ್ಸರಸಾಂ ಸಹಸ್ರಮ್[೧] ॥ ೧೯ ॥

ಅ: ಉಚ್ಚೈಃಶ್ರವಸ್ ಎಂಬ ಕುದುರೆ ಜನಿಸಿತು; ಹಾಗೆಯೇ ಐರಾವತವೆಂಬ ಆನೆಯೂ. ಇತರ ದಿಕ್ಪಾಲಕರ ಗಜಗಳೂ ಹುಟ್ಟಿದವು. ಹಾಗೆಯೇ ಶ್ರೇಷ್ಠರಾದ ಸಾವಿರಾರು ಅಪ್ಸರೆಯರೂ ಸಹ ಜನಿಸಿದರು.

ವಿ: ೧) ಅಷ್ಟದಿಗ್ಗಜಗಳು ಐರಾವತ(ಪೂರ್ವ), ಪುಂಡರೀಕ(ಆಗ್ನೇಯ), ವಾಮನ (ದಕ್ಷಿಣ), ಕುಮುದ (ನೈಋತ್ಯ), ಅಂಜನ(ಪಶ್ಚಿಮ), ಪುಷ್ಪದಂತ(ವಾಯವ್ಯ), ಸುಪ್ರತೀಕ (ಉತ್ತರ) ಮತ್ತು ಸಾರ್ವಭೌಮ (ಈಶಾನ್ಯ). ಇವು ಭೂಮಿಯನ್ನು ಹೊರುತ್ತವೆ ಎಂಬುದು [೨]ಪುರಾಣವಚನ.

೨) ಅವುಗಳೊಂದಿಗೆ ನಾಲ್ಕು ದಂತಗಳ ಇತರ ಆರು ಸಾವಿರ ಆನೆಗಳು ಸಹ ಆ ಕಾಲದಲ್ಲಿ ಹುಟ್ಟಿ ಬಂದವು ಎಂಬ [೩]ವಿವರ ಮುಂದೆ ನಿರೂಪಿತವಾಗಿದೆ(೨೦/೧೦೭).

೩) ಅಶ್ವಗಳಲ್ಲಿ ಉಚ್ಚೈಃಶ್ರವಸ್ಸಿನಲ್ಲೂ, ಆನೆಗಳಲ್ಲಿ ಐರಾವತದಲ್ಲೂ ಭಗವಂತನ ವಿಭೂತಿರೂಪಗಳಿವೆ[೪].

೪) ಅಪ್ಸರೆಯರು ಅನೇಕವಿಧ. ಸಮುದ್ರಮಥನಕಾಲದಲ್ಲಿ ಜನಿಸಿದ ಅಪ್ಸರೆಯರಿಗೆ 'ಅಮೃತಾ' ಎಂದು ಹೆಸರು.

---

೧. 'ವರಂ ತಥೈವಾಪ್ಸರಸಾಂ ಸಹಸ್ರಂ' ಇತಿ 'ಷಷ್ಟಿಕೋಟ್ಯೋಽಭವಂಸ್ತಾಸಾಮಪ್ಸರಾಣಾಂ ಸುವರ್ಚಸಾಮ್' ಇತ್ಯಾದಿ ರಾಮಾಯಣೇ (೧/೪೪/೩೪)। – (ಮ.)

೨. ಐರಾವತಃ ಪುಂಡರೀಕೋ ವಾಮನಃ ಕುಮುದೋಽಂಜನಃ ।
ಪುಷ್ಪದಂತಃ ಸಾರ್ವಭೌಮಃ ಸುಪ್ರತೀಕಶ್ಚ ದಿಗ್ಗಜಾಃ ॥

೩. 'ಚತುರ್ದಂತಾನ್ ಷಟ್ಸಹಸ್ರಾನ್ ಕರೀಂದ್ರಾನ್ ಪಯೋಬ್ಧಿಜಾತಾನ್ ಪ್ರಾಹಿಣೋದ್ದ್ವಾರವತ್ಯೈ' ಇತಿ (೨೦/೧೦೭) ವಕ್ಷ್ಯಮಾಣತ್ವಾತ್ ॥ – (ತಿ.)

೪. **ಉಚ್ಚೈಃಶ್ರವಸಮಶ್ವಾನಾಂ ವಿದ್ಧಿ ಮಾಮಮೃತೋದ್ಭವಮ್ ।**
ಐರಾವತಂ ಗಜೇಂದ್ರಾಣಾಂ ನರಾಣಾಂ ಚ ನರಾಧಿಪಮ್ ॥ – ಗೀತಾ (೧೦/೨೭)

ತಥಾऽऽಯುಧಾನ್ಯಾಭರಣಾನಿ ಚೈವ
ದಿವೌಕಸಾಂ ಪಾರಿಜಾತಸ್ತರುಶ್ಚ।
ತಥೈವ ಸಾಕ್ಷಾತ್[೧] ಸುರಭಿರ್ನಿಶೇಶೋ
ಬಭೂವ ತತ್ ಕೌಸ್ತುಭಂ ಲೋಕಸಾರಮ್[೨] ॥೨೦॥

ಅ: ಹಾಗೆಯೇ ದೇವತೆಗಳ ಆಯುಧಗಳು, ಆಭರಣಗಳು ಉದ್ಭವಿಸಿದವು. ಪಾರಿಜಾತ ವೃಕ್ಷ ಹುಟ್ಟಿತು. ಹಾಗೆಯೇ ಸಾಕ್ಷಾತ್ ಕಾಮಧೇನು ಜನಿಸಿತು; ಚಂದ್ರ ಹುಟ್ಟಿದ. ಲೋಕದಲ್ಲೆಲ್ಲ ಅತ್ಯಂತಶ್ರೇಷ್ಠವೆನ್ನಿಸಿದ ಕೌಸ್ತುಭಮಣಿಯೂ ಹುಟ್ಟಿತು.

ವಿ: ೧) ಇಲ್ಲಿ ಜನಿಸಿದ ಕಾಮಧೇನು ಸುರಭಿ. ನಂದಿನಿ ಮೊದಲಾದ ಇತರ ಕಾಮಧೇನುಗಳು ಇದರ ವಂಶದಲ್ಲಿ ಹುಟ್ಟಿತು.

೨) ಕೌಸ್ತುಭಮಣಿ ರತ್ನಗಳಲ್ಲೆಲ್ಲ ಮಿಗಿಲಾದುದು. ಅದನ್ನು ಧರಿಸಿದ ವಿಷ್ಣು ದೇವತೆಗಳಲ್ಲೆಲ್ಲ ಮಿಗಿಲಾದವನು.

೩) ಅತ್ರಿಪುತ್ರನಾಗಿ ಜನಿಸಿದ್ದ ಚಂದ್ರ ಈಗ ಮತ್ತೊಂದು ರೂಪದಿಂದ ಜನಿಸಿ ಬಂದ ಎಂದು ತಿಳಿಯಬೇಕು. ದೇವತೆಗಳು ಹೀಗೆ ಬಹುಬಾರಿ ಜನಿಸುವುದು ಪುರಾಣಗಳಲ್ಲಿ ಬಂದಿದೆ. ಅತ್ರಿಪುತ್ರನಾದ ಚಂದ್ರನಲ್ಲಿ ಬ್ರಹ್ಮದೇವರ ವಿಶೇಷಸನ್ನಿಧಾನ. ಆ ಚಂದ್ರನನ್ನೇ ಶಿವ ತನ್ನ ಶಿರಸ್ಸಿನಲ್ಲಿ ಧರಿಸಿರುವುದು.

ಮಹಾಲಕ್ಷ್ಮಿ ಹಾಗೂ ಧನ್ವಂತರಿಯ ಪ್ರಾದುರ್ಭಾವ

ಅಥೇಂದಿರಾ ಯದ್ಯಪಿ ನಿತ್ಯದೇಹಾ
ಬಭೂವ ತತ್ಪ್ರಾಪರಯಾ ಸ್ವತನ್ವಾ।
ತತೋ ಭವಾನ್ ದಕ್ಷಿಣಬಾಹುನಾ ಸುಧಾ-
ಕಮಂಡಲುಂ ಕಲಶಂ ಚಾಪರೇಣ ।
ಪ್ರಗೃಹ್ಯ ತಸ್ಮಾನ್ನಿರಗಾತ್ ಸಮುದ್ರಾ-
ದ್ಧನ್ವಂತರಿರ್ನಾಮ ಹರಿನ್ಮಣಿದ್ಯುತಿಃ ॥ ೨೧ ॥

---

೧. ಸಾಕ್ಷಾತ್ ಸುರಭಿಃ ಮುಖ್ಯಕಾಮಧೇನುಃ। ನಂದಿನ್ಯಾದಿವ್ಯಾವೃತ್ತ್ಯರ್ಥಂ ಸಾಕ್ಷಾದಿತ್ಯುಕ್ತಮ್। –(ಜ.)

೨. ಲೋಕೇಷು ಸಾರಂ ಶ್ರೇಷ್ಠಂ। –(ಜ.)
ತತ್ಪ್ರಸಿದ್ಧಂ ಲೋಕೇ ಸಾರಭೂತಂ ಕೌಸ್ತುಭಂ ಬಭೂವ। –(ವ.)

ಅ: ಬಳಿಕ ಮಹಾಲಕ್ಷ್ಮಿಯು ನಿತ್ಯಶರೀರಳಾದರೂ, ಮತ್ತೊಂದು ರೂಪದಿಂದ ಅಲ್ಲಿ ಪ್ರಾದುರ್ಭವಿಸಿದಳು. ಅನಂತರ ನೀನು ಬಲಗೈಯಲ್ಲಿ ಅಮೃತ (ಬಡಿಸುವ)ಕಮಂಡಲು, ಎಡಗೈಯಿಂದ ಅಮೃತಕಲಶಗಳನ್ನು ಹಿಡಿದು, ಇಂದ್ರನೀಲಮಣಿಯ ಕಾಂತಿಯಿಂದ ಕೂಡಿದ ಧನ್ವಂತರಿ ಎಂಬ ರೂಪದಿಂದ ಆ ಸಮುದ್ರದೊಳಗಿಂದ ಪ್ರಾದುರ್ಭವಿಸಿದೆ.

ವಿ: ೧) ಮಹಾಲಕ್ಷ್ಮಿಯು ನಿತ್ಯಸ್ವರೂಪಳು. ಇಲ್ಲಿ ಕಾಣಿಸಿಕೊಂಡಿದ್ದು ಅವಳದೇ ಮತ್ತೊಂದು ರೂಪ. ಅವಳಿಗೆ ಎಂದೂ ಪ್ರಾಕೃತದೇಹವಿಲ್ಲ.

೨) ಚಂದ್ರವಂಶದಲ್ಲಿ ದೀರ್ಘತಮಸ್ ಎಂಬವನ [೩]ಪುತ್ರತ್ವೇನ ಧನ್ವಂತರಿರೂಪ ಮತ್ತೊಮ್ಮೆ ಪ್ರಾದುರ್ಭೂತವಾಗಿದೆ.

೩) ಇಲ್ಲಿ ಸುಧಾಕಮಂಡಲು ಎಂದರೆ ಸುಧೆ ತುಂಬಿದ ಕಮಂಡಲು ಎಂದಲ್ಲ, ಸುಧೆಯನ್ನು ನೀಡಲೆಂದು ತಂದ ಕಮಂಡಲು. ಕಲಶ ಸುಧಾಪೂರಿತಕಲಶ; ಕಮಂಡಲುವಿನಲ್ಲೂ ಸುಧೆ ಇದ್ದಿದ್ದರೆ ದೈತ್ಯರು ಅದನ್ನೂ ಅಪಹರಿಸುತ್ತಿದ್ದರು ಎಂಬ [೪]ವಿಶೇಷಾರ್ಥವನ್ನು ಶ್ರೀವಾದಿರಾಜರು ತಿಳಿಸಿರುವರು.

೪) ಇಲ್ಲಿ ಹೇಳಿರುವಂತೆ ಧನ್ವಂತರಿರೂಪ ಇಂದ್ರನೀಲಮಣಿಯಂತೆ ನೀಲವರ್ಣದ್ದು. ತಂತ್ರಸಾರದಲ್ಲಿ 'ಚಂದ್ರೌಘಕಾಂತಿಂ' (ಸಾವಿರಾರು ಚಂದ್ರರ ಕಾಂತಿ) ಎಂದು ಬಣ್ಣಿಸಲಾಗಿದೆ. ಇದು 'ಶ್ಯಾಮಾವದಾತೇ ಜಗದೇಕಸಾರೇ ಸ್ವನಂತಚಂದ್ರಾಧಿಕಕಾಂತಿಕಾಂತೇ' (೪/೧೨) ಎಂಬ

---

೩. ತಂತ್ರಸಾರೇ ಕಮಂಡಲುಸ್ಥಾನೇ ಜ್ಞಾನಮುದ್ಘೋಕ್ತಿಸ್ತು ಉಪಾಸಕಾನಾಂ ಜ್ಞಾನಸ್ಯಾಪೇಕ್ಷಿತತ್ವಾದ್ರೂಪ-ವಿಶೇಷವಿವಕ್ಷಯೇತಿ ಬೋಧ್ಯಮ್ । –(ತಾ.)

೪. ಹರಿನ್ಮಣಿದ್ಯುತಿರಿತಿ ಇಂದ್ರನೀಲಮಣಿವರ್ಣ ಇತ್ಯರ್ಥಃ । – (ತಾ.)

೫. ....ಧನ್ವಂತರಿರ್ದೀರ್ಘತಮಸ ಆಯುರ್ವೇದಪ್ರವರ್ತಕಃ ।..... – ಭಾಗವತ (೯/೧೭/೪)

ಪುರೂರವವಂಶೇऽಪಿ ಧನ್ವಂತರಿರವತೀರ್ಣಃ ।
'ಯಸ್ಯ ವಂಶೇ ಸಮಭವದ್ದೇವೋ ಧನ್ವಂತರಿಸ್ತಥಾ' ಇತಿ ಹರಿವಂಶೇ ॥ – (ಮ.)

೬. ಸುಧಾಕಮಂಡಲುಂ ನತು ಸುಧಾಪೂರಿತಕಮಂಡಲುಮ್ । ತಥಾಸತಿ ದೈತ್ಯೈಃಸ್ತ್ಯಾಪಹಾರ-ಪ್ರಸಂಗಾತ್। ಕಿಂತು ಜಲಪರಿವೇಷಣಕಮಂಡಲುಮಿತಿ ಭಾವಃ । ಕಲಶಂ ಸುಧಾಪರಿಪೂರಿತಕಲಶಮ್ । ಪರಿವೇಷಣಪಾತ್ರಸ್ಯ ಸುಧಾಪಾತ್ರತ್ವೇ ಕಲಶಸ್ಯ ಸುಧಾಪೂರ್ಣತ್ವಂ ಸ್ವತ ಏವ ಸಿದ್ಧಮಿತ್ಯತೋ ನ ಪೃಥಗುಕ್ತಮ್ । ಸುಧಾಯಾಃ ಭರಃ ಭಾರೋ ಯತ್ರ ತಂ ಸುಧಾಭರಂ ಕಲಶಮಿತಿ ವಕ್ಷ್ಯತಿ ಚ । ''ಜ್ಞಾನಂ ಸುಧಾಕಲಶಮೇವ ಚ ಸಂದಧಾನಮ್'' ಇತಿ ತಂತ್ರಸಾರೇ ಸ್ವಯಮೇವ ಗ್ರಂಥಕಾರೈರುಕ್ತತ್ವಾಚ್ಚ॥ – (ವಾ.)

ಶ್ರೀರಾಮರೂಪದ ವರ್ಣನೆಯಂತೆ ಎಂದು ತಿಳಿಯಬೇಕು; ಮತ್ತು ಅಲ್ಲಿ [೧]ಭಾವಪ್ರಕಾಶಿಕೆಯಲ್ಲಿ ಬರೆದಿರುವ ರೀತಿಯಲ್ಲಿ ವಿರೋಧವನ್ನೂ ಪರಿಹರಿಸಿಕೊಳ್ಳಬೇಕು.

೫) ಬಣ್ಣ ಇಂದ್ರನೀಲಮಣಿಯದು; ಶೋಭೆ ಸಾವಿರಾರು ಚಂದ್ರರದು. ಆದ್ದರಿಂದ ಇವೆರಡಕ್ಕೂ ವಿರೋಧವಿಲ್ಲ. ಇದು ಭಗವದ್ರೂಪವಾದ್ದರಿಂದ ಅದಕ್ಕೆ ಯಾವ ಬಣ್ಣನೆಯೂ ವಿರುದ್ಧವೆನ್ನಿಸದು. ಒಬ್ಬನೇ ಸೂರ್ಯ ಉದಿಸುವ ಕಾಲದಲ್ಲಿ ರಕ್ತವರ್ಣನಾಗಿಯೂ, ಅನಂತರ ಕಾಲದಲ್ಲಿ ಬಿಳಿಬಣ್ಣದವನಾಗಿಯೂ ಗೋಚರಿಸುವಂತೆ.

ಅಸುರರಿಂದ ಅಮೃತದ ಅಪಹರಣ

ತತೋ ಭವದ್ದಸ್ತಗತಂ ದಿತೇಃ ಸುತಾಃ
[೨]ಸುಧಾಭರಂ ಕಲಶಂ ಚಾಪಜಹ್ರುಃ ।
ಮುಕ್ತಂ ತ್ವಯಾ ಶಕ್ತಿಮತಾಽಪಿ ದೈತ್ಯಾನ್
ಸತ್ಯಚ್ಯುತಾನ್ ಕಾರಯತಾ ವಧಾಯ ॥ ೨೨ ॥

ಅ: ಆಗ ದೈತ್ಯರು ನಿನ್ನ ಕೈಯಲ್ಲಿನ ಅಮೃತ ತುಂಬಿದ ಕಲಶವನ್ನು ಸೆಳೆದೊಯ್ದರು. ನೀನು ಶಕ್ತಿಯುಳ್ಳವನಾದರೂ, ಸತ್ಯಭ್ರಷ್ಟರಾದ ಅವರನ್ನು ವಧಾರ್ಹರಾಗಿಸಲೆಂದು ಹಾಗೆ ಸೆಳೆದೊಯ್ಯಲು ಅನುವಿತ್ತೆ.

ವಿ: ೧) ಅನಂತಶಕ್ತಿಸಂಪನ್ನನಾದ ಭಗವಂತನಿಂದ ಅಮೃತಕಲಶವನ್ನು ಸೆಳೆದೊಯ್ಯಲು ದೈತ್ಯರಿಗೆಂತು ಸಾಧ್ಯವಾಯಿತು? ಎಂಬ ಸಮಸ್ಯೆಗೆ ಇಲ್ಲಿ ಪರಿಹಾರವಿದೆ. ಭಗವಂತನಿಂದ ಏನನ್ನೂ ಅಪಹರಿಸುವ ಶಕ್ತಿ ಯಾರಿಗೂ ಇಲ್ಲ. ಅವನು ಸರ್ವಶಕ್ತ. ಆದರೂ ಅವರಿಗೆ ಅವಕಾಶ ನೀಡಿದ್ದು ಅಸುರಮೋಹನಕ್ಕೆಂದು. ಮಥನದ ಅನಂತರ ಬರುವ ಅಮೃತವನ್ನು ತಾವೆಲ್ಲ ಸಮವಾಗಿ

---

೧. ಶ್ಯಾಮತ್ವೇಽಪಿ ಸೂರ್ಯಮಂಡಲವತ್ ಇಂದ್ರನೀಲವಚ್ಚ ಶುಕ್ಲಭಾಸ್ವರತೇಜೋವಿಶೇಷಯುಕ್ತತ್ವಾದವದಾತಶ್ಚೇತ್ಯರ್ಥಃ। – (ವಾ.೪/೧೨)

'ಧನ್ವಂತರಿರ್ನಾಮ ಹರಿಸ್ಸಣದ್ಯುತಿ'ರಿತ್ಯತ್ರ ಚಂದ್ರೌಘಕಾಂತಿರಿತ್ಯುಕ್ತಾ ವಿರುದ್ಧಮತೋಽತ್ರ ರಾಜಕುಲೇಽವತೀರ್ಣಸ್ಯೈವ ಧನ್ವಂತರೇರ್ಮಂತ್ರಧ್ಯೇಯತ್ವಮಿತ್ಯಂಗೀಕಾರಾನ್ನ ವಿರೋಧಃ। – (ರಾ.)

೨. ಸುಧಾಭರಂ ಕಲಶಂ ಚೇತ್ಯತ್ರ ಚಶಬ್ದ ಏವಾರ್ಥಃ ನತು ಕಮಂಡಲುಮಿತಿ ॥ – (ವಾ.)

ಸುಧಾಭರಮಮೃತೇನ ಪೂರ್ಣಂ ಕಮಂಡಲಂ ಕಲಶಂ ....। – (ವ.)

ಸುಧಾಭರಂ ಕಲಶಂ — ಚಶಬ್ದಾತ್ ಕಮಂಡಲುಂ ಚಾಪಜಹ್ರುಃ। – (ತಾ.)

ಹಂಚಿಸಿಕೊಳ್ಳಬೇಕೆಂದು ಒಪ್ಪಂದವಾಗಿದ್ದರೂ, ದೈತ್ಯರು ಅದನ್ನು ಉಲ್ಲಂಘಿಸುವ ಮೂಲಕ ವಧಾರ್ಹರಾಗುವರು ಎಂಬುದು ಅದರ ಮತ್ತೊಂದು [೧]ಹಿನ್ನೆಲೆ.

೨) ಹಾಗೆ ಮಾಡದಿದ್ದಲ್ಲಿ ಅಸುರರ ದುರ್ಬುದ್ಧಿ ಪ್ರಕಟವಾಗುತ್ತಿರಲಿಲ್ಲ. ಈ ರೀತಿ ನಿರ್ಣಯ ನೀಡದಿದ್ದಲ್ಲಿ ಭಗವಂತನ ನಿರ್ದೋಷತ್ವಸಮರ್ಥನೆ ಆಗುತ್ತಿರಲಿಲ್ಲ ಎಂಬುದನ್ನು ಗಮನಿಸಬೇಕು. ಮುಂದೆ ಬರುವ ಬಲಿಚಕ್ರವರ್ತಿಯು ಭಗವಂತನ ಕಿರೀಟವನ್ನು ಅಪಹರಿಸುವ ಪ್ರಸಂಗವೂ ಸಹ ಇಂತಹುದೇ ಎಂದು ತಿಳಿಯಬೇಕು.

ಶ್ರೀಹರಿಯ ಮೋಹಿನೀರೂಪ

ತತೋ [೨]ಭವಾನನುಪಮಮುತ್ತಮಂ ವಪು-
ರ್ಬಭೂವ ದಿವ್ಯಪ್ರಮದಾತ್ಮಕಂ [೩]ತ್ವರನ್ ।
ಶ್ಯಾಮಂ ನಿತಂಬಾರ್ಪಿತರತ್ನಮೇಖಲಂ
ಜಾಂಬೂನದಾಭಾಂಬರಭೃತ್ ಸುಮಧ್ಯಮಮ್ ॥ ೨೩ ॥

ಅ: ಆಗ ನೀನು ಒಡನೆಯೆ ಶ್ಯಾಮವರ್ಣದ, ನಿತಂಬದ ಮೇಲೆ ರತ್ನದ ಒಡ್ಯಾಣ ಧರಿಸಿದ, ಚಿನ್ನದಂತೆ ಹೊಳೆವ ಸೀರೆ ಉಟ್ಟ, ಚೆಲು ನಡುವಿನ, ಸಾಟಿಯಿಲ್ಲದ ಅಲೌಕಿಕ ಸ್ತ್ರೀರೂಪನಾದೆ.

ವಿ: ೧) ಇದು ಮೋಹಿನೀರೂಪದ ವರ್ಣನೆ. ಭಗವಂತನು 'ಸ್ತ್ರೀರೂಪವನ್ನು ಧರಿಸಿದ' ಎಂಬುದರ ಬದಲು 'ಸ್ತ್ರೀರೂಪನಾದ' ಎಂದು ತಿಳಿಸಿದ್ದು ಅವನಿಗೂ, ಅವನ ದೇಹಕ್ಕೂ ಭೇದವಿಲ್ಲವೆಂಬ ತತ್ತ್ವವನ್ನು ತಿಳಿಸಲೆಂದು ಎಂಬ ವಿಶೇಷಾರ್ಥವನ್ನು ಶ್ರೀವಾದಿರಾಜರು ತಿಳಿಸಿರುವರು. ನಾರಾಯಣೀರೂಪವೆಂದರೆ ಈ ಮೋಹಿನೀರೂಪವವೇ.

೨) ಭಗವಂತನು ಬರಿ ಸ್ತ್ರೀವೇಷ ಹಾಕಿದ್ದಲ್ಲ, ನಿಜಕ್ಕೂ ಸ್ತ್ರೀರೂಪನಾಗಿಯೇ ಬಂದನು. ಅವನಿಗೆ ಪುರುಷರೂಪದಂತೆ, ಸ್ತ್ರೀರೂಪವೂ [೪]ಉಂಟು ಎಂಬ ಮತ್ತೊಂದು ಅರ್ಥವನ್ನೂ 'ವಪುಃ' ಎಂಬ ಪದದಿಂದ ಸೂಚಿಸಿರುವರು ಎಂದು ಸಹ ತಿಳಿಯಬಹುದು.

---

೧. ತೇಷಾಂ ಸತ್ಯಾಚ್ಚಾಲನಾರ್ಥಂ ಹರಿರ್ಧನ್ವಂತರಿರ್ವಿಭುಃ ।
ಸಮರ್ಥೋಽಪ್ಯಸುರಾಣಾಂ ತು ಸ್ವಹಸ್ತಾದಮುಚತ್ ಸುಧಾಮ್ ॥
– ಬ್ರಹ್ಮಾಂಡಪುರಾಣ (ಜ., ತಿ. ಉದಾಹೃತ)

೨. ವಿಷ್ಣೋರ್ವಿಷ್ಣುವಪುಷಶ್ಚಾಭೇದಸೂಚನಾಯ ಭವಾನನುಪಮಮುತ್ತಮಂ ವಪುರ್ಬಭೂವೇತ್ಯುಕ್ತಮ್ । ಅನುಪಮಮಸದೃಶಮ್ । ನೀಚತ್ವೇಽಪ್ಯಸದೃಶತ್ವಸಂಭವಾತ್ ಉತ್ತಮಮಿತ್ಯುಕ್ತಮ್ ॥ – (ವಾ.)

೩. ತದ್ವಪುರ್ಭವಾನ್ ತ್ವರನ್ ವ್ಯಕ್ತೀಚಕಾರೇತಿ । – (ಸ.)

ಬೃಹನ್ನಿತಂಬಂ ಕಲಶೋಪಮಸ್ತನಂ
ಸತ್ಪುಂಡರೀಕಾಯತನೇತ್ರಮುಜ್ಜ್ವಲಮ್ ।
ಸಮಸ್ತಸಾರಂ ಪರಿಪೂರ್ಣಸದ್ಗುಣಂ
ದೃಷ್ಟ್ವೈವ ತತ್ ಸಮ್ಮುಮುಹುಃ ಸುರಾರಯಃ ॥ ೨೪ ॥

ಅ: ವಿಶಾಲನಿತಂಬ, ಕಲಶದಂತಹ ಸ್ತನಗಳು, ಉತ್ತಮಕಮಲದಂತಹ ವಿಶಾಲವಾದಂತಹ ಕಣ್ಣುಗಳು – ಇವುಗಳಿಂದ ಕೂಡಿದ ಸರ್ವಶ್ರೇಷ್ಠವೂ, ಪರಿಪೂರ್ಣಸದ್ಗುಣಗಳಿಂದ ಯುಕ್ತವೂ ಆದ ಆ ಉಜ್ಜ್ವಲ(ಮೋಹಿನೀ)ರೂಪವನ್ನು ಕಾಣುತ್ತಲೆ ದೈತ್ಯರು ಬಹಳವಾಗಿ ಮೋಹ-ಗೊಂಡರು.

ಪರಸ್ಪರಂ ತೇऽಮೃತಹೇತುತೋऽಖಿಲಾ
ವಿರುಧ್ಯಮಾನಾಃ ಪ್ರದದುಃ ಸ್ಮ ತೇ ಕರೇ ।
ಸಮಂ ಸುಧಾಯಾಃ ಕಲಶಂ ವಿಭಜ್ಯ
ನಿಪಾಯಯಾಸ್ಮಾನಿತಿ ವಂಚಿತಾಸ್ತ್ವಯಾ ॥ ೨೫ ॥

ಅ: ತಮ್ಮ ತಮ್ಮಲ್ಲೇ ಅಮೃತಕ್ಕೋಸ್ಕರ ಕಲಹಕ್ಕೆ ತೊಡಗಿದ್ದ ಅವರೆಲ್ಲ ನಿನ್ನಿಂದ ವಂಚಿತರಾಗಿ ಒಟ್ಟಾಗಿ 'ನಮಗೆ ಇದನ್ನು ಸರಿಯಾಗಿ ಹಂಚಿ ತಿನ್ನಿಸು' ಎಂದು ಆ ಅಮೃತಕಲಶವನ್ನು ನಿನ್ನ ಕೈಗಿತ್ತರು.

ವಿ: ೧) ಹಾಗೆ ಅಮೃತದ ಕಲಶವನ್ನು ಅಪಹರಿಸಿದ ಅವರು 'ನಾನು ಮೊದಲು, ನಾನು ಮೊದಲು' ಎಂದು ಕಲಹದಲ್ಲಿ ತೊಡಗಿದರೇ ಹೊರತು, ಅದನ್ನು ಕುಡಿಯಲು ಮಾತ್ರ ಶಕ್ತರಾಗಲೇ ಇಲ್ಲ. ಭಗವದನುಗ್ರಹವಿಲ್ಲದಿದ್ದಲ್ಲಿ ಕೈಗೆಟುಕಿದ ವಸ್ತು ಬಾಯಿ ತಲುಪಲೂ ಸಾಧ್ಯವಿಲ್ಲ ಎಂಬುದು ಇದರ ಭಾವ.

೨) ಬ್ರಹ್ಮಸೂತ್ರದಂತಹ ಅಮೃತದಂತಹ ಕೃತಿಗಳು ಕೈಗೆ ದೊರಕಿದರೂ, ಅದರ ಸಾರವನ್ನು ಸವಿಯಲಾಗದ ಅನೇಕ ಭಾಷ್ಯಕಾರರು ಇದಕ್ಕೆ ಉತ್ತಮನಿದರ್ಶನ.

---

೪. ಭವತ್ಯೇವ ಹಿ ಭಗವಾನ್ ಸ್ತ್ರೀರೂಪಃ ಪುಂರೂಪಶ್ಚ। ತಸ್ಮಾದ್ವದತ್ಯೇವ। ಅಪ್ರಸಿದ್ಧತ್ವಾನ್ನವದತಿ ಚ।

ಸ್ತ್ರೀರೂಪಶ್ಚೈವ ಪುಂರೂಪೋ ಯಸ್ಮಾನ್ನಾರಾಯಣಃ ಸ್ಥಿತಃ।
ಪುಮಾಂಸ್ತ್ರೀ ಚೇತಿ ವಾಚ್ಯೋऽತೋ ವೈಲಕ್ಷಣ್ಯಾನ್ನ ಚೋಚ್ಯತೇ ॥
ವಿಷ್ಣೋರ್ನಪುಂಸಕಾಕಾರೋ ನೈವಾಸ್ತಿ ಕ್ವಚನ ಪ್ರಭೋಃ।
ತಥಾಪ್ಯರಾಗಾಕೃಷ್ಟತ್ವಾತ್ತಚ್ಚಬ್ದೈರಪಿ ಕಥ್ಯತೇ॥ ಇತಿ ಗಾರುಡೇ। – ಐತರೇಯಭಾಷ್ಯ

೩) ತಾವು ಹಾಗೆ ಅಮೃತದ ಕಲಶವನ್ನು ಒಪ್ಪಿಸುತ್ತಿರುವುದು ತಾವು ಕಿತ್ತು ತಂದಿದ್ದ ಶ್ರೀಹರಿಯ ಕೈಗೇ ಎಂಬುದರ ಅರಿವು ಅವರಿಗಿಲ್ಲವಾಗಿದ್ದೇ ಹರಿಯು ಅವರಿಗೆ ಮಾಡಿದ ವಂಚನೆಯ ಫಲ. ರೂಪರೂಪಗಳಲ್ಲಿ ಹೀಗೆ ಭೇದಚಿಂತಿಸಿದ್ದೇ ಅವರ ಪತನಕ್ಕೆ ಕಾರಣ; ಅಂತಹ ಮಿಥ್ಯಾಚಿಂತನೆ ಅವರ ಸ್ವರೂಪವೇ ಆಗಿರುವುದು.

ಧರ್ಮಚ್ಛಲಂ[೧] ಪಾಪಜನೇಷು ಧರ್ಮ
ಇತಿ ತ್ವಯಾ ಜ್ಞಾಪಯಿತುಂ ತದೋಕ್ತಮ್ ।
ಯದ್ಯತ್ ಕೃತಂ ಮೇ ಭವತಾಂ ಯದೀಹ
ಸಂವಾದ ಏವೋದ್ವಿಭಜೇ ಸುಧಾಮಿಮಾಮ್ ॥ ೨೬ ॥

ಅ: ಧರ್ಮಪಾಲನೆಗಾಗಿ ಪಾಪಿಜನರನ್ನು ವಂಚಿಸುವುದು ಸಹ ಧರ್ಮವೇ ಎಂದು ತಿಳಿಸಿಕೊಡಲೆಂದು ನೀನಾಗ ನುಡಿದೆ : 'ನಾನು ಮಾಡುವುದೆಲ್ಲ ನಿಮಗೆ ಒಪ್ಪಿಗೆಯಾಗುವು-ದಿದ್ದಲ್ಲಿ ಮಾತ್ರವೇ ನಾನು ಈ ಅಮೃತವನ್ನು ಹಂಚುವೆ'.

ವಿ: ೧) 'ಧರ್ಮಚ್ಛಲಂ'[೧] ಎಂದರೆ ಧರ್ಮದ ಪಾಲನೆಗಾಗಿ ಮಾಡುವ ವಂಚನೆ ಎಂದರ್ಥ.

೨) 'ನಿಕೃತ್ಯಾ ನಿಕೃತಿಂ ಹನ್ಯಾನ್ನಿಕೃತ್ಯಾ ನೈವ ಧಾರ್ಮಿಕಾನ್ । ದೇವೈರ್ಹಿ ವಂಚಯಿತ್ವೈವ ಹತಾಃ ಪೂರ್ವಂ ಸುರಾರಯಃ ॥' ಎಂದು ಮುಂದೆ (೨೮/೨೧೫) ಹೇಳುವ ಮಾತನ್ನು ಇಲ್ಲಿ ಗಮನಿಸಬಹುದು.

ಯಥೇಷ್ಟತೋಽಹಂ ವಿಭಜಾಮಿ ಸರ್ವಥಾ
ನ ವಿಶ್ವಸಧ್ವಂ ಮಯಿ ಕೇನಚಿತ್ ಕ್ವಚಿತ್ ।
ಇತಿ ಪ್ರಹಸ್ಯಾಭಿಹಿತಂ ನಿಶಮ್ಯ
ಸ್ತ್ರೀಭಾವಮುಗ್ಧಾಸ್ತು ತಥೇತಿ ತೇಽವದನ್ ॥ ೨೭ ॥

---

೧. ಧರ್ಮಚ್ಛಲಂ = ಧರ್ಮರಕ್ಷಣಾಯ ಛಲಂ ಛದ್ಮ ಧರ್ಮಃ । –(ವಾ.)

೨. ಲೋಕಶಿಕ್ಷಣಾಯೈವ ಇಮಾಂ ಸುಧಾಂ ಉದ್ವಿಭಜ ಇತಿ ಪ್ರಾಗನೃತಂ ತ್ವಯೋಕ್ತಮ್ । 'ನ ವಿಷ್ಣೋರ್ವಚನಂ ಕ್ವಾಪಿ ಮೃಷಾ ಭವತಿ ಕಸ್ಯಚಿತ್' (೯/೩೮) ಇತಿ ಸ್ವನಿಯಮರಕ್ಷಣಾಯ ಪುನಃ ಸತ್ಯಮೇವೋ ಕ್ತಮಿತಿ ಭಾವೇನಾಹುಃ । ಯಥೇಷ್ಟತ ಇತಿ ಇಷ್ಟಂ ಇಚ್ಛಾ ಭಾವೇ ಕ್ತಃ ಮಮೇಚ್ಛಾನುಸಾರತ ಇತ್ಯರ್ಥಃ । ಯಥೇಷ್ಟತ ಇತಿ ತರ್ಹಿ ದೈತ್ಯಾಃ ಕಥಮಂಗೀಚಕ್ರುರಿತ್ಯತ ಉಕ್ತಂ ಸ್ತ್ರೀಭಾವಮುಗ್ಧಾ ಇತಿ ॥ –(ವಾ.)

ಅ: 'ನಾನು ನನ್ನಿಚ್ಛೆಯಂತೇ ಇದನ್ನು ಹಂಚುವೆ. ನೀವು ಯಾವ ರೀತಿಯಲ್ಲೂ, ಯಾವ ಕಾರಣಕ್ಕೂ, ಯಾವ ವಿಷಯದಲ್ಲೂ ನನ್ನಲ್ಲಿ ನಂಬಿಕೆ ಇಡಬೇಡಿ' ಎಂದು ಜೋರಾಗಿ ನಗುತ್ತಾ ನೀನು ನುಡಿದುದನ್ನು ಕೇಳಿ, ಅವರು ನಿನ್ನ ಸ್ತ್ರೀರೂಪಕ್ಕೆ ಮರುಳಾಗಿ 'ಹಾಗೆಯೇ ಆಗಲಿ' ಎಂದರು.

ವಿ: ೧) ಮೊದಲೇನೋ ಲೋಕಶಿಕ್ಷಣಕ್ಕಾಗಿ ಭಗವಂತ 'ಅಮೃತ ಹಂಚುವೆ' ಎಂದು ನುಡಿದ. ಆದರೆ ತನ್ನ ವಚನ ಎಂದೂ ಸುಳ್ಳಾಗದು ಎಂದು ತಿಳಿಸಲೆಂದು ಈಗ 'ನಾನು ಹಂಚುವುದು ನನಗೆ ತೋಚಿದಂತೆಯೇ ಹೊರತು, ನೀವು ಬಯಸಿದಂತೆ ಅಲ್ಲ' ಎಂದು ಸತ್ಯವನ್ನೇ ನುಡಿಯುತ್ತಿರುವನು ಎಂದು ತಿಳಿಯಬೇಕು.

೨) ಅದನ್ನು ಅಸುರರು ಒಪ್ಪಿಕೊಳ್ಳಲು ಅವರೆಲ್ಲ ಆ ಸ್ತ್ರೀರೂಪದಿಂದ ಮೋಹಿತರಾದದ್ದೇ ಕಾರಣ.

ತತಶ್ಚ ಸಂಸ್ಥಾಪ್ಯ ಪೃಥಕ್ ಸುರಾಸುರಾಂ-
ಸ್ತವಾತಿರೂಪೋಚ್ಚಲಿತಾನ್ ಸುರೇತರಾನ್ ।
ಸರ್ವಾನ್ ಭವದ್ದರ್ಶನ ಈಕ್ಷ್ಯ ಲಜ್ಜಿತಾ೨-
ಸ್ಮ್ಯಹಂ ದೃಶೋ ಮೀಲಯತೇತ್ಯವೋಚಃ ॥ ೨೮ ॥

ಅ: ಬಳಿಕ ದೇವತೆಗಳನ್ನೂ, ದೈತ್ಯರನ್ನೂ ಬೇರೆಬೇರೆಯಾಗಿ ಕುಳ್ಳಿರಿಸಿ, ನಿನ್ನ ಅಪಾರಸೌಂದರ್ಯದಿಂದ[೨] ಬಹಳವಾಗಿ ಕಂಗೆಟ್ಟ ಅಸುರರನ್ನೆಲ್ಲ ಕುರಿತು ನುಡಿದೆ : 'ನಿಮ್ಮ (ಕಾಮಪೂರಿತ)ನೋಟ ಕಂಡು ನಾನು ನಾಚಿರುವೆ; ಕಣ್ಣುಗಳನ್ನು ಮುಚ್ಚಿಕೊಳ್ಳಿ'.

---

೧. ಈಕ್ಷ್ಯೇತ್ಯುಪಸರ್ಗವಿಭಕ್ತಿಸ್ವರಪ್ರತಿರೂಪಕಾಶ್ಚೇತಿ ಅತ್ರ ಚಕಾರಸ್ಯಾನುಕ್ತಸಮುಚ್ಚಯಾರ್ಥತ್ವಾತ್ತಿಙಂತ-ಪ್ರತಿರೂಪಕಾಶ್ಚೇತಿವತ್ ಲ್ಯಬಂತಪ್ರತಿರೂಪಕಮವ್ಯಯಂ ದ್ರಷ್ಟವ್ಯಂ। ಯದ್ವಾ ಈಕ್ಷಿತ್ವಾ ಇತಿ ವಿಗೃಹ್ಯ ಸ್ವರಪ್ರತಿರೂಪಕೇಣಾವ್ಯಯೇನ ಕರ್ತ್ಯಕರಣೇ ಕೃತಾ ಬಹುಲಮಿತಿ ಬಹುಲವಚನಾತ್ಸಮಾಸಃ। – (ಜ.)

೨. ಅತಿರೂಪೋಚ್ಚಲಿತಾನ್ = ತವಾತಿರೂಪೇಣ ಉತ್ಕೃಷ್ಟಂ ಚಲಿತಂ ಮನಶ್ಚಾಂಚಲ್ಯಂ ಯೇಷಾಂ ತಾನಿತ್ಯರ್ಥಃ। ಭವದ್ದರ್ಶನ ಈಕ್ಷ್ಯ ಲಜ್ಜಿತೇತ್ಯತ್ರ ಭವತಾಂ ರಾಗೇಣ ಮದ್ದರ್ಶನೇ ಸತಿ ಯುಷ್ಮಾನೀಕ್ಷ್ಯೇತಿ ಯೋಗ್ಯಪದಾಧ್ಯಾಹಾರೇಣ ಯೋಜನಾ । ಅತ ಏವಾತಿರೂಪೋಚ್ಚಲಿತಾನಿತ್ಯುಕ್ತಮ್ । ದೇವಾನಾಂ ತು ರಾಗಂ ವಿಹಾಯೈವ ಮದ್ದರ್ಶನಾತ್ತಾನ್ವೀಕ್ಷ್ಯ ನ ಲಜ್ಜೇತಿ ಭಾವಃ । ವಸ್ತುತೋ ನಾರಾಯಣಸ್ಯ ಲಜ್ಜಾಭಾವಾದ- ನೃತಮಿದಮಿತಿ ನ ಶಂಕನೀಯಮ್ । ಅತಿಪಾಪಿನಾಂ ದರ್ಶನೇ ಲಜ್ಜಾಯಾ ಅಪಿ ಗುಣತ್ವಾತ್ ॥ – (ವಾ.)

ವಿ: ನಾರಾಯಣನು 'ನಿಮ್ಮ ನೋಟ ಕೆಟ್ಟದ್ದು' ಎಂದು ಹೇಳಿದ್ದು ಅಸುರರಿಗೆ ಮಾತ್ರ; ಸುರರಿಗಲ್ಲ. ಸುರರ ದೃಷ್ಟಿ ಕೆಟ್ಟದ್ದಾಗಿರಲಿಲ್ಲವಷ್ಟೆ. ನಾರಾಯಣನಿಗೆಂತಹ ನಾಚಿಕೆ? ಎಂದು ಶಂಕಿಸಬೇಕಿಲ್ಲ; ಅತಿಪಾಪಿಗಳ ನೋಟಕ್ಕೆ ನಾಚುವುದೂ ಗುಣವೇ ಆಗಿದೆ ಎಂದು ಅದರ ಸೂಚನೆ.

ರಾಹುವಿನ ಶಿರ ಹೋಯಿತು

ನಿಮೀಲಿತಾಕ್ಷೇಷ್ವಸುರೇಷು ದೇವತಾ
ನ್ಯಪಾಯಯಃ ಸಾಧ್ವಮೃತಂ ತತಃ ಪುಮಾನ್ ।
ಕ್ಷಣೇನ ಭೂತ್ವಾ ಪಿಬತಃ[೧] ಸುಧಾಂ ಶಿರೋ
ರಾಹೋರ್ನ್ಯಕೃಂತಶ್ಚ ಸುದರ್ಶನೇನ ॥ ೨೯ ॥

ಅ: ಅಸುರರು ಕಣ್ಣು ಮುಚ್ಚಿರಲು ನೀನು ದೇವತೆಗಳಿಗೆ ಚೆನ್ನಾಗಿ ಅಮೃತಪಾನ ಮಾಡಿಸಿದೆ. ಅನಂತರ ಅಮೃತಪಾನ ಮಾಡುತ್ತಿದ್ದ ರಾಹುವಿನ ತಲೆಯನ್ನು ಕ್ಷಣದಲ್ಲೇ ಪುರುಷನಾಗಿ ಸುದರ್ಶನದಿಂದ ತುಂಡರಿಸಿದೆ.

ವಿ: ೧) ಅಸುರರು ಕಣ್ಣು ಮುಚ್ಚಿ ಕುಳಿತಿದ್ದಂತೆ ಶ್ರೀಹರಿ ಸುರರಿಗೆ ಅಮೃತವನ್ನು ಉಣಿಸಿದ. ಆಗೊಮ್ಮೆ ಕಣ್ಣು ತೆಗೆದ ರಾಹು ಸುರರಿಗೆ ಮಾತ್ರ ಅಮೃತ ಸಿಗುತ್ತಿದ್ದುದನ್ನು ಕಂಡ. ತನಗೂ ಅದು ಸಿಕ್ಕಲೆಂದು ದೇವತೆಗಳ ಸಾಲಿನ ಕೊನೆಯಲ್ಲಿ ತಾನೂ ಕುಳಿತ. ಶ್ರೀಹರಿ ಅವನ ಕೈಯಲ್ಲೂ ಅಮೃತ ಹಾಕಿದ. ಅದನ್ನು ಅವನು ಕುಡಿಯತೊಡಗುತ್ತಿದ್ದಂತೆ ಸುದರ್ಶನಚಕ್ರದಿಂದ ಅವನ ಶಿರಸ್ಸನ್ನು ತುಂಡರಿಸಿದ.

೨) ಪರಮಾತ್ಮ ಸ್ತ್ರೀರೂಪದಿಂದಲೇ ಅವನನ್ನು ಸಂಹರಿಸಬಹುದಿತ್ತು ಆದರೂ ಸ್ತ್ರೀಯರಿಗೆ ಉಗ್ರಕಾರ್ಯ ಶೋಭಿಸುವುದಿಲ್ಲ ಎಂದು ತಿಳಿಸಲೆಂದು ಪುರುಷರೂಪ ತಳೆದು ಸಂಹರಿಸಿದನೆಂದು ಭಾವಿಸಬಹುದು.

---

೧. ಪಿಬತಃ ಸುಧಾಮಿತ್ಯುಕ್ತ್ವಾ ದೇವಪಂಕ್ತಾವವಸಾನೇ ರಾಹುರುಪವಿಷ್ಟ ಇತಿ ಸೂಚ್ಯತೇ । ಸರ್ವೇಷಾಂ ದೇವಾನಾಂ ಸುಧಾಪಾನಾನಂತರಂ ಅಂತೇ ಸುಧಾಂ ಪಿಬತಃ ರಾಹೋಃ ಶಿರಃ ನ್ಯಕೃಂತ ಇತಿ ಯೋಜನಾ । ಅನ್ಯಥಾ ಮಧ್ಯೇ ರಾಹೋಃ ಸ್ಥಿತೌ ಕೇಷಾಂಚಿದ್ದೇವಾನಾಂ ಸುಧಾಪಾನಂ ನ ಸ್ಯಾತ್ । ಪರಿವೇಷಕಸ್ತ್ರೀರೂಪಸ್ಯ ತತ್ರೈವ ಪರಿಸಮಾಪ್ತಿಪ್ರಸಂಗಾತ್ । ಮಾಯಯಾ ದೇವವೇಷಧಾರೀ ಭೀತಸ್ಸನ್ ಕೋಣ ಏವೋಪವಿವೇಶ ಚೇತಿ ಭಾವಃ ॥ – (ವಾ.)

ತೇನಾಮೃತಾರ್ಥಂ ಹಿ ಸಹಸ್ರಜನ್ಮಸು
ಪ್ರತಪ್ಯ ಭೂಯಸ್ತಪ ಆರಿತೋ ವರಃ ।
ಸ್ವಯಂಭುವಸ್ತೇನ ಭವಾನ್ ಕರೇಽಸ್ಯ
ಬಿಂದುಂ ಸುಧಾಂ ಪ್ರಾಶ್ಯ ಶಿರೋ ಜಹಾರ ॥ ೩೦ ॥

ಅ: ಆ ರಾಹುವು ಅಮೃತಪಾನಕ್ಕೆಂದು ಸಾವಿರಜನ್ಮಗಳಲ್ಲಿ ಮತ್ತೆ ಮತ್ತೆ ಉಗ್ರತಪಸ್ಸು ಮಾಡಿ, ಬ್ರಹ್ಮನಿಂದ ವರಪಡೆದಿದ್ದ. ಅದರಿಂದಾಗಿ ನೀನು ಅವನ ಕೈಗೆ ಒಂದು ತೊಟ್ಟು ಅಮೃತ ನೀಡಿ, ಅವನ [೩]ತಲೆಯನ್ನು ಕತ್ತರಿಸಿದೆ.

ವಿ: ೧) ರಾಹುವಿನ ಕೈಯಲ್ಲಿ ಆ ರೀತಿ ಅಮೃತ ಹಾಕಿ, ಅವನು ಕುಡಿಯುವಾಗ ಅವನ ತಲೆ ಕತ್ತರಿಸುವ ಬದಲು, ಅವನ ಕೈಗೆ ಅಮೃತವನ್ನೇ ಹಾಕದಿದ್ದರಾಗುತ್ತಿತ್ತಲ್ಲ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ರಾಹುವು ಬ್ರಹ್ಮದೇವರನ್ನು ಕುರಿತು ಸಾವಿರಜನ್ಮಗಳಲ್ಲಿ ಉಗ್ರ ತಪಸ್ಸನ್ನು ಆಚರಿಸಿ, ಅವರಿಂದ ಅಮೃತ ಬಾಯಲ್ಲಿ ಬೀಳುವಂತೆ ವರ ಪಡೆದುಕೊಂಡಿದ್ದ.

೨) ಭಗವಂತ ಬ್ರಹ್ಮದೇವರ ವಚನವನ್ನು ಎಂದೂ ಸುಳ್ಳು ಮಾಡುವುದಿಲ್ಲ. ಅದಕ್ಕೆಂದೇ ಅವನ ಕೈಗೆ ಅಮೃತವನ್ನು ನೀಡಿದ. ಅವನು ಕುಡಿಯುವ ಮುನ್ನವೇ ಅವನ ತಲೆ ಕತ್ತರಿಸಿದ. ಬ್ರಹ್ಮ ದೇವರಿಂದ ವರ ಪಡೆದದ್ದು ಅಮೃತ ಪಡೆಯಲೆಂದೇ ಹೊರತು, ಕುಡಿಯಲೆಂದಲ್ಲ. ಆದ್ದರಿಂದ ಬ್ರಹ್ಮದೇವರ ವಚನ ಸುಳ್ಳಾಗದೆ, ಸತ್ಯವೇ ಆಯಿತು; ರಾಹುವಿನ ತಲೆಯೂ ಹೋಯಿತು.

೩) ಅಸುರರು ವರ ಪಡೆಯುವಲ್ಲಿ ತೋರುವ ವಂಚನೆಗೆ ಇದೊಂದು ನಿದರ್ಶನ. ಅವರ ಮೂರ್ಖತನಕ್ಕೂ ಇದು ನಿದರ್ಶನವೇ. 'ಅಮೃತ ಪಡೆದ ಮೇಲೆ ಕುಡಿಯುವುದು ಕಷ್ಟವೇ?' ಎಂದು ಅವನ ವಿಚಾರವಾಗಿತ್ತು. ಆದರೆ ಪಡೆಯಲಿರಲಿ, ಕುಡಿಯಲು, ಕುಡಿದದ್ದನ್ನು ಜೀರ್ಣಿಸಿಕೊಳ್ಳಲು ಸಹ ಭಗವಂತನ ದಯೆ ಬೇಕು ಎಂಬ ತತ್ತ್ವ ಇಲ್ಲಿ ಪ್ರಕಟಿತ.

---

೧. 'ಭೂಯಃ ಪುನಃ ಪುನಃ ಖ್ಯಾತಂ ಪ್ರಭೂತಾರ್ಥೇತ್ವನವ್ಯಯಮ್' ಇತಿ ವಿಶ್ವಃ । – (ಜ.)

೨. ''ರಾ ದಾನ'' ಇತಿ ಧಾತೋಃ ಆರಿತಃ ಆತ್ತಃ ॥ – (ವಾ.)

೩. ಅತ್ರ ಕೇಚಿದಾಹುಃ । ಅಮೃತಂ ಹಸ್ತೇ ಪ್ರಕ್ಷಿಪ್ಯ ಶಿರಶ್ಛೇದೋಽಪಿ ಸಂಸ್ಕಾರವಶಾದಶಿರಸೋ ಭುವಿ ಪತನಾತ್ ಪೂರ್ವಮೇವ ಸಾವೃತಹಸ್ತಸ್ಥ ಛಿನ್ನೇ ಕಂಠಲಗ್ನೇ ಶಿರಸಿ ಗಲದ್ವಾರೇ ಚ ಸಂಸರ್ಗಾತ್ ಶಿರಃಕಬಂಧಯೋಃ ಸ್ಥಾಯಿತ್ವಮಿತಿ । ಅಪರೇ ತು ಹಸ್ತಾಖ್ಯಾವಯವೇ ಅಮೃತಸಂಸರ್ಗ ಮಹಿಮ್ನೈವ ಅಂಗಿನಃ ಸ್ಥಾಯಿತ್ವಂ ಲಭ್ಯತೇ । ತತ್ಕೋತ್ತಮಾಂಗತ್ವಾಚ್ಚಿರಸೋಗ್ರ್ಹತ್ವಮಿತಿ ಮನ್ಯತೇ । ವಸ್ತುತಸ್ತು ಪಿಬತಃ ಸುಧಾಂ ಶಿರ ಇತ್ಯುಕ್ತತ್ವಾದಮೃತಸ್ಯ ಮುಖಿಸಂಬಂಧಾಚ್ಚಿರಸೋ ಗ್ರಹತ್ವಂ ಕರಸಂಶ್ಲೇಷಾತ್ ಸಬಾಹುಕಬಂಧಸ್ಯಾವಿನಾಶ ಇತಿ ನ ಕಾಚಿತ್ಕತಾ । ಶಿರಸ್ತು ತಸ್ಯೇತಿ ರಾಹುಣಾಽಧಿಷ್ಠಿತಮಿತಿ ಶೇಷಃ । ಅನ್ಯಥಾ ಪೂರ್ವವೈರಮನುಸ್ಮರನ್ ಇತಿ ಭಾಗವತವಿರೋಧಾತ್ । 'ಋತೇ ಭವಂತಂ' ಇತಿ ಬ್ರಹ್ಮವರಾದಿತ್ಯುಕ್ತ್ಯಾತಂ ಚ ಋತ ಇತಿ ಸಿದ್ಧಮೇವ । ಬ್ರಹ್ಮಣ್ಯಪಿ ತೇನೈವ ವ್ಯಾಖ್ಯಾತಮ್ ॥ – (ತಾ.)

ರಾಹುಗ್ರಹದ ವಿವರ

ಶಿರಸ್ತು ತಸ್ಯ[೧] ಗ್ರಹತಾಮವಾಪ
ಸುರೈಃ ಸಮಾವಿಷ್ಟಮಥೋ ಸಬಾಹುಃ ।
ಕ್ಷಿಪ್ತಃ ಕಬಂಧೋಽಸ್ಯ ಶುಭೋದಸಾಗರೇ
ತ್ವಯಾ ಸ್ಥಿತೋಽದ್ಯಾಪಿ ಹಿ ತತ್ರ ಸಾಮೃತಃ ॥ ೩೧ ॥

ಅ: ರಾಹುವಿನ ತಲೆ ದೇವತೆಗಳಿಂದ ಆವಿಷ್ಟವಾಗಿ ಗ್ರಹವೆನ್ನಿಸಿತು. ಆ ಬಳಿಕ ತೋಳುಗಳಿಂದ ಕೂಡಿದ ಅವನ ಮುಂಡವನ್ನು ನೀನು ಶುದ್ಧೋದಕಸಾಗರದಲ್ಲಿ ಬೀಳಿಸಿದೆ. ಅಮೃತಯುಕ್ತವಾದ್ದರಿಂದಾಗಿ ಅದು ಇಂದಿಗೂ ಸಾಯದೆ, ಅಲ್ಲಿ ಉಳಿದಿದೆ.

ವಿ: ೧) ಹಾಗೆ ಕತ್ತರಿಸಲ್ಪಟ್ಟ ರಾಹುವಿನ ರುಂಡದಲ್ಲಿ ದೇವತೆಗಳು ಪ್ರವೇಶಿಸಿದರು. ಅವನ ಮುಂಡದಲ್ಲೂ ಅಮೃತದ ಬಿಂದು ಹರಡಿದ್ದರಿಂದ ಅದೂ ಉಳಿದುಕೊಂಡಿತು. ರುಂಡ, ಮುಂಡ ಎರಡೂ ಉಳಿದು, ರಾಹು ಮಾತ್ರ ಸತ್ತಿದ್ದು ಭಗವಂತನ ಚಮತ್ಕಾರ.

೨) ರಾಹು, ಕೇತು ಎಂಬ ಎರಡು ಗ್ರಹಗಳಿಗೂ ಅವನ ತಲೆಯೇ ಅಧಿಷ್ಠಾನ. ವೈಷ್ಣವರು ಯಜ್ಞದಲ್ಲಿ ನೀಡುವ ಆಹುತಿ ತಲುಪುವುದು ಅವನ ಶಿರಸ್ಸಿನಲ್ಲಿ ನೆಲೆಸಿರುವ [೨]ದೇವತೆಗಳಿಗೇ ಹೊರತು, ಅವನಿಗಲ್ಲ. ಸೂರ್ಯಚಂದ್ರರ ಮೇಲೆ ದ್ವೇಷ ಸಾಧಿಸುವುದಷ್ಟೇ ರಾಹುವಿನ ಕೆಲಸ. ಅವನಿಗೆ [೩]ಅವೈಷ್ಣವರು ನೀಡುವ ಆಹುತಿಯಿಂದಲೇ ಬದುಕು.

---

೧. ಚಮತ್ಕಾರೇಣ ಛಿದ್ಯಮಾನೇ ಶಿರಸಿ ರಾಹುರ್ಮೃತಃ । ತಸ್ಯ ಸುಧಾಪಾನಂ ನಾಸೀದೇವ ಶಿರಸ್ತು ಹರೇರ್ಹಸ್ತಲಾಘವಬಲಾತತ್ತತ್ಪೈವ ಲಗ್ನಮ್ । ನತು ತದೈವ ಪತಿತಮ್ । ಅಥ ತಸ್ಯಾಧರೋಷ್ಠೋಪರಿ ನಿಕ್ಷಿಪ್ತ-ಕರಸ್ಥಮಮೃತಂ ತು ಛಿನ್ನಶಿರಃ ಪಾತಾತ್ಪೂರ್ವಂ ಆಸ್ಯವಿವರಂ ಪ್ರವಿಶ್ಯ ಗಲವಿವರದ್ವಾರೇಣ ಕಬಂಧಂ ಪ್ರಾವಿಶತ್ ಶಿರೋಽಪಿ ಪ್ರಾವಿಶತ್ । ಅತಃ ಸುವಾಸತ್ತ್ವಾಚ್ಛಿರೋಽಪಿ ಚಿರಕಾಲಸ್ಥಾಯಿ । ಕಬಂಧೋಽಪಿ ಚಿರಕಾಲಸ್ಥಾಯೀ । ತಯೋರ್ಮಧ್ಯೇ ಶಿರಸಿ ''ರಾಹುಜ್ಯೇಷ್ಠಂ ಕೇತುಶತಮ್'' ಇತಿ ವಚನಾತ್ ರಾಹೋರಪೀಷತ್ಸನ್ನಿಧಾನಮ್ । ದೇವಾನಾಂ ಶತಸ್ಯ ಚ ಸನ್ನಿಧಾನಮ್ । ತತ್ರಾಪಿ ಶಿರೋಽಭಿಮಾನಿತ್ವಾದ್ರಾಹೋರಂಶಸ್ಯ ಜ್ಯೇಷ್ಠತಾ ಕೇತೂನಾಂ ಕನಿಷ್ಠತಾ । ಏವಂ ಗ್ರಹದ್ವಯಸ್ಯಾಪ್ಯೇಕಂ ಶಿರ ಏವಾಧಿಷ್ಠಾನಮ್ । ಅತ ಏವ ಕರೇ ಪ್ರಾಸ್ಯ ಶಿರೋ ಜಹಾರೇತ್ಯುಕ್ತಮ್ । –(ವಾ.)

೨. ರಾಹುನಾಮ್ನಾ ಯಾಜ್ಞಿಕೈರ್ದೀಯಮಾನಂ ಹವಿಃ ದೇವಾ ಏವ ಗೃಹ್ಣಂತಿ । ಯಜ್ಞಾಹುತ್ಯಾಂ ದೈತ್ಯಾನಾಮನಧಿಕಾರಾತ್ । ಪರ್ವಣಿ ಪರ್ವಣಿ ಸೂಚಕಯೋಶ್ಚಂದ್ರಸೂರ್ಯಯೋರ್ದ್ವೇಷಮಾತ್ರಾಯ ರಾಹುಃ । ಅವೈಷ್ಣವದತ್ತಾಹುತ್ಯೈವ ತಸ್ಯ ಜೀವನಮಿತಿ ವಿವೇಕಃ ॥ –(ವಾ.)

೩. ತತೋ ವೈರವಿನಿರ್ಬಂಧಃ ಕೃತೋ ರಾಹುಮುಖೇನ ವೈ।
ಶಾಶ್ವತಶ್ಚಂದ್ರಸೂರ್ಯಾಭ್ಯಾಂ ಗ್ರಸತ್ಯದ್ಯಾಪಿ ಚೈವ ತೌ ॥ ಇತಿ। –(ಜ.)

೨) ಹಾಲಾಹಲ ಕುಡಿದೂ ಶಿವ ಮೃತನಾಗದೆ, ನೀಲಕಂಠನೆನ್ನಿಸಿ ಮಾನ್ಯನಾದ. ಆದರೆ ಅಮೃತ ಕುಡಿದೂ ರಾಹು ಆ ಕ್ಷಣದಲ್ಲೇ ಮೃತನಾದ. ಶಿವ ಸಾಯದಿರಲು ಅದು ವಾಯುದೇವರ ಅಮೃತಹಸ್ತದಿಂದ[೧] ಬಂದದ್ದು ಕಾರಣ. ವಾಯುದೇವರು[೨] ಅಮೃತಸ್ವರೂಪರೇ ಅಲ್ಲವೆ! ರಾಹು ಸಾಯಲು ಅಮೃತವು ಭಗವಂತನ ಮೋಹಿನೀರೂಪದಿಂದ ಬಂದಿದ್ದು ಕಾರಣ. ಸುರರಿಗೂ ಹಾಗೆಯೇ ಬಂದಿದ್ದರೂ, ಅವರಿಗೆ ಅದರ ಸ್ಪಷ್ಟಪರಿಜ್ಞಾನವಿದ್ದದ್ದರಿಂದ ಅದು ಮಾರಕವಾಗದೆ, ತಾರಕವಾಯಿತು. ಆದರೆ ರಾಹುವಿಗೆ ಆ ಪರಿಜ್ಞಾನವಿಲ್ಲದ್ದರಿಂದ ಅದು ಮಾರಕವಾಯಿತು. ವೇದವ್ಯಾಸರ ಮೋಹಕವಾಕ್ಯಗಳಿಂದ ಅಸುರರು ಮೋಹಗೊಳ್ಳುವುದು ಇದೇ ರೀತಿಯಾಗಿ. ನಿರ್ಣಯ ಬಲ್ಲವರಿಗೆ ಎಂತಹ ಮೋಹಕವಾಕ್ಯಗಳೂ ತಾರಕವೇ. 'ಯದ್ವೈ ಮನುರವದತ್ ತದ್ಭೇಷಜಮ್' ಎಂಬ ಶ್ರುತಿವಾಕ್ಯ ವಾಯುದೇವರಿಂದ ಬಂದದ್ದು ಪೂರ್ಣತಾರಕ ಎಂದು ಸಾರುತ್ತಿದೆ.

ಕಲಿಯ ಪ್ರಭಾವ

ಅಥಾಸುರಾಃ ಪ್ರತ್ಯಪತನ್ನುದಾಯುಧಾಃ
ಸಮಸ್ತಶಸ್ತೇ ಚ ಹತಾಸ್ತ್ವಯಾ ರಣೇ ।
ಕಲಿಸ್ತು ಸ ಬ್ರಹ್ಮವರಾದಜೇಯೋ
ಹ್ಯತೇ ಭವಂತಂ ಪುರುಷೇಷು ಸಂಸ್ಥಿತಃ ॥ ೩೨ ॥

ಅ: ಅನಂತರ ಅಸುರರು ಆಯುಧಗಳನ್ನೆತ್ತಿಕೊಂಡು ನುಗ್ಗಿಬಂದರು. ಅವರೆಲ್ಲ ನಿನ್ನಿಂದ ಯುದ್ಧದಲ್ಲಿ ಹತರಾದರು. ಬ್ರಹ್ಮವರದಿಂದಾಗಿ ನಿನ್ನ ಹೊರತು ಇತರರಿಗೆ ಸೋಲದ ಕಲಿಯೊಬ್ಬನು ಮಾತ್ರ ಮನುಷ್ಯರಲ್ಲಿ ಸ್ಥಿರವಾಗಿ ನೆಲೆಸಿರುವನು.

---

೧. ಸ್ಪೃಷ್ಟಂ ಕರೇಣ ವಿಷಮಷ್ಮಮೃತಾಯ ದೃಷ್ಟಂ ಯಸ್ಯೋದಯಃ ಸ ಭಗವಾನ್ ಯದು ರಾತಿ ಕಿಂಚಿತ್ ।
ತದ್ಭೇಷಜಂ ಗದವತಾಂ ಪ್ರತಿಕೃಪ್ತಮಾಯುರ್ವೇದೇ ಸುಸಿದ್ಧಮಮುನೇತ್ಯವಿಚಾರ್ಯಮೇತತ್ ॥
– ತತ್ತ್ವಪ್ರದೀಪ (ಶ್ಲೋ. ೧೦)

೨. 'ವಾಯುರನಿಲಮಮೃತಮ್' – ಈಶಾವಾಸ್ಯೋಪನಿಷತ್

೩. ಬ್ರಹ್ಮವರಾದ್ಭವಂತಮೃತೇ ಅಜೇಯಃ ಕಲಿಸ್ತು ಪರಶುಕ್ಲತ್ರಯಸ್ಯ ಕಲಿಜಯೋಽಪಿ ಭವತ್ಕೃಪಾದಾದೇವೇತ್ಯತೋ ನ ಸ ಪೃಥಗುಕ್ತಃ । ಪುರುಷೇಷು 'ಪುರುಷಾಃ ಪೂರುಷಾ ನರಾ' ಇತ್ಯನುಶಾಸನಾತ್ ಮಾನುಷೇಷು ಸಂಸ್ಥಿತಃ= ಸಮ್ಯಕ್ ಸ್ಥಿತಃ । ರುದ್ರಾದಿಷು ಕದಾಚಿತ್ಕಲ್ಯಾವೇಶ ಇತಿ ಸೂಚನಾಯ ಸಂಸ್ಥಿತ ಇತ್ಯುಕ್ತಮ್ ॥ – (ವಾ.)

ವಿ: ೧) ಶ್ರೀಹರಿಯಂತೆ ಪರಶುಕ್ಲತ್ರಯರಿಗೂ ಕಲಿಬಾಧೆ ಇಲ್ಲ. ರುದ್ರಾದಿದೇವತೆಗಳಿಗೂ ಒಮ್ಮೊಮ್ಮೆ ಕಲಿಬಾಧೆಯುಂಟು. ಆದರೆ ಮನುಷ್ಯರಲ್ಲಿ ಮಾತ್ರ ಅವನದು ವಿಶೇಷಪ್ರಭಾವ.

ತಸ್ಯಾರ್ಧದೇಹಾ[೧] ಸಮಭೂದಲಕ್ಷ್ಮೀ-
ಸ್ತತ್ಪುತ್ರಕಾ ದೋಷಗಣಾಶ್ಚ ಸರ್ವಶಃ ।
ಅಥೇಂದಿರಾ ವಕ್ಷಸಿ ತೇ ಸಮಾಸ್ಥಿತಾ
ತ್ವತ್ಕಂಠಗಂ ಕೌಸ್ತುಭಮಾಸ ಧಾತಾ ॥ ೩೩ ॥

ಅ: ಅಲಕ್ಷ್ಮಿಯು ಕಲಿಯ ಅರ್ಧಾಂಗಿ. ದೋಷಗಳ ಗುಂಪಿಗೆ ಅಭಿಮಾನಿಗಳಾದ ದೈತ್ಯರೆಲ್ಲ ಅವನ ಕೆಟ್ಟಸಂತತಿ. ಅವರೆಲ್ಲ ಕ್ಷೀರಸಮುದ್ರದಿಂದ ಜನಿಸಿದವರು. ಅನಂತರ ಮಹಾಲಕ್ಷ್ಮಿಯು ನಿನ್ನ [೨]ಎದೆಯಲ್ಲಿ ನೆಲೆಸಿದಳು. ನಿನ್ನ ಕಂಠದಲ್ಲಿ ನೆಲೆಸಿದ ಕೌಸ್ತುಭಮಣಿಗೆ ಬ್ರಹ್ಮನು[೩] ಅಭಿಮಾನಿಯಾದ.

ವಿ: ೧) ಕಲಿಪತ್ನಿಯಾದ ಅಲಕ್ಷ್ಮಿಯೂ ಸಮುದ್ರದಲ್ಲಿ ಜನಿಸಿದವಳೇ. ಅವಳು ಮಹಾ–ಲಕ್ಷ್ಮಿಗಿಂತ ಮುಂಚಿತವಾಗಿ ಜನಿಸಿದ್ದರಿಂದ ಅವಳಿಗೆ ಜ್ಯೇಷ್ಠಲಕ್ಷ್ಮೀ ಎಂದೂ ಹೆಸರು.

೨) ಲಕ್ಷ್ಮೀನಾರಾಯಣರನ್ನು ಆಶ್ರಯಿಸಿದವರಿಗೆ ಈ ಅಲಕ್ಷ್ಮಿಯ ಹಾಗೂ ಅವಳ ಸಂತತಿಯ ಪೀಡೆ ಇರದು. ಮಹಾಲಕ್ಷ್ಮಿಯು ಸತ್ಸಂಪತ್ತಿಗೆ ಅಭಿಮಾನಿದೇವತೆಯಾದರೆ, ಅಲಕ್ಷ್ಮಿಯು ಕೆಟ್ಟಸಂಪತ್ತಿಗೆ ಅಭಿಮಾನಿದೈತ್ಯಳು. ಮಂಥರೆಯಾಗಿ ಹುಟ್ಟಿ ರಾಮಾಭಿಷೇಕಕ್ಕೆ ವಿಘ್ನಮಾಡಿದವಳು ಇವಳೇ(೫/೧,೨).

೩) ಮಹಾಲಕ್ಷ್ಮಿ ಸರ್ವೋತ್ತಮನ ಪತ್ನಿಯಾದರೆ, ಅಲಕ್ಷ್ಮಿ ಸರ್ವಾಧಮನ ಪತ್ನಿ. ಲಕ್ಷ್ಮೀಸ್ವಯಂವರದ ವಿವರಗಳು ಭಾಗವತಪುರಾಣದಲ್ಲಿ ವಿವರವಾಗಿ ನಿರೂಪಿತವಾಗಿವೆ.

---

೧. ಅರ್ಧದೇಹಾ= ಅರ್ಧಾಂಗೀ ಭಾರ್ಯಾ । ದೋಷಗಣಾಃ= ದೋಷಾಭಿಮಾನಿನೋ ದೈತ್ಯಗಣಾಃ । ಕೌಸ್ತುಭಮಾಸ ಕೌಸ್ತುಭಾಭಿಮಾನೀ ಆಸೇತ್ಯರ್ಥಃ ॥ – (ವಾ.)

೨. ಅನಾದ್ಯನಂತಕಾಲೇऽಪಿ ವಿಷ್ಣುಮೇವಾಶ್ರಿತಾ ರಮಾ ।
ಅನ್ಯೇಷಾಂ ಜ್ಞಾಪನಾರ್ಥಾಯ ದೋಷಾನುಕ್ತ್ವೋತರಾನ್ ಜಹೌ ॥ - ಭಾ. ತಾ. (೮/೮/೨೩)

೩. ಕೌಸ್ತುಭೋ ಬ್ರಹ್ಮಣೋ ರೂಪಂ ....' ಇತಿ ಚ ॥ - ಭಾ. ತಾ.೩/೧೬/೩೯

ಸ ಚ ಬ್ರಹ್ಮಾ ಹರೇಃ ಕಂಠೇ ಕೌಸ್ತುಭತ್ವೇನ ಭಾಸತೇ' ಇತಿ ಭಾಗವತತಂತ್ರೇ । – ಭಾ. ತಾ.೩/೨೯/೨೭

'ಶ್ರೀವತ್ಸಃ ಪ್ರಕೃತಿರ್ಜ್ಞೇಯಾ ಬ್ರಹ್ಮಾಖ್ಯಃ ಕೌಸ್ತುಭಃ ಪುಮಾನ್ । - ಭಾ.ತಾ.೬/೯/೨೮೩..

೨) ಬ್ರಹ್ಮದೇವರು ಕೌಸ್ತುಭಮಣಿಯ ಅಭಿಮಾನಿದೇವತೆ. ಈ ಕೌಸ್ತುಭಮಣಿಯನ್ನು ಶ್ರೀವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದಿಸಿದ ಪ್ರಸಂಗದಲ್ಲಿ ಬ್ರಹ್ಮದೇವರು ಶ್ರೀವೇದವ್ಯಾಸ–ರೂಪಕ್ಕೆ ಕಾಣಿಕೆಯಾಗಿ ಸಮರ್ಪಿಸಿದರು ಎಂಬ ವಿಶೇಷವಿವರ [೧]ಸುಮಧ್ವವಿಜಯದಲ್ಲಿ ಬಂದಿದೆ.

ಅಮೃತಪ್ರಾಶನಪ್ರಸಂಗದ ಆಂತರ್ಯ

[೨]ಯಥಾವಿಭಾಗಂ ಚ ಸುರೇಷು ದತ್ತಾ-
ಸ್ತ್ವಯಾ ತಥಾऽನ್ಯೇऽಪಿ ಹಿ ತತ್ರ ಜಾತಾಃ ।
ಇತ್ಥಂ ತ್ವಯಾ [೩]ಸಾಧ್ವಮೃತಂ ಸುರೇಷು
ದತ್ತಂ ಹಿ ಮೋಕ್ಷಸ್ಯ ನಿದರ್ಶನಾಯ ॥ ೩೪ ॥

ಅ: ಅಲ್ಲಿ ಹುಟ್ಟಿದ ಇತರ ವಸ್ತುಗಳನ್ನು ನೀನು ಸುರರಿಗೆ ಅವರವರ ಯೋಗ್ಯತೆಗೆ ಅನುಗುಣವಾಗಿ ಹಂಚಿದೆ. ಮೋಕ್ಷ ನೀಡುವುದಕ್ಕೆ ನಿದರ್ಶನವಾಗಿ ಸುರರಿಗೆ ನೀನು ಹೀಗೆ ಚೆನ್ನಾಗಿ ಅಮೃತವನ್ನು ನೀಡಿದೆ.

ವಿ: ೧) ಕೌಸ್ತುಭಾದಿಗಳನ್ನು ಹೊರತುಪಡಿಸಿ, ಐರಾವತ, ಉಚ್ಚೈಃಶ್ರವಸ್, ಪಾರಿಜಾತಾದಿ–ಗಳನ್ನು ಶ್ರೀಹರಿ ಇಂದ್ರನಿಗೆ ನೀಡಿದ; ಪುಂಡರೀಕಾದಿ ಸಪ್ತದಿಗ್ಗಜಗಳನ್ನು ಇತರ ಏಳು ದಿಕ್ಪಾಲಕರಿಗೆ ನೀಡಿದ. ಅಂತೆಯೇ ಅವರವರಿಗೆ ಉಚಿತವಾದ ಆಯುಧಗಳನ್ನೂ, ಆಭರಣಗಳನ್ನೂ ನೀಡಿದ.

೨) ಅಸುರರಿಗೆ ಒಂದು ತೊಟ್ಟು ಅಮೃತ ನೀಡದೆ, ಸಕಲಸುರರಿಗೂ ಅಮೃತ ನೀಡಿದ ಈ ಪ್ರಸಂಗ ಶ್ರೀಹರಿಯು ಅಸುರರಿಗೆಂದೂ ಮೋಕ್ಷ ನೀಡದೆ, ಸಾತ್ತ್ವಿಕರಿಗೆ ಮಾತ್ರ ಮೋಕ್ಷ ನೀಡುವನು ಎಂಬುದಕ್ಕೆ ನಿದರ್ಶನ. 'ತಮೇವಂ ವಿದ್ವಾನಮೃತ ಇಹ ಭವತಿ' ಎಂಬ ಶ್ರುತಿವಾಕ್ಯದಲ್ಲಿ ಅಮೃತವು ಮೋಕ್ಷ ಎಂಬ ಅರ್ಥದಲ್ಲೇ ಪ್ರಯೋಗಿಸಲ್ಪಟ್ಟಿದೆ.

---

೧. ಅಸಮೇऽನಧಿಕೇ ಸುಸಾಧಿತೇ ನಿಜತಾತೇ ರವಿರಾಶಿದೀಧಿತಿ ।
ಪ್ರದದೌ ತ್ರಿಜಗಜ್ಜಯಧ್ವಜಂ ವಿಧಿರೇತದ್ಗಲಸಂಗಿಭೂಷಣಮ್ ॥ – ಮ.ವಿ. (೭/೩೪)

೨. ಯಥಾವಿಭಾಗಮಿತ್ಯತ್ರ ತತ್ರ= ಮಥ್ಯಮಾನಕ್ಷೀರಸಮುದ್ರೇ ಜಾತಾಃ ಅನ್ಯೇ= ಪ್ರಾಗುಕ್ತೇಭ್ಯಃ ಅನ್ಯೇ ಲಕ್ಷ್ಮೀಕೌಸ್ತುಭಸುಧಾದಿಭ್ಯೋऽನ್ಯೇ ಇತ್ಯರ್ಥಃ । ಯಥಾವಿಭಾಗಂ = ವಿಭಾಗಮನತಿಕ್ರಮ್ಯ ಸುರೇಷು ದತ್ತಾಃ । ಸ ಚ ವಿಭಾಗಃ ಶಾಸ್ತ್ರಪ್ರಸಿದ್ಧಿತೋऽವಗಂತವ್ಯ ಇತಿ ಸೂಚನಾಯ ಹಿಶಬ್ದಃ । ಐರಾವತೋಚ್ಚೈಃಶ್ರವಃ ಪಾರೀಜಾತಪ್ರಭೃತಯಃ ಇಂದ್ರಾಯ ದತ್ತಾಃ । ತಥಾ ಶಾಸ್ತ್ರೇ ಉಕ್ತತ್ವಾತ್ । ತದತಿರಿಕ್ತಾಃ ಪುಂಡರೀಕವಾಮನಕುಮುದಾಂಜನಪುಷ್ಪದಂತ-ಸಾರ್ವಭೌಮಸುಪ್ರತೀಕಾಖ್ಯಾಃ ಸಪ್ತದಿಗ್ಗಜಾಃ ಅಗ್ನ್ಯಾದಿಸಪ್ತದಿಕ್ಪಾಲಾನಾಂ ದತ್ತಾಃ । ತಥಾ ಶಾಸ್ತ್ರಪ್ರಸಿದ್ಧತ್ವಾತ್ । ಆಯುಧಾನ್ಯಾಭರಣಾನಿ ಚ ಯಥಾಯೋಗ್ಯಂ ಸುರೇಷು ದತ್ತಾನೀತ್ಯರ್ಥಃ । – (ವಾ.)

೩. ಹಿಶಬ್ದೇನ 'ತಮೇವಂ ವಿದ್ವಾನಮೃತ ಇಹ ಭವತಿ' ಇತಿ ಶ್ರುತಿಪ್ರಸಿದ್ಧಿಂ ಸೂಚಯತಿ ॥ – (ವಾ.)

೩) ಹೀಗೆ ಅಮೃತಾದಿಗಳನ್ನು ವಿಭಾಗ ಮಾಡಿದ ಶ್ರೀಹರಿಯೇ ಶ್ರೀವ್ಯಾಸರೂಪದಿಂದ ಅವತರಿಸಿ ವೇದವಿಭಾಗ ಮಾಡುವನು.

ಭವೇದ್ಧಿ ಮೋಕ್ಷೋ ನಿಯತಂ ಸುರಾಣಾಂ
ನೈವಾಸುರಾಣಾಂ ಸ ಕಥಂಚನ ಸ್ಯಾತ್[೧] ।
ಉತ್ಸಾಹಯುಕ್ತಸ್ಯ ಚ ತತ್ಪ್ರತೀಪಂ
ಭವೇದ್ಧಿ ರಾಹೋರಿವ ದುಃಖರೂಪಮ್ ॥ ೩೫ ॥

ಅ: ಸುರರಿಗೆ ಮೋಕ್ಷ ದೊರೆಯುವುದು ನಿಶ್ಚಿತ. ಅಸುರರಿಗೆ ಅದು ಸರ್ವಥಾ ದೊರೆಯದು. ಅರ್ಹತೆ ಇಲ್ಲದವನು ಅದಕ್ಕೆ ಕಾತರಿಸಿದರೆ ರಾಹುವಿಗೆ ಹೇಗೋ, ಹಾಗೆ, ಅದಕ್ಕೆ ವಿರುದ್ಧವಾದ ದುಃಖರೂಪವಾದ ಫಲವೇ ಲಭಿಸುವುದು.

ವಿ: ಅರ್ಹರಿಗೆ ತಪ್ಪದೆ ಮೋಕ್ಷ ಲಭಿಸುವಂತೆ, ಅನರ್ಹರಿಗೆ ತಪ್ಪದೆ ತಮಸ್ಸು ಲಭಿಸುವುದು ಎಂಬ ಶಾಸ್ತ್ರತತ್ತ್ವಕ್ಕೆ ಈ ಅಮೃತಪ್ರದಾನಪ್ರಸಂಗ ನಿದರ್ಶನ ಎಂದರ್ಥ. ತನಗೆ ಸಲ್ಲದ ರಾಮಪತ್ನಿತ್ವವನ್ನು ಬಯಸಿ, [೨]ಶೂರ್ಪಣಖಿಯು ಕಿವಿ, ಮೂಗುಗಳನ್ನು ಕಳೆದುಕೊಂಡದ್ದು ಸಹ ಇಂತಹುದೇ ಪ್ರಸಂಗ (೫/೨೪–೨೬).

---

೧. ಅವೈಷ್ಣವಾನಾಂ ಯತನೈರ್ನ ಮೋಕ್ಷಃ ಪತಂತ್ಯಧಸ್ತಾಮಸವೃತ್ತಯಸ್ತೇ । – ರುಕ್ಮಿಣೀಶವಿಜಯಃ (೨/೫೦)

ಅಸುರಾಣಾಂ ನ ಸ್ಯಾದ್ಧೀತಿ ಹಿಶಬ್ದೇನ ''ಮಾಯಾಭಿರುತ್ಸಿಸೃಪ್ಸತ ಇಂದ್ರ ದ್ಯಾಮಾರುರುಕ್ಷತಃ । ಅವದಸ್ಯಾಂ ರಧೂನುಥಾ'' (ಋ. ೮/೧೪/೧೪) ಇತ್ಯಾದಿಶ್ರುತಿಪ್ರಸಿದ್ಧಿಂ ''ಆರುರುಕ್ಷಂತಿ ಮಾಯಾಭಿಃ ಉತ್ಸಿಸೃಪ್ಸಂತಿ ಯೇ ದಿವಮ್ । ತಾಂದಸ್ಯೂನ್ವಿಧುನೋಮ್ಯಜ್ಞ ಪೂರ್ವಸ್ಮಾಚ್ಚ ಪದಾದಧಃ'' । ''ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ । ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್'' । ಇತಿ ಸ್ಮೃತಿಪ್ರಸಿದ್ಧಿಂ ಚ ಸೂಚಯತಿ । ಉತ್ಸಾಹಯುಕ್ತಸ್ಯ= ಮೋಕ್ಷೋತ್ಸಾಹಯುಕ್ತಸ್ಯ ತತ್ಪ್ರತೀಪಂ= ಸುಖರೂಪಮೋಕ್ಷವಿಪರೀತಂ ದುಃಖರೂಪಮಂಧಂತಮೋ ಭವೇದ್ಧೀತಿ ಹಿಶಬ್ದೇನ ''ಪರಾ ಪೂರ್ವೇಷಾಂ ಸಖ್ಯಾ ವೃಣಕ್ತಿ ವಿತರ್ದುರಾಣೋ ಅಪರೇಭಿರೇತಿ'' ಇತ್ಯಾದಿಶ್ರುತಿಪ್ರಸಿದ್ಧಿಂ ಚ ಸೂಚಯತಿ । ತರ್ಹಿ ಉತ್ಸಾಹಸ್ಯ ಕಾ ಗತಿರಿತಿ ಶಂಕಾಮಪಿ ಪೂರ್ವೇಷಾಮುಗ್ರಾಣಾಂ ದೈತ್ಯಾನಾಂ ಸಖ್ಯಾ= ಸ್ವಸ್ಮಿನ್ ಕ್ರಿಯಮಾಣಾನಿ ಸಖ್ಯಾನಿ ಭಕ್ತ್ಯಾದಿಸಾಧನಾನೀತಿ ಯಾವತ್ ಪರಾವೃಣಕ್ತಿ= ಛಿನತ್ತೀತಿ ವದಂತೀ ಶ್ರುತಿರೇವ ಧಿಕ್ಕುರುತೇ । – (ವಾ.)

೨. ಇದಮಪಿ ಶೂರ್ಪಣಖ್ಯಾದಿಷು ಪ್ರಸಿದ್ಧಮಿತಿ ಹಿಶಬ್ದೇನ ಸೂಚಿತಮ್ ॥ – (ವಾ.)

ಕಲಿಯಿಂದಾದ ತತ್ತ್ವವಿಪ್ಲವ

[೧]ಕಲಿಸ್ತ್ವಯಂ ಬ್ರಹ್ಮವರಾದಿದಾನೀಂ
ವಿಬಾಧತೇ ಽಸ್ಮಾನ್ ಸಕಲಾಃ ಪ್ರಜಾಶ್ಚ।
ಅಜ್ಞಾನಮಿಥ್ಯಾಮತಿರೂಪತೋ ಽಸೌ
ಪ್ರವಿಶ್ಯ ಸಜ್ಞಾನವಿರುದ್ಧರೂಪಃ ॥ ೩೬ ॥

ಅ: ಯಥಾರ್ಥಜ್ಞಾನಕ್ಕೆ ವಿರುದ್ಧಸ್ವರೂಪದ ಈ [೨]ಕಲಿಯಾದರೋ ಈಗ ಬ್ರಹ್ಮವರದಿಂದಾಗಿ ನಮ್ಮನ್ನೂ, ಸಕಲಜನರನ್ನೂ, ಅಜ್ಞಾನಮಿಥ್ಯಾಜ್ಞಾನರೂಪಗಳಿಂದ ಪ್ರವೇಶಿಸಿ, ಪೀಡಿಸುತ್ತಿರುವನು.

ವಿ: ೧) ಜೀವೋತ್ತಮರಾದ ವಾಯುದೇವರು ಯಥಾರ್ಥಜ್ಞಾನಸ್ವರೂಪರಾಗಿರುವಂತೆ, ಜೀವಾಧಮನಾದ [೧]ಕಲಿ ಮಿಥ್ಯಾಜ್ಞಾನಸ್ವರೂಪನಾಗಿರುವನು. **'ಅಜ್ಞಾನಾದಿಸ್ವರೂಪಸ್ತು ಕಲಿ–ರ್ದುರ್ಯೋರ್ಧನಃ ಸ್ಮೃತಃ'**(೨/೧೪೨) ಎಂಬುದಾಗಿ ಈ ಮೊದಲೇ ಹೇಳಿರುವುದನ್ನು ಇಲ್ಲಿ ಗಮನಿಸಬೇಕು.

೨) ಮನಸ್ಸಿನಲ್ಲಿ ಸಂಶಯ, ಮಿಥ್ಯಾಜ್ಞಾನಗಳು ಹುಟ್ಟುವುದು ಕಲಿಪ್ರವೇಶದ ಫಲ. ಪರಶುಕ್ಲತ್ರಯರ ಹೊರತು ಇತರ [೩]ದೇವತೆಗಳನ್ನೂ ಕಲಿ ಪೀಡಿಸಬಲ್ಲ. ಅವನಿಗೀಗ ಹಾಲಾಹಲದ

---

೧. ಅವತಾರಾಂತರಂ ವಿಹಾಯ ಯದರ್ಥಂ ಕೂರ್ಮಾವತಾರಕಥೈವ ವಿಸ್ತರೇಣ ಕಥಿತಾ ತತ್ಫಲಮಾಹುಃ- ಕಲಿಸ್ತ್ವಯಮಿತಿ । ಅಯಂ ಕಲಿಃ ತು = ಕಾಲಕೂಟಾಖ್ಯವಿಷಸ್ಯ ಸಹಾಯವಿಶೇಷೇಣ ಇದಾನೀಮಸ್ಮಾನ್ ಪ್ರವಿಶ್ಯ ಅಜ್ಞಾನಮಿಥ್ಯಾಜ್ಞಾನರೂಪತಃ= ಅಜ್ಞಾನಮಿಥ್ಯಾಜ್ಞಾನಯೋಃ ರೂಪೇಣ ಚಿತ್ತಂ ಭ್ರಾಮಯಿತ್ವಾ ಕದಾಚಿತ್ಕದಾ- ಚಿದ್ಬಾಧತೇ । ಸಕಲಾಃ ಪ್ರಜಾಶ್ಚ ಪ್ರವಿಶ್ಯ ಅಜ್ಞಾನಮಿಥ್ಯಾಜ್ಞಾನರೂಪತಃ ಚಿತ್ತಂ ಭ್ರಾಮಯಿತ್ವಾ ವಿಶೇಷೇಣ ಬಾಧತ ಇತಿ ಯಥಾಯೋಗ್ಯಂ ವಿಭಜ್ಯ ಯೋಜನಾ ದ್ರಷ್ಟವ್ಯಾ । ಸ್ವಯಮಪಿ ಪಿಶಾಚಾವೇಶೇನೇವ ಪರಶುಕ್ಲತ್ರಯಂ ವಿನಾ ಅಸ್ಮಾಕಂ ಪ್ರಜಾನಾಂ ಚ ಬುದ್ಧಿಭ್ರಂಶಕರಣೇ ಸಮರ್ಥಃ । ಇದಾನೀಂ ಕಾಲಕೂಟಸಹಾಯೇ ಸತಿ ಉನ್ಮತ್ತಬೀಜೇನೇವ ಬುದ್ಧಿಂ ಭ್ರಾಮಯಿತ್ವಾ ಅಸ್ಮಾನ್ ಕದಾಚಿತ್ಕದಾಚಿದ್ಬಾಧತೇ । ಪ್ರಜಾಸ್ತು ದುರ್ಬಲಚಿತ್ತತ್ವಾ - ದ್ವಿಶೇಷೇಣ ಬಾಧತ ಇತಿ ಭಾವಃ । – (ವಾ.)

೨. ಅಜ್ಞಾನಾದಿಸ್ವರೂಪಸ್ತು ಕಲಿರ್ದುರ್ಯೋರ್ಧನಃ ಸ್ಮೃತಃ ॥ – ಮ.ಭಾ.ತಾ.ನಿ. (೨/೧೪೮)

೩. 'ನ ದೇವಾನಾಂ ಪ್ರಜಾಪಾನಾಂ ವಿಜೇತಾ ವರತೋ ವಿನಾ ।
ಬಲೇನ ವಿದ್ಯಯಾ ವಾ ಽಪಿ ನ ಸಮಸ್ತತ್ರಿತೀನ್ವಿನಾ ।
ವರೋ ಽಪಿ ತಾದೃಶೋ ಯಾವಚ್ಛರೀರಂ ನಾನ್ಯದೇಹಗಃ' ಇತಿ ತತ್ತ್ವನಿರ್ಣಯೇ ॥
- ಭಾ. ತಾ. (೩/೧೮/೨೨, ೩೧)

ಬೆಂಬಲವಿದೆ. ಗೌತಮಶಾಪ ಬೇರೆ ಅದಕ್ಕೆ ಸೇರಿದೆ. ಒಟ್ಟಾಗಿ ಕಳ್ಳು ಕುಡಿದ, ಚೇಳು ಕಡಿದ, ಪಿಶಾಚಿ ಹೊಕ್ಕ ಕಪಿಯ ತೆರನಂತೆ ಸಜ್ಜನರ ಪರಿಸ್ಥಿತಿ ಇದೆ. ಇಲ್ಲಿ ಕಲಿಯೇ ಪಿಶಾಚಿ; ಬ್ರಹ್ಮ ಶಾಪ ಮದ್ಯಪಾನದಂತೆ; ಗೌತಮಶಾಪ ಚೇಳು [೧]ಕುಟುಕಿದಂತೆ.

೩) ಬೇರೆಲ್ಲ ನೋವಿಗಿಂತ ಸಂಶಯ, ಮಿಥ್ಯಾಜ್ಞಾನಗಳ ನೋವು ಅತಿಶಯವಾದದ್ದು; ಅದನ್ನು ಉಂಟುಮಾಡುವ ಕಲಿಯೇ ಪ್ರಧಾನದೈತ್ಯ ಎಂದೂ ತಿಳಿಯಬೇಕು.

ತ್ವದಾಜ್ಞಯಾ ತಸ್ಯ ವರೋಽಬ್ಜಜೇನ
ದತ್ತಃ ಸ ಆವಿಶ್ಯ ಶಿವಂ ಚಕಾರ ।
[೨]ಕದಾಗಮಾಂಸ್ತಸ್ಯ ಕುಯುಕ್ತಿಬಾಧಾನ್
ನ ಹಿ ತ್ವದನ್ಯಶ್ಚರಿತುಂ ಸಮರ್ಥಃ ॥ ೩೭ ॥

ಅ: ರಾಹುವಿಗೆ ಕಮಲಸಂಭವನಾದ ಬ್ರಹ್ಮ ಹಾಗೆ ವರನೀಡಿದ್ದು ನಿನ್ನ ಆದೇಶದಿಂದಲೇ. ಕಲಿಯು ಶಿವನಲ್ಲಿ ಹೊಕ್ಕು ದುರಾಗಮಗಳನ್ನು ರಚಿಸಿರುವನು. ಅವನ ಕುಯುಕ್ತಿಗಳನ್ನು ಖಂಡಿಸಲು ನಿನ್ನ ಹೊರತು ಬೇರಾರೂ ಸಮರ್ಥರಲ್ಲ.

ವಿ: ಬ್ರಹ್ಮದೇವರು ಅದಕ್ಕೆ ಸಮರ್ಥರಾದರೂ, ಅವರೇ ವರ ನೀಡಿರುವುದರಿಂದ ಹಾಗೆ ಮಾಡರು. ರುದ್ರಾದಿದೇವತೆಗಳಂತೂ ಅವನ ಪೀಡೆಗೆ ಒಳಗಾಗಿ ಪಾಶುಪತಾದಿದುರಾಗಮಗಳನ್ನು ಪ್ರವರ್ತಿಸಿದವರು. ಆದ್ದರಿಂದ ಶ್ರೀಹರಿಯ ಹೊರತು ಬೇರಾರೂ ಕಲಿಯ ನಿಗ್ರಹಕ್ಕೆ ಸಮರ್ಥರಲ್ಲ ಎಂದು ಭಾವ.

---

೧. ಯದಾಹ ನೀತಿಕಾರಃ–

> ''ಕಪಿರಪಿ ಚ ಕಾಪಿಶಾಯನಮದಮತ್ತೋ ವೃಶ್ಚಿಕೇನ ಸಂದಷ್ಟಃ ।
> ಅಪಿ ಚ ಪಿಶಾಚಗ್ರಸ್ತಃ ಕಿಂ ಬ್ರೂಮೋ ವೈಕೃತಂ ತಸ್ಯ'' ಇತಿ ।
> —— ಪ್ರಕೃತೇ ವೃಶ್ಚಿಕದಂಶವತ್ ಗೌತಮಶಾಪೋಽಸ್ತೀತಿ ಜ್ಞೇಯಮ್ ॥ – (ವಾ.)

> ಮರ್ಕಟಸ್ಯ ಸುರಾಪಾನಂ ಮಧ್ಯೇ ವೃಶ್ಚಿಕದಂಶನಂ ।
> ತನ್ಮಧ್ಯೇ ಭೂತಸಂಚಾರೋ ಯದ್ವಾ ತದ್ವಾ ಭವಿಷ್ಯತಿ ॥ – (ಸುಭಾಷಿತ)

೨. ಕದಾಗಮಾನ್ = ಕುತ್ಸಿತಾಗಮಾನ್ ಶಿವಂ ಪ್ರವಿಶ್ಯ ಚಕಾರೇತಿ ಸಂಬಂಧಃ । ಪಾಶುಪತಾದಿಸಕಲ-ದುರಾಗಮಾನಾಂ ಶಿವ ಏವ ಪ್ರವರ್ತಕ ಇತ್ಯತಃ ಶಿವಂ ಪ್ರವಿಶ್ಯೇತ್ಯುಕ್ತಮ್ ॥ – (ವಾ.)

[೧]ವೇದಾಶ್ಚ ಸರ್ವೇ ಸಹಶಾಸ್ತ್ರಸಂಘಾ
ಉತ್ಸಾದಿತಾಸ್ತೇನ ನ ಸಂತಿ ತೇಽದ್ಯ ।
ತತ್ ಸಾಧು ಭೂಮಾವವತೀರ್ಯ ವೇದಾ-
ನುದ್ಧೃತ್ಯ ಶಾಸ್ತ್ರಾಣಿ ಕುರುಷ್ವ ಸಮ್ಯಕ್ ॥ ೩೮ ॥

ಅ: ಇತರ ಶಾಸ್ತ್ರಗಳ ಸಮೂಹದೊಂದಿಗೆ ಸಕಲವೇದಗಳೂ ಕಲಿಯಿಂದ ನಾಶ ಹೊಂದಿವೆ. ಅವು ಇಂದು ಉಳಿದಿಲ್ಲ. ಆದ್ದರಿಂದ ನೀನು ಭೂಮಿಯಲ್ಲಿ ಅವತರಿಸಿ, ವೇದಗಳನ್ನು ಉದ್ಧರಿಸಿ, ಶಾಸ್ತ್ರಗಳನ್ನು ಚೆನ್ನಾಗಿ ರಚಿಸು.

ವಿ: ೧) ವೇದಗಳು ನಾಶವಾಗುವುದು ಎಂದರೆ ಅಪಪಾಠಾದಿಗಳಿಂದ ಕಲುಷಿತಗೊಳ್ಳುವುದು, ಅವುಗಳ ಅಧ್ಯಯನಾದಿಗಳು ಮರೆಯಾಗುವುದು ಎಂದರ್ಥ. ಇತರ ಶಾಸ್ತ್ರಗಳು ಎಂದರೆ ಪಂಚರಾತ್ರ, ಮೂಲರಾಮಾಯಣಾದಿಗಳು ಎಂದರ್ಥ.

೨) ದ್ವಾಪರಯುಗದ ಕೊನೆಯಲ್ಲಿ ಜ್ಞಾನ ನಾಶವಾಗಲು ಗೌತಮರ ಶಾಪ ಕಾರಣ. ಆದರೆ ಅವರು ತಮಗೆ ದ್ರೋಹ ಮಾಡಿದ ಮುನಿವೃಂದಕ್ಕೆ ಶಾಪ ಕೊಡುವ ಬದಲು ಜ್ಞಾನವೇ ನಾಶವಾಗಲಿ ಎಂದು ಶಪಿಸಲು ಅವರೊಳಗೂ ಕಲಿಪ್ರವೇಶವಾಗಿದ್ದೇ ಕಾರಣ.

೩) ಇಲ್ಲಿ ರಚಿಸಬೇಕಾದ ಶಾಸ್ತ್ರಗಳು ಎಂದರೆ [೨]ಬ್ರಹ್ಮಸೂತ್ರ, ಮಹಾಭಾರತ ಮತ್ತು ಪುರಾಣಾದಿಗಳು. ಪಂಚರಾತ್ರಾದಿಗಳನ್ನು ಆದಿಸೃಷ್ಟಿಯಲ್ಲಿ ಶ್ರೀಹರಿಯೇ ರಚಿಸಿದ್ದರಿಂದ ಅವುಗಳನ್ನು ಪುನಃ ರಚಿಸಬೇಕಿರಲಿಲ್ಲ. ಆದರೆ ಅವುಗಳ ಪ್ರವರ್ತನೆ ಮಾಡಬೇಕಿತ್ತು. 'ಸಮ್ಯಕ್' ಎಂದರೆ ವೇದಾದಿಶಾಸ್ತ್ರಗಳ ಅರ್ಥದಲ್ಲಿ ಸಂಶಯ ಉಂಟಾಗದಂತೆ ಸರಿಯಾಗಿ ರಚಿಸುವುದು ಎಂದರ್ಥ.

---

೧. ವೈದಿಕಶಿರೋಮಣೇರ್ಗೌತಮಸ್ಯ ವೇದಶಾಸ್ತ್ರೋತ್ಸಾದನಾಯ ಶಾಪದಾನೇ ಮನೋಽಪಿ ಕಲ್ಯಾವೇಶಾದೇವ ಜಾತಮಿತಿ ಭಾವೇನೋಕ್ತಂ ತೇನ = ಕಲಿನಾ ಉತ್ಸಾದಿತಾ ಇತಿ । ಅನ್ಯಥಾ ಶಿಷ್ಯಾಪರಾಧೇ ಸತಿ ಅಗಸ್ತ್ಯೋ ಗಜೇಂದ್ರಸ್ಯೇವ ಶಿಷ್ಯಾಣಾಮೇವ ಶಾಪಂ ದದ್ಯಾತ್ । ನಿರಪರಾಧಿವೇದಶಾಸ್ತ್ರದ್ವೇಷಸ್ತು ಕಲ್ಯಾವೇಶಾದೇವೇತಿ ಭಾವಃ । ಸಹಶಾಸ್ತ್ರಸಂಘಾ ಇತ್ಯತ್ರ ಶಾಸ್ತ್ರಂ ಪಂಚರಾತ್ರಮೂಲರಾಮಾಯಣಾದಿಕಮ್ । ವೇದಾನಾಮನಾದಿತ್ವಾದ್ವೇದಾನುದ್ಧೃತ್ಯೇತ್ಯುಕ್ತಮ್ । ವೇದಶಬ್ದೇನ ಪಂಚರಾತ್ರಾದಿಕಮಪಿ ಗ್ರಾಹ್ಯಮ್ । ಪಂಚರಾತ್ರಸ್ಯ ಸಾದಿತ್ವೇಽಪಿ ಆದಿಸೃಷ್ಟೌ ಭಗವತ್ಕೈವ ಕೃತತ್ವೇನ ಪುನಃ ಕರಣಾಯೋಗಾತ್ । ಅತ ಏವ ನ ಸಂತೀತ್ಯಸ್ಯಾಪಿ ವ್ಯಕ್ತತಯಾ ನ ಸಂತೀತ್ಯರ್ಥಃ। – (ವಾ.)

೨. ಶಾಸ್ತ್ರಾಣಿ = ಬ್ರಹ್ಮಸೂತ್ರಭಾರತಪುರಾಣಾದೀನಿ । ಸಮ್ಯಕ್ ವೇದಾದ್ಯರ್ಥೇಽಪಿ ಸಂಶಯಚ್ಛೇದೋ ಯಥಾ ಭವತಿ ತಥಾ ಕುರುಷ್ವೇತಿ ಯೋಜನಾ ॥ – (ವಾ.)

ಅದೃಶ್ಯಮಜ್ಞೇಯಮತರ್ಕ್ಯರೂಪಂ
ಕಲಿಂ ನಿಲೀನಂ ಹೃದಯೇऽಖಿಲಸ್ಯ ।
ಸಚ್ಛಾಸ್ತ್ರಶಸ್ತ್ರೇಣ ನಿಹತ್ಯ[೧] ಶೀಘ್ರಂ
ಪದಂ ನಿಜಂ ದೇಹಿ ಮಹಾಜನಸ್ಯ[೨] ॥ ೩೯ ॥

ಅ: ಕಣ್ಣಿಗೆ ಕಾಣದಂತೆ, ಅರಿಯಲಾಗದಂತೆ, ಊಹಿಸಲೂ ಆಗದಂತೆ ಕಲಿ ಎಲ್ಲರ ಹೃದಯದಲ್ಲೂ ಅಡಗಿರುವನು. ಅವನನ್ನು ಸಚ್ಛಾಸ್ತ್ರವೆಂಬ ಶಸ್ತ್ರದಿಂದ ಬೇಗನೆ ತರಿದು, ನಿನ್ನ ಭಕ್ತಜನರಿಗೆ ನಿನ್ನ ಲೋಕವನ್ನು ನೀಡು.

ವಿ: ಶಸ್ತ್ರಕ್ರಿಯೆಯಿಂದ ದೇಹದ ಒಳಗಿನ ದೋಷವನ್ನು ನಾಶಮಾಡುವಂತೆ, ಶಾಸ್ತ್ರೋಪದೇಶಕ್ರಿಯೆಯಿಂದ ಮನಸ್ಸಿನೊಳಗೆ ಅಡಗಿರುವ ಕಲಿಯನ್ನು ನಾಶ ಮಾಡಬೇಕು. ಇಲ್ಲಿ ಕಲಿಹನನವೆಂದರೆ ಅವನಿಂದ ಅಭಿಮನ್ಯಮಾನವಾದ ಅಜ್ಞಾನ, ಮಿಥ್ಯಾಜ್ಞಾನಗಳ ಪರಿಹಾರ ಎಂದರ್ಥ.

ದೇವತಾಪ್ರಾರ್ಥನೆಯ ಪರಿಸಮಾಪ್ತಿ

ಋತೇ ಭವಂತಂ ನಹಿ[೩] ತಂ ನಿಹಂತಾ
ತ್ವಮೇಕ ಏವಾಖಿಲಶಕ್ತಿಪೂರ್ಣಃ ।
ತತೋ ಭವಂತಂ ಶರಣಂ ಗತಾ ವಯಂ
ತಮೋನಿಹತ್ಯೈ ನಿಜಬೋಧವಿಗ್ರಹಮ್ ॥ ೪೦ ॥

ಅ: ನಿನ್ನ ಹೊರತು ಅವನನ್ನು ನಾಶಪಡಿಸುವವರು ಬೇರಾರೂ ಇಲ್ಲ. ನೀನೊಬ್ಬನೇ ಸಕಲಶಕ್ತಿಪರಿಪೂರ್ಣನಾದವನು. ಅದಕ್ಕೆಂದೇ ಅಜ್ಞಾನದ ಕತ್ತಲೆಯ ಪರಿಹಾರಕ್ಕೋಸ್ಕರವಾಗಿ ಸ್ವರೂಪಜ್ಞಾನಮೂರ್ತಿಯಾದ ನಿನ್ನನ್ನು ನಾವು ಶರಣುಹೊಕ್ಕಿರುವೆವು''.

---

೧. ಮಿಥ್ಯಾಜ್ಞಾನಸ್ಯಾಪಿ ಕಲ್ಯಭಿಮನ್ಯಮಾನತಯಾ ಕಲೇರಪರರೂಪತ್ವಾತ್ ಹನನಮಪಿ ದೇಹಹನನೇ ಜೀವಹನನವತ್ ಕಲೇರೇವ ಹನನಮಿತಿ ಭಾವೇನೋಕ್ತಂ ಸಚ್ಛಾಸ್ತ್ರಶಸ್ತ್ರೇಣ ಕಲಿಂ ನಿಹತ್ಯೇತಿ । ಅತ ಏವ ಅಜ್ಞಾನಮಿಥ್ಯಾಮತಿರೂಪತ ಇತಿ ಪ್ರಾಗುಕ್ತಮ್ ॥ – (ವಾ.)

೨. ಮಹಾಜನಸ್ಯ ಭಕ್ತಜನಸ್ಯ । – (ಜ.)

೩. ಕಲ್ಯಿರೂಪೇಣ ಕಲಿಹನನಂ ಭಗವತಃ ಪ್ರಸಿದ್ಧಮಿತಿ ಸೂಚನಾಯ ಹಿಶಬ್ದಃ ॥ – (ವಾ.)

ವಿ: ೧) ಕಲ್ಕಿರೂಪದಿಂದ ಕಲಿಯ ಹನನವನ್ನು ಶ್ರೀಹರಿ ಮಾಡುವುದು ಪ್ರಸಿದ್ಧವಾದ ವಿಚಾರ. ಕಲ್ಕಿಶಬ್ದದ [೧]ಅರ್ಥವೂ ಅದೇ ಆಗಿದೆ. ಅದನ್ನು 'ಹಿ' ಶಬ್ದದಿಂದ ಸೂಚಿಸಿರುವರು.

೨) ಮೂರನೆಯ ಶ್ಲೋಕದಿಂದ ಪ್ರಾರಂಭವಾದ ದೇವತೆಗಳ ಪ್ರಾರ್ಥನೆ ಇಲ್ಲಿಗೆ ಮುಕ್ತಾಯವಾಗಿದೆ.

ಇತೀರಿತಸ್ತೈರಭಯಂ ಪ್ರದಾಯ
ಸುರೇಶ್ವರಾಣಾಂ ಪರಮೋಽಪ್ರಮೇಯಃ ।
ಪ್ರಾದುರ್ಬಭೂವಾಮೃತಭೂರಿಲಾಯಾಂ[೨]
ವಿಶುದ್ಧವಿಜ್ಞಾನಘನಸ್ವರೂಪಃ ॥ ೪೧ ॥

ಅ: ದೇವತೆಗಳಿಂದ ಹೀಗೆ ಪ್ರಾರ್ಥಿತನಾದ ಅಮೃತಕ್ಕೆ ನೆಲೆಯೂ, ಪರಿಶುದ್ಧವಿಜ್ಞಾನದ ಘನಸ್ವರೂಪನೂ, ಅಪ್ರಮೇಯನೂ, ಸರ್ವೋತ್ತಮನೂ ಆದ ಶ್ರೀಹರಿಯು ಆ ಸುರಶ್ರೇಷ್ಠರಿಗೆ ಅಭಯ ನೀಡಿ, ಭೂಮಿಯಲ್ಲಿ ಪ್ರಾದುರ್ಭವಿಸಿದ.

ವಿ: ೧) ವ್ಯಾಸರೂಪದಿಂದ ಅವತರಿಸಿದ್ದು ಸಾಕ್ಷಾತ್ ಭಗವಂತನೇ ಎಂಬುದನ್ನು ಬಗೆಬಗೆಯ ವಿಶೇಷಣಗಳಿಂದ ಸ್ಪಷ್ಟಪಡಿಸಿರುವರು.

೨) ಶ್ರೀಹರಿಯದು ಪ್ರಾದುರ್ಭಾವವೇ ಹೊರತು, ಇತರರಂತೆ ಪ್ರಾಕೃತದೇಹದ ಹುಟ್ಟಲ್ಲ. ಅವನು ಇತರರಂತೆ ಹುಟ್ಟುವುದಾದಲ್ಲಿ ಅವನೊಂದಿಗೆ ಅವನ ಉದರದೊಳಗಿನ ಮುಕ್ತರೂ ಹುಟ್ಟಬೇಕಾಗುತ್ತಿತ್ತು ಎಂಬುದನ್ನು ಸೂಚಿಸಲು [೨]'ಅಮೃತಭೂಃ' ಎಂದು ಕರೆದಿರುವರು.

೩) 'ಅಮೃತಭೂಃ' ಎಂದರೆ ಮುಕ್ತರಿಗೆ ಆಶ್ರಯ ಎಂದರ್ಥ.

---

೧. ಕಲೇಸ್ತು ಕಾತ್ಕಾರತ ಏವ ಕಲ್ಕೀ ..... । –ಮ.ಭಾ.ತಾ.ನಿ.(೩೨/೧೬೪)

ಕಲಿಮಲಹುತವಹ ಸುಭಗ ಮಹೋತ್ಸವ ಶರಣದ ಕಲ್ಕೀಶ ಹೇ ಭವ ಮಮ ಶರಣಮ್ ॥
–ದ್ವಾದಶಸ್ತೋತ್ರಮ್ (೯/೧೪)

೨. ಭಗವತಃ ಸಾಕ್ಷಾಜ್ಜನ್ಮಾಭಾವಸೂಚನಾಯ ಅಮೃತಭೂಃ ಪ್ರಾದುರ್ಭಭೂವ ಚೇತ್ಯುಕ್ತಮ್ । **ಅಮೃತಭೂಃ** ಮುಕ್ತಾಶ್ರಯ ಇತ್ಯರ್ಥಃ । ಭಗವತೋ ಜನನೇ ತದುದರಗತಾನಾಂ ಮುಕ್ತಾನಾಮಪಿ ಪುನರ್ಭವಃ ಸ್ಯಾದಿತಿ ಭಾವಃ॥
–(ವಾ.)

ಪರಾಶರಮುನಿಯ ಹಿನ್ನೆಲೆ

ವಸಿಷ್ಠನಾಮಾ ಕಮಲೋದ್ಭವಾತ್ಮಜಃ
ಸುತೋಽಸ್ಯ ಶಕ್ತಿಸ್ತನಯಃ ಪರಾಶರಃ ।
ತಸ್ಯೋತ್ತಮಂ ಸೋಽಪಿ ತಪೋಽಚರದ್ಧರಿಃ
ಸುತೋ ಮಮ ಸ್ಯಾದಿತಿ ತದ್ಧರಿರ್ದದೌ ॥ ೪೨ ॥

ಅ: ವಸಿಷ್ಠ ಎಂಬವರು ಕಮಲಸಂಭವರಾದ ಬ್ರಹ್ಮದೇವರ ಮಗ; ಶಕ್ತಿ ಅವರ ಪುತ್ರ; ಪರಾಶರ ಶಕ್ತಿಯ ಮಗ. ಪರಾಶರಮುನಿಯು ಹರಿಯು ತನಗೆ ಮಗನಾಗಬೇಕೆಂದು ಉತ್ತಮವಾದ ತಪಸ್ಸನ್ನು ಆಚರಿಸಿದ. ಆ ವರವನ್ನು ಹರಿ ಅವನಿಗೆ ನೀಡಿದ.

ವಿ: ವಸಿಷ್ಠರು ಬ್ರಹ್ಮದೇವರ ಮಾನಸಪುತ್ರರಲ್ಲೊಬ್ಬರು. ಕರ್ದಮಪುತ್ರಿ ಅರುಂಧತಿ ಇವರ ಪತ್ನಿ. ಇವರ ನೂರು ಜನ ಪುತ್ರರಲ್ಲಿ ಶಕ್ತಿ ಹಿರಿಯ. ವಿಶ್ವಾಮಿತ್ರರ ವಿರೋಧದಿಂದಾಗಿ ಇವರ ನೂರು ಮಕ್ಕಳೂ ಅಳಿದರು. ಶಕ್ತಿಮುನಿ ಹತನಾದಾಗ, ಅವನ ಪತ್ನಿ ಅದೃಶ್ಯಂತಿಯು ಗರ್ಭಿಣಿ. ಅವಳು ಹೆತ್ತ ಮಗುವೇ ಪರಾಶರಮುನಿ :

ಪರಾಸುಃ ಸ ಯತಸ್ತೇನ ವಸಿಷ್ಠಃ ಸ್ಥಾಪಿತೋ ಮುನಿಃ ।
ಗಭೇಸ್ಥೇನ ತತೋ ಲೋಕೇ ಪರಾಶರ ಇತಿ ಸ್ಮೃತಃ ॥ – ಭಾರತ(ಆದಿ.೧೭೭/೩)

ಸತ್ಯವತಿಯ ಪೂರ್ವಾಪರ

ಉವಾಚ ಚೈನಂ ಭಗವಾನ್ ಸುತೋಷಿತೋ
ವಸೋರ್ಮದೀಯಸ್ಯ ಸುತಾಽಸ್ತಿ ಶೋಭನಾ ।
ವನೇ ಮೃಗಾರ್ಥಂ ಚರತೋಽಸ್ಯ ವೀರ್ಯಂ
ಪಪಾತ ಭಾರ್ಯಾಂ ಮನಸಾ ಗತಸ್ಯ ॥ ೪೩ ॥

ಅ: ಅವರಿಂದ ತೋಷಿತನಾದ ಭಗವಂತ ಅವರನ್ನು ಕುರಿತು ಹೇಳಿದ : ''ನನ್ನ ಭಕ್ತನಾದ ವಸುರಾಜನಿಗೆ ಒಬ್ಬ ಒಳ್ಳೆಯ ಮಗಳಿರುವಳು. ಅವನೊಮ್ಮೆ ವನದಲ್ಲಿ ಬೇಟೆಗೆಂದು ಸಂಚರಿಸುತ್ತಿದ್ದಾಗ ಮನಸ್ಸಿನಿಂದಲೇ ಮಡದಿಯ ಸಂಗ ಮಾಡಿದಾಗ ಅವನ ರೇತಸ್ಸು ಸ್ಖಲನಹೊಂದಿತು.

ವಿ: ೧) ಈ ವಸುಚಕ್ರವರ್ತಿಗೆ ಉಪರಿಚರ ಎಂದು ಹೆಸರು; ಚೇದಿದೇಶದ ದೊರೆ; ಅವನು ಪುರುವಂಶದವನು. ಅವನು ರಾಜ್ಯವಾಳುತ್ತಿದ್ದ ಸ್ಥಳ ಪರಶುರಾಮಕ್ಷೇತ್ರದ [೧]ಬಸುರೂರು ಎಂದು

ಲಕ್ಷಾಲಂಕಾರದಲ್ಲಿದೆ. ಅವನ ಧರ್ಮನಿಷ್ಠೆಗೆ ಮೆಚ್ಚಿ ಇಂದ್ರದೇವರು ಒಂದು ಶ್ರೇಷ್ಠವಿಮಾನವನ್ನು, ವೈಜಯಂತೀಮಾಲೆಯನ್ನೂ ಅನುಗ್ರಹಿಸಿದ್ದರು (ಭಾರತ ೧/೬೩/೧೩–೧೫). ವಿಮಾನದಲ್ಲಿ ಕುಳಿತು ಅವನು ಗಗನದಲ್ಲಿ ಎಲ್ಲರಿಗಿಂತ ಮೇಲೆ ಸಂಚರಿಸುತ್ತಿದ್ದುದರಿಂದ ಅವನಿಗೆ 'ಉಪರಿಚರ' ಎಂಬ ಹೆಸರು ಅನ್ವರ್ಥಕವಾಗಿತ್ತು. ಶುಕ್ತಿಮತಿನದಿಯ ಪುತ್ರಿ ಗಿರಿಕೆ ಈತನ ಪತ್ನಿ. ಇವನು ಹಿಂದಿನ ಜನ್ಮದಲ್ಲಿ ಆಯುಪುತ್ರನಾದ ಅಮಾವಸು. ಆಗೊಮ್ಮೆ ಅವನ ಪತ್ನಿಯು ಋತುಸ್ನಾತಳಾಗಿದ್ದ ದಿವಸ; ಅವನಿಗೆ ಅವಳಲ್ಲಿ ಗರ್ಭಾಧಾನ ಮಾಡುವ ಸಂಕಲ್ಪ. ಆದರೆ ಆ ವೇಳೆಗೆ ಕ್ರೂರಮೃಗಗಳ ಹಾವಳಿಯಿಂದ ತತ್ತರಿಸಿದ್ದ ಜನಗಳ ಪ್ರಾರ್ಥನೆಯನ್ನು ಮನ್ನಿಸಿ, ಪಿತೃದೇವತೆಗಳು ಅವನಿಗೆ ಆ ಮೃಗಗಳನ್ನು ಬೇಟೆಯಾಡಿ ನಿಗ್ರಹಿಸಲು ಆದೇಶಿಸಿದರು. ಅವರ ಆದೇಶವನ್ನು ಮನ್ನಿಸಿ, ಅವನು ಬೇಟೆಗೆ ತೆರಳಿದನು. ಬೇಟೆಯಾಡುವಾಗಲೂ ಅವನಿಗೆ ಪತ್ನಿ ಗಿರಿಕೆಯ ಬಗ್ಗೆಯೇ ಯೋಚನೆ. ಅದರಿಂದಾಗಿಯೇ ಅವನಿಗೆ ವೀರ್ಯಪತನವಾಯಿತು ಎಂದರ್ಥ.

ತಚ್ಛ್ಯೇನಹಸ್ತೇ ಪ್ರದದೌ ಸ ತಸ್ಯೈ
ದಾತುಂ ತದನ್ಯೇನ ತು ಯುಧ್ಯತೋಽಪತತ್ ।
ಜಗ್ರಾಸ ತನ್ಮತ್ಸ್ಯವಧೂರ್ಯಮಸ್ವಸು-
ರ್ಜಲಸ್ಥಮೇನಾಂ ಜಗೃಹುಃ ಸ್ಮ ದಾಶಾಃ ॥ ೪೪ ॥

ಅ: ಆ ರೇತಸ್ಸನ್ನು ಅವನು ತನ್ನ ಪತ್ನಿಗೆ ತಲುಪಿಸಲೆಂದು ಒಂದು ಗಿಡುಗದ ಕೈಗಿತ್ತ. ಅದು ಇನ್ನೊಂದು ಗಿಡುಗದೊಂದಿಗೆ ಹೋರಾಡುವಾಗ ಆ ರೇತಸ್ಸು ಯಮುನೆಯ ಜಲದಲ್ಲಿ ಬಿದ್ದಿತು. ಅದನ್ನು ಆ ನೀರಿನಲ್ಲಿದ್ದ ಒಂದು ಹೆಣ್ಣುಮೀನು ನುಂಗಿತು. ಆ ಮೀನನ್ನು ಬೆಸ್ತರು ಹಿಡಿದರು.

---

೧. ಗೋರೂಪಾಯಾ ಉತ್ತರಾಭಿಮುಖ್ಯಾಃ ಪರಶುರಾಮಭೂಮೇಃ ಗೋಕರ್ಣಾಖ್ಯ ಪ್ರದೇಶಃ ಕರ್ಣಸ್ಥಾನೀಯಃ। ವಸುಪುರಾಖ್ಯನಗರೀಂ ಪರಿತೋ ವಿದ್ಯಮಾನೋ ಯೋ ದೇಶಃ ಸ ಊಧಃಸ್ಥಾನೀಯಃ ಕ್ಷೀರಸ್ಥಾನೀಯೈಃ ಬಹುಸಸ್ಯಫಲಾದಿಭಃ ಪರಿಪೂರ್ಣ ಇತಿ ಭಾವಃ । ವಸುಚಕ್ರವರ್ತಿನಾ ರಕ್ಷಿತತ್ವಾದ್ಧಿ ವಸುಪುರಮ್। ಬಸುರೂರು ಇತ್ಯಪಭ್ರಂಶ ಭಾಷಾ । ವಸ ವೇದಿಷು ಚೇದಿಪೇತ್ಯತ್ರ ವೇದಿಷು ಸಮುದ್ರಸಹ್ಯಾಚಲ ಯೋರ್ಮಧ್ಯೇ ದೀರ್ಘಾಕಾರೇಣ ತಿರ್ಯಗ್ ವರ್ತಮಾನತ್ವಾತ್ ವೇದಿಸ್ಥಾನೀಯೇಷು ಬಹುಯಜ್ಞವೇದಿ ಭರಿತತ್ವಾದ್ವಾ ವೇದಿಷು ದೇಶೇಷು । ವೇದಿಷ್ವಿತ್ಯುಕ್ತ್ಯಾ ಯಕ್ಷವೇದಿ ಸಂಪನ್ನಾನ್ ಬ್ರಾಹ್ಮಣಾನ್ ಆಹೃತ್ಯಾದಾನೀಯ ತತ್ರ ಸ್ಥಾಪಯೇತಿ ಸೂಚಯತಿ। – ಲಕ್ಷಾಲಂಕಾರ

೨. ಅನ್ಯೇನ= ಶ್ಯೇನೇನ ತು= ವಿಶೇಷೇಣ ಯುಧ್ಯತಃ= ತುಂಡಮಾತ್ರಯುದ್ಧಂ ವಿನಾ ಹಸ್ತಪಕ್ಷಾಭ್ಯಾಂ ಸಹ ಯುಧ್ಯತ ಇತ್ಯರ್ಥಃ । ಯಮಸ್ವಸುಃ= ಯಮುನಾಯಾಃ । ಜಲಸ್ಥಂ ತದ್ವೀರ್ಯಂ ಮತ್ಸ್ಯವಧೂರ್ಜಗ್ರಾಸೇತಿ ಸಂಬಂಧಃ । ಅನೇನ ಶ್ಯೇನಶ್ಯೇನಯೋರ್ಯುದ್ಧಮಪಿ ಯಮುನಾಜಲಸ್ಯೋಪರಿಸ್ಥಾಂಬರಪ್ರದೇಶ ಇತಿ ಸೂಚಿತಮ್॥ – (ವಾ.)

ವಿ: ೧) ಅದರಿಂದಾಗಿ ಸ್ಖಲನವಾದ ರೇತಸ್ಸನ್ನು ಎಲೆಯೊಂದರಲ್ಲಿ ಸಂಗ್ರಹಿಸಿ, ಅದನ್ನು ಗಿಡುಗವೊಂದರ ಕೈಗಿತ್ತು ಅದನ್ನು ತನ್ನ ಪತ್ನಿಗೆ ತಲುಪಿಸಲು ನೀಡಿದನು. ಅದು ಅದನ್ನು ಸ್ವೀಕರಿಸಿ, ಅವನ ಪಟ್ಟಣದತ್ತ ತೆರಳಿತು. ಮಾರ್ಗಮಧ್ಯದಲ್ಲಿ ಅದು ಯಮುನಾನದಿಯ ಮೇಲೆ ಹಾರುತ್ತಿದ್ದಾಗ ಮತ್ತೊಂದು ಗಿಡುಗ ಎದುರಾಗಿ, ಅವೆರಡರ ಮಧ್ಯೆ ಕದನವೇರ್ಪಟ್ಟಿತು. ಆಗ ಈ ಗಿಡುಗದ ಬಳಿಯಿದ್ದ ರೇತಸ್ಸು ಯಮುನೋದಕದಲ್ಲಿ ಬಿದ್ದಿತು. ಅದನ್ನು ಮೀನೊಂದು ಸ್ವೀಕರಿಸಿತು. ಆ ಮೀನು ಸಾಮಾನ್ಯವಾದುದಲ್ಲ. ಅದ್ರಿಕಾ ಎಂಬ ಅಪ್ಸರೆ ಬ್ರಹ್ಮಶಾಪದಿಂದಾಗಿ ಮೀನಾಗಿ ಜನಿಸಿ, ಯಮುನೆಯಲ್ಲಿ ವಾಸಿಸುತ್ತಿದ್ದಳು; ಅವಳು ಅಮಾವಸುವಿನ ಪತ್ನಿ. ಅವಳು ನುಂಗಿದ ರೇತಸ್ಸು ಅವಳ ಗರ್ಭದಲ್ಲಿ ಬೆಳೆಯತೊಡಗಿತು. ಮುಂದೊಮ್ಮೆ ಬೆಸ್ತರು ಬಲೆ ಬೀಸಿದಾಗ ಸಿಕ್ಕಿದ ಮೀನುಗಳಲ್ಲಿ ಇವಳೂ ಸೇರಿಕೊಂಡಿದ್ದಳು. ಇವಳು ಗರ್ಭಿಣಿ ಎಂದು ತಿಳಿದ ಬೆಸ್ತರು ಅವಳನ್ನು ಹಾಗೆಯೇ ಪೋಷಿಸಿದರು.

ತದ್ಗರ್ಭತೋಽಭೂನ್ಮಿಥುನಂ [೧]ಸ್ವರಾಜ್ಞೇ
ನ್ಯವೇದಯನ್ ಸೋಽಪಿ ವಸೋಃ ಸಮಾರ್ಪಯತ್।
ಪುತ್ರಂ ಸಮಾದಾಯ ಸುತಾಂ ಸ ತಸ್ಮೈ
ದದೌ ಸುತೋಽಭೂದಥ ಮತ್ಸ್ಯರಾಜಃ[೨] ॥ ೪೫ ॥

ಅ: ಅದರ ಗರ್ಭದಿಂದ ಅವಳಿ ಗಂಡು ಹೆಣ್ಣು ಮಕ್ಕಳು ಜನಿಸಿದರು. ಅವರನ್ನು ಬೆಸ್ತರು ತಮ್ಮ ರಾಜನಿಗೆ ಒಪ್ಪಿಸಿದರು. ಅವನು ಅವರನ್ನು ವಸುರಾಜನಿಗೆ ಒಪ್ಪಿಸಿದ. ಅವನು ಗಂಡುಮಗುವನ್ನು ತಾನಿರಿಸಿಕೊಂಡು, ಹೆಣ್ಣುಮಗುವನ್ನು ಅವನಿಗೇ ನೀಡಿದ. ಮುಂದೆ ಆ ಪುತ್ರನು ಮತ್ಸ್ಯರಾಜನೆನ್ನಿಸಿದ.

ವಿ: ನವಮಾಸ ತುಂಬಿದ ಮೇಲೆ ಆ ಹೆಣ್ಣು ಮೀನು ಹೆತ್ತಿದ್ದು ಎರಡು ಅವಳಿ ಗಂಡುಹೆಣ್ಣುಗಳನ್ನು. ಆಶ್ಚರ್ಯಚಕಿತರಾದ ಬೆಸ್ತರು ಅದನ್ನು ತಮ್ಮ ರಾಜನಾದ ದಾಶರಾಜನಿಗೆ ನೀಡಿದರು. ಅವನು ಅವುಗಳನ್ನು ಉಪರಿಚರ ರಾಜನಿಗೆ ಒಪ್ಪಿಸಿದ. ಅವುಗಳನ್ನು ತನ್ನ ಮಕ್ಕಳೆಂದು ಗುರುತಿಸಿದ ರಾಜ, ಅವನ ಪ್ರಾಮಾಣಿಕತೆಗೆ ಮೆಚ್ಚಿ, ಗಂಡು ಮಗುವನ್ನು ತಾನಿರಿಸಿಕೊಂಡು, ಹೆಣ್ಣು ಶಿಶುವನ್ನು ಅವನಿಗೇ ಕಾಣಿಕೆಯನ್ನಾಗಿ ನೀಡಿದ. ಅವನೇ ಮುಂದೆ ಮತ್ಸ್ಯರಾಜನೆನ್ನಿಸಿದ. ಅವಳಿ

---

೧. ತೇ ದಾಶಾಃ ಸ್ವರಾಜ್ಞೇ ದಾಶರಾಜಾಯ ನ್ಯವೇದಯನ್ನಿತಿ ಯೋಜನಾ । ರಾಜತ್ವಮುಪಚರಿತಮಿತಿ ಸೂಚನಾಯ ಸ್ವರಾಜ್ಞ ಇತಿ ಛಾಂದಸಪ್ರಯೋಗಃ । ಅಥ ತಸ್ಮಾತ್ಕಾರಣಾತ್ ಮತ್ಸ್ಯವಧೂದೇಹೋತ್ಪನ್ನತ್ವಾದಿತ್ಯರ್ಥಃ । ಮತ್ಸ್ಯರಾಜಃ = ಮತ್ಸ್ಯಸಂಬಂಧೀ ರಾಜಾ ಮತ್ಸ್ಯರಾಜ ಇತಿ ಮಧ್ಯಮಪದಲೋಪೀಸಮಾಸಃ ॥ – (ವಾ.)

೨. ಸ ಮತ್ಸ್ಯೋ ನಾಮ ರಾಜಾऽऽಸೀತ್ ಧಾರ್ಮಿಕಃ ಸತ್ಯಸಂಗರಃ ॥ – ಭಾರತ(೧/೬೩/೬೩)

ಮಕ್ಕಳಿಗೆ ಜನ್ಮ ನೀಡಿದ ಹೆಣ್ಣು ಮೀನಾಗಿದ್ದ ಅದ್ರಿಕೆ ತನ್ನ ಶಾಪವನ್ನು ಕಳೆದುಕೊಂಡು ಪುನಃ ಅಪ್ಸರೆಯಾಗಿ ತನ್ನ ಲೋಕವನ್ನು ಸೇರಿಕೊಂಡಳು.

ಕನ್ಯಾ[೧] ತು ಸಾ ದಾಶರಾಜಸ್ಯ ಸದ್ಮ-
ನ್ಯವರ್ಧತಾತೀವ ಸುರೂಪಯುಕ್ತಾ।
ನಾಮ್ನಾ ತು ಸಾ ಸತ್ಯವತೀತಿ ತಸ್ಯಾಂ
ತವಾತ್ಮಜೋಽಹಂ ಭವಿತಾಽಸ್ಮ್ಯಜೋಽಪಿ ॥ ೪೬ ॥

ಅ: ಆ ಕನ್ಯೆ ದಾಶರಾಜನ ಮನೆಯಲ್ಲಿ ಅತ್ಯಂತ ಸೌಂದರ್ಯವತಿಯಾಗಿ ಬೆಳೆದಿರುವಳು; ಸತ್ಯವತಿ ಎಂದು ಅವಳ ಹೆಸರು. ನಾನು ಹುಟ್ಟಿಲ್ಲದವನಾದರೂ, ಅವಳಲ್ಲಿ ನಿನ್ನ ಪುತ್ರನಾಗಿ ಜನಿಸುವೆನು''.

ವಿ: 'ತು'ಶಬ್ದದಿಂದ ಅವಳು ದಾಶಕನ್ಯೆಯಾಗಿ ಬೆಳೆಯದೆ, ರಾಜಕನ್ಯೆಯಾಗಿಯೇ ಬೆಳೆದಳು ಎಂಬ ವಿಶೇಷಾಂಶ ಸೂಚಿತ.

ಪರಾಶರ-ಸತ್ಯವತಿ ಸಂಗಮ

ಇತೀರಿತಶ್ಚಕ್ರಧರೇಣ ತಾಂ ಮುನಿ-
ರ್ಜಗಾಮ ಮಾರ್ತಾಂಡಸುತಾಂ ಸಮುದ್ರಗಾಮ್[೨]।
ಉತ್ತಾರಯಂತೀಮಥ[೩] ತತ್ರ ವಿಷ್ಣುಃ
ಪ್ರಾದುರ್ಬಭೂವಾಶು ವಿಶುದ್ಧಚಿದ್ಘನಃ ॥ ೪೭ ॥

---

೧. ತುಶಬ್ದೇನ ದಾಶಕನ್ಯಾ ನ ಭವತಿ ಕಿಂತು ರಾಜಕನ್ಯೇತಿ ವಿಶೇಷಂ ಸೂಚಯತಿ॥ – (ವಾ.)

೨. ಸಮುದ್ರಗಾಮಿತಿ ಗಂಗಾಸಂಗಮನಾನಂತರಂ ಪುನರ್ವಿಶಿಷ್ಯ ಸಮುದ್ರಂ ಯಾಂತೀಮಿತ್ಯರ್ಥಃ । ಅತ ಏವ ತಾತ್ಪರ್ಯಚಂದ್ರಿಕಾಯಾಮ್ । ಪ್ರಸಿದ್ಧಶ್ಚ ಲೋಕೇ ಸಂಗತಾನಾಂ ಕೃಷ್ಣಾದೀನಾಂ ಗಂಗಾದಿಸಹಸ್ರನದೀಜಲಾನಾಂ ಪುನಃ ಪ್ರತ್ಯೇಕಂ ಸಮುದ್ರಗಮನಾರ್ಥಂ ವಿಭಕ್ತಾನಾಂ ವಿಲಕ್ಷಣಪೂರ್ವರೂಪರಸಾದಿಮತ್ತಯಾ ಭೇದಮಿತಿ । ಉಕ್ತಂ ಚ ಗೀತಾಭಾಷ್ಯನರಹರಿತೀರ್ಥೀಯೇ – ಮಹಾನದ್ಯೋ ಹಿ ಪರಸ್ಪರಮೇಕೀ ಭೂಯ ಪುನರ್ವಿಯುಜ್ಯ ಸಮುದ್ರಂ ಗಚ್ಛಂತೀತಿ । – (ತಾ.)

೩. ಅಥಶಬ್ದೇನ ವಸಿಷ್ಠಯಾಜ್ಞವಲ್ಕ್ಯಾದಿಮುನೀನಾಂ ಸಂಸದಿ ವಿವಾಹಹೋಮೇ ಕೃತೇ ಸತಿ ಪಿತ್ರಾ ವಸು-ಚಕ್ರವರ್ತಿನಾ ಧಾರಾಪೂರ್ವಕದಾನಾನಂತರಮಿತಿ ಭಾರತೇ ಪ್ರಸಿದ್ಧಕಥಾಂ ಸ್ಮಾರಯತಿ । ಏವಂ ಚ ಸಮುದ್ರಗಾಂ ಮಾರ್ತಂಡಸುತಾಂ ಯಮುನಾಂ ಉತ್ತಾರಯಂತೀಂ ಕನ್ಯಾಂ ಅಥ ಜಗಾಮೇತಿ ಯೋಜನಾ ।

ಉತ್ತಾರಯಂತೀಮಥೇತಿ ಅಥಶಬ್ದೇನ ವಿಶಿಷ್ಟಯಾಜ್ಞವಲ್ಕ್ಯಾದಿಮುನೀನಾಂ ಸದಸಿ ಪಿತ್ರಾ ವಸುನಾ ಧಾರಾಪೂರ್ವಕಮಿತಿ ವಿವಕ್ಷಿತಮ್ । ಭಾರತೇ ತಥೋಕ್ತತ್ವಾದಿತಿ ಜ್ಞೇಯಮ್ । – (ತಾ.)

ಅ: ಚಕ್ರಧಾರಿಯಾದ ಶ್ರೀಹರಿಯು ಹೀಗೆ ತಿಳಿಸಲು, ಪರಾಶರಮುನಿಯು ಸಮುದ್ರ-ಮುಖಿಯಾದ ಯಮುನೆಯನ್ನು ದಾಟಿಸುತ್ತಿದ್ದ [೧]ಸತ್ಯವತಿಯ ಬಳಿಗೆ ತೆರಳಿದ. ಅವಳಲ್ಲಿ ವಿಶುದ್ಧಜ್ಞಾನಸ್ವರೂಪನಾದ ಶ್ರೀಹರಿ ಕೂಡಲೆ [೨]ಪ್ರಾದುರ್ಭವಿಸಿದ.

ವಿ: ೧) ಇಲ್ಲಿಯ 'ಅಥ' ಶಬ್ದಕ್ಕೆ ಪರಾಶರರು ವಿಧ್ಯುಕ್ತವಾಗಿ ಸತ್ಯವತಿಯನ್ನು ವಿವಾಹವಾದ ಅನಂತರ ಎಂಬ ಅರ್ಥವನ್ನು ಬರೆದು, ಶ್ರೀವಾದಿರಾಜರು ವ್ಯಾಸರು ಕಾನೀನರು ಎಂಬುದು ಸರಿಯಲ್ಲ ಎಂದು ಬರೆದಿರುವರು[೩].

೨) ಋಗ್ವೇದದಲ್ಲಿನ[೪] 'ಕನೀನ' ಎಂಬ ಪದಕ್ಕೆ ಕರ್ಮನಿರ್ಣಯದಲ್ಲಿ ಶ್ರೀಮದಾಚಾರ್ಯರು 'ಕಾನೀನೋ ಬಾದರಾಯಣಃ' ಎಂದು ವಿವರ ನೀಡಿರುವರು. ಯದುಪತ್ಯಾಚಾರ್ಯರು ತಮ್ಮ 'ಶ್ರೀವೇದವ್ಯಾಸಕರಾವಲಂಬನಸ್ತೋತ್ರ'ದಲ್ಲಿ 'ಕಾನೀನ' ಎಂದೇ ಶ್ರೀವ್ಯಾಸರನ್ನು ಕರೆದಿರುವರು (ಶ್ಲೋ.೩೫).

೩) ಮಹಾಭಾರತದಲ್ಲೂ ವ್ಯಾಸರು ಕಾನೀನರು ಎಂಬ ಉಕ್ತಿಗಳು ಉಂಟು:

ತಸ್ಯಾಂ ಪೂರ್ವಂ ಕಾನೀನೋ ಗರ್ಭಃ ಪರಾಶರಾದ್ದ್ವೈಪಾಯನೋऽಭವತ್ ।
– ಆದಿ.(೯೫/೪೯)

ಪಾರಾಶರ್ಯೋ ಮಹಾಯೋಗೀ ಸ ಬಭೂವ ಮಹಾನೃಷಿಃ ।
ಕನ್ಯಾ ಪುತ್ರೋ ಮಮ ಪುರಾ ದ್ವೈಪಾಯನ ಇತಿ ಶ್ರುತಃ ॥ –(ಆದಿ.೧೦೪/೧೪)

---

೧. ಶುಶ್ರೂಷಾರ್ಥಂ ಪಿತುರ್ನಾವಂ ವಾಹಯಂತೀಂ ಜಲೇ ಚ ತಾಮ್ ।
ತೀರ್ಥಯಾತ್ರಾಂ ಪರಿಕ್ರಾಮನ್ನಪಶ್ಯದ್ವೈ ಪರಾಶರಃ ॥
ಅತೀವರೂಪಸಂಪನ್ನಾಂ ಸಿದ್ಧಾನಾಮಪಿ ಕಾಂಕ್ಷಿತಾಮ್ । .... – ಭಾರತ (ಆದಿ. ೬೩/೬೯, ೭೦)

೨. ವಿಶ್ವಕರ್ಮಾ ದ್ವೀಪೇ ವಿತಾನ ಶೋಭತೇ ಪರ್ಯಂಕೇ ಚ ಪರ್ಣಶಾಲಾಯಾಂ ನಿರ್ಮಿತಾಯಾಂ ಸ್ಪೃತೇನಾಗತೇನಾರುಂಧತೀಸಹಿತೇನ ವಸಿಷ್ಠೇನ ತಾದೃಶೈಃ ಪಿತೃಭಿಶ್ಚ ತದಾಜ್ಞಪ್ತವಸುನಾ ಚ ಬ್ರಾಹ್ಮವಿವಾಹೇ ಕೃತೇ ಬಭೂವ ವ್ಯಾಸಃ । ತಸ್ಮೈ ಪುನಃ ಕನ್ಯಾತ್ವವರಂ ದದೌ ಪರಾಶರಃ । ಅತಃ ಶಂತನೋರ್ವಿವಾಹೇ ನ ದೋಷ ಇತಿ ಜ್ಞೇಯಮ್ ॥ – (ಶ್ರೀ.)

೩. ತಸ್ಮಾತ್ ಕಾನೀನೋ ವ್ಯಾಸ ಇತಿ ಯದವಿದುಷಾಂ ವಚನಂ ತದ್ಭಾರತಕಥಾಪರಿಜ್ಞಾನಶೂನ್ಯತ್ವನಿಮಿತ್ತಮ್। ವ್ಯಾಸಸ್ಯ ತು ಜನ್ಮ ಭಾರತೋಕ್ತರೀತ್ಯಾ ಪರಮಸುಶೋಭನಮೇವೇತಿ ಮಹಾಭಾರತತಾತ್ಪರ್ಯನಿರ್ಣಯಕೃತೋ ಭಾವಃ॥ –(ವಾ.)

೪. ಅತೀದು ಶಕ್ರ ಓಹತ ಇಂದ್ರೋ ವಿಶ್ವಾ ಅತಿ ದ್ವಿಷಃ ।
ಭಿನತ್ಕನೀನ ಓದನಂ ಪಚ್ಯಮಾನಂ ಪರೋ ಗಿರಾ ॥೮॥ – ಋಗ್ವೇದ (೮/೬೯/೧೪)

೪) ಆದರೆ ಸತ್ಯವತಿ ಪರಾಶರರೊಂದಿಗೆ ವಿವಾಹಿತಳಾದರೂ ಇನ್ನೂ ಕನ್ಯಾವಸ್ಥೆಯಲ್ಲೇ ಇದ್ದಾಗ ಅವಳಲ್ಲಿ ಅವತರಿಸಿದ್ದರಿಂದ ವ್ಯಾಸರು ಊಢಕಾನೀನರು ಎಂದು ಕೆಲವರ ವಾದ.

೫) ಆದರೆ [೧]ಮಹಾಭಾರತದಲ್ಲಿ ಸ್ಪಷ್ಟವಾಗಿ ಅವಳು ಪ್ರೌಢೆಯಾಗಿದ್ದ ವಿವರ ಬಂದಿರುವುದರಿಂದ, ಶ್ರೀವ್ಯಾಸರು ಅನೂಢಕಾನೀನರು ಎಂಬುದು ಮತ್ತೆ ಕೆಲವರ ವಾದ.

೬) ಅಲ್ಲದೆ ಒಮ್ಮೆ ಅವಳು ವಿವಾಹಿತಳಾಗಿದ್ದಳೆಂದಾದರೆ, [೨]ಪುನರ್ವಿವಾಹ ಅಶಕ್ಯ. ಅವಳನ್ನು ಶಂತನು ವಿವಾಹವಾಗುವ ವಿಚಾರ ಮುಂದೆ ಬಂದಿರುವುದರಿಂದ ಅವಳಿಗೆ ವಿವಾಹವಾಗಿರುವುದು ಶಕ್ಯವಿಲ್ಲ. ಆದ್ದರಿಂದ ವ್ಯಾಸರು ಕಾನೀನರೇ ಸರಿ. ವಾದಿರಾಜೀಯ ಪ್ರಕ್ಷಿಪ್ತ ಎಂದು ಕೆಲವರ ವಿಚಾರ.

೭) ಇಲ್ಲಿ 'ಆಶು' ಎನ್ನುವ ಮೂಲಕ ಶ್ರೀವೇದವ್ಯಾಸಾವತಾರ ಸದ್ಯೋಗರ್ಭ ಎಂಬ ವಿಶೇಷಾಂಶವನ್ನು ಸೂಚಿಸಿರುವರು :

ಪರಾಶರೇಣ ಸಂಯುಕ್ತಾ ಸದ್ಯೋಗರ್ಭಂ ಸುಷಾವ ಸಾ ।
ಜಜ್ಞೇ ಚ ಯಮುನಾದ್ವೀಪೇ ಪಾರಾಶರ್ಯಃ ಸ ವೀರ್ಯವಾನ್॥ –(ಆದಿ.೬೩/೮೪)

೮) ಮತ್ಸ್ಯಗಂಧಿಯಾಗಿದ್ದ ಸತ್ಯವತಿಗೆ ಯೋಜನಗಂಧಿಯಾಗುವಂತೆಯೂ, ಪುನಃ ಕನ್ಯೆ–ಯಾಗುವಂತೆಯೂ ಪರಾಶರಮುನಿ ವರ ನೀಡಿದರು ಎಂಬ ಮತ್ತೊಂದು ವಿವರವೂ ಗಮನಾರ್ಹ.

ಶ್ರೀವ್ಯಾಸಾವತಾರ

ವಿದೋಷವಿಜ್ಞಾನಸುಖೈಕರೂಪೋ೬-
ಪ್ಯಜೋ ಜನಾನ್ ಮೋಹಯಿತುಂ [೩]ಮೃಷೈವ ।
ಯೋಷಿತ್ಸು ಪುಂಸೋ ಹ್ಯಜನೀವ [೪]ದೃಶ್ಯತೇ
ನ ಜಾಯತೇ ಕ್ವಾಪಿ ಬಲಾದಿವಿಗ್ರಹಃ ॥ ೪೮ ॥

---

೧. ಸಾ ಕದಾಚಿದಹಂ ತತ್ರ ಗತಾ ಪ್ರಥಮಯೌವನಮ್ ।
ಅಥ ಧರ್ಮವಿದಾಂ ಶ್ರೇಷ್ಠಃ ಪರಮರ್ಷಿಃ ಪರಾಶರಃ ॥
ಆಜಗಾಮ ತರೀಂ ಧೀಮಾಂಸ್ತರಿಷ್ಯನ್ ಯಮುನಾಂ ನದೀಮ್। –ಭಾರತ (ಆದಿ. ೧೦೪/೭)

೨. 'ಸಕೃತ್ ಕನ್ಯಾ ಪ್ರದೀಯತೇ' – ಭಾರತ(ವನ. ೨೭೮/೨೫)

೩. ಮೃಷೈವ = ವೃಥೈವ । ಹ್ಯಜನೀವ ದೃಶ್ಯತ ಇತ್ಯತ್ರ ಹಿಶಬ್ದೇನ 'ನಿತ್ಯೋ ನಿತ್ಯಾನಾಮ್' ಇತ್ಯಾದಿಶ್ರುತಿಪ್ರಸಿದ್ಧಿಂ ಸೂಚಯತಿ। –(ವಾ.)

೪. ಬಲಾದಿವಿಗ್ರಹ ಇತ್ಯನೇನ ಪಿತೃದ್ವಾರಾ ಮಾತುರುದರಪ್ರವೇಶೇ೬ಪಿ ಯಥಾ ಶುಕ್ಲಶೋಣಿತಾದಿಮಲ-ಸಂಬಂಧೋ ನ ಭವತಿ ತಾದೃಶಂ ಸಾಮರ್ಥ್ಯಮಸ್ತೀತಿ ಸೂಚಯತಿ । ಅನ್ಯಥಾ ಚಿದಾದಿವಿಗ್ರಹ ಇತ್ಯವಕ್ಷ್ಯತ್॥–(ವಾ.)

ಅ: ನಿರ್ದೋಷನೂ, ಜ್ಞಾನಾನಂದಸ್ವರೂಪನೂ, ಜನ್ಮಾದಿರಹಿತನೂ ಆದ ಶ್ರೀಹರಿಯು ಅಸುರಜನರ ಮೋಹನಕ್ಕೋಸ್ಕರ ಸ್ತ್ರೀಯರಲ್ಲಿ ಪುರುಷನಿಂದ ಜನಿಸಿದಂತೆ, ಸುಮ್ಮನೆ ಕಾಣಿಸಿಕೊಳ್ಳುವನಷ್ಟೆ. ಬಲಾದಿಗುಣಗಳನ್ನೇ ಶರೀರವನ್ನಾಗಿ ಹೊಂದಿರುವ ಅವನು, ಎಲ್ಲೂ ಹುಟ್ಟುವವನಲ್ಲ.

ವಿ: ಭಗವಂತನದು ಸದಾ ಜ್ಞಾನಾನಂದಮಯವಾದ ಅಪ್ರಾಕೃತಶರೀರ. ಅವನಿಗೆಂದೂ ಶುಕ್ಲಶೋಣಿತಾದಿಸಂಬಂಧದ ಹುಟ್ಟು ಇಲ್ಲವೇ ಇಲ್ಲ. ಅದಕ್ಕೇ ಅವನು ನಿರ್ಗುಣ(ಸತ್ತ್ವಾದಿ-ಪ್ರಾಕೃತಗುಣರಹಿತ). ಅವನು ಲೋಕಮೋಹನಕ್ಕಾಗಿ ಮೊದಲು ತಂದೆಯನ್ನು, ಅನಂತರ ತಾಯಿಯನ್ನು ಪ್ರವೇಶಿಸಿದರೂ, ಅವರ ಸಂಬಂಧವಿಲ್ಲದೆ ಅವತರಿಸುವನು. ಅದು ಅವನ ವಿಶಿಷ್ಟಸಾಮರ್ಥ್ಯ. ಅದನ್ನು ತಿಳಿಯದ ಜನ ಅವನು ಪ್ರಾಕೃತದೇಹ ಹೊಂದಿ ಹುಟ್ಟಿದವನು ಎಂದು ತಪ್ಪಾಗಿ ತಿಳಿದು ಅನರ್ಥಕ್ಕೆ ಗುರಿಯಾಗುವರು.

ಯಥಾ ನೃಸಿಂಹಾಕೃತಿರಾವಿರಾಸೀತ್
ಸ್ತಂಭಾತ್ ತಥಾ ನಿತ್ಯತನುತ್ವತೋ ವಿಭುಃ ।
ಆವಿರ್ಭವೇದ್ಯೋಷಿತಿ ನೋ ಮಲೋತ್ಥ-
ಸ್ತಥಾऽಪಿ ಮೋಹಾಯ ನಿದರ್ಶಯೇತ್ ತಥಾ ॥ ೪೯ ॥

ಅ: ಹೇಗೆ ನೃಸಿಂಹರೂಪವು ಸ್ತಂಭದಿಂದ ಪ್ರಾದುರ್ಭವಿಸಿತೋ, ಅಂತೆಯೇ ನಿತ್ಯಶರೀರ-ನಾದ ಶ್ರೀಹರಿಯು ಇತರರೂಪಗಳಲ್ಲೂ ಪ್ರಾದುರ್ಭವಿಸುವನು. ಅವನು ಎಂದೂ ಸ್ತ್ರೀಯಲ್ಲಿ ಶುಕ್ಲಶೋಣಿತಾದಿಮಲದಿಂದ ಹುಟ್ಟುವವನಲ್ಲ. ಆದರೂ ಅಯೋಗ್ಯಜನರನ್ನು ಮೋಹ-ಗೊಳಿಸಲೆಂದು ಹಾಗೆ ತೋರಿಸಿಕೊಳ್ಳುವನು.

ವಿ: ನರಸಿಂಹರೂಪವು ಪ್ರಾಕೃತವಲ್ಲ ಎಂಬುದು ಕಂಬದಿಂದ ಪ್ರಾದುರ್ಭಾವವಾದ ಪ್ರಸಂಗ-ದಿಂದ ಸಕಲರಿಗೂ ತಿಳಿದಿದೆ. ಶ್ರೀಹರಿಯ ಇತರ ಸಕಲರೂಪಗಳೂ ನರಸಿಂಹರೂಪದಂತೆಯೇ ಅಪ್ರಾಕೃತ. ಕೆಲವು ರೂಪಗಳಲ್ಲಿ ಹೀಗೆ ತಂದೆತಾಯಿಗಳಿಂದ ಹುಟ್ಟಿಬರುವಂತೆ ತೋರಿಸಿಕೊಳ್ಳು-ವುದು ಅಯೋಗ್ಯಜನರನ್ನು ಮೋಹಗೊಳಿಸುವುದಕ್ಕೆ ಮಾತ್ರ. ಈ ಮಾತು ಗೀತೆಯಲ್ಲೂ ಬಂದಿದೆ :

ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಮ್ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್॥ –(೯/೧೧)

[೧]ಸ್ತ್ರೀಪುಂಪ್ರಸಂಗಾತ್ ಪರತೋ ಯತೋ ಹರಿಃ
ಪ್ರಾದುರ್ಭವತ್ಯೇಷ ವಿಮೋಹಯನ್ ಜನಮ್
ಅತೋ ಮಲೋತ್ಥೋऽಯಮಿತಿ ಸ್ಮ ಮನ್ಯತೇ
ಜನೋऽಶುಭಃ ಪೂರ್ಣಗುಣೈಕವಿಗ್ರಹಮ್ ॥ ೫೦ ॥

ಅ: ಹರಿಯು ಕೆಲವೊಮ್ಮೆ ಅಜ್ಞಜನರನ್ನು ಮೋಹಗೊಳಿಸಲೆಂದು ಸ್ತ್ರೀಪುರುಷರ ಸಂಗಮದ ಅನಂತರ ಪ್ರಾದುರ್ಭವಿಸುವನು. ಅದರಿಂದಾಗಿ ದುಷ್ಪಜನರು [೨]ಪೂರ್ಣಗುಣೈಕ ಮೂರ್ತಿಯಾದ ಅವನನ್ನು ಶುಕ್ರಶೋಣಿತಾದಿಮಲದಿಂದ ಜನಿಸಿದವನು ಎಂದು ತಪ್ಪಾಗಿ ತಿಳಿಯುವರು.

---

೧. ''ಅನಿತ್ಯತ್ವಾತ್ತಮಾಸಾಂತವಿಧೇ''ರಿತಿ ವಚನಾತ್ ಸ್ತ್ರೀಪುಂಪ್ರಸಂಗಾದಿತಿ ಸಾಧುಃ ॥ – (ವಾ.)

೨. 'ಅಹೇಯಮನುಪಾದೇಯಂ ಯದ್ರೂಪಂ ನಿತ್ಯಮವ್ಯಯಮ್ ।
ಸ ಏವಾಪೇಕ್ಷ್ಯ ರೂಪಾಣಾಂ ವ್ಯಕ್ತಿಮೇವ ಜನಾರ್ದನಃ ।
ಆಗೃಹ್ಣದ್ವ್ಯಸೃಜಚ್ಚೇತಿ ಕೃಷ್ಣರಾಮಾದಿಕಾಂ ತನುಮ್ ।
ಪಶ್ಯತೇ ಭಗವಾನೀಶೋ ಮೂಢಬುದ್ಧಿವ್ಯಪೇಕ್ಷಯಾ ।
ತಮಸಾ ಹ್ಯುಪಗೂಢಸ್ಯ ಯತ್ತಮಃಪಾನಮೀಶಿತುಃ ।
ಏತತ್ಪುರುಷರೂಪಸ್ಯ ಗ್ರಹಣಂ ಸಮುದೀರ್ಯತೇ ।
ಕೃಷ್ಣರಾಮಾದಿರೂಪಾಣಾಂ ಲೋಕವ್ಯಕ್ತಿಮಪೇಕ್ಷಯಾ' ಇತಿ ವಾರಾಹೇ ॥ - ಭಾ.ತಾ.(೧/೩/೧)

'ನ ತಸ್ಯ ಪ್ರಾಕೃತಾ ಮೂರ್ತಿರ್ಮಾಂಸಮೇದೋऽಸ್ಥಿಸಂಭವಾ ।
ನ ಯೋಗಿತ್ವಾದೀಶ್ವರತ್ವಾತ್ತತ್ಕರೂಪೋऽಚ್ಯುತೋ ವಿಭುಃ' ಇತಿ ವಾರಾಹೇ । - ಭಾ.ತಾ.(೧/೩/೧)

'ಸರ್ವೇ ನಿತ್ಯಾಃ ಶಾಶ್ವತಾಶ್ಚ ದೇಹಾಸ್ತಸ್ಯ ಪರಾತ್ಮನಃ ।
ಹಾನೋಪಾದಾನರಹಿತಾ ನೈವ ಪ್ರಕೃತಿಜಾಃ ಕ್ವಚಿತ್ ।
ಪರಮಾನಂದಸಂದೋಹಾ ಜ್ಞಾನಮಾತ್ರಾಶ್ಚ ಸರ್ವಶಃ ।
ಸರ್ವೇ ಸರ್ವಗುಣೈಃ ಪೂರ್ಣಾಃ ಸರ್ವೇ ಭೇದವಿವರ್ಜಿತಾಃ ।
ಅನ್ಯೂನಾನಧಿಕಾಶ್ಚೈವ ಗುಣೈಃ ಸರ್ವೈಶ್ಚ ಸರ್ವತಃ ।
ದೇಹಿದೇಹಭಿದಾ ಚೈವ ನೇಶ್ವರೇ ವಿದ್ಯತೇ ಕ್ವಚಿತ್ ।
ತತ್ತ್ವೀಕಾರಾದಿಶಬ್ದಸ್ತು ಹಸ್ತ್ವೀಕಾರವತ್ ಸ್ಮೃತಃ ।
ವೈಲಕ್ಷಣ್ಯಾನ್ನ ವಾ ತತ್ರ ಜ್ಞಾನಮಾತ್ರಾರ್ಥಮೀರಿತಮ್ ।
ಕೇವಲೈಶ್ವರ್ಯಸಂಯೋಗಾದೀಶ್ವರಃ ಪ್ರಕೃತೇಃ ಪರಃ ।
ಜಾತೋ ಗತಸ್ತ್ವಿದಂ ರೂಪಂ ತದಿತ್ಯಾದಿ ವ್ಯವಕ್ಷ್ಯತೇ' ಇತಿ ಮಹಾವಾರಾಹೇ । - ಭಾ.ತಾ. (೧/೩/೧)

ಶ್ರೀವೇದವ್ಯಾಸರ ವರ್ಣನೆ

ದ್ವೀಪೇ ಭಗಿನ್ಯಾಸ್ತು ಯಮಸ್ಯ ವಿಶ್ವಕೃತ್
ಪ್ರಕಾಶತೇ ಜ್ಞಾನಮರೀಚಿಮಂಡಲಃ ।
ಪ್ರಭಾಸಯನ್ಖಂಡಬಹಿಸ್ತಥಾಽಂತಃ
ಸಹಸ್ರಲಕ್ಷಾಮಿತಭಾನುದೀಧಿತಿಃ[೧] ॥ ೫೧ ॥

ಅ: ಯಮನ ಸಹೋದರಿಯಾದ ಯಮುನೆಯ ದ್ವೀಪದಲ್ಲಿ ವಿಶ್ವಕರ್ತನಾದ ಶ್ರೀಹರಿಯು ಜ್ಞಾನಕಿರಣಮಾಲಿಯಾಗಿ ಕಂಗೊಳಿಸಿದ. ಬ್ರಹ್ಮಾಂಡದ ಒಳಹೊರಗನ್ನು ಬೆಳಗುತ್ತಾ ಸಾವಿರಲಕ್ಷಅನಂತಸೂರ್ಯರ ಪ್ರಕಾಶ ಉಳ್ಳವನಾಗಿ ಶೋಭಿಸಿದ.

ಏ: ವೇದವ್ಯಾಸರೂಪವು ಬ್ರಹ್ಮಾಂಡದ ಒಳಹೊರಗನ್ನೂ ಬೆಳಗುವ ಅಪಾರಕಾಂತಿಯ ಸಾಕ್ಷಾದ್ರೂಪ. ಅದು ಸಾಮಾನ್ಯರಿಗೆ ಸಾವಿರಸೂರ್ಯರ ಕಾಂತಿ ಉಳ್ಳಂತೆ, ಮಧ್ಯಮರಿಗೆ ಲಕ್ಷಸೂರ್ಯಕಾಂತಿ ಉಳ್ಳಂತೆ, ಉತ್ತಮರಿಗೆ ಅನಂತಸೂರ್ಯಕಾಂತಿ ಉಳ್ಳಂತೆ ಗೋಚರಿಸಿತು*. ವಾಸ್ತವವಾಗಿ ಅದರ ಕಾಂತಿ ಅನಂತಾನಂತಸೂರ್ಯರದು.

ಅಗಣ್ಯದಿವ್ಯೋರುಗುಣಾರ್ಣವಃ ಪ್ರಭುಃ
ಸಮಸ್ತವಿದ್ಯಾಧಿಪತಿರ್ಜಗದ್ಗುರುಃ ।
ಅನಂತಶಕ್ತಿರ್ಜಗದೀಶ್ವರೇಶ್ವರಃ
ಸಮಸ್ತದೋಷಾತಿವಿದೂರವಿಗ್ರಹಃ ॥ ೫೨ ॥

ಅ: ಶ್ರೀವ್ಯಾಸರು ಅನಂತ ಅಲೌಕಿಕಮಹಾಗುಣಗಳ ಸಮುದ್ರ, ಸಕಲಶಾಸ್ತ್ರಗಳಿಗೂ ಅಧಿಪತಿ, ಜಗತ್ತಿಗೆ ಗುರು, ಸರ್ವಸಮರ್ಥ, ಅನಂತಶಕ್ತಿಸಂಪನ್ನ, ಜಗದೀಶ್ವರರಿಗೂ ಈಶ್ವರ; ಸಕಲದೋಷಗಳಿಂದಲೂ ಸಂಪೂರ್ಣ ಹೊರತಾದ ಪರಿಪೂರ್ಣದೇಹ ಅವರದು.

---

೧. ಅಧಮಮಧ್ಯಮೋತ್ತಮಾಧಿಕಾರಿಣಾಂ ಕ್ರಮೇಣ ಸಹಸ್ರಲಕ್ಷಾಮಿತಸೂರ್ಯಸಮಾನದೀಧಿತಿದರ್ಶನ-ಯೋಗ್ಯತೇತಿ ಸೂಚನಾಯ ಸಹಸ್ರಲಕ್ಷಾಮಿತಸೂರ್ಯದೀಧಿತಿರಿತ್ಯುಕ್ತಮ್ ॥ – (ವಾ.)

ತತ್ತದಧಿಕಾರಿಣಾಂ ತಥಾ ದೃಶ್ಯತ ಇತಿ ಭಾವಃ । – (ವ.)

[೧]ಶುಭಮರತಕವರ್ಣೋ ರಕ್ತಪಾದಾಬ್ಜನೇತ್ರಾ-
ಧರಕರನಖರಸನಾಗ್ರಶ್ಚಕ್ರಶಂಖಾಬ್ಜರೇಖಃ ।
ರವಿಕರವರಗೌರಂ ಚರ್ಮ ಚೈಣಂ ವಸಾನ-
ಸ್ತಟಿದಮಲಜಟಾಸಂದೀಪ್ತಚೂಡಂ ದಧಾನಃ ॥ ೫೩ ॥

ಅ: ಅವರದು ಪರಿಶುದ್ಧ ಇಂದ್ರನೀಲಮಣಿಯ ಬಣ್ಣ; ಕೆಂಪಾದ ಪಾದಗಳು, ಕಮಲದಂತಹ ಕಣ್ಣುಗಳು, ಕೆಂಬಣ್ಣದ ತುಟಿ, ಅಂಗೈ, ಉಗುರು, ನಾಲಿಗೆಯ ತುದಿ ಅವರವು. ಅವರ ಅಂಗೈ ಅಂಗಾಲುಗಳಲ್ಲಿ ಚಕ್ರ, ಶಂಖ ಹಾಗೂ ಕಮಲದ ರೇಖೆಗಳು. ಅವರು ಸೂರ್ಯಕಿರಣದಂತೆ ಶುಭ್ರವಾದ ಜಿಂಕೆಯ ಚರ್ಮವನ್ನು ತೊಟ್ಟವರು; ಮಿಂಚಿನಂತಹ ನಿರ್ಮಲವಾದ ಜಟೆಯಿಂದ ಶೋಭಿತವಾದ ಶಿರಸ್ಸನ್ನು ಹೊಂದಿದವರು.

ವಿಸ್ತೀರ್ಣವಕ್ಷಾಃ ಕಮಲಾಯತಾಕ್ಷೋ
ಬೃಹದ್ಭುಜಃ[೨] ಕಂಬುಸಮಾನಕಂಠಃ ।
ಸಮಸ್ತವೇದಾನ್ ಮುಖತಃ ಸಮುದ್ಗಿರ-
ನ್ನನಂತಚಂದ್ರಾಧಿಕಕಾಂತಿಸನ್ಮುಖಃ ॥ ೫೪ ॥

ಅ: ಶ್ರೀವ್ಯಾಸರದು ವಿಶಾಲವಾದ ಎದೆ, ಕಮಲದಂತಹ ವಿಶಾಲವಾದ ಕಣ್ಣುಗಳು, ದೊಡ್ಡದಾದ ತೋಳುಗಳು, ಶಂಖದಂತಹ ಕಂಠ. ಅವರು ಸಮಸ್ತವೇದಗಳನ್ನೂ ಮುಖದಿಂದ ಉಲಿಯುವವರು, ಅನಂತಚಂದ್ರರಿಗಿಂತಲೂ ಮಿಗಿಲಾದ ಕಾಂತಿಯಿಂದ ಕೂಡಿದ ಶ್ರೇಷ್ಠ ಮುಖ ಅವರದು.

ವಿ: ರೇಖಾತ್ರಯಗಳಿಂದ ಕೂಡಿದ ಕಂಠವನ್ನು 'ಕಂಬುಸಮಾನಕಂಠ' ಎನ್ನುವರು.

ಪ್ರಬೋಧಮುದ್ಭಾಭಯದೋರ್ದ್ವಯಾನ್ವಿತೋ[೩]
ಯಜ್ಞೋಪವೀತಾಜಿನಮೇಖಲೋಲ್ಲಸನ್ ।
ದೃಶಾ ಮಹಾಜ್ಞಾನಭುಜಂಗದಷ್ಟ-
ಮುಜ್ಜೀವಯಾನೋ ಜಗದತ್ಯರೋಚತ ॥ ೫೫ ॥

---

೧. "ನವಾ ಏಕೇನ ವಾಽಕ್ಷರೇಣ ಛಂದಾಂಸಿ ವಿಯಂತಿ ನ ದ್ವಾಭ್ಯಾಮ್" ಇತಿ ವಚನಾತ್ ಶುಭಮರಕತೇತಿ ಶ್ಲೋಕಸ್ಯ ದ್ವಿತೀಯಪಾದೇ ವರ್ಣದ್ವಯಾಧಿಕ್ಯಂ ಛಂದಸ್ಸಮಾನತ್ವದ್ಯೋತಕತ್ವಾದ್ ಗುಣ ಏವ ॥ – (ವಾ.)

೨. ಕಂಬುಸಮಾನೇತಿ 'ರೇಖಾತ್ರಯಾಂಕಿತಾದ್ಗ್ರೀವಾ ಕಂಬುಗ್ರೀವೇತಿ ಕಥ್ಯತೇ' ಇತಿ । – (ಮ.)

ಅ: ಶ್ರೀವೇದವ್ಯಾಸರು ಜ್ಞಾನಮುದ್ರೆ, ಅಭಯಮುದ್ರೆಗಳ ಎರಡು ಕೈಗಳಿಂದ ಕೂಡಿದವರು. ಯಜ್ಞೋಪವೀತ, ಕೃಷ್ಣಾಜಿನ ಮತ್ತು ಮೇಖಲಗಳಿಂದ ಹೊಳೆಯುವವರು. ಮಹಾಅಜ್ಞಾನವೆಂಬ ಹಾವು ಕಚ್ಚಿದ ಜಗತ್ತನ್ನು ತನ್ನ ನೋಟದಿಂದಲೇ ಮರಳಿ ಬದುಕಿಸುತ್ತಾ ಬಹಳವಾಗಿ ಶೋಭಿಸಿದರು.

ವಿ: ಈ ಶ್ಲೋಕಗಳಲ್ಲಿ ವೇದವ್ಯಾಸರ ವರ್ಣನೆ ಅದ್ಭುತವಾಗಿ ಮೂಡಿಬಂದಿದೆ. ಇಲ್ಲಿಯ ಒಂದೊಂದು ಲಕ್ಷಣವೂ ಅವರು ಸಕಲಸಲ್ಲಕ್ಷಣೋಪೇತಶರೀರನಾದ ಭಗವಂತ ಎಂದು ಸಾರುವುದು. ದ್ವಾದಶಸ್ತೋತ್ರದ ಮೊದಲ ಅಧ್ಯಾಯದಲ್ಲಿ ವರ್ಣಿತವಾದ ಪಾದ, ಎದೆ, ತೋಳು–ಗಳು, ಕಂಠ, ಮುಖ ಮೊದಲಾದವುಗಳ ವರ್ಣನೆ ಇಲ್ಲಿ ಪಡಿಮೂಡಿದೆ. ದೇಹಲಕ್ಷಣದಿಂದಲೇ ತಾವು ಭಗವಂತನೆಂದು ಸ್ಫುಟಪಡಿಸುವ ಶ್ರೀವೇದವ್ಯಾಸರನ್ನು 'ಕಶ್ಚನ ಋಷಿ' ಎಂದು ತಪ್ಪಾಗಿ ತಿಳಿದವರೇ ಹೆಚ್ಚು. ಶಂಕರಭಾಷ್ಯದಲ್ಲಂತೂ ಇವರು [೫]ಅಪಾಂತರತಮ ಎಂಬ ಋಷಿಯ ಅವತಾರ ಎಂದೇ ಕರೆಯಲಾಗಿದೆ. ಶ್ರೀಮದಾಚಾರ್ಯರು ಅಂತಹ ವಾದಗಳನ್ನು ನಿರಾಕರಿಸಿ, ಶ್ರೀವೇದ–ವ್ಯಾಸರನ್ನು ಸಾಕ್ಷಾತ್ ನಾರಾಯಣ ಎಂದು ಪ್ರತಿಪಾದಿಸಿರುವರು.

ವೇದವ್ಯಾಸರ ಉಪನಯನ ಹಾಗೂ ಅವರಿಂದ ವರಪ್ರದಾನ

ಸ ಲೋಕಧರ್ಮಾಭಿರಿರಕ್ಷಯಾ ಪಿತು-
ರ್ದ್ವಿಜತ್ವಮಾಪ್ಯಾಶು[೬] ಪಿತುರ್ದದೌ ನಿಜಮ್ ।
ಜ್ಞಾನಂ ತಯೋಃ ಸಂಸ್ಮೃತಿಮಾತ್ರತಃ ಸದಾ
ಪ್ರತ್ಯಕ್ಷಭಾವಂ ವರಮಾತ್ಮನೋ ದದೌ ॥ ೫೬ ॥

ಅ: ಲೋಕನಿಯಮವನ್ನು ಪಾಲಿಸುವ ಬಯಕೆಯಿಂದ ಶ್ರೀವೇದವ್ಯಾಸರು ಕೂಡಲೆ ಉಪನಯನಸಂಸ್ಕಾರವನ್ನು ಹೊಂದಿ, ತಂದೆಗೆ ತನ್ನ ಜ್ಞಾನವನ್ನು ನೀಡಿದರು. ಅವರಿಬ್ಬರಿಗೂ ಸ್ಮರಣೆಮಾತ್ರದಿಂದಲೇ ತಾನು ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳುವ ವರವನ್ನಿತ್ತರು.

---

೩. ಅನ್ವಿತಃ ಇತಿ ವಾ ಪಾಠಃ । – (ಜ.)

೪. ಅಜಿನಂ ಉಪವೀತೇನ ಸಹ ಧ್ರಿಯಮಾಣಂ ಕೃಷ್ಣಾಜಿನಮ್ ॥ – (ವಾ.)

೫. ತಥಾ ಹ್ಯಪಾಂತರತಮಾ ನಾಮ ವೇದಾಚಾರ್ಯಃ ಪುರಾಣರ್ಷಿಃ ವಿಷ್ಣುನಿಯೋಗಾತ್ ಕಲಿದ್ವಾಪರಯೋಃ ಸಂಧೌ ಕೃಷ್ಣದ್ವೈಪಾಯನಃ ಸಂಬಭೂವೇತಿ ಸ್ಮರಂತಿ । – ಶಂಕರಭಾಷ್ಯ (೩/೩/೩೨)

೬. ಆಶು = ಜನನಾಂತರಂ ದಿನಸಪ್ತಕಾತ್ಪಾಗೇವೇತ್ಯರ್ಥಃ । ತಯೋಃ ಸಂಸ್ಮೃತಿಮಾತ್ರತ ಇತ್ಯತ್ರ ತಯೋಃ= ಮಾತಾಪಿತ್ರೋಃ ಆತ್ಮನಃ ಸ್ಮೃತಿಮಾತ್ರತಃ ಪ್ರತ್ಯಕ್ಷಭಾವಂ= ಪ್ರತ್ಯಕ್ಷತ್ವಂ ವರಂ ದದೌ । ಯದಾ ಮಮ ಸ್ಮರಣಂ ಕ್ರಿಯತೇ ತದಾ ಯುವಯೋಃ ಪ್ರತ್ಯಕ್ಷೋ ಭವಿಷ್ಯಾಮೀತಿ ಮಾತರಂ ಪ್ರತಿ ಮಾತೃವಿಯೋಗಕಾಲೇ ಇದಾನೀಂ ವರಂ ದದಾವಿತಿ ವಿವೇಕಃ ॥ –(ವಾ.)

ವಿ: ತನ್ನನ್ನು ಒಲಿಸಿ, ಪುತ್ರತ್ವೇನ ಪಡೆದ ಅವರಿಬ್ಬರಿಗೆ ನೆನೆದಾಗ ದರ್ಶನ ನೀಡುವ ವಿಶಿಷ್ಟವರವನ್ನು ವೇದವ್ಯಾಸರು ಕರುಣಿಸಿದರು. ಶ್ರಮವಹಿಸಿ ವೇದವ್ಯಾಸರ ಗ್ರಂಥಗಳನ್ನು ಅಧ್ಯಯನ ಮಾಡುವವರಿಗೆ ನೆನೆದಾಗ ಅವು ಕಣ್ಮುಂದೆ ನಿಲ್ಲುವುದು ಒಂದು ರೀತಿಯಲ್ಲಿ ಅವರು ಕರುಣಿಸಿದ ವರವೇ ಆಗಿದೆ ಎಂಬುದನ್ನು ಗಮನಿಸಬೇಕು.

ವೇದೋದ್ಧಾರ, ಬ್ರಹ್ಮಸೂತ್ರಾದಿಶಾಸ್ತ್ರನಿರ್ಮಾಣ

ದ್ವೈಪಾಯನಃ[೧] ಸೋಽಥ ಜಗಾಮ ಮೇರುಂ
ಚತುರ್ಮುಖಾದ್ಯೈರನುಗಮ್ಯಮಾನಃ ।
ಉದ್ಧೃತ್ಯ ವೇದಾನಖಿಲಾನ್ ಸುರೇಭ್ಯೋ
ದದೌ ಮುನಿಭ್ಯಶ್ಚ ಯಥಾऽऽದಿಸೃಷ್ಟೌ ॥ ೫೭ ॥

ಅ: ಅನಂತರ ವೇದವ್ಯಾಸರು ಬ್ರಹ್ಮಾದಿದೇವತೆಗಳಿಂದ ಹಿಂಬಾಲಿಸಲ್ಪಟ್ಟವರಾಗಿ ಮೇರುಪರ್ವತಕ್ಕೆ ತೆರಳಿದರು. ಸಕಲವೇದಗಳನ್ನೂ ಉದ್ಧರಿಸಿ, ಆದಿಸೃಷ್ಟಿಯಲ್ಲಿದ್ದಂತೆಯೇ ಅವುಗಳನ್ನು ದೇವತೆಗಳಿಗೂ ಮುನಿಗಳಿಗೂ ನೀಡಿದರು.

ವಿ: ಶ್ರೀವೇದವ್ಯಾಸರು ಮಾಡಿದ ವೇದೋದ್ಧಾರ ಆದಿಸೃಷ್ಟಿಯಲ್ಲಿದ್ದಂತೆ ಸಮಗ್ರವೇದೋದ್ಧಾರ ಎಂಬುದು ಇಲ್ಲಿಯ ವಿಶೇಷ. ದ್ರೌಣಿ ಮೊದಲಾದ ಇತರ ಯುಗಗಳ ವ್ಯಾಸರು ಮಾಡುವ ವೇದೋದ್ಧಾರ ಈ ಬಗೆಯದಲ್ಲ. ಆದ್ದರಿಂದ ಕೃಷ್ಣದ್ವೈಪಾಯನರು ಸಾಕ್ಷಾತ್ ಶ್ರೀಹರಿ ಎಂದರ್ಥ.

ಸರ್ವಾಣಿ ಶಾಸ್ತ್ರಾಣಿ ತಥೈವ ಕೃತ್ವಾ
ವಿನಿರ್ಣಯಂ[೨] ಬ್ರಹ್ಮಸೂತ್ರಂ ಚಕಾರ ।
ತಚ್ಛುಶ್ರುವುರ್ಬ್ರಹ್ಮಗಿರೀಶಮುಖ್ಯಾಃ
ಸುರಾ ಮುನೀನಾಂ ಪ್ರವರಾಶ್ಚ ತಸ್ಮಾತ್ ॥ ೫೮ ॥

ಅ: ವೇದವ್ಯಾಸರು ಸಕಲಶಾಸ್ತ್ರಗಳನ್ನೂ ಯಥಾವತ್ತಾಗಿ ಮಾಡಿ, ಅವೆಲ್ಲವುಗಳ ಅರ್ಥನಿರ್ಣಯರೂಪವಾದ ಬ್ರಹ್ಮಸೂತ್ರವನ್ನು ರಚಿಸಿದರು. ಅದನ್ನು ಬ್ರಹ್ಮ, ಶಿವ ಮೊದಲಾದ ದೇವತೆಗಳೂ, ಮುನಿಶ್ರೇಷ್ಠರೂ ಅವರಿಂದಲೇ ಶ್ರವಣ ಮಾಡಿದರು.

---

೧. ನ್ಯಸ್ತೋ ದ್ವೀಪೇ ಸ ಯದ್ಬಾಲಸ್ತಸ್ಮಾದ್ದ್ವೈಪಾಯನಃ ಸ್ಮೃತಃ । – ಭಾರತ (ಆದಿ. ೬೩/೮೬)

೨. ವಿನಿರ್ಣಯಂ ಬ್ರಹ್ಮಸೂತ್ರಮಿತ್ಯತ್ರ ವಿಶೇಷೇಣ ನಿರ್ಣಯೋ ಯಸ್ಮಾದಿತಿ ವಿಗ್ರಹಃ ॥ – (ವಾ.)

ವಿ: ಬ್ರಹ್ಮಸೂತ್ರದಂತಹ ಸರ್ವೋತ್ತಮಶಾಸ್ತ್ರದ ರಚನೆ ಮತ್ತು ಬ್ರಹ್ಮಾದಿದೇವತೆಗಳಿಗೆ ಉಪದೇಶ – ಇವುಗಳ ಮೂಲಕವೂ ಶ್ರೀವೇದವ್ಯಾಸರು ಸಾಕ್ಷಾತ್ ನಾರಾಯಣ ಎಂಬುದು ಸಿದ್ಧವಾಗುವುದು ಎಂದು ತಿಳಿಯಬೇಕು.

ಮಹಾಭಾರತ ರಚನೆ

ಸಮಸ್ತಶಾಸ್ತ್ರಾರ್ಥ[೧]ನಿದರ್ಶನಾತ್ಮಕಂ
ಚಕ್ರೇ ಮಹಾಭಾರತನಾಮಧೇಯಮ್ ।
ವೇದೋತ್ತಮಂ ತಚ್ಚ ವಿಧಾತೃಶಂಕರ-
ಪ್ರಧಾನಕೈಸ್ತನ್ಮುಖತಃ[೨] ಸುರೈಃ[೩] ಶ್ರುತಮ್ ॥ ೫೯ ॥

ಅ: ಸಮಸ್ತಶಾಸ್ತ್ರಾರ್ಥಗಳಿಗೆ ದೃಷ್ಟಾಂತರೂಪವಾದ [೨]ಮಹಾಭಾರತವೆಂಬ ಗ್ರಂಥವನ್ನೂ ಶ್ರೀವೇದವ್ಯಾಸರು ರಚಿಸಿದರು. ವೇದಗಳಿಗಿಂತಲೂ ಮಿಗಿಲಾದ ಅದನ್ನು ಬ್ರಹ್ಮರುದ್ರಾದಿ-ದೇವತೆಗಳು ಅವರ ಮುಖದಿಂದಲೇ ಶ್ರವಣ ಮಾಡಿದರು.

---

೧. ಸಮಸ್ತಶಾಸ್ತ್ರಾರ್ಥದೃಷ್ಟಾಂತರೂಪಮಿತ್ಯರ್ಥಃ । ರಾಜಸೂಯೇ ಅಗ್ರಪೂಜಯಾ ಕೃಷ್ಣಶ್ಚೈದ್ಯಸ್ಯ ನಿದರ್ಶಿತತ್ವಾತ್ । ಬಾಲಲೀಲಾಮಾರಭ್ಯ ಭೀಮೇ ಸರ್ವೇಭ್ಯೋ ಬಲಾತಿಶಯಸ್ಯ ವಿಷಭಕ್ಷಣಸರ್ಪದಂಶನಾದಿನಾ ಮರಣಾಭಾವಸಾಮರ್ಥ್ಯಸ್ಯ ಲಾಕ್ಷಾಗೃಹಾತ್ ಕುಂತೀಯುಧಿಷ್ಠಿರಾದೀನ್ ಸರ್ವಾನುದೂಹ್ಯ ಗಮನೇನ ಸರ್ವಾಸಾಧ್ಯಜರಾಸಂಧಾದಿವಧೇನ ಚ ಸಕಲದೇವೋತ್ತಮತ್ವಸ್ಯ ಚ ನಿದರ್ಶಿತತ್ವಾದಿತಿ ಭಾವಃ ॥ – (ವಾ.)

೨. ನಷ್ಟಧರ್ಮಜ್ಞಾನಲೋಕಕೃಪಾಲುರ್ಭಗವಾನ್ಬ್ರಹ್ಮರುದ್ರೇಂದ್ರಾದಿಭಿರರ್ಥಿತೋ ಜ್ಞಾನಪ್ರದರ್ಶನಾಯ ಭಗವಾನ್ ವ್ಯಾಸೋऽವತತಾರ । ತತಶ್ಚೇಷ್ಟಾನಿಷ್ಟಪ್ರಾಪ್ತಿಪರಿಹಾರಸಾಧನಾದರ್ಶನಾತ್ ವೇದಾರ್ಥಜ್ಞಾನಾಚ್ಚ ಸಂಸಾರೇ ಕ್ಲಿಶ್ಯ-ಮಾನಾನಾಂ ವೇದಾನಧಿಕಾರಿಣಾಂ ಸ್ತ್ರೀಶೂದ್ರಾದೀನಾಂ ಚ ಧರ್ಮಜ್ಞಾನದ್ವಾರಾ ಮೋಕ್ಷೋ ಭವೇದಿತಿ ಕೃಪಾಲುಃ ಸರ್ವವೇದಾದ್ಯರ್ಥೋಪಬೃಂಹಿತಾಂ ತದನುಕ್ತೇವಲೇಶ್ವರಜ್ಞಾನದೃಷ್ಟಾರ್ಥಯುಕ್ತಾಂ ಚ ಸರ್ವಪ್ರಾಣಿನಾಮವ-ಗಾಹ್ಯಾನವಗಾಹ್ಯರೂಪಾಂ ಕೇವಲಭಗವತ್ತ್ವರೂಪಪರಾಂ ಪರೋಕ್ಷಾರ್ಥಾಂ ಮಹಾಭಾರತಸಂಹಿತಾಮಚೀಕ್ಲೃಪತ್ ॥
– ಗೀತಾಭಾಷ್ಯ

೩. ಲೋಕೇಶಾ ಬ್ರಹ್ಮರುದ್ರಾದ್ಯಾಃ ಸಂಸಾರೇ ಕ್ಲೇಶಿನಂ ಜನಮ್ ।
ವೇದಾರ್ಥಜ್ಞಮಧೀಕಾರವರ್ಜಿತಂ ಚ ಸ್ತ್ರಿಯಾದಿಕಮ್ ॥
ಅವೇಕ್ಷ್ಯ ಪ್ರಾರ್ಥಯಾಮಾಸುರ್ದೇವೇಶಂ ಪುರುಷೋತ್ತಮಮ್ ।
ತತಃ ಪ್ರಸನ್ನೋ ಭಗವಾನ್ ವ್ಯಾಸೋ ಭೂತ್ವಾ ಚ ತೇನ ಚ ॥
ಅನ್ಯಾವತಾರರೂಪೈಶ್ಚ ವೇದಾನುಕ್ತಾರ್ಥಭೂಷಿತಮ್ ।
ಕೇವಲೇನಾತ್ಮಬೋಧೇನ ದೃಷ್ಟಂ ವೇದಾರ್ಥಸಂಯುತಮ್ ॥
ವೇದಾದಪಿ ಪರಂ ಚಕ್ರೇ ಪಂಚಮಂ ವೇದಮುತ್ತಮಮ್ ।
ಭಾರತಂ ಪಂಚರಾತ್ರಂ ಚ ಮೂಲರಾಮಾಯಣಂ ತಥಾ ॥
ಪುರಾಣಂ ಭಾಗವತಂ ಚೇತಿ ಸಂಭಿನ್ನಃ ಶಾಸ್ತ್ರಪುಂಗವಃ॥ ಇತಿ ನಾರಾಯಣಾಷ್ಟಾಕ್ಷರಕಲ್ಪೇ । – ಗೀತಾಭಾಷ್ಯ

ವಿ: ೧) ಸಮಸ್ತಶಾಸ್ತ್ರಾರ್ಥಗಳಿಗೆ ನಿದರ್ಶನರೂಪ ಎಂದರೆ ವಿಷ್ಣುಸರ್ವೋತ್ತಮತ್ವ, ವಾಯುಜೀವೋತ್ತಮತ್ವ ಮೊದಲಾದ ಶಾಸ್ತ್ರತತ್ತ್ವಗಳನ್ನು ದೃಷ್ಟಾಂತಪೂರ್ವಕ ತಿಳಿಸುವಂತಹ ಕೃತಿ ಎಂದರ್ಥ. ರಾಜಸೂಯಯಾಗದಲ್ಲಿನ ಅಗ್ರಪೂಜೆಯಿಂದ ಕೃಷ್ಣಸರ್ವೋತ್ತಮತ್ವ, ಬಾಲಲೀಲೆಯಿಂದ ಆರಂಭಿಸಿ, ವಿಷಭಕ್ಷಣ ಮೊದಲಾದ ಸಕಲಕಾರ್ಯಗಳಲ್ಲಿ ಅವನ ಅವ್ಯಯವಾದ ಹಿರಿಮೆ, ಅರಗಿನ ಮನೆಯಿಂದ ಕುಂತಿ ಮೊದಲಾದವರನ್ನು ಎತ್ತಿಕೊಂಡು ನಡೆದದ್ದು ಎಲ್ಲರಿಗೂ ಅಜೇಯನಾಗಿದ್ದ ಜರಾಸಂಧನ ವಧೆ ಮೊದಲಾದವುಗಳ ಮೂಲಕ ವಾಯುಜೀವೋತ್ತಮತ್ವ ನಿರೂಪಿತವಾಗಿರುವುದರಿಂದ ಎಂದು ಭಾವ. ಈ ವಿವರಗಳನ್ನೆಲ್ಲ ಎರಡನೆಯ ಅಧ್ಯಾಯದ ಪ್ರಾರಂಭದಲ್ಲಿ ವಿವರವಾಗಿ ವಿಶ್ಲೇಷಿಸಿ, ತೋರಿಸಿಕೊಟ್ಟಿರುವುದನ್ನೂ ಗಮನಿಸಬೇಕು. ಮಹಾಭಾರತದ ಹಿರಿಮೆಯನ್ನು ಸಾರುವ ಇತರ ಅನೇಕವಾಕ್ಯಗಳ ಉಲ್ಲೇಖ ಅಲ್ಲಿದೆ (೨/೫೦).

ಕಲಿಯ ವಿನಾಶ

ಅಥೋ ಗಿರೀಶಾದಿಮನೋನುಶಾಯೀ
ಕಲಿರ್ಮಮಾರಾಶು ಸುವಾಙ್ಮಯೈಃ ಶರೈಃ।
ನಿಕೃತ್ತಶೀರ್ಷೋ ಭಗವನ್ಮುಖೇರಿತೈಃ
ಸುರಾಶ್ಚ ಸಜ್ಞಾನಸುಧಾರಸಂ ಪಪುಃ ॥ ೬೦ ॥

ಅ: ಬಳಿಕ ರುದ್ರಾದಿದೇವತೆಗಳ ಮನಸ್ಸಿನಲ್ಲಿ ನೆಲೆಸಿದ್ದ ಕಲಿಯು ಭಗವಂತನ ಮುಖದಿಂದ ಹೊರಹೊಮ್ಮಿದ ಉತ್ತಮವಾದ ವಾಙ್ಮಯಶರಗಳಿಂದ ತಲೆ ಕತ್ತರಿಸಲ್ಪಟ್ಟವನಾಗಿ ಕೂಡಲೆ ಹತನಾದ.ದೇವತೆಗಳು ಉತ್ತಮವಾದ ಜ್ಞಾನಾಮೃತರಸವನ್ನು ಪಾನ ಮಾಡಿದರು.

ವಿ: ೧) ದೇವತೆಗಳು ಪ್ರಾರ್ಥಿಸಿದ್ದಂತೆ ಶ್ರೀಹರಿಯು ವ್ಯಾಸರೂಪದಿಂದ ಬ್ರಹ್ಮಸೂತ್ರಾದಿ–ಗ್ರಂಥಗಳನ್ನು ರಚಿಸಿದ. ಅದರಲ್ಲಿನ ಪ್ರತಿವಾತುಗಳೂ ಬಾಣದಂತೆ ಕಲಿಯನ್ನು ನಾಶಪಡಿಸಿದವು.

೨) ವೇದವ್ಯಾಸರ ಬ್ರಹ್ಮಸೂತ್ರಾದಿಕೃತಿಗಳ ಅಧ್ಯಯನದಿಂದ ಮನಸ್ಸನ್ನು ಕಾಡುವ ಅಜ್ಞಾನ, ಸಂಶಯ, ಮಿಥ್ಯಾಜ್ಞಾನರೂಪದ ಕಲಿಯು ಬೇಗನೆ ನಾಶವಾಗುವನು ಎಂದರ್ಥ. ಧನ್ವಂತರಿರೂಪದಿಂದ ಸುರರಿಗೆ ಅಮೃತಪಾನ ಮಾಡಿಸಿದ್ದ ಶ್ರೀಹರಿಯು , ಶ್ರೀವ್ಯಾಸರೂಪದಿಂದ ಜ್ಞಾನಾಮೃತವನ್ನು ಪಾನ ಮಾಡಿಸಿದನು ಎಂಬುದು 'ಸಜ್ಞಾನಸುಧಾರಸಂ' ಎಂಬ ಪದದಿಂದ ಸೂಚಿತ.

ಭಾಗವತ ರಚನೆ

ಅಥೋ ಮನುಷ್ಯೇಷು ತಥಾऽಸುರೇಷು
ರೂಪಾಂತರೈಃ[೧] ಕಲಿರೇವಾವಶಿಷ್ಟಃ ।
ತತೋ ಮನುಷ್ಯೇಷು ತು ಸತ್ಸು ಸಂಸ್ಥಿತೋ
ವಿನಾಶ್ಯ ಇತ್ಯೇವ ಹರಿರ್ವ್ಯಚಿಂತಯತ್ ॥ ೬೧ ॥

ಅ: ಅನಂತರವೂ ಮನುಷ್ಯರಲ್ಲಿ ಹಾಗೂ ಅಸುರರಲ್ಲಿ ರೂಪಾಂತರಗಳಿಂದ ಕಲಿಯು ಉಳಿದುಕೊಂಡ. ಆಗ ಮನುಷ್ಯರಲ್ಲೂ ಹಾಗೂ ಇತರಸಜ್ಜನರಲ್ಲೂ ನೆಲೆಸಿರುವ ಕಲಿಯನ್ನು ಸಂಹರಿಸಬೇಕೆಂದು ಶ್ರೀವೇದವ್ಯಾಸರು ಆಲೋಚಿಸಿದರು.

ಏ: ದೇವತೆಗಳು, ಋಷಿಗಳು ಬ್ರಹ್ಮಸೂತ್ರಾದಿಗಳನ್ನು ಶ್ರವಣ ಮಾಡಿದ್ದರಿಂದ ಅಜ್ಞಾನಾದಿ-ದೋಷಗಳನ್ನು ಪರಿಹರಿಸಿಕೊಂಡರು. ಹಾಗೆ ಮಾಡಲಾಗದ ಮನುಷ್ಯರಲ್ಲಿ ಕಲಿಯು ಎಂದಿನಂತೆಯೇ ನೆಲೆಸಿಯೇ ಇದ್ದನು. ಅವನನ್ನು ನಾಶಪಡಿಸಲೆಂದು ಮತ್ತೊಂದು ಗ್ರಂಥವನ್ನು ರಚಿಸಲು ಶ್ರೀವ್ಯಾಸರು ತೀರ್ಮಾನಿಸಿದರು ಎಂದು ಭಾವ.

ತತೋ ನೃಣಾಂ ಕಾಲಬಲಾತ್ ಸುಮಂದ-
ಮಾಯುರ್ಮತಿಂ ಕರ್ಮ ಚ ವೀಕ್ಷ್ಯ ಕೃಷ್ಣಃ ।
ವಿವ್ಯಾಸ ವೇದಾನ್ ಸ ವಿಭುಶ್ಚತುರ್ಧಾ
ಚಕ್ರೇ ತಥಾ ಭಾಗವತಂ[೨] ಪುರಾಣಮ್ ॥ ೬೨ ॥

ಅ: ಬಳಿಕ ಕಾಲದ ಪ್ರಭಾವದಿಂದಾಗಿ ಮನುಷ್ಯರಲ್ಲಿ ಆಯುಷ್ಯ, ಬುದ್ಧಿ ಹಾಗೂ ಕರ್ಮಾಚರಣೆಗಳೆಲ್ಲವೂ ಕಡಿಮೆ ಆಗಿರುವುದನ್ನು ಕಂಡು ಸರ್ವಸಮರ್ಥರಾದ ಶ್ರೀವೇದವ್ಯಾಸರು ವೇದಗಳನ್ನು ನಾಲ್ಕು ಭಾಗಗಳನ್ನಾಗಿ ವಿಭಾಗಮಾಡಿದರು. ವಿಷ್ಣುಸರ್ವೋತ್ತಮತ್ವವನ್ನು ಸಾರುವ ಪುರಾಣಗಳನ್ನು ರಚಿಸಿದರು.

---

೧. ರೂಪಾಂತರೈಃ ಕಲಿರೇವಾವಶಿಷ್ಟ ಇತ್ಯಾದೇಃ ದೇವರ್ಷ್ಯಾದಿಸ್ಥಿತಮಿಥ್ಯಾಜ್ಞಾನಾಖ್ಯರೂಪಾಣಾಂ ವಾಙ್ಮಯೈಃ ನಿಕೃತ್ತಶೀರ್ಷತ್ವೇऽಪಿ ಉತ್ತಮಮಧ್ಯಮಾಧಮಾಖ್ಯಮನುಷ್ಯೇಷ್ವಸುರೇಷು ಚ ಸ್ಥಿತಮಿಥ್ಯಾಜ್ಞಾನಾಖ್ಯ-ರೂಪಾಣ್ಯನಿಕೃತ್ತಶೀರ್ಷಾಣ್ಯೇವಾವಶಿಷ್ಟಾನಿ । ತತ್ರ ತನ್ಮುಖಾದೇವಾನಂತವೇದಶ್ರವಣಾಸಮರ್ಥಸನ್ಮನುಷ್ಯಸ್ಥಿತ ಮಿಥ್ಯಾಜ್ಞಾನಾಖ್ಯರೂಪಾಣಾಂ ಶಿರಶ್ಛೇದಃ ಕಥಂ ಕಾರ್ಯ ಇತ್ಯಚಿಂತಯದಿತಿ ಭಾವಃ ॥ – (ವಾ.)

೨. ಭಗವತ್ಸಂಬಂಧಿ ಭಾಗವತಂ ವೈಷ್ಣವಪುರಾಣಾನೀತ್ಯರ್ಥಃ । ಜಾತಾವೇಕವಚನಮ್ ॥ – (ವಾ.)

ವಿ: ೧) ಕಾಲಬಲದಿಂದಾಗಿ ಜನರ ಬುದ್ಧಿ ಮೊದಲಾದವುಗಳು ಕುಂಠಿತವಾಗಿರುವುದರಿಂದ ಅವುಗಳ ಅಧ್ಯಯನ ಎಲ್ಲರಿಗೂ ಎಟುಕುವಂತಹುದಲ್ಲ ಎಂದು ಭಾವಿಸಿ, ಶ್ರೀವ್ಯಾಸರು ವೇದಗಳನ್ನು ನಾಲ್ಕು ಬಗೆಯಾಗಿ ವಿಂಗಡಿಸಿದರು.

೨) ಇಲ್ಲಿ 'ಭಾಗವತಂ' ಎಂದರೆ ಭಾಗವತಪುರಾಣ ಎಂದಷ್ಟೇ ತಿಳಿಯದೆ, ಭಗವಂತನನ್ನು ಸರ್ವೋತ್ತಮನೆಂದು ಸಾರುವ ವೈಷ್ಣವಪುರಾಣಗಳನ್ನೆಲ್ಲ ರಚಿಸಿದರು ಎಂದು ತಿಳಿಯಬೇಕು.

೩) ಹೀಗೆ ವೇದವಿಭಾಗ ಮಾಡಿದ್ದರಿಂದಲೇ ಅವರಿಗೆ ವೇದವ್ಯಾಸ[೧] ಎಂದು ಹೆಸರಾಯಿತು.

೪) ಹೀಗೆ ನಾಲ್ಕು ಬಗೆಯಾಗಿ ವಿಂಗಡಿಸಿದ ವೇದಗಳನ್ನೇ ಪುನಃ ಅನೇಕಬಗೆಯಾಗಿ ವಿಂಗಡಿಸಿದ ವಿವರಗಳನ್ನು ಬ್ರಹ್ಮಸೂತ್ರಭಾಷ್ಯದಲ್ಲಿ [೨]ನೀಡಿರುವರು.

೫) ಹೀಗೆ ನಾಲ್ಕು ಬಗೆಯಾಗಿ ಮಾತ್ರವಲ್ಲದೆ ಸಾವಿರಾರು ಬಗೆಯಾಗಿ ವೇದವಿಭಾಗ ಮಾಡುವ ಮೂಲಕವೂ ಶ್ರೀವೇದವ್ಯಾಸರು ಎಂಬ ವಿಶಿಷ್ಟ ಹೆಸರಿನಿಂದ ಮಾನ್ಯರಾಗಿರುವರು.

ಕಿರೀಟ ಹೊತ್ತ ಕೀಟ

ಯೇ ಯೇ ಚ ಸಂತಸ್ತಮಸಾऽನುವಿಷ್ಟಾ-
ಸ್ತಾಂಸ್ತಾನ್ ಸುವಾಕ್ಯೈಸ್ತಮಸೋ ವಿಮುಂಚನ್।
ಚಚಾರ ಲೋಕಾನ್ ಸ ಪಥಿ ಪ್ರಯಾಂತಂ
ಕೀಟಂ ವ್ಯಪಶ್ಯತ್ ತಮುವಾಚ ಕೃಷ್ಣಃ ॥ ೬೩ ॥

---

೧. ಆಯುಃ ಶಕ್ತಿಂ ಚ ಮರ್ತ್ಯಾನಾಂ ಯುಗಾವಸ್ಥಾಮವೇಕ್ಷ್ಯ ಚ।
ಬ್ರಹ್ಮಣೋ ಬ್ರಾಹ್ಮಣಾನಾಂ ಚ ತಥಾನುಗ್ರಹಕಾಂಕ್ಷಯಾ।
ವಿವ್ಯಾಸ ವೇದಾನ್ ಯಸ್ಮಾತ್ ಸ ತಸ್ಮಾದ್ವ್ಯಾಸ ಇತಿ ಸ್ಮೃತಃ ॥ – ಭಾರತ (ಆದಿ. ೬೩/೮೭,೮೮)

೨. ದ್ವಾಪರೇ ಸರ್ವತ್ರ ಜ್ಞಾನ ಆಕುಲೀಭೂತೇ ತನ್ನಿರ್ಣಯಾಯ ಬ್ರಹ್ಮರುದ್ರೇಂದ್ರಾದಿಭಿರರ್ಥಿತೋ ಭಗವಾನ್ನಾರಾಯಣೋ ವ್ಯಾಸತ್ವೇನಾವತತಾರ । ಅಥೇಷ್ಟಾನಿಷ್ಟಪ್ರಾಪ್ತಿಪರಿಹಾರೇಚ್ಛೂನಾಂ ತದ್ಯೋಗಮ-ವಿಜಾನತಾಂ ತಜ್ಜ್ಞಾಪನಾರ್ಥಂ ವೇದಮುತ್ಸನ್ನಂ ವ್ಯಂಜಯಂಶ್ಚತುರ್ಧಾ ವ್ಯಭಜತ್। ಚತುರ್ವಿಂಶತಿಧೈಕಶತಧಾ ಸಹಸ್ರಧಾ ದ್ವಾದಶಧಾ ಚ। ತದರ್ಥನಿರ್ಣಯಾಯ ಬ್ರಹ್ಮಸೂತ್ರಾಣಿ ಚಕಾರ। ತಚ್ಚೋಕ್ತಂ ಸ್ಕಾಂದೇ –

..... ಭಗವಾನ್ ಪುರುಷೋತ್ತಮಃ ॥
ಅವತೀರ್ಣೋ ಮಹಾಯೋಗೀ ಸತ್ಯವತ್ಯಾಂ ಪರಾಶರಾತ್।
ಉತ್ಸನ್ನಾನ್ ಭಗವಾನ್ ವೇದಾನುಜ್ಜಹಾರ ಹರಿಃ ಸ್ವಯಮ್ ॥
ಚತುರ್ಧಾ ವ್ಯಭಜತ್ತಾಂಶ್ಚ ಚತುರ್ವಿಂಶತಿಧಾ ಪುನಃ।
ಶತಧಾ ಚೈಕಧಾ ಚೈವ ತಥೈವ ಚ ಸಹಸ್ರಧಾ ॥
ಕೃಷ್ಣೋ ದ್ವಾದಶಧಾ ಚೈವ ಪುನಸ್ತಸ್ಯಾರ್ಥವಿತ್ತಯೇ।
ಚಕಾರ ಬ್ರಹ್ಮಸೂತ್ರಾಣಿ ಯೇಷಾಂ ಸೂತ್ರತ್ವಮಂಜಸಾ ॥ – ಸ್ಕಾಂದವಚನ (ಸೂ.ಭಾ.ದಲ್ಲಿ ಉದಾಹೃತ)

ಅ: ಅಜ್ಞಾನದಿಂದ ಕೂಡಿದ್ದ ಸಜ್ಜನರನ್ನೆಲ್ಲ ತಮ್ಮ ಸೂಕ್ತಿಗಳಿಂದ ಅಜ್ಞಾನದಿಂದ ಬಿಡುಗಡೆ ಮಾಡುತ್ತಾ ಶ್ರೀವೇದವ್ಯಾಸರು ಲೋಕಗಳಲ್ಲಿ ಸಂಚರಿಸಿದರು. ಆಗೊಮ್ಮೆ ದಾರಿಯಲ್ಲಿ ಸಂಚರಿಸುತ್ತಿದ್ದ ಕೀಟವೊಂದನ್ನು ಕಂಡರು; ಅದನ್ನು ಕುರಿತು ಹೀಗೆಂದರು.

ವಿ: ೧) ಶಾಸ್ತ್ರರಚನೆ, ಉಪದೇಶಗಳೆಲ್ಲ ದುರ್ಜನರನ್ನು ತಿದ್ದಲೆಂದಲ್ಲ; ಅಜ್ಞಾನಕ್ಕೊಳಗಾದ ಸಜ್ಜನರನ್ನು ಉದ್ಧರಿಸಲೆಂದು ಮಾತ್ರ. ಶ್ರೀವೇದವ್ಯಾಸರು ಮಾಡಿದ್ದೂ ಅದನ್ನೇ. ಇದು ವೇದವ್ಯಾಸರ ಕೃತಿಗಳಿಂದ ಎಲ್ಲರೂ ಏಕೆ ಉದ್ಧಾರವಾಗಲಿಲ್ಲವೆಂಬ ಪ್ರಶ್ನೆಗೆ ಉತ್ತರ.

೨) ಶ್ರೀವೇದವ್ಯಾಸರ ಕೃತಿಗಳಂತೆ ಅವರ ಸಂಚಾರಾದಿಕಾರ್ಯವೂ ಅಪೂರ್ವ ಎಂಬುದನ್ನು ಅಪೂರ್ವಪ್ರಸಂಗವೊಂದರಿಂದ ನಿರೂಪಿಸುತ್ತಿರುವರು.

ಭವಸ್ವ ರಾಜಾ ಕುಶರೀರಮೇತತ್
ತ್ಯಕ್ತ್ವೇತಿ ನೈಚ್ಛತ್ ತದಸೌ ತತಸ್ತಮ್ ।
ಅತ್ಯಕ್ತದೇಹಂ[೧] ನೃಪತಿಂ ಚಕಾರ
ಪುರಾ ಸ್ವಭಕ್ತಂ ವೃಷಲಂ[೨] ಸುಲುಬ್ಧಮ್ ॥ ೬೪ ॥

ಅ: ''ಈ ಕೆಟ್ಟ ದೇಹವನ್ನು ತೊರೆದು ರಾಜನಾಗು'' ಎಂದು ವೇದವ್ಯಾಸರು ನುಡಿಯಲು, ಕೀಟ ಅದಕ್ಕೆ ಒಪ್ಪಲಿಲ್ಲ. ಅದರಿಂದಾಗಿ ದೇಹ ತೊರೆಯದಂತೆಯೇ ಅವನನ್ನು ಅವರು ರಾಜನನ್ನಾಗಿಸಿದರು; ಅವನು ಹಿಂದಿನ ಜನ್ಮದಲ್ಲಿ ತಮ್ಮ ಭಕ್ತನೇ ಆಗಿದ್ದ ಒಬ್ಬ ಮಹಾಲೋಭಿಯಾದ ಶೂದ್ರ.

ವಿ: ವೇದವ್ಯಾಸರ ದೃಷ್ಟಿಗೆ ಬಿದ್ದ ಮೇಲೆ ಉದ್ಧಾರವಾಗಲೇಬೇಕು. ಅಂತಹ ಉದ್ಧಾರವೂ ಸಾಮಾನ್ಯವಾಗಿರದೆ, ಅಸಾಮಾನ್ಯವಾಗಿರಬೇಕು. ಅದಕ್ಕೆಂದೇ ತಮ್ಮ ಕಣ್ಣಿಗೆ ಬಿದ್ದ ಆ ಕೀಟವನ್ನು ರಾಜಪದವಿಗೆ ಏರಲು ಅನುಗ್ರಹಿಸಿದರು. ಆದರೆ ಆ ಕೀಟಕ್ಕೆ ತನ್ನ ದೇಹದ ಮೇಲಿನ ಮೋಹ; ರಾಜನಾಗಲೂ ಕಾತರ. ಎಂದರೆ ದೇಹ ತೊರೆಯದೆಯೇ ರಾಜನಾಗುವ ಬಯಕೆ ಅದರದು. ವೇದವ್ಯಾಸರಿಗೆ ಯಾವುದು ಅಸಾಧ್ಯ? ಅವರು ಅವನನ್ನು ಆ [೩]ಕೀಟದೇಹದಲ್ಲಿದ್ದೇ

---

೧. ಅತ್ಯಕ್ತದೇಹಮಿತಿ ಕೀಟದೇಹಮೇವ ಮನುಷ್ಯದೇಹಂ ಕೃತ್ವಾ ರಾಜಾನಂ ಚಕಾರೇತ್ಯರ್ಥಃ । ಕೇಚಿತ್ ತು ಕೀಟೇನೈವ ರಾಜ್ಯಂ ಕಾರಯಾಮಾಸೇತ್ಯಾಹುಃ । – (ತಾ.)

೨. ವೃಷಲಂ= ಶೂದ್ರಮ್ ॥ – (ವಾ.)

೩. 'ಕ್ರಿಮಿಯಿಂದ ರಾಜ್ಯವಾಳಿಸಿದೆ' – (ವಿಜಯದಾಸರು)

ರಾಜ್ಯವಾಳುವಂತೆ ಮಾಡಿದರು. ಹೀಗೆ ಕೀಟದಿಂದ ರಾಜ್ಯವಾಳಿಸಿದ ವೈಭವ ಶ್ರೀವ್ಯಾಸರದು. ಈ ಕಾರಣಕ್ಕೂ ಅವರು ಸಾಕ್ಷಾತ್ ನಾರಾಯಣ ಎಂಬುದು ಸಿದ್ಧವಾಗುವುದು. ಶ್ರೀವ್ಯಾಸಾನುಗ್ರಹಕ್ಕೆ ಪಾತ್ರನಾದರೆ, ಕೀಟದಂತಹ ಸಾಮಾನ್ಯನೂ, ರಾಜಮರ್ಯಾದೆ ಗಳಿಸುವನು ಎಂಬ ತತ್ತ್ವಕ್ಕೂ ಇದು ನಿದರ್ಶನ — 'ವಿದ್ವಾನ್ ಸರ್ವತ್ರ ಪೂಜ್ಯತೇ'. ಅವನ ಕೀಟ ದೇಹವನ್ನೇ ರಾಜದೇಹವನ್ನಾಗಿ ಪರಿವರ್ತಿಸಿ ರಾಜನನ್ನಾಗಿಸಿದ ಎಂಬ ಪಕ್ಷವೂ ಉಂಟು:

ತ್ಯಕ್ತ್ವಾ ಸ ಕೀಟತಾಂ ರಾಜಂಶ್ಚಚಾರ ವಿಪುಲಂ ತಪಃ । – (ಅನು. ೧೧೯/೧)

ಈ ಕೀಟದ ಪ್ರಸಂಗ ಭಾರತದ ಅನುಶಾಸನಪರ್ವದಲ್ಲಿ ಬಂದಿದೆ(ಅ.೧೧೭–೧೧೯).

ಲೋಭಾತ್ ಸ ಕೀಟತ್ವಮುಪೇತ್ಯ ಕೃಷ್ಣ-
ಪ್ರಸಾದತಶ್ಚಾಶ್ನು ಬಭೂವ ರಾಜಾ ।
ತದೈವ ತಂ ಸರ್ವನೃಪಾಃ ಪ್ರಣೇಮು-
ರ್ದದುಃ ಕರಂ ಚಾಸ್ಯ ಯಥೈವ ವೈಶ್ಯಾಃ ॥ ೬೫ ॥

ಅ: ಲೋಭದ ಕಾರಣದಿಂದಾಗಿ ಅವನು ಕೀಟತ್ವ ಹೊಂದಿದ್ದರೂ, ವಾಸಿಷ್ಠಕೃಷ್ಣರಾದ ವೇದವ್ಯಾಸರ ಅನುಗ್ರಹದಿಂದ ಕೂಡಲೆ ರಾಜನಾದ. ಅವನಿಗೆ ಸಕಲರಾಜರೂ ಮಣಿದರು; ಮತ್ತು ವೈಶ್ಯರಂತೆ ಅವನಿಗೆ ಕಪ್ಪವನ್ನೂ ಸಲ್ಲಿಸಿದರು.

ವಿ: ೧) ಅವನಿಗೆ ವ್ಯಾಸಾನುಗ್ರಹವೂ ಸುಮ್ಮನೆ ಲಭಿಸಿದ್ದಲ್ಲ. ಅವನು ಹಿಂದಿನ ಜನ್ಮದಲ್ಲೂ ಭಗವದ್ಭಕ್ತನೇ. ಜಾತಿಯಲ್ಲಿ ಶೂದ್ರ. ಇತರ ಎಲ್ಲ ಗುಣಗಳಿದ್ದರೂ ಲೋಭ ಅವನ ದೊಡ್ಡ ದೋಷವಾಗಿತ್ತು. ಅದರಿಂದಾಗಿ ಅವನಿಗೆ ಕೀಟಜನ್ಮ; ಭಕ್ತನಾಗಿದ್ದ ಕಾರಣದಿಂದಾಗಿ ವ್ಯಾಸಾನುಗ್ರಹ. ಸಾಧನೆ ವ್ಯರ್ಥವಲ್ಲ ಎಂಬುದಕ್ಕೂ, ಪುನರ್ಜನ್ಮ ಸತ್ಯ ಎಂಬುದಕ್ಕೂ ಸಹ ಈ ಪ್ರಸಂಗ ಉತ್ತಮನಿದರ್ಶನ.

೨) ಎಷ್ಟೆಲ್ಲ ಗುಣಗಳಿದ್ದರೂ, ಲೋಭಿಯ ಬಾಳು ಕೀಟದಂತೆಯೇ. 'ಲೋಭಃ ಸರ್ವಗುಣಾನಿವ'(ದ್ರೋಣಪರ್ವ. ೯೯/೫೬) (ಇತರ ಎಲ್ಲ ಗುಣಗಳನ್ನೂ ಲೋಭ ಮುಸುಕುಗೊಳಿಸುತ್ತದೆ) ಎಂದಿದೆ ಮಹಾಭಾರತ. ಆದರೂ ವ್ಯಾಸರ ದಯೆಯಿಂದಾಗಿ ಅವನಿಗೆ ರಾಜನಾಗುವ ಯೋಗ. ಶೀಘ್ರಫಲ ಅವರ ಅನುಗ್ರಹದ ಮತ್ತೊಂದು ಮುಖ. ಅವನು ಆಗಲೇ ರಾಜನಾದ; ಇತರ ಎಲ್ಲ ರಾಜರು ಅವನಿಗೆ ತಲೆಬಾಗಿದರು; ಕಪ್ಪಕಾಣಿಕೆಗಳನ್ನು ನೀಡಿ ಗೌರವಿಸಿ–ದರು. ಎಂದರೆ ಅವನು ಹೆಸರಿಗೆ ಮಾತ್ರ ರಾಜನಾಗದೆ, ನಿಜಕ್ಕೂ ರಾಜನೇ ಆದ ಎಂದು ಭಾವ.

ಉವಾಚ ತಂ ಭಗವಾನ್ ಮುಕ್ತಿಮಸ್ಮಿಂ-
ಸ್ತ್ವ ಕ್ಷಣೇ ದಾತುಮಹಂ ಸಮರ್ಥಃ ।
ತಥಾಽಪಿ ಸೀಮಾರ್ಥಮವಾಪ್ಯ ವಿಪ್ರ-
ತನುಂ ವಿಮುಕ್ತೋ ಭವ ಮತ್ಪ್ರಸಾದಾತ್ ॥ ೬೬ ॥

ಅ: ಭಗವಂತನಾದ ವ್ಯಾಸರು ಆ ಕೀಟಕ್ಕೆ ಹೇಳಿದರು: ''ಈ ಕ್ಷಣದಲ್ಲೇ ನಾನು ನಿನಗೆ ಮುಕ್ತಿ ನೀಡಬಲ್ಲೆ. ಆದರೂ ಶಾಸ್ತ್ರಮರ್ಯಾದೆಯ ಪಾಲನೆಗಾಗಿ ನೀನು [೨]ಬ್ರಾಹ್ಮಣದೇಹವನ್ನು ಪಡೆದು, ನನ್ನ ಪ್ರಸಾದದಿಂದ ಮುಕ್ತನಾಗು''.

ವಿ: ೧) ಈ ಲೋಕದಲ್ಲಿ ರಾಜ್ಯಪ್ರಾಪ್ತಿ; ಅನಂತರ ಮುಕ್ತಿಪ್ರಾಪ್ತಿ, ಇದು ವ್ಯಾಸಾನುಗ್ರಹದ ಪೂರ್ಣಫಲ. ಅವನಿಗೆ ಎರಡೂ ಲಭಿಸಿದವು. ಹೀಗೆ ಮುಕ್ತಿ ನೀಡುವ ಅವರು ಸಾಕ್ಷಾದ್ಭಗವಂತ ಎಂಬುದಕ್ಕೆ ಮತ್ತೊಂದು ಪುರಾವೆ. ಶಾಸ್ತ್ರಜ್ಞಾನದ ಪೂರ್ಣಫಲ [೩]ಅಪರೋಕ್ಷಜ್ಞಾನ ಹಾಗೂ ಮುಕ್ತಿ ಎಂಬ ತತ್ತ್ವವೂ ಇದರಿಂದ ಸೂಚಿತ.

೨) ಸಾಧಕ ಯಾವುದೇ ಜನ್ಮದಲ್ಲಿದ್ದು ಸಾಧನೆ ಮಾಡಿದರೂ, ಅವನ ಚರಮದೇಹ ಮಾತ್ರ ಅವನ ಸ್ವರೂಪಕ್ಕೆ ಅನುಗುಣವಾಗಿರಲೇಬೇಕೆಂಬುದು ಶಾಸ್ತ್ರದ ನಿಯಮ :

ಸರ್ವೇಷಾಮಪಿ ಜೀವಾನಾಮಂತ್ಯದೇಹೋ ಯಥಾ ನಿಜಃ ।
ಮುಕ್ತೌ ಚ ನಿಜಭಾವಃ ಸ್ಯಾತ್ ಕರ್ಮಭೋಗಾಂತತೋಽಪಿ ಚ'

– ಭವಿಷ್ಯತ್ಪರ್ವವಚನ, ಗೀತಾತಾತ್ಪರ್ಯ (೯/೩೪)

ಅದನ್ನು ಪಾಲಿಸಲೆಂದು ವೇದವ್ಯಾಸರು ಅವನಿಗೆ ಹಾಗೆ ನುಡಿದರು ಎಂದು ತಿಳಿಯಬೇಕು. ಅವರು ಎಲ್ಲ ನಿಯಮವನ್ನು ಮೀರಿದವರಾದರೂ, ಅವನ್ನು ಪಾಲಿಸುವ ಮೂಲಕ ಜಗತ್ತಿಗೆ ಮಾರ್ಗದರ್ಶನ ತೋರುವುದು ಅವರ ಉದ್ದೇಶ.

೩) ಅವರು ಪರಶುರಾಮರೂಪದಿಂದ ಕೀಟಕ್ಕೆ ದರ್ಶನಮಾತ್ರದಿಂದ ಮುಕ್ತಿ ನೀಡಿದ ವಿವರ ಮುಂದೆ ಬಂದಿದೆ (೧೫/೫೬).

---

೧. ಸೀಮಾ= ಮರ್ಯಾದಾ ತದ್ರಕ್ಷಣಾರ್ಥಮಿತ್ಯರ್ಥಃ । ಸ್ವರೂಪತೋ ಬ್ರಾಹ್ಮಣೇನ ಬ್ರಾಹ್ಮಣತ್ವ ಮವಾಪ್ಯೈವ ಮೋಕ್ಷಃ ಪ್ರಾಪ್ಯಃ ನತು ರೂಪಾಂತರೇಣೇತಿ ಮರ್ಯಾದಾರಕ್ಷಣಾರ್ಥಮಿತಿ ಭಾವಃ ॥ – (ವಾ.)

೨. ಇತಸ್ತ್ವಂ ರಾಜಪುತ್ರತ್ವಾದ್ಬ್ರಾಹ್ಮಣ್ಯಂ ಸಮವಾಪ್ಸ್ಯಸಿ ॥ – ಭಾರತ (ಅನುಶಾಸನ. ೧೧೭/೨೧)

೩. ತತ್ತ್ವಜ್ಞಾನಾರ್ಥದರ್ಶನಮ್ = ಅಪರೋಕ್ಷಜ್ಞಾನಾರ್ಥಂ ಶಾಸ್ತ್ರದರ್ಶನಮ್ ॥

೪) ಶ್ರೀವ್ಯಾಸರ ಅನುಗ್ರಹಕ್ಕೆ ಪಾತ್ರನಾಗದ ವಿಪ್ರ, ರಾಜ ಮೊದಲಾದವರೂ ಕೀಟದಂತೆ ಕ್ಷುದ್ರರಾಗುವರು ಎಂಬ ತತ್ತ್ವವೂ ಇಲ್ಲಿ ಸೂಚಿತ.

ಜ್ಞಾನಂ ಚ ತಸ್ಮೈ ವಿಮಲಂ ದದೌ ಸ
ಮಹೀಂ ಚ ಸರ್ವಾಂ[೧] ಬುಭುಜೇ ತದಂತೇ ।
ತ್ಯಕ್ತ್ವಾ ತನುಂ ವಿಪ್ರವರತ್ವಮೇತ್ಯ
ಪದಂ ಹರೇರಾಪ ಸುತತ್ತ್ವವೇದೀ ॥ ೬೭ ॥

ಅ: ಅವನಿಗೆ ನಿರ್ಮಲವಾದ ಜ್ಞಾನವನ್ನೂ ಶ್ರೀವೇದವ್ಯಾಸರು ನೀಡಿದರು. ಅವನು ಚಕ್ರವರ್ತಿಯಾಗಿ ಇಡೀ ಭೂಮಿಯನ್ನು ಪಾಲಿಸಿದ; ಅದರ ಅನಂತರ ಆ ದೇಹವನ್ನು ತೊರೆದು, ಬ್ರಾಹ್ಮಣೋತ್ತಮನಾಗಿ ಜನಿಸಿ, ಉತ್ತಮತತ್ತ್ವಜ್ಞಾನಿಯಾಗಿ [೨]ಶ್ರೀಹರಿಪದವನ್ನು ಸೇರಿದ.

ವಿ: ಶ್ರೀವ್ಯಾಸರ ಪದಗಳನ್ನು ಸರಿಯಾಗಿ ಅರ್ಥಮಾಡಿಕೊಂಡವನು ಪಂಡಿತ ಚಕ್ರವರ್ತಿ ಎನ್ನಿಸುವನು ಎಂಬುದಕ್ಕೂ ಇದು ಸೂಚಕ.

ಶ್ರೀವ್ಯಾಸವೈಭವ

ಏವಂ ಬಹೂನ್ ಸಂಸೃತಿಬಂಧತಃ ಸ
ವ್ಯಮೋಚಯದ್ವ್ಯಾಸತನುರ್ಜನಾರ್ದನಃ ।
ಬಹೂನ್ಯಚಿಂತ್ಯಾನಿ ಚ ತಸ್ಯ ಕರ್ಮಾ-
ಣ್ಯಶೇಷದೇವೇಶಸದೋದಿತಾನಿ ॥ ೬೮ ॥

ಅ: ಹೀಗೆ ಸರ್ವಸಮರ್ಥನಾದ ವ್ಯಾಸರೂಪದ ಶ್ರೀಹರಿಯು ಅನೇಕರನ್ನು ಸಂಸಾರಬಂಧನದಿಂದ ಪಾರುಮಾಡಿದ. ಅವನ ಕಾರ್ಯಗಳು ಅಸಂಖ್ಯವಾದವು; ಚಿಂತನೆಗೆ ಎಟುಕದಂತಹವು; ಸಕಲದೇವಶ್ರೇಷ್ಠರುಗಳಿಂದಲೂ ಸದಾ ಕೊಂಡಾಡಲ್ಪಡುವಂತಹವು.

---

೧. ಸರ್ವಾಂ ಮಹೀಂ ಚಕ್ರವರ್ತಿತ್ವಮಿತ್ಯರ್ಥಃ । – (ಜ.)

೨. ಭಗವದ್ವಚನಾತ್ ಕೀಟೋ ಬ್ರಾಹ್ಮಣ್ಯಂ ಪ್ರಾಪ್ಯ ದುರ್ಲಭಮ್ ॥
ಅಕರೋತ್ ಪೃಥಿವೀಂ ರಾಜನ್ ಯಜ್ಞಯೂಪಶತಾಂಕಿತಾಮ್ ।
ತತಃ ಸಾಲೋಕ್ಯಮಗಮದ್ಬ್ರಾಹ್ಮಣೋ ಬ್ರಹ್ಮವಿತ್ತಮಃ ॥
ಅವಾಪ ಚ ಪದಂ ಕೀಟಃ ಪಾರ್ಥ ಬ್ರಹ್ಮ ಸನಾತನಮ್ । – ಭಾರತ (ಅನು. ೧೧೯/೧೨-೧೪)

ಶ್ರೀಶುಕಮುನಿಯ ಅವತಾರ

ಅಥಾಸ್ಯ ಪುತ್ರತ್ವಮವಾಪ್ತುಮಿಚ್ಛಂ-
ಶ್ಚಚಾರ ರುದ್ರಃ ಸುತಪಸ್ತದೀಯಮ್ ।
ದದೌ ಚ ತಸ್ಮೈ ಭಗವಾನ್ ವರಂ ತಂ
ಸ್ವಯಂ ಚ ತಪ್ತ್ವೈವ ತಪೋ ವಿಮೋಹಯನ್[೧] ॥ ೬೯ ॥

ಅ: ಅವರ ಮಗನಾಗಿ ಜನಿಸಲು ಬಯಸಿ, ಶಿವ ಅವರನ್ನು ಕುರಿತು ಉತ್ತಮತಪಸ್ಸನ್ನು ಮಾಡಿದ. ಭಗವಂತನಾದ ವ್ಯಾಸರು ತಾವೇ ತಪಸ್ಸು ಮಾಡಿದಂತೆ ನಟಿಸಿ, ಅಯೋಗ್ಯಜನರನ್ನು ಮರುಳುಗೊಳಿಸುತ್ತಾ ಶಿವನಿಗೆ ಆತ ಬೇಡಿದ ವರವನ್ನು ನೀಡಿದರು.

ವಿ: ೧) ದ್ರೋಣಪುತ್ರ ಅಶ್ವತ್ಥಾಮ ಶಿವನ ಮತ್ತೊಂದುರೂಪ. ಆದರೆ ಆ ರೂಪವನ್ನು ದುರ್ಯೋಧನ ಹಾಲು ಕುಡಿಸುವ ಮೂಲಕ ತನ್ನೆಡೆಗೆ ಸೆಳೆದುಕೊಂಡ; ಅವರು ಕೌರವಪಕ್ಷವನ್ನು ಸೇರಿ, ಪಾಂಡವರ ವಿರುದ್ಧ ಹೋರಾಡುವಂತಾಯಿತು. ಅದು ಸಹಜವಾಗಿಯೇ ಅವರಿಗೆ ಅಪ್ರಿಯವಾದದ್ದು. ಅದನ್ನು ಸರಿಪಡಿಸಿಕೊಳ್ಳಲೋ ಎಂಬಂತೆ ಅವರು ಮತ್ತೊಂದು ರೂಪದಿಂದ ಜನಿಸಲು ಬಯಸಿದರು. ಬೇರೆಯವರ ಪುತ್ರರಾದರೆ ಪುನಃ ಕಲಿಬಾಧೆ ಒದಗೀತೆಂಬ ಭಯದಿಂದ ಸಾಕ್ಷಾದ್ಭಗವಂತನಾದ ವೇದವ್ಯಾಸರಿಗೆ ಪುತ್ರನಾಗಲು ನಿಶ್ಚಯಿಸಿದರು. ತಮ್ಮ ಗುರಿಯನ್ನು ಸಾಧಿಸಲೆಂದು ಶ್ರೀವ್ಯಾಸರನ್ನೇ ಕುರಿತು ತಪಸ್ಸನ್ನು ಆಚರಿಸಿ ಅವರ ಒಲುಮೆಗೆ ಪಾತ್ರರಾದರು.

೨) ವಸ್ತುಸ್ಥಿತಿ ಇದು. ಆದರೆ ಅವರನ್ನು ಅನುಗ್ರಹಿಸಲೆಂದು ಅವರ ಬಳಿ ತೆರಳಿದ ವೇದ–ವ್ಯಾಸರು ನೋಡುವವರ ಕಣ್ಣಿಗೆ ತಪಸ್ಸು ಮಾಡಿದ್ದು ಸ್ವತಃ ತಾವೇ ಎಂಬ ಭ್ರಮೆಯನ್ನು ಕವಿಸಿ–ದರು. ಅವರು ವರ ನೀಡಿದವರಾದರೂ, ವರ ಪಡೆದವರಂತೆ ವರ್ತಿಸಿದರು. ಅದರಿಂದ ಅಸುರಜನ ವ್ಯಾಸರ ತಪಸ್ಸಿನ ಫಲವಾಗಿ ಶಿವ ಅವರ ಮಗ ಶುಕಮುನಿಯಾಗಿ ಜನಿಸಿದ ಎಂದು ತಪ್ಪು ತಿಳಿಯು–ವಂತಾಯಿತು. ಇದು ಶ್ರೀಕೃಷ್ಣನ ಕೈಲಾಸಯಾತ್ರಾಪ್ರಸಂಗದಂತೆ ಮೋಹಕ ಎಂಬುದು ನಿರ್ಣಯ.

---

೧. 'ನಿತ್ಯತೃಪ್ತಃ ಪರಾನಂದೋ ಯೋऽವ್ಯಯಃ ಪರಮೇಶ್ವರಃ ।
ಯಸ್ಯ ಪುತ್ರಫಲಂ ನೈವ ಯಜ್ಜಾತಂ ಜಗದೀದೃಶಮ್ ।
ಯದಧೀನಶ್ರಿಯೋऽಪಾಂಗಾದ್ಬ್ರಹ್ಮರುದ್ರಾದಿಸಂಸ್ಥಿತಿಃ ।
ಸ ಪುತ್ರಾರ್ಥಂ ತಪಸ್ತೇಪೇ ವ್ಯಾಸೋ ರುದ್ರಸ್ಯ ಚೇಶ್ವರಃ ।
ಕಾತರ್ಯಂ ದರ್ಶಯಾಮಾಸ ಏಯೋಗೇ ಲೌಕಿಕಂ ಹರಿಃ' ॥ – ಭಾ.ತಾ.(೧/೨/೨)

[೧]ವಿಮೋಹನಾಯಾಸುರಸರ್ಗಿಣಾಂ ಪ್ರಭುಃ
ಸ್ವಯಂ ಕರೋತೀವ ತಪಃ ಪ್ರದರ್ಶಯೇತ್ ।
ಕಾಮಾದಿದೋಷಾಂಶ್ಚ ಮೃಷೈವ ದರ್ಶಯೇತ್
ನ ತಾವತಾ ತೇಽಸ್ಯ ಹಿ ಸಂತಿ ಕುತ್ರಚಿತ್ ॥ ೭೦ ॥

ಅ: ಸರ್ವಸಮರ್ಥರಾದ ವ್ಯಾಸರು ಅಸುರಸ್ವಭಾವದ ಜನರಿಗೆ ಮೋಹ ಕವಿಸಲೆಂದು ತಾನೇ ತಪಸ್ಸು ಮಾಡಿದಂತೆ ತೋರಿಸಿಕೊಂಡರು; ಕಾಮಾದಿದೋಷಗಳನ್ನು ಹೊಂದಿರುವಂತೆ ನಡೆದುಕೊಂಡರು. ಆದರೆ ಆ ದೋಷಗಳು ಎಲ್ಲೂ ಸರ್ವಥಾ ಅವರಿಗೆ ಇರುವಂತಹವಲ್ಲ.

ಎ: ಅಸುರಜನವೋಹನಕ್ಕೆಂದು ಶ್ರೀವ್ಯಾಸರು ಹಾಗೆ ತಾವೇ ತಪಸ್ಸು ಮಾಡಿದಂತೆ ತೋರಿಸಿಕೊಂಡರು. ಮುಂದೆ ಹೆಣ್ಣು ಗಿಳಿರೂಪದಲ್ಲಿ ಬಂದ ಘೃತಾಚೀ ಎಂಬ ಅಪ್ಸರೆಯನ್ನು ಕಂಡು ವೋಹಗೊಂಡಂತೆ ನಟಿಸಿದ್ದು ಇದೇ ಕಾರಣಕ್ಕಾಗಿ. ಆದರೆ ಇಂತಹ ಯಾವ ದೋಷಗಳೂ ಅವರಲ್ಲಿ ಯಾವ ಕಾಲಕ್ಕೂ ಸರ್ವಥಾ ಇರವು ಎಂಬುದು ಸಿದ್ಧಾಂತ.

ಘೃತಾಚಿಯ ನಿಮಿತ್ತದಿಂದ ಶುಕಮುನಿಯ ಅವತಾರ

ತತಸ್ತ್ವರಣ್ಯೋಃ[೨] ಸ ಬಭೂವ ಪುತ್ರಕಃ
ಶಿವೋಽಸ್ಯ ಸೋಽಭೂಚ್ಛುಕನಾಮಧೇಯಃ ।
[೩]ಶುಕೀ ಹಿ ಭೂತ್ವಾ ಹ್ಯಗಮದ್ಘೃತಾಚೀ
ವ್ಯಾಸಂ ವಿಮಥ್ನಂತಮುತಾರಣೀ[೪] ತಮ್ ॥ ೭೧ ॥

ಅ: ಬಳಿಕ ಆ ಶಿವ ಎರಡು ಅರಣಿಗಳಲ್ಲಿ ಅವರಿಗೆ ಶುಕ ಎಂಬ ಹೆಸರಿನ ಪುತ್ರನಾಗಿ ಜನಿಸಿದ. ಘೃತಾಚಿಯು ಅರಣಿಮಥನಕಾರ್ಯದಲ್ಲಿ ತೊಡಗಿದ್ದ ವ್ಯಾಸರ ಬಳಿಗೆ ಹೆಣ್ಣು ಗಿಳಿಯ ರೂಪದಿಂದ ತೆರಳಿದ್ದಳಲ್ಲವೆ!

---

೧. ವಿಮೋಹಯನ್ನಿತ್ಯತ್ರೋಕ್ತವಿಮೋಹಃ ಕಸ್ಮೇತ್ಯತ ಆಹ – ವಿಮೋಹನಾಯೇತಿ । ''ಸರ್ಗಃ ಸ್ವಭಾವ-ನಿರ್ಮೋಕನಿಶ್ಚಯಾಧ್ಯಾಯಸೃಷ್ಟಿಷು'' ಇತಿ ವಚನಾತ್ ಅಸುರಸರ್ಗಿಣಾಮಸುರಸ್ವಭಾವಿನಾಮಿತ್ಯರ್ಥಃ। – (ವಾ.)

೨. ಹಿಶಬ್ದೇನ ''ನ ಕರ್ಮಣಾ ಲಿಪ್ಯತೇ ಪಾಪಕೇನ'', ''ನ ಸ್ತ್ರೀಕೃತಂ ಕಶ್ಮಲಮಶ್ನುವೀತೇ''ತ್ಯಾದಿಶ್ರುತಿಸ್ಮೃತಿಪ್ರಸಿದ್ಧಿಂ ಸೂಚಯತಿ । ತೇನ ಅರಣ್ಯೋರ್ಮಥನಸಮಯೇ ರೇತಃ ಪಾತೋ ಜಾತ ಇತಿ ಕಥಾ ಅಸುರಜನಮೋಹನಾರ್ಥಾ । ರೇತಸ್ತು ಪ್ರಾಕೃತಂ ಸೃಷ್ಟಮೇವ ನ ಸ್ವರೇತ ಇತಿ ಸಿದ್ಧಮ್। ಅನ್ಯಥಾ ಸ್ತ್ರೀಕೃತಂ ಕಶ್ಮಲಂ ನಾಶ್ನುವೀತೇತಿ ಸ್ಪಷ್ಟವಚನವ್ಯಾಘಾತಾದಿತಿ ಭಾವಃ ॥ – (ವಾ.)

ವಿ: ೧) ವ್ಯಾಸಾನುಗ್ರಹದಂತೆ ಶಿವ ಶುಕರೂಪದಿಂದ ಅವರಿಗೆ ಪುತ್ರನಾಗಿ ಜನಿಸಿದ. ಅದು ನಡೆದದ್ದು ಹೀಗೆ : ಒಮ್ಮೆ ವ್ಯಾಸರು ಎರಡು ಅರಣಿಗಳನ್ನು ಮಥನಮಾಡುತ್ತಿದ್ದಾಗ, ಘೃತಾಚೀ ಎಂಬ ಅಪ್ಸರೆಯು ಅವರ ಅನುಗ್ರಹಕ್ಕೆ ಪಾತ್ರಳಾಗಲೆಂದು ಹೆಣ್ಣುಗಿಳಿಯ ರೂಪದಲ್ಲಿ ತೆರಳಿದಳು. ಅವಳತ್ತ ನೋಡುತ್ತಲೇ ವ್ಯಾಸರು ಮೋಹಗೊಂಡಂತೆ ನಟಿಸಿದರು; ಆಗ ಶುಕಮುನಿ ಜನಿಸಿದ. ಶುಕಮುನಿಗೆ ಆ ಹೆಸರು ಬರಲು ಘೃತಾಚಿ ಹಾಗೆ ಹೆಣ್ಣುಗಿಳಿಯ ರೂಪದಲ್ಲಿ ಬಂದದ್ದೇ ಕಾರಣವಾಯಿತು.

೨) ಇಲ್ಲಿಯ 'ಹಿ'ಶಬ್ದ ಶ್ರೀವೇದವ್ಯಾಸರು ನಿಜಕ್ಕೂ ಕಾಮುಕರಾದದ್ದಲ್ಲ ಎಂಬುದನ್ನು ದೃಢಪಡಿಸುತ್ತದೆ. ಲೋಕದಲ್ಲಿ ಸಾಮಾನ್ಯಮನುಷ್ಯರಿಗೂ, ಮಾನವೇತರರಾದ ಹೆಣ್ಣು ಗಿಳಿ ಮೊದಲಾದವುಗಳ ದರ್ಶನದಿಂದ ಕಾಮ ಹುಟ್ಟಲಾರದು; ಎಂದ ಮೇಲೆ ವ್ಯಾಸರೆಂತು ಅದನ್ನು ಮೋಹಿಸಿಯಾರು? ಎಂಬ ಯುಕ್ತಿಇದರಿಂದ ಸೂಚಿತ.

ಅಕಾಮಯನ್ ಕಾಮುಕವತ್ ಸ ಭೂತ್ವಾ
ತಯಾऽರ್ಥಿತಸ್ತಂ ಶುಕನಾಮಧೇಯಮ್ ।
ಚಕ್ರೇ ಹ್ಯರಣ್ಯೋಸ್ತನಯಂ ಚ ಸೃಷ್ಟ್ವಾ
ವಿಮೋಹಯಂಸ್ತತ್ತ್ವಮಾರ್ಗೇಷ್ವಯೋಗ್ಯಾನ್ ॥ ೭ ॥

ಅ: ಅವಳನ್ನು ಸ್ವತಃ ಕಾಮಿಸದಿದ್ದರೂ, ಕಾಮಿಸಿದವರಂತೆ ನಟಿಸುತ್ತಾ ಎರಡು ಅರಣಿಗಳಲ್ಲಿ ಪುತ್ರನನ್ನು ಪಡೆದು, ಅವಳ ಪ್ರಾರ್ಥನೆಯಂತೆ, ಅವನಿಗೆ [೬]ಶುಕ ಎಂದು ನಾಮಕರಣ ಮಾಡಿದರು; ತತ್ತ್ವದ ಹಾದಿಯಲ್ಲಿ ಯೋಗ್ಯರಲ್ಲದವರನ್ನು ಆ ಮೂಲಕ ಮೋಹಕ್ಕೊಳಗಾಗಿಸಿದರು.

---

೩. ತತಸ್ತ್ವರಣ್ಯೋಃ ಸ ಬಭೂವ ಪುತ್ರಕ ಇತಿ–

ಪರಾಶರಕುಲೋದ್ಭೂತಃ ಶುಕೋ ನಾಮ ಮಹಾಯಶಾಃ ।
ಭವಿಷ್ಯತಿ ಯುಗೇ ತಸ್ಮಿನ್ ಮಹಾಯೋಗೀ ದ್ವಿಜರ್ಷಭಃ ॥
ವ್ಯಾಸಾದರಣಿಸಂಭೂತೋ ವಿಧೂಮೋऽಗ್ನಿರಿವ ಜ್ವಲನ್ ।
ಸ ತಸ್ಯಾಂ ಪಿತೃಕನ್ಯಾಯಾಂ ಪೀವರ್ಯಾಂ ಜನಯಿಷ್ಯತಿ ॥.... ಇತಿ ಹರಿವಂಶೇ । –(ಮ.)

೪. ಶುಕೀ ಹಿ ಭೂತ್ವೇತಿ ಹಿಶಬ್ದೇನ ಮನುಷ್ಯಾಣಾಂ ಮನುಷ್ಯಸ್ತ್ರೀರೂಪದರ್ಶನಾತ್ ಕಾಮಸಂಭವೇऽಪಿ ಶುಕಜಾತೀಯಸ್ತ್ರೀರೂಪದರ್ಶನೇ ಮಾನುಷಾಣಾಮಪಿ ಕಾಮಸ್ಯಾದೃಷ್ಟಚರತ್ವಾದಿತಿ ಯುಕ್ತಿಪ್ರಸಿದ್ಧಿಂ ಸೂಚಯತಿ ॥ –(ವಾ.)

೫. ...ಮುತಾರಣೇಂ – (ಪಾಠಾಂತರ)

ಶುಕಂ ತಮಾಶು ಪ್ರವಿವೇಶ ವಾಯು-
ರ್ವ್ಯಾಸಸ್ಯ ಸೇವಾರ್ಥಮಥಾಸ್ಯ ಸರ್ವಮ್ ।
ಜ್ಞಾನಂ ದದೌ ಭಗವಾನ್ ಸರ್ವವೇದಾನ್
ಸಭಾರತಂ ಭಾಗವತಂ ಪುರಾಣಮ್ ॥ ೭೩ ॥

ಅ: ಆ ಶುಕನೊಳಗೆ ಶ್ರೀವೇದವ್ಯಾಸರ ಸೇವೆಗೆಂದು ಶ್ರೀವಾಯುದೇವರು ಕೂಡಲೇ ಪ್ರವೇಶಿಸಿದರು. ಬಳಿಕ ಭಗವಂತನಾದ ಶ್ರೀವ್ಯಾಸರು ಅವರಿಗೆ ಜ್ಞಾನವನ್ನು ನೀಡಿದರು. ಸಕಲ ವೇದಗಳನ್ನೂ, ಭಾರತವನ್ನೂ, ಭಾಗವತಾದಿವೈಷ್ಣವಪುರಾಣಗಳನ್ನೂ ಉಪದೇಶಿಸಿದರು.

ವಿ: ೧) ವ್ಯಾಸರು ನಾರಾಯಣನಾದ್ದರಿಂದ ಅವರಿಗೆ ಸಾಕ್ಷಾತ್ ಪುತ್ರನಾಗಿ ಜನಿಸುವ ಅರ್ಹತೆ, ಅವರಿಂದ ಸಾಕ್ಷಾತ್ ತತ್ತ್ವಶ್ರವಣ ಮಾಡುವ ಯೋಗ್ಯತೆ ಋಜುಗಳದು ಮಾತ್ರ. ಅದಕ್ಕೆಂದೇ ಶುಕಮುನಿಯೊಳಗೆ ವಾಯುದೇವರು[೭] ಆವೇಶಿಸಿದರು. ಅದರಿಂದಾಗಿ ಶುಕಮುನಿಗೆ ವ್ಯಾಸಪುತ್ರತ್ವ ಸಿದ್ಧಿಸಿದಂತೆ, ಅವರಿಂದ ಸಾಕ್ಷಾತ್ ಶ್ರವಣಭಾಗ್ಯವೂ ಲಭಿಸಿತು.

೨) ದ್ರೋಣಪುತ್ರನಾಗಿ ಜನಿಸಿದ್ದಕ್ಕೆ ಅವರು ಕಲಿಯಾದ ದುರ್ಯೋಧನನಿಂದ ಹಾಲಿನ ರೂಪದಲ್ಲಿ ಹಾಲಾಹಲ ಕುಡಿಯುವಂತಾಯಿತು. ವ್ಯಾಸಪುತ್ರನಾಗಿ ಜನಿಸಿದ್ದಕ್ಕೆ ವಾಯುದೇವರ ಅನುಗ್ರಹದಿಂದಾಗಿ ಭಾಗವತಾದಿ ಸಚ್ಛಾಸ್ತ್ರಾಮೃತವನ್ನು ಪಡೆಯುವ ಭಾಗ್ಯ ಲಭಿಸಿತು. ದ್ರೋಣರು ಬೃಹಸ್ಪತಿಯ ಅವತಾರ; ಬೃಹಸ್ಪತಿ ಚಾರ್ವಾಕಮತಪ್ರವರ್ತಕ. ಅವರ ಪುತ್ರನಾಗಿ–ದ್ದಕ್ಕೆ ದುರ್ಯೋಧನನಂತಹ ಚಾರ್ವಾಕಮಿತ್ರನ ಸಹವಾಸ. ವ್ಯಾಸರು ಭಗವಂತ; ಅವರು ಮೋಕ್ಷ ನೀಡುವ ಪರದೈವ. ಅವರ ಪುತ್ರನಾಗಿದ್ದಕ್ಕೆ ವಾಯುದೇವರ ಆವೇಶವನ್ನು ಪಡೆಯುವ ಭಾಗ್ಯ; ವ್ಯಾಸೋಪದೇಶದ ಶ್ರವಣದ ಭಾಗ್ಯ. ಅಂತೂ ಅವರ ತಪಸ್ಸು ಸಾರ್ಥಕವಾಯಿತು.

೩) ಇಲ್ಲಿ 'ಭಾಗವತಂ ಪುರಾಣಂ' ಎಂಬುದಕ್ಕೆ ಶ್ರೀಮದ್ಭಾಗವತಪುರಾಣ ಎಂದು ಮಾತ್ರವಲ್ಲದೆ, 'ಭಗವತ್ಪರವಾದ ಸಕಲವೈಷ್ಣವಪರಾಣಗಳು'[೮] ಎಂದರ್ಥ.

---

೬. ಅಹಂಕಾರಾತ್ಮಕೋ ರುದ್ರಃ ಶುಕೋ ದ್ವೈಪಾಯನಾತ್ಮಜಃ ॥ ಇತಿ ಸ್ಕಾಂದೇ । – ಭಾ.ತಾ. (೧/೨/೨)

೭. ಅಥ ವಾಯುಪ್ರವೇಶಾನಂತರಂ ಸರ್ವಂ ಸರ್ವತತ್ತ್ವವಿಷಯಜ್ಞಾನಂ ದದೌ । – (ವ.)

೮. ಭಾಗವತಂ ಪುರಾಣಮಿತ್ಯತ್ರ ಭಾಗವತಂ = ಭಗವತ್ಸಂಬಂಧಿ ಪುರಾಣಂ ।

'ವೈಷ್ಣವಂ ನಾರದೀಯಂ ಚ ತಥಾ ಭಾಗವತಂ ಶುಭಮ್ ।
ಗಾರುಡಂ ಚ ತಥಾ ಪಾದ್ಮಂ ವಾರಾಹಂ ಶುಭದರ್ಶನೇ ॥'

ಇತಿ ಪಾದ್ಮಪುರಾಣೋಕ್ತಸ್ಯಾತ್ತ್ವಿಕಪುರಾಣಷಟ್ಕಮ್ । ಜಾತಾವೇಕವಚನಮಿತಿ ಭಾವಃ ॥ – (ವಾ.)

ಪ್ರಮುಖ ವ್ಯಾಸಶಿಷ್ಯರು

ಶೇಷೋಽಥ[೧] ಪೈಲಂ ಮುನಿಮಾವಿಶತ್ ತದಾ
ವೀಶಃ ಸುಮಂತುಮಪಿ ವಾರುಣಿಂ ಮುನಿಮ್।
ಬ್ರಹ್ಮಾಽಽವಿಶತ್ ತಮುತ ವೈಶಂಪಾಯನಂ
ಶಕ್ರಶ್ಚ ಜೈಮಿನಿಮಥಾವಿಶತ್ ಪ್ರಭುಃ ॥ ೭೪ ॥

ಅ: ಅನಂತರ ಶೇಷದೇವರು ಪೈಲಮುನಿಯೊಳಗೆ ಪ್ರವೇಶಿಸಿದರು. ಪಕ್ಷಿರಾಜನಾದ ಗರುಡ ವರುಣಪುತ್ರನಾದ ಸುಮಂತುಮುನಿಯೊಳಗೆ ಪ್ರವೇಶಿಸಿದ. ಬ್ರಹ್ಮದೇವರು ವೈಶಂಪಾಯನನೊಳಗೂ, ಸಮರ್ಥನಾದ ಇಂದ್ರ ಜೈಮಿನಿಯೊಳಗೂ ಪ್ರವೇಶಿಸಿದರು.

ವಿ: ೧) ವಾಯುದೇವರು ವ್ಯಾಸಪುತ್ರನಾದ ಶುಕಮುನಿಯೊಳಗೆ ಪ್ರವೇಶಿಸಿದಂತೆ, ಬ್ರಹ್ಮಾದಿದೇವತೆಗಳು ವ್ಯಾಸಶಿಷ್ಯರಾದ ಪೈಲ, ಸುಮಂತು ಮೊದಲಾದವರೊಳಗೆ ಪ್ರವೇಶಿಸಿದರು ಎಂದು ಇಲ್ಲಿ ನಿರೂಪಿಸಿರುವರು. ವ್ಯಾಸರಿಂದ ಸಾಕ್ಷಾತ್ ಶ್ರವಣ ಮಾಡುವ ಮುಖ್ಯ ಅರ್ಹತೆ ಬ್ರಹ್ಮಾದಿಋಜುಗಳದು, ಬಳಿಕ ಇತರ ದೇವತೆಗಳದು ಎಂಬುದು ಇಲ್ಲಿಯ ತತ್ತ್ವ.

೨) ಇಲ್ಲಿ 'ವಾರುಣಿಂ' ಎಂಬುದಕ್ಕೆ ವರುಣಪುತ್ರನಾದ ಸುಮಂತು ಎಂದು ವಾದಿರಾಜೀಯ; ಸುಮಂತು ಸಹ ವರುಣಪುತ್ರನಾದ್ದರಿಂದ ಇದು ಸ್ವರಸ ಎಂದು ಅವರ ವಿವರಣೆ. 'ವಾರುಣಿ' ಪದದಿಂದ ವರುಣಪುತ್ರನಾದ ಭೃಗು ಮತ್ತು ಸುಮಂತು ಇಬ್ಬರೂ ವಿವಕ್ಷಿತ ಎಂದು

---

೧. ಶೇಷೋಽಥ ಪೈಲಮಿತ್ಯತ್ರ ವೀಶೋಽಪಿ ವಾರುಣಂ = ವರುಣಪುತ್ರಂ ಸುಮಂತುಂ ಆವಿಶತ್ । ಪ್ರವರ್ತಕವಿಭಾಗಕಥನೇ ಭೃಗೋರಕಥನಾತ್ ಚತುರ್ಣಾಂ ದೇವಾನಾಂ ಚತುರ್ಷ್ವೇವ ಪ್ರವೇಶಸ್ಯೋಚಿತತ್ವಾಚ್ಚೋಕ್ತೈವ ಯೋಜನಾ ಗ್ರಂಥಕಾರಸ್ಯಾಭಿಮತಾ । ''ಅಥರ್ವಾಂಗಿರಸಾಮಾಸೀತ್ ಸುಮಂತುರ್ವಾರುಣೋ ಮುನಿಃ'' ಇತಿ ಭಾಗವತೇ ವಾರುಣೋ ವರುಣಪುತ್ರಃ ಸುಮಂತುರ್ನಾಮ ಮುನಿರಿತಿ ತಟ್ಟೀಕಾಯಾಂ ಚ ಸ್ಪಷ್ಟಮುದಿತತ್ವಾದಪಿ ಸುಮಂತುರೇವ ವಾರುಣಿಃ । ನ ತು ಭೃಗುರಿತ್ಯರ್ಥಃ । ಸೂರ್ಯನಾರದಾದ್ಯಾಸ್ತು ಸಾಕ್ಷಾದ್ವ್ಯಸಮುಖಾತ್ ಶುಕಮುಖಾದ್ವಾ ಪಾಠಯಿತ್ವಾ ಪ್ರವರ್ತಕಾ ಇತ್ಯತೋ ನ ತೇಷಾಮಾವೇಶಃ ಕಥಿತಃ । ಅತ ಏವ ನಾರದಂ ಪಾಠಯಿತ್ವೇತ್ಯತ ಆಕೃಷ್ಯ ಸೂರ್ಯಂ ಪಾಠಯಿತ್ವೇತಿ ಯೋಜ್ಯಮ್ । ಬ್ರಹ್ಮೋತ = ಬ್ರಹ್ಮಾ ಚ । ತಂ = ಭಾರತಪ್ರವರ್ತಕತ್ವೇನ ಪ್ರಸಿದ್ಧಂ ವೈಶಂಪಾಯನಮ್ । ಸಾಕ್ಷಾದ್ವ್ಯಸಮುಖಾದೇವ ಬ್ರಹ್ಮಾದಿಭಿರ್ಮೂಲರೂಪೇಣೈವ ಅವಿಭಕ್ತಸಕಲವೇದಾನಾಂ ಶ್ರುತತ್ವಾತ್ತನರ್ವಿಭಕ್ತವೇದಶ್ರವಣಾಯ ಕುತೋ ಮುನಿಷು ಪ್ರವೇಶ ಇತಿ ಚೇತ್ತತ್ಕಂ, ಆದಿವೇದೇ ಸಂಕಲಯ್ಯೈಕತ್ರ ಸ್ಥಿತರ್ಗ್ಯಜುಃಸಾಮಾಥರ್ವಭ್ಯಃ ಏಕಾಂತವಿಜಾತೀಯವಾಕ್ಯಾನ್ಯುದ್ಧೃತ್ಯ । ಋಗಾದಿಶಾಖಾಕರಣಕೌಶಲಾಭ್ಯಾಸಾರ್ಥಂ ಮುನೀನಾಂ ಪ್ರತ್ಯೇಕಶಾಖಾಪ್ರವರ್ತಕತ್ವಶಕ್ತಿದಾನಾಯ ಚ ಪ್ರವೇಶಸಂಭವಾದಿತ್ಯಸ್ಯ ವಿವೇಕಿಭಿರ್ಮೋದ್ಧುಂ ಶಕ್ಯತ್ವಾತ್ ॥ –(ವಾ.)

ಎಂದು [೧]ಜನಾರ್ದಭಟ್ಟೀಯ ಹಾಗೂ ವರದರಾಜೀಯ. ಭೃಗು ವರುಣಪುತ್ರನಾಗಿರುವುದು ಪ್ರಸಿದ್ಧ. ('ಭೃಗುರ್ವೈ ವಾರುಣಿಃ'). ಭೃಗುವಮುನಿಯಲ್ಲೂ ವೈಶಂಪಾಯನರಲ್ಲೂ ಬ್ರಹ್ಮನ ಆವೇಶ ಎಂದು ಈ ಎರಡು ವ್ಯಾಖ್ಯಾನಗಳ ನಿರೂಪಣೆ.

ಕೃಷ್ಣಸ್ಯ [೨]ಪಾದಪರಿಸೇವನೋತ್ಸುಕಾಃ
ಸುರೇಶ್ವರಾ ವಿವಿಶುರಾಶು ತಾನ್ ಮುನೀನ್ ।
ಸಮಸ್ತವಿದ್ಯಾಃ ಪ್ರತಿಪಾದ್ಯ ತೇಷ್ವಸೌ
ಪ್ರವರ್ತಕಾಂಸ್ತಾನ್ ವಿದಧೇ ಹರಿಃ ಪುನಃ ॥ ೭೫ ॥

ಅ: ವಾಸಿಷ್ಠಕೃಷ್ಣರಾದ ಶ್ರೀವೇದವ್ಯಾಸರ ಪಾದಸೇವೆಯನ್ನು ವಿಶೇಷವಾಗಿ ಮಾಡುವ ಬಯಕೆಯಿಂದ ದೇವಶ್ರೇಷ್ಠರುಗಳು ಆ ಮುನಿಗಳಲ್ಲಿ ಹಾಗೆ ಕೂಡಲೆ ಪ್ರವೇಶಿಸಿದರು. ಅವರಿಗೆ ವ್ಯಾಸರು ಸಮಸ್ತಶಾಸ್ತ್ರಗಳನ್ನೂ ಉಪದೇಶಿಸಿ ಅವರನ್ನು ಆಯಾ ಶಾಸ್ತ್ರಗಳಿಗೆ ಪ್ರವರ್ತಕರನ್ನಾಗಿ ನೇಮಿಸಿದರು.

ಋಗಾದಿಶಾಸ್ತ್ರಗಳ ಪ್ರವರ್ತನೆ

ಋಚಾಂ ಪ್ರವರ್ತಕಂ ಪೈಲಂ ಯಜುಷಾಂ ಚ ಪ್ರವರ್ತಕಮ್ ।
ವೈಶಂಪಾಯನಮೇವೈಕಂ ದ್ವಿತೀಯಂ ಸೂರ್ಯಮೇವ ಚ ॥ ೭೬ ॥

ಅ: ಋಗ್ವೇದಕ್ಕೆ ಪ್ರವರ್ತಕನನ್ನಾಗಿ ಪೈಲನನ್ನೂ, [೩]ಯಜುರ್ವೇದಕ್ಕೆ ಒಬ್ಬ ಪ್ರವರ್ತಕನನ್ನಾಗಿ ವೈಶಂಪಾಯನನನ್ನೂ, ಮತ್ತೊಬ್ಬ ಪ್ರವರ್ತಕನಾಗಿ ಸೂರ್ಯನನ್ನೂ ಮಾಡಿದರು.

---

೧. ವೀಶೋ ಗರುಡಃ ಸುಮಂತುಂ ಋಷಿಂ ವಾರುಣಂ ಮುನಿಮಪಿ ವರುಣಪುತ್ರಂ ಭೃಗುಋಷಿಮಪಿ ಇತ್ಯುಭಾವಪಿ ಆವಿಶತ್। ಬ್ರಹ್ಮಾ ತಮುತ ಗರುಡಾವಿಷ್ಟವಾರುಣಮುನಿಮಪಿ ವೈಶಂಪಾಯನಋಷಿಂ ಚೇತ್ಯುಭಾವಪಿ ಆವಿಶತ್। – (ಜ.)

ವೀಶೋ ಗರುಡಃ ಸುಮಂತಂ ವಾರುಣಂ ವರುಣಸ್ಯಾಪತ್ಯಂ ಭೃಗುಮುನಿಮಪೀತಿ ಉಭೌ ಆವಿಶತ್ । ಬ್ರಹ್ಮಾ ತಮುತ ವಾರುಣಂ ವೈಶಂಪಾಯನಂ ಚೇತ್ಯುಭೌ ಆವಿಶತ್ । – (ವ.)

೨. ಫಲಾಂತರಮಸ್ತೀತ್ಯಾಹ । ಕೃಷ್ಣಸ್ಯ ಪಾದಪರಿಸೇವನೋತ್ಸುಕಾ ಇತಿ । ಸಮಸ್ತವಿದ್ಯಾಃ ಪ್ರತಿಪಾದ್ಯೇತ್ಯತ್ರಾಪಿ ಪ್ರತಿಪಾದ್ಯ="ಪದ ಗತಾ" ವಿತಿ ಧಾತೋಃ ಪ್ರಾಪಯಿತ್ವಾ ಉಪದಿಶ್ಯೇತ್ಯರ್ಥಃ॥ – (ವಾ.)

೩. ಶುಕ್ಲಕೃಷ್ಣಭೇದೇನ ದ್ವಿವಿಧಯಜುಷಾಂ ಮಧ್ಯೇ ಯಜುಷಾಂ = ಕೃಷ್ಣಯಜುಷಾಂ ಏಕಂ ವೈಶಂಪಾಯನಂ ಪ್ರವರ್ತಕಂ ಚಕ್ರೇ । ಯಜುಷಾಂ = ಶುಕ್ಲಯಜುಷಾಂ ದ್ವಿತೀಯಂ ಸೂರ್ಯಮೇವ ಪ್ರವರ್ತಕಂ ಚಕ್ರ ಇತ್ಯಾವೃತ್ತ್ಯಾ ಯೋಜನಾ । ಸರ್ವತ್ರಾಪಿ ಶಾಖಾಭೇದಸದ್ಭಾವಾದ್ಬಹುವಚನಮ್ ॥ – (ವಾ.)

ವಿ: ೧) ಯಜುರ್ವೇದ ಶುಕ್ಲಯಜುರ್ವೇದ ಮತ್ತು ಕೃಷ್ಣಯಜುರ್ವೇದ ಎಂಬುದಾಗಿ ಎರಡು ಬಗೆ. ಅವುಗಳಲ್ಲಿ ಶುಕ್ಲಯಜುರ್ವೇದಕ್ಕೆ ಸೂರ್ಯನನ್ನೂ, ಕೃಷ್ಣಯಜುರ್ವೇದಕ್ಕೆ ವೈಶಂಪಾಯನ-ರನ್ನೂ ಪ್ರವರ್ತಕರನ್ನಾಗಿ ಮಾಡಿದರು ಎಂದು ತಿಳಿಯಬೇಕು.

೨) ಋಗಾದಿಸರ್ವವೇದಗಳಲ್ಲೂ ಅನೇಕಶಾಖೆಗಳಿರುವುದರಿಂದ 'ಋಚಾಂ', 'ಯಜುಷಾಂ' ಎಂಬುದಾಗಿ ಬಹುವಚನ ಪ್ರಯೋಗ ಮಾಡಿರುವರು.

ಚಕ್ರೇಽಥ ಜೈಮಿನಿಂ [೧]ಸಾಮ್ನಾಮಥರ್ವಾಂಗಿರಸಾಮಪಿ ।
ಸುಮಂತುಂ ಭಾರತಸ್ಯಾಪಿ ವೈಶಂಪಾಯನಮಾದಿಶತ್ ॥ ೭೭ ॥

[೨]ಪ್ರವರ್ತನೇ ಮಾನುಷೇಷು [೩]ಗಂಧರ್ವಾದಿಷು ಚಾತ್ಮಜಮ್ ।
ನಾರದಂ ಪಾಠಯಿತ್ವಾ ಚ ದೇವಲೋಕಪ್ರವೃತ್ತಯೇ ॥ ೭೮ ॥

ಅ: ಅನಂತರ ಜೈಮಿನಿಯನ್ನು ಸಾಮವೇದಕ್ಕೂ, ಸುಮಂತುವನ್ನು ಅಥರ್ವಾಂಗಿರಸ-ವೇದಕ್ಕೂ, ವೈಶಂಪಾಯನರನ್ನು ಮತ್ತೆ ಮನುಷ್ಯಲೋಕದಲ್ಲಿ ಮಹಾಭಾರತಕ್ಕೂ ಪ್ರವರ್ತಕ-ರನ್ನಾಗಿ ನೇಮಿಸಿದರು. ತಮ್ಮ ಪುತ್ರನಾದ ಶುಕಮುನಿಯನ್ನು ಗಂಧರ್ವಾದಿಗಳಲ್ಲಿ ಪ್ರಸಾರಕ್ಕೆ ಆದೇಶಿಸಿದರು. ಅದನ್ನು ನಾರದರಿಗೂ ಉಪದೇಶಿಸಿ, ದೇವಲೋಕದಲ್ಲಿ ಅದರ ಪ್ರಸಾರಕ್ಕೆಂದು ಅವರನ್ನು ನೇಮಿಸಿದರು.

ವಿ: ೧) ವೈಶಂಪಾಯನ, ಶುಕಮುನಿ ಹಾಗೂ ನಾರದಮುನಿ – ಈ ಮೂವರನ್ನೂ ಕ್ರಮವಾಗಿ ಮನುಷ್ಯಾದಿಮೂರುಲೋಕಗಳಲ್ಲಿ ವೇದಾದಿಸಕಲಶಾಸ್ತ್ರಗಳ ಪ್ರವರ್ತಕರನ್ನಾಗಿಸಿದರೆಂದು ವಾದಿರಾಜೀಯದಲ್ಲಿದೆ.

---

೧. ಅಥರ್ವಾಂಗಿರಸಾಮಪಿ = ಅಥರ್ವಾಂಗಿರಸಾಂ ಚ ಸುಮಂತುಂ ಪ್ರವರ್ತಕಂ ಚಕ್ರೇ । ವೈಶಂಪಾಯನಸ್ಯ ಯಜುಷಾಂ ಭಾರತಸ್ಯ ಚ ಪ್ರವರ್ತಕತ್ವಾದ್ಭಾರತಸ್ಯಾಪೀತ್ಯುಕ್ತಮ್ ॥ – (ವಾ.)

ಸಪ್ತಶಾಖಾಭೇದಾದೃಚಾಮಿತಿ ಸರ್ವತ್ರ ಬಹುವಚನಮ್ । ಷಡಶೀತಿಭೇದಾದ್ಯಜುಷಾಂ ಸಹಸ್ರ- ಭೇದಾತ್ ಸಾಮ್ನಾಂ ನವಭೇದಾದಥರ್ವಾಂಗಿರಸಾಮಿತಿ ಸರ್ವತ್ರಬಹುವಚನಮ್ । – (ಜ.)

೨. ಪ್ರವರ್ತನೇ ಮಾನುಷೇಷು ಗಂಧರ್ವಾದಿಷು ಚಾತ್ಮಜಮಿತ್ಯತ್ರ ಆತ್ಮಜಂ ಶುಕಂ ವೇದಾದೀನಾಂ ಪ್ರವರ್ತನಾ-ಯಾದಿಶತ್ । ಶುಕಶಿಷ್ಯಪರೀಕ್ಷಿದಾದಿಚಕ್ರವರ್ತಿನಾಂ ಮಾನುಷೇಷ್ವಂತರ್ಭಾವಾನ್ಮಾನುಷೇಷ್ವಿತ್ಯುಕ್ತಮ್। ದೇವಲೋಕ-ಪ್ರವೃತ್ತಯ ಇತ್ಯತ್ರ ದೇವಲೋಕೇ ಸ್ವರ್ಗೇ ವಾಯುಶೇಷಗರುಡಬ್ರಹ್ಮಶಕ್ರಸೂರ್ಯಾದಿವ್ಯತಿರಿಕ್ತದೇವೇಷು । ವೇದಾದಿಪ್ರವರ್ತನಾಯ ನಾರದಂ ಪಾಠಯಿತ್ವಾಽಽದಿಶದಿತಿ ಯೋಜನಾ । ತೇಷಾಂ ಸಾಕ್ಷಾಚ್ಛ್ರೋತೃಷು ಋಷಿ-ಷ್ವಪ್ರವೇಶಾತ್ ಸಾಕ್ಷಾದ್ವ್ಯಾಸಮುಖಾದಶ್ರವಣಾಚ್ಚ ತೇಷು ಪ್ರವರ್ತನಾಯ ನಾರದಸ್ಯಾಜ್ಞೇತಿ ಭಾವಃ॥ – (ವಾ.)

೩. ಗಂಧರ್ವಾದಿಷು = ಆದಿಪದೇನ ಸಿದ್ಧಚಾರಣಾದಯಃ । – (ಜ.)

೨) ಈ ಮೂವರನ್ನೂ ಕ್ರಮವಾಗಿ ಮನುಷ್ಯಲೋಕ, ಗಂಧರ್ವಲೋಕ ಹಾಗೂ ದೇವಲೋಕಗಳಲ್ಲಿ ಮಹಾಭಾರತಪ್ರಸಾರಕರನ್ನಾಗಿ ನೇಮಿಸಿದರು ಎಂದು ಜನಾರ್ದನೀಯ ಹಾಗೂ ವರದರಾಜೀಯದಲ್ಲಿದೆ.

೩) ದೇವಲೋಕ ಎಂದರೆ ವಾಯು, ಶೇಷ, ಗರುಡ, ಬ್ರಹ್ಮ, ಇಂದ್ರ, ಸೂರ್ಯ ಮೊದಲಾದವರಿಂದ ಭಿನ್ನರಾದ ದೇವತೆಗಳಲ್ಲಿ ಎಂದರ್ಥ. ಅವರು ಸಾಕ್ಷಾಚ್ಛ್ರೋತೃಗಳಾದ ಋಷಿಗಳಲ್ಲಿ ಪ್ರವೇಶವನ್ನೂ ಮಾಡಿಲ್ಲ; ವ್ಯಾಸಮುಖದಿಂದ ಶ್ರವಣವನ್ನೂ ಮಾಡಿಲ್ಲ ಎಂಬ ಕಾರಣದಿಂದ ಅವರಿಗೆಲ್ಲ ನಾರದರ ಮೂಲಕ ಉಪದೇಶ ಎಂದು ತಿಳಿಯಬೇಕು.

ಆದಿಶತ್ [೧]ಸಸೃಜೇ ಸೋಽಥ ರೋಮಾಂಚಾದ್ರೋಮಹರ್ಷಣಮ್ ।
ತಂ ಭಾರತಪುರಾಣಾನಾಂ ಮಹಾರಾಮಾಯಣಸ್ಯ ಚ ॥ ೭೯ ॥

ಪಂಚರಾತ್ರಸ್ಯ [೨]ಕೃತ್ಸ್ನಸ್ಯ ಪ್ರವೃತ್ತ್ಯರ್ಥಮಥಾದಿಶತ್ [೩]।
ತಮಾದಿಶತ್ ಕಾಮದೇವಃ ಕೃಷ್ಣಸೇವಾಸಮುತ್ಸುಕಃ ॥ ೮೦ ॥

ಸ [೪]ತಸ್ಮೈ ಜ್ಞಾನಮಖಿಲಂ ದದೌ ದ್ವೈಪಾಯನಃ ಪ್ರಭುಃ ।
ಸನತ್ಕುಮಾರಪ್ರಮುಖಾಂಶ್ಚಕ್ರೇ ಯೋಗಪ್ರವರ್ತಕಾನ್ ॥ ೮೧ ॥

---

೧. ಸಃ ವೇದವ್ಯಾಸಃ ಅಥ= ಋಷೀಣಾಮಾದೇಶಾನಂತರಂ ರೋಮಾಂಚಾದ್ರೋಮಹರ್ಷಣಂ ಸಸೃಜೇ । ಸಸೃಜ ಇತ್ಯಕ್ಕ್ಯಾ ರೋಮಾಂಚಾತ್ಪೂತಜಾತೇರಷ್ಟಸ್ಯ ಪದ್ಭ್ಯಾಂ ಶೂದ್ರಸ್ಯೇವ ಸೃಷ್ಟಿರಿತಿ ಗಮ್ಯತೇ । ಅತ ಏವ ಅಥ ಸೃಷ್ಟ್ಯನಂತರಂ ರೋಮಹರ್ಷಣಂ ವೇದವ್ಯತಿರಿಕ್ತಭಾರತಾದಿಪೌರುಷೇಯಗ್ರಂಥಪ್ರವೃತ್ತ್ಯರ್ಥಮಾದಿಶದಿತಿ ಯೋಜನಾ ॥ – (ವಾ.)

ಸ ವ್ಯಾಸೋ ರೋಮಾಂಚಾತ್ ಸ್ವಾನಂದೋದ್ರೇಕೇಣ ಸಂಜಾತಾದ್ರೋಮಾಂಚಾದ್ರೋಮಹರ್ಷಣನಾಮಮುನಿಂ ಸಸೃಜೇ ಸೃಷ್ಟವಾನ್ ... । – (ವ.)

೨. ತಂ ರೋಮಹರ್ಷಣಂ ಕೃತ್ಸ್ನಸ್ಯ ಸರ್ವಶಾಸ್ತ್ರಸಮೂಹಸ್ಯೇತ್ಯರ್ಥಃ ಕೃತ್ಸ್ನಸ್ಯ ಪಂಚರಾತ್ರಸ್ಯೇತಿ ವಾ ಸಂಬಂಧಃ । – (ಜ.)

೩. ಶುಕಂ ಭಾರತಸ್ಯ ವರ್ತನೇ ಆದಿಶದಿತಿ ಶೇಷಃ। ನಾರದಂ ಭಾರತಂ ಪಾಠಯಿತ್ವಾ ಉಪದೇಶ್ಯೇತ್ಯರ್ಥಃ। ದೇವಲೋಕಪ್ರವೃತ್ತಯೇ ದೇವಲೋಕಪ್ರವೃತ್ಯರ್ಥಂ ಆದಿಶತ್। – (ಜ.)

೪. ಸ ತಸ್ಮೈ ಜ್ಞಾನಮಖಿಲಮಿತ್ಯಕ್ಕ್ಯಾ ಪೌರುಷೇಯಗ್ರಂಥೋಪದೇಶಮುಖೇನ ವೇದಾದಿಸಕಲಜ್ಞಾನಮಪಿ ದದಾವಿತಿ ಲಭ್ಯತೇ । ತಸ್ಮೈ = ಕಾಮದೇವಾಯ ॥ – (ವಾ.)

ಅ: ಅನಂತರ ಅವರು ರೋಮಾಂಚನದಿಂದ ರೋಮಹರ್ಷಣನನ್ನು ಹುಟ್ಟಿಸಿದರು; ಮತ್ತು ಅವನನ್ನು ಮಹಾಭಾರತ ಹಾಗೂ ಪುರಾಣಗಳಿಗೂ ಹಾಗೂ ಮಹಾರಾಮಾ- ಯಣಕ್ಕೂ, ಸಮಗ್ರಪಂಚರಾತ್ರಕ್ಕೂ ಪ್ರವರ್ತಕನನ್ನಾಗಿ ನೇಮಿಸಿದರು. ವೇದವ್ಯಾಸರ ಸೇವೆಗೆ ತವಕಿಸುತ್ತಿದ್ದ ಕಾಮದೇವ ಆ ರೋಮಹರ್ಷಣನೊಳಗೆ ಪ್ರವೇಶಿಸಿದ. ಸಮರ್ಥರಾದ ವೇದವ್ಯಾಸರು ಆ ರೋಮಹರ್ಷಣನಿಗೆ ಸಕಲಶಾಸ್ತ್ರಗಳ ಜ್ಞಾನವನ್ನೂ ದಯಪಾಲಿಸಿದರು. ಸನತ್ಕುಮಾರ ಮೊದಲಾದವರನ್ನು ಯೋಗಪ್ರವರ್ತಕರನ್ನಾಗಿ ನಿಯೋಜಿಸಿದರು.

ವಿ: ೧) ರೋಮಹರ್ಷಣನೇ ಪುರಾಣಾದಿಗಳ ಪ್ರವಚನಾಚಾರ್ಯರೆನ್ನಿಸಿದ ಸೂತಪುರಾಣಿಕ.

೨) ಯೋಗಪ್ರವರ್ತಕರು ಎಂಬುದಕ್ಕೆ ಯೋಗಶಾಸ್ತ್ರಪ್ರವರ್ತಕರು ಅಥವಾ ಧ್ಯಾನ-ಯೋಗಪ್ರವರ್ತಕರು[೧] ಎಂದು ಅರ್ಥ.

೩) ಸನತ್ಕುಮಾರಪ್ರಮುಖರು ಎಂದರೆ ಸನಕ, ಸನಂದನ [೨]ಮೊದಲಾದವರು ಎಂದರ್ಥ.

ಕರ್ಮಯೋಗಾದಿಪ್ರವರ್ತಕರು

ಭೃಗ್ವಾದೀನ್ ಕರ್ಮಯೋಗಸ್ಯ ಜ್ಞಾನಂ ದತ್ವಾऽಮಲಂ ಶುಭಮ್ ।
ಜೈಮಿನಿಂ ಕರ್ಮಮೀಮಾಂಸಾಕರ್ತಾರಮಕರೋತ್ ಪ್ರಭುಃ ॥ ೮೨ ॥

ಅ: ಭೃಗು ಮೊದಲಾದವರಿಗೆ ನಿರ್ಮಲವೂ ಮಂಗಲಕರವೂ ಆದ ಜ್ಞಾನವನ್ನು ನೀಡಿ ಕರ್ಮಯೋಗಕ್ಕೆ ಪ್ರವರ್ತಕರನ್ನಾಗಿ ಮಾಡಿದರು. ಪ್ರಭುವಾದ ವೇದವ್ಯಾಸರು ಜೈಮಿನಿಯನ್ನು ಕರ್ಮಮೀಮಾಂಸಾ ಕರ್ತೃವನ್ನಾಗಿ ಮಾಡಿದರು.

[ಷ]ದೇವಮೀಮಾಂಸಕಾದ್ಯಂತಂ ಕೃತ್ವಾ [ಳ]ಪೈಲಮಥಾದಿಶತ್ [ಜ]।
ಶೇಷಂ ಚ ಮಧ್ಯಕರಣೇ ಪುರಾಣಾನ್ಯಥ ಚಾಕರೋತ್ ॥ ೮೩ ॥

---

೧. ಸನತ್ಕುಮಾರಾದೀನ್ ಯೋಗಶಾಸ್ತ್ರಪ್ರವರ್ತಕಾಂಶ್ಚಕ್ರೇ ಇತ್ಯರ್ಥಃ । ಧ್ಯಾನಯೋಗಪ್ರವರ್ತಕಾನಿತಿ ವಾ । –(ವ.)

೨. ಸನತ್ಕುಮಾರಃ ಪ್ರಮುಖೋ ಯೇಷಾಂ ಸನಕಸನಂದನಾಯಃ ತಾನ್ ಯೋಗಶಾಸ್ತ್ರಪ್ರವರ್ತಕಾನ್ ಚಕ್ರೇ। –(ಜ.)

ಅ: ದೇವಮೀಮಾಂಸಾಶಾಸ್ತ್ರದ ಆದ್ಯಂತಭಾಗಗಳನ್ನು ತಾವೇ ರಚಿಸಿ, ಮಧ್ಯಭಾಗವನ್ನು ರಚಿಸಲು ಪೈಲ ಮತ್ತು ಅವನೊಳಗೆ ಆವಿಷ್ಟನಾಗಿದ್ದ ಶೇಷನನ್ನು ನಿಯಮಿಸಿದರು. ಅನಂತರ ಪುರಾಣಗಳನ್ನು ರಚಿಸಿದರು.

ವಿ: ೧) ಮೀಮಾಂಸಾಶಾಸ್ತ್ರವು ಬ್ರಹ್ಮಮೀಮಾಂಸಾ, ದೈವೀಮೀಮಾಂಸಾ ಹಾಗೂ ಕರ್ಮಮೀಮಾಂಸಾ ಎಂಬುದಾಗಿ ಮೂರು ಬಗೆ :

ಮೀಮಾಂಸಾ ತ್ರಿವಿಧಾ ಪ್ರೋಕ್ತಾ ಬ್ರಾಹ್ಮೀ ದೈವೀ ಚ ಕಾರ್ಮಿಕೀ ॥ –(ಪ್ರಕಾಶಿಕಾ)

ಅವುಗಳಲ್ಲಿ ಬ್ರಹ್ಮಮೀಮಾಂಸೆಯನ್ನು ಅವರೇ ರಚಿಸಿದ್ದ ಉಲ್ಲೇಖ ಈಗಾಗಲೇ ಬಂದಿದೆ (ಶ್ಲೋಕ ೫೮). ದೈವೀಮೀಮಾಂಸೆಯ 'ಅಥಾತೋ ದೈವೀಮೀಮಾಂಸಾ' ಎಂಬ ಮೊದಲ ಸೂತ್ರವನ್ನೂ, 'ಸ ವಿಷ್ಣುರಾಹ ಹಿ', 'ತಂ ಬ್ರಹ್ಮೇತ್ಯಾಚಕ್ಷತೇ' ಎಂಬ ಕೊನೆಯ ಎರಡು ಸೂತ್ರಗಳನ್ನು ತಾವೇ ರಚಿಸಿ, ಒಟ್ಟು ನಾಲ್ಕು ಅಧ್ಯಾಯಗಳ ಆ ಶಾಸ್ತ್ರದ ಉಳಿದ ಸೂತ್ರಗಳ ರಚನೆಗೆ ಪೈಲ ಮತ್ತು ಶೇಷರನ್ನು ಆಜ್ಞಾಪಿಸಿದರು.

೨) ಈ ಮೂರೂ ಮೀಮಾಂಸೆಗಳೂ ಪ್ರಮಾಣಗಳೇ. ಅವುಗಳಲ್ಲಿ ಅವರೇ ಸಾಕ್ಷಾತ್ ರಚಿಸಿದ ಬ್ರಹ್ಮಮೀಮಾಂಸೆ ಸರ್ವಶ್ರೇಷ್ಠವಾದದ್ದು. ಅನಂತರದ ಸ್ಥಾನ ಅವರು ಬರೆದ ಎರಡು

---

೩. ''ಅಥಾತೋ ದೈವೀಮೀಮಾಂಸೇ''ತ್ಯಾದಿ ಸೂತ್ರಂ ''ಸ ವಿಷ್ಣುರಾಹ ಹಿ'' ''ತಂ ಬ್ರಹ್ಮೇತ್ಯಾಚಕ್ಷತ'' ಇತ್ಯಂತಿಮಂ ಸೂತ್ರದ್ವಯಂ ಚ ಕೃತ್ವೇತ್ಯರ್ಥಃ ॥ –(ವಾ.)

ಸ ವಿಷ್ಣುರಾಹ ಹೀತ್ಯಂತೇ ದೇವಶಾಸ್ತ್ರಸ್ಯ ತೇನ ಹಿ ।
ಆದ್ಯಂತಂ ದೇವಶಾಸ್ತ್ರಸ್ಯ ಸ್ವಯಂ ಭಗವತಾ ಕೃತಮ್ ॥
ಮಧ್ಯಂ ತದಾಜ್ಞಯಾ ಪೈಲಶೇಷಾಭ್ಯಾಂ ಕೃತಮಂಜಸಾ । –ಅನುವ್ಯಾಖ್ಯಾನ (೧/೧/೮೧, ೮೨)

೪. ಪೈಲಾವಿಷ್ಟಂ ಶೇಷಮ್ । –(ಜ.)

೫. ನನು ನಾತ್ರ ಅಥ ಶಬ್ದಃ ದೇವಮೀಮಾಂಸಾನಂತರ್ಯವಾಚೀ । ಬ್ರಹ್ಮಸೂತ್ರಸ್ಯೈವ ತದನಂತರಭಾವಿತ್ವೇನ ಪ್ರಮಾಣಸ್ಯೋಕ್ತತ್ವಾತ್ । ನಾಪಿ ಬ್ರಹ್ಮಸೂತ್ರವ್ಯವಧಾನೇನ ದೇವಮೀಮಾಂಸಾನಂತರ್ಯಪರಃ ಬ್ರಹ್ಮಸೂತ್ರಾತ್ ಪೂರ್ವಭಾವಿಭಾರತಪೂರ್ವಭಾವಿತ್ವಾತ್ । ತದುಕ್ತಂ ಭಾರತೇ — 'ಅಷ್ಟಾದಶಪುರಾಣಾನಿ ಕೃತ್ವಾ ಸತ್ಯವತೀಸುತಃ । ಭಾರತಾಖ್ಯಾನಮಕರೋದಿ'ತಿ । ಗೀತಾಭಾಷ್ಯನರಹರಿತೀರ್ಥೀಯೇ ಚ — 'ಸರ್ವವೇದೋಪಬೃಂಹಿತಾಮ್' ಇತ್ಯತ್ರಾದಿಪದೇನ ಪುರಾಣಾನಿ । ತದುಕ್ತಂ ಮಾತ್ಸ್ಯೇ —

ಅಷ್ಟಾದಶಪುರಾಣಾನಿ ಕೃತ್ವಾ ಸತ್ಯವತೀಸುತಃ ।
ಭಾರತಾಖ್ಯಾನಮಖಿಲಂ ಚಕ್ರೇ ತದುಪಬೃಂಹಿತಮ್ ।
ಲಕ್ಷೇಣೈಕೇನ ತತ್ಪೋಕ್ತಂ ವೇದಾರ್ಥಪರಿಬೃಂಹಿತಮ್ ॥ ಇತಿ । –(ತಾ.)

ಸೂತ್ರಗಳಿಂದ ಕೂಡಿದ ದೈವೀಮೀಮಾಂಸೆಗೆ. ಇವಕ್ಕೆಲ್ಲ ಅನಂತರ ದುರ್ಭಾಷ್ಯಗಳು ರಚಿತವಾದವು. ಬ್ರಹ್ಮಸೂತ್ರದ ಸದ್ಭಾಷ್ಯವಾಗಿ ಮಧ್ವಭಾಷ್ಯ ರಚಿತವಾಯಿತು. ಆದರೆ ಕರ್ಮಮೀಮಾಂಸೆಗೆ ಮಾತ್ರ ಇರುವುದೆಲ್ಲ ಅಪವ್ಯಾಖ್ಯಾನಗಳೇ ಎಂಬುದು ವಿಶೇಷ.

ಮೂರು ಬಗೆಯ ಪುರಾಣಗಳು

ಶೈವಾನ್ ಪಾಶುಪತಾಚ್ಚಕ್ರೇ ಸಂಶಯಾರ್ಥಂ ಸುರದ್ವಿಷಾಮ್ ।
ವೈಷ್ಣವಾನ್[೧] ಪಂಚರಾತ್ರಾಚ್ಚ ಯಥಾರ್ಥಜ್ಞಾನಸಿದ್ಧಯೇ ।
ಬ್ರಾಹ್ಮಾಂಶ್ಚ ವೇದತಶ್ಚಕ್ರೇ ಪುರಾಣಗ್ರಂಥಸಂಗ್ರಹಾನ್ ॥ ೮೪ ॥

ಅ: ಅಸುರರಿಗೆ ಸಂಶಯ ಹುಟ್ಟಿಸಲೆಂದು ಪಾಶುಪತಮೂಲವಾದ ಶಿವಸರ್ವೋತ್ತಮತ್ವಪ್ರತಿಪಾದಕವಾದ ಶೈವಪುರಾಣಗಳನ್ನೂ ರಚಿಸಿದರು. ಯೋಗ್ಯರಿಗೆ ಯಥಾರ್ಥಜ್ಞಾನಕ್ಕೋಸ್ಕರ ಪಂಚರಾತ್ರಮೂಲವಾದ ವೈಷ್ಣವಪುರಾಣಗಳನ್ನು ರಚಿಸಿದರು. ವೇದಗಳ ಮೇಲ್ನೋಟದ ಅರ್ಥದಿಂದ [೨]ಬ್ರಾಹ್ಮಪುರಾಣಗಳನ್ನು ರಚಿಸಿದರು.

ವಿ: ೧) ಪುರಾಣಗ್ರಂಥಗಳನ್ನು ಎಂದು ಹೇಳದೆ, ಪುರಾಣಗ್ರಂಥಸಂಗ್ರಹಗಳನ್ನು ಎಂದು ಹೇಳಿದ್ದು ಆ ಮೊದಲಿದ್ದ [೩]ಪುರಾಣಗಳನ್ನೇ ಸಂಗ್ರಹಿಸಿದ್ದು ಎಂದು ತಿಳಿಸಲು.

೨) ಶೈವಪುರಾಣಗಳೆಂದರೆ ಶಿವಸರ್ವೋತ್ತಮತ್ವಪ್ರತಿಪಾದಕವಾದ ಸ್ಕಾಂದಾದಿತಾಮಸ–ಪುರಾಣಗಳು; ವೈಷ್ಣವಪುರಾಣಗಳು ಎಂದರೆ ವಿಷ್ಣುಸರ್ವೋತ್ತಮತ್ವಪ್ರತಿಪಾದಕ ಭಾಗವತಾದಿ–

---

೧. ವೈಷ್ಣವಾನಿ ಪುರಾಣಾನಿ ಪಂಚರಾತ್ರಾತ್ಕತ್ವತಃ ।
ಪ್ರಮಾಣಾನ್ಯೇವ ..... –(೧/೩೨)

೨. ಬ್ರಾಹ್ಮಾನ್ ವೇದಾಪಾತಾರ್ಥಭೂತದೇವಸಂಬಂಧಿನಃ । 'ಪ್ರಜಾಪತಿಂ ಕೃಶಾನುಂ ಚ ತಥಾ ದೇವೀಂ ಸರಸ್ವತೀಮ್ । ಪರತ್ವೇನ ವದಚ್ಛಾಸ್ತ್ರಂ ರಾಜಸಂ ಪರಿಕೀರ್ತಿತಮ್' ಇತಿ ವಚನಾತ್ 'ಪ್ರಜಾಪತೇ ನ ತ್ವದೇತಾನಿ'। 'ಅಗ್ನಿಮೀಳೇ ಪುರೋಹಿತಮ್' । 'ದೇವೀಂ ವಾಚಮಜನಯಂತ' ಇತ್ಯಾದಿವೇದಾಪಾತಾರ್ಥಭೂತಾನಿತಿ ಯಾವತ್ । ಉಪಲಕ್ಷಣಂ ಚೈತತ್ 'ಸವಿತಾ ಪಶ್ಚಾತಾತ್' 'ಅಪಾಂ ಫೇನೇನ ನಮುಚೇಃ ಶಿರಇಂದ್ರೋದವರ್ತಯಃ' 'ಗಣಾನಾಂ ತ್ವಾ ಗಣಪತಿಂ ಹವಾಮಹೇ' 'ಯೋ ವಃ ಸೇನಾನೀರ್ಮಹತೋ ಮಹಸ್ಕ' ಇತ್ಯಾದಿವೇದಾಪಾತಾರ್ಥಭೂತದೇವಸಂಬಂಧಿನ ಇತ್ಯಪಿ ದ್ರಷ್ಟವ್ಯಮ್ । ಪುರಾಣಗ್ರಂಥಸಂಗ್ರಹಾನ್ । –(ವಾ.)

೩. ಪುರಾಣಗ್ರಂಥಸಂಗ್ರಹಾನಿತ್ಯತ್ರ ಪುರಾಣಗ್ರಂಥಾನಿತಿ ವಕ್ತವ್ಯೇ ಪುರಾಣಗ್ರಂಥಸಂಗ್ರಹಾನಿತ್ಯುಕ್ತ್ಯಾ ಪೂರ್ವಂ ವಿದ್ಯಮಾನಾನಾಂ ಪುರಾಣಾನಾಂ ಅನ್ಯಥಾಕರಣಮೇವ । ನ ತ್ವನ್ಯಪುರಾಣಕರಣಮಿತಿ ಸೂಚಯತಿ । ಪುರಾಣಾನಾಮನ್ಯಥಾಕರಣಮೇವ, ನ ತ್ವನ್ಯಕರಣಮಿತ್ಯೇತತ್ ಪ್ರಮೇಯಮ್ । 'ಪುರಾಣಾನಿ ತದರ್ಥಾನಿ ಸರ್ಗೇ ಸರ್ಗೇ ಽನ್ಯಥೈವ ತು । ಕ್ರಿಯಂತೇ ಽತಸ್ತ್ವನಿತ್ಯಾನಿ ..... ।' ಇತ್ಯಾದಿಪ್ರಮಾಣಸಿದ್ಧಮ್ । –(ಸ.)

ಸಾತ್ತ್ವಿಕಪುರಾಣಗಳು; ಬ್ರಾಹ್ಮಪುರಾಣಗಳು ಎಂದರೆ ಬ್ರಹ್ಮ ಮೊದಲಾದ ಇತರ ದೇವತೆಗಳ ಸರ್ವೋತ್ತಮತ್ವವನ್ನು ಪ್ರತಿಪಾದಿಸುವ ಬ್ರಹ್ಮವೈವರ್ತ ಮೊದಲಾದ ರಾಜಸಪುರಾಣಗಳು ಎಂದು ತಿಳಿಯಬೇಕು :

ಶೈವೇ ಚ ಸ್ಕಾಂದೇ .... ಬ್ರಾಹ್ಮೇ ಚ ಬ್ರಹ್ಮವೈವರ್ತೇ ।

– ಬ್ರಹ್ಮಸೂತ್ರಭಾಷ್ಯ(೧/೧/೧)

೩) 'ವೇದತಃ' ಎಂದರೆ ವೇದಗಳ [೧]ಆಪಾತಾರ್ಥದಿಂದ ಎಂದರ್ಥ.

ಏವಂ ಜ್ಞಾನಂ ಪುನಃ ಪ್ರಾಪುರ್ದೇವಾಶ್ಚ ಋಷಯಸ್ತಥಾ ।
ಸನತ್ಕುಮಾರಪ್ರಮುಖಾ ಯೋಗಿನೋ ಮಾನುಷಾಸ್ತಥಾ ।
ಕೃಷ್ಣದ್ವೈಪಾಯನಾತ್ ಪ್ರಾಪ್ಯ ಜ್ಞಾನಂ ತೇ ಮುಮುದುಃ ಸದಾ ॥ ೮೫ ॥

ಅ: ಇದರಿಂದಾಗಿ ದೇವತೆಗಳು, ಋಷಿಗಳು, ಸನತ್ಕುಮಾರ ಮೊದಲಾದ ಯೋಗಿಗಳು, ಅದರಂತೆ ಮನುಷ್ಯರೂ ಪುನಃ [೨]ತತ್ತ್ವಜ್ಞಾನವನ್ನು ಪಡೆದರು. ಶ್ರೀಕೃಷ್ಣದ್ವೈಪಾಯನ ವ್ಯಾಸರಿಂದ ಜ್ಞಾನವನ್ನು ಪಡೆದು, ಅವರೆಲ್ಲ ಸದಾ ಆನಂದಿಸಿದರು.

ಏ: ದೇವತೆಗಳು, ಋಷಿಗಳು ಮೊದಲಾಗಿ ಸಮಸ್ತರಿಗೂ ಪರಮಾನಂದದಾಯಕವಾದ ತತ್ತ್ವಜ್ಞಾನವನ್ನು ನೀಡಿದ ವೇದವ್ಯಾಸರು ಸಾಕ್ಷಾತ್ ಶ್ರೀಹರಿ ಎಂಬುದು ನಿಶ್ಚಯ.

---

೧. ವೇದತಃ = ವೇದಾನಾಮಾಪಾತಾರ್ಥಚ್ಚಕ್ರೇ । ಯಥಾ ವೇದಮಧ್ಯಸ್ಥಿತಹಿರಣ್ಯಗರ್ಭಾಗ್ನೀಂದ್ರಾದಿ-ಸೂಕ್ತೇಷ್ವಾಪಾತತಃ ತಸ್ಯ ತಸ್ಯೋತ್ಕರ್ಷಃ ಪ್ರತೀಯತೇ ತಥಾ ಕ್ವಚಿದ್ಭಾಗೇ ಬ್ರಹ್ಮಣಃ ಕ್ವಚದಗ್ನೇಃ ಕ್ವಚಿದಿಂದ್ರಾದೇಃ ಕ್ವಚಿಲ್ಲಕ್ಷ್ಮೀಸರಸ್ವತ್ಯಾದೇಶ್ಚ ಪರತ್ವಂ ಪ್ರತಿಪಾದಯತಃ ಪುರಾಣಗ್ರಂಥಸಂಗ್ರಹಾನ್ ಚಕ್ರ ಇತಿ ಭಾವಃ । ಅತ ಏವ ಸರ್ವಸಂಗ್ರಾಹಕತ್ವಾತ್ಸಂಗ್ರಹಾನಿತ್ಯುಕ್ತಮ್ ॥ – (ವಾ.)

ವೇದತಃ ಪ್ರತೀಯಮಾನಕರ್ಮಾದಿಪ್ರತಿಪಾದಕಾರ್ಥವೇದಾನುಸಾರೇಣ । ಬ್ರಾಹ್ಮಾನ್ ರಾಜಸಪುರಾಣಗ್ರಂಥಸಂಗ್ರಹಾನ್ । – (ಜ.)

ವೇದತಃ ಯಥಾ ಶ್ರುತಾರ್ಥಕಾತ್ 'ಹಿರಣ್ಯಗರ್ಭಃ ಸಮವರ್ತತಾಗ್ರೇ' ಇತ್ಯಾದಿರೂಪಾದ್ವೇದತೋ ವೇದಮೂಲಾನ್ ಚಕ್ರೇ ॥ – (ವ.)

೨. ಏವಂ ವಿಧಾನಿ ಸೂತ್ರಾಣಿ ಕೃತ್ವಾ ವ್ಯಾಸೋ ಮಹಾಯಶಾಃ ।
ಬ್ರಹ್ಮರುದ್ರಾದಿದೇವೇಷು ಮನುಷ್ಯಪಿತೃಪಕ್ಷಿಷು।
ಜ್ಞಾನಂ ಸಂಸ್ಥಾಪ್ಯ ಭಗವಾನ್ ಕ್ರೀಡತೇ ಪುರುಷೋತ್ತಮಃ ।

– ಬ್ರಹ್ಮಸೂತ್ರಭಾಷ್ಯೋದ್ಧೃತಸ್ಕಾಂದವಚನ(೧/೧/೧)

ಶ್ರೀವೇದವ್ಯಾಸರ ಅನುಪಮಜ್ಞಾನಕಾರ್ಯ

ಸಮಸ್ತವಿಜ್ಞಾನಗಭಸ್ತಿಚಕ್ರಂ
ವಿತಾಯ ವಿಜ್ಞಾನಮಹಾದಿವಾಕರಃ[1] ।
ನಿರಸ್ಯ ಚಾಜ್ಞಾನತಮೋ ಜಗತ್ತತಂ
ಪ್ರಭಾಸತೇ ಭಾನುರಿವಾವಭಾಸಯನ್ ॥ ೮೬ ॥

ಅ: ತತ್ತ್ವಜ್ಞಾನದ ಮಹಾಸೂರ್ಯರಾದ ಶ್ರೀವೇದವ್ಯಾಸರು ಪರಿಪೂರ್ಣಜ್ಞಾನದ ಕಿರಣಪುಂಜವನ್ನು ಎಲ್ಲೆಡೆ ಪಸರಿಸಿ, ಜಗತ್ತಿನಲ್ಲಿ ತುಂಬಿದ್ದ ಅಜ್ಞಾನದ ಕತ್ತಲನ್ನು ಪರಿಹರಿಸಿ, ಸೂರ್ಯನಂತೆ ಬೆಳಗುತ್ತಾ ಕಂಗೊಳಿಸುತ್ತಿರುವರು.

ಎ: ಸೂರ್ಯ ಹೊರಗಿನ ಕತ್ತಲೆಯನ್ನು ಮಾತ್ರ ಪರಿಹರಿಸುವನು; ಶ್ರೀವ್ಯಾಸರು ಒಳಹೊರಗಿನ ಕತ್ತಲೆಯನ್ನೆಲ್ಲ ಪರಿಹರಿಸುವರು; ಸೂರ್ಯನು ಭೂಲೋಕದ ಕತ್ತಲೆಯನ್ನು ಮಾತ್ರ ಕಳೆದರೆ, ಶ್ರೀವ್ಯಾಸರು ಮೂರು ಲೋಕಗಳ ಕತ್ತಲೆಯನ್ನೂ ಕಳೆಯುವರು. ಆದ್ದರಿಂದ ಇವರು 'ಮಹಾದಿವಾಕರರು'. [2]ಮಧ್ವಕೀರ್ತಿಯೇ ಸೂರ್ಯನನ್ನು ಮೀರಿಸಿರುವಾಗ, ವ್ಯಾಸವೈಭವ ಹೀಗೆ ಅದ್ಭುತವಾಗಿರುವುದು ಸಹಜ.

ಚತುರ್ಮುಖೇಶಾನಸುರೇಂದ್ರಪೂರ್ವಕೈಃ
ಸದಾ ಸುರೈಃ ಸೇವಿತಪಾದಪಲ್ಲವಃ ।
ಪ್ರಕಾಶಯಂಸ್ತೇಷು ಸದಾऽऽತ್ಮಗುಹ್ಯಂ
ಮುಮೋದ ಮೇರೌ ಚ ತಥಾ ಬದರ್ಯಾಮ್[3] ॥ ೮೭ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ವ್ಯಾಸಾವತಾರೋ ನಾಮ ದಶಮೋऽಧ್ಯಾಯಃ ॥೧೦॥

---

೧. ವಿಜ್ಞಾನಮಯಃ ಮಹಾನ್ ಸರ್ವೋತ್ತಮಃ ವ್ಯಾಸಾಖ್ಯೋ ದಿವಾಕರಃ ॥ –(ವಾ.)

೨. ಅಪಿ ತ್ರಿಲೋಕ್ಯಾ ಬಹಿರುಲ್ಲಸಂತೀ ತಮೋ ಹರಂತೀ ಮುಹುರಾಂತರಂ ಚ ।
ದಿಶ್ಯಾದ್ದ್ವಿಶಂ ನೋ ವಿಶದಾಂ ಜಯಂತೀ ಮಧ್ವಸ್ಯ ಕೀರ್ತಿರ್ದಿನನಾಥದೀಪ್ತಿಮ್ ॥ –ಮಧ್ವವಿಜಯ (೧/೩)

೩. ಸದೈವ ಮೋದರೂಪಿಣೋ ಮುದೋಕ್ತಿರಸ್ಯ ಲೌಕಿಕೀ ।
ಯಥೋದಯೋ ರವೇರ್ಭವೇತ್ ಸದೋದಿತಸ್ಯ ಲೋಕತಃ ॥ –ಮ.ಭಾ.ತಾ.ನಿ.(೧೩/೧೩೭)

ಅ: ಚತುರ್ಮುಖಬ್ರಹ್ಮದೇವರು, ರುದ್ರದೇವರು, ಸುರಶ್ರೇಷ್ಠನಾದ ಇಂದ್ರ ಮೊದಲಾದ ದೇವತೆಗಳಿಂದ ಸದಾ ಸೇವಿತ ಪಾದಪಲ್ಲವನಾದ ಶ್ರೀವೇದವ್ಯಾಸರೂಪದ ಶ್ರೀಹರಿಯು ಅವರಿಗೆ ತನ್ನ ಪರಮರಹಸ್ಯವನ್ನು ಸದಾ ಪ್ರಕಟಿಸುತ್ತಾ ಮೇರುಪರ್ವತದಲ್ಲಿಯೂ, ಹಾಗೆಯೇ ಬದರೀಕ್ಷೇತ್ರದಲ್ಲಿಯೂ ಸುಖಿಸಿದರು.

ಏ: ಪರಮಾತ್ಮ ನಿತ್ಯಸುಖಿಯಾದರೂ, ಹೀಗೆ ಆನಂದಿಸಿದನು ಎಂದು ಮತ್ತೆ ನಿರೂಪಿಸಿವುದು, ಸದಾ ಬೆಳಗುವ ಸೂರ್ಯನನ್ನು ಪ್ರಕಾಶಿಸುವನು ಎನ್ನುವಂತೆ ಸ್ವರೂಪಕಥನಮಾತ್ರ ಎಂದು ತಿಳಿಯಬೇಕು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ವ್ಯಾಸಾವತಾರ'ವೆಂಬ ಹತ್ತನೆಯ ಅಧ್ಯಾಯ ಮುಗಿಯಿತು ॥ ೧೦ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೧೧

(ಶ್ರೀಭಗವದವತಾರಪ್ರತಿಜ್ಞಾನಮ್)

(ಶಂತನು ಭೀಷ್ಮರ ವೃತ್ತಾಂತ, ಧೃತರಾಷ್ಟ್ರಾದಿಗಳ ಜನನ ಇತ್ಯಾದಿ)

ಚಂದ್ರವಂಶದ ಪ್ರಮುಖರು

ಶಶಾಂಕಪುತ್ರಾದಭವತ್[೧] ಪುರೂರವಾ-
ಸ್ತಸ್ಮಾಯುರಾಯೋರ್ನಹುಷೋ ಯಯಾತಿಃ।
ತಸ್ಯಾಸ ಪತ್ನೀಯುಗಲಂ ಸುತಾಶ್ಚ
ಪಂಚಾಭವನ್ ವಿಷ್ಣುಪದೈಕಭಕ್ತಾಃ ॥ ೧ ॥

ಅ: ಚಂದ್ರನ ಮಗನಾದ ಬುಧನಿಂದ ಪುರೂರವಸ್ ಜನಿಸಿದ; ಅವನಿಗೆ ಆಯು, ಆಯುವಿಗೆ ನಹುಷ, ನಹುಷನಿಗೆ ಯಯಾತಿ ಪುತ್ರರಾಗಿ ಜನಿಸಿದರು. ಯಯಾತಿಗೆ ಇಬ್ಬರು ಹೆಂಡಿರು ಮತ್ತು ವಿಷ್ಣುವಿನ ಪಾದದಲ್ಲಿ ವಿಶೇಷಭಕ್ತಿ ಹೊಂದಿದ್ದ ಐವರು ಪುತ್ರರು ಇದ್ದರು.

ವಿ: ೧) ಮಹಾಭಾರತ ಪಾಂಡವರ ಕಥೆ. ಪಾಂಡವರು ಚಂದ್ರವಂಶದವರು. ಆ ವಂಶದ ಪರಿಚಯವನ್ನು ಈ ಮೂಲಕ ನೀಡುತ್ತಿರುವರು.

೩) ರಾಮಾವತಾರ ಸೂರ್ಯವಂಶದ್ದು; ಕೃಷ್ಣಾವತಾರ ಚಂದ್ರವಂಶದ್ದು. ಈ ಮುನ್ನ ರಾಮಾವತಾರದ ಕಥೆಯನ್ನು ನಿರ್ಣಯಿಸಿದ ಶ್ರೀಮದಾಚಾರ್ಯರು ಈ ಅಧ್ಯಾಯದಿಂದ ಪಾಂಡವರ ಕಥೆಯೊಂದಿಗೆ ಶ್ರೀಕೃಷ್ಣಕಥೆಯನ್ನು, ಪ್ರಸ್ತಾವನೆಯಾಗಿ ಚಂದ್ರವಂಶದ ಕಥೆಯನ್ನೂ ನಿರ್ಣಯಿಸುತ್ತಿರುವರು. ಎರಡು ವಂಶಗಳೂ ಸಮಕಾಲಿಕ ಎಂಬುದು ಮತ್ತೊಂದು ವಿಶೇಷ.

೨) ಬ್ರಹ್ಮ ವಿಷ್ಣುಪುತ್ರ; ಅತ್ರಿ ಬ್ರಹ್ಮಪುತ್ರ; ಚಂದ್ರ ಅತ್ರಿಪುತ್ರ; ಬುಧ ಚಂದ್ರಪುತ್ರ. ಬುಧನಿಗೆ ಇಲಾ ಎಂಬ ಸ್ತ್ರೀರೂಪದ ಸುದ್ಯುಮ್ನನಲ್ಲಿ ಹುಟ್ಟಿದ ಪುತ್ರ ಪುರೂರವಸ್. ಅದಕ್ಕೇ ಅವನಿಗೆ ಐಲ ಎಂದೂ ಹೆಸರು.

---

೧. ವಿವಸ್ವತಃ ವೈವಸ್ವತೋ ನಾಮ ಮನುರಭವತ್ । ತಸ್ಯ ಪುಂವಂಶಾತ್ ಸೂರ್ಯವಂಶಃ । ತದಪತ್ಯಸ್ಯ ಐಲಾಖ್ಯಸ್ಯ ಇಲಾವೃತಖಂಡಪ್ರವೇಶಾತ್ ಸ್ತ್ರೀಭಾವೇ ಸತಿ ತಸ್ಯಾಂ ಶಶಾಂಕಪುತ್ರಾದ್ಬುಧಾತ್ ಸೋಮವಂಶ ಇತಿ ವಿವೇಕಃ । ಏವಂ ಚ ದ್ವಾವಪಿ ವಂಶೌ ವೈವಸ್ವತಸಮಾನಕಾಲೀನಾವೇವ । ನತು ಸೂರ್ಯವಂಶಾದನಂತರಂ ಸೋಮವಂಶಾರಂಭ ಇತಿ ಜ್ಞೇಯಮ್ ॥ – (ವಾ.)

'ಅತ್ರಿಸ್ತು ಬ್ರಹ್ಮಣಃ ಪುತ್ರಃ ಶಶಾಂಕಸ್ತತ್ಸುತಃ ಸ್ಮೃತಃ।
ಲೋಕಥಾಯಾಮಯಂ ಲಕ್ಷ್ಮತವಾಂಕೇ ಶಶಸಂಜ್ಞಿತಮ್' ಇತ್ಯಾದಿ ಹರಿವಂಶೇ। – (ತಿ.)

[೧]ಯದುಂ ಚ ತುರ್ವಸುಂ ಚೈವ ದೇವಯಾನೀ ವ್ಯಜಾಯತ[೨]।
ದ್ರುಹ್ಯಂ ಚಾನುಂ ಚ ಪೂರುಂ ಚ ಶರ್ಮಿಷ್ಠಾ ವಾರ್ಷಪರ್ವಣೀ ॥ ೨ ॥

ಅ: ಯದು ಮತ್ತು ತುರ್ವಸುವನ್ನು ದೇವಯಾನಿಯು ಹೆತ್ತಳು. ವೃಷಪರ್ವನ ಪುತ್ರಿಯಾದ ಶರ್ಮಿಷ್ಠೆಯು ದ್ರುಹ್ಯ, ಅನು ಮತ್ತು ಪೂರು ಎಂಬವರನ್ನು ಹೆತ್ತಳು.

ವಿ: ೧) ದೇವಯಾನಿ ಮತ್ತು ಶರ್ಮಿಷ್ಠೆ ಯಯಾತಿಯ ಪತ್ನಿಯರು. ದೇವಯಾನಿ ದೈತ್ಯಗುರು ಶುಕ್ರಾಚಾರ್ಯರ ಪುತ್ರಿ. ಪ್ರಿಯವ್ರತಪುತ್ರಿ ಊರ್ಜಸ್ವತಿ ದೇವಯಾನಿಯ ತಾಯಿ. ಶರ್ಮಿಷ್ಠೆ ದೈತ್ಯರಾಜನಾದ ವೃಷಪರ್ವನ ಮಗಳು.

೨) ಈ ಐವರು ಪುತ್ರರಲ್ಲಿ ಹಿರಿಯನಾದ ಯದುವಿನ ವಂಶದಲ್ಲಿ ಸರ್ವೋತ್ತಮನಾದ ಶ್ರೀಕೃಷ್ಣನು ಅವತರಿಸಿದ; ಕಿರಿಯನಾದ ಪುರುವಿನ ವಂಶದಲ್ಲಿ ಜೀವೋತ್ತಮನಾದ ಭೀಮು ಅವತರಿಸಿದ ಎಂಬುದು ವಿಶೇಷ.

೩) ಬೃಹಸ್ಪತಿಪುತ್ರನಾದ ಕಚನ [೩]ಶಾಪದಿಂದಾಗಿ ದೇವಯಾನಿ ಬ್ರಾಹ್ಮಣಸ್ತ್ರೀ–ಯಾಗಿದ್ದರೂ, ಕ್ಷತ್ರಿಯನಾದ ಯಯಾತಿಗೆ ಪತ್ನಿಯಾಗಬೇಕಾಯಿತು.

ಕಾರ್ತವೀರ್ಯಾರ್ಜುನ ಹಾಗೂ ಇತರರು

[೪]ಯದೋರ್ವಂಶೇ ಚಕ್ರವರ್ತೀ ಕಾರ್ತವೀರ್ಯಾರ್ಜುನೋಽಭವತ್ ।
ವಿಷ್ಣೋರ್ದತ್ತಾತ್ತ್ರೇಯನಾಮ್ನಃ ಪ್ರಸಾದಾದ್ಯೋಗವೀರ್ಯವಾನ್[೫] ॥ ೩ ॥

ಅ: ಯದುವಿನ ವಂಶದಲ್ಲಿ ಚಕ್ರವರ್ತಿಯಾದ ಕಾರ್ತವೀರ್ಯಾರ್ಜುನ ಜನಿಸಿದ. ಅವನು ವಿಷ್ಣುವಿನ ದತ್ತಾತ್ತ್ರೇಯನಾಮಕರೂಪದ ಅನುಗ್ರಹದಿಂದಾಗಿ ಯೋಗಸಾಮರ್ಥ್ಯವನ್ನು ಹೊಂದಿದ್ದ.

---

೧. ಈ ಶ್ಲೋಕ ಭಾರತ(ಆದಿ.೯೫/೯), ಭಾಗವತ(೯/೧೮/೩೩), ವಿಷ್ಣುಪುರಾಣ(೪/೦/೬)ಗಳಲ್ಲೂ ಕಂಡುಬರುತ್ತದೆ.

೨. ವ್ಯಜಾಯತ ಅಂತರ್ಣೀತೋ ಣಿಚ್ । ಜನಯಾಮಾಸೇತ್ಯರ್ಥಃ ॥ –(ವಾ.)

೩. 'ಋಷಿಪುತ್ರೋ ನ ತೇ ಕಶ್ಚಿಜ್ಜಾತು ಪಾಣಿಂ ಗ್ರಹಿಷ್ಯತಿ' ಇತ್ಯಾದಿಪರ್ವಣಿ ॥ –(ಜ., ತಿ.)

೪. ಸಾಕ್ಷಾದ್ಯದುಕುಮಾರತ್ವಾಭಾವಾನ್ಮಧ್ಯೇ ರಾಜಪರಂಪರಾಸದ್ಭಾವಾಚ್ಚ ವಂಶ ಇತ್ಯುಕ್ತಮ್ । ಏವಮುತ್ತರತ್ರಾಪಿ ದ್ರಷ್ಟವ್ಯಮ್ ॥ –(ವಾ.)

೫. ಯೋಗವೀರ್ಯವಾನ್ = ಅಣಿಮಾದ್ಯಷ್ಟಯೋಗವೀರ್ಯವಾನ್ । –(ಜ.)

ಏಃ ೧) ಕಾರ್ತವೀರ್ಯಾರ್ಜುನ ಕೃತವೀರ್ಯ ಎಂಬವನ ಮಗ; ಹೈಹಯ ಅವನ ನಾಮಾಂತರ. [೧]ದತ್ತಾತ್ರೇಯರೂಪದ ವಿಷ್ಣುವನ್ನು ಹತ್ತುಸಾವಿರ ವರ್ಷಗಳ ಕಾಲ ವಿಶೇಷವಾಗಿ ಆರಾಧಿಸಿ, ಆತನ ಅನುಗ್ರಹದಿಂದಾಗಿ ಅಣಿಮಾದಿಅಷ್ಟೈಶ್ವರ್ಯಗಳನ್ನೂ ಹೊಂದಿ [೨]ಮಹಾಯೋಗಿಯೆನ್ನಿಸಿದ್ದ. ಅದರಿಂದಾಗಿ ಅವನ ರಾಜ್ಯದಲ್ಲಿ ಕಳ್ಳತನ, ಸುಳ್ಳುತನಗಳಿಗೆ ಅವಕಾಶವೇ ಇರಲಿಲ್ಲ. ಕೆಟ್ಟಯೋಚನೆ ಜನರ ಮನಸ್ಸಿನಲ್ಲಿ ಮೂಡುತ್ತಿದ್ದಂತೆಯೇ ಅವರ ಮನಸ್ಸಿನಲ್ಲಿ ಧನುರ್ಧಾರಿಯಾಗಿ ಕಾಣಿಸಿಕೊಂಡು ಕಾರ್ತವೀರ್ಯಾರ್ಜುನ ಅವರನ್ನು ಸನ್ಮಾರ್ಗಿಗಳನ್ನಾಗಿ ಮಾಡುತ್ತಿದ್ದ ಎಂಬ ವಿವರ ಪುರಾಣಗಳಲ್ಲಿದೆ.

೨) ಮಹಾವಿಷ್ಣುವಿನ ದತ್ತಾತ್ರೇಯರೂಪ ಯೋಗಪ್ರವರ್ತಕರೂಪ. 'ದತ್ತಾತ್ರೇಯ–ಯೋಗ' ಎಂಬ ಗ್ರಂಥವೊಂದನ್ನು ಸಹ ಶ್ರೀಮಧ್ವಾಚಾರ್ಯರು ಭಾಗವತತಾತ್ಪರ್ಯಾದಿ–ಗ್ರಂಥಗಳಲ್ಲಿ ಉಲ್ಲೇಖಿಸಿರುವರು.

೩) ಕಾರ್ತವೀರ್ಯಾರ್ಜುನ ಹೀಗೆ ಮಹಾವಿಷ್ಣುಭಕ್ತನಾಗಿದ್ದರೂ, ಪ್ರಾರಬ್ಧವಶಾತ್ ಒದಗಿದ ಅಧಿಕಪುಣ್ಯದಿಂದಾಗಿ ಅಸುರಾವೇಶಕ್ಕೊಳಗಾಗಿ, ಜಮದಗ್ನಿಋಷಿಗೆ ದ್ರೋಹವೆಸಗಿ, ಪರಶುರಾಮರೂಪದ ಭಗವಂತನಿಂದ ಹತನಾದ.

ಯದುವಂಶ ಹಾಗೂ ಪುರುವಂಶ

ತಸ್ಯಾನ್ವವಾಯೇ [೩]ಯದವೋ ಬಭೂವುರ್ವಿಷ್ಣುಸಂಶ್ರಯಾಃ ।
ಪೂರೋರ್ವಂಶೇ ತು ಭರತಶ್ಚಕ್ರವರ್ತೀ ಹರಿಪ್ರಿಯಃ ॥ ೪ ॥

---

೧. ಅರ್ಜುನಃ ಕೃತವೀರ್ಯಸ್ಯ ಸಪ್ತದ್ವೀಪೇಶ್ವರೋಽಭವತ್ ।
ದತ್ತಾತ್ರೇಯಾದ್ಧರೇರಂಶಾತ್ ಪ್ರಾಪ್ತಯೋಗಮಹಾಗುಣಃ ॥ – ಭಾಗವತ (೯/೨೩/೨೪)

೨. ಸ ಹಿ ವರ್ಷಾಯುತಂ ತಪ್ತ್ವಾ ತಪಃ ಪರಮದುಶ್ಚರಮ್ ।
ದತ್ತಮಾರಾಧಯಾಮಾಸ ಕಾರ್ತವೀರ್ಯೋಽತ್ರಿಸಂಭವಮ್ ॥ – ಹರಿವಂಶ (೧/೩೩/೧೦)

ಹೈಹಯಾನಾಮಧಿಪತಿರರ್ಜುನಃ ಕ್ಷತ್ರಿಯರ್ಷಭಃ ।
ದತ್ತಂ ನಾರಾಯಣಾಂಶಾಂಶಮಾರಾಧ್ಯ ಪರಕರ್ಮಭಿಃ ॥
ಬಾಹೂನ್ ದಶಶತಂ ಲೇಭೇ ದುರ್ಧರ್ಷತ್ವಮರಾತಿಷು ।
ಅವ್ಯಾಹತೇಂದ್ರಿಯೌಜಃಶ್ರೀತೇಜೋವೀರ್ಯಯಶೋಬಲಮ್ ॥
ಯೋಗೇಶ್ವರತ್ವಮೈಶ್ವರ್ಯಂ ಗುಣಾ ಯತ್ರಾಣಿಮಾದಯಃ । – ಭಾಗವತ (೯/೧೫/೧೭-೧೯)

೩. ರಘುವಂಶೀಯಾನಾಂ ಸರ್ವೇಷಾಂ ರಘುರಿತಿವದ್ಯದುವಂಶೀಯಾನಾಮಪಿ ಯದುರಿತಿ ನಾಮೇತಿ ಭಾವೇನೋಕ್ತಂ ಯದವ ಇತಿ ॥ – (ವಾ.)

ಅ: ಅವನ ವಂಶದಲ್ಲಿ ವಿಷ್ಣುವನ್ನು ಆಶ್ರಯಿಸಿದ ಯಾದವರು ಜನಿಸಿದರು. ಪುರುವಂಶದಲ್ಲಿ ಚಕ್ರವರ್ತಿಯೂ, ವಿಷ್ಣುಭಕ್ತನೂ ಆದ ಭರತ ಜನಿಸಿದ.

ವಿ: ೧) ಕಾರ್ತವೀರ್ಯಾರ್ಜುನನ ವಂಶದಲ್ಲಿ ಜನಿಸಿದವರು ಯಾದವರೆನ್ನಿಸಿದರು; ಪುರುವಂಶದಲ್ಲಿ ಜನಿಸಿದವರು ಪೌರವರೆನ್ನಿಸಿದರು. ಯದುವಂಶದಲ್ಲಿ ಕಾರ್ತವೀರ್ಯಾರ್ಜುನ ಚಕ್ರವರ್ತಿ ಎನ್ನಿಸಿದ್ದಂತೆ, ಪುರುವಂಶದಲ್ಲಿ ಭರತ ಚಕ್ರವರ್ತಿಯೆನ್ನಿಸಿದ್ದ.

೨) ಲೋಕಾಪವಾದದ ಭಯದಿಂದ ದುಷ್ಯಂತ ಶಕುಂತಲೆ ಮತ್ತು ಸರ್ವದಮನರನ್ನು ಕಂಡು ಗುರುತಿಲ್ಲದಂತೆ ವರ್ತಿಸಿ, ತ್ಯಜಿಸಲು ಸಿದ್ಧನಾದಾಗ, ಅಶರೀರವಾಣಿ ''ಅವರಿಬ್ಬರೂ ಅವನ ಪತ್ನಿ ಹಾಗೂ ಪುತ್ರ; ಅವರನ್ನು ಸ್ವೀಕರಿಸಬೇಕು'' ಎಂದು ನುಡಿಯಿತು. ಅವನ ಪುತ್ರ ಸರ್ವದಮನ ಭರತ[೧] ಎಂದೇ ಪ್ರಸಿದ್ಧನಾದ. ಈ ಭರತನ ಹಿರಿಮೆಯಿಂದಾಗಿ ಅನಂತರದವರು ಮಾತ್ರವಲ್ಲದೆ, ಮುಂಚಿನವರಿಗೂ ಸಹ [೨]'ಭಾರತ'ರೆಂದೇ ಹೆಸರಾಯಿತು. ಶ್ರೀರಾಮನ ತಮ್ಮ ಭರತ, ಋಷಭನಾಮಕ ಶ್ರೀಹರಿಯ ಪುತ್ರ ಭರತ ಹಾಗೂ ಶ್ರೀಮದ್ಭಾಗವತದ ಭರತ ಇಬ್ಬರೂ ಈ ಭರತನಿಂದ ಬೇರೆಯಾದವರು ಎಂದು ಗಮನಿಸಬೇಕು. ಮುಖ್ಯವಾಗಿ ವಾಯುದೇವರಿಗೆ ಭರತ ಎಂಬ ಹೆಸರಿರುವ ಉಲ್ಲೇಖ ಮುಂದೆ ಬಂದಿದೆ(೧೮/೧೦೩).

ಕುರುವಂಶದ ವಿವರ

ತದ್ವಂಶಜಃ ಕುರುನಾಮ ಪ್ರತೀಪೋಽಭೂತ್ ತದನ್ವಯೇ ।
ಪ್ರತೀಪಸ್ಯಾಭವನ್ ಪುತ್ರಾಸ್ತ್ರಯಸ್ತ್ರೇತಾಗ್ನಿವರ್ಚಸಃ ॥ ೫ ॥

ಅ: ಕುರು ಎಂಬವನು ಈ ಭರತವಂಶದಲ್ಲಿ ಜನಿಸಿದವನು; ಅವನ ವಂಶದಲ್ಲಿ ಪ್ರತೀಪ ಹುಟ್ಟಿದ. ಪ್ರತೀಪನಿಗೆ ತ್ರೇತಾಗ್ನಿಗಳಂತೆ ವರ್ಚಸ್ವಿಗಳಾದ ಮೂವರು ಪುತ್ರರು ಜನಿಸಿದರು.

---

೧. ಭರ್ತವ್ಯೋಽಯಂ ತ್ವಯಾ ಯಸ್ಮಾದಸ್ಮಾಕಂ ವಚನಾದಪಿ ।
ತಸ್ಮಾದ್ಭವತ್ವಯಂ ನಾಮ್ನಾ ಭರತೋ ನಾಮ ತೇ ಸುತಃ ॥ – ಭಾರತ(ಆದಿ. ೬೯/೩೩)

೨. ಭರತಾದ್ಭಾರತೀ ಕೀರ್ತಿರ್ಯೇನೇದಂ ಭಾರತಂ ಕುಲಮ್ ।
ಅಪರೇ ಯೇ ಚ ಪೂರ್ವೇ ಚ ಭಾರತಾ ಇತಿ ವಿಶ್ರುತಾಃ ॥ – ಭಾರತ (ಆದಿ. ೬೯/೪೯)

೩. ....ತ್ರೇತಾಗ್ನೀನಾಮಾಹವನೀಯಗಾರ್ಹಪತ್ಯದಕ್ಷಿಣಾಗ್ನೀನಾಂ ವರ್ಚ ಇವ ವರ್ಚಸ್ತೇಜಃ ಕಾಂತಿರ್ಯೇಷಾಂ ತೇ ತಥಾ । 'ತೇಜಃಪುರೀಷಯೋರ್ವರ್ಚಃ' ಇತ್ಯಮರಃ । 'ದಕ್ಷಿಣಾಗ್ನಿರ್ಗಾರ್ಹಪತ್ಯಾಹವನೀಯಾಸ್ತ್ರಯೋಽಗ್ನಯಃ । ಅಗ್ನಿತ್ರಯಮಿದಂ ತ್ರೇತೇ'ತ್ಯಮರಃ। – (ಜ.)

ವಿ: ೧) ಈ ಕುರು ಎಂಬ ರಾಜ ನಿರ್ಮಿಸಿದ ಕ್ಷೇತ್ರವೇ ಜಗತ್ತು ಕಂಡ ಅದ್ವಿತೀಯ ರಣಭೂಮಿ 'ಕುರುಕ್ಷೇತ್ರ'[೧]. ಇವನಿಂದಾಗಿಯೇ ಕುರುವಂಶವೆಂಬ ಹೆಸರು ಅವನ ವಂಶಕ್ಕೂ, ಕೌರವರೆಂಬ ಹೆಸರು ಆ ವಂಶದವರಿಗೂ ಬಂದಿತು.

೨) ಪ್ರತೀಪರಾಜನಿಗೆ ಜನಿಸಿದ ಮೂವರು ಮಕ್ಕಳು ಆಹವನೀಯ, ಗಾರ್ಹಪತ್ಯ ಮತ್ತು ದಕ್ಷಿಣ ಎಂಬ ಮೂರು ಅಗ್ನಿಗಳಂತೆ ತುಂಬಾ ತೇಜಸ್ವಿಗಳಾಗಿದ್ದರು.

ದೇವಾಪಿರಥ ಬಾಹ್ಲೀಕೋ [೨]ಗುಣಜ್ಯೇಷ್ಠಶ್ಚ ಶಂತನುಃ ।
[೩]ತ್ವಗ್ದೋಷಯುಕ್ತೋ ದೇವಾಪಿರ್ಜಗಾಮ ತಪಸೇ ವನಮ್ ॥ ೬ ॥

ಅ: ದೇವಾಪಿ, ಬಾಹ್ಲೀಕ ಮತ್ತು ಗುಣಗಳಿಂದಾಗಿ ಮಿಗಿಲೆನ್ನಿಸಿದ ಶಂತನು ಎಂಬವರು ಆ ಮೂವರು ಪುತ್ರರು. ಚರ್ಮರೋಗದಿಂದ ಕೂಡಿದ್ದ ದೇವಾಪಿ ತಪಸ್ಸಿಗೆಂದು ಕಾಡಿಗೆ ತೆರಳಿದ.

ವಿ: ೧) ಪ್ರತೀಪನ ಮೂವರು ಮಕ್ಕಳಲ್ಲಿ ದೇವಾಪಿ ಹಿರಿಯ; ಬಾಹ್ಲೀಕ, ಶಂತನು ಅನಂತರದವರು. ಆದರೆ ಗುಣಗಳಲ್ಲಿ ಮಾತ್ರ ವರುಣನ ಅವತಾರನಾಗಿದ್ದರಿಂದಾಗಿ ಅವರಲ್ಲಿ ಶಂತನುವೇ ಮಿಗಿಲೆನ್ನಿಸಿದ್ದ.

೨) ದೇವಾಪಿಗೆ ಚರ್ಮರೋಗವಿದ್ದುದ್ದರಿಂದ ಅವನು ರಾಜನಾಗಲು ಅನರ್ಹನೆಂದು ತೀರ್ಮಾನಿಸಿದ್ದರಿಂದ ಅವನು ಅದರ ನಿವೃತ್ತಿಗೆಂದು ತಪಸ್ಸಿಗೋಸ್ಕರ ಕಾಡಿಗೆ ತೆರಳಿದ.

ಬಾಹ್ಲೀಕರಾಜ

ವಿಷ್ಣೋಃ ಪ್ರಸಾದಾತ್ [*]ಸ ಕೃತೇ ಯುಗೇ ರಾಜಾ ಭವಿಷ್ಯತಿ ।
ಪುತ್ರಿಕಾಪುತ್ರತಾಂ ಯಾತೋ ಬಾಹ್ಲೀಕೋ ರಾಜಸತ್ತಮಃ ॥ ೭ ॥

---

೧. ಕುರುಕ್ಷೇತ್ರಂ ಸ ತಪಸಾ ಪುಣ್ಯಂ ಚಕ್ರೇ ಮಹಾತಪಾಃ । – ಭಾರತ (ಆದಿ. ೯೪/೫೧)

ಪ್ರಕೃಷ್ಟಮೇತತ್ ಕುರುಣಾ ಮಹಾತ್ಮನಾ ತತಃ ಕುರುಕ್ಷೇತ್ರಮಿತೀಹ ಪಪ್ರಥೇ ॥ – ಭಾರತ (ಶಲ್ಯ. ೫೩/೨)

೨. ಅನುಜತ್ವೇಽಪಿ ಸ್ವಪಿತೃವಂಶಪ್ರವರ್ಧಕತ್ವಾದ್ವರುಣಾವತಾರತ್ವಾಚ್ಚ ಶಂತನುರ್ಗುಣಜ್ಯೇಷ್ಠ ಇತಿ ಭಾವಃ ॥ – (ವಾ.)

ಗುಣಜ್ಯೇಷ್ಠಃ = ದೇವಾಪಿಬಾಹ್ಲೀಕಾಭ್ಯಾಂ ಜ್ಞಾನಭಕ್ತ್ಯಾದಿಗುಣೈರುತ್ತಮಃ । ನ ತು ವಯಸಾ । ಗುಣಜ್ಯೇಷ್ಠ ಇತ್ಯನೇನ ಶಂತನುರ್ಜ್ಯೇಷ್ಠ ಇತಿ ಗ್ರಂಥಾಂತರವಿರೋಧಃ ಪರಿಹೃತಃ । – (ಜ.)

೩. ತ್ವಗ್ದೋಷೇಣ ಕುಷ್ಠೇನ ಯುಕ್ತಃ – (ಜ.)

* ವಿಷ್ಣುಪುರಾಣ (೪/೨೪/೧೧೮, ೧೧೯); ಭಾಗವತ (೧೨/೨/೩೭, ೩೮)

ಅ: ವಿಷ್ಣುವಿನ ಅನುಗ್ರಹದಿಂದಾಗಿ ಅವನು ಮುಂದೆ ಕೃತಯುಗದಲ್ಲಿ ರಾಜನಾಗುವನು. ರಾಜಶ್ರೇಷ್ಠನಾದ ಬಾಹ್ಲೀಕನು ಪುತ್ರಿಕಾಪುತ್ರನೆನ್ನಿಸಿ, ಬಾಹ್ಲೀಕದ ದೊರೆಯಾದ.

ವಿ: ೧) ತಪಸ್ಸಿಗೆ ತೆರಳಿದ ದೇವಾಪಿ ವಿಷ್ಣುವಿನ ಅನುಗ್ರಹದಿಂದ ತನ್ನ ಚರ್ಮರೋಗವನ್ನು ಪರಿಹರಿಸಿಕೊಂಡು, ಮುಂದೆ ಕೃತಯುಗದಲ್ಲಿ ರಾಜನೆನ್ನಿಸಿ ಚಂದ್ರವಂಶವನ್ನು ಮುಂದುವರೆಸುವನು. ಅದರಂತೆ ಮರು ರಾಜನು ಇನ್ನೂ ತಪೋನಿರತನಾಗಿದ್ದು, ಮುಂದೆ ಕೃತಯುಗದಲ್ಲಿ ಸೂರ್ಯವಂಶ ಪ್ರವರ್ತಕನಾಗುವನು ಎಂಬ ವಿಶೇಷಾಂಶ ಭಾಗವತಪುರಾಣದಲ್ಲಿ ಉಕ್ತವಾಗಿದೆ. ಅವರಿಬ್ಬರೂ ಈಗ ಬದರಿಯ ಬಳಿಯ ಕಲಾಪಗ್ರಾಮದಲ್ಲಿ ನೆಲೆಸಿರುವರು ಎಂಬ ಮಾತೂ ಅಲ್ಲೇ ಬಂದಿದೆ :

ದೇವಾಪಿಃ ಶಂತನೋರ್ಭ್ರಾತಾ ಮರುಶ್ಚೇಕ್ಷ್ವಾಕುವಂಶಜಃ ।
ಕಲಾಪಗ್ರಾಮ ಆಸಾತೇ ಮಹಾಯೋಗಬಲಾನ್ವಿತೌ ॥
ತಾವಿಹೇತ್ಯ ಕಲೇರಂತೇ ವಾಸುದೇವಾನುಶಿಕ್ಷಿತೌ ।
ವರ್ಣಾಶ್ರಮಯುತಂ ಧರ್ಮಂ ಪೂರ್ವವತ್ ಪ್ರಥಯಿಷ್ಯತಃ ॥
– ಭಾಗವತ (೧೨/೨/೩೭,೩೮)

ದೇವಾಪಿಃ ಪೌರವೋ ರಾಜಾ ಮರುಶ್ಚೇಕ್ಷ್ವಾಕುವಂಶಜಃ ।
ಮಹಾಯೋಗಬಲೋಪೇತೌ ಕಲಾಪಗ್ರಾಮಸಂಶ್ರಿತೌ ॥
ಕೃತೇ ಯುಗೇ ತ್ವಿಹಾಗಮ್ಯ ಕ್ಷತ್ರಪ್ರವರ್ತಕೌ ಹಿ ತೌ ।
ಭವಿಷ್ಯತೋ ಮನೋರ್ವಂಶಬೀಜಭೂತೌ ವ್ಯವಸ್ಥಿತೌ ॥
– ವಿಷ್ಣುಪುರಾಣ (೪/೨೪/೧೧೮,೧೧೯)

೨) ಎರಡನೆಯವನು ಬಾಹ್ಲೀಕ. ಅವನೂ ಸಹ ಈ ಕುರುವಂಶದ ರಾಜನಾಗಲಿಲ್ಲ. ಅದಕ್ಕೆ ಅವನು ಪುತ್ರಿಕಾಪುತ್ರಧರ್ಮದಿಂದ ಜನಿಸಿದ್ದು ಕಾರಣವಾಯಿತು. ಎಂದರೆ ಅವನ ತಾಯಿ ಬಾಹ್ಲೀಕದೇಶದವಳಾಗಿದ್ದರಿಂದ, ಅವನು ಬಾಹ್ಲೀಕದೇಶಕ್ಕೇ ಸೇರಿದ; ಅಲ್ಲಿಯೇ ರಾಜನೆನ್ನಿಸಿದ.

೩) ಪುತ್ರಸಂತಾನವಿಲ್ಲದ ರಾಜನು ತನ್ನ ಮಗಳನ್ನು ಧಾರೆಯೆರೆಯುವಾಗ ಅವಳಲ್ಲಿ ಜನಿಸುವ ಪುತ್ರನನ್ನು ತನ್ನ ವಂಶಕ್ಕೇ ನೀಡಬೇಕೆಂದು ಮಾಡಿಕೊಳ್ಳುವ ನಿಬಂಧನೆಯನ್ನು [೪]'ಪುತ್ರಿಕಾಪುತ್ರ' ಧರ್ಮವೆನ್ನುವರು. ಬಾಹ್ಲೀಕ ಈ ಧರ್ಮಕ್ಕೆ ಅನುಗುಣವಾಗಿ ಜನಿಸಿದ್ದರಿಂದ ಅವನು ಬಾಹ್ಲೀಕದೇಶದ ದೊರೆ ಎನ್ನಿಸಿದ.

---

೪. ಪುತ್ರಿಕಾಯಾಃ ಪುತ್ರ ಏವ ಮಮ ಪುತ್ರ ಇತಿ ಸಂಕೇತಂ ಕೃತ್ವಾ ಯಾ ಕನ್ಯಾ ದೀಯತೇ ತತ್ಪುತ್ರಃ ಪುತ್ರಿಕಾಪುತ್ರಃ। ಯೋಗರೂಢೋಽಯಂ ಶಬ್ದಃ । ತಸ್ಯ ಭಾವಃ ಪುತ್ರಿಕಾಪುತ್ರತಾ । ಬಾಹ್ಲೀಕಾಧಿಪತಿನಾ ರಾಜ್ಞಾ ಪ್ರತೀಪಾಯೈವಂ ಸಂಕೇತಂ ಕೃತ್ವಾ ದತ್ತಃ । ತಾದೃಶಪುತ್ರಿಕಾಯಾಃ ಪುತ್ರೋಽಯಂ ಬಾಹ್ಲೀಕ ಇತಿ ಹೇತೋಃ ಬಾಹ್ಲೀಕೇಷ್ವೇವ ನೃಪೋಽಭವತ್ । ನತು ಸ್ವಪಿತುಃ ಪ್ರತೀಪಸ್ಯ ರಾಜ್ಯ ಇತಿ ಭಾವಃ ॥ – (ವಾ.)

ಪ್ರಹ್ಲಾದ ಬಾಹ್ಲೀಕರಲ್ಲಿ ವಾಯುದೇವರ ಆವೇಶ

ಹಿರಣ್ಯಕಶಿಪೋಃ ಪುತ್ರಃ ಪ್ರಹ್ಲಾದೋ ಭಗವತ್ಪ್ರಿಯಃ ।
ವಾಯುನಾ ಚ ಸಮಾವಿಷ್ಟೋ ಮಹಾಬಲಸಮನ್ವಿತಃ ॥ ೮ ॥

ಅ: ಬಾಹ್ಲೀಕನು ಹಿರಣ್ಯಕಶಿಪುವಿನ ಪುತ್ರನೂ, ಭಗವಂತನಿಗೆ ಪ್ರಿಯನೂ, ವಾಯುವಿನ ವಿಶೇಷಾವೇಶದೊಂದಿಗೆ ಕೂಡಿದ್ದವನೂ, ಮಹಾಬಲಶಾಲಿಯೂ ಆದ ಪ್ರಹ್ಲಾದ.

ವಿ: ಹಿರಣ್ಯಕಶಿಪುವಿನ ಪುತ್ರನಾಗಿ ಜನಿಸಿದ್ದ ಪ್ರಹ್ಲಾದನೇ ಈಗ ಬಾಹ್ಲೀಕರಾಜನಾಗಿ ಜನಿಸಿದ. ಪ್ರಹ್ಲಾದನಲ್ಲಿ ವಾಯುದೇವರ ಆವೇಶವಿದ್ದ ವಿಶೇಷಾಂಶವನ್ನು ಇಲ್ಲಿ ತಿಳಿಸಿರುವರು. ಇದನ್ನು ಭಾಗವತತಾತ್ಪರ್ಯದೊಂದಿಗೆ ಸೇರಿಸಿಕೊಂಡು ಓದಿದಾಗ ಪ್ರಹ್ಲಾದನ ಹಿರಿಮೆಯ ರಹಸ್ಯ ತಿಳಿಯುವುದು.

ಬಾಹ್ಲೀಕನ ಅಗಾಧಬಲ

ಯೇನೈವ ಜಾಯಮಾನೇನ[೬] ತರಸಾ ಭೂರ್ವಿದಾರಿತಾ ।
ಭೂಭಾರಕ್ಷಪಣೇ ವಿಷ್ಣೋರಂಗತಾಮಾಪ್ತುಮೇವ ಸಃ ॥ ೯ ॥

ಪ್ರತೀಪಪುತ್ರತಾಮಾಪ್ಯ ಬಾಹ್ಲೀಕೇಷ್ವಭವತ್ ಪತಿಃ ।
ರುದ್ರೇಷು[೭] ಪತ್ರತಾಪಾಖ್ಯಿಃ ಸೋಮದತ್ತೋಽಸ್ಯ ಚಾತ್ಮಜಃ ॥ ೧೦ ॥

ಅ: ಅವನು ಜನಿಸುತ್ತಿದ್ದಂತೆಯೇ ಭೂಮಿ ಬಲವಾಗಿ ಸೀಳಿಹೋಯಿತು. ಭೂಭಾರವನ್ನು ಪರಿಹರಿಸುವ ವಿಷ್ಣುವಿನ ಸೇವೆಯನ್ನು ಮಾಡಲೆಂದೇ ಅವನು ಹಾಗೆ ಪ್ರತೀಪರಾಜನ ಪುತ್ರನಾಗಿ

---

೫. ಪುತ್ರಿಕಾಪುತ್ರತ್ವಲಕ್ಷಣಮನ್ಯತ್ರೋಕ್ತಮ್ –
ಅಪುತ್ರೇಣ ಮಯಾ ಕನ್ಯಾ ದೀಯತೇ ತವ ಭೋ ವರ ।
ಏತಸ್ಯಾಂ ಜಾಯತೇ ಪುತ್ರಃ ಸ ಮೇ ಪುತ್ರೋ ಭವಿಷ್ಯತಿ ॥ ಇತಿ । – (ಜ., ವ., ತಿ.)

೬. ತರಸಾ ಬಲೇನ । – (ಜ.)
ಉಕ್ತಂ ಚ ಸಭಾಪರ್ವಣಿ –
'ವರದಂ ಸ್ತುಹಿ ಬಾಹ್ಲೀಕಮಿಮಂ ಪಾರ್ಥಿವಸತ್ತಮಮ್ ।
ಜಾಯಮಾನೇನ ಯೇನೇಯಮಭವದ್ದಾರಿತಾ ಮಹೀ ॥' – (ಜ., ತಿ.)

೭. ರುದ್ರಾಣಾಮಿತಿ ನಿರ್ಧಾರಣೇ ಷಷ್ಠೀ । ರುದ್ರಾಣಾಂ ಮಧ್ಯೇ ಅಜೈಕಪಾದಹಿರ್ಬುಧ್ನ್ಯರ್ವಿರೂಪಾಕ್ಷ ಇತಿ ತ್ರಯಃ ಸೋಮದತ್ತಸುತಾ ಬಭೂವುರಿತಿ ಯೋಜನಾ ॥ – (ವಾ.)

ಜನಿಸಿ, ಬಾಹ್ಲೀಕದೇಶದಲ್ಲಿ ದೊರೆಯೆನ್ನಿಸಿದ. ರುದ್ರರಲ್ಲಿ ಪತ್ರತಾಪ ಎಂಬವನು ಇವನಿಗೆ ಸೋಮದತ್ತ ಎಂಬ ಪುತ್ರನಾದ.

ವಿ: ೧) ಪ್ರಹ್ಲಾದನೇ ಬಾಹ್ಲೀಕನಾದ್ದರಿಂದ ಇವನಲ್ಲಿಯೂ ವಾಯುದೇವರ ವಿಶೇಷಾವೇಶ–ವಿದ್ದಿತು. ಅದರಿಂದಾಗಿಯೇ ಮಹಾಬಲಶಾಲಿ ಎನ್ನಿಸಿದ ಇವನು ಜನಿಸುತ್ತಿದ್ದಂತೆಯೇ ಭೂಮಿ ಬರಿಯಿತು. ''ಇವನು ವಿಷ್ಣುವಿನ ಭೂಭಾರಹರಣಕಾರ್ಯದಲ್ಲಿ ಸೇವೆ ಸಲ್ಲಿಸಲೆಂದು ಜನಿಸಿದ'' ಎಂದು ತಿಳಿಸುವ ಮೂಲಕ ಮುಂದೆ ಇವನು ಕುರುಕ್ಷೇತ್ರಯುದ್ಧದಲ್ಲಿ ಕೌರವಪಕ್ಷವನ್ನು ಸೇರಿದ್ದೂ ಸಹ ಶ್ರೀಹರಿಸೇವೆಗೆ ಸಾಧನವಾಯಿತು ಎಂಬ ತತ್ತ್ವವನ್ನು ತಿಳಿಸಿರುವರು.

೨) [೧]ಏಕಾದಶರುದ್ರರು : ರೈವತ, ಅಜ, ಭವ, ಭೀಮ, ವಾಮ, ಉಗ್ರ, ವೃಷಾಕಪಿ, ಅಜೈಕಪಾತ್, ಅಹಿರ್ಬುಧ್ನಿ, ಬಹುರೂಪ ಮತ್ತು ಮಹಾನ್.

೩) ಈ ಏಕಾದಶರುದ್ರರಲ್ಲಿ ಒಬ್ಬ ರುದ್ರನಿಗೆ ಪತ್ರತಾಪ ಎಂಬುದು ನಾಮಾಂತರ. ಈತನೇ ಬಾಹ್ಲೀಕಪುತ್ರನಾಗಿ ಅವತರಿಸಿ, ಸೋಮದತ್ತ ಎನಿಸಿದ.

೨) ಈ ಪತ್ರತಾಪರುದ್ರನೇ ಜರಾಸಂಧನ ಪುತ್ರನಾಗಿ ಸಹದೇವ ಎಂಬ ಹೆಸರಿನಿಂದಲೂ ಅವತರಿಸಿದ ವಿವರ ಮುಂದೆ ಬಂದಿದೆ (೨೧/೧೫೧).

ಸೋಮದತ್ತನ ಪುತ್ರರು; ಭೂರಿಶ್ರವಸ್ಸಿನ ಹಿರಿಮೆ

ಅಜೈಕಪಾದಹಿರ್ಬುಧ್ನ್ಯಿರ್ವಿರೂಪಾಕ್ಷ ಇತಿ ತ್ರಯಃ ।
ರುದ್ರಾಣಾಂ ಸೋಮದತ್ತಸ್ಯ ಬಭೂವುಃ ಪ್ರಥಿತಾಃ ಸುತಾಃ ॥ ೧೧ ॥

ವಿಷ್ಣೋರೇವಾಂಗತಾಮಾಪ್ತುಂ ಭೂರಿರ್ಭೂರಿಶ್ರವಾಃ ಶಲಃ ।
ಶಿವಾದಿಸರ್ವರುದ್ರಾಣಾಮಾವೇಶಾದ್ವರತಸ್ತಥಾ ॥ ೧೨ ॥

ಭೂರಿಶ್ರವಾ ಅತಿಬಲಸ್ತತ್ರಾಸೀತ್ ಪರಮಾಸ್ತ್ರವಿತ್ ।
ತದರ್ಥಂ ಹಿ ತಪಶ್ಚೀರ್ಣಂ ಸೋಮದತ್ತೇನ ಶಂಭವೇ ॥ ೧೩ ॥

---

೧. ರೈವತೋऽಜೋ ಭವೋ ಭೀಮೋ ವಾಮ ಉಗ್ರೋ ವೃಷಾಕಪಿಃ ।
ಅಜೈಕಪಾದಹಿರ್ಬುಧ್ನೋ ಬಹುರೂಪೋ ಮಹಾನಿತಿ ॥ – ಭಾಗವತ (೬/೬/೧೮)

೨. ವರತಸ್ತಥೇತ್ಯಸ್ಯ । ಕಸ್ಯ ತಪಸಾ ಕಸ್ಮಾದ್ವರ ಇತ್ಯತಸ್ತಾತ್ಪರ್ಯಮಾಹ – ತದರ್ಥಮಿತಿ ॥ – (ವಾ.)

ಅ: ಅಜೈಕಪಾತ್, ಅಹಿರ್ಬುಧ್ನಿ ಮತ್ತು ವಿರೂಪಾಕ್ಷ ಎಂಬ ಮೂವರು ರುದ್ರರು ಸೋಮದತ್ತನಿಗೆ ಭೂರಿ, ಭೂರಿಶ್ರವಸ್ ಮತ್ತು ಶಲ ಎಂಬ ಪ್ರಖ್ಯಾತಪುತ್ರರಾಗಿ ಶ್ರೀವಿಷ್ಣುಸೇವೆಗೆಂದು ಜನಿಸಿದರು. ಶಿವ ಮೊದಲಾದ ಸಕಲರುದ್ರರ ಆವೇಶದಿಂದಾಗಿಯೂ, ಶಿವನ ವರದಿಂದಾಗಿಯೂ ಆ ಮೂವರಲ್ಲಿ ಭೂರಿಶ್ರವಸ್ ಅತ್ಯಂತ ಬಲಿಷ್ಠನೂ, ಮಹಾ ಅಸ್ತ್ರಜ್ಞನೂ ಎನ್ನಿಸಿದ. ಸೋಮದತ್ತನು ಅದಕ್ಕಾಗಿಯೇ ಶಿವನನ್ನು ಕುರಿತು ತಪಸ್ಸು ಮಾಡಿದ್ದ.

ವಿ: ೧) ಏಕಾದಶರುದ್ರರಲ್ಲಿ ಬಹುರೂಪ ಎಂಬವನಿಗೆ ವಿರೂಪಾಕ್ಷ ಎಂದು ನಾಮಾಂತರ. ಸೋಮದತ್ತನು ಮಧ್ಯಮಪುತ್ರ. ಶಿವಾದಿಸಕಲರುದ್ರರ ಆವೇಶದಿಂದ ಕೂಡಿ, ಮಹಾಬಲಿಷ್ಠನೂ, ಶ್ರೇಷ್ಠಅಸ್ತ್ರಜ್ಞನೂ ಆಗಬೇಕೆಂದು ಶಿವನನ್ನು ಕುರಿತು ತಪಸ್ಸನ್ನು ಮಾಡಿದ್ದ. ಅದಕ್ಕೆಂದೇ ಮಧ್ಯಮಪುತ್ರನಾದ ಭೂರಿಶ್ರವಸ್ ಸೋಮದತ್ತಪುತ್ರರಲ್ಲಿ ವಿಶೇಷಖ್ಯಾತಿ ಪಡೆದ. ಆದ್ದರಿಂದಲೇ ಭಗವದ್ಗೀತೆಯ ಮೊದಲ ಅಧ್ಯಾಯದಲ್ಲಿ ಬರುವ 'ಸೌಮದತ್ತಿಸ್ತಥೈವ ಚ' ಎಂಬಲ್ಲಿ ಪ್ರಸ್ತಾಪಿತ–ನಾಗಿರುವ ಸೌಮದತ್ತಿಯು ಈ ಭೂರಿಶ್ರವಸ್ ಎಂದೇ ತಿಳಿಯಬೇಕು.

೨) ಇವರೆಲ್ಲರೂ ಬಾಹ್ಲೀಕರಾಜನಂತೆ ಕುರುಕ್ಷೇತ್ರಸಮರದಲ್ಲಿ ಕೌರವಪಕ್ಷವನ್ನೇ ಸೇರುವರು. ಅದು ಸಹ ಅವರಿಗೆ ವಿಷ್ಣುಸೇವೆಗೇ ಸಾಧನವಾಯಿತು ಎಂಬ ವಿಶೇಷಾಂಶವೂ ಸಹ ಇಲ್ಲಿ ಸೂಚಿತವಾಗಿದೆ.

ದತ್ತೋ ವರಶ್ಚ ತೇನಾಸ್ಯ ತ್ವತ್ಪ್ರತೀಪಾಭಿಭೂತಿಕೃತ್[೧] ।
ಬಲವೀರ್ಯಗುಣೋಪೇತೋ ನಾಮ್ನಾ ಭೂರಿಶ್ರವಾಃ ಸುತಃ ॥ ೧೪ ॥

ಭವಿಷ್ಯತಿ ಮಯಾऽऽವಿಷ್ಟೋ ಯಜ್ಞಶೀಲ ಇತಿ ಸ್ಮ ಹ ।
ತೇನ ಭೂರಿಶ್ರವಾ ಜಾತಃ ಸೋಮದತ್ತಸುತೋ ಬಲೀ ॥ ೧೫ ॥

ಅ: ''ನಿನ್ನ ವೈರಿಗಳನ್ನು ಪರಾಭವಗೊಳಿಸುವಂತಹ, ಬಲ ವೀರ್ಯ ಗುಣಗಳಿಂದ ಕೂಡಿದ, ಯಜ್ಞಶೀಲನಾದ ನನ್ನ ಆವೇಶವನ್ನೂ ಹೊಂದಿದ ಭೂರಿಶ್ರವಸ್ ಎಂಬ ಪುತ್ರ ನಿನಗೆ ಜನಿಸುವನು'' ಎಂಬುದಾಗಿಯೇ ಅವನಿಗೆ ಶಿವ ವರ ನೀಡಿದ್ದ. ಅದಕ್ಕಾಗಿ ಸೋಮದತ್ತನ ಪುತ್ರ ಭೂರಿಶ್ರವಸ್ ಅತ್ಯಂತಬಲಶಾಲಿ ಎನ್ನಿಸಿದ.

---

೧. ತ್ವತ್ಪ್ರತೀಪಾಭಿಭೂತಿಕೃದಿತ್ಯಸ್ಯ ತವ ಯೇ ಪ್ರತೀಪಾಃ ವೈರಿಣಃ ತೇಷಾಮಭಿಭೂತಿಃ ಪರಾಭವಃ ತಸ್ಯಾಃ ಕರ್ತೇತ್ಯರ್ಥಃ ॥ – (ವಾ.)

ಪ್ರತಿಪಕ್ಷಿಣಃ ಶಿನೇಃ ಅಭಿಭೂತಿಂ ಪರಾಭವಮ್ ..... – (ಜ.)

ಶಂತನುವಿನ ಪೂರ್ವೋತ್ತರ

ಪೂರ್ವೋದಧೇಸ್ತೀರಗತೇಽಬ್ಜಸಂಭವೇ
ಗಂಗಾಯುತಃ ಪರ್ವಣಿ ಘೂರ್ಣಿತೋಽಬ್ಧಿಃ ।
ಅವಾಕ್ಷಿಪತ್ ತಸ್ಯ ತನೌ ನಿಜೋದ-
ಬಿಂದುಂ ಶಶಾಪೈನಮಥಾಬ್ಜಯೋನಿಃ ॥ ೧೬ ॥

ಅ: ಒಂದು ಪರ್ವಕಾಲದಲ್ಲಿ ಕಮಲಸಂಭವರಾದ ಬ್ರಹ್ಮದೇವರು ಪೂರ್ವಸಮುದ್ರದ ತೀರಕ್ಕೆ ತೆರಳಿದ್ದಾಗ, ಗಂಗೆಯಿಂದ ಕೂಡಿದ ಸಮುದ್ರ ಉಕ್ಕೇರಿ, ತನ್ನ ನೀರ ಹನಿಯೊಂದನ್ನು ಬ್ರಹ್ಮನ ಮೈಗೆ ಸಿಡಿಸಿದ. ಆಗ ಬ್ರಹ್ಮ ಅವನನ್ನು ಶಪಿಸಿದ.

ವಿ: ೧) ಇಲ್ಲಿ ಪರ್ವಕಾಲವೆಂದರೆ ಹುಣ್ಣಿಮೆ ಎಂಬ ಅರ್ಥವನ್ನು ಹರಿವಂಶವಚನದ ಆಧಾರದಿಂದ ಜನಾರ್ದನಭಟ್ಟರು ಬರೆದಿರುವರು.

೨) 'ಗಂಗಾಯುತಃ' ಎಂದಿದ್ದರಿಂದ ಇದು ಗಂಗಾಸಾಗರಸಂಗಮದ ಬಳಿ ನಡೆದ ಘಟನೆ ಎಂದು ಸ್ಫುಟಪಡುವುದು. ಸಮುದ್ರ ಹಾಗೆ ತನ್ನ ನೀರ ಹನಿಯೊಂದನ್ನು ಬ್ರಹ್ಮದೇವರ ಮೇಲೆ ಸಿಡಿಸಲು ಗಂಗೆಯೊಂದಿಗೆ ಕೂಡಿ ಮೈಮರೆತದ್ದೇ ಕಾರಣ ಎಂಬ ವಿಶೇಷಾಂಶವೂ ಇದರಿಂದ ಸೂಚಿತ.

೩) ಪರ್ವಕಾಲದಲ್ಲಿ ಗಂಗಾಸಾಗರಸಂಗಮಸ್ನಾನ ವಿಶೇಷಪುಣ್ಯದಾಯಕ ಎಂಬ ತತ್ತ್ವ ಸಹ ಇದರಿಂದ ಸೂಚಿತ.

---

೧. ಸಮುದ್ರಸ್ಯ ತೀರಂ ಗತೇ ಪಶ್ಚಿಮತೀರಂ ಪ್ರಾಪ್ತೇ ಸತಿ ।
'ಸಮುದ್ರೇಽಹಂ ಪುರಾ ಪೂರ್ವೇ ವೇಲಾಮಾಸಾದ್ಯ ಪಶ್ಚಿಮಾಮ್'
ಇತಿ ಹರಿವಂಶೇಷು ॥ (೧/೫೩/೧೫) – (ಜ.)

೨. ಪರ್ವಣಿ = ಪೂರ್ಣಿಮಾಯಾಮ್ ।
ಉದ್ಧೂತೈಶ್ಚ ಮಹಾವಾತೈಃ ಪ್ರವೃದ್ಧೈಶ್ಚ ಬಲಾಹಕೈಃ ।
ಪರ್ವಣಾ ಚೇಂದುಯುಕ್ತೇನ ತ್ರಿಭಿಃ ಕ್ಷುಬ್ಧೋಽಸ್ಮಿ ಕಾರಣೈಃ ॥'
ಇತಿ ಹರಿವಂಶೇ । (೧/೫೩/೩೨) – (ಜ.)

ಪರ್ವಣಿ = ದರ್ಶೇ । – (ವ.)

೩. ಘೂರ್ಣಿತಃ = ಉಚ್ಚಲಿತಃ । – (ಜ.)

೪. ನಿಜೋದಬಿಂದುಮಿತ್ಯತ್ರ ಗಂಗೋದಬಿಂದುವ್ಯಾವೃತ್ತ್ಯರ್ಥಂ ನಿಜೇತ್ಯುಕ್ತಮ್ । ಏತೇನೋದಬಿಂದುಮಿತ್ಯನೇನೈವ ಪೂರ್ಣತ್ವಾತ್ ನಿಜೇತ್ಯೇತದ್ವ್ಯರ್ಥಮಿತಿ ದೂಷಣಂ ಪರಿಹೃತಮ್ । ಸ್ವಕೀಯಲವಣೋದಬಿಂದುಮೇವಾವಾಕ್ಷಿಪತ್ ನ ತು ಗಂಗಾಸಂಬಂಧಿಮಧುರೋದಬಿಂದುಮಿತಿ ಜ್ಞಾಪಯಿತುಂ ನಿಜೇತ್ಯುಕ್ತಮಿತಿ ಸ್ವೀಕರಣಾತ್। – (ಸ.)

೪) ಬ್ರಹ್ಮದೇವರು ಗಂಗೆಗೆ ಶಾಪ ನೀಡದೆ, ಸಮುದ್ರರಾಜನಾದ ವರುಣನಿಗೆ ಮಾತ್ರ ಶಾಪ ನೀಡಲು ಅವನ ನೀರ ಹನಿ ಮಾತ್ರ ಅವರ ಮೈಮೇಲೆ ಬಿದ್ದದ್ದೇ ಕಾರಣ ಎಂಬುದು 'ನಿಜೋದಬಿಂದುಂ' ಎಂಬ ಪದದಿಂದ ಸೂಚಿತ.

೫) ಬ್ರಹ್ಮದೇವರದು ವರುಣನ ಅಪರಾಧಕ್ಕೆ ನೀಡಿದ ಯೋಗ್ಯಶಿಕ್ಷೆಯಾದ್ದರಿಂದ ಅವರ ಶಾಪವು ಇತರರ ಶಾಪದಂತೆ ಪುಣ್ಯಹಾನಿಕಾರಕವಾದ ಶಾಪವಲ್ಲ ಎಂದು ತಿಳಿಯಬೇಕು.

ಮಹಾಭಿಷಜ್ನಾಮ ನರೇಶ್ವರಸ್ತ್ವಂ
ಭೂತ್ವಾ ಪುನಃ ಶಂತನುನಾಮಧೇಯಃ ।
ಜನಿಷ್ಯಸೇ ವಿಷ್ಣುಪದೀ ತಥೈಷಾ
ತವಾಪಿ ಭಾರ್ಯಾ ಭವತೋ ಭವಿಷ್ಯತಿ ॥ ೧೭ ॥

ಅ: ನೀನು ಮಹಾಭಿಷಕ್ ಎಂಬ ರಾಜನಾಗಿ ಹುಟ್ಟಿ ಅನಂತರ ಶಂತನುನಾಮಕನಾಗಿ ಜನಿಸುವಿ. ಹಾಗೆಯೇ ಈ ಗಂಗೆಯು ಆ ಜನ್ಮದಲ್ಲೂ ನಿನಗೆ ಪತ್ನಿಯಾಗುವಳು.

ವಿ: ೧) ಬ್ರಹ್ಮಶಾಪದಂತೆ ವರುಣ ಎರಡು ಜನ್ಮಗಳನ್ನು ಪಡೆಯುವನು. ಅದರಲ್ಲಿ ಮೊದಲನೆಯದು ಮಹಾಭಿಷಕ್; ಎರಡನೆಯದು ಶಂತನು. ಶಂತನುಜನ್ಮದಲ್ಲಿ ಗಂಗೆಯು ಮೂಲರೂಪದಿಂದಲೇ ಅವನಿಗೆ ಪತ್ನಿಯಾದಳು.

೨) ಗಂಗೆಯೊಂದಿಗೆ ಒಡಗೂಡಿದ್ದಾಗಲೇ ವರುಣ ಅಪರಾಧವೆಸಗಿದ್ದರಿಂದ ಅವನು ಶಂತನುವಾಗಿ ಜನಿಸಿದಾಗಲೂ, ಅವಳು ಅವನೊಂದಿಗೇ ಪತ್ನಿಯಾಗಿರಬೇಕು ಎಂಬುದು ಈ ಶಾಪದ ಹಿನ್ನೆಲೆ ಎಂದು ತಿಳಿಯಬಹುದು.

ಶಾಂತೋ ಭವೇತ್ಯೇವ ಮಯೋದಿತಸ್ತ್ವಂ
ತನುತ್ವಮಾಪ್ತೋಽಸಿ ತತಶ್ಚ ಶಂತನುಃ ।
ಇತೀರಿತಃ ಸೋಽಥ ನೃಪೋ ಬಭೂವ
ಮಹಾಭಿಷಜ್ನಾಮ ಹರೇಃ ಪದಾಶ್ರಯಃ ॥ ೧೮ ॥

---

೧. ಏಷಾ ವಿಷ್ಣುಪದೀ = ಗಂಗಾ ಮೂಲರೂಪೇಣೈವ । ತತ್ರಾಪಿ = ದೇವಾನಾಂ ಗರ್ಹಿತಮನುಷ್ಯಜನ್ಮನ್ಯಪಿ ಭವತೋ ಭಾರ್ಯಾ ಭವಿಷ್ಯತಿ ॥ – (ವಾ.)

೨. .... ದೇವತಾದೇಹೇನಾಪಿ ಭವತಸ್ತವ ಭಾರ್ಯಾ ಭವಿಷ್ಯತಿ । – (ಜ.)

ಅ: ''ಶಾಂತನಾಗು ಎಂದು ನನ್ನಿಂದ ಹೇಳಲ್ಪಟ್ಟ ನೀನು ಕುಗ್ಗಿ ಶಾಂತನಾದ್ದರಿಂದ ನೀನು 'ಶಂತನು'ವೆನ್ನಿಸುವಿ''. ಹೀಗೆ ಹೇಳಲ್ಪಟ್ಟ ವರುಣ ಹರಿಯ ಪದವನ್ನು ಆಶ್ರಯಿಸಿದ ಮಹಾಭಿಷಕ್ ಎಂಬ ರಾಜನಾಗಿ ಜನಿಸಿದನು.

ಎ: ೧) ವರುಣನಿಗೆ ಬ್ರಹ್ಮ ಶಾಪ ನೀಡಿದ ಪ್ರಸಂಗ ಹರಿವಂಶದಲ್ಲಿ ಬಂದಿದೆ :

ಶಾಂತೋಽಸೀತಿ ಮಯೋಕ್ತಸ್ತ್ವಂ ಯಚ್ಚಾಪಿ ತನುತಾಂ ಗತಃ ।
ಸುತನುರ್ಯಶಸಾ ಲೋಕೇ ಶಂತನುಸ್ತ್ವಂ ಭವಿಷ್ಯಸಿ ॥ – ಹರಿವಂಶ (೧/೫೩/೨೬)

೨) 'ಶಂತನು' ಎಂಬ ಹೆಸರು ಬರಲು ಕಾರಣವನ್ನು ಇಲ್ಲಿ ನೀಡಿರುವರು. 'ಶಾಂತೋ ಭವ' ಎಂದು ಬ್ರಹ್ಮದೇವರಿಂದ ನುಡಿಯಲ್ಪಟ್ಟು ಜನ್ಮ ಪಡೆಯುವುದರಿಂದ ಅವನಿಗೆ ಆ ಹೆಸರು ಎಂದರ್ಥ :

೩) ಶಂತನು ಎಂಬ ಪದದ ನಿಷ್ಪತ್ತಿಯನ್ನು ಶ್ರೀವಾದಿರಾಜರು 'ಶಾಂತತನು' ಎಂಬ ಪದದಲ್ಲಿನ ಆಕಾರವು ಅಕಾರವಾಗಿ, ವರ್ಣವಿಕಾರ ಹೊಂದಿ, ತಕಾರವು ಪೂರ್ತಿ ಲೋಪಗೊಂಡು 'ಶಂತನು' ಎಂದಾಗಿದೆ ಎಂದು [೧]ವಿವರಿಸಿರುವರು.

೪) ಮಹಾಭಾರತ ಮತ್ತು ವಿಷ್ಣುಪುರಾಣಗಳಲ್ಲಿ–

ಯಂ ಯಂ ಕರಾಭ್ಯಾಂ ಸ್ಪೃಶತಿ ಜೀರ್ಣಂ ಸ ಸುಖಮಶ್ನುತೇ ।
ಪುನರ್ಯುವಾ ಚ ಭವತಿ ತಸ್ಮಾತ್ ತಂ ಶಂತನುಂ ವಿದುಃ ॥ – (ಆದಿ. ೯೫/೪೬)

ಯಂ ಯಂ ಕರಾಭ್ಯಾಂ ಸ್ಪೃಶತಿ ಜೀರ್ಣಂ ಯೌವನಮೇತಿ ಸಃ ।
ಶಾಂತಿಂ ಚಾಪ್ನೋತಿ ಯೇನಾಗ್ರ್ಯಂ ಕರ್ಮಣಾ ತೇನ ಶಂತನುಃ ॥
– ವಿಷ್ಣುಪುರಾಣ (೪/೨೦/೧೩)

ಅವನು ತನ್ನ ಎರಡೂ ಕೈಗಳಿಂದ ಮುಟ್ಟಿದಾಗ ವೃದ್ಧರು ಮತ್ತೆ ತರುಣರಾಗಿ ಸುಖಪಡುವಂತಾಗುತ್ತಿತ್ತು, ಅದಕ್ಕೆಂದೇ ಅವನಿಗೆ ಶಂತನು ಎನ್ನುವರು ಎಂಬುದಾಗಿ ಮತ್ತೊಂದು ಬಗೆಯ ವಿವರಣೆ ನೀಡಲಾಗಿದೆ.

---

೧. ನಿರುಕ್ತೇ ''ದ್ವೌ ಚಾಪರೌ ವರ್ಣವಿಕಾರನಾಶೌ'' ಇತಿ ವರ್ಣವಿಕಾರನಾಶಯೋರುಕ್ತತ್ವಾತ್ । ಆಕಾರಸ್ಯ ಅಕಾರಾಖ್ಯವರ್ಣವಿಕಾರೇ ಸತಿ ತಕಾರನಾಶೇ ಚ ಸತಿ ಶಾಂತತನುರಿತ್ಯರ್ಥೇ ಶಂತನುರಿತಿ ಪದಮ್ । ಶಾಂತೋ ಭವೇತಿ ಬ್ರಹ್ಮಣೋಕ್ತೇ ಆಟೋಪಶಾಂತಿಂ ಪ್ರಾಪ್ಯ ತನುತ್ವಮಲ್ಪತ್ವಂ ಚ ಪ್ರಾಪ್ತಸ್ಯ ಮೂಲರೂಪಸಮುದ್ರಸ್ಯ ನಾಮ ಭವತು । ತತಶ್ಚ ಶಂತನುರಿತಿ ಶಂತನುಚಕ್ರವರ್ತಿನಃ ಕಥಂ ನಾಮ । ಮೂಲರೂಪಸ್ಯ ನಾಮ ಅವತಾರೇಽಪಿ ಭವತಿ ಚೇತ್ ಮಹಾಭಿಷಗಾಖ್ಯಪ್ರಥಮರೂಪೇ ಕುತೋ ನಾಭೂದಿತಿ ಚೇತ್ ಸತ್ಯಂ, ದ್ವಿತೀಯತನೌ ಮಾನುಷತ್ವಾನು-ಭವಸಮಯೇ ತಸ್ಯಾಂ ತನೌ ಮಯ್ಯಾಚರಿತಾಪರಾಧಸ್ಯ ಶಾಂತತ್ವಾತ್ ಸಾಽಪಿ ತನುಃ ಶಂತನುರಿತ್ಯುಚ್ಯತ ಇತಿ ಬ್ರಹ್ಮಣೋ ಭಾವಸದ್ಭಾವಾತ್ ॥ –(ವಾ.)

೫) 'ಶಾಂತಸ್ಯ ಜಜ್ಞೇ ಸಂತಾನಸ್ತಸ್ಮಾದಾಸೀತ್ ಸ ಶಂತನುಃ' (ರಾಜವಂಶ ನಿಲ್ಲುವ ಪ್ರಸಂಗದಲ್ಲಿ ಜನಿಸಿ, ಅದು ಮುಂದುವರೆಯಲು ಕಾರಣನಾದ್ದರಿಂದ ಅವನು ಶಂತನುವೆನ್ನಿಸಿದನು) ಎಂಬ ಇನ್ನೊಂದು ಬಗೆಯ ವಿವರಣೆಯೂ ಮಹಾಭಾರತದಲ್ಲಿದೆ.

೬) ಈ ಮಹಾಭಿಷಕ್ ಜನಿಸಿದ್ದು ಇಕ್ಷ್ವಾಕುವಂಶದಲ್ಲಿ:

ಇಕ್ಷ್ವಾಕುವಂಶಪ್ರಭವೋ ರಾಜಾऽऽಸೀತ್ ಪೃಥಿವೀಪತಿಃ ।
ಮಹಾಭಿಷ ಇತಿ ಖ್ಯಾತಃ ಸತ್ಯವಾಕ್ ಸತ್ಯವಿಕ್ರಮಃ ॥ – ಭಾರತ(ಆದಿ. ೯೬/೧)

೭) ಪ್ರಚಲಿತ ಮಹಾಭಾರತಪಾಠದಲ್ಲಿ 'ಮಹಾಭಿಷಕ್' ಎಂಬಲ್ಲಿ 'ಮಹಾಭಿಷ' ಎಂದೂ, 'ಶಂತನು' ಎಂಬುದಕ್ಕೆ 'ಶಾಂತನು' ಎಂದೂ ಉಲ್ಲೇಖವಿದೆ. ಅವನ್ನು ಪಾಠಾಂತರಗಳೆಂದು ತಿಳಿಯಬಹುದು.

ಮಹಾಭಿಷನ ಅಪರಾಧ; ಶಂತನುವಾಗಿ ಜನನ

ಸ ತತ್ರ ಭುಕ್ತ್ವಾ ಚಿರಕಾಲಮುರ್ವೀಂ
ತನುಂ ವಿಹಾಯಾಪ ಸದೋ ವಿಧಾತುಃ ।
ತತ್ರಾಪಿ ತಿಷ್ಠನ್ ಸುರವೃಂದಸನ್ನಿಧೌ
ದದರ್ಶ ಗಂಗಾಂ ಶ್ಲಥಿತಾಂಬರಾಂ ಸ್ವಕಾಮ್ ॥ ೧೯ ॥

ಅ: ಆ ಜನ್ಮದಲ್ಲಿ ಅವನು ಬಹುಕಾಲ ಭೂಮಿಯನ್ನು ಪಾಲಿಸಿ, ದೇಹವನ್ನು ತೊರೆದು, ಬ್ರಹ್ಮಸಭೆಯನ್ನು ಸೇರಿದ. ಅಲ್ಲಿ ದೇವತೆಗಳ ಗುಂಪಿನಲ್ಲಿ ನೆಲೆಸಿದ್ದಾಗಲೊಮ್ಮೆ ತನ್ನ ಪತ್ನಿಯಾದ ಗಂಗೆಯನ್ನು ಅವಳ ಬಟ್ಟೆ ಜಾರಿದಾಗ ನೋಡಿದ.

ವಿ: ೧) ಮಹಾಭಿಷಕ್ ಅನೇಕವಿಧವಾದ ಯಜ್ಞಯಾಗಗಳಿಂದ ಬಹುಕಾಲ ಭಗವಂತನನ್ನು ಆರಾಧಿಸಿ, ಸ್ವರ್ಗ ಪಡೆದ ವಿವರ ಮಹಾಭಾರತದಲ್ಲಿದೆ :

ಸೋऽಶ್ವಮೇಧಸಹಸ್ರೇಣ ರಾಜಸೂಯಶತೇನ ಚ ।
ತೋಷಯಾಮಾಸ ದೇವೇಶಂ ಸ್ವರ್ಗಂ ಲೇಭೇ ತತಃ ಪ್ರಭುಃ ॥ – (ಆದಿ. ೯೬/೨)

೨) ಅವನು ಬ್ರಹ್ಮಸಭೆಯಲ್ಲಿದ್ದಾಗಲೊಮ್ಮೆ ದೇವತೆಗಳೂ ಅಲ್ಲಿ ಸೇರಿದ್ದರು. ಆಗ ಬ್ರಹ್ಮ–ದೇವರನ್ನು ಕಾಣಲೆಂದು ಗಂಗೆಯೂ ಅಲ್ಲಿಗೆ ಆಗಮಿಸಿದಳು. ಆಗ ಬೀಸಿದ ಗಾಳಿಗೆ ಅವಳ ಬಟ್ಟೆ ಜಾರಿತು. ತತ್ಕ್ಷಣವೇ ದೇವತೆಗಳೆಲ್ಲ ತಲೆತಗ್ಗಿಸಿದರು. ಆದರೆ ಮಹಾಭಿಷಕ್ ಮಾತ್ರ ಅವಳು ತನ್ನ ಮಡದಿ ಗಂಗೆಯೇ ಎಂಬ ಕಾರಣದಿಂದ ಅವಳನ್ನೇ ಆಸಕ್ತಿಯಿಂದ ನೋಡುತ್ತಲಿದ್ದ. ಸಭಾಮರ್ಯಾದೆಯನ್ನು ಮೀರಿದ ಅವನಿಗೆ ಬ್ರಹ್ಮದೇವರು ತತ್ಕ್ಷಣವೇ ಭೂಮಿಯಲ್ಲಿ ಹುಟ್ಟು–

ವಂತೆಯೂ, ಆ ಗಂಗೆ ಅವನಿಗೆ ಅಲ್ಲೂ ಮಡದಿಯಾಗಿ ಅನೇಕವಿಧವಾದ ಅಪ್ರಿಯಕಾರ್ಯಗಳನ್ನು ನಡೆಸುವಂತೆಯೂ, ಅವನು ಅವಳ ಮೇಲೆ ಕೋಪಗೊಂಡಾಗ ಅವರಿಬ್ಬರಿಗೆ ವಿಯೋಗವಾಗು-ವಂತೆಯೂ [೧]ಶಪಿಸಿದರು.

[೨]ಅವಾಙ್ಮುಖೇಷು ದ್ಯುಸದತ್ಸು ಗಂಗಾಂ
ನಿರೀಕ್ಷಮಾಣಂ ಪುನರಾತ್ಮಸಂಭವಃ ।
ಉವಾಚ ಭೂಮೌ ನೃಪತಿರ್ಭವಾಶು[೩]
ಶಪ್ತೋ ಯಥಾ ತ್ವಂ ಹಿ ಪುರಾ ಮಯೈವ ॥ ೨೦ ॥

ಅ: ದೇವತೆಗಳೆಲ್ಲರೂ ಮುಖತಗ್ಗಿಸಿ ಕುಳಿತರು. ಅವನು ಮಾತ್ರ ಗಂಗೆಯನ್ನು ನೋಡು-ತ್ತಲೇ ಇದ್ದ. ಆಗ ಬ್ರಹ್ಮದೇವರು ನುಡಿದರು : ''ನಾನು ನಿನಗೆ ಹಿಂದೆ ಶಪಿಸಿದ್ದಂತೆ ನೀನು ಭೂಮಿಯಲ್ಲಿ ಬೇಗನೆ ರಾಜನಾಗಿ ಜನಿಸು''.

ವಿ: ೧) 'ನಗ್ನಸ್ತ್ರೀಯನ್ನು ನೋಡಕೂಡದು' ಎಂಬ [೧]ಶಾಸ್ತ್ರವಾಣಿಗೆ ಅನುಗುಣವಾಗಿ ಬಟ್ಟೆ ಜಾರುತ್ತಲೇ ದೇವತೆಗಳೆಲ್ಲ ಮುಖತಗ್ಗಿಸಿದರು ಎಂದು ಭಾವ.

೨) ಮಹಾಭಿಷಕ್ ಮಾತ್ರ ಅವಳನ್ನು ಹಾಗೆ ದಿಟ್ಟಿಸಿ ನೋಡಲು ಅವಳು ತನ್ನ ಪತ್ನಿಯೇ ಎಂಬ ಭಾವ ಕಾರಣವಾಗಿತ್ತು; ತನ್ನ ಪತ್ನಿಯೇ ಆದರೂ, ಸಭಾಮರ್ಯಾದೆಯನ್ನು ಗಮನಿಸದೆ,

---

೧. ತತಃ ಕದಾಚಿದ್ಬ್ರಹ್ಮಾಣಮುಪಾಸಾಂ ಚಕ್ರಿರೇ ಸುರಾಃ ।
ತತ್ರ ರಾಜರ್ಷಯೋ ಹ್ಯಾಸನ್ ಸ ಚ ರಾಜಾ ಮಹಾಭಿಷಃ ॥
ಅಥ ಗಂಗಾ ಸರಿಚ್ಛ್ರೇಷ್ಠಾ ಸಮುಪಾಯಾತ್ ಪಿತಾಮಹಮ್ ।
ತಸ್ಯಾ ವಾಸಃ ಸಮುದ್ಧೂತಂ ಮಾರುತೇನ ಶಶಿಪ್ರಭಮ್ ॥
ತತೋऽಭವನ್ ಸುರಗಣಾಃ ಸಹಸಾऽವಾಙ್ಮುಖಾಸ್ತದಾ ।
ಮಹಾಭಿಷಸ್ತು ರಾಜರ್ಷಿರಶಂಕೋ ದೃಷ್ಟವಾನ್ ನದೀಮ್ ॥
ಅಪಧ್ಯಾತೋ ಭಗವತಾ ಬ್ರಹ್ಮಣಾ ಸ ಮಹಾಭಿಷಃ ।
ಉಕ್ತಶ್ಚ ಜಾತೋ ಮರ್ತ್ಯೇಷು ಪುನರ್ಲೋಕಾನವಾಪ್ಸ್ಯಸಿ ॥ ೬॥
ಯಯಾऽऽಹೃತಮನಾಶ್ಚಾಸಿ ಗಂಗಯಾ ತ್ವಂ ಹಿ ದುರ್ಮತೇ ।
ಸಾ ತೇ ವೈ ಮಾನುಷೇ ಲೋಕೇ ವಿಪ್ರಿಯಾಣ್ಯಾಚರಿಷ್ಯತಿ ॥
ಯದಾ ತೇ ಭವಿತಾ ಮನ್ಯುಸ್ತದಾ ಶಾಪಾದ್ವಿಮೋಕ್ಷ್ಯಸೇ ॥ –(ಆದಿ.೯೬/೩-೮)

೨. 'ನ ನಗ್ನಾಂ ಸ್ತ್ರಿಯಮೀಕ್ಷೇತ' ಇತಿ ವಚನಾದವಾಙ್ಮುಖೇಷ್ವಿತಿ ಭಾವಃ । – (ಜ.)

೩. ನೃಪತಿರ್ಭವಾಶ್ವಿತಿ ವದತಾ ಪೂರ್ವಾಬ್ದೌ ಬ್ರಹ್ಮದತ್ತಶಾಪಸ್ಯ ಮಾನುಷಜನ್ಮದ್ವಯಂ ಫಲಮ್ । ರಾಗೇಣ ಗಂಗಾದರ್ಶನೇ ಸತಿ ಸ್ವಸಭಾಯಾಂ ಬ್ರಹ್ಮದತ್ತಶಾಪಸ್ಯ ಶಂತನುಜನ್ಮನ್ಯಾಶು ಭವನಮೇವ ಫಲಮಿತಿ ಸೂಚಿತಮ್। ಅತ ಏವ ತತ್ಕ್ಷಣತೋ ಬಭೂವೇತಿ ಉತ್ತರಶ್ಲೋಕೇ ಪ್ರಕಟಿತಮ್ ॥ – (ವಾ.)

ಅವಳನ್ನು ಹಾಗೆ ನೋಡಿದ್ದು ಅಪರಾಧವಾಯಿತು. ಅದಕ್ಕೆಂದೇ ಬ್ರಹ್ಮದೇವರು ಹಾಗೆ ಶಾಪ ನೀಡಿದರು ಎಂದು ತಿಳಿಯಬೇಕು.

೩) ವರುಣನಿಗೆ ಎರಡು ಜನ್ಮ ಬರುವಂತೆ ಬ್ರಹ್ಮದೇವರು ಈಗಾಗಲೇ ಶಾಪ ನೀಡಿದ್ದರು. ಈಗ ನುಡಿದದ್ದು ಅದು ಕೂಡಲೆ[೧] ಜಾರಿಗೆ ಬರಲೆಂದು ಮಾತ್ರ.

೪) ಮಹಾಭಿಷಕ್ ಆಗಿದ್ದಾಗ ಬ್ರಹ್ಮಸಭೆಯಲ್ಲಿ ಅವನು ಮಾಡುವ ಈ ಅಪರಾಧವನ್ನು ಸರ್ವಜ್ಞರಾದ ಬ್ರಹ್ಮದೇವರು ಮೊದಲೇ ತಿಳಿದಿದ್ದರಿಂದ ಆ ಶಾಪ ಕೊಡುವಾಗಲೇ ಇದನ್ನೂ ಸೇರಿಸಿಯೇ ಕೊಟ್ಟಿದ್ದರು ಎಂದು ತಿಳಿಯಬೇಕು ಎಂಬ ವಿಶೇಷಾಂಶ ಜನಾರ್ದನಭಟ್ಟೀಯದಲ್ಲಿದೆ.

ಇತೀರಿತಸ್ತತ್ಕ್ಷಣತಃ ಪ್ರತೀಪಾ-
ದ್ಬಭೂವ ನಾಮ್ನಾ ನೃಪತಿಶ್ಚ ಶಂತನುಃ ।
ಅವಾಪ್ಯ ಗಂಗಾಂ ದಯಿತಾಂ ಸ್ವಕೀಯಾಂ
ತಯಾ ಮುಮೋದಾಬ್ದಗಣಾನ್ ಬಹೂಂಶ್ಚ ॥ ೨೧ ॥

ಅ: ಹೀಗೆ ಹೇಳಲ್ಪಟ್ಟ ಅವನು ಆ ಕ್ಷಣದಲ್ಲೇ ಪ್ರತೀಪನಿಂದ ಶಂತನು ನಾಮಕ ರಾಜನಾಗಿ ಜನಿಸಿದ. ತನ್ನ ಪತ್ನಿಯಾದ ಗಂಗೆಯನ್ನೇ ಮಡದಿಯನ್ನಾಗಿ ಹೊಂದಿ ಬಹುವರ್ಷಗಳ ಕಾಲ ಸುಖಿಸಿದ.

ವಿ: ಮಹಾಭಿಷಕ್ ತತ್ಕ್ಷಣವೇ ಶಂತನುವಾಗಿ ಜನಿಸಿದ. ಅವನ ಮೂಲರೂಪದ ಪತ್ನಿ–ಯಾದ ಗಂಗೆ ಅಲ್ಲಿಯೂ ಅವನಿಗೆ ಮೂಲರೂಪದಿಂದಲೇ ಪತ್ನಿಯಾದಳು. ಇದರ ವಿವರ ಮುಂದೆ ಬಂದಿದೆ.

ಅಷ್ಟವಸುಗಳ ಗೋಹರಣಪ್ರಯತ್ನ

ಅಥಾಷ್ಟಮೋ ವಸುರಾಸೀದ್ದ್ಯುನಾಮಾ
ವರಾಂಗಿನಾಮ್ನ್ಯಸ್ಯ[೨] ಬಭೂವ ಭಾರ್ಯಾ ।
ಬಭೂವ ತಸ್ಯಾಶ್ಚ ಸಖೀ ನೃಪಸ್ಯ
ಸುವಿಂದನಾಮ್ನೋ ದಯಿತಾ ಸನಾಮ್ನೀ[೩] ॥ ೨೨ ॥

---

೧. ಅನೇನಾಪರಾಧೇನ ಪೂರ್ವಂ ದತ್ತಃ ಶಾಪಃ ಶೀಘ್ರಫಲಪ್ರದೋಽಸ್ತ್ವಿತಿ ಭಾವಃ । – (ವ.)
ಇಮಮೇವಾಪರಾಧಂ ಜಾನತಾ ಬ್ರಹ್ಮಣಾ ಏತದರ್ಥಂ ಪುರೈವ ಶಪ್ತ ಇತಿ ಭಾವಃ ॥ – (ಜ.)

ಅ: ಎಂಟನೆಯ ವಸುವು 'ದ್ಯು' ಎಂಬ ಹೆಸರನ್ನೂ ಹೊಂದಿದ್ದ. ಅವನಿಗೆ ವರಾಂಗಿ ಎಂಬ ಹೆಂಡತಿ ಇದ್ದಳು. ಅವಳಿಗೆ ಅವಳ ಹೆಸರಿನವಳೇ ಆದ ಗೆಳತಿ ಇದ್ದಳು. ಅವಳು ಸುವಿಂದ ಎಂಬ ಹೆಸರಿನ ರಾಜನ ಪತ್ನಿ.

ವಿ: ೧) ಅಷ್ಟವಸುಗಳಲ್ಲಿ ಪ್ರಭಾಸ ಕೊನೆಯವನು; ಆತನಿಗೆ 'ದ್ಯು' ಎಂಬುದು ಮತ್ತೊಂದು ಹೆಸರು; ವರಾಂಗಿ ಅವನ ಪತ್ನಿ. ಆಗ ಸುವಿಂದ ಎಂಬವನು ಭೂಲೋಕದ ಒಬ್ಬ ರಾಜ. ಅವನ ಪತ್ನಿಯ ಹೆಸರೂ ವರಾಂಗಿ ಎಂದೇ ಆಗಿದ್ದಿತು. ಈ ಇಬ್ಬರು ವರಾಂಗಿಯರೂ ಪ್ರೀತಿಯ ಗೆಳತಿಯರಾಗಿದ್ದರು.

೨) ಮಹಾಭಾರತದಲ್ಲಿ ದ್ಯು ಎಂಬ ಹೆಸರಿನಿಂದಲೇ ಈ ಅಷ್ಟಮವಸುವನ್ನು ವ್ಯವಹರಿಸಲಾಗಿದೆ :

ಪೃಥ್ವಾದ್ಯೈರ್ಭ್ರಾತೃಭಿಃ ಸಾರ್ಧಂ ದ್ಯೌಸ್ತದಾ ತಾಂ ಜಹಾರ ಗಾಮ್ ।
ತಯಾ ಕಮಲಪತ್ರಾಕ್ಷ್ಯಾ ನಿಯುಕ್ತೋ ದ್ಯೌಸ್ತದಾ ನೃಪ ॥ – (ಆದಿ. ೯೯/೨೭)

೩) ವರಸ್ತ್ರೀ ಎಂಬುದು ದ್ಯುಪತ್ನಿ ವರಾಂಗಿಯ ನಾಮಾಂತರ. ಅವಳು ದೇವಗುರುವಾದ ಬೃಹಸ್ಪತಿಯ ತಂಗಿ:

ಬೃಹಸ್ಪತೇಸ್ತು ಭಗಿನೀ ವರಸ್ತ್ರೀ ಬ್ರಹ್ಮಚಾರಿಣೀ ।
ಯೋಗಸಿದ್ಧಾ ಜಗತ್ಕೃತ್ಸ್ನಮಸಕ್ತಾ ವಿಚರತ್ಯುತ ।
ಪ್ರಭಾಸಸ್ಯ ತು ಸಾ ಭಾರ್ಯಾ ವಸೂನಾಮಷ್ಟಮಸ್ಯ ತು ॥
– ವಿಷ್ಣುಪುರಾಣ (೧/೧೫/೧೧೮)

೪) ಸುವಿಂದಪತ್ನಿ ವರಾಂಗಿಯನ್ನು ಜಿತವತೀ ಎಂದು ಮಹಾಭಾರತ ಉಲ್ಲೇಖಿಸಿದೆ. ಅದು ಅವಳ ನಾಮಾಂತರವೆಂದು ತಿಳಿಯಬಹುದು. ಅವಳು ಉಶೀನರ ಎಂಬ ರಾಜರ್ಷಿಯ ಪುತ್ರಿ:

ನಾಮ್ನಾ ಜಿತವತೀ ನಾಮ ರೂಪಯೌವನಶಾಲಿನೀ ।
ಉಶೀನರಸ್ಯ ರಾಜರ್ಷೇಃ ಸತ್ಯಸಂಧಸ್ಯ ಧೀಮತಃ ॥
ದುಹಿತಾ ಪ್ರಥಿತಾ ಲೋಕೇ ಮಾನುಷೇ ರೂಪಸಂಪದಾ ॥ – (ಆದಿ. ೯೯/೨೨,೨೩)

---

೨. "ಮಂಗಲಾನಂತರಾರಂಭಪ್ರಶ್ನಕಾರ್ತ್ಸ್ನ್ಯೇಷ್ವಥೋ ಅಥೇ"ತಿ ವಚನಾತ್ ಕಥಾಂತರಾರಂಭಸೂಚನಾಯ ಅಥಾಷ್ಟಮೋ ವಸುರಿತ್ಯುಕ್ತಮ್ ॥ – (ವಾ.)

೩. ವರಾಂಗಿನಾಮ್ನೀ = ವರಾಂಗಿನಾಮವತೀ । ನಞನಿರ್ದಿಷ್ಟಮನಿತ್ಯಮಿತ್ಯನೇನ ಮನ ಇತಿ ಜ್ಞೇಪ್ಪ್ರತಿಷೇಧೋ ನ ಪ್ರವರ್ತತೇ । – (ಜ.)

೪. ಸನಾಮ್ನೀ = ಸಮಾನನಾಮಾ । ವರಾಂಗೀತಿ ಯಾವತ್ । – (ಜ.)

ತಸ್ಯಾ ಜರಾಮೃತಿವಿಧ್ವಂಸಹೇತೋ-
ರ್ವಸಿಷ್ಠಧೇನುಂ ಸ್ವಮೃತಂ ಕ್ಷರಂತೀಮ್ ।
ಜರಾಪಹಾಂ ನಂದಿನಿನಾಮಧೇಯಾಂ
ಬದ್ಧಂ ಪತಿಂ ಚೋದಯಾಮಾಸ ದೇವೀ ॥ ೨೩ ॥

ಅ: ಅವಳ ಮುಪ್ಪುಸಾವುಗಳ ಪರಿಹಾರಕ್ಕೆಂದು ಉತ್ತಮ ಅಮೃತವನ್ನು ಸುರಿಸುವ ನಂದಿನೀ ಎಂಬ ಹೆಸರಿನ ವಸಿಷ್ಠಧೇನುವನ್ನು ಹಿಡಿದು ತರಲು ದೇವಿ ವರಾಂಗಿಯು ತನ್ನ ಪತಿಯನ್ನು ಪ್ರೇರೇಪಿಸಿದಳು.

ವಿ: ೧) ತನ್ನ ಗೆಳತಿಯಾದ ವರಾಂಗಿಯು ಸಹ ತನ್ನಂತೆ ಮುಪ್ಪುಸಾವುಗಳನ್ನು ಗೆಲ್ಲುವವಳಾಗಬೇಕೆಂದು ವಸುಪತ್ನಿ ವರಾಂಗಿಯ ಬಯಕೆ. ಆದರೆ ಅಮೃತ ದೇವತೆಗಳಿಗೆ ಮಾತ್ರ ವಿಹಿತವಾದ ವಿಶಿಷ್ಟವಾದ ಅನ್ನ. ಅದನ್ನು ಮನುಷ್ಯರಿಗೆ ನೀಡುವುದು ನಿಷಿದ್ಧ. ಆದ್ದರಿಂದ ಅದರ ಬದಲಾಗಿ ಅಮೃತದ ಗುಣಗಳನ್ನು ಹೊಂದಿದ್ದ ವಸಿಷ್ಠಧೇನುವಾದ ನಂದಿನಿಯ ಹಾಲನ್ನು ನೀಡುವುದು ಈ ವರಾಂಗಿಯ ಉದ್ದೇಶವಾಗಿತ್ತು ಎಂದು ತಿಳಿಯಬೇಕು.

೨) ನಂದಿನಿ ಧೇನುವನ್ನು ಅದರ ಕರುವಿನ ಸಮೇತ ಅಪಹರಿಸಲು ವರಾಂಗಿಯು ತನ್ನ ಪತಿಯನ್ನು ಪ್ರಚೋದಿಸಿದ ವಿವರ ಹೀಗಿದೆ :

ತಸ್ಯಾ ಹೇತೋರ್ಮಹಾಭಾಗ ಸವತ್ಸಾಂ ಗಾಂ ಮಮೇಪ್ಸಿತಾಮ್ ।
ಆನಯಸ್ವಾಮರಶ್ರೇಷ್ಠ ತ್ವರಿತಂ ಪುಣ್ಯವರ್ಧನ ।
ಯಾವದಸ್ಯಾಃ ಪಯಃ ಪೀತ್ವಾ ಸಾ ಸಖೀ ಮಮ ಮಾನದ ।
ಮಾನುಷೇಷು ಭವತ್ವೇಕಾ ಜರಾರೋಗವಿವರ್ಜಿತಾ ॥ – ಆದಿ. (೯೯/೨೩-೨೫)

೩) ಈ ನಂದಿನಿಧೇನುವು ಸುರಭಿ ಎಂಬ ಕಾಮಧೇನುವಿನ ಪುತ್ರಿ. ಅದರ ಹಾಲನ್ನು ಕುಡಿದ ಮಾನವ ಹತ್ತುಸಾವಿರವರ್ಷಗಳ ಕಾಲ ಚಿರಯೌವನದಿಂದ ಸುಖಿಸುವನು ಎಂಬ ವಿಶೇಷಾಂಶ ಮಹಾಭಾರತದಲ್ಲಿದೆ :

ದಕ್ಷಸ್ಯ ದುಹಿತಾ ಯಾ ತು ಸುರಭೀತ್ಯಭಿಶಬ್ದಿತಾ ।
ಗಾಂ ಪ್ರಜಾತಾ ತು ಸಾ ದೇವೀ ಕಶ್ಯಪಾದ್ಭರತರ್ಷಭ ॥ ....
ನಂದಿನೀಂ ನಾಮ ರಾಜೇಂದ್ರ, ಸರ್ವಕಾಮಧುಗುತ್ತಮಾಮ್ ।
ಸಾ ವಿಸ್ಮಯಸಮಾವಿಷ್ಟಾ ಶೀಲದ್ರವಿಣಸಂಪದಾ ॥ .....
ದಶವರ್ಷಸಹಸ್ರಾಣಿ ಸ ಜೀವೇತ್ ಸ್ಥಿರಯೌವನಃ ।
ಏತಚ್ಛ್ರುತ್ವಾ ತು ಸಾ ದೇವೀ ನೃಪೋತ್ತಮ ಸುಮಧ್ಯಮಾ ॥
– (ಆದಿ.೯೯/೮,೧೪,೨೦)

ತಯಾ ದ್ಯುನಾಮಾ ಸ ವಸುಃ ಪ್ರಚೋದಿತೋ
ಭ್ರಾತೃಸ್ನೇಹಾತ್ ಸಪ್ತಭಿರನ್ವಿತೋಽಪರೈಃ ।
ಬಬಂಧ ತಾಂ ಗಾಮಥ ತಾನ್ ಶಶಾಪ
ವಸಿಷ್ಠಸಂಸ್ಥಃ[೧] ಕಮಲೋದ್ಭವಃ ಪ್ರಭುಃ ॥ ೨೪ ॥

ಅ: ಅವಳಿಂದ ಪ್ರೇರಿತನಾದ ಆ ದ್ಯುನಾಮಕ ವಸು ಸೋದರಸ್ನೇಹದಿಂದಾಗಿ ತನ್ನ ಜೊತೆಗೂಡಿದ ಇತರ ಏಳು ಜನ ವಸುಗಳೊಂದಿಗೆ ಕೂಡಿಕೊಂಡು, ಆ ಹಸುವನ್ನು (ಅಪಹರಿಸಲೆಂದು) ಕಟ್ಟಿದ. ಬಳಿಕ ವಸಿಷ್ಠನೊಳಗಿದ್ದ ಕಮಲಸಂಭವನಾದ ಪ್ರಭು ಬ್ರಹ್ಮ ಅವರನ್ನು ಶಪಿಸಿದ.

ಎ: ೧) ಭಾರ್ಯಾಸ್ನೇಹದಿಂದ ದ್ಯುನಾಮಕವಸು ನಂದಿನಿಧೇನುವಿನ ಅಪಹರಣಕ್ಕೆ ತೆರಳಿದ. ಭ್ರಾತೃಸ್ನೇಹದಿಂದ ಇತರ ಏಳು ವಸುಗಳು ಅವನನ್ನು ಹಿಂಬಾಲಿಸಿ ನಡೆದರು. ಭಗವತ್ಸ್ನೇಹ–ವಿಲ್ಲದ್ದೇ ಅವರ ಆ ಗೋಹರಣಕಾರ್ಯಕ್ಕೆ ಮುಖ್ಯಕಾರಣವಾಯಿತು ಎಂಬುದು ಇಲ್ಲಿಯ ಧ್ವನಿ.

೨) ಅಷ್ಟವಸುಗಳಲ್ಲಿ ಅಗ್ನಿಯೂ ಒಬ್ಬ. ತಾರತಮ್ಯದಲ್ಲಿ ವಸಿಷ್ಠರಿಗಿಂತ ಮಿಗಿಲು. ಎಂದ ಮೇಲೆ ವಸಿಷ್ಠರಿಗೆ ಹಾಗೆ ಶಪಿಸಲು ಹೇಗೆ ಸಾಧ್ಯ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಶಾಪ ನೀಡಿದ್ದು ವಸಿಷ್ಠರಲ್ಲ; ಅವರೊಳಗೆ ಆವೇಶಿಸಿದ್ದ ಬ್ರಹ್ಮದೇವರು ಎಂದು ಭಾವ.

೩) ವಸಿಷ್ಠರು ತನ್ನ ನೂರು ಮಕ್ಕಳನ್ನು ಕೊಂದಾಗಲೂ ವಿಶ್ವಾಮಿತ್ರರ ಮೇಲೆ ಕೋಪಗೊಳ್ಳದ ಪ್ರಶಾಂತಮನಸ್ಕರು. ಅವರೆಂತು ಹೀಗೆ ಶಾಪ ನೀಡಲು ಸಾಧ್ಯ ಎಂಬ ಪ್ರಶ್ನೆಗೂ ಇಲ್ಲಿ ಉತ್ತರವಿದೆ[೨].

೪) ವಸಿಷ್ಠರಿಗೆ ತನ್ನ ನೂರು ಮಕ್ಕಳನ್ನು ಕೊಂದಾಗಲೂ ಬಾರದಿದ್ದ ಕೋಪ ಈಗ ಬರಲು ಕಾರಣ ಅದು ಗೋಹರಣದಂತಹ ಹೀನಕೃತ್ಯ ಎಂಬ ಮತ್ತೊಂದು ಕಾರಣವನ್ನೂ ಇಲ್ಲಿ ಊಹಿಸಬಹುದು. ಅವರು ಕೋಪಗೊಳ್ಳಲು ಇದು ಮುಖ್ಯಕಾರಣವಾದರೂ, ಹಾಗೆ ಶಾಪ ನೀಡಿದ ಶಕ್ತಿಗೆ ಮಾತ್ರ ಅವರೊಳಗಿದ್ದ ಬ್ರಹ್ಮದೇವರ ಆವೇಶವೇ ಕಾರಣ ಎಂದು ತಿಳಿಯಬೇಕು.

---

೧. ಅಷ್ಟವಸೂನಾಂ ಮಧ್ಯೇ ಅಗ್ನೇರಪಿ ಸತ್ತ್ವಾತ್ ತಸ್ಮಾದವರಸ್ಯ ವಸಿಷ್ಠಸ್ಯ ಶಾಪದಾನೇ ಕಥಂ ಶಕ್ತಿರಿತ್ಯತಸ್ತಾತ್ಪರ್ಯಮಾಹ — ವಸಿಷ್ಠಸಂಸ್ಥಃ ಕಮಲೋದ್ಭವ ಇತಿ ॥ – (ವಾ.)

ಕ್ವಚಿದ್ವಸಿಷ್ಠಃ ಶಶಾಪೇತ್ಯುಕ್ತಂ ಅತ ಏವಾಸ್ಮಿನ್ನಿರ್ಣಯಗ್ರಂಥೇ ವಾಸಿಷ್ಠಸಂಸ್ಥ ಇತ್ಯುಕ್ತಮ್ । – (ಜ.)

೨. ವಸಿಷ್ಠೇ ಸ್ವಪುತ್ರಶತವಧೇಽಪಿ ಕೋಪಾಭಾವೇನ ಶಾಪಾಯೋಗಸ್ಯ ಭಾರತ ಏವ ವಿಸ್ಮೃತತ್ವಾತ್ ವಸಿಷ್ಠಸಂಸ್ಥಃ ಕಮಲೋದ್ಭವಃ ಪ್ರಭುರಿತಿ ತಾತ್ಪರ್ಯಮಾಹುಃ । – ಲಕ್ಷಾಲಂಕಾರ

ಅಸ್ವಯಂಕೃತಯಾ ಹೃದಿಸ್ಥಬ್ರಹ್ಮಾವೇಶಬಲೇನ ಕೃತಯಾ ಶಪ್ತಾಃ ಸ್ಮ ಇತಿ ಯೋಜನಾ । – ಲಕ್ಷಾಲಂಕಾರ

ಅಷ್ಟವಸುಗಳಿಗೆ ಬ್ರಹ್ಮಶಾಪ

ಅಧರ್ಮವೃತ್ತಾಃ ಪ್ರತಿಯಾತ ಮಾನುಷೀಂ
ಯೋನಿಂ ದ್ರುತಂ ಯತ್ಕೃತೇ ಸರ್ವ ಏವ ।
ಧರ್ಮಚ್ಯುತಾಃ ಸ ತಥಾऽಷ್ಟಾಯುರಾಪ್ಯತಾ-
ಮನ್ಯೇ ಪುನಃ ಕ್ಷಿಪ್ರಮತೋ ವಿಮೋಕ್ಷ್ಯಥ ॥ ೨೫ ॥

ಅ: ''ಅಧರ್ಮದಲ್ಲಿ ತೊಡಗಿದ ನೀವೆಲ್ಲ ಬೇಗನೆ ಮನುಷ್ಯಯೋನಿಯನ್ನು ಹೊಂದಿರಿ. ನೀವೆಲ್ಲ ಯಾರಿಗಾಗಿ ಧರ್ಮ ತಪ್ಪಿದಿರೊ, ಅವನು ಎಂಟು ಜನರ ಆಯುಷ್ಯವನ್ನು ಹೊಂದಲಿ. ಉಳಿದವರು ಬೇಗನೆ ಅದರಿಂದ ಬಿಡುಗಡೆ ಹೊಂದಿರಿ.

ವಿ: ೧) ವಸಿಷ್ಠರು ನೀಡಿದ ಶಾಪದ ವಿವರವಿದು. ಅಧರ್ಮಕಾರ್ಯಕ್ಕೆಳಸಿದ ಅವರೆಲ್ಲರಿಗೂ ಮನುಷ್ಯರಾಗಿ ಹುಟ್ಟುವ ಶಿಕ್ಷೆ. ಮುಖ್ಯಅಪರಾಧಿಯಾದ ದ್ಯು ಒಟ್ಟು ಎಂಟು ಜನರ ಆಯುಷ್ಯವನ್ನು ಹೊಂದಿ ಭೂಲೋಕದಲ್ಲಿರಬೇಕು. ಇತರರಿಗೆ ಹುಟ್ಟುವುದಷ್ಟೇ ಶಿಕ್ಷೆ. ತತ್ಕ್ಷಣವೇ ಅವರೆಲ್ಲ ಹಿಂದಿರುಗಬಹುದು.

೨) ಗೋಹರಣ ನರಕಾದ್ಯನರ್ಥಕಾರಕವಾದ ಮಹಾಪಾಪ. ಆದರೆ ವಸುಗಳು ದೇವತೆ–ಗಳು. ದೇವತೆಗಳಿಗೆ ನರಕವಿಲ್ಲ. ('ದೇವಾನಾಂ ನಿರಯೋ ನಾಸ್ತಿ..'–೧/೮೮) ಆದ್ದರಿಂದ ಮನುಷ್ಯಜನ್ಮ ಹೊಂದುವುದೇ ಅವರಿಗೆ ನರಕವಾಸವಿದ್ದಂತೆ ಎಂದೂ ತಿಳಿಯಬಹುದು. ಆದಕ್ಕಾಗಿ ಈ ಶಾಪ ಎಂದೂ ತಿಳಿಯಬಹುದು.

ವರಾಂಗಿಗೆ ಬ್ರಹ್ಮಶಾಪ

ಪ್ರಚೋದಯಾಮಾಸ ಚ ಯಾ ಕುಮಾರ್ಗೇ
ಪತಿಂ ಹಿ ಸಾऽಂಬೇತಿ ನರೇಷು ಜಾತಾ ।
ಅಭರ್ತೃಕಾ ಪುಂಸ್ತ್ವಸಮಾಶ್ರಯೇಣ
ಪತ್ಯುರ್ಮತೌ ಕಾರಣತ್ವಂ ವ್ರಜೇತ ॥ ೨೬ ॥

---

೧. ದೇವಾನಾಂ ಮನುಷ್ಯಯೋನಿಪ್ರಾಪ್ತಿರೇವ ನಿರಯಪ್ರಾಪ್ತಿರಿತ್ಯುಚ್ಯತೇ । ತೇನ ಕಾರಣೇನ ನಿರಯಪ್ರಾಪ್ತಿಮತಃ ಅಷ್ಟಮವಸೋರ್ಬಹುಕಾಲಂ ಮನುಷ್ಯದೇಹೇ ಅವಸ್ಥಿತಿರಸ್ತ್ವಿತಿ ಭಾವೇನಾಹ - ಸ ತಥಾऽಷ್ಟಾಯುರಿತಿ । ಸಃ = ದ್ಯುನಾಮಾ ವಸುಃ । ತಥಾ = ಯಥಾ ಪಾಪಮಧಿಕಂ ತಥಾऽಷ್ಟಾಯುಃ= ಸ್ವೇನ ಸಹಾಷ್ಟಾನಾಮಾಯುಃ ಆಪ್ಯತಾಮ್ । ''ವ್ಯತ್ಯಯೋ ಬಹುಲಮ್'' ಇತಿ ವಚನಾತ್ ಆಪ್ನೋತು । ಯದ್ವಾ ಅಷ್ಟಾನಾಮಾಯುರ್ಯಸ್ಯ ತಾದೃಶೋ ಭೂತ್ವಾ ಸ್ವಕೃತಪಾಪಫಲೇನಾಪ್ಯತಾಮಿತಿ ಯೋಜನಾ ॥ –(ವಾ.)

ಅ: ಯಾವಳು ತನ್ನ ಪತಿಯನ್ನು ಕೆಟ್ಟ ಮಾರ್ಗಕ್ಕೆ ತೊಡಗಿಸಿದಳೊ, ಅಂತಹ ಆ ವರಾಂಗಿಯು ಅಂಬೆ ಎಂಬ ಹೆಸರಿನಿಂದ ಮನುಷ್ಯರಲ್ಲಿ ಜನಿಸಲಿ. ಪತಿಯನ್ನು ಹೊಂದದವಳಾಗಿದ್ದು ಪುರುಷತ್ವವನ್ನು ಆಶ್ರಯಿಸುವ ಮೂಲಕ ತನ್ನ ಪತಿಯ ಮರಣಕ್ಕೆ ನಿಮಿತ್ತಳಾಗಲಿ.

ವಿ: ೧) ಇದು ಬ್ರಹ್ಮದೇವರು ಗೋಹರಣಕಾರ್ಯಕ್ಕೆ ಪ್ರಚೋದನೆಯಿತ್ತ ವರಾಂಗಿಗೆ ನೀಡಿದ ಶಾಪ.

೨) ಗಂಡನನ್ನು ಅಂತಹ ಹೀನಕಾರ್ಯಕ್ಕೆ ಪ್ರಚೋದಿಸಿದ್ದರಿಂದಾಗಿ ಅವಳಿಗೆ ಪತಿಯನ್ನು ಹೊಂದುವ ಅವಕಾಶ ದೊರೆಯದೇ ಹೋಯಿತು. ಜೊತೆಗೆ ಅವನ ಸಾವಿಗೆ ತಾನೇ ಕಾರಣಳಾಗುವ ಮತ್ತೊಂದು ಅಪಾಯವೂ ಒದಗಿತು.

೩) ಎಳೆತರಲೆಂದು ಕಟ್ಟಿದಾಗ ಗೋವು 'ಅಂಬಾ' ಎಂದು ಒರಲಿದ್ದರ ಫಲವೋ ಎಂಬಂತೆ, ಅದಕ್ಕೆ ಕಾರಣಳಾದ ವರಾಂಗಿಗೆ ಅವಳು ಮನುಷ್ಯಳಾಗಿ ಹುಟ್ಟಿದಾಗ ಅಂಬಾ ಎಂಬ ಹೆಸರೇ ಬಂದಿತು ಎಂದು ಭಾವಿಸಬಹುದು.

೪) 'ಪುಂಸ್ತ್ವಸಮಾಶ್ರಯೇಣ' ಎಂಬ ಪದದಿಂದ ಸ್ತ್ರೀಯರಿಗೆ ಎಂದೂ ಪುರುಷತ್ವಪ್ರಾಪ್ತಿ ಇಲ್ಲ ಎಂಬುದನ್ನು ಸೂಚಿಸಿರುವರೆಂದೂ ಸಹ ತಿಳಿಯಬಹುದು. ಈ ಬಗ್ಗೆ ವಿವರಗಳು ಮುಂದೆ ಬಂದಿವೆ.

ದ್ಯು ವಸುವಿಗೆ ಬ್ರಹ್ಮಶಾಪ

ಭವತ್ವಸೌ ಬ್ರಹ್ಮಚರ್ಯ್ಯೈಕನಿಷ್ಠೋ
ಮಹಾನ್ ವಿರೋಧಶ್ಚ ತಯೋರ್ಭವೇತ ।
ಸ ಗರ್ಭವಾಸಾಷ್ಟಕದುಃಖಮೇವ[೧]
ಸಮಾಪ್ನುತಾಂ ಶರತಲ್ಪೇ ಶಯಾನಃ ॥ ೨೭ ॥

ಅ: ಅವನು ನೈಷ್ಠಿಕಬ್ರಹ್ಮಚರ್ಯದಲ್ಲಿ ತೊಡಗಲಿ. ಅವರಿಬ್ಬರಿಗೂ ಮಹಾವಿರೋಧ ಹುಟ್ಟಲಿ; ಶರಮಂಚದಲ್ಲಿ ಮಲಗಿ, ಎಂಟು ಗರ್ಭವಾಸದುಃಖಗಳನ್ನೂ ಅನುಭವಿಸಲಿ.

---

೧. ದ್ಯುನಾಮಾ ಸ ಏವ ಶರತಲ್ಪೇ ಶಯಾನಃ ಸನ್ ಗರ್ಭವಾಸಾಷ್ಟಕೇ ಯದ್ದುಃಖಂ ತದಾಪ್ನೋತು । ಅಷ್ಟವಾರಂ ಗರ್ಭವಾಸೇ ಸತಿ ಯಾವದ್ದುಃಖಂ ತಾವದ್ದುಃಖಂ ಶಯ್ಯಾಭೂತಬಹುಶರಾಣಾಂ ಘಾತೇನಾಪ್ನೋತ್ವಿತ್ಯರ್ಥಃ ॥

–(ವಾ.)

ವಿಃ ೧) ಇದು ದ್ಯುನಾಮಕವಸುವಿಗೆ ಬ್ರಹ್ಮ ನೀಡಿದ ಶಾಪ. ಅವಳಿಗೆ ಪತಿಪ್ರಾಪ್ತಿ ತಪ್ಪಿದಂತೆ, ಇವನಿಗೆ ಪತ್ನೀಪ್ರಾಪ್ತಿಯೂ ತಪ್ಪುವುದು. ಪರಸ್ಪರರಲ್ಲಿ ಮಹಾವೈರ ಮೂಡುವುದು.

೨) ಗೋಹರಣಪ್ರಯತ್ನವೂ ಸಹ ಪತಿಪತ್ನಿಯರಲ್ಲಿನ ವಿರಸಕ್ಕೆ ವಿವಾಹಯೋಗಭಂಗಕ್ಕೆ ಕಾರಣ ಎಂಬ ಪ್ರಮೇಯವಿಶೇಷವೂ ಇಲ್ಲಿ ನಿರೂಪಿತವಾಗಿದೆ.

ಮೃತ್ಯಷ್ಟಕೋತ್ಥಾಮಪಿ ವೇದನಾಂ ಸ
ಪ್ರಾಪ್ನೋತು[೧] ಶಸ್ತ್ರೈರ್ಬಹುಧಾ ನಿಕೃತ್ತಃ।
ಇತೀರಿತಾಸ್ತೇ ಕಮಲೋದ್ಭವಂ ತಂ
ಜ್ಞಾತ್ವಾ ಸಮುತ್ಸೃಜ್ಯ ಚ ಗಾಂ ಪ್ರಣೇಮುಃ[೨] ॥ ೨೮ ॥

ಅ: ಎಂಟು ಮರಣಗಳಿಂದ ಹುಟ್ಟುವ ದುಃಖವನ್ನೂ ಸಹ ಶಸ್ತ್ರಗಳಿಂದ ಬಹಳವಾಗಿ ಕತ್ತರಿಸಲ್ಪಡುವ ಮೂಲಕ ಇವನು ಹೊಂದಲಿ''. ಹೀಗೆ ಹೇಳಲ್ಪಟ್ಟ ವಸುಗಳು ಹಾಗೆ ಶಾಪ ನೀಡಿದ್ದು ಬ್ರಹ್ಮನೇ ಎಂದು ತಿಳಿದು ಗೋವನ್ನು ಬಿಟ್ಟು ಅವರಿಗೆ ವಂದಿಸಿದರು.

ಬ್ರಹ್ಮನಲ್ಲಿ ವಸುಗಳ ಅರಿಕೆ

ನ[೩] ಮಾನುಷಂ ಗರ್ಭಮವಾಪ್ನುಮೋ ವಯಂ
ಭವತ್ವಯಂ ಸರ್ವವಿತ್ ಕೀರ್ತಿಮಾಂಶ್ಚ।
ಮಹಾಸ್ತ್ರವೇತ್ತಾ ಭವದಂಶಯುಕ್ತ-
ಸ್ತಥಾ ಬಲಂ ನೋಽಖಿಲಾನಾಮುಪೈತು ॥ ೨೯ ॥

ಅ: ''ನಾವು ಮನುಷ್ಯಸ್ತ್ರೀಯ ಗರ್ಭವನ್ನು ಹೊಂದದಂತಾಗಲಿ. ಇವನು ನಿನ್ನ ಅಂಶ-ದೊಂದಿಗೆ ಕೂಡಿ ಸರ್ವಜ್ಞನಾಗಲಿ; ಕೀರ್ತಿವಂತನಾಗಲಿ; ಮಹಾಅಸ್ತ್ರಜ್ಞನೆನ್ನಿಸಲಿ; ನಮ್ಮೆಲ್ಲರ ಬಲವನ್ನೂ ಪಡೆಯಲಿ''.

---

೧. ಮೃತೀನಾಮಷ್ಟಕೇನೋತ್ಥಾಂ ಮೃತ್ಯಷ್ಟಕೋತ್ಥಾಂ ವೇದನಾಮಪಿ ಯುದ್ಧೇ ಶಸ್ತ್ರೈರ್ಬಹುಧಾ ನಿಕೃತ್ತಃ ಸನ್ನಾಪ್ನೋತು। ಏಕದೇಹೇನೈವಾಷ್ಟವಾರಂ ಜನನದುಃಖಮಷ್ಟವಾರಂ ಮರಣದುಃಖಂ ಚ ಶರತಲ್ಪಶಯನೇನ ಯುದ್ಧೇ ಶಸ್ತ್ರಸಂಘಾತೇನ ಚಾಪ್ನೋತ್ವಿತಿ ಭಾವಃ॥ – (ವಾ.)

೨. ಪ್ರಣೇಮುಃ ವಿಜ್ಞಾಪನಂ ಚಕ್ರುರಿತಿ ಚಾರ್ಥಃ। – (ಜ.)

೩. 'ನ ಮಾನುಷೀಂ' ಇತಿ ಪಾಠೇ ಮಾನುಷೀಂ ಯೋನಿಂ ಆಪ್ನುಮ ಇತ್ಯರ್ಥಃ। – (ಜ.)

ಏ: ೧) ತಮಗೆ ಶಾಪ ನೀಡಿದವರು ಬ್ರಹ್ಮದೇವರೆಂದು ಗುರುತಿಸಿದ ವಸುಗಳು ಅವರಿಗೆ ಶರಣಾಗಿ, ತಮ್ಮ ಅಪೇಕ್ಷೆಯನ್ನು ಹೀಗೆ ನಿವೇದಿಸಿಕೊಂಡರು.

೨) ಮನುಷ್ಯಗರ್ಭವನ್ನು ಹೊಂದುವುದು ವಿಶೇಷವಾದ [೧]ಜ್ಞಾನಹ್ರಾಸಕ್ಕೆ ಕಾರಣ. ಅದಕ್ಕೆಂದೇ ಅವರು ಹಾಗೆ ಪ್ರಾರ್ಥಿಸಿದರು ಎಂದು ತಿಳಿಯಬೇಕು (ಭಾರತ ಆದಿ. ೯೬/೧೬) :

ನ ಮಾನುಷೀಣಾಂ ಜಠರಂ ಪ್ರವಿಶೇಮ ವಯಂ ಶುಭೇ ।

ವಸುಗಳಿಂದ ಗಂಗಾಪ್ರಾರ್ಥನೆ

ಇತೀರಿತೇ೨ಸ್ತ್ವತ್ಕುದಿತಾಃ ಸ್ವಯಂಭುವಾ
ವಸಿಷ್ಠಸಂಸ್ಥೇನ ಸುರಾಪಗಾಂ ಯಯುಃ ।
ಊಚುಸ್ತಥೈನಾಮುದರೇ ವಯಂ ತೇ
ಜಾಯೇಮಹಿ ಕ್ಷಿಪ್ರಮಸ್ಮಾನ್ ಹನ ತ್ವಮ್ ॥ ೩೦ ॥

ಅ: ಹೀಗೆ ವಸುಗಳು ಕೇಳಿಕೊಳ್ಳಲು ವಸಿಷ್ಠರಲ್ಲಿದ್ದ ಬ್ರಹ್ಮದೇವರು ''ಆಗಲಿ'' ಎಂದು ನುಡಿದರು. ಬಳಿಕ ಅವರು ಗಂಗೆಯ ಬಳಿಗೆ ತೆರಳಿ ಕೇಳಿಕೊಂಡರು. ''ನಾವು ನಿನ್ನ ಗರ್ಭದಲ್ಲಿ ಜನಿಸುವೆವು. ಆಗ ನೀನು ಕೂಡಲೆ ನಮ್ಮನ್ನು ಕೊಲ್ಲು''.

ಗಂಗೆಯ ಸಮ್ಮತಿ

[೨]ಇತೀರಿತಾ ಸಾ ವರಮಾಶು ವವ್ರೇ
ತೇಭ್ಯೋ೨ಪ್ಯಪಾಪತ್ವಮಥ ಪ್ರಿಯತ್ವಮ್ ।
[೩]ತೇಷಾಂ ಸದೈವಾತ್ಮನ ಏಕಮೇಷಾಂ
ದೀರ್ಘಾಯುಷಂ ತಾನ್ ಸುಷುವೇ೨ಥ ಶಂತನೋಃ ॥ ೩೧ ॥

---

೧. 'ಮಾನುಷಾನ್ನವನುಂಡು ಜ್ಞಾನಶೂನ್ಯನು ಆದೆ' – ತತ್ತ್ವಸುಬ್ಬಾಲಿ

೨. ಇತೀರಿತಾ ಸಾ ವರಮಾಶು ವವ್ರ ಇತ್ಯತ್ರ ತೇಷಾಂ ಸ್ವಯಾ ಮಾರಿತಾನಾಂ ಪುತ್ರಾಣಾಂ ಪ್ರಿಯತ್ವಂ = ಹಂತ್ರ್ಯಮಪಿ ಸ್ವಸ್ಯಾಂ ಪ್ರೇಮವತ್ತ್ವಮ್ । ಅಥ = ಹನನಾನಂತರಂ ಆತ್ಮನಃ ಅಪಾಪತ್ವಂ ಭ್ರೂಣಹತ್ಯಾಖ್ಯಪಾಪರಹಿತತ್ವಂ ಏಷಾಂ = ಕುಮಾರಾಣಾಂ ಮಧ್ಯೇ ಏಕಂ ದೀರ್ಘಾಯುಷಮಪಿ = ದೀರ್ಘಾಯುಷಂ ಚೇತಿ ವರಂ = ತ್ರಿವಿಧಂ ವರಂ ತೇಭ್ಯಃ ವವ್ರ ಇತಿ ಯೋಜನಾ ॥ – (ವಾ.)

೩. ತೇಷಾಂ ತಥೈವಾತ್ಮನ... – (ಪಾಠಾಂತರ : ಜ., ವ.,)

ಅ: ಅವರು ಹೀಗೆ ಕೇಳಿಕೊಳ್ಳಲು ಗಂಗೆಯು ಒಡನೆಯೆ ಅದರಿಂದ ಪಾಪ ಒದಗದಿರಲು, ಅವರಿಗೆ ಪ್ರಿಯವಾಗಿರಲು ಹಾಗೆಯೇ ಅವರಲ್ಲಿ ಒಬ್ಬನನ್ನು ದೀರ್ಘಾಯುಷಿಯನ್ನಾಗಿ ಹೊಂದಲು ಅವರಿಂದ ವರವನ್ನು ಪಡೆದಳು. ಬಳಿಕ ಶಂತನುವಿನಿಂದ ಅವರನ್ನು ಮಕ್ಕಳನ್ನಾಗಿ ಹೆತ್ತಳು.

ವಿ: ೧) ವಸುಗಳ ಕೋರಿಕೆಯನ್ನು ಗಂಗೆ ಒಪ್ಪಿ ಅವರಿಂದ ಈ ತೆರನಾದ ವರವನ್ನು ಪಡೆದಳು. ''ಶಿಶುಹತ್ಯೆ ಮಹಾಪಾಪ. ಅವರನ್ನು ಹಾಗೆ ಕೊಲ್ಲುವುದರಿಂದ ತನಗೆ ಪಾಪ ಒದಗಕೂಡದು; ಕೊಲ್ಲುವುದು ಅಪ್ರೀತಿಗೆ ಕಾರಣ. ಹಾಗೆ ಕೊಲ್ಲುವುದರಿಂದ ಅವರು ತನ್ನ ಬಗ್ಗೆ ಕೋಪಗೊಳ್ಳಬಾರದು. ಹಾಗೆ ಹೆತ್ತ ಎಲ್ಲ ಮಕ್ಕಳೂ ಸಾಯದೆ, ಅವರಲ್ಲೊಬ್ಬನು ದೀರ್ಘಾಯುಷಿಯಾಗಿ ಬದುಕಬೇಕು'' ಎಂಬುದು ಆ ವರದ ಭಾವ.

೨) ಗಂಗೆ ಕೇಳಿದ ವರ ಬ್ರಹ್ಮದೇವರು ನೀಡಿದ ಶಾಪಕ್ಕೆ ಅನುಗುಣವಾಗಿಯೇ ಇತ್ತು ಅವರು ಅದಕ್ಕೆ ಒಪ್ಪಿ ಹಾಗೆ ಉಳಿಯುವ ಒಬ್ಬನಿಗೆ ಮತ್ತೆ ಸಂತತಿ ಜನಿಸದು ಎಂದು ತಿಳಿಸಿದರು :

ನ ಸಂಪತ್ಸ್ಯತಿ ಮರ್ತ್ಯೇಷು ಪುನಸ್ತಸ್ಯ ತು ಸಂತತಿಃ ।
ತಸ್ಮಾದಪುತ್ರಃ ಪುತ್ರಸ್ತೇ ಭವಿಷ್ಯತಿ ಸ ವೀರ್ಯವಾನ್ ।

– ಭಾರತ (ಆದಿ. ೯೬/೨೨)

ಪ್ರತೀಪನಿಂದ ಗಂಗೆಗೆ ವಚನ

ಅವಿಘ್ನತಸ್ತಾನ್ ವಿನಿಹಂತುಮೇವ[೧]
ಪುರಾ ಪ್ರತೀಪಸ್ಯ ಹಿ ದಕ್ಷಿಣೋರುಮ್ ।
ಸಮಾಶ್ರಿತಾ ಕಾಮಿನೀವ ತ್ವಕಾಮಾ
ತತ್ಪುತ್ರಭಾರ್ಯಾ ಭವಿತುಂ ವಿಡಂಬಾತ್ ॥ ೩೨ ॥

---

೧. ಪೂರ್ವಮೇವ ಶಂತನುಪ್ರಾಪ್ತೌ ದೇವಸ್ತ್ರೀಗಮನಂ ತ್ವಯಾ ನ ಕಾರ್ಯಮಿತಿ ಪುತ್ರಂ ಪ್ರತಿ ಪಿತ್ರೋಕ್ತೇ ವಿಘ್ನಃ ಸ್ಯಾದಿತಿಶಂಕಯಾ ಅವಿಘ್ನತ ಏವ = ವಿಘ್ನಾಭಾವಾದೇವ ತಾನ್ ವಿನಿಹಂತುಮ್ । ತು = ವರುಣಪತ್ನ್ಯಾಃ ಸ್ವಸ್ಯಾಃ ತದಿತರಪತ್ನೀತ್ವಸ್ಯಾಯೋಗ್ಯತ್ವಾಖ್ಯವಿಶೇಷೇಣ ಅಕಾಮಾ = ಪ್ರತೀಪೇ ಕಾಮರಹಿತಾ ವಿಡಂಬಾತ್ = ಮನುಷ್ಯ-ನಾರ್ಯನುಕರಣಾತ್ । ಕಾಮಿನೀವ ಪುರಾ = ಶಂತನುವಿವಾಹಾತ್ಪೂರ್ವಮೇವ ಪ್ರತೀಪಸ್ಯ ದಕ್ಷಿಣೋರುಂ ಸಮಾಶ್ರಿತಾ ಹಿ । ದಕ್ಷಿಣೋರುಗತಾಯಾಃ ಸುಷಾತ್ವಪ್ರಸಿದ್ಧಿಸೂಚನಾಯ ಹಿ ಶಬ್ದಃ । ಅನಿಯತಪತಿಕಾಮನಾ ಮನುಷ್ಯ-ಸ್ತ್ರೀವಿಡಂಬನಾತ್ ದಕ್ಷಿಣೋರುಗತಾಯಾಃ ಸುಷಾತ್ವನಿಯಮಾತ್ ದಕ್ಷಿಣೋರುಗತಾ ತ್ವಂ ಮಮ ಪುತ್ರಭಾರ್ಯಾ ಭವೇತಿ ಪಿತೈವ ವಾಕ್ಯಂ ವದೇದಿತಿ ಭಾವೇನ ಭಾವಿವಿಘ್ನಪರಿಹಾರಾಯ ದಕ್ಷಿಣೋರುಸಮಾಶ್ರಯಣಮಿತಿ ಭಾವಃ । ಮೇ ಸುತಸ್ಯ ಭಾರ್ಯಾ ಭವೇತಿ ತೇನೈವ= ಯೇನ ವಿಘ್ನಃ ಕಾರ್ಯಃ ತೇನೈವೋಕ್ತೇತ್ಯನ್ವಯಃ ॥ – (ವಾ.)

ಅ: ನಿರ್ವಿಘ್ನವಾಗಿ ಅವರನ್ನು ಕೊಲ್ಲಲೆಂದು ಗಂಗೆಯು ಮೊದಲಿಗೆ ಪ್ರತೀಪನ ಬಳಿಗೆ ತೆರಳಿ, ಅವನನ್ನು ಬಯಸಿದವಳಂತೆ ನಟಿಸುತ್ತಾ ಅವನ ಬಲತೊಡೆಯನ್ನೇರಿ ಕುಳಿತಳು. ತನಗೆ ಅವನನ್ನು ವಿವಾಹವಾಗುವ ಬಯಕೆ ಇಲ್ಲದಿದ್ದರೂ, ಅವನ ಪುತ್ರನಾದ ಶಂತನುವಿನ ಪತ್ನಿಯಾಗಲೆಂದೇ ಹಾಗೆ ನಟಿಸಿದ್ದಳು.

ವಿ: ೧) ಗಂಗೆ ಒಮ್ಮೆ ಹರಿದ್ವಾರದಲ್ಲಿ [೧]ಜಪನಿರತನಾಗಿದ್ದ ಪ್ರತೀಪರಾಜನ ಬಳಿಗೆ ತೆರಳಿ, ಅವನ ಬಲತೊಡೆಯನ್ನೇರಿ ಕುಳಿತು, ತನ್ನನ್ನು ಮದುವೆಯಾಗುವಂತೆ ಅವನನ್ನು ಕೇಳಿಕೊಂಡಳು ಎಂಬ ಉಲ್ಲೇಖ ಮಹಾಭಾರತದಲ್ಲಿದೆ. ಅದರ ಭಾವವನ್ನು ಇಲ್ಲಿ ಶ್ರೀಮದಾಚಾರ್ಯರು ವಿವರಿಸಿರುವರು :

ತ್ವಾಮಹಂ ಕಾಮಯೇ ರಾಜನ್ ಭಜಮಾನಾಂ ಭಜಸ್ವ ಮಾಮ್ ।
ತ್ಯಾಗಃ ಕಾಮವತೀನಾಂ ಹಿ ಸ್ತ್ರೀಣಾಂ ಸದ್ಭಿರ್ವಿಗರ್ಹಿತಃ ॥– ಭಾರತ (ಆದಿ. ೯೭/೫)

೨) ವರುಣಪತ್ನಿಯಾದ ಗಂಗೆಗೆ ಪ್ರತೀಪರಾಜನನ್ನು ವಿವಾಹವಾಗುವ ಉದ್ದೇಶವೇನೂ ಇರಲಿಲ್ಲ; ದೇವಸ್ತ್ರೀಯಾದ ಅವಳಿಗೆ ಹಾಗೆ ಕಾಮನೆ ಇರಲು ಸಾಧ್ಯವೂ ಇರಲಿಲ್ಲ. ಗಂಗೆ ಹಾಗೆ ಮಾಡಿದ್ದು ನಟನೆ ಅಷ್ಟೆ. ಅದಕ್ಕೆ ಕಾರಣ ತಾನು ವಸುಗಳಿಗೆ ನೀಡಿದ ವಚನವನ್ನು ಪೂರೈಸುವುದೇ ಆಗಿತ್ತು.

೩) ತನಗೆ ಹುಟ್ಟಿದ ಮಕ್ಕಳನ್ನು ಹಾಗೆ ಕೊಲ್ಲುವುದು ಶಾಸ್ತ್ರದಂತೆ ಲೋಕಕ್ಕೂ ವಿರುದ್ಧವೇ. ಗಂಡನೆಂದೂ ಅದಕ್ಕೆ ಸಮ್ಮತಿಸಲಾರ. ಆದ್ದರಿಂದ ಅವರನ್ನು ಕೊಲ್ಲುವ ಕಾರ್ಯ ಅಷ್ಟು ಸುಲಭವಾದುದೇನೂ ಆಗಿರಲಿಲ್ಲ. ಅದಕ್ಕೆಂದು ಗಂಗೆ ಮೊದಲು ಶಂತನುವಿನ ತಂದೆಯಾಗಿದ್ದ ಪ್ರತೀಪರಾಜನ ಬಳಿಗೆ ತೆರಳಿ ಅವನನ್ನು ಮೆಚ್ಚಿ ಬಂದವಳಂತೆ ನಟಿಸುತ್ತಾ ಅವನ ಬಲತೊಡೆಯನ್ನೇರಿ ಕುಳಿತು, ತನ್ನನ್ನು ವಿವಾಹವಾಗಲು ಕೇಳಿಕೊಂಡು, ಅವನಿಂದ ವಚನ ಪಡೆದಳು[೨] ಎಂದು ತಿಳಿಯಬೇಕು.

---

೧. ತತಃ ಪ್ರತೀಪೋ ರಾಜಾऽऽಸೀತ್ ಸರ್ವಭೂತಹಿತಃ ಸದಾ ।
ನಿಷಸಾದ ಸಮಾ ಬಹ್ವೀರ್ಗಂಗಾದ್ವಾರಗತೋ ಜಪನ್ ॥ – ಭಾರತ (ಆದಿ. ೯೭/೧)

೨. ತದುಕ್ತಂ ಆದಿಪರ್ವಣಿ–

'ತಥೇತ್ಯುಕ್ತ್ವಾ ತು ರಾಜಾನಂ ತತ್ಸೈವಾಂತರಧೀಯತ' ಇತಿ ।
'ಏತಸ್ಮಿನ್ನೇವ ಕಾಲೇ ತು ಪ್ರತೀಪಃ ಕ್ಷತ್ರಿಯರ್ಷಭಃ ।
ತಪಸ್ತೇಪೇ ಸುತಸ್ಯಾರ್ಥೇ ಸಭಾರ್ಯಃ ಕುರುನಂದನ' ಇತಿ ।
ಶಾಂತಸ್ಯ ಜಜ್ಞೇ ಸಂತಾನಸ್ತಸ್ಮಾದಾಸೀತ್ ಸ ಶಾಂತನುಃ' ಇತಿ ॥ – (ಜ., ವ.)

ತೇನೈವ ಚೋಕ್ತಾ ಭವ ಮೇ ಸುತಸ್ಯ
ಭಾರ್ಯಾ ಯತೋ ದಕ್ಷಿಣೋರುಸ್ಥಿತಾಽಸಿ ।
ಭಾಗೋ ಹಿ ದಕ್ಷೋ ದುಹಿತುಃ ಸ್ನುಷಾಯಾ[೧]
ಭಾರ್ಯಾಭಾಗೋ ವಾಮ ಇತಿ ಪ್ರಸಿದ್ಧಃ[೨] ॥ ೩೩ ॥

ಅ: ''ನೀನು ನನ್ನ ಬಲತೊಡೆಯನ್ನು ಏರಿ ಕುಳಿತಿರುವುದರಿಂದ ನನ್ನ ಮಗನಿಗೆ ಪತ್ನಿಯಾಗು; ಬಲಭಾಗ ಮಗಳದು ಹಾಗೂ ಸೊಸೆಯದು; ಎಡಭಾಗ ಪತ್ನಿಯದು ಎಂದೇ ಪ್ರಸಿದ್ಧ'' ಎಂದು ಅವನು ಅವಳಿಗೆ ಹೇಳಿದ.

ವಿ: ೧) ಆದರೆ ಗಂಗೆಯ ಆ ಮಾತನ್ನು ಪ್ರತೀಪರಾಜ ಒಪ್ಪಲಿಲ್ಲ. ಅದಕ್ಕೆ ಅವನು ನೀಡಿದ ಕಾರಣ ಇದು: ''ಬಲತೊಡೆ ಮಗಳು ಅಥವಾ ಸೊಸೆಯದು. ಎಡತೊಡೆ ಪತ್ನಿಯದು. ನೀನೀಗ ಕುಳಿತಿರುವುದು ನನ್ನ ಬಲತೊಡೆಯ ಮೇಲೆ. ನೀನು ನನ್ನ ಮಗಳಂತೂ ಅಲ್ಲ. ಆದ್ದರಿಂದ ಸೊಸೆಯಾಗುವುದೇ ಉಚಿತ''. ಪ್ರತೀಪರಾಜ ಆಗಿನ್ನೂ ತರುಣ; ಗಂಗೆ ಅಪ್ರತಿಮರೂಪಸಿಯಾದ ದೇವತಾಸ್ತ್ರೀ. ಆದರೂ ಅವನು ಧರ್ಮಕ್ಕನುಗುಣವಾಗಿ ನಡೆದನೇ ಹೊರತು, ಕಾಮಕ್ಕೆ ಬಲಿಯಾಗಲಿಲ್ಲ. ಹೀಗೆ ಅಧರ್ಮಕ್ಕೆ ವಿರೋಧಿಯಾದ್ದರಿಂದಲೇ 'ಪ್ರತೀಪ' ಎಂಬ ಹೆಸರು ಅವನಿಗೆ ಸಾರ್ಥಕ. ಇದನ್ನೆಲ್ಲ ಬಲ್ಲ ಗಂಗೆ ಅವನು ಹಾಗೆ ಹೇಳುವನೆಂದು ತಿಳಿದೆ ಬಲತೊಡೆಯನ್ನೇರಿ ಕುಳಿತಳು ಎಂದು ಭಾವ.

ಗಂಗೆಯ ನಿಬಂಧನೆ

ಉವಾಚ ಸಾ ತಂ ನ[೩] ತು ಮಾಂ ಸುತಸ್ತೇ
ಕಾಽಸೀತಿ ಪೃಚ್ಛೇನ್ನ ತು ಮಾಂ ನಿವಾರಯೇತ್ ।
ಅಯೋಗ್ಯಕರ್ತ್ರೀಮಪಿ ಕಾರಣಂ ಚ
ಮತ್ಕರ್ಮಣೋ ನೈವ ಪೃಚ್ಛೇತ್ ಕದಾಚಿತ್ ॥ ೩೪ ॥

---

೧. ದುಹಿತುಃ ಸ್ನುಷಾಯಾ ಇತ್ಯತ್ರ ದುಹಿತುರ್ವಾ ಸ್ನುಷಾಯಾ ವೇತ್ಯನ್ವಯಃ ॥ – (ವಾ.)

೨. ದಕ್ಷೋ ದಕ್ಷಿಣ ಇತಿ ಸ್ಮೃತಿಷು ಪ್ರಸಿದ್ಧಃ । – (ಜ.)

ಅಪತ್ಯಾನಾಂ ಸ್ನುಷಾಣಾಂ ಚ ಭೀರು ವಿದ್ಧ್ಯತದಾಸನಮ್ ।
ಸವ್ಯೋರುಃ ಕಾಮಿನೀಭೋಗ್ಯಃ ..... ॥ – ಭಾರತ (೧/೯೭/೧೦)

ಅ: ಗಂಗೆ ನುಡಿದಳು : ''ನಿನ್ನ ಮಗ ನನ್ನನ್ನು ನೀನು ಯಾರೆಂದು ಪ್ರಶ್ನಿಸಕೂಡದು; ನಾನು ಉಚಿತವಲ್ಲದ್ದನ್ನು ಎಸಗಿದರೂ ಅದನ್ನು ತಡೆಯಕೂಡದು; ಮತ್ತು ನನ್ನ ಅಂತಹ ಕಾರ್ಯಕ್ಕೆ ಕಾರಣವನ್ನೂ ಸಹ ಎಂದೂ ಕೇಳಕೂಡದು''.

ವಿ: ''ನಿನ್ನ ಮಾತನ್ನು ನಾನು ನಡೆಸುವೆ. ಆದರೆ ನಾನು ಕೇಳುವ ಈ ಮೂರು ನಿಬಂಧನೆಗಳನ್ನು ಅವನು ನಡೆಸುವುದಾದಲ್ಲಿ ಮಾತ್ರ'' ಎಂದು ನುಡಿಯುವ ಮೂಲಕ ಗಂಗೆ ತಾನು ಮುಂದೆ ಮಾಡಲಿರುವ ತನ್ನ ಮಕ್ಕಳಾಗಿ ಜನಿಸುವ ಆ ವಸುಗಳ ಹತ್ಯೆಯ ಕಾರ್ಯಕ್ಕೆ ಅಡ್ಡಿ ಒದಗದಂತೆ ವ್ಯವಸ್ಥೆ ಮಾಡಿಕೊಂಡಳು ಎಂದರ್ಥ.

ಯದಾ ತ್ರಯಾಣಾಮಪಿ ಚೈಕಮೇಷಃ
ಕರೋತಿ ಗಚ್ಛೇಯಮಹಂ ವಿಸೃಜ್ಯ ।
ತದಾ ತ್ವದೀಯಂ ಸುತಮಿತ್ಯುದೀರಿತೇ
ತಥೇತಿ ರಾಜಾऽಪ್ಯವದತ್ ಪ್ರತೀಪಃ ॥ ೩೫ ॥

ಅ: ''ಈ ಮೂರರಲ್ಲಿ ಯಾವ ಒಂದನ್ನು ಮಾಡಿದರೂ, ನಾನು ನಿನ್ನ ಮಗನನ್ನು ತೊರೆದು ತೆರಳುವೆ'' ಎಂದು ಗಂಗೆ ನುಡಿಯಲು, ಪ್ರತೀಪರಾಜ ''ಹಾಗೆಯೇ ಆಗಲಿ'' ಎಂದು ನುಡಿದ.

ವಿ: ೧) ಈ ರೀತಿ ಪ್ರತೀಪರಾಜನನ್ನು ಕೇಳುವ ಮೂಲಕ ಅವನು ಆತನ ನಿಯಮವನ್ನು ತನ್ನ ಮಗನಿಗೆ ತಿಳಿಸಿ, ಅದನ್ನು ತಪ್ಪದಂತೆ ಪಾಲಿಸಲು ಆದೇಶಿಸುವನು ಎಂಬುದು ಗಂಗೆಯ ಆಶಯ. ಮುಂದೆ ನಡೆದದ್ದೂ ಹಾಗೆಯೇ.

ತಥೈವ ಪುತ್ರಾಯ ಚ ತೇನ ತದ್ವಚೋ
ವಧೂಕೃತಮುಕ್ತಂ ವಚನಾದ್ಯುನದ್ಯಾಃ ।
ಕನೀಯಸೇ ಸಾ ಹ್ಯವದತ್ ಸುತಸ್ತೇ
ನಾನ್ಯಃ ಪತಿಃ ಶಂತನುರೇವ ಮೇ ವೃತಃ ॥ ೩೬ ॥

---

೩. ನತು ಮಾಂ ಸುತಸ್ತೇ ಇತ್ಯಾದಿಕಮಪಿ ಅವಿಘ್ನತಸ್ತಾನ್ವಿನಿಹಂತುಮೇವ ಪಿತ್ರಾಜ್ಞಾಂ ಪುತ್ರೋ ನೋಲ್ಲಂಘಯೇದೇವ ತದಾऽಹಂ ಸುಖೇನೈವ ತಾನ್ಹನ್ಮೀತ್ಯಾಶಯಾ ಇಮಾನ್ ಶಪಥಾನ್ ಪಿತೃಮುಖೇನೈವ ಕಾರಯಿತುಂ ಚ ತಸ್ಯ ದಕ್ಷಿಣೋರುಂ ಶ್ರಿತೇತಿ ಭಾವಃ । ನತು ಮಾಂ ನಿವಾರಯೇದಿತ್ಯತ್ರ । ತು = ವಿಶೇಷೇಣ ಅಯೋಗ್ಯಭ್ರೂಣಹತ್ಯಾಖ್ಯಕರ್ಮಕರ್ತ್ರೀಮಪೀತಿ ಸಂಬಂಧಃ । ನಿಷಿದ್ಧದಿನೇ ಶಯ್ಯಾಂ ಪ್ರತ್ಯಾಗಮನಾದಿಕಿಂಚಿದಯೋಗ್ಯಕರ್ಮಕರ್ತ್ರ್ಯಃ ನಿವಾರಣೇऽಪಿ ನ ದೋಷ ಇತಿ ಭಾವಃ । ತು = ವಿಶೇಷೇಣ ನ ನಿವಾರಯೇತ್ = ಇದಂ ನ ಕುರ್ವಿತಿ ವಚಸಾ ನ ನಿವಾರಯೇದಿತಿ ವಾ । ಮನಸಾ ನಿವಾರಣೇऽಪಿ ನ ದೋಷ ಇತಿ ಭಾವಃ ॥ –(ವಾ.)

ಅ : ಹಾಗೆಂದು ತನ್ನ ಕಿರಿಯಪುತ್ರನಾದ ಶಂತನುವಿಗೆ ದೇವನದಿಯಾದ ಗಂಗೆಯ ಮಾತನ್ನು ಅವನು ತಿಳಿಸಿದ. ಏಕೆಂದರೆ ಗಂಗೆಯು ''ನಾನು ಪತಿಯನ್ನಾಗಿ ವರಿಸುವುದು ಶಂತನುವನ್ನೇ ಹೊರತು ಇತರ ಪುತ್ರರನ್ನಲ್ಲ'' ಎಂದೇ ತಿಳಿಸಿದ್ದಳು.

ವಿ: ೧) ಪ್ರತೀಪರಾಜ ಹೀಗೆ ಗಂಗೆಗೆ ವಚನ ನೀಡಿದಾಗ ಅವನಿಗಿನ್ನೂ ಶಂತನು ಜನಿಸಿಯೇ ಇರಲಿಲ್ಲ. ಅವನಿಗೆ ದೇವಾಪಿ, ಬಾಹ್ಲೀಕ, ಶಂತನು ಎಂಬ ಮೂವರು ಪುತ್ರರು ಜನಿಸಿದ್ದರೂ, ಅವನು ಈ ವಿಷಯವನ್ನು ತಿಳಿಸಿದ್ದು ಶಂತನುವಿಗೇ ಹೊರತು ತನ್ನ ಮೊದಲ ಇಬ್ಬರು ಮಕ್ಕಳಿಗಲ್ಲ. ''ತಾನು ವರಿಸುವುದು ಅವನ ಮೂರನೆಯ ಮಗ ಶಂತನುವನ್ನೇ ಹೊರತು ಮೊದಲಿಬ್ಬರನ್ನಲ್ಲ'' ಎಂದು ಗಂಗೆ ಆ ಸಮಯದಲ್ಲೇ ತಿಳಿಸಿದ್ದುದೇ ಇದಕ್ಕೆ ಕಾರಣ (ಆದಿ.೯೭/೧೨):

ಏವಮಪ್ಯಸ್ತು ಧರ್ಮಜ್ಞ ಸಂಯುಜ್ಯೇಯಂ ಸುತೇನ ತೇ ।
ತ್ವದ್ಬಕ್ತ್ಯಾ ತು ಭಜಿಷ್ಯಾಮಿ ಪ್ರಖ್ಯಾತಂ ಭಾರತಂ ಕುಲಮ್ ॥

ಎಂದು ಗಂಗೆಯ ವಚನ. ಇದರಂತೆ ತಾನು ಸೇರುವುದು ಭಾರತಕುಲಕ್ಕೆ ಎಂದು ಗಂಗೆಯ ಅಭಿಪ್ರಾಯ. ಪ್ರತೀಪನ ಮೂವರು ಪುತ್ರರಲ್ಲಿ ದೇವಾಪಿ ವನಕ್ಕೆ ತೆರಳಿದ. ಬಾಹ್ಲೀಕ ಬಾಹ್ಲೀಕದೇಶದ ದೊರೆಯಾದ. ಶಂತನು ಭರತವಂಶಪ್ರವರ್ತಕನಾದ. ಆದ್ದರಿಂದ ಇಲ್ಲಿ ತಾನು ವರಿಸುವುದು ಶಂತನುವನ್ನೇ ಎಂದು ಗಂಗೆಯ ಭಾವ. ಶ್ರೀಮದಾಚಾರ್ಯರು ಇದರ ಭಾವವನ್ನು ವಿವರಿಸಲೆಂದೇ ''ಸುತಸ್ತೇ ನಾನ್ಯಃ ಪತಿಃ ಶಂತನುರೇವ ಮೇ ವೃತಃ'' ಎಂದು ತಿಳಿಸಿರುವರು.

೩) ಶಂತನುವನ್ನೇ ತಾನು ವರಿಸುವೆನೆಂದು ಗಂಗೆ ಹೇಳಲು ಆತ ತನ್ನ ಪತಿಯೇ ಆದ ವರುಣ ಎಂದು ಅರಿತಿದ್ದುದೇ ಕಾರಣ.

೪) ಗಂಗೆಯ ಈ ಮಾತಗಳನ್ನೆಲ್ಲ ಗಮನಿಸಿದಾಗ ಅವಳು ಪ್ರತೀಪನನ್ನು ಮೆಚ್ಚಿದಂತೆ ಮಾತನಾಡಿದ್ದು ನಟನೆಯೇ ಹೊರತು ವಸ್ತುಸ್ಥಿತಿಯಲ್ಲ ಎಂಬುದು ಸ್ಫುಟಪಡುವುದು.

೫) ಹೀಗೆ ಪ್ರತೀಪನೊಂದಿಗೆ ಕರಾರು ಮಾಡಿಕೊಂಡ ಗಂಗೆ ಅಲ್ಲಿಯೇ ಅದೃಶ್ಯಳಾದಳು:

'ತಥೇತ್ಯುಕ್ತ್ವಾ ತು ಸಾ ರಾಜಂಸ್ತತ್ರೈವಾಂತರಧೀಯತ ।'

–ಭಾರತ(ಆದಿ. ೯೭/೧೬)

---

೪. ವಧೂಕ್ತಂ ತತ್ = ತ್ರಿರೂಪಂ ವಚ ಇತಿ ಸಂಬಂಧಃ । ತೇ ಸುತಃ ಶಂತನುರೇವ ವೃತೋ ಹೀತಿ ಹಿಶಬ್ದೇನ ವರುಣರೂಪತ್ವಾತ್ತಸ್ಯೈವ ಪತಿತ್ವೇನ ವರಣಯೋಗ್ಯತಾಪ್ರಸಿದ್ಧಿಂ ಸೂಚಯತಿ ॥ – (ವಾ.)

'ವಧೂರ್ನಾರೀ ವಧೂರ್ಭಾರ್ಯಾ ವಧೂಃ ಪುತ್ರವಧೂರಪಿ'

ಇತ್ಯನೇಕಾರ್ಥಧ್ವನಿಪದಮಂಜರ್ಯಾಮ್। – (ಜ.)

೬) ಹಾಗೆ ಅದೃಶ್ಯಳಾಗುವ ಮೂಲಕ ತಾನು ದೇವಸ್ತ್ರೀ ಎಂಬುದನ್ನು ಸೂಚಿಸಿದಳು ಸಹ.

ಗಂಗೆಯಿಂದ ವಸುಗಳ ಕೋರಿಕೆಯ ಪೂರೈಕೆ

೧ತತಸ್ತು ಸಾ ಶಂತನುತೋಽಷ್ಟಪುತ್ರಾ-
ನವಾಪ್ಯ ಸಪ್ತ ನ್ಯಹನತ್ ತಥಾಽಷ್ಟಮಮ್ ।
ಗಂತುಂ ತತೋ ಮತಿಮಾಧಾಯ ಹಂತು-
ಮಿವೋದ್ಯೋಗಂ ಸಾ ಹಿ ಮೃಷಾ ಚಕಾರ ॥ ೩೭ ॥

ಅ: ಅನಂತರ ಗಂಗೆಯು ಶಂತನುವಿನಿಂದ ಎಂಟು ಜನ ಪುತ್ರರನ್ನು ಪಡೆದು, ಮೊದಲ ಏಳು ಜನರನ್ನು ಕೊಂದಳು. ಅಲ್ಲಿಂದ ಹೊರಡುವ ನಿರ್ಧಾರ ಮಾಡಿ, ಎಂಟನೆಯ ಮಗನನ್ನು ಕೊಲ್ಲಲು ತೊಡಗುವಂತೆ ಸುಮ್ಮನೆ ನಡೆದುಕೊಂಡಳು.

ವಿ: ೧) ಮುಂದೆ ಶಂತನುವನ್ನು ವರಿಸಿದ ಗಂಗೆ ಅವನಿಂದ ಅಷ್ಟವಸುಗಳನ್ನು ಪುತ್ರರನ್ನಾಗಿ ಪಡೆದಳು. ಮೊದಲ ಏಳು ಜನರನ್ನು ಅವರು ಹುಟ್ಟುತ್ತಿದ್ದಂತೆಯೇ ಗಂಗೆಯಲ್ಲಿ ಮುಳುಗಿಸಿ ಕೊಂದಳು. ಎಂಟನೆಯದನ್ನು ಕೊಲ್ಲುವ ಉದ್ದೇಶ ಅವಳಿಗಿರಲಿಲ್ಲ. ಹಾಗೆಂದೇ ವಸುಗಳಿಂದ ವರವನ್ನೂ ಪಡೆದಿದ್ದಳು. ಆದರೂ ಅದನ್ನೂ ಸಹ ಕೊಲ್ಲುವವಳಂತೆ ವರ್ತಿಸಿದಳು. ಅದಕ್ಕೆ ಅವಳು ಭೂಲೋಕವನ್ನು ತೊರೆದು ಹೋಗಲು ನಿಶ್ಚಯಿಸಿದ್ದುದೇ ಕಾರಣವಾಗಿತ್ತು ಎಂದು ಭಾವ.

೨) ಶಂತನುವನ್ನು ವರಿಸುವ ಮುನ್ನ ಅವನ ಮುಂದೆಯೂ ತನ್ನ ಕರಾರನ್ನು ತಿಳಿಸಿ, ಅವುಗಳಲ್ಲಿ ಯಾವುದೊಂದನ್ನು ಉಲ್ಲಂಘಿಸಿದರೂ, ತಾನು ಅವನನ್ನು ತೊರೆದುಹೋಗುವ ಸಂಕಲ್ಪವನ್ನು ತಿಳಿಸಿದಳು ಎಂಬ ಉಲ್ಲೇಖ ಮಹಾಭಾರತದಲ್ಲಿದೆ :

ಉವಾಚ ಚೈವ ರಾಜ್ಞಃ ಸಾ ಹ್ಲಾದಯಂತೀ ಮನೋ ಗಿರಾ ।
ಭವಿಷ್ಯಾಮಿ ಮಹೀಪಾಲ ಮಹಿಷೀ ತೇ ವಶಾನುಗಾ ॥
ಯತ್ ತು ಕುರ್ಯಾಮಹಂ ರಾಜಂಶ್ಚುಭಂ ವಾ ಯದಿ ವಾಶುಭಮ್ ।
ನ ತದ್ವಾರಯಿತವ್ಯಾಽಸ್ಮಿ ನ ವಕ್ತವ್ಯಾ ತಥಾಽಪ್ರಿಯಮ್ ॥
ಏವಂ ಹಿ ವರ್ತಮಾನೋಽಹಂ ತ್ವಯಿ ವತ್ಸ್ಯಾಮಿ ಪಾರ್ಥಿವ ।
ವಾರಿತಾ ವಿಪ್ರಿಯಂ ಚೋಕ್ತಾ ತ್ಯಜೇಯಂ ತ್ವಾಮಸಂಶಯಮ್॥

– (ಆದಿ.೯೮/೨-೪)

---

೧. ಉತ್ಪತ್ತೌ ಹನನೇ ಚ ಕ್ರಮಾಖ್ಯವಿಶೇಷಂ ಸೂಚಯಿತುಂ ತುಶಬ್ದಃ । ಮೃಷಾ ಚಕಾರ ಹೀತಿ ಹಿಶಬ್ದೇನ ಗಂಗಯೈವ ಏಕಸ್ಯ ದೀರ್ಘಾಯುಷ್ಟ್ವೇನ ವರಣಪ್ರಸಿದ್ಧಿಂ ಸೂಚಯತಿ ॥ – (ವಾ.)

೩) ಹೀಗೆ ಇಬ್ಬರಿಂದಲೂ ಸಮ್ಮತಿ ಪಡೆಯುವ ಮೂಲಕ ಗಂಗೆ ತನ್ನ ಪುತ್ರರನ್ನು ಕೊಲ್ಲುವ ಕಾರ್ಯವನ್ನು ಸುಗಮಗೊಳಿಸಿಕೊಂಡಳು ಎಂದು ತಾತ್ಪರ್ಯ.

೪) ಈ ಎರಡರಲ್ಲಿ ಪ್ರತೀಪರಾಜನ ಮಾತು ಶಂತನುವಿಗೂ ಹೆಚ್ಚು ಮಾನ್ಯ ಎಂಬ ಕಾರಣದಿಂದ ಶ್ರೀಮದಾಚಾರ್ಯರು ಅದನ್ನು ಮಾತ್ರ ಉಲ್ಲೇಖಿಸಿರುವರು ಎಂದು ತಿಳಿಯಬೇಕು.

೪) ದೇವಕಿಯ ಮೊದಲ ಆರು ಮಕ್ಕಳನ್ನು ಕಂಸ ಸಂಹರಿಸಿದರೆ, ತನ್ನ ಮೊದಲ ಏಳು ಮಕ್ಕಳನ್ನು ಸ್ವತಃ ಗಂಗೆಯೇ ಸಂಹರಿಸಿದಳು. ಅಲ್ಲಿ ಕಂಸನದು ಅವಿವೇಕವಾಗಿದ್ದರೆ, ಇಲ್ಲಿ ಗಂಗೆ–ಯದು ವಿವೇಕವಾಗಿತ್ತು. ದೇವಕಿಯ ಮಕ್ಕಳು ಹಾಗೆ ಸಾಯಲು ಹಿರಣ್ಯಕಶಿಪುವಿನ ಶಾಪ ಕಾರಣ–ವಾಗಿತ್ತು. ಆದರೆ ಗಂಗೆಯ ಮಕ್ಕಳು ಹೀಗೆ ಸಾಯಲು ವಸುಗಳ ಅಪೇಕ್ಷೆಯೇ ಕಾರಣವಾಗಿತ್ತು.

೫) ದೇವಕಿಯ ಎಂಟನೆಯ ಗರ್ಭವಾಗಿ ಭಗವಂತನಾದ ಶ್ರೀಕೃಷ್ಣ ಜನಿಸಿದರೆ, ಗಂಗೆಯ ಎಂಟನೆಯ ಗರ್ಭವಾಗಿ ಭೀಷ್ಮರು ಜನಿಸಿದರು. ಆ ಕೃಷ್ಣನಿಗೆ ಈ ಭೀಷ್ಮರು ಭಕ್ತಾಗ್ರೇಸರ–ರಲ್ಲೊಬ್ಬರೆನ್ನಿಸಿದ್ದು ವಿಶೇಷ.

೬) ಗಂಗೆ ವಿಷ್ಣುಪಾದೋದ್ಭವೆಯಾದ್ದರಿಂದ ವಿಷ್ಣುಪುತ್ರಿ. ಭೀಷ್ಮರು ಗಂಗಾಪುತ್ರ. ಎಂದರೆ ಈ ಅರ್ಥದಲ್ಲಿ ಅವರು ವಿಷ್ಣುವಿಗೆ ದೌಹಿತ್ರ ಎಂಬುದು ವಿಶೇಷ. ಗಂಗಾಪುತ್ರರಾದ ಇವರು ಗಂಗಾಜನಕನ ವಿಶೇಷಾನುಗ್ರಹಕ್ಕೆ ಪಾತ್ರರಾದದ್ದು ಉಚಿತವೇ ಆಗಿದೆ.

ಗಂಗೆಯ ನಿರ್ಗಮನ

ಅವಸ್ಥಿತಿರ್ನಾತಿಸುಖಾಯ[೧] ಮಾನುಷೇ
ಯತಃ ಸುರಾಣಾಮತ ಏವ ಗಂತುಮ್ ।
ಐಚ್ಛನ್ನ ತಸ್ಯಾ ಹಿ ಬಭೂವ ಮಾನುಷೋ
ದೇಹೋ ನರೋತ್ಥೋ ಹಿ ತದಾऽऽಸ[೨] ಶಂತನೋಃ ॥ ೩೮ ॥

---

೧. ಮಾನುಷೇ= ಮಾನುಷದೇಹವತಾಂ ಸಮೀಪೇ ಅವಸ್ಥಿತಿಃ = ದೃಶ್ಯತಯಾ ಅವಸ್ಥಿತಿಃ । ತಸ್ಯಾಃ ಮಾನುಷೋ ದೇಹೋ ನ ಬಭೂವ ಹೀತಿ ಹಿಶಬ್ದೇನ ಮನುಷ್ಯದೇಹಾಪ್ರಾಪ್ತೌ ''ನ ಮಾನುಷಂ ಗರ್ಭಮವಾಪ್ನುಮೋ ವಯಮ್'' ಇತಿ ವಸೂನಾಂ ಪ್ರಾರ್ಥನಾವ್ಯಕಾರಣಸ್ಯ ಪ್ರಸಿದ್ಧಿಂ ಸೂಚಯತಿ । ಅನ್ಯಥಾ ಪತ್ಯುರ್ಮಾನುಷದೇಹಪ್ರಾಪ್ತೌ ಭಾರ್ಯಾಯಾ ಮಾನುಷದೇಹಪ್ರಾಪ್ತಿಃ ಸುತರಾಮುಚಿತೇತಿ ಭಾವಃ ॥ – (ವಾ.)

೨. ತಥಾऽऽಸ – (ಪಾಠಾಂತರ)

ಅ: ಮನುಷ್ಯರೊಂದಿಗೆ ವಾಸಿಸುವುದು ದೇವತೆಗಳಿಗೆ ಹೆಚ್ಚು ಮುದ ನೀಡುವಂತಹುದಲ್ಲ. ಅದಕ್ಕೆಂದೇ ಗಂಗೆ ಹಾಗೆ ತೆರಳಲು ಬಯಸಿದಳು. ಅವಳಿಗೆ ಮನುಷ್ಯದೇಹವಿರಲಿಲ್ಲ. ಶಂತನುವಿನದು ಮಾತ್ರ ಆಗ ಮನುಷ್ಯರಿಂದ ಹುಟ್ಟಿದ ದೇಹವೇ ಆಗಿತ್ತು.

ವಿ: ೧) ಗಂಗೆಯದು ಮನುಷ್ಯಶರೀರವಾಗಿರದೆ, ದೇವತಾಶರೀರವೇ ಆಗಿತ್ತು, ಶಂತನು–ವಿನದು ಮಾತ್ರ ಮನುಷ್ಯದೇಹ. ಅದರಿಂದಾಗಿ ಗಂಗೆಗೆ ಆ ದೇಹದ ಅವನೊಂದಿಗೆ ವಾಸಿಸಲು ಹೆಚ್ಚು ಹಿತವೆನ್ನಿಸಲಿಲ್ಲ. ಅದಕ್ಕೆಂದೇ ಹಾಗೆ ತೆರಳಲು ನಿಶ್ಚಯಿಸಿದಳು ಎಂದು ಭಾವ. ಶಂತನು ಹುಟ್ಟುವ ಮುನ್ನವೇ ಪ್ರತೀಪರಾಜನೊಂದಿಗೆ ಕರಾರು ಮಾಡಿಕೊಂಡಿದ್ದ ಗಂಗೆ ವಯಸ್ಸಿನಲ್ಲಿ ತುಂಬಾ ಕಿರಿಯನಾದ ಶಂತನುವನ್ನು ಹೇಗೆ ವರಿಸಿದಳು ಎಂಬ ಪ್ರಶ್ನೆಗೂ ಇದು ಪರಿಹಾರವಾಗಿದೆ.

೨) ಗಂಡ ಮೈಲಿಗೆಯಿಂದಿದ್ದು, ಹೆಂಡತಿ ಮಡಿಯಿಂದಿದ್ದಾಗ ಗಂಡನ ಸ್ಪರ್ಶ ಹೇಗೆ ಅವಳಿಗೆ ಅನಪೇಕ್ಷಿತವೊ, ಹಾಗೆ ದೇವಶರೀರದ ಗಂಗೆಗೆ ಮನುಷ್ಯಶರೀರದ ಶಂತನುವಿನೊಂದಿಗೆ ವಾಸ ಅನಪೇಕ್ಷಿತ ಎಂದು ತಿಳಿಯಬೇಕು.

೩) ಗಂಗೆ ಹಾಗೆ ತೆರಳಿದ್ದು ಸಹ ಬೇರೆಲ್ಲಿಗೋ ಅಲ್ಲದೆ, ಶಂತನುವಿನ ಮೂಲರೂಪವಾದ ವರುಣನ ಬಳಿಗೆ ಎಂಬುದು ಗಮನಾರ್ಹ. ಆದ್ದರಿಂದಲೇ ಇದನ್ನು ಪತ್ನಿಯು ಮಾಡಿದ ಪತಿಯ ಪರಿತ್ಯಾಗ ಎಂದು ಸರ್ವಥಾ ತಿಳಿಯುವಂತಿಲ್ಲ.

ತಾಂ ಪುತ್ರನಿಧನೋದ್ಯುಕ್ತಾಂ ನ್ಯವಾರಯತ ಶಂತನುಃ ।
ಕಾऽಸಿ ತ್ವಂ ಹೇತುನಾ ಕೇನ ಹಂಸಿ ಪುತ್ರಾನ್ ನೃಶಂಸವತ್ ॥ ೩೯ ॥

ಅ: ಮಗನನ್ನು ಕೊಲ್ಲಹೊರಟ ಅವಳನ್ನು ಶಂತನು ತಡೆದ. ''ನೀನಾರು? ಯಾವ ಕಾರಣದಿಂದ ನೀನು ರಕ್ಕಸಿಯಂತೆ ಪುತ್ರರನ್ನು ಕೊಲ್ಲುತ್ತಿರುವೆ?''

ವಿ: ಗಂಗೆಯ ಮೂರು ನಿಬಂಧನೆಗಳನ್ನು ಏಕಕಾಲಕ್ಕೆ ಶಂತನು ಮೀರಿದ್ದು ಇದರಿಂದ ತಿಳಿಯುವುದು.

ರೂಪಂ ಸುರವರಸ್ತ್ರೀಣಾಂ ತವ ತೇನ ನ ಪಾತಕಮ್ ।
ಭವೇತ್ ಕರ್ಮ ತ್ವದೀಯಂ ತನ್ಮಹತ್ಕಾರಣಮತ್ರ ಹಿ ॥ ೪೦ ॥

ಅ: ನಿನ್ನದು ಶ್ರೇಷ್ಠದೇವತಾಸ್ತ್ರೀಯ ರೂಪ. ಆದ್ದರಿಂದ ನಿನ್ನ ಈ ಕಾರ್ಯ ಪಾತಕ–ವೆನ್ನಿಸದು. ಇದರಲ್ಲಿ ಒಂದು ದೊಡ್ಡ ಕಾರಣವಿರಬೇಕು.

ವಿ: ''ನಿನ್ನ ಕೃತಿ ರಾಕ್ಷಸಕಾರ್ಯ; ರೂಪ ಶ್ರೇಷ್ಠದೇವತಾಸ್ತ್ರೀಯದು. ಆದ್ದರಿಂದ ಇದು ನಿಜಕ್ಕೂ ಪಾಪಕರ್ಮವಾಗಿರಲು ಸಾಧ್ಯವಿಲ್ಲ, ಇದರ ಹಿನ್ನೆಲೆಯಾಗಿ ದೊಡ್ಡಕಾರಣವೊಂದಿರಬೇಕು'' ಎಂದು ಭಾವ.

ತತ್ ಕಾರಣಂ ವದ ಶುಭೇ ಯದಿ ಮಚ್ಛ್ರೋತ್ರಮರ್ಹತಿ ।
ಇತೀರಿತಾऽವದತ್ ಸರ್ವಂ ಪ್ರಯಯೌ ಚ ಸುರಾಪಗಾ ॥ ೪೧ ॥

ಆ: ಕಲ್ಯಾಣರೂಪಳೆ! ನನ್ನ ಕಿವಿಗೆ ಬೀಳಬಹುದಿದ್ದಲ್ಲಿ ಆ ಕಾರಣವನ್ನು ತಿಳಿಸು. ಹೀಗೆ ಅವನು ಕೇಳಲು ದೇವನದಿಯಾದ ಗಂಗೆ ಎಲ್ಲವನ್ನೂ ತಿಳಿಸಿ ತೆರಳಿದಳು.

ವಿ: ೧) ಅವನ ಪ್ರಶ್ನೆಗೆ ಉತ್ತರವಾಗಿ ತನ್ನ ಹಾಗೂ ಆ ಮಕ್ಕಳ ವೃತ್ತಾಂತವನ್ನೆಲ್ಲ ಗಂಗೆ ತಿಳಿಸಿ–ದಳು. ಅವನು ನಿಬಂಧನೆಯನ್ನು ಉಲ್ಲಂಘಿಸಿದ್ದರಿಂದ ಅವನನ್ನು ತೊರೆದು ಹೊರಟುಬಿಟ್ಟಳು ಸಹ.

೨) ಗಂಗೆಯು ಶಂತನುವಿಗೆ ವಸುಗಳ ವೃತ್ತಾಂತವನ್ನು ವಿವರವಾಗಿ ತಿಳಿಸಿದ ವಿಷಯ ಮಹಾಭಾರತದ ಆದಿಪರ್ವದ ೯೯ನೆಯ ಅಧ್ಯಾಯದಲ್ಲಿದೆ.

೩) ಗಂಗೆಯು ಅದನ್ನೆಲ್ಲ ತಿಳಿಸಿ, ದೇವವ್ರತನೊಂದಿಗೆ ಅದೃಶ್ಯಳಾದಳು :

ಏತದಾಖ್ಯಾಯ ಸಾ ದೇವೀ ತತ್ರೈವಾಂತರಧೀಯತ ।
ಆದಾಯ ಚ ಕುಮಾರಂ ತಂ ಜಗಾಮಾಥ ಯಥೇಪ್ಸಿತಮ್ ॥

– ಆದಿ. (೯೯/೪೬)

೪) ಅಷ್ಟವಸುಪುತ್ರನಿಗೆ ದೇವವ್ರತ ಮತ್ತು ಗಾಂಗೇಯ ಎಂಬ ಎರಡು ಹೆಸರುಗಳು.

ಸ ತು ದೇವವ್ರತೋ ನಾಮ ಗಾಂಗೇಯ ಇತಿ ಚಾಭವತ್ ।
ದ್ಯುನಾಮಾ ಶಂತನೋಃ ಪುತ್ರಃ ಶಂತನೋರಧಿಕೋ ಗುಣೈಃ ॥– (ಆದಿ. ೯೯/೪೭)

ಭೀಷ್ಮರು ಶಂತನುವಿಗಿಂತ ಮಿಗಿಲೆನ್ನಿಸಲು ಅವರೊಳಗಿದ್ದ ಬ್ರಹ್ಮದೇವರ ಸನ್ನಿಧಾನ ಕಾರಣ.

೫) ಸೂರ್ಯಪತ್ನಿ ಸಂಜ್ಞೆ ಸಹ ಹೀಗೆ ಪತಿಯನ್ನು ತ್ಯಜಿಸಿ ಹೊರಟವಳೇ. ಅದರ ಕಾರಣ ಮತ್ತು ವಿಧಾನಗಳು ಮಾತ್ರ ವಿಭಿನ್ನ.

ಗಂಗೆಯ ನಿರ್ಗಮನಕ್ಕೆ ಕಾರಣ

ನ ಧರ್ಮೋ ದೇವತಾನಾಂ ಹಿ ಜ್ಞಾತವಾಸಶ್ಚಿರಂ ನೃಷು ।
ಕಾರಣಾದೇವ ಹಿ ಸುರಾ ನೃಷು ವಾಸಂ ಪ್ರಕುರ್ವತೇ ॥ ೪೨ ॥

ಅ: ತಮ್ಮ ಸ್ವರೂಪ ತಿಳಿದ ಮೇಲೆ ಮನುಷ್ಯರಲ್ಲಿ ಬಹುಕಾಲ ನೆಲೆಸುವುದು ದೇವತೆಗಳಿಗೆ ಧರ್ಮವಲ್ಲ. ದೇವತೆಗಳು ವಿಶೇಷಕಾರಣದಿಂದಾಗಿ ಮನುಷ್ಯರ ಮಧ್ಯೆ ನೆಲೆಸುವರು.

ಕಾರಣಾಪಗಮೇ ಯಾಂತಿ ಧರ್ಮೋಽಪ್ಯೇಷಾಂ ತಥಾವಿಧಃ ।
ಅದೃಶ್ಯತ್ವಮಸಂಸ್ಪರ್ಶೋ ಹ್ಯಸಂಭಾಷಣಮೇವ ಚ ॥ ೪೩ ॥

ಸುರೈರಪಿ [೨]ನೃಜಾತೈಸ್ತು ಗುಹ್ಯಧರ್ಮೋ ದಿವೌಕಸಾಮ್ ।
ಅತಃ ಸಾ ವರುಣಂ ದೇವಂ ಪೂರ್ವಭರ್ತಾರಮಪ್ಯಮುಮ್ ।
ನೃಜಾತಂ ಶಂತನುಂ ತ್ಯಕ್ತ್ವಾ ಪ್ರಯಯೌ ವರುಣಾಲಯಮ್ ॥ ೪೪ ॥

ಅ: ಆ ನಿಮಿತ್ತ ಪೂರೈಸುತ್ತಲೇ ಹೊರಟುಬಿಡುವರು. ಅವರ ಧರ್ಮ ಅಂತಹುದು. ಮನುಷ್ಯರಾಗಿ ಜನಿಸಿದಾಗಲೂ ಕಾಣದಂತಿರುವುದು, ಮುಟ್ಟದಂತಿರುವುದು, ಮಾತನಾಡದಿರುವುದು, ದೇವತೆಗಳ ರಹಸ್ಯಧರ್ಮ. ಆದ್ದರಿಂದಲೇ ಶಂತನು ತನ್ನ ಮೊದಲ ಪತಿಯಾದ ವರುಣದೇವನೇ ಆಗಿದ್ದರೂ, ಅವನನ್ನು ತೊರೆದು ವರುಣಲೋಕಕ್ಕೆ ತೆರಳಿದಳು.

ವಿ: ೧) ವಿಶೇಷನಿಮಿತ್ತದಿಂದ ದೇವತೆಗಳು ಮನುಷ್ಯಲೋಕದಲ್ಲಿ ಜನಿಸುವರು. ಆ ಕಾರಣ ಮುಗಿಯುತ್ತಿದ್ದಂತೆಯೇ ತಮ್ಮ ಲೋಕಕ್ಕೆ ತೆರಳಿಬಿಡುವರು. ಹಾಗೆ ಜನಿಸಿದಾಗಲೂ ಹೆಚ್ಚಾಗಿ ಇತರರಿಗೆ ಕಾಣಿಸಿಗದಿರುವುದು, ಮುಟ್ಟಿಸಿಕೊಳ್ಳದಿರುವುದು, ಮಾತಿಗೆ ಸಿಕ್ಕದಿರುವುದು ಅವರಿಗೆ [೩]ಎಹಿತವಾದ ರಹಸ್ಯಧರ್ಮ.

---

೧. ಪ್ರತ್ಯಕ್ಷೇಣ ಸ್ವಮೂರ್ತೇಃ ಜ್ಞಾತತಯಾ ವಾಸಃ ಜ್ಞಾತವಾಸಃ ತತ್ತ್ವಾಭಿಮಾನಿತಯಾ ಅಜ್ಞಾತದೇವಾನಾಂ ನೃಷು ವಾಸಂ ವ್ಯಾವರ್ತಯಿತುಂ ಜ್ಞಾತಪದಮ್ । ಚಿರಮಿತ್ಯನೇನ ವರದಾನಾದ್ಯರ್ಥಂ ಕದಾಚಿದಾವಾಸೋಽಸ್ತೀತಿ ಸೂಚಯತಿ । ನೃಷ್ವಿತ್ಯನೇನ ದೇವಪ್ಯಾದಿಭಿಃ ಸಹ ಜ್ಞಾತತಯಾ ಚಿರಂ ವಾಸೋಽಸ್ತೀತಿ ಸೂಚಯತಿ । ಅಸಂಸ್ಪರ್ಶೋ ಹೀತಿ ಹಿಶಬ್ದೇನ ತತ್ರ ಪ್ರಮಾಣಪ್ರಸಿದ್ಧಿಂ ಸೂಚಯತಿ ॥ – (ವಾ.)

೨. ನೃಜಾತೈಸ್ತ್ವಿತ್ಯತ್ರ ತು = ಮಾನುಷಜನನಾಖ್ಯವಿಶೇಷೇಣ ನೃಜಾತೈರಿತ್ಯರ್ಥಃ । ಯಥಾಕಥಂಚಿನ್ನೃಜಾತತ್ವಮಾತ್ರೇಣ ತ್ಯಾಗೇ ರಾಮಕೃಷ್ಣಾದೀನಾಮಪಿ ತ್ಯಾಗಪ್ರಸಂಗಾದಿತಿ ಭಾವಃ ॥ – (ವಾ.)

೩. ಪರೋಕ್ಷಪ್ರಿಯಾ ಇವ ಹಿ ದೇವಾಃ ಪ್ರತ್ಯಕ್ಷದ್ವಿಷಃ । – ಐತರೇಯೋಪನಿಷತ್

ಪಾಪೈರಜ್ಞಾತತಾಂ ದೇವಾ ಮಾನಯಂತಿ ಸದಾऽऽತ್ಮನಃ ॥ – ಐತರೇಯಭಾಷ್ಯ

'ದೇವಾ ಮನುಷ್ಯತಾಂ ಪ್ರಾಪ್ತಾ ವಿಜ್ಞೇಯಾ ದೇವಮಾನುಷಾಃ ।
ಧ್ಯಾನಂ ಕುರ್ವಂತ ಇವ ತೇ ನೈವ ಸ್ಯುರ್ಬಹುಭಾಷಿಣಃ ।
ಬ್ರೂಯುರರ್ಥವತೀಂ ವಾಚಂ ನಾನರ್ಥಾಂ ಪ್ರಾಯಶೋ ಹಿ ತೇ' ಇತಿ ಪಾದ್ಮೇ ।

– ಛಾಂದೋಗ್ಯೋಪನಿಷದ್ಭಾಷ್ಯ

೨) ಗಂಗೆ ಅವತರಿಸಿ ಬಂದವಳಲ್ಲ. ವಸುಗಳ ಪ್ರಾರ್ಥನೆಯಂತೆ ಮೂಲರೂಪದಿಂದಲೇ ಬಂದು ಶಂತನುವಿನಿಂದ ಪುತ್ರನನ್ನು ಪಡೆದವಳು. ತನ್ನ ಕಾರ್ಯ ಪೂರೈಸುತ್ತಲೇ ತನ್ನ ಲೋಕಕ್ಕೆ ನಡೆದುಬಿಟ್ಟಳು. ಹಾಗೆ ನಡೆಯಲು ಅನುಕೂಲವಾಗಲೆಂದೇ ಆ ರೀತಿ ನಿಬಂಧನೆಗಳನ್ನು ಹಾಕಿದ್ದಳು.

೩) ಆ ನಿಬಂಧನೆಗಳಿಂದ ಮಕ್ಕಳಾಗಿ ಜನಿಸಿದ ವಸುಗಳನ್ನು ಕೊಲ್ಲಲು ಮಾತ್ರವಲ್ಲದೆ, ತಾನು ತನ್ನ ಲೋಕಕ್ಕೆ ತೆರಳಲು ಸಹ ಅವಕಾಶ ಲಭಿಸುವುದು ಎಂದು ಅವಳ ಭಾವವಾಗಿತ್ತು.

೪) ತತ್ತ್ವಾಭಿಮಾನಿದೇವತೆಗಳು ಸದಾ ಜನರ ದೇಹದಲ್ಲಿ ನೆಲೆಸಿದ್ದರೂ, ಅವರು ಜನಿಸಿ ಬಂದವರಲ್ಲ; ಜನರಿಗೆ ಕಾಣುವವರೂ ಅಲ್ಲ. ಆದ್ದರಿಂದ ಅವರಿಗೆ ಈ ನಿಯಮ ಅನ್ವಯಿಸದು.

೫) ''ಚಿರಕಾಲ ವಾಸಮಾಡುವುದಿಲ್ಲ'' ಎಂದದ್ದರಿಂದ ವರದಾನಾದಿಕಾರಣದಿಂದ ಮಾತ್ರ ಸ್ವಲ್ಪ ಕಾಲ ಕಾಣಿಸಿಕೊಳ್ಳುವುದು ಮೊದಲಾದ ಕಾರ್ಯಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ ಎಂದೂ ತಿಳಿಯಬೇಕು.

ಸುತಮಷ್ಟಮಮಾದಾಯ ಭರ್ತುರೇವಾಪ್ಯನುಜ್ಞಯಾ ।
ವಧೋದ್ಯೋಗಾನ್ನಿವೃತ್ತಾ[೧] ಸಾ ದದೌ ಪುತ್ರಂ ಬೃಹಸ್ಪತೌ ॥ ೪೫ ॥

ಅ: ಕೊಲ್ಲುವ ಕಾರ್ಯವನ್ನು ಕೈಬಿಟ್ಟು, ಪತಿಯ ಅಪ್ಪಣೆ ಪಡೆದು ಎಂಟನೆಯ ಮಗನನ್ನು ಕರೆದುಕೊಂಡು ಗಂಗೆ ಆ ಪುತ್ರನನ್ನು ಬೃಹಸ್ಪತ್ಯಾಚಾರ್ಯರ ಬಳಿ ಒಪ್ಪಿಸಿದಳು.

ವಿ: ಗಂಗೆ ಹಾಗೆ ತೆರಳುವಾಗ ಶಂತನುವಿನ ಅಪ್ಪಣೆ ಪಡೆದು ಎಂಟನೆಯ ಮಗನಾದ ದೇವವ್ರತನನ್ನು ಕರೆದೊಯ್ದು ವಿದ್ಯಾಭ್ಯಾಸಕ್ಕಾಗಿ ಬೃಹಸ್ಪತ್ಯಾಚಾರ್ಯರ ಬಳಿ ಒಪ್ಪಿಸಿದಳು ಎಂದರ್ಥ.

ದೇವವ್ರತನ ವೇದಾಧ್ಯಯನ

ದೇವವ್ರತೋಽಸಾವನುಶಾಸನಾಯ
ಮಾತ್ರಾ ದತ್ತೋ ದೇವಗುರೌ ಶತಾರ್ಧಮ್ ।
ಸಂವತ್ಸರಾಣಾಮಖಿಲಾಂಶ್ಚ[೨] ವೇದಾನ್
ಸಮಭ್ಯಸತ್ ತದ್ವಶಗಾಂತರಾತ್ಮಾ ॥ ೪೬ ॥

---

೧. ವಧೋದ್ಯೋಗಾನ್ನಿವೃತ್ತಾ ಸಾ = ಭಾಗೀರಥೀ ಭರ್ತುರನುಜ್ಞಯೈವಾಷ್ಟಮಂ ಸುತಮಾದಾಯ ಗತಾ ಸತೀ ತಂ ಪುತ್ರಂ ಬೃಹಸ್ಪತೌ ದದಾವಿತಿ ಯೋಗ್ಯಪದಾಧ್ಯಾಹಾರೇಣ ಯೋಜನಾ ॥ – (ವಾ.)

೨. ವೇದಾನ್ ಸಮ್ಯಗರ್ಥಪೂರ್ವಕಮಿತ್ಯರ್ಥಃ । – (ಜ.)

ಅ: ದೇವವ್ರತನು ತಾಯಿಯಾದ ಗಂಗೆಯಿಂದ ವಿದ್ಯಾಭ್ಯಾಸಕ್ಕಾಗಿ ಬೃಹಸ್ಪತ್ಯಾಚಾರ್ಯರ ಬಳಿ ಬಿಡಲ್ಪಟ್ಟವನಾಗಿ ಐವತ್ತು ವರ್ಷಗಳ ಕಾಲ ಗುರುವಿಗೆ ಮನಸ್ಸು ಒಪ್ಪಿಸಿದವನಾಗಿ, ಸಕಲವೇದಗಳನ್ನೂ ಅಧ್ಯಯನ ಮಾಡಿದ.

ವಿ: ದೇವವ್ರತ ವೇದವ್ರತನಾದದ್ದು ವಿಶೇಷ. ದೇವರನ್ನು ನಂಬಿ, ಅವನ ಪ್ರೀತಿಗೋಸ್ಕರ ವ್ರತಾದಿಗಳನ್ನು ಆಚರಿಸುವವರಿಗೆ ಮಾತ್ರವೇ ವೇದಾಧ್ಯಯನದ ಯೋಗ ಎಂದು ಇಲ್ಲಿಯ ತತ್ತ್ವ.

ಪರಶುರಾಮರ ಬಳಿ ತತ್ತ್ವಶ್ರವಣ ಹಾಗೂ ಅಸ್ತ್ರಾಭ್ಯಾಸ

ತತಶ್ಚ ಮಾತ್ರಾ ಜಗತಾಂ ಗರೀಯ-
ಸ್ಯನಂತಪಾರೇಽಖಿಲಸದ್ಗುಣಾರ್ಣವೇ ।
ರಾಮೇ ಭೃಗೂಣಾಮಧಿಪೇ ಪ್ರದತ್ತಃ
ಶುಶ್ರಾವ ತತ್ತ್ವಂ[೧] ಚ ಶತಾರ್ಧವರ್ಷಮ್ ॥ ೪೭ ॥

ಅ: ಅನಂತರ ತಾಯಿಯಾದ ಗಂಗೆ ಆ ದೇವವ್ರತನನ್ನು ಸಕಲಜಗತ್ತಿಗೂ ಮಿಗಿಲಾದವನೂ, ಅನಂತವೇದಪ್ರತಿಪಾದ್ಯನೂ, ಸಕಲಸದ್ಗುಣಗಳ ಸಮುದ್ರನೂ, ಭೃಗುಕುಲದ ಒಡೆಯನೂ ಆದ ಪರಶುರಾಮನ ಬಳಿ ಒಪ್ಪಿಸಿದಳು; ಅವರ ಬಳಿ ಆ ದೇವವ್ರತ ಐವತ್ತು ವರ್ಷಗಳ ಕಾಲ ತತ್ತ್ವವನ್ನು ಶ್ರವಣ ಮಾಡಿದ.

ವಿ: ೧) ಪರಶುರಾಮರೂಪವು ಭಗವಂತನ ದಶಾವತಾರಗಳಲ್ಲಿ ಒಂದು. ಕೆಲವರು ಭ್ರಮಿಸಿರುವಂತೆ ಸಾಮಾನ್ಯಬ್ರಾಹ್ಮಣನಲ್ಲ ಎಂಬುದನ್ನು 'ಜಗತಾಂ ಗರೀಯಸಿ', 'ಅನಂತಪಾರೇ' ಮೊದಲಾದ ವಿಶೇಷಣಗಳಿಂದ ಸೂಚಿಸಿರುವರು.

೨) ರಘುಕುಲದಲ್ಲಿ ಅವತರಿಸಿದ ಶ್ರೀರಾಮ ರಘುಕುಲಲಲಾಮನಾದರೆ, ಭೃಗುಕುಲದಲ್ಲಿ ಜನಿಸಿದ ಪರಶುರಾಮ ಭೃಗುಕುಲಲಲಾಮ. ಆತ ರಾಘವರಾಮನಾದರೆ, ಈತ ಭಾರ್ಗವರಾಮ.

೩) ಇಲ್ಲಿ 'ತತ್ತ್ವ' ಎಂದರೆ 'ಹರಿಸ್ವರೂಪಪ್ರತಿಪಾದಕಶಾಸ್ತ್ರ' ಎಂದರ್ಥ. ಸಾಕ್ಷಾತ್ ಶ್ರೀಹರಿಯಿಂದಲೇ ಹರಿತತ್ತ್ವ ಕೇಳಿದ್ದು ದೇವವ್ರತನ ಭಾಗ್ಯ.

---

೧. ತತ್ತ್ವಂ ಹರಿಸ್ವರೂಪಪ್ರತಿಪಾದಕಶಾಸ್ತ್ರಮ್ – (ಜ.)

ದೇವವ್ರತ-ಶಂತನು ಸಮಾಗಮ

ಸ ಪಂಚವಿಂಶತ್ ಪುನರಬ್ದಕಾನಾ-
ಮಸ್ತ್ರಾಣಿ ಚಾಭ್ಯಸ್ಯ ಪತೇರ್ಭೃಗೂಣಾಮ್ ।
ಮಾತ್ರಾ ಸಮಾನೀಯ ನಿಜೇ ತಟೇ ತು
ಸಂಸ್ಥಾಪಿತಃ ಪ್ರಾರ್ಪಯಿತುಂ ಸ್ವಪಿತ್ರೇ ॥ ೪೮ ॥

ಅ: ದೇವವ್ರತ ಮತ್ತೆ ಇಪ್ಪತ್ತೈದುವರ್ಷಗಳ ಕಾಲ ಭೃಗುಕುಲಸ್ವಾಮಿಯಾದ ಪರಶು-ರಾಮನಿಂದ ಅಸ್ತ್ರಗಳನ್ನು ಸಹ ಅಭ್ಯಾಸ ಮಾಡಿದ. ಬಳಿಕ ತಾಯಿಯಾದ ಗಂಗೆ ಅವನನ್ನು ಕರೆತಂದು ಅವನ ತಂದೆಗೆ ಒಪ್ಪಿಸಲೆಂದು ತನ್ನ ತೀರದಲ್ಲಿ ನಿಲ್ಲಿಸಿದಳು.

ವಿ: ಒಟ್ಟು ಎಪ್ಪತ್ತೈದು ವರ್ಷಗಳ ಕಾಲ ದೇವವ್ರತ ಪರಶುರಾಮರ ಬಳಿ ನೆಲೆಸಿದ್ದ. ಬಳಿಕ ಗಂಗೆ ಅವನನ್ನು ಶಂತನುವಿಗೆ ಒಪ್ಪಿಸಲೆಂದು ಭೂಲೋಕಕ್ಕೆ ಕರೆತಂದು, ಗಂಗಾತೀರದಲ್ಲಿ ನಿಲ್ಲಿಸಿದಳು.

ಸ ತತ್ರ ಬಧ್ವಾ ಶರಪಂಜರೇಣ
ಗಂಗಾಂ ವಿಜಹ್ರೇಽಸ್ಯ ಪಿತಾ ತದೈವ ।
ವ್ರಜನ್ ಮೃಗಾರ್ಥೀ ತೃಷಿತೋ ವಿಲೋಕಯನ್
ಗಂಗಾಮತೋಯಾಮಭವತ್ ಸುವಿಸ್ಮಿತಃ[೧] ॥ ೪೯ ॥

ಅ: ಅಲ್ಲಿ ದೇವವ್ರತ ಬಾಣಗಳ ಪಂಜರದಿಂದ ಗಂಗಾಪ್ರವಾಹವನ್ನು ತಡೆಹಿಡಿದು, ವಿಹರಿಸಿದ. ಅಲ್ಲಿಗೆ ಬೇಟೆಗೆಂದು ಬಂದಿದ್ದ ಅವನ ತಂದೆ ಶಂತನು ಬಾಯಾರಿ ಗಂಗೆ ಬತ್ತಿದ್ದನ್ನು ಕಂಡು ಬಹಳ ಆಚ್ಚರಿಗೊಂಡ.

ವಿ: ೧) ದೇವವ್ರತನು ಗಂಗೆಗೆ ಬಾಣಸೇತುವನ್ನು ನಿರ್ಮಿಸಿ ಆಟವಾಡುತ್ತಿದ್ದಾಗ, ಬೇಟೆಗೆಂದು ಅಲ್ಲಿಗೆ ಬಂದಿದ್ದ ಶಂತನು ಬಾಯಾರಿ ನೀರು ಕುಡಿಯಲೆಂದು ಗಂಗೆಯ ಬಳಿ ಬಂದವನು ಅದರಲ್ಲಿ ನೀರು ತುಂಬಾ ಕಡಿಮೆಯಾಗಿರುವುದನ್ನು ಕಂಡು ಆಶ್ಚರ್ಯಚಕಿತನಾದ ಎಂದರ್ಥ.

---

೧. ಅತೋಯಾಂ ಅಲ್ಪಜಲಾಂ ಅನೂದರೀ ಕನ್ಯೇತಿವತ್ । ತದುಕ್ತಂ ಆದಿಪರ್ವಣಿ–
'ಭಾಗೀರಥೀಮಲ್ಪಜಲಾಂ ಶಂತನುರ್ದದೃಷ್ಟವಾನ್ ನೃಪಃ' ಇತಿ । (ಆದಿ. ೧೦೦/೨೩) –(ಜ.)
ಅತೋಯಾಂ ಅಲ್ಪಜಲಾಂ ಅನೂದರೀ ಕನ್ಯೇತಿವತ್ । –(ವ.)

೨) ಹೀಗೆ ಶರಪಂಜರ ನಿರ್ಮಿಸಿದ ದೇವವ್ರತ ಮುಂದೆ ಶರಮಂಚದ ಮೇಲೆ ಮಲಗಿದ್ದು ಎಂತಹ ವಿಧಿವಿಲಾಸ ಎಂಬ ಧ್ವನಿಯನ್ನೂ ಇಲ್ಲಿ ಗುರುತಿಸಬಹುದು.

೩) ಗಂಗೆ ಮಳೆಗಾಲದಲ್ಲಿ ಮಳೆಯಿಂದಾಗಿಯೂ, ಬೇಸಿಗೆಯಲ್ಲಿ ಹಿಮಕರಗಿದ ನೀರಿನಿಂದಾಗಿಯೂ ಸದಾ ತುಂಬಿಹರಿಯುವ ನದಿ. ಅದು ಬತ್ತುವುದು ಅಸಾಧ್ಯ. ಆದರೆ ಅದು ಹಾಗೆ ಬತ್ತಿದ್ದನ್ನು ಕಂಡು ಶಂತನುವಿಗೆ ಪಿಪಾಸೆಯ ಬದಲು ಜಿಜ್ಞಾಸೆ ಹುಟ್ಟಿತು.

೪) ಇಲ್ಲಿ 'ಅತೋಯಾಂ' ಎಂಬುದಕ್ಕೆ 'ಪೂರ್ಣ ಬತ್ತಿದ' ಎಂದು ಅರ್ಥವಲ್ಲ; 'ಅಲ್ಪತೋಯಾಂ' ('ನೀರು ತುಂಬಾ ಕಡಿಮೆಯಾಗಿದ್ದ') ಎಂದು ಅರ್ಥ. [೧]ಮಹಾಭಾರತದಲ್ಲಿ– ರುವುದು ಹಾಗೆಯೇ. ಕೃಶೋದರಿಯನ್ನು 'ಅನೂದರೀ ಕನ್ಯಾ' ಎಂದು ಕರೆಯುವಂತೆ ಎಂದು ಜನಾರ್ದನೀಯದಲ್ಲಿದೆ.

ಸ ಮಾರ್ಗಯಾಮಾಸ ತತೋಽಸ್ಯ ಹೇತುಂ
ಜ್ಞಪ್ತ್ಯೈ ತದಾ ಸ್ವಂ ಚ ದದರ್ಶ ಸೂನುಮ್।
ಕ್ರೀಡಂತಮಸ್ತ್ರೇಣ ಬಭೂವ ಸೋಽಪಿ
[೧]ಕ್ಷಣಾದದೃಶ್ಯಃ ಪಿತೃದರ್ಶನಾದನು ॥ ೫೦ ॥

ಅ: ಶಂತನುವು ಬಳಿಕ ಅದಕ್ಕೆ ಕಾರಣವನ್ನು ಹುಡುಕತೊಡಗಿದ. ಆಗ ಅಸ್ತ್ರದೊಂದಿಗೆ ವಿಹರಿಸುತ್ತಿದ್ದ ತನ್ನ ಮಗನನ್ನು ಕಂಡ. ಅವನಾದರೊ ತಂದೆ ಕಾಣೂತ್ತಿದ್ದಂತೆಯೇ ಆ ಕ್ಷಣದಲ್ಲೇ ಅದೃಶ್ಯನಾಗಿಬಿಟ್ಟ.

ವಿ: ೧) ಶಂತನುವು ದೇವವ್ರತನನ್ನು ಕಂಡ ಬಗೆ ಮಹಾಭಾರತದಲ್ಲಿ ಹೀಗೆ ವರ್ಣಿತವಾಗಿದೆ:

ದಿವ್ಯಮಸ್ತ್ರಂ ವಿಕುರ್ವಾಣಂ ಯಥಾ ದೇವಂ ಪುರಂದರಮ್ ।
ಕೃತ್ಸ್ನಂ ಗಂಗಾಂ ಸಮಾವೃತ್ಯ ಶರೈಸ್ತೀಕ್ಷ್ಣೈರವಸ್ಥಿತಮ್ ॥
ತಾಂ ಶರೈರಾಚಿತಾಂ ದೃಷ್ಟ್ವಾ ನದೀಂ ಗಂಗಾಂ ತದಂತಿಕೇ ।
ಅಭವದ್ ವಿಸ್ಮಿತೋ ರಾಜಾ ದೃಷ್ಟ್ವಾ ಕರ್ಮಾತಿಮಾನುಷಮ್ ॥
– (ಆದಿ. ೧೦೦/೨೬,೨೭)

---

೧. ಕ್ಷಣಾದದೃಶ್ಯ ಇತ್ಯತ್ರ ಪರಮೋಪಕರ್ತ್ರ್ಯಾ ಮಾತ್ರೈವಾಹಂ ಪಿತ್ರೇ ದೇಯ ಇತಿ ಮನಸಾಽದೃಶ್ಯೋಽಭೂದಿತಿ ಭಾವಃ ॥ – (ವಾ.)

ಸೋಽಪಿ ಪಿತೃದರ್ಶನಾತ್ ಕ್ಷಣಾತ್ । – (ಜ.)

೨) ತಾಯಿಯೇ ತನ್ನನ್ನು ತಂದೆಗೆ ಒಪ್ಪಿಸಲಿ ಎಂಬ ಕಾರಣದಿಂದ ದೇವವ್ರತ ಹಾಗೆ ಅದೃಶ್ಯನಾದ ಎಂದು ತಿಳಿಯಬೇಕು.

ಮೀಮಾಂಸಮಾನಂ ತಮವಾಪ ಗಂಗಾ
ಸುತಂ ತಮಾದಾಯ ಪತಿಂ ಜಗಾದ ।
ಅಯಂ ಸುತಸ್ತೇ ಪರಮಾಸ್ತ್ರವೇತ್ತಾ
ಸಮರ್ಪಿತೋ ವೀರ್ಯಬಲೋಪಪನ್ನಃ ॥ ೫೧ ॥

ಅ: ಪತಿಯಾದ ಶಂತನುವು ಹಾಗೆ ವಿಚಾರದಲ್ಲಿ ತೊಡಗಿರಲು ಗಂಗೆ ಮಗನನ್ನು ಕರೆತಂದು ಅವನಿಗೆ ಒಪ್ಪಿಸುತ್ತಾ ನುಡಿದಳು : ''ಇವನು ನಿನ್ನ ಮಗ; ಶ್ರೇಷ್ಠ ಅಸ್ತ್ರಗಳನ್ನು ಬಲ್ಲವನು; ವೀರ್ಯ, ಬಲಗಳಿಂದ ಕೂಡಿದವನು. ಇವನನ್ನು ನಿನಗೆ ಒಪ್ಪಿಸುವೆ''.

ವಿ: ಗಂಗೆ ನೇರವಾಗಿ ಮಗನನ್ನು ಶಂತನುವಿಗೆ ಒಪ್ಪಿಸದೆ, ಅವನಿಂದ ಶರಪಂಜರವನ್ನು ನಿರ್ಮಿಸಿ, ಅನಂತರ ಅವನನ್ನು ಒಪ್ಪಿಸಿದ್ದು ಅವನು ಎಷ್ಟು ಶ್ರೇಷ್ಠ ಅಸ್ತ್ರಜ್ಞನಾಗಿ ರೂಪಿಸಲ್ಪಟ್ಟಿರು–ವನು ಎಂದು ತಿಳಿಸಲೆಂದೇ. 'ಪರಮಾಸ್ತ್ರವೇತ್ತಾ' ಎಂಬ ಇಲ್ಲಿಯ ಮಾತು ಅದಕ್ಕೆ ಸೂಚಕ. ತನಗೆ ಮಗ ದೊರಕಿದ ಎಂದಷ್ಟೆ ಸಂತೋಷಿಸುವುದಕ್ಕಿಂತ ಎಂತಹ ಶ್ರೇಷ್ಠ ಮಗ ದೊರಕಿದ ಎಂಬ ಸಂತೋಷಾತಿಶಯವನ್ನು ಶಂತನು ಹೊಂದಲಿ ಎಂಬುದು ಅವಳ ಉದ್ದೇಶವಾಗಿತ್ತು ಎಂದು ತಿಳಿಯಬಹುದು.

ಅಸ್ಯಾಗ್ರಜಾಃ[೧] ಸ್ಥಾ ಸ್ಥಿತಿಮೇವ ಯಾತಾ
ಹರೇಃ ಪದಾಂಭೋಜಸುಪಾವಿತೇ ಜಲೇ ।
ತನೂರ್ಮದೀಯೇ ಪ್ರಣಿಧಾಯ ತಸ್ಮಾತ್
ತಾನ್ ಮಾ ಶುಚೋಽನೇನ ಚ ಮೋದಮಾನಃ ॥ ೫೨ ॥

ಅ: ''ಇವನ ಅಣ್ಣಂದಿರು ಶ್ರೀಹರಿಯ ಚರಣಕಮಲಗಳಿಂದ ಪವಿತ್ರವಾದ ನನ್ನ ಜಲದಲ್ಲಿ ದೇಹಗಳನ್ನು ಬಿಟ್ಟು, ತಮ್ಮ ಮೂಲರೂಪವನ್ನು ಸೇರಿರುವರು. ಅವರ ಬಗ್ಗೆ ನೀನು ಶೋಕಿಸದಿರು; ಇವನೊಂದಿಗೆ ಆನಂದದಿಂದಿರು''.

ವಿ: ಎಂಟನೆಯ ಮಗನ ಇಂತಹ ವೈಭವವನ್ನು ಕಾಣುತ್ತಲೆ, ಹಿಂದಿನ ಏಳು ಮಂದಿ ಪುತ್ರರ ನೆನಪು ಮರುಕಳಿಸುವುದು ಸಹಜ. ಅದರಿಂದ ಒದಗುವ ಶೋಕವನ್ನು ಪರಿಹರಿಸಲೆಂದು ಅವರೆಲ್ಲ

---

೧. ಅಸ್ಯ ಭೀಷ್ಮಸ್ಯಾಗ್ರಜಾಃ ಅಗ್ರೇ ಮಯಿ ಜಾತಾಃ ಸಪ್ತಕುಮಾರಾ ಇತ್ಯರ್ಥಃ ॥ – (ವಾ.)

ಪಾವನವಾದ ಗಂಗಾಜಲದಲ್ಲಿ ದೇಹ ತೊರೆದು, ತಮ್ಮ ಲೋಕ ಸೇರಿರುವರು ಎಂಬ ವಿವರವನ್ನು ನೀಡಿ, ಸಾಂತ್ವನಪಡಿಸಿದಳು ಎಂದು ಭಾವ.

ಇತಿ ಪ್ರದಾಯಾಮುಮದೃಶ್ಯತಾಮಗಾ-
ದ್ಗಂಗಾ ತಮಾದಾಯ ಯಯೌ ಸ್ವಕಂ ಗೃಹಮ್ ।
ರಾಜಾऽಭಿಷಿಚ್ಯಾಥ ಚ ಯೌವರಾಜ್ಯೇ
ಮುಮೋದ ತತ್ಸದ್ಗುಣತರ್ಪಿತೋ[೧] ಭೃಶಮ್ ॥ ೫೩ ॥

ಅ: ಹೀಗೆ ಮಗನನ್ನು ಒಪ್ಪಿಸಿ, ಗಂಗೆ ಅದೃಶ್ಯಳಾದಳು. ಅವನನ್ನು ಕರೆದುಕೊಂಡು ಶಂತನುರಾಜ ಮನೆಗೆ ತೆರಳಿದ. ಅನಂತರ ಅವನನ್ನು [೨]ಯೌವರಾಜ್ಯದಲ್ಲಿ ಅಭಿಷೇಕಿಸಿ, ಅವನ ಸದ್ಗುಣಗಳಿಂದ ತೃಪ್ತನಾಗಿ ಬಹಳವಾಗಿ ಆನಂದಿಸಿದನು.

ವಿ: ೧) ದೇವವ್ರತನಿಗೆ ಆ ವೇಳೆಗೆ ನೂರಿಪ್ಪತ್ತೈದು ವರ್ಷ ಕಳೆದಿದ್ದವು. ಆದರೂ ಇಲ್ಲಿ 'ಕುಮಾರ' ಎಂದೇ ವ್ಯವಹರಿಸಲು, ಆತ ಸ್ವರ್ಗದಲ್ಲೂ, ಪರಶುರಾಮರ ಬಳಿಯಲ್ಲೂ ವಾಸಿಸಿದ್ದರಿಂದ ದೇಹದ ಮೇಲೆ ವಯಸ್ಸಿನ ಪರಿಣಾಮವಾಗದೆ, ತರುಣನಾಗಿಯೇ ಇದ್ದದ್ದು ಕಾರಣ ಎಂದು ತಿಳಿಯಬೇಕು. ವಿಜ್ಞಾನವೂ ಇದನ್ನು ಒಪ್ಪಿದೆ ಎಂಬುದನ್ನು ಗಮನಿಸಬೇಕು.

೨) ಬೇರೆ ಲೋಕಗಳ, ಅದರಲ್ಲೂ ಉತ್ತಮಲೋಕಗಳ ಕಾಲಮಾನ ಬೇರೆ ಬಗೆಯದು ಎಂದು ಶಾಸ್ತ್ರಗಳು ಸಾರಿವೆ.

ಮುಂದುವರೆದ ದೇವವ್ರತನ ಅಧ್ಯಯನ

ಪುನಃ ಸ ಪಿತ್ರಾऽನುಮತೋ ಬೃಹಸ್ಪತೇ-
ರವಾಪ ವೇದಾನ್ ಪುರುಷಾಯುಷೋ[೩]ऽರ್ಧತಃ ।
ರಾಮಾತ್ ತಥಾऽಸ್ತ್ರಾಣಿ ಪುನಸ್ತ್ವವಾಪ
ತಾವದ್ಬಿರಬ್ದೈಸ್ತ್ರಿಶತೈಶ್ಚ ತತ್ತ್ವಮ್ ॥ ೫೪ ॥

---

೧. ತಸ್ಯ ಪುತ್ರಸ್ಯ ಸದ್ಗುಣೈಃ ಜ್ಞಾನಭಕ್ತ್ಯಾದಿಗುಣೈಸ್ತರ್ಪಿತಃ ತೃಪ್ತಿಂ ಪ್ರಾಪಿತಃ । – (ಜ.)

೨. ಪೌರವೇಷು ತತಃ ಪುತ್ರಂ ರಾಜ್ಯಾರ್ಥಮಭಯಪ್ರದಮ್ ।
ಗುಣವಂತಂ ಮಹಾತ್ಮಾನಂ ಯೌವರಾಜ್ಯೇऽಭ್ಯಷೇಚಯತ್ ॥ – ಭಾರತ (ಆದಿ. ೧೦೦/೪೩)

೩. ಪುರುಷಾಯುಷಸ್ಯಾರ್ಧತಃ ಪಂಚದಶಾಬ್ದೈರಿತ್ಯರ್ಥಃ ।
'ಶತಾಯುರ್ವೈ ಪುರುಷಃ ಶತೇಂದ್ರಿಯಃ' ಇತಿ ಶ್ರುತಿಃ । – (ಜ., ವ.)

ಅ: ತಂದೆಯ ಅನುಮತಿಯನ್ನು ಪಡೆದು, ದೇವವ್ರತ ಮತ್ತೆ ಬೃಹಸ್ಪತಿಯಿಂದ ಮನುಷ್ಯನ ಆಯುಷ್ಯದ ಅರ್ಧದಷ್ಟು ಕಾಲದಲ್ಲಿ ವೇದಗಳನ್ನು ಅಧ್ಯಯನ ಮಾಡಿದನು. ಹಾಗೆಯೇ ಅಷ್ಟೇ ವರ್ಷಗಳ ಕಾಲದಲ್ಲಿ ಪರಶುರಾಮನಿಂದ ಪುನಃ ಅಸ್ತ್ರಗಳನ್ನು, ಮತ್ತು ಮನುಷ್ಯಮಾನದ ಮುನ್ನೂರುವರ್ಷಗಳ ಕಾಲ ತತ್ತ್ವವನ್ನೂ ತಿಳಿದ.

ವಿ: ೧) ದೇವವ್ರತನ ಒಟ್ಟು ಅಧ್ಯಯನ ಬೃಹಸ್ಪತ್ಯಾಚಾರ್ಯರ ಬಳಿ ಹಿಂದಿನ ಐವತ್ತು ಸೇರಿ ಒಂದುನೂರು ವರ್ಷಗಳ ಕಾಲ. ಪರಶುರಾಮದೇವರ ಬಳಿ ಹಿಂದಿನ ಎಪ್ಪತ್ತೈದು ವರ್ಷಗಳು ಸೇರಿ ನಾಲ್ಕುನೂರ ಇಪ್ಪತ್ತೈದು ವರ್ಷಗಳ ಕಾಲ. ಅಂತೂ ಅವನ ಅಧ್ಯಯನದ ಒಟ್ಟು ಅವಧಿ ಐದುನೂರ ಇಪ್ಪತ್ತೈದು ವರ್ಷಗಳಷ್ಟು ದೀರ್ಘಕಾಲ.

೨) ಬೃಹಸ್ಪತ್ಯಾಚಾರ್ಯರ ಬಳಿ ತಿಳಿದದ್ದಕ್ಕಿಂತ ಪರಶುರಾಮರ ಬಳಿ ತಿಳಿದದ್ದು ಹೆಚ್ಚು; ನೆಲೆಸಿದ್ದೂ ಹೆಚ್ಚು ಕಾಲ. ಬೃಹಸ್ಪತಿಯ ಬಳಿ ವೇದ ಓದಿದರೆ, ಪರಶುರಾಮರ ಬಳಿ ವೇದಾರ್ಥವನ್ನು ತಿಳಿದರು. ಇವೆಲ್ಲ ಪರಶುರಾಮರು ಬೃಹಸ್ಪತಿಗಿಂತ ತುಂಬ ಮಿಗಿಲಾದ ಸಾಕ್ಷಾದ್ಭಗವಂತ ಎಂಬುದಕ್ಕೆ ಗಮಕ.

೩) ಪರಶುರಾಮರ ಬಳಿಯೂ ಅಸ್ತ್ರಕ್ಕಿಂತ ಮಿಗಿಲಾಗಿ ಕಲಿತದ್ದು ತತ್ತ್ವವನ್ನು. ಇದು ತತ್ತ್ವಶಾಸ್ತ್ರವು ಅಸ್ತ್ರವಿದ್ಯೆ ಮೊದಲಾದ ಇತರ ಶಾಸ್ತ್ರಗಳಿಗಿಂತಲೂ ಮಿಗಿಲು ಎಂಬುದಕ್ಕೆ ಗಮಕ – **'ಅಧ್ಯಾತ್ಮವಿದ್ಯಾ ವಿದ್ಯಾನಾಮ್'**.

೪) ದೇವವ್ರತ ಪರಶುರಾಮರ ಬಳಿ ಅಸ್ತ್ರವಿದ್ಯೆ ಕಲಿತ ವಿಕಮಾತ್ರ ಕ್ಷತ್ರಿಯ. ಅವರ ಮೂಲಕ ಕ್ಷತ್ರಿಯರಿಗೆ ಅಸ್ತ್ರವಿದ್ಯೆ ತೆರೆದುಕೊಳ್ಳುವಂತಾದದ್ದು ಒಂದು ವಿಶೇಷಸಂಗತಿ.

ಸ ಸರ್ವವಿತ್ತ್ವಂ ಸಮವಾಪ್ಯ ರಾಮಾತ್
ಸಮಸ್ತವಿದ್ಯಾಧಿಪತೇರ್ಗುಣಾರ್ಣವಾತ್[೧] **।**
ಪಿತುಃ ಸಮೀಪಂ ಸಮವಾಪ್ಯ ತಂ ಚ
ಶುಶ್ರೂಷಮಾಣಃ ಪ್ರಮುಮೋದ ವೀರಃ ॥ ೫೫ ॥

ಅ: ವೀರನಾದ ದೇವವ್ರತ ಸಮಸ್ತವಿದ್ಯೆಗಳಿಗೆ ಅಧಿಪತಿಯಾದ, ಗುಣಸಾಗರನಾದ ಪರಶುರಾಮನಿಂದ ಸರ್ವಜ್ಞತ್ವವನ್ನು ಪಡೆದ; ತಂದೆಯ ಬಳಿಗೆ ತೆರಳಿ, ಅವನನ್ನು ಸೇವಿಸುತ್ತಾ ಆನಂದಿಸಿದ.

---

೧. ಋಷಿಃ ಪರೈರನಾದೃಶ್ಯೋ ಜಾಮದಗ್ನ್ಯಃ ಪ್ರತಾಪವಾನ್ ।
ಮಹೇಷ್ವಾಸಮಿಮಂ ರಾಜನ್ ರಾಜಧರ್ಮಾರ್ಥಕೋವಿದಮ್ ॥ – ಭಾರತ (ಆದಿ. ೧೦೦/೩೯)

ವಿ: ಇಲ್ಲಿ ದೇವವ್ರತನು ಸರ್ವಜ್ಞತ್ವವನ್ನು ಪಡೆದನೆಂದರೆ ತಾನು ತಿಳಿಯಬೇಕಾದ ಎಲ್ಲವನ್ನೂ ತಿಳಿದ ಎಂದರ್ಥ. ತನ್ನ ಯೋಗ್ಯತೆಗೆ ತಕ್ಕಂತಹ ಸರ್ವಜ್ಞತ್ವವನ್ನು ಹೊಂದಿದ ಎಂದೇ ಭಾವ. ಪರಿಪೂರ್ಣಸರ್ವಜ್ಞತ್ವ ಭಗವಂತನದು ಮಾತ್ರ; ಅನಂತರ ಮಹಾಲಕ್ಷ್ಮಿಯದು; ಋಜುಗಳೆಲ್ಲ ಪೂರ್ಣಪ್ರಜ್ಞರು; ಇತರದೇವತೆಗಳ ಸರ್ವಜ್ಞತ್ವವು ಇಲ್ಲಿ ತಿಳಿಸಿದಂತೆ ಯಥೋಚಿತಸರ್ವಜ್ಞತ್ವ ಮಾತ್ರ.

ಕೃಪ-ಕೃಪಿಯರ ಜನನ

ಯದೈವ ಗಂಗಾ ಸುಷುವೇ೭ಷ್ಟಮಂ ಸುತಂ
ತದೈವ ಯಾತೋ ಮೃಗಯಾಂ ಸ ಶಂತನುಃ ।
ಶರದ್ವತೋ ಜಾತಮಪಶ್ಯದುತ್ತಮಂ
ವನೇ ವಿಸೃಷ್ಟಂ ಮಿಥುನಂ ತ್ವಯೋನಿಜಮ್ ॥ ೫೬ ॥

ಅ: ಗಂಗೆಯು ಎಂಟನೆಯ ಮಗುವನ್ನು ಹೆತ್ತಾಗಲೆ, ಶಂತನು ಬೇಟೆಗೆಂದು ತೆರಳಿದ್ದಾಗ ಶರದ್ವಾನ್ ಎಂಬ ಮುನಿಯಿಂದ ಹುಟ್ಟಿ, ಕಾಡಿನಲ್ಲೇ ತೊರೆಯಲ್ಪಟ್ಟಿದ್ದ ಅಯೋನಿಜವಾದ, ಉತ್ತಮವಾದ ಹೆಣ್ಣುಗಂಡು ಅವಳಿಶಿಶುಗಳನ್ನು ಕಂಡಿದ್ದ.

ವಿ: ೧) ವಿಷ್ಣುಪುರಾಣದಲ್ಲಿ ಸತ್ಯಧೃತಿ ಎಂಬ ಗೌತಮಪುತ್ರ ಶತಾನಂದಮುನಿಯ ಮಗನಿಗೆ ಅವಳಿಮಕ್ಕಳಾಗಿ ಜನಿಸಿದವರು ಕೃಪ ಮತ್ತು ಕೃಪಿ. ಇದರಿಂದ ಸತ್ಯಧೃತಿ ಎಂಬುದು ಶರದ್ವಾನ್ ಮುನಿಯ ನಾಮಾಂತರ ಎಂದಾಗುವುದು ([೧]ವಿಷ್ಣುಪುರಾಣ ೪/೧೯/೬೨–೬೪).

೨) ಮಹಾಭಾರತದಲ್ಲಿ ಬಂದಿರುವಂತೆ ಶರದ್ವಾನ್ ಎಂಬುದು ಗೌತಮಪುತ್ರ ಗೌತಮಮುನಿಯ ನಾಮಾಂತರ. ಅವರಿಗೆ ಬಾಲ್ಯದಿಂದಲೂ ವೇದವಿದ್ಯೆಗಿಂತ ಹೆಚ್ಚಾದ ಆಸಕ್ತಿ ಧನುರ್ವಿದ್ಯೆಯಲ್ಲೇ ಇದ್ದಿತಂತೆ. ಅವರಿಗೆ ಜಾನಪದೀ ಎಂಬ ದೇವಕನ್ಯೆಯ ದರ್ಶನದಿಂದ ಜನಿಸಿದ ಮಿಥುನ ಕೃಪ ಮತ್ತು ಕೃಪಿ. ವಿಷ್ಣುಪುರಾಣದಲ್ಲಿ ಬಂದಿರುವುದು ಶ್ರೀಮಧ್ವಾಚಾರ್ಯರು ತಿಳಿಸಿರುವಂತೆ ಅಪ್ಸರೆಯಾದ ಉರ್ವಶಿಯ ದರ್ಶನದಿಂದ ಕೃಪ, ಕೃಪಿಯರ ಜನನ. ಜಾನಪದೀ ಎಂಬುದು ಉರ್ವಶಿಯ ನಾಮಾಂತರ ಎಂದು ತಿಳಿಯಬಹುದು :

ತಸ್ಯಾಥ ಮಿಥುನಂ ಜಜ್ಞೇ ಗೌತಮಸ್ಯ ಶರದ್ವತಃ ।
ಮೃಗಯಾಂ ಚರತೋ ರಾಜ್ಞಃ ಶಂತನೋಸ್ತು ಯದೃಚ್ಛಯಾ ॥ – ಆದಿ.(೧೨೯/೧೪)

---

೧. ಸತ್ಯಧೃತೇಃ ವರಾಪ್ಸರಮುರ್ವಶೀಂ ದೃಷ್ಟ್ವಾ ರೇತಃಸ್ಖನ್ನಂ ಶರಸ್ತಂಬೇ ಪಪಾತ । ತಚ್ಚ ದ್ವಿಧಾಗತಮಪತ್ಯ-ದ್ವಯಂ ಕುಮಾರಃ ಕನ್ಯಾ ಚಾಭವತ್ । ತೌ ಚ ಮೃಗಯಾಮುಪಯಾತಾಹ ಶಾಂತನುರ್ದೃಷ್ಟ್ವಾ ಕೃಪಯಾ ಜಗ್ರಾಹ ॥ ತತಃ ಕುಮಾರಃ ಕೃಪಃ ಕನ್ಯಾ ಚಾಶ್ವತ್ಥಾಮ್ನೋ ಜನನೀ ಕೃಪೀ ದ್ರೋಣಾಚಾರ್ಯಸ್ಯ ಪತ್ನ್ಯಭವತ್ ॥ –ವಿಷ್ಣುಪುರಾಣ

೩) ಅವರಿಬ್ಬರೂ ಜನಿಸಿದ್ದು ಊರ್ವಶಿಯ ದರ್ಶನಮಾತ್ರದಿಂದಲೇ ಹೊರತು, ಊರ್ವಶಿಯ ಗರ್ಭದಿಂದಲ್ಲ; ಆದ್ದರಿಂದ ಅವರು ಅಯೋನಿಜರು.

೪) ಜ್ಞಾನಿಯಾದ ಶರದ್ವಾನ್ ಮುನಿಯು ಅವುಗಳನ್ನು ಶಂತನು ಪಾಲಿಸುವನೆಂದು ತಿಳಿದೇ ಹಾಗೆ ಅವುಗಳನ್ನು ತೊರೆದುಹೋದರು; ನಿಷ್ಕರುಣೆಯಿಂದಲ್ಲ ಎಂಬ ಅರ್ಥವಿಶೇಷವೂ 'ತು'ಶಬ್ದದಿಂದ ಸೂಚಿತವಾಗಿದೆ[೧].

ಶರದ್ವಾಂಸ್ತು ತಪಃ ಕುರ್ವನ್ ದದರ್ಶ ಸಹಸೋರ್ವಶೀಮ್ ।
ಚಸ್ಕಂದ ರೇತಸಸ್ತ್ಯಾಥ ಶರಸ್ತಂಬೇ ತತೋಽಭವತ್ ॥ ೫೭ ॥

ಅ: ಶರದ್ವಾನ್ ಮುನಿಯು ತಪಸ್ಸು ಮಾಡುತ್ತಿದ್ದಾಗ ಅಕಸ್ಮಾತ್ ಊರ್ವಶಿಯನ್ನು ಕಂಡ. ಆಗ ಅವರ ರೇತಸ್ಸು ಸ್ಖಲನವಾಯಿತು ಹಾಗೂ ಶರಸ್ತಂಬ(ಜೊಂಡಿನ ಪೊದೆ)ದಲ್ಲಿ [೨]ಬಿದ್ದಿತು.

ಕೃಪಾಚಾರ್ಯರ ಸಾಧನೆ

ವಿಷ್ಕಂಭೋ ನಾಮ [೩]ರುದ್ರಾಣಾಂ ಭೂಭಾರಹರಣೇಽಂಗತಾಮ್ ।
ಹರೇಃ ಪ್ರಾಪ್ತುಂ ತಥಾ [೪]ತಾರಾ ಭಾರ್ಯಾ ಯಾ ಹಿ ಬೃಹಸ್ಪತೇಃ ॥ ೫೮ ॥

ಅ: ರುದ್ರರಲ್ಲಿ ವಿಷ್ಕಂಭ ಎಂಬವನು ಶ್ರೀಹರಿಯ ಭೂಭಾರಹರಣಕಾರ್ಯದಲ್ಲಿ ಸೇವೆ ಸಲ್ಲಿಸಲೆಂದು ಹಾಗೆ ಜನಿಸಿದ. ಹಾಗೆಯೇ ಬೃಹಸ್ಪತಿಪತ್ನಿಯಾದ ತಾರೆಯೂ ಜನಿಸಿದಳು.

ವಿ: ಏಕಾದಶರುದ್ರರಲ್ಲಿ ವಿಷ್ಕಂಭ ಒಬ್ಬ ರುದ್ರ; ಗಂಡು ಶಿಶುವಾಗಿ ಜನಿಸಿದ್ದು ಅವರೇ. ಹೆಣ್ಣುಶಿಶುವಾಗಿ ಜನಿಸಿದ್ದು ಬೃಹಸ್ಪತಿಪತ್ನಿಯಾದ ತಾರೆ.

ತಾವುಭೌ ಶಂತನುರ್ದೃಷ್ಟ್ವಾ ಕೃಪಾವಿಷ್ಟಃ ಸ್ವಕಂ ಗೃಹಮ್ ।
ನಿನಾಯ ನಾಮ ಚಕ್ರೇಽಥ ಕೃಪಾಯಾ ವಿಷಯೌ ಯತಃ ॥ ೫೯ ॥

---

೧. ತು = ಶಂತನುಃ ಪರಿಪಾಲಯಿಷ್ಯತೀತಿ ಕಾರ್ಯವಿಶೇಷೇಣ ವನೇ ವಿಸೃಷ್ಟಂ ಮಿಥುನಮಿತಿ ಸಂಬಂಧಃ । ಅತೋ ಮುನೇರ್ನ ನೈರ್ಘೃಣ್ಯಮಿತಿ ಭಾವಃ । ತು= ವಕ್ಷ್ಯಮಾಣೋರ್ವಶೀದರ್ಶನಮಾತ್ರೇಣ ರೇತಃ ಪಾತಾಖ್ಯಕಾರಣವಿಶೇಷಾತ್ ಅಯೋನಿಜಂ ಮಾತೃಯೋನಾವಜಾತಮಿತಿ ಯಾ ॥ – (ವಾ.)

೨. ಸ್ರುತಂ ಶರಾಣಾಂ ತೃಣವಿಶೇಷಾಣಾಸ್ತಂಬೇ ಗುಲ್ಮೇ । – (ಜ.)

೩. ಯಸ್ತು ರಾಜನ್ ಕೃಪೋ ನಾಮ ಬ್ರಹ್ಮರ್ಷಿರಭವತ್ ಕ್ಷಿತೌ ।
ರುದ್ರಾಣಾಂ ತು ಗಣಾದ್ವಿದ್ಧಿ ಸಂಭೂತಮತಿಪೌರುಷಮ್ ॥ – ಭಾರತ (ಆದಿ. ೬೭/೭೭)

ಕೃಪಃ ಕೃಪೀತಿ[೧] ಸ ಕೃಪಸ್ತಪೋ ವಿಷ್ಣೋಶ್ಚಚಾರ ಹ ।
ತಸ್ಯ ಪ್ರೀತಸ್ತದಾ ವಿಷ್ಣುಃ ಸರ್ವಲೋಕೇಶ್ವರೇಶ್ವರಃ ॥ ೬೦ ॥

ಪ್ರಾದಾದೇಷ್ಯತ್ಸಪ್ತರ್ಷಿತ್ವಮಾಯುಃ[೨] ಕಲ್ಪಾಂತಮೇವ[೩] ಚ ।
ಸ ಶಂತನುಗೃಹೇ ತಿಷ್ಠನ್ ದೇವವ್ರತಸಖೋಽಭವತ್ ॥ ೬೧ ॥

ಅ: ಅವರಿಬ್ಬರನ್ನೂ ಶಂತನು ನೋಡಿ, ಕೃಪೆಯಿಂದ ಕೂಡಿದವನಾಗಿ ತನ್ನ ಮನೆಗೆ ಒಯ್ದ. ತನ್ನ ಕೃಪೆಗೆ ಪಾತ್ರರಾದ್ದರಿಂದ ಅವರಿಗೆ ಕೃಪ ಮತ್ತು ಕೃಪಿ ಎಂದು ಹೆಸರಿಟ್ಟ. ಕೃಪ ವಿಷ್ಣುವನ್ನು ಕುರಿತು ತಪಸ್ಸನ್ನು ಆಚರಿಸಿದ. ಆಗ ಸಕಲಲೋಕಗಳ ಒಡೆಯರಿಗೂ ಒಡೆಯನಾದ ವಿಷ್ಣು ಅವನಿಗೆ ಪ್ರಸನ್ನನಾಗಿ ಮುಂದಿನ ಮನ್ವಂತರದಲ್ಲಿ ಸಪ್ತರ್ಷಿಗಳಲ್ಲಿ ಒಬ್ಬನನ್ನಾಗಿಸಿದ. ಹಾಗೆಯೇ ಮನುಕಲ್ಪ ಮುಗಿಯುವವರೆಗೂ ಆಯುಷ್ಯ ನೀಡಿದ. ಕೃಪನು ಶಂತನುವಿನ ಮನೆಯಲ್ಲೇ ಇದ್ದು ದೇವವ್ರತನಿಗೆ ಗೆಳೆಯನೆನ್ನಿಸಿದ.

ವಿ: ೧) ಶಂತನು ಆ ಅವಳಿ ಮಕ್ಕಳನ್ನು ಕೃಪೆಯಿಂದ ಕರೆತಂದು ಪೋಷಿಸಿದ್ದರಿಂದ ಅವುಗಳಿಗೆ ಕೃಪ[೪] ಹಾಗೂ ಕೃಪಿ ಎಂದೇ ಹೆಸರಿಟ್ಟ. ಕೃಪ ವಿಷ್ಣುವನ್ನು ಕುರಿತು ತಪಸ್ಸನ್ನಾಚರಿಸಿ, ಮುಂದಿನ ಮನ್ವಂತರದಲ್ಲಿ ಸಪ್ತರ್ಷಿಗಳಲ್ಲಿ ಒಬ್ಬನೆನ್ನಿಸಿದ; ಈ ಕಲ್ಪದ ಸಪ್ತಚಿರಂಜೀವಿಗಳಲ್ಲೂ ಒಬ್ಬನಾದ.

---

೧. ''ಅರ್ಶಾದಿಭ್ಯೋ ಅಚ್'' ಇತಿ ಸೂತ್ರಾತ್ ಮತುಬರ್ಥೇಽಚೂಪ್ರತ್ಯಯೇ ಕೃತೇ ಅರ್ಶವಾರ್ನಶ ಇತಿವತ್ ರಾಜ್ಞಃ ಕೃಪಾವಾನ್ ಕೃಪ ಇತ್ಯರ್ಥಃ ॥ –(ವಾ.)

ಗೌತಮೋಽಪಿ ತತೋಽಭ್ಯೇತ್ಯ ಧನುರ್ವೇದಪರೋಽಭವತ್ ।
ಕೃಪಯಾ ಯನ್ಮಯಾ ಬಾಲಾವಿಮೌ ಸಂವರ್ಧಿತಾವಿತಿ ।
ತಸ್ಮಾತ್ ತಯೋರ್ನಾಮ ಚಕ್ರೇ ತದೇವ ಸ ಮಹೀಪತಿಃ ॥ – ಭಾರತ(ಆದಿ. ೧೨೯/೧೯,೨೦)

೨. ಸಪ್ತಸು ಋಷಿಃ ಸಪ್ತರ್ಷಿಃ ತಸ್ಯ ಭಾವಃ ಸಪ್ತರ್ಷಿತ್ವಮ್ । ಸಪ್ತರ್ಷೀಣಾಂ ಮಧ್ಯೇ ಏಕರ್ಷಿತ್ವಮಿತ್ಯರ್ಥಃ ॥ –(ವಾ.)

ಏಷ್ಯತ್ಸಪ್ತರ್ಷಿತ್ವಂ ಭಾವಿಸಪ್ತರ್ಷಿಷು ಮಧ್ಯೇ ಏಕಋಷಿತ್ವಂ ಪ್ರಾದಾತ್ । – (ಜ.)

೩. ಕಲ್ಪಾಂತಮೇವ ವೈವಸ್ವತಮನುಕಲ್ಪಪರ್ಯಂತಂ ಆಯುಶ್ಚ ಪ್ರಾದಾದಿತ್ಯರ್ಥಃ । ಅನ್ಯಥಾ ಭಾವಿಸಪ್ತಋಷಿತ್ವಂ ನ ಸ್ಯಾತ್ । – (ಜ.)

೪. ಹೃದಯಸ್ಯ ದ್ರವೀಭಾವಸ್ತ್ವನುಕಂಪೇತಿ ಕಥ್ಯತೇ ।
ಉಪಕಾರಂ ಕರ್ತುಮಿಚ್ಛಾಂ ಕೃಪೇತ್ಯಾಹುರ್ಮನೀಷಿಣಃ ॥ ಇತಿ ಶಬ್ದನಿರ್ಣಯೇ । – ಭಾ. ತಾ.(೪/೭/೭೮)

ಕೃಪಯಾ ಯನ್ಮಯಾ ಬಾಲಾವಿಮೌ ಸಂವರ್ಧಿತಾವಿತಿ ।
ತಸ್ಮಾತ್ ತಯೋರ್ನಾಮ ಚಕ್ರೇ ತದೇವ ಚ ಮಹೀಪತಿಃ ॥ – ಭಾರತ (ಆದಿ. ೧೨೮/೨೦)

೨) ಕೃಪ ದೇವವ್ರತನ ಗೆಳೆಯನಾದ ಎಂದು ತಿಳಿಸುವ ಮೂಲಕ ಅವರಿಬ್ಬರೂ ಸಮಾನವಯಸ್ಕರು ಎಂಬ ವಿಶೇಷಾಂಶ ಸೂಚಿತವಾಗಿದೆ. ಈಗಾಗಲೇ ಅದು ನಡೆದದ್ದು ದೇವವ್ರತ ಜನಿಸಿದಾಗಲೇ ಎಂಬ ಮಾತು ಬಂದಿರುವುದು ಗಮನಾರ್ಹ.

ಪುತ್ರವಚ್ಚಂತನೋಶ್ಚಾಪೀತ್ ಸ ಚ ಪುತ್ರವದೇವ ತತ್ ।
ಮಿಥುನಂ ಪಾಲಯಾಮಾಸ ಸ ಕೃಪೋಽಸ್ತ್ರಾಣ್ಯವಾಪ ಚ ॥ ೬೨ ॥

ಸರ್ವವೇದಾನಧಿಜಗೌ[೧] ಸರ್ವಶಾಸ್ತ್ರಾಣಿ[೨] ಕೌಶಿಕಾತ್ ।
ತತ್ತ್ವಜ್ಞಾನಂ ತಥಾ ವ್ಯಾಸಾದಾಪ್ಯ ಸರ್ವಜ್ಞತಾಂ ಗತಃ ॥ ೬೩ ॥

ಅ: ಕೃಪ ಶಂತನುವಿಗೆ ಪುತ್ರನಂತಿದ್ದ; ಶಂತನುವೂ ಸಹ ಆ ಅವಳಿ ಶಿಶುಗಳನ್ನು ಸ್ವಂತ ಮಕ್ಕಳಂತೆಯೇ ಪೋಷಿಸಿದ. ಕೃಪನು ವಿಶ್ವಾಮಿತ್ರಮುನಿಗಳಿಂದ ಅಸ್ತ್ರಗಳನ್ನು ಕಲಿತ; ಸಕಲವೇದಗಳನ್ನೂ ಅಧ್ಯಯನ ಮಾಡಿದ. ಸರ್ವಶಾಸ್ತ್ರಗಳನ್ನೂ ತಿಳಿದ. ಹಾಗೆಯೇ ವ್ಯಾಸರಿಂದ ತತ್ತ್ವಜ್ಞಾನವನ್ನು ಪಡೆದು, ಸರ್ವಜ್ಞತ್ವವನ್ನು ಪಡೆದ.

ದ್ರೋಣರ ಉತ್ಪತ್ತಿ

ಯದಾಽಭಿಜಾತಃ[೩] ಸ ಕೃಪಸ್ತದೈವ
ಬೃಹಸ್ಪತೇಃ ಸೂನುರಗಾಚ್ಚ ಗಂಗಾಮ್ ।
ಸ್ನಾತುಂ ಘೃತಾಚೀಂ ಸ ದದರ್ಶ ತತ್ರ
ಶ್ಲಥದ್ದುಕೂಲಾಂ ಸುರವರ್ಯಕಾಮಿನೀಮ್ ॥ ೬೪ ॥

---

೧. ದ್ರೋಣದ್ರೌಣಿಕೃಪಾಃ ಪಾರ್ಥಾ ಭೀಷ್ಮೋ ವಿದುರಸಂಜಯೌ ।
ಯೇ ಚಾನ್ಯೇ ತತ್ರ ದೇವಾಂಶಾಃ ಸಮ್ಯಕ್ ತತ್ತ್ವಪರೋಕ್ಷಿಣಃ ॥ - ಇತಿ ಸ್ಕಾಂದೇ । ಭಾ. ತಾ.೩/೮/೧೮೯

ತದುಕ್ತಂ ಆದಿಪರ್ವಣಿ–
'ಗೋಪಿತೋ ಗೌತಮಸ್ತತ್ರ ತಪಸಾ ತಾವವಿಂದತ ।
ಆಗಮ್ಯ ತಸ್ಮೈ ಗೋತ್ರಾದಿಸರ್ವಮಾಖ್ಯಾತವಾಂಸ್ತದಾ ।
ಚತುರ್ವಿಧಂ ಧನುರ್ವೇದಮಸ್ತ್ರಾಣಿ ವಿವಿಧಾನಿ ಚ ।
ನಿಖಿಲೇನಾಸ್ಯ ತತ್ ಸರ್ವಂ ಗುಹ್ಯಮಾಖ್ಯಾತವಾನ್ ಪಿತಾ ॥ (ಭಾರತ ೧/೧೪೦-೨೧) – (ಜ.)

೨. ಕೌಶಿಕಾತ್ ವಿಶ್ವಾಮಿತ್ರಾತ್ ಸರ್ವವೇದಾನ್ ಸರ್ವಶಾಸ್ತ್ರಾಣಿ ಅಧಿಜಗೌ ಅಧ್ಯಗೀಷ್ಟ। – (ಜ.)

೩. ಬೃಹಸ್ಪತೇಃ ಸೂನುಃ = ಭರದ್ವಾಜಃ । ಬೃಹಸ್ಪತೇಃ ಸೂನುಶ್ಚೇತಿ ಚಶಬ್ದಸಂಬಂಧಃ ॥ – (ವಾ.)

ಅ: ಕೃಪನು ಜನಿಸಿದ ಸಮಯದಲ್ಲಿಯೇ ಬೃಹಸ್ಪತಿಪುತ್ರ ಭರದ್ವಾಜಮುನಿ ಸ್ನಾನಕ್ಕೆಂದು ಗಂಗಾನದಿಗೆ ತೆರಳಿದ್ದ. ಅಲ್ಲಿ ದೇವಶ್ರೇಷ್ಠರುಗಳ ಭೋಗಸ್ತ್ರೀಯಾದ ಘೃತಾಚಿಯನ್ನು ಅವಳು ಉಟ್ಟರೇಷ್ಮೆ ವಸ್ತ್ರ ಜಾರಿದ್ದಾಗ ಕಂಡ.

ದ್ರೋಣನಾದ ಬೃಹಸ್ಪತಿ

ತದ್ದರ್ಶನಾತ್ ಸ್ಖನ್ನಮಥೇಂದ್ರಿಯಂ ಸ
ದ್ರೋಣೇ ದಧಾರಾಶು ತತೋಽಭವತ್ ಸ್ವಯಮ್।
ಅಂಭೋಜಜಾವೇಶಯುತೋ ಬೃಹಸ್ಪತಿಃ
ಕರ್ತುಂ ಹರೇಃ ಕರ್ಮ ಭುವೋ ಭರೋದ್ಧೃತೌ ॥ ೬೫ ॥

ಅ: ಅವಳ ದರ್ಶನದಿಂದ ಪತನಗೊಂಡ ವೀರ್ಯವನ್ನು ಆ ಭರದ್ವಾಜಮುನಿ ದೊನ್ನೆಯಲ್ಲಿಟ್ಟ. ಅದರಿಂದ ಕಮಲಸಂಭವರಾದ ಬ್ರಹ್ಮದೇವರ ಆವೇಶದಿಂದ ಕೂಡಿದ ಬೃಹಸ್ಪತಿಯು ಭೂಭಾರಹರಣಕಾರ್ಯದಲ್ಲಿ ಶ್ರೀಹರಿಗೆ ಸೇವೆ ಸಲ್ಲಿಸಲೆಂದು ಜನಿಸಿದ.

ವಿ: ೧) ಇಲ್ಲಿ ದ್ರೋಣವೆಂದರೆ ದೊನ್ನೆಯೆಂದರ್ಥ. ಶ್ರೀವಾದಿರಾಜಸ್ವಾಮಿಗಳು 'ಕೊಳಗ' ಎಂದೂ, ಜನಾರ್ದನಭಟ್ಟರು 'ಕಲಶ'ವೆಂದೂ [೧]ಕರೆದಿರುವರು :

ತತಃ ಸಮಭವದ್ದ್ರೋಣಃ ಕಲಶೇ ತಸ್ಯ ಧೀಮತಃ । – ಭಾರತ(ಆದಿ. ೨೯/೩೮)

ಆಧುನಿಕ ಪ್ರಣಾಳಶಿಶುವಿನ ಪರಿಕಲ್ಪನೆ ಇದನ್ನು ಅರ್ಥವಾಡಿಕೊಳ್ಳಲು ಸಾಧಕ.

೨) ದ್ರೋಣರು ಸಹ ಕೃಪ ಕೃಪಿಯರಂತೆ ಅಯೋನಿಜರು ಎಂಬುದು ವಿಶೇಷ.

---

೧. ''ಅಸ್ತ್ರಿಯಾಂ ಮಾಠರೋ ದ್ರೋಣ'' ಇತಿ ವಚನಾತ್ ವ್ರೀಹ್ಯಾದೀನಾಂ ಮಾನವಿಶೇಷೋ ದ್ರೋಣ ಇತ್ಯುಚ್ಯತೇ । 'ಕೋಳಗ'ಮಿತ್ಯಪಭ್ರಷ್ಟಭಾಷಾ । ವಿರಕ್ತತ್ವಾತ್ ಜಲಸಂಗ್ರಹಾಯ ತಮಪಿ ಸಹೈವ ನೀತವಾನಿತಿ ಜ್ಞೇಯಮ್ । ಬೃಹಸ್ಪತೇರಯೋಗ್ಯಂ ಭೀಮಾರ್ಜುನಾದೀನಾಂ ಗುರುತ್ವಂ ಶಿರಸಾ ವೋಢುಂ ಬ್ರಹ್ಮಾ ತತ್ರ ಸನ್ನಿಹಿತೋ ಬಭೂವೇತಿ ಭಾವೇನೋಕ್ತಮಂಭೋಜಜಾವೇಶಯುತ ಇತಿ ॥ – (ವಾ.)

ಆಚಾರ್ಯಃ ಕಲಶಾಜ್ಜಾತೋ ದ್ರೋಣಃ.....ಇತ್ಯಾದಿಪರ್ವಣಿ । – (ಜ.)

ದ್ರೋಣೇ ದ್ರೋಣಾಖ್ಯಯಜ್ಞಕಲಶೇ । 'ಅತಿಥಿರ್ದ್ರುಣಸತ್' । ಸದ್ರೋಣಕಲಶ ಇತಿ ದ್ರೋಣ-ಪಾತ್ರಯಜ್ಞಪಾತ್ರೇ ರೂಢತ್ವಾತ್ । ಆಚಾರ್ಯಃ ಕಲಶಾಜ್ಜಾತ ಇತಿ .... ಸ್ಪಷ್ಟಂ ಭಾರತೋಕ್ತೇಶ್ಚ। – (ತಾ.)

'ದ್ರೋಣೇತಿ ನಾಮಾಸ್ಯೇ'ತ್ಯತ್ರ ದ್ರೋಣ ಇತಿ ಭಿನ್ನಂ ಪದಂ ಅವಿಭಕ್ತನಿರ್ದೇಶಃ । – (ರಾ.)

೩) ದ್ರೋಣರಲ್ಲಿ ಬ್ರಹ್ಮದೇವರ ಆವೇಶವಿದ್ದದ್ದರಿಂದ ಭೀಮಾರ್ಜುನಾದಿಗಳಿಗೆ ಗುರು–ವೆನ್ನಿಸುವ ಅರ್ಹತೆ ಅವರಿಗೆ ಲಭಿಸಿತು.

೪) ಭರದ್ವಾಜರು ಬೃಹಸ್ಪತಿಯ ಪುತ್ರ. ಇಲ್ಲಿ ಭರದ್ವಾಜರಿಗೆ ಮಗನಾಗಿ ಜನಿಸಿದ್ದು ಸ್ವಯಂ ಬೃಹಸ್ಪತಿಯೇ. ಎಂದರೆ ಬೃಹಸ್ಪತಿ ತಮ್ಮ ಮಗನಿಗೆ ಮಗನಾಗಿ ಜನಿಸಿದರು. ಸುಮಧ್ವ–ವಿಜಯದಲ್ಲಿ ಬಾಲಮಧ್ವರ ಕ್ಷೀರಪಾನಕ್ಕೆಂದು ಗೋದಾನ ಮಾಡಿದ ಪೂರ್ವಾಲಯ ಬ್ರಾಹ್ಮಣ ಇದೇ ರೀತಿ ತನ್ನ ಮಗನಿಗೆ ಮಗನಾಗಿ[೧] ಜನಿಸಿದ ಉಲ್ಲೇಖ ಬಂದಿರುವುದು ಗಮನಾರ್ಹ.

ದ್ರೋಣೇತಿ ನಾಮಾಸ್ಯ ಚಕಾರ ತಾತೋ
ಮುನಿರ್ಭರದ್ವಾಜ ಉತಾಸ್ಯ ವೇದಾನ್[೨] ।
ಅಧ್ಯಾಪಯಾಮಾಸ ಸಶಾಸ್ತ್ರಸಂಘಾನ್
ಸರ್ವಜ್ಞತಾಮಾಪ ಚ ಸೋಽಚಿರೇಣ ॥ ೬೬ ॥

ಅ: ತಂದೆಯಾದ ಭರದ್ವಾಜಮುನಿ ಆ ಮಗುವಿಗೆ 'ದ್ರೋಣ' ಎಂದು ಹೆಸರಿಟ್ಟರು; ಮತ್ತು ಶಾಸ್ತ್ರವೃಂದಸಮೇತವಾಗಿ ವೇದಗಳನ್ನು ಅಧ್ಯಯನ ಮಾಡಿಸಿದರು. ಅವನೂ ಸಹ ಬೇಗನೆ ಸರ್ವಜ್ಞತ್ವವನ್ನು ಗಳಿಸಿದ.

ವಿ: ೧) ದ್ರೋಣಕಲಶದಲ್ಲಿ ಜನಿಸಿದ್ದರಿಂದ 'ದ್ರೋಣ' ಎಂಬ ಹೆಸರನ್ನೇ ಆ ಮಗುವಿಗೆ ತಂದೆ ಭರದ್ವಾಜರು ಇರಿಸಿದರು; 'ಅಸಾಧಾರಣ್ಯೇನ ವ್ಯಪದೇಶಾ ಭವಂತಿ' ಎಂಬ ನ್ಯಾಯದಂತೆ ಅವರ ಅಸಾಧಾರಣಹುಟ್ಟಿಗೆ ಇದು ಗಮಕವಾಯಿತು.

೨) ಭರದ್ವಾಜರು ದ್ರೋಣರಿಗೆ ವೇದಗಳನ್ನೂ, ಇತರಶಾಸ್ತ್ರಗಳನ್ನೂ ಕಲಿಸಿದರು. ಸ್ವತಃ ಬೃಹಸ್ಪತಿಯ ಅವತಾರರಾದ ಅವರಿಗೆ ಸರ್ವಜ್ಞತ್ವವನ್ನು ಬೇಗನೆ ಪಡೆಯಲು ಬ್ರಹ್ಮದೇವರ ಆವೇಶ ಮತ್ತೊಂದು ಮುಖ್ಯಕಾರಣವಾಯಿತು.

---

೧. ಪಾತುಂ ಪಯಾಂಸಿ ಶಿಶವೇ ಕಿಲ ಗೋಪ್ರದೋಽಸ್ಯೈ
ಪೂರ್ವಾಲಯಃ ಸ್ವಸುತಸೂನುತಯಾ ಪ್ರಜಾತಃ ।
ನಿರ್ವಾಣಹೇತುಮಲಭೇಷ್ಟ ಪರಾತ್ಮವಿದ್ಯಾಂ
ದಾನಂ ಧ್ರುವಂ ಫಲತಿ ಪಾತ್ರಗುಣಾನುಕೂಲ್ಯಾತ್ ॥ –ಮ.ವಿ.(೨/೩೦)

೨. ವೇದಾನುತ = ವೇದಾಂಶ್ಚ। ದ್ರೋಣೇ ಬ್ರಹ್ಮಣಃ ಸನ್ನಿಧಾನಾದಚಿರೇಣೇತ್ಯುಕ್ತಮ್ ॥ –(ವಾ.)

ದ್ರುಪದನ ಜನನ

ಕಾಲೇ ಚ ತಸ್ಮಿನ್ ಪೃಷತೋಽನಪತ್ಯೋ
ವನೇಷು ಪಾಂಚಾಲಪತಿಶ್ಚಚಾರ ।
ತಪೋ ಮಹತ್ ತಸ್ಯ ತಥಾ [೧]ವರಾಪ್ಸರೋಽ-
ವಲೋಕನಾತ್ ಸ್ಕಂದಿತಮಾಶು ರೇತಃ ॥ ೬೭ ॥

ಅ: ಅದೇ ಸಮಯದಲ್ಲಿ ಸಂತಾನವಿಲ್ಲದಿದ್ದ ಪಾಂಚಾಲದ ಅರಸನಾದ ಪೃಷತನು ವನದಲ್ಲಿ ದೊಡ್ಡ ತಪಸ್ಸನ್ನು ಆಚರಿಸಿದ. ಅವನಿಗೆ ಉತ್ತಮ ಅಪ್ಸರೆಯೊಬ್ಬಳ ದರ್ಶನದಿಂದ ಆಗಲೇ ರೇತಃಸ್ಖಲನವಾಯಿತು.

ವಿ: ೧) ಪೃಷತರಾಜನು ಪಾಂಚಾಲವಂಶದ ಸೋಮಕರಾಜನ ನೂರುಮಕ್ಕಳಲ್ಲಿ ಕೊನೆಯವನು.

೨) ಅವನು ಕಂಡ ಅಪ್ಸರೆ ಮೇನಕೆ ಎಂಬುದಾಗಿ [೧]ಮಹಾಭಾರತದಲ್ಲಿದೆ.

ಸ ತದ್ವಿಲಜ್ಜಾವಶತಃ ಪದೇನ
ಸಮಾಕ್ರಮತ್ [೨]ತಸ್ಯ ಬಭೂವ ಸೂನುಃ ।
[೩]ಹುಹೂ ತು ನಾಮ್ನಾ ಸ ವಿರಿಂಚಗಾಯಕೋ
ನಾಮ್ನಾಽವಹೋ ಯೋ ಮರುತಾಂ ತದಂಶಯುಕ್ ॥ ೬೮ ॥

ಅ: ಅವನು ಅದನ್ನು ನಾಚಿಕೆಯಿಂದಾಗಿ ಕಾಲಿಂದ ಮುಚ್ಚಿದ; ಅದರಿಂದ ಅವನಿಗೆ ಪುತ್ರನೊಬ್ಬ ಜನಿಸಿದ. ಅವನು ಹುಹೂ ಎಂಬ ಹೆಸರಿನ ವಿರಿಂಚಗಾಯಕ; ಮರುತ್ತುಗಳಲ್ಲಿ ಒಬ್ಬನಾದ ಆವಹನ ಅಂಶದಿಂದಲೂ ಕೂಡಿದ್ದ.

---

೧. ವರಾಪ್ಸರಾವಲೋಕನಾದಿತಿ ಮೇನಕಾವಲೋಕನಾದಿತ್ಯರ್ಥಃ । ತದುಕ್ತಂ ಭಾರತೇ–
'ಸಂಗತಾ ಚಾಪ್ಸರಾ ರಾಜನ್ ಮೇನಕೇತಿ ಪರಿಶ್ರುತಾ' ಇತಿ । –(ತಾ.)

೨. ಸಮಾಕ್ರಮತ್ ಆಚ್ಛಾದಿತವಾನ್ । –(ಜ.)

೩. ಹೂಹೂ ತು ನಾಮ್ನಾ ಸ ವಿರಿಂಚಗಾಯಕ ಇತ್ಯತ್ರ ತು= ವಿಶೇಷೇಣ ವಿರಿಂಚಗಾಯಕ ಇತಿ ತುಶಬ್ದಸಂಬಂಧಃ। ಇಂದ್ರಾದಿಸಭಾಯಾಮಪಿ ಕದಾಚಿದ್ಗಾನಂ ಕರೋತಿ ಬ್ರಹ್ಮಸಭಾಯಾಮೇವ ವಿಶೇಷ್ಯ ಗಾಯಕ ಇತಿ ಭಾವಃ॥ –(ವಾ.)

ಹಾಹಾಹೂಹೂ ಇತ್ಯವ್ಯಯಮಿತಿ ಶೃಂಗಾರಪ್ರಕಾಶೇ । ತುಶಬ್ದ ಇತ್ಯರ್ಥಃ। ಅವ್ಯಯಸ್ಯಾನೇಕಾರ್ಥತ್ವಾತ್। ..... ತುನಾಮ್ನಾ ವಿಶೇಷನಾಮ್ನಾ ಹೂಹೂನಾಮಕ ಇತ್ಯರ್ಥ ಇತಿ ವಾ । –(ಜ.)

ಏಃ ಹೀಗೆ ದ್ರೋಣಕೃಪರಂತೆ ದ್ರುಪದನೂ ಅಯೋನಿಜನೇ. ಹುಹೂ ಎಂಬವನು ವಿಶೇಷವಾಗಿ ಬ್ರಹ್ಮಲೋಕದಲ್ಲಿ ಹಾಡುವ ದೇವಗಂಧರ್ವ.

ಸ ದ್ರೋಣತಾತಾತ್ ಸಮವಾಪ ವೇದಾ-
ನಸ್ತ್ರಾಣಿ ವಿದ್ಯಾಶ್ಚ ತಥಾ ಸಮಸ್ತಾಃ ।
ದ್ರೋಣೇನ ಯುಕ್ತಃ ಸ ತದಾ ಗುರೋಃ ಸುತಂ
ಸಹೈವ ನೌ ರಾಜ್ಯಮಿತಿ ಹ್ಯವಾದೀತ್ ॥ ೬೯ ॥

ಅಃ ಅವನು ದ್ರೋಣನ ತಂದೆ ಭರದ್ವಾಜನಿಂದ ದ್ರೋಣನ ಜೊತೆಯಲ್ಲೇ ವೇದಗಳನ್ನೂ, ಅಸ್ತ್ರಗಳನ್ನೂ, ಸಕಲವಿದ್ಯೆಗಳನ್ನೂ ಪಡೆದ. ಆಗೊಮ್ಮೆ ಗುರುಪುತ್ರನಾದ ದ್ರೋಣನನ್ನು ಕುರಿತು ''ನಾವಿಬ್ಬರೂ ಒಟ್ಟಾಗಿಯೇ ರಾಜ್ಯವಾಳೋಣ'' ಎಂದು ಹೇಳಿದ.

ಏಃ ಪೃಷತ ಭರದ್ವಾಜರು ಮಿತ್ರರು. ಅದಕ್ಕೆಂದೇ ಅರಣ್ಯದಲ್ಲಿ ಜನಿಸಿದ ತನ್ನ ಪುತ್ರ ದ್ರುಪದನನ್ನು ಪೃಷತ ಭರದ್ವಾಜರ ತಪೋವನದಲ್ಲೇ ಅಧ್ಯಯನಕ್ಕೆಂದು ಬಿಟ್ಟು ರಾಜ್ಯಕ್ಕೆ ಹಿಂದಿರುಗಿದ. ಅಲ್ಲಿ ಭರದ್ವಾಜರು ತಮ್ಮ ಪುತ್ರ ದ್ರೋಣನೊಂದಿಗೆ ದ್ರುಪದನಿಗೂ ವಿದ್ಯಾಭ್ಯಾಸ ಮಾಡಿಸಿದರು. ದ್ರೋಣದ್ರುಪದರಲ್ಲಿ ಸ್ನೇಹ ಬೆಳೆಯಿತು. ಅದರಿಂದಾಗಿ ದ್ರುಪದನೊಮ್ಮೆ ತಾನು ರಾಜನಾದ ಮೇಲೆ ಅದರ ಅರ್ಧಭಾಗವನ್ನು ದ್ರೋಣರಿಗೆ ನೀಡುವುದಾಗಿ ವಚನವಿತ್ತ.

ದ್ರೋಣರ ವಿಶಿಷ್ಟಜೀವನಕ್ರಮ

ಪದೇ[೧] ದ್ರುತತ್ವಾತ್ ದ್ರುಪದಾಭಿಧೇಯಃ
ಸ ರಾಜ್ಯಮಾಪಾಥ ನಿಜಾಂ ಕೃಪೀಂ ಸಃ ।
ದ್ರೋಣೋಽಪಿ ಭಾರ್ಯಾಂ ಸಮವಾಪ್ಯ ಸರ್ವ-
ಪ್ರತಿಗ್ರಹೋಜ್ಝಶ್ಚ ಪುರೇಽವಸತ್ ಸುಖೀ ॥ ೭೦ ॥

ಅಃ ಕಾಲಿನಿಂದ ಮುಚ್ಚಲ್ಪಟ್ಟದ್ದರಿಂದಾಗಿ 'ದ್ರುಪದ' ಎಂದೇ ಅವನಿಗೆ ಹೆಸರಾಯಿತು; ಮುಂದೆ ಅವನು ರಾಜ್ಯವನ್ನೂ ಪಡೆದ. ದ್ರೋಣನು ಸ್ವರೂಪದಲ್ಲೂ ತನ್ನ ಪತ್ನಿಯೇ ಆದ

---

೧. ಪದೇ ರೇತೋಽಂತರ್ಗತತಯಾ ಅಸ್ಯಾಪಿ ದ್ರುತತ್ವಾದಿತಿ ಭಾವಃ । ನಿರುಕ್ತತ್ವಾತ್ ಅಗ್ನ್ಯಾಹಿತಾದಿವತ್ ವಿಶೇಷಣಸ್ಯೋಪರಿ ನಿಪಾತ ಇತಿ ಭಾವಃ । – (ವಾ.)

ಪದೇ ತೃತೀತೀಯಾರ್ಥೇ ಸಪ್ತಮೀ । – (ಜ.)

ಕೃಪಿಯನ್ನು ಮದುವೆಯಾಗಿ ಸಕಲಪ್ರತಿಗ್ರಹವನ್ನೂ ತ್ಯಜಿಸಿ, ಪಟ್ಟಣದಲ್ಲಿ ನೆಮ್ಮದಿಯಿಂದ ವಾಸಿಸತೊಡಗಿದನು.

ವಿ: ೧) ಪದದಿಂದ ಮುಚ್ಚಲ್ಪಟ್ಟ ವೀರ್ಯದಿಂದ ಜನಿಸಿದ್ದರಿಂದ ಪೃಷತಪುತ್ರನಿಗೆ ದ್ರುಪದ ಎಂದೇ ಹೆಸರಾಯಿತು.

೨) ವಿದ್ಯಾಭ್ಯಾಸ ಪೂರೈಸಿದ ದ್ರುಪದ ರಾಜ್ಯಕ್ಕೆ ತೆರಳಿ, ತಂದೆಯ ಅನಂತರ ಪಾಂಚಾಲದೇಶಕ್ಕೆ ದೊರೆಯಾದ. ದ್ರೋಣ ಕೃಪಿಯನ್ನು ವಿವಾಹವಾದ. ಕೃಪಿ ಬೃಹಸ್ಪತಿಯ ಪತ್ನಿಯಾದ ತಾರೆಯ ಅವತಾರ. ಎಂದರೆ ಸ್ವರೂಪದಲ್ಲೂ ದ್ರೋಣರಿಗೆ ಪತ್ನಿಯೇ.

೩) ದ್ರೋಣರು ನೆಲೆಸಿದ್ದು ಕುರುರಾಜಧಾನಿಯಾದ ಹಸ್ತಿನಾಪುರದಲ್ಲಾದರೂ, ಅವಲಂಬಿಸಿದ್ದು ಅಪ್ರತಿಗ್ರಹವ್ರತವನ್ನು. ಪ್ರತಿಗ್ರಹವೆಂದರೆ ಇತರರು ನೀಡುವ ದಾನವನ್ನು ಸ್ವೀಕರಿಸುವುದು ಎಂದರ್ಥ. ಬ್ರಾಹ್ಮಣನಿಗೆ ವಿಹಿತವಾದ ಷಟ್ಕರ್ಮಗಳಲ್ಲಿ ಅದೂ ಒಂದು; ಅದು ಐಚ್ಛಿಕ. ಅದನ್ನು ತೊರೆಯುವುದು ಶ್ರೇಷ್ಠಧರ್ಮ. ದ್ರೋಣರು ಅಂತಹ ಅಪ್ರತಿಗ್ರಹವ್ರತವನ್ನು ಕೈಗೊಂಡಿದ್ದ ಶ್ರೇಷ್ಠಬ್ರಾಹ್ಮಣರಾಗಿದ್ದರು ಎಂದು ಭಾವ.

ಶಿಲೋಂಛವೃತ್ತ್ಯೈವ ಹಿ[೧] ವರ್ತಯನ್ ಸ
ಧರ್ಮಂ ಮಹಾಂತಂ ವಿರಜಂ[೨] ಜುಷಾಣಃ[೩] ।
ಉವಾಸ ನಾಗಾಖ್ಯಪುರೇ ಸಖಾऽऽಸ
ದೇವವ್ರತಸ್ಯಾಥ ಕೃಪಸ್ಯ ಚೈವ ॥ ೭೧ ॥

ಅ: ಶಿಲ ಮತ್ತು ಉಂಛ ವೃತ್ತಿಗಳಿಂದಲೇ ಬದುಕುತ್ತಾ ನಿರ್ದುಷ್ಟವಾದ ಶ್ರೇಷ್ಠಧರ್ಮವನ್ನು ಅವಲಂಬಿಸಿ ದ್ರೋಣ ಹಸ್ತಿನಾಪುರದಲ್ಲಿ ನೆಲೆಸಿದ; ಹಾಗೂ ದೇವವ್ರತನಿಗೂ, ಹಾಗೆಯೇ ಕೃಪನಿಗೂ ಮಿತ್ರನಾದ.

---

೧. ಹಿಶಬ್ದೇನೋತ್ತಮಬ್ರಾಹ್ಮಣಾನಾಂ ಸೈವ ವೃತ್ತಿಃ ಯೋಗ್ಯೇತಿ ಸೂಚಯತಿ। –(ವಾ.)
ಶಿಲಂ ಚ ಉಂಛಂ ಚ ಶಿಲೋಂಛೇ ತಾಭ್ಯಾಂ ವೃತ್ತಿರ್ಜೀವನೋಪಾಯಃ। – (ಜ.)

೨. ಉತ್ತಮಂ ಧರ್ಮಂ ವಿಷ್ಣುಪ್ರೀತಿಕರಂ ಧರ್ಮಮ್ ....। – (ಜ.)

೩. ವಿರಜಂ ನಿರ್ದೋಷಂ ಕಾಮ್ಯಕರ್ಮರಹಿತಮಿತ್ಯರ್ಥಃ।
'ಶಿರೋವಾಚೀ ಶಿರೋದಂತೋ ರಜೋವಾಚೀ ರಜಸ್ತಥಾ ।
ನಿಚಕರ್ತ ಶಿರಾನ್ ದ್ರೋಣರಥಾಃ ಪಾದರಜೋಪಮಾ ॥' ಇತಿ ಕವಿಕಂಠಾಭರಣೇ। – (ಜ.)

ಎಃ ೧) ರೈತರು ಕಾಳುಗಳನ್ನು ಕಣದಿಂದ ಮನೆಗೊಯ್ದ ಮೇಲೆ ಅಲ್ಲಿ ಉಳಿಯುವ ಕಾಳುಗಳನ್ನು ಆಯ್ದು ಅವುಗಳಿಂದಲೇ ಜೀವನ ನಿರ್ವಹಿಸುವ ಕ್ರಮ ಶಿಲೋಂಛವೃತ್ತಿ, ಉತ್ತಮಬ್ರಾಹ್ಮಣರಿಗೆ ಜೀವನನಿರ್ವಹಣೆಗೆಂದು ವಿಹಿತವಾದ ವೃತ್ತಿ ಇದೇ.

೨) ಮೂಲತಃ ದೇವಗುರುಗಳಾಗಿದ್ದ ಬೃಹಸ್ಪತ್ಯಾಚಾರ್ಯರ ಅವತಾರರೂ, ಸರ್ವಶ್ರೇಷ್ಠಬ್ರಾಹ್ಮಣದೇವತೆಯಾದ ಬ್ರಹ್ಮದೇವರ ಆವೇಶದಿಂದ ಕೂಡಿದವರೂ ಆದ ದ್ರೋಣರು ಇಂತಹ ಉತ್ತಮಬ್ರಾಹ್ಮಣವೃತ್ತಿಯಲ್ಲಿದ್ದುದು ಸಹಜವೇ ಆಗಿತ್ತು.

೩) ಮಹಾಧರ್ಮ ಎಂದರೆ ವಿಷ್ಣುಪ್ರೀತಿಕರವಾದ ಶ್ರೇಷ್ಠಧರ್ಮ ಎಂದರ್ಥ.

೪) ಭೀಷ್ಮರು ಸಹ ಪರಶುರಾಮರ ಶಿಷ್ಯರು; ಬ್ರಹ್ಮದೇವರ ಅಂಶದಿಂದ ಕೂಡಿದವರು; ಪರಮವಿರಕ್ತರು. ಅದಕ್ಕೆಂದೇ ಅವರಲ್ಲಿ ಕೃಪಾಚಾರ್ಯರಿಗಿಂತ ಹೆಚ್ಚಿನ ಸ್ನೇಹ ದ್ರೋಣರೊಂದಿಗೆ ಬೆಳೆಯಿತು ಎಂಬ ವಿಶೇಷಾಂಶ 'ಅಥ' ಎಂಬ ಪದದಿಂದ [೧]ಸೂಚಿತವಾಗಿದೆ.

೫) ಶುದ್ಧಬ್ರಾಹ್ಮಣಧರ್ಮವನ್ನು ವಿವರಿಸುವ ಭಾಗವತದ ಏಕಾದಶಸ್ಕಂಧದ ಶ್ಲೋಕ–ವನ್ನೇ ಶ್ರೀಮದಾಚಾರ್ಯರು ಇದರಲ್ಲಿ ಅಳವಡಿಸಿರುವುದು ಗಮನಾರ್ಹ (೧೧/೧೭/೪೩):

ಶಿಲೋಂಛವೃತ್ತ್ಯಾ ಪರಿತುಷ್ಟಚಿತ್ತೋ ಧರ್ಮಂ ಮಹಾಂತಂ ವಿರಜಂ ಜುಷಾಣಃ ।

ವಿರಾಟರಾಜನ ಪರಿಚಯ

ತೇಷಾಂ ಸಮಾನೋ ವಯಸಾ ವಿರಾಟ–
ಸ್ತ್ವಭೂದ್ದಹಾ[೨] ನಾಮ ವಿಧಾತೃಗಾಯಕಃ ।
ಮರುತ್ಸು ಯೋ ವಿವಹೋ ನಾಮ ತಸ್ಯಾ–
ಪ್ಯಂಶೇನ ಯುಕ್ತೋ ನಿಜಧರ್ಮವರ್ತೀ ॥ ೭೨ ॥

---

೧. ದೇವವ್ರತಸ್ಯೈವ ಸಖಾ ಅಥ ಕೃಪಸ್ಯ ಚ ಸಖೇತಿ ಸಂಬಂಧಃ । ದ್ರೋಣಭೀಷ್ಮಯೋರುಭಯೋರಪಿ ಪರಶುರಾಮಶಿಷ್ಯತ್ವಾತ್ ಬ್ರಹ್ಮಣೋಽಂಶಯುಕ್ತತ್ವಾದುಭಯೋರಪಿ ವಿರಕ್ತತ್ವಾಚ್ಚ ಭೀಷ್ಮೇ ಯಾದೃಶಂ ಸಖ್ಯಂ ತಾದೃಶಂ ಸಖ್ಯಂ ಕೃಪೇ ನಾಸ್ತೀತ್ಯರ್ಥೇ ಅಥೇತ್ಯುಕ್ತಮ್ । ಅತ ಏವ ದೇವವ್ರತಸ್ಯೈವೇತ್ಯೇವಕಾರಶ್ಚ ॥ – (ವಾ.)

೨. ಗಂಧರ್ವೌ ದ್ವೌ । ಹಹಾ ಹೂಹೂ ಇತಿ ಪ್ರಯೋಗಸದ್ಭಾವಾತ್ ಹಾಹೇತಿ ಹಹೇತಿ ಚ ತಸ್ಯೈವ ನಾಮ॥ – (ವಾ.)

ಹಹಾ ಇತಿ । ಪೂರ್ವಹ್ರಸ್ವಶಬ್ದೋಽಪ್ಯಸ್ತಿ। – (ಜ.)

ಅ: ವಿರಾಟರಾಜ ವಯಸ್ಸಿನಲ್ಲಿ ಇವರಿಗೆ ಸಮಾನನಾಗಿದ್ದ; ಅವನು ಹಹಾ ಎಂಬ ಬ್ರಹ್ಮಗಾಯಕ; ಮರುತ್ತುಗಳಲ್ಲಿ ವಿವಹ ಎಂಬವನ ಅಂಶದಿಂದಲೂ ಕೂಡಿದ್ದ; ತನಗೆ ವಿಹಿತಧರ್ಮದಲ್ಲಿ ತೊಡಗಿದವನಾಗಿದ್ದ.

ವಿ: ೧) ವಿರಾಟರಾಜ ವಯಸ್ಸಿನಲ್ಲಿ ದೇವವ್ರತ, ದ್ರೋಣ, ಕೃಪ ಹಾಗೂ ದ್ರುಪದರಿಗೆ ಸಮಾನನಾಗಿದ್ದ. ಬ್ರಹ್ಮಸಭೆಯ ಗಾಯಕರಾಗಿದ್ದ ಹಹಾ, ಹುಹೂಗಳೇ ಈ ವಿರಾಟದ್ರುಪದರಾಗಿ ಅವತರಿಸಿರುವುದು ವಿಶೇಷ; ಹಾಹಾ ಹಾಗೂ ಹೂಹೂ ಎಂಬುದು ಅವರಿಬ್ಬರ ನಾಮಾಂತರಗಳು.

೨) ಗಜೇಂದ್ರಮೋಕ್ಷಪ್ರಸಂಗದಲ್ಲಿನ ಗಜೇಂದ್ರ ಈ ಹಹಾ ಗಂಧರ್ವನ ಅವತಾರ. ಅವನ ಕಾಲು ಹಿಡಿದಿದ್ದ ಮೊಸಳೆ ಹುಹೂ ಗಂಧರ್ವನ ಅವತಾರ (ಭಾರತ, ಗಜೇಂದ್ರಮೋಕ್ಷ) :

ಯಥಾ ತೌ ಶಾಪಿತೌ ತೇನ ದೇವಲೇನ ಮಹಾತ್ಮನಾ ।
ಹಾಹಾ ಹೂಹೂರಿತಿ ಖ್ಯಾತೌ ಗೀತವಾದ್ಯವಿಶಾರದೌ॥ (ಇತ್ಯಾದಿ)

– ಭಾರತ (ಶಾಂತಿ., ಅ.೧೦೦)

ಶಂತನು - ಸತ್ಯವತಿ ವಿವಾಹ

ತತಃ ಕದಾಚಿನ್ಮೃಗಯಾಂ ಗತಃ ಸ
ದದರ್ಶ ಕನ್ಯಾಪ್ರವರಾಂ[೧] ತು ಶಂತನುಃ ।
ಯಾ ಪೂರ್ವಸರ್ಗೇ ಪಿತೃಪುತ್ರಿಕಾ ಸತೀ
ಚಚಾರ ವಿಷ್ಣೋಸ್ತಪ ಉತ್ತಮಂ ಚಿರಮ್ ॥ ೭೩ ॥

ಅ: ಬಳಿಕ ಒಮ್ಮೆ ಬೇಟೆಗೆಂದು ಹೊರಟಿದ್ದ ಶಂತನು ಶ್ರೇಷ್ಠಕನ್ಯೆಯೊಬ್ಬಳನ್ನು ಕಂಡ. ಅವಳು ಪೂರ್ವಜನ್ಮದಲ್ಲಿ ಪಿತೃಗಳ ಪುತ್ರಿಯಾಗಿದ್ದು ವಿಷ್ಣುವನ್ನು ಕುರಿತು ಬಹುಕಾಲ ಉತ್ತಮತಪಸ್ಸನ್ನು ಮಾಡಿದ್ದವಳು.

ವಿ: ೧) ಈ ಪ್ರಸಂಗ ನಡೆದದ್ದು ದೇವವ್ರತ ಅಧ್ಯಯನ ಪೂರೈಸಿ ಮರಳಿದ ನಾಲ್ಕುವರ್ಷಗಳ ಅನಂತರ ಎಂದು ಮಹಾಭಾರತದಲ್ಲಿದೆ (ಆದಿ. ೧೦೦/೪೫) :

---

೧. 'ಅಚ್ಛೋದಾ ಇತಿ ತಸ್ಯಾ ನಾಮ' ಇತಿ ಹರಿವಂಶೇ (೧/೧೮/೨೭)

ಅಗ್ನಿಷ್ವಾತ್ತಾಖ್ಯದೇವಪಿತೃಣಾಂ ಪುತ್ರಿಕಾ । ... – (ಜ.)

ಅತ ಏವ ಭಾರತೇ 'ತ್ವತ್ಸಂಪರ್ಕಾತ್ ಪ್ರದುಷ್ಯೇತ ಕನ್ಯಾಭಾವೋ ಮಮಾನಘ' ಇತಿ । ಸತ್ಯವತೀಪ್ರಶ್ನೇ ಮತ್ಪಿತಯಂ ಕೃತ್ವಾ ಪುನಃ ಕನ್ಯಾ ಭವಿಷ್ಯತೀತಿ ಋಷಿಣೋತ್ತರಂ ದತ್ತಮಿತ್ಯುಕ್ತಂ ಜ್ಞೇಯಮ್ । – (ತಾ.)

.... ವರ್ತಯಾಮಾಸ ವರ್ಷಾಣಿ ಚತ್ವಾರ್ಯಮಿತವಿಕ್ರಮಃ ॥

೨) ಹಾಗೆ ಶಂತನು ಕಂಡ ಕನ್ಯಾಮಣಿ ಸತ್ಯವತಿ. ಅವಳು ಪೂರ್ವಜನ್ಮದಲ್ಲಿ ಅಗ್ನಿಷ್ವಾತ್ತ–ರೆಂಬ ಅಮೂರ್ತಪಿತೃಗಳ ಮಾನಸಪುತ್ರಿ. ಅಚ್ಛೋದೆ ಎಂದು ಅವಳ ಹೆಸರು. ಅವಳ ಹೆಸರಿನಲ್ಲಿ ಅಚ್ಛೋದ ಎಂಬ ಸರೋವರ ನಿರ್ಮಾಣವಾಗಿತ್ತು ಎಂದು ಹರಿವಂಶದಲ್ಲಿದೆ(೧/೧೮/೨೬,೨೭) :

'ಪಿತರೋ ದಿವಿ ವರ್ತಂತೇ ದೇವಾಸ್ತಾನ್ ಭಾವಯತ್ಯುತ ।
ಅಗ್ನಿಷ್ವಾತ್ತಾ ಇತಿ ಖ್ಯಾತಾಃ ಸರ್ವ ಏವಾಮಿತೌಜಸಃ ।
ಏತೇಷಾಂ ಮಾನಸೀ ಕನ್ಯಾ ಅಚ್ಛೋದಾನಾಮನಿಮ್ಮಗಾ ॥
ಅಚ್ಛೋದಂ ನಾಮ ವಿಖ್ಯಾತಂ ಸರೋ ಯಸ್ಯಾಃ ಸಮುತ್ಥಿತಮ್ ॥

ಯಸ್ಯೈ ವರಂ ವಿಷ್ಣುರದಾತ್ ಪುರಾऽಹಂ
ಸುತಸ್ತವ ಸ್ಯಾಮಿತಿ ಯಾ ವಸೋಃ ಸುತಾ ।
ಜಾತಾ ಪುನರ್ದಾಶಗೃಹೇ ವಿವರ್ಧಿತಾ
ವ್ಯಾಸಾತ್ಮನಾ ವಿಷ್ಣುರಭೂಚ್ಚ ಯಸ್ಯಾಮ್ ॥ ೭೪ ॥

ಅ: ಅವಳಿಗೆ ವಿಷ್ಣುವು ''ನಾನು ನಿನ್ನ ಮಗನಾಗುವೆನು'' ಎಂಬುದಾಗಿ ವರ ನೀಡಿದ್ದನು. ಅವಳು ವಸುವಿನ ಮಗಳಾಗಿ ಜನಿಸಿ, ದಾಶರಾಜನ ಮನೆಯಲ್ಲಿ ಬೆಳೆದಿದ್ದಳು. ಅವಳಲ್ಲಿ ವಿಷ್ಣುವು ವ್ಯಾಸರೂಪದಿಂದ ಅವತರಿಸಿದ್ದನು.

ಏ: ಸತ್ಯವತಿಯು ವಸುರಾಜನ ಮಗಳಾಗಿ ಜನಿಸಿ, ದಾಶರಾಜನ ಮನೆಯಲ್ಲೇ ಬೆಳೆದಿದ್ದಳು. ಆಗಲೂ ಅವಳು ದಾಶರಾಜನ ಅನ್ನ ನೀರುಗಳನ್ನೂ ಮುಟ್ಟದೆ, ಕಂದಮೂಲಗಳನ್ನಷ್ಟೆ ಸೇವಿಸುತ್ತಾ ಯಮುನಾತೀರದಲ್ಲಿ ಬೆಳೆದಿದ್ದಳು. ಆದ್ದರಿಂದ ಅವಳು ಕ್ಷತ್ರಿಯಸ್ತ್ರೀಯಾಗಿಯೇ ಇರಲು ಸಾಧ್ಯವಾಗಿತ್ತು ಎಂಬ ವಿಶೇಷಾಂಶ ಸ್ಕಂದಪುರಾಣದಲ್ಲಿದೆ(*ವ್ಯಾಸತೀರ್ಥಮಾಹಾತ್ಮ್ಯ). ಇದನ್ನು 'ವಿವರ್ಧಿತಾ' ಎಂಬಲ್ಲಿನ 'ವಿ' ಎಂಬ ಉಪಸರ್ಗದಿಂದ ಶ್ರೀಮದಾಚಾರ್ಯರು ಸೂಚಿಸಿರುವರು ಎಂದು ತಿಳಿಯಬೇಕು.

ತದ್ದರ್ಶನಾನ್ನೃಪತಿರ್ಜಾತಹೃಚ್ಛ್ರಯೋ
ವವ್ರೇ ಪ್ರದಾನಾಯ ಚ ದಾಶರಾಜಮ್ ।
ಋತೇ ಸ ತಸ್ಯಾಸ್ತನಯಸ್ಯ ರಾಜ್ಯಂ
ನೈಚ್ಛದ್ದಾತುಂ ತಾಮಥಾಯಾತ್ ಗೃಹಂ ಸ್ವಮ್ ॥ ೭೫ ॥

ಅ: ಅವಳ ದರ್ಶನದಿಂದ ಶಂತನು ಅನುರಾಗ ಹೊಂದಿದವನಾಗಿ ಅವಳನ್ನು ತನಗೆ ಧಾರೆ ಎರೆಯಲು ದಾಶರಾಜನನ್ನು ಕೇಳಿಕೊಂಡ. ಆದರೆ ಅವನು ಅವಳ ಪುತ್ರನಿಗೆ ರಾಜ್ಯವನ್ನು ನೀಡದ ಹೊರತು ಅವಳನ್ನು ಧಾರೆ ಎರೆಯಲು ಬಯಸದಾದ. ಬಳಿಕ ಶಂತನು ತನ್ನ ಮನೆಗೆ ಮರಳಿದ.

ವಿ: ೧) ಒಬ್ಬ ಚಕ್ರವರ್ತಿಯಾಗಿಯೂ ಒಬ್ಬ ಕನ್ಯೆಯನ್ನು ಧಾರ್ಮಿಕರೀತಿಯಲ್ಲಿ ಶಂತನು ವಿವಾಹವಾಗಬಯಸಿದನೇ ಹೊರತು, ಅವಳನ್ನು ಬಲಾತ್ಕಾರದಿಂದ ಪಡೆಯಬಯಸಲಿಲ್ಲ ಎಂಬುದು ಗಮನಾರ್ಹ ಅಂಶ. ಇದು ಆ ಕಾಲದ ಧರ್ಮನಿಷ್ಠೆಗೆ ವಿಶಿಷ್ಟನಿದರ್ಶನ.

೨) ದಾಶರಾಜನು ಸತ್ಯವತಿಗೆ ಜನಿಸುವ ಸಂತತಿಗೆ ರಾಜ್ಯ ನೀಡುವುದಾದಲ್ಲಿ ಮಾತ್ರ ವಿವಾಹ ಮಾಡಿಕೊಡಲು ಸಾಧ್ಯ ಎಂದು ತಿಳಿಸಿದ. ಅವನು ಹಾಗೆ ಅವಳ ಸಂತತಿಗೆ ರಾಜ್ಯ ಅಪೇಕ್ಷಿಸಲು ಅವಳು ಮೂಲತಃ ರಾಜಕುಮಾರಿಯಾಗಿದ್ದುದೇ ಕಾರಣ. ಅವಳು ತನ್ನ ತಂದೆ ವಸುರಾಜನ ಮನೆಯಲ್ಲೇ ಬೆಳೆದಿದ್ದಲ್ಲಿ ರಾಜಕುಮಾರನೊಬ್ಬನ ಕೈಹಿಡಿದು, ಮಹಾರಾಣಿಯೂ, ಮುಂದೆ ರಾಜಮಾತೆಯೂ ಆಗುತ್ತಿದ್ದಳು. ತನ್ನಲ್ಲಿ ಬೆಳೆದಿದ್ದರಿಂದ ಅವಳಿಗೆ ಅಂತಹ ಅವಕಾಶ ತಪ್ಪಿ ಅದಕ್ಕೆ ತಾನು ಕಾರಣ ಎಂದಾಗಬಾರದು ಎಂಬ ಹಿನ್ನೆಲೆಯಲ್ಲಿ ದಾಶರಾಜನು ಅವಳ ಸಂತತಿಗೆ ರಾಜ್ಯ ನೀಡುವ ನಿಬಂಧನೆಯನ್ನು ಮುಂದಿಟ್ಟ ಎಂದು ತಿಳಿಯಬಹುದು.

ತಚ್ಚಿಂತಯಾ ಮ್ಲಾನಮುಖಂ[೧] ಜನಿತ್ರಂ
ದೃಷ್ಟ್ವೈವ ದೇವವ್ರತ ಆಶ್ವಪೃಚ್ಛತ್ ।
ತತ್ಕಾರಣಂ ಸಾರಥಿಮಸ್ಯ ತಸ್ಮಾ-
ಚ್ಛ್ರುತ್ವಾಖಿಲಂ ದಾಶಗೃಹಂ ಜಗಾಮ ॥ ೭೬ ॥

ಅ: ಅವಳ ಚಿಂತೆಯಿಂದಾಗಿ ತಂದೆಯ ಮುಖ ಬಾಡಿದ್ದನ್ನು ಕಂಡು ದೇವವ್ರತ ಅದಕ್ಕೆ ಕೂಡಲೆ ಅವನ ಸಾರಥಿಯನ್ನು ಕಾರಣ ಕೇಳಿದ. ಅವನಿಂದ ಎಲ್ಲವನ್ನೂ ತಿಳಿದು, ದಾಶರಾಜನ ಮನೆಗೆ ನಡೆದ.

---

೧. ಜನಿಧಾತೋಃ ಹೇತ್ವರ್ಥೇ ತ್ರಚ್‌ಪ್ರತ್ಯಯೇ ಕೃತೇ ಖನಿತ್ರಮಿತಿವತ್ ಜನಿತ್ರಮಿತ್ಯಪಿ ಜನಕವಾಚಿಪದಂ ಭವತೀತಿ ಭಾವೇನೋಕ್ತಂ ಮ್ಲಾನಮುಖಂ ಜನಿತ್ರಮಿತಿ ॥ – (ವಾ.)

ಗ್ಲಾನಮುಖಮ್ – (ಪಾಠಾಂತರ)

ವಿ: ತನ್ನ ತಂದೆಯ ನೋವಿನ ಹಿನ್ನೆಲೆಯನ್ನು ಹೀಗೆ ಗುರುತಿಸಿ, ಅದಕ್ಕೆ ಪರಿಹಾರ ಹುಡುಕುವ ಶ್ರೇಷ್ಠ ಪಿತೃಭಕ್ತಿ ದೇವವ್ರತನ ಹಿರಿಮೆಗೆ ಕಾರಣವಾಯಿತು.

ಸ ತಸ್ಯ ವಿಶ್ವಾಸಕೃತೇ ಪ್ರತಿಜ್ಞಾಂ
ಚಕಾರ ನಾಹಂ ಕರವಾಣಿ ರಾಜ್ಯಮ್ ।
ತಥೈವ ಮೇ ಸಂತತಿತೋ ಭಯಂ ತೇ
ವ್ಯೈತೂರ್ಧ್ವರೇತಾಃ ಸತತಂ ಭವಾನಿ ॥ ೭೭ ॥

ಅ: ಆ ದಾಶರಾಜನಿಗೆ ನಂಬಿಕೆಯನ್ನು ಹುಟ್ಟಿಸುವ ಸಲುವಾಗಿ ''ನಾನು ರಾಜ್ಯವನ್ನು ಆಳೆನು; ಹಾಗೆಯೇ ನನ್ನ ಸಂತತಿಯಿಂದಲೂ ನೀನು ಭಯಪಡಬೇಕಿಲ್ಲ. ನಾನು ಸದಾ ಬ್ರಹ್ಮಚರ್ಯದಿಂದಿರುವೆ'' ಎಂದು ದೇವವ್ರತ ಪ್ರತಿಜ್ಞೆ ಮಾಡಿದ.

ವಿ: ೧) ತನ್ನ ತಂದೆಯ ಅಪೇಕ್ಷೆ ಪೂರೈಸಲು ದಾಶರಾಜನ ಅಪೇಕ್ಷೆಯಂತೆ ದೇವವ್ರತ ವಚನ ನೀಡಿದ : ''ತಾನೆಂದೂ ರಾಜ್ಯಭಾರ ಮಾಡುವುದಿಲ್ಲ''. ಇದರಿಂದ ಸತ್ಯವತಿಯ ಸಂತಾನಕ್ಕೇ ರಾಜ್ಯ ದೊರೆಯುವಂತಾಗುವುದು. ಇನ್ನು ಅವನ ಸಂತತಿಯಿಂದ ಬರಬಹುದಾದ ವಿಘ್ನ; ಅದಕ್ಕೆಂದು ದೇವವ್ರತನ ಎರಡನೆಯ ಪ್ರತಿಜ್ಞೆ : ''ತಾನೆಂದೂ ವಿವಾಹವಾಗುವುದಿಲ್ಲ''.

೨) ಹಿಂದೆ ಆಯುರಾಜನ ಪುತ್ರನಾದ ರಜಿ ಎಂಬವನು ತನಗೆ ದೇವತೆಗಳು ನೀಡಿದ ವಚನದಂತೆ, ಇಂದ್ರಪದವಿ ದೊರೆಯುವಂತಿದ್ದರೂ, ಅದನ್ನು ತ್ಯಜಿಸಿದ್ದ. ಆದರೆ ಅವನ ಅನಂತರ ರಾಜ್ಯವಾಳತೊಡಗಿದ ರಾಜೇಯರೆಂಬ ಹೆಸರಿನ ಐನೂರು ಜನ ಅವನ ಪುತ್ರರು ತಂದೆಗೆ ವಚನ ನೀಡಿದಂತೆ ಇಂದ್ರಪದವಿಯನ್ನು, ತಮಗೆ ನೀಡಲೇಬೇಕೆಂದು ಹಟ ಹಿಡಿಯುವರು. ಕೊನೆಗೆ ಬೃಹಸ್ಪತ್ಯಾಚಾರ್ಯರು ಪ್ರಚುರಪಡಿಸಿದ ಚಾರ್ವಾಕಮತದಿಂದಾಗಿ ಅವರೆಲ್ಲ ನಾಶ ಹೊಂದಿದರು. ತಂದೆ ತಿಳಿಸಿದ್ದರೂ, ಇಂದ್ರಪದವಿಗೆ ಆಶಿಸಿ, ಸರ್ವನಾಶ ಕಂಡದ್ದು ಅವರ ಪರಿ. ಇಲ್ಲೂ ಸಹ ತಾವು ರಾಜ್ಯ ತ್ಯಜಿಸಿದರೂ, ತಮ್ಮ ಮಕ್ಕಳಿಂದ ರಾಜ್ಯ ಪಾಲಾಗುವ ಪ್ರಸಂಗ ಒದಗಿ, ಅವನ ಚಕ್ರವರ್ತಿತ್ವಕ್ಕೆ ಚ್ಯುತಿ ಬರುವ ಶಂಕೆ ದಾಶರಾಜನಿಗೆ ಬರಲು ಸಾಧ್ಯವಿದೆ. ಅದಕ್ಕೆಂದೇ ದೇವವ್ರತ ತಾನು ಎಂದೂ ವಿವಾಹವಾಗದ ಮತ್ತೊಂದು ಶಪಥವನ್ನು ಮಾಡಿದ ಎಂದು ತಿಳಿಯಬೇಕು. ರಜಿಯ ಕಥೆ ಹರಿವಂಶದಲ್ಲಿ(೧/೨೮) ಬಂದಿದೆ.

೩) ದೇವವ್ರತನ ಇಂತಹ ನೈಷ್ಠಿಕಬ್ರಹ್ಮಚರ್ಯದ ಪ್ರತಿಜ್ಞೆಗೆ ಪಿತೃಭಕ್ತಿ ಒಂದು ಕಾರಣವಾದರೆ, ಬ್ರಹ್ಮದೇವರು ನೀಡಿದ್ದ ಶಾಪ ಪ್ರಧಾನಕಾರಣವಾಯಿತು ಎಂದು ತಿಳಿಯಬೇಕು.

ದೇವವ್ರತ 'ಭೀಷ್ಮ'ನಾದ

[೧]ಭೀಮವ್ರತತ್ವಾದ್ಧಿ ತದಾऽಸ್ಯ ನಾಮ
ಕೃತ್ವಾ ದೇವಾ ಭೀಷ್ಮ ಇತಿ ಹ್ಯಚೀಕ್ಲೃಪನ್ ।
ಪ್ರಸೂನವೃಷ್ಟಿಂ ಚ ಸ ದಾಶದತ್ತಾಂ
ಕಾಳೀಂ ಸಮಾದಾಯ ಪಿತುಃ ಸಮಾರ್ಪಯತ್ ॥ ೭೮ ॥

ಅ: ಅಂತಹ ಕಠಿಣವ್ರತದಿಂದಾಗಿ ಆಗ ಆತನಿಗೆ 'ಭೀಷ್ಮ' ಎಂದು ನಾಮಕರಣ ಮಾಡಿ, ದೇವತೆಗಳು ಪುಷ್ಪವೃಷ್ಟಿಗರೆದರು. ದೇವವ್ರತ ಸತ್ಯವತಿಯನ್ನು ಕರೆದೊಯ್ದು ತಂದೆಗೆ ಒಪ್ಪಿಸಿದ.

ವಿ: ೧) ದೇವವ್ರತ ಕೈಗೊಂಡ ಆ ಎರಡು ಕಠೋರವ್ರತಗಳಿಗೆ ಮೆಚ್ಚಿದ ದೇವತೆಗಳು ಅವನಿಗೆ 'ಭೀಷ್ಮ' ಎಂದು ಹೆಸರಿಟ್ಟು, ಪುಷ್ಪವೃಷ್ಟಿಗೈದರು. ಅಂದಿನಿಂದ ಭೀಷ್ಮ ಎಂಬುದೇ ಅವರ ಮುಖ್ಯಹೆಸರಾಯಿತು. ಆ ಹೆಸರು ಅವರ [೨]ತ್ಯಾಗದ ಅಪೂರ್ವತೆಗೆ ಸೂಚಕವಾಯಿತು.

೨) ಭೀಷ್ಮ ಎಂಬುದಕ್ಕೆ ಸಾಹಸಿ ಎಂಬ ಅರ್ಥವೇ ಕೋಶಗಳಲ್ಲಿದ್ದು ಆ ಅರ್ಥದಲ್ಲೂ ಭೀಮವ್ರತದ ಕಾರಣದಿಂದಾಗಿ ಅವರು ಭೀಷ್ಮ ಎನ್ನಿಸಿದ್ದು ಉಚಿತ.

೩) ಕಾಳಿ ಎಂಬುದು ಸತ್ಯವತಿಯ ಮತ್ತೊಂದು ಹೆಸರು. ಅವಳನ್ನು ಕರೆದೊಯ್ದ ಭೀಷ್ಮರು ತಂದೆಗೆ ಒಪ್ಪಿಸಿ, ವಿವಾಹ ಮಾಡಿಸಿದರು.

೪) ಮಕ್ಕಳ ಮದುವೆ ಮಾಡಿ ಸಂತೋಷಿಸುವುದು ಪಿತೃಗಳ ಕರ್ತವ್ಯ. ಆದರೆ ತಂದೆಗೇ ಅವನು ಮೆಚ್ಚಿದ ಹೆಣ್ಣನ್ನು ತಂದು ಮದುವೆ ಮಾಡಿಸಿ, ತೃಪ್ತಿಪಡೆದ ಅಪೂರ್ವಚೇತನ ಭೀಷ್ಮ.

---

೧. ಹಿಶಬ್ದೇನ ಊರ್ಧ್ವರೇತಸ್ಕತ್ವಾಖ್ಯವ್ರತಸ್ಯ ಇತರಾಸಾಧ್ಯತ್ವಾತ್ ಭಯಂಕರತ್ವಂ ಪ್ರಸಿದ್ಧಮಿತಿ ಸೂಚಯತಿ। ಪ್ರಸೂನವೃಷ್ಟಿಂ ಹ್ಯಚೀಕ್ಲೃಪನ್ನಿತ್ಯತ್ರ ಹಿಶಬ್ದೇನ ಈದೃಶಸ್ಯ ಭೀಷ್ಮಸ್ಯ ಪುಷ್ಪವೃಷ್ಟಿರುಚಿತೇತಿ ಪ್ರಸಿದ್ಧಿಂ ಸೂಚಯತಿ ॥
– (ವಾ.)

ಭೀಮಂ ಭಯಂಕರಂ ವ್ರತಂ ಯಸ್ಯ ಸ ತಥಾ । – (ಜ.)

೨. ಭೀಷ್ಮಃ ಖಲು ಪಿತುಃ ಪ್ರಿಯಚಿಕೀರ್ಷಯಾ ಸತ್ಯವತೀಂ ಮಾತರಮುದವಾಹಯತ್ । ಯಾಮಾಹುರ್ಗಂಧಕಾಲೀತಿ। –ಭಾರತ (ಆದಿ. ೯೫/೪೮)

ಉತ್ಪಲವರ್ಣತ್ವಾತ್ ಕಾಲೀ । – (ಶ್ರೀ.)

೩. ಭೀಷ್ಮಃ ಮಹಾಸಾಹಸಿಕಃ । 'ಭೀಷ್ಮಃ ಸಾಹಸಿಕೋ ಮತಃ' ಇತ್ಯಮರಮಾಲಾ । – ಲಕ್ಷಾಲಂಕಾರ

೫) ದೇವವ್ರತ ಎಂಬುದು ಅವರ ಮೊದಲ ಹೆಸರು; ಭೀಷ್ಮ ಎಂಬುದು ಈ ಕಾರಣದಿಂದ ಬಂದ ಹೆಸರು. ಮುಂಚೆ ದೇವವ್ರತರಾದವರಷ್ಟೆ ಭೀಷ್ಮರಾಗಲು ಸಾಧ್ಯ ಎಂಬುದು ಇದರಿಂದ ಸೂಚಿತವಾಗುವುದು. ದೇವವ್ರತ ಎಂದರೆ ದೇವನಾದ ಶ್ರೀಹರಿಯಲ್ಲೂ, ರಮಾಬ್ರಹ್ಮಾದಿ-ದೇವತೆಗಳಲ್ಲೂ ಉಚಿತರೀತಿಯಲ್ಲಿ ಆದರ ಮಾಡುವ ದೀಕ್ಷೆ ತೊಟ್ಟವನು ಎಂದರ್ಥ. ಉಪಲಕ್ಷಣದಿಂದ ಋಷಿ, ಪಿತೃ, ಭೂತ ಹಾಗೂ ಮನುಷ್ಯರೆಂಬ ಇತರ ನಾಲ್ವರನ್ನು ಕುರಿತ ಬ್ರಹ್ಮಯಜ್ಞ, ಪಿತೃಯಜ್ಞ, ಭೂತಯಜ್ಞ ಹಾಗೂ ಮನುಷ್ಯಯಜ್ಞ ಎಂಬ ಯಜ್ಞಗಳಲ್ಲಿ, ಒಟ್ಟಾಗಿ ಪಂಚಮಹಾಯಜ್ಞಗಳಲ್ಲಿ ದೀಕ್ಷೆ ತೊಟ್ಟವರು ಎಂದು ತಿಳಿಯಬಹುದು.

ಜ್ಞಾತ್ವಾ ತು ತಾಂ ರಾಜಪುತ್ರೀಂ ಗುಣಾಢ್ಯಾಂ
ಸತ್ಯಸ್ಯ ವಿಷ್ಣೋರ್ಮಾತರಂ ನಾಮತಸ್ತತ್ ।
ಲೋಕೇ ಪ್ರಸಿದ್ಧಾಂ ಸತ್ಯವತೀತ್ಯುದಾರಾಂ
ವಿವಾಹಯಾಮಾಸ ಪಿತುಃ ಸ ಭೀಷ್ಮಃ ॥ ೭೯ ॥

ಅ: ಸತ್ಯಸ್ವರೂಪಿಯಾದ ವಿಷ್ಣುವಿನ ತಾಯಿಯೂ, ಸತ್ಯವತಿ ಎಂದು ಲೋಕದಲ್ಲಿ ಪ್ರಸಿದ್ಧಳೂ ಆದ ಅವಳನ್ನು ರಾಜಪುತ್ರಿಯೂ, ಗುಣಾಢ್ಯಳೂ, ಶ್ರೇಷ್ಠಳೂ ಎಂದು ತಿಳಿದೇ ಭೀಷ್ಮ ತಂದೆಗೆ ವಿವಾಹಮಾಡಿಸಿದ.

ವಿ: ೧) 'ಸತ್ಯ' ಎಂಬುದು ಮಹಾವಿಷ್ಣುವಿನ ಹೆಸರುಗಳಲ್ಲೊಂದು:

ವಸುರ್ವಸುಮನಾಃ **ಸತ್ಯಃ** ಸಮಾತ್ಮಾ ಸಮ್ಮಿತಃ ಸಮಃ ।
ಗುರುರ್ಗುರುತಮೋ ಧಾಮ **ಸತ್ಯಃ** ಸತ್ಯಪರಾಕ್ರಮಃ ।
ಸತ್ತ್ವವಾನ್ ಸಾತ್ತ್ವಿಕಃ **ಸತ್ಯಃ** ಸತ್ಯಧರ್ಮಪರಾಯಣಃ । – (ವಿಷ್ಣುಸಹಸ್ರನಾಮ)

೨) ಸತ್ಯನಾಮಕನಾದ ವಿಷ್ಣುವಿಗೆ ತಾಯಿ ಎನ್ನಿಸಿಕೊಂಡದ್ದರಿಂದ ಸತ್ಯವತಿ ಎಂಬ ಹೆಸರು ಅವಳಿಗೆ ಉಚಿತವಾಯಿತು ಎಂದರ್ಥ.

೩) ಭೀಷ್ಮರು ಸತ್ಯವತಿಯನ್ನು ರಾಜಪುತ್ರಿಯೆಂದು ಖಚಿತಪಡಿಸಿಕೊಂಡೇ ವಿವಾಹ ಮಾಡಿದರು. ಆದ್ದರಿಂದ ಇದು ಅಸವರ್ಣವಿವಾಹ ಎಂಬ ಶಂಕೆಗೆ ಅವಕಾಶವಿಲ್ಲ:

ಚೇದಿರಾಜಸುತಾಂ ಜ್ಞಾತ್ವಾ ದಾಶರಾಜೇನ ವರ್ಧಿತಾಮ್ ।
ವಿವಾಹಂ ಕಾರಯಾಮಾಸ ಶಾಸ್ತ್ರದೃಷ್ಟೇನ ಕರ್ಮಣಾ ॥

– ಭಾರತ (ಆದಿ. ೧೦೧/೧)

[೧]ಪ್ರಾಯಃ ಸತಾಂ ನ ಮನಃ ಪಾಪಮಾರ್ಗೇ
ಗಚ್ಛೇದಿತಿ ಹ್ಯಾತ್ಮಮನಶ್ಚ ಸಕ್ತಮ್ ।
ಜ್ಞಾತ್ವಾಽಪಿ ತಾಂ ದಾಶಗೃಹೇ [೨]ವಿವರ್ಧಿತಾಂ
ಜಗ್ರಾಹ ಸದ್ಧರ್ಮರತಶ್ಚ ಶಂತನುಃ ॥ ೮೦ ॥

ಅ: ಸಾಮಾನ್ಯವಾಗಿ ಸಜ್ಜನರ ಮನಸ್ಸು ಪಾಪಮಾರ್ಗದಲ್ಲಿ ತೊಡಗದು, ತನ್ನ ಮನಸ್ಸಾದರೊ ಅವಳಲ್ಲಿ ಅನುರಕ್ತವಾಗಿದೆ ಎಂಬ ಕಾರಣದಿಂದ ಅವಳು ದಾಶಗೃಹದಲ್ಲಿ [೨]ವಿಶೇಷರೀತಿಯಲ್ಲಿ ಬೆಳೆಸಲ್ಪಟ್ಟವಳು ಎಂದು ಅರಿತೇ ಉತ್ತಮಧರ್ಮಶೀಲನಾದ ಶಂತನು ಅವಳನ್ನು ಸ್ವೀಕರಿಸಿದ.

ವಿ: ೧) ಭೀಷ್ಮರು ಸತ್ಯವತಿಯನ್ನು ರಾಜಕುಮಾರಿಯೆಂದು ನಿಶ್ಚಯಿಸಿಯೇ ವಿವಾಹ ಮಾಡಿಸಿದಂತೆ, ಶಂತನು ಸಹ ಅವಳು ಅಂಬಿಗರ ಮನೆಯಲ್ಲಿದ್ದರೂ, ರಾಜಪುತ್ರಿಯಂತೆಯೇ ಬೆಳೆಸಲ್ಪಟ್ಟವಳು ಎಂದು ಖಚಿತಪಡಿಸಿಕೊಂಡೇ ವಿವಾಹವಾದ.

೨) ಸಜ್ಜನರ ಮನಸ್ಸು ಸಾಮಾನ್ಯವಾಗಿ ನಿಷಿದ್ಧಕಾರ್ಯದಲ್ಲಿ ತೊಡಗದು. ತನ್ನ ಮನಸ್ಸು ಅವಳಲ್ಲಿ ಆಸಕ್ತವಾಗಿರುವುದರಿಂದ ಅವಳು ತಾನು ವಿವಾಹವಾಗಲು ಯೋಗ್ಯಳಾದ ಕ್ಷತ್ರಿಯಸ್ತ್ರೀಯೇ ಆಗಿರಬೇಕೆಂಬುದು ಶಂತನುವಿನ ವಿಚಾರಸರಣಿ.

---

೧. ಸತಾಂ ಮನಃ ಪಾಪಮಾರ್ಗೇ ಪ್ರಾಯಃ ನ ಗಚ್ಛೇತ್ । ಚಂದ್ರಸ್ಯ ಸ್ವೋಚ್ಚಬೃಹಸ್ಪತೇರ್ದಾರಪರಿಗ್ರಹಾತ್ ಸುಗ್ರೀವಸ್ಯ ಸ್ವೋಚ್ಚವಾಲಿವಧೂಪರಿಗ್ರಹದರ್ಶನಾಚ್ಚ ಪ್ರಾಯ ಇತ್ಯುಕ್ತಮ್ । ತರ್ಹಿ ತದ್ವದೇವ ಸ್ವಸ್ಯಾಪಿ ಕದಾಚಿತ್ಪಾಪಪ್ರವೃತ್ತಿಃ ಸ್ಯಾದಿತಿ ನ ಶಂಕನೀಯಮ್ । ಆಕಲ್ಪಾಂತಂ ಮೇರುಮಭಿತಃ ಪರ್ಯಟನೇನ ಲಬ್ಧಸ್ವಯೋಗ್ಯತಾತಿರಿಕ್ತಪುಣ್ಯಸ್ಯ ಸುಗ್ರೀವಸ್ಯ ಚ ಸ್ವಯೋಗ್ಯತಾತಿರೇಕೇಣ ರಾಮಸೇವಾರ್ಜಿತಪುಣ್ಯಸ್ಯ ಚ ನಾಶಾಯ ಕದಾಚಿತ್ಪಾಪೇ ಪ್ರವೃತ್ತಿಸಂಭವಾತ್ । ಮಮ ತು ತದಭಾವಾತ್ ನ ತಾದೃಶೀ ಪ್ರವೃತ್ತಿರಿತಿ ಭಾವಸಂಭವಾತ್ । ಅತ ಏವ ಸತಾಮಿತ್ಯುಕ್ತಮ್ । ಸ್ವಸ್ವಯೋಗ್ಯತಾ ಯಾವತೀ ತಾವತ್ಯಾಮೇವ ಚ ಸತಾಂ ವರ್ತಮಾನಾನಾಂ ಸತಾಂ ಸಜ್ಜನಾನಾಮಿತ್ಯಾವೃತ್ತ್ಯಾಯೋಜನೀಯಮ್ । ಇತಿ ಹೇತೋಃ= ಆತ್ಮಮನಶ್ಚ ಸಕ್ತಮಿತಿ ಹೇತೋಶ್ಚ। – (ವಾ.)

ಇಂದ್ರಚಂದ್ರಾದಿವ್ಯಾವೃತ್ತ್ಯರ್ಥಂ ಪ್ರಾಯ ಇತ್ಯುಕ್ತಮ್ । – (ಜ.)

೨. ತಾಂ ದಾಶಕನ್ಯಾತ್ವೇನ ಪ್ರಸಿದ್ಧಾಮಪಿ ದಾಶಗೃಹೇ ವಿವರ್ಧಿತಾಂ ವಿ = ವಿಶೇಷೇಣ ರಾಜಕನ್ಯಾಯೋಗ್ಯಾನ್ನ-ಪಾನವಿಶೇಷೇಣ ವರ್ಧಿತಾಮ್ । 'ಸರ್ವಂ ವಾಕ್ಯಂ ಸಾವಧಾರಣಮ್' ಇತಿ ನ್ಯಾಯೇನ ವಿವರ್ಧಿತಾಮೇವ ನ ತೂತ್ಪನ್ನಾಮಿತ್ಯರ್ಥಃ । ಜ್ಞಾತ್ವಾ ಜಗ್ರಾಹೇತಿ ಯೋಜನಾ ॥ – (ವಾ.)

ಮತ್ಸ್ಯೋದರೀ ತು ತನ್ನಾಮ ಚಕ್ರುಃ ಸ್ವಜ್ಞಾತಿಮಧ್ಯತಃ ।
ತೇಷಾಮನ್ನಂ ನ ಸಾ ಭುಂಕ್ತೇ ಜಲಂ ವಾ ऽಪಿ ಕದಾಚನ ॥
ಕರ್ಮಾನುರೂಪಾ ಬುದ್ಧಿಸ್ತು ತಸ್ಯಾ ಜಾತಾ ಮುನೀಶ್ವರ ।
ಕಂದಮೂಲಾನಿ ಸೇವಂತೀ ಕೃಷ್ಣಾತೀರೇ ಸದಾ ऽವಸತ್ ॥ – ಇತಿ ಸ್ಕಾಂದೇ ವ್ಯಾಸತೀರ್ಥಮಾಹಾತ್ಮ್ಯೇ

೩) ಶಂತನುವಿನ ಪೂರ್ವಜರಲ್ಲೊಬ್ಬನಾದ ದುಷ್ಮಂತನು ಸಹ ಶಕುಂತಲೆಯನ್ನು ಕ್ಷತ್ರಿಯಕನ್ಯೆಯೆಂದು[೧] ತೀರ್ಮಾನಿಸಲು ಇದೇ ಆಧಾರವನ್ನು ಅವಲಂಬಿಸಿದ್ದನ್ನು ಮಹಾಭಾರತ ದಾಖಲಿಸಿದೆ:

'ನ ಮೇಽನ್ಯತ್ ಕ್ಷತ್ರಿಯಾಯಾ ಮನೋ ಜಾತು ಪ್ರವರ್ತತೇ' । – ಭಾರತ

೪) ಸತ್ಯವತಿ ಕ್ಷತ್ರಿಯೋಚಿತರೀತಿಯಲ್ಲಿ ಬೆಳೆಸಲ್ಪಟ್ಟಿದ್ದನ್ನು ವಿವರಿಸುವ ಸ್ಕಂದಪುರಾಣದ ವಚನವನ್ನು ಈಗಾಗಲೇ ಉಲ್ಲೇಖಿಸಲಾಗಿದೆ.

೫) ಸಜ್ಜನರ ಮನಸ್ಸು ಪ್ರಾರಬ್ಧವಶಾತ್ ಒದಗುವ ಅಸುರಾವೇಶಾದಿಕಾರಣದಿಂದಾಗಿ ಒಮ್ಮೊಮ್ಮೆ ಪಾಪಕರ್ಮದಲ್ಲಿ ತೊಡಗುವುದುಂಟು ಎಂಬುದನ್ನು ಸೂಚಿಸಲು 'ಪ್ರಾಯಃ' ಎಂದಿರುವರು. ಚಂದ್ರ, ಸುಗ್ರೀವರು ಇದಕ್ಕೆ ದೃಷ್ಟಾಂತ. ಚಂದ್ರ ಗುರುಪತ್ನಿಯಾದ ತಾರೆಯನ್ನು ಪರಿಗ್ರಹಿಸಿದರೆ, ಸುಗ್ರೀವ ವಾಲಿಪತ್ನಿಯಾದ ತಾರೆಯನ್ನು ಪರಿಗ್ರಹಿಸಿದ. ಸುಗ್ರೀವ ಸೂರ್ಯನ ಅವತಾರ. ಎಂದರೆ ಲೋಕಕ್ಕೆ ಬೆಳಕು ನೀಡುವ ಇಬ್ಬರೂ ಹೀಗೆ ತಪ್ಪೆಸಗಿದವರೇ. ಆದರೆ ಅವರು ತಮ್ಮ ಯೋಗ್ಯತೆಗೆ ಮೀರಿದ ಅಧಿಕಪುಣ್ಯದ ಕಾರಣದಿಂದಾಗಿ ಹಾಗೆ ಮಾಡುವಂತಾಯಿತು. ಕಲ್ಪ ಪೂರ್ತಿ ಮೇರು ಪ್ರದಕ್ಷಿಣೆ ಮಾಡುವುದು ಚಂದ್ರನ ಅಧಿಕಪುಣ್ಯಕ್ಕೆ ಕಾರಣವಾದರೆ, ವಿಶಿಷ್ಟರೀತಿಯಲ್ಲಿ ರಾಮಸೇವೆ ಮಾಡಿದ್ದು ಸುಗ್ರೀವನ ಅಧಿಕಪುಣ್ಯಕ್ಕೆ ಕಾರಣವಾಯಿತು ಎಂಬ ವಿವರ ವಾದಿರಾಜೀಯದಲ್ಲಿದೆ.

ಭೀಷ್ಮರಿಗೆ ಸ್ವಚ್ಛಂದಮೃತ್ಯುತ್ವವರ

ಸ್ವಚ್ಛಂದಮೃತ್ಯುತ್ವವರಂ ಪ್ರದಾಯ
ತಥಾಽಪ್ಯಜೇಯತ್ವಮಧೃಷ್ಯತಾಂ ಚ ।
ಯುದ್ಧೇಷು ಭೀಷ್ಮಸ್ಯ ನೃಪೋತ್ತಮೋಽಸ್ಯ
ರೇಮೇ ತಯೈವಾಬ್ದಗಣಾನ್ ಬಹೂಂಶ್ಚ ॥ ೮೧ ॥

---

೧. ಅಸಂಶಯಂ ಕ್ಷತ್ರಪರಿಗ್ರಹಕ್ಷಮಾ ಯದಾರ್ಯಮಸ್ಯಾಮಭಿಲಾಷಿ ಮೇ ಮನಃ ।
ಸತಾಂ ಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ ॥ – ಅಭಿಜ್ಞಾನಶಾಕುಂತಲ

೨. ಅಜೇಯತ್ವಂ = ಪರೈರಜೇಯತಾಮ್ । ಅತ ಏವಾಧೃಷ್ಯತಾಂ ಪರಧರ್ಷಣಾಯೋಗ್ಯತಾಂ ಚ ಪ್ರದಾಯೇತಿ ಸಂಬಂಧಃ । ಧರ್ಷಣಂ = ಬಲಾತ್ಕಾರೇಣ ಗ್ರಹಣಮ್ । ಹೀತ್ಯನೇನ ತಾದೃಶಸಾಮರ್ಥ್ಯಂ ಭೀಷ್ಮಸ್ಯ ಪ್ರಸಿದ್ಧಮಿತಿ ಸೂಚಯತಿ ॥ – (ವಾ.)

ಅ: ಭೀಷ್ಮನಿಗೆ ಸ್ವಚ್ಛಂದಮೃತ್ಯುತ್ವವರವನ್ನು, ಹಾಗೆಯೇ ಯುದ್ಧಗಳಲ್ಲಿ ಅಜೇಯತ್ವ-ವನ್ನೂ, ಶತ್ರುಗಳಿಗೆ ಜಗ್ಗದಿರುವಿಕೆಯನ್ನೂ ವರವನ್ನಾಗಿ ನೀಡಿ, ನೃಪಶ್ರೇಷ್ಠನಾದ ಶಂತನು ಸತ್ಯವತಿಯೊಂದಿಗೆ ಬಹುವರ್ಷಗಳ ಕಾಲ ವಿಹರಿಸಿದ.

ವಿ: ೧) ಸ್ವಚ್ಛಂದಮೃತ್ಯುತ್ವ ಎಂದರೆ ತನ್ನ ಇಚ್ಛೆಗನುಸಾರವಾಗಿ ದೇಹವನ್ನು ಅನಾಯಾಸವಾಗಿ ತೊರೆಯುವ ಸಾಮರ್ಥ್ಯವಿಶೇಷ. ಅಧೃಷ್ಯತ್ವ ಎಂದರೆ ಇತರರಿಂದ ಸೆರೆಹಿಡಿಯಲ್ಪಡದಿರುವಿಕೆ ಎಂದರ್ಥ.

೨) ಈ ವರಗಳು ಭೀಷ್ಮರು ಬಯಸಿದ್ದಲ್ಲ. ಸುಪ್ರೀತನಾದ ಶಂತನು ತಾನಾಗಿಯೇ ಅವರಿಗೆ ನೀಡಿದ್ದು ಎಂಬುದು ಮತ್ತೊಂದು ವಿಶೇಷ.

೩) ಪಿತೃತೋಷಣ ಸ್ವಚ್ಛಂದಮೃತ್ಯುತ್ವಕ್ಕೆ ಕಾರಣವಾಗುವ ಅಪೂರ್ವತಪಸ್ಸು ಎಂಬ ತತ್ತ್ವವೂ ಇಲ್ಲಿದೆ. ಪಿತೃಪತಿ ಯಮ; ಅವನು ಮೃತ್ಯುದೇವತೆ. ಪಿತೃಸೇವೆಯಿಂದ ಯಮ ಸಂತೃಪ್ತನಾಗುವುದರಿಂದ ಅನಾಯಾಸದ ಮರಣ ಲಭಿಸುವುದು ಸ್ವರಸವೇ ಆಗಿದೆ.

೪) ಭಗವಂತ ಜಗತ್ಪಿತೃ. ಅವನ ಆರಾಧನೆ ಸರ್ವಥಾ ಮೃತ್ಯುರಾಹಿತ್ಯಕ್ಕೆ ಎಂದರೆ ಮೋಕ್ಷಪ್ರಾಪ್ತಿಗೆ ಸಾಧನವಾಗುವುದು ಕೈಮುತ್ಯಸಿದ್ಧ.

೫) ತಂದೆಯ ಕಲ್ಯಾಣಕ್ಕೋಸ್ಕರ ರಾಜ್ಯತ್ಯಾಗ, ಭೋಗತ್ಯಾಗ ಭೀಷ್ಮರ ಸಾಧನೆ. ಜಗತ್ಪಿತೃವಾದ ಭಗವಂತನ ಪ್ರೀತಿಗೋಸ್ಕರ ಫಲತ್ಯಾಗ ಸಕಲರ ಕರ್ತವ್ಯ.

ಲೇಭೇ ಸ ಚಿತ್ರಾಂಗದಮತ್ರ ಪುತ್ರಂ
ತಥಾ ದ್ವಿತೀಯಂ ಚ ವಿಚಿತ್ರವೀರ್ಯಮ್ ।
ತಯೋಶ್ಚ ಬಾಲ್ಯೇ ವ್ಯಸೃಜಚ್ಛರೀರಂ
ಜೀರ್ಣೇನ ದೇಹೇನ ಹಿ ಕಿಂ ಮಮೇತಿ ॥ ೮೨ ॥

ಅ: ಶಂತನು ಅವಳಲ್ಲಿ ಚಿತ್ರಾಂಗದನೆಂಬ ಒಬ್ಬ ಮಗನನ್ನು, ಹಾಗೆಯೇ ವಿಚಿತ್ರವೀರ್ಯ-ನೆಂಬ ಮತ್ತೊಬ್ಬ ಮಗನನ್ನೂ ಪಡೆದ; ಅವರಿಬ್ಬರಿನ್ನೂ ಚಿಕ್ಕವರಿದ್ದಾಗಲೇ ''ಈ ವಯಸ್ಸಾದ ದೇಹದಿಂದ ನನಗೇನು ಪ್ರಯೋಜನ'' ಎಂದು ತನ್ನ ದೇಹವನ್ನು ತೊರೆದ.

---

೧. ಹಿಶಬ್ದೇನ ಸ್ವಚ್ಛಂದಮೃತ್ಯುತಾಪ್ರಸಿದ್ಧಿಂ ಸೂಚಯತಿ । ಪರಸ್ಯ ಸ್ವಚ್ಛಂದಮೃತ್ಯುತಾವರಪ್ರದಾತುಃ ಸ್ವಸ್ಯ ಸ್ವಚ್ಛಂದಮೃತ್ಯುತಾ ಕಿಂ ವಾಚ್ಯೇತಿ ಭಾವಃ ॥ – (ವಾ.)

ವಿಃ ೧) ಇಲ್ಲಿ ಜೀರ್ಣದೇಹ ಎಂಬುದಕ್ಕೆ ತನ್ನ ಅವತಾರಕಾರ್ಯವನ್ನು ಪೂರೈಸಿದ ದೇಹ ಎಂದೂ ಅರ್ಥ ಮಾಡಬಹುದು. ಅವನಿಗೆ ಆ ವೇಳೆಗೆ ಆರುನೂರು ಅಥವಾ ಏಳುನೂರು ವರ್ಷಗಳಿಗಿಂತ ಹೆಚ್ಚು ವಯಸ್ಸಾಗಿದ್ದರೂ, ಅದು ತೊರೆಯುವಷ್ಟು ಜೀರ್ಣವೇನೂ ಆಗಿರಲಿಲ್ಲ. ಏಕೆಂದರೆ ಆತನ ಅಣ್ಣನಾದ ಬಾಹ್ಲೀಕರಾಜ ಇನ್ನೂ ಜೀವಿಸಿಯೇ ಇದ್ದ. ಅವನು ಮುಂದೆಯೂ ಸಹ ಕುರುಕ್ಷೇತ್ರಯುದ್ಧದಲ್ಲಿ ಭಾಗವಹಿಸುವ ವಿವರ ಬಂದಿದೆ. ಅಲ್ಲದೆ ಶಂತನು ತನ್ನ ಸ್ಪರ್ಶಮಾತ್ರದಿಂದಲೇ ವೃದ್ಧರನ್ನು ತರುಣರನ್ನಾಗಿ ಮಾಡುವ ಅಪೂರ್ವಸಾಮರ್ಥ್ಯ ಹೊಂದಿದ್ದ ಉಲ್ಲೇಖ ಈಗಾಗಲೇ ಬಂದಿದೆ. ಮೇಲಾಗಿ ಅವನು ವರುಣನ ಅವತಾರ; ವರುಣ ದೇವವೈದ್ಯರಾದ ಅಶ್ವಿನಿದೇವತೆಗಳಿಗೂ ಗುರುವಾದ ಮಹಾವೈದ್ಯ. ರಾಮಾಯಣಕಾಲದಲ್ಲಿ ಸುಷೇಣನೆಂಬ ಕಪಿಯಾಗಿ ಜನಿಸಿ, ಗಾಯಗೊಂಡ ಕಪಿಗಳನ್ನೆಲ್ಲ ಪುನಃ ದೃಢಕಾಯರನ್ನಾಗಿ ಮಾಡುತ್ತಿದ್ದ ಅಪೂರ್ವಸಾಧಕ. ಆದ್ದರಿಂದ ಇಲ್ಲಿ 'ಜೀರ್ಣದೇಹ' ಎಂಬುದಕ್ಕೆ 'ಅವತಾರಕಾರ್ಯ ಪೂರೈಸಿದ ದೇಹ' ಎಂದೇ ಅರ್ಥಮಾಡಬೇಕು.

೧ಸ್ವೇಚ್ಛಯಾ ವರುಣತ್ವಂ ಸ ಪ್ರಾಪ ನಾನಿಚ್ಛಯಾ ತನುಃ ।
ತಸ್ಮಿನ್ ಕಾಲೇ ತ್ಯಜ್ಯತೇ ಹಿ ಬಲವದ್ಭಿರ್ವಧಂ ವಿನಾ ॥ ೮೩ ॥

ಅ: ಅವನು ತನ್ನ ಇಚ್ಛೆಯಿಂದಲೇ (ದೇಹ ತೊರೆದು) ವರುಣತ್ವವನ್ನು ಪಡೆದ. ಆ ಕಾಲದಲ್ಲಿ (ತಪಸ್ವಿಗಳಾದವರು) ತಮಗಿಂತ ಹೆಚ್ಚು ಬಲಶಾಲಿಗಳಾದವರಿಂದ ಕೊಲ್ಲಲ್ಪಡುವುದರ ಹೊರತು ಇಚ್ಛೆ ಇಲ್ಲದೆ ದೇಹ ತೊರೆಯುತ್ತಿರಲಿಲ್ಲ.

ವಿಃ ೧) ಶಂತನು ಸಹ ಸ್ವಚ್ಛಂದಮೃತ್ಯುವಾಗಿದ್ದವನು. ತನ್ನ ಮಗನಾದ ಭೀಷ್ಮರಿಗೆ ಅಂತಹ ವರ ನೀಡುವ ಅವನಿಗೆ ಆ ಸಿದ್ಧಿ ಇದ್ದುದು ಕೈಮುತ್ಯಸಿದ್ಧ. ತನಗಿಲ್ಲದ ಸಾಮರ್ಥ್ಯವನ್ನು ಇತರರಿಗೆ ಅನುಗ್ರಹಿಸಲು ಸರ್ವಥಾ ಅಶಕ್ಯವಷ್ಟೆ.

---

೧. ತದೇವ ಸ್ಪಷ್ಟಯತಿ - ಸ್ವೇಚ್ಛಯೇತಿ । ಸಃ = ಶಂತನುಃ ಸ್ವೇಚ್ಛಯಾ ವರುಣತ್ವಂ= ವರುಣಾಖ್ಯಮೂಲರೂಪತ್ವಂ ಪ್ರಾಪ । ನ ತ್ವನಿಚ್ಛಯಾ । ಅತೋ ನ ಸ್ವಚ್ಛಂದಮೃತ್ಯುತ್ವಹಾನಿಃ । ಬಲವದ್ಭಿಃ= ಯೋಗಬಲವದ್ಭಿಃ ತಸ್ಮಿನ್ಕಾಲೇ= ಮರಣೇಚ್ಛಾಕಾಲೇ ವಧಂ ವಿನಾ ಸ್ವೇಚ್ಛಯೈವ ತನುಸ್ತ್ಯಜ್ಯತೇ ಹೀತಿ ಹಿಶಬ್ದೇನ ಯೋಗೈಶ್ವರ್ಯಸ್ಯ ತಾದೃಶಸಾಮರ್ಥ್ಯಂ ಸತೀದೇವ್ಯಾದೌ ಪ್ರಸಿದ್ಧಮಿತ್ಯಾಹ ॥ – (ವಾ.)

೨. ಚಿತ್ರಾಂಗದಾದಿವ್ಯಾವೃತ್ಯರ್ಥಂ ಬಲವದ್ಭಿರಿತ್ಯುಕ್ತಮ್ । – (ಜ.)

ತಸ್ಮಿನ್ ಕಾಲೇ ಮರಣೇಚ್ಛಾಕಾಲೇ ವಧಂ ವಿನಾ ತನುಃ ಸ್ವೇಚ್ಛಯೈವ ತ್ಯಜ್ಯತೇ ಹೀತ್ಯರ್ಥ ಇತಿ ಕೇಚಿತ್ । – (ತಾ.)

ವಿನೇತ್ಯಸ್ಯ ಬಲವತ್ತರ್ತ್ಯಕವಧವಿಶಿಷ್ಟಶರೀರಂ ವಿನೇತ್ಯರ್ಥಃ । – (ಸ.)

೨) ಆ ಕಾಲದಲ್ಲಿ ಸಾಮಾನ್ಯವಾಗಿ ತಪಸ್ವಿಗಳಾದವರೆಲ್ಲ ಹೀಗೆ ಇಚ್ಛೆಯಿಂದಲೇ ದೇಹ ತೊರೆಯುತ್ತಿದ್ದವರು. ತಮಗಿಂತ ಬಲಿಷ್ಠರಾದವರಿಂದ ಮೃತರಾಗುವ ಪ್ರಸಂಗ ಮಾತ್ರ ಇದಕ್ಕೆ ಅಪವಾದ.

೩) ಬಲಿಷ್ಠರಿಂದ ವಧಿಸಲ್ಪಟ್ಟು ದೇಹ ತೊರೆದದ್ದಕ್ಕೆ ಶಂತನುವಿನ ಹಿರಿಯ ಮಗ ಚಿತ್ರಾಂಗದ ದೃಷ್ಟಾಂತ. ಅವನು ಚಿತ್ರಾಂಗದನೆಂಬ ಗಂಧರ್ವನೊಬ್ಬನಿಂದ ಹತನಾದ ವಿವರ ಮುಂದೆ ಬಂದಿದೆ (ಶ್ಲೋಕ ೮೬).

ಅತಿಸಕ್ತಾಸ್ತಪೋಹೀನಾಃ[೧] ಕಥಂಚಿನ್ಮೃತಿಮಾಪ್ನುಯುಃ।
ಅನಿಚ್ಛಯಾऽಪಿ[೨] ಹಿ ಯಥಾ ಮೃತಶ್ಚಿತ್ರಾಂಗದಾನುಜಃ ॥ ೮೪ ॥

ಅ: ಅತಿಯಾದ ಭೋಗಲಾಲಸೆ ಹೊಂದಿದವರು, ತಪೋಹೀನರು ಮಾತ್ರ ಇಚ್ಛೆ ಇಲ್ಲದಿದ್ದರೂ ಎಂಥದೋ ರೀತಿಯಲ್ಲಿ ಮರಣ ಹೊಂದುವರು; ಚಿತ್ರಾಂಗದನ ತಮ್ಮ ಹೇಗೆ ಮೃತನಾದನೊ, ಹಾಗೆ.

ವಿ: ೧) ಇಚ್ಛೆ ಇಲ್ಲದೆ ಸಾಯುವವರು ವಿಷಯಸುಖಗಳಲ್ಲಿ ಅತಿಯಾದ ಆಸಕ್ತಿ ಹೊಂದಿದವರು ಹಾಗೂ ತಪೋಹೀನರು ಮಾತ್ರ. ಅವರು ಇಚ್ಛೆ ಇಲ್ಲದಿದ್ದರೂ, ರೋಗಾದಿಕಾರಣಗಳಿಂದ ಸಾಯುವರು. ಹಾಗಿಲ್ಲದವರು ಮಾತ್ರ ಸಾಮಾನ್ಯವಾಗಿ ಸ್ವೇಚ್ಛೆಯಿಂದ ದೇಹ ಬಿಡುತ್ತಿದ್ದ ಕಾಲ ಅದಾಗಿತ್ತು.

೨) ಇಚ್ಛೆ ಇಲ್ಲದೆ ದೇಹ ತೊರೆದದ್ದಕ್ಕೆ ಶಂತನುವಿನ ಎರಡನೆಯ ಮಗ ವಿಚಿತ್ರವೀರ್ಯ ನಿದರ್ಶನ. ಅವನು ಮಿತಿಮೀರಿದ ವಿಷಯಾಸಕ್ತಿಯಿಂದಾಗಿ ಕ್ಷಯರೋಗಪೀಡಿತನಾಗಿ ಮೃತನಾಗುವನು ಎಂಬ ವಿಚಾರ ಮುಂದೆ ಬಂದಿದೆ.

೩) ಅಂತೂ ಶಂತನುವಿನ ಮೂರು ಮಕ್ಕಳಲ್ಲಿ ಹಿರಿಯ ಮಗ ಭೀಷ್ಮ ಸ್ವಚ್ಛಂದಮೃತ್ಯು; ಎರಡನೆಯ ಮಗ ಚಿತ್ರಾಂಗದ ತನಗಿಂತ ಬಲಿಷ್ಠನಿಂದ ಹತನಾದವನು; ಮೂರನೆಯ ಮಗ ವಿಚಿತ್ರವೀರ್ಯ ಮಿತಿಮೀರಿದ ಭೋಗಲಾಲಸೆಯಿಂದ ರೋಗಪೀಡಿತನಾಗಿ ಸತ್ತವನು. ಹೀಗೆ ದೇಹ ತೊರೆಯುವ ಮೂರು ಪ್ರಸಂಗಗಳಿಗೂ ಅವನ ಮೂರು ಮಕ್ಕಳು ನಿದರ್ಶನರಾದದ್ದು ವಿಶೇಷ.

---

೧. ಕಥಂಚಿನ್ಮೃತಿಹೇತುರೋಗಾದ್ಯೈರ್ಮೃತಿಂ ಆಪ್ನುಯುಃ। – (ಜ.)

೨. ಹಿಶಬ್ದೇನ ವಿಚಿತ್ರವೀರ್ಯಸ್ಯ ವಿಷಯಾಸಕ್ತತಾ ತಪೋಹೀನತಾ ಚ ಪ್ರಸಿದ್ಧೇತಿ ಸೂಚಯತಿ ॥ – (ವಾ.)

೪) ಅನಾಯಾಸದಿಂದ ಮರಣ ಬಯಸುವವರು ಅತಿಯಾದ ವಿಷಯಾಸಕ್ತಿ ತೊರೆಯ–ಬೇಕು; ಏಕಾದಶ್ಯಾದಿವ್ರತಗಳನ್ನು ತಪ್ಪದೆ ಆಚರಿಸಬೇಕು ಎಂಬ ಸಂದೇಶವೂ ಇದರಲ್ಲಿ ಅಡಗಿದೆ.

ಅಥೌರ್ಧ್ವದೈಹಿಕಂ[೧] ಕೃತ್ವಾ ಪಿತುರ್ಭೀಷ್ಮೋಽಭ್ಯಷೇಚಯತ್ ।
ರಾಜ್ಯೇ ಚಿತ್ರಾಂಗದಂ ವೀರಂ ಯೌವರಾಜ್ಯೇಽಸ್ಯ ಚಾನುಜಮ್ ॥ ೮೫ ॥

ಅ: ಬಳಿಕ ಭೀಷ್ಮ ತಂದೆಯ ಉತ್ತರಕ್ರಿಯೆಯನ್ನು ಪೂರೈಸಿ, ವೀರನಾದ ಚಿತ್ರಾಂಗದನನ್ನು ರಾಜ್ಯದಲ್ಲಿ ಅಭಿಷೇಕಿಸಿದ. ಅವನ ತಮ್ಮನನ್ನು ಯುವರಾಜಪದವಿಯಲ್ಲಿ ಅಭಿಷೇಕಿಸಿದ.

ವಿ: ತನ್ನ ಪ್ರತಿಜ್ಞೆಯಂತೆ ಭೀಷ್ಮ ತಾನು ರಾಜ್ಯವಾಳದೆ, ಸತ್ಯವತಿಪುತ್ರರಾದ ಚಿತ್ರಾಂಗದ, ವಿಚಿತ್ರವೀರ್ಯರಿಗೆ ರಾಜ್ಯ ನೀಡಿದ. ಆ ಮೂಲಕ ಸತ್ಯಪ್ರತಿಜ್ಞ ಎನ್ನಿಸಿದ.

ಚಿತ್ರಾಂಗದನ ವಧೆ

ಚಿತ್ರಾಂಗದೇನ ನಿಹತೋ ನಾಮ ಸ್ವಂ ತ್ವಪರಿತ್ಯಜನ್ ।
ಚಿತ್ರಾಂಗದೋಽಕೃತೋದ್ವಾಹೋ ಗಂಧರ್ವೇಣ ಮಹಾರಣೇ ॥ ೮೬ ॥

ಅ: ತನ್ನ ಹೆಸರನ್ನು ತೊರೆಯಲು ಬಯಸದೆ, ಅವಿವಾಹಿತನಾಗಿದ್ದ ಚಿತ್ರಾಂಗದ, ಚಿತ್ರಾಂಗದನೆಂಬ ಗಂಧರ್ವನಿಂದ ಮಹಾಸಂಗ್ರಾಮದಲ್ಲಿ ಹತನಾದ.

ವಿ: ೧) ಚಿತ್ರಾಂಗದ ಮಹಾವೀರ ಹಾಗೂ ಬಲಾಢ್ಯ. ಚಿತ್ರಾಂಗದನೆಂದ ಒಬ್ಬ ಗಂಧರ್ವ ಅವನ ಬಳಿ ಬಂದು ನುಡಿದ[೨] : ''ನಮ್ಮಿಬ್ಬರಲ್ಲಿ ಒಬ್ಬ ಚಿತ್ರಾಂಗದ ಮಾತ್ರ ಬದುಕಿರಬೇಕು. ನೀನು ಹೆಸರನ್ನು ಬದಲಾಯಿಸಿಕೊ; ಅಥವಾ ನನ್ನೊಂದಿಗೆ ಸಮರಕ್ಕೆ ಸಿದ್ಧನಾಗು''. ಸ್ವಾಭಿಮಾನಿಯಾದ ಚಿತ್ರಾಂಗದ ಕ್ಷತ್ರಧರ್ಮಕ್ಕನುಸಾರವಾಗಿ ಸಮರವನ್ನೇ ಆಯ್ದುಕೊಂಡ. ಬಲಾಢ್ಯನಾದ ಗಂಧರ್ವನಿಂದ ಹತನಾದ. ಧರ್ಮಕ್ಕಾಗಿ ಪ್ರಾಣತೊರೆದು ಮಹಾತ್ಮನೆನ್ನಿಸಿದ. 'ಸ್ವಧರ್ಮೇ ನಿಧನಂ ಶ್ರೇಯಃ' ಎಂಬ ಶಾಸ್ತ್ರವಾಣಿಗೆ ನಿದರ್ಶನನಾದ.

---

೧. ಔರ್ಧ್ವದೈಹಿಕಂ ದೇಹಾದ್ಯದೂರ್ಧ್ವಂ ತದೌರ್ಧ್ವದೈಹಿಕಂ ಪ್ರೇತಸಂಸ್ಕಾರಕಮಿತಿ ಯಾವತ್। – (ಜ.)

೨. ತ್ವಂ ವೈ ಸದೃಶನಾಮಾಸಿ ಯುದ್ಧಂ ದೇಹಿ ನೃಪಾತ್ಮಜ ।
ನಾಮ ಚಾನ್ಯತ್ ಪ್ರಗೃಣೀಷ್ವ ಯದಿ ಯುದ್ಧಂ ನ ದಾಸ್ಯಸಿ ॥ – ಭಾರತ (ಆದಿ. ೧೦೧/೮)

೨) ಅವರಿಬ್ಬರಿಗೂ ಆ ಮಹಾಸಮರ ನಡೆದದ್ದು ಕುರುಕ್ಷೇತ್ರದಲ್ಲಿ; ಒಟ್ಟು ಮೂರುವರ್ಷಗಳ[೧] ಕಾಲ.

೩) ಅದು ದ್ವಂದ್ವಯುದ್ಧವಾದ್ದರಿಂದ ಭೀಷ್ಮರು ಚಿತ್ರಾಂಗದನಿಗೆ ಯುದ್ಧದಲ್ಲಿ ನೆರವಾಗಲು ಮಧ್ಯೆ ಪ್ರವೇಶಿಸಲಿಲ್ಲ ಎಂದು ತಿಳಿಯಬೇಕು.

ವಿಚಿತ್ರವೀರ್ಯನ ವಿವಾಹ; ಅಂಬೆಯ ವೃತ್ತಾಂತ

ವಿಚಿತ್ರವೀರ್ಯಂ ರಾಜಾನಂ ಕೃತ್ವಾ ಭೀಷ್ಮೋ ऽನ್ವಪಾಲಯತ್ ।
ಅಥ ಕಾಶಿಸುತಾಸ್ತಿಸ್ರಸ್ತದರ್ಥಂ ಭೀಷ್ಮ ಆಹರತ್ ॥ ೮೭ ॥

ಅಂಬಾಮಪ್ಯಂಬಿಕಾನಾಮ್ನೀಂ ತಥೈವಾಂಬಾಲಿಕಾಂ ಪರಾಮ್ ।
ಪಾಣಿಗ್ರಹಣಕಾಲೇ ತು ಬ್ರಹ್ಮದತ್ತಸ್ಯ ವೀರ್ಯವಾನ್ ।
ವಿಜಿತ್ಯ ತಂ ಸಾಲ್ವರಾಜಂ ಸಮೇತಾನ್ ಕ್ಷತ್ರಿಯಾನಪಿ ॥ ೮೮ ॥

ಅ: ವಿಚಿತ್ರವೀರ್ಯನನ್ನು ರಾಜನನ್ನಾಗಿ ಮಾಡಿ, ಭೀಷ್ಮ ರಾಜ್ಯವನ್ನು ಪಾಲಿಸತೊಡಗಿದ. ವೀರ್ಯಶಾಲಿಯಾದ ಅವನು ಬಳಿಕ ಅಂಬಾ, ಅಂಬಿಕಾ ಹಾಗೂ ಅಂಬಾಲಿಕಾ ಎಂಬ ಮೂವರು ಕಾಶಿರಾಜನ ಪುತ್ರಿಯರನ್ನು ಬ್ರಹ್ಮದತ್ತನು ಕೈಹಿಡಿಯುವ ಕಾಲದಲ್ಲಿ ಆ ಸಾಲ್ವರಾಜನನ್ನೂ, ಅಲ್ಲಿನೆರೆದಿದ್ದ ಕ್ಷತ್ರಿಯರನ್ನೂ ಸೋಲಿಸಿ, ಅಪಹರಿಸಿ ತಂದ.

ಎ: ೧) ಹೀಗೆ ತಮ್ಮ ಸಾಮರ್ಥ್ಯದಿಂದ ಕನ್ಯೆಯರನ್ನು ಅಪಹರಿಸಿ ತಂದು, ವಿವಾಹವಾಗುವುದು, ವಿವಾಹಮಾಡಿಸುವುದು ಕ್ಷತ್ರಿಯರ ಪಾಲಿಗೆ ವಿಹಿತವೇ ಆದ್ದರಿಂದ ಭೀಷ್ಮರು ಮಾಡಿದ್ದು ಅಧರ್ಮವೇನಲ್ಲ.

೨) ಅಲ್ಲದೆ ಆ ಸಾಲ್ವರಾಜನಾದ ಬ್ರಹ್ಮದತ್ತ ಒಬ್ಬ ಅಸುರ. ಅಂಬಾ ಮೊದಲಾದವರು ದೇವತಾಸ್ತ್ರೀಯರು. ಅವನೊಂದಿಗೆ ಅವರ ವಿವಾಹವನ್ನು ತಪ್ಪಿಸಿದ್ದು ಪುಣ್ಯಕಾರ್ಯವೇ ಆಯಿತು ಎಂಬುದು ಇಲ್ಲಿಯ ಮತ್ತೊಂದು ವಿಶೇಷ.

---

೧. ತಯೋರ್ಬಲವತೋಸ್ತತ್ರ ಗಂಧರ್ವಕುರುಮುಖ್ಯಯೋಃ ।
ನದ್ಯಾಸ್ತೀರೇ ಸರಸ್ವತ್ಯಾಃ ಸಮಾಸ್ತಿಸ್ರೋ ऽಭವದ್ ರಣಃ ॥ – ಭಾರತ (ಆದಿ. ೧೦೧/೮)

೨. ಬ್ರಹ್ಮದತ್ತಾಖ್ಯಾಸುರಸ್ಯ ಪಾಣಿಗ್ರಹಣಕಾಲೇ ಉದ್ವಾಹಸಮಯೇ ... । – (ಜ.)

೩) ಸತ್ಯವ್ರತ ಎಂಬವನು ಒಬ್ಬ ಕನ್ಯೆಯನ್ನು ಮತ್ತೊಬ್ಬನೊಂದಿಗೆ ಪಾಣಿಗ್ರಹಣ ಕಾಲದಲ್ಲಿ ಸಪ್ತಪದಿಗಿಂತ ಮುಂಚಿತವಾಗಿ ತನ್ನ ವಶಕ್ಕೆ ತೆಗೆದುಕೊಂಡು ವಿವಾಹವಾದ ಪ್ರಸಂಗ ಹರಿವಂಶದಲ್ಲಿದೆ[೧]. ಮುಂದೆ ಅವನೇ ತ್ರಿಶಂಕು ಎಂದು ಪ್ರಸಿದ್ಧನಾದವನು. ಆದರೆ ಅವನು ಹಾಗೆ ಮಾಡಿದ್ದು ಆ ಕನ್ಯೆಯ ವಿವಾಹ ಪೂರೈಸಿದ್ದ ಅನಂತರ ಎಂಬುದು ವಿಶೇಷ.

ಅಂಬಿಕಾಂಬಾಲಿಕೇ ತತ್ರ ಸಂವಾದಂ ಚಕ್ರತುಃ ಶುಭೇ[೨] ।
ಅಂಬಾ ಸಾ ಭೀಷ್ಮಭಾರ್ಯ್ಯೈವ ಪೂರ್ವದೇಹೇ ತು ನೈಚ್ಛತ ॥ ೮೯ ॥

ಅ: ಅವರಲ್ಲಿ ಉತ್ತಮರಾದ ಅಂಬಿಕಾ ಮತ್ತು ಅಂಬಾಲಿಕೆ ಇಬ್ಬರೂ ಅದಕ್ಕೆ ಸಮ್ಮತಿಸಿದರು. ಆದರೆ ಪೂರ್ವಜನ್ಮದಲ್ಲಿ ಭೀಷ್ಮಪತ್ನಿಯಾಗಿದ್ದ ಅಂಬೆ ಮಾತ್ರ ಸಮ್ಮತಿಸಲಿಲ್ಲ.

ವಿ: ಅಂಬೆಗೆ ಬ್ರಹ್ಮಶಾಪವಿದ್ದಂತೆ, ಅಂಬಿಕೆ ಅಂಬಾಲಿಕೆಯರಿಗೆ ಯಾವುದೇ ಶಾಪವಿರಲಿಲ್ಲ ಎಂಬುದನ್ನು 'ಶುಭೇ' ಎಂಬ ಪದದಿಂದ ಸೂಚಿಸಿರುವರು ಎಂದು ತಿಳಿಯಬಹುದು.

ಶಾಪಾದ್ಧಿರಣ್ಯಗರ್ಭಸ್ಯ ಸಾಲ್ವಕಾಮಾऽಹಮಿತ್ಯಪಿ[೩] ।
ಉವಾಚ ತಾಂ ಸ ತತ್ಯಾಜ ಸಾऽಗಮತ್ ಸಾಲ್ವಮೇವ ಚ ॥ ೯೦ ॥

ಅ: ಬ್ರಹ್ಮದೇವರ ಶಾಪದಿಂದಾಗಿ ಅಂಬೆ ತಾನು ಸಾಲ್ವನನ್ನು ಬಯಸಿದವಳು ಎಂದು ಹೇಳಿಕೊಂಡಳು ಸಹ. ಅವಳನ್ನು ಭೀಷ್ಮ ವಿವಾಹ ಮಾಡದೆ, ಕಳುಹಿಸಿಕೊಟ್ಟ. ಅವಳು ಸಾಲ್ವನ ಬಳಿಗೇ ತೆರಳಿದಳು.

ವಿ: ಅವಳು ವಿಚಿತ್ರವೀರ್ಯನನ್ನು ವಿವಾಹವಾಗದಿರಲು ಅವನು ಅವಳ ನಿಯತಪತಿ–ಯಾಗದಿರುವುದೇ ಮುಖ್ಯಕಾರಣ; ಆದರೆ ''ಸಾಲ್ವನನ್ನು ಮೆಚ್ಚಿದ್ದೇನೆ'' [೪]ಎಂಬ ಅಯೋಗ್ಯವಾದ

---

೧. ತಸ್ಯ ಸತ್ಯವ್ರತೋ ನಾಮ ಕುಮಾರೋऽಭೂನ್ಮಹಾಬಲಃ ।
ಪಾಣಿಗ್ರಹಣಮಂತ್ರಾಣಾಂ ವಿಘ್ನಂ ಚಕ್ರೇ ಸುದುರ್ಮತಿಃ ॥ – ಹರಿವಂಶ (೧/೧೨/೧೨)

೨. ಶುಭೇ ಶಾಪಾದಿದೋಷಾಭಾವಾದುತ್ತಮೇ । – (ಜ.)

೩. ಬ್ರಹ್ಮದತ್ತಸ್ಯ ಸಾಲ್ವವಿಷಯಪತಿತ್ವಾತ್ ಸಾಲ್ವ ಇತಿ ನಾಮ । – (ಜ.)

೪. ಮಯಾ ಸೌಭಪತಿಃ ಪೂರ್ವಂ ಮನಸಾ ಹಿ ವೃತಃ ಪತಿಃ ।
ತೇನ ಚಾಸ್ಮಿ ವೃತಾ ಪೂರ್ವಮೇಷ ಕಾಮಶ್ಚ ಮೇ ಪಿತುಃ ॥ –ಭಾರತ (ಆದಿ. ೧೦೨/೬೧)

ವಚನವನ್ನು ನುಡಿದು, ವಿವಾಹದಿಂದ ವಂಚಿತಳಾಗಲು ಬ್ರಹ್ಮದೇವರು ನೀಡಿದ ಶಾಪ ಮುಖ್ಯಕಾರಣ ಎಂದು ತಿಳಿಯಬೇಕು[೧].

ತೇನಾಪಿ ಸಂಪರಿತ್ಯಕ್ತಾ ಪರಾಮೃಷ್ಟೇತಿ ಸಾ ಪುನಃ ।
ಭೀಷ್ಮಮಾಪ ಸ ನೋ ಗೃಹ್ಣಾತ್ [೨] ಪ್ರಯಯೌ ಸಾಽಪಿ ಭಾರ್ಗವಮ್ ॥೯೧॥

ಅ: ಪರಪುರುಷನಿಂದ ದೂಷಿತಳಾದವಳೆಂದು ಸಾಲ್ವ ಅವಳನ್ನು ನಿರಾಕರಿಸಿದ. ಅವಳು ಮತ್ತೆ ಭೀಷ್ಮರ ಬಳಿಗೆ ಬಂದಳು; ಅವನು ಸ್ವೀಕರಿಸಲಿಲ್ಲ. ಅವಳು ಪರಶುರಾಮನ ಬಳಿಗೆ ತೆರಳಿದಳು.

ವಿ: ೧) ಭೀಷ್ಮರಿಂದ ಸ್ಪೃಷ್ಟಳು ಎಂಬ ಕಾರಣ ನೀಡಿ, ಬ್ರಹ್ಮದತ್ತ ಅವಳನ್ನು ಸ್ವೀಕರಿಸದಾದ. ನಿಜಕ್ಕೂ ಅಂಬೆ ಭೀಷ್ಮರಿಂದ ದೂಷಿತಳೇನೂ ಆಗಿರಲಿಲ್ಲ. ಅವನದು ಮಿಥ್ಯಾರೋಪವೇ. ಅಸುರನಾದ ಅವನಿಗೆ ಅಂತಹ ನಡತೆ ಸ್ವಾಭಾವಿಕವೇ ಆಗಿತ್ತು ಅಂಬೆ ದೇವತಾಸ್ತ್ರೀ. ಅಯೋಗ್ಯನಾದ ಅವನಿಗೆ ಅವಳನ್ನು ಪರಿತ್ಯಜಿಸುವ ಬುದ್ಧಿ ಅಂಬೆಯ ಪುಣ್ಯದ ಫಲ. ಈ ಸಾಲ್ವ ಮುಂದೆ ಸಾತ್ಯಕಿಯಿಂದ ಹತನಾಗುವನು (೧೭/೨೮೭).

೨) ಸಾಲ್ವನು ಹಾಗೆ ಅವಳನ್ನು ಪರಿತ್ಯಜಿಸಲು ಅವನಿಗಿದ್ದ ಭೀಷ್ಮರ ಭಯ ಮತ್ತೊಂದು ಕಾರಣ ಎಂಬ ಮಾತೂ [೩]ಮಹಾಭಾರತದಲ್ಲಿದೆ.

೩) ಅಲ್ಲಿಂದ ಭೀಷ್ಮರ ಬಳಿಗೆ ತೆರಳಿದ ಅವಳು ಅವರೇ ತನ್ನನ್ನು ಮದುವೆಯಾಗ–ಬೇಕೆಂದು ಹಟ ಹಿಡಿದಳು. ಆದರೆ ಭೀಷ್ಮ ತನ್ನ ಆಜೀವಬ್ರಹ್ಮಚರ್ಯಪ್ರತಿಜ್ಞೆಯನ್ನು ತಿಳಿಸಿ, ಅವಳ ಕೋರಿಕೆಯನ್ನು ನಿರಾಕರಿಸಿದ. ಅವಳು ಮತ್ತೊಮ್ಮೆ ಸಾಲ್ವನ ಬಳಿಗೆ ಹೋಗಿ ಪುನಃ ಭೀಷ್ಮರ ಬಳಿಗೆ

---

೧. ಪೂರ್ವದೇಹೇ = ವರಾಂಗಿತ್ವದೇಹೇ । ಭೀಷ್ಮಭಾರ್ಯಾ = ಭೀಷ್ಮಮೂಲರೂಪದ್ಯುನಾಮ್ನೋ ಭಾರ್ಯಾ । ತು = ದೇವಪತ್ನೀನಾಂ ಮನುಷ್ಯಪತ್ನೀತ್ವಾಯೋಗ್ಯತಾಖ್ಯವಿಶೇಷೇಣ ನೈಚ್ಛದೇವೇತ್ಯನ್ವಯಃ । ಹಿರಣ್ಯಗರ್ಭಸ್ಯ ಶಾಪಾತ್= ಅಭರ್ತೃಕಾ ಭವೇತಿ ಶಾಪಾತ್ ಅಹಂ ಸಾಲ್ವಕಾಮೇತ್ಯಪಿ ಗರ್ಹಿತಂ ವಾಕ್ಯಮುವಾಚ । ಸ ಭೀಷ್ಮಸ್ತಾಂ ವಿರುದ್ಧಭಾಷಿಣೀಂ ತತ್ಯಾಜ । ಸಾ ಸಾಲ್ವಮೇವಾಗಮಚ್ಚ ॥ –(ವಾ.)

೨. ಸ ನೋ ಗೃಹ್ಣಾದಿತ್ಯತ್ರ ಗೃಹ್ಣಾದಗೃಹ್ಣಾದಿತ್ಯರ್ಥಃ । ''ಬಹುಲಂ ಛಂದಸ್ಯಮಾಙ್‌ಯೋಗೇಽಪೀ'' ತಿ ಸೂತ್ರಾತ್ ಒದಂತನಿಪಾತಸ್ಯ ಪ್ರಕೃತಿತ್ವೇನಾಡಾಗಮಾಭಾವೋ ನ ದೋಷಃ ॥ –(ವಾ.)

ಸ ನಾಗೃಹ್ಣಾತ್ – (ಪಾಠಾಂತರ); 'ಅಗೃಹ್ಣಾತ್' ಇತಿ ವಾ ।– (ಜ.)

೩. ಬಿಭೇಮಿ ಭೀಷ್ಮಾತ್ ಸುಶ್ರೋಣಿ ತ್ವಂ ಚ ಭೀಷ್ಮಪರಿಗ್ರಹಃ । - ಭಾರತ (ಉದ್ಯೋಗ. ೧೭೫/೨೪)

ಬಂದಳು. ಹೀಗೆ ಭೀಷ್ಮರ ಸಾಲ್ವರ ಬಳಿಗೆ ಅವಳ ಸಂಚಾರದಲ್ಲಿ ಆರುವರ್ಷಗಳು ಕಳೆದವು ಎಂಬ ವಿಶೇಷಾಂಶ [೧]ಮಹಾಭಾರತದಲ್ಲಿದೆ.

೪) ನಿರಾಶಳಾದ ಅಂಬೆ ತಪೋವನಕ್ಕೆ ತೆರಳಿದಾಗ ಅಲ್ಲಿ ಶೈಖಾವತ್ಯ ಮೊದಲಾದ ಮುನಿಗಳು ಅವಳನ್ನು ಸಮಾಧಾನಪಡಿಸಿದರು. ಆ ವೇಳೆಗೆ ಅಲ್ಲಿಗೆ ಅವಳ ತಾಯಿಯ ತಂದೆಯಾದ ಪೌತ್ರವಾಹನ ಆಗಮಿಸಿ, ಅವಳನ್ನು ಸಾಂತ್ವನಗೊಳಿಸಿದ. ಅಕೃತವ್ರಣ ಎಂಬ ಪರಶುರಾಮಶಿಷ್ಯ ಅಲ್ಲಿಗೆ ಬಂದು ಮಾರನೆಯ ದಿನ ಪರಶುರಾಮರು ಮಹೇಂದ್ರಪರ್ವತದಿಂದ ಅಲ್ಲಿಗೆ ಬರುವ ವಿಷಯ ತಿಳಿಸಿದ. ಹಾಗೆ ಬಂದ ಪರಶುರಾಮರನ್ನು ಅಂಬೆ ಭೀಷ್ಮರು ತನ್ನನ್ನು ಪರಿಗ್ರಹಿಸುವಂತೆ ಮಾಡಲು ಕೋರಿದಳು. ಅದರಂತೆ ಪರಶುರಾಮರು ಅವಳೊಂದಿಗೆ ಭೀಷ್ಮರ ಬಳಿ ತೆರಳಿ, ಅವಳನ್ನು ಸ್ವೀಕರಿಸಬೇಕು, ಅಥವಾ ಸಮರಕ್ಕೆ ಸಿದ್ಧನಾಗಬೇಕು ಎಂದು ನುಡಿದರು. ತನ್ನ ಪ್ರತಿಜ್ಞೆಯ ಕಾರಣವನ್ನು ಮುಂದಿಟ್ಟು ಭೀಷ್ಮ ವಿವಾಹಕ್ಕೆ ಬದಲಾಗಿ ಸಮರವನ್ನೇ ಆಯ್ದುಕೊಂಡ.

ಭ್ರಾತುರ್ವಿವಾಹಯಾಮಾಸ ಸೋಽಂಬಿಕಾಂಬಾಲಿಕೇ ತತಃ ।
ಭೀಷ್ಮಾಯ ತು ಯಶೋ ದಾತುಂ ಯುಯುಧೇ ತೇನ ಭಾರ್ಗವಃ ॥ ೯೨ ॥

ಅ: ಇತ್ತ ಭೀಷ್ಮ ತಮ್ಮನಾದ ವಿಚಿತ್ರವೀರ್ಯನಿಗೆ ಅಂಬಿಕೆ ಅಂಬಾಲಿಕೆಯರನ್ನು ವಿವಾಹ ಮಾಡಿಸಿದ. ಭೀಷ್ಮನಿಗೇ ಯಶಸ್ಸು ನೀಡಲೆಂದು ಪರಶುರಾಮ ಅವನೊಡನೆ ಯುದ್ಧಮಾಡಿದರು.

ವಿ: ಪರಶುರಾಮ ಭೀಷ್ಮರೊಂದಿಗೆ ಯುದ್ಧ ಆಯ್ದುಕೊಂಡದ್ದು ಅವರಿಗೆ ಯಶಸ್ಸು ನೀಡಲೆಂದೇ ಹೊರತು ಪರಾಭವಗೊಳಿಸಲೆಂದಲ್ಲ. ಅವರಿಗೆ ಭೀಷ್ಮರ ಬ್ರಹ್ಮಚರ್ಯರಕ್ಷಣೆಯ ಪ್ರತಿಜ್ಞೆಯನ್ನು ಪಾಲಿಸುವುದರೊಂದಿಗೆ, ಬ್ರಹ್ಮದೇವರು ದ್ಯು ಮತ್ತು ವರಾಂಗಿಯವರಿಗೆ ನೀಡಿದ್ದ ಶಾಪವನ್ನು ಸತ್ಯ ಮಾಡುವುದೂ ಬೇಕಿತ್ತು.

ಭೀಷ್ಮರಿಗೆ ಪರಶುರಾಮಾನುಗ್ರಹ

ಅನಂತಶಕ್ತಿರಪಿ ಸನ್ ನ ಭೀಷ್ಮಂ ನಿಜಘಾನ ಹ ।
ನ ಚಾಂಬಾಂ ಗ್ರಾಹಯಾಮಾಸ ಭೀಷ್ಮಕಾರುಣ್ಯಯಂತ್ರಿತಃ ॥ ೯೩ ॥

ಅ: ಭೀಷ್ಮರ ಮೇಲಿನ ಕಾರುಣ್ಯಕ್ಕೆ ಒಳಗಾಗಿ ಪರಶುರಾಮ ಅನಂತಶಕ್ತಿಯನ್ನು ಹೊಂದಿದ್ದರೂ, ಭೀಷ್ಮನನ್ನು ಕೊಲ್ಲಲಿಲ್ಲ. ಅವನು ಅಂಬೆಯನ್ನು ಸ್ವೀಕರಿಸುವಂತೆ ಮಾಡಲೂ ಇಲ್ಲ.

---

೧. ಅಂಬಾ ಭೀಷ್ಮಂ ಪುನಃ ಸಾಲ್ವಂ ಭೀಷ್ಮಂ ಸಾಲ್ವಂ ಪುನಃ ಪುನಃ ॥
ಗಮನಾಗಮನೇನೈವಮನೈಷೀತ್ ಷಟ್ ಸಮಾ ನೃಪ । – ಕೃ. ಭಾರತ (ಆದಿ. ೧೦೯/೯೧,೯೨)

ವಿ: ಭೀಷ್ಮ, ಪರಶುರಾಮರ ಯುದ್ಧ ನಡೆದದ್ದು ಸಹ ಕುರುಕ್ಷೇತ್ರದಲ್ಲೇ. ಯುದ್ಧ ಪ್ರಾರಂಭಿಸುವ ಮುನ್ನ ಭೀಷ್ಮರು ರಥದಿಂದ ಕೆಳಗಿಳಿದು, ಪರಶುರಾಮರ ಬಳಿಗೆ ತೆರಳಿ, ಭಕ್ತಿಯಿಂದ ಪೂಜಿಸಿ, ನಮಸ್ಕರಿಸಿದರು; ತನ್ನ ಗೌರವವನ್ನು ಸಮರ್ಪಿಸಿದ. ಹಾಗೆ ನಮಸ್ಕರಿಸಿ, ಶರಣಾದ ಅವನ ಭಕ್ತಗೆ ಮೆಚ್ಚಿದ ಪರಶುರಾಮರು ಮುಂದೆ ಯುದ್ಧದಲ್ಲಿ ಕೊಲ್ಲುವುದಿರಲಿ, ಸೋಲಿಸಲೂ ಇಲ್ಲ.

ಪರಶುರಾಮ ಅಶಕ್ತ ಮೊದಲಾದ ಸರ್ವದೋಷರಹಿತ

ಅನಂತಶಕ್ತಿಃ ಸಕಲಾಂತರಾತ್ಮಾ
ಯಃ ಸರ್ವವಿತ್ ಸರ್ವವಶೀ ಚ ಸರ್ವಜಿತ್ ।
ನ ಯತ್ಸಮೋಽನ್ಯೋಽಸ್ತಿ ಕಥಂ ಚ ಕುತ್ರಚಿತ್
ಕಥಂ ಹ್ಯಶಕ್ತಿಃ ಪರಮಸ್ಯ ತಸ್ಯ ॥ ೯೪ ॥

ಅ: ಪರಶುರಾಮ ಅನಂತಶಕ್ತ ಉಳ್ಳವನು; ಸರ್ವರ ಅಂತರ್ಯಾಮಿ; ಸರ್ವಜ್ಞ; ಸರ್ವವನ್ನೂ ವಶದಲ್ಲಿಟ್ಟುಕೊಂಡಿರುವವನು; ಎಲ್ಲರನ್ನೂ ಗೆಲ್ಲುವವನು. ಅವನಿಗೆ ಸಾಟಿಯಾದವನು ಮತ್ತೊಬ್ಬನು ಎಲ್ಲೂ, ಯಾವ ರೀತಿಯಲ್ಲೂ ಇಲ್ಲ. ಅಂತಹ ಸರ್ವೋತ್ತಮನಿಗೆ ಅಶಕ್ತ ಎಂತು?

ವಿ: ಭೀಷ್ಮರನ್ನು ಕೊಲ್ಲಲು ಪರಶುರಾಮರಿಗೆ ಆಗಲಿಲ್ಲ ಎಂಬ ಕೆಲವರ ವಾದವನ್ನು ಇಲ್ಲಿ ನಿರಾಕರಿಸಿರುವರು. ಪರಶುರಾಮ ಸಾಕ್ಷಾದ್ಭಗವಂತ; ಅವನಿಗೆ ಆಗದ್ದಾವುದು? ಅವನಿಗೆ ಅಶಕ್ತ ಎಂತು?

ಭೀಷ್ಮಂ ಸ್ವಭಕ್ತಂ ಯಶಸಾಽಭಿಪೂರಯನ್
ವಿಮೋಹಯನ್ನಸುರಾಂಶ್ಚೈವ ರಾಮಃ ।
ಜಿತ್ವೈವ ಭೀಷ್ಮಂ ನ ಜಘಾನ ದೇವೋ
ವಾಚಂ ಚ ಸತ್ಯಾಮಕರೋತ್ ಸ ತಸ್ಯ ॥ ೯೫ ॥

ಅ: ತನ್ನ ಭಕ್ತ ಭೀಷ್ಮನನ್ನು ಯಶಸ್ಸಿನಿಂದ ತುಂಬಿಸಲೆಂದೂ, ಅಸುರರನ್ನು ಮೋಹಗೊಳಿಸಲೆಂದೂ, ಪರಶುರಾಮದೇವರು ಭೀಷ್ಮರನ್ನು ಗೆದ್ದರೂ, ಕೊಲ್ಲಲಿಲ್ಲ. ಭಕ್ತನಾದ ಅವರ ವಚನವನ್ನು ಸತ್ಯವಾಗಿಸಿದರು.

---

೧. ಹಿಶಬ್ದೇನ ''ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ'' ಇತಿ ಶ್ರುತಿಪ್ರಸಿದ್ಧಿಂ ಸೂಚಯತಿ ॥ –(ವಾ.)

೨. ಆಸುರಾನೇವ ವಿಮೋಹಯಂಶ್ಚೇತಿ ಪದಸಂಬಂಧಃ । ಜಿತ್ವೈವ ಭೀಷ್ಮಮಿತಿ ವಸ್ತುಸ್ಥಿತಿಕಥನಮ್ । ಲೋಕದೃಷ್ಟ್ಯಾ ತು ಮಾಮಪ್ಯಜಯದಯಂ ಭೀಷ್ಮಃ । ಅತೋ ಮಯಾ ಕಿಂ ಕಾರ್ಯಮಿತ್ಯಂಬಾಂ ವಂಚಯಿತುಂ ಪರಾಜಿತವದಭೂದಿತಿ ಚೋಹ್ಯಮ್ । ವಾಚಂ ಚ ಸತ್ಯಾಮಿತ್ಯತ್ರ ವಾಚಂ= ಊರ್ಧ್ವರೇತಾಃ ಸತತಂ ಭವಾನೀತಿ ವಾಚಮ್ ॥ –(ವಾ.)

ಎಃ ೧) ವಸ್ತುತಃ ಆ ಯುದ್ಧದಲ್ಲಿ ಗೆದ್ದಿದ್ದು ಪರಶುರಾಮರೇ. ಭೀಷ್ಮರು ಅವರಿಗೆ ವಂದನೆ ಸಲ್ಲಿಸಿದಾಗಲೇ ಅದು ಸ್ಪಷ್ಟವಾಗಿತ್ತು, ಆದರೂ ಜನಕ್ಕೆ ತಿಳಿಯುವಂತೆ ಭೀಷ್ಮರನ್ನು ಸೋಲಿಸಲೂ ಇಲ್ಲ; ಕೊಲ್ಲಲೂ ಇಲ್ಲ. ಬದಲಾಗಿ ಅವನಿಗೆ ಕೀರ್ತಿಬರುವಂತೆ ವರ್ತಿಸಿದ.

೨) ''ಪರಶುರಾಮನಿಗೆ ಭೀಷ್ಮರನ್ನು ಸೋಲಿಸಲಾಗಲಿಲ್ಲ. ಭೀಷ್ಮರ ಕೈಯೇ ಮಿಗಿಲಾ–ಯಿತು'' ಎಂಬ ಭ್ರಮೆಯನ್ನು ಅಸುರರಿಗೆ ಉಂಟುಮಾಡಲೆಂದು ಅಸಮರ್ಥನಂತೆ ವರ್ತಿಸಿದ.

೩) ತಾನು ಯುದ್ಧ ಪ್ರಾರಂಭಿಸುವ ಮುನ್ನ ಭೀಷ್ಮರನ್ನು ಕುರಿತು ಪರಶುರಾಮ ಹೇಳುವ ಮಾತು ಅವನು ಭಗವಂತ ಎಂಬುದನ್ನು ಸ್ಫುಟಪಡಿಸುವ ಮತ್ತೊಂದು ಪುರಾವೆ (೫/೧೭೯/೩,೪):

ರಥೋ ಮೇ ಮೇದಿನೀ ಭೀಷ್ಮ ವಾಹಾ ವೇದಾಃ ಸದಶ್ವವತ್ ।
ಸೂತಶ್ಚ ಮಾತರಿಶ್ವಾ ವೈ ಕವಚಂ ವೇದಮಾತರಃ ।
ಸುಸಂವೀತೋ ರಣೇ ತಾಭಿರ್ಯೋತ್ಸ್ಯೇಽಹಂ ಕುರುನಂದನ ॥

೪) ಕೃಷ್ಣನ ರಥ ಹೀಗಿದ್ದ ವಿವರ ಮುಂದೆ ಬಂದಿದೆ (೧೪/೨೨).

[೧]ವಿದ್ಧವನ್ಮುಗ್ಧವಚ್ಚೈವ ಕೇಶವೋ ವೇದನಾರ್ತವತ್ ।
ದರ್ಶಯನ್ನಪಿ ಮೋಹಾಯ ನೈವ ವಿಷ್ಣುಸ್ತಥಾ ಭವೇತ್ ।
ಏವಮಾದಿಪುರಾಣೋತ್ಥವಾಕ್ಯಾದ್ರಾಮಃ ಸದಾ ಜಯೀ ॥ ೯೬ ॥

ಅಃ ಹೊಡೆಸಿಕೊಂಡವನಂತೆ, ಮೋಹಗೊಂಡವನಂತೆ, ನೋವಿನಿಂದ ಬಳಲಿದವನಂತೆ ಭಗವಂತನು ತೋರಿಸಿಕೊಳ್ಳುವುದು ಅಸುರಮೋಹನಕ್ಕೆಂದು ಮಾತ್ರ. ಹಾಗೆಂದೂ ವಿಷ್ಣು ಸರ್ವಥಾ ಆಗಲಾರ. ಇವೇ ಮೊದಲಾದ [೨]ಪುರಾಣವಾಕ್ಯದಿಂದಾಗಿ ಪರಶುರಾಮರು ಸದಾ ವಿಜಯಶೀಲರೇ ಆಗಿರುವರು.

---

೧. ವಸ್ತುಗತ್ಯಾ ಪರಾಭವಃ ಕುತೋ ನೇತೀತಿ ಶಂಕಾಂ ಪುರಾಣವಾಕ್ಯೇನೈವ ಪರಿಹರತಿ- ವಿದ್ಧವದಿತಿ ॥ –(ವಾ.)

೨. ಅಸಂಗಶ್ಚಾವ್ಯಥೋಽಭೇದ್ಯೋಽನಿಗ್ರಾಹ್ಯೋಽಶೋಷ್ಯ ಏವ ಚ ।
ವಿದ್ಧೋಽಸೃಗಂಚಿತೋ ಬದ್ಧಇತಿ ವಿಷ್ಣುಃ ಪ್ರದರ್ಶ್ಯತೇ । ಸ್ಕಾಂದೇ ॥ –ಭಾ.ತಾ.(೧/೯/೪೧,೪೫)

'ಅಕ್ಷತಃ ಕ್ಷತವದ್ವಿಷ್ಣುರಸಮಃ ಸಮವತ್ತಥಾ ।
ಅಜಿತೋ ಜಿತವಚ್ಚೈವ ಜ್ಞೋಽಜ್ಞವಚ್ಚ ಪ್ರಕಾಶಯೇತ್ ।
ಸರ್ವರೂಪೇಷ್ವನಂತೋಽಪಿ ಬ್ರಹ್ಮಾದ್ಯಾಶ್ಚೈವ ತನ್ಮತೇಃ ।
ಅನುಸಾರಿತಯಾ ಬ್ರೂಯುಃ ಕುರ್ಯುಶ್ಚ ಸ ನ ದುಃಖಭಾಕ್' ಇತಿ ಬ್ರಹ್ಮಾಂಡೇ ॥

–ಭಾ.ತಾ. (೩/೧೯/೨೫)

ಎ: ೧) ಭೀಷ್ಮರೊಂದಿಗೆ ಯುದ್ಧ ಮಾಡುವಾಗಲೊಮ್ಮೆ ಪರಶುರಾಮ ಮೋಹಗೊಂಡಂತೆ ನಟಿಸಿದ ಉಲ್ಲೇಖ ಮಹಾಭಾರತದಲ್ಲಿದೆ. ಅದಕ್ಕೆ ಇದು ವಿವರಣೆಯಾಗಿದೆ.* ಮಹಾಭಾರತ–ವಾಕ್ಯದಲ್ಲೇ [೧]"ಮಂದಚೇತಾ ಇವಾಭವತ್" ('ಮೂರ್ಛಿತರಾದಂತೆ ನಟಿಸಿದರು') ಎಂಬುದಾಗಿ ಇರುವುದನ್ನು ಗಮನಿಸಬೇಕು.

೨) ವಾಸ್ತವವಾಗಿ ಪರಶುರಾಮರೇ ಗೆದ್ದವರು ಎಂಬುದನ್ನು ಸಮರ್ಥಿಸುವ ಸ್ಕಂದಪುರಾಣದ ವಚನವೊಂದನ್ನು ಸಹ ಶ್ರೀಮದಾಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ (೨/೭೨) ಉಲ್ಲೇಖಿಸಿರುವರು :

ಯೋಽಜಿತೋ ವಿಜಿತೋ ಭಕ್ತ್ಯಾ ಗಾಂಗೇಯಂ ನ ಜಘಾನ ಹ ।
ನ ಚಾಂಬಾಂ ಗ್ರಾಹಯಾಮಾಸ ಕರುಣಃ ಕೋಽಪರಸ್ತತಃ ॥

ಶಿಖಂಡಿಯಾಗಿ ಅಂಬೆಯ ಜನನ

ಯಶೋ ಭೀಷ್ಮಸ್ಯ ದತ್ವಾ ತು ಸೋಽಂಬಾಂ ಚ [೨]ಶರಣಾಗತಾಮ್ ।
ಉನ್ಮಚ್ಯ ಭರ್ತೃದ್ವೇಷೋತ್ಥಪಾಪಾತ್ [೩] ತೇನಾಶ್ವಯೋಜಯತ್ ॥ ೯೭ ॥

ಅನಂತರಂ ಶಿಖಂಡಿತ್ವಾತ್ ತದಾ ಸಾ ಶಾಂಕರಂ ತಪಃ ।
ಭೀಷ್ಮಸ್ಯ ನಿಧನಾರ್ಥಾಯ ಪುಂಸ್ತ್ವಾರ್ಥಂ ಚ ಚಕಾರ ಹ ॥ ೯೮ ॥

ಅ: ಭೀಷ್ಮರಿಗೆ ಕೀರ್ತಿಯನ್ನಿತ್ತು ಪರಶುರಾಮ ಶರಣಾಗತಳಾದ ಅಂಬೆಯನ್ನು ಗಂಡನ ಮೇಲೆ ವೈರ ಸಾಧಿಸಿದ ಪಾಪದಿಂದ ಬಿಡುಗಡೆ ಮಾಡಿ, ಮುಂದೆ ಅವಳು ಶಿಖಂಡಿಯಾಗಿ ಜನಿಸಿಯಾದ ಬಳಿಕ ಬೇಗನೆ ಅವನೊಂದಿಗೆ ಒಂದುಗೂಡಿಸಿದನು. ಅನಂತರ ಅಂಬೆ ಭೀಷ್ಮರನ್ನು ಸಂಹರಿಸಲೆಂದೂ, ಪುರುಷತ್ವ ಹೊಂದಲೆಂದೂ ಆಗ ಅವಳು ಶಿವನನ್ನು ಕುರಿತು ತಪಸ್ಸನ್ನು ಮಾಡಿದಳು; ಆಶ್ಚರ್ಯ!

---

೧. ಸ ತೈರಗ್ನ್ಯರ್ಕಸಂಕಾಶೈಃ ಶರೈರಾಶೀವಿಷೋಪಮೈಃ ।
ಶಿತೈರಭ್ಯರ್ದಿತೋ ರಾಮೋ ಮಂದಚೇತಾ ಇವಾಭವತ್ ॥ – ಭಾರತ (ಉದ್ಯೋಗ. ೧೭೯/೩೫)

೨. ತರ್ಹಿ ಶರಣಾಗತಾಯಾ ಅಂಬಾಯಾ ಅಭೀಷ್ಟಾಕರಣಾತ್ "ಶರಣಾಗತವಜ್ರಪಂಜರ" ಇತಿ ಭಗವನ್ಮಹಿಮ್ನೋ ಹಾನಿರಿತ್ಯತ ಆಹ । ಅಂಬಾಂ ಚ ಶರಣಾಗತಾಮಿತಿ ॥ – (ವಾ.)

೩. ಕೇಚಿತ್ ತು ಭೀಷ್ಮಪಾಣಿಗ್ರಹಣಾಯೈವ ಭಾರ್ಗವಪ್ರಾರ್ಥನಾತ್ ತದಾನೀಂ ಪಾಪಾಭಾವಾಚ್ಛಿಖಂಡಿತ್ವಾನಂತರಂ ಭರ್ತೃದ್ವೇಷೋತ್ಥಪಾಪಾದಿತಿ ಸಂಬಂಧ ಇತ್ಯಾಹುಃ । – (ತಾ.)

ಎಃ ೧) ಅಂಬೆ ಶಿಖಂಡಿಯಾಗಿ ಜನಿಸಿ, ಭೀಷ್ಮರ ಮೇಲೆ ವೈರ ಸಾಧಿಸಿದ ಪ್ರಸಂಗ ಅವಳಿಗೆ ಅನೇಕಜನ್ಮಗಳ ಕಾಲ ಪತಿವಿಯೋಗಕ್ಕೆ ಕಾರಣವಾಗುತ್ತಿತ್ತು, ಆದರೆ ಪರಶುರಾಮರನ್ನು ಅಂಬೆ ಶರಣುಹೊಂದಿ, ಪತಿಯೋಗವನ್ನು ಪ್ರಾರ್ಥಿಸಿದ್ದರಿಂದ ಶಿಖಂಡಿಜನ್ಮ ಕಳೆಯುತ್ತಲೇ, ಪತಿಯೊಂದಿಗೆ ಸೇರುವ ಅನುಗ್ರಹವನ್ನು ಮಾಡಿದರು ಎಂಬುದನ್ನು 'ಆಶು' ಎಂಬ ಪದದಿಂದ ಸೂಚಿಸಿರುವರು. ಆ ಮೂಲಕ ತಾವು ಅವಳಿಗೆ ನೀಡಿದ್ದ ವಚನವನ್ನು ಸತ್ಯ ಮಾಡಿದರು[೧].

೨) ತಾರೆಯಾಗಿ ಜನಿಸಿದ್ದ ಶಚಿ ಸುಗ್ರೀವನ ಸಂಗ ಮಾಡಿದ್ದರಿಂದ ಆ ದೇಹ ತೊರೆದ ಅನಂತರವೂ ಅವಳಿಗೆ ಸ್ವರ್ಗ ಸೇರಲು ಸಾಧ್ಯವಾಗದೆ, ಚಿತ್ರಾಂಗದೆಯಾಗಿ ಜನಿಸಿ, ಶುದ್ಧಳಾಗುವ–ವರೆಗೂ ಮೂಲರೂಪಕ್ಕೆ ಸೇರಲು ಸಾಧ್ಯವಾಗಿರಲಿಲ್ಲ ಎಂಬ ಮುಂದೆ ಬರುವ ವಿಚಾರ ಇಲ್ಲಿ ಮನನೀಯ(೨೦/೧೬೦). ಅಂಬೆ ಪರಶುರಾಮರನ್ನು ಶರಣುಹೊಕ್ಕಿದ್ದರಿಂದಾಗಿ ಅವಳು ಸಾಲ್ವರಾಜನನ್ನು ಕಾಮಿಸಿದ ಅಪರಾಧವನ್ನು ಪರಿಹರಿಸಿ, ಬೇಗನೆ ಅವಳಿಗೆ ಪತಿಯೋಗವನ್ನು ಕರುಣಿಸಿದರು ಎಂದೂ ತಿಳಿಯಬಹುದು.

೩) ಅಂಬೆ ಹಾಗೆ ತಪಸ್ಸು ಮಾಡಿದ್ದು ಹಿಮಾಲಯದ ಬಳಿಯ ಬಾಹುದಾ ನದಿಯ ತೀರದ ಬಳಿಯಲ್ಲಿ; ಒಟ್ಟು ಹನ್ನೆರಡುವರ್ಷಗಳ ಕಾಲ; ಅದೂ ಪಾದಾಂಗುಷ್ಠಗಳ ಮೇಲೆ ಮಾತ್ರ ನಿಂತು ಎಂಬುದಾಗಿ ಮಹಾಭಾರತದಲ್ಲಿದೆ :

ಸಾ ತತೋ ದ್ವಾದಶಸಮಾ ಬಾಹುದಾಮಭಿತೋ ನದೀಮ್ ।
ಪಾರ್ಶ್ವೇ ಹಿಮವತೇ ರಮ್ಯೇ ತಪೋ ಘೋರಂ ಸಮಾದದೇ ॥
....ಪಾದಾಂಗುಷ್ಠೇನ ಸಾऽತಿಷ್ಠತ್ ..... ।

– ಕೃ. ಭಾರತ (ಆದಿ. ೧೦೯/೯೪,೯೫)

ಏವಂ ದ್ವಾದಶ ವರ್ಷಾಣಿ ತಾಪಯಾಮಾಸ ರೋದಸೀ – ಭಾರತ (೫/೧೮೬/೨೩)

---

೧. ಶಿಖಂಡಿತ್ವಾತ್= ಅಂಬಾಯಾ ಏವ ಶಿಖಂಡಿನಾಮ್ನಾ ಯಜ್ಜನನಂ ತಸ್ಯ ಭಾವಃ ಶಿಖಂಡಿತ್ವಂ ತಸ್ಮಾತ್ । ಅನೇನಾಂಬಾಯಾ ಏವ ದ್ರುಪದಗೇಹೇ ಶಿಖಂಡಿನಾಮ್ನಾ ಯತ್ ಜನ್ಮಾಭೂದಿತಿ ವಕ್ಷ್ಯಮಾಣಕಥಾऽಪಿ ಸೂಚಿತಾ। ತಸ್ಮಾತ್ ಶಿಖಂಡಿತ್ವಾದನಂತರಂ ಭರ್ತೃಭೂತಭೀಷ್ಮಾಚಾರ್ಯಸ್ಯ ದ್ವೇಷಃ = ವಧಹೇತುತಾಖ್ಯದ್ವೇಷಃ ತಸ್ಮಾದುತ್ಥಪಾಪಾತ್ ಉನ್ಮುಚ್ಯ = ಮೋಚಯಿತ್ವಾ ತೇನ = ಮೂಲರೂಪಂ ಗತೇನ ಭೀಷ್ಮೇಣಾಶು= ತಸ್ಯ ಮೂಲರೂಪಪ್ರವೇಶಸಮಯ ಏವಾಯೋಜಯತ್ । ಬಹುಜನ್ಮಸ್ವನುಭೋಕ್ತವ್ಯಮಪಿ ಭರ್ತೃಹನನಾಖ್ಯಂ ಭವಿಷ್ಯ-ನ್ಮಹಾಪಾಪಂ ಸ್ವಶರಣಾಗಮನಾಖ್ಯಮಹಾಪುಣ್ಯೇನ ಶೀಘ್ರಂ ಮೋಚಯಿತ್ವಾ ಪತ್ಯಾ ಸಹಾಯೋಜಯದಿತಿ ಭಾವಃ । ಅಂಬಾಜನ್ಮನಿ ಪ್ರಾಯಃ ಭೀಷ್ಮಪಾಣಿಗ್ರಹಣಾಯೈವ ಭಾರ್ಗವಂ ಪ್ರತಿ ಪ್ರಾರ್ಥಿತತ್ವೇನ ಪಾಪಾಭಾವಾತ್ ಶಿಖಂಡಿತ್ವಾದನಂತರಂ ಭರ್ತೃದ್ವೇಷೋತ್ಥಪಾಪಾದಿತ್ಯುಕ್ತಮ್ । ತದಾ ಭಾರ್ಗವಸಮೀಪಾತ್ ಪ್ರತ್ಯಾಗಮನಾನಂತರಂ ಸಾ ಅಂಬಾ ಶಾಂಕರಂ ತಪಶ್ಚಕಾರೇತಿ ಯೋಜನಾ ॥ – (ವಾ.)

ಅವಳು ಹಾಗೆ ತಪಸ್ಸು ಮಾಡಿದ್ದು ಯಮುನಾತೀರದಲ್ಲಿ ಎಂಬ ಮಾತೂ ಉಂಟು:

ಯಮುನಾತೀರಮಾಶ್ರಿತ್ಯ ತಪಸ್ತೇಪೇऽತಿಮಾನುಷಮ್॥ -ಭಾರತ(೫/೧೮೬/೧೯)

ಒಟ್ಟಾಗಿ ಆ ಎರಡೂ ನದಿಗಳ ತೀರದಲ್ಲೂ ತಪಸ್ಸನ್ನಾಚರಿಸಿದಳು ಎಂದು ತಿಳಿಯಬಹುದು.

ಭೀಷ್ಮೋ ಯಥಾ ತ್ವಾಂ ಗೃಹ್ಣೀಯಾತ್ ತಥಾ ಕುರ್ಯಾಮಿತೀರಿತಮ್ ।
ರಾಮೇಣ ಸತ್ಯಂ ತಚ್ಚಕ್ರೇ ಭೀಷ್ಮೇ ದೇಹಾಂತರಂ ಗತೇ[೧] ॥ ೯೯ ॥

ಅ: ಭೀಷ್ಮನು ನಿನ್ನನ್ನು ಸ್ವೀಕರಿಸುವಂತೆ ಮಾಡುವೆನು ಎಂದು ತಾನು ಹೇಳಿದ್ದನ್ನು ಪರಶುರಾಮ ಭೀಷ್ಮನು ತನ್ನ ಮೂಲರೂಪವನ್ನು ಹೊಂದಿದ ಮೇಲೆ ಸತ್ಯವನ್ನಾಗಿಸಿದ.

ವಿ: ''ಭೀಷ್ಮನು ಕೈಹಿಡಿಯುವಂತೆ ಮಾಡುತ್ತೇನೆ'' ಎಂದು ತಮ್ಮ ವಚನವನ್ನು ಅವರು ಅವಳು ಶಿಖಂಡಿದೇಹ ತೊರೆಯುತ್ತಲೇ ಪತಿಯೊಂದಿಗೆ ಸೇರುವಂತೆ ಮಾಡಿ ಅನುಗ್ರಹಿಸಿ ಪೂರೈಸಿದರು.

ಅಂಬೆಯ ತಪಸ್ಸು; ಶಿವನಿಂದ ವರಪ್ರಾಪ್ತಿ

ರುದ್ರಸ್ತು ತಸ್ಯಾಸ್ತಪಸಾ ತುಷ್ಟಃ ಪ್ರಾದಾದ್ವರಂ ತದಾ ।
ಭೀಷ್ಮಸ್ಯ ಮೃತಿಹೇತುತ್ವಂ ಕಾಲಾತ್[೨] ಪುಂದೇಹಸಂಭವಮ್ ॥ ೧೦೦ ॥

ಅ: ಶಿವನಾದರೊ ಅವಳ ತಪಸ್ಸಿನಿಂದ ಸಂತುಷ್ಟನಾಗಿ ಭೀಷ್ಮನ ಸಾವಿಗೆ ಕಾರಣಳಾಗುವ, ಕಾಲಾನಂತರ ಪುರುಷದೇಹವನ್ನು ಹೊಂದುವ ವರವನ್ನು ನೀಡಿದ.

ವಿ: ೧) ಅಂಬೆ ಭೀಷ್ಮರ ಸಾವಿಗೆ ಕಾರಣವಾಗುವ ಶಾಪವನ್ನು ಆಗಲೆ ಬ್ರಹ್ಮದೇವರು ನೀಡಿದ್ದರು ('ಪತ್ಯುರ್ಮೃತೌ ಕಾರಣತ್ವಂ ವ್ರಜೇತ' ಶ್ಲೋ.೧೧/೨೬). ಇಲ್ಲಿ ಅದನ್ನೇ ಅವಳು ವರ–ವನ್ನಾಗಿ ಶಿವನಿಂದ ಪಡೆಯುವ ಪ್ರಸಂಗ ಬ್ರಹ್ಮದೇವರ ಶಾಪದ ಪ್ರಭಾವವನ್ನು ಸ್ಫುಟಪಡಿಸುತ್ತದೆ.

೨) ಪುರುಷಳಾಗಿಯೇ ಹುಟ್ಟುವ ವರವನ್ನು ನೀಡದೆ, ಅನಂತರ ಪುರುಷದೇಹಪ್ರಾಪ್ತಿ–ಯಾಗುವುದೆಂದು ಶಿವನು ವರ ನೀಡಲು ಸ್ತ್ರೀಯರಿಗೆ ಎಂದೂ ಪುರುಷತ್ವ ಬರದು ಎಂಬ ವಿಶೇಷಾಂಶವೇ ಕಾರಣ ಎಂಬ ವಿವರ ಮುಂದೆ ಬಂದಿದೆ.

---

೧. ಅಂತರಂ ಗತೇ ವಸುತ್ವಂ ಪ್ರಾಪ್ತೇ ಸತಿ ಸತ್ಯಂ ಚಕ್ರೇ ರಾಮ ಇತಿಶೇಷಃ । ರಾಮೇಣ ಅಸ್ಮಿನ್ ಜನ್ಮನ್ಯೇವ ಯೋಜಯಿಷ್ಯ ಇತಿ ವಿಶಿಷ್ಯಾನುಕ್ತತ್ವಾತ್ ಭೀಷ್ಮೇಣ ಯೋಜಯಿಷ್ಯ ಇತಿ ಸಾಮಾನ್ಯೋಕ್ತೇಶ್ಚ ಜನ್ಮಾಂತರವಿಷಯತ್ವಾಭಿಪ್ರಾಯಸಂಭವಾತ್ ತಸ್ಯ ಚ ಕೃತತ್ವಾನ್ನ ರಾಮಪ್ರತಿಜ್ಞಾಭಂಗ ಇತಿಭಾವಃ । – (ಜ.)

೨. ಕಾಲಾತ್ = ದೇಹಾಂತರಪ್ರಾಪ್ತ್ಯನಂತರಕಾಲಾತ್ ಸ ಹನಿಷ್ಯತಿ । – (ವಾ.)

ಅಂಬೆಗೆ ಶಿವ ನೀಡಿದ ಮಾಲೆ

[೧]ಮಾಲಾಂ ಚ ಯ ಇಮಾಂ ಮಾಲಾಂ ಗೃಹ್ಣೀಯಾತ್ ಸ ಹನಿಷ್ಯತಿ ।
[೨]ಭೀಷ್ಮಮಿತ್ಯೇವ ತಾಂ ಮಾಲಾಂ ಗೃಹೀತ್ವಾ ಸಾ [೩]ನೃಪಾನ್ ಯಯೌ ॥ ೧೦೧ ॥

ಅ: ಮತ್ತು ಈ ಮಾಲೆಯನ್ನು ಧರಿಸುವವನು ಭೀಷ್ಮನನ್ನು ಕೊಲ್ಲುವನು ಎಂದು ಮಾಲೆಯೊಂದನ್ನು ನೀಡಿದ. ಅಂಬೆ ಆ ಮಾಲೆಯನ್ನು ತೆಗೆದುಕೊಂಡು ರಾಜರ ಬಳಿಗೆ ತೆರಳಿದಳು.

ಎ: ಶಿವನಿತ್ತ ಆ ಮಾಲೆಯನ್ನು ಧರಿಸುವವನು ಭೀಷ್ಮನನ್ನು ಕೊಲ್ಲುವುದಾದಲ್ಲಿ ಆ ಕಾರ್ಯವನ್ನು ಆಗಲೇ ಸಾಧಿಸುವ ಬಯಕೆಯಿಂದ ಹಾಗೆ ರಾಜರುಗಳ ಬಳಿ ತೆರಳಿದಳು ಎಂದು ತಿಳಿಯಬಹುದು.

[೪]ತಾಂ ನ ಭೀಷ್ಮಭಯಾತ್ ಕೇಽಪಿ ಜಗೃಹುಸ್ತಾಂ ಹಿ ಸಾ ತತಃ ।
[೫]ದ್ರುಪದಸ್ಯ ಗೃಹದ್ವಾರಿ ನ್ಯಸ್ಯ ಯೋಗಾತ್ ತನುಂ ಜಹೌ ॥ ೧೦೨ ॥

---

೧. ಏತಾಂ ಚೈವ ಮಯಾ ದತ್ತಾಂ ಮಾಲಾಂ ಯೋ ಧಾರಯಿಷ್ಯತಿ ।
ಸೋಽಸ್ಯ ಭೀಷ್ಮಸ್ಯ ನಿಧನೇ ಕಾರಣಂ ವೈ ಭವಿಷ್ಯತಿ ॥ – ಕೃ. ಭಾರತ (ಆದಿ. ೧೦೯/೯೯)

ನ ಚ ಪುಂದೇಹಸಂಭವೇ ತಸ್ಯೈವ ಮೃತಿಹೇತುತ್ವೋಪಪತ್ತೌ ಮಾಲಾದಾನಂ ವ್ಯರ್ಥಮಿತಿ ವಾಚ್ಯಮ್ । ಅನಯಾ ಭೀಷ್ಮಘಾತನಾರ್ಥಂ ಸ್ವಸ್ಯೈವಂವಿಧನಾನಾಕ್ಲೇಶಹೇತುಭೂತಸ್ತ್ರೀತ್ವಾಪಗಮೇ ನ ಪುಂಸ್ತ್ವಾರ್ಥಂ ತಪಃಕರಣೇನ ಸ್ವಸ್ಯೈವ ತದ್ಧಂತೃತ್ವಸ್ಯಾನನುಸಂಹಿತತ್ವಾನ್ಮಾಲಾಸ್ವೀಕಾರೋಪಪತ್ತೇಃ । ಶಿವೇನ ತು ಸಾಮಾನ್ಯತಃ ಸ್ವದತ್ತಸ್ಯ ಭೀಷ್ಮನಿಧನರೂಪವರಸ್ಯೋಪಪತ್ತಯೇ ಮಾಲಾಪ್ರದಾನಾದಿತಿ । – (ತಾ.)

೨. ಭೀಷ್ಮಮಿತ್ಯೇವೇತ್ಯತ್ರ ಸ ಏವ ಭೀಷ್ಮಂ ಹನಿಷ್ಯತಿ ಇತ್ಯುಕ್ತ್ವಾ ಮಾಲಾಂ ಪ್ರಾದಾದಿತಿ ಯೋಗ್ಯಪದಾಧ್ಯಾಹಾರೇಣ ಸಂಬಂಧಃ ॥ – (ವಾ.)

೩. ನೃಪತೀನಿತಿ । 'ಅಪತಿಃ ಕ್ಷತ್ರಿಯಾನ್ ಸರ್ವಾನಾಕ್ರಂದಾಮಿ ಸಮಂತತಃ । ಇಯಂ ವಃ ಕ್ಷತ್ರಿಯಾಮಾಲಾ ಯೋ ಭೀಷ್ಮಂ ನಿಹನಿಷ್ಯತಿ । ಅಹಂ ಚ ಭಾರ್ಯಾ ತಸ್ಯ ಸ್ಯಾಮ್' ಇತಿ ಭಾರತವಚನಾತ್ ಪತ್ಯರ್ಥಂ ಭೀಷ್ಮಘಾತನಾರ್ಥಂ ಚ ಮಾಲಾಂ ದಾತುಂ ನೃಪಾನ್ ಯಯಾವಿತ್ಯರ್ಥಃ ॥ – (ತಾ.)

೪. ತಾಂ ಹೀತಿ ಹಿಶಬ್ದಸ್ಯ ನ ಜಗೃಹುರ್ಹೀತಿ ಸಂಬಂಧಃ । ಭೀಷ್ಮಸ್ಯ ಸಾಮರ್ಥ್ಯಾತಿಶಯಪ್ರದರ್ಶನಂ ತತ್ಫಲಮ್ । ದ್ರುಪದಸ್ಯ ಗೃಹದ್ವಾರೀತಿ ವದತಾ ಅಮ್ಲಾನಪದ್ಮಮಯೀಂ ತಾಂ ಮಾಲಾಂ ದ್ರುಪದಃ ಸ್ವಕೋಶೇ ನಿಕ್ಷಿಪ್ಯ ದ್ರೌಪದೀಸ್ವಯಂವರಕಾಲೇ ತಾಮೇವ ಮಾಲಾಂ ಭೀಷ್ಮಹಂತುರರ್ಜುನಸ್ಯ ಕಂಠೇ ದ್ರೌಪದೀಕರೇಣಾರ್ಪಯಿಷ್ಯತೀತಿ ಸೂಚಿತಮ್ । ಅನ್ಯಥಾ ಯ ಇಮಾಂ ಮಾಲಾಂ ಗೃಹ್ಣೀಯಾತ್ । ಸ ಹನಿಷ್ಯತಿ ಭೀಷ್ಮಮಿತಿ ಶಿವದತ್ತವರಸ್ಯ ವೈಯರ್ಥ್ಯಪ್ರಸಂಗಾತ್ ॥ – (ವಾ.)

ಅ: ಭೀಷ್ಮನ ಭಯದಿಂದಾಗಿ ಅದನ್ನು ಯಾರೂ ಸ್ವೀಕರಿಸದಾದರು. ಕೊನೆಗೆ ಅವಳು ಅದನ್ನು ದ್ರುಪದನ ಮನೆಯ ಬಾಗಿಲ ಬಳಿ ಇರಿಸಿ, ಯೋಗಬಲದಿಂದ ದೇಹವನ್ನು ತೊರೆದಳು.

ಎ: ೧) ಅವಳು ಹಾಗೆ ರಾಜರುಗಳ ಬಳಿಗೆ ತೆರಳಿ, ಮಾಲೆ ಧರಿಸಿರೆಂದು ಕೇಳಿಕೊಳ್ಳುವ ಪ್ರಸಂಗ ನಡೆದದ್ದು ಒಟ್ಟು ಐದುವರ್ಷಗಳಷ್ಟು ದೀರ್ಘಕಾಲ :

ತಸ್ಯಾಶ್ಚಂಕ್ರಮಮಾಣಾಯಃ ಸಮಾಃ ಪಂಚ ಗತಾಃ ಪರಾಃ ।
ನಾಭವಚ್ಚರಣಂ ಕಶ್ಚಿತ್ ಕ್ಷತ್ರಿಯೋ ಭೀಷ್ಮಜಾದ್ಭಯಾತ್ ॥

– ಕೃ. ಭಾರತ (ಆದಿ. ೧೧೧/೩,೪)

೨) ಭೀಷ್ಮರು ಕಾಶಿರಾಜನ ಪುತ್ರಿಯರನ್ನು ಕರೆದೊಯ್ಯುವ ಸಂದರ್ಭದಲ್ಲಿ ತೋರಿಸಿದ ಪರಾಕ್ರಮ ಆ ಕಾಲದ ಅಪೂರ್ವದಾಖಲೆಗಳಲ್ಲೊಂದಾಗಿತ್ತು, ಅವರ ಅದ್ಭುತವಿಜಯ ಅವರ ಬಗ್ಗೆ ಆ ಕಾಲದ ರಾಜರಲ್ಲಿ ದಿಗಿಲು ಹುಟ್ಟಿಸಿತ್ತು, ಅದಕ್ಕೆಂದೇ ಅವರಾರೂ ಆ ಮಾಲೆಯನ್ನು ಸ್ವೀಕರಿಸುವ ಧೈರ್ಯ ತೋರಲಿಲ್ಲ, ಅವರಿಗೆ ಆ ಮಾಲೆಯ ಹಿಂದಿದ್ದ ವರಕ್ಕಿಂತಲೂ, ಭೀಷ್ಮರ ಬಗ್ಗೆ ಇದ್ದ ಭಯವೇ ಹೆಚ್ಚು ಪರಿಣಾಮಕಾರಿಯಾಗಿದ್ದುದು ಇದಕ್ಕೆ ದ್ಯೋತಕ.

೩) ಹಾಗೆ ದ್ರುಪದನ ಬಳಿಗೆ ತೆರಳಿದಾಗ, ಅವನೂ ಸಹ ಅದನ್ನು ನಿರಾಕರಿಸಲು, ಅವಳು ಬೇಸರದಿಂದ ಅವನು ಬೇಡವೆಂದರೂ ಕೇಳದೆ, ಅವನ ಅರಮನೆಯ ಮಹಾದ್ವಾರದ ಬಳಿ ಇರಿಸಿ ತೆರಳಿಬಿಟ್ಟಳು.

೪) ಆ ಮಾಲೆಯನ್ನು ದ್ರುಪದ ಕಾದಿರಿಸಿದ್ದ, ಶಿಖಂಡಿನಿಯಾಗಿ ಜನಿಸಿದ ಅಂಬೆ ಒಮ್ಮೆ ಅದನ್ನು ತಾನೂ ಧರಿಸಿದ್ದ ಉಲ್ಲೇಖ ಮಹಾಭಾರತದಲ್ಲಿದೆ(೧/೧೧೦/೨೧) :

ತಾಂ ಶಿಖಂಡಿನ್ಯಬಧ್ನಾತ್ ತು ಬಾಲಾ ಪಿತುರಜಾನತೀ । – ಕೃ.ಭಾರತ

---

೫. ದ್ರುಪದಸ್ಯೇತಿ । ನ ಚ ಯ ಇಮಾಂ ಮಾಲಾಂ ಗೃಹ್ಣೀಯಾತ್ ಸ ಹನಿಷ್ಯತೀತ್ಯುಕ್ತ್ವಾ ದತ್ತಾ ಮಾಲಾ ಮೋಘೇತಿ ವಾಚ್ಯಮ್ । ಯ ಇಮಾಂ ಮಾಲಾಂ ಗೃಹ್ಣೀಯಾತ್ ಸ ಹನಿಷ್ಯತೀತಿ ರುದ್ರವರಸ್ಯಾಂಬಾಯಾಮೇವ ಪರ್ಯವಸಾನಾತ್ । ಶಿಖಂಡಿತ್ವಾವಸ್ಥಾಯಾಂ ತಥೈವ ಮಾಲಾಗ್ರಹಣಾದಂಬಯಾ ಚ ತದಜಾನಂತ್ಯಾ ರಾಜಸಮೀಪಮಗಮತ್ । ತದುಕ್ತಂ ಭಾರತೇ –

ಇತ್ಯುಕ್ತ್ವಾ ಸ್ರಜಮಾಸೃಜ್ಯ ದ್ವಾರಿ ರಾಜ್ಞೋ ಹ್ಯಪಾದ್ರವತ್ ।
ತಾಂ ಸ್ರಜಂ ದ್ರುಪದೋ ರಾಜಾ ಕಿಂಚಿತ್ ಕಾಲಂ ರರಕ್ಷ ಸಃ ।
ತದಾ ವಿಸ್ರಂಭಮಾಸ್ಥಾಯ ತೂಷ್ಣೀಮೇತಾಮುಪೈಕ್ಷತ ।
ತಾಂ ಶಿಖಂಡಿನ್ಯಬಧ್ನಾತ್ತು ಬಾಲಾ ಪಿತುರಜಾನತೀ ॥ ಇತ್ಯಾದಿನಾ । – (ತಾ.)

೫) ಮುಂದೆ ಸ್ವಯಂವರಕಾಲದಲ್ಲಿ ದ್ರೌಪದಿ ಮತ್ಸ್ಯಯಂತ್ರ ಭೇದಿಸಿದ ಅರ್ಜುನನ ಕೊರಳಲ್ಲಿ ಹಾಕಿದ್ದು ಅದೇ ಮಾಲೆಯನ್ನು ಎಂಬ ವಿಶೇಷಾಂಶ ವಾದಿರಾಜೀಯದಲ್ಲಿದೆ.

೬) ಹೀಗೆ ಆ ಮಾಲೆ ಧರಿಸಿದ ಶಿಖಂಡಿನೀ ಶಿಖಂಡಿಯಾಗಿ ಭೀಷ್ಮವಧೆಗೆ ನಿಮಿತ್ತಳಾದರೆ, ಅರ್ಜುನ ಭೀಷ್ಮರನ್ನು ತನ್ನ ಬಾಣಗಳಿಂದ ವಧಿಸಿದ ಸಮರ್ಥನೆನ್ನಿಸಿದ. ಆ ಮಾಲೆಯನ್ನು ಧರಿಸುವವನು ಭೀಷ್ಮರನ್ನು ಕೊಲ್ಲುವನು ಎಂಬ ಶಿವನ ವರ ಸತ್ಯವೇ ಆಯಿತು.

ದ್ರುಪದನ ತಪಸ್ಸು; ಶಿವನ ವರ

ಏತಸ್ಮಿನ್ನೇವ ಕಾಲೇ ತು ಸುತಾರ್ಥಂ ದ್ರುಪದಸ್ತಪಃ ।
ಚಕಾರ ಶಂಭವೇ ಚೈನಂ ಸೋಽಬ್ರವೀತ್ ಕನ್ಯಕಾ ತವ ॥ ೧೦೩ ॥

ಭೂತ್ವಾ ಭವಿಷ್ಯತಿ ಪುಮಾನಿತಿ[೧] ಸಾಽಂಬಾ ತತೋಽಜನಿ ।
ನಾಮ್ನಾ ಶಿಖಂಡಿನೀ ತಸ್ಯಾಃ ಪುಂವತ್ ಕರ್ಮಾಣಿ[೨] ಚಾಕರೋತ್ ॥೧೦೪॥

ಅ: ಇದೇ ಸಮಯದಲ್ಲಿ ಪುತ್ರಪ್ರಾಪ್ತಿಗಾಗಿ ದ್ರುಪದ ಶಿವನನ್ನು ಕುರಿತು ತಪಸ್ಸನ್ನು ಮಾಡಿದ. ಶಿವ ಅವನಿಗೆ ತಿಳಿಸಿದ : ''ನಿನಗೆ ಹೆಣ್ಣುಮಗು ಹುಟ್ಟಿ ಅನಂತರ ಅದು ಗಂಡಾಗುವುದು''; ಬಳಿಕ ಅಂಬೆ ಶಿಖಂಡಿನೀ ಎಂಬ ಹೆಸರಿನಿಂದ ಜನಿಸಿದಳು. ಅವಳಿಗೆ ಪುರುಷಶಿಶುವಿಗೆ ಹೇಗೋ, ಹಾಗೆ ಸಂಸ್ಕಾರಗಳನ್ನು ದ್ರುಪದ ಮಾಡಿದ.

ವಿ: ೧) ಮುಂದೆ ಗಂಡಾಗುವುದು ಖಚಿತ ಎಂಬ ಶಿವನ ಮಾತನ್ನು ನಂಬಿ ದ್ರುಪದ ತನಗೆ ಜನಿಸಿದ ಹೆಣ್ಣುಮಗುವಿಗೆ ಗಂಡುಮಗುವಿಗೆ ಮಾಡಬೇಕಾದ ಚೌಲ ಉಪನಯನಾದಿ–ಸಂಸ್ಕಾರಗಳನ್ನು ಮಾಡಿದನು.

೧, ಕನ್ಯಾ ಭೂತ್ವಾ ಪುಮಾನ್ ಭಾವೀ ಇತಿ ಚೋಕ್ತೋಽಸ್ಮಿ ಶಂಭುನಾ ॥
- ಇತಿ ದ್ರುಪದವಾಕ್ಯಂ ಭಾರತೇ। (೧೫/೧೮೮/೭)

೨. ನಾಮ್ನಾ ಶಿಖಂಡಿನೀತಿ । ನನು ಶಿಖಂಡಿನೀತಿ ಸ್ತ್ರೀನಾಮಕರಣೇ ಸರ್ವೈರಪಿ ಸ್ತ್ರೀತ್ವಜ್ಞಾನಾನ್ನಾತಾಪಿತ್ರೋರನ್ಯತ್ರ ನ ವಿಜ್ಞಾತಾಮಿತಿ ಕಥಂ? । ಕಥಂ ವಾ ಪುಂವತ್ಕರ್ಮಕರಣಮಿತಿ ಚೇನ್ನ । ಅಂತರಂಗೇ ಮಾತಾಪಿತೃಭ್ಯಾಂ ಶಿಖಂಡಿನೀತಿ ವ್ಯವಹಾರಾತ್ ತದನುಸಾರೇಣಾಚಾರ್ಯೈರೇವಂ ಪ್ರಯುಕ್ತತ್ವಾತ್ । ಅತ ಏವ ಶಿಖಂಡಿನೀತಿ ನಾಮತೋಽಭೂದಿತ್ಯತ್ರಾಪಿ ಮಾತಾಪಿತೃವ್ಯವಹಾರಮಪೇಕ್ಷ್ಯೈವ ವಕ್ಷ್ಯತೀತಿ ಬೋಧ್ಯಮ್ । – (ತಾ.)

೩. ಕರ್ಮಾಣಿ ಚೌಲೋಪನಯನಾದಿಕರ್ಮಾಣಿ ಅಕರೋತ್ । – (ಜ.)

೨) 'ಸುತಾರ್ಥ೦' ಎಂಬ ಮಾತು 'ಸುತಸ್ಯ ಅರ್ಥ೦', 'ಸುತಾಯಾ ಅರ್ಥ೦' ಎಂದು ಎರಡುರೀತಿಯಲ್ಲೂ ಅರ್ಥೈಸಲು ಬರುವುದರಿಂದ ದ್ರುಪದ ಮಾಡಿದ ತಪಸ್ಸು ಈ ಅರ್ಥದಲ್ಲೂ ಸಾರ್ಥಕವಾಯಿತು ಎಂಬ ವಿಶೇಷಾಂಶವನ್ನೂ ಇಲ್ಲಿ ಗಮನಿಸಬಹುದು.

ಶಿಖಂಡಿನಿಯ ವಿವಾಹ

ತಸ್ಯೈ ಪಾಂಚಾಲರಾಜಃ ಸ ದಶಾರ್ಣಾಧಿಪತೇಃ ಸುತಾಮ್ ।
ಉದ್ವಾಹಯಾಮಾಸ ಸಾ ತಾಂ ಪುಂವೇಷೇಣೈವ ಗೂಹಿತಾಮ್ ॥ ೧೦೫ ॥

ಅ: ಪುರುಷವೇಷದಿಂದ ಮರೆಮಾಚಿ ಅವಳಿಗೆ ಪಾಂಚಾಲರಾಜನಾದ ದ್ರುಪದ ಮುಂದೆ ದಶಾರ್ಣದೇಶದ ದೊರೆಯ ಮಗಳೊಂದಿಗೆ ವಿವಾಹವನ್ನೂ ಮಾಡಿದ.

ಅನ್ಯತ್ರ ಮಾತಾಪಿತ್ರೋಸ್ತು ನ ವಿಜ್ಞಾತಾಂ ಬುಬೋಧ ಹ ।
ಧಾತ್ರೈ[೧] ನ್ಯವೇದಯತ್ ಸಾऽಥ ತತ್ಪಿತ್ರೇ ಸಾ ನ್ಯವೇದಯತ್ ॥ ೧೦೬ ॥

ಅ: ತಂದೆತಾಯಿಯ ಹೊರತು ಬೇರಾರಿಗೂ ತಿಳಿಯದಿದ್ದ ಅವಳು ಹೆಣ್ಣೆಂಬ ವಿಚಾರವನ್ನು ಆ ದಶಾರ್ಣದೇಶದ ರಾಜನ ಮಗಳು ತಿಳಿದು, ಅದನ್ನು ದಾದಿಗೆ ತಿಳಿಸಿದಳು; ಅವಳು ಅದನ್ನು ಅವಳ ತಂದೆಗೆ ತಿಳಿಸಿದಳು.

ವಿ: ೧) ತಾನು ಹಾಗೂ ತನ್ನ ಹೆಂಡತಿಯ ಹೊರತು ಇತರ ಯಾರಿಗೂ ಶಿಖಂಡಿನೀ ನಿಜವಾಗಲೂ ಹೆಣ್ಣು ಎಂದು ತಿಳಿಯದಂತೆ ದ್ರುಪದರಾಜ ಬೆಳೆಸಿದ್ದ ಇಷ್ಟು ರಹಸ್ಯವಾಗಿದ್ದ ಆ ವಿಚಾರ ವಿವಾಹದ ಅನಂತರ ಆ ರಾಜಕುಮಾರಿಗೆ ತಿಳಿಯಿತು ಎಂದು ಭಾವ.

೨) [೧]ಧಾತ್ರೀ ಎಂದರೆ ಸಾಕುತಾಯಿ ಎಂದರ್ಥ. ಇದೇ ಕನ್ನಡದಲ್ಲಿ ದಾದಿ ಎಂದಾಗಿದೆ.

೩) ಆ ದೇಶದ ರಾಜನ ಹೆಸರು [೨]ಹಿರಣ್ಯವರ್ಮ :

ಹಿರಣ್ಯವರ್ಮೇತಿ ನೃಪೋ ಯೋऽಸೌ ದಾಶಾರ್ಣಕಃ ಸ್ಮೃತಃ ।
ಸ ಚ ಪ್ರಾದಾನ್ಮಹೀಪಾಲಃ ಕನ್ಯಾಂ ತಸ್ಮೈ ಶಿಖಂಡಿನೇ ॥ – ಭಾರತ(೧/೧೮೯/೧೦)

---

೧. 'ಧಾತ್ರೀ ಸ್ಯಾದುಪಮಾತಾ' ಇತ್ಯಮರಃ। – (ಜ.)

೨. .....ಪತೇರ್ಹಿರಣ್ಯವರ್ಮಣಃ.... – (ಜ.)

ಸ[೧] ಕ್ರುದ್ಧಃ ಪ್ರೇಷಯಾಮಾಸ ನಿಹನ್ಮಿ[೨] ತ್ವಾಂ ಸಬಾಂಧವಮ್ ।
ಇತಿ ಪಾಂಚಾಲರಾಜಾಯ ನಿರ್ಜಗಾಮ ಚ ಸೇನಯಾ ॥ ೧೦೭ ॥

ಅ: ಆ ದಶಾರ್ಣದೇಶದ ರಾಜ ಕೋಪಗೊಂಡವನಾಗಿ ''ನಿನ್ನನ್ನು ಬಂಧುಗಳ ಸಮೇತ ಕೊಂದುಹಾಕುವೆ'' ಎಂದು ಪಾಂಚಾಲರಾಜನಿಗೆ (ದೂತನ ಮೂಲಕ) ಹೇಳಿಕಳಿಸಿ, ಸೈನ್ಯಸಮೇತನಾಗಿ ತೆರಳಿಯೂಬಿಟ್ಟ.

ವಿಶ್ವಸ್ಯ ವಾಕ್ಯಂ ರುದ್ರಸ್ಯ ಪುಮಾನೇವೇತಿ ಪಾರ್ಷತಃ ।
ಪ್ರೇಷಯಾಮಾಸ ಧಿಗ್ಬುದ್ಧಿರ್ಭಿನ್ನಾ[೩] ತೇ ಬಾಲವಾಕ್ಯತಃ ॥ ೧೦೮ ॥
ಅಪರೀಕ್ಷಕಸ್ಯ ತೇ ರಾಷ್ಟ್ರಂ ಕಥಮಿತ್ಯೇವ ನರ್ಮಕೃತ್ ।

ಅ: ಶಿವನ ಮಾತಿನ ಮೇಲೆ ನಂಬಿಕೆಯಿರಿಸಿ, ಪೃಷತಪುತ್ರನಾದ ದ್ರುಪದ ''ನನ್ನ ಮಗ ಗಂಡೇ; ನಿನಗೆ ಧಿಕ್ಕಾರ. ಅರಿಯದ ಜನರ ಮಾತಿನಿಂದ ನಿನ್ನ ಬುದ್ಧಿ ಕೆಟ್ಟಿದೆ. ಪರೀಕ್ಷಿಸಿ ನಡೆಯದ ನೀನು ರಾಜ್ಯವಾಳುವುದೆಂತು?'' ಎಂಬ ಅಪಹಾಸದ ಪ್ರತಿಸಂದೇಶವನ್ನು ಕಳುಹಿಸಿದ.

ಅಥ ಭಾರ್ಯಾಸಮೇತಂ ತಂ ಪಿತರಂ ಚಿಂತಯಾಽಽಕುಲಮ್ ।
ದೃಷ್ಟ್ವಾ ಶಿಖಂಡಿನೀ ದುಃಖಾನ್ಮನ್ನಿಮಿತ್ತಾನ್ನ ನಶ್ಯತು ॥ ೧೦೯ ॥

ಇತಿ ಮತ್ವಾ ವನಾಯೈವ ಯಯೌ ಯತ್ರ ಚ ತುಂಬುರುಃ ।
ಸ್ಥೂಣಾಕರ್ಣಾಭಿಧೇಯಸ್ತಮಪಶ್ಯದ್ದೃಢಕರ್ಣತಃ[೪] ॥ ೧೧೦ ॥

ಅ: ಬಳಿಕ ತಾಯಿಯೊಂದಿಗೆ ತಂದೆಯೂ ಚಿಂತೆಯಿಂದ ಬಳಲಿರುವುದನ್ನು ಕಂಡು ಶಿಖಂಡಿನೀ ತನ್ನ ನಿಮಿತ್ತದಿಂದಾಗಿ ಅವನಿಗೆ ಕೇಡಾಗದಿರಲಿ ಎಂದು ಯೋಚಿಸಿ, ದುಃಖದಿಂದ

---

೧. ಸ ಕ್ರುದ್ಧಃ ಪ್ರೇಷಯಾಮಾಸೇತ್ಯತ್ರ । ದೂತಮಿತಿ ಯೋಗ್ಯಪದಾಧ್ಯಾಹಾರಃ ॥ – (ವಾ.)
ಕಾಂಚನವರ್ಮಾಣಂ ದೂತಮಿತಿ.... । – (ಜ.)

೨. ಸ ಹಿರಣ್ಯವರ್ಮಾ ತ್ವಾಂ ಹನ್ಮೀತಿ ಪಾಂಚಾಲರಾಜಾಯ ದ್ರುಪದಂ ಪ್ರತೀತ್ಯರ್ಥಃ । – (ಜ.)

೩. ಅಪರೀಕ್ಷಕಸ್ಯ ಪರೀಕ್ಷತೇ ಅವಧಾರಯತಿಪ್ರಮಾಣೈರರ್ಥಮಿತಿ ಣ್ವುಲ್ । ಪರೀಕ್ಷಕಃ ಸ ನ ಭವತ್ಯಪರೀಕ್ಷಕಃ ತಸ್ಯ । – (ಜ.)

೪. ಕ್ವಚಿತ್ ಸ್ಥೂಣಾಕರ್ಣಾಖ್ಯಃ ಶಿಖಂಡಿನ್ಯೈ ದೇಹಂ ದತ್ತವಾನಿತಿ ಕಥಾಽಸ್ತಿ । ತಸ್ಯಾಸ್ತಾತ್ಪರ್ಯಮಾಹ-ದೃಢಕರ್ಣತ ಇತಿ । ದೃಢಕರ್ಣತಃ= ನಿಮಿತ್ತಾತ್ ಸ್ಥೂಣಾಕರ್ಣಾಭಿಧೇಯ ಇತಿ ॥ – (ವಾ.)

ಕಾಡಿಗೆ ತೆರಳಿದಳು. ಅಲ್ಲಿ ಬಲವಾದ ಕಿವಿಗಳಿಂದಾಗಿ ಸ್ಥೂಣಾಕರ್ಣನೆಂದು ಹೆಸರು ಪಡೆದಿದ್ದ ತುಂಬುರುಗಂಧರ್ವ ಇದ್ದ.

ವಿ: ಉದ್ಯೋಗಪರ್ವದ [೧]ಅಂಬೋಪಾಖ್ಯಾನಪರ್ವದಲ್ಲಿ ಅಂಬೆಗೆ ತನ್ನ ದೇಹವನ್ನು ನೀಡಿದವನು ಸ್ಥೂಣಾಕರ್ಣ ಎಂದಿದೆ. ತುಂಬುರುವಿಗೇ ಸ್ಥೂಣಾಕರ್ಣ ಎಂಬುದು ಬಲವಾದ ಕಿವಿಗಳಿಂದಾಗಿ ಮತ್ತೊಂದು ಹೆಸರು ಎಂದು ತಿಳಿಸುವುದರ ಮೂಲಕ ಅದರ ಭಾವವನ್ನು [೨]ತಿಳಿಸಿರುವರು.

ಶಿಖಂಡಿನಿಗೆ ತುಂಬುರುವಿನ ಪುರುಷದೇಹ

ಸ ತಸ್ಯಾ ಅಖಿಲಂ ಶ್ರುತ್ವಾ ಕೃಪಾಂ ಚಕ್ರೇ ಮಹಾಮನಾಃ ।
ಸ ತಸ್ಮೈ ಸ್ವಂ ವಪುಃ ಪ್ರಾದಾತ್ ತದೀಯಂ ಜಗೃಹೇ ತಥಾ ।
ಅಂಶೇನ ಪುಂಸ್ತ್ವಭಾವಾರ್ಥಂ ಪೂರ್ವದೇಹೇ ಸಮಾಸ್ಥಿತಃ ॥ ೧೧೧ ॥

ಅ: ದೊಡ್ಡ ಮನಸ್ಸಿನ ಅವನು ಅವಳ ವಿಚಾರವನ್ನೆಲ್ಲ ಕೇಳಿ ಕರುಣೆ ತೋರಿದ. ಅವಳಿಗೆ ತನ್ನ ದೇಹವನ್ನು ನೀಡಿದ; ಅವಳ ದೇಹವನ್ನು ತಾನು ತೆಗೆದುಕೊಂಡ. ಪುರುಷತ್ವ ಸಿದ್ಧಿಗೋಸ್ಕರ ತಾನು ನೀಡಿದ ದೇಹದಲ್ಲಿ ಒಂದಂಶದಿಂದ ತಾನೂ ನೆಲೆಸಿದ.

ಸ್ತ್ರೀಯರಿಗೆ ಸರ್ವಥಾ ಪುರುಷತ್ವವಿಲ್ಲ

ಪುಂಸಾಂ ಸ್ತ್ರೈತ್ವಂ ಭವೇತ್ ಕ್ವಾಪಿ ತಥಾऽಪ್ಯಂತೇ ಪುಮಾನ್ ಭವೇತ್ ।
ಸ್ತ್ರೀಣಾಂ ನೈವ ಹಿ ಪುಂಸ್ತ್ವಂ ಸ್ಯಾದ್ಬಲವತ್ಕಾರಣೈರಪಿ ॥ ೧೧೨ ॥

ಅ: ಪುರುಷರಿಗೆ ಕೆಲವೊಮ್ಮೆ ಸ್ತ್ರೈತ್ವ ಬರಬಹುದು. ಆಗಲೂ ಕೊನೆಗೆ ಅವನು ಪುರುಷನೇ ಆಗುವನು. ಆದರೆ ಸ್ತ್ರೀಯರಿಗೆ ಬಲವತ್ತಾದ ಕಾರಣದಿಂದಲೂ ಸಹ ಪುರುಷತ್ವ ಬರಲಾರದು.

ವಿ: ೧) ಪುರುಷಜೀವರು ಮತ್ತು ಸ್ತ್ರೀಜೀವರು ಎಂಬುದಾಗಿ ಜೀವರು ಎರಡು ವಿಧ. ಪುರುಷಜೀವರು ಪುರುಷರಾಗಿಯೂ, ಸ್ತ್ರೀಜೀವರು ಸ್ತ್ರೀಯರಾಗಿಯೂ ಹುಟ್ಟುವುದು ನಿಯಮ.

೨) ಈ ಬಗೆಯ ಜಿಜ್ಞಾಸೆ ಅನುಶಾಸನಪರ್ವದ ಉಮಾಮಹೇಶ್ವರಸಂವಾದದಲ್ಲಿದೆ.

---

೧. ತಸ್ಮೈ ಯಕ್ಷಪ್ರಧಾನಾಯ ಸ್ಥೂಣಕರ್ಣಾಯ ಭಾರತ । – ಭಾರತ (೫/೧೯೧/೨೬)

೨. ಸ್ಥೂಣಾಕರ್ಣೋऽಪಶ್ಯದಿತಿ ಗ್ರಂಥಾಂತರವಿರೋಧಂ ಪರಿಹರನ್ನಾಹ ಸ್ಥೂಣಾಕರ್ಣೇತಿ । – (ಜ.)

೩. ಪೂರ್ವದೇಹೇ= ಶಿಖಂಡಿನ್ಯೈ ದತ್ತಸ್ವಪೂರ್ವದೇಹೇ । ಪುಂಸ್ತ್ವಭಾವಾರ್ಥಂ= ಪುಂಸ್ತ್ವಸ್ಯ ಭಾವಃ ಪ್ರಾಪ್ತಿಸ್ತದರ್ಥಮಂಶೇನ ಸಮಾಸ್ಥಿತಃ । ನಾರ್ಯಾಃ ಪುಂಭಾವಃ ಪುಮಾಂಸಂ ವಿನಾ ನ ಭವತಿ । ಪುಂಸಸ್ತು ಸ್ತ್ರೈತ್ವಂ ಸ್ತ್ರ್ಯಂಶಾಭಾವೇऽಪಿ ಅರ್ಜುನಾದೇರಿವ ಸ್ವಭಾವಾದೇವ ಘಟತ ಇತಿ ಭಾವಃ ॥ – (ವಾ.)

೩) ಪುರುಷಜೀವರಿಗೆ ಕಾರಣಾಂತರದಿಂದ ಎಂದರೆ ವರ ಅಥವಾ ಶಾಪಗಳಿಂದ [೧]ಸ್ತ್ರೀತ್ವ ಬರಬಹುದು. ೧೬೧೦೦ ಜನ [೨]ಅಗ್ನಿಪುತ್ರರು ಶ್ರೀಕೃಷ್ಣಪತ್ನಿಯರಾಗ ಬಯಸಿ ಸ್ತ್ರೀತ್ವ ಪಡೆದದ್ದು ಇಚ್ಛೆ ಪಟ್ಟು ಸ್ತ್ರೀದೇಹ ಪಡೆಯುವುದಕ್ಕೆ ನಿದರ್ಶನ. ವೈವಸ್ವತಮನುವಿನ ಪುತ್ರನಾದ [೩]ಸುದ್ಯುಮ್ನ ಕುಮಾರವನವನ್ನು ಪ್ರವೇಶಿಸಿ, ಶಿವನ ಶಾಪದಿಂದ ಸ್ತ್ರೀದೇಹವನ್ನು ಪಡೆದದ್ದು ಶಾಪದಿಂದ ಸ್ತ್ರೀದೇಹ ಪಡೆದುದಕ್ಕೆ ನಿದರ್ಶನ. ಹೀಗೆ ಕಾರಣಾಂತರದಿಂದ ಸ್ತ್ರೀದೇಹ ಪಡೆದ ಪುರುಷಜೀವರು ಆ ಕಾರಣ ಮುಗಿಯುತ್ತಲೇ ಪುನಃ ಪುರುಷದೇಹವನ್ನೇ ಪಡೆಯುವರು ಎಂಬುದು ವಿಶೇಷ.

೪) ಸ್ತ್ರೀಜೀವರು ಮಾತ್ರ ಎಂತಹ ಪ್ರಬಲಕಾರಣದಿಂದಲೂ ಪುರುಷದೇಹ ಪಡೆಯಲು ಸಾಧ್ಯವಿಲ್ಲ. ಅತ್ಯಂತಪ್ರಬಲಕಾರಣವಿದ್ದಾಗ ಸ್ತ್ರೀಜೀವರು ಪುರುಷದೇಹದಲ್ಲಿ ನೆಲೆಸಬಹುದೇ ಹೊರತು, ಸ್ವತಃ ಪುರುಷದೇಹವನ್ನು ಪಡೆಯಲು ಸಾಧ್ಯವಿಲ್ಲ. ಹಾಗೆ ಪುರುಷದೇಹದಲ್ಲಿ ನೆಲೆಸಿದ್ದಾಗಲೂ ಆ ಪುರುಷದೇಹದಲ್ಲಿ ಒಬ್ಬ ಪುರುಷಜೀವ ನೆಲೆಸಿರಲೇಬೇಕು ಎಂಬುದು ಮತ್ತೊಂದು ವಿಶೇಷ. ಪ್ರಕೃತ ಶಿಖಂಡಿನಿಗೆ ತನ್ನ ದೇಹ ಕೊಟ್ಟ ತುಂಬುರು ಅದರಲ್ಲಿ ತಾನೂ ಒಂದಂಶದಿಂದ ನೆಲೆಸಲು ಇದೇ ಕಾರಣ. ಆದರೆ ಪುರುಷ ಸ್ತ್ರೀದೇಹ ಪಡೆದಾಗ ಅಲ್ಲಿ ಬೇರೆ ಸ್ತ್ರೀಜೀವ ನೆಲೆಸಬೇಕಾದ ಅಗತ್ಯವಿಲ್ಲ.

[೪]
ಅತಃ ಶಿವವರೇಽಪ್ಯೇಷಾ ಜಜ್ಞೇ ಯೋಷೈವ ನಾನ್ಯಥಾ ।
ಪಶ್ಚಾಚ್ಚ ಪುಂತನುಂ ಸೈಷಾ ಪ್ರವಿವೇಶೈವ ಪುಂಯುತಾಮ್ ॥ ೧೧೩ ॥

---

೧. ಯಾಂತಿ ಸ್ತ್ರೀತ್ವಂ ಪುಮಾಂಸೋಽಪಿ ಪಾಪತಃ ಕಾಮತೋಽಪಿ ವಾ ।
ನ ಸ್ತ್ರಿಯೋ ಯಾಂತಿ ಪುಂಸ್ತ್ವಂ ತು ಸ್ವಭಾವಾದೇವ ಯಾಃ ಸ್ತ್ರಿಯಃ ।
ಪುಂಸಾ ಸಹೈವ ಪುಂದೇಹಸ್ಥಿತಿಃ ಸ್ಯಾದ್ ವರದಾನತಃ ।
ತಜ್ಜನ್ಮನಿ ವರಾಃ ಪಾಪಜಾತಾಭ್ಯೋ ನಿಜಸಸ್ತ್ರಿಯಃ ।
ಸರ್ವೇಷಾಮಪಿ ಜೀವಾನಾಮಂತ್ಯದೇಹೋ ಯಥಾ ನಿಜಃ ।
ಮುಕ್ತೌ ಚ ನಿಜಭಾವಃ ಸ್ಯಾತ್ ಕರ್ಮಭೋಗಾಂತತೋಽಪಿ ವಾ ॥
—ಇತಿ ಗೀತಾತಾತ್ಪರ್ಯೋದ್ಧೃತ (೯/೩೪) ಭವಿಷ್ಯತ್ಪರ್ವವಚನಮ್

೨. 'ಅಗ್ನಿಪುತ್ರಾ ಮಹಾತ್ಮಾನಸ್ತಪಸಾ ಸ್ತ್ರೀತ್ವಮಾಪಿರೇ ।' —ಭಾ.ತಾ. (೧/೧೦/೩೧)

೩. ಸುದ್ಯುಮ್ನನ ಕಥೆ ಭಾಗವತದ ನವಮಸ್ಕಂಧದ ಮೊದಲ ಅಧ್ಯಾಯದಲ್ಲಿ ಬಂದಿದೆ.

೪. ಪ್ರಾಕ್ ತವ ಕನ್ಯಕಾ ಭೂತ್ವಾ ಸೈವ ಪುಮಾನ್ ಭವಿಷ್ಯತೀತಿ ಶಿವವರೇ ಸತ್ಯಪಿ ಅತಃ = ಸ್ತ್ರೀಣಾಂ ಪುಂಸ್ತ್ವಭಾವಾನ್ನಿಮಿತ್ತಾತ್ ಏಷಾ ಯೋಷೈವ ಜಜ್ಞೇ ಏವಕಾರವ್ಯಾವರ್ತ್ಯಂ ದರ್ಶಯತಿ । ಅನ್ಯಥಾ ನೇತಿ । ಅಸ್ಯಾಃ ಪುಂಸ್ತ್ವಂ ಶಿವವರಾದಪಿ ನಾಭೂದಿತಿ ಭಾವಃ । ನಾಪಿ ಭವಿಷ್ಯತೀತ್ಯಾಹ । ಪಶ್ಚಾಚ್ಚೇತಿ । ಪಶ್ಚಾತ್ = ಭವಿಷ್ಯತ್ಕಾಲೇಽಪಿ ಸಾ ಪುಮಾನ್ ಭವಿಷ್ಯತೀತಿ ಶಿವವರಪ್ರಸಾದವತೀ ಏಷಾ = ಕನ್ಯಕಾ ಪುಂಯುತಾಂ = ಪುಂತನುಂ ಪ್ರವಿವೇಶೈವ । ನ ತು ಸ್ವಯಮೇವ ಪುಮಾಂಜಾತಾ ॥ —(ವಾ.)

ನಾಸ್ಯಾ ದೇಹಃ ಪುಂಸ್ತ್ವಮಾಪ[೧] ನ ಚ ಪುಂಸಾऽನಧಿಷ್ಠಿತೇ ।
ಪುಂದೇಹೇ ನ್ಯವಸತ್ ಸಾऽಥ ಗಂಧರ್ವೇಣ ತ್ವಧಿಷ್ಠಿತಮ್ ।
ಗಾಂಧರ್ವಂ ದೇಹಮಾವಿಶ್ಯ ಸ್ವಕೀಯಂ ಭವನಂ ಯಯೌ ॥ ೧೧೪ ॥

ಅ: ಆದ್ದರಿಂದ ಶಿವನ ವರವಿದ್ದರೂ, ಅಂಬೆ ಹೆಣ್ಣಾಗಿ ಹುಟ್ಟಿದಳೇ ಹೊರತು ಗಂಡಾಗಿ ಅಲ್ಲ. ಅನಂತರವೂ ಪುರುಷಜೀವನಿಂದ ಕೂಡಿದ ಪುರುಷದೇಹವನ್ನು ಪ್ರವೇಶಿಸಿದಳೇ ಹೊರತು ಅವಳ ದೇಹ ಪುರುಷತ್ವ ಪಡೆಯಲಿಲ್ಲ. ಪುರುಷಜೀವನು ನೆಲೆಸಿದ ಪುರುಷದೇಹದಲ್ಲಿ ಅವಳು ನೆಲೆಸಲಿಲ್ಲ. ಅವಳು ಅನಂತರ ಗಂಧರ್ವನಿಂದ ಕೂಡಿದ್ದ ಗಂಧರ್ವದೇಹವನ್ನು ಪ್ರವೇಶಿಸಿ, ತನ್ನ ಮನೆಗೆ ತೆರಳಿದಳು.

ವಿ: ಶಿಖಂಡಿನೀದೇಹವನ್ನು ತುಂಬುರು ಪ್ರವೇಶಿಸಿದಂತೆ, ಶಿಖಂಡಿನಿಗೆ ತುಂಬುರುದೇಹವನ್ನು ಪ್ರವೇಶಿಸಲು ಸಾಧ್ಯವಾಗಲಿಲ್ಲ. ತುಂಬುರುವಿನಿಂದ ಕೂಡಿದ್ದ ದೇಹದಲ್ಲಿ ಅವನ ಅಂಶದೊಂದಿಗೆ ನೆಲೆಸಿದಳೇ ಹೊರತು ಪ್ರತ್ಯೇಕವಾಗಿ ಅಲ್ಲ. ಗೃಹಸ್ಥನ ಮನೆಗೆ ಯತಿ ಪ್ರವೇಶಿಸಿದಂತೆ ಈ ಪ್ರಸಂಗ ನಡೆದಿದೆ. ಯತಿ ಪ್ರವೇಶಿಸಿದಾಗಲೂ ಆ ಗೃಹ ಗೃಹಸ್ಥನದೇ ಹೊರತು [೨]ಯತಿಯದಲ್ಲ. ಭಿಕ್ಷುವಿಗೆ ಗೃಹಸ್ಥತ್ವ ಹೇಗೆ ಒದಗದೊ, ಹಾಗೆ ಶಿಖಂಡಿನಿಗೆ ಪುರುಷತ್ವ ಒದಗಲಿಲ್ಲ ಎಂದು ಭಾವ.

ತಸ್ಯಾಸ್ತದ್ದೇಹಸಾದೃಶ್ಯಂ ಗಂಧರ್ವಸ್ಯ ಪ್ರಸಾದತಃ ।
ಪ್ರಾಪ ಗಂಧರ್ವದೇಹೋऽಪಿ ತಯಾ ಪಶ್ಚಾದಧಿಷ್ಠಿತಃ ॥ ೧೧೫ ॥

ಅ: ಅವಳು ಹಾಗೆ ನೆಲೆಸಿದ ಗಂಧರ್ವದೇಹವು ಅವಳ ದೇಹದ ಹೋಲಿಕೆಯನ್ನು ಗಂಧರ್ವನ ಪ್ರಸಾದದಿಂದ ಪಡೆಯಿತು.

---

೧. ನಾಪ್ಯಸ್ಯಾಃ ಪುಂರೂಪಾರ್ಜುನಸ್ಯ ದೇಹಃ ಶಾಪಾತ್ ಸ್ತ್ರೀತ್ವಮಿವ ಶಿವವರಾದಪಿ ಪುಂಸ್ತ್ವಮಾಪ । ಕಿಂತು ಸ್ವಸ್ತ್ರೀದೇಹಮನ್ಯಸ್ಮೈ ದತ್ತ್ವಾ ತಸ್ಯ ಪುಂದೇಹಮೇವ ಸ್ವಯಂ ಪ್ರಾಪ । ಪುಂಸಾऽನಧಿಷ್ಠಿತೇ ತಸ್ಮಿನ್ ಪುಂದೇಹೇ ಸ್ವಶಕ್ತ್ಯಾ ನ ನ್ಯವಸತ್। ಕಿಂತು ತದಂಶಮಾದಾಯೈವ ನ್ಯವಸಚ್ಚ । ತಸ್ಮಾದ್ಬಲವತ್ಕಾರಣೈರಪಿ ಸ್ತ್ರೀಣಾಂ ಪುಂಸ್ತ್ವಂ ನ ಸ್ಯಾದೇವೇತಿ ನಿಯಮಃ ಸುಸ್ಥಃ । ಸ್ತ್ರಿಯಾಃ ಸ್ತ್ರೀತ್ವೇ ವರಸ್ಯಾನಪೇಕ್ಷಣಾತ್ ಸ್ತ್ರಿಯಾಃ ಪುಂಭಾವಸ್ಯ ಚ ಕದಾऽಪ್ಯಜಾತತ್ವಾತ್ ಪುಮಧಿಷ್ಠಿತಪುಂದೇಹಪ್ರವೇಶಸ್ಯ ಚ ಗಂಧರ್ವಪ್ರಸಾದಾದೇವ ಜಾತತ್ವಾತ್ ಬಲವಾನ್ ಶಿವವರೋऽಪಿ ಸ್ತ್ರೀಣಾಂ ಪುಂಸ್ತ್ವಂ ನ ಭವತೀತಿ ಯೇನ ನಿಯಮೇನ ವ್ಯರ್ಥೀಕೃತಃ। ತಸ್ಯ ನಿಯಮಸ್ಯ ಕದಾऽಪಿ ಕೇನಾಪಿ ನ ಭಂಗ ಇತಿ ವಾಕ್ಯಸಮುದಾಯಸ್ಯಾಭಿಪ್ರಾಯಃ । ಅತ ಏವ ಶ್ರುತಿಃ ''ಸ್ತ್ರಿಯಃ ಸತೀಸ್ತಾ೯ ಉ ಮೇ ಪುಂಸ ಆಹುಃ ಪಶ್ಯದಕ್ಷಣ್ವಾನ್ನ ವಿ ಚೇತದಂಧಃ । ಕವಿರ್ಯಃ ಪುತ್ರಃ ಸ ಇಮಾ ಚಿಕೇತ ಯಸ್ತಾ ವಿಜಾನಾತ್ಸ ಪಿತುಷ್ಪಿತಾऽಸತ್'' ಇತಿ ಶ್ರುತಿಃ । ..... ತಸ್ಮಾದ್ಗ್ರಂಥಲಾಘವಾಯ ಅವ್ಯಯೈರೇವ ಸಕಲಶಂಕಾಶೂಕಾನಾಂ ವ್ಯಯಂ ಕುರ್ವನ್ ಗ್ರಂಥಕಾರೋऽಪಿ ಸ್ವಗುರುವ್ಯಾಸವತ್ ಅಘಟಿತಘಟಕ ಇತಿ ಜ್ಞೇಯಮ್ । –(ವಾ.)

೨. ಅಸ್ಯಾಸ್ತು ಗೃಹಸ್ಯಗೃಹಪ್ರವಿಷ್ಟಭಿಕ್ಷುಕವದವಸ್ಥಾನಮಾತ್ರಮ್ । ತಸ್ಮಾದ್ಭಿಕ್ಷೋರ್ಗೃಹಸ್ಥತ್ವವನ್ನಾಸ್ಯಾಃ ಪುಂಸ್ತ್ವಮಿತಿ ಭಾವಃ । –(ವಾ.)

ವಿ: ೧) ಈ ರೀತಿಯಾಗಿ ದೇಹಗಳ ಬದಲಾವಣೆಯೇನೋ ಆಯಿತು. ಆದರೆ ಅವಳು ಕುಳಿತಿದ್ದ ಗಂಧರ್ವದೇಹ ಅವಳ ಮುಂಚಿನದೇಹದಂತೆ ಇರಲು ಹೇಗೆ ಸಾಧ್ಯ? ಅದಕ್ಕೆ ಅವನ ಅನುಗ್ರಹ ಕಾರಣವಾಯಿತು. ಅವನು ಅವಳು ಕುಳಿತ ತನ್ನ ದೇಹಕ್ಕೆ ಅವಳ ದೇಹದ ಹೋಲಿಕೆ ಬರುವಂತೆ ಅನುಗ್ರಹ ಮಾಡಿದ. ಅದರಿಂದಾಗಿ ಅವಳು ಮನೆಗೆ ತೆರಳಿದಾಗ ಯಾರಿಗೂ ಸಂಶಯ ಹುಟ್ಟದಂತಾಯಿತು.

೨) ಗಂಧರ್ವದೇಹಕ್ಕೆ ಶಿಖಂಡಿನೀದೇಹದ ಸಾದೃಶ್ಯ ಬೇಕಿಲ್ಲ. ಅದನ್ನೇನೂ ಅವನು ಯಾರಿಗೂ ಪ್ರದರ್ಶನ ಮಾಡುವ ಅವಶ್ಯಕತೆ ಇರಲಿಲ್ಲವಷ್ಟೆ!

ಶ್ವೋ ದೇಹಿ ಮಮ ದೇಹಂ ಮೇ ಸ್ವಂ ಚ ದೇಹಂ ಸಮಾವಿಶ ।
ಇತ್ಯುಕ್ತ್ವಾ ಸ ತು ಗಂಧರ್ವಃ ಕನ್ಯಾದೇಹಂ ಸಮಾಸ್ಥಿತಃ ।
ಉವಾಸೈವ ವನೇ ತಸ್ಮಿನ್ ಧನದಸ್ತತ್ರ ಚಾಗಮತ್ ॥ ೧೧೬ ॥

ಅ: ''ನಾಳೆ ನನ್ನ ದೇಹವನ್ನು ನನಗೆ ಮರಳಿ ಕೊಡು; ನಿನ್ನ ದೇಹವನ್ನು ನೀನು ಪ್ರವೇಶಿಸು'' ಎಂದು ನುಡಿದು ಗಂಧರ್ವ ಆ ಸ್ತ್ರೀದೇಹದಲ್ಲಿ ನೆಲೆಸಿದ; ಆ ವನದಲ್ಲೇ ಉಳಿದ. ಅಲ್ಲಿಗೆ ಕುಬೇರ ಆಗಮಿಸಿದ.

ತುಂಬುರುವಿಗೆ ಕುಬೇರನ ಶಾಪ

ಅಪ್ರತ್ಯುತ್ಥಾಯಿನಂ [೧]ತಂತುಲೀಯಮ್ಮಾನಂ ವಿಲಜ್ಜಯಾ ।
ಶಶಾಪ ಧನದೋ ದೇವಶ್ಚಿರಮಿತ್ಥಂ [೨]ಭವೇತಿ ತಮ್ ॥ ೧೧೭ ॥

ಅ: ಎದ್ದು ನಿಂತು ಗೌರವಿಸದೆ, ಲಜ್ಜೆಯಿಂದ ಪೊದೆಗಳಲ್ಲಿ ಅಡಗಿಕೊಳ್ಳಹೊರಟ ಅವನನ್ನು ಅವನ ಸ್ವಾಮಿಯಾದ ಕುಬೇರ ಶಪಿಸಿದ : ''ಬಹುಕಾಲ ನೀನು ಹೀಗೆಯೇ ಇರು'' ಎಂದು.

---

೧. ತಂತುಲೀಯಮಾನಂ = ತಂತುಷು ಸ್ಥೂಲತೃಣಗುಲ್ಮೇಷು ಲೀಯಮಾನಂ ದತ್ತಪುಂಸ್ತ್ವಂ ತಂ = ತುಂಬುರುಂ ಶಶಾಪೇತಿ ಯೋಜನಾ । ಅನ್ಯಥಾ ತಚ್ಛಬ್ದದ್ವಯಸ್ಯ ಪೌನರುಕ್ತ್ಯಂ ಸ್ಯಾತ್ । – (ವಾ.)

'ತಂತುಸ್ತಂಬೇ ತಥೋರ್ಣಾಯಾಂ ಸೂತ್ರಸಂಘೇ ಚ ಸಂತತಾ'ವಿತ್ಯಭಿಧಾನಮ್। – (ವಾ., ಜ.)

ತಂತುಲೀಯಮಾನಂ ಗುಲ್ಮೇ ಲೀಯಮಾನಂ ತಂ ತು ಸ್ತಂಬೇ ತಥೋರ್ಣಾಯಾಂ ಸೂತ್ರಸಂಘೇ ಚ ಸಂತತಾವಿತ್ಯಭಿಧಾನಾತ್ । – (ತಾ.)

೨. 'ಇತ್ಥಂ ಭವೇದಿತಿ' ಇತಿ ವಾ ಪಾಠಃ । –(ಜ.)

ವಿ: ಇಲ್ಲಿ 'ತಂತುಲೀಯಮಾನಂ' ಎಂದೇ ಪದ. 'ತಂ ತು ಲೀಯಮಾನಂ' ಎಂದು ಅನ್ವಯಮಾಡಿಕೊಂಡರೆ ಉತ್ತರಾರ್ಧದಲ್ಲಿನ 'ತಂ' ಪದ ಪುನರುಕ್ತಿಯಾಗುವುದು.

ಯದಾ ಯುದ್ಧೇ ಮೃತಿಂ ಯಾತಿ ಸಾ ಕನ್ಯಾ ಪುಂತನುಸ್ಥಿತಾ ।
ತದಾ ಪುಂಸ್ತ್ವಂ ಪುನರ್ಯಾಸಿ ಚಪಲತ್ವಾದಿತೀರಿತಃ ॥ ೧೧೮ ॥

ತಥಾऽವಸತ್ ಸ ಗಂಧರ್ವಃ ಕನ್ಯಾ ಪಿತ್ರೋರಶೇಷತಃ ।
ಕಥಯಾಮಾಸಾನುಭೂತಂ ತೌ ಭೃಶಂ ಮುದಮಾಪತುಃ ॥ ೧೧೯ ॥

ಅ: ''ನಿನ್ನ ಪುರುಷದೇಹದಲ್ಲಿರುವ ಆ ಕನ್ಯೆ ಯುದ್ಧದಲ್ಲಿ ಮರಣ ಹೊಂದಿದ ಮೇಲೆ ನೀನು ನಿನ್ನ ಪುರುಷತ್ವವನ್ನು ಮರಳಿ ಪಡೆಯುವಿ; ಇದೆಲ್ಲ ನೀನು ಅಕಾರ್ಯ ಮಾಡಿದ್ದರ ಫಲ''. ಹೀಗೆ ಹೇಳಲ್ಪಟ್ಟ ಆ ಗಂಧರ್ವನು ಹಾಗೆಯೇ ವಾಸಿಸತೊಡಗಿದನು. ಆ ಕನ್ಯೆ ಶಿಖಂಡಿನೀ ತಂದೆತಾಯಿಗಳಿಗೆ ತನ್ನ ಅನುಭವವನ್ನು ಸಮಗ್ರವಾಗಿ ವಿವರಿಸಿದಳು. ಅವರಿಬ್ಬರೂ ಬಹಳ ಸಂತೋಷ ಹೊಂದಿದರು.

ವಿ: ೧) ಶಿಖಂಡಿ ಕುರುಕ್ಷೇತ್ರಯುದ್ಧದ ಕೊನೆಯ ದಿನ ರಾತ್ರಿ ಅಶ್ವತ್ಥಾಮರಿಂದ ಹತನಾಗುವನು(೨೮/೧೪೧). ಆ ಬಳಿಕ ತುಂಬುರು ಗಂಧರ್ವನಿಗೆ ತನ್ನ ಪುರುಷದೇಹ ಮರಳುವುದು ಎಂದರ್ಥ.

೨) ಇಲ್ಲಿ ಚಾಪಲ್ಯವೆಂದರೆ ಸಲ್ಲದ ಉಪಕಾರವನ್ನು ಮಾಡುವ ಕಾತರ ಎಂದರ್ಥ. ಗಂಧರ್ವ ಕುಬೇರನ ಭೃತ್ಯ. ಅವನ ಅನುಮತಿ ಇಲ್ಲದೆ ಹಾಗೆ ತನ್ನ ವಿಶೇಷಸಾಮರ್ಥ್ಯವನ್ನು ಉಪಯೋಗಿಸಿದ್ದು ಸಲ್ಲದ ಕಾರ್ಯ. ಅದಕ್ಕೆಂದೇ ಅವನಿಗೆ ಆ ಶಿಕ್ಷೆ ಎಂದು ಭಾವ.

ಸಾ ಕನ್ಯಕಾ ಯುದ್ಧೇ= ಶಿಬಿರೇ ರಾತ್ರೌ ಅಶ್ವತ್ಥಾಮ್ನಾ ಸಹ ಯುದ್ಧೇ, ಯದಾ ಖಡ್ಗೇನ ಮೃತಿಂ ಯಾತಿ । ತದಾ= ತತ್ಕ್ಷಣ ಏವ । ಚಪಲತ್ವಾತ್= ಶಿಖಂಡಿನ್ಯೈ ತ್ವಯಾ ದತ್ತದೇಹಸ್ಯ ಚಂಚಲತ್ವಾತ್ ಸ್ವಭಾವತಸ್ತದೀಯತ್ವಾಭಾವಾದಿತಿ ಯಾವತ್ । ಯದ್ವಾ ಚಪಲತ್ವಾತ್= ತವ ಚಾಟುತ್ವಾತ್ ದೇಹದಾನಾದಾನಾದಿಸಾಮರ್ಥ್ಯವಿಶೇಷವತ್ತ್ವಾದಿತ್ಯರ್ಥಃ । ಪುಂಸ್ತ್ವಂ = ತವ ಪುಂದೇಹವತ್ವಂ, ಪುನರ್ಯಾಸಿ । ಸ್ವಸ್ವಯೋಗಸಾಮರ್ಥ್ಯಾತ್ ತಸ್ಯಾಃ ಸ್ವಭಾವಭೂತೇ ಅಸ್ಮಿನ್ ದೇಹೇ ತಾಂ ಪ್ರವೇಶ್ಯ ತವ ಸ್ವಭಾವಭೂತಂ ಗಾಂಧರ್ವಂ ಪುಂದೇಹಂ ಸ್ವಯೋಗಶಕ್ತ್ಯಾ ಪುನರಾದಾಯ ತ್ವಂ ತತ್ರ ಸುಖೇನ ತಿಷ್ಠೇತಿ ಭಾವಃ । ಅನ್ಯಥಾ ''ಪ್ರಾಪ ಗಂಧರ್ವದೇಹೋऽಪಿ ತಯಾ ಪಶ್ಚಾದಧಿಷ್ಠಿತಃ'' ಇತಿ ಪ್ರಾಗುಕ್ತವಿರೋಧಃ ಸ್ಯಾತ್ । ಯದಾ ಯುದ್ಧೇ ಸಾ ಕನ್ಯಕಾ ಮೃತಿಂ ಯಾತಿ ತದಾ ಪುಂಸ್ತ್ವಂ ಯಾಸೀತ್ಯಸ್ಯಾಸಂಗತತ್ವಪ್ರಸಂಗಾತ್ । ನೂತನದೇಹಾಂತರಪ್ರಾಪ್ತೌ ''ಶ್ವೋ ದೇಹಿ ಮಮ ದೇಹಂ ಮೇ'' ಇತಿ ಸ್ವೋಕ್ತವಿರೋಧಾಚ್ಚೋಕ್ತೈವ ಯೋಜನಾ ॥ – (ವಾ.)

೨. ಚಪಲತ್ವಾತ್ ಅಕಾರ್ಯಕರ್ಮಕರಣತ್ವಾದಿತ್ಯರ್ಥಃ । – (ಜ.)

ಪರೀಕ್ಷ್ಯ ತಾಮುಪಾಯೈಸ್ತು ಶ್ವಶುರೋ ಲಜ್ಜಿತೋ ಯಯೌ ।
ಶ್ವೋಭೂತೇ ಸಾ ತು ಗಂಧರ್ವಂ ಪ್ರಾಪ್ಯ ತದ್ವಚನಾತ್ ಪುನಃ ॥ ೧೨೦ ॥

ಯಯೌ ತೇನೈವ ದೇಹೇನ ಪುಂಸ್ತ್ವಮೇವ ಸಮಾಶ್ರಿತಾ ।
ಸ ಶಿಖಂಡೀ ನಾಮತೋಽಭೂದಸ್ತ್ರಶಸ್ತ್ರಪ್ರತಾಪವಾನ್ ॥ ೧೨೧ ॥

ಅ: ಅವಳನ್ನು ಅವಳ ಮಾವ ಅನೇಕ ಉಪಾಯಗಳಿಂದ ಪರೀಕ್ಷಿಸಿ, (ಪುರುಷನೆಂದು ನಿಶ್ಚಯಿಸಿಕೊಂಡ ಮೇಲೆ ಸೋತು) ಲಜ್ಜೆಯಿಂದ ಹೊರಟುಬಿಟ್ಟ. ಮಾರನೆಯ ದಿನ ಶಿಖಂಡಿನೀ ಗಂಧರ್ವನ ಬಳಿ ಹೋಗಿ ಅವನ ಮಾತಿನಂತೆ ಮತ್ತೆ ಪುರುಷದೇಹ ಹೊಂದಿದವಳಾಗಿಯೇ ಮನೆಗೆ ಹಿಂದಿರುಗಿದಳು. ಅವನು ಮುಂದೆ ಶಿಖಂಡಿ ಎಂಬ ಹೆಸರಿನಿಂದ ಅಸ್ತ್ರಶಸ್ತ್ರಗಳ ಪ್ರತಾಪವನ್ನು ಹೊಂದಿದವನಾದ.

ವಿ: ೧) ಮಾವನಾದ ಹಿರಣ್ಯವರ್ಮ ಪುರುಷತ್ವವನ್ನು ನಿಶ್ಚಯಿಸುವ ಅನೇಕ ಬಗೆಯ ಪರೀಕ್ಷೆಗಳನ್ನು ಮಾಡಿ, ಅವನು ಪುರುಷನೆಂದು ನಿಶ್ಚಯಿಸಿದ. ತನ್ನ ಮಗಳ ಮಾತನ್ನು ನಂಬಿ, ಹಾಗೆ ನಡೆದದ್ದಕ್ಕೆ ಲಜ್ಜಿತನಾಗಿ ತನ್ನ ದೇಶಕ್ಕೆ [೧]ಹಿಂತಿರುಗಿದ. ದೇಹ ಹಿಂದಿರುಗಿಸಲು ಬಂದ ಶಿಖಂಡಿನಿಗೆ ತುಂಬುರು ನಡೆದ ವಿಷಯವನ್ನೆಲ್ಲ ತಿಳಿಸಿ, ಮರಣಪರ್ಯಂತ ಅವಳು ಆ ದೇಹದಲ್ಲೇ [೨]ಇರಬಹುದು ಎಂದು ಹೇಳಿಬಿಟ್ಟ. ಶಿಖಂಡಿನೀ ಅಂದಿನಿಂದ ಶಿಖಂಡಿ ಎನ್ನಿಸಿ, ಅಸ್ತ್ರಶಸ್ತ್ರದಲ್ಲಿ ಪ್ರಾವೀಣ್ಯವನ್ನು ಪಡೆದ. ಗೀತೆಯಲ್ಲಿನ 'ಶಿಖಂಡೀ ಚ ಮಹಾರಥಃ' (೧/೧೭) ಎಂಬ ಮಾತು ಅವನ ಅಸ್ತ್ರಶಸ್ತ್ರಗಳಲ್ಲಿನ ಪ್ರಾವೀಣ್ಯಕ್ಕೆ ಪುರಾವೆಯಾಗಿದೆ.

೨) ಲಜ್ಜಿತನಾದ ಹಿರಣ್ಯವರ್ಮ ಹಾಗೆ ತೆರಳುವ ಮುನ್ನ ಅವಳನ್ನು ಸಂತೋಷಪಡಿಸಲೆಂದು ಶಿಖಂಡಿಗೆ ಆನೆ ಕುದುರೆ ಮೊದಲಾದ ಕಾಣಿಕೆಗಳನ್ನು ನೀಡಿದ ವಿವರ [೧]ಮಹಾಭಾರತದಲ್ಲಿದೆ:

೩) ಅಂತೂ ಶಿಖಂಡಿನೀ ಹೀಗೆ ಶಿಖಂಡಿಯಾಗುವ ಮೂಲಕ ಶಿವನ ವರ ಸತ್ಯವಾಯಿತು. ದ್ರುಪದ ಶಿವನ ಮೇಲೆ ಇರಿಸಿದ ನಂಬಿಕೆ ಸುಳ್ಳಾಗಲಿಲ್ಲ. ದೇವತೆಗಳನ್ನು ಸರಿಯಾಗಿ ನಂಬಿದಲ್ಲಿ ಅವರು ನೀಡುವ ವರ ಸತ್ಯವೇ ಆಗುವುದು ಎಂಬುದಕ್ಕೆ [೨]ಇದು ನಿದರ್ಶನ: 'ನ ದೇವತೋಷಣಂ ವೃಥಾ'.

---

೧. ಶಿಖಂಡಿನೇ ಚ ಮುದಿತಃ ಪ್ರಾದಾದ್ವಿತ್ತಂ ಜನೇಶ್ವರಃ ।
ಹಸ್ತಿನೋಽಶ್ವಾಂಶ್ಚ ಗಾಶ್ಚೈವ ದಾಸ್ಯೋಽಥ ಬಹುಲಾಸ್ತಥಾ ॥
ಪೂಜಿತಶ್ಚ ಪ್ರತಿಯಯೌ ನಿರ್ಭರ್ತ್ಸ್ಯ ತನಯಾಂ ಕಿಲ । – ಭಾರತ (ಉದ್ಯೋಗ. ೧೯೨/೩೧,೩೨)

೨. ತದ್ವಚನಾತ್ ಮರಣಪರ್ಯಂತಂ ಮಮ ಪುಂದೇಹಸ್ತವಾಸ್ತು । ತ್ವದೀಯಂ ಸ್ತ್ರೀವಪುಃ ಮಮಾಸ್ತ್ವಿತ್ಯೇವಂರೂಪಗಂಧರ್ವವಚನಾತ್ । – (ಜ.)

ವಿಚಿತ್ರವೀರ್ಯನ ನಿರ್ಯಾಣ

ವಿಚಿತ್ರವೀರ್ಯಃ ಪ್ರಮದಾದ್ವಯಂ ತತ್
ಸಂಪ್ರಾಪ್ಯ ರೇಮೇಽಬ್ದಗಣಾನ್ ಸುಸಕ್ತಃ ।
ತತ್ಯಾಜ ದೇಹಂ ಸ ಚ ಯಕ್ಷ್ಮಣಾಽರ್ದಿತ-[೧]
ಸ್ತತೋಽಸ್ಯ ಮಾತಾಽಸ್ಮರದಾಶು ಕೃಷ್ಣಮ್ ॥ ೧೨೨ ॥

ಅ: ವಿಚಿತ್ರವೀರ್ಯ ಆ ಇಬ್ಬರು ಪತ್ನಿಯರನ್ನು ಪಡೆದು, ಅನೇಕವರ್ಷಗಳ ಕಾಲ ಬಹಳ ಆಸಕ್ತನಾಗಿ ಕ್ರೀಡಿಸಿದನು. ಅದರಿಂದ ಕ್ಷಯರೋಗಪೀಡಿತನಾಗಿ ದೇಹ ಬಿಟ್ಟ. ಆಗ ಕೂಡಲೆ ಅವನ ತಾಯಿಯಾದ ಸತ್ಯವತಿ ಶ್ರೀವೇದವ್ಯಾಸರನ್ನು ಸ್ಮರಿಸಿಕೊಂಡಳು.

ಎ: ೧) ವಿಚಿತ್ರವೀರ್ಯ ಅಂಬಿಕೆ, ಅಂಬಾಲಿಕೆಯರೆಂಬ ಇಬ್ಬರು ಪತ್ನಿಯರಲ್ಲಿ [೨]ಏಳು ವರ್ಷಗಳಷ್ಟು ಕಾಲ ಮಿತಿಮೀರಿ ಭೋಗಿಸಿದ; ಅದರ ಫಲವಾಗಿ ಕ್ಷಯರೋಗಕ್ಕೆ ತುತ್ತಾಗಿ ಮೃತನಾದನು.

೨) ಅವನ ಸಾವಿಗೆ ಮಿತಿಮೀರಿದ ಭೋಗ ಹಾಗೂ ತಪೋಹೀನತೆ ಕಾರಣವಾಯಿತು ಎಂದು ಮೊದಲೇ ಹೇಳಿರುವುದನ್ನು ಗಮನಿಸಬೇಕು(ಶ್ಲೋಕ ೪೪).

೩) ಸತ್ಯವತಿಯ ಇಬ್ಬರು ಪುತ್ರರಲ್ಲಿ ಹಿರಿಯನಾದ ಚಿತ್ರಾಂಗದ ಮದುವೆಯಾಗುವ ಮುನ್ನವೇ ಹತನಾದ; ವಿಚಿತ್ರವೀರ್ಯ ಮದುವೆಯಾದರೂ ಮಕ್ಕಳಾಗುವ ಮುನ್ನ ಮೃತನಾದ. ವಂಶಕ್ಕೆ ಉತ್ತರಾಧಿಕಾರಿ ಇಲ್ಲವಾಯಿತು. ಪರಿಪರಿಯಿಂದ ಕೇಳಿಕೊಂಡರೂ, ಭೀಷ್ಮರು ರಾಜ್ಯಭಾರವನ್ನು ಒಪ್ಪಿಕೊಳ್ಳದಾದರು. ಆಗ ಅವರೊಂದಿಗೆ ಸಮಾಲೋಚಿಸಿ, ನಿಯೋಗಪದ್ಧತಿ–ಯಿಂದ ಸಂತತಿ ಪಡೆಯಲೆಂದು ತೀರ್ಮಾನಿಸಿ, ಅದಕ್ಕಾಗಿ ಶ್ರೀವೇದವ್ಯಾಸರನ್ನು ನೆನೆದಳು.

೪) ಹಾಗೆ ಅವರನ್ನು ನೆನೆಯಲು 'ನೆನೆದಾಗ ಕಾಣಿಸಿಕೊಳ್ಳುವೆನೆಂದು' ಅವರು ನೀಡಿದ್ದ ವರ ಕಾರಣವಾಯಿತು (೧೦/೫೬).

---

೧. ಯಕ್ಷ್ಮಣಾ = ಯಾತಿ ದೇಹಃ ಕ್ಷಯಮನೇನೇತಿ ಯಕ್ಷ್ಮಕ್ಷಯವ್ಯಾಧಿಃ ತೇನ ॥ –(ವಾ.)

೨. ತಾಭ್ಯಾಂ ಸಹ ಸಮಾಃ ಸಪ್ತ ವಿಹರನ್ ಪೃಥಿವೀಪತಿಃ ।
ವಿಚಿತ್ರವೀರ್ಯಸ್ತರುಣೋ ಯಕ್ಷ್ಮಣಾ ಸಮಗೃಹ್ಯತ ॥ –ಭಾರತ (೧/೧೦೨/೭೦)

ಶ್ರೀವೇದವ್ಯಾಸರ ಆಗಮನ

ಆವಿರ್ಬಭೂವಾಶು ಜಗಜ್ಜನಿತ್ರೋ
ಜನಾರ್ದನೋ ಜನ್ಮಜರಾಭಯಾಪಹಃ ।
ಸಮಸ್ತವಿಜ್ಞಾನತನುಃ ಸುಖಾರ್ಣವಃ
ಸಂಪೂಜಯಾಮಾಸ ಚ ತಂ ಜನಿತ್ರೀ ॥ ೧೨೩ ॥

ಅ: ಹಾಗೆ ಸ್ಮರಿಸಿದೊಡನೆಯೇ ಜಗಜ್ಜನಕರೂ, ಹುಟ್ಟು, ಭಕ್ತಜನರ ಸಂಸಾರವನ್ನು ಪರಿಹರಿಸುವವರೂ, ಮುಪ್ಪುಗಳ ಭಯವನ್ನು ಪರಿಹರಿಸುವವರೂ, ಪರಿಪೂರ್ಣಜ್ಞಾನ-ಮಯಶರೀರರೂ, ಆನಂದಸಮುದ್ರರೂ ಆದ ಶ್ರೀವೇದವ್ಯಾಸರು ಪ್ರತ್ಯಕ್ಷರಾದರು; ಅವರನ್ನು ತಾಯಿ ಸತ್ಯವತಿ ಆದರದಿಂದ ಸ್ವಾಗತಿಸಿ ಪೂಜಿಸಿದಳು.

ವಿ: ಶ್ರೀವೇದವ್ಯಾಸರು ಒಬ್ಬ ಸಾಮಾನ್ಯ ಋಷಿ ('ಕಶ್ಚನ ಋಷಿಃ') ಎಂಬ ಕೆಲವರ ತಪ್ಪುಕಲ್ಪನೆಯನ್ನು ನಿರಾಕರಿಸಲೆಂದು ಹೀಗೆ ಅನೇಕವಿಶೇಷಣಗಳಿಂದ ಅವರನ್ನು ಹೀಗೆ ಪ್ರತಿಬಾರಿಯೂ ವರ್ಣಿಸಿರುವುದು ಈ ಕೃತಿಯಲ್ಲಿ ಉದ್ದಕ್ಕೂ ಕಂಡುಬರುವ ವಿಶೇಷ.

ಸತ್ಯವತಿಯ ಕೋರಿಕೆ

ತಂ ಭೀಷ್ಮಪೂರ್ವೈಃ ಪರಮಾದರಾರ್ಚಿತಂ
ಸ್ವಭಿಷ್ಟುತಂ ಚಾವದದಸ್ಯ ಮಾತಾ ।
ಪುತ್ರೌ ಮೃತೌ ಮೇ ನ ತು ರಾಜ್ಯಮೈಚ್ಛ-
ದ್ಭೀಷ್ಮೋ ಮಯಾ ನಿತರಾಮರ್ಥಿತೋಽಪಿ ॥ ೧೨೪ ॥

ಅ: ಭೀಷ್ಮ ಮೊದಲಾದವರು ತುಂಬು ಆದರದಿಂದ ಅವರನ್ನು ಪೂಜಿಸಿದರು; ಭಕ್ತಿಯಿಂದ ಸ್ತುತಿಸಿದರು. ಬಳಿಕ ಅವರ ತಾಯಿ ಸತ್ಯವತಿ ನುಡಿದಳು : ''ನನ್ನ ಇಬ್ಬರು ಪುತ್ರರೂ ಮಡಿದರು; ನಾನು ಬಹಳವಾಗಿ ಕೇಳಿಕೊಂಡರೂ ಭೀಷ್ಮ ರಾಜ್ಯ ಸ್ವೀಕರಿಸಲು ಒಪ್ಪುತ್ತಿಲ್ಲ''.

ಕ್ಷೇತ್ರೇ ತತೋ ಭ್ರಾತುರಪತ್ಯಮುತ್ತಮ-
ಮುತ್ಪಾದಯಾಸ್ಮತ್ಪರಮಾದರಾರ್ಥಿತಃ ।
ಇತೀರಿತಃ ಪ್ರಣತಶ್ಚಾಪ್ಯಭಿಷ್ಟುತೋ
ಭೀಷ್ಮಾದಿಭಿಶ್ಚಾಹ ಜಗದ್ಗುರುರ್ವಚಃ ॥ ೧೨೫ ॥

ಅ: ''ಆದ್ದರಿಂದ ನಿನ್ನ ಸೋದರನಾದ ವಿಚಿತ್ರವೀರ್ಯನ ಪತ್ನಿಯಲ್ಲಿ ಉತ್ತಮಸಂತಾನಕ್ಕೆ ಜನ್ಮ ಕೊಡು ಎಂದು ನಾವು ವಿಶೇಷ ಆದರದಿಂದ ಕೋರುತ್ತಿರುವೆವು''. ತಾಯಿ ಹೀಗೆಂದಳು. ಭೀಷ್ಮಾದಿಗಳು ಸಹ (ಹಾಗೆ ಮಾಡಲು) ವಂದಿಸಿ ಪ್ರಾರ್ಥಿಸಿದರು. ಆಗ ಜಗದ್ಗುರುವಾದ ವೇದವ್ಯಾಸರು ಹೇಳಿದರು.

ವಿ: ವೇದವ್ಯಾಸರಿಂದ ಹಾಗೆ ಸಂತತಿ ಪಡೆಯಲು ಭೀಷ್ಮರು ಮೊದಲಾದ ಪ್ರಮುಖರೆಲ್ಲ ಒಮ್ಮತದಿಂದ ತೀರ್ಮಾನಿಸಿದ್ದರೆಂಬುದು ಇದರ ಭಾವ.

ಶ್ರೀವೇದವ್ಯಾಸರ ಆದೇಶ

ಋತೇ ರಮಾಂ ಜಾತು ಮಮಾಂಗಸಂಗ-
ಯೋಗ್ಯಾಂಗನಾ ನೈವ ಸುರಾಲಯೇಽಪಿ ।
ತಥಾಽಪಿ ತೇ ವಾಕ್ಯಮಹಂ ಕರಿಷ್ಯೇ
ಸಾಂವತ್ಸರಂ ಸಾ ಚರತು ವ್ರತಂ[೧] ಮೇ ॥ ೧೨೬ ॥

ಅ: ''ಮಹಾಲಕ್ಷ್ಮಿಯ ಹೊರತು ನನ್ನ ಅಂಗಸಂಗಕ್ಕೆ ಅರ್ಹಳಾದ ನಾರಿ ದೇವಲೋಕದಲ್ಲೂ [೧]ಇಲ್ಲ. ಆದರೂ ನಿನ್ನ ಮಾತನ್ನು ನಾನು ನಡೆಸುವೆ. ಅವಳು ಅದಕ್ಕಾಗಿ ಒಂದು ವರ್ಷ ನನ್ನ ವ್ರತವನ್ನು ಆಚರಿಸಲಿ.

ವಿ: ೧) ಗೋಪಿಕಾಸ್ತ್ರೀಯರೊಂದಿಗೂ, ಹದಿನಾರುಸಹಸ್ರಪತ್ನಿಯರೊಂದಿಗೂ ಕೃಷ್ಣ ವಿಹರಿಸಲು ಅವರೆಲ್ಲರಲ್ಲಿದ್ದ ರಮಾವೇಶ ಕಾರಣ ಎಂಬುದು ಇದರಿಂದ ಸೂಚಿತ.

೨) ಒಂದು ವರ್ಷ ವೈಷ್ಣವವ್ರತವನ್ನು ಆಚರಿಸುವುದರಿಂದ ವಿಚಿತ್ರವೀರ್ಯನ ಪತ್ನಿಯಲ್ಲಿ ರಮಾವೇಶ ಉಂಟಾಗಿ, ಅವಳು ಗರ್ಭಾಧಾನ ಹೊಂದಲು ಅರ್ಹತೆ ಪಡೆಯುವಳು ಎಂದು ಭಾವ.

೩) ವ್ಯಾಸರ ಅನುಗ್ರಹಕ್ಕೆ ಪಾತ್ರರಾಗುವುದೆಂದರೆ ಅವರಿಂದ ಜ್ಞಾನ ಪಡೆಯಲು ಅರ್ಹರಾಗುವುದು ಎಂದರ್ಥ. ಜ್ಞಾನವನ್ನು ಪುತ್ರ ಎಂದೇ ಶಾಸ್ತ್ರಗಳು ವ್ಯವಹರಿಸಿವೆ

---

೧. ಋತೇ ರಮಾಮಿತಿ ವದತಾ ಅಪ್ಸರೋರೂಪಗೋಪ್ಯದೀನಾಮಪಿ ಲಕ್ಷ್ಮೀಸನ್ನಿಧಾನಾದೇವಾಂಗೇ ಸಂಗ ಇತಿ ಸೂಚಿತಮ್ ॥ –(ವಾ.)

ನ ಹಿ ಮಾಮವ್ರತೋಪೇತಾ ಉಪೇಯಾತ್ ಕಾಚಿದಂಗನಾ । –ಭಾರತ(೧/೧೦೪/೪೩)

ಸಂವತ್ಸರಂ ಯಥಾನ್ಯಾಯಂ ತತಃ ಶುದ್ಧೇ ಭವಿಷ್ಯತಃ ॥ –ಭಾರತ (೧/೧೦೪/೪೨)

('ಜ್ಞಾನಪುತ್ರವಾನ್'). ಹಾಗೆ ಜ್ಞಾನ ಪಡೆಯಲು ಒಂದು ವರ್ಷಕಾಲ ಗುರುಗಳ ಬಳಿ ನೆಲೆಸಿ, ಅವರು ಹೇಳುವ ಸೇವಾಕಾರ್ಯದಲ್ಲಿ ತೊಡಗಲೇಬೇಕು ಎಂಬ ನಿಯಮವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ('ನಾಸಂವತ್ಸರವಾಸಿನೇ ಪ್ರಬ್ರೂಯಾತ್').

ಸಾ ಪೂತದೇಹಾऽಥ ಚ ವೈಷ್ಣವವ್ರತಾ-
ನ್ಮತ್ತಃ ಸಮಾಪ್ನೋತು ಸುತಂ ವರಿಷ್ಠಮ್ ।
ಇತೀರಿತೇ ರಾಷ್ಟ್ರಮುಪೈತಿ ನಾಶ-
ಮಿತಿ ಬ್ರುವಂತೀಂ ಪುನರಾಹ ವಾಕ್ಯಮ್ ॥ ೧೨೭ ॥

ಅ: ''ವೈಷ್ಣವವ್ರತದಿಂದ ದೇಹಶುದ್ಧಿ ಪಡೆಯುವ ಅವಳು ನನ್ನಿಂದ ಶ್ರೇಷ್ಠಪುತ್ರನನ್ನು ಹೊಂದಲಿ''. ವೇದವ್ಯಾಸರು ಹೀಗೆನ್ನಲು (ಹಾಗೆ ವಿಲಂಬವಾದಲ್ಲಿ) ''ರಾಷ್ಟ್ರ ನಾಶ ಹೊಂದುವುದು'' ಎಂದು ಸತ್ಯವತಿ ನುಡಿದಳು. ಆಗ ವೇದವ್ಯಾಸರು ಮತ್ತೆ ನುಡಿದರು.

ವಿ: ವೈಷ್ಣವವ್ರತದಿಂದ ದೇಹಶುದ್ಧಿಯಾಗುವುದು ಎಂದರೆ ಅವಳ ದೇಹದಲ್ಲಿ ರವಾಸನ್ನಿಧಾನ ಉಂಟಾಗುವುದು ಎಂದರ್ಥ.

[೧]ಸೌಮ್ಯಸ್ವರೂಪೋऽಪ್ಯತಿಭೀಷಣಂ [೨]ಮೃಷಾ
ತಚ್ಚಕ್ಷುಷೋ ರೂಪಮಹಂ ಪ್ರದರ್ಶಯೇ ।
[೩]ಸಹೇತ ಸಾ ತದ್ಯದಿ ಪುತ್ರಕೋऽಸ್ಯಾ
ಭವೇದ್ಗುಣಾಢ್ಯೋ ಬಲವೀರ್ಯಯುಕ್ತಃ ॥ ೧೨೮ ॥

ಅ: ನಾನು ಶಾಂತಸ್ವರೂಪನಾದರೂ, ಅತ್ಯಂತಭಯಂಕರವಾದ ಆಕೃತಿಯನ್ನು ಸುಮ್ಮನೆ ತೋರುವೆ. ಅವಳು ಅದನ್ನು ಸಹಿಸಿಕೊಂಡರೆ, ಅವಳಿಗೆ ಗುಣಾಢ್ಯನೂ, ಬಲವೀರ್ಯಗಳಿಂದ ಕೂಡಿದವನೂ ಆದ ಪುತ್ರ ಜನಿಸುವನು.

---

೧. ಸೌಮ್ಯಸ್ವರೂಪೋऽಪ್ಯತಿಭೀಷಣಂ ರೂಪಂ ಮೃಷಾ = ವೃಥಾ ದರ್ಶಯೇ। ಕಸ್ಯಚಿದ್ವಧೇ ಸತಿ ದರ್ಶಯಿತುಂ ಯೋಗ್ಯಂ ರೂಪಂ ತದಭಾವೇऽಪಿ ದರ್ಶಯಾಮೀತ್ಯರ್ಥಃ ॥ – (ವಾ.)

೨. ಮೃಷಾ ಅವಿದ್ಯಮಾನಮೇವ ಅತಿಭೀಷಣಂ ಅತಿಭಯಂಕರಂ ರೂಪಂ ಪ್ರದರ್ಶಯಿಷ್ಯೇ। – (ಜ.)

೩. ಯದಿ ಮೇ ಸಹತೇ ಗಂಧಂ ರೂಪಂ ವೇಷಂ ತಥಾ ವಪುಃ।
ಅದ್ಯೈವ ಗರ್ಭಂ ಕೌಸಲ್ಯಾ ವಿಶಿಷ್ಟಂ ಪ್ರತಿಪದ್ಯತಾಮ್ ॥ – ಭಾರತ (೧/೧೦೪/೪೭)

ವಿ: ೧) ಒಂದು ವರ್ಷ ಕಾಲದ ವೈಷ್ಣವವ್ರತವನ್ನು ಮಾಡದೆ, ಸಂತತಿಯನ್ನು ಪಡೆಯುವ ಹಟ ಮಾಡಿದಲ್ಲಿ ತಾವು ಸುಮ್ಮನೆ ತೋರುವ ಉಗ್ರರೂಪವನ್ನು ಸಹಿಸಿಕೊಳ್ಳಬೇಕಾಗುವುದು ಎಂದು ಎಚ್ಚರಿಸಿದರು.

೨) ಒಂದು ವರ್ಷ ಗುರುಕುಲದಲ್ಲಿ ನೆಲೆಸದೆ, ವಿದ್ಯೆ ಪಡೆಯಲು ಬಯಸುವವರಿಗೆ ಶಾಂತರೂಪದ ಶ್ರೀವೇದವ್ಯಾಸರ ಕೃತಿಗಳು ಕಠಿಣವೆನ್ನಿಸುವ ಮೂಲಕ ಭಯಂಕರವೆನ್ನಿಸುವುದು ಅನಿವಾರ್ಯ ಎಂಬ ತತ್ತ್ವ ಇಲ್ಲಿ ಸೂಚಿತ.

ಧೃತರಾಷ್ಟ್ರನ ಜನನ

ಇತೀರಿತೇ೨ಸ್ತ್ವಿತ್ಯುದಿತಸ್ತಯಾ೨ಗಮತ್
ಕೃಷ್ಣೋ೨ಂಬಿಕಾಂ ಸಾ ತು ಭಯಾನ್ನ್ಯಮೀಲಯತ್ ।
[೧]ಅಭೂಚ್ಚ ತಸ್ಯಾಂ ಧೃತರಾಷ್ಟ್ರನಾಮಕೋ
ಗಂಧರ್ವರಾಟ್ ಪವನಾವೇಶಯುಕ್ತಃ ॥ ೧೨೯ ॥

ಅ: ಅವರು ಹೀಗೆ ಹೇಳಲು ಸತ್ಯವತಿ ''ಆಗಲಿ'' ಎಂದಳು. ವೇದವ್ಯಾಸರು ಅಂಬಿಕೆಯ ಬಳಿಗೆ ತೆರಳಿದರು. ಅವಳಾದರೋ ಭಯದಿಂದ ಕಣ್ಣುಗಳನ್ನು ಮುಚ್ಚಿಕೊಂಡಳು. ಅವಳಲ್ಲಿ ಧೃತರಾಷ್ಟ್ರ ಎಂಬ ಹೆಸರಿನ ಗಂಧರ್ವರಾಜ ವಾಯುವಿನ ಆವೇಶದಿಂದ ಕೂಡಿ ಜನಿಸಿದ.

ವಿ: ೧) ವೇದವ್ಯಾಸರು ತಾವು ಹೇಳಿದಂತೆ ಅವಳಿಗೆ ಉಗ್ರರೂಪವನ್ನೇ ತೋರಿದರು. ಭಯದಿಂದಾಗಿ ಅವಳು ಕಣ್ಣುಮುಚ್ಚಿಕೊಂಡಾಗ ಹುಟ್ಟಿದ್ದು ಧೃತರಾಷ್ಟ್ರ.

೨) ಧೃತರಾಷ್ಟ್ರ ಎಂಬ ಗಂಧರ್ವರಾಜ ಹುಟ್ಟಿದ. ಅವನಿಗೆ ಇಲ್ಲಿ ಇಟ್ಟ ಹೆಸರೂ ಧೃತರಾಷ್ಟ್ರನೆಂದೇ. ಆ ಧೃತರಾಷ್ಟ್ರಗಂಧರ್ವನಿಗೆ [೧]ಹಂಸ ಎಂಬುದು ನಾಮಾಂತರ.

೩) ಶ್ರೀವ್ಯಾಸರು ಹಾಗೆ ಧೃತರಾಷ್ಟ್ರನಿಗೆ ಜನ್ಮವಿತ್ತಾಗ ಅವರ ವಯಸ್ಸು ೬೦೦ ವರ್ಷಗಳು ಎಂಬ ವಿಶೇಷಾಂಶ ಸ್ಕಾಂದಪುರಾಣದಲ್ಲಿದೆ (ಭಾಗವತತಾತ್ಪರ್ಯೋದ್ಧೃತ – ೨/೧/೮) :

---

೧. ''ಅರಿಷ್ಟಾಯಾಸ್ತು ಯಃ ಪುತ್ರೋ ಹಂಸ ಇತ್ಯಭಿವಿಶ್ರುತಃ ।
ಸ ಗಂಧರ್ವಪತಿರ್ಜಜ್ಞೇ ಕುರುವಂಶವಿವರ್ಧನಃ ।
ಧೃತರಾಷ್ಟ್ರ ಇತಿ ಖ್ಯಾತಃ ಕೃಷ್ಣದ್ವೈಪಾಯನಾತ್ಮಜಃ ॥''

— ಇತಿ ಭಾರತೋಕ್ತೇಃ (೧/೬೭/೮೩) ಹಂಸನಾಮಕೋ ಗಂಧರ್ವರಾಟ್ ಪವನಾವೇಶಯುಕ್ತಃ ಸನ್ ತಸ್ಯಾಮಂಬಿಕಾಯಾಂ ಕೃಷ್ಣದ್ವೈಪಾಯನಾತ್ಮಜಃ ಕುರುವಂಶವಿವರ್ಧನಃ ಧೃತರಾಷ್ಟ್ರನಾಮಕಃ ಪುತ್ರೋ೨ಭೂದಿತಿ ಪೂರ್ವಾರ್ಧಸ್ಯ ಯೋಜನಾ । ಮಾರುತಾವೇಶವಶಾದ್ಬಲಾಧಿಕಃ ಸ ಧೃತರಾಷ್ಟ್ರನಾಮಾ ಬಭೂವೇತ್ಯುತ್ತರಾರ್ಧಸ್ಯ ಯೋಜನಾ ॥ –(ವಾ.)

ವ್ಯಾಸಃ ಷಟ್‌ಶತವರ್ಷೀಯೋ ಧೃತರಾಷ್ಟ್ರಮಜೀಜನತ್ ॥

೪) ಶ್ರೀವ್ಯಾಸರ ವಯಸ್ಸಿನ ಬಗೆಗಿನ ಈ ಅಪೂರ್ವ ಮಾಹಿತಿ ಮಹಾಭಾರತದಲ್ಲಿನ ಅನೇಕವಿವರಗಳ ಸ್ಫುಟವಾದ ಪರಿಜ್ಞಾನಕ್ಕೆ ನೀಡುವ ನೆರವು ಅಪಾರ.

ಸ ಮಾರುತಾವೇಶವಶಾದ್ಬಲಾಧಿಕೋ
ಬಭೂವ ರಾಜಾ ಧೃತರಾಷ್ಟ್ರನಾಮಾ[೧]।
ಅದಾದ್ವರಂ ಚಾಸ್ಯ ಬಲಾಧಿಕತ್ವಂ
ಕೃಷ್ಣೋಽಂಧ ಆಸೀತ್ ಸ ತು ಮಾತೃದೋಷತಃ ॥ ೧೩೦ ॥

ಅ: ಧೃತರಾಷ್ಟ್ರ ಎಂಬ ಹೆಸರನ್ನು ಹೊಂದಿದ ಅವನು ವಾಯುವಿನ ಆವೇಶದಿಂದಾಗಿ ವಿಶೇಷ ಬಲಶಾಲಿ ಎನ್ನಿಸಿದ. ಶ್ರೀವ್ಯಾಸರು ಅವನಿಗೆ ಅಧಿಕಬಲಶಾಲಿಯಾಗುವಂತೆ ವರವಿತ್ತರು. ಆದರೆ ಅವನು ತಾಯಿಯ ತಪ್ಪಿನಿಂದಾಗಿ (ಹುಟ್ಟುವಾಗಲೇ) ಕುರುಡನಾಗಿದ್ದ.

ವಿ: ೧) ತಂದೆತಾಯಿಗಳ ತಪ್ಪು, ಕಾಲಬಲ, ತಮ್ಮ ಹಿಂದಿನ ಕರ್ಮಗಳ ಫಲ ಮೊದಲಾದ ಅನೇಕಕಾರಣಗಳಿಂದ ದೇಹದಲ್ಲಿ ದೋಷಗಳು ಉಂಟಾಗುವವು ಎಂಬುದನ್ನು ಈಗಾಗಲೇ ತಿಳಿಸಿರುವರು (ಶ್ಲೋಕ ೩/೨೯). ಇಲ್ಲಿ ಧೃತರಾಷ್ಟ್ರ ಕುರುಡನಾಗಲು ಅವನ ತಾಯಿ ಶ್ರೀವೇದವ್ಯಾಸರನ್ನು ಕಂಡು ಕಣ್ಣುಮುಚ್ಚಿದ ದೋಷ ಕಾರಣವಾಯಿತು ಎಂದು ತಿಳಿಯಬೇಕು.

೨) ಶ್ರೀವ್ಯಾಸರ ಪ್ರತಿರೂಪದಂತಿರುವ ಅವರ ಗ್ರಂಥಗಳನ್ನು ಓದದೆ ಕಣ್ಣು ಮುಚ್ಚುವ ಜನ ಇದರಂತೆಯೇ ಜ್ಞಾನದೃಷ್ಟಿಯಿಂದ ಹೀನರಾಗುವರು ಎಂಬ ತತ್ತ್ವವೂ ಇಲ್ಲಿ ಸೂಚಿತ.

ಪಾಂಡುವಿನ ಜನನ

ಜ್ಞಾತ್ವಾ ತಮಂಧಂ ಪುನರೇವ ಕೃಷ್ಣಂ
ಮಾತಾಽಬ್ರವೀಜ್ಜನಯಾನ್ಯಂ ಗುಣಾಢ್ಯಮ್ ।
ಅಂಬಾಲಿಕಾಯಾಮಿತಿ ತತ್ ತಥಾಽಕರೋ-
ದ್ಭಯಾತ್ ತು[೨] ಸಾ ಪಾಂಡುರಭೂನ್ನೃಷಾದೃಕ್ ॥ ೧೩೧ ॥

---

೧. ಗಂಧರ್ವರಾಜೋ ಧೀಮಾನ್ ಧೃತರಾಷ್ಟ್ರ ಇತಿ ಶ್ರುತಃ।
ಸ ಏವ ಮಾನುಷೇ ಲೋಕೇ ಧೃತರಾಷ್ಟ್ರಃ ಪತಿಸ್ತವ ॥ – ಭಾರತ (ಆಶ್ರಮವಾಸಿಕ. ೩೧/೮)

ಪೂರ್ವೇ ಧೃತರಾಷ್ಟ್ರನಾಮಕೋ ಗಂಧರ್ವರಾಟ್ ಗಂಧರ್ವಶ್ರೇಷ್ಠಃ ಅತ್ರಾಪಿ ಧೃತರಾಷ್ಟ್ರನಾಮಾ ಬಭೂವ। – (ಜ.)

ಅ: ಅವನು ಕುರುಡನೆಂಬುದನ್ನು ಗಮನಿಸಿ ತಾಯಿ ಸತ್ಯವತಿ ಮತ್ತೆ ಶ್ರೀವ್ಯಾಸರನ್ನು ಕೇಳಿಕೊಂಡಳು. ''ಅಂಬಾಲಿಕೆಯಲ್ಲಿ ಗುಣಾಢ್ಯನಾದ ಇನ್ನೊಬ್ಬ ಮಗನಿಗೆ ಜನ್ಮ ನೀಡು''. ವ್ಯಾಸರು ಆ ಮಾತನ್ನು ಹಾಗೆಯೇ ನಡೆಸಿದರು. ಆದರೆ ಅಂಬಾಲಿಕೆಯು ಅವರು ಸುಮ್ಮನೆ ತೋರಿದ ಭಯಂಕರರೂಪವನ್ನು ನೋಡಿ ಮೈಯೆಲ್ಲ ಬಿಳಿಚಿಕೊಂಡವಳಾದಳು.

ವಿ: ಮೊದಲ ಸೊಸೆ ಅಂಬಿಕೆಯಲ್ಲಿ ಹುಟ್ಟಿದ ಮಗ ಧೃತರಾಷ್ಟ್ರ ಕುರುಡನೆಂದು ತಿಳಿದ ಸತ್ಯವತಿ ಎರಡನೆಯ ಸೊಸೆ ಅಂಬಾಲಿಕೆಯಲ್ಲಾದರೂ ಶ್ರೇಷ್ಠಪುತ್ರನನ್ನು ಕರುಣಿಸಲು ವ್ಯಾಸರನ್ನು ಕೇಳಿಕೊಂಡಳು. ವ್ಯಾಸರು ಮುಂಚಿನಂತೆ ನಿಬಂಧನೆ ಮುಂದಿಟ್ಟು ಒಪ್ಪಿದರು. ಅವರು ತೋರಿದ ಉಗ್ರರೂಪ ಕಂಡು ಭಯಪಟ್ಟ ಅಂಬಾಲಿಕೆ ತನ್ನ ಅಕ್ಕನಿಗಾದ ಸ್ಥಿತಿ ತನಗೆ ಬರದಿರಲೆಂದು ಕಣ್ಣುಮುಚ್ಚಿಕೊಳ್ಳುವುದನ್ನು ತಡೆದಳು. ಆದರೆ ಅವಳಿಗುಂಟಾದ ಭಯದಿಂದಾಗಿ ಅವಳ ಮೈಯೆಲ್ಲ ಪಾಂಡುರೋಗ ಉಂಟಾದವರ ಮೈಬಣ್ಣದಂತೆ ಹಳದಿಬಣ್ಣವನ್ನು ಹೊಂದಿಬಿಟ್ಟಿತು.

ಪರಾವಹೋ ನಾಮ ಮರುತ್ ತತೋಽಭವ-
ದ್ವರ್ಣೇನ[೩] ಪಾಂಡುಃ ಸ ಹಿ ನಾಮತಶ್ಚ।
ಸ ಚಾಸ ವೀರ್ಯಾಧಿಕ ಏವ ವಾಯೋ-
ರಾವೇಶತಃ ಸರ್ವಶಸ್ತ್ರಾಸ್ತ್ರವೇತ್ತಾ ॥ ೧೩೨ ॥

ಅ: ಆಗ ಪರಾವಹ ಎಂಬ ಮರುತ್ ಜನಿಸಿದ. ಅವನು ಬಣ್ಣದಲ್ಲಿ ಪಾಂಡುವರ್ಣದವನಾಗಿದ್ದ. ಹೆಸರಿನಿಂದಲೂ ಪಾಂಡುವೇ ಎನ್ನಿಸಿದ ಮತ್ತು ಅವನು ವಾಯುವಿನ ಆವೇಶದಿಂದಾಗಿ ಶಕ್ತಿಯಲ್ಲಿ ಮಿಗಿಲೆನ್ನಿಸಿದ. ಸಕಲಶಸ್ತ್ರಾಸ್ತ್ರಗಳನ್ನೂ ತಿಳಿದವನಾದ.

---

೨. ತು = ಅಂಬಿಕಾಪುತ್ರವತ್ ಮಮ ಪುತ್ರಸ್ಯಾಂಧತಾ ನ ಭವೇದಿತಿ ಕಾರ್ಯವಿಶೇಷಾತ್ ಮೃಷಾ= ವೃಥಾ ವ್ಯಾಸೇನ ಪ್ರದರ್ಶಿತಭಯಂಕರಂ ರೂಪಂ ಪಶ್ಯಂತೀತಿ ಮಧ್ಯಮಪದಲೋಪೀಸಮಾಸಃ ನತು ತದ್ವತ್ ಚಕ್ಷುರ್ನಿಮೀಲನಂ ಕುರ್ವಂತೀತಿ ಭಾವಃ । ಸಾ = ಅಂಬಾಲಿಕಾ ಭಯಾತ್ = ಭಯಂಕರರೂಪದರ್ಶನನಿಮಿತ್ತಭಯಾತ್ ಪಾಂಡುಃ = ಪಾಂಡುರವರ್ಣಾऽಭೂತ್ । ಸ್ವಸೌವರ್ಣವರ್ಣಂ ವಿಹಾಯ ಭೀತ್ಯಾ ಪಾಂಡುರೋಗಗ್ರಸ್ತವತ್ ಹರಿದ್ರಾವರ್ಣಾऽಭೂದಿತಿ ಭಾವಃ। ''ನಮಃ ಶಾಂತಾಯ ಘೋರಾಯ ಮೂಢಾಯ ಗುಣಕರ್ಮಣೇ'' ಇತಿ ಭಾಗವತೋಕ್ತೇಃ ಭಯಂಕರರೂಪಮಪಿ ಭಗವತೋऽಸ್ಯೈವ । ತೇನಾವಿದ್ಯಮಾನಂ ಪಶ್ಯಂತೀತ್ಯರ್ಥೋ ನ ಯೌಕ್ತಿಕಃ ॥ – (ವಾ.)

ಮೃಷಾದೃಕ್ । ಅವಿದ್ಯಮಾನವಿರೂಪದೃಷ್ಟಿಃ । ಯದ್ವಾ ವೃಥಾದೃಕ್ । ಭಕ್ತಿಂ ವಿನಾ ಪಶ್ಯತೀತ್ಯರ್ಥಃ । – (ತಾ.)

೩. ಪಾಂಡುತ್ವಂ ವರ್ಣತಸ್ತಸ್ಯ ಮಾತೃದೋಷಾದ್ಭವಿಷ್ಯತಿ । – ಕೃ. ಭಾರತ (ಆದಿ. ೧೧೫/೨೮)

ಏಃ ಪಾಂಡು ಧೃತರಾಷ್ಟ್ರನಂತೆ ಕುರುಡನಾಗದಿದ್ದರೂ, ಮೈಯೆಲ್ಲ ಪಾಂಡುರವರ್ಣದವನಾದ. ಇದಕ್ಕೂ ಅವನ ತಾಯಿ ಅಂಬಾಲಿಕೆಯ ತಪ್ಪೇ ಕಾರಣವಾಯಿತು. ಅವನ ಹೆಸರೂ ಪಾಂಡು ಎಂದೇ ಆಯಿತು. ಪಾಂಡುವಿನ ಚರ್ಮದ ಬಣ್ಣ ಬಿಳಿಯಾಗಿತ್ತೇ ಹೊರತು ಚರ್ಮರೋಗವಿರಲಿಲ್ಲ. ಇದ್ದಿದ್ದಲ್ಲಿ ದೇವಾಪಿಯಂತೆ ರಾಜ್ಯಕ್ಕೆ ಅನರ್ಹನಾಗುತ್ತಿದ್ದ ಎಂಬುದನ್ನು ಗಮನಿಸಬೇಕು.

ತಸ್ಮೈ ತಥಾ ಬಲವೀರ್ಯಾಧಿಕತ್ವ-
ವರಂ ಪ್ರಾದಾತ್ ಕೃಷ್ಣ ಏವಾಥ ಪಾಂಡುಮ್ ।
ವಿಜ್ಞಾಯ ತಂ[೧] ಪ್ರಾಹ ಪುನಶ್ಚ ಮಾತಾ
ನಿರ್ದೋಷಮನ್ಯಂ ಜನಯೋತ್ತಮಂ ಸುತಮ್ ॥ ೧೩೩ ॥

ಅಃ ಅವನಿಗೂ ವಿಶೇಷ ಬಲವೀರ್ಯಗಳನ್ನು ಹೊಂದುವ ವರವನ್ನು ವ್ಯಾಸರು ನೀಡಿದರು. ಆಮೇಲೆ ತಾಯಿ ಸತ್ಯವತಿಯು ಅವನು ಪಾಂಡುವರ್ಣದವನೆಂದು ತಿಳಿದು ಮತ್ತೆ ಕೇಳಿಕೊಂಡಳು. ''ದೋಷರಹಿತನಾದ ಮತ್ತೊಬ್ಬ ಪುತ್ರನನ್ನು ಹುಟ್ಟಿಸು''.

ಉಕ್ತ್ವೇತಿ ಕೃಷ್ಣಂ ಪುನರೇವ ಚ ಸ್ನುಷಾ-
ಮಾಹ ತ್ವಯಾಽಕ್ಷ್ಣೋರ್ಹಿ ನಿಮೀಲನಂ ಪುರಾ ।
ಕೃತಂ ತತಸ್ತೇ ಸುತ ಆಸ ಚಾಂಧ-
ಸ್ತತಃ ಪುನಃ ಕೃಷ್ಣಮುಪಾಸ್ಯ ಭಕ್ತಿತಃ ॥ ೧೩೪ ॥

ಅಃ ಹೀಗೆ ಶ್ರೀವ್ಯಾಸರನ್ನು ಕೇಳಿಕೊಂಡು, ಸತ್ಯವತಿ (ಹಿರಿಯ)ಸೊಸೆಗೆ ಪುನಃ ಹೇಳಿದಳು : ''ನೀನು ಹಿಂದೆ ಕಣ್ಣುಗಳನ್ನು ಮುಚ್ಚಿಕೊಂಡೆ. ಅದರಿಂದ ನಿನ್ನ ಮಗ ಕುರುಡನಾದ. ಆದ್ದರಿಂದ ಮತ್ತೊಮ್ಮೆ ವ್ಯಾಸರನ್ನು ಭಕ್ತಿಯಿಂದ ಸೇವಿಸು''.

ದಾಸಿ ಮಾಡಿದ ವ್ಯಾಸಸೇವೆ

ಇತೀರಿತಾಽಪ್ಯಸ್ಯ ಹಿ ಮಾಯಯಾ ಸಾ
ಭೀತಾ ಭುಜಿಷ್ಯಾಂ[೧] ಕುಮತಿರ್ನ್ಯಯೋಜಯತ್ ।
ಸಾ ತಂ ಪರಾನಂದತನುಂ ಗುಣಾರ್ಣವಂ
ಸಂಪ್ರಾಪ್ಯ ಭಕ್ತ್ಯಾ ಪರಯೈವ ರೇಮೇ ॥ ೧೩೫ ॥

---

೧. ತಂ ಅಂಬಾಲಿಕಾಯಾಮುತ್ಪನ್ನಂ ಪಾಂಡುಶ್ವೇತವರ್ಣಂ ವಿಜ್ಞಾಯ ಪ್ರಾಹ ..... । – (ಜ.)

ಅ: ಅವಳು ಹೀಗೆ ಹೇಳಿದರೂ, ವ್ಯಾಸರ ಸಂಕಲ್ಪದಿಂದಾಗಿ ದುರ್ಬುದ್ಧಿಯ ಅಂಬಿಕೆ ಭಯಗೊಂಡವಳಾಗಿ ದಾಸಿಯನ್ನು ನಿಯಮಿಸಿದಳು. ಆ ದಾಸಿಯು ಉತ್ತಮವಾದ ಆನಂದ-ಶರೀರನೂ, ಗುಣಸಮುದ್ರನೂ ಆದ ವ್ಯಾಸರನ್ನು ಹೊಂದಿ, ಶ್ರೇಷ್ಠಭಕ್ತಿಯಿಂದಲೇ ರಮಿಸಿದಳು.

ವಿ: ೧) ಅಂಬಿಕೆ ವ್ಯಾಸರ ಬಳಿಗೆ ತಾನು ತೆರಳದೆ, ತನ್ನ ದಾಸಿಯನ್ನು ಕಳಿಸಿಬಿಟ್ಟಳು. ಅದಕ್ಕೆ ಆವಳಿಗುಂಟಾಗಿದ್ದ ಭಯವೇ ಕಾರಣ; ಮುಖ್ಯವಾದ ಕಾರಣ ದೈವಸಂಕಲ್ಪವೇ.

೨) ಹಾಗೆ ಕಳಿಸುವ ಮುನ್ನ ಅವರು ದಾಸಿಯನ್ನು ತನ್ನ ಆಭರಣಗಳಿಂದ ಅಲಂಕರಿಸಿದಳು:

ಸಾ ತು ರೂಪಂ ಚ ಗಂಧಂ ಚ ಮಹರ್ಷೇಃ ಪ್ರವಿಚಿಂತ್ಯ ತಮ್ ।
ನಾಕರೋದ್ವಚನಂ ದೇವ್ಯಾ ಭಯಾತ್ ಸುರಸುತೋಪಮಾ ॥
ತತಃ ಸ್ವೈರ್ಭೂಷಣೈರ್ದಾಸೀಂ ಭೂಷಯಿತ್ವಾऽಪ್ಸರೋಪಮಾಮ್ ।
ಪ್ರೇಷಯಾಮಾಸ ಕೃಷ್ಣಾಯ ತತಃ ಕಾಶಿಪತೇಃ ಸುತಾ ।
ಸಾ ತಮೃಷಿಮನುಪ್ರಾಪ್ತಂ ಪ್ರತ್ಯುದ್ಗಮ್ಯಾಭಿವಾದ್ಯ ಚ ।
ಸಂವಿವೇಶಾಭ್ಯನುಜ್ಞಾತಾ ಸತ್ಯತ್ಯೋಪಚಚಾರ ಹ ॥ –ಭಾರತ(೧/೧೦೫/೨೩-೨೫)

೩) ವೇದವ್ಯಾಸರ ಬಳಿಗೆ ತೆರಳಲು ಸಿದ್ಧಳಾದ ದಾಸಿಗೆ ಮಹಾರಾಣಿಯ ಆಭರಣಗಳೆಲ್ಲ ಲಭಿಸಿದವು. ವ್ಯಾಸಸೇವೆಗೆಂದು ಸಂಕಲ್ಪಿಸಿದಾಗಲೇ ರಾಜವೈಭವ ಲಭಿಸುವುದಕ್ಕೆ ಇದು ಸೂಚಕ – 'ಪ್ರಾರಂಭಮಾತ್ರಮಿಚ್ಛಾ ವಾ ವಿಷ್ಣೂದ್ಭವೇರ್ ನ ನಿಷ್ಫಲಾ'.

ವಿದುರನ ಜನನ, ಜನನದ ಹಿನ್ನೆಲೆ

ತಸ್ಯಾಂ ಸ ದೇವೋऽಜನಿ ಧರ್ಮರಾಜೋ
ಮಾಂಡವ್ಯಶಾಪಾದ್ಯ ಉವಾಹ ಶೂದ್ರತಾಮ್।
ವಸಿಷ್ಠಸಾಮ್ಯಂ ಸಮಭೀಪ್ಸಮಾನಂ[೩]
ಪ್ರಚ್ಯಾವಯನ್ನಿಚ್ಛಯಾ ಶಾಪಮಾಪ ॥ ೧೩೬ ॥

---

೨. ಭುಜಿಷ್ಯಾಂ ಪರಿಚಾರಿಕೀಂ ಊಢಾಂ ಶೂದ್ರೀಂ ನ್ಯಯೋಜಯತ್ । –(ಜ)

೩. ನನು ನೀಚಋಷೇಃ ಸಕಾಶಾದತ್ಯುಚ್ಚೋ ಯಮಃ ಕುತಃ ಶಾಪಮವಾಪೇತ್ಯಾಶಂಕಾಯಾಮುಚ್ಚೇ ಸ್ವಸ್ಮಿನ್ ಶಾಪದಾನೇನ ತದೀಯತಪಸಃ ಪ್ರಚ್ಯಾವನಾರ್ಥಮಿತಿ ಭಾವೇನಾಹ – ವಸಿಷ್ಠಸಾಮ್ಯಮಿತಿ । ಪ್ರಚ್ಯಾವಯನ್ ॥ –(ವಾ.)

ಅ: ಅವಳಲ್ಲಿ ಧರ್ಮದೇವತೆಯಾದ ಯಮದೇವ ಹುಟ್ಟಿಬಂದ. ಮಾಂಡವ್ಯರ ಶಾಪದಿಂದಾಗಿ ಆತ ಶೂದ್ರತ್ವವನ್ನು ಹೊಂದಿದ. ವಸಿಷ್ಠರ ಸಾಮ್ಯವನ್ನು ಹೊಂದಬಯಸಿದ್ದ ಅವನಿಗೆ ತಪೋಭಂಗವನ್ನು ಮಾಡಲೆಂದು ತನ್ನ ಇಚ್ಛೆಯಿಂದಲೇ ಅವನು ಆ ಶಾಪ ಪಡೆದುಕೊಂಡಿದ್ದ.

ವಿ: ೧) ಆ ದಾಸಿಯಲ್ಲಿ ಅವತರಿಸಿದ್ದು ಯಮದೇವ; ದಾಸೀಪುತ್ರನಾಗಿ ಜನಿಸಿದ್ದರಿಂದ ಅವನು ಶೂದ್ರನೆನ್ನಿಸಿದ. ಅನುಲೋಮಸಂತತಿಯಲ್ಲಿ ಮಗುವಿನದು ತಾಯಿಯ ಜಾತಿ ಎಂದು ಧರ್ಮಶಾಸ್ತ್ರ ('ಮಾತೃಜಾತಿಃ ಪಿತುರ್ಗುಣಾಃ').

೨) ವ್ಯಾಸಸೇವೆಯಿಂದ ದಾಸಿಗೆ ವಿದುರನಂತಹ ಮಗ ಜನಿಸಿದ; ದಾಸೀಪುತ್ರನೊಬ್ಬ ಹರಿಭಕ್ತರನ್ನು ಸೇವಿಸಿ ನಾರದಮುನಿ ಎನ್ನಿಸಿದ ವಿವರ ಭಾಗವತಪುರಾಣ(ಸ್ಕಂಧ ೧, ಅ.೬)ದಲ್ಲಿದೆ.

೩) ಯಮದೇವ ಶಾಪ ಪಡೆದದ್ದು ಮಾಂಡವ್ಯಮುನಿಯಿಂದ. ಋಷಿಯ ಶಾಪ ಸ್ವೋತ್ತಮರಾದ ದೇವತೆಗಳಿಗೆ ಬಾಧಕವೆನ್ನಿಸದು. ಆದರೂ ಯಮ ಹಾಗೆ ಶಾಪ ಪಡೆದದ್ದು ತನ್ನ ಇಚ್ಛೆಯಿಂದಲೇ. ಅದಕ್ಕೆ ಕಾರಣ ಮಾಂಡವ್ಯಮುನಿ ಕೈಗೊಂಡಿದ್ದ ಸಲ್ಲದ ತಪಸ್ಸನ್ನು [೧]ಭಂಗ ಮಾಡುವುದಾಗಿತ್ತು.

[೧]
ಅಯೋಗ್ಯಸಂಪ್ರಾಪ್ತಿಕೃತಪ್ರಯತ್ನ-
ದೋಷಾತ್ ಸಮಾರೋಪಿತಮೇವ ಶೂಲೇ ।
ಚೋರೈರ್ಹೃತೇಽರ್ಥೇಽಪಿ ತು ಚೋರಬುದ್ಧ್ಯಾ
ಮಕ್ಷೀವಧಾದಿತ್ಯವದದ್ಯಮಸ್ತಮ್ ॥ ೧೩೭ ॥

---

೧. ತಪಸಾ ವಿದ್ಯಯಾ ವಾऽಪಿ ಜ್ಞಾನಧ್ಯಾನಾದಿನಾऽಥವಾ ।
ವ್ಯಸ್ತೈಃ ಸಮಸ್ತೈರಪಿ ವಾ ಕುರ್ವತಾಂ ಯತ್ನಮುತ್ತಮಮ್ ।
ಮಹಾರವಿಕ್ಷೇಪಶತೈರ್ಬಹುಕೋಟಿಭಿರೇವ ವಾ ।
ನ ಶಕ್ಯಂತೇ ಸಮಾರೋಢುಂ ಸ್ವಾತ್ಮಾಯೋಗ್ಯಪದಾನಿ ತು ।
ತಥಾऽಪ್ಯಾಚರತಾಂ ಕುರ್ಯುರ್ದೈತ್ಯಾನಾಂ ಸುರನಾಯಕಾಃ ॥
ವಿಘ್ನಂ ತು ತಪಆದೀನಾಂ ವೈಯರ್ಥ್ಯಾಪನುತ್ತಯೇ ॥ (ಪ್ರಕಾಶಸಂಹಿತಾಯಾಮ್)
– ಭಾ.ತಾ. (೭/೩/೧೧)

ಅಶಕ್ತಾ ಅಪಿ ಶಕ್ತಾನಾಂ ಶಕ್ತಾಃ ಶಾಪಾದಿಷು ಸ್ಫುಟಮ್ ।
ತಥಾऽಪ್ಯಶಕ್ಯೈರ್ವಿಹಿತಾಃ ಶಾಪಾದ್ಯಾಃ ಶಕ್ತಿಮತ್ಸು ವೈ ।
ಅತ್ಯಲ್ಪಾಶ್ಚಾಲ್ಪಕಾಲಾಶ್ಚ ನ ಸಮ್ಯಕ್ ಪ್ರಭವಂತಿ ಚ ।
ಯತ್ನೇನಾಪೋಹಿತುಂ ಶಕ್ಯಾ ಉತ್ತಮೈಸ್ತು ನ ಸಂಶಯಃ ॥ – ಭಾ.ತಾ.ಉದ್ಧೃತ (೭/೧೭/೩೭)ಸ್ಕಾಂದವಚನ

ಅ: ತನಗೆ ಸಲ್ಲದ ಪದವಿಯನ್ನು ಹೊಂದಲೆಂದು ಪ್ರಯತ್ನಮಾಡಿದ ತಪ್ಪಿಗಾಗಿಯೇ ಮಾಂಡವ್ಯಮುನಿ ಶೂಲಕ್ಕೇರಿಸಲ್ಪಟ್ಟಿದ್ದ. ಕಳ್ಳರಿಂದ ಧನ ಅಪಹರಣವಾದಾಗ ಇವರು ಕಳ್ಳರೆಂದು ಶೂಲಕ್ಕೆ ಹಾಕಿದ್ದು ನೆಪ ಮಾತ್ರ. ಯಮ ಅದಕ್ಕೆ ಆ ಮುನಿ [೧]ನೊಣವೊಂದನ್ನು ಕೊಂದಿದ್ದೇ ಕಾರಣ ಎಂದು ಅವನಿಗೆ ಹೇಳಿದ.

ವಿ: ೧) [೨]ಒಮ್ಮೆ ಧನಿಕನ ಧನವನ್ನು ಕಳ್ಳತನ ಮಾಡಿದ ಕಳ್ಳರನ್ನು ರಾಜಭಟರು ಬೆನ್ನಟ್ಟಿದರು. ಕಳ್ಳರು ರಕ್ಷಣೆಗಾಗಿ ಮಾಂಡವ್ಯಮುನಿಯ ಆಶ್ರಮವನ್ನು ಹೊಕ್ಕರು. ಅಸಂಪ್ರಜ್ಞಾತಸಮಾಧಿಯಲ್ಲಿದ್ದ ಮಾಂಡವ್ಯರಿಗೆ ಅದಾವುದೂ ತಿಳಿದಿರಲಿಲ್ಲ. ಭಟರು ಆಶ್ರಮದಲ್ಲಿದ್ದ ಕಳ್ಳರೊಂದಿಗೆ ಪ್ರಧಾನ–ಕಳ್ಳನೆಂದು ಭ್ರಮಿಸಿ, ಮಾಂಡವ್ಯಮುನಿಯನ್ನೂ ಹಿಡಿದೊಯ್ದರು. ಹಾಗೆ ಒಯ್ದ ಕಳ್ಳರನ್ನೆಲ್ಲ ರಾಜಾಜ್ಞೆಯಂತೆ ಶೂಲಕ್ಕೇರಿಸಿದರು; ಮಾಂಡವ್ಯಮುನಿಯನ್ನು ಸಹ. ಅವರೆಲ್ಲ ಸತ್ತರೂ, ಮಾಂಡವ್ಯಮುನಿ ಮಾತ್ರ ಬದುಕಿಯೇ ಇದ್ದರು. ರಾಜ ವಿಷಯ ತಿಳಿದು, ಕ್ಷಮೆ ಯಾಚಿಸಿ, ಅವರನ್ನು

---

೧. ಅಯೋಗ್ಯಸಂಪ್ರಾಪ್ತಿಕೃತಪ್ರಯತ್ನದೋಷಾದೇವ ಶೂಲೇ ಸಮಾರೋಪಿತಮಿತಿ ಏವಕಾರಸಂಬಂಧಃ । ಅಥವಾ ಚೋರೈರೇವೇತ್ಯೇವಕಾರಸಂಬಂಧಃ । ಚೋರೈರೇವಾಪಹೃತೇऽಪೀತ್ಯಪಿಪದೇನಾರ್ಥಾಪಹರಣಸ್ಯ ಶೂಲಾರೋಪಣಹೇತುತಾಂ ಗರ್ಹಯತಿ । ಅತ ಏವಾವಿವೇಕಮೂಲತ್ವಾಚ್ಛೂಲಮಾರೋಪಯೇತಿ ರಾಜಾಜ್ಞಾऽಪಿ ನ ತತ್ರ ಕಾರಣಮಿತಿ ಸೂಚಿತಮ್ । ತಸ್ಮಾದಯೋಗ್ಯಕಾಮಾಖ್ಯದೋಷಾದೇವ ಶೂಲಾರೋಪಣಮಿತಿ ಭಾವಃ । ತದಾ ತತ್ರ ಗತೋ ಯಮೋ ಮಮ ಶೂಲಾರೋಪಣಂ ಕಸ್ಮಾದಿತಿ ಋಷಿಣಾ ಪೃಷ್ಟೇ ಸತಿ ವಸಿಷ್ಠಸಾಮ್ಯಾಪೇಕ್ಷಯಾ ತಪಃಕರಣರೂಪಮುಖ್ಯದೋಷಮನುಕ್ತ್ವಾ ಋಷೇಃ ಕೋಪಜನನಾಯ ಮಕ್ಷೀವಧಾತ್ = ತತ್ಕ್ಷುದ್ರಪಾಪರೂಪ-ಮಕ್ಷೀವಧಾದಿತಿ ತಂ ಋಷಿಮವದದಿತಿ ಯೋಜನಾ ॥ –(ವಾ.)

ನನು ವೃತ್ರಹತ್ಯಾದಿವನ್ಮಹತ್ಕರ್ಮಣ ಏವ ಪ್ರಾರಬ್ಧಾನರ್ಥಸೂಚಕತ್ವಂ ನ ಕ್ಷುದ್ರಪಾಪಸ್ಯ ಮಕ್ಷೀವಧಸ್ಯೇತಿ ಚೇನ್ನ। ಇಂದ್ರಾದೀನ್ ಪ್ರತಿ ವೃತ್ರಹತ್ಯಾದೇರ್ಮಹತ್ಕರ್ಮತ್ವವತ್ ಮಾಂಡವ್ಯಋಷಿಂ ಪ್ರತಿ ಮಕ್ಷೀವಧಸ್ಯೈವ ಮಹತ್ತ್ವೋಪಪತ್ತೇಃ । ಏತೇನ ಜ್ಞಾನಾದಿವ್ಯಕ್ತಿರವ್ಯಕ್ತಿಃ ಸುಖದುಃಖಾದಿಕಂ ತಥಾ । ಸುದೃಷ್ಟಬ್ರಹ್ಮತತ್ತ್ವಾನಾಂ ಭವಂತ್ಯಾರಬ್ಧಕರ್ಮಣೇತಿವಾಕ್ಯವಿರೋಧ ಇತ್ಯಪಾಸ್ತಮ್ । ಪ್ರಾರಬ್ಧಕರ್ಮಣಾ ಭಾವ್ಯೇ ಶೂಲಾರೋಪಣೇ ಅಯೋಗ್ಯಸಂಪ್ರಾಪ್ತಿಕೃತಪ್ರಯತ್ನದೋಷಾದೇವೇತ್ಯೇವಕಾರವಿರೋಧ ಇತಿ ಚೇನ್ನ । ತಸ್ಯೈವ ಶೂಲಾರೋಪೇ ಮುಖ್ಯಕಾರಣತ್ವೇನ ಮುಖ್ಯಕಾರಣಾನ್ಯನಿಷೇಧವಿವಕ್ಷಯಾऽವಧಾರಣೋಪಪತ್ತೇಃ । ಅವಧಾರಣಸ್ಯಾಯೋಗ-ವ್ಯವಚ್ಛೇದಕತ್ವೋಪಪತ್ತೇಶ್ಚ। ಚೋರೈರೇವಾರ್ಥೇ ಹೃತೇऽಪೀತ್ಯನ್ವಯಸ್ಯೋಕ್ತತ್ವಾಚ್ಚೇತಿ ದಿಕ್ । –(ತಾ.)

೨. 'ಪತಂಗಕಾನಾಂ ಪುಚ್ಛೇಷು ತ್ವಯೈಷಿಕಾ ಪ್ರವೇಶಿತಾ' ಇತ್ಯಾದಿ ಆದಿಪರ್ವತಃ ಕಥಾ ಜ್ಞೇಯಾ । ಚೋರೈರ್ಧನಿಕಸ್ಯ ಧನೇ ಹೃತೇ ಸತಿ ಧನಿಕದೂತೈರನುಗಮೇ ಕೃತೇ ಸತಿ ಅಸಂಪ್ರಜ್ಞಾತಸಮಾಧಿಸ್ಥಸ್ಯ ಮಾಂಡವ್ಯಸ್ಯಾಗ್ರೇ ಧನಂ ಸಂಸ್ಥಾಪ್ಯ ಚೋರೇಷು ಪಲಾಯಿತೇಷು ಅನುಯಾತಾ ದೂತಾಃ ಪುರಸ್ಥದ್ರವ್ಯಂ ಮಾಂಡವ್ಯಂ ದೃಷ್ಟ್ವಾ ಅಯಮೇವ ಚೋರಃ ಪಲಾಯನೇಷ್ವಸಕ್ತಃ ಸನ್ ನಿಮೀಲಿತಾಕ್ಷೋ ವರ್ತತೇ । ಅತ ಏವ ವಧಾರ್ಹ ಇತಿ ಮತ್ವಾ ಶೂಲೇ ಸಮಾರೋಪಿತಃ । ತತಃ ಕಸ್ಮಾದ್ದೋಷಾನ್ಮೇ ಶೂಲಪ್ರಾಪ್ತಿರಿತಿ ಪೃಷ್ಟೋ ಯಮಃ ತ್ವಯಾ ಮಕ್ಷಿಕಾಕಂಟಕಾಗ್ರಂ ಸಮಾರೋಪ್ಯ ಹತಾ ತೇನ ದೋಷೇಣ ಶೂಲಪ್ರಾಪ್ತಿರಿತ್ಯುದಿತೋ ಮಾಂಡವ್ಯಃ ಅಸತ್ಯವಾದಾತ್ ತ್ವಂ ಶೂದ್ರೋ ಭವೇತಿ ಯಮಂ ಶಶಾಪೇತಿ ಭಾವಃ ॥ –(ಜ.)

ಶೂಲದಿಂದ ಬಿಡುಗಡೆ ಮಾಡಿದ. ಹಾಗೆ ಬಿಡಿಸುವಾಗ ಅದರ ತುದಿ ಮುರಿದು, ಅವರ ಕಂಠದಲ್ಲೇ ಉಳಿದುಬಿಟ್ಟಿತು. ಅಂದಿನಿಂದ ಅವರಿಗೆ ಅಣಿಮಾಂಡವ್ಯರೆಂದು ಹೆಸರಾಯಿತು.

ಬಳಿಕ ಆ ಮುನಿ ಯಮಲೋಕಕ್ಕೇ ತೆರಳಿ ಯಮನನ್ನೇ ಪ್ರಶ್ನಿಸಿದರು : ''ಯಾವ ತಪ್ಪಿಗಾಗಿ ತನಗೆ ಅಂತಹ ಶಿಕ್ಷೆ?''. ಯಮ ಉತ್ತರಿಸಿದ : ''ನೀವು ಮಗುವಾಗಿದ್ದಾಗ ನೊಣವೊಂದನ್ನು ಮುಳ್ಳಿನಿಂದ ಚುಚ್ಚಿ ಕೊಂದಿದ್ದಿರಿ. ಈ ಶಿಕ್ಷೆ ಆ ಪಾಪಕ್ಕಾಗಿ''. ಮುನಿ ಕೆರಳಿದ. ''ತಿಳುವಳಿಕೆ ಇರದ ಆ ವಯಸ್ಸಿನಲ್ಲಿ ಮಾಡಿದ ಸಣ್ಣತಪ್ಪಿಗಾಗಿ ಇಂತಹ ದೊಡ್ಡ ಶಿಕ್ಷೆಯೇ? ಪಾಪಪುಣ್ಯದ ಲೇಪ ಹನ್ನೆರಡು ತುಂಬಿದ ಮೇಲಲ್ಲವೆ? ಇದು ನ್ಯಾಯವಲ್ಲ. ಇದಕ್ಕಾಗಿ ನಿನ್ನನ್ನು ಶಪಿಸುವೆ – ನೀನು ಶೂದ್ರನಾಗಿ ಜನಿಸು''.

ಯಮನಿಗೆ ಬೇಕಾಗಿದ್ದೂ ಅದೇ. ಆತನಿಗೂ ತಿಳಿದಿತ್ತು – ಆ ತಪ್ಪಿಗಷ್ಟೆ ಈ ಶಿಕ್ಷೆಯಲ್ಲ. ನಿಜಕ್ಕೂ ಮುನಿ ಮಾಡಿದ ದೊಡ್ಡ ತಪ್ಪು ಬೇರೊಂದೇ ಆಗಿತ್ತು. ಅವರು ವಸಿಷ್ಠಮುನಿಯ ಸಾವ್ಯವನ್ನು ಬಯಸಿ, ಕಠಿಣತಪಸ್ಸಿನಲ್ಲಿ ತೊಡಗಿದ್ದರು. ಆದರೆ ಅದು ಅವರಿಗೆ ಸಲ್ಲದ ಬಯಕೆ. ಹಾಗೆ ಎಟುಕದ ಪದವಿಗಾಗಿ ತಪಸ್ಸನ್ನು ಆಚರಿಸುವುದು ಅಪರಾಧ. ಆ ತಪ್ಪಿಗಾಗಿ ಆ ಶೂಲಾರೋಪಣದ ಶಿಕ್ಷೆ. ಆದರೆ ಈ ಪ್ರಧಾನ ಕಾರಣವನ್ನು ಯಮ ಅವರಿಗೆ ತಿಳಿಸದೆ, ಅಪ್ರಧಾನ ಕಾರಣವನ್ನು ತಿಳಿಸಿದ. ಹಾಗೆ ಹೇಳಿ ಮುನಿಗೆ ಕೋಪ ಹುಟ್ಟಿಸಿ, ಅವರು ಶಾಪ ನೀಡಿ, ತಮ್ಮ ಆ ತಪಸ್ಸನ್ನು ಕಳೆದುಕೊಳ್ಳಲೆಂಬುದೇ ಅವನ ಉದ್ದೇಶವಾಗಿತ್ತು. ನಡೆದದ್ದು ಹಾಗೆಯೇ.

ರಾಮಾಯಣದಲ್ಲಿ ಬಂದಿರುವ ಗೌತಮಮುನಿ ತನಗೆ ಸಲ್ಲದ ಪದವಿಗಾಗಿ ತಪಸ್ಸು ಮಾಡಿದ್ದರಿಂದ ಇಂದ್ರದೇವರು ಅಹಲ್ಯಾಗಮನ ಮಾಡಿ, ಅವರಿಗೆ ಕೋಪ ಹುಟ್ಟಿಸಿ, ಶಾಪ ನೀಡುವಂತೆ ಮಾಡಿ, ಅವರನ್ನು ಉದ್ಧರಿಸಿದ [೧]ಪ್ರಸಂಗವೂ ಇಂತಹುದೇ.

ಅಂತೂ ಇದು ಹೀಗೆ ಯಮದೇವರು ತಾವಾಗಿ ಬಯಸಿ ಪಡೆದ ಶಾಪ.

೨) ಮಾಂಡವ್ಯರು ಆವರೆಗೂ ಹನ್ನೆರಡು ತುಂಬುವವರೆಗೂ ಪಾಪಲೇಪವಿಲ್ಲ ಎಂಬ ನಿಯಮ ಹದಿಮೂರು ತುಂಬುವವರೆಗೂ ಎಂದು ಬದಲಾಗಲಿ ಎಂದೂ ಸಹ ನುಡಿದರು ಎಂಬ ಉಲ್ಲೇಖವೂ ಮಹಾಭಾರತದಲ್ಲಿದೆ :

> 'ಅಲ್ಪೇಽಪರಾಧೇಽಪಿ ಮಹಾನ್ ಮಮ ದಂಡಸ್ತ್ವಯಾ ಕೃತಃ ।....
> ಶೂದ್ರಯೋನಾವತೋ ಧರ್ಮ ಮಾನುಷಃ ಸಂಭವಿಷ್ಯಸಿ । ....
> ಆಚತುರ್ದಶಕಾದ್ ವರ್ಷಾನ್ನ ಭವಿಷ್ಯತಿ ಪಾತಕಮ್ । –(ಆದಿ. ೧೦೭/೧೪-೧೬)

---

೧. ಮ.ಭಾ.ತಾ.ನಿ.(೪/೧೧); ವಾಲ್ಮೀಕಿರಾಮಾಯಣ (೧/೪೯/೨); ಸಂಗ್ರಹರಾಮಾಯಣ (೧/೬/೧೮)

ನಾಸತ್ಯತಾ [೧] ತಸ್ಯ ಚ ತತ್ರ ಹೇತುತಃ
ಶಾಪಂ ಗೃಹೀತುಂ ಸ ತಥೈವ ಚೋಕ್ತ್ವಾ ।
ಅವಾಪ ಶೂದ್ರತ್ವಮಥಾಸ್ಯ ನಾಮ
ಚಕ್ರೇ ಕೃಷ್ಣಃ ಸರ್ವವಿತ್ತ್ವಂ ತಥಾऽದಾತ್ ॥ ೧೩೮ ॥

ಅ: (ನೊಣವನ್ನು) ಹಿಂಸಿಸಿದ ಪಾಪವೂ ಸಹ ಅದಕ್ಕೆ (ಶೂಲಾರೋಪಣಕಾರ್ಯಕ್ಕೆ) ಒಂದು ಕಾರಣವೇ ಆದ್ದರಿಂದ ಯಮನದು ಸುಳ್ಳೇನೂ ಅಲ್ಲ. ಶಾಪವನ್ನು ಪಡೆಯಲೆಂದು ಅದನ್ನಷ್ಟೇ ಕಾರಣವೆಂದು ಹೇಳಿ ಶೂದ್ರತ್ವವನ್ನು ಹೊಂದಿದ. ಅವನಿಗೆ ವ್ಯಾಸರು (ವಿದುರ ಎಂದು) ಹೆಸರಿಟ್ಟರು. ಸರ್ವಜ್ಞತ್ವವನ್ನೂ ಅವನಿಗೆ ನೀಡಿದರು.

ವಿ: ಶೂಲಾರೋಪಣಕ್ಕೆ ವಸಿಷ್ಠಸಾಮ್ಯದ ಬಯಕೆ ಮುಖ್ಯಕಾರಣ; ನೊಣವನ್ನು ಹಿಂಸಿಸಿದ್ದು ಅವಾಂತರಕಾರಣ. ಆದರೆ ಮುಖ್ಯಕಾರಣವನ್ನು ಹೇಳಿದ್ದರೆ, ಅವರು ಕೋಪಗೊಳ್ಳುತ್ತಿರಲಿಲ್ಲ; ಶಾಪವನ್ನೂ ನೀಡುತ್ತಿರಲಿಲ್ಲ. ಶಾಪ ನೀಡದೆ, ಅವರ ತಪಸ್ಸು ಕ್ಷಯಿಸುತ್ತಿರಲಿಲ್ಲ. ಅದಕ್ಕಾಗಿ ಯಮ ಅವಾಂತರ ಕಾರಣವನ್ನಷ್ಟೇ ಹೇಳಿ, ಮುನಿ ಕೆರಳುವಂತೆ ಮಾಡಿದ. ಆದ್ದರಿಂದ ಸುಳ್ಳು ಹೇಳಿದ ದೋಷ ಅವನಿಗಿಲ್ಲ.

[೨] ವಿದ್ಯಾರತೇರ್ವಿದುರೋ ನಾಮ ಚಾಯಂ
ಭವಿಷ್ಯತಿ ಜ್ಞಾನಬಲೋಪಪನ್ನಃ ।
ಮಹಾಧನುರ್ಬಾಹುಬಲಾಧಿಕಶ್ಚ
ಸುನೀತಿಮಾನಿತ್ಯವದತ್ ಸ ಕೃಷ್ಣಃ ॥ ೧೩೯ ॥

---

೧. ತಸ್ಯ ಚ = ಮಕ್ಷೀವಧಾಖ್ಯಪಾಪಸ್ಯ ಚ ತತ್ರ = ಶೂಲಾರೋಪಣೇ ಹೇತುತಃ = ಈಷದ್ಧೇತುತ್ವಾದಸತ್ಯತಾ ನ = ಯಮವಾಕ್ಯಸ್ಯಾಸತ್ಯತ್ವಂ ನೇತಿ ಯೋಜನಾ । ಅಕೃತಪ್ರಾಯಶ್ಚಿತ್ತಸ್ಯ ತಸ್ಯ ಮಕ್ಷೀವಧೋऽಪಿ ತತ್ರ ಕಾರಣಮಭೂದಿತಿ ಭಾವಃ ॥ – (ವಾ.)

೨. ತಸ್ಯ ಚ ಮಕ್ಷೀವಧಸ್ಯಾಪಿ ತತ್ರಶೂಲಾರೋಪಣೇ ಹೇತುತಃ ಕಾರಣತ್ವಾತ್ ಅಸತ್ಯತಾ ಮಕ್ಷೀವಧಾದಿತಿ ಬ್ರುವತೋ ಧರ್ಮಸ್ಯಾಸತ್ಯತ್ವನ್ನ । ವಸಿಷ್ಠಸಾಮ್ಯೇಚ್ಛಯಾ ಕೃತತಪಃಮಕ್ಷೀವಧಶ್ಚೇದುಭಯಮಪಿ ಶೂಲಾರೋಪಣೇ ಕಾರಣಾಮಿತಿ ಭಾವಃ । ನನು ನಿಮಿತ್ತದ್ವಯೇ ಸತ್ಯಪಿ ಪ್ರಬಲನಿಮಿತ್ತಂ ವಿಹಾಯಾಲ್ಪನಿಮಿತ್ತಂ ಕುತೋऽವದದಿತ್ಯಾಹ – ಶಾಪಮಿತಿ । ಸಂಭವದ್ಬಲವತ್ಕಾರಣೋಕ್ತ್ಯಾತಸ್ಯ ಕೋಪಾನುದಯಾದ್ಯಕಿಂಚಿತ್ತದಲ್ಪಕಾರಣೋಕ್ತ್ಯಾಕುಪಿತೋऽಯಂ ಶಪೇತ್ ತತೋ ವಸಿಷ್ಠಸಾಮ್ಯತ್ವಪ್ರಾಪ್ತ್ಯೈ ಕೃತತಪೋಹಾನಿರ್ಭವೇದಿತಿ ಭಾವೇನ ಶಾಪಂ ಗೃಹೀತುಂ ಸ ಧರ್ಮಃ । – (ಜ.)

ಅ: ''ವಿದ್ಯೆಯಲ್ಲಿ ರತನಾದವನಾದ್ದರಿಂದ ಇವನು 'ವಿದುರ' ಎನ್ನಿಸುವನು; ಜ್ಞಾನ ಹಾಗೂ ಬಲಗಳಿಂದ ಕೂಡಿದವನಾಗುವನು; ಮಹಾಧನುರ್ಧಾರಿಯೂ, ಬಾಹುಬಲದಲ್ಲಿ ಮಿಗಿಲಾದವನೂ, ಒಳ್ಳೆಯ ನೀತಿವಂತನೂ ಆಗುವನು'' ಎಂದು ಶ್ರೀವ್ಯಾಸರು ನುಡಿದರು.

ವಿ: ೧) ವಿದುರ ಎಂದರೆ ವಿದ್ಯಾರತ ಎಂದರ್ಥ. ಕೋಶಗಳಲ್ಲೂ ಆ ಅರ್ಥವೇ ಉಂಟು.

೨) ಇಲ್ಲಿಯ 'ಸುನೀತಿವಾನ್' ಎಂಬ ಪದ ಒಂದು ವಿಧದಲ್ಲಿ ಮುಂದೆ ಅವನು ವಿದುರನೀತಿ ಎಂದು ಪ್ರಸಿದ್ಧವಾದ ನೀತಿ ಹೇಳುವ ವಿಚಾರವನ್ನು ಸೂಚಿಸುವಂತಿದೆ ಎಂಬುದನ್ನೂ ಗಮನಿಸಬೇಕು.

ಜ್ಞಾತ್ವಾऽಸ್ಯ ಶೂದ್ರತ್ವಮಥಾಸ್ಯ ಮಾತಾ
ಪುನಶ್ಚ ಕೃಷ್ಣಂ ಪ್ರಣತಾ ಯಯಾಚೇ ।
ಅಂಬಾಲಿಕಾಯಾಂ ಜನಯಾನ್ಯಮಿತ್ಯಥೋ
ನೈಚ್ಛತ್ ಸ ಕೃಷ್ಣೋऽಭವದಪ್ಯದೃಶ್ಯಃ ॥ ೧೪೦ ॥

ಅ: ಅವನು ಶೂದ್ರನೆಂದು ಅರಿತ ತಾಯಿ ಸತ್ಯವತಿ ಪುನಃ ವ್ಯಾಸರನ್ನು ವಂದಿಸಿ ಬೇಡಿಕೊಂಡಳು: ''ಅಂಬಾಲಿಕೆಯಲ್ಲಿ ಮತ್ತೊಬ್ಬ ಮಗನನ್ನು ಹುಟ್ಟಿಸು''. ವ್ಯಾಸರು ಅದಕ್ಕೆ ಒಪ್ಪಲಿಲ್ಲ; ಅದೃಶ್ಯರಾದರು ಸಹ.

ವಿ: ೧) ವ್ಯಾಸರು ಹೇಳಿದ ವೈಷ್ಣವವ್ರತವನ್ನು ಆಚರಿಸುವ ನಿಯಮವನ್ನು ಪಾಲಿಸುವ ಬದಲು ಬೇರೊಂದು ರೀತಿಯಲ್ಲಿ ಪರಿಹಾರ ಕಾಣಲು ಸತ್ಯವತಿ ಬಯಸಿದ್ದು ವಿಧಿವಿಲಾಸ. ತಮ್ಮ ಮಾತು ಎಷ್ಟು ಆವೇಷ ಎಂಬುದನ್ನು ವ್ಯಾಸರು ಆ ಮೂಲಕ ಸಾರಿದರು. ವ್ರತನಿಯಮಗಳ ಅನುಷ್ಠಾನ–ವಿಲ್ಲದೆ ವ್ಯಾಸರಿಂದ ಪೂರ್ಣಾನುಗ್ರಹ ಪಡೆಯುವುದು ಸರ್ವಥಾ ಅಶಕ್ಯ ಎಂಬುದು ಇಲ್ಲಿಯ ತತ್ತ್ವ.

---

೩. ''ವಿದ ಜ್ಞಾನ'' ಇತಿ ಧಾತೋಃ ಜ್ಞಾನೇ ಉ ತಾಚ್ಛೀಲ್ಯೇನ ರತತ್ವಾತ್ ವಿದುರ ಇತಿ ಭಾವೇನೋಕ್ತಂ ವಿದ್ಯಾರತೇರ್ವಿದುರೋ ನಾಮೇತಿ । ''ರಮು ಕ್ರೀಡಾಯಾ''ಮಿತಿ ಧಾತೋಃ ಕರ್ತ್ರರ್ಥೇ ಡಪ್ರತ್ಯಯೇ ಕೃತೇ ಸತಿ ರಃ = ರತ ಇತ್ಯರ್ಥಃ ಸೇತ್ಸ್ಯತೀತಿ ವ್ಯಾಸಸ್ಯ ಹೃದಯಮ್ ॥ – (ವಾ.)

'ಜ್ಞಾತಾ ತು ವಿದುರೋ ವಿಂದುಃ' ಇತ್ಯಮರಃ ।

ಅಯಂ ವಿದ್ಯಾರತೇರ್ವಿದುರೋ ನಾಮ ಭವಿಷ್ಯತಿ । – ಭಾರತ

೨) ವ್ಯಾಸರು ನಾಲ್ಕನೆಯ ಮಗುವನ್ನು ಕರುಣಿಸಲು ಒಪ್ಪದಿರಲು, ''ನಾಲ್ಕನೆಯ ಸಂತತಿ ಎಹಿತವಾದುದಲ್ಲ'' ಎಂದು ಮುಂದೆ ಕುಂತಿ ನೀಡುವ ಶಾಸ್ತ್ರವಿಧಿ ಕಾರಣ ಎನ್ನಬಹುದು. – 'ನಾತಶ್ಚತುರ್ಥಂ ಪ್ರಸವಮಾಪತ್ಸ್ವಪಿ ವದಂತ್ಯುತ'.

ಯೋಗ್ಯಾನಿ ಕರ್ಮಾಣಿ ತತಸ್ತು ತೇಷಾಂ
ಚಕಾರ ಭೀಷ್ಮೋ ಮುನಿಭಿರ್ಯಥಾವತ್ ।
ವಿದ್ಯಾಃ ಸಮಸ್ತಾ ಅದದಾಚ್ಚ ಕೃಷ್ಣ-
ಸ್ತೇಷಾಂ ಪಾಂಡೋರಸ್ತ್ರಶಸ್ತ್ರಾಣಿ ಭೀಷ್ಮಃ ॥ ೧೪೧ ॥

ಅ: ಬಳಿಕ ಭೀಷ್ಮರು ಆ ಮೂವರಿಗೂ ಶಾಸ್ತ್ರವಿಹಿತವಾದ ಸಂಸ್ಕಾರಗಳನ್ನು ಮುನಿಗಳ ಮೂಲಕ ವಿಧ್ಯುಕ್ತವಾಗಿ ಮಾಡಿಸಿದರು. ವ್ಯಾಸರು ಸಮಸ್ತವಿದ್ಯೆಗಳನ್ನೂ ಅವರಿಗೆ ಕರುಣಿಸಿದರು. ಭೀಷ್ಮ ಪಾಂಡುವಿಗೆ ಅಸ್ತ್ರಶಸ್ತ್ರಗಳನ್ನು ಕಲಿಸಿದರು.

ವಿ: ೧) ಧೃತರಾಷ್ಟ್ರ ಕುರುಡ; ವಿದುರ ಶೂದ್ರ. ಅದಕ್ಕೆಂದೇ ಅವರಿಬ್ಬರಿಗೂ ಭೀಷ್ಮರು ಶಸ್ತ್ರಾಸ್ತ್ರ ನೀಡುವ ಪ್ರಸಂಗ ಒದಗಲಿಲ್ಲ.

೨) ಭೀಷ್ಮರು ತಾವು ಪರಶುರಾಮರಿಂದ ಪಡೆದ ಶಸ್ತ್ರಾಸ್ತ್ರವಿದ್ಯೆಯನ್ನು ಪಾಂಡುವಿಗೆ ನೀಡಿದರು. ಅಲ್ಲಿಗೆ ಮೊದಲಬಾರಿಗೆ ರಾಜ್ಯವಾಳುವ ಕ್ಷತ್ರಿಯನೊಬ್ಬ ಪರಶುರಾಮರ ದಿವ್ಯ–ಶಸ್ತ್ರಾಸ್ತ್ರವಿದ್ಯೆಯನ್ನು ಪಡೆಯುವಂತಾಯಿತು.

ತೇ ಸರ್ವವಿದ್ಯಾಪ್ರವರಾ[೨] ಬಭೂವು-
ರ್ವಿಶೇಷತೋ ವಿದುರಃ ಸರ್ವವೇತ್ತಾ ।
ಪಾಂಡುಃ ಸಮಸ್ತಾಸ್ತ್ರವಿದೇಕವೀರೋ
ಜಿಗಾಯ ಪೃಥ್ವೀಮಖಿಲಾಂ ಧನುರ್ಧರಃ ॥ ೧೪೨ ॥

---

೧. ಧೃತರಾಷ್ಟ್ರಪಾಂಡ್ವೋಃ ಕ್ಷತ್ರಯೋಗ್ಯಸಂಸ್ಕಾರಕರ್ಮಾಣಿ ವಿದುರಸ್ಯ ಶೂದ್ರಯೋಗ್ಯಸಂಸ್ಕಾರಕರ್ಮಾಣಿ ಚಕಾರೇತಿ ಭಾವಃ । – (ಜ.)

೨. ಪ್ರವರಾಃ ಚತುರಾಃ । – (ಜ.)

ಅ: ಆ ಮೂವರೂ ಸಕಲವಿದ್ಯೆಗಳಲ್ಲೂ ಪಾರಂಗತರಾದರು. ವಿಶೇಷವಾಗಿ ವಿದುರ ಎಲ್ಲ ಬಲ್ಲವನೆನ್ನಿಸಿದ. ಪಾಂಡು ಸಮಸ್ತ ಅಸ್ತ್ರಗಳನ್ನೂ ಬಲ್ಲವನಾಗಿ, ಜಗದೇಕವೀರನೆನ್ನಿಸಿ, ಧನುರ್ಧಾರಿಯಾಗಿ ಇಡೀ ಭೂಮಿಯನ್ನು ಜಯಿಸಿದ.

ವಿ: ಪ್ರತೀಪರಾಜನ ಮೂವರು ಮಕ್ಕಳಲ್ಲಿ ಕನಿಷ್ಠನಾದ ಶಂತನು ಗುಣಜ್ಯೇಷ್ಠನೆನ್ನಿಸಿದಂತೆ, ಈ ಮೂವರಲ್ಲಿ ಕನಿಷ್ಠನಾದ ವಿದುರ ಗುಣಜ್ಯೇಷ್ಠನೆನ್ನಿಸಿದ. ಶಂತನು ಗುಣಜ್ಯೇಷ್ಠನೆನ್ನಿಸಲು ಅವನು ವರುಣಾವತಾರ ಎಂಬುದು ಕಾರಣವಾದರೆ, ವಿದುರನು ಗುಣಜ್ಯೇಷ್ಠನೆನ್ನಿಸಲು ಅವನು ಯಮನ ಅವತಾರ ಎಂಬುದು ಕಾರಣವಾಯಿತು.

ಸಂಜಯನ ಜನನ

ಗವದ್ಗಣಾದಾಸ ತಥೈವ ಸೂತಾತ್
ಸಮಸ್ತಗಂಧರ್ವಪತಿಃ ಸ ತುಂಬುರುಃ ।
ಯ ಉದ್ವಹೋ ನಾಮ ಮರುತ್ ತದಂಶ-
ಯುಕ್ತೋ ವಶೀ ಸಂಜಯನಾಮಧೇಯಃ[೧] ॥ ೧೪೩ ॥

ಅ: ಹಾಗೆಯೇ ಗವದ್ಗಣ ಎಂಬ ಸೂತನಿಂದ ಸಕಲಗಂಧರ್ವರಿಗೆ ಒಡೆಯನಾದ ತುಂಬುರು ಸಂಜಯನಾಮಕನಾಗಿ ಹುಟ್ಟಿದ. ಉದ್ವಹ ಎಂಬ ಮರುತ್ತಿನ ಅಂಶದಿಂದ ಕೂಡಿದ ಅವನು ಜಿತೇಂದ್ರಿಯನಾಗಿದ್ದ.

ವಿಚಿತ್ರವೀರ್ಯಸ್ಯ ಸ ಸೂತಪುತ್ರಃ
ಸಖಾ ಚ ತೇಷಾಮಭವತ್ ಪ್ರಿಯಶ್ಚ ।
ಸಮಸ್ತವಿನ್ಮತಿಮಾನ್ ವ್ಯಾಸಶಿಷ್ಯೋ
ವಿಶೇಷತೋ ಧೃತರಾಷ್ಟ್ರಾನುವರ್ತೀ ॥ ೧೪೪ ॥

ಅ: ಅವನು ವಿಚಿತ್ರವೀರ್ಯನ ಸೂತನ ಮಗ. ಆ ಮೂವರಿಗೂ ಆಪ್ತನೂ, ಪ್ರಿಯನೂ ಆದ. ವ್ಯಾಸರ ಶಿಷ್ಯನಾದ ಅವನು ಎಲ್ಲವನ್ನೂ ಬಲ್ಲವನು; ಬುದ್ಧಿವಂತ. ವಿಶೇಷವಾಗಿ ಧೃತರಾಷ್ಟ್ರನನ್ನು ಅನುಸರಿಸಿಕೊಂಡಿದ್ದ.

---

೧. ಸಂಜಯೋ ಮುನಿಕಲ್ಪಸ್ತು ಜಜ್ಞೇ ಸೂತಾತ್ ಗವದ್ಗಣಾತ್ । – ಭಾರತ (೧/೬೩/೯೭)

ವಿ: ವಿಚಿತ್ರವೀರ್ಯನ ಸೂತ ಗವದ್ಗಣ. 'ಗವಲ್ಗಣ' ಎಂಬ ಪಾಠವೂ ಉಂಟು. ವಿಚಿತ್ರ-ವೀರ್ಯನ ಹಿರಿಯ ಮಗ ಧೃತರಾಷ್ಟ್ರ; ಗವದ್ಗಣನ ಮಗ ಸಂಜಯ. ಧೃತರಾಷ್ಟ್ರ ಗಂಧರ್ವರಾಜ; ತುಂಬುರುವೂ ಗಂಧರ್ವರಾಜನೇ. ಹೀಗೆ ಇಬ್ಬರೂ ಗಂಧರ್ವರಾಜರಾದ್ದರಿಂದ ಧೃತರಾಷ್ಟ್ರ, ಸಂಜಯ ಇಬ್ಬರಲ್ಲೂ ವಿಶೇಷಸಂಬಂಧ ಬೆಳೆಯಿತು. ಅವರಿಬ್ಬರ ಒಡನಾಟ ಕೊನೆಯವರೆಗೂ ಮುಂದುವರೆದದ್ದು ಮತ್ತೊಂದು ವಿಶೇಷ.

ಶಕುನಿ-ಗಾಂಧಾರಿಯರು

ಗಾಂಧಾರರಾಜಸ್ಯ ಸುತಾಮುವಾಹ
ಗಾಂಧಾರಿನಾಮ್ನೀಂ ಸುಬಲಸ್ಯ ರಾಜಾ ।[೧]
ಜ್ಯೇಷ್ಠೋ ಜ್ಯೇಷ್ಠಾಂ ಶಕುನೇರ್ದ್ವಾಪರಸ್ಯ
ನಾಸ್ತಿಕ್ಯರೂಪಸ್ಯ ಕುಕರ್ಮಹೇತೋಃ ॥ ೧೪೫ ॥

ಅ: ಗಾಂಧಾರದೇಶದ ರಾಜನಾದ ಸುಬಲ ಎಂಬವನ ಮಗಳಾದ ಗಾಂಧಾರೀ ಎಂಬವಳನ್ನು ಧೃತರಾಷ್ಟ್ರ ವಿವಾಹವಾದ. ಅವಳು ಶಕುನಿಯ ಅಕ್ಕ; ಶಕುನಿ ಕುಕೃತ್ಯಗಳಿಗೆ ಕಾರಣವೆನ್ನಿಸುವ ನಾಸ್ತಿಕ್ಯದ ಅಭಿಮಾನಿದೈತ್ಯನಾದ ದ್ವಾಪರನ ಅವತಾರ.

---

೧. ದ್ವಯೋರ್ವಿರುದ್ಧಕೋಟ್ಯೇಃ ಪರಂ ತಾತ್ಪರ್ಯವಜ್ಜ್ಞಾನಂ ದ್ವಿಪರಂ ತತ್ತ್ವಸಂಶಯ ಇತಿ ಯಾವತ್ । ಪ್ರಾಯಸ್ತದ್ಧೇತುಭೂತತ್ವಾತ್ ತೃತೀಯೋ ಯುಗೋಽಪಿ ದ್ವಾಪರ ಇತ್ಯುಚ್ಯತೇ । ತದಭಿಮಾನೀ ತತ್ತ್ವನಿಶ್ಚಯ-ವಿರೋಧೀ ಶಕುನಿರಪಿ ಮೂಲರೂಪೇ ದ್ವಾಪರನಾಮಧೇಯಃ । ನಾಸ್ತಿಕ್ಯಮೇವ ರೂಪಯತಿ ಪ್ರಕಾಶಯತೀತಿ ನಾಸ್ತಿಕ್ಯರೂಪಃ ನಾಸ್ತಿ ಪರದೇವತೇತಿ ಮಿಥ್ಯಾಜ್ಞಾನರೂಪೀ ವಾ । ಅತ ಏವ ಕುಕರ್ಮಣಾಂ ಹೇತುಃ ಸ ಏವ ಶಕುನಿರಭೂತ್ । ತಸ್ಯ ಶಕುನೇರ್ಜ್ಯೇಷ್ಠಾಮ್ । ಧೃತರಾಷ್ಟ್ರಸ್ಯ ಬುದ್ಧೌ ಸಂದೇಹಮುತ್ಪಾದ್ಯ ಅಂತತಸ್ತಾಂ ನಾಸ್ತಿಕ್ಯೇ ಸ್ಥಿರೀಕೃತ್ಯ ರುಚಿಮುತ್ಪಾದಯತೀತಿ ಸೂಚನಾಯ ವಿಶೇಷಣತ್ರಯಮ್ । ತಥಾ ಚ ಜ್ಯೇಷ್ಠೋ ರಾಜಾ= ಧೃತರಾಷ್ಟ್ರಃ ಸುಬಲಸ್ಯ = ಸುಬಲನಾಮ್ನಃ ಗಾಂಧಾರರಾಜಸ್ಯ ಸುತಾಮ್ । ದ್ವಾಪರಸ್ಯ= ಮೂಲರೂಪೇ ದ್ವಾಪರನಾಮಧೇಯಸ್ಯ, ನಾಸ್ತಿಕ್ಯರೂಪಸ್ಯ ಕುಕರ್ಮಹೇತೋಃ ಶಕುನೇರ್ಜ್ಯೇಷ್ಠಾಂ ಗಾಂಧಾರೀನಾಮ್ನೀಮುವಾಹೇತಿ ಯೋಜನಾ॥ – (ವಾ.)

ನಾಸ್ತಿಕ್ಯಸ್ಯ ನಾಸ್ತಿ ಪರಲೋಕ ಇತ್ಯಾದಿದುರ್ಬುದ್ಧೇರಭಿಮಾನಿನಃ । ಕುಕರ್ಮಣಾಂ ಕುತ್ಸಿತಕರ್ಮಣಾಂ ಹೇತೋಃ ಕಾರಣಭೂತಸ್ಯ ದ್ವಾಪರಸ್ಯ ಪೂರ್ವಂ ದ್ವಾಪರಾಖ್ಯಾಸುರಸ್ಯ ಜ್ಯೇಷ್ಠಾಂ ಜ್ಯೇಷ್ಠಭಗಿನೀಂ ಗಾಂಧಾರೀನಾಮ್ನೀಂ ಉವಾಹ ಪ್ರಾಪ ।

'ಶಕುನಿರ್ನಾಮ ಯಸ್ತ್ವಾಸೀದ್ರಾಜಾ ಲೋಕೇ ಮಹಾರಥಃ ।
ದ್ವಾಪರಂ ವಿದ್ಧಿತಂ ರಾಜನ್ ಸಂಭೂತಮರಿಮರ್ದನಮ್' ಇತ್ಯಾದಿಪರ್ವಣಿ ।

ತಥಾ ಗಾಂಧಾರೀಂ ಪೂರ್ವಂ ಮತಿನಾಮ್ನೀಮ್ । – (ಜ.)

ವಿಃ ೧) ಗಾಂಧಾರಿ [೧]ಮತಿ ಎಂಬ ದೇವತಾಸ್ತ್ರೀಯ ಅವತಾರ. ಅವಳು ಶಿವನಿಂದ ಶತಪುತ್ರ–ರನ್ನು ಪಡೆಯುವ ವರವೊಂದನ್ನು ಪಡೆದಿದ್ದ ವಿಷಯ ಭೀಷ್ಮರಿಗೆ ತಿಳಿದಿತ್ತು. ಅವರು ವಿದುರ–ನೊಂದಿಗೆ ಸಮಾಲೋಚಿಸಿ, ಅವಳನ್ನು ಧೃತರಾಷ್ಟ್ರನಿಗೆ ತಂದುಕೊಂಡರು. ಸುಬಲರಾಜ ಅವನು ಕುರುಡನೆಂದು ತಿಳಿದು, ಮೊದಲು ಹಿಂಜರಿದರೂ, ಅವನ ವಂಶ ಮೊದಲಾದ ಇತರ ಹಿರಿಮೆಯನ್ನು ಗಮನಿಸಿ, ಮದುವೆ ಮಾಡಿಕೊಟ್ಟ. ವರ ಕುರುಡನೆಂದು ತಿಳಿದಾಗಲೇ, ಗಾಂಧಾರೀ ಪತಿವ್ರತಾ–ಪರಾಯಣೆಯಾಗುವ ವಿಚಾರದಿಂದ ತಾನೂ ಕಣ್ಣಿಗೆ ಬಟ್ಟೆಯನ್ನು ಬಿಗಿದುಕೊಂಡುಬಿಟ್ಟಳು :

ತತಃ ಸಾ ಪಟ್ಟಮಾದಾಯ ಕೃತ್ವಾ ಬಹುಗುಣಂ ತದಾ ।
ಬಬಂಧ ನೇತ್ರೇ ಸ್ವೇ ರಾಜನ್ ಪತಿವ್ರತಪರಾಯಣಾ ॥ – ಭಾರತ(ಆದಿ.೧೦೯/೧೪)

೨) ಧೃತರಾಷ್ಟ್ರ ಕುರುಡ; ಅವನ ಪತ್ನಿ ಗಾಂಧಾರೀ ಕಣ್ಣಿದ್ದೂ ಬಟ್ಟೆ ಕಟ್ಟಿಕೊಂಡು ಕುರುಡಳಂತಾಗಿಬಿಟ್ಟಳು. ಯಜಮಾನ ಕುರುಡನಾದಾಗ, ಯಜಮಾನಿ ಕಣ್ಣಿದ್ದೂ ಕುರುಡಿಯೇ ಸರಿ ಎಂಬ ತತ್ತ್ವವನ್ನೂ ಈ ಪ್ರಸಂಗ ಸೂಚಿಸುವಂತಿದೆ. ಇವರಿಬ್ಬರ ಮಕ್ಕಳಾದ ಕೌರವರು ಕಣ್ಣಿದ್ದೂ ಕುರುಡರೆನ್ನಿಸಿದ ದುರಾತ್ಮರು; ವ್ಯಾಸ, ಕೃಷ್ಣರ ಮಧ್ಯೆ ಇದ್ದೂ ಅವರನ್ನು ಅರಿಯದಾದ ಮಹಾ ಮೂರ್ಖರು – 'ಅಂತರಂಗದಲಿ ಹರಿಯ ಕಾಣದವ ಹುಟ್ಟುಕುರುಡನೊ'. ಅವರ ಮಕ್ಕಳೂ ಸಹ ಪರಮಪಾಪಿಗಳಾದವರೇ. ಅಂತೂ ವ್ಯಾಸರನ್ನು ನೋಡಿ, ಕಣ್ಣು ಮುಚ್ಚಿದ್ದರ ಫಲವಾಗಿ ಅಂಬಿಕೆಯ ಸಂತತಿಯೆಲ್ಲ ಕುರುಡಾದದ್ದು ಇತಿಹಾಸ. ವ್ಯಾಸರ ಕೃತಿಗಳನ್ನು ಓದದ ಜನರೆಲ್ಲ ಇಂತಹ ಕುರುಡುಸಂತಾನವೇ.

ಶೂರಸ್ಯ ಪುತ್ರೀ ಗುಣಶೀಲರೂಪ–
ಯುಕ್ತಾ ದತ್ತಾ ಸಖ್ಯುರೇವ ಸ್ವಪಿತ್ರಾ ।
ನಾಮ್ನಾ ಪೃಥಾ ಕುಂತಿಭೋಜಸ್ಯ ತೇನ
ಕುಂತೀ ಭಾರ್ಯಾ[೨] ಪೂರ್ವದೇಹೇಽಪಿ ಪಾಂಡೋಃ ॥ ೧೪೬ ॥

ಅ: ಪೃಥೆ ಶೂರನ ಮಗಳು; ಗುಣ, ನಡತೆ, ರೂಪಗಳಿಂದ ಕೂಡಿದ್ದವಳು; ತನ್ನ ತಂದೆಯಿಂದ ಅವನ ಮಿತ್ರನಾದ ಕುಂತಿಭೋಜನಿಗೆ ಸಾಕುಮಗಳಾಗಿ ಕೊಡಲ್ಪಟ್ಟಿದ್ದವಳು. ಅದರಿಂದಾಗಿ ಕುಂತೀ ಎನ್ನಿಸಿದವಳು. ಅವಳು ಪೂರ್ವದೇಹದಲ್ಲೂ ಪಾಂಡುರಾಜನ ಪತ್ನಿಯೇ.

---

೧. 'ಸಿದ್ಧಿರ್ಧೃತಿಶ್ಚ ಯೇ ದೇವ್ಯೌ ಪಂಚಾನಾಂ ಮಾತರೌ ಚ ತೇ ।
ಕುಂತೀ ಮಾದ್ರೀ ಚ ಜಜ್ಞಾತೇ ಮತಿಸ್ತು ಸುಬಲಾತ್ಮಜಾ' ಇತ್ಯಾದಿಪರ್ವಣಿ । – (ಜ.)

೨. ಯಾ ಪಾಂಡೋಃ ಪೂರ್ವದೇಹೇಽಪಿ = ಪರಾವಹಾಖ್ಯಮೂಲರೂಪದೇಹೇಽಪಿ ಕುಂತೀ= ಕುಂತೀಸಂಜ್ಞಾವತೀ ಭಾರ್ಯಾ । – (ವಾ.)

ವಿ: ೧) ಕುಂತಿಭೋಜ ಯದುಶ್ರೇಷ್ಠನಾದ ಶೂರನಿಗೆ ಸೋದರತ್ತೆಯ ಮಗನೂ ಆಗಿದ್ದ. ಸಂತತಿ ಇಲ್ಲದಿದ್ದ ಅವನಿಗೆ ತನ್ನ ಪುತ್ರಿ ಪೃಥೆಯನ್ನು ದತ್ತು ನೀಡಿದ. ವಸುದೇವ ಇವಳ ತಮ್ಮ. ಅದಕ್ಕೇ ಕೃಷ್ಣನಿಗೆ ಇವಳು ಸೋದರತ್ತೆ ಎನ್ನಿಸಿದಳು :

ಶೂರೋ ನಾಮ ಯದುಶ್ರೇಷ್ಠೋ ವಸುದೇವಪಿತಾऽಭವತ್ ।
ತಸ್ಯ ಕನ್ಯಾ ಪೃಥಾ ನಾಮ ರೂಪೇಣಾಪ್ರತಿಮಾ ಭುವಿ ॥
ಪಿತೃಷ್ವಸ್ರೀಯಾಯ ಸ ತಾಮನಪತ್ಯಾಯ ಭಾರತ ।
ಅಗ್ರ್ಯಮಗ್ರ್ಯೇ ಪ್ರತಿಜ್ಞಾಯ ಸ್ವಸ್ರಾಪತ್ಯಂ ಸ ಸತ್ಯವಾಕ್॥ –ಭಾರತ (೧/೧೧೦/೧,೨)

೨) ಕುಂತಿಯು ಪಾಂಡುರಾಜನಿಗೆ ಪರಾವಹ ಎಂಬ ಅವನ ಮೂಲರೂಪದಲ್ಲೂ ಅವನಿಗೆ ಪತ್ನಿ; ಆಗ ಅವಳ ಹೆಸರು ಸಿದ್ಧಿ. ಕುಂತಿ ಎಂಬುದು ಸಹ ಮೂಲರೂಪದ ನಾಮಾಂತರ ಎಂದು ವಾದಿರಾಜೀಯದಲ್ಲಿದೆ[೧].

ಕುಂತಿಗೆ ದುರ್ವಾಸರಿಂದ ಮಂತ್ರಪ್ರಾಪ್ತಿ

ಕೂರ್ಮಶ್ಚ ನಾಮ್ನಾ ಮರುದೇವ ಕುಂತಿ-
ಭೋಜೋऽಥೈನಾಂ ವರ್ಧಯಾಮಾಸ ಸಮ್ಯಕ್।
ತತ್ರಾಗಮಚ್ಛಂಕರಾಂಶೋऽತಿಕೋಪೋ
ದೂರ್ವಾಸಾಸ್ತಂ ಪ್ರಾಹ ಮಾಂ ವಾಸಯೇತಿ ॥ ೧೪೭ ॥

ಅ: ಕುಂತಿಭೋಜ ಕೂರ್ಮ ಎಂಬ ಮರುತ್ತಿನ ಅವತಾರ. ಅವನು ಕುಂತಿಯನ್ನು ಚೆನ್ನಾಗಿ ಬೆಳೆಸಿದ್ದ. ಅವನಲ್ಲಿಗೆ ಶಿವನ ಅವತಾರರೂ, ತುಂಬಾ ಕೋಪಿಷ್ಠರೂ ಆದ ದುರ್ವಾಸಮುನಿ ಆಗಮಿಸಿದರು. ''ನನಗೆ ವಾಸಕ್ಕೆ ಅವಕಾಶ ಕಲ್ಪಿಸು'' ಎಂದರು.

ವಿ: ೧) ಶಿವನ ಅವತಾರರಾದ ದುರ್ವಾಸಮುನಿಗಳು ಅತಿಕೋಪಿಗಳಾಗಲು ಕ್ರೋಧಾತ್ಮಕ–ವಾದ ಅವರ ಮೂಲರೂಪವೇ ಕಾರಣ('ಕ್ರೋಧಾತ್ಮಕಃ ಪಾಲನೇ ನೈವ ಯೋಗ್ಯಃ' –೧೨/೯೭).

೨) ದುರ್ವಾಸರು ಯತಿಗಳು ಎಂಬ ವಿಚಾರ ಮುಂದೆ ಬಂದಿದೆ(೧೭/೨೩೯). ಅವರು ಆಗಮಿಸಿದ್ದು ಚಾತುರ್ಮಾಸ್ಯದ ದೀಕ್ಷೆಗೆ ಅವಕಾಶವನ್ನು ಬಯಸಿ ಎಂದು ಜನಾರ್ದನೀಯದಲ್ಲಿದೆ.

---

೧. ಅಪಿಪದೇನಾತ್ರಾಪಿ ಕುಂತೀನಾಮವತೀತಿ ಸೂಚಯತಿ । ಸಾ ನಾಮ್ನಾ ಪೃಥಾ ಶೂರಸ್ಯ ಪುತ್ರೀ ತೇನ ಸ್ವಪಿತ್ರೈವ ಸಖ್ಯುಃ=ಕುಂತಿಭೋಜಸ್ಯ ದತ್ತಾ=ಅಪುತ್ರಸ್ಯೈಮಿಮಾಂ ಪುತ್ರೀತ್ವೇನ ಪರಿಪಾಲಯೇತಿ ದತ್ತೇತಿ ಯೋಜನಾ॥ – (ವಾ.)

೨. ಮಾಂ ಚಾತುರ್ಮಾಸ್ಯಂ ವಾಸಯ ವಾಸಂ ಕಾರಯೇತಿ ಕುಂತಿಭೋಜಂ ಪ್ರಾಹ । – (ಜ.)

ದುರ್ವಾಸರು ಹಂಸನಾಮಕಪರವಾತ್ಮನ ಪರಂಪರೆಯಲ್ಲಿ ಬಂದ ಯತಿಗಳು ಎಂಬುದು ಸಂಪ್ರದಾಯದಲ್ಲಿ [೧]ಪಠ್ಯವಾಗಿರುವ ಶ್ಲೋಕಗಳಲ್ಲೂ, ಹರಿದಾಸರ [೨]ಕೃತಿಗಳಲ್ಲೂ ಕಂಡುಬರುತ್ತವೆ.

ತಮಾಹ ರಾಜಾ ಯದಿ ಕನ್ಯಕಾಯಾಃ
ಕ್ಷಮಿಷ್ಯಸೇ ಶಕ್ತಿತಃ[೩] ಕರ್ಮ ಕರ್ತ್ಯಾಃ ।
ಸುಖಂ ವಸೇತ್ಯೋಮಿತಿ ತೇನ ಚೋಕ್ತಃ
ಶುಶ್ರೂಷಣಾಯಾದಿಶದಾಶು ಕುಂತೀಮ್ ॥ ೧೪೮ ॥

ಅ: ರಾಜ ಅವರಿಗೆ ವಿಜ್ಞಾಪಿಸಿಕೊಂಡ: ''ಕನ್ಯೆ ಕುಂತಿ ಯಥಾಶಕ್ತಿ ನಿಮಗೆ ಸೇವೆ ಸಲ್ಲಿಸುವಳು. ತಪ್ಪಿಸಗಿದಲ್ಲಿ ನೀವು ಕ್ಷಮಿಸುವುದಾದರೆ, ಅವಶ್ಯ ವಾಸ ಮಾಡಬಹುದು''. ಅವರು ''ಆಗಲಿ'' ಎಂದರು. ರಾಜ ತತ್ಕ್ಷಣವೇ ಅವರನ್ನು ಸೇವಿಸಲು ಕುಂತಿಗೆ ಅಪ್ಪಣೆ ಮಾಡಿದ.

ವಿ: ೧) ರಾಜನಿಗೆ ದುರ್ವಾಸರನ್ನು ಮೆಚ್ಚುವಂತೆ ಸೇವಿಸುವುದು ಸುಲಭಸಾಧ್ಯವಾದುದಲ್ಲ ಎಂಬ ವಿಚಾರ ತಿಳಿದಿತ್ತು. ಈ ವಿಷಯ ರಾಮಾಯಣದಲ್ಲೂ ಬಂದಿದೆ (೯/೫೧,೫೨). ಆದರೆ ಅಂತಹವರಿಗೆ ಅವಕಾಶ ಕಲ್ಪಿಸದಿರುವುದೂ ಅನರ್ಥಕ್ಕೆ ಕಾರಣ ಎಂಬುದನ್ನೂ ಅವನು ತಿಳಿದಿದ್ದ. ಅದಕ್ಕಾಗಿ ಈ ಉಪಾಯ ಮಾಡಿದ. ಕುಂತಿ ದುರ್ವಾಸರು ನೀಡಿದ ವರದಿಂದಾಗಿ ಅವರನ್ನು ಮೆಚ್ಚಿಸಲು ಸಾಧ್ಯವಾಯಿತು.

ಚಕಾರ ಕರ್ಮ ಸಾ ಪೃಥಾ ಮುನೇಃ ಸುಕೋಪನಸ್ಯ ಹಿ ।
ಯಥಾ ನ ಶಕ್ಯತೇ ಪರೈಃ ಶರೀರವಾಙ್ಮನೋನುಗಾ ॥ ೧೪೯ ॥

ಅ: ಇತರರಿಗೆ ಅಸಾಧ್ಯವೆನ್ನಿಸುವ ರೀತಿಯಲ್ಲಿ ಶರೀರ, ಮಾತು ಹಾಗೂ ಮನಸ್ಸುಗಳಲ್ಲಿ ಅನುಕೂಲೆಯಾಗಿ ಕುಂತಿ ಆ ಕಡುಕೋಪಿಯಾದ ಮುನಿಯ ಸೇವೆಯನ್ನು ಮಾಡಿದಳು.

ವಿ: ದುರ್ವಾಸರು ನೀಡಿದ್ದ ವಚನದ ದುರ್ಲಾಭ ಪಡೆಯದೆ, ಕುಂತಿ ಅತ್ಯಂತಪ್ರಾಮಾಣಿಕ–ವಾಗಿಯೇ ಅವರ ಸೇವೆ ಮಾಡಿದಳು ಎಂಬುದು ವಿಶೇಷ.

---

೧. ವಂಶಸ್ಯಾದೀನ್ ಸನಕಾದೀನುಪಾಸ್ಯೇ ದುರ್ವಾಸಸಂ ಪರತೀರ್ಥಾಖ್ಯಭಿಕ್ಷುಮ್ ।
ಸತ್ಯಪ್ರಜ್ಞಂ ಪ್ರಾಜ್ಞತೀರ್ಥಂ ಕ್ರಮಾದ್ವಂದೇऽಚ್ಯುತಪ್ರೇಕ್ಷಮಥೌ ॥

೨. 'ಸನಕಾದಿಗಳ ಶಿಷ್ಯರೆ ದುರ್ವಾಸರು' – ಶ್ರೀಪುರಂದರದಾಸರು

೩. ಶಕ್ತಿತಃ ಕರ್ಮಕರ್ತ್ಯಾಃ ಕರ್ಮ ಯದಿ ಕ್ಷಮಿಷ್ಯಸೇ ಇತಿ ಸಂಬಂಧಃ । ಕದಾಚಿತ್ಕಿಂಚಿನ್ನ್ಯೂನಂ ಚೇದಪಿ ಸೋಢವ್ಯಮಿತಿ ಭಾವಃ ॥ – (ವಾ.)

[೧]ಸ ವತ್ಸರತ್ರಯೋದಶಂ ತಯಾ ಯಥಾವದರ್ಚಿತಃ ।
ಉಪಾದಿಶತ್ ಪರಂ ಮನುಂ ಸಮಸ್ತದೇವವಶ್ಯದಮ್ ॥ ೧೫೦ ॥

ಅ: ಹದಿಮೂರು ವರ್ಷಗಳ ಕಾಲ ಅವಳಿಂದ [೨]ಯಥಾವತ್ತಾಗಿ ಸೇವಿತನಾದ ದುರ್ವಾಸಮುನಿ ಅವಳಿಗೆ ಸಕಲದೇವತೆಗಳನ್ನು ಒಲಿಸಿಕೊಳ್ಳುವ ಸಾಮರ್ಥ್ಯ ನೀಡುವಂತಹ ಉತ್ತಮಮಂತ್ರವನ್ನು ಉಪದೇಶಿಸಿದ.

ವಿ: ೧) 'ಯಥಾವತ್' ಎಂಬುದಕ್ಕೆ ಮೊದಲದಿನದಿಂದ ಆರಂಭಿಸಿ ಕೊನೆಯ ದಿನದ ವರೆಗೆ ಒಟ್ಟು ಹದಿಮೂರುವರ್ಷಗಳ ಕಾಲ ಒಂದೇ ರೀತಿಯಲ್ಲಿ ಪರಮಭಕ್ತಿಯಿಂದ ಸೇವಿಸಿದಳು ಎಂದರ್ಥ. ಇಲ್ಲಿ ಹದಿಮೂರು ವರ್ಷಗಳ ಕಾಲ ಎಂದರೆ ಹದಿಮೂರು ವರ್ಷಗಳ ಚಾತುರ್ಮಾಸ್ಯ ಕಾಲದಲ್ಲಿ ಎಂದು ತಿಳಿಯಬೇಕು.

೨) ದುರ್ವಾಸರು ಉಪದೇಶಿಸಿದ್ದು [೩]ಒಂದೇ ಮಂತ್ರ. ಮಹಾಭಾರತದಲ್ಲಿರುವುದೂ ಹಾಗೆಯೇ. ಐದು ಮಂತ್ರಗಳನ್ನು ಉಪದೇಶಿಸಿದರು ಎಂಬುದು ಪಂಪ, ಕುಮಾರವ್ಯಾಸರ ಮೊದಲಾದವರ ಕಲ್ಪನೆ ಮಾತ್ರ.

೩) **'ದುರ್ವಾಸಾ ವತ್ಸರಸ್ಯಾಂತೇ ದದೌ ಮಂತ್ರಮನುತ್ತಮಮ್'** (ಆದಿ. ೧೨೦/೭) ಎಂದು ಮಹಾಭಾರತದಲ್ಲಿದೆ. ಅದಕ್ಕೆ 'ತ್ರಯೋದಶವತ್ಸರಸ್ಯಾಂತೇ' ಎಂದು ಅರ್ಥ ಮಾಡಿಕೊಂಡಲ್ಲಿ ಯಾವ ವಿರೋಧವೂ ಇರುವುದಿಲ್ಲ.

---

೧. ''ಕಾಲಾಧ್ವನೋರತ್ಯಂತಸಂಯೋಗೇ'' ಇತಿ ವಚನಾತ್ ವತ್ಸರತ್ರಯೋದಶಮಿತಿ ದ್ವಿತೀಯಾ । ತ್ರಯೋದಶ-ವರ್ಷಪರ್ಯಂತಮರ್ಚಿತ ಇತಿ ತಾತ್ಪರ್ಯಮ್ । ಉಪಾದಿಶತ್ಪರಂ ಮನುಮಿತ್ಯೇಕವಚನೇನೈಕ ಏವ ಮನುಃ । ತೇನ ಯಸ್ಯ ಯಸ್ಯ ದೇವಸ್ಯಾಹ್ವಾನಂ ಕರೋತಿ ಸ ಸರ್ವೋಽಪಿ ಮಂತ್ರಶಕ್ತ್ಯಾ ಆಯಾತೀತಿ ಸೂಚಿತಮ್। ಸಮಸ್ತದೇವವಶ್ಯದ-ಮಿತ್ಯತ್ರ ವಶೇ ಭವತೀತಿ ವಶ್ಯಮ್ । ವಶ್ಯಮಿತಿ ಭಾವಪ್ರಧಾನೋ ನಿರ್ದೇಶಃ । ವಶೀಕರಣಶಕ್ತಿರಿತ್ಯರ್ಥಃ ॥ – (ವಾ.)

೨. ಯಥಾವತ್ ಪ್ರಥಮದಿನಮಾರಭ್ಯ ಅಂತ್ಯದಿನಪರ್ಯಂತಂ ಏಕಪ್ರಕಾರೇಣ ಅರ್ಚಿತೋ ಮುನಿಃ । – (ಜ.)

ತಮುಗ್ರಂ ಶಂಸಿತಾತ್ಮಾನಂ ಸರ್ವಯತ್ನೈರತೋಷಯತ್ ।
ದಧ್ಯಾಜ್ಯಕಾದಿಭಿರ್ನಿತ್ಯಂ ವ್ಯಂಜನೈಃ ಪ್ರತ್ಯಹಂ ಶುಭಾ ।
ಸಹಸ್ರಸಂಖ್ಯೈರ್ಯೋಗೀಂದ್ರಮುಪಾಚರದನುತ್ತಮಾ ॥ – ಕೃ.ಭಾರತ (ಆದಿ. ೧೨೦/೫,೬)

೩. ತಂ ವೈ ದ್ವಿಜಾತಿಪ್ರವರಂ ತದಾ ಶಾಪಭಯಾನ್ನೃಪ ।
ತತಸ್ತಾಮನವದ್ಯಾಂಗೀಂ ಗ್ರಾಹಯಾಮಾಸ ಸ ದ್ವಿಜಃ ॥
ಮಂತ್ರಗ್ರಾಮಂ ತದಾ ರಾಜನ್ನಥರ್ವಶಿರಸಿ ಶ್ರುತಮ್ ।
ತಂ ಪ್ರದಾಯ ತು ರಾಜೇಂದ್ರ ಕುಂತಿಭೋಜಮುವಾಚ ಹ । – ಭಾರತ (ವನ. ೩೦೫/೨೦,೨೧)

ಯಂ ಯಂ ದೇವಂ ತ್ವಮೇತೇನ ಮಂತ್ರೇಣಾವಾಹಯಿಷ್ಯಸಿ ।
ತಸ್ಯ ತಸ್ಯ ಪ್ರಸಾದೇನ ಪುತ್ರಸ್ತವ ಭವಿಷ್ಯತಿ ॥ – ಭಾರತ (೧/೧೧೦/೭)

ಕರ್ಣನಾಗಿ ಸೂರ್ಯನ ಜನನ

ಋತೌ ತು ಸಾ ಸಮಾಪ್ಲುತಾ ಪರೀಕ್ಷಣಾರ್ಥಂ ತನ್ಮನೋಃ ।
ಸಮಾಹ್ವಯದ್ದಿವಾಕರಂ ಸ ಚಾಜಗಾಮ ತತ್ಕ್ಷಣಾತ್ ॥ ೧೫೧ ॥

ಋತುಕಾಲದಲ್ಲಿ ಕುಂತಿ ಶುದ್ಧಸ್ನಾತಳಾಗಿ ಆ ಮಂತ್ರದ ಪರೀಕ್ಷೆಗೆಂದು ಸೂರ್ಯನನ್ನು ಆಹ್ವಾನಿಸಿದಳು. ಕೂಡಲೇ ಅವನು ಆಗಮಿಸಿದ.

ತತೋ ನ ಸಾ ವಿಸರ್ಜಿತುಂ[1] ಶಶಾಕ ತಂ ವಿನಾ ರತಿಮ್[2] ।
ಸುವಾಕ್ಪ್ರಯತ್ನತೋಽಪಿ[3] ತಾಮಥಾಸಸಾದ ಭಾಸ್ಕರಃ[4] ॥ ೧೫೨ ॥

ಅ: ಬಗೆಬಗೆಯಾಗಿ[5] ಪ್ರಾರ್ಥನೆ ಸಲ್ಲಿಸಿ ಪ್ರಯತ್ನಿಸಿದರೂ, ರತಿಕ್ರೀಡೆಯಿಲ್ಲದೆ ಸೂರ್ಯನನ್ನು ಹಿಂದಕ್ಕೆ ಕಳುಹಲು ಕುಂತಿಯಿಂದಾಗಲಿಲ್ಲ. ಅವಳನ್ನು ಸೂರ್ಯ ಕೂಡಿಯೆಬಿಟ್ಟ.

ವಿ: ೧) ಕುಂತಿಯ ಉದ್ದೇಶ ಮಂತ್ರವನ್ನು ಪರೀಕ್ಷಿಸುವುದಾಗಿತ್ತೇ ಹೊರತು ಸಂತತಿ ಪಡೆಯುವುದಾಗಿರಲಿಲ್ಲ. ಅವಳಿನ್ನೂ ಕನ್ಯೆಯಾದ್ದರಿಂದ ಪುತ್ರಪ್ರಾಪ್ತಿ ಉಚಿತವೂ ಆಗಿರಲಿಲ್ಲ.

---

೧ ಯೋಗಾತ್ ಕೃತ್ವಾ ದ್ವಿಧಾऽऽತ್ಮಾನಮಾಜಗಾಮ ತತಾಪ ಚ । – ಭಾರತ

೨. ಸಾ ತು ಕನ್ಯಾ ಬಹುವಿಧಂ ಬ್ರುವಂತೀ ಮಧುರಂ ವಚಃ ।
ಆನುನೇತುಂ ಸಹಸ್ರಾಂಶುಂ ನ ಶಶಾಕ ಮನಸ್ವಿನೀ ॥ - ಭಾರತೇ (೩/೩೦೭/೧೧)

ರತಿಂ ವಿನಾ ಗಚ್ಛೇತಿ ಸುವಾಗ್ಭಿಃ ಸ್ತುತಿರೂಪವಾಗ್ಭಿಃ ಯಃ ಪ್ರಯತ್ನಃ ಪ್ರಾರ್ಥನಾ ತಸ್ಮಾದಪಿ ಸೂರ್ಯಂ ವಿಸರ್ಜಯಿತುಂ ನ ಶಶಾಕ । – (ಜ.)

೩. ಅಪರೋಕ್ಷಣಾಮಾನಂದವೈಚಿತ್ರ್ಯಂ ಚ ದ್ವಿವಿಧಮ್ । ಸ್ವವಿಹಿತಸಾಧನಾನುಷ್ಠಾನಪ್ರಾಪ್ಯಂ ಸ್ವಾವಿಹಿತಾಕರಣೇನ ಪ್ರಾಪ್ಯಂ ಚೇತಿ ॥ – (ರಾ.)

೪. ಮಯಿ ರಮಸ್ವೇತಿ ವಾಕ್ ಸುವಾಕ್ ಕರಗ್ರಹಣಪಾದಗ್ರಹಣಾದಿಕಂ ಪ್ರಯತ್ನಃ । ತಾಭ್ಯಾಂ ಸುವಾಕ್ಪ್ರಯತ್ನತೋऽಪಿ ತಾಭ್ಯಾಮಂಗೀಕಾರಿತಾಂ ರತಿಂ ವಿನಾ ತಂ ವಿಸರ್ಜಯಿತುಂ ನ ಶಶಾಕೇತ್ಯನ್ವಯಃ ॥ – (ವಾ.)

ಸುವಾಕ್ಪ್ರಯತ್ನತೋಷಿತಾಮಿತಿ ಪಾಠೇ ಸುವಾಗ್ಭಿಃ ತವಾಪಯಶೋ ನ ಭವಿಷ್ಯತೀತ್ಯಾದಿವಾಕ್ಪ್ರಯತ್ನೇನ ಸಂತೋಷಂ ಪ್ರಾಪಿತಾಮಿತ್ಯರ್ಥಃ । – (ಜ.)

೫. ಏತಸ್ಮಿನ್ನಪರಾಧೇ ತ್ವಾಂ ಶಿರಸಾಹಂ ಪ್ರಸಾದಯೇ ।
ಯೋಷಿತೋ ಹಿ ಸದಾ ರಕ್ಷ್ಯಾಃ ಸ್ವಾಪರಾದ್ಧಾಪಿ ನಿತ್ಯಶಃ ॥ –ಭಾರತ (ಆದಿ. ೧೧೦/೧೨)

ಏವಮುಕ್ತ್ವಾ ಬಹುವಿಧಂ ಸಾಂತ್ವಪೂರ್ವಂ ವಿವಸ್ವತಾ ।
ಸಾ ತು ನೈಚ್ಛತ್ ವರಾರೋಹಾ ಕನ್ಯಾऽಹಮಿತಿ ಭಾರತ ॥ – ಭಾರತ (ಆದಿ. ೧೧೦/೧೫)

ಅದಕ್ಕೆಂದೇ ಅವಳು ಬಳಿಬಂದ ಭಾಸ್ಕರನನ್ನು ಪರಿಪರಿಯಾಗಿ ಪ್ರಾರ್ಥಿಸಿ, ಹಿಂದಿರುಗಿಸಲು ಪ್ರಯತ್ನಿಸಿದಳು. ಆದರೆ ಅವಳ ಪ್ರಯತ್ನ ವ್ಯರ್ಥವಾಯಿತು ಎಂದು ಭಾವ.

೨) ಕುಂತಿ ಬೇಡವೆಂದರೂ ಸೂರ್ಯನೇ ಒಳ್ಳೆಯ ಮಾತು ಮೊದಲಾದ ಪ್ರಯತ್ನದಿಂದ ಅವಳ ಮನ ಒಲಿಸಿದ ಎಂಬ ಅರ್ಥ ವಾದಿರಾಜೀಯ ಹಾಗೂ ಜನಾರ್ದನೀಯಗಳಲ್ಲಿದೆ. ಸೂರ್ಯದೇವನ ಮಾಯೆಗೊಳಗಾಗಿ ಕುಂತಿ ಸಮ್ಮತಿಸಿದಳು ಎಂದು ಅದರ ಭಾವ. ಮರಳಿ ಅವಳು ಕನ್ಯೆಯಾಗುವ ವರವನ್ನೂ ಸಹ ಸೂರ್ಯ ನೀಡಿದ ವಿವರ ಮಹಾಭಾರತದಲ್ಲಿದೆ :

'ಪ್ರಾದಾಚ್ಚ ತಸ್ಯೈ ಕನ್ಯಾತ್ವಂ ಪುನಃ ಸ ಪರಮದ್ಯುತಿಃ ।' – (ಆದಿ. ೧೧೦/೨೦)

ಸ ತತ್ರ ಜಜ್ಞಿವಾನ್ ಸ್ವಯಂ ದ್ವಿತೀಯರೂಪಕೋ[೧] ವಿಭುಃ ।
ಸವರ್ಮದಿವ್ಯಕುಂಡಲೋ[೨] ಜ್ವಲನ್ನಿವ ಸ್ವತೇಜಸಾ ॥ ೧೫೩ ॥

ಅ: ಅವಳಲ್ಲಿ ಮತ್ತೊಂದು ರೂಪದಿಂದ ಕವಚ ಹಾಗೂ ದಿವ್ಯಕುಂಡಲಗಳಿಂದ ಕೂಡಿದವನಾಗಿ ತನ್ನ ತೇಜಸ್ಸಿನಿಂದ ಪ್ರಜ್ವಲಿಸುತ್ತ ಸ್ವತಃ ಸೂರ್ಯನೇ ಅವತರಿಸಿದ.

ವಿ: 'ದ್ವಿತೀಯರೂಪಕಃ' ಎಂಬಲ್ಲಿನ 'ಕ' ಪ್ರತ್ಯಯ ಕುತ್ಸಿತಸಂಬಂಧಸೂಚಕ. ಆ ರೂಪ ಸುಗ್ರೀವರೂಪದಂತೆ ವಿಶೇಷ ಹರಿಸೇವೆ ಮಾಡುವಂತಹುದಲ್ಲ ಎಂದು ಅದರ ಭಾವ.

ಪುರಾ ಸ ವಾಲಿಮಾರಣಪ್ರಭೂತದೋಷಕಾರಣಾತ್ ।
ಸಹಸ್ರವರ್ಮನಾಮಿನಾऽಸುರೇಣ ವೇಷ್ಟಿತೋऽಜನಿ ॥ ೧೫೪ ॥

ಅ: ಹಿಂದೆ ಅವನು (ಸುಗ್ರೀವನಾಗಿದ್ದಾಗ) ವಾಲಿಯನ್ನು ಕೊಲ್ಲಿಸಿದ ಮಹಾಪಾಪದ ನಿಮಿತ್ತದಿಂದಾಗಿ ಸಹಸ್ರವರ್ಮ ಎಂಬ ಹೆಸರಿನ ಅಸುರನಿಂದ ಆವಿಷ್ಟನಾಗಿ ಜನಿಸಿದ.

ವಿ: ೧) ಹೀಗೆ ಅವತರಿಸಿದ ಸೂರ್ಯನಲ್ಲಿ ಸಹಸ್ರವರ್ಮ ಎಂಬ ಅಸುರನ ಆವೇಶವಿತ್ತು. ಅಂತಹ ಅಸುರಾವೇಶಕ್ಕೆ ಕಾರಣ ಸೂರ್ಯ ಸುಗ್ರೀವನಾಗಿದ್ದಾಗ ಅಣ್ಣನೂ, ಸ್ವೋತ್ತಮನೂ ಆಗಿದ್ದ ವಾಲಿಯನ್ನು [೩]ಕೊಲ್ಲಿಸಿದ್ದ ಪಾಪ. ಹುಟ್ಟುವಾಗಲೇ ಬಂದಿದ್ದ ಕವಚಕುಂಡಲಗಳು ಆ ಅಸುರನ

---

೧. ದ್ವಿತೀಯರೂಪಕ ಇತ್ಯತ್ರ ಕಪ್ರತ್ಯಯಃ ಕುತ್ಸಿತಸಂಬಂಧವಾಚೀ । – (ಜ.)

೨. ವರ್ಮಣಾ ದಿವ್ಯಕುಂಡಲಾಭ್ಯಾಂ ಚ ಸಹಿತಃ ಸವರ್ಮದಿವ್ಯಕುಂಡಲ ಇತ್ಯರ್ಥಃ ॥ – (ವಾ.)

೩. ಕರ್ಣೋ ऽಪ್ಯಾವಿಷ್ಟಚಿತ್ತಾತ್ಮಾ ನರಕಸ್ಯಾಂತರಾತ್ಮನಾ ।
ಅರ್ಜುನಸ್ಯ ವಧೇ ಕ್ರೂರಾಂ ಕರೋತಿ ಸ ತದಾ ಮತಿಮ್ ॥ ಇತಿ ಭಾರತೇ (ವನ. ೨೫೨/೩೫) – (ವ.)

ಆವೇಶಕ್ಕೆ ಸೂಚಕ. ಸಹಸ್ರವರ್ಮನ ಸಾವಿರಕವಚಗಳಲ್ಲಿ ೯೯ ಕವಚಗಳನ್ನು ನರನಾರಾಯಣರು ಕತ್ತರಿಸಿದ್ದ ವಿಚಾರ ಪುರಾಣಗಳಲ್ಲಿದೆ.

೨) ಸಹಸ್ರವರ್ಮಅಸುರನ ಆವೇಶ ಕರ್ಣನಲ್ಲಿ ಅವನು ತನ್ನ ಕವಚಕುಂಡಲಗಳನ್ನು ಇಂದ್ರದೇವರಿಗೆ ದಾನ ಕೊಡುವವರೆಗೂ ಇತ್ತು ಆ ವೇಳೆಗೆ ಶ್ರೀಕೃಷ್ಣನಿಂದ ಹತನಾದ ನರಕಾಸುರ ಪ್ರವೇಶಿಸಿದ್ದ.

ಯಥಾ ಗ್ರಹೈರ್ವಿದೂಷ್ಯತೇ ಮತಿರ್ನೃಣಾಂ ತಥೈವ ಹಿ ।
ಅಭೂಚ್ಚ ದೈತ್ಯದೂಷಿತಾ ಮತಿರ್ದಿವಾಕರಾತ್ಮನಃ ॥ ೧೫೫ ॥

ಅ: ಪಿಶಾಚಿಗಳಿಂದ ಮನುಷ್ಯರ ಬುದ್ಧಿ ಹೇಗೆ ಕೆಡುವುದೋ, ಹಾಗೆಯೇ ಸೂರ್ಯನ ಅವತಾರನಾಗಿದ್ದ ಕರ್ಣನ ಬುದ್ಧಿ ಆ ದೈತ್ಯನ ಆವೇಶದಿಂದ ದೂಷಿತವಾಯಿತು.

ವಿ: ಗ್ರಹಗತಿ ಮನುಷ್ಯರನ್ನು ಕಾಡಿದರೆ, ಗ್ರಹಾಧಿಪತಿ ಎನ್ನಿಸಿದ ಸೂರ್ಯನನ್ನೇ ಕಾಡಿದ ಮಹಾಗ್ರಹ ಸಹಸ್ರವರ್ಮನಾಗಿದ್ದ ಎಂಬುದು ವಿಶೇಷ.

[೧]ತಥಾऽಪಿ ರಾಮಸೇವನಾದ್ಧರೇಶ್ಚ ಸನ್ನಿಧಾನಯುಕ್ ।
[೨]ಸುದರ್ಶನೀಯಕರ್ಣತಃ ಸ ಕರ್ಣನಾಮಕೋऽಭವತ್ ॥ ೧೫೬ ॥

ಅ: ಹಾಗಿದ್ದರೂ, (ಸುಗ್ರೀವನಾಗಿದ್ದಾಗ) ಶ್ರೀರಾಮನ ಸೇವೆ ಮಾಡಿದ್ದರ ಫಲವಾಗಿ ಶ್ರೀಹರಿಯ ಸನ್ನಿಧಾನವನ್ನೂ ಹೊಂದಿದ್ದ. ತುಂಬಾ ಸುಂದರವಾದ ಕವಿಗಳಿಂದಾಗಿ ಅವನು ಕರ್ಣ ಎಂಬ ಹೆಸರನ್ನು ಹೊಂದಿದ.

ವಿ: ೧) ದಿವ್ಯಕುಂಡಲಗಳಿಂದಾಗಿ ಅವನ ಕವಿಗಳು ತುಂಬಾ ಆಕರ್ಷಕವಾಗಿ ಕಾಣುತ್ತಿದ್ದು-ದರಿಂದ ಅವನಿಗೆ ಕರ್ಣ ಎಂದೇ ಹೆಸರಾಯಿತು. ಅವನಿಗೆ ಆಕರ್ಷಕಕವಚವಿದ್ದರೂ, ಅದು ದೇಹರಕ್ಷಣೆಗಾಗಿಯೇ ಹೊರತು, ಕುಂಡಲಗಳಂತೆ ಅಲಂಕಾರಕ್ಕಾಗಿ ಅಲ್ಲ. ಆದ್ದರಿಂದ ಸದಾ ಅದು

---

೧. ತಥಾಪಿ = ಪಾಪನಿಮಿತ್ತಕಾಸುರವೇಷ್ಟಿತತ್ವೇऽಪಿ ರಾಮಸೇವನಾತ್ = ಪ್ರಾಕ್ ಕೃತರಘುರಾಮಸೇವನಾ-ದಿತ್ಯರ್ಥಃ। ಸುದರ್ಶನೀಯಕರ್ಣತಃ ಸ ಕರ್ಣನಾಮಕೋऽಭವದಿತ್ಯತ್ರ ''ಅರ್ಶ ಆದಿಭ್ಯೋ ಅಜ್'' ಇತಿ ಸೂತ್ರಾತ್ ಪ್ರಾಶಸ್ತ್ಯಾರ್ಥೇ ಮತುಬಃ ಸ್ಥಾನೇ ಅಚೋ ವಿಧಾನಾತ್ಪ್ರಶಸ್ತಕರ್ಣವಾನ್ ಕರ್ಣ ಇತ್ಯರ್ಥೋऽನುಸಂಧೇಯಃ ॥–(ವಾ.)

೨. ಸುದರ್ಶನೀಯಕರ್ಣತ ಇತಿ । ಅರ್ಶಾದಿಭ್ಯೋऽಜಿತಿ ಪ್ರಾಶಸ್ತ್ಯಾರ್ಥೇ ಮತುಬವಸ್ಥಾನೇऽಚೋ-ವಿಧಾನಾತ್ ಪ್ರಶಸ್ತಕರ್ಣವಾನ್ ಕರ್ಣ ಇತ್ಯರ್ಥೋ ಲಭ್ಯತ ಇತಿ ಭಾವಃ । –(ತಾ.)

ಇತರರಿಗೆ ಕಾಣಬೇಕಾಗಿರಲಿಲ್ಲ. ಅದರಿಂದಾಗಿ ಅವನು ಕವಚಿಯಾಗಿದ್ದರೂ, ಆ ಹೆಸರು ಅವನಿಗೆ ಬರಲಿಲ್ಲ ಎಂದು ತಿಳಿಯಬೇಕು.

೨) ಹಿಂದಿನ ಜನ್ಮದಲ್ಲಿ ಶ್ರೀರಾಮನ ಸೇವೆ ಮಾಡಿ ರಾಜ್ಯ ಪಡೆದ ಭಾಗ್ಯಶಾಲಿಯೆನ್ನಿಸಿದ್ದ ಸುಗ್ರೀವ ಇಲ್ಲಿ ಮುಂದೆ ಶ್ರೀಪರಶುರಾಮರೂಪದ ಶ್ರೀಹರಿಯನ್ನು ಸೇವಿಸಿ ಅಸ್ತ್ರ ಪಡೆಯುವುದು ವಿಶೇಷ.

ಕುಂತಿಯಿಂದ ಕರ್ಣನ ಪರಿತ್ಯಾಗ

ಸ ರತ್ನಪೂರ್ಣ[೧]ಮಂಜುಷಾಗತೋ ವಿಸರ್ಜಿತೋ [೨]ಜಲೇ ।
ಜನಾಪವಾದಭೀತಿತಸ್ತಯಾ ಯಮಸ್ವಸುರ್ದ್ರುತಮ್ ॥ ೧೫೭ ॥

ಅ: ಕರ್ಣನನ್ನು ಕುಂತಿ ಜನಾಪವಾದದ ಭಯದಿಂದ ಬೇಗನೆ ರತ್ನ ತುಂಬಿದ ಭರಣಿಯಲ್ಲಿರಿಸಿ, ಯಮುನಾನದಿಯ ಜಲವನ್ನು ಸೇರುವಂತೆ ಬಿಟ್ಟಳು.

ವಿ: ೧) ಕುಂತಿಯು ಕರ್ಣನನ್ನು ಗಂಗೆಯಲ್ಲಿ ಬಿಸಾಡಿದಳು ಎಂದು ಕನ್ನಡದ ಅನೇಕ ಕವಿಗಳು ಬರೆದಿರುವುದುಂಟು. ಆದರೆ ಅವಳು ಹಾಗೆ ಬಿಸಾಡದೆ, ಆ ಮಗುವಿನ ಸುಭದ್ರಜೀವನಕ್ಕೋಸ್ಕರ ಅಮೂಲ್ಯರತ್ನಗಳನ್ನು ಹೇರಳವಾಗಿ ಅದರಲ್ಲಿ ತುಂಬಿಸಿ, ಅದರ ಸರ್ವವಿಧವಾದ ರಕ್ಷಣೆಯನ್ನೂ ಹಾರೈಸಿ, ಸುವ್ಯವಸ್ಥಿತರೀತಿಯಲ್ಲಿ ಕಳುಹಿಸಿಕೊಟ್ಟಳು ಎಂಬುದಾಗಿ ಮಹಾಭಾರತದಲ್ಲಿದೆ (ವನಪರ್ವ ೩೦೪/೧೦–೨೧).

---

೧. ''ಷದಲೃ ವಿಶರಣಗತ್ಯವಸಾದನೇಷು'' ಇತಿ ಧಾತೋಃ ಮಂಜೂನಿ= ಮನೋಹರಾಣಿ ರತ್ನಾನಿ ದ್ರವ್ಯಾಣಿ ಸೀದಂತಿ ತಿಷ್ಠಂತಿ ಅಸ್ಯಾಮಿತಿ ವ್ಯುತ್ಪತ್ತ್ಯಾ ಮಂಜುಷೈವ ಮಂಜೂಷಾ । ಏವಂ ಚ ಸರ್ವಜ್ಞಗ್ರಂಥಕಾರಪ್ರಯೋಗೇ ನ ಕ್ಲಿಷ್ಟಕಲ್ಪನಾ । ಯಥಾಸ್ಥಿತವರ್ಣವಿನ್ಯಾಸೇನೈವಾರ್ಥಲಾಭಾತ್ । ಲೌಕಿಕಪ್ರಯೋಗ ಏವ ನಿರುಕ್ತತ್ವಾದಿನಾ ವರ್ಣವಿಕಾರಾದಿಕಂ ಬಲಾದಾನೇಯಮ್ ॥ –(ವಾ.)

ಅಶ್ವನದ್ಯಾಃ ಚರ್ಮಣ್ವತೀಂ ತತೋ ಯಮುನಾಂ ತತೋ ಗಂಗಾಮಿತಿ ಭಾವಃ । ತದುಕ್ತಂ ಆರಣ್ಯಕೇ ಪರ್ವಣಿ (೩/೩೦೮/೨೫)–

ಮಂಜೂಷಾ ತ್ವಶ್ವನದ್ಯಾಃ ಸಾ ಯಯೌ ಚರ್ಮಣ್ವತೀಂ ನದೀಮ್ ।
ಚರ್ಮಣ್ವತ್ಯಾಶ್ಚ ಯಮುನಾಂ ತತೋ ಗಂಗಾಂ ಜಗಾಮ ಹ ।
ಗಂಗಾಯಾಃ ಸೂತವಿಷಯಂ ಚಂಪಾಮನುಯಯೌ ಪುರೀಮ್ ॥ ಇತಿ । –(ಜ.)

೨. ಜಲೇ ऽಶ್ವನದ್ಯಾ ಇತಿ ಶೇಷಃ । –(ಜ.)

೨) ಅವಳು ಹಾಗೆ ಗಂಗೆಯಲ್ಲಿ ಬಿಸಾಡಿದ್ದರೆ, ಗಂಗೆ ಬಿಸಾಡಿದ ಶಂತನುವಿನ ಏಳು ಮಕ್ಕಳು ಮೃತರಾದಂತೆ ಅವನೂ ಮೃತನಾಗುತ್ತಿದ್ದನಲ್ಲವೆ?

೩) ಅಲ್ಲದೆ ಅವಳು ಕರ್ಣನನ್ನು ವ್ಯವಸ್ಥಿತರೀತಿಯಲ್ಲಿ ಕಳುಹಿಸಿಕೊಟ್ಟಿದ್ದು ಅಶ್ವನದಿಯ ಮೂಲಕವೇ ಹೊರತು ಗಂಗಾನದಿಯಲ್ಲಲ್ಲ. ಆ ಮಂಜೂಷಾ ಅಶ್ವನದಿಯಿಂದ ಚರ್ಮಣ್ವತೀ ನದಿಯನ್ನು ಸೇರಿ, ಅದರ ಮೂಲಕ ಯಮುನೆಯನ್ನೂ, ಕೊನೆಯಲ್ಲಿ ಗಂಗೆಯನ್ನೂ ಸೇರಿ, ಅಂಗದೇಶದ ಚಂಪಾಪುರಿಯ ಬಳಿ ಅಧಿರಥನ ಕೈಸೇರಿತು ಎಂಬುದು ಮಹಾಭಾರತದ ನಿರೂಪಣೆ. ಕನ್ನಡದ ಅನೇಕಕಾವ್ಯಗಳಲ್ಲಿ ಬಂದಿರುವಂತೆ ಗಂಗಾನದಿಯಲ್ಲಲ್ಲ. ಕುಂತಿಭೋಜದೇಶದಲ್ಲಿ ಗಂಗಾ ನದಿ ಹರಿಯುವುದೂ ಇಲ್ಲ. ಇಂತಹ ಕಲ್ಪನಾವಿಲಾಸಗಳು ಮಹಾಭಾರತಕ್ಕೂ, ಭೂಗೋಳಕ್ಕೂ ಅಪಚಾರವೆಸಗಿವೆ. ವ್ಯಾಸರದು ಮಾತ್ರ ಎಲ್ಲ ಕಾಲದ ಎಂತಹ ವಿಮರ್ಶೆಗೂ ಒಪ್ಪಿಗೆಯಾಗುವ ಅತ್ಯಂತಪ್ರಾಮಾಣಿಕನಿರೂಪಣೆ. ಅವರನ್ನು ಪೂರ್ಣವಾಗಿ ಅನುಸರಿಸಿದವರು ಶ್ರೀಮಧ್ವರೊಬ್ಬರೇ.

ಕರ್ಣ ಸೂತಪುತ್ರನಾದ

ನದೀಪ್ರವಾಹತೋ ಗತಂ ದದರ್ಶ[೧] ಸೂತನಂದನಃ ।
ತಮಗ್ರಹೀತ್ ಸರತ್ನಕಂ ಚಕಾರ ಪುತ್ರಕಂ ನಿಜಮ್ ॥ ೧೫೮ ॥

ಅ: ನದೀಪ್ರವಾಹದ ಮೂಲಕ ತೆರಳಿದ ಅವನನ್ನು ಸೂತಪುತ್ರನೊಬ್ಬ ಕಂಡ; ರತ್ನಸಮೇತವಾಗಿ ಅವನನ್ನು ಸ್ವೀಕರಿಸಿ, ಅವನನ್ನು ತನ್ನ ಪುತ್ರನನ್ನಾಗಿ ಮಾಡಿಕೊಂಡ.

ವಿ: ೧) ಅಧಿರಥ ಎಂಬವನು ಆ ಸೂತ. ಮೊದಲು ಆ ಭರಣಿಯನ್ನು ಕಂಡವಳು ಅವನ ಪತ್ನಿ ರಾಧೆ. ಅವರಿಬ್ಬರೂ ಯಂತ್ರದ ಸಹಾಯದಿಂದ ಆ ಭರಣಿಯನ್ನು ತೆಗೆದು ಕಂಡಾಗ ಕಣ್ಣಿಗೆ ಬಿದ್ದದ್ದು ಈ ಕರ್ಣ. ಅವನೊಂದಿಗೆ ಅಪಾರರತ್ನರಾಶಿ. ಸಂತತಿ ಇಲ್ಲದಿದ್ದ ಅವರಿಬ್ಬರೂ ರತ್ನದೊಂದಿಗೆ ಅವನನ್ನು ಸ್ವೀಕರಿಸಿ, ಅವನನ್ನು ತಮ್ಮ ಪುತ್ರರತ್ನವನ್ನಾಗಿ ಮಾಡಿಕೊಂಡರು.

೨) ಆಗ ತಾನೆ ಜನಿಸಿದ ಒಂದು ಶಿಶುವನ್ನು ನೂರಾರು ಮೈಲಿಗಳಷ್ಟು ದೂರ ಜಲಪ್ರಯಾಣದ ಮೂಲಕ ಸುರಕ್ಷಿತ ಕಳುಹಿಸುವಷ್ಟು ಉನ್ನತಮಟ್ಟದ [೨]ತಂತ್ರಜ್ಞಾನ ಕುಂತಿಗೆ ಸಿದ್ಧಿಸಿತ್ತು ಎಂಬುದು ಇಲ್ಲಿ ಗಮನಿಸಬೇಕಾದ ಮತ್ತೊಂದು ವಿಶೇಷ.

---

೧. ವಸುವರ್ಮಧರಂ ದೃಷ್ಟ್ವಾ ತಂ ಬಾಲಂ ಹೇಮಕುಂಡಲಮ್ ।
ನಾಮಾಸ್ಯ ವಸುಷೇಣೇತಿ ತತಶ್ಚಕ್ರುರ್ದ್ವಿಜಾತಯಃ ॥ – ಭಾರತ (ವನ. ೩೦೯/೧೩)

೨. ಸ ತಾಮುದ್ಧೃತ್ಯ ಮಂಜೂಷಾಮುತ್ಸಾರ್ಯ ಜಲಮಂತಿಕಾತ್ ।
ಯಂತ್ರೈರುದ್ಘಾಟಯಾಮಾಸ ಸೋಽಪಶ್ಯತ್ ತತ್ರ ಬಾಲಕಮ್ ॥ – ಭಾರತ (ವನ. ೩೦೯/೬)

ಸೂತೇನಾಧಿರಥೇನ ಲಾಲಿತತನುಸ್ತದ್ಭಾರ್ಯಯಾ ರಾಧಯಾ
ಸಂವೃದ್ಧೋ ನಿಖಿಲಾಃ ಶ್ರುತೀರಧಿಜಗೌ[೧] ಸರ್ವಾಣಿ ಶಾಸ್ತ್ರಾಣಿ ಚ ।
ಬಾಲ್ಯಾದೇವ ಮಹಾಬಲೋ ನಿಜಗುಣೈಃ ಸಂಭ್ರಾಸಮಾನೋಽವಸ-
ನ್ನಾಮ್ನಾಽಸೌ ವಸುಷೇಣತಾಮಗಮದಪ್ಯಾಸೀದ್ಯಮಾ ತದ್ವಸು ॥ ೧೫೯ ॥

ಅ: ಸೂತನಾದ ಅಧಿರಥನಿಂದ ಕರ್ಣ ಪಾಲಿತನಾದ. ಅವನ ಪತ್ನಿ ರಾಧೆ ಅವನನ್ನು ಚೆನ್ನಾಗಿ ಬೆಳೆಸಿದಳು.ಮುಂದೆ ಅವನು ಸಕಲಶ್ರುತಿಗಳನ್ನೂ, ಸಕಲಶಾಸ್ತ್ರಗಳನ್ನೂ ಅಧ್ಯಯನ ಮಾಡಿದ. ಬಾಲ್ಯದಿಂದಲೂ ತುಂಬಾ ಬಲಶಾಲಿ ಎನ್ನಿಸಿದ್ದ ಅವನು ತನ್ನ ಗುಣಗಳಿಂದ ಕಂಗೊಳಿಸುತ್ತಾ ವಾಸಿಸಿದನು. ಅವನ ಹೆಸರು ವಸುಷೇಣ ಎಂದಾಯಿತು. ಅವನೊಡನೆ ಸಂಪತ್ತೇ ಇದ್ದಿತಲ್ಲವೆ!

ವಿ: ೧) ಅಧಿರಥ, ರಾಧೆಯರು ಕರ್ಣನನ್ನು ಸ್ವಂತಮಗನಂತೆ ಪೋಷಿಸಿದರು. ಸೂತರಾದ ಅವನಿಂದ ಪೋಷಿತನಾದ ಅವನು ಸೂತಪುತ್ರನೆನ್ನಿಸಿದ. ಸೂತ ಕ್ಷತ್ರಿಯ, ವೈಶ್ಯರ ಮಧ್ಯೆ ಬರುವಂತಹವನು(೨೩/೭). ಅವನಿಗೂ ವೇದಾಧಿಕಾರ ಉಂಟು. ಅದರಿಂದಾಗಿ ಕರ್ಣ ಸಕಲಶ್ರುತಿಗಳನ್ನೂ, ಶಾಸ್ತ್ರಗಳನ್ನೂ ಅಧ್ಯಯನ ಮಾಡಿ ತಿಳಿದ.

೨) ಕರ್ಣನಿಗೆ ನಾಮಕರಣವಾದದ್ದು ವಸುಷೇಣ ಎಂದು. ವೃಷ[೩] ಎಂಬುದು ಅವನ ಮತ್ತೊಂದು ಹೆಸರು.

---

೧. ಸಂವರ್ಧಮಾನೋ ಬಲವಾನ್ ಸರ್ವಾಸ್ತ್ರೇಷೂತ್ತಮೋಽಭವತ್ ।
ವೇದಾಂಗಾನಿ ಚ ಸರ್ವಾಣಿ ಜಜಾಪ ಜಯತಾಂ ವರಃ ॥ – ಭಾರತ (ಆದಿ. ೬೭/೧೪೨)

೨. ಹಿ = ಯಸ್ಮಾತ್ಕಾರಣಾತ್ ಮಂಜೂಷಾಗತಂ ವಸು = ದ್ರವ್ಯಂ ಅಸ್ಯ ಕರ್ಣಸ್ಯ ಅಮಾ= ಸಮೀಪೇ ಸಹ ವಾ ಆಸೀತ್ । ''ಅಮಾ ಸಹ ಸಮೀಪೇ ಚೇ''ತ್ಯಮರಃ । ತಸ್ಮಾತ್ಕಾರಣಾತ್ ನಾಮ್ನಾ ವಸುಷೇಣತಾಮಗಮತ್ । ''ಷಿಞ್ ಬಂಧನ'' ಇತಿ ಧಾತೋಃ ಕರ್ಮಣಿ ಲ್ಯುಟ್ಪ್ರತ್ಯಯೇ ಕೃತೇ ''ಯುವೋರನಾಕಾ''ವಿತಿ ಯಕಾರಸ್ಯಾನಾದೇಶೇ ಚ ಕೃತೇ ''ಸಾರ್ವಧಾತುಕಾರ್ಧಧಾತುಕಯೋ'' ರಿತಿ ಗುಣೇ ಚ ಕೃತೇ ''ಏಡಃ ಪದಾಂತಾದತೀ''ತಿ ಆಕಾರಸ್ಯ ಪೂರ್ವರೂಪಾದೇಶೇ ಚ ಕೃತೇ ''ರಷಾಭ್ಯಾಂ ನೋಣಃ ಸಮಾನಪದೇ'' ಇತಿ ಣತ್ವೇ ಚ ಕೃತೇ ವಸುಷೇಣ ಇತಿ ರೂಪಸಿದ್ಧಿರ್ಭವತಿ । ನಿರುಕ್ತತ್ವಾತ್ ಸಕಾರಸ್ಯ ಷತ್ವಂ ಭವತಿ । ವಸುನಾ ಷೇಣಃ ಸಂಬದ್ಧ ಇತ್ಯರ್ಥಃ ॥ – (ವಾ.)

'ಷಿಞ್ ಬಂಧನ ಇತಿ ಧಾತುಃ' । ವಪ್ರತ್ಯಯ ಔಣಾದಿಕಃ । ಯದ್ವಾ ವಸು ಸೇನಾ ಯಸ್ಯೇತಿ । 'ವಸು ರತ್ನಂ ವಸು ದ್ರವ್ಯಂ ವಸವಾಷ್ಟೌ ಧ್ರುವಾದಯಃ' ಇತ್ಯನೇಕಾರ್ಥಪದಮಂಜರ್ಯಾಮ್ । – (ಜ.)

೩. ಪುರಾ ನಾಮ ಚ ತಸ್ಯಾಸೀದ್ ವಸುಷೇಣ ಇತಿ ಕ್ಷಿತೌ । – ಭಾರತ (೧/೬೭/೧೪೭)

ವಸುಷೇಣ ಇತಿ ಖ್ಯಾತೋ ವೃಷ ಇತ್ಯೇವ ಚ ಪ್ರಭುಃ । – ಭಾರತ (ವನ. ೩೦೯/೧೪)

ವಸುಷೇಣತಾಮಗಮದಿತ್ಯನೇನ ಯೋಗೇನ ವಸುಷೇಣಶಬ್ದವಾಚ್ಯತ್ವಮುಚ್ಯತೇ । ನಾಮ್ನಾ ವಿಶಿಷ್ಟ ಇತ್ಯನೇನ ರೂಢ್ಯಾ ವಸುಷೇಣಶಬ್ದವಾಚ್ಯತ್ವಮುಚ್ಯತ ಇತಿ ಭೇದೋ ದ್ರಷ್ಟವ್ಯಃ । – (ಸ.)

೩) ಕುಂತಿ ಇದನ್ನೆಲ್ಲ ಗೂಢಚಾರರ ಮೂಲಕ ತಿಳಿದು ಸಂತಸಪಟ್ಟ ಉಲ್ಲೇಖ ಮಹಾಭಾರತದಲ್ಲಿದೆ :

'ಚಾರೇಣ ವಿದಿತಶ್ಚಾಪೀತ್ ಪೃಥಯಾ ದಿವ್ಯವರ್ಮಭೃತ್ ।' –ಭಾರತ(೩/೩೦೯/೧೫)

ಪಾಂಡು ಮತ್ತು ವಿದುರರ ವಿವಾಹ

ಅಥ ಕುಂತೀ ದತ್ತಾ ಸಾ ಪಾಂಡೋಃ ಸೋಽಪ್ಯೇತಯಾ ಚಿರಂ ರೇಮೇ ।
ಶೂರಾಚ್ಛೂದ್ರ್ಯಾಂ ಜಾತಾಂ ವಿದುರೋಽವಹದಾರುಣೀಂ ಗುಣಾಢ್ಯಾಂ ಸಃ ॥೧೬೦॥

ಅ: ಅಂತಹ ಕುಂತಿ ಪಾಂಡುವಿಗೆ ಧಾರೆಯೆರೆಯಲ್ಪಟ್ಟಳು. ಅವನೂ ಅವಳೊಂದಿಗೆ ಬಹುಕಾಲ ರಮಿಸಿದ. ಶೂರನಿಂದ ಶೂದ್ರಸ್ತ್ರೀಯಲ್ಲಿ ಹುಟ್ಟಿದ್ದ ಗುಣವತಿಯಾದ ಆರುಣೀ ಎಂಬವಳನ್ನು ವಿದುರ ವಿವಾಹವಾದ.

ವಿ: ೧) ಪೃಥೆ ಶೂರರಾಜನ ಕ್ಷತ್ರಿಯಪತ್ನಿಯ ಮಗಳಾದರೆ, ಆರುಣೀ ಅವನ ಶೂದ್ರಪತ್ನಿಯ ಮಗಳು; ಎಂದರೆ ಇಬ್ಬರೂ ಅಕ್ಕತಂಗಿಯರು. ಅವರು ಕೈಹಿಡಿದದ್ದು ಸಹ ಅಣ್ಣತಮ್ಮಂದಿರನ್ನೇ. ಇವರಿಬ್ಬರೂ ಶೂರಪುತ್ರಿಯರಾದರೆ, ಅವರಿಬ್ಬರೂ ವ್ಯಾಸಪುತ್ರರು. ಹಾಗೆ ವಿಶೇಷ ಪ್ರಸಂಗಗಳಲ್ಲಿ ನಾಲ್ಕು ವರ್ಣದ ಸ್ತ್ರೀಯರನ್ನು ಬ್ರಾಹ್ಮಣ, ಮೂರು ವರ್ಣದ ಸ್ತ್ರೀಯರನ್ನು ಕ್ಷತ್ರಿಯರು ವಿವಾಹವಾಗುವ ಅವಕಾಶ ಆ ಕಾಲದಲ್ಲಿತ್ತು, ಹಾಗೆ ಇತರ ವರ್ಣದ ಸ್ತ್ರೀಯರನ್ನು ಮದುವೆ–ಯಾಗುವ ಮುನ್ನ ಸಜಾತೀಯ ಸ್ತ್ರೀಯನ್ನು ವರಿಸುವ ನಿಯಮವೂ ಇದ್ದಿತು ಎಂಬುದು ವಿಶೇಷ.

೨) ಕುಂತಿಯು ಪಾಂಡುವನ್ನು ಸ್ವಯಂವರದಲ್ಲಿ ಮೆಚ್ಚಿ ಮಾಲೆ ಹಾಕಿ ವರಿಸಿದಳು ಎಂದು ಮಹಾಭಾರತದಲ್ಲಿದೆ :

ಪಿತ್ರಾ ಸ್ವಯಂವರೇ ದತ್ತಾ ದುಹಿತಾ ರಾಜಸತ್ತಮ ।.....
ವ್ರೀಡಮಾನಾ ಸ್ವಜಂ ಕುಂತೀ ರಾಜ್ಞಃ ಸ್ಕಂಧೇ ಸಮಾಸಜತ್ ॥–(ಆದಿ. ೧೧೧/೩,೮)

ಶಲ್ಯ, ಮಾದ್ರಿಯರ ಜನನ

[೧]ಅಥ ಚರ್ತಾಯನನಾಮಾ ಮದ್ರೇಶಃ ಶಕ್ರತುಲ್ಯಪುತ್ರಾರ್ಥೀ ।
[೨]ಕನ್ಯಾರತ್ನಂ [೩]ಚಾಪ್ತುಂ ಚಕ್ರೇ ಬ್ರಾಹ್ಮಂ ತಪೋ ವರಂ ಚಾಪ ॥ ೧೬೧ ॥

---

೧. ಅಥಶಬ್ದೇನ ಕಥಾಂತರಾರಂಭಂ ಸೂಚಯತಿ । ಮದ್ರೇಶಃ ಋತಾಯನನಾಮಾ ಚೇತಿ ಚಶಬ್ದಸಂಬಂಧಃ ॥ – (ವಾ.)

ಅ: ಋತಾಯನ ಎಂಬ ಮದ್ರದೇಶದ ರಾಜ ಇಂದ್ರನಂತಹ ಮಗನನ್ನು ಬಯಸಿದವನಾಗಿ, ಒಬ್ಬ ಶ್ರೇಷ್ಠಪುತ್ರಿಯನ್ನೂ ಸಹ ಪಡೆಯಲೆಂದು ಬ್ರಹ್ಮದೇವರನ್ನು ಕುರಿತು ತಪಸ್ಸು ಮಾಡಿದ; ವರವನ್ನೂ ಪಡೆದುಕೊಂಡ.

ವಿ : ಕನ್ಯಾರತ್ನ ಪ್ರಾಪ್ತಿಗಾಗಿ ರಾಜನೊಬ್ಬ ತಪಸ್ಸು ಮಾಡಿದ ವಿಶೇಷ ಇಲ್ಲಿರುವುದು ಗಮನಾರ್ಹ.

ಪ್ರಹ್ಲಾದಾವರಜೋ ಯಃ ಸಹ್ಲಾದೋ ನಾಮತೋ ಹರೇರ್ಭಕ್ತಃ ।
ಸೋಽಭೂದ್ಬ್ರಹ್ಮವರಾಂತೇ ವಾಯೋರಾವೇಶಯುಕ್ ಸುತೋ ರಾಜ್ಞಃ ॥ ೧೬೨ ॥

ಅ: ಪ್ರಹ್ಲಾದನ ತಮ್ಮನಾದ ಸಹ್ಲಾದ ಎಂಬ ಹೆಸರಿನ ಭಗವದ್ಭಕ್ತನೇ ಬ್ರಹ್ಮನ ವರದಿಂದ ವಾಯುವಿನ ಆವೇಶವನ್ನು ಹೊಂದಿ, ಆ ರಾಜನಿಗೆ ಮಗನಾದ.

ಸ ಮಾರುತಾವೇಶವಶಾತ್ ಪೃಥಿವ್ಯಾಂ
ಬಲಾಧಿಕೋಽಭೂದ್ವರತಶ್ಚ[೪] ಧಾತುಃ ।
ಶಲ್ಯಶ್ಚ ನಾಮ್ನಾಽಖಿಲಶತ್ರುಶಲ್ಯೋ
ಬಭೂವ ಕನ್ಯಾಽಸ್ಯ ಚ ಮಾದ್ರಿನಾಮ್ನೀ ॥ ೧೬೩ ॥

ಅ: ಅವನು ವಾಯುವಿನ ಆವೇಶದಿಂದಾಗಿಯೂ, ಬ್ರಹ್ಮನ ವರದಿಂದಾಗಿಯೂ, ಭೂಮಿಯಲ್ಲಿ ಬಲದಲ್ಲಿ ಮಿಗಿಲೆನ್ನಿಸಿದ. ಎಲ್ಲ ಶತ್ರುಗಳ ಪಾಲಿಗೆ ಶಲ್ಯ(ಈಟಿ)ನೆನ್ನಿಸಿ, ಶಲ್ಯನೆಂದೇ ಹೆಸರಾದನು. ಋತಾಯನರಾಜನಿಗೆ ಮಾದ್ರಿ ಎಂಬ ಮಗಳೂ ಜನಿಸಿದಳು.

ವಿ: ಶಲ್ಯನಿಗೆ ಬ್ರಹ್ಮನ ವರ ಹಾಗೂ ವಾಯುವಿನ ಆವೇಶ. ಇದರಿಂದಾಗಿ ಅವನು ಮಹಾಬಲಾಢ್ಯನೆನ್ನಿಸಿದ. ದುರ್ಯೋಧನ ಪರಿಗಣಿಸಿದ ನಾಲ್ವರು ಮಹಾಬಲಾಢ್ಯರಲ್ಲಿ ಇವನು ಮೂರನೆಯವನು :

---

೨. ಕನ್ಯಾಶ್ರೇಷ್ಠಂ ಚ 'ರತ್ನಂ ಸ್ವಜಾತಿಶ್ರೇಷ್ಠೇಽಪಿ' ಇತ್ಯಮರಃ। – (ಜ.)

೩. ಆಪ್ತಂ ಬ್ರಾಹ್ಮಸಂಬಂಧಿತಪಶ್ಚಕ್ರೇ। ವರಂ ಈಪ್ಸಿತವಂ ವರಂ ಆಪ । – (ಜ.)
ಕನ್ಯಾರತ್ನಂ ಚೇಚ್ಛನ್ ಚಕ್ರೇ – (ಪಾಠಾಂತರ)

೪. ವರತಶ್ಚೇತ್ಯುಭಯಹೇತುಭ್ಯಾಂ ಬಲಾಧಿಕೋಽಭೂತ್। – (ಜ.)

ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್ ।
ಚತುರ್ಥಃ ಕೀಚಕಸ್ತೇಷಾಂ ಪಂಚಮಂ ನಾನುಶುಶ್ರುಮಃ ॥
– ಭಾರತ (ವಿರಾಟ. ೨೯/೧೫)

ಸಾ ಪಾಂಡುಭಾರ್ಯ್ಯೈವ ಚ ಪೂರ್ವಜನ್ಮ-
ನ್ಯಭೂತ್ ಪುನಶ್ಚ ಪ್ರತಿಪಾದಿತಾಽಸ್ಮೈ ।
ಶಲ್ಯಶ್ಚ ರಾಜ್ಯಂ ಪಿತೃದತ್ತಮಂಜೋ
ಜುಗೋಪ ಧರ್ಮೇಣ ಸಮಸ್ತಶಾಸ್ತ್ರವಿತ್ ॥ ೧೬೪ ॥

ಅ: ಅವಳು ಸಹ ಹಿಂದಿನ ಜನ್ಮದಲ್ಲಿ ಪಾಂಡುವಿನ ಹೆಂಡತಿಯಾಗಿದ್ದವಳೇ. ಅವಳು ಪಾಂಡುವಿಗೆ ಧಾರೆ ಎರೆಯಲ್ಪಟ್ಟಳು. ಸಮಸ್ತಶಾಸ್ತ್ರಗಳನ್ನು ಬಲ್ಲ ಶಲ್ಯನು ತಂದೆ ನೀಡಿದ ರಾಜ್ಯವನ್ನು ಧರ್ಮದಿಂದ ಪಾಲಿಸಿದ.

ವಿ: ಮಾದ್ರಿ ಸ್ವರೂಪದಲ್ಲೂ ಸಹ ಪಾಂಡುರಾಜ(ಪರಾವಹ)ನ ಪತ್ನಿ. [೧]ಧೃತಿ ಎಂಬುದು ಅವಳ ಹೆಸರು. ಅಪಾರ [೨]ಧನವನ್ನು ನೀಡಿ ಮಾದ್ರಿಯನ್ನು ಪಾಂಡುರಾಜನಿಗೆ ವಿವಾಹ ಮಾಡಿದ ವಿವರ ಮಹಾಭಾರತದಲ್ಲಿದೆ.

ಪಾಂಡುವಿನ ರಾಜ್ಯಭಾರ

ಅಥಾಂಗನಾರತ್ನಮವಾಪ್ಯ ತದ್ದ್ವಯಂ
ಪಾಂಡುಸ್ತು ಭೋಗಾನ್ ಬುಭುಜೇ ಯಥೇಷ್ಟತಃ ।
ಅಪೀಪಲದ್ಧರ್ಮಸಮಾಶ್ರಯೋ ಮಹೀಂ
ಜ್ಯೇಷ್ಠಾಪಚಾಯೀ ವಿದುರೋಕ್ತಮಾರ್ಗತಃ ॥ ೧೬೫ ॥

ಅ: ಪಾಂಡು ಆ ಇಬ್ಬರು ನಾರೀಮಣಿಯರನ್ನು ಪತ್ನಿಯರನ್ನಾಗಿ ಪಡೆದು, ಯಥೇಷ್ಟವಾಗಿ ಭೋಗಗಳನ್ನು ಅನುಭವಿಸಿದ. ಧರ್ಮವನ್ನು ಅವಲಂಬಿಸಿದವನಾಗಿ ವಿದುರ ಹೇಳಿದ ಹಾದಿಯಲ್ಲಿ ಅಣ್ಣನಿಗೆ ವಿಧೇಯನಾಗಿ ರಾಜ್ಯವನ್ನು ಪಾಲಿಸಿದ.

---

೧. 'ಸಿದ್ಧಿರ್ಧೃತಿಶ್ಚ ಯೇ ದೇವ್ಯೌ ಪಂಚಾನಾಂ ಮಾತರೌ ಚ ತೇ ।
ಕುಂತೀ ಮಾದ್ರೀ ಚ ಜಜ್ಞಾತೇ ಮತಿಸ್ತು ಸುಬಲಾತ್ಮಜಾ ' । – ಭಾರತ

೨. 'ತತ್ಪ್ರಗೃಹ್ಯ ಧನಂ ಸರ್ವಂ ಶಲ್ಯಃ ಸಂಪ್ರೀತಮಾನಸಃ ।
ದದೌ ತಾಂ ಸಮಲಂಕೃತ್ಯ ಸ್ವಸಾರಂ ಕೌರವರ್ಷಭ ॥' (ಆದಿ. ೧೧೨/೧೬) – (ಜ.)

ವಿ: ವಿದುರ ತಮ್ಮನಾದರೂ, ತುಂಬಾ ತಿಳಿದವನು ಎಂಬುದನ್ನು ಗಮನಿಸಿ, ಪಾಂಡುವು ಅವನ ಮಾರ್ಗದರ್ಶನವನ್ನು ಪಡೆಯುತ್ತಿದ್ದ ಎಂದರ್ಥ.

ಭೀಷ್ಮೋ ಹಿ ರಾಷ್ಟ್ರೇ ಧೃತರಾಷ್ಟ್ರಮೇವ
ಸಂಸ್ಥಾಪ್ಯ ಪಾಂಡುಂ ಯುವರಾಜಮೇವ ।
ಚಕ್ರೇ ತಥಾऽಪ್ಯಂಧ ಇತಿ ಸ್ಮ ರಾಜ್ಯಂ
ಚಕಾರ ನಾಸಾವಕರೋಚ್ಚ ಪಾಂಡುಃ ॥ ೧೬೬ ॥

ಅ: ಭೀಷ್ಮರಾದರೊ ರಾಜ್ಯದಲ್ಲಿ ಧೃತರಾಷ್ಟ್ರನನ್ನು ಕೂಡಿಸಿ, ಪಾಂಡುರಾಜನನ್ನು ಯುವರಾಜನನ್ನಾಗಿ ಮಾಡಿದರು. ಆದರೆ ಧೃತರಾಷ್ಟ್ರ ತಾನು ಕುರುಡನೆಂಬ ಕಾರಣದಿಂದ ರಾಜ್ಯಭಾರವನ್ನು ಮಾಡಲಿಲ್ಲ; ಪಾಂಡುವೇ [೪]ರಾಜ್ಯವಾಳಿದ.

ವಿ: ೧) ದೇವಾಪಿ ಜ್ಯೇಷ್ಠಪುತ್ರನಾಗಿದ್ದರೂ, ಚರ್ಮರೋಗವಿದ್ದದ್ದರಿಂದ ರಾಜನಾಗಲು ಸಾಧ್ಯವಾಗದೆ, ವನಕ್ಕೆ ತೆರಳಿದ ವಿಚಾರ ಹಿಂದೆ (ಶ್ಲೋ. ೬)ಬಂದಿದೆ.

೨) ಚರ್ಮರೋಗವಿದ್ದವನಿಗೇ ರಾಜ್ಯಾಧಿಕಾರವಿಲ್ಲವೆಂದಾಗ, ಅಂಧನಿಗೆ ರಾಜ್ಯಾಧಿಕಾರ–ವಿಲ್ಲವೆಂಬುದು ಕೈಮುತ್ಯಸಿದ್ಧ. ಹಿರಿಯನೆಂಬ ಕಾರಣದಿಂದ ಕುರುಡನಿಗೆ ವಾಹನಚಾಲನೆಗೆ ಅವಕಾಶ ನೀಡಲಾದೀತೆ? ತಾನಾಗಿಯೇ ರಾಜ್ಯತ್ಯಾಗ ಮಾಡಿದ್ದು ಮಾತ್ರ ಧೃತರಾಷ್ಟ್ರನ ವಿವೇಕ.

ಭೀಷ್ಮಾಂಬಿಕೇಯೋಕ್ತಿಪರಃ ಸದೈವ
ಪಾಂಡುಃ ಶಶಾಸಾವನಿಮೇಕವೀರಃ ।
ಅಥಾಂಬಿಕೇಯೋ ಬಹುಭಿಶ್ಚ ಯಜ್ಞೈ-
ರೀಜೇ ಸ ಪಾಂಡುಶ್ಚ ಮಹಾಧನೌಘೈಃ ॥ ೧೬೭ ॥

---

೩. ಅಪೀಪಲದ್ಧರ್ಮಸಮಾಶ್ರಯ ಇತ್ಯತ್ರ । ಅಪೀಪಲತ್ = ಪಾಲಯಾಮಾಸ । ಜ್ಯೇಷ್ಠಾಪಚಾಯೀ=''ಚಿಞೂ ಚಯನೇ'' ಇತಿ ಧಾತೋರ್ಜ್ಯೇಷ್ಠಮಪಚಿನೋತಿ ಧನವಂತಂ ಕರೋತೀತಿ ಜ್ಯೇಷ್ಠಾಪಚಾಯೀ । ಸ್ವೋಪಾರ್ಜಿತದ್ರವ್ಯಂ ಜ್ಯೇಷ್ಠಗೃಹ ಏವ ಪುಂಜೀಕರೋತೀತಿ ಭಾವಃ ॥ – (ವಾ.)

.... ಜ್ಯೇಷ್ಠಂ ಧೃತರಾಷ್ಟ್ರಂ ಅಪಚಾಯೀ ಅನತಿಕ್ರಮಶೀಲಃ ಧೃತರಾಷ್ಟ್ರಾಪೇಕ್ಷಯಾ ಸ್ವಸ್ಮಿನ್ ನೀಚಬುದ್ಧಿಮಾನಿತ್ಯರ್ಥಃ । – (ಜ.)

ಜ್ಯೇಷ್ಠಾದಪಚಯೋऽಪಕರ್ಷೋऽಸ್ಯಾಸ್ತೀತಿ ಜ್ಯೇಷ್ಠಾಪಚಾಯೀ ಜ್ಯೇಷ್ಠಾನುಸಾರೀತಿ ಯಾವತ್ । – (ತಾ.)

೪. ಅಂಧಃ ಕರಣಹೀನತ್ವಾನ್ನ ವೈ ರಾಜಾ ಪಿತಾ ತವ ।
ರಾಜಾ ತು ಪಾಂಡುರಭವನ್ಮಹಾತ್ಮಾ ಲೋಕವಿಶ್ರುತಃ ॥ – ಭಾರತ (ಉದ್ಯೋಗ. ೧೪೭/೩೯)

ಅ: ಭೀಷ್ಮ, ಧೃತರಾಷ್ಟ್ರರ ಮಾತಿನಂತೆ ನಡೆಯುತ್ತಾ ಮಹಾವೀರನಾದ ಪಾಂಡು ಭೂಮಿಯನ್ನು ಆಳಿದ. ಧೃತರಾಷ್ಟ್ರ ಹಾಗೂ ಪಾಂಡು ಅಪಾರಧನರಾಶಿಯಿಂದ ಕೂಡಿದ ಯಜ್ಞಗಳಿಂದ ಭಗವಂತನನ್ನು ಆರಾಧಿಸಿದರು.

ಸತ್ಯವತಿಯ ವ್ಯಾಸಾಶ್ರಮಗಮನ

ನೈಷಾ ವಿರೋಧೇ ಕುರುಪಾಂಡವಾನಾಂ
ತಿಷ್ಠೇದಿತಿ ವ್ಯಾಸ ಉದಾರಸದ್ಗುಣಃ ।
ಸ್ವಮಾತರಂ ಸ್ವಾಶ್ರಮಮೇವ ನಿನ್ಯೇ
ಸ್ನುಷೇ ಚ ತಸ್ಯಾ ಯಯತುಃ ಸ್ಮ ತಾಮನು ॥ ೧೬೮ ॥

ಅ: ಕೌರವಪಾಂಡವರ ವಿರೋಧದ ಸಮಯದಲ್ಲಿ ಇವಳು ಇಲ್ಲಿರಬಾರದು ಎಂಬ ಕಾರಣದಿಂದ ಉತ್ಕೃಷ್ಟಗುಣಪೂರ್ಣರಾದ ವ್ಯಾಸರು ತಮ್ಮ ತಾಯಿಯನ್ನು ತಮ್ಮ ಆಶ್ರಮಕ್ಕೆ ಕರೆದೊಯ್ದರು. ಅವಳ ಇಬ್ಬರು ಸೊಸೆಯರೂ ಅವಳನ್ನು ಹಿಂಬಾಲಿಸಿ ನಡೆದರು.

ವಿ: ''ಕಾಲ ಕೆಡುತ್ತಿದೆ; ಮುಂದಿನವು ಇನ್ನೂ ಕೆಟ್ಟ ದಿನಗಳು'' ಎಂಬ [೧]ವೈರಾಗ್ಯದ ಮಾತು-ಗಳನ್ನು ಉಪದೇಶಿಸಿ, ವ್ಯಾಸರು ತಾಯಿ ಸತ್ಯವತಿಯನ್ನು ತಮ್ಮ ಆಶ್ರಮಕ್ಕೆ ಕರೆದೊಯ್ದರು. ಸೊಸೆಯಂದಿರ ಸಮೇತ ವ್ಯಾಸಾಶ್ರಮಕ್ಕೆ ತೆರಳಿದ ಅವಳು ಬೇಗನೆ ದೇಹವನ್ನು ತೊರೆಯಲು ಅದು ಸಾಧನವಾಯಿತು. ಇಲ್ಲವಾದಲ್ಲಿ ಮುಂದೆ ಅವರು ಕುರುಪಾಂಡವರ ವೈರವನ್ನು ಕಂಡು ನೋಯುವ ಪ್ರಸಂಗ ಒದಗುತ್ತಿತ್ತು ಎಂದು ಭಾವ.

ಸತ್ಯವತಿಗೆ ಸದ್ಗತಿ

ಸುತೋಕ್ತಮಾರ್ಗೇಣ ವಿಚಿಂತ್ಯ ತಂ ಹರಿಂ
ಸುತಾತ್ಮನಾ ಬ್ರಹ್ಮತಯಾ ಚ ಸಾ ಯಯೌ ।
ಪರಂ ಪದಂ ವೈಷ್ಣವಮೇವ ಕೃಷ್ಣ-
ಪ್ರಸಾದತಃ ಸ್ವರ್ಯಯತುಃ ಸ್ನುಷೇ ಚ ॥ ೧೬೯ ॥

---

೧. ಅತಿಕ್ರಾಂತಸುಖಾಃ ಕಾಲಾಃ ಪರ್ಯುಪಸ್ಥಿತದಾರುಣಾಃ ।
ಶ್ವಃ ಶ್ವಃ ಪಾಪಿಷ್ಠದಿವಸಾಃ ಪೃಥಿವೀ ಗತಯೌವನಾ ॥
ಬಹುಮಾಯಾಸಮಾಕೀರ್ಣೋ ನಾನಾದೋಷಸಮಾಕುಲಃ ।
ಲುಪ್ತಧರ್ಮಕ್ರಿಯಾಚಾರೋ ಘೋರಃ ಕಾಲೋ ಭವಿಷ್ಯತಿ ॥ – ಭಾರತ(ಆದಿ.೧೨೭/೬,೭)

ಅ: ಪುತ್ರನಾದ ವ್ಯಾಸರು ಹೇಳಿದ ಮಾರ್ಗದಿಂದ ಶ್ರೀಹರಿಯನ್ನು ಪುತ್ರನೆಂದೂ, ಪರಬ್ರಹ್ಮನೆಂದೂ ಉಪಾಸನೆ ಮಾಡಿ, ವ್ಯಾಸರೂಪದ ಆ ಶ್ರೀಹರಿಯ ಅನುಗ್ರಹದಿಂದ ಸದ್ಗತಿಯನ್ನು ಹೊಂದಿದಳು. ಅವಳ ಸೊಸೆಯಂದಿರೂ ಸಹ ಉತ್ತಮಲೋಕ ಪಡೆದರು.

ವಿದುರನ ತಾಯಿಯ ಭಾಗ್ಯ

ಮಾತಾ ಚ ಸಾ ವಿದುರಸ್ಯಾಪ [೩]ಲೋಕಂ
ವೈರಿಂಚಮನ್ವೇವ ಗತಾಂಬಿಕಾಂ ಸತೀ ।
ವ್ಯಾಸಪ್ರಸಾದಾತ್ ಸುತಸದ್ಗುಣೈಶ್ಚ
ಕಾಲೇನ ಮುಕ್ತಿಂ ಚ ಜಗಾಮ ಸನ್ಮತಿಃ ॥ ೧೭೦ ॥

ಅ: ಅಂಬಿಕೆಯನ್ನು [೪]ಹಿಂಬಾಲಿಸಿ ನಡೆದ ವಿದುರನ ತಾಯಿ ಶ್ರೀವ್ಯಾಸಾನುಗ್ರಹದಿಂದಲೂ ಪುತ್ರನಾದ ವಿದುರನ ಸದ್ಗುಣಗಳಿಂದಾಗಿಯೂ ಬ್ರಹ್ಮಲೋಕಕ್ಕೆ ತೆರಳಿದಳು. ಉತ್ತಮಬುದ್ಧಿಯ ಅವಳು ಕಾಲಕ್ರಮದಲ್ಲಿ [೫]ಮುಕ್ತಿಯನ್ನೂ ಪಡೆದಳು.

---

೨. ನನ್ವೇಕಾದಶಸ್ಕಂಧೇ 'ಅತೋಽಶರೀರೋ ಭಗವಾನ್ ಪುತ್ರತಾಭಿಮತಿಶ್ಚ ಯಾ । ವಾಸುದೇವಾದಿಕಾನಾಂ ಚ ನೈವ ಮಿಥ್ಯಾಮತಿರ್ಭವೇತ್' ಇತಿ ಪುತ್ರತ್ವಬುದ್ಧೇರ್ಭ್ರಮತ್ವಮುಕ್ತಮ್ । ತತ್ ಕಥಂ ತಸ್ಯ ಮೋಕ್ಷಹೇತುತ್ವಮಿತಿ ಚೇತ್ ಪರಿಹೃತೋಽಯಮಸ್ಮಾಭಿರ್ವಿರೋಧೋದ್ಧಾರೇ –

'ಮತಿಸ್ತು ದ್ವಿವಿಧಾ ಪ್ರೋಕ್ತಾ ಶುಕ್ರಶೋಣಿತಜೋ ಹ್ಯಯಮ್ ।
ಅಮಂದಾನಂದರೂಪೋಽಸೌ ಮಯ್ಯಾವಿರ್ಭೂತ ಇತ್ಯಪಿ' ಇತಿ । – (ತಾ.)

ಸುತತ್ವನಿಮಿತ್ತಸಲ್ಲಗ್ನಾಂತಃಕರಣೇನೇತ್ಯರ್ಥಃ । – (ಸ.)

೩. .....ಲೋಕಾನ್ ಸ್ವಾನ್ ಪುನಃ ಪ್ರಾಪ್ಸ್ಯಸಿ ದುರ್ಲಭಾನ್ । – ಹರಿವಂಶ (೧/೧೮/೪೦)

೪. ಅಂಬಿಕಾಂ = ಸ್ವಸ್ವಾಮಿನೀಂ ಅನು = ಅನುಸೃತ್ಯ ಗತಾ = ವ್ಯಾಸಾಶ್ರಮಂ ಗತಾ ಸತೀ ವಿದುರಸ್ಯ ಮಾತಾ ಚ ವ್ಯಾಸಪ್ರಸಾದಾತ್ = ರಮಣಕಾಲೇ ಭಕ್ತಿಕರಣೇನ ಜಾತವ್ಯಾಸಾನುಗ್ರಹಾತ್ ಸುತಸದ್ಗುಣೈಶ್ಚ = ಸುತಸ್ಯಾಪಿ ತಸ್ಯ ಯಮರೂಪತಯಾ ಇತರಾಧಿಕೈಃ ಸದ್ಗುಣೈರುತ್ತಮಭಕ್ತ್ಯಾದಿಗುಣೈಃ ವೈರಿಂಚಂ ಲೋಕಮಾಪ । ವ್ಯಾಸಸ್ತು ಮಾತೃಭಕ್ತ್ಯಾ ಸ್ವಮಾತರಂ ಸ್ವಾಶ್ರಮಂ ನಿನ್ಯೇ । ಅಂತೇ ವೈಷ್ಣವಸ್ಥಾನಂ ಚ ದದೌ । ಅಂಬಿಕಾಂಬಾಲಿಕೇ ತು ರಮಣಸಮಯೇ ವ್ಯಾಸೇ ಅತಿಶಯಿತಭಕ್ತೇರಕರಣಾತ್ ಅನ್ಯಥಾ ಭಕ್ತಿಕರಣಾಚ್ಚ ಸ್ವರ್ಗಮೇವ ಗತೇ । ವಿದುರಮಾತಾ ತು ದಾಸೀತ್ವೇಽಪಿ ಭಕ್ತೇರಾಧಿಕ್ಯಾದ್ವೈರಿಂಚಂ ಲೋಕಮಾಪ । ಮುಕ್ತಿಕಾಲೇ ತು ಸರ್ವಾಶ್ಚ ಮುಕ್ತಿಂ ಯಾಸ್ಯಂತೀತಿ ಭಾವಃ ॥ – (ವಾ.)

೫. ನ ಚಾಂತ್ಯದೇಹಸ್ಯ ಶೂದ್ರಯೋನಿಜತ್ವೇ ಮುಕ್ತಾವಪಿ ತಥಾತ್ವಂ ಸ್ಯಾದಿತಿ ವಾಚ್ಯಮ್ । ಬಾಧಕಾಭಾವಾತ್ । ಅಂಶೇನ ಬ್ರಾಹ್ಮಣೀತ್ವೇನ ಪುನರ್ಜನನೋಪಪತ್ತಿರ್ವಾ ಕ್ರಮಯೋಗತಃ । – (ತಾ.)

ವಿ: ದಾಸಿಯಾಗಿ ಜನಿಸಿಯೂ, ಇಬ್ಬರು ರಾಣಿಯರಿಗಿಂತ ಮಿಗಿಲಾದ ಉತ್ತಮಗತಿಯನ್ನು ಪಡೆದದ್ದು ವಿದುರನ ತಾಯಿಯ ವಿಶೇಷ. ಅದಕ್ಕೆ ಅವಳು ಮಾಡಿದ ವಿಶೇಷ ವ್ಯಾಸಸೇವೆ ಕಾರಣವಾಯಿತು. ಅದಕ್ಕೆ ವಿದುರನಂತಹ ಸತ್ಪುತ್ರನ ಸಾಧನೆಯೂ ನೆರವಾಯಿತು. ಶೂದ್ರನಾದ ವಿದುರ ಕ್ಷತ್ರಿಯರಾದ ಅಣ್ಣಂದಿರಿಗಿಂತ ಮಿಗಿಲೆನ್ನಿಸಿದರೆ, ಅವನ ತಾಯಿ ದಾಸಿಯಾಗಿಯೂ ಮಹಾರಾಣಿ, ಯುವರಾಣಿ ಇಬ್ಬರನ್ನೂ ಮೀರಿಸಿದಳು.

ಅಂಬಿಕಾ, ಅಂಬಾಲಿಕೆಯರಿಗೂ ಸದ್ಗತಿ

[೧]ಅಂಬಾಲಿಕಾऽಪಿ ಕ್ರಮಯೋಗತೋऽಗಾತ್
ಪರಾಂ ಗತಿಂ ನೈವ ತಥಾऽಂಬಿಕಾ ಯಯೌ ।
ಯಥಾ ಯಥಾ ವಿಷ್ಣುಪರಶ್ಚಿದಾತ್ಮಾ
ತಥಾ ತಥಾ ಹ್ಯಸ್ಯ ಗತಿಃ ಪರತ್ರ ॥ ೧೭೧ ॥

ಅ: ಅಂಬಾಲಿಕೆಯೂ ಸಹ ಕಾಲಕ್ರಮದಲ್ಲಿ ಮೋಕ್ಷಸಾಧನೆಯಲ್ಲಿ ಮುಂದುವರೆದು ಉತ್ತಮಗತಿಯನ್ನು ಪಡೆದಳು. ಆದರೆ ಅಂಬಿಕೆ ಹಾಗೆ ಉತ್ತಮಗತಿಯನ್ನು ಪಡೆಯಲಿಲ್ಲ. ಜ್ಞಾನಸ್ವರೂಪನಾದ ಜೀವನು ಹೇಗೆ ಹೇಗೆ ಹರಿಯನ್ನು[೨]ಸೇವಿಸುವನೊ, ಹಾಗೆ ಹಾಗೆ ಅವನಿಗೆ ಪರಗತಿ ಲಭಿಸುವುದು.

---

೧. ಅಂಬಾಲಿಕಾ ತು ಕ್ರಮಯೋಗತಃ ಪರಾಂ ಗತಿಂ= ವೈಕುಂಠಾದಿಗತಿಮಗಾತ್ । ಅಂಬಿಕಾ ತು ಸ್ವಯಮಗತ್ವಾ ದಾಸೀಪ್ರೇಷಣಾಪರಾಧೇನ ತಥಾ= ಶ್ವಶ್ರೂವದನುಜಾವದ್ದಾಸೀವಚ್ಚ ವೈಕುಂಠಾದಿರೂಪಾಂ ಪರಾಂ ಗತಿಂ ನೈವಾಪ । ಕಿಂತು ಸಾರೂಪ್ಯಮೋಕ್ಷಮಾತ್ರಂ ಗತಾ ವೈಕುಂಠಾದಿತರತ್ರೈವಾಧಮಮುಕ್ತವತ್ಸಂಚರಂತೀ ಬಭೂವ । ನ ತು ತದ್ವತ್ಸಾಲೋಕ್ಯಮೋಕ್ಷೋ ಲಬ್ಧ ಇತಿ ತಥೇತಿ ವದತೋ ಗ್ರಂಥಕಾರಸ್ಯಾಭಿಪ್ರಾಯಃ । ಅನ್ಯಥಾ ಪರಾಂ ಗತಿಂ ನೈವ ಯಯಾವಿತ್ಯವಕ್ಷ್ಯತ್ । ಏತದೇವಾಭಿಪ್ರೇತ್ಯ ಪ್ರಾಗಸ್ಮಾಭಿಃ ಸರ್ವಾಶ್ಚ ಮುಕ್ತಾ ಯಾಸ್ಯಂತೀತ್ಯುಕ್ತಮ್ । ಮುಕ್ತಿಯೋಗ್ಯತಾಂ ವಿನಾ ವ್ಯಾಸಾಂಗಸಂಗಸ್ಯಾಯೋಗಾತ್ । ಯಥಾಯಥಾ ವಿಷ್ಣುಪರಶ್ಚಿದಾತ್ಮೇತ್ಯತ್ರ । ಚಿದಾತ್ಮಾ = ಜೀವಃ ॥ – (ವಾ.)

೨. ಉಪಾಸತಃ ಸತ್ಯ ಇತಿ ಸತ್ಯಸಂಕಲ್ಪತಾ ಭವೇತ್ ।
ಈಶತ್ವಮೀಶ್ವರ ಇತಿ ಗುಣಂ ತಂತಂ ಯಥಾ ಹರಿಮ್ ॥ – ಭಾ. ತಾ. (೧೧/೧೫/೧೫)

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್ ॥ – ಗೀತಾ (೪/೧೧)

''ಯಥಾ ಭಕ್ತಿವಿಶೇಷೋऽತ್ರ ದೃಶ್ಯತೇ ಪುರುಷೋತ್ತಮೇ ।
ತಥಾ ಮುಕ್ತಿವಿಶೇಷೋऽಪಿ ಜ್ಞಾನಿನಾಂ ಲಿಂಗಭೇದನೇ'' ॥ – ಅನುವ್ಯಾಖ್ಯಾನೇ (೩/೪/೬೫)

'ಸಾಧನಸ್ಯೋತ್ತಮತ್ವೇನ ಸಾಧ್ಯಂ ಚೋತ್ತಮಮಾಪ್ನುಯುಃ ।
ಬ್ರಹ್ಮಾದಯಃ ಕ್ರಮೇಣೈವ ಯಥಾऽऽನಂದಶ್ರುತೌ ಶ್ರುತಾಃ' ಇತಿ ಚ ಬ್ರಾಹ್ಮೇ ॥
– ಬ್ರಹ್ಮಸೂತ್ರಭಾಷ್ಯ (೩/೨/೨೦)

ವಿ: ೧) ಅಂಬಿಕೆ ಮೊದಲ ಬಾರಿ ವ್ಯಾಸರನ್ನು ಸೇವಿಸಿದರೂ, ಕಣ್ಣುಗಳನ್ನು ಮುಚ್ಚಿಕೊಳ್ಳುವ ತಪ್ಪನ್ನು ಮಾಡಿದಳು. ಎರಡನೆಯ ಬಾರಿಯಂತೂ ತಾನು ತೆರಳಲೇ ಇಲ್ಲ, ಬದಲಾಗಿ ತನ್ನ ದಾಸಿಯನ್ನು ಕಳುಹಿಸುವ ಮೂಲಕ ಮತ್ತೊಂದು ತಪ್ಪನ್ನೂ ಮಾಡಿದಳು. ಹೀಗೆ ವ್ಯಾಸಸೇವೆಯಲ್ಲಿನ ಅಪಚಾರ ಹಾಗೂ ಲೋಪಗಳು ಅವಳಿಗೆ ಅತ್ಯುತ್ತಮಗತಿ ಬೇಗನೆ ಆಗದಿರಲು ಕಾರಣವಾಯಿತು. ಭಯದಿಂದ ಸೇವೆ ಮಾಡಿದ್ದು ಅಂಬಾಲಿಕೆಯ ತಪ್ಪಾದರೆ, ಯಾವ ತಪ್ಪೂ ಮಾಡದ್ದು ದಾಸಿಯ ಹಿರಿಮೆಯಾಯಿತು. ಹೀಗೆ ಸಾಧನೆಯಲ್ಲಿನ ವ್ಯತ್ಯಾಸ ಸಿದ್ಧಿಯ ವ್ಯತ್ಯಾಸಕ್ಕೂ ಕಾರಣ ಎಂಬುದು ಇಲ್ಲಿಯ ತತ್ತ್ವ.

೨) ವ್ಯಾಸರ ಅಂಗಸಂಗಕ್ಕೆ ಪಾತ್ರಳಾದ ಅಂಬಿಕೆ ಸದ್ಗತಿಗೆ ಹೋಗಿದ್ದು ನಿಶ್ಚಿತ; ಆದರೆ ಅವಳ ದಾಸಿಗೆ ದೊರೆತಂತಹ ಉತ್ತಮಲೋಕ ಅವಳಿಗೆ ದೊರೆಯಲಿಲ್ಲ. ಇದು ಮುಕ್ತಿಯಲ್ಲಿ ಆನಂದತಾರತಮ್ಯಕ್ಕೆ ಸಾಧಕವಾದ ಪ್ರಮೇಯವಿಶೇಷ.

ಪಾಂಡುವಿನ ಬದರೀವಾಸ

ಪಾಂಡುಸ್ತತೋ ರಾಜ್ಯಭರಂ ನಿಧಾಯ
ಜ್ಯೇಷ್ಠೇऽನುಜೇ ಚೈವ ವನಂ ಜಗಾಮ ।
ಪತ್ನೀದ್ವಯೇನಾನುಗತೋ ಬದರ್ಯಾ-
ಮುವಾಸ ನಾರಾಯಣಪಾಲಿತಾಯಾಮ್ ॥ ೧೭೨ ॥

ಅ: ಬಳಿಕ ಒಮ್ಮೆ ಪಾಂಡು ರಾಜ್ಯದ ಹೊಣೆಯನ್ನು ಅಣ್ಣ ಧೃತರಾಷ್ಟ್ರನಿಗೂ, ತಮ್ಮ ವಿದುರನಿಗೂ ಒಪ್ಪಿಸಿ, ವನಕ್ಕೆ ತೆರಳಿದ; ಇಬ್ಬರು ಪತ್ನಿಯರೂ ಅವನನ್ನು ಹಿಂಬಾಲಿಸಿದರು. ಅವನು ನಾರಾಯಣನಿಂದ ರಕ್ಷಿತವಾದ ಬದರಿಯಲ್ಲಿ ನೆಲೆಸಿದ.

ಗೃಹಾಶ್ರಮೇಣೈವ ವನೇ ನಿವಾಸಂ
ಕುರ್ವನ್ ಸ ಭೋಗಾನ್ ಬುಭುಜೇ ತಪಶ್ಚ ।
ಚಕ್ರೇ ಮುನೀಂದ್ರೈಃ ಸಹಿತೋ ಜಗತ್ಪತಿಂ
ರಮಾಪತಿಂ ಭಕ್ತಿಯುತೋऽಭಿಪೂಜಯನ್ ॥ ೧೭೩ ॥

ಅ: ಗೃಹಸ್ಥಾಶ್ರಮದಿಂದಲೇ ವನದಲ್ಲಿ ವಾಸಿಸುತ್ತಾ ಭೋಗಗಳನ್ನು ಅನುಭವಿಸಿದ; ಮುನಿಶ್ರೇಷ್ಠರೊಂದಿಗೆ ಒಡಗೂಡಿ ಜಗತ್ಪತಿಯಾದ ರಮಾಪತಿಯಾದ ಶ್ರೀಹರಿಯನ್ನು ಭಕ್ತಿಯಿಂದ ವಿಶೇಷವಾಗಿ ಆರಾಧಿಸುತ್ತಾ ತಪಸ್ಸನ್ನೂ ಮಾಡಿದ.

ಪಾಂಡುವಿಗೆ ಶಾಪಪ್ರಾಪ್ತಿ

ಸ ಕಾಮತೋ ಹರಿಣತ್ವಂ ಪ್ರಪನ್ನಂ
ದೈವಾದೃಷಿಂ ಗ್ರಾಮ್ಯಕರ್ಮಾನುಷಕ್ತಮ್ ।
ವಿದ್ಧ್ವಾ ಶಾಪಂ ಪ್ರಾಪ ತಸ್ಮಾತ್ ಸ್ತ್ರಿಯಾಯು[೧]-
ಷ್ಮರಿಷ್ಯಸೀತ್ಯೇವ ಬಭೂವ ಚಾರ್ತಃ ॥ ೧೭೪ ॥

ಅ: ದೈವವಶಾತ್ ಆವನು ಸ್ವೇಚ್ಛೆಯಿಂದ ಜಿಂಕೆಯ ರೂಪ ಹೊಂದಿ ರತಿಕ್ರೀಡೆಯಲ್ಲಿ ತೊಡಗಿದ್ದ ಒಬ್ಬ ಮುನಿಯನ್ನು ಬಾಣದಿಂದ ಹೊಡೆದು, ಅವನಿಂದ ''ಸ್ತ್ರೀಸಂಪರ್ಕ ಮಾಡಿದರೆ ಸಾಯುವಿ'' ಎಂಬ ಶಾಪಕ್ಕೆ ಗುರಿಯಾದ; ಅದರಿಂದಾಗಿ ನೊಂದ.

ವಿ: ೧) ಹೊಸದಾಗಿ ಮದುವೆಯಾಗಿದ್ದ ಕಿಂದಮ ಎಂಬ ಮುನಿ ತನ್ನ ಪತ್ನಿಯೊಂದಿಗೆ ಜಿಂಕೆ ರೂಪ ತಾಳಿ, ರತಿಕ್ರೀಡೆಯಲ್ಲಿ ತೊಡಗಿದ್ದಾಗ, ಅವರನ್ನು ನಿಜವಾದ ಜಿಂಕೆಗಳೆಂದು ತಪ್ಪಾಗಿ ತಿಳಿದು, ಪಾಂಡು ಐದು ಬಾಣಗಳಿಂದ ಹೊಡೆದ. ಸಾಯುವ ಮುನ್ನ ಆ ಮುನಿ ನಿಜರೂಪ ತಾಳಿ ''ಮೈಥುನದಲ್ಲಿದ್ದಾಗ ನನ್ನನ್ನು ಕೊಂದೆಯಾದ್ದರಿಂದ, ಮೈಥುನಕ್ಕೆ ತೊಡಗಿದರೆ ನೀನು ಸಾಯುವಿ'' ಎಂದು ಶಾಪ[೨] ನೀಡಿದ.

೨) ಬೇಡನೊಬ್ಬ ಮೈಥುನದಲ್ಲಿದ್ದ ಕ್ರೌಂಚಪಕ್ಷಿಗಳ ಜೋಡಿಯಲ್ಲಿ ಗಂಡನ್ನು ಬಾಣದಿಂದ ಕೊಂದ ರಾಮಾಯಣದ ಪ್ರಸಂಗವನ್ನು ಇದು ಹೋಲುತ್ತದೆ. ಅಲ್ಲಿ ಬೇಡನಿಗೆ ಶಾಪ ಕೊಟ್ಟಿದ್ದು ಅದನ್ನು ಕಂಡ ವಾಲ್ಮೀಕಿಮುನಿಯಾದರೆ, ಇಲ್ಲಿ ಅನ್ಯಾಯಕ್ಕೆ ಗುರಿಯಾದ ಕಿಂದಮಮುನಿಯೇ ಆಗಿರುವುದು ವಿಶೇಷ. ಅಲ್ಲಿ ಕೊಂದದ್ದು ಗಂಡು ಕ್ರೌಂಚಪಕ್ಷಿಯನ್ನು ಮಾತ್ರ. ಆದರೆ ಇಲ್ಲಿ ಪಾಂಡುರಾಜ ಇಬ್ಬರನ್ನೂ ಕೊಂದಿದ್ದ.

೩) ಆ ಬೇಡ ಯಾವನೋ ಸಾಮಾನ್ಯನಾಗಿದ್ದು ಇಲ್ಲಿ ಪಾಂಡುರಾಜ ಪರಾವಹ ಮರುತ್ತಿನಂತಹ ಶ್ರೇಷ್ಠ ದೇವತೆಯ ಅವತಾರನಾಗಿದ್ದ. ಅದರಿಂದ ಇವನಿಗೆ ಅಂತಹ ಮಹತ್ತರವಾದ ದೋಷ ತಟ್ಟಲಿಲ್ಲ ಎಂದು ತಿಳಿಯಬಹುದು.

---

೧. ಸ್ತ್ರಿಯಾಯುಕ್ ಯುಕ್ತಃ ರತಿಸ್ಥ ಏವೇತಿ ಭಾವಃ । – (ಜ.)

೨. ಪ್ರಿಯಯಾ ಸಹ ಸಂವಾಸಂ ಪ್ರಾಪ್ಯ ಕಾಮವಿಮೋಹಿತಃ ।
ತ್ವಮಪ್ಯಸ್ಯಾಮವಸ್ಥಾಯಾಂ ಪ್ರೇತಲೋಕಂ ಗಮಿಷ್ಯಸಿ ॥ – ಭಾರತ (ಆದಿ. ೧೧೭/೩೧)

ಪಾಂಡುವಿನ ವಿರಕ್ತಜೀವನ

ನ್ಯಸಿಷ್ಣುರುಕ್ತಃ ಪೃಥಯಾ ಸ ನೇತಿ
ಪ್ರಣಾಮಪೂರ್ವಂ ನ್ಯವಸತ್ ತಥೈವ ।
ತಾಭ್ಯಾಂ ಸಮೇತಃ ಶತಶೃಂಗಪರ್ವತೇ
ನಾರಾಯಣಸ್ಯಾಶ್ರಮಮಧ್ಯಗೇ ಪುರಃ ॥ ೧೭೫ ॥

ಅ: ಅವನು ಸನ್ನ್ಯಾಸಿ ಆಗಬಯಸಿದಾಗ ಕುಂತಿ ''ಬೇಡ'' ಎಂದು ಪ್ರಣಾಮಪೂರ್ವಕ ಬೇಡಿಕೊಂಡಳು. ಅವನು ಮುಂಚಿನಂತೆಯೇ ಅವರೊಂದಿಗೆ ಕೂಡಿ, ನಾರಾಯಣಾಶ್ರಮದ ಮಧ್ಯದಲ್ಲಿನ ಮುಂಭಾಗದ ಶತಶೃಂಗಪರ್ವತದಲ್ಲಿ ನೆಲೆಸಿದ.

ವಿ: ೧) ಶಾಪದ ಕಾರಣದಿಂದಾಗಿ ತಾನಿನ್ನು ಸನ್ನ್ಯಾಸಿಯಾಗುವುದೇ ಉಚಿತವೆಂದು ಪಾಂಡು–ರಾಜ ತೀರ್ಮಾನಿಸಿದಾಗ, ಕುಂತೀ ಪರಿಪರಿಯಾಗಿ [೨]ಬೇಡಿಕೊಂಡು, ಅದನ್ನು ತಡೆದಳು ಎಂದರ್ಥ. ಅವನು ಸನ್ನ್ಯಾಸಿಯಾದಲ್ಲಿ ತಾವಿಬ್ಬರೂ ಅವನೊಂದಿಗೆ ಇರುವಂತಿಲ್ಲ. ಆದ್ದರಿಂದ ತಾವಿಬ್ಬರು ಅವನ ಜೊತೆಗಿದ್ದೇ ಸೇವೆ ಸಲ್ಲಿಸಲು ಅನುಕೂಲವಾಗುವಂತಹ ತಪಸ್ಸನ್ನು ಮಾಡಬಹುದು. ತಾವು ಅವನ ನಿಯಮಗಳಿಗೆ ಅಡ್ಡಿ ಬರದಂತೆ ಸಹಕರಿಸುವುದಾಗಿ ವಚನವಿತ್ತು ಅವನ ನಿರ್ಧಾರವನ್ನು ಬದಲಿಸಿದಳು.

---

೧. ಸಪಾದಲಕ್ಷಶೃಂಗವತ್ತ್ವಾತ್ಪೂರ್ವಾಪರವಾರಿಧಿಪರ್ಯಂತಂ ಮಹಾನ್ ಸಪಾದಲಕ್ಷಾಖ್ಯಃ ಪರ್ವತೋಽಸ್ತಿ । ತನ್ಮಧ್ಯೇ ಶತಶೃಂಗಾಖ್ಯ ಅವಾಂತರಪರ್ವತಃ । ತಸ್ಯ ಮಧ್ಯೇ ಪೂರ್ವತಃ ಪಶ್ಚಿಮತಶ್ಚ ನರನಾರಾಯಣಶೃಂಗಾಭ್ಯಾಂ ಮಧ್ಯೇ ಅಲಕನಂದಯಾ ಚಾಲಂಕೃತಃ ಬದರಿಕಾಖ್ಯನಾರಾಯಣಾಶ್ರಮಮಿಷ್ಯತಿ । ತಸ್ಯ ದಕ್ಷಿಣಭಾಗೇ ಯೋಜನಪ್ರಮಾಣಾದಧಸ್ತಾತ್ಪಾಂಡುಚಕ್ರವರ್ತಿನಾಽಧಿಷ್ಠಿತತ್ವಾತ್ಪಾಂಡಕೇಶ್ವರಾಖ್ಯಂ ಪುಣ್ಯಕ್ಷೇತ್ರಂ ಚ ವರ್ತತೇ ಇತಿ ವಸ್ತುಸ್ಥಿತಿಃ । ಏವಂ ಚ ದಕ್ಷಿಣತಃ ಬದರಿಕಾಶ್ರಮಯಾತ್ರಾಯಾಂ ಕ್ರಿಯಮಾಣಾಯಾಂ ಯಸ್ಮಾದಾಶ್ರಮಾತ್ಪುರಃ = ಪುರತಃ ಉತ್ತರತ ಇತಿ ಯಾವತ್ ನಾರಾಯಣಸ್ಯಾಶ್ರಮಃ ಮಧ್ಯಗಃ ಶತಶೃಂಗಪರ್ವತಮಧ್ಯಸ್ಥಸ್ತಿಷ್ಠತಿ । ತಸ್ಮಿಂಶ್ಚತಶೃಂಗಪರ್ವತೇ = ಶತಶೃಂಗಪ್ರದೇಶೇ ನ್ಯವಸದಿತಿ ಸಂಬಂಧಃ । ಅಗ್ನ್ಯಾಹಿತಾದಿವದ್ಬಿಶೇಷಣಸ್ಯೋಪರಿನಿಪಾತಃ । ''ಷಷ್ಠ್ಯಾ ಆಕ್ರೋಶೇ ಅಲುಕ್'' ಇತಿ ವಚನಾತ್ ನಾರಾಯಣಸ್ಯೇತಿ ಷಷ್ಠ್ಯಾ ಅಲುಕ್ಸಮಾಸಃ । ತಸ್ಮಿನ್ನಾಶ್ರಮೇ ನಾರಾಯಣಸ್ಯ ಲೋಪಾಭಾವಸೂಚನಂ ತತ್ಫಲಮ್ । ನಾರಾಯಣಾಶ್ರಮೇ ಹಿಮಕಾಲೇ ಷಣ್ಮಾಸಪರ್ಯಂತಮಾಕಾಶಾತ್ ಪತಮಾನಗಿರಿಶೃಂಗೋಪಮಶಿಲೀಭೂತಹಿಮಾನೀಭಯಾತ್ ತತ್ರತ್ಯಾಃ ಪಶವಃ ಪಕ್ಷಿಣೋ ಮೃಗಾ ಮನುಷ್ಯಾಶ್ಚ ಪಾಂಡಕಕ್ಷೇತ್ರಂ ಪ್ರತ್ಯಾಯಾಂತಿ । ಅತೋ ಭಾರ್ಯಾಭ್ಯಾಂ ಪರಿಜನೈಶ್ಚ ಸಹ ನಿರಂತರವಾಸಾಯ ಇದಮೇವ ಸ್ಥಲಂ ಯೋಗ್ಯಮಿತಿ ಋಷೀಣಾಂ ವಚನಾದತ್ರೈವ ನ್ಯವಸದಿತಿ ಭಾವಃ ॥ – (ವಾ.)

೨. ಅನ್ಯೇಽಪಿ ಹ್ಯಾಶ್ರಮಾಃ ಸಂತಿ ಯೇ ಶಕ್ಯಾ ಭರತರ್ಷಭ ।
ಆವಾಭ್ಯಾಂ ಧರ್ಮಪತ್ನೀಭ್ಯಾಂ ಸಹ ತಪ್ತುಂ ತಪೋ ಮಹತ್ ॥ ....
ಪ್ರಣಿಧಾಯೇಂದ್ರಿಯಗ್ರಾಮಂ ಭರ್ತೃಲೋಕಪರಾಯಣೇ ।
ತ್ಯಕ್ತಕಾಮಸುಖೇ ಹ್ಯಾವಾಂ ತಪ್ಸ್ಯಾವೋ ವಿಪುಲಂ ತಪಃ ॥ – ಭಾರತ (ಆದಿ. ೧೧೮/೨೭,೨೯)

೨) ನೂರಾರು ಶೃಂಗಗಳ ವಿಶಾಲಪರ್ವತ ಎಂಬ ಕಾರಣದಿಂದಾಗಿ ಶತಶೃಂಗಪರ್ವತ ಎಂಬ ಹೆಸರು ಅದಕ್ಕೆ ಯುಕ್ತವಾಗಿತ್ತು. ಪಾಂಡಕೇಶ್ವರದ ಬಳಿ ಆ ಪರ್ವತ ಇಂದೂ ಪ್ರಸಿದ್ಧ.

೩) ಪಾಂಡುರಾಜ ಹಾಗೆ ನೆಲೆಸಿದ ಸ್ಥಳ ಪಾಂಡಕೇಶ್ವರವೆಂದು ಪ್ರಸಿದ್ಧವಾದ ಪುಣ್ಯಕ್ಷೇತ್ರವಾಯಿತು.

ತಪೋ ನಿತಾಂತಂ ಸ ಚಕಾರ ತಾಭ್ಯಾಂ
ಸಮನ್ವಿತಃ ಕೃಷ್ಣಪದಾಂಬುಜಾಶ್ರಯಃ ।
ತತ್ಸಂಗಪೂತದ್ಯುಸರಿದ್ವರಾಂಭಃ-
ಸದಾವಗಾಹಾತಿಪವಿತ್ರಿತಾಂಗಃ ॥ ೧೭೬ ॥

ಅ: ಕೃಷ್ಣಪಾದಕಮಲವನ್ನು ನಂಬಿದ ಪಾಂಡು, ಅವರಿಬ್ಬರಿಂದೊಡಗೂಡಿ, ದುಷ್ಕರವಾದ ತಪಸ್ಸನ್ನು ಆಚರಿಸತೊಡಗಿದ. ಶ್ರೀಕೃಷ್ಣನ ಪಾದಸಂಗದಿಂದ ಪಾವನವಾದ ದೇವನದಿ ಗಂಗೆಯ ಉತ್ತಮಜಲದಲ್ಲಿ ಸದಾ ಅವಗಾಹನ ಸ್ನಾನವನ್ನು ಮಾಡುತ್ತಾ ದೇಹವನ್ನು ಅತ್ಯಂತ ಪವಿತ್ರವಾಗಿಸಿಕೊಂಡ.

ವಿ: ಪಾಂಡುವಿಗೆ ಬಂದ ಶಾಪ ಹೀಗೆ ಅಪೂರ್ವತಪಸ್ಸಿಗೆ ಕಾರಣವಾಗುವ ಮೂಲಕ ಒಂದು ರೀತಿಯಲ್ಲಿ ವರವೇ ಎನ್ನಿಸಿತು. ಪ್ರತಿನಿತ್ಯ ವಿಷ್ಣುಪಾದೋದ್ಭವೆಯಾದ ಗಂಗೆಯ ಸ್ನಾನ ಅವನಿಗೆ ಅಪಾರವಾದ ಪಾವಿತ್ರ್ಯವನ್ನು ತಂದುಕೊಟ್ಟಿತು. ಯುಧಿಷ್ಠಿರಭೀಮಾರ್ಜುನಾದಿಲೋಕೋತ್ತರ-ಪುತ್ರರನ್ನು ಪಡೆಯಲು ಪೂರ್ವರಂಗವಾಯಿತು. ದೇಹ ಪಾಂಡುವರ್ಣವಾಗಿದ್ದಂತೆ ಮನಸ್ಸು ಪರಿಶುದ್ಧವಾಗುವ ಮೂಲಕ ಶುಕ್ಲ ವರ್ಣದ್ದೇ ಆಯಿತು. ಹೀಗೆ ಅವನಿಗೆ ಒದಗಿದ ಶಾಪ ಒಂದು ರೀತಿಯಲ್ಲಿ ವಿಶೇಷ ಸಾಧನೆಗೆ ಕಾರಣವಾದ ವರವೇ ಆಯಿತು ಎಂಬುದು ಗಮನಾರ್ಹ — **'ಕ್ರೋಧೋಽಪಿ ದೇವಸ್ಯ ವರೇಣ ತುಲ್ಯಃ'**.

ವಿಷ್ಣುವಿನ ಬಳಿ ಬ್ರಹ್ಮಾದಿದೇವತೆಗಳು

ಏತಸ್ಮಿನ್ನೇವ ಕಾಲೇ ಕಮಲಭವಶಿವಾಗ್ರೇಸರಾಃ ಶಕ್ರಪೂರ್ವಾ
ಭೂಮ್ಯಾ ಪಾಪಾತ್ಮದೈತ್ಯೈರ್ಭೃಶವಿ ಕೃತನಿಲಯೈರಾಕ್ರಮಂ ಚಾಸಹಂತ್ಯಾ ।
ಈಯುರ್ದೇವಾಧಿದೇವಂ ಶರಣಮಜಗುರುಂ ಪೂರ್ಣಷಾಡ್ಗುಣ್ಯಮೂರ್ತಿಂ
ಕ್ಷೀರಾಬ್ಧೌ ನಾಗಭೋಗೇ ಶಯಿತಮನುಪಮಾನಂದಸಂದೋಹದೇಹಮ್ ॥೧೭೭॥

ಅ: ಇದೇ ಸಮಯದಲ್ಲಿ ಬ್ರಹ್ಮಶಿವರನ್ನು ಮುಂದಿಟ್ಟುಕೊಂಡು ಇಂದ್ರಾದಿದೇವತೆಗಳು ಭೂಮಿಯಲ್ಲಿ ನೆಲೆಸಿದ್ದ ಪಾಪಸ್ವರೂಪರಾದ ದೈತ್ಯರ ಆಕ್ರಮಣವನ್ನು ಸಹಿಸದ ಭೂದೇವಿ-ಯಿಂದ ಕೂಡಿದವರಾಗಿ, ದೇವಾಧಿದೇವನೂ, ಬ್ರಹ್ಮದೇವರಿಗೆ ಗುರುವೂ, ಪೂರ್ಣಷಡ್ಗುಣ-ದೇಹನೂ, ಕ್ಷೀರಸಾಗರದಲ್ಲಿ ಶೇಷನ ಮೈಮೇಲೆ ಒರಗಿದವನೂ, ಸಾಟಿಯಿಲ್ಲದ ಆನಂದ ಸಮೂಹದ ಮೂರ್ತಿಯೂ ಆದ ನಾರಾಯಣನನ್ನು ಶರಣುಹೊಕ್ಕರು.

ವಿ: ೧) ಭೂಮಿಯಲ್ಲಿ ಪಾಪಿಗಳಾದ ದೈತ್ಯರು ಹುಟ್ಟಿ, ಧರ್ಮನಾಶಕ್ಕೆ ತೊಡಗಿದ್ದರು. ಅದರಿಂದ ನೊಂದ ಭೂದೇವಿ ಇಂದ್ರಾದಿದೇವತೆಗಳನ್ನು ಬೇಡಿಕೊಳ್ಳಲು, ಅವರು ಅವಳನ್ನೂ ಕರೆದುಕೊಂಡು, ದೈತ್ಯರಿಗೆ ವರ ನೀಡಿದ್ದ ಬ್ರಹ್ಮರುದ್ರರನ್ನು ಮುಂದಿಟ್ಟುಕೊಂಡೇ ವಿಷ್ಣುವಿನ ಬಳಿ ತೆರಳಿ, ಪ್ರಾರ್ಥಿಸಿದರು ಎಂದರ್ಥ. ಬ್ರಹ್ಮರುದ್ರರ ವರದಿಂದ ರಕ್ಷಿತರಾಗಿದ್ದ ದೈತ್ಯರ ಹನನಕ್ಕೆ ಸರ್ವೋತ್ತಮನಾದ ವಿಷ್ಣುವೊಬ್ಬನೇ ಸಮರ್ಥನೆಂದು ಅರಿತು, ಅವನನ್ನೇ ಶರಣುಹೊಕ್ಕರು ಎಂದು ಭಾವ. ಇದು ತಾರತಮ್ಯವನ್ನೂ ಸೂಚಿಸುವ ಅಪೂರ್ವಪ್ರಸಂಗ.

೨) ಭೂಮಿಯಲ್ಲಿ ಜ್ಞಾನ ನಾಶವಾದಾಗ ಜ್ಞಾನ ನೀಡಲೆಂದು ವ್ಯಾಸಾವತಾರಕ್ಕಾಗಿ ದೇವತೆಗಳು ನಾರಾಯಣನನ್ನು ಪ್ರಾರ್ಥಿಸಿದ್ದ ವಿಷಯ ಹತ್ತನೆಯ ಅಧ್ಯಾಯದಲ್ಲಿ ಬಂದಿದೆ. ಈಗ ದುಷ್ಟದೈತ್ಯರನ್ನು ಸಂಹರಿಸುವ ಬಲಕಾರ್ಯಕ್ಕಾಗಿ ಕೃಷ್ಣರೂಪದಿಂದ ಅವತರಿಸಲು ದೇವತೆಗಳು ಪ್ರಾರ್ಥಿಸುತ್ತಿರುವರು ಎಂದು ತಿಳಿಯಬೇಕು.

೩) ಅಂದು ಜ್ಞಾನವಿಲ್ಲದೆ ಸಾಧನೆ ಅಶಕ್ಯವಾಗಿದ್ದರೆ, ಇಂದು ಜ್ಞಾನವಿದ್ದರೂ ದುಷ್ಟರ ಉಪಟಳದಿಂದಾಗಿ ಅದರ ಅನುಷ್ಠಾನ ಅಶಕ್ಯವಾಗಿತ್ತು ಎಂದು ಭಾವ.

---

೧. ಭಕ್ತಾಗ್ರೇಸರೋ ಬ್ರಹ್ಮೈವ ಪೂರ್ವಂ ಗಚ್ಛತಿ । ತದನಂತರಂ ರುದ್ರಃ ತತಃ ಪರಂ ಸರ್ವೇ ದೇವಾಃ ಶಕ್ರಂ ಪುರಸ್ಕೃತ್ಯ ಗಚ್ಛಂತೀತಿ ಕ್ರಮಸೂಚನಾಯ ಕಮಲಭವಶಿವಾಗ್ರೇಸರಾಃ ಶಕ್ರಪೂರ್ವಾ ಇತ್ಯುಕ್ತಮ್ । ಯದ್ವಾ ಕಮಲಭವಶಿವೌ ಸ್ವಸೇವಕದೈತ್ಯಾನಾಂ ಸ್ವಯಮೇವ ಘಾತಕೌ । ತಸ್ಮಾದ್ ಬುಭೂಷುಣಾ ಹರಿಂ ವಿನಾ ತೌ ಪೃಥಙ್ ನ ಸೇವ್ಯಾವಿತಿ ಸೂಚನಾಯ ತಾವೇವಾಗ್ರೇಸರೌ ಪೃಥಗುಕ್ತ್ವಾ ಪಶ್ಚಾಚ್ಛಕ್ರಾದೀನಾಂ ಗತಿಮಾಹ - ಕಮಲಭವೇತಿ । ತದುಕ್ತಂ ಭಾಗವತೇ । ''ಶಾಪಪ್ರಸಾದಯೋರೀಶಾಃ ಬ್ರಹ್ಮವಿಷ್ಣುಶಿವಾದಯಃ । ಸದ್ಯಃ ಶಾಪಪ್ರಸಾದೋಽಂಗ ಶಿವೋ ಬ್ರಹ್ಮಾನ ಚಾಚ್ಯುತಃ'' ಇತಿ ।

೨. ಭಗವತೋಽನಂತಗುಣಾನಾಮುಪಾಸಕಃ ಆಚಾರ್ಯಃ ಯತ್ರ ಯತ್ರ ಸ್ವಗ್ರಂಥೇ ಭಗವತ್ಸಂಗಸ್ತತ್ರ ತತ್ರ ತದ್ಗುಣಾನನಂತಾನಪಿ ಸ್ವಯೋಗ್ಯಾನ್ ಸಹೈವ ಸ್ಮರತಿ ಇತಿ ವಸ್ತುತತ್ತ್ವಮ್ । ತಾವತಾಮಪಿ ಗ್ರಂಥೇ ನಿಬಂಧನೇ ಗ್ರಂಥಸ್ಯಾಪ್ಯನಂತತ್ವಪ್ರಸಂಗಭಿಯಾ ಪಂಚಷಾನ್ ದಿವ್ಯಾನ್ಗುಣಾನ್ತ್ವಭಕ್ತಜನೇಷು ಸ್ವಸ್ವಭಾವಂ ದರ್ಶಯಿತುಂ ಯತ್ರ ಯತ್ರ ಶ್ಲೋಕೇ ವಿಶಿಷ್ಯ ಹರೇಃ ಪ್ರಸಂಗಸ್ತತ್ರ ತತ್ರ ನಿಯಮೇನಾನುವರ್ಣಯತೀತಿ ಸರ್ವತ್ರಾನುಸಂಧೇಯಮ್ । ಅತ ಏತಸ್ಮಿನ್ನೇವ ಕಾಲೇ ಇತಿ ಪದ್ಯೇಽಪಿ ದೇವಾದಿದೇವಮಿತ್ಯಾದೀನಿ ವಿಶೇಷಣಾನಿ ॥ – (ವಾ.)

ಊಚುಃ ಪರಂ ಪುರುಷಮೇನಮನಂತಶಕ್ತಿಂ
ಸೂಕ್ತೇನ ತೇ[೧]ಽಬ್ಜಮುಖಾ ಅಪಿ ಪೌರುಷೇಣ ।
ಸ್ತುತ್ವಾ ಧರಾಽಸುರವರಾಕ್ರಮಣಾತ್ ಪರೇಶ
ಖಿನ್ನಾ ಹ್ಯತೋ[೨]ಽತಿವಿಮುಖಾಸ್ತವ ತೇ[೩]ಽತಿಪಾಪಾಃ ॥ ೧೭೮ ॥

ಅ: ಬ್ರಹ್ಮಾದಿದೇವತೆಗಳು ಅನಂತಶಕ್ತಿಯಾದ, ಪರಮಪುರುಷನಾದ ಶ್ರೀಹರಿಯನ್ನು ಪುರುಷಸೂಕ್ತದಿಂದ ಸ್ತೋತ್ರ ಮಾಡಿ ಪ್ರಾರ್ಥಿಸಿದರು. ''ಸರ್ವೋತ್ತಮನಾದ ಸ್ವಾಮಿಯೇ! ಭೂದೇವಿಯು ಮಹಾದೈತ್ಯರ ಆಕ್ರಮಣದಿಂದಾಗಿ [೨]ನೊಂದಿರುವಳು. ಅತಿಪಾಪಿಗಳಾದ ಅವರೆಲ್ಲ ನಿನ್ನನ್ನು ಕಣ್ಣೆತ್ತಿ ನೋಡದವರು ಎಂಬುದೇ ಅವಳ ನೋವಿಗೆ ಕಾರಣ''.

[೩]ದುಃಸಂಗತಿರ್ಭವತಿ ಭಾರವದೇವ ದೇವ
ನಿತ್ಯಂ ಸತಾಮಪಿ [೪]ಹಿ ನಃ ಶೃಣು ವಾಕ್ಯಮೀಶ ।
ಪೂರ್ವಂ ಹತಾ ದಿತಿಸುತಾ ಭವತಾ ರಣೇಷು
ಹ್ಯಸ್ಮತ್ಪ್ರಿಯಾರ್ಥಮಧುನಾ ಭುವಿ ತೇ[೫]ಽಭಿಜಾತಾಃ ॥ ೧೭೯ ॥

ಅ: ''ಕ್ರೀಡಾದಿಗುಣಗಳಿಂದ ತುಂಬಿದ ಸ್ವಾಮಿಯೆ! ದುರ್ಜನರ ಸಹವಾಸವು ಸಜ್ಜನರಿಗೆ ಸದಾ ಭಾರದಂತೆಯೇ ಆಗಿರುವುದು. ಈಶನೆ! ಅದಕ್ಕೆಂದು ನಾವು ಹೇಳುವ ಮಾತನ್ನು ಆಲಿಸು. ಹಿಂದೆ ಯುದ್ಧದಲ್ಲಿ ನಮ್ಮ ಪ್ರೀತಿಗಾಗಿ ನೀನು ಕೊಂದಿದ್ದ ದೈತ್ಯರು ಈಗ ಭೂಮಿಯಲ್ಲಿ ಹುಟ್ಟಿರುವರು''.

---

೧. ಅಪಿಶಬ್ದಸ್ತೇಷಾಂ ಸರ್ವೋಚ್ಚತ್ವಂ ಗರ್ಹಯಿತುಮ್ ॥ – (ವಾ.)

೨. ಸೇಯಂ ಭಾರಪರಿಶ್ರಾಂತಾ ಪೀಡ್ಯಮಾನಾ ನರಾಧಿಪೈಃ ।
ಪೃಥಿವೀ ಸಮನುಪ್ರಾಪ್ತಾ ನೌರಿವಾಸನ್ನವಿಪ್ಲವಾ ॥ – ಹರಿವಂಶ (೧/೫೧/೧೮)

೩. ದುಃಸಂಗತಿರ್ಭಾರವತ್ ಭವತ್ಯೇವ ಪಾಷಾಣಾದಿಭಾರೋ ಯಥಾ ದುಃಖಪ್ರದೋ ಭವತಿ ತಥಾ ದುಃಖಪ್ರದೋ ಭವತ್ಯೇವೇತ್ಯರ್ಥಃ ॥ – (ಸ.)

೪. ಹಿಶಬ್ದೇನ ಶಿಷ್ಟಾಯಾಃ ಗೋರ್ದುಷ್ಪೃಷ್ಟಿಸಂಗೇನ ಕಂಠೇ ಕಾಷ್ಠಭಾರಬಂಧನಪ್ರಸಿದ್ಧಿಂ ಸೂಚಯತಿ । ಹ್ಯಸ್ಮತ್ಪ್ರಿಯಾರ್ಥಮಿತ್ಯತ್ರ । ಹಿಶಬ್ದೇನ ''ಆಪ್ತಕಾಮಸ್ಯ ಕಾ ಸ್ಪೃಹಾ'' ಇತಿ ಶ್ರುತೇರ್ದೈತ್ಯವಧೇನ ಹರೇಃ ಸ್ವಪ್ರಯೋಜನಾಭಾವಪ್ರಸಿದ್ಧಿಂ ಸೂಚಯತಿ ॥ – (ವಾ.)

ದೇವಾಸುರರ ಅದ್ಭುತ ಸಂಗ್ರಾಮ

ಆಸೀತ್ ಪುರಾ ದಿತಿಸುತೈರಮರೋತ್ತಮಾನಾಂ
ಸಂಗ್ರಾಮ ಉತ್ತಮಗಜಾಶ್ವರಥದ್ವಿಪದ್ಭಿಃ ।
[೧]ಅಕ್ಷೋಹಿಣೀಶತಮಹೌಘಮಹೌಘಮೇವ
ಸೈನ್ಯಂ ಸುರಾತ್ಮಕಮಭೂತ್ ಪರಮಾಸ್ತ್ರಯುಕ್ತಮ್
ತಸ್ಮಾನ್ಮಹೌಘಗುಣಮಾಸ ಮಹಾಸುರಾಣಾಂ
ಸೈನ್ಯಂ ಶಿಲಾಗಿರಿಮಹಾಸ್ತ್ರಧರಂ ಸುಘೋರಮ್ ॥ ೧೮೦ ॥

ಅ: ಹಿಂದೆ ದೈತ್ಯರೊಂದಿಗೆ ದೇವಶ್ರೇಷ್ಠರ ಯುದ್ಧ ನಡೆಯಿತು. ಉತ್ತಮವಾದ ಆನೆ, ಕುದುರೆ, ರಥ ಹಾಗೂ ಪದಾತಿಗಳಿಂದ ಕೂಡಿದ ದೇವಸೈನ್ಯ ನೂರುಮಹೌಘಮಹೌಘ ಅಕ್ಷೋಹಿಣಿಗಳಷ್ಟಿತ್ತು; ಶ್ರೇಷ್ಠವಾದ ಅಸ್ತ್ರಗಳಿಂದ ಕೂಡಿತ್ತು. ದೇವಸೈನ್ಯಕ್ಕಿಂತ ಮಹೌಘಪಾಲು ಅಧಿಕವಾಗಿ ಆ ಮಹಾದೈತ್ಯರ ಸೇನೆಯಿತ್ತು. ಅದು ಬಂಡೆ, ಬೆಟ್ಟ, ಮಹಾಸ್ತ್ರಗಳನ್ನು ಹೊಂದಿತ್ತು; ತುಂಬಾ ಭಯಂಕರವಾಗಿತ್ತು.

ವಿ: ೧) ಮಹೌಘಸಂಖ್ಯೆಯ ವಿವರ ಈಗಾಗಲೇ ಬಂದಿದೆ (೮/೧೭೯). ಅದು $೧೦^{೮}$ ಎಂದರೆ ಒಂದರ ಮುಂದೆ ಅರವತ್ತು ಸೊನ್ನೆಗಳನ್ನು ಹಾಕಿದಾಗ ಬರುವ ಸಂಖ್ಯೆ.

೨) ದೇವತೆಗಳ ಸಂಖ್ಯೆ ೩೩ಕೋಟಿಯಾದರೂ ಅವರ ಸೈನ್ಯದ ಸಂಖ್ಯೆ ಅಪಾರ ಎಂಬುದು ಇದರ ಭಾವ.

೩) ಇಲ್ಲಿ ದೇವಸೈನ್ಯದ ಸಂಖ್ಯೆಗಿಂತ ಅಸುರರ ಸೇನೆಯ ಸಂಖ್ಯೆಯೇ ಅಧಿಕವಾಗಿದ್ದುದು ಒಟ್ಟು ಜೀವಿಗಳ ಸಂಖ್ಯೆಯಲ್ಲಿ ಅಸುರರ ಸಂಖ್ಯೆಯೇ [೨]ಅಧಿಕ ಎಂಬುದಕ್ಕೆ ಸೂಚಕ.

---

೧. ಅಕ್ಷೌಹಿಣೀಶತೇನ ಸಹಿತಂ ಮಹೌಘಾನಾಂ ಮಹೌಘಂ ಯಸ್ಮಿಂಸ್ತತ್ತಥೋಕ್ತಮ್ । ಯದ್ವಾ ಅಕ್ಷೌಹಿಣೀ-ಶತೇನ ಸಹಿತಮೇಕಂ ಮಹೌಘಂ ಪುನರೇಕಂ ಮಹೌಘಂ ಚೇತಿ ಸಂಖ್ಯಾ ಯಸ್ಮಿಂಸ್ತತ್ತಥೋಕ್ತಮ್ ॥ – (ವಾ.)

ಅಕ್ಷೌಹಿಣೀಶತಮಹೌಘಮಹೌಘಂ ಅಕ್ಷೋಹಿಣೀನಾಂ ಶತಂ ಅಕ್ಷೋಹಿಣೀಶತಂ ಅಕ್ಷೋಹಿಣೀಶತೇನ ಗುಣಿತಂ ಚ ತತ್ ಮಹೋಘಂ ಚ ತಾದೃಶಮಹೌಘೇನ ಗುಣಿತಂ ಮಹೋಘಂ ಏತತ್ಸಂಖ್ಯಾವಿಶೇಷಪರಿಮಿತಂ ಪರಮಾಸ್ತ್ರೈಃ ..... । – (ಜ.)

ಅಕ್ಷೋಹಿಣೀತಿ । ಅಕ್ಷೋಹಿಣೀನಾಂ ಯಚ್ಛತಂ ಮಹೌಘಂ ತಸ್ಯ ಮಹೌಘಸಂಖ್ಯಾತ್ಮಕಮಿತ್ಯರ್ಥಃ । ಗಂಧರ್ವಾದಿದೇವಾನುಚರವಿವಕ್ಷಯಾ ತದ್ಗಣೀಯಾನಾಂ ತತ್ಪುತ್ರತ್ವೇನ ಜನನಾತ್ ತದ್ವಿವಕ್ಷಯಾ ವಾ ದೇವಾನಾಂ ತತ್ಸಂಖ್ಯಾವತ್ತ್ವಂ ಬೋಧ್ಯಮ್ । ನಲ್ವಃ ಕಿಷ್ಕುಚತುಃಶತಮ್ । ಕಿಷ್ಕುರ್ಹಸ್ತಃ । – (ತಾ.)

ತೇಷಾಂ[೩] ರಥಾಶ್ಚ ಬಹುನಲ್ವಪರಿಪ್ರಮಾಣಾ
ದೇವಾಸುರಪ್ರವರಕಾರ್ಮುಕಬಾಣಪೂರ್ಣಾಃ ।
ನಾನಾಂಬರಾಭರಣವೇಷವರಾಯುಧಾಢ್ಯಾಃ
ದೇವಾಸುರಾಃ ಸಸೃಪುರಾಶು ಪರಸ್ಪರಂ ತೇ ॥ ೧೮೧ ॥

ಅ: ಅವರೆಲ್ಲರ ರಥಗಳೂ ಸಹ ಬಹುನಲ್ವಪರಿಮಾಣವನ್ನು ಹೊಂದಿದ್ದವು. ದೇವಾಸುರರ ಶ್ರೇಷ್ಠವಾದ ಬಿಲ್ಲುಗಳನ್ನೂ, ಬಾಣಗಳನ್ನೂ ತುಂಬಿಕೊಂಡಿದ್ದವು. ತೆರತೆರನಾದ ವಸ್ತ್ರ ಆಭರಣಗಳಿಂದ ಕೂಡಿದ ವೇಷಗಳಿಂದಲೂ, ಶ್ರೇಷ್ಠ ಆಯುಧಗಳಿಂದಲೂ ಕೂಡಿದ ಆ ದೇವಾಸುರರು ಪರಸ್ಪರರ ಮೇಲೆ ಬೇಗನೆ ನುಗ್ಗಿದರು.

ವಿ: [೪]ನಲ್ವವೆಂದರೆ ನಾಲ್ಕುನೂರು ಮೊಳ; ಬಹುನಲ್ವವೆಂದರೆ ನಾಲ್ಕುನೂರು ಮೊಳಗಳಿ–ಗಿಂತಲೂ ದೊಡ್ಡ ಪ್ರಮಾಣದ ರಥಗಳು ಎಂದು ಭಾವ.

ದೇವತೆಗಳಿಂದ ದೈತ್ಯಸೈನ್ಯದ ನಾಶ

ಜಘ್ನುರ್ಗಿರೀಂದ್ರತಲಮುಷ್ಟಿಮಹಾಸ್ತ್ರಶಸ್ತ್ರೈ-
ಶ್ಚಕ್ರುರ್ನದೀಶ್ಚ ರುಧಿರೌಘವಹಾ ಮಹೌಘಮ್[೫] ।
ತತ್ರ ಸ್ಮ ದೇವವೃಷಭೈರಸುರೇಶಚಮ್ವಾ
ಯುದ್ಧೇ ನಿಷೂದಿತ ಉತೌಘಬಲೈಃ ಶತಾಂಶಃ ॥ ೧೮೨ ॥

ಅ: ದೊಡ್ಡ ಬೆಟ್ಟಗಳಿಂದಲೂ, ಅಂಗೈ, ಅಂಗಾಲುಗಳಿಂದಲೂ, ಮುಷ್ಟಿಗಳಿಂದಲೂ ಮಹಾಸ್ತ್ರಶಸ್ತ್ರಗಳಿಂದಲೂ ದೇವಾಸುರರು ಪರಸ್ಪರ ಹೊಡೆದಾಡಿದರು. ರಕ್ತದ ಪ್ರವಾಹದಿಂದ

---

೨. 'ಅತಸ್ತ್ವಿತರಜ್ಜ್ಯಾಯೋ ಲಿಂಗಾಚ್ಚ' – ಬ್ರಹ್ಮಸೂತ್ರ (೩/೪/೩೯)
'ತತಃ ಕನೀಯಸಾ ಏವ ದೇವಾ ಜ್ಯಾಯಸಾ ಅಸುರಾಃ' ಇತಿ ಶ್ರುತೇಶ್ಚ।
'ಅಸುರಾ ಬಹುಲಾ ಯಸ್ಮಾತ್ತಸ್ಮಾನ್ನ ಜನತಾಮಿಯಾತ್' ಇತಿ ಚ ಬ್ರಾಹ್ಮೇ ॥– ಬ್ರಹ್ಮಸೂತ್ರಭಾಷ್ಯ(೩/೪/೩೯)

೩. ತೇಷಾಂ ದೇವಾಸುರಾಣಾಂ ರಥಾಃ ಬಹುನಲ್ವಪರಿಮಾಣಾಃ । ''ಕಿಷ್ಕುರ್ಹಸ್ತೇ ವಿತಸ್ತೌ ಚ ನಲ್ವಃ ಕಿಷ್ಕುಚತುಃಶತ''ಮಿತ್ಯಭಿಧಾನಾತ್ । ಚತುಃಶತಹಸ್ತಪರಿಮಾಣಂ ನಲ್ವ ಇತ್ಯುಚ್ಯತೇ । ತಾದೃಶಬಹುನಲ್ವಾನಾಂ ಪರಿತಃ ಪ್ರಮಾಣಂ ಯೇಷಾಂ ತೇ ತಥೋಕ್ತಾಃ ॥ – (ವಾ.)

೪. 'ಕಿಷ್ಕುರ್ಹಸ್ತೋ ವಿತಸ್ತೌ ಚ ನಲ್ವಃ ಕಿಷ್ಕುಚತುಃಶತಮ್' ಇತ್ಯಭಿಧಾನಾತ್ । – (ಜ.)

೫. ಮಹಾನೋಘಃ ಪ್ರವಾಹೋ ಯಥಾ ಭವತಿ ತಥಾ ಮಹೌಘಮ್ । ರುಧಿರೌಘವಹಾಃ = ರುಧಿರಸಮೂಹೇನ ಪ್ರವಹಂತೀಃ । ಓಘಬಲಾಚ್ಛತಾಂಶ ಇತ್ಯತ್ರ । ಓಘಬಲಾತ್ = ಪುಂಜೀಭೂಯ ಬಲಾತ್ ಓಘಸಂಖ್ಯಾಕಬಲಾದ್ವಾ॥ – (ವಾ.)

ಕೂಡಿದ ಮಹೌಘಸಂಖ್ಯೆಯ ನದಿಗಳನ್ನು ಹರಿಸಿದರು. ಅಲ್ಲಿ ಮಹಾಬಲಿಷ್ಠರಾದ ದೇವಶ್ರೇಷ್ಠರುಗಳಿಂದ ಅಸುರಶ್ರೇಷ್ಠರ ಸೇನೆಯ ನೂರನೆಯ ಒಂದಂಶ ನಾಶಹೊಂದಿತು.

ಇಂದ್ರನಿಂದ ಶಂಬರಾಸುರವಧೆ

ಅಥಾತ್ಮಸೇನಾಮವಮೃದ್ಯಮಾನಾಂ
ವೀಕ್ಷ್ಯಾಸುರಃ ಶಂಬರನಾಮಧೇಯಃ ।
ಸಸಾರ ಮಾಯಾವಿದಸಹ್ಯಮಾಯೋ
ವರಾದುಮೇಶಸ್ಯ ಸುರಾನ್ ವಿಮೋಹಯನ್ ॥ ೧೮೩ ॥

ಅ: ಆಗ ತನ್ನ ಸೇನೆ ನಾಶಗೊಳ್ಳುತ್ತಿದ್ದುದನ್ನು ಕಂಡು, ಶಿವನ ವರದಿಂದಾಗಿ ಮಾಯೆಗಳನ್ನು ತಿಳಿದಿದ್ದ ಶಂಬರನಾಮಕನಾದ ಅಸುರ ಸಹಿಸಲಾಗದ ಮಾಯೆಗಳನ್ನು ಹೊಂದಿದವನಾಗಿ ದೇವತೆಗಳಿಗೆ ಬಹಳವಾಗಿ ಮೋಹ ಕವಿಸುತ್ತಾ ನುಗ್ಗಿದ.

ವಿ: ಶಂಬರಾಸುರ ಮಾಯೆಗೆ ಹೆಸರಾದ ದೈತ್ಯ. 'ಶಂಬರನ ಮಾಯೆಗಳು' ಎಂದೇ ಅವನ ಮಾಯೆಗಳು ಪ್ರಸಿದ್ಧ:

ಸ ಶಂಬರ ಇತಿ ಖ್ಯಾತಃ ಶತಮಾಯೋ ಮಹಾಸುರಃ । – ವಾ.ರಾ. (೨/೯/೧೩)

ಮಾಯಾಸಹಸ್ರೇಣ ಸುರಾ ಸಮರ್ದಿತಾ
ರಣೇ ವಿಷೇದುಃ ಶಶಿಸೂರ್ಯಮುಖ್ಯಾಃ ।
ತಾನ್ ವೀಕ್ಷ್ಯ ವಜ್ರೀ ಪರಮಾಖ್ಯವಿದ್ಯಾಂ
ಸ್ವಯಂಭುದತ್ತಾಂ ಪ್ರಯುಯೋಜ ವೈಷ್ಣವೀಮ್ ॥ ೧೮೪ ॥

ಅ: ಶಂಬರನ ಸಾವಿರಾರು ಮಾಯೆಗಳಿಂದಾಗಿ ಯುದ್ಧದಲ್ಲಿ ಸುರರು ಕಂಗೆಟ್ಟರು. ಚಂದ್ರ ಸೂರ್ಯ ಮೊದಲಾದವರು ಖಿನ್ನರಾದರು. ಅವರನ್ನು ನೋಡಿ, ವಜ್ರಪಾಣಿಯಾದ ದೇವೇಂದ್ರ ಬ್ರಹ್ಮದೇವರು ನೀಡಿದ್ದ 'ಪರಮಾ' ಎಂಬ ಹೆಸರಿನ ವೈಷ್ಣವೀಮಾಯೆಯನ್ನು ಪ್ರಯೋಗಿಸಿದ.

ವಿ: ಶಂಬರನು ಪ್ರಯೋಗಿಸಿದ ಶಿವಮಾಯೆಗೆ ಪ್ರತಿಯಾಗಿ ದೇವೇಂದ್ರ ಬ್ರಹ್ಮ ಉಪದೇಶಿಸಿದ ವಿಷ್ಣುಮಾಯೆಯನ್ನು ಪ್ರಯೋಗಿಸಿದ. ಇದು ಪಾಶುಪತಶಾಸ್ತ್ರಕ್ಕೆ ವಿರುದ್ಧವಾಗಿ ಭಾಗವತ–ಶಾಸ್ತ್ರವನ್ನು, ಭಾವಿಬ್ರಹ್ಮಶಾಸ್ತ್ರನ್ನೂ ಉಲ್ಲೇಖಿಸುವ [೧]ಶಾಸ್ತ್ರನೀತಿಯಾಗಿದೆ.

---

೧. 'ಸ್ಪೃತ್ಯನವಕಾಶದೋಷಪ್ರಸಂಗ ಇತಿ ಚೇನ್ನಾನ್ಯಸ್ಮೃತ್ಯನವಕಾಶದೋಷಪ್ರಸಂಗಾತ್' – ಬ್ರಹ್ಮಸೂತ್ರ (೨/೧/೧)

ಸಮಸ್ತಮಾಯಾಪಹಯಾ ತಯೈವ
ವರಾದ್ರಮೇಶಸ್ಯ ಸದಾऽಪ್ಯಸಹ್ಯಯಾ ।
ಮಾಯಾ ವಿನೇಶುರ್ದಿತಿಜೇಂದ್ರಸೃಷ್ಟಾ
ವಾರೀಶವಹ್ನೀಂದುಮುಖಾಶ್ಚ ಮೋಚಿತಾಃ ॥ ೧೮೫ ॥

ಅ: ವಿಷ್ಣುವಿನ ವರದಿಂದಾಗಿ ಸಕಲಮಾಯೆಗಳನ್ನು ನಾಶ ಮಾಡಬಲ್ಲ, ಎಂದೂ ಸಹಿಸಲಾಗದಂತಹ ಆ ವಿಷ್ಣುಮಾಯೆಯಿಂದ ಆ ದೈತ್ಯಶ್ರೇಷ್ಠನಾದ ಶಂಬರನು ನಿರ್ಮಿಸಿದ್ದ ಮಾಯೆಗಳೆಲ್ಲ ನಾಶಹೊಂದಿದವು. ವರುಣ, ಅಗ್ನಿ, ಚಂದ್ರ ಮೊದಲಾದ ದೇವತೆಗಳೆಲ್ಲ ಬಿಡುಗಡೆ ಹೊಂದಿದರು.

ಯಮೇಂದುಸೂರ್ಯಾದಿಸುರಾಸ್ತತೋऽಸುರಾನ್
ನಿಜಘ್ನುರಾಪ್ಯಾಯಿತವಿಕ್ರಮಾಸ್ತದಾ ।
ಸುರೇಶ್ವರೇಣೋರ್ಜಿತಪೌರುಷಾ ಬಹೂನ್
ವಜ್ರೇಣ ವಜ್ರೀ ನಿಜಘಾನ ಶಂಬರಮ್ ॥ ೧೮೬ ॥

ಅ: ದೇವೇಂದ್ರನಿಂದ ಪರಾಕ್ರಮ ವರ್ಧಿಸಿದ ಮಹಾಪೌರುಷಶಾಲಿಗಳಾದ ಯಮ, ಚಂದ್ರ, ಸೂರ್ಯ ಮೊದಲಾದ ಸುರರು ಬಳಿಕ ಅಸುರರನ್ನು ಕೊಲ್ಲತೊಡಗಿದರು. ವಜ್ರಪಾಣಿಯಾದ ಇಂದ್ರ ವಜ್ರಾಯುಧದಿಂದ ಶಂಬರನನ್ನು ಕೊಂದುಹಾಕಿದ.

ವಿ: ೧) ದೇವೇಂದ್ರನಿಂದ ಹೀಗೆ ಹತನಾದ ಈ [೨]ಆದಿಶಂಬರನು ಮತ್ತೊಮ್ಮೆ ಶಂಬರನೆಂಬ ಹೆಸರಿನಿಂದಲೇ ಹುಟ್ಟಿ ಕೃಷ್ಣಪುತ್ರನಾದ ಪ್ರದ್ಯುಮ್ನನಿಂದ ಹತನಾಗುವ ವಿವರ ಮುಂದೆ ಬಂದಿದೆ.

೨) ಒಮ್ಮೆ ಸತ್ತ ಆದಿಹಿರಣ್ಯಾಕ್ಷ ಮತ್ತೊಮ್ಮೆ ದೈತ್ಯಹಿರಣ್ಯಾಕ್ಷನಾಗಿ ಹುಟ್ಟಿಬಂದಂತೆ ಈ ಪ್ರಸಂಗ ಎಂದು ತಿಳಿಯಬೇಕು. ಇಲ್ಲಿ ಇಂದ್ರನಿಂದ ಹತನಾದ ಅವನು ಮುಂದೆ ಇಂದ್ರಸಮನಾದ ಕಾಮಾವತಾರ ಪ್ರದ್ಯುಮ್ನನಿಂದ ಹತನಾಗುವನು ಎಂಬುದು ವಿಶೇಷ.

---

೧. ವಿನೇಶುಃ = ''ಪಶ್ ಅದರ್ಶನ'' ಇತಿ ಧಾತೋಃ ನಷ್ಪಾ ಬಭೂವುಃ ॥ – (ವಾ.)

೨. ಇಂದ್ರೇಣ ಹತಃ ಶಂಬರಃ ಆದಿಶಂಬರಃ ಕೃಷ್ಣಾವತಾರೇ ಪ್ರದ್ಯುಮ್ನೇನ ಹನಿಷ್ಯಮಾಣಃ ಶಂಬರಃ ಅನ್ಯ ಇತಿ ವಿವೇಕಃ ॥ – (ವಾ.)

ಮುಖ್ಯಪ್ರಾಣನಿಂದ ವಿಪ್ರಚಿತ್ತಿಯ ವಧೆ

ತಸ್ಮಿನ್ ಹತೇ ದಾನವಲೋಕಪಾಲೇ
ದಿತೇಃ ಸುತಾ ದುದ್ರುವುರಿಂದ್ರಭೀಷಿತಾಃ ।
ತಾನ್ ವಿಪ್ರಚಿತ್ತಿರ್ವಿನಿವಾರ್ಯ ಧನ್ವೀ
ಸಸಾರ ಶಕ್ರಪ್ರಮುಖಾನ್ ಸುರೋತ್ತಮಾನ್ ॥೧೮೭॥

ಅ: ದಾನವಲೋಕಪಾಲನಾದ ಆ ಶಂಬರ ಹತನಾಗಲು, ದೈತ್ಯರೆಲ್ಲ ಇಂದ್ರನಿಗೆ ಅಂಜಿ ಓಡತೊಡಗಿದರು. ಧನುಸ್ಸನ್ನು ಹಿಡಿದ ವಿಪ್ರಚಿತ್ತಿ ಅವರನ್ನು ಓಡದಂತೆ ತಡೆದು, ಇಂದ್ರ ಮೊದಲಾದ ದೇವಶ್ರೇಷ್ಠರುಗಳ ಮೇಲೆ ನುಗ್ಗಿದ.

ವರಾದಜೇಯೇನ ವಿಧಾತುರೇವ
ಸುರೋತ್ತಮಾಂಸ್ತೇನ ಶರೈರ್ನಿಪಾತಿತಾನ್ ।
ನಿರೀಕ್ಷ್ಯ ಶಕ್ರಂ ಚ ವಿಮೋಹಿತಂ ದ್ರುತಂ[೧]
ನ್ಯವಾರಯತ್ ತಂ ಪವನಃ ಶರೌಘೈಃ ॥ ೧೮೮ ॥

ಅ: ಬ್ರಹ್ಮದೇವರ ವರದಿಂದಾಗಿ ಅಜೇಯನೆನ್ನಿಸಿದ್ದ ವಿಪ್ರಚಿತ್ತಿ ಬಾಣಗಳಿಂದ ದೇವಶ್ರೇಷ್ಠರುಗಳನ್ನು ಹೊಡೆದುರುಳಿಸಿದ; ಇಂದ್ರನನ್ನೂ ಮೂರ್ಛೆಗೊಳಿಸಿದ. ಅದನ್ನು ಕಂಡು ವಾಯುದೇವರು ಬಾಣಗಳ ಪ್ರವಾಹದಿಂದ ಅವನನ್ನು ಕೂಡಲೆ ತಡೆದರು.

ಅಸ್ತ್ರೈ ತಸ್ಯಾಸ್ತ್ರವರೈರ್ನಿವಾರ್ಯ
ಚಿಕ್ಷೇಪ ತಸ್ಯೋರಸಿ ಕಾಂಚನೀಂ ಗದಾಮ್ ।
ವಿಚೂರ್ಣಿತೋಽಸೌ ನಿಪಪಾತ ಮೇರೌ
ಮಹಾಬಲೋ ವಾಯುಬಲಾಭಿನುನ್ನಃ ॥ ೧೮೯ ॥

ಅ: ಅವನ ಅಸ್ತ್ರಗಳನ್ನು ತನ್ನ ಅಸ್ತ್ರಗಳಿಂದ ತಡೆದು, ವಾಯುದೇವರು ಅವನ ಎದೆಯ ಮೇಲೆ ಚಿನ್ನದ ಗದೆಯನ್ನು ಅಪ್ಪಳಿಸಿದರು. ಮಹಾಬಲಶಾಲಿಯಾಗಿದ್ದ ವಿಪ್ರಚಿತ್ತಿ ವಾಯು-ದೇವರ ಬಲದಿಂದ ಹೊಡೆಯಲ್ಪಟ್ಟವನಾಗಿ ಅಪ್ಪಚ್ಚಿಯಾಗಿ ಮೇರುಪರ್ವತದ ಮೇಲೆ ಬಿದ್ದ.

---

೧. ದ್ರುತಂ = ಪಲಾಯಿತಮ್ ॥ –(ವಾ.)

ವಿಷ್ಣುವಿನಿಂದ ಕಾಲನೇಮಿಯ ವಧೆ

ಅಥಾಸಸಾದಾಶು ಸ ಕಾಲನೇಮಿ-
ಸ್ತ್ವದಾಜ್ಞಯಾ ಯಸ್ಯ ವರಂ ದದೌ ಪುರಾ ।
ಸರ್ವೈರಜೇಯತ್ವಮಜೋಽಸುರಃ ಸ
ಸಹಸ್ರಶೀರ್ಷೋ ದ್ವಿಸಹಸ್ರಬಾಹುಯುಕ್ ॥೧೯೦॥

ಅ: ಬಳಿಕ ಧಾವಿಸಿಬಂದವನು ಕಾಲನೇಮಿ; ಹಿಂದೆ ಬ್ರಹ್ಮ ನಿನ್ನ ಆದೇಶದಂತೆ ಅವನಿಗೆ ಯಾರಿಂದಲೂ ಜಯಿಸಲ್ಪಡದಂತೆ ವರ ನೀಡಿದ್ದ. ಆ ಅಸುರನಿಗೆ ಸಾವಿರ ತಲೆಗಳು, ಎರಡುಸಾವಿರ ಕೈಗಳು.

ವಿ: ಕಾಲನೇಮಿ ಕಾಮಾಭಿಮಾನಿದೈತ್ಯ; ಇವನಿಗೆ ಸಾವಿರಮುಖಗಳು; ಅದರಂತೆ ಕಾಮವು ಬಹುಮುಖವಾದುದು. ಸಾವಿರತಲೆಗಳು ಸಾವಿರಬಯಕೆಗಳ ಸಂಕೇತವಾದರೆ, ಎರಡುಸಾವಿರ ಕೈಗಳು ಆ ಬಯಕೆಯ ಪೂರೈಕೆಗಾಗಿ ಮಾಡುವ ಬಹುವಿಧಪ್ರಯತ್ನಕ್ಕೆ ಸಂಕೇತ.

ತಮಾಪತಂತಂ ಪ್ರಸಮೀಕ್ಷ್ಯ ಮಾರುತ-
ಸ್ತ್ವದಾಜ್ಞಯಾ ದತ್ತವರಸ್ತ್ವಯೈವ ।
ಹಂತವ್ಯ ಇತ್ಯಸ್ಮರದಾಶು[೧] ಹಿ ತ್ವಾಂ
ತದಾऽऽವಿರಾಸೀಸ್ತ್ವಮನಂತಪೌರುಷಃ ॥ ೧೯೧ ॥

ಅ: ನುಗ್ಗಿಬರುತ್ತಿದ್ದ ಅವನನ್ನು ಕಂಡು ವಾಯು ನಿನ್ನಾಜ್ಞೆಯಿಂದ ಬ್ರಹ್ಮನಿಂದ ವರ ಪಡೆದ ಅವನು ನಿನ್ನಿಂದಲೇ ಸಾಯಬೇಕೆಂದು ತತ್ಕ್ಷಣ ನಿನ್ನನ್ನೇ ಸ್ಮರಿಸಿದ; ಅನಂತಪೌರುಷನಾದ ನೀನಾಗ ಮೈದೋರಿದೆ.

ವಿ: ಬ್ರಹ್ಮನು ವಿಷ್ಣುವಿನ ಆಜ್ಞೆಯಂತೆ ಕಾಲನೇಮಿಗೆ ಸರ್ವಾಜೇಯತ್ವವರವನ್ನು ನೀಡಿದ್ದರಿಂದ, ವಿಷ್ಣುವೇ ಅವನನ್ನು ಕೊಲ್ಲುವುದು ಉಚಿತವೆಂದು ಭಾವಿಸಿ, ವಿಷ್ಣುವನ್ನು ಸ್ಮರಿಸಿದ ಎಂದು ಭಾವ. ಹೀಗೆ ಎಂದೂ ಧರ್ಮ ತಪ್ಪದಿರುವುದು ವಾಯುದೇವರ ಹಿರಿಮೆ.

---

೧. ಆಶು ತ್ವಾಮಸ್ಮರದ್ಧೀತಿ ಹಿಶಬ್ದೇನ ಅಚ್ಛಿನ್ನಧರ್ಮತಯಾ ಮುಖ್ಯಪ್ರಾಣಸ್ಯ ವಿಷ್ಣುವಿಷಯೇ ವಿಸ್ಮೃತಿರಾಹಿತ್ಯಪ್ರಸಿದ್ಧಿಂ ಸೂಚಯತಿ ॥ – (ವಾ.)

ತಮಸ್ತ್ರಶಸ್ತ್ರೈಃ ಬಹೂನಿ ಬಾಹುಭಿಃ
ಪ್ರವರ್ಷಮಾಣಂ ಭುವನಾಪ್ತದೇಹಮ್[೧] ।
ಚಕ್ರೇಣ ಬಾಹೂನ್ ವಿನಿಕೃತ್ಯ ಕಾನಿ ಚ
ನ್ಯವೇದಯಶ್ಚಾಶು ಯಮಾಯ ಪಾಪಮ್ ॥ ೧೯೨ ॥

ಅ: ಚಕ್ರದಿಂದ ಅವನ ತೋಳುಗಳನ್ನೂ, ತಲೆಗಳನ್ನೂ ಕತ್ತರಿಸಿ, ತನ್ನ ತೋಳುಗಳಿಂದ ಅನೇಕ ಶಸ್ತ್ರಾಸ್ತ್ರಗಳನ್ನು ಮಳೆಗರೆಯುತ್ತಿದ್ದ ಭೂಮಿಯನ್ನೆಲ್ಲ ವ್ಯಾಪಿಸಿದ್ದ ದೊಡ್ಡ ದೇಹದ ಆ ಪಾಪಿಯನ್ನು ಬೇಗನೆ ಯಮನಿಗೊಪ್ಪಿಸಿದೆ.

ವಿ: ಹೀಗೆ ಇಲ್ಲಿ ಕಾಲನೇಮಿಯ ನಾಶ ವಿಷ್ಣುವಿನಿಂದಾಯಿತು. ಕಾಮದ ನಾಶಕ್ಕಾಗಿ ಕಾಲನೇಮಿಯನ್ನು ಕೊಂದ ಆ ವಿಷ್ಣುವನ್ನೇ ಆಶ್ರಯಿಸಬೇಕು ಎಂಬ ಗೀತೆಯ[೨] ದರ್ಶನಕ್ಕೆ ಇದು ನಿದರ್ಶನ.

ಭೂಮಿಯಲ್ಲಿ ದೈತ್ಯರ ಅವತಾರ

ತತೋಽಸುರಾಸ್ತೇ ನಿಹತಾ ಅಶೇಷಾ-
ಸ್ತ್ವಯಾ ತ್ರಿಭಾಗಾ ನಿಹತಾಶ್ಚತುರ್ಥಮ್ ।
ಜಘಾನ ವಾಯುಃ ಪುನರೇವ ಜಾತಾ-
ಸ್ತೇ ಭೂತಲೇ ಧರ್ಮಬಲೋಪಪನ್ನಾಃ ॥ ೧೯೩ ॥

ಅ: ಹಾಗೆ ಆ ಅಸುರರೆಲ್ಲ ಸತ್ತರು. ನೀನು ಕೊಂದದ್ದು ಮೂರುಭಾಗ; ನಾಲ್ಕನೆಯ ಭಾಗವನ್ನು ಮುಖ್ಯಪ್ರಾಣ ಕೊಂದ. ಅವರೆಲ್ಲ ಧರ್ಮ ಹಾಗೂ ಬಲದಿಂದ ಕೂಡಿ ಭೂಮಿಯ ಮೇಲೆ ಜನಿಸಿರುವರು.

---

೧. 'ಆಪ್ಲೃ ವ್ಯಾಪ್ತಾ'ವಿತಿ ಧಾತೋಃ ಭುವನವ್ಯಾಪ್ತದೇಹಮಿತ್ಯರ್ಥಃ । ವಿನಿಕೃತ್ಯ ಕಾನಿ ಚೇತ್ಯತ್ರ । ಕಾನಿ = ಶಿರಾಂಸಿ॥ –(ವಾ.)

೨. ಏವಂ ಬುದ್ಧೇಃ ಪರಂಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।
ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್ ॥ – ಗೀತಾ (೩/೪೩)

ಸ್ಮರ ಕೃಷ್ಣಂ ಭಜ ಹರಿಂ ನಮ ವಿಷ್ಣುಂ ಶ್ರಯಾಚ್ಯುತಮ್ ।
ತ್ಯಜ ಕಾಮಂ ಜಹಿ ಕ್ರೋಧಂ ಜಹಿ ಮೋಹಂ ಭವಾಲಯಮ್ ॥
– ಶ್ರೀಅಕ್ಷೋಭ್ಯತೀರ್ಥಕೃತವೇದಸಾರ(ಶ್ಲೋ. ೧)

ದೈತ್ಯರನ್ನು ದುರ್ಮಾರ್ಗದಲ್ಲಿ ತೊಡಗಿಸಲು ಪ್ರಾರ್ಥನೆ

ರಾಜ್ಞಾಂ ಮಹಾವಂಶಸುಜನ್ಮನಾಂ[೧] ತು
ತೇಷಾಮಭೂದ್ಧರ್ಮಮತಿರ್ವಿಪಾಪಾ[೨]।
ಶಿಕ್ಷಾಮವಾಪ್ಯ ದ್ವಿಜಪುಂಗವಾನಾಂ
ತ್ವದ್ಭಕ್ತಿರಪ್ಯೇಷು ಹಿ ಕಾಚನ ಸ್ಯಾತ್ ॥ ೧೯೪ ॥

ಅ: ಶ್ರೇಷ್ಠವಂಶಗಳಲ್ಲಿ ರಾಜರಾಗಿ ಜನಿಸಿರುವ ಅವರಿಗೆ ನಿರ್ಮಲವಾದ ಧರ್ಮಬುದ್ಧಿ ಹುಟ್ಟಿದೆ. ವಿಪ್ರೋತ್ತಮರ ಉಪದೇಶವನ್ನು ಹೊಂದಿದ ಅವರಿಗೆ ನಿನ್ನಲ್ಲಿ ಒಂದು ಬಗೆಯ ಭಕ್ತಿಯೂ ಹುಟ್ಟಿಬಿಟ್ಟಿದೆ.

ವಿ: ೧) ಶ್ರೇಷ್ಠವಂಶದಲ್ಲಿ ಅವರು ಹಾಗೆ ಜನಿಸಲು ತಪಸ್ಸು ಮೊದಲಾದವುಗಳೇ ಕಾರಣ ಎಂಬುದನ್ನು 'ತು' ಶಬ್ದದಿಂದ ಸೂಚಿಸಿರುವರು.

೨) ಹಾಗೆ ಜನಿಸಿದ ಅವರು ವಿಪ್ರೋತ್ತಮರಿಂದ ವೈದಿಕಕರ್ಮಗಳಲ್ಲಿ ತೊಡಗಿಸಲ್ಪಡುವರು. 'ವಿಷ್ಣುಪ್ರೇರಣಯಾ ವಿಷ್ಣುಪ್ರೀತ್ಯರ್ಥಂ' ಎಂದೇ ಪುರೋಹಿತರು ಅವರಿಂದ ಸಂಕಲ್ಪ ಮಾಡಿಸುವರು. ಕೊನೆಯಲ್ಲಿ 'ಕೃಷ್ಣಾರ್ಪಣ'ವನ್ನೂ ಹೇಳಿಸುವರು. ಪ್ರತಿನಿತ್ಯ ಹರಿಗುರುಗಳಿಗೆ ವಂದಿಸುವರು; ದೇವತೆಗಳಿಗೆ, ಋಷಿಗಳಿಗೆ, ಪಿತೃಗಳಿಗೆ ತರ್ಪಣವನ್ನೂ ನೀಡುವರು. ಹೀಗೆ ಸಹವಾಸಬಲದಿಂದಾಗಿ ಅವರಿಗೆ ಧರ್ಮದಲ್ಲಿ ಬುದ್ಧಿ ಹುಟ್ಟುವುದು. ಹರಿಯಲ್ಲಿ ಸ್ವಲ್ಪಭಕ್ತಿಯೂ ಬರುವುದು. ಸ್ಫಟಿಕಮಣಿ ಕೆಂಪುದಾಸವಾಳದ ಸನ್ನಿಧಾನದಿಂದಾಗಿ ಕೆಂಪಾಗಿ ತೋರುವಂತೆ

---

೧. ಸುಪದೇನ ವಿಶಿಷ್ಟಮಾತಾಪಿತೃಭ್ಯೋ ಜನ್ಮ ಸೂಚಯತಿ। ತಚ್ಚ ತಪೋವಿಶೇಷೇಣೇತಿ ತುಶಬ್ದಃ। ಏವಂ ಚ ವಂಶೋಚಿತಪುರೋಹಿತಾಃ ವಂಶಾನುಸಾರೇಣ ಮಂತ್ರಂ ಪಾಠಯಂತಿ ತದಾ ವಿಷ್ಣುಪ್ರೇರಣಯಾ ವಿಷ್ಣುಪ್ರೀತ್ಯರ್ಥಮಿತ್ಯೇವ ಸರ್ವಕರ್ಮಾಣ್ಯಾರಭಂತೇ। ''ಅಂತೇ ನಾರಾಯಣಾಯೇತಿ ಸಮರ್ಪಯೇತ್ ತತ್'' ಇತಿ ವಚನಾತ್। ''ಸರ್ವದೇವನಮಸ್ಕಾರಃ ಕೇಶವಂ ಪ್ರತಿ ಗಚ್ಛತೀ''ತಿ ಮಂತ್ರಬಲಾಚ್ಚ ಕೃಷ್ಣೇ ಸಮರ್ಪಣಮಪಿ ಕುರ್ವಂತಿ। ''ಅಮುಕಶರ್ಮಾऽಹಂ ಭೋ ಅಭಿವಾದಯೇ'' ಇತಿ ಹರಿಂ ಗುರುಂ ಚ ನಮಸ್ಯುರ್ವತೇ। ದೇವರ್ಷಿಪಿತ್ರಾದೀನಾಂ ತರ್ಪಣಂ ಚ ಕುರ್ವಂತಿ। ಅತಃ ಸಂಸರ್ಗೋತ್ಥಾಧಿನಾ ಧರ್ಮೇ ಮತಿರಪಿ ಜಾಯತೇ। ಹರಾವೀಷದ್ಭಕ್ತಿರಪಿ ಭವತಿ। ಏವಂ ಧರ್ಮರತಾನಾಂ ತ್ವಯೀಷದ್ಭಕ್ತಿರತಾನಾಂ ಚಾಂಧಂತಮೋ ಭವಿತುಂ ನಾರ್ಹತಿ। ಕಿಂತು ಪರಂ ಪದಮೇವ ಭವೇತ್। ತಥಾಚ ''ಶೃಣ್ವೇ ವೀರ ಉಗ್ರಮುಗ್ರಂ ದಮಾಯನ್'' ಇತ್ಯಾದಿಶ್ರುತೀನಾಂ ''ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್'' ಇತ್ಯಾದಿಸ್ಮೃತೀನಾಂ ಚಾಪ್ರಾಮಾಣ್ಯಂ ಸ್ಯಾದಿತಿ ವಾಕ್ಯಸಮುದಾಯಸ್ಯಾಭಿಪ್ರಾಯಃ। ತ್ವದ್ಭಕ್ತಿರಪ್ಯೇಷು ಹೀತ್ಯತ್ರ। ಹಿಶಬ್ದೇನ ಸ್ಫಟಿಕೇ ಜಪಾಕುಸುಮೋಪಾಧೇರಿವ ಸತ್ಸಮಾಗಮೋಪಾಧೇರಪಿ ಶಕ್ತಿಃ ಪ್ರಸಿದ್ಧೇತಿ ಸೂಚಯತಿ॥ – (ವಾ.)

೨. ಅಸುರಾ ಜಜ್ಞಿರೇ ಕ್ಷೇತ್ರೇ ರಾಜ್ಞಾಂ ತು ಮನುಜೇಶ್ವರ। – ಭಾರತ (೧/೬೪/೨೭)

ಮೂಲತಃ ಅಸುರರಾದ ಈ ದುಷ್ಟಜನ ಸಜ್ಜನಸಂಪರ್ಕದಿಂದಾಗಿ ಭಕ್ತರಂತೆ ಕಾಣಿಸಿಕೊಳ್ಳುವರು ಎಂಬ ವಿಶಿಷ್ಟವಿವೇಚನೆ ಶ್ರೀವಾದಿರಾಜೀಯದಲ್ಲಿದೆ.

ತ್ವದ್ಭಕ್ತಿಲೇಶಾಭಿಯುತಃ ಸುಕರ್ಮಾ
ವ್ರಜೇನ್ನ ಪಾಪಾಂ ತು ಗತಿಂ ಕಥಂಚಿತ್ ।
ದೈತ್ಯೇಶ್ವರಾಣಾಂ ಚ ತಮೋಽಂಧಮೇವ
ತ್ವಯೈವ ಕ್ಲೃಪ್ತಂ ನನು ಸತ್ಯಕಾಮ ॥ ೧೯೫ ॥

ಅ: ನಿನ್ನಲ್ಲಿ ಭಕ್ತಿಲೇಶವನ್ನು ಹೊಂದಿದ, ಸತ್ಕರ್ಮಾನುಷ್ಠಾನವನ್ನು ಮಾಡುವ ವ್ಯಕ್ತಿ ಎಂದೂ ಕೆಟ್ಟಗತಿಯನ್ನು ಹೊಂದಕೂಡದು. ಹೇ ಸತ್ಯಕಾಮನೆ! ಆದರೆ ದೈತ್ಯಶ್ರೇಷ್ಠರಿಗೆಲ್ಲ ಅಂಧಂತಮಸ್ಸೇ ನಿನ್ನಿಂದ ವಿಹಿತವಾಗಿದೆ, ಅಲ್ಲವೆ!

ವಿ: ೧) ಹೀಗೆ ಅಸ್ವಾಭಾವಿಕವಾಗಿ ಅವರಲ್ಲಿ ಭಕ್ತಿ ಮೂಡಿದರೂ, ಅವರಿಗೆ ತಮಸ್ಸಾಗುವಂತಿಲ್ಲ. ಆದರೆ ಮೂಲತಃ ಪರಮಪಾಪಿಗಳಾದ ಅವರಿಗೆ ಅಂಧಂತಮಸ್ಸೇ ಯೋಗ್ಯವಾದ ಗತಿ. ಅದು ಭಗವನ್ನಿಯತಿಯೂ ಆಗಿದೆ. ಶ್ರುತಿಸ್ಮೃತಿಗಳು ಹೇಳಿರುವುದೂ ಅದನ್ನೇ :

ಅಂಧಂತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ ॥

– ಈಶಾವಾಸ್ಯೋಪನಿಷತ್ (ಶ್ಲೋ. ೯)

೨) ಆಗಿನ ಪರಿಸ್ಥಿತಿಯಲ್ಲಿ ದುಷ್ಟರೆಲ್ಲ ಇಂತಹ ಕಪಟಭಕ್ತಿಯನ್ನು ಅಳವಡಿಸಿಕೊಂಡಿರುವುದರಿಂದ ಅವರ ವಿನಾಶ ಎಂತು ಎಂಬುದು ದೇವತೆಗಳ ದುಗುಡದ ಹಿನ್ನೆಲೆ.

ಧರ್ಮಸ್ಯ ಮಿಥ್ಯಾತ್ವಭಯಾದ್ವಯಂ ತ್ವಾ-
ಮಥಾಪಿ ವಾ ದೈತ್ಯಶುಭಾಪ್ತಿಭೀಷಾ ।
ಸಂಪ್ರಾರ್ಥಯಾಮೋ ದಿತಿಜಾನ್ ಸುಕರ್ಮಣಾ-
ಸ್ತ್ವದ್ಭಕ್ತಿತಶ್ಚಾಲಯಿತುಂ ಚ ಶೀಘ್ರಮ್ ॥ ೧೯೬ ॥

ಅ: ಧರ್ಮವು ಸುಳ್ಳೆನಿಸುವ ಭೀತಿಯಿಂದಾಗಿಯೂ, ದೈತ್ಯರಿಗೆ ಮಂಗಳವಾದೀತೆಂಬ ಭಯದಿಂದಾಗಿಯೂ ನಾವು ನಿನ್ನನ್ನು ಆ ದೈತ್ಯರನ್ನು ಸತ್ಕರ್ಮಾನುಷ್ಠಾನದಿಂದಲೂ, ನಿನ್ನಲ್ಲಿ ಭಕ್ತಿ ಮಾಡುವುದರಿಂದಲೂ ಬೇಗನೆ ದಾರಿತಪ್ಪಿಸಲೆಂದು ಬಹಳವಾಗಿ ಬೇಡಿಕೊಳ್ಳುತ್ತಿರುವೆವು.

ವಿ: ಔಪಾಧಿಕವಾಗಿ ಪುಣ್ಯಕರ್ಮದಲ್ಲಿ ತೊಡಗಿರುವ ದೈತ್ಯರಿಗೆ ಸದ್ಗತಿ ನೀಡದಿದ್ದಲ್ಲಿ ಪುಣ್ಯಕರ್ಮಾನುಷ್ಠಾನ ನಿಷ್ಫಲವೆಂಬ ತಪ್ಪು ಕಲ್ಪನೆಗೆ ಅವಕಾಶ ಒಂದು ಕಡೆ; ಹಾಗಾಗದಿರಲೆಂದು ಸತ್ಫಲ

ನೀಡಿದಲ್ಲಿ ದೈತ್ಯರಿಗೂ ಒಳಿತಾಗುವ ಅಪಾಯ ಮತ್ತೊಂದೆಡೆ. ಇದರ ಪರಿಹಾರಕ್ಕೆ ಇರುವ ನೇರ ಉಪಾಯವೆಂದರೆ ಅವರನ್ನೆಲ್ಲ ಹಿಂದಿನಂತೆ ಪಾಪಕರ್ಮದಲ್ಲಿ ತೊಡಗಿಸುವುದೇ ಆಗಿದೆ. ಅದನ್ನು ಸರ್ವಶಕ್ತನೂ, ಸ್ವತಂತ್ರನೂ ಆದ ಶ್ರೀಹರಿಯೇ ಮಾಡಬೇಕು ಎಂಬುದು ದೇವತೆಗಳ ಆಶಯ.

ಕಂಸನಾಗಿ ಕಾಲನೇಮಿ

ಯ ಉಗ್ರಸೇನಃ ಸುರಗಾಯಕಃ ಸ
ಜಾತೋ ಯದುಷ್ವೇವ ತಥಾಭಿಧೇಯಃ ।
ತವೈವ ಸೇವಾರ್ಥಮಮುಷ್ಯ ಪುತ್ರೋ
ಜಾತೋಽಸುರಃ ಕಾಲನೇಮಿಃ ಸ ಈಶ ॥ ೧೯೭ ॥

ಅ: ಈಶನೆ! ಉಗ್ರಸೇನನೆಂಬ ದೇವಗಂಧರ್ವ ನಿನ್ನ ಸೇವೆಗೆಂದೇ ಅದೇ ಹೆಸರಿನಿಂದ ಯದುವಂಶದಲ್ಲಿ ಜನಿಸಿರುವನು. ಅಸುರನಾದ ಕಾಲನೇಮಿ ಅವನ ಮಗನಾಗಿ ಹುಟ್ಟಿರುವನು.

ವಿ: ಧೃತರಾಷ್ಟ್ರನೆಂಬ ಗಂಧರ್ವರಾಜ ಧೃತರಾಷ್ಟ್ರ ಎಂಬ ಹೆಸರಿನಿಂದಲೇ ಹುಟ್ಟಿದ್ದಂತೆ, ಉಗ್ರಸೇನನೆಂಬ ಗಂಧರ್ವ ಉಗ್ರಸೇನ ಎಂಬ ಹೆಸರಿನಿಂದಲೇ ಹುಟ್ಟಿರುವನು ಎಂದು ತಿಳಿಯಬೇಕು. ಪರೀಕ್ಷಿತ್, ಪ್ರಿಯವ್ರತ, ಕಾರ್ತವೀರ್ಯಾರ್ಜುನ ಮೊದಲಾದ ಚಕ್ರವರ್ತಿಗಳು ಸಹ ಇದೇ ರೀತಿಯಲ್ಲಿ ಮೂಲರೂಪದಲ್ಲಿ ಆದೇ ಹೆಸರಿನವರು ಎಂದು ತಿಳಿಯಬಹುದು.

ಯಸ್ತ್ವತ್ಪ್ರಿಯಾರ್ಥಂ ನ ಹತೋ ಹಿ ವಾಯ್ವನಾ
ಭವತ್ಪ್ರಸಾದಾತ್ ಪರಮೀಶಿತಾಽಪಿ ।
ಸ ಏಷ ಭೋಜೇಷು ಪುನಶ್ಚ ಜಾತೋ
ವರಾದುಮೇಶಸ್ಯ ಪರೈರಜೇಯಃ ॥ ೧೯೮ ॥

---

೧. ಮಿಥ್ಯಾತ್ವಂ = ವೃಥಾತ್ವಂ ''ಭೀಷಾऽಸ್ಮಾದ್ವಾತಃ ಪವತೇ'' ಇತಿವತ್ ಭೀಷೇತಿ ವೈದಿಕಂ ಪದಮ್ । ದೈತ್ಯಶುಭಾಪ್ತಿಭಯೇನೇತ್ಯರ್ಥಃ । ದೈತ್ಯಶುಭಾಪ್ತಿಭೀತ್ಯೇತಿ ವಕ್ತುಂ ಶಕ್ಯತ್ವೇऽಪಿ ಯದ್ಭೀಷೇತ್ಯಾಹ ತೇನ ವೈದಿಕಪದಪ್ರಯೋಗಪ್ರಿಯತ್ವಂ ಸ್ವಸ್ಯ ಸ್ಫೋರಯತಿ । ಧರ್ಮಸ್ಯ ಫಲಾದಾನೇ ವೈಯರ್ಥ್ಯಂ ಸ್ಯಾತ್ ಫಲದಾನೇ ದೈತ್ಯಾನಾಂ ಶುಭಗತಿಃ ಸ್ಯಾದಿತಿ ಉಭಯತಃ ಪಾಶಾರಜ್ಜುರಿತಿ ಭಾವಃ । ತ್ವಂ ತು ಕೃಷ್ಣಾವತಾರಸಮಯ ಏವ ತವ ಮೃತ್ಯುರ್ಗೋಕುಲೇ ಜಾತ ಇತಿ ದುರ್ಗಾವಚನೇನ ಸ್ವಸ್ಮಿನ್ ದ್ವೇಷಮುತ್ಪಾದ್ಯ ಕಂಸಾದೀನಾಂ ಭಕ್ತಿಲೇಶಮಪಿ ನಾಶಯಿಷ್ಯಸಿ । ಪೂತನಾದೀನಾಂ ಗ್ರಾಮೇ ಗ್ರಾಮೇ ಶಿಶೂನಾಂ ಹಿಂಸಾದಾವತಿದೇಶೇನ ಪ್ರಾಕ್ತನಧರ್ಮರತಿಂ ಚ ನಾಶಯಿಷ್ಯಸಿ । ಬಹ್ವಧರ್ಮಸಂಪಾದನಂ ಚ ಸ್ವಕೌಶಲೇನೈವ ಕಾರಯಿಷ್ಯಸೀತಿ ಭಾವೇನ ಸುಕರ್ಮಣಸ್ತ್ವದ್ಭಕ್ತಿತಶ್ಚ ದಿತಿಜಾನ್ ಶೀಘ್ರಂ ಚಾಲಯಿತುಂ ತ್ವಾಮೇವ ಸಂಪ್ರಾರ್ಥಯಾಮ ಇತ್ಯಾಹುಃ ॥ – (ವಾ.)

ಅ: ನಿನ್ನ ಅನುಗ್ರಹದಿಂದ ಪರಮಸಮರ್ಥನೇ ಆಗಿದ್ದರೂ, ಮುಖ್ಯಪ್ರಾಣ ನಿನ್ನ ಪ್ರೀತಿಗೆಂದು ಯಾರನ್ನು ತಾನೇ ಕೊಂದಿರಲಿಲ್ಲವೊ, ಆ ಕಾಲನೇಮಿ ಭೋಜವಂಶದಲ್ಲಿ ಹುಟ್ಟಿರುವನು. ಶಿವನ ವರದಿಂದಾಗಿ ಇತರರಿಗೆ ಅಜೇಯನಾಗಿರುವನು.

ಸ ೩ಉಗ್ರಸೇನೇ ಜನಿತೋಽಸುರೇಣ
ಕ್ಷೇತ್ರೇ ಹಿ ತದ್ರೂಪಧರೇಣ ಮಾಯಯಾ ।
ಗಂಧರ್ವಜೇನ ದ್ರಮಿಳೇನ ನಾಮ್ನಾ
ಕಂಸೋ ಜಿತೋ ಯೇನ ವರಾಚ್ಛಚೀಪತಿಃ ॥ ೧೯೯ ॥

ಅ: ಮಾಯೆಯಿಂದಾಗಿ ಉಗ್ರಸೇನನ ರೂಪವನ್ನು ಧರಿಸಿದ ಗಂಧರ್ವಕುಲದಲ್ಲಿ ಜನಿಸಿದ ದ್ರಮಿಳ ಎಂಬವನಿಂದ, ಉಗ್ರಸೇನನ ಪತ್ನಿಯಲ್ಲಿ ಕಾಲನೇಮಿ ಕಂಸನೆಂಬ ಹೆಸರಿನಿಂದ ಜನಿಸಿರುವನು. ಅವನು ವರಬಲದಿಂದಾಗಿ ಶಚೀಪತಿಯಾದ ಇಂದ್ರನನ್ನೂ ಗೆದ್ದಿರುವನು.

ವಿ: ೧) ದ್ರುಮಿಲನೆಂಬ ಒಬ್ಬ ಸೌಭಪತಿ ಗಂಧರ್ವರ ವಂಶದಲ್ಲಿ ಹುಟ್ಟಿದ್ದ ಅಸುರ. ಒಮ್ಮೆ ಉಗ್ರಸೇನನ ಪತ್ನಿ ರಜಸ್ವಲೆಯಾಗಿದ್ದಾಗ ಸುಯಾಮುನಾ ಎಂಬ ಪರ್ವತವನ್ನು ನೋಡಲೆಂದು ಸಖಿಯರೊಂದಿಗೆ ತೆರಳಿದ್ದಳು. ಗಗನದಲ್ಲೂ ಸಂಚರಿಸಬಲ್ಲ ಕಾಮಗಮವಾದ ರಥದಲ್ಲಿ ಕುಳಿತು ಆ ಪರ್ವತವನ್ನು ನೋಡಲೆಂದು ಬಂದಿದ್ದ ದ್ರುಮಿಲ ಅವಳನ್ನು ಕಂಡ. ಅವಳಲ್ಲಿ ಮೋಹಗೊಂಡು, ಮಾಯಾಶಕ್ತಿಯಿಂದ ಅವಳ ಪತಿಯಾದ ಉಗ್ರಸೇನನ ರೂಪವನ್ನೇ ಧರಿಸಿ, ಆವಳನ್ನು ಸಂಪರ್ಕಿಸಿದಾಗ ಈ ಕಂಸ ಜನಿಸಿದ. ವಿಷಯ ತಿಳಿದ ಅವಳು ಕೋಪಗೊಂಡಾಗ ಅವನು ''ನನ್ನನ್ನು ನೀನು 'ಕಸ್ಯ ತ್ವಂ?' ಎಂದು ಕೇಳಿದ್ದರಿಂದ ಈ ಮಗುವಿಗೆ 'ಕಂಸ'[೪] ಎಂದೇ ಹೆಸರಾಗಲಿ'' ಎಂದ.

ಇದು ಹರಿವಂಶ (ವಿಷ್ಣುಪರ್ವ, ಅಧ್ಯಾಯ ೨೮, ಶ್ಲೋಕ ೫೯–೧೧೮)ದಲ್ಲಿ ಬಂದಿರುವಂತೆ ಕಂಸನ ಜನ್ಮವೃತ್ತಾಂತ.

---

೨. ಪರಂ= ಕೇವಲಂ ಭವತೃಸಾದಾತ್ ಯೋ ವಾಯುರೀಶಿತಾ । ತೇನಾಪಿ ವಾಯುನಾ ನ ಹತ ಇತಿ ಸಂಬಂಧಃ ॥ –(ವಾ.)

೩. ಕಂಸಸ್ಯ ಜನ್ಮಪ್ರಭೃತಿ ಕೃಷ್ಣದ್ವೇಷಾಯ ದುರ್ಬೀಜತ್ವಮಪಿ ಕಾರಣಮಸ್ತೀತ್ಯಾಹ – ಸ ೩ಉಗ್ರಸೇನ ಇತಿ ॥ –(ವಾ.)

೪. ಕಸ್ಯ ತ್ವಮಿತಿ ಯಚ್ಚಾಹಂ ತ್ವಯೋಕ್ತೋ ಮತ್ತಕಾಶಿನಿ ।
ಕಂಸಸ್ತಸ್ಮಾದ್ರಿಪುರ್ಧ್ವಂಸೀ ತವ ಪುತ್ರೋ ಭವಿಷ್ಯತಿ ॥ –ಹರಿವಂಶ (೨/೮/೧೦೩)

ಜಿತ್ವಾ ಜಲೇಶಂ ಚ ಹೃತಾನಿ ಯೇನ
ರತ್ನಾನಿ ಯಕ್ಷಾಶ್ಚ ಜಿತಾಃ ಶಿವಸ್ಯ ।
ಕನ್ಯಾವನಾರ್ಥಂ ಮಗಧಾಧಿಪೇನ
ಪ್ರಯೋಜಿತಾಸ್ತೇ ಚ ಹೃತೇ ಬಲೇನ[೧] ॥ ೨೦೦ ॥

ಅ: ಕಂಸ ವರುಣನನ್ನು ಗೆದ್ದು, ಅವನಿಂದ ರತ್ನಗಳನ್ನು ಅಪಹರಿಸಿರುವನು. ತನ್ನ ಕನ್ಯೆಯರ ರಕ್ಷಣೆಗಾಗಿ ಮಗಧದ ದೊರೆಯಾದ ಜರಾಸಂಧನಿಂದ ನಿಯಮಿಸಲ್ಪಟ್ಟಿದ್ದ ಶಿವನ ಕಡೆಯ ಯಕ್ಷರನ್ನೂ ಗೆದ್ದಿರುವನು. ಆ ಕನ್ಯೆಯರನ್ನೂ ಬಲಾತ್ಕಾರದಿಂದ ಅಪಹರಿಸಿರುವನು.

ಜರಾಸಂಧನ ಬಲ

ಸ ವಿಪ್ರಚಿತ್ತಿಶ್ಚ ಜರಾಸುತೋಽಭೂ-
ದ್ವರಾದ್ವಿಧಾತುರ್ಗಿರಿಶಸ್ಯ[೨] ಚೈವ ।
ಸರ್ವೈರಜೇಯೋ ಬಲಮುತ್ತಮಂ ತ-
ಜ್ಞಾತ್ವೈವ ಕಂಸಸ್ಯ ಮುದಾ ಸುತೇ ದದೌ[೩] ॥ ೨೦೧ ॥

ಅ: ವಿಪ್ರಚಿತ್ತಿ ಜರಾಸಂಧನಾಗಿ ಜನಿಸಿರುವನು. ಬ್ರಹ್ಮನ ಮತ್ತು ಹಾಗೆಯೇ ಶಿವನ ವರದಿಂದಾಗಿ ಅವನು ಸಕಲರಿಂದಲೂ ಅಜೇಯನಾಗಿರುವನು. ಕಂಸನ ಉತ್ತಮಬಲವನ್ನು ತಿಳಿದೇ ಅವನು ತನ್ನ ಇಬ್ಬರು ಮಕ್ಕಳನ್ನು ಅವನಿಗೆ ಸಂತೋಷದಿಂದ ಮದುವೆ ಮಾಡಿಕೊಟ್ಟಿರುವನು.

ವಿ: ಅಸ್ತಿ ಮತ್ತು ಪ್ರಾಸ್ತಿ ಇಬ್ಬರು ಜರಾಸಂಧನ ಹೆಣ್ಣುಮಕ್ಕಳು. ಅವನು ಶಿವನ ಯಕ್ಷರನ್ನು ಆ ಹೆಣ್ಣುಮಕ್ಕಳ ರಕ್ಷಣೆಗೆಂದು ನಿಯಮಿಸಿದ್ದ. ಕಂಸ ಅವರನ್ನು ಜಯಿಸಿ, ಕನ್ಯೆಯರನ್ನು ಅಪಹರಿಸಿದ. ಅವನ ಬಲವನ್ನು ಅರಿತು ಸಂತೋಷದಿಂದ ಜರಾಸಂಧ ಅವನೊಂದಿಗೆ ತನ್ನ ಮಕ್ಕಳ ಮದುವೆಯನ್ನು ನೆರವೇರಿಸಿದ.

---

೧. ತೇ ಅಸ್ತಿಪ್ರಾಸ್ತಿನಾಮಿಕೇ ಜರಾಸಂಧಕನ್ಯಕೇ ಚ ಬಲೇನ ಹೃತೇ ಇತ್ಯರ್ಥಃ ॥ – (ವಾ.)

೨. ವಿಧಾತುರ್ಗಿರಿಶಸ್ಯ ಚ ವರಾದೇವ ಸರ್ವೈರಜೇಯೋ ಜರಾಸುತೋಽಭೂದಿತಿ ಯೋಜನಾ ॥ – (ವಾ.)

೩. ....ಅಸ್ತಿಪ್ರಾಸ್ತೀ ಪುನರ್ದದೌ ಕಂಸಾಯೇತಿ ಶೇಷಃ । – (ಜ.)

ನಿವಾರಯಾಮಾಸ ನ ಕಂಸಮುದ್ಧತಂ
ಶಕ್ತೋಽಪಿ ಯೋ ಯಸ್ಯ ಬಲೇನ ಕಶ್ಚಿತ್ ।
ತುಲ್ಯಃ ಪೃಥಿವ್ಯಾಂ ವಿವರೇಷು[೧] ವಾ ಕ್ವಚಿ-
ದ್ವಶೇ ಬಲಾಢ್ಯೋ ನೃಪತೀಂಶ್ಚ ಚಕ್ರೇ ॥ ೨೦೨ ॥

ಅ: ಜರಾಸಂಧ ಉದ್ಧತನಾದ ಕಂಸನನ್ನು ಶಕ್ತನಾಗಿದ್ದರೂ ತಡೆಯಲಿಲ್ಲ. ಬಲದಲ್ಲಿ ಅವನಿಗೆ ಸಾಟಿಯಾದವನು ಭೂಮಿಯಲ್ಲಾಗಲಿ, ಪಾತಾಳಾದಿ ಇತರಲೋಕಗಳಲ್ಲಾಗಲಿ, ಎಲ್ಲೂ ಯಾರೂ ಇಲ್ಲ. ಬಲಾಢ್ಯನಾದ ಅವನು ರಾಜರನ್ನೆಲ್ಲ ತನ್ನ ವಶವರ್ತಿಗಳನ್ನಾಗಿಸಿಕೊಂಡಿರುವನು.

ವಿ: ವರಬಲದಿಂದಾಗಿ ಜರಾಸಂಧ ಕಂಸನಿಗಿಂತ ಬಲಾಢ್ಯನಾಗಿದ್ದ ಎಂದು ಭಾವ.

ಹಂಸಡಿಭಕರಾಗಿ ಮಧುಕೈಟಭರು

ಹತೌ ಪುರಾ ಯೌ ಮಧುಕೈಟಭಾಖ್ಯೌ
ತ್ವಯೈವ ಹಂಸೋ ಡಿಭಕಶ್ಚ ಜಾತೌ ।
ವರಾದಜೇಯೌ ಗಿರಿಶಸ್ಯ ವೀರೌ
ಭಕ್ತೌ ಜರಾಸಂಧಮನು ಸ್ಮ ತೌ ಶಿವೇ ॥ ೨೦೩ ॥

ಅ: ನಿನ್ನಿಂದ ಹಿಂದೆ ಹತರಾಗಿದ್ದ ಮಧುಕೈಟಭರೆಂಬವರು ಹಂಸಡಿಭಕರಾಗಿ ಹುಟ್ಟಿರುವರು. ಶಿವನ ವರದಿಂದಾಗಿ ಅವರು ಅಜೇಯರಾದ ವೀರರಾಗಿರುವರು. ಜರಾಸಂಧನ ಬಳಿಕ ಶಿವಭಕ್ತರೆಂದರೆ ಅವರೇ.

ವಿ: ಶ್ರೀಹರಿ ಮಧುಕೈಟಭರನ್ನು ಹಯಗ್ರೀವರೂಪದಿಂದ ಕೊಂದ ವಿವರ ಮೂರನೆಯ ಅಧ್ಯಾಯ(ಶ್ಲೋಕ ೬೦)ದಲ್ಲಿ ಬಂದಿದೆ.

ಜನಿಸಿರುವ ಮತ್ತೆ ಕೆಲವು ಅಸುರರು

ಅನ್ಯೇಽಪಿ ಭೂಮಾವಸುರಾಃ ಪ್ರಜಾತಾ-
ಸ್ತ್ವಯಾ ಹತಾ ಯೇ ಸುರದೈತ್ಯಸಂಗರೇ ।
ಅನ್ಯೇ ತಥೈವಾಂಧತಮಃ ಪ್ರಪೇದಿರೇ
ಕಾರ್ಯಾ ತಥೈಷಾಂ ಚ ತಮೋಗತಿಸ್ತ್ವಯಾ ॥೨೦೪॥

---

೧. ವಿವರೇಷು = ಸಪ್ತಪಾತಾಲಾಖ್ಯಭೂವಿವರೇಷು ॥ –(ವಾ.)

ಅ: ಆ ಸುರದೈತ್ಯಸಂಗ್ರಾಮದಲ್ಲಿ ನಿನ್ನಿಂದ ಹತರಾದ ಬೇರೆ ಕೆಲವು ಅಸುರರು ಭೂಮಿಯಲ್ಲಿ ಜನಿಸಿರುವರು. ಹಾಗೆಯೇ ಮತ್ತೆ ಕೆಲವರು ಅಂಧಂತಮಸ್ಸನ್ನು ಹೊಂದಿರುವರು. ಇವರಿಗೂ ನೀನು ತಮೋಗತಿ ನೀಡಬೇಕಿದೆ.

ವ್ಯಾಸಾವತಾರೇ ನಿಹತಸ್ತ್ವಯಾ[೧] ಯಃ
ಕಲಿಃ ಸುಶಾಸ್ತ್ರೋಕ್ತಿಭಿರೇವ ಚಾದ್ಯ ।
ಶ್ರುತ್ವಾ[೨] ತ್ವದುಕ್ತೀಃ ಪುರುಷೇಷು ತಿಷ್ಠ-
ನ್ನೀಷಚ್ಚಕಾರೇವ ಮನಸ್ತ್ವಯೀಶ ॥ ೨೦೫ ॥

ಅ: ವ್ಯಾಸಾವತಾರದಲ್ಲಿ ನಿನ್ನ ಸಚ್ಛಾಸ್ತ್ರವಚನಗಳಿಂದ ಹತನಾದ ಕಲಿ ಜನರಲ್ಲಿ ನೆಲೆಸಿ, ನಿನ್ನ ಮಾತುಗಳನ್ನು ಶ್ರವಣ ಮಾಡಿ, ನಿನ್ನಲ್ಲೀಗ ಸ್ವಲ್ಪ ಮನಸ್ಸು ಹಾಕಿರುವಂತೆ ಕಾಣುತ್ತಿರುವನು.

ವಿ: ೧) ದುರ್ಯೋಧನನಂತಹ ಪರಮಪಾಪಿಗೂ ಭಕ್ತಿ ಹುಟ್ಟಿಸುವಷ್ಟು ಪರಿಣಾಮಕಾರಿಯಾದದ್ದು ಶ್ರೀವೇದವ್ಯಾಸರ ವಚನ ಎಂಬ ಇಲ್ಲಿಯ ಭಾವ ಗಮನಾರ್ಹ.

೨) ಅವನು ಸ್ವಲ್ಪ ಮನಸ್ಸು ಹಾಕಿರುವಂತೆ ಕಾಣುತ್ತಿರುವನೇ ಹೊರತು, ನಿಜವಾಗಿಯೂ ಹಾಕಿಲ್ಲ; ಸ್ವರೂಪತಃ ಪರಮಪಾಪಿಯಾದ ಅವನು ಹಾಗೆ ಹಾಕಲು ಸಾಧ್ಯವೂ ಇಲ್ಲ ಎಂದರ್ಥ.

---

೧. ವ್ಯಾಸಾವತಾರೇ ಮಿಥ್ಯಾಜ್ಞಾನರೂಪೀ ಯಃ ಕಲಿಃ ಸುಶಾಸ್ತ್ರೋಕ್ತಿಭಿರೇವ ನಿಹತಃ ನತು ತವ ಚಕ್ರಾದ್ಯಾಯುಧೈಃ ಕಾಲನೇಮಿವತ್ ಸರ್ವಥಾ ನಿಹತಃ । ಸ ಕಲಿರವಶಿಷ್ಟನಿಜರೂಪೇಣಾದ್ಯ ಪುರುಷೇಷು = ಸತ್ಪುರುಷೇಷು ತಿಷ್ಠತಿ । ತಿಷ್ಠನ್ ಸನ್ ತ್ವದುಕ್ತೀಃ = ತೈಃ ಪಠ್ಯಮಾನಾಃ ಬ್ರಹ್ಮಮೀಮಾಂಸಾದಿನಿರ್ಣಾಯಕೋಕ್ತೀಃ ಶ್ರುತ್ವಾ ಮಿಥ್ಯಾಜ್ಞಾನಸ್ಯ ಪ್ರಾಯಶಸ್ತ್ವಯೈವ ನಾಶಿತತ್ವಾತ್ । ತತ್ಪೈವ ದಾರ್ಢ್ಯಂ ಕರ್ತುಮಶಕ್ನುವನ್ ಹರಿಃ ಸರ್ವೋತ್ತಮೋ ಭವತಿ ವಾ ನ ವೇತಿ ಸಂದಿಹಾನಸ್ತಿಷ್ಠತಿ । ಅತಸ್ತಸ್ಯಾಪಿ ತಮೋ ನ ಭವಿಷ್ಯತಿ । ಶುಭಪದಮೇವ ಭವಿಷ್ಯತಿ । ಕಿಮನ್ಯೇಷಾಂ ದೈತ್ಯಾನಾಮ್ । ತಸ್ಮಾತ್ ಸ ದುರ್ಯೋಧನರೂಪೇಣ ಭೂಮೌ ಜಾತಃ । ಭೀಮಗದಯಾ ಸರ್ವಾತ್ಮನಾ ಹನನೀಯ ಇತಿ ಭಾವಃ । ಅತ ಏವ ದುರ್ಯೋಧನವಧಸ್ಯ ನ ಪೃಥಕ್ ಪ್ರಾರ್ಥನೇತಿ ಜ್ಞೇಯಮ್ ॥ – (ವಾ.)

೨. ನ ಚ 'ತತೋ ಮನುಷ್ಯೇಷು ಚ ಸತ್ಸು ಸಂಸ್ಥಿತೋ ವಿನಾಶ್ಯ ಇತ್ಯೇವ ಹರಿರ್ವ್ಯಚಿಂತಯತ್'★ ಇತಿ ಹರಿಸಂಕಲ್ಪಾನುಸಾರೇಣ ಮನುಷ್ಯಸ್ಥಿತಸ್ಯಾಪಿ ನಾಶಃ ಸ್ಯಾತ್ । ಅದ್ಯ ಶ್ರುತ್ವಾ ತ್ವದುಕ್ತೀರಿತ್ಯುಕ್ತಿ ಕಥಮಿತಿ ವಾಚ್ಯಮ್ । ಕ್ರಮೇಣ ನಾಶ್ಯ ಇತ್ಯೇವ ಹರಿಸಂಕಲ್ಪಸಂಭವೇನ ಭಾಗವತಕರಣಾನಂತರಮೇವ ನಾಶ್ಯ ಇತ್ಯೇವ ವಿವಕ್ಷಿತತ್ವಾತ್ । ಅತ ಏವ ಯೇ ಯೇ ಚ ಸಂತಮಸುರಾವಿಷ್ಟಾಸ್ತಾಂಸ್ತಾನ್ ಸುವಾಕ್ಯೈಸ್ತಮಸಾ ವಿಮುಂಚನ್ । ಚಚಾರ ಲೋಕಾನಿತಿ ತಮಸೋ ಜ್ಞಾನರೂಪಾತ್ ಕಲೇರ್ವ್ಯಮುಂಚಯನ್ ಕ್ರಮೇಣ ಸತ್ಸು ವಿದ್ಯಮಾನಂ ಕಲಿಂ ನಾಶಯನ್ನಿತ್ಯುಕ್ತಮ್। – (ತಾ.)

★ ಮ.ಭಾ.ತಾ.ನಿ. (೧೦/೬೧)

ರಾಮಾತ್ಮನಾ ಯೇ ನಿಹತಾಶ್ಚ ರಾಕ್ಷಸಾ
ದೃಷ್ಟ್ವಾ ಬಲಂ ತೇಽಪಿ ತದಾ ತವಾದ್ಯ ।
ಸಮಂ ತವಾನ್ಯಂ ನ ಹಿ ಚಿಂತಯಂತಿ
ಸುಪಾಪಿನೋಽಪೀಶ ತಥಾ ಹನೂಮತಃ ॥ ೨೦೬ ॥

ಅ: ರಾಮರೂಪದಿಂದ ನಿನ್ನಿಂದ ಹತರಾದ ರಾಕ್ಷಸರು ಆಗ ನಿನ್ನ ಬಲವನ್ನು ಕಂಡು ಮಹಾಪಾಪಿಗಳಾಗಿದ್ದರೂ ಸಹ ನಿನಗೆ ಬೇರಾರೂ ಸಮರಲ್ಲ ಎಂದು ಭಾವಿಸಿರುವರು; ಹಾಗೆಯೇ ಹನುಮಂತನಿಗೂ ಸಹ.

ವಿ: ಕಲಿಯು ಶ್ರೀವ್ಯಾಸವಚನಗಳಿಂದ ಪ್ರಭಾವಿತನಾದಂತೆ ಕಂಡರೆ, ಇತರ ಅಸುರರು ಶ್ರೀರಾಮಹನುಮಂತರ ಅಪಾರಬಲವನ್ನು ಕಂಡು, ಅವರಿಬ್ಬರೂ ನಿಜಕ್ಕೂ ತುಂಬಾ ದೊಡ್ಡವರು ಎಂದು ತಿಳಿಯುವಂತಾಗಿರುವರು ಎಂದರ್ಥ. ಶ್ರೀವ್ಯಾಸರ ಜ್ಞಾನಕಾರ್ಯ ಹಾಗಿದ್ದರೆ, ಶ್ರೀರಾಮನ ಬಲಕಾರ್ಯ ಹಾಗಿತ್ತು ಎಂದರ್ಥ.

ಯೇ ಕೇಶವ ತ್ವದ್ಬಹುಮಾನಯುಕ್ತಾ-
ಸ್ತಥೈವ ವಾಯೌ ನ ಹಿ ತೇ ತಮೋಽಂಧಮ್ ।
ಯೋಗ್ಯಾಃ ಪ್ರವೇಷ್ಟುಂ ತದತೋ[೧] ಹಿ ಮಾರ್ಗಾ-
ಚ್ಚಾಲ್ಯಾಸ್ತ್ವಯಾ ಜನಯಿತ್ವೈವ ಭೂಮೌ ॥ ೨೦೭ ॥

ಅ: ಕೇಶವನೆ! ನಿನ್ನಲ್ಲಿ ಹಾಗೂ ವಾಯುವಿನಲ್ಲಿ ಯಾರು ಯಾರು ಗೌರವಭಾವ ತಳೆಯುವರೊ, ಅವರಾರೂ ಅಂಧಂತಮಸ್ಸಿಗೆ ತೆರಳಲು ಸಾಧ್ಯವಿಲ್ಲ. ಆದ್ದರಿಂದ ಅವರನ್ನು ಭೂಮಿಯಲ್ಲಿ ಅವತರಿಸಿ, ನೀನೇ ಸನ್ಮಾರ್ಗದಿಂದ ಚ್ಯುತರನ್ನಾಗಿಸಬೇಕು.

ವಿ: ೧) ಹಿಂದೆ (ಶ್ಲೋಕ ೧೯೮) ಹೇಳಿದಂತೆ, ಹರಿವಾಯುಗಳಲ್ಲಿ ಭಕ್ತರಾದವರು ಎಂದೂ ತಮಸ್ಸಿಗೆ ತೆರಳಲಾರರು. ಆದರೆ ತಮಸ್ಸಿಗೆ ತೆರಳಲೇಬೇಕಾದ ಇವರಿಗೆ ಹರಿವಾಯುಗಳಲ್ಲಿ ನಿಜವಾದ ಭಕ್ತಿ ಹುಟ್ಟಿಲ್ಲವಾದರೂ, ಹುಟ್ಟಿರುವಂತೆ ಜನ ಭ್ರಮಿಸುವಂತಾಗಿದೆ. ಅವರ ನಿಜಸ್ವರೂಪ ವ್ಯಕ್ತವಾಗಿ ಅವರು ತಮಸ್ಸಿಗೇ ತೆರಳುವಂತಾಗಬೇಕು. ಅವರು ಮೋಹಗೊಳ್ಳುವಂತೆ ಮಾಡಿ, ಆ ಕಾರ್ಯವನ್ನು ನೀನೇ ನೆರವೇರಿಸಿ, ಧರ್ಮವನ್ನು ಸಂರಕ್ಷಿಸಬೇಕು ಎಂದರ್ಥ.

---

೧. ತತ್ = ತಸ್ಮಾತ್ಕಾರಣಾತ್ । ಅತಃ= ಪೂರ್ವೋಕ್ತಾತ್ ಮಾರ್ಗಾತ್ = ಸನ್ಮಾರ್ಗಾತ್ ॥ –(ವಾ.)

೨) ಯೋಗ್ಯರಿಗೆ ಜ್ಞಾನ ತಲುಪುವಂತೆ, ಅಯೋಗ್ಯರಿಗೆ ಜ್ಞಾನ ತಲುಪದಂತೆ ನೋಡಿಕೊಳ್ಳಬೇಕಾದ ಹೊಣೆಯನ್ನು ಭಗವಂತ ದೇವತೆಗಳಿಗೆ ನೀಡಿರುವನು (ಅ. ೩೨, ಶ್ಲೋ. ೧೪೪). ಅದಕ್ಕೆಂದೇ ದೇವತೆಗಳು ಹೀಗೆ ಪ್ರಾರ್ಥಿಸುತ್ತಿರುವರು ಎಂದು ತಿಳಿಯಬೇಕು. ರಾಹುವು ಅಮೃತಪಾನ ಮಾಡಲು ಯತ್ನಿಸುತ್ತಿದ್ದುದನ್ನು ಮೋಹಿನಿಯ ಗಮನಕ್ಕೆ ತಂದ ಸೂರ್ಯಚಂದ್ರರ ರೀತಿಯೂ ಇಂತಹುದೇ ಎಂಬುದನ್ನು ಗಮನಿಸಬೇಕು.

ನಿತಾಂತಮುತ್ಪಾದ್ಯ ಭವದ್ವಿರೋಧಂ
ತಥಾ ಚ ವಾಯೌ ಬಹುಭಿಃ ಪ್ರಕಾರೈಃ ।
ಸರ್ವೇಷು ದೇವೇಷು ಚ ಪಾತನೀಯಾ-
ಸ್ತಮಸ್ಯಥಾಂಧೇ ಕಲಿಪೂರ್ವಕಾಸುರಾಃ ॥ ೨೦೮ ॥

ಅ: ನಿನ್ನಲ್ಲಿಯೂ, ವಾಯುವಿನಲ್ಲಿಯೂ ಹಾಗೆಯೇ ಇತರ ದೇವತೆಗಳಲ್ಲಿಯೂ ಅನೇಕ ಬಗೆಗಳಿಂದ ತೀವ್ರವೈರವನ್ನು ಹುಟ್ಟಿಸಿ, ಆ ಕಲಿ ಮೊದಲಾದ ಅಸುರರನ್ನೆಲ್ಲ ಅಂಧಂತಮಸ್ಸಿನಲ್ಲಿ ಬೀಳಿಸಬೇಕು.

ವಿ: ಶ್ರೀಹರಿವಾಯುಗಳಲ್ಲಿಯೂ, ದೇವತೆಗಳಲ್ಲಿಯೂ ಮಾಡುವ ವಿರೋಧವೇ ಪ್ರಧಾನವಾಗಿ ತಮಃಸಾಧನ ಎಂಬ ತತ್ತ್ವ ಇಲ್ಲಿ ನಿರೂಪಿತವಾಗಿದೆ.

ಶಿಶುಪಾಲದಂತವಕ್ರರಾಗಿ ಜಯವಿಜಯರು

ಹತೌ ಚ ಯೌ ರಾವಣಕುಂಭಕರ್ಣೌ
ತ್ವಯಾ ತ್ವದೀಯೌ ಪ್ರತಿಹಾರಪಾಲೌ ।
ಮಹಾಸುರಾವೇಶಯುತೌ ಹಿ ಶಾಪಾತ್
ತ್ವಯೈವ ತಾವದ್ಯ ವಿಮೋಚನೀಯೌ ॥ ೨೦೯ ॥

ಅ: ನಿನ್ನಿಂದ ಹತರಾದ ರಾವಣ, ಕುಂಭಕರ್ಣರು ಮಹಾ ಅಸುರರ ಆವೇಶದಿಂದ ಕೂಡಿದ ನಿನ್ನ ದ್ವಾರಪಾಲಕರು (ಜಯ, ವಿಜಯರು). ಅವರನ್ನೀಗ ನೀನು ಶಾಪದಿಂದ ಬಿಡುಗಡೆ ಮಾಡಬೇಕು.

ವಿ: ಜಯ, ವಿಜಯರು ಈಗ ಶಿಶುಪಾಲ, ದಂತವಕ್ರರಾಗಿ ಹುಟ್ಟಲಿದ್ದು ಇದು ಅವರ ಮೂರನೆಯ ಹಾಗೂ ಕೊನೆಯ ಜನ್ಮವಾಗಿದೆ. ಅವರು ನಿನ್ನ ವಚನದಂತೆ ನಿನ್ನಿಂದಲೇ ಹತರಾಗಿ ಶಾಪದಿಂದ ಬಿಡುಗಡೆ ಕಾಣಬೇಕಾಗಿದೆ. ಅದಕ್ಕಾಗಿ ನೀನೀಗ ಅವತರಿಸಲೇಬೇಕು ಎಂದರ್ಥ.

ಯೌ ತೌ ತವಾರೀ ಹ ತಯೋಃ ಪ್ರವಿಷ್ಟೌ
ದೈತ್ಯೌ ತು ತಾವಂಧತಮಃ ಪ್ರವೇಶ್ಯೌ ।
ಯೌ ತೌ ತ್ವದೀಯೌ ಭವದೀಯವೇಶ್ಮ
ತ್ವಯಾ ಪುನಃ ಪ್ರಾಪಣೀಯೌ ಪರೇಶ ॥೨೧೦॥

ಅ: ಪರೇಶನೆ! ಅವರಿಬ್ಬರಲ್ಲಿ ಪ್ರವಿಷ್ಟರಾಗಿರುವ ನಿನ್ನ ಶತ್ರುಗಳಾದ ಆ ಇಬ್ಬರು ದೈತ್ಯರನ್ನು ಅಂಧಂತಮಸ್ಸಿನಲ್ಲಿ ಬೀಳಿಸಬೇಕಿದೆ. ನಿನ್ನ ಆ ಇಬ್ಬರು ಭಕ್ತರನ್ನು ನೀನೇ ನಿನ್ನ ಸ್ಥಾನಕ್ಕೆ ತಲುಪಿಸಬೇಕಿದೆ.

ವಿ: ೧) ಹಿರಣ್ಯಕಶಿಪು, ಹಿರಣ್ಯಾಕ್ಷರೇ ಜಯ, ವಿಜಯರಲ್ಲಿ ಆವಿಷ್ಟರಾಗಿ ಶ್ರೀಹರಿಯ ದ್ವೇಷ ಮಾಡಿದವರು. ಅವರಿಗೆ ಅಂಧಂತಮಸ್ಸು ಸಹ ನಿನ್ನಿಂದಲೇ ದೊರೆಯಬೇಕಿದೆ.

೨) ಇಲ್ಲಿ 'ತವಾರೀಹ' ಎಂಬದನ್ನು 'ತವಾರೀ ಇಹ' ಎಂದೂ, 'ತವಾರೀ ಹ' ಎಂದೂ ವಿಭಾಗ ಮಾಡಬಹುದು.

ಸಾಲ್ವರಾಜನಾಗಿ ಅಸುರಬಲಿ

ಆವಿಶ್ಯ ಯೋ ಬಲಿಮಂಜಶ್ಚಕಾರ
ಪ್ರತೀಪಮಸ್ಮಾಸು ತಥಾ ತ್ವಯೀಶ ।
ಸ ಚಾಸುರೋ ಬಲಿನಾಮೈವ ಭೂಮೌ
ಸಾಲ್ವೋ ನಾಮ್ನಾ ಬ್ರಹ್ಮದತ್ತಸ್ಯ ಜಾತಃ ॥ ೨೧೧ ॥

ಅ: ಬಲಿಯಲ್ಲಿ ಆವಿಷ್ಟನಾಗಿ ಅವನಿಗೆ ನಮ್ಮಲ್ಲೂ, ನಿನ್ನಲ್ಲೂ ಚೆನ್ನಾಗಿ ವೈರ ಹುಟ್ಟಿಸಿದ್ದ ಬಲಿ ಎಂಬ ಹೆಸರಿನ ಅಸುರ ಭೂಮಿಯಲ್ಲಿ ಸಾಲ್ವ ಎಂಬ ಹೆಸರಿನಿಂದ ಬ್ರಹ್ಮದತ್ತನ ಮಗನಾಗಿ ಹುಟ್ಟಿರುವನು.

ವಿ: ವಾಮನರೂಪಿಭಗವಂತನಿಗೆ ಸರ್ವಸ್ವದಾನ ಮಾಡಿದ ಬಲಿಚಕ್ರವರ್ತಿ ಪರಮವೈಷ್ಣವ. ಅವನು ದೇವತೆಗಳಲ್ಲೂ, ಹರಿಯಲ್ಲೂ ವಿರೋಧವನ್ನು ಮಾಡಿದ್ದ. ಅದಕ್ಕೆ ಕಾರಣ ಅವನೊಳಗೆ ಆವಿಷ್ಟನಾಗಿದ್ದ ಬಲಿ ಎಂಬ ಅಸುರ. ಹೆಸರು ಒಂದಾದರೂ, ವ್ಯಕ್ತಿಗಳು ಬೇರೆ. ಸಾತ್ತ್ವಿಕನಾಗಿದ್ದ ಬಲಿ ಇವನ ಆವೇಶದಿಂದಾಗಿಯೇ ವೈರ ಸಾಧಿಸಿದ. ಅವನೀಗ ಅಂಬೆ ಮೆಚ್ಚಿದ್ದ ಬ್ರಹ್ಮದತ್ತನಿಗೆ ಸಾಲ್ವ ಎಂಬ ಹೆಸರಿನಿಂದ ಮಗನಾಗಿ ಹುಟ್ಟಿರುವನು ಎಂದರ್ಥ. ಅವನ ಸಂಹಾರವೂ ಕೃಷ್ಣಾವತಾರದಿಂದಲೇ ಆಗಬೇಕು ಎಂದರ್ಥ.

ಮಾಯಾಮಯಂ ತೇನ ವಿಮಾನಮಗ್ರ್ಯ-
ಮಭೇದ್ಯಮಾಪ್ತಂ ಸಕಲೈರ್ಗಿರೀಶಾತ್ ।
ವಿದ್ರಾವಿತೋ ಯೋ ಬಹುಶಸ್ತ್ವಯೈವ
ರಾಮಸ್ವರೂಪೇಣ ಭೃಗೂದ್ವಹೇನ ॥ ೨೧೨ ॥

ಅ: ಅವನು ಸಕಲರಿಂದಲೂ ಅಭೇದ್ಯವಾದ ಮಾಯಾಮಯವಾದ ಶ್ರೇಷ್ಠವಿಮಾನ-ವೊಂದನ್ನು ಶಿವನಿಂದ ಪಡೆದುಕೊಂಡಿರುವನು. ಪರಶುರಾಮರೂಪದ ನೀನು ಅವನನ್ನು ಅನೇಕಸಲ ಸೋಲಿಸಿ, ಓಡಿಸಿರುವೆ.

ವಿ: ರಾಮಾಯಣದಲ್ಲಿ ಪುಷ್ಪಕವಿಮಾನವನ್ನು ಇರಿಸಿಕೊಂಡಿದ್ದವನು ರಾವಣ; ಆ ವಿಮಾನ ಬ್ರಹ್ಮನಿಂದ ಕುಬೇರನಿಗೆ ಕೊಡಲ್ಪಟ್ಟಿತ್ತು. ಅದನ್ನು ರಾವಣ ಕುಬೇರನಿಂದ ಅಪಹರಿಸಿದ್ದ. ರಾವಣ–ವಧೆಯ ಅನಂತರ ಅದು ಮತ್ತೆ ಕುಬೇರನಿಗೆ ದೊರಕಿತು. ಸಾಲ್ವನಿಗೆ ವಿಮಾನ ಶಿವನಿಂದ ದೊರಕಿತ್ತು. ನಗರದಂತೆ ಕಾಣುತ್ತಾ ಗಗನದಲ್ಲಿ ಸಂಚರಿಸುವ ಸಾಮರ್ಥ್ಯವೂ ಈ ವಿಮಾನಕ್ಕಿದ್ದುದು ವಿಶೇಷ.

ನಾಸೌ ಹತಃ ಶಕ್ತಿಮತಾಽಪಿ ತತ್ರ
ಕೃಷ್ಣಾವತಾರೇ ಸ ಮಯೈವ ವಧ್ಯಃ ।
ಇತ್ಯಾತ್ಮಸಂಕಲ್ಪಮೃತಂ ವಿಧಾತುಂ
ಸ ಚಾತ್ರ ವಧ್ಯೋ ಭವತಾಽತಿಪಾಪೀ ॥ ೨೧೩ ॥

ಅ: ''ಕೃಷ್ಣಾವತಾರದಲ್ಲೇ ನಾನು ಅವನನ್ನು ಕೊಲ್ಲುವೆ'' ಎಂಬ ನಿನ್ನ ಸಂಕಲ್ಪವನ್ನು ಸತ್ಯಮಾಡಲೆಂದು, ನೀನು ಶಕ್ತನಾಗಿದ್ದರೂ, ಪರಶುರಾಮರೂಪದಿಂದ ಆಗ ಅವನನ್ನು ಕೊಂದಿಲ್ಲ. ಮಹಾಪಾಪಿಯಾದ ಅವನನ್ನೀಗ ನೀನು ಕೊಲ್ಲಬೇಕಿದೆ.

ವಿ: ಸಾಲ್ವನನ್ನು ಪರಶುರಾಮರೂಪದಿಂದ ಕೊಲ್ಲದಿರಲು ಅಶಕ್ತಿ ಕಾರಣ ಎಂಬ ಕೆಲವರ ತಪ್ಪು ತಿಳುವಳಿಕೆಗೆ ಇಲ್ಲಿ ಉತ್ತರವಿದೆ.

ಯದೀಯಮಾರುಹ್ಯ ವಿಮಾನಮಸ್ಯ
ಪಿತಾಽಭವತ್ ಸೌಭಪತಿಶ್ಚ ನಾಮ್ನಾ ।
[೧]ಯದಾ ಸ ಭೀಷ್ಮೇಣ ಜಿತಃ ಪಿತಾಽಸ್ಯ
ತದಾ ಸ ಸಾಲ್ವಸ್ತಪಸಿ ಸ್ಥಿತೋಽಭೂತ್ ॥ ೨೧೪ ॥

ಅ: ಅವನ ವಿಮಾನವನ್ನು ಏರಿ, ಅವನ ತಂದೆ ಸೌಭಪತಿ ಎಂಬ ಹೆಸರು ಪಡೆದನು. ಅವನು (ಸ್ವಯಂವರ ಪ್ರಸಂಗದಲ್ಲಿ) ಭೀಷ್ಮರಿಂದ ಪರಾಜಿತನಾದಾಗ ಈ ಸಾಲ್ವ ತಪಸ್ಸಿನಲ್ಲಿ ತೊಡಗಿದ್ದ.

ವಿ: ತಂದೆಯಾದ ಬ್ರಹ್ಮದತ್ತ ಭೀಷ್ಮರಿಂದ ಪರಾಜಿತನಾದಾಗ, ಶಿವನ ವರದಿಂದ ಅಪೂರ್ವ–ವಿಮಾನ ಪಡೆದಿದ್ದ ಈ ಸಾಲ್ವನೇತಕ್ಕೆ ಅವನ ಸಹಾಯಕ್ಕೆ ಒದಗಲಿಲ್ಲ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಅವನಿನ್ನೂ ಆಗ ತಪಸ್ಸಿನಲ್ಲಿ ತೊಡಗಿದ್ದ. ಅವನಿಗೆ ಶಿವನ ವರವಾಗಲಿ, ವಿಮಾನವಾಗಲಿ ಆಗಿನ್ನೂ ಲಭಿಸಿರಲಿಲ್ಲ ಎಂದರ್ಥ.

ಸ ಚಾದ್ಯ ತಸ್ಮಾತ್ ತಪಸೋ ನಿವೃತ್ತೋ
ಜರಾಸುತಸ್ಯಾನುಮತೇ ಸ್ಥಿತೋ ಹಿ ।
ಅನನ್ಯವಧ್ಯೋ ಭವತಾऽದ್ಯ ವಧ್ಯಃ
ಸ ಪ್ರಾಪಣೀಯಶ್ಚ ತಮಸ್ಯಥೋಗ್ರೇ ॥ ೨೧೫ ॥

ಅ: ಅವನೀಗ ತಪಸ್ಸನ್ನು ಪೂರೈಸಿ, ಜರಾಸಂಧನ ಅನುಯಾಯಿಯಾಗಿರುವನು. ಬೇರಾರಿಂದಲೂ ಹತನಾಗದ ಅವನನ್ನು ನೀನೇ ಈಗ ಸಂಹರಿಸಬೇಕು; ಮತ್ತು ಉಗ್ರವಾದ ತಮಸ್ಸಿನಲ್ಲಿ ಹಾಕಬೇಕು.

ಕೀಚಕನಾಗಿ ಬಾಣಾಸುರ

ಯೋ ಬಾಣಮಾವಿಶ್ಯ ಮಹಾಸುರೋऽಭೂತ್
ಸ್ಥಿತಃ ಸ ನಾಮ್ನಾ ಪ್ರಥಿತೋऽಪಿ ಬಾಣಃ ।
ಸ ಕೀಚಕೋ ನಾಮ ಬಭೂವ ರುದ್ರ-
ವರಾದವಧ್ಯಃ ಸ ತಮಃ ಪ್ರವೇಶ್ಯಃ ॥ ೨೧೬ ॥

ಅ: ಬಾಣನನ್ನು ಪ್ರವೇಶಿಸಿ, ಅವನಲ್ಲಿ ನೆಲೆಸಿರುವ ಮಹಾಅಸುರ ಬಾಣ ಎಂಬ ಹೆಸರಿನಿಂದಲೇ ಪ್ರಸಿದ್ಧನಾಗಿರುವನು. ಅವನು ಕೀಚಕನಾಗಿ ಜನಿಸಿರುವನು. ಶಿವನ ವರದಿಂದ ಅವಧ್ಯನಾಗಿರುವ ಅವನನ್ನು ತಮಸ್ಸಿಗೆ ಹಾಕಬೇಕಾಗಿದೆ.

ವಿ: ೧) ಬಲಿಚಕ್ರವರ್ತಿಯನ್ನು ಪ್ರವೇಶಿಸಿ, ಬಲಿಯೆಂಬ ಅಸುರ ಅವನನ್ನು ಹರಿಗುರುಗಳ ವಿರೋಧದಲ್ಲಿ ತೊಡಗಿಸಿದ್ದಂತೆ, ಬಲಿಯ ಮಗನಾದ ಬಾಣನನ್ನು ಪ್ರವೇಶಿಸಿ, ಬಾಣನೆಂಬ ಅಸುರ

---

೧. ಸಾಲ್ವಸ್ಯಾತಿಸಮರ್ಥತ್ವೇ ಭೀಷ್ಮೇಣ ತತ್ಪಿತಾ ಕಥಂ ಜಿತ ಇತ್ಯತ ಆಹ– ಯದೇತಿ ॥ –(ವಾ.)

ಅವನನ್ನು ಹರಿದ್ವೇಷಿಯನ್ನಾಗಿಸಿರುವನು. ಅವನು ಒಂದಂಶದಿಂದ ಬಾಣನೊಳಗೆ ಪ್ರವೇಶಿಸಿದ್ದರೆ, ಮತ್ತೊಂದು ಅಂಶದಿಂದ [೧]ಕೀಚಕನಾಗಿ ಜನಿಸಿರುವನು ಎಂದರ್ಥ. ಬಾಣನೊಳಗಿರುವ ಬಾಣನನ್ನು ನೀನು ನಾಶ ಮಾಡಬೇಕು (ಅ. ೨೨, ಶ್ಲೋ. ೨೬೭.); ಕೀಚಕನನ್ನು ಭೀಮನ ಮೂಲಕ ಕೊಲ್ಲಿಸಿ (ಅ. ೨೩, ಶ್ಲೋ. ೨೬); ಬಳಿಕ ಅವನನ್ನು ತಮಸ್ಸಿಗೆ ಹಾಕಬೇಕು ಎಂದರ್ಥ.

೨) ಹಿರಿಯದೇವತೆಗಳು ಸಾಂಶರಾಗಿರುವಂತೆ, ಮಹಾಅಸುರರೂ ಸಾಂಶರು ಎಂದು ತಿಳಿಯಬೇಕು.

ಅತಸ್ತ್ವಯಾ ಭುವ್ಯವತೀರ್ಯ ದೇವ-
ಕಾರ್ಯಾಣಿ ಕಾರ್ಯಾಣ್ಯಖಿಲಾನಿ ದೇವ ।
ತ್ವಮೇವ ದೇವೇಶ ಗತಿಃ ಸುರಾಣಾಂ
ಬ್ರಹ್ಮೇಶಶಕ್ರೇಂದುಯಮಾದಿಕಾನಾಮ್ ॥ ೨೧೭ ॥

ಅ: ದೇವನೆ! ಆದ್ದರಿಂದ ನೀನು ಭೂಮಿಯಲ್ಲಿ ಅವತರಿಸಿ, ಸಕಲದೇವಕಾರ್ಯಗಳನ್ನೂ ಈಡೇರಿಸಿಕೊಡಬೇಕು. ದೇವತೆಗಳ ಒಡೆಯನೆ! ಬ್ರಹ್ಮ, ರುದ್ರ, ಇಂದ್ರ, ಚಂದ್ರ, ಯಮ ಮೊದಲಾದ ಸುರರಿಗೆಲ್ಲ ನೀನೇ ಗತಿ.

ತ್ವಮೇವ ನಿತ್ಯೋದಿತಪೂರ್ಣಶಕ್ತಿ-
ಸ್ತ್ವಮೇವ ನಿತ್ಯೋದಿತಪೂರ್ಣಚಿದ್ಘನಃ ।
ತ್ವಮೇವ ನಿತ್ಯೋದಿತಪೂರ್ಣಸತ್ಸುಖ-
ಸ್ತ್ವದೃಜ್ನ ಕಶ್ಚಿತ್ ಕುತ ಏವ ತೇಽಧಿಕಃ ॥ ೨೧೮ ॥

ಅ: ನಿತ್ಯಾಭಿವ್ಯಕ್ತನಾದ ಪೂರ್ಣಶಕ್ತಿ ಉಳ್ಳವನು ನೀನೇ; ನಿತ್ಯಾಭಿವ್ಯಕ್ತವಾದ ಪೂರ್ಣಜ್ಞಾನಸ್ವರೂಪನೂ ನೀನೇ; ನಿತ್ಯಾಭಿವ್ಯಕ್ತವಾದ ಪರಿಪೂರ್ಣ ಉತ್ತಮಸುಖದಿಂದ ತುಂಬಿದವನೂ ನೀನೆ. ನಿನ್ನಂತಹವನು ಬೇರಾರೂ ಇಲ್ಲ; ಮಿಗಿಲಾದವನು ಎಲ್ಲಿದ್ದಾನು?''

ವಿ: ೧) ಅವರೆಲ್ಲ ಶ್ರೀಹರಿಯನ್ನೇ ಶರಣು ಹೊಂದಲು, ಅವನೊಬ್ಬನೇ ಜ್ಞಾನಾನಂದಾದಿ ಅನಂತಗುಣಪೂರ್ಣನಾದ ಸರ್ವೋತ್ತಮದೇವತೆ ಎಂಬುದೇ ಕಾರಣ ಎಂದರ್ಥ.

---

೧. ಜಜ್ಞಿರೇ ಕೀಚಕಾ ರಾಜನ್ ಬಾಣೋ ಜ್ಯೇಷ್ಠಸ್ತತೋಽಭವತ್ । – ಭಾರತ (೪/೧೬/೫೧)

೨) ಶ್ಲೋಕ ೧೭೮ ರಿಂದ ಪ್ರಾರಂಭವಾದ ಬ್ರಹ್ಮಾದಿಗಳ ಸ್ತೋತ್ರ ಇದರೊಂದಿಗೆ ಮುಕ್ತಾಯವಾಗಿದೆ.

ಇತೀರಿತೋ ದೇವವರೈರುದಾರ-
ಗುಣಾರ್ಣವೋಽಕ್ಷೋಭ್ಯತಮಾಮೃತಾಕೃತಿಃ[೧]।
ಉತ್ಥಾಯ ತಸ್ಮಾತ್ ಪ್ರಯಯಾವನಂತ-
ಸೋಮಾರ್ಕಕಾಂತಿದ್ಯುತಿರನ್ವಿತೋಽಮರೈಃ ॥ ೨೧೯ ॥

ಅ: ದೇವಶ್ರೇಷ್ಠರಿಂದ ಹೀಗೆ ಪ್ರಾರ್ಥಿತನಾದ ಗುಣಸಮುದ್ರನೂ, ಅತ್ಯಂತ ವ್ಯಾಪ್ತವೂ, ನಿತ್ಯವೂ ಆದ ಸ್ವರೂಪವುಳ್ಳವನೂ, ಅಕ್ಷೋಭ್ಯವಾದ ಅಮೃತಸ್ವರೂಪನೂ, ಅನಂತಚಂದ್ರ-ಸೂರ್ಯರ ಕಾಂತಿಯಂತಹ ಶೋಭೆ ಉಳ್ಳವನೂ ಆದ ಶ್ರೀಹರಿಯು ಅಲ್ಲಿಂದ ಮೇಲೆದ್ದು ದೇವತೆಗಳೊಂದಿಗೆ ಕೂಡಿ, ಹೊರಟನು.

ಮೇರುಪರ್ವತದಲ್ಲಿ ಮಂತ್ರಾಲೋಚನೆ

ಸ ಮೇರುಮಾಪ್ಯಾಹ ಚತುರ್ಮುಖಂ ಪ್ರಭು-
ರ್ಯತ್ರ ತ್ವಯೋಕ್ತೋಽಸ್ಮಿ ಹಿ ತತ್ರ ಸರ್ವಥಾ।
ಪ್ರಾದುರ್ಭವಿಷ್ಯೇ ಭವತೋ ಹಿ ಭಕ್ತ್ಯಾ[೨]
ವಶಸ್ತ್ವಹಂ ಸ್ವವಶೋಽಪಿ ಚೇಚ್ಛಯಾ ॥ ೨೨೦ ॥

---

೧. ಅಕ್ಷೋಭ್ಯತಮಾಮೃತಾಕೃತಿಃ =''ಕ್ಷುಭೂ ಚಿತ್ತವಿಕ್ಷೇಪ'' ಇತಿ ಧಾತೋಃ । ಕೇನಾಪಿ ಕ್ಷೋಭಯಿತುಮಶಕ್ಯಾ ಅಮೃತಾ ಮೃತಿರಹಿತಾ ಆಕೃತಿರ್ಯಸ್ಯ ಸ ತಥೋಕ್ತಃ ॥ – (ವಾ.)

೨. ಕಾಂತಿದ್ಯುತ್ಯೋಃ ಪರ್ಯಾಯತ್ವೇಽಪಿ ಚಂದ್ರಗತಶೋಭಾ ಸೂರ್ಯಗತಪ್ರತಾಪರೂಪಾವಾಂತರ-ವಿಶೇಷವಾಚಿತ್ವೇನ ಸಹಪ್ರಯೋಗಃ ॥ – (ಜ.)

೩. ತತ್ರ ಪ್ರಾದುರ್ಭವಿಷ್ಯೇ ಹೀತಿ ಹಿಶಬ್ದೇನ ಜನ್ಮಾಭಾವಪ್ರಸಿದ್ಧಿಂ ಸೂಚಯತಿ । ತು = ವಿಶೇಷೇಣ ಭವತೋ ಭಕ್ತ್ಯಾ ಇಚ್ಛಯಾ ಚ ತವ ವಶೇ ವರ್ತೇ ಹೀತಿ ಹಿಶಬ್ದೇನ ''ಅಹಂ ಭಕ್ತಪರಾಧೀನೋ ಹ್ಯಸ್ವತಂತ್ರ ಇವ ದ್ವಿಜ । ವಶೀಕುರ್ವಂತಿ ಮಾಂ ಭಕ್ತ್ಯಾ ಸತ್ಸ್ತ್ರಿಯಃ ಸತ್ಪತಿಂ ಯಥಾ'' ಇತಿ ಪ್ರಮಾಣಪ್ರಸಿದ್ಧಿಂ ಸೂಚಯತಿ । ''ಬ್ರಹ್ಮಾ ತದುಪಧಾರ್ಯಾಥ ಸಹ ದೇವೈಸ್ತಯಾ ಸಹ । ಜಗಾಮ ಸತ್ರಿನಯನಃ ತೀರಂ ಕ್ಷೀರಪಯೋನಿಧೇಃ'' ಇತಿ ಭಾಗವತೋಕ್ತೇಃ । – (ವಾ.)

ಅ: ಪ್ರಭುವಾದ ಶ್ರೀಹರಿ ಮೇರುಪರ್ವತಕ್ಕೆ ತೆರಳಿ ಚತುರ್ಮುಖನಿಗೆ ಹೇಳಿದ. ''ನೀನು ಹೇಳಿದಲ್ಲೇ ನಾನು ಸರ್ವಥಾ ಅವತರಿಸುವೆ. ನಾನು ಸ್ವತಂತ್ರನಾದರೂ, ಸ್ವೇಚ್ಛೆಯಿಂದಲೇ ನಿನ್ನ ಭಕ್ತಿಗೆ ವಶನಾಗಿರುವೆ''.

ವಿ: ೧) ಬ್ರಹ್ಮಾದಿದೇವತೆಗಳು ಶ್ರೀಹರಿಯನ್ನು ಪ್ರಾರ್ಥಿಸಿದ್ದು ಕ್ಷೀರಸಮುದ್ರದ ಬಳಿ ಎಂದು ಭಾಗವತದಲ್ಲಿದೆ. ಬ್ರಹ್ಮಾದಿದೇವತೆಗಳಿಗೆ ಶ್ರೀಹರಿ ಆದೇಶ ನೀಡಿದ್ದು ಮೇರುಶಿಖರಕ್ಕೆ ತೆರಳಿ ಎಂದು ಹರಿವಂಶದಲ್ಲಿದೆ. ಶ್ರೀಮದಾಚಾರ್ಯರು ಆ ಎರಡರ ಭಾವವನ್ನು ಹೀಗೆ ಸಂಗ್ರಹಿಸಿ, ವಿರೋಧವನ್ನು ಪರಿಹರಿಸಿರುವರು. ಎಂದರೆ ಬ್ರಹ್ಮಾದಿಗಳು ಶ್ರೀಹರಿಯನ್ನು ಪ್ರಾರ್ಥಿಸಿದ್ದು ಕ್ಷೀರಸಮುದ್ರಕ್ಕೆ ತೆರಳಿಯಾದರೂ, ಅಲ್ಲಿಂದ ಶ್ರೀಹರಿ ಅವರನ್ನೆಲ್ಲ ಮೇರುಶಿಖರಕ್ಕೆ ಕರೆದೊಯ್ದು ಅಲ್ಲಿ ಆದೇಶ ನೀಡಿದ ಎಂದರ್ಥ. [೧]ಹರಿವಂಶದಲ್ಲಿರುವುದೂ ಹಾಗೆಯೇ.

ತದಾಗಚ್ಛ ಮಹಾಭಾಗ ಸಹ ವೈ ಮಂತ್ರ್ಯಕಾರಣಾತ್ ।
ವ್ರಜಾಮೋ ಮೇರುಶಿಖರಂ ಪುರಸ್ಕೃತ್ಯ ವಸುಂಧರಾಮ್ ॥

– ಹರಿವಂಶ (೧/೫೧/೩೨)

೨) ಹಾಗೆ ಶ್ರೀಹರಿಯು ಮೇರುಶಿಖರಕ್ಕೆ ಕರೆದೊಯ್ದು ಆದೇಶ ನೀಡಲು, ಅಲ್ಲಿ ನಡೆಯುವ ವಿಚಾರವನ್ನೆಲ್ಲ ಅಸುರರು ಸಹ ಕೇಳಿಸಿಕೊಳ್ಳಲಿ; ಆ ಮೂಲಕ ಅವರು ವಿಶೇಷವಿರೋಧ ಮಾಡುವಂತಾಗಿ ಸರ್ವನಾಶ ಹೊಂದಲಿ ಎಂಬುದೇ ಕಾರಣವಾಗಿದೆ. ಕ್ಷೀರಸಮುದ್ರತೀರದ ಆ ಸ್ಥಳ ಅಸುರರಿಗೆ ಅಗಮ್ಯವಾದ ಸ್ಥಳ. ಆದ್ದರಿಂದ ಅಲ್ಲಿಯ ವಿಚಾರ ಅಸುರರು ತಿಳಿಯುವಂತಿರಲಿಲ್ಲ. ಆದರೆ ಅಸುರರಿಗೆ ತಿಳಿಯಬೇಕೆಂಬುದು ಭಗವಂತನ ಸಂಕಲ್ಪವಾಗಿತ್ತು. ಅದಕ್ಕೆ ಅವರನ್ನು ಮೇರುಶಿಖರಕ್ಕೆ ಕರೆದೊಯ್ದ ಎಂಬ ವಿಶೇಷಾಂಶ [೧]ವಾದಿರಾಜೀಯದಲ್ಲಿದೆ.

---

೧. ಸತ್ಯಲೋಕಸ್ಥಿತೋ ಬ್ರಹ್ಮಾ ವಿಷ್ಣೋಃ ಸರ್ವೋತ್ತಮತ್ವಪ್ರದರ್ಶನಾಯ ಸ್ವಸ್ಯ ತಸ್ಮಿನ್ನಿರವಧಿಕಭಕ್ತಿಪ್ರಕಟನಾಯ ಚ ದೇವೈಃ ಸಹ ಪ್ರಾಕ್ ಶ್ವೇತದ್ವೀಪಂ ಜಗಾಮ । ತತ್ರಾಪಿ ಸರ್ವೈರದೃಶ್ಯಃ ಸನ್ ಭಗವಾನ್ ಬ್ರಹ್ಮಣ ಏವ ಸ್ವವಾಚಃ ಶ್ರಾವಯಾಮಾಸ । ತತಸ್ತೈರ್ದೇವೈಃ ಸಹ ರಾಜಾ ಕೋಶರಕ್ಷಕಮಿವ ಭುವೋ ರಕ್ಷಣಾಯ ಮೇರೌ ಸ್ಥಿತಂ ಬ್ರಹ್ಮಾಣಮಪಿ ದಯಯಾऽನುಕೂಲಯಿತುಂ ತೇನ ಕಾಶ್ಯಪಸ್ಯ ದತ್ತಶಾಪಂ ಚ ತನ್ಮುಖಾದೇವ ಶ್ರುತ್ವಾ ಮಾನಯಿತುಂ ''ವಸುಂಧರಾತಲೋದ್ಭವೋನ್ಮುಖಂ ಶ್ರುತಂ ದಿತೇಃ ಸುತೈಃ'' ಇತಿ ವಕ್ಷ್ಯಮಾಣಾತ್ವಾತ್ । ಅಸುರಾಗಮ್ಯಶ್ವೇತದ್ವೀಪಂ ವಿಹಾಯಾಸುರಾಗಮನಾರ್ಹಮೇರುಂ ಪ್ರಾಪ್ಯಾಸುರಾನ್ ಪ್ರತ್ಯಪಿ ಸುರಾಣಾಮವತಾರೋದ್ಯೋಗಂ ಶ್ರಾವಯಿತುಂ ಚ ಮೇರಾವಾಗತ್ಯ ದೃಶ್ಯ ಏವ ಸನ್ ತದ್ವಚನಾದೇವ ಸರ್ವಂ ಕಾರ್ಯಂ ಕೃತವಾನಿತಿ ವಿವೇಕಃ । ಅತೋ ಭಾಗವತಹರಿವಂಶೋಕ್ತ್ಯೋರ್ನ ವಿರೋಧ ಇತಿ ಜ್ಞೇಯಮ್ ॥ – (ವಾ.)

ವಸುದೇವನಾಗಿ ಕಶ್ಯಪಮುನಿಯ ಅವತಾರ

ಬ್ರಹ್ಮಾ ಪ್ರಣಮ್ಯಾಹ ತಮಾತ್ಮಕಾರಣಂ
ಪ್ರಾದಾಂ ಪುರಾऽಹಂ ವರುಣಾಯ ಗಾಃ ಶುಭಾಃ ।
ಜಹಾರ ತಾಸ್ತಸ್ಯ ಪಿತಾऽಮೃತಸ್ರವಾಃ
ಸ ಕಶ್ಯಪೋ ದ್ರಾಕ್ ಸಹಸಾऽತಿಗರ್ವಿತಃ ॥ ೨೨೧ ॥

ಅ: ಬ್ರಹ್ಮ ತನಗೆ ಜನ್ಮ ನೀಡಿದ ಹರಿಯನ್ನು ವಂದಿಸಿ, ಪ್ರಾರ್ಥಿಸಿದ : ''ಹಿಂದೆ ನಾನು ವರುಣನಿಗೆ ಅಪೂರ್ವ ಗೋವುಗಳನ್ನು ನೀಡಿದ್ದೆ. ಅಮೃತ ಸುರಿಸುವ ಆ ಗೋವುಗಳನ್ನು ಕಶ್ಯಪ, ತಾನು ತಂದೆ ಎಂಬ ಅತಿಯಾದ ಸೊಕ್ಕಿನಿಂದಾಗಿ ಅಪಹರಿಸಿದ.

ಮಾತ್ರಾ ತ್ವದಿತ್ಯಾ ಚ ತಥಾ ಸುರಭ್ಯಾ
ಪ್ರಚೋದಿತೇನೈವ ಹೃತಾಸು ತಾಸು ।
ಶ್ರುತ್ವಾ ಜಲೇಶಾತ್ ಸ ಮಯಾ ತು ಶಪ್ತಃ
ಕ್ಷತ್ರೇಷು ಗೋಜೀವನಕೋ ಭವೇತಿ ॥ ೨೨೨ ॥

ಅ: ತಾಯಿಯಾದ ಅದಿತಿಯಿಂದಲೂ, ಸುರಭಿಯಿಂದಲೂ ಪ್ರಚೋದಿತನಾಗಿ [೩]ಕಶ್ಯಪ ಅವುಗಳನ್ನು ಹಾಗೆ ಅಪಹರಿಸಲು ನಾನು ವರುಣನಿಂದ ವಿಷಯ ತಿಳಿದು ಅವನಿಗೆ ಶಾಪವಿತ್ತೆ : ''ಕ್ಷತ್ರಿಯನಾಗಿ ಜನಿಸಿ ಗೋಪಾಲಕನಾಗಿ ಜೀವಿಸು'' ಎಂದು.

---

೧. ಸಹಸಾ = ಬಲೇನೇತ್ಯರ್ಥಃ । – (ವ್ಯಾ.)

೨. ಕ್ಷೇತ್ರೇಷ್ವಿತಿ ಪಾಠೇ ಗೋಸಂಚರಣಯೋಗ್ಯಸ್ಥಾನೇಷು । – (ಜ.)

೩. ಪುರಾ ಹಿ ಕಶ್ಯಪೋ ವಿಷ್ಣೋ ವರುಣಸ್ಯ ಮಹಾತ್ಮನಃ ।
ಜಹಾರ ಯಜ್ಞಿಯಾ ಗಾ ವೈ ಪಯೋದಾಸ್ತು ಮಹಾಮಖೇ ॥
ಅದಿತಿಃ ಸುರಭಿಶ್ಚೈತೇ ದ್ವೇ ಭಾರ್ಯೇ ಕಶ್ಯಪಸ್ಯ ತು ।
ಪ್ರದೀಯಮಾನಾ ಗಾಸ್ತಾಸ್ತು ನೈಚ್ಛತಾಂ ವರುಣಸ್ಯ ವೈ ॥
ತತೋ ಮಾಂ ವರುಣೋऽಭ್ಯೇತ್ಯ ಪ್ರಣಮ್ಯ ಶಿರಸಾ ತತಃ ।
ಉವಾಚ ಭಗವನ್ ಗಾವೋ ಗುರುಣಾ ಮೇ ಹೃತಾ ಇತಿ ॥
ಕೃತಕಾರ್ಯೋ ಹಿ ಗಾಸ್ತಾಸ್ತು ನಾನುಜಾನಾತಿ ಮೇ ಗುರುಃ ।
ಅನ್ವವರ್ತತು ಭಾರ್ಯೇ ದ್ವೇ ಅದಿತಿಂ ಸುರಭಿಂ ತಥಾ ॥ .... – ಹರಿವಂಶ (೧/೫೫/೨೧-೨೪)

ವಿ: ಈ ಕಶ್ಯಪಶಾಪಪ್ರಸಂಗ ಹರಿವಂಶದಲ್ಲಿ ಬಂದಿದೆ(೧/೫೫/೨೧–೪೬). ಈ ಬ್ರಹ್ಮಶಾಪ–ದಿಂದಾಗಿ ಬ್ರಾಹ್ಮಣನಾಗಿದ್ದ ಕಶ್ಯಪ ಕ್ಷತ್ರಿಯನಾಗಿ ಹುಟ್ಟಿ, ವೈಶ್ಯನಂತೆ ಬದುಕುವಂತಾಯಿತು. ಯಾವುದೇ ರೀತಿಯಿಂದಲೇ ಆಗಲಿ ಗೋ ಅಪಹರಣದ ಕಾರ್ಯ ತುಂಬಾ ಅನರ್ಥಕರ ಎಂಬುದಕ್ಕೆ ಇದು ಮತ್ತೊಂದು ನಿದರ್ಶನ.

ಶೂರಾತ್ ಸ ಜಾತೋ ಬಹುಗೋಧನಾಢ್ಯೋ
ಭೂಮೌ ಯಮಾಹುರ್ವಸುದೇವ ಇತ್ಯಪಿ ।
ತಸ್ಯೈವ ಭಾರ್ಯಾ ತ್ವದಿತಿಶ್ಚ ದೇವಕೀ
ಬಭೂವ ಚಾನ್ಯಾ ಸುರಭಿಶ್ಚ ರೋಹಿಣೀ ॥ ೨೨೩ ॥

ಅ: ಅವನು ಶೂರನಿಂದ ಜನಿಸಿ, ಭೂಮಿಯಲ್ಲೂ ಅಸಂಖ್ಯಗೋಧನವನ್ನು ಹೊಂದಿ-ದವನಾದ. ಅವನನ್ನೇ ವಸುದೇವ ಎಂದೂ ಕರೆಯುವರು. ಅದಿತಿ ಅವನ ಹೆಂಡತಿಯಾದ ದೇವಕಿಯಾದಳು. ಸುರಭಿ ಮತ್ತೊಬ್ಬ ಪತ್ನಿ ರೋಹಿಣಿಯಾದಳು.

ವಿ: ಆನಕದುಂದುಭಿ[೧] ಎಂಬುದು ವಸುದೇವನ ಮತ್ತೊಂದು ಹೆಸರು. ಅವನು ಜನಿಸುತ್ತಲೆ ದೇವದುಂದುಭಿ ಮೊಳಗಿದವಂತೆ. ಅದಕ್ಕೇ ಅವನಿಗೆ ಆ ಹೆಸರು.

ನಂದಗೋಪ, ಯಶೋದೆಯರು

ತತ್ ತ್ವಂ ಭವಸ್ವಾಶು ಚ ದೇವಕೀಸುತ–
ಸ್ತಥೈವ ಯೋ ದ್ರೋಣನಾಮಾ ವಸುಃ ಸಃ ।
ಸ್ವಭಾರ್ಯಯಾ ಧರಯಾ ತ್ವತ್ಪಿತೃತ್ವಂ
ಪ್ರಾಪ್ತುಂ ತಪಸ್ತೇಪ ಉದಾರಮಾನಸಃ ॥ ೨೨೪ ॥

---

೧. ವಸುದೇವೋ ಮಹಾಬಾಹುಃ ಪೂರ್ವಮಾನಕದುಂದುಭಃ ।
ಜಜ್ಞೇ ಯಸ್ಯ ಪ್ರಸೂತಸ್ಯ ದುಂದುಭ್ಯಃ ಪ್ರಾಣದನ್ ದಿವಿ ॥
ಆನಕಾನಾಂ ಚ ಸಂಹ್ಲಾದಃ ಸುಮಹಾನಭವದ್ದಿವಿ ।
ಪಪಾತ ಪುಷ್ಪವರ್ಷಂ ಚ ಶೂರಸ್ಯ ಭವನೇ ಮಹತ್ ॥
ಮನುಷ್ಯಲೋಕೇ ಕೃತ್ಸ್ನೇಽಪಿ ರೂಪೋ ನಾಸ್ತಿ ಸಮೋ ಭುವಿ ।
ಯಸ್ಯಾಸೀತ್ ಪುರುಷಾಗ್ರ್ಯಸ್ಯ ಕಾಂತಿಶ್ಚಂದ್ರಮಸೋ ಯಥಾ ॥ – ಹರಿವಂಶ (೧/೩೪/೧೮-೨೦)

ಅ: ಆದ್ದರಿಂದ ನೀನು ಬೇಗನೆ ದೇವಕೀಸುತನಾಗು. ಹಾಗೆಯೇ ದ್ರೋಣ ಎಂಬ ಹೆಸರಿನ ವಸು ತನ್ನ ಪತ್ನಿಯಾದ ಧರೆಯೊಂದಿಗೆ ಕೂಡಿ, ನಿನ್ನ ತಂದೆ ಎನ್ನಿಸಬೇಕೆಂದು ಉತ್ತಮಮನಸ್ಸಿನಿಂದ ತಪಸ್ಸು ಮಾಡಿರುವನು.

ವಿ: ದ್ರೋಣವಸುವಿಗೆ ಶ್ರೀಹರಿ ತನ್ನ ಮಗನಾಗಬೇಕು ಎಂಬಲ್ಲಿ ದುರುದ್ದೇಶ ಯಾವುದೂ ಇರಲಿಲ್ಲ ಎಂಬುದನ್ನು ಸೂಚಿಸಲು 'ಉದಾರಮಾನಸಃ' ಎಂಬ ವಿಶೇಷಣವನ್ನು ಪ್ರಯೋಗಿಸಿರುವರು.

ತಸ್ಮೈ ವರಃ ಸ ಮಯಾ ಸನ್ನಿಸೃಷ್ಟಃ
ಸ ಚಾಸ ನಂದಾಖ್ಯ ಉತಾಸ್ಯ ಭಾರ್ಯಾ ।
ನಾಮ್ನಾ ಯಶೋದಾ ಸ ಚ ಶೂರತಾತ[೧]-
ಸುತಸ್ಯ ವೈಶ್ಯಾಪ್ರಭವೋಽಥ[೨] ಗೋಪಃ ॥ ೨೨॥

ಅ: ಅವನಿಗೆ ನಾನು ವರವನ್ನು ನೀಡಿರುವೆನು. ಅವನು ನಂದ ಎಂಬವನಾಗಿ ಹುಟ್ಟಿರುವನು. ಅವನ ಪತ್ನಿಯು ಯಶೋದೆ ಎಂಬ ಹೆಸರಿನಿಂದ ಹುಟ್ಟಿರುವಳು. ಆ ನಂದನು ಶೂರನಿಗೆ ವೈಶ್ಯಜಾತಿಯ ಪತ್ನಿಯಲ್ಲಿ ಮಗನಾಗಿ ಜನಿಸಿರುವನು; ಆದ್ದರಿಂದ ಗೋಪಾಲಕನಾಗಿರುವನು.

ವಿ: ೧) ವಸುದೇವನಂತೆ ನಂದನೂ ಶೂರನ ಮಗನೇ; ಎಂದರೆ ಅವರಿಬ್ಬರೂ ಅಣ್ಣತಮ್ಮಂದಿರು. ವಸುದೇವ ಕ್ಷತ್ರಿಯಸ್ತ್ರೀಯ ಮಗನಾದರೂ, ಬ್ರಹ್ಮಶಾಪದಿಂದಾಗಿ ರಾಜನಾಗದೆ, ಗೋಪಾಲಕನಾಗುವಂತಾಯಿತು. ಆದರೆ ನಂದ ವೈಶ್ಯಸ್ತ್ರೀಯ ಮಗನಾದ್ದರಿಂದ ಅವನು ಸಹಜವಾಗಿಯೇ ಗೋಪನಾದ ('ಮಾತೃಜಾತಿಃ ಪಿತುರ್ಗುಣಾಃ'). ಗೋಪಾಲನಕಾರ್ಯ ವೈಶ್ಯವೃತ್ತಿಯೆಂಬ ವಿಚಾರ [೩]ಗೀತೆಯಲ್ಲಿ ಬಂದಿದೆ.

---

೧. ಶೂರತಾತಸುತಸ್ಯ = ಶೂರಸ್ಯ ತಾತಃ ಪಿತಾ ಶೂರಪಿತಾ ತಸ್ಯ ಸುತಃ ಶೂರ ಏವ । ತಸ್ಯೇತ್ಯರ್ಥಃ । ಶೂರಸ್ಯೇತಿ ವಕ್ತವ್ಯೇ ಛಂದೋಭಂಗಪರಿಹಾರಾರ್ಥಮೇವಮುಕ್ತಿಃ । ಘಟಸ್ಯೇತಿ ವಕ್ತವ್ಯೇ ಘಟಾಭಾವಾಭಾವಸ್ಯೇತಿವತ್ ತರ್ಕಮುದ್ರಯೇತಿ ಜ್ಞೇಯಮ್ । – (ವಾ.)

.... ಶೂರಸ್ಯ ತಾತಃ ತಸ್ಯ ಸುತಃ ಶೂರಭ್ರಾತಾ ತಸ್ಯ ಸಕಾಶಾತ್ ಶೂರಸ್ಯ ವಾ । – (ಜ.)

ಶೂರತಾತಸುತಃ ಶೂರ ಏವೇತಿ ಕೇಚಿತ್ । ಶೂರಾದನ್ಯಸುತಸ್ಯೇತಿ ಕೇಚಿತ್ । – (ತಾ.)

ತಾತಸುತಸ್ಯ ತಾತೋದ್ಧಾರಕಸುತಸ್ಯ ಶೂರಸ್ಯ ಸಕಾಶಾತ್ ವೈಶ್ಯಾಂ ಪ್ರಭವ ಇತ್ಯೇತದ್ಧಿ ಪ್ರಸಿದ್ಧಮಿತ್ಯರ್ಥಃ। – (ಸ.)

೨. ಅವ್ಯಯಾನಾಮನೇಕಾರ್ಥತ್ವಾದಥ = ತಸ್ಮಾತ್ ವೈಶ್ಯಾಪುತ್ರತ್ವಾತ್ ಗೋಪ ಇತ್ಯರ್ಥಃ ॥ – (ವಾ.)

೩. ಕೃಷಿಗೋರಕ್ಷವಾಣಿಜ್ಯಂ ವೈಶ್ಯಕರ್ಮ ಸ್ವಭಾವಜಮ್ – ಗೀತಾ (೧೮/೪೪)

೨) ಶೂರನನ್ನು 'ಶೂರತಾತಸುತ' ಎಂದಿರುವರು. ಶೂರನ ತಂದೆಯ ಮಗ ಎಂದು ಅದರ ಅರ್ಥ; ಎಂದರೆ ಶೂರ ಎಂದೇ ಆಗುವುದು. ಹಾಗೆ ಕರೆಯಲು ಕಾರಣವನ್ನು ಶ್ರೀಸತ್ಯಾಭಿನವತೀರ್ಥರು ಹೀಗೆ ತಿಳಿಸಿರುವರು:

'ತಾತಸುತಸ್ಯ ತಾತೋದ್ಧಾರಕಸುತಸ್ಯ ಇತ್ಯರ್ಥೇ ತಾತ್ಪರ್ಯಮ್ ।'

ಎಂದರೆ ತಂದೆಯನ್ನು ಉದ್ಧರಿಸುವ ಮಗನಾದ್ದರಿಂದ ಶೂರನನ್ನು 'ತಾತಸುತ' ಎಂದು ಕರೆದಿರುವರು ಎಂದು ಇದರ ಅರ್ಥ. ರುಗ್ಮಿ ಮೊದಲಾದವರು ತಂದೆಯ ಮಕ್ಕಳೇ ಆದರೂ, ಅವರು ವಂಶೋದ್ಧಾರಕರಾಗದೆ, ವಂಶನಾಶಕರೇ ಆದರು. ಶೂರ ಹಾಗಲ್ಲ; ಕೃಷ್ಣನಂತಹ ಮೊಮ್ಮಗನನ್ನೇ ಪಡೆಯುವ ಮಹಾಭಾಗ್ಯಶಾಲಿಯಾಗಿ ವಂಶೋದ್ಧಾರಕನಾದವನು. ಅದಕ್ಕೆಂದೇ ಅವನು 'ತಾತಸುತ' ಎಂದು ಈ ವ್ಯಾಖ್ಯಾನದ ತಾತ್ಪರ್ಯ. 'ತ್ರಾತಾ ಯ ಏವ ನರಕಾತ್ ಸ ಹಿ ಪುತ್ರನಾಮಾ' (ಸುಮಧ್ವವಿಜಯ ೨/೧೭) ಎಂಬಂತೆ. ಈ ಶೂರನ ಪೌತ್ರ ಶ್ರೀಕೃಷ್ಣಸರ್ವೋತ್ತಮ; ದೌಹಿತ್ರ ಭೀಮಸೇನ ಜೀವೋತ್ತಮ ಎಂಬುದು ಮತ್ತೊಂದು ವಿಶೇಷ.

೩) ಶೂರನು ತಾತಸುತ ತನ್ನ ತಂದೆಯ ಔರಸಪುತ್ರ, ಎಂದರೆ ಸಾಕ್ಷಾತ್ ಪುತ್ರ; ತಂದೆಯಿಂದಲೇ ಜನಿಸಿದ ಮಗ. ಕರ್ಣಾದಿಗಳಂತೆ ಸಾಕುಮಗನಾಗಲಿ, ಪಾಂಡುರಾಜ ಮೊದಲಾದವರಂತೆ ಕ್ಷೇತ್ರಜನಾಗಲೀ, ದತ್ತುಮಗನಾಗಲೀ, ಬಾಹ್ಲೀಕ ಮೊದಲಾದವರಂತೆ ಪುತ್ರಿಕಾಪುತ್ರಧರ್ಮದಿಂದ ಹುಟ್ಟಿದ ಮಗನಾಗಲೀ ಅಲ್ಲ ಎಂಬ ಮತ್ತೊಂದು ರೀತಿಯ ಅರ್ಥವನ್ನೂ ಮಾಡಬಹುದು. ಆರು ತೆರನಾಗಿ ಪುತ್ರತ್ವ ಬರಲು ಸಾಧ್ಯ ಎಂಬ [೧]ಮಹಾಭಾರತದ ಮಾತೂ ಗಮನಾರ್ಹ.

ತೌ ದೇವಕೀವಸುದೇವೌ ಚ ತೇಪತು-
ಸ್ತಪಸ್ತ್ವದೀಯಂ ಸುತಮಿಚ್ಛಮಾನೌ ।
ತ್ವಾಮೇವ ತಸ್ಮಾತ್ ಪ್ರಥಮಂ ಪ್ರದರ್ಶ್ಯ
ತತ್ರ ಸ್ವರೂಪಂ ಹಿ ತತೋ[೨] ವ್ರಜಂ ವ್ರಜ ॥ ೨೨೬ ॥

ಅ: ಆ ದೇವಕೀ ವಸುದೇವರು ನಿನ್ನನ್ನು ಮಗನಾಗಿ ಹೊಂದಬಯಸಿ, ನಿನ್ನನ್ನು ಕುರಿತು ತಪಸ್ಸನ್ನು ಆಚರಿಸಿರುವರು. ಆದ್ದರಿಂದ ನೀನು ಮೊದಲಿಗೆ ಅವರಲ್ಲಿ ನಿನ್ನ ರೂಪವನ್ನು ತೋರಿಸಿ, ಬಳಿಕ ಗೋಕುಲಕ್ಕೆ ತೆರಳು.

---

೧. ಸ್ವಯಂಜಾತಃ ಪ್ರಣೀತಶ್ಚ ತತ್ಸಮಃ ಪುತ್ರಿಕಾಸುತಃ ।
ಪೌನರ್ಭವಶ್ಚ ಕಾನೀನಃ ಭಗಿನ್ಯಾಂ ಯಶ್ಚ ಜಾಯತೇ ॥ – ಭಾರತ (ಆದಿ. ೧೧೯/೩೩)

೨. ಹಿಶಬ್ದೇನ ದರ್ಶನಮೇವ ಭಗವತೋ ಜನನಂ ನಾಪರಮಿತಿ ಸೂಚಯತಿ ॥ – (ವಾ.)

ವಿ: ೧) ವಸುದೇವ ದೇವಕಿಯರಂತೆ ನಂದಗೋಪ ಯಶೋದೆಯರು ಕೃಷ್ಣನನ್ನೇ ಮಗನಾಗಿ ಪಡೆಯಲು ತಪಸ್ಸು ಮಾಡಿರುವರು. ವಸ್ತುತಃ ಭಗವಂತನಿಗೆ ಹುಟ್ಟೇ ಇಲ್ಲ. ಆದ್ದರಿಂದ ಅವನು ಮೊದಲು ವಸುದೇವ, ದೇವಕಿಯರಿಗೆ ಪುತ್ರತ್ವೇನ ಅವತರಿಸಿ, ಅನಂತರ ನಂದಗೋಪ, ಯಶೋದೆಯರ ಬಳಿಗೆ ತೆರಳಿ, ಅವರ ಪುತ್ರನಂತೆಯೂ ಇರಬೇಕು ಎಂಬುದು ಬ್ರಹ್ಮದೇವರ ಪ್ರಾರ್ಥನೆಯ ಆಶಯ.

೨) ನಂದಗೋಪ, ಯಶೋದೆಯರು ಬ್ರಹ್ಮನಿಂದ ವರ ಪಡೆದಿದ್ದರೆ, ದೇವಕೀ, ವಸುದೇವರು ವಿಷ್ಣುವಿನಿಂದಲೇ ನೇರವಾಗಿ ವರ ಪಡೆದಿರುವರು. ಆದ್ದರಿಂದ ಮೊದಲು ವಸುದೇವ, ದೇವಕಿಯರ ಪುತ್ರನಂತೆ ಅವತರಿಸಿ, ಅನಂತರ ಗೋಕುಲಕ್ಕೆ ತೆರಳಿ ನಂದಗೋಪ, ಯಶೋದೆಯರ ಪುತ್ರನಂತೆ ಇರಬೇಕು ಎನ್ನಲು ಇದೇ ಹಿನ್ನೆಲೆ. ಅಲ್ಲದೆ, ಕೃಷ್ಣ ಮುಖ್ಯವಾಗಿ ವಸುದೇವ, ದೇವಕಿಯರ ಪುತ್ರನೆಂದೇ ಲೋಕದಲ್ಲಿ ಪ್ರಸಿದ್ಧನಾಗಲು ಅವರಿಬ್ಬರೂ ಹೀಗೆ ನೇರವಾಗಿ ವಿಷ್ಣುವಿನಿಂದಲೇ ವರ ಪಡೆದಿರುವುದೇ ಪ್ರಧಾನಕಾರಣ.

೩) ಒಮ್ಮೆ ದೇವಕಿ, ವಸುದೇವರು ಪೃಶ್ನಿ ಮತ್ತು ಸುತಪಸ್ ಎಂಬ ದಂಪತಿಗಳಾಗಿದ್ದರು. ಆಗ ಸುತಪಸ್ ಒಬ್ಬ ಪ್ರಜಾಪತಿ. ಆಗ ಅವರಿಬ್ಬರೂ ಬ್ರಹ್ಮದೇವರ ಆದೇಶದಂತೆ, ದೇವಮಾನದ ೧೨೦೦೦ ವರ್ಷಗಳ ಕಾಲ (ಎಂದರೆ ಒಂದು ಮಹಾಯುಗಪರ್ಯಂತ; ಒಟ್ಟು ೪೩,೨೦,೦೦೦ ವರ್ಷ ಎಂದರ್ಥ) ಶ್ರೀಹರಿಗೆ ಸಮನಾದ ಮಗನನ್ನು ಪಡೆಯಲೆಂದು ಅವನನ್ನೇ ಕುರಿತು ತೀವ್ರತಪಸ್ಸು ಮಾಡಿದ್ದರು. ಆಗ ವಿಷ್ಣುಪ್ರತ್ಯಕ್ಷನಾಗಿ ಅವರಿಗೆ ತಾನು ಮೂರು ಬಾರಿ ಪುತ್ರತ್ವೇನ ಅವತರಿಸುವುದಾಗಿ ವರ ನೀಡಿದ್ದ. ಪೃಶ್ನಿಗರ್ಭ ಮೊದಲನೆಯ ರೂಪ; ಎರಡನೆಯದು ವಾಮನ; ಮೂರನೆಯದು ಕೃಷ್ಣ. ಈ ವಿವರ ಭಾಗವತಪುರಾಣದಲ್ಲಿ ಬಂದಿದೆ (೧೦/೩/೩೨–೪೫).

ಇತೀರಿತಃ ಸೋಽಬ್ಜಭವೇನ ಕೇಶವ-
ಸ್ತಥೇತಿ ಚೋಕ್ತ್ವಾ ಪುನರಾಹ ದೇವತಾಃ ।
ಸರ್ವೇ ಭವಂತೋ ಭವತಾಶು[೧] ಮಾನುಷೇ
ಕಾರ್ಯಾನುಸಾರೇಣ[೨] ಯಥಾಽನುರೂಪತಃ ॥ ೨೨೭ ॥

---

೧. ಭಾಗವತಹರಿವಂಶಾದಿಗ್ರಂಥೇ 'ಅಯಮಸ್ಮಾಜ್ಜಾತಃ ಅಯಮಸ್ಮಾಜ್ಜಾತ' ಇತಿ ನಿರೂಪಿತಂ ತದನುಕೂಲ-ರೂಪತಃ । ಮಾನುಷೇಷ್ವನುಕೂಲರೂಪತ ಇತಿ ವದತಾ ಯಸ್ಯ ಬ್ರಾಹ್ಮಣೇಷು ಜನ್ಮೋಕ್ತಂ ಬೃಹಸ್ಪತ್ಯಾದೇಃ ಸ ಬ್ರಾಹ್ಮಣರೂಪತಯಾಽವತರತು । ಯಸ್ಯ ಕ್ಷತ್ರಿಯತಯಾ ಜನ್ಮೋಕ್ತಂ ಧರ್ಮರಾಜಾದೇಃ ಸ ಕ್ಷತ್ರಿಯರೂಪತಯಾಽವತರತು । ಯಸ್ಯ ಪುನಃ ಶಾಪಾದಿನಿಮಿತ್ತಾಚ್ಛೂದ್ರತಯಾ ಜನ್ಮೋಕ್ತಂ ವಿದುರಾದೇಃ ಸ ಶೂದ್ರತಯಾಽವತರತ್ವಿತ್ಯಾದಿಕಂ ಸೂಚಿತಮ್ ॥ –(ವಾ.)

೨. ಕಾರ್ಯಾನುಸಾರೇಣ ಸುಪ್ರತೀಕಹಸ್ತಿಪ್ರಾಪ್ತಿರೂಪಾದಿಸ್ವಕಾರ್ಯಾನುಕೂಲೇನ ಬಲಕಾರ್ಯಾನುಸಾರೇಣ ವಾ। ಯಥಾಽನುರೂಪತಃ ಚತುರ್ವರ್ಣೇಷು ಯೋಗ್ಯತಾನುಸಾರೇಣ। -(ಜ.)

ಅ: ಹೀಗೆ ಬ್ರಹ್ಮಪ್ರಾರ್ಥಿಸಲು ಬ್ರಹ್ಮರುದ್ರರ ಪ್ರವರ್ತಕನಾದ ಶ್ರೀಹರಿಯು ''ಹಾಗೆಯೇ ಆಗಲಿ'' ಎಂದು ನುಡಿದು, ದೇವತೆಗಳಿಗೆ ತಿಳಿಸಿದ : ''ನೀವೆಲ್ಲರೂ ಬೇಗನೆ ನಿಮ್ಮ ಕಾರ್ಯಕ್ಕೆ ಒಪ್ಪುವ ಯಥಾಯೋಗ್ಯ ರೀತಿಯಲ್ಲಿ ಬೇಗನೆ ಮನುಷ್ಯಲೋಕದಲ್ಲಿ [೧]ಅವತರಿಸಿರಿ''.

ವಿ: ೧) ಇಲ್ಲಿ 'ಕಾರ್ಯಾನುಸಾರೇಣ' ಎಂದರೆ ಅವರ ಅವತಾರಕಾರ್ಯಕ್ಕೆ ಅನುಸಾರವಾಗಿ ಎಂದೂ, 'ಯಥಾऽನುರೂಪತಃ' ಎಂದರೆ ಬ್ರಾಹ್ಮಣಾದಿನಾಲ್ಕುವರ್ಣಗಳಲ್ಲಿ ಎಂದೂ ಅರ್ಥ*.

೨) ನರಕಾಸುರನಿಂದ ಅಪಹೃತವಾದ ಸುಪ್ರತೀಕ ಎಂಬ ತನ್ನ ದಿಗ್ಗಜವನ್ನು ಮರಳಿ ಪಡೆಯಲು ಕುಬೇರ ನರಕಾಸುರಪುತ್ರ ಭಗದತ್ತನಾಗಿ ಅವತರಿಸಿದ್ದು, ಕಾರ್ಯಾನುಸಾರಅವತಾರ–ಪ್ರಸಂಗಕ್ಕೆ ಒಂದು ನಿದರ್ಶನ. ಅದರಂತೆ ಬ್ರಾಹ್ಮಣದೇವತೆಯಾದ ಬೃಹಸ್ಪತ್ಯಾಚಾರ್ಯರು ದ್ರೋಣರೆಂಬ ಬ್ರಾಹ್ಮಣರೂಪದಿಂದ ಅವತರಿಸಿದ್ದು ವರ್ಣಾನುರೂಪಅವತಾರಕ್ಕೆ ನಿದರ್ಶನ. ಅವರೇ ಉದ್ಧವ ಎಂಬ ಕ್ಷತ್ರಿಯರೂಪದಿಂದ ಇನ್ನೊಂದು ರೂಪದಿಂದ ಅವತರಿಸಿದ್ದು ಕಾರ್ಯಾನುಸಾರೇಣ ಅವತಾರಕ್ಕೆ ಮತ್ತೊಂದು ದೃಷ್ಟಾಂತ. ಶಾಪಾದಿನಿಮಿತ್ತದಿಂದ ಗಂಧರ್ವ(ಧೃತರಾಷ್ಟ್ರ) ಹಾಗೂ ಮರುತ್ತು(ಪರಾವಹ)ಗಳಿಗಿಂತ ಮಿಗಿಲಾದ ಯಮದೇವರು ಕ್ಷತ್ರಿಯರಾಗಿ ಅವತರಿಸದೆ, ವಿದುರ ಎಂಬ ಶೂದ್ರರೂಪದಿಂದ ಹುಟ್ಟಿದ್ದು ವಿಶೇಷಕಾರ್ಯಕ್ಕೆ ಅನುಗುಣವಾದ ಅವತಾರಕ್ಕೆ ಮತ್ತೊಂದು ನಿದರ್ಶನ.

ಅಥಾವತೀರ್ಣಾಃ ಸಕಲಾಶ್ಚ ದೇವತಾ
ಯಥಾ ಯಥೈವಾಹ ಹರಿಸ್ತಥಾ ತಥಾ ।
ವಿತ್ತೇಶ್ವರಃ ಪೂರ್ವಮಭೂದ್ಧಿ ಭೌಮಾ-
ದ್ಧರೇಃ ಸುತತ್ವೇऽಪಿ ತದಿಚ್ಛಯಾऽಸುರಾತ್ ॥ ೨೨೮ ॥

ಅ: ಅದರಂತೆ ಶ್ರೀಹರಿ ಹೇಗೆ ಹೇಗೆ ತಿಳಿಸಿದನೋ, ಹಾಗೆ ಹಾಗೆಯೇ ಸಕಲದೇವತೆಗಳೂ ಅವತರಿಸಿದರು. ಆ ಮುನ್ನವೇ ಕುಬೇರ ಶ್ರೀಹರಿಯ ಪುತ್ರನಾಗಿದ್ದರೂ ಅಸುರನಾಗಿದ್ದ ನರಕಾಸುರನಿಂದ ಹುಟ್ಟಿದ್ದ.

---

೧. 'ವಿಶೇಷಾದ್ಭಾರತೇ ಪುಣ್ಯಂ ಚರೇಯುಃ ಪಾಪಮಪ್ಯಥ ।
ತಥೈವ ಭಗವದ್ಭಕ್ತಿಂ ಪೃಥಿವ್ಯಾಂ ನಾನ್ಯವರ್ಷಗಾಃ' ಇತಿ ಬ್ರಹ್ಮಾಂಡೇ ॥ – ಭಾ.ತಾ.(೫/೬/೧೪)

೨. ಹರೇಃ ಸುತತ್ವೇऽಪಿ ಅಸುರಾತ್ ಭೌಮಾನ್ನರಕಾತ್ । ತದಿಚ್ಛಯಾ = ಹರೀಚ್ಛಯಾ ಪೂರ್ವಮೇವಾಭೂತ್ । ಅವತಾರೇ ಹರಿಸುತಸ್ಯಾಸುರತ್ವಂ ಪ್ರಾಯಃ ಗರ್ಹಿತಮಿತಿ ಸೂಚನಾಯಾಪಿಪದಮ್ । ಪೂರ್ವಮಭೂದ್ಧೀತಿ ಹಿಶಬ್ದೇನ ತಥಾ ಪ್ರಮಾಣಪ್ರಸಿದ್ಧಿಂ ಸೂಚಯತಿ । ಅಸುರಾದುತ್ಪತ್ತ್ಯೌ ಪ್ರಯೋಜನಪ್ರಸಿದ್ಧಿಂ ವಾ ಸೂಚಯತಿ ॥ – (ವಾ.)

ವಿ: ೧) ಈ ರೀತಿ ಶ್ರೀಹರಿಯ ಆಜ್ಞೆಗಿಂತ ಮುಂಚಿತವಾಗಿಯೇ ಕುಬೇರ ಭಗದತ್ತನಾಗಿ ಹುಟ್ಟಿದ್ದ ದ್ರೋಣಪರ್ವದಲ್ಲಿ ಭಗದತ್ತ ಮಡಿಯುವಾಗ ಅವನು ತುಂಬಾ ವೃದ್ಧನಾಗಿದ್ದ ಉಲ್ಲೇಖ ಬಂದಿದೆ. ಆದ್ದರಿಂದ ಅವನು ಶ್ರೀಕೃಷ್ಣಾವತಾರಕ್ಕಿಂತ ಮುಂಚಿತವಾಗಿಯೇ ಹುಟ್ಟಿದ್ದ ಎಂಬುದು ಸ್ಪಷ್ಟ. ಅವನು ಜರಾಸಂಧನೊಂದಿಗೆ ಸೇರಿ ಕೃಷ್ಣನ ವಿರುದ್ಧ ಯುದ್ಧಕ್ಕೆ ಬರುತ್ತಿದ್ದುದು ಸಹ ಇದನ್ನು ಸಮರ್ಥಿಸುವುದು.

೨) ಹರಿಯ ಮಗನೆಂದ ಮೇಲೆ ನರಕಾಸುರ ಅದೇಕೆ ದುಷ್ಟ? ಎಂಬುದಕ್ಕೆ ಸಮಾಧಾನವನ್ನು 'ಶ್ರೀಹರಿಯ ಇಚ್ಛೆಯಿಂದಲೇ ಅಂತಹವನು ಜನಿಸಿದ' ಎಂಬ ಮಾತಿನಿಂದ ನೀಡಿರುವರು. ಬ್ರಹ್ಮದೇವರಿಂದ ಹುಟ್ಟಿದ್ದ ಆದಿಹಿರಣ್ಯಾಕ್ಷ ಸಹ ಇಂತಹ ಒಬ್ಬ ಮಹಾಅಸುರ ಎಂಬುದನ್ನು ಗಮನಿಸಬೇಕು. ಸರ್ವೋತ್ತಮನಾದ ಹರಿಯ ಮಗನೇ ಆಗಲಿ, ಜೀವೋತ್ತಮನಾದ ಬ್ರಹ್ಮನ ಮಗನೇ ಆಗಲಿ, ಅವರವರ ಸ್ವರೂಪ ಅವರದ್ದೇ ಎಂಬ ತತ್ತ್ವವನ್ನು ತಿಳಿಸಲು ಅವರಿಬ್ಬರೂ ಅಂತಹ ಅಸುರರಿಗೆ ಜನ್ಮ ನೀಡಿದ್ದರು ಎಂದು ತಿಳಿಯಬೇಕು. ಅಂತೂ ಅವರಿಬ್ಬರೂ ಸ್ವೇಚ್ಛೆಯಿಂದಲೇ ಹಾಗೆ ಮಾಡಿದ್ದರು. ಧೃತರಾಷ್ಟ್ರಾದಿಗಳಿಗೆ ದುರ್ಯೋಧನಾದಿದುಷ್ಟಪುತ್ರರು ಅನಪೇಕ್ಷಿತವಾಗಿ ಜನಿಸಿದಂತೆ ಈ ಪ್ರಸಂಗಗಳಲ್ಲ ಎಂಬುದು ತಾತ್ಪರ್ಯ.

೧
ಪಾಪೇನ ತೇನಾಪಹೃತೋ ಹಿ ಹಸ್ತೀ
ಶಿವಪ್ರದತ್ತಃ ಸುಪ್ರತೀಕಾಭಿಧಾನಃ ।
ತದರ್ಥಮೇವಾಸ್ಯ ಸುತೋಽಭಿಜಾತೋ
ಧನೇಶ್ವರೋ ಭಗದತ್ತಾಭಿಧಾನಃ ॥ ೨೨೯ ॥

ಅ: ಪಾಪಿಯಾದ ನರಕಾಸುರ ಕುಬೇರನಿಗೆ ರುದ್ರದೇವರು ನೀಡಿದ್ದ ಸುಪ್ರತೀಕವೆಂಬ ಹೆಸರಿನ ಆನೆಯನ್ನು ಅಪಹರಿಸಿದ್ದ. ಅದಕ್ಕೆಂದೇ ಕುಬೇರ ಭಗದತ್ತನೆಂಬ ಹೆಸರಿನಿಂದ ಅವನ ಪುತ್ರನಾಗಿ ಜನಿಸಿದ.

ವಿ: ೧) ನರಕಾಸುರನಿಗೆ ಬ್ರಹ್ಮದೇವರ ವರವಿದ್ದದ್ದರಿಂದ ತನ್ನ ಆನೆಯನ್ನು ಅವನು ಅಪಹರಿಸುವುದನ್ನು ತಪ್ಪಿಸಲಾಗಲಿ, ಅಪಹರಿಸಿದ್ದನ್ನು ಬಿಡಿಸಿಕೊಳ್ಳಲಾಗಲಿ ಕುಬೇರನಿಗೆ ಸಾಧ್ಯ– ವಿರಲಿಲ್ಲ. ಅದರಂತೆ ಶಿವ ನೀಡಿದ್ದ ಅಂತಹ ಅಪೂರ್ವವಾದ ಆನೆಯನ್ನು ಬಿಟ್ಟರಲೂ ಅವನಿಗೆ ಸಾಧ್ಯವಾಗಲಿಲ್ಲ. ಅವನಿಗೆ ಮಗನಾಗಿ ಜನಿಸಿದಲ್ಲಿ ಆ ಆನೆ ಸುಲಭವಾಗಿ ತನ್ನ ಕೈಸೇರುವುದೆಂದು

---

೧. ತದೇವ ಪ್ರಯೋಜನಂ ವಿಶದಯತಿ – ಪಾಪೇನೇತಿ ॥ – (ವಾ.)

ಬುದ್ಧಿಪೂರ್ವಕವಾಗಿ ಕುಬೇರ ಹಾಗೆ ಹುಟ್ಟಿದ್ದ. ಇದು ಭಾಗವತಾಮೃತಶ್ರವಣ ಮಾಡಲು ಶಿವ ಶುಕಮುನಿಯಾಗಿ ಶ್ರೀವ್ಯಾಸಪುತ್ರನೆನ್ನಿಸಿದ್ದು ಇಂತಹುದೇ ಪ್ರಸಂಗ ಎನ್ನಬಹುದು. ಇದು ಭೌತಿಕ ಸಂಪತ್ತಿನ ಪ್ರಾಪ್ತಿಗಾಗಿ ಆದರೆ, ಅದು ಆಧ್ಯಾತ್ಮಿಕಸಂಪತ್ತಿನ ಪ್ರಾಪ್ತಿಗಾಗಿ ಎಂಬುದು ವಿಶೇಷ.

೨) ಸುಪ್ರತೀಕ ಎಂಬುದು ಸಮುದ್ರಮಥನಕಾಲದಲ್ಲಿ ಹುಟ್ಟಿದ ಅಷ್ಟದಿಗ್ಗಜಗಳಲ್ಲಿ ಒಂದು ಎಂಬ ವಿವರ ಈಗಾಗಲೇ ಬಂದಿದೆ (ಅ. ೧೦, ಶ್ಲೋ. ೧೯).

ಮಹಾಸುರಸ್ಯಾಂಶಯುತಃ ಸ ಏವ
ರುದ್ರಾವೇಶಾದ್ಬಲವಾನಸ್ತ್ರವಾಂಶ್ಚ।
ಶಿಷ್ಯೋ ಮಹೇಂದ್ರಸ್ಯ ಹತೇ ಬಭೂವ
ತಾತೇ ಸ್ವಧರ್ಮಾಭಿರತಶ್ಚ ನಿತ್ಯಮ್ ॥ ೨೩೦ ॥

ಅ: ಮಹಾಅಸುರನೊಬ್ಬನ ಅಂಶದಿಂದ ಕೂಡಿದ್ದ ಅವನು ರುದ್ರದೇವರ ಆವೇಶದಿಂದಾಗಿ ತುಂಬಾ ಬಲಶಾಲಿಯೂ, ಅಸ್ತ್ರಜ್ಞನೂ ಆಗಿದ್ದ. ಮಹೇಂದ್ರನಿಗೆ ಶಿಷ್ಯನಾಗಿದ್ದ ಅವನು ತನ್ನ ತಂದೆಯಾದ ನರಕಾಸುರ ಹತನಾದ ಮೇಲೆ, ಸ್ವಧರ್ಮದಲ್ಲಿ ಸದಾ ನಿರತನಾದ.

ವಿ: ೧) ಕುಬೇರನು ನರಕಾಸುರನ ಮಗನಾಗಿ ಹುಟ್ಟಿದ್ದರಿಂದ ಅವನಲ್ಲಿ ಒಬ್ಬ ಅಸುರನ ಆವೇಶವೂ ಸೇರಿಕೊಂಡಿತ್ತು. ಆ ಅಸುರನ ಹೆಸರು ಬಾಷ್ಕಲ ಎಂಬ ವಿಶೇಷಾಂಶ ಜನಾರ್ದನೀಯದಲ್ಲಿದೆ[೧].

೨) ಶ್ರೀಕೃಷ್ಣನಿಂದ ನರಕಾಸುರನ ವಧೆಯಾದ ಮೇಲೆ ಅವನ ಅಸುರಾವೇಶ ಪರಿಹಾರವಾಗಿ ಅವನು [೨]ಧರ್ಮಶೀಲನಾದ(ಅ. ೨೦, ಶ್ಲೋ. ೧೦೨).

೩) ಭಗದತ್ತ ಅನಂತರ ಕೌರವಪಕ್ಷದಲ್ಲಿ ಸೇರಿ, ಪಾಂಡವರ ವಿರುದ್ಧ ಹೋರಾಡಲು ಅವನಲ್ಲಿ ಅನಂತರ ಇನ್ನೊಬ್ಬ ಅಸುರನ ಆವೇಶ ಬಂದಿದ್ದು ಕಾರಣ ಎಂದು ತಿಳಿಯಬೇಕು. ಆ ರೀತಿ ಕೌರವಪಕ್ಷಕ್ಕೆ ಸೇರಿದ್ದ ಸಾತ್ತ್ವಿಕರಲ್ಲೆಲ್ಲ ಅಸುರಪ್ರವೇಶ ಪುನಃ ಆಗಿದ್ದರ ಪ್ರಸಂಗ ಘೋಷಯಾತ್ರಾಪ್ರಸಂಗದಲ್ಲಿ (೨೨/೪೩೦) ಬಂದಿದೆ :

'ಭೀಷ್ಮಾದೀಂಶ್ಚ ವಯಂ ಸರ್ವಾನಾವಿಶಾಮ ಜಯಾಯ ತೇ ।'

---

೧. ಸ ಭಗದತ್ತಃ ಮಹಾಸುರಸ್ಯ ಬಾಷ್ಕಲನಾಮ್ನೋಽಸುರಸ್ಯ ಅಂಶೇನ ಕಲಯಾ ಯುತಃ। – (ಜ.)

೨. ನರಕವಧಾನಂತರಂ ಅಸುರಾವೇಶೋ ನಷ್ಟ ಇತಿ ಭಾವಃ। – (ಜ.)

ಸಾತ್ಯಕಿ ಕೃತವರ್ಮರ ಅವತಾರ

ಅಭೂಚ್ಛಿನಿರ್ನಾಮ ಯದುಪ್ರವೀರ-
ಸ್ತಸ್ಯಾತ್ಮಜಃ ಸತ್ಯಕ ಆಸ ತಸ್ಮಾತ್ ।
ಕೃಷ್ಣಃ ಪಕ್ಷೋ[೧] ಯುಯುಧಾನಾಭಿಧೇಯೋ
ಗರುತ್ಮತೋಽಂಶೇನ ಯುತೋ ಬಭೂವ ॥ ೨೩೧ ॥

ಅ: ಶಿನಿ ಎಂಬ ಹೆಸರಿನ ಒಬ್ಬ ಯಾದವ ಮಹಾವೀರ ಇದ್ದ. ಸತ್ಯಕ ಎಂಬ ಪುತ್ರ ಅವನಿಗೆ ಜನಿಸಿದ. ಅವನಿಗೆ ಗರುಡನ ಅಂಶದಿಂದ ಕೂಡಿ, ಕೃಷ್ಣಪಕ್ಷಾಭಿಮಾನಿದೇವತೆ ಯುಯುಧಾನ ಎಂಬ ಹೆಸರಿನಿಂದ ಜನಿಸಿದ.

ಯಃ ಸಂವಹೋ ನಾಮ ಮರುತ್ ತದಂಶ-
ಶ್ಚಕ್ರಸ್ಯ ವಿಷ್ಣೋಶ್ಚ ಬಭೂವ ತಸ್ಮಿನ್ ।
ಯದುಷ್ವಭೂದ್ಧೃದಿಕೋ ಭೋಜವಂಶೇ
ಸಿತಃ ಪಕ್ಷಸ್ತಸ್ಯ ಸುತೋ ಬಭೂವ ॥ ೨೩೨ ॥

ಅ: ಮರುತ್ತುಗಳಲ್ಲಿ ಸಂವಹ ಎಂಬವನ ಅಂಶ ಹಾಗೂ ವಿಷ್ಣುವಿನ ಚಕ್ರದ ಅಂಶಗಳು ಇದ್ದವು. ಯಾದವರ ಭೋಜವಂಶದಲ್ಲಿ ಹೃದಿಕ ಎಂಬವನಿದ್ದ. ಅವನಿಗೆ ಶುಕ್ಲಪಕ್ಷದ ಅಭಿಮಾನಿದೇವತೆ ಪುತ್ರನಾಗಿ ಜನಿಸಿದ.

ಸ ಪಾಂಚಜನ್ಯಾಂಶಯುತೋ ಮರುತ್ಸು
ತಥಾಽಂಶಯುಕ್ತಃ ಪ್ರವಹಸ್ಯ ವೀರಃ ।
ನಾಮಾಸ್ಯ ಚಾಭೂತ್ ಕೃತವರ್ಮೇತ್ಯಥಾನ್ಯೇ[೨]
ಯೇ ಯಾದವಾಸ್ತೇಽಪಿ ಸುರಾಃ ಸಗೋಪಾಃ ॥ ೨೩೩ ॥

---

೧. ಕೃಷ್ಣಃ ಪಕ್ಷಃ= ಕೃಷ್ಣಪಕ್ಷಾಭಿಮಾನೀ ದೇವಃ ॥ – (ವಾ.)

೨. ಅಥ ಗೋಪಾಃ ಅನ್ಯೇ ಯೇ ಯಾದವಾಶ್ಚ ಜಾತಾ ತೇಽಪಿ ಸುರಾ ಇತಿ ಸಂಬಂಧಃ ॥ – (ವಾ.)

ಅ: ವೀರನಾದ ಅವನು ಪಾಂಚಜನ್ಯದ ಅಂಶದಿಂದ ಕೂಡಿದ್ದ. ಹಾಗೆಯೇ ಮರುತ್ತುಗಳಲ್ಲಿ ಒಬ್ಬನಾದ ಪ್ರವಹನ ಅಂಶವನ್ನೂ ಹೊಂದಿದ್ದ. ಅವನಿಗೆ ಕೃತವರ್ಮ ಎಂದು ಹೆಸರಾಯಿತು. ಹೀಗೆ ಯಾರು ಯಾರು ಯಾದವರೋ ಹಾಗೂ ಗೋಪರೋ, ಅವರೆಲ್ಲ ದೇವತೆಗಳೇ.

ವಿ: ೧) ಯುಯುಧಾನ ಎಂದರೆ ಸಾತ್ಯಕಿ. ಕೃಷ್ಣಪಕ್ಷದ ದೇವತೆಯಾದ ಅವನು ಕೃಷ್ಣ ಹಾಗೂ ಕೃಷ್ಣಭಕ್ತನಾದ ಅರ್ಜುನ ಇಬ್ಬರಿಗೂ ಶಸ್ತ್ರಾಸ್ತ್ರಗಳಲ್ಲಿ ಶಿಷ್ಯನಾಗಿ ಕುರುಕ್ಷೇತ್ರದ ಯುದ್ಧದಲ್ಲೂ ಕೃಷ್ಣನ ಪಕ್ಷವನ್ನೇ ಸೇರಿ ಕೌರವರ ವಿರುದ್ಧ ಹೋರಾಡಿದ.

೨) ಕೃತವರ್ಮ ಶುಕ್ಲಪಕ್ಷದ ಅಭಿಮಾನಿದೇವತೆಯ ಅವತಾರ. ಶುಕ್ಲಪಕ್ಷದ ದೇವತೆಯಾಗಿದ್ದರೂ, ಕೃಷ್ಣನ ವಿರುದ್ಧವಾಗಿ ಕೌರವಪಕ್ಷವನ್ನು ಸೇರಿ ಹೋರಾಡಿದ್ದು ದೈವಸಂಕಲ್ಪ.

೩) ಸಾತ್ಯಕಿಯಲ್ಲಿ ವಿಷ್ಣುಚಕ್ರದ ಅಂಶ ಇದ್ದರೆ, ಕೃತವರ್ಮನಲ್ಲಿ ವಿಷ್ಣುವಿನ ಶಂಖವಾದ ಪಾಂಚಜನ್ಯದ ಅಂಶವಿತ್ತು. ವಿಷ್ಣುಚಕ್ರದ ಅವಾಂತರಾಭಿಮಾನಿದೇವತೆ ಕಾಮ; ಶಂಖದ ದೇವತೆ ಕಾಮಪುತ್ರ ಅನಿರುದ್ಧ ಎಂಬ ಮಾತು ಈಗಾಗಲೇ ಬಂದಿದೆ (ಅ. ೩, ಶ್ಲೋ. ೭೫). ಆದ್ದರಿಂದ ಸಾತ್ಯಕಿ, ಕೃತವರ್ಮರಲ್ಲಿ ಕಾಮ, ಅನಿರುದ್ಧರ ಅಂಶವೂ ಇದ್ದಿತೆಂದು ತಿಳಿಯಬೇಕು.

೪) ಸಾತ್ಯಕಿ, ಕೃತವರ್ಮರಲ್ಲಿ ಕ್ರಮವಾಗಿ ಸಂವಹ ಹಾಗೂ ಪ್ರವಹ ಎಂಬ ಮರುತ್ತುಗಳ ಅಂಶವೂ ಇತ್ತು.

೫) ಸಾತ್ಯಕಿಯಲ್ಲಿ ಗರುಡನ ಅಂಶವೂ ಇದ್ದಿದ್ದು ವಿಶೇಷ. ಇದರಿಂದಾಗಿ ಇವನು ಕೃಷ್ಣನಿಗೆ ವಿಶೇಷಪ್ರಿಯನಾಗಲು ಸಾಧ್ಯವಾಯಿತು ಎಂದು ಭಾವಿಸಬಹುದು.

೬) ಕುರುಕ್ಷೇತ್ರಯುದ್ಧದಲ್ಲಿ ಸಾತ್ಯಕಿ ಕೃತವರ್ಮರಿಬ್ಬರೂ ಅನೇಕಬಾರಿ ಪರಸ್ಪರ ಹೋರಾಡಿದ ಪ್ರಸಂಗ ಬಂದಿದೆ.

೭) ಹೀಗೆ ಎಲ್ಲ ಯಾದವರೂ, ಎಲ್ಲ ಗೋಪಾಲಕರೂ ದೇವಾಂಶಸಂಭೂತರೇ ಆಗಿದ್ದರು ಎಂಬ ವಿಶೇಷಾಂಶವನ್ನು ಇಲ್ಲಿ ತಿಳಿಸಿರುವರು.

೮) ಶ್ರೀಕೃಷ್ಣನಿಂದ ಹತನಾದ ಶತಧನ್ವ ಮಾತ್ರ ಅಸುರ ಎಂಬುದು ವಿಶೇಷ.

ಯೇ ಪಾಂಡವಾನಾಮಭವನ್ ಸಹಾಯಾ
ದೇವಾಶ್ಚ ದೇವಾನುಚರಾಃ ಸಮಸ್ತಾಃ ।
ಅನ್ಯೇ ತು ಸರ್ವೇಽಪ್ಯಸುರಾ ಹಿ ಮಧ್ಯಮಾ
ಯೇ ಮಾನುಷಾಸ್ತೇ ಚಲಬುದ್ಧಿವೃತ್ತಯಃ ॥ ೨೩೪ ॥

ಅ: ಯಾರು ಪಾಂಡವರಿಗೆ ಸಹಾಯಕರಾದರೊ, ಅವರೆಲ್ಲ ದೇವತೆಗಳು ಅಥವಾ ದೇವತೆಗಳ ಅನುಚರರು. ಅದರಂತೆ ವಿರೋಧಿಗಳಾಗಿದ್ದವರೆಲ್ಲ ಅಸುರರು; ಇಬ್ಬರ ಪಕ್ಷಕ್ಕೂ ಸೇರದೆ ಮಧ್ಯಸ್ಥರಾಗಿ ಉಳಿದವರು ಹಾಗೂ ಚಂಚಲಬುದ್ಧಿಯವರು ರಾಜಸರು.

ವಿ: ೧) ಇಲ್ಲಿ ದೇವಾನುಚರರು ಎಂದರೆ [೨]ಗಂಧರ್ವಾದಿಗಳು ಎಂದರ್ಥ.

೨) **'ಪಾಂಡವೇಯಾಸ್ತು ಪುಣ್ಯಾನಿ ತೇಷಾಂ ವಿಷ್ಣುರ್ನಿಯೋಜಕಃ'** (೨/೧೪೫)

ಲಿಂಗಂ ಸುರಾಣಾಂ ಹಿ ಪರೈವ [೩]ಭಕ್ತಿ-
ರ್ವಿಷ್ಣೌ [೪]ತದನ್ಯೇಷು ಚ ತತ್ಪ್ರತೀಪತಾ ।
ಅತೋಽತ್ರ ಯೇ ಯೇ(ಽ)ಹರಿಭಕ್ತಿತತ್ಪರಾ-
ಸ್ತೇ ತೇ(ಽ)ಸುರಾಸ್ತದ್ಚರಿತಾ ವಿಶೇಷತಃ ॥ ೨೩೫ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಶ್ರೀಭಗವದವತಾರಪ್ರತಿಜ್ಞಾನಂ ನಾಮ ಏಕಾದಶೋಽಧ್ಯಾಯಃ ॥ ೧೧ ॥

---

೧. ಭೀಷ್ಮದ್ರೋಣಾದೀನಾಂ ಕೌರವಸೇನಾಸ್ಥತ್ವೇಽಪಿ ಮನಸಾ ಪಾಂಡವಸಹಾಯತ್ವಾದ್ದೇವತ್ವಮಿತಿ ಜ್ಞೇಯಮ್। ಅಥ ಚಲಬುದ್ಧಿವೃತ್ತಯೋ ಯೇ ಮಾನುಷಾಸ್ತೇಽಪಿ ಮಧ್ಯಮಾ ಇತಿ ಸಂಬಂಧಃ ॥ – (ವಾ.)

೨. ದೇವಾನುಕೂಲವರ್ತಿನಃ ಗಂಧರ್ವಾದಯ ಇತಿ ಯಾವತ್ । – (ಜ.)

೩. ವಿಷ್ಣುಭಕ್ತಿರ್ಹಿ ಸರ್ವೇಷಾಂ ಸದ್ಗುಣಾನಾಂ ಸ್ವಲಕ್ಷಣಮ್ । – ಕಥಾಲಕ್ಷಣ

೪. ತದನ್ಯೇಷು = ತೇಷಾಂ ಸುರಾಣಾಮನ್ಯೇಷು ವಿರೋಧಿಷು ದೈತ್ಯೇಷು ತತ್ಪ್ರತೀಪತಾ = ತಸ್ಮಿನ್ ವಿಷ್ಣೌ ಪ್ರತೀಪತಾ ವಿರುದ್ಧತಾ ಲಿಂಗಮಿತ್ಯರ್ಥಃ । ಚಶಬ್ದೇನ ಭಕ್ತ್ಯಭಾವಂ ಸಮುಚ್ಚಿನೋತಿ । ಲಿಂಗಂ ಸುರಾಣಾಮಿತ್ಯತ್ರ । ಸುರಾಣಾಂ = ದೇವಾನಾಮ್ । ''ರಯಿ ಕಯಿ ಗಯಿ'' ಇತಿ ಧಾತೋಃ ಸುಷ್ಠು ರಾಯಂತಿ ಗಾಯಂತೀತಿ ಸುರಾಃ = ಗಂಧರ್ವಾಃ । ತೇಷಾಂ ಸರ್ವೇಷಾಂ ವಿಷ್ಣೌ ಪರಾ ಭಕ್ತಿರೇವ ಲಿಂಗಮ್ । ತತೋಽನ್ಯೇಷ್ವಸುರಾದಿಷು ತತ್ಪ್ರತೀಪತಾ ತಸ್ಯ ವಿಷ್ಣೋಸ್ತೇಷಾಂ ದೇವಾನಾಂ ಚ ಪ್ರತೀಪತಾ ವಿರುದ್ಧತಾ ಲಿಂಗಮ್ । ತತಃ ಕಾರಣಾತ್ । ಅತ್ರ ಕುರುಪಾಂಡವಸೇನಯೋಃ ಯೇ ಯೇ ಹರಿಭಕ್ತಿತತ್ಪರಾಃ ಯುಧಿಷ್ಠಿರಭೀಮಾರ್ಜುನದ್ರೋಣಕರ್ಣಭೀಷ್ಮಾದ್ಯಾಃ ಯೇ ಯೇ ಧೃತರಾಷ್ಟ್ರದ್ರುಪದವಿರಾಟಾದ್ಯಾಶ್ಚ ತೇ ತು ಪೂರ್ವೋಕ್ತಾಃ ಸರ್ವೇಽಪಿ ಸುರಾಃ = ಸಾಕ್ಷಾತ್ ಸುರಾಃ । ಉತ್ತರೋಕ್ತಾಸ್ತು ವಿಶೇಷತಸ್ತದ್ಚರಿತಾಃ ತೈಃ ಸುರೈರಾವಿಷ್ಟಾಃ । ''ರೈ ಕೈ ಗೈ'' ಇತಿ ಧಾತೋಃ ಸುಷ್ಠು ರಾಯಂತಿ ಗಾಯಂತೀತಿ ಸುರಾಃ = ಗಂಧರ್ವಾ ಇತ್ಯೇಕಾ ಯೋಜನಾ । ಅತೋ ವಿಷ್ಣುಪ್ರತೀಪತಾಯಾಃ ಅಸುರಲಿಂಗತ್ವಾತ್ ಯೇ ಯೇ ಅಹರಿಭಕ್ತಿತತ್ಪರಾಃ = ಹರಿಭಕ್ತಿತತ್ಪರಾ ನ ಭವಂತೀತಿ ಅಹರಿಭಕ್ತಿತತ್ಪರಾಃ । ನಞಸೋ ವಿರುದ್ಧಾರ್ಥಕತ್ವಾತ್ । ಹರೌ ಭಕ್ತಿತತ್ಪರೇಷು ಚ ವಿರುದ್ಧಾಶ್ಚ ದುರ್ಯೋಧನಾದಯಃ ತೇ ಸರ್ವೇ ಅಸುರಾ ಇತ್ಯರ್ಥಃ ಇತ್ಯಾವೃತ್ತ್ಯಾ ಯೋಜನಾ। ತಸ್ಮಾದಾರಬ್ಧಾರ್ಥದ್ವಯಸ್ಯೋಪಸಂಹಾರೇಽಪಿ ನಿಗಮನಾತ್ ನ ಸರ್ವಜ್ಞಾಚಾರ್ಯವಾಕ್ಯೇ ನ್ಯೂನತಾ ಶಂಕನೀಯೇತಿ ಸರ್ವಮವದಾತಮ್ ॥ – (ವಾ.)

ಅ: ವಿಷ್ಣುವಿನಲ್ಲಿ ಉತ್ತಮಭಕ್ತಿ ಹೊಂದಿರುವುದು ಸುರರ ಲಕ್ಷಣ. ವಿಷ್ಣುದ್ವೇಷಿಗಳಾಗಿರುವುದು ಅಸುರರ ಲಕ್ಷಣ. ಆದ್ದರಿಂದ ಇವರಲ್ಲಿ ಯಾರು ಯಾರು ಹರಿಭಕ್ತಿಯಲ್ಲಿ ನಿರತರೋ, ಅವರೆಲ್ಲ ಸುರರು ಅಥವಾ ಅವರಿಂದ ವಿಶೇಷವಾಗಿ ಆವಿಷ್ಟರಾದವರು. (ಅದರಂತೆ ಯಾರು ಯಾರು ಹರಿದ್ವೇಷದಲ್ಲಿ ನಿರತರೋ, ಅವರೆಲ್ಲ ಅಸುರರು ಅಥವಾ ಅಸುರರಿಂದ ವಿಶೇಷವಾಗಿ ಆವಿಷ್ಟರಾದವರು).

ವಿ: ೧) ದೇವಾಸುರರ ಖಚಿತಲಕ್ಷಣವನ್ನು ತಿಳಿಸುವ ಅಪೂರ್ವಶ್ಲೋಕವಿದು.

೨) ಯಾರು ಹರಿಭಕ್ತಿರತರೋ ಅವರೆಲ್ಲ ಸುರರು; ಅಥವಾ ಸುರರಿಂದ ಆವಿಷ್ಟರು ಎಂದು ಹರಿಭಕ್ತರ ಲಕ್ಷಣವನ್ನು ವಿವರಿಸಿದ ಶ್ರೀಮದಾಚಾರ್ಯರು, ಇದೇ ರೀತಿ ಹರಿದ್ವೇಷಿಗಳ ಲಕ್ಷಣವನ್ನು ಸಹ ಇದೇ ಶ್ಲೋಕದಲ್ಲಿ ತಿಳಿಸಿರುವರು. 'ಯೇ ಯೇ ಹರಿಭಕ್ತಿತತ್ಪರಾಃ' ಎಂಬುದನ್ನು 'ಯೇ ಯೇऽಹರಿಭಕ್ತಿತತ್ಪರಾಃ' ಎಂದೂ, 'ತೇ ಸುರಾಃ' ಎಂಬುದನ್ನು 'ತೇऽಸುರಾಃ' ಎಂದೂ ಪದಚ್ಛೇದ ಮಾಡಲು ಸಾಧ್ಯವಿದೆ. ಆವೃತ್ತಿ ಮಾಡಿಕೊಂಡಾಗ ಎರಡನೆಯ ರೀತಿಯ ಪದಚ್ಛೇದದಂತೆ ಅದು ಹರಿದ್ವೇಷಿಗಳ ಲಕ್ಷಣಪ್ರತಿಪಾದಕವಾಗಿ 'ಯಾರು ಯಾರು ಹರಿದ್ವೇಷದಲ್ಲಿ ನಿರತರೋ, ಅವರೆಲ್ಲ ಅಸುರರು ಅಥವಾ ಅಸುರರಿಂದ ವಿಶೇಷವಾಗಿ ಆವಿಷ್ಟರಾದವರು' ಎಂದು ಅರ್ಥವಾಗುತ್ತದೆ. ಶ್ರೀಮದಾಚಾರ್ಯರು ಸರ್ವಜ್ಞರು. ಅವರ ವಾಕ್ಯದಲ್ಲಿ ನ್ಯೂನತೆಗೆ ಅವಕಾಶವೇ ಇಲ್ಲ ಎಂಬ ವಿಶೇಷಾಂಶ ವಾದಿರಾಜೀಯದಲ್ಲಿದೆ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಶ್ರೀಭಗವದವತಾರಪ್ರತಿಜ್ಞಾನ'ವೆಂಬ ಹನ್ನೊಂದನೆಯ ಅಧ್ಯಾಯ ಮುಗಿಯಿತು ॥ ೧೧ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೧೨

(ಶ್ರೀಕೃಷ್ಣಾವತಾರ ಪಾಂಡವೋತ್ಪತ್ತಿಃ)

(ಕುರುಪಾಂಡವರ ಜನನ, ಶ್ರೀಕೃಷ್ಣಾವತಾರ, ಪೂತನಾವಧ ಇತ್ಯಾದಿ)

ದೇವಕಿಯ ಪರಿಚಯ

ಬಭೂವ ಗಂಧರ್ವಮುನಿಸ್ತು ದೇವಕಃ[೧] ಸ ಆಸ ಸೇವಾರ್ಥಮಥಾಹುಕಾದ್ಧರೇಃ ।
ಸ ಉಗ್ರಸೇನಾವರಜಸ್ತಥೈವ ನಾಮಾಸ್ಯ ತಸ್ಮಾದಜನಿ ಸ್ಮ ದೇವಕೀ ॥ ೧ ॥

ಅ: ದೇವಕನೆಂಬ ಗಂಧರ್ವಮುನಿ ಇದ್ದ. ಅವನು ಶ್ರೀಹರಿಸೇವೆಗೆಂದು ಆಹುಕನಿಂದ ಜನಿಸಿದ. ಅವನು ಉಗ್ರಸೇನನ ತಮ್ಮ. ಹೆಸರು ದೇವಕ ಎಂದು. ಅವನಿಂದ ದೇವಕೀ ಹುಟ್ಟಿದಳು.

ವಿ: ೧) ಉಗ್ರಸೇನ, ದೇವಕ ಇಬ್ಬರೂ ಆಹುಕನ ಮಕ್ಕಳೇ. ಉಗ್ರಸೇನ ಹಿರಿಯ; ದೇವಕ ಕಿರಿಯ. ದೇವಕನ ಮಗಳು ದೇವಕಿ.

೨) ಉಗ್ರಸೇನಗಂಧರ್ವನೇ ಉಗ್ರಸೇನನಾಮಕನಾಗಿ ಜನಿಸಿದ್ದಂತೆ, ದೇವಕನೆಂಬ ಗಂಧರ್ವಮುನಿ ದೇವಕನಾಮಕನಾಗಿ ಜನಿಸಿದನು.

ಅನ್ಯಾಶ್ಚ ಯಾಃ ಕಶ್ಯಪಸ್ಯೈವ[೨] ಭಾರ್ಯಾ ಜ್ಯೇಷ್ಠಾಂ ತು ತಾಮಾಹುಕ ಆತ್ಮಪುತ್ರೀಮ್ ।
ಚಕಾರ ತಸ್ಮಾದ್ಧಿ ಪಿತೃಷ್ವಸಾ ಸಾ ಸ್ವಸಾ ಚ ಕಂಸಸ್ಯ ಬಭೂವ ದೇವಕೀ ॥ ೨ ॥

ಅ: ಕಶ್ಯಪನ ಇತರ (ಕೆಲವು) ಪತ್ನಿಯರು ದೇವಕನ ಮಕ್ಕಳಾಗಿ ಜನಿಸಿದರು. ಅವಳಲ್ಲಿ ಎಲ್ಲರಿಗಿಂತ ಹಿರಿಯಳಾದ ದೇವಕಿಯನ್ನು ಆಹುಕ ತನ್ನ ಪುತ್ರಿಯನ್ನಾಗಿ ಸ್ವೀಕರಿಸಿದ. ಅದರಿಂದ ಅವಳು ಕಂಸನಿಗೆ ಸೋದರತ್ತೆಯೂ ಆದಳು; ತಂಗಿಯೂ ಆದಳು.

---

೧. ಗಂಧರ್ವಮುಖ್ಯಃ 'ಯಸ್ತ್ವಾಸೀದ್ದೇವಕೋ ನಾಮ ದೇವರಾಜಸಮದ್ಯುತಿಃ । ಸ ಗಂಧರ್ವಪತಿರ್ಮುಖ್ಯಃ ಕ್ಷಿತೌ ಜಜ್ಞೇ ನರಾಧಿಪಃ' ಇತ್ಯಾದಿಪರ್ವಣಿ (೧/೬೭/೬೮)। – (ತಿ.)

೨. ''ಕಾಶ್ಯಪಾಯ ತ್ರಯೋದಶ'' ಇತಿ ಭಾಗವತೋಕ್ತೇಃ । ಕಾಶ್ಯಪಸ್ಯ ತ್ರಯೋದಶ ಭಾರ್ಯಾಃ ಸಂತಿ । ತಾಸ್ವದಿತೇರ್ದೇವಕೀತ್ವೇನ ಜನ್ಮನ ಉಕ್ತತ್ವಾತ್ । ಸುರಭೀದಿತಿದನೂನಾಂ ಕಾಶ್ಯಪಪತ್ನೀನಾಂ ಬಾಹ್ಲೀಕೇಶ್ವರ ಕಾಶಿರಾಜ ಕರವೀರೇಶ್ವರಾಣಾಂ ಕನ್ಯಾತ್ವೇನ ಜನ್ಮನಃ ವಸುದೇವಪತ್ನೀತ್ವಸ್ಯ ಚ ವಕ್ಷ್ಯಮಾಣತ್ವಾತ್ । ಸುರಭ್ಯದಿತಿದಿತಿದನುಭ್ಯೋಽನ್ಯಾಃ ಷಟ್ ಭಾರ್ಯಾಃ ದೇವಕಾದೇವ ದೇವಕ್ಯಾ ಅವರಜಾತ್ವೇನಾಜನಿಷತ । ಏವಂ ವಸುದೇವಪತ್ನೀನಾಂ ದಶಾನಾಂ ಭೂಮೌ ಜನ್ಮಾಸ್ತಿ । ತಿಸೃಣಾಂ ತು ಕಾರ್ಯಾಭಾವಾಜ್ಜನ್ಮ ನಾಸ್ತೀತಿ ಜ್ಞೇಯಮ್ । ತಸ್ಮಾದ್ಧಿ ಪಿತೃಷ್ವಸೇತ್ಯತ್ರ । ಉಗ್ರಸೇನಾವರಜದೇವಕಪುತ್ರೀತ್ವಾತ್ । ಉಗ್ರಸೇನಸುತಕಂಸಸ್ಯ ಸ್ವಸಾ । ಉಗ್ರಸೇನಪಿತ್ರಾ ಆಹುಕೇನ ಸ್ವಪುತ್ರೀತ್ವೇನ ಪರಿಗ್ರಹಾತ್ ಪಿತೃಷ್ವಸಾ ಚೇತಿ ವಿವೇಕಃ ॥ – (ವಾ.)

ವಿ: ೧) ಕಶ್ಯಪನಿಗೆ ಹದಿಮೂರು [೧]ಪತ್ನಿಯರು. ಅವರೆಲ್ಲ ದಕ್ಷಪುತ್ರಿಯರು. ಅವರ ಹೆಸರು ಅದಿತಿ, ದಿತಿ, ದನು, ಕಾಷ್ಠಾ, ಅರಿಷ್ಟಾ, ಸುರಸಾ, ಇಲಾ, ಮುನಿ, ಕ್ರೋಧವಶಾ, ತಾಮ್ರಾ, ಸುರಭಿ, ಸರಮಾ ಮತ್ತು ತಿಮಿ.

೩) ಕಂಸ ಉಗ್ರಸೇನನ ಮಗ. ಆದ್ದರಿಂದ ದೇವಕಿ ಅವನಿಗೆ ತಂಗಿ. ಆಹುಕ ಮೊಮ್ಮಗಳಾದ ದೇವಕಿಯನ್ನು ಮಗಳನ್ನಾಗಿ ಮಾಡಿಕೊಂಡ. ಈ ದೃಷ್ಟಿಯಲ್ಲಿ ಕಂಸನಿಗೆ ಅವಳು ಸೋದರತ್ತೆ. ಅವನು ದೇವಕಿಗೆ ದ್ರೋಹ ಮಾಡಿದ್ದು ಒಂದು ದೃಷ್ಟಿಯಿಂದ ತಂಗಿಯ ದ್ರೋಹವಾದರೆ, ಮತ್ತೊಂದು ದೃಷ್ಟಿಯಿಂದ ಸೋದರತ್ತೆಯ ದ್ರೋಹವಾಯಿತು. ಇದರಿಂದಾಗಿ ಅವನ ಪಾಪದ ಪ್ರಮಾಣ ಹೆಚ್ಚಿತು ಎಂದರ್ಥ.

- ೪) ಆಹುಕ ತನ್ನ ಮಗನ ಮಗಳನ್ನು ತನ್ನ ಮಗಳನ್ನಾಗಿ ಮಾಡಿಕೊಂಡ ಈ ಪ್ರಸಂಗ, ಸ್ವಾಯಂಭುವಮನು ತನ್ನ ಮಗಳು ಆಕೂತಿಯ ಪುತ್ರ ಯಜ್ಞನಾಮಕ ಭಗವಂತನನ್ನು ಪುತ್ರಿಕಾಧರ್ಮದಿಂದ ಮಗನನ್ನಾಗಿ ಮಾಡಿಕೊಂಡ ಪ್ರಸಂಗದಂತಿರುವುದು ಗಮನಾರ್ಹ. ಆಹುಕ ಪೌತ್ರಿಯನ್ನು ಪುತ್ರಿಯನ್ನಾಗಿ ಮಾಡಿಕೊಂಡರೆ, ಸ್ವಾಯಂಭುವಮನು ದೌಹಿತ್ರನನ್ನು ಪುತ್ರನನ್ನಾಗಿ ಮಾಡಿಕೊಂಡಿದ್ದ ಎಂಬುದು ವಿಶೇಷ.

ಕಂಸನ ಕಿವಿಗೆ ಬಿದ್ದ ಸಾವಿನ ಸುದ್ದಿ

ಸೈವಾದಿತಿರ್ವಸುದೇವಸ್ಯ ದತ್ತಾ ತಸ್ಯಾ ರಥಂ ಮಾಂಗಲಂ ಕಂಸ ಏವ ।
ಸಂಯಾಪಯಾಮಾಸ ತದಾ ಹಿ ವಾಯುರ್ಜಗಾದ ವಾಕ್ಯಂ ಗಗನಸ್ಥಿತೋಽಮುಮ್ ೩

ಅ: ದೇವಕೀರೂಪಳಾದ ಅದಿತಿ ವಸುದೇವನ ಪತ್ನಿಯಾದಳು. ಅವಳ ವಿವಾಹದ ಮಂಗಲರಥವನ್ನು ಕಂಸನೇ ಸಾರಥಿಯಾಗಿ ನಡೆಸಿದ. ಆಗ ವಾಯು ಗಗನದಲ್ಲಿದ್ದು ಅವನಿಗೆ ವಾಕ್ಯವೊಂದನ್ನು ಹೇಳಿದ.

ವಿ: ಕಂಸ ರಥ ನಡೆಸುತ್ತಿದ್ದಾಗ ಅಶರೀರವಾಣಿ ಕಿವಿಗೆ ಬಿತ್ತು. ಅಶರೀರವಾಣಿಯೆಂದರೆ ವಾಯುದೇವರ ಮಾತು ಎಂಬ ವಿಶೇಷಾರ್ಥವನ್ನು ಇಲ್ಲಿ ತಿಳಿಸಿರುವರು. ಸಾಮಾನ್ಯವಾಗಿ ಅಶರೀರವಾಣಿಯಾಯಿತೆಂದು ತಿಳಿಸುವಾಗಲೆಲ್ಲ ಶ್ರೀಮದಾಚಾರ್ಯರು ವಾಯುದೇವರು ನುಡಿದರು ಎಂದು ವಿವರಣರೂಪವಾಗಿ ತಿಳಿಸಿರುವುದನ್ನು ಗಮನಿಸಬೇಕು.

---

೧. ಅದಿತಿರ್ದಿತಿರ್ದನುಃ ಕಾಷ್ಠಾ ಅರಿಷ್ಟಾ ಸುರಸಾ ಇಲಾ ।
ಮುನಿಃ ಕ್ರೋಧವಶಾ ತಾಮ್ರಾ ಸುರಭಿಃ ಸರಮಾ ತಿಮಿಃ ॥ – ಭಾಗವತ (೬/೬/೨೫)

೧ವಿನಾऽಪರಾಧಾದ್ಧಿ ನ ತತೋ ಗರೀಯಸೋ
ನ ಮಾತುಲೋ ವಧ್ಯತಾಮೇತಿ ವಿಷ್ಣೋಃ ।
ಲೋಕಸ್ಯ ಧರ್ಮಾನನುವರ್ತತೋऽತಃ
ಪಿತ್ರೋರ್ವಿರೋಧಾರ್ಥಮುವಾಚ ವಾಯುಃ ॥ ೪ ॥

ಅ: ತನಗಿಂತಲೂ ಹಿರಿಯರಾದವರಿಗೆ ಅಪರಾಧವೆಸಗದಿದ್ದಲ್ಲಿ ಸೋದರಮಾವ ಲೋಕಧರ್ಮವನ್ನು ಅನುಸರಿಸಿ ನಡೆಯುವ ವಿಷ್ಣುವಿಗೆ ವಧಾರ್ಹನಾಗಲಾರ. ಅದರಿಂದ ಕೃಷ್ಣನ ತಂದೆ ತಾಯಿಗಳ ಬಗ್ಗೆ ಕಂಸನಿಗೆ ವೈರ ಹುಟ್ಟಿಸಲೆಂದು ವಾಯುದೇವರು ಹಾಗೆ ನುಡಿದರು.

ಏ: ೧) ಸೋದರಮಾವ ಪೂಜ್ಯ. ಶಾಸ್ತ್ರ ಹೇಳುವ ಐವರು ಗುರುಗಳಲ್ಲಿ ಸೋದರಮಾವ ಒಬ್ಬ. ಎಂದ ಮೇಲೆ ಕೃಷ್ಣ ಸೋದರಮಾವನಾದ ಕಂಸನನ್ನು ಹೇಗೆ ಕೊಂದ? ಎಂಬುದು ಜನ ಕೇಳಬಹುದಾದ ಪ್ರಶ್ನೆ. ಅದು ನಿಜ. ಆದರೆ ಸೋದರಮಾವನಿಗಿಂತ ತಂದೆತಾಯಿಗಳು ಹೆಚ್ಚು ಪೂಜ್ಯರು. 'ಮಾತೃದೇವೋ ಭವ ಪಿತೃದೇವೋ ಭವ' ಎಂದೇ ವೇದವಚನ. ತಂದೆತಾಯಿಗಳಿಗೆ ದ್ರೋಹ ಮಾಡಿದವರು ಯಾರೇ ಆದರೂ ಶಿಕ್ಷಾರ್ಹರು. ಕಂಸ ವಸುದೇವದೇವಕಿಯರಿಗೆ ದ್ರೋಹವೆಸಗಿದರೆ, ಅವನು ಕೃಷ್ಣನಿಗೆ ಶಿಕ್ಷಾರ್ಹನಾಗುತ್ತಾನೆ. ಅವನು ಹಾಗೆ ದ್ರೋಹ ಮಾಡಿ, ವಧಾರ್ಹನಾಗಬೇಕು ಎಂಬ ಉದ್ದೇಶದಿಂದಲೇ ವಾಯು ಹಾಗೆ ತಿಳಿಸಿದ್ದು ಎಂದರ್ಥ. ಈ ಮಾತನ್ನು ಕೇಳಿದ ಕಂಸ ವಸುದೇವದೇವಕಿಯರನ್ನು ಬಂಧನದಲ್ಲಿರಿಸಿ, ದ್ರೋಹವೆಸಗಿದ್ದು ಇತಿಹಾಸ.

೨) ಕೃಷ್ಣ ಕಂಸನಂತಹ ದುಷ್ಟನನ್ನು ಕೊಲ್ಲುವಾಗಲೂ ಲೋಕನೀತಿಯನ್ನು ಕಡೆಗಣಿಸಿಲ್ಲ ಎಂದು ತಿಳಿಸುವ ಮೂಲಕ ಶಾಸ್ತ್ರಗಳ ಆದೇಶದಂತೆ ನಡೆಯುವುದು ಪ್ರತಿಯೊಬ್ಬರ ಕರ್ತವ್ಯ ಎಂಬ ತತ್ತ್ವವನ್ನೂ ತಿಳಿಸಿರುವರು.

---

೧. ಮಾತುಲೋ ವಧ್ಯತಾಂ ನೈತೀತಿ ಲೋಕಧರ್ಮೋऽಸ್ತಿ । ಅತಃ ಕಾರಣಾತ್ ಲೋಕಧರ್ಮಾನನುವರ್ತತೋ ವಿಷ್ಣೋಃ ಕೃಷ್ಣಸ್ಯಾಪಿ ಮಾತುಲಃ ಕಂಸಃ ತತಃ= ಮಾತುಲಾತ್ ಕಂಸಾತ್ ಗರೀಯಸಃ= ವಸುದೇವಸ್ಯ ಪುರುಷಸ್ಯ ಅಪರಾಧಂ ವಿನಾ ವಧ್ಯತಾಂ ನೈತಿ ಅತೋ ನಞ್‌ದ್ವಯಸ್ಯ ನ ವೈಯ್ಯರ್ಥಮ್ । ಅತಃ = ಕಾರಣಾತ್ ಪಿತ್ರೋಃ = ಕೃಷ್ಣಪಿತ್ರೋರ್ದೇವಕೀವಸುದೇವಯೋರ್ವಿಷಯೇ । ವಿರೋಧಾರ್ಥಂ = ಕಂಸಸ್ಯ ವಿರೋಧಾರ್ಥಂ ವಾಯುರುವಾಚೇತಿ ಯಥಾಯೋಗ್ಯಂ ಪದಾನಾಮಾವೃತ್ತ್ಯಾ ಯೋಜನಾ । ನನು ದೇವಕೀ ಕಂಸಸ್ಯಾವರಜಾ । ಅತಃ ಕಂಸಾದಪಿ ಲಘೀಯಸೀ । ವಸುದೇವಸ್ತು ಕಂಸಸ್ಯ ಭಾವುಕಃ । ಅತೋ ಲೋಕನ್ಯಾಯೇನ ದ್ವಾವಪಿ ಸಮೌ । ಏವಂ ಚ ದೇವಕೀವಸುದೇವಯೋರಪರಾಧಃ ಮಾತುಲಾದ್ಗರೀಯಸೋऽಪರಾಧಃ ಕಥಮಿತಿ ಚೇತ್ಸತ್ಯಮ್ ಸ್ವಸಂಬಂಧ-ವಿವಕ್ಷಾಯಾಂ ಮಾತುಲಾದಪಿ ಮಾತಾಪಿತರೌ ಗರೀಯಸೌ । ಅತಃ ಸ್ವಸ್ವಮುಖ್ಯಸಂಬಂಧಿನೋ-ರ್ಮಾತಾಪಿತ್ರೋರ್ವಿರೋಧೇ ಸತಿ ತದಪೇಕ್ಷಯಾ ಸ್ವಾಮುಖ್ಯಸಂಬಂಧಿನೋ ಮಾತುಲಸ್ಯ ಲಘೀಯಸ್ತ್ವಾತ್ ವಧೋ ಯೋಗ್ಯ ಇತಿ ಗ್ರಂಥಕಾರಸ್ಯಾಭಿಪ್ರೇತತ್ವಾತ್ ॥ –(ವಾ.)

ಮೃತ್ಯುಸ್ತವಾಸ್ಯಾ ಭವಿತಾऽಷ್ಟಮಃ ಸುತೋ ಮೂಢೇತಿ ಚೋಕ್ತೋ ಜಗೃಹೇ ಕೃಪಾಣಮ್ ।
ಪುತ್ರಾನ್ ಸಮರ್ಪ್ಯಾಸ್ಯ ಚ ಶೂರಸೂನುರ್ವಿಮೋಚ್ಯ ತಾಂ ತತ್ಸಹಿತೋ ಗೃಹಂ ಯಯೌ ೫೫

ಅ: ''ಮೂರ್ಖ! ಈ ದೇವಕಿಯ ಎಂಟನೆಯ ಮಗ ನಿನಗೆ ಮೃತ್ಯುವಾಗುವನು''. ಈ ಮಾತು[೧] ಕೇಳುತ್ತಲೇ ಕಂಸ ಖಡ್ಗವನ್ನು ಕೈಗೆತ್ತಿಕೊಂಡ. ವಸುದೇವ ಅವನಿಗೆ ಪುತ್ರನನ್ನು ಒಪ್ಪಿಸುವ ವಚನ ನೀಡಿ ಅವಳನ್ನು ಬಿಡುಗಡೆ ಮಾಡಿ, ಅವಳೊಂದಿಗೆ ಮನೆಗೆ ತೆರಳಿದ.

ಎ: ೧) ಅಶರೀರವಾಣಿಯನ್ನು ಕೇಳುತ್ತಲೇ ಕಂಸ ದೇವಕಿಯನ್ನೇ ಕೊಲ್ಲ ಹೊರಟ. ಅವಳನ್ನೇ ಸಂಹರಿಸಿಬಿಟ್ಟರೆ ಅವಳ ಎಂಟನೆಯ ಮಗನ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂಬುದು ಅವನ ವಿಚಾರ. ವಸುದೇವ ಪರಿಪರಿಯಾಗಿ ಬೇಡಿದರೂ, ಕಂಸ ತನ್ನ ಹಟ ಬಿಡದಿದ್ದಾಗ, ವಸುದೇವ ಅವನಿಗೆ ವಚನ ನೀಡಿದ : ''ನಿನಗೆ ಮೃತ್ಯು ಇವಳಿಂದೇನೂ ಅಲ್ಲ; ಇವಳ ಎಂಟನೆಯ ಮಗನಿಂದ. ನಾನು ಇವಳಲ್ಲಿ ಹುಟ್ಟುವ ಎಲ್ಲ ಮಕ್ಕಳನ್ನೂ ನಿನಗೆ [೨]ಒಪ್ಪಿಸುವೆ. ದಯವಿಟ್ಟು ಇವಳನ್ನು ಕೊಲ್ಲದಿರು''. ಕಂಸ ಅವಳನ್ನು ಬಿಡುಗಡೆ ಮಾಡಿದ.

೨) ಹೀಗೆ ಕಂಸನಿಗೆ ವಾಯು ತಿಳಿಸಿದ್ದು ಅವನಿಂದ ವಿಶೇಷವಾದ ವೈಷ್ಣವದ್ರೋಹವಾಗಿ ಅವನು ವಧಾರ್ಹನಾಗಲಿ ಎಂದೇ ಎಂಬುದು ಇದರಿಂದ ದೃಢಪಡುವುದು.

೩) ಪರೀಕ್ಷಿದ್ರಾಜ ತಾನು ಅಂದಿಗೆ ಏಳನೆಯ ದಿನ ತಕ್ಷಕನಿಂದ ಕಚ್ಚಲ್ಪಟ್ಟು ಮರಣ ಒದಗುವ ಶಾಪದ ವಿಚಾರವನ್ನು ಕೇಳಿದ ತತ್ಕ್ಷಣ ವಿರಕ್ತನಾಗಿ ಗಂಗೆಯಲ್ಲಿ ಪ್ರಾಯೋಪವೇಶಕ್ಕೆ ಕುಳಿತು, ಭಾಗವತ ಕೇಳಿ ಸದ್ಗತಿಗೆ ತೆರಳಿದ. ಶಾಪಕೊಟ್ಟ ಶೃಂಗಿಯ ಮೇಲಾಗಲಿ, ಅದಕ್ಕೆ ಕಾರಣರಾದ ಶಮೀಕರ ಮೇಲಾಗಲಿ, ಕಚ್ಚಿ ಕೊಲ್ಲಬರುವ ತಕ್ಷಕನ ಮೇಲಾಗಲಿ ಕೋಪಗೊಳ್ಳದೆ, ಅದೆಲ್ಲ ತನ್ನ ವಿಧಿನಿಯತಿ ಎಂದು ಶರಣಾದ ಸಾತ್ತ್ವಿಕಶಿರೋಮಣಿ ಅವನು. ಆದರೆ ಕಂಸ ತನ್ನ ಮರಣವಾರ್ತೆಯನ್ನು ಕೇಳಿದ ಮೇಲೆ ಅದನ್ನು ಗೆಲ್ಲುವ ಕಾತರದಲ್ಲಿ ತನ್ನ ತಂಗಿ, ಸೋದರತ್ತೆ ನವವಿವಾಹಿತೆಯಾದ ಸ್ತ್ರೀ ಮೊದಲಾದ ಯಾವ ಅಂಶವನ್ನೂ ಗಮನಿಸದೆ, ದೇವಕಿಯನ್ನೇ ಸಂಹರಿಸುವ ನೀಚಕೃತ್ಯಕ್ಕೆ ಯತ್ನಿಸುತ್ತಾನೆ. ಅವನಿಗೆ ಸಾವಿದ್ದುದು ಅವಳಿಂದಲ್ಲ; ಅವಳ ಎಂಟನೆಯ ಮಗುವಿನಿಂದ; ಸುಮಾರು ಹದಿನಾರು ವರ್ಷಗಳಷ್ಟು ದೂರದಲ್ಲಿ. ಆದರೆ ಅದನ್ನು

---

೧. ಪಥಿ ಪ್ರಗೃಹ್ಯಣಂ ಕಂಸಮಾಭಾಷ್ಯಾಹಾಶರೀರವಾಕ್ ।
ಅಸ್ಯಾಸ್ತ್ವಾಮಷ್ಟಮೋ ಗರ್ಭೋ ಹಂತಾ ಯಾಂ ವಹಸೇऽಬುಧ ॥ – ಭಾಗವತ (೧೦/೧/೩೪)

೨. ನ ಹ್ಯಸ್ಯಾಸ್ತೇ ಭಯಂ ಸೌಮ್ಯ ಯದ್ ವಾಗಾಹಾಶರೀರಿಣೀ ।
ಪುತ್ರಾನ್ ಸಮರ್ಪಯಿಷ್ಯೇऽಸ್ಯಾ ಯತಸ್ತೇ ಭಯಮುತ್ಥಿತಮ್ ॥ – ಭಾಗವತ(೧೦/೧/೫೪)

ಅರ್ಥಮಾಡಿಕೊಂಡು, ಉಳಿದ ಜೀವನವನ್ನು ಪರೀಕ್ಷಿದ್ರಾಜನಂತೆ ಸಾರ್ಥಕ ಮಾಡಿಕೊಳ್ಳದೆ, ಆ ಅಶರೀರವಾಣಿಗೆ ಪ್ರತಿಗಾಮಿಯಾಗಲು ಯತ್ನಿಸಿ, ಇನ್ನೂ ಬೇಗನೆ ಸಾಯುತ್ತಾನೆ; ಅಧೋಗತಿಗೆ ತೆರಳುತ್ತಾನೆ. ಪರೀಕ್ಷಿದ್ರಾಜನದು ದೈವೀಪ್ರಕೃತಿ; ಇವನದು ಆಸುರೀಪ್ರಕೃತಿ ಎನ್ನಲು ಇದೊಂದು ಉತ್ತಮನಿದರ್ಶನ.

೪) 'ಅಷ್ಟಮಗರ್ಭ' ಎಂಬ ಮಾತಿನಲ್ಲಿ ಆ ಗರ್ಭದಲ್ಲಿರುವವನು 'ಅಷ್ಟಮರಸ'ನಾದ ಶ್ರೀಹರಿ ಎಂಬ ತತ್ತ್ವವೂ ಸೂಚಿತ.

ವಸುದೇವನ ಇತರ ಪತ್ನಿಯರು

ಷಟ್ ಕನ್ಯಕಾಶ್ಚಾವರಜಾ ಗೃಹೀತಾಸ್ತೇನೈವ ತಾಭಿಶ್ಚ ಮುಮೋದ ಶೂರಜಃ ।
ಬಾಹ್ಲೀಕಪುತ್ರೀ ಚ ಪುರಾ ಗೃಹೀತಾ ಪುರಾऽಸ್ಯ ಭಾರ್ಯಾ ಸುರಭಿಸ್ತು ರೋಹಿಣೀ ॥ ೬ ॥

ಅ: ಕನ್ಯೆಯರಾಗಿದ್ದ ದೇವಕಿಯ [೧]ಆರು ಜನ ತಂಗಿಯರನ್ನೂ ವಸುದೇವ ಮದುವೆಯಾದ. ವಸುದೇವ ಅವರೊಂದಿಗೆ ಆನಂದದಿಂದಿದ್ದ. ಆ ಮುನ್ನ ಬಾಹ್ಲೀಕರಾಜನ ಪುತ್ರಿಯಾದ ರೋಹಿಣಿಯನ್ನು ವಿವಾಹವಾಗಿದ್ದ. ಅವಳು ಹಿಂದೆ ಸುರಭಿ ಎಂಬ ಅವನ ಪತ್ನಿಯಾಗಿದ್ದವಳು.

ವಿ: ೧) ಸುರಭಿ ಬಾಹ್ಲೀಕರಾಜನ ಮಗಳಾದ ರೋಹಿಣಿ; ದಿತಿಯು ಕಾಶಿರಾಜನ ಮಗಳಾಗಿ ಹುಟ್ಟಿದವಳು; ದನುವು ಕರವೀರರಾಜನ ಮಗಳಾಗಿ ಹುಟ್ಟಿದವಳು. ದೇವಕನ ಮಕ್ಕಳಾಗಿ ಜನಿಸಿದ ಇತರರೆಂದರೆ ಧೃತದೇವಾ, ಶಾಂತಿದೇವಾ, ಉಪದೇವಾ, ಶ್ರೀದೇವಾ, ದೇವರಕ್ಷಿತಾ ಮತ್ತು ಸಹದೇವಾ. ಇವರೆಲ್ಲ ದೇವಕಿಯ ತಂಗಿಯರು. ಈ ಏಳು ಜನರನ್ನೂ ವಸುದೇವನೇ ಮದುವೆಯಾದ.

೨) ವಸುದೇವಪತ್ನಿಯರಲ್ಲಿ ರೋಹಿಣೀ ಎಲ್ಲರಿಗಿಂತ ಹಿರಿಯಳು.

ಪೌಂಡ್ರಕ-ಶೃಗಾಲವಾಸುದೇವರ ಜನನ

ರಾಜ್ಞಶ್ಚ ಕಾಶಿಪ್ರಭವಸ್ಯ ಕನ್ಯಕಾಂ ಸ ಪುತ್ರಿಕಾಪುತ್ರಕಧರ್ಮತೋऽವಹತ್ ।
ಕನ್ಯಾಂ ತಥಾ ಕರವೀರೇಶ್ವರಸ್ಯ ತೇನೈವ ಧರ್ಮೇಣ ದಿತಿಂ ದನುಂ ಪುರಾ ॥ ೭ ॥

---

೧. ಪೌರವೀ ರೋಹಿಣೀ ನಾಮ ಬಾಹ್ಲೀಕಸ್ಯಾತ್ಮಜಾಭವತ್ ।
ಜ್ಯೇಷ್ಠಪತ್ನೀ ಮಹಾರಾಜದಯಿತಾऽऽನಕದುಂದುಭೇಃ' ಇತಿ ಹರಿವಂಶೇ । – (ಜ.)

ಅ: ಕಾಶಿರಾಜನ ಮಗಳನ್ನು ವಸುದೇವ ಪುತ್ರಿಕಾಪುತ್ರಧರ್ಮದಿಂದ ವಿವಾಹವಾದ. ಹಾಗೆಯೇ ಕರವೀರರಾಜನ ಮಗಳನ್ನೂ ಸಹ ವಿವಾಹವಾದ. ಅವರಿಬ್ಬರೂ ಹಿಂದೆ ದಿತಿ ಹಾಗೂ ದನು ಆಗಿದ್ದವರು.

ವಿ: ಕಶ್ಯಪಪತ್ನಿಯರಲ್ಲಿ ದಿತಿ ಮತ್ತು ದನು ಎಂಬ ಇಬ್ಬರು ಕ್ರಮವಾಗಿ ಕಾಶಿರಾಜ ಹಾಗೂ ಕರವೀರರಾಜರ ಪುತ್ರಿಯರಾಗಿ ಜನಿಸಿದ್ದರು. ಅವರಿಬ್ಬರನ್ನೂ ವಸುದೇವ [೧]ಪುತ್ರಿಕಾಪುತ್ರಧರ್ಮದಿಂದ ವಿವಾಹವಾಗಿದ್ದ.

ಯೋ ಮನ್ಯತೇ ವಿಷ್ಣುರೇವಾಹಮಿತ್ಯಸೌ ಪಾಪೋ ವೇನಃ ಪೌಂಡ್ರಕೋ ವಾಸುದೇವಃ ।
ಜಾತಃ ಪುನಃ ಶೂರಜಾತ್ ಕಾಶಿಜಾಯಾಂ ನಾನ್ಯೋ ಮತ್ತೋ ವಿಷ್ಣುರಸ್ತೀತಿ ವಾದೀ ॥೮॥

ಅ: ''ವಿಷ್ಣುವೇ ನಾನು'' ಎಂದು ಭಾವಿಸಿದ್ದ ಪಾಪಿ ವೇನನೇ ಪೌಂಡ್ರಕವಾಸುದೇವ. ಅವನು ವಸುದೇವನಿಂದ ಕಾಶಿರಾಜನ ಮಗಳಲ್ಲಿ ಹುಟ್ಟಿದ್ದ. ''ವಿಷ್ಣು ನನ್ನಿಂದ ಬೇರೆ ಅಲ್ಲ'' (''ನನ್ನ ಹೊರತು ಬೇರೊಬ್ಬ ವಿಷ್ಣು ಇಲ್ಲ'') ಎಂದೇ ಹೇಳುತ್ತಿದ್ದ.

ವಿ: ೧) ಅಂಗರಾಜನಿಗೆ ಸುನೀಥಾ ಎಂಬವಳಲ್ಲಿ ಜನಿಸಿದ ಪುತ್ರ ವೇನ. ಇವನ ಕಥೆ ಭಾಗವತಪುರಾಣದಲ್ಲಿ ಬಂದಿದೆ (ಸ್ಕಂಧ ೪, ಅಧ್ಯಾಯ ೧೩, ಶ್ಲೋಕ ೩೮–೪೯ ಮತ್ತು ಅಧ್ಯಾಯ ೧೪ರಲ್ಲಿ ಶ್ಲೋಕ ೧–೪೬). ಅವನು **'ಮತ್ತೋಽನ್ಯಃ ಕೋಽಗ್ರಭುಕ್ ಪುಮಾನ್'** – ಭಾಗವತ (೪/೧೪/೨೮) ಎನ್ನುತ್ತಾ ''ನಾನೇ ವಿಷ್ಣು; ಯಜ್ಞ, ದಾನ, ತಪಸ್ಸು ಎಲ್ಲವನ್ನೂ 'ಕೃಷ್ಣಾರ್ಪಣ'ವೆನ್ನದೆ, 'ವೇನಾರ್ಪಣ'ವೆನ್ನಿ ಎಂಬ ಕರಾಳಶಾಸನ ಮಾಡಿದ್ದ ಮಹಾಪಾಪಿ. ಅವನೇ ಪೌಂಡ್ರಕವಾಸುದೇವನಾಗಿ ಜನಿಸಿದ್ದ. ''ನಾನು ಬ್ರಹ್ಮ'' ಎಂದು ವೇನ ಹೇಳಿಕೊಂಡಿದ್ದರೆ ಅವನ ಶಿಷ್ಯನಾದ ಕ್ರಮು ಎಂಬವನು 'ಎಲ್ಲರೂ ಬ್ರಹ್ಮನಿಂದ ಅಭಿನ್ನರು' ಎಂದು ಸರ್ವಬ್ರಹ್ಮೈಕ್ಯವಾದವನ್ನು ಪ್ರಸಾರಮಾಡಿದ್ದ. ವೇನ ಪೌಂಡ್ರಕವಾಸುದೇವನಾಗಿ ಜನಿಸಿದ್ದಾಗಲೂ, ''ತಾನೇ ವಿಷ್ಣು; ತನ್ನ ಹೊರತು ಬೇರೆ ದೇವರಿಲ್ಲ'' ಎಂದು ಹೇಳಿಕೊಳ್ಳುತ್ತಿದ್ದ.

೨) ಪೌಂಡ್ರಕ ಎಂಬುದು ಅವನ ಹೆಸರು. ಅವನು ವಸುದೇವನ ಮಗನೇ ಆದ್ದರಿಂದ ಪೌಂಡ್ರಕವಾಸುದೇವ ಎಂದು ಹೆಸರಾದನು. ಅವನು ಪುತ್ರಿಕಾಪುತ್ರಧರ್ಮದಿಂದ ಜನಿಸಿದ್ದರಿಂದ ಕಾಶಿರಾಜ್ಯಕ್ಕೆ ಅರಸನಾದ; ಯಾದವವಂಶಕ್ಕೆ ಸೇರಲಿಲ್ಲ.

---

೧. ಪುರಾ ದಿತಿಂ= ಕಾಶಿಪ್ರವರಸ್ಯ ಕನ್ಯಾಂ, ಪುರಾ ದನುಂ= ಕರವೀರೇಶ್ವರಸ್ಯ ಕನ್ಯಾಮಿತಿ ವಿಭಾಗೇನಾನ್ವಯಃ । ತೇನೈವ ಧರ್ಮೇಣ= ಪುತ್ರಿಕಾಪುತ್ರಕಧರ್ಮೇಣ ॥ – (ವಾ.)

ಧುಂಧುರ್ಹತೋ ಯೋ ಹರಿಣಾ ಮಧೋಃ ಸುತ ಆಸೀತ್ ಸುತಾಯಾಂ ಕರವೀರೇಶ್ವರಸ್ಯ।
ಸೃಗಾಲನಾಮಾ ವಾಸುದೇವೋಽಥ ದೇವಕೀಮುದೂಹ್ಯ ಶೌರಿರ್ನ ಯಯಾವುಭೇ ತೇ ॥೯॥

ಅ: ಶ್ರೀಹರಿಯಿಂದ ಹತನಾಗಿದ್ದ ಧುಂಧು ಎಂಬ ಮಧುವಿನ ಮಗ ಕರವೀರರಾಜನ ಮಗಳಲ್ಲಿ ಶೃಗಾಲವಾಸುದೇವ ಎಂಬ ಹೆಸರಿನಿಂದ ಜನಿಸಿದ. ಬಳಿಕ ದೇವಕಿಯನ್ನು ವಿವಾಹವಾದ ವಸುದೇವ ಅವರಿಬ್ಬರ ಬಳಿಗೆ ತೆರಳಲಿಲ್ಲ.

ವಿ: ೧) ಮಧುಕೈಟಭರಲ್ಲಿ ಹಿರಿಯನಾದ ಮಧು ಎಂಬವನ ಮಗ ಧುಂಧು ಎಂಬ ಅಸುರ. ಅವನೇ ಕರವೀರರಾಜನ ಮಗನಾಗಿ ಜನಿಸಿದ್ದ ಶೃಗಾಲವಾಸುದೇವ. ಅವನೂ ಸಹ ಪುತ್ರಿಕಾಪುತ್ರಧರ್ಮದಿಂದಲೇ ವಸುದೇವನಿಂದ ಜನಿಸಿದ್ದರಿಂದ ಅವನು ಕರವೀರದ ಅರಸನಾದನೆ ಹೊರತು, ಯಾದವವಂಶಕ್ಕೆ ಸೇರಲಿಲ್ಲ.

೨) ಹೀಗೆ ವಸುದೇವನ ಮಕ್ಕಳಾದರೂ, ಪೌಂಡ್ರಕ, ಶೃಗಾಲ ಇಬ್ಬರೂ ಯಾದವರ ವಂಶಕ್ಕೆ ಸೇರಲಿಲ್ಲವಾದ್ದರಿಂದ, ಯಾದವರೆಲ್ಲ ದೇವತೆಗಳು ಎಂಬ ಮಾತಿಗೆ ಚ್ಯುತಿ ಬರಲಿಲ್ಲ. (ಅಧ್ಯಾಯ ೧೧, ಶ್ಲೋಕ ೨೩೫).

೩) ಈ ಇಬ್ಬರೂ ಮುಂದೆ ಶ್ರೀಕೃಷ್ಣನಿಂದಲೇ ಹತರಾಗುವರು ಎಂಬುದು ವಿಶೇಷ.

೪) ಧುಂಧು ಹತನಾದದ್ದೂ ಕುವಲಯಾಶ್ವ ಎಂಬ ರಾಜನಿಂದ ವಂಶದ ರಾಜನಿಂದ. ಅವನಿಗೆ ಅದು ಸಾಧ್ಯವಾದದ್ದು ಅವನೊಳಗೆ ಆಗ ಇದ್ದ ಶ್ರೀಹರಿಯ ಆವೇಶದಿಂದ. ಅದರಿಂದಾಗಿ ಧುಂಧುಮಾರ ಎಂದರೆ ಮುಖ್ಯಾರ್ಥದಲ್ಲಿ ಶ್ರೀಹರಿಯೇ ಎಂಬ ಅರ್ಥದಲ್ಲಿ ಈ ರೀತಿ ತಿಳಿಸಿರುವರು ಎಂದು [೧]ತಿಳಿಯಬೇಕು. ಧುಂಧು ಎಂಬ ಹೆಸರಿನ ಮತ್ತೊಬ್ಬ ಅಸುರನನ್ನು ಸಾಕ್ಷಾತ್ ಶ್ರೀಹರಿಯೇ ಕೊಂದಿದ್ದ ಎಂಬ ಮತ್ತೊಂದು ಬಗೆಯ ಅರ್ಥವನ್ನು ಕೆಲವರು ಮಾಡಿರುವರು.

ತತಸ್ತು ತೌ ವೃಷ್ಣಿಶತ್ರೂ ಬಭೂವತುರ್ಜ್ಯೇಷ್ಠೌ ಸುತೌ ಶೂರಸುತಸ್ಯ ನಿತ್ಯಮ್ ।
ಅನ್ಯಾಸು ಚ ಪ್ರಾಪ ಸುತಾನುದಾರಾನ್ ದೇವಾವತಾರಾನ್ ವಸುದೇವೋಽಖಿಲಜ್ಞಃ ೧೦

ಅ: ಅದರಿಂದಾಗಿ ವಸುದೇವನ ಜ್ಯೇಷ್ಠಪುತ್ರರಾದ ಆ ಇಬ್ಬರೂ ಯಾದವರಿಗೆ ನಿತ್ಯವೈರಿಗಳಾದರು. ಸರ್ವಜ್ಞನಾಗಿದ್ದ ವಸುದೇವ ಮುಂದೆ ಇತರಪತ್ನಿಯರಲ್ಲಿ ದೇವತೆಗಳ ಅವತಾರರಾದ ಯೋಗ್ಯಮಕ್ಕಳನ್ನು ಪಡೆದ.

---

೧. 'ನಾರಾಯಣೇನ ಕೌರವ್ಯತ್ತೇಜಸಾಽಽಪ್ಯಾಯಿತಸ್ತದಾ ।
ಅರ್ಣವಂ ಖನಯಾಮಾಸ ಕುವಲಾಶ್ವೋ ಮಹೀಪತಿಃ' ಇತ್ಯದ್ಯಾರಣ್ಯಪರ್ವವಚನಾತ್ ॥ – (ಜ.)

ವಿ: ಪೌಂಡ್ರಕ, ಶೃಗಾಲರ ಯಾದವದ್ವೇಷಕ್ಕೆ ವಸುದೇವ ಅನಂತರ ತಮ್ಮ ತಾಯಿಯರ ಬಳಿ ಬರಲಿಲ್ಲ ಎಂಬುದು ಮತ್ತೊಂದು ಪ್ರಧಾನಕಾರಣವಾಯಿತು ಎಂದರ್ಥ.

ದೇವಾವತಾರರೆಲ್ಲ ವ್ಯಾಸಶಿಷ್ಯರೇ

ಯೇ ಯೇ ಹಿ ದೇವಾಃ ಪೃಥಿವೀಂ ಗತಾಸ್ತೇ ಸರ್ವೇ ಶಿಷ್ಯಾಃ ಸತ್ಯವತೀಸುತಸ್ಯ ।
ವಿಷ್ಣೋರ್ಜ್ಞಾನಂ ಪ್ರಾಪ್ಯ ಸರ್ವೇಽಖಿಲಜ್ಞಾಸ್ತಸ್ಮಾದ್ಯಥಾಯೋಗ್ಯತಯಾ ಬಭೂವುಃ ॥೧೧॥

ಅ: ಭೂಮಿಗಿಳಿದು ಬಂದ ದೇವಾಂಶಸಂಭೂತರೆಲ್ಲರೂ ಶ್ರೀವೇದವ್ಯಾಸದೇವರ ಶಿಷ್ಯರೇ ಆದರು. ಅವರಿಂದ ವಿಷ್ಣುತತ್ತ್ವದ ಜ್ಞಾನವನ್ನು ಹೊಂದಿ, ತಮ್ಮ ಯೋಗ್ಯತೆಗೆ ಅನುಗುಣವಾಗಿ ಎಲ್ಲ ಬಲ್ಲವರಾದರು.

ವಿ: ೧) ಭೂಮಿಯಲ್ಲಿ ಅವತಾರ ಮಾಡಿದ್ದ ಎಲ್ಲ ದೇವತೆಗಳೂ ವ್ಯಾಸಶಿಷ್ಯರೇ ಆದರು. ಮೂಲರೂಪದಿಂದ ಬಂದು ಶ್ರೀವ್ಯಾಸರಿಂದ ತತ್ತ್ವಶ್ರವಣ ಮಾಡಿದ ದೇವತೆಗಳು, ಹೀಗೆ ಅವತರಿಸಿ ಬಂದಾಗಲೂ ಅವರ ಶಿಷ್ಯರೇ ಆಗಿ ವಿಶೇಷಜ್ಞಾನ ಪಡೆದರು ಎಂಬುದು ವಿಶೇಷ.

೨) ಆಗಿನ ಸಜ್ಜನರೆಲ್ಲ ಶ್ರೀವ್ಯಾಸಶಿಷ್ಯರಾಗಿ ಜ್ಞಾನ ಪಡೆದರೆ, ಅನಂತರದ ಶಿಷ್ಯರೆಲ್ಲ ಶ್ರೀವ್ಯಾಸರ ಗ್ರಂಥಗಳಿಂದಲೇ ಜ್ಞಾನ ಪಡೆದರು. ಆದ್ದರಿಂದಲೇ ಮುಖ್ಯವಾಗಿ ಜಗದ್ಗುರು ಎಂದರೆ ಶ್ರೀವ್ಯಾಸರೇ ಎಂದರ್ಥ.

ದೇವಕಿಯ ಮೊದಲ ಆರು ಪುತ್ರರ ಹಿನ್ನೆಲೆ

ಮರೀಚಿಜಾಃ ಷಣ್ಮನಯೋ ಬಭೂವುಸ್ತೇ ದೇವಲಂ ಪ್ರಾಹಸನ್ ಕಾರ್ಯಹೇತೋಃ[೧] ।
ತಚ್ಛಾಪತಃ ಕಾಲನೇಮಿಪ್ರಸೂತಾ ಅವಧ್ಯತಾರ್ಥಂ ತಪ ಏವ ಚಕ್ರುಃ ॥ ೧೨ ॥

---

೧. ಕಾರ್ಯಂ ಪ್ರಾಮಜ್ವರೇಣ ಕೃಶಾಂಗತ್ವಮ್ । ನ ಚೈವಂ । ''ಸುತಾಂಶ್ಚಖಾದಿತುಮುದ್ಯತಮ್'' ಇತಿ ಭಾಗವತವಚನಸ್ಯ ವಿರೋಧಃ । ''ತಚ್ಛಾಪತಃ ಕಾಲನೇಮಿಪ್ರಸೂತಾಃ'' ಇತ್ಯಸ್ಯ ''ಹಿರಣ್ಯಕಶಿಪೋರ್ಜಾತಾಃ'' ಇತಿ ಭಾಗವತೋಕ್ತೇಶ್ಚ ವಿರೋಧ ಇತಿ ಚೇನ್ನ । ಹಿರಣ್ಯಕಶಿಪೋಃ ಪುತ್ರತ್ವೇ ಪುನರ್ದೇವಕ್ಯಾಂ ಜನ್ಮನಿ ಕಾರಣಾಭಾವಾತ್ ಶಾಪೋಽವಶ್ಯಂ ವಕ್ತವ್ಯಃ । ಪಿತ್ರಾ ತೇನೈವ ಹಿರಣ್ಯಕಶಿಪುನಾ ಅಹಂಕಾರವಶಾತ್ ಆತ್ಮನ್ಯತೋ ವರಲಿಪ್ಸೂನ್ ಪ್ರತಿ ಕುಪಿತೇನ ಶಾಪೋ ದತ್ತಶ್ಚೇತ್ ಭೂಮೌ ಜಾಯತಾಂ ಕಂಸೇನೈವ ಹನನೇ ನ ಕಿಂಚಿತ್ ಕಾರಣಮ್ । ಸ್ವಸ್ಯೈವ ಪುತ್ರತ್ವೇ ತು ಸ್ವತಾತೋ ಭವತಾಂ ಹರಿತೇತಿ ಸ್ವಸ್ಯಾಪಿ ಜನ್ಮಘಟಕಂ ಶಾಪಂ ನ ದದ್ಯಾದೇವ । ಕ್ರೋಧವಶಾದ್ದದ್ಯಾಚ್ಚೇದಪಿ ಭೂಮೌ ಜಾತೇನ ಹಿರಣ್ಯಕಶಿಪುನೈವ ಹರಿತವ್ಯಾಃ ನತು ಕಂಸೇನ । ಕಾಲನೇಮಿಜಾತತ್ವೇ ತು ತತ್ರ ಸ್ವತಾತೋ ಭವತಾಂ ನಿಹಂತೇತಿ ಹಿರಣ್ಯಕಶಿಪೋಃ ಶಾಪೋಽಪಿ ಅಹಂಕಾರವಶಾತ್ ಆತ್ಮನ್ಯತೋ ವರಲಿಪ್ಸಯಾ ಕಾರಣೇನ ಘಟೇತೈವ । ಕಂಸೇನೈವ ಹನನಮಪಿ ಭಾಗವತೋಕ್ತಂ ಸುತರಾಂ ಘಟೇತ ।

ಅ: ಮರೀಚಿಯಿಂದ ಹುಟ್ಟಿದ ಆರು ಜನ ಮುನಿಗಳಿದ್ದರು. ಅವರು ದೇವಲಮುನಿಯನ್ನು ಅವರ ತೆಳುದೇಹದ ನಿಮಿತ್ತ ಹಾಸ್ಯ ಮಾಡಿದರು. ಆ ಮುನಿಯ ಶಾಪದಿಂದ ಕಾಲನೇಮಿಯ ಮಕ್ಕಳಾಗಿ ಜನಿಸಿದರು. ಸಾವಿಲ್ಲದವರಾಗಲೆಂದು ತಪಸ್ಸನ್ನೂ ಮಾಡಿದರು.

ವಿ: ೧) ಬ್ರಹ್ಮದೇವರ ಮಾನಸಪುತ್ರರಾದ ಸಪ್ತರ್ಷಿಗಳಲ್ಲಿ ಮರೀಚಿಮುನಿ ಒಬ್ಬರು. ಅವರಿಗೆ ಆರು ಜನ ಪುತ್ರರು. ಅಸಿತದೇವಲ ಕಶ್ಯಪಋಷಿಯ ಪುತ್ರ. ಹಿಮಾಲಯ ಪುತ್ರಿ ಏಕಪರ್ಣಾ ಆತನ ಮಡದಿ. ತಪಸ್ಸಿನಿಂದ ಅವನ ದೇಹ ತುಂಬಾ ಕೃಶವಾಗಿತ್ತು. ಅದನ್ನು ಕಂಡು ಮರೀಚಿಯ ಆ

ಅತಸ್ತಾತ್ಪರ್ಯಕಾರೋಕ್ತಮೇವ ತತ್ತ್ವಮ್ । ತರ್ಹಿ ''ತೇನಾಸುರೀಮಗುರ್ಯೋನಿಮಮುನಾऽವದ್ಯಕರ್ಮಣಾ । ಹಿರಣ್ಯಕಶಿಪೋರ್ಜಾತಾಃ ಪುತ್ರಾಸ್ತೇ ಯೋಗಮಾಯಯಾ । ದೇವಕ್ಯಾ ಜಠರೇ ಜಾತಾ ರಾಜನ್ ಕಂಸವಿಹಿಂಸಿತಾಃ । ಸಾ ತಾಂಧೋಚಂತ್ಯಾತ್ಮಜಾನ್ ಸ್ವಾಂಸ್ತ ಇಮೇऽದ್ಯಾಸತೇऽಂತಿಕೇ । ಇತ ಏತಾನ್ ಪ್ರಣೇಷ್ಯಾಮೋ ಮಾತೃಶೋಕಾಪನುತ್ತಯೇ'' ಇತಿ ಭಾಗವತೋಕ್ತೇಃ ಕಾ ಗತಿರಿತಿ ಚೇದಿತ್ಥಮ್ । ಅಮುನಾ ಅವದ್ಯಕರ್ಮಣಾ ದೇವಲಪರಿಹಾಸಾಖ್ಯಾವದ್ಯಕರ್ಮಣಾ ಜಾತೇನ ತೇನ ಕುಪಿತದೇವಲಶಾಪೇನ ಆಸುರೀಂ ಕಾಲನೇಮ್ಯಾಖ್ಯಾ-ಸುರಸಂಬಂಧಿನೀಂ ಯೋನಿಂ ತದ್ಭಾರ್ಯಾಯೋನಿಮಗುಃ । ಏವಂ ಜಾತಾಸ್ತೇ ಪುತ್ರಾ ಹಿರಣ್ಯಕಶಿಪೋರ್ನಿಮಿತ್ತಾ-ಚ್ಛಾಪಾದಿತಿ ಯಾವತ್ । ಯೋಗಮಾಯಯಾ ದುರ್ಗಯಾ ದೇವಕ್ಯಾ ಜಠರೇ ಜಾತಾಃ । ಕಂಸೇನ ವಿಹಿಂಸಿತಾಃ ಪುನರ್ಬ್ರಹ್ಮವರಾದೇವಾವಧ್ಯೇ ಸ್ವಸ್ವಶರೀರೇ ತಯೈವ ದುರ್ಗಯಾ ಪ್ರವೇಶಿತಾಃ ಸಂತಃ ತ ಇಮೇ ಹೇ ಬಲೇ, ಅದ್ಯ ತೇऽಂತಿಕೇ ಆಸತ ಇತಿ ಯೋಜನಯಾ ಉಭಯೋರಪ್ಯವಿರೋಧಸಂಭವಾದಿತಿ । ಯೋಗಮಾಯಯೇತಿ ವದತಾ ''ಪ್ರಸ್ವಾಪಯಿತ್ವಾ ಪ್ರಚಕರ್ಷ ಕಾಯಾತ್'' ಇತಿ ತಾತ್ಪರ್ಯೋಕ್ತಂ ಪ್ರಮೇಯಂ ಸೂಚಿತಮ್ । ಅನ್ಯಥಾ ಕಂಸಕರಾನ್ಮರಣಾನಂತರಂ ಸ್ವಮೂಲಮುನಿರೂಪಪ್ರಾಪ್ತಿರೇವ ಸ್ಯಾತ್ ಪುನರ್ದಾನವದೇಹಂ ಪ್ರವಿಶ್ಯ ಮಹಾಬಲಿನಿಕಟೇ ಅವಸ್ಥಾನೇ ಕಿಂ ಕಾರಣಮ್ । ಕಥಂ ಚ ತದ್ಘಟತೇ । ಅತ ಉಭಯಸಂಪಾದನಾಯ ದಾನವದೇಹೇ ಸ್ಥಿತಾನಾಂ ತೇಷಾಮವಧ್ಯತ್ವರೂಪಬ್ರಹ್ಮವರೋऽಪ್ಯಾವಶ್ಯಕಃ । ತದ್ಘಟನಾಯಾವಿನಷ್ಟಪ್ರಸುಪ್ತಪೂರ್ವ-ದೇಹಾದ್ದೇವಕೀದೇಹಂ ಪ್ರತ್ಯಾಕರ್ಷಣಾಯ ಪುನರತ್ರ ಮೃತಾನಾಮವಿನಷ್ಟಪೂರ್ವದೇಹ ಏವ ಪ್ರವೇಶನಾಯ ಯೋಗಮಾಯಾऽಪ್ಯಾವಶ್ಯಕೀ । ತಸ್ಮಾದ್ಯೋಗಮಾಯೇತಿ ವದತಾ ಭಾಗವತಕಾರೇಣಾಪಿ ತಾತ್ಪರ್ಯಕಾರೋಕ್ತಂ ಸರ್ವಂ ಪ್ರಮೇಯಂ ಸೂಚಿತಮ್ । ಪ್ರಸ್ವಾಪನಸ್ಯ ಚ ವತ್ಸರಪರ್ಯಂತಂ ಸ್ವಗೃಹೇ ಅಸಂಭವಾತ್ ಕಸ್ಯಾಂಚಿದ್ ಗಿರಿಗುಹಾಯಾಂ ದುರ್ಗೈವ ಸ್ವಶಕ್ತ್ಯಾ ಕ್ರಮೇಣೈಕೈಕಂ ನೀತ್ವಾ ಸ್ವಶಕ್ತ್ಯಾ ಬ್ರಹ್ಮವರಶಕ್ತ್ಯಾ ಚ ಜೀವತಾಮೇವ ತೇಷಾಂ ಕಾಯಾನಾಂ ಪ್ರಸ್ವಾಪನಂ ಕಾರಯತಿ । ಕಂಸೇನ ನಿಹತಾನಾಂ ಪುನಸ್ತೇಷ್ವೇವ ಕಾಯೇಷು ಪ್ರವೇಶಂ ಚ ಕಾರಯತಿ । ಭಗವಾಂಸ್ತು ಸ್ವಾಘಟಿತಘಟಕಶಕ್ತ್ಯಾ ದಾನವದೇಹಂ ವಿನಾಶ್ಯ [illegible] ಪರಿಣಮಯ್ಯ ಸ್ವಮಾತ್ರೇ ದರ್ಶಯಿತ್ವಾ ಪುನಸ್ತಸ್ಮಾಚ್ಛಿಶುರೂಪಾದ್ವಿಮೋಚ್ಯ ದಿವ್ಯದೇಹಂ ದತ್ತ್ವಾ ಸ್ವಲೋಕಂ ಪ್ರಾಪಯಾಮಾಸೇತ್ಯತೋ ಭಾರತತಾತ್ಪರ್ಯಕಾರಃ ಭಾಗವತಸ್ಯಾಪಿ ತಾತ್ಪರ್ಯಕಾರ ಇತಿ ಸರ್ವಮವದಾತಮ್ । ಆತ್ಮಾನ್ಯತೋ ವರಲಿಪ್ಸುನ್ ಹಿರಣ್ಯ ಇತ್ಯತ್ರ । ಹಿರಣ್ಯಃ= ಹಿರಣ್ಯಕಶಿಪುಃ ಆತ್ಮಾನ್ಯತಃ ಸ್ವಸ್ಮಾದನ್ಯತಃ ಬ್ರಹ್ಮಣಃ ವರಲಿಪ್ಸುನಿತಿ ಸಂಬಂಧಃ । ತರ್ಹಿ ಸ್ವಯಂ ಚತುರ್ಮುಖಾತ್ ಕಥಂ ವರಂ ಜಗ್ರಾಹೇತಿ ಚೇತ್, ಸತ್ಯಮ್ । ತದಾ ಮಹಾನಹಂಕಾರೋ ಹಿರಣ್ಯಕಶಿಪೋರ್ನಾಸೀತ್ । ಬ್ರಹ್ಮಣೋ ವರದಾನಾನಂತರಂ ''ಯಸ್ತ್ವಯಾ ಮಂದಭಾಗ್ಯೋಕ್ತೋ ಮದನ್ಯೋ ಜಗದೀಶ್ವರಃ । ಕ್ವಾಸೌ ಯದಿ ಸ ಸರ್ವತ್ರ ಸ್ತಂಭೇ ಕಸ್ಮಾನ್ನ ದೃಶ್ಯತೇ'' ಇತಿ ಭಾಗವತೋಕ್ತೇಃ, ದೃಪ್ತಃ ಸನ್ ಭಗವಂತಮಪ್ಯವಜಾನಾನೋ ಬ್ರಹ್ಮಾಣಮಪಿ ತೃಣೀಕೃತ್ಯಾಹಂಕಾರವಶಾಚ್ಛಶಾಪೇತಿ ಭಾವಃ ॥ ೧೨, ೧೩ ॥ – (ವಾ.)

ಪುತ್ರರು [೧]ನಕ್ಕರು. ದೇವಲಮುನಿ ಅವರನ್ನು ಶಪಿಸಿದ. ಅವರೆಲ್ಲ ಹಿರಣ್ಯಾಕ್ಷನ ಮಗನಾದ ಕಾಲನೇಮಿಗೆ ಮಕ್ಕಳಾಗಿ ಜನಿಸಿದರು. ಸ್ಮರ, ಉದ್ಗೀಥ, ಪರಿಷ್ವಂಗ, ಪತಂಗ, ಕ್ಷುದ್ರಭೃತ್ ಮತ್ತು ಘೃಣಿ ಎಂದು ಆಗ ಅವರ ಹೆಸರು.

೨) ಹೃಷೀಕೇಶತೀರ್ಥೀಯ, ಜನಾರ್ದನೀಯ ಹಾಗೂ ವರದರಾಜೀಯದಲ್ಲಿ 'ತೇ ದೇವಕಂ' ಎಂಬ ಪಾಠವಿದೆ.

ಧಾತಾ ಪ್ರಾದಾದ್ವರಮೇಷಾಂ ತಥೈವ ಶಶಾಪ ತಾನ್ ಕ್ಷ್ಮಾತಲೇ ಸಂಭವಧ್ವಮ್ ।
ತತ್ರ ಸ್ವತಾತೋ ಭವತಾಂ ನಿಹಂತೇತ್ಯಾತ್ಮಾನ್ಯತೋ ವರಲಿಪ್ಸೂನ್ ಹಿರಣ್ಯಃ ॥ ೧೩ ॥

ಅ: ಬ್ರಹ್ಮ ಅವರಿಗೆ ಹಾಗೆಯೇ [೨]ವರ ನೀಡಿದ. ತನ್ನನ್ನು ಬಿಟ್ಟು ಬೇರೆಯವರಿಂದ ವರ ಪಡೆಯಲು ಬಯಸಿದರೆಂಬ ಕೋಪದಿಂದ ಹಿರಣ್ಯಕಶಿಪು ಅವರನ್ನು ಶಪಿಸಿದ : ''ನೀವು ಭೂಮಿಯಲ್ಲಿ ಹುಟ್ಟಿರಿ; ಅಲ್ಲಿ ನಿಮ್ಮ ತಂದೆಯೇ ನಿಮ್ಮನ್ನು ಕೊಲ್ಲುವನು''.

ಎ: ಬ್ರಹ್ಮನ ವರಬಲದಿಂದ ಕೊಬ್ಬಿ, ತನ್ನನ್ನೇ ಜಗದೀಶ್ವರನೆಂದು ಭ್ರಮಿಸಿದ್ದ ಹಿರಣ್ಯಕಶಿಪುವಿಗೆ ತನ್ನ ತಮ್ಮನ ಪೌತ್ರರಾದ ಅವರೆಲ್ಲ [೩]ತನ್ನನ್ನು ಬಿಟ್ಟು ಬ್ರಹ್ಮದೇವರಿಂದ ವರ

---

೧. ಹೀನಾಂಗಾನತಿರಿಕ್ತಾಂಗಾನ್ ವಿದ್ಯಾಹೀನಾನ್ ವಯೋಽಧಿಕಾನ್ ।
ರೂಪದ್ರವಿಣಹೀನಾಂಶ್ಚ ಜಾತಿಹೀನಾಂಶ್ಚನಾಕ್ಷಿಪೇತ್ ॥ - ಇತಿ ಆಶ್ವಮೇಧಿಕೇ ಮನುಸ್ಮೃತೌ ಚ ।

೨. ಯತ್ರ ತೇ ಗರ್ಭಶಯನಾಃ ಷಡ್ಗರ್ಭಾ ನಾಮ ದಾನವಾಃ ॥
ವಿಕ್ರಾಂತವಪುಷೋ ದೀಪ್ತಾಸ್ತೇಽಮೃತಪ್ರಾಶನೋಪಮಾಃ ।
ಅಮರಪ್ರತಿಮಾ ಯುದ್ಧೇ ಪುತ್ರಾ ವೈ ಕಾಲನೇಮಿನಃ ॥
ತೇ ತಾತತಾತಂ ಸಂತ್ಯಜ್ಯ ಹಿರಣ್ಯಕಶಿಪುಂ ಪುರಾ ।
ಉಪಾಸಾಂಚಕ್ರಿರೇ ದೈತ್ಯಾಃ ಪುರಾ ಲೋಕಪಿತಾಮಹಮ್ ॥
ತಪ್ಯಮಾನಾಸ್ತಪಸ್ತೀವ್ರಂ ಜಟಾಮಂಡಲಧಾರಿಣಃ ।
ತೇಷಾಂ ಪ್ರೀತೋಽಭವದ್ಬ್ರಹ್ಮಾ ಷಡ್ಗರ್ಭಾಣಾಂ ವರಂ ದದೌ ॥ – ಹರಿವಂಶ (೨/೨/೧೧-೧೪)

೩. ತತೋ ಹಿರಣ್ಯಕಶಿಪುಃ ಸರೋಷೋ ವಾಕ್ಯಮಬ್ರವೀತ್ ॥
ಮಾಮುತ್ಸೃಜ್ಯ ವರೋ ಯಸ್ಮಾದ್ಧೃತೋ ವಃ ಪದ್ಮಸಂಭವಾತ್ ।
ತಸ್ಮಾದ್ವಸ್ತ್ಯಜಿತಃ ಸ್ನೇಹಃ ಶತ್ರುಭೂತಾಂಸ್ತ್ಯಜಾಮ್ಯಹಮ್ ॥
ಷಡ್ಗರ್ಭಾ ಇತಿ ಯೋಽಯಂ ವಃ ಶಬ್ದಃ ಪಿತ್ರಾಽಭಿವರ್ಧಿತಃ ।
ಸ ಏವ ವೋ ಗರ್ಭಗತಾನ್ ಪಿತಾ ಸರ್ವಾನ್ ವಧಿಷ್ಯತಿ ॥
ಷಡೇವ ದೇವಕೀಗರ್ಭಾಃ ಷಡ್ಗರ್ಭಾ ವೈ ಮಹಾಸುರಾಃ ।
ಭವಿಷ್ಯಥ ತತಃ ಕಂಸೋ ಗರ್ಭಸ್ಥಾನ್ ವೋ ವಧಿಷ್ಯತಿ ॥ – (ಹರಿವಂಶ ೨/೨/೨೦-೨೩)

ಪಡೆದದ್ದು ಕೋಪ ತರಿಸಿತು. ತಾನೂ ಸಹ ಬ್ರಹ್ಮನಿಂದ ವರ ಪಡೆದವನು ಎಂಬುದನ್ನು ಗಮನಿಸದೆ, ಅವರನ್ನು ಹಾಗೆ ಶಪಿಸಿದ. ಆಸುರಬುದ್ಧಿ ಎಂದರೆ ಇದೇ.

೧
ದುರ್ಗಾ ತದಾ ತಾನ್ ಭಗವತ್ಪ್ರಚೋದಿತಾ ಪ್ರಸ್ವಾಪಯಿತ್ವಾ ಪ್ರಚಕರ್ಷ ಕಾಯಾತ್ ।
ಕ್ರಮಾತ್ ಸಮಾವೇಶಯದಾಶು ದೇವಕೀಗರ್ಭಾಶಯೇ ತಾನ್ ನ್ಯಹನಚ್ಚ ಕಂಸಃ ॥ ೧೪ ॥

---

೧. ಇದಾನೀಂ ಬ್ರಹ್ಮಣೋ ವರಂ ಹಿರಣ್ಯಕಶಿಪೋಃ ಶಾಪಂ ಚ ಘಟಯಿತುಮಾಹ - ದುರ್ಗೇತಿ । ತಥಾಚಾಸ್ಯ ಶ್ಲೋಕಸ್ಯೈವಂ ಯೋಜನಾ । ತದಾ = ಹಿರಣ್ಯಕಶಿಪುಶಾಪದಶಾಯಾಂ ಭಗವತ್ಪ್ರಚೋದಿತಾ ದುರ್ಗಾ ತಾನ್= ಅಸುರದೇಹೇಷು ಸ್ಥಿತಕಾಲನೇಮಿಪುತ್ರಾನ್ ಪ್ರಸ್ವಾಪಯಿತ್ವಾ = ಕ್ರಮೇಣ ವತ್ಸರಪರ್ಯಂತಂ ಪ್ರಸ್ವಾಪಯಿತ್ವಾ ಕಾಯಾತ್= ಜೀವಮಾನಾದೇವ ತದೀಯದೇಹಾತ್ ಪ್ರಚಕರ್ಷ = ಜೀವಮಾತ್ರಂ ಪ್ರಚಕರ್ಷ । ಕ್ರಮಾತ್ ತಾನ್ ದೇವಕೀಗರ್ಭಾಶಯೇ ಆಶು ಸಮಾವೇಶಯತ್ ಕಂಸಸ್ತಾನ್ನ್ಯಹನಚ್ಚೇತಿ ಚಶಬ್ದೇನ ತದೈವ ದುರ್ಗಾ ಪುನಶ್ಚ ಸುಪ್ತದೇಹೇಷು ಪ್ರಾವೇಶಯದಿತಿ ಸಮುಚ್ಚಿನೋತಿ । ''ಪ್ರಸ್ವಾಪಯಿತ್ವಾ ಪ್ರಚಕರ್ಷ ಕಾಯಾತ್'' ಇತಿ ವಚನಾತ್ ದುರ್ಗಾ ಏಕೈಕಪುತ್ರಂ ದೇವಕೀಗರ್ಭೇ ಸಂವತ್ಸರಮಾತ್ರಂ ಸ್ಥಾಪಯಿತ್ವಾ ತತಃ ಏಕೈಕಶಿಶೋಃ ಕಂಸೇನ ಹನನೇ ಕೃತೇ ಸತಿ ಪುನಃ ಕ್ರಮೇಣ ತಾನ್ ಸ್ವಸ್ವಪೂರ್ವದೇಹೇಷು ಪ್ರವೇಶಯತಿ । ಏವಂ ಚ ಬ್ರಹ್ಮಣಾ ಯೇಷು ದೇಹೇಷ್ವವಧ್ಯತ್ವವರೋ ದತ್ತಃ ತೇಷಾಂ ದೇಹಾನಾಂ ವಧಾಭಾವಾತ್ ಬ್ರಹ್ಮವರೋಽಪಿ ಸಾರ್ಥಕಃ। ದೇಹಾಂತರೇಣ ಭೂಮೌ ಜಾತಾನಾಂ ಕಂಸಾಖ್ಯಸ್ವಪಿತೃಭೂತಕಾಲನೇಮಿಕರೇಣೈವ ವಧಾದ್ಧಿರಣ್ಯಕಶಿಪೋಃ ಶಾಪೋಽಪಿ ಸಾರ್ಥಕಃ । ಇದಮುಭಯಮಪಿ ಅಘಟಿತಘಟಕಶಕ್ತಿಮತೀ ವಿಷ್ಣೋರ್ಮಾಯಾ ದುರ್ಗೈವ ಘಟಯಾಮಾಸೇತಿ ಭಾವಃ । ಅತ ಏವ ದೇವಕ್ಯಾ ದ್ವಾರವತ್ಯಾಂ ಷಟ್ ಕುಮಾರಾ ದ್ರಷ್ಟವ್ಯಾ ಇತಿ ಪ್ರಾರ್ಥಿತೇ ಸತಿ ಕೃಷ್ಣೇನ ಬಲಿಲೋಕೇ ಬ್ರಹ್ಮದತ್ತವರೇಣಾವಧ್ಯಪೂರ್ವದೇಹೇ ಸ್ಥಿತಾಂಸ್ತಾನ್ ಬಲಿಸದನಾತ್ ತೇಷಾಂ ಪೂರ್ವದೇಹಾನ್ನಾಶಯಿತ್ವಾ ಶಿಶುರೂಪೇಣಾನೀಯ ಮಾತ್ರೇ ದರ್ಶಯಿತ್ವಾ ಬ್ರಹ್ಮವರಂ ದೇವಲಶಾಪಂ ಚ ದುರ್ಬಲತ್ವಾತ್ ಸ್ವಶಕ್ತ್ಯೋಲ್ಲಂಘ್ಯ ತೇಷಾಂ ದಿವ್ಯಾ ಗತಿರ್ದತ್ತೇತಿ ಭಾಗವತೇ ಕಥಾಽಪ್ಯುಪಪನ್ನೈವ ಜಾತಾ । ''ಪೀತಶೇಷಂ ಗದಾಭೃತಃ'' ಇತಿ ಭಾಗವತೋಕ್ತಾ ಕೃಷ್ಣೇನ ಚತುರ್ಭುಜರೂಪಪ್ರದರ್ಶನಾನಂತರಂ ಶಿಶುರೂಪಂ ಧೃತ್ವಾ ತದೈವ ದೇವಕೀಸ್ತನಂ ಚ ಪೀತ್ವಾ ಪುನರ್ಗೋಕುಲಂ ಪ್ರತಿ ಜಗಾಮೇತಿ ಪ್ರಮೇಯಂ ಚ ಸೂಚಿತಮ್ । ತಾನ್ನ್ಯಹನಚ್ಚ ಕಂಸ ಇತ್ಯತ್ರ ಕಸ್ತ್ವವರಾಹಾಣಾಂ ಏಕೈಕಮಾರಭ್ಯ ಸಂಖ್ಯಾಯಾಂ ಸರ್ವೇಽಪಿ ಯಥಾ ದಶಮಾ ಭವಂತಿ । ಏವಂ ಕ್ರಮಮವಿವಕ್ಷಯಿತ್ವಾ ಸ್ವರೂಪಮಾತ್ರಗಣನಾಯಾಂ ಸರ್ವೇಽಷ್ಟಮಾ ಭವಂತೀತಿ ಸರ್ವತ್ರಾಷ್ಟಮತ್ವಶಂಕಯಾ ಕಂಸಸ್ತಾನ್ನ್ಯಹನದಿತಿ ಶಂಕಾಸಮುಚ್ಚಯಾರ್ಥಶ್ಚಶಬ್ದಃ । ಅತ ಏವೋಕ್ತಂ ಭಾಗವತೇ — ''ಜಾತಂ ಜಾತಂ ತಯೋಃ ಪುತ್ರಮಹನ್ನಜನಿಶಂಕಯಾ'' ಇತಿ । ಸ್ವವಧಂ ಪ್ರತಿ ದೇವಕ್ಯಾ ಗರ್ಭಸಂಭೂತಂ ವಿಷ್ಣ್ವಂಶಂ ನಾರದವಾಕ್ಯೇನ ವಿಷ್ಣೋರನ್ಯೋ ಮಾಂ ಹಂತುಂ ನ ಸಮರ್ಥ ಇತಿ ಯುಕ್ತ್ಯಾಚ ಜಾನನ್ ಕಂಸಃ ತಯೋರ್ದೇವಕೀವಸುದೇವಯೋಃ ಜಾತಂ ಜಾತಂ ಪುತ್ರಂ ಅಜನಿಶಂಕಯಾ ಜನನರಹಿತಪರಮಾತ್ಮೈವ ಜಾತ ಇತಿ ಶಂಕಯಾ ಅಹನ್ನಿತ್ಯರ್ಥಃ । ಅನ್ಯಥಾ ''ಅಸ್ಯಾಸ್ತ್ವಮಷ್ಟಮೋ ಗರ್ಭೋ ಹಂತಾ ಯಾಂ ನಯಸೇಽಬುಧ'' ಇತಿ ಸಾಮಾನ್ಯೋಕ್ತೇಃ ವಿಷ್ಣ್ವಂಶತ್ವಜ್ಞಾನಾಸಂಭವಾದಿದಮೇವ ಹೃದಯಂ ವ್ಯಾಸಸ್ಯೇತಿ ಭಾವಃ । ''ಬುದ್ಧಿಃ ಕರ್ಮಾನುಸಾರಿಣೀ'' ಇತ್ಯುಕ್ತೇಃ ಹಿರಣ್ಯಕಶಿಪುಶಾಪಜನಿತದುರದೃಷ್ಟಂ ಚ ಈದೃಶಬುದ್ಧಿಜನಕಮಿತಿ ಜ್ಞೇಯಮ್ ॥ –(ವಾ.)

೨. ದೇವಕ್ಯಾಃ ಗರ್ಭಾಶಯೇ ಜರಾಯೌ । 'ಗರ್ಭಾಶಯೋ ಜರಾಯುಃ ಸ್ಯಾತ್' ಇತ್ಯಭಿಧಾನಮ್ ।.....

ಅ: ಭಗವಂತನಿಂದ ಪ್ರಚೋದಿತಳಾದ ದುರ್ಗೆ ಅವರ ದೇಹದಿಂದ ಅವರನ್ನು ಮೈಮರೆಸಿ ಸೆಳೆದು ತಂದು ಕ್ರಮವಾಗಿ ಬೇಗನೆ ದೇವಕಿಯ ಗರ್ಭಾಶಯದಲ್ಲಿ ಸೇರಿಸಿದಳು. ಕಂಸ ಅವರನ್ನು ಕೊಂದುಹಾಕಿದ.

ವಿ: ೧) ಬ್ರಹ್ಮನಿಂದ ಅಮರತ್ವವರವಿದ್ದದ್ದರಿಂದ ಅವರು ಸಾಯುವಂತಿರಲಿಲ್ಲ. ಹಿರಣ್ಯಕಶಿಪುವಿನ ಶಾಪದಿಂದಾಗಿ ಅವರು ಹುಟ್ಟುವುದು ತಪ್ಪುವಂತೆಯೂ ಇರಲಿಲ್ಲ. ಅದರಂತೆ ಭಗವದಾಜ್ಞೆಯಂತೆ ದುರ್ಗಾದೇವಿ ಅವರನ್ನು ಆ ದೇಹದಲ್ಲಿ ಹಾಗೆಯೇ ಇರಿಸಿ, ಗಾಢನಿದ್ರೆ ಬರಿಸಿ, ಅವರನ್ನು ದೇವಕೀಗರ್ಭದಲ್ಲಿ ಒಬ್ಬರಾದ ಮೇಲೊಬ್ಬರೆಂಬಂತೆ ಪ್ರವೇಶ ಮಾಡಿಸಿದಳು. ಕಾಲನೇಮಿಯೇ ಆದ ಕಂಸ ಅವರನ್ನು ಕ್ರಮವಾಗಿ ಕೊಲ್ಲುತ್ತಾ ಹೊರಟ. ಎಂದರೆ ಅವರೆಲ್ಲ ತಮ್ಮ ತಾಯಿಯಿಂದಲೇ ಸತ್ತಂತಾಯಿತು. ಹಾಗೆ ಸತ್ತ ಅವರನ್ನೆಲ್ಲ ಪುನಃ ದುರ್ಗೆ ಅವರ ದೇಹದಲ್ಲಿ ಮರಳಿ ಸೇರಿಸಿದಳು. [೧]ಹೀಗೆ ಬ್ರಹ್ಮದೇವರ ವರದಂತೆ, ಹಿರಣ್ಯಕಶಿಪುವಿನ ಶಾಪವೂ ಸತ್ಯವೇ ಆಯಿತು.

೨) ದೇವಕಿಯ ಮಕ್ಕಳಾಗಿ ಜನಿಸಿದಾಗ ಅವರ ಹೆಸರು ಕ್ರಮವಾಗಿ ಕೀರ್ತಿಮಾನ್, ಸುಷೇಣ, ಭದ್ರಸೇನ, ಋಜು, ಸಂಮರ್ದನ ಮತ್ತು ಭದ್ರ ಎಂದಾಗಿದ್ದವು. ಅವರೆಲ್ಲ [೨]'ಷಡ್ಗರ್ಭ'ರೆಂದು ಪ್ರಸಿದ್ಧರಾದವರು.

ಪಾಂಡುರಾಜನಿಗೆ ಮುನಿಗಳ ಆದೇಶ

ತದಾಽ ಮುನೀಂದ್ರಸಂಯುತಃ ಸದೋ ವಿಧಾತುರುತ್ತಮಮ್ ।
ಸ ಪಾಂಡುರಾಪ್ತುಮೈಚ್ಛತ ನ್ಯವಾರಯಂಶ್ಚ ತೇ ತದಾ ॥ ೧೫ ॥

---

೧. ಕಾಲನೇಮಿಪ್ರಸೂತದೇಹಾನಾಂ ಚೇತನವಿಯೋಗಾದಪಿ ನಿರ್ವಿಕಾರತ್ವಾತ್ ದೇವಕೀಗರ್ಭೋತ್ಪತ್ತ್ಯನಂತರ-ಕಾಲೇ ಚೇತನಸಂಯೋಗಾಚ್ಚ ಬ್ರಹ್ಮಣೋಽವಧ್ಯತ್ವವರಃ ತಥಾ ಕಾಲನೇಮಿಪ್ರಸೂತಾನಾಂ ದೇವಕೀಗರ್ಭಜನನಾತ್ ತತ್ರ ದೇಹಾಂತರಪ್ರಾಪ್ತಕಾಲನೇಮ್ಯಾತ್ಮಕಕಂಸೇನ ಹತತ್ವಾಚ್ಚ ಬ್ರಹ್ಮಣಃ ಪ್ರಾಪ್ತಸಾಮರ್ಥ್ಯವತೋ ಹಿರಣ್ಯಕಶಿಪೋಃ ಶಾಪಶ್ಚೇತ್ಯುಭಯಮಪಿ ಸಂಪಾದಿತಮಿತ್ಯುಕ್ತಂ ಭವತಿ ॥ – (ಜ.)

೨. ಪ್ರಾಣೇಶ್ವರಾಂಶ್ಚ ನಿಷ್ಕೃಷ್ಯ ನಿದ್ರಾಯೈ ಪ್ರದದೌ ತದಾ ॥
ತಾಂ ಚೋವಾಚ ತತೋ ನಿದ್ರಾಂ ವಿಷ್ಣುಃ ಸತ್ಯಪರಾಕ್ರಮಃ ।
ಗಚ್ಛ ನಿದ್ರೇ ಮಯೋತ್ಸೃಷ್ಟಾ ದೇವಕೀಭವನಾಂತಿಕಮ್ ॥
ಇಮಾನ್ ಪ್ರಾಣೇಶ್ವರಾನ್ ಗೃಹ್ಯ ಷಡ್ಗರ್ಭಾನ್ ದಾನವೋತ್ತಮಾನ್ ।
ಸರ್ವಪ್ರಾಣೇಶ್ವರಾಂಶ್ಚೈವ ಷಡ್ಗರ್ಭಾನ್ ನಾಮ ದೇಹಿನಃ ।
ಷಡ್ಗರ್ಭಾನ್ ದೇವಕೀಗರ್ಭೇ ಯೋಜಯಸ್ವ ಯಥಾಕ್ರಮಮ್ ॥ – ಹರಿವಂಶ (೨/೨/೨೬-೨೮)

ಷಡ್ಗರ್ಭಾನ್ನಿಸೃತಾನ್ ಕಂಸಸ್ತಾನ್ ಜಘಾನ ಶಿಲಾತಲೇ ॥ – ಹರಿವಂಶ (೨/೪/೨)

ಅ: ಆ ಸಮಯದಲ್ಲಿ ಮುನೀಂದ್ರರೊಂದಿಗೆ ಒಡಗೂಡಿ, ಬ್ರಹ್ಮದೇವರ ಉತ್ತಮವಾದ ಸಭೆಗೆ ತೆರಳಲು ಪಾಂಡು ಅಪೇಕ್ಷಿಸಿದ. ಆಗ ಅವರು ಅವನನ್ನು ತಡೆದರು.

ಎ: ಆಗೊಮ್ಮೆ ಅಮಾವಾಸ್ಯೆ ತಿಥಿಯಲ್ಲಿ ಮುನಿಗಳೆಲ್ಲ ಬ್ರಹ್ಮಸಭೆಗೆಂದು ತೆರಳುತ್ತಿದ್ದುದನ್ನು ಪಾಂಡು [೪]ಕಂಡನು. ತಾನೂ ಅವರೊಂದಿಗೆ ತೆರಳಲು ಬಯಸಿ, ಪತ್ನಿಯರೊಂದಿಗೆ ಹಿಂಬಾಲಿಸಿದ. ಆದರೆ ಆ ಮುನಿಗಳೊಂದಿಗೆ ಹೋಗಲು ಅವನಿಗೆ ಸಾಧ್ಯವಾಗಲಿಲ್ಲ. ಆಗ ಮುನಿಗಳು ಕಾರಣ ತಿಳಿದು, ಅವನನ್ನು ತಮ್ಮನ್ನು ಹಿಂಬಾಲಿಸದಂತೆ ತಡೆದರು.

ಯದರ್ಥಮೇಷ ಜಾಯತೇ ಪುಮಾನ್ ಹಿ ತಸ್ಯ ಸೋಽಕೃತೇಃ [೫]।
ಶುಭಾಂ ಗತಿಂ ನ ತು ವ್ರಜೇದ್ಧ್ರುವಂ ತತೋ ನ್ಯವಾರಯನ್ ॥ ೧೬ ॥

ಅ: ಸಾಧಕ ಯಾವ ಉದ್ದೇಶದಿಂದ ಅವತರಿಸುವನೊ, ಅದನ್ನು ಪೂರೈಸದಿದ್ದಲ್ಲಿ ಅವನು ಸದ್ಗತಿಯನ್ನು ನಿಶ್ಚಿತವಾಗಿ ಹೊಂದಲಾರನು. ಅದಕ್ಕೆಂದೇ ಮುನಿಗಳು ಅವನನ್ನು ಹಾಗೆ ತಡೆದರು.

---

೩. ಅಥ ಕೃಷ್ಣಾವತಾರಾತ್ಪೂರ್ವಂ ಧರ್ಮರಾಜಸ್ಯೋತ್ಪನ್ನತ್ವಾತ್ ಕೃಷ್ಣಕಥಾಂ ಮಧ್ಯೇ ಸ್ಥಾಪಯಿತ್ವಾ ತದುತ್ಪತ್ತಿಮಾದೌ ವಕ್ತುಂ ಪಾಂಡೋಃ ಕಥಾಂ ಪ್ರಕ್ರಮತೇ – ತದೇತಿ । ತದಾ= ದೇವಕೀಷಷ್ಠಗರ್ಭಪಾತಾವಸಾನ-ಸಮಯೇ । ಮುನೀಂದ್ರೈಃ ಸಹ ಪಾಂಡೋರ್ಬ್ರಹ್ಮಲೋಕಗಮನೋದ್ಯೋಗಾಭಾವಾತ್ ಮುನೀಂದ್ರಸಂಯುತ ಇತ್ಯಸ್ಯ=''ಯು ಮಿಶ್ರಣಾಮಿಶ್ರಣಯೋಃ'' ಇತಿ ಧಾತೋಃ ಮುನೀಂದ್ರೈಃ ಸಹ ತತ್ಸಭಾಯಾಂ ಮಿಶ್ರಿತ ಇತ್ಯರ್ಥಃ । ಯದ್ವಾ ಮುನಿಂದ್ರೈರಮಿಶ್ರಿತ ಏವ ತಾನ್ ವಿಹಾಯೇತಿ ಯಾವತ್ ॥ –(ವಾ.)

೪. ಅಮಾವಾಸ್ಯಾಂ ತು ಸಹಿತಾ ಋಷಯಃ ಸಂಶಿತವ್ರತಾಃ ।
ಬ್ರಹ್ಮಾಣಂ ದ್ರಷ್ಟುಕಾಮಾಸ್ತೇ ಸಂಪ್ರತಸ್ಥುರ್ಮಹರ್ಷಯಃ ॥
ಸಂಪ್ರಯಾತಾನ್ ಋಷೀನ್ ದೃಷ್ಟ್ವಾ ಪಾಂಡುರ್ವಚನಮಬ್ರವೀತ್ ॥ .....
ಸ್ವರ್ಗಪಾರಂ ತಿತೀರ್ಷುಃ ಸ ಶತಶೃಂಗಾದುದಙ್ಮುಖಃ ॥
ಪ್ರತಸ್ಥೇ ಸಹ ಪತ್ನೀಭ್ಯಾಮಬ್ರುವಂಸ್ತಂ ಚ ತಾಪಸಾಃ ।
ಉಪರ್ಯುಪರಿ ಗಚ್ಛಂತಃ ಶೈಲರಾಜಮುದಙ್ಮುಖಾಃ ॥ .....
ಗಚ್ಛತ್ಯಾ ಶೈಲರಾಜೇಽಸ್ಮಿನ್ ರಾಜಪುತ್ರ್ಯಾ ಕಥಂ ತ್ವಿಮೇ ॥
ನ ಸೀದೇತಾಮದುಃಖಾರ್ಹೇ ಮಾ ಗಮೋ ಭರತರ್ಷಭ । .....
ಅಸ್ತಿ ವೈ ತವ ಧರ್ಮಾತ್ಮನ್ ವಿದ್ಮೋ ದೇವೋಪಮಂ ಶುಭಮ್ ॥
ಅಪತ್ಯಮನಘಂ ರಾಜನ್ ವಯಂ ದಿವ್ಯೇನ ಚಕ್ಷುಷಾ ।
ದೈವೋದ್ದಿಷ್ಟಂ ನರವ್ಯಾಘ್ರ ಕರ್ಮಣೇಹೋಪಪಾದಯ ॥
– ಭಾರತ (ಆದಿ. ೧೧೯/೫-೬, ೮-೯, ೧೪,೧೫, ೨೩,೨೪)

೫. ಸಃ ತಸ್ಯ ಕಾರ್ಯಸ್ಯ ಅಕೃತೇರಕರಣಾದಿತ್ಯರ್ಥಃ ॥ –(ವಾ.)

ಪ್ರಧಾನದೇವತಾಜನೌ[೧] ನಿಯೋಕ್ತುಮಾತ್ಮನಃ ಪ್ರಿಯಾಮ್ ।
ಬಭೂವ ಪಾಂಡುರೇಷ ತದ್ವಿನಾ ನ ತಸ್ಯ ಸದ್ಗತಿಃ ॥ ೧೭ ॥

ಅ: ಪ್ರಮುಖದೇವತೆಗಳನ್ನು (ತನ್ನ ಮಕ್ಕಳನ್ನಾಗಿ)ಪಡೆಯುವ ವಿಷಯದಲ್ಲಿ ತನ್ನ ಪತ್ನಿಯನ್ನು ಆದೇಶಿಸಲೆಂದು ಪಾಂಡು ಅವತರಿಸಿದ್ದ. ಅದನ್ನು ಪೂರೈಸದ ಹೊರತು ಅವನಿಗೆ ಸದ್ಗತಿ ಲಭಿಸದು.

ವಿ: ಪಾಂಡುವಿಗೆ ಸಂತತಿ ಇರಲಿಲ್ಲ. ಕಿಂದಮಮುನಿಯ ಶಾಪದಿಂದಾಗಿ ಅವನಿಗೆ ಸಂತತಿ ಲಭಿಸುವುದು ಸಾಧ್ಯವೂ ಇರಲಿಲ್ಲ. ಆದರೆ ಪಾಂಡುರಾಜನ ಅವತಾರದ ಮುಖ್ಯಕಾರ್ಯ ಸಾಕ್ಷಾತ್ ಸಂತತಿ ಪಡೆಯಲೆಂದು ಆಗಿರದೆ, ಅಂತಹ ಸಂತತಿಯನ್ನು ಪಡೆಯಲು ತನ್ನ ಪತ್ನಿಗೆ ಆದೇಶ ನೀಡುವುದೇ ಆಗಿತ್ತು. ಆ ಕಾರ್ಯವಿನ್ನೂ ಆಗಿರಲಿಲ್ಲ. ಅದಕ್ಕೆಂದೇ ಅವನಿಗೆ ಬ್ರಹ್ಮಸಭೆಗೆ ಪ್ರವೇಶ ಸಾಧ್ಯವಾಗಲಿಲ್ಲ ಎಂದರ್ಥ.

ಅತೋಽನ್ಯಥಾ ಸುತಾನೃತೇ ವ್ರಜಂತಿ ಸದ್ಗತಿಂ ನರಾಃ[೨] ।
ಯಥೈವ ಧರ್ಮಭೂಷಣೋ ಜಗಾಮ ಸಂಧ್ಯಕಾಸುತಃ ॥ ೧೮ ॥

---

೧. ಜನೇರಿತ್ಯಪಿ ಕ್ವಚಿತ್ ಪಾಠಃ । ನಾಪುತ್ರಸ್ಯ ಲೋಕೋಽಸ್ತೀತಿ ಶ್ರುತೇರಪುತ್ರಸ್ಯ ಸದ್ಗತ್ಯಭಾವಾದೇವ ನ್ಯವಾರಯನ್ನಿತಿ ಕಿಮಸ್ಯಾದಿತ್ಯತೋ ಯಃ ಪುತ್ರಾರ್ಥಂ ಜಾತಃ ತದ್ವಿಷಯಂ ತದ್ಭಾಕ್ಯಮಿತ್ಯಭಿಪ್ರೇಯನ್ ಸರ್ವವಿಷಯತ್ವೇ ಬಾಧಕವಿಪರ್ಯಯಪರ್ಯಾಸನಮುಖೇನಾಹ – ಅತೋಽನ್ಯಥೇತಿ । ಅತ ಉಕ್ತವ್ಯವಸ್ಥಾತೋಽನ್ಯಥಾ ಚೇತ್ ಶ್ರುತೇಃ ಸರ್ವವಿಷಯತ್ವಾಂಗೀಕಾರಾದಿತಿ ಯಾವತ್ । ನ ಕೋಽಪ್ಯಪುತ್ರಕಃ ಶುಭಾಂ ಗತಿಂ ವ್ರಜೇತ್ । ವ್ರಜಂತಿ ಚ ಸದ್ಗತಿಂ ನರಾಃ । ಅತೋಽಸ್ಮದುಕ್ತ ಏವಾರ್ಥ ಇತಿ । – (ತಾ.)

೨. ಅತಃ = ಸ್ವಸ್ಯ ಸಾಕ್ಷಾತ್ ಸಂತಾನಾಭಾವೇಽಪಿ ಸಂತಾನಾರ್ಥಂ ಭಾರ್ಯಾಂ ಪ್ರತಿ ನಿಯೋಗಾಖ್ಯ-ಪುಣ್ಯಕರಣೇನಾಪಿ ಪಾಂಡೋಃ ಸದ್ಗತಿಪ್ರಾಪ್ತಿತಃ ಕಾರಣಾತ್ ಸುತಾನೃತೇ = ಸರ್ವಾತ್ಮನಾ ಸುತಾನೃತೇ । ಉಪಲಕ್ಷಣಂ ಚೈತತ್ ಸುತಾರ್ಥಂ ನಿಯೋಗಾಖ್ಯಪುಣ್ಯಮಪ್ಯೃತೇ । ಅನ್ಯಥಾ= ಪ್ರಬಲಪುಣ್ಯಾಂತರಕರಣೇನಾಪಿ ನರಾಃ ಸದ್ಗತಿಂ ವ್ರಜಂತೀತಿ ಯೋಜನಾ । ಯಥಾ ಸಂಧ್ಯಕಾಸುತಃ= ಸಂಧ್ಯಾವಲೀಸುತಃ ಧರ್ಮಭೂಷಣಃ= ಧರ್ಮಾಂಗದಃ ಸಾಕ್ಷಾತ್ಸಂತಾನಂ ಪಾಂಡುವತ್ಸಂತಾನಾರ್ಥಂ ನಿಯೋಗಂ ಚ ವಿನಾ ಏಕಾದಶೀವ್ರತಂ ತ್ಯಜ ವಾ ಸ್ವಸುತಶಿರೋ ವಾ ದಿಶೇತಿ ಮೋಹಿನ್ಯೋಕ್ತಸ್ಯಪಿತ್ರಾ ಪೃಷ್ಟೋ ಸತಿ ಏಕಾದಶೀಂ ಸಭಾರ್ಯಸ್ತ್ವಂ ಚ ನ ತ್ಯಜ ಅಹಂ ಚ ನ ತ್ಯಜಾಮಿ ಮಮ ಶಿರ ಏವ ದಿಶೇತಿ ಏಕಾದಶೀವ್ರತೇ ಪರಮಾದರಾಖ್ಯಪುಣ್ಯಕರಣಾತ್ ಮಾತ್ರಾ ಪಿತ್ರಾ ಚ ಸಹ ಪ್ರಸನ್ನಹರಿಣಾ ಽಽದಿಷ್ಟವಿಮಾನಸ್ಥಃ ಸನ್ ಸದ್ಗತಿಂ ವೈಕುಂಠಗತಿಂ ಜಗಾಮ । ತಥೇತಿ ಪೂರ್ವೇಣಾನ್ವಯಃ ॥ – (ವಾ.)

'ನಾಪುತ್ರಸ್ಯ ಲೋಕೋಽಸ್ತೀ'ತಿ ಶ್ರುತೇಃ ಯಃ ಪುತ್ರಜನನಾರ್ಥಮುತ್ಪನ್ನಃ ಸ ಪುತ್ರೋತ್ಪತ್ತಿಂ ವಿನಾ ಸದ್ಗತಿಂ ನ ಯಾತೀತಿ ಶ್ರುತ್ಯರ್ಥೋ ಜ್ಞಾತವ್ಯ ಇತಿ ಭಾವಃ । – (ಜ.)

ಅನೇನ ನಾಪುತ್ರಸ್ಯ ಲೋಕೋಽಸ್ತೀತ್ಯಾದಿಕಂ ಯದರ್ಥಮೇಷ ಜಾಯತ ಇತ್ಯುಕ್ತವಿಷಯಂ ನ ತು ಪುತ್ರರಾಹಿತ್ಯವಿಷಯಂ ಅನ್ಯಥಾ ಧರ್ಮಾಂಗದೇ ವ್ಯಭಿಚಾರಾದಿತ್ಯುಕ್ತಂ ಭವತಿ ॥ – (ವ.)

ಅ: ಇಲ್ಲದಿದ್ದಲ್ಲಿ ಮಕ್ಕಳಿಲ್ಲದೆಯೂ ಜನ ಸದ್ಗತಿಯನ್ನು ಪಡೆಯಬಲ್ಲರು. ಸಂಧ್ಯಾವಳಿಯ ಮಗನಾದ ಧರ್ಮಭೂಷಣ ಸದ್ಗತಿಗೆ ಹೇಗೆ ತೆರಳಿದನೋ, ಹಾಗೆ.

ವಿ: ೧) ಸಂತತಿ ಇಲ್ಲದೆ ಸದ್ಗತಿ ಇಲ್ಲ; ಅದರಲ್ಲೂ ಪುತ್ರ ಸಂತಾನವಿಲ್ಲದೆ ಸದ್ಗತಿ ಇಲ್ಲ ಎಂಬುದು ಹೆಚ್ಚು ಪ್ರಚಾರದಲ್ಲಿರುವ ಮಾತು. ಶಾಸ್ತ್ರವಚನವೂ ಹಾಗೇ ಇದೆ – 'ಅಪುತ್ರಸ್ಯ ಗತಿರ್ನಾಸ್ತಿ', 'ನಾಪುತ್ರಸ್ಯ ಲೋಕೋಸ್ತಿ'. ಇವುಗಳ ಸರಿಯಾದ ಅರ್ಥವನ್ನು ತಿಳಿಯದವರು ಪುತ್ರಸಂತಾನವಿಲ್ಲದೆ ಸದ್ಗತಿ ಸಾಧ್ಯವಿಲ್ಲ ಎಂದು ತಪ್ಪು ತಿಳಿಯುವ ಸಾಧ್ಯತೆ ಇದೆ. ಆದ್ದರಿಂದ ಅದರ ಬಗ್ಗೆ ಶ್ರೀಮದಾಚಾರ್ಯರು ಇಲ್ಲಿ ಈ ರೀತಿಯ ಸ್ಪಷ್ಟೀಕರಣ ನೀಡಿರುವರು.

೨) ಮೋಕ್ಷಕ್ಕೆ ಅಗತ್ಯವಾದುದು [೧]ಜ್ಞಾನವೇ ಹೊರತು, ಸಂತತಿ ಮೊದಲಾದ ಇತರ ಯಾವುದೂ ಅಲ್ಲ; ಬೇರೆಲ್ಲ ಇದ್ದು ಜ್ಞಾನವೊಂದು ಇಲ್ಲವಾದರೆ, ಅವರಿಗೆಂದೂ ಸದ್ಗತಿ ಲಭಿಸದು ಎಂಬುದೇ ಶಾಸ್ತ್ರವಾಣಿ —'ಜ್ಞಾನೇನೈವ ಪರಂಪದಮ್'.

೩) ಜ್ಞಾನವಿಲ್ಲದೆ ಸದ್ಗತಿ ಪಡೆದ ಒಂದು ನಿದರ್ಶನವೂ ದೊರೆಯುವುದಿಲ್ಲ. ಆದರೆ ಸಂತತಿ ಮೊದಲಾದವುಗಳಿಲ್ಲದೆ ಸದ್ಗತಿ ಪಡೆದ ನಿದರ್ಶನಗಳು ಅನೇಕ ಉಂಟು. ರುಕ್ಮಾಂಗದನ ಮಗನಾದ ಧರ್ಮಾಂಗದ (ಧರ್ಮಭೂಷಣ) ಅಂತಹ ಒಂದು ನಿದರ್ಶನ. ಸಂಧ್ಯಾವಳಿ ಧರ್ಮಾಂಗದನ ತಾಯಿ. ರುಕ್ಮಾಂಗದ ಏಕಾದಶೀವ್ರತವನ್ನು ತನ್ನ ಆಳ್ವಿಕೆಯಲ್ಲಿ ಕಡ್ಡಾಯ ಮಾಡಿದ್ದ ವೈಷ್ಣವಶಿರೋಮಣಿ. ಅದರಿಂದಾಗಿ ಅವನ ಪ್ರಜೆಗಳಾರೂ ನರಕಕ್ಕೆ ಹೋಗುತ್ತಿರಲಿಲ್ಲ. ಆಗ ಬ್ರಹ್ಮದೇವರು ಮೋಹಿನೀ ಎಂಬವಳನ್ನು ಕಳುಹಿಸಿ, ರಾಜನನ್ನು ಸತ್ತ್ವಪರೀಕ್ಷೆಗೆ ಗುರಿಪಡಿಸಿದರು. ತನ್ನನ್ನು ಮೆಚ್ಚಿದ ಅವನಿಗೆ ಅವಳು ಏಕಾದಶೀವ್ರತವನ್ನು ಬಿಟ್ಟಲ್ಲಿ ಮಾತ್ರ ಅವನನ್ನು ಮದುವೆ–ಯಾಗುವುದಾಗಿ ತಿಳಿಸಿದಳು. ಅದಾಗದಿದ್ದಲ್ಲಿ ಅವನ ಮಗ ಧರ್ಮಾಂಗದನ ಶಿರಸ್ಸನ್ನಾದರೂ ತರಿಯಬೇಕು ಎಂದಳು. ಆಗ ಧರ್ಮಾಂಗದ ಮುಂದೆ ಬಂದು ತಂದೆಗೆ ಹೇಳಿದ : ''ಏಕಾದಶೀವ್ರತವನ್ನು ಬಿಡುವುದು ಬೇಡ; ನನ್ನ ತಲೆಯನ್ನೇ ಅರ್ಪಿಸುವೆ''. ಅದರಂತೆ ಧರ್ಮಾಂಗದ ದೇಹ ತೊರೆದಾಗ, ಮೆಚ್ಚಿದ ಶ್ರೀಹರಿ ಅವರೆಲ್ಲರಿಗೂ ಸದ್ಗತಿಯನ್ನು ನೀಡಿದ. ಹೀಗೆ

---

೧ 'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ।' – ಗೀತಾ (೪/೩೮)

ಅನಪತ್ಯೋಽಪಿ ಸದ್ಧರ್ಮಾ ಲೋಕಜಿನ್ನಾತ್ರ ಸಂಶಯಃ।
– ಭಾ. ತಾ. ಉದ್ಧೃತ (೪/೧೨/೩೩) ವಾಮನಪುರಾಣವಚನ

ಯೋಗ್ಯತಾऽನಾದಿಭಕ್ತಿಃ ಸ್ಯಾದಯೋಗ್ಯಸ್ಯ ಕುತೋ ಗತಿಃ' ಬ್ರಹ್ಮತರ್ಕೇ॥ – ಭಾ. ತಾ. (೩/೧೫/೪೫)

ಸ್ವತಃ ಸದ್ಗತಿಯೋಗ್ಯಸ್ಯ ಪುತ್ರಾದೇರ್ಹೇತುತಾ ಭವೇತ್ ॥ – ಭಾ. ತಾ. (೩/೧೫/೪೫)

ಧರ್ಮಾಂಗದ ಸಂತತಿ ಪಡೆಯುವುದಿರಲಿ, ವಿವಾಹವನ್ನೂ ಆಗದೆ ಸದ್ಗತಿಗೆ ತೆರಳಿದ. ಅದಕ್ಕೆ ಅವನು ದಿವ್ಯತತ್ತ್ವಜ್ಞಾನಿಯಾಗಿದ್ದುದೇ ಮುಖ್ಯಕಾರಣ.

೪) ಆದ್ದರಿಂದ ಜ್ಞಾನದಿಂದಲೇ ಮೋಕ್ಷ ಎಂಬದು ಸಿದ್ಧಾಂತ. 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ವಾಕ್ಯಕ್ಕೆ 'ಜ್ಞಾನಹೀನನಿಗೆ ಸದ್ಗತಿ ಇಲ್ಲ' ಎಂದೇ ಅರ್ಥ. ಅಲ್ಲಿನ 'ಪುತ್ರ'ಶಬ್ದಕ್ಕೆ 'ಜ್ಞಾನ'ವೆಂದೇ ಅರ್ಥ ('ಜ್ಞಾನಪುತ್ರವಾನ್' – ಐತರೇಯಭಾಷ್ಯ). ಹರಿದಾಸರ ಕೃತಿಗಳಲ್ಲೂ ಈ ತತ್ತ್ವ [೧]ನಿರೂಪಿತವಾಗಿದೆ.

೫) ಶ್ರೀಮದ್ಭಾಗವತತಾತ್ಪರ್ಯದಲ್ಲೂ ಶ್ರೀಮದಾಚಾರ್ಯರು ಈ ವಿಷಯವನ್ನು [೨]ನಿರೂಪಿಸಿರುವರು :

೬) ಸನಕಾದಿಗಳು ಆಜೀವನೈಷ್ಠಿಕಬ್ರಹ್ಮಚಾರಿಗಳು. ಅವರಿಗೆ ಸಂತತಿಯ ಪ್ರಸಕ್ತಿಯೇ ಇಲ್ಲ; ಆದರೆ ಅವರೆಲ್ಲ ಮೋಕ್ಷ ಹೊಂದುವವರಲ್ಲಿ ಮುಂಚೂಣಿಯಲ್ಲಿರುವವರು ಎಂಬುದನ್ನು ಗಮನಿಸಬೇಕು.

೭) ಎಂದರೆ ಪುತ್ರರಿರುವುದು, ಇಲ್ಲದಿರುವುದು ಮುಖ್ಯವಲ್ಲ; ಜ್ಞಾನವಿರುವುದಷ್ಟೇ ಮುಖ್ಯ ಎಂಬುದು ಇದರ ಮಥಿತಾರ್ಥ. ಪುತ್ರರಿದ್ದಲ್ಲಿ ಅದು ಸಾಧನೆಗೆ ಅತಿಶಯ ತಂದು ಕೊಡ–ಬಹುದೇ ಹೊರತು, ಅದೇ ಮೂಲಸಾಧನೆಯಾಗದು. ಅಂತಹ ಪುತ್ರರೂ ಸಹ ಯೋಗ್ಯವೈಷ್ಣವ–ಪುತ್ರರೇ ಆಗಬೇಕೇ ಹೊರತು, ಸರ್ವಥಾ ದುರ್ಯೋಧನಾದಿಗಳಂತಹ ದುಷ್ಪುತ್ರರಲ್ಲ.

೮) ಇಲ್ಲಿ ಪಾಂಡುರಾಜನಿಗೆ ಸದ್ಗತಿಯ ಸಮಸ್ಯೆ ಇಲ್ಲವೇ ಇಲ್ಲ. ಅವನು ಮೂಲತಃ ಪರಾವಹ ಮರುತ್ತಿನ ಅವತಾರ; ಎಂದರೆ ದಿವ್ಯತತ್ತ್ವಜ್ಞಾನಿ ('ನೈವ ದೇವಪದಂ ಪ್ರಾಪ್ತಾಃ ಬ್ರಹ್ಮದರ್ಶನವರ್ಜಿತಾಃ') ಅಪರೋಕ್ಷಜ್ಞಾನಿಗಳಿಗೆ ಮೋಕ್ಷ ಖಚಿತ ಎಂಬುದು ಶಾಸ್ತ್ರದ ನಿರ್ಣಯವಲ್ಲವೆ!.

---

೧. ಹರಿಸರ್ವೋತ್ತಮನೆಂಬೊ ಹಿರಿಪುತ್ರನಿರಲಾಗಿ
ಈ ನರಪುತ್ರರಿಂದ ಆಹೋದೇನಯ್ಯಾ
ಪದ್ಮನಾಭನೆಂಬೊ ದೊಡ್ಡಪುತ್ರನಿರಲಾಗಿ
ಈ ದಡ್ಡಪುತ್ರರಿಂದ ಆಗೋ ಗತಿಯೇನಯ್ಯಾ
ಶ್ರೀಕೇಶವನೆಂಬೊ ಜ್ಯೇಷ್ಠಪುತ್ರನಿರಲಾಗಿ
ಈ ನಷ್ಟಪುತ್ರರಿಂದಲಾಗೋ ಗತಿ ಏನಯ್ಯಾ
ಪುರಂದರವಿಠಲನೆಂಬೊ ಪುಣ್ಯಪುತ್ರನಿರಲಾಗಿ
ಈ ಅನ್ಯಪುತ್ರರಿಂದಲಿ ಆಗೋ ಗತಿಯೇನಯ್ಯಾ ॥ – ಶ್ರೀಪುರಂದರದಾಸರು

ಮಗನಿಂದ ಗತಿಯುಂಟೆ ಜಗದೊಳಗೆ
ನಿಗಮಾರ್ಥ ತತ್ತ್ವವಿಚಾರದಿಂದಲ್ಲದೆ । – ಶ್ರೀಕನಕದಾಸರು

೯) ಅವನಿಗೀಗ ಬ್ರಹ್ಮಸಭೆಗೆ ಅವಕಾಶ ಲಭಿಸದ್ದು ಒಂದು ವಿಶೇಷ. ಅದಕ್ಕೆ ಕಾರಣ ಪುತ್ರರಿಲ್ಲದ್ದು ಎಂಬುದಲ್ಲ; ಅವನಿನ್ನೂ ತನ್ನ ಅವತಾರದ ಮುಖ್ಯಕಾರ್ಯವನ್ನು ಪೂರೈಸಿಲ್ಲ ಎಂದು. ಅವನ ಅವತಾರದ ಮುಖ್ಯಕಾರ್ಯ ಸಂತತಿ ಪಡೆಯುವುದಾಗಿರಲಿಲ್ಲ; ಹಾಗೆ ಸಂತತಿ ಪಡೆಯಲು ತನ್ನ ಪತ್ನಿಯರಿಗೆ ಆದೇಶ ನೀಡುವುದು ಮಾತ್ರ ಆಗಿತ್ತು. ಅದನ್ನಿನ್ನೂ ಅವನು ಪೂರೈಸಿರಲಿಲ್ಲ; ಅದಕ್ಕೆಂದೇ ಅವನಿಗೆ ಬ್ರಹ್ಮಸಭೆಗೆ ಹೋಗುವ ಅವಕಾಶ ಲಭಿಸಲಿಲ್ಲ ಎಂದು ಭಾವ.

೧೦) ಇಂತಹ ಅವತಾರಕಾರ್ಯ ಪುತ್ರೋತ್ಪತ್ತಿಯ ಹೊರತು ಬೇರೆ ಯಾವುದೇ ಆಗಿದ್ದರೂ ಅದು ಸದ್ಗತಿಗೆ ಪ್ರತಿಬಂಧಕವಾಗುವುದು ನಿಶ್ಚಿತ.

೧೧) 'ಅಪುತ್ರಸ್ಯ ಗತಿರ್ನಾಸ್ತಿ' ಎಂಬುದಕ್ಕೆ ಪುತ್ರಜನನಕ್ಕೋಸ್ಕರ ಅವತರಿಸಿದವನು ಮಾತ್ರ ಆ ಕಾರ್ಯ ಪೂರೈಸದೆ, ಸದ್ಗತಿಗೆ ತೆರಳಲಾರ ಎಂಬ ವಿಶೇಷಾರ್ಥ ಜನಾರ್ದನೀಯದಲ್ಲಿದೆ.

೧೨) ಖಾಂಡವವನದಹನ ಪ್ರಸಂಗದಲ್ಲಿ ಬರುವ ಮಂದಪಾಲ ಋಷಿಯ ಪ್ರಸಂಗವೂ ಇಂತಹುದೇ ಎಂಬುದನ್ನು ಗಮನಿಸಬೇಕು. ಅವರಿಗೆ ಹಾಗೆ ಜನಿಸಿದ ಜರಿತಾರಿ ಮೊದಲಾದ ಪಕ್ಷಿಗಳು ಅಗ್ನಿಸೂಕ್ತವನ್ನು ಪಠಿಸಿ ಸುಡದೆ ಪಾರಾದ ವಿವರ ಅಲ್ಲಿದೆ.

ಗಾಂಧಾರೀ ಬಸಿರಿನಲ್ಲಿ ಕಲ್ಯಾದಿದೈತ್ಯರ ಪ್ರವೇಶ

ತದಾ ಕಲಿಶ್ಚ ರಾಕ್ಷಸಾ ಬಭೂವುರಿಂದ್ರಜಿನ್ಮುಖಾಃ ।
ವಿಚಿತ್ರವೀರ್ಯನಂದನಪ್ರಿಯೋದರೇ ಹಿ ಗರ್ಭಗಾಃ ॥ ೧೯ ॥

ಅ: ಆ ವೇಳೆಗೆ ಕಲಿ ಹಾಗೂ ಇಂದ್ರಜಿತ್ ಮೊದಲಾದ ರಾಕ್ಷಸರು ಧೃತರಾಷ್ಟ್ರನ ಪತ್ನಿಯಾದ ಗಾಂಧಾರಿಯ ಗರ್ಭದಲ್ಲಿ ಪ್ರವೇಶಿಸಿದ್ದರು.

ವಿ: ೧) ಒಮ್ಮೆ ಶ್ರೀವೇದವ್ಯಾಸರು ಹಸಿವಿನ ಬಾಧೆಯಿಂದ ಬಳಲಿದಂತೆ ನಟಿಸುತ್ತಾ ಗಾಂಧಾರಿಯ ಬಳಿ ಬಂದರು. ಗಾಂಧಾರಿ ಅವರಿಗೆ ಆಗ ವಿಶೇಷಸೇವೆ ಸಲ್ಲಿಸಿದಳು. ಶ್ರೀವ್ಯಾಸರು ಆಗ ಪ್ರಸನ್ನರಾಗಿ ವರ ಕೇಳಲು ಆದೇಶಿಸಿದರು. ಅವಳಿಗೆ [೧]ಶತಪುತ್ರರನ್ನು ಪಡೆಯುವಂತಹ ವರವೊಂದು ಶಿವನಿಂದ ಲಭಿಸಿದ್ದ ವಿವರ ಮಹಾಭಾರತದಲ್ಲಿದೆ. ಆಗ ಗಾಂಧಾರಿ ತನ್ನ ಪತಿಯಂತಹ ನೂರು ಪುತ್ರರನ್ನು ಕೇಳಿಕೊಂಡಳು. ಅದರಂತೆ ಗಾಂಧಾರಿ ಗರ್ಭಿಣಿಯಾದಳು. ಆಗ ಅವಳ ಗರ್ಭದಲ್ಲಿ ಸೇರಿದ್ದವರೆಲ್ಲ ಕಲಿ ಮೊದಲಾದ ಮಹಾಅಸುರರೇ.

---

೧. ಆರಾಧ್ಯ ವರದಂ ದೇವಂ ಭಗನೇತ್ರಹರಂ ಹರಮ್ ।
ಗಾಂಧಾರೀ ಕಿಲ ಪುತ್ರಾಣಾಂ ಶತಂ ಲೇಭೇ ವರಂ ಶುಭಮ್ ॥ – ಭಾರತ (ಆದಿ. ೧೦೯/೯, ೧೦)

೨) ವೇದವ್ಯಾಸರನ್ನು ಸೇವಿಸಿಯೂ ಗಾಂಧಾರಿಗೆ ಅಂತಹ ದುಷ್ಫಲ ಲಭಿಸಲು ಅವಳು ಸಾಕ್ಷಾದ್ಭಗವದವತಾರರಾದ ಶ್ರೀವೇದವ್ಯಾಸರನ್ನು ಹಸಿವಿನ ಬಾಧೆಯಿಂದ ಬಳಲಿದವರು ಎಂದು ತಪ್ಪಾಗಿ ತಿಳಿದದ್ದೇ ಕಾರಣ. ಅಸದುಪಾಸನೆಯಿಂದಾಗಿ ಅವಳಿಗೆ ಸತ್ಫಲ ದೊರೆಯದೇ ಹೋಯಿತು. ಅಂಬಿಕೆ ವ್ಯಾಸರನ್ನು ನೋಡಿ ಕಣ್ಣು ಮುಚ್ಚಿದ್ದರೆ, ಇವಳು ಕಣ್ತೆರದೂ ಸರಿಯಾಗಿ ನೋಡದಾದಳು. ಅಲ್ಲಿ ಅಂಧನಾದ ಧೃತರಾಷ್ಟ್ರ ಹುಟ್ಟಿದಂತೆ, ಇಲ್ಲಿ ದೇವರನ್ನು ಕಾಣದ ಪರಮಾಂಧರಾದ ದುರ್ಯೋಧನಾದಿಗಳು ಹುಟ್ಟಿದರು.

ಸಂತತಿ ಪಡೆಯಲು ಪಾಂಡುರಾಜನ ನಿರ್ಧಾರ

[೧]ತದಾऽಸ್ಯ ಸೋऽನುಜೋऽಶೃಣೋನ್ಮುನೀಂದ್ರಭಾಷಿತಂ ಚ ತತ್ ।
ವಿಚಾರ್ಯ ಚ ಪ್ರಿಯಾಮಿದಂ ಜಗಾದ ವಾಸುದೇವಧೀಃ ॥ ೨೦ ॥

ಅ: ಅವನ ತಮ್ಮನಾದ ಪಾಂಡುರಾಜ ಮುನಿವರ್ಯರ ಆ ಮಾತನ್ನು ಕೇಳಿದ್ದು ಆ ಸಮಯದಲ್ಲಿ. ಅವರ ಮಾತನ್ನು ವಿಚಾರ ಮಾಡಿ, ಶ್ರೀವಾಸುದೇವಮನಸ್ಕನಾದ ಪಾಂಡು ತನ್ನ ಪತ್ನಿಯಾದ ಕುಂತಿಗೆ ಹೇಳಿದ.

ವಿ: ೧) ಮುನಿವರ್ಯರು ಹೇಳಿದ ಮಾತು ಎಂದರೆ ''ನೀನು ಸಂತಾನವಾಗದೆ ಬ್ರಹ್ಮಸಭೆಗೆ ಬರುವಂತಿಲ್ಲ. ನಿನಗೆ ಅಪೂರ್ವಸಂತಾನವಾಗುವ [೧]ಯೋಗವಿದೆ ಎಂದು ನಮ್ಮ ದಿವ್ಯದೃಷ್ಟಿಗೆ ಗೋಚರಿಸುವುದು'' ಎಂಬುದು.

೨) 'ಮುನೀಂದ್ರಭಾಷಿತಂ' ಎಂಬುದಕ್ಕೆ 'ಗಾಂಧಾರಿಯ ಗರ್ಭದಲ್ಲಿ ಕಲ್ಯಾದಿದೈತ್ಯರು ಅವತರಿಸಲು ಸೇರಿಕೊಂಡಿರುವರು ಎಂಬ ವಿಚಾರವನ್ನು ಮುನಿಶ್ರೇಷ್ಠರ ಬಾಯಿಂದ ಕೇಳಿ' ಎಂಬ ಅರ್ಥವೂ [೩]ಜನಾರ್ದನೀಯದಲ್ಲಿದೆ.

---

೧. ತದಸ್ಯ ಸೋऽನುಜ ಇತ್ಯತ್ರ ಅಸ್ಯ= ಧೃತರಾಷ್ಟ್ರಸ್ಯ ಅನುಜಃ ಸಃ= ಪಾಂಡುಃ । ತತ್= ಗಾಂಧಾರ್ಯಾಂ ಗರ್ಭಪ್ರಾಪಣಮ್ ॥ –(ವಾ.)

'ತದಸ್ಯ ಸೋऽನುಜೋऽಶ್ರುಣೋತ್' – (ಪಾಠಾಂತರ)

೨. ಅಸ್ತಿ ವೈ ತವ ಧರ್ಮಾತ್ಮನ್ ವಿದ್ಮೋ ದೇವೋಪಮಂ ಶುಭಮ್ ॥
ಅಪತ್ಯಮನಘಂ ರಾಜನ್ ವಯಂ ದಿವ್ಯೇನ ಚಕ್ಷುಷಾ ।
ದೈವೋದ್ದಿಷ್ಟಂ ನರವ್ಯಾಘ್ರ ಕರ್ಮಣೇಹೋಪಪಾದಯ ॥ – ಭಾರತ (ಆದಿ. ೧೧೯/೨೩,೨೪)

೩. ಋಷಿಭಿರ್ಭಾಷಿತಂ ಉದಿತಂ ತತ್ ಕಲ್ಯಾದೀನಾಂ ಗರ್ಭಗತ್ವಂ ಅಶ್ರುಣೋತ್ । .... ಮುನೀಂದ್ರಭಾಷಿತಮಿತ್ಯುಭಯತ್ರ ಸಂಬಧ್ಯತೇ । – (ಜ.)

ಯ ಏವ ಮದ್ಗುಣಾಧಿಕಸ್ತತಃ ಸುತಂ ಸಮಾಪ್ನುಹಿ ।
ಸುತಂ ವಿನಾ ನ ನೋ ಗತಿಂ ಶುಭಾಂ ವದಂತಿ ಸಾಧವಃ ॥ ೨೧ ॥

ಅ: ''ಗುಣಗಳಲ್ಲಿ ನನಗಿಂತ ಮಿಗಿಲಾದವನಿಂದ ಪುತ್ರನನ್ನು ಪಡೆ. ಪುತ್ರನಿಲ್ಲದೆ ನಮಗೆ ಸದ್ಗತಿ ಇಲ್ಲವೆಂದು ಸತ್ಪುರುಷರು ಹೇಳುತ್ತಿರುವರು''.

ವಿ: ೧) ಪಾಂಡುರಾಜ ಕುಂತಿಗೆ ಆದೇಶ ನೀಡಿದ. ''ಮುನಿಗಳ ಮಾತಿನಂತೆ ಸಂತತಿಯನ್ನು ಪಡೆಯುವುದು ಅನಿವಾರ್ಯ. ಮುನಿಶಾಪದಿಂದಾಗಿ ತಾನು ಸಾಕ್ಷಾತ್ ಸಂತತಿಯನ್ನು ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ತನಗಿಂತ ಶ್ರೇಷ್ಠನಾದವನಿಂದ ನಿಯೋಗಪದ್ಧತಿಯಿಂದ ಸಂತತಿ ಪಡೆ'' ಎಂದು [೧]ಆದೇಶ ನೀಡಿದ ಎಂದು ಭಾವ.

೨) ಅಂತಹ ಸಮಯದಲ್ಲಿ ತನಗೆ ಸಮರಾಗಲಿ, ಕಡಿಮೆಯವರಿಂದಾಗಲಿ ಸಂತತಿ ಪಡೆಯುವುದು ಶ್ರೇಯಸ್ಕರವಲ್ಲ; ಆದ್ದರಿಂದ ತನಗಿಂತ ಮಿಗಿಲಾದವರಿಂದ ಸಂತತಿ ಪಡೆಯಲು ಹೇಳಿದ.

ತದಸ್ಯ ಕೃಚ್ಛ್ರತೋ ವಚಃ ಪೃಥಾऽಗ್ರಹೀಜ್ಜಗಾದ ಚ ।
ಮಮಾಸ್ತಿ ದೇವವಶ್ಯದೋ ಮನೂತ್ತಮಃ ಸುತಾಪ್ತಿದಃ ॥ ೨೨ ॥

ಅ: ಅವನ ಮಾತನ್ನು ಕುಂತೀ ಕಷ್ಟದಿಂದಲೇ ಒಪ್ಪಿದಳು; ಮತ್ತು ಹೀಗೆಂದಳು : ''ನನಗೆ ದೇವತೆಗಳನ್ನು ವಶಪಡಿಸಿಕೊಳ್ಳುವ, ಪುತ್ರರನ್ನು ನೀಡುವ ಉತ್ತಮಮಂತ್ರವೊಂದು ತಿಳಿದಿದೆ''.

ವಿ: ೧) ಕುಂತಿ ಪರಮಪತಿವ್ರತೆಯಾದ ತಾನು ಆ ರೀತಿ ಸಂತತಿ ಪಡೆಯುವುದಕ್ಕೆ ಇಚ್ಛಿಸುವುದಿಲ್ಲ. ಪಾಂಡುರಾಜನಿಗೆ ಶಾಪವಿದ್ದರೂ, ಅವನು ಯೋಗಿಯಾದ್ದರಿಂದ ವಿಶಿಷ್ಟರೀತಿಯಲ್ಲಿ ಸಂತತಿ ನೀಡಲು ಸಮರ್ಥನಾದವನು. ಹಿಂದೊಮ್ಮೆ ಪುರುವಂಶದ ವ್ಯುಷಿತಾಶ್ವನೆಂಬ ರಾಜ ತುಂಬಾ ಧಾರ್ಮಿಕನಾಗಿದ್ದ. ಭದ್ರಾ ಎಂಬವಳು ಅವನ ಪತ್ನಿ; ಅಪಾರ ರೂಪಸಿ. ಅವರಿಬ್ಬರೂ ಮೆಚ್ಚಿ ಮದುವೆಯಾಗಿದ್ದವರು. ಅವಳಲ್ಲಿಯ ಅತಿಭೋಗದಿಂದಾಗಿ ಅವನು ವಿಚಿತ್ರವೀರ್ಯನಂತೆ ಕ್ಷಯರೋಗಕ್ಕೆ ತುತ್ತಾಗಿ ಸಂತತಿ ಪಡೆಯುವ ಮುನ್ನವೇ ಅಸುನೀಗಿದ. ಭದ್ರೆ ರಾಜವಂಶ ಸಂತತಿಹೀನವಾಯಿತೆಂದು ಬಹಳವಾಗಿ ಶೋಕಿಸತೊಡಗಿದಾಗ, ಅವನು ತನ್ನ ಶವದಲ್ಲಿ ಪ್ರವೇಶಿಸಿ, ಅವಳಲ್ಲಿ ಏಳು ಪುತ್ರರನ್ನು ಪಡೆದ. ಮುಂದೆ ಅವರಲ್ಲಿ ಮೂವರು ಸಾಲ್ವದೇಶಕ್ಕೂ,

---

೧. ತಸ್ಮಾತ್ ಪ್ರಹೇಷ್ಯಾಮ್ಯದ್ಯ ತ್ವಾಂ ಹೀನಃ ಪ್ರಜನನಾತ್ ಸ್ವಯಮ್ ।
ಸದೃಶಾಚ್ಛ್ರೇಯಸೋ ವಾ ತ್ವಂ ವಿದ್ಧ್ಯಪತ್ಯಂ ಯಶಸ್ವಿನಿ ॥ – ಭಾರತ (ಆದಿ. ೧೧೯/೩೭)

ಉಳಿದ ನಾಲ್ವರು ಮದ್ರದೇಶಕ್ಕೂ ಅಧಿಪತಿಗಳಾದರು. ಈ ಪ್ರಸಂಗವನ್ನು ತಿಳಿಸಿದ ಕುಂತಿ, ಪಾಂಡುರಾಜನು ಸಹ ಹಾಗೆ ಯೋಗಶಕ್ತಿಯಿಂದ ತನ್ನಲ್ಲಿ ಸಂತತಿ ಪಡೆಯಬೇಕೆಂದು ಪ್ರಾರ್ಥಿಸುವಳು ಎಂಬ ವಿವರ [೧]ಮಹಾಭಾರತದಲ್ಲಿದೆ.

೨) ಆದರೆ ಪಾಂಡುರಾಜ ಅದಕ್ಕೊಪ್ಪದೆ, ನಿಯೋಗಪದ್ಧತಿಯಿಂದಲೇ ಸಂತತಿ ಪಡೆಯಲು [೨]ಆಗ್ರಹಪಡಿಸಿದಾಗ, ಕುಂತಿ ತನಗೆ ದುರ್ವಾಸರು ನೀಡಿದ ಮಂತ್ರದ ವಿಚಾರವನ್ನು [೩]ತಿಳಿಸುವಳು :

ನ ತೇ ಸುರಾನ್ಯತೇ ಸಮಃ ಸುರೇಷು ಕೇಚಿದೇವ ಚ ।
ಅತಸ್ತವಾಧಿಕಂ ಸುರಂ ಕಮಾಹ್ವಯೇ ತ್ವದಾಜ್ಞಯಾ ॥ ೨೩ ॥

ಅ: ''ಸುರರ ಹೊರತು ನಿನಗೆ ಬೇರಾರೂ ಸಮರಲ್ಲ. ದೇವತೆಗಳಲ್ಲೂ ನಿನಗೆ ಸಮರು ಕೆಲವರು ಮಾತ್ರ. ಆದ್ದರಿಂದ ನಿನ್ನ ಆದೇಶದಂತೆ ನಿನಗಿಂತ ಮಿಗಿಲಾದ ಯಾವ ದೇವತೆಯನ್ನು ಕರೆಯಲಿ?''.

ವಿ: ಪಾಂಡುರಾಜ ಪರಾವಹಮರುತ್ತಿನ ಅವತಾರ; ಶತಸ್ಥದೇವತೆಗಳ ಸಾಲಿಗೆ ಸೇರಿದವನು. ಆದ್ದರಿಂದ ಅವನಿಗೆ ಸಮರ ಸಂಖ್ಯೆಯೂ ಕಡಿಮೆಯೇ.

ದೇವತಾಸ್ತ್ರೀಯರ ಪಾತಿವ್ರತ್ಯವಿಚಾರ

ವರಂ ಸಮಾಶ್ರಿತಾ ಪತಿಂ ವ್ರಜೇತ ಯಾ ತತೋಽಧಮಮ್ ।
ನ ಕಾಚಿದಸ್ತಿ ನಿಷ್ಕೃತಿರ್ನ ಭರ್ತೃಲೋಕಮೃಚ್ಛತಿ ॥ ೨೪ ॥

---

೧. ಸಾ ತೇನ ಸುಷುವೇ ದೇವೀ ಶವೇನ ಭರತರ್ಷಭ ।
ತ್ರೀನ್ ಶಾಲ್ವಾಂಶ್ಚತುರೋ ಮದ್ರಾನ್ ಸುತಾನ್ ಭರತಸತ್ತಮ ॥
ತಥಾ ತ್ವಮಪಿ ಮಯ್ಯೇವಂ ಮನಸಾ ಭರತರ್ಷಭ ।
ಶಕ್ತೋ ಜನಯಿತುಂ ಪುತ್ರಾಂಸ್ತ್ವಯೋಯೋಗಬಲಾನ್ವಿತಃ ॥ – ಭಾರತ (ಆದಿ. ೧೨೦/೩೬,೩೭)

೨. ತಥಾ ರಕ್ತಾಂಗುಲಿತಲಃ ಪದ್ಮಪತ್ರನಿಭಃ ಶುಭೇ ॥
ಪ್ರಸಾದಾರ್ಥಂ ಮಯಾ ತೇಽಯಂ ಶಿರಸ್ಯಭ್ಯುದ್ಯತೋಽಂಜಲಿಃ ।
ಮನ್ನಿಯೋಗಾತ್ ಸುಕೇಶಾಂತೇ ದ್ವಿಜಾತೇಸ್ತಪಸಾಽಧಿಕಾತ್ ॥
ಪುತ್ರಾನ್ ಗುಣಸಮಾಯುಕ್ತಾನುತ್ಪಾದಯಿತುಮರ್ಹಸಿ । – ಭಾರತ(ಆದಿ.೧೨೧/೬-೮)

೩. ಸ ಮೇಽಭಿಚಾರಸಂಯುಕ್ತಮಾಚಷ್ಟ ಭಗವಾನ್ ವರಮ್ ।
ಮಂತ್ರಂ ತ್ವಿಮಂ ಚ ಮೇ ಪ್ರಾದಾದಬ್ರವೀಚ್ಚೈವ ಮಾಮಿದಮ್ ॥ –ಭಾರತ (ಆದಿ. ೧೨೧/೧೨)

ಅ: ಉತ್ತಮಪತಿಯನ್ನು ಹೊಂದಿದವಳು ಅವನಿಗಿಂತ ಕಡಿಮೆಯಾದವನನ್ನು ಹೊಂದಿದರೆ, ಅವಳಿಗೆ ಯಾವ [೧]ಪ್ರಾಯಶ್ಚಿತ್ತವೂ ಇಲ್ಲ. ಅವಳು ಪತಿಲೋಕವನ್ನು ಹೊಂದಲಾರಳು.

ಪ್ರ ಉತ್ತಮಗುರುವನ್ನು ಹೊಂದಿದ ಶಿಷ್ಯ ಅವನಿಗಿಂತ ಕಡಿಮೆಯಾದವನನ್ನು ಗುರುವಾಗಿ ಸ್ವೀಕರಿಸಬಾರದು ಎಂಬ [೨]ನಿಯಮವನ್ನು ಇದು ಹೋಲುತ್ತದೆ. ಹೆಂಡತಿಗೆ ಗಂಡನೇ ಗುರು. 'ಪತಿರೇವ ಗುರುಃ ಸ್ತ್ರೀಣಾಮ್' ಎಂಬ ಮಾತು ಇದಕ್ಕೆ ಸಂವಾದಿಯಾಗಿದೆ. ಗುರುದ್ರೋಹಿಗೆ ಸದ್ಗತಿ ಇಲ್ಲ; ಅದರಂತೆ ಪತಿದ್ರೋಹಿಯಾದ ಸ್ತ್ರೀಗೂ ಸಹ.

ಕೃತೇ ಪುರಾ ಸುರಾಸ್ತಥಾ ಸುರಾಂಗನಾಶ್ಚ ಕೇವಲಮ್ ।
ನಿಮಿತ್ತತೋಽಪಿ ತಾಃ ಕ್ವಚಿನ್ನ ತಾನ್ ವಿಹಾಯ [೩]ರೇಮಿರೇ ॥ ೨೫ ॥

ಅ: ಹಿಂದೆ ಕೃತಯುಗದಲ್ಲಿ ಸುರರು ಯಾವುದೇ ಕಾರಣದಿಂದಲೂ ತಮ್ಮ ನಿಯತಪತ್ನಿಯರನ್ನು ಹೊರತು, ಇತರರೊಂದಿಗೆ ರಮಿಸುತ್ತಿರಲಿಲ್ಲ. ಅದರಂತೆ ಸುರಸ್ತ್ರೀಯರು ತಮ್ಮ ನಿಯತ ಪತಿಗಳನ್ನು ಬಿಟ್ಟು, ಅನ್ಯಪುರುಷರೊಂದಿಗೆ ರಮಿಸುತ್ತಿರಲಿಲ್ಲ.

ಮನೋವಚಃಶರೀರತೋ ಯತೋ ಹಿ ತಾಃ ಪತಿವ್ರತಾಃ ।
ಅನಾದಿಕಾಲತೋಽಭವಂಸ್ತತಃ ಸಭರ್ತೃಕಾಃ ಸದಾ ॥ ೨೬ ॥

ಅ: ಮನಸ್ಸು, ಮಾತು ಹಾಗೂ ದೇಹಗಳಿಂದ ಆ ದೇವತಾಸ್ತ್ರೀಯರು ಅನಾದಿಕಾಲದಿಂದಲೂ ಪತಿವ್ರತೆಯರೇ ಆಗಿದ್ದವರು. ಆದ್ದರಿಂದ ಅವರು ಸದಾ ತಮ್ಮ ಪತಿಗಳೊಂದಿಗೇ ಯುಕ್ತರಾಗಿರುತ್ತಿದ್ದರು.

ಸ್ವಭರ್ತೃಭಿರ್ವಿಮುಕ್ತಿಗಾಃ ಸಹೈವ ತಾ ಭವಂತಿ ಹಿ ।
ಕೃತಾಂತಮಾಪ್ಯ ಚಾಪ್ಸರಃಸ್ತ್ರಿಯೋ ಬಭೂವುರೂರ್ಜಿತಾಃ ॥ ೨೭ ॥

---

೧. ತತೋಽಧಮಮಿತ್ಯುಪಲಕ್ಷಣಮ್ । ತತ್ಸಮಂ ಚ ॥ –(ವಾ.)

ಹುತ್ವಾತ್ಮದೇಹಮುರುಪಾಪಮದಃಕೃತಂ ಚೇತ್ಯಗ್ರೇ ವಕ್ಷ್ಯಮಾಣತ್ವಾದಿದಂ ದೇಹಹಾನಿರೂಪಪ್ರಾಯಶ್ಚಿತ್ತ-ರಾಹಿತ್ಯ ಇತಿ ದ್ರಷ್ಟವ್ಯಂ। – (ಜ.)

೨. ಗುಣಾಧಿಕಂ ಗುರುಂ ಪ್ರಾಪ್ಯ ತದ್ಧೀನಂ ನಾಪ್ನುಯಾತ್ ಕ್ವಚಿತ್ ।
ವಿಪರ್ಯಯಸ್ತು ಕರ್ತವ್ಯಃ ಸರ್ವಥಾ ಶುಭಮಿಚ್ಛತಾ ॥ – ಅನುವ್ಯಾಖ್ಯಾನ (೩/೩೨೦೫)

೩. 'ಮೇನಿರೇ' – (ಪಾಠಾಂತರ)

ಅನಾವೃತಾಶ್ಚ [೧]ತಾಸ್ತಥಾ ಯಥೇಷ್ಟಭರ್ತೃಕಾಃ ಸದಾ ।
ಅತಸ್ತು ತಾ ನ ಭರ್ತೃಭಿರ್ವಿಮುಕ್ತಿಮಾಪುರುತ್ತಮಾಮ್ ॥ ೨೮ ॥

ಅ: ಅವರು ತಮ್ಮ ಪತಿಗಳೊಂದಿಗೇ [೨]ಮುಕ್ತಿಗೆ ತೆರಳುವರು. ಕೃತಯುಗ ಮುಗಿದ ಮೇಲೆ ಬಹುಸಂಖ್ಯೆಯಲ್ಲಿ ಅಪ್ಸರಸ್ತ್ರೀಯರು ಜನಿಸಿದರು. ಅವರು ಎಂದೂ ನಿಯತಪತಿಗಳನ್ನು ಹೊಂದದಿದ್ದವರು. ತಾವು ಬಯಸಿದವರನ್ನು ಪತಿಗಳನ್ನಾಗಿ ಸ್ವೀಕರಿಸುವವರು. ಆದ್ದರಿಂದ ಅವರು ತಮ್ಮ ಗಂಡಂದಿರೊಂದಿಗೆ ಉತ್ತಮಮುಕ್ತಿಯನ್ನು ಪಡೆಯುವವರಲ್ಲ.

ವಿ: ನಿಯತಪತಿಗಳನ್ನು ಹೊಂದಿದ ದೇವತಾಸ್ತ್ರೀಯರಿಗೆ ಲಭಿಸುವಂತಹ ಶ್ರೇಷ್ಠ ಮುಕ್ತಿ ಅಪ್ಸರಸ್ತ್ರೀಯರಿಗೆ [೩]ಲಭಿಸಲಾರದು ಎಂದರ್ಥ.

ಸುರಸ್ತ್ರಿಯೋ[೪]ಽತಿಕಾರಣೈರ್ಯದಾಽನ್ಯಥಾ ಸ್ಥಿತಾಸ್ತದಾ ।
ದುರನ್ವಯಾಃ ಸುದುಃಸಹಾ [೫]ವಿಪತ್ ತತೋ ಭವಿಷ್ಯತಿ ॥ ೨೯ ॥

ಅ: ದೇವತಾಸ್ತ್ರೀಯರು ಬಲವಾದ [೬]ಕಾರಣಗಳಿಂದಾಗಿ ನಿಯತಪತಿನಿಯಮವನ್ನು ತಪ್ಪಿದರೆ, ಆಗ ಅವರಿಗೆ ಪತಿಯೋಗ ತಪ್ಪುವಂತಹ, ಸಹಿಸಲಾಗದಂತಹ [೭]ವಿಪತ್ತು ಒದಗುವುದು.

---

೧. ತಾ= ಅಪ್ಸರಸಃ । ಭರ್ತೃಭಿಃ ಸಹ = ನಿಯತಭರ್ತೃಕಶಚ್ಯಾದಿಸ್ತ್ರೀವತ್ ಕಂಚನ ಸ್ವಭರ್ತಾರಂ ಪುರೋ ನಿಧಾಯ ತೇನ ಸಹ ಮುಕ್ತಿಂ ನಾಪುಃ । ಕಿಂತು ಮುಕ್ತಾವಪಿ ದೇವಾಃ ಸರ್ವೇ ಜಾರಾ ಏವ ನ ಭರ್ತಾರಃ । ಸ್ವಯಂ ಚ ಸ್ವೈರಿಣ್ಯಃ । ಅನ್ಯಥಾ ಬ್ರಹ್ಮಣಾ ಸಹ ತಾಸಾಮಪಿ ಮುಕ್ತೇರ್ಜಾತತ್ವಾದಸಂಗತಿಃ ಸ್ಯಾತ್ । ಅತಃ ಉಕ್ತಪ್ರಕಾರೇಣೈವ ಯೋಜನಾ ॥
–(ವಾ.)

೨. ಅನಾದಿಕಾಲಾದಾರಭ್ಯ ಯಾ ಭಾರ್ಯಾಸ್ತಾಃ ಸದೈವ ತು ।
ಬ್ರಹ್ಮಾದೀನಾಂ ವಿಮುಕ್ತೌ ಚ ಭಾರ್ಯಾಃ ಸ್ಯುರ್ನಿಯಮಾತ್ ಸದಾ ।
ನ ಕದಾಚಿದ್ವಿಮುಕ್ತಾನಾಂ ಭಾರ್ಯಾಃ ಕಾಶ್ಚಿತ್ಸ್ಮರನ್ಯಗಾಃ ।
ನ ಕದಾಚಿದ್ವಿಯೋಗಶ್ಚ ನ ವಿದ್ವೇಷೋ ನ ವಾಽರತಿಃ ।
ಮೋದಂತೇ ಸಹಿತಾಃ ಸರ್ವೇ ಸದಾ ವಿಷ್ಣುಪರಾಯಣಾಃ' ಇತಿ ಪೈಂಗಿಶ್ರುತಿಃ । - ಬೃಹದ್ಭಾಷ್ಯೇ

೩. ಉತ್ತಮಾಂ ದೇವತಾಸ್ತ್ರೀಯೋಗ್ಯೋತ್ತಮಾಂ ವಿಮುಕ್ತಿಂ ಭರ್ತೃಭಿಃ ಸಹ ನಾಪುಃ । –(ಜ.)

೪. ಸುರಸ್ತ್ರಿಯಃ = ನಿಯತದೇವಸ್ತ್ರಿಯಃ ಅತಿ = ಸ್ವಪತೀನತಿಕ್ರಮ್ಯ ಕಾರಣೈಃ = ಬಲಾತ್ ಕಾರಣೈರಪೀತ್ಯರ್ಥಃ । ದುರನ್ವಯಾ = ದುಃಖಪ್ರದಃ ಅನ್ವಯಃ ಸಂಬಂಧೋ ಯಸ್ಯಾಃ ಸಾ ತಥೋಕ್ತಾ । ತತಃ = ಸ್ವಯೋಗ್ಯಪಾತಿವ್ರತ್ಯಭಂಗಜನಿತಪಾಪಾತ್ ಅತೋ ನಿಯತಸುರಸ್ತ್ರೀಣಾಮಪಿ ಸ್ವಪತಿಭ್ಯೋಽಧಿಕಪುರುಷಪರಿಗ್ರಹೇಽಪಿ ಪರಲೋಕಪರಿಪಂಥಿಪಾಪಾಭಾವೇಽಪಿ ಐಹಿಕದುಃಖದಾಯಕಪಾಪಂ ಪತ್ಯುಃ ಪುತ್ರಾಣಾಂ ಮಾತುಶ್ಚ ಭವತೀತಿ ಭಾವಃ॥– (ವಾ.)

ವಿ: ೧) ಹಾಗೆ ಅನ್ಯಪುರುಷರೊಂದಿಗೆ ರಮಿಸಿದ ದೇವತಾಸ್ತ್ರೀಯರು ಇಬ್ಬರು. ಒಬ್ಬಳು ವಾಲಿಪತ್ನಿ ತಾರೆಯಾದರೆ, ಮತ್ತೊಬ್ಬಳು ಗುರುಪತ್ನಿ ತಾರೆ. ಇಬ್ಬರೂ ಪತಿಯೊಂದಿಗೆ ತತ್ಕ್ಷಣ ಯೋಗ ಹೊಂದಲು [೮]ಸಾಧ್ಯವಾಗದೆ ವ್ಯಥೆಪಟ್ಟದ್ದು ಸುಪ್ರಸಿದ್ಧ.

೨) ಇಬ್ಬರ ಹೆಸರೂ ತಾರಾ ಎಂದೇ ಆಗಿರುವುದು ವಿಶೇಷ. ಗುರುಪತ್ನಿ ತಾರೆ ಮೂಲರೂಪದಲ್ಲೂ ತಾರೆಯಾದರೆ, ಇಂದ್ರಪತ್ನಿ ಶಚಿ ಅವತಾರದಲ್ಲಿ ತಾರೆಯೆಂಬ ಹೆಸರನ್ನು ಹೊಂದಿದ್ದವಳು.

೩) 'ಅತಿಕಾರಣಗಳು' ಎಂದರೆ ಪ್ರಾರಬ್ಧವಶಾತ್ ಒದಗುವ ಶಾಪಾದಿಪ್ರಬಲಕಾರಣ–ಗಳು. ಮುಂದೆ ಬರುವ ಪಾರ್ವತೀ, ಶಚೀ, ಶ್ಯಾಮಲಾ ಮತ್ತು ಉಷಾ ಎಂಬ ದೇವತಾಸ್ತ್ರೀಯರು ಬ್ರಹ್ಮಶಾಪಕ್ಕೆ ಒಳಗಾಗಿ ದುಃಖಿತರಾಗುವ ಪ್ರಸಂಗ ಇಂತಹ ಮತ್ತೊಂದು ನಿದರ್ಶನ. ಇಲ್ಲೂ ಪ್ರಾರಬ್ಧವೇ ಮುಖ್ಯಕಾರಣ.

ಅಯುಕ್ತಮುಕ್ತವಾಂಸ್ತತೋ ಭವಾಂಸ್ತಥಾऽಪಿ ತೇ ವಚಃ ।
ಅಲಂಘ್ಯಮೇವ ಮೇ ತತೋ ವದಸ್ವ ಪುತ್ರದಂ ಸುರಮ್ ॥ ೩೦ ॥

ಅ: ''ಆದ್ದರಿಂದ ನೀನು ಹೇಳಿದ್ದು ಯುಕ್ತವಾದದ್ದಲ್ಲ. ಆದರೂ ನಿನ್ನ ಮಾತನ್ನು ನಾನು ಮೀರಲಾಗದು. ಆದರಿಂದ ನೀನು ನನಗೆ ಪುತ್ರನನ್ನು ನೀಡುವ ದೇವತೆ ಯಾರು? ತಿಳಿಸು''.

ವಿ: ೧) ಇಬ್ಬರು ತಾರೆಯರ ಪ್ರಸಂಗಕ್ಕೂ, ಕುಂತಿಯ ಪ್ರಸಂಗಕ್ಕೂ ಸ್ವಲ್ಪ ವ್ಯತ್ಯಾಸವಿರುವು–ದನ್ನು ಗಮನಿಸಬೇಕು. ಅವರು ಸಂತಾನಕ್ಕಾಗಿ ಅಲ್ಲದೆ, ವಿಹಾರಕ್ಕೆಂದೇ ಪರಪುರುಷರೊಂದಿಗೆ ಕೂಡಿದರು. ಅವರು ಹಾಗೆ ಮಾಡಲು ಪತಿಯ ಆಜ್ಞೆಯೇನೂ ಇರಲಿಲ್ಲ ಎಂಬುದು ಸಹ ಗಮನಾರ್ಹ.

೨) ಅಲ್ಲದೆ ಅವರು ಸೇರಿದ ದೇವತಾಪುರುಷರು ತಮ್ಮ ಪತಿಗಿಂತ ಮಿಗಿಲಾದವರೂ ಆಗಿರಲಿಲ್ಲ. ಆದರೆ ಕುಂತಿ ಪತಿಯ ಆಜ್ಞೆಯಿಂದ ಕೇವಲ ಸಂತಾನಕ್ಕಾಗಿ ಉತ್ತಮದೇವತೆಯನ್ನು ಮಾತ್ರ ಆಹ್ವಾನಿಸುತ್ತಿರುವಳು ಎಂಬುದು ಇಲ್ಲಿಯ ವಿಶೇಷ.

---

೬. ಅತಿಕಾರಣೈಃ ಪ್ರಾರಬ್ಧಕರ್ಮಾನುರೂಪೋತ್ತಮಶಾಪಾದಿಬಲವತ್ಕಾರಣೈಃ। – (ಜ.)

೭. ಭೂಲೋಕೇऽಪಿ ಸ್ವಭರ್ತುಃ ಅಸಾಮೀಪ್ಯಾದ್ಯಾಪದ್ಭವಿಷ್ಯತಿ ಭವತಿ ದುರನ್ವಯಾ ಬಹುಕಾಲಭರ್ತೃಯೋಗ-ರಹಿತಾವಿಪದಿತಿ ಕೇಚಿತ್ ॥ – (ಜ.)

೮. ಅತ ಏವ 'ತಾರಾದೇಹೇ ಸೂರ್ಯಜಸ್ಯಾಂಗಸಂಗಾತ್ ಸ್ವರ್ಗಂ ನಾಗಾದಂತರಿಕ್ಷಾದಿಹಾಸೀತ್'
- ಇತಿ ಉಚ್ಯತೇ (೨೦/೧೬೦)

ಯುಧಿಷ್ಠಿರನ ಜನನ

ಇತೀರಿತೋಽಬ್ರವೀನ್ನೃಪೋ ನ ಧರ್ಮತೋ ವಿನಾ ಭುವಃ ।
ನೃಪೋಽಭಿರಕ್ಷಿತಾ ಭವೇತ್ ತದಾಹ್ವಯಾಶು ತಂ ವಿಭುಮ್ ॥ ೩೧ ॥

ಅ: ಹೀಗೆ ಹೇಳಲು, ಪಾಂಡುರಾಜ ತಿಳಿಸಿದ : ''ಧರ್ಮದ ಹೊರತು ರಾಜ ಭೂಮಿಯನ್ನು ಪಾಲಿಸಲಾರ. ಆದ್ದರಿಂದ ಕೂಡಲೆ ಪ್ರಭುವಾದ [೧]ಯಮಧರ್ಮನನ್ನು ಕರೆ''.

ಸ ಧರ್ಮಜಃ ಸುಧಾರ್ಮಿಕೋ ಭವೇದ್ಧಿ ಸೂನುರುತ್ತಮಃ ।
ಇತೀರಿತೇ ತಯಾ ಯಮಃ [೨]ಸಮಾಹುತೋಽಗಮದ್ಧ್ರುತಮ್ ॥ ೩೨ ॥

ಅ: ''ಯಮಧರ್ಮನಿಂದ ಜನಿಸುವ ಪುತ್ರ ಉತ್ತಮನೂ, ತುಂಬಾ ಧಾರ್ಮಿಕನೂ ಆಗುವನು''. ಹೀಗೆ ಪಾಂಡು ಹೇಳಲು, ಕುಂತಿಯು ಯಮನನ್ನು [೩]ಆಹ್ವಾನಿಸಿದಳು; ಅವನು ಕೂಡಲೆ ಆಗಮಿಸಿದ.

[೪]ತತಶ್ಚ ಸದ್ಯ ಏವ ಸಾ ಸುಷಾವ ಪುತ್ರಮುತ್ತಮಮ್ ।
ಯುಧಿಷ್ಠಿರಂ ಯಮೋ ಹಿ ಸ ಪ್ರಪೇದ ಆತ್ಮಪುತ್ರತಾಮ್ ॥ ೩೩ ॥

ಅ: ಆಗ ಕುಂತಿ ತತ್ಕ್ಷಣವೇ ಯುಧಿಷ್ಠಿರನೆಂಬ ಉತ್ತಮಪುತ್ರನನ್ನು ಹೆತ್ತಳು. ಯಮನು ತನ್ನ ಪುತ್ರನಾಗಿ ತಾನೇ ಜನಿಸಿದ.

ವಿ: ಯುಧಿಷ್ಠಿರ ಜನಿಸಿದಾಗ 'ಧಾರ್ಮಿಕರಲ್ಲಿ ಪರಮಶ್ರೇಷ್ಠನೆನ್ನಿಸುವ ಪುತ್ರ ಜನಿಸಿರುವನು' ಎಂದು [೫]ಅಶರೀರವಾಣಿಯಾಯಿತು.

---

೧. ಧರ್ಮಮಾವಾಹಯ ಶುಭೇ ಸ ಹಿ ಲೋಕೇಷು ಪುಣ್ಯವಾಕ್ ।
ಅಧರ್ಮೇಣ ನ ನೋ ಧರ್ಮಃ ಸಂಯುಜ್ಯತಿ ಕಥಂಚನ ॥ – ಭಾರತ (ಆದಿ. ೧೨೧/೧೭)

೨. ಸಮಾಹುತಃ 'ಹು ದಾನಾದಾನಯೋ'ರಿತಿ ಧಾತೋಃ । ಸಮ್ಯಗಾಹೂತಃ ಆಗಚ್ಛೇತಿ ವಚನದಾನಂ ಪ್ರಾಪಿತಃ ॥ – (ವಾ.)

೩. 'ಸಂವತ್ಸರೇ ಧೃತೇ ಗರ್ಭೇ ಗಾಂಧಾರ್ಯಾ ಜನಮೇಜಯ ।
ಆಹ್ವಯಾಮಾಸ ವೈ ಕುಂತೀ ಗರ್ಭಾರ್ಥೇ ಧರ್ಮಮಚ್ಯುತಮ್' ಇತ್ಯಾದಿಪರ್ವಣಿ(೧೨೨/೧) । – (ಜ.)

೪. ತತಃ= ತಸ್ಮಾದ್ಧರ್ಮಾತ್ ॥ – (ವಾ.)

ದುರ್ಯೋಧನಾದಿಗಳ ಜನನ

ಯಮೇ ಸುತೇ ತು ಕುಂತಿತಃ ಪ್ರಜಾತ ಏವ ಸೌಬಲೀ ।
ಅದಹ್ಯತೇರ್ಷ್ಯಯಾ ಚಿರಂ ಬಭಂಜ ಗರ್ಭಮೇವ ಚ ॥ ೩೪ ॥

ಅ: ಯಮನು ಕುಂತಿಯ ಮಗನಾಗಿ ಜನಿಸುತ್ತಲೇ ಗಾಂಧಾರಿ ಅಸೂಯೆಯಿಂದ ಉರಿದಳು; ಒಡನೆ ತನ್ನ ಗರ್ಭವನ್ನು ತಾನೇ [೬]ಒಡೆದುಕೊಂಡಳು.

ವಿ: ೧) ಕುಂತಿ ಯಮನನ್ನು ಸಂತಾನ ನೀಡಲು ಪ್ರಾರ್ಥಿಸುವ ಸಮಯದಲ್ಲಿ ಗಾಂಧಾರೀ ಗರ್ಭ ಧರಿಸಿ, ಒಂದು ವರ್ಷವಾಗಿತ್ತು. ಮೊದಲು ಗರ್ಭಿಣಿಯಾದವಳು ತಾನಾದರೂ, ಮೊದಲು ಹೆತ್ತಿದ್ದು ಕುಂತಿ ಎಂಬುದು ಅವಳ ಹೊಟ್ಟೆ ಉರಿಗೆ ಕಾರಣವಾಯಿತು. ಜ್ಯೇಷ್ಠಪುತ್ರನಾಗುವ ಭಾಗ್ಯ ತನ್ನ ಸಂತತಿಗೆ ತಪ್ಪಿದ್ದು ಅವಳ ಅಸೂಯೆಯನ್ನು ಹೆಚ್ಚಿಸಿತು ಎಂದೂ ಸಹ ತಿಳಿಯಬಹುದು.

೨) ಗಾಂಧಾರಿ ಸಾತ್ತ್ವಿಕಳು; ಮಾತ್ಸರ್ಯಾದಿಗಳು ಅವಳ ಸ್ವಭಾವವಲ್ಲ. ಈ ಪ್ರಸಂಗದಲ್ಲಿ ಹೊರತು, ಮುಂದೆಂದೂ ಅವಳು ಹಾಗೆ ಕುಂತಿ ಹಾಗೂ ಪಾಂಡವರ ಬಗ್ಗೆ ಅಸೂಯೆ ಪಟ್ಟ ನಿದರ್ಶನ ಕಂಡುಬರುವುದಿಲ್ಲ. ಈಗ ಮಾತ್ರ ಅವಳು ಹಾಗೆ ಅಸೂಯೆ ಪಡಲು ಅವಳ ಗರ್ಭದಲ್ಲಿ ಸೇರಿದ್ದ ಕಲ್ಯಾದಿದೈತ್ಯರ ಪ್ರಭಾವವೇ ಕಾರಣ. ಉದರ ಸೇರುವ ಆಹಾರ ತಲೆಯ ವಿಚಾರದ ಮೇಲೆ ಪರಿಣಾಮ ಬೀರುವುದು ಶಾಸ್ತ್ರಪ್ರಮಿತವಾದ ವಿಚಾರವೇ ಆಗಿದೆ. (ಅನ್ನಮಶಿತಂ ತ್ರೇಧಾ ವಿಧೀಯತೇ ... ಯತ್ಸೂಕ್ಷ್ಮ ಂ ತನ್ಮನಃ' – ಉಪನಿಷತ್) ಉದರ ಸೇರಿದ ಮದ್ಯ ತಲೆಗೆ ಭ್ರಮೆ ಕವಿಸುವುದು ಲೋಕದಲ್ಲೂ ಕಂಡಿದೆ. ಅಂಬಿಕೆ ವ್ಯಾಸರನ್ನು ಕಂಡು ಕಣ್ಣು ಮುಚ್ಚಲು ಸಹ ಅವಳಿಗೆ ಮುಂದೆ ಅಂತಹ ಕುರುಡುಸಂತತಿ ಜನಿಸುವ ಪ್ರಾರಬ್ಧದ ಫಲ ಎಂದೂ ಸಹ ತಿಳಿಯಬೇಕು.

---

೫. ಲೇಭೇ ಪುತ್ರಂ ವರಾರೋಹಾ ಸರ್ವಪ್ರಾಣಭೃತಾಂ ಹಿತಮ್ ।
ಐಂದ್ರೇ ಚಂದ್ರಸಮಾಯುಕ್ತೇ ಮುಹೂರ್ತೇ ऽಭಿಜಿತೇ ऽಷ್ಟಮೇ ।
ದಿವಾಮಧ್ಯಗತೇ ಸೂರ್ಯೇ ತಿಥೌ ಪೂರ್ಣೇ ऽತಿಪೂಜಿತೇ ॥
ಸಮೃದ್ಧಯಶಸಂ ಕುಂತೀ ಸುಷಾವ ಪ್ರವರಂ ಸುತಮ್ ।
ಜಾತಮಾತ್ರೇ ಸುತೇ ತಸ್ಮಿನ್ ವಾಗುವಾಚಾಶರೀರಿಣೀ ॥
ಏಷ ಧರ್ಮಭೃತೋ ಶ್ರೇಷ್ಠೋ ಭವಿಷ್ಯತಿ ನರೋತ್ತಮಃ । – ಭಾರತ (ಆದಿ. ೧೨೨/೫-೮)

೬. ತತಃ ಕಾಲೇನ ಸಾ ಗರ್ಭಂ ಧೃತರಾಷ್ಟ್ರಾದಥಾಗ್ರಹೀತ್ ॥
ಸಂವತ್ಸರದ್ವಯಂ ತಂ ತು ಗಾಂಧಾರೀ ಗರ್ಭಮಾಹಿತಮ್ ।
ಅಪ್ರಜಾ ಧಾರಯಾಮಾಸ ತತಸ್ತಾಂ ದುಃಖಮಾವಿಶತ್ ॥
ಶ್ರುತ್ವಾ ಕುಂತೀಸುತಂ ಜಾತಂ ಬಾಲಾರ್ಕಸಮತೇಜಸಮ್ ।
ಉದರಸ್ಯಾತ್ಮನಃ ಸ್ಥೈರ್ಯಮುಪಲಭ್ಯಾನ್ವಚಿಂತಯತ್ ॥
ಅಜ್ಞಾತಂ ಧೃತರಾಷ್ಟ್ರಸ್ಯ ಯತ್ನೇನ ಮಹತಾ ತತಃ ।
ಸೋದರಂ ಪಾತಯಾಮಾಸ ಗಾಂಧಾರೀ ದುಃಖಮೂರ್ಛಿತಾ ॥ – ಭಾರತ (ಆದಿ. ೧೧೪/೮-೧೧)

೩) ಹಾಗೆ ಕುಂತಿಯ ಬಗ್ಗೆ ಅಸೂಯೆ ಪಟ್ಟು ಗಾಂಧಾರಿ ಗರ್ಭ ಒಡೆದುಕೊಂಡದ್ದು ಅವಳ ಗರ್ಭದಿಂದ ಜನಿಸುವ ಮಕ್ಕಳೆಲ್ಲ ಕುಂತಿಯ ಮಕ್ಕಳ ಬಗ್ಗೆ ಅಜೀವ ಅಸೂಯೆ ಪಡುವುದಕ್ಕೆ ಸೂಚಕವೂ ಆಯಿತು.

೪) ದುರ್ಯೋಧನಾದಿಪರಮಪಾಪಿಗಳಿಗೆ ತಾಯಿಯ ಗರ್ಭದಲ್ಲಿ ಪೂರ್ಣಾವಧಿ ನೆಲೆಸುವ ಯೋಗ ಸಹ ಇರಲಿಲ್ಲ.

ಶ್ರೀವೇದವ್ಯಾಸರಿಂದ ಗರ್ಭರಕ್ಷಣೆ

ಸ್ವಗರ್ಭಪಾತನೇ ಕೃತೇ ತಯಾऽऽಜಗಾಮ ಕೇಶವಃ ।
ಪರಾಶರಾತ್ಮಜೋ ನ್ಯಧಾದ್ಘಟೇಷು ತಾನ್ ವಿಭಾಗಶಃ ॥ ೩೫ ॥

ಅ: ಅವಳು ತನ್ನ ಗರ್ಭಪಾತ ಮಾಡಿಕೊಳ್ಳುತ್ತಲೆ ಶ್ರೀವ್ಯಾಸರೂಪದ ಹರಿ ಅಲ್ಲಿಗೆ [೧]ಆಗಮಿಸಿದ. ಗರ್ಭದೊಳಗಿನ ಭ್ರೂಣಗಳನ್ನು ವಿಭಾಗಿಸಿ, ಗಡಿಗೆಗಳಲ್ಲಿ ಇರಿಸಿದ.

ವಿ: ೧) ಅವಳು ಗರ್ಭಪಾತ ಮಾಡಿಕೊಳ್ಳುತ್ತಿದ್ದಂತೆಯೇ ಅಲ್ಲಿಗೆ ಶ್ರೀವೇದವ್ಯಾಸರು ಆಗಮಿಸಿದರು. ''ಗಾಂಧಾರಿ! ಇದೇನು ಮಾಡ ಬಯಸಿರುವೆ?'' ಎಂದರು. ಅವಳು ''ನಾನು ಶತಪುತ್ರರು ಜನಿಸಬೇಕೆಂದು ವರ ಕೇಳಿದ್ದರೆ, ಜನಿಸಿದ್ದು ಈ ಮಾಂಸದ ತುಣುಕು'' ಎಂದು [೨]ನುಡಿದಳು. ಆಗ ವ್ಯಾಸರು ''ನನ್ನ ಮಾತು ಎಂದೂ, ಯಾವ ಕಾರಣಕ್ಕೂ ಸುಳ್ಳಾಗದು. ಇದರಿಂದ ನೂರು ಪುತ್ರರು ಹುಟ್ಟುವುದು ಖಚಿತ'' ಎಂದವರೇ ಘೃತಪೂರ್ಣ ನೂರು ಘಟಗಳಲ್ಲಿ

---

೧. ತತೋ ಜಜ್ಞೇ ಮಾಂಸಪೇಶೀ ಲೋಹಾಷ್ಮೀಲೇವ ಸಂಹತಾ ।
ದ್ವಿವರ್ಷಸಂಭೃತಾ ಕುಕ್ಷೌತಾಮುತ್ಸೃಷ್ಟುಂ ಪ್ರಚಕ್ರಮೇ ॥
ಅಥ ದ್ವೈಪಾಯನೋ ಜ್ಞಾತ್ವಾ ತ್ವರಿತಃ ಸಮುಪಾಗಮತ್ ।
ತಾಂ ಸ ಮಾಂಸಮಯೀಂ ಪೇಶೀಂ ದದರ್ಶ ಜಪತಾಂವರಃ ॥
ತತೊऽಬ್ರವೀತ್ ಸೌಬಲೇಯೀಂ ಕಿಮಿದಂ ತೇ ಚಿಕೀರ್ಷಿತಮ್ ।
ಸಾ ಚಾತ್ಮನೋ ಮತಂ ಸತ್ಯಂ ಶಶಂಸ ಪರಮರ್ಷಯೇ ॥ – ಭಾರತ (ಆದಿ. ೧೨೨/೧೨-೧೪)

೨. ಏವಮೇತತ್ ಸೌಬಲೇಯಿ ನೈತಜ್ಜಾತ್ವನ್ಯಥಾ ಭವೇತ್ ।
ವಿತಥಂ ನೋಕ್ತಪೂರ್ವಂ ಮೇ ಸ್ವೈರೇಷ್ವಪಿ ಕುತೊऽನ್ಯಥಾ ॥
ತತಸ್ತಾಂಸ್ತೇಷು ಕುಂಡೇಷು ಗರ್ಭಾನವದಧೇ ತದಾ ।
ಸ್ವನುಗುಪ್ತೇಷು ದೇಶೇಷು ರಕ್ಷಾಂ ಚ ವ್ಯದಧಾತ್ ತತಃ ॥
ಶಶಂಸ ಚೈವ ಭಗವಾನ್ ಕಾಲೇನೈತಾವತಾ ಪುನಃ ।
ಉದ್ಘಾಟನೀಯಾನ್ಯೇತಾನಿ ಕುಂಡಾನೀತಿ ಸ್ಮ ಸೌಬಲೀಮ್ ॥ – ಭಾರತ (ಆದಿ. ೧೧೨/೧೭,೨೧,೨೨)

[೧]ಅಂಗುಷ್ಠಪರ್ವಗಾತ್ರದ ಆ ನೂರು ಭ್ರೂಣಗಳನ್ನು ಇರಿಸಿ, ಅವುಗಳನ್ನು ಸುರಕ್ಷಿತ ಸ್ಥಳದಲ್ಲಿ ಇರಿಸಿದರು. ಅವುಗಳಿಂದ ಪುತ್ರರು ಜನಿಸುವುದನ್ನು ತಿಳಿಸಿ, ತೆರಳಿಬಿಟ್ಟರು.

೨) ತಮ್ಮ ಮಾತು ಎಂದೂ ಸುಳ್ಳಾಗದು ಎನ್ನುವ ಮೂಲಕ ಶ್ರೀವ್ಯಾಸರು ತಾವು ಸತ್ಯಸಂಧನಾದ ನಾರಾಯಣ ಎಂದು ತಿಳಿಸಿರುವರು.

[೨]**ಶತಾತ್ಮನಾ ವಿಭೇದಿತಾಃ ಶತಂ ಸುಯೋಧನಾದಯಃ ।**
ಬಭೂವುರನ್ವಹಂ ತತಃ ಶತೋತ್ತರಾ ಚ ದುಃಶಲಾ ॥ ೩೬ ॥

ಅ: ನೂರು ಭಾಗವಾಗಿ ವಿಭಾಗಗೊಂಡವರಾಗಿ ದುರ್ಯೋಧನಾದಿಗಳು ದಿನಕ್ಕೊಬ್ಬರಂತೆ ಹುಟ್ಟಿಬಂದರು ಹಾಗೂ ನೂರೊಂದನೆಯವಳಾಗಿ ದುಃಶಲೆ ಹುಟ್ಟಿದಳು.

ವಿ: ೧) ಆ ನೂರು ಗಡಿಗೆಗಳಿಂದ ದಿನಕ್ಕೊಬ್ಬರಂತೆ ದುರ್ಯೋಧನಾದಿ ನೂರು ಜನ ಕೌರವರು ಹುಟ್ಟಿದರು. ಅವರಲ್ಲಿ ದುರ್ಯೋಧನ ಎಲ್ಲರಿಗಿಂತಲೂ ಹಿರಿಯ; ಯೋಗ್ಯತೆಯಲ್ಲೂ ಹಾಗೆಯೇ, ಉಳಿದೆಲ್ಲರಿಗಿಂತ ಹೆಚ್ಚಿನ ದೊಡ್ಡ ದೈತ್ಯ.

೨) ಆ ಭ್ರೂಣಗಳನ್ನು ನೂರಾಗಿ ವಿಭಾಗಿಸುವಾಗ ಗಾಂಧಾರೀ ಮನಸ್ಸಿನಲ್ಲೇ ಅಂದು-ಕೊಂಡಳಂತೆ. ''ಶ್ರೀವ್ಯಾಸರ ಮಾತಿನಂತೆ ನೂರು ಪುತ್ರರು ಜನಿಸುವುದೇನೋ ನಿಶ್ಚಯ; ಜೊತೆಗೆ ಒಬ್ಬಳು ಪುತ್ರಿಯೂ ನನಗೆ ಜನಿಸಿದರೆ ಚೆನ್ನ. ಹಾಗೆ ದೇವತೆಗಳು [೩]ಅನುಗ್ರಹಿಸಬಾರದೇ?''. ಅವಳು ಹಾಗೆಂದುಕೊಳ್ಳುತ್ತಿದ್ದಂತೆಯೇ [೪]ವ್ಯಾಸರು ನುಡಿದರು : ''ಗಾಂಧಾರಿ! ನೂರು ಗಡಿಗೆಗಳನ್ನು ತುಂಬಿಯಾಯಿತು. ನಿನಗೆ ದೌಹಿತ್ರನನ್ನು ಕಾಣುವ ಯೋಗಕ್ಕಾಗಿ ಮತ್ತೊಂದು ಭಾಗ ಉಳಿದು-

---

೧ 'ಅಂಗುಷ್ಠಪರ್ವಮಾತ್ರಾಣಾಂ ಭಾಗಾನಾಂ ಪೃಥಗೇವ ತು ।
ಏಕಾಧಿಕಂ ಶತಂ ಪೂರ್ಣಂ ಯಥಾ ಯೋಗವಿಶೇಷತಃ ।
ಮಾಂಸಪೇಶ್ಯಾಸ್ತತೋ ರಾಜನ್ .....' ಇತ್ಯಾದಿಪರ್ವವಾಕ್ಯಾದುಕ್ತೋऽರ್ಥೋऽವಗಂತವ್ಯಃ । – (ಜ.)

೨. ಶತಾತ್ಮನಾ ಶತತ್ವೇನಾಪಿ ಭೇದಿತಾಃ ಪೃಥಕೃತಾಃ । – (ವ.)

೩. ಮನಸಾऽಚಿಂತಯದ್ದೇವೀ ಏತತ್ ಪುತ್ರಶತಂ ಮಮ ।
ಭವಿಷ್ಯತಿ ನ ಸಂದೇಹೋ ನ ಬ್ರವೀತ್ಯನೃತಾ ಮುನಿಃ ।
ಮಮೇಯಂ ಪರಮಾ ತುಷ್ಟಿರ್ದುಹಿತಾ ಮೇ ಭವೇದ್ಯದಿ ॥ – ಭಾರತ (ಆದಿ. ೧೧೫/೯,೧೦)

೪. ವ್ಯಾಸ ಉವಾಚ –
'ಪೂರ್ಣಪುತ್ರಶತತ್ವೇನ ನ ಮಿಥ್ಯಾ ವಾಗುದಾಹೃತಾ ।
ದೌಹಿತ್ರಯೋಗಾಯ ಭಾಗ ಏಕಃಶಿಷ್ಟಃ ಶತಾತ್ಪರಃ ।
ಏಷಾ ತೇ ಸುಭಗಾ ಕನ್ಯಾ ಭವಿಷ್ಯತಿ ಯಥೇಪ್ಸಿತಾ' ಇತಿ ॥ – (ಜ.)

ಕೊಂಡಿದೆ. ಇದರಿಂದ ನಿನಗೊಬ್ಬ ಪುತ್ರಿಯೂ ಜನಿಸುವಳು'' ಎಂದು ನುಡಿದವರೇ ಮತ್ತೊಂದು ಗಡಿಗೆಯಲ್ಲಿ ನೂರೊಂದನೆಯ ಭ್ರೂಣವನ್ನಿರಿಸಿದರು. ಅದರಿಂದ ಜನಿಸಿದವಳೇ ದುಃಶಲೆ.

ಸ ದೇವಕಾರ್ಯಸಿದ್ಧಯೇ ರರಕ್ಷ ಗರ್ಭಮೀಶ್ವರಃ ।
ಪರಾಶರಾತ್ಮಜಃ ಪ್ರಭುರ್ವಿಚಿತ್ರವೀರ್ಯಜೋದ್ಭವಮ್ ॥ ೩೭ ॥

ಅ: ದೇವಕಾರ್ಯಸಿದ್ಧಿಗೋಸ್ಕರ ಸರ್ವಸಮರ್ಥರೂ, ಸರ್ವಸ್ವಾಮಿಯೂ ಆದ ಶ್ರೀವೇದವ್ಯಾಸರು ಧೃತರಾಷ್ಟ್ರನಿಂದ ಹುಟ್ಟಿದ ಆ ಗರ್ಭವನ್ನು ಸಂರಕ್ಷಿಸಿದರು.

ವಿ: ೧) 'ಶ್ರೀವೇದವ್ಯಾಸರು ಆ ಗರ್ಭವನ್ನೇಕೆ ರಕ್ಷಿಸಬೇಕಿತ್ತು? ಅದನ್ನು ಆಗಲೇ ಸಾಯಲು ಬಿಡಬಹುದಿತ್ತಲ್ಲ' ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಎಂದರೆ ದುರ್ಯೋಧನಾದಿಗಳು ಜನಿಸಿ, ಅವರ ಪಾಪಸ್ವರೂಪ ಜಗತ್ತಿಗೆಲ್ಲ ತಿಳಿಯಬೇಕು. ಅವರನ್ನು ಸಂಹರಿಸುವ ಮೂಲಕ ಭೀಮಸೇನಾದಿಗಳ ಪುಣ್ಯಸ್ವರೂಪವು ಪ್ರಕಟವಾಗಬೇಕು. ಮಹಾಭಾರತದಂತಹ ಇತಿಹಾಸ ಜಗತ್ತಿಗೆ ತಲುಪಬೇಕು. ಜನರೆಲ್ಲ ಧರ್ಮ ತಿಳಿದು, ಮೋಕ್ಷದ ಹಾದಿ ಕಾಣುವಂತಾಗಬೇಕು. ಎಲ್ಲ ದೇವತೆಗಳಿಗೂ ಅವರವರಿಗೆ ಉಚಿತವಾದ ಸಾಧನೆ ನಡೆಯುವಂತಾಗಬೇಕು ಎಂಬ ವಿಶೇಷ ಕಾರಣಕ್ಕೋಸ್ಕರ ಆ ಗರ್ಭವನ್ನು ಸಂರಕ್ಷಿಸಿದರು ಎಂದರ್ಥ. ದೇವಕಾರ್ಯದ ಸ್ವರೂಪ [೧]ಗೀತೆಯಲ್ಲೇ ಬಂದಿದೆ.

೨) ಈ ಎಲ್ಲ ಪ್ರಸಂಗಗಳಲ್ಲೂ ಶ್ರೀವ್ಯಾಸರು ಸಾಕ್ಷಾತ್ ನಾರಾಯಣ ಎಂಬ ತತ್ತ್ವಗೋಚರವಾಗುವುದು ಎಂಬುದನ್ನು ತಿಳಿಸಲು 'ಈಶ್ವರ', 'ವಿಭು' ಎಂಬ ಪದಗಳನ್ನು ಪ್ರಯೋಗಿಸಿರುವರು ಎಂದು ತಿಳಿಯಬೇಕು.

ಕಲಿಯೇ ದುರ್ಯೋಧನ

[೨]ಕಲಿಃ ಸುಯೋಧನೋಽಜನಿ ಪ್ರಭೂತಬಾಹುವೀರ್ಯಯುಕ್ ।
ಪ್ರಧಾನವಾಯುಸನ್ನಿಧೇರ್ಬಲಾಧಿಕತ್ವಮಸ್ಯ ತತ್ ॥ ೩೮ ॥

---

೧. ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಬವಾಮಿ ಯುಗೇ ಯುಗೇ ॥ – ಗೀತಾ (೪/೮)

೨. ಕಲೇರಂಶಸ್ತು ಸಂಜಜ್ಞೇ ಭುವಿ ದುರ್ಯೋಧನೋ ನೃಪಃ ।
ದುರ್ಬುದ್ಧಿರ್ದುರ್ಮತಿಶ್ಚೈವ ಕುರೂಣಾಮಯಶಸ್ಕರಃ ॥
ಜಗತೋ ಯಸ್ತು ಸರ್ವಸ್ಯ ವಿದ್ವಿಷ್ಟಃ ಕಲಿಪೂರುಷಃ ।
ಯಃ ಸರ್ವಾಂ ಘಾತಯಾಮಾಸ ಪೃಥಿವೀಂ ಪೃಥಿವೀಪತೇ ॥
ಉದ್ದೀಪಿತಂ ಯೇನ ವೈರಂ ಭೂತಾಂತಕರಣಂ ಮಹತ್ ॥ – ಭಾರತ (೧/೬೭/೮)

ಅ: ಕಲಿ ಉತ್ಕೃಷ್ಟವಾದ ಬಾಹುಬಲದಿಂದ ಕೂಡಿದ ಸುಯೋಧನನಾಗಿ ಜನಿಸಿದ. ಮುಖ್ಯವಾಯುವಿನ ಸನ್ನಿಧಾನದಿಂದಾಗಿ ಅವನಿಗೆ ಅಂತಹ ಅಧಿಕಬಲ ಒದಗಿತ್ತು.

ವಿ: ೧) ದುರ್ಯೋಧನ ಹುಟ್ಟುವಾಗ [೧]ಕತ್ತೆಯಂತೆ ಅರಚಿದ. ಅದಕ್ಕೆ ಕತ್ತೆಗಳು ಪ್ರತಿಯಾಗಿ ತಾವೂ ಅರಚಿದವು. ಜೊತೆಗೆ ಅನೇಕ ದುಃಶಕುನಗಳು ಗೋಚರಿಸಿದವು ಎಂಬ ವಿವರ ಮಹಾಭಾರತದಲ್ಲಿದೆ.

೨) ಅಂತಹ ದುಃಶಕುನಗಳನ್ನು ಕಂಡು ಭೀತನಾದ ಧೃತರಾಷ್ಟ್ರ ಭೀಷ್ಮ, ವಿದುರಾದಿಗಳನ್ನು ಕರೆದು, ಅವುಗಳ ಪರಿಣಾಮವನ್ನು ಕೇಳಿದ. ವಿಪ್ರರೆಲ್ಲ ''ಅವು ಅವನಿಂದಾಗುವ ಕುಲಕ್ಷಯಕ್ಕೆ ಸೂಚನೆ'' ಎಂದರು. ಅದಕ್ಕೆ ಅವನು ಪರಿಹಾರ ತಿಳಿಯಬಯಸಿದಾಗ ವಿದುರನೂ, ವಿಪ್ರರೂ ನುಡಿದರು: ''ಇವನನ್ನು [೨]ತ್ಯಜಿಸುವುದೊಂದೇ ನಿಜವಾದ ಪರಿಹಾರ''. ಆದರೆ ಪುತ್ರವ್ಯಾಮೋಹ–ಕ್ಕೊಳಗಾದ ಧೃತರಾಷ್ಟ್ರ ಹಾಗೆ ಮಾಡಲಿಲ್ಲ. ಅದರಿಂದಾಗಿ ಮುಂದೆ ಕುಲಕ್ಷಯವಾದದ್ದು ಇತಿಹಾಸ.

೩) ಪಾಂಡವರು ಅವತರಿಸುತ್ತಿದ್ದಾಗ ಗುಣಗಾನ ಮಾಡುವ ಅಶರೀರವಾಣಿ ಮೊಳಗಿದ್ದರೆ, ಕೌರವರು ಹುಟ್ಟಿದಾಗ ಭಯಂಕರ ದುಃಶಕುನಗಳು ಕಾಣಿಸಿಕೊಂಡವು ಎಂಬ ಅಂಶವೂ ಗಮನಾರ್ಹ.

ಪುರಾ ಹಿ ಮೇರುಮೂರ್ಧನಿ ತ್ರಿವಿಷ್ಟಪೌಕಸಾಂ ವಚಃ ।
ವಸುಂಧರಾತಲೋದ್ಭವೋನ್ಮುಖಂ ಶ್ರುತಂ ದಿತೇಃ ಸುತೈಃ ॥ ೩೯ ॥

ಅ: ಹಿಂದೆ ಮೇರುಶಿಖರದಲ್ಲಿ ಭೂಮಿಯ ಮೇಲೆ ಅವತರಿಸತೊಡಗುವ ದೇವತೆಗಳ ಮಾತನ್ನು ದೈತ್ಯರು ಕೇಳಿಸಿಕೊಂಡಿದ್ದರು.

ವಿ: ಅವರೆಲ್ಲ ಹಾಗೆ ಕೇಳಿಸಿಕೊಳ್ಳಲೆಂದೇ ಭಗವಂತ ಮೇರುಶಿಖರಕ್ಕೆ ತೆರಳಿ, ದೇವತೆಗಳಿಗೆ ಆದೇಶ ನೀಡಿದ್ದ ವಿವರ ಈಗಾಗಲೇ ಬಂದಿದೆ (ಅ. ೧೧, ಶ್ಲೋ. ೨೨೦).

---

೧. ಸ ಜಾತಮಾತ್ರ ಏವಾಥ ಧೃತರಾಷ್ಟ್ರಸುತೋ ನೃಪ ॥
ರಾಸಭಾರಾವಸದೃಶಂ ರುರಾವ ಚ ನನಾದ ಚ ।
ತಂ ಖರಾಃ ಪ್ರತ್ಯಭಾಷಂತ ಗೃಧ್ರಗೋಮಾಯುವಾಯಸಾಃ ॥
ವಾತಾಶ್ಚ ಪ್ರವವುಶ್ಚಾಪಿ ದಿಗ್ದಾಹಾಶ್ಚಭವತ್ ತದಾ । –ಭಾರತ (ಆದಿ. ೧೧೪/೨೭-೨೯)

೨. ತ್ಯಜೈನಮೇಕಂ ಶಾಂತಿಂ ಚೇತ್ ಕುಲಸ್ಯೇಚ್ಛಸಿ ಭಾರತ ॥
ಏಕೇನ ಕುರು ವೈ ಕ್ಷೇಮಂ ಕುಲಸ್ಯ ಜಗತಸ್ತಥಾ ।
ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ॥
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ । – ಭಾರತ (ಆದಿ. ೧೧೪/೩೭-೩೯)

ತತಸ್ತು ತೇ ತ್ರಿಲೋಚನಂ ತಪೋಬಲಾದತೋಷಯನ್ ।
ವೃತಶ್ಚ ದೇವಕಂಟಕೋ ಹ್ಯವಧ್ಯ ಏವ ಸರ್ವತಃ ॥ ೪೦ ॥

ಅ: ಆಗ ಅವರೆಲ್ಲ ಮುಕ್ಕಣ್ಣನಾದ ಶಿವನನ್ನು ತಪೋಬಲದಿಂದ ಮೆಚ್ಚಿಸಿದರು. ದೇವತೆಗಳನ್ನು ಪೀಡಿಸುವ ಕಲಿ, ಎಲ್ಲ ರೀತಿಯಲ್ಲೂ ಅವಧ್ಯನಾಗುವಂತೆ ವರ ಪಡೆದುಕೊಂಡನು.

ವಿ: 'ದೇವಕಂಟಕ' ಎಂದರೆ ದೇವತೆಗಳನ್ನು ಸದಾ ಪೀಡಿಸುವ ಕಲಿ ಎಂದರ್ಥ. ಅವನು ದೈತ್ಯರ ಮುಖಂಡನಾದ್ದರಿಂದ ಅವರೆಲ್ಲ ಸೇರಿ, ಅವನ ಅವಧ್ಯತ್ವವನ್ನೇ ಕೇಳಿಕೊಂಡರು ಎಂದರ್ಥ.

ದುರ್ಯೋಧನನದು ವಜ್ರಕಾಯ

ವರಾದುಮಾಪತೇಸ್ತತಃ ಕಲಿಃ ಸ ದೇವಕಂಟಕಃ ।
ಬಭೂವ ವಜ್ರಕಾಯಯುಕ್ ಸುಯೋಧನೋ ಮಹಾಬಲಃ ॥ ೪೧ ॥

ಅ: ಉಮಾಪತಿಯಾದ ಶಿವನ ವರದಿಂದಾಗಿ ಆ ದೇವಕಂಟಕನಾದ ಕಲಿ ವಜ್ರದೇಹದಿಂದ ಕೂಡಿ, ಮಹಾಬಲಿಷ್ಠನಾದ ಸುಯೋಧನನಾಗಿ ಜನಿಸಿದ.

ವಿ: ದುರ್ಯೋಧನ ಶಿವನ ವರದಿಂದಾಗಿ ವಜ್ರದೇಹಿಯಾಗಿಯೇ ಹುಟ್ಟಿದವನು. ಅವನ ದೇಹದ ಪೂರ್ವಾರ್ಧ ಪಾರ್ವತಿಯಿಂದಲೂ, ಉತ್ತರಾರ್ಧ ಶಿವನಿಂದಲೂ ನಿರ್ಮಿತವಾಗಿದ್ದ ವಿವರ ಮುಂದೆ [೨]ಬಂದಿದೆ. ಅವನ ದೇಹದ ನಿರ್ಮಾಣದಲ್ಲಿ ಶಿವನ ಪಾತ್ರದಂತೆ, ಪಾರ್ವತಿಯ ಪಾತ್ರವೂ ಇದೆ ಎಂಬುದನ್ನು 'ಉಮಾಪತೇಃ' ಎಂಬ ಪದದಿಂದ ಸೂಚಿಸಿರುವರು.

ದುಃಶಾಸನಾದಿಗಳ ಜನನ

ಅವಧ್ಯ ಏವ ಸರ್ವತಃ ಸುಯೋಧನೇ ಸಮುತ್ಥಿತೇ ।
ಘೃತಾಭಿಪೂರ್ಣಕುಂಭತಃ ಸ ಇಂದ್ರಜಿತ್ ಸಮುತ್ಥಿತಃ ॥ ೪೨ ॥

ಸ ದುಃಖಶಾಸನೋಽಭವತ್ ತತೋಽತಿಕಾಯಸಂಭವಃ ।
ಸ ವೈ ವಿಕರ್ಣ ಉಚ್ಯತೇ ತತಃ ಖರೋಽಭವದ್ಬಲೀ ॥ ೪೩ ॥

---

೧. ದೇವಕಂಟಕಃ = ಕಲಿಃ । ಸರ್ವತಃ ಅವಧ್ಯೋ ಭವತ್ವಿತಿ ವರಃ ತುಷ್ಟಾತ್ತ್ರಿಲೋಚನಾತ್ ಸವೈರಸುರೈರ್ವ್ಯತಶ್ಚ। ಕಲೇರ್ದೈತ್ಯಗಣಾಗ್ರೇಸರತ್ವಾತ್ ಸ್ವಯಂ ತಪಸ್ತಪ್ತ್ವಾ ತಚ್ಛ್ರೇಯ ಏವ ಪ್ರಾರ್ಥಯಾಮಾಸುರಿತಿ ಭಾವಃ॥ – (ವಾ.)

೨. ಉಮಯಾ ನಿರ್ಮಿತಾತ್ಮಾರ್ಧಮುತ್ತರಂ ಹರನಿರ್ಮಿತಮ್ ।
ಜ್ಞಾತ್ವೈವಾವಧ್ಯತಾಂ ಚೈವ ರಾಜ್ಞೇ ಬುದ್ಧಿಂ ಚಕಾರ ಸಃ ॥ (೨೨/೪೩೩)

ಪುರಾ ತ್ವಂ ತಪಸಾಽಸ್ಮಾಭಿರ್ಲಬ್ಧೋ ರಾಜನ್ ಮಹೇಶ್ವರಾತ್॥ (ದಾನವರವಚನ)– ಭಾರತ (೩/೨೫೨/೬)

ಸ ಚಿತ್ರಸೇನನಾಮಕಸ್ತಥಾಽಪರೇ ಚ ರಾಕ್ಷಸಾಃ ।
ಬಭೂವುರುಗ್ರಪೌರುಷಾ ವಿಚಿತ್ರವೀರ್ಯಜಾತ್ಮಜಾಃ ॥ ೪೪ ॥

ಅ: ಸರ್ವರೀತಿಯಿಂದಲೂ ಅವಧ್ಯನಾದ ದುರ್ಯೋಧನ ಹುಟ್ಟಿಬರುತ್ತಿದ್ದಂತೆ, ತುಪ್ಪ ತುಂಬಿದ ಮತ್ತೊಂದು ಗಡಿಗೆಯಿಂದ ಇಂದ್ರಜಿತ್ ಹುಟ್ಟಿಬಂದ. ಅವನು ದುಃಖ ಪಡಿಸುವ ಶಾಸನ ಮಾಡುವ [೧]ದುಃಶಾಸನ. ಅನಂತರ ಅತಿಕಾಯನ ಜನ್ಮ. ಅವನು ವಿಕರ್ಣ ಎನ್ನಿಸಿದವನು. ಆಮೇಲೆ ಬಲಿಷ್ಠನಾದ ಖರ ಜನಿಸಿದ. ಅವನು ಚಿತ್ರಸೇನ ಎಂಬ ಹೆಸರಿನವನಾದ. ಹಾಗೆಯೇ ಇತರ ರಾಕ್ಷಸರೂ ಭಯಂಕರಪೌರುಷವುಳ್ಳವರಾಗಿ ಧೃತರಾಷ್ಟ್ರನ ಮಕ್ಕಳಾಗಿ ಹುಟ್ಟಿದರು.

ವಿ: ೧) ದುರ್ಯೋಧನನ ಅನಂತರ ಹುಟ್ಟಿದವನು ದುಃಶಾಸನ. ಅವನು ರಾಮಾಯಣದಲ್ಲಿ ಇಂದ್ರಜಿತ್ ಆಗಿದ್ದವನು. ಅಲ್ಲಿ ರಾಮಾಯಣದ ಖಳನಾಯಕನಾದ ರಾವಣನ ಮಗನಾಗಿದ್ದರೆ, ಇಲ್ಲಿ ಮಹಾಭಾರತದ ಖಳನಾಯಕನಾದ ದುರ್ಯೋಧನನ ತಮ್ಮನಾದ. ಅವನನ್ನು ದುಃಶಾಸನ ಎನ್ನದೆ, ದುಃಖಶಾಸನ ಎಂದಿರುವುದು ಆ ಪದದ ಅರ್ಥವನ್ನು ತಿಳಿಸಲೆಂದು. ಜನರ ದುಃಖಕ್ಕೆ ಕಾರಣವಾಗುವ ಕರಾಳಶಾಸನವನ್ನು ರೂಪಿಸುವುದರಿಂದ ಅವನಿಗೆ ಆ ಹೆಸರು ಎಂದರ್ಥ.

೨) ಅನಂತರ ಹುಟ್ಟಿದ್ದು ಅತಿಕಾಯ. ಅವನು ರಾಮಾಯಣದಲ್ಲಿ ರಾವಣನ ಮಗನಾಗಿದ್ದರೆ, ಇಲ್ಲಿ ದುರ್ಯೋಧನನ ತಮ್ಮನಾಗಿ ವಿಕರ್ಣ ಎನ್ನಿಸಿದ.

೩) ಬಳಿಕ ಹುಟ್ಟಿದ್ದು ಖರ. ಅಲ್ಲಿ ಅವನು ರಾವಣನ ತಮ್ಮ; ಇಲ್ಲಿ ದುರ್ಯೋಧನನ ತಮ್ಮ ಚಿತ್ರಸೇನ.

೪) ಹೀಗೆ ರಾಮಾಯಣದ ಅನೇಕ ಖಳನಾಯಕರು ಮಹಾಭಾರತದ ಖಳನಾಯಕರಾಗಿ ಜನಿಸಿದ ಅಪೂರ್ವವಿವರವಿದು. ರಾಮಾಯಣ, ಮಹಾಭಾರತಗಳ ಸಂಬಂಧವನ್ನು ಮೊಟ್ಟ-ಮೊದಲ ಬಾರಿಗೆ ಹೀಗೆ ವಿವೇಚಿಸಿದ ಹಿರಿಮೆ ಶ್ರೀಮಧ್ವಾಚಾರ್ಯರದು.

ಸಮಸ್ತದೋಷರೂಪಿಣಃ [೨]ಶರೀರಿಣೋ ಹಿ ತೇಽಭವನ್ ।
ಮೃಷೇತಿ ನಾಮತೋ ಹಿ ಯಾ ಬಭೂವ ದುಃಶಲಾಽಽಸುರೀ ॥ ೪೫ ॥

---

೧. ದುಃಖೇನ ಶಾಸನಂ ಶಿಕ್ಷಾ ಯಸ್ಯ ಸಃ ದುಃಖಶಾಸನಃ ದುಃಶಾಸನಶಬ್ದಸ್ಯ ವ್ಯಾಖ್ಯಾನಮೇತತ್ ॥ – (ವಾ.)

೨. ಘಟಸ್ಥಮಾಂಸಪಿಂಡಾದುತ್ಪನ್ನಶರೀರವಂತಃ ಯೇಽಭವನ್ ತೇ = ದುರ್ಯೋಧನಾದಯಃ ಸಮಸ್ತದೋಷ-ರೂಪಿಣ ಇತಿ ಸಂಬಂಧಃ । ಮೂಲರೂಪೇ ಮೃಷೇತಿ ನಾಮತೋ ಯಾ ಆಸುರೀ ಸಾ ದುಃಶಲಾ ಬಭೂವ ॥ – (ವಾ.)

ಕುಹೂಪ್ರವೇಶಸಂಯುತಾ[೧] ಯಯಾऽऽರ್ಜುನೇರ್ವಧಾಯ ಹಿ ।
ತಪಃ ಕೃತಂ ತ್ರಿಶೂಲಿನೇ ತತೋ ಹಿ ಸಾऽತ್ರ ಜಜ್ಞುಷೀ[೨] ॥ ೪೬ ॥

ಅ: ಸಕಲದೋಷಗಳ ಸ್ವರೂಪರಾದ ರಾಕ್ಷಸರೇ ಹೀಗೆ ದೇಹ ತಳೆದು ಹುಟ್ಟಿದರು. ಮೃಷಾ ಎಂಬ ಹೆಸರಿನ ಒಬ್ಬ ರಾಕ್ಷಸಿ ದುಃಶಲೆಯಾಗಿ ಜನಿಸಿದಳು; ಕುಹೂ ಎಂಬವಳ ಆವೇಶ ಅವಳಲ್ಲಿತ್ತು. ಅವಳು ಅರ್ಜುನಪುತ್ರನಾದ ಅಭಿಮನ್ಯುವಿನ ವಧೆಗಾಗಿ ಶಿವನನ್ನು ಕುರಿತು ತಪಸ್ಸು ಮಾಡಿದ್ದಳು. ಅದಕ್ಕೆಂದೇ ಅವಳು ಇಲ್ಲಿ ಜನಿಸಿದಳು.

ವಿ: ಕೌರವರೆಲ್ಲ ಹೀಗೆ ರಾಕ್ಷಸಸ್ವರೂಪರಾದರೆ, ಅವರ ತಂಗಿಯಾಗಿ ಹುಟ್ಟಿದ ದುಃಶಲೆಯೂ ರಾಕ್ಷಸಿಯೇ. ಹೀಗೆ ಗಾಂಧಾರಿಯಲ್ಲಿ ಜನಿಸಿದ ಧೃತರಾಷ್ಟ್ರನ ಮಕ್ಕಳೆಲ್ಲ ರಾಕ್ಷಸರೇ ಆಗಿದ್ದುದು ವಿಶೇಷ.

೨) ಕುಹೂ ಎಂಬವಳು ಪೂರ್ಣಅಮಾವಾಸ್ಯೆಯ ದೇವತೆ; ಇತರ ಅಮಾವಾಸ್ಯೆಗಳಿಗೆ ಶಿನೀವಾಲಿ ದೇವತೆ. ಇವರಿಬ್ಬರೂ ಅಂಗಿರಸ್ ಮತ್ತು ಶ್ರದ್ಧಾ ದಂಪತಿಗಳ ಪುತ್ರಿಯರು.

ತಯೋದಿತೋ ಹಿ ಸೈಂಧವೋ ಬಭೂವ ಕಾರಣಂ ವಧೇ ।
ಸ ಕಾಲಕೇಯದಾನವಸ್ತದರ್ಥಮಾಸ[೩] ಭೂತಲೇ ॥ ೪೭ ॥

ಅ: ಅವಳು ಹೇಳಿದ್ದರಿಂದಲೇ ಸೈಂಧವ ಅಭಿಮನ್ಯುವಿನ ವಧೆಗೆ ಕಾರಣನಾದ. ಆ ಸೈಂಧವನು ಒಬ್ಬ ಕಾಲಕೇಯ ದಾನವ. ಅವನು ಭೂಮಿಯ ಮೇಲೆ ಜನಿಸಿದ್ದೇ ಅದಕ್ಕಾಗಿ.

ವಿ: ಧೃತರಾಷ್ಟ್ರನ ಪುತ್ರಿ ದುಃಶಲೆ ರಾಕ್ಷಸಿಯಾಗಿದ್ದಂತೆ, ಅವಳ ಕೈಹಿಡಿದ ಜಯದ್ರಥನೂ ರಾಕ್ಷಸನಾಗಿದ್ದು ಮತ್ತೊಂದು ವಿಶೇಷ. ಇದನ್ನೆಲ್ಲ 'ಹಿ' ಎಂಬ ಅವ್ಯಯಗಳಿಂದ ಸೂಚಿಸಿರುವರು ಎಂದು ತಿಳಿಯಬೇಕು.

---

೧. "ಸಾ ನಷ್ಟೇಂದುಕಲಾ ಕುಹೂಃ" ಇತ್ಯಭಿಧಾನಾತ್ ಕುಹೂಃ = ಅಮಾವಾಸ್ಯಾಭಿಮಾನಿನೀ ದೇವತಾ । ಯಯಾರऽಜುನೇರಿತ್ಯತ್ರ । ಯಯಾ= ಮೃಷಾಖ್ಯಾಸುರ್ಯಾ ಆರ್ಜುನೇಃ = ಅಭಿಮನ್ಯೋಃ ॥ –(ವಾ.)

ಪ್ರವೇಶಸಂಯುತಾ ನಷ್ಟೇಂದುಕಲಾ ಅಮಾವಾಸ್ಯಾ ಕುಹೂಃ ತದಭಿಮಾನಿದೇವತಾಪ್ರವೇಶೇನ ಆವೇಶೇನ ಸಂಯುತಾ ದುಃಶಲಾನಾಮ್ನೀ ಕನ್ಯಾ ಬಭೂವ ॥ –(ಜ.)

೨. ಜಜ್ಞುಷೀ ಜಾತಾ ಜನಜನನೇಕ್ವಸುಹಿತ್ವಂ ಗಿತಶ್ಚೇತಿಡೀಪ್ ವಸೋಃ ಸಂಪ್ರಸಾರಣಮಿತಿವಸ್ಯಉಃ ಗಮಜನಹ-ಸಾಮಿತಿ ಅಕಾರಸ್ಯಲೋಪಃ ಸ್ತೋಶ್ಚುನಾಶ್ಚುರಿತಿಇಕಾರಃಜಇಷೋರ್ಜ್ಞಃ ಆದೇಶಪ್ರತ್ಯಯೋರಿತಿಸಸ್ಯಷತ್ವಮ್। –(ಜ.)

೩. ಕಾಲಕೇಯದಾನವಃ= ಕಾಲಕೇಯಗಣೇ ವಿದ್ಯಮಾನಃ ಕಶ್ಚಿದ್ದಾನವಃ । –(ವಾ.)

ಯುಯುತ್ಸುವಿನ ಜನನ

ತಥಾऽऽಸ ನಿರ್ಋತಾಭಿಧೋ[೧]ऽನುಜಃ ಸ ನಿರ್ಋತೇರಭೂತ್ ।
ಸ ನಾಸಿಕಾಮರುದ್ಯುತೋ ಯುಯುತ್ಸುನಾಮಕಃ ಕೃತೀ ॥ ೪೮ ॥

ಸ ಚಾಂಬಿಕೇಯವೀರ್ಯಜಃ ಸುಯೋಧನಾದನಂತರಃ ।
ಬಭೂವ ವೈಶ್ಯಕನ್ಯಕೋದರೋದ್ಭವೋ ಹರಿಪ್ರಿಯಃ ॥ ೪೯ ॥

ಅ: ಹಾಗೆಯೇ ನಿರ್ಋತ ಎಂಬ ನಿರ್ಋತಿಯ ತಮ್ಮ ನಾಸಿಕಾಭಿಮಾನಿವಾಯುವಿನೊಂದಿಗೆ ಕೂಡಿಕೊಂಡು ಯುಯುತ್ಸು ಎಂಬ ಹೆಸರಿನಿಂದ ಜನಿಸಿದ. ಅವನು ಧೃತರಾಷ್ಟ್ರನ ವೀರ್ಯದಿಂದಲೇ ಹುಟ್ಟಿದವನು. ದುರ್ಯೋಧನನಿಗಿಂತ ಚಿಕ್ಕವನು. ಅವನು ಒಬ್ಬ ವೈಶ್ಯಕನ್ಯೆಯ ಉದರದಲ್ಲಿ ಹುಟ್ಟಿದವನು. ಅವನು ಸತ್ಕರ್ಮಾನುಷ್ಠಾನನಿಪುಣನೂ, ಶ್ರೀಹರಿಗೆ ಪ್ರಿಯನೂ ಆಗಿದ್ದವನು.

ವಿ: ಧೃತರಾಷ್ಟ್ರನ ಮಕ್ಕಳಲ್ಲಿ ಯುಯುತ್ಸು ಒಬ್ಬನೇ ಯೋಗ್ಯನಾದವನು. ಅವನು ಗಾಂಧಾರಿಯ ಮಗನಾಗದೆ, ಒಬ್ಬ ವೈಶ್ಯಕನ್ಯೆಯ ಮಗನಾಗಿ ಹುಟ್ಟಿದವನು. ಗಾಂಧಾರಿ ಎರಡು ವರ್ಷಗಳ ಕಾಲ ಗರ್ಭ ಧರಿಸಿದ್ದಾಗ ಧೃತರಾಷ್ಟ್ರನಿಗೆ ಒಬ್ಬ ವೈಶ್ಯಕನ್ಯೆಯಲ್ಲಿ ಹುಟ್ಟಿದವನು. ನಿರ್ಋತನೆಂಬ ದೇವತೆಯ ಅವತಾರ, ಅವನಲ್ಲಿ ನಾಸಿಕ್ಯವಾಯುವಿನ ಆವೇಶ; ಇವನು ದುರ್ಯೋಧನನಿಗೆ ತಮ್ಮ; ಉಳಿದವರಿಗೆ ಅಣ್ಣ. ದೇವಾಂಶನಾದ ಇವನು ಸಹಜವಾಗಿಯೇ ಪಾಂಡವಪಕ್ಷಪಾತಿ. ಯುದ್ಧದಲ್ಲೂ ಪಾಂಡವರ ಪಕ್ಷ ವಹಿಸಿದವನು. ಪಾಂಡವರು ಮಹಾಪ್ರಸ್ಥಾನ ಕೈಗೊಂಡ ಮೇಲೆ ಯುಯುತ್ಸು ಪರೀಕ್ಷಿದ್ರಾಜನ ಶಿಕ್ಷಣಕ್ಕಾಗಿ ಹಸ್ತಿನಾಪುರದಲ್ಲೇ ಉಳಿಯುವನು.

ಭೀಮಾವತಾರದ ಹಿನ್ನೆಲೆ

ಯುಧಿಷ್ಠಿರೇ ಜಾತ ಉವಾಚ ಪಾಂಡುರ್ಬಾಹ್ವೋರ್ಬಲಾಜ್ಜ್ಞಾನಬಲಾಚ್ಚ ಧರ್ಮಃ ।
ರಕ್ಷ್ಯೋऽನ್ಯಥಾ ನಾಶಮುಪೈತಿ ತಸ್ಮಾದ್ಬಲದ್ವಯಾಢ್ಯಂ [೨]ಪ್ರಸುವಾಶು ಪುತ್ರಮ್ ॥೫೦॥

---

೧. ತಥಾ ನಿರ್ಋತೇರ್ದೇವಸ್ಯಾನುಜೋ ಯಃ ಸಃ= ನಿರ್ಋತಾಭಿಧಃ ಆಸ= ದೇವೇಷ್ವಾಸ ಸಃ ಅಭೂತ್= ಭೂಮಾವಭೂತ್ । ಸ ನಾಸಿಕಾಮರುದ್ಯುತ ಇತ್ಯತ್ರ । ನಾಸಿಕಾಮರುತ್ = ನಾಸಿಕಾಗೋಳಕಾಭಿಮಾನೀ ಮರುತ್ ತೇನ ಯುಕ್ತ ಇತ್ಯರ್ಥಃ ॥ – (ವಾ.)

೨. ಜನಯಾಶು – (ಪಾಠಾಂತರ.)

ಧಾರ್ಮಿಕಂ ತು ಸುತಂ ಲಬ್ಧ್ವಾ ಪಾಂಡುಸ್ತಾಂ ಪುನರಬ್ರವೀತ್ ।
ಪ್ರಾಹುಃ ಕ್ಷತ್ರಂ ಬಲಜ್ಯೇಷ್ಠಂ ಬಲಜ್ಯೇಷ್ಠಂ ಸುತಂ ವೃಣು ॥ – ಭಾರತ (ಆದಿ. ೧೨೧/೧೦, ೧೧)

ಅ: ಯುಧಿಷ್ಠಿರ ಜನಿಸಿದ ಮೇಲೆ ಪಾಂಡು ಹೇಳಿದ : ''ಧರ್ಮವನ್ನು ಬಾಹುಬಲ ಮತ್ತು ಜ್ಞಾನಬಲದಿಂದ ರಕ್ಷಿಸಬೇಕು. ಇಲ್ಲದಿದ್ದರೆ ಅದು ನಾಶ ಹೊಂದುವುದು. ಆದ್ದರಿಂದ ಎರಡೂ ಬಲಗಳಿಂದ ಕೂಡಿದ ಮಗನನ್ನು ಬೇಗನೆ ಪ್ರಸವಿಸು.

ವಿ: ೧) ಪ್ರತಿಬಾರಿ ಸಂತತಿ ಪಡೆಯುವಾಗಲೂ ಪಾಂಡುರಾಜ ಅತ್ಯಂತವಿವೇಚನೆಯಿಂದ ವರ್ತಿಸುವುದನ್ನು ಗಮನಿಸಬೇಕು. ಧರ್ಮಪಾಲನೆಗೆಂದು ಯಮಧರ್ಮನಿಂದ ಸಂತತಿ ಪಡೆಯಲು ಆದೇಶಿಸಿದ್ದ ಅವನು, ಆ ಧರ್ಮಸ್ವರೂಪನಾದ ಧರ್ಮರಾಜನ ಪಾಲನೆಗೆಂದು ಬಾಹುಬಲ, ಜ್ಞಾನಬಲಗಳಿಂದ ತುಂಬಿದ ಪುತ್ರನನ್ನು ಪಡೆಯಲು ಆದೇಶಿಸಿದ.

೨) ಧರ್ಮರಕ್ಷಣೆಯ ಬಗ್ಗೆ ಮಾರ್ಗದರ್ಶನವೀಯುವ ಅಪೂರ್ವಸಂದೇಶ ಇಲ್ಲಿದೆ. ಧರ್ಮರಕ್ಷಣೆಯ ಬಗೆಗಿನ ಚಿಂತನೆ ಸನಾತನವಾದುದು. [೧]ಜ್ಞಾನಬಲ, ಬಾಹುಬಲಗಳೇ ಧರ್ಮರಕ್ಷಣೆಯ ಪ್ರಧಾನ ಆಕರಗಳು. ಜ್ಞಾನಬಲ ಅದರ ತಾತ್ತ್ವಿಕಭಾಗವನ್ನು ವಿವೇಚಿಸಿದರೆ, ಬಾಹುಬಲ ಅದರ ಆಚರಣೆಯ ಭಾಗವನ್ನು ವಿವೇಚಿಸುವುದು. ಎಂದರೆ ಧರ್ಮವನ್ನು ಪಾಲಿಸಲು ಅದರ ಬಗ್ಗೆ ಸರಿಯಾದ ಪರಿಜ್ಞಾನವಿರಬೇಕು. ಅದನ್ನು ಅನುಷ್ಠಾನಕ್ಕಿಳಿಸಲು ಅದಕ್ಕನುಗುಣವಾದ ದೇಹದಾರ್ಢ್ಯವಿರಬೇಕು. ಇವುಗಳಲ್ಲಿ ಒಂದು ತಪ್ಪಿದರೂ ಧರ್ಮ ಪೂರ್ಣ ಸಿದ್ಧಿಸದು. ಎರಡೂ ತಪ್ಪಿದಾಗ ಅದು ಎಂದೂ ಉಳಿಯದು.

೩) ಜ್ಞಾನ ಹಾಗೂ ಬಲಗಳು ಒಡಗಲು ಅವುಗಳನ್ನು ಉತ್ತಮಪ್ರಮಾಣದಲ್ಲಿ ಹೊಂದಿದ ವ್ಯಕ್ತಿಯೇ ಆಗಬೇಕು. ಅಮೂರ್ತವಾದ ಅವುಗಳನ್ನು ಬೇರೆ ಮಾರ್ಗದಲ್ಲಿ ಸಂಪಾದಿಸುವುದು ಅಸಾಧ್ಯ. ಆದ್ದರಿಂದ ಅವರೆಡನ್ನೂ ಹೊಂದಿರುವ ಪುತ್ರನನ್ನು ಪಡೆ ಎಂದು ತಿಳಿಸಿದ.

ಯಜ್ಞಾಧಿಕೋ [೨]ಹ್ಯಶ್ವಮೇಧೋ ಮನುಷ್ಯ-
ದೃಶ್ಯೇಷು ತೇಜಸ್ಸ್ವಧಿಕೋ ಹಿ ಭಾಸ್ಕರಃ ।
ವರ್ಣೇಷು ವಿಪ್ರಃ ಸಕಲೈರ್ಗುಣೈರ್ವರೋ
ದೇವೇಷು ವಾಯುಃ ಪುರುಷೋತ್ತಮಾದೃತೇ ॥ ೫೧ ॥

---

೧. 'ಬಲಂ ಜ್ಞಾನಬಲಂ ಚೈವ ಬಾಹ್ಯಂ ಚೇತಿ ದ್ವಿಧಾ ಮತಮ್ ।
ಯುಕ್ತಿಜ್ಞಾನಾ ಜ್ಞಾನಬಲಂ ಸಾ ಜ್ಞಾನಾದಧಿಕಾ ಮತಾ' ಇತಿ ತತ್ತ್ವಸಾರೇ । - ಛಾಂದೋಗ್ಯಭಾಷ್ಯೇ

೨. ಅಶ್ವಮೇಧಃ ಕ್ರತುಶ್ರೇಷ್ಠೋ ಜ್ಯೋತಿಃ ಶ್ರೇಷ್ಠೋ ದಿವಾಕರಃ ।
ಬ್ರಾಹ್ಮಣೋ ದ್ವಿಪದಾಂ ಶ್ರೇಷ್ಠೋ ದೇವಶ್ರೇಷ್ಠಸ್ತು ಮಾರುತಃ ॥

ಅ: ಯಜ್ಞಗಳಲ್ಲಿ ಮಿಗಿಲಾದುದು ಅಶ್ವಮೇಧ; ಮನುಷ್ಯನಿಗೆ ಗೋಚರಿಸುವ ತೇಜಸ್ಸುಗಳಲ್ಲಿ ಸೂರ್ಯ ಮಿಗಿಲು; ವರ್ಣಗಳಲ್ಲಿ ಬ್ರಾಹ್ಮಣ ಮಿಗಿಲು; ದೇವತೆಗಳಲ್ಲಿ ಎಲ್ಲ ಗುಣಗಳಲ್ಲೂ ಮಿಗಿಲಾದವನು ಪುರುಷೋತ್ತಮನಾದ ವಿಷ್ಣುವಿನ ಅನಂತರ ವಾಯುವೇ.

ವಿ: ೧) ಇದು ಮಹಾಭಾರತದ ಶ್ಲೋಕದ ಅರ್ಥವಿವರಣೆರೂಪವಾದ ಅಪೂರ್ವಶ್ಲೋಕ. 'ಜ್ಯೋತಿಃಶ್ರೇಷ್ಠೋ ದಿವಾಕರಃ' ಎಂಬ ಮೂಲದ ಮಾತನ್ನು 'ಮನುಷ್ಯದೃಶ್ಯೇಷು ತೇಜಸ್ಸ್ವಧಿಕೋ ಹಿ ಭಾಸ್ಕರಃ' ಎಂದು ವಿವರಿಸಿರುವರು. ಬ್ರಹ್ಮಸೂತ್ರದ ಜ್ಯೋತಿರಧಿಕರಣದಲ್ಲಿ ಬಂದಿರುವಂತೆ ಎಲ್ಲಕ್ಕೂ ಮಿಗಿಲಾದ ಜ್ಯೋತಿ ಭಗವಂತನೇ. ಅವನದು ಅನಂತಸೂರ್ಯಪ್ರಕಾಶ; ಆದರೆ ಅವನು ಎಲ್ಲರ ಕಣ್ಣಿಗೂ ಗೋಚರಿಸುವವನಲ್ಲ. ಅದಕ್ಕೆಂದೇ ಮನುಷ್ಯರಿಗೆ ಗೋಚರಿಸುವ ತೇಜಸ್ಸುಗಳಲ್ಲಿ ಸೂರ್ಯ ಶ್ರೇಷ್ಠ ಎಂದು ತಿಳಿಸಿರುವರು.

೨) ಅದರಂತೆ 'ದೇವಶ್ರೇಷ್ಠಸ್ತು ಮಾರುತಃ' ಎಂಬುದಕ್ಕೆ 'ಸಕಲೈರ್ಗುಣೈರ್ವರೋ ದೇವೇಷು ವಾಯುಃ ಪುರುಷೋತ್ತಮಾದೃತೇ' ಎಂದು ವಿವರಿಸಿರುವರು. ಎಂದರೆ ಸಕಲದೇವತೆ–ಗಳಲ್ಲೂ ವಿಷ್ಣುವೇ ಸಕಲಗುಣಗಳಿಂದಲೂ ಶ್ರೇಷ್ಠನಾದವನು. ಅವನು ಸರ್ವೋತ್ತಮ. ಅನಂತರದ ಪುರುಷದೇವತೆಗಳಲ್ಲಿ ಬ್ರಹ್ಮವಾಯುಗಳದು ಅಗ್ರಸ್ಥಾನ ಎಂದು ಇದರ ಭಾವ.

೩) ಇದೇ ಸಂದರ್ಭದಲ್ಲಿ ಪಾಂಡುರಾಜನು ಹೇಳುವ :

ಬಲಮಿಂದ್ರಸ್ಯ ಗಿರಿಶೋ ಗಿರಿಶಸ್ಯ ಬಲಂ ಮರುತ್ ।
ಬಲಂ ತಸ್ಯ ಹರಿಃ ಸಾಕ್ಷಾನ್ನ ಹರೇರ್ಬಲಮನ್ಯತಃ ॥

– ಎಂಬ ಮತ್ತೊಂದು ಶ್ಲೋಕವೂ ಮೂಲಮಹಾಭಾರತದಲ್ಲಿದೆ. ವಾಯುಜೀವೋತ್ತ–ಮತ್ವವನ್ನು ತುಂಬಾ ಪರಿಣಾಮಕಾರಿಯಾಗಿ ಪ್ರತಿಪಾದಿಸುವ ಆ ಶ್ಲೋಕವನ್ನು ಎರಡನೆಯ ಅಧ್ಯಾಯದಲ್ಲಿ ಉಲ್ಲೇಖಿಸಿರುವರು (ಶ್ಲೋಕ ೧೫೭). ವಿವರಗಳನ್ನು ಅಲ್ಲಿಯೇ ನೋಡಬಹುದು.

೧
ವಿಶೇಷತೋऽಪ್ಯೇಷ ಪಿತೈವ ಮೇ ಪ್ರಭುರ್ವ್ಯಾಸಾತ್ಮನಾ ವಿಷ್ಣುರನಂತಪೌರುಷಃ ।
ಅತಶ್ಚ ತೇ ಶ್ವಶುರೋ ನೈವ ಯೋಗ್ಯೋ ದಾತುಂ ಪುತ್ರಂ ವಾಯುಮುಪೈಹಿ ತಂ ಪ್ರಭುಮ್ ೫೮

ಅ: ''ಅನಂತಪರಾಕ್ರಮಿಯಾದ ಶ್ರೀಹರಿಯು ವ್ಯಾಸರೂಪದಿಂದ ನನಗೆ ವಿಶೇಷವಾಗಿ ತಂದೆಯೇ ಆಗಿರುವರು. ಆದ್ದರಿಂದ ಅವನು ನಿನಗೆ ಮಾವನಾಗುವನು. ಅವನಿಂದ ಪುತ್ರನನ್ನು

---

೧. ವಿಶೇಷತಃ = ಮಮ ಮಾತೃಯೋನೌ ವೀರ್ಯಸೇಚಕತ್ವಾಖ್ಯವಿಶೇಷೇಣ ಪಿತಾ ನತು ವಿಚಿತ್ರವೀರ್ಯವತ್ ನಾಮಮಾತ್ರೇಣೇತ್ಯರ್ಥಃ ॥ ೫೮ ॥ – (ವಾ.)

ಪಡೆಯುವುದು ಯೋಗ್ಯವಲ್ಲ. ಆದ್ದರಿಂದ ಪ್ರಭುವಾದ ವಾಯುವನ್ನೇ ನೀನು ಮೊರೆಹೋಗು''.

ವಿ: ಜ್ಞಾನಬಲಾದ್ಯನಂತಗುಣಪೂರ್ಣನಾದ ಶ್ರೀಹರಿಯನ್ನು ಪುತ್ರನನ್ನಾಗಿ ಪಡೆಯುವುದು ಅತ್ಯುತ್ತಮ. ಆದರೆ ವ್ಯಾಸರೂಪದ ಆತ ಪಾಂಡುವಿಗೆ ತಂದೆ. ಅವನು ವಿಚಿತ್ರವೀರ್ಯನ ಸಂತತಿಗೆ ಸೇರಿದ್ದರೂ, ಅವತರಿಸಿದ್ದು ವ್ಯಾಸರಿಂದಲೇ ಅಲ್ಲವೆ! ಆದರಿಂದಾಗಿ ಅವರು ಕುಂತಿಗೆ ಮಾವ. ಮಾವನಿಂದ ನಿಯೋಗ ಪಡೆಯುವುದು ಅತ್ಯಂತ ನಿಷಿದ್ಧ. ಭಗವಂತನಿಗೆ ಯಾವ ದೋಷವೂ ಇಲ್ಲವಾದರೂ, ಅದು ಲೋಕನೀತಿ. ಲೋಕನೀತಿಯನ್ನು ಸಹ ಎತ್ತಿಹಿಡಿಯಲೆಂದೇ ಭಗವಂತನ ಅವತಾರ. ಆದ್ದರಿಂದ ಅವನ ಅನಂತರದ ಬಲಜ್ಞಾನಾದಿಪೂರ್ಣನಾದ ದೇವತೆಯಾದ ವಾಯು–ವಿನಿಂದ ಮಗನನ್ನು ಪಡೆಯುವುದು ವಿಹಿತ ಎಂಬುದು ಪಾಂಡುವಿನ ಆಶಯ. ಇದರಿಂದ ಪಾಂಡು–ರಾಜನಿಗೆ ಶ್ರೀಕೃಷ್ಣನಾರಾಯಣಾವತಾರ ಎಂಬುದು ತಿಳಿದಿತ್ತು ಎಂಬುದು ಸ್ಪುಟಪಡುವುದು.

ಭೀಮಾವತಾರ

ಇತೀರಿತೇ ಪೃಥಯಾ ऽऽಹೂತವಾಯುಸಂಸ್ಪರ್ಶಮಾತ್ರಾದಭವದ್ಬಲದ್ವಯೇ ।
ಸಮೋ ಜಗತ್ಯಸ್ತಿ ನ ಯಸ್ಯ ಕಶ್ಚಿದ್ಬಕೌ ಚ ವಿಷ್ಣೋರ್ಭಗವದ್ವಶಃ ಸುತಃ ॥ ೫೩ ॥

ಅ: ಹೀಗೆ ಪಾಂಡು ನುಡಿಯಲು ಕುಂತಿಯು ವಾಯುವನ್ನು ಕರೆದಳು. ಅವನ ಸ್ಪರ್ಶ ಮಾತ್ರದಿಂದಲೇ ಎರಡು ಬಲಗಳಲ್ಲಿಯೂ ಹಾಗೂ ವಿಷ್ಣುಭಕ್ತಿಯಲ್ಲಿಯೂ ಜಗತ್ತಿನಲ್ಲಿ ಯಾರೂ ಸಾಟಿಯೆನ್ನಿಸದ ಭಗವಂತನಿಗೆ ಮಾತ್ರ ಅಧೀನನಾದ ಪುತ್ರ ಜನಿಸಿದ.

ವಿ: ೧) ವಾಯುವು ಜ್ಞಾನಬಲಪೂರ್ಣನೆಂಬುದು ವಾಯು ಎಂಬ ಹೆಸರಿನಿಂದಲೇ ಸಿದ್ಧ. ಬಳಿತ್ಥಸೂಕ್ತಾದಿಶ್ರುತಿಗಳೂ ಅದನ್ನು ಸಾರಿದೆ.

೨) ವಾಯುವಿನ ಸ್ಪರ್ಶದಿಂದಲೇ ಕುಂತಿ ಭೀಮನನ್ನು ಪಡೆದಳು. ಹಾಗೆ ಸ್ಪರ್ಶದಿಂದಲೂ ಸಂಕಲ್ಪ, ಮಾತು, ನೋಟ, ಸ್ಪರ್ಶ, ಮೈಥುನ ಎಂದು ಐದು ಬಗೆಯಲ್ಲಿ ಸಂತಾನೋತ್ಪತ್ತಿ ಸಾಧ್ಯ ಎಂಬುದಾಗಿ ಮೂಲಮಹಾಭಾರತ(ಆಶ್ರಮವಾಸಿಕ. ೩೦/೨೨)ದಲ್ಲೇ ಬಂದಿದೆ :

ಸಂತಿ[೧] ದೇವನಿಕಾಯಾಶ್ಚ ಸಂಕಲ್ಪಾಜ್ಜನಯಂತಿ ಯೇ ।
ವಾಚಾ ದೃಷ್ಟ್ಯಾ ತಥಾ ಸ್ಪರ್ಶಾತ್ ಸಂಘರ್ಷೇಣೇತಿ ಪಂಚಧಾ ॥

'ಇಚ್ಛಾಮಾತ್ರಂ ಪ್ರಭೋಃ ಸೃಷ್ಟಿಃ' – ಭಗವಂತನಿಂದ ನಡೆಯುವ ಸೃಷ್ಟಿ ಪ್ರಧಾನವಾಗಿ ಇಚ್ಛೆಯಿಂದಲೇ ಆಗುವಂತಹುದು. ವರದಿಂದ ಜನಿಸುವುದು ಮಾತಿನಿಂದಾಗುವ ಸೃಷ್ಟಿ. ಊರ್ವಶೀ

---

೧. ಜನಾರ್ದನೀಯವ್ಯಾಖ್ಯಾನದಲ್ಲಿ ಉದಾಹೃತ

ಮೊದಲಾದವರ ದರ್ಶನದಿಂದಲೇ ಕೃಪಾದಿಗಳು ಜನಿಸಿದ್ದು ದೃಷ್ಟಿಯಿಂದ ಆಗುವ ಸೃಷ್ಟಿ. ವಾಯುದೇವರಿಂದಾದ ಭೀಮನ ಜನನ ಕೇವಲ ಸ್ಪರ್ಶದಿಂದ ಎಂದು [೧]ತಿಳಿಯಬೇಕು. ಇನ್ನು ಮೈಥುನದಿಂದ ಸೃಷ್ಟಿ ಲೋಕಸಿದ್ಧವಾದುದು.

'ಭೀಮಸೇನ' ಶಬ್ದದ ಅರ್ಥ

ಸ ವಾಯುರೇವಾಭವದತ್ರ ಭೀಮನಾಮಾ [೨]ಭೃತಾ ಮಾಃ ಸಕಲಾ ಹಿ ಯಸ್ಮಿನ್ ।
ಸ ವಿಷ್ಣುನೇಶೇನ ಯುತಃ ಸದೈವ ನಾಮ್ನಾ ಸೇನೋ ಭೀಮಸೇನಸ್ತತೋಽಸೌ ॥ ೫೪ ॥

ಅ: ಆ ವಾಯುವೇ ಅಲ್ಲಿ ಹಾಗೆ ಜನಿಸಿದ್ದು. ಸಕಲವಿದ್ಯೆಗಳನ್ನೂ ಪೂರ್ಣವಾಗಿ ಧರಿಸಿರುವುದರಿಂದ ಭೀಮ ಎಂದು ಅವನ ಹೆಸರು. ಸ್ವಾಮಿಯಾದ ವಿಷ್ಣುವಿನಿಂದ ಸದಾ ಒಡಗೂಡಿಯೇ ಇರುವನು; ಆದರಿಂದ ಅವನ ಹೆಸರು ಸೇನ. ಆದ್ದರಿಂದಲೇ ಅವನು ಭೀಮಸೇನ.

ವಿ: ೧) ಹೀಗೆ ಅವತರಿಸಿದ ವಾಯುರೂಪಕ್ಕೆ ಭೀಮಸೇನ ಎಂಬ ಹೆಸರು ಬರಲು ಕಾರಣವನ್ನು ಇಲ್ಲಿ ತಿಳಿಸಿರುವರು. 'ಭೀಮಶ್ಚಾಸೌ ಸೇನಶ್ಚ' – [೩]ಭೀಮನೂ, ಸೇನನೂ ಆದವನು ಎಂದು ಇದರ ಅರ್ಥ. 'ಭೀಮ' ಎಂದರೆ ('ಭೃತಮಃ ಭೀಮಃ', 'ಭೃತಾಃ ಮಾಃ') ವೇದಾದಿಸಕಲಶಾಸ್ತ್ರವಿದ್ಯೆಗಳನ್ನು ಸಂಪೂರ್ಣ ಬಲ್ಲವನು. 'ಸೇನ' ('ಇನೇನ ಸಹಿತಃ ಸೇನಃ') ಎಂದರೆ ಸ್ವಾಮಿಯಾದ ವಿಷ್ಣುವಿನೊಡನೆ ಯಾವಾಗಲೂ ಇರುವವನು. 'ಭೀಮಸೇನ' ಎಂದರೆ ಭಯಂಕರ ಎಂದು ಜನ ತಿಳಿದಿರುವುದು ಸರಿಯಲ್ಲ. 'ಭೀಮ' ಎಂಬುದಕ್ಕೆ 'ಭಯರಹಿತ' ಹಾಗೂ 'ಅಭಯದಾಯಕ' ಎಂಬ ಮತ್ತೊಂದು ಅರ್ಥವನ್ನೂ [೪]ಛಾಂದೋಗ್ಯಭಾಷ್ಯದಲ್ಲಿ ತಿಳಿಸಿರುವರು.

೨) ಭೀಮಾವತಾರದ ದಿವಸ [೫]ಫಾಲ್ಗುಣ ಶುದ್ಧ ತ್ರಯೋದಶೀ.

---

೧. ತಥಾಸ್ತ್ವಿತಿ ಚ ತಾಂ ವಾಯುಃ ಸಮಾಲಭ್ಯ ದಿವಂ ಗತಃ । – ಕೃ.ಭಾರತ (ಆದಿ.೧೨೯/೫೧)

೨. ಸಕಲಾಃ ಮಾಃ ವಿದ್ಯಾಃ ಯಸ್ಮಿನ್ ಭೃತಾಃ ಪೂರ್ಣಾಃ ತೇನ ಕಾರಣೇನ ಭೃತಾಃ ಮಾಃ ಯಸ್ಮಿನ್ನಿತಿ ವ್ಯುತ್ಪತ್ತ್ಯಾ ಭೀಮ ಇತ್ಯರ್ಥಃ। ನಿರುಕ್ತತ್ವಾತ್ ಋಕಾರಾಖ್ಯವರ್ಣನಾಶಃ । ಈಕಾರಾಖ್ಯವರ್ಣಗಮಶ್ಚೇತಿ ಭಾವಃ । ಇನೇನ ಪ್ರಭುಣಾ ಸಹಿತಃ ಸೇನಃ ಸ ಚ ಪ್ರಭುರ್ವಿಷ್ಣುರೇವೇತಿ ಭಾವೇನೋಕ್ತಮ್ ಸ ವಿಷ್ಣುನೇಶೇನೇತಿ ॥ – (ವಾ.)

೩. ಭೀಮಶ್ಚಾಸೌ ಸೇನಶ್ಚೇತಿ ಕರ್ಮಧಾರಯಃ । – (ಜ.)

೪. ಭೃತಮೋ ಭೀಮ ಇತ್ಯುಕ್ತಃ – ಇತಿ ಛಾಂದೋಗ್ಯಭಾಷ್ಯೇ ।

೫. ಮಘೇ ಚಂದ್ರಮಸಾ ಯುಕ್ತೇ ಸಿಂಹೇ ಚಾಭ್ಯುದಿತೇ ಗುರೌ ।
ದಿವಾಮಧ್ಯಗತೇ ಸೂರ್ಯೇ ತಿಥೌ ಪುಣ್ಯೇ ತ್ರಯೋದಶೇ ।
ಮೈತ್ರೇ ಮುಹೂರ್ತೇ ಸಾ ಕುಂತೀ ಸುಷುವೇ ಭೀಮಮಚ್ಯುತಮ್ ॥ – ಭಾರತ (ಆದಿ. ೧೨೨/೧೮)

೩) ಭೀಮ ಅವತರಿಸುತ್ತಲೇ [೧]ಅಶರೀರವಾಣಿ ಮೊಳಗಿತು : ''ಸರ್ವಬಲಿಷ್ಠರಲ್ಲೂ ತುಂಬಾ ಶ್ರೇಷ್ಠನಾದವನು ಜನಿಸಿರುವನು''.

'ಗಿರಿ ಒಡೆದು ಶತಶೃಂಗವೆಂದೆನಿಸಿತು'

ತಜ್ಜನ್ಮಮಾತ್ರೇಣ ಧರಾ ವಿದಾರಿತಾ ಶಾರ್ದೂಲಭೀತಾಜ್ಜನನೀಕರಾದ್ಯದಾ ।
ಪಪಾತ ಸಂಚೂರ್ಣಿತ ಏವ ಪರ್ವತಸ್ತೇನಾಖಿಲೋಽಸೌ ಶತಶೃಂಗನಾಮಾ ॥ ೫೫ ॥

ಅ: ಭೀಮ ಜನಿಸುತ್ತಲೇ ಭೂಮಿ ಬಿರಿಯಿತು. ಹುಲಿಗೆ ಅಂಜಿದ ತಾಯಿಯ ಕೈಯಿಂದ ಭೀಮ ಬಿದ್ದಾಗ ಶತಶೃಂಗ ಎಂಬ ಹೆಸರಿನ ಇಡೀ ಪರ್ವತ ಪುಡಿಯಾಗಿ ಹೋಯಿತು.

ವಿ: ೧) ಇದು ನಡೆದದ್ದು ಕುಂತೀ ಮಂಗಲಸ್ನಾನ ಮಾಡಿದ [೨]ಹತ್ತನೇ ದಿನ. ದೇವತೆಗಳನ್ನು ಪೂಜಿಸಲೆಂದು ಅವಳು ಆಶ್ರಮದಿಂದ ಬೆಟ್ಟದ ಮೇಲೆ ತೆರಳಿದ್ದಳು. ಆಗೊಂದು ಹುಲಿ ಗುಹೆಯಿಂದ ಹೊರಬಂದಿತು. ನುಗ್ಗಿದ ಅದನ್ನು ಪಾಂಡುರಾಜ ಮೂರು ಬಾಣಗಳಿಂದ ಹೊಡೆದ. ಅದರ ಪೆಟ್ಟಿಗೆ ಹುಲಿ ಭಯಂಕರವಾಗಿ ಆರ್ತನಾದ ಮಾಡಿ ಕೆಳಗೆ ಬಿದ್ದಿತು. ಅದರ ಧ್ವನಿಗೆ ಅಂಜಿದ

---

೧. ತಮಪ್ಯತಿಬಲಂ ಜಾತಂ ವಾಗುವಾಚಾಶರೀರಿಣೀ ॥
ಸರ್ವೇಷಾಂ ಬಲಿನಾಂ ಶ್ರೇಷ್ಠೋ ಜಾತೋಽಯಮಿತಿ ಭಾರತ । –ಭಾರತ (ಆದಿ. ೧೨೨/೧೪,೧೫)

೨. ಶತಶೃಂಗನಾಮಾ ಅಸೌ = ಪರ್ವತಃ । ತೇನ = ಭೀಮಸೇನಪಾತನೇನ ಚೂರ್ಣಿತ ಇತಿ ಯೋಜನಾ । ನತು ತೇನ ಕಾರಣೇನ ಶತಶೃಂಗನಾಮೇತಿ ಯೋಜನಾ । ತಥಾ ಸತಿ ತಾಭ್ಯಾಂ ಸಮೇತಃ ಶತಶೃಂಗಪರ್ವತ ಇತಿ ಶತಶೃಂಗನಾಮ್ನಃ ಪೂರ್ವಮೇವ ವಿದ್ಯಮಾನತ್ವೋಕ್ತಿರಯುಕ್ತಾ ಸ್ಯಾತ್ ॥ – (ವಾ.)

೩. ಇದಮತ್ಯದ್ಭುತಂ ಚಾಸೀಜ್ಜಾತಮಾತ್ರೇ ವೃಕೋದರೇ ॥
ಯದಂಕಾತ್ ಪತಿತೋ ಮಾತುಃ ಶಿಲಾಂ ಗಾತ್ರೈರ್ವ್ಯಚೂರ್ಣಯತ್ ।
ಕುಂತೀ ತು ಸಹ ಪುತ್ರೇಣ ಯಾತ್ವಾ ಸುರುಚಿರಂ ಸರಃ ।
ಸ್ನಾತ್ವಾ ತು ಸುತಮಾದಾಯ ದಶಮೇಽಹನಿ ಯಾದವೀ ॥
ದೈವತಾನ್ಯರ್ಚಯಿಷ್ಯಂತೀ ನಿರ್ಜಗಾಮಾಶ್ರಮಾತ್ ಪೃಥಾ ।
ಶೈಲಾಭ್ಯಾಶೇನ ಗಚ್ಛಂತ್ಯಾಸ್ತದಾ ಭರತಸತ್ತಮ ॥
ನಿಶ್ಚಕ್ರಾಮ ಮಹಾನ್ ವ್ಯಾಘ್ರೋ ಜಿಘಾಂಸನ್ ಗಿರಿಗಹ್ವರಾತ್ ॥
ತಾಮಪತಂತಂ ಶಾರ್ದೂಲಂ ವಿಕೃಷ್ಯಾಥ ಕುರೂತ್ತಮಃ ।
ನಿರ್ಬಿಭೇದ ಶರೈಃ ಪಾಂಡುಸ್ತ್ರಿಭಿಸ್ತ್ರಿದಶವಿಕ್ರಮಃ ॥
ನಾದೇನ ಮಹತಾ ತಾಂ ತು ಪೂರಯಂತಂ ಗಿರೇರ್ಗುಹಾಮ್ ।
ಕುಂತೀ ವ್ಯಾಘ್ರಭಯೋದ್ವಿಗ್ನಾ ಸಹಸೋತ್ಪತಿತಾ ಕಿಲ ॥
ನಾನ್ವಬುಧ್ಯತ ಸಂಸುಪ್ತಮುತ್ಸಂಗೇ ಸ್ವೇ ವೃಕೋದರಮ್ ।
ತತಃ ಸ ವಜ್ರಸಂಘಾತಃ ಕುಮಾರೋ ನ್ಯಪತತ್ ಗಿರೌ ॥
ಪತತಾ ತೇನ ಶತಧಾ ಶಿಲಾ ಗಾತ್ರೈರ್ವಿಚೂರ್ಣಿತಾ । –ಭಾರತ (ಆದಿ. ೧೨೨/೧೫-೧೮)

ಕುಂತಿ ತತ್ಕ್ಷಣ ಬಿದ್ದುಬಿಟ್ಟಳು. ಅವಳ ತೊಡೆಯಲ್ಲಿದ್ದ ಮಗು ಕೆಳಗೆ ಜಾರಿಬಿದ್ದಿತು. ಆನಂತರ ನೋಡಿದಾಗ, ಇಡೀ ಪರ್ವತವೇ ನೂರಾರು ಹೋಳಾಗಿ ಸೀಳಿಹೋಗಿತ್ತು. ಭೀಮ ಮಾತ್ರ ಆನಂದದಿಂದ ಪವಡಿಸಿಯೇ ಇದ್ದ.

೨) ಇಂದ್ರ ವಜ್ರಾಯುಧದಿಂದ ಅಪ್ಪಳಿಸಿದಾಗ ಪರ್ವತದ ರೆಕ್ಕೆಗಳು ಮಾತ್ರ ತುಂಡಾದವು. ಆದರೆ ಶಿಶುವಾದ ಭೀಮನ ಸ್ಪರ್ಶದಿಂದಲೇ ಇಡೀ ಶತಶೃಂಗಪರ್ವತ [೧]ಪುಡಿಯಾಗಿ ಹೋಯಿತು. ಎಂತಹ ಅದ್ಭುತ! ಪರ್ವತಗಳ ರೆಕ್ಕೆಗಳನ್ನು ತುಂಡು ಮಾಡಲು ಇಂದ್ರ ಜೋರಾಗಿ ಅಪ್ಪಳಿಸಬೇಕಾಯಿತು. ಆದರೆ ಶತಶೃಂಗ ಪುಡಿಯಾಗಲು ಭೀಮನ ದೇಹದ ಸ್ಪರ್ಶ ಸಾಕಾಯಿತು. ಇಂದ್ರನ ವಜ್ರಾಯುಧಕ್ಕಿಂತ ಭೀಮನ ದೇಹ ದೃಢವಾದುದು ಎಂದು ಈ ಪ್ರಸಂಗವನ್ನು ಸುಮಧ್ವವಿಜಯ ವರ್ಣಿಸಿದೆ. ಮಹಾಭಾರತವೂ ಭೀಮನನ್ನು [೨]'ವಜ್ರಸಂಘಾತ' ಎಂದಿದೆ.

೩) ಶತಶೃಂಗ ಎಂಬುದು ಆ ಪರ್ವತಕ್ಕೆ ಆ ಮುಂಚೆಯೇ ಇದ್ದ ಹೆಸರು. ಭೀಮನಿಂದಾಗಿ ಅದು ನೂರಾರು ಹೋಳಾಗಿ ಸೀಳಿತು. ಇದರಿಂದಾಗಿ ಅದರ ಹೆಸರು [೩]ಸಾರ್ಥಕವಾಯಿತು. 'ತಾಭ್ಯಾಂ ಸಮೇತಃ ಶತಶೃಂಗಪರ್ವತೇ' ಎಂದು ಈ ಮೊದಲೇ (ಅಧ್ಯಾಯ ೧೧, ಶ್ಲೋಕ ೧೭೬) ಹೇಳಿರುವುದು ಇದಕ್ಕೆ ಗಮಕ; 'ಕರದಿಂದ ಶಿಶುಭಾವನಾದ ಭೀಮನ ಬಿಡಲು ಗಿರಿ ಒಡೆದು ಶತಶೃಂಗವೆಂದೆನಿಸಿತು' – ಮಧ್ವನಾಮ.

೪) ಕುಂತಿ ಭೀಮನ ಈ ಹಿರಿಮೆಯನ್ನು ಕಣ್ಣಾರೆ ಕಂಡು, ಅಚ್ಚರಿಪಟ್ಟಳು; ಆನಂದಿಸಿದಳು. ಜೀವಮಾನದಲ್ಲಿ ಮುಂದೆಂದೂ ಭೀಮನ ಬಗ್ಗೆ ಆತಂಕಪಡದೆ, ನಿಶ್ಚಿಂತೆಯಿಂದಿದ್ದಳು. ಅದೇಕೆ!

---

೧. ಇಂದ್ರಾಯುಧಂ ಹೀಂದ್ರಕರಾಭಿನುನ್ನಂ ಚಿಚ್ಛೇದ ಪಕ್ಷಾನ್ ಕ್ಷಿತಿಧಾರಿಣಾಂ ಪ್ರಾಕ್ ।
ಬಿಭೇದ ಭೂಭೃದ್ವಪುರಂಗಸಂಗಾಚ್ಚತ್ರಂ ಸ ಪಸ್ಪೋ ಜನನೀಕರಾಗ್ರಾತ್ ॥ – ಸುಮಧ್ವವಿಜಯ (೧/೨೯)

೨. ಪರ್ವತಸ್ಯೋಪರಿಸ್ಥಾಯಾಮಧಸ್ತಾದಪತಚ್ಛಿಶುಃ ।
ಸ ಶಿಲಾಂ ಚೂರ್ಣಯಾಮಾಸ ವಜ್ರವದ್ವಜ್ರಿಚೋದಿತಃ ॥ – ಕೃ.ಭಾರತ (ಆದಿ. ೧೨೯/೬೨)

ತತಃ ಸ ವಜ್ರಸಂಘಾತಃ ಕುಮಾರೋ ನ್ಯಪತದ್ಗಿರೌ ॥ – ಭಾರತ (ಆದಿ. ೧೨೨/೧೭)

೩. ಅಯಂ ಪರ್ವತಃ ಅನಾದಿತಃ ಶತಶೃಂಗನಾಮಾ ನ ತು ಸಂಚೂರ್ಣನೇನ । ತತ್ಪೂರ್ವಮಪಿ ತಾಭ್ಯಾಂ ಸಮೇತಃ ಶತಶೃಂಗಪರ್ವತ ಇತ್ಯಾದೌ ತನ್ನಾಮ್ನಾ ವ್ಯವಹಾರಾತ್ । ಅತ ಏವ 'ಸಂಚೂರ್ಣಿತ' ಇತ್ಯನೇನ ಪರ್ವತಾವಯವಾನಾಂ ಶಿಥಿಲತ್ವಂ ವಿವಕ್ಷಿತಮ್ । ತೇನ ಭೀಮೇನ ಸಂಚೂರ್ಣಿತಃ ಶತಧಾ ವಿಭಕ್ತೋ ಅತ ಏವ ಶತಶೃಂಗನಾಮಾऽಭವದಿತಿ ಟೀಕಾಕಾರಃ ॥ – (ಜ.)

ಶತಧಾ ವಿಭಕ್ತಃ ಅತ ಏವ ಶತಶೃಂಗನಾಮಾऽಭವದಿತ್ಯರ್ಥಃ । – (ವ.)

ಕೇಚಿತ್ ತು ತೇನ ಸಂಚೂರ್ಣಿತೇನ ಗಿರಿಃ ಶತಶೃಂಗನಾಮಾ ಅಭವದಿತ್ಯರ್ಥಮಾಹುಃ । ಅಸ್ಮಿನ್ ಪಕ್ಷೇ ಶತಶೃಂಗಪರ್ವತೇ ನಾರಾಯಣಸ್ಯಾಶ್ರಮಮಧ್ಯಗೇ ಪುರ ಇತ್ಯತ್ರ ಭಾವಿನೀಸಂಜ್ಞಯಾ ವ್ಯವಹಾರ ಇತಿ ದ್ರಷ್ಟವ್ಯಮ್ ॥ – (ತಾ.)

ಅಂತಹ ಭೀಮನ ಜೊತೆಗಿರುವುದರಿಂದ ತನ್ನ ಇತರ ಮಕ್ಕಳೂ, ತಾನೂ ಸುರಕ್ಷಿತ ಎಂದು ದೃಢವಾಗಿ ನಂಬಿದಳು; ಅಂದುಕೊಂಡಿದ್ದನ್ನು ಸಾಧಿಸಿದಳು. ವಾಯುವಿನ ಹಿರಿಮೆಯನ್ನು ಕಣ್ಣಾರೆ ಕಂಡು ದೃಢವಾಗಿ ನಂಬಿದ್ದರ ಫಲ ಇದು ಎಂದು ತಿಳಿಯಬೇಕು.

ತಸ್ಮಿನ್ ಪ್ರಜಾತೇ[೧] ರುಧಿರಂ ಪ್ರಸುಸ್ರುವುರ್ಮಹಾಸುರಾ ವಾಹನಸೈನ್ಯಸಂಯುತಾಃ ।
ನೃಪಾಶ್ಚ ತತ್ಕ್ಷಭವಾಃ ಸಮಸ್ತಾಸ್ತದಾ ಭೀತಾ ಅಸುರಾ ರಾಕ್ಷಸಾಶ್ಚ ॥ ೫೬ ॥

ಅ: ಭೀಮ ಹುಟ್ಟಿದಾಗ ಮಹಾಅಸುರರು ತಮ್ಮ ವಾಹನ ಹಾಗೂ ಸೇನೆಗಳೊಂದಿಗೆ ರಕ್ತ ಕಾರಿದರು. ಅವರ ಪಕ್ಷದಲ್ಲಿ ಹುಟ್ಟಿ ರಾಜರಾಗಿದ್ದ ಅಸುರರೂ, ರಾಕ್ಷಸರೂ ಭೀತರಾದರು.

ವಿ: ೧) ಆ ಕಾಲದಲ್ಲಿ ಅಸುರರು, ರಾಕ್ಷಸರು ಮೂಲರೂಪದಲ್ಲಿ ಮಾತ್ರವಲ್ಲದೆ, ಅವತಾರರೂಪದಲ್ಲೂ ಭೀತರಾಗಿ ತಮ್ಮ ಮುಖಗಳಿಂದ ರಕ್ತಕಾರಿದರು; ಗುದದ್ವಾರ, ಮೂತ್ರದ್ವಾರಗಳಿಂದಲೂ ರಕ್ತ ಸುರಿಸಿದರು. ಅದು ಅವರಿಗೆ ಅವರ ವಿನಾಶಕಾಲಕ್ಕೆ ಮುನ್ಸೂಚನೆಯಾಯಿತು.

೨) ಸ್ಪರ್ಶ ಮಾತ್ರದಿಂದ ಶತಶೃಂಗಪರ್ವತ ಪುಡಿಯಾದಂತೆ, ಜನ್ಮಮಾತ್ರದಿಂದ ಅಸುರರು ಭಯಗೊಂಡರು. ಮುಂದೆ ಭೀಮಸೇನನ ಶಂಖನಾದಮಾತ್ರಕ್ಕೂ ಕೌರವಪಕ್ಷದ ಸೈನಿಕರು ಮಲಮೂತ್ರ ವಿಸರ್ಜಿಸಿ, ಸತ್ತು ಬೀಳುತ್ತಿದ್ದ ವಿವರ ಬಂದಿದೆ. ವಾಯುದೇವರು ಸರ್ವರೀತಿಯಿಂದಲೂ ದೈತ್ಯಭಂಜಕರು ಎಂಬುದಕ್ಕೆ ಇದು ದ್ಯೋತಕ.

---

೧. ಮಹಾಸುರಾಃ = ಮೂಲರೂಪೇ ಸ್ಥಿತಾ ಅಸುರಾಃ । ತತ್ಕ್ಷಭವಾಃ ಅಸುರಾಃ = ಅಸುರರೂಪಾಃ ರಾಕ್ಷಸಾಃ = ರಕ್ಷೋರೂಪಾಶ್ಚ ಯೇ ನೃಪಾಃ ತೇ ಚೇತಿ ಸಂಬಂಧಃ । ಮೂಲರೂಪೇ ಭೂಮಾವುತ್ಪನ್ನರೂಪೇ ಚ ರುಧಿರಂ ಪ್ರಸುಸ್ರುವುರಿತಿ ಭಾವಃ ॥ – (ವಾ,)

ತಸ್ಮಿನ್ ಭೀಮೇ ಪ್ರಜಾತೇ ಸತಿ ವಾಹನೈಃ ಸೈನ್ಯೈಃ ಸಂಯುತಾಃ ಮಹಾಸುರಾಃ ಪಾತಾಲಾದಿಷು ವರ್ತಮಾನಾಃ ಮೂಲರೂಪಸ್ಥಮಹಾಸುರಾಃ ತತ್ಕ್ಷಭವಾಃ ಮಹಾಸುರಪಕ್ಷೀಯತ್ವೇನ ಜಾತಾಃ ಸಮಸ್ತಾಃ ನೃಪಾಃ ನೃನ್ ಮನುಷ್ಯಾಧಮಾನ್ ಪಾಂತಿ ರಕ್ಷಂತಿ ತೇ ತಥಾ ತ್ರಿವಿಧಮನುಷ್ಯಾಧಮೇಷು ಮನುಷ್ಯಾಧಮಶ್ರೇಷ್ಠಾ ಇತ್ಯರ್ಥಃ । ಯದ್ವಾ ರಾಜಕುಲೇ ಪ್ರಜಾತಾ ಮನುಷ್ಯಾಧಮಾಶ್ಚ ಅಸುರಾಃ ಭುವ್ಯುತ್ಪನ್ನಜರಾಸಂಧಕೀಚಕಾದಯಃ ರಾಕ್ಷಸಾಃ ಹಿಡಿಂಬಕಿರ್ಮೀರಾದಯೋ ರಾಕ್ಷಸಾಃ ತದಾ ಭೀಮೋತ್ಪತ್ತಿಕಾಲೇ ಭೀತಾಃ ಸಂತಃ ರುಧಿರಂ ರಕ್ತಂ ಪ್ರಸುಸ್ರುವುಃ । ಮೂತ್ರದ್ವಾರಾತ್ ಗುದದ್ವಾರಾತ್ ಮುಖಾಚ್ಚ ರಕ್ತಸ್ರಾವಸ್ತೇಷಾಂ ವಿನಾಶಕೋತ್ಪಾತೋ ಜಾತ ಇತಿ ಭಾವಃ ॥ – (ಜ.)

ಜಾತಮಾತ್ರೇ ಕುಮಾರೇ ತು ಸರ್ವಲೋಕಸ್ಯ ಪಾರ್ಥಿವಾಃ ।
ಮೂತ್ರಂ ಪ್ರಸುಸ್ರುವುಃ ಸರ್ವೇ ವ್ಯಥಾಂ ಚಾಪಿ ಪ್ರಪೇದಿರೇ ।
ವಾಹನಾನಿ ವ್ಯಶೀರ್ಯಂತ ವ್ಯಮುಂಚನ್ನಶ್ರುಬಿಂದವಃ ॥ – ಕೃ.ಭಾರತ (ಆದಿ. ೧೨೯/೫೩,೫೪

ಬಲರಾಮನಾಗಿ ಶೇಷ

ಅವರ್ಧತಾತ್ಕೈವ ವೃಕೋದರೋ[೧] ವನೇ ಮುದಂ ಸುರಾಣಾಮಧಿಕಂ ಪ್ರವರ್ಧಯನ್ ।
ತದೈವ ಶೇಷೋ ಹರಿಣೋದಿತೋಽವಿಶದ್ಗರ್ಭಂ[೨] ಸುತಾಯಾ ಅಪಿ ದೇವಕಸ್ಯ ॥ ೫೭ ॥

ಅ: ಆ ವನದಲ್ಲೇ ಸುರರಿಗೆ ಆನಂದವನ್ನು ಬಹಳವಾಗಿ ಹೆಚ್ಚಿಸುತ್ತಾ ಭೀಮಸೇನ ಬೆಳೆದ. ಆ ಸಮಯದಲ್ಲೇ ಶ್ರೀಹರಿಯ ಆದೇಶದಂತೆ ಶೇಷ ದೇವಕಿಯ ಗರ್ಭವನ್ನು ಪ್ರವೇಶಿಸಿದ್ದ.

ವಿ: ೧) 'ವೃಕೋದರ' ಭೀಮನ ದ್ವಾದಶನಾಮಗಳಲ್ಲೊಂದು. ಇದಕ್ಕೆ ಕೆಲವರು 'ತೋಳದಂತೆ ಹೊಟ್ಟೆ ಉಳ್ಳವ', ಹೊಟ್ಟೆಬಾಕ ಎಂದು ಅಪಾರ್ಥ ಮಾಡಿರುವುದುಂಟು. ಭೀಮನು ಹೊಟ್ಟೆಬಾಕನೂ ಅಲ್ಲ; ತೋಳದಂತೆ ಹೊಟ್ಟೆ ಉಳ್ಳವನೂ ಅಲ್ಲ. ಅದರ ನಿಜವಾದ ಅರ್ಥ 'ವೃಕ' ಎಂಬ ಹೆಸರಿನ ವಿಶಿಷ್ಟಾಗ್ನಿಯನ್ನು ಉದರದಲ್ಲಿ ಹೊಂದಿದವ ಎಂದು. ಮತ್ಸ್ಯಪುರಾಣದಲ್ಲಿ ಈ ವಿವರಣೆ ಬಂದಿದೆ. ಅದರಿಂದಾಗಿ ಭೀಮಸೇನ ಎಷ್ಟನ್ನು ಬೇಕಾದರೂ ತಿನ್ನುತ್ತಿದ್ದ, ಆ ಕ್ಷಣದಲ್ಲೇ ತಿಂದದ್ದನ್ನೆಲ್ಲ ಜೀರ್ಣಿಸಿಕೊಳ್ಳುತ್ತಿದ್ದ. ಇದು ಜೀವಸಂಕುಲದಲ್ಲೇ ಅನುಪಮವಾದ ಹಿರಿಮೆ. ಆತನ ಜೀವೋತ್ತಮತ್ವವನ್ನು ಪ್ರತಿಪಾದಿಸುವ ಮಹಿಮೆ.

೨) ಬಲರಾಮ ಜನಿಸಿದಾಗ ಭೀಮನಿಗೆ ಎರಡು ತಿಂಗಳು ಎಂದು ಮುಂದೆ ಹೇಳುವರು. ಅದರಿಂದ ಭೀಮ ಅವತರಿಸುವ ಎರಡು ತಿಂಗಳ ಮುಂಚೆ ಬಲರಾಮ ದೇವಕಿಯ ಗರ್ಭವನ್ನು ಪ್ರವೇಶಿಸಿದ ಎಂದಾಗುವುದು.

---

೧. ''ವೃಕೋನಾಮ ಮಹಾವಹ್ನಿ''ರಿತಿ ವಚನಾತ್ ವೃಕನಾಮಕಮಹಾವಹ್ನಿರುದರೇ ಯಸ್ಯ ಸ ವೃಕೋದರಃ । ಅತ ಏವ ಬಹ್ವನ್ನಭಸ್ಮೀಕರಣಶಕ್ತಿರ್ಭೀಮಸ್ಯ । ತದೈವ ಶೇಷೋ ಹರಿಣೋದಿತ ಇತ್ಯತ್ರ । ಶೇಷೋಽಪೀತಿ ಪದಸಂಬಂಧಃ ॥ – (ವಾ.)

ವೃಕೋದರ ಇತಿ । 'ವೃಕೋ ನಾಮ ಮಹಾವಹ್ನಿ'ರಿತಿ ವಚನಾದ್ವೃಕನಾಮಕವಹ್ನಿರುದರೇ ಯಸ್ಯ ಸ ವೃಕೋದರಃ। ಅತ ಏವ ಬಹ್ವನ್ನಭಸ್ಮೀಕರಣಶಕ್ತಿರ್ಭೀಮಸ್ಯ । – (ತಾ.)

ಯಸ್ಯ ತೀಕ್ಷ್ಣೋ ವೃಕೋ ನಾಮ ಜಠರೇ ಹವ್ಯವಾಹನಃ ।
ಮಯಾ ದತ್ತಃ ಸ ಧರ್ಮಾತ್ಮಾ ತೇನ ಚಾಸೌ ವೃಕೋದರಃ ॥
– ಮತ್ಸ್ಯಪುರಾಣ (೬೮/೧೪); ಪದ್ಮಪುರಾಣ (ಉ. ಖಂ. ೨೩/೧೫)

ಮತಿಮಾನ್ ದಾನತಶೀಲಶ್ಚ ನಾಗಾಯುತಬಲೋ ಮಹಾನ್ ।
ಭವಿಷ್ಯತ್ಯರಜಾಃ ಶ್ರೀಮಾನ್ ಕಂದರ್ಪ ಇವ ರೂಪವಾನ್ ॥ – ಮತ್ಸ್ಯಪುರಾಣ (೬೮/೧೫)

೨. ತದೈವ ಭೀಮೋತ್ಪತ್ತಿಸಮಯ ಏವೇತಿ ಕೇಷಾಂಚಿದ್ವ್ಯಾಖ್ಯಾನಮನಾದರಣೀಯಮ್ । ಯದಾ ಸ ಮಾಸದ್ವಿತಯೀ ಬಭೂವೇತಿ ಉತ್ತರಶ್ಲೋಕವಿರೋಧಾತ್ । ಅನ್ಯಥಾ ಭೀಮೋತ್ಪತ್ತ್ಯನಂತರಂ ದಶಮೇ ಮಾಸಿ ಚೋತ್ಪನ್ನ ಇತಿ ಬ್ರೂಯುಃ । – (ಜ.)

ಸ ತತ್ರ ಮಾಸತ್ರಯಮುಷ್ಯ ದುರ್ಗಯಾऽಪವಾಹಿತೋ ರೋಹಿಣೀಗರ್ಭಮಾಶು ।
ನಿಯುಕ್ತಯಾ ಕೇಶವೇನಾಥ ತತ್ರ ಸ್ಥಿತ್ವಾ ಮಾಸಾನ್ ಸಪ್ತ[೧] ಜಾತಃ ಪೃಥಿವ್ಯಾಮ್ ॥೫೮॥

ಅ: ಶೇಷದೇವ ದೇವಕಿಯ ಗರ್ಭದಲ್ಲಿ ಮೂರುತಿಂಗಳು ನೆಲೆಸಿದ್ದು ಶ್ರೀಹರಿಯ ಆದೇಶದಿಂದ ದುರ್ಗಾದೇವಿಯಿಂದ ರೋಹಿಣೀಗರ್ಭಕ್ಕೆ ವರ್ಗಾಯಿಸಲ್ಪಟ್ಟ. ಅಲ್ಲಿ ಏಳು ತಿಂಗಳು ಕಳೆದು, ಭೂಮಿಯಲ್ಲಿ ಹುಟ್ಟಿದ.

ವಿ: ಇದು ಪುರಾಣಪ್ರಪಂಚದ ಅದ್ಭುತಗಳಲ್ಲೊಂದು. ಮೊದಲು ದೇವಕಿಯ ಗರ್ಭದಲ್ಲಿ ಬೆಳೆದ ಬಲರಾಮ, ಅಲ್ಲಿಂದ ರೋಹಿಣೀಗರ್ಭಕ್ಕೆ ವರ್ಗಾಯಿಸಲ್ಪಟ್ಟ. ನೂರಾರು ವರ್ಷಗಳ ಹಿಂದೆ ಕೇವಲ ಕಲ್ಪನೆ ಎನ್ನಿಸಬಹುದಿದ್ದ ಈ ವಿಚಾರ, ಇಂದು ವೈಜ್ಞಾನಿಕಹಿನ್ನೆಲೆಯಲ್ಲಿ ಅದ್ಭುತಘಟನೆಯಾಗಿ ಅರ್ಥವಾಗುತ್ತದೆ. ಇಂದು ವಿಜ್ಞಾನ ಹಾಗೆ ಮಾಡುವ ಸಾಮರ್ಥ್ಯ ಪಡೆದಿದ್ದರೆ, ಅಂದು ದುರ್ಗಾದೇವಿ ಅಂದು ಕಾರ್ಯವನ್ನು ಮಾಡಿದ್ದಳು. ಇದು ಹೋಲಿಕೆ ಮಾತ್ರ. ಪರಿಪೂರ್ಣತೆ ಮಾತ್ರ ಅದರದ್ದೇ.

ಶ್ರೀಕೃಷ್ಣಾವತಾರ

ಸ ನಾಮತೋ ಬಲದೇವೋ ಬಲಾಢ್ಯೋ ಬಭೂವ ತಸ್ಯಾನು ಜನಾರ್ದನಃ ಪ್ರಭುಃ ।
ಆವಿರ್ಬಭೂವಾಖಿಲಸದ್ಗುಣೈಕಪೂರ್ಣಃ ಸುತಾಯಾಮಿಹ ದೇವಕಸ್ಯ[೨] ॥ ೫೯ ॥

ಅ: ಬಲದೇವ ಎಂಬ ಹೆಸರಿನ ಅವನು ತುಂಬ ಬಲಾಢ್ಯನೆನ್ನಿಸಿದ. ಅವನ ಅನಂತರ ಸ್ವಾಮಿಯಾದ ಅನಂತಸದ್ಗುಣಗಳ ಮುಖ್ಯನೆಲೆಯಾದ, ಸ್ವಾಮಿಯಾದ ಜನಾರ್ದನ ದೇವಕಿಯಲ್ಲಿ ಅವತರಿಸಿದ.

---

೧. ಭಗವಾನಪಿ ವಿಶ್ವಾತ್ಮಾ ವಿದಿತ್ವಾ ಕಂಸಜಂ ಭಯಮ್ ।
ಯದೂನಾಂ ನಿಜನಾಥಾನಾಂ ಯೋಗಮಾಯಾಂ ಸಮಾದಿಶತ್ ॥
ಗಚ್ಛ ದೇವಿ ವ್ರಜಂ ಭದ್ರೇ ಗೋಪಗೋಭಿರಲಂಕೃತಮ್ ।
ರೋಹಿಣೀ ವಸುದೇವಸ್ಯ ಭಾರ್ಯಾऽऽಸ್ತೇ ನಂದಗೋಕುಲೇ ।
ಅನ್ಯಾಶ್ಚ ಕಂಸಸಂವಿಗ್ನಾ ವಿವರೇಷು ವಸಂತಿ ಹಿ ॥
ದೇವಕ್ಯಾ ಜಠರೇ ಗರ್ಭಂ ಶೇಷಾಖ್ಯಂ ಧಾಮ ಮಾಮಕಮ್ ।
ತತ್ ಸನ್ನಿಕೃಷ್ಯ ರೋಹಿಣ್ಯಾ ಉದರೇ ಸನ್ನಿವೇಶಯ ॥ – ಭಾಗವತ (೨/೨/೬-೮)

೨. 'ಜಾತಃ ಸುತಾಯಾಮಿಹ' ಇತಿ ಪಾಠೇ ಇಹ ಭೂಮ್ಯಾಮ್ । – (ಜ.)

೩. ನ ಗರ್ಭವಾಸೋ ಮಮ ನಿರ್ಮಲಸ್ಯೇತ್ಯದೋ ಬುಧಾನ್ ಬೋಧಯಿತುಂ ಹೃದೇವ ।
ಫಣೀಶ್ವರಂ ಗರ್ಭಗತಂ ವಿಧಾಯ ಪುನಃ ಸ್ವಯಂ ಸನ್ನಿಹಿತೋ ಬಭೂವ ॥ – ಋ.ವಿ. (೧/೨೯)

ವಿ: ೧) ಇತರರ ಸಂಸಾರವನ್ನೇ ಪರಿಹರಿಸುವ ಭಗವಂತನಿಗೆ ಎಂದೂ ಹುಟ್ಟು ಮೊದಲಾದ ದೋಷಗಳಿಲ್ಲ ಎಂಬುದನ್ನು 'ಜನಾರ್ದನ' ಎಂಬ ಪದದಿಂದ ಸೂಚಿಸಿರುವರು.

೨) ಬಲರಾಮ ಮೊದಲು ಹುಟ್ಟಿ, ಅನಂತರ ಕೃಷ್ಣ ಅವತರಿಸಿದ. ರಾಜರು ಆಗಮಿಸುವ ಮುನ್ನ ಅವರ ಹಾಸಿಗೆ ಬರುವ ಸಂಪ್ರದಾಯಕ್ಕೆ ಇದು ನಾಂದಿಯಾಯಿತು. ಶೇಷ ಅನಂತ–ಕೋಟಿಬ್ರಹ್ಮಾಂಡನಾಯಕನಾದ ವಿಷ್ಣುವಿನ ಹಾಸಿಗೆಯಷ್ಟೆ! ಅವನು ಮೊದಲು ಅವತರಿಸಿದ್ದು ಇದಕ್ಕೆ ಸೂಚನೆ ಎಂಬ ಅಪೂರ್ವ ತಾತ್ತ್ವಿಕವಿವರಣೆಯನ್ನು [೧]ಶ್ರೀವಾದಿರಾಜರು ನೀಡಿರುವರು.

ಶ್ರೀಕೃಷ್ಣನಿಗೆ ಪ್ರಾಕೃತದೇಹವಿಲ್ಲ

ಯಃ ಸತ್ಸುಖಜ್ಞಾನಬಲೈಕದೇಹಃ ಸಮಸ್ತದೋಷಸ್ಪರ್ಶೋಜ್ಝಿತಃ ಸದಾ ।
ಅವ್ಯಕ್ತತತ್ಕಾರ್ಯಮಯೋ[೨] ನ ಯಸ್ಯ ದೇಹಃ ಕುತಶ್ಚಿತ್ ಕ್ವ ಚ ಸ ಹ್ಯಜೋ[೩] ಹರಿಃ ॥೬೦॥

ಅ: ಶ್ರೀಹರಿಯು ಉತ್ತಮವಾದ ಸುಖ, ಜ್ಞಾನ, ಬಲಗಳನ್ನು ಮಾತ್ರ ದೇಹವನ್ನಾಗಿ ಹೊಂದಿದವನು. ಸದಾ ಸಮಸ್ತದೋಷಗಳ ಸ್ಪರ್ಶವೂ ಇರದವನು. ಎಂದ ಮೇಲೆ ಜಡಪ್ರಕೃತಿ ಮತ್ತು ಅದರ ಕಾರ್ಯವಾದ ಪಾಂಚಭೌತಿಕದೇಹ ಅವನಿಗೆ ಹೇಗೆ ಬಂದೀತು? ಎಲ್ಲಿ ಬಂದೀತು? ಅವನು ಜನ್ಮರಹಿತನಲ್ಲವೆ!

ನ ಶುಕ್ಲರಕ್ತಪ್ರಭವೋಽಸ್ಯ ಕಾಯಸ್ತಥಾಽಪಿ ತತ್ಪುತ್ರತಯೋಚ್ಯತೇ ಮೃಷಾ ।
ಜನಸ್ಯ ಮೋಹಾಯ ಶರೀರತೋಽಸ್ಯಾ ಯದಾಽಽವಿರಾಸೀದಮಲಸ್ವರೂಪಃ॥ ೬೧ ॥

---

೧. ಆಜ್ಞಾಪಯಾಮಾಸ ಪುರಾ ಸ ಶೇಷಂ ಜಜ್ಞೇ ಸ ರೋಹಿಣ್ಯುದರೋದಯಾದ್ರೇಃ ।
ಸಂಪ್ರೇಷಯಂತಿ ಸ್ಮ ನರೈರ್ನರೇಂದ್ರಾಃ ಶಯ್ಯಾಂ ಸ್ವಕೀಯಾಂ ಪುರತಃ ಪ್ರಯಾಣೇ ॥ – ಋ.ವಿ. (೧/೨೬)

೨. ಅವ್ಯಕ್ತಂ = ಮೂಲಪ್ರಕೃತಿಃ ತತ್ಕಾರ್ಯಂ = ಭೂತಪಂಚಕಂ ತದುಭಯವಿಕಾರಸನ್ಮಯಃ । ಶುದ್ಧಪ್ರಾಕೃತಃ ಪಾಂಚಭೌತಿಕಶ್ಚ ದೇಹಃ ಕುತಶ್ಚಿತ್ಕಾರಣಾತ್ ಕ್ವಚ ಕಸ್ಮಿನ್ನಪಿ ಪ್ರದೇಶೇ ನೇತಿ ಸಂಬಂಧಃ ॥ – (ವಾ.)

೩. ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥ – ಗೀತಾ(೪/೬)

ಪ್ರಕೃತ್ಯಾ ಜಾತೇಷು ವಸುದೇವಾದಿಷು । ತಥೈವ ತೇಷಾಂ ಜಾತ ಇತಿ ಪ್ರತೀಯಮಾನ ಇತ್ಯರ್ಥಃ ।
– ಗೀತಾಭಾಷ್ಯ

ವಸುದೇವಸುತೋ ನಾಯಂ ನಾಯಂ ಗರ್ಭೇಽವಸತ್ ಪ್ರಭುಃ । – ಮ.ಭಾ.ತಾ.ನಿ. (೨/೭೪)

ಅ: ಅವನ ದೇಹ ಶುಕ್ಲಶೋಣಿತಗಳಿಂದಾದುದಲ್ಲ. ಆದರೂ ಅಸುರಮೋಹನಕ್ಕೆ ಅವರ ಪುತ್ರರೆಂಬುದಾಗಿ ಸುಮ್ಮನೆ ಹೇಳಲ್ಪಡುವನು. ದೇವಕಿಯ ದೇಹದಿಂದ ನಿರ್ಮಲಸ್ವರೂಪನಾದ ಅವನು ಪ್ರಕಟನಾದನಷ್ಟೆ!

ವಿ: ಸೂರ್ಯನಿಗೆ ಪ್ರತಿದಿನ ಹುಟ್ಟೂ ಇಲ್ಲ; ಸಾವೂ ಇಲ್ಲ. ಆದರೂ ಸೂರ್ಯ ಹುಟ್ಟಿದ, ಸೂರ್ಯ ಮುಳುಗಿದ ಎಂದು ವ್ಯವಹರಿಸುವಂತೆ, ಹುಟ್ಟಿಲ್ಲದ ಭಗವಂತನನ್ನು ಹುಟ್ಟಿದ ಎಂದು ಕರೆಯುವ ಪರಿ ಇಂತಹುದು. ಸೂರ್ಯನಿಗೆ ಪ್ರತಿದಿನ ಹುಟ್ಟುಸಾವುಗಳಿಲ್ಲವೆಂದು ವಿಜ್ಞಾನ ಸಾರಿದರೆ, ಭಗವಂತನಿಗೆ ಎಂದೂ ಹುಟ್ಟುಸಾವುಗಳಿಲ್ಲವೆಂದು ತತ್ತ್ವಜ್ಞಾನ ಸಾರಿದೆ – 'ಯಥೋದಯೋ ರವೇರ್ಭವೇತ್' ಎಂಬುದಾಗಿ ಶ್ರೀಮದಾಚಾರ್ಯರೇ ನೀಡಿರುವ ನಿದರ್ಶನದಲ್ಲಿ ಈ ಅಂಶವೂ ಸೂಚಿತ.

ಆವಿಶ್ಯ ಪೂರ್ವಂ[೧] ವಸುದೇವಮೇವ ವಿವೇಶ ತಸ್ಮಾದೃತುಕಾಲ ಏವ ।
ದೇವೀಮುವಾಸಾತ್ರ[೨] ಚ ಸಪ್ತಮಾಸಾನ್ ಸಾರ್ಧಂಸ್ತತಶ್ಚಾವಿರಭೂದಜೋಽಪಿ॥೬೨॥

ಅ: ಮೊದಲಿಗೆ ವಸುದೇವನ ಒಳಗೆ ಪ್ರವೇಶ ಮಾಡಿ, ಅನಂತರ ಋತುಕಾಲದಲ್ಲಿ ಅವನಿಂದ ದೇವಕಿಯನ್ನು ಪ್ರವೇಶಿಸಿ, ಅಲ್ಲಿ ಏಳುವರೆ ತಿಂಗಳುಗಳನ್ನು ಕಳೆದು, ಬಳಿಕ ಅಜನಾದ ಶ್ರೀಹರಿ ಅವತರಿಸಿದ.

ವಿ: ೧) ಮೊದಲು ತಂದೆಯನ್ನು ಪ್ರವೇಶಿಸಿ, ಅನಂತರ ತಾಯಿಯ ಗರ್ಭವನ್ನು ಹೊಕ್ಕು ಅಲ್ಲಿ ಬೆಳೆದು, ಹತ್ತನೆಯ ತಿಂಗಳಲ್ಲಿ ಹುಟ್ಟುವುದು ಸಾಮಾನ್ಯವಾಗಿ ಜೀವರ ಹುಟ್ಟಿನ ಕ್ರಮ. ಕೃಷ್ಣನೂ ಅಂತಹ ಸಾಮಾನ್ಯಚೇತನ ಎಂದು ಅಸುರಜನರಿಗೆ ಮೋಹಕವಿಸಲೆಂದು ಕೃಷ್ಣ ಹಾಗೆ ವಿಡಂಬನೆ ಮಾಡಿದ. ಆದರೆ ಅವನದು ಪ್ರವೇಶವಷ್ಟೇ ಹೊರತು ಜೀವರಂತೆ ಶುಕ್ಲಶೋಣಿತಗಳ ಸಂಬಂಧ ಅಲ್ಲ. ಅಪ್ರಾಕೃತದೇಹನಾದ ಅವನಿಗೆ ಅದರ ಅಗತ್ಯವೂ ಇಲ್ಲ.

೨) ಇಲ್ಲಿಯ 'ಸಪ್ತಮಾಸಾನ್' ಎಂಬುದಕ್ಕೆ ಕೆಲವರು ಸಪ್ತಮಾಸ ಹಾಗೂ ಅದರ ಅರ್ಧ ಎಂದು ಅರ್ಥ ಮಾಡಿ ಒಟ್ಟು ಹತ್ತೂವರೆ ತಿಂಗಳೆಂದು ಅರ್ಥಮಾಡುವುದುಂಟು. ಇದು ಶ್ರೀಕೃಷ್ಣ

---

೧. ವಸುದೇವಮಾವಿಶ್ಯ ದೇವೀಂ ವಿವೇಶೇತ್ಯುಕ್ತ್ಯಾ ಭೂತಾವೇಶವದ್ವಸುದೇವೇऽಪ್ಯಾವೇಶ ಏವ । ದೇವ್ಯುದರೇऽಪ್ಯಾವೇಶ ಏವ । ನತು ಶುಕ್ಲದ್ವಾರಾ-ಯೋನಿಸ್ಥಶೋಣಿತೇ ಸಂಕಲನಮಿತಿ ಸೂಚಿತಮ್ ॥ – (ವಾ.)

೨. ಅತ್ರ ದೇವಕೀಗರ್ಭೇ ಸಾರ್ಧಾನ್ ತ್ರಿಂಶದ್ದಿನಾತ್ಮಕೋ ಮಾಸಃ ಪಂಚದಶದಿನೈರ್ಮಾಸಾರ್ಧಂ ಭವತಿ । ಅರ್ಧಮಾಸೇನ ಸಹಿತಾನ್ ಸಪ್ತಮಾಸಾನುವಾಸ । – (ಜ.)

ಅವತರಿಸಿದ್ದು ಎಂಟನೆಯ ತಿಂಗಳು ಎಂಬ ಸ್ಪಷ್ಟ ಹರಿವಂಶವಾಕ್ಯಕ್ಕೆ ವಿರುದ್ಧವಾದ್ದರಿಂದ ಅಗ್ರಾಹ್ಯ ಎಂದು [೧]ಜನಾರ್ದನೀಯದಲ್ಲಿದೆ.

೩) ಕೃಷ್ಣ ದೇವಕಿಯ ಅಷ್ಟಮಗರ್ಭ; ಅವತರಿಸಿದ್ದು ಅಷ್ಟಮೀ ತಿಥಿ ಹಾಗೂ ಅಷ್ಟಮಮಾಸ; ದಶಾವತಾರಗಳಲ್ಲಿ ಎಂಟನೆಯದು ಅದು. ಉದ್ದೇಶ [೨]ಅಷ್ಟದಿಕ್ಕುಗಳಲ್ಲಿನ ದೈತ್ಯರ ಸಂಹಾರ. ಸ್ವತಃ ಛಾಂದೋಗ್ಯೋಪನಿಷತ್ತು ಹೇಳುವಂತೆ ಅವನು ಅಷ್ಟಮರಸ. ವಿಶ್ವಕ್ಕೆ ಸೃಷ್ಟಿ ಮೊದಲಾದ ಎಂಟು ಕಾರ್ಯಗಳನ್ನು ಮಾಡುವ ಸರ್ವೋತ್ತಮ. ಅಷ್ಟೈಶ್ವರ್ಯಯುಕ್ತರಾದ ಯೋಗಿಗಳಿಂದ ಸದಾ ಉಪಾಸ್ಯ. ವಿಶೇಷವಾಗಿ ಅಷ್ಟಮಹಾಮಂತ್ರಗಳಿಂದ ಆರಾಧ್ಯನಾದ ಏಕೈಕ–ದೇವತೆ. ಅಷ್ಟಮಹಿಷೀಯುಕ್ತನಾದ ಪರಮಪುರುಷ. ಅಷ್ಟವರ್ಣಯುಕ್ತವಾದ ಓಂಕಾರದಿಂದ ಪ್ರತಿಪಾದ್ಯ ನಾರಾಯಣ. ಅವನಿಗಿಂತ ಉತ್ತಮನಂತೂ ಅಷ್ಟಮರಸದಂತೆ ಎಂದೂ ಅಸಂಭಾವಿತ. ಗಂಗೆಯ ಅಷ್ಟಮ ಗರ್ಭವಾದ ಭೀಷ್ಮನಿಗೆ ಮುಕ್ತಿಪ್ರದಾಯಕ. ನಾರಾಯಣಾಷ್ಟಾಕ್ಷರಮಹಾ–ಮಂತ್ರಪ್ರತಿಪಾದ್ಯ.

೩

ಯಥಾ ಪುರಾ ಸ್ತಂಭತ ಆವಿರಾಸೀದಶುಕ್ಲರಕ್ತೋಽಪಿ ನೃಸಿಂಹರೂಪಃ ।
ತಥೈವ ಕೃಷ್ಣೋಽಪಿ ತಥಾಽಪಿ ಮಾತಾಪಿತೃಕ್ರಮಾದೇವ ವಿಮೋಹಯತ್ಯಜಃ ॥ ೬೩ ॥

ಅ: ಹೇಗೆ ಹಿಂದೆ ಕಂಬದಿಂದ ಶುಕ್ಲಶೋಣಿತಸಂಬಂಧವಿಲ್ಲದೆ ನೃಸಿಂಹರೂಪ ಪ್ರಕಟವಾ-ಗಿತ್ತೋ, ಹಾಗೆಯೇ ಕೃಷ್ಣರೂಪವೂ ಪ್ರಕಟವಾಯಿತು. ಆದರೂ, ತಂದೆತಾಯಿಗಳ ಕ್ರಮವನ್ನು ಅನುಸರಿಸುವ ಮೂಲಕ ಹುಟ್ಟಿಲ್ಲದ ಅವನು ಅಯೋಗ್ಯರನ್ನು ಮೋಹಗೊಳಿಸುವನು.

---

೧. ಅಷ್ಟಮೇ ಮಾಸಿ ಪ್ರಕಟೋಽಭೂದಿತಿ ಭಾವಃ । ''ಸಾರ್ಧಾನ್ ಅರ್ಧೇನ ಸಪ್ತಾರ್ಧೇನ ಸಾರ್ಧಮಾಸತ್ರಯೇಣ ಸಹಿತಾನ್ ಸಪ್ತಮಾಸಾನುವಾಸ ಸಾರ್ಧದಶಮಾಸಾನುವಾಸೇತ್ಯರ್ಥಃ'' ಇತಿ ಕೇಷಾಂಚಿದಾಶಂಕಾ —

'ಗರ್ಭಕಾಲೇ ತ್ವಸಂಪೂರ್ಣೇ ಅಷ್ಟಮೇ ಮಾಸಿ ತೇ ಸ್ತ್ರೀಯೌ।
ದೇವಕೀ ಚ ಯಶೋದಾ ಚ ಸುಷುವಾತೇ ಸಮಂ ತದಾ॥

— ಇತಿ ಹರಿವಂಶ ವಾಕ್ಯವಿರೋಧಾನ್ನಿರಸ್ತಾವೇದಿತವ್ಯಾ। – (ಜ.)

೨. ಅಥೋ ಜಯಂತ್ಯಾಮುದಭೂನ್ನಿಶೀಥೇ ಶಶೀವ ದೇವಕ್ಯುದರೋದಯಾದ್ರೇಃ ।
ದಿಗಷ್ಟಕೇ ರಾತ್ರಿಚರಾನ್ ಜಿಗೀಷೋಸ್ತಥಿರ್ನಿಶಾ ಸಾ ಚ ಗುಣೋಚಿತೈವ ॥ – ರುಕ್ಮಿಣೀಶವಿಜಯ (೧/೩೧)

೩. ಮಾತಾಪಿತ್ರೋಸ್ತಂಭತುಲ್ಯತ್ವಾನ್ನಾನುಪಪತ್ತಿರಿತ್ಯಾಶಯೇನ ದೃಷ್ಟಾಂತಮಾಹ– ಯಥೇತಿ । – (ತಾ.)

ಯದಾ ನೃಸಿಂಹಾಕೃತಿರಾವಿರಾಸೀತ್ ಪದಾಹತಸ್ತಂಭವರಾದ್ಧಿಪೂರ್ವಮ್ ।
ತದಾ ನು ಕಾ ಸ್ತ್ರೀ ಸುಷುವೇ ಮುಕುಂದಂ ಸ ಕಸ್ಯ ವೀರ್ಯಾದಜನಿಷ್ಟ ಕಾಯಃ ॥ – ರು.ವಿ. (೧/೫೪)

ಪಿತೃಕ್ರಮಂ ಮೋಹನಾರ್ಥಂ ಸಮೇತಿ ನ ತಾವತಾ ಶುಕ್ಲತೋ ರಕ್ತತಶ್ಚ।
ಜಾತೋಽಸ್ಯ ದೇಹಸ್ತ್ವಿತಿ ದರ್ಶನಾಯ ಸಶಂಖಚಕ್ರಾಬ್ಜಗದಃ ಸ ದೃಷ್ಟಃ ॥ ೬೪ ॥

ಅ: ಪಿತೃಕ್ರಮವನ್ನು [೧]ಅಸುರಮೋಹನಕ್ಕೆಂದು ಹೊಂದುವನು. ಅಷ್ಟು ಮಾತ್ರಕ್ಕೆ ಅವನ ದೇಹ ಶುಕ್ಲದಿಂದ, ಶೋಣಿತದಿಂದ ಹುಟ್ಟಿದ್ದಲ್ಲ ಎಂದು ತಿಳಿಸಿ ಕೊಡಲಿಕ್ಕಾಗಿ ಶಂಖ, ಚಕ್ರ, ಪದ್ಮ, ಗದೆಗಳೊಂದಿಗೆ ಕೂಡಿದವನಾಗಿಯೇ ಅವನು ಕಾಣಿಸಿಕೊಂಡ.

ವಿ: ೧) ಮೇಲ್ನೋಟಕ್ಕೆ ಕೃಷ್ಣ ಶಂಖಚಕ್ರಗದಾಪದ್ಮಗಳಿಂದ ಕಾಣಿಸಿಕೊಂಡಿದ್ದು ಮಾತಾಪಿತೃಗಳಾದ ದೇವಕೀ, ವಸುದೇವರಿಗೆ ಮಾತ್ರ. ಆದರೆ ಅದು ಆಗಲೇ ಬ್ರಹ್ಮಾದಿದೇವತೆಗಳಿಗೆ ಹಾಗೆಯೇ ಕಂಡಿತು. ಭಾಗವತದಲ್ಲಿ ವ್ಯಾಸರೂಪದಿಂದ ಅದನ್ನು ಬರೆಯುವ ಮೂಲಕ ಸಮಸ್ತಸಜ್ಜನರಿಗೂ ಅವನೇ ತಿಳಿಸಿಕೊಟ್ಟಿರುವನು.

೨) ಭಗವಂತನ ಕೃಷ್ಣರೂಪವಲ್ಲದೆ, ಮತ್ಸ್ಯಕೂರ್ಮಾದಿಸಕಲರೂಪಗಳೂ ನರಸಿಂಹ–ರೂಪದಂತೆ ಪ್ರಕಟವಾಗುವವು ಮಾತ್ರ. ಅವನ ಯಾವ ರೂಪಕ್ಕೂ ಪ್ರಾಕೃತದೇಹ ಇಲ್ಲವೇ ಇಲ್ಲ.

೩) ಅಸುರಮೋಹನಕ್ಕೆಂದು ಕೃಷ್ಣರೂಪವನ್ನು ಮಾತಾಪಿತೃಕ್ರಮದಿಂದೆಂಬಂತೆ ಪ್ರಕಟಿ–ಸಿದರೂ, ಸಜ್ಜನರಿಗೆ ಅದನ್ನು ತಿಳಿಸಿಕೊಡಲೆಂದು ಶಂಖಚಕ್ರಪದ್ಮಗದಾಪಾಣಿಯಾಗಿಯೇ ಕಾಣಿಸಿ–ಕೊಂಡ ಎಂದು ತಿಳಿಯಬೇಕು. ಅವನು ವಸುದೇವದೇವಕಿಯರಿಂದಲೇ ಹುಟ್ಟಿದವನಾಗಿದ್ದರೆ, ಅವನೊಂದಿಗೆ ಆ ಶಂಖಚಕ್ರಾದಿಗಳು ಬಂದುದು [೨]ಎಲ್ಲಿಂದ? ವಸುದೇವ, ದೇವಕಿಯರ ಇತರ ಮಕ್ಕಳಾದ ಬಲರಾಮಾದಿಗಳು ಹಾಗೇನೂ ಹುಟ್ಟಿಲ್ಲವಷ್ಟೆ!

---

೧. ನಾವತಾರೇಷ್ವಪಿ ಹರೇರ್ದೇಹಃ ಶುಕ್ಲಾದಿಸಂಭವಃ।
ತಥಾಽಪಿ ಶುಕ್ಲಸಂಸ್ಥಃ ಸನ್ ಮಾತೃದೇಹಂ ಪ್ರವಿಶ್ಯ ಚ ॥
ವಿಲಾಪ್ಯ ಶುಕ್ಲಂ ತತ್ರೈವ ಕೇವಲಜ್ಞಾನರೂಪಕಃ।
ಉದೇತಿ ಭಗವಾನ್ ವಿಷ್ಣುಃ ಕಾಲೇ ಲೋಕಂ ವಿಮೋಹಯನ್ ॥
– ಭಾ.ತಾ.(೩/೨೫/೬) ಉದ್ಧೃತ ಮಹಾವಾರಾಹವಚನ

ಆವಿಶ್ಯ ಪಿತರಂ ವಿಷ್ಣುಃ ಸ್ವರೂಪೇಣೈವ ಮಾತರಮ್।
ವಿಡಂಬನಾರ್ಥಂ ಲೋಕಸ್ಯ ನಿರ್ಜಗಾಮಾಶ್ವಥಾವಿಶತ್।
ಆನಂದಮಾತ್ರದೇಹೇನ ಜಾತವತ್ ಸಂಪ್ರದೃಶ್ಯತೇ ॥ – ಭಾ.ತಾ.(೧೦/೩/೧೯)ಉದ್ಧೃತ ಪುರಾಣವಚನ

ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಮ್।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್ ॥ – ಗೀತಾ (೯/೧೧)

ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ ॥ – ಗೀತಾ (೪/೯)

ಅನೇಕಸೂರ್ಯಾಭಕಿರೀಟಯುಕ್ತೋ
ವಿದ್ಯುತ್ಪ್ರಭೇ ಕುಂಡಲೇ ಧಾರಯಂಶ್ಚ।
ಪೀತಾಂಬರೋ ವನಮಾಲೀ ಸ್ವನಂತ-
ಸೂರ್ಯೋರುದೀಪ್ತಿರ್ದದೃಶೇ ಗುಣಾರ್ಣವಃ ॥ ೬೫ ॥

ಅ: ಅನಂತಸೂರ್ಯರಂತೆ ಶೋಭಿಸುವ ಕಿರೀಟದಿಂದ ಕೂಡಿದವನಾಗಿ, ಮಿಂಚಿನಂತೆ ಕಂಗೊಳಿಸುವ ಎರಡು ಕುಂಡಲಗಳನ್ನೂ ಧರಿಸಿದವನಾಗಿ, ಪೀತಾಂಬರ ತೊಟ್ಟು, ವನಮಾಲೆ ಧರಿಸಿ, ಅನಂತಸೂರ್ಯರ ಶ್ರೇಷ್ಠಕಾಂತಿಯಿಂದ ಕೂಡಿದವನಾಗಿ ಗುಣಸಮುದ್ರನಾದ ಶ್ರೀಕೃಷ್ಣ ಕಾಣಿಸಿಕೊಂಡ.

ಏ: ೧) 'ಸಶಂಖಚಕ್ರಾಬ್ಜಗದಃ' ಎಂಬುದು ಉಪಲಕ್ಷಣ. [೩]ಭಾಗವತದಲ್ಲಿ ಹೇಳಿರುವ ಶ್ರೀವತ್ಸಕೌಸ್ತುಭಾದಿ ಇತರ ಎಲ್ಲವನ್ನೂ ಗ್ರಹಿಸಬೇಕು.

೨) ಶ್ರೀಕೃಷ್ಣ ಅವತರಿಸುವಾಗ ಶ್ರೀವತ್ಸಲಾಂಛನನೂ ಆಗಿದ್ದ. ಶ್ರೀವತ್ಸ ಒಂದರ್ಥದಲ್ಲಿ ಭೃಗುಮುನಿಯ ಪಾದಚಿಹ್ನೆ. ಅದು ಆಗಿದ್ದು ಮೂಲರೂಪದಲ್ಲಿ. ಕೃಷ್ಣರೂಪದಲ್ಲೂ ಅದು ಇತ್ತೆಂದರೆ ಕೃಷ್ಣನದು ಬೇರೆ ದೇಹ ಅಲ್ಲ; ಮೂಲರೂಪವೇ ಎಂದು ಸ್ಪಷ್ಟವಾಗುವುದಿಲ್ಲವೆ? [೪]ಎಂಬ [೫]ವಿಶೇಷಯುಕ್ತಿಯನ್ನು ಶ್ರೀವಾದಿರಾಜರು ನೀಡಿರುವರು.

---

೨. ಸ್ತುತಿಂ ಸ್ವಪಿತ್ರೋರವಧಾರ್ಯಯೋಽಸೌ ಬಭೂವ ಪಶ್ಚಾಚ್ಛಿಶುವೇಷಧಾರೀ।
ಅಸೂತ ತಂ ಕಾ ನು ತದಾ ಮೃಗಾಕ್ಷೀ ಪುರಾ ಪುರಾಣಾಕೃತಿಮಪ್ರಮೇಯಮ್ ॥
ಯದೀಹ ಜಾತೋ ವಸುದೇವವೀರ್ಯಾತ್ ತದಾ ಕುತಸ್ತಸ್ಯ ವಿಭೂಷಣಾನಿ।
ವರಾಂಬರಂ ಕೌಸ್ತುಭರತ್ನಮುದ್ಯತ್ಸುದರ್ಶನಂ ಶಂಖಗದಾದಿಜಾತಮ್ ॥
– ರುಕ್ಮಿಣೀಶವಿಜಯ (೧/೫೧, ೫೨)

೩. ತಮದ್ಭುತಂ ಬಾಲಕಮಂಬುಜೇಕ್ಷಣಾಂ ಚತುರ್ಭುಜಂ ಶಂಖಗದಾರ್ಯುದಾಯುಧಮ್ ।
ಶ್ರೀವತ್ಸಲಕ್ಷ್ಮಂ ಗಲಶೋಭಿಕೌಸ್ತುಭಂ ಪೀತಾಂಬರಂ ಸಾಂದ್ರಪಯೋದಸೌಭಗಮ್ ॥
ಮಹಾರ್ಹವೈಡೂರ್ಯಕಿರೀಟಕುಂಡಲತ್ವಿಷಾ ಪರಿಷ್ವಕ್ತಸಹಸ್ರಕುಂತಲಮ್ ।
ಉದ್ದಾಮಕಾಂಚ್ಯಂಗದಕಂಕಣಾದಿಭಿರ್ವಿರೋಚಮಾನಂ ವಸುದೇವ ಐಕ್ಷತ ॥ – ಭಾಗವತ (೧೦/೩/೯,೧೦)

೪. ಯದ್ವಿಷ್ಣಾಂಘ್ರ್ಯಂಕನಂ ವೈಕುಂಠಸ್ಥಮೂರ್ತೇರ್ಹಿ ವಕ್ಷಸಿ।
ತದೇವ ದೇವಕೀಗರ್ಭಜಾತಸ್ಯ ಕಿಲ ವಕ್ಷಸಿ ॥
ಅತಸ್ತದೇವ ಹಿ ಭವೇದಿದಂ ರೂಪಂ ನ ಚಾಪರಮ್ ।
ನ ಚೇತ್ ಕುಪ್ಯಂತಿ ಯೋಧಾನಾಂ ಕಲಾಕುಶಲಮಂತ್ರಿಣಃ ॥ –ಯುಕ್ತಿಮಲ್ಲಿಕಾ (ಶುದ್ಧಿ.೨೦,೨೧)

೩) ವನಮಾಲೆ[೧] ಎಂದರೆ ಸಕಲಋತುಗಳ ಪುಷ್ಪಗಳಿಂದ ಶೋಭಿಸುವ, ಮಧ್ಯದಲ್ಲಿ ಸ್ಥೂಲಕದಂಬಪುಷ್ಪಗಳಿಂದ ತುಂಬಿದ ಪಾದದವರೆಗೂ ಬರುವ ಮಾಲೆ ಎಂದರ್ಥ.

ಸ ಕಂಜಯೋನಿಪ್ರಮುಖೈಃ ಸುರೈಃ ಸ್ತುತಃ ಪಿತ್ರಾ ಚ ಮಾತ್ರಾ ಚ ಜಗಾದ ಶೂರಜಮ್ ।
ನಯಸ್ವ ಮಾಂ ನಂದಗೃಹಾನಿತಿ ಸ್ಮ ತತೋ ಬಭೂವ ದ್ವಿಭುಜೋ ಜನಾರ್ದನಃ ॥ ೬೬ ॥

ಅ: ಬ್ರಹ್ಮಾದಿದೇವತೆಗಳಿಂದಲೂ, ತಂದೆ ಮತ್ತು ತಾಯಿಯಿಂದಲೂ ಸ್ತುತಿಸಲ್ಪಟ್ಟ ಕೃಷ್ಣ ವಸುದೇವನಿಗೆ ಹೇಳಿದ: ''ನನ್ನನ್ನು ನಂದನ ಮನೆಗೆ ಕರೆದೊಯ್ಯಿ''. ಅನಂತರ ಅವನು ಎರಡು ತೋಳಿನವನಾದ.

ವಿ: ೧) ಅವತಾರಕಾಲದಲ್ಲಿ ಚತುರ್ಭುಜನಾಗಿ ಗೋಚರಿಸಿದ ಕೃಷ್ಣ ಈ ಹಂತದಲ್ಲಿ ದ್ವಿಭುಜನಾಗಿ ಕಾಣಿಸಿಕೊಂಡ ಎಂದರ್ಥ.

೨) ''ಕಂಸನ ಪಾಪದ ಕೊಡ ತುಂಬಲಿ. ಅವನ ಭೃತ್ಯರನ್ನೆಲ್ಲ ಮೊದಲು ಕೊಲ್ಲುವೆ; ಕೊನೆಗೆ ಅವನ ಸಾವು. ಈಗಲೇ ಕೊಲ್ಲುವುದು ಬೇಡ'' ಎಂಬ ಕಾರಣದಿಂದ ಕೃಷ್ಣ ಹಾಗೆ ನಂದಗೋಪನ ಬಳಿಗೆ [೨]ತೆರಳುತ್ತಿರುವನು ಎಂದು ತಿಳಿಯಬೇಕು.

೩) ನಂದಗೋಪ, ಯಶೋದೆಯರಿಗೂ ತಾನು ಪುತ್ರನಾಗಿ ಕಾಣಿಸಿಕೊಳ್ಳುವ ವರ ನೀಡಿರುವುದರಿಂದ ಕೃಷ್ಣ ಹಾಗೆ ತೆರಳಿದ ಎಂಬುದು ಮತ್ತೊಂದು ಕಾರಣ. ಕಾಲಿಯಮಥನ, ಗೋಗೋಪರ ಉದ್ಧಾರ ಮೊದಲಾದ ಇತರ [೩]ಅನೇಕಕಾರಣಗಳು ಇದರಂತೆ ಗ್ರಾಹ್ಯ.

ದುರ್ಗಾವತಾರ

ತದೈವ ಜಾತಾ ಚ ಹರೇರನುಜ್ಞಯಾ ದುರ್ಗಾಭಿಧಾ ಶ್ರೀರನು[೪] ನಂದಪತ್ನ್ಯಮ್ ।
ತತಸ್ತಮಾದಾಯ ಹರಿಂ ಯಯೌ ಸ ಶೂರಾತ್ಮಜೋ ನಂದಗೃಹಾನ್ ನಿಶೀಥೇ ॥ ೬೭ ॥

---

೧. ಆಪಾದಚುಂಬಿನೀ ಮಾಲಾ ವನಮಾಲೇತ್ಯಭಿಧೀಯತೇ । – ಪುರಾಣವಾಕ್ಯ

೨. ಯದೀಹ ವಾಸೋ ಮಮ ತರ್ಹಿ ಕಂಸಃ ಸುಹೃದ್ವಧಕ್ಲೇಶವಿದೂರ ಏವ ।
ಯಮಾತಿಥಿಃ ಸ್ಯಾದಿತಿ ವೀಕ್ಷ್ಯ ಕೃಷ್ಣಸ್ತತೋ ವ್ರಜಂ ಪ್ರತ್ಯಗಮತ್ ಸುಧೀಮಾನ್ ॥ – ರು.ವಿ. (೧/೫೬)

೩. ನ ಕಂಸಭೀತ್ಯಾ ऽಭಿಯಯೌ ವ್ರಜಂ ಸ ಸ್ವಸಂಶ್ರಿತಾನಾಮಭಯಸ್ಯ ಕರ್ತಾ ।
ಸ್ವವಲ್ಲಭಾಂ ನಂದಕಲತ್ರಜಾತಾಂ ಮನೋರಮಾಮೀಕ್ಷಿತುಮೇವ ಸೋ ऽಗಾತ್ ॥ – ರು.ವಿ. (೧/೫೭)

೪. ಅನು = ಕಿಂಚಿದನಂತರಂ ಅನುಕೂಲತಯಾ ಜಾತೇತಿ ಸಂಬಂಧಃ ॥ – (ವಾ.)

ಅ: ಶ್ರೀಕೃಷ್ಣಾವತಾರದ ಅನಂತರ ಆ ವೇಳೆಗೆ ಶ್ರೀಹರಿಯ ಆದೇಶದಂತೆ ಮಹಾಲಕ್ಷ್ಮಿಯು ದುರ್ಗೆಯೆಂಬ ಹೆಸರಿನಿಂದ ನಂದಪತ್ನಿಯಾದ ಯಶೋದೆಯಲ್ಲಿ ಅವತರಿಸಿದಳು. ಬಳಿಕ ವಸುದೇವ ಕೃಷ್ಣನನ್ನು ಕರೆದುಕೊಂಡು, ಆ ನಡುರಾತ್ರಿಯಲ್ಲಿ ನಂದನ ಮನೆಗೆ ತೆರಳಿದ.

ವಿ: ೧) ಈ ದುರ್ಗೆ ಶ್ರೀ, ಭೂ, ದುರ್ಗಾ ಎಂಬ ಮಹಾಲಕ್ಷ್ಮೀರೂಪಗಳಲ್ಲಿ ಸೇರಿದ ಮಹಾದುರ್ಗೆ. ಪಾರ್ವತೀದುರ್ಗೆಯಲ್ಲ.

೨) ಈ ದುರ್ಗೆ ಮಹಾಲಕ್ಷ್ಮಿಯಾದ್ದರಿಂದಲೇ ಈಕೆಗೂ ಶುಕ್ಲಶೋಣಿತಸಂಬಂಧದ ಪ್ರಾಕೃತದೇಹವಿಲ್ಲ ಎಂದು ತಿಳಿಯಬೇಕು.

೩) ಅಷ್ಟಮೀತಿಥಿಯ ಅಧಿದೇವತೆ ದುರ್ಗೆ. ಆದ್ದರಿಂದ ಅವಳು ಅಷ್ಟಮಿಯಂದು ಅವತರಿಸಿದ್ದರಲ್ಲಿ ಔಚಿತ್ಯವಿದೆ. ಕೃಷ್ಣಾಷ್ಟಮಿಯಂತೆ ದುರ್ಗಾಷ್ಟಮೀ ಎಂಬುದೂ ಪ್ರಸಿದ್ಧ.

೪) ಹಿಂದೆ ಹೇಳಿರುವಂತೆ ವಸುದೇವ, ನಂದಗೋಪರು ಅಣ್ಣತಮ್ಮಂದಿರು. ಆದ್ದರಿಂದ ಕೃಷ್ಣ ದುರ್ಗೆಯರು ಅಣ್ಣತಂಗಿಯರು ಎಂದು ತಿಳಿಯಬೇಕು. ಯಜ್ಞ, ದಕ್ಷಿಣೆಯರು ರುಚಿನಾಮಕ ಪ್ರಜಾಪತಿಗೆ ಆಕೂತಿಯಲ್ಲಿ ಒಟ್ಟಿಗೆ ಜನಿಸಿದ ಉಲ್ಲೇಖ ಭಾಗವತಪುರಾಣದಲ್ಲಿದೆ. ಇಲ್ಲಿ ಕೃಷ್ಣದುರ್ಗೆಯರು ಹೀಗೆ ಜನಿಸಿದ್ದು ವಿಶೇಷ.

೫) ಕೃಷ್ಣಾವತಾರವಾದ್ದರಿಂದ ಕಂಸನ ಕಡೆಯ ದೈತ್ಯರು ಮಲಗಿದ್ದರೆ, ದುರ್ಗಾರೂಪ–ವಾದ್ದರಿಂದ ನಂದನ ಕಡೆಯವರು ಮಲಗಿದ್ದರು. ಅಸುರರಿಗೆ ದೇವರ ಬಗ್ಗೆ ವಿಸ್ಮೃತಿ; ಸಾತ್ತ್ವಿಕರಿಗೆ ಸಂಪತ್ತಿನ ಬಗ್ಗೆ ವಿಸ್ಮೃತಿ.

ಗೋಕುಲಕ್ಕೆ ಶ್ರೀಕೃಷ್ಣ, ಮಧುರೆಗೆ ದುರ್ಗೆ

ಸಂಸ್ಥಾಪ್ಯ ತಂ ತತ್ರ ತಥೈವ[೧] ಕನ್ಯಕಾಮಾದಾಯ ತಸ್ಮಾತ್ ಸ್ವಗೃಹಂ ಪುನರ್ಯಯೌ ।
ಹತ್ವಾ ಸ್ವಸುರ್ಗರ್ಭಷಟ್ಕಂ ಕ್ರಮೇಣ ಮತ್ವಾಽಷ್ಟಮಂ ತತ್ರ ಜಗಾಮ ಕಂಸಃ ॥ ೬೮ ॥

ಅ: ವಸುದೇವ ಯಶೋದೆಯ ಬಳಿ ಕೃಷ್ಣನನ್ನಿರಿಸಿ, ಹಾಗೆಯೇ ಅಲ್ಲಿದ್ದ ದುರ್ಗೆಯನ್ನು ಎತ್ತಿಕೊಂಡು ಅಲ್ಲಿಂದ ಪುನಃ ತನ್ನ ನೆಲೆಗೆ ತೆರಳಿದ. ಆ ವೇಳೆಗೆ ತಂಗಿಯ ಆರು ಮಕ್ಕಳನ್ನು ಕ್ರಮವಾಗಿ ಕೊಂದಿದ್ದ ಕಂಸ ಅದನ್ನು ಎಂಟನೆಯದೆಂದು ತಿಳಿದು ಅಲ್ಲಿಗೆ ಧಾವಿಸಿದ.

ವಿ: ಕೃಷ್ಣನನ್ನು ಮಲಗಿಸಿದ ವಸುದೇವನ ಕೈಗೆ ತತ್ಕ್ಷಣ ದುರ್ಗೆ ಬಂದಳು. ಇದು ಭಗವಂತನನ್ನು ಆರಾಧಿಸುವವರಿಗೆ ಅಪಾರಸಂಪತ್ತು ದೊರಕುವುದಕ್ಕೆ ಸಂಕೇತ.

---

೧. ತಥೈವ = ಕೃಷ್ಣವದೇವ ॥ – (ವಾ.)

ಗರ್ಭಂ ದೇವಕ್ಯಾಃ ಸಪ್ತಮಂ ಮೇನಿರೇ ಹಿ
ಲೋಕಾಃ ಸುತಂ[೧] ತ್ವಷ್ಟಮಂ ತಾಂ ತತಃ ಸಃ ।
ಮತ್ವಾ ಹಂತುಂ ಪಾದಯೋಃ ಸಂಪ್ರಗೃಹ್ಯ
ಸಂಪೋಥಯಾಮಾಸ ಶಿಲಾತಲೇ ಚ ॥ ೬೯ ॥

ಅ: ದೇವಕಿಯ ಏಳನೆಯ ಗರ್ಭ ಸ್ರಾವಗೊಂಡಿತೆಂದು [೨]ಜನರು ತಿಳಿದರು. ಆದ್ದರಿಂದ ಕಂಸನು ಈಗಿನದು ಎಂಟನೆಯದೆಂದು ತಿಳಿದು, ಅದನ್ನು ಕೊಲ್ಲಲೆಂದು ಎರಡೂ ಕಾಲುಗಳನ್ನು ಹಿಡಿದುಕೊಂಡು, ಕಲ್ಲುಬಂಡೆಯ ಮೇಲೆ ಬಲವಾಗಿ ಅಪ್ಪಳಿಸಿದ.

ವಿ: ಅವನು ದೇವಕಿಯ ಮೊದಲ ಆರು ಪುತ್ರರನ್ನೂ ಅದೇ ರೀತಿಯಲ್ಲಿ ಸಂಹರಿಸಿದ್ದ.

ಕಂಸನಿಗೆ ದುರ್ಗೆಯ ಎಚ್ಚರಿಕೆ

ಸಾ ತದ್ಧಸ್ತಾತ್ಸ್ಯ ಕ್ಷಿಪ್ರಮುತ್ಪತ್ಯ ದೇವೀ ಖೇ[೩]ಽದೃಶ್ಯತೈವಾಷ್ಟಭುಜಾ[೪] ಸಮಗ್ರಾ ।
ಬ್ರಹ್ಮಾದಿಭಿಃ ಪೂಜ್ಯಮಾನಾ ಸಮಗ್ರೈರತ್ಯದ್ಭುತಾಕಾರವತೀ ಹರಿಪ್ರಿಯಾ ॥ ೭೦ ॥

ಅ: ಹರಿಪ್ರಿಯೆಯಾದ ದುರ್ಗಾದೇವಿ ತತ್ಕ್ಷಣ ಕಂಸನ ಕೈಯಿಂದ ಮೇಲೆ ಹಾರಿ, ಅಷ್ಟಭುಜಗಳುಳ್ಳವಳಾಗಿ ಸಮಗ್ರ ಕಾಣಿಸಿಕೊಂಡಳು. ಹಾಗೆ ಅತ್ಯದ್ಭುತಾಕಾರದಿಂದ ಕಾಣಿಸಿಕೊಂಡ ಅವಳನ್ನು ಬ್ರಹ್ಮಾದಿದೇವತೆಗಳೆಲ್ಲ ಪೂಜಿಸಿದರು.

---

೧. ಸೃತಂ (ಪಾಠಾಂತರ); ಸೃತಂ ಗಲಿತಂ ... । – (ವ.)

೨. ಗರ್ಭೇ ಪ್ರಣೀತೇ ದೇವಕ್ಯಾ ರೋಹಿಣೀಂ ಯೋಗನಿದ್ರಯಾ ।
ಅಹೋ ವಿಸ್ರಂಸಿತೋ ಗರ್ಭ ಇತಿ ಪೌರಾ ವಿಚುಕ್ರುಶುಃ ॥ – ಭಾಗವತ (೨/೨/೧೫)

೩. ಖ ಏವೇತ್ಯೇವಕಾರಸಂಬಂಧಃ ॥ – (ವಾ.)

೪. ಸಾ ತದ್ಧಸ್ತಾತ್ ಸಮುತ್ಪತ್ಯ ಸದ್ಯೋ ದೇವ್ಯಂಬರಂ ಗತಾ ।
ಅದೃಶ್ಯತಾನುಜಾ ವಿಷ್ಣೋಃ ಸಾಯುಧಾಷ್ಟಮಹಾಭುಜಾ ॥
ದಿವ್ಯಸ್ರಗಂಬರಾಲೇಪರತ್ನಾಭರಣಭೂಷಿತಾ ।
ಧನುಃಶೂಲೇಷುಚರ್ಮಾಸಿಶಂಖಚಕ್ರಗದಾಧರಾ ॥
ಸಿದ್ಧಚಾರಣಗಂಧರ್ವೈರಪ್ಸರಃಕಿನ್ನರೋರಗೈಃ ।
ಉಪಾಹೃತೋರುಬಲಿಭಿಃ ಸ್ತೂಯಮಾನೇದಮಬ್ರವೀತ್ ॥ – ಭಾಗವತ (೧೦/೪/೯-೧೧)

ಹಾರಶೋಭಿತಸರ್ವಾಂಗೀ ಮಕುಟೋಜ್ಜ್ವಲಭೂಷಿತಾ ।
ಕನ್ಯೈವ ಸಾಽಭವನ್ನಿತ್ಯಂ ದಿವ್ಯಾ ದೇವೈರಭಿಷ್ಟುತಾ ॥ – ಹರಿವಂಶ (೨/೪/೩೮)

ಏ: ೧) ಕಂಸ ಹಾಗೆ ಅಪ್ಪಳಿಸಹೊರಟಾಗ ದುರ್ಗೆ ಗಗನಕ್ಕೆ ನೆಗೆದು, ಅಷ್ಟಭುಜಗಳ ರೂಪವನ್ನು ತಾಳಿ ಕಾಣಿಸಿಕೊಂಡಳು. ಬ್ರಹ್ಮಾದಿದೇವತೆಗಳೆಲ್ಲ ಅವಳನ್ನು ಪೂಜಿಸಿದ್ದು ಆಕೆ ಮಹಾಲಕ್ಷ್ಮಿ ಎಂಬುದಕ್ಕೆ ಗಮಕ.

೨) ವಸುದೇವನ ಕೈಯಿಂದ ಜಾರದ ದುರ್ಗೆ ಕಂಸನ ಕೈಯಿಂದ ಜಾರಿ ಮೇಲೆ ಹಾರಿದಳು. 'ವಸುದೇವ' ಎಂದರೆ ವಸುವನ್ನು ಐಶ್ವರ್ಯವನ್ನು ದೇವನಾದ ಶ್ರೀಹರಿಯ ಪೂಜೆಗೆಂದು ವಿನಿಯೋಗಿಸುವ ಪರಮಸಾತ್ತ್ವಿಕಜೀವ ಎಂದರ್ಥ. ಅದಕ್ಕೆ ಅವನ ಕೈಯಲ್ಲಿ ಮಹಾಲಕ್ಷ್ಮಿ ಉಳಿದಳು. ಕಂಸ ಅವಳನ್ನು ಬಂಡೆಯ ಮೇಲೆ ಎಸೆಯಲು ಹೊರಟವನು. ಎಂದರೆ ಜಡಪದಾರ್ಥಗಳ ಮೇಲೆ ದುರ್ವಿನಿಯೋಗ ಮಾಡಲು ಹೊರಟವ. ಅದರಿಂದ ಲಕ್ಷ್ಮಿ ಅವನ ಕೈಯಲ್ಲಿ ಉಳಿಯಲಿಲ್ಲ. ಸದ್ವಿನಿಯೋಗ ಮಾಡದವರ ಬಳಿ ಎಂದೂ ಸಂಪತ್ತು ಉಳಿಯದು ಎಂಬ ತತ್ತ್ವ ಇದರಿಂದ ಸೂಚಿತ.

೩) ದುರ್ಗೆಯು ಅಷ್ಟಭುಜಗಳಲ್ಲಿ ಧರಿಸಿರುವ ಆಯುಧಗಳು ಕ್ರಮವಾಗಿ ಹೀಗಿವೆ : ಧನುಸ್ಸು, ಶೂಲ, ಬಾಣ, ಗುರಾಣಿ, ಖಡ್ಗ, ಶಂಖ, ಚಕ್ರ ಮತ್ತು ಗದಾ.

೪) ಶ್ರೀಕೃಷ್ಣ ಚತುರ್ಭುಜನಾಗಿ ಅವತರಿಸಿ ಬಳಿಕ ದ್ವಿಭುಜನಾದರೆ, ದುರ್ಗೆ ದ್ವಿಭುಜಳಾಗಿ ಅವತರಿಸಿ ಬಳಿಕ ಅಷ್ಟಭುಜದವಳಾದಳು ಎಂಬುದು ವಿಶೇಷ.

ಉವಾಚ ಚಾರ್ಯಾ[೧] ತವ ಮೃತ್ಯುರತ್ರ ಕ್ವಚಿತ್ ಪ್ರಜಾತೋ ಹಿ ವೃಥೈವ ಪಾಪ ।
ಅನಾಗಸೀಂ ಮಾಂ ವಿನಿಹಂತುಮಿಚ್ಛಸ್ಯಶಕ್ಯಕಾರ್ಯೇ ತವ ಚೋದ್ಯಮೋಽಯಮ್ ॥೭೧॥

ಅ: ಸರ್ವೋತ್ತಮಸ್ತ್ರೀಯಾದ ದುರ್ಗೆ ತಿಳಿಸಿದಳು ಸಹ : ''ಎಲೋ ಪಾಪಿ! ನಿನ್ನ ಮೃತ್ಯು ಇಲ್ಲಿಯೇ ಒಂದೆಡೆ ಜನಿಸಿಯಾಗಿದೆ. ನಿರ್ದೋಷಳಾದ ನನ್ನನ್ನು ನಿಷ್ಕಾರಣವಾಗಿ ಕೊಲ್ಲಬಯಸಿರುವಿ. ನಿನ್ನ ಈ ಪ್ರಯತ್ನ ಎಂದೂ ಸಫಲವಾಗದು.

ಉಕ್ತ್ವೇತಿ ಕಂಸಂ ಪುನರೇವ ದೇವಕೀತಲ್ಪೇಽಶಯದ್ಬಾಲರೂಪೈವ ದುರ್ಗಾ ।
ನಾಜ್ಞಾಸಿಷುಸ್ತಾಮಥ ಕೇಚನಾತ್ರ ಋತೇ ಹಿ ಮಾತಾಪಿತರೌ ಗುಣಾಢ್ಯಾಮ್ ॥ ೭೨ ॥

ಅ: ಕಂಸನಿಗೆ ಹೀಗೆ ಹೇಳಿ ದುರ್ಗೆ ದೇವಕಿಯ ಶಯನದಲ್ಲಿ ಶಿಶುರೂಪಳಾಗಿಯೇ ಮಲಗಿದಳು. ಗುಣಾಢ್ಯಳಾದ ಅವಳು ಅಲ್ಲಿ ಹಾಗೆ ಇದ್ದುದನ್ನು ತಂದೆತಾಯಿಗಳಾದ ದೇವಕಿವಸುದೇವರ ಹೊರತು ಬೇರಾರೂ ಅರಿಯಲಿಲ್ಲ; ಆಶ್ಚರ್ಯ!

---

೧. ಆರ್ಯಾ ಸರ್ವೋತ್ತಮಾ ದುರ್ಗಾ । – (ಜ.)

ವಿ: ಕೃಷ್ಣ ಅವತರಿಸಿ, ತನ್ನ ರೂಪವನ್ನು ತೋರಿ, ಶಿಶುರೂಪವನ್ನು ತಾಳಿದಂತೆ, ಅವನ ಪತ್ನಿಯಾದ ದುರ್ಗೆಯೂ ಹಾಗೆಯೇ ಮಾಡಿದಳು. ಇದು ಅವಳಿಗೂ ಪ್ರಾಕೃತದೇಹವಿಲ್ಲವೆಂಬುದಕ್ಕೆ ಮತ್ತೊಂದು ಪುರಾವೆಯಾಯಿತು. ದುರ್ಗೆ ಹಾಗೆ ಶಿಶುರೂಪದಲ್ಲಿ ಅವರೊಂದಿಗಿದ್ದ ವಿವರ [೧]ಹರಿವಂಶದಲ್ಲಿ ಬಂದಿದೆ.

ಕಂಸನ ಪಶ್ಚಾತ್ತಾಪ

ಶ್ರುತ್ವಾ ತಯೋಕ್ತಂ ತು ತದೈವ ಕಂಸಃ ಪಶ್ಚಾತ್ತಾಪಾದ್ವಸುದೇವಂ ಸಭಾರ್ಯಮ್ ।
ಪ್ರಸಾದಯಾಮಾಸ ಪುನಃ ಪುನಶ್ಚ ವಿಹಾಯ ಕೋಪಂ ಚ ತಮೂಚತುಸ್ತೌ ।
ಸುಖಸ್ಯ ದುಃಖಸ್ಯ ಚ ರಾಜಸಿಂಹ ನಾನ್ಯಃ ಕರ್ತಾ ವಾಸುದೇವಾದಿತಿ ಸ್ಮ ॥೭೩॥

ಅ: ಅವಳು ಹೇಳಿದ್ದನ್ನು ಕೇಳಿದ ಕಂಸ ಆಗಲೇ ಪಶ್ಚಾತ್ತಾಪದಿಂದ ಸಪತ್ನೀಕನಾದ ವಸುದೇವನನ್ನು ಮತ್ತೆ ಮತ್ತೆ ಪ್ರಸನ್ನನಾಗಲು ಬೇಡಿದ; ಅವರೂ ಕೋಪಗೊಳ್ಳದೆ ಅವನಿಗೆ ಹೇಳಿದರು : ''ಮಹಾರಾಜನೆ! ಸುಖಕ್ಕೂ ಮತ್ತು ದುಃಖಕ್ಕೂ ಶ್ರೀಹರಿಯ ಹೊರತು ಬೇರಾರೂ ಕಾರಣರಲ್ಲವಷ್ಟೆ!''.

ವಿ: ೧) ಕಂಸನ ಈ ಪಶ್ಚಾತ್ತಾಪದ ಮಾತುಗಳಿಗೆ ಅವನ ಒಳಗಿದ್ದ ಭೃಗುಮುನಿಯ ಆವೇಶ ಕಾರಣ. ಅವನು ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಪಶ್ಚಾತ್ತಾಪ ಪಟ್ಟಂತೆ ನಟಿಸಿ, ಅವರನ್ನು ವಂಚಿಸಿದ ಎಂದೂ ತಿಳಿಯಬಹುದು.

೨) ಕಂಸನು ವಸುದೇವದೇವಕಿಯರ ಎರಡೂ ಪಾದಗಳನ್ನು ಹಿಡಿದು ತನ್ನ ಅಪರಾಧ–ವನ್ನು ಮನ್ನಿಸಲು ಕೋರಿಕೊಂಡ ವಿವರ ಭಾಗವತ ಹಾಗೂ [೨]ಹರಿವಂಶಗಳಲ್ಲಿದೆ.

---

೧. ಸಾ ಕನ್ಯಾ ವವೃಧೇ ತತ್ರ ವೃಷ್ಣಿಸಂಘಸುಪೂಜಿತಾ ।
ಪುತ್ರವತ್ಪಾಲ್ಯಮಾನಾ ಸಾ ವಸುದೇವಾಜ್ಞಯಾ ತದಾ ॥ – ಹರಿವಂಶ (೨/೪/೪೬)

೨. ಕ್ಷಮಧ್ವಂ ಮಮ ದೌರಾತ್ಮ್ಯಂ ಸಾಧವೋ ದೀನವತ್ಸಲಾಃ ।
ಇತ್ಯುಕ್ತ್ವಾ ಽಶ್ರುಮುಖಃ ಪಾದೌ ಶ್ಯಾಲಸ್ತ್ವಸ್ಯೋರಥಾಗ್ರಹೀತ್ ॥ .....
ಭ್ರಾತುಃ ಸಮನುತಪ್ತಸ್ಯ ಕ್ಷಾಂತ್ವಾ ರೋಷಂ ಚ ದೇವಕೀ ।
ವ್ಯಸೃಜತ್ ವಸುದೇವಶ್ಚ ಪ್ರಹಸ್ಯ ತಮುವಾಚ ಹ ॥ – ಭಾಗವತ (೧೦/೪/೨೩, ೨೫)

ಏಷ ತೇ ಪಾದಯೋರ್ಮೂರ್ಧ್ನಾ ಪುತ್ರವತ್ ತವ ದೇವಕಿ ।
ಮದ್ಗತಸ್ತ್ಯಜ್ಯತಾಂ ರೋಷೋ ಜಾನಾಮ್ಯಪಕೃತಂ ತ್ವಯಿ ॥
ಇತ್ಯುಕ್ತವಂತಂ ಕಂಸಂ ಸಾ ದೇವಕೀ ವಾಕ್ಯಮಬ್ರವೀತ್ ।
ಸಾ ಽಶ್ರುಪೂರ್ಣಮುಖಾ ದೀನಾ ಭರ್ತಾರಮುಪವೀಕ್ಷತೀ ॥
ಉತ್ತಿಷ್ಠೋತ್ತಿಷ್ಠ ವತ್ಸೇತಿ ಕಂಸಂ ಮಾತೇವ ಜಲ್ಪತೀ । – ಹರಿವಂಶ (೨/೪/೫೬,೫೭)

೩) ಅವನು ದೇವಕಿಯ [೧]ಪಾದಗಳನ್ನು ಮುಟ್ಟಿ ಪ್ರಾರ್ಥಿಸಿಕೊಳ್ಳಲು ಅವಳು ಸೋದರಿಯಷ್ಟೇ ಆಗಿರದೆ, ಸೋದರತ್ತೆಯೂ ಆಗಿದ್ದಳು ಎಂಬುದೇ ಕಾರಣ.

೪) ಅವಳ ಎಂಟನೆಯ ಮಗು ತನ್ನನ್ನು ಕೊಲ್ಲುವುದೆಂದು ತಿಳಿದು ಅವಳ ಆರು ಜನ ಪುತ್ರರನ್ನು ಸಂಹರಿಸಿದ ಕಂಸ ಎಲ್ಲಿ? ಹಾಗೆ ಸಂಹರಿಸಿದ ಅವನ ತಪ್ಪನ್ನು ಎಲ್ಲಕ್ಕೂ ದೇವರು ಕಾರಣ ಎಂದು ಹೇಳುವ ದೇವಕಿ ಎಲ್ಲಿ? ಅವನದು ತಾಮಸಚಿಂತನೆ; ಇವಳದು ಸಾತ್ತ್ವಿಕಚಿಂತನೆ. ದೈವೀಸಂಪತ್ತು ಹಾಗೂ ಆಸುರೀಸಂಪತ್ತುಗಳಲ್ಲಿನ ಅಂತರವೆಂದರೆ ಇದೇ.

ಕಂಸ ನಡೆಸಿದ ಶಿಶುಹತ್ಯೆ

ಆನೀಯ ಕಂಸೋಽಥ ಗೃಹೇ ಸ್ವಮಂತ್ರಿಣಃ
ಪ್ರೋವಾಚ ಕನ್ಯಾವಚನಂ ಸಮಸ್ತಮ್ ।
ಶ್ರುತ್ವಾ ಚ ತೇ ಪ್ರೋಚುರತ್ಯಂತಪಾಪಾಃ
ಕಾರ್ಯಂ ಬಾಲಾನಾಂ ನಿಧನಂ [೨]ಸರ್ವಶೋಽಪಿ ॥ ೭೪ ॥

ಅ: ಬಳಿಕ ಕಂಸ ಅರಮನೆಗೆ ತನ್ನ ಮಂತ್ರಿಗಳನ್ನು ಕರೆಸಿಕೊಂಡು, ದುರ್ಗೆ ಹೇಳಿದ ಮಾತನ್ನೆಲ್ಲ ತಿಳಿಸಿದ. ಅದನ್ನು ಕೇಳಿ, ಮಹಾಪಾಪಿಗಳಾದ ಅವರು ನುಡಿದರು : ''ಎಲ್ಲ ಶಿಶುಗಳನ್ನೂ ಸಂಹರಿಸತಕ್ಕದ್ದು''.

ವಿ: ೧) ಕಂಸನದು ನಿಜಕ್ಕೂ ಪಶ್ಚಾತ್ತಾಪವಲ್ಲ; ಅದೊಂದು ಕಪಟ ಎನ್ನಲು ಇದು ಪುರಾವೆ. ಅವರ ಮುಂದೆ ದುಃಖಿಸಿದಂತೆ ನಟಿಸಿ, ಇಲ್ಲಿ ಪುನಃ ಕೃಷ್ಣನನ್ನು ಕೊಲ್ಲುವ ಯತ್ನವನ್ನೇ ಅವನು ಮುಂದುವರೆಸುತ್ತಿರುವನು. ಇದು ಅವನ ಸಹಜವಾದ ಕೃಷ್ಣದ್ವೇಷಕ್ಕೆ ಗಮಕ.

---

೧. ಕಾರಣಂ ತ್ವಂ ನ ವೈ ಪುತ್ರ ಕೃತಾಂತೋಽಷ್ಟತ್ರ ಕಾರಣಮ್ ॥
ಗರ್ಭಕರ್ತನಮೇತನ್ಮೇ ಸಹನೀಯಂ ತ್ವಯಾ ಕೃತಮ್ ।
ಪಾದಯೋಃ ಪತತಾ ಮೂರ್ಧ್ನಾ ಸ್ವಂ ಚ ಕರ್ಮ ಜುಗುಪ್ಸತಾ ॥
ಗರ್ಭೇ ತು ನಿಯತೋ ಮೃತ್ಯುರ್ಬಾಲ್ಯೇಽಪಿ ನ ನಿವರ್ತತೇ ।....
ಮೃತ್ಯುನಾಽಪಹೃತೇ ಪೂರ್ವಂ ಶೇಷೋ ಹೇತುಃ ಪ್ರವರ್ತತೇ ।
ವಿಧಿನಾ ಪೂರ್ವದೃಷ್ಟೇನ ಪ್ರಜಾಸರ್ಗೇಣ ತತ್ತ್ವತಃ ॥ – ಹರಿವಂಶ (೨/೪/೫೮,೫೯,೬೩)

—— ಇಲ್ಲಿಯ ಮೃತ್ಯು, ಕೃತಾಂತ ಎಂಬ ಪದಗಳಿಗೆ ವಿಷ್ಣು ಎಂದೇ ಅರ್ಥ :
'ಮೃತ್ಯುಃ ಸರ್ವಹರಶ್ಚಾಹಮ್ । –(ಗೀತಾ ೧೦/೩೪)

೨. ಸರ್ವತೋಽಪಿ – (ಪಾಠಾಂತರ)

೨) ಅವರೆಲ್ಲ ಅವನಿಗೆ ತಕ್ಕ ಮಂತ್ರಿಗಳೇ. ಕೃಷ್ಣನ ಸಂಹಾರಕ್ಕೆ ಅವರಿಗೆ ಹೊಳೆದ ಉಪಾಯ ಆ ಪ್ರಾಂತದ ಸರ್ವಶಿಶುಗಳನ್ನೂ ಸಂಹರಿಸುವುದು. ಆಸುರೀಚಿಂತನೆ ಎಂದರೆ ಇದೇ. ಜನಾರ್ದನನ ಮೇಲಿನ ದ್ವೇಷವನ್ನು ಜನತೆಯ ಮೇಲೂ ತೋರುವುದು. ಅದಕ್ಕೇ ಶಾಸ್ತ್ರಗಳು ಸಾರಿವೆ: 'ಹರಿದ್ರೋಹ ಸರ್ವನಾಶಕ್ಕೆ ಕಾರಣ'('ಕ್ಷಯಾಯ ಜಗತೋऽಹಿತಾಃ'). ಕೃಷ್ಣನಿಗೆ ನೈವೇದ್ಯ ಇಡೀ ಜಗತ್ತಿನ [೧]ಸಂತರ್ಪಣೆಯಾಗುವಂತೆ, ಕೃಷ್ಣದ್ರೋಹ ಸಮಸ್ತಲೋಕಕ್ಕೂ ದ್ರೋಹ.

ತಥೇತಿ ತಾಂಸ್ತತ್ರ ನಿಯುಜ್ಯ ಕಂಸೋ ಗೃಹಂ ಸ್ವಕೀಯಂ ಪ್ರವಿವೇಶ ಪಾಪಃ ।
ಚೇರುಶ್ಚ ತೇ ಬಾಲವಧೇ ಸದೋದ್ಯತಾ ಹಿಂಸಾವಿಹಾರಾಃ ಸತತಂ ಸ್ವಭಾವತಃ ॥೭೫॥

ಅ: ''ಹಾಗೆಯೇ ಆಗಲಿ'' ಎಂದು ಪಾಪಿಯಾದ ಕಂಸ ತನ್ನ ಮಂತ್ರಿಗಳನ್ನು ಆ ಕಾರ್ಯದಲ್ಲಿ ತೊಡಗಿಸಿ, ತನ್ನ ಅಂತಃಪುರಕ್ಕೆ ತೆರಳಿದ. ಸ್ವಾಭಾವಿಕವಾಗಿಯೇ ಸದಾ ಹಿಂಸೆಯಲ್ಲೇ ನಲಿಯುವ ಅವರು, ಶಿಶುಹತ್ಯೆಯಲ್ಲಿ ತೊಡಗಿಕೊಂಡು, ಸಂಚರಿಸತೊಡಗಿದರು.

ವಿ: ಹಿರಣ್ಯಕಶಿಪುವಿನದು ಪ್ರಹ್ಲಾದನನ್ನು ಕೊಲ್ಲುವ ಯತ್ನ; ಕಂಸನದು ಕೃಷ್ಣನನ್ನುಕೊಲ್ಲುವ ಯತ್ನ. ಇಬ್ಬರೂ ತಮ್ಮ ಯತ್ನದಲ್ಲಿ ವಿಫಲರಾದವರೇ. ಒಬ್ಬ ಹರಿದ್ರೋಹಿ; ಇನ್ನೊಬ್ಬ ಹರಿಭಕ್ತದ್ರೋಹಿ. ಕೊನೆಗೂ ಅವರು ಸತ್ತಿದ್ದು ಅವರು ದ್ವೇಷ ಮಾಡುತ್ತಿದ್ದ ಶ್ರೀಹರಿಯಿಂದಲೇ. ಹರಿಭಕ್ತನನ್ನೇ ಕೊಲ್ಲಲಾಗದ ಅವರು, ಹರಿಯನ್ನೆಂತು ಕೊಂದಾರು?

ಕೃಷ್ಣನನ್ನು ಕಂಡು ನಂದಯಶೋದೆಯರ ಸಂಭ್ರಮ

ಅಥ [೨]ಪ್ರಭಾತೇ ಶಯನೇ ಶಯಾನಮಪಶ್ಯತಾಮಬ್ಜದಲಾಯತಾಕ್ಷಮ್ ।
ಕೃಷ್ಣಂ ಯಶೋದಾ ಚ ತಥೈವ ನಂದ [೩]ಆನಂದಸಾಂದ್ರಾಕೃತಿಮಪ್ರಮೇಯಮ್ ॥ ೭೬ ॥

ಅ: ಮಾರನೆಯ ದಿನ ಬೆಳಿಗ್ಗೆ ಹಾಸಿಗೆಯಲ್ಲಿ ಪವಡಿಸಿದ್ದ, ಕಮಲದಳಗಳಂತಹ ವಿಶಾಲನೇತ್ರನೂ, ಆನಂದದ ಪೂರ್ಣಸ್ವರೂಪನೂ, ಅಪ್ರಮೇಯನೂ ಆದ ಕೃಷ್ಣನನ್ನು ಯಶೋದೆ ಹಾಗೂ ನಂದಗೋಪ ಕಂಡರು.

---

೧. ಹರಿರ್ಯತ್ರ ಗೃಹೇ ಭುಂಕ್ತೇ ತತ್ರ ಭುಂಕ್ತೇ ಜಗತ್ತ್ರಯಮ್ । – (ಸ್ಮೃತಿ)

೨ ಪ್ರಭಾತೇ ಪ್ರಕಾಶಮಾನೇ ಶಯನ ಇತ್ಯರ್ಥಃ । ಏತೇನ ನಿಶೀಥೇ ಪ್ರಶ್ರವಾತ್ ಪ್ರಾತಃ ಕಾಲಪರ್ಯಂತಂ ಕಥಂ ಜಾತಕರ್ಮಾದ್ಯಕರಣಮಿತಿ ನಿರಸ್ತಮ್ । – (ತಾ.)

೩. ಲೌಕಿಕಶಿಶುವೈಲಕ್ಷಣ್ಯಜ್ಞಾಪನಾಯೋಕ್ತಂ ಆನಂದೇತಿ । – (ತಾ.)

ವಿ: ಹುಟ್ಟಿದ ಮಗು ಯಾವುದು ಎಂದು ತಿಳಿಯುವ ಮುನ್ನವೇ ಎಚ್ಚರ ತಪ್ಪಿದ್ದ ಯಶೋದೆ, ಕಣ್ತೆರೆದಾಗ ಕಂಡಿದ್ದು ಪಕ್ಕದಲ್ಲಿ ಮಲಗಿದ್ದ ಶಿಶುರೂಪದ ಕೃಷ್ಣನನ್ನು. ಬಳಿಕ ಕೃಷ್ಣನನ್ನು ಕಂಡವನು ನಂದ. ಅವರು ಕಂಡ ಕ್ರಮವನ್ನು ಸಹ 'ಯಶೋದಾ ಚ ತಥೈವ ನಂದಃ' ಎಂಬುದಾಗಿ ತಿಳಿಸಿರುವರು.

ಮೇನಾತ ಏತೌ ನಿಜಪುತ್ರಮೇನಂ
ಸ್ರಷ್ಟಾರಮಬ್ಜಪ್ರಭವಸ್ಯ ಚೇಶಮ್ ।
ಮಹೋತ್ಸವಾತ್ ಪೂರ್ಣಮನಾಶ್ಚ ನಂದೋ
ವಿಪ್ರೇಭ್ಯೋ೬ದಾಲ್ಲಕ್ಷಮಿತಾಸ್ತದಾ ಗಾಃ [೧] **॥೭೭॥**

ಅ: ಅವರಿಬ್ಬರೂ ಕಮಲಸಂಭವರಾದ ಬ್ರಹ್ಮನಿಗೂ ತಂದೆಯಾದವನೂ, ಸ್ವಾಮಿಯಾದವನೂ ಆದ ಕೃಷ್ಣನನ್ನು ತಮ್ಮ ಮಗನೆಂದು ಭಾವಿಸಿದರು. ಹರ್ಷಾತಿರೇಕದಿಂದ ಮನಸ್ಸು ತುಂಬಿದ ನಂದ ವಿಪ್ರರಿಗೆ ಲಕ್ಷಗಟ್ಟಲೆ ಗೋವುಗಳನ್ನು ದಾನ ಮಾಡಿದನು.

ವಿ: ೧) ನಂದ ಎರಡು ಲಕ್ಷ ಗೋದಾನ ಮಾಡಿದನೆಂದು ಜನಾರ್ದನೀಯದಲ್ಲಿದೆ. ಭಾಗವತದಲ್ಲಿ ನಿಯುತ ಗೋವುಗಳನ್ನು ದಾನ ಮಾಡಿದ ಉಲ್ಲೇಖವಿದೆ. ನಿಯುತ ಎಂದರೆ ಲಕ್ಷ ಹಾಗೂ ಹತ್ತು ಲಕ್ಷ ಎಂಬ ಅರ್ಥಗಳುಂಟು. ಇಲ್ಲಿ ಎರಡು ಲಕ್ಷವೆಂದು ಅಭಿಪ್ರಾಯ ಎಂದರ್ಥ.

೨) ಕೃಷ್ಣಾವತಾರವಾಗುತ್ತಿದ್ದಂತೆಯೇ ವಸುದೇವ ಹತ್ತುಸಹಸ್ರಗೋವುಗಳನ್ನು ದಾನ ಮಾಡುವ ಸಂಕಲ್ಪ ಮಾಡಿದ ಉಲ್ಲೇಖ [೨]ಭಾಗವತದಲ್ಲಿದೆ.

೩) ನಂದ ಅಷ್ಟು ಅಪಾರಸಂಖ್ಯೆಯಲ್ಲಿ ಗೋದಾನ ಮಾಡಿದ ಕಾರ್ಯವನ್ನು ಶ್ರೀವಾದಿರಾಜರು ಅಪೂರ್ವರೀತಿಯಲ್ಲಿ [೩]ಉತ್ಪ್ರೇಕ್ಷಿಸಿರುವರು.

---

೧. ಲಕ್ಷಮಿತಾಃ ಲಕ್ಷಾಭ್ಯಾಂ ಮಿತಾಃ ಲಕ್ಷದ್ವಯಸಂಖ್ಯಾಕಾಃ ಗಾಃ ಅದಾತ್ । 'ಧೇನೂನಾಂ ನಿಯುತೇ ಪ್ರಾದಾತ್' ಇತಿ ಭಾಗವತೇ। – (ಜ.)

೨. ಸ ವಿಸ್ಮಯೋತ್ಫುಲ್ಲವಿಲೋಚನೋ ಹರಿಂ ಸುತಂ ವಿಲೋಕ್ಯಾನಕದುಂದುಭಸ್ತದಾ ।
ಕೃಷ್ಣಾವತಾರೋತ್ಸವಸಂಭ್ರಮೋ೬ಸ್ಪೃಶನ್ಮುದಾ ದ್ವಿಜೇಭ್ಯೋ೬ಯುತಮಾಪ್ಲುತೋ ಗವಾಮ್ ॥
– ಭಾಗವತ (೧೦/೪/೧೧)

ಅಸ್ಪೃಶತ್ ದಾಸ್ಯಾಮೀತಿ ಮನಸಾ ಸಂಕ್ಲಪ್ತವಾನ್ । ಮುದಾ ಆಪ್ಲುತಃ ॥ – ಶ್ರೀವಿಜಯಧ್ವಜತೀರ್ಥರು

೩. ಸ ನಂದಗೋಪಃ ಪ್ರದದೌ ದ್ವಿಜೇಭ್ಯೋ ಬಹೂನಿ ಗೋರೂಪಧನಾನಿ ವಿಷ್ಣೋಃ ।
ತಟೇಷು ಗೋಭಿಃ ಸಹ ಸಂಚರಿಷ್ಣೋಃ ಸಹಸ್ರಶಸ್ತಾ ಇತಿ ಸಾಧಯಿಷ್ಯನ್ ॥ – ರು.ವಿ. (೨/೧೬)

ಸುವರ್ಣರತ್ನಾಂಬರಭೂಷಣಾನಾಂ
ಬಹೂನಿ ಗೋಜೀವಿಗಣಾಧಿನಾಥಃ ।
ಪ್ರಾದಾದಥೋಪಾಯನಪಾಣಯಸ್ತಂ
ಗೋಪಾ ಯಶೋದಾಂ ಚ ಮುದಾ ಸ್ತ್ರಿಯೋಽಗಮನ್ ॥ ೭೮ ॥

ಅ: ಗೋಪರ ಗುಂಪಿನ ಒಡೆಯನಾದ ನಂದ ಚಿನ್ನ, ರತ್ನ, ವಸ್ತ್ರ ಆಭರಣಗಳನ್ನು ಅಪಾರಸಂಖ್ಯೆಯಲ್ಲಿ ದಾನ ಮಾಡಿದ.ಗೋಪರೆಲ್ಲ ಕಾಣಿಕೆಗಳನ್ನು ಹಿಡಿದುಕೊಂಡು, ಆನಂದದಿಂದ ನಂದನ ಬಳಿಗೆ ಧಾವಿಸಿದರು. ಗೋಪಸ್ತ್ರೀಯರೂ ಸಹ ಆನಂದದಿಂದ ಯಶೋದೆಯ ಬಳಿ ನೆರೆದರು.

ಗತೇಷು ತತ್ರೈವ ದಿನೇಷು ಕೇಷುಚಿಜ್ಜಗಾಮ ಕಂಸಸ್ಯ ಗೃಹಂ ಸ ನಂದಃ ।
ಪೂರ್ವಂ ಹಿ ನಂದಃ ಸ ಕರಂ ಹಿ ದಾತುಂ ಬೃಹದ್ವನಾನ್ನಿಃಸೃತಃ ಪ್ರಾಪ ಕೃಷ್ಣಾಮ್ ॥೭೯॥

ಸಹಾಗತಾ ತೇನ ತದಾ ಯಶೋದಾ ಸುಷಾವ ದುರ್ಗಾಮಥ ತತ್ರ ಶೌರಿಃ ।
ನಿಧಾಯ ಕೃಷ್ಣಂ ಪ್ರತಿಗೃಹ್ಯ ಕನ್ಯಕಾಂ ಗೃಹಂ ಯಯೌ ನಂದ ಉವಾಸ ತತ್ರ ॥ ೮೦ ॥

ಅ: ಅಲ್ಲಿಯೇ ಕೆಲವು ದಿನಗಳು ಕಳೆದ ಮೇಲೆ ನಂದ ಕಂಸನ ಮನೆಗೆ ತೆರಳಿದ. ನಂದ ಆ ಮುನ್ನ ಬೃಹದ್ವನದಿಂದ ಹೊರಟು ಕಂಸನಿಗೆ ಕಪ್ಪ ನೀಡಲೆಂದು ಬಂದು ಯಮುನೆಯ ತೀರದಲ್ಲಿ ತಂಗಿದ್ದ. ಅವನೊಂದಿಗೆ ಬಂದಿದ್ದ ಯಶೋದೆ ಅಲ್ಲಿಯೇ ದುರ್ಗೆಯನ್ನು ಹೆತ್ತಳು. ಅಲ್ಲಿಗೆ ಬಂದ ವಸುದೇವ ಕೃಷ್ಣನನ್ನು ಇರಿಸಿ, ದುರ್ಗೆಯನ್ನು ಎತ್ತಿಕೊಂಡು ಮನೆಗೆ ಹಿಂತಿರುಗಿದ್ದ. ನಂದ ಅಲ್ಲಿಯೇ ನೆಲೆಸಿದ್ದ.

---

೧. ಸುವರ್ಣರತ್ನಾಂಬರೈರ್ಭೂಷಣಾನಿ ಯಾಸಾಂ ತಾಃ ತಾಸಾಂ ಗವಾಂ ಬಹೂನಿ= ವೃಂದಾನಿ ಚ ಪ್ರಾದಾದಿತಿ ಸಂಬಂಧಃ । ತೂಷ್ಣೀಂ ಗವಾಂ ಲಕ್ಷಂ ದತ್ತವಾನ್ ಅಲಂಕೃತಾ ಗಾಶ್ಚ ಬಹ್ವೀರ್ದತ್ತವಾನಿತಿ ಭಾವಃ । ಸುವರ್ಣರತ್ನಾಂಬರಭೂಷಣಾನಾಂ ವೃಂದಾನಿ ಚ ಪ್ರಾದಾದಿತಿ ಪ್ರತ್ಯೇಕಂ ವಾ ಸಂಬಂಧಃ ॥ – (ವಾ.)

ತೂಷ್ಣೀಂ ಗವಾಂ ಲಕ್ಷಂ ದತ್ತವಾನ್ ಅಲಂಕೃತಾಶ್ಚ ಬಹ್ವೀಃ ದತ್ತವಾನಿತಿ ಭಾವಃ । ಯದ್ವಾ ಸುವರ್ಣಾದೀನಾಂ ಬಹ್ವೀಃ ದತ್ತವಾನಿತಿ ಭಾವಃ । – (ತಾ.)

೨. ಬೃಹದ್ವನಾನ್ನಿರ್ಗತೋ ನಂದಃ ಬೃಹದ್ವನಸ್ಯ ಪಶ್ಚಿಮದಿಕ್ಸ್ಥಾಂ ಕ್ರೋಶದ್ವಯವ್ಯವಹಿತಾಂ ಮಧುರಾಂ ಗಂತುಂ ಮಹಾವನಾಂತರಂಗಾಂ ಯಮುನಾಂ ಪ್ರಾಪೇತಿ ಭಾವಃ ॥ – (ಜ.)

ಕಂಸಸ್ಯ ಕರದಾನಾಯ ತತ್ರೈವಾಭ್ಯಾಗತಾಂಸ್ತಟೇ ।
ನಂದಾದೀನ್ ಗೋಪವೃದ್ಧಾಂಶ್ಚ ಯಮುನಾಯಾಂ ದದರ್ಶ ಸಃ ॥ - ಇತಿ ವಿಷ್ಣುಪುರಾಣೇ ।

ಏ: ಬೃಹದ್ವನ ನಂದನ ಸ್ಥಳ. ಅವನು ಕಂಸನಿಗೆ ಆ ವರ್ಷದ ಕಪ್ಪ ನೀಡಲೆಂದು ಮಧುರೆಗೆ ಹೊರಟಿದ್ದ. ಯಮುನೆಯ ತೀರದವರೆಗೂ ಬಂದು, ಅಲ್ಲಿ ನೆಲೆಸಿದ್ದಾಗ ಯಶೋದೆ ದುರ್ಗೆಯನ್ನು ಹೆತ್ತಳು. ವಸುದೇವ ಕೃಷ್ಣನನ್ನು ಮಲಗಿಸಿ, ದುರ್ಗೆಯನ್ನು ಕರೆದೊಯ್ದದ್ದು ಅಲ್ಲಿಂದಲೇ. ಆ ವೇಳೆಗೆ ಯಶೋದೆ ಹೆತ್ತಿದ್ದರಿಂದ ಅಲ್ಲಿಯೇ ಕೆಲವು ದಿವಸ ವಾಸವನ್ನು ಮುಂದುವರೆಸಿದ. ಮಧುರೆಗೂ, ಗೋಕುಲಕ್ಕೂ ಒಂದು ರಾತ್ರಿಯ ಅಲ್ಪಸಮಯದಲ್ಲಿ ಹೋಗಿಬರಲು ಸಾಧ್ಯವಿಲ್ಲ. ಎಂದ ಮೇಲೆ ವಸುದೇವ ಆ ನಡುರಾತ್ರಿಯಲ್ಲಿ ಅಷ್ಟು ಸಮಯದಲ್ಲಿ ಶಿಶುಗಳನ್ನು ಬದಲಾಯಿಸಲು ಹೇಗೆ ಸಾಧ್ಯವಾಯಿತು? ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ವಸುದೇವ ಗೋಕುಲಕ್ಕೇನೂ ಹೋಗಬೇಕಿ–ರಲಿಲ್ಲ. ನಂದ ಯಮುನಾನದಿಯ ಆ ಬದಿಯ ತೀರದಲ್ಲಿ ಬೀಡುಬಿಟ್ಟಿದ್ದರಿಂದ ಹಾಗೆ ಹೋಗಿಬಂದದ್ದು ಸರ್ವಥಾ ಅಸಂಭಾವ್ಯವಲ್ಲ ಎಂದರ್ಥ.

ನಿರುಷ್ಯ ತಸ್ಮಿನ್ ಯಮುನಾತಟೇ ಸ ಮಾಸಂ ಯಯೌ ದ್ರಷ್ಟುಕಾಮೋ ನರೇಂದ್ರಮ್ ॥
ರಾಜ್ಞೋಽಥ ತಂ ದತ್ತಕರಂ ದದರ್ಶ ಶೂರಾತ್ಮಜೋ ವಾಕ್ಯಮುವಾಚ ಚೈನಮ್ ೮೧

ಅ: ನಂದ ಆ ಯಮುನೆಯ ತಟದಲ್ಲಿ ಒಂದು ತಿಂಗಳು ನೆಲೆಸಿ, ಕಂಸನನ್ನು ಕಾಣಲೆಂದು ಹೊರಟ. ರಾಜನಿಗೆ ಅವನು ಕರ ಒಪ್ಪಿಸಿಯಾದ ಮೇಲೆ ವಸುದೇವ ನಂದನನ್ನು ಕಂಡು ಹೀಗೆ ತಿಳಿಸಿದ.

ಪೂತನಾ ಸಂಹಾರ

ಯಾಹ್ಯುತ್ಪಾತಾಃ ಸಂತಿ ತತ್ರೇತ್ಯುದೀರಿತೇ ಜಗಾಮ ಶೀಘ್ರಂ ಯಮುನಾಂ ಸ ನಂದಃ ।
ರಾತ್ರಾವೇವಾಗಚ್ಛಮಾನೇ ತು ನಂದೇ ಕಂಸಸ್ಯ ಧಾತ್ರೀ ತು ಜಗಾಮ ಗೋಷ್ಠಮ್ ೮೨

ಅ: ''ಅನರ್ಥಸೂಚಕ ಶಕುನಗಳು ಕಾಣುತ್ತಿವೆ; ಬೇಗ ಹೊರಡು'' ಎಂದು ಅವನು ತಿಳಿಸಲು, ನಂದ ಯಮುನೆಯತ್ತ ತ್ವರೆಯಿಂದ ನಡೆದ. ರಾತ್ರಿಯಲ್ಲಿ ಅವನು ಹಾಗೆ ಹಿಂತಿರುಗುವ ಮುನ್ನವೇ, ಆ ಗೋಕುಲದ ಬಳಿ ಕಂಸನ ದಾದಿ ತೆರಳಿದಳು.

ಸಾ ಪೂತನಾ ನಾಮ ನಿಜಸ್ವರೂಪಮಾಚ್ಛಾದ್ಯ ರಾತ್ರೌ ಶುಭರೂಪವಚ್ಚ ।
ವಿವೇಶ ನಂದಸ್ಯ ಗೃಹಂ ಬೃಹದ್ವನಪ್ರಾಂತೇ ಹಿ ಮಾರ್ಗೇ ರಚಿತಂ ಪ್ರಯಾಣೇ ॥೮೩॥

ಅ: ಪೂತನೆ ಎಂಬ ಅವಳು ತನ್ನ ನಿಜರೂಪವನ್ನು ಮರೆಮಾಚಿಕೊಂಡು, ಒಳ್ಳೆಯ ರೂಪವನ್ನು ತಾಳಿ ಬೃಹದ್ವನದ ಸೀಮೆಯಲ್ಲಿ ಪ್ರಯಾಣಮಾರ್ಗದಲ್ಲಿ ನಿರ್ಮಿತವಾಗಿದ್ದ ನಂದನ ಶಿಬಿರವನ್ನು ಹೊಕ್ಕಳು.

[೧]ತೀರೇ ಭಗಿನ್ಯಾಸ್ತು ಯಮಸ್ಯ ವಸ್ತ್ರ-
ಗೃಹೇ ಶಯಾನಂ ಪುರುಷೋತ್ತಮಂ ತಮ್ ।
ಜಗ್ರಾಹ ಮಾತ್ರಾ ತು ಯಶೋದಯಾ ತಯಾ
ನಿದ್ರಾಯುಜಾ ಪ್ರೇಕ್ಷ್ಯಮಾಣಾ ಶುಭೇವ ॥ ೮೪ ॥

ಅ: ಯಮುನಾತೀರದ ಆ ಶಿಬಿರದಲ್ಲಿ ಮಲಗಿದ್ದ ಶಿಶುರೂಪದ ಆ ಕೃಷ್ಣನನ್ನು ಎತ್ತಿಕೊಂಡಳು. ನಿದ್ರೆಯ ಮಂಪರಿನಲ್ಲಿದ್ದ ಯಶೋದೆಗೆ ಅವಳು ಒಳ್ಳೆಯವಳಂತೆಯೇ ಕಂಡಳು.

ತನ್ಮಾಯಯಾ ಧರ್ಷಿತಾ ನಿದ್ರಯಾ ಚ ನ್ಯವಾರಯನ್ನೈವ ಹಿ ನಂದಜಾಯಾ ।
ತಯಾ ಪ್ರದತ್ತಂ ಸ್ತನಮೀಶಿತಾऽಸುಭಿಃ ಪಪೌ ಸಹೈವಾಶು ಜನಾರ್ದನಃ ಪ್ರಭುಃ ೮೫

ಅ: ಅವಳ ಮಾಯೆಯಿಂದಲೂ ಹಾಗೂ ನಿದ್ರೆಯಿಂದಲೂ ಪೀಡಿತಳಾದ ಯಶೋದೆ ಅವಳನ್ನು ತಡೆಯಲೇ ಇಲ್ಲ. ಅವಳು ನೀಡಿದ ಸ್ತನವನ್ನು ಪ್ರಭುವಾದ ಶ್ರೀಕೃಷ್ಣ ಅವಳ ಪ್ರಾಣಗಳೊಂದಿಗೆ ಕೂಡಲೆ ಹೀರಿದ.

ವಿ: ಪೂತನಿ ನೀಡಿದ ಹಾಲು ಅವಳ ಪ್ರಾಣಕ್ಕೇ ಸಂಚಕಾರವಾಯಿತು. ಚಾತುರ್ಮಾಸ್ಯದ ಕ್ಷೀರವ್ರತದಲ್ಲಿ ಭಗವಂತನಿಗೆ ಅರ್ಪಿಸುವ ಹಾಲೂ(ಹಾಲಿನಿಂದ ತಯಾರಾದ ಪದಾರ್ಥಗಳೂ) ಸಹ ಪೂತನಿಯ ಹಾಲಿನಂತೆ ನಿಷಿದ್ಧ. ಹಾಗೆ ಅರ್ಪಿಸುವವರಿಗೆ ಮದ್ಯಪಾನ ಮಾಡಿದ ಪಾಪ ಎಂದು [೨]ಆದಿತ್ಯಪುರಾಣ ಸಾರಿದೆ.

ಮೃತಾ ಸ್ವರೂಪೇಣ ಸುಭೀಷಣೇನ ಪಪಾತ ಸಾ ವ್ಯಾಪ್ಯ ವನಂ ಸಮಸ್ತಮ್ ।
ತದಾऽಗಮನ್ನಂದಗೋಪೋऽಪಿ ತತ್ರ ದೃಷ್ಟ್ವಾ ಚ ಸರ್ವೇऽಪ್ಯಭವನ್ ಸುವಿಸ್ಮಿತಾಃ ೮೬

ಅ: ತುಂಬ ಭಯಂಕರವಾದ ನಿಜರೂಪದಿಂದ ವನವನ್ನೆಲ್ಲ ವ್ಯಾಪಿಸಿ, ಆ ಪೂತನಿ ಸತ್ತುಬಿದ್ದಳು. ಆ ವೇಳೆಗೆ ನಂದಗೋಪನೂ ಅಲ್ಲಿಗೆ ಬಂದ. ಎಲ್ಲರೂ ನೋಡಿ, ಬಹಳ ಸೋಜಿಗಪಟ್ಟರು.

---

೧. ತೀರೇ ರಚಿತೇ ವಸ್ತ್ರಗೃಹೇ ವಸ್ತ್ರಕಗೃಹೇ । – (ಜ.)
ವಸ್ತ್ರಸ್ಥಾಪನಾರ್ಥಂ ರಚಿತೇ ಗೃಹೇ । – (ವ.)

೨. ಕ್ಷೀರೇ ಪೀತೇ ತೃತೀಯೇ ತು ಸುರಾ ಪೀತಾ ನ ಸಂಶಯಃ । – ಆದಿತ್ಯಪುರಾಣ

ವಿ: ಕೃಷ್ಣನಿಂದ ಹತಳಾದ ಪೂತನಿ ತನ್ನ ನಿಜರೂಪವನ್ನು ತಾಳಿ ಬಿದ್ದಳು. ಹಾಗೆ ಅಂತ್ಯಕಾಲದಲ್ಲಿ ನಿಜರೂಪ ಒದಗುವುದು ಅನಿವಾರ್ಯ. ಕುಂಭಕರ್ಣ ಮೊದಲಾದವರೆಲ್ಲ ಹಾಗೆ ಅಂತ್ಯಕಾಲದಲ್ಲಿ ನಿಜರೂಪ ತಾಳಿದ ವಿವರ ಈಗಾಗಲೇ ಬಂದಿದೆ (೮/೧೩೧, ೧೩೨).

ಪೂತನಿಗೆ ತಮಸ್ಸು; ಉರ್ವಶಿಗೆ ಸ್ವರ್ಗ

ಸಾ ತಾಟಕಾ ಚೋರ್ವಶೀಸಂಪ್ರವಿಷ್ಟಾ ಕೃಷ್ಣಾವಧ್ಯಾನಾನ್ನಿರಯಂ ಸಂಜಗಾಮ ।
ಸಾ ತೂರ್ವಶೀ ಕೃಷ್ಣಭುಕ್ತಸ್ತನೇನ ಪೂತಾ ಸ್ವರ್ಗಂ ಪ್ರಯಯೌ ತತ್ಕ್ಷಣೇನ ॥ ೮೭ ॥

ಅ: ಉರ್ವಶಿಯ ಆವೇಶ ಹೊಂದಿದ್ದ ತಾಟಕೆಯೇ ಆ ಪೂತನಿ. ಶ್ರೀಕೃಷ್ಣನನ್ನು ಕೊಲ್ಲಲು ಪ್ರಯತ್ನಿಸಿದ್ದರಿಂದಾಗಿ ತಮಸ್ಸಿಗೆ ತೆರಳಿದಳು. ಒಳಗಿದ್ದ ಉರ್ವಶೀ ಕೃಷ್ಣ ಕುಡಿದ ಸ್ತನದಿಂದಾಗಿ ಪಾವನಳಾಗಿ ಆ ಕ್ಷಣದಲ್ಲೇ [೧]ಸ್ವರ್ಗ ಸೇರಿದಳು.

ವಿ: ೧) ಶ್ರೀರಾಮನಿಂದ ಹತಳಾಗಿದ್ದ ತಾಟಕೆ ಈಗ ಪೂತನಿಯಾಗಿ ಜನಿಸಿ, ಕೃಷ್ಣನನ್ನು ಕೊಲ್ಲಬಂದಿದ್ದಳು. ತರುಣನಾಗಿದ್ದ ರಾಮನಿಂದ ಹತಳಾಗಿದ್ದ ಅವಳಿಗೆ ಶಿಶುರೂಪದ ಕೃಷ್ಣನನ್ನು ಕೊಲ್ಲುವುದು ಶಕ್ಯ ಎಂಬ ಭ್ರಮೆ ಹಾಗೆ ಬರಲು ಕಾರಣವಾಗಿತ್ತು. ಹಾಗೆ ಬರುವಾಗ ತನ್ನ ಸ್ತನಗಳಲ್ಲಿ [೨]ಕಾಲಕೂಟವನ್ನು ತುಂಬಿಸಿಕೊಂಡೇ ಬಂದಿದ್ದಳು. ಆದರೆ ಅದರಿಂದ ತಾನೇ ಹತಳಾದಳು.

೨) ತಾಟಕೆ ಕೇವಲ ರಾಕ್ಷಸಿ. ಪೂತನಿಯಾಗಿ ಜನಿಸಿದಾಗ ಅವಳಲ್ಲಿ ಉರ್ವಶಿಯ ಆವೇಶವಿತ್ತು. ಅಸುರಳಾದ ತಾಟಕೆ ತಮಸ್ಸಿಗೆ ತೆರಳಿದರೆ, ಯೋಗ್ಯಳಾದ ಉರ್ವಶೀ ಸ್ವರ್ಗಕ್ಕೆ ತೆರಳಿದಳು. ಕಾಲಕೂಟ ನೀಡಿದ ಪಾಪ ಅವಳ ಅನರ್ಥಕ್ಕೆ ಕಾರಣವಾದರೆ, ಸ್ತನ್ಯಪ್ರಾಶನ ಮಾಡಿಸಿದ ಪುಣ್ಯ ಉರ್ವಶಿಯ ಉದ್ಧಾರಕ್ಕೆ ಕಾರಣವಾಯಿತು. ಒಂದೇ ದೇಹದಲ್ಲಿ ನೆಲೆಸಿದ್ದ ಇಬ್ಬರು ಜೀವರ ಸಾಧನೆ ಅವರ ಯೋಗ್ಯತೆಗೆ ತಕ್ಕಂತೆ ಹೇಗೆ ವಿಭಿನ್ನವಾಗುವುದು ಎಂಬುದಕ್ಕೆ ಇದೊಂದು ಉತ್ತಮನಿದರ್ಶನ.

೩) ಆದಿಹಿರಣ್ಯಾಕ್ಷ ದೈತ್ಯ. ಅವನೇ ದಿತಿಪುತ್ರನಾಗಿ ಅವತರಿಸಿದಾಗ ವಿಜಯನ ಆವೇಶ. ಅದರಂತೆ ಈ ಪ್ರಸಂಗ ಎಂದು ಗಮನಿಸಬೇಕು.

---

೧. ಜಿಘಾಂಸಯಾऽಪಿ ಹರಯೇ ಸ್ತನಂ ದತ್ವಾऽऽಪ ಸದ್ಗತಿಮ್ ॥ - ಭಾಗವತ (೧೦/೬/೩೫)

೨. ಅಹೋ ಬಕೀಯಂ ಸ್ತನಕಾಲಕೂಟಂ ಜಿಘಾಂಸಯಾऽಪಾಯಯದಪ್ಯಸಾಧ್ವೀ ।
ಲೇಭೇ ಗತಿಂ ಧಾತ್ರ್ಯುಚಿತಾಂ ತತೋऽನ್ಯಂ ಕಂ ವಾ ದಯಾಲುಂ ಶರಣಂ ವ್ರಜೇಮ ॥
– ಭಾಗವತ (೩/೨/೨೩)

೪) ಕಾಲಕೂಟವನ್ನು ಹೀಗೆ ಜೀರ್ಣಿಸಿಕೊಂಡವರು ಇಬ್ಬರೇ. ಒಬ್ಬ ಸಮುದ್ರಮಥನ–ಕಾಲದಲ್ಲಿ ಜೀವೋತ್ತಮನಾದ ವಾಯು, ಇಲ್ಲಿ ಸರ್ವೋತ್ತಮನಾದ ಶ್ರೀಕೃಷ್ಣ.

೫) ಕಾಲಕೂಟ ಕಲಿಯ ಸ್ವರೂಪ. ಅದನ್ನು ಜೀರ್ಣಿಸಿಕೊಳ್ಳುವುದು ಎಂದರೆ ನಿಗ್ರಹಿಸುವುದು ಎಂದರ್ಥ. ಕಲಿನಿಗ್ರಹ ಶ್ರೀಹರಿವಾಯುಗಳಿಗೆ ಮಾತ್ರ ಸಾಧ್ಯ ಎಂಬ ತತ್ತ್ವಕ್ಕೆ ಇದು ದ್ಯೋತಕ.

೬) ರಾಮಾಯಣದಲ್ಲಿ ಶ್ರೀರಾಮ ಸಂಹರಿಸಿದ್ದು ಮೊದಲು ತಾಟಕೆಯನ್ನು; ಶ್ರೀಕೃಷ್ಣಾವತಾರದಲ್ಲಿ ಮೊದಲು ಸಂಹರಿಸಿದ್ದು ಈ ಪೂತನೆಯನ್ನು. ಆ ತಾಟಕೆಯೇ ಈ ಪೂತನೆ ಎಂಬುದು ಮತ್ತೊಂದು ವಿಶೇಷ. ಎಂದರೆ ಎರಡೂ ಅವತಾರಗಳಲ್ಲಿ ಶ್ರೀಹರಿ ಮೊದಲಿಗೆ ಸಂಹರಿಸಿದ್ದು ಒಬ್ಬ ಸ್ತ್ರೀಯನ್ನು. ಸ್ತ್ರೀ ಎಂದರೆ ಅಜ್ಞಾನಮಿಥ್ಯಾಜ್ಞಾನಗಳ ಸಂಕೇತ ಎಂಬುದನ್ನು ಶ್ರೀಮದಾಚಾರ್ಯರು ಶ್ರೀಮದ್ಭಾಗವತತಾತ್ಪರ್ಯದಲ್ಲಿ ವಿವರಿಸಿರುವರು. ಮನುಷ್ಯಸಾಧನೆಗೆ ಅಡ್ಡಿಯಾಗುವುದು ಹೊರಗೆ ಕಾಣುವಂತೆ ಸ್ತ್ರೀ. ಮನಸ್ಸನ್ನು ಕವಿದು, ಹಾಳು ಮಾಡುವುದು ಮಿಥ್ಯಾಜ್ಞಾನ. ಇವೆರಡರ ನಾಶ ಸಾಧಕನ ಪ್ರಥಮಕರ್ತವ್ಯ ಎಂದು ಭಗವಂತ ಲೋಕಶಿಕ್ಷಣ ಮಾಡಿರುವನು ಎಂದು ತಿಳಿಯಬೇಕು – 'ಸಂಗಂ ನ ಕುರ್ಯಾತ್ ಪ್ರಮದಾಸು ಜಾತು'(ಭಾಗವತ)

೭) ಆದರೆ ಎಲ್ಲ ಸ್ತ್ರೀಯರೂ ದುಷ್ಟರಲ್ಲ; ವಿಷ್ಣ ಒದಗುವುದು ದುಷ್ಟಸ್ತ್ರೀಯರಿಂದಲೇ ಹೊರತು, ಉತ್ತಮಸ್ತ್ರೀಯರಿಂದಲ್ಲ. ದುಷ್ಟತನದ ನಿಜವಾದ ದ್ರೋಹ ದೈವದ್ರೋಹ. ಆದರೆ ಉರ್ವಶೀ ದುಷ್ಟಸ್ತ್ರೀಯಲ್ಲ; ಅವಳು ಉತ್ತಮಸ್ತ್ರೀ. ಆದ್ದರಿಂದ ತಾಟಕೆಯನ್ನು ಕೊಂದ ಭಗವಂತ ಉರ್ವಶಿಯನ್ನು ಉದ್ಧರಿಸಿದ.

೮) ಮೇಲ್ನೋಟಕ್ಕೆ ಭಾಗವತಪುರಾಣ ಪೂತನೆಯೇ ಸದ್ಗತಿಗೆ ಹೊರಟಳು ಎಂದು ತಿಳಿಸುವಂತೆ ಕಾಣುತ್ತದೆ. ಆದರೆ ಅಸುರಳಾದ ಅವಳಿಗೆ ಸದ್ಗತಿ ದೊರೆಯುವುದು ಸಾಧ್ಯವೇ ಇಲ್ಲ ಎಂಬುದು ಭಾಗವತದ ನಿರೂಪಣೆ. ಆದ್ದರಿಂದ ಅದರ ತಾತ್ಪರ್ಯವನ್ನು ಶ್ರೀಮದಾಚಾರ್ಯರು ಇಲ್ಲಿ ವಿವರವಾಗಿ ತಿಳಿಸಿರುವರು. ಎಂದರೆ ಇಲ್ಲಿ ಸದ್ಗತಿಗೆ ತೆರಳಿದ್ದು ಪೂತನೆಯ ಒಳಗಿನ ಉರ್ವಶಿಯೇ ಹೊರತು, ತಾಟಕೆಯಲ್ಲ.

೯) ಮುಕ್ತಿ ಭಕ್ತಿಯಿಂದಲೇ ಹೊರತು, ದ್ವೇಷದಿಂದಲ್ಲ. ಕೃಷ್ಣನನ್ನು ಕೊಲ್ಲಬಂದ ಪೂತನೆಯದು ದ್ವೇಷವೇ ಹೊರತು, ಭಕ್ತಿಯಲ್ಲ. ಎಂದ ಮೇಲೆ ಅವಳಿಗೆ ದೊರೆಯುವ ಫಲ ತಮಸ್ಸೇ ಹೊರತು ಮುಕ್ತಿಯಲ್ಲ. ದ್ವೇಷಕ್ಕೆ ಮುಕ್ತಿ ದೊರೆಯುವುದಾಗಿದ್ದಲ್ಲಿ ಭಗವಂತ ದ್ವೇಷಿಗಳನ್ನು ಸಂಹರಿಸಲೆಂದು ಅವತರಿಸಬೇಕಿರಲಿಲ್ಲ; 'ವಿನಾಶಾಯೇತಿ ದುಷ್ಕೃತಾಮ್' ಎಂದು ಹೇಳಬೇಕಿರಲಿಲ್ಲ.

೧೦) ದುಷ್ಟರಾದ ದುರ್ಯೋಧನಾದಿಗಳು ಹತರಾದಾಗ ಅವರೆಲ್ಲ ಸದ್ಗತಿಗೆ ಹೋದರೆಂದು ಪುರಾಣಗಳು ತಿಳಿಸಿಲ್ಲ; ಅವರಿಗೆ ದೊರಕಿದ್ದು ದುರ್ಗತಿ ಎಂದೇ ಅವುಗಳ ಘೋಷಣೆ.

೧೧) ಶಿಶುಪಾಲ ಮೊದಲಾದ ಕೆಲವು ದುಷ್ಟರು ಹತರಾದಾಗ ಮಾತ್ರ ಅವರು ಸದ್ಗತಿಗೆ ತೆರಳಿದರು ಎಂಬ ಉಲ್ಲೇಖ ಬಂದಿದೆ. ಎಲ್ಲ ದುಷ್ಟರೂ ಹತರಾದಾಗ ಸದ್ಗತಿಗೆ ತೆರಳಿದರು ಎಂದಲ್ಲ. ಶಿಶುಪಾಲಾದಿಗಳ ಪ್ರಸಂಗದಲ್ಲೂ ಈ ಪೂತನೆಯ ಪ್ರಸಂಗದಂತೆ ಜೀವದ್ವಯಾವೇಶವಿತ್ತು ಎಂಬ ತತ್ತ್ವವನ್ನು ಅನುಸಂಧಾನ ಮಾಡಿಕೊಳ್ಳಬೇಕು. ಆ ವಿವರಗಳನ್ನು ಈ ತಾತ್ಪರ್ಯನಿರ್ಣಯದಲ್ಲಿ ಶ್ರೀಮದಾಚಾರ್ಯರು ನೀಡಿರುವರು.

೧೨) ಕೃಷ್ಣನ ಬಳಿಗೆ ತೆರಳುವ ಯೋಗ, ಕೃಷ್ಣನ ಸ್ಪರ್ಶ ಮೊದಲಾದುವೆಲ್ಲ ಉರ್ವಶಿಗೆ ದೊರಕಿದ ಲಾಭ; ಪಾಪಕಾರ್ಯಗಳೆಲ್ಲ ತಾಟಕೆಯ ದುಷ್ಟತೆಯ ಫಲ.

೧೩) ಈ ಪೂತನಾಪ್ರಸಂಗದ ವಿಸ್ತೃತವಿವೇಚನೆಯನ್ನು ಶ್ರೀವಾದಿರಾಜಸ್ವಾಮಿಗಳ ರುಗ್ಮಿಣೀಶವಿಜಯದಲ್ಲಿ[೧] ಕಾಣಬಹುದು.

---

೧. ತತಃ ಕದಾಚಿತ್ ಪಥಿ ಪೂತನಾಖ್ಯಾ ಸ್ವಮಾಯಯಾ ರೂಪಮವಾಪ್ಯ ರಮ್ಯಮ್ ।
ತಮಂಕಮಾರೋಪ್ಯ ವಿಷಾನುಷಕ್ತಕುಚಂ ಮುದಾ ऽಪಾಯಯದಂಬುಜಾಕ್ಷಮ್ ॥

ಪರಿಸ್ಫುರನ್ನೂಪುರಕಂಕಣೋಜ್ಜ್ವಲಾ ಲಸನ್ನಿತಂಬಾರ್ಪಿತರತ್ನಮೇಖಲಾ ।
ದೃಗಂತಸಂಸ್ತಂಭಿತಮಾನಿಮಂಡಲಾ ತದೋರ್ವಶೀವಾಸ್ತಿ ವಿಲೋಲಕುಂಡಲಾ ॥

ಸ ಪೂತನೋಚ್ಚಸ್ತನಕುಂಭಚುಂಬಿಮುಖಾರವಿಂದೋ ಹರಿರಾಬಭಾಸೇ ।
ವಿಷಂ ಬಹಿಷ್ಕಂ ಪ್ರಮದಾಂತರಂಗೇ ಸುಪೂರಯಂಸ್ತನ್ಮಖಿವರ್ತ್ಮನೇವ ॥

ರಮಾಧರೋಷ್ಮಾಮೃತಪಾನಜಾತಮಹಾನುಭಾವೇನ ನ ಪೂತನಾಯಾಃ ।
ಉರೋಜಸಂಗ್ಯಾರ್ತಿಕರೋ ಗರೋ ऽಸೌ ಬಭೂವ ಬಾಲಸ್ಯ ಬಲಾನುಜಸ್ಯ ॥

ಮರಿಷ್ಯತೋ ಭೋಜಪತೇರ್ನ ಜನ್ಮತಮಃಶ್ರಮಾರ್ಹಸ್ಯ ಭವಿಷ್ಯತೀಹ ।
ಇತೀವ ಧಾತ್ರೀಮವಧೀತ್ ಸ ತಸ್ಯ ವ್ರತೀಂದ್ರವೃಂದಾರ್ಚಿತಪಾದಪೀಠಃ ॥

ವ್ರಜಸ್ಥಬಾಲಗ್ರಹಪೀಡಿತಾ ಸಾ ವಿಷಪ್ರದಾನಸ್ಯ ಫಲಂ ಪ್ರಪೇದೇ ।
ತಥಾಹಿ ಕೃತ್ಯಾ ಮಹತಿ ಪ್ರಯುಕ್ತಾ ಸ್ವಕೀಯಮೃತ್ಯುತ್ವಮುಪೈತಿ ಪೃಥ್ವ್ಯಾಮ್ ॥

ಅಪಿ ಪ್ರದತ್ತೇ ಗರಲೇ ಶಿಶುಂ ತಮಭೀತಮಾಲೋಕ್ಯ ಭುಜಂಗಸಂಘಾನ್ ।
ವಿಭೀಷಯಂತೀ ಸಮಗಾದಧಃ ಸಾ ನ ಚೇದ್ವಿಪರ್ಯಸ್ತಮತಿಃ ಕಥಂ ಸ್ಯಾತ್ ॥

ಉತ್ತುಂಗಹಸ್ತಚರಣಾಯತಶೈಲಶೃಂಗಾಂ ವಿಸ್ತಾರಿತಾನನವಿನಿರ್ಗತದೀರ್ಘದಂಷ್ಟ್ರಾಮ್ ।
ಶುಷ್ಕತ್ ತಟಾಕಸದೃಶೋದರಘೋರರೂಪಾಂ ತರ್ಕೇ ऽತಿಕರ್ಕಶರವೋಜ್ಜ್ವಲತಾಟಕಾಂ ತಾಮ್ ॥

ಮುಕುಂದವಿದ್ವೇಷವಿಷಾನುಷಂಗಾದ್ವಿಯೋಜಿತಾಂಗೀ ಕಿಲ ಪೂತನೈಕಾ ।
ಪಪಾತ ಧನ್ಯಾ ಲಲನಾಗ್ರಗಣ್ಯಾ ಜಗಾಮ ಚಾನ್ಯಾ ऽಮರಲೋಕಲೋಕಮ್ ॥

ಯದಿ ಪ್ರಭುರ್ವಿದ್ವಿಷತೋ ऽಪಿ ಶೌರಿಃ ಪ್ರಸಾದಕೃತ್ ತರ್ಹಿ ಕುತಃ ಸುರಾರೀನ್ ।
ವಿಜಿತ್ಯ ಭಕ್ತಾಯ ತದೀಯಭಾಗ್ಯಂ ಪ್ರಯಚ್ಛತಿ ಸ್ವೈರಮಿಹಾವತೀರ್ಯ ॥

ದ್ವಿಷಾಂ ಹರಿರ್ಯಚ್ಛತಿ ಯರ್ಹಿ ಮೋಕ್ಷಂ ನ ತರ್ಹಿ ಕಸ್ಮಾದಪವರ್ಗಮಾರ್ಗಃ ।
ಅರಿಷ್ಟವಾತಾಸುರವತ್ಸಕೇಶಿವಿನಾಶಕಾಲೇ ವಿವೃತಃ ಶುಕೇನ ॥

ಪತಂತ್ಯಧೋ ऽನಾದೃತಕೃಷ್ಣಪಾದಾ ನ ಚೇದ್ಯಮಸ್ಯಾಲಯಮೇಷ್ಯಸಿ ತ್ವಮ್ ।
ಸ ನೈರ್ಋತಂ ಧಾಮ ಜಗಾಮ ದೈತ್ಯ ಇತೀರಿತಾ ದುರ್ಗತಿರೇವ ತೇಷಾಮ್ ॥

ವಿದ್ವೇಷಮೂಲಸ್ಮರಣೇನ ತುಷ್ಟಿರಿತ್ಯಪ್ಯವದ್ಯಂ ನ ಜಹಾತಿ ಪಕ್ಷಃ ।
ಹಿಂಸಾರ್ಥಮಾಲಿಂಗಯತಸ್ತರಕ್ಷೋಃ ಕಿಂ ಚೇಷ್ಟಯಾ ತುಷ್ಯತಿ ಕಾಮಧೇನುಃ ॥

ನಚೇದ್ಗವಾಂ ವಿಪ್ರಶಿಖಾಮಣೀನಾಂ ಹತಿಶ್ಚ ಪುಣ್ಯಾಯ ಭವೇದ್ಧಿ ಮೂಢಾಃ ।
ತದಂಗಸಂಸ್ಪರ್ಶನದರ್ಶನಾದ್ಯೈಸ್ತದೀಯನಾಮಗ್ರಹಣಾದಿಭಿರ್ವಾ ॥

ದೋಷಂ ದುರಂತಂ ಕ್ವ ಚ ವರ್ಣಯದ್ಭಿರ್ದ್ವೇಷಂ ಹರೇಃ ಕ್ವಾಪಿ ತಮೋನಿದಾನಮ್ ।
ಈಶಾಪ್ತಿವಿಘ್ನಂ ಕ್ವ ಚ ನಿರ್ಣಯದ್ಭಿರೇತನ್ಮತಂ ವಿಪ್ರತಿಷಿದ್ಧಮಾರ್ಯೈಃ ॥

ಅದ್ವೈತಿನಸ್ತಾರ್ಕಿಕಮಾನಿನೋ ವಾ ರಾದ್ಧಾಂತಮಧ್ಯೇ ಪರವಾದಿನಾಂ ವಾ ।
ಜ್ಞಾನಂ ವಿನಾ ಯನ್ನ ಹಿ ಬಂಧಮೋಕ್ಷಸ್ತೇನೇದಮಾತ್ಮೀಯವಚೋವಿರುದ್ಧಮ್ ॥

ಜ್ಞಾನಾನ್ಯಮಾರ್ಗಪ್ರತಿಷೇಧಕರ್ತ್ರಾ ರ್ಕ ಶ್ರುತ್ಯಾ ಚ ನಿರ್ಣಾಯಕಸೂತ್ರಕರ್ತ್ರಾ ।
ಕಿಮೇಷ ಮಾರ್ಗಃ ಸುಲಭೋ ನ ದೃಷ್ಟಃ ಕಿಂ ವಾ ತಪಸ್ಯಾವ್ರತಕರ್ಶಿತಾಂಗೈಃ ॥

ಅವೈಷ್ಣವಾನಾಂ ಯತನೈರ್ನ ಮೋಕ್ಷಃ ಪತಂತ್ಯಧಸ್ತಾಮಸವೃತ್ತಯಸ್ತೇ ।
ಏತತ್ಸಮಾನಾರ್ಥಕಭಾರತೋಕ್ತವ್ರಾತಾಮತಂ ತನ್ನ ಮತಂ ಶುಕಸ್ಯ ॥

ನಿಂದಾಂ ಮುಕುಂದಸ್ಯ ಸಕೃನ್ನಿಶಮ್ಯ ಮಂದಃ ಪತೇತ್ ಕಿಂ ಪುನರಚ್ಯುತಂ ತಮ್ ।
ನಿಂದನ್ನಿತಿ ಹ್ಯಾಲಪತಃ ಶುಕಸ್ಯ ಕಿಂ ದ್ವೇಷತೋ ಮುಕ್ತಿರಿತಿ ಸ್ಮ ಹೃದ್ಯಮ್ ॥

ಆಪೋ ऽಬ್ರುವನ್ನಿತಿ ಸನಾತನವೇದವಾಕ್ಯಾತ್
ಕಿಂ ವಕ್ಷ್ಯತಾ ಜಡಜಲಸ್ಯ ತಥಾ ಶುಕೋಕ್ತಾ ।
ಕಂಸಾದಿಮೋಕ್ಷವಚನಾನ್ಯಪಿ ಯುಕ್ತಿಯುಕ್ತ-
ಮಾನಾಂತರೋದಿತಮನೋಮಧುರಾರ್ಥಭಾಂಜಿ ॥

ಯಥಾ ಗ್ರಹಾವಿಷ್ಟಕಲೇವರೇ ದ್ವೌ ಕೃತಾಭಿಮಾನಾವಿಹ ಚೇತನೌ ಸ್ತಃ ।
ತಥೈವ ಕಂಸಾದಿಶರೀರಸಂಸ್ಥೌ ಶುಭಾಶುಭೌ ದ್ವೌ ಸುಖದುಃಖಭಾಜೌ ॥

ದ್ವಿಷಂತಮೇಕಂ ದಿತಿಜಂ ವಿಹಾಯ ಹರಿಪ್ರಿಯಸ್ಯಾಸುರತಾ ಕಥಂ ಸ್ಯಾತ್ ।
ಕ್ವಚಿದ್ದ್ವಿಷಂತೋ ऽಪಿ ಕಿಮರ್ಜುನೇಂದ್ರಪುರೋಗಮಾ ದೈತ್ಯತಯಾ ನಿರುಕ್ತಾಃ ॥

ಉರ್ವಶೀಶಾಪದ ಹಿನ್ನೆಲೆ

ಸಾ ತುಂಬುರೋಃ ಸಂಗತ ಆವಿವೇಶ ರಕ್ಷಸ್ತನುಂ ಶಾಪತೋ ವಿತ್ತಪಸ್ಯ ।
ಕೃಷ್ಣಸ್ಪರ್ಶಾಚ್ಛುದ್ಧರೂಪಾ ಪುನರ್ದಿವಂ ಯಯೌ ತುಷ್ಟೇ ಕಿಮಲಭ್ಯಂ ರಮೇಶೇ ॥ ೮೮ ॥

ಅ: ಅವಳು ತುಂಬುರುವಿನ ಸಂಗ ಮಾಡಿದ್ದರಿಂದಾಗಿ ಒದಗಿದ ಕುಬೇರನ ಶಾಪದಿಂದ ರಾಕ್ಷಸಿಯ ದೇಹದಲ್ಲಿ ಪ್ರವೇಶಿಸುವಂತಾಗಿತ್ತು. ಕೃಷ್ಣನ ಸ್ಪರ್ಶದಿಂದಾಗಿ ಶುದ್ಧಸ್ವರೂಪಳಾದ ಅವಳು ಪುನಃ ಸ್ವರ್ಗಕ್ಕೆ ತೆರಳಿದಳು. ರಮೇಶನೊಲಿದಾಗ ಯಾವುದು ತಾನೆ ಅಲಭ್ಯ!

ವಿ: ೧) ಉರ್ವಶಿಯು ರಾಕ್ಷಸಿಯ ದೇಹದಲ್ಲಿ ಪ್ರವೇಶಿಸಲು ಕಾರಣವನ್ನು ಇಲ್ಲಿ ತಿಳಿಸಿರುವರು. ಒಮ್ಮೆ ಕುಬೇರನ ಬಳಿ ಇದ್ದ ಉರ್ವಶೀ ಅವನಿಗೆ ತಿಳಿಯದಂತೆ ತುಂಬುರುವಿನ ಸಂಗ ಮಾಡಿದಳು. ಅದರಿಂದ ಕೋಪಗೊಂಡ ಕುಬೇರ ಅಸುರೆಯಲ್ಲಿ ಆವಿಷ್ಟಳಾಗಿ ಜನಿಸಲು ಶಾಪ ನೀಡಿದ. ಅದರಿಂದಾಗಿ ಅವಳು ಪೂತನೆಯಾಗಿ ಅವತರಿಸಿದ ತಾಟಕೆಯಲ್ಲಿ ಪ್ರವೇಶಿಸುವಂತಾಯಿತು. ತುಂಬುರುವಿನ ಸಂಗದಿಂದ ಒದಗಿದ್ದ ಶಾಪ, ಕೃಷ್ಣಸ್ಪರ್ಶದಿಂದಾಗಿ ಪರಿಹಾರಗೊಂಡು ಅವಳು ಸ್ವರ್ಗಕ್ಕೆ ಮರಳಿದಳು.

೨) ಕುಬೇರ ತುಂಬುರುವಿಗೂ ಅಸುರನಾಗಿ ಜನಿಸಲು ಶಾಪ ನೀಡಿದ. ಅವನು ವಿರಾಧನಾಗಿ ಹುಟ್ಟಿ, ಶ್ರೀರಾಮದೇವರ ಅನುಗ್ರಹದಿಂದ ಸದ್ಗತಿ ಪಡೆದ ವಿವರ ಈಗಾಗಲೇ ಬಂದಿದೆ (೫/೨೦, ೨೧).

ನ ಚೋಗ್ರಶಾಪಾದಸುರತ್ವಮೇಷಾಂ ವಿಹಾಯ ದುಷ್ಪಂ ಕಮಪಿ ಸ್ವನಿಷ್ಠಮ್ ।
ಯತೋಽಭಶಪ್ತೇಽಪಿ ನೃಪೇ ತದೇತದಭೂತ್ ಪುರಾ ಕಿಂಕರದೈತ್ಯಯೋಗಾತ್ ॥

ತಥೈವ ಚೈದ್ಯೇ ಜಯನಾಮಕಃ ಸನ್ ತಥಾ ಪರಸ್ಮಿನ್ ವಿಜಯಾಭಿಧಾನಃ ।
ನಿರಂತರದ್ವೇಷಫಲಸ್ಯ ಮೂಲಂ ಬಲೇನ ರಕ್ಷೋಽಪಿ ಹಿ ತರ್ಹಿ ಸಿದ್ಧ್ಯೇತ್ ॥

ಯದೀಹ ಚೈದ್ಯೇ ದಿತಿಜೋ ನ ವೈರಾನ್ನತರ್ಹಿ ಮೋಕ್ಷಃ ಪರಿಚರ್ಯಯೈವ ।
ಯದಾ ತು ಸೇವಾವಿಧುರೋಽಪರೋಽಸ್ತಿ ತದಾ ಬಲಾತ್ ಸಿದ್ಧ್ಯತಿ ಜೀವಯುಗ್ಮಮ್ ॥

ವಿದ್ವೇಷಿಜೀವಕೃತಸಂಗಮಪಿ ಸ್ವಭಕ್ತಂ ಕೃಷ್ಣೋ ವ್ಯಮೋಚಯದಹೋ ಕರುಣಾಂಬುರಾಶಿಃ ।
ಕಿಂ ನಾಮ ತದ್ರಹಿತಭಕ್ತಜನಾನಿತಿ ಸ್ಮ ಕೈಮುತ್ಯಮೂಹಯತ ಸತ್ಕವತೀಸುತೋಕ್ಥ್ಯಾ॥

ದ್ವೇಷಾಭಿವೃದ್ಧಿಂ ದ್ವಿಷತಾಂ ವಿಧಾತುಂ ವ್ಯಾಸಶ್ಚ ನ ಸ್ಪಷ್ಟಮಿದಂ ಪ್ರಮೇಯಮ್ ।
ಊಚೇ ನ ಚೇದ್ಭಕ್ತಜನೈರಗಮ್ಯಂ ಪಾಪೈರಸಾಧ್ಯಂ ತಮ ಆಪ್ನುಯಾತ್ ಕಃ ॥ ೫೯ ॥

ಆನಂದತೀರ್ಥಮತಮುಜ್ಝಿತದೋಷಜಾತಂ ಸ್ವಾನಂದದಾಯಿ ಶಿಥಿಲೀಕೃತಮತ್ತಮಾಯಿ ।
ಮಾನೌಘಶೋಭಿ ಮಮ ದುರ್ಜನಪುಂಜತೋಽಭೀರ್ಯೇನೇದೃಶೀ ಮತಿರಭೂತ್ ಕವಿತೋಲ್ಲಸದ್ಭ್ರೂಃ ॥

– ರುಕ್ಮಿಣೀಶವಿಜಯ (೨/೩೩-೬೦)

ಉಪನಿಷ್ಕ್ರಮಣಸಂಸ್ಕಾರ

ಯದಾऽऽಪ ಕೃಷ್ಣಶ್ಚತುರಃ ಸ ಮಾಸಾಂಸ್ತದೋಪನಿಷ್ಕ್ರಮಣಮಸ್ಯ[೧] ಚಾಸೀತ್ ।
ಜನ್ಮರ್ಕ್ಷಮಸ್ಮಿನ್[೨] ದಿನ ಏವ ಚಾಸೀತ್ ಪ್ರಾತಃ ಕಿಂಚಿತ್ ತತ್ರ ಮಹೋತ್ಸವೋऽಭೂತ್ ೮೯

ಅ: ಕೃಷ್ಣನಿಗೆ ನಾಲ್ಕನೆಯ ತಿಂಗಳು ನಡೆಯುವಾಗ ಅವನಿಗೆ ಉಪನಿಷ್ಕ್ರಮಣ ನಡೆಯಿತು. ಅಂದು ಪ್ರಾತಃಕಾಲದಲ್ಲಿ ಸ್ವಲ್ಪ ಅವನ ಜನ್ಮನಕ್ಷತ್ರವೂ ಇದ್ದಿತು. ಅದಕ್ಕಾಗಿ ದೊಡ್ಡ ಉತ್ಸವ ನಡೆಯಿತು.

ವಿ: ೧) ನಿಷ್ಕ್ರಮಣ ಅಥವಾ ಉಪನಿಷ್ಕ್ರಮಣವು ಷೋಡಶಸಂಸ್ಕಾರಗಳಲ್ಲಿ ಏಳನೆಯದು. ಔತ್ಥಾನಿಕಕರ್ಮವೆಂದರೂ ಇದೇ. ನಾಲ್ಕನೇ ತಿಂಗಳಲ್ಲಿ ವಿಹಿತವಾದ ಸಂಸ್ಕಾರ. ಮೊದಲಬಾರಿಗೆ ಮಗುವನ್ನು ಮನೆಯಿಂದ ಹೊರಗೆ ಕರೆದೊಯ್ಯುವ ಕಾರ್ಯವದು. ಹಾಗೆ ಕರೆದೊಯ್ಯಬೇಕಾದದ್ದು ದೇವಸ್ಥಾನ, ತೀರ್ಥಕ್ಷೇತ್ರ, ಗುರುಹಿರಿಯರ ಮನೆ ಮೊದಲಾದ ಪುಣ್ಯಸ್ಥಳಗಳಿಗೆ. ಮಗು ಸಜ್ಜೀವನ ಸಾಗಿಸಲು ಸ್ಫೂರ್ತಿ ನೀಡುವ ಸಂಸ್ಕಾರವದು.

೨) ಅಂದಿನ ದಿನ ಪ್ರಾತಃಕಾಲದಲ್ಲಿ ಕೃಷ್ಣನ ಜನ್ಮನಕ್ಷತ್ರವಾದ ರೋಹಿಣಿಯೂ ಇದ್ದದ್ದು ಅದರ ಇನ್ನೂ ಹೆಚ್ಚಿನ ಮಹತ್ತ್ವಕ್ಕೆ ಕಾರಣವಾಯಿತು.

ಶಕಟಾಸುರವಧೆ

ತದಾ ಶಯಾನಃ ಶಕಟಸ್ಯ ಸೋऽಧಃ ಪದಾऽಕ್ಷಿಪತ್ ತಂ ದಿತಿಜಂ ನಿಹಂತುಮ್ ।
ಅನಃ ಸಮಾವಿಶ್ಯ ದಿತೇಃ ಸುತೋऽಸೌ ಸ್ಥಿತಃ ಪ್ರತೀಪಾಯ ಹರೇಃ ಸುಪಾಪಃ॥ ೯೦ ॥

---

೧. ಕದಾಚಿದೌತ್ಥಾನಿಕಕೌತುಕಾಪ್ಲವೇ ಜನ್ಮರ್ಕ್ಷಯೋಗೇ ಸಮವೇತಯೋಷಿತಾಮ್ । – ಭಾಗವತ (೧೦/೭/೪)

ಗೃಹಾದ್ಬಹಿಃ ಶಿಶೋರ್ನಿಷ್ಕ್ರಮಣಾಖ್ಯಸಂಸ್ಕಾರಃ ತತ್ಸಂಬಂಧಿ ಔತ್ಥಾನಿಕಂ ತಸ್ಮಿನ್ ಕೌತುಕೇ ಉತ್ಸವೇ । – ಶ್ರೀವಿಜಯಧ್ವಜತೀರ್ಥರು

ಉತ್ಥಾನಂ ಶಿಶೋರಂಗಪರಿವರ್ತನಂ .... । – ಶ್ರೀಸತ್ಯಧರ್ಮತೀರ್ಥರು

೨. ಋಕ್ಷಾಣಾಂ ಪೂರ್ವಭಾಗೇ ಋಕ್ಷಕರ್ಮ ಸಮಾಚರೇತ್ । ತಿಥೀನಾಂ ಪಶ್ಚಿಮೇ ಭಾಗೇ ತಿಥಿಕರ್ಮ ಸಮಾಚರೇತ್ । ನಕ್ಷತ್ರಭೇದೇ ಬಾಧಿಕ್ಯೇ ತಿಥಿಭೇದೇ ತದಂತಿಮೇ ಇತಿ ಜ್ಞೇಯಮ್ ॥

'ಅಮಾವಾಸ್ಯಾಂ ಪ್ರತಿಚ್ಛರೋ ಮಾಸಃ ಸ್ಯಾದ್ಬ್ರಾಹ್ಮಣಸ್ಯ ತು ।
ಸಂಕ್ರಾಂತಿಪೌರ್ಣಮಾಸೀಭ್ಯಾಂ ತಥೈವ ಕ್ಷತ್ರವೈಶ್ಯಯೋಃ ॥' ಇತಿ ವಚನಾತ್ । – (ಶ್ರೀ.)

ಅ: ಆಗ ಬಂಡಿಯ ಕೆಳಗೆ ಮಲಗಿದ್ದ ಕೃಷ್ಣ ದೈತ್ಯನನ್ನು ಕೊಲ್ಲಲೆಂದು ಕಾಲಿಂದ ಒದ್ದ. ಮಹಾಪಾಪಿಯಾದ ಒಬ್ಬ ದೈತ್ಯ ಶ್ರೀಕೃಷ್ಣನಿಗೆ ವಿರೋಧ ಮಾಡಲೆಂದು ಆ ಬಂಡಿಯಲ್ಲಿ ಆವಿಷ್ಟನಾಗಿದ್ದ.

ಕ್ಷಿಪ್ತೋऽನಸಿಸ್ಥಃ ಶಕಟಾಕ್ಷನಾಮಾ ಸ ವಿಷ್ಣುನೇತ್ವಾಸಹಿತಃ[೧] ಪಪಾತ ।
ಮಮಾರ ಚಾಶು ಪ್ರತಿಭಗ್ನಗಾತ್ರೋ ವ್ಯತ್ಯಸ್ತಚಕ್ರಾಕ್ಷಮಭೂದನಶ್ಚ ॥ ೯೧ ॥

ಅ: ಕೃಷ್ಣ ಒದ್ದಾಗ ಬಂಡಿಯಲ್ಲಿದ್ದ ಶಕಟಾಕ್ಷನೆಂಬ ಅಸುರ ಬಂಡಿಸಮೇತನಾಗಿ ಕೆಳಕ್ಕೆ ಬಿದ್ದ. ಮೈಯೆಲ್ಲ ಪುಡಿಯಾಗಿ ಅವನು ತತ್ಕ್ಷಣವೇ ಹತನಾದ. ಬಂಡಿಯ ಚಕ್ರಗಳು ಅದರ ಅಚ್ಚು ಬೆಲ್ಲಾಪಿಲ್ಲಿಯಾದವು.

ವಿ: ೧) ಅಂದು ನಡೆದ ಉತ್ಸವದಲ್ಲಿ ಕೃಷ್ಣನನ್ನು ಯಮುನಾತೀರದಲ್ಲಿ ಗಾಡಿಯೊಂದರ ಕೆಳಗೆ ಮಲಗಿಸಿ, ಯಶೋದೆ ಮೊದಲಾದವರೆಲ್ಲ ಸ್ನಾನಕ್ಕೆಂದು ತೆರಳಿದ್ದರು. ಆಗ ಬಂಡಿಯಲ್ಲಿ ಆವಿಷ್ಟನಾಗಿದ್ದ ಶಕಟ ಎಂಬ ದೈತ್ಯ ಬಂಡಿಯಲ್ಲಿ ಪ್ರವೇಶಿಸಿ, ಕೃಷ್ಣನನ್ನು ಕೊಲ್ಲಲು ಹೊಂಚುಹಾಕುತ್ತಿದ್ದ. ಅಚ್ಚು ಮುರಿದು ಮಗುವಿನ ಮೇಲೆ ಬಿದ್ದಲ್ಲಿ ಮಗು ಪುಡಿಯಾಗುವುದೆಂದು ಅವನ ವಿಚಾರ. ಆದರೆ ಸರ್ವಜ್ಞನೂ, ಸರ್ವಸಮರ್ಥನೂ ಆದ ಕೃಷ್ಣ ತನ್ನ ಕಾಲಿನಿಂದ ಒದ್ದ. ಆ ಕ್ಷಣದಲ್ಲಿ ಗಾಡಿಯೊಂದಿಗೆ ನೆಲಕ್ಕೆ ಬಿದ್ದ ಶಕಟಾಸುರ ಮೃತನಾದ. ಅವನೇ ಶ್ರೀಕೃಷ್ಣನ ಮೇಲೆ ಬಿದ್ದಿದ್ದರೂ ತಾನೇ ಹತನಾಗುತ್ತಿದ್ದ. ಬಂಡಿಯ ಮೇಲೆ ಗಾಜು ಬಿದ್ದರೂ, ಗಾಜಿನ ಮೇಲೆ ಬಂಡೆ ಬಿದ್ದರೂ ಒಡೆಯುತ್ತಿದ್ದುದು ಗಾಜು ಮಾತ್ರವೇ.

೨) ಇದನ್ನು ಆಚಾರ್ಯರು ಕಂದುಕಸ್ತುತಿಯಲ್ಲಿ 'ಪದತಲವಿದಲಿತಗುರುತರಶಕಟಃ' ಎಂಬುದಾಗಿ ಸಂಗ್ರಹಿಸಿರುವರು.

---

೧. ''ಅಹ ಹಾರೇತ್ವಾ ಶೂದ್ರ ತವೈವ ಸಹ ಗೋಭರಸ್ತು'' ಇತಿ ಛಾಂದೋಗ್ಯೇ । ಹಾರೇಣ ಸಹಿತಃ ಇತ್ವಾ ಶಕಟಂ ಗೋಭಃ ಸಹ ತವೈವಾಸ್ತ್ವಿತಿ ಪ್ರಯೋಗಾತ್ ಇತ್ವನಾ ಶಕಟೇನ ಆ ಸಮಂತಾತ್ ಸಹಿತಃ ಅಸುರಃ ಪಪಾತೇತ್ಯರ್ಥಃ ॥ – (ವಾ.)

.... ಇತ್ವಾ ಚ ಶಕಟಂ ಚ ಉತ್ತರಾರ್ಧಸ್ಯ ಚಕಾರಃ ಇತ್ವೇತಿಪದೇನ ಸಂಬಧ್ಯತೇ । ... ಇತ್ವಾ ಚ ಶಕಟಂ ಚ ಪಪಾತ ..... ಸಹಿತ ಇತ್ಯತ್ರ ರಸಕುಪ್ಯಾದಿಸಂಭಾರೋಪೇತ ಇತಿ ವ್ಯಾಖ್ಯಾನೇ 'ವಿಧ್ವಸ್ತನಾನಾರಸಕುಪ್ಯಭಾಜನಮ್' ಇತ್ಯಾದಿ ದಶಮಸ್ಕಂಧೋಕ್ತಿರ್ಮಾನಮ್ । – (ಜ.)

ತದುಕ್ತಂ ಹರಿವಂಶೇ— 'ಸ ತತ್ಪೈಕೇನ ಪಾದೇನ ಶಕಟಂ ಪರ್ಯವರ್ತಯತ್' ಇತಿ। ಸುಪಾಪೋऽಸೌ ದಿತೇಃ ಸುತಃ ಹರೇಃ ಪ್ರತೀಪಾಯ ಪ್ರತಿಕೂಲಂ ಕರ್ತುಂ ಅನಃ ಶಕಟಂ ಸಮಾವಿಶ್ಯ ಸ್ಥಿತಃ ಅವಸ್ಥಿತೋಭೂತ್। – (ಜ.)

'ಅಥನೋಭ್ಯಕಟಂ ಲೋಲೀಪಾದಾಂಗುಷ್ಠೇನ' ಇತಿ ಯಮಕಭಾರತೋಕ್ತೇಃ ಪಾದಾಂಗುಷ್ಠೇನ ಶಕಟಂ ಕ್ರೀಡಮಾನೋ ವ್ಯಪಾಹತೇತಿ ಹರಿವಂಶೇ ಪಂಚಶತ್ತಮಾಧ್ಯಾಯವಚನಾಚ್ಚ। ಇತ್ವಾ ಸಹಿತಃ ಶಕಟೇನ ಸಹಿತಃ । – (ತಾ.)

೩) ಇಲ್ಲಿ 'ಇತ್ವಾ ಸಹಿತಃ' ಎಂಬುದಕ್ಕೆ 'ಇತ್ವನಾ ಶಕಟೇನ ಆಸಮಂತಾತ್ ಸಹಿತಃ' ಎಂದು ವಾದಿರಾಜೀಯ ಹಾಗೂ ವರದರಾಜೀಯ. 'ಸಹಿತಃ ಇತ್ವಾ ಪಪಾತ' ಎಂದು ಜನಾರ್ದನೀಯ. 'ವಿಧ್ವಸ್ತಾನಾರಸಕುಪ್ಯಭಾಜನಂ ವ್ಯತ್ಯಸ್ತಚಕ್ರಾಕ್ಷವಿಭಿನ್ನಕೂಬರಮ್' ಎಂದು ಭಾಗವತ.

ಸಾ ಸಂಭ್ರಮಾತ್ ತಂ ಪ್ರತಿಗೃಹ್ಯ ಶಂಕಯಾ ಕೃಷ್ಣಂ ಯಶೋದಾ ದ್ವಿಜವರ್ಯಸೂಕ್ತಿಭಿಃ ।[೧]
ಸಂಸ್ನಾಪಯಾಮಾಸ ನದೀತಟಾತ್ ತದಾ ಸಮಾಗತಾ ನಂದವಚೋಭಿತರ್ಜಿತಾ ॥ ೯೨ ॥

ಅ: ಆ ವೇಳೆಗೆ ನದೀತೀರದಿಂದ ಆಗಮಿಸಿದ ಯಶೋದೆ ನಂದನಿಂದ ಬಹಳವಾಗಿ ಬೈಸಿಕೊಂಡಳು; ಕಾತರದಿಂದ ಕೃಷ್ಣನನ್ನು ಎತ್ತಿಕೊಂಡು ಗ್ರಹಚೇಷ್ಟೆ ಎಂಬ ಶಂಕೆಯಿಂದ ವಿಪ್ರಶ್ರೇಷ್ಠರುಗಳ ವೇದಸೂಕ್ತಗಳೊಂದಿಗೆ ಸ್ನಾನಮಾಡಿಸಿದಳು.

ವಿ: ೧) ಯಶೋದೆ ಅದನ್ನು ಭೂತಚೇಷ್ಟೆ ಎಂದು ಭಾವಿಸಿ, ಬ್ರಾಹ್ಮಣರಿಂದ ಹೋಮ ಮಾಡಿಸಿ, ಮಂತ್ರಿತಜಲದಿಂದ ಪ್ರೋಕ್ಷಣೆ ಮಾಡಿಸಿದಳು.

ಹತ್ವಾ ತು ತಂ ಕಂಸಭೃತ್ಯಂ ಸ ಕೃಷ್ಣಃ
ಶಿಶ್ಯೇ ಪುನಃ ಶಿಶುವತ್ ಸರ್ವಶಾಸ್ತಾ ।
ಏವಂ ಗೋಪಾನ್ ಪ್ರೀಣಯನ್ ಬಾಲಕೇಲೀ-
ವಿನೋದತೋ[೨] ನ್ಯವಸತ್ ತತ್ರ ದೇವಃ ॥ ೯೩ ॥

ಅ: ಕಂಸಭೃತ್ಯನಾದ ಶಕಟಾಸುರರನನ್ನು ಹೀಗೆ ಸಂಹರಿಸಿ, ಸರ್ವಶಾಸಕನೂ, ಕ್ರೀಡಾದಿ-ಗುಣವಿಶಿಷ್ಟನೂ ಆದ ಶ್ರೀಕೃಷ್ಣನು ಮತ್ತೆ ಮಗುವಿನಂತೆ ಮಲಗಿದ. ಹೀಗೆ ತನ್ನ ಬಾಲಲೀಲಾವಿನೋದಗಳಿಂದ ಗೋಪಾಲಕರನ್ನು ಆನಂದಪಡಿಸುತ್ತಾ ಅಲ್ಲಿ ನೆಲೆಸಿದ.

ಅರ್ಜುನನ ಜನ್ಮ

ವಿವರ್ಧಮಾನೇ ಲೋಕದೃಷ್ಟ್ಯೈವ ಕೃಷ್ಣೇ ಪಾಂಡುಃ ಪುನಃ ಪ್ರಾಹ ಪೃಥಾಮಿದಂ ವಚಃ ।
ಧರ್ಮಿಷ್ಠೋ ನೌ ಸೂನುರಗ್ರೇ ಬಭೂವ ಬಲದ್ವಯಜ್ಯೇಷ್ಠ ಉತಾಪರಶ್ಚ ॥ ೯೪ ॥

---

೧. ರುದಂತಂ ಸುತಮಾದಾಯ ಯಶೋದಾ ಗ್ರಹಶಂಕಿತಾ ।
ಕೃತಸ್ವಸ್ತ್ಯಯನಂ ವಿಪ್ರೈಃ ಸೂಕ್ತೈಃ ಸ್ತನಮಪಾಯಯತ್ ॥ – ಭಾಗವತ (೧೦/೮/೧೩)

೨. ಬಾಲಕೇಲೀವಿನೋದತ ಇತ್ಯಸ್ಯ । ಬಾಲಕ್ರೀಡಾವಿನೋದೇನೇತ್ಯರ್ಥಃ ॥ – (ವಾ.)

ಅ: ಲೋಕದೃಷ್ಟಿಯಿಂದ ಮಾತ್ರ ಶ್ರೀಕೃಷ್ಣ ಬೆಳೆಯುತ್ತಿದ್ದಂತೆ ಪಾಂಡುವು ಕುಂತಿಗೆ ಪುನಃ ಹೇಳಿದ: ''ನಮಗೆ ಮೊದಲಿಗೆ ಧರ್ಮಶೀಲನಾದ ಪುತ್ರ ಹುಟ್ಟಿದ. ಅನಂತರ ಬಾಹುಬಲ,ಜ್ಞಾನಬಲಗಳಲ್ಲಿ ತುಂಬ ಶ್ರೇಷ್ಠನಾದ ಮತ್ತೊಬ್ಬ ಪುತ್ರನೂ ಜನಿಸಿದ.

ವಿ: ಶ್ರೀಕೃಷ್ಣನು ನಿತ್ಯಪೂರ್ಣನೂ, ವೃದ್ಧಿಹ್ರಾಸರಹಿತನೂ ಆದ ಪರಮಾತ್ಮನಾದ್ದರಿಂದ ಅವನು ಬೆಳೆದನು ಎಂದು ಹೇಳದೆ, ಲೋಕದೃಷ್ಟಿಯಿಂದ ಬೆಳೆದನು ಎಂದು ತಿಳಿಸಿರುವರು. ಶ್ರೀರಾಮಾವತಾರವರ್ಣನೆ ಪ್ರಸಂಗದಲ್ಲಿ 'ನಿತ್ಯಪ್ರವೃದ್ಧಸ್ಯ ಚ ತಸ್ಯ ವೃದ್ಧಿರಪೇಕ್ಷ್ಯ ಲೋಕಸ್ಯ ಹಿ ಮಂದದೃಷ್ಟಿಮ್' (೪/೨) ಎಂದು ಹೇಳಿರುವುದನ್ನು ಗಮನಿಸಬೇಕು. ಅಲ್ಲಿ 'ಮಂದದೃಷ್ಟಿ' ಎಂದಿದ್ದರೆ, ಇಲ್ಲಿ ಲೋಕದೃಷ್ಟಿ ಎಂದಿರುವರು; ಆ ಪದಗಳಿಗೆ ಲೋಕದ ಮಂದದೃಷ್ಟಿ ಅಥವಾ ಮಂದಲೋಕದ ದೃಷ್ಟಿ ಎಂದು ತಾತ್ಪರ್ಯ.

ಯದ್ಯೈಕ ಏವಾತಿಬಲೋಪಪನ್ನೋ ಭವೇತ್ ತದಾ ತೇನ ಪರಾವಮರ್ದೇ।
ಪ್ರವರ್ತಮಾನೇ ಸ್ವಪುರಂ ಹರೇಯುಶ್ಚೌರ್ಯಾತ್ ಪರೇ[೧] ತದ್ದ್ವಯಮತ್ರ ಯೋಗ್ಯಮ್॥

ಅತ್ಯಂತಬಲಶಾಲಿಯಾದ ಒಬ್ಬನೇ ಮಗ ಇದ್ದಲ್ಲಿ ಅವನು ಶತ್ರುಗಳೊಂದಿಗೆ ಯುದ್ಧದಲ್ಲಿ ತೊಡಗಿದಾಗ ಇತರ ಶತ್ರುಗಳು ನಮ್ಮ ಪಟ್ಟಣವನ್ನು ಕಳ್ಳತನದಿಂದ ಸೂರೆ ಹೊಡೆಯಬಹುದು. ಆದ್ದರಿಂದ ಅಂತಹವರು ಇಬ್ಬರಿರುವುದು ಯೋಗ್ಯ.

ಶಸ್ತ್ರಾಸ್ತ್ರವಿದ್ವೀರ್ಯವಾನ್ ನೌ ಸುತೋಽನ್ಯೋ
ಭವೇದ್ದೇವಂ ತಾದೃಶಮಾಹ್ವಯಾತಃ।
ಶೇಷಸ್ತವ ಭ್ರಾತೃಸುತೋಽಭಿಜಾತ-
ಸ್ತಸ್ಮಾನ್ನಾಸೌ ಸುತದಾನಾಯ ಯೋಗ್ಯಃ ॥ ೯೬ ॥

ಅ: ಶಸ್ತ್ರಾಸ್ತ್ರಗಳನ್ನು ಬಲ್ಲ ವೀರ್ಯವಂತನಾದ ಅಂತಹ ಇನ್ನೊಬ್ಬ ಮಗ ನಮಗೆ ಜನಿಸಬೇಕು. ಆದ್ದರಿಂದ ಅಂತಹ ದೇವತೆಯನ್ನು ನೀನು ಆಹ್ವಾನಿಸು. ಶೇಷ ನಿನ್ನ ಸೋದರನ ಮಗನಾಗಿ ಹುಟ್ಟಿರುವನು. ಆದ್ದರಿಂದ ಅವನು ಪುತ್ರನನ್ನು ನೀಡಲು ಅರ್ಹನೆನ್ನಿಸುವುದಿಲ್ಲ.

ವಿ: ಸೋದರಮಾವ ಪಿತೃಸಮಾನನಾದ್ದರಿಂದ ಸೋದರಳಿಯ ಪುತ್ರಸಮಾನನಾಗುವನು. ಆದ್ದರಿಂದ ಅವನಿಂದ ಸಂತತಿ ಪಡೆಯುವುದು ಉಚಿತವಲ್ಲ ಎಂದು ಭಾವ.

---

೧. ಅತ್ರ ರಾಜ್ಯಪರಿಪಾಲನವಿಷಯೇ ದ್ವಯಂ ಬಲಾಢ್ಯಪುತ್ರದ್ವಯಮ್। ಯೋಗ್ಯಮಿತಿ ಸಂಬಂಧಃ॥ –(ವಾ.)

ನ ವೈ ಸುಪರ್ಣಃ ಸುತದೋ ನರೇಷು ಪ್ರಜಾಯತೇ ಚಾಸ್ಯ ಯತಸ್ತಥಾ ೨ ೨ಜ್ಞಾ ।
ಕೃತಾ ಪುರಾ ಹರಿಣಾ ಶಂಕರಸ್ತು ಕ್ರೋಧಾತ್ಮಕಃ ಪಾಲನೇ ನೈವ ಯೋಗ್ಯಃ ॥ ೯೭ ॥

ಅ: ಗರುಡನಂತು ಪುತ್ರನನ್ನು ನೀಡುವವನಾಗಿ ಮನುಷ್ಯರಲ್ಲಿ ಹುಟ್ಟಲಾರ. ಅವನಿಗೆ ಹಿಂದೆ ಶ್ರೀಹರಿ ಆದೇಶವಿತ್ತಿರುವುದೇ ಹಾಗೆ. ಶಂಕರ ಕ್ರೋಧಾಭಿಮಾನಿ. ರಾಜ್ಯಪಾಲನೆಗೆ ಯೋಗ್ಯನೆನ್ನಿಸಲಾರ.

ಎ: ೧) ಬಲಿಷ್ಠರಲ್ಲಿ ಶ್ರೀಹರಿವಾಯುಗಳ ಅನಂತರದ ಸ್ಥಾನ ಗರುಡಶೇಷರುದ್ರ–ದೇವರದ್ದು. ಆದರೆ ಅವರಿಂದ ಪುತ್ರರನ್ನು ಪಡೆಯಬಯಸದೆ, ಅವರ ಅನಂತರದವರಾದ ಇಂದ್ರದೇವರಿಂದ ಪುತ್ರರನ್ನು ಪಡೆಯಲು ಬಯಸಿದ್ದಕ್ಕೆ ಕಾರಣವನ್ನು ಈ ಎರಡು ಶ್ಲೋಕಗಳಲ್ಲಿ ನೀಡಿರುವರು. ಗರುಡನಿಗೆ ಅವತಾರವಿಲ್ಲವಾದ್ದರಿಂದ ಆತನಿಂದಲೂ ಪುತ್ರನನ್ನು ಪಡೆಯುವಂತಿಲ್ಲ. ಶೇಷದೇವರು ವಸುದೇವನ ಮಗ ಬಲರಾಮನಾಗಿ ಅವತರಿಸಿರುವರು. ಎಂದರೆ ಕುಂತಿಗೆ ಅವರು ಸೋದರಳಿಯ. ಸೋದರತ್ತೆಯ ಸ್ಥಾನ ಸೋದರಳಿಯನಿಗೆ ತಾಯಿಯಂತೆ ಪೂಜ್ಯವಾದುದು. ಆದ್ದರಿಂದ ಅವನಿಂದ ಸಂತತಿ ಪಡೆಯುವುದು ಶಾಸ್ತ್ರಸಮ್ಮತವಲ್ಲ. ಶಿವ ಕ್ರೋಧಾಭಿಮಾನಿಯಾದ್ದ–ರಿಂದ, ಪಾಲನಕಾರ್ಯಕ್ಕೆ ಅಷ್ಟು ಶ್ರೇಷ್ಠನಲ್ಲ. ಆದ್ದರಿಂದ ಅವನಿಂದ ಸಂತತಿ ಪಡೆಯುವುದೂ ಉಚಿತವೆನ್ನಿಸದು. ಹೀಗೆ ಈ ಮೂವರಿಂದಲೂ ಸಂತತಿ ಪಡೆಯುವಂತಿಲ್ಲ ಎಂದು ಭಾವ.

೨) ರುದ್ರದೇವರು ಲಯಕಾರಕರಾದ್ದರಿಂದ ಪ್ರಜಾಸೃಷ್ಟಿ, ಪ್ರಜಾಪಾಲನೆ ಎರಡು ಕಾರ್ಯಗಳಿಗೂ ಅಷ್ಟು ಪ್ರಶಸ್ತರಲ್ಲ ಎಂಬ ಮಾತು [೧]ಭಾಗವತದಲ್ಲೂ ಬಂದಿದೆ.

೩) ರುದ್ರದೇವರು ಕ್ರೋಧರೂಪರೆಂಬುದು ಅವರ ಅಶ್ವತ್ಥಾಮ, ದುರ್ವಾಸಾದಿರೂಪ–ಗಳಲ್ಲಿ ವಿಶೇಷವಾಗಿ ಪ್ರಕಟವಾಗಿದೆ.

ಅತೋ ಮಹೇಂದ್ರೋ [೨]ಬಲವಾನನಂತರ–
ಸ್ತೇಷಾಂ ಸಮಾಹ್ವಾನಮಿಹಾರ್ಹತಿ ಸ್ವರಾಟ್ ।
ಇತೀರಿತಾ ಸಾ ೨ ೨ಹ್ವಯದಾಶು ವಾಸವಂ
ತತಃ ಪ್ರಜಜ್ಞೇ ಸ್ವಯಮೇವ ಶಕ್ರಃ ॥ ೯೮ ॥

---

೧. ಅಲಂ ಪ್ರಜಾಭಿಃ ಸೃಷ್ಟಾಭಿರೀದೃಶೀಭಿಃ ಸುರೋತ್ತಮ ।
ಮಯಾ ಸಹ ದಹಂತೀಭಿರ್ದಿಶಶ್ಚಕ್ಷುಭಿರುಲ್ಬಣೈಃ ॥ – ಭಾಗವತ (೩/೧೨/೧೭)

೨. ಬಲಮಿತ್ಯುಪಲಕ್ಷಣಂ ಜ್ಞಾನಭಕ್ತಿಮಾಂಶ್ಚ ಶೇಷಾದ್ಯನಂತರಂ ತಾರತಮ್ಯಸ್ಥ ಇಂದ್ರ ಏವೇತಿ ಭಾವಃ । – (ಜ.)

ಅ: ಆದ್ದರಿಂದ ಅವರ ಅನಂತರ ಬಲಿಷ್ಠನಾದವನೆಂದರೆ ಮಹೇಂದ್ರ. ಸ್ವರ್ಗಾಧಿಪತಿಯಾದ ಅವನನ್ನು ಕರೆಯುವುದೇ ಯೋಗ್ಯ''. ಹೀಗೆ ಹೇಳಲ್ಪಟ್ಟ ಅವಳು ಕೂಡಲೆ ಇಂದ್ರನನ್ನು ಆಹ್ವಾನಿಸಿದಳು. ಆಗ ಸ್ವತಃ ಇಂದ್ರನೇ ಜನಿಸಿದ.

ವಿ: ಇಂದ್ರದೇವರು ಸ್ವರ್ಗಾಧಿಪತಿಯಾದ್ದರಿಂದ ಅವರು ಪ್ರಜಾಪಾಲನೆಗೆ ಅರ್ಹರು ಎಂಬುದನ್ನು 'ಸ್ವರಾಟ್' ಎಂಬ ಪದದಿಂದ ಸೂಚಿಸಿರುವರು.

ಸ ಚಾರ್ಜುನೋ ನಾಮ ನರಾಂಶಯುಕ್ತೋ
ವಿಷ್ಣ್ವಾವೇಶೀ ಬಲವಾನಸ್ತ್ರವೇತ್ತಾ।
ರೂಪ್ಯನ್ಯಃ ಸ್ಯಾತ್ ಸೂನುರಿತ್ಯುಚ್ಯಮಾನಾ[೧]
ಭರ್ತ್ರಾ ಕುಂತೀ ನೇತಿ ತಂ ಪ್ರಾಹ ಧರ್ಮಾತ್ ॥ ೯೯ ॥

ಅ: ಅರ್ಜುನನೆಂಬವನು ಅವನೇ. ಅವನು ನರಾಂಶದಿಂದ ಕೂಡಿದ್ದ. ವಿಷ್ಣುವಿನ ಆವೇಶವನ್ನು ಹೊಂದಿದ್ದ; ಬಲಿಷ್ಠನಾಗಿದ್ದ; ಶಸ್ತ್ರಾಸ್ತ್ರಗಳನ್ನು ಅರಿತಿದ್ದ; ರೂಪವಂತನಾದ ''ಇನ್ನೊಬ್ಬ ಮಗನೂ ಆಗಬೇಕು'' ಎಂದು ಪತಿಯಾದ ಪಾಂಡು ನುಡಿಯಲು ಕುಂತಿ ಧರ್ಮರಕ್ಷಣೆಯ ಕಾರಣದಿಂದಾಗಿ[೨] ಬೇಡವೆಂದಳು.

ವಿ: ೧) ಅರ್ಜುನನು ಸಾಕ್ಷಾತ್ ನರ ಎಂಬ ತಪ್ಪು ಕಲ್ಪನೆ ಕೆಲವರಲ್ಲುಂಟು. ಅದರ ಬಗ್ಗೆ ಸರಿಯಾದ ವಿವರಗಳನ್ನು ಶ್ರೀಮದಾಚಾರ್ಯರು ಇಲ್ಲಿ ನೀಡಿರುವರು. ಅರ್ಜುನ ಮೂಲತಃ ಇಂದ್ರಾವತಾರ. ಅವನಲ್ಲಿ ನರಾಂಶವೂ ಇತ್ತು ('ಸ ಚ ಜ್ಞಾನೀ ಇಂದ್ರಃ ನರಾಂಶಶ್ಚ ' – ಗೀತಾಭಾಷ್ಯ). ಜೊತೆಗೆ ವಿಷ್ಣುವಿನ ಆವೇಶವನ್ನೂ ಹೊಂದಿದ್ದ. ಅವನಲ್ಲಿ ಧನಂಜಯನಾಮಕ ಶ್ರೀಹರಿಯ ವಿಭೂತಿರೂಪವಿದ್ದ ವಿವರ ಗೀತೆಯಲ್ಲಿದೆ('ಪಾಂಡವಾನಾಂ ಧನಂಜಯಃ'–೧೦/೩೭).

೨) ಪಾಂಡುರಾಜ ಮೊದಲ ಮೂವರು ಮಕ್ಕಳನ್ನು ಪಡೆಯಲು ಅತ್ಯಂತ ಉಚಿತವಾದ ಕಾರಣವನ್ನು ನೀಡಿದ್ದ. ಆದರೆ ನಾಲ್ಕನೆಯ ಮಗನನ್ನು ಬಯಸಲು ಆತ ನೀಡಿದ ಕಾರಣ ಧರ್ಮ–ಶಾಸ್ತ್ರಕ್ಕೆ ಸಮ್ಮತವಾಗಿರಲಿಲ್ಲ. ನಿಯೋಗದಿಂದ ಸಂತತಿ ಪಡೆಯುವ ಮುಖ್ಯ ಉದ್ದೇಶ ರಾಜ್ಯರಕ್ಷಣೆಗೆ ಅನುಗುಣವಾಗುವಂತಾಗಿರಬೇಕು; ಬರಿ ರೂಪವಂತನಾದ ಮಗನನ್ನು ಪಡೆಯುವುದರಲ್ಲಿ ಯಾವ ಪುರುಷಾರ್ಥವಿದೆ? ಇದು ಧರ್ಮವಲ್ಲ ಎಂಬ ಕಾರಣದಿಂದ ಕುಂತಿ ನಿರಾಕರಿಸಿದಳು.

---

೧. ಭೀಮಾರ್ಜುನಯೋರತಿಮನೋಹರತ್ವೇಽಪಿ ವಜ್ರಕಾಯತ್ವಾತ್, ಮೃದುಕಾಯಃ ಕಶ್ಚನ ರೂಪವಾನ್ ಪುತ್ರೋ ಭವೇದಿತಿ ಭಾವಂ ಗ್ರಂಥಕಾರಃ ಸ್ವಯಮೇವ ವಕ್ಷ್ಯತೀತಿ ಜ್ಞೇಯಮ್ ॥ – (ವಾ.)

೩) ಭೀಮಾರ್ಜುನರೇ ಸಾಕಷ್ಟು ರೂಪವಂತರೂ ಆಗಿರುವಾಗ ರೂಪವಂತನಾದ ಮತ್ತೊಬ್ಬ ಮಗ ಬೇಕೆನ್ನುವುದು ಧರ್ಮವಲ್ಲ ಎಂಬ ಅರ್ಥದಲ್ಲೂ ಕುಂತಿಯ ನಿರಾಕರಣೆ ಅರ್ಥವತ್ತಾದುದು.

೪) ಎಂತಹ ಆಪತ್ಕಾಲದಲ್ಲೂ ನಾಲ್ಕನೆಯ ಮಗುವನ್ನು ಪಡೆಯುವುದು ಧರ್ಮವಲ್ಲ; ಹಾಗೆ ಪಡೆಯುವವಳು ಸ್ವೈರಿಣೀ ಎನ್ನಿಸುವಳು; ಐದನೆಯ ಮಗುವನ್ನು ಪಡೆಯುವವಳು ಬಂಧಕೀ ಎನ್ನಿಸುವಳು ಎಂಬ ಧರ್ಮವನ್ನು ಗಮನದಲ್ಲಿರಿಸಿಕೊಂಡು ಕುಂತಿ ನಾಲ್ಕನೆಯ ಮಗನನ್ನು ಹೊಂದಲು ನಿರಾಕರಿಸಿದಳು ಎಂದು [೧]ಮಹಾಭಾರತದಲ್ಲಿದೆ.

೫) ಸತ್ಯವತಿಯ ಅಪೇಕ್ಷೆಯಂತೆ ಮೂರು ಮಕ್ಕಳನ್ನು ಕರುಣಿಸಿದ ವೇದವ್ಯಾಸರು ಅವಳು ನಾಲ್ಕನೆಯ ಮಗುವನ್ನು ಬಯಸಿದಾಗ ಅದನ್ನು ನೀಡಬಯಸಲಿಲ್ಲ ಎಂಬ ಪ್ರಸಂಗವೂ ಇದಕ್ಕೆ ಪೋಷಕವಾಗಿದೆ(೧೧/೧೪೦). ಕುಂತಿ ಗಮನದಲ್ಲಿರಿಸಿಕೊಂಡಿದ್ದ ನಿದರ್ಶನ ಅದೇ ಎಂದು ಸಹ ತಿಳಿಯಬಹುದು.

ಉದ್ಧವನ ಜನನ

ಬೃಹಸ್ಪತಿಃ [೨]ಪೂರ್ವಮಭೂದ್ಧರೇಃ ಪದಂ
ಸಂಸೇವಿತುಂ ಪವನಾವೇಶಯುಕ್ತಃ ।
ಸ ಉದ್ಧವೋ ನಾಮ ಯದುಪ್ರವೀರಾ-
ಜ್ಜಾತೋ ವಿದ್ವಾನುಪಗವನಾಮಧೇಯಾತ್ ॥ ೧೦೦ ॥

ಅ: ಶ್ರೀಹರಿಯ ಪಾದವನ್ನು ಚೆನ್ನಾಗಿ ಸೇವಿಸಲೆಂದು ಇವರೆಲ್ಲರಿಗಿಂತ ಮುಂಚಿತವಾಗಿ ಉಪಗವ ಎಂಬ ಯಾದವವೀರನಿಂದ ಉದ್ಧವ ಎಂಬ ಹೆಸರಿನಿಂದ ವಾಯುದೇವರ ಆವೇಶದಿಂದ ಕೂಡಿದವನಾಗಿ ಜ್ಞಾನಿಯಾದ ಬೃಹಸ್ಪತಿ ಜನಿಸಿದ್ದ.

ವಿ: ವಸುದೇವನ ತಮ್ಮನಾದ ದೇವಭಾಗ ಎಂಬವನ ಮಗನ ಹೆಸರೂ ಉದ್ಧವ ಎಂದಿತ್ತು; ಆ ಉದ್ಧವ ಬೃಹಸ್ಪತಿಯ ಅವತಾರನಲ್ಲ ಎಂಬುದನ್ನು ಸ್ಫುಟಪಡಿಸಲು, ಈ ಉದ್ಧವ ಉಪಗವ ಎಂಬ ಯಾದವವೀರನ ಮಗ ಎಂದು ನಿರೂಪಿಸಿರುವರು.

---

೧. ನಾತಶ್ಚತುರ್ಥಂ ಪ್ರಸವಮಾಪತ್ಸ್ವಪಿ ವದಂತ್ಯುತ ।
ಅತಃ ಪರಂ ಸ್ವೈರಿಣೀ ಸ್ಯಾದ್ ಬಂಧಕೀ ಪಂಚಮೇ ಭವೇತ್ ॥
ಸ ತ್ವಂ ವಿದ್ವನ್ ಧರ್ಮಮಿಮಮಧಿಗಮ್ಯ ಕಥಂ ನು ಮಾಮ್ ।
ಆಪತ್ಯಾರ್ಥಂ ಸಮುತ್ಥಮ್ಯ ಪ್ರಮಾದಾದಿವ ಭಾಷಸೇ ॥ (ಕುಂತೀವಚನ) – ಭಾರತ (೧/೨೨/೭೭)

೨. ಯುಧಿಷ್ಠಿರಭೀಮಾದಿಭ್ಯಃ ರಾಮಕೃಷ್ಣಾದಿಭ್ಯಶ್ಚ ಪೂರ್ವಮಿತ್ಯರ್ಥಃ ॥ –(ವಾ.)

ದ್ರೋಣಾತ್ಮಕಂ [೧]ನಾತಿತರಾಂ ಸ್ವಸೇವಕಂ ಕುರ್ಯಾದ್ಧರಿರ್ಮಾಮಿತಿ ಭೂಯ ಏವ ।
ಸ ಉದ್ಧವಾತ್ಮಾऽವತತಾರ ಯಾದವೇಷ್ವಾಸೇವನಾರ್ಥಂ ಪುರುಷೋತ್ತಮಸ್ಯ ॥ ೧೦೧ ॥

ಅ: ದ್ರೋಣರೂಪದ ತನ್ನನ್ನು ಶ್ರೀಹರಿ ವಿಶೇಷವಾಗಿ ನೆಚ್ಚಿನ ಸೇವಕನನ್ನಾಗಿ ಮಾಡಿಕೊಳ್ಳಲಾರ ಎಂಬ ಕಾರಣದಿಂದ ಪುರುಷೋತ್ತಮನಾದ ಅವನ ಸೇವೆಗೆಂದು ಯಾದವರಲ್ಲಿ ಉದ್ಧವರೂಪದಿಂದ ಬೃಹಸ್ಪತಿ ಇನ್ನೊಮ್ಮೆ ಅವತರಿಸಿದ್ದ.

ವಿ: ೧) ಬೃಹಸ್ಪತಿ ದ್ರೋಣರಾಗಿ ಅವತರಿಸಿದ್ದರೂ, ಆ ರೂಪ ಬ್ರಾಹ್ಮಣಧರ್ಮವನ್ನು ಬಿಟ್ಟು ಕ್ಷತ್ರಿಯಧರ್ಮವನ್ನು ಹಿಡಿಯುವುದರಿಂದಲೂ, ಪಾಂಡವರಿಗೆ ವಿರುದ್ಧವಾಗಿ ಕೌರವಪಕ್ಷವನ್ನು ಸೇರುವುದರಿಂದಲೂ ಶ್ರೀಹರಿಗೆ ತುಂಬಾ ಹತ್ತಿರವಾಗಲಾರದು ಎಂಬ ಕಾರಣದಿಂದ ಉದ್ಧವ ಎಂಬ ಮತ್ತೊಂದು ರೂಪದಿಂದ ಜನಿಸಿದ ಎಂದರ್ಥ.

೨) ದ್ರೋಣ ಬ್ರಾಹ್ಮಣರೂಪವಾದ್ದರಿಂದ ಕ್ಷತ್ರಿಯರೂಪದಲ್ಲಿ ಅವತರಿಸಿದ ಕೃಷ್ಣನ ನಿರ್ಮಾಲ್ಯಧಾರಣಾದಿದಾಸ್ಯಭಕ್ತಿಯನ್ನು ಮಾಡಲು ಅವಕಾಶ ಪಡೆಯಲಾರದೆಂದು ಭಾವಿಸಿ, ಉದ್ಧವನಾಗಿ ಕ್ಷತ್ರಿಯರೂಪದಿಂದ ಅವತರಿಸಿದ ಎಂಬ ವಿಶೇಷಾರ್ಥ ವಾದಿರಾಜೀಯದಲ್ಲಿದೆ.

೩) ಒಬ್ಬ ದೇವತೆ ಹೀಗೆ ಒಂದಕ್ಕಿಂತ ಹೆಚ್ಚು ರೂಪದಿಂದ ಅವತರಿಸುವುದು ಯಮ (ಜಾಂಬವಂತ, ವಿದುರ, ಯುಧಿಷ್ಠಿರ) ಮೊದಲಾದ ಇತರದೇವತೆಗಳಲ್ಲೂ ಕಂಡಿದೆ.

೪) ದ್ರೋಣರೂಪದಲ್ಲಿ ಬ್ರಹ್ಮನ ಅಂಶವಿದ್ದರೆ, ಉದ್ಧವನಲ್ಲಿ ವಾಯುದೇವರ ಆವೇಶ– ವಿದ್ದಿತೆಂಬುದು ಮತ್ತೊಂದು ವಿಶೇಷ.

೫) ದ್ರೋಣರೂಪಕ್ಕೆ ದೊರೆಯದ ಭಾಗವತಶ್ರವಣಭಾಗ್ಯ ಉದ್ಧವರೂಪಕ್ಕೆ ದೊರೆ– ತದ್ದರಿಂದ ಅವರು ಹಾಗೆ ಅವತರಿಸಿದ್ದು ಸಾರ್ಥಕವಾಯಿತೆಂಬುದು ಸ್ಪುಟಪಡುವುದು.

೬) ದ್ರೋಣರೂಪಕ್ಕೆ ಒದಗದ ಹರಿನಿರ್ಮಾಲ್ಯಾದಿಸೇವನರೂಪವಾದ ವಿಶೇಷಭಾಗ್ಯ ಉದ್ಧವರೂಪಕ್ಕೆ ಒದಗಿದ ವಿಚಾರ [೨]ಭಾಗವತದಲ್ಲೇ ಬಂದಿದೆ.

---

೧. ಅತಿತರಾಮಿತ್ಯನೇನ ಭೂಭಾರಹರಣಾಖ್ಯಸೇವಾಂ ಪರಂ ಕಾರಯೇತ್ । ವಿಪ್ರತ್ವಾತ್ ''ತ್ವಯೋಪಭುಕ್ತಸ್ರಗ್ಗಂಧವಾಸೋऽಲಂಕಾರಚರ್ಚಿತಾಃ । ಉಚ್ಛಿಷ್ಟಭೋಜಿನೋ ದಾಸಾಸ್ತವ ಮಾಯಾಂ ಜಯೇಮಹೀ'' ತ್ಯಾದಿನೋದ್ಧವೋಕ್ತಸ್ವನಿರ್ಮಾಲ್ಯಧಾರಣಸ್ವೋಚ್ಛಿಷ್ಟಭೋಜನಾದ್ಯಂತರಂಗಸೇವಾಸು ಚ ನ ನಿಯುಂಜ್ಯಾದಿತಿ ಸೂಚಯತಿ ॥ – (ವಾ.)

೨. ತ್ವಯೋಪಭುಕ್ತಸ್ರಗ್ಗಂಧವಾಸೋಲಂಕಾರಚರ್ಚಿತಾಃ ।
ಉಚ್ಛಿಷ್ಟಭೋಜಿನೋ ದಾಸಾಸ್ತವ ಮಾಯಾಂ ಜಯೇಮಹಿ ॥ – ಭಾಗವತ (೧೧/೬/೪೬)

ಬೃಹಸ್ಪತೇರೇವ ಸ ಸರ್ವವಿದ್ಯಾ ಅವಾಪ ಮಂತ್ರೀ ನಿಪುಣಃ ಸರ್ವವೇತ್ತಾ।
ವರ್ಷತ್ರಯೇ ತತ್ಪರತಃ ಸ ಸಾತ್ಯಕಿರ್ಜಜ್ಞೇ ದಿನೇ ಚೇಕಿತಾನಶ್ಚ ತಸ್ಮಿನ್ ॥ ೧೦೨ ॥

ಅ: ಉದ್ಧವನು ಬೃಹಸ್ಪತಿಯಿಂದಲೇ ಸಕಲವಿದ್ಯೆಗಳನ್ನು ಕಲಿತು, ಎಲ್ಲ ತಿಳಿದವನೂ, ನಿಪುಣನೂ ಎನ್ನಿಸಿ, ಕೃಷ್ಣನಿಗೆ ಮಂತ್ರಿಯಾದ. ಅವನು ಹುಟ್ಟಿದ ಮೂರುವರ್ಷಗಳ ನಂತರ ಸಾತ್ಯಕಿ ಹುಟ್ಟಿದ. ಅದೇ ದಿನ ಚೇಕಿತಾನನೂ ಜನಿಸಿದ.

ವಿ: ಉದ್ಧವ ತನ್ನ ಮೂಲರೂಪವಾದ ಬೃಹಸ್ಪತಿಯ ಬಳಿಯಲ್ಲೇ ಸರ್ವವಿದ್ಯೆಗಳನ್ನೂ ಕಲಿತದ್ದು ಇಲ್ಲಿಯ ವಿಶೇಷ. ಹೀಗೆ ತನ್ನಲ್ಲೇ ತಾನು ಓದುವುದು ತಾನೇ ವಿಶೇಷ ಅಧ್ಯಯನ ಮಾಡಿ ರಚಿಸಿದ ಗ್ರಂಥಗಳನ್ನು ಪ್ರಸಂಗ ಒದಗಿದಾಗ ತಾನೇ ಅವಲೋಕಿಸಿ ಉಪಯೋಗ ಪಡೆಯುವ ಕಾರ್ಯ–ವನ್ನು ಹೋಲುವುದು. ದೇವತೆಗಳ ಮೂಲರೂಪದ ಸಾಮರ್ಥ್ಯ ಅವತಾರರೂಪಕ್ಕಿಂತ ಮಿಗಿಲಾ–ದ್ದರಿಂದ, ಅವರ ಬಳಿ ಅವತಾರರೂಪದ ಅಧ್ಯಯನ ಸೂಕ್ತವೇ ಆಗಿದೆ. ಇದು ಅವತಾರರೂಪದಲ್ಲಿ ಶೇಷಾದಿ ಇತರದೇವತೆಗಳ ಜ್ಞಾನಾನಂದಾದಿಗಳು ಹ್ರಾಸಗೊಂಡಿರುವುದಕ್ಕೂ ನಿದರ್ಶನ.

ಚೇಕಿತಾನನ ಅವತಾರ ಹಾಗೂ ವಯೋಮಾನದ ಅಂತರ

ಮರುತ್ಸು ನಾಮ [೧]ಪ್ರತಿಭೋ ಯದುಷ್ವಭೂತ್ ಸ ಚೇಕಿತಾನೋ ಹರಿಸೇವನಾರ್ಥಮ್ ।
ತದೈವ ಜಾತೋ ಹೃದಿಕಾತ್ಮಜೋಽಪಿ ವರ್ಷತ್ರಯೇ ತತ್ಪರತೋ ಯುಧಿಷ್ಠಿರಃ ॥ ೧೦೩ ॥

ಅ: ಮರುತ್ತುಗಳಲ್ಲಿ ಪ್ರತಿಭನೆಂಬವನು ಶ್ರೀಹರಿಸೇವೆಗಾಗಿ ಯಾದವರಲ್ಲಿ ಜನಿಸಿದ. ಅವನೇ ಚೇಕಿತಾನ. ಹೃದಿಕನ ಮಗನಾಗಿ ಕೃತವರ್ಮನೂ ಆಗಲೇ ಜನಿಸಿದ. ಅವನು ಜನಿಸಿದ ಮೂರುವರ್ಷದ ಮೇಲೆ ಯುಧಿಷ್ಠಿರ ಹುಟ್ಟಿದ.

ಅಶ್ವತ್ಥಾಮನ ಜನನ

ತತೋಽಬ್ದತೋ ಭೂಭರಸಂಹೃತೌ ಹರೇ-
ರಂಗತ್ವಮಾಪ್ತುಂ ಗಿರಿಶೋಽಜನಿಷ್ಟ।
[೨]ಅಶ್ವತ್ಥಾಮಾ ನಾಮತೋಽಶ್ವಧ್ವನಿಂ ಸ
ಯಸ್ಮಾಚ್ಚಕ್ರೇ ಜಾಯಮಾನೋ ಮಹಾತ್ಮಾ ॥೧೦೪॥

---

೧. ....ಪ್ರವಹೋ – (ಪಾಠಾಂತರ)

೨. ಅಶ್ವೇ ಸ್ಥಿತಃ ಅಶ್ವತ್ಥಃ ಧ್ವನಿಃ ತೇನ ಅಮಾ ಸಹೋತ್ಪನ್ನತ್ವಾದಶ್ವತ್ಥಾಮೇತ್ಯರ್ಥಃ ॥ – (ವಾ.)

ಅ: ಅನಂತರ ಒಂದು ವರ್ಷದ ಮೇಲೆ ಭೂಭಾರಹರಣಕಾರ್ಯದಲ್ಲಿ ಶ್ರೀಹರಿಗೆ ಸೇವಕನಾಗಲೆಂದು ಶಿವ ಅಶ್ವತ್ಥಾಮ ಎಂಬ ಹೆಸರಿನಿಂದ ಜನಿಸಿದ. ಮಹಾತ್ಮನಾದ ಅವನು ಹುಟ್ಟುವಾಗ [೧]ಕುದುರೆಯಂತೆ ಕೆನೆದ. ಅದರಿಂದಾಗಿ ಅವನಿಗೆ ಅಶ್ವತ್ಥಾಮನೆಂದು ಹೆಸರು.

ಸ ಸರ್ವವಿದ್ಬಲವಾನಸ್ತ್ರವೇತ್ತಾ
ಕೃಪಸ್ವಸಾಯಾಂ ದ್ರೋಣವೀರ್ಯೋದ್ಭವೋಽಭೂತ್ ।
ದುರ್ಯೋಧನಸ್ತಚ್ಚತುರ್ಥೇಽಹ್ನಿ ಜಾತ-
ಸ್ತಸ್ಯಾಪರೇದ್ಯುರ್ಭೀಮಸೇನಃ ಸುಧೀರಃ ॥ ೧೦೫ ॥

---

೧. ಸ ಜಾತಮಾತ್ರೋ ವ್ಯನದತ್ ಯಥೈವೋಚ್ಚೈಶ್ರವಾ ಹಯಃ ॥...
ಅಶ್ವಸ್ಯೇವಾಸ್ಯ ಯತ್ ಸ್ಥಾಮ ನದತಃ ಪ್ರದಿಶೋ ಗತಮ್ ॥
ಅಶ್ವತ್ಥಾಮ್ನೈವ ಬಾಲೋಽಯಂ ತಸ್ಮಾನ್ನಾಮ್ನಾ ಭವಿಷ್ಯತಿ ॥ – ಭಾರತ (ಆದಿ. ೧೨೯/೪೭-೪೯)

೨. ಕೃಪಸ್ವಸಾಯಾಂ ದ್ರೋಣವೀರ್ಯೋದ್ಭವ ಇತ್ಯತ್ರ । ಯಾಂ ಕೃಪಸ್ವಸೇತಿ ವದಂತಿ ತಸ್ಯಾಂ ದ್ರೋಣವೀರ್ಯೋದ್ಭವೋಽಭೂದಿತಿ ಯೋಜನಾ ಯದ್ವಾ ''ಸೃ ಗತಾ'' ವಿತಿ ಧಾತೋಃ ಔಣಾದಿಕೇ ಡಪ್ರತ್ಯಯೇ ಕೃತೇ ಸ್ವೇನ ಸಹ ನಿಃಸೃತಾ ಸ್ವಸಾ ಸಹೋದರೀತ್ಯರ್ಥಃ । – (ವಾ.)

ಕೇಚಿತ್ ತು ಯಾಂ ಕೃಪಸ್ವಸೇತ್ಯಾಹುಃ । ತಸ್ಯಾಂ ದ್ರೋಣವೀರ್ಯೋದ್ಭವ ಇತ್ಯರ್ಥಮಾಹುಃ । – (ತಾ.)

ಕೃಪಸ್ವಸಾಯಾಮಿತ್ಯತ್ರ ಸ್ವಸೃಶಬ್ದಾತ್ ಢಾಂದಸೋ ಡಾಬ್ಭ್ರೂಪಃ ಸ್ತ್ರೀಪ್ರತ್ಯಯೋ ದ್ರಷ್ಟವ್ಯಃ । ... – (ಸ.)

೩. ತಸ್ಯಾಪರೇದ್ಯುರ್ಭೀಮಸೇನಃ ಸುಧೀರ ಇತ್ಯತ್ರ । ತಸ್ಯ ದುರ್ಯೋಧನಸ್ಯ ಅಪರೇ = ಪರದಿನೇ ಭೀಮಸೇನೋಽಭೂತ್ ಏವಂ ಸತಿ ''ಶತಂ ಸುಯೋಧನಾದಯೋ ಬಭೂವುರನ್ವಹಂ'' ಇತ್ಯನೇನ ವಿರೋಧ ಇತಿ ನ ಶಂಕನೀಯಮ್ । ದುರ್ಯೋಧನೋತ್ಪತ್ತೇರಪರದಿನೇ ಕುಂತ್ಯಾಂ ಭೀಮಸೇನೋ ಜಾತಃ । ತಸ್ಮಿನ್ನೇವ ದಿನೇ ದ್ವಿತೀಯಘಟಾದ್ದುಃಶಾಸನಸ್ಯೋತ್ಪತ್ತಿಸಂಭವಾತ್ ॥ – (ವಾ.)

ನನ್ವತ್ರ ಸುಯೋಧನೋ ಯುಧಿಷ್ಠಿರತಶ್ಚತುರ್ದಿನಾಧಿಕವರ್ಷಾತ್ ನೀಚ ಇತ್ಯುಕ್ತಂ। ಇದಂ ನ ಸಂಗಚ್ಛತೇ। ಪೂರ್ವಂ ತದಾಸ್ಯೇತ್ಯಾದಿನಾ ಪಾಂಡುಃ ಗಾಂಧಾರ್ಯಾ ಗರ್ಭೋ ಧೃತ ಇತಿ ಶ್ರುತ್ವಾ ಕುಂತೀಂ ಪುತ್ರೋತ್ಪತ್ತ್ಯರ್ಥಂ ಪ್ರೇರಯಮಾಸೇತ್ಯುಕ್ತತ್ವಾತ್। ಗರ್ಭಸ್ಯ ದಶಮಾಸ್ಯತ್ವಸ್ಯ ಶ್ರುತ್ಯಾ ಉಕ್ತತ್ವಾಚ್ಚೇತಿ ಚೇತ್ ಸತ್ಯಂ। ದಶಮಾಸ್ಯತ್ವಂ ತು ಪ್ರಾಯಿಕಂ। ಕುತ್ರಚಿದಾಧಿಕ್ಯಸ್ಯಾಪಿ ದೃಷ್ಟತ್ವಾತ್। ಅತ್ರ ಗಾಂಧಾರ್ಯಾ ವರ್ಷದ್ವಯಂ ಗರ್ಭಸ್ಯ ಧೃತತ್ವಾತ್ ಚತುರ್ದಿನಾಧಿಕ ವರ್ಷಾನ್ನೀಚತ್ವಂ ಯುಜ್ಯತೇ। ಗಾಂಧಾರ್ಯಾ ವರ್ಷದ್ವಯಂ ಗರ್ಭಸ್ಯ ಧಾರಣಂ ಆದಿಪರ್ವಣ್ಯುಕ್ತಂ ತಥಾಹಿ —

ಸಂವತ್ಸರದ್ವಯಂ ತಂ ತು ಗಾಂಧಾರೀ ಗರ್ಭಮಾಹಿತಮ್ ।
ಅಪ್ರಜಾ ಧಾರಯಾಮಾಸ ತತಸ್ತಾಂ ದುಃಖಮಾವಿಶತ್। ಇತಿ ॥

ತಸ್ಯ ದುರ್ಯೋಧನಸ್ಯ ಅಪರೇದ್ಯುಃ ದ್ವಿತೀಯೇಽಹ್ನಿಸುತರಾಂ ಧೀರಃ ಧೈರ್ಯವಾನ್ ಭೀಮಃ ಜಾತ ಇತಿ ವಿಶೇಷಃ ॥ – (ಜ.)

ಅ: ಅಶ್ವತ್ಥಾಮನು ಎಲ್ಲವನ್ನೂ ಬಲ್ಲವನೂ, ಬಲಿಷ್ಠನೂ, ಅಸ್ತ್ರಜ್ಞನೂ ಆಗಿ ಕೃಪನ ತಂಗಿಯಾದ ಕೃಪಿಯಲ್ಲಿ ದ್ರೋಣನ ವೀರ್ಯದಿಂದ ಜನಿಸಿದ. ಅನಂತರ ನಾಲ್ಕನೆಯ ದಿನದಲ್ಲಿ ದುರ್ಯೋಧನ ಜನಿಸಿದ. ಅದರ ಮಾರನೆಯ ದಿನ ಮಹಾಧೀರನಾದ ಭೀಮಸೇನ ಜನಿಸಿದ.

ವಿ: ಇಲ್ಲಿ 'ದ್ರೋಣವೀರ್ಯೋದ್ಭವೋಽಭೂತ್' ಎಂಬ ಮಾತಿನಿಂದ ಅವರ ಹುಟ್ಟು ಶ್ರೀಹರಿಯ ಹುಟ್ಟಿನಂತಲ್ಲ; ಪ್ರಾಕೃತವಾದುದು ಎಂಬುದನ್ನು ತಿಳಿಸಿರುವರು. ಇದು 'ಪತ್ಯುರಸಾಮಂಜಸ್ಯಾತ್' ಎಂಬ ಬ್ರಹ್ಮಸೂತ್ರಕ್ಕೆ ವಿವರಣರೂಪ.

ಬಲರಾಮನು ಅಣ್ಣನಾಗಲು ಕಾರಣ

ಯದಾ ಸ ಮಾಸದ್ವಿತಯೀ ಬಭೂವ ತದಾ ರೋಹಿಣ್ಯಾಂ ಬಲದೇವೋಽಭಿಜಾತಃ ।
ಬಲೀ ಗುಣಾಢ್ಯಃ ಸರ್ವವೇದೀ ಯ ಏವ ಸೇವಾಖಿನ್ನೋ[೧] ಲಕ್ಷ್ಮಣೋಽಗ್ರೇ ಹರೇರ್ಭೂತ್॥

---

೧. ರಾಮಾವತಾರೇ ಕೃತಸೇವಯಾ = ಬಹುಸೇವಯಾ ಖಿನ್ನಃ= ಶ್ರಮವಾನಹಂ ಅತಃ ಪರಮಪಿ ತಥಾ ಕರ್ತುಂ ನ ಶಕ್ನೋಮೀತಿ ಮನಃ ಖೇದವಾನಿತಿ ಯಾವತ್ । ಅನುಜತ್ವೇ ಅತ್ರಾಪಿ ತಥೈವ ಸೇವಾ ಕಾರ್ಯಾ ಅನ್ಯಥಾ ವಿದ್ಯುಲ್ಲಂಘನದೋಷಃ ಸ್ಯಾತ್ । ಅತ ಅಗ್ರಜೋ ಭವಾಮೀತಿ ಬುದ್ಧ್ಯಾ ಅಗ್ರೇಽಭೂದಿತಿ ಯೋಜನಾ । ಅತ ಏವ ಲಕ್ಷ್ಮಣಜನ್ಮನಿ ಖೇದಸೂಚನಾಯ ಲಕ್ಷ್ಮಣಪದಮ್ । ''ಏಧಮಾನದ್ವಿಟ್'' ಇತಿ ಹಿ ಭಗವತೋ ಮಹಿಮಾ । ಅಧಿಕಸೇವಾಜನಿತಪುಣ್ಯನಾಶಾಯ ಭಗವಾನೇವ ತಾದೃಶೀಂ ಬುದ್ಧಿಂ ದದೌ । ಕಥಮನ್ಯಥಾ ಭಗವದ್ಭಕ್ತಃ ಶಕ್ರೋ ಗೋವರ್ಧನಗಿರ್ಯುದ್ಧರಣಸಮಯೇ ಕೃಷ್ಣಾವಜ್ಞಾಂ ಕೃತವಾನ್ । ಅಸುರಾವೇಶವಶಾತ್ ತಚ್ಚೇತ್ ಇದಮಪಿ ತಥೇತಿ ಸಂತೋಷ್ಟವ್ಯಮ್ । ರಾಮಾವತಾರೇ ಮಮ ಸೇವಾ ಸಮ್ಯಙ್ ನಾಭೂದಿತಿ ಸೇವಾಖಿನ್ನ ಇತಿ ವ್ಯಾಖ್ಯಾನಂ ಪೂರ್ವೋತ್ತರವಿರುದ್ಧಮ್ । ಅಗ್ರಜನ್ಮನಿ ಪಾದಸಂವಾಹನಾದಿನಾ ಸೇವ್ಯತ್ವಸ್ಯೈವ ಸಂಭವೇನ ಸೇವಾಯಾ ಅಸಂಭವಾತ್ ।''ಅಧಿಕಂ ಯೈಃ ಕೃತಂ ತತ್ರ ತೈರೂನಂ ಕೃತಮತ್ರ ತತ್''ಇತಿ ಆಚಾರ್ಯವಚನವಿರುದ್ಧಂ ಚ ।– (ವಾ.)

ಅಗ್ರೇ ಪೂರ್ವತ್ರೇತಾಯಾಮಿತ್ಯರ್ಥಃ। ಹರೇಃ ಶ್ರೀರಾಮಚಂದ್ರಸ್ಯ ಸೇವಯಾ ಖಿನ್ನಃ ಶ್ರಾಂತೋ ಯೋ ಲಕ್ಷ್ಮಣಃ ಸ ಏವ ನಾಮ್ನಾ ಬಲದೇವಃ ಸನ್ ರೋಹಿಣ್ಯಾಮಭಿಜಾತಃ। ಯದ್ವಾ ಅಗ್ರೇ ರಾಮಾವತಾರಸಮಾಪ್ತಿಕಾಲೇ ಮಮ ಸೇವಾ ನಾಭೂದಿತಿ ಸೇವಾಯಾಂ ಸೇವಾನಿಮಿತ್ತಂ ಖಿನ್ನೋಽನಲಂಬುದ್ಧಿರ್ಯೋ ಲಕ್ಷ್ಮಣಃ ಸ ರೋಹಿಣ್ಯಾ-ಮಭಿಜಾತಃ। ಅತ ಏವೋಕ್ತಂ ಪೂರ್ವಂ 'ಭಕ್ತಿಖೇದೋಽಚ್ಯುತಾಶ್ರಯಃ' ಇತಿ ಪಾದ್ಮೇ। ಅತುಷ್ಟಿರಪ್ರಸಾದಶ್ಚ ಖೇದೋ ತೃಪ್ತಿಸ್ತಥೈವ ಚ। ಅನಲತ್ವಂ ವದಂತ್ಯೇತೇ ಸರ್ವೇ ಪರ್ಯಾಯವಾಚಕಾ ಇತಿ ಬ್ರಾಹ್ಮೇ। – (ಜ.)

ಸೇವಾಖಿನ್ನಃ ಶ್ರೀರಾಮಸ್ಯ ಸೇವಾಯಾಂ ಖಿನ್ನೋಽನಲಂ ಬುದ್ಧಿಮಾನ್। – (ವ.)

ಸೇವಾಖಿನ್ನ ಇತಿ । ಲಕ್ಷ್ಮಣತ್ವಾವಸ್ಥಾಯಾಂ ಅನುಜತ್ವಾತ್ ಸೇವಯಾ ಬಹುಶ್ರಮೇಣ ಕಿಂಚಿತ್ ಖೇದಯುಕ್ತತ್ವಾದ್ಧರೇರಗ್ರೇ ಅಭೂದಿತ್ಯರ್ಥಃ । ವ್ಯಾಸತೀರ್ಥೀಯೇ ತು ರಾಮಾವತಾರೇ ಭಗವತ್ಸೇವಾ ಮಮ ಸಮ್ಯಙ್ನಾಭೂದಿತಿ ಸೇವಾವಿಷಯೇ ಖಿನ್ನಃ ಅಲಂಬುದ್ಧಿರಹಿತ ಇತಿ ವ್ಯಾಖ್ಯಾತಮ್ । ಅಸ್ಮಿನ್ ಪಕ್ಷೇ ಅಗ್ರತ ಇತಿ ಸ್ವರೂಪಕಥನಮ್। ಅತುಷ್ಟಿರಪ್ರಸಾದಶ್ಚ ಖೇದೋ ತೃಪ್ತಿಸ್ತಥೈವ ಚ ಅನಲತ್ವಂ ವದಂತ್ಯೇತೇ ಸರ್ವೇ ಪರ್ಯಾಯ-ವಾಚಕಾಃ। ಇತಿ ಪ್ರಥಮಸ್ಕಂಧತಾತ್ಪರ್ಯಾನುಸಾರೇಣಾಖಿನ್ನ ಇತ್ಯಸ್ಯ ಅಲಂಬುದ್ಧಿರಹಿತ ಇತ್ಯರ್ಥ ಉಕ್ತಃ। - (ತಾ.)

ಅ: ಭೀಮ ಎರಡು ತಿಂಗಳ ಮಗುವಾಗಿದ್ದಾಗ ರೋಹಿಣಿಯಲ್ಲಿ ಬಲಶಾಲಿಯೂ, ಗುಣವಂತನೂ ಆದ ಬಲರಾಮ ಜನಿಸಿದ. (ಹಿಂದೆ) ಲಕ್ಷ್ಮಣನಾಗಿದ್ದಾಗ ಸೇವೆ ಮಾಡಿ ಬಳಲಿದ್ದರಿಂದ ಅವನೀಗ ಕೃಷ್ಣನಿಗಿಂತ ಮುಂಚೆಯೇ ಜನಿಸಿದ (ಲಕ್ಷ್ಮಣನಾಗಿದ್ದಾಗ ಮಾಡಿದ್ದ ಮುಂಚಿನ ಸೇವೆ ಇನ್ನೂ ಸಾಲದೆನ್ನಿಸದ್ದರಿಂದ ಶೇಷ ಶ್ರೀಕೃಷ್ಣಾವತಾರದಲ್ಲೂ ಮುಂಚಿತವಾಗಿಯೇ ಅವತರಿಸಿದ).

ವಿ: ೧) ಶೇಷ ಲಕ್ಷ್ಮಣನಾಗಿ ಶ್ರೀರಾಮಸೇವೆ ಸಲ್ಲಿಸಿ, ಬಳಲಿದ್ದ. ಅಲ್ಲಿ ತಮ್ಮನಾಗಿ ಜನಿಸಿದ್ದರಿಂದ ಸೇವಾಕಾರ್ಯ ಅನಿವಾರ್ಯವೂ ಆಗಿತ್ತು. ಕೃಷ್ಣಾವತಾರದಲ್ಲೂ ತಮ್ಮನಾಗಿಯೇ ಜನಿಸಿದಲ್ಲಿ ಪುನಃ ಹಾಗೆಯೇ ಸೇವೆ ಮಾಡುವುದು ಅನಿವಾರ್ಯವಾಗುವುದು. ಆದರೆ ಬಳಲಿಕೆ–ಯಿಂದಾಗಿ ಅದು ಸಾಧ್ಯವಾಗುವುದಿಲ್ಲ. ಆದ್ದರಿಂದ ಅಣ್ಣನಾಗಿ ಜನಿಸಿದಲ್ಲಿ ವಿಶೇಷಸೇವೆ ಸಲ್ಲಿಸುವ ಪ್ರಸಂಗ ಒದಗಲಾರದೆಂದು ಭಾವಿಸಿ, ಇಲ್ಲಿ ಕೃಷ್ಣನಿಗೆ ಅಣ್ಣನಾಗಿ ಜನಿಸಿದ ಎಂದು ಭಾವ.

೨) ಲಕ್ಷ್ಮಣನಾಗಿದ್ದಾಗ ಮಾಡಿದ್ದ ಮುಂಚಿನ ಸೇವೆ ಇನ್ನೂ ಸಾಲದೆನ್ನಿಸದ್ದರಿಂದ ಶೇಷದೇವರು ಶ್ರೀಕೃಷ್ಣಾವತಾರದಲ್ಲೂ ಅವತರಿಸಿದರು ಎಂಬುದು ಮತ್ತೊಂದು ರೀತಿಯ ವ್ಯಾಖ್ಯಾನ.

೩) ಮೊದಲರೀತಿಯ ಅರ್ಥ ವಾದಿರಾಜೀಯದಲ್ಲಿದ್ದರೆ, ಎರಡನೆಯ ರೀತಿಯ ಅರ್ಥ ಸತ್ಯಾಭಿನವತೀರ್ಥೀಯ, ಜನಾರ್ದನೀಯ ಹಾಗೂ ವರದರಾಜೀಯಗಳಲ್ಲಿವೆ. ಜನಾರ್ದನೀಯ ಹಾಗೂ ತಾಮ್ರಪರ್ಣೀಯಗಳಲ್ಲಿ ಎರಡು ರೀತಿಯ ಅರ್ಥಗಳೂ ಇವೆ.

---

೨. ಸೇವಾಖಿನ್ನಃ ಲಕ್ಷ್ಮಣಃ ಅಗ್ರೇ ಹರೇರ್ಭೂತ್ ಇತ್ಯಸ್ಯ ಸೇವಾಖಿನ್ನಃ ಭಗವತ್ಸೇವಾಯಾಂ ಖಿನ್ನಃ ಅಲಂಬುದ್ಧಿರಹಿತಃ ಲಕ್ಷ್ಮಣಃ ಹರೇಃ ಅಗ್ರೇಭೂತ್ ಅಭೂದಿತ್ಯರ್ಥಃ । ಏತೇನ ಗುಣಾಢ್ಯಸ್ಯ ಲಕ್ಷ್ಮಣಸ್ಯ ಭಗವತ್ಸೇವಾರ್ಥಮವತಾರಕಾಲೇ ಭಗವತ್ಸೇವಾ ನಿಮಿತ್ತಕ ಕ್ಲೇಶಾಯೋಗಾತ್ ಗುಣಾಢ್ಯೋ ಲಕ್ಷ್ಮಣಃ ಭಗವತ್ಸೇವಯಾ ಕ್ಲೇಶಂ ಪ್ರಾಪ್ತ ಇತಿ ಕಥನಮನುಪಪನ್ನಮಿತಿ ದೂಷಣಂ ಪರಾಸ್ತಮ್ । ಸೇವಾಖಿನ್ನ ಇತ್ಯಸ್ಯ ಭಗವತ್ಸೇವಯಾ ಕ್ಲೇಶಂ ಪ್ರಾಪ್ತ ಇತ್ಯರ್ಥಮನಂಗೀಕೃತ್ಯ,

ಅತುಷ್ಟಿರಪ್ರಸಾದಶ್ಚ ಖೇದೋಽತೃಪ್ತಿಸ್ತಥೈವ ಚ।
ಅನಲತ್ವಂ ವದಂತ್ಯೇತೇ ಸರ್ವೇ ಪರ್ಯಾಯ ವಾಚಕಾಃ ॥

ಇತಿ ಬ್ರಾಹ್ಮವಾಕ್ಯಾನುಸಾರೇಣ ಭಗವತ್ಸೇವಾವಿಷಯಕಾಲಂಬುದ್ಧಿರಹಿತ ಇತ್ಯರ್ಥಸ್ಯೋಕ್ತತ್ವಾತ್ । ಲಕ್ಷ್ಮಣಸ್ಯ ಭಗವತ್ಸೇವಾವಿಯೇ ಮಹಾನಾದರೋಽಸ್ತೀತಿ ಸೂಚಯಿತುಂ ಹರೇರಗ್ರಜೋಽಭೂದಿತ್ಯನುಕ್ತ್ವಾ ಹರೇರಗ್ರೇಽಭೂದಿತ್ಯುಕ್ತಮ್। –(ಸ.)

ನನು 'ಲಕ್ಷ್ಮಣೋಽಗ್ರೇಽಭೂತ್' ಇತ್ಯತ್ರ ಕಥಂ ಲಕ್ಷ್ಮಣಸ್ಯ ಮೂಲರೂಪಸಶೇಷಾತ್ । ತದೇವ ಶೇಷೋ ಹರಿಣೋದಿತ ಇತಿ ಬಲಭದ್ರಸ್ಯ ಮೂಲರೂಪಾಂಶತ್ವೋಕ್ತೇಶ್ಚೇತಿ ಚೇತ್, ಶೇಷಸ್ಯ ಲಕ್ಷ್ಮಣತ್ವಾವಸ್ಥಾಯಾಂ ಖೇದಜ್ಞಾಪನಾಯ ಲಕ್ಷ್ಮಣಪದಗ್ರಹಣಾದಿತಿ। –(ತಾ.)

೪) ಈ ಎರಡು ಅರ್ಥಗಳೂ ಗ್ರಾಹ್ಯವೆ. ಶೇಷದೇವರು ರಾಮಾವತಾರದಲ್ಲಿ ಲಕ್ಷ್ಮಣನಾಗಿ ಅವತರಿಸಿ ತಮ್ಮನಾಗಿ ಸೇವೆ ಸಲ್ಲಿಸಿದ್ದರೆ, ಕೃಷ್ಣಾವತಾರದಲ್ಲೇಕೆ ತಮ್ಮನಾಗಲಿಲ್ಲ? ಎಂಬ ಪ್ರಶ್ನೆಗೆ ಮೊದಲನೆಯ ಅರ್ಥ ಉತ್ತರವಾಗಿದೆ. ಇದರಿಂದ ಲಕ್ಷ್ಮಣನಾಗಿ ಸಲ್ಲಿಸಿದಂತಹ ಸೇವೆಯನ್ನೇ ಸಲ್ಲಿಸಲು ಅಧಿಕಪುಣ್ಯಾದಿಗಳ ಕಾರಣದಿಂದ ಸಾಧ್ಯವಾಗದೆ, ಇಲ್ಲಿ ಅಣ್ಣನಾದರು ಎಂದರ್ಥ. ಎಂದರೆ ವಾಯುದೇವರಂತೆ ಎಲ್ಲ ಅವತಾರಗಳಲ್ಲೂ ಏಕರೀತಿಯ ಸೇವೆ ಸಲ್ಲಿಸುವುದು ಇತರದೇವತೆಗಳಿಗೆ ಸಾಧ್ಯವಾಗದು; ಶೇಷದೇವರೂ ಇದಕ್ಕೆ ಹೊರತಲ್ಲ. ಆದ್ದರಿಂದ ಅವರು ಸ್ವಲ್ಪ ಬಳಲಿಕೆ ತಪ್ಪಿಸಿಕೊಳ್ಳಲೆಂದು ಅಣ್ಣನಾಗಿ ಜನಿಸಿದರು ಎಂದು ಭಾವ. ಈ ಅರ್ಥದಂತೆ 'ಸೇವಾಖಿನ್ನಃ ಲಕ್ಷ್ಮಣಃ ಹರೇರಗ್ರೇಽಭೂತ್' ಎಂದು ಅನ್ವಯಕ್ರಮ.

೫) ರಾಮಾವತಾರದಲ್ಲಿ ಲಕ್ಷ್ಮಣನಾಗಿ ಅಪಾರಸೇವೆ ಸಲ್ಲಿಸಿದ್ದ ಶೇಷದೇವರು ಕೃಷ್ಣಾವತಾರದಲ್ಲಿ ಮತ್ತೇಕೆ ಜನಿಸಿದರು ಎಂಬ ಪ್ರಶ್ನೆಗೆ ಎರಡನೆಯ ರೀತಿಯ ಅರ್ಥದಲ್ಲಿ ಉತ್ತರವಿದೆ. ಲಕ್ಷ್ಮಣನಾಗಿ ಅಷ್ಟು ಅಪಾರವಾಗಿ ಸೇವೆ ಸಲ್ಲಿಸಿದ್ದರೂ, ಅವರಿಗಿನ್ನೂ ಹರಿಸೇವೆ ಮಾಡಿದ್ದು ಸಾಕೆನ್ನಿಸಲಿಲ್ಲ. ಅದಕ್ಕಾಗಿ ಪುನಃ ಶ್ರೀಕೃಷ್ಣಾವತಾರದಲ್ಲೂ ಅವತರಿಸಿದರು ಎಂದರ್ಥ. ಈ ಅರ್ಥದಂತೆ ಶ್ಲೋಕದ ಈ ಭಾಗಕ್ಕೆ 'ಅಗ್ರೇ ರಾಮಾವತಾರಸಮಾಪ್ತಿಕಾಲೇ ಹರೇಃ ಸೇವಾಖಿನ್ನಃ ಸೇವಾನಿಮಿತ್ತಂ ಖಿನ್ನಃ ಅನಲಂಬುದ್ಧಿಃ ಯಃ ಲಕ್ಷ್ಮಣಃ ಸ ರೋಹಿಣ್ಯಾಮಭಿಜಾತಃ' ಎಂದು ಅನ್ವಯಕ್ರಮ.

೬) ಮೊದಲನೆಯ ಅರ್ಥಕ್ಕೆ 'ಅಧಿಕಂ ಯೈಃ ಕೃತಂ ತತ್ರ ತೈರೂನಂ ಕೃತಮತ್ರ ತತ್' ಎಂಬ ಮಾತು ಆಧಾರವಾದರೆ, ಎರಡನೆಯ ಅರ್ಥಕ್ಕೆ ಈ ಕೆಳಗಿನ ವಾಕ್ಯಗಳು ಆಧಾರ :

'ತೃತೀಯಾಂಗಂ ಹರೇಃ ಶೇಷಃ ಪ್ರಾದುರ್ಭಾವಸಮನ್ವಿತಃ ।
ಪ್ರಾದುರ್ಭಾವಾ ನರಶ್ಚೈವ ಲಕ್ಷ್ಮಣೋ ಬಲ ಏವ ಚ' (೩/೧೨೮)

ದ್ರೌಪದೀ ವೈರಹೇತುಃ ಸಾ ತಸ್ಮಾದ್ಭೀಮಾದನಂತರಾ ।
ಬಲದೇವಸ್ತತಃ ಪಶ್ಚಾತ್ ತತಃ ಪಶ್ಚಾಚ್ಚ ಫಲ್ಗುನಃ ॥ (೨/೪೩)

೭) ಇಲ್ಲಿ 'ಸೇವಾಖಿನ್ನ' ಎಂಬ ಪದವನ್ನು ಮೊದಲನೆಯ ಅರ್ಥಕ್ಕಾಗಿ 'ಸೇವಯಾ ಖಿನ್ನಃ' ಎಂದೂ, ಎರಡನೆಯ ಅರ್ಥಕ್ಕಾಗಿ 'ಸೇವಯಾ ಅಖಿನ್ನಃ' ಎಂದೂ ವಿಗ್ರಹಮಾಡಬೇಕಾಗುವುದು. 'ಸೇವಯಾ ಖಿನ್ನಃ' ಎಂಬ ವಿಗ್ರಹ ಮಾಡಿದರೂ, 'ಖೇದೋಽನಲಂಬುದ್ಧಿಃ' ಎಂಬ ಅರ್ಥವನ್ನು ಇಟ್ಟುಕೊಂಡೇ ಆ ಅರ್ಥವನ್ನು ಕೂಡಿಸಬಹುದು.

೮) ಹೀಗೆ ಎರಡು ಅರ್ಥಗಳೂ ಕೂಡುವಂತೆ ಬರೆದಿರುವುದು ಆಚಾರ್ಯರ ಅದ್ಭುತವಾದ ರಚನಾಕೌಶಲ. ಬಲರಾಮನಾಗಿ ಶೇಷದೇವರು ಕೆಲವೊಮ್ಮೆ (ಪ್ರಲಂಬಾಸುರವಧೆ

ಮೊದಲಾದ ಪ್ರಸಂಗಗಳಲ್ಲಿ) [೧]ವಿಶೇಷಸೇವೆ ಮಾಡಿರುವುದೂ ಉಂಟು; ಕೆಲವೊಮ್ಮೆ (ಸ್ಯಮಂತಕಮಣಿ ಮೊದಲಾದ ಪ್ರಸಂಗಗಳಲ್ಲಿ) ಶ್ರೀಹರಿಗೆ ಅಪಚಾರವಾಗುವಂತೆ ನಡೆದು-ಕೊಂಡಿರುವುದೂ ಉಂಟು ಎಂಬುದನ್ನು ಗಮನಿಸಿದಾಗ ಎರಡೂ ಅರ್ಥಗಳಿಗೆ ಹೊಂದಿಕೆ-ಯಾಗುವಂತೆಯೇ ಬಲರಾಮನ ಸಾಧನೆ ಇದೆ ಎಂಬುದು ಸ್ಫುಟಪಡುವುದು.

ಬಲರಾಮನ ಜನ್ಮಕ್ರಮದ ವಿಶ್ಲೇಷಣೆ

ಯದಾ ಹಿ ಪುತ್ರಾನ್ ವಿನಿಹಂತುಮೇತೌ ಸಹೈವ ಬದ್ಧೌ [೨]ಗತಿಶೃಂಖಲಾಯಾಮ್ ।
ಕಂಸೇನಾಪಾಪೌ ದೇವಕೀಶೂರಪುತ್ರೌ ವಿಯೋಜಿತಾಃ ಶೌರಿಭಾರ್ಯಾಃ ಪರಾಶ್ಚ ॥೧೦೭

ಅ: ಅವರ ಪುತ್ರರನ್ನು ಕೊಲ್ಲಲೆಂದು ನಿರಪರಾಧಿಗಳಾದ ವಸುದೇವ, ದೇವಕಿಯರನ್ನು ಒಟ್ಟಾಗಿ ನಡೆಸಂಕೋಲೆಯಿಂದ ಬಂಧನದಲ್ಲಿರಿಸಿದಾಗ ಕಂಸ ವಸುದೇವನ ಇತರ ಪತ್ನಿಯರನ್ನು ಅವನಿಂದ ಅಗಲಿಸಿ ದೂರವಿರಿಸಿದ್ದ.

[೩]ವಿನಿಶ್ಚಯಾರ್ಥಂ ದೇವಕೀಗರ್ಭಜಾನಾಮನ್ಯಾ ಭಾರ್ಯಾ ಧೃತಗರ್ಭಾಃ ಸ ಕಂಸಃ ।
ಸ್ಥಾನಾಂತರೇ ಪ್ರಸವೋ ಯಾವದಾಸಾಂ ಸಂಸ್ಥಾಪಯಾಮಾಸ ಸುಪಾಪಬುದ್ಧಿಃ ॥ ೧೦೮ ॥

ಅ: ದೇವಕಿಯ ಗರ್ಭದಲ್ಲಿ ಜನಿಸಿದವರನ್ನು ಖಚಿತವಾಗಿ ತಿಳಿಯಲು ಅನುಕೂಲ-ವಾಗಲೆಂದು ತುಂಬಾ ಕೆಟ್ಟಬುದ್ಧಿಯ ಕಂಸ ವಸುದೇವನ ಗರ್ಭಿಣಿಯರಾದ ಇತರ ಪತ್ನಿಯರನ್ನು ಪ್ರಸವವಾಗುವವರೆಗೂ ಇತರಸ್ಥಳಗಳಲ್ಲಿ ಇರಿಸುತ್ತಿದ್ದ.

---

೧. ಅತ ಏವೋಕ್ತಂ 'ಪೂರ್ವಂ ಭಕ್ತಿಂ ಖೇದೋऽಚ್ಯುತಾಶ್ರಯಃ' ಇತಿ ಪಾದ್ಮೇ । – (ಜ.)

೨. ಗತಿಶೃಂಖಲಾನಾಮ ಗಮನಾಯೋಗ್ಯಾ ಪಾದಶೃಂಖಲಾ । 'ನಡೇಸಂಕೋಲೆ' ಇತ್ಯಪಭ್ರಷ್ಟಭಾಷಾ।। – (ವಾ.)

೩. ನ ಸಹೈವ ಸರ್ವಾ ವಿಯೋಜಿತಾಃ ಇತಿ ಭಾವೇನೋಕ್ತಂ ವಿನಿಶ್ಚಯಾರ್ಥಮಿತಿ । ದೇವಕೀವ್ಯತಿರಿಕ್ತಾಃ ವಸುದೇವಸ್ಯ ಭಾರ್ಯಾಃ ಸಹ ವಾ ತಿಷ್ಠಂತಿ । ಭ್ರಾತೃತ್ವಾನ್ನಂದಗೇಹೇ ವಾ ತಿಷ್ಠಂತಿ । ಅತೋ ರೋಹಿಣ್ಯಪಿ । ''ರೋಹಿಣೀ ವಸುದೇವಸ್ಯ ಭಾರ್ಯಾऽऽಸ್ತೇ ನಂದಗೋಕುಲೇ । ತತ್ಸನ್ನಿಕೃಷ್ಟಃ ರೋಹಿಣ್ಯಾ ಜಠರೇ ಸನ್ನಿವೇಶಯ'' ಇತಿ ಭಾಗವತೋಕ್ತೇಃ । ನಂದಗೋಕುಲೇ ಜಾತಂ ದೈವಿಕಂ ಗರ್ಭಮಜಾನಾನಾಃ ದೇವಕೀಗರ್ಭಸ್ರಾವಾನಂತರಂ ತಾಂ ವಿಚಾರಯಿತುಮಾಗತಾಃ । ಗರ್ಭಚಿಹ್ನೇ ಕಂಸೇನಾಪಿ ಜ್ಞಾತೇ ಪುನರ್ನಂದಗೇಹಂ ಪ್ರತಿ ಪ್ರೇಷಿತಾ । ತತ್ರೈವ ರಾಮಂ ಸುಷುವೇ । ತೇನ ಪತಿರೇಕತ್ರ ಭಾರ್ಯಾऽನ್ಯತ್ರ ಕಥಂ ವಾ ಪುತ್ರಸಂಪತ್ತಿರಿತಿ ಮಂದಾನಾಮಾಶಂಕಾ ಗರ್ಭಸ್ರಾವೇಣೈವ ಗತೇತಿ ಭಾವಃ । ಗರ್ಭವತ್ಯಾ ಅಪಿ ಸಹ ವಾಸೇ ವರ್ಷೇ ವರ್ಷೇ ದೇವಕ್ಯಾ ಅಪಿ ಗರ್ಭಸ್ಯ ಜಾಯಮಾನತ್ವಾತ್ । ಮಯಿ ದ್ವೇಷಾದುತ್ಪತ್ತಿಸಮಯ ಏವ ಪುತ್ರವ್ಯತ್ಯಾಸೇ ಕೃತೇ ಸತಿ ಮಮ ಮರಣಂ ಸ್ಯಾದೇವೇತಿ ಭಯಾ ಗರ್ಭೇ ಜಾತೇ ದೇವಕೀವ್ಯತಿರಿಕ್ತಾಃ ಸರ್ವಾ ಅನ್ಯತ್ರ ಪ್ರೇಷಯತಿ । ಏತದಪ್ಯುಕ್ತಂ ವಿ = ವಿಶೇಷೇಣ ನಿಶ್ಚಯಾರ್ಥಮಿತಿ ॥ – (ವಾ.)

ಎ: ಕಂಸ ವಸುದೇವನಿಗೆ ಇತರಪತ್ನಿಯರೊಂದಿಗೆ ಇರಲು ಅವಕಾಶ ಕಲ್ಪಿಸಿದರೂ, ಅವರು ಗರ್ಭಿಣಿಯರಾಗುತ್ತಲೇ ಅವರನ್ನು ಅವರು ಹೆರುವವರೆಗೂ ಬೇರೆ ಸ್ಥಳಗಳಲ್ಲಿ ಇರಿಸುತ್ತಿದ್ದ. ದೇವಕಿಯನ್ನು ಮಾತ್ರ ವಸುದೇವನೊಂದಿಗೆ ಇರಲು ವ್ಯವಸ್ಥೆ ಮಾಡಿದ್ದ. ತನಗೆ ಮೃತ್ಯುವಾಗಲಿದ್ದ ದೇವಕಿಯ ಪುತ್ರರನ್ನು ಖಚಿತವಾಗಿ ಗುರುತಿಸಲು ಅನುಕೂಲವಾಗಲಿ ಎಂಬುದು ಪಾಪಬುದ್ಧಿಯ ಅವನ ಯೋಜನೆಯಾಗಿತ್ತು. ಇಲ್ಲವಾದಲ್ಲಿ ಮಕ್ಕಳು ಅದಲುಬದಲಾಗಿ ದೇವಕೀಪುತ್ರರ ಬದಲು ತಾನು ಇನ್ನಾರನ್ನೋ ಕೊಂದು ಮೃತ್ಯುವಶನಾಗುವ ಭೀತಿ ಅವನನ್ನು ಕಾಡುತ್ತಿತ್ತು. ಆದರೂ ನಡೆದದ್ದು ಮಾತ್ರ ಹರಿಸಂಕಲ್ಪದಂತೆಯೇ ಹೊರತು ಕಂಸನ ಯೋಜನೆಯಂತಲ್ಲ. ದೈವಸಂಕಲ್ಪದ ಮುಂದೆ ಆಸುರೀಶಕ್ತಿಗಳ ತಂತ್ರ ಹೇಗೆ ವಿಫಲವಾಗುವುದು ಎಂಬುದಕ್ಕೆ ಇದೊಂದು ಅತ್ಯುತ್ತಮನಿದರ್ಶನ.

ಹೇತೋರೇತಸ್ಮಾದ್ರೋಹಿಣೀ ನಂದಗೇಹೇ ಪ್ರಸೂತ್ಯರ್ಥಂ ಸ್ಥಾಪಿತಾ ತೇನ ದೇವೀ ।
ಲೇಭೇ ಪುತ್ರಂ ಗೋಕುಲೇ ಪೂರ್ಣಚಂದ್ರಕಾಂತಾನನಂ ಬಲಭದ್ರಂ ಸುಶುಭ್ರಮ್ ೧೦೯

ಅ: ಈ ಕಾರಣದಿಂದಾಗಿ ರೋಹಿಣಿಯು ನಂದಗೋಪನ ಮನೆಯಲ್ಲಿ ಪ್ರಸವಕ್ಕಾಗಿ ಆ ಕಂಸನಿಂದ ಇರಿಸಲ್ಪಟ್ಟಿದ್ದಳು. ಆದ್ದರಿಂದ ರೋಹಿಣೀದೇವಿಯು ಪೂರ್ಣಚಂದ್ರನಂತಹ ಮನೋಹರಮುಖದ ಶುಭ್ರವರ್ಣದ ಬಲರಾಮನನ್ನು ಗೋಕುಲದಲ್ಲೇ ಹೆತ್ತಳು.

ಎ: ಅದರಂತೆ ಕಂಸ ರೋಹಿಣಿಯು ಗರ್ಭವತಿಯಾಗುವವರೆಗೂ ವಸುದೇವನ ಜೊತೆಗಿರಲು ಅವಕಾಶ ಕಲ್ಪಿಸಿದ್ದ. ಅವಳು ಗರ್ಭವತಿಯಾಗುತ್ತಲೇ ಅವಳನ್ನು ಗೋಕುಲದಲ್ಲಿ [೧]ನಂದಗೋಪನ ಬಳಿ ಇರಿಸಿದ. ಆದರೆ ಭಗವದಾವೇಶದಂತೆ ಯೋಗಮಾಯೆಯಾದ ದುರ್ಗೆ ದೇವಕಿಯ ಗರ್ಭವನ್ನು ರೋಹಿಣಿಯ ಗರ್ಭಕ್ಕೆ ಸ್ಥಳಾಂತರಿಸಿದಳು. ಬಲರಾಮ ರೋಹಿಣೀಪುತ್ರನಾಗಿ ಜನಿಸಿದ್ದು ಹೀಗೆ.

ಬಲರಾಮ ಇಬ್ಬರ ಪುತ್ರನಾದ ಹಿನ್ನೆಲೆ

ಯದಾ ತ್ರಿಮಾಸಃ ಸ ಬಭೂವ ದೇವಸ್ತದಾऽऽವಿರಾಸೀತ್ ಪುರುಷೋತ್ತಮೋऽಜಃ ।
ತೌ ಕೃಷ್ಣಶೇಷಾವಾಪ್ತಕಾಮೌ ಸುತೌ ಹಿ ತಪಶ್ಚಕ್ರಾತೇ ದೇವಕೀಶೂರಪುತ್ರೌ ೧೧೦

---

೧. ವಸುದೇವಸ್ಯ ರೋಹಿಣೀನಾಮ್ನೀ ಭಾರ್ಯಾ ನಂದಗೋಕುಲೇ ಆಸ್ತೇ । ಸಾऽಂಕುರಿತೇ ಗರ್ಭೇ ಬಹಿರ್ಯಾಪಿತಾ ತತ್ರಾಸ್ತೇ । ತಸ್ಯಾಃ ಪ್ರಾಕ್ತನಂ ಗರ್ಭಂ ಬಹಿಷ್ಕೃತ್ಯೈತನ್ನಿವೇಶಯೇತ್ಯಸ್ಯ ಭಾವೋऽವಸೇಯಃ ॥
– ಭಾಗವತ ಸತ್ಯಧರ್ಮೀಯ ಟೀಕಾ

ಅ: ಬಲರಾಮ ಮೂರು ತಿಂಗಳ ಮಗುವಾಗಿದ್ದಾಗ ಜನ್ಮರಹಿತನಾದ ಪುರುಷೋತ್ತಮ ಶ್ರೀಹರಿ ಪ್ರಾದುರ್ಭವಿಸಿದ. ವಸುದೇವ, ದೇವಕಿಯರು ಕೃಷ್ಣ ಮತ್ತು ಶೇಷರಿಬ್ಬರನ್ನೂ ತಮ್ಮ ಪುತ್ರರನ್ನಾಗಿ ಪಡೆಯಲು ತಪಸ್ಸನ್ನು ಆಚರಿಸಿದ್ದರು.

ವಿಷ್ಣ್ವಾವೇಶೀ ಬಲವಾನ್ ಯೋ ಗುಣಾಧಿಕಃ ಸ ಮೇ ಸುತಃ ಸ್ಯಾದಿತಿ ರೋಹಿಣೀ ಚ ।
ತೇಪೇ ತಪೋಽತೋ ಹರಿಶುಕ್ಲಕೇಶಯುತಃ ಶೇಷೋ ದೇವಕೀರೋಹಿಣೀಜಃ ೧೧೧

ಅ: ''ವಿಷ್ಣುವಿನ ಆವೇಶದಿಂದ ಕೂಡಿದ ಬಲಿಷ್ಠನೂ, ಅತಿಶಯಗುಣಗಳನ್ನು ಹೊಂದಿದವನೂ ಆದ ಪುತ್ರ ತನಗೆ ಜನಿಸಲಿ'' ಎಂದು ರೋಹಿಣಿಯೂ ಸಹ [೪]ತಪಸ್ಸು ಮಾಡಿದ್ದಳು. ಆದ್ದರಿಂದ ಶ್ರೀಹರಿಯ ಶುಕ್ಲಕೇಶರೂಪದ ಆವೇಶದಿಂದ ಕೂಡಿ, ಶೇಷ ದೇವಕೀ ಹಾಗೂ ರೋಹಿಣೀ ಇಬ್ಬರಲ್ಲೂ ಜನಿಸಿದ.

ವಿ: ಬಲರಾಮ ಮೊದಲು ದೇವಕಿಯ ಗರ್ಭದಲ್ಲಿದ್ದು ಅನಂತರ ರೋಹಿಣಿಯ ಗರ್ಭದಲ್ಲಿ ಬೆಳೆದು, ಗೋಕುಲದಲ್ಲಿ ಅವತರಿಸಿದ. ಹೀಗೆ ಇಬ್ಬರ ಗರ್ಭದಲ್ಲೂ ಬೆಳೆಯಲು ಕಾರಣವನ್ನು ಇಲ್ಲಿ ತಿಳಿಸಿರುವರು. ಶ್ರೀಹರಿಯಂತೆ ಶೇಷನೂ ತಮ್ಮ ಮಗನಾಗಬೇಕೆಂದು ವಸುದೇವ, ದೇವಕಿ ತಪಸ್ಸು ಮಾಡಿದ್ದರು. ವಿಷ್ಣುವಿನ [೫]ಆವೇಶದಿಂದ ಕೂಡಿದ ಶ್ರೇಷ್ಠಪುತ್ರನೊಬ್ಬನು ಜನಿಸಬೇಕೆಂದು

---

೨. ಶೇಷಾಖ್ಯಗರ್ಭಸ್ಯ ಮಾಸತ್ರಯಪರ್ಯಂತಂ ದೇವಕ್ಯುದರೇ ಸ್ಥಿತ್ವಾ ಪಶ್ಚಾತ್ ರೋಹಿಣ್ಯಾ ಏವ ಉದರಪ್ರವೇಶೇ ಕಿಂ ನಿಮಿತ್ತಮಿತ್ಯತ ಆಹ । ತೌ ಕೃಷ್ಣಶೇಷಾವಿತಿ ॥ –(ವಾ.)

ಅತಃ = ಸ್ಪಷ್ಟಂ ಶೇಷಃ ಪುತ್ರೋ ಭವೇದಿತಿ ದೇವಕ್ಯಾ ವಿಷ್ಣ್ವಾವೇಶೀ ಬಲವಾನ್ ಪುತ್ರೋ ಭವೇದಿತಿರೋಹಿಣ್ಯಾ ಚ ತಪಃ ಕರಣಾತ್ । ಹರಿಶುಕ್ಲಕೇಶಯುತಃ ಶೇಷಃ ತ್ರಿಮಾಸಂ ದೇವಕ್ಯಾಂ ಸಪ್ತಮಾಸಂ ರೋಹಿಣ್ಯಾಂ ಚ ಜಾತ ಇತ್ಯರ್ಥಃ । ''ಅತೋ ದಶಮೇ ಮಾಸಿ ಜಾತ'' ಇತಿ ಶ್ರುತಿಂ ರಕ್ಷನ್ ರಾಮೋಽಪಿ ದಶಮೇ ಮಾಸಿ ಜಾತಃ । ಕೃಷ್ಣೋಽಪಿ ಶ್ರೌತಮರ್ಯಾದಾರಕ್ಷಣಾಯ ಶೇಷಗಮನಾನಂತರಂ ಅವಶಿಷ್ಟಸಪ್ತಮಾಸಾನುಷಿತ್ವಾ ರಾಮೋತ್ಪತ್ತೇರ್ಮಾಸತ್ರಯಾನಂತರಮುತ್ಪನ್ನತ್ವಾದ್ದಶಮೇ ಮಾಸ್ಯೇವ ಜಾತ ಇತಿ ಭಾವಃ ॥ –(ವಾ.)

೪. 'ತಪಃ ಪ್ರಿಯಂ ಸದಾ ವಿಷ್ಣೋಸ್ತಪಸ್ಯೈವಾವ್ಯತೇ ಹರಿಃ ।
ಸ್ವಯಂ ಚ ತಪಸ್ಯೇವೇದಂ ಬಿಭರ್ತಿ ಜ್ಞಾನಮೇವ ಹಿ ।
ತಪಃ ಶಬ್ದಾಭಿಧಂ ಪ್ರೋಕ್ತಂ ಜ್ಞಾನರೂಪೋ ಹರಿರ್ಯತಃ ।
ಜ್ಞಾನವೀರ್ಯೋ ಜ್ಞಾನಬಲೋ ಜ್ಞಾನಾನಂದ ಉದಾಹೃತಃ' ಬೃಹತ್ಸಂಹಿತಾಯಾಮ್ ॥
–ಭಾ.ತಾ. (೨/೯/೨೩,೨೪)

೫. 'ರಾಮ ಏಕೋ ಹ್ಯನಂತಾಂಶಸ್ತತ್ರ ರಾಮಾಭಿಧೋ ಹರಿಃ ।
ಶುಕ್ಲಕೇಶಾತ್ಮಕಸ್ತಿಷ್ಠನ್ ರಮಯಾಮಾಸ ವೈ ಜಗತ್' ಇತಿ ಬ್ರಾಹ್ಮೇ । –ಭಾ.ತಾ. (೨/೭/೨೬)

ರೋಹಿಣಿಯೂ ತಪಸ್ಸು ಮಾಡಿದ್ದಳು. ರೋಹಿಣೀ ಹಾಗೂ ದೇವಕೀ ಇಬ್ಬರ ತಪಸ್ಸಿಗೂ ಫಲ ನೀಡಲೆಂದು ಬಲರಾಮ ಹೀಗೆ ಇಬ್ಬರಿಗೂ ಮಗನಾಗಿ ಜನಿಸಿದ ಎಂದರ್ಥ.

ಅವರ್ಧತಾಸೌ ಹರಿಶುಕ್ಲಕೇಶಸಮಾವೇಶೀ ಗೋಕುಲೇ ರೌಹಿಣೇಯಃ ।
ಕೃಷ್ಣೋಽಪಿ ಲೀಲಾ ಲಲಿತಾಃ ಪ್ರದರ್ಶಯನ್ ಬಲದ್ವಿತೀಯೋ ರಮಯಾಮಾಸ ಗೋಷ್ಠಮ್ ॥

ಅ: ಶ್ರೀಹರಿಯ ಶುಕ್ಲಕೇಶರೂಪದ ವಿಶೇಷಾವೇಶದಿಂದ ಕೂಡಿದ್ದ ಬಲರಾಮ ಗೋಕುಲದಲ್ಲೇ ಬೆಳೆದ. ಬಲರಾಮನೊಂದಿಗೆ ಕೃಷ್ಣನೂ ಸಹ ಮನೋಹರವಾದ ಲೀಲೆಗಳನ್ನು ಪ್ರಕಟಿಸುತ್ತಾ ಗೋಕುಲವನ್ನು ಆನಂದಪಡಿಸಿದ.

ವಿ: ೧) ಬಲರಾಮನಲ್ಲಿದ್ದುದು ಶುಕ್ಲಕೇಶರೂಪದ ವಿಶೇಷಾವೇಶ ಎಂಬುದನ್ನು 'ಹರಿಶುಕ್ಲ-ಕೇಶಸಮಾವೇಶೀ' ಎಂಬ ಪದದಿಂದ ತಿಳಿಸಿರುವರು (ವಿವರಗಳಿಗೆ ನೋಡಿ ೨/೩೨,೩೩).

೨) ಬಲರಾಮನು ನಿಜವಾಗಿಯೂ ಬೆಳೆದ ಎಂದು ತಿಳಿಸಲು 'ಲೋಕದೃಷ್ಟ್ಯಾ' ಎಂದು ಹೇಳದೆ, 'ಅವರ್ಧತ' ಎಂದೇ ಹೇಳಿರುವರು.

ಯಶೋದೆಗೆ ವಿಶ್ವರೂಪದರ್ಶನ

ಸ ಪ್ರಾಕೃತಂ ಶಿಶುಮಾತ್ಮಾನಮುಚ್ಚೈರ್ವಿಜಾನಂತ್ಯಾ ಮಾತುರಾದರ್ಶನಾಯ[೧] ।
ವಿಜೃಂಭಮಾಣೋಽಖಿಲಮಾತ್ಮಸಂಸ್ಥಂ ಪ್ರದರ್ಶಯಾಮಾಸ ಕದಾಚಿದೀಶಃ॥ ೧೧೩ ॥

ಅ: ತನ್ನನ್ನು ಸಾಮಾನ್ಯಶಿಶು ಎಂದು ತಿಳಿದಿದ್ದ ತಾಯಿ ಯಶೋದೆಗೆ ತಾನು ಅಪ್ರಾಕೃತ ಎಂಬುದನ್ನು ಸ್ಫುಟವಾಗಿ ತೋರಿಸಲೆಂದು ಒಮ್ಮೆ ಸರ್ವೇಶನಾದ ಕೃಷ್ಣನು ಆಕಳಿಸುತ್ತಾ ಎಲ್ಲವೂ ತನ್ನಲ್ಲಿರುವುದನ್ನು ತೋರಿಸಿದ.

ಸಾಂಡಂ ಮಹಾಭೂತಮನೋಭಿಮಾನಮಹತ್ಪ್ರಕೃತ್ಯಾ[೨] ವೃತಮಬ್ಜಜಾದಿಭಿಃ ।
ಸುರೈಃ ಶಿವೇತೈರ್ನರದೈತ್ಯಸಂಘೈರ್ಯುತಂ ದದರ್ಶಾಸ್ಯ ತನೌ ಯಶೋದಾ ॥ ೧೧೪ ॥

ಅ: ಯಶೋದೆ ಅವನ ಶರೀರದಲ್ಲಿ ಪಂಚಮಹಾಭೂತಗಳು, ಮನಸ್ಸು, ಅಹಂಕಾರ, ಮಹತ್ತತ್ತ್ವ, ಪ್ರಕೃತಿಗಳಿಂದ ಆವೃತವಾದ ಶಿವನೊಂದಿಗೆ ಕೂಡಿದ ಬ್ರಹ್ಮಾದಿದೇವತೆ-ಗಳಿಂದಲೂ, ಮಾನವ, ದಾನವ ಸಮೂಹಗಳಿಂದಲೂ ಕೂಡಿದ್ದ ಬ್ರಹ್ಮಾಂಡವನ್ನು ಕಂಡಳು.

---

೧. ಆ ಸಮ್ಯಕ್ ದರ್ಶನಾಯ ಅಪ್ರಾಕೃತತ್ವದರ್ಶನಾಯೇತ್ಯರ್ಥಃ ॥ –(ವಾ.)

ವಿ: ೧) ಇಲ್ಲಿ ಬ್ರಹ್ಮಾಂಡದ ವಿವರಗಳು ಸಂಕಲಿತವಾಗಿವೆ.

೨) ಪಂಚಮಹಾಭೂತದಿಂದ ಉಪಲಕ್ಷಣಯಾ ಪಂಚತನ್ಮಾತ್ರಗಳನ್ನೂ, ಮನಸ್ತತ್ತ್ವದ ಜೊತೆಗೆ ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ ಹಾಗೂ ಬುದ್ಧಿತತ್ತ್ವಗಳನ್ನೂ ಗ್ರಹಿಸ–ಬೇಕು. ಆಗ ಇದರಲ್ಲಿ ೨೪ ತತ್ತ್ವಗಳು ಸಂಗ್ರಹಿಸಿದಂತಾಗುವುದು ಎಂದು ವಾದಿರಾಜೀಯ.

೩) ಇದರಲ್ಲಿ ಪಂಚಭೂತಗಳು, ಅಹಂಕಾರ, ಮಹತ್ತತ್ತ್ವ ಮತ್ತು ಗುಣತ್ರಯಗಳು ಎಂದು ದಶಾವರಣಗಳು ವಿವಕ್ಷಿತ ಎಂದು ವರದರಾಜೀಯ.

---

೧. ಮಹಾಭೂತಪದೇನ ಮಾತ್ರಾಪಂಚಕಮಪಿ ಲಕ್ಷ್ಯತೇ । ಮನಃ ಪದೇನ ಚ ದಶೇಂದ್ರಿಯಾಣಿ ಬುದ್ಧಿತತ್ತ್ವಂ ಚ ಲಕ್ಷ್ಯತೇ । ಅಭಿಮಾನಪದೇನ ''ಗರ್ವೋ೯ಭಿಮಾನೋ೯ಹಂಕಾರ'' ಇತ್ಯಭಧಾನಾತ್ ಅಹಂಕಾರತತ್ತ್ವಮುಚ್ಯತೇ । ಮಹತ್ಪದೇನ ಮಹತ್ತತ್ತ್ವಮುಚ್ಯತೇ । ಏವಂ ಚತುರ್ವಿಂಶತಿತತ್ತ್ವಾನಿ ಸಂಗೃಹೀತಾನಿ । ಪ್ರಕೃತಿಪದೇನಾವ್ಯಕ್ತಾಖ್ಯಂ ಮೂಲತತ್ತ್ವಮುಚ್ಯತೇ । ಆವೃತಂ = ಮಹಾಭೂತಮನೋ೯ಭಿಮಾನಮಹತ್ಪ್ರಕೃತಿಭಿಶ್ಚತುರ್ವಿಂಶತಿತತ್ತ್ವಮೂಲ-ತತ್ತ್ವರೂಪಾಭಿಃ ಯಥಾಯೋಗ್ಯಮುತ್ತರೋತ್ತರಾಧಿಕ್ಯೇನಾವೃತಮ್ । ಸಕಲತತ್ತ್ವಸಂಗ್ರಹಾಯ ಆಚಾರ್ಯೈರೇವ-ಮುಕ್ತಮ್ । ಭಾಗವತಕಾರೈಸ್ತು ಕ್ರಮಾದ್ದಶೋತ್ತರತ್ವರೂಪಸ್ಫೋಕ್ತಸಂಖ್ಯಾರಕ್ಷಣಾಯ । ''ಅಬಗ್ನೀರನಭೋ೯ಹಂಕೃನ್ಮ-ಹತ್ತತ್ತ್ವಗುಣತ್ರಯೈಃ । ಕ್ರಮಾದ್ದಶೋತ್ತರೈಃ'' ಇತಿ ನವಾನಾಮೇವ ಗ್ರಹಣಂ ಕೃತಮ್ । ವಸ್ತುತಸ್ತು ಮಿಲಿತಾನಿ ಚತುರ್ವಿಂಶತಿತತ್ತ್ವಾನಿ ಅಂಡಕಟಾಹಾಂತಃ ಸರ್ವದಾ ಸಂತಿ । ಅನ್ಯಥಾ ಚತುರ್ವಿಂಶತಿತತ್ತ್ವತ್ಕ-ಚತುರಶೀತಿಲಕ್ಷಯೋನಿಭೇದೇನ ನಾನಾವಿಧಾನಂತದೇಹಾನಾಂ ಸಮಯೇ ಕಥಮುತ್ಪತ್ತಿಃ ಸ್ಯಾತ್ । ಅತಃ ಆವರಣಂ ನಾಮ ಇತರಾಮಿಲಿತಪೃಥಿವೀತತ್ತ್ವಸ್ಯೈವ ಸೌವರ್ಣಶತಕೋಟಿಪ್ರಮಾಣಬ್ರಹ್ಮಾಂಡರೂಪೇಣ ಯಾ ಅವಸ್ಥಿತಿಃ ಸಾಪೃಥಿವ್ಯಾಖ್ಯಂ ಪ್ರಥಮಮಾವರಣಮ್ । ಪೃಥಿವೀಭಾಗೇನಾಪ್ಯಮಿಶ್ರಕೇವಲಧವಲಜಲರಸಮೂಹಾನಾಂ ಶತಕೋಟೀರ್ದಶಗುಣತಸಹಸ್ರಕೋಟಿಪ್ರಮಾಣಪ್ರದೇಶೇ ವಿಸ್ತೃತಾನಾಂ ಬ್ರಹ್ಮಾಂಡಕಟಾಹಾನಾಮಾವೃತ್ಯಾ ಯಾ ಸ್ಥಿತಿಃ ಸಾ ದ್ವಿತೀಯಾವರಣಮ್ । ಏವಂ ಜಲಭಾಗಾಮಿಶ್ರಿತಕೇವಲತೇಜೋರಾಶೀನಾಂ ಶತಕೋಟಿಸಹಿತ-ಸಹಸ್ರಕೋಟೀನಃ ದಶೋತ್ತರಪದೋಕ್ತದಶಸಹಸ್ರಕೋಟಿಯೋಜನಪ್ರಮಾಣಪ್ರದೇಶೇ ಯಾ ಸ್ಥಿತಿಃ ಸಾ ತೃತೀಯಾವರಣಮುಚ್ಯತೇ । ಅತ ಏವ ಹಿ ಪರಿತೋ ಜಾಜ್ವಲ್ಯಮಾನಜ್ವಲನಜ್ವಾಲಯಾ ಸದಾಭಘಾತಾತ್ ನಿರಾಧಾರಮಪಿ ಜಲಂ ನಾಧಃ ಪತತಿ । ನ ಪರ್ಯಕ್ ಸ್ರವತಿ । ನಾಪಿ ಕ್ವಥನೇ ಸತ್ಯೂರ್ಧ್ವಂ ಗಚ್ಛತಿ । ಜಲಸ್ಥಿತನಾರಾಯಣಸನ್ನಿಧಾನಾಚ್ಚ ನ ಶುಷ್ಯತಿ । ನಾಪಿ ಸರ್ವತ್ರೋಷ್ಣೀಭವತಿ । ಕಥಮನ್ಯಥಾ ತ್ರಿವಿಕ್ರಮವಾಮಪಾದನಖನಿರ್ಭಿನ್ನಾಂಡಕಟಾಹವಿವರಾತ್ ಶೀತಲಶುಕ್ಲರೂಪಗಂಗಾಪ್ರವಾಹಸ್ಯಾಧಃ ಸ್ರವಣಮ್ । ಅತ ಏವಾಂಡಕಟಾಹಾಖ್ಯಪೃಥಿವ್ಯಾವರಣಾದ್ಬಿನ್ನಪೃಥಿವ್ಯಾವರಣಕಲ್ಪನಮಪಿ ನಿರ್ಮೂಲತ್ವಾತ್ ಸ್ವಕಪೋಲಕಲ್ಪನ-ಮೇವ । ಏವಂ ತೇಜೋಭಾಗಾಮಿಶ್ರಿತವಾಯೂನಾಂ ಶತಕೋಟೀರ್ದಶಸಹಸ್ರಾಚ್ಚ ದಶೋತ್ತರಾಖ್ಯವಿಂಶತಿಸಹಸ್ರ-ಕೋಟಿರೂಪಯೋಜನಪ್ರಮಾಣಪ್ರದೇಶೇ ಯತ್ಪವನಂ ತಚ್ಚತುರ್ಥಾವರಣಮಿತ್ಯುಚ್ಯತೇ । ಏವಮೀಷದಪಿ ವಾಯುಭಾಗಾಮಿಶ್ರಿತಭೂತಾಕಾಶಾವಯವಾನಾಂ ವಿಂಶತಿಸಹಸ್ರಾದಪಿ ದಶೋತ್ತರಾಖ್ಯತ್ರಿಂಶತ್ಸಹಸ್ರಕೋಟಿ-ಯೋಜನಪ್ರಮಾಣಪ್ರದೇಶೇ ಯಾ ಅವಸ್ಥಿತಿಃ ಸಾ ಪಂಚಮಾವರಣಮ್ । ಏವಮಾಕಾಶಭಾಗಾಮಿಶ್ರಿತಾ-ಹಂಕಾರಾವಯವಾನಾಂ ತ್ರಿಂಶತ್ಸಹಸ್ರಕೋಟಿಭ್ಯಃ ಶತಕೋಟೀಶ್ಚ ದಶೋತ್ತರಾತ್ಕಚತ್ವಾರಿಂಶತ್ಸಹಸ್ರಕೋಟಿ-ಯೋಜನಪ್ರಮಾಣಪ್ರದೇಶೇ ಯಾ ಸ್ಥಿತಿಃ ಸಾ ಷಷ್ಠಮಾವರಣಮ್ । ಏವಮುತ್ತರತ್ರಾಪ್ಯೂಹ್ಯಮ್ । ಏವಂ ಸ್ಥಿತಾಕಾಶತತ್ತ್ವಾದಧಿಕವೃತ್ತೀನಾಂ ಅಹಂಕಾರತತ್ತ್ವನ್ಯೂನವೃತ್ತೀನಾಂ ಸ್ವಯಂ ಚ ಕ್ರಮೇಣಾಧಿಕವೃತ್ತೀನಾಂ ಪಂಚತನ್ಮಾತ್ರಕರ್ಮೇಂದ್ರಿಯಜ್ಞಾನೇಂದ್ರಿಯಾಂತಃಕರಣಾಖ್ಯಮನೋರೂಪೇಂದ್ರಿಯಭೇದೇನ ಷೋಡಶ-ತತ್ತ್ವಾನಾಂ ದಶೋತ್ತರತ್ವನಿಯಮಾಭಾವಾತ್ ತ್ರಿಂಶತ್ಸಹಸ್ರಕೋಟಿಪರಿಮಿತಾಕಾಶತತ್ತ್ವಾತ್ ಸಂಭಾವಿತಪಂಚ-

೪) ಜಲ ಮೊದಲಾದ ನಾಲ್ಕು ಭೂತಗಳು, ಅಹಂಕಾರತತ್ತ್ವ, ಮಹತ್ತತ್ತ್ವ ಮತ್ತು ಗುಣತ್ರಯಗಳೆಂಬ ನವಾವರಣಗಳು ವಿವಕ್ಷಿತ ಎಂದು [೨]ಜನಾರ್ದನೀಯ.

೫) ಶ್ರೀಕೃಷ್ಣ ಅನೇಕಬಾರಿ ವಿಶ್ವರೂಪ ತೋರಿದ ಪ್ರಸಂಗಗಳಲ್ಲಿ ಇದು ಮೊದಲನೆಯದು.

೬) ಶ್ರೀಮದಾಚಾರ್ಯರ ಅಣುಭಾಷ್ಯ ಕೃತಿ ಶ್ರೀಕೃಷ್ಣನ ಈ ವಿಶ್ವರೂಪಪ್ರದರ್ಶನದ ಪ್ರತಿರೂಪದಂತಿದೆ ಎಂಬ [೩]ಸುಮಧ್ವವಿಜಯದ ಮಾತು ಗಮನಾರ್ಹ.

ಪಂಚಾಧಿಕತಯಾ ಗಣನೇಽಶೀತಿಸಹಸ್ರಕೋಟಿಭ್ಯೋಽಪ್ಯುಪರಿ ಪಂಚಸಹಸ್ರಕೋಟಿಪ್ರಮಾಣಪ್ರದೇಶೇಽವಸ್ಥಾನಂ ಜಾಯತೇ । ಬುದ್ಧಿತತ್ತ್ವಸ್ಯ ಪಾರ್ವತ್ಯಭಮನ್ಯಮಾನತಯಾ ಈದೃಶಸ್ಯೈವಾಧಿಕ್ಯಸ್ಯೈವಾನುಚಿತತ್ವಾತ್ । ಸಂಭಾವಿತಪಂಚಪಂಚಕೇನಾಧಿಕೇ ಪೂರ್ವೋಕ್ತೇಭ್ಯೋಽಪ್ಯುಪರಿ ಪಂಚವಿಂಶತ್ಸಹಸ್ರಕೋಟಿಯೋಜನಪ್ರಮಾಣ-ಪ್ರದೇಶೇಽವಸ್ಥಾನಂ ಜಾಯತೇ । ಏವಂ ಮಿಲಿತ್ವಾ ಉಕ್ತಸಪ್ತದಶತತ್ತ್ವಾನಾಂ ಶತಸಹಸ್ರಕೋಟಿಭ್ಯೋಽಪ್ಯುಪರಿ ದಶಸಹಸ್ರಕೋಟಿಪ್ರಮಾಣಪ್ರದೇಶೇ ವ್ಯಾಪ್ತಿರ್ಜಾಯತೇ । ಅಹಂಕಾರತತ್ತ್ವಂ ತು ಇತೋಽಪಿ ನವತಿ-ಸಹಸ್ರಕೋಟಿಯೋಜನೋಚ್ಛ್ರಿತಮೇಕಾದಶಮಾರಭ್ಯ ಏತೈಃ ಸಹ ಚ ಸ್ಥಿತಮ್ । ಅತಃ ಪುಂಜೀಕೃತ್ಯ ಗಣನೇ ದ್ವಿಶತಸಹಸ್ರಕೋಟಿಪ್ರಮಾಣಂ ಜಾಯತೇ । ತಸ್ಮಾದೇತೇಷಾಂ ಮುಖ್ಯಾವರಣಭೂತಾಹಂಕಾರತತ್ತ್ವ ಏವಾಂತ-ರ್ಭೂತತ್ವಾದ್ದಶೋತ್ತರತ್ವಾಭಾವಾಚ್ಚ ನ ಪೃಥಗ್ಗಣನಮ್ । ಅನ್ಯಥಾ ಬ್ರಹ್ಮಾಂಡಾದ್ಬಹಿರಾಕಾಶತತ್ತ್ವಾತ್ ಪ್ರಾಕ್ಸೃಷ್ಟಾ-ನಾಂ ತಾಮಸತೈಜಸವೈಕಾರಿಕಾಖ್ಯಾಹಂಕಾರತತ್ತ್ವಪರಿಣಾಮರೂಪಾಣಾಮೇತೇಷಾಮವಸ್ಥಾನಮೇವ ನ ಸ್ಯಾತ್ । ಆಚಾರ್ಯೈಸ್ತು ಸಂಖ್ಯಾನಿಯಮಂ ವಿನಾ ಉಕ್ತವಿಧಯಾ ಚತುರ್ವಿಂಶತಿತತ್ತ್ವಸ್ಯ ತು ಭಾಗವತಕೃತೋಽ-ಸ್ಮಭಿಮತತತ್ತ್ವಸ್ವರೂಪಮಾತ್ರಗಣನೈವ ಕೃತೇತಿ ನ ಕ್ವಾಪಿ ಗುರುಶಿಷ್ಯಯೋರನಯೋರ್ವಿರೋಧ ಇತಿ ಜ್ಞೇಯಮ್ ।

ಅಸ್ಮಾಭಿರಪಿ ಶ್ರೀಹಯಗ್ರೀವಸ್ಯ ಶ್ರೀವೇದವ್ಯಾಸಸ್ಯ ಶ್ರೀಮದ್ಭಮುನೇಶ್ಚ ಕೃಪಯಾ ಮಂದಾನಾಂ ಬೋಧಾಯ ಯಥಾಮತಿ ಸಂಭಾವಿತಪ್ರಮೇಯಚರ್ಚಾ ಕೃತಾ । ಅಸ್ಮದೀಯಮನೋದೋಷಾತ್ ಕ್ವಚಿತ್ ಕಿಂಚಿನ್ನ್ಯೂನತ್ವೇಽ-ಧಿಕತ್ವೇ ವಾ ''ಸ ವಾಗ್ವಿಸರ್ಗೋ ಜನತಾಘವಿಪ್ಲವೋ ಯಸ್ಮಿನ್ ಪ್ರತಿಶ್ಲೋಕಮಬದ್ಧವತ್ಯಪಿ'' ಇತಿ ಭಾಗವತೋಕ್ತೇಃ । ಅನುವ್ಯಾಖ್ಯಾನೇ ಆಚಾರ್ಯೋಕ್ತಮತತತ್ತ್ವವಿರೋಧಾಭಾವಾಚ್ಚ । ಗಂಗಾಂ ಪ್ರತಿ ಗಚ್ಛತಃ ಮಧ್ಯೇಮಧ್ಯೇ ಪಾದಸ್ಖಲನಮಿವ ಲಘೀಯಾಂಸಮಪರಾಧಂ ಸಂತಃ ಕ್ಷಂತುಮರ್ಹಂತಿ । ಏವಂ ಚ ''ಸಾಂಡಂ ಮಹಾಭೂತ-ಮನೋಭಿಮಾನಮಹತ್ಕೃತ್ಯಾವೃತಮ್'' ಇತ್ಯಾದಿನಾ ಕೃತಮಂಡಾದ್ಬಾಹ್ಯತತ್ತ್ವಸಂಖ್ಯಾನಮ್ । ''ಅಬಗ್ನೀರನ-ಭೋಽಹಂಕೃನ್ಮಹತತ್ತ್ವಗುಣತ್ರಯೈಃ'' ಇತ್ಯಾದಿನಾ ಭಾಗವತೋಕ್ತಬಹಿರಾವರಣಸಂಖ್ಯಾನಾಂ ಚಾವಿರುದ್ಧೇಷ-ದ್ವಿಶೇಷವಿಶಿಷ್ಟತ್ವೇಽಪಿ ಗಂಗಾಯಮುನಯೋಃ ಸಂಗಮಸ್ಥಜಲವತ್ತರಮಮಂಗಲಂ ಸರ್ವೇಷಾಮವಗಾಹನಯೋಗ್ಯಂ ಚೇತಿ ಸ್ಥಿತಮ್ । – (ವಾ.)

೨. ಅತ್ರ ಮಹಾಭೂತಪದೇನ ಅಬಾದಿಭೂತಚತುಷ್ಟಯಂವಿವಕ್ಷಿತಂ। ತಥಾ ಮನೋಽಭಿಮಾನೇತಿ ಪದೇನ ಅಹಂಕಾರತತ್ವಮೇವ ವಿವಕ್ಷಿತಮ್ । ನ ತು ಭೂತಪದೇನಭೂತಪಂಚಕಂ ಮನಃಪದೇನ ಮನಸ್ತತ್ವಮ್ । ಅಭಿಮಾನಪದೇನ ಅಹಂಕಾರತತ್ವಂ ವಿವಕ್ಷಿತಮ್ । ತಥಾ ಸತಿ ಅಂಡಾವರಣಸ್ಯ ನವತ್ವಪ್ರತಿಪಾದಕಾ-ಬಗ್ನೀರನಭೋಽಹಂಕೃನ್ಮಹತ್ತತ್ವಗುಣತ್ರಯೈರಿತಿ ವಾಕ್ಯವಿರೋಧಃ ಸ್ಯಾತ್। ಮನೋಽಭಿಮಾನಪದೇನ ಮನಸ್ತತ್ವಮಪಿ ನ ವಿವಕ್ಷಿತಮ್ । ಅಬಗ್ನೀರೋತವಾಕ್ಯೇಽಹಂಕಾರಸ್ಯೈವ ಪರಿಗಣನಾತ್ ಮನಸ್ತತ್ವಸ್ಯಾಪರಿಗಣನಾಚ್ಚ। – (ಜ.)

೩. ಅನಂತೋಽರ್ಥಃ ಪ್ರಕಟಿತಸ್ತ್ವಯಾಽಣೌ ಭಾಷ್ಯಸಂಗ್ರಹೇ ।
ಅಹೋ ಆತ್ಮಪರಿಜ್ಞಪ್ತ್ಯೈ ಕೃಷ್ಣೇನೇವಾನನಾಂತರೇ ॥ – ಸುಮಧ್ವವಿಜಯ (೧೫/೮೨)

ನ್ಯಮೀಲಯಚ್ಚಾಕ್ಷಿಣೀ ಭೀತಭೀತಾ [೧]ಜುಗೂಹ ಚಾತ್ಮಾನಮಥೋ ರಮೇಶಃ ।
ವಪುಃ ಸ್ವಕೀಯಂ ಸುಖಚಿತ್ಸ್ವರೂಪಂ ಪೂರ್ಣಂ ಸತ್ಸು ಜ್ಞಾಪಯಂಸ್ತದ್ವ್ಯದರ್ಶಯತ್॥

ಅ: ಯಶೋದೆ ಬಹಳ ಭೀತಳಾಗಿ ಎರಡು ಕಣ್ಣುಗಳನ್ನೂ ಮುಚ್ಚಿಕೊಂಡಳು. ಕೃಷ್ಣ ತನ್ನ ಆ ರೂಪವನ್ನೂ ಮರೆಮಾಡಿದ. ತನ್ನ ದೇಹ ಜ್ಞಾನಾನಂದಸ್ವರೂಪ ಹಾಗೂ ಪರಿಪೂರ್ಣ ಎಂಬುದನ್ನು ಸಜ್ಜನರಿಗೆ ತಿಳಿಸಲೆಂದು ಕೃಷ್ಣ ಆ ರೂಪವನ್ನು ತೋರಿಸಿದ.

ತೃಣಾವರ್ತನ ವಧೆ

ಕದಾಚಿತ್ ತಂ ಲಾಲಯಂತೀ ಯಶೋದಾ
ವೋಢುಂ ನಾಶಕ್ನೋದ್ಭೂರಿಭಾರಾಧಿಕಾರ್ಭಾ ।
ನಿಧಾಯ ತಂ ಭೂಮಿತಲೇ ಸ್ವಕರ್ಮ
ಯದಾ ಚಕ್ರೇ ದೈತ್ಯ ಆಗಾತ್ ಸುಘೋರಃ ॥ ೧೧೬ ॥

ಅ: ಒಮ್ಮೆ ಕೃಷ್ಣನನ್ನು ಆಡಿಸುತ್ತಿದ್ದಾಗ ಹೆಚ್ಚು [೨]ಭಾರದಿಂದ ನೊಂದವಳಾಗಿ ಅವನನ್ನು ಎತ್ತಿಕೊಳ್ಳಲು ಅಶಕ್ತಳಾದಳು.ಅವನನ್ನು ನೆಲದ ಮೇಲಿರಿಸಿ, ತನ್ನ ಕಾರ್ಯದಲ್ಲಿ ತೊಡಗಿದಳು. ಆಗ ಮಹಾಭಯಂಕರನಾದ ದೈತ್ಯನೊಬ್ಬ ಬಂದ.

ವಿ: ಹಾಗೆ ಕೃಷ್ಣ ಭಾರವೆನ್ನಿಸಿದ್ದು ಗರಿಮಾಯೋಗಶಕ್ತಿ. ಕೃಷ್ಣನಿಗೆ ಅಂತಹ ಸಕಲಯೋಗಶಕ್ತಿಯೂ ಸದಾ ಸ್ವರೂಪಭೂತವಾದದ್ದು. ಆಗ ಹಾಗೆ ಪ್ರದರ್ಶಿಸಿದ್ದು ಯಶೋದೆ ತನ್ನನ್ನು ಇಳಿಸಿ ಹೋದ ತಕ್ಷಣ ಬರುವ ತೃಣಾವರ್ತನನ್ನು ಸಂಹರಿಸಲಿಕ್ಕೆಂದು.

ತೃಣಾವರ್ತೋ ನಾಮತಃ ಕಂಸಭೃತ್ಯಃ ಸೃಷ್ಟ್ವೋತ್ಕ್ರಂ ಚಕ್ರವಾತಂ ಶಿಶುಂ ತಮ್ ।
ಆದಾಯಾಗಾದಂತರಿಕ್ಷಂ ಸ ತೇನ ಶಸ್ತಃ [೩] ಕಂಠಗ್ರಾಹಸಂರುದ್ಧವಾಯುಃ ॥ ೧೧೭ ॥

---

೧. ಜುಗೂಹ = ''ಗುಹೂ ಸಂವರಣ'' ಇತಿ ಧಾತೋಃ । ಆಚ್ಛಾದಿತವಾನ್ । ತದ್ಧ್ಯದರ್ಶಯದಿತ್ಯತ್ರ । ತತ್ ವ್ಯಾಪ್ತಂ ವಪುಃ ॥ – (ವಾ.)

೨. ಭೂರಿಭಾರೇಣ ಅತಿಭಾರೇಣ । – (ಜ.)

೩. ಶಸ್ತಃ ಶಿಕ್ಷಾಂ ಪ್ರಾಪಿತಃ । ಹತ ಇತ್ಯರ್ಥಃ ॥ – (ವಾ.)
ಶಸ್ತಃ ಶಾಸನಂ ಪ್ರಾಪ್ತಃ ಪೀಡಿತ ಇತಿ ಯಾವತ್ । – (ತಾ.)

ಅ: ತೃಣಾವರ್ತ ಎಂಬ ಹೆಸರಿನ ಕಂಸಭೃತ್ಯನಾದ ಆ ರಾಕ್ಷಸ ಅತಿಭಯಂಕರವಾದ ಸುಂಟರಗಾಳಿಯನ್ನು ಉಂಟುಮಾಡಿ, ಶಿಶುರೂಪನಾದ ಕೃಷ್ಣನನ್ನು ಎತ್ತಿಕೊಂಡು ಅಂತರಿಕ್ಷಕ್ಕೆ ನೆಗೆದ. ಕೃಷ್ಣ ಅವನ ಕತ್ತನ್ನು ಹಿಡಿದು, ಉಸಿರುಕಟ್ಟಿಸಿ, ಪೀಡಿಸಿದ.

ವಿ: ಉತ್ತರಭಾರತದ ಆ ಪ್ರಾಂತದಲ್ಲಿ ಇಂದಿಗೂ ಜನರನ್ನು, ಭಾರದ ವಸ್ತುಗಳನ್ನು ಹಾಗೆ ಗಗನಕ್ಕೆ ಎತ್ತೊಯ್ಯುವ ಸುಂಟರಗಾಳಿಗಳು ಬೀಸುವುದು ಕಂಡಿದೆ. ಆದರೆ ಅಂದು ಬಂದಿದ್ದು ಸುಂಟರಗಾಳಿಯಾಗಿರದೆ, ಆ ರೂಪದ ದೈತ್ಯನಾಗಿದ್ದ ಎಂಬುದು ವಿಶೇಷ.

ಪಪಾತ ಕೃಷ್ಣೇನ ಹತಃ ಶಿಲಾತಲೇ ತೃಣಾವರ್ತಃ ಪರ್ವತೋದಗ್ರದೇಹಃ ।
ಸುವಿಸ್ಮಯಂ ಚಾಪುರಥೋ ಜನಾಸ್ತೇ ತೃಣಾವರ್ತಂ ವೀಕ್ಷ್ಯ ಸಂಚೂರ್ಣಿತಾಂಗಮ್ ೧೧೮

ಅ: ಕೃಷ್ಣನಿಂದ ಹತನಾದ ಪರ್ವತದಂತೆ ದೊಡ್ಡದೇಹದ ಆ ತೃಣಾವರ್ತನು ಬಂಡೆಗಲ್ಲಿನ ಮೇಲೆ ಸತ್ತುಬಿದ್ದ. ಬಳಿಕ ಆ ಜನರೆಲ್ಲ ನುಜ್ಜುಗುಜ್ಜಾದ ದೇಹದ ತೃಣಾವರ್ತನನ್ನು ಕಂಡು ಅತ್ಯಂತ ಅಚ್ಚರಿ ಪಟ್ಟರು.

ಕೃಷ್ಣನ ನವನೀತಚೌರ್ಯ

ಅಕ್ರುಧ್ಯತಾಂ ಕೇಶವೋಽನುಗ್ರಹಾಯ ಶುಭಂ ಸ್ವಯೋಗ್ಯಾದಧಿಕಂ ನಿಹಂತುಮ್ ।
ಸ ಕ್ರುಧ್ಯತಾಂ ನವನೀತಾದಿ ಮುಷ್ಣಂಶ್ಚಚಾರ ದೇವೋ ನಿಜಸತ್ಸುಖಾಂಬುಧಿಃ ॥ ೧೧೯ ॥

ಅ: ಮುನಿಸಿಕೊಳ್ಳದವರಿಗೆ ಅನುಗ್ರಹಿಸಲೆಂದು, ಮುನಿಸಿಕೊಂಡವರಿಗೆ ಅವರ ಯೋಗ್ಯತೆಗೆ ಮೀರಿದ ಪುಣ್ಯವನ್ನು ನಾಶಪಡಿಸಲೆಂದು ಕ್ರೀಡಾದಿಗುಣಪೂರ್ಣನೂ, ಸ್ವರೂಪಭೂತವಾದ ನಿರ್ದುಷ್ಟಸುಖದಸಮುದ್ರನೂ ಆದ ಶ್ರೀಕೃಷ್ಣ ಬೆಣ್ಣೆ ಮೊದಲಾದವುಗಳನ್ನು ಕದಿಯುತ್ತಾ ಓಡಾಡಿದ.

ವಿ: ೧) ಕೃಷ್ಣನ ನವನೀತಚೌರ್ಯದ ಹಿನ್ನೆಲೆ ಇಲ್ಲಿ ನಿರೂಪಿತವಾಗಿದೆ. ಕೃಷ್ಣ ನವನೀತ–ಚೋರನೆಂಬುದು ಸುಪ್ರಸಿದ್ಧವಾದ ಮಾತು. ಆದರೆ ಕೃಷ್ಣ ಹಾಗೆ ಬೆಣ್ಣೆ ಕದ್ದದ್ದು ಬೆಣ್ಣೆಯ ಮೇಲಿನ ಆಸೆಯಿಂದಲ್ಲ. ಪೂರ್ಣಕಾಮನೂ, ಕ್ಷೀರಸಾಗರಶಾಯಿಯೂ ಆದ ಅವನಿಗೆ ಈ ಹಾಲು, ಮೊಸರು, ಬೆಣ್ಣೆಗಳಿಂದ ಆಗುವುದೇನು?

೨) ಆದರೂ ಕೃಷ್ಣ ಅವುಗಳನ್ನು ಕದ್ದ. ಅದರಿಂದ ತನ್ನ ಕೋಪಗೊಳ್ಳದೆ, ಸಂಭ್ರಮಪಡುವವರಿಗೆ ಅನುಗ್ರಹ ಮಾಡುವುದು, ಅದನ್ನು ಅರಿಯದೆ ಕೋಪಗೊಳ್ಳುವವರ ಅಧಿಕಪುಣ್ಯವನ್ನು ನಿಗ್ರಹಿಸುವುದು ಕೃಷ್ಣನ ಆ ಕಾರ್ಯದ ಉದ್ದೇಶವಾಗಿತ್ತು ಎಂದು ಭಾವ.

೩) ನವನೀತದ ಅಭಿಮಾನಿ ವಾಯುದೇವರು ಎಂದು ಪಂಚರಾತ್ರದಲ್ಲಿದೆ. ಕೃಷ್ಣ ವಾಯುಪ್ರಿಯ. ಅದಕ್ಕೆಂದೇ ಅವರಿಂದ ಅಭಿಮನ್ಯಮಾನವಾದ ನವನೀತ ಕೃಷ್ಣನಿಗೆ ಪ್ರಿಯ ಎಂಬುದು ಇಲ್ಲಿಯ ಮುಖ್ಯತತ್ತ್ವ.

ಶ್ರೀಕೃಷ್ಣಜಯಂತೀ

೧
ಯಸ್ಮಿನ್ನಬ್ದೇ ಭಾದ್ರಪದೇ ಸ ಮಾಸೇ ಸಿಂಹಸ್ಥಯೋರ್ಗುರುರವ್ಯೋಃ ಪರೇಶಃ ।
ಉದೈತ್ ತತಃ ಫಾಲ್ಗುನೇ ಫಲ್ಗುನೋಽಭೂದ್ಗತೇ ತತೋ ಮಾದ್ರವತೀ ಬಭಾಷೇ ॥೧೨೦॥

ಅ: ಗುರು ಮತ್ತು ಸೂರ್ಯ ಇಬ್ಬರೂ ಸಿಂಹರಾಶಿಯಲ್ಲಿದ್ದ ಭಾದ್ರಪದಮಾಸದಲ್ಲಿ ಪರೇಶನಾದ ಶ್ರೀಕೃಷ್ಣ ಅವತರಿಸಿದ. ಅದೇ ವರ್ಷದ ಫಾಲ್ಗುನಮಾಸದಲ್ಲಿ ಅರ್ಜುನ ಜನಿಸಿದ. ಅದಾದ ಮೇಲೆ ಮಾದ್ರವತೀ ಪಾಂಡುವನ್ನು ಕುರಿತು ಕೇಳಿಕೊಂಡಳು.

ವಿ: ೧) ಶ್ರೀಕೃಷ್ಣಜಯಂತಿಯ ಬಗ್ಗೆ ಬೆಳಕು ಚೆಲ್ಲುವ ಅಪೂರ್ವಮಾಹಿತಿ ಈ ಶ್ಲೋಕದಲ್ಲಿದೆ. ಕೃಷ್ಣ ಅವತರಿಸಿದ ಸಂವತ್ಸರ ಗುರು ಮತ್ತು ಸೂರ್ಯ ಇಬ್ಬರೂ ಸಿಂಹರಾಶಿಯಲ್ಲಿದ್ದ ವಿಶಿಷ್ಟವರ್ಷ. ಸಾಮಾನ್ಯವಾಗಿ ಸೂರ್ಯ ಸಿಂಹರಾಶಿಯಲ್ಲಿರುವುದು ಶ್ರಾವಣದಲ್ಲಿ. ಆದರೆ ಆ ವರ್ಷ ಅಧಿಕ-ಮಾಸವಿದ್ದದ್ದರಿಂದ ಸೂರ್ಯ ಭಾದ್ರಪದಮಾಸದಲ್ಲಿ ಸಿಂಹರಾಶಿಯಲ್ಲಿದ್ದ. ಗುರು ಸಿಂಹರಾಶಿಯಲ್ಲಿ-

---

೧. ಯಸ್ಮಿನ್ ಸಂವತ್ಸರೇಽಧಿಕಮಾಸಪ್ರಾಪ್ತೌ ಸತ್ಯಾಂ ಭಾದ್ರಪದೇ ಮಾಸಿ ರವಿಃ ಸಿಂಹರಾಶಿಂ ಗತೋ ಭವತಿ । ಕೃಷ್ಣಾವತಾರಸಮಯೇ ಗುರುರಪಿ ಸಿಂಹರಾಶಿಸ್ಥಿತೋಽಭೂತ್ । ತದಾ ದರ್ಶಮಾಸರೀತ್ಯಾ ಭಾದ್ರಪದಮಾಸೋಽಪಿ ಭವತಿ । ಸೌರಮಾಸರೀತ್ಯಾ ಶ್ರಾವಣಮಾಸಶ್ಚ ಭವತಿ । ತಸ್ಮಿನ್ ಸಂವತ್ಸರೇ ಕೃಷ್ಣಾವತಾರ ಇತಿ ಭಾವೇನ ''ಯಸ್ಮಿನ್ನಬ್ದ'' ಇತ್ಯಾದ್ಯುಕ್ತಮ್ । ಏವಂ ದ್ವಿವಿಧಮಾಸಸಂಪ್ರಯೋಗಃ ಅಧಿಕಮಾಸಪ್ರಾಪ್ತಾವೇವ ಭವತಿ । ನ ಸರ್ವದಾ । ಅತಃ ''ಯಸ್ಮಿನ್ನಬ್ದೇ'' ಇತ್ಯುಕ್ತಮ್ । ಅನ್ಯಥಾ ಅಬ್ದೇ ಶುಭೇ ಭಾದ್ರಪದೇಽಥ ಮಾಸೇ ಇತ್ಯೇವಾವಕ್ಷ್ಯತ್ । ಏತದ್ಯೋಗಾಲಾಭೇ ಸಾಂವತ್ಸರಿಕತಿಥೇಃ ಕರ್ತವ್ಯತ್ವಾತ್ ''ಶ್ರವಣ್ಯಾಂ ಚಾಸಿತೇ ಪಕ್ಷೇ'' ಇತ್ಯಾದಿ ಪ್ರಮಾಣಾನುಸಾರೇಣ ಸೋಮಾಭಾವೇ ಪೂತಿಕಾಗ್ರಹಣವತ್ ಕೇವಲಸಿಂಹಮಾಸೇಽಪಿ ಕ್ರಿಯತೇ । ಗತೇ ತತ ಇತ್ಯತ್ರ । ಗತೇ ತಸ್ಮಿನ್ನಬ್ದೇ ಗತೇ ಸತಿ ॥ – (ವಾ.)

ತತಃ ಫಾಲ್ಗುನಮಾಸಾನಂತರಂ ಚೈತ್ರಮಾಸೀತಿ ಯಾವತ್ । – (ಜ.)

ರೋಹಿಣ್ಯಾಮರ್ಧರಾತ್ರೇ ತು ಯದಾ ಕಾಲಾಷ್ಟಮೀ ಭವೇತ್ ।
ಜಯಂತೀ ನಾಮ ಸಾ ಪ್ರೋಕ್ತಾ ಸರ್ವಪಾಪಪ್ರಣಾಶನೀ ॥ - ಇತಿ ಜಯಂತೀನಿರ್ಣಯೇ

ಸಿಂಹಮಾಸೇ ತು ರೋಹಿಣ್ಯಾಂ ಪೂಜಯೇನ್ನಂದನಂದನಮ್ - ಇತಿ ವಿಷ್ಣುತೀರ್ಥೀಯೇ ।

ಪೌರ್ಣಮಾಸ್ಯಾಂ ತು ಚಂದ್ರಗ್ರಹಣೇನ ಭಾದ್ರಪದತ್ವಂ। ಮೀನಾದಿಸೌರಗ್ರಹಣೇನ ಚ ರವೇರ್ಭಾದ್ರಪದತ್ವಂ ದ್ರಷ್ಟವ್ಯಮ್ । – (ಜ.)

ರುವುದು ಹನ್ನೆರಡುವರ್ಷಗಳಿಗೊಮ್ಮೆ ಮಾತ್ರ. ಅಂತಹ ಅಪೂರ್ವಯೋಗ ಆಗ ಒದಗಿತ್ತು ಇದು ಶ್ರೀಕೃಷ್ಣಾವತಾರದ ಕಾಲನಿರ್ಣಯದ ಬಗ್ಗೆಯೂ ಅಪೂರ್ವಬೆಳಕು ಚೆಲ್ಲುವ ವಿಶಿಷ್ಟಮಾಹಿತಿ.

೨) ಜಯಂತೀನಿರ್ಣಯದಲ್ಲೂ ಆಚಾರ್ಯರು ಶ್ರಾವಣ, ಭಾದ್ರಪದ ಎಂದು ಉಲ್ಲೇಖ ಮಾಡದೆ, 'ಯದಾ ಕಾಲಾಷ್ಟಮೀ ಭವೇತ್' ಎಂದು ಹೇಳಿರುವುದು ಗಮನಾರ್ಹ. ಶ್ರೀವಿಷ್ಣುತೀರ್ಥರು ಸನ್ನ್ಯಾಸಪದ್ಧತಿಯಲ್ಲಿ ಸಿಂಹಮಾಸಕ್ಕೆ ಪ್ರಾಧಾನ್ಯ ನೀಡಿರುವರು. ಸಾಮಾನ್ಯ–ವಾಗಿ ಶ್ರಾವಣಮಾಸಕ್ಕೆ ಪ್ರಾಧಾನ್ಯನೀಡುವುದು ಘಟ್ಟದ ಮೇಲಿನ ಸಂಪ್ರದಾಯ. ಪುರಾಣಗಳಲ್ಲಿ ಶ್ರಾವಣ ಹಾಗೂ ಭಾದ್ರಪದ ಎರಡು ಮಾಸಗಳಲ್ಲೂ ಕೃಷ್ಣಾಷ್ಟಮೀ, ಕೃಷ್ಣಜಯಂತಿಗಳು ಪ್ರಸ್ತಾಪಿಸಲ್ಪಟ್ಟಿದ್ದು ಅದು ಶ್ರೀಮದಾಚಾರ್ಯರ ನಿರೂಪಣೆಗೆ ಪ್ರಬಲಪೋಷಕವಾಗಿದೆ.

೩) ಅರ್ಜುನ ಫಾಲ್ಗುನಮಾಸದಲ್ಲಿ ಹುಟ್ಟಿದ್ದರಿಂದ ಫಲ್ಗುನ ಎನ್ನಿಸಿದ. ಪ್ರತಿವರ್ಷ ಫಾಲ್ಗುನ ಮಾಸ ಬಂದರೂ, ಕೃಷ್ಣ ಅವತರಿಸಿದ್ದ ವರ್ಷದ ಫಾಲ್ಗುನ ಮಾಸ ಎಂಬುದು ಆ ಮಾಸದ ವಿಶೇಷವಾಗಿತ್ತು. ಅದರ ಸ್ಮಾರಕವಾಗಿ ಅರ್ಜುನನಿಗೆ ಆ ಹೆಸರು ಎಂದು ತಿಳಿಯಬೇಕು.

ಕೃಷ್ಣ ಉದ್ಯೆತ್ ಪ್ರಾದುರ್ಭೂತಃ ನನು ರವೇಃ ಸಿಂಹಸ್ಥತ್ವಂ ಶ್ರಾವಣಮಾಸ ಏವ ನತು ಭಾದ್ರಪದೇ ಮಾಸಿ। ಕನ್ಯಾಯುಕ್ತೇ ರವಿಸಂಬಂಧಸ್ಯ ಭಾದ್ರಪದೋಪಾಧಿತ್ವಾತ್ ತಥಾ ಶ್ರೀಕೃಷ್ಣಾವತಾರಸ್ಯ ಶ್ರಾವಣಕೃಷ್ಣಾಷ್ಟಮ್ಯಾಂ ಜಾತತ್ವಪ್ರಸಿದ್ಧೇಃ ಭಾದ್ರಪದೇ ಮಾಸಿ ಇತ್ಯಾದಿ ಕಥಂ ಘಟತ ಇತಿ ಚೇತ್ ತಸ್ಯ ವ್ರತಾದ್ಯಪೇಕ್ಷಯಾ ಶ್ರಾವಣಪೌರ್ಣಮಾಸೀಮಾರಭ್ಯ ಭಾದ್ರಪದತ್ವವತ್ ಸೌರಮಾನಮಾದಾಯ ಶ್ರಾವಣಮಪಿ ಮಾಸ ಭಾದ್ರಪದತ್ವೇನ ವ್ಯವಹೃತವಾನಾಚಾರ್ಯ ಇತಿ ಸಂತೋಷ್ಟವ್ಯಮ್। – (ವ.)

ಯಸ್ಮಿನ್ನಬ್ದೇ ಭಾದ್ರಪದ ಇತಿ। ನನು ಶ್ರಾವಣಕೃಷ್ಣಾಷ್ಟಮ್ಯಾಂ ಕೃಷ್ಣಜಯಂತೀತಿ ಪ್ರಸಿದ್ಧಮ್। ಕಥಂ ಭಾದ್ರಪದೇ ಕೃಷ್ಣೋದಯ ಇತಿ ಚೇತ್ ಶ್ರಾವಣಪೌರ್ಣಮೀಮಾರಭ್ಯ ಭಾದ್ರಪದಪೌರ್ಣಮೀಪರ್ಯಂತಂ ಮಾಸ ಇತಿ ಪಕ್ಷೇ ಶ್ರಾವಣಬಹುಳಸ್ಯಾಪಿ ಭಾದ್ರಪದತ್ವಾತ್ ತದ್ವಿವಕ್ಷಯೈವಮುಕ್ತ್ಯಪಪತ್ತೇಃ। – (ತಾ.)

ಉಕ್ತಂ ಚ ಮಹಾಭಾರತೇ ಅರ್ಜುನಾದೇಕಸಂವತ್ಸರಾನಂತರ್ಯಂ ಯಮಯೋಃ —

ಜಗಾಮ ಹಸ್ತಿನಗರಂ ಷೋಡಶಾಬ್ದೋ ಯುಧಿಷ್ಠಿರಃ।
ಭೀಮಸೇನಃ ಪಂಚದಶೋ ಬೀಭತ್ಸುರ್ವೈ ಚತುರ್ದಶ।
ತ್ರಯೋದಶಾಬ್ದೌ ತು ಯಮೌ ಜಗ್ಮತುರ್ನಾಗಸಾಹ್ವಯಮ್।
ತತ್ರ ತ್ರಯೋದಶಾಬ್ದಾನಿ ಧಾರ್ತರಾಷ್ಟ್ರೈಃ ಸಹೋಷಿತಾಃ।
ಷಟ್ಕಮಾಸಾನ್ ಜಾತುಗೃಹಾನ್ಮುಕ್ತಾ ಜಾತೋ ಘಟೋತ್ಕಚಃ।
ಷಣ್ಮಾಸಾನೇಕಚಕ್ರಾಯಾಂ ವರ್ಷಂ ಪಾಂಚಾಲಕೇ ಪುರೇ।
ಧಾರ್ತರಾಷ್ಟ್ರೈಃ ಸಹೋಷಿತ್ವಾ ಪಂಚವರ್ಷಾಣಿ ಭಾರತ।
ಇಂದ್ರಪ್ರಸ್ಥೇऽವಸನ್ ತತ್ರ ತ್ರೀಣಿ ವರ್ಷಾಣಿ ವಿಂಶತಿಃ।
ದ್ವಾದಶಾಬ್ದಾ ತಥೈಕಂ ಚ ಬಭೂವುರ್ಯೂತನಿರ್ಜಿತಾಃ।
ಭುಕ್ತ್ವಾ ಷಟ್ತ್ರಿಂಶತಂ ರಾಜ್ಯಂ ಸಾಗರಾಂತವಸುಂಧರಮ್।
ಮಾಸೈಃ ಷಡ್ಭಿರ್ಮಹಾತ್ಮಾನಃ ಸರ್ವೇ ಕೃಷ್ಣಪರಾಯಣಾಃ॥ ಇತಿ। – (ತಾ.)

೪) ಶ್ರೀಕೃಷ್ಣಾವತಾರದ ಅನಂತರ ಏಳನೆಯ ತಿಂಗಳಲ್ಲಿ ಅರ್ಜುನನ ಜನನ ಎಂದಾಗುವುದು.

ಮಂತ್ರೋಪದೇಶಕ್ಕಾಗಿ ಮಾದ್ರಿಯ ಪ್ರಾರ್ಥನೆ

ಜಾತಾಃ ಸುತಾಸ್ತೇ ಪ್ರವರಾಃ ಪೃಥಾಯಾಮೇಕಾ[೧]ನಪತ್ಯಾ[೨]ಽಹಮತಃ ಪ್ರಸಾದಾತ್ ।
ತವೈವ ಭೂಯಾಸಮಹಂ ಸುತೇತಾ ವಿಧತ್ಸ್ವ ಕುಂತೀಂ ಮಮ ಮಂತ್ರದಾತ್ರೀಮ್ ॥೧೨೧॥

ಅ: ''ನಿನಗೆ ಕುಂತಿಯಲ್ಲಿ ತುಂಬಾ ಶ್ರೇಷ್ಠರಾದ ಪುತ್ರರು ಜನಿಸಿರುವರು. ಈಗ ನಾನೊಬ್ಬಳೇ ಮಕ್ಕಳಿಲ್ಲದವಳು. ನಿನ್ನ ಅನುಗ್ರಹದಿಂದ ನಾನೂ ಪುತ್ರವತಿ ಎನ್ನಿಸಬೇಕಾಗಿದೆ. ನನಗೆ ಮಂತ್ರ ನೀಡುವಂತೆ ಕುಂತಿಗೆ ನೀನು ಹೇಳು.

ವಿ: ಕುರುಕುಲದ ಹಿರಿಯ ಸೊಸೆ ಗಾಂಧಾರಿಗೆ ನೂರು ಪುತ್ರರು. ಅನಂತರದ ಕುಂತಿಗೆ ಮೂರು ಪುತ್ರರು. ಆದರೆ ಕಿರಿಯಸೊಸೆಯಾದ ತನಗೆ ಮಾತ್ರ ಪುತ್ರರೇ ಇಲ್ಲ. ಆ ಕೊರಗು ತಪ್ಪುವುದು ತನಗೂ ಕುಂತಿಯಿಂದ ಮಂತ್ರ ಲಭಿಸಿದಾಗ ಮಾತ್ರ ಎಂಬುದು ಮಾದ್ರಿಯ ವಿಚಾರ.

ಕುಂತಿಯಿಂದ ಮಾದ್ರಿಗೆ ಮಂತ್ರೋಪದೇಶ

ಇತೀರಿತಃ ಪ್ರಾಹ ಪೃಥಾಂ ಸ ಮಾದ್ರ್ಯೈ ದಿಶಸ್ವ ಮಂತ್ರಂ ಸುತದಂ ವರಿಷ್ಠಮ್ ।
ಇತ್ಯೂಚಿವಾಂಸಂ ಪತಿಮಾಹ ಯಾದವೀ ದದ್ಯಾಂ ತ್ವದರ್ಥೇ ತು ಸಕೃತ್ಫಲಾಯ ॥ ೧೨೨ ॥

ಅ: ಹೀಗೆ ಮಾದ್ರಿ ಪ್ರಾರ್ಥಿಸಲು, ಪಾಂಡು ಕುಂತಿಗೆ ತಿಳಿಸಿದ : ''ನೀನು ಸಂತತಿಯನ್ನೀಯುವ ಶ್ರೇಷ್ಠಮಂತ್ರವನ್ನು ಮಾದ್ರಿಗೆ ಉಪದೇಶಿಸು''. ಹೀಗೆ ನುಡಿದ ಪತಿಗೆ ಯಾದವಿಯಾದ ಕುಂತಿ ತಿಳಿಸಿದಳು : ''ಒಂದು ಬಾರಿ ಮಾತ್ರ ಫಲ ನೀಡುವಂತೆ ನಿನಗಾಗಿ ಆ ಮಂತ್ರವನ್ನು ನಾನು ಅವಳಿಗೆ ನೀಡುವೆ''.

ವಿ: ೧) ಕುಂತಿ ಯದುಕುಲದ ಶೂರರಾಜನ ಪುತ್ರಿಯಾದ್ದರಿಂದ 'ಯಾದವೀ' ಎಂದೂ ಉಲ್ಲೇಖ.

೨) ಮಾದ್ರಿಯ ಪ್ರಾರ್ಥನೆ ಯೋಗ್ಯವಾಗಿತ್ತು. ಅದರಿಂದ ಪಾಂಡು ಕುಂತಿಗೆ ಹಾಗೆ ಆದೇಶ ನೀಡಿದ.

---

೧. ಏಕೇತಿ ಏಕತ್ವೋಕ್ತ್ಯಾ ಏಕತ್ವಸಮಾನಾಧಿಕರಣಮನಪತ್ಯತ್ವಮತಿಶಯೇನ ದುಃಖಕರಣಮಿತಿ ದ್ಯೋತಯತಿ ।
– (ಸ.)

ಉವಾಚ ಮಾದ್ರ್ಯೈ ಸುತದಂ ಮನುಂ ಚ ಪುನಃ ಫಲಂ ತೇ ನ ಭವಿಷ್ಯತೀತಿ ।
ಮಂತ್ರಂ ಸಮಾದಾಯ ಚ ಮದ್ರಪುತ್ರೀ ವ್ಯಚಿಂತಯತ್ ಸ್ಯಾಂ ನು ಕಥಂ ದ್ವಿಪುತ್ರೀ ॥೧೨೩॥

ಅ: ಮಾದ್ರಿಗೆ ಪುತ್ರಪ್ರದವಾದ ಮಂತ್ರವನ್ನು ಕುಂತಿ ಉಪದೇಶಿಸಿ ನುಡಿದಳು : ''ಇದು ಎರಡನೆಯ ಬಾರಿಗೆ ನಿನಗೆ ಫಲ ನೀಡದು''. ಮಂತ್ರೋಪದೇಶ ಪಡೆದ ಮಾದ್ರಿ ಯೋಚಿಸಿದಳು : ''ನಾನು ಇಬ್ಬರು ಮಕ್ಕಳನ್ನು ಎಂತು ಪಡೆದೇನು?''

ವಿ: ಕುಂತಿಯ ಎಚ್ಚರಿಕೆ ಮಾದ್ರಿಯನ್ನು ಯೋಚಿಸುವಂತೆ ಮಾಡಿತು. ಕುಂತಿಗೆ ಮೂರು ಮಕ್ಕಳಿ–ರುವಾಗ ನನಗೆ ಒಂದೇ ಏಕೆ? ಎರಡೂ ಆಗಬಹುದಲ್ಲ? ಎಂಬ ಯೋಚನೆ ಅವಳಲ್ಲಿ ಹುಟ್ಟಿತು.

ಸದಾऽವಿಯೋಗೌ ದಿವಿಜೇಷು ದಸ್ರೌ ನ ಚೈತಯೋರ್ನಾಮಭೇದಃ[೧] ಕ್ವಚಿದ್ಧಿ ।
ಏಕಾ ಭಾರ್ಯಾ ಸೈತಯೋರಪ್ಯುಷಾ ಹಿ ತದಾऽऽಯಾತಃ ಸಕೃದಾವರ್ತನಾದ್ ದ್ವೌ
॥೧೨೪॥

ಅ: ದೇವತೆಗಳಲ್ಲಿ ಅಶ್ವಿನಿದೇವತೆಗಳು ಸದಾ ಜೊತೆಯಾಗಿಯೇ ಇರುವವರು. ಅವರು ಎಂದೂ ಒಬ್ಬರನ್ನೊಬ್ಬರು ಬಿಟ್ಟಿರುವವರಲ್ಲ; ಅವರ ಹೆಸರಿನಲ್ಲೂ ವ್ಯತ್ಯಾಸವಿಲ್ಲ. ಅವರಿಬ್ಬರಿಗೆ ಉಷೆ ಎಂಬ ಒಬ್ಬಳೇ ಪತ್ನಿ. ಆದ್ದರಿಂದ ಒಮ್ಮೆ ಉಚ್ಚರಿಸಿದರೂ, ಇಬ್ಬರೂ ಬರುವರು.

ವಿ: ೧) ಇದು ಅಶ್ವಿನಿದೇವತೆಗಳ ಬಗ್ಗೆ ಒಂದು ಅಪೂರ್ವಮಾಹಿತಿ. ಇಡೀ ದೇವತೆಗಳ ಗುಂಪಿನಲ್ಲಿ ಅಶ್ವಿನಿದೇವತೆಗಳದು ವಿಶಿಷ್ಟಬಗೆ. ಅವಳಿದೇವತೆಗಳು ಎಂಬುದು ಅವರ ಹಿರಿಮೆ. ಹುಟ್ಟಿನಿಂದಲೂ ಅವರು ಸದಾ ಜೊತೆಯಿರುವವರೇ. ಅವರಿಗೆ ನಾಸತ್ಯ, ದಸ್ರರೆಂದು ಹೆಸರು. ಅವು ಅವರಿಬ್ಬರಿಗೂ ಅನ್ವಯಿಸುವ ಹೆಸರುಗಳು. ನಾಸತ್ಯ ಎಂದು ದಸ್ರನಿಗೂ, ದಸ್ರ ಎಂದು ನಾಸತ್ಯನಿಗೂ ಹೆಸರು. ಅವರಿಬ್ಬರಿಗೂ ಉಷೆ ಎಂಬ ಒಬ್ಬಳೇ ಪತ್ನಿ ಎಂಬುದು ಅವರ ವಿಶೇಷ. ಅವರಿಬ್ಬರಲ್ಲಿ ವಸ್ತುತಃ ಭೇದವಿದ್ದರೂ, ಈ ಕಾರಣಗಳಿಂದಾಗಿ ಒಂದೇ ಮಂತ್ರದಿಂದ ಇಬ್ಬರೂ ಒಟ್ಟಾಗಿ ಬಂದು ಇಬ್ಬರು ಪುತ್ರರನ್ನು ನೀಡಲು ಸಾಧ್ಯ ಎಂಬುದು ಮಾದ್ರಿಯ ಚಿಂತನೆ.

೨) ಹೀಗೆ ಸಂಪೂರ್ಣಸಾಮ್ಯವಿದ್ದರೂ, ನಾಸತ್ಯ ದಸ್ರರು ಒಬ್ಬರೇ ವ್ಯಕ್ತಿಗಳಲ್ಲ; ಇಬ್ಬರೂ ಬೇರೆಬೇರೆಯೇ. ಎಂದ ಮೇಲೆ ಯಾವ ಸಾಮ್ಯವೂ ಇಲ್ಲದ ಜೀವ ಮತ್ತು ಈಶ್ವರ ಒಂದಾಗಲು ಹೇಗೆ ಸಾಧ್ಯ ಎಂಬ ತತ್ತ್ವವನ್ನೂ ಇಲ್ಲಿ ಗಮನಿಸಬೇಕು.

---

೧. ಏತಯೋರಶ್ವಿನೋರ್ಭಾರ್ಯಾಪಿ ಸಾ ಸಕಾರಾಂತಶಬ್ದವಾಚ್ಯೇತಿ ಪ್ರಸಿದ್ಧಾ ಉಷಾ ಇತಿ ನಾಮವತೀ ಏಕಾ ಹಿ ಏಕೈವ ಆಬಂತಶಬ್ದವಾಚ್ಯೋಷಾ ಅನಿರುದ್ಧಭಾರ್ಯೇತಿ ದ್ರಷ್ಟವ್ಯಮ್ । – (ಜ.)

ನಕುಲ ಸಹದೇವರ ಜನನ

ಇತೀಕ್ಷಂತ್ಯಾಽಽಕಾರಿತಾವಶ್ವಿನೌ ತೌ[೧]
ಶೀಘ್ರಂ ಪ್ರಾಪ್ತೌ ಪುತ್ರಕೌ ತತ್ಪ್ರಸೂತೌ ।
ತಾವೇವ ದೇವೌ ನಕುಲಃ ಪೂರ್ವಜಾತಃ
ಸಹದೇವೋಽಭೂತ್ ಪಶ್ಚಿಮಸ್ತೌ ಯಮೌ ಚ ॥ ೧೨೫ ॥

ಅ: ಹೀಗೆ ಚಿಂತಿಸಿದ ಮಾದ್ರಿ ಅಶ್ವಿನಿದೇವತೆಗಳನ್ನು ಕರೆದಳು. ಅವರೂ ಕೂಡಲೆ ಆಗಮಿಸಿದರು. ಅವಳಿಗೆ ಮಕ್ಕಳಾಗಿ ಅವರಿಬ್ಬರೂ ಜನಿಸಿದರು. ನಕುಲ ಮೊದಲು ಹುಟ್ಟಿದ; ಸಹದೇವ ಅನಂತರ ಹುಟ್ಟಿದ. ಅವರಿಬ್ಬರೂ ಅವಳಿಗಳು.

ಪುನರ್ಮನೋಃ ಫಲವತ್ತ್ವಾಯ ಮಾದ್ರೀ ಸಂಪ್ರಾರ್ಥಯಾಮಾಸ ಪತಿಂ ತದುಕ್ತಾ।
ಪೃಥಾऽವಾದೀತ್ ಕುಟಿಲೈಷಾ ಮದಾಜ್ಞಾಮೃತೇ ದೇವಾವಾಹ್ವಯಾಮಾಸ ದಸ್ರೌ ॥೧೨೬॥

ಅತೋ ವಿರೋಧಂ ಚ ಮದಾತ್ಮಜಾನಾಂ ಕುರ್ಯಾದೇಷೇತ್ಯೇವ ಭೀತಾಂ ನ ಮಾಂ ತ್ವಮ್
ನಿಯೋಕ್ತುಮರ್ಹಃ ಪುನರೇವ ರಾಜನ್ನಿತೀರಿತೋऽಸೌ ವಿರರಾಮ ಕ್ಷಿತೀಶಃ॥ ೧೨೭ ॥

ಅ: ಮಂತ್ರವು ಮತ್ತೊಮ್ಮೆ ಫಲಿಸಲು ಮಾದ್ರಿ ಪತಿಯನ್ನು[೨]ಬೇಡಿಕೊಂಡಳು.ಅವನು ಹಾಗೆ ಹೇಳಲು, ಕುಂತಿ (ನಿರಾಕರಿಸುತ್ತಾ) ನುಡಿದಳು: ''ಈ ಮಾದ್ರೀ ವಂಚಕಳು; ನನ್ನ ಅನುಮತಿ ಇಲ್ಲದೆ, ಅಶ್ವಿನಿದೇವತೆಗಳನ್ನು ಕರೆದಳು. ಅದರಿಂದ ಮುಂದೆ ನನ್ನ ಮಕ್ಕಳಿಗೂ ಇವಳು ವಿರೋಧವೆಸಗಬಹುದೆಂದು ನನಗೆ ಅಂಜಿಕೆ. ಅದು ಮತ್ತೊಮ್ಮೆ ಫಲ ಕೊಡಲು ನೀನು ಹೇಳದಿರು''. ಅವಳು ಹಾಗೆನ್ನಲು ಪಾಂಡುರಾಜ ಸುಮ್ಮನಾದ.

ವಿ: ೧) ಕುಂತಿಯು ಮಾದ್ರಿ ಹಾಗೆ ಅಶ್ವಿನಿದೇವತೆಗಳನ್ನು ಕರೆದು ಮಕ್ಕಳನ್ನು ಪಡೆಯಬಹುದೆಂದು ನಿರೀಕ್ಷಿಸಿರಲಿಲ್ಲ; ಅದಕ್ಕೆ ಕಾರಣವನ್ನು ಮುಂದಿನ ಶ್ಲೋಕದಲ್ಲಿ ತಿಳಿಸಿರುವರು.

---

೧. ಆಕಾರಿತೌ = ಆಹೂತೌ ॥ – (ವಾ.)

೨. ಕುಂತೀಮಥ ಪುನಃ ಪಾಂಡುರ್ಮಾದ್ರ್ಯರ್ಥೇ ಸಮಚೋದಯತ್ ।
ಉಕ್ತಾ ಸಕೃದ್ ದ್ವಂದ್ವಮೇಷಾ ಲೇಭೇ ತೇನಾಸ್ಮಿ ವಂಚಿತಾ ।
ಬಿಭೇಮ್ಯಸ್ಯಾಃ ಪರಿಭವಾತ್ ಕುಸ್ತ್ರೀಣಾಂ ಗತಿರೀದೃಶೀ ॥
ತಸ್ಮಾನ್ನಾಹಂ ನಿಯೋಕ್ತವ್ಯಾ ತ್ವಯೈಷೋऽಸ್ತುವರೋ ಮಮ ॥ – ಭಾರತ (೧೧/೨೩/೨೫)

ಹೀಗೆ ತಪ್ಪುಮಾಡಿದ್ದಲ್ಲದೆ, ತಾನು ಒಬ್ಬೊಬ್ಬ ದೇವತೆಯಿಂದ ಒಬ್ಬೊಬ್ಬ ಪುತ್ರರನ್ನು ಪಡೆದರೆ, ಅವಳು ಒಮ್ಮೆಲೆ ಇಬ್ಬರು ಪುತ್ರರನ್ನು ಪಡೆದಿದ್ದಾಳೆ; ಅದೂ ಸಲ್ಲದ ರೀತಿಯಲ್ಲಿ ಎಂಬುದು ಕುಂತಿ ಅವಳನ್ನು ವಂಚಕಿ ಎಂದು ಆರೋಪಿಸಲು ಕಾರಣವಾಯಿತು.

೨) ಒಂದು ಬಾರಿ ಮಾತ್ರ ಫಲ ನೀಡಲು ಮಂತ್ರವನ್ನು ಉಪದೇಶಿಸಿದರೆ, ಇಬ್ಬರು ಮಕ್ಕಳನ್ನು ಪಡೆದ ಅವಳು, ಇನ್ನೂ ಹೆಚ್ಚಿನ ಮಕ್ಕಳನ್ನು ಪಡೆದು, ತನ್ನ ಮಕ್ಕಳಿಗೇ ದ್ರೋಹ ಬಗೆಯಬಹುದೆಂಬ ಅಂಜಿಕೆ ಅವಳನ್ನು ಕಾಡಿತು.

ವಿಶೇಷನಾಮ್ನೈವ[೧] ಸಮಾಹುತಾಃ ಸುತಾನ್
ದದ್ಯುಃ ಸುರಾ ಇತ್ಯವಿಶೇಷಿತಂ ಯಯೋಃ ।
ವಿಶೇಷನಾಮಾಪಿ ಸಮಾಹ್ವಯತ್ ತೌ
ಮಂತ್ರಾವೃತ್ತಿರ್ನಾಮಭೇದೇಽಸ್ಯ[೨] ಚೋಕ್ತಾ ॥ ೧೨೮ ॥

---

೧. ಹೇ ದೇವ ಆಯಾಹೀತಿ ಸಾಮಾನ್ಯನಾಮ್ನಾ ಆಹ್ವಾನೇ ತೇ ದೇವಾಃ ಕಸ್ಯ ವಾಽಽಹ್ವಾನಂ ಕೃತಮಿತಿ ಶಂಕಯಾ ನಾಯಾಂತ್ಯೇವ । ಕಿಂತು ಇಂದ್ರವಾಯುಯಮಾದಿವಿಶೇಷನಾಮ್ನಾ ಆಹೂತಾ ಏವ ಸುರಾಃ ಪುತ್ರಾನ್ ದದ್ಯುಃ । ಅತೋ ವಿಶೇಷನಾಮವತಾಂ ತತ್ತನ್ನಾಮ್ನಾ ಸಕೃದಾಹ್ವಾನೇ ಏಕ ಏವ ಪುತ್ರೋ ಭವತಿ । ನ ದ್ವೌ । ತೇನ ಕಾರಣೇನ ತಯೋರಶ್ವಿನೋರ್ವಿಶೇಷನಾಮಾಪ್ಯವಿಶೇಷಿತಮೇವ । ಅಶ್ವಿನೌ ದಸ್ರಾವಿತ್ಯಾದಿರೂಪೇಣ ಇಂದ್ರಾದಿಭ್ಯೋ ಯದ್ವಿಶೇಷನಾಮ ತದಪಿ ಅಶ್ವಿನೋಃ ಪರಸ್ಪರಾಪೇಕ್ಷಯಾಽವಿಶೇಷಿತಮೇವ । ಅನ್ಯಾಸಾಧಾರಣದ್ವಿಸಾಧಾರಣನಾಮ ವಿನಾ ಇಂದ್ರಚಂದ್ರಯೋರಿವ ಏಕೈಕಸ್ಯ ಪೃಥಗಸಾಧಾರಣಂ ನಾಮ ನಾಸ್ತಿ । ''ಏಕಯೋಕ್ತ್ಯಾ ಪುಷ್ಪದಂತೌ ದಿವಾಕರನಿಶಾಕರೌ'' ಇತ್ಯುಕ್ತೇ । ಪುಷ್ಪದಂತನಾಮಾಪಿ ಪುಷ್ಪಪದೇನ ದಿವಾಕರಂ ದಂತಪದೇನ ನಿಶಾಕರಂ ವಕ್ತಿ ನ ತ್ವೇಕಪದೇನ ದಸ್ರಾವಿತಿವದುಭೌ ವಕ್ತಿ । ಪಿತರಾವಿತ್ಯತ್ರಾಪಿ ಪಿತೃಪದಂ ಮಾತಾ ಚ ಪಿತಾ ಚ ಪಿತಾರಾವಿತಿ ಸಮಾಸೇ ಪೂರ್ವಪದಲೋಪೇ ತದರ್ಥಂ ಕಾಕೇಭ್ಯೋ ದಧಿ ರಕ್ಷ್ಯತಾಮಿತಿವತ್ ಅಜಹತ್ಸ್ವಾರ್ಥಲಕ್ಷಣಾಮಾಶ್ರಿತ್ಯ ಲಕ್ಷಣಯಾ ಮಾತರಂ ವಕ್ತಿ । ಪಿತರಂ ತು ಸ್ವಶಕ್ತ್ಯೈವ ವಕ್ತಿ । ನ ತ್ವೇಕವಿಧಯಾಽಶ್ವಿನಾವಿತಿವದುಭೌ ವಕ್ತಿ । ತಸ್ಮಾದುಭಯನಿಯಮವಂತಾವಶ್ವಿನಾವೇವೇತಿ ಹೇತೋಃ ತೌ ಸಕೃದಾಹ್ವಾನೇ ಸತಿ ದ್ವಾವಪಿ ಸಹೈವಾಯಾತಃ । ತದಾ ಮಂತ್ರಸ್ಯಾಪಿ ಸಕೃದಾವೃತ್ತಿರೇವ । ಅತ ಏವ ಮಾದ್ರ್ಯಾ ಕುಂತೀವಚನಮಪಿ ನೋಲ್ಲಂಘಿತಮ್ । ಪುತ್ರದ್ವಯಾಖ್ಯಸ್ವಕಾರ್ಯಂ ಚ ಸಂಪಾದಿತಮ್ ।

೨. ಅಸ್ಯ = ಆಹೂಯಮಾನಸುರಸಮೂಹಸ್ಯ ಇಂದ್ರಚಂದ್ರಾದಿವತ್ ಪ್ರತ್ಯೇಕಂ ನಾಮಭೇದೇ ವಿಶೇಷನಾಮ್ನೈವಾಹ್ವಾನನಿಯಮಾತ್ । ಏಕಸ್ಯ ಪೂರ್ವಾಹ್ವಾನೇ ಮಂತ್ರಾವೃತ್ತಿರುಕ್ತಾ । ವಿಶೇಷನಾಮಾಪಿ ಯಯೋರವಿಶೇಷಿತಂ ತಯೋರ್ವಿಶೇಷನಾಮ್ನೈವ ಸಕೃದಾಹ್ವಾನೇಽಪಿ ದ್ವಯೋರಾಗಮನಸಂಭವಾತ್ ನ ಮಂತ್ರಾವೃತ್ತಿರಿತಿ ಭಾವಃ ॥ – (ವಾ.)

ಏಕೈಕಮಪಿಧತ್ರಿನ್ಯಾಯೇನ ದ್ವಯೋರಪ್ಯಭಿದಾಯಕಂ ನ ತು ಶಕ್ಯಾ । ಅನ್ಯಥಾ 'ನಾಸತ್ಯದಸ್ರೌ ಕ್ರಮಶಃ ಪ್ರಸೂತೌ' ಇತ್ಯಾದೌ ಸಹಪ್ರಯೋಗೋ ನ ಸ್ಯಾತ್ । ಅಯಂ ಚಾರ್ಥಃ ತಕ್ಷನ್ನಾಸತ್ಯಾಭ್ಯಾಮಿತ್ಯೇತದ್ಗೃಹ್ಯಷ್ಟೀಕಾಯಾಂ ಜಯತೀರ್ಥಾರ್ಯೈರ್ನಿರ್ಣೀತಃ ಅತಃ ತೌ ಸಮಾಹ್ವಯದಿತ್ಯರ್ಥಃ । – (ಜ.)

ಅ: ದೇವತೆಗಳು ವಿಶೇಷಹೆಸರಿನಿಂದ ಕರೆದಾಗ ಮಾತ್ರ ಪುತ್ರರನ್ನು ನೀಡುವರು. ಅವರಿಬ್ಬರ ವಿಶೇಷನಾಮವು ಸಹ ಒಂದೇ ಆಗಿದ್ದುದು ಅಶ್ವಿನಿದೇವತೆಗಳ ವಿಶೇಷ. ಅದಕ್ಕೆಂದೇ ಮಾದ್ರೀ ಅಶ್ವಿನೀದೇವತೆಗಳನ್ನು ಆಹ್ವಾನಿಸಿದಳು. ಮಂತ್ರದ ಆವೃತ್ತಿ ಹೆಸರಿನಲ್ಲಿ ಭೇದವಿದ್ದಾಗ ಮಾತ್ರ ವಿಹಿತ.

ವಿ: ಆ ಮಂತ್ರಗಳಿಂದ ದೇವತೆಗಳನ್ನು ಆಹ್ವಾನಿಸಿ, ಸಂತತಿಯನ್ನು ಪಡೆಯುವಾಗ ಆಯಾ ದೇವತೆಗಳ [೧]ವಿಶೇಷನಾಮವನ್ನೇ ಉಚ್ಚರಿಸಬೇಕು. 'ದೇವ' ಎಂಬ ಸಾಮಾನ್ಯನಾಮದಿಂದ ಕರೆದಾಗ ದೇವತೆಗಳು ಸಂತತಿ ನೀಡುವುದಿಲ್ಲ. ಅದರಂತೆ ಮರುತ್, ಆದಿತ್ಯ, ವಸು, ರುದ್ರ ಮೊದಲಾದವರು ಆಯಾ ಗುಂಪಿನ ದೇವತೆಗಳ ವಿಶೇಷನಾಮವಾದರೂ, ಆ ಗುಂಪಿನ ಪ್ರತಿಯೊಂದು ದೇವತೆಗೂ ತಮ್ಮದೇ ಆದ ವಿಶೇಷವಾದ ನಾಮವೊಂದು ಇದ್ದೇ ಇರುವುದು. ದ್ವಾದಶಾದಿತ್ಯರು, ಅಷ್ಟವಸುಗಳು, ಏಕಾದಶರುದ್ರರು, ೪೯ ಮರುತ್ತುಗಳಿಗೆ ಆದಿತ್ಯ, ವಸು, ರುದ್ರ, ಮರುತ್ ಎಂಬುದು ಇತರದೇವತೆಗಳ ಅಪೇಕ್ಷೆಯಿಂದ ವಿಶೇಷನಾಮವಾದರೂ, ಅವರಿಗೆಲ್ಲ ಪ್ರತ್ಯೇಕವಾದ ವಿಶೇಷನಾಮವೊಂದು ಇದ್ದೇ ಇರುವುದು. ಪುಷ್ಪದಂತ ಮೊದಲಾದ ಪದದಿಂದ ಸೂರ್ಯಚಂದ್ರರಿಬ್ಬರೂ ವಾಚ್ಯರಾದರೂ,ಅವುಗಳಲ್ಲಿನ 'ಪುಷ್ಪ' ಎಂಬುದಕ್ಕೆ ಸೂರ್ಯ ಎಂದೂ 'ದಂತ' ಎಂಬುದಕ್ಕೆ ಚಂದ್ರ ಎಂದೂ ವಿಶೇಷನಾಮವೇ ಇದೆ.

ಆದರೆ ಅಶ್ವಿನಿದೇವತೆಗಳ ವಿಚಾರದಲ್ಲಿ ಹೀಗಿಲ್ಲ. ಅವರಿಬ್ಬರಿಗೂ ನಾಸತ್ಯ ದಸ್ರರೆಂದು ಹೆಸರಿದ್ದು, ಅವೆರಡು ಅವರಿಬ್ಬರಿಗೂ ಸಮಾನವಾಗಿಯೇ [೨]ವಿಶೇಷನಾಮಗಳಾಗಿವೆ. ಎಂದರೆ ನಾಸತ್ಯ ದಸ್ರ ಎಂಬ ಹೆಸರುಗಳು ಇಬ್ಬರಿಗೆ ಪ್ರತ್ಯೇಕವಾಗಿ ಮಾತ್ರವಲ್ಲದೆ, ಒಬ್ಬೊಬ್ಬರಿಗೂ

---

೧. ಅತ್ರ ಕೇಚಿದಾಹುಃ । ನಾಸತ್ಯದಸ್ರಶಬ್ದಾವುಭಯೋರಪಿ ವಾಚಕೌ ಭೇದಕೌ ಸರ್ವಶತ್ರೂಣಾಂ ನಾಸತ್ಯೌ ನಾಸಿಕಾಸಂಸ್ಥೌ ಇತ್ಯುಭಯತ್ರ ನಿರ್ವಚನಾತ್ । ನ ಚ ನಿರ್ವಚನಮಾತ್ರಂ ನ ರೂಢಿರಿತಿ ವಾಚ್ಯಮ್ । ಬಹುಪ್ರಯೋಗಬಲೇನ ರೂಢಿನಿಶ್ಚಯಾತ್ । ಟೀಕಾವಚನಂ ತು ಪ್ರಯೋಗೇನೋಭಯವಾಚಕತ್ವೇ ಸತ್ಯಪಿ ಏಕತ್ರ ಬಹುನಾತಿಪ್ರಯೋಗಮನ್ಯತ್ರ ತಥಾ ಪ್ರಯೋಗಾಭಾವಂ ಚಾದಾಯ ಪ್ರವೃತ್ತಮಿತಿ । ಅನ್ಯೇ ತು ಅತ್ರ ನಾಮಾಭೇದೋ ನಾಮಪ್ರತಿಪಾದಕಾಭೇದೋ ವಿವಕ್ಷಿತಃ । ರೂಢಲಕ್ಷಣಾದೇರಭಿಧಾತುಲ್ಯತ್ವಾತ್ ನಾಮಪದ-ಪ್ರಯೋಗಃ ಅತ ಏವ ಸುಧಾಯಾಂ ರೂಢಲಕ್ಷಣಾದೇರಭಿಧಾತುಲ್ಯತ್ವಾದಿತ್ಯುಕ್ತಮ್ । ಪ್ರತಿಪಾದಕತ್ವಂ ಚ ಸಾಹಚರ್ಯೇಣ । ಅತ ಏವ ಸದಾವಿಯೋಗಾವಿತ್ಯುಕ್ತಮ್ । ಅವಿಯೋಗಶ್ಚ ಪ್ರೀತ್ಯತಿಶಯೇನೇತಿ ಭಾವೇನೈಕ-ಭಾರ್ಯತ್ವಮುಕ್ತಮಿತ್ಯಾಹುಃ । ನನು ಮರುತ ಆಯಾತಮಿತ್ಯಾದಿರೂಪೇಣಾಹ್ವಾನೇ ಬಹುಪುತ್ರಲಾಭಾತ್ ಕಿಂ ತಾವೇವಾಹ್ವಯದಿತ್ಯತ್ರಾಹ – ವಿಶೇಷೇತಿ । ನನು ಚಂದ್ರಸೂರ್ಯಯಮಾ ಆಯಾತು ಇತ್ಯಾಹ್ವಾನೇ ಬಹುಪುತ್ರ-ಲಾಭಃ । ವಿಶೇಷನಾಮಾ ಚ ಭವತೀತ್ಯತೋ ಚಾಹ – ಮಂತ್ರೇತಿ । ಚಶಬ್ದೇನಾವರ್ತಿತಮಂತ್ರಸ್ಯ ವಿಕಲತಾ ಚೇತಿ ಜ್ಞೇಯಮ್ । – (ತಾ.)

೨. ನಾಸತ್ಯಶ್ಚೈವ ದಸ್ರಶ್ಚ ಸ್ಮೃತೌ ದ್ವಾವಶ್ವಿನೌ ನೃಪ।
ನೈತಯೋರ್ನಾಮಭೇದೋಽಸ್ತಿ ಸಹಿತೌ ಚರತಃ ಸದಾ ॥ – ಭಾರತ

ವಿಶೇಷವಾಗಿಯೂ ಅನ್ವಯಿಸುತ್ತದೆ. ನಾಸತ್ಯನು ದಸ್ರನೂ ಹೌದು; ದಸ್ರ ನಾಸತ್ಯನೂ ಹೌದು. ಎಂದರೆ ಅದರಲ್ಲಿ ಯಾವ ಒಂದು ಹೆಸರಿನಿಂದ ಕರೆದರೂ ಇಬ್ಬರೂ ಆಗಮಿಸುವರು. ಈ ಸೂಕ್ಷ್ಮವನ್ನು ಮಾದ್ರಿ ಅರಿತದ್ದರಿಂದ ಅವಳು ಮಂತ್ರವನ್ನು ಒಂದೇ ಬಾರಿ ಜಪಿಸುವ ಮೂಲಕ ಅವರಿಬ್ಬರನ್ನೂ ಕರೆದು, ಇಬ್ಬರು ಮಕ್ಕಳನ್ನು ಪಡೆಯಲು ಸಾಧ್ಯವಾಯಿತು.

ಇತರ ಪಾಂಡವರಲ್ಲಿ ವಾಯುವಿನ ಆವೇಶ

[೧]ಯುಧಿಷ್ಠಿರಾದ್ಯೇಷು ಚತುರ್ಷು ವಾಯುಃ ಸಮಾವಿಷ್ಟಃ ಫಲ್ಗುನೇಽತೋ ವಿಶೇಷಾತ್ ।
ಯುಧಿಷ್ಠಿರೇ ಸೌಮ್ಯರೂಪೇಣ ವಿಷ್ಟೋ ವೀರೇಣ ರೂಪೇಣ ಧನಂಜಯೇಽಸೌ ॥೧೪೯॥

ಅ: ಯುಧಿಷ್ಠಿರ ಮೊದಲಾದ ಇತರ ನಾಲ್ವರು ಪಾಂಡವರಲ್ಲೂ, ವಿಶೇಷವಾಗಿ ಅರ್ಜುನನಲ್ಲೂ ವಾಯುದೇವರು ವಿಶೇಷವಾಗಿ ಆವೇಶ ಹೊಂದಿದರು. ಯುಧಿಷ್ಠಿರನಲ್ಲಿ ಸೌಮ್ಯ ಎಂಬ ರೂಪದಿಂದ ಪ್ರವೇಶ ಮಾಡಿದರೆ, ಅರ್ಜುನನಲ್ಲಿ ವೀರ ಎಂಬ ರೂಪದಿಂದ ಪ್ರವೇಶ ಮಾಡಿದರು.

ವಿ: ೧) ಯುಧಿಷ್ಠಿರಾದಿ ಇತರ ನಾಲ್ಕು ಪಾಂಡವರಲ್ಲೂ ವಾಯುದೇವರ ಆವೇಶ; ಅದರಲ್ಲೂ ಅರ್ಜುನನಲ್ಲಿ ವಿಶೇಷ ಆವೇಶ. ಯುಧಿಷ್ಠಿರನಲ್ಲಿದ್ದು ಸೌಮ್ಯನಾಮಕರೂಪ; ಅರ್ಜುನನಲ್ಲಿದ್ದುದು ವೀರನಾಮಕರೂಪ. ಭೀಮನಂತೂ ಸಾಕ್ಷಾತ್ ವಾಯುವೇ ಆಗಿದ್ದ.

೨) ನಾಲ್ವರು ಪಾಂಡವರಲ್ಲೂ ಹೀಗೆ ವಾಯುದೇವರು ಇದ್ದುದು ಶ್ರೀಕೃಷ್ಣನ ''ಮಮ ಪ್ರಾಣಾ ಹಿ ಪಾಂಡವಾಃ'' ಎಂಬ ಮಾತಿನಿಂದಲೂ ಸ್ಫುಟಪಡುವುದು.

ಶೃಂಗಾರರೂಪಂ [೨]ಕೇವಲಂ ದರ್ಶಯಾನೋ ವಿವೇಶ ವಾಯುರ್ಯಮಜೌ ಪ್ರಧಾನಃ ।
ಶೃಂಗಾರಕೈವಲ್ಯಮಭೀಪ್ಸಮಾನಃ ಪಾಂಡುರ್ಹಿ ಪುತ್ರಂ ಚಕಮೇ ಚತುರ್ಥಮ್ ॥ ೧೩೦ ॥

---

೧. ವಾಯುರೇವ ಯುಧಿಷ್ಠಿರಾದಿಪಂಚರೂಪೀ ಜಾತ ಇತಿ ಗ್ರಂಥಾಂತರವಿರೋಧಪರಿಹಾರಾಯಾಹ – ಯುಧಿಷ್ಠಿರಾದ್ಯೇಷ್ವಿತ್ಯಾದಿನಾ । – (ತಾ.)

೨. ಕೇವಲಸ್ಯ ಭಾವಃ ಕೈವಲ್ಯಮ್ । ಶೃಂಗಾರಸ್ಯ = ಸೌಂದರ್ಯಸ್ಯ ಕೈವಲ್ಯಂ ಶೃಂಗಾರಕೈವಲ್ಯಮ್ । ಕೇವಲಂ ಶೃಂಗಾರಮಿತ್ಯರ್ಥಃ । ವಿಶೇಷಾದಿತಿ ವದತಾ ಈಷಚ್ಛೃಂಗಾರರೂಪಃ ಸಹದೇವಂ ವಿವೇಶೇತಿ ಸೂಚಿತಮ್ । ತತೋ ಭೀಮಾರ್ಜುನಯೋರತಿಸುಂದರತ್ವೇಽಪಿ ಕಠೋರಾಂಗತ್ವೇನ ಪ್ರಾಯಃ ಪ್ರಾಕೃತಜನೈಃ ರೂಪಶಾಲಿತ್ವೇನಾಕಥನಾತ್ ಕಾರಣಾತ್ । ವರವಜ್ರಕಾಯೌ ಭೀಮಾರ್ಜುನಾವೃತೇಽಪಿ ಸುಜಾತೌ= ಪಲ್ಲವವತ್ಕೋಮಲಾಂಗತ್ವೇನ ಜಾತೌ ಪುತ್ರೌ ಪಾಂಡುರೈಚ್ಛದಿತ್ಯನ್ವಯಃ ॥ – (ವಾ.)

ಅ: ಕೇವಲ ಸುಂದರರೂಪವನ್ನು ಪ್ರಕಟಪಡಿಸುತ್ತಾ ಪ್ರಧಾನವಾಯುವು ನಕುಲಸಹದೇವರಲ್ಲಿ ಪ್ರವೇಶಿಸಿದ. ಕೇವಲ ಸುಂದರರೂಪದ ಪುತ್ರನಿಗಾಗಿ ಬಯಸಿ, ಪಾಂಡು ನಾಲ್ಕನೆಯ ಪುತ್ರನನ್ನು ಬಯಸಿದ್ದನಲ್ಲವೆ!

ವಿ: ೧) ಆದರಂತೆ ನಕುಲನಲ್ಲಿ ವಾಯುವು ಶೃಂಗಾರನಾಮಕರೂಪದಿಂದ ಪ್ರವೇಶಿಸಿದ. ಪಾಂಡು ಅರ್ಜುನ ಜನಿಸಿದ ಮೇಲೆ ನಾಲ್ಕನೆಯವನಾಗಿ ರೂಪವಂತ ಮಗನೊಬ್ಬ ಜನಿಸಲಿ ಎಂದು ಅಪೇಕ್ಷಿಸಿದ್ದನಲ್ಲವೆ! ಆದರಿಂದಾಗಿ ನಾಲ್ಕನೆಯವನಾದ ನಕುಲನಲ್ಲಿ ಅಂತಹ ರೂಪದಿಂದ ಪ್ರವೇಶಿಸಿದ್ದನು ಎಂದು ಭಾವ.

೨) ಉಳಿದ ಪಾಂಡವರಲ್ಲಿ ವಾಯುದೇವರ ಸನ್ನಿಧಾನದಿಂದಾಗಿಯೇ ಅವರೆಲ್ಲ ಕೃಷ್ಣನಿಗೆ ಅತ್ಯಂತಪ್ರಿಯರಾದರು. ಸ್ವತಃ ಕೃಷ್ಣನೇ 'ಮಮ ಪ್ರಾಣಾ ಹಿ ಪಾಂಡವಾಃ' ಎಂದಿರುವನು.

ಶೃಂಗಾರರೂಪೋ[೧] ನಕುಲೇ ವಿಶೇಷಾತ್ ಸುನೀತಿರೂಪಃ ಸಹದೇವಂ ವಿವೇಶ ।
ಗುಣೈಃ ಸಮಸ್ತೈಃ ಸ್ವಯಮೇವ ವಾಯುರ್ಬಭೂವ ಭೀಮೋ ಜಗದಂತರಾತ್ಮಾ॥ ೧೩೧ ॥

ಅ: ವಿಶೇಷವಾಗಿ ಶೃಂಗಾರರೂಪನಾಗಿ ನಕುಲನಲ್ಲೂ, ಸುನೀತಿರೂಪನಾಗಿ ಸಹದೇವನಲ್ಲೂ ವಾಯುವು ಪ್ರವೇಶಿಸಿದ. ಜಗತ್ತಿನ ಅಂತರಾತ್ಮನಾದ ವಾಯುವು ಸಕಲಗುಣಗಳಿಂದ ಕೂಡಿದ ಭೀಮನಾಗಿ ಸ್ವತಃ ಜನಿಸಿದ.

ವಿ: ಗ್ರಂಥಾಂತರದಲ್ಲಿ ಯುಧಿಷ್ಠಿರಾದಿಗಳೆಲ್ಲ ಪಂಚವಾಯುಗಳು ಎಂಬುದಾಗಿ ಹೇಳಲ್ಪಟ್ಟಿರುವುದು ಈ ಹಿನ್ನೆಲೆಯಲ್ಲಿ ಎಂದು [೨]ಜನಾರ್ದನೀಯದಲ್ಲಿದೆ.

ಸುಪಲ್ಲವಾಕಾರತನುರ್ಹಿ[೩] ಕೋಮಲಃ ಪ್ರಾಯೋ ಜನೈಃ ಪ್ರೋಚ್ಯತೇ ರೂಪಶಾಲೀ ।
ತತಃ ಸುಜಾತೌ ವರವಜ್ರಕಾಯೌ ಭೀಮಾರ್ಜುನಾವಪ್ಯ ತೇ ಪಾಂಡುರೈಚ್ಛತ್ ॥ ೧೩೨ ॥

ಅ: ಎಳೆ ಚಿಗುರಿನಂತಹ ಶರೀರದ ಕೋಮಲಪುರುಷನನ್ನು ಜನ ರೂಪವಂತ ಎನ್ನುವರು. ಅದರಿಂದ ವಜ್ರಕ್ಕಿಂತ ದೃಢದೇಹದ ಭೀಮಾರ್ಜುನರು ಅಪೂರ್ವಸುರೂಪಿಗಳೇ ಆಗಿದ್ದರೂ, ಇನ್ನೊಬ್ಬ ರೂಪವಂತನಾದ ಮಗನನ್ನು ಪಾಂಡು ಬಯಸಿದ.

---

೧. ಸ್ವಯಮೇವ ಸಾಕ್ಷಾದೇವ ಅನ್ಯಾವೇಶಮಂತರೈವ ಭೀಮೋ ಬಭೂವೇತಿ ॥ – (ಸ.)

೨. ಗ್ರಂಥಾಂತರೇ ಯುಧಿಷ್ಠಿರಾದಯಃ ಪಂಚ ವಾಯವ ಇತ್ಯುಕ್ತೇರಭಪ್ರಾಯಮಾಹ । – (ಜ.)

೩. ರಾಜದಂತಾದಿತ್ವಾತ್ ಪರನಿಪಾತಃ ಪಂಚಮೀತಿಯೋಗವಿಭಾಗಾತ್ ಸಮಾಸಃ । – (ಜ.)

ವಿ: ರೂಪವಂತನಾದ ಮತ್ತೊಬ್ಬ ಮಗನನ್ನು ಪಾಂಡುರಾಜ ಬಯಸಿದ್ದಕ್ಕೆ ನಕುಲ ಜನಿಸಿದ ಎಂದಾದರೆ, ಭೀಮಾರ್ಜುನರು ಅಂತಹ ರೂಪವಂತರಲ್ಲ ಎಂಬ ಭ್ರಮೆಗೆ ಅವಕಾಶವಿದೆ. ಅದನ್ನು ಇಲ್ಲಿ ನಿರಾಕರಿಸಿರುವರು. ಭೀಮಾರ್ಜುನರು ನಕುಲನಿಗಿಂತ ಹೆಚ್ಚು ಸುಂದರರು. ಆದರೆ ಅವರು ವಜ್ರದಂತೆ ದೃಢಕಾಯರು. ಅವರದು ಕೋಮಲದೇಹವಲ್ಲ. ಜನಗಳು ರೂಪಶಾಲಿ ಎನ್ನುವುದು ವಿಶೇಷವಾಗಿ ಕೋಮಲದೇಹದವರನ್ನು. ಅದಕ್ಕಾಗಿ ಕೋಮಲದೇಹದ ನಕುಲ ಜನಿಸಿದ ಎಂದರ್ಥ.

[೧]ಅಪ್ರಾಕೃತಾನಾಂ ತು ಮನೋಹರಂ ಯದ್ರೂಪಂ [೨]ದ್ವಾತ್ರಿಂಶಲ್ಲಕ್ಷಣೋಪೇತಮಗ್ರ್ಯಮ್।
ತನ್ಮಾರುತೋ ನಕುಲೇ ಕೋಮಲಾಭ ಏವಂ ವಾಯುಃ ಪಂಚರೂಪೋಽತ್ರ ಚಾಸೀತ್ ॥೩೩

ಅ: ಸೂಕ್ಷ್ಮದೃಷ್ಟಿಯನ್ನು ಹೊಂದಿದವರಿಗೆ (ಮಾತ್ರ) ಮೂವತ್ತೆರಡುಲಕ್ಷಣಗಳಿಂದ ಕೂಡಿದ ಶರೀರ ಸುಂದರವಾಗಿ ತೋರುವುದು. ಆದ್ದರಿಂದ ವಾಯು ನಕುಲನಲ್ಲಿ ಕೋಮಲಕಾಂತಿಯವನಾಗಿ ನೆಲೆಸಿದನು. ಹೀಗೆ ವಾಯು (ಆ ಕೃಷ್ಣಾವತಾರಕಾಲದಲ್ಲಿ) ಪಂಚರೂಪನಾಗಿ ನೆಲೆಸಿದ್ದನು.

---

೧. ಅಪ್ರಾಕೃತಾನಾಂ = ಅಲೌಕಿಕಾನಾಂ । ತು = ವಿಶೇಷೇಣ ಮನೋಹರಮ್ । ದ್ವಾತ್ರಿಂಶಲ್ಲಕ್ಷಣೋಪೇತಂ ಅಗ್ರ್ಯಂ = ವಜ್ರಸಾರಾಂಗಮ್ । ಯನ್ನಿಜರೂಪಂ ತತ್ = ರೂಪಂ ಮಾರುತಃ । ಹಿರಣ್ಯಕಶಿಪೂದರವಿದಾರಣ-ಸಮಯೇ ಪ್ರದರ್ಶಿತಂ ಕಾಠಿನ್ಯಮವ್ಯಕ್ತೀಕೃತ್ಯ ರಮಾಕುಚಕುಂಭಪರಿರಂಭಣಕಾಲೇ ಮಾರ್ದವಂ ಪ್ರದರ್ಶಯ-ನ್ನರಸಿಂಹ ಇವ । ಜರಾಸಂಧಕಠೋರಾಂಗಸಂಧಿವಿದಾರಣಸಮಯವರ್ತಿಕಾಠಿನ್ಯಮವ್ಯಕ್ತೀಕೃತ್ಯ ದ್ರೌಪದೀಪರಿರಂಭ-ಸಂಭ್ರಮಸಮಯಸಂಭೂತಮಾರ್ದವಮಿವ ನಕುಲದೇಹೇಽಪಿ ಕೋಮಲಾಭಃ ಸನ್ ಪಲ್ಲವವತ್ ಮಾರ್ದವಮೇವ ದರ್ಶಯಾಮಾಸೇತಿ ಯೋಗ್ಯಕ್ರಿಯಾಧ್ಯಾಹಾರೇಣಾನ್ವಯಃ ॥ –(ವಾ.)

ವಸ್ತುತಸ್ತು ಭೀಮಾರ್ಜುನಯೋರೇತಾದೃಶಂ ರೂಪಂ ತದ್ದಿವ್ಯದೃಷ್ಟಿಗೋಚರಮೇವೇತ್ಯಾಹ – ಅಪ್ರಾಕೃತಾನಾಮಿತಿ । –(ವ.)

೨. 'ಹರಿಭಕ್ತಿರ್ಹರೇಃ ಪ್ರೀತಿರ್ಜ್ಞಾನಾನಂದಾದಯೋ ಗುಣಾಃ ।
ಅಧಿಕಾರೇ ಚ ಮುಕ್ತೌ ಚ ಬ್ರಹ್ಮವಾಯ್ವೋಶ್ಚ ತತ್ಸ್ತ್ರಿಯೋಃ ।
ಶೇಷವೀಂದ್ರಹರಾಣಾಂ ಚ ತತ್ಸ್ತ್ರೀಣಾಂ ವಾಸವಾದಿನಾಮ್ ।
ಯಥಾಕ್ರಮಂ ತು ವಿಜ್ಞೇಯಾ ಭೂಮೌ ಕಾರಣತೋಽನ್ಯಥಾ ।
ದೇಹಸ್ಯ ಲಕ್ಷಣಂ ಚೈವ ಭೂಮಾವಪ್ಯನ್ಯಥಾ ಭವೇತ್ ।
ಬ್ರಹ್ಮಾದಿಷು ಕ್ರಮೇಣೈವ ನಿತ್ಯಂ ಸ್ಯಾದ್ದೇಹಲಕ್ಷಣಮ್ ।
ಶ್ರಿಯೋಽಧಿಕಾ ಗುಣಾಃ ಸರ್ವೇ ಸರ್ವೇಭ್ಯೋ ನಿಯಮೇನ ತು ।
ಉಕ್ತಾಶ್ಚೈವಾಪ್ಯನುಕ್ತಾಶ್ಚ ತತೋ ವಿಷ್ಣೋರ್ನ ಸಂಶಯಃ' ಇತಿ ತತ್ತ್ವನಿರ್ಣಯೇ ॥ –ಭಾ.ತಾ.(೩/೧೭/೨೧)

ವಿ: ೧) ಸೂಕ್ಷ್ಮದೃಷ್ಟಿಯ ಜ್ಞಾನಿಗಳಿಗೆ ದ್ವಾತ್ರಿಂಶಲ್ಲಕ್ಷಣಗಳಿಂದ ಕೂಡಿದ ಭೀಮನೇ ಅತ್ಯಂತಸುಂದರ.ಆದರೆ ಸಾಮಾನ್ಯಜನರಿಗೆ ಅಂತಹ ಸೌಂದರ್ಯದ ಅರಿವಾಗದು. ಅದಕ್ಕಾಗಿ ವಾಯು ಕೇವಲ ಸೌಂದರ್ಯವನ್ನು ಪ್ರಕಟಿಸಲೆಂದು ನಕುಲನಲ್ಲಿ ಪ್ರವೇಶಿಸಿದ ಎಂದರ್ಥ.

೨) ವಾಯುದೇವರು ಅವತಾರರೂಪಗಳಲ್ಲೂ ದ್ವಾತ್ರಿಂಶಲ್ಲಕ್ಷಣೋಪೇತರು ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ.

ಪಾಂಡವರು ಪಂಚೇಂದ್ರರು

ಅತೀತೇಂದ್ರಾ ಏವ ತೇ ವಿಷ್ಣುಷಷ್ಠಾಃ[೧] ಪೂರ್ವೇಂದ್ರೋಽಸೌ ಯಜ್ಞನಾಮಾ ರಮೇಶಃ ।
ಸ ವೈ ಕೃಷ್ಣೋ ವಾಯುರಥ ದ್ವಿತೀಯಃ ಸ ಭೀಮಸೇನೋ ಧರ್ಮ ಆಸೀತ್ ತೃತೀಯಃ ॥

ಯುಧಿಷ್ಠಿರೋಽಸಾವಥ ನಾಸತ್ಯದಸ್ರೌ[೨] ಕ್ರಮಾತ್ ತಾವೇತೌ ಮಾದ್ರವತೀಸುತೌ ಚ ।
ಪುರಂದರಃ ಷಷ್ಠ ಉತಾತ್ರ ಸಪ್ತಮಃ ಸ ಏವೈಕಃ ಫಲ್ಗುನೋ ಹ್ಯೇತ ಇಂದ್ರಾಃ ॥೧೩೫॥

ಅ: ವಿಷ್ಣು ಹಾಗೂ ಆ ಪಂಚಪಾಂಡವರು ಸೇರಿ ಆರು ಜನ ಈ ಹಿಂದೆ ಇಂದ್ರರೇ ಆಗಿದ್ದವರು. ಯಜ್ಞನಾಮಕನಾಗಿ ಮೊದಲ ಇಂದ್ರನಾಗಿದ್ದ ರಮಾಪತಿಯಾದ ಶ್ರೀಹರಿಯೇ ಕೃಷ್ಣ. ವಾಯು ಎರಡನೆಯ ಇಂದ್ರ; ಭೀಮನಾಗಿದ್ದು ಅವನೇ. ಮೂರನೆಯ ಇಂದ್ರನೇ ಯಮಧರ್ಮ; ಅವನೇ ಈ ಯುಧಿಷ್ಠಿರ. ಬಳಿಕ ನಾಸತ್ಯ ಮತ್ತು ದಸ್ರರು ಕ್ರಮವಾಗಿ ಇಂದ್ರರಾಗಿದ್ದವರು. ಅವರೇ ಈ ಮಾದ್ರಿಯ ಮಕ್ಕಳಾದ ನಕುಲಸಹದೇವರು. ಪುರಂದರನೊಬ್ಬನೇ ಆರನೆಯ ಮತ್ತು ಏಳನೆಯ ಇಂದ್ರ; ಅವನೇ ಅರ್ಜುನ. ಹೀಗೆ ಇವರೆಲ್ಲ ಇಂದ್ರರೇ.

---

೧. ವ್ಯತ್ಯಮಸಂಖ್ಯಯಾ ವಿಷ್ಣುಃ ಷಷ್ಠೋ ಯೇಷಾಂ ತೇ ವಿಷ್ಣುಷಷ್ಠಾಃ । ಅತ ಏವ''ಪೂರ್ವೇಂದ್ರೋಽಸೌ ಯಜ್ಞನಾಮಾ ರಮೇಶಃ'' ಇತ್ಯುಕ್ತಮ್ ॥ –(ವಾ.)

ನ ಚ ಕೃಷ್ಣಸ್ಯ ಕೃಷ್ಣಕೇಶನಾಮನಾರಾಯಣಾದ್ಯಂಶತ್ವಂ ತತ್ರ ತತ್ರೋಚ್ಯತ ಇತಿ ವಿರೋಧ ಇತಿ ವಾಚ್ಯಮ್ । 'ಸರ್ವಾಂಶೋ ಹಿ ಯತಃ ಕೃಷ್ಣೋ ನ ವಿಗೀತಿರತೋ ಯಥಾ । ಚತುರ್ಮೂರ್ತೇರ್ಹರೇರಂಶೌ ನಾರಾಯಣನೃಸಿಂಹಕೌ' ಇತಿ ಅಸ್ಮಾಭಿರ್ವಿರೋಧೋದ್ಧಾರೇ ಸಮಾಹಿತತ್ವಾತ್ । –(ತಾ.)

ಇಂದ್ರೋ ಹಿ ಪ್ರಥಮೋ ವಿಷ್ಣುರ್ಯಜ್ಞನಾಮಾ ಜಗತ್ಪತಿಃ ॥
ತತ್ಪ್ರಸಾದಾದಥೇಂದ್ರತ್ವಂ ದ್ವಾದಶಾನ್ಯೇ ಪ್ರಪೇದಿರೇ ।
ಪುರಂದರಸ್ತ್ವೇಕ ಏವ ವಾಸುದೇವಪ್ರಸಾದತಃ ॥
ದ್ವಿವಾರಮಿಂದ್ರತಾಮಾಪ ತಸ್ಮಾತ್ ದ್ವಾದಶ ತೇ ಪರೇ । - ಐತರೇಯೋಪನಿಷದ್ಭಾಷ್ಯಮ್

ಏಃ ೧) ಪಾಂಡವರು ಪಂಚೇಂದ್ರರು ಎಂಬ ವಿಚಾರ ದ್ರೌಪದೀಸ್ವಯಂವರದ ಸಮಯದಲ್ಲಿ ಬರುವ ಪಂಚೇಂದ್ರೋಪಾಖ್ಯಾನದಲ್ಲಿ ಬಂದಿದೆ (ಆದಿಪರ್ವ ಅಧ್ಯಾಯ ೧೯೬). ಅದರ ಭಾವವನ್ನು ಇಲ್ಲಿ ತಿಳಿಸಿರುವರು. ಕೃಷ್ಣ ಹಾಗೂ ಪಂಚಪಾಂಡವರು ಹಿಂದೆ ಕ್ರಮವಾಗಿ ಇಂದ್ರಪದವಿಯಲ್ಲಿದ್ದವರು. ವಿಷ್ಣು ಮೊದಲ ಇಂದ್ರನಾದ ಯಜ್ಞ. ವಾಯು ಎರಡನೆಯ ಇಂದ್ರನಾದ ರೋಚನ. ಯಮ ಮೂರನೆಯ ಇಂದ್ರನಾದ ಸತ್ಯಜಿತ್ ಯಮಧರ್ಮ. ತ್ರಿಶಿಖ ಮತ್ತು ಶಂಭು ಕ್ರಮವಾಗಿ ನಾಲ್ಕನೆಯ ಹಾಗೂ ಐದನೆಯ ಇಂದ್ರರು ಅಶ್ವಿನಿದೇವತೆಗಳು. ಇವರು ಜೊತೆಯಾಗಿಯೇ ಇಂದ್ರಪದವಿಯಲ್ಲಿದ್ದರೂ, ಒಂದು ಮನ್ವಂತರದಲ್ಲಿ ತ್ರಿಶಿಖನಿಗೂ, ಮತ್ತೊಂದು ಮನ್ವಂತರದಲ್ಲಿ ಶಂಭುವಿಗೂ ಪ್ರಾಧಾನ್ಯ. ಆರನೆಯ ಇಂದ್ರ ಮಂದ್ರದ್ಯುಮ್ನ. ಆತ ಪುರಂದರನಾಮಕ ಇಂದ್ರನೇ. ಈ ಏಳನೆಯ ಮನ್ವಂತರದ ಇಂದ್ರ ಪುರಂದರ. ಈತನು ಮಂದ್ರದ್ಯುಮ್ನನಾಮಕನಾದ ಇಂದ್ರ. ಆರು ಮತ್ತು ಏಳನೆಯ ಮನ್ವಂತರಗಳಿಗೆ ಒಬ್ಬನೇ ಇಂದ್ರ ಎರಡು ಬೇರೆ ಹೆಸರುಗಳಿಂದ ಇಂದ್ರಪದವಿಯಲ್ಲಿರುವನು. ಅವನೇ ಅರ್ಜುನನಾಗಿ ಜನಿಸಿದನು.

೨) ಅಶ್ವಿನಿದೇವತೆಗಳಿಗೆ ಮೂಲರೂಪದಲ್ಲಿ ನಾಸತ್ಯ, ದಸ್ರ ಎರಡೂ ವಿಶೇಷ–ನಾಮಗಳೇ. ಅವತಾರರೂಪದಲ್ಲಿ ಮಾತ್ರ ಅವರಿಗೆ ಪ್ರತ್ಯೇಕಹೆಸರುಗಳು ಹಾಗೂ ಪ್ರತ್ಯೇಕವಾದ ಗಮನಾಗಮನಾದಿಗಳು ಎಂಬ ವಿಶೇಷಾಂಶ ವಾದಿರಾಜೀಯದಲ್ಲಿದೆ.

---

೨. ದ್ವಯೋರಪಿ ಪೃಥಜ್ನಾಮಾಭಾವಾದ್ವಿಯೋಗಾಭಾವಾಚ್ಚನಾಸತ್ಯಾವಷ್ಯಶ್ವಿನಾವೇವ । ದಸ್ರಾವಷ್ಯಶ್ವಿನಾ- ವೇವ । ತಥಾऽಪ್ಯೇಕದಾ ದ್ವಯೋರಿಂದ್ರಪದವ್ಯಾಂ ಸತ್ತ್ವೇऽಪ್ಯೇಕಸ್ಯ ಪ್ರಾಧಾನ್ಯಮ್ । ದ್ವಿತೀಯೇಂದ್ರಪದವ್ಯಾ-ಮಪರಸ್ಯ ಪ್ರಾಧಾನ್ಯಮ್ । ಯಥಾ ದ್ವಿಮಂದಿರಪ್ರಿಯಸ್ಯ ರಾಜ್ಞೋ ರಮಣಯೋಗ್ಯರತಿಮಂದಿರದ್ವಯಸ್ಥ-ಮಂಚೌ ಪ್ರಿಯಪತ್ನೀಭ್ಯಾಂ ಸಹೈವ ಶಯನನಿಯಮವತೋ ರಾಜ್ಞೋ ರಾಜ್ಞೀದ್ವಯಸ್ಯಾಪಿ ಸಮೌ । ಏಕಸ್ಮಿನ್ ದಿನೇ ಏಕಯಾ ಸಹ ರಮಣಾತ್ ಅಪರಸ್ಮಿನ್ ದಿನೇ ಅಪರಯಾ ಸಹ ರಮಣಾತ್ ತತ್ತದ್ಭಾನೌ । ಏವಮಿಂದ್ರಪದವ್ಯೌ ದ್ವೇ ಅಪಿ ದ್ವಯೋರಶ್ವಿನೋಃ ಸಮೇ । ತಥಾऽಪ್ಯೇಕೈಕಪದವ್ಯಾಮೇಕೈಕಸ್ಯ ಭಗವದ್ದತ್ತಪ್ರಾಧಾನ್ಯಾತ್ ಆದ್ಯಾ ಏಕಸ್ಯ ದ್ವಿತೀಯಾऽನ್ಯಸ್ಯೇತಿ ವಿಭಜ್ಯೋಕ್ತಿರಿತಿ ಭಾವಃ । ತಾವೇತೌ ಕ್ರಮಾತ್ = ಮಾನುಷಾವತಾರ- ಯೋಗ್ಯಕ್ರಮಾತ್ ನಕುಲಃ ಸಹದೇವ ಇತಿ ಮಾದ್ರೀಸುತೌ ಬಭೂವತುಃ । ಕ್ರಮಾದಿತಿ ವದತಾ ಮಾನುಷದೇಹೇ ಏಕಂ ವಿಹಾಯ ಏಕಸ್ತಿಷ್ಠತಿ । ಏಕಂ ವಿಹಾಯಾನ್ಯೋ ಗಚ್ಛತಿ ಏಕಂ ವಿಹಾಯಾಪರಃ ಏಕ ಏವ ಭುಂಕ್ತೇ ರಮತೇ ಪುತ್ರಮುತ್ಪಾದಯತಿ ಚೇತ್ಯಾದಿ ಮೂಲರೂಪಾದ್ವಿಲಕ್ಷಣಪ್ರಮೇಯಭೇದೋऽಪಿ ಸೂಚಿತಃ । ವಿಶೇಷ- ನಾಮಾಪ್ಯವಿಶೇಷಿತಂ ಯಯೋರಿತಿ ನಿಯಮಸ್ತು ಮೂಲರೂಪ ಏವೇತಿ ಭಾವಃ । ಪುರಂದರಃ ಷಷ್ಠ ಉತಾತ್ರ ಸಪ್ತಮಃ ಇತ್ಯತ್ರ । ಅತ್ರ ಇಂದ್ರೇಷು ಪುರಂದರಃ ಅನುಕ್ರಮಸಂಖ್ಯಯಾ ಷಷ್ಠಃ ಸಪ್ತಮ ಉತ = ಸಪ್ತಮಶ್ಚ ಮನ್ವಂತರದ್ವಯಕಾಲೇऽಪಿ ಯಃ ಪುರಂದರಃ ಏಕ ಏವೇಂದ್ರೋऽಭೂತ್ । ಸ ಪುರಂದರಃ ಫಲ್ಗುನೋऽಭೂತ್ । ಅತಃ ಷಡಿಂದ್ರಾಣಾಮಪಿ ಪಂಚೇಂದ್ರತ್ವಮ್ । ತೇ ಪಂಚಪಾಂಡವಾ ಜಾತಾಃ । ಪೂರ್ವೇಂದ್ರೋ ಯಜ್ಞಸ್ತುಕೃಷ್ಣೋ ಬಭೂವೇತಿ ವಿವೇಕಃ ॥

– (ವಾ.)

....ನಾಸತ್ಯದಸ್ರೌ ಅಶ್ವಿನೌ ಕ್ರಮಾತ್ ಕ್ರಮೇಣ ಏಕ ಚತುರ್ಥ ಇಂದ್ರ ಅಪರಃ ಪಂಚಮ ಇಂದ್ರ ಇತ್ಯರ್ಥಃ ।

– (ಜ.)

೩) ಹೀಗೆ ಇವರೆಲ್ಲ ಇಂದ್ರಪದವಿಯಲ್ಲಿ ಇದ್ದವರಾದರೂ, ತಾರತಮ್ಯದಲ್ಲಿ ಮಾತ್ರ ಅವರ ಸ್ವರೂಪದ ಯೋಗ್ಯತೆಯೇ ಮುಖ್ಯವಾದುದು. ಇಂದ್ರಪದವಿಯಲ್ಲಿ ವಿಷ್ಣುವಿದ್ದಾಗ ಇಂದ್ರ ಸರ್ವೋತ್ತಮನೂ ಹೌದು. ಈ ಅಭಿಪ್ರಾಯದಿಂದಲೇ ಋಗ್ವೇದದ ಇಂದ್ರಸರ್ವೋತ್ತಮತ್ವಪ್ರತಿ-ಪಾದಕಶ್ರುತಿಗಳು ಹೊರಟಿವೆ ಎಂದು ತಿಳಿಯಬೇಕು. ಅದರಂತೆ ರೋಚನನಾಮಕನಾದ ಇಂದ್ರ ವಾಯುಪದವಿಯಲ್ಲಿದ್ದಾಗ ಆತ ಜೀವೋತ್ತಮನೇ. ಅದರಂತೆ ಇಂದ್ರಪದವಿಗಿಂತ ಕಡಿಮೆಯವರಾದ ಯಮಧರ್ಮ ಮೊದಲಾದವರು ಇಂದ್ರಪದವಿಯಲ್ಲಿದ್ದಾಗಲೂ, ಅವರದು ಸ್ವರೂಪದ ತಾರತಮ್ಯವೇ. ಇಂದ್ರಕಾಮರು ಸಮ ಎಂಬ ಪ್ರಮೇಯ ಆರು ಮತ್ತು ವಿಳನೆಯ ಇಂದ್ರನಾದ ಪುರಂದರನಿಗೆ ಮಾತ್ರ ಅನ್ವಯಿಸುವಂತಹುದು. ಈ ವಿಶೇಷಗಳನ್ನು ಗ್ರಂಥಾಂತರಗಳಿಂದ ತಿಳಿಯಬೇಕು.

ಪಾಂಡವರು ಶ್ರುತಿಪ್ರತಿಪಾದ್ಯರು

ಕ್ರಮಾತ್ ಸಂಸ್ಕಾರಾನ್ ಕ್ಷತ್ರಿಯಾಣಾಮವಾಪ್ಯ ತೇऽವರ್ಧಂತ ಸ್ವತವಸೋ ಮಹಿತ್ವನಾ।
ಸರ್ವೇ ಸರ್ವಜ್ಞಾಃ ಸರ್ವಧರ್ಮೋपಪನ್ನಾಃ ಸರ್ವೇ ಭಕ್ತಾಃ ಕೇಶವೇऽತ್ಯಂತಯುಕ್ತಾಃ ೧೩೬

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಶ್ರೀಕೃಷ್ಣಾವತಾರಪಾಂಡವೋತ್ಪತ್ತಿರ್ನಾಮ ದ್ವಾದಶोऽಧ್ಯಾಯಃ ॥ ೧೨ ॥

ಅ: ಅವರೆಲ್ಲ ಕ್ರಮವಾಗಿ ಕ್ಷತ್ರಿಯೋಚಿತಸಂಸ್ಕಾರಗಳನ್ನು ಹೊಂದಿ, ತಮ್ಮ ಸ್ವರೂಪಭೂತ-ಸಾಮರ್ಥ್ಯವನ್ನು ಹೊಂದಿದವರಾಗಿ ಮಹಿಮೆಯಿಂದ ಅಭಿವೃದ್ಧಿ ಹೊಂದಿದರು. ಅವರೆಲ್ಲರೂ ಸರ್ವಜ್ಞರು. ವಿಷ್ಣುಪ್ರೀತಿಕರವಾದ ಸ್ವವಿಹಿತಧರ್ಮಗಳಲ್ಲಿ ತೊಡಗಿಕೊಂಡಿದ್ದವರು. ಎಲ್ಲರೂ ಬ್ರಹ್ಮರುದ್ರಪ್ರವರ್ತಕನಾದ ಕೃಷ್ಣನಲ್ಲಿ ಪರಮಭಕ್ತರು ಹಾಗೂ ಅವನಲ್ಲೇ ಮನಸ್ಸನ್ನು ತೊಡಗಿಸಿದ್ದವರು.

ವಿ: 'ತೇऽವರ್ಧಂತ ಸ್ವತವಸೋ ಮಹಿತ್ವನಾ' ಎಂಬ ಈ ಶ್ಲೋಕದ ಎರಡನೆಯ ಪಾದ ಆಶ್ವಲಾಯನಶಾಖೆಯ[೧] ಶ್ರುತಿ. ಇದನ್ನು ಉದಾಹರಿಸುವ ಮೂಲಕ ಪಾಂಡವರು ಶ್ರುತಿಪ್ರತಿಪಾದ್ಯರು ಎಂಬುದಾಗಿ ನಿರೂಪಿಸಿರುವರು.

೨) ಶ್ರುತಿವಾಕ್ಯವನ್ನು ಹೀಗೆ ಉದಾಹರಿಸುವ ಮೂಲಕ ತಾವು ತಿಳಿಸಿದ ನಿರ್ಣಯವೆಲ್ಲ ವೇದೋಕ್ತವಾದದ್ದು ಎಂದು ಶ್ರೀಮದಾಚಾರ್ಯರು ಸೂಚಿಸಿರುವರು ಎಂದು [೨]ವರದರಾಜೀಯ.

---

೧. ಸ್ವತವಸಃ ಸ್ವರೂಪಭೂತಸಾಮರ್ಥ್ಯವಂತಃ । .... ಆಶ್ವಲಾಯನಶಾಖಾಯಾಂ ವಿದ್ಯಮಾನಶ್ರುತಿ-ರಧ್ಯಾಯಾಂತೇ ಉದಾಹೃತಾ । – (ಜ.)

೨. ಉಕ್ತಾರ್ಥಸ್ಯ ವೇದೋಕ್ತತ್ವಸೂಚನಾರ್ಥಂ ವೈದಿಕಃ ಪಾದೋऽಂತೇ ಪಠಿತಃ । – (ವ.)

೩) ಶ್ರುತಿವಾಕ್ಯವನ್ನು ಶ್ಲೋಕಪಾದವನ್ನಾಗಿ ಬಳಸುವ ಮೂಲಕ ಶ್ರೀಮದಾಚಾರ್ಯರು ತಮ್ಮ ಗ್ರಂಥ ಶ್ರುತಿತುಲ್ಯವೆಂದು ತಿಳಿಸಿರುವರು ಎಂದು [೧]ವಾದಿರಾಜೀಯ.

೪) ಇದು ಸಮಗ್ರಶ್ರುತಿ (ಋ. ೧/೮೫/೭) :

ತೇऽವರ್ಧಂತ ಸ್ವತವಸೋ ಮಹಿತ್ವನಾ ನಾಕಂ ತಸ್ಥುರುರು ಚಕ್ರಿರೇ ಸದಃ ।
ವಿಷ್ಣುರ್ಯದ್ಧಾವದ್ವೃಷಣಂ ಮದಚ್ಯುತಂ ವಯೋ ತ ಸೀದನ್ನಧಿ ವರ್ಹಿಷಿ ಪ್ರಿಯೇ ॥

''ಯಾರು ಇಂದ್ರಪದವಿಯಲ್ಲಿ ಕುಳಿತು ಸ್ವರ್ಗವನ್ನು ಪಾಲಿಸಿದರೊ, ಅವರೇ ಪಾಂಡವರಾಗಿ ತಮ್ಮ ಸ್ವಂತಸಾಮರ್ಥ್ಯದಿಂದ ಅಭಿವೃದ್ಧಿ ಹೊಂದಿದರು'' ಎಂಬುದು ಶ್ರುತಿಯ ತಾತ್ಪರ್ಯ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಶ್ರೀಕೃಷ್ಣಾವತಾರಪಾಂಡವೋತ್ಪತ್ತಿ' ಎಂಬ ಹನ್ನೆರಡನೆಯ ಅಧ್ಯಾಯ ಮುಗಿಯಿತು ॥ ೧೨ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

---

೧. ''ತೇऽವರ್ಧಂತ ಸ್ವತವಸೋ ಮಹಿತ್ವನಾ'' ಇತಿ ಶ್ರುತೇಃ ಪಾದಂ ಸ್ವಶ್ಲೋಕೇ ಪಾದತ್ವೇನ ಕಥಯತಾऽऽಚಾರ್ಯೇಣ ಸ್ವಗ್ರಂಥಸ್ಯ ಛಂದಃ ಸಮಾನತಾ ಸೂಚಿತಾ । ನಹಿ ಸೌವರ್ಣಸರ್ವಾಂಗಂ ವಿನಾ ಪಾದಮಾತ್ರಂ ಸೌವರ್ಣಂ ಕ್ವಾಪಿ ದೃಷ್ಟಮ್ । ಅತಃ ಶ್ಲೋಕೈಕಪಾದಸ್ಯ ಶ್ರೌತತ್ವೇ ಸರ್ವೋऽಪಿ ಶ್ಲೋಕಃ ಶ್ರುತಿಸಮಾನ ಏವೇತಿ ಕಥಂ ನ ಸಿದ್ಧೇದಿತಿ ಭಾವಃ । ಪಂಚಪಾಂಡವಾನಾಂ ಪೂರ್ವೇಂದ್ರತ್ವಂ ಶ್ರೌತಮಿತ್ಯಪಿ ಸೂಚಿತಮ್ । ತಥಾಹಿ —

ತೇऽವರ್ಧಂತ ಸ್ವತವಸೋ ಮಹಿತ್ವನಾ ನಾಕಂ ತಸ್ಥುರುರು ಚಕ್ರಿರೇ ಸದಃ ।
ವಿಷ್ಣುರ್ಯದ್ಧಾವದ್ ವೃಷಣಂ ಮದಚ್ಯುತಂ ವಯೋ ತ ಸೀದನ್ನಧಿ ವರ್ಹಿಷಿ ಪ್ರಿಯೇ ॥
— ಋ.(೧/೮೫/೭)

ಯೇ ನಾಕಂ ತಸ್ಥುಃ = ಸ್ಥಾಪಯಾಮಾಸುಃ ಪಾಲಯಾಮಾಸುರಿತಿ ಯಾವತ್ । ಯೇ ತಂ ನಾಕಂ ಉರುಸದಃ ಸಭಾಂ ಚಕ್ರಿರೇ । ವಿಷ್ಣುಃ । ವಿಷ್ಣುರೂಪೀ ವಾಮನಃ ವೃಷಣಂ ಸರ್ವಾಭೀಷ್ಟವರ್ಷಣಸಮರ್ಥಃ ಮದಚ್ಯುತಂ ಐಶ್ವರ್ಯಮದೇನ ಚ್ಯುತಂ, ಶಕ್ರೇಣಾಹಂಕಾರೇ ಕೃತೇ ಸತಿ ದುರ್ವಾಸಸಃ ಶಾಪೇನ ಚ್ಯುತಮಿತ್ಯರ್ಥಃ । ಯತ್ ನಾಕಸ್ಥಾನಮ್ । ಆವತ್ ''ಅವ ರಕ್ಷಣ'' ಇತಿ ಧಾತೋಃ ಅರಕ್ಷತ್ । ಹ ಪ್ರಸಿದ್ಧಮ್ । ಯೇ ವಯಃ ವೀತ್ಯುಪಸರ್ಗಸ್ಯ ವಿಶಿಷ್ಟವಾಚಕತ್ವಾತ್ । ವಿಃ ವೀ ವಯ ಇತಿ ರೂಪನಿಷ್ಪತ್ತ್ಯಾ ವಯಃ ಶ್ರೇಷ್ಠಾಃ ಪ್ರಿಯೇ ಅಧಿ ಅಧಿಕೇ । ಬರ್ಹಿಷಿ = ಯಜ್ಞಬರ್ಹಿಷಿ । ನಸೀದನ್ = ಅಸೀದನ್ । ''ಷದಲೃ ವಿಶರಣಗತ್ಯವಸಾದನೇಷು'' ಇತಿ ಧಾತೋಃ । ದೈತ್ಯೈರ್ವಿಘ್ನೇ ಕೃತೇऽಪಿ ಅವಸನ್ನಾಃ ವಿಷಣ್ಣಾಃ ಆಸನ್ನಿತ್ಯರ್ಥಃ । ''ತನು ವಿಸ್ತಾರ'' ಇತಿ ಧಾತೋಃ ಭಾವಾರ್ಥೇ ಔಣಾದಿಕೇ ಡಸನ್ಪ್ರತ್ಯಯೇ ಕೃತೇ ಡಿತಿ ಚೇತಿ ಟೇರ್ಲೋಪೇ ಚ ಕೃತೇ ಸತಿ ರುತ್ವವಿಸರ್ಗೇ ಚ ಕೃತೇ ತವೋ ವಿಸ್ತಾರಃ । ಸ್ವತವಸಃ = ಸ್ವಭಾವೇನೈವ ತವಃ ವಿಸ್ತಾರೋ ಯೇಷಾಂ ತೇ ಸ್ವತವಸಃ । ಭೂಮೌ ಕುಂತೀಮಾದ್ರ್ಯೋರ್ಜಾತಾಃ । ತೇ ಪಂಚೇಂದ್ರಾಃ । ಮಹಿತ್ವನಾ = ಮಹಿಮ್ನಾ । ಅವರ್ಧಂತ = ದಿನೇದಿನೇ ಅಭಿವೃದ್ಧಿಂ ಪ್ರಾಪ್ತಾ ಇತ್ಯರ್ಥಪರ್ಯಾಲೋಚನಯಾ ಪಂಚಪಾಂಡವಾನಾಮಪಿ ಪಂಚೇಂದ್ರತಾಯಾಃ ಸ್ವಪ್ನತ್ವಾದಿತಿ ಗ್ರಂಥಕಾರಸ್ಯ ಭಾವಃ । ಯುಕ್ತಾಃ = ಮನೋಯೋಗಯುಕ್ತಾಃ ॥ — (ವಾ.)

ಅಧ್ಯಾಯ - ೧೩

(ಕಂಸವಧಃ)

(ಶ್ರೀಕೃಷ್ಣನ ಬಾಲಲೀಲೆಗಳು - ಕಂಸವಧಪರ್ಯಂತ)

ಗರ್ಗಮುನಿಯಿಂದ ಕೃಷ್ಣರಾಮರಿಗೆ ಕ್ಷತ್ರಿಯೋಚಿತಸಂಸ್ಕಾರಗಳು

ಗರ್ಗಃ ಶೂರಸುತೋಕ್ತ್ಯಾ ವ್ರಜಮಾಯತ್ ಸಾತ್ತ್ವತಾಂ ಪುರೋಧಾಃ ಸಃ ।
ಚಕ್ರೇ ಕ್ಷತ್ರಿಯಯೋಗ್ಯಾನ್ ಸಂಸ್ಕಾರಾನ್ ಕೃಷ್ಣರೋಹಿಣೀಸೂನ್ವೋಃ ॥ ೧ ॥

ಅ: [೧]ಗರ್ಗಮುನಿ ವಸುದೇವನ ಮಾತಿನಿಂದ ಗೋಕುಲಕ್ಕೆ ತೆರಳಿದ. ಅವನು ಯಾದವರ ಪುರೋಹಿತ. ಕೃಷ್ಣ, ಬಲರಾಮರಿಗೆ ಕ್ಷತ್ರಿಯಯೋಗ್ಯವಾದ ಸಂಸ್ಕಾರಗಳನ್ನು ನಡೆಸಿದ.

ವಿ: ೧) ಗರ್ಗಮುನಿ ಯಾದವರ ಪುರೋಹಿತ. ಸಾತ್ವತರು ಯಾದವರ ಒಂದು ಒಳಪಂಗಡ–ವಾದರೂ, ಯಾದವರು ಎಂಬ ಅರ್ಥದಲ್ಲಿಯೇ ಬಳಸಲ್ಪಡುತ್ತದೆ. ಗರ್ಗಮುನಿಯನ್ನು ವಸುದೇವ ಗೋಕುಲಕ್ಕೆ ಬಲರಾಮಕೃಷ್ಣರಿಗೆ ಕ್ಷತ್ರಿಯೋಚಿಸಂಸ್ಕಾರಗಳನ್ನು ನಡೆಸಲೆಂದು ಕಳುಹಿಸಿದ. ಹಾಗೆ ಕಳುಹಿಸುವಾಗ ಅವರಿಬ್ಬರೂ ತನ್ನ ಮಕ್ಕಳೆಂಬುದನ್ನು ತಿಳಿಸಿ, ಕ್ಷತ್ರಿಯೋಚಿತಸಂಸ್ಕಾರಗಳನ್ನೇ ನಡೆಸಲು ಅವರಿಗೆ ಕೇಳಿಕೊಂಡ. ಅದರಂತೆ ಅವರಿಬ್ಬರಿಗೂ ಜಾತಕರ್ಮಾದಿಸಂಸ್ಕಾರಗಳನ್ನು ನಡೆಸಿದರು.

೨) ಕ್ಷತ್ರಿಯನಾದ ಕರ್ಣ ಸೂತಪುತ್ರನಾಗಲು ಅವನಿಗೆ [೨]ಕ್ಷತ್ರಿಯೋಚಿತಸಂಸ್ಕಾರಗಳು ನಡೆಯದೆ, ಸೂತೋಚಿತಸಂಸ್ಕಾರಗಳೇ ನಡೆದದ್ದು ಕಾರಣ; ಅದರಂತೆ ವೈಶ್ಯರಾದ ನಂದಗೋಪ, ಯಶೋದೆಯರ ಬಳಿ ಬೆಳೆದ ಕೃಷ್ಣ ಬಲರಾಮರು ವೈಶ್ಯರಾಗಬಹುದಲ್ಲ ಎಂಬ ಆಕ್ಷೇಪಕ್ಕೆ ಇದು ಪರಿಹಾರವಾಗಿದೆ. ಕೃಷ್ಣರಾಮರಿಗೆ ಗರ್ಗಮುನಿಯಿಂದ ಕ್ಷತ್ರಿಯೋಚಿತಸಂಸ್ಕಾರಗಳೇ ನಡೆದದ್ದರಿಂದ ಅವರು ಕ್ಷತ್ರಿಯರೆನ್ನಿಸಿದರೇ ಹೊರತು, ವೈಶ್ಯರೆನ್ನಿಸಲಿಲ್ಲ. ಕರ್ಣನಿಗೆ ಹಾಗಾಗದ್ದರಿಂದ ಅವನು ಕ್ಷತ್ರಿಯನೆನ್ನಿಸಲಿಲ್ಲ.

---

೧. 'ಅಕ್ಷತ್ರಸಂಸ್ಕಾರಯುತೋ ಜಾತೋಽಪಿ ಕ್ಷತ್ರಿಯೇ ಕುಲೇ। ನ ಕ್ಷತ್ರಿಯೋ ಹಿ ಭವತಿ ಯಥಾ ವ್ರಾತ್ಯೋ ದ್ವಿಜೋತ್ತಮ' ಇತಿ ಸ್ಮರಣಾತ್ತ್ವಾರಸಪುತ್ರಬುದ್ಧ್ಯಾ ವಸುದೇವಪುತ್ರೋಽಯಮಿತ್ಯಜಾನತೋ ನಂದಗೋಪಾತ್ಪ್ರಾಪ್ತ-ವೈಶ್ಯಯೋಗ್ಯಸಂಸ್ಕಾರಸ್ಯ ಕೃಷ್ಣಸ್ಯಾಕ್ಷತ್ರಿಯತ್ವಂ ಸ್ಯಾದಿತ್ಯಾಶಂಕಾಪನುತ್ಯರ್ಥಂ ಕೃಷ್ಣಬಲಭದ್ರಯೋರ್ಗರ್ಗೋ ರಹಃ ಕ್ಷತ್ರಿಯಯೋಗ್ಯಸಂಸ್ಕಾರಾನ್ ಚಕ್ರ ಇತ್ಯಾಹ– ಗರ್ಗ ಇತ್ಯಾದಿನಾ। – (ಜ.)

೨. ಅಲಕ್ಷಿತೇಽಸ್ಮಿನ್ ರಹಸಿ ಮಾಮಕೈರಪಿ ಗೋವ್ರಜೇ।
ಕುರು ದ್ವಿಜಾತಿಸಂಸ್ಕಾರಂ ಸ್ವಸ್ತಿವಾಚನಪೂರ್ವಕಮ್ ॥ –ಭಾಗವತ(೧೦/೮/೧೦)

ಗರ್ಗಮುನಿಯಿಂದ ಕೃಷ್ಣನ ಸ್ವರೋಪೋದ್ಘಾಟನೆ

ಊಚೇ ನಂದ ಸುತೋಽಯಂ ತವ ವಿಷ್ಣೋರ್ನಾವಮೋ[೧] ಗುಣೈಃ ಸರ್ವೈಃ ।
ಸರ್ವೇ ಚೈತತ್ ತ್ರಾತಾಃ ಸುಖಮಾಪ್ಸ್ಯಂತ್ಯುನ್ನತಂ ಭವತ್ಪೂರ್ವಾಃ ॥ ೨ ॥

ಅ: ಗರ್ಗಮುನಿ ತಿಳಿಸಿದ : ''ನಂದ! ನಿನ್ನ ಈ ಪುತ್ರ ಯಾವ ಗುಣಗಳಲ್ಲೂ ವಿಷ್ಣುವಿಗಿಂತ ಕಡಿಮೆಯಲ್ಲದವನು. ನೀವೆಲ್ಲರೂ ಇವನಿಂದ ಪಾಲಿತರಾಗಿ ಉನ್ನತವಾದ ಸುಖವನ್ನು ಪಡೆಯಲಿರುವಿರಿ''.

ವಿ: ಕೃಷ್ಣನನ್ನು ಸಾಕ್ಷಾತ್ ವಿಷ್ಣುವಿಗೆ ಸಕಲಗುಣಗಳಿಂದಲೂ ಕಡಿಮೆಯಲ್ಲದವನು ಎಂದರೆ ಸಮ ಎಂದು ತಿಳಿಸಿದರು. ವಿಷ್ಣುವಿಗೆ ಸಮ ಬೇರಾರೂ ಇಲ್ಲ. ಆದ್ದರಿಂದ ಕೃಷ್ಣ ವಿಷ್ಣುವೆಂದೇ ಅರ್ಥ.

ಕೃಷ್ಣರಾಮರ ಗೋಕುಲಸಂಚಾರ

ಇತ್ಯುಕ್ತಃ ಪ್ರಮುಮೋದ ಪ್ರಯಯೌ ಗರ್ಗೋಽಪಿ ಕೇಶವೋಽಥಾದ್ಯಃ ।
ಸ್ವಪದೈರಗ್ರಜಯುಕ್ತಶ್ಚಕ್ರೇ ಪುಣ್ಯಂ ವ್ರಜನ್ ವ್ರಜೋದ್ದೇಶಮ್[೨] ॥ ೩ ॥

ಅ: ಅವರು ಹೀಗೆ ಹೇಳಲು ನಂದ ಬಹಳವಾಗಿ ಆನಂದಿಸಿದ. ಗರ್ಗಮುನಿ ಹೊರಟುಬಿಟ್ಟ. ಅನಂತರ ಆದಿಪುರುಷನಾದ ಶ್ರೀಕೃಷ್ಣ ಅಣ್ಣನೊಂದಿಗೆ ಕೂಡಿ, ತನ್ನ ಪಾದಗಳಿಂದ ಸಂಚರಿಸುತ್ತಾ ಆ ಗೋಕುಲಪ್ರದೇಶವನ್ನು ಪಾವನಗೊಳಿಸಿದ.

ಮತ್ತೊಮ್ಮೆ ವಿಶ್ವರೂಪಪ್ರದರ್ಶನ

ಸ ಕದಾಚಿಚ್ಛಿಶುಭಾವಂ[೩] ಕುರ್ವಂತ್ಯಾ ಮಾತುರಾತ್ಮನೋ ಭೂಯಃ ।
ಅಪನೇತುಂ ಪರಮೇಶೋ ಮೃದಂ ಜಘಾಸೇಕ್ಷತಾಂ ವಯಸ್ಯಾನಾಮ್ ॥ ೪ ॥

---

೧. ವಿಷ್ಣೋಃ ಸಮಾಧಿಕರಹಿತತ್ವಾತ್ ತತ್ಸಮಃ ಸ ಏವೇತಿ ಭಾವಃ । – (ಜ.)

ನಾರಯೋಽಭಿಭವಂತ್ಯೇತಾನ್ ವಿಷ್ಣುಪಕ್ಷಾನಿವಾಸುರಾಃ ॥
ತಸ್ಮಾನ್ನಂದಾತ್ಮಜೋಽಯಂ ತೇ ನಾರಾಯಣಸಮೋ ಗುಣೈಃ । –ಭಾಗವತ(೧೦/೮/೧೮, ೧೯)

೨. ಕದಾಚಿದ್ವಾಯುವಾಹನತ್ವೇಽಪಿ ಅನ್ಯದಾ ಸ್ವಪದೈರ್ಗಮನೋಪಪತ್ತೇಃ । ವಸ್ತುತಸ್ತು ವಾಯ್ವಾರೂಢಸ್ಯಾಪ್ಯೈಶ್ವರ್ಯವಶಾತ್ ಸ್ವಪದೈರ್ಗಮನಂ ಸಂಭವತಿ । ಅನ್ಯಥಾ ತದಾನೀಂತನಾನಾಂ ಕೃಷ್ಣೋ ಭುವಿ ಸ್ವಪದೈರ್ಗತ ಇತಿ ಪ್ರತ್ಯಯಸ್ಯ ಭ್ರಮತ್ವಾಪತ್ತೇಃ । – (ತಾ.)

ಅ: ಒಮ್ಮೆ ತನ್ನನ್ನು ಶಿಶುವೆಂದು ಬಗೆದಿದ್ದ ತಾಯಿ ಯಶೋದೆಗೆ ಆ ಭ್ರಮೆಯನ್ನು ಕಳೆಯಲೆಂದು ಸರ್ವೇಶನಾದ ಶ್ರೀಕೃಷ್ಣ ಓರಿಗೆಯವರು ನೋಡುತ್ತಿದ್ದಂತೆಯೇ ಮಣ್ಣನ್ನು ತಿಂದುಬಿಟ್ಟ.

ಮಾತ್ರೋಪಾಲಬ್ಧ ಈಶೋ ಮುಖವಿವೃತಿಮಕರ್ನಾಂಬ ಮೃದ್ಭಕ್ಷಿತಾऽಹಂ
ಪಶ್ಯೇತ್ಯಾಸ್ಯಾಂತರೇ ತು ಪ್ರಕೃತಿವಿಕೃತಿಯುಕ್ ಸಾ ಜಗತ್ ಪರ್ಯಪಶ್ಯತ್।
ಇತ್ಥಂ ದೇವೋऽಪ್ಯಚಿಂತ್ಯಾಮಪರದುರಧಿಗಾಂ ಶಕ್ತಿಮುಚ್ಚಾಂ ಪ್ರದರ್ಶ್ಯ
ಪ್ರಾಯೋ ಜ್ಞಾತಾತ್ಮತತ್ತ್ವಂ ಪುನರಪಿ ಭಗವಾನಾವೃಣೋದಾತ್ಮಶಕ್ತ್ಯಾ ॥ ೫ ॥

ಅ: ತಾಯಿ ಬೈದಾಗ ಕೃಷ್ಣ ''ಅಮ್ಮ! ನಾನೇನೂ ಮಣ್ಣು ತಿಂದಿಲ್ಲ ನೋಡು'' ಎಂದು ತನ್ನ ಬಾಯ್ತೆರೆದ. ಅವನ ಬಾಯೊಳಗೆ ಮೂಲಪ್ರಕೃತಿ ಹಾಗೂ ಅದರ ಕಾರ್ಯ(ಮಹತ್ತತ್ತ್ವಾದಿ)-ಗಳಿಂದ ಕೂಡಿದ ವಿಶ್ವವನ್ನು ಅವಳು ಕಂಡಳು. ಹೀಗೆ ದೇವರಾದ ಶ್ರೀಕೃಷ್ಣನು ಬೇರಾರೂ ತಿಳಿಯಲಾಗದ ಅಚಿಂತ್ಯವಾದ ತನ್ನ ಉತ್ಕೃಷ್ಟಶಕ್ತಿಯನ್ನು ಪ್ರದರ್ಶಿಸಿ, ತನ್ನ ಸ್ವರೂಪ-ಸಾಮರ್ಥ್ಯವನ್ನು ಅವಳು ಬಹಳವಾಗಿ ಅರಿಯುತ್ತಿದ್ದಂತೆಯೇ ಮತ್ತೆ ತನ್ನ ಶಕ್ತಿಯಿಂದ ಅದನ್ನು ಮರೆಮಾಡಿದ.

ವಿ: ೧) ಇಲ್ಲಿ 'ಅಕಃ' ಎಂಬುದು 'ಅಕರೋತ್' ಎಂಬ ಅರ್ಥದಲ್ಲಿನ [೧]ವೈದಿಕಪ್ರಯೋಗ.

---

೩. ಶಿಶುಭಾವಂ ಶಿಶುರಿತಿ ಭಾವಂ ಬುದ್ಧಿಂ ಭ್ರಮಮಿತಿ ಯಾವತ್ । ಕುರ್ವಂತ್ಯಾಃ ಮಾತುಃ । ಆತ್ಮನೋ ಮಾತುಃ ಶಿಶುಭಾವಮಪನೇತುಮಿತ್ಯಾವೃತ್ತ್ಯಾ ಯೋಜನಾ ॥ – (ವಾ.)

ಹರೇಃ ಶುಭಭೋಕ್ತೃತ್ವಾತ್ ಮೃದ್ಭಕ್ಷಣಸ್ಯ ಮದ್ಯಪಾನಸಮತ್ವಾತ್ ..... – (ಶ್ರೀ.)

ಕೇಚಿತ್ ತು ಮೃದಂ ಜಘಾಸೇವ ನ ತು ಜಘಾಸೇತ್ಯಾಹುಃ । ತಥಾ ಸತಿ 'ಜಘಾಸ ಮೃತ್ತಿಕಾಂ ದೇವಃ ಕದಾಚಿಲ್ಲೀಲಯಾ ಹರಿಃ' ಇತ್ಯುಕ್ತಿವಿರೋಧಃ । – (ರಾ.)

೧. ಅಕಃ ಅಕರೋದಿತಿ ವೈದಿಕಂ ಪದಮ್ । ''ಇಷ ಇಷ್ಟವ್ರತಾ ಅಕಃ'' ಇತಿ ಶ್ರುತೌ ಪ್ರಯೋಗಪ್ರದರ್ಶನಾತ್ । ಪ್ರಕೃತಿಃ = ಮೂಲಪ್ರಕೃತಿಃ । ವಿಕೃತಿಃ = ತತ್ಕಾರ್ಯಾಣಿ ಮಹದಾದೀನಿ ॥ – (ವಾ.)

ವೈಷ್ಣವೀಂ ವ್ಯತನೋನ್ಮಾಯಾಂ ಪ್ರಜಾಸ್ನೇಹಮಯೀಂ ಪ್ರಭುಃ ।
ಸದ್ಯೋನಷ್ಟಪ್ರತಿಗೋರ್ಮೀ ಸಾऽऽರೋಪ್ಯಾರೋಹಮಾತ್ಮಜಮ್ ।
ಪ್ರವೃದ್ಧಸ್ನೇಹಕಲಿಲಹೃದಯಾ ಸಾ ಯಥಾ ಪುರಾ ॥' – ಇತಿ ಭಾಗವತವಾಕ್ಯಾದುಕ್ತಾರ್ಥೋऽವಗಂತವ್ಯಃ । ಯದ್ವಾ ಪ್ರಾಯಃ ಪುನರಪಿ ಜ್ಞಾತಂ ಆತ್ಮತತ್ತ್ವಂ ಸ್ವಸ್ವರೂಪಂ ಯಸ್ಯಾಃ ಶಕ್ತೇಃ ಸಕಾಶಾತ್ ತಥಾ ತಾದೃಶೀಂ ಶಕ್ತಿಂ ಆತ್ಮಶಕ್ತ್ಯಾ ಸ್ವಸಾಮರ್ಥ್ಯೇನ ಆವೃಣೋತ್ ಜುಗೂಹ । – (ಜ.)

೨) 'ನಾಂಬ ಮೃದ್ಭಕ್ಷಿತಾಹಮ್' ಎಂಬುದಕ್ಕೆ ಮೂಲವಾದ ಭಾಗವತಶ್ಲೋಕ ಹೀಗಿದೆ :

'ನಾಹಂ ಭಕ್ಷಿತವಾನಂಬ ಸರ್ವೇ ಮಿಥ್ಯಾಭಿಶಂಸಿನಃ ।
ಯದಿ ಸತ್ಯಗಿರಸ್ತರ್ಹಿ ಸಮಕ್ಷಂ ಪಶ್ಯ ಮೇ ಮುಖಮ್ ॥'

– ಭಾಗವತ(೧೦/೮/೩೫)

ಇಲ್ಲಿಯ ಈ ಶ್ಲೋಕಕ್ಕೆ [೧]ಶ್ರೀಸತ್ಯಧರ್ಮತೀರ್ಥರು 'ಅಂಬ ಅಹಂ ನಾ ಮೃದ್ಭಕ್ಷಿತವಾನ್' (ಅಮ್ಮ ನಾನು ಪರಮಪುರುಷನಾದ ಶ್ರೀಹರಿ; ನಾನು ಮಣ್ಣುತಿಂದಿದ್ದು ಹೌದು) ಎಂದು ಅರ್ಥ ಮಾಡಿ, ಅದರಿಂದ ಕೃಷ್ಣ ಎಂದೂ ಸುಳ್ಳು ಹೇಳದ ಸತ್ಯಸಂಧ ಎಂದು ಸಮರ್ಥಿಸಿರುವರು.

೩) ಇದು ಶ್ರೀಕೃಷ್ಣನು ವಿಶ್ವರೂಪ ತೋರಿಸಿದ ಮತ್ತೊಂದು ಪ್ರಸಂಗ.

ಇತಿ ಪ್ರಭುಃ ಸ ಲೀಲಯಾ ಹರಿರ್ಜಗದ್ವಿಡಂಬಯನ್ ।
ಚಚಾರ ಗೋಷ್ಠಮಂಡಲೇऽಪ್ಯನಂತಸೌಖ್ಯಚಿದ್ಘನಃ ॥ ೬ ॥

ಹೀಗೆ ಪ್ರಭುವಾದ ಶ್ರೀಕೃಷ್ಣನು ತಾನು ಅನಂತಜ್ಞಾನಾನಂದಸ್ವರೂಪನಾದರೂ, ಲೋಕವನ್ನು ಅನುಕರಣೆ ಮಾಡುತ್ತಾ ಲೀಲೆಯಿಂದ ಗೋಕುಲದ ನೆಲದಲ್ಲಿ ಸಂಚರಿಸಿದ.

ಗಡಿಗೆ ಒಡೆದು ಬೆಣ್ಣೆ ಮೆದ್ದ ಮಹಿಮೆ

ಕದಾಚಿದೀಶ್ವರಃ ಸ್ತನಂ ಪಿಬನ್ ಯಶೋದಯಾ ಪಯಃ ।
[೨]ಸೃತಂ ನಿಧಾತುಮುದ್ಧತೋ ಬಭಂಜ ದಧ್ಯಮತ್ರಕಮ್ [೩] ॥ ೭ ॥

---

೧. ನ ನಿರುಪಾದಾನಾ ಸೃಷ್ಟಿಃ ಸಂಭವೇತಿ ಸಾ ತದಾನೀಮಾಸ್ಯೇ ದರ್ಶನೀಯೇತಿ ಧಿಯಾ ತದ್ಭಾರಾವತಾರಾಯಾಯಮವತಾರ ಇತಿ ತಯಾ ಚ ಧರಯಾ ಕಿಂಚಿದುಪಯೋಗಿನ್ಯಾ ಭಾವ್ಯಮಿತಿ ಮತಿತೋ ಮೃದದನಮುಚಿತಮಚ್ಯುತಸ್ಯ । ತರ್ಹೀಶ್ವರೋ ನಾನೃತಾತ್ ಪಾತಕಂ ಪರಮಿತಿ ಜಾನನ್ ಕಥಂ ಜನನೀಂ ಪ್ರತಿ ಜನನೀತಿಶಾಸಕಃ ಅನೃತಮವಾದೀದಿತ್ಯತ ಆಂತರಂಗಿಕೋ ಭಗವತೋ ಭಾವಃ ಶ್ಲೋಕಸ್ಯ ನಾ ಪರಮಪುರುಷೋऽಹಂ ಮೃದಂ ಭಕ್ಷಿತವಾನ್ । ಸರ್ವ ಏತೇऽಮಿಥ್ಯಾಭಿಶಂಸಿನಃ । ಹೇ ಸತಿ ಮಾತಃ ಸರ್ವೇऽಗಿರಸ್ತೂಷ್ಣೀಕಾ ಯದಿ ತರ್ಹ್ಯಗಿರೋ ಮಮ ಮುಖಂ ಸಮಕ್ಷಂ ಪಶ್ಯ । ಕಾರ್ಯೇಣ ಕಾರಣಮವಗತಂ ಭವತೀತಿ । ಶಿಷ್ಟಂ ಶ್ಲಿಷ್ಟಮ್ । ಪಂಚೀಕರಣಪಕ್ಷೇ ಸರ್ವಭೂತಮೇಲನಾದೇಕಸ್ಯಾಂ ಮೃದಿ ಭಕ್ಷಿತಾಯಾಂ ಆಂತರಿಕ್ಷಾದ್ಯುಪಾದೇಯಪ್ರದರ್ಶನಂ ನಾಸಂಭವೀತಿ ವರ್ಣಯಂತಿ । – ಶ್ರೀಸತ್ಯಧರ್ಮತೀರ್ಥರು

೨. ಗೋಷ್ಠಂ ಘೋಷ ಇತಿ ಪ್ರೋಕ್ತೋ ವ್ರಜಸ್ತತ್ಪಾಲಸಂಸ್ಥಿತಿಃ । ಇತ್ಯಭಿಧಾನಮ್ । – ಭಾ.ತಾ. (೪/೧೮/೩೧)

೩. ಪಯಃ ಸೃತಂ ವೀಕ್ಷ್ಯ ನಿಧಾತುಂ=ಪಾತ್ರಮಧ್ಯೇ ನಿಧಾತುಮಿತಿ ಯೋಗ್ಯಪದಾಧ್ಯಾಹಾರೇಣ ಯೋಜನಾ ॥ – (ವಾ.)

ಅ: ಒಮ್ಮೆ ಸರ್ವಸಮರ್ಥನಾದ ಶ್ರೀಕೃಷ್ಣನು ಸ್ತನಪಾನ ಮಾಡುತ್ತಿದ್ದಾಗ ಯಶೋದೆ [೫]ಉಕ್ಕುತ್ತಿದ್ದ ಹಾಲನ್ನು ಕೆಳಕ್ಕಿಳಿಸಲೆಂದು ಕೃಷ್ಣನನ್ನು ಕೆಳಗಿಳಿಸಿದಳು; ಆಗ ಅವನು ಮೊಸರಿನ ಗಡಿಗೆಯನ್ನು ಒಡೆದುಹಾಕಿದ.

ವಿ: ಹಾಲಿಗಾಗಿ ತನ್ನನ್ನು ಕೆಳಕ್ಕಿಳಿಸಿದ ತಪ್ಪಿಗಾಗಿ ಕೃಷ್ಣ ಅವಳ ಮೊಸರ ಗಡಿಗೆಯನ್ನು ಒಡೆದುಹಾಕಿದ. ಲೌಕಿಕಕ್ಕಾಗಿ ದೇವರನ್ನು ಕೈಬಿಡುವವರ ಸಂಪತ್ತನ್ನು ಕೃಷ್ಣ ನಾಶಪಡಿಸುವನು ಎಂಬುದಕ್ಕೆ ಇದು ಸೂಚಕ – **'ತದಲಂ ಬಹುಲೋಕವಿಚಿಂತನಯಾ ಪ್ರವಣಂ ಕುರು ಮಾನಸಮೀಶಪದೇ'.**

ಪ್ರಮಥ್ಯಮಾನದಧ್ನುರುಪ್ರಜಾತಮಿಂದುಸನ್ನಿಭಮ್ ।
ನವಂ ಹಿ ನೀತಮಾದದೇ [೬]ರಹೋ ಜಘಾಸ ಚೇಶಿತಾ ॥ ೮ ॥

---

೪. 'ಅಮತ್ರಂ ಭಾಜನಂ ಪಾತ್ರಮ್' ಇತ್ಯಭಿಧಾನಮ್ । – (ಜ)

ಅಮತ್ರಕಂ = ಪಾತ್ರಂ 'ಅಮತ್ರಂ ಭಾಜನಂ ಪಾತ್ರಮ್' ಇತ್ಯಭಿಧಾನಾತ್ । – (ತಿ.)

೫. ಸ್ರುತಮಧಿಕತಾಪೇನ ಭಾಂಡಾದ್ಬಹಿರ್ಗಲಿತಂ ... । – (ವ.)

ನನ್ವಾಪ್ತಕಾಮ ಈಶ್ವರಃ ದಧಿಭಾಂಡಭಂಜನನವನೀತಸ್ತೈನ್ಯಾದಿಕಂ ಕಿಮರ್ಥಂ ಕೃತವಾನ್? ನ ಚ ದೇವಾದೀನಾಂ ಧರ್ಮಶಿಕ್ಷಾರ್ಥಮಿತಿ ವಾಚ್ಯಮ್ । ಶಿಕ್ಷಾರ್ಥಂ ಸ್ತೈನ್ಯಾದಿಕರಣೇ 'ಯದ್ಯದಾಚರತಿ ಶ್ರೇಷ್ಠಃ' ಇತ್ಯುಕ್ತನ್ಯಾಯೇನೇತರೇಷಾಮಧರ್ಮಕರಣಪ್ರಸಕ್ತೇಃ । ತಥಾ ಚ ಸಮಾಯವ್ಯಯಫಲತ್ವಂ ಸ್ಯಾತ್ । ನ ಚ 'ಯದಿ ಹ್ಯಹಂ ನ ವರ್ತೇಯಂ ಜಾತುಕರ್ಮಣ್ಯತಂದ್ರಿತಃ । ಮಮ ಕರ್ಮಾನುವರ್ತಂತೇ ಮನುಷ್ಯಾ ಪಾರ್ಥ ಸರ್ವಶಃ' (ಗೀತಾ. ೩/೨೩) ಇತ್ಯುಕ್ತದಿಶಾ ಅಧರ್ಮಾನಲಾಯಮಾನಸ್ಯ ಹರೇರಧರ್ಮಪ್ರಸಂಜಕತ್ವಂ ಸಂಭವತೀತ್ಯತ ಆಹ – ಪ್ರಜಾಯತ ಇತಿ । ಯಥಾಕುಲಮಿತಿ ಚ ಯೋಜ್ಯಮ್ ॥ – (ತಾ.)

೬. ಆದದೇ ಹೀತಿ ಹಿಶಬ್ದೇನ ಸೂಚಿತಾಂ ಸುರನಿಯಮಪ್ರಸಿದ್ಧಿಂ ಸ್ಪಷ್ಟೀಕರೋತಿ ಪ್ರಜಾಯತ ಇತಿ ॥ – (ವಾ.)

ನವಶಬ್ದೋತ್ತರಾನುಸ್ವಾರೇಣ ಹರಿಶಬ್ದೇನ ಚ ನವನೀತಸ್ಯಾಧಿಕ್ಯಮುಚ್ಯತ ಇತ್ಯಂಗೀಕಾರಾತ್ । ಅಧಿಕಶಬ್ದಸ್ಯಾಧಿಕ್ಯಾರ್ಥಂ ಉರೂಚೀ ಸೋಮಪೀತಯ ಇತ್ಯತ್ರ ಉರುಚೀಶಬ್ದದೃಷ್ಟಮ್ । ಅತ ಏವ ಋಗ್ಭಾಷ್ಯೇ ಸೋಮಪಾಯಾತಿಮಹತೀತ್ಯನೇನ ಉರೂಚೀಶಬ್ದಃ ಅತಿಮಹತೀತಿ ವ್ಯಾಖ್ಯಾತಃ ॥ – (ಸ.)

ನವೋ ನವೋ ಭವತೀತಿ ಶ್ರುತೇಃ ನವವತ್ ಚಂದ್ರವತ್ ನೀತಂ ನವನೀತಮಿತ್ಯಾಹ – ಇಂದ್ವಿತಿ । – (ಶ್ರೀ.)

ದಧಿಮಥಿತೇ ಸತಿ ನೂತನತ್ವೇನ ಜಾತಂ ನ ತು ಪರ್ಯುಷಿತಮಿತ್ಯರ್ಥಃ । – (ತಿ.)

ನ ಚ ದಧಿಜನಿತಂ ತಕ್ರಮಪಿ ಭವತೀತಿ ನವನೀತಸಿದ್ಧಿರಿತಿ ವಾಚ್ಯಂ । ಜಘಾಸೇತಿ ಕ್ರಿಯಯಾ ತತ್ಸಿದ್ಧೇಃ । ಅನ್ಯಥಾ ಪಪಾವಿತಿ ಸ್ಯಾದಿತಿ ಭಾವಃ । ಯದ್ವಾ ಕೃಷ್ಣೇನ ಅನ್ಯೇಭ್ಯೋ ನೀತಂ ಕೃಷ್ಣೋ ಯದಾऽऽದದೇ, ಯಚ್ಚ ರಹೋ ಜಘಾಸ ಚ, ತತ್ ನವಂ ಹಿ ನೂತನಂ ಹಿ ಆಶ್ಚರ್ಯಮಿತಿ ಯಾವತ್ । ತತ್ರ ಹೇತುರೀಶಿತೇತಿ । ದರಿದ್ರೇಣ ಕ್ರಿಯಮಾಣಮೀಶಿತುಃ ಕಥಂ ಘಟತ ಇತಿ ಆಶ್ಚರ್ಯಮೇವೋಪಪಾದಯತಿ । – (ತಿ.)

ಕಡೆಯುತ್ತಿದ್ದ ಮೊಸರಿನಲ್ಲಿ ಬಹಳವಾಗಿ ತುಂಬಿ ಬಂದ ಚಂದ್ರನಂತೆ ಶೋಭಿಸುತ್ತಿದ್ದ ಬೆಣ್ಣೆಯನ್ನು ಕೈಗೆತ್ತಿಕೊಂಡು, ಸರ್ವಸಮರ್ಥನಾದ ಕೃಷ್ಣ ರಹಸ್ಯದಲ್ಲಿ ತಿಂದ.

ಬಾಲಲೀಲೆಗಳ ಆಂತರ್ಯ

ಪ್ರಜಾಯತೇ ಹಿ ಯತ್ಕುಲೇ ಯಥಾ ಯುಗಂ[೧] ಯಥಾ ವಯಃ ।
ತಥಾ ಪ್ರವರ್ತನಂ ಭವೇದ್ದಿವೌಕಸಾಂ ಸಮುದ್ಭವೇ ॥ ೯ ॥

ಇತಿ ಸ್ವಧರ್ಮಮುತ್ತಮಂ ದಿವೌಕಸಾಂ ಪ್ರದರ್ಶಯನ್ ।
ಅಧರ್ಮಪಾವಕೋಽಪಿ ಸನ್ ವಿಡಂಬತೇ[೨] ಜನಾರ್ದನಃ ॥ ೧೦ ॥

ಅ: ದೇವತೆಗಳು ಭೂಮಿಯಲ್ಲಿ ಜನಿಸಿದಾಗ ಅವರು ಯುಗಕ್ಕೆ ತಕ್ಕಂತೆ, ವಯಸ್ಸಿಗೆ ತಕ್ಕಂತೆ ತಾವು ಜನಿಸಿದ ಕುಲಕ್ಕೆ ತಕ್ಕಂತೆ ನಡೆದುಕೊಳ್ಳಬೇಕು ಎಂಬುದಾಗಿ ಉತ್ತಮವಾದ ಸ್ವಧರ್ಮವನ್ನು ದೇವತೆಗಳಿಗೆ ತಿಳಿಸಿಕೊಡಲೆಂದು ಅಧರ್ಮಕ್ಕೆ ಬೆಂಕಿಯಂಥವನಾದರೂ, ಕೃಷ್ಣ ಹಾಗೆ ಅನುಕರಣೆ ಮಾಡಿದ.

ವಿ: ಕೃಷ್ಣ ನವನೀತಾದಿಗಳನ್ನು ಕದ್ದ ಪ್ರಸಂಗಕ್ಕೆ ಇದು ಒಂದು ರೀತಿಯಾದ ವಿವರಣೆ. ದೇವತೆಗಳು ಭೂಮಿಯಲ್ಲಿ ಅವತರಿಸಿದಾಗ, ಆಯಾ ಯುಗ, ವಯಸ್ಸು ಹಾಗೂ ಕುಲಕ್ಕೆ ತಕ್ಕಂತೆ ಪ್ರವರ್ತಿಸಬೇಕಾಗಿದ್ದು ಸ್ವಧರ್ಮವೇ ಹೊರತು ಅಧರ್ಮವಲ್ಲ ಎಂದು ದೇವತೆಗಳಿಗೆ ತಿಳಿಸಿಕೊಡಲೆಂದು ಹಾಗೆ ಲೋಕವಿಡಂಬನೆ ಮಾಡುತ್ತಿರುವನು ಎಂದರ್ಥ. ಎಂದರೆ ಕೃಷ್ಣ ಅವತರಿಸಿದ್ದು ದ್ವಾಪರಯುಗದ ಕೊನೆಯಲ್ಲಿ; ಗೋಪಾಲಕನಾಗಿ; ವಯಸ್ಸೋ ಇನ್ನೂ ಬಾಲ್ಯ. ಆ ವಯಸ್ಸಿನ ಗೋಪಾಲಕರು ಹೀಗೆ ವರ್ತಿಸುವುದು ಸಹಜ ಎಂಬುದನ್ನು ಕೃಷ್ಣ ತನ್ನ ಅನುಕರಣೆಯಿಂದ ತೋರಿಸಿರುವನು ಎಂದರ್ಥ. ಇದು ದೋಷವಾಗದೆ, ದೇವತಾಶಿಕ್ಷಣ–ರೂಪವಾಗಿ ಧರ್ಮವೇ ಆಗಿದೆ.

---

೧. 'ಯಥಾಕುಲಮಿ'ತ್ಯಪಿ ಗ್ರಾಹ್ಯಮ್ । –(ಜ.)

೨. ಮಾನುಷಂ ಮಾನುಷೋ ಧರ್ಮೋ ದೇವಾ ಅಪಿ ಹಿ ಮಾನುಷೇ ।
ಮನುಷ್ಯವತ್ ಪ್ರವರ್ತಂತೇ ನೈವೈಶ್ವರ್ಯಪ್ರಕಾಶಿನಃ ॥
–ಇತಿ ತೈತ್ತಿರೀಯಭಾಷ್ಯೋದ್ಧೃತಪ್ರಮಾಣವಚನಮ್ ।

'ಕರ್ಮಾಣಿ ಕುರುತೇ ವಿಷ್ಣುಃ ಕೀನಾಶ ಇವ ದುರ್ಬಲಃ' ಇತಿ ಚೋದ್ಯೋಗೇ । - ಭಾರತೇ (೫/೬೮/೧೪)

'ದೇವತ್ವೇ ದೇವವಚ್ಚೇಷ್ಟಾ ಮಾನುಷತ್ವೇ ಚ ಮಾನುಷೀ' –ಇತಿ ವಿಷ್ಣುಧರ್ಮೇ । (೧/೨/೨)

ನೃತಿರ್ಯಗಾದಿರೂಪಕಃ ಸ[೧] ಬಾಲ್ಯಯೌವನಾದಿಯುಕ್ ।
ಕ್ರಿಯಾಶ್ಚ ತತ್ತದುದ್ಭವಾಃ ಕರೋತಿ ಶಾಶ್ವತೋಽಪಿ ಸನ್ ॥ ೧೧ ॥

ಅ: ಮನುಷ್ಯ, ಪ್ರಾಣಿ ಮೊದಲಾದ ರೂಪಗಳಿಂದ ಅವತರಿಸುವ ಶ್ರೀಹರಿ ಸದಾ ಒಂದೇ ತೆರನಾಗಿ ಇರುವವನಾದರೂ, ಬಾಲ್ಯಯೌವನಾದಿಗಳನ್ನು ಹೊಂದಿದವನಂತೆ ನಟಿಸುತ್ತಾ ಅವಕ್ಕೆ ಉಚಿತವಾದ ಕಾರ್ಯಗಳನ್ನು ಮಾಡುವನು.

ವಿ: ರಾಮಕೃಷ್ಣಾದಿರೂಪಗಳು ಮನುಷ್ಯರೆಂದೇ ತೋರುವ ರೂಪವಾದರೆ, ಮತ್ಸ್ಯ–ಕೂರ್ಮಾದಿರೂಪಗಳು ಪ್ರಾಣಿಗಳಂತೆ ತೋರುವ ರೂಪಗಳು. ಹಯಗ್ರೀವ, ನರಸಿಂಹಾದಿ–ರೂಪಗಳು ಬೇರೆ ತೆರನಾದ ರೂಪಗಳು. ಅದರಂತೆ ಬಾಲ್ಯ, ಕೌಮಾರಾದಿಗಳು ಅವಸ್ಥೆಗಳು. ಶಾಶ್ವತನಾದ ಶ್ರೀಹರಿಯಾದ ಅವನಿಗೆ ಯಾವುದೇ ರೀತಿಯ ವಿಕಾರಗಳೂ ಸರ್ವಥಾ ಇರುವುದಿಲ್ಲ ಎಂದರ್ಥ.

ಸ ವಿಪ್ರರಾಜಗೋಪಕಸ್ವರೂಪಕಸ್ತದುದ್ಭವಾಃ[೨] ।
ತದಾ ತದಾ ವಿಚೇಷ್ಟತೇ ಕ್ರಿಯಾಃ ಸುರಾನ್ ವಿಶಿಕ್ಷಯನ್ ॥ ೧೨ ॥

ಅ: ಶ್ರೀಹರಿಯು ಬ್ರಾಹ್ಮಣ, ರಾಜ, ಗೋಪಾಲಕ ಮೊದಲಾದ ಸ್ವರೂಪಗಳಿಂದ ಅವತರಿಸಿದಾಗಲೆಲ್ಲ ದೇವತೆಗಳಿಗೆ ತಿಳಿಸಿಕೊಡುವುದಕ್ಕಾಗಿ ಆಯಾ ವರ್ಣಗಳಿಂದ ಉಂಟಾಗುವ ಕ್ರಿಯೆಗಳನ್ನು ಮಾಡುವನು.

ವಿ: ವ್ಯಾಸಪರಶುರಾಮಾದಿಗಳು [೨]ವಿಪ್ರರೂಪಗಳು; ಶ್ರೀರಾಮ, ಋಷಭ ಮೊದಲಾದವುಗಳು ರಾಜರೂಪಗಳು; ಶ್ರೀಕೃಷ್ಣನದು ಗೋಪಾಲಕರೂಪ.

---

೧. ಬಾಲ್ಯಯೌವನಾದಿ ಯದ್ವಯೋಽವಸ್ಥಾನಂ ತತ್ತದುದ್ಭವಾಃ ಕ್ರಿಯಾಶ್ಚ ಕರೋತೀತಿ ಯೋಜನಾ॥ – (ವಾ.)

ರಾಮಕೃಷ್ಣಾದ್ಯಾನುರೂಪಕಾ ಮತ್ಸ್ಯಾದ್ಯಾನುರೂಪಕಾಃ ಮತ್ಸ್ಯಾದ್ಯಾಸ್ತಿರ್ಯಗ್ರೂಪಕಾಃ ಆದಿಪದೇನ ಹಯಗ್ರೀವನೃಸಿಂಹಾದ್ಯಾ ಇತ್ಯಾದಿರೂಪವಾನ್ । – (ಜ.)

೨. ಆದಿಪದೇನ ನೃಪದೇನ ವಾ ವಿಪ್ರರಾಜಾದೀನಾಂ ಸರ್ವಸ್ಯ ಸಂಗ್ರಹಸಂಭವಾತ್ । ಸವಿಪ್ರರಾಜಗೋಪಕಸ್ವರೂಪಕ ಇತಿ ಪುನರ್ವಚನಂ ಕಿಮರ್ಥಮಿತಿ ಚೇತ್, ಸತ್ಯಮ್ । ವಯೋಽವಸ್ಥಾವಿಶೇಷೋಚಿತಕರ್ಮ್ಯೇವ ತತ್ರ ಗೃಹೀತಮ್ । ಜಾತಿವಿಶೇಷೋಚಿತಕರ್ಮಸಂಗ್ರಹಾಯ ಪುನರ್ವಚನಮಿತಿ ಪರಿಹಾರಸಂಭವಾತ್ । ಅತ ಏವ ತತ್ತದುದ್ಭವಾ ಇತ್ಯತ್ರ । ತತ್ತದ್ವಯೋಽವಸ್ಥಾವಿಶೇಷೋದ್ಭವಾ ಇತ್ಯರ್ಥಃ । ತತ್ತದುದ್ಭವಾ = ತತ್ತಜ್ಜಾತ್ಯುದ್ಭವಾ ಇತಿ ಸ್ಥಾನದ್ವಯೋಕ್ತತಚ್ಛಬ್ದಾರ್ಥಭೂತಪೂರ್ವಪರಾಮರ್ಶಯೋರಪಿ ವಿಷಯಭೇದೋ ವಿವೇಚನೀಯಃ ॥ – (ವಾ.)

ತಥಾऽಪ್ಯನನ್ಯದೇವತಾಸಮಂ ನಿಜಂ ಬಲಂ ಪ್ರಭುಃ ।
ಪ್ರಕಾಶಯನ್ ಪುನಃ ಪುನಃ ಪ್ರದರ್ಶಯತ್ಯಜೋ ಗುಣಾನ್[೪] ॥ ೧೩ ॥

ಆದರೂ ಜನ್ಮರಹಿತನಾದ ಶ್ರೀಹರಿ ಇತರದೇವತೆಗಳು ಎಂದೂ ಸರಿಗಟ್ಟಲಾಗದ ತನ್ನ ಸ್ವಾಭಾವಿಕಬಲವನ್ನು ಪ್ರಕಟಪಡಿಸುತ್ತಾ ತನ್ನ ಗುಣಗಳನ್ನು ಮತ್ತೆಮತ್ತೆ ತೋರುವನು.

ಅಥಾತ್ತಯಷ್ಟಿಮೀಕ್ಷ್ಯ ತಾಂ ಸ್ವಮಾತರಂ ಜಗದ್ಗುರುಃ ।
ಸ ಪುಪ್ಲವೇ ತಮನ್ವಯಾನ್ಮನೋವಿದೂರಮಂಗನಾ ॥ ೧೪ ॥

ಅ: ಆ ಬಳಿಕ ಜಗದ್ಗುರುವಾದ ಶ್ರೀಕೃಷ್ಣನು ತನ್ನ ತಾಯಿ ಯಶೋದೆ ಕೋಲು ಕೈಗೆತ್ತಿಕೊಂಡಿದ್ದನ್ನು ಕಂಡು ಓಡತೊಡಗಿದ. ಮನಸ್ಸಿಗೂ ಎಟುಕದ ಅವನನ್ನು ಆ ಮಹಿಳೆ ಅಟ್ಟಿಸಿಕೊಂಡು ತೆರಳಿದಳು.

ವಿ: ೧) ಈವರೆಗೂ ಶ್ರೀಕೃಷ್ಣನ ವಿವಿಧಲೀಲೆಗಳ ತಾತ್ತ್ವಿಕಹಿನ್ನೆಲೆಯನ್ನು ವಿಶ್ಲೇಷಿಸಿ, ರಹಸ್ಯದಲ್ಲಿ ಬೆಣ್ಣೆ ತಿಂದ ಪ್ರಸಂಗವನ್ನು ಮುಂದುವರೆಸುತ್ತಿರುವರು.

೨) ಕೃಷ್ಣನಾದರೋ ಮನಸ್ಸಿಗೂ ಎಟುಕದ ಮಹಾಮಹಿಮ ('ಯತೋ ವಾಚೋ ನಿವರ್ತಂತೇऽಪ್ರಾಪ್ಯ ಮನಸಾ ಸಹ'); ಯಶೋದೆಯಾದರೂ ಒಬ್ಬ ಮಹಿಳೆ. ಅವನನ್ನು ಹಿಡಿಯುವ ಪ್ರಯತ್ನ ಎಷ್ಟು ಹಾಸ್ಯಾಸ್ಪದ ಎಂಬ ಧ್ವನಿ ಇಲ್ಲಿದೆ.

ಪುನಃ ಸಮೀಕ್ಷ್ಯ ತಚ್ಛ್ರಮಂ ಜಗಾಮ ತತ್ಕರಗ್ರಹಮ್ ।
ಪ್ರಭುಃ ಸ್ವಭಕ್ತವಶ್ಯತಾಂ ಪ್ರಕಾಶಯನ್ನುರುಕ್ರಮಃ ॥ ೧೫ ॥

ಅ: ಪ್ರಭುವೂ, ಉರುಕ್ರಮನೂ ಆದ ಶ್ರೀಕೃಷ್ಣ ಅವಳ ಶ್ರಮವನ್ನು ಗಮನಿಸಿ, ತನ್ನ ಭಕ್ತಪರಾಧೀನತೆಯನ್ನು ತಿಳಿಸಲೆಂದು ಅವಳ ಕೈಹಿಡಿತಕ್ಕೆ ಸಿಲುಕಿದ.

ವಿ: 'ಪ್ರಭು' ಎಂಬ ಪದದಿಂದ ಅವನ ಸರ್ವಶಕ್ತತ್ವವನ್ನೂ, 'ಉರುಕ್ರಮ' ಎಂಬ ಪದದಿಂದ

---

೩. ವ್ಯಾಸಭಾರ್ಗವಾದ್ಯಾಃ ವಿಪ್ರಸ್ವರೂಪಕಾಃ ರಾಮೋ ರಾಜಸ್ವರೂಪಕೋ ಗೋಪಸ್ವರೂಪಕಃ ಕೃಷ್ಣಃ । ಯದಾ ಯದಾ ವಿಪ್ರಸ್ವರೂಪಕಃ ಸ ಹರಿರ್ಭವತಿ ತದಾ ತದಾ ತದುದ್ಭವಾಸ್ತದ್ರೂಪೋಚಿತಾಃ ಕ್ರಿಯಾಃ ಸುರಾನ್ ವಿಶಿಕ್ಷಯನ್ ವಿಚೇಷ್ಟತೇ ಕರೋತಿ । – (ಜ.)

೪. ಗುಣಾನ್ = ಸರ್ವೋತ್ತಮತ್ವ - ಸರ್ವಜ್ಞತ್ವ - ಸರ್ವಶಕ್ತಿತ್ವಾದಿಗುಣಾನ್ ॥ – (ವಾ.)

ಅವನ ತ್ರಿವಿಕ್ರಮರೂಪದ ವಿಶಿಷ್ಟಹೆಜ್ಜೆಯನ್ನು ಸೂಚಿಸುತ್ತಾ ಅವನು ಯಶೋದೆಯ ಕೈಗೆ ಸಿಕ್ಕಿದ್ದು ನಿಜವಾದರೂ, ಅದು ಅವಳ ಪ್ರಯತ್ನದಿಂದಲ್ಲ; ಅವನ ಭಕ್ತಪರಾಧೀನತೆಯಿಂದ ಎಂಬ ತತ್ತ್ವವನ್ನು ತಿಳಿಸಿರುವರು.

ಸದಾ ವಿಮುಕ್ತಮೀಶ್ವರಂ ನಿಬದ್ಧುಮಂಜಸಾऽऽದದೇ ।
ಯದೈವ ದಾಮ ಗೋಪಿಕಾ ನ ತತ್ ಪುಪೂರ ತಂ ಪ್ರತಿ ॥ ೧೬ ॥

ಅ: ನಿತ್ಯಮುಕ್ತನೂ, ಸರ್ವಸಮರ್ಥನೂ ಆದ ಶ್ರೀಕೃಷ್ಣನನ್ನು ಕಟ್ಟಿಹಾಕಲೆಂದು ಗೋಪಿಯು ಹಗ್ಗವನ್ನು ತೆಗೆದುಕೊಂಡಾಗ, ಅದು ಅವನನ್ನು ಕಟ್ಟಲು ಸಾಲದಾಯಿತು.

ವಿ: ಹಗ್ಗ ಬಂಧನದ ಸಂಕೇತ. ಕೃಷ್ಣನಾದರೊ ನಿತ್ಯಮುಕ್ತನಾದ ಸರ್ವೇಶ್ವರ. ಯಶೋದೆಯಾದರೊ ಒಬ್ಬ ಸಾಮಾನ್ಯಗೋಪಸ್ತ್ರೀ. ಅವಳು ಪ್ರಕೃತಿಯ ಸಂಕೇತ. ಅವಳು ಹಿಡಿದ ಹಗ್ಗ ಸತ್ವ ಮೊದಲಾದ ಮೂರು ಗುಣಗಳ ಸಂಕೇತ. ಅದು ಕೃಷ್ಣನನ್ನು ಕಟ್ಟಲು ಸಾಲದಾಯಿತು ಎನ್ನುವ ಮೂಲಕ ಕೃಷ್ಣ ಬಂಧವರ್ಜಿತ; ಅವಿದ್ಯೆ ಮೊದಲಾದ ಯಾವುದೇ [೧]ಬಂಧನಕ್ಕೂ ಅವನು ಒಳಗಾಗುವವನಲ್ಲ ಎಂಬ ತತ್ತ್ವ ಸೂಚಿತ.

ಸಮಸ್ತದಾಮಸಂಚಯಃ ಸುಸಂಧಿತೋऽಪ್ಯಪೂರ್ಣತಾಮ್ ।
ಯಯಾವನಂತವಿಗ್ರಹೇ ಶಿಶುತ್ವಸಂಪ್ರದರ್ಶಕೇ ॥ ೧೭ ॥

ಅ: ಎಲ್ಲ ಹಗ್ಗಗಳ ರಾಶಿಯನ್ನು ಒಟ್ಟಾಗಿ ಜೋಡಿಸಿದರೂ, ಶಿಶುತ್ವವನ್ನು ತೋರಿಸುತ್ತಿದ್ದ ಕೃಷ್ಣನ ಆ ಕೊನೆಯಿಲ್ಲದ ದೇಹಕ್ಕೆ ಸಾಲದಾಯಿತು.

ವಿ: ಒಂದು ಹಗ್ಗ ಮಾತ್ರವಲ್ಲ ಅವಳ ಬಳಿಯಿದ್ದ ಎಲ್ಲ ಹಗ್ಗಗಳನ್ನೂ ಗಂಟು ಹಾಕಿ ಒಟ್ಟಾಗಿ ಸೇರಿಸಿದರೂ, ಕೃಷ್ಣನನ್ನು ಕಟ್ಟಲು ಸಾಲದಾದವು. ಗೋಪರಾಣಿಯಾದ ಅವಳ ಬಳಿ ಹಗ್ಗಗಳ ರಾಶಿಯೇ ಇದ್ದವು ಎಂಬುದನ್ನು ಹಿಂದಿನ ಶ್ಲೋಕದಲ್ಲಿನ 'ಗೋಪಿಕಾ' ಎಂಬ ಪದದಿಂದ

---

೧. 'ಅಜ್ಞತಾऽಖಿಲಸಂವೇತ್ತುರ್ಘಟತೇ ನ ಕುತಶ್ಚನ' – ಉಪಾಧಿಖಂಡನ.

'ಯಸ್ಯ ಮತಂ ತಸ್ಯ ಅಮತಂ ಮತಂ ಯಸ್ಯ ನ ವೇದ ಸಃ ॥' – ತಲವಕಾರೋಪನಿಷತ್

ಕೃತಾಗಸಂ ತಂ ಕಿಲ ನೈವ ಮಾತಾ ಶಶಾಕ ಬದ್ಧುಂ ಮಮ ತು ಪ್ರತರ್ಕಃ ।
ತದೀಯರಮ್ಯೋದರಮಧ್ಯಸಂಸ್ಥವಿಮುಕ್ತಶಕ್ತ್ಯೈವ ನ ಬಂಧ ಆಸೀತ್ ॥ – ರು.ವಿ. (೪/೮)

ಸೂಚಿಸಿರುವರು. ಇಷ್ಟಾಗಿಯೂ ಅವು ಪರಿಮಿತವೇ. ಕೃಷ್ಣ ಶಿಶುರೂಪದಲ್ಲೂ ಅನಂತ, ಸರ್ವತ್ರವ್ಯಾಪ್ತ ('ಅಣೋರಣೀಯಾನ್ ಮಹತೋ ಮಹೀಯಾನ್').

ದಾಮೋದರನಾದ ಕೃಷ್ಣ

ಅಬಂಧಯೋಗ್ಯತಾಂ ಪ್ರಭುಃ ಪ್ರದರ್ಶ್ಯ ಲೀಲಯಾ ಪುನಃ ।
ಸ ಏಕವತ್ಸಪಾಶಕಾಂತರಂ ಗತೋಽಖಿಲಂಭರಃ ॥ ೧೮ ॥

ಅ: ಹೀಗೆ ತಾನು ಬಂಧನಕ್ಕೆ ಒಳಗಾಗದವನು ಎಂಬುದನ್ನು ತೋರಿಸಿ, ಪ್ರಭುವೂ, ವಿಶ್ವಂಭರನೂ ಆದ ಆ ಶ್ರೀಕೃಷ್ಣನು ಲೀಲೆಯಿಂದ ಒಂದು ಕರು ಕಟ್ಟುವ ಹಗ್ಗದ ಕಟ್ಟಿಗೆ ಸಿಲುಕಿದ.

ವಿ: ೧) ಅವನು ಅಖಿಲಂಭರ; ಆದರೂ ಸ್ವೇಚ್ಛೆಯಿಂದ ಒಂದು ಚಿಕ್ಕ ಹಗ್ಗದ ಕಟ್ಟಿಗೆ [೧]ಸಿಲುಕಿದ. ಹಾಗೆ ಸಿಕ್ಕಿದ್ದೂ ಅವನ ಮಹಿಮೆಯೇ. ಅವ್ಯಕ್ತನಾದ ಅವನು ಭಕ್ತರಿಗೆ ವ್ಯಕ್ತನಾಗಿ ದರ್ಶನ ನೀಡುವುದು ಸಹ ಅವನ ಅಂತಹ ಮಹಿಮೆಯೆಂದೇ ಬ್ರಹ್ಮಸೂತ್ರ ಸಾರಿದೆ ('ತದವ್ಯಕ್ತಮಾಹ ಹಿ' – ೩/೨/೨೩)

೨) ಹಾಗೆ ಆ ಹಗ್ಗವನ್ನು ತನ್ನ ಮೈಮೇಲೆ ಧರಿಸುವ ಮೂಲಕವೂ ತಾನು ವಿಶ್ವಂಭರ ಎಂಬುದನ್ನು ಸಾರಿದ ಎಂಬಲ್ಲಿನ ಸ್ವಾರಸ್ಯ ಗಮನಾರ್ಹ.

ಯಮಳಾರ್ಜುನಭಂಜನ

ಸುತಸ್ಯ ಮಾತೃವಶ್ಯತಾಂ ಪ್ರದರ್ಶ್ಯ ಧರ್ಮಮೀಶ್ವರಃ ।
ಬಭಂಜ ತೌ ದಿವಿಸ್ಪೃಶೌ [೨] ಯಮಾರ್ಜುನೌ ಸುರಾತ್ಮಜೌ ॥ ೧೯ ॥

ಅ: ತಾಯಿಗೆ ವಶನಾಗುವುದು ಪುತ್ರನ ಧರ್ಮ ಎಂಬುದನ್ನು ತೋರಿಸಿದ ಈಶ್ವರನಾದ ಶ್ರೀಕೃಷ್ಣ ಗಗನಚುಂಬಿಗಳಾಗಿದ್ದ ಅವಳಿ ಅರ್ಜುನವೃಕ್ಷಗಳನ್ನು ಬೀಳಿಸಿದ. ಅವರಿಬ್ಬರೂ ದೇವಪುತ್ರರು.

---

೧. ಸುತೋ ನ ಮೇಽಯಂ ಹರಿರೇವ ಸಾಕ್ಷಾದಿತಿ ಪ್ರಬೋಧೇऽಂಕುರಿತೇ ಪುರಂಧ್ರೀ ।
ಬಬಂಧ ನಂದಸ್ಯ ಬಲಾನುಜಂ ತಂ ಬುಧೈರ್ನಿಬದ್ಧಂ ಪ್ರಣಯಾಖ್ಯರಜ್ಜ್ವಾ ॥ – ರು.ವಿ. (೪/೧೦)

೨. 'ಸಹಸ್ರಧನುಷಸ್ತದೂರ್ಧ್ವಂ ದ್ಯುಶಬ್ದೇನಾಪಿ ಭಣ್ಯತೇ' ಇತಿ ತಂತ್ರಮಾಲಾಯಾಮ್ । – (ಜ.)

ಎ: ಕೃಷ್ಣ ಹಾಗೆ ಯಶೋದೆಗೆ ಸಿಕ್ಕಿದ್ದು ಮಕ್ಕಳು ತಾಯಿಗೆ ವಿಧೇಯರಾಗಿರಬೇಕು ಎಂಬ ತತ್ತ್ವವನ್ನು ತಿಳಿಸಲು ಸಹ. ಅವನನ್ನು ಯಶೋದೆ ಒರಳಿಗೆ ಕಟ್ಟಿದಾಗ, ಕೃಷ್ಣ ಆ ಒರಳನ್ನು ಅವಳಿಯಾಗಿ ಬೆಳೆದಿದ್ದ ಅರ್ಜುನವೃಕ್ಷಗಳ ಮಧ್ಯೆ ಎಳೆದೊಯ್ದ. ಅವೆರಡೂ ದೊಡ್ಡ ಶಬ್ದದೊಂದಿಗೆ ಬುಡಸಮೇತ ಉರುಳಿದವು. ಕೃಷ್ಣ ಹೀಗೆ ಉದರದಲ್ಲಿ ದಾಮ(ಹಗ್ಗ)ವನ್ನು ಧರಿಸಿದ್ದರಿಂದ ದಾಮೋದರ[೧] ಎಂಬ ಹೆಸರು ಈ ಅರ್ಥದಲ್ಲೂ ಸಾರ್ಥಕವಾಯಿತು.

ಧುನಿ ಮೊದಲಾದವರಿಗೆ ಪಾರ್ವತಿಯ ವರ

ಪುರಾ ಧುನಿಶ್ಚಮುಸ್ತಥಾऽಪಿ ಪೂತನಾಸಮನ್ವಿತೌ[೨] ।
ಅನೋಕ್ಷಸಂಯುತೌ ತಪಃ ಪ್ರಚಕ್ರತುಃ ಶಿವಾಂ ಪ್ರತಿ ॥ ೨೦ ॥
ತಯಾ ವರೋऽಪ್ಯವಧ್ಯತಾ ಚತುರ್ಷು ಚ ಪ್ರಯೋಜಿತಃ ।

ಅ: ಹಿಂದೆ ಧುನಿ ಮತ್ತು ಚಮು ಎಂಬವರು ಪೂತನಿಯೊಂದಿಗೆ ಕೂಡಿಕೊಂಡು ಶಕಟಾಸುರನ ಜೊತೆಯಲ್ಲಿ ಪಾರ್ವತಿಯನ್ನು ಕುರಿತು ತಪಸ್ಸನ್ನು ಆಚರಿಸಿದ್ದರು. ಪಾರ್ವತಿಯು ಆ ನಾಲ್ವರಿಗೂ ಅವಧ್ಯತ್ವವರವನ್ನು ನೀಡಿದ್ದಳು.

ವಿ: ೧) ಆ ಯಮಳವೃಕ್ಷಗಳ ಹಿನ್ನೆಲೆಯನ್ನು ವಿವರಿಸುತ್ತಿರುವರು.

೨) ಪೂತನಿ ಮತ್ತು ಶಕಟಾಸುರ ಇಬ್ಬರಿಗೂ ಪಾರ್ವತಿಯ ವರವಿದ್ದ ವಿಶೇಷವಿವರ ಇಲ್ಲಿ ಬಂದಿದೆ.

ಅನಂತರಂ ತೃಣೋದ್ಭ್ರಮಿಸ್ತಪೋऽಚರದ್ವರಂ ಚ ತಮ್[೩] ॥ ೨೧ ॥
ಅವಾಪ ತೇ ತ್ರಯೋ ಹತಾಃ ಶಿಶುಸ್ವರೂಪವಿಷ್ಣುನಾ ।

ಅ: ಆ ಬಳಿಕ ತೃಣಾವರ್ತನು ತಪಸ್ಸನ್ನು ಮಾಡಿದ; ಅವಧ್ಯತ್ವವರವನ್ನೂ ಪಡೆದುಕೊಂಡ. ಶಿಶುರೂಪನಾದ ಶ್ರೀಹರಿಯಿಂದ ಆ ಮೂವರೂ ಹತರಾದರು.

---

೧. ತಯೋರ್ಮಧ್ಯಗತಂ ದಾಮ್ನಾ ಬದ್ಧಂ ಗಾಢಂ ತಥೋದರೇ ।
ತತಶ್ಚ ದಾಮೋದರತಾಂ ಸ ಯಯೌ ದಾಮಬಂಧನಾತ್ ॥ – ವಿಷ್ಣುಪುರಾಣ (ಅಂಶ ೬, ಶ್ಲೋ..೨೦)

೨. ಧುನಿಸ್ತಥಾ ಚಮುರಪೀತ್ಯಪಿಪದಸಂಬಂಧಃ । ಅನೋಕ್ಷಃ = ಶಕಟಾಕ್ಷಃ ॥ – (ವಾ.)

೩. ತೃಣಂ ಉತ್ ಊರ್ಧ್ವಂ ಭ್ರಾಮಯತೀತಿ ತೃಣೋದ್ಭ್ರಮಿಃ = ತೃಣಾವರ್ತಃ ॥ – (ವಾ.)

ಧುನಿಶ್ಚಮುಶ್ಚ ತೌ ತರೂ ಸಮಾಶ್ರಿತೌ ನಿಷೂದಿತೌ ॥ ೨೨ ॥
ತರುಪ್ರಭಂಗತೋಽಮುನಾ ತರೂ ಚ ಶಾಪಸಂಭವೌ ।

ಅ: ಧುನಿ ಮತ್ತು ಚಮು ಇಬ್ಬರೂ ಅರ್ಜುನವೃಕ್ಷಗಳಲ್ಲಿ ನೆಲೆಸಿದರು. ಕೃಷ್ಣನು ಮರಗಳನ್ನು ಮುರಿಯುವ ಮೂಲಕ ಅವರನ್ನೂ ಸಂಹರಿಸಿದ. ಆ ಮರಗಳೂ ಶಾಪದಿಂದ ಹುಟ್ಟಿದವುಗಳೇ.

ಪುರಾ ಹಿ ನಾರದಾಂತಿಕೇ ದಿಗಂಬರೌ ಶಶಾಪ ಸಃ ॥ ೨೩ ॥
ಧನೇಶಪುತ್ರಕೌ ದ್ರುತಂ ತರುತ್ವಮಾಪ್ನುತಂ ತ್ವಿತಿ ।

ಅ: ಹಿಂದೆ ಕುಬೇರನ ಮಕ್ಕಳು ನಾರದರ ಬಳಿಯಲ್ಲಿ ದಿಗಂಬರರಾಗಿ ನಿಂತಿದ್ದರು. ''ನೀವಿಬ್ಬರೂ ಕೂಡಲೆ ಮರವಾಗಿ ಜನಿಸಿರಿ'' ಎಂದು ಅವರಿಬ್ಬರನ್ನೂ ನಾರದಮುನಿ ಶಪಿಸಿದ.

ಏ: ೧) ೧೯ನೆಯ ಶ್ಲೋಕದಲ್ಲಿ 'ಸುರಾತ್ಮಜೌ' ಎಂದು ಉಲ್ಲೇಖಿಸಿದ್ದರ ವಿವರ ಇಲ್ಲಿದೆ.

೨) ನಳಕೂಬರ ಮತ್ತು ಮಣಿಗ್ರೀವ ಎಂಬ ಇಬ್ಬರೂ ಕುಬೇರನ [೨]ಪುತ್ರರು, ಶಿವನ ಸೇವಕರು. ಅವರಿಬ್ಬರೂ ಮದ್ಯಪಾನ ಮಾಡಿ, ಸ್ತ್ರೀಯರೊಡನೆ ದೇವಗಂಗೆಯಲ್ಲಿ ಜಲಕ್ರೀಡೆಯಾಡುತ್ತಿದ್ದಾಗ ನಾರದರು ಆಗಮಿಸಿದರು. ಸ್ತ್ರೀಯರು ಗೌರವ, ನಾಚಿಕೆಗಳಿಂದ ವಸ್ತ್ರ ಧರಿಸಿದರೂ, ಅವರಿಬ್ಬರು ಐಶ್ವರ್ಯಮದದಿಂದ ದಿಗಂಬರರಾಗಿಯೇ ನಾರದರ ಮುಂದೆ ನಿಂತು

---

೧. ಶಾಪಸಂಭವೌ = ನಾರದಶಾಪೇನ ಸಂಭವೋ ಯಯೋಸ್ತೌ। ತರೂ= ನಲಕೂಬರಮಣಿಗ್ರೀವಾಖ್ಯಕೌ ವೃಕ್ಷೌ ನಿಷೂದಿತೌ ಅಮುನಾ = ಕೃಷ್ಣೇನ ತರುಪ್ರಭಂಗತೋ ನಿಮಿತ್ತಾತ್ । ತರೂ ಸಮಾಶ್ರಿತೌ ಧುನಿಶ್ಚಮುಶ್ಚ ದಾನವೌ ನಿಷೂದಿತೌ ॥ – (ವಾ.)

೨. ರುದ್ರಸ್ಯಾನುಚರೌ ಭೂತ್ವಾ ಸುದೃಪ್ತೌ ಧನದಾತ್ಮಜೌ ।
ಕೈಲಾಸೋಪವನೇ ರಮ್ಯೇ ಮಂದಾಕಿನ್ಯಾಂ ಮದೋತ್ಕಟೌ ॥
ವಾರುಣೀಂ ಮದಿರಾಂ ಪೀತ್ವಾ ಮದಾಘೂರ್ಣಿತಲೋಚನೌ ।
ಸ್ತ್ರೀಜನೈರನುಗಾಯದ್ಭಿಶ್ಚೇರತುಃ ಪುಷ್ಪಿತೇ ವನೇ ॥
ಅಂತಃ ಪ್ರವಿಶ್ಯ ಗಂಗಾಯಾಮಂಭೋಜವನರಾಜಿನಿ ।
ಚಿಕ್ರೀಡತುರ್ಯುವತಿಭಿರ್ಗಜಾವಿವ ಕರೇಣುಭಿಃ ॥
ಯದೃಚ್ಛಯಾ ಚ ದೇವರ್ಷಿರ್ಭಗವಾಂಸ್ತತ್ರ ಕೌರವ ।
ಅಪಶ್ಯನ್ನಾರದೋ ದೇವೌ ಕ್ಷೀಬಾಣೌ ಸಮಬುಧ್ಯತ ॥
ತಂ ದೃಷ್ಟ್ವಾ ವ್ರೀಡಿತಾ ದೇವ್ಯೋ ವಿವಸ್ತ್ರಾಃ ಶಾಪಶಂಕಿತಾಃ ।
ವಾಸಾಂಸಿ ಪರ್ಯಧುಃ ಶೀಘ್ರಂ ವಿವಸ್ತ್ರೌ ನೈವ ಗುಹ್ಯಕೌ ॥
ತೌ ದೃಷ್ಟ್ವಾ ಮದಿರಾಮತ್ತೌ ಶ್ರೀಮದಾಂಧೌ ಸುರಾತ್ಮಜೌ ।
ತಯೋರನುಗ್ರಹಾರ್ಥಾಯ ಶಾಪಂ ದಾಸ್ಯನ್ನಿದಂ ಜಗೌ – ಭಾಗವತ (೧೦/೧೦/೨-೭)

ಅಪಹಾಸ್ಯ ಮಾಡಿದರು. ನಾರದರು ತತ್ಕ್ಷಣವೇ ವೃಕ್ಷಗಳಾಗಿ ಜನಿಸುವಂತೆ ಶಾಪವಿತ್ತರು; ಕೃಷ್ಣನಿಂದ ಉದ್ಧಾರವಾಗುವುದೆಂದು ವಿಶಾಪವನ್ನೂ ನೀಡಿದರು. ಇದು ಅವರಿಬ್ಬರ ಹಿನ್ನೆಲೆ.

೩) ಅವರಿಬ್ಬರೂ ಕುಬೇರನ ಪುತ್ರರು. ಕುಬೇರ ಧನಾಧಿಪ. ಎಂದರೆ ಅವರು ಹಣವಂತರ ಮಕ್ಕಳು; ಧನದುರ್ಮದಾಂಧರು. ಅದಕ್ಕಾಗಿ ನಾರದಮುನಿಯಂತಹ ಭಗವದ್ಭಕ್ತ-ರನ್ನು ಅವಮಾನಿಸಿದರು. ಅವರ ಮದವನ್ನು ಇಳಿಸಲೆಂದು ನಾರದರಿಂದ ಅಂತಹ ಶಾಪ. ವೃಕ್ಷಗಳು ವಸ್ತ್ರರಹಿತವಾದವುಗಳು. ಅದಕ್ಕೆಂದೇ ವಸ್ತ್ರರಹಿತರಾದ ಅವರಿಗೆ [೧]ವೃಕ್ಷವಾಗಿ ಜನಿಸಲೆಂದು ಶಾಪ. ಅವರಿಬ್ಬರೂ ಜೊತೆಯಾಗಿಯೇ ತಪ್ಪು ಮಾಡಿದ್ದರಿಂದ ಅವಳಿವೃಕ್ಷಗಳಾಗಿಯೇ ಜನಿಸಿದರು. ಕರ್ಮಫಲದ ಅನುಭವ ಕರ್ಮಕರಣರೀತಿಗೆ ಅನುಗುಣ ಎಂಬುದಕ್ಕೂ ಇದು ಸೂಚಕ. ಮೂಲತಃ ಭಗವದ್ಭಕ್ತರಾದ್ದರಿಂದ ನಾರದಮುನಿಗಳಿಗೆ ಅವರ ಮೇಲೆ ಕರುಣೆ. ಅದಕ್ಕೆಂದೇ ವಿಶಾಪದಾನ.

ತತೋ ಹಿ ತೌ ನಿಜಾಂ ತನುಂ ಹರೇಃ ಪ್ರಸಾದತಃ ಶುಭೌ ।
ಅವಾಪತುಃ ಸ್ತುತಿಂ ಪ್ರಭೋರ್ವಿಧಾಯ ಜಗ್ಮತುರ್ಗೃಹಮ್ ॥ ೨೪ ॥

ಅ: ಅದರಿಂದ ಸ್ವರೂಪತಃ ಸಜ್ಜನರಾದ ಅವರು ಶ್ರೀಕೃಷ್ಣನ ಪ್ರಸಾದದಿಂದ ನಿಜರೂಪ ಪಡೆದರು. ಶ್ರೀಹರಿಯ ಸ್ತುತಿಯನ್ನು ಮಾಡಿ, ತಮ್ಮ ಲೋಕಕ್ಕೆ ತೆರಳಿದರು.

ವಿ: ೧) ಅವರು ಸ್ವರೂಪತಃ ಸಜ್ಜನರು ಎನ್ನಲು ಅವರು ಮಾಡಿದ ಕೃಷ್ಣಸ್ತುತಿಯೇ ಗಮಕ ಎಂದು ಭಾವ. ಸ್ವಭಾವತಃ ರಾಕ್ಷಸರಾದವರು ಶ್ರೀಹರಿಯನ್ನು ಎಂದೂ ಶರಣುಹೊಂದರು ಎಂಬ ಸೂಚನೆಯೂ ಇಲ್ಲಿದೆ.

ನಲಕೂಬರಮಣಿಗ್ರೀವೌ ಮೋಚಯಿತ್ವಾ ತು ಶಾಪತಃ ।
ವಾಸುದೇವೋಽಥ ಗೋಪಾಲೈರ್ವಿಸ್ಮಿತೈರಭಿವೀಕ್ಷಿತಃ ॥ ೨೫ ॥

---

೧. ಯದಿಮೌ ಲೋಕಪಾಲಸ್ಯ ಪುತ್ರೌ ಭೂತ್ವಾ ತಮಃಪ್ಲುತೌ ।
ನ ವಿವಾಸಸಮಾತ್ಮಾನಂ ವಿಜಾನೀತಃ ಸುದುರ್ಮದೌ ॥
ಅತೋಽರ್ಹತಃ ಸ್ಥಾವರತಾಂ ಸ್ಯಾತಾಂ ನೈವ ಯಥಾ ಪುನಃ ।
ಸ್ಮೃತಿಃ ಸ್ಯಾನ್ಮತ್ಪ್ರಸಾದೇನ ತತ್ರಾಪಿ ಮದನುಗ್ರಹಾತ್ ॥
ವಾಸುದೇವಸ್ಯ ಸಾನ್ನಿಧ್ಯಂ ಲಬ್ಧ್ವಾ ದಿವ್ಯಶರಚ್ಶತೇ ।
ವೃತ್ತೇ ಸ್ವರ್ಲೋಕತಾಂ ಭೂಯೋ ಲಬ್ಧಭಕ್ತೀ ಭವಿಷ್ಯತಃ ॥ – ಭಾಗವತ (೧೦/೧೦/೨೦-೨೨)

ಅ: ನಲಕೂಬರ ಮತ್ತು ಮಣಿಗ್ರೀವರನ್ನು ಶಾಪದಿಂದ ಬಿಡುಗಡೆ ಮಾಡಿದ ಕೃಷ್ಣನನ್ನು ಗೋಪಾಲಕರು ಅಚ್ಚರಿಯಿಂದ ನೋಡತೊಡಗಿದರು.

ಎ: ಕೃಷ್ಣನ ಈ ಮಹಿಮೆಯನ್ನು ಕಣ್ಣಾರೆ ಕಂಡ ಗೋಪಾಲಕರಿಗೆಲ್ಲ ಅಪಾರವಿಸ್ಮಯ ಹುಟ್ಟಿದ್ದು ಸಹಜ ಎಂದರ್ಥ.

ತೋಳಗಳ ಸೃಷ್ಟಿ

ವೃಂದಾವನಂ ಯಿಯಾಸುಃ ಸನ್ ನಂದಸೂನುರ್ಬೃಹದ್ವನೇ ।
ಸಸರ್ಜ ರೋಮಕೂಪೇಭ್ಯೋ ವೃಕಾನ್ ವ್ಯಾಘ್ರಸಮಾನ್ ಬಲೇ ॥ ೨೬ ॥

ಅ: ವೃಂದಾವನಕ್ಕೆ ತೆರಳಬಯಸಿದವನಾಗಿ ನಂದಸೂನುವಾದ ಕೃಷ್ಣ ಗೋಕುಲದಲ್ಲಿ ಬಲದಲ್ಲಿ ಹುಲಿಗೆ ಸಮಾನವಾದ ತೋಳಗಳನ್ನು ತನ್ನ ರೋಮಕೂಪಗಳಿಂದ ಸೃಷ್ಟಿಮಾಡಿದ.

ಎ: ೧) ಗೋಕುಲದಲ್ಲಿ ತೃಣಾವರ್ತಾದಿಗಳನ್ನು ಸಂಹರಿಸಿದ ಕೃಷ್ಣ ಇನ್ನು ಅಲ್ಲಿಗೆ ಅಂಜಿದ ದೈತ್ಯವೃಂದ ಬರಲಾರದೆಂದು ತಿಳಿದು, ಅಲ್ಲಿಂದ ವೃಂದಾವನಕ್ಕೆ ತೆರಳಬಯಸಿದ. ಅಲ್ಲಿಗೆ ದೈತ್ಯರು ಮತ್ತೆ ಬಂದು ಅವರೆಲ್ಲ ನಾಶ ಹೊಂದಲಿ ಎಂಬುದು ಅವನ ಸಂಕಲ್ಪ. ಆದರೆ ಹಾಗೆ ಗೋಕುಲ ಬಿಟ್ಟು ವೃಂದಾವನಕ್ಕೆ ವಲಸೆ ಹೋಗಲು ನಂದಾದಿಗೋಪಾಲಕರು ಸಿದ್ಧರಾಗುವುದು ಅಷ್ಟು ಸುಲಭವಲ್ಲ. ಅದಕ್ಕೆಂದು ಕೃಷ್ಣ ಅಲ್ಲಿ ಅಸಂಖ್ಯವಾದ ತೋಳಗಳ ಪಡೆಯನ್ನೇ ಸೃಷ್ಟಿಸಿದ. ಹಾಗೆ ಸೃಷ್ಟಿಸಿದ ತೋಳಗಳಿಗೆಲ್ಲ ಶ್ರೀವತ್ಸದ ಚಿಹ್ನೆ ಇತ್ತೆಂಬ ಮಾತು [೧]ಹರಿವಂಶದಲ್ಲಿ ಬಂದಿದೆ.

೨) ಅವೆಲ್ಲ ಶ್ರೀವತ್ಸಲಾಂಛಿತವಾದ್ದರಿಂದ ಕೃಷ್ಣನ ರೂಪಗಳೇ ಎಂಬ ವಿವರ [೨]ಸತ್ಯಧರ್ಮೀಯಭಾಗವತಟಿಪ್ಪಣಿಯಲ್ಲಿದೆ.

೩) ಸಂಕಲ್ಪಮಾತ್ರದಿಂದಲೇ ಹಾಗೆ ಅಸಂಖ್ಯತೋಳಗಳ ಸೃಷ್ಟಿ ಮಾಡುವ ಮೂಲಕ ಕೃಷ್ಣ ತಾನು ಸಾಕ್ಷಾತ್ ಶ್ರೀಹರಿ ಎಂಬುದನ್ನು ಸ್ಫುಟಪಡಿಸಿದ ಎಂದೂ ತಿಳಿಯಬೇಕು.

---

೧. ಏವಂ ಕಥಯತಸ್ತಸ್ಯ ವಾಸುದೇವಸ್ಯ ಧೀಮತಃ ।
ಪ್ರಾದುರ್ಬಭೂವುಃ ಶತಶೋ ರಕ್ತಮಾಂಸಮಹಾಶನಾಃ ।
ಘೋರಾಶ್ಚಿಂತಯತಸ್ತಸ್ಯ ಸ್ವತನೂರುಹತಸ್ತಥಾ ।
ವಿನಿಷ್ಪೇತುರ್ಭಯಕರಾಃ ಸರ್ವತಶ್ಶತಶೋ ವೃಕಾಃ ॥....
ನಿಶ್ಚೇರುಸ್ತಸ್ಯ ಗಾತ್ರೇಭ್ಯಃ ಶ್ರೀವತ್ಸಕೃತಲಕ್ಷಣಾಃ ॥ – ಹರಿವಂಶೇ (೨/೮/೩೦, ೩೧, ೩೪)

೨. ಉತ್ಪಾತಾ ವೃಕಾದ್ಯಾಃ । ಯಥೋಕ್ತಂ ಹರಿವಂಶೇ 'ನಿಶ್ಚೇರುಸ್ತಸ್ಯ ಗಾತ್ರೇಭ್ಯಃ ಶ್ರೀವತ್ಸಕೃತ ಲಕ್ಷಣಾಃ' ಇತಿ । ತೇ ಚ ಸ್ಥಲಾಂತರಗಮನಮನಸಾ ಶ್ರೀಕೃಷ್ಣೇನ ಬಹಿರಾವಿರ್ಭಾವಿತಾಸ್ತದಾತ್ಮನಾ ಇತಿ ಜ್ಞೇಯಮ್ । ಶ್ರೀವತ್ಸಕೃತಲಕ್ಷಣಾ ಇತಿ ತದಸಾಧಾರಣಲಕ್ಷಣೋಕ್ತೇಃ । – ಸತ್ಯಧರ್ಮೀಯ

ಅನೇಕಕೋಟಿಸಂಘೈಸ್ತೈಃ ಪೀಡ್ಯಮಾನಾ ವ್ರಜಾಲಯಾಃ ।
ಯಯುರ್ಬ್ಯಂದಾವನಂ ನಿತ್ಯಾನಂದಮಾದಾಯ ನಂದಜಮ್ ॥ ೨೭ ॥

ಅ: ಅನೇಕಕೋಟಿತೋಳಗಳ ಹಿಂಡುಗಳಿಂದ ಪೀಡಿತರಾದ ಗೋಕುಲದ ಜನ ನಿತ್ಯಾನಂದನಾದ ಶ್ರೀಕೃಷ್ಣನನ್ನು ಕರೆದುಕೊಂಡು ವೃಂದಾವನಕ್ಕೆ ತೆರಳಿದರು.

ವಿ: ರೋಗಾದ್ಯುಪದ್ರವ ಒದಗಿದಾಗ ಹೀಗೆ ವಲಸೆ ಹೋಗುವುದು ಎಲ್ಲ ಕಡೆಗಳಲ್ಲಿ ರೂಢಿಯಲ್ಲಿರುವ ಪದ್ಧತಿ. ಅದಕ್ಕೆ ಈ ಪ್ರಸಂಗ ಸ್ಫೂರ್ತಿಯಾಗಿದೆಯೆಂದು ಭಾವಿಸಬಹುದು.

ವೃಂದಾವನದಲ್ಲಿ ವೃಂದಾರಕವಂದ್ಯ

ಇಂದಿರಾಪತಿರಾನಂದಪೂರ್ಣೋ ವೃಂದಾವನೇ ಪ್ರಭುಃ ।
ನಂದಯಾಮಾಸ ನಂದಾದೀನುದ್ದಾಮತರಚೇಷ್ಟಿತೈಃ[೧] ॥ ೨೮ ॥

ಅ: ಆನಂದಪೂರ್ಣನೂ, ಲಕ್ಷ್ಮೀಪತಿಯೂ ಆದ ಪ್ರಭು ಶ್ರೀಕೃಷ್ಣ ತನ್ನ ಅತ್ಯುತ್ಕೃಷ್ಟವಾದ ಲೀಲೆಗಳಿಂದ ವೃಂದಾವನದಲ್ಲಿ ನಂದ ಮೊದಲಾದವರನ್ನು ಆನಂದಪಡಿಸಿದ.

ವತ್ಸಪಾಲನಾದ ಸರ್ವಪಾಲ

ಸ[೨] ಚಂದ್ರತೋ ಹಸತ್ಕಾಂತವದನೇನೇಂದುವರ್ಚಸಾ ।
ಸಂಯುತೋ ರೌಹಿಣೇಯೇನ ವತ್ಸಪಾಲೋ ಬಭೂವ ಹ ॥ ೨೯ ॥

ಅ: ಚಂದ್ರನನ್ನು ಮೀರಿಸುವ ಸುಂದರವಾದ ಮುಖದಿಂದ ಕೂಡಿದ ಚಂದ್ರಕಾಂತಿಯ ಬಲರಾಮನೊಂದಿಗೆ ಕೂಡಿಕೊಂಡು ಕೃಷ್ಣ ವತ್ಸಪಾಲಕ(ಕರುಗಳನ್ನು ಕಾಯುವವ)ನಾದನು; ಆಶ್ಚರ್ಯ!

ವಿ: ೧) ಗೋಪಾಲನಾಗುವ ಮುನ್ನ ಸರ್ವಪಾಲಕನಾದ ಕೃಷ್ಣ ಗೋವತ್ಸಪಾಲಕನಾದ. ದೊಡ್ಡ ಗೋವುಗಳನ್ನು ಕಾಯುವ ಅವಕಾಶ ನೀಡುವ ಮುನ್ನ ಚಿಕ್ಕವರಿಗೆ ಕರುಗಳನ್ನು ಕಾಯುವ ಅವಕಾಶ ನೀಡುವುದು ಗೊಲ್ಲರ ಪದ್ಧತಿ. ಲೋಕವಿಡಂಬಕನಾದ ಕೃಷ್ಣ ಹಾಗೆ ನಡೆದುಕೊಂಡ ಎಂದರ್ಥ.

೨) ಶ್ರೀಕೃಷ್ಣನ ವತ್ಸಪಾಲನೆಯ ವೈಭವವನ್ನು ಶ್ರೀವಿಜಯದಾಸರು 'ಕಾದನಾ ವತ್ಸವ ಹರಿ' ಎಂಬ ಕೀರ್ತನೆಯಲ್ಲಿ ಮನೋಜ್ಞವಾಗಿ ವರ್ಣಿಸಿರುವರು.

---

೧. ಉದ್ದಾಮತರೈರತಿಪ್ರೌಢೈಶ್ಚೇಷ್ಟಿತೈಃ ಸ್ವಕೃತಕರ್ಮಭಿರ್ನಂದಯಾಮಾಸ ಸಂತೋಷಯಾಮಾಸ ॥ – (ಜ.)

೨. ತಸೇಃ ಸಾರ್ವವಿಭಕ್ತಿಕತ್ವಾತ್ । ಚಂದ್ರತಃ = ಚಂದ್ರಮಿತಿ ದ್ವಿತೀಯಾ ॥ – (ವಾ.)

ವತ್ಸಾಸುರ ಬಕಾಸುರರ ಸಂಹಾರ

ದೈತ್ಯಂ ಸ ವತ್ಸತನುಮಪ್ರಮಯಃ[೧] ಪ್ರಗೃಹ್ಯ
ಕಂಸಾನುಗಂ ಹರವರಾದಪರೈರವಧ್ಯಮ್ ।
ಪ್ರಕ್ಷಿಪ್ಯ ವೃಕ್ಷಶಿರಸಿ ನ್ಯಹನದ್ಬಕೋಽಪಿ
ಕಂಸಾನುಗೋಽಥ ವಿಭುಮಚ್ಯುತಮಾಸಸಾದ ॥ ೩೦ ॥

ಅ: ಶಿವನ ವರದಿಂದಾಗಿ ಇತರರಿಂದ ಅವಧ್ಯನಾಗಿದ್ದ ಕಂಸಭೃತ್ಯನಾಗಿದ್ದ ಕರುರೂಪದ ದೈತ್ಯನನ್ನು ಅಪ್ರಮೇಯನಾದ ಕೃಷ್ಣ ಮರದ ಮೇಲೆ ಅಪ್ಪಳಿಸಿ ಸಂಹರಿಸಿದ. ಬಳಿಕ ಕಂಸಭೃತ್ಯನಾದ ಬಕ ಸರ್ವಸಮರ್ಥನಾದ ಕೃಷ್ಣನ ಬಳಿಗೆ ಬಂದ.

ವಿ: ೧) [೨]ಕೃಷ್ಣ ಹಾಗೆ ವತ್ಸಾಸುರನನ್ನು ಸಂಹರಿಸಿದ್ದು ಬೇಲದ ಮರದ ಮೇಲೆ ಎಸೆದು. ಆಗ ಬೇಲದ ಹಣ್ಣುಗಳು ಕೆಳಕ್ಕೆ ಉದುರಿದವು. ಗೋಪಾಲಬಾಲರು ಅಚ್ಚರಿಗೊಂಡರು; ದೇವತೆಗಳು ಸಂಭ್ರಮದಿಂದ ಪುಷ್ಪವೃಷ್ಟಿಗೈದರು.

೨) 'ಅಪ್ರಮಯ' ಎಂದರೆ ಅಪ್ರಮೇಯ ಎಂದರ್ಥ. 'ಅಪ್ರಮಶ್ಚಾಸೌ ಯಶ್ಚೇತಿ' ಎಂದು ವಿಗ್ರಹ ಮಾಡಿದರೆ ''ಸ್ವಯಂ ಕೃಷ್ಣನು ದೈತ್ಯರಿಗೆ ತಿಳಿಯಲಾಗದವನು; ಆ ದೈತ್ಯನನ್ನು

---

೧. ಪ್ರಕರ್ಷೇಣ ಮಾ = ಜ್ಞಾನಂ ನ ಯಸ್ಮಿನ್ ಸೋಽಪ್ರಮಃ । ''ಯಾ ಪ್ರಾಪಣ'' ಇತಿ ಧಾತೋಃ ಸ್ವಯಂ ಜ್ಞಾನರೂಪಶ್ಚ । ಅಪ್ರಮಶ್ಚಾಸೌ ಯಶ್ಚೇತಿ ವಿಗ್ರಹಃ ಸ ತು ಕೃಷ್ಣಂ ಸರ್ವೇಶ್ವರಂ ನ ಜಾನಾತಿ । ಕೃಷ್ಣಸ್ತು ತಂ ದೈತ್ಯಂ ಜನಾತೀತಿ ಭಾವಃ । ಯದ್ವಾ ''ಮಾಙ್ ಮಾನ'' ಇತಿ ಧಾತೋಃ ಕರ್ಮಣ್ಯಾಣ್ಯಾದಿಕೇ ಡಪ್ರತ್ಯಯೇ ಕೃತೇ ಅಪ್ರಮೇಯ ಏವಾಪ್ರಮಯಃ ॥ – (ವಾ.

ಅಪ್ರಮಯಃ ಪ್ರಮಿತಿಃ ಪ್ರಮಃ ಘಞರ್ಥೇ ಕಃ ತೇನ ಪ್ರಮೀಯತ ಇತಿ ಪ್ರಮಯಃ ನ ಪ್ರಮಯಃ ಅಪ್ರಮಯಃ ಜ್ಞಾತುಮಶಕ್ಯ ಇತ್ಯರ್ಥಃ – (ಜ.)

ಅಪ್ರಮೇಯಃ ಪ್ರಕೃಷ್ಟಾಪ್ರಮಾ ಯೇಷಾಂ ತೇ ಪ್ರಮಾಃ ಪ್ರಜ್ಞಾಃ ತೈರೀಯತೇ ಪ್ರಾಪ್ಯತೇ ಸಾಕಲ್ಯೇನ ಜ್ಞಾಯತ ಇತಿ ಪ್ರಮಯಃ । ನ ಪ್ರಮಯಃ ಅಪ್ರಮಯಃ ಪ್ರಾಜ್ಞೈರಪಿ ಸಾಕಲ್ಯೇನ ಜ್ಞಾತುಮಶಕ್ಯ ಇತಿ ಯಾವತ್ । – (ವ.)

೨. ತಂ ವತ್ಸರೂಪಿಣಂ ವೀಕ್ಷ್ಯ ವತ್ಸಯೂಥಗತಂ ಹರಿಃ ।
ದರ್ಶಯನ್ ಬಲದೇವಾಯ ಶನೈರ್ಮುಗ್ಧ ಇವಾಸದತ್ ॥
ಗೃಹೀತ್ವಾಪರಪಾದಾಭ್ಯಾಂ ಸಹಲಾಂಗೂಲಮಚ್ಯುತಃ ।
ಭ್ರಾಮಯಿತ್ವಾ ಕಪಿತ್ಥಾಗ್ರೇ ಪ್ರಾಹಿಣೋದ್ಗಜಜೀವಿತಮ್ ।
ಸ ಕಪಿತ್ಥೈರ್ಮಹಾಕಾಯಃ ಪಾತ್ಯಮಾನೈಃ ಪಪಾತ ಹ ॥
ತಂ ವೀಕ್ಷ್ಯ ವಿಸ್ಮಿತಾ ಬಾಲಾಃ ಶಶಂಸುಃ ಸಾಧು ಸಾಧ್ವಿತಿ ।
ದೇವಾಶ್ಚ ಪರಿಸಂತುಷ್ಟಾ ಬಭೂವುಃ ಪುಷ್ಪವೃಷ್ಟಿಣಃ ॥ – ಭಾಗವತ(೧೦/೧೧/೪೨-೪೪)

ಮಾತ್ರ ಕೃಷ್ಣ ಪೂರ್ಣ ಬಲ್ಲವನು'' ಎಂದು ಅರ್ಥವಾಗುವುದು ಎಂಬ ವಿಶೇಷಾಂಶ ವಾದಿರಾಜೀಯದಲ್ಲಿದೆ.

ಸ್ಕಂದಪ್ರಸಾದಕವಚಃ ಸ ಮುಖೇ ಚಕಾರ
ಗೋವಿಂದಮಗ್ನಿವದಮುಂ ಪ್ರದಹಂತಮುಚ್ಚೈಃ ।
ಚಚ್ಛರ್ದ ತುಂಡಶಿರಸೈವ ನಿಹಂತುಮೇನ-
ಮಾಯಾಂತಮೀಕ್ಷ್ಯ ಜಗೃಹೇ ಽಸ್ಯ ಸ ತುಂಡಮೀಶಃ ॥ ೩೧ ॥

ಅ: ಷಣ್ಮುಖನ ವರದಿಂದ ರಕ್ಷಿತನಾಗಿದ್ದ ಬಕ ಕೃಷ್ಣನನ್ನು ನುಂಗಿದ. ಒಳಗೆ ಬೆಂಕಿಯಂತೆ ಸುಡತೊಡಗಿದ ಕೃಷ್ಣನನ್ನು ಅವನು ಹೊರಕ್ಕೆ ಹಾಕಿದ. ಬಳಿಕ ಕೊಕ್ಕಿನ ತುದಿಯಿಂದ ತನ್ನನ್ನು ಕೊಲ್ಲಲೆಂದು ನುಗ್ಗಿದ ಅವನನ್ನು ನೋಡಿ ಕೃಷ್ಣ ಅವನ ಕೊಕ್ಕನ್ನು ಹಿಡಿದ.

ತುಂಡದ್ವಯಂ ಯದುಪತಿಃ ಕರಪಲ್ಲವಾಭ್ಯಾಂ
ಸಂಗೃಹ್ಯ ಚಾಶು ವಿದದಾರ ಹ ಪಕ್ಷಿದೈತ್ಯಮ್ ।
ಬ್ರಹ್ಮಾದಿಭಿಃ ಕುಸುಮವರ್ಷಿಭಿರೀಡ್ಯಮಾನಃ
ಸಾಯಂ ಯಯೌ ವ್ರಜಭುವಂ ಸಹಿತೋ ಽಗ್ರಜೇನ ॥ ೩೨ ॥

ಅ: ಎಸಳಿನಂತಹ ತನ್ನ ಕೈಗಳಿಂದ ಕೃಷ್ಣ ಅವನ ಎರಡು ಕೊಕ್ಕುಗಳನ್ನು ತಕ್ಷಣವೇ ಹಿಡಿದು, ಆ ಪಕ್ಷಿರೂಪದ ದೈತ್ಯನನ್ನು ಸೀಳಿಹಾಕಿದ. ಹೂಮಳೆ ಸುರಿಸಿ ಬ್ರಹ್ಮಾದಿಗಳು ಅವನನ್ನು ಸ್ತುತಿಸಿದರು. ಸಂಜೆ ಅಣ್ಣನೊಂದಿಗೆ ಕೃಷ್ಣ ಗೋಕುಲಕ್ಕೆ ಮರಳಿದ.

ವಿ: ೧) ಶ್ರೀಕೃಷ್ಣ ಹೀಗೆ ಸ್ಕಂದನ ವರವಿದ್ದ ಬಕಾಸುರನನ್ನು ಸಂಹರಿಸಿದ್ದು ಸ್ಕಾಂದಮತನಿರಾಸಕ್ಕೆ ಸಂಕೇತವೂ ಆಯಿತು. ಭೀಮನು ಏಕಚಕ್ರನಗರದಲ್ಲಿ ಬಕಾಸುರನೊಬ್ಬನನ್ನು ಸಂಹರಿಸಿದ ಪ್ರಸಂಗ ಮುಂದೆ ಬರುತ್ತದೆ (೧೯/೯೨).

೨) ಸ್ಕಂದವರದಿಂದ ಕೂಡಿದ್ದ ಆ ದೈತ್ಯನನ್ನು ಕೃಷ್ಣ ತನ್ನ ಕೋಮಲಕೈಗಳಿಂದ ಸೀಳಿ ಬಿಸುಟಿದ್ದು ಅವನ ಅಗಾಧಬಲಕ್ಕೆ ಗಮಕ. ಬ್ರಹ್ಮಾದಿಗಳು ಮಾಡಿದ ಪುಷ್ಪವೃಷ್ಟಿ ಅವನ ಸರ್ವೋತ್ತಮತ್ವಕ್ಕೆ ದ್ಯೋತಕ.

೩) ಇಲ್ಲಿ 'ವ್ರಜಭುವಂ' ಎಂದರೆ ವೃಂದಾವನ ಎಂದೇ ಅರ್ಥ. 'ವ್ರಜಸ್ತತ್ಪಾಲಸಂಸ್ಥಿತಿಃ' (ಭಾ.ತಾ. ೪/೮/೩೧) ಎಂಬ ವಿವರಣೆಯಂತೆ ಗೋಪರ ತಾಣವೇ ಗೋಕುಲವಲ್ಲವೆ!

೪) ಬಕ ಆಷಾಢಭೂತಿತನಕ್ಕೆ ಸಂಕೇತ. ಭಗವಂತ ಅಂತಹವನನ್ನು ಅನುಗ್ರಹಿಸದೆ ನಿಗ್ರಹಿಸುವನು ಎಂದು ಇದರ ಧ್ವನಿ.

೫) ಇಲ್ಲಿ ಭಾಗವತದ ಶ್ಲೋಕಗಳನ್ನು ಶಬ್ದತಃ ಸಹ ಅನುಸರಿಸಿರುವುದು ಗಮನಾರ್ಹ :

ತಂ ತಾಲುಮೂಲಂ ಪ್ರದಹಂತಮಗ್ನಿವತ್ .... ಚಚ್ಛರ್ದ .... ಬಕಸ್ತುಂಡೇನ ಹಂತುಂ .... ॥ ತಮಾಪತಂತಂ ಸ ನಿಗೃಹ್ಯ ತುಂಡಯೋರ್ದೋರ್ಭ್ಯಾಂ ಬಕಂ .... ದದಾರ ಲೀಲಯಾ.... ॥ ತದಾ ಬಕಾರಿಂ ಸುರಲೋಕವಾಸಿನಃ ಸಮಾಕಿರನ್ ನಂದನಮಲ್ಲಿಕಾದಿಭಿಃ। ಸಮೀಡಿರೇ .... ॥ — ಭಾಗವತ (೧೦/೧೧/೫೦-೫೨)

ಏವಂ ಸ ದೇವವರವಂದಿತಪಾದಪದ್ಮೋ
ಗೋಪಾಲಕೇಷು ವಿಹರನ್ ಭುವಿ ಷಷ್ಠಮಬ್ದಮ್ ।
ಪ್ರಾಪ್ತೋ ಗವಾಮಖಿಲಪೋಽಪಿ ಸ ಪಾಲಕೋಽಭೂತ್
ವೃಂದಾವನಾಂತರಗಸಾಂದ್ರಲತಾವಿತಾನೇ[೧] ॥ ೩೩ ॥

ಅ: ಹೀಗೆ ದೇವಶ್ರೇಷ್ಠರಿಂದ ವಂದಿತಪಾದಕಮಲನಾದ ಶ್ರೀಕೃಷ್ಣ ಗೊಲ್ಲರ ನಡುವೆ ವಿಹರಿಸುತ್ತಾ ಆರನೆಯ ವರ್ಷವನ್ನು ತಲುಪಿದ. ಸರ್ವಪಾಲಕನಾದ ಅವನು ವೃಂದಾವನದಲ್ಲಿನ ದಟ್ಟವಾಗಿ ಬಳ್ಳಿಗಳು ತುಂಬಿದ್ದ ವಿಶಾಲಪ್ರದೇಶದಲ್ಲಿ ಗೋವುಗಳನ್ನು ಪಾಲಿಸತೊಡಗಿದ.

ಕಾಲಿಯಮಥನ

ಜ್ಯೇಷ್ಠಂ ವಿಹಾಯ ಸ ಕದಾಚಿದಚಿಂತ್ಯಶಕ್ತಿ-
ರ್ಗೋಗೋಪಗೋಗಣಯುತೋ[೨] ಯಮುನಾತಟೇಷು ।
ರೇಮೇ ಭವಿಷ್ಯದನುವೀಕ್ಷ್ಯ ಹಿ ಗೋಪದುಃಖಂ
ತದ್ಬೋಧನಾಯ ನಿಜಮಗ್ರಜಮೇಷು ಸೋಽಧಾತ್ ॥ ೩೪ ॥

---

೧. ವೃಂದಾವನಾಂತರಗಸಾಂದ್ರಲತಾವಿತಾನೇ ಇತ್ಯತ್ರ ವೃಂದಾವನಾಂತರಗಸಾಂದ್ರಲತಾವಿತಾನೇ = ಪ್ರದೇಶೇ ಗವಾಂ ಪಾಲಕೋಽಭೂದಿತ್ಯನ್ವಯಃ ॥ — (ವಾ.

...ವಿತಾನೇ ವಿಸ್ತೀರ್ಣೇ ವನೇ ಇತಿ ಶೇಷಃ । — (ವ.)

೨. ''ಗುಪೂ ರಕ್ಷಣ'' ಇತಿ ಧಾತೋಃ ಗಾಃ ಗೋಪಯಂತಿ ರಕ್ಷಂತೀತಿ ಗೋಗೋಪಾಃ ಗೋಪಾಲಾಃ । ಅತೋ ನ ಪುನರುಕ್ತಿಃ ॥ — (ವಾ.

ಗೋಗೋಪಗೋಗಣಯುತಃ ಗಾಃ ಗೋಪಾಯಂತಿ ಪಾಲಯಂತೀತಿ ಗೋಗೋಪಾಃ । — (ಜ.)

ಅ: ಅಚಿಂತ್ಯಶಕ್ತಿಯ ಶ್ರೀಕೃಷ್ಣ ಒಮ್ಮೆ ಅಣ್ಣನಾದ ಬಲರಾಮನನ್ನು ಬಿಟ್ಟು ಗೋಪಾಲಕರ ಗುಂಪುಗಳೊಂದಿಗೂ, ಗೋವುಗಳ ಹಿಂಡುಗಳೊಂದಿಗೂ ಕೂಡಿಕೊಂಡು ಯಮುನೆಯ ತೀರಗಳಲ್ಲಿ ಕ್ರೀಡಿಸಿದ. ಮುಂದೆ ಒದಗಲಿದ್ದ ಗೋಪರ ದುಃಖವನ್ನು ಗಮನಿಸಿ, ಅವರಿಗೆ ತನ್ನ ಮಹಿಮೆಯನ್ನು ತಿಳಿಸಲೆಂದು ಅಣ್ಣನಾದ ಬಲರಾಮನನ್ನು ಅವರ ಬಳಿಯೇ ಬಿಟ್ಟಿದ್ದ.

ವಿ: ಕೃಷ್ಣ ಅಂದು ಹಾಗೆ ತೆರಳಿದ್ದು ಕಾಲಿಯನ ದಮನಕ್ಕೆಂದು. ಕೃಷ್ಣ ಕಾಲಿಯನಿದ್ದ ಮಡುವಿನಲ್ಲಿ ಧುಮುಕಿದಾಗ ಗೋಪರು ಅಂಜಿಕೆಯಿಂದ ದುಃಖಿಸಿದಾಗ ಅವರಿಗೆ ಕೃಷ್ಣನ ಹಿರಿಮೆಯನ್ನು ತಿಳಿಸಿ ದುಃಖಶಮನ ಮಾಡಲೆಂದು ಅಣ್ಣನಾದ ಬಲರಾಮನನ್ನು ಅಲ್ಲಿಯೇ ಬಿಟ್ಟು ತಾನೊಬ್ಬನೇ ಇತರ ಗೋಪರೊಂದಿಗೆ ತೆರಳಿದ್ದ ಎಂದರ್ಥ. ಇದು ಕೃಷ್ಣನ ಸರ್ವಜ್ಞತ್ವಕ್ಕೂ, ಬಲರಾಮನ ವಿಶೇಷಹಿರಿಮೆಗೂ ದ್ಯೋತಕ.

ತಂ ಬ್ರಹ್ಮಣೋ ವರಬಲಾದುರಗಂ ತ್ವವಧ್ಯಂ
ಸರ್ವೈರವಾರ್ಯವಿಷವೀರ್ಯಮೃತೇ ಸುಪರ್ಣಾತ್ ।
ವಿಜ್ಞಾಯ ತದ್ವಿಷವಿದೂಷಿತವಾರಿಪಾನ-
ಸನ್ನಾನ್ ಪಶೂನಪಿ ವಯಸ್ಯಜನಾನ್ ಸ ಆವೀತ್ ॥ ೩೫ ॥

ಅ: ಕಾಲಿಯಸರ್ಪವು ಬ್ರಹ್ಮನ ವರದಿಂದಾಗಿ ಅವಧ್ಯವಾಗಿದ್ದನ್ನು, ಗರುಡನ ಹೊರತು ಇತರ ಎಲ್ಲರಿಂದಲೂ ಸಹಿಸಲಾಗದ ವಿಷದ ಬಲದಿಂದ ಕೂಡಿದ್ದನ್ನು ತಿಳಿದು, ಅವನ ವಿಷದಿಂದ ಕಲುಷಿತವಾಗಿದ್ದ ನೀರನ್ನು ಕುಡಿದು ಮೃತವಾದ ಗೋವುಗಳನ್ನೂ, ಗೋಪಮಿತ್ರರನ್ನೂ ಕೃಷ್ಣ ಪಾಲಿಸಿದ.

ವಿ: ಬ್ರಹ್ಮವರದಿಂದಾಗಿ ಕಾಲಿಯ ಅವಧ್ಯನಾಗಿದ್ದ. ಅವನ ವಿಷವನ್ನು ಗರುಡನ ಹೊರತು ಇತರರಾರೂ ತಡೆದುಕೊಳ್ಳುವಂತಿರಲಿಲ್ಲ. ಅದರಿಂದಾಗಿ ಕಲುಷಿತವಾದ ಯಮುನೆಯ ನೀರು ಗೋಗೋಪರಿಗೆ ಮಾರಕವಾಗಿತ್ತು. ಕಾಲಿಯ ದಮನದ ಮೂಲಕ ಆ ಆಪತ್ತನ್ನು ಪರಿಹರಿಸುವುದು ಕೃಷ್ಣನ ಉದ್ದೇಶವಾಗಿತ್ತು ಎಂದರ್ಥ.

ತದ್ದೃಷ್ಟಿದಿವ್ಯಸುಧಯಾ ಸಹಸಾಽಭಿವೃಷ್ಟಾಃ
ಸರ್ವೇಽಪಿ ಜೀವಿತಮವಾಪುರಥೋಚ್ಚಶಾಖಿಮ್ ।
ಕೃಷ್ಣಃ ಕದಂಬಮಧಿರುಹ್ಯ ತತೋಽತಿತುಂಗಾ-
ದಾಸ್ಫೋಟ್ಯ ಗಾಢರಶನೋ ನ್ಯಪತದ್ವಿಷೋದೇ ॥ ೩೬ ॥

ಅ: ಅವನ ನೋಟವೆಂಬ ದಿವ್ಯ ಅಮೃತದಿಂದ ನೆನೆದ ಆ ಗೋಗೋಪರೆಲ್ಲ ಮರಳಿ ಬದುಕಿದರು. ಬಳಿಕ ಕೃಷ್ಣ ಎತ್ತರದ ರೆಂಬೆಗಳಿಂದ ಕೂಡಿದ್ದ ಕದಂಬವೃಕ್ಷವನ್ನು ಏರಿ, ಉತ್ತರೀಯವನ್ನು ಸೊಂಟಕ್ಕೆ ಬಿಗಿದುಕೊಂಡು, ಕೈಗಳಿಂದ ಭುಜಗಳನ್ನು ಚಪ್ಪರಿಸಿಕೊಂಡು ತುಂಬಾ ಎತ್ತರದಿಂದ ವಿಷಜಲದಲ್ಲಿ [೧]ಧುಮುಕಿದ.

ವಿ: ೧) ಒಮ್ಮೆ [೨]ಗರುಡ ಕದ್ರುವಿಗೆ ನೀಡಲೆಂದು ಅಮೃತವನ್ನು ಒಯ್ಯುವಾಗ ಅಮೃತಕಲಶವನ್ನು ಆ ವೃಕ್ಷದ ಮೇಲಿರಿಸಿದ್ದ. ಅದರಿಂದಾಗಿ ಆ ವೃಕ್ಷ ಮಾತ್ರ ಉಳಿದುಕೊಂಡಿತ್ತು. ಅಲ್ಲಿಯ ಉಳಿದೆಲ್ಲ ಗಿಡಮರಗಳು ಕಾಲಿಯನ ವಿಷಜ್ವಾಲೆಯಿಂದ ನಾಶವಾಗಿದ್ದವು.

೨) ಅಮೃತಕ್ಕೆ ವಾಯುದೇವರು ಅಭಿಮಾನಿದೇವತೆ('ವಾಯುರನಿಲಮಮೃತಮ್'). ವಾಯುದೇವರು ಇದ್ದಲ್ಲಿಗೆ ಹರಿ ಬರುವುದು ಶ್ರುತಿಸಿದ್ಧ ('ದೇಹೇಽಪಿ ಯತ್ರ ಪವನೋಽತ್ರ ಹರಿರ್ಯತೋಽಸೌ ತತ್ರೈವ ವಾಯುಃ'); ಅಮೃತದಿಂದಾಗಿ ಬದುಕಿದ್ದ ಕದಂಬದ ಬಳಿಗೆ ಶ್ರೀಕೃಷ್ಣ ತೆರಳಿದ ಹಿನ್ನೆಲೆ ಎಂದರೆ ಇದೇ ಎಂದು ಭಾವಿಸಬಹುದು.

೩) ಶ್ರೀಹರಿ ತನ್ನ ದಿವ್ಯದೃಷ್ಟಿಯಿಂದ ಮಂದರ ಪರ್ವತ ಮೈಮೇಲೆ ಬಿದ್ದದ್ದರಿಂದ ಹತರಾಗಿದ್ದ ಸುರಾಸುರರನ್ನು ಬದುಕಿಸಿದ ವಿವರ ಹಿಂದೆ ಬಂದಿದೆ(೧೦/೭).

ಸಾರ್ಪಹ್ರದಃ ಪುರುಷಸಾರನಿಪಾತವೇಗ-
ಸಂಕ್ಷೋಭಿತೋರಗವಿಷೋಚ್ಛ್ವಸಿತಾಂಬುರಾಶಿಃ ।
ಪರ್ಯಕ್ಪ್ಲುತೋ ವಿಷಕಷಾಯವಿಭೀಷಣೋರ್ಮಿ-
ಭೀಮೋ ಧನುಃಶತಮನಂತಬಲಸ್ಯ ಕಿಂ ತತ್ ॥ ೩೭ ॥

ಅ: ಪರಮಪುರುಷನಾದ ಶ್ರೀಕೃಷ್ಣ ಧುಮುಕಿದ ರಭಸಕ್ಕೆ ಕಾಲಿಯ ತತ್ತರಿಸಿದ. ಅವನ ವಿಷದಿಂದಾಗಿ ಮಡುವಿನ ನೀರು ಉಕ್ಕಿತು. ವಿಷದಿಂದ ಕಲುಷಿತವಾಗಿ ಭಯಂಕರ ಅಲೆಗಳಿಂದ ಕೂಡಿ ಸುತ್ತಲೂ ನೂರು ಧನುಸ್ಸುಗಳ ದೂರದ ಪ್ರದೇಶಕ್ಕೆ ಚಿಮ್ಮಿತು. ಅನಂತಬಲನಾದ ಕೃಷ್ಣನಿಗೆ ಅದೆಷ್ಟರ ವಿಷಯ!

---

೧. ದೃಢರಶನಾಬದ್ಧಕಟಪ್ರದೇಶಃ ಸನ್ ಆಸ್ಫೋಟ್ಯ ತತಃ ಕದಂಬವೃಕ್ಷಾದೂರ್ಧ್ವಂ ಗತ್ವಾ ಅತಿತುಂಗಾತ್ ಪ್ರದೇಶಾತ್ ವಿಷೋದೇ ನ್ಯಪತದಿತಿ ॥ –(ಸ.)

೨. ಕದಂಬಃ ಕಥಮುದ್ಧರಿತ ಇತಿ ಶಂಕಾ – ಗರುಡೇನ ಸುಧಾಹರಣಕಾಲೇ ಸುಧಾಪಾತ್ರಂ ಸ್ಥಾಪಿತಂ, ತೇನ ಸುಧಾಬಿಂದುಪತನಂ ಕೃತಂ, ತೇನೋದ್ಧರಿತ ಇತಿ ಪುರಾಣಪ್ರಸಿದ್ಧ್ಯಾ ನಿರಾಕಾರ್ಯಾ । –(ತಿ.)

ವಿ: ೧) ಕೃಷ್ಣ ಹಾರಿದ ರಭಸಕ್ಕೆ ಮಡುವಿನ ನೀರು ನೂರು ಧನುಸ್ಸುಗಳಷ್ಟು ದೂರ ಚಿಮ್ಮಿತು. ಧನುಸ್ಸಿನಷ್ಟು ದೂರ ಎಂದರೆ ಹನ್ನೆರಡು ದಂಡಗಳಷ್ಟು ದೂರ; ಒಂದು ದಂಡ ಎಂದರೆ ನಾಲ್ಕು ಮೊಳ ಎಂದು [೧]ಜನಾರ್ದನೀಯದಲ್ಲಿದೆ.

೨) ಇಲ್ಲಿ ಅನಂತಬಲ ಎಂಬುದಕ್ಕೆ ಕೊನೆಯಿಲ್ಲದ ಅನಂತಶಕ್ತಿ ಎಂಬ ಅರ್ಥದ ಜೊತೆಗೆ ಅನಂತನಾದ ಶೇಷನಿಗೂ ಬಲ, ಅನಂತಶಬ್ದವಾಚ್ಯನಾದ ಗರುಡನಿಗೂ ಬಲವಾದ ಶ್ರೀಹರಿಗೆ ಈ ಕಾಲಿಯ ಸರ್ಪ ಯಾವ ಲೆಕ್ಕ! ಎಂಬ ಅರ್ಥವೂ ವಿವಕ್ಷಿತ ('ಯೋಽನಂತನಾಮಾ ಗರುಡಸ್ತದಂಸಕೇ' – ೧೦/೬).

೩) ಇದು ಮೂಲತಃ ಭಾಗವತಶ್ಲೋಕವೇ ಆಗಿರುವುದು ಗಮನಾರ್ಹ (೧೦/೧೬/೬,೭).

ತಂ ಯಾಮುನಹ್ರದವಿಲೋಲಕಮಾಪ್ಯ ನಾಗಃ
ಕಾಲ್ಯೋ ನಿಜೈಃ ಸಮದಶತ್ ಸಹ ವಾಸುದೇವಮ್ ।
ಭೋಗೈರ್ಬಬಂಧ ಚ ನಿಜೇಶ್ವರಮೇನಮಜ್ಞಃ
ಸೇಹೇ ತಮೀಶ ಉತ ಭಕ್ತಿಮತೋಽಪರಾಧಮ್ ॥ ೩೮ ॥

ಅ: ಯಮುನೆಯ ಮಡುವನ್ನು ಕದಡಿದ ಕೃಷ್ಣನ ಬಳಿಗೆ ಅಜ್ಞನಾದ ಕಾಲಿಯ ತನ್ನವರೊಂದಿಗೆ ಬಂದು ಅವನನ್ನು ಕಚ್ಚಿದ. ತನ್ನ ಸ್ವಾಮಿಯಾದ ಅವನನ್ನು ತನ್ನ ಅವಯವ-ಗಳಿಂದ ಬಿಗಿದ. ಆದರೆ ಈಶನಾದ ಕೃಷ್ಣ ಭಕ್ತನಾದ ಅವನ ಅಪರಾಧವನ್ನು ಸಹಿಸಿದ.

ವಿ: ೧) ಕೃಷ್ಣ ಭವಪಾಶ ಬಿಡಿಸುವ ವಾಸುದೇವ. ಅವನನ್ನು ಕಾಲಿಯ ಕಚ್ಚಿದ, ಬಿಗಿದ. ಅದಕ್ಕೇ ಅವನು ಅಜ್ಞ ಎಂಬುದು ಖಚಿತ ಎಂದು ಭಾವ. ಹಗ್ಗದಿಂದ ಕೃಷ್ಣನನ್ನು ಕಟ್ಟಿದ ಯಶೋದೆಯಂತೆ ತನ್ನ ದೇಹದಿಂದ ಬಿಗಿದ ಕಾಲಿಯನೂ ಅಜ್ಞನೇ. ಆದರೆ ಇಬ್ಬರೂ ಭಕ್ತರೇ. ಅದಕ್ಕಾಗಿ ಕೃಷ್ಣ ಅವರಿಬ್ಬರನ್ನೂ ಕ್ಷಮಿಸಿದ.

ಉತ್ಪಾತಮೀಕ್ಷ್ಯ ತು ತದಾಽಖಿಲಗೋಪಸಂಘ-
ಸ್ತತ್ರಾಜಗಾಮ ಹಲಿನಾ ಪ್ರತಿಬೋಧಿತೋಽಪಿ ।
ದೃಷ್ಟ್ವಾ ನಿಜಾಶ್ರಯಜನಸ್ಯ ಬಹೋಃ ಸುದುಃಖಂ
ಕೃಷ್ಣಃ ಸ್ವಭಕ್ತಮಪಿ ನಾಗಮಮುಂ ಮಮರ್ದ ॥ ೩೯ ॥

---

೧. ಚತುರ್ಹಸ್ತೈಸ್ತು ದಂಡಕಃ ಧನುರ್ದ್ವಾದಶದಂಡೈಸ್ತು ಇತ್ಯಭಿಧಾನಮ್ । – (ಜ.)
'ಜಲೈರಾಕಾಶಗಂಗಾಯಾ ಐರಾವತಕರೋದ್ಧೃತೈಃ' ಇತಿ ಭಾಗವತೇ । – (ತಿ.)

ಅ: ಆಗ ದುಃಶಕುನವನ್ನು ಕಂಡು ಎಲ್ಲ ಗೋಪರ ಸಮೂಹ ಬಲರಾಮ ಎಷ್ಟು ತಿಳಿಹೇಳಿದರೂ, ಅಲ್ಲಿಗೆ ಧಾವಿಸಿತು. ತನ್ನನ್ನು ನಂಬಿದ ಬಹುಜನರ ಅಪಾರದುಃಖವನ್ನು ಕಂಡು ಕೃಷ್ಣ ತನ್ನ ಭಕ್ತನೇ ಆಗಿದ್ದರೂ, ಆ ನಾಗನನ್ನು ಮರ್ದಿಸತೊಡಗಿದ.

ವಿ: ೧) ವಿಷಯ ತಿಳಿದ ಗೋಪವೃಂದ ತುಂಬಾ ಕಳವಳಗೊಂಡಿತು. ಕೃಷ್ಣನ ಮಹಿಮೆ ಬಲ್ಲ ಬಲರಾಮ ಎಷ್ಟು ಹೇಳಿದರೂ, ಅವರು ಸಮಾಧಾನಗೊಳ್ಳದೆ ಆಮಡುವಿನತ್ತ ಧಾವಿಸಿದರು. ಹಾವು ಸುತ್ತಿದ ಕೃಷ್ಣನನ್ನು ಕಂಡಾಗ ಅವರ ದುಃಖ ಮೇರೆ ಮೀರಿತು. ಅದಕ್ಕೆ ಅವರು ಕೃಷ್ಣ ನ ಮಹಿಮೆಯನ್ನು ಅರಿಯದ್ದೇ ಕಾರಣ. ಆವರೆಗೂ ಭಕ್ತನೆಂಬ ಕಾರಣದಿಂದ ಕಾಲಿಯನ ಅಪರಾಧವನ್ನು ಮನ್ನಿಸಿದ್ದ ಕೃಷ್ಣ ಈಗ ಅಪಾರಸಂಖ್ಯೆಯ ಭಕ್ತರ ನೋವನ್ನು ತೊಲಗಿಸಲು, ಭಕ್ತನಾದ ನಾಗನನ್ನು ಮರ್ದಿಸತೊಡಗಿದ. ಒಬ್ಬನ ಕಲ್ಯಾಣಕ್ಕಿಂತ ಬಹುಜನರ ಕಲ್ಯಾಣ ಮುಖ್ಯ ಎಂಬ ತತ್ತ್ವವನ್ನು ಆ ಮೂಲಕ ಸಾರಿದ – 'ಬಹೂನನುವರ್ತೇತ ವೈಷ್ಣವಾನ್' (೨೯/೨೩).

೨) ಬಲರಾಮ ಹೇಳಿದರೂ ಗೋಪರಿಗೆ ಸ್ತುಃಖಶಮನವಾಗಲಿಲ್ಲ ಎಂಬ ಮಾತಿನಲ್ಲಿ ವಾಯುದೇವರ ಹೊರತು ಬೇರಾರೂ ಹರಿಯ ಮಹಿಮೆಯನ್ನು ಸಮರ್ಥವಾಗಿ ನಿರೂಪಿಸಲಾರರು ಎಂಬ ಸೂಚನೆಯೂ ಅಡಗಿದೆ. ಅದರೊಂದಿಗೆ ಎಷ್ಟು ಕೇಳಿದರೂ, ಕಂಡ ಪರಿಣಾಮ ಆಗಲಾರದು ಎಂಬ ತತ್ತ್ವವೂ ಸೂಚಿತವಾಗಿದೆ.

ತಸ್ಯೋನ್ನತೇಷು ಸ ಫಣೇಷು ನನರ್ತ ಕೃಷ್ಣೋ
ಬ್ರಹ್ಮಾದಿಭಿಃ ಕುಸುಮವರ್ಷಿಭಿರೀಡ್ಯಮಾನಃ ।
ಆರ್ತೋ ಮುಖೈರುರು ವಮನ್ ರುಧಿರಂ ಸ ನಾಗೋ
ನಾರಾಯಣಂ ತಮರಣಂ ಮನಸಾ ಜಗಾಮ ॥ ೪೦ ॥

ಅ: ಅವನ ಎತ್ತರದ ಹೆಡೆಗಳ ಮೇಲೆ ಕೃಷ್ಣ ನರ್ತಿಸತೊಡಗಿದ. ಬ್ರಹ್ಮಾದಿಗಳು ಪುಷ್ಪವೃಷ್ಟಿ ಸುರಿಸಿ ಸ್ತುತಿಸತೊಡಗಿದರು. ಆ ಕಾಲಿಯ ನಾಗ ನೊಂದವನಾಗಿ ತನ್ನ ಮುಖಗಳಿಂದ ರಕ್ತ ಕಾರುತ್ತಾ ಆ ನಾರಾಯಣನನ್ನು ಮನಸ್ಸಿನಿಂದ ಶರಣುಹೊಕ್ಕ.

ವಿ: ೧) ಶ್ರೀಕೃಷ್ಣ ನಾಗನನ್ನು ಮರ್ದಿಸಿದ್ದು ಮಾತ್ರವಲ್ಲದೆ, ಅದರ ಎತ್ತರದ ಹೆಡೆಗಳ ಮೇಲೆ ನರ್ತಿಸತೊಡಗಿದ. ರಕ್ತ ಸುರಿಸತೊಡಗಿದ ನಾಗ ಕೃಷ್ಣನನ್ನು ನಾರಾಯಣನೆಂದು ಅರ್ಥ ಮಾಡಿಕೊಂಡು, ಮನಸ್ಸಿನಿಂದಲೇ ಅವನಿಗೆ ಶರಣಾದ. ಅದು ಶ್ರೀಕೃಷ್ಣನ ಅನುಗ್ರಹವನ್ನು ಸಂಪಾದಿಸಲು ಕಾರಣವಾಯಿತು.

೨) ಆಗ ಬ್ರಹ್ಮದೇವರು ಮೃದಂಗ ಬಾರಿಸಿದರು; ಹನುಮಂತ ಹಾಡತೊಡಗಿದ; ಶಿವ ತಾಳ ಹಾಕಿದ ಎಂದು ಶ್ರೀವಾದಿರಾಜರು ವರ್ಣಿಸಿರುವರು (ರುಕ್ಮಿಣೀಶವಿಜಯ – ೪/೬೮) :

ಅನೀನದತ್ ಪದ್ಮಭವೋ ಮೃದಂಗಂ ಜಗೌ ಹನೂಮಾನ್ ಜಗತಾಮಧೀಶಮ್ ।
ಅದರ್ಶಯತ್ ತಾಲಗತೀಃ ಕಪರ್ದೀ ನನರ್ತ ಗೋಪಾಲಕಬಾಲಮೌಲಿಃ ॥

ಇದರ ಅನುವಾದದಂತಿರುವ ಕನಕದಾಸರ ಮಾತು ಹೀಗಿದೆ :

ಡೋಲಿನ ಮೇಲ್ ಕೈಯ ಬರಮಪ್ಪ ಹಾಕ್ಯಾನು
ತಾಳವ ಶಿವನಪ್ಪ ಕಟದಾನ್ಯಾಕ
ಒಳ್ಕೊಳ್ಳಿ ಪದಗಳ ಹನುಮಪ್ಪ ಹಾಡ್ಯಾನು
ಚಿಲುವ ಕನಕಪ್ಪ ಕುಣಿದಾನ್ಯಾಕ

೩) ಹೀಗೆ ಹಾವಿನ ಬಂಧನವನ್ನು ಗೆದ್ದವರು ಇಬ್ಬರೇ. ಇಲ್ಲಿ ಕೃಷ್ಣ; ದುರ್ಯೋಧನನು ಪ್ರಯೋಗಿಸಿದ ಅಷ್ಟಮಹಾಸರ್ಪ ಮೊದಲಾದವುಗಳನ್ನು ಲೀಲಾಜಾಲವಾಗಿ ಹಿಮ್ಮೆಟ್ಟಿಸಿದ ಭೀಮ. ಇವನು ಸರ್ವೋತ್ತಮ; ಅವನು ಜೀವೋತ್ತಮ. ಹಾಗೆಯೇ ವಿಷವನ್ನು ಜೀರ್ಣಿಸಿಕೊಂಡವರೂ ಈ ಕೃಷ್ಣಭೀಮರಿಬ್ಬರೇ.

೪) ಕೃಷ್ಣ ಸಾವಿರ ಹೆಡೆಯ ಶೇಷನ ಮೇಲೆಯೇ ಪವಡಿಸಿರುವವನು. ಹಾವು ಸಾವಿನ ಸಂಕೇತ. ಅವುಗಳನ್ನು ಸಂಪೂರ್ಣ ಗೆದ್ದವರು ಇವರಿಬ್ಬರೇ. ಶ್ರೀಹರಿಗೆ ಪ್ರಾಕೃತದೇಹವೇ ಇಲ್ಲ; ಬ್ರಹ್ಮವಾಯುಗಳಿಗೆ ಅಂತಹ ದೇಹವಿದ್ದರೂ ಅದರ ಬಂಧನವಿಲ್ಲ ಎಂಬುದು ವಿಶೇಷ. ಹಾವು – ಎಲರುಣಿ; ಎಂದರೆ ಗಾಳಿ ಕುಡಿದು ಬದುಕುವುದು ಎಂದರ್ಥ. ಎಂದರೆ ಶೇಷನಿಗೆ ವಾಯುದೇವರು ಉಪಜೀವ್ಯರು ಎಂದರ್ಥವಾಗುವುದು.

ತಚ್ಚಿತ್ರತಾಂಡವವಿರುಗ್ನಫಣಾತಪತ್ರಂ
ರಕ್ತಂ ವಮಂತಮುರು ಸನ್ನಧಿಯಂ ನಿತಾಂತಮ್ ।
ದೃಷ್ಟ್ವಾ ತ್ವಹಿರಾಜಮುಪಸೇದುರಮುಷ್ಯ ಪತ್ನ್ಯೋ
ನೇಮುಶ್ಚ ಸರ್ವಜಗದಾದಿಗುರುಂ ಭುವೀಶಮ್ ॥ ೪೧ ॥

ಅ: ಕೃಷ್ಣನ ವಿಚಿತ್ರಕುಣಿತದಿಂದ ಕೊಡೆಯಂತಿದ್ದ ಆ ನಾಗನ ಹೆಡೆಗಳು ಘಾಸಿಗೊಂಡವು. ಅವನು ರಕ್ತ ಕಾರುತ್ತಾ ಗಾಢಮೂರ್ಛೆಗೊಳಗಾದ. ಆ ನಾಗನ ಅವಸ್ಥೆಯನ್ನು ಕಂಡು ಅವನ ಪತ್ನಿಯರು ಕೃಷ್ಣನ ಬಳಿ ಬಂದು ಭೂಮಿಯಲ್ಲಿದ್ದ ಸರ್ವಜಗತ್ತಿನ ಆದಿಗುರುವಾದ ಆ ಪ್ರಭುವನ್ನು ನಮಸ್ಕರಿಸಿದರು.

ವಿ: ೧) ಕಾಲಿಯನ ಶೋಚನೀಯಸ್ಥಿತಿಯನ್ನು ಕಂಡು ಅಲ್ಲಿಗೆ ಧಾವಿಸಿದ ಅವನ ಪತ್ನಿಯರು ಕೃಷ್ಣ ನಾರಾಯಣನೆಂದು ತಿಳಿದು ನಮಸ್ಕರಿಸಿ ಸ್ತುತಿಸಿದರು. ಶ್ರೀಮದ್ಭಾಗವತಪುರಾಣದಲ್ಲಿ ಅವರು ಮಾಡಿದ ಸ್ತುತಿಯ ವಿವರವಿದೆ(೧೦/೧೬/೩೩–೫೩).

೨) ತಮ್ಮ ಪತಿಗೊದಗಿದ ಆಪತ್ತಿನ ಪರಿಹಾರಕ್ಕೆ ಭಗವಂತನನ್ನು ಪ್ರಾರ್ಥಿಸಿದ ಅವರು ನಿಜವಾದ ಅರ್ಥದಲ್ಲಿ ಧರ್ಮಪತ್ನಿಯರೆನ್ನಿಸಿದರು.

ತಾಭಿಃ ಸ್ತುತಃ ಸ ಭಗವಾನಮುನಾ ಚ ತಸ್ಮೈ
ದತ್ತ್ವಾಽಭಯಂ ಯಮಸಹೋದರವಾರಿತೋಽಮುಮ್ ।
ಉತ್ಸಾರ್ಯ ನಿರ್ವಿಷಜಲಾಂ ಯಮುನಾಂ ಚಕಾರ
ಸಂಸ್ತೂಯಮಾನಚರಿತಃ ಸುರಸಿದ್ಧಸಾಧ್ಯೈಃ ॥ ೪೨ ॥

ಅ: ಅವರಿಂದಲೂ, ಅವನಿಂದಲೂ ಸ್ತುತನಾದ ಶ್ರೀಕೃಷ್ಣ ಅವನಿಗೆ ಅಭಯ ನೀಡಿದ. ಅವನನ್ನು ಯಮುನಾಜಲದಿಂದ ದೂರಕ್ಕೆ ಕಳುಹಿಸಿ, ಆ ಯಮುನೆಯ ನೀರನ್ನು ವಿಷರಹಿತವನ್ನಾಗಿಸಿದ. ದೇವತೆಗಳು, ಸಿದ್ಧರು, ಸಾಧ್ಯರು ಕೃಷ್ಣನ ಆ ಲೀಲೆಯನ್ನು ಬಹುವಾಗಿ ಕೊಂಡಾಡಿದರು.

ವಿ: ೧) ಅವರ ಸ್ತುತಿಗೆ ಮೆಚ್ಚಿದ ಕೃಷ್ಣ ಅವನಿಗೆ ಅಭಯ ನೀಡಿ, ಅಲ್ಲಿಂದ ರಮಣಕದ್ವೀಪಕ್ಕೆ ಕಳುಹಿಸಿಕೊಟ್ಟ. ಗರುಡನನ್ನು ಇದಿರಿಸಿ, ಪರಾಜಿತನಾಗಿದ್ದ ಕಾಲಿಯ ಈ ಯಮುನೆಯ ಮಡುವನ್ನು ಆಶ್ರಯಿಸಿ, ಅದನ್ನು ವಿಷಮಯವನ್ನಾಗಿಸಿದ್ದ. ಆ ಮಡುವಿಗೆ ಪ್ರವೇಶಿಸಲಾಗದಂತೆ ಗರುಡನಿಗೆ ಸೌಭರಿಯ [೧]ಶಾಪವಿದ್ದುದು ಅವನು ಹಾಗೆ ಅಲ್ಲಿ ನೆಲೆಸಲು ಕಾರಣವಾಗಿತ್ತು. ಕೃಷ್ಣನ ಅಪ್ಪಣೆಯಂತೆ ಕಾಲಿಯ ಅದರಿಂದ ಹೊರನಡೆದ. ಅಷ್ಟು ದಿನ ಸೌಭರಿಯ ಶಾಪದಿಂದಾಗಿ ಅಲ್ಲಿ ಸುರಕ್ಷಿತನಾಗಿದ್ದ ಕಾಲಿಯ ಅನಂತರ ತನ್ನ ತಲೆಯ ಮೇಲೆ ಮೂಡಿದ್ದ ಕೃಷ್ಣನ ಹೆಜ್ಜೆಯ [೨]ಗುರುತುಗಳಿಂದಾಗಿ

---

೧. ತತ್ರೈಕದಾ ಜಲಚರಂ ಗರುಡೋ ಭಕ್ಷ್ಯಮೀಪ್ಸಿತಮ್ ।
ನಿವಾರಿತಃ ಸೌಭರಿಣಾ ಪ್ರಸಹ್ಯ ಕ್ಷುಧಿತೋಽಹರತ್ ॥
ಮೀನಾನ್ ಸುದುಃಖಿತಾನ್ ದೃಷ್ಟ್ವಾ ದೀನಾನ್ ಮೀನಪತೌ ಹತೇ ।
ಕೃಪಯಾ ಸೌಭರಿಃ ಪ್ರಾಹ ತತ್ರತ್ಯ ಕ್ಷೇಮಮಾಚರನ್ ॥
ಅತ್ರ ಪ್ರವಿಶ್ಯ ಗರುಡೋ ಯದಿ ಮತ್ಸ್ಯಾನ್ ಸ ಖಾದತಿ ।
ಸದ್ಯಃ ಪ್ರಾಣೈರ್ವಿಯುಜ್ಯೇತ ಸತ್ಯಮೇತದ್ಬ್ರವೀಮ್ಯಹಮ್ ॥ – ಭಾಗವತ (೧೦/೧೬/೯-೧೧)

ಮತ್ಪದಾನಿ ಚ ತೇ ಸರ್ಪ ದೃಷ್ಟ್ವಾ ಮೂರ್ಧಸು ಸಾಗರೇ ।
ಗರುಡಃ ಪನ್ನಗರಿಪುಸ್ತ್ವಯಿ ನ ಪ್ರಹರಿಷ್ಯತಿ ॥ – ಹರಿವಂಶ (೨/೧೨/೪೨)

ಅನಂತರವೂ ಸುರಕ್ಷಿತನಾದ. ಅವನ ತಲೆಯ ಮೇಲಿನ ಕೃಷ್ಣಪಾದದ ಲಾಂಛನ ಗರುಡನಿಂದ ಅವನಿಗೆ ಅಭಯ ಒದಗಿಸಿತ್ತು.

೨) ಕೃಷ್ಣ ತನ್ನ ಅಮೃತನೋಟದಿಂದ ಯಮುನೆಯ ನೀರನ್ನು ಪರಿಶುದ್ಧವನ್ನಾಗಿಸಿ, ಅದರ ಪ್ರಯೋಜನ ಗೋಗೋಪರಿಗೆಲ್ಲ ಲಭಿಸುವಂತೆ ಮಾಡಿದ.

೩) ಮತಂಗಮುನಿಯ ಶಾಪದಿಂದ ವಾಲಿಗೆ ಋಷ್ಯಮೂಕ ದುರ್ಗಮವಾಗಿದ್ದಂತೆ (ವಾ.ರಾ. ಕಿಷ್ಕಿಂಧಾ. ೧೧/೫೩), ಸೌಭರಿಮುನಿಯ ಶಾಪದಿಂದ ಗರುಡನಿಗೆ ಆ ಯಮುನೆಯ ಮಡು ದುರ್ಗಮವಾಗಿತ್ತು. ಅಲ್ಲಿ ಸುಗ್ರೀವ ನೆಲೆಸಿದ್ದಂತೆ ಇಲ್ಲಿ ಕಾಲಿಯ ನೆಲೆಸಿದ್ದ. ರಾಮನಿಂದ ಸುಗ್ರೀವ ಸುರಕ್ಷಿತನಾದಂತೆ, ಕೃಷ್ಣನಿಂದ ಕಾಲಿಯ ಸುರಕ್ಷಿತನಾದ.

೪) ದಕ್ಷಿಣಸಮುದ್ರದ ಮಧ್ಯೆ ಇಂದ್ರದೇವರ ವಜ್ರಾಯುಧಕ್ಕೆ ಅಂಜಿ ಅಡಗಿದ್ದ ಮೈನಾಕ ಹನುಮಂತನನ್ನು ಸೇವಿಸುವ ಮೂಲಕ ಇಂದ್ರದೇವರ ಕೃಪೆಗೆ ಪಾತ್ರನಾಗಿ ಅಭಯ ಪಡೆದಂತೆ, ಯಮುನೆಯ ಮಧ್ಯೆ ನೆಲೆಸಿದ್ದ ಕಾಲಿಯ ಕೃಷ್ಣನನ್ನು ಸೇವಿಸುವ ಮೂಲಕ ಗರುಡನಿಂದ ಅಭಯ ಪಡೆದ. ಅದು ವಾಯುಸೇವೆಯ ಫಲವಾದರೆ, ಇದು ಹರಿಸೇವೆಯ ಫಲವಾಯಿತು.

೫) ಕಾಲಿಯನ ಉದ್ಧಾರಕ್ಕೆ ಅವನು ಕೃಷ್ಣನನ್ನು ಹಿಡಿದದ್ದೇ ಕಾರಣವಾಯಿತು. ಹರಿಯ ಮಹಿಮೆ ಅಂತಹುದು. ಅವನನ್ನು ಯಾವುದೇ ನಿಮಿತ್ತದಿಂದ ಹಿಡಿದರೂ, ಅವನು ಬಂಧನದಿಂದ ಭಕ್ತರನ್ನು [೧]ಪಾರುಮಾಡುವುದು ಖಚಿತ.

೬) ಈ ಕಾಲಿಯಮರ್ದನಪ್ರಸಂಗದ ಅಪೂರ್ವ ಆಧ್ಯಾತ್ಮಿಕವಿಶ್ಲೇಷಣೆಯನ್ನು ಶ್ರೀವಾದಿರಾಜರು ರುಕ್ಮಿಣೀಶವಿಜಯದಲ್ಲಿ ಮಾಡಿರುವರು (ಸರ್ಗ ೪, ಶ್ಲೋ. ೫೫–೭೨).

೭) ಕೃಷ್ಣನ ಪಾದದ ತುಳಿತ ಆ ಕಾಲಕ್ಕೆ ಕ್ಲೇಶಕರವೆನ್ನಿಸಿದರೂ, ಮುಂದೆ ಕಾಲಿಯನಿಗೆ ಶಾಶ್ವತರಕ್ಷಣೆ ನೀಡುವ ಅಪೂರ್ವಸಾಧನವಾಯಿತು. ಅದರಂತೆ ವಾಸಿಷ್ಠಕೃಷ್ಣ ವ್ಯಾಸರ ಪದಗಳ ಗ್ರಹಣ ಅಧ್ಯಯನಕಾಲಕ್ಕೆ ಕ್ಲಿಷ್ಟವೆನ್ನಿಸಿದರೂ, ಅದು ಸಂಸಾರಸರ್ಪದ ಭಯವನ್ನು ಪರಿಹರಿಸುವ ದಿವ್ಯಾಮೃತವೇ ಆಗಿದೆ. ಕೃಷ್ಣನ ಪಾದದ ಗುರುತು ಕಾಲಿಯನ ತಲೆಯ ಮೇಲೆ ಮೂಡಿದಂತೆ ವಾಸಿಷ್ಠಕೃಷ್ಣ ಶ್ರೀವ್ಯಾಸರ ಭಾಗವತಾದಿಪದಗಳ ಗುರುತು ನಮ್ಮ ತಲೆಯ ಒಳಗೆ ಮೂಡಿದಾಗ ಅಭಯ ಖಚಿತ.

---

೧. ಸಾಂಕೇತ್ಯಂ ಪಾರಿಹಾಸ್ಯಂ ವಾ ಸ್ತೋಭಂ ಹೇಲನಮೇವ ವಾ ।
ವೈಕುಂಠನಾಮಗ್ರಹಣಮಶೇಷಾಘಹರಂ ವಿದುಃ ॥ –ಭಾಗವತ (೬/೨/೧೪)

ಸದ್ಭಕ್ತಿಪಾಶದಲಿ ಕಟ್ಟುವರ ಭವಕಟ್ಟುಬಿಡಿಸುವನು – ಹರಿಕಥಾಮೃತಸಾರ (೨/೨೬)

ಗೋಪೈರ್ಬಲಾದಿಭಿರುದೀರ್ಣತರ[೧]ಪ್ರಮೋದೈಃ
ಸಾರ್ಧಂ ಸಮೇತ್ಯ ಭಗವಾನರವಿಂದನೇತ್ರಃ ।
ತಾಂ ರಾತ್ರಿಮತ್ರ ನಿವಸನ್ ಯಮುನಾತಟೇ ಸ
ದಾವಾಗ್ನಿಮುದ್ಧತಬಲಂ ಚ ಪಪೌ ವ್ರಜಾರ್ಥೇ ॥ ೪೩ ॥

ಅ: ಬಲರಾಮ ಮೊದಲಾದ ಸಕಲಗೋಪಾಲಕರ ಆನಂದಕ್ಕೆ ಪಾರವಿಲ್ಲವಾಯಿತು. ಅವರೊಂದಿಗೆ ಯಮುನಾತೀರದಲ್ಲಿ ಆ ರಾತ್ರಿ ನೆಲೆಸಿದ ಪುಂಡರೀಕಾಕ್ಷನಾದ ಭಗವಾನ್ ಕೃಷ್ಣ, ಆಗ ಕಾಣಿಸಿಕೊಂಡ ಪ್ರಬಲವಾದ ಕಾಳ್ಗಿಚ್ಚನ್ನು ಗೋಕುಲದ ರಕ್ಷಣೆಗೆಂದು ಪಾನಮಾಡಿದ.

ವಿ: ೧) ಕೃಷ್ಣನ ಕಾಲಿಯಮರ್ದನದ ಕಾರ್ಯ ಬಲರಾಮ ಮೊದಲಾಗಿ ಸಕಲರಿಗೂ ಅಮಿತಾನಂದವನ್ನು ಉಂಟುಮಾಡಿತು. ತನ್ನಂತೆ ಸರ್ಪಜಾತಿಯವನಾದ ಕಾಲಿಯನ ಉದ್ಧಾರ ಸ್ವತಃ ಶೇಷಾವತಾರನಾದ ಬಲರಾಮನಿಗೆ ಪ್ರಿಯವೆನ್ನಿಸಿತು ಎಂಬ ಭಾವ [೨]ರುಕ್ಮಿಣೀಶವಿಜಯದಲ್ಲಿದೆ.

೨) ಕೃಷ್ಣ ದಾವಾಗ್ನಿಯನ್ನು ಕುಡಿಯುವ ಮೂಲಕ ಉಪಸಂಹರಿಸಿದ. ಅಗ್ನಿಯ ಉದ್ಭವಸ್ಥಾನ ಭಗವಂತನಾದ ಕೃಷ್ಣನ ಮುಖವೇ ಆಗಿದೆ('ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ' – ಪುರುಷಸೂಕ್ತ). ಹಾಗೆ ಮಾಡುವ ಮೂಲಕ ಕೃಷ್ಣ ಅದರ ಉತ್ಪತ್ತಿಸ್ಥಾನದಲ್ಲೇ ಅದಕ್ಕೆ ಲಯ ಎಂಬ ತತ್ತ್ವವನ್ನೂ ತೋರಿಸಿದ ಎಂಬ ಅಪೂರ್ವವಿವರ [೩]ರುಕ್ಮಿಣೀಶವಿಜಯದಲ್ಲಿದೆ.

೩) ಹೀಗೆ ಅಗ್ನಿಪಾನ ಮಾಡಿ ಗೋಗೋಪರನ್ನು ರಕ್ಷಿಸುವ ಮೂಲಕ ಕೃಷ್ಣ ತಾನು ಶಾಸ್ತ್ರಗೋವುಗಳನ್ನು, ಅದನ್ನು ಪಾಲಿಸುವ ಜ್ಞಾನಿಜನರ ಸಂಸಾರತಾಪವನ್ನೂ ಹಾಗೆಯೇ ಪರಿಹರಿಸುವೆ ಎಂದು ಸೂಚಿಸಿರುವನು.

೪) ಕೃಷ್ಣನ ಬಾಯಲ್ಲಿ ಅಗ್ನಿ ಲಯಹೊಂದಿದಂತೆ, ವಾಸಿಷ್ಠಕೃಷ್ಣವೇದವ್ಯಾಸರ ಬಾಯಿಂದ ಬರುವ ಭಾಗವತಾಮೃತದಿಂದ ಸಂಸಾರದ ತಾಪ ಲಯಹೊಂದುವುದು ಎಂಬ ಭಾವವೂ ಸೂಚಿತ ('ಪಿಬತ ಭಾಗವತಂ ರಸಮಾಲಯಮ್', 'ಶ್ರೀಮದ್ಭಾಗವತೇ ಮಹಾಮುನಿಕೃತೇ', 'ಯಾ ಸ್ವಯಂ ಪದ್ಮನಾಭಸ್ಯ ಮುಖಪದ್ಮಾದ್ವಿನಿಃಸೃತಾ')

---

೧. ಉದೀರ್ಣತರಃ ಅತ್ಯುತ್ಕೃಷ್ಟಃ – (ಜ.)

೨. ಸ್ವಪಕ್ಷಪಾತಿಪ್ರಿಯಮಕ್ಷಿಕರ್ಣವಿಮರ್ದನಾನ್ನೂನಮಸೌ ಪ್ರಸಾಧ್ಯ ।
ವಿಧಾಯ ಚಾಸ್ಯಾಭಯಮಂಜಸಾऽಂತೇ ಮುದಂ ಸ್ವತಲ್ಪಾಯ ದದಾವನಲ್ಪಾಮ್ ॥ – ರು.ವಿ.(೪/೭೨)

೩. ಸ್ತುವಂತು ಸರ್ವೇ ವನವಹ್ನಿಪಾನಕೃತಾನುಭಾವಂ ನ ವಯಂ ಮುರಾರೇಃ ।
ಸ್ವಜನ್ಮಭೂಮಿಂ ಶಿಖಿನಿ ಪ್ರವಿಷ್ಟೇ ಕ ಈಶಿತುಸ್ತೇನ ಕೃತೋऽನುಭಾವಃ ॥ – ರು.ವಿ. (೫/೨)

ಉಗ್ರಾಸುರ ವಧೆ

ಇತ್ಥಂ ಸುರಾಸುರಗಣೈರವಿಚಿಂತ್ಯದಿವ್ಯ-
ಕರ್ಮಾಣಿ ಗೋಕುಲಗತೇऽಗಣಿತೋರುಶಕ್ತೌ ।
ಕುರ್ವತ್ಯಜೇ ವ್ರಜಭುವಾಮಭವದ್ವಿನಾಶ
ಉಗ್ರಾಭಿಧಾದಸುರತಸ್ತರುರೂಪತೋऽಲಮ್ ॥ ೪೪ ॥

ಅ: ಹೀಗೆ ಗೋಕುಲದಲ್ಲಿದ್ದು ಅಪರಿಮಿತವಾದ ದಿವ್ಯಶಕ್ತಿವುಳ್ಳವನೂ, ಅಜನೂ ಆದ ಶ್ರೀಕೃಷ್ಣನು ದೇವಾಸುರರ ಗುಂಪುಗಳ ಚಿಂತನೆಗೂ ಎಟುಕದ ದಿವ್ಯಕರ್ಮಗಳನ್ನು ಮಾಡುತ್ತಿರಲು ವೃಕ್ಷರೂಪದ ಉಗ್ರ ಎಂಬ ಹೆಸರಿನ ಅಸುರನಿಂದ ಗೋಕುಲದ ಜನರಿಗೆ ಆಪತ್ತು ಒದಗಿತು.

ವಿ: ೧) ಸುರಾಸುರರ ಚಿಂತನೆಗೂ ಸಿಗದ ಅದ್ಭುತಕಾರ್ಯಗಳನ್ನು ಶ್ರೀಕೃಷ್ಣ ಮಾಡುತ್ತಿದ್ದರೂ, ಉಗ್ರ ಎಂಬ ಅಸುರ ಕೃಷ್ಣರಕ್ಷಿತರಾದ ಜನಗಳನ್ನು ಪೀಡಿಸಬಂದದ್ದು ಅವನ ಅವಿವೇಕಕ್ಕೆ ದ್ಯೋತಕ ಎಂದು ಭಾವ.

೨) ತನ್ನ ಮೂಗನ್ನಾದರೂ ಕೊಯ್ದುಕೊಂಡು ಸಜ್ಜನರ ಪ್ರಯಾಣಕ್ಕೆ ವಿಘ್ನ ಮಾಡುವುದು ದುಷ್ಟರ ಸ್ವಭಾವ. ಅದರಂತೆ ಇಲ್ಲಿಯೂ ವೃಕ್ಷರೂಪವನ್ನಾದರೂ ಧರಿಸಿ, ಕೃಷ್ಣನನ್ನು ನಾಶ ಪಡಿಸಲೆಂದು ಉಗ್ರಾಸುರ ಬಂದದ್ದು ಇದಕ್ಕೆ [೧]ಉತ್ತಮನಿದರ್ಶನ.

ತದ್ಗಂಧತೋ ನೃಪಶುಮುಖ್ಯಸಮಸ್ತಭೂತಾ-
ನ್ಯಾಪುರ್ಮೃತಿಂ ಬಹುಲರೋಗನಿಪೀಡಿತಾನಿ ।
ಧಾತುರ್ವರಾಜ್ಜಗದಭಾವಕೃತೈಕಬುದ್ಧಿ-
ರ್ವಧ್ಯೋ ನ ಕೇನಚಿದಸೌ ತರುರೂಪದೈತ್ಯಃ ॥ ೪೫ ॥

ಅ: ಅವನ ವಿಷದ ವಾಸನೆಯಿಂದ ಮನುಷ್ಯರು, ಪಶುಗಳು ಮೊದಲಾದ ಸಕಲಜೀವಿಗಳು ಅನೇಕರೋಗಗಳಿಗೆ ತುತ್ತಾಗಿ ಸಾವನ್ನಪ್ಪಿದವು. ಜಗತ್ತನ್ನು ನಾಶಪಡಿಸುವುದೊಂದನ್ನೇ ಗುರಿಯನ್ನಾಗಿ ಹೊಂದಿದ್ದ ಆ ವೃಕ್ಷರೂಪಿರಾಕ್ಷಸ ಬ್ರಹ್ಮನ ವರದಿಂದಾಗಿ ಯಾರಿಂದಲೂ ಸಾವಿಲ್ಲದವನಾಗಿದ್ದ.

---

೧. ತರುತ್ವಮಪ್ಯಾಪ್ಯ ವನಂ ಮುರಾರೇರದೂಷಯದ್ದಂತವಿಷೈಃ ಸಮಂತಾತ್ ।
ಸ್ವನಾಸಿಕಾಚ್ಛೇದಮಪೀಹ ಸೋಢ್ವಾ ಖಲೋ ನಿರುಂಧೇ ಖಲು ಸತ್ಕ್ರಿಯಾಣಮ್ ॥
– ರುಕ್ಮಿಣೀಶವಿಜಯ (೫/೮)

ಎ: ಅವನ ಜಗನ್ನಾಶದ ಕ್ರಮ ವಿಚಿತ್ರವಾಗಿತ್ತು. ಆ ವೃಕ್ಷದಿಂದ ಹೊರಡುತ್ತಿದ್ದ ವಿಷದ ಗಾಳಿ ಮನುಷ್ಯರಿಗೂ, ಪಶುಗಳಿಗೂ ಬಗೆಬಗೆಯ ರೋಗಗಳನ್ನು ಉಂಟುಮಾಡಿ ಸಾವಿಗೀಡು-ಮಾಡುತ್ತಿತ್ತು.

ಸಂಕರ್ಷಣೇऽಪಿ ತದುದಾರವಿಷಾನುವಿಷ್ಟೇ
ಕೃಷ್ಣೋ ನಿಜಸ್ಪರ್ಶತಸ್ತಮಪೇತರೋಗಮ್ ।
ಕೃತ್ವಾ ಬಭಂಜ[೧] ವಿಷವೃಕ್ಷಮಮುಂ ಬಲೇನ
ತಸ್ಯಾನುಗೈಃ ಸಹ ತದಾಕೃತಿಭಿಃ ಸಮಸ್ತೈಃ ॥ ೪೬ ॥

ಅ: ಆ ಮಹಾವಿಷದ ಬಾಧೆಗೆ ಬಲರಾಮನೂ ಸಹ ಒಳಗಾಗಲು, ಕೃಷ್ಣ ತನ್ನ ಸ್ಪರ್ಶಮಾತ್ರ-ದಿಂದ ಅವನ ರೋಗವನ್ನು ಪರಿಹರಿಸಿದ. ತನ್ನ ಬಲದಿಂದ ಆ ವಿಷವೃಕ್ಷರೂಪದ ಅವನನ್ನು ಅವನಂತೆಯೇ ವೃಕ್ಷರೂಪದಲ್ಲಿದ್ದ ಅವನ ಎಲ್ಲ ಅನುಯಾಯಿಗಳ ಸಮೇತವಾಗಿ ನಾಶಪಡಿಸಿದ.

ವಿ: ೧) ಅವನಿಗೆ ಬ್ರಹ್ಮವರವಿದ್ದದ್ದರಿಂದ ಶೇಷಾವತಾರದ ಬಲರಾಮನನ್ನೂ ಸಹ ತನ್ನ ವಿಷದ ಗಾಳಿಯಿಂದ ರೋಗಕ್ಕೆ ಒಳಗಾಗಿಸಲು ಸಾಧ್ಯವಾಯಿತು ಎಂದರ್ಥ.

೨) ಬ್ರಹ್ಮವರದಿಂದ ಅವಧ್ಯನಾಗಿದ್ದ ಆ ಉಗ್ರಾಸುರನನ್ನು ಅವನ ಅನುಯಾಯಿಗಳ ಸಮೇತ ಲೀಲಾಜಾಲವಾಗಿ ಸಂಹರಿಸಿದ ಶ್ರೀಕೃಷ್ಣ ಸಾಕ್ಷಾತ್ ಪರಬ್ರಹ್ಮನೆಂಬುದು ಸ್ಪಷ್ಟ.

೩) ರಾಮಾವತಾರದಲ್ಲಿ ಕಿಷ್ಕಿಂಧೆಯ ಬಳಿ ಸಪ್ತತಾಲಗಳನ್ನು ಒಂದೇ ಬಾಣದಿಂದ ನಾಶಮಾಡಿದ ಪ್ರಸಂಗವೂ ಈ ತೆರನಾದುದೇ ಆಗಿದೆ; ಅವೂ ಸಹ ಇವುಗಳಂತೆ ಅಸುರಸ್ವರೂಪ.

ದೈತ್ಯಾಂಶ್ಚ ಗೋವಪುಷ ಆತ್ತವರಾನ್ ವಿರಿಂಚಾ-
ನ್ನೃತ್ಯೂಜ್ಝಿತಾನಪಿ ನಿಪಾತ್ಯ ದದಾಹ ವೃಕ್ಷಾನ್ ।
ವಿಕ್ರೀಡ್ಯ ರಾಮಸಹಿತೋ ಯಮುನಾಜಲೇ ಸ
ನೀರೋಗಮಾಶು ಕೃತವಾನ್ ವ್ರಜಮಬ್ಜನಾಭಃ ॥ ೪೭ ॥

ಅ: ಬ್ರಹ್ಮನಿಂದ ವರ ಪಡೆದು, ಸಾವಿಲ್ಲದವರಾಗಿದ್ದ ಗೋರೂಪದಲ್ಲಿದ್ದ ರಾಕ್ಷಸರನ್ನೂ ಸಹ ಸಂಹರಿಸಿ, ಶ್ರೀಕೃಷ್ಣ ಆ ವೃಕ್ಷಗಳನ್ನು ಸುಟ್ಟುಹಾಕಿದ. ಬಲರಾಮನೊಂದಿಗೆ ಯಮುನಾಜಲದಲ್ಲಿ ವಿಹರಿಸಿ, ಪದ್ಮನಾಭನಾದ ಅವನು ಒಡನೆಯೇ ಗೋಕುಲವನ್ನು ರೋಗಮುಕ್ತವಾಗಿಸಿದ.

---

೧. ಬಭಂಜ ವಿಷವೃಕ್ಷಮಮುಂ ಬಲೇನೇತ್ಯಸ್ಯ ಬಲೇನ ಸಾಮರ್ಥ್ಯೇನ ಯುಕ್ತಂ ವಿಷವೃಕ್ಷಂ ವಿಷವೃಕ್ಷಾರಮಮುಮುಗ್ರನಾಮಕಂ ದೈತ್ಯಂ ಬಭಂಜೇತ್ಯರ್ಥಃ ॥ – (ಸ.)

ವಿ: ೧) ಬ್ರಹ್ಮನಿಂದ ಅವಧ್ಯತ್ವ ವರ ಪಡೆದಿದ್ದ ಬೇರೆ ರಾಕ್ಷಸರು ಗೋರೂಪದಲ್ಲಿ ಹುಟ್ಟಿ ಗೋಕುಲವನ್ನು ನಾಶಪಡಿಸುತ್ತಿದ್ದರು. ಕೃಷ್ಣ ವೃಕ್ಷರೂಪದ ಅಸುರರಂತೆ ಗೋರೂಪದ ಅಸುರರನ್ನೂ ಸಂಹರಿಸಿದ.

೨) ಗೋರೂಪದಲ್ಲಿದ್ದು ಗೋಕುಲನಾಶಕರಾಗಿದ್ದ ಅಸುರರಂತೆ, ವಿಪ್ರಾದಿರೂಪಗಳಲ್ಲಿ ಜಟಾಸುರನಂತೆ ಜನಿಸಿಯೂ ಅಸುರರು ಲೋಕನಾಶ ಮಾಡುವರು. ಗೋಮುಖವ್ಯಾಘ್ರ ಎಂದರೆ ಇಂತಹ ಪರಮಪಾಪಿಗಳೇ.

೩) ಉಗ್ರಾಸುರ ವೃಕ್ಷರೂಪದಲ್ಲಿ ಹುಟ್ಟಿದ್ದರೆ, ಅವನ ಪತ್ನಿಯರು ಗೋರೂಪದಲ್ಲೂ ಅವನ ಪುತ್ರರು ಕರುಗಳ ರೂಪದಲ್ಲೂ ಹುಟ್ಟಿ ಗೋಕುಲನಾಶದಲ್ಲಿ ನಿರತರಾಗಿದ್ದರು. ಅವರನ್ನೆಲ್ಲ ಸಂಹರಿಸಿ ಕೃಷ್ಣ ವೃಕ್ಷಗಳ ಸಮೇತ ಸುಟ್ಟುಹಾಕಿದ ಎಂಬ ವಿಶೇಷಾಂಶ [೧]ಜನಾರ್ದನೀಯದಲ್ಲಿದೆ.

೪) ಹೀಗೆ ವಿಷವೃಕ್ಷವನ್ನು ನಾಶಪಡಿಸುವ ಮೂಲಕ ತಾನು ಸಂಸಾರವಿಷವೃಕ್ಷವನ್ನೂ ನಾಶಪಡಿಸುವ ಅಮೃತಸ್ವರೂಪಿ ಎಂಬುದನ್ನು ಕೃಷ್ಣ ತಿಳಿಸಿಕೊಟ್ಟಿರುವನು ಎಂದೂ ಸಹ ತಿಳಿಯ-ಬೇಕು. ಈಗಾಗಲೇ ಪೂತನೆಯ ವಿಷ, ಕಾಲಿಯನ ವಿಷಗಳನ್ನು ನಾಶಪಡಿಸಿದ ಕೃಷ್ಣ ಈಗ ಈ ವಿಷವೃಕ್ಷವನ್ನು ನಾಶಪಡಿಸಿದ್ದು ಅವನು ವಿಷೋಪಲಕ್ಷಿತವಾದ ದೋಷಗಳಿಂದ ದೂರನಾಗಿರುವು-ದಕ್ಕೂ ಸಹ ಸೂಚಕ. ಈ ರೀತಿ ವಿಷದ ಬಾಧೆಗೆ ತುತ್ತಾಗದೆ ನಾಶಪಡಿಸುವ ಸಾಮರ್ಥ್ಯ ಜೀವಕೋಟಿಯಲ್ಲಿ ಶ್ರೀವಾಯುದೇವರದು ಮಾತ್ರ ಎಂದು ಸಮುದ್ರಮಥನದಲ್ಲಿ ಉದ್ಭವಿಸಿದ ಕಾಲಕೂಟಪಾನಪ್ರಸಂಗದಲ್ಲಿ ವ್ಯಕ್ತವಾಗಿದೆ. ಭೀಮ ವಿಷವನ್ನು ಗೆಲ್ಲುವ ಪರಿ ಮುಂದೆ ವರ್ಣಿತವಾಗಿದೆ.

ನೀಲೆಯೊಂದಿಗೆ ವಿವಾಹ ಹಾಗೂ ಸಂಗಮ

[೨]ಸಪ್ತೋಕ್ಷಣೋಽತಿಬಲವೀರ್ಯಯುತಾನದಮ್ಯಾನ್
ಸರ್ವೇಗಿರೀಶವರತೋ ದಿತಿಜಪ್ರಧಾನಾನ್ ।
ಹತ್ವಾ ಸುತಾಮಲಭದಾಶು ವಿಭುರ್ಯಶೋದಾ-
ಭ್ರಾತುಃ ಸ ಕುಂಭಕಸಮಾಹ್ವಯಿನೋಽಪಿ ನೀಲಾಮ್ ॥ ೪೮ ॥

---

೧. ಉಗ್ರಾಭಿಧಾನದೈತ್ಯಸ್ಯ ಗೋರೂಪಾಃ ಪತ್ನ್ಯಃ ವತ್ಸರೂಪಾಃ ಪುತ್ರಾಸ್ತಾಂಶ್ಚ ನಿಪಾತ್ಯ ವೃಕ್ಷೈಃ ಸಹ ದದಾಹೇತಿ ಭಾವಃ। – (ಜ.)

೨. ಸಪ್ತ ಉಕ್ಷಣಃ ಸಂಜ್ಞಾಪೂರ್ವಕೋ ವಿಧಿರನಿತ್ಯ ಇತ್ಯಥೋಪೋನ ಉಕ್ಷಣಃ ವೃಷಾನ್ ಹತ್ವಾ। – (ಜ.)

ಅ: ಶಿವನ ವರದಿಂದಾಗಿ ಅಪಾರವಾದ ಬಲವೀರ್ಯಗಳಿಂದ ಕೂಡಿದ್ದ ಇತರರಿಗೆ ವಶವಾಗದಿದ್ದ ಏಳು ಗೂಳಿಗಳ ರೂಪದಲ್ಲಿದ್ದ ಅಸುರಮುಖ್ಯರನ್ನು ಕೃಷ್ಣ ಕೂಡಲೆ ಸಂಹರಿಸಿ, ಯಶೋದೆಯ ಸೋದರನಾದ ಕುಂಭಕನೆಂಬ ಹೆಸರಿನವನ ಮಗಳಾದ ನೀಲೆಯನ್ನು ಬೇಗನೆ ಪಡೆದ.

ವಿ: ೧) ಯಶೋದೆಯ ಸೋದರ ಕುಂಭಕನೆಂಬ ಗೋಪ. ಅವನ ಮಗಳಾಗಿ ಕೃಷ್ಣನ ಷಣ್ಮಹಿಷಿಯರಲ್ಲಿ ಒಬ್ಬಳಾದ ನೀಲಾದೇವಿ ಅವತರಿಸಿದ್ದಳು. ಆ ಏಳು ಗೂಳಿಗಳನ್ನು ನಿಯಂತ್ರಿಸುವುದು ಅವಳ ಸ್ವಯಂವರದ ಪಣವಾಗಿತ್ತು. ಕೃಷ್ಣ ಅವುಗಳನ್ನು ನಿಯಂತ್ರಿಸಿದ್ದು ಮಾತ್ರವಲ್ಲದೆ, ಸಂಹರಿಸಿಯೂಬಿಟ್ಟ. ಹಾಗೆ ಸಂಹರಿಸಲು ಅವೆಲ್ಲ ಶಿವನ ವರದಿಂದಾಗಿ ಅವಧ್ಯವಾಗಿ ಲೋಕನಾಶಕ್ಕೆ ತೊಡಗಿದ್ದ ಅಸುರರಾಗಿದ್ದುದೇ ಕಾರಣ.

೨) ಈ ನೀಲಾ ಮತ್ತೊಂದು ರೂಪದಿಂದ ನಗ್ನಜಿತ್ ರಾಜನ ಮಗಳಾಗಿ ಸತ್ಯಾ ಎಂಬ ಹೆಸರಿನಿಂದ ಜನಿಸಿ, ಕೃಷ್ಣಪತ್ನಿಯಾಗುವ ವಿವರ ಮುಂದೆ ಬಂದಿದೆ (೨೦/೪೭).

ಯಾ[೧] ಪೂರ್ವಜನ್ಮನಿ ತಪಃ ಪ್ರಥಮೈವ ಭಾರ್ಯಾ
ಭೂಯಾಸಮಿತ್ಯಚರದಸ್ಯ ಹಿ ಸಂಗಮೋ ಮೇ ।
ಸ್ಯಾತ್ ಕೃಷ್ಣಜನ್ಮನಿ ಸಮಸ್ತವರಾಂಗನಾಭ್ಯಃ
ಪೂರ್ವಂ ತ್ವಿತಿ ಸ್ಮ ತದಿಮಾಂ ಪ್ರಥಮಂ ಸ ಆಪ ॥ ೪೯ ॥

ಅ: ಅವಳು ಹಿಂದಿನ ಜನ್ಮದಲ್ಲಿ ''ತಾನು ಕೃಷ್ಣನಿಗೆ ಪ್ರಥಮಪತ್ನಿ ಆಗಬೇಕು; ಇತರ ಎಲ್ಲಾ ಉತ್ತಮಸ್ತ್ರೀಯರಿಗಿಂತಲೂ ಮುಂಚಿತವಾಗಿಯೇ ಕೃಷ್ಣನೊಂದಿಗೆ ಸಂಗಮವಾಗಬೇಕು'' ಎಂದು ತಪಸ್ಸು ಮಾಡಿದ್ದಳು. ಅದಕ್ಕೆಂದೇ ಕೃಷ್ಣ ಅವಳನ್ನು ಮೊದಲನೆಯವಳನ್ನಾಗಿ ಸ್ವೀಕರಿಸಿದ.

ವಿ: ೧) ಅವಳನ್ನು ಕೃಷ್ಣನು ಪ್ರಥಮಪತ್ನಿಯಾಗಿ ಸ್ವೀಕರಿಸಲು ಮತ್ತು ಅವಳಿಗೆ ಪ್ರಥಮಸಂಗಮಭಾಗ್ಯವನ್ನು ನೀಡಲು ವಿಶೇಷಕಾರಣವನ್ನು ಇಲ್ಲಿ ತಿಳಿಸಿರುವರು.

೨) ನಂದಪುತ್ರಿಯಾಗಿ ಅವತರಿಸಿದ ದುರ್ಗೆಯು ಮೂಲತಃ ಕೃಷ್ಣಪತ್ನಿಯಾದರೂ, ತಂಗಿಯ ರೂಪದಲ್ಲಿ ಜನಿಸಿದ್ದರಿಂದ ಅಂಗಸಂಗವನ್ನು ಹೊಂದಲಿಲ್ಲ. ಗೋಪಿಕಾಸ್ತ್ರೀಯರು

---

೧. ಗೋಪಾಂಗನಾತ್ವಾತ್ಪರಭಾರ್ಯಾಯಾಃ ಸತ್ಯಾ ಅಂಗಸಂಗೋ ನೇತಿ ಭಾವೇನ ಪ್ರಥಮಾ ಭಾರ್ಯೈವ ಭೂಯಾಸಮಿತ್ಯುಕ್ತಮ್ । ಪ್ರಥಮಮಪಿ ಸ್ವಭಾವತೋ ಭಾರ್ಯಾಯಾಃ ನಂದಕುಮಾರ್ಯಾ ಅಂಗಸಂಗಾಭಾವಾತ್ ಉಭಯಮಪಿ ಪ್ರಾರ್ಥಿತಮಿತಿ ಜ್ಞೇಯಮ್ ॥ –(ವಾ.)

ಅಂಗಸಂಗ ಹೊಂದಿದರೂ, ಕೃಷ್ಣನ ಪತ್ನಿಯರೆನ್ನಿಸಲಿಲ್ಲ. ನೀಲಾದೇವಿ ಎರಡನ್ನೂ ಹೊಂದುವ ಬಯಕೆಯಿಂದ ಹಾಗೆ ವರ ಕೇಳಿದ್ದಳು ಎಂದು ತಿಳಿಯಬೇಕು.

ಗೋಪಿಯರ ಸಂಗಕ್ಕೆ ಕಾರಣ

ಅಗ್ರೇ ದ್ವಿಜತ್ವತ ಉಪಾವಹದೇಷ ನೀಲಾಂ
ಗೋಪಾಂಗನಾ ಅಪಿ ಪುರಾ ವರಮಾಪಿರೇ ಯತ್[೧] ।
ಸಂಸ್ಕಾರತಃ ಪ್ರಥಮಮೇವ ಸುಸಂಗಮೋ ನೋ
ಭೂಯಾತ್ ತವೇತಿ ಪರಮಾಪ್ಸರಸಃ[೨] ಪುರಾ ಯಾಃ ॥ ೫೦ ॥

ಅ: ಕೃಷ್ಣನು ಉಪನೀತನಾಗುವ ಮುನ್ನವೇ ನೀಲೆಯನ್ನು ವಿವಾಹವಾದ; ''ಉಪನಯನ-ಕ್ಕಿಂತ ಮುಂಚಿತವಾಗಿಯೇ ನಿನ್ನ ಸಂಗಮ ನಮಗೆ ಲಭಿಸಬೇಕು'' ಎಂದು ವರ ಪಡೆದದ್ದರಿಂದ ಶ್ರೇಷ್ಠ ಅಪ್ಸರೆಯರಾಗಿದ್ದ ಗೋಪಸ್ತ್ರೀಯರನ್ನೂ ಸಹ ಕೃಷ್ಣ ಸ್ವೀಕರಿಸಿದ.

ವಿ: ೧) ನೀಲೆಯಂತೆ ಗೋಪಸ್ತ್ರೀಯರೂ ಉಪನಯನಕ್ಕಿಂತ ಮುಂಚೆಯೇ ಅಂಗಸಂಗವನ್ನು ಹೊಂದುವ ವರವನ್ನು ಪಡೆದದ್ದರಿಂದ ಅವರನ್ನೂ ಕೃಷ್ಣ ಸ್ವೀಕರಿಸಿದ. ಆದರೂ ಮೊದಲ ಅಂಗಸಂಗ ಲಭಿಸಿದ್ದು ನೀಲೆಗೇ. ಅದಕ್ಕೆ ಅವಳು ಎರಡು ಬಗೆಯ ವರವನ್ನು ಪಡೆದಿದ್ದುದು ಕಾರಣ.

೨) ಅಷ್ಟಮಹಿಷಿಯರಲ್ಲೊಬ್ಬಳಾದ ಈ ನೀಲಾದೇವಿ ನಗ್ನಜಿತ್ ರಾಜನ ಮಗಳಾಗಿ ನೀಲಾ ಎಂಬ ಹೆಸರಿನಿಂದಲೇ ಮತ್ತೊಂದು ರೂಪದಿಂದಲೂ ಜನಿಸಿದ್ದಳು. ಅವಳನ್ನೂ ಕೃಷ್ಣ ಏಳು ಗೂಳಿಗಳನ್ನು ನಿಗ್ರಹಿಸಿ ವಿವಾಹವಾದ (೨೦/೪೬).

ಧೇನುಕಾಸುರನ ವಧೆ

ತತ್ರಾಥ ಕೃಷ್ಣಮವದನ್ ಸಬಲಂ ವಯಸ್ಯಾಃ
ಪಕ್ವಾನಿ ತಾಲಸುಫಲಾನ್ಯನುಭೋಜಯೇತಿ ।
ಇತ್ಯರ್ಥಿತಃ ಸಬಲ ಆಪ ಸ ತಾಲವೃಂತಂ[೩]
ಗೋಪೈರ್ದುರಾಸದಮತೀವ ಹಿ ಧೇನುಕೇನ ॥ ೫೧ ॥

---

೧. ಯತ್ = ಯಸ್ಮಾತ್ ಕಾರಣಾತ್ ಗ್ರಂಥೋಕ್ತರೀತ್ಯಾ ಗೋಪಾಂಗನಾ ಅಪಿ ವರಮಾಪಿರೇ ತತ್ ದ್ವಿಜತ್ವತಃ ಅಗ್ರೇ ವರಂ = ಶ್ರೇಷ್ಠಂ ಕೃಷ್ಣಮಾಪಿರೇ ಇತಿ ಕ್ರಿಯಾಕರ್ಮಣೋರಾವೃತ್ತ್ಯಾಯೋಜನಾ ॥ – (ವಾ.)

೨. ಅತ್ರ ಕೇಚಿದಾಹುಃ ಕಾಸಾಂಚಿದ್ಗೋಪೀನಾಂ ಕಾರ್ಮಿಕಸಾಮ್ಯಂ ಕಾಸಾಂಚಿದಗ್ನಿಪುತ್ರ್ಯಾ ವರತ್ವಮತೋ ನ ವಿರೋಧ ಇತಿ । ವಸ್ತುತಸ್ತು ಪರಮಾಪ್ಸರಸ ಇತ್ಯತ್ರ ಭಗವದಂಗಸಂಗಭಾಕ್ತ್ವಾತ್ ಪರಮ ಇತಿ ಸ್ವರೂಪಕಥನಮ್ । ನ ತು ಸರ್ವಾಪ್ಸರಸಃ ಪ್ರಾಧಾನ್ಯಮಿತಿ ಜ್ಞೇಯಮ್ ।– (ತಾ.)

೩. ತಾಲವ್ಯಂದಂ (ಪಾಠಾಂತರ)

ಅ: ಆಗೊಮ್ಮೆ ಬಲರಾಮಸಮೇತನಾದ ಕೃಷ್ಣನನ್ನು ಸಂಗಡಿಗರು ''ಮಾಗಿರುವ ಉತ್ತಮ ತಾಳೆ ಹಣ್ಣುಗಳನ್ನು ನಮಗೆ ತಿನ್ನಿಸು'' ಎಂದು ಕೇಳಿಕೊಂಡರು. ಅವರು ಹಾಗೆ ಬೇಡಲು ಬಲರಾಮನ ಸಮೇತನಾಗಿ ಆ ಕೃಷ್ಣನು ಧೇನುಕನಿಂದಾಗಿ ಗೋಪರಿಗೆ ಅತ್ಯಂತದುರ್ಲಭವಾಗಿದ್ದ ತಾಳೆಯ ತೋಪಿಗೆ ತೆರಳಿದ.

ವಿ: ಗೋಪರಿಗೆ ಫಲದ ಬಯಕೆ ಇದ್ದರೂ, ಅವನ್ನು ತಾವೇ ತೆಗೆದುಕೊಳ್ಳಲು ಅಶಕ್ಯ ಎಂಬ ಎಚ್ಚರವೂ ಇದ್ದಿತು. ಅದಕ್ಕಾಗಿಯೇ ಅವರು ಕೃಷ್ಣಬಲರಾಮರನ್ನು ಹಾಗೆ ಕೇಳಿಕೊಂಡರು ಎಂದರ್ಥ.

ವಿಘ್ನೇಶತೋ ವರಮವಾಪ್ಯ ಸುದುಷ್ಪದೈತ್ಯೋ
ದೀರ್ಘಾಯುರುತ್ತಮಬಲಃ ಕದನಪ್ರಿಯೋಽಭೂತ್ ।
ನಿತ್ಯೋದ್ಧತಃ ಸ ಉತ ರಾಮಮವೇಕ್ಷ್ಯ ತಾಲ-
ವೃಂದಾತ್ ಫಲಾನಿ ಗಲಯಂತಮಥಾಭ್ಯಧಾವತ್ ॥ ೫೨ ॥

ಅ: ಧೇನುಕ ತುಂಬಾ ದುಷ್ಟನಾಗಿದ್ದ ದೈತ್ಯ. ವಿಘ್ನೇಶನಿಂದ ವರವನ್ನು ಪಡೆದು ದೀರ್ಘಾಯುವೂ, ಉತ್ತಮಬಲಶಾಲಿಯೂ ಆಗಿ ಸಮರಪ್ರಿಯನಾಗಿದ್ದ; ಸದಾ ಉನ್ಮತ್ತನೂ ಆಗಿದ್ದ. ಬಲರಾಮ ತಾಳೆಯ ಮರಗಳಿಂದ ಹಣ್ಣುಗಳನ್ನು ಬೀಳಿಸುತ್ತಿದ್ದುದನ್ನು ಕಂಡು ಅಲ್ಲಿಗೆ ಧಾವಿಸಿದ.

ವಿ: ಗೋಪರಿಗೆ ಆ ತಾಳವನ ದುರ್ಗಮವಾಗಲು ಧೇನುಕನಿಗಿದ್ದ ವಿಘ್ನೇಶನ ವರ ಕಾರಣವಾಗಿತ್ತು. ಗಣೇಶನಿಗಿಂತ ತುಂಬಾ ಮಿಗಿಲಾದ ಶೇಷನ ಅವತಾರನಾದ ಬಲರಾಮ ತಾಳೆಯ ಮರದಿಂದ ಹಣ್ಣುಗಳನ್ನು ಉದುರಿಸತೊಡಗಿದಾಗ ಧೇನುಕ ಅವನತ್ತ ನುಗ್ಗಿದ.

ತಸ್ಯ ಪ್ರಹಾರಮಭಿಕಾಂಕ್ಷತ ಆಶು ಪೃಷ್ಠ-
ಪಾದೌ ಪ್ರಗೃಹ್ಯ ತೃಣರಾಜಶಿರೋಽಹರತ್ ಸಃ ।
ತಸ್ಮಿನ್ ಹತೇ ಖರತರೇ ಖರರೂಪದೈತ್ಯೇ
ಸರ್ವೇ ಖರಾಶ್ಚ ಖರತಾಲವನಾಂತರಸ್ಥಾಃ ॥ ೫೩ ॥
ಪ್ರಾಪುಃ ಖರಾಃ ಖರತರಾಃ ಖರರಾಕ್ಷಸಾರಿಂ
ಕೃಷ್ಣಂ ಬಲೇನ ಸಹಿತಂ ನಿಹತಾಶ್ಚ ತೇನ ।

ಅ: ತನ್ನನ್ನು ಒದೆಯಲು ಬಯಸಿದ ಆ ಧೇನುಕನ ಹಿಂಗಾಲುಗಳನ್ನು ಹಿಡಿದು ಬಲರಾಮ ತಾಳೆಯ ಮರದ ಮೇಲೆ ಅಪ್ಪಳಿಸಿ ಕೊಂದ. ಅತಿಕ್ರೂರಿಯಾದ ಕತ್ತೆಯ ರೂಪದ ಆ ದೈತ್ಯ ಹತನಾಗುತ್ತಲೇ ಆ ಖರತಾಲವನದೊಳಗಿದ್ದ ಎಲ್ಲ ಕತ್ತೆಗಳೂ ಅತ್ಯಂತಕರ್ಕಶವಾದ ಧ್ವನಿಯಿಂದ ಅರಚುತ್ತಾ ಕ್ರೂರರಾಕ್ಷಸರಿಗೆ ಶತ್ರುವಾದ ಬಲರಾಮಸಮೇತನಾದ ಕೃಷ್ಣನನ್ನು ಆಕ್ರಮಿಸಿದವು ಮತ್ತು ಅವನಿಂದ ಹತವಾದವು.

ವಿ: ೧) ಬಲರಾಮ ತನ್ನನ್ನು ಹಿಂಗಾಲಿನಿಂದ ಒದೆಯಲು ಬಂದ ಧೇನುಕನ ಆ ಕಾಲುಗಳನ್ನೇ ಹಿಡಿದು, ಆ ವೃಕ್ಷಗಳ ಮೇಲೆ ಅಪ್ಪಳಿಸಿ [೪]ಸಂಹರಿಸಿದ. ಬಳಿಕ ತನ್ನನ್ನು ಮುತ್ತಿದ ಧೇನುಕನ ಅನುಯಾಯಿಗಳಾಗಿದ್ದ ಕ್ರೂರರಾಕ್ಷಸರನ್ನೆಲ್ಲ ಕೃಷ್ಣ ಸಂಹರಿಸಿದ.

೨) ಇಲ್ಲಿಯ 'ಖರತಾಲವನ' ಎಂಬುದಕ್ಕೆ ಖರ್ಜೂರದ ತೋಟ ಎಂಬ ವಿಶೇಷಾರ್ಥ ಜನಾರ್ದನೀಯದಲ್ಲಿದೆ. ಅದು ಶ್ರೀತಾಲದಿಂದ ಬೇರೆಯಾದುದು. ಆದ್ದರಿಂದ ನಿಷಿದ್ಧವಾದ ತಾಲಫಲಗಳನ್ನು ಕೃಷ್ಣ ಹೇಗೆ ತಿನ್ನಿಸಿದ ಎಂಬ ಆಕ್ಷೇಪಕ್ಕೆ ಅವಕಾಶವಿರದು ಎಂದರ್ಥ.

೩) ಧೇನುಕನನ್ನು ಸಂಹರಿಸಿದ್ದು ಬಲರಾಮನೇ. ಆದರೆ ಅದಕ್ಕೆ ನೆರವಾದದ್ದು ಕೃಷ್ಣನ ಅನುಗ್ರಹವಾದದ್ದರಿಂದ 'ಧೇನುಕಾಸುರಭಂಜನ' ಎಂಬುದು ಕೃಷ್ಣನ ಹೆಸರೇ ಆಯಿತು.

೪) ಆಗ ದೇವತೆಗಳು ಪುಷ್ಪವೃಷ್ಟಿಮಾಡಿ ಶ್ರೀಕೃಷ್ಣನನ್ನು ಸ್ತುತಿಸಿದ ವಿವರ [೫]ಭಾಗವತದಲ್ಲಿದೆ.

೫) 'ಧೇನುಕಾಸುರಭಂಜನಃ' ಎಂಬ ಮಾತು ಶ್ರೀಕೃಷ್ಣಾಷ್ಟೋತ್ತರ ಶತನಾಮಸ್ತೋತ್ರದಲ್ಲಿದೆ.

---

೧. ತೃಣರಾಜಶಿರಃ ತಾಲೋರ್ದ್ಧ್ವಭಾಗಂ ..... । – (ಜ.)

೨. ಖರತಾಲಃ ಶ್ರೀತಾಲ ಇತಿ ತಾಲಭೇದೋऽಸ್ತಿ ತತ್ರ ಖರತಾಲವನಸ್ಯ ಅಂತಸ್ಥಾಃ ಮಧ್ಯಸ್ಥಾಃ । – (ಜ.)

೩. ಖರತರಾಃ= ಅತಿಖರಾಃ ॥ –(ವಾ.)

೪. ಸ ತಂ ಗೃಹೀತ್ವಾ ಪ್ರಪದೋರ್ಭ್ರಾಮಯಿತ್ವೈಕಪಾಣಿನಾ ।
ಚಿಕ್ಷೇಪ ತೃಣರಾಜಾಗ್ರೇ ಭ್ರಾಮಣತ್ಯಕ್ತಜೀವಿತಮ್ ॥ – ಭಾಗವತ (೧೦/೧೫/೩೨)

೫. ತಯೋಸ್ತತ್ ಸುಮಹತ್ ಕರ್ಮ ನಿಶಾಮ್ಯ ವಿಬುಧಾದಯಃ ।
ಮುಮುಚುಃ ಪುಷ್ಪವರ್ಷಾಣಿ ಚಕ್ರುರ್ವಾದ್ಯಾನಿ ತುಷ್ಟುವುಃ ॥
ಅಥ ತಾಲಫಲಾನ್ಯಾದನ್ ಮನುಷ್ಯಾ ಗತಸಾಧ್ವಸಾಃ ।
ತೃಣಂ ಚ ಪಶವಶ್ಚೇರುರ್ಹತಧೇನುಕಕಾನನೇ ॥ – ಭಾಗವತ (೧೦/೧೫/೩೯,೪೦)

ಸರ್ವಾನ್ ನಿಹತ್ಯ ಖರರೂಪಧರಾನ್ ಸ ದೈತ್ಯಾನ್
ವಿಘ್ನೇಶ್ವರಸ್ಯ ವರತೋಽನ್ಯಜನೈರವಧ್ಯಾನ್ ।
ಪಕ್ವಾನಿ ತಾಲಸುಫಲಾನಿ ನಿಜೇಷು ಚಾದಾ-
ದ್ದುರ್ವಾರಪೌರುಷಗುಣೋದ್ಭರಿತೋ ರಮೇಶಃ ॥ ೫೪ ॥

ಅ: ವಿಘ್ನೇಶ್ವರನ ವರದಿಂದಾಗಿ ಬೇರೆಯವರಿಂದ ಸಾವಿಲ್ಲದವರಾಗಿದ್ದ ಕತ್ತೆಯರೂಪದ ಆ ರಾಕ್ಷಸರನ್ನೆಲ್ಲ ಸಂಹರಿಸಿ, ಲಕ್ಷ್ಮೀಶನೂ, ಎದುರಿಲ್ಲದ ಪೌರುಷಾದಿಗುಣಗಳಿಂದ ಪೂರ್ಣನೂ ಆದ ಕೃಷ್ಣ ಮಾಗಿದ ಆ ಉತ್ತಮತಾಲಫಲಗಳನ್ನು ತನ್ನವರಿಗೆ ನೀಡಿದ.

ವಿ: ೧) ಧೇನುಕನಂತೆ ಅವನ ಅನುಯಾಯಿಗಳಿಗೂ ವಿಘ್ನೇಶನ ವರವೇ ಇದ್ದಿತು. ಹೀಗೆ ವಿಘ್ನೇಶನ ವರವನ್ನು ಭಂಗಿಸುವ ಮೂಲಕ ಕೃಷ್ಣ ತಾನು ಗಣಪತಿ ಮೊದಲಾದ ಎಲ್ಲದೇವತೆಗಳಿಗಿಂತಲೂ ಮಿಗಿಲಾದ ಪರದೈವ ಎಂದು ನಿರೂಪಿಸಿದ. ವಾಸಿಷ್ಠಕೃಷ್ಣರೂಪದಿಂದ ಪಶುಪತ್ಯಧಿಕರಣದಲ್ಲಿ ಪಾಶುಪತಮತದಂತೆ ಗಾಣಪತಾದಿಮತಗಳನ್ನೂ ನಿರಾಕರಿಸಿದ ಶ್ರೀಹರಿ, ಈ ಯಾದವಕೃಷ್ಣರೂಪದಿಂದ ಗಣಪತಿಯ ವರಗಳನ್ನು ಭಂಗಿಸುವ ಮೂಲಕವೂ ಆ ಕಾರ್ಯವನ್ನು ಮಾಡಿದ ಎಂದು ತಿಳಿಯುವುದು.

೨) ಹೀಗೆ ತನ್ನವರಿಗೆ ಫಲಗಳನ್ನು ನೀಡುವ ಮೂಲಕ ಕೃಷ್ಣ ತಾನೇ ಸರ್ವಕರ್ಮಗಳಿಗೆ ಫಲದಾತೃವಾದ ಪರಬ್ರಹ್ಮ ಎಂದೂ ನಿರೂಪಿಸಿದ. ಹೀಗೆ ಈ ಪ್ರಸಂಗ 'ಫಲಮತ ಉಪಪತ್ತೇಃ' (೨/.....) ಎಂಬ ಸೂತ್ರಾರ್ಥವಾಗಿರುವಂತೆ, 'ಮಾ ಫಲೇಷು ಕದಾಚನ' (೨/೪೭) ಎಂಬ ಗೀತಾರ್ಥವೂ ಆಗಿದೆ.

ಪ್ರಲಂಬಾಸುರವಧೆ

ಪಕ್ಷದ್ವಯೇನ ವಿಹರತ್ಸ್ವಥ ಗೋಪಕೇಷು
ದೈತ್ಯಃ ಪ್ರಲಂಬ ಇತಿ ಕಂಸವಿಸೃಷ್ಟ ಆಗಾತ್ ।
ಕೃಷ್ಣಸ್ಯ ಪಕ್ಷಿಷು ಜಯತ್ಸು ಸ ರಾಮಮೇತ್ಯ
ಪಾಪಃ ಪರಾಜಿತ ಉವಾಹ ತಮುಗ್ರರೂಪಃ ॥ ೫೫ ॥

ಅ: ಗೋಪಬಾಲಕರು ಎರಡು ತಂಡಗಳಾಗಿ ಆಟವಾಡುತ್ತಿದ್ದಾಗ ಕಂಸನಿಂದ ಕಳುಹಿಸಲ್ಪಟ್ಟ ಪ್ರಲಂಬ ಎಂಬ ದೈತ್ಯ ಆಗಮಿಸಿದ. ಕೃಷ್ಣನ ಪಕ್ಷದವರು ಗೆಲ್ಲತೊಡಗಿದಾಗ, ಪರಾಜಿತನಾದ ಅವನು ಬಲರಾಮನನ್ನು ಉಗ್ರರೂಪದಿಂದ ಹೊತ್ತು ನಡೆದ.

ವಿ: ೧) ಬಲರಾಮನ ಗುಂಪು ಹಾಗೂ ಕೃಷ್ಣನ ಗುಂಪು ಎಂದು ಎರಡು ಗುಂಪುಗಳಾಗಿ ಹರಿಣಾಕ್ರೀಡನ[೨] ಎಂಬ ಆಟದಲ್ಲಿ ತೊಡಗಿದ್ದಾಗ ಪ್ರಲಂಬಾಸುರನೆಂಬ ರಾಕ್ಷಸ [೩]ಗೋಪಾಲಕ–ವೇಷದಿಂದ ಅವರ ಮಧ್ಯೆ ಸೇರಿಕೊಂಡ. ಸರ್ವಜ್ಞನಾದ ಕೃಷ್ಣ ಅವನನ್ನು ಗಮನಿಸಿಯೂ ಗಮನಿಸದಂತೆ ಸುಮ್ಮನಿದ್ದ. ಆಟದಲ್ಲಿ ಬಲರಾಮನಿಗೆ ಸೋತ ಪ್ರಲಂಬಾಸುರ ಆಟದ ನಿಯಮದಂತೆ ಅವನನ್ನು ಹೊತ್ತು ಭಾಂಡೀರಕವೆಂಬ ಆಲದಮರದವರೆಗೆ ಓಡಿದ. ಹಾಗೆ ಓಡುತ್ತಲೇ ತನ್ನ ಭಯಂಕರವಾದ ನಿಜರೂಪವನ್ನು ಧರಿಸಿ ಗಗನಕ್ಕೆ ನೆಗೆದ ಎಂಬ ವಿವರಗಳು ಹರಿವಂಶದಲ್ಲೂ, ಭಾಗವತದಲ್ಲೂ ಬಂದಿವೆ.

---

೧. ಪಕ್ಷದ್ವಯೇನ ಕೃಷ್ಣರಾಮೇಶ್ವರಕಪಕ್ಷದ್ವಯೇನ ಗೋಪಕೇಷು ವಿಹರತ್ಸು ಹರಿಣಾಕ್ರೀಡನನಾಮಕವಿಹಾರಂ ಕುರ್ವತ್ಸುಪ್ರಲಂಬಃ ಕಂಸೇನ ಪ್ರೇಷಿತ ಆಗತ್ಯ ಕೃಷ್ಣಪಕ್ಷೀ ಭೂತ್ವಾ ಕೃಷ್ಣಸ್ಯ ಪಕ್ಷಿಷು ಜಯತ್ಸ್ವಥ ಜಯತ್ಸ್ವಪಿ ಪಾಪಿಷ್ಠಃ ಮಹಾಬಲಂ ರಾಮಮೇತ್ಯ ತೇನ ಸಹ ಪ್ಲವನಾದಿರೂಪಕ್ರೀಡಯಾ ಪ್ರಾಪ್ಯ ಪರಾಜಿತಃ ಸನ್ನುವಾಹೇತಿ । ತಥಾಹಿ ಹರಿವಂಶೇ —

ಹರಿಣಾಕ್ರೀಡನಂ ನಾಮ ಬಾಲಕ್ರೀಡನಕಂ ತತಃ ।
ಪ್ರಕ್ರೀಡಿತಾಸ್ತು ತೇ ಸರ್ವೇ ದ್ವೌ ದ್ವೌ ಯುಗಪದುತ್ಥಿತನ್ ।
ಕೃಷ್ಣಃ ಶ್ರೀದಾಮಸಹಿತಃ ಪುಪ್ಲುವೇ ಗೋಪಸೂನುನಾ ।
ಸಂಕರ್ಷಣಸ್ತು ಪ್ಲುತವಾನ್ ಪ್ರಲಂಬೇನ ಮಹಾಬಲಃ ।
ಗೋಪಾಲಾಸ್ತ್ವಪರೇ ದ್ವಂದ್ವಂ ಗೋಪಾಲೈರಪರೈಃ ಸಹ ।
ಪ್ರದ್ರುತಾ ಲಂಘಯಂತೋ ವೈ ತೇऽನ್ಯೋನ್ಯಂ ಲಘುವಿಕ್ರಮಾಃ ।
ಶ್ರೀದಾಮಂ ಚಾಜಯತ್ ಕೃಷ್ಣಃ ಪ್ರಲಂಬಂ ರೋಹಿಣೀಸುತಃ ।
ಗೋಪಾಲೈಃ ಕೃಷ್ಣಪಕ್ಷೀಯೈರ್ಗೋಪಾಲಾಸ್ತ್ವಪರೇ ಜಿತಾಃ ।
ತೇ ವಾಹಯಂತಸ್ತ್ವನ್ಯೋನ್ಯಂ ಸಂಹರ್ಷಾತ್ ಸಹಸಾ ದ್ರುತಾಃ ।
ಭಾಂಡೀರಸ್ಕಂಧಮುದ್ದಿಶ್ಯ ಮರ್ಯಾದಾಂ ಪುನರಾಗಮನ್ ।
ಸಂಕರ್ಷಣಂ ತು ಸ್ಕಂಧೇನ ಶೀಘ್ರಮುತ್ಕ್ಷಿಪ್ಯ ದಾನವಃ ।
ದ್ರುತಂ ಜಗಾಮ ವಿಮುಖಃ ಸಚಂದ್ರ ಇವ ತೋಯದಃ ॥ ಇತಿ ।

ಕೃಷ್ಣೋ ರಾಮಪಕ್ಷಗತೇನ ಶ್ರೀದಾಮ್ನಾ ಪುಪ್ಲುವೇ । ಅಪರೈರ್ಗೋಪಾಲೈರನ್ಯೇ ಪುಪ್ಲುವುಃ । ತತ್ರ ಕೃಷ್ಣೋ ರಾಮಪಕ್ಷೀಯಂ ಶ್ರೀದಾಮಾನಮಜಯತ್ । ರಾಮಃ ಕೃಷ್ಣಪಕ್ಷೀಯಂ ಪ್ರಲಂಬಮಜಯತ್ । ಅನ್ಯೇ ರಾಮಪಕ್ಷೀಯ್ಯಾಃ ಕೃಷ್ಣಪಕ್ಷೀಯೈರ್ಜಿತಾ ಇತಿ ವಚನದ್ವಯಾರ್ಥಃ । – (ತಾ.)

೨. ಅವಿಷಹ್ಯಂ ತತೋ ಮತ್ವಾ ಕೃಷ್ಣಮದ್ಭುತವಿಕ್ರಮಮ್ ।
ರೌಹಿಣೇಯವಧೇ ಯತ್ನಮಕರೋದ್ದಾನವೋತ್ತಮಃ ।
ಹರಿಣಾಕ್ರೀಡನಂ ನಾಮ ಬಾಲಕ್ರೀಡನಕಂ ತತಃ ॥ – ಹರಿವಂಶ (೨/೧೪/೧೭,೧೮)

೩. ಗೋಪರೂಪೀ ಪ್ರಲಂಬೋऽಗಾದಸುರಸ್ತಜ್ಜಿಹೀರ್ಷಯಾ ।
ತಂ ವಿದ್ವಾನಪಿ ದಾಶಾರ್ಹೋ ಭಗವಾನ್ ಸರ್ವದರ್ಶನಃ ।
ಅನ್ವಮೋದತ ತತ್ಸಖ್ಯಂ ವಧಂ ತಸ್ಯ ವಿಚಿಂತಯನ್ ॥ – ಭಾಗವತ (೧೦/೧೮/೧೭,೧೮)

೨) ಪ್ರಲಂಬಾಸುರನಿಗೆ ಸ್ಕಂದನ ವರವಿತ್ತು ಎಂಬ ವಿವರ ಮುಂದೆ (೧೩/೭೨) ಬಂದಿದೆ.

ಭೀತೇನ ರೋಹಿಣಿಸುತೇನ ಹರಿಃ ಸ್ತುತೋಽಸೌ
ಸ್ವಾವಿಷ್ಟತಾಮುಪದಿದೇಶ ಬಲಾಭಿಪೂರ್ತ್ಯೈ[೧] ।
ತೇನೈವ ಪೂರಿತಬಲೋಽಂಬರಚಾರಿಣಂ ತಂ
ಪಾಪಂ ಪ್ರಲಂಬಮುರುಮುಷ್ಟಿಹತಂ ಚಕಾರ ॥ ೫೬ ॥

ಅ: ಭೀತನಾದ ಬಲರಾಮ ಶ್ರೀಕೃಷ್ಣನನ್ನು ಸ್ತುತಿಸಿದ. ಅವನಲ್ಲಿ ಬಲ ತುಂಬಿಸಲೆಂದು ಶ್ರೀಕೃಷ್ಣ ಅವನಲ್ಲಿ ತಾನು ಆವಿಷ್ಟನಾಗಿರುವುದನ್ನು ತಿಳಿಸಿದ. ಅದರಿಂದ ಬಲ ತುಂಬಿದವನಾಗಿ ಬಲರಾಮ ಗಗನದಲ್ಲಿ ಹಾರುತ್ತಿದ್ದ ಆ ಅಸುರನನ್ನು ತನ್ನ ಬಲವಾದ ಮುಷ್ಟಿಯಿಂದ ಹೊಡೆದು ಕೊಂದುಹಾಕಿದ.

ವಿ: ೧) ಅವನು ಅಸುರನೆಂದು ಅರಿತ ಬಲರಾಮ ಭಯದಿಂದ ಶ್ರೀಕೃಷ್ಣನನ್ನು ಪ್ರಾರ್ಥಿಸಿದಾಗ, ಶ್ರೀಕೃಷ್ಣ ಅವನಲ್ಲಿ ತನ್ನ ಆವೇಶ ಇರುವುದನ್ನು ತಿಳಿಸಿ, ಧೈರ್ಯ ನೀಡಿದ. ವಿಷ್ಣುವಿನ ಆವೇಶದಿಂದಾಗಿ ಬಲರಾಮ ಅಸುರನನ್ನು ಮುಷ್ಟಿಯಿಂದ ಹೊಡೆದುರುಳಿಸಿದ.

೨) ಶ್ರೀಕೃಷ್ಣ ಬಲರಾಮನಿಗೆ ಅವನಲ್ಲಿ ತನ್ನ ಆವೇಶವಿರುವುದನ್ನು ತಿಳಿಸಿ, ಆ ಮೂಲಕ ಪ್ರಲಂಬಾಸುರನನ್ನು ಸಂಹರಿಸಿದ ವಿವರ [೨]ಹರಿವಂಶದಲ್ಲಿದೆ.

೩) ಬಲರಾಮನು ಸಾಕ್ಷಾತ್ ಮಹಾವಿಷ್ಣುವಿನ ಅವತಾರ ಎಂಬ ಕೆಲವರ ತಪ್ಪುಕಲ್ಪನೆ–ಯನ್ನು ಈ ಪ್ರಸಂಗ ನಿವಾರಿಸುತ್ತದೆ. ಬಲರಾಮನು ಕೃಷ್ಣನಂತೆ ಸಾಕ್ಷಾದವತಾರನಾಗಿದ್ದಲ್ಲಿ ಆತ ಗಾಬರಿಗೊಳ್ಳುವುದಾಗಲಿ, ಕೃಷ್ಣನಿಂದ ಉಪದೇಶ ಹೊಂದಿ ಶಕ್ತಿ ಪಡೆಯುವುದಾಗಲಿ ಬೇಕಿರಲಿಲ್ಲ. ಅವನು ಭಾಗವತಾದಿಗ್ರಂಥಗಳು ಸ್ಪಷ್ಟನಿರೂಪಿಸಿರುವಂತೆ ಶೇಷಾವತಾರನೇ ಹೊರತು ಸಾಕ್ಷಾದ್ವಿಷ್ಣುವಿನ ಅವತಾರವಲ್ಲ. ಕೆಲವೆಡೆ ಆತನನ್ನು ವಿಷ್ಣುವೆಂಬಂತೆ ಉಲ್ಲೇಖಿಸಿರುವುದು ಅಸುರಮೋಹನಕ್ಕೆಂದೂ, ಅವನೊಳಗಿನ ಶುಕ್ಲಕೇಶ ಎಂಬ ವಿಷ್ಣುವಿನ ಆವೇಶದ ವಿವಕ್ಷೆಯಿಂದ ಎಂದೂ ತಿಳಿಯಬೇಕು. ಬ್ರಹ್ಮಸೂತ್ರದ ಪತ್ಯುರಧಿಕರಣದಲ್ಲಿ ಪಶುಪತಿಯಾದ ಶಿವನಿಗೆ

---

೧. ಬಲಾಭಿಪೂರ್ತ್ಯೈ ಸ್ವೇನಾವಿಷ್ಟತ್ವಮುಪದಿದೇಶ = ಬಲಂ ಪ್ರತ್ಯುಕ್ತವಾನ್ । ಅಹಂ ತ್ವಯ್ಯಾವಿಷ್ಟೋಽಸ್ಮಿ ತ್ವಂ ಮಾ ಭೈಷೀರಿತ್ಯುಕ್ತವಾನಿತಿ ಭಾವಃ ॥ –(ವಾ.)

೨. ಸಂಸ್ಮಾರಿತಸ್ತು ಕೃಷ್ಣೇನ ರೌಹಿಣೇಯಃ ಪುರಾತನಮ್ ।
ಬಲೇನಾಪೂರ್ಯತ ತದಾ ತ್ರೈಲೋಕ್ಯಾಂತರಚಾರಿಣಾ ।
ತತಃ ಪ್ರಲಂಬಂ ದುರ್ವೃತ್ತಂ ಸ ಬದ್ಧೇನ ಮಹಾಭುಜಃ ॥ – ಹರಿವಂಶ (೨/೧೪/೫೦, ೫೧)

ನಿರೂಪಿತವಾಗಿರುವ ಅಸಾಮಂಜಸ್ಯರೂಪದೋಷವು ನಾಗಪತಿಯಾದ ಶೇಷನಿಗೂ ಅನ್ವಯಿ–ಸುವುದು ಎಂದೂ ಭಾವ.

೪) ರಾವಣ ತನ್ನನ್ನು ಎತ್ತಲು ಬಂದಾಗ ಲಕ್ಷ್ಮಣ ತನ್ನ ಮೂಲರೂಪವನ್ನು ಸ್ಮರಿಸಿ ರಾವಣನಿಂದ ಎತ್ತಲಾಗದಷ್ಟು ಭಾರದಿಂದ ಕೂಡಿದವನಾದ ಪ್ರಸಂಗವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಮತ್ತೊಮ್ಮೆ ದಾವಾಗ್ನಿಪಾನ

ತಸ್ಮಿನ್ ಹತೇ ಸುರಗಣಾ ಬಲದೇವನಾಮ
ರಾಮಸ್ಯ ಚಕ್ರುರತಿತೃಪ್ತಿಯುತಾ ಹರಿಶ್ಚ ।
ವಹ್ನಿಂ ಪಪೌ ಪುನರಪಿ ಪ್ರದಹಂತಮುಚ್ಚೈ-
ರ್ಗೋಪಾಂಶ್ಚ ಗೋಗಣಮಗಣ್ಯಗುಣಾರ್ಣವೋಽಪಾತ್ ॥ ೫೭ ॥

ಅ: ಪ್ರಲಂಬ ಹತನಾಗಲು ಅತ್ಯಂತತೃಪ್ತಿಯಿಂದ ಕೂಡಿದ ಸುರಸಮೂಹಗಳು ರಾಮನಿಗೆ ಬಲದೇವ ಎಂಬ ಹೆಸರನ್ನು ಇರಿಸಿದವು. ಅನಂತಗುಣಸಾಗರನಾದ ಕೃಷ್ಣ ಬಹಳವಾಗಿ ಸುಡುವ ಕಾಳ್ಗಿಚ್ಚನ್ನು ಮತ್ತೊಮ್ಮೆ ಪಾನ ಮಾಡಿ, ಗೋಪರನ್ನೂ, ಗೋವೃಂದವನ್ನೂ [೧]ಪಾಲಿಸಿದನು.

ವಿ: ೧) ಆವರೆಗೂ ರಾಮ ಎಂದಷ್ಟೇ ಅವನ ಹೆಸರಾಗಿತ್ತು, ಅದು ಅವನು ಲಕ್ಷ್ಮಣನಾಗಿದ್ದಾಗ ಶ್ರೀರಾಮಸೇವೆ ಮಾಡಿದ ಫಲವಾಗಿತ್ತು, ಎಂದರೆ ರಾಮಸೇವೆಯ ಫಲವಾಗಿ ಅವನಿಗೆ ಬಂದದ್ದು ರಾಮತ್ವವಲ್ಲ, ರಾಮ ಎಂಬ ಹೆಸರನ್ನು ವಿಶೇಷವಾಗಿ ರಾಮಭಕ್ತನಾಗಿ ಮೆರೆಯುವ ಸೌಭಾಗ್ಯ. ಜೀವನೆಂದೂ ಪರಬ್ರಹ್ಮನಾಗಲಾರ ಎಂಬುದಕ್ಕೆ ಇದೊಂದು ಅತ್ಯುತ್ತಮನಿದರ್ಶನ. ಅಂತಹ ಲಕ್ಷ್ಮಣನೇ ರಾಮನಾಗದಾಗ, ಸಾಮಾನ್ಯಜೀವರ ಪಾಡೇನು?

೨) ಪ್ರಲಂಬಾಸುರವಧೆಯ ಪ್ರಸಂಗದಲ್ಲಿ ವ್ಯಕ್ತವಾದ ಅವನ ಬಲದಿಂದಾಗಿ [೨]'ಬಲದೇವ'ನೆಂಬ ವಿಶಿಷ್ಟಖ್ಯಾತಿ ಆತನದಾಯಿತು. ಬಲರಾಮ ಎಂಬ ಪ್ರಸಿದ್ಧಿಗೂ ಇದೇ ಮೂಲವಾಯಿತು.

---

೧. ಅಚ್ಯುತ ಜಗನ್ನಾಥವಿಟ್ಠಲ
ನಿಚ್ಚಮೆಚ್ಚಿದ ಜನರ ಬಡ ಕಾ-
ಡ್ಗಿಚ್ಚನುಂಡಾರಣ್ಯದೊಳು ಗೋಗೋಪರನು ಕಾಯ್ದ ॥ – ಹರಿಕಥಾಮೃತಸಾರ (೧೦/೨೫)

೨. ಬಲದೇವೇತಿ ನಾಮಾಸ್ಯ ದೇವೈರುಕ್ತಂ ದಿವಿ ಸ್ಥಿತೈಃ ।
ಬಲಂ ತು ಬಲದೇವಸ್ಯ ತದಾ ಭುವಿ ಜನಾ ವಿದುಃ ॥ – ಹರಿವಂಶ (೨/೧೪/೫೮)

೩) ಇದೇ ಸಮಯದಲ್ಲಿ ಅಲ್ಲಿಂದ ತೆರಳಿದ್ದ ಗೋವುಗಳೆಲ್ಲ ಕಾಡಿನಲ್ಲಿ ದಾವಾಗ್ನಿಯ ಮಧ್ಯೆ ಸಿಲುಕಿಕೊಂಡವು. ಆಗ ಕೃಷ್ಣ ಮತ್ತೊಮ್ಮೆ ದಾವಾಗ್ನಿಯನ್ನು ಪಾನ ಮಾಡಿ, ಗೋಪರನ್ನೂ, ಗೋವುಗಳನ್ನೂ ಸಲಹಿದ. ಹೀಗೆ ಆಪತ್ತು ಒದಗಿದಾಗಲೆಲ್ಲ ಯಾದವಕೃಷ್ಣರೂಪದಿಂದ ಗೋಗೋಪರನ್ನು ಕಾಯ್ದ ಶ್ರೀಹರಿ ತನ್ನ ವಾಸಿಷ್ಠಕೃಷ್ಣರೂಪದಿಂದ ಶಾಸ್ತ್ರಗಳನ್ನು, ಶಾಸ್ತ್ರ ತಿಳಿದ ಜ್ಞಾನಿಗಳನ್ನು ಪಾಲಿಸಿದ ('ಅನಾಕುಲಂ ಗೋಕುಲಮುಲ್ಲಾಸ...' – ಮಧ್ವವಿಜಯ ೧/೨).

ವಿಪ್ರಪತ್ನಿಯರ ಕೃಷ್ಣಸೇವೆ

ಕೃಷ್ಣಂ ಕದಾಚಿದತಿದೂರಗತಂ ವಯಸ್ಯಾ
ಊಚುಃ ಕ್ಷುಧಾರ್ದಿತತರಾ[೧] ವಯಮಿತ್ಯುದಾರಮ್ ।
ಸೋಽಪ್ಯಾಹ ಸತ್ರಮಿಹ ವಿಪ್ರಗಣಾಶ್ಚರಂತಿ
ತಾನ್ ಯಾಚತೇತಿ ಪರಿಪೂರ್ಣಸಮಸ್ತಕಾಮಃ ॥ ೫೮ ॥

ಅ: ಒಮ್ಮೆ ಬಹುದೂರಕ್ಕೆ ತೆರಳಿದ ಭಕ್ತಾಭೀಷ್ಟಪ್ರದನಾದ ಕೃಷ್ಣನಿಗೆ ಅವನ ಸಂಗಡಿಗರು ''ನಾವೆಲ್ಲ ಹಸಿವೆಯಿಂದ ಬಹಳವಾಗಿ ಪೀಡಿತರಾಗಿರುವೆವು'' ಎಂದು ಹೇಳಿದರು. ಪರಿಪೂರ್ಣಸರ್ವಕಾಮನಾದ ಕೃಷ್ಣ ಅವರಿಗೆ ಹೇಳಿದ : ''ಇಲ್ಲೊಂದೆಡೆ ಬ್ರಾಹ್ಮಣರ ಗುಂಪು ಬಹುಕರ್ತೃಕವಾದ ಯಾಗವೊಂದನ್ನು ನಡೆಸಿರುವರು. ಅವರನ್ನು ಬೇಡಿರಿ''.

ವಿ: ೧) ಬಹುಕರ್ತೃಕವಾದ ಯಾಗಕ್ಕೆ 'ಸತ್ರ' ಎಂದು ಹೆಸರು. ವಿಪ್ರರು ಮಾಡುತ್ತಿದ್ದ ಆ ಸತ್ರಯಾಗ ಆಂಗಿರಸ ಎಂದು [೨]ಭಾಗವತದಲ್ಲಿದೆ.

೨) ಹಸಿವೆಯಿಂದ ಪೀಡಿತರಾದ ಅವರು ಕೃಷ್ಣನನ್ನು ಹಾಗೆ ಮೊರೆಹೊಕ್ಕದ್ದು ನಾಲ್ಕು ಬಗೆಯ ತನ್ನ ಭಕ್ತರಲ್ಲಿ ಆರ್ತರು ಒಂದು ಬಗೆ ಎಂಬ ಗೀತಾವಚನಕ್ಕೆ (೭/೧೬) ನಿದರ್ಶನ :

೩) ದುರ್ವಾಸರಂಥವರು ಬೇಡಿದಾಗ ಶ್ರೀರಾಮರೂಪದಿಂದ ಸ್ವತಃ ತಾನೇ ಅನ್ನ ನೀಡಿದ ಕೃಷ್ಣ ಇವರಿಗೆ ಹಾಗೆ ಮಾಡದೆ ಬೇರೆಯವರಿಂದ ಅನ್ನ ಕೊಡಿಸುವ ವ್ಯವಸ್ಥೆ ಮಾಡಿದ್ದು ಅವನು ಅನ್ನ ಕೊಡುವ ಮತ್ತೊಂದು ಬಗೆಗೆ ಸೂಚಕ. ದುರ್ವಾಸರಂತಹ ಉತ್ತಮಾಧಿಕಾರಿಗಳಿಗೆ ಸಾಕ್ಷಾತ್

---

೧. ಕ್ಷುಧರ್ದಿತತರಾ – (ಪಾಠಾಂತರ.)

೨. ಪ್ರಯಾತ ದೇವಯಜನಂ ಬ್ರಾಹ್ಮಣಾ ಬ್ರಹ್ಮವಾದಿನಃ ।
ಸತ್ರಮಾಂಗಿರಸಂ ನಾಮ ಹ್ಯಾಸತೇ ಸ್ವರ್ಗಕಾಮಯಾ ॥ –ಭಾಗವತ (೧೦/೨೩/೩)

ನೀಡುವ ಪರಮಾತ್ಮ ಇತರರಿಗೆ ಮತ್ತೊಬ್ಬರ ಮೂಲಕ ನೀಡುವನು ಎಂಬ ತತ್ತ್ವವನ್ನೂ ಗ್ರಹಿಸಬಹುದು. ಅಂತೂ ಸರ್ವರಿಗೂ ಅನ್ನ ನೀಡುವವನು ಅವನೇ ಎಂಬುದು ಮಥಿತಾರ್ಥ.

ತಾನ್ ಪ್ರಾಪ್ಯ ಕಾಮಮನವಾಪ್ಯ ಪುನಶ್ಚ ಗೋಪಾಃ
ಕೃಷ್ಣಂ ಸಮಾಪುರಥ ತಾನವದತ್ ಸ ದೇವಃ ।
ಪತ್ನೀಃ ಸಮರ್ಥಯತ ಮದ್ವಚನಾದಿತಿ ಸ್ಮ
ಚಕ್ರುಶ್ಚ ತೇ ತದಪಿ ತಾ ಭಗವಂತಮಾಪುಃ ॥ ೫೯ ॥

ಅ: ಆ ಗೋಪರು ಅವರ ಬಳಿ ಹೋಗಿ ತಮ್ಮ ಬಯಕೆ ಈಡೇರದೆ ಕೃಷ್ಣನ ಬಳಿಗೆ ಮರಳಿದರು. ಅವರಿಗೆ ದೇವನಾದ ಕೃಷ್ಣ ನುಡಿದ: ''ನಾನು ಕಳುಹಿಸಿದೆನೆಂದು ಹೇಳಿ ಅವರ ಪತ್ನಿಯರನ್ನು ಕೇಳಿರಿ''. ಅವರು ಹಾಗೆಯೇ ಮಾಡಿದರು; ಆ ವಿಪ್ರಪತ್ನಿಯರು ಕೃಷ್ಣನ ಬಳಿಗೆ ಧಾವಿಸಿದರು.

ವಿ: ೧) ಶ್ರೀಕೃಷ್ಣ ಹೀಗೆ ಮಾಡುವ ಮೂಲಕ ವಿಪ್ರರಿಂದ ಆಗದ ಕಾರ್ಯ ಅವರ ಪತ್ನಿಯರಿಂದ ಆಗುವುದೆಂದು ತಿಳಿಸಿಕೊಟ್ಟ. ಆದ್ದರಿಂದಲೇ ಬೇಡುವವರು ''ಭವತಿ ಭಿಕ್ಷಾಂ ದೇಹಿ'' (ಅಮ್ಮಾ ! ಭಿಕ್ಷೆ ನೀಡು) ಎಂದು ಕೇಳುವುದು ರೂಢಿಗೆ ಬಂದಿರಬೇಕು. ಅನ್ನ ನೀಡುವವರಿಗೆ ಅನ್ನಪೂರ್ಣೇಶ್ವರಿ ಎಂದು ಕರೆಯಲು ಕಾರಣವಾಗಿರಬೇಕು ಎನ್ನಬಹುದು.

೨) ಶ್ರೀಕೃಷ್ಣ ಹೀಗೆ ಗೋಪರನ್ನು ವಿಪ್ರಪತ್ನಿಯರ ಬಳಿಗೆ ಕಳುಹಿಸುತ್ತಾ ಅವರು ತಪ್ಪದೆ ಅನ್ನ ನೀಡುವರು ಎಂಬ ಆಶ್ವಾಸನೆಯನ್ನೂ ನೀಡಿದ ಎಂಬ ವಿಶೇಷಾಂಶ [೧]ಭಾಗವತದಲ್ಲಿದೆ.

ತಾಃ ಷಡ್ವಿಧಾನ್ನಪರಿಪೂರ್ಣಕರಾಃ ಸಮೇತಾಃ
ಪ್ರಾಪ್ತಾ ವಿಸೃಜ್ಯ ಪತಿಪುತ್ರಸಮಸ್ತಬಂಧೂನ್ ।
ಆತ್ಮಾರ್ಚನೈಕಪರಮಾ ವಿಸಸರ್ಜ ಕೃಷ್ಣ
ಏಕಾ ಪತಿಪ್ರವಿಧೃತಾ ಪದಮಾಪ ವಿಷ್ಣೋಃ ॥ ೬೦ ॥

ಅ: ಆ ವಿಪ್ರಪತ್ನಿಯರು ಗಂಡ, ಮಕ್ಕಳು ಮೊದಲಾದ ಸಮಸ್ತಬಂಧುಗಳನ್ನೂ ತೊರೆದು ಕೃಷ್ಣನನ್ನು ಆರಾಧಿಸುವ ಒಂದೇ ಉದ್ದೇಶದಿಂದ ಕೈಯಲ್ಲಿ ಷಡ್ವಿಧಅನ್ನವನ್ನು ಹಿಡಿದುಕೊಂಡು

---

೧. ಮಾಂ ಜ್ಞಾಪಯತ ಪತ್ನೀಭ್ಯಃ ಸಸಂಕರ್ಷಣಮಾಗತಮ್ ।
ದಾಸ್ಯಂತಿ ಕಾಮಮನ್ನಂ ವಃ ಸ್ನಿಗ್ಧಾ ಮಯ್ಯುಷಿತಾ ಧಿಯಾ ॥ – ಭಾಗವತ (೧೦/೨೩/೧೪)

ಕೃಷ್ಣನ ಬಳಿಗೆ ಧಾವಿಸಿದರು. ಅವರನ್ನು ಕೃಷ್ಣ ಮರಳಿ ಕಳುಹಿಸಿಕೊಟ್ಟ. ತನ್ನ ಪತಿಯಿಂದ ತಡೆಯಲ್ಪಟ್ಟ ಒಬ್ಬಳು ಮಾತ್ರ ಹರಿಪದವನ್ನೈದಿದಳು.

ವಿಃ ೧) ಕೃಷ್ಣ ಅವರ ಆತಿಥ್ಯವನ್ನು ಸ್ವೀಕರಿಸಿ ಅವರನ್ನೆಲ್ಲ ಅವರ ಗಂಡಂದಿರ ಬಳಿ ಮರಳಿ ಕಳುಹಿಸಿಕೊಟ್ಟ. ತಮ್ಮನ್ನು ತಮ್ಮ ಪತಿಗಳು ತೊರೆಯಬಹುದೆಂಬ ಆಂಜಿಕೆಯಿಂದ ಅವರು ಹಾಗೆ ಹೋಗಲು ಸಂದೇಹಿಸಿದಾಗ, ''ನಿಮ್ಮ ಗಂಡಂದಿರು ನಿಮ್ಮನ್ನು ಖಂಡಿತ ಸ್ವೀಕರಿಸುವರು'' ಎಂದು ಆಶ್ವಾಸನೆ[೪] ನೀಡಿದ.

೨) ಒಬ್ಬ ವಿಪ್ರಪತ್ನಿಗೆ ಮಾತ್ರ ಹಾಗೆ ಇತರರಂತೆ ಕೃಷ್ಣನ ಬಳಿಗೆ ಬರಲು ಸಾಧ್ಯವಾಗಿರಲಿಲ್ಲ. ಅದಕ್ಕೆ ಅವಳ ಗಂಡ ಮಾಡಿದ ಅಡ್ಡಿ ಕಾರಣವಾಗಿತ್ತು. ಅದರಿಂದ ನೊಂದ ಅವಳು ಕೃಷ್ಣನನ್ನು ನೆನೆಯುತ್ತಾ ದೇಹ ತೊರೆದು, [೫]ಸದ್ಗತಿ ಪಡೆದಳು ಎಂದರ್ಥ.

೩) ಷಡ್ರಸಗಳು ಹೀಗಿವೆ : ಮಧುರ, ಕಷಾಯ, ಆಮ್ಲ, ತಿಕ್ತ, ಕಟು ಮತ್ತು ಲವಣ.

ಭುಕ್ತ್ವೇಽಥ ಗೋಪಸಹಿತೋ ಭಗವಾಂಸ್ತದನ್ನಂ
ರೇಮೇ ಚ ಗೋಕುಲಮವಾಪ್ಯ ಸಮಸ್ತನಾಥಃ ।
ಆಜ್ಞಾತಿಲಂಘನಕೃತೇಃ ಸ್ವಕೃತಾಪರಾಧಾತ್
ಪಶ್ಚಾತ್ ಸುತಪ್ತಮನಸೋಽಪ್ಯಭವನ್ ಸ್ಮ ವಿಪ್ರಾಃ ॥ ೬೧ ॥

---

೨. ಷಡ್ರಸೋಪೇತತಯಾಽನ್ನಸ್ಯ ಷಾಡ್ವಿಧ್ಯಂ ಜ್ಞೇಯಮ್ । ವಿಪ್ರಪತ್ನೀನಾಮಾಗಮನಪ್ರಕಾರಂ ಗಮನಪ್ರಕಾರಂ ಚೋಕ್ತ್ವಾ ಪ್ರಾಗಾಗಮನಸಮಯ ಏವ ಜಾತಾಂ ಕಾಂಚಿ- ತ್ಕಥಾಮಾಹ ಏಕಾ ಪತಿಪ್ರವಿರುದ್ಧೇತಿ । ಪತ್ಯಾ ಆಕರ್ಷಣೇನ ವಿರುದ್ಧತಯಾ ಧೃತಾ ನ ಗಚ್ಛೇತಿ ಧೃತೇತಿ ಯಾವತ್ । ಅನ್ಯಥಾ ''ಪತಯೋ ನಾಭ್ಯಸೂಯೇರನ್ನಿತ್ಯಂ ಭ್ರಾತೃಸುತಾದಯಃ । ಲೋಕಾಶ್ಚ ವೋ ಮಯೋಪೇತಾ ದೇವಾ ಅಪ್ಯನುಮನ್ವತೇ'' । ಇತಿ ಭಾಗವತೋಕ್ತಕೃಷ್ಣವಚನಸ್ಯಾಸತ್ಯತಾ ಸ್ಯಾತ್ । ಭಗವಂತಂ ದೃಷ್ಟ್ವಾ ಕಸ್ಯಾಶ್ಚಿದ್ವರ್ಜನೇ । ''ತತ್ಯೈಕಾ ವಿಧೃತಾ ತತ್ರ ಭಗವಂತಂ ಯಥಾಶ್ರುತಮ್ । ಹೃದೋಪಗುಹ್ಯ ವಿಜಹೌ ದೇಹಂ ಕರ್ಮಾನುಬಂಧನಮ್'' ಇತಿ ಶ್ಲೋಕೇ ಯಥಾಶ್ರುತಮಿತಿ ನ ಸ್ಯಾತ್ । ಕಿಂತು ಯಥಾದೃಷ್ಟಮಿತ್ಯವಧ್ಯಂದಿತಿ ಜ್ಞೇಯಮ್ ॥ – (ವಾ.)

೩. ಪ್ರವಿರುದ್ಧಾ ಪ್ರಕರ್ಷೇಣವಿರುದ್ಧತಯಾ ಧೃತಾನಿಗೃಹೀತೇತಿ ಯಾವತ್ । ವಿಸೃಷ್ಟೇತಿ ವಾ । ವಿತೇರೂರ್ವಿತರಣಂ ಚಕ್ರುಃ । – (ತಾ.)

೪. ಪತಯೋ ನಾಭ್ಯಸೂಯೇರನ್ ಪಿತೃಭ್ರಾತೃಸುತಾದಯಃ ।
ಲೋಕಾಶ್ಚ ವೋ ಮಯೋಪೇತಾ ದೇವಾ ಅಪ್ಯನುಮನ್ವತೇ ॥
ನ ಪ್ರೀತಯೇಽನುರಾಗಾಯ ಹ್ಯಂಗಸಂಗೋ ನೃಣಾಮಿಹ ।
ತನ್ಮನೋ ಮಯಿ ಯುಂಜಾನಾ ಅಚಿರಾನ್ಮಾಮವಾಪ್ಸ್ಯಥ ॥ – ಭಾಗವತ (೧೦/೨೩/೩೧-೩೨)

೫. ಪತ್ಯಾ ಸ್ವಪತಿನಾ ಪ್ರವಿರುದ್ಧಾ ಮಾ ಗಚ್ಛೇತಿ ಪ್ರವಾರಿತಾ ಏಕಾ ವಿಪ್ರಪತ್ನೀ ಯೋಗೇನ ತನುಂ ತ್ಯಕ್ತ್ವಾ ವಿಷ್ಣೋಃ ಪದಂ ಸ್ಥಾನಮಾಪ । – (ಜ.)

ಅ: ಬಳಿಕ ಭಗವಂತನಾದ ಕೃಷ್ಣ ಗೊಲ್ಲರೊಂದಿಗೆ ಕೂಡಿ ಆ ಅನ್ನವನ್ನು ಉಂಡ. ಸರ್ವಸ್ವಾಮಿಯಾದ ಅವನು ಗೋಕುಲಕ್ಕೆ ತೆರಳಿ ವಿಹರಿಸಿದ. ಇತ್ತ ವಿಪ್ರರು ಕೃಷ್ಣನ ಆಜ್ಞೆಯನ್ನು ಮೀರಿದ ತಾವು ಮಾಡಿದ ಅಪರಾಧದಿಂದಾಗಿ ಬಹಳವಾಗಿ ಮನಸ್ಸಿನಲ್ಲಿ ಪಶ್ಚಾತ್ತಾಪ ಪಟ್ಟರು.

ವಿ: ೧) ಕೃಷ್ಣ ವಿಪ್ರಪತ್ನಿಯರು ತಂದಿತ್ತ ಬಗೆಬಗೆಯ ಷಡ್ರಸೋಪೇತವಾದ ನಾಲ್ಕುಬಗೆಯ ಅನ್ನವನ್ನು ತಾನೂ ಸ್ವೀಕರಿಸಿ, ಗೋಪರಿಗೂ ನೀಡಿದ. ಬಳಿಕ ಗೋಕುಲಕ್ಕೆ ತೆರಳಿ ವಿಹರಿಸಿದ. ಸರ್ವೇಶ್ವರನಾದ ಅವನಿಗೆ ಗೋಕುಲದ ವಿಹಾರ ಲೀಲೆ ಮಾತ್ರ ಎಂಬುದನ್ನು 'ಸಮಸ್ತನಾಥಃ' ಎಂಬುದಾಗಿ ತಿಳಿಸಿರುವರು.

೨) ವಿಪ್ರರು ಮರಳಿದ ತಮ್ಮ ಪತ್ನಿಯರನ್ನು ಕೃಷ್ಣ ಹೇಳಿದ್ದಂತೆ ಆದರದಿಂದ ಸ್ವೀಕರಿಸಿದರು. ತಾವು ಹಾಗೆ ಮಾಡದೆ ಕೃಷ್ಣನ ಆಜ್ಞೆಯನ್ನು ಉಲ್ಲಂಘಿಸಿದ ತಪ್ಪಿಗಾಗಿ ನೊಂದರು. ಅವರೂ ಸಹ ಜ್ಞಾನಿಗಳೇ ಆಗಿದ್ದರೂ, ಕಂಸನ ಭಯ ಅವರಿಗೆ ಹಾಗೆ ಮಾಡಲು ಅಡ್ಡಿಯಾಗಿತ್ತು. ಆ ಭಯವನ್ನು ಮೀರಿ ಕೃಷ್ಣನನ್ನು ಆರಾಧಿಸಿದ್ದು ಅವರ ಪತ್ನಿಯರ ಭಾಗ್ಯವಾಯಿತು.

೩) ಅವಕಾಶ ಒದಗಿದಾಗ ಅದನ್ನು ಸದುಪಯೋಗ ಪಡೆಯದೆ, ಅನಂತರ ಪರಿತಪಿಸಿದ ಆ ವಿಪ್ರರ ರೀತಿ ''ವಿಪ್ರರದು ಕೆಟ್ಟ ಮೇಲೇ ಬುದ್ಧಿ'' ಎಂಬ [೧]ಗಾದೆಯ ಮಾತಿಗೆ ಕಾರಣವಾಯಿತು. ಹಾಗೆ ಪರಿತಪಿಸಿದ ಬಳಿಕವೂ ಕಂಸನ [೨]ಭಯದಿಂದಾಗಿ ಕೃಷ್ಣ ಬಲರಾಮರ ಬಳಿಗೆ ಹೋಗಿ ಕ್ಷಮೆ ಯಾಚಿಸುವ ಕಾರ್ಯವನ್ನು ಮಾಡಲು ಸಾಧ್ಯವಾಗಲಿಲ್ಲ ಎಂಬ ವಿವರ ಭಾಗವತದಲ್ಲಿದೆ :

ಗೋವರ್ಧನೋದ್ಧರಣ

ಕೃಷ್ಣೋಽಥ ವೀಕ್ಷ್ಯ ಪುರುಹೂತಮಹಪ್ರಯತ್ನಂ
ಗೋಪಾನ್ ನ್ಯವಾರಯದವಿಸ್ಮರಣಾಯ ತಸ್ಯ ।
ಮಾ ಮಾನುಷೋಽಯಮಿತಿ ಮಾಮವಗಚ್ಛತಾತ್ ಸ
ಇತ್ಯವ್ಯಯೋಽಸ್ಯ ವಿದಧೇ ಮಹಭಂಗಮೀಶಃ ॥ ೬೨ ॥

---

೧. ಇದಂದಿನಮಾದೀಕ್ಯತ್ಯ 'ವಿಪ್ರಾಃ ಪಶ್ಚಿಮಬುದ್ಧಯ' ಇತಿ ಪ್ರಸೃತಮಾಖಾಣಕಮಿತಿ ಕಿಂವದಂತೀ ॥
- ಶ್ರೀ ಸತ್ಯಧರ್ಮತೀರ್ಥರು (ಭಾಗವತಟಪ್ಪಣ ೧೦/೮೭)

೨. ಇತಿ ಸ್ವಾಘಮನುಸ್ಮೃತ್ಯ ಕೃಷ್ಣೇ ತೇ ಕೃತಹೇಲನಾಃ ।
ದಿದೃಕ್ಷವೋಽಪ್ಯಚ್ಯುತಯೋಃ ಕಂಸಾದ್ಭೀತಾ ನ ಚಾಚಲನ್ ॥
– ಭಾಗವತ (೧೦/೨೩/೫೨)

ಅ: ಕೃಷ್ಣನು ಇಂದ್ರನನ್ನು ಕುರಿತ ಪೂಜೆಯ ಸಿದ್ಧತೆಯನ್ನು ಕಂಡು ಗೋಪರನ್ನು ತಡೆದ. ಇಂದ್ರನು ತನ್ನನ್ನು ಮನುಷ್ಯನೆಂದು ತಿಳಿಯದಿರಲಿ ಎಂಬ ಕಾರಣದಿಂದ ಅವನಿಗೆ ತನ್ನ ಬಗ್ಗೆ ವಿಸ್ಮರಣೆಯನ್ನು ಪರಿಹರಿಸಲೆಂದು ಅವ್ಯಯನೂ, ಪ್ರಭುವೂ ಆದ ಅವನು ಆ ಪೂಜೆಯನ್ನು ನಿಲ್ಲಿಸಿದ.

ವಿ: ೧) ಪ್ರತಿವರ್ಷದಂತೆ ಗೋಪರೆಲ್ಲ ಇಂದ್ರಪೂಜೆಗೆಂದು ತೊಡಗಲು, ಕೃಷ್ಣನು ಅದನ್ನು ನಿಲ್ಲಿಸಿದ. ಇಂದ್ರನು ತನ್ನ ಬಗ್ಗೆ ಹೊಂದಿದ್ದ ಮರೆವನ್ನು ಪರಿಹರಿಸುವುದು ಅದರ ಮುಖ್ಯಉದ್ದೇಶವಾಗಿತ್ತು ಎಂದು ಭಾವ.

೨) ಅದರಂತೆ ನಂದಾದಿಗಳಿಗೆ ತನ್ನ ಸ್ವರೂಪದ ಬಗ್ಗೆ ತಿಳುವಳಿಕೆಯನ್ನು ನೀಡುವುದು ಕೃಷ್ಣನ ಆ ಕಾರ್ಯದ ಮತ್ತೊಂದು ಉದ್ದೇಶವಾಗಿತ್ತು ಎಂಬ ವಿವರ ಮುಂದೆ ಬಂದಿದೆ.

೩) 'ಅವ್ಯಯ' ಎಂಬುದು ವಿಷ್ಣುವಿನ ಸಹಸ್ರನಾಮಗಳಲ್ಲೊಂದು('ಅವ್ಯಯಃ ಪುರುಷಃ ಸಾಕ್ಷೀ'). ಇಂದ್ರ ಬದಲಾಗುವ ಸ್ವರ್ಗದದೊರೆಯಾದರೆ, ಕೃಷ್ಣ ಶಾಶ್ವತವಾಗಿ ವಿಶ್ವದ ಪ್ರಭು ಎಂಬುದು ಇಲ್ಲಿಯ ಧ್ವನಿ.

ಗೋಪಾಂಶ್ಚ ತಾನ್ ಗಿರಿಮಹೋಽಸ್ಮದುರುಸ್ವಧರ್ಮ
ಇತ್ಯುಕ್ತಿಸಚ್ಛಲತ[೧] ಆತ್ಮಮಹೇಽವತಾರ್ಯ ।
ಭೂತ್ವಾಽತಿವಿಸ್ಮೃತತನುರ್ಬುಭುಜೇ ಬಲಿಂ ಸ
ನಾನಾವಿಧಾನ್ನರಸಪಾನಗುಣೈಃ ಸಹೈವ ॥ ೬೩ ॥

---

೧. ಛಲೇನ = ಗಿರಿಪೂಜಾ ಕಾರ್ಯೇತಿ ಛದ್ಮನಾ ಸಹಿತಾ ಉಕ್ತಿಃ ಉಕ್ತಿಸಚ್ಛಲಮಿತಿ ವಿಶೇಷಣಸ್ಯೋಪರಿ ನಿಪಾತೋ ಜ್ಞೇಯಃ । ''ಕಪಟೋಽಸ್ತ್ರೀ ವ್ಯಾಜದಂಭೋಽನೃತಂ ಛದ್ಮ ಛಲಃ ಪುಮಾನ್'' ಇತಿ ಹ್ಯನುಶಾಸನಮ್ । ಯದ್ವಾ । ಉಕ್ತೌ ಸತ್ಸಮೀಚೀನಂ ಛಲಂ ದ್ವಯಾರ್ಥಕಪದಪ್ರಯೋಗಃ ತಸ್ಮಾತ್ ಗಿರಿಶಬ್ದೋ ಹಿ ಗಿರತಿ ನದ್ಯಾದಿಕಮಿತಿ ಪರ್ವತಮಪಿ ವಕ್ತಿ । ತತ್ರಾನಭಿಪ್ರೇತಾರ್ಥಗ್ರಹಣೇ ಸಮೀಚೀನಚ್ಛಲಂ ಭವತಿ । ಇದಂ ಚ ಗಿರಿಶಬ್ದೇನ ''ನಾಮಾನಿ ಸರ್ವಾಣಿ'' ಇತ್ಯಾದಿ ಶ್ರುತೇಃ । ''ಅರ್ಚಂತು ಪುತ್ರಕಾ ಉತ ಪುರಂ ನ ಧೃಷ್ಣ್ವರ್ಚತ'' ಇತಿ ಶ್ರುತೇಶ್ಚ । ವಾಚ್ಯತಯಾ ಪೂಜ್ಯತಯಾ ಚ ದ್ವೇಧಾऽಪಿ ಸ್ವಾತ್ಮಗ್ರಹಣಮುಚಿತತರಮಿತಿ ಭಾವಃ । ಅತೋ ಲೀಲಯೋಕ್ತಮಪಿ ಭಗವದ್ವಚನಂ ನಾನೃತಮಿತಿ ಜ್ಞೇಯಮ್ । ಅತ ಏವ ''ಆತ್ಮಮಹೇಽವತಾರ್ಯ'' ಇತ್ಯುಕ್ತಮ್ ॥ – (ವಾ.)

'ಗೋಪಾಂಶ್ಚ ತಾನ್ ಗಿರಿವರಸ್ಯ ವಿಧೀಯತಾಂ ಸ ಯಾಗೋ ಯಥಾವದಿತಿಹ' ಇತಿ ಪಾಠೇ ಸ ಯಾಗಃ ಇಂದ್ರಾರ್ಥಂ ಕ್ರಿಯಮಾಣೋ ಯಾಗಃ ..... । – (ಜ.)

ಅತ್ರ ಸಚ್ಛಲತ ಇತಿ ಛದ್ಮವಾಚಕಚ್ಛಲ ಶಬ್ದೇನ ಛದ್ಮಕಾರ್ಯಂ ಮಿಥ್ಯಾಜ್ಞಾನಂ ಗೃಹ್ಯತೇ । ಮಿಥ್ಯಾಜ್ಞಾನಸ್ಯಾಪಿ ಗಿರ್ಯಂತರ್ಗತಾತ್ಮಪೂಜಾದ್ವಾರಾ ಅಭೀಷ್ಟಹೇತುತ್ವಾತ್ ಸಮೀಚೀನತ್ವಮಿತಿ ಜ್ಞಾಪಯಿತುಂ ಸದಿತ್ಯುಕ್ತಮ್ । – (ಸ.)

ಅ: ಗೋಪರನ್ನು ಕುರಿತು ''ಗಿರಿಯಜ್ಞವೇ ನಮಗೆ ವಿಹಿತವಾದ ಶ್ರೇಷ್ಠಧರ್ಮ'' ಎಂಬ ಉಕ್ತಿವ್ಯಾಜದಿಂದ ಕೃಷ್ಣ ಗೋಪರನ್ನು ತನ್ನ ಆರಾಧನೆಯಲ್ಲಿ ತೊಡಗಿಸಿದ; ತುಂಬಾ ದೊಡ್ಡದಾದ ದೇಹವನ್ನು ಧರಿಸಿ, ಅನೇಕತೆರನಾದ ಅನ್ನ,ರಸ, ಪಾನಗಳ ಪರಿಕರದಿಂದ ಕೂಡಿದ ಅವರ ಪೂಜೆಯನ್ನು [೧]ಸ್ವೀಕರಿಸಿದ.

ವಿ: ೧) ಕೃಷ್ಣ ಇಂದ್ರಪೂಜೆಯನ್ನು ನಿಲ್ಲಿಸಿ, ಗಿರಿಪೂಜೆಗೆ ತೊಡಗಿಸುವ ಮೂಲಕ ಗೋಪರನ್ನು ತನ್ನ ಪೂಜೆಯಲ್ಲೇ ತೊಡಗಿಸಿದ. ಎಂದರೆ ಗಿರಿಪೂಜೆಯ ನೆಪದಲ್ಲಿ ತನ್ನ ಪೂಜೆಗೇ ತೊಡಗಿಸಿದ ಎಂದರ್ಥ. ಒಂದರ್ಥದಲ್ಲಿ ಇದು ಛಲವೇ. ಆದರೆ ಇದು ಉತ್ತಮಜ್ಞಾನಕ್ಕೆ ಸಾಧನವಾದ್ದರಿಂದ ಸಚ್ಛಲವೆನ್ನಿಸಿತು ಎಂದು ಭಾವ.

೨) 'ಗಿರಿ'ಶಬ್ದ ಮುಖ್ಯವಾಗಿ ವಿಷ್ಣುವಾಚಕ; ಅನಂತರ ಮುಖ್ಯಪ್ರಾಣವಾಚಕವೂ ಆಗಿದೆ. ಹೀಗೆ ಗಿರಿಪೂಜೆ ಶ್ರೀಹರಿವಾಯುಗಳ ಪೂಜೆಗೆ ಸಾಧನವಾಯಿತು.

೩) ಇಂದ್ರ ಗಿರಿಗಳ ರೆಕ್ಕೆಗಳನ್ನು ಕತ್ತರಿಸಿದ ವಿವರ ವೇದಪ್ರಸಿದ್ಧವಾದುದು. ಇದರಿಂದ ಇಂದ್ರ ಗಿರಿಗಳ ವೈರಿ ಎಂದಾಯಿತು. ಕೃಷ್ಣ ಇಂದ್ರಪೂಜೆಯನ್ನು ತಪ್ಪಿಸಿ, ಗಿರಿಪೂಜೆಗೆ ಅವಕಾಶ ಕಲ್ಪಿಸಿದ್ದು ಇಂದ್ರನ ವಿರುದ್ಧ ಅವನ ಶತ್ರುವನ್ನು ಎತ್ತಿಕಟ್ಟಿದಂತಾಯಿತು. ಅದರಿಂದಾಗಿ ಕೋಪ–ಗೊಂಡ ಇಂದ್ರ ಕಾದಾಟಕ್ಕೆ ಧಾವಿಸುವ ಮೂಲಕ ಪಾಠ ಕಲಿಯಲು [೨]ಅವಕಾಶವಾಯಿತು ಎಂದರ್ಥ.

ಇಂದ್ರೋಽಥ ವಿಸ್ಮೃತರಥಾಂಗಧರಾವತಾರೋ
ಮೇಘಾನ್ ಸಮಾದಿಶದುರೂದಕಪೂಗವೃಷ್ಟ್ಯೈ ।
ತೇ ಪ್ರೇರಿತಾಃ ಸಕಲಗೋಕುಲನಾಶನಾಯ
[೩]ಧಾರಾ ವಿತೇರುರುರುನಾಗಕರಪ್ರಕಾರಾಃ [೪] ॥ ೬೪ ॥

---

೧. ಸ ಚ ಬ್ರಾಹ್ಮಣಗಿರ್ಯಾದಿನಾಮಾ ವಿಷ್ಣುರಜಃ ಪರಃ ।
ವಿತಸ್ಮಾತ್ ಕಾರಣಾತ್ ಕೃಷ್ಣಂ ಶಕ್ರಸ್ಯ ವಿಮದಾಯ ತು ।
ಗಿರ್ಯಾದಿಸ್ಥಿತಮಾತ್ಮಾನಂ ಪೂಜಯಾಮಾಸ ವಲ್ಲವೈಃ ॥ - ಇತಿ ಭಾಗವತತಾತ್ಪರ್ಯೇ

೨. ಶತಕ್ರತೌ ವರ್ಷತಿ ವಾಸುದೇವೋ ಗಿರಿಂ ಸಮುದ್ಧೃತ್ಯ ಬಭೂವ ತೂಷ್ಣೀಮ್ ।
ಜಿಹೀರ್ಷುಭಿಃ ಸ್ವಾಸಮಶತ್ರುಶೌರ್ಯಂ ತದಾದ್ಯವೈರ್ಯುದ್ಧರಣಂ ಹಿ ಕಾರ್ಯಮ್ ॥ –ರು.ವಿ. (೫/೫೭)

೩. ಧಾರಾ ವಿತೇರುರಿತ್ಯತ್ರ ವಿತೇರುಃ = ವಿತರಣಂ ಚಕ್ರುಃ ಯಥೇಷ್ಟಂ ದದುರಿತ್ಯರ್ಥಃ ॥ – (ವಾ.)

೪. 'ನಾಗೋ ವೃಕ್ಷವಿಶೇಷಃ ಸ್ಯಾನ್ನಾಗೌ ವಾರಣಪನ್ನಗೌ' ಇತ್ಯನೇಕದ್ವನಿಪದಮಂಜರ್ಯಾಮ್ । – (ಜ.)

ಅ: ಆಗ ಶ್ರೀಕೃಷ್ಣ ರಥಾಂಗಪಾಣಿಯಾದ ಶ್ರೀಹರಿಯ ಅವತಾರ ಎಂಬುದನ್ನು ಮರೆತಿದ್ದ ಇಂದ್ರ ದೊಡ್ಡ ಜಲಧಾರೆಯನ್ನು ಸುರಿಸಲೆಂದು ಮೋಡಗಳಿಗೆ ಆದೇಶ ನೀಡಿದ. ಅವನಿಂದ ಪ್ರೇರಿತವಾದ ಆ ಮೇಘಗಳು ದೊಡ್ಡ ಆನೆಯ ಸೊಂಡಿಲ ಗಾತ್ರದ ಮಳೆಯನ್ನು ಸಮಸ್ತಗೋಕುಲದ ವಿನಾಶಕ್ಕಾಗಿ ಸುರಿಸತೊಡಗಿದವು.

ವಿ: ೧) 'ರಥಾಂಗಪಾಣಿ' ಎಂಬುದು ವಿಷ್ಣುವಿನ ಸಹಸ್ರನಾಮಗಳಲ್ಲಿ ಒಂದು ('ರಥಾಂಗಪಾಣಿರಕ್ಷೋಭ್ಯಃ'). ಆವರೆಗೂ ಕೃಷ್ಣ ಕೈಯಲ್ಲಿ ಚಕ್ರವನ್ನು ಹಿಡಿದಿರಲಿಲ್ಲವೆಂಬುದು ಇಂದ್ರನಿಗೆ ಕೃಷ್ಣ ವಿಷ್ಣುವಿನ ಅವತಾರ ಎಂಬುದರ ಮರೆವಿಗೆ ಕಾರಣವಾಯಿತು ಎಂಬ ಸ್ವಾರಸ್ವವನ್ನು 'ರಥಾಂಗಧರ' ಎಂಬ ಪದದ ಮೂಲಕ ಸೂಚಿಸಿರುವರು ಎಂಬ [೧]ವಿಶೇಷಾರ್ಥವನ್ನು ಶ್ರೀವಾದಿರಾಜರು ತಿಳಿಸಿರುವರು.

೨) ಇಂದ್ರ ಎಂದರೆ ಐಶ್ವರ್ಯವಂತ ಎಂದರ್ಥ('ಇದಿ ಪರಮೈಶ್ವರ್ಯೇ'). ಇಂದ್ರನಿಗೆ ಅಹಂಕಾರ ಬರಲು ಐಶ್ವರ್ಯದ ಮದ ಕಾರಣವಾಯಿತು ಎಂಬ ಸೂಚನೆಯನ್ನೂ ಇದರಿಂದ ಗ್ರಹಿಸಬಹುದು. ಆಗ ಕಳುಹಿಸಿದ ಮೇಘಗಳು ಪ್ರಳಯಕಾಲದಲ್ಲಿ ಮಳೆಸುರಿಸುವ ಸಂವರ್ತಕ ಮೇಘಗಳು ಎಂಬ [೨]ವಿಶೇಷಾಂಶ ಹರಿವಂಶ, ಭಾಗವತ ಹಾಗೂ ವಿಷ್ಣುಪುರಾಣಗಳಲ್ಲಿವೆ.

ತಾಭಿರ್ನಿಪೀಡಿತಮುದೀಕ್ಷ್ಯ ಸ ಕಂಜನಾಭಃ
ಸರ್ವಂ ವ್ರಜಂ ಗಿರಿವರಂ ಪ್ರಸಭಂ[೩] ದಧಾರ ।
ವಾಮೇನ ಕಂಜದಲಕೋಮಲಪಾಣಿನೈವ
ತತ್ರಾಖಿಲಾಃ ಪ್ರವಿವಿಶುಃ ಪಶುಪಾಃ ಸ್ವಗೋಭಿಃ ॥ ೬೫ ॥

---

೧. ವಿಸ್ಮೃತವಿಷ್ಣ್ವವತಾರ ಇತ್ಯನುಕ್ತ್ವಾ ರಥಾಂಗವರಾವತಾರ ಇತಿ ವದತಾ ಬಾಲರೂಪಕೃಷ್ಣಕರೇ ತದಾನೀಂ ಚಕ್ರಾದರ್ಶನಂ ಚ ವಿಸ್ಮರಣಬೀಜಮಿತಿ ಸೂಚಿತಮ್ । – (ವಾ.)

೨. ಗಣಂ ಸಾಂವರ್ತಕಂ ನಾಮ ಮೇಘಾನಾಂ ಚಾಂತಕಾರಿಣಾಮ್ ।
ಗೋಪೇಭ್ಯಃ ಕೃಷ್ಣನಾಥೇಭ್ಯೋ ನಂದಾದಿಭ್ಯಶ್ಚುಕೋಪ ಸಃ ॥ – ಭಾಗವತ (೧೦/೨೫/೧)

ಮಂತ್ರಯಜ್ಞಪರಾ ವಿಪ್ರಾಃ ಸೀತಾಯಜ್ಞಾಶ್ಚ ಕರ್ಷಕಾಃ ।
ಗಿರಿಯಜ್ಞಾಸ್ತಥಾ ಗೋಪಾ ಇಜ್ಯತೇऽಸ್ಮಾಭಿರಿರ್ವನೇ ॥ – ಹರಿವಂಶ (೨/೯)

ಮಂತ್ರಯಜ್ಞಪರಾ ವಿಪ್ರಾಃ ಸೀರಯಜ್ಞಾಶ್ಚ ಕರ್ಷಕಾಃ ।
ಗಿರಿಗೋಯಜ್ಞಶೀಲಾಶ್ಚ ವಯಮದ್ರಿವನಾಶ್ರಯಾಃ ॥ – ವಿಷ್ಣುಪುರಾಣ (೫/೧೦/೩೭)

೩. ಪ್ರಸಭಂ ಕ್ರಿಯಾವಿಶೇಷಣಮೇತತ್ । – (ಸ.)

ಅ: ಅವುಗಳಿಂದ ಗೋಕುಲವೆಲ್ಲ ಬಹಳವಾಗಿ ಪೀಡಿತವಾದದ್ದನ್ನು ಕಂಡು ಪದ್ಮನಾಭನಾದ ಶ್ರೀಕೃಷ್ಣ ಆ ದೊಡ್ಡಪರ್ವತವನ್ನು ತನ್ನ ಕಮಲದಳದಂತೆ ಕೋಮಲವಾದ ಎಡಗೈ-ಯೊಂದರಿಂದಲೇ[೧] ಎತ್ತಿ ಹಿಡಿದ. ಅದರೊಳಕ್ಕೆ ಎಲ್ಲ ಗೋಪರೂ ತಮ್ಮ ಗೋವುಗಳೊಂದಿಗೆ ಪ್ರವೇಶಿಸಿದರು.

ವಿ: ೧) ಅಂತಹ ಭಯಂಕರವೃಷ್ಟಿಯಿಂದ ಇಡೀ ಗೋಕುಲ ತಲ್ಲಣಿಸಿದಾಗ ಕೃಷ್ಣ ತನ್ನ ಎಡಗೈಯೊಂದರಿಂದಲೇ ಗೋವರ್ಧನವನ್ನು ಎತ್ತಿ ಹಿಡಿದ. ಕೊಡೆಯಂತಾದ ಅದರೊಳಗೆ ಸಕಲ ಗೋಪರೂ ಗೋವು ಮೊದಲಾದವುಗಳೊಂದಿಗೆ ಪ್ರವೇಶಿಸಿ ಸುರಕ್ಷಿತರಾದರು ಎಂದರ್ಥ.

೨) ಹೀಗೆ ಪರ್ವತವನ್ನು ಒಂದೇ ಕೈಯಿಂದ ಎತ್ತಿದ ದಾಖಲೆ ಇಲ್ಲಿ ಶ್ರೀಕೃಷ್ಣನದಾದರೆ, ರಾಮಾಯಣದಲ್ಲಿ ಒಂದೇ ಕೈಯಿಂದ ಸಂಜೀವನಪರ್ವತ ಎತ್ತಿದ ಹಿರಿಮೆ ಹನುಮಂತನದು(೮/೧೫೬). ಕೃಷ್ಣ ಹರಿಯಾದರೆ, ಹನುಮಂತ ವಾಯು. ಗೋವರ್ಧನ ಧರಿಸಿ ಕೃಷ್ಣ ಗೋಗೋಪರ ಪ್ರಾಣ ಉಳಿಸಿದರೆ, ಸಂಜೀವನ ತಂದು ಹನುಮಂತ ಕಪಿಗಳ ಪ್ರಾಣ ಉಳಿಸಿದ. ಗೋವರ್ಧನ ಗೋಗೋಪರಿಗೆ ಸಂಜೀವನವಾಯಿತು. ಶ್ರೀಹರಿವಾಯುಗಳ ಕಾರ್ಯ ಅಪೂರ್ವವಾಗಿರುವಂತೆ ಅಪಾರ ಲೋಕೋಪಕಾರಕವೂ ಆಗಿವೆ ಎಂಬುದು ಗಮನಾರ್ಹ. ಹನುಮಂತ ಸಂಜೀವನ ತಂದಿದ್ದು ಹೂವೆತ್ತಿದಂತಹ ಕಾರ್ಯವಾಗಿದ್ದಂತೆ ಕೃಷ್ಣ ಗೋವರ್ಧನ ಎತ್ತಿ ಹಿಡಿದದ್ದು ಬಾಲಕ ಕೈಯಲ್ಲಿ ನಾಯಿಕೊಡೆ ಹಿಡಿದಂತಾಗಿತ್ತು.

ವೃಷ್ಟ್ಯೋತ್ಥಾರುವಾರ್ಯಥ ನಿರಂತರಸಪ್ತರಾತ್ರಂ
ತ್ರಾತಂ ಸಮೀಕ್ಷ್ಯ ಹರಿಣಾ ವ್ರಜಮಶ್ರಮೇಣ ।
ಶಕ್ರೋಽನುಸಂಸ್ಮೃತಸುರಪ್ರವರಾವತಾರಃ
ಪಾದಾಂಬುಜಂ ಯದುಪತೇಃ ಶರಣಂ ಜಗಾಮ ॥ ೬೬ ॥

---

೧. ಇತ್ಯುಕ್ತ್ವೈಕೇನ ಹಸ್ತೇನ ಕೃತ್ವಾ ಗೋವರ್ಧನಾಚಲಮ್ ।
ದಧಾರ ಲೀಲಯಾ ಕೃಷ್ಣಶ್ಛತ್ರಾಕಮಿವ ಬಾಲಕಃ ॥ – ಭಾಗವತ (೧೦/೨೫/೧೯)

ಸ ಧೃತಃ ಸಂಗತೋ ಮೇಘೈರ್ಗಿರಿಃ ಸಮ್ಯೇನ ಪಾಣಿನಾ ।
ಗೃಹಭಾವಂ ಗತಸ್ತತ್ರ ಗೃಹಾಕಾರೇಣ ವರ್ಚಸಾ ॥ – ಹರಿವಂಶ (೨/೧೮/೩೧)

ಬಾಹುದಂಡೇನ ಕೃಷ್ಣಸ್ಯ ವಿಧೃತಂ ಸುಮಹತ್ ತದಾ ।
ನೀಲಾಭ್ರಪಟಲಚ್ಛನ್ನಂ ತದ್ಗಿರಿಚ್ಛತ್ರಮಾಬಭೌ ॥ – ಹರಿವಂಶ (೨/೧೮/೪೬)

ಅ: ಅಪಾರಜಲವನ್ನು ಏಳುದಿನಗಳ ಕಾಲ ಸತತ ಸುರಿಸಿದರೂ, ಗೋಕುಲವು ಕೃಷ್ಣನಿಂದ ಅನಾಯಾಸವಾಗಿ ರಕ್ಷಿತವಾದದ್ದನ್ನು ಕಂಡ ಇಂದ್ರನಿಗೆ ಶ್ರೀಕೃಷ್ಣನು ಸರ್ವೋತ್ತಮನಾದ ಶ್ರೀಹರಿಯ ಅವತಾರವೆಂಬುದು ನೆನಪಾಯಿತು. ಅವನು ಯದುಪತಿಯಾದ ಶ್ರೀಕೃಷ್ಣನ ಚರಣಕಮಲವನ್ನು ಶರಣುಹೊಕ್ಕ.

ವಿ: ೧) ಹನುಮಂತ ಸಂಜೀವನ ತಂದದ್ದು ಐವತ್ತು ಸಹಸ್ರಯೋಜನ ದೂರದ ಗಂಧಮಾದನದಿಂದಾದರೆ, ಕೃಷ್ಣ ಗೋವರ್ಧನ ಎತ್ತಿ ಹಿಡಿದದ್ದು ನಿರಂತರ ಏಳು ದಿನಗಳ ಕಾಲ. ಅಲ್ಲಿಯದು ಅಪಾರದೂರವಾದರೆ, ಇಲ್ಲಿಯದು ಅಪಾರಕಾಲ. ಈ ದೃಶ್ಯ ಮಳೆ ಸುರಿಸಿದ ಇಂದ್ರನಿಗೆ ಹರಿಸ್ಮರಣೆಗೆ ಕಾರಣವಾಗಿ ಕಣ್ಣಲ್ಲಿ ಆನಂದಾಶ್ರುವಿಗೆ ಸಾಧನವಾಯಿತು. ತನ್ನ ತಪ್ಪನ್ನು ಅರಿತು, ಅವನು ಕೃಷ್ಣನ ಚರಣಕಮಲವನ್ನು ಆಶ್ರಯಿಸಲೆಂದು ಧಾವಿಸಿದ ಎಂದರ್ಥ.

೨) ಇದು ಮಾಹಾತ್ಮ್ಯಜ್ಞಾನ ಭಕ್ತಿವರ್ಧಕ ಎಂಬ ಶಾಸ್ತ್ರವಚನಕ್ಕೆ ನಿದರ್ಶನ. ('ಭಕ್ತ್ಯರ್ಥಂ ಭಗವನ್ಮಹಿಮೋಕ್ತಿರಸ್ಮಿನ್ ಪಾದೇ।' –ಬ್ರಹ್ಮಸೂತ್ರಭಾಷ್ಯ ೩/೨)

ತುಷ್ಟಾವ ಚೈನಮುರುವೇದಶಿರೋಗತಾಭಿ-
ರ್ಗೀರ್ಭಿಃ ಸದಾऽಗಣಿತಪೂರ್ಣಗುಣಾರ್ಣವಂ ತಮ್ ।
[೧]ಗೋಭೃದ್ಗುರುಂ ಹರಗುರೋರಪಿ ಗೋಗಣೇನ
ಯುಕ್ತಃ [೨]ಸಹಸ್ರಗುರಗಾಧಗುಮಗ್ರ್ಯಮಗ್ರ್ಯಾತ್ ॥ ೬೭ ॥

---

೧. ಗೋಭೃತ್ = ವಜ್ರಭೃತ್ । ಗೋಗಣೇನ = ಸುರಭ್ಯಾದಿಗೋಸಮೂಹೇನ ಯುಕ್ತಃ ಸಹಸ್ರಗುಃ = ಸಹಸ್ರಾಕ್ಷಃ ಇಂದ್ರಃ । ಹರಗುರೋರಪಿ ಗುರುಃ । ಅಗಾಧಗುಂ = ಅಪಾರಶರೀರಕಾಂತಿಂ ಅಪಾರವಾಗ್ವಿಲಾಸಂ ವಾ । ಅಗ್ರ್ಯಾತ್ ಉದಗ್ರ್ಯಂ ಶ್ರೀಕೃಷ್ಣಂ ತುಷ್ಟಾವೇತ್ಯನ್ವಯಃ । ''ದಿಗ್ದೃಷ್ಟಿದೀಧಿತಿಸ್ವರ್ಗವಜ್ರವಾಗ್ಬಾಣವಾರಿಷು । ಭೂಮೌ ಪಶೌ ಚ ಗೋಶಬ್ದೋ ವಿದ್ವದ್ಭಿರ್ದಶಸು ಸ್ಮೃತಃ'' ಇತಿ ಹ್ಯನುಶಾಸನಮ್ ॥ –(ವಾ.)

ಗೋಭೃತ್ ವಜ್ರಧರಃ ಸಹಸ್ರಗುಃ ಸಹಸ್ರನೇತ್ರಃ ಇಂದ್ರಃ ಗೋಗಣೇನ ಸುರಭ್ಯಾದಿಗೋಸಮೂಹೇನ ಯುಕ್ತಃ ಸನ್ ಸದಾ ಅಗಣಿತತ್ವೇನ ಪೂರ್ಣೈರ್ಗುಣೈರರ್ಣವ ಇವಾರ್ಣವಃ ತಮ್ । ಹರಗುರೋರಪಿ ಬ್ರಹ್ಮಣೋऽಪಿ ಗುರುಮ್ । ಅಗಾಧಗುಂ ಅಪರಿಮಿತದೀಪ್ತಂ ಅಪರೈರಸಹ್ಯದೀಪ್ತಿಮಿತ್ಯರ್ಥಃ । ಅಗ್ರ್ಯಾತ್ ಉತ್ತಮಾದಗ್ರ್ಯಂ ಉತ್ತಮಮೇನಂ ಕೃಷ್ಣಂ ಉರವಶ್ಚ ತೇ ವೇದಾಶ್ಚ ಅನಂತವೇದಾಃ ತೇಷಾಂ ಶಿರಸ್ಸು ಉಪನಿಷತ್ಸು ಗತಾಭಿರ್ವಿದ್ಯಮಾನಾಭಿಃ ಗೀರ್ಭಿರ್ವಾಗ್ಭಿಃ ತುಷ್ಟಾವ ಅಸ್ತೌತ್ । 'ದಿಕ್‌ದೃಷ್ಟಿದೀಧಿತಿಸ್ವರ್ಗವಜ್ರವಾಗ್‌ಬಾಣವಾರಿಷು । ಭೂಮೌ ಪಶುಷು ಗೋಶಬ್ದೋ ವಿದ್ವದ್ಭಿರ್ದಶಸು ಸ್ಮೃತಃ' ಇತ್ಯಭಿಧಾನಮ್ । 'ಸ್ವರ್ಗೇ ಶರೇ ಚ ವಜ್ರೇ ಚ ಬಲೀವರ್ದೇ ಚ ಗೌಃ ಪುಮಾನ್ । ಸ್ತ್ರಿಯಾಂ ನಯನದಿಗ್ಭಾಗಮಾತೃವಾಗ್ಭೂಜಲೇಷ್ವಪಿ' ಇತ್ಯನೇಕಧ್ವನಿಪದಮಂಜರ್ಯಾಮ್॥ – (ಜ.)

೨. ಪರಮೇಶ್ವರಸ್ತಾವಕತ್ವೋಪಪಾದನಾರ್ಥಮಿಂದ್ರಸ್ಯ ಸಹಸ್ರಗುರಿತ್ಯನೇನ ಬಹುಜ್ಞಾನತ್ವಮೇವೋಚ್ಯತೇ । ನತು ಸಹಸ್ರನೇತ್ರತ್ವಮಿತ್ಯಭ್ಯುಪಗಮಾತ್ ॥ –(ಸ.)

ಅ: ಸದಾ ಅನಂತಪರಿಪೂರ್ಣಗುಣಸಾಗರನಾದ, ಶಿವನಿಗೆ ಪೂಜ್ಯನಾದ ಬ್ರಹ್ಮನಿಗೂ ಗುರುವೆನ್ನಿಸಿದ, ಶ್ರೇಷ್ಠರಿಗಿಂತಲೂ ಮಿಗಿಲೆನ್ನಿಸಿದ ಅಪಾರಕಾಂತಿಯ ಶ್ರೀಕೃಷ್ಣನನ್ನು ಸಹಸ್ರಾಕ್ಷನಾದ ಇಂದ್ರ ಗೋಗಣಗಳಿಂದ ಕೂಡಿದವನಾಗಿ ಧಾವಿಸಿ ಶ್ರೇಷ್ಠವಾದ ಉಪನಿಷನ್ಮಂತ್ರಗಳಿಂದ ಕೊಂಡಾಡಿದ.

ವಿ: ೧) ಶ್ರೀಕೃಷ್ಣನ ಹಿರಿಮೆಯನ್ನು ಅರ್ಥಮಾಡಿಕೊಂಡ ಇಂದ್ರ ಗೋಬ್ರಾಹ್ಮಣಪ್ರಿಯನಾದ ಅವನನ್ನು ಒಲಿಸಲೆಂದು ಗೋಗಣಸಮೇತನಾಗಿಯೇ ಧಾವಿಸಿದ. ಸಹಸ್ರಾಕ್ಷನಾಗಿದ್ದೂ ಕೃಷ್ಣನನ್ನು ಅರಿಯದಾಗಿದ್ದ ಅವನು ಕೃಷ್ಣನ ಮಹಿಮೆಯನ್ನು ಅವನ ಅದ್ಭುತಕಾರ್ಯದಿಂದ ಗುರುತಿಸಿದ.

೨) ಶಿವ ಇಂದ್ರನಿಗೆ ಗುರು. ಶಿವನಿಗೂ ಗುರುವಾದ ಬ್ರಹ್ಮನಿಗೂ ಗುರುವಾದವನು ಶ್ರೀಕೃಷ್ಣ. ಇಂತಹ ಶ್ರೀಕೃಷ್ಣನನ್ನು ಇಂದ್ರ ಪೂಜಿಸಿದ.

೩) ಆವರೆಗೂ ವಿವಿಧವಾದ ಅನ್ನಸಮರ್ಪಣೆಯಿಂದ ಗೋಪರು ಕೃಷ್ಣನನ್ನು ಪೂಜಿಸಿದ್ದರೆ, ಈಗ ಸ್ತೋತ್ರರೂಪವಾದ ಶ್ರೇಷ್ಠ ಅನ್ನದಿಂದ ಇಂದ್ರ ಕೃಷ್ಣನನ್ನು ಪೂಜಿಸಿದ. ಪರಮಾತ್ಮನಿಗೆ ಸ್ತೋತ್ರ ಅನ್ನ ಎಂಬ ಮಾತು ಬೃಹದಾರಣ್ಯಕೋಪನಿಷತ್ತಿನಲ್ಲಿದೆ.

ತ್ವತ್ತೋ ಜಗತ್ ಸಕಲಮಾವಿರಭೂದಗಣ್ಯ-
ಧಾಮ್ನಸ್ತ್ವಮೇವ ಪರಿಪಾಸಿ ಸಮಸ್ತಮಂತೇ ।
ಅತ್ಸಿ ತ್ವಯೈವ ಜಗತೋಽಸ್ಯ ಹಿ ಬಂಧಮೋಕ್ಷೌ
ನ ತ್ವತ್ಸಮೋಽಸ್ತಿ ಕುಹಚಿತ್ ಪರಿಪೂರ್ಣಶಕ್ತೇ ॥ ೬೮ ॥

ಅ: ಪರಿಪೂರ್ಣಶಕ್ತಿಶಾಲಿಯಾದ ಶ್ರೀಕೃಷ್ಣನೆ! ಅಗಣಿತತೇಜಸ್ಸನ್ನು ಹೊಂದಿರುವ ನಿನ್ನಿಂದಲೇ ಇಡೀ ಜಗತ್ತು ಜನಿಸಿದೆ. ಈ ಎಲ್ಲವನ್ನು ಪಾಲಿಸುವವನು ನೀನೇ. ಕೊನೆಯಲ್ಲಿ ಎಲ್ಲವನ್ನು ಲಯಗೊಳಿಸುವವನೂ ನೀನೆ. ಜಗತ್ತಿನ ಬಂಧಮೋಕ್ಷಗಳು ಕೂಡ ನಿನ್ನಿಂದಲೇ. ನಿನಗೆ ಸಮನು ಎಲ್ಲಿಯೂ ಇಲ್ಲ.

ಕ್ಷಂತವ್ಯಮೇವ ಭವತಾ ಮಮ ಬಾಲ್ಯಮೀಶ
ತ್ವತ್ಸಂಶ್ರಯೋಽಸ್ಮಿ ಹಿ ಸದೇತ್ಯಭಿವಂದಿತೋಽಜಃ ।
ಕ್ಷಾಂತಂ ಸದೈವ ಭವತಸ್ತವ ಶಿಕ್ಷಣಾಯ
ಪೂಜಾಪಹಾರವಿಧಿರಿತ್ಯವದದ್ರಮೇಶಃ ॥ ೬೯ ॥

---

೧. ಕ್ಷಾಂತಂ ಸದೈವ ಭವತಾ ಇತ್ಯತ್ರ ಭವತಃ ಬಾಲ್ಯಂ ಕ್ಷಾಂತಮಿತಿ ಬಾಲ್ಯಪದಾವೃತ್ತ್ಯಾ ಯೋಜನಾ ॥ – (ವಾ.)

''ಸ್ವಾಮಿ! ನನ್ನ ಹುಡುಗುತನವನ್ನು ನೀನೇ [೧]ಮನ್ನಿಸಬೇಕು. ನಾನು ಸದಾ ನಿನ್ನನ್ನೇ ಅವಲಂಬಿಸಿದವನು''. ಹೀಗೆ ಇಂದ್ರನಿಂದ ನಮಸ್ಕೃತನಾದ ಇಂದಿರೇಶನಾದ ಕೃಷ್ಣ ನುಡಿದ : ''ನಾನು ಸದಾ ನಿನ್ನನ್ನು ಕ್ಷಮಿಸಿದವನೆ. ನಿನಗೆ ಎಚ್ಚರ ನೀಡಲೆಂದೇ ನಿನ್ನ ಪೂಜೆಗೆ ನಾನು ತಡೆ ಹಾಕಿದೆ''.

ಇಂದ್ರನಿಂದ ಉಪೇಂದ್ರನಿಗೆ ಪಟ್ಟಾಭಿಷೇಕ

ಗೋವಿಂದಮೇನಮಭಿಷಿಚ್ಯ [೨] ಸ ಗೋಗಣೇಶೋ
ಗೋಭಿರ್ಜಗಾಮ ಗುಣಪೂರ್ಣಮಮುಂ ಪ್ರಣಮ್ಯ ।
ಗೋಪೈರ್ಗಿರಾಂ [೩]ಪತಿರಪಿ ಪ್ರಣತೋಽಭಿಗಮ್ಯ [೪]
ಗೋವರ್ಧನೋದ್ಧರಣಸಂಗತಸಂಶಯೈಃ ಸಃ ॥ ೭೦ ॥

---

೧. ನಾಥಾಪರಾಧಕೃದುಪೇತ್ಯ ಸುಲಜ್ಜಿತೋಽಥೋ ಶಕ್ರೋಽಚ್ಯುತಂ ರಹಸಿ ರಮ್ಯತಮಂ ತ್ರಿಲೋಕ್ಯಾಮ್ ।
ಮೂರ್ಧ್ನಾ ಪ್ರಣಮ್ಯ ಸದಯಂ ಸುಧಯಾಽಭ್ಯಷಿಂಚದ್ಗೋವಿಂದನಾಮ ಚ ಪಠನ್ ಸ್ವಕೃತಾಘಶಾಂತ್ಯೈ ॥
– ರುಕ್ಮಿಣೀಶವಿಜಯ (೬/೨೧)

ವಿಷ್ಣುಪ್ರಣಾಮಾಭಿಷೇಕನಾಮೋಚ್ಚಾರಣಾನಾಂ ಮಹಾಪಾಪಪರಿಹಾರಹೇತುತ್ವಂ ವಿಷ್ಣುದ್ರೋಹಸ್ಯ ಮಹಾಪಾತಕತ್ವಂ ಚಾನೇನ ದ್ಯೋತ್ಯತೇ । – ರುಕ್ಮಿಣೀಶವಿಜಯವ್ಯಾಖ್ಯಾ

೨. 'ಜಲೈಶ್ಚಾಕಾಶಗಂಗಾಯಾ ಐರಾವತಕರೋದ್ಧೃತೈಃ' ಇತಿ ಭಾಗವತೇ । – (ಜ.)

ತತಃ ಶಕ್ರಸ್ತು ತಾನ್ ಗೃಹ್ಯ ಘಟಾನ್ ದಿವ್ಯಪಯೋಧರಾನ್ ।
ಅಭಿಷೇಕೇಣ ಗೋವಿಂದಂ ಯೋಜಯಾಮಾಸ ಯೋಗವಿತ್ ॥
ದೃಷ್ಟ್ವಾ ತಮಭಿಷಿಕ್ತಂ ತು ಗಾವಸ್ತಾಃ ಸಹ ಯೂಥಪೈಃ ।
ಸ್ತನೈಃ ಪ್ರಸ್ರವಯುಕ್ತೈಶ್ಚ ಸಿಷಿಚುಃ ಕೃಷ್ಣಮವ್ಯಯಮ್ ॥
ಮೇಘಾಶ್ಚ ದಿವಿ ಯುಕ್ತಾಭಿಃ ಸಾಮೃತಾಭಿಃ ಸಮಂತತಃ ।
ಸಿಷಿಚುಸ್ತೋಯಧಾರಾಭಿರಭಿಷಿಚ್ಯ ತಮವ್ಯಯಮ್ ॥
ವನಸ್ಪತೀನಾಂ ಸರ್ವೇಷಾಂ ಸುಸ್ರಾವೇಂದುನಿಭಂ ಪಯಃ ।
ವವರ್ಷುಃ ಪುಷ್ಪವರ್ಷಂ ಚ ನೇದುಸ್ತೂರ್ಯಾಣಿ ಚಾಂಬರೇ ॥ – ಹರಿವಂಶ (೨/೧೯/೬೧-೬೪)

ಅಥೋಪವಾಹ್ಯಾದಾದಾಯ ಘಂಟಾಮೈರಾವತಾದ್ಗಜಾತ್ ।
ಅಭಿಷೇಕಂ ತಯಾ ಚಕ್ರೇ ಪವಿತ್ರಜಲಪೂರ್ಣಯಾ ॥ – ವಿಷ್ಣುಪುರಾಣ (೫/೧೨/೧೩)

೩. ಗಿರಾಂ = ವೇದವಾಕ್ಯಾನಾಂ ಪತಿಃ ಗಿರಾಂ ಪತಿಃ ॥ – (ವಾ,)

೪. ಸಮ್ಯಗ್ಗತಃ ಸಂಶಯೋ ಯೇಷಾಂ ತೇ ತಥೋಕ್ತಾಃ । ತೈಃ ಗೋಪೈಃ ಅಭಿಗಮ್ಯ ಪ್ರಣತಃ ಗೋಕುಲಂ ಜಗಾಮೇತಿ ಪೂರ್ವಕ್ರಿಯಾವೃತ್ತ್ಯಾ ಯೋಗ್ಯಪದಾಧ್ಯಾಹಾರೇಣ ಯೋಜನಾ । – (ವಾ,)

ಅ: ಗೋಗಣದ ಒಡೆಯನಾದ ಇಂದ್ರ ತನ್ನ ಗೋವುಗಳಿಂದ ಗುಣಪೂರ್ಣನಾದ ಗೋವಿಂದನಿಗೆ ಅಭಿಷೇಕ ಮಾಡಿ ವಂದಿಸಿ, ತೆರಳಿದ. ಗೋವರ್ಧನೋದ್ಧರಣದಿಂದಾಗಿ ಕೃಷ್ಣನ ಬಗ್ಗೆ ಸಂಶಯ ನೀಗಿದವರಾದ ಗೋಪರು ಸರ್ವಶಬ್ದಗಳಿಗೆ ಒಡೆಯನಾದ ಶ್ರೀಕೃಷ್ಣನ ಸಮೀಪಕ್ಕೆ ತೆರಳಿ, ಸಾಷ್ಟಾಂಗ ವಂದಿಸಿದರು.

ವಿ: ೧) ಇಂದ್ರ ಆ ಸಮಯದಲ್ಲಿ ಶ್ರೀಕೃಷ್ಣನಿಗೆ ತೆರತೆರನಾಗಿ ಅಭಿಷೇಕಿಸಿದ ವಿವರ ಹರಿವಂಶ, ವಿಷ್ಣುಪುರಾಣ ಹಾಗೂ ಭಾಗವತಗಳಲ್ಲಿವೆ. ಆ ವರೆಗೂ ಕೋಪದಿಂದ ಮಳೆಗರೆದಿದ್ದ ಇಂದ್ರ ಈಗ ಭಕ್ತಿಯಿಂದ ಅಭಿಷೇಕಿಸಿದ್ದು ಅವನಲ್ಲಾದ ಅಪೂರ್ವ ಪರಿವರ್ತನೆಗೆ ದ್ಯೋತಕ.

೨) ಶ್ರೀಕೃಷ್ಣನನ್ನು ಇಂದ್ರ 'ಗೋವಿಂದ ಗೋವಿಂದ' ಎಂದು ವಂದಿಸಿದ ವಿವರವೂ [೧]ಭಾಗವತಾದಿಗಳಲ್ಲಿದೆ.

ಇಂದ್ರ ನುಡಿದ: ''ನಾನು ದೇವತೆಗಳಿಗೆ ಮಾತ್ರ ಇಂದ್ರ; ನೀನು ಸಕಲವೇದ-ಗಳಿಂದಲೂ ಪ್ರತಿಪಾದಿತನಾದ ನಿಜವಾದ ಇಂದ್ರ. ಅದಕ್ಕೇ ನೀನು ಗೋವಿಂದ''.

೩) 'ಅಚ್ಯುತ ಅನಂತ ಗೋವಿಂದ' ಎಂಬ ಮೂರು ನಾಮಗಳು ಲೋಪದೋಷಪರಿಹಾರಕ್ಕೆ ಸಾಧನ. ಇಂದ್ರ ಕೃಷ್ಣನನ್ನು ಗೋವಿಂದ ಎಂದು ಕರೆಯುವ ಮೂಲಕ ತನ್ನ ತಪ್ಪನ್ನು ಮನ್ನಿಸಲು ವಿಶೇಷರೀತಿಯಲ್ಲಿ ಪ್ರಾರ್ಥಿಸಿಕೊಂಡ ಎಂದರ್ಥ. [೨]'ಅಚ್ಯುತ ಅನಂತ ಗೋವಿಂದ' ಎಂಬ ಈ ಮೂರು ನಾಮಗಳು [೩]ವಿಷ್ಣುಸಹಸ್ರನಾಮದಲ್ಲೂ ಬಂದಿವೆ.

ಕೃಷ್ಣಂ ತತಃಪ್ರಭೃತಿ ಗೋಪಗಣಾ ವ್ಯಜಾನನ್
ನಾರಾಯಣೋಽಯಮಿತಿ ಗರ್ಗವಚಶ್ಚ ನಂದಾತ್ ।
ನಾರಾಯಣಸ್ಯ ಸಮ ಇತ್ಯುದಿತಂ ನಿಶಮ್ಯ
ಪೂಜಾಂ ಚ ಚಕ್ರುರಧಿಕಾಮರವಿಂದನೇತ್ರೇ ॥ ೭೧ ॥

---

೧. ಅಹಂ ಕಿಲೇಂದ್ರೋ ದೇವಾನಾಂ ತ್ವಂ ಗವಾಮಿಂದ್ರತಾಂ ಗತಃ ।
ಗೋವಿಂದ ಇತಿ ಲೋಕಾಸ್ತ್ವಾಂ ಸ್ತೋಷ್ಯಂತಿ ಭುವಿ ಶಾಶ್ವತಮ್ ॥ – ಹರಿವಂಶ (೨/೧೯/೪೫)

೨. ಅಚ್ಯುತಾನಂತಗೋವಿಂದನಾಮೋಚ್ಚಾರಣಭೇಷಜಾತ್ ।
ನಶ್ಯಂತಿ ಸಕಲಾ ರೋಗಾಃ ಸತ್ಯಂ ಸತ್ಯಂ ವದಾಮ್ಯಹಮ್ ॥

೩. ಸಿದ್ಧಿಃ ಸರ್ವಾದಿರಚ್ಯುತಃ, ಅಚ್ಯುತಃ ಪ್ರಥಿತಃ ಪ್ರಾಣಃ, ದೃಢಃ ಸಂಕರ್ಷಣೋಽಚ್ಯುತಃ ;
ವೀರೋಽನಂತೋ ಧನಂಜಯಃ, ಅನಂತೋ ಹುತಭುಗ್ಭೋಕ್ತಾ ;
ಗೋವಿಂದೋ ಗೋವಿದಾಂಪತಿಃ, ಮಹಾವರಾಹೋ ಗೋವಿಂದಃ । – ವಿಷ್ಣುಸಹಸ್ರನಾಮ

ಅ: ಅಂದಿನಿಂದ ಮೊದಲ್ಗೊಂಡು ಗೋಪರ ಗುಂಪುಗಳು ಕೃಷ್ಣನನ್ನು 'ಇವನು ಸಾಕ್ಷಾತ್ ನಾರಾಯಣ' ಎಂದೇ ವಿಶೇಷವಾಗಿ ತಿಳಿದರು. ಇವನು 'ನಾರಾಯಣನಿಗೆ ಸಮ' ಎಂಬ ಗರ್ಗಾಚಾರ್ಯರ ಮಾತನ್ನು ನಂದನಿಂದ ಕೇಳಿ ತಿಳಿದು, ಪುಂಡರೀಕಾಕ್ಷನಾದ ಅವನಲ್ಲಿ ಇನ್ನೂ ಹೆಚ್ಚಿನ ಪೂಜೆಯನ್ನು ಸಲ್ಲಿಸಿದರು.

ವಿ: ೧) ಆಗ ಗೋಪರಿಗೆಲ್ಲ ನಂದ ತನಗೆ ಗರ್ಗಾಚಾರ್ಯರು ನಾಮಕರಣಕಾಲದಲ್ಲೇ ಶ್ರೀಕೃಷ್ಣನು ಸಾಮಾನ್ಯನಲ್ಲ; ಅವನು ಸಕಲಗುಣಗಳಲ್ಲೂ ನಾರಾಯಣನಿಗೆ ಸಮನಾದವನು'' ಎಂದು ತಿಳಿಸಿದ ವಿವರ [೧]ಭಾಗವತದಲ್ಲಿದೆ (೧೦/೨೬/೧೫–೨೪).

೨) ಇಂದ್ರನು ತೆರಳುವ ಮುನ್ನ ''ಚಾತುರ್ಮಾಸ್ಯದ ಮೊದಲ ಎರಡು ತಿಂಗಳುಗಳು ಮಳೆಗಾಲವಾಗಿ, ಉಳಿದೆರಡು ತಿಂಗಳುಗಳು ಶರತ್ಕಾಲವೆನ್ನಿಸಿ, ಆ ಇಂದ್ರಪರಾಭವದ್ಯೋತಕ–ವಾಗಿ ಕೃಷ್ಣಪೂಜೆಯ ವಿಶೇಷಪರ್ವಕಾಲವಾಗಲಿ'' ಎಂದು ನುಡಿದ ಎಂದು [೨]ಹರಿವಂಶದಲ್ಲಿದೆ.

೩) ರಾಮಾಯಣದಲ್ಲಿ ವರುಣ ಪ್ರತ್ಯಕ್ಷನಾಗಿ ಬಂದು ಶ್ರೀರಾಮನಿಗೆ ಶರಣಾಗುವ ವಿವರ ಬಂದರೆ, ಈ ಕೃಷ್ಣಾವತಾರದಲ್ಲಿ ಇಂದ್ರ ಪ್ರತ್ಯಕ್ಷನಾಗಿ ಬಂದು ಶ್ರೀಕೃಷ್ಣನಿಗೆ ಶರಣಾದ ವಿವರ ಬಂದಿದೆ. ಅದು ನಡೆದದ್ದು ಕಪಿಗಳ ಸಮ್ಮುಖದಲ್ಲಾದರೆ, ಇದು ನಡೆದದ್ದು ಗೊಲ್ಲರ ಸಮ್ಮುಖದಲ್ಲಿ ಎಂಬುದು ವಿಶೇಷ. ಅಲ್ಲಿ ಜಲಾಧಿಪತಿಯಾದ ವರುಣನ ಗರ್ವಭಂಗವಾದರೆ, ಇಲ್ಲಿ ಸ್ವರ್ಗಾಧಿಪತಿಯಾದ ದೇವೇಂದ್ರನ ಗರ್ವಭಂಗವಾಯಿತು ಎಂಬುದನ್ನು ಗಮನಿಸಬೇಕು.

ಸ್ಕಂದಾದುಪಾತ್ತವರತೋ ಮರಣಾದಪೇತಂ
ದೃಷ್ಟ್ವಾ ಚ ರಾಮನಿಹತಂ ಬಲಿನಂ ಪ್ರಲಂಬಮ್ ।
ಚಕ್ರುರ್ವಿನಿಶ್ಚಯಮಮುಷ್ಯ ಸುರಾಧಿಕತ್ವೇ
ಗೋಪಾಸ್ತಥಾ ಽಸ್ಯ ವಿದಧುಃ ಪರಮಾಂ ಚ ಪೂಜಾಮ್ ॥ ೭೨ ॥

---

೧. ತಸ್ಮಾನ್ನಂದಾತ್ಮಜೋ ಽಯಂ ತೇ ನಾರಾಯಣಸಮೋ ಗುಣೈಃ ।
ಶ್ರಿಯಾ ಕೀರ್ತ್ಯಾ ಽನುಭಾವೇನ ಗೋಪಾಯಸ್ವ ಸಮಾಹಿತಃ ॥ – ಇತಿ ಭಾಗವತೇ ೧೦/೮/೧೯

ತಸ್ಮಾನ್ನಂದ ಕುಮಾರೋ ಽಯಂ ನಾರಾಯಣಸಮೋ ಗುಣೈಃ ।
ಶ್ರಿಯಾ ಕೀರ್ತ್ಯಾ ಽನುಭಾವೇನ ತತ್ಕರ್ಮಸು ನ ವಿಸ್ಮಯಃ ॥ – ಭಾಗವತ (೧೦/೨೬/೨೨)

೨. ಯೇ ಚೇಮೇ ವಾರ್ಷಿಕಾ ಮಾಸಾಶ್ಚತ್ವಾರೋ ವಿಹಿತಾ ಮಮ ।
ವಿಷಮಾರ್ಧಂ ಪ್ರಯಚ್ಛಾಮಿ ಶರತ್ಕಾಲಂ ತು ಪಶ್ಚಿಮಮ್ ॥
ಅದ್ಯಪ್ರಭೃತಿ ಮಾಸೌ ದ್ವೌ ಜ್ಞಾಸ್ಯಂತಿ ಮಮ ಮಾನವಾಃ ।
ವರ್ಷಾರ್ಧೇ ಚ ಧ್ವಜೋ ಮಹ್ಯಂ ತತಃ ಪೂಜಾಮವಾಪ್ಸ್ಯಸಿ ॥ – ಹರಿವಂಶ (೨/೧೯/೪೭,೪೮)

ಅ: ಷಣ್ಮುಖನ ಬಲದಿಂದ ಸಾವಿಲ್ಲದವನಾಗಿದ್ದ ಬಲಿಷ್ಠನಾದ ಪ್ರಲಂಬಾಸುರ ಬಲರಾಮನಿಂದ ಕೊಲ್ಲಲ್ಪಟ್ಟದ್ದನ್ನು ಕಂಡು ಗೋಪರು ಅವನು ಶ್ರೇಷ್ಠದೇವತೆ ಎಂಬ ವಿಷಯದಲ್ಲಿ ವಿಶೇಷನಿಶ್ಚಯವನ್ನು ಹೊಂದಿದರು; ಅವನಿಗೂ ವಿಶೇಷಪೂಜೆಯನ್ನು ಸಲ್ಲಿಸಿದರು.

ವಿ: ೧) ಗೋವರ್ಧನೋದ್ಧರಣದ ಪ್ರಸಂಗ ಗೋಪರ ಪಾಲಿಗೆ ಕೃಷ್ಣ ಸರ್ವೋತ್ತಮತ್ವ–ಪರಿಜ್ಞಾನಕ್ಕೆ ವಿಶೇಷಸಾಧನವೆನ್ನಿಸಿದಂತೆ, ಪ್ರಲಂಬಾಸುರ ವಧೆಯ ಪ್ರಸಂಗ ಬಲರಾಮನು ಒಬ್ಬ ಶ್ರೇಷ್ಠದೇವತೆಯೆಂಬ ಪರಿಜ್ಞಾನಕ್ಕೆ ಸಾಧನವಾಯಿತು ಎಂದರ್ಥ.

೨) 'ಅಥ' ಶಬ್ದದಿಂದ ಕೃಷ್ಣನಿಗೆ ಸಲ್ಲಿಸಿದ ಪೂಜೆಯ ಅನಂತರದ ಸ್ಥಾನ ಬಲರಾಮನದು ಎಂಬ ವಿಶೇಷಾಂಶವೂ ಸೂಚಿತವಾಗಿದೆ ಎಂದು [೧]ಜನಾರ್ದನೀಯದಲ್ಲಿದೆ.

ಗೋಪಿಯರೊಂದಿಗೆ ರಾಸಕ್ರೀಡೆ

ಕಾತ್ಯಾಯನೀವ್ರತಪರಾಃ [೨]ಸ್ವಪತಿತ್ವಹೇತೋಃ
[೩]ಕನ್ಯಾ ಉವಾಹ ಭಗವಾನಪರಾಶ್ಚ ಗೋಪೀಃ ।
ಅನ್ಯೈರ್ಹೃತಾ ಅಯುಗಬಾಣಶರಾಭಿನುನ್ನಾಃ
ಪ್ರಾಪ್ತಾ ನಿಶಾಸ್ವರಮಯಚ್ಛಶಿರಾಜಿತಾಸು ॥ ೭೩ ॥

ಅ: ಭಗವಂತನಾದ ಶ್ರೀಕೃಷ್ಣ ತನ್ನನ್ನು ಪತಿಯನ್ನಾಗಿ ಪಡೆಯಲೆಂದು ಕಾತ್ಯಾಯನೀವ್ರತನಿರತರಾಗಿದ್ದ ಗೋಪಕನ್ಯೆಯರನ್ನು ವಿವಾಹವಾದ. ಇತರರಿಗೆ ಪತ್ನಿಯರಾಗಿದ್ದ ಬೇರೆ ಗೊಲ್ಲತಿಯರು ಕಾಮಬಾಣಪೀಡಿತರಾಗಿ ತನ್ನ ಬಳಿ ಬಂದಾಗ ಅವರನ್ನೂ ಅವನು ಚಂದ್ರನಿಂದ ಶೋಭಿತವಾದ ರಾತ್ರಿಗಳಲ್ಲಿ ಸಂತೋಷಪಡಿಸಿದ.

---

೧. ನನು ಕೃಷ್ಣಸ್ಯಾಧಿಕಾಂ ಪೂಜಾಂ ಯಥಾ ಚಕ್ರುಸ್ತಥಾ ಚಕ್ರುಃ ಕಿಮಿತ್ಯತೋ ನೇತ್ಯಾಹ ಅಥೇತಿ। ಅಸ್ಯ ಕೃಷ್ಣಸ್ಯ ಅಥ ಅನಂತರಂ, ಅಸಮಾನಮಿತ್ಯರ್ಥಃ। ಪರಮಾಂ ಸ್ವೋತ್ತಮೇಭ್ಯಃ ಪರಮಾಮಿತ್ಯರ್ಥಃ। – (ಜ.)

೨. **ಕಾತ್ಯಾಯನೀವ್ರತಧರಾಃ** – (ಪಾಠಾಂತರ)

೩. ಅಕೃತೋದ್ವಾಹಾನಾಂ ಕನ್ಯಾನಾಮಸಂಸ್ಕೃತತ್ವೇನ ಪರಿಗ್ರಹಾಯೋಗಾದ್ ವಿವಾಹವಿಧಿನೈವ ಜಗ್ರಾಹೇತಿ ಭಾವೇನ ಕನ್ಯಾ ಉವಾಹೇತ್ಯುಕ್ತಮ್ । ತಾಶ್ಚ ಅನ್ಯೈರ್ಹೃತಾ ಅಪರಾ ಗೋಪೀಶ್ಚಾರಮಯದಿತಿ ಯೋಜನಾ ॥– (ವಾ.)

ಅತ್ರಾಯಂ ನಿಷ್ಕರ್ಷಃ । ಮುಕ್ತಯೋಗ್ಯಾಪ್ಸರಸಃ ಸಹಸ್ರಸಂಖ್ಯಾಕಾಸ್ತಾಸು ಭಗವದ್ಭಾರ್ಯತಾ ಯೋಗ್ಯಾಃ । ಶತಂ ತಾಸ್ವಪಿ ಅಪ್ರತೀಕಾಲಂಬನಾಃ । ದ್ವಿನವತ್ಯಃ ಗೋಪಾಂಗನಾ ಬಭೂವುಃ । ತದನ್ಯಾ ಸಪ್ತ ಕಾತ್ಯಾಯನೀವ್ರತಧರಾ ಬಭೂವುಃ । ತತ್ಸೈಕಾ ಸೈರಂಧ್ರೀ ಬಭೂವೇತಿ ॥ – (ರಾ.)

ವಿ: ೧) ಶ್ರೀಕೃಷ್ಣ ರಾಸಕ್ರೀಡೆಯಾಡಿದ್ದು ಎರಡುಬಗೆಯ ಸ್ತ್ರೀಯರೊಂದಿಗೆ. ಕನ್ಯೆಯರಾಗಿದ್ದು ಕೃಷ್ಣನನ್ನೇ ಪತಿಯನ್ನಾಗಿ ಹೊಂದಬಯಸಿ ಕಾತ್ಯಾಯನೀವ್ರತವನ್ನು ಆಚರಿಸಿದ್ದ ಕನ್ಯೆಯರು ಒಂದು ಗುಂಪಿನವರಾದರೆ, ಇತರರೊಂದಿಗೆ ವಿವಾಹವಾಗಿದ್ದರೂ, ಶ್ರೀಕೃಷ್ಣನೊಂದಿಗೆ ವಿಹರಿಸಬಯಸಿದ್ದ ಗೋಪಿಯರು ಮತ್ತೊಂದು ಗುಂಪಿನವರು.

೨) ಆ ಗೋಪಿಕೆಯರೆಲ್ಲ ಮೂಲತಃ ಅಪ್ಸರೆಯರು. ಶ್ರೀಕೃಷ್ಣನ ಅಂಗಸಂಗದ ಭಾಗ್ಯಕ್ಕೆಂದು ರಮಾವೇಶದಿಂದ ಕೂಡಿದ್ದವರು. ಅದಕ್ಕೆಂದೇ ಶ್ರೀಕೃಷ್ಣ ಅವರೊಂದಿಗೆ ವಿಹರಿಸಿದ ಎಂದು ಭಾವ.

೩) ಶ್ರೀಕೃಷ್ಣ ಆಗಿನ್ನೂ ಆರೇಳು ವರ್ಷದ ಬಾಲಕ. ಅವನು ಹಾಗೆ ಗೋಪಿಕೆಯರೊಂದಿಗೆ ರಮಿಸಿದ್ದು ಸರ್ವಥಾ ಲೌಕಿಕಶೃಂಗಾರವಲ್ಲ, ಅದು ಕೇವಲ ಅಲೌಕಿಕ. ಅದಕ್ಕೆಂದೇ ಯಾವುದೇ ಸಂದೇಹಕ್ಕೂ ಅಲ್ಲಿ ಅವಕಾಶವಿಲ್ಲ ಎಂದರ್ಥ. ಇಂದ್ರ ಅಹಲ್ಯಾಜಾರನಾದದ್ದು ಅಹಲ್ಯೆಯ ಉದ್ಧಾರಕ್ಕೋಸ್ಕರ ಎಂದು ಶ್ರುತಿಪ್ರಸಿದ್ಧ. ಉಪೇಂದ್ರನಾದ ಶ್ರೀಕೃಷ್ಣ ಗೋಪೀಜನಜಾರನೆನ್ನಿಸಿದ್ದು ಕೇವಲ ಅವರ ಕಲ್ಯಾಣಕ್ಕೆ ಎಂದು ತಿಳಿಯಬೇಕು. ಗೋಪೀಗೀತೆಯಲ್ಲಿನ ಗೋಪಿಯರ ಮಾತುಗಳು ಇದನ್ನು ಸ್ಫುಟಪಡಿಸುವವು. ಸ್ವರಮಣನಾದ ಅವನು ರಮಾಪತಿ ಎನ್ನಿಸಿರುವುದು ಕೇವಲ ರಮೆಯ ಕಲ್ಯಾಣಕ್ಕೋಸ್ಕರ ಆಗಿರುವಾಗ, ಅವನಿಗೆ ಈ ಗೋಪಿಕೆಯರಿಂದ ಆಗುವುದೇನಿದೆ? ಎಂಬುದನ್ನೂ ಗಮನಿಸಬೇಕು. ಅಹಲ್ಯಾಜಾರತ್ವ ಇಂದ್ರನಿಗೆ ದೋಷವಾಗದೆ ಪೂಜ್ಯತೆಗೆ ಕಾರಣವಾದಂತೆ, ಉಪೇಂದ್ರನಾದ ಶ್ರೀಕೃಷ್ಣನ ಗೋಪೀಜನಜಾರತ್ವ ಅವನ ಸರ್ವೋತ್ತಮತ್ವಕ್ಕೆ ದ್ಯೋತಕ–ವಾಯಿತು. ಅಹಲ್ಯೆಯ ಉದ್ಧಾರ ಅಲ್ಲಿ ನಡೆದರೆ, ಗೋಪಿಯರ ಉದ್ಧಾರ ಇಲ್ಲಿ ನಡೆಯಿತು.

ನಾರಾಯಣೀ ಸೇನೆ

ತಾಸ್ವತ್ರ ತೇನ ಜನಿತಾ ದಶಲಕ್ಷಪುತ್ರಾ
ನಾರಾಯಣಾಹ್ವಯಯುತಾ ಬಲಿನಶ್ಚ ಗೋಪಾಃ ।
ಸರ್ವೇಽಪಿ ದೈವತಗಣಾ ಭಗವತ್ಸುತತ್ವ–
ಮಾಪ್ತುಂ ಧರಾತಲಗತಾ ಹರಿಭಕ್ತಿಹೇತೋಃ ॥ ೭೪ ॥

ಅ: ಅವರಲ್ಲಿ ಶ್ರೀಕೃಷ್ಣನಿಂದ 'ನಾರಾಯಣ' ಎಂಬ ಹೆಸರಿನ ಬಲಶಾಲಿಗಳಾದ ಹತ್ತುಲಕ್ಷ ಪುತ್ರರು ಜನಿಸಿದರು. ಅವರೆಲ್ಲ ಗೋಪರೇ. ಅವರು ಮೂಲತಃ ದೇವಗಣದವರಾಗಿದ್ದು ವಿಶೇಷಹರಿಭಕ್ತಿಯ ಕಾರಣಕ್ಕಾಗಿ ಭಗವಂತನ ಪುತ್ರತ್ವವನ್ನು ಹೊಂದಲೆಂದು ಭೂತಲದಲ್ಲಿ ಜನಿಸಿಬಂದರು.

ವಿ: ೧) ಹೀಗೆ ಗೋಪಿಯರಲ್ಲಿ ಕೃಷ್ಣನಿಂದ ಜನಿಸಿದ ಪುತ್ರರ ಸಂಖ್ಯೆ ಹತ್ತುಲಕ್ಷ. ನಾರಾಯಣ ಎಂದು ಅವರ ಹೆಸರು. ಅವರೆಲ್ಲರ ಗುಂಪು ಒಟ್ಟಾಗಿ ನಾರಾಯಣೀಸೇನೆ ಎನ್ನಿಸಿತು. ದುರ್ಯೋ-ಧನನ ಕೋರಿಕೆಯಂತೆ ಕೃಷ್ಣ ಅವರನ್ನು ಅವನಿಗೆ ನೀಡಿದ್ದ (೨೪/....). ಅವರು ಕೌರವಪಕ್ಷದಲ್ಲಿದ್ದು ಹೋರಾಡಿ, ಶ್ರೀಹರಿಯ ಭೂಭಾರಹರಣಕಾರ್ಯದಲ್ಲಿ ಸೇವೆ ಸಲ್ಲಿಸಿ, ಹತರಾದರು.

೨) ಅವರೆಲ್ಲ ಕೃಷ್ಣಪುತ್ರರೇ ಆದರೂ, ಜನಿಸಿದ್ದು ಗೊಲ್ಲತಿಯರಲ್ಲಾದ್ದರಿಂದ 'ಮಾತೃಜಾತಿಃ ಪಿತುರ್ಗುಣಾಃ' ಎಂಬ ನಿಯಮದಂತೆ ಗೋಪರೆನ್ನಿಸಿದರು.

೩) ಅವರು ಮೂಲತಃ ದೇವತೆಗಳಾದ್ದರಿಂದ ಕೌರವಪಕ್ಷದಲ್ಲಿದ್ದರೂ ಸದ್ಗತಿಯನ್ನೇ ಪಡೆದರು. ಮಕ್ಕಳಾಗಿ ಜನಿಸುವ ಮೂಲಕ ವಿಶೇಷಸೇವೆ ಸಲ್ಲಿಸಬಹುದೆಂಬ ಕಾರಣ ಅವರು ಶ್ರೀಕೃಷ್ಣಪುತ್ರರಾಗಿ ಜನಿಸಲು ಕಾರಣವಾಯಿತು ಎಂಬ ವಿಶೇಷಾಂಶ ಇಲ್ಲಿಯ 'ಹರಿಭಕ್ತಿಹೇತೋಃ' ಎಂಬ ಪದದಿಂದ ಸೂಚಿತವಾಗಿದೆ.

ತಾಸ್ತತ್ರ ಪೂರ್ವವರದಾನಕೃತೇ ರಮೇಶೋ
ರಾಮಾದ್ದ್ವಿಜತ್ವಗಮನಾದಪಿ ಪೂರ್ವಮೇವ ।
ಸರ್ವಾ ನಿಶಾಸ್ವರಮಯತ್ ಸಮಭೀಷ್ಟಸಿದ್ಧಿ-
ಚಿಂತಾಮಣಿರ್ಹಿ ಭಗವಾನಶುಭೈರಲಿಪ್ತಃ ॥ ೭೫ ॥

ಅ: ತಾನು ಹಿಂದೆ ವರ ನೀಡಿದ್ದಂತೆ ಶ್ರೀಕೃಷ್ಣ ಅಣ್ಣನಾದ ಬಲರಾಮನಿಗಿಂತಲೂ ಮುಂಚಿತ-ವಾಗಿ, ಉಪನಯನಕ್ಕಿಂತಲೂ ಮೊದಲೇ ರಾತ್ರಿಗಳಲ್ಲಿ ಅವರೊಡನೆ ರಮಿಸಿದ. ಭಗವಂತ ಎಲ್ಲ ಕೋರಿಕೆಗಳ ಸಿದ್ಧಿಗೆ ಚಿಂತಾಮಣಿಯೂ, ಅಮಂಗಲಗಳ ಲೇಪವಿಲ್ಲದವನೂ ಆದವನಲ್ಲವೆ!

ವಿ: ೧) ಗೋಪಿಯರು ಕೃಷ್ಣನಿಂದ ಹಾಗೆ ವರ ಪಡೆದಿದ್ದ ವಿವರ ಈಗಾಗಲೇ ಬಂದಿದೆ (ಶ್ಲೋ. ೫೦).

೨) ಶ್ರೀಕೃಷ್ಣ ಅವರೊಡನೆ ರಮಿಸಿದ್ದು ಅವರ ಸುಖಕ್ಕಾಗಿಯೇ ಹೊರತು, ತನ್ನ ಸುಖಕ್ಕಾಗಿ ಅಲ್ಲ. ಅವನು ನಿತ್ಯಸುಖಪೂರ್ಣನಾದ ಸಾಕ್ಷಾದ್ಭಗವಂತ.

---

೧. ರಾಮಾ ದ್ವಿಜತ್ವಗಮನಾತ್ – (ಜ. ಪಾಠ)

'ರಾಮಾತ್ ದ್ವಿಜತ್ವಗಮನಾತ್' ಇತಿ ಪಾಠೇ ರಮೇಶಃ ಪೂರ್ವಂ ವರದಾನಕೃತೇಃ ದ್ವಿಜತ್ವಗಮನಾದಪಿ ಪೂರ್ವಮೇವ ಸರ್ವಾಸ್ತಾಃ ರಾಮಾಃ ಯುವತೀಃ ನಿಶಾಸ್ವರಮಯದಿತ್ಯನ್ವಯಃ। 'ರಾಮಾ ಸ್ತ್ರೀ ಜಾಮದಗ್ನ್ಯಶ್ಚ ರಾಮೋ ರಾಮೌ ಸಿತಾಸಿತೌ' ಇತ್ಯನೇಕಧ್ವನಿಪದಮಂಜರ್ಯಾಮ್। – (ಜ.)

೩) ಶ್ರೀಕೃಷ್ಣನು ಹಾಗೆ ಅಸಂಖ್ಯಗೋಪಿಯರೊಂದಿಗೆ ರಾಸಕ್ರೀಡೆಯನ್ನಾಡುವಾಗ, ಅಸಂಖ್ಯರೂಪಗಳನ್ನೂ ತಾಳಿ, ಪ್ರತಿಯೊಬ್ಬಳೊಂದಿಗೂ ಏಕಕಾಲದಲ್ಲಿ ವಿಹರಿಸಿದ ಎಂಬ ವಿಶೇಷಾಂಶವನ್ನು '*ಸರ್ವಾ ನಿಶಾಸ್ವರಮಯತ್*' ಎಂಬ ಮಾತಿನಿಂದ ಸೂಚಿಸಿರುವರು.

೪) *ಗೋಪಿಯರು* ಶ್ರೀಕೃಷ್ಣನೊಂದಿಗಿದ್ದಾಗ ಅವರ ಗಂಡಂದಿರಿಗೆ ಅವರೆಲ್ಲ ತಮ್ಮೊಂದಿಗೇ ಇದ್ದಂತಹ ಭ್ರಾಂತಿಯನ್ನು ಉಂಟುಮಾಡುವ ಮೂಲಕ ಕೃಷ್ಣ ಅವರಿಗೆ ತಮ್ಮ ಪತ್ನಿಯರ ಬಗ್ಗೆ ದುರ್ಭಾವನೆ ಹುಟ್ಟದಂತೆ ಕಾಪಾಡಿದ ಎಂಬ ವಿಶೇಷಾಂಶವೂ [೧]ಭಾಗವತದಲ್ಲಿದೆ.

೫) ಅಣ್ಣನಿಗಿಂತ ಮೊದಲು ತಮ್ಮ ಮದುವೆಯಾಗುವುದು ದೋಷ. ಆ ಕ್ರಿಯೆಗೆ ಪರಿವೇದನ ಎಂದೂ, ಹಾಗೆ ಮದುವೆಯಾದವನನ್ನು ಪರಿವಿತ್ತಿ ಎಂದೂ ಕರೆಯುವರು. ಆದರೆ ಶ್ರೀಕೃಷ್ಣ ಅಣ್ಣನಿಗಿಂತ ಮುಂಚಿತವಾಗಿ ಮದುವೆಯಾದದ್ದು ಯಾವುದೇ ದೋಷಕ್ಕೂ ಕಾರಣವಾಗಲಿಲ್ಲ. ಅವನು ನಿರ್ದೋಷನಾದ ಭಗವಂತನೇ ಅಲ್ಲವೆ!

೬) ಭೀಮಸೇನ ಸಹ ಇದರಂತೆ ಅಣ್ಣನಾದ ಯುಧಿಷ್ಠಿರನಿಗಿಂತ ಮುಂಚಿತವಾಗಿ ಹಿಡಿಂಬೆಯನ್ನು ವಿವಾಹವಾಗುವ ಪ್ರಸಂಗ [೨]ಮುಂದೆ ಬರುವುದು. ಶ್ರೀವಾಯುದೇವರು ಶ್ರೀಹರಿಯನ್ನು ಹೀಗೆ ಅನುಕರಿಸುವ ಮೂಲಕ ತಾವು ಅವನ ಸಾಕ್ಷಾತ್‌ಪ್ರತಿಬಿಂಬರಾದ ಶ್ರೀವಾಯುವಿನ ಅವತಾರ ಎಂದು ನಿರೂಪಿಸಿದರು ತಿಳಿಯಬೇಕು.

೬) ದಿವಾರಮಣ ನಿಷಿದ್ಧ ಎಂಬ [೩]ಷಟ್ಪಶ್ನೋಪನಿಷತ್ತಿನಲ್ಲಿ ನಿರೂಪಿತವಾದ ಪ್ರಮೇಯ–ವನ್ನು ಸೂಚಿಸಲೆಂದು ಇಲ್ಲಿ '*ನಿಶಾಸು*' ಎಂಬುದಾಗಿ ತಿಳಿಸಿರುವರು ಎಂದೂ ತಿಳಿಯಬಹುದು.

ಶಂಖಚೂಡವಧೆ

ಸಂಪೂರ್ಣಚಂದ್ರಕರರಾಜಿತಸದ್ರಜನ್ಯಾಂ
ವೃಂದಾವನೇ ಕುಮುದಕುಂದಸುಗಂಧವಾತೇ ।
ಶ್ರುತ್ವಾ ಮುಕುಂದಮುಖನಿಃಸೃತಗೀತಸಾರಂ
ಗೋಪಾಂಗನಾ ಮುಮುಹುರತ್ರ ಸಸಾರ ಯಕ್ಷಃ ॥ ೭೬ ॥

---

೧. ನಾಸೂಯನ್ ಖಲು ಕೃಷ್ಣಾಯಾ ಮೋಹಿತಾಸ್ತಸ್ಯ ಮಾಯಯಾ ।
ಮನ್ಯಮಾನಾಃ ಸ್ವಪಾರ್ಶ್ವಸ್ಥಾನ್ ಸ್ವಾನ್ ಸ್ವಾನ್ ದಾರಾನ್ ವ್ರಜೌಕಸಃ ॥ –ಭಾಗವತ (೧೦/೩೩/೩೮)

೨. ಮ.ಭಾ.ತಾ.ನಿ. (೧೯/೫೦-೬೪); ಭಾರತ (ಆದಿ. ಅಧ್ಯಾಯ ೧೫೧)

೩. ತಸ್ಮಾಹರೇವ ಪ್ರಾಣೋ ರಾತ್ರಿರೇವ ರಯಿರ್ವಾ ಏತೇ ಪ್ರಸ್ಕಂದಂತಿ ಯೇ ದಿವಾ ರತ್ಯಾ ಸಂಯುಜ್ಯಂತೇ। ಬ್ರಹ್ಮಚರ್ಯಮೇವ ತದ್ ಯದ್ ರಾತ್ರೌ ರತ್ಯಾ ಸಂಯುಜ್ಯಂತೇ ॥ –ಷಟ್ಪಶ್ನೋಪನಿಷತ್ (೧/೯)

ಅ: ಪೂರ್ಣಚಂದ್ರನ ಕಿರಣಗಳಿಂದ ಕಂಗೊಳಿಸುವ ಶ್ರೇಷ್ಠರಾತ್ರಿಗಳಲ್ಲಿ ಕನ್ನೈದಿಲೆ, ಮಲ್ಲಿಗೆ ಮೊದಲಾದ ಪುಷ್ಪಗಳ ಸುಗಂಧಭರಿತ ಗಾಳಿಯಿಂದ ಕೂಡಿದ ವೃಂದಾವನದಲ್ಲಿ ಮುಕುಂದನಾದ ಶ್ರೀಕೃಷ್ಣನ ಮುಖದಿಂದ ಹೊರಹೊಮ್ಮಿದ ಗಾನರಸವನ್ನು ಕೇಳಿ ಗೋಪಿಕೆಯರು ಮೈಮರೆತರು. ಅಲ್ಲಿಗೆ ಒಬ್ಬ ಯಕ್ಷ ಧಾವಿಸಿದ.

ವಿ: ೧) ಶ್ರೀಕೃಷ್ಣನ ಮುಖದಿಂದ ಹೊರಹೊಮ್ಮಿದ ಗಾನರಸ ಎಂಬ ಮಾತಿನಿಂದ ಕೊಳಲಿನ ಗಾನದಂತೆ ಮುಖದ ಗಾನವೂ ವಿವಕ್ಷಿತ ಎಂಬ ವಿಶೇಷಾಂಶ [೧]ವಾದಿರಾಜೀಯದಲ್ಲಿದೆ.

೨) ವೃಂದಾವನದ ರಮ್ಯಪ್ರದೇಶ, ಬೆಳದಿಂಗಳಿನ ರಾತ್ರಿಕಾಲ, ಸುಗಂಧಪುಷ್ಪಗಳ ಮೇಲೆ ಬೀಸಿಬಂದ ಗಾಳಿ, ಎಲ್ಲಕ್ಕಿಂತ ಮಿಗಿಲಾಗಿ ಶ್ರೀಕೃಷ್ಣನ ಮುಖದಿಂದ ಹೊರಹೊಮ್ಮಿದ ಗಾನ ಇವುಗಳಿಂದ ಗೋಪಿಕೆಯರು ಮೈಮರೆತರು ಎಂದು ಭಾವ.

೩) ಶ್ರೀಮದಾಚಾರ್ಯರ ಗಾನಸುಧೆಗೆ ಸಭೆಯ ಜನರೆಲ್ಲ ಮೈಮರೆತ ಸುಮಧ್ವವಿಜಯದ[೨] ಪ್ರಸಂಗ ಇದಕ್ಕೆ ಸ್ಮಾರಕ ಎನ್ನಬಹುದು.

ರುದ್ರಪ್ರಸಾದಕೃತರಕ್ಷ ಉತಾಸ್ಯ [೩]ಸಖ್ಯು-
ರ್ಭೃತ್ಯೋ ಬಲೀ ಖರತರೋಽಪಿ ಚ ಶಂಖಚೂಡಃ ।
ತಾಃ ಕಾಲಯನ್ ಭಗವತಸ್ತಲತಾಡನೇನ
ಮೃತ್ಯುಂ ಜಗಾಮ ಮಣಿಮಸ್ಯ [೪]ಜಹಾರ ಕೃಷ್ಣಃ ॥ ೭೭ ॥

ಅ: ಹಾಗೆ ಬಂದ ಆ ಯಕ್ಷ ಶಂಖಚೂಡ; ಅವನು ರುದ್ರವರದಿಂದ ರಕ್ಷಿತನಾದವನು; ಶಿವನ ಸ್ನೇಹಿತನಾದ ಕುಬೇರನಿಗೆ ಸೇವಕ. ತುಂಬಾ ಕ್ರೂರಿ; ಬಲಶಾಲಿ. ಗೋಪಿಯರಿಗೆ ಗೊಂದಲ

---

೧. ಮುಖನಿಃಸೃತಗೀತಸಾರಮಿತಿ ವದತಾ ವೇಣುಂ ವಿನಾ ಸ್ವಮುಖೇನೈವಾದ್ಭುತಸಂಗೀತರಸಃ ಪ್ರದರ್ಶಿತ ಇತಿ ಸೂಚಿತಮ್ । ಅತ ಏವ ಮುಮುಹುಃ = ಮೂರ್ಛಾಂ ಗತಾ ಇತ್ಯುಕ್ತಮ್ ॥ – (ವಾ.)

೨. ಅಯಮೇವ ಗೋವಿಷಯತೋಽಪಿ ಸದಸಿ ಜನತಾರ್ಥಿತೋ ಜವಾತ್ ।
ಪುಷ್ಪಮುತ ಫಲಮಹೋ ವಿದಧೇ ಜನಸುಪ್ತಿದಾನುಪಮಗಾನಸಂಪದಾ ॥ – ಸುಮಧ್ವವಿಜಯ (೧೦/೫೩)

೩. ಅಸ್ಯ = ರುದ್ರಸ್ಯ ಸಖ್ಯುಃ = ಕುಬೇರಸ್ಯ ಭೃತ್ಯ ಇತ್ಯರ್ಥಃ । ತಾಃ = ಗೋಪೀಃ ಕಾಲಯನ್ = ''ಕಲ ಗತಾ'' ವಿತಿ ಧಾತೋಃ ನಯನ್ನಿತ್ಯರ್ಥಃ ॥ – (ವಾ.)

೪. ಶಂಖಚೂಡಂ ನಿಹತ್ಯೈವಂ ಮಣಿಮಾದಾಯ ಭಾಸ್ವರಮ್ ।
ಅಗ್ರಜಾಯಾದದತ್ ಪ್ರೀತ್ಯಾ ಪಶ್ಯಂತೀನಾಂ ಚ ಯೋಷಿತಾಮ್ ॥ – ಭಾಗವತ (೧೦/೩೪/೩೨)

ಹುಟ್ಟಿಸಿದ ಅವನು ಶ್ರೀಕೃಷ್ಣನ ಅಂಗೈ ಹೊಡೆತದಿಂದ ಮರಣಹೊಂದಿದ. ಅವನ ಮಣಿಯನ್ನು ಕೃಷ್ಣ ಕಿತ್ತುಕೊಂಡ.

ವಿ: ೧) ಶ್ರೀಕೃಷ್ಣ ಹೀಗೆ ಶಂಖಚೂಡನನ್ನು ಸಂಹರಿಸಿದ. ಅವನ ತಲೆಯ ಮೇಲಿದ್ದ ಮಣಿ–ಯನ್ನು ಕಿತ್ತುಕೊಂಡ. ಅದನ್ನು ಅಣ್ಣನಾದ ಬಲರಾಮನಿಗೆ ನೀಡಿದ. ತಾನು [೧]ಯಶೋಮಣಿಯನ್ನು ಪಡೆದು, ಕಾಂತಾಮಣಿಗಳೊಂದಿಗೆ ರಮಿಸಿ, ಅಣ್ಣನಿಗಿಂತ ಮಿಗಿಲೆನ್ನಿಸಿದ.

೨) ಶಂಖಚೂಡನ ತಲೆಯ ಮೇಲಿದ್ದ ಮಣಿಯನ್ನು ಶ್ರೀಕೃಷ್ಣ ಹೀಗೆ ಅಣ್ಣ ಬಲರಾಮನಿಗೆ ನೀಡಿದಂತೆ, ಅಶ್ವತ್ಥಾಮರ ತಲೆಯ ಮೇಲಿದ್ದ ಮಣಿಯನ್ನು ಭೀಮ ತನ್ನ ಅಣ್ಣನಿಗೆ ನೀಡಿದ. ಶ್ರೀಕೃಷ್ಣನ ಈ ಕಾರ್ಯ ಭೀಮನ ಆ ಕಾರ್ಯಕ್ಕೆ ಮೂಲಪ್ರೇರಣೆ. ಅದಕ್ಕೆಂದೇ ವಾಯುವನ್ನು ಶ್ರೀಹರಿಯ ಸಾಕ್ಷಾತ್ [೨]ಪ್ರತಿಬಿಂಬ ಎಂದು ಶಾಸ್ತ್ರಗಳು ಬಣ್ಣಿಸಿವೆ.

ನಾಮ್ನಾಽಪ್ಯರಿಷ್ಟ ಉರುಗಾಯವಿಲೋಮಚೇಷ್ಟೋ
ಗೋಷ್ಠಂ ಜಗಾಮ ವೃಷಭಾಕೃತಿರಪ್ಯವಧ್ಯಃ ।
ಶಂಭೋರ್ವರಾದನುಗತಶ್ಚ ಸದೈವ ಕಂಸಂ
ಗಾ ಭೀಷಯಂತಮಮುಮಾಹ್ವಯದಾಶು ಕೃಷ್ಣಃ ॥ ೭೮ ॥

ಅ: ಅರಿಷ್ಟ ಎಂಬ ಹೆಸರಿನ, ಕೃಷ್ಣನಿಗೆ ವಿರುದ್ಧವಾದ ನಡೆಯ ಮತ್ತೊಬ್ಬ ಅಸುರ ಎತ್ತಿನ ರೂಪದಲ್ಲಿ ಗೋಕುಲಕ್ಕೆ ಬಂದ. ಶಿವನ ವರದಿಂದಾಗಿ ಅವನು ಇತರರಿಗೆ ಅವಧ್ಯನಾಗಿದ್ದು ಕಂಸನ ಸೇವಕನಾಗಿದ್ದ. ಗೋವುಗಳನ್ನು ಬೆದರಿಸುತ್ತಿದ್ದ ಅವನನ್ನು ಕೃಷ್ಣ ಬೇಗನೆ ಹೋರಾಟಕ್ಕೆ ಆಹ್ವಾನಿಸಿದ.

ವಿ: ೧) ಅರಿಷ್ಟಾಸುರ ತನ್ನ ಗುಟುರಿನಿಂದಲೇ ಗರ್ಭಿಣಿಗೋವುಗಳ [೩]ಗರ್ಭಸ್ರಾವ ಮಾಡಿಸುತ್ತಿದ್ದ ಮಹಾದೈತ್ಯ. ಅವನ ತೀಕ್ಷ್ಣ ಕೊಂಬುಗಳಿಂದ ಗೋಪಗೋಪಿಯರು ಮಾತ್ರವಲ್ಲದೆ, ಪಶುಗಳೂ ಕಂಗಾಲಾಗಿದ್ದವು. ಹಾಗೆ ಗೋಗೋಪರನ್ನು ಅಂಜಿಸುವ ಮೂಲಕ ಶ್ರೀಕೃಷ್ಣನಿಗೆ ವಿರೋಧವೆಸಗಿದ ಅವನನ್ನು ಶ್ರೀಕೃಷ್ಣ ಹೋರಾಟಕ್ಕೆ ಕರೆದ.

---

೧. ಶಿರೋಮಣಿಂ ತಸ್ಯ ವಧಾದವಾಪ್ತಂ ಬಲಾಯ ದತ್ತ್ವಾ ಬುಭುಜೇ ಸ್ವಯಂ ಸಃ ।
ಯಶೋಮಣಿಂ ಚಂದ್ರಚಯಾತಿಚಾರುಂ ಮನೋಜ್ಞಕಾಂತಾಮಣಿಭಿಃ ಸಮೇತಮ್ ॥ – ರು.ವಿ.(೧೦/೫೫)

೨. ಆಭಾಸಕೋಽಸ್ಯ ಪವನಃ ಪವನಸ್ಯ ರುದ್ರಃ ..... – ಮ.ಭಾ.ತಾ.ನಿ.(೧/೧೪)

೩. ಯಸ್ಯ ನಿರ್ಹ್ರಾದಿತೇನಾಂಗ ನಿಷ್ಠುರೇಣ ಗವಾಂ ನೃಣಾಮ್ ।
ಪತಂತ್ಯಕಾಲತೋ ಗರ್ಭಾಃ ಸ್ರವಂತಿ ಸ್ಮ ಭಯೇನ ವೈ ॥ – ಭಾಗವತ (೧೦/೩೬/೩,೪)

೨) ಇಲ್ಲಿ 'ಉರುಗಾಯ' ಎಂಬುದಕ್ಕೆ ಬ್ರಹ್ಮಾದಿಶ್ರೇಷ್ಠದೇವತೆಗಳಿಂದ ಸ್ತುತಿಸಲ್ಪಡುವವನು, ಉತ್ಕೃಷ್ಟವಾಗಿ ಸಾಮಗಾನ ಮಾಡುವವನು ಮೊದಲಾದ ಅರ್ಥಗಳನ್ನು ಶ್ರೀವಾದಿರಾಜರು[೧] ಮಾಡಿರುವರು.

ಸೋಽಪ್ಯಾಸಾದ ಹರಿಮುಗ್ರವಿಷಾಣಕೋಟಿ-
ಮಗ್ರೇ ನಿಧಾಯ ಜಗೃಹೇಽಸ್ಯ ವಿಷಾಣಮೀಶಃ ।
ಭೂಮೌ ನಿಪಾತ್ಯ ಚ ವೃಷಾಸುರಮುಗ್ರವೀರ್ಯಂ
ಯಜ್ಞೇ ಯಥಾ ಪಶುಮಮಾರಯದಗ್ರ್ಯಶಕ್ತಿಃ ॥ ೭೯ ॥

ಅ: ಅರಿಷ್ಟಾಸುರ ಸಹ ಭಯಂಕರವಾದ ಕೊಂಬಿನ ತುದಿಯನ್ನು ಮುಂದೆ ಮಾಡಿಕೊಂಡು ಕೃಷ್ಣನ ಮೇಲೆ ಎರಗಿದ. ಮಹಾಶಕ್ತಿಸಂಪನ್ನನೂ, ಸರ್ವಸಮರ್ಥನೂ ಆದ ಶ್ರೀಕೃಷ್ಣ ಅವನ ಕೊಂಬನ್ನು ಹಿಡಿದು, ಭೂಮಿಯಲ್ಲಿ ಕೆಡವಿ, ಭಯಂಕರವೀರ್ಯದ ಆ ವೃಷಭಾಸುರನನ್ನು ಯಜ್ಞದಲ್ಲಿ ಪಶುವನ್ನು ಕೊಲ್ಲುವಂತೆ ಕೊಂದುಹಾಕಿದ.

ವಿ: ೧) ವೃಷಭಾಸುರನನ್ನು ಕಾಲಿನಿಂದ ಒತ್ತಿ ಕೊಂಬುಗಳನ್ನು ಹಿಡಿದು, ಭೂಮಿಯಲ್ಲಿ ಕೆಡವಿ, ಒದ್ದೆಬಟ್ಟೆಯನ್ನು ಹಿಂಡುವಂತೆ ಹಿಂಡಿ, ಅವನ ಕೊಂಬಿನಿಂದಲೇ ಹೊಡೆದು ಅವನನ್ನು ಕೊಂದ.

೨) ರಕ್ತ ಕಾರುತ್ತಾ, ಮಲಮೂತ್ರಗಳನ್ನು ವಿಸರ್ಜಿಸುತ್ತಾ, ಕಾಲು ಜಾಡಿಸಿ ಒದ್ದಾಡುತ್ತಾ, ಕಣ್ಣುಗಳನ್ನು ತಿರುಗಿಸುತ್ತಾ, ಆ ಅಸುರ ಭಯಂಕರ ಸಾವನ್ನು ಕಂಡ.

೩) 'ಉಗ್ರವೀರ್ಯಂ' ಎಂಬ ಪದದಿಂದ ಅವನ ಸಾಮರ್ಥ್ಯವೆಲ್ಲ ಉಗ್ರನಾಮಕನಾದ ಶಿವನ ವರಬಲದಿಂದ ಒದಗಿದ್ದೇ ಹೊರತು ಸಹಜವಾದದ್ದಲ್ಲ ಎಂಬ ಅರ್ಥ ಸೂಚಿತ.

೪) ಸುರರೆಲ್ಲ ಪುಷ್ಪವೃಷ್ಟಿ ಮಾಡಿ ಕೃಷ್ಣನನ್ನು ಸ್ತುತಿಸಿದರು ಎಂದು [೨]ಭಾಗವತದಲ್ಲಿದೆ.

---

೧. ಉರುಭಿರ್ಗೀಯತ ಇತಿ ಉರುಗಾಯಃ । ಉರುಧಾ ಸಾಮಾದಿನಾ ಗಾಯತೀತಿ ವಾ ಉರುಗಾಯಃ ॥ –(ವಾ.)

೨. ತಮಾಪತಂತಂ ಸ ನಿಗೃಹ್ಯ ಶೃಂಗಯೋಃ ಪದಾ ಸಮಾಕ್ರಮ್ಯ ನಿಪಾತ್ಯ ಭೂತಲೇ ।
ನಿಷ್ಪೀಡಯಾಮಾಸ ಯಥಾऽऽರ್ದ್ರಮಂಬರಂ ಕೃತ್ವಾ ವಿಷಾಣೇನ ಜಘಾನ ಸೋऽಪತತ್ ॥
ಅಸೃಗ್ವಮನ್ ಮೂತ್ರಶಕೃತ್ಸಮುತ್ಸೃಜನ್ ಕ್ಷಿಪಂಶ್ಚ ಪಾದಾನನವಸ್ಥಿತೇಕ್ಷಣಃ ।
ಜಗಾಮ ಕೃಚ್ಛ್ರಂ ನಿರ್ಯತೇರಥ ಕ್ಷಯಂ **ಪುಷ್ಪೈಃ ಕಿರಂತೋ ಹರಿಮೀಡಿರೇ** ಸುರಾಃ ॥
–ಭಾಗವತ (೧೦/೩೬/೧೩,೧೪)

ಕೇಶವನಿಂದ ಕೇಶಿಯ ಸಂಹಾರ

ಕೇಶೀ ಚ ಕಂಸವಿಹಿತಸ್ತುರಗಸ್ವರೂಪೋ
ಗಿರ್ಯಾತ್ಮಜಾವರಮವಾಪ್ಯ ಸದಾ ವಿಮೃತ್ಯುಃ ।
ಪಾಪಃ ಸ ಕೇಶವಮವಾಪ ಮುಖೇಽಸ್ಯ ಬಾಹುಂ
ಪ್ರಾವೇಶಯತ್ ಸ ಭಗವಾನ್ ವವೃಧೇಽಸ್ಯ ದೇಹೇ ॥ ೮೦ ॥

ಅ: ಕಂಸನಿಂದ ಕಳುಹಿಸಲ್ಪಟ್ಟ ಕೇಶಿ ಎಂಬ ಅಸುರ ಕುದುರೆಯ ರೂಪದಲ್ಲಿ ಶ್ರೀಕೃಷ್ಣನ ಬಳಿ ಬಂದ. ಅವನು ಪಾರ್ವತಿಯ ವರದಿಂದಾಗಿ ಸಾವಿಲ್ಲದವನಾಗಿದ್ದ ಪಾಪಿ. ಭಗವಂತ ಅವನ ಬಾಯಲ್ಲಿ ತನ್ನ ತೋಳನ್ನಿರಿಸಿದ. ಅದು ಅವನ ದೇಹದೊಳಗೆ ಬೆಳೆಯತೊಡಗಿತು.

ವಿ: ೧) ಈ ಕೇಶಿ ಹಯಗ್ರೀವ ಎಂಬ ಅಸುರನ ಅವತಾರ ಎಂದು [೧]ಹರಿವಂಶದಲ್ಲಿದೆ. ನಾರಾಯಣಪಂಡಿತಾಚಾರ್ಯರ [೨]ಅಂಶಾವತಾರದಲ್ಲೂ ಹಾಗೆಯೇ ಇದೆ. ಇವನು ಮತ್ಸ್ಯರೂಪಿ ಶ್ರೀಹರಿಯಿಂದ ಹತನಾದ ಹಯಗ್ರೀವಾಸುರ. ಅಲ್ಲಿ ವೇದ ಕದ್ದಿದ್ದ ಅವನು, ಈಗ ವೇದಪ್ರತಿಪಾದ್ಯನನ್ನೇ ಎದುರಿಸಿ ಬಂದಿದ್ದ. ಇಲ್ಲಿಯೂ ಅವನು ಆ ವೇದಪತಿಯಾದ ಶ್ರೀಹರಿಯಿಂದಲೇ ಹತನಾದ.

೨) ಅವನು ಅಶ್ವರೂಪ ಧರಿಸಿದ್ದು ಅವನು ನಾಳೆ ಇಲ್ಲದವನು ('ನ ವಿದ್ಯತೇ ಶ್ವಃ ಯಸ್ಯ'); ಎಂದರೆ ಅಂದೇ ಸಾಯುವವನು ಎಂದು ಅವನೇ ಭಾವಿಸಿದ್ದನೆಂಬಂತೆ ಇದ್ದಿತು ಎಂಬ ವಿವರ [೩]ರುಕ್ಮಿಣೀಶವಿಜಯದಲ್ಲಿದೆ.

೩) ಕೇಶಿ (ಪಾರ್ವತಿಯಿಂದ ವರ ಪಡೆದಿದ್ದವ); ಕೃಷ್ಣ ಕೇಶವ(ಬ್ರಹ್ಮ ಹಾಗೂ ಪಾರ್ವತೀಪತಿಯಾದ ರುದ್ರದೇವರಿಗೂ ಪ್ರವರ್ತಕ) ಎಂಬ ಸ್ವಾರಸ್ಯವನ್ನು 'ಕೇಶೀ ಕೇಶವಮವಾಪ' ಎಂಬ ಮಾತಿನಿಂದ ಸೂಚಿಸಿರುವರು.

೪) ಹರಿಗುರುದ್ರೋಹಿಗಳಿಗೆ ನಾಳೆ ಎಂಬುದು ಇರುವುದಿಲ್ಲ; ಉತ್ತಮಭವಿಷ್ಯ ಸರ್ವಥಾ ಇರದು ಎಂಬ ತತ್ತ್ವವೂ ಇದರಿಂದ ಸೂಚಿತ.

---

೧. ಕೇಽಪ್ಯಸೌ ಹಯವಿಕ್ರಾಂತೋ ಹಯಗ್ರೀವ ಇತಿ ಸ್ಮೃತಃ ।
ಕೇಶೀ ನಾಮ ಹಯೋ ಜಾತಃ ॥ - ಇತಿ ಹರಿವಂಶೇ (೧/೫೪/೭೦)

೨. ಕೇಶಿನಾಮಾಽಸುರಃ ಪೂರ್ವಂ ಹಯಗ್ರೀವೋ ಮಹಾಸುರಃ । – ಅಂಶಾವತಾರ (ಶ್ಲೋ. ೨೧)

೩. ಮುಕುಂದಮಾಜೌ ಪ್ರತಿ ಯಾಸ್ಯತೋ ಮೇ ನ ಜೀವಿತಾಶಾ ನನು ವಿದ್ಯತೇ ಶ್ವಃ ।
ಇತೀವ ನಿಶ್ಚಿತ್ಯ ಜಗಾಮ ಕೇಶೀ ಜವೇನ ನಂದವ್ರಜಮಶ್ವರೂಪೀ ॥ – ರುಕ್ಮಿಣೀಶವಿಜಯ (೧೦/೧೧)

೫) ಅವನ ಬಾಯಲ್ಲಿ ಕೃಷ್ಣನ ತೋಳು ಬೆಳೆದ ಬಗೆಯನ್ನು ಉಪೇಕ್ಷಿಸಿದ [೧]ರೋಗದ ಬಗೆಗೆ ಹೋಲಿಸಿರುವರು :

೬) ತ್ರಿವಿಕ್ರಮರೂಪದಿಂದ ತನ್ನ ಪಾದವನ್ನು ಬೆಳೆಸಿದ್ದ ಶ್ರೀಹರಿ ಇಲ್ಲಿ ಶ್ರೀಕೃಷ್ಣರೂಪ–ದಿಂದ ತನ್ನ [೨]ಕೈಯನ್ನು ಮಾತ್ರ ಹೀಗೆ ಬೆಳೆಸಿ ತೋರಿಸಿ ತಾನು ಬಯಸುವ ಯಾವುದೇ ರೀತಿಯಲ್ಲೂ ಅವಯವಗಳನ್ನು ಬೆಳೆಸಬಲ್ಲ ಎಂಬ ತತ್ತ್ವವನ್ನು ಸೂಚಿಸಿರುವನು. ಅವನ ಸಕಲ ಅವಯವಗಳೂ ಪರಿಪೂರ್ಣ ಎಂಬುದು ಇದರ ಭಾವ.

ತತ್ಪಾದನಾಯ ಕುಮತಿಃ ಸ ಕೃತಪ್ರಯಾಸಃ
ಶೀರ್ಣಾಸ್ಯದಂತದಶನಚ್ಛದರುದ್ಧವಾಯುಃ ।
ದೀರ್ಣಃ ಪಪಾತ ಚ ಮೃತೋ ಹರಿರಪ್ಯಶೇಷೈ–
ರ್ಬ್ರಹ್ಮೇಶಶಕ್ರದಿನಕೃತ್ಪ್ರಮುಖೈಃ ಸ್ತುತೋಽಭೂತ್ ॥ ೮೧ ॥

ಅ: ಅದನ್ನು ತಿನ್ನಲೆಂದು ದುರ್ಬುದ್ಧಿಯ ಅಸುರ ಪ್ರಯಾಸಪಟ್ಟ. ಅವನ ಬಾಯಿ, ಹಲ್ಲು, ತುಟಿಗಳೆಲ್ಲ ಪುಡಿಯಾದವು; ಉಸಿರುಕಟ್ಟಿತು. ಶರೀರ ಎರಡು ಹೋಳಾಗಿ ಸೀಳಿ, ಅವನು ಸತ್ತುಬಿದ್ದ. ಬ್ರಹ್ಮ, ರುದ್ರ, ಇಂದ್ರ, ಸೂರ್ಯ ಮೊದಲಾದ ಸುರರು ಕೃಷ್ಣನನ್ನು ಸ್ತುತಿಸಿದರು.

ವಿ: ೧) ಎರಡು ಹೋಳಾಗಿ ಸೀಳಿಬಿದ್ದ ಅವನ ದೇಹದ ಒಂದೊಂದು ಭಾಗದಲ್ಲೂ ಒಂದು ಕಿವಿ, ಒಂದು ಕಣ್ಣು ಅರ್ಧ ಮೂಗು, ಎರಡು ಕಾಲು, ಅರ್ಧ ಬೆನ್ನು ಮತ್ತು ಅರ್ಧ ಬಾಲಗಳು ಇದ್ದವು ಎಂಬ ಚಿತ್ರವನ್ನು [೩]ವಿಷ್ಣುಪುರಾಣ ನೀಡಿದೆ.

೨) ಭೀಮ ಜರಾಸಂಧನನ್ನು ಇದೇ ರೀತಿಯಾಗಿಯೇ ಸೀಳಿ ಸಂಹರಿಸಿದ ಎಂಬ ವಿವರ ಮಹಾಭಾರತದಲ್ಲಿದೆ.

---

೧. 'ಯಥಾऽऽಮಯಃ ಸಂವವೃಧೇ ಉಪೇಕ್ಷಿತಃ' – ಭಾಗವತ (೧೦/೩೭/೭)
'ವಿನಾಶಾಯ ಯಥಾ ವ್ಯಾಧಿರಾಸಂಭೂತೇರುಪೇಕ್ಷಿತಃ' – ವಿಷ್ಣುಪುರಾಣ (೫/೧೬/೧೧)

೨. 'ಬಾಹುನಾ ಭೋಗಿನಂ ಕೃತ್ವಾ ಮುಖೇ ತ್ವಸ್ಯ ಜನಾರ್ದನಃ ।
ಪ್ರವೇಶಯಾಮಾಸ ತದಾ ಕೇಶಿನೋ ದುಷ್ಟವಾಜಿನಃ ।
ತಥಾ ಕೃಷ್ಣಸ್ಯ ವವೃಧೇ ಬಾಹುಃ ..... ।' ಇತಿ ವಿಷ್ಣುಪುರಾಣೇ ॥ – (ಜ.)

೩. ತದುಕ್ತಂ ಹರಿವಂಶೇ –
ದ್ವಿಪಾದೇ ಪೃಷ್ಠಪುಚ್ಛಾರ್ಧೇ ಶ್ರವಣೈಕಾಕ್ಷಿನಾಸಿಕೇ ।
ಕೇಶಿನಸ್ತೇ ದ್ವಿಧಾಭೂತೇ ಶಕಲೇ ದ್ವೇ ವಿರೇಜತುಃ ॥ ಇತಿ । – (ಜ.)
ವಿಷ್ಣುಪುರಾಣೇ ಚ – 'ನಿಪಪಾತ ದ್ವಿಧಾಭೂತಃ' ಇತಿ । – (ಜ.)

ವ್ಯೋಮಾಸುರವಧೆ

ವ್ಯೋಮಶ್ಚ ನಾಮ ಮಯಸೂನುರಜಪ್ರಸಾದಾ-
ಲ್ಲಬ್ಧಾಮಿತಾಯುರಖಿಲಾನ್ ವಿದಧೇ ಬಿಲೇ ಸಃ ।
ತಂ ಶ್ರೀಪತಿಃ ಸುರಪತಿಃ ಪಶುವದ್ವಿಶಸ್ಯ
ನಿಃಸಾರಿತಾನ್ ಬಿಲಮುಖಾದಖಿಲಾಂಶ್ಚಕಾರ ॥ ೮೨ ॥

ಅ: ವ್ಯೋಮನೆಂಬ ಮಯಪುತ್ರ ಬ್ರಹ್ಮನ ಅನುಗ್ರಹದಿಂದ ಅಪರಿಮಿತ ಆಯುಷ್ಯವನ್ನು ಪಡೆದುಕೊಂಡಿದ್ದ. ಅವನು ಎಲ್ಲ ಗೋಪಾಲಕರನ್ನೂ ಒಂದು ಬಿಲದಲ್ಲಿ ಕೂಡಿಹಾಕಿದ. ಶ್ರೀಪತಿಯಾದ ಕೃಷ್ಣ ಅವನನ್ನು ಪಶುವಿನಂತೆ ಕೊಂದುಹಾಕಿ, ಅವರೆಲ್ಲರನ್ನು ಬಿಲದ ಬಾಯಿಂದ ಹೊರಕ್ಕೆ ಬರಿಸಿದ.

ವಿ: ಒಮ್ಮೆ ಗೋಪಾಲಕರು ಪರ್ವತಪ್ರಾಂತದಲ್ಲಿ ದನಗಳನ್ನು ಮೇಯಿಸುತ್ತಿದ್ದಾಗ ಬಚ್ಚಿಟ್ಟುಕೊಳ್ಳುವ ಆಟವೊಂದರಲ್ಲಿ ತೊಡಗಿದ್ದರು. ಅವರಲ್ಲಿ ಕೆಲವರು ಕಳ್ಳರಂತೆಯೂ, ಕೆಲವರು ರಾಜಭಟರಂತೆಯೂ, ಮತ್ತೆ ಕೆಲವರು ಕುರಿಯಂತೆಯೂ ನಟಿಸುತ್ತಾ ಆಟವಾಡುತ್ತಿದ್ದರು. ಆಗ ವ್ಯೋಮಾಸುರ ಕಳ್ಳನ ಪಾತ್ರ ವಹಿಸಿ, ಕುರಿಯ ರೂಪದಲ್ಲಿದ್ದ ಗೋಪಾಲಕರನ್ನು ಪರ್ವತದ ಗುಹೆಯಲ್ಲಿ ಕೂಡಿ ಹಾಕಿದ. ಗೋಪಾಲಕರ ಸಂಖ್ಯೆ ಕಡಿಮೆಯಾಗುತ್ತಾ ಹೋಗಿ ನಾಲ್ಕಾರು ಜನ ಮಾತ್ರ ಉಳಿಯುವಂತಾಯಿತು. ಸರ್ವಜ್ಞನಾದ ಕೃಷ್ಣ ಅವನನ್ನು ತೋಳವನ್ನು ಸಿಂಹದಂತೆ ಹಿಡಿದು, ಸಂಹರಿಸಿದ. ಗೋಪಾಲಕರನ್ನು ಬಂಧಮುಕ್ತರನ್ನಾಗಿಸಿದ. ಅವಿದ್ಯೆಯಿಂದಾಗಿ ಸಂಸಾರಗುಹೆಯಲ್ಲಿ ಬೀಳುವ ಸಾತ್ತ್ವಿಕಚೇತನರನ್ನು ಅವಿದ್ಯೆಯಿಂದ ಪಾರುಮಾಡಿ, ಉದ್ಧರಿಸುವ ಭಗವಂತ ತಾನೇ ಎಂಬುದನ್ನು ಆ ಮೂಲಕ ಜಗತ್ತಿಗೆ ಸಾರಿದ.

ವಸುದೇವದೇವಕಿಯರು ಮರಳಿ ಕಂಸನ ಬಂಧನದಲ್ಲಿ

ಕುರ್ವತ್ಯನನ್ಯವಿಷಯಾಣಿ ದುರಂತಶಕ್ತೌ
ಕರ್ಮಾಣಿ ಗೋಕುಲಗತೇऽಖಿಲಲೋಕನಾಥೇ ।
ಕಂಸಾಯ ಸರ್ವಮವದತ್ ಸುರಕಾರ್ಯಹೇತೋ-
ರ್ಬ್ರಹ್ಮಾಂಕಜೋ ಮುನಿರಕಾರಿ ಯದೀಶಪಿತ್ರಾ[೧] ॥ ೮೩ ॥

---

೧. ಈಶಪಿತ್ರಾ = ಜಗದೀಶಪಿತ್ರಾ ವಸುದೇವೇನ ಯದಕಾರಿ = ಸ್ವಪುತ್ರಂ ಕೃಷ್ಣಂ ನಿಶೀಥೇ ಗೋಕುಲಂ ನೀತವಾನಿತ್ಯಾದಿ ತತ್ಸರ್ವಮವದದಿತಿ ಸಂಬಂಧಃ । ಸುರಕಾರ್ಯಹೇತೋಃ = ನಿರಪರಾಧಿಕಂಸಸ್ಯ ಹನನಾಯೋಗಾತ್ ಪಿತ್ರೋಃ ಶೃಂಖಲಾಬಂಧನೇನ ಸಾಪರಾಧೀಕರಣಾಖ್ಯಸುರಕಾರ್ಯಹೇತೋರಿತ್ಯರ್ಥಃ ॥ –(ವಾ.)

ಅ: ಕೊನೆ ಇರದ ಶಕ್ತಿಯುಳ್ಳ ಸಕಲಲೋಕಗಳಿಗೆ ಒಡೆಯನಾದ ಶ್ರೀಕೃಷ್ಣ ಹೀಗೆ ಇತರರಿಗೆ ನೀಗದ ಅಪೂರ್ವಕಾರ್ಯಗಳನ್ನು ಮಾಡುತ್ತಾ ಗೋಕುಲದಲ್ಲಿದ್ದಾಗ ನಾರದಮುನಿ ಕಂಸನಿಗೆ ಶ್ರೀಕೃಷ್ಣನ ತಂದೆಯಾದ ವಸುದೇವ ಹಿಂದೆ ಮಾಡಿದ್ದೆಲ್ಲವನ್ನು ದೇವಕಾರ್ಯಕ್ಕೋಸ್ಕರ ತಿಳಿಸಿದ.

ವಿ: ೧) ಕಂಸನ ವಧೆ ಬೇಗ ಆಗಬೇಕೆಂಬ ದೇವತೆಗಳ ಕಾರ್ಯವನ್ನು ಸಾಧಿಸಲೆಂದು, ನಾರದಮುನಿ ಕಂಸನ ಬಳಿ ತೆರಳಿ, ವಸುದೇವ ಕೃಷ್ಣಾವತಾರವಾಗುತ್ತಿದ್ದಂತೆಯೇ ಅವನನ್ನು ಗೋಕುಲದಲ್ಲಿರಿಸಿ ದುರ್ಗೆಯನ್ನು ಕರೆತಂದ ವಿವರಗಳನ್ನೆಲ್ಲ ತಿಳಿಸಿದ.

೨) ನಾರದಮುನಿ ಬ್ರಹ್ಮದೇವರ ತೊಡೆಯಿಂದ ಹುಟ್ಟಿದವರು. ಅದಕ್ಕೇ ಅವರನ್ನು 'ಬ್ರಹ್ಮಾಂಕಜ' ಎಂದಿರುವರು. 'ಉತ್ಸಂಗಾನ್ನಾರದೋ ಜಜ್ಞೇ (ಭಾಗವತ ೩/೧೨/೨೩)

ಶ್ರುತ್ವಾತಿಕೋಪರಭಸೋಚ್ಚಲಿತಃ ಸ ಕಂಸೋ
ಬದ್ಧ್ವಾ ಸಭಾರ್ಯಮಥ ಶೂರಜಮುಗ್ರಕರ್ಮಾ ।
ಅಕ್ರೂರಮಾಶ್ವದಿಶದಾನಯನಾಯ ವಿಷ್ಣೋಃ
ರಾಮಾನ್ವಿತಸ್ಯ ಸಹ ಗೋಪಗಣೈ ರಥೇನ ॥ ೮೪ ॥

ಅ: ಅದನ್ನು ಕೇಳುತ್ತಲೇ ಉಗ್ರಕರ್ಮಿಯಾದ ಕಂಸ ಕೋಪಾವೇಗದಿಂದ ಮೇಲೆದ್ದು ವಸುದೇವನನ್ನು ದೇವಕೀಸಮೇತವಾಗಿ ಬಂಧನದಲ್ಲಿರಿಸಿದ. ಬಲರಾಮ ಹಾಗೂ ಗೋಪ-ರೊಂದಿಗೆ ಕೃಷ್ಣಬಲರಾಮರನ್ನು ಕರೆತರಲೆಂದು ರಥದೊಂದಿಗೆ ಅಕ್ರೂರನನ್ನು ಕಳುಹಿಸಿಕೊಟ್ಟ.

ವಿ: ೧) ವಿಷಯ ತಿಳಿದ ಕಂಸ ತನ್ನನ್ನು ವಂಚಿಸಿದರೆಂದು ಬಗೆದು, ವಸುದೇವದೇವಕಿಯರನ್ನು ಪುನಃ ಸೆರೆಯಲ್ಲಿರಿಸಿದ. ತನ್ನ ಮಂತ್ರಿಗಳಲ್ಲೊಬ್ಬನಾದ ಅಕ್ರೂರನನ್ನು ಬಿಲ್ಲಹಬ್ಬಕ್ಕೆಂದು ಕೃಷ್ಣಬಲರಾಮರನ್ನು ಮಧುರೆಗೆ ಕರೆತರಲೆಂದು ಗೋಕುಲಕ್ಕೆ ಕಳುಹಿಸಿಕೊಟ್ಟ. ಅವನು ಹೀಗೆ ಮಾಡುವ ಮೂಲಕ ಪಾಪವೃದ್ಧಿಯಾಗಿ ಕೃಷ್ಣನಿಂದ ಬೇಗನೆ ಹತನಾಗುವನೆಂಬುದು ನಾರದಮುನಿಯ ಉದ್ದೇಶವಾಗಿತ್ತು ಎಂದು ಭಾವ.

೨) ವಸುದೇವದೇವಕಿಯರು ಹಾಗೆ ಬಂಧನಕ್ಕೊಳಗಾಗಲು ಅವರು ಜಗತ್ತಿನ ತಂದೆ–ಯಾದ ಶ್ರೀಕೃಷ್ಣನನ್ನು ತಮ್ಮ ಮಗನೆಂದು ತಪ್ಪು ತಿಳಿಯುತ್ತಿದ್ದುದು ಕಾರಣವಾಯಿತೆಂದು ತಿಳಿಯಬಹುದು. ಕೃಷ್ಣನನ್ನು ತಮ್ಮ ಮಗನೆಂದು ತಪ್ಪು ತಿಳಿದದ್ದಕ್ಕೆ ಅವರಿಗೆ ಬಂಧನ ಒದಗಿದಂತೆ, ಭಗವಂತನ ಕೃಷ್ಣಾದಿರೂಪಗಳನ್ನು ವಸುದೇವಾದಿಗಳಿಂದ ಜನಿಸಿದವುಗಳೆಂದು ತಪ್ಪಾಗಿ ತಿಳಿಯುವವರಿಗೂ ಸಂಸಾರಬಂಧನ ತಪ್ಪಿದ್ದಲ್ಲ ಎಂಬ ತತ್ತ್ವ ಇದರಿಂದ ಸೂಚಿತ.

ಅಕ್ರೂರನ ಪರಿಚಯ

ಸಂಸೇವನಾಯ ಸ ಹರೇರಭವತ್ ಪುರೈವ
ನಾಮ್ನಾ ಕಿಶೋರ ಇತಿ ಯಃ ಸುರಗಾಯಕೋಽಭೂತ್ ।
ಸ್ವಾಯಂಭುವಸ್ಯ ಚ ಮನೋಃ ಪರಮಾಂಶಯುಕ್ತ
ಆವೇಶಯುಕ್ ಕಮಲಜಸ್ಯ ಬಭೂವ ವಿದ್ವಾನ್ ॥ ೮೫ ॥

ಅ: ಅಕ್ರೂರ ಹರಿಯ ವಿಶೇಷಸೇವೆಗೆಂದು ಅವತಾರ ಮಾಡಿದ್ದ ಕಿಶೋರ ಎಂಬ ದೇವಗಂಧರ್ವ. ಸ್ವಾಯಂಭುವಮನುವಿನ ವಿಶೇಷ ಅಂಶವೂ ಅವನಲ್ಲಿತ್ತು. ಬ್ರಹ್ಮದೇವರ ಆವೇಶದಿಂದ ಕೂಡಿದ್ದ ಅವನು ವಿದ್ವಾಂಸನಾಗಿದ್ದ.

ಸೋಽಕ್ರೂರ ಇತ್ಯಭವದುತ್ತಮಪೂಜ್ಯಕರ್ಮಾ-
ವೃಷ್ಣಿಷ್ವಥಾಸ ಸ ಹಿ ಭೋಜಪತೇಶ್ಚ ಮಂತ್ರೀ ।
ಆದಿಷ್ಟ ಏವ ಜಗದೀಶ್ವರದೃಷ್ಟಿಹೇತೋ-
ರಾನಂದಪೂರ್ಣಸುಮನಾ ಅಭವತ್ ಕೃತಾರ್ಥಃ ॥ ೮೬ ॥

ಅ: ಉತ್ತಮವೂ, ಪೂಜನೀಯವೂ ಆದ ಕಾರ್ಯಗಳನ್ನು ಮಾಡುತ್ತಿದ್ದ ಅವನು ವೃಷ್ಣಿವಂಶದಲ್ಲಿ ಅಕ್ರೂರನಾಗಿ ಜನಿಸಿದ್ದ; ಕಂಸನಿಗೆ ಮಂತ್ರಿಯಾಗಿದ್ದ. ಕಂಸ ಆದೇಶಿಸುತ್ತಲೇ ಅವನು ಜಗದೊಡೆಯನಾದ ಶ್ರೀಕೃಷ್ಣನ ಸಂದರ್ಶನವಾಗುವುದೆಂದು ಮನಸ್ಸಿನಲ್ಲಿ ಆನಂದ ತುಂಬಿದವನಾಗಿ ಕೃತಾರ್ಥನೆನ್ನಿಸಿದ.

ವಿ: ೧) ಅವನು [೧]ಶ್ವಫಲ್ಕ ಎಂಬ ವೃಷ್ಣಿಪುತ್ರನ ಮಗ. ಶ್ವಫಲ್ಕ ಒಮ್ಮೆ ಕಾಶಿರಾಜನಾದ ವಿಭುವಿನ ಆಹ್ವಾನದಂತೆ ಅಲ್ಲಿಗೆ ತೆರಳಿದಾಗ, ಮೂರುವರ್ಷ ಮಳೆಯಾಗದಿದ್ದ ಅಲ್ಲಿ ತತ್ಕ್ಷಣವೇ ಮಳೆಯಾಯಿತು. ಅದರಿಂದ ಸಂತೋಷಪಟ್ಟ ವಿಭು ತನ್ನ ಮಗಳಾದ ಗಾಂದಿನಿಯನ್ನು ವಿವಾಹ

---

೧. ಶ್ವಫಲ್ಕಃ ಕಾಶಿರಾಜಸ್ಯ ಸುತಾಂ ಭಾರ್ಯಾಮವಿಂದತ ।
ಗಾಂದಿನೀಂ ನಾಮ ಸಾ ಗಾಂ ತು ದದೌ ವಿಪ್ರೇಷು ನಿತ್ಯಶಃ ॥ ....
ಪ್ರೋವಾಚ ಚೈನಂ ಗರ್ಭಾಸ್ಥಾ ಕನ್ಯಾ ಗಾಂ ಚ ದಿನೇ ದಿನೇ ।
ಯದಿ ದದ್ಯಾಂ ತತೋಽದ್ಯಾಹಂ ಜಾಯಯಿಷ್ಯಾಮಿ ತಾಂ ಪಿತಾ ॥
ತಥೇತ್ಯುವಾಚ ತಂ ಚಾಸ್ಯಾಃ ಪಿತಾ ಕಾಮಮಪೂರಯತ್ ।
ದಾತಾ ಯಜ್ವಾ ಚ ಧೀರಶ್ಚ ಶ್ರುತವಾನತಿಥಿಪ್ರಿಯಃ ॥
ಅಕ್ರೂರಃ ಸುಷುವೇ ತಸ್ಯಾಶ್ಚ್ವಾಫಲ್ಯಾದ್ಭೂರಿದಕ್ಷಿಣಃ ॥ — ಹರಿವಂಶ (೧/೩೪/೭, ೯-೧೧)

ಮಾಡಿಕೊಟ್ಟ. ಅವಳದೂ ವಿಚಿತ್ರಕಥೆ. ಅವಳು ಗರ್ಭದಲ್ಲಿದ್ದಾಗ ಎಷ್ಟು ದಿನವಾದರೂ ಹುಟ್ಟಲು ಇಷ್ಟಪಟ್ಟಿರಲಿಲ್ಲ. ಆಗ ತಂದೆ ಅವಳನ್ನು ಹುಟ್ಟಲು ಕೇಳಿಕೊಂಡಾಗ, ಅವಳು ತನಗೆ ಪ್ರತಿದಿನ ಗೋದಾನ ಮಾಡುವ ಅವಕಾಶ ದೊರೆತಲ್ಲಿ ಮಾತ್ರ ಹುಟ್ಟುವುದಾಗಿ ತಿಳಿಸಿದಳು. ಅವನು ಅದಕ್ಕೆ ಸಮ್ಮತಿಸಲು ಅವಳು ಹುಟ್ಟಿದಳು. ಅದರ ಸ್ಮಾರಕವಾಗಿ ಅವಳಿಗೆ ಗಾಂದಿನಿ ಎಂದೇ ಹೆಸರಿಟ್ಟರು. ಈ ಶ್ವಫಲ್ಕಗಾಂದಿನಿಯರ ಪುತ್ರನೇ ಅಕ್ರೂರ. ಮಾತಾಪಿತೃಗಳ ಅಂತಹ ಅವೋಘ ಹಿರಿಮೆಯಿಂದಾಗಿ ಗೋಎಂದನಾದ ಶ್ರೀಕೃಷ್ಣನಿಗೆ ಪ್ರಿಯನೆನ್ನಿಸುವ ಯೋಗ ಅವನಿಗೆ ಲಭಿಸಿತ್ತು ಎಂಬ ವಿವರ ಹರಿವಂಶದಲ್ಲಿದೆ.

ಗೋಕುಲದಲ್ಲಿ ಅಕ್ರೂರ

ಆರುಹ್ಯ ತದ್ರಥವರಂ ಭಗವತ್ಪದಾಬ್ಜ-
ಮಬ್ಜೋದ್ಭವಪ್ರಣತಮಂತರಮಂತರೇಣ[೧] ।
ಸಂಚಿಂತಯನ್ ಪಥಿ ಜಗಾಮ ಸ ಗೋಷ್ಠಮಾರಾ[೨]-
ದ್ದೃಷ್ಟ್ವಾ ಪದಾಂಕಿತಭುವಂ ಮುಮುದೇ ಪರಸ್ಯ ॥ ೮೭ ॥

ಅ: ಅಕ್ರೂರ ಕಂಸ ನೀಡಿದ ಆ ಶ್ರೇಷ್ಠರಥವನ್ನೇರಿ ಬ್ರಹ್ಮವಂದಿತವಾದ ಭಗವಂತನ ಚರಣಕಮಲವನ್ನು ಮಾರ್ಗದಲ್ಲಿ ಮನಸ್ಸಿನಲ್ಲಿ ಎಡೆಬಿಡದೆ ಚಿಂತಿಸುತ್ತಾ ಗೋಕುಲಕ್ಕೆ ತೆರಳಿದ. ದೂರದಿಂದಲೇ ಸರ್ವೋತ್ತಮನಾದ ಕೃಷ್ಣನ ಪಾದಚಿಹ್ನೆಯಿಂದ ಕೂಡಿದ್ದ ಭೂಮಿಯನ್ನು ಕಂಡು ನಲಿದಾಡಿದ.

ಸೋಽಚೇಷ್ಟತಾತ್ರ[೩] ಜಗದೀಶಿತುರಂಗಸಂಗಾತ್
ಲಬ್ಧೋಚ್ಚಯೇನ ನಿಖಿಲಾಘವಿದಾರಣೇಷು ।
ಪಾಂಸುಷ್ವಜೇಶಪುರುಹೂತಮುಖೋಚ್ಚವಿದ್ಯು-
ದ್ಭ್ರಾಜತ್ಕಿರೀಟಮಣಿಲೋಚನಗೋಚರೇಷು[೪] ॥ ೮೮ ॥

---

೧. ಅಂತರಂ = ವ್ಯವಧಾನಮ್ । ಅಂತರೇಣ = ವಿನಾ । ಸಂಚಿಂತಯನ್ = ನಿರಂತರಂ ಸಂಚಿಂತಯನ್ನಿತ್ಯರ್ಥಃ । ಅಂತರಂ = ಹೃದಯಾಂತರ್ವಿದ್ಯಮಾನಂ । ಅಂತರೇಣ = ಚಿತ್ತೇನೇತಿ ವಾ ॥ – (ವಾ.)

೨. 'ಆರಾದ್ದೂರಸಮೀಪಯೋಃ' ಇತ್ಯಮರಃ । – (ಜ.)

೩. ಅಚೇಷ್ಟತ ವ್ಯಲುಂಠತ । **ಅವೇಷ್ಟತೇತಿ** ವಾ ಪಾಠಃ । – (ಜ.)

೪. ಕಿರೀಟಮಣೀನಾಂ ಲೋಚನಾನಾಂ ಗೋಚರೇಷು ಶಿರೋಭಿರ್ನಮ್ಯಮಾನೇಷು ಲೋಚನೈಃ ಸಾದರಂ ದೃಶ್ಯಮಾನೇಷ್ವಿತ್ಯರ್ಥಃ ॥ – (ವಾ.)

ಅ: ಅವನು ಜಗದೀಶನಾದ ಶ್ರೀಕೃಷ್ಣನ ಅಂಗಸಂಗದಿಂದಾಗಿ ಮಹತ್ತ್ವ ಪಡೆದಿದ್ದ, ಸಕಲಪಾಪಗಳನ್ನೂ ಪರಿಹರಿಸುವಂತಹ ಬ್ರಹ್ಮ, ರುದ್ರ, ಇಂದ್ರ, ಮೊದಲಾದವರ ಉನ್ನತವಾದ ಮಿಂಚಿನಂತೆ ಹೊಳೆಯುವ ಕಿರೀಟಮಣಿಗಳ ಲೋಚನಗಳಲ್ಲಿ ಗೋಚರವಾದಂತಹ ಧೂಳಿನಲ್ಲಿ ಹೊರಳಾಡಿದ.

ವಿ: ಅಕ್ರೂರ ಕೃಷ್ಣನ ಪಾದಸ್ಪರ್ಶದಿಂದ ಪವಿತ್ರವಾದ ಧೂಳಿಯಲ್ಲಿ ಭಕ್ತಿಯಿಂದ ಹೊರಳಾಡಿದ. ಆ ಪಾದಧೂಳು ಕೃಷ್ಣನ ಪಾದಗಳಿಗೆ ಮಣಿಯುವ ಬ್ರಹ್ಮಾದಿಗಳ ಕಿರೀಟಮಣಿಗಳಲ್ಲಿ ಪ್ರತಿಫಲಿಸುವಂತಹವು; ಬ್ರಹ್ಮಾದಿಗಳಿಂದ ಪೂಜಿತವಾದವು ಎಂದರ್ಥ.

ಸೋಽಪಶ್ಯತಾಥ ಜಗದೇಕಗುರುಂ ಸಮೇತ-
ಮಗ್ರೋದ್ಭವೇನ ಭುವಿ ಗಾ ಅಪಿ ದೋಹಯಂತಮ್ [೬] ।
ಆನಂದಸಾಂದ್ರತನುಮಕ್ಷಯಮೇನಮೀಕ್ಷ್ಯ
ಹೃಷ್ಟಃ ಪಪಾತ ಪದಯೋಃ ಪುರುಷೋತ್ತಮಸ್ಯ ॥ ೮೯ ॥

ಅ: ಅವನು ಆ ಬಳಿಕ ಜಗತ್ತಿನ ಮುಖ್ಯಗುರುವಾದ ಶ್ರೀಕೃಷ್ಣನು ಅಣ್ಣನಾದ ಬಲರಾಮನೊಂದಿಗೆ ಹಸುಗಳನ್ನು ಕರೆಯುತ್ತಿದ್ದುದನ್ನು ಕಂಡ. ಆನಂದಪೂರ್ಣನೂ, ನಾಶರಹಿತನೂ ಆದ ಆ ಶ್ರೀಕೃಷ್ಣನನ್ನು ಕಂಡು ಆ ಪುರುಷೋತ್ತಮನ ಎರಡೂ ಪಾದಗಳಲ್ಲಿ ಸಂಭ್ರಮದಿಂದ ಎರಗಿದ.

ಉತ್ಥಾಪ್ಯ ತಂ ಯದುಪತಿಃ ಸಬಲೋ ಗೃಹಂ ಸ್ವಂ
ನೀತ್ವೋಪಚಾರಮಖಿಲಾಂ ಪ್ರವಿಧಾಯ ತಸ್ಮಿನ್ ।
ನಿತ್ಯೋದಿತಾಕ್ಷಯಚಿದಪ್ಯಖಿಲಂ ಸ ತಸ್ಮಾ-
ಚ್ಛುಶ್ರಾವ ಲೋಕಚರಿತಾನುವಿಡಂಬನೇನ ॥ ೯೦ ॥

ಅ: ಬಲರಾಮನೊಂದಿಗೆ ಯದುಪತಿಯಾದ ಕೃಷ್ಣ ಅವನನ್ನು ಮೇಲೆಬ್ಬಿಸಿ, ತನ್ನ ಮನೆಗೆ ಕರೆದೊಯ್ದು, ಅವನಿಗೆ ಸಕಲ ಉಪಚಾರವನ್ನೂ ಮಾಡಿದ; ನಿತ್ಯಾಭಿವ್ಯಕ್ತವಾದ ಅಕ್ಷಯಜ್ಞಾನ-

---

೫. ನ ಕೇವಲಂ ಮಣಿಷು, ಲೋಚನೋಪರಿಭಾಗೇಷು ಚ ಸಂಲಗ್ನೇಷ್ವಿತ್ಯರ್ಥಲಾಭಾರ್ಥಂ ಮಣಿಲೋಚನ ಗೋಚರೇಷ್ವಿತ್ಯುಕ್ತಮ್ । –(ಸ.)

೬. ದೋಹಯಂತಂ = ದುಹಂತಂ ''ದುಹ ಪ್ರಪೂರಣ'' ಇತಿ ಧಾತೋಃ ಪಾತ್ರೇ ಪೂರಯಂತಂ ವಾ ॥ –(ವಾ.)

ನಾದರೂ ಅವನು ಆ ಅಕ್ರೂರನಿಂದ ಲೋಕವ್ಯವಹಾರದ ವಿಡಂಬನೆಗಾಗಿ ಎಲ್ಲವನ್ನೂ ಕೇಳಿಸಿಕೊಂಡ.

ಮಥುರೆಗೆ ಕೃಷ್ಣನ ಪ್ರಯಾಣ

ಶ್ರುತ್ವಾ ಸ ಕಂಸಹೃದಿ ಸಂಸ್ಥಿತಮಬ್ಜನಾಭಃ
ಪ್ರಾತಸ್ತು ಗೋಪಸಹಿತೋ ರಥಮಾರುರೋಹ ।
ರಾಮಶ್ಚಫಲ್ಕತನಯಾಭಿಯುತೋ ಜಗಾಮ
ಯಾನೇನ ತೇನ ಯಮುನಾತಟಮವ್ಯಯಾತ್ಮಾ ॥ ೯೧ ॥

ಅ: ಪದ್ಮನಾಭನೂ, ಅವ್ಯಯದೇಹನೂ ಆದ ಶ್ರೀಕೃಷ್ಣ ಅವನಿಂದ ಕಂಸನ ಮನಸ್ಸಿನಲ್ಲಿದ್ದುದನ್ನು ತಿಳಿದು, ಪ್ರಾತಃಕಾಲದಲ್ಲಿ ಬಲರಾಮ, ಅಕ್ರೂರರೊಂದಿಗೆ ಕೂಡಿಕೊಂಡು ರಥವನ್ನೇರಿದ. ಗೋಪರೊಂದಿಗೆ ಕೂಡಿ, ಆ ರಥದಿಂದ ಅವನು ಯಮುನೆಯ ತೀರವನ್ನು ತಲುಪಿದ.

ಅಕ್ರೂರನಿಗೆ ವಿಶ್ವರೂಪದರ್ಶನ

ಸಂಸ್ಥಾಪ್ಯ ತೌ ರಥವರೇ ಜಗತಾಽಭಿವಂದ್ಯೌ
ಶ್ವಾಫಲ್ಕಿರಾಶ್ವವತತಾರ ಯಮಸ್ವಸ್ಸಾರಮ್ ।
ಸ್ನಾತ್ವಾ ಸ ತತ್ರ ವಿಧಿನೈವ ಕೃತಾಘಮರ್ಷಃ
ಶೇಷಾಸನಂ ಪರಮಪೂರುಷಮತ್ರ ಚೈಕ್ಷತ್ ॥ ೯೨ ॥

ಅ: ಅಲ್ಲಿ ಸಕಲಜಗತ್ತುಗಳಿಗೂ ವಂದ್ಯರಾದ ಶ್ರೀಕೃಷ್ಣ ಮತ್ತು ರಾಮರನ್ನು ಆ ಶ್ರೇಷ್ಠರಥದಲ್ಲೇ ಕುಳ್ಳಿರಿಸಿ, ಅಕ್ರೂರ ಬೇಗನೆ ಯಮುನಾನದಿಯಲ್ಲಿ ಇಳಿದು, ಅಲ್ಲಿ ವಿಧ್ಯುಕ್ತವಾಗಿ ಸ್ನಾನಮಾಡಿ, ಅಘಮರ್ಷಣವನ್ನು ಮಾಡುತ್ತಾ ಶೇಷಶಾಯಿಯೂ ಪರಮಪುರುಷನೂ ಆದ ಶ್ರೀಕೃಷ್ಣನನ್ನು ಕಂಡ.

ವಿ: ೧) ಯಮುನಾನದಿಯಲ್ಲಿ ಅವಗಾಹನಸ್ನಾನ ಮಾಡುತ್ತಾ ಅಘಮರ್ಷಣ ಮಾಡುತ್ತಿದ್ದಾಗ ಅಕ್ರೂರನಿಗೆ ಶೇಷಶಾಯಿಯಾದ ಶ್ರೀಕೃಷ್ಣನ ದರ್ಶನವಾಯಿತು. ಅವಗಾಹನಸ್ನಾನ ಮಾಡುವಾಗ

---

೧. ನಿಮಗ್ನೋಽಪ್ಸು ತ್ರಿರ್ಜಪೇದಘಮರ್ಷಣಮ್ । —ಸದಾಚಾರಸ್ಮೃತಿ (ಶ್ಲೋ.೪೪)

ನೀರಲ್ಲೇ ಮುಳುಗಿದ್ದು ಭಗವಂತನನ್ನು ಧ್ಯಾನಿಸುತ್ತಾ ಮೂರು ಬಾರಿ ಅಘಮರ್ಷಣಸೂಕ್ತವನ್ನು ಪಠಿಸಬೇಕಾದ ವಿಧಿ ಉಂಟು. ಹಾಗೆ ಮಾಡುವಾಗ ಅಕ್ರೂರನಿಗೆ ಶ್ರೀಹರಿಯ ದರ್ಶನವಾಯಿತು ಎಂದರ್ಥ.

೨) ಬಲರಾಮ ಮತ್ತು ಕೃಷ್ಣರಿಗೆ ಇನ್ನೂ ಉಪನಯನವಾಗಿರಲಿಲ್ಲವಾದ್ದರಿಂದ, ಅವರು ಆಹ್ನಿಕಕ್ಕೆಂದು ನೀರಿಗಿಳಿಯಲಿಲ್ಲ ಎಂದು ತಿಳಿಯಬೇಕು.

ನಿತ್ಯಂ ಹಿ ಶೇಷಮಭಿಪಶ್ಯತಿ ಸಿದ್ಧಮಂತ್ರೋ[೧]
ದಾನೇಶ್ವರಃ ಸ ತು ತದಾ ದದೃಶೇ ಹರಿಂ ಚ ।
ಅಗ್ರೇ[೨] ಹಿ ಬಾಲತನುಮೀಕ್ಷ್ಯ ಸ ಕೃಷ್ಣಮತ್ರ
ಕಿಂ ನಾಸ್ತಿ ಯಾನ ಇತಿ ಯಾನಮುಖೋ ಬಭೂವ ॥ ೯೩ ॥

ಅ: ದಾನಶೂರನಾಗಿದ್ದ ಅಕ್ರೂರ ಅಘಮರ್ಷಣಮಂತ್ರಸಿದ್ಧನೂ ಆಗಿದ್ದ. ಅವನು ಪ್ರತಿನಿತ್ಯ ಶೇಷನನ್ನು ಮಾತ್ರ ಹಾಗೆ ಕಾಣುತ್ತಿದ್ದ. ಅಂದು ಹರಿಯನ್ನು ಸಹ ಕಂಡದ್ದು ವಿಶೇಷ. ಶೇಷನ ಮುಂಭಾಗದಲ್ಲಿ ಬಾಲರೂಪಿಯಾದ ಶ್ರೀಕೃಷ್ಣನನ್ನು ಕಂಡ ಅವನು ''ರಥದಲ್ಲಿ ಇಲ್ಲವೇ?'' ಎಂದು ರಥದತ್ತ ಮುಖಮಾಡಿದ.

ವಿ: ೧) ಅಕ್ರೂರ ದಾನಶೂರನಾಗಿದ್ದ. ಅದರಿಂದಾಗಿಯೇ ಮಂತ್ರಸಿದ್ಧನೂ ಆಗಿದ್ದ. ದಾನ ಮಂತ್ರಸಿದ್ಧಿಗೆ ಸಾಧನ ಎಂಬ ತತ್ತ್ವವೂ ಈ ಪದಗಳಿಂದ ಸೂಚಿತ.

೨) ಸಾಮಾನ್ಯವಾಗಿ ಫಲಸಿದ್ಧಿ ಮಂತ್ರಸಿದ್ಧಿಗೆ ದ್ಯೋತಕ. ಆದರೆ ಅಕ್ರೂರ ಮಂತ್ರಪ್ರತಿಪಾದ್ಯದೇವತೆಯನ್ನೇ ಕಾಣುವಷ್ಟು ಶ್ರೇಷ್ಠಸಿದ್ಧಿಯನ್ನೇ ಪಡೆದಿದ್ದ ಮಹಾಸಾಧಕ ಎಂಬುದು ಇದರಿಂದ ತಿಳಿಯುವುದು.

ತತ್ರಾಪಿ ಕೃಷ್ಣಮಭಿವೀಕ್ಷ್ಯ ಪುನರ್ನಿಮಜ್ಯ
ಶೇಷೋರುಭೋಗಶಯನಂ ಪರಮಂ ದದರ್ಶ ।
ಬ್ರಹ್ಮೇಶಶಕ್ರಮುಖದೇವಮುನೀಂದ್ರವೃಂದ-
ಸಂವಂದಿತಾಂಘ್ರಿಯುಗಮಿಂದಿರಯಾ ಸಮೇತಮ್ ॥ ೯೪ ॥

---

೧. ಸಿದ್ಧಮಂತ್ರಃ ಸಿದ್ಧಾಘಮರ್ಷಣಮಂತ್ರಃ – (ಜ.)

೨. ಅಗ್ರೇ = ಶೇಷಸ್ಯ ಪುರೋಭಾಗೇ ॥ – (ವಾ.)

ಅ: ಅಲ್ಲೂ ಶ್ರೀಕೃಷ್ಣನಿರುವುದನ್ನು ಕಂಡು ಮತ್ತೊಮ್ಮೆ ಮುಳುಗು ಹಾಕಿ, ಆಗಲೂ ಶೇಷನ ವಿಶಾಲದೇಹದ ಮೇಲೆ ಪವಡಿಸಿದ ಬ್ರಹ್ಮ, ರುದ್ರ, ಇಂದ್ರ ಮೊದಲಾದ ದೇವತೆಗಳ ಮತ್ತು ಮುನಿಶ್ರೇಷ್ಠರ ಸಮೂಹಗಳಿಂದ ವಂದಿತಪಾದಯುಗನಾದ, ಲಕ್ಷ್ಮೀಸಮೇತನಾದ ಪರಮ-ಪುರುಷ ಶ್ರೀಹರಿಯನ್ನು ಕಂಡ.

ವಿ: ೧) ಅಘಮರ್ಷಣದ ಅನಂತರ ಅಕ್ರೂರ ಮತ್ತೊಮ್ಮೆ ಮುಳುಗಿದಾಗ ಅವನಿಗೆ ಶೇಷಶಾಯಿಯಾದ ಶ್ರೀಹರಿಯ ದರ್ಶನವೇ ಆಯಿತು. ಹಾಗೆ ಮತ್ತೊಮ್ಮೆ ಮುಳುಗಬೇಕಾದ್ದು ಸಹ [೧]ಶಾಸ್ತ್ರವಿಧಿ.

ಸ್ತುತ್ವಾ ವರಸ್ತುತಿಭಿರವ್ಯಯಮಬ್ಜನಾಭಂ
ಸೋಽಂತರ್ಹಿತೇ ಭಗವತಿ ಸ್ವಕಮಾರುರೋಹ ।
ಯಾನಂ ಚ ತೇನ ಸಹಿತೋ ಭಗವಾನ್ ಜಗಾಮ
ಸಾಯಂ ಪುರೀಂ ಸಹಬಲೋ ಮಧುರಾಮನಂತಃ ॥ ೯೫ ॥

ಅ: ಶ್ರೇಷ್ಠಸ್ತುತಿಗಳಿಂದ ಅವ್ಯಯನೂ, ಪದ್ಮನಾಭನೂ ಆದ ಶ್ರೀಹರಿಯನ್ನು ಸ್ತುತಿಸಿ, ಆ ರೂಪ ಮರೆಯಾದಾಗ ಅಕ್ರೂರ ತನ್ನ ರಥವನ್ನು ಏರಿದ. ಅವನೊಂದಿಗೆ ಭಗವಂತನೂ, ಅನಂತನೂ ಆದ ಶ್ರೀಕೃಷ್ಣ ಬಲರಾಮಸಮೇತನಾಗಿ ಸಂಜೆ ಮಧುರಾಪುರಿಯನ್ನು ಸೇರಿದ.

ವಿ: ೧) 'ಅನಂತ' ಎಂದರೆ ದೇಶ, ಕಾಲ ಹಾಗೂ ಗುಣಗಳಿಂದ ಕೊನೆಯಿಲ್ಲದವನು ಎಂದು ಈಗಾಗಲೇ ಬಂದಿದೆ (ಅಧ್ಯಾಯ ೧, ಶ್ಲೋಕ ೧೨).

೨) ಅಕ್ರೂರ ಸಾಕ್ಷಾತ್ ಶ್ರೀಕೃಷ್ಣನ ಜೊತೆಗೇ ಇದ್ದರೂ, ತನ್ನ ನಿತ್ಯಾಹ್ನಿಕವನ್ನು ಎಂದಿನಂತೆಯೇ ಆಚರಿಸಿದ ಎಂಬುದು ಜ್ಞಾನಿಗೂ ಕರ್ಮ ವಿಹಿತ ಎಂಬ [೨]ಶಾಸ್ತ್ರತತ್ತ್ವಕ್ಕೆ ನಿದರ್ಶನ ('ಜ್ಞಾನೀ ಚ ಕರ್ಮಾಣಿ ಸದೋದಿತಾನಿ ಕುರ್ಯಾದಕಾಮಃ ಸತತಂ ಭವೇತ', 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ').

---

೧. ಮೃದಾಲಿಪ್ಯ ನಿಮಜ್ಯ ತ್ರಿಸ್ತ್ರಿರ್ಜಪೇದಘಮರ್ಷಣಮ್ ।
ಸ್ರಷ್ಟಾರಂ ಸರ್ವಲೋಕಾನಾಂ ಸ್ಮೃತ್ವಾ ನಾರಾಯಣಂ ಪರಮ್ ॥
ಯತಶ್ಚಾಸೌ ನಿಮಗ್ನೋಽಪ್ಸು ಪ್ರಣವೇನೋತ್ಥಿತಸ್ತತಃ ।
ಸಿಂಚಯೇತ್ ಪುರುಷಸೂಕ್ತೇನ ಸ್ವದೇಹಸ್ಥಂ ಹರಿಂ ಸ್ಮರನ್ ॥ – ಸದಾಚಾರಸ್ಮೃತಿ (೪, ೫)

೨. ಭಕ್ತೋ ನಾಮ ಸ ಏವ ಯಃ ಕರಗತೇ ಕೃಷ್ಣೇಽಪಿ ವೇದೋದಿತಂ
ತತ್ಕರ್ಮಾಚರದೇತದೇವ ದುರಿತಪ್ರಧ್ವಂಸಿ ಕರ್ಮ ಕ್ಷಿತೌ । – ರು.ವಿ. (೧೦/೪೯)

ಅಕ್ರೂರನನ್ನು ಬೀಳ್ಕೊಟ್ಟು ಮಥುರಾಪ್ರವೇಶ

ಅಗ್ರೇಽಥ ದಾನಪತಿಮಕ್ಷಯಪೌರುಷೋಽಸಾ-
ವೀಶೋ ವಿಸೃಜ್ಯ ಸಬಲಃ ಸಹಿತೋ ವಯಸ್ಯೈಃ ।
ದ್ರಷ್ಟುಂ ಪುರೀಮಭಿಜಗಾಮ ನರೇಂದ್ರಮಾರ್ಗೇ
ಪೌರೈಃ ಕುತೂಹಲಯುತೈರಭಿಪೂಜ್ಯಮಾನಃ ॥ ೯೬ ॥

ಅ: ಮೊದಲಿಗೆ ಅಕ್ಷಯಪೌರುಷವುಳ್ಳ ಶ್ರೀಕೃಷ್ಣ ಅಕ್ರೂರನನ್ನು ಬೀಳ್ಕೊಟ್ಟು, ಬಲರಾಮನೊಂದಿಗೆ ಸಂಗಡಿಗರೊಡಗೂಡಿ, ರಾಜಮಾರ್ಗದಲ್ಲಿ ಆ ಪಟ್ಟಣವನ್ನು ನೋಡಲೆಂದು ಹೊರಟ. ಪುರವಾಸಿಗಳು ಕುತೂಹಲದಿಂದ ಕೂಡಿ ಅವನನ್ನು ಬಹಳವಾಗಿ ಪೂಜಿಸತೊಡಗಿದರು.

ರಜಕಸಂಹಾರ

ಆಸಾದ್ಯ ಕುಂಜರಗತಂ ರಜಕಂ ಯಯಾಚೇ
ವಸ್ತ್ರಾಣಿ ಕಂಸದಯಿತಂ ಗಿರಿಜಾವರೇಣ ।
ಮೃತ್ಯೂಜ್ಝಿತಂ ಸಪದಿ ತೇನ ದುರುಕ್ತಿವಿದ್ಧಃ
ಪಾಪಂ ಕರಾಗ್ರಮೃದಿತಂ ವ್ಯನಯದ್ಯಮಾಯ ॥ ೯೭ ॥

ಅ: ಶ್ರೀಕೃಷ್ಣ ಕಂಸನಿಗೆ ಪ್ರಿಯನೂ, ಪಾರ್ವತೀವರದಿಂದ ಸಾವಿಲ್ಲದವನೂ ಆಗಿ, ಆನೆಯ ಮೇಲೆ ಕುಳಿತು ಬರುತ್ತಿದ್ದ ಅಗಸನನ್ನು ನೋಡಿ ವಸ್ತ್ರಗಳನ್ನು ಬೇಡಿದ. ಅಗಸ ಕೆಟ್ಟ ಮಾತುಗಳಿಂದ ಬೈಯ್ಯತೊಡಗಿದ; ಆ ಪಾಪಿಯನ್ನು ಕೂಡಲೆ ಶ್ರೀಕೃಷ್ಣ ತನ್ನ ತುದಿಗೈಯಿಂದ ಅಪ್ಪಳಿಸಿ, ಯಮನ ಬಳಿಗೆ ಅಟ್ಟಿದ.

ವಿ: ೧) ಅಗಸ ಅರಸನಾದ ಕಂಸನಿಗೆಂದು ಶುದ್ಧಿಮಾಡಿದ್ದ ಬಟ್ಟೆಗಳನ್ನು ತರುತ್ತಿದ್ದಾಗ ನಡೆದ ಪ್ರಸಂಗವಿದು. ಅವನು ತರುತ್ತಿದ್ದ ಬಟ್ಟೆಗಳು ಕಂಸ ಉಪಯೋಗಿಸಿದ ಬಟ್ಟೆಗಳಲ್ಲ. ಉಪಯೋಗಿಸುವ ಮುನ್ನ ಚೆಲುವೆ ಮಾಡಿ ತರುತ್ತಿದ್ದ ನೂತನವಸ್ತ್ರಗಳು ಅವು ಎಂಬುದನ್ನು ಗಮನಿಸಬೇಕು.

೨) ಅಗಸ ಶ್ರೀಕೃಷ್ಣನಿಗೆ ವಸ್ತ್ರನೀಡುವ ಬದಲು, ''ಗುಡ್ಡಗಾಡಿನ ಜನಗಳಾದ ನಿಮಗೆ ಇಂತಹ ರಾಜೋಚಿತವಸ್ತ್ರಗಳೇತಕ್ಕೆ? ನೀವೆಲ್ಲ ತಿಳುವಳಿಕೆ ಇಲ್ಲದವರು. ಜೀವನದ ಮೇಲೆ ಆಸೆ ಇದ್ದಲ್ಲಿ ಬೇಗ ಇಲ್ಲಿಂದ ತೊಲಗಿ'' ಎಂದು ನಿಂದಿಸಿ, [೧]ವಧಾರ್ಹನಾದ ಎಂದು ತಿಳಿಯಬೇಕು.

---

೧. ತತಸ್ತಸ್ಯ ದುರಾಲಾಪಂ ನಿಶಮ್ಯ ಸುದುರಾತ್ಮನಃ ।
ಶಿರೋ ಜಹಾರ ಕಿಂ ಕಾರ್ಯಂ ಕರೋತ್ವಕೃತಕಿಲ್ಬಿಷಮ್ ॥ – ಹ.ವಿ. (೧೧/೪)

೨) ಶ್ರೀಕೃಷ್ಣ ಅಗಸನನ್ನು ತನ್ನ ಕೈಯಿಂದ ಅವನ ತಲೆಯನ್ನು ಕೆಳಕ್ಕೆ ಬೀಳಿಸಿ ಕೊಂದ ಎಂದು [೧]ಭಾಗವತದಲ್ಲಿದೆ.

೨) ಶ್ರೀಕೃಷ್ಣ ವಸ್ತ್ರವನ್ನು ಕೇಳಲು ಅದಕ್ಕೆ ವಾಯುದೇವರು ಅಭಿಮಾನಿದೇವತೆ–ಗಳಾಗಿರುವುದು ಮುಖ್ಯಕಾರಣ (**'ಪ್ರಾಣಸ್ಯ ವಸ್ತ್ರಬುದ್ಧ್ಯಾ ತು'**). ಹಾಗೆ ವಸ್ತ್ರ ನೀಡದ ಅವನನ್ನು ಕೃಷ್ಣ ಸಂಹರಿಸಿದ.

೩) ಪ್ರತಿನಿತ್ಯ ನಡೆಸುವ ಭಗವಂತನ ಷೋಡಶೋಪಚಾರ ಪೂಜೆಯಲ್ಲಿ ವಸ್ತ್ರ–ಸಮರ್ಪಣವೂ ಒಂದು. ಪೂಜೆ ಸಲ್ಲಿಸದವರೆಲ್ಲ ಈ ಅಗಸರಂತೆಯೇ ತಲೆ ಕಳೆದುಕೊಂಡು ಸಾಯುವವರು ಎಂದು ಭಾವ. ತಲೆ ಕಳೆದುಕೊಳ್ಳುವುದು ಜ್ಞಾನಶೂನ್ಯರಾಗುವುದಕ್ಕೆ ಸಂಕೇತ. ಜ್ಞಾನದ ಸಂಕೇತವಾದ ಮುಖ್ಯಪ್ರಾಣನಿಂದ ಅಭಿಮನ್ಯವಾದ ವಸ್ತ್ರಗಳನ್ನು ನೀಡದವರಿಗೆ ಜ್ಞಾನಹೀನತೆ ಉಂಟಾಗುವುದು ಸಹಜ ಎಂದರ್ಥ.

ಹತ್ವಾ ತಮಕ್ಷತಬಲೋ ಭಗವಾನ್ ಪ್ರಗೃಹ್ಯ
ವಸ್ತ್ರಾಣಿ ಚಾತ್ಮಸಮಿತಾನಿ ಬಲಸ್ಯ ಚಾದಾತ್ ।
ದತ್ವಾಽಪರಾಣಿ ಸಖಿಗೋಪಜನಸ್ಯ ಶಿಷ್ಟಾ–
ನ್ಯಾಸ್ತೀರ್ಯ ತತ್ರ ಚ ಪದಂ ಪ್ರಣಿಧಾಯ ಚಾಗಾತ್ ॥ ೯೮ ॥

ಅ: ಅವ್ಯಯಬಲನಾದ ಭಗವಂತನಾದ ಶ್ರೀಕೃಷ್ಣ ಅವನನ್ನು ಸಂಹರಿಸಿ, ತನಗೆ ಯೋಗ್ಯ-ವಾದ ವಸ್ತ್ರಗಳನ್ನು ತಾನು ತೆಗೆದುಕೊಂಡು, ಬಲರಾಮನಿಗೂ ನೀಡಿದ. ಇತರವಸ್ತ್ರಗಳನ್ನು ತನ್ನ ಜೊತೆಯ ಗೊಲ್ಲ ಜನರಿಗೆ ನೀಡಿದ. ಉಳಿದವುಗಳನ್ನು ದಾರಿಯುದ್ದಕ್ಕೂ ಹಾಸಿ ಅದರ ಮೇಲೆ ಕಾಲಿಟ್ಟು ನಡೆದ.

---

೧. ಸ ಯಾಚಿತೋ ಭಗವತಾ ಪರಿಪೂರ್ಣೇನ ಸರ್ವತಃ ।
ಸಾಕ್ಷೇಪಂ ರುಷಿತಃ ಪ್ರಾಹ ಭೃತ್ಯೋ ರಾಜ್ಞಃ ಸುದುರ್ಮದಃ ॥
ಈದೃಶಾನ್ಯೇವ ವಾಸಾಂಸಿ ನಿತ್ಯಂ ಗಿರಿವನೇಚರಾಃ ।
ಪರಿಧತ್ತ ಕಿಮುದ್ಧೃತ್ಯ ರಾಜದ್ರವ್ಯಾಣ್ಯಭೀಪ್ಸಥ ॥
ಯಾತಾಶು ಬಾಲಿಶಾ ಮೈವಂ ಪ್ರಾರ್ಥ್ಯಂ ಯದಿ ಜಿಜೀವಿಷಾ ।
ಬಧ್ನಂತಿ ಘ್ನಂತಿ ಲುಂಪಂತಿ ದೃಪ್ತಂ ರಾಜಕುಲಾನಿ ವೈ ॥
ಏವಂ ವಿಕತ್ಥಮಾನಸ್ಯ ಕುಪಿತೋ ದೇವಕೀಸುತಃ ।
ರಜಕಸ್ಯ ಕರಾಗ್ರೇಣ ಶಿರಃ ಕಾಯಾದಪಾತಯತ್ ॥ – ಭಾಗವತ (೧೦/೪೧/೩೪-೩೭)

ವಿ: ೧) ಕೃಷ್ಣ ಆ ವಸ್ತ್ರಗಳನ್ನು ತಾನೊಬ್ಬನೇ ಸ್ವೀಕರಿಸದೆ, ಬಲರಾಮಾದಿಗಳಿಗೂ ಹಂಚಿದ. ಕೃಷ್ಣ ಭಗವಂತನಾದರೆ, ಅವರೆಲ್ಲ ದೇವತೆಗಳು. ಕೃಷ್ಣ ವಸ್ತ್ರಾದಿಸಕಲವನ್ನೂ ಸರ್ವದೇವತೆಗಳಿಗೂ ನೀಡುವ ಸರ್ವಸ್ವಾಮಿ ಎಂದು ಭಾವ.

ಕ್ಷೌರಿಕನ ಹರಿಸೇವೆ

ಗ್ರಾಹ್ಯಾಪಹೇಯರಹಿತೈಕಚಿದಾತ್ಮಸಾಂದ್ರ-[೧]
ಸ್ವಾನಂದಪೂರ್ಣವಪುರಪ್ಯಯಶೋಷಹೀನಃ[೨] ।
ಲೋಕಾನ್ ವಿಡಂಬ್ಯ ನರವತ್ ಸಮಲಕ್ತಕಾದ್ಯೈ-
ರ್ವರ್ಪ್ಯಾವಿಭೂಷಿತ ಇವಾಭವದಪ್ರಮೇಯಃ ॥ ೯೯ ॥

ಅ: ಶ್ರೀಕೃಷ್ಣನು ಹೇಯೋಪಾದೇಯರಹಿತವಾದ ಜ್ಞಾನಸ್ವರೂಪನಾದ ಪೂರ್ಣವಾದ ಸ್ವರೂಪಾನಂದದಿಂದ ತುಂಬಿದ ದೇಹವುಳ್ಳವನು. ವೃದ್ಧಿಹ್ರಾಸವಿಲ್ಲದವನು. ಸಾಕಲ್ಯೇನ ಅರಿಯಲಾಗದವನು. ಅವನು ಲೋಕದ ಜನರನ್ನು ಅನುಕರಣೆ ಮಾಡುತ್ತಾ ಮನುಷ್ಯನಂತೆ ಅಲಕ್ತಕ ಮೊದಲಾದವುಗಳಿಂದ ಕ್ಷೌರಿಕನಿಂದ ಅಲಂಕೃತನಂತೆ ಕಾಣಿಸಿಕೊಂಡನು.

ವಿ: ೧) ಶ್ರೀಕೃಷ್ಣನು ಮಧುರೆಯಲ್ಲಿ ಕ್ಷೌರಿಕನಿಂದ ಅಲಂಕೃತನಾದನೆಂಬ ವಿಷಯದ ಬಗ್ಗೆ ವಿವರಣೆ ನೀಡುತ್ತಿರುವರು.

೨) ಶ್ರೀಕೃಷ್ಣನು ಜ್ಞಾನಾನಂದಮಯವಾದ ಅಪ್ರಾಕೃತಶರೀರ ಹೊಂದಿದವನು. ಅವನಿಗೆ ಯಾವ ಬಾಹ್ಯಅಲಂಕಾರವೂ ಬೇಕಿಲ್ಲ. ಅವನ ದೇಹದಲ್ಲಿ ಅನಪೇಕ್ಷಿತವಾದ ನಖಕೇಶಾದಿಗಳು ಇಲ್ಲವೇ ಇಲ್ಲ. ಆದರೂ ಅವನು ಹಾಗೆ ಮಾಡಿದ್ದು ನರವಿಡಂಬನೆಗಾಗಿ ಮಾತ್ರ. ಅಸುರವೋಹನ ಅದರ ಮತ್ತೊಂದು ಉದ್ದೇಶ. ಅವನಲ್ಲಿ ಎಡಗ್ಯೆ, ಬಲಗ್ಯೆ ಮೊದಲಾಗಿ ಹೇಯ ಉಪಾದೇಯ ಭೇದವೂ ಇರುವುದಿಲ್ಲ.

---

೧. ಭಾವಪ್ರಧಾನೋ ನಿರ್ದೇಶಃ । ಗ್ರಾಹ್ಯತ್ವಾಪಹೇಯತ್ವಾಭ್ಯಾಂ ರಹಿತಂ ಕೇವಲಂ ಗ್ರಾಹ್ಯಮೇವೇತ್ಯರ್ಥಃ । ಮನುಷ್ಯದೇಹೇಷು ವಾಮಕರಾದಿಕಮಪಹೇಯಂ ದಕ್ಷಿಣಕರಾದಿಕಂ ಗ್ರಾಹ್ಯಮಿತಿ ವಿಭಾಗೋಽಸ್ತಿ ಭಗವದ್ವಪುಃ ಸರ್ವತ್ರ ಪರಮಮಂಗಲಮಿತ್ಯರ್ಥಃ । ವಪ್ಯಾ = ವಪನಕರ್ತ್ರಾ । ನಾಪಿತೇನೇತ್ಯರ್ಥಃ ॥ – (ವಾ.)

ಗ್ರಾಹ್ಯೇಣ ಸ್ವೀಕರ್ತುಂ ಯೋಗ್ಯಮಂಡನದ್ರವ್ಯೇಣ, ಅಪಹೇಯೇನ ಪರಿತ್ಯಾಗ ಯೋಗ್ಯೇನ ನಖಲೋಮಾದಿನಾ ರಹಿತಮ್ । – (ಜ.)

೨. ಅಪ್ಯಯಶೋಷಹೀನ ಇತ್ಯತ್ರಾಪ್ಯಯೋ ನಾಶಃ ಶೋಷಃ ಶೋಷಣಂ ತಾಭ್ಯಾಂ ಹೀನ ಇತಿ ಟೀಕಾಯಾಂ ತು ಅಪಿ ಅಯಶೋಷಹೀನ ಇತಿ ಪದವಿಭಾಗಂ ಕೃತ್ವಾ ಅಯೋ ವೃದ್ಧಿಃ ಶೋಷೋ ಹ್ರಾಸಸ್ತಾಭ್ಯಾಂ ಹೀನ ಇತ್ಯುಕ್ತಮ್ ॥ – (ರಾ.)

೩) ಸ್ವತಃ ಅಪ್ರಾಕೃತದೇಹನಾದ ಕೃಷ್ಣನ ನಖಕೇಶಾದಿಗಳು ಸಹ ಅವನಿಗೆ ಸ್ವರೂಪ–ಭೂತವಾಗಿದ್ದು ಅಪ್ರಾಕೃತವೂ ಅಚ್ಛೇದ್ಯವೂ ಅಭೇದ್ಯವೂ ಆದವು. ಆದರೆ ಕೃಷ್ಣಕ್ಷೌರಿಕನ ಮುಂದೆ ಕುಳಿತು, ತತ್ಕಾಲದಲ್ಲಿ ಪ್ರಾಕೃತನಖಕೇಶಾದಿಗಳನ್ನು ಸೃಷ್ಟಿಮಾಡಿ, ಅವುಗಳನ್ನು ಮಾತ್ರ ಕತ್ತರಿಸಿ–ಕೊಂಡನು. ಅವನ ನಖದ ತುದಿಯಿಂದ ಶತಕೋಟಿಯೋಜನ ದಪ್ಪದ ಸುವರ್ಣಮಯ ಬ್ರಹ್ಮಾಂಡಕಟಾಹವೇ ಛಿನ್ನವಾಗಿರುವಾಗ ಅವನ ಕೇಶಾದಿಗಳು ಹೇಗೆ ತಾನೆ ಕ್ಷೌರಿಕನ ಕತ್ತಿಗೆ ತುಂಡಾದಾವು? ಅದರಂತೆ ಅಲಕ್ತಕಾದಿಗಳಿಂದ ಅವನು ಅಲಂಕರಿಸಿಕೊಳ್ಳುವುದು ಸಹ ಲೋಕವಿಡಂಬನೆಗಾಗಿ ಮಾತ್ರ. ಪರಿಪೂರ್ಣಸೌಂದರ್ಯದ ಅವನಿಗೆ ಬೇರಾವ ಅಲಂಕಾರದ ಆವಶ್ಯಕತೆ ಇದೆ?

ಮಾಲಾಕಾರನ ಉದ್ಧಾರ

ಮಾಲಾ ಅವಾಪ್ಯ ಚ ಸುದಾಮತ ಆತ್ಮತಂತ್ರ–
ಸ್ತಾವಕ್ಷಯೋಽನುಜಗೃಹೇ ನಿಜಪಾರ್ಷದೌ ಹಿ ।
ಪೂರ್ವಂ ವಿಕುಂಠಸದನಾದ್ಧರಿಸೇವನಾಯ
ಪ್ರಾಪ್ತೌ ಭುವಂ ಮೃಜನಪುಷ್ಪಕರೌ ಪುರಾಽಪಿ ॥ ೧೦೦ ॥

ಅ: ಸ್ವತಂತ್ರನೂ, ನಾಶರಹಿತನೂ ಆದ ಶ್ರೀಕೃಷ್ಣ ಸುದಾಮನಿಂದ ಮಾಲೆಯನ್ನು ಸ್ವೀಕರಿಸಿ, ಅವರಿಬ್ಬರನ್ನೂ ಅನುಗ್ರಹಿಸಿದ. ಸ್ವರೂಪದಲ್ಲೂ ಶ್ರೀಹರಿಗೆ ಕ್ಷೌರಿಕ, ಮಾಲಾಕಾರರೇ ಆಗಿ ವೈಕುಂಠಲೋಕದಲ್ಲಿದ್ದ ಅವರು ಅವನ ಸೇವೆಗೆಂದು ಭೂಮಿಯಲ್ಲಿ ಅವತರಿಸಿದ್ದರು.

ವಿ: ೧) ಕ್ಷೌರಿಕ ಮತ್ತು ಮಾಲಾಕಾರ ಸುದಾಮ ಇಬ್ಬರೂ ಸ್ವರೂಪದಲ್ಲೂ ಜಯವಿಜಯರಂತೆ ವೈಕುಂಠದ ಅಮುಕ್ತಸ್ಥಾನದಲ್ಲಿದ್ದು ಶ್ರೀಹರಿಗೆ ಆ ಸೇವೆಗಳನ್ನು ಸಲ್ಲಿಸುತ್ತಿದ್ದ ಸೇವಕರಾಗಿದ್ದವರು.

೨) ಮಾಲಾಕಾರನ ಹೆಸರು ಗುಣಕ ಎಂಬುದಾಗಿ [೨]ಹರಿವಂಶದಲ್ಲಿದೆ. ಸುದಾಮ ಮೂಲರೂಪದ ಹೆಸರು; ಗುಣಕ ಎಂಬುದು ಅವತಾರದಲ್ಲಿನ ಹೆಸರು ಎಂದು ತಿಳಿಯಬಹುದು.

---

೧. "ಮೃಜೂ ಶುದ್ಧಾ" ವಿತಿ ಧಾತೋಃ ಮೃಜನಂ = ಮಾರ್ಜನಂ ನಖಶ್ಮಶ್ರ್ವಾದಿಮುಂಡನಮ್ । ವಪ್ತ್ರಾ ಅಲಂಕಾರಾಯ ನಖಶ್ಮಶ್ರ್ವಾದೀನಾಂ ಯಥಾಯೋಗ್ಯಂ ಈಷದೀಷಚ್ಛೇದನಕಾಲೇ ಆನಂದಮಯಂ ಸ್ವನಖಾದಿಕಂ ಸ್ವಶಕ್ತ್ಯೈವ ಯಥಾಲಂಕಾರೋ ಭವತಿ ತಥಾ ಸಂಕೋಚಯಿತ್ವಾ ಪ್ರಾಕೃತನಖಕೇಶಾಗ್ರಾದಿಕಂ ನಿರ್ಮಾಯಾಧಃ ಪಾತಯತೀತಿ ಮಂದಾನಾಂ ಬುದ್ಧಿಂ ಮೋಹಯತಿ । ಜ್ಞಾನಿನಾಂ ತು ಅಸ್ಮದುಕ್ತವಿಧಯಾ ತತ್ತ್ವಮೇವ ಬೋಧಯತಿ । ಅನ್ಯಥಾ ಘನೀಭೂತಶತಕೋಟಿಯೋಜನಸೌವರ್ಣಬ್ರಹ್ಮಾಂಡಭೇದನೇಽಪ್ಯಚ್ಛಿನ್ನನಖಾಗ್ರಂ ಕಃ ಛಿಂದ್ಯಾದಿತಿ ಅನುಸಂಧೇಯಮ್ ॥ –(ವಾ.)

ಮೃಜನಪುಷ್ಪಕರೌ ಭೂಷಣಮಾಲಾಕಾರೌ । –(ವ.)

೩) ಕ್ಷೌರಿಕನಿಗೆ ಸಾರೂಪ್ಯಮುಕ್ತಿಯನ್ನೂ, ಅಪಾರಸಂಪತ್ತು ಬಲ, ಐಶ್ವರ್ಯ, ಸ್ಮೃತಿಶಕ್ತಿ ಇಂದ್ರಿಯಪಾಟವವನ್ನೂ, ಮಾಲಾಕಾರನಿಗೆ ವಂಶಪಾರಂಪರ್ಯ ಅಪಾರಸಂಪತ್ತನ್ನೂ, ಬಲ, ಆಯುಷ್ಯ, ಯಶಸ್ಸು, ಕಾಂತಿ, ನಿಶ್ಚಲಭಕ್ತಿಯನ್ನು ಶ್ರೀಕೃಷ್ಣ ಅನುಗ್ರಹಿಸಿದನೆಂದು ಭಾಗವತಾದಿ-ಗಳಲ್ಲಿದೆ. ಶ್ರೀಕೃಷ್ಣನಿಗೆ ಅಲಕ್ತಕ ಮಾಲಾದಿಗಳನ್ನು ಸಮರ್ಪಿಸುವವರಿಗೆ ಸಹ ಇಂತಹ [೩]ಅನುಗ್ರಹವಾಗುವುದೆಂಬ ತತ್ತ್ವವೂ ಇಲ್ಲಿ ಸೂಚಿತ.

ತ್ರಿವಕ್ರೆಯ ಉದ್ಧಾರ

ಸರ್ವೇಷ್ಟಪುಷ್ಟಿಮಿಹ ತತ್ರ ಸರೂಪತಾಂ ಚ
ಕೃಷ್ಣಸ್ತಯೋರ್ವರಮದಾದಥ ರಾಜಮಾರ್ಗೇ ।
ಗಚ್ಛನ್ ದದರ್ಶ ವನಿತಾಂ ನರದೇವಯೋಗ್ಯ-
ಮಾದಾಯ ಗಂಧಮಧಿಕಂ ಕುಟಿಲಾಂ ವ್ರಜಂತೀಮ್ ॥ ೧೦೧ ॥

ಅ: ಶ್ರೀಕೃಷ್ಣನು ಅವರಿಬ್ಬರಿಗೂ ಈ ಲೋಕದಲ್ಲಿ ಸರ್ವೇಷ್ಟಸಮೃದ್ಧಿಯನ್ನೂ, ಪರಲೋಕ-ದಲ್ಲಿ ಸಾರೂಪ್ಯವನ್ನೂ ವರವನ್ನಾಗಿ ನೀಡಿದ. ಬಳಿಕ ಅವನು ರಾಜಮಾರ್ಗದಲ್ಲಿ ಸಾಗುತ್ತಾ ರಾಜಯೋಗ್ಯವಾದ ಗಂಧವನ್ನು ತೆಗೆದುಕೊಂಡು ಹೋಗುತ್ತಿದ್ದ ತುಂಬಾ ಗೂನಿಯಾಗಿದ್ದ ಸ್ತ್ರೀಯೊಬ್ಬಳನ್ನು ಕಂಡ.

ವಿ: ರಾಮಾಯಣದಲ್ಲಿನ ತ್ರಿವಕ್ರೆ ಮಂಥರೆ; ಅವಳು ಶ್ರೀರಾಮಾಭಿಷೇಕಕ್ಕೆ ವಿಘ್ನ ಮಾಡಿದ ಮಹಾಪಾಪಿ. ಇವಳು ಶ್ರೀಕೃಷ್ಣನಿಗೆ ಗಂಧಾರ್ಪಣೆ ಮಾಡಿ ಅನುಗ್ರಹಕ್ಕೆ ಪಾತ್ರಳಾದ [೪]ಭಾಗ್ಯಶಾಲಿ.

---

೨. 'ಗುಣಕೋ ನಾಮ ತತ್ರಾಸೀನ್ಮಾಲ್ಯವೃತ್ತಿಃ ಪ್ರಿಯಂವದಃ । – ಹರಿವಂಶ (೨/೨೭/೧೯)

೩. ತಸ್ಯ ಪ್ರಸನ್ನೋ ಭಗವಾನ್ ಪ್ರಾದಾತ್ ಸಾರೂಪ್ಯಮಾತ್ಮನಃ ।
ಶ್ರಿಯಂ ಚ ಪರಮಾಂ ಲೋಕೇ ಬಲೈಶ್ವರ್ಯಸ್ಮೃತೀಂದ್ರಿಯಮ್ ॥ – ಭಾಗವತ(೧೦/೪೧/೪೨)

ಸೋಽಪಿ ವವ್ರೇಽಚಲಾಂ ಭಕ್ತಿಂ ತಸ್ಮಿನ್ನೇವಾಖಿಲಾತ್ಮನಿ ।
ತದ್ಭಕ್ತೇಷು ಚ ಸೌಹಾರ್ದಂ ಭೂತೇಷು ಚ ದಯಾಂ ಪರಾಮ್ ॥
ಇತಿ ತಸ್ಮೈ ವರಂ ದತ್ತ್ವಾ ಶ್ರಿಯಂ ಚಾನ್ವಯವರ್ಧಿನೀಮ್ ।
ಬಲಮಾಯುರ್ಯಶಃ ಕಾಂತಿಂ ನಿರ್ಜಗಾಮ ಸಹಾಗ್ರಜಃ ॥ – ಭಾಗವತ (೧೦/೪೧/೫೧,೫೨)

೪. ಪ್ರಪದನಿಹಿತಪಾದಾಂಭೋಜಪುಲ್ಲಪ್ರಸೂನೋ ವದನಮುಪಗತೇನ ದ್ವ್ಯಂಗುಲೋತ್ತಾನದೋಷ್ಣಾ ।
ಋಜುತನುಮತನೋತ್ ತಾಮುನ್ನಮಯ್ಯ ತ್ರಿವಕ್ರಾಂ ಚುಬುಕಗತಕರಾಣಾಮಂಚತಾಂ ಕ್ವಾಸ್ತಿ ವಕ್ರಾ ॥
ಗಂಧಾರ್ಪಣಾದ್ಯುಚಿರವೇಷಕೃತೇರ್ಮನೋಜ್ಞಕುಂದಪ್ರಸೂನರಚಿತಾಮಲಮಾಲ್ಯದಾನಾತ್ ।
ಕುಬ್ಜಾದಯಸ್ತಮಲಭಂತ ಮಹಾಪ್ರಸಾದಂ ಕಿಂ ನಾಮ ಸರ್ವವಿಧಿಭಿರ್ವಿಭುಮರ್ಚಯಂತಃ ॥
– ಹ.ವಿ. (೧೧/೮, ೧೦)

ತೇನಾರ್ಥಿತಾ ಸಪದಿ ಗಂಧಮದಾತ್ ತ್ರಿವಕ್ರಾ
ತೇನಾಗ್ರಜೇನ ಸಹಿತೋ ಭಗವಾನ್ ಲಿಲಿಂಪೇ ।
ತಾಂ ಚಾಶ್ವಜುತ್ವಮನಯತ್ ಸ ತಯಾಽರ್ಥಿತೋಽಲ-
ಮಾಯಾಮಿ ಕಾಲತ ಇತಿ[೧] ಪ್ರಹಸನ್ನಮುಂಚತ್ ॥ ೧೦೨ ॥

ಅ: ಅವನು ಕೇಳಿದಾಕ್ಷಣವೇ ತ್ರಿವಕ್ರೆ ಗಂಧವನ್ನು ನೀಡಿದಳು. ಶ್ರೀಕೃಷ್ಣ ಅಣ್ಣನೊಂದಿಗೆ ಅದನ್ನು ಲೇಪಿಸಿಕೊಂಡ ಮತ್ತು ಅವಳನ್ನು ಆಗಲೇ ನೇರವಾಗಿಸಿದ. ಅವಳಿಂದ ಬಹಳವಾಗಿ ಪ್ರಾರ್ಥಿತನಾದ ಶ್ರೀಕೃಷ್ಣ ''ಸಮಯ ಒದಗಿದಾಗ ಬರುವೆ'' ಎಂದು ಹೇಳಿ ಮಂದಹಾಸದಿಂದ ಅವಳನ್ನು ಬೀಳ್ಕೊಂಡ.

ವಿ: ೧) ತ್ರಿವಕ್ರೆಯೆಂದರೆ ಮೂರೆಡೆ ಶರೀರ ಬಾಗಿದವಳು, ಗೂನಿ ಎಂದರ್ಥ. ಅವಳು ಪಿಂಗಲೆಯೆಂಬ ಒಬ್ಬ ಅಪ್ಸರೆಯ ಅವತಾರ ಎಂದು ಮುಂದೆ ತಿಳಿಸಿರುವರು (೧೫/೨).

೨) ಶ್ರೀಕೃಷ್ಣ ಕೇಳಿದೊಡನೆ, ಅವಳು ಭಕ್ತಿಯಿಂದ ಎಲ್ಲ ಗಂಧವನ್ನು ಸಮರ್ಪಿಸಿ ಕೃತಕೃತ್ಯಳಾದಳು. ಅದನ್ನು ಸ್ವೀಕರಿಸಿದ ಕೃಷ್ಣ ಆಗಲೇ ಅವಳ ವಕ್ರತೆಯನ್ನು ನೀಗಿಸಿ, ನೆಟ್ಟಗಾಗಿಸಿದನು.

೩) ಶ್ರೀಕೃಷ್ಣನಿಗೆ ಗಂಧಾರ್ಪಣೆ ಸೇವೆಯಿಂದ ಗೂನು ಪರಿಹಾರ ಫಲಶ್ರುತಿ ಎಂಬ ಸೂಚನೆಯೂ ಇಲ್ಲಿದೆ. ತ್ರಿವಕ್ರತ್ವ ಎಂದರೆ ಮನಸ್ಸು, ಮಾತು ಹಾಗೂ ಕೃತಿಗಳಲ್ಲಿ ನೇರವಾಗಿಲ್ಲದಿರುವಿಕೆ ಎಂದರ್ಥ. ಗಂಧಾರ್ಪಣೆಯಿಂದ ಆ ದೋಷ ಪರಿಹಾರವಾಗಿ ಮನುಷ್ಯ ಮಹಾತ್ಮನಾಗುವನು ಎಂದು ತಾತ್ಪರ್ಯ.

೪) ತ್ರಿವಕ್ರೆಗೆ ವಚನನೀಡಿದಂತೆ ಅವಳಿಗೆ ಅಂಗಸಂಗವನ್ನು ನೀಡಿ, ವಿಶೋಕ ಎಂಬ ಪುತ್ರನನ್ನು ಕರುಣಿಸಿದ ವಿವರ ಮುಂದೆ ಬಂದಿದೆ (೧೫/೧).

೫) ಇಲ್ಲಿ 'ಅಮುಚತ್' ಎಂಬುದರ ಬದಲಾಗಿ 'ಅಮುಂಚತ್' ಎಂದಿರುವುದು ವೈದಿಕ-ಪ್ರಯೋಗ. ಆ ಮೂಲಕ ತಾವು ಲೌಕಿಕಾಲೌಕಿಕಪಾಂಡಿತ್ಯಚತುರರಾದ್ದರಿಂದ 'ತ್ರೈಲೋಕ್ಯಾಚಾರ್ಯರು' ಎಂಬುದಾಗಿ ಶ್ರೀಮದಾಚಾರ್ಯರು ಸೂಚಿಸಿರುವರು ಎಂದು [೧]ವಾದಿರಾಜೀಯದಲ್ಲಿದೆ.

---

೧. ಪ್ರಹಸನ್ನಮುಂಚದಿತ್ಯುಕ್ತ್ಯಾ ಕ್ವಚದಮುಂಚದಿತ್ಯಾದಿನಾ ಲೌಕಿಕಪ್ರಯೋಗಂ ಕರೋಮಿ । ಕ್ವಚದಮುಚದಿತ್ಯಾದಿನಾ ವೈದಿಕಪ್ರಯೋಗಂ ಕರೋಮಿ । ಅತೋಽಹಂ ಲೌಕಿಕಾಲೌಕಿಕಪಾಂಡಿತ್ಯಚತುರತ್ವಾತ್ ತ್ರೈಲೋಕ್ಯಾಚಾರ್ಯ ಇತಿ ಸೂಚಿತಮ್ ॥ – (ವಾ.)

ಶಿವಧನುರ್ಭಂಗ

[೧]ಪೂರ್ಣೇಂದುವೃಂದನಿವಹಾಧಿಕಕಾಂತಿಕಾಂತ-
ಸೂರ್ಯಾಮಿತೋರುಪರಮದ್ಯುತಿಸೌಖ್ಯದೇಹಃ ।
ಪೀತಾಂಬರಃ ಕನಕಭಾಸುರಗಂಧಮಾಲ್ಯಃ
ಶೃಂಗಾರವಾರಿಧಿರಗಣ್ಯಗುಣಾರ್ಣವೋಽಗಾತ್ ॥ ೧೦೩ ॥

ಅ: ಪೂರ್ಣಚಂದ್ರರ ವೃಂದಗಳಿಗೆ ಬಹಳವಾಗಿ ಆಶ್ರಯನಾದ, ಅತ್ಯಂತ ಕಾಂತಿಯಿಂದಾಗಿ ಮನೋಹರನಾದ, ಅಮಿತಸೂರ್ಯರ ಶ್ರೇಷ್ಠವಾದ ಹೆಚ್ಚಿನದಾದ ಕಾಂತಿ ಹಾಗೂ ಸುಖಪೂರ್ಣವಾದ ದೇಹದಿಂದ ಕೂಡಿದ, ಪೀತಾಂಬರ ತೊಟ್ಟ, ಚಿನ್ನದಂತೆ ಹೊಳೆಯುವ ಗಂಧಮಾಲೆಗಳಿಂದ ಕೂಡಿದ ಸೌಂದರ್ಯವಾರಿಧಿಯಾದ, ಅನಂತಗುಣಸಮುದ್ರನಾದ ಶ್ರೀಕೃಷ್ಣ ರಾಜಮಾರ್ಗದಲ್ಲಿ ತೆರಳಿದ.

ವಿ: ೧) ಭಕ್ತರಿಗೆ ಚಂದ್ರರಾಶಿಯಂತೆ ಶಾಂತನಾಗಿಯೂ, ದ್ವೇಷಿಗಳಿಗೆ ಮಧ್ಯಾಹ್ನದ ಸೂರ್ಯನಂತೆ ಉಗ್ರನಾಗಿಯೂ [೨]ತೋರುತ್ತಾ ಶ್ರೀಕೃಷ್ಣ ತೆರಳಿದ ಎಂಬುದನ್ನು 'ಪೂರ್ಣೇಂದು...' ಎಂಬ ಪದದಿಂದ ಸೂಚಿಸಿರುವರು.

ಪ್ರಾಪ್ಯಾಥ ಚಾಯುಧಗೃಹಂ ಧನುರೀಶದತ್ತಂ
ಕೃಷ್ಣಃ ಪ್ರಸಹ್ಯ ಜಗೃಹೇ ಸಕಲೈರಭೇದ್ಯಮ್ ।
[೪]ಕಾಂಸಂ ಸ ನಿತ್ಯಪರಿಪೂರ್ಣಸಮಸ್ತಶಕ್ತಿ-
ರಾರೋಪ್ಯ ಚೈನಮನುಕೃಷ್ಯ ಬಭಂಜ ಮಧ್ಯೇ ॥ ೧೦೪ ॥

---

೧. ಪೂರ್ಣೇಂದುವೃಂದಮೇವ ನಿತರಾಂ ವಹದಾಧಾರಭೂತಂ ಯಸ್ಯಾಃ ಕಾಂತೇಃ ಸಾ ಪೂರ್ಣೇಂದುವೃಂದ-ನಿವಹಾ ತತೋಽಪ್ಯಧಿಕಾ ಯಾ ಕಾಂತಿಃ । ತಯಾ ಕಾಂತಶ್ಚಾಸೌ । ಸೂರ್ಯೈರ್ಮಿತಾ ನ ಭವತೀತಿ ಸೂರ್ಯಾಮಿತಾ ಏತಾದೃಶೀ ಉರ್ವೀ = ಬಹುಲಾ ಪರಮಾ = ಉತ್ತಮಾ ದ್ಯುತಿರ್ಯಸ್ಯ ಸ ತಥೋಕ್ತಃ । ಈದೃಶಸೌಖ್ಯಮಯದೇಹೋ ಯಸ್ಯ ಸ ಇತಿ ಸಮಾಸಃ । ಭಕ್ತಾನಾಂ ಚಂದ್ರರಾಶಿವದಿತಿ ಶಾಂತತಯಾ ದೃಶ್ಯಮಾನೋ ವಿದ್ವಿಷಾಂ ಮಧ್ಯಂದಿನ-ಸೂರ್ಯವತ್ ಅತ್ಯುಗ್ರತಯಾ ದೃಶ್ಯಮಾನ ಇತಿ ಭಾವಃ । ಅತೋ ವೃಂದನಿವಹೇತ್ಯತ್ರ ಪೌನರುಕ್ತ್ಯಶಂಕಾ ಗರ್ಭಸ್ಯಾವೇಣ್ಯೈವ ಗತಾ ॥ – (ವಾ.)

೨. ತದುಕ್ತಂ ವಾಯವೀಯೇ – 'ಅರ್ಬುದಂ ನ್ಯರ್ಬುದಂ ಚೈವ ವೃಂದಂ ಚೈವ ತತಃ ಪರಮ್' ಇತಿ । – (ಜ.)

೩. ವೀರದೃಷ್ಟಿಕೃತಸಿಂಹವಿಭ್ರಮಃ ಶಾಂತದೃಷ್ಟಿಕೃತಶಾಂತಸಮ್ಮದಃ ॥ – (ಸುಮಧ್ವವಿಜಯ ೯/೫) ಎಂದಿರುವಂತೆ .

೪. ಕಾಂಸಂ = ಕಂಸಸ್ಯ ವಿದ್ಯಮಾನಂ । ಆರೋಪ್ಯ ಚೈನಮಿತ್ಯತ್ರ । ಏನಂ ಚಾಪಮ್ ॥ – (ವಾ.)

ಕಾಂಸಂ ಕಂಸೇನ ಪ್ರಾಪ್ತಮ್ । – (ರಾ.)

ಅ: ಆಯುಧಗೃಹವನ್ನು ಸೇರಿ, ನಿತ್ಯಪರಿಪೂರ್ಣವಾದ ಸಮಸ್ತಶಕ್ತಿಸಂಪನ್ನನಾದ ಶ್ರೀಕೃಷ್ಣ ಶಿವನಿಂದ ಕೊಡಲ್ಪಟ್ಟಿದ್ದ ಸಕಲಾಭೇದ್ಯವಾದ ಕಂಸನ ಧನುಸ್ಸನ್ನು ಬಲಾತ್ಕಾರದಿಂದ ಹಿಡಿದೆತ್ತಿ, ಹೆದೆಯೇರಿಸಿ, ಸೆಳೆಯುತ್ತಾ ಅದನ್ನು ಮಧ್ಯದಲ್ಲಿ ಎರಡು ತುಂಡಾಗಿಸಿದನು.

ವಿ: ೧) ರಾಮಾವತಾರದಲ್ಲಿ ಜನಕನ ಬಳಿ ಇದ್ದ ಶಿವಧನುಸ್ಸನ್ನು ಶ್ರೀರಾಮರೂಪದಿಂದ ತುಂಡುಮಾಡಿದ ಶ್ರೀಹರಿ, ಈ ಕೃಷ್ಣಾವತಾರದಲ್ಲೂ ಸಹ ಶಿವಧನುಸ್ಸನ್ನು ಭಗ್ನಗೊಳಿಸಿ, ತಾನು ಶಿವೋತ್ತಮ ಎಂಬುದನ್ನು ಸ್ಫುಟಪಡಿಸಿರುವನು ಎಂದು ತಿಳಿಯಬೇಕು. ಭಗವಂತನ ರೂಪರೂಪಗಳಲ್ಲಿ ಅಭೇದವೂ ಇದರಿಂದ ಸೂಚಿತ.

೨) ಅಲ್ಲಿಯ ಧನುರ್ಭಂಗ ಸೀತಾಸ್ವಯಂವರಕ್ಕೆ ಕಾರಣವಾದರೆ, ಇಲ್ಲಿಯ ಧನುರ್ಭಂಗ ಕಂಸವಧೆಗೆ ನಾಂದಿಯಾಯಿತು.

೩) ಶ್ರೀಕೃಷ್ಣನು ಶಿವಧನುಸ್ಸನ್ನು ಭಂಗಪಡಿಸಿದ ರೀತಿ ಭಾಗವತದಲ್ಲಿ ಹೀಗೆ ವರ್ಣಿತವಾಗಿದೆ :

ಕರೇಣ ವಾಮೇನ ಸಲೀಲಮುದ್ಧೃತಂ ಸಜ್ಯಂ ಚ ಕೃತ್ವಾ ನಿಮಿಷೇಣ ಪಶ್ಯತಾಮ್ ।
ನೃಣಾಂ ವಿಕೃಷ್ಯ ಪ್ರಬಭಂಜ ಮಧ್ಯತೋ ಯಥೇಕ್ಷುದಂಡಂ ಮದಕರ್ಯ್ಯರುಕ್ರಮಃ ॥
– ಭಾಗವತ (೧೦/೪೨/೧೭)

ಇದು ಶ್ರೀರಾಮ ಶಿವಧನುಸ್ಸನ್ನು ಭಂಗಮಾಡಿದ ರೀತಿಯಂತೆಯೇ ಇರುವುದು ಗಮನಾರ್ಹ.

ತಸ್ಮಿನ್ ಸುರಾಸುರಗಣೈರಖಿಲೈರಭೇದ್ಯೇ
ಭಗ್ನೇ ಬಭೂವ ಜಗದಂಡವಿಭೇದಭೀಮಃ ।
ಶಬ್ದಃ ಸ ಯೇನ ನಿಪಪಾತ ಭುವಿ ಪ್ರಭಗ್ನ-
ಸಾರೋಽಸುರೋ ಧೃತಿಯುತೋಽಪಿ ತದೈವ ಕಂಸಃ ॥ ೧೦೫ ॥

ಅ: ಸಕಲಸುರಾಸುರಗಣಗಳಿಂದಲೂ ಅಭೇದ್ಯವಾಗಿದ್ದ ಆ ಧನುಸ್ಸು ಮುರಿಯುತ್ತಿದ್ದಂತೆಯೇ ಬ್ರಹ್ಮಾಂಡ ಒಡೆದಷ್ಟು [೧]ಭಯಂಕರವಾದ ಶಬ್ದ ಹುಟ್ಟಿತು. ಕಂಸ ಎಷ್ಟೇ ಧೈರ್ಯಶಾಲಿಯಾಗಿದ್ದರೂ, ಅದರಿಂದ ತತ್ಕ್ಷಣವೇ ಸತ್ತ್ವಶೂನ್ಯನಾಗಿ ನೆಲದ ಮೇಲೆ ಬಿದ್ದ.

---

೧. ಧನುಷೋ ಭಜ್ಯಮಾನಸ್ಯ ಶಬ್ದಃ ಖಂ ರೋದಸೀ ದಿಶಃ ।
ಪೂರಯಾಮಾಸ ಯಂ ಶ್ರುತ್ವಾ ಕಂಸಸ್ತ್ರಾಸಮುಪಾಗಮತ್ ॥ –ಭಾಗವತ(೧೦/೪೨/೧೮)

ಏಃ ಧನುರ್ಭಂಗದ ಧ್ವನಿಯೂ ಕಂಸನಿಗೆ ತಡೆಯಲಸಾಧ್ಯವಾದಾಗ ಅದನ್ನು ಮುರಿದ ಸಾಕ್ಷಾತ್ ಶ್ರೀಕೃಷ್ಣನನ್ನು ಅವನು ಸರ್ವಥಾ ಎದುರಿಸಲಾರ ಎಂಬುದು ಕೈಮುತ್ಯಸಿದ್ಧ.

ಕಂಸಸೇನೆಯ ವಧೆ ಹಾಗೂ ರಾತ್ರಿಯಲ್ಲಿ ಕ್ಷೀರಾನ್ನಭೋಜನ

ಆದಿಷ್ಟಮಪ್ಯುರುಬಲಂ ಭಗವಾನ್ ಸ ತೇನ
ಸರ್ವಂ ನಿಹತ್ಯ ಸಬಲಃ ಪ್ರಯಯೌ ಪುನಶ್ಚ।
ನಂದಾದಿಗೋಪಸಮಿತಿಂ ಹರಿರತ್ರ ರಾತ್ರೌ
ಭುಕ್ತ್ವಾ ಪಯೋನ್ವಿತಶುಭಾನ್ನಮುವಾಸ ಕಾಮಮ್ ॥ ೧೦೬ ॥

ಅ: ಕಂಸನಿಂದ ಕಳುಹಿಸಲ್ಪಟ್ಟ ದೊಡ್ಡ ಸೇನೆಯನ್ನೆಲ್ಲ ಸಂಹರಿಸಿ, ಕೃಷ್ಣ ಬಲರಾಮನೊಂದಿಗೆ ನಂದಾದಿಗೋಪರ ಗುಂಪನ್ನು ಸೇರಿದ. ಆ ರಾತ್ರಿಯಲ್ಲಿ ಕ್ಷೀರದಿಂದ ಕೂಡಿದ ಶುಭಾನ್ನವನ್ನು ಭುಂಜಿಸಿ, ಸ್ವೇಚ್ಛೆಯಿಂದ ಕಳೆದ.

ವಿ: ೧) ರಾತ್ರಿಯಲ್ಲಿ ಶ್ರೀಕೃಷ್ಣ ಕ್ಷೀರಾನ್ನವನ್ನು ಉಣ್ಣುವ ಮೂಲಕ ರಾತ್ರಿ ಭೋಜನಕ್ಕೆ ಉಚಿತವಾದುದು ಕ್ಷೀರಾನ್ನವೇ ಹೊರತು, ಮೊಸರನ್ನವಲ್ಲ ಎಂದು ಸೂಚಿಸಿದ ಎಂದು ತಿಳಿಯಬೇಕು. ರಾತ್ರಿಯಲ್ಲಿ ಮೊಸರನ್ನಭೋಜನ ಆರೋಗ್ಯಭಾಗ್ಯಾದಿನಾಶಕ ಎಂದು ವೈದ್ಯಶಾಸ್ತ್ರಸಾರಿದೆ.

ಸಭೆಯಲ್ಲಿ ಕಂಸ

ಕಂಸೋಽಪ್ಯತೀವಭಯಕಂಪಿತಹೃತ್ಸರೋಜಃ
ಪ್ರಾತರ್ನರೇಂದ್ರಗಣಮಧ್ಯಗತೋಽಧಿಕೋಚ್ಚಮ್ ।
ಮಂಚಂ ವಿವೇಶ ಸಹ ಜಾನಪದೈಶ್ಚ ಪೌರೈ-
ರ್ನಾನಾನುಮಂಚಕಗತೈರ್ಯುವತೀಸಮೇತೈಃ ॥ ೧೦೭ ॥

ಅ: ಕಂಸನ ಹೃದಯಕಮಲ ಅತಿಯಾದ ಭಯದಿಂದಾಗಿ ಕಂಪಿಸತೊಡಗಿತು. ಮುಂಜಾವಿನಲ್ಲಿ ಅವನು ರಾಜರ ಗುಂಪಿನ ಮಧ್ಯದಲ್ಲಿ ಬಹಳ ಎತ್ತರವಾಗಿದ್ದ ಪೀಠದಲ್ಲಿ ಕುಳಿತ. ದೇಶದ, ಪಟ್ಟಣದ ಜನರೆಲ್ಲ ಅವನೊಂದಿಗೆ ಸಪತ್ನೀಕರಾಗಿ ಬಗೆಬಗೆಯ ಚಿಕ್ಕ ಆಸನಗಳಲ್ಲಿ ಕುಳಿತರು.

---

೧. ಅನುಮಂಚಕಾಃ ಉಪಮಂಚಕಾಃ। – (ಜ.)

ಕಂಸಪರಿವಾರದ ವಿವರ

ಸಂಸ್ಥಾಪ್ಯ ನಾಗಮುರುರಂಗಮುಖೇ ಕುವಲ್ಯಾ[೧]-
ಪೀಡಂ ಗಿರೀಂದ್ರಸದೃಶಂ ಕರಿಸಾದಿಯುಕ್ತಮ್ ।
ಚಾಣೂರಮುಷ್ಟಿಕಮುಖಾನಪಿ ಮಲ್ಲವೀರಾನ್
ರಂಗೇ ನಿಧಾಯ ಹರಿಸಂಯಮನಂ ಕಿಲೈಚ್ಛತ್ ॥ ೧೦೮ ॥

ಅ: ಕಂಸ ರಂಗದ ಮಹಾದ್ವಾರದಲ್ಲಿ ಬೆಟ್ಟದಂತಹ ಕುವಲ್ಯಾಪೀಡವೆಂಬ ದೊಡ್ಡ ಆನೆಯನ್ನು ಮಾವುತಸಮೇತವಾಗಿ ನಿಲ್ಲಿಸಿ, ರಂಗದೊಳಗೆ ಚಾಣೂರ, ಮುಷ್ಟಿಕ ಮೊದಲಾದಂತಹ ಮಲ್ಲವೀರರನ್ನು ಇರಿಸಿ, ಶ್ರೀಕೃಷ್ಣನನ್ನು ನಿಗ್ರಹಿಸಲು ಬಯಸಿದನು. ಎಂತಹ ಆಶ್ಚರ್ಯ!

ವಿ: ೧) ಕುವಲ್ಯಾಪೀಡ ಎಂಬುದು ಕಂಸನ ಬಳಿಯಿದ್ದ ಕುವಲಯಾಪೀಡ ಎಂಬ ಆನೆಯ ಮತ್ತೊಂದು ಹೆಸರು. 'ಕುವಲಯ' ಎಂದರೆ ಭೂಮಂಡಲ. ಅದಕ್ಕೆ ತನ್ನ ಹೆಚ್ಚಿಯಿಂದಲೇ 'ಆಪೀಡ' ಕಂಪನ ಉಂಟುಮಾಡುವಷ್ಟು ಬಲಿಷ್ಠವಾದುದು ಎಂದರ್ಥ. 'ಕುವಲ್ಯಾಪೀಡ' ಎಂದರೆ ಭೂಮಿಯೆಂಬ ಬಳ್ಳಿಯನ್ನು ಬಹುವಾಗಿ ಪೀಡಿಸುವಂತಹ ಭೂಭಾರಭೂತವಾದ ಆನೆ ಎಂದರ್ಥ.

೨) ಆ ಕುವಲಯಾಪೀಡ ಆನೆ ರಿಷ್ಟ ಎಂಬ ಅಸುರನ ಅವತಾರ ಎಂದು ಹರಿವಂಶದಲ್ಲಿದೆ.

೩) ಚಾಣೂರ ಮತ್ತು ಮುಷ್ಟಿಕ ಎಂಬ ಇಬ್ಬರು ಮಲ್ಲರು ವಾರಾಹ ಮತ್ತು ಕಿಶೋರ ಎಂಬ ದಾನವರು ಎಂದೂ [೨]ಹರಿವಂಶದಲ್ಲಿದೆ.

೪) ನಾರಾಯಣಪಂಡಿತಾಚಾರ್ಯರಿಂದ ರಚಿತವಾದ ಅಂಶಾವತಾರದಲ್ಲೂ ಈ ವಿವರ-ಗಳು ದೊರೆಯುತ್ತವೆ.

---

೧. ಕುವಲ್ಯಾಪೀಡಂ ಕುಃ ಪೃಥ್ವೀ ಸೈವ ವಲ್ಲೀ ತಾಮಾಸಮಂತಾತ್ಪೀಡಯತೀತಿ ಕುವಲ್ಯಾಪೀಡಃ । ಭೂಭಾರಭೂತ ಇತ್ಯರ್ಥಃ । ತಸ್ಯೈವ ಕುವಲಯಾಪೀಡ ಇತಿ ನಾಮಾಂತರಮ್ ॥ -(ವಾ.)

೨. ರಿಷ್ಟೋ ನಾಮ ದಿತೇಃ ಪುತ್ರೋ ವರಿಷ್ಠೋ ದಾನವೇಷು ಯಃ ।
ಸ ಕುಂಜರತ್ವಮಾಪನ್ನೋ ದೈತ್ಯಃ ಕಂಸಸ್ಯ ವಾಹನಃ ॥ -ಹರಿವಂಶ (೧/೫೪/೭)

ರಿಷ್ಟೋ ನಾಮ ದಿತೇಃ ಪುತ್ರೋ ವರಿಷ್ಠೋ ದಾನವೇಶ್ವರಃ । -ಅಂಶಾವತಾರ(೨೧)

ವರಾಹಶ್ಚ ಕಿಶೋರಶ್ಚ ದಾನವೌ ಯೌ ಮಹಾಬಲೌ ।
ಮಲ್ಲೌ ರಂಗಗತೌ ತೌ ತು ಜಾತೌ ಚಾಣೂರಮುಷ್ಟಿಕೌ ॥ -ಹರಿವಂಶ (೧/೫೪/೭೬)

ವರಾಹಶ್ಚ ಕಿಶೋರಶ್ಚ ಜಾತೌ ಚಾಣೂರಮುಷ್ಟಿಕೌ ॥ -ಅಂಶಾವತಾರ (೨೯)

ಅಕ್ಷೋಹಿಣೀಗಣಿತಮಸ್ಯ ಬಲಂ ಚ ವಿಂಶ-
ದಾಸೀದಸಹ್ಯಮುರುವೀರ್ಯಮನನ್ಯವಧ್ಯಮ್ ।
ಶಂಭೋರ್ವರಾದಪಿ ಚ ತಸ್ಯ ಸುನೀಥನಾಮಾ
ಯಃ ಪೂರ್ವಮಾಸ ವೃಕ ಇತ್ಯಸುರೋಽನುಜೋಽಭೂತ್ ॥ ೧೦೯ ॥

ಅ: ಅಪಾರಸಾಮರ್ಥ್ಯದಿಂದ ಕೂಡಿದ, ಶಿವನ ವರದಿಂದಾಗಿ ಇತರರಿಂದ ಅವಧ್ಯವಾಗಿದ್ದ ಇಪ್ಪತ್ತು ಅಕ್ಷೋಹಿಣೀಸಂಖ್ಯೆಯ ಸಹಿಸಲಾಗದ ಸೇನೆಯೂ ಕಂಸನಿಗಿತ್ತು. ಅವನಿಗೆ ಸುನೀಥ ಎಂಬ ಒಬ್ಬ ತಮ್ಮನೂ ಇದ್ದ. ಅವನು ಹಿಂದಿನ ಜನ್ಮದಲ್ಲಿ ವೃಕ ಎಂಬ ಅಸುರನಾಗಿದ್ದ.

ವಿ: ವೃಕಾಸುರ ಎಂದರೆ ಭಸ್ಮಾಸುರ ಎಂದರ್ಥ. ಈ ವೃಕಾಸುರನೇ ಶಿವನಿಂದ ವರ ಪಡೆದು, ಶ್ರೀಹರಿಯಿಂದ ಮೋಹಿತನಾಗಿ ಭಸ್ಮವಾದವನು.

ಸಪ್ತಾನುಜಾ ಅಪಿ ಹಿ ತಸ್ಯ [೧] ಪುರಾತನಾ ಯೇ
ಸರ್ವೇಽಪಿ ಕಂಸಪೃತನಾಸಹಿತಾಃ ಸ್ಮ ರಂಗೇ ।
ತಸ್ಥುಃ ಸರಾಮಮಭಿಯಾಂತಮುದೀಕ್ಷ್ಯ ಕೃಷ್ಣ-
ಮಾತ್ತಾಯುಧಾ ಯುಧಿ ವಿಜೇತುಮಜಂ ಸುಪಾಪಾಃ ॥ ೧೧೦ ॥

ಅ: ಹಿಂದಿನ ಜನ್ಮದಲ್ಲಿ ತಮ್ಮಂದಿರಾಗಿದ್ದ ಏಳು ಜನರು ಇಲ್ಲಿಯೂ ಕಂಸನಿಗೆ ಅನುಜರಾಗಿ, ಜನಿಸಿ, ಅವರೆಲ್ಲರೂ ಕಂಸನ ಸೇನೆಯೊಂದಿಗೆ ರಂಗದಲ್ಲಿ ಸೇರಿದ್ದರು. ಮಹಾಪಾಪಿಗಳಾದ ಅವರು ಬಲರಾಮಸಮೇತನಾಗಿ ಕೃಷ್ಣನು ಒಳಬರುತ್ತಿದ್ದುದನ್ನು ಕಂಡು, ಅಜನಾದ ಅವನನ್ನು ಯುದ್ಧದಲ್ಲಿ ಗೆಲ್ಲಲೆಂದು ಆಯುಧಗಳನ್ನು ಕೈಗೆತ್ತಿಕೊಂಡರು.

ಕೃಷ್ಣೋಽಪಿ [೨] ಸೂರ ಉದಿತೇ ಸಬಲೋ ವಯಸ್ಯೈಃ
ಸಾರ್ಧಂ ಜಗಾಮ ವರರಂಗಮುಖಂ ಸುರೇಶೈಃ ।
ಸಂಸ್ತೂಯಮಾನ ಉರುವಿಕ್ರಮ ಆಸುರಾಣಾಂ
ನಿರ್ಮೂಲನಾಯ ಸಕಲಾಚರಿತೋರುಶಕ್ತಿಃ ॥ ೧೧೧ ॥

---

೧. ತಸ್ಯ = ಸುನೀಥಸ್ಯ ಪುರಾತನಾಃ = ಪೂರ್ವಜನ್ಮನ್ಯನುಜತ್ವೇನ ವಿದ್ಯಮಾನಾಃ ಯೇ ತ ಏವ ಇಹಾಪಿ ಸಪ್ತ ಅನುಜಾಃ । ಕಂಸಪೃತನಾಸಹಿತಾಃ ಸಂತಃ ರಂಗೇ = ರಣರಂಗಯೋಗ್ಯಪ್ರದೇಶೇ ತಸ್ಥುರಿತಿ ಯೋಜನಾ ॥ – (ವಾ.)

೨. ''ಸೂರಸೂರ್ಯಾರ್ಯಮಾದಿತ್ಯಾಃ'' ಇತ್ಯನುಶಾಸನಾತ್ ಸೂರಃ = ಸೂರ್ಯಃ ॥ – (ವಾ.)

ಸೂರ್ಯ ಉದಿತೇ – (ಪಾಠಾಂತರ)

ಅ: ಕೃಷ್ಣನಾದರೊ ಸೂರ್ಯ ಉದಿಸಿದ ಮೇಲೆ, ಬಲರಾಮನೊಂದಿಗೆ, ಜೊತೆಗಾರರೊಂದಿಗೆ ಕೂಡಿ, ಆ ದೊಡ್ಡ ರಂಗದ ಹೆಬ್ಬಾಗಿಲ ಬಳಿಗೆ, ದೇವತೆಗಳಿಂದ ವಿಶೇಷವಾಗಿ ಸ್ತುತಿಸಲ್ಪಡುತ್ತಲೇ, ಅಸುರರ ನಿರ್ಮೂಲನಕ್ಕೋಸ್ಕರ ತೆರಳಿದ; ಅವನು ಮಹಾಪರಾಕ್ರಮಿ ಹಾಗೂ ಸಕಲಕಾರ್ಯಗಳನ್ನೂ ಚೆನ್ನಾಗಿ ನಿರ್ವಹಿಸಬಲ್ಲ ಅಪಾರ ಶಕ್ತಿಸಂಪನ್ನ.

ಕುವಲ್ಯಾಪೀಡವಧೆ

ಆಯನ್ ಜಗದ್ಗುರುತಮೋ ಬಲಿನಂ ಗಜೇಂದ್ರಂ
ರುದ್ರಪ್ರಸಾದಪರಿರಕ್ಷಿತಮಾಶ್ವಪಶ್ಯತ್ ।
ದುಷ್ಪೋರುರಂಗಮುಖಸಂಸ್ಥಿತಮೀಕ್ಷ್ಯ[೧] ಚೈಭ್ಯಂ
ಪಾಪಾಪಯಾಹಿ ನಚಿರಾದಿತಿ ವಾಚಮೂಚೇ ॥ ೧೧೨ ॥

ಅ: ವಿಶ್ವದ ಮಹಾಗುರುವಾದ ಶ್ರೀಕೃಷ್ಣ ಆಗಮಿಸುತ್ತಾ, ಶಿವನ ಅನುಗ್ರಹದಿಂದ ಸುರಕ್ಷಿತವಾಗಿದ್ದ ಬಲಿಷ್ಠವಾದ ಗಜೇಂದ್ರನನ್ನು ಕಂಡ. ದುಷ್ಟನಾದ ಕಂಸನ ದೊಡ್ಡ ರಂಗಸ್ಥಳದ ಪ್ರವೇಶದ್ವಾರದಲ್ಲಿ ನಿಂತಿದ್ದ ಅದನ್ನು ಕಂಡು, ಮಾವುತನನ್ನು ಕುರಿತು ''ಎಲವೋ ಪಾಪಿ! ಬೇಗನೆ ಇಲ್ಲಿಂದ ತೊಲಗು'' ಎಂಬ ಮಾತನ್ನು ಆಡಿದ.

ಕ್ಷಿಪ್ತಃ ಸ ಈಶ್ವರತಮೇನ ಗಿರೀಶಲಬ್ಧಾ-
ದ್ದೃಪ್ತೋ ವರಾಜ್ಜಗತಿ ಸರ್ವಜನೈರವಧ್ಯಃ ।
ನಾಗಂ ತ್ವವಧ್ಯಮಭಿಯಾಪಯತೇ ತತೋಽಗ್ರೇ
ಪಾಪೋ ದುರಂತಮಹಿಮಂ ಪ್ರತಿ ವಾಸುದೇವಮ್[೨] ॥ ೧೧೩ ॥

ಅ: ಅತ್ಯಂತಸಮರ್ಥನಾದ ಶ್ರೀಕೃಷ್ಣನಿಂದ ಹಾಗೆ ನಿಂದಿತನಾದ, ಶಿವನ ವರದಿಂದಾಗಿ ಕೊಬ್ಬಿದ್ದ, ಜಗತ್ತಿನಲ್ಲಿ ಸಕಲಜನರಿಂದಲೂ ಸಾವಿಲ್ಲದವನಾಗಿದ್ದ ಆ ಪಾಪಿಮಾವುತನು ಅವಧ್ಯವಾಗಿದ್ದ ಆನೆಯನ್ನು ಮೊದಲಿಗೆ ಕೊನೆಯಿರದ ಮಹಿಮೆಯ ವಾಸುದೇವನಾದ ಕೃಷ್ಣನ ಮೇಲೆ ನುಗ್ಗಿಸಿದ.

---

೧. ಉರುರಂಗಮುಖಸಂಸ್ಥಿತಂ ಗಜೇಂದ್ರಂ ದೃಷ್ಟ್ವಾ ಐಭ್ಯಂ ಚೇಕ್ಷ್ಯೇತಿ ಸಂಬಂಧಃ । ಐಭ್ಯಂ = ಇಭಸಂಬಂಧಿನಂ ಯಂತಾರಮ್ ॥ –(ವಾ.)

೨. ''ಡಾಬುಭಾಭ್ಯಾಮನ್ಯತರಸ್ಯಾಮ್'' ಇತಿ(ಪಾ.ಸೂ. ೪/೧/೧೩) ವಚನಾತ್ । ಡಾಬಂತೋ ಮಹಿಮಶಬ್ದೋಽಸ್ತಿ । ದುರಂತಾ ಮಹಿಮಾ ಯಸ್ಯ ತಂ ವಾಸುದೇವಂ ಪ್ರತೀತಿ ಸಂಬಂಧಃ ॥ – (ವಾ.)

ವಿಕ್ರೀಡ್ಯ ತೇನ ಕರಿಣಾ ಭಗವಾನ್ ಸ ಕಿಂಚಿ-
ದ್ದಸ್ತೇ ಪ್ರಗೃಹ್ಯ ವಿನಿಕೃಷ್ಯ ನಿಪಾತ್ಯ ಭೂಮೌ ।
ಕುಂಭೇ ಪದಂ ಪ್ರತಿನಿಧಾಯ ವಿಷಾಣಯುಗ್ಮ-
ಮುತ್ಕೃಷ್ಯ ಹಸ್ತಿಪಮಹನ್ ನಿಪಪಾತ ಸೋಽಪಿ ॥ ೧೧೪ ॥

ಅ: ಭಗವಂತನಾದ ಕೃಷ್ಣ ಕೆಲಹೊತ್ತು ಆ ಆನೆಯೊಂದಿಗೆ ಆಟವಾಡಿ, ಅದರ ಸೊಂಡಿಲನ್ನು ಹಿಡಿದು, ಎಳೆದು ಭೂಮಿಯ ಮೇಲೆ ಬೀಳಿಸಿ, ಅದರ ಕುಂಭಸ್ಥಳದ ಮೇಲೆ ಕಾಲೂರಿ, ಅದರ ಎರಡೂ ದಂತಗಳನ್ನು ಕಿತ್ತಿ ಮಾವುತನನ್ನು ಹೊಡೆದ; ಅವನು ಸತ್ತುಬಿದ್ದ.

ನಾಗಂ ಸಸಾದಿನಮವಧ್ಯಮಸೌ ನಿಹತ್ಯ
ಸ್ಕಂಧೇ ವಿಷಾಣಮವಸಜ್ಯ ಸಹಾಗ್ರಜೇನ ।
ನಾಗೇಂದ್ರಸಾಂದ್ರಮದಬಿಂದುಭಿರಂಚಿತಾಂಗಃ
ಪೂರ್ಣಾತ್ಮಶಕ್ತಿರಮಲಃ ಪ್ರವಿವೇಶ ರಂಗಮ್[೧] ॥ ೧೧೫ ॥

ಅ: ಅವಧ್ಯವಾಗಿದ್ದ ಆನೆಯನ್ನು ಮಾವುತನ ಸಮೇತ ಸಂಹರಿಸಿ, ಪೂರ್ಣವೂ ಸ್ವಾಭಾವಿಕವೂ ಆದ ಶಕ್ತಿಯನ್ನು ಹೊಂದಿದ ನಿರ್ದೋಷನಾದ ಶ್ರೀಕೃಷ್ಣನು ಅಣ್ಣನೊಂದಿಗೆ ಭುಜದ ಮೇಲೆ ಆನೆಯ ದಂತವನ್ನು ಇರಿಸಿಕೊಂಡು, ಆ ಶ್ರೇಷ್ಠವಾದ ಆನೆಯ ನಿಬಿಡವಾದ ಮದಬಿಂದುಗಳಿಂದ ಶೋಭಿತವಾದ ದೇಹವುಳ್ಳವನಾಗಿ ರಂಗಸ್ಥಳವನ್ನು ಪ್ರವೇಶಿಸಿದ.

ವಿಷ್ಟೇ ಜಗದ್ಗುರುತಮೇ ಬಲವೀರ್ಯಮೂರ್ತೌ
ರಂಗಂ ಮುಮೋದ ಚ ಶುಶೋಷ ಜನೋಽಖಿಲೋಽತ್ರ ।
ಕಂಜಂ[೨] ತಥಾಽಪಿ ಕುಮುದಂ ಚ ಯಥೈವ ಸೂರ್ಯ
ಉದ್ಯತ್ಯಜೇಽನುಭವಿನೋ[೩] ವಿಪರೀತಕಾಶ್ಚ ॥ ೧೧೬ ॥

---

೧. 'ರಂಗಂ ವಿವಿಶತೂ ರಾಜನ್ ಗಜದಂತವರಾಯುಧೌ' ಇತಿ ಭಾಗವತೇ। –(ಜ.)

೨. ಕಂಜಮಪಿ ಕಂಜಂ ಚ । ತಥಾ ಕುಮುದಂ ಚ ಸೂರ್ಯೇ ಉದ್ಯತಿ ಯಥಾ ತಥೈವಾನುಭವಿನಃ । ಭಗವದನುಕೂಲಜನನವಂತಃ । ಮುಮುದುಃ । ವಿಪರೀತಕಾಃ ಹರಿವಿರುದ್ಧಾಃ ಕುತ್ಸಿತಾಃ ಶುಶುಷುರಿತಿ ಯೋಗ್ಯಕ್ರಿಯಾವೃತ್ತ್ಯಾಯೋಜನಾ ॥ –(ವಾ.)

೩. .... ಅನುಭವಿನಃ ಅಪರೋಕ್ಷಜ್ಞಾನಿನಃ ಮುಮುದುರಿತ್ಯರ್ಥಃ । .... ವಿಪರೀತಕಾಶ್ಚ ವಿಪರೀತಜ್ಞಾನಿನ ಇತ್ಯರ್ಥಃ। ದ್ವೇಷಿಣ ಇತಿ ಯಾವತ್ ಶುಷ್ಯನ್ತಿತ್ಯರ್ಥಃ ॥ –(ಜ.)

ಅ: ಜಗತ್ತಿಗೆಲ್ಲ ಮುಖ್ಯಗುರುವಾದ ಬಲವೀರ್ಯಗಳ ಮೂರ್ತಿಯಾದ ಶ್ರೀಕೃಷ್ಣನು ರಂಗಸ್ಥಳವನ್ನು [೧]ಪ್ರವೇಶಿಸುತ್ತಿದ್ದಂತೆ ಸಕಲಜ್ಞಾನಿಜನರೂ ಆನಂದಭರಿತರಾದರು; ಎಲ್ಲ ಅಜ್ಞಾನಿಜನರೂ ಖೇದಗೊಂಡರು — ಸೂರ್ಯ ಉದಿಸುತ್ತಿದ್ದಂತೆಯೇ ಸಕಲಕಮಲಗಳು ಅರಳುವಂತೆ, ಕುಮುದಗಳು ಮುದುಡಿಹೋಗುವಂತೆ.

ವಿ: ೧) ಕೃಷ್ಣನ ಆಗಮನ ಸಜ್ಜನರಿಗೆ ಮುದ ನೀಡಿದಂತೆ, ದುರ್ಜನರಿಗೆ ಖೇದ ಹುಟ್ಟಿಸಿತು. ಒಬ್ಬನ ಆಗಮನದಿಂದ ಹಾಗೆ ವಿಭಿನ್ನಪರಿಣಾಮವಾದದ್ದನ್ನು ಸೂಕ್ತ ನಿದರ್ಶನದೊಂದಿಗೆ ವಿವರಿಸಿರುವರು. ಒಬ್ಬನೇ ಸೂರ್ಯ ಉದಿಸಿದಾಗ ಕಮಲಗಳು ಅರಳಿದರೆ, ನೈದಿಲೆಗಳು ಮುದುಡುವುವು. ಅದರಂತೆ ಚಂದ್ರೋದಯವಾದಾಗ ನೈದಿಲೆ ಅರಳಿ, ಕಮಲ ಮುದುಡುವುದು. ಅದಕ್ಕೆ ಅವುಗಳ ಸ್ವರೂಪವೇ ಕಾರಣ ಎಂದು ಭಾವ. ಇದರಂತೆ ಭಗವತ್ಕಥಾಶ್ರವಣ ಯೋಗ್ಯರ ಸಂತಸಕ್ಕೆ ಕಾರಣವಾದರೆ, ಅಯೋಗ್ಯರಿಗೆ ದುಃಖಕ್ಕೂ ಕಾರಣವಾಗುವುದು ಎಂದು ತಿಳಿಯಬೇಕು.

ಚಾಣೂರನ ವಧೆ

ರಂಗಂ ಪ್ರವಿಷ್ಟಮಭಿವೀಕ್ಷ್ಯ ಜಗಾದ ಮಲ್ಲಃ
ಕಂಸಪ್ರಿಯಾರ್ಥಮಭಿಭಾಷ್ಯ ಜಗನ್ನಿವಾಸಮ್ ।
ಚಾಣೂರ ಇತ್ಯಭಿಹಿತೋ ಜಗತಾಮವಧ್ಯಃ
ಶಂಭುಪ್ರಸಾದತ ಇದಂ ಶೃಣು ಮಾಧವೇತಿ ॥ ೧೧೭ ॥

ರಾಜ್ಞೈವ ದೈವತಮಿತಿ ಪ್ರವದಂತಿ ವಿಪ್ರಾ
ರಾಜ್ಞಃ ಪ್ರಿಯಂ ಕೃತವತಃ ಪರಮಾ ಹಿ ಸಿದ್ಧಿಃ ।
ಯೋತ್ಸ್ಯೇವ ತೇನ ನೃಪತಿಪ್ರಿಯಕಾಮ್ಯಯಾಽಽವಾಂ
ರಾಮೋಽಭಿಯುಧ್ಯತು ಬಲೀ ಸಹ ಮುಷ್ಟಿಕೇನ ॥ ೧೧೮ ॥

ಅ: ರಂಗದೊಳಗೆ ಪ್ರವೇಶಿಸಿದ ಜಗನ್ನಿವಾಸನಾದ ಶ್ರೀಕೃಷ್ಣನನ್ನು ಕಂಡು, ಶಿವನ ಪ್ರಸಾದದಿಂದ ಜಗತ್ತುಗಳಿಗೆಲ್ಲ ಅವಧ್ಯನಾಗಿದ್ದ ಚಾಣೂರ ಎಂಬ ಹೆಸರಿನ ಮಲ್ಲನು ಕಂಸನ

---

೧. ಮಲ್ಲಾನಾಮಶನಿರ್ನೃಣಾಂ ನರವರಃ ಸ್ತ್ರೀಣಾಂ ಸ್ಮರೋ ಮೂರ್ತಿಮಾನ್
ಗೋಪಾನಾಂ ಸ್ವಜನೋಽಸತಾಂ ಕ್ಷಿತಿಭುಜಾಂ ಶಾಸ್ತಾ ಸ್ವಪಿತ್ರೋಃ ಶಿಶುಃ ।
ಮೃತ್ಯುರ್ಭೋಜಪತೇರ್ವಿರಾಡವಿದುಷಾಂ ತತ್ತ್ವಂ ಪರಂ ಯೋಗಿನಾಂ
ವೃಷ್ಣೀನಾಂ ಪರದೇವತೇತಿ ವಿದಿತೋ ರಂಗಂ ಗತಃ ಸಾಗ್ರಜಃ ॥ – ಭಾಗವತ (೧೦/೪೩/೧೭)

ಪ್ರೀತಿಗೋಸ್ಕರ ಹೀಗೆ ನುಡಿದ : ''ಮಾಧವ! ಇದನ್ನು ಕೇಳು. ವಿಪ್ರರು ರಾಜನೇ ದೈವವೆಂದು ಹೇಳುವರು. ರಾಜನಿಗೆ ಪ್ರಿಯವಾದದ್ದನ್ನು ಮಾಡಿದವನಿಗೆ ಪರಮಸಿದ್ಧಿ ಖಚಿತ. ಆದ್ದರಿಂದ ರಾಜನ ಪ್ರೀತಿಗೋಸ್ಕರ ನಾವಿಬ್ಬರೂ ಹೋರಾಡೋಣ. ಬಲಶಾಲಿಯಾದ ಬಲರಾಮ ಮುಷ್ಟಿಕನೊಂದಿಗೆ ಕಾದಲಿ''.

ವಿ: ಸಾಕ್ಷಾತ್ ಶ್ರೀಕೃಷ್ಣ ಎದುರಿಗೆ ಇರುವಾಗಲೇ 'ವಿಷ್ಣುಪ್ರೀತ್ಯರ್ಥಂ' ಎನ್ನದೇ 'ಕಂಸಪ್ರೀತ್ಯರ್ಥಂ' ಎಂದ ಚಾಣೂರ ಮಹಾಪಾತಕಿ ಎಂಬುದು ಸ್ಪಷ್ಟ.

ಇತ್ಯುಕ್ತ ಆಹ ಭಗವಾನ್ ಪರಿಹಾಸಪೂರ್ವ-
ಮೇವಂ ಭವತ್ವಿತಿ ಸ ತೇನ ತದಾऽಭಿಯಾತಃ ।
ಸಂದರ್ಶ್ಯ ದೈವತಪತಿರ್ಯುಧಿ ಮಲ್ಲಲೀಲಾಂ
ಮೌಹೂರ್ತಿಕೀಮಥ ಪದೋರ್ಜಗೃಹೇ ಸ್ವಶತ್ರುಮ್[೧] ॥ ೧೧೯ ॥

ಅ: ಆವನು ಹೀಗೆನ್ನಲು ಭಗವಂತನಾದ ಕೃಷ್ಣ ಪರಿಹಾಸಪೂರ್ವಕವಾಗಿ ''ಹಾಗೆಯೇ ಆಗಲಿ'' ಎಂದು ಅವನೊಂದಿಗೆ ಕಾದಾಟಕ್ಕಿಳಿದ. ದೇವತೆಗಳ ಒಡೆಯನಾದ ಅವನು ಒಂದು ಮುಹೂರ್ತಕಾಲ ಯುದ್ಧದಲ್ಲಿ ಮಲ್ಲಕ್ರೀಡೆಯನ್ನು ತೋರಿಸಿ, ಬಳಿಕ ತನ್ನ ಶತ್ರುವನ್ನು ಕಾಲುಗಳಲ್ಲಿ ಹಿಡಿದ.

ವಿ: ಒಂದು ಮುಹೂರ್ತವೆಂದರೆ ಎರಡು ಘಳಿಗೆ. ಒಂದು ಘಳಿಗೆ ಎಂದರೆ ೨೪ ನಿಮಿಷ. ಮುಹೂರ್ತವೆಂದರೆ ೪೮ ನಿಮಿಷ. ಆದರೆ ಇಲ್ಲಿ ಸ್ವಲ್ಪಕಾಲ ಮಾತ್ರ ಎಂದಷ್ಟೇ ಗ್ರಹಿಸಬೇಕು.

ಉತ್ಕ್ಷಿಪ್ಯ ತಂ ಗಗನಗಂ ಗಿರಿಸನ್ನಿಕಾಶ-
ಮುದ್ಯಾಮ್ಯ ಚಾಥ ಶತಶಃ ಕುಲಿಶಾಕ್ಷತಾಂಗಮ್ ।
ಆವಿಧ್ಯ ದುರ್ಧರಬಲೋ ಭುವಿ ನಿಷ್ಪಿಪೇಷ
ಚೂರ್ಣೀಕೃತಃ ಸ ನಿಪಪಾತ ಯಥಾ ಗಿರೀಂದ್ರಃ ॥ ೧೨೦ ॥

ಅ: ಯಾರಿಂದಲೂ ಧರಿಸಲಾಗದ ಅಪಾರಬಲದ ಶ್ರೀಕೃಷ್ಣ ವಜ್ರಾಯುಧದಿಂದಲೂ ಸೀಳಲಾಗದ ಅವಯವಗಳುಳ್ಳ ಬೆಟ್ಟದಂತಿದ್ದ ಅವನನ್ನು ಮೇಲೆತ್ತಿ ಗಗನದಲ್ಲಿ ನೂರಾರು

---

೧. ಸ್ವಶತ್ರುಮಿತ್ಯತ್ರ ಸ್ವಸ್ಯ ಶತ್ರುಃ ಸ್ವಶತ್ರುರಿತಿ ನಾರ್ಥಃ । 'ನ ಯಸ್ಯ ವಧ್ಯೋ ನ ಚ ರಕ್ಷಣೀಯೋ ನೋಪೇಕ್ಷಣೀಯಪಕ್ಷಃ' ಇತ್ಯಷ್ಟಮಸ್ಕಂಧೋಕ್ತೇಃ (೮/೫೫/೨೨) । ಕಿಂತು ಸ್ವಸ್ಮಿನ್ ಶತ್ರುತ್ವಬುದ್ಧಿರ್ಯಸ್ಯ ಸ ತಥೇತ್ಯರ್ಥಃ। ಸ್ವೇನ ಸಹಯುದ್ಧ್ಯಂತಮಿತಿ ವಾ ॥ – (ರಾ.)

ಬಾರಿ ತಿರುಗಿಸಿ, ಭೂಮಿಯ ಮೇಲೆ ಅಪ್ಪಳಿಸಿ, ಕಾಲಿನಿಂದ ತುಳಿದು ಹಾಕಿದ. ಅವನು ಪುಡಿಯಾದ ದೊಡ್ಡಬೆಟ್ಟದಂತೆ ಕೆಳಕ್ಕುರುಳಿದ.

ಮುಷ್ಟಿಕನ ವಧೆ

ಕೃಷ್ಣಂ ಚ ತುಷ್ಟುವುರಥೋ ದಿವಿ ದೇವಸಂಘಾ
ಮರ್ತ್ಯಾ ಭುವಿ ಪ್ರವರಮುತ್ತಮಪೂರುಷಾಣಾಮ್ ।
ತದ್ವದ್ಬಲಸ್ಯ ದೃಢಮುಷ್ಟಿನಿಪಿಷ್ಟಮೂರ್ಧಾ
ಭ್ರಷ್ಟಸ್ತದೈವ ನಿಪಪಾತ ಸ ಮುಷ್ಟಿಕೋಽಪಿ ॥ ೧೨೧ ॥

ಅ: ಉತ್ತಮಪುರುಷರಲ್ಲೆಲ್ಲ ಮಿಗಿಲೆನ್ನಿಸಿದ ಕೃಷ್ಣನನ್ನು ಗಗನದಲ್ಲಿ ದೇವತೆಗಳ ಸಮೂಹಗಳೂ, ಭೂಮಿಯಲ್ಲಿ ಮನುಷ್ಯರೂ ಸ್ತುತಿಸತೊಡಗಿದರು. ಬಳಿಕ ಅದರಂತೆ ಬಲರಾಮನ ದೃಢವಾದ ಮುಷ್ಟಿಯಿಂದ ತಲೆ ಪುಡಿಯಾದವನಾಗಿ ಭ್ರಷ್ಟನಾದ ಮುಷ್ಟಿಕನೂ ಸಹ ಹತನಾಗಿ ಬಿದ್ದನು.

ವಿ: ೧) ಬಲರಾಮ ಮುಷ್ಟಿಕನನ್ನು ಮುಷ್ಟಿಯಿಂದ ಕೊಂದ ವಿವರ [೧]ಹರಿವಂಶ ಹಾಗೂ ವಿಷ್ಣುಪುರಾಣಗಳಲ್ಲಿದೆ. ಆದರೆ ಭಾಗವತದಲ್ಲಿ ಬಲರಾಮ ಮುಷ್ಟಿಕನನ್ನು ಕೊಂದಿದ್ದು ಅಂಗೈಹೊಡೆತದಿಂದ ಎಂಬ ಮಾತಿದೆ. ಈ ವಿರೋಧವನ್ನು ಶ್ರೀಸತ್ಯಧರ್ಮತೀರ್ಥರು ತಮ್ಮ ಭಾಗವತಟಿಪ್ಪಣಿಯಲ್ಲಿ 'ಬಲಿನಾ ಅತಲೇನ' ಎಂದು ಪದವಿಭಾಗ ಮಾಡಿ, 'ಅತಲ' ಎಂದರೆ ತಲದಿಂದ ಬೇರೆಯಾದದ್ದು ಎಂದರೆ ಮುಷ್ಟಿ ಎಂದು ಅರ್ಥಮಾಡಿರುವರು.

ಆದರೆ ರುಕ್ಮಿಣೀಶವಿಜಯದಲ್ಲಿ ಮುಷ್ಟಿಕನನ್ನು ಬಲರಾಮ ಕೊಂದಿದ್ದು ಮುಷ್ಟಿಯಿಂದಲ್ಲ, ಅಂಗೈಯಿಂದಲೇ ಎಂದಿದೆ :

ನ ಮೇ ಮುಷ್ಟಿಪ್ರಹಾರಸ್ಯ ಲಕ್ಷೋಽಯಮಿತಿ ಲಕ್ಷಯನ್ ।
ರಾಮಸ್ತಂ ತಲಘಾತೇನ ಜಘಾನಾಪಾರ್ಥನಾಮಕಮ್ ॥ – ರು.ವಿ.(೧೧/೪೯)

---

೧. ತದುಕ್ತಂ ಹರಿವಂಶೇ –

ಮುಷ್ಟಿನೈಕೇನ ತೇಜಸ್ವೀ ಸಾಶನಿಸ್ತನಯಿತ್ನುನಾ ।
ಶಿರಸ್ಯಭ್ಯಹನದ್ವೀರೋ ವಜ್ರೇಣೇವ ಮಹಾಗಿರಮ್ ।
ಸ ಸುನಿಷ್ಪಿಷ್ಟಮಸ್ತಿಷ್ಕೋ ವಿಸ್ರಸ್ತನಯನಾನನಃ ।
ಪಪಾತ ನಿಹತಸ್ತೇನ ..... ।' ಇತಿ ॥ – (ಜ.)

ಸೋಽಪ್ಯೇನಂ ಮುಷ್ಟಿನಾ ಮೂರ್ಧ್ನಿ ವಕ್ಷಸ್ಯಾಹತ್ಯ ಜಾನುನಾ ।
ಪಾತಯಿತ್ವಾ ಧರಾಪೃಷ್ಠೇ ನಿಷ್ಪಿಪೇಷ ಗತಾಯುಷಮ್ – ವಿಷ್ಣುಪುರಾಣ (೫/೨೦/೭೮)

ಮೇಲ್ನೋಟಕ್ಕೆ ಈ ಮಾತುಗಳು ಪರಸ್ಪರ ಹೊಂದಿಕೆಯಾಗುವಂತಿಲ್ಲ. ಆದರೆ ನಿರ್ಣಯದ ಮಾತು ಅತ್ಯಂತಪ್ರಧಾನ. ಅದಕ್ಕನುಗುಣವಾಗಿ ಭಾಗವತ ಹಾಗೂ ರುಕ್ಮಿಣೀಶವಿಜಯಗಳ ಮಾತನ್ನು 'ಮುಷ್ಟಿಯ ತಲಭಾಗದಿಂದ' ಎಂದು ಅರ್ಥಮಾಡಿಕೊಂಡರೆ ಯಾವ ವಿರೋಧವೂ ಇರುವುದಿಲ್ಲ. ಬಲರಾಮನದು ದೃಢಮುಷ್ಟಿಯಾದರೂ, ಅವನು ಹೊಡೆದದ್ದು ಮಾತ್ರ ಅದರ ತಲಭಾಗದಿಂದ ಎಂದು ಭಾವ.

೨) ಚಾಣೂರಮುಷ್ಟಿಕರಲ್ಲಿ ಚಾಣೂರನು ಕರೂಶದೇಶದವನೆಂದೂ ('ಕರೂಷೇಷು ಪ್ರಸೂತೋಽಯಂ ಚಾಣೂರೋ ನಾಮ ನಾಮತಃ' – ಹರಿವಂಶ ೨/೩೦/೨೪), ಮುಷ್ಟಿಕನು ಆಂಧ್ರದೇಶದವನೆಂದೂ ಹರಿವಂಶದಲ್ಲಿದೆ (೨/೩೦/೧೯). ಇದರಿಂದಾಗಿ 'ಚಾಣೂರಾಂಧ್ರ-ನಿಷೂದನಃ' ಎಂಬ ಕೃಷ್ಣಷ್ಟೋತ್ತರಶತನಾಮಸ್ತೋತ್ರದ ಮಾತು ಸ್ವರಸವಾಗುವುದು. ಚಾಣೂರ ಹಾಗೂ ಮುಷ್ಟಿಕರನ್ನು ಕೊಂದವನು ಎಂದು ಅದರ ಅರ್ಥ.

ಕೂಟಕೋಸಲಾದಿಗಳ ವಧೆ

ಕೂಟಶ್ಚ ಕೋಸಲ ಉತ ಚ್ಛಲನಾಮಧೇಯೋ
ದ್ವೌ ತತ್ರ ಕೃಷ್ಣನಿಹತಾವಪರೋ ಬಲೇನ ।
ಕಂಸಸ್ಯ ಯೇ ತ್ವವರಜಾಶ್ಚ ಸುನೀಥಮುಖ್ಯಾಃ
ಸರ್ವೇ ಬಲೇನ ನಿಹತಾಃ ಪರಿಘೇಣ ವೀರಾಃ ॥ ೧೨೨ ॥

ಅ: ಬಳಿಕ ಕೂಟ ಮತ್ತು ಕೋಸಲ ಎಂಬ ಇಬ್ಬರು ಕೃಷ್ಣನಿಂದಲೂ, ಛಲ ಎಂಬ ಹೆಸರಿನ ಮತ್ತೊಬ್ಬನು ಬಲರಾಮನಿಂದಲೂ ಹತರಾದರು. ಕಂಸನ ತಮ್ಮಂದಿರಾದ ಸುನೀಥ ಮೊದಲಾದ ವೀರರುಗಳೆಲ್ಲ ಬಲರಾಮನಿಂದ ಪರಿಘಾಯುಧದಿಂದ ಹತರಾದರು.

ವಿ: ಕೂಟಕೋಸಲಾದಿ ಆ ಎಲ್ಲ ಮಲ್ಲರು ಅಸುರರೇ ಎಂಬ ಮಾತು [೧]ವಿಷ್ಣುಪುರಾಣದಲ್ಲಿದೆ.

ಕಂಸನಿಂದ ಸೇನೆಯ ಪ್ರೇಷಣೆ

ತಾಭ್ಯಾಂ ಹತಾನಭಿಸಮೀಕ್ಷ್ಯ ನಿಜಾನ್ ಸಮಸ್ತಾನ್
ಕಂಸೋ ದಿದೇಶ ಬಲಮಕ್ಷಯಮುಗ್ರವೀರ್ಯಮ್ ।
ರುದ್ರಪ್ರಸಾದಕೃತರಕ್ಷಮವಧ್ಯಮೇತೌ
ನಿಃಸಾರ್ಯ ದಂಡಮಧಿಕಂ ಕುರುತೇತಿ ಪಾಪಃ ॥ ೧೨೩ ॥

---

೧. ದೈತೇಯಮಲ್ಲಾಶ್ಚಾಣೂರಪ್ರಮುಖಾಸ್ತ್ವತಿದಾರುಣಾಃ। – ವಿಷ್ಣುಪುರಾಣ (೫/೨೦/೬೧)

ಅ: ಅವರಿಬ್ಬರಿಂದ ತನ್ನವರೆಲ್ಲ ಹತರಾದದ್ದನ್ನು ಕಂಡು ಪಾಪಿಯಾದ ಕಂಸ ನಾಶವಿಲ್ಲದ ಉಗ್ರವೀರ್ಯದಿಂದ ಕೂಡಿದ, ರುದ್ರದೇವರ ಅನುಗ್ರಹದಿಂದ ರಕ್ಷಣೆಹೊಂದಿ ಅವಧ್ಯ ಎನ್ನಿಸಿದ್ದ ಸೇನೆಯನ್ನು, ''ಇವರಿಬ್ಬರನ್ನು ಹೊರಗೆ ಹಾಕಿ ಬಹಳವಾಗಿ ಶಿಕ್ಷಿಸಿರಿ'' ಎಂದು ಆದೇಶ ನೀಡಿ ಕಳುಹಿಸಿದ.

ಶ್ರುತ್ವೈವ ರಾಜವಚನಂ ಬಲಮಕ್ಷಯಂ ತ-
ದಕ್ಷೌಹಿಣೀದಶಕಯುಗ್ಮಮನಂತವೀರ್ಯಮ್ ।
ಕೃಷ್ಣಂ ಚಕಾರ ವಿವಿಧಾಸ್ತ್ರಧರಂ ಸ್ವಕೋಷ್ಠೇ[೧]
ಸಿಂಹಂ ಯಥಾऽಖಿಲಸೃಗಾಲಬಲಂ ಸಮೇತಮ್ ॥ ೧೨೪ ॥

ಅ: ರಾಜಾಜ್ಞೆಯನ್ನು ಕೇಳುತ್ತಲೇ ನಾಶವಿಲ್ಲದ ಆ ಇಪ್ಪತ್ತೊಂದು ಅಕ್ಷೌಹಿಣೀಸೇನೆ ವಿವಿಧ ಅಸ್ತ್ರಗಳನ್ನು ಧರಿಸಿ, ಅನಂತಶಕ್ತಿಯನ್ನು ಹೊಂದಿದ ಕೃಷ್ಣನನ್ನು ಸುತ್ತುಗಟ್ಟಿ ನಿಂತಿತು — ಎಲ್ಲ ನರಿಗಳ ಸೇನೆ ಸಿಂಹವನ್ನು ತಮ್ಮ ಮಧ್ಯೆ ಇರಿಸಿಕೊಂಡಂತೆ.

ಇಂದ್ರನಿಂದ ರಥಸಮರ್ಪಣೆ

ಜಾನನ್ನಪೀಶ್ವರಮನಂತಬಲಂ ಮಹೇಂದ್ರಃ
ಕೃಷ್ಣಂ ರಥಂ ನಿಜಮಯಾಪಯದಾಯುಧಾಢ್ಯಮ್ ।
ಶುಶ್ರೂಷಣಾಯ ಪರಮಸ್ಯ ಯಥಾ ಸಮುದ್ರ-
ಮರ್ಘ್ಯೇಣ ಪೂರಯತಿ ಪೂರ್ಣಜಲಂ ಜನೋऽಯಮ್ ॥ ೧೨೫ ॥

ಅ: ಶ್ರೀಕೃಷ್ಣನು ಅನಂತಬಲದ ಸರ್ವೇಶ್ವರ ಎಂದು ತಿಳಿದಿದ್ದರೂ ಸಹ ಮಹೇಂದ್ರ ಆಯುಧಗಳಿಂದ ತುಂಬಿದ ತನ್ನ ರಥವನ್ನು ಸರ್ವೋತ್ತಮನಾದ ಅವನಿಗೆ ಸೇವೆ ಸಲ್ಲಿಸಲೆಂದು ಕಳುಹಿಸಿಕೊಟ್ಟ - ಜಲ ತುಂಬಿದ ಸಮುದ್ರವನ್ನು ಜನ ಅರ್ಘ್ಯದಿಂದ ತುಂಬಿಸುವಂತೆ.

ವಿ: ೧) ಆ ವೇಳೆಗೆ ಶ್ರೀಕೃಷ್ಣನ ಸೇವೆಗೆಂದು ಇಂದ್ರ ತನ್ನ ರಥವನ್ನು ಕಳುಹಿಸಿದ. ಇಂದ್ರನಿಗೆ ಕೃಷ್ಣ ಭಗವಂತನೆಂದು ತಿಳಿದಿದ್ದರಿಂದ ಅವನು ಹಾಗೆ ಕಳುಹಿಸಿದ್ದು ಸೇವೆಗೆಂದೇ ಹೊರತು ಸಹಾಯಕ್ಕೆಂದಲ್ಲ. ಸಮುದ್ರಕ್ಕೆ ಜನ ಅರ್ಘ್ಯ ನೀಡುವುದು ತಮ್ಮ ಭಕ್ತಿಯ ಸಂಕೇತವಾಗಿಯೇ ಹೊರತು ಸಮುದ್ರವನ್ನು ನೀರಿನಿಂದ ತುಂಬುವ ಹುಂಬತನದಿಂದಲ್ಲವಷ್ಟೆ! ಇದರಂತೆ ಸಕಲರೂ

---

೧. ಸ್ವಕೋಷ್ಠೇ = ಸ್ವಮಧ್ಯೇ ॥ – (ವಾ.)

ಭಗವಂತನಿಗೆ ಸಲ್ಲಿಸುವ ಅರ್ಘ್ಯಪಾದ್ಯಾದ್ಯುಪಚಾರಗಳೆಲ್ಲ ಸೇವೆಯೇ ಹೊರತು, ಭಗವಂತನಿಗೆ ಅವುಗಳಿಂದ ಏನೂ ಆಗಬೇಕಾದ್ದಿಲ್ಲ ಎಂಬ ತತ್ತ್ವಾರ್ಥ ಧ್ವನಿತವಾಗಿದೆ — 'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೊ। ಹರಿಯ ಕರುಣದೊಳಾದ ಭಾಗ್ಯವ ಹರಿಸಮರ್ಪಣೆ ಮಾಡಿ ಬದುಕಿರೊ'.

೨) ಇದೇ ರೀತಿ ಇಂದ್ರ ರಾವಣಸಂಹಾರಕಾಲದಲ್ಲಿ ತನ್ನ ಸೇವೆಯಾಗಿ ಶ್ರೀರಾಮದೇವರಿಗೆ ರಥ ಕಳುಹಿಸಿಕೊಟ್ಟಿದ್ದವಿವರ ಈಗಾಗಲೇ ಬಂದಿದೆ(ಅಧ್ಯಾಯ ೮, ಶ್ಲೋ. ೨೦೭).

ಕೃಷ್ಣನಿಂದ ಕಂಸಸೇನೆಯ ವಿನಾಶ

ಸ್ವಸ್ಯಂದನಂ ತು ಭಗವಾನ್ ಸ ಮಹೇಂದ್ರದತ್ತ-
ಮಾರುಹ್ಯ ಸೂತವರಮಾತಲಿಸಂಗೃಹೀತಮ್ ।
ನಾನಾಯುಧೋಗ್ರಕಿರಣಸ್ತರಣಿರ್ಯಥೈವ
ಧ್ವಾಂತಂ ವ್ಯನಾಶಯದಶೇಷತ ಆಶು ಸೈನ್ಯಮ್ ॥ ೧೨೬ ॥

ಅ: ಮಹೇಂದ್ರದತ್ತವಾದ, ಮಾತಲಿಯಿಂದ ನಡೆಸಲ್ಪಡುತ್ತಿದ್ದ ತನ್ನದೇ ಆದ ಆ ರಥವನ್ನು ಏರಿ, ಭಗವಂತನಾದ ಕೃಷ್ಣ ಬಗೆಬಗೆಯ ಆಯುಧಗಳೆಂಬ ಉಗ್ರಕಿರಣಗಳಿಂದ ಕೂಡಿದ ಸೂರ್ಯನು ಕತ್ತಲೆಯನ್ನು ಹೇಗೋ, ಹಾಗೆ ಅವನ ಸೈನ್ಯವನ್ನೆಲ್ಲ ಸಂಪೂರ್ಣವಾಗಿ ನಾಶಗೊಳಿಸಿದ.

ವಿ: ೧) ಇಂದ್ರ ಕಳುಹಿಸಿದ್ದ ಆ ರಥ ಮೂಲತಃ ಭಗವಂತನದೇ. ಜಗತ್ತಿನಲ್ಲಿ ಎಲ್ಲವೂ ಭಗವಂತನಿಗೆ ಸೇರಿದ್ದೇ ಅಲ್ಲವೆ! – **'ಈಶಾವಾಸ್ಯಮಿದಂ ಸರ್ವಮ್'**.

೨) ಒಬ್ಬನೇ ಸೂರ್ಯನು ಸಮಸ್ತಕತ್ತಲೆಯನ್ನು ತನ್ನ ಕಿರಣಗಳಿಂದ ನಾಶಪಡಿಸುವಂತೆ, ಶ್ರೀಕೃಷ್ಣ ಕಂಸನ ಕತ್ತಲೆಯಂತಹ ಆ ಸಮಸ್ತಸೈನ್ಯವನ್ನು ಆಗಲೇ ನಾಶಪಡಿಸಿದ ಎಂದು ಭಾವ.

ಕಂಸವಧೆ

ನಿಃಶೇಷತೋ ವಿನಿಹತೇ ಸ್ವಬಲೇ ಸ ಕಂಸ-
ಶ್ಚರ್ಮಾಸಿಪಾಣಿರಭಿಯಾತುಮಿಯೇಷ ಕೃಷ್ಣಮ್ ।
ತಾವತ್ ತಮೇವ ಭಗವಂತಮಭಿಪ್ರಯಾಂತ-
ಮುತ್ತುಂಗಮಂಚಶಿರಸಿ ಪ್ರದದರ್ಶ ವೀರಮ್ ॥ ೧೨೭ ॥

ಅ: ತನ್ನ ಸೈನ್ಯವೆಲ್ಲ ಸಂಪೂರ್ಣವಾಗಿ ಹತವಾಗಿ ಹೋಗಲು, ಕಂಸ ಖಡ್ಗಗುರಾಣಿಗಳನ್ನು ಕೈಯಲ್ಲಿ ಹಿಡಿದು ಕೃಷ್ಣನನ್ನು ಎದುರಿಸಲು ಬಯಸಿದ. ಅಷ್ಟರಲ್ಲಿ ತನ್ನ ಮೇಲೆರಗಲು ವೀರನಾದ ಭಗವಂತನೇ ಆ ಉನ್ನತವಾದ ಆಸನದ ಮೇಲೆ ಧಾವಿಸಿರುವುದನ್ನು ಕಂಡ.

ತಂ ಶ್ಯೇನವೇಗಮಭಿತಃ ಪ್ರತಿಸಂಚರಂತಂ
ನಿಶ್ಚಿದ್ರಮಾಶು ಜಗೃಹೇ ಭಗವಾನ್ ಪ್ರಸಹ್ಯ ।
ಕೇಶೇಷು ಚೈನಮಭಿಮೃಶ್ಯ ಕರೇಣ ವಾಮೇ-
ನೋದ್ಧೃತ್ಯ ದಕ್ಷಿಣಕರೇಣ ಜಘಾನ ಕೇ[೧]ಽಸ್ಯ ॥ ೧೨೮ ॥

ಅ: ಗಿಡುಗನ ವೇಗದಿಂದ ಸುತ್ತಲೂ ಅವಕಾಶ ನೀಡದೆ ಸಂಚರಿಸುತ್ತಿದ್ದ ಭಗವಂತನಾದ ಕೃಷ್ಣ ಬೇಗನೆ ಬಲಾತ್ಕಾರದಿಂದ ಅವನನ್ನು ಸೆಳೆದು ಕೈಯಲ್ಲಿ ಹಿಡಿದ. ಅವನ ತಲೆಗೂದಲುಗಳನ್ನೆಲ್ಲ ಎಡಗೈಯಿಂದ ಒಟ್ಟಾಗಿ ಹಿಡಿದು, ಬಲಗೈಯಿಂದ ಅವನ ತಲೆಗೆ ಹೊಡೆದ.

ಸಂಚಾಲಿತೇನ ಮಕುಟೇನ ವಿಕುಂಡಲೇನ
ಕರ್ಣದ್ವಯೇನ ವಿಗತಾಭರಣೋರಸಾ ಚ ।
ಸ್ರಸ್ತಾಂಬರೇಣ ಜಘನೇನ ಸುಶೋಚ್ಯರೂಪಃ
ಕಂಸೋ ಬಭೂವ ನರಸಿಂಹಕರಾಗ್ರಸಂಸ್ಥಃ[೨] ॥ ೧೨೯ ॥

ಅ: ಕೃಷ್ಣನ ಹೊಡೆತಕ್ಕೆ ಕಂಸನ ಕಿರೀಟ ಜಾರಿತು; ಕಿವಿಗಳ ಕುಂಡಲಗಳು ಕಳಚಿಬಿದ್ದವು; ಎದೆಯ ಆಭರಣಗಳು ನೆಲಕಚ್ಚಿದವು; ಉಟ್ಟ ಬಟ್ಟೆ ಸೊಂಟದಿಂದ ಜಾರಿತು. ನರಸಿಂಹನಾದ ಕೃಷ್ಣನ ಕೈಯಲ್ಲಿ ಸಿಲುಕಿದ ಕಂಸನ ಪಾಡು ಅತ್ಯಂತಶೋಚನೀಯವಾಯಿತು.

ವಿ: ೧) ನರಸಿಂಹ ಎಂಬ ಪದಕ್ಕೆ ಪುರುಷೋತ್ತಮ ಎಂದು ಅರ್ಥ. ಈ ಪದದಿಂದ ಕೃಷ್ಣನನ್ನು ಸಾಕ್ಷಾತ್ ನರಸಿಂಹನೆಂದೂ, ಅವನ ಕೈಗೆ ಸಿಲುಕಿದ ಕಂಸನ ಸ್ಥಿತಿ ನರಸಿಂಹನ ಕೈಗೆ ಸಿಲುಕಿದ ಹಿರಣ್ಯಕಶಿಪುವಿನ ಪಾಡಿನಂತಾಯಿತು ಎಂದೂ ತಿಳಿಯುವುದು.

---

೧. ಕೇ = ಶಿರಸಿ ಜಘಾನ ॥ – (ವಾ.)

೨. ನರಸಿಂಹಕರಾಗ್ರಸಂಸ್ಥಃ ಹಿರಣ್ಯಕಶಿಪುಃ ಯಥಾ ಸುಶೋಚ್ಯರೂಪೋ ಬಭೂವ ತಥಾ ಕಂಸೋ ಬಭೂವೇತಿ ಲುಪ್ತೋಪಮೇಯಮಿತಿ ವಾ । – (ಜ.)

ಉತ್ಕೃಷ್ಯ ತಂ ಸುರಪತಿಃ ಪರಮೋಚ್ಚಮಂಚಾ-
ದನ್ಯೈರಜೇಯಮತಿವೀರ್ಯಬಲೋಪಪನ್ನಮ್ ।
ಅಬ್ಜೋದ್ಭವೇಶವರಗುಪ್ತಮನಂತಶಕ್ತಿ-
ರ್ಭೂಮೌ ನಿಪಾತ್ಯ ಸ ದದೌ ಪದಯೋಃ ಪ್ರಹಾರಮ್ ॥ ೧೩೦ ॥

ಅ: ಸುರಪತಿಯೂ, ಅನಂತಶಕ್ತಿಸಂಪನ್ನನೂ ಆದ ಕೃಷ್ಣ ಅತ್ಯುನ್ನತವಾದ ಮಂಚದಿಂದ ಕಂಸನನ್ನು ಕೆಳಕ್ಕೆ ಸೆಳೆದು, ಇತರರಿಗೆ ಸೋಲದಿದ್ದವನೂ, ಅತ್ಯಂತವೀರ್ಯಬಲಗಳಿಂದ ಕೂಡಿದ್ದವನೂ, ಬ್ರಹ್ಮ, ರುದ್ರವರದಿಂದ ರಕ್ಷಿತನೂ ಆಗಿದ್ದ ಅವನನ್ನು ಭೂಮಿಯ ಮೇಲೆ ಬೀಳಿಸಿ ಎರಡೂ ಪಾದಗಳಿಂದ ಒದ್ದ.

ಕಂಸನಲ್ಲಿ ಜೀವದ್ವಯಾವೇಶ

ದೇಹೇ ತು ಯೋಽಭವದಮುಷ್ಯ ರಮೇಶಬಂಧು-
ರ್ವಾಯುಃ ಸ ಕೃಷ್ಣತನುಮಾಶ್ರಯದನ್ಯಪಾಪಮ್ ।
ದೈತ್ಯಂ ಚಕರ್ಷ ಹರಿರತ್ರ ಶರೀರಸಂಸ್ಥಂ
ಪಶ್ಯತ್ಸು ಕಂಜಜಮುಖೇಷು ಸುರೇಷ್ವನಂತಃ ॥ ೧೩೧ ॥

ಅ: ಅವನ ದೇಹದಲ್ಲಿ ನೆಲೆಸಿದ್ದ ಶ್ರೀಹರಿಯ ಬಂಧುವಾದ ವಾಯುವು ಶ್ರೀಕೃಷ್ಣನ ದೇಹವನ್ನು ಆಶ್ರಯಿಸಿದನು. ಆ ದೇಹದಲ್ಲಿದ್ದ ಪಾಪಿದೈತ್ಯನಾದ ಮತ್ತೊಬ್ಬನನ್ನು ಬ್ರಹ್ಮಾದಿ-ದೇವತೆಗಳು ನೋಡುತ್ತಿದ್ದಂತೆಯೇ ಅನಂತನಾದ ಕೃಷ್ಣ ಸೆಳೆದನು.

ವಿ: ೧) ಕಂಸನು ಪ್ರಧಾನವಾಗಿ ಕಾಲನೇಮಿ ಎಂಬ ಅಸುರ. ಸಾವಿರಮುಖಗಳ ಮಹಾದೈತ್ಯ-ನಾದ ಅವನು ದೇವಾಸುರಸಂಗ್ರಾಮಕಾಲದಲ್ಲಿ ಮಹಾವಿಷ್ಣುವಿನಿಂದ ಹತನಾಗಿದ್ದ. ಅವನು ಕಾಮಾಭಿಮಾನಿ. ಅವನೊಳಗೆ ಭೃಗುಮುನಿಯ ಆವೇಶವೂ ಇದ್ದಿತು('ಕಂಸಾವಿಷ್ಟಃ ಸ್ವಯಂ ಭೃಗುಃ' – ಭಾ.ತಾ. ೭/೧/೩೨). ಅದರಂತೆ ವಾಯುದೇವರ ಆವೇಶವೂ ಇದ್ದಿತು.

೨) 'ಭಯಾತ್ ಕಂಸಃ'(ಭಾಗವತ ೭/೧/೩೨) ಎಂಬ ಮಾತಿನಲ್ಲಿ ಕಂಸ ಭಯದಿಂದ ಮೋಕ್ಷ ಪಡೆದ ಎಂಬುದಾಗಿ ಉಕ್ತವಾಗಿದೆ. ಆದರೆ ಮೋಕ್ಷ ಸಿಕ್ಕಿದ್ದು ಕಂಸನೊಳಗಿದ್ದ ಭೃಗುಮುನಿಗೇ ಹೊರತು, ಕಾಲನೇಮಿ ದೈತ್ಯನಿಗಲ್ಲ. ಪೂತನೆಯ ಪ್ರಸಂಗದಲ್ಲಿ ಸ್ವರ್ಗಕ್ಕೆ ತೆರಳಿದ್ದು [೧]ಊರ್ವಶಿಯೇ ಹೊರತು ತಾಟಕೆಯಲ್ಲ. ಅದರಂತೆ ಇಲ್ಲಿಯೂ ಜೀವದ್ವಯಾವೇಶವನ್ನು ತಿಳಿಯಬೇಕು.

೩) ಇಲ್ಲಿ [೨]'ರಮೇಶಬಂಧುಃ' ಎಂಬ ಪದಕ್ಕೆ 'ಉರುಕ್ರಮಸ್ಯ ಸ ಹಿ ಬಂಧುರಿತ್ಥಾ' ಎಂಬ ಋಗ್ವೇದದ ಮಾತಿನಂತೆ ವಾಯುದೇವರು ಎಂದು ಅರ್ಥ. [೩]ಉಪಲಕ್ಷಣಯಾ ಭಾಗವತ–ತಾತ್ಪರ್ಯದಲ್ಲಿ ಹೇಳಿದಂತೆ ಭೃಗುಮುನಿಯನ್ನೂ ಗ್ರಹಿಸಬೇಕು.

೪) ಭೃಗು ಕಾಲಿನಿಂದ ಹರಿಯ ಎದೆಗೆ ಒದ್ದಿದ್ದರೆ, ಆ ಭೃಗುವಿನ ಆವೇಶವಿದ್ದ ಕಂಸನನ್ನು ಕೃಷ್ಣ ಎರಡೂ ಕಾಲಿನಿಂದ ಒದ್ದ ಎಂಬಲ್ಲಿನ ಸ್ವಾರಸ್ಯ ಗಮನಾರ್ಹ.

೫) ಕಂಸ ಆಯುಧದ ಪೆಟ್ಟಿನಿಂದ ಸಾಯದೆ ಇದ್ದದ್ದರಿಂದ ಅವನಿಗೆ ವೀರರಿಗೆ ದೊರಕುವ ಸ್ವರ್ಗವೂ ದೊರೆಯಲಿಲ್ಲ ಎಂಬ ಮಾತು ಹರಿವಂಶದಲ್ಲಿದೆ :

ಅಸಂಗ್ರಾಮಹತಃ ಕಂಸಃ ಸ ಬಾಣೈರಪರಿಕ್ಷತಃ ।
ಕೇಶಗ್ರಾಹಾನ್ನಿರಸ್ತಾಸುರ್ವೀರಮಾರ್ಗಾನ್ನಿರಾಕೃತಃ ॥ – ಹರಿವಂಶ (೨/೩೦/೮೭)

ಈ ಮಾತನ್ನು ಶ್ರೀಸತ್ಯಧರ್ಮತೀರ್ಥರು ತಮ್ಮ ಭಾಗವತಟಿಪ್ಪಣಿಯಲ್ಲಿ ಉಲ್ಲೇಖಿಸಿ **'ಸಮಸಮರಾಕರಣಾತ್ ಅನಾಯುಧಘಾತಾನ್ನ ವೀರಸ್ವರ್ಗಸ್ತಸ್ಯೇತಿ ಮಂತವ್ಯಮ್'** ಎಂದು ಬರೆದಿರುವರು.

ಕಂಸಾದಿಗಳಿಗೆ ಅಂಧಂತಮಸ್ಸು

ದ್ವೇಷಾತ್ ಸ ಸರ್ವಜಗದೇಕಗುರೋಃ ಸ್ವಕೀಯೈಃ
ಪೂರ್ವಂ ಪ್ರಮಾಪಿತಜನೈಃ ಸಹಿತಃ ಸಮಸ್ತೈಃ ।
ಧಾತ್ರ್ಯಾದಿಭಿಃ ಪ್ರತಿಯಯೌ ಕುಮತಿಸ್ತಮೋಽಂಧ–
ಮನ್ಯೇಽಪಿ ಚೈವಮುಪಯಾಂತಿ ಹರಾವಭಕ್ತಾಃ ॥ ೧೩೨ ॥

ಅ: ಸರ್ವಜಗತ್ತಿನ ಮುಖ್ಯಗುರುವಾದ ಶ್ರೀಹರಿಯ ಮೇಲಿನ ದ್ವೇಷದಿಂದಾಗಿ ದುರ್ಬುದ್ಧಿಯವನಾದ ಆ ಕಂಸ ಆ ಮೊದಲೇ ಹತರಾಗಿದ್ದ ಪೂತನೆ ಮೊದಲಾದಂತಹ ಸಮಸ್ತ

---

೧. 'ಪೌಂಡ್ರಕೇ ನರಕೇ ಚೈವ ಸಾಲ್ವೇ ಕಂಸೇ ಚ ರುಗ್ಮಿಣಿ ।
ಆವಿಷ್ಟಾಸ್ತು ಹರೇರ್ಭಕ್ತಾಸ್ತದ್ಭಕ್ತ್ಯಾ ಹರಿಮಾಪಿರೇ ।
ಅಸುರಾಸ್ತು ಸ್ವಯಂ ತೇ ತು ಮಹಾತಮಸಿ ಪಾತಿತಾಃ' ಇತಿ ಚ । - ಭಾ. ತಾ. (೭/೧೦/೪೦)

೨. ಯದ್ವಾ ರಮಾ ಜಾಯಾ ತಸ್ಯಾ ಈಶಃ ಭರ್ತಾ ಸಂಕರ್ಷಣಃ ತಸ್ಯ ಬಂಧುಃ ಪುತ್ರ ಇತ್ಯರ್ಥಃ । – (ಜ.)

ಕಂಸದೇಹಾವಿಷ್ಟಸ್ಯ ಭೃಗೋರುಪಲಕ್ಷಣಮೇತತ್ । ಪ್ರಾಧಾನ್ಯಾದ್ವಾಯುಗ್ರಹಣಮತ ಏವ ರಮೇಶಬಂಧುರಿತ್ಯುಕ್ತಮ್ ॥ – (ವ.)

೩. ದೇಹೇತಿ । ವಾಯುರಿತ್ಯುಪಲಕ್ಷಣಂ । ಭೃಗುರಿತ್ಯಪಿ ದ್ರಷ್ಟವ್ಯಮ್ । – (ತಾ.)

ತನ್ನ ಜನಗಳೊಂದಿಗೆ ಕೂಡಿ, ಅಂಧಂತಮಸ್ಸಿಗೆ ತೆರಳಿದ; ಇದರಂತೆಯೇ ಹರಿದ್ವೇಷಿಗಳಾದ ಇತರರೆಲ್ಲ ತಮಸ್ಸನ್ನೇ ಹೊಂದುವರು.

ವಿ: ೧) ಕಂಸಾದಿಗಳಿಗೆ ಮಾತ್ರವಲ್ಲದೆ ಹರಿದ್ವೇಷಿಗಳಾದ ಸಮಸ್ತರಿಗೂ ತಮಸ್ಸು ಖಚಿತ ಎಂದು ಭಾವ.

ನಿತ್ಯಾತಿದುಃಖಮನಿವೃತ್ತಿ ಸುಖವ್ಯಪೇತ-
ಮಂಧಂತಮೋ ನಿಯತಮೇತಿ ಹರಾವಭಕ್ತಃ ।
ಭಕ್ತೋಽಪಿ ಕಂಜಜಗಿರೀಶಮುಖೇಷು ಸರ್ವ-
ಧರ್ಮಾರ್ಣವೋಽಪಿ ನಿಖಿಲಾಗಮನಿರ್ಣಯೇನ ॥ ೧೩೩ ॥

ಅ: ಶ್ರೀಹರಿಯಲ್ಲಿ ಭಕ್ತಿ ಇಲ್ಲದವನು ಬ್ರಹ್ಮರುದ್ರಾದಿದೇವತೆಗಳಲ್ಲಿ ಭಕ್ತನಾಗಿದ್ದರೂ, ಸಕಲಧರ್ಮಗಳ ಸಾಗರನಾಗಿದ್ದರೂ, ಸಕಲಶಾಸ್ತ್ರಗಳ ನಿರ್ಣಯದಂತೆ, ಸದಾ ಅತ್ಯಂತದುಃಖ-ದಿಂದ ಕೂಡಿದ, ಮರಳಿ ಹಿಂತಿರುಗಲಾಗದ, ಸುಖಲೇಶವೂ ಇರದ ಅಂಧಂತಮಸ್ಸನ್ನು ಖಚಿತವಾಗಿ ಹೊಂದುವನು.

ವಿ: ೧) ವಿಷ್ಣುಭಕ್ತಿ ಸಜ್ಜನರ ಮುಖ್ಯಲಕ್ಷಣವಾಗಿರುವಂತೆ ವಿಷ್ಣುದ್ವೇಷ ದುರ್ಜನರ ಮುಖ್ಯ-ಲಕ್ಷಣ. ಇತರದೇವತೆಗಳಲ್ಲಿ ಭಕ್ತನಾಗಿದ್ದರೂ, ಹರಿಭಕ್ತನಾಗದಿದ್ದರೆ [೫]ತಮಸ್ಸು ಖಚಿತ. ಅವನು

---

೪. ಪೂರ್ವಂ ಪ್ರಮಾಪಿತಜನ್ಯೇರಿತ್ಯತ್ರ "ಪ್ರಮಾಪಣಂ ನಿಬರ್ಹಣಮ್" ಇತ್ಯಭಿಧಾನಾತ್ । ಪ್ರಮಾಪಿತಾಃ = ವಿನಾಶಿತಾಃ ॥ –(ವಾ.)

'ಅಖಿಲಪ್ರೇರಕೋ ವಿಷ್ಣುರ್ಬ್ರಹ್ಮಾದ್ಯಾಸ್ತದವಾಂತರಾಃ ।
ಅಸುರಾ ಅಶುಭೇಷ್ವೇವ ಕಾಮಾದೇರಭಿಮಾನಿನಃ ॥
ತತ್ರ ಕಾಮಃ ಕಾಲನೇಮಿಃ ಸರ್ವಂ ಧೂಮಮಲೋಲ್ಬವತ್ ।
ಶುಭಮಧ್ಯಾಧಮಜನಂ ಕ್ರಮಾದಾವೃತ್ಯ ತಿಷ್ಠತಿ ॥
ಮಹಾಶನಸ್ಯ ತಸ್ಯೇದಂ ನಾಲಂ ತೇನಾನಲೋಽಗ್ನಿವತ್ ।
ಭುಂಜಾನ ಇಂದ್ರಿಯಾವಿಷ್ಟೋ ಜ್ಞಾನಾಸ್ತ್ರೇಣೈವ ಹನ್ಯತೇ' ಇತಿ ಬ್ರಹ್ಮತರ್ಕೇ । ೩/೩೭-೩೯

೫. ಸರ್ವೋತ್ತಮಂ ಹರಿಂ ಜ್ಞಾತ್ವಾ ಯ ಏವಂ ಭಕ್ತಿಪೂರ್ವಕಮ್ ।
ಜಪಧ್ಯಾನಾದಿಭಿರ್ನಿತ್ಯಂ ಪೂಜಯೇನ್ನಾಸ್ಯ ದುರ್ಲಭಮ್ ॥
ಭಕ್ತಿಂ ಕೃತ್ವಾಽನ್ಯದೇವೇಷು ಬ್ರಹ್ಮರುದ್ರಾದಿಕೇಷ್ವಪಿ ।
ಸರ್ವೋತ್ಕರ್ಷಮವಿಜ್ಞಾಯ ವಿಷ್ಣೋರ್ಯಾತಿ ತಮೋ ಧ್ರುವಮ್ ॥
ನ ಯಜ್ಞಾ ನ ಚ ತೀರ್ಥಾನಿ ನೋಪವಾಸವ್ರತಾನಿ ಚ ।
ದೈವತಾನಿ ಚ ಸರ್ವಾಣಿ ತ್ರಾತುಂ ತಂ ಶಕ್ನುಯುಃ ಕ್ವಚಿತ್ ॥ –ತಂತ್ರಸಾರಸಂಗ್ರಹ (೧/೭೧,೭೨)

ಇತರಧರ್ಮಗಳನ್ನು ಎಷ್ಟೇ ಪರಿಪೂರ್ಣವಾಗಿ ಆಚರಿಸಿದರೂ, ಮುಖ್ಯಧರ್ಮವಾದ ವಿಷ್ಣುಭಕ್ತಿ–ಯನ್ನು ಹೊಂದದ್ದರಿಂದ ಅವನಿಗೆ ತಮಸ್ಸು ನಿಶ್ಚಿತ. ಲೋಕದಲ್ಲಿ ಎಷ್ಟೆಲ್ಲ ಗುಣಗಳಿದ್ದರೂ, ದೇಶದ್ರೋಹಿಯಾದವನಿಗೆ ಶಿಕ್ಷೆ ಹೇಗೆ ಅನಿವಾರ್ಯವೋ ಹಾಗೆ ಎಂದು ಇದರ ಭಾವ :

೨) ಇತರ ನರಕಾದಿಗಳಲ್ಲಿ ಸ್ವಲ್ಪ ಸುಖ ಇದ್ದರೂ ಇದ್ದೀತು. ಆದರೆ ತಮಸ್ಸಿನಲ್ಲಿ ಮಾತ್ರ ಸುಖಲೇಶವೂ[೧] ಇರದು. ಅಲ್ಲಿರುವುದು ದುಃಖಮಾತ್ರ ಎಂಬುದನ್ನು 'ಸುಖವ್ಯಪೇತಂ' ಎಂಬ ಪದದಿಂದ ಸೂಚಿಸಿರುವರು.

ಯೋ ವೇತ್ತಿ ನಿಶ್ಚಿತಮತಿರ್ಹರಿಮಬ್ಜಜೇಶ–
ಪೂರ್ವಾಖಿಲಸ್ಯ ಜಗತಃ ಸಕಲೇऽಪಿ ಕಾಲೇ ।
ಸೃಷ್ಟಿಸ್ಥಿತಿಪ್ರಲಯಮೋಕ್ಷದಮಾತ್ಮತಂತ್ರಂ
ಲಕ್ಷ್ಮ್ಯಾ ಅಪೀಶಮತಿಭಕ್ತ್ಯುತಃ ಸ ಮುಚ್ಯೇತ್ ॥ ೧೩॥

ಅ: ಯಾವನು ದೃಢಬುದ್ಧಿಯಿಂದ ಶ್ರೀಹರಿಯನ್ನು ಬ್ರಹ್ಮರುದ್ರಾದಿಸಮಸ್ತಜಗತ್ತಿಗೂ, ಸಕಲ ಕಾಲದಲ್ಲೂ ಸೃಷ್ಟಿ, ಸ್ಥಿತಿ, ಪ್ರಲಯ, ಮೋಕ್ಷಗಳನ್ನು ನೀಡುವವನೆಂದೂ, ಸ್ವತಂತ್ರನೆಂದೂ, ಮಹಾಲಕ್ಷ್ಮಿಗೂ ಸ್ವಾಮಿಯೆಂದೂ ಅತ್ಯಂತಭಕ್ತಿಯಿಂದ ತಿಳಿಯುವನೊ, ಅವನು ಮುಕ್ತನಾಗುವನು[೨].

ವಿ: ೧) ಹರಿದ್ವೇಷ ಖಚಿತ ತಮಃಸಾಧನವಾಗಿರುವಂತೆ, ಹರಿಭಕ್ತಿ ಖಚಿತಮೋಕ್ಷಸಾಧನ ಎಂಬುದನ್ನು ಇಲ್ಲಿ ವಿವರಿಸಿರುವರು.

---

೧. 'ಗಚ್ಛಂತಿ ಪಾಪಿನಃ ಸರ್ವೇ ನರಕಂ ನಾತ್ರ ಸಂಶಯಃ।
ತತ್ರ ಭುಕ್ತ್ವಾ ಪತಂತ್ಯೇವ ಯೇ ದ್ವಿಷಂತಿ ಜನಾರ್ದನಮ್।
ಮಹಾತಮಸಿ ಮಗ್ನಾನಾಂ ನ ತೇಷಾಮುದ್ಧಿತಿಃ ಕ್ವಚಿತ್।
ಇತರೇಷಾಂ ತು ಪಾಪಾನಾಂ ವ್ಯತ್ಯಾನಂ ವಿದ್ಯತೇऽಪಿ ಚ।
ಸುಖಿಸ್ಯಾನಂತರಂ ದುಃಖಂ ದುಃಖಿಸ್ಯಾನಂತರಂ ಸುಖಮ್।
ಇತಿ ಸರ್ವತ್ರ ನಿಯಮಃ ಪಂಚಕಪ್ಪೇ ತು ತತ್ ಸದಾ' ಇತ್ಯಾದಿ ॥ – ಬ್ರಹ್ಮಸೂತ್ರಭಾಷ್ಯ (೩/೧/೧೫)

'ನ ತಮಃ ಸುಖಾನುವೃತ್ತಂ ಕೇವಲಂ ಹ್ಯೇವಾತ್ರ ದುಃಖಂ ಭವತಿ' ಶ್ರುತಿಃ – ಸೂ.ಭಾ.(೯೩/೧/೧೯)

ತಿರ್ಯಕ್ಷು ನರಕೇ ಚೈವ ಸುಖಲೇಶೋ ವಿಧೀಯತೇ ।
ನಾಂಧೇ ತಮಸಿ ಮಗ್ನಾನಾಂ ಸುಖಲೇಶೋऽಪಿ ಕಶ್ಚನ ॥ಇತಿ ಭವಿಷ್ಯತ್ಪರ್ವಣಿ ॥- ಸೂ. ಭಾ. (೩/೧/೨೦)

೨. 'ಯ ಏತತ್ ಪರತಂತ್ರಂ ತು ಸರ್ವಮೇವ ಹರೇಃ ಸದಾ ।
ವಶಮಿತ್ಯೇವ ಜಾನಾತಿ ಸಂಸಾರಾನ್ಮುಚ್ಯತೇ ಹಿ ಸಃ ॥ – ತತ್ತ್ವವಿವೇಕ(ಶ್ಲೋ.೧೩)

ತಸ್ಮಾದನಂತಗುಣಪೂರ್ಣಮಮುಂ ರಮೇಶಂ
ನಿಶ್ಚಿತ್ಯ ದೋಷರಹಿತಂ ಪರಯೈವ ಭಕ್ತ್ಯಾ ।
ವಿಜ್ಞಾಯ ದೈವತಗಣಾಂಶ್ಚ ಯಥಾಕ್ರಮೇಣ
ಭಕ್ತಾ ಹರೇರಿತಿ ಸದೈವ ಭಜೇತ ಧೀರಃ ॥ ೧೩೫ ॥

ಅ: ಆದ್ದರಿಂದ ರಮಾಪತಿಯಾದ ಶ್ರೀಹರಿಯನ್ನು ಸಕಲಗುಣಪೂರ್ಣನೆಂದೂ, ಸಕಲದೋಷದೂರನೆಂದೂ, ಖಚಿತವಾಗಿ ತಿಳಿದುಕೊಂಡು ಶ್ರೇಷ್ಠವಾದ ಭಕ್ತಿಯಿಂದ ತಿಳಿದು ದೇವತೆಗಳ ಸಮೂಹವನ್ನು ತಾರತಮ್ಯಕ್ರಮದಲ್ಲಿ ಶ್ರಿಹರಿಯ ಭಕ್ತರೆಂದೂ ತಿಳಿದು, ಧೀರನಾಗಿ ಸದಾ ಭಜಿಸಬೇಕು.

ವಿ: ೧) ಹರಿಭಕ್ತಿಯಂತೆ ಹರಿಭಕ್ತರಾದ ಬ್ರಹ್ಮಾದಿದೇವತೆಗಳಲ್ಲೂ ತಾರತಮ್ಯಜ್ಞಾನಪೂರ್ವಕ–ವಾದ ಭಕ್ತಿ ಅತ್ಯಂತ ಆವಶ್ಯಕ ಎಂದು ತಿಳಿಸಿರುವರು.

ನಿಹತ್ಯ ಕಂಸಮೋಜಸಾ ವಿಧಾತೃಶಂಭುಪೂರ್ವಕೈಃ ।
ಸ್ತುತಃ ಪ್ರಸೂನವರ್ಷಿಭಿರ್ಮುಮೋದ ಕೇಶವೋಽಧಿಕಮ್ ॥ ೧೩೬ ॥

ಅ: ತನ್ನ ಸಾಮರ್ಥ್ಯದಿಂದ ಕಂಸನನ್ನು ಕೊಂದ ಕೃಷ್ಣ ಹೂಮಳೆಗರೆದ ಬ್ರಹ್ಮರುದ್ರಾದಿ-ದೇವತೆಗಳಿಂದ ಸ್ತುತನಾಗಿ ಬಹಳವಾಗಿ ಆನಂದಿಸಿದ.

ಸದೈವ ಮೋದರೂಪಿಣೋ ಮುದೋಕ್ತಿರಸ್ಯ[೧] ಲೌಕಿಕೀ ।
ಯಥೋದಯೋ ರವೇರ್ಭವೇತ್ ಸದೋದಿತಸ್ಯ ಲೋಕತಃ ॥ ೧೩೭ ॥

---

೧. ''ಡಾಪಂ ಚೈವ ಹಲಂತಾನಾಮ್'' ಇತಿ ವಚನಾತ್ ಮುದೇವ ಮುದೇತಿ ಜ್ಞೇಯಮ್ ॥ –(ವಾ.)

ಟಾಪಂ ಚೈವ ಹಲಂತಾನಾಂ ಯಥಾ ವಾಚಾ ನಿಶಾ ದಿಶೇತಿ ಹಲಂತಾದಪಿ ಟಾಪ್ ವಿಧಾನಾತ್ ಮುಚ್ಛಬ್ದಸ್ಯ ಟಾಬಂತತ್ವಮಭಿಪ್ರೇತ್ಯಾಯಂ ಪ್ರಯೋಗಃ । ಅಸ್ಯ ಕೃಷ್ಣಸ್ಯ ಮುದಾ ಸಂತೋಷೇಣ ಉಕ್ತಿಃ ವಿಶಿಷ್ಟತ್ವೋಕ್ತಿಃ ಲೌಕಿಕೀತಿ ವಾऽರ್ಥಃ ॥ –(ಜ.)

ಉದಯೋ ಭವೇತ್ ಸದಾऽಭವ್ಯಕ್ತೋऽಪಿ ಸೂರ್ಯ ಇದಾನೀಮುದಿತ ಇತಿ ಯಥಾ ಲೌಕಿಕೋ ವ್ಯವಹಾರಃ ತಥಾ ಮುಮೋದೇತಿ ವ್ಯವಹಾರ ಇತಿ ವಿಭಾವಃ । –(ವ.)

ಮುದೋಕ್ತಿರಿತಿ । ಹಲಂತಾದಪಿ ಟಾಬಂತಂ ಯಥಾ ವಾಚಾನಿಶಾದಿಶೇತಿ । ಲಂತಾದಪಿ ಟಾಶ್ವಿಧಾನಾನ್ಮುಚ್ಛಬ್ದಸ್ಯ ಟಾಬಂತತ್ವಮಭಿಪ್ರೇತ್ಯೈವಂ ಪ್ರಯೋಗಃ । ಮುದೇತಿ ವಿಭಿನ್ನಂ ವಾ ಪದಮ್ । ಮುದಾ ವಿಶಿಷ್ಟತ್ವೇನೋಕ್ತಿರಿತಿ ಯೋಜ್ಯಮ್ । ಲೋಕದೃಷ್ಟ್ಯಪೇಕ್ಷಯಾ ಮುಮೋದೇತ್ಯುಕ್ತಿರಿತಿ ಕುತಃ ಅಸ್ಮದಾದಿವತ್ಸುಖಜನಿರ್ವಾ ಮುಕ್ತಾನಾಮಿವ ಸುಖವ್ಯಕ್ತಿರ್ವಾ ಕಿಂ ನ ಸ್ಯಾದಿತ್ಯತೋ ಸದೈವಮೋದರೂಪಿಣ ಇತ್ಯುಕ್ತಂ ವಿವೃಣ್ವನ್ನಾಹ ಅನಂತೇತಿ । –(ತಾ.)

ಸದಾ ಆನಂದರೂಪನಾದ ಶ್ರೀಹರಿಗೆ ಆನಂದವಾಯಿತೆಂಬ ಮಾತು ಲೋಕದೃಷ್ಟಿಯದು. ಸದಾ ಉದಿಸಿಯೇ ಇರುವ ಸೂರ್ಯನಿಗೆ ಲೋಕದೃಷ್ಟಿಯಿಂದ ಉದಯ ಎಂದು ಹೇಳುವಂತೆ.

ವಿ: ೧) ಶ್ರೀಹರಿಯು ಸದಾ ಆನಂದಪೂರ್ಣ. ಆದರೂ ಇಂತಹ ಕೆಲವು ಪ್ರಸಂಗಗಳಲ್ಲಿ ಅವನನ್ನು ವಿಶೇಷವಾಗಿ ಆನಂದಿಸಿದ ಎಂದು ಹೇಳುವುದು ಲೋಕದ ದೃಷ್ಟಿಯಿಂದ ಮಾತ್ರ. ಇದನ್ನು ದೈನಂದಿನ ದೃಷ್ಟಾಂತದಿಂದ ಶ್ರೀಮದಾಚಾರ್ಯರು ವಿವರಿಸಿರುವರು.

೨) ಸೂರ್ಯ ಎಂದೂ ಹುಟ್ಟುವುದೂ ಇಲ್ಲ; ಮುಳುಗುವುದೂ ಇಲ್ಲ. ಆದರೂ ನಮ್ಮ ಕಣ್ಣಿಗೆ ಕಂಡಾಗ ಅವನನ್ನು ಹುಟ್ಟಿದ ಎಂದು ವ್ಯವಹರಿಸುವಂತೆ, ಶ್ರೀಹರಿಯನ್ನು ಇಂತಹ ಪ್ರಸಂಗಗಳಲ್ಲಿ ವಿಶೇಷವಾಗಿ ಆನಂದಿಸಿದ ಎಂದು ಹೇಳುವುದು ಲೋಕದ ಜನರ ತಿಳುವಳಿಕೆಗೆಂದು ಮಾತ್ರ.

೩) ಶ್ರೀರಾಮ, ಕೃಷ್ಣ ಮೊದಲಾದ ಭಗವದ್ರೂಪಗಳು ಸದಾ ಒಂದೇ ತೆರನಾಗಿದ್ದರೂ, ಅವು ಬೆಳೆದವು ಎಂದು ಹೇಳುವುದು ಲೋಕದೃಷ್ಟಿಯಿಂದ ಹೇಗೋ, ಹಾಗೆ ಎಂದು ಈಗಾಗಲೇ ಹೇಳಿರುವುದನ್ನು ಗಮನಿಸಬೇಕು :

'ನಿತ್ಯಪ್ರವೃದ್ಧಸ್ಯ ಚ ತಸ್ಯ ವೃದ್ಧಿರಪೇಕ್ಷ್ಯ ಲೋಕಸ್ಯ ಹಿ ಮಂದದೃಷ್ಟಿಮ್ ।' (೪/೧)

ಅನಂತಚಿತ್ಸುಖಾರ್ಣವಃ ಸದೋದಿತೈಕ[೧]ರೂಪಕಃ ।
ಸಮಸ್ತದೋಷವರ್ಜಿತೋ ಹರಿರ್ಗುಣಾತ್ಮಕಃ ಸದಾ ॥ ೧೩೮ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಕಂಸವಧೋ ನಾಮ ತ್ರಯೋದಶೋಽಧ್ಯಾಯಃ ॥ ೧೩ ॥

ಅ: ಶ್ರೀಹರಿಯು ಅನಂತಜ್ಞಾನಸುಖಗಳ ಸಮುದ್ರ. ಸದಾ ಉದಿತವೇ ಆಗಿರುವ ಉತ್ತಮಸ್ವರೂಪದವನು. ಸಮಸ್ತದೋಷಗಳಿಂದ ರಹಿತನಾದವನು. ಸದಾ ಗುಣಸ್ವರೂಪನಾದವನು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಕಂಸವಧ'ವೆಂಬ ಹದಿಮೂರನೆಯ ಅಧ್ಯಾಯ ಮುಗಿಯಿತು ॥ ೧೩ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

---

೧. ಸ್ವಾರ್ಥೇ ಕಪ್ರತ್ಯಯಃ । – (ಜ.)

ಅಧ್ಯಾಯ – ೧೪

(ಉದ್ಧವಪ್ರತಿಯಾನಮ್)

(ಕೃಷ್ಣನ ಗುರುಕುಲವಾಸ, ಜರಾಸಂಧನ ಪರಾಭವ, ಪಾಂಡುವಿನ ನಿರ್ಯಾಣ, ಪಾಂಡವರ ಹಸ್ತಿನಾಪುರಗಮನ, ಭೀಮನ ಬಾಲಲೀಲೆ ಇತ್ಯಾದಿ)

ಕಂಸವಧೆಯ ಅನಂತರ

ಕೃಷ್ಣೋ ವಿಮೋಚ್ಯ ಪಿತರಾವಭಿವಂದ್ಯ ಸರ್ವ-
ವಂದ್ಯೋಽಪಿ ರಾಮಸಹಿತಃ ಪ್ರತಿಪಾಲನಾಯ ।
ಧರ್ಮಸ್ಯ[೧] ರಾಜ್ಯಪದವೀಂ ಪ್ರಣಿಧಾಯ ಚೋಗ್ರ-
ಸೇನೇ ದ್ವಿಜತ್ವಮುಪಗಮ್ಯ ಮುಮೋಚ ನಂದಮ್ ॥ ೧ ॥

ಅ: ಶ್ರೀಕೃಷ್ಣ ತಂದೆತಾಯಿಗಳನ್ನು ಬಂಧನದಿಂದ ಬಿಡಿಸಿ, ತಾನು ಸರ್ವವಂದ್ಯನಾದರೂ, ಧರ್ಮದ ಪರಿಪಾಲನೆಗೋಸ್ಕರ ಬಲರಾಮಸಮೇತನಾಗಿ ಅವರಿಗೆ ನಮಸ್ಕರಿಸಿ, ರಾಜ್ಯಪದವಿಯನ್ನು ಉಗ್ರಸೇನನಿಗೆ ನೀಡಿ, ಉಪನಯನವನ್ನು ಹೊಂದಿ, ನಂದನನ್ನು ಬೀಳ್ಕೊಟ್ಟ.

ವಿ: ೧) ಕಂಸವಧೆಯ ಅನಂತರ ವಸುದೇವದೇವಕಿಯರನ್ನು ಶ್ರೀಕೃಷ್ಣ ಬಿಡುಗಡೆ ಮಾಡಿಸಿದ. 'ಮಾತೃದೇವೋ ಭವ ಪಿತೃದೇವೋ ಭವ' ಎಂಬ ಧರ್ಮದ ಪಾಲನೆಗಾಗಿ ಅವರಿಗೆ ನಮಸ್ಕರಿಸಿದ. ಕಂಸನಿಂದ ಪದಚ್ಯುತನಾಗಿದ್ದ ಉಗ್ರಸೇನನಿಗೆ ಮರಳಿ ರಾಜ್ಯವನ್ನು ನೀಡಿದ. ಲೋಕಶಿಕ್ಷಣಕ್ಕೆಂದು ಉಪನಯನಸಂಸ್ಕಾರವನ್ನು ಹೊಂದಿದ. ಸ್ವತಃ ಪರಬ್ರಹ್ಮನಾದ ಅವನಿಗೆ ಎಂತಹ ಬ್ರಹ್ಮೋಪದೇಶ! ಆವರೆಗೂ ಜೊತೆಗಿದ್ದ ನಂದನನ್ನು ವೃಂದಾವನಕ್ಕೆ ಕಳುಹಿಸಿಕೊಟ್ಟ.

೨) ಯಯಾತಿಯ[೨] ಶಾಪದಿಂದಾಗಿ ಯದುವಂಶದವರಿಗೆ ರಾಜ್ಯಪದವಿ ದೊರೆಯುವಂತಿರಲಿಲ್ಲ. ಆದರೂ ಶ್ರೀಕೃಷ್ಣ ಅನುಗ್ರಹಿಸಿದ್ದರಿಂದ ಉಗ್ರಸೇನ ರಾಜನಾಗುವಂತಾಯಿತು ಎಂಬ ವಿಶೇಷಾಂಶ ವಿಷ್ಣುಪುರಾಣದಲ್ಲಿದೆ.

೩) ಧರ್ಮದ ಪಾಲನೆಗಾಗಿ ಎಂಬುದು ವಸುದೇವದೇವಕಿಯರಿಗೆ ನಮಸ್ಕಾರ, ಉಗ್ರಸೇನನಿಗೆ ರಾಜ್ಯಪದವಿ ಹಾಗೂ ಉಪನಯನ – ಈ ಮೂರಕ್ಕೂ ಅನ್ವಯಿಸುವುದು.

---

೧. ಧರ್ಮಸ್ಯ ಪ್ರತಿಪಾಲನಾಯೇತಿ ತ್ರಿಷು ಸಂಬಂಧಃ । – (ಜ.)

೨. ಯಯಾತಿಶಾಪಾದ್ವಂಶೋಽಯಮರಾಜ್ಯಾರ್ಹೋಽಪಿ ಸಾಂಪ್ರತಮ್ ।
ಮಯಿ ಭೃತ್ಯೇ ಸ್ಥಿತೇ ದೇವಾನಾಜ್ಞಾಪಯತು ಕಿಂ ನೃಪೈಃ ॥ – ವಿಷ್ಣುಪುರಾಣ(೫/೨೧/೧೨)

ನಂದನ ವೃಂದಾವನಪಯಣ

ನಂದೋಽಪಿ ಸಾಂತ್ವವಚನೈರನುನೀಯ ಮುಕ್ತಃ
ಕೃಷ್ಣೇನ ತಚ್ಚರಣಪಂಕಜಮಾತ್ಮಸಂಸ್ಥಮ್ ।
ಕೃತ್ವಾ ಜಗಾಮ ಸಹ ಗೋಪಗಣೇನ ಕೃಚ್ಛ್ರಾ-
ದ್ಧ್ಯಾಯನ್ ಜನಾರ್ದನಮುವಾಸ ವನೇ ಸಭಾರ್ಯಃ ॥ ೨ ॥

ಅ: ಸಾಂತ್ವವಚನಗಳಿಂದ ಸಮಾಧಾನಪಡಿಸಿ, ಶ್ರೀಕೃಷ್ಣನಿಂದ ಕಳುಹಿಸಲ್ಪಟ್ಟ ನಂದನು ಅವನ ಪಾದಕಮಲಗಳನ್ನು ತನ್ನ ಹೃದಯದಲ್ಲಿರಿಸಿಕೊಂಡು ಗೋಪರ ಸಮೂಹದೊಂದಿಗೆ ಕಷ್ಟದಿಂದಲೇ ತೆರಳಿದ. ವೃಂದಾವನದಲ್ಲಿ ಶ್ರೀಕೃಷ್ಣನನ್ನು ಧ್ಯಾನಿಸುತ್ತಲೇ ಸಪತ್ನೀಕನಾಗಿ ನೆಲೆಸಿದ.

ವಿ: ೧) ನಂದನಿಗೆ ಶ್ರೀಕೃಷ್ಣನನ್ನು ಬಿಟ್ಟಿರುವ ಪ್ರಸಂಗ ಜೀವನದಲ್ಲಿ ಮೊದಲಬಾರಿಗೆ ಒದಗಿತು. ಅದನ್ನು ಸಹಿಸಲು ಅವನಿಗೆ ಸಹಜವಾಗಿಯೇ ಅಪಾರಶ್ರಮವೆನ್ನಿಸಿತು. ಆದರೂ ಶ್ರೀಕೃಷ್ಣನ ಆದೇಶವನ್ನು ಪಾಲಿಸಿ, ವೃಂದಾವನಕ್ಕೆ ತೆರಳಿ, ಶ್ರೀಕೃಷ್ಣನ ಧ್ಯಾನದಲ್ಲೇ ಜೀವನ ಸಾಗಿಸಿದ ಎಂದು ಭಾವ.

ಕೃಷ್ಣಬಲರಾಮರ ಗುರುಕುಲವಾಸ

ಕೃಷ್ಣೋಽಪ್ಯವಂತಿಪುರವಾಸಿನಮೇತ್ಯ ವಿಪ್ರಂ
ಸಾಂದೀಪನಿಂ ಸಹ ಬಲೇನ ತತೋಽಧ್ಯಗೀಷ್ಟ।
ವೇದಾನ್ ಸಕೃನ್ನಿಗದಿತಾನ್ ನಿಖಿಲಾಶ್ಚ ವಿದ್ಯಾಃ
ಸಂಪೂರ್ಣಸಂವಿದಪಿ ದೈವತಶಿಕ್ಷಣಾಯ ॥ ೩ ॥

ಅ: ಶ್ರೀಕೃಷ್ಣ ಬಲರಾಮಸಮೇತನಾಗಿ ಅವಂತಿಪುರದಲ್ಲಿ ನೆಲೆಸಿದ್ದ ಸಾಂದೀಪನಿ ಎಂಬ ವಿಪ್ರನ ಬಳಿಗೆ ತೆರಳಿ, ಅವನು ಒಮ್ಮೆ ಹೇಳಿದೊಡನೆಯೇ ಸಕಲವೇದಗಳನ್ನೂ, ಸರ್ವವಿದ್ಯೆ-ಗಳನ್ನೂ [೧]ಅಧ್ಯಯನ ಮಾಡಿದ; ತಾನು ಪರಿಪೂರ್ಣಜ್ಞಾನಸಂಪನ್ನನಾದರೂ, ದೇವತೆಗಳಿಗೆ ತಿಳಿಸಿಕೊಡಲೆಂದು ಹಾಗೆ ಅಧ್ಯಯನ ಮಾಡಿದ.

---

೧. ಅಹೋರಾತ್ರೈಶ್ಚತುಃಷಷ್ಟ್ಯಾ ಸಾಂಗಂ ವೇದಮಧೀಯತಾಮ್ ।
ಚತುಷ್ಪಾದೇ ಧನುರ್ವೇದೇ ಶಸ್ತ್ರಗ್ರಾಮಸಸಂಗ್ರಹೇ ।
ಅಚಿರೇಣೈವ ಕಾಲೇನ ಗುರುಸ್ತಾನಧ್ಯಶಿಕ್ಷಯತ್ ॥' ಇತಿ ಹರಿವಂಶೇ । – (ಮ.)

ಎಃ ೧) ಅವಂತಿ ಎಂದರೆ ಇಂದಿನ ಉಜ್ಜಯಿನಿ. ಕೃಷ್ಣ ಅಲ್ಲಿಗೆ ತೆರಳಿ ಅಧ್ಯಯನ ಮಾಡಿದ್ದು ಲೋಕಶಿಕ್ಷಣಕ್ಕಾಗಿ. ಅವನು ಸರ್ವಜ್ಞನಾದ ಪರದೇವತೆಯಲ್ಲವೆ! ಮಧುರೆಯಿಂದ ಉಜ್ಜಯಿನಿಗೆ ತೆರಳಿದ್ದು ಅರ್ಹಗುರುಗಳು ದೂರ ಇದ್ದರೂ, ಅವರ ಬಳಿಗೆ ತೆರಳಿಯೇ ಅಧ್ಯಯನ ಮಾಡಬೇಕೆಂದು ತೋರಿಸಲು. ಬಲರಾಮನೊಂದಿಗೆ ತೆರಳಿದ್ದು ಇತರರಿಗೂ ವಿದ್ಯಾಭ್ಯಾಸದ ಅವಕಾಶವನ್ನು ಕಲ್ಪಿಸಬೇಕೆಂದು ತಿಳಿಸಲು. ಸಾಂದೀಪಿನಿಯ ಬಳಿಗೆ ತೆರಳಿದ್ದು ಜ್ಞಾನದೀಪವನ್ನು ಬೆಳಗಬಲ್ಲ ಗುರುಗಳ ಬಳಿಯೇ ತೆರಳಬೇಕೆಂದು ತಿಳಿಸಲು. ಅಲ್ಲಿ ವೇದಗಳೊಂದಿಗೆ ಇತರವಿದ್ಯೆಗಳನ್ನು ಅಧ್ಯಯನ ಮಾಡಿದ್ದು 'ದ್ವೇ ವಿದ್ಯೇ ವೇದಿತವ್ಯೇ' ಎಂಬ ಉಪನಿಷದ್ವಾಣಿಯನ್ನು ಸೂಚಿಸಲು.

೨) ಸಾಂದೀಪನಿ ಮೂಲತಃ ಕಾಶಿದೇಶದ ವಿಪ್ರ. ಆಗ ಅವಂತಿಯಲ್ಲಿ ನೆಲೆಸಿದ್ದ ಎಂದು ಭಾಗವತ, ಹರಿವಂಶ ಹಾಗೂ [೧]ವಿಷ್ಣುಪುರಾಣಗಳಲ್ಲಿದೆ.

೩) ಕೃಷ್ಣಬಲರಾಮರು ಅಲ್ಲಿ ಅಧ್ಯಯನ ಮಾಡಿದ ವಿದ್ಯೆಯ ವಿವರ [೨]ಭಾಗವತದಲ್ಲಿದೆಃ

೪) ಕೃಷ್ಣರಾಮರು ಅಲ್ಲಿ ೬೪ ದಿವಸಗಳಿದ್ದು [೩]ಚತುಃಷಷ್ಟಿಕಲಾವಿದ್ಯೆಗಳನ್ನು ಕಲಿತರು ಎಂದು ಭಾಗವತ ಹಾಗೂ ವಿಷ್ಣುಪುರಾಣಗಳಲ್ಲಿದೆ :

೫) ಶ್ರೀಕೃಷ್ಣ ಹಾಗೆ ಸಕಲವಿದ್ಯೆಗಳನ್ನೂ ಕಲಿತದ್ದು ಜ್ಞಾನಾರ್ಜನೆ ಆದಷ್ಟು ವ್ಯಾಪಕ–ವಾಗಿರಬೇಕೆಂದು ಸೂಚಿಸಲು ಎಂದೂ ತಿಳಿಯಬೇಕು.

೬) ಇಲ್ಲಿಯ 'ದೈವತಶಿಕ್ಷಣಾಯ' ಎಂಬುದರ ವಿವರಣೆ ಮುಂದಿನ ಶ್ಲೋಕದಲ್ಲಿದೆ.

---

೧. 'ಕಾಶ್ಯಂ ಸಾಂದೀಪನಿಂ ನಾಮ ಹ್ಯವಂತೀಪುರವಾಸಿನಮ್' – ಭಾಗವತ (೧೦/೪೫/೩೧)

೨. ತಯೋರ್ದ್ವಿಜವರಸ್ತುಷ್ಟಃ ಶುದ್ಧಭಾವಾನುವೃತ್ತಿಭಿಃ ।
ಪ್ರೋವಾಚ ವೇದಾನಖಿಲಾನ್ ಸಾಂಗೋಪನಿಷದೋ ಗುರುಃ ॥
ಸರಹಸ್ಯಂ ಧನುರ್ವೇದಂ ಧರ್ಮಾನ್ ನ್ಯಾಯಪಥಾಂಸ್ತಥಾ ।
ತಥಾ ಚಾನ್ವೀಕ್ಷಕೀಂ ವಿದ್ಯಾಂ ರಾಜನೀತಿಂ ಚ ಷಡ್ವಿಧಾಮ್ ॥
ಸರ್ವಂ ನರವರಶ್ರೇಷ್ಠೌ ಸರ್ವವಿದ್ಯಾಪ್ರವರ್ತಕೌ ।
ಸಕೃನ್ನಿಗದಮಾತ್ರೇಣ ತೌ ಸಂಜಗೃಹತುರ್ನೃಪ ॥
ಅಹೋರಾತ್ರೈಶ್ಚತುಃಷಷ್ಟ್ಯಾ ಸಂಯತ್ತೌ ತಾವತೀಃ ಕಲಾಃ ।
ಗುರುದಕ್ಷಿಣಯಾ ऽऽಚಾರ್ಯಂ ಛಂದಯಾಮಾಸತುರ್ನೃಪ ॥ – (ಭಾಗವತ ೧೦/೪೫/೩೩-೩೬)

ಅಹೋರಾತ್ರೈಶ್ಚತುಃಷಷ್ಟ್ಯಾ ಸಂಯತ್ತೌ ತಾವತೀಃ ಕಲಾಃ । – ಭಾಗವತ (೧೦/೪೫/೩೬)

೩. ಸರಹಸ್ಯಂ ಧನುರ್ವೇದಂ ಸಸಂಗ್ರಹಮಧೀಯತಾಮ್ ।
ಅಹೋರಾತ್ರಚತುಃಷಷ್ಟ್ಯಾ ತದದ್ಭುತಮಭೂದ್ದ್ವಿಜ ॥ – ವಿಷ್ಣುಪುರಾಣ (೫/೨೧/೨೧)

೬) ಶ್ರೀಕೃಷ್ಣಬಲರಾಮರಿಗೆ ಅವುಗಳನ್ನು ಕೇಳಲು ೬೪ ದಿವಸಗಳು ಬೇಕಾಯಿತೆಂದಲ್ಲ. ಸಾಂದೀಪಿನಿಗೆ ಅವನ್ನು ಹೇಳಲು ೬೪ ದಿವಸಗಳು ಬೇಕಾಯಿತು ಎಂಬ ವಿಶೇಷಾಂಶವನ್ನು [೧]ರುಕ್ಮಿಣೀಶವಿಜಯದಲ್ಲಿ ತಿಳಿಸಿರುವರು.

೭) ಸರ್ವಜ್ಞನಾದ ಕೃಷ್ಣನಿಗಿರಲಿ, ಶೇಷಾವತಾರನಾದ ಬಲರಾಮನಿಗೂ ಸಾಂದೀಪನಿ ಬಳಿ ಗುರುಕುಲವಾಸ ಬೇಕಿರಲಿಲ್ಲ ಎಂಬ ವಿವರ ಭಾಗವತ ಹಾಗೂ [೨]ವಿಷ್ಣುಪುರಾಣಗಳಲ್ಲಿದೆ :

ಗುರುಕುಲವಾಸದ ಆಂತರ್ಯ

ಧರ್ಮೋ ಹಿ ಸರ್ವವಿದುಷಾಮಪಿ ದೈವತಾನಾಂ
ಪ್ರಾಪ್ತೇ ನರೇಷು ಜನನೇ ನರವತ್ ಪ್ರವೃತ್ತಿಃ ।
ಜ್ಞಾನಾದಿಗೂಹನಮುತಾಧ್ಯಯನಾದಿರತ್ರ
ತಜ್ಜ್ಞಾಪನಾರ್ಥಮವಸದ್ಭಗವಾನ್ ಗುರೌ ಚ ॥ ೪ ॥

ಅ: ದೇವತೆಗಳು ಎಲ್ಲ ಬಲ್ಲವರಾದರೂ, ಮನುಷ್ಯರಲ್ಲಿ ಅವತರಿಸಿದಾಗ, ಮನುಷ್ಯರಂತೆ ನಡೆದುಕೊಳ್ಳುವುದು ತಮ್ಮ ಜ್ಞಾನಾದಿಗಳನ್ನು ವ್ಯಕ್ತಪಡಿಸದಿರುವುದು, ಅಧ್ಯಯನಾದಿಗಳನ್ನು ಮಾಡುವುದು ಧರ್ಮ ಎಂಬುದನ್ನು ತಿಳಿಸುವುದಕ್ಕಾಗಿ ಭಗವಂತನಾದ ಕೃಷ್ಣ ಗುರುಕುಲವಾಸ ಮಾಡಿದ.

ವಿ: ೧) ಬಲರಾಮಕೃಷ್ಣರ ಅಧ್ಯಯನ ಲೋಕಶಿಕ್ಷಣಕ್ಕೆಂದು ಮಾತ್ರ ಎಂದು ವಿಷ್ಣುಪುರಾಣದಲ್ಲಿದೆ.

೨) ಕೃಷ್ಣನು ತಾನು ಸರ್ವಜ್ಞನೂ, ಪರಿಪೂರ್ಣನೂ ಆಗಿದ್ದರೂ, ಲೋಕಶಿಕ್ಷಣಕ್ಕೆಂದು ಕರ್ಮಾದಿಗಳಲ್ಲಿ ತೊಡಗುವ ವಿಚಾರವನ್ನು [೩]ಭಗವದ್ಗೀತೆಯಲ್ಲಿ ತಿಳಿಸಿರುವನು.

---

೧. ಅಥೋ ಚತುಃಷಷ್ಟಿದಿನೈಃ ಸ ತಾವತ್ ಕಲಾಃ ಪ್ರಜಗ್ರಾಹ ಬಲಶ್ಚ ಧೀಮಾನ್ ।
ಗುರೋಸ್ತತೋಽಷ್ಟಲ್ಪದಿನೈರ್ಯದಾಸಾಂ ಸಕೃತ್ ಸಮುಚ್ಚಾರಣಮಷ್ಟಶಕ್ತಮ್ ॥ –ರು.ವಿ. (೧೨/೩೦)

೨. ಪ್ರಭವೌ ಸರ್ವವಿದ್ಯಾನಾಂ ಸರ್ವಜ್ಞೌ ಜಗದೀಶ್ವರೌ ।
ನಾನ್ಯಸಿದ್ಧಾಮಲಜ್ಞಾನಂ ಗೂಹಮಾನಂ ನರೇಹಿತೈಃ ॥
ಅಥೋ ಗುರುಕುಲೇ ವಾಸಮಿಚ್ಛಂತಾವುಪಜಗ್ಮತುಃ ॥ – ಭಾಗವತ (೧೦/೪೫/೩೦,೩೧)

ವಿದಿತಾಖಿಲವಿಜ್ಞಾನೌ ಸರ್ವಜ್ಞಾನಮಯಾವಪಿ ।
ಶಿಷ್ಯಾಚಾರ್ಯಕ್ರಮಂ ವೀರೌ ಖ್ಯಾಪಯಂತೌ ಯದೂತ್ತಮೌ ॥
ತತಃ ಸಾಂದೀಪನಿಂ ಕಾಶ್ಯಮವಂತಿಪುರವಾಸಿನಮ್ ।
ವಿದ್ಯಾರ್ಥಂ ಜಗ್ಮತುರ್ಜಾಲೌ ಕೃತೋಪನಯನಕ್ರಮೌ ॥ – ವಿಷ್ಣುಪುರಾಣ (೫/೨೧/೧೮,೧೯)

೩) ಸ್ವತಃ ಭಗವಂತನಾದ ತಾನು ಹಾಗೆ ನಡೆದುಕೊಳ್ಳುವ ಮೂಲಕ ದೇವತೆಗಳಿಗೂ ಅವರು ಅವತರಿಸಿದಾಗ ಹಾಗೆ ಗುರುಕುಲವಾಸಾದಿಮುಖ್ಯಧರ್ಮಗಳನ್ನು ಪಾಲಿಸಲೇ-ಬೇಕೆಂಬ ಆಚಾರಸಂಹಿತೆಯನ್ನು ತಿಳಿಸಿಕೊಟ್ಟನು ಎಂದು ಭಾವ.

ಶ್ರೀಕೃಷ್ಣನೀಡಿದ ಅಪೂರ್ವಗುರುದಕ್ಷಿಣೆ

ಗುರ್ವರ್ಥಮೇಷ ಮೃತಪುತ್ರಮದಾತ್ ಪುನಶ್ಚ
ರಾಮೇಣ ಸಾರ್ಧಮಗಮನ್ಮಧುರಾಂ ರಮೇಶಃ ।
ಪೌರೈಃ ಸಜಾನಪದಬಂಧುಜನೈರಜಸ್ರ-
ಮಭ್ಯರ್ಚಿತೋ ನ್ಯವಸದಿಷ್ಟಕೃದಾತ್ಮಪಿತ್ರೋಃ ॥ ೫ ॥

ಅ: ರಮಾಪತಿಯಾದ ಶ್ರೀಕೃಷ್ಣ ಗುರುಗಳಿಗೋಸ್ಕರ ಅವನ ಮೃತಪುತ್ರನನ್ನು ಮರಳಿ ಬದುಕಿಸಿಕೊಟ್ಟ. ಮತ್ತೆ ಬಲರಾಮನೊಂದಿಗೆ ಮಧುರೆಗೆ ತೆರಳಿದ. ದೇಶದ ಬಂಧುಜನ-ರೊಂದಿಗೆ ಕೂಡಿದ ಪಟ್ಟಣಿಗರಿಂದ ಸದಾ ವಿಶೇಷವಾಗಿ ಪೂಜಿತನಾಗಿ ಅವನು ತನ್ನ ತಂದೆತಾಯಿಗಳ ಅಭೀಷ್ಟಪೂರೈಸುತ್ತಾ ವಾಸಿಸಿದ.

ವಿ: ೧) ಗುರುಕುಲವಾಸದ ನೆಪವನ್ನು ಪೂರೈಸಿದ ಕೃಷ್ಣ ಗುರುದಕ್ಷಿಣೆ ಸಲ್ಲಿಸಲು ಮುಂದಾದಾಗ ಅವನ ಅಪಾರ ಮಹಿಮೆಯನ್ನು ಕಣ್ಣಾರೆ ಕಂಡಿದ್ದ ಅವರು ಎಂದೋ ಮೃತನಾಗಿದ್ದ ತಮ್ಮ ಪುತ್ರನನ್ನು ಮರಳಿ ಬದುಕಿಸಿಕೊಡಬೇಕೆಂಬ ಅಸಾಮಾನ್ಯವಾದ ದಕ್ಷಿಣೆಯನ್ನೇ ಬಯಸಿದರು. ಕೃಷ್ಣ ಅದರಂತೆ ತೆರಳಿ ಯಮಲೋಕದಲ್ಲಿದ್ದ [೪]ಗುರುಪುತ್ರನನ್ನು ಮರಳಿ ತಂದು ಗುರುದಕ್ಷಿಣೆಯಾಗಿ ನೀಡಿದ.

೨) ಹಾಗೆ ಗುರುದಕ್ಷಿಣೆ ನೀಡುವ ಕಾರ್ಯದಲ್ಲೂ ತಾನು ಜಗಜ್ಜನ್ಮಾದಿಕಾರಣನಾದ ಶ್ರೀಹರಿ ಎಂದು ನಿರೂಪಿಸಿದ.

---

೩. ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ – ಭಗವದ್ಗೀತಾ (೩/೨೧)

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥ – ಭಗವದ್ಗೀತಾ (೩/೨೨)

೪. ಸೋಽಪ್ಯತೀಂದ್ರಿಯಮಾಲೋಕ್ಯ ತಯೋಃ ಕರ್ಮ ಮಹಾಮತಿಃ ।
ಅಯಾಚತ ಮೃತಂ ಪುತ್ರಂ ಪ್ರಭಾಸೇ ಲವಣಾರ್ಣವೇ ॥ – ವಿಷ್ಣುಪುರಾಣ (೫/೨೧/೨೫)

೩) ಶ್ರೀಕೃಷ್ಣಪ್ರಭಾಸದ ಬಳಿ ಸಮುದ್ರದಲ್ಲಿ ಪಂಚಜನನೆಂಬ ಶಂಖರೂಪದ ರಾಕ್ಷಸನಿಂದ ಹತನಾಗಿ ಯಮಪಟ್ಟಣ ಸೇರಿದ್ದ ಗುರುಪುತ್ರನನ್ನು ತರಲು ಹೊರಟ; ಪಂಚಜನರನ್ನು ಸಂಹರಿಸಿ, ಪಾಂಚಜನ್ಯಶಂಖವನ್ನು ಮಾಡಿಕೊಂಡು, ಯಮಪಟ್ಟಣಕ್ಕೆ ತೆರಳಿ, ಆ ಶಂಖಧ್ವನಿಗೇ ಭೀತರಾದ ಯಮದೇವರಿಂದ ಪೂಜಿತನಾದ; ತನ್ನ ಅಪ್ಪಣೆಯಂತೆ ಅವರು ಒಪ್ಪಿಸಿದ ಗುರುಪುತ್ರನನ್ನು ತಂದು ಗುರುಗಳಿಗೆ ನೀಡಿದ. ಇದರ ವಿವರ ಹರಿವಂಶ, ಭಾಗವತ ಹಾಗೂ ವಿಷ್ಣುಪುರಾಣಗಳಲ್ಲಿ ಬಂದಿದೆ.

೪) ಸಾಂದೀಪಿನಿಯ ಬಳಿ ಹಾಗೆ ಶ್ರೀಕೃಷ್ಣ ನೆಲೆಸಿ ಅವರಿಗೆ ತನ್ನ ದರ್ಶನ ಭಾಗ್ಯವನ್ನು ಕರುಣಿಸಿ ದಿವ್ಯಜ್ಞಾನವನ್ನು ನೀಡಿ ಉದ್ಧರಿಸಿದ ಎಂಬುದು ಇಲ್ಲಿಯ ವಿಶೇಷ. ಅವರ ಪುತ್ರನನ್ನು ತಂದು ನೀಡಿದ್ದು ಅವರಿಗೆ ಜ್ಞಾನಪುತ್ರನನ್ನು ಕರುಣಿಸಿದ ಕಾರ್ಯಕ್ಕೆ ಸಂಕೇತದಂತಿತ್ತು.

೫) ದೇವಕಿಯ ಮೃತಪುತ್ರರನ್ನೂ ಹೀಗೆ ತಂದೊಪ್ಪಿಸಿದ ವಿವರ ಭಾಗವತದಲ್ಲಿದೆ.

ಶ್ರೀಕೃಷ್ಣನಿಂದಾಗಿ ಮಥುರೆಯ ವೈಭವ

ಸರ್ವೇಽಪಿ ತೇ ಪತಿಮವಾಪ್ಯ ಹರಿಂ ಪುರಾಽಭಿ-
ತಪ್ತಾ ಹಿ ಭೋಜಪತಿನಾ ಮುಮುದುರ್ನಿತಾಂತಮ್ ।
ಕಿಂ ವಾಚ್ಯಮತ್ರ ಸುತಮಾಪ್ಯ ಹರಿಂ ಸ್ವಪಿತ್ರೋ-
ರ್ಯತ್ಪ್ರಾಖಿಲಸ್ಯ ಸುಜನಸ್ಯ ಬಭೂವ ಮೋದಃ ॥ ೬ ॥

ಅ: ಹಿಂದೆ ಕಂಸನಿಂದ ಬಹಳವಾಗಿ ನೊಂದಿದ್ದ ಮಥುರೆಯ ಜನರೆಲ್ಲ ಶ್ರೀಕೃಷ್ಣನನ್ನು ಸ್ವಾಮಿಯನ್ನಾಗಿ ಹೊಂದಿ, ಬಹಳವಾಗಿ ಸಂತೋಷಿಸಿದರು. ಹೀಗೆ ಸಕಲಸಜ್ಜನರಿಗೂ ಅಂತಹ ಆನಂದ ಉಂಟಾದಾಗ ಅಂತಹ ಹರಿಯನ್ನೇ ಮಗನನ್ನಾಗಿ ಪಡೆದ ಆ ತಂದೆತಾಯಿಗಳ ಆನಂದವನ್ನು ಏನೆಂದು ಹೇಳುವುದು!

ವಿ: ೧) ರಾಮರಾಜ್ಯದಲ್ಲಿ ಜನತೆಗಾದ ಅನುಭವ ಕೃಷ್ಣಪಾಲಿತವಾದ ಈ ರಾಜ್ಯದ ಜನತೆಗೂ ಲಭಿಸಿತೆಂದು ಭಾವ.

ಕೃಷ್ಣಾಶ್ರಯೋ ವಸತಿ ಯತ್ರ ಜನೋಽಪಿ ತತ್ರ
ವೃದ್ಧಿರ್ಭವೇತ್ ಕಿಮು ರಮಾಧಿಪತೇರ್ನಿವಾಸೇ ।
ವೃಂದಾವನಂ ಯದಧಿವಾಸತ ಆಸ ಸಂಧ್ಯಜ್
ಮಾಹೇಂದ್ರಸದ್ಮಸದೃಶಂ ಕಿಮು ತತ್ರ ಪುರ್ಯಾಮ್ ॥ ೭ ॥

ಶ್ರೀಕೃಷ್ಣನನ್ನು ಆಶ್ರಯಿಸಿದ ಜನ ನೆಲೆಸಿರುವಲ್ಲಿಯೇ ಸಮೃದ್ಧಿಯು ಒದಗುವಾಗ ಇನ್ನು ರಮಾಪತಿಯಾದ ಆ ಕೃಷ್ಣನ ವಾಸಸ್ಥಾನದಲ್ಲಿ ಹೇಳುವುದಿನ್ನೇನು! ಅವನು ನೆಲೆಸಿದ್ದರಿಂದಾಗಿ ವೃಂದಾವನದಂತಹ ವನವೇ ಇಂದ್ರಪುರಿಯಂತೆ ವಿಶೇಷವಾಗಿ ಕಂಗೊಳಿಸಿದಾಗ ಆ ಪಟ್ಟಣದಲ್ಲಿನ್ನು ಹೇಳುವುದೇನಿದೆ?

ವಿ: ೧) ಶ್ರೀಕೃಷ್ಣಭಕ್ತ ನೆಲೆಸಿದ ಸ್ಥಳವೇ ಸಮೃದ್ಧಿಭರಿತವಾಗುವಾಗ, ಸಾಕ್ಷಾತ್ ಶ್ರೀಕೃಷ್ಣ ನೆಲೆಸಿದ ಮಧುರೆ ಸಮೃದ್ಧವಾದದ್ದರಲ್ಲಿ ಅಚ್ಚರಿಯೇನು? ಕೃಷ್ಣನ ವಾಸದಿಂದಾಗಿ ವೃಂದಾವನ–ದಂತಹ ಕಾಡೇ ನಂದನವನದಂತಾದಾಗ ಮಧುರೆಯಂತಹ ಪುರಿ ಇಂದ್ರಪುರಿಯಂತಾದದ್ದರಲ್ಲಿ ಅಚ್ಚರಿ ಏನು ಎಂದು ಭಾವ.

ಯೇನಾಧಿವಾಸಮೃಷಭೋ ಜಗತಾಂ ವಿಧತ್ತೇ
ವಿಷ್ಣುಸ್ತತೋ ಹಿ ವರತಾ ಸದನೇ ವಿಧಾತುಃ।
ತಸ್ಮಾತ್ ಪ್ರಭೋರ್ನಿವಸನಾನ್ಮಧುರಾ ಪುರೀ ಸಾ
ಶಶ್ವತ್ ಸಮೃದ್ಧಜನಸಂಕುಲಿತಾ ಬಭೂವ ॥ ೮ ॥

ಅ: ಜಗತ್ತಿಗೆಲ್ಲ ಶ್ರೇಷ್ಠನಾದ ವಿಷ್ಣು ನೆಲೆಸಿದ್ದರಿಂದಾಗಿ ತಾನೆ ಬ್ರಹ್ಮಲೋಕಕ್ಕೆ ಸರ್ವಶ್ರೇಷ್ಠತೆ ಲಭಿಸಿದೆ! ಆ ಪ್ರಭುವಿನ ವಾಸದಿಂದಾಗಿಯೇ ಆ ಮಧುರಾಪುರಿಯು ಸದಾ ಸಮೃದ್ಧಜನಗಳಿಂದ ತುಂಬಿ ಹೋಯಿತು.

ವಿ: ಬ್ರಹ್ಮಲೋಕ ಹದಿನಾಲ್ಕು ಲೋಕಗಳಿಗೂ ಮಿಗಿಲೆನ್ನಿಸಿದ ಅಪೂರ್ವಲೋಕ. ಅದರ ಆ ಹಿರಿಮೆಗೆ ಕಾರಣ ಸದಾ ಮಹಾವಿಷ್ಣು ನೆಲೆಸಿರುವುದೇ ಆಗಿದೆ. ಆ ವಿಷ್ಣುವೇ ಆದ ಕೃಷ್ಣನ ವಾಸದಿಂದಾಗಿ ಮಧುರೆಯೂ ಸತ್ಯಲೋಕದಂತೆ ಸುಖಸಂತೋಷಗಳಿಂದ ತುಂಬಿದ ಜನತೆಯ ನೆಲೆಯಾಯಿತು ಎಂದರ್ಥ. ಶ್ರೀಹರಿಯ ಸನ್ನಿಧಾನ ಮನೆ ಮೊದಲಾದವುಗಳಲ್ಲಿ ಇದ್ದಾಗ ಅವುಗಳಲ್ಲಿ ಸುಖಶಾಂತಿ ನೆಲೆಸುವುದು ಎಂದು ಭಾವ. ಕೃಷ್ಣ ನೆಲೆಸಿದ್ದರಿಂದಾಗಿ ಅಂತಹ ಸಮೃದ್ಧಿ

---

೧. 'ತತ್ರ ಸನ್ನಿಹಿತಾ ಶ್ರೀಶ್ಚ ಯತ್ರ ಸನ್ನಿಹಿತೋ ಹರಿಃ।
ನಾಸ್ಯ ಸನ್ನಿಧಿಮಾತ್ರೇಣ ರಮಾ ಪತ್ನೀತ್ವಮಾವ್ರಜೇತ್।
ಸಾಕ್ಷಾದೇವ ತು ಸಾಕ್ಷಾಚ್ಚ ಹರೇಃ ಸನ್ನಿಧಿತಃ ಕ್ವಚಿತ್।
ಗೋಪ್ಯಾದಿರೂಪಾ ಭವತಿ ವಿಪರೀತಂ ನ ತು ಕ್ವಚಿತ್' ಇತಿ ಚ ॥ - ಭಾ. ತಾ. (೪/೧೪/೫೦)

೨. ಸದೃಶಂ ಆಸ ತಿಙಂತಪ್ರತಿರೂಪಕಮವ್ಯಯಮೇತತ್। ನ ತು ತಿಙಂತಂ ಪದಂ ಅಸ್ತೇರಾರ್ಧಧಾತುಕೇ ಭೂರಾದೇಶವಿಧಾನಾತ್। – (ಜ.)

ನೆಲೆಸಿದಂತೆ, ಕೃಷ್ಣಶಿಲೆಯಾದ ಸಾಲಿಗ್ರಾಮದಿಂದಾಗಿ ಮನೆಗೆ [೧]ಪಾವಿತ್ರ್ಯಾದಿವೈಭವ ಎಂಬ ತತ್ತ್ವವೂ ಇದರಿಂದ ಸೂಚಿತ.

ಜರಾಸಂಧನಿಂದ ಜರೆಯ ಹತ್ಯೆ

ರಕ್ಷತ್ಯಜೇ ತ್ರಿಜಗತಾಂ ಪರಿರಕ್ಷಕೇಽಸ್ಮಿನ್
ಸರ್ವಾನ್ ಯದೂನ್ ಮಗಧರಾಜಸುತೇ ಸ್ವಭರ್ತುಃ ।
ಕೃಷ್ಣಾನ್ನೃತಿಂ ಪಿತುರವಾಪ್ಯ ಸಮೀಪಮಸ್ತಿ-
ಪ್ರಾಸ್ತೀ ಶಶಂಸತುರತೀವ ಚ ದುಃಖಿತೇಽಸ್ಯೈ ॥ ೯ ॥

ಅ: ಮೂರುಲೋಕಗಳ ರಕ್ಷಕನಾದ ಶ್ರೀಕೃಷ್ಣ ಸಕಲಯಾದವರನ್ನೂ ಹೀಗೆ ರಕ್ಷಿಸುತ್ತಿದ್ದಾಗ ಅಸ್ತಿ ಪ್ರಾಸ್ತಿ ಎಂಬ ಮಗಧದ ದೊರೆಯಾದ ಜರಾಸಂಧನ ಇಬ್ಬರು ಪುತ್ರಿಯರು ಬಹಳ ದುಃಖಪೀಡಿತರಾಗಿ ತಂದೆಯ ಬಳಿಗೆ ತೆರಳಿ, ತಮ್ಮ ಗಂಡನಾದ ಕಂಸ ಕೃಷ್ಣನಿಂದ ಹತನಾದದ್ದನ್ನು ವಿವರಿಸಿದರು.

ವಿ: ಕಂಸನ ಮಡದಿಯರಾದ ಅಸ್ತಿಪ್ರಾಸ್ತಿಯರು ಜರಾಸಂಧನ ಪುತ್ರಿಯರು. ಅವರಿಬ್ಬರೂ ಕಂಸನ ಮರಣವಿಚಾರವನ್ನು ತಿಳಿಸಲೆಂದು ತಂದೆಯ ಬಳಿಗೆ ಹೋಗಿದ್ದು ಗಂಡನ ಮನೆಯನ್ನು ನಾಶಮಾಡಿದ ಅವರು ತಂದೆಯ ಮನೆಯನ್ನೂ ನಾಶಮಾಡುವುದಕ್ಕೆ ಸೂಚನೆಯಾಯಿತು ಎಂಬ ವಿವರಣೆ [೨]ರುಗ್ಮಿಣೀಶವಿಜಯದಲ್ಲಿದೆ.

ಶ್ರುತ್ವೈವ ತನ್ಮಗಧರಾಜ ಉರುಪ್ರರೂಢ-
ಬ್ಭಾಹ್ವೋರ್ಬಲೇನ ನ ಜಿತೋ ಯುಧಿ ಸರ್ವಲೋಕೈಃ ।
ಬ್ರಹ್ಮೇಶಚಂಡಮುನಿದತ್ತವರೈರಜೇಯೋ
ಮೃತ್ಯೂದ್ಯತಶ್ಚ ವಿಜಯೀ ಜಗತಶ್ಚಕೋಪ ॥ ೧೦ ॥

---

೧. ಮ್ಲೇಚ್ಛದೇಶೇಽಶುಚೌ ವಾಽಪಿ ಚಕ್ರಾಂಕೋ ಯತ್ರ ತಿಷ್ಠತಿ ।
ಯೋಜನಾನಿ ತಥಾ ತ್ರೀಣಿ ಮಮ ಕ್ಷೇತ್ರಂ ವಸುಂಧರೇ ॥
ಸಾಲಗ್ರಾಮೋದ್ಭವೋ ದೇವೋ ಶೈಲಂ ಚಕ್ರಾಂಕಮಂಡಿತಮ್ ।
ಯತ್ರಾಪಿ ನೀಯತೇ ತತ್ರ ವಾರಾಣಸ್ಯಾಃ ಶತಾಧಿಕಮ್ ॥ – ಕೃಷ್ಣಾಮೃತಮಹಾರ್ಣವ (೧೦೫,೧೦೬)

೨. ಕಂಸೇ ಬಲೈಃ ಸಹ ಮೃತೇ ಸತಿ ಯಾಽವಶಿಷ್ಟಾ ವಂಶಂ ಸ್ವಮಾತುರಪಿ ತಾದೃಶಮಸ್ತಿನಾಮ್ನೀ ।
ಕೃತ್ವೋಚಿತಂ ವಿದಧತೀವ ನಿಜಾಭಿಧಾನಂ ಪಿತ್ರೇ ನ್ಯವೇದಯದಥಾಚ್ಯುತಕೃತ್ಯಮಾರ್ತಾ ॥ – ಹ.ವಿ. (೧೩/೩೮)

ಅ: ಮಗಧರಾಜನಾದ ಜರಾಸಂಧ ಬಹಳವಾಗಿ ಹೆಚ್ಚಿದ್ದ ಬಾಹುಬಲದಿಂದಾಗಿ ಸಕಲ ಲೋಕಗಳಿಗೂ ಯುದ್ಧದಲ್ಲಿ ಅಜೇಯನಾಗಿದ್ದ. ಬ್ರಹ್ಮ, ರುದ್ರ ಹಾಗೂ ದುರ್ವಾಸ ಮುನಿಗಳು ನೀಡಿದ್ದ ವರಗಳಿಂದಾಗಿ ಪರಾಭವ ಹೊಂದದವನೂ, ಮರಣ ರಹಿತನೂ ಆಗಿದ್ದ. ಜಗತ್ತನ್ನೇ ಜಯಿಸಿದ್ದ; ಅವನು ಅದನ್ನು ಕೇಳುತ್ತಲೇ ಕೆರಳಿದ.

ವಿ: ೧) ಜರಾಸಂಧ ಮಿಥ್ಯಾಜ್ಞಾನಕ್ಕೆ ಅಭಿಮಾನಿಯಾದ ವಿಪ್ರಚಿತ್ತಿ ಎಂಬ ದೈತ್ಯನ ಅವತಾರ ಎಂಬ ವಿವರ ಈಗಾಗಲೇ ಬಂದಿದೆ (ಅಧ್ಯಾಯ ೧೧, ಶ್ಲೋ ೨೦೧). ಅವನಿಗೆ ಬ್ರಹ್ಮ ಹಾಗೂ ರುದ್ರರಿಂದ ಅಜೇಯತ್ವ, ಅವಧ್ಯತ್ವವರಗಳು ಲಭಿಸಿದ್ದವು. ಅದರೊಂದಿಗೆ ಹರಾವತಾರರಾದ ದುರ್ವಾಸರ ವರವೂ ಇದ್ದಿತು; ಹಾಗೆಯೇ ಚಂಡಕೌಶಿಕ ಎಂಬ ಮುನಿಯ ವರವೂ ಸಹ ಇದ್ದ ವಿವರ ಸಭಾಪರ್ವದಲ್ಲಿದೆ. ಆದ್ದರಿಂದ ಇಲ್ಲಿಯ ಚಂಡಮುನಿ ಎಂಬುದಕ್ಕೆ ದುರ್ವಾಸ ಹಾಗೂ ಚಂಡಕೌಶಿಕ ಎಂಬ ಇಬ್ಬರೂ ವಿವಕ್ಷಿತರು ಎಂದು ತಿಳಿಯಬಹುದು.

ಕ್ಷುಬ್ಧೋಽತಿಕೋಪವಶತಃ [೫]ಸ್ವಗದಾಮಮೋಘಾಂ
ದತ್ತಾಂ ಶಿವೇನ ಜಗೃಹೇ ಶಿವಭಕ್ತವಂದ್ಯಃ।
ಶೈವಾಗಮಾಖಿಲವಿದತ್ರ ಚ ಸುಸ್ಥಿರೋಽಸೌ
ಚಿಕ್ಷೇಪ ಯೋಜನಶತಂ ಸ ತು ತಾಂ ಪರಸ್ಮೈ ॥ ೧೧ ॥

ಅ: ಅತ್ಯಂತ ಕೋಪದ ವಶದಿಂದಾಗಿ ಕ್ಷೋಭೆಗೊಂಡ ಅವನು ಶಿವನಿಂದ ದತ್ತವಾಗಿದ್ದ ಅಮೋಘವಾದ ಗದೆಯನ್ನು ಕೈಗೆತ್ತಿಕೊಂಡ. ಶಿವಭಕ್ತರಿಂದ ವಂದ್ಯನೂ, ಶೈವಾಗಮಗಳನ್ನೆಲ್ಲ

---

೩. ಜತೋ ನ ಭವತೀತಿ ನಜಿತಃ ನಸಮಾಸೋಽಯಮ್। – (ವಾ.)

೪. ಚಂಡಮುನಿಃ= ದುರ್ವಾಸಾಃ ॥ – (ವಾ.)

ಚಂಡಮುನಿಃ ಚಂಡಕೌಶಿಕಃ। ತದುಕ್ತಂ ಸಭಾಪರ್ವಣಿ —
'ಅಥ ಕಕ್ಷೀವತಃ ಪುತ್ರಂ ಗೌತಮಸ್ಯ ಮಹಾತ್ಮನಃ।
ಸಿಷೇವೇ ತಪಸಿ ಶ್ರಾಂತಮುದಾರಂ ಚಂಡಕೌಶಿಕಮ್ ॥' ಇತಿ। –(ಜ.; ಹಾಗೂ ಮ. ಉದಾಹೃತ)

ದುರ್ವಾಸಾ ಇತಿ ಕೇಚಿತ್। – (ಜ.)

ಚಂಡಮುನಿಃ ದುರ್ವಾಸಾಃ। – (ವ.)

ಚಂಡಮುನಿರ್ದುರ್ವಾಸಾ ಇತಿ ವೇದಾಂಗತೀರ್ಥೀಯೇ। – (ತಾ.)

೫. ಸ್ವಗದಾಮಿತ್ಯಸ್ಯಾತಿಶಯಿತಸ್ವವಿಷಯಗದಾಮಿತ್ಯರ್ಥಃ। – (ಸ.)

ಸಂಪೂರ್ಣ ಬಲ್ಲವನೂ, ಅವುಗಳಲ್ಲಿ ಅಪಾರನಿಷ್ಠೆ ಹೊಂದಿದ್ದವನೂ ಆಗಿದ್ದ ಅವನು ಆ ಗದೆಯನ್ನು ಸರ್ವೋತ್ತಮನಾದ ಶ್ರೀಕೃಷ್ಣನಿಗೆಂದು ನೂರುಯೋಜನ ದೂರಕ್ಕೆ ಎಸೆದ.

ವಿ: ೧) ಜರಾಸಂಧನಿಗೆ ಶಿವನಿಂದ ವರ ಮಾತ್ರವಲ್ಲದೆ, ಅವನ ಗದೆಯೂ ಲಭಿಸಿತ್ತು. ಅಮೋಘವಾದ ಆ ಗದೆಯನ್ನು ಅವನಿಗೆ ನೀಡಿದ್ದ ಶಿವ ಗುರಿ ತಪ್ಪಾದಲ್ಲಿ ಮಾತ್ರ ಅದು ಮರಳಿ ಕೈಲಾಸಕ್ಕೆ ತನ್ನ ಬಳಿಗೆ ಹಿಂದಿರುಗುವುದೆಂಬ ಎಚ್ಚರಿಕೆಯನ್ನೂ ನೀಡಿದ್ದ.

೨) ಹರನಿಂದ ಪಡೆದಿದ್ದ ಗದೆಯನ್ನು ಜರಾಸಂಧ ಹರಿಯ ಮೇಲೆ ಪ್ರಯೋಗಿಸಿದ ಎಂಬಲ್ಲಿ ಅವನ ಅವಿವೇಕ ಚಿತ್ರಿತವಾಗಿದೆ.

೩) ಶಿವನ ಧನುಸ್ಸನ್ನೇ ಭಂಗ ಮಾಡಿದ ಶ್ರೀಕೃಷ್ಣನಿಗೆ ಆ ಶಿವನ ಗದೆಯಿಂದ ಯಾವ ಅಪಾಯವೂ ಇರಲಿಲ್ಲವೆಂಬುದು ಕೈಮುತ್ಯಸಿದ್ಧ.

ಅರ್ವಾಕ್ ಪಪಾತ ಚ ಗದಾ ಮಧುರಾಪ್ರದೇಶಾತ್
ಸಾ ಯೋಜನೇನ ಯದಿಮಂ ಪ್ರಜಗಾದ ಪೃಷ್ಟಃ ।
ಏಕೋತ್ತರಾಮಪಿ ಶತಾಚ್ಛತಯೋಜನೇತಿ[೧]
ದೇವರ್ಷಿರತ್ರ ಮಧುರಾಂ ಭಗವತ್ಪ್ರಿಯಾರ್ಥೇ ॥ ೧೨ ॥

ಅ: ಆದರೆ ಆ ಗದೆ ಮಧುರಾಪ್ರದೇಶಕ್ಕಿಂತ ಒಂದು ಯೋಜನೆ ಈಚೆಯೇ ಬಿದ್ದಿತು. ಆವನು ಕೇಳಿದಾಗ ದೇವಮುನಿ ನಾರದರು ಹರಿಪ್ರೀತಿಗೆಂದು ನೂರೊಂದು ಯೋಜನ ದೂರವಿದ್ದ ಮಧುರೆಯನ್ನು ಒಂದುನೂರು ಯೋಜನ ಎಂದು ತಿಳಿಸಿದ್ದು ಅದಕ್ಕೆ ಕಾರಣವಾಯಿತು.

ವಿ: ೧) ಗದೆಯನ್ನು ಎಸೆಯುವ ಸನ್ನಾಹದಲ್ಲಿದ್ದ ಜರಾಸಂಧನ ಬಳಿಗೆ ನಾರದರು ಆಗಮಿಸಿದರು. ಆಗ ಅವನು ''ಮಧುರೆ ಅಲ್ಲಿಂದ ಎಷ್ಟು ದೂರದಲ್ಲಿದೆ?'' ಎಂದು ಪ್ರಶ್ನಿಸಿದ. ವಾಸ್ತವವಾಗಿ ಮಧುರೆ ಮಗಧದಿಂದ ನೂರೊಂದು ಯೋಜನ ದೂರ ಇದ್ದರೂ, ನಾರದರು ''ಒಂದುನೂರು ಯೋಜನ'' ಎಂಬುದಾಗಿ ತಿಳಿಸಿದರು. ಅವರು ಹಾಗೆ ತಿಳಿಸಲು ಶ್ರೀಹರಿಪ್ರೀತಿಯನ್ನು ಪಡೆಯುವುದೇ ಮುಖ್ಯ ಉದ್ದೇಶವಾಗಿತ್ತು.

೨) ಶತಶಬ್ದವು ಬಹುತ್ವವಾಚಕ ಎಂಬ ಅರ್ಥದಲ್ಲೂ ನಾರದರದು ಮಿಥ್ಯಾವಚನವಾಗಿರಲಿಲ್ಲ.

---

೧. ಶತಾಂ ಶತಯೋಜನೇತಿ ಕ್ವಚಿತ್ ಪಾಠಃ । – (ತಾ.)

ಶಕ್ತಸ್ಯ ಚಾಪಿ ಹಿ ಗದಾಪ್ರತಿಘಾತನೇ ತು
ಶುಶ್ರೂಷಣಂ ಮದುಚಿತಂ ತ್ವಿತಿ ಚಿಂತಯಾನಃ ।
ವಿಷ್ಣೋರ್ಮುನಿಃ ಸ ನಿಜಗಾದ ಹ ಯೋಜನೋನಂ
ಮಾರ್ಗಂ ಪುರೋ ಭಗವತೋ ಮಗಧೇಶಪೃಷ್ಟಃ ॥ ೧೩ ॥

ಅ: ಶ್ರೀಹರಿಯು ಗದೆಯನ್ನು ಹಿಮ್ಮೆಟ್ಟಿಸಲು ಶಕ್ತನೆಂದು ತಿಳಿದಿದ್ದರೂ, ವಿಷ್ಣುವಿಗೆ ಸೇವೆ ಸಲ್ಲಿಸುವುದು ಉಚಿತ ಎಂದು ಆಲೋಚಿಸಿ, ನಾರದಮುನಿ ಮಗಧೇಶನಾದ ಜರಾಸಂಧ ಕೇಳಿದಾಗ ಮಥುರೆಯ ದೂರವನ್ನು ಒಂದು ಯೋಜನ ಕಡಿಮೆಯಾಗಿಯೇ ತಿಳಿಸಿದರು.

ವಿ: ೧) ನಾರದರು ಹಾಗೆ ಒಂದು ಯೋಜನ ಕಡಿಮೆ ಹೇಳಲು ಗದೆಯಿಂದ ಕೃಷ್ಣನನ್ನು ಸಂರಕ್ಷಿಸಲೆಂದಲ್ಲ; ಸರ್ವಶಕ್ತನಾದ ಕೃಷ್ಣನಿಗೆ ಆ ಗದೆಯಿಂದ ಯಾವ ಸಮಸ್ಯೆಯೂ ಇಲ್ಲ ಎಂದು ಅವರು ತಿಳಿದಿದ್ದರು. ಆದರೂ ಅವಕಾಶ ಒದಗಿದಾಗ ಯಥೋಚಿತವಾದ ಸೇವೆ ಸಲ್ಲಿಸುವುದು ಭಕ್ತರಾದ ತಮ್ಮ ಕರ್ತವ್ಯ ಎಂದು ಭಾವಿಸಿ, ಹಾಗೆ ತಿಳಿಸಿದ್ದರು ಎಂದು ಭಾವ.

೨) ಇದರಿಂದ ದೊಡ್ಡವರಿಗೆ ಸೇವೆ ಸಲ್ಲಿಸುವ ಪ್ರಸಂಗ ಒದಗಿದಾಗ, ಅವರು ಸಮರ್ಥರಿದ್ದರೂ, ತಮ್ಮಿಂದಾಗುವ ಸೇವೆಯ ಅವಕಾಶವನ್ನು ಕಳೆದುಕೊಳ್ಳಬಾರದೆಂಬ ತತ್ತ್ವವನ್ನು ಈ ಮೂಲಕ ತಿಳಿಸಿರುವರು ಎಂದು ತಿಳಿಯಬೇಕು.

ಕ್ಷಿಪ್ತಾ ತು ಸಾ ಭಗವತೋಽಥ ಗದಾ ಜರಾಖ್ಯಾಂ
ತತ್ಸಂಧಿನೀಮಸುಭಿರಾಶು ವಿಯೋಜ್ಯ ಪಾಪಾಮ್ ।
ಮರ್ತ್ಯಾಶನೀಂ ಭಗವತಃ ಪುನರಾಜ್ಞಯೈವ
ಯಾತಾ ಗಿರೀಶಸದನಂ ಮಗಧಂ ವಿಸೃಜ್ಯ ॥ ೧೪ ॥

ಅ: ಭಗವಂತನಿಗೆಂದು ಎಸೆಯಲ್ಪಟ್ಟ ಆ ಗದೆ ಜರೆಯೆಂಬ ಹೆಸರಿನ, ಅವನ ದೇಹದ ಎರಡು ಸೀಳುಗಳನ್ನು ಒಂದುಗೂಡಿಸಿದ್ದ ನರಭಕ್ಷಕಿಯಾದ ಪಾಪಿ ರಾಕ್ಷಸಿಯ [೧]ಪ್ರಾಣಗಳನ್ನೂ ತೆಗೆದು, ಭಗವಂತನ ಆದೇಶದಂತೆ ಜರಾಸಂಧನನ್ನೂ ತೊರೆದು, ಶಿವನ ನೆಲೆಯಾದ ಕೈಲಾಸಕ್ಕೆ ಮರಳಿಬಿಟ್ಟಿತು.

---

೧. ಸಾ ತು ಭೂಮಿಂ ಗತಾ ಪಾರ್ಥ ಹತಾ ಸಸುತಬಾಂಧವಾ ।
ಗದಯಾ ತೇನ ಚಾಸ್ತ್ರೇಣ ಸ್ಥೂಣಾಕರ್ಣೇನ ರಾಕ್ಷಸೀ ॥
ವಿನಾಭೂತಃ ಸ ಗದಯಾ ಜರಾಸಂಧೋ ಮಹಾಮೃಧೇ ॥ –ಇತಿ ಭಾರತೇ (ದ್ರೋಣ. ೭೮೧/೧೪)

ಎ: ೧) ಕೃಷ್ಣನಿಗೆಂದು ಎಸೆದ ಗದೆ ಅವನ ತಾಯಿ ಜರೆಯನ್ನೇ ಕೊಂದುಹಾಕಿತು. ದೈವದ್ರೋಹವು ಮಾತೃದ್ರೋಹಾದಿಸಕಲಪಾಪಗಳಿಗೂ ಕಾರಣವಾಗುವುದು ಎಂಬ ತತ್ತ್ವ ಇಲ್ಲಿದೆ. ಜರಾಸಂಧನು ಹೀಗೆ ಮಧುರೆಯತ್ತ ಗದೆ ಎಸೆದ ಪ್ರಸಂಗದ ವಿವರ [೧]ಮಹಾಭಾರತದ ಸಭಾಪರ್ವ ಹಾಗೂ ದ್ರೋಣಪರ್ವಗಳಲ್ಲಿ ಬಂದಿದೆ.

೨) ಸಭಾಪರ್ವದಲ್ಲಿ ಗದೆ ಎಸೆದ ಉಲ್ಲೇಖವಿದ್ದರೆ, [೨]ದ್ರೋಣಪರ್ವದಲ್ಲಿ ಅದರಿಂದ ಜರಾನಾಮಕರಾಕ್ಷಸಿ ಹತಳಾದ ವಿವರವೂ ಇದೆ. ಗದೆ ಬಿದ್ದ ಸ್ಥಳ ಗದಾವಸಾನ ಎಂದು ಖ್ಯಾತವಾದ ವಿವರವೂ ಅಲ್ಲಿದೆ.

೩) ಶಿವನ ಗದೆಯನ್ನು ಮರಳಿ ಶಿವನ ಕೈಸೇರುವಂತೆ ಮಾಡಿದ್ದು ನಾರದರ ಮತ್ತೊಂದು ಸಾಧನೆ ಎಂದೂ ತಿಳಿಯಬಹುದು.

---

೧. ನಿಹತೇ ವಾಸುದೇವೇನ ತದಾ ಕಂಸೇ ಮಹೀಪತೌ ।
ಜಾತೋ ವೈ ವೈರನಿರ್ಬಂಧಃ ಕೃಷ್ಣೇನ ಸಹ ತಸ್ಯ ವೈ ॥
ಭ್ರಾಮಯಿತ್ವಾ ಶತಗುಣಮೇಕೋನಂ ಯೇನ ಭಾರತ ।
ಗದಾ ಕ್ಷಿಪ್ತಾ ಬಲವತಾ ಮಾಗಧೇನ ಗಿರಿವ್ರಜಾತ್ ॥
ತಿಷ್ಠತೋ ಮಥುರಾಯಾಂ ವೈ ಕೃಷ್ಣಸ್ಯಾದ್ಭುತಕರ್ಮಣಃ ।
ಏಕೋನಯೋಜನಶತೇ ಸಾ ಪಪಾತ ಗದಾ ಶುಭಾ ॥
ದೃಷ್ಟ್ವಾ ಪೌರೈಸ್ತದಾ ಸಮ್ಯಗ್ಗದಾ ಚೈವ ನಿವೇದಿತಾ ।
ಗದಾವಸಾನಂ ತತ್ ಖ್ಯಾತಂ ಮಥುರಾಯಾಃ ಸಮೀಪತಃ ॥ – ಭಾರತ (ಸಭಾ. ೧೯/೨೨-೨೫)

೨. ಜರಾಸಂಧೋ ಹಿ ರುಷಿತೋ ರೌಹಿಣೇಯಪ್ರಧರ್ಷಿತಃ ।
ಅಸೃಜ್ವಧಾರ್ಥೇ ಚಿಕ್ಷೇಪ ಗದಾಂ ವೈ ಸರ್ವಘಾತಿನೀಮ್ ॥
ಸೀಮಂತಮಿವ ಕುರ್ವಾಣಾ ನಭಸಃ ಪಾವಕಪ್ರಭಾ ।
ಅದೃಶ್ಯತಾಪತಂತೀ ಸಾ ಶಕ್ರಮುಕ್ತಾ ಯಥಾऽಶನಿಃ ॥
ತಮಾಪತಂತೀಂ ದೃಷ್ಟ್ವೈವ ಗದಾಂ ರೋಹಿಣಿನಂದನಃ ।
ಪ್ರತಿಘಾತಾರ್ಥಮಸ್ತ್ರಂ ವೈ ಸ್ಥೂಣಾಕರ್ಣಮವಾಸೃಜತ್ ॥
ಅಸ್ತ್ರವೇಗಪ್ರತಿಹತಾ ಸಾ ಗದಾ ಪ್ರಾಪತದ್ಭುವಿ ।
ದಾರಯಂತೀ ಧರಾಂ ದೇವೀಂ ಕಂಪಯಂತೀವ ಪರ್ವತಾನ್ ॥
ತತ್ರ ಸಾ ರಾಕ್ಷಸೀ ಘೋರಾ ಜರಾನಾಮ್ನೀ ಸುವಿಕ್ರಮಾ ।
ಸಂದಧೇ ಸಾ ಹಿ ಸಂಜಾತಂ ಜರಾಸಂಧಮರಿಂದಮಮ್ ॥
ದ್ವಾಭ್ಯಾಂ ಜಾತೋ ಹಿ ಮಾತೃಭ್ಯಾಮರ್ಧದೇಹಃ ಪೃಥಕ್ ಪೃಥಕ್ ।
ಜರಯಾ ಸಂಧಿತೋ ಯಸ್ಮಾಜ್ಜರಾಸಂಧಸ್ತತೋऽಭವತ್ ॥
ಸಾ ತು ಭೂಮಿಂ ಗತಾ ಪಾರ್ಥ ಹತಾ ಸಸುತಬಾಂಧವಾ ।
ಗದಯಾ ತೇನ ಚಾಸ್ತ್ರೇಣ ಸ್ಥೂಣಾಕರ್ಣೇನ ರಾಕ್ಷಸೀ ॥
ವಿನಾಭೂತಃ ಸ ಗದಯಾ ಜರಾಸಂಧೋ ಮಹಾಮೃಧೇ ।
ನಿಹತೋ ಭೀಮಸೇನೇನ ಪಶ್ಯತಸ್ತೇ ಧನಂಜಯ ॥ – ಭಾರತ (ದ್ರೋಣ. ೧೮೧/೮-೧೫)

ತಾಯಿಯೊಂದಿಗೆ ಗದೆಯನ್ನೂ ಕಳೆದುಕೊಂಡ ಪಾಪಿ

ರಾಜಾ ಸ್ವಮಾತೃತ[೧] ಉತೋ ಗದಯಾ ಚ ಹೀನಃ
ಕ್ರೋಧಾತ್ ಸಮಸ್ತನೃಪತೀನಭಿಸನ್ನಿಪಾತ್ಯ ।
ಅಕ್ಷೌಹಿಣೀತ್ರ್ಯಧಿಕವಿಂಶಯುತೋಽತಿವೇಲಂ
ದರ್ಪೋದ್ಧತಃ ಸಪದಿ ಕೃಷ್ಣಪುರೀಂ ಜಗಾಮ ॥ ೧೫ ॥

ಅ: ರಾಜನಾದ ಜರಾಸಂಧ ಹೀಗೆ ತನ್ನ ತಾಯಿಯನ್ನೂ, ಗದೆಯನ್ನೂ ಕಳೆದುಕೊಂಡ. ಕೋಪದಿಂದ ಸಕಲರಾಜರುಗಳನ್ನೂ ಒಟ್ಟಾಗಿಸಿಕೊಂಡು, ಇಪ್ಪತ್ತಮೂರು ಅಕ್ಷೋಹಿಣೀಸೇನೆಯೊಂದಿಗೆ ಕೂಡಿ, ದರ್ಪದಿಂದ ಬಹಳ ಉನ್ಮತ್ತನಾಗಿ ಕೃಷ್ಣಪುರಿಯಾದ ಮಧುರೆಯ ಮೇಲೆ ನುಗ್ಗಿದ.

ವಿ: ೧) ಶ್ರೀಕೃಷ್ಣದ್ರೋಹದಿಂದಾಗಿ ಜರಾಸಂಧ ತಾಯಿಯನ್ನೂ ಕಳೆದುಕೊಂಡ; ಗದೆಯನ್ನೂ ಕಳೆದುಕೊಂಡ. ಹರಿದ್ರೋಹದ ಫಲ ಹೀಗೆ ದುರಂತವೇ ಎಂದು ಭಾವ. ಜರೆ ಚೇತನಳು, ಗದೆ ಅಚೇತನ. ಶ್ರೀಕೃಷ್ಣದ್ರೋಹದಿಂದಾಗಿ ಹಾಗೆ ಜಡ–ಚೇತನಗಳೆರಡನ್ನೂ ಕಳೆದುಕೊಳ್ಳುವ ಮೂಲಕ ಜರಾಸಂಧ ಸ್ಥಿರಾಸ್ತಿ ಚರಾಸ್ತಿಗಳೆರಡನ್ನೂ ಕಳೆದುಕೊಳ್ಳುವ ದುಷ್ಪರಿಗೆ ಸಂಕೇತವೆನ್ನಿಸಿದ.

೨) ಆದರೂ ಬುದ್ಧಿ ಬಾರದ ಅವನು ಕೃಷ್ಣನ ಮೇಲೆ ಅಪಾರಸೇನೆಯೊಂದಿಗೆ ನುಗ್ಗಿ, ತಾನು ಕೃಷ್ಣದ್ವೇಷಿ ಎಂಬುದನ್ನು ಸ್ಫುಟಪಡಿಸಿದ.

೩) ನಾರದರು ಏಕಶತಯೋಜನವೆಂದು ನುಡಿದದ್ದು ಏಕ ಮತ್ತು ಶತ ಎಂದರೆ ನೂರೊಂದು ಎಂಬ ಅರ್ಥದಲ್ಲಿ. ಆದರೆ ಜರಾಸಂಧ ಅದನ್ನು ತಿಳಿದದ್ದು ಒಂದುನೂರು ಎಂಬ ಅರ್ಥದಲ್ಲಿ. ಹೀಗೆ ಸಂಖ್ಯಾವಾಚಕವಾದ ಒಂದು ಪದವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾಗದ್ದರ ದುಷ್ಪರಿಣಾಮ ಜರಾಸಂಧನಿಗೆ ತಾಯಿ ಹಾಗೂ ಗದೆ ಇಬ್ಬರನ್ನೂ ಇಲ್ಲವಾಗಿಸಿತು. ಇನ್ನು 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ' ಇತ್ಯಾದಿ ಶಾಸ್ತ್ರವಚನಗಳನ್ನು ತಪ್ಪಾಗಿ ತಿಳಿಯುವ ಜನ ಸರ್ವನಾಶ ಹೊಂದುವುದರಲ್ಲಿ ಅಚ್ಚರಿ ಏನಿದೆ ಎಂಬ ಸೂಚನೆಯನ್ನೂ ಇಲ್ಲಿ ಗಮನಿಸಬಹುದು.

೪) ಜರಾರಾಕ್ಷಸಿ ಜರಾಸಂಧನನ್ನು ಜೋಡಿಸಿದ ಉಪಕಾರ ಹೀಗೆ ಅವಳ ಪ್ರಾಣಕ್ಕೇ ಸಂಚಕಾರವಾಯಿತು. ದುಷ್ಪರಿಗೆ ಮಾಡುವ ಉಪಕಾರ ಆತ್ಮಘಾತಕ ಎಂಬುದಕ್ಕೂ ಇದು ಸೂಚಕ. ಅವಳು ಸ್ವತಃ ದುಷ್ಟಳಾಗಿದ್ದುದು ಮತ್ತೊಂದು ವಿಶೇಷ.

---

೧. ಉತೇತ್ಯರ್ಥೇ ಅಥೋ ಅಥೇತಿವತ್ ಉತೋ ಇತ್ಯವ್ಯಯಮ್ ॥ –(ವಾ.)

ಜರಾಸಂಧನಿಂದ ಮಥುರೆಯ ಆಕ್ರಮಣ

ಸರ್ವಾಂ[೧] ಪುರೀಂ ಪ್ರತಿನಿರುಧ್ಯ ದಿದೇಶ ವಿಂದ-
ವಿಂದಾನುಜೌ ಭಗವತಃ ಕುಮತಿಃ ಸ ದೂತೌ ।
ತಾವೂಚತುರ್ಭಗವತೇಽಸ್ಯ ವಚೋಽತಿದರ್ಪ-
ಪೂರ್ಣಂ ತಥಾ ಭಗವತೋಽಪ್ಯಪಹಾಸಯುಕ್ತಮ್ ॥ ೧೬ ॥

ಅ: ಇಡೀ ಪಟ್ಟಣವನ್ನು ಸುತ್ತುವರೆದು, ಆ ದುರ್ಬುದ್ಧಿಯ ಜರಾಸಂಧ ಭಗವಂತನಾದ ಕೃಷ್ಣನ ಬಳಿಗೆ ವಿಂದ ಮತ್ತು ಅನುವಿಂದ ಎಂಬವರನ್ನು ದೂತರನ್ನಾಗಿ ಕಳುಹಿಸಿದ. ಅವರಿಬ್ಬರೂ ಕೃಷ್ಣನಿಗೆ ಆ ಜರಾಸಂಧನ ಅತ್ಯಂತದರ್ಪಯುಕ್ತವಾದ ಹಾಗೂ ಶ್ರೀಕೃಷ್ಣನ ಬಗ್ಗೆ ಅಪಹಾಸದಿಂದ ಕೂಡಿದ ಮಾತನ್ನು ತಿಳಿಸಿದರು.

ವಿ: ವಿಂದಾನುವಿಂದರಿಬ್ಬರೂ ಮುಂದೆ ಕೃಷ್ಣಪತ್ನಿಯಾಗುವ ಮಿತ್ರವಿಂದಾದೇವಿಯ ಅಣ್ಣಂದಿರು ಹಾಗೂ ಕೃಷ್ಣನ ಸೋದರತ್ತೆಯಾದ ರಾಜಾಧಿದೇವಿಯ ಪುತ್ರರು; ಅವಂತೀದೇಶದ ರಾಜಪುತ್ರರು; ಸ್ವರೂಪತಃ ಪರಮಪಾಪಿಗಳು. ಅದಕ್ಕೆಂದೇ ಅವರಿಗೆ ಜರಾಸಂಧನಲ್ಲಿ ಪಕ್ಷಪಾತ. ಮುಂದೆಯೂ ಅವರು ಕೌರವಪಕ್ಷವನ್ನು ಸೇರಿ, ಪಾಂಡವರ ವಿರುದ್ಧ ಹೋರಾಡಿ, ಕುರುಕ್ಷೇತ್ರಯುದ್ಧದಲ್ಲಿ ಮಡಿಯುವರು.

ಜರಾಸಂಧನ ಮೂರ್ಖಸಂದೇಶ

ಲೋಕೇ[೨]ಽಪ್ರತೀತಬಲಪೌರುಷಸಾರರೂಪ-
ಸ್ತ್ವಂ ಹ್ಯೇಕ ಏಷ್ಯಭವತೋ[೩] ಬಲವೀರ್ಯಸಾರಮ್ ।
ಜ್ಞಾತ್ವಾ ಸುತೇ ನ ತು ಮಯಾ ಪ್ರತಿಪಾದಿತೇ ಹಿ
ಕಂಸಸ್ಯ ವೀರ್ಯರಹಿತೇನ ಹತಸ್ತ್ವಯಾ ಸಃ ॥ ೧೭ ॥

ಅ: ''ಲೋಕದಲ್ಲಿ ಪ್ರಸಿದ್ಧವಾದ ಬಲಪೌರುಷಗಳ ಸಾರರೂಪನಾದವನು ನೀನೊಬ್ಬನೇ ಎಂದು ಮುಂದೆ ಜನಿಸುವ ನಿನ್ನ ಬಲವೀರ್ಯಗಳ ಸತ್ತ್ವವನ್ನು ಅರಿಯದೆ, ವೀರ್ಯರಹಿತನಾದ ನಾನು ನನ್ನ ಇಬ್ಬರು ಪುತ್ರಿಯರನ್ನು ಕಂಸನಿಗೆ ಧಾರೆಯೆರೆದೆ. ನಿನ್ನಿಂದ ಅವನು ಹತನಾಗಿ ಹೋದ''.

---

೧. ವಿಂದಾನುಜಃ = ಅನುವಿಂದಃ ॥ – (ವಾ.)

೨. ಲೋಕೇಽಪ್ರತೀಪುಲ – (ವ. ಪಾಠ)

ಎಃ ೧) ಎಂದಾನುಎಂದರು ತಿಳಿಸಿದ ಜರಾಸಂಧನ ಮಾತುಗಳಿವು. ಕೃಷ್ಣನಂತಹ ಅಪ್ರತಿಮಪುರುಷ ಜನಿಸಿರುವುದನ್ನು ತಿಳಿಯದೆ, ಜರಾಸಂಧ ತಾನು ತನ್ನ ಇಬ್ಬರು ಪುತ್ರಿಯರನ್ನು ಕಂಸನಿಗೆ ಕೊಟ್ಟು ಇಂದು ಪರಿತಪಿಸುವಂತಾಗಿದೆ ಎಂದು ಒಂದರ್ಥ.

೨) ''ನಿನ್ನಂತಹವನು ಹುಟ್ಟುವಿಯೆಂದು ತಿಳಿದೇ ನಾನು ನನ್ನ ಪುತ್ರಿಯರನ್ನು ಕಂಸನಿಗೆ ವಿವಾಹ ಮಾಡಿಕೊಡಲಿಲ್ಲ. ಅವನೇ ಅವರನ್ನು ಅಪಹರಿಸಿ ಮದುವೆಯಾದ'' ಎಂಬ ಮತ್ತೊಂದು ಬಗೆಯ ಅರ್ಥವೂ ಇದರಲ್ಲಿದೆ.

೨) ಮೇಲ್ನೋಟಕ್ಕೆ ಹೀಗೆ ಕೃಷ್ಣನನ್ನು ಹೊಗಳಿದಂತೆ ಮಾಡಿದ ಜರಾಸಂಧ ''ವೀರ್ಯರಹಿತನಾದ ನೀನು'' ಎನ್ನುವ ಅಪಹಾಸದ ಮಾತಿನ ಮೂಲಕ ಅದೆಲ್ಲ ವ್ಯಂಗ್ಯದ ಮಾತುಗಳು ಎಂದು ತಿಳಿಸುತ್ತಿರುವನು ಎಂದರ್ಥ.

ಸೋಽಹಂ ಹಿ ದುರ್ಬಲತಮೋ ಬಲಿನಾಂ ವರಿಷ್ಠಂ
ಕೃತ್ವೈವ ದೃಷ್ಟಿವಿಷಯಂ ವಿಗತಪ್ರತಾಪಃ ।
ಯಾಸ್ಯೇ ತಪೋವನಮಥೋ ಸಹಿತಃ ಸುತಾಭ್ಯಾಂ
ಕ್ಷಿಪ್ರಂ ಮಮಾದ್ಯ ವಿಷಯೋ ಭವ ಚಕ್ಷುಷೋಽತಃ ॥ ೧೮ ॥

ಅಃ ''ಹೀಗೆ ಅತ್ಯಂತದುರ್ಬಲನಾದ ನಾನು ಬಲಿಷ್ಠರಲ್ಲಿ ಶ್ರೇಷ್ಠನಾದ ನಿನ್ನನ್ನು ಕಣ್ಣಾರೆ ಕಂಡು ಪ್ರತಾಪಹೀನನಾಗಿ ನನ್ನಿಬ್ಬರು ಪುತ್ರಿಯರೊಂದಿಗೆ ತಪೋವನಕ್ಕೆ ತೆರಳಿಬಿಡುವೆನು. ಆದ್ದರಿಂದ ಬೇಗನೆ ನೀನು ನನ್ನ ಕಣ್ಣಿಗೆ ಬೀಳು''.

---

೩. ಏಷ್ಯಸ್ಯ ಭವಿಷ್ಯತಃ ಭವತಃ ಬಲವೀರ್ಯಯೋಃ ಸಾರಮ್ । ನ ತು ಜ್ಞಾತ್ವಾ ಅಜ್ಞಾತ್ವೇತ್ಯರ್ಥಃ । ಸುತೇ= ಪುತ್ರ್ಯೌ ಮಯಾ ಕಂಸಸ್ಯ ಪ್ರತಿಪಾದಿತೇ= ದತ್ತೇ ಇತಿ ಸಂಬಂಧಃ । ವಿವಾಹಸಮಯೇ ಅತಿಸಮರ್ಥಸ್ತ್ವಂ ವರ್ತಸೇ ಚೇದಹಂ ಸುತೇ ನ ದದ್ಯಾಂ ಭವಿಷ್ಯತಸ್ತವ ಸಾಮರ್ಥ್ಯಮಜ್ಞಾತ್ವಾ ಸುತೇ ಪ್ರಾದಾಮಿತಿ ಪರಿಹಾಸಃ । ಯದ್ವಾ ಭವಿಷ್ಯತಃ ಬಲವೀರ್ಯಸಾರಂ ಜ್ಞಾತ್ವಾ ಮಯಾ ಕಂಸಸ್ಯ ಸುತೇ ನ ಪ್ರತಿಪಾದಿತೇ । ಕಿಂತು ಸ ಏವ ಬಲಾನ್ನೀತವಾನಿತಿ ಭಾವಃ । ತದ್ವಚಃ ಸತ್ಯಮ್ । ಅರ್ಥವದಿತಿ ವದತಾ ಭಗವತಾ ಕಟಾಕ್ಷಕ್ಷೇಪಮಾತ್ರೇಣ ಬ್ರಹ್ಮಾಂಡಚೂರ್ಣೀಕರಣ-ಸಮರ್ಥೋಽಹಂ ತೃಣಮುದ್ಧರ್ತುಂ ಸರ್ವಂ ನಿಜಬಲಮಪ್ರಯುಂಜಾನೋ ಗಜ ಇವ ತುಚ್ಛಕಂಸವಧಾಯ ನಿಜವೀರ್ಯಂ ನೋಪಾದದಮ್ । ಅತಃ ವೀರ್ಯರಹಿತೇನ ನಿಜವೀರ್ಯರಹಿತೇನ ಮಯಾ ಕಂಸೋ ಹತ ಇತಿ ವಚೋಽಪ್ಯರ್ಥವದಿತಿ ಸೂಚಿತಮ್ ॥ – (ವಾ.)

ಜಗತಿ ಅಪ್ರತೀತೇ ಅಪ್ರಸಿದ್ಧೇ ಯೇ ಬಲಪೌರುಷೇ ತಾಭ್ಯಾಂ ಸಾರರೂಪಃ ಶ್ರೇಷ್ಠ ರೂಪಸ್ತ್ವಮೇಕ ಇತಿ ಹಿ ಪ್ರಸಿದ್ಧಿಃ। ವೀರ್ಯರಹಿತೇನ ಮಯಾ ಏಷ್ಯಸ್ಯ ಭವಿಷ್ಯತೋ ಭವತಸ್ತವ ಬಲವೀರ್ಯಯೋಃ ಸಾರಮಾಧಿಕ್ಯಂ ನ ಜ್ಞಾತ್ವಾಽವಿಜ್ಞಾಯ ಸುತೇ ಕಂಸಸ್ಯ ಪ್ರತಿಪಾದಿತೇ। – (ಜ.)

ಶ್ರೀಕೃಷ್ಣನ ಪ್ರತಿಸಂದೇಶ

ಸಾಕ್ಷೇಪಮೀರಿತಮಿದಂ ಬಲದರ್ಪಪೂರ್ಣ-
ಮಾತ್ಮಾಪಹಾಸಸಹಿತಂ ಭಗವಾನ್ ನಿಶಮ್ಯ ।
ಸತ್ಯಂ ತದಿತ್ಯುರುವಚೋಽರ್ಥವದಿತ್ಯುದೀರ್ಯ
ಮಂದಂ ಪ್ರಹಸ್ಯ ನಿರಗಾತ್ ಸಹಿತೋ ಬಲೇನ ॥ ೧೯ ॥

ಅ: ಜರಾಸಂಧನ ಆಕ್ಷೇಪದಿಂದ ಕೂಡಿದ, ಬಲದ ಸೊಕ್ಕಿನಿಂದ ತುಂಬಿದ್ದ, ತನ್ನ ಬಗ್ಗೆ ಅಪಹಾಸಯುಕ್ತವಾಗಿದ್ದ ಆ ಮಾತನ್ನು ಕೇಳಿ, ಭಗವಂತನಾದ ಶ್ರೀಕೃಷ್ಣ ''ಅದು ನಿಜ'' ಎಂಬ ಅರ್ಥಗರ್ಭಿತವಾದ ಉತ್ಕೃಷ್ಟಮಾತನ್ನು ನುಡಿದ. ನಸುನಕ್ಕು ಬಲರಾಮನೊಂದಿಗೆ ಯುದ್ಧಕ್ಕೆ ನಡೆದ.

ವಿ: ೧) ಜರಾಸಂಧ ಆಕ್ಷೇಪಕ್ಕೆಂದು ನುಡಿದ ಮಾತುಗಳನ್ನೆಲ್ಲ ಕೃಷ್ಣ ನಿಜ ಎಂದು ನುಡಿಯುವ ಮೂಲಕ ಅವನನ್ನು ತುಚ್ಛೀಕರಿಸಿದನು ಎಂದು ತಿಳಿಯಬೇಕು. ಇದರಿಂದ ಕೃಷ್ಣನನ್ನು ಅಪಹಾಸ ಮಾಡಲೆಂದು ಹೊರಟ ಜರಾಸಂಧ ತಾನೇ ಅಪಹಾಸಕ್ಕೀಡಾದ ಎಂಬ ಅಂಶ ಸ್ಫುಟಪಡುವುದು. ಶ್ರೀಕೃಷ್ಣನನ್ನು ಕಂಡ ಬಳಿಕ ಅವನಿಂದ ಇನ್ನಿಲ್ಲದಂತೆ ಪರಾಭವವನ್ನು ಕಾಣುವ ಜರಾಸಂಧನ ಜೀವನ ಕಾಡುಪಾಲಾಗುವುದು ನಿಜವೇ ಅಲ್ಲವೆ!

೨) 'ಸತ್ಯಂ' ಎಂಬ ಇಲ್ಲಿಯ ಪದ ಶಾಸ್ತ್ರೀಯಪರಿಭಾಷೆಯಲ್ಲಿರುವಂತೆ, ಅರ್ಧಾಂಗೀಕಾರ ಎಂಬ ಅರ್ಥದಲ್ಲಿ [೨]ಜನಾರ್ದನಭಟ್ಟರು ವ್ಯಾಖ್ಯಾನಿಸಿರುವರು.

ದ್ವಾರೇಷು ಸಾತ್ಯಕಿಪುರಃಸರಮಾತ್ಮಸೈನ್ಯಂ
ತ್ರಿಷ್ವಪ್ಯುದೀರ್ಯ ಭಗವಾನ್ ಸ್ವಯಮುತ್ತರೇಣ ।
ರಾಮದ್ವಿತೀಯ ಉದಗಾನ್ನಗಧಾಧಿರಾಜಂ
ಯೋದ್ಧುಂ ನೃಪೇಂದ್ರಕಟಕೇನ ಯುತಂ ಪರೇಶಃ ॥ ೨೦ ॥

---

೧. ಉರು= ಉತ್ಕೃಷ್ಟಂ ಅಲ್ಪಾಕ್ಷರತ್ವೇಽಪಿ ಬಹ್ವರ್ಥಭರಿತಮಿತ್ಯರ್ಥಃ । ಬಹುಭಾಷಿಣೋ ಜರಾಸಂಧಸ್ಯ । ವ್ಯರ್ಥಬಹುತರವಾಕ್ಯಸ್ಯ ಮಿತವಾಣೀಷ್ವಗ್ರಣೀಃ ಶ್ರೀಕೃಷ್ಣಃ ಸ್ವಲ್ಪಂ ಬಹ್ವರ್ಥಭರಿತಂ ವಾಕ್ಯಂ ಪ್ರಯುಕ್ತವಾನ್ । ಅತಃ ಸ ಏವ ಗಂಭೀರಪುರುಷ ಇತಿ ಭಾವಃ ॥ – (ವಾ.)

೨. ತತ್ ಜರಾಸಂಧೋಕ್ತಂ ವಿಗತಪ್ರತಾಪ ಇತ್ಯುಕ್ತಂ ಸ್ಯಾದೇವ । ತಪೋವನಂ ಯಾಸ್ಯ ಇತ್ಯುಕ್ತಂ ನ ಸ್ಯಾದಿತ್ಯಭಿಪ್ರಾಯೇಣ ಸತ್ಯಮಿತ್ಯರ್ಧಾಂಗೀಕಾರ ಪ್ರಯೋಗಃ । – (ಜ.)

ಅಃ ಉಳಿದ ಮೂರುದ್ವಾರಗಳಲ್ಲಿ ಸಾತ್ಯಕಿ ನೇತೃತ್ವದ ತನ್ನ ಸೇನೆಯನ್ನು ತೊಡಗಿಸಿ ಭಗವಂತನೂ, ಸರ್ವೋತ್ತಮನೂ, ಸರ್ವೇಶ್ವರನೂ ಆದ ಶ್ರೀಕೃಷ್ಣ ಉತ್ತರದ್ವಾರದ ಮೂಲಕ ಬಲರಾಮನೊಂದಿಗೆ ಕೂಡಿ ರಾಜಶ್ರೇಷ್ಠರ ಸಮೂಹದೊಂದಿಗೆ ಕೂಡಿದ್ದ ಜರಾಸಂಧನೊಂದಿಗೆ ಕಾದಲು ಸ್ವತಃ ಹೊರಟ.

ಧರೆಗಿಳಿದ ಹರಿಯ ರಥ ಆಯುಧಗಳು

ತಸ್ಯೇಚ್ಛಯೈವ ಪೃಥಿವೀಮವತೇರುರಾಶು
ತಸ್ಯಾಯುಧಾನಿ ಸಬಲಸ್ಯ ಸುಭಾಸ್ವರಾಣಿ ।
ಶಾರ್ಙ್ಗಾಸಿಚಕ್ರದರತೂಣಗದಾಃ ಸ್ವಕೀಯಾ
ಜಗ್ರಾಹ ದಾರುಕಗೃಹೀತರಥೇ ಸ್ಥಿತಃ ಸಃ ॥ ೨೧ ॥

ಅಃ ಅವನ ಇಚ್ಛಾಮಾತ್ರದಿಂದಲೇ ಅವನ ಹಾಗೂ ಬಲರಾಮನ ಬಹಳವಾಗಿ ಹೊಳೆಯುವ ಆಯುಧಗಳು ಕೂಡಲೆ ಧರೆಗಿಳಿದು ಬಂದವು. ದಾರುಕ ನಡೆಸುತ್ತಿದ್ದ ರಥದಲ್ಲಿ ಕುಳಿತ ಶ್ರೀಕೃಷ್ಣ ತನ್ನ ಶಾರ್ಙ್ಗ, ಖಡ್ಗ, ಚಕ್ರ, ಶಂಖ, ಬತ್ತಳಿಕೆ, ಗದೆಗಳನ್ನು ಕೈಗೆತ್ತಿಕೊಂಡ.

ವಿಃ ೧) ಇದು ಶ್ರೀಕೃಷ್ಣ ತೋರಿದ ಮತ್ತೊಂದು ಅಪೂರ್ವಮಹಿಮೆ. ಕೃಷ್ಣ ಧರೆಗಿಳಿದು ಬಂದಿದ್ದಂತೆ ಅವನ ಆಯುಧಗಳೂ ಧರೆಗಿಳಿದು ಬಂದವು ಎಂಬುದು ಒಂದು ಬಗೆಯ ಸೂಚನೆ. ಅವನ ಆಯುಧಗಳೇ ಹೀಗೆ ಧರೆಗಿಳಿದು ಬರುವಾಗ, ಸ್ವತಃ ಕೃಷ್ಣ ಅಪ್ರಾಕೃತದೇಹದಿಂದ ಹಾಗೆ ಅವತರಿಸಿದ್ದರಲ್ಲಿ ಅಚ್ಚರಿಯೇನಿದೆ ಎಂಬ ಸೂಚನೆಯೂ ಇಲ್ಲಿದೆ.

೨) ಬಲರಾಮನಲ್ಲಿ ಶುಕ್ಲಕೇಶರೂಪದ ಹರಿಯ ಆವೇಶವಿರುವುದರಿಂದ ಅವನ ಆಯುಧಗಳೂ ಹಾಗೆ ಇಳಿದು ಬಂದವು ಎಂಬ [೪]ವಿಶೇಷಾಂಶವನ್ನು ತಿಳಿಯಬೇಕು.

---

೩. ಭಗವಾನ್ ಸ್ವಯಮೇವ ಯುದ್ಧಂ ಕರ್ತುಂ ಸಮರ್ಥೋಽಪಿ ರಾಮದ್ವಿತೀಯಃ ಸನ್ ಉತ್ತರೇಣೋದಯಾದಿತ್ಯರ್ಥಃ ॥ –(ಸ.)

೪. ತತೋ ರಾಮಶ್ಚಕೃಷ್ಣಶ್ಚ ಮತಿಂ ಚಕ್ರತುರಂಜಸಾ ।
ಆಯುಧಾನಾಂ ಪುರಾಣಾನಾಮಾದಾನೇ ಮುನಿಸತ್ತಮ ॥
ಅನಂತರಂ ಹರೇಃ ಶಾರ್ಙ್ಗಂ ತೂಣೌ ಚಾಕ್ಷಯಸಾಯಕೌ ।
ಆಕಾಶಾದಾಗತೌ ವಿಪ್ರ ತಥಾ ಕೌಮೋದಕೀ ಗದಾ ॥
ಹಲಂ ಚ ಬಲಭದ್ರಸ್ಯ ಗಗನಾದಾಗತಂ ಮಹತ್ ॥
ಮನಸೋಽಭಿಮತಂ ವಿಪ್ರ ಸುನಂದಂ ಮುಸಲಂ ತಥಾ ॥
–ವಿಷ್ಣುಪುರಾಣ (೫/೨೨/೫,೭); ಹರಿವಂಶ (೨/೩೫/೫೬/೬೧)

೩) ಶಾರ್ಙ್ಗವೆಂದರೆ ಕೃಷ್ಣನ ಧನುಸ್ಸು; ಖಡ್ಗದ ಹೆಸರು ನಂದಕ; ಚಕ್ರ ಸುದರ್ಶನ; ಶಂಖ ಪಾಂಚಜನ್ಯ; ಗದೆ ಕೌಮೋದಕಿ. ಅವುಗಳ ಹಾಗೂ ಅವುಗಳ ಅಭಿಮಾನಿದೇವತೆಗಳ ವಿವರ ಮೂರನೆಯ ಅಧ್ಯಾಯದಲ್ಲಿ ಈಗಾಗಲೇ ಬಂದಿದೆ. ಅವುಗಳ ಅಭಿಮಾನಿದೇವತೆಗಳು ಕೃಷ್ಣಸೇವೆಗೆಂದು ಹಾಗೆ ಧಾವಿಸಿಬಂದರು ಎಂದು ತಾತ್ಪರ್ಯ.

೪) ಹಲ(ನೇಗಿಲು), ಮುಸಲ(ಒನಕೆ)ಗಳು ಬಲರಾಮನ ಆಯುಧಗಳು.

ಆರುಹ್ಯ ಭೂಮಯರಥಂ ಪ್ರತಿಯುಕ್ತಮಶ್ವೈ-
ರ್ವೇದಾತ್ಮಕೈರ್ಧನುರಧಿಜ್ಯಮಥ ಪ್ರಗೃಹ್ಯ ।
ಶಾರ್ಙ್ಗಂ ಶರಾಂಶ್ಚ ನಿಶಿತಾನ್ ಮಗಧಾಧಿರಾಜ-
ಮುಗ್ರಂ ನೃಪೇಂದ್ರಸಹಿತಂ ಪ್ರಯಯೌ ಜವೇನ ॥ ೨೨ ॥

ಅ: ವೇದಸ್ವರೂಪವಾದ ಅಶ್ವಗಳನ್ನು ಹೂಡಿದ್ದ ಭೂಮ್ಯಾತ್ಮಕವಾದ ರಥವನ್ನು ಏರಿ, ಶ್ರೀಕೃಷ್ಣ ಹೆದೆಯೇರಿಸಿದ್ದ ಶಾರ್ಙ್ಗಧನುಸ್ಸನ್ನೂ, ತೀಕ್ಷ್ಣಬಾಣಗಳನ್ನೂ ಕೈಗೆತ್ತಿಕೊಂಡು, ಶ್ರೇಷ್ಠರಾಜರುಗಳಿಂದ ಕೂಡಿದ್ದ ಕ್ರೂರಿಯಾದ ಜರಾಸಂಧನ ಮೇಲೆ ವೇಗದಿಂದ ಹೊರಟ.

ವಿ: ೧) ಶ್ರೀಕೃಷ್ಣನ ಆಯುಧಗಳು ರಮಾ, ವಾಯು ಮೊದಲಾದ ದೇವತೆಗಳಿಂದ ಅಭಿಮನ್ಯಮಾನವಾಗಿದ್ದಂತೆ, ಅವನು ಕುಳಿತಿದ್ದ ರಥ ಭೂಮ್ಯಾತ್ಮಕವಾಗಿತ್ತು, ಅದಕ್ಕೆ ಹೂಡಿದ್ದ ಅಶ್ವಗಳು ವೇದಮಯವಾಗಿದ್ದವು ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ. ಪರಶುರಾಮರ ರಥವೂ ಇದರಂತೆಯೇ ಇದ್ದ ವಿವರ ಈಗಾಗಲೇ ಬಂದಿದೆ (೧೧/೯೫ರ ವಿವರಣೆ).

೨) ಜರಾಸಂಧನೊಂದಿಗೆ ಬಂದಿದ್ದ ರಾಜರುಗಳಲ್ಲಿ ಬಾಹ್ಲೀಕ, ಶಲ್ಯ, ದ್ರುಪದ, ವಿರಾಟ–ನಂತಹ ಸಾತ್ತ್ವಿಕರಾಜರುಗಳೂ ಇದ್ದದ್ದರಿಂದ ಇಲ್ಲಿ 'ನೃಪೇಂದ್ರಸಹಿತ' ಎಂಬ ಮಾತು ಯುಕ್ತವಾಗಿದೆ.

ರಾಮಃ[೧] ಪ್ರಗೃಹ್ಯ ಮುಸಲಂ ಸ ಹಲಂ ಚ ಯಾನ-
ಮಾಸ್ಥಾಯ ಸಾಯಕಶರಾಸನತೂಣಯುಕ್ತಃ ।
ಸೈನ್ಯಂ ಜರಾಸುತಸುರಕ್ಷಿತಮಭ್ಯಧಾವ-
ದ್ದರ್ಪಾನ್ನದನ್ನುರುಬಲೋಽರಿಬಲೈರಧೃಷ್ಯಃ ॥ ೨೩ ॥

ಅ: ಮಹಾಬಲಶಾಲಿಯೂ, ಶತ್ರುಸೈನ್ಯಕ್ಕೆ ಮಣಿಯದವನೂ ಆದ ಬಲರಾಮ ಮುಸಲ, ಹಲಗಳನ್ನು ಕೈಗೆತ್ತಿಕೊಂಡು, ಬಾಣ, ಧನುಸ್ಸು, ಬತ್ತಳಿಕೆಗಳನ್ನು ಧರಿಸಿ, ರಥವನ್ನೇರಿ ಜರಾಸಂಧನಿಂದ ಪಾಲಿತವಾಗಿದ್ದ ಸೇನೆಯನ್ನು ಸಂಭ್ರಮದಿಂದ ಎದುರಿಸಿ ಹೊರಟ.

ಉದ್ವೀಕ್ಷ್ಯ ಕೃಷ್ಣಮಭಿಯಾಂತಮನಂತಶಕ್ತಿಂ
ರಾಜೇಂದ್ರವೃಂದಸಹಿತೋ ಮಗಧಾಧಿರಾಜಃ ।
ಉದ್ವೇಲಸಾಗರವದಾಶ್ವಭಿಯಾಯ[೨] ಕೋಪಾ-
ನ್ನಾನಾವಿಧಾಯುಧವರೈರಭಿವರ್ಷಮಾಣಃ ॥ ೨೪ ॥

ಅ: ತನ್ನೆಡೆಗೆ ಧಾವಿಸಿದ ಅನಂತಶಕ್ತಿಯ ಶ್ರೀಕೃಷ್ಣನನ್ನು ಕಂಡು ರಾಜಶ್ರೇಷ್ಠರುಗಳ ಗುಂಪಿನೊಂದಿಗೆ ಕೂಡಿದ ಮಗಧಾಧಿರಾಜನಾದ ಜರಾಸಂಧ ಬಗೆಬಗೆಯ ಶ್ರೇಷ್ಠ ಆಯುಧಗಳ ಮಳೆಗರೆಯುತ್ತಾ ಮೇರೆ ಮೀರಿದ ಸಾಗರದಂತೆ ಕೋಪದಿಂದ ತ್ವರೆಯಿಂದ ಎದುರಿಸಿ ಹೊರಟ.

ಉಗ್ರಸೇನನ ಮೂಲಕ ಜರಾಸಂಧನ ಪರಾಭವ

ತಂ ವೈ ಚುಕೋಪಯಿಷುರಗ್ರತ ಉಗ್ರಸೇನಂ
ಕೃಷ್ಣೋ ನಿಧಾಯ ಸಮಗಾತ್ ಸ್ವಯಮಸ್ಯ ಪಶ್ಚಾತ್ ।
ದೃಷ್ಟ್ವಾಽಗ್ರತೋ ಮಗಧರಾಟ್ ಸ್ಥಿತಮುಗ್ರಸೇನಂ
ಕೋಪಾಚ್ಚಲತ್ತನುರಿದಂ ವಚನಂ ಬಭಾಷೇ ॥ ೨೫ ॥

ಅ: ಅವನನ್ನು ಕೆರಳಿಸಬಯಸಿದ್ದ ಶ್ರೀಕೃಷ್ಣ ಉಗ್ರಸೇನನ್ನು ಮುಂದಿಟ್ಟುಕೊಂಡು, ಅವನ ಹಿಂದೆ ಸ್ವತಃ ತಾನೇ ತೆರಳಿದ. ಜರಾಸಂಧ ಎದುರಿನಲ್ಲಿ ಉಗ್ರಸೇನ ನಿಂತಿದ್ದನ್ನು ಕಂಡು, ಕೋಪದಿಂದ ದೇಹ ನಡುಗುತ್ತಾ ಈ ಮಾತನ್ನಾಡಿದ.

ವಿ: ೧) ತನ್ನಂತಹ ಮಹಾವೀರನ ಎದುರು, ಉಗ್ರಸೇನನಂತಹ ದುರ್ಬಲನಾದ ವೃದ್ಧನನ್ನು ಕೃಷ್ಣ ಕಳುಹಿಸಿದ್ದನ್ನು ಕಂಡು ಜರಾಸಂಧನಿಗೆ ರೇಗಿಹೋಯಿತು. ಅದರಿಂದಾಗಿ ದೇಹ ನಡುಗಿದ ಜರಾಸಂಧ ಹೀಗೆಂದ. ಅವನನ್ನು ಹೀಗೆ ರೇಗಿಸಲೆಂದೇ ಕೃಷ್ಣ ಹಾಗೆ ಮಾಡಿದ್ದನಲ್ಲವೆ!.

---

೧. ರಾಮಃ ಪ್ರಗೃಹ್ಯೇತಿ–
ಸಖ್ಯೇನ ಸಾತ್ವತಾಂ ಶ್ರೇಷ್ಠೋ ಜಗ್ರಾಹ ಮುಸಲೋತ್ತಮಮ್ ।
ಸೌನಂದಂ ಚ ತತಃ ಶ್ರೀಮಾನ್ ನಿರಾನಂದಕರಂ ದ್ವಿಷಾಮ್ ।
ಹಲಂ ಸಂವರ್ತಕಂ ನಾಮ ಸೌನಂದಂ ಮುಸಲಂ ತಥಾ ॥ ಇತಿ ಹರಿವಂಶೇ ।' –(ಮ.)

೨. ಆಶು ಅಭಿ= ಅಭಿತಃ ಯಾಯ= ಪ್ರಾಪ್ತ । ''ಯಾ ಪ್ರಾಪಣ'' ಇತಿ ಧಾತೋಃ ಅಭಿಧಾಯೇತಿವತ್ ಲ್ಯಬಂತಮಿದಂ ಪದಮ್ । ಕ್ರಿಯಾತ್ವೇ ತು ಅಭೀಯಾಯೇತಿ ಸ್ಯಾತ್ । ಅಭಿವರ್ಷಮಾಣೋ ಬಭೂವೇತಿ ಯೋಗ್ಯಪದಾಧ್ಯಾಹಾರಃ ॥ –(ವಾ.)

ಪಾಪಾಪಯಾಹಿ ಪುರತೋ ಮಮ ರಾಜ್ಯಕಾಮ
ನಿರ್ಲಜ್ಜ ಪುತ್ರವಧಕಾರಣ ಶತ್ರುಪಕ್ಷ ।
ತ್ವಂ ಜೀರ್ಣಬಸ್ತಸದೃಶೋ[೧] ನ ಮಯೇಹ ವಧ್ಯಃ
ಸಿಂಹೋ ಹಿ ಸಿಂಹಮಭಿಯಾತಿ ನ ವೈ ಸೃಗಾಲಮ್ ॥ ೨೬ ॥

ಅ: ''ಎಲೈ ಪಾಪಿಯೇ! ರಾಜ್ಯಕಾಮುಕನೆ! ಲಜ್ಜೆ ಇಲ್ಲದವನೆ! ಪುತ್ರನ ಸಾವಿಗೆ ಕಾರಣನಾದವನೆ! ಶತ್ರುಪಕ್ಷ ವಹಿಸಿದವನೆ! ನನ್ನೆದುರಿನಿಂದ ತೊಲಗು; ಮುದಿಮೇಕೆ-ಯಂತಿರುವ ನಿನ್ನನ್ನು ನಾನು ಕೊಲ್ಲಲಾರೆ. ಸಿಂಹ ಎದುರಿಸುವುದು ಸಿಂಹವನ್ನೇ ಹೊರತು ನರಿಯನ್ನಲ್ಲವಷ್ಟೆ!''.

ವಿ: ನಿಜಕ್ಕೂ ರಾಜ್ಯಕಾಮನಾಗಿ ನಿರ್ಲಜ್ಜೆಯಿಂದ ಪಿತೃದ್ರೋಹವನ್ನೆಸಗಿ ಶತ್ರುಪಕ್ಷವೆಸಗಿ–ದವನು ಕಂಸ. ಉಗ್ರಸೇನ ಕೃಷ್ಣನ ದಯೆಯಿಂದ ಕಂಸ ಬಂಧನದಿಂದ ಪಾರಾಗಿ, ಉನ್ನತಿ ಪಡೆದಿರುವನು. ಪಾಪಿಯಾದ ಜರಾಸಂಧ ವಿನಾಕಾರಣ ಅವನನ್ನು ದೂಷಿಸುವ ಮೂಲಕ ಭಾಗವತರ ದ್ರೋಹಕ್ಕೂ ಗುರಿಯಾಗುತ್ತಿರುವನು ಎಂದು ತಿಳಿಯಬೇಕು. ಪ್ರಹ್ಲಾದನನ್ನು ದೂಷಿಸಿ, ಹಿರಣ್ಯಕಶಿಪು ವಧ್ಯನಾದಂತೆ, ಉಗ್ರಸೇನನನ್ನು ದೂಷಿಸುವ ಮೂಲಕ ಜರಾಸಂಧನೂ ವಿಶೇಷವಾಗಿ ಪತನದಂಚಿಗೆ ಸಾಗುತ್ತಿರುವನು ಎಂಬ ವಿಷಯವೂ ಇಲ್ಲಿ ಸೂಚಿತ.

ಆಕ್ಷಿಪ್ತ ಇತ್ಥಮಮುನಾಽಥ ಸ ಭೋಜರಾಜ-
ಸ್ತೂಣಾತ್ ಪ್ರಗೃಹ್ಯ ನಿಶಿತಂ ಶರಮಾಶು ತೇನ ।
ಛಿತ್ವಾ ಜರಾಸುತಧನುರ್ಬಲವಾನ್ ನನಾದ
ವಿವ್ಯಾಧ ಸಾಯಕಗಣೈಶ್ಚ ಪುನಸ್ತಮುಗ್ರೈಃ ॥ ೨೭ ॥

ಅ: ಅವನಿಂದ ಹೀಗೆ ಆಕ್ಷೇಪಿಸಲ್ಪಟ್ಟ ಬಲಶಾಲಿಯಾದ ಉಗ್ರಸೇನ ಬೇಗನೆ ಬತ್ತಳಿಕೆಯಿಂದ ಹರಿತವಾದ ಬಾಣವನ್ನು ತೆಗೆದುಕೊಂಡು, ಅದರಿಂದ ಜರಾಸಂಧನ ಧನುಸ್ಸನ್ನು ಕತ್ತರಿಸಿ, ಸಿಂಹನಾದ ಮಾಡಿದ ಮತ್ತು ತೀಕ್ಷ್ಣವಾದ ಬಾಣಗಳ ಗುಂಪಿನಿಂದ ಅವನನ್ನು ನೋಯಿಸಿದ.

ವಿ: ಕೃಷ್ಣ ಉಗ್ರಸೇನನನ್ನು ಹೀಗೆ ಮುಂದೆ ಮಾಡಿಕೊಂಡು ಬಂದದ್ದು 'ಭಕುತಜನ ಮುಂದೆ ನೀನವರ ಹಿಂದೆ' ಎಂಬ ದಾಸವಾಣಿಗೆ ನಿದರ್ಶನ. ಕೃಷ್ಣ ಹಿಂದಿರುವ ಧೈರ್ಯದಿಂದ ಉಗ್ರಸೇನ ವೃದ್ಧನಾಗಿದ್ದರೂ ಅಪೂರ್ವಪರಾಕ್ರಮವನ್ನು ತೋರಲು ಸಾಧ್ಯವಾಯಿತು ಎಂದೂ ತಿಳಿಯಬೇಕು.

---

೧. ಬಸ್ತಃ= ಛಾಗಃ ॥ –(ವಾ.)

ಅನ್ಯಚ್ಚರಾಸನವರಂ ಪ್ರತಿಗೃಹ್ಯ ಕೋಪ-
ಸಂರಕ್ತನೇತ್ರಮಭಿಯಾಂತಮುದೀಕ್ಷ್ಯ ಕೃಷ್ಣಃ ।
ಭೋಜಾಧಿರಾಜವಧಕಾಂಕ್ಷಿಣಮುಗ್ರವೇಗಂ
ಬಾರ್ಹದ್ರಥಂ ಪ್ರತಿಯಯೌ ಪರಮೋ ರಥೇನ ॥ ೨೮ ॥

ಅ: ಮತ್ತೊಂದು ಧನುಸ್ಸನ್ನು ಕೈಗೆತ್ತಿಕೊಂಡು, ಕೋಪದಿಂದ ಬಹಳವಾಗಿ ಕೆಂಪಾದ ಕಣ್ಣಿನಿಂದ ಜರಾಸಂಧನು ಉಗ್ರಸೇನನ್ನು ಕೊಲ್ಲುವ ಬಯಕೆಯಿಂದ ಮುನ್ನುಗ್ಗುತ್ತಿದ್ದುದನ್ನು ಕಂಡು ಶ್ರೀಕೃಷ್ಣ ಆ ಉಗ್ರವೇಗದ ಜರಾಸಂಧನನ್ನು ರಥದಿಂದ ಎದುರಿಸಿ ಹೊರಟ.

ವಿ: ತಾನು ತುಚ್ಛೀಕರಿಸಿದ ಉಗ್ರಸೇನನಿಂದ ಅಂತಹ ಪರಾಭವ ಒದಗಿದ್ದನ್ನು ಕಂಡು ಕೆರಳಿದ ಜರಾಸಂಧ ಅವನನ್ನು ಕೊಲ್ಲಲೆಂದು ಧಾವಿಸಿದ್ದನ್ನು ಕಂಡು ಶ್ರೀಕೃಷ್ಣ ತಾನು ಮುಂದೆ ಬಂದು ಉಗ್ರಸೇನನನ್ನು ರಕ್ಷಿಸಿದ ಎಂದರ್ಥ. ಇದು ಶ್ರೀಕೃಷ್ಣನ ಭಕ್ತವಾತ್ಸಲ್ಯಕ್ಕೂ ದ್ಯೋತಕ.

ಶ್ರೀಕೃಷ್ಣನಿಂದ ಜರಾಸಂಧನ ಪರಾಭವ

ಆಯಾಂತಮೀಕ್ಷ್ಯ ಭಗವಂತಮನಂತಶಕ್ತಿಂ
ಚೇದೀಶಪೌಂಡ್ರಮುಖರಾಜಗಣೈಃ ಸಮೇತಃ ।
ನಾನಾವಿಧಾಸ್ತ್ರವರಶಸ್ತ್ರಗಣೈರ್ವವರ್ಷ
ಮೇರುಂ ಯಥಾ ಘನ ಉದೀರ್ಣರವೋ[೧] ಜಲೌಘೈಃ ॥ ೨೯ ॥

ಅ: ಅನಂತಶಕ್ತಿಯ ಭಗವಂತನಾದ ಕೃಷ್ಣ ಎದುರಿಸಿ ಬಂದದ್ದನ್ನು ಕಂಡು ಶಿಶುಪಾಲ, ಪೌಂಡ್ರಕ ಮೊದಲಾದ ರಾಜರ ಗುಂಪುಗಳೊಂದಿಗೆ ಕೂಡಿಕೊಂಡು ಜರಾಸಂಧ, ಜಲಧಾರೆ-ಗಳಿಂದ ಉಚ್ಚಧ್ವನಿಯಿಂದ ಗುಡುಗುವ ಮೋಡ ಮೇರುಪರ್ವತದ ಮೇಲೆ ಮಳೆಗರೆಯುವಂತೆ ಬಗೆಬಗೆಯ ಅಸ್ತ್ರಗಳನ್ನೂ, ಶ್ರೇಷ್ಠಶಸ್ತ್ರಸಮೂಹಗಳನ್ನೂ ಕೃಷ್ಣನ ಮೇಲೆ ಸುರಿಸಿದ.

ವಿ: ಜರಾಸಂಧನ ಶಸ್ತ್ರಾಸ್ತ್ರವೃಷ್ಟಿ ಮೇರುಪರ್ವತದ ಮೇಲೆ ಸುರಿದ ಮಳೆಯಂತೆ ವಿಫಲವಾಯಿತು ಎಂಬುದು ಇಲ್ಲಿಯ ಭಾವ. 'ಗೋರ್ಕಲ್ಲ ಮೇಲೆ ಮಳೆ ಸುರಿದಂತೆ' ಎಂಬುದು ಪ್ರಸಿದ್ಧ ಮಾತು. ಇಲ್ಲಿ ಮೇರುಪರ್ವತದ ಮೇಲೆ ಮಳೆ ಸುರಿಸಿದಂತೆ ಎನ್ನುವ ಮೂಲಕ ಶ್ರೀಕೃಷ್ಣನ ಮೇಲೆ ಸುರಿಸಿದ ಶಸ್ತ್ರಾಸ್ತ್ರ ಎಷ್ಟು ನಿರರ್ಥಕ ಎಂಬುದು ಪರಿಣಾಮಕಾರಿಯಾಗಿ ನಿರೂಪಿತವಾಗಿದೆ.

---

೧. ಉದೀರ್ಣರವಃ ಉಚ್ಚಧ್ವನಿಃ । –(ಜ.)

ಶಸ್ತ್ರಾಸ್ತ್ರವೃಷ್ಟಿಮಭಿತೋ ಭಗವಾನ್ ವಿವೃಶ್ಚ್ಯ
ಶಾರ್ಙ್ಗೋತ್ಥಸಾಯಕಗಣೈರ್ವಿರಥಾಶ್ವಸೂತಮ್ ।
ಚಕ್ರೇ ನಿರಾಯುಧಮಸೌ ಮಗಧೇಂದ್ರಮಾಶು
ಚ್ಛಿನ್ನಾತಪತ್ರವರಕೇತುಮಚಿಂತ್ಯಶಕ್ತಿಃ ॥ ೩೦ ॥

ಅ: ಶಾರ್ಙ್ಗಧನುಸ್ಸಿನಿಂದ ಸುರಿದ ಬಾಣಗಳ ಮೂಲಕ ಎಲ್ಲೆಡೆಗಳಿಂದಲೂ ಅಚಿಂತ್ಯಶಕ್ತಿ-ಶಾಲಿಯಾದ ಶ್ರೀಕೃಷ್ಣ ಜರಾಸಂಧನ ಶಸ್ತ್ರಾಸ್ತ್ರವೃಷ್ಟಿಯನ್ನು ನಾಶಮಾಡಿದ. ಅವನನ್ನು ವಿರಥ-ನನ್ನಾಗಿಯೂ, ಅಶ್ವಸೂತಗಳಿಂದ ರಹಿತನನ್ನಾಗಿಯೂ, ನಿರಾಯುಧನನ್ನಾಗಿಯೂ ಮಾಡಿ, ಅವನ ಛತ್ರವನ್ನೂ, ಶ್ರೇಷ್ಠಪತಾಕೆಗಳನ್ನೂ ಕತ್ತರಿಸಿಹಾಕಿದ.

ಜರಾಸಂಧನ ಅನುಯಾಯಿಗಳ ಶೋಚನೀಯ ಸ್ಥಿತಿ

ನೈನಂ ಜಘಾನ ಭಗವಾನ್ ಸುಶಕಂ ಚ ಭೀಮೇ
ಭಕ್ತಿಂ ನಿಜಾಂ ಪ್ರಥಯಿತುಂ ಯಶ ಉಚ್ಚಧರ್ಮಮ್ ।
ಚೈದ್ಯೇಶಪೌಂಡ್ರಕಸಕೈಚಕಮದ್ರರಾಜ-
ಸಾಲ್ವೈಕಲವ್ಯಕಮುಖಾನ್ ವಿರಥಾಂಶ್ಚಕಾರ ॥ ೩೧ ॥

ಅ: ಭೀಮನಲ್ಲಿ ತನ್ನಲ್ಲಿನ ಸಹಜಭಕ್ತಿಯನ್ನೂ, ಯಶಸ್ಸನ್ನೂ, ಶ್ರೇಷ್ಠಧರ್ಮವನ್ನೂ ಪ್ರಕಟಿಸಲೆಂದು ಭಗವಂತನಾದ ಶ್ರೀಕೃಷ್ಣ ತನಗೆ ತುಂಬ ಸುಲಭವಾಗಿದ್ದರೂ, ಆ ಜರಾಸಂಧನನ್ನು ಸಂಹರಿಸಲಿಲ್ಲ. ಚೇದಿರಾಜನಾದ ಶಿಶುಪಾಲ, ಪೌಂಡ್ರಕವಾಸುದೇವ, ಕೀಚಕ, ಶಲ್ಯರಾಜ, ಸಾಲ್ವರಾಜ, ಏಕಲವ್ಯ ಮೊದಲಾದವರನ್ನು ವಿರಥರನ್ನಾಗಿಸಿದ.

ಯೇ ಚಾಪಿ ಹಂಸಡಿಭಕದ್ರುಮರುಗ್ಮಿಮುಖ್ಯಾ
ಬಾಹ್ಲೀಕಭೌಮಸುತಮೈಂದಪುರಃಸರಾಶ್ಚ ।
ಸರ್ವೇ ಪ್ರದುದ್ರುವುರಜಸ್ಯ ಶರೈರ್ವಿಭಿನ್ನಾ
ಅನ್ಯೇ ಚ ಭೂಮಿಪತಯೋ ಯ ಇಹಾಸುರುರ್ವ್ಯಾಮ್ ॥ ೩೨ ॥

ಅ: ಹಂಸ, ಡಿಭಿಕ, ದ್ರುಮ, ರುಗ್ಮಿ ಮೊದಲಾದವರು, ಬಾಹ್ಲೀಕ, ಭಗದತ್ತ, ಮೈಂದ ಮುಂತಾದವರು, ಅದರಂತೆ ಅಲ್ಲಿ ನೆರೆದಿದ್ದ ಭೂಮಿಯ ಮೇಲಿನ ಇತರ ರಾಜರುಗಳು ಸಹ ಅಜನಾದ ಶ್ರೀಹರಿಯ ಬಾಣಗಳಿಂದ ಪೆಟ್ಟುತಿಂದು, ಪಲಾಯನ ಮಾಡಿದರು.

---

೧. ಭೀಮೇ ವಿದ್ಯಮಾನಾಂ ನಿಜಾಂ ಭಕ್ತಿಂ= ಸಹಜಾಂ ಸ್ವವಿಷಯಾಂ ವಾ ಭಕ್ತಿಮಿತಿ ಸಂಬಂಧಃ ॥ – (ವಾ.)

ಛಿನ್ನಾಯುಧಧ್ವಜಪತಾಕರಥಾಶ್ವಸೂತ-
ವರ್ಮಾಣ ಉಗ್ರಶರತಾಡಿತಭಿನ್ನಗಾತ್ರಾಃ ।
ಸ್ರಸ್ತಾಂಬರಾಭರಣಮೂರ್ಧಜಮಾಲ್ಯಹೀನಾ
ರಕ್ತಂ ವಮಂತ ಉರು ದುದ್ರುವುರಾಶು ಭೀತಾಃ ॥ ೩೩ ॥

ಅ: ಅವರೆಲ್ಲ ಆಯುಧ, ಧ್ವಜ, ಪತಾಕೆ, ರಥ, ಕುದುರೆ, ಸಾರಥಿ, ಕವಚ ಮೊದಲಾದವುಗಳನ್ನೆಲ್ಲ ಕಳೆದುಕೊಂಡರು; ತೀಕ್ಷ್ಣವಾದ ಬಾಣಗಳ ಹೊಡೆತದಿಂದ ಅವರ ಶರೀರ ಗಾಯಗೊಂಡವು; ಅವರ ಮೈಮೇಲಿಂದ ವಸ್ತ್ರ ಆಭರಣ, ಕಿರೀಟ, ಮಾಲೆಗಳು ಜಾರಿದವು; ಬಹಳವಾಗಿ ರಕ್ತ ಕಾರುತ್ತಾ ಭಯಗೊಂಡವರಾಗಿ ಅವರೆಲ್ಲ ಕೂಡಲೆ ಓಡತೊಡಗಿದರು.

ಶೋಚ್ಯಾಂ ದಶಾಮುಪಗತೇಷು ನೃಪೇಷು ಸರ್ವೇ-
ಷ್ವಾತ್ತಾಯುಧೇಷು ಹರಿಣಾ ಯುಧಿ ವಿದ್ರವತ್ಸು ।
ನಾನಾಯುಧಾಢ್ಯಮಪರಂ ರಥಮುಗ್ರವೀರ್ಯ
ಆಸ್ಥಾಯ ಮಾಗಧಪತಿಃ ಪ್ರಸಸಾರ ರಾಮಮ್ ॥ ೩೪ ॥

ಅ: ಎಲ್ಲ ರಾಜರೂ ಯುದ್ಧದಲ್ಲಿ ಶ್ರೀಕೃಷ್ಣನಿಂದ ಆಯುಧಹೀನರಾಗಿ ಶೋಚನೀಯವಾದ ಸ್ಥಿತಿಯನ್ನು ತಲುಪಿ ಪಲಾಯನ ಮಾಡತೊಡಗಲು ಉಗ್ರವೀರ್ಯನಾದ ಜರಾಸಂಧ ಬಗೆಬಗೆಯ ಆಯುಧಗಳಿಂದ ತುಂಬಿದ್ದ ಬೇರೊಂದು ರಥವನ್ನೇರಿ ಬಲರಾಮನೆಡೆಗೆ ನುಗ್ಗಿದ.

ವಿ: ಶ್ರೀಕೃಷ್ಣನಿಂದ ತನ್ನ ರಾಜರಿಗಾದ ಅಂಥಹ ಪರಾಭವವನ್ನು ಕಂಡು ಜರಾಸಂಧ ಕೃಷ್ಣನೊಂದಿಗೆ ಕಾದಲು ಧೈರ್ಯ ಸಾಲದೆ ಬಲರಾಮನೆಡೆಗೆ ಧಾವಿಸಿದ ಎಂದರ್ಥ.

ಬಲರಾಮನಿಂದ ಜರಾಸಂಧನ ಪರಾಭವ

ಆಧಾವತೋಽಸ್ಯ ಮುಸಲೇನ ರಥಂ ಬಭಂಜ
ರಾಮೋ ಗದಾಮುರುತರೋರಸಿ ಸೋಽಪಿ ತಸ್ಯ ।
ಚಿಕ್ಷೇಪ ತಂ ಚ ಮುಸಲೇನ ತತಾಡ ರಾಮ-
ಸ್ತಾವುತ್ತಮೌ ಬಲವತಾಂ ಯುಯುಧಾತ ಉಗ್ರಮ್ ॥ ೩೫ ॥

ಅ: ಧಾವಿಸಿ ಬರುತ್ತಿದ್ದ ಜರಾಸಂಧನ ರಥವನ್ನು ಬಲರಾಮ ಮುಸಲದಿಂದ ಪುಡಿಮಾಡಿದ. ಅವನು ಬಲರಾಮನ ವಿಶಾಲವಾದ ಎದೆಯ ಮೇಲೆ ಗದೆಯನ್ನೆಸೆದ. ಬಲರಾಮ ಅವನನ್ನು ತನ್ನ

ಮುಸಲದಿಂದ ಬಡಿದ. ಬಲಶಾಲಿಗಳಲ್ಲಿ ಉತ್ತಮರಾದ ಬಲರಾಮಜರಾಸಂಧರು ಭಯಂಕರ-ವಾಗಿ ಹೋರಾಡತೊಡಗಿದರು.

ವಿ: ಜರಾಸಂಧನಿಗೆ ವರಬಲವಾದರೆ ಬಲರಾಮನಲ್ಲಿ ಶ್ರೀಹರಿಯ ಶುಕ್ಲಕೇಶಾವೇಶದ ಬಲ. ಹೀಗಾಗಿ ಅವರಿಬ್ಬರ ಯುದ್ಧ ತುಂಬ ರೋಚಕವಾಗಿದ್ದಿತು ಎಂದರ್ಥ.

ತೌ ಚಕ್ರತುಃ ಪುರುನಿಯುದ್ಧಮಪಿ ಸ್ಮ ತತ್ರ
ಸಂಚೂರ್ಣ್ಯ ಸರ್ವಗಿರಿವೃಕ್ಷಶಿಲಾಸಮೂಹಾನ್ ।
ದೀರ್ಘಂ ನಿಯುದ್ಧಮಭವತ್ ಸಮಮೇತಯೋಸ್ತು
ವಜ್ರಾದ್ದೃಢಾಂಗತಮಯೋರ್ಬಲಿನೋರ್ನಿತಾಂತಮ್ ॥ ೩೬ ॥

ಅ: ಅವರಿಬ್ಬರು ಅಲ್ಲಿ ಸಕಲ ಬೆಟ್ಟ, ವೃಕ್ಷ, ಬಂಡೆಗಳ ಸಮೂಹಗಳನ್ನು ಪುಡಿಗೈಯುತ್ತಾ ದೊಡ್ಡದಾದ ದ್ವಂದ್ವಯುದ್ಧವನ್ನು ಮಾಡಿದರು. ವಜ್ರಕ್ಕಿಂತ ತುಂಬ ಗಟ್ಟಿಯಾದ ದೇಹ ಹೊಂದಿದ, ತುಂಬ ಬಲಶಾಲಿಗಳಾದ ಅವರಿಬ್ಬರಿಗೂ ದೀರ್ಘಕಾಲ ಆ ದ್ವಂದ್ವಯುದ್ಧ ಸಮನಾಗಿಯೇ ನಡೆಯಿತು.

ಶ್ರುತ್ವಾಽಥ ಶಂಖರವಮಂಬುಜಲೋಚನಸ್ಯ
ವಿದ್ರಾವಿತಾನಪಿ ನೃಪಾನಭವೀಕ್ಷ್ಯ ರಾಮಃ ।
ಯುದ್ಧ್ಯಂತಮೀಕ್ಷ್ಯ ಚ ರಿಪುಂ ವವೃಧೇ ಬಲೇನ
ತ್ಯಕ್ತ್ವಾರಿಪುಂ ಮುಸಲಮಾದದ ಆಶ್ವಮೋಘಮ್ ॥ ೩೭ ॥

ಅ: ಬಳಿಕ ಬಲರಾಮ ಪುಂಡರೀಕಾಕ್ಷನಾದ ಶ್ರೀಕೃಷ್ಣನ ಶಂಖಘೋಷವನ್ನು ಕೇಳಿದ ರಾಜ ಪಲಾಯನ ಮಾಡಿದ್ದನ್ನು ನೋಡಿದ; ಶತ್ರುವಾದ ಜರಾಸಂಧ ಇನ್ನೂ ಹೋರಾಡುತ್ತಿದ್ದುದನ್ನು ಗಮನಿಸಿ ತನ್ನ ಬಲವನ್ನು ಹೆಚ್ಚಿಸಿಕೊಂಡ; ಶತ್ರುವನ್ನು ಕೈಬಿಟ್ಟು ಬೇಗನೆ ಅಮೋಘವಾದ ಮುಸಲವನ್ನು ಕೈಗೆತ್ತಿಕೊಂಡ.

ವಿ: ತಾನು ಇವನೊಬ್ಬನ ಜೊತೆಗೆ ಹೋರಾಟ ಮುಗಿಸುವ ಮುನ್ನವೇ ಕೃಷ್ಣ ಉಳಿದೆಲ್ಲ ಶತ್ರುಗಳನ್ನು ಹೊಡೆದೋಡಿಸಿದನ್ನು ಕಂಡು ಬಲರಾಮ ತಾನಿನ್ನು ತಡಮಾಡಬಾರದೆಂದೆನಿಸಿ ಜರಾಸಂಧನನ್ನು ಜೋರಾಗಿ ಹೊಡೆಯಲೆಂದು ಮುಸಲವನ್ನು ಕೈಗೆತ್ತಿಕೊಂಡ ಎಂದರ್ಥ.

---

೧. ಅತಿಶಯೇನ ದೃಢಾಂಗೌ ದೃಢಾಂಗತಮೌ ॥ – (ವಾ.)

ತೇನಾಹತಃ ಶಿರಸಿ ಸಮ್ಮುಮುಹೇ೭ತಿವೇಲಂ
ಬಾರ್ಹದ್ರಥೋ ಜಗೃಹ ಏನಮಥೋ ಹಲೀ ಸಃ ।
ತತ್ಕೈಕಲವ್ಯ ಉತ ಕೃಷ್ಣಶರೈಃ ಪಲಾಯ-
ನ್ನಸ್ತ್ರೈ ರಾಮಶಿರಸಿ ಪ್ರಮುಮೋಚ ಶೀಘ್ರಮ್ ॥ ೩೮ ॥

ಅ: ಬಲರಾಮನಿಂದ ತಲೆಯ ಮೇಲೆ ಪೆಟ್ಟು ತಿಂದ ಜರಾಸಂಧ ಗಾಢ ಮೂರ್ಛೆಗೊಳಗಾದ. ಆಗ ಶ್ರೀಕೃಷ್ಣನ ಬಾಣಗಳಿಂದ ಪಲಾಯನಮಾಡುತ್ತಿದ್ದ ಏಕಲವ್ಯ ತ್ವರೆಯಿಂದ ಬಲರಾಮನ ತಲೆಯ ಮೇಲೆ ಅಸ್ತ್ರಗಳನ್ನು ಪ್ರಯೋಗಿಸಿದ.

ಏ: ಜರಾಸಂಧ ಬಲರಾಮನ ಕೈಸೆರೆಯಾದದ್ದನ್ನು ಕಂಡು ಶ್ರೀಕೃಷ್ಣನಿಂದ ಪೆಟ್ಟುತಿಂದು ಓಡು-ತ್ತಿದ್ದ ಏಕಲವ್ಯ ಜರಾಸಂಧನನ್ನು ರಕ್ಷಿಸಲೆಂದು ಬಲರಾಮನ ಮೇಲೆ ಅಸ್ತ್ರಗಳನ್ನು ಪ್ರಯೋಗಿಸಿದ.

ಪ್ರದ್ಯುಮ್ನನ ಜನನ

ಭೀತೇನ ತೇನ ಸಮರಂ ಭಗವಾನನಿಚ್ಛನ್
ಪ್ರದ್ಯುಮ್ನಮಾಶ್ವಸೃಜದಾತ್ಮಸುತಂ ಮನೋಜಮ್ ।
ಪ್ರದ್ಯುಮ್ನ ಏನಮಭಯಾಯ[೧] ಮಹಾಸ್ತ್ರಜಾಲೈ
ರಾಮಸ್ತು ಮಾಗಧಮಥಾತ್ಮರಥಂ ನಿನಾಯ ॥ ೩೯ ॥

ಅ: ಅಂಜಿದ್ದ ಅವನೊಂದಿಗೆ ಕಾದಲು ಬಯಸದ ಭಗವಂತನಾದ ಕೃಷ್ಣ ಬೇಗನೆ ತನ್ನ ಮಗನಾದ ಪ್ರದ್ಯುಮ್ನನನ್ನು ಮನಸ್ಸಿನಿಂದಲೇ ಸೃಷ್ಟಿಸಿದ. ಪ್ರದ್ಯುಮ್ನನು ಮಹಾಸ್ತ್ರಗಳ ಗುಂಪುಗಳೊಂದಿಗೆ ಏಕಲವ್ಯನ ಮೇಲೆ ನುಗ್ಗಿದ. ಬಲರಾಮನಾದರೋ ಜರಾಸಂಧನನ್ನು ತನ್ನ ರಥಕ್ಕೆ ಎಳೆದೊಯ್ದ.

ಏ: ಪ್ರದ್ಯುಮ್ನನನ್ನು ಹೀಗೆ ಅದ್ಭುತರೀತಿಯಲ್ಲಿ ಸೃಷ್ಟಿಸಿದ್ದು ಶ್ರೀಕೃಷ್ಣನ ಹಿರಿಮೆ. ಸ್ವರೂಪ-ದಲ್ಲೂ ಭಗವಂತನ ಮನಸ್ಸಿನಿಂದ ಜನಿಸಿದ ಮನ್ಮಥ ಇಲ್ಲಿಯೂ ಕೃಷ್ಣನ ಇಚ್ಛಾಮಾತ್ರದಿಂದಲೇ ಜನಿಸಿ ಪುತ್ರನೆನಿಸಿದ. ಹೀಗೆ ಪ್ರದ್ಯುಮ್ನನನ್ನು ಸೃಷ್ಟಿಸುವ ಮೂಲಕ ತಾನು ಸ್ತ್ರೀನಿರಪೇಕ್ಷವಾಗಿ ಸೃಷ್ಟ್ಯಾದಿಗಳನ್ನು ಮಾಡಬಲ್ಲ ಸರ್ವಶಕ್ತ ಎಂದು ಕೃಷ್ಣ ಸಾರಿದ; ಈ ಮೂಲಕ ಶಾಕ್ತಮತವನ್ನೂ ನಿರಾಕರಿಸಿದ ಎಂದು ತಿಳಿಯಬಹುದು.

---

೧. ಅಭಿಯಾಯ = ಅಭಿಮುಖ್ಯೇನ ಗತ್ವಾ । ಅಭಿಧಾಯೇತಿವತ್ ಲ್ಯಬಂತಮಿದಂ ಪದಮ್ । ಮಹಾಸ್ತ್ರಜಾಲೈರ್ವ್ಯಾಧೇತಿ ಯೋಗ್ಯಪದಾಧ್ಯಾಹಾರೇಣ ಸಂಬಂಧಃ ॥ – (ವಾ.)

ಪ್ರದ್ಯುಮ್ನನಿಂದ ಏಕಲವ್ಯನ ಪರಾಭವ

ಯುಧ್ವಾ ಚಿರಂ ರಣಮುಖೇ ಭಗವತ್ಸುತೋಽಸೌ
ಚಕ್ರೇ ನಿರಾಯುಧಮಮುಂ ಸ್ಥಿರಮೇಕಲವ್ಯಮ್ ।
ಅಂಶೇನ ಯೋ ಭುವಮಗಾನ್ಮಣಿಮಾನಿತಿ ಸ್ಮ
ಸ ಕ್ರೋಧತಂತ್ರಕಗಣೇಷ್ವಧಿಪೋ ನಿಷಾದಃ ॥ ೪೦ ॥

ಅ: ಪ್ರದ್ಯುಮ್ನ ಬಹುಕಾಲ ಯುದ್ಧದಲ್ಲಿ ಏಕಲವ್ಯನೊಂದಿಗೆ ಹೋರಾಡಿ ಅವನನ್ನು ಸಂಪೂರ್ಣವಾಗಿ ನಿರಾಯುಧನನ್ನಾಗಿಸಿದ. ನಿಷಾದನಾದ ಏಕಲವ್ಯ ಒಂದಂಶದಿಂದ ಭೂಮಿಯಲ್ಲಿ ಹುಟ್ಟಿಬಂದಿದ್ದ ಕ್ರೋಧವಶಗುಂಪಿನ ಅಧಿಪತಿಯಾಗಿದ್ದ ಮಣಿಮಂತ.

ವಿ: ೧) ಏಕಲವ್ಯ ಕ್ರೋಧವಶರೆಂಬ ದೈತ್ಯರ ಅಧಿಪತಿಯಾದ ಮಣಿಮಂತನ ಅವತಾರ. ಇವನು ಕೃಷ್ಣನಿಂದ ಹತನಾಗುವ ವಿವರ ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ಬರುವುದು (೨೨/೨೨೧).

೨) ಹೊರಗೆ ಭಕ್ತರಂತಿದ್ದು ಒಳಗೆ ಹರಿದ್ವೇಷ ಮಾಡುವ ಅಸುರರನ್ನು [೧]ಕ್ರೋಧವಶ ಎನ್ನುವರು.

ಪ್ರದ್ಯುಮ್ನಮಾತ್ಮನಿ ನಿಧಾಯ ಪುನಃ ಸ ಕೃಷ್ಣಃ
ಸಂಹೃತ್ಯ ಮಾಗಧಬಲಂ ನಿಖಿಲಂ ಶರೌಘೈಃ ।
ಭೂಯಶ್ಚಮೂಮಭಿನೇತುಮುದಾರಕರ್ಮಾ
ಬಾರ್ಹದ್ರಥಂ ತ್ವಮುಚದಕ್ಷಯಪೌರುಷೋಽಜಃ ॥ ೪೧ ॥

ಅ: ಶ್ರೀಕೃಷ್ಣನು ಮರಳಿ ಪ್ರದ್ಯುಮ್ನನನ್ನು ತನ್ನೊಳಗಿರಿಸಿಕೊಂಡ; ಜರಾಸಂಧನ ಸಕಲ ಸೈನ್ಯವನ್ನು ಬಾಣಗಳ ಪ್ರವಾಹದಿಂದ ಸಂಹರಿಸಿದ; ಉತ್ತಮಕರ್ಮಗಳನ್ನು ಮಾಡುವ, ಪ್ರಾಕೃತದೇಹವಿಲ್ಲದ, ಎಂದೂ ಕುಂದದ ಪೌರುಷಶಾಲಿಯಾದ ಅವನು ಪುನಃ ಸೈನ್ಯವನ್ನು ತರಲಿ ಎಂದು ಆ ಜರಾಸಂಧನನ್ನು (ಕೊಲ್ಲದೆ)ಬಿಟ್ಟ.

ವಿ: ೧) ಶ್ರೀಕೃಷ್ಣ ಜರಾಸಂಧನನ್ನು ಸಂಪೂರ್ಣವಾಗಿ ಪರಾಭವಗೊಳಿಸಿದ. ಆದರೂ ಅವನನ್ನು ಕೊಲ್ಲದೇ ಬಿಟ್ಟುಬಿಟ್ಟ. ಅದಕ್ಕೆ ಕಾರಣ ಅಲ್ಲಿಂದ ತೆರಳುವ ಅವನು ಮತ್ತೆಮತ್ತೆ ಸೈನ್ಯವನ್ನು ಒಗ್ಗೂಡಿಸಿಕೊಂಡು ಬರಲಿ. ಅದನ್ನು ತಾನು ಸಂಹರಿಸುವೆ ಎಂಬ ಕಾರಣಕ್ಕಾಗಿ ಮಾತ್ರ

---

೧. ಅಂತರ್ಭಕ್ತಾ ಬಹಿಃ ಕ್ರುದ್ಧಾ ಹಿರಣ್ಯಾದ್ಯಾ ಹರಿಂ ಪ್ರತಿ ।
ಸರ್ವಕ್ರುದ್ಧಾ ಶಂಬರಾದ್ಯಾ ಅಂತಃಕ್ರೋಧವಶಾಸ್ತಥಾ ॥ – ಭಾ.ತಾ. (೩/೧೭/೨೬)

ಎಂದು ಭಾವ. ಶ್ರೀಕೃಷ್ಣ ಅವತರಿಸಿರುವುದು ಭೂಭಾರಹರಣಕ್ಕಾಗಿ. ಜರಾಸಂಧ ಸಂಗ್ರಹಿಸಿ ತರುವುದು ದುಷ್ಟಜನಗಳ ಗುಂಪನ್ನು. ಅವರನ್ನೆಲ್ಲ ಇದ್ದಲ್ಲಿಯೇ ಜರಾಸಂಧ ಒಪ್ಪಿಸುತ್ತಿರುವಾಗ ಅವನನ್ನು ಕೊಲ್ಲದೇ ಬಿಡುವುದೇ ಉಚಿತ. ಯೋಗವೆಂದರೆ ಇದೇ– 'ಯೋಗಃ ಕರ್ಮಸು ಕೌಶಲಮ್'. ಶ್ರೀಕೃಷ್ಣ ಯೋಗೇಶ್ವರನಲ್ಲವೆ! ('**ಯತ್ರ ಯೋಗೇಶ್ವರಃ ಕೃಷ್ಣಃ**'– ಗೀತಾ ೧೮/೭೮).

೨) ಶ್ರೀಕೃಷ್ಣನು ಶಿವಭಕ್ತಾಗ್ರೇಸರನಾದ ಜರಾಸಂಧನನ್ನು ತನ್ನ ಭಕ್ತಾಗ್ರೇಸರನಾದ ಭೀಮನಿಂದ ಕೊಲ್ಲಿಸಲು ಸಂಕಲ್ಪಿಸಿದ್ದುದು ತಾನೇ ಅವನನ್ನು ಕೊಲ್ಲದಿದ್ದುದಕ್ಕೆ ಮತ್ತೊಂದು ಪ್ರಧಾನಕಾರಣ ಎಂಬ ವಿವರ ಮುಂದೆ ಬಂದಿದೆ (೨೧/೧೨೦).

೩) ಹನುಮಂತ ತಾನು ಶಕ್ತನಾಗಿದ್ದರೂ (೭/೨೭) ರಾವಣಕುಂಭಕರ್ಣರನ್ನು ಕೊಲ್ಲದೆ ರಾಮನಿಗೆ ಮೀಸಲಿರಿಸಿದ್ದಂತೆ, ಶ್ರೀಕೃಷ್ಣ ಸಮರ್ಥನಾಗಿದ್ದರೂ ತಾನೇ ಕೊಲ್ಲದೆ ಜರಾಸಂಧನನ್ನು ಭೀಮನಿಗೆ ಮೀಸಲಿಟ್ಟ.

[೧]ವ್ರೀಳಾನತಾಚ್ಛವಿಮುಖಃ ಸಹಿತೋ ನೃಪೈಸ್ತೈ-
ರ್ಬಾರ್ಹದ್ರಥಃ ಪ್ರತಿಯಯೌ ಸ್ವಪುರೀಂ ಸ ಪಾಪಃ ।
ಆತ್ಮಾಭಿಷಿಕ್ತಮಪಿ ಭೋಜವರಾಧಿಪತ್ಯೇ
ದೌಹಿತ್ರಮಗ್ರತ ಉತ ಪ್ರಣಿಧಾಯ ಮಂದಃ ॥ ೪೨ ॥

ಅ: ಜರಾಸಂಧ ನಾಚಿಕೆಯಿಂದ ಕಳೆಗುಂದಿದ ತನ್ನ ಮುಖವನ್ನು ಕೆಳಕ್ಕೆ ಬಾಗಿಸಿದ. ಮೂರ್ಖನಾದ ಅವನು ಭೋಜರ ಅಧಿಪತಿಯನ್ನಾಗಿ ತಾನು ಪಟ್ಟಾಭಿಷೇಕ ಮಾಡಿದ್ದ ತನ್ನ ದೌಹಿತ್ರನನ್ನು ಮುಂದಿಟ್ಟುಕೊಂಡು ತನ್ನ ಪಟ್ಟಣಕ್ಕೆ ಮರಳಿದ.

ವಿ: ೧) ಜರಾಸಂಧ ತನ್ನ ಮಗಳ ಮಗನೊಬ್ಬನನ್ನು ಕಂಸನ ಉತ್ತರಾಧಿಕಾರಿಯನ್ನಾಗಿ ಪಟ್ಟಾಭಿಷೇಕ ಮಾಡಿ ಅವನಿಗೆ ಯದುರಾಜ್ಯ ನೀಡಲೆಂದು ಮಧುರೆಯನ್ನು ಆಕ್ರಮಿಸಿದ್ದ. ಕೃಷ್ಣನಿಂದ ಪರಾಜಿತನಾದ ಅವನು ಭ್ರಷ್ಟಸಂಕಲ್ಪನಾಗಿ ಮೊಮ್ಮಗನನ್ನು ಮುಂದಿರಿಸಿಕೊಂಡು ತನ್ನ ಪಟ್ಟಣಕ್ಕೆ ಮರಳಿದನೆಂದು ಭಾವ. ಈಗ ಮಾತ್ರವಲ್ಲದೇ ಮುಂದೆಂದೂ ಸಹ ಅವನಿಂದ ತನ್ನ ಮೊಮ್ಮಗನಿಗೆ ರಾಜ್ಯಕೊಡಿಸಲು ಸಾಧ್ಯವಾಗಲೇ ಇಲ್ಲ ಎಂಬುದೂ ಗಮನಾರ್ಹ. ಹಾಗೆ ಶ್ರೀಹರಿಯ ವಿರೋಧಿಗಳ ಸಂಕಲ್ಪ ವ್ಯರ್ಥವಾಗುವುದು [೨]ಶಾಸ್ತ್ರಪ್ರಮಿತವಿಚಾರವೇ ಆಗಿದೆ.

---

೧. ಧವಿರಹಿತಮಚ್ಛವಿ ಮುಖಂ ಯಸ್ಯೇತಿ ವಿಗ್ರಹಃ ॥ – (ವಾ.)

೨. ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ।
ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ॥ – ಗೀತಾ (೯/೧೨)

೨) ಜರಾಸಂಧನಿಗೆ ಯುದ್ಧದಲ್ಲಿನ ಸೋಲಿನ ದುಃಖದೊಂದಿಗೆ ತನ್ನ ಸಂಕಲ್ಪಭ್ರಂಶದ ದುಃಖವೂ ಸೇರಿ ನಾಚಿಕೆಯಿಂದ ಮುಖ ಎತ್ತದಂತಾಯಿತೆಂದು ತಾತ್ಪರ್ಯ.

ಜಿತ್ವಾ ತಮೂರ್ಜಿತಬಲಂ ಭಗವಾನಜೇಶ-
ಶಕ್ರಾದಿಭಿಃ ಕುಸುಮವರ್ಷಿಭಿರೀಡ್ಯಮಾನಃ ।
ರಾಮಾದಿಭಿಃ ಸಹಿತ ಆಶು ಪುರೀಂ ಪ್ರವಿಶ್ಯ
ರೇಮೇ ಽಭಿವಂದಿತಪದೋ ಮಹತಾಂ ಸಮೂಹೈಃ ॥ ೪೩ ॥

ಅ: ಆ ಮಹಾಬಲಶಾಲಿಯಾದ ಜರಾಸಂಧನನ್ನು ಜಯಿಸಿದ ಭಗವಂತನಾದ ಶ್ರೀಕೃಷ್ಣನನ್ನು ಬ್ರಹ್ಮರುದ್ರೇಂದ್ರಾದಿದೇವತೆಗಳು ಹೂಮಳೆಗರೆದು ಕೊಂಡಾಡಿದರು. ಶ್ರೀಕೃಷ್ಣನು ಬಲರಾಮಾದಿಗಳೊಂದಿಗೆ ಕೂಡಿ ಬೇಗನೆ ಪಟ್ಟಣವನ್ನು ಪ್ರವೇಶಿಸಿ ಶ್ರೇಷ್ಠಜನರ ಗುಂಪುಗಳಿಂದ ಪರಿಪರಿಯಾಗಿ ನಮಸ್ಕೃತನಾಗಿ ಕ್ರೀಡಿಸಿದ.

ವಿ: ಜರಾಸಂಧ ಬ್ರಹ್ಮಾದಿಗಳ ವರದಿಂದ ಅಜೇಯನೂ, ಅವಧ್ಯನೂ ಆಗಿದ್ದರಿಂದ ಅವನ ಪರಾಭವ ಬ್ರಹ್ಮರುದ್ರಾದಿಗಳಿಂದ ಸ್ತುತ್ಯವಾಯಿತು ಎಂದರ್ಥ.

ಅರ್ಜುನನ ಹದಿನಾಲ್ಕನೆಯ ಹುಟ್ಟುಹಬ್ಬ

ವರ್ಧತ್ಸು ಪಾಂಡುತನಯೇಷು ಚತುರ್ದಶಂ ತು
ಜನ್ಮರ್ಕ್ಷಮಾಸ ತನಯಸ್ಯ ಸಹಸ್ರದೃಷ್ಟೇಃ ।
ಪ್ರತ್ಯಾಬ್ದಿಕಂ[೧] ಮುನಿಗಣಾನ್ ಪರಿವೇಷಯಂತೀ
ಕುಂತೀ ತದಾ ಽಽಸ ಬಹುಕಾರ್ಯಪರಾ(ಽ)ನಯಜ್ಞಾ ॥ ೪೪ ॥

---

೧. ಯದಾ । ಪ್ರತ್ಯಾಬ್ದಿಕಂ ಅಬ್ದಮಬ್ದಂಪ್ರತಿ ಜಾಯಮಾನಮ್ । ಚತುರ್ದಶಂ = ಚತುರ್ದಶಾಬ್ದೇ ವಿದ್ಯಮಾನಮ್ ಜನ್ಮದಿನಂ ಜನ್ಮರ್ಕ್ಷಂ= ಜನ್ಮನಃ ಋಕ್ಷಂ ನಕ್ಷತ್ರಂ ಯತ್ರ ಜನ್ಮದಿನೇ ತತ್ ಜನ್ಮರ್ಕ್ಷಂ ಆಸ । ಜನ್ಮನಕ್ಷತ್ರಯೋಗೇನಾಪಿ ಸಹಿತಂ ಜನ್ಮದಿನಮಾಸ ತದೇತಿ ಸಂಬಂಧಃ ॥ – (ವಾ.)

ತದಾ ಕುಂತೀ ಅನಯಜ್ಞಾ ಆಸ ನ ಯೋ ನೀತಿಸ್ತಾಂ ಜಾನಾತೀತಿ ನಯಜ್ಞಾ ಸಾ ನ ಭವತೀತ್ಯನಯಜ್ಞಾ ಆಸೀತ್ ಪಾಂಡುರಕ್ಷಣನೀತಿಂ ವಿಸ್ಮೃತ್ಯ ಕಾರ್ಯಾಂತರೇ ಆಸಕ್ತಾಽಭೂದಿತ್ಯರ್ಥಃ । ತದೇತದುಕ್ತಮ್ –

ಪೂರ್ಣೇ ಚತುರ್ದಶೇ ವರ್ಷೇ ಫಲ್ಗುನಸ್ಯ ಚ ಧೀಮತಃ ।
ತದಾ ಉತ್ತರಫಲ್ಗುನ್ಯಾಂ ಪ್ರವೃತ್ತೇ ಸ್ವಸ್ತಿವಾಚನೇ ॥
ರಕ್ಷಣೇ ವಿಸ್ಮೃತಾ ಕುಂತೀ ವೃಗ್ಯಾ ಬ್ರಾಹ್ಮಣಭೋಜನೇ ॥
ಪುರೋಹಿತೇನ ಸಹಿತಾ ಬ್ರಾಹ್ಮಣಾನ್ ಪರ್ಯವೇಷಯತ್ ॥ ಇತ್ಯಾದಿಪರ್ವಣಿ(೧೪೪/೧೫) ॥ – (ರಾ.)

ಅ: ಪಾಂಡುಪುತ್ರರು ಬೆಳೆಯುತ್ತಿರಲು ಇಂದ್ರಪುತ್ರನಾದ ಅರ್ಜುನನ ಹದಿನಾಲ್ಕನೆಯ ವರ್ಷದ ಹುಟ್ಟುಹಬ್ಬದಲ್ಲಿ ಜನ್ಮನಕ್ಷತ್ರ ಒದಗಿತ್ತು. ಆಗ ಧರ್ಮಜ್ಞಳಾದ ಕುಂತಿ ಮುನಿಗಣಗಳಿಗೆ ಬಡಿಸುವ ಕಾರ್ಯದಲ್ಲಿ ತೊಡಗಿ ಅನೇಕಕಾರ್ಯಗಳಲ್ಲಿ ಮಗ್ನಳಾಗಿದ್ದಳು.

ವಿ: ಅರ್ಜುನನಿಗೆ ೧೪ ವರ್ಷ ಎಂದರೆ ಯುಧಿಷ್ಠಿರ, ಭೀಮಸೇನ ಮತ್ತು ನಕುಲ ಸಹದೇವರಿಗೆ ಆಗ ಕ್ರಮವಾಗಿ ೧೬, ೧೫ ಹಾಗೂ ೧೩ ವರ್ಷಗಳಾಗಿದ್ದವು. ಅರ್ಜುನನ ಹದಿನಾಲ್ಕನೆಯ ವರ್ಷದ ಹುಟ್ಟು ಹಬ್ಬದ ಸಮಯದಲ್ಲಿ ಜನ್ಮನಕ್ಷತ್ರ ಒದಗಿದ್ದು ಅಂದಿನ ವಿಶೇಷವಾಗಿತ್ತು ಅದಕ್ಕಾಗಿ ವಿಶೇಷ ಉತ್ಸವ ನಡೆದು ಕುಂತಿ ಬ್ರಾಹ್ಮಣಭೋಜನಾದಿಗಳ ವ್ಯವಸ್ಥೆಯಲ್ಲಿ ಮಗ್ನಳಾಗಿದ್ದಳು ಎಂದರ್ಥ.

ಪಾಂಡುರಾಜನ ನಿರ್ಯಾಣ

ತತ್ಕಾಲ ಏವ ನೃಪತಿಃ ಸಹ ಮಾದ್ರವತ್ಯಾ
ಪುಂಸ್ಕೋಕಿಲಾಕುಲಿತಫುಲ್ಲವನಂ ದದರ್ಶ ।
ತಸ್ಮಿನ್ ವಸಂತಪವನಸ್ಪರ್ಶೈಧಿತಃ ಸಃ
ಕಂದರ್ಪಮಾರ್ಗಣವಶಂ ಸಹಸಾ ಜಗಾಮ ॥ ೪೫ ॥

ಅ: ಆ ಸಮಯದಲ್ಲೇ ಪಾಂಡುರಾಜನು ಮಾದ್ರಿಯ ಜೊತೆಗಿದ್ದು ಗಂಡು ಕೋಗಿಲೆಗಳಿಂದ ತುಂಬಿಹೋಗಿದ್ದ ಅರಳಿದ ವನವನ್ನು ಕಂಡ. ಅಲ್ಲಿ ವಸಂತಮಾರುತದ ಸ್ಪರ್ಶದಿಂದ ಉದ್ರೇಕಗೊಂಡವನಾಗಿ ಒಡನೆಯೇ ಕಾಮಬಾಣಕ್ಕೆ ವಶನಾದ.

ವಿ: ೧) ಅರ್ಜುನ ಜನಿಸಿದ್ದು ಫಾಲ್ಗುಣಮಾಸದಲ್ಲಿ, ಅವನ ಜನ್ಮನಕ್ಷತ್ರ ಬಂದಿದ್ದೂ ಆ ಮಾಸದಲ್ಲೇ. ಆಗಿನ್ನೂ ಶಿಶಿರಋತು. ವಸಂತಮಾರುತ ಎಂದು ಕರೆದದ್ದು ಹೇಗೆ ಎಂಬುದಕ್ಕೆ ಸೌರಮಾನರೀತ್ಯಾ ಒಂದೊಮ್ಮೆ ಫಾಲ್ಗುಣಮಾಸದಲ್ಲೂ ವಸಂತಋತು ಬರಲು ಸಾಧ್ಯ ಎಂಬ ವಿವರಣೆ [೧]ಜನಾರ್ದನೀಯದಲ್ಲಿದೆ.

ಜಗ್ರಾಹ ತಾಮಥ ತಯಾ ರಮಮಾಣ ಏವ
ಯಾತೋ ಯಮಸ್ಯ ಸದನಂ ಹರಿಪಾದಸಂಗೀ[೨] ।
ಪೂರ್ವಂ[೩] ಶಚೀರಮಣಮಿಚ್ಛತ ಏಷ ವಿಷ್ಣಂ
ಶಕ್ರಸ್ಯ ತದ್ದರ್ಶನೋಪಗತೋ ಹಿ ಚಕ್ರೇ ॥ ೪೬ ॥

---

೧. ಸೌರಮಾಸಾನುಸಾರೇಣ ಕ್ವಚಿತ್ ಫಾಲ್ಗುನೇ ಮಾಸಿ ವಸಂತರ್ತುರ್ಭವತಿ। –(ಜ.)

ತೇನೈವ ಮಾನುಷಮವ್ಯಾಪ್ಯ ರತಿಸ್ಥ ಏವ
ಪಂಚತ್ವಮಾಪ ರತಿವಿಘ್ನಮಪುತ್ರತಾಂ ಚ ।
ಸ್ವಾತ್ಕೋತ್ತಮೇಷ್ವಥ ಸುರೇಷು ವಿಶೇಷತಶ್ಚ
ಸ್ವಲ್ಪೋಽಪಿ ದೋಷ ಉರುತಾಮಭಿಯಾತಿ ಯಸ್ಮಾತ್ ॥ ೪೭ ॥

ಅ: ಕೂಡಲೆ ಪಾಂಡು ಮಾದ್ರಿಯೊಂದಿಗೆ ಬೆರೆತ. ಅವಳೊಂದಿಗೆ ರಮಿಸುತ್ತಿದ್ದಂತೆಯೇ ಹರಿಪಾದಭಕ್ತನಾಗಿದ್ದ ಅವನು ಯಮಲೋಕವನ್ನು ಸೇರಿದ. ಮೂಲರೂಪದಲ್ಲಿದ್ದಾಗ ಇವನು ಇಂದ್ರನ ದರ್ಶನಕ್ಕೆಂದು ಅವನ ಬಳಿಗೆ ತೆರಳಿ, ಶಚೀಸಂಗಮಕ್ಕೆ ವಿಘ್ನವೆಸಗಿದ್ದ. ಆದ್ದರಿಂದಲೇ ಅವನು ಮನುಷ್ಯನಾಗಿ ಹುಟ್ಟಿ ರತಿಕ್ರೀಡೆಯಲ್ಲಿದ್ದಾಗಲೇ ಮರಣಹೊಂದಿದ. ರತಿಗೆ ವಿಘ್ನವನ್ನೂ ಹೊಂದಿದ; ಸಂತತಿಹೀನನೂ ಆದ. ತನಗಿಂತ ಉತ್ತಮರಾದ ಜನರಲ್ಲಿ ವಿಶೇಷವಾಗಿ ದೇವತೆಗಳಲ್ಲಿ ಮಾಡುವ ಸ್ವಲ್ಪ ಅಪರಾಧವೂ ಬಹಳ ದೊಡ್ಡದಾಗಿ ಬಿಡುತ್ತದೆ ಎಂಬುದೇ ಇದಕ್ಕೆ ಕಾರಣ.

ವಿ: ೧) ಪಾಂಡುರಾಜ ಹಾಗೆ ರತಿಕ್ರೀಡೆಗೆ ತೊಡಗುತ್ತಲೇ ವಿಘ್ನ ಹೊಂದಲು ಮೇಲ್ನೋಟಕ್ಕೆ ಕಿಂದಮಮುನಿಯ ಶಾಪ ಕಾರಣ. ವಸ್ತುತಃ ಅದು ಮುಖ್ಯಕಾರಣವಾಗಿರಲಿಲ್ಲ. ಪಾಂಡುರಾಜ ಪರಾವಹಮರುತ್ತಿನ ಅವತಾರವಾದ್ದರಿಂದ ದೇವತೆಯಾದ ಅವನಿಗೆ, ಅವನಿಗಿಂತ ಕಡಿಮೆಯಾಗಿದ್ದ ಮುನಿಯ ಶಾಪ ತಟ್ಟುವುದು ಸಾಧ್ಯವಿಲ್ಲ. ಅವನು ಹಾಗೆ ರತಿವಿಘ್ನ ಹೊಂದಿ ಮರಣ ಹೊಂದಲು, ಅವನು ಮೂಲರೂಪದಲ್ಲಿ ಒಮ್ಮೆ ಇಂದ್ರನ ಬಳಿಗೆ ಅಕಾಲದಲ್ಲಿ ತೆರಳಿ ರತಿವಿಘ್ನ ಉಂಟುಮಾಡಿದ್ದೇ ಮುಖ್ಯಕಾರಣವಾಗಿತ್ತು ಎಂಬ ಸೂಕ್ಷ್ಮವಿವರ ಇಲ್ಲಿದೆ. ಇದು ಪಾಂಡುರಾಜ ಮನುಷ್ಯಜನ್ಮ ಹೊಂದಲೂ, ಸಾಕ್ಷಾತ್ ಸಂತತಿಯನ್ನು ಹೊಂದದಿರಲೂ, ದೀರ್ಘಕಾಲ ರತಿವಿಘ್ನ ಹೊಂದಲು ಸಹ ಕಾರಣವಾಯಿತು.

೨) ಮೇಲ್ನೋಟಕ್ಕೆ ಇದು ಸಾಮಾನ್ಯ ಅಪರಾಧದಂತೆ ಕಂಡರೂ, ಅದು ನಡೆದದ್ದು ಇಂದ್ರನಂತಹ ಶ್ರೇಷ್ಠದೇವತೆಯ ಬಗ್ಗೆ. ಸ್ವೋತ್ತಮದ್ರೋಹ ಸ್ವಲ್ಪವೇ ಆದರೂ ಹೆಚ್ಚಿನ

---

೨. ರತಿಕಾಲೇ ಮೃತಸ್ಯಾಪಿ ಸುಪುಣ್ಯೈ ರಾಜಭಿಃ ಪ್ರಾಪ್ಯಸ್ಯ ಯಮಸದನಸ್ಯ ಪ್ರಾಪ್ತೌ ಹರಿಪಾದಸಂಗಿತ್ವಮೇವ ಕಾರಣಮಿತಿ ಭಾವಃ । – (ಜ.)

೩. ಪೂರ್ವಂ ಶಚೀರಮಣಮಿತ್ಯತ್ರ । ಶಚ್ಯಾಂ ರಮಣಂ ಕ್ರೀಡಾಂ ಶಚೀರಮಣಮಿತಿ ವಿಗ್ರಹಃ ॥ – (ವಾ.)

೪. ಋಷಿಶಾಪಾನಂತರಂ ಏತಾವತ್ಕಾಲಪರ್ಯಂತಂ ರತೇರಭಾವಾದ್ರತಿವಿಘ್ನಮಿತ್ಯುಕ್ತಮ್ । ಯದ್ಯಪಿ ಋಷಿಶಾಪೋಽಪ್ಯಸ್ತಿ ನಿಮಿತ್ತಮ್ । ತಥಾಽಪಿ ಋಷೇರ್ನಿಗೃಹೀತತ್ವಾತ್ ತಚ್ಛಾಪಃ ನ ಪ್ರಬಲಂ ನಿಮಿತ್ತಂ ಕಿಂತು ಇಂದ್ರಕ್ರೋಧ ಏವ ಮರಣೇ ಮುಖ್ಯನಿಮಿತ್ತಮಿತಿ ಭಾವೇನ ಪೂರ್ವಂ ಶಚೀರಮಣಮಿತ್ಯಾದ್ಯುಕ್ತಮ್ ॥ – (ವಾ.)

ಅನರ್ಥಕ್ಕೆ ಕಾರಣ. ದೇವತಾದ್ರೋಹವಂತೂ ಮಹದನರ್ಥಕ್ಕೇ ಸಾಧನ ಎಂಬುದು ಇದರ ಹಿನ್ನೆಲೆ. ಶ್ರೀರಾಮನ ಪಟ್ಟಾಭಿಷೇಕಕ್ಕೆ ವಿಘ್ನ ಮಾಡುವ ಪ್ರಯತ್ನ ಮಂಥರೆಗೆ ಅಂಧಂತಮಸ್ಸಿಗೆ ಸಾಧನವಾದದ್ದನ್ನು ಇಲ್ಲಿ ಗಮನಿಸಬಹುದು (೫/೨).

೨) ಇಲ್ಲಿ ಪಾಂಡುರಾಜ ಯಮಲೋಕಕ್ಕೆ ತೆರಳಿದ ಎಂಬುದಕ್ಕೆ ಮೃತನಾದ ಎಂದು ಸಾಮಾನ್ಯವಾದ ಅರ್ಥ. ಆದರೆ ಧರ್ಮಿಷ್ಠರಾದ ರಾಜರು ಸಾಮಾನ್ಯವಾಗಿ ತೆರಳುವುದು ಯಮನ ಸಭೆಗೆ. ಅಲ್ಲಿ ಅವರು ಯಮಸಭೆಯ ಸದಸ್ಯರಾಗಿ ಮಾನ್ಯತೆ ಪಡೆಯುವರು. ಪಾಂಡುರಾಜ ಅಂತಹ ಧರ್ಮಿಷ್ಠರಾಜನಾದ್ದರಿಂದ ಹಾಗೆ ಯಮಲೋಕಕ್ಕೆ ತೆರಳಿ, ಅಲ್ಲಿ ಯಥಾಯೋಗ್ಯವಾಗಿ ಪೂಜಿತನಾದ ಎಂದರ್ಥ.

೩) ಮೂಲತಃ ದೇವತೆಯಾದ ಅವನು ಇಂದ್ರಲೋಕಕ್ಕೇ ತೆರಳಬೇಕಿತ್ತು ಆದರೂ ವಿಶೇಷಕಾರಣದಿಂದಾಗಿ ಯಮಲೋಕಕ್ಕೆ ತೆರಳುವಂತಾಯಿತು ಎಂಬ ವಿಶೇಷಾಂಶ ಮುಂದೆ ಬಂದಿದೆ(ಅ. ೨೧, ಶ್ಲೋ. ೭೧).

೪) ಅವನು ರತಿಕ್ರೀಡೆಯಲ್ಲಿದ್ದಾಗ ಮೃತನಾದರೂ, ಮೂಲತಃ ವಿಶೇಷಹರಿಭಕ್ತ-ನಾದ್ದರಿಂದ ಸದ್ಗತಿಪ್ರಾಪ್ತಿಗೆ ಅಡ್ಡಿಯಾಗಲಿಲ್ಲ ಎಂಬ ವಿಶೇಷಾಂಶವನ್ನು 'ಹರಿಪಾದಸಂಗೀ' ಎಂಬ ಪದದಿಂದ ಸೂಚಿಸಿರುವರು ಎಂಬುದಾಗಿ ಜನಾರ್ದನೀಯದಲ್ಲಿದೆ.

೫) ಅಪರೋಕ್ಷಜ್ಞಾನಿಗಳಿಗೆ ಸಾಮಾನ್ಯವಾಗಿ ಪಾಪಕರ್ಮದ ಲೇಪವಿಲ್ಲದಿದ್ದರೂ, ಸ್ವೋತ್ತಮದ್ರೋಹ ಮಾತ್ರ ಲೇಪವಾಗದಿರದು ಎಂಬ ವಿಶೇಷಾಂಶ ಇದರಿಂದ ಸೂಚಿತ(೨೦/೧೫೮).

ಮಾದ್ರೀ ಪತಿಂ ಮೃತಮವೇಕ್ಷ್ಯ ರುರೋದ ದೂರಾತ್[೧]
ತಚ್ಛುಶ್ರುವುಶ್ಚ ಪೃಥಯಾ ಸಹ ಪಾಂಡುಪುತ್ರಾಃ ।
ತೇಷ್ವಾಗತೇಷು ವಚನಾದಪಿ ಮಾದ್ರವತ್ಯಾಃ
ಪುತ್ರಾನ್ ನಿವಾರ್ಯ ಚ ಪೃಥಾ ಸ್ವಯಮೇವ ಚಾಗಾತ್ ॥ ೪೮ ॥

ಅ: ಪತಿಯು ಮರಣ ಹೊಂದಿದ್ದನ್ನು ಕಂಡು, ಮಾದ್ರಿ ಜೋರಾಗಿ ಅಳತೊಡಗಿದಳು. ಕುಂತಿಯೊಂದಿಗೆ ಪಾಂಡುಪುತ್ರರೂ ಅದನ್ನು ಕೇಳಿಸಿಕೊಂಡರು. ಅವರೆಲ್ಲ ಅಲ್ಲಿಗೆ ತೆರಳಲು, ಮಾದ್ರಿಯ ಮಾತಿನಿಂದ ಅವರನ್ನು ತಡೆದು, ಕುಂತಿಯೊಬ್ಬಳೇ ಅಲ್ಲಿಗೆ ತೆರಳಿದಳು.

---

೧. ದೂರಾದ್ದೂರೇ ಸ್ಥಿತಾಶ್ಚ ಸ್ಥಿತಾ ಅಪಿ ತಚ್ಛುಶ್ರುವುರಿತ್ಯರ್ಥಃ। – (ಸ.)

೨. ಪುತ್ರಾನ್ನಾನಯ ತ್ವಮೇವಾಯಾಹೀತಿ ರುದತ್ಯಾ ಮಾದ್ರವತ್ಯಾ ವಚನಾದಪೀತ್ಯರ್ಥಃ॥ – (ವಾ.)

ಏಃ ಮಾದ್ರಿಯ ರೋದನವನ್ನು ಕೇಳಿ, ಕುಂತಿಯೊಂದಿಗೆ ಪಾಂಡವರೂ ತೆರಳಿದರೂ, ಮಾದ್ರಿ ಮಕ್ಕಳನ್ನು ಕರೆತರದೆ ಅವಳೊಬ್ಬಳೇ ಬರಲು [೧]ತಿಳಿಸಿದ್ದರಿಂದ, ಕುಂತಿ ಅವರನ್ನು ದೂರದಲ್ಲಿಯೇ ನಿಲ್ಲಿಸಿ, ತಾನೊಬ್ಬಳೇ ಅಲ್ಲಿಗೆ ತೆರಳಿದಳು.

ಪತ್ಯುಃ ಕಲೇವರಮವೇಕ್ಷ್ಯ ನಿಶಮ್ಯ [೨]ಮಾದ್ರ್ಯಾಃ
ಕುಂತೀ ಭೃಶಂ ವ್ಯಥಿತಹೃತ್ಕಮಲೈವ ಮಾದ್ರೀಮ್ ।
ಧಿಕ್ಕೃತ್ಯ ಚಾನುಮರಣಾಯ ಮತಿಂ ಚಕಾರ
ತಸ್ಯಾಃ ಸ್ವನೋ ರುದಿತಜಃ ಶ್ರುತ ಆಶು ಪಾರ್ಥೈಃ ॥ ೪೯ ॥

ಕುಂತಿ ಪತಿಯ ಮೃತದೇಹವನ್ನು ನೋಡಿದಳು; ಮಾದ್ರಿಯಿಂದ ವಿಷಯ ತಿಳಿದ ಅವಳ ಹೃದಯ ಕಮಲ ಬಹಳವಾಗಿ ಬಾಡಿಹೋಯಿತು; ಮಾದ್ರಿಯನ್ನು ತೆಗಳಿದಳು; ಸಹಗಮನ ಮಾಡಲು ನಿಶ್ಚಯಿಸಿದಳು. ಅವಳ ಅಳುವಿನ ಧ್ವನಿ ಕೂಡಲೆ ಪಾಂಡವರಿಗೆಲ್ಲ ಕೇಳಿಸಿತು.

ಮಾದ್ರಿಯ ಸಹಗಮನ

ತೇಷ್ವಾಗತೇಷ್ವಧಿಕ ಆಸ ವಿರಾವ ಏತಂ
ಸರ್ವೇಽಪಿ ಶುಶ್ರುವುರ್ಋಷಿಪ್ರವರಾ ಅಥಾತ್ರ ।
ಆಜಗ್ಮುರುತ್ತಮಕೃಪಾ ಋಷಿಲೋಕಮಧ್ಯೇ
ಪತ್ನೀ ನೃಪಾನುಗಮನಾಯ ಚ ಪಸ್ಪೃಧಾತೇ ॥ ೫೦ ॥

---

೧. ಏಕೈವ ತ್ವಮಿಹಾಗಚ್ಛ ತಿಷ್ಠಂತ್ವತ್ರೈವ ದಾರಕಾಃ ।
ತಚ್ಛ್ರುತ್ವಾ ವಚನಂ ತಸ್ಯಾಸ್ತತ್ರೈವಾಧಾಯ ದಾರಕಾನ್ ।
ಹತಾऽಹಮಪಿ ವಿಕ್ರುಶ್ಯ ಸಹಸೈವ ಜಗಾಮ ಸಾ ॥ – (ಆದಿ. ೧೨೪/೧೫,೧೬)

೨. ಮಾದ್ರ್ಯಾಃ ಸಕಾಶಾತ್ ನಿಶಮ್ಯ = ಮರಣಪ್ರಕಾರಂ ನಿಶಮ್ಯೇತ್ಯರ್ಥಃ ॥ – (ವಾ.)

೩. ಬಾಲೇಷು ಸುತೇಷು ಸತ್ಸು ದ್ವಯೋರನುಗಮನಮನುಚಿತಮ್ । ತತ್ರ ಏಕಸ್ಯಾಃ ಪತ್ನ್ಯಾಃ ನೃಪಾನುಗಮನಂ ಪತ್ನೀ ನೃಪಾನುಗಮನಂ ತಸ್ಯೈ । ಅಹಂ ಗಚ್ಛಾಮಿ ಅಹಂ ಗಚ್ಛಾಮೀತಿ ಉಭೇ ಪಸ್ಪೃಧಾತೇ ಇತಿ ಯೋಜನಾ॥ – (ವಾ.)

ಪತ್ನೀ ಪತ್ನ್ಯೌ ಕ .... । – (ಜ.)

ಋಷಿಲೋಕಮಧ್ಯೇ ಪತ್ನೀಶಬ್ದೋ ದ್ವಿರಾವರ್ತನೀಯಸ್ತೇನ ಪಸ್ಪೃಧಾತೇ ಇತಿ ದ್ವಿವಚನೋಪಪತ್ತಿಃ । ದ್ವಿವಚನಸ್ಯ ಏಕವಚನಾದೇಶೋ ವಾ । ಸುಪಾಂ ಸುಲುಗಿತಿ ವಚನಾದಿತಿ ದ್ರಷ್ಟವ್ಯಮ್ ॥ – (ವ.)

ಪತ್ನೀಸಂಯಜ್ವನ್ನವಭೃಥೈಶ್ಚರಿತ್ವಾ ತಮಥರ್ತ್ವಿಜಃ ಇತ್ಯತ್ರ ಪತ್ನೀಸಂಯಾಜಾವಭೃಥಶಬ್ದಸ್ಯ ಯಥೈಕಪದತ್ವಂ ಪತ್ನೀ ನೃಪಾನುಗಮನಸ್ಯೈಕಪದತ್ವಂ ಜ್ಞಾತವ್ಯಮ್ । – (ತಿ.)

ಅ: ಅವರೆಲ್ಲ ಅಲ್ಲಿಗೆ ಬಂದಾಗ ಗೋಳಾಟದ ಧ್ವನಿ ಮತ್ತೂ ಹೆಚ್ಚಿತು. ಋಷಿಶ್ರೇಷ್ಠರುಗಳೆಲ್ಲ ಅದನ್ನು ಕೇಳಿದರು. ಋಷಿಜನರ ಮಧ್ಯದಲ್ಲಿ ತುಂಬಾ ಕೃಪಾಳುಗಳಾಗಿದ್ದವರು ಅಲ್ಲಿಗೆ ಧಾವಿಸಿದರು. ರಾಜನ ಇಬ್ಬರು ಪತ್ನಿಯರೂ ಅವನೊಡನೆ ಸಹಗಮನ ಮಾಡಲೆಂದು ಸ್ಪರ್ಧಿಸತೊಡಗಿದರು.

ವಿ: ಮಕ್ಕಳಿನ್ನೂ ಚಿಕ್ಕವರಿರುವಾಗ, ತಾಯಂದಿರಿಗೆ ಸಹಗಮನ ವಿಹಿತವಲ್ಲ. ಆದ್ದರಿಂದ ಇಬ್ಬರಲ್ಲಿ ಒಬ್ಬರು ಮಾತ್ರ ಸಹಗಮನ ಮಾಡಬಹುದು. ಆಗ ಸಹಗಮನ ಮಾಡಲು ಅವರಿಬ್ಬರಲ್ಲೂ ಸ್ಪರ್ಧೆಯುಂಟಾಯಿತು ಎಂದು ಭಾವ.

ತೇ ಸನ್ನಿವಾರ್ಯ ತು ಪೃಥಾಮಥ ಮಾದ್ರವತ್ಯಾ
ಭರ್ತುಃ ಸಹಾನುಗಮನಂ ಬಹುಶೋಽರ್ಥಯಂತ್ಯಾಃ ।
ಸಂವಾದಮೇವ ನಿಜದೋಷಮವೇಕ್ಷ್ಯ ತಸ್ಯಾ-
ಶ್ಚಕ್ರುಃ ಸದಾಽವಗತಭಾಗವತೋಚ್ಚಧರ್ಮಾಃ ॥ ೫೧ ॥

ಅ: ಶ್ರೇಷ್ಠಭಾಗವತಧರ್ಮವನ್ನು ಚೆನ್ನಾಗಿ ಸದಾ ಬಲ್ಲವರಾದ ಆ ಋಷಿಗಳು, ಕುಂತಿಯನ್ನು ತಡೆದು, ಪತಿಯೊಂದಿಗೆ ಸಹಗಮನ ಮಾಡಲು ಪುನಃ ಪುನಃ ಪ್ರಾರ್ಥಿಸುತ್ತಿದ್ದ ಮಾದ್ರಿಗೆ ಪತಿಯ ಮರಣಕ್ಕೆ ಕಾರಣವಾದ ಅವಳ ದೋಷವನ್ನು ಗಮನಿಸಿ, ಅವಳ ಸಹಗಮನಕ್ಕೆ ಸಮ್ಮತಿ ನೀಡಿದರು.

ವಿ: ೧) ಕುಂತಿಯ ಸಹಗಮನಕ್ಕೆ ಅನುಮತಿ ನೀಡದ ಋಷಿಗಳು, ಮಾದ್ರಿಯ ಸಹಗಮನಕ್ಕೆ ಅನುಮತಿ ನೀಡಲು ಅವಳ ಬಹಳವಾದ ಪ್ರಾರ್ಥನೆಯೊಂದಿಗೆ, ನಿಜಕ್ಕೂ ಅವಳು ಪತಿಯ ಮರಣಕ್ಕೆ ಕಾರಣವಾದ [೧]ದೋಷವನ್ನು ಹೊಂದಿದವಳು ಎಂಬುದೇ ಮುಖ್ಯಕಾರಣವಾಗಿತ್ತು ಎಂದು ಭಾವ.

೨) ಕುಂತಿಯು ಐವರನ್ನೂ ತನ್ನ ಮಕ್ಕಳಂತಯೇ ಸಮಾನವಾಗಿ ನೋಡಬಲ್ಲ ವಿಶಾಲಹೃದಯದವಳು; ಅಂತಹ ಸಾಮರ್ಥ್ಯ ತನ್ನದಲ್ಲ ಎಂಬ ಕಾರಣವನ್ನು ಮುಂದಿಟ್ಟು, ಅವಳು ಉಳಿದುಕೊಳ್ಳುವುದೇ ವಿಹಿತ ಎಂದು ಕೇಳಿಕೊಂಡಳು ಎಂದು [೨]ಮಹಾಭಾರತದಲ್ಲಿದೆ. ಇದು ಕುಂತಿಗೆ ತನ್ನ ಸವತಿಯಿಂದಲೇ ಸಂದ ವಿಶೇಷ ಗೌರವ ಎಂಬುದನ್ನು ಗಮನಿಸಬೇಕು.

---

೧. ಮಾಂ ಚ ಕಾಮಯಮಾನೋಽಯಂ ರಾಜಾ ಪ್ರೇತವಶಂ ಗತಃ । – ಭಾರತ (೧೨೪/೨೮)

೨. ನಾಹಂ ತ್ವಮಿವ ಪುತ್ರಾಣಾಂ ಸಮರ್ಥಾ ಧಾರಣೇ ತಥಾ ।
ಸಾಹಂ ಭರ್ತಾರಮನ್ವೇಷ್ಯೇ ಅತೃಪ್ತಾ ನನ್ವಹಂ ತಥಾ ॥ – ಭಾರತ (ಆದಿ. ೧೨೪/೨೮)

ಭರ್ತುರ್ಗುಣೈರನಧಿಕೌ[೧] ತನಯಾರ್ಥಮೇವ
ಮಾದ್ಯಾ[೨]ಽಽಕೃತೌ ಸುರವರಾವಧಿಕೌ ಸ್ವತೋಽಪಿ ।
ತೇನೈವ ಭರ್ತೃಮೃತಿಹೇತುರಭೂತ್ ಸಮಸ್ತ-
ಲೋಕೈಶ್ಚ ನಾತಿಮಹಿತಾ ಸುಗುಣಾಽಪಿ ಮಾದ್ರೀ ॥ ೫೨ ॥

ಅ: ತನಗಿಂತ ಅಧಿಕರಾಗಿದ್ದರೂ, ಗಂಡನಾದ ಪಾಂಡುವಿನ ಗುಣಗಳಿಗಿಂತ ಮಿಗಿಲೆನ್ನಿಸದ ಅಶ್ವಿನಿದೇವತೆಗಳನ್ನು ಸಂತತಿಗೋಸ್ಕರ ಮಾದ್ರಿ ಆಹ್ವಾನಿಸಿದ್ದಳು. ಅದರಿಂದಾಗಿಯೇ ತನ್ನ ಗಂಡನ ಮೃತಿಗೆ ಕಾರಣಳಾದಳು. ಅವಳು ಉತ್ತಮಗುಣವತಿಯೇ ಆಗಿದ್ದರೂ, ಆ ಕಾರಣದಿಂದಾಗಿ ಸಮಸ್ತಜನರಿಂದ ಹೆಚ್ಚಿನ ಗೌರವಕ್ಕೆ ಪಾತ್ರಳಾಗದವಳಾದಳು.

ವಿ: ೧) ಮಾದ್ರಿ ಅಶ್ವಿನಿದೇವತೆಗಳನ್ನು ಸಂತತಿಗೋಸ್ಕರ ಆಹ್ವಾನಿಸಿ, ನಕುಲಸಹದೇವರನ್ನು ಪುತ್ರರನ್ನಾಗಿ ಪಡೆದಳು. ಆದರೆ ಶಾಸ್ತ್ರವಿಧಿಯಂತೆ ಅವಳು ಆಹ್ವಾನಿಸಬೇಕಾದದ್ದು ಗಂಡನಾದ ಪಾಂಡುವಿಗಿಂತ ಗುಣಗಳಲ್ಲಿ ಮಿಗಿಲಾದ ದೇವತೆಗಳನ್ನು ಮಾತ್ರ. ಅಶ್ವಿನಿದೇವತೆಗಳು ಪಾಂಡುವಿನ ಮೂಲರೂಪವಾದ ಪರಾವಹನಂತೆ ಶೇಷಶತಸ್ಥದೇವತೆಗಳ ಕಕ್ಷೆಗೆ ಸೇರಿದವರು. ಎಂದರೆ ಸಮಕಕ್ಷೆಯವರು. ಆದ್ದರಿಂದ ಅವಳು ಮಾಡಿದ್ದು ಅಪರಾಧವಾಯಿತು.

೨) ಮತ್ತೊಂದು ರೀತಿಯಲ್ಲಿ ಅವರು ಸಮಕಕ್ಷೆಯವರಾದರೂ, ಅವಾಂತರತಾರತಮ್ಯದಲ್ಲಿ ಪರಾವಹನಿಗಿಂತ ಸ್ವಲ್ಪ ಯೋಗ್ಯತೆಯಲ್ಲಿ ಕಡಿಮೆಯವರೂ ಆದವರು. ಈ ವಿವಕ್ಷೆಯಲ್ಲಿ ಪತಿಗಿಂತ ಗುಣದಲ್ಲಿ ಕಡಿಮೆಯವರನ್ನೇ ಮಾದ್ರಿ ಆಹ್ವಾನಿಸಿದಂತಾಯಿತು. ಇದು ಶಾಸ್ತ್ರದೃಷ್ಟಿಯಲ್ಲಿ ಅಪರಾಧ. ಅದಕ್ಕೆಂದೇ ಅವಳು ಮುಖ್ಯವಾಗಿ ಪತಿಯ ಮರಣಕ್ಕೆ ಕಾರಣವಾಗುವಂತಾಯಿತು ಎಂದರ್ಥ.

---

೧. ಮಾದ್ಯಾಃ ಭರ್ತುಃ ಸಕಾಶಾದ್ ಗುಣೈರನಧಿಕೌ ನ ಅಧಿಕೌ, ಸಮೌ ನೀಚೌ ಚ। ಉಕ್ತಶೇಷಶತಸ್ಥತ್ವೇನ ಸಾಮ್ಯೇಽಪಿ,

ದೇವಾದಿಷ್ವೇಷು ಸರ್ವೇಷು ಪ್ರೋಕ್ತಾ ಅಪಿ ವಿಶೇಷಿಣಃ ।
ಪಂಚಾಂಶತೋ ದಶಾಂಶಾದ್ವಾ ಸ್ವಸ್ವಜಾತ್ಯಾ ಪರಸ್ಪರಮ್ ॥

ಇತಿ ವಚನಾತ್ ಅವಾಂತರತಾರತಮ್ಯಾಪೇಕ್ಷಯಾ ನೀಚತ್ವಂ ಜ್ಞೇಯಮ್ । ಅತ ಏವಾಚಾರ್ಯೈಃ ಸಮೌ ನೀಚಾವಿತ್ಯನುಕ್ತ್ವಾ ಸಾಧಾರಣಾನಧಿಕಪದಪ್ರಯೋಗಃ ಕೃತಃ। –(ಜ.)

೨. ''ವಿಷ್ವಕ್ಸೇನೋಽಶ್ವಿನೌ ತೌ ಗಣಪತಿಧನಪಾ ಉಕ್ತಶೇಷಾಃ ಶತಸ್ಥಾ ದೇವಾಶ್ಚೋಕ್ತೇತರಾ ಯೇ'' ಇತಿ ಚಶಬ್ದಾತ್ ಪ್ರಾಕ್ಸಂಗೃಹೀತಯೋರಶ್ವಿನೋಃ ಶತಸ್ಥದೇವೇಷು ಪಠಿತಸ್ಯ ಪಾಂಡುಮೂಲರೂಪಪರಾವಹಾಖ್ಯಮರುತಶ್ಚ ಸಾಮ್ಯೇನ ಪಾಂಡೋಃ ಸಕಾಶಾದಶ್ವಿನೋರಾಧಿಕ್ಯಾಭಾವಾತ್ ''ಭರ್ತುರ್ಗುಣೈರನಧಿಕೌ'' ಇತ್ಯುಕ್ತಮ್ ಆಕೃತೌ= ಆಕಾರಿತೌ ॥ –(ವಾ.)

೩) ಶ್ರೀಮದಾಚಾರ್ಯರು ಪ್ರಯೋಗಿಸಿರುವ 'ಭರ್ತುರ್ಗುಣೈರನಧಿಕೋ' ಎಂಬ ಮಾತು ಅಶ್ವಿನಿದೇವತೆಗಳು ಒಂದು ದೃಷ್ಟಿಯಲ್ಲಿ ಸಮರು, ಮತ್ತೊಂದು ದೃಷ್ಟಿಯಲ್ಲಿ ಕಡಿಮೆ– ಯಾದವರು ಎಂಬ ಎರಡು ಅರ್ಥವನ್ನೂ ಧ್ವನಿಸುತ್ತದೆ ಎಂಬ ವಿಶೇಷಾಂಶ ಜನಾರ್ದನೀಯದಲ್ಲಿದೆ. ಇಂತಹ ದೋಷ ವೈಧವ್ಯಕ್ಕೆ ಕಾರಣ ಎಂಬ ಸೂಚನೆಯನ್ನೂ ಇಲ್ಲಿ ಗ್ರಹಿಸಬಹುದು.

ಪಾಂಡೋಃ ಸುತಾ ಮುನಿಗಣೈಃ ಪಿತೃಮೇಧಮತ್ರ
ಚಕ್ರುರ್ಯಥಾವದಥ ತೇನ ಸಹೈವ ಮಾದ್ರೀ ।
ಹುತ್ವಾऽऽತ್ಮದೇಹಮುರುಪಾಪಮದಃ ಕೃತಂ ಚ
ಸಮ್ಮಾರ್ಜ್ಯ ಲೋಕಮಗಮನ್ನಿಜಭರ್ತುರೇವ ॥ ೫೩ ॥

ಅ: ಪಾಂಡುಪುತ್ರರು ಮುನಿಜನರೊಂದಿಗೆ ಕೂಡಿಕೊಂಡು ಪಿತೃಯಜ್ಞವನ್ನು ಯಥಾವಿಧಿ ಪೂರೈಸಿದರು. ಅವನೊಂದಿಗೆ ಮಾದ್ರಿಯು ತನ್ನ ದೇಹವನ್ನು ಹೋಮಿಸಿಕೊಂಡು ತಾನು ಮಾಡಿದ ಮಹಾಪಾಪವನ್ನು ಕಳೆದುಕೊಂಡು ತನ್ನ[೨] ಪತಿಲೋಕವನ್ನೇ ಸೇರಿದಳು.

ವಿ: ೧) ಮಾದ್ರಿಯು ಮಾಡಿದ ಸಹಗಮನ ಶಾಸ್ತ್ರವಿಹಿತವಾಗಿ ಪುಣ್ಯಕರವಾದಂತೆ, ಮಾದ್ರಿಯ ಆ ಮಹಾಪಾಪವನ್ನು ತೊಡೆಯುವ ಸಾಧನವೂ ಆಯಿತು ಎಂದರ್ಥ.

೨) ಗುರುಪತ್ನಿ ತಾರೆ ಹಾಗೂ ವಾಲಿಪತ್ನಿ ತಾರೆ ಇಬ್ಬರೂ ತಮ್ಮ ಗಂಡಂದಿರಿಗಿಂತ ಗುಣಗಳಲ್ಲಿ ಕಡಿಮೆಯವರೇ ಆದ ಚಂದ್ರ ಹಾಗೂ ಸುಗ್ರೀವರೊಂದಿಗೆ ಕೂಡಿದ ಮಹಾಪರಾಧಪ್ರಸಂಗವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

೩) ಅಶ್ವಿನಿದೇವತೆಗಳು ಪಾಂಡುವಿಗೆ ಸಮಕಕ್ಷೆಯವರಾದರೆ, ಚಂದ್ರ ಮತ್ತು ಸೂರ್ಯರು ಗುರು ಹಾಗೂ ಇಂದ್ರರಿಗಿಂತ ತುಂಬಾ ಕಡಿಮೆ ಕಕ್ಷೆಯವರೆಂಬುದು ವಿಶೇಷ. ಆದ್ದರಿಂದ ಮಾದ್ರಿಗೆ ಸಹಗಮನದ ಪ್ರಾಯಶ್ಚಿತ್ತದಿಂದ ಅವಳ ದೋಷ ಪರಿಹಾರವಾಯಿತು.

೪) ಆದರೆ ಆ ಇಬ್ಬರು ತಾರೆಯರೂ ತಮ್ಮ ಪಾಪವನ್ನು ಕಳೆದುಕೊಳ್ಳಲು ಇನ್ನೂ ಹೆಚ್ಚಿನ ಸಾಧನೆಯನ್ನು ಮಾಡಬೇಕಾಯಿತು ಎಂಬ ಮತ್ತೊಂದು ಅಂಶವನ್ನೂ ಇಲ್ಲಿ ಗಮನಿಸಬೇಕು.

---

೧. ಯಥಾವದಥೇತ್ಯತ್ರಾಥಶಬ್ದಸ್ಯ ಅಥ ಪಾಂಡುಸುತಾ ಇತಿ ಪೂರ್ವೇಣಾನ್ವಯಃ ॥ – (ವಾ.)

ಪ್ರವಿಷ್ಟಾ ಪಾವಕಂ ಮಾದ್ರೀ ಹಿತ್ವಾ ಜೀವಿತಮಾತ್ಮನಃ ।
ಸಾ ಗತಾ ಸಹ ತೇನೈವ ಪತಿಲೋಕಮನುವ್ರತಾ ॥ – ಭಾರತ (ಆದಿ. ೧೨೫/೩೦,೩೧)

ಗುರುಪತ್ನಿ ತಾರೆ ಕೃಪಿಯಾಗಿ ಜನಿಸಿದಾಗ ವಿಶೇಷವಾಗಿ ಪತಿಸೇವೆ ಮಾಡುವ ಮೂಲಕ ತನ್ನ ಪಾತಕವನ್ನು [೧]ಪರಿಹರಿಸಿಕೊಂಡರೆ, ವಾಲಿಪತ್ನಿ ತಾರೆ ಆ ದೇಹ ತೊರೆದ ಅನಂತರವೂ ಮೂಲರೂಪವನ್ನು ಸೇರಲಾಗದೆ, ಚಿತ್ರಾಂಗದೆಯಾಗಿ ಜನಿಸಿ, ತನ್ನ ನಿಯತಪತಿಯಾದ ಇಂದ್ರಾವತಾರ ಅರ್ಜುನನ ಸಂಪರ್ಕದಿಂದ ಶುದ್ಧಳಾಗಿ ತನ್ನ ಮೂಲರೂಪವನ್ನು ಸೇರಿದಳು ಎಂಬ ವಿವರ ಮುಂದೆ ಬಂದಿದೆ (೨೦/೧೬೦).

ಪಾಂಡುವಿಗೆ ಸದ್ಗತಿ

ಪಾಂಡುಶ್ಚ ಪುತ್ರಕಗುಣೈಃ ಸ್ವಗುಣೈಶ್ಚ ಸಾಕ್ಷಾತ್
ಕೃಷ್ಣಾತ್ಮಜಃ ಸತತಮಸ್ಯ ಪದೈಕಭಕ್ತಃ ।
ಲೋಕಾನವಾಪ ವಿಮಲಾನ್ ಮಹಿತಾನ್ ಮಹದ್ಭಿಃ
ಕಿಂ ಚಿತ್ರಮತ್ರ [೨]ಹರಿಪಾದವಿನಮ್ರಚಿತ್ತೇ ॥ ೫೪ ॥

---

೧. ಯಾ ವಿಷ್ಣುಭಕ್ತಾ ಗುರುಭಾರ್ಯಾ ಚ ತಾರಾ ಮಿತ್ರಸ್ಯ ಪುತ್ರೀ ಮಿತ್ರವತ್ ಸಾ ಸತೀ ಚ ।
ಪಾತಿವ್ರತ್ಯಂ ಚೋತ್ತಮಾನಾಂ ಹಿ ಸ್ತ್ರೀಣಾಮುಪದೇಷ್ಟುತ್ವಾತ್ ತಾರಕತ್ವಾಚ್ಚ ತಾರಾ ॥
ತಾರಾ ಪೃಥಿವ್ಯಾಂ ಕೃಪಿಸಂಜ್ಞಾ ಬಭೂವ ದ್ರೋಣಸ್ಯ ಭಾರ್ಯಾ ಹ್ಯತ್ರಿಋಷೇಃ ಶರದ್ವತಃ ।
ಪಾತಿವ್ರತ್ಯಂ ದ್ರೋಣರೂಪೇ ಗುರೌ ಚ ಸಮ್ಯಕ್ ಚಕ್ರೇ ಭೂತಲೇ ವಿಷ್ಣುಭಕ್ತಾ ॥
ಯದಾ ದ್ರೋಣೋ ಸರ್ವದಾನೋಜ್ಜಿತಃ ಸನ್ ಶಿಲೋಂಛವೃತ್ತ್ಯಾ ಚೋಪಜೀವನ್ ತದಾ ಹಿ ।
ಕೃಪಿಸ್ತದಾ ಸಂಚಕಾರೈವ ನಿತ್ಯಂ ದ್ರೋಣಾಂತಸ್ಥಂ ಪ್ರೀಣಯಾಮಾಸ ವೀಂದ್ರ ॥
ಯದಾ ದ್ರೋಣೋ ಕೃಚ್ಛ್ರಚಾಂದ್ರಾಯಣಂ ಚ ಮಾಸೋಪವಾಸಂ ಚ ತಥಾ ಖಗೇಂದ್ರ ।
ತದಾ ಕೃಪೀ ಕೃಚ್ಛ್ರಚಾಂದ್ರಾಯಣಂ ಚ ಚಕಾರ ವಿಷ್ಣುಂ ಪ್ರೀಣಯಾಮಾಸ ತೇನ ॥
ಕದಾಽಪಿ ವಸ್ತ್ರಂ ನಾಪಿ ದ್ರೋಣಃ ಸ ವೀಂದ್ರ ಹ್ಯಲಂಕಾರಾನ್ ಸುತರಾಂ ನೈವ ಚಾಪ ।
ಅಥಾಪಿ ಯಸ್ಯಾಶ್ಚೇತಸಿ ಪಕ್ಷಿವರ್ಯ ವಿಕಾರಂ ವೈ ನಾಭವತ್ ಕ್ವಾಪಿ ಕಾಲೇ ॥
ತಸ್ಯ ಪ್ರಭಾವಾಚ್ಚ ವಿಷ್ಣೋಃ ಪ್ರಸಾದಾತ್ ವಿಧೋಃ ಸಕಾಶಾದ್ದ್ವೇಷಯುಕ್ತಾಽಪಿ ತಾರಾ ।
ಸುಸಾಧುಜಾನಾಂ ಸ್ಪೃತಿಯೋಗ್ಯಾ ಬಭೂವ ಸದಾ ವೀಂದ್ರ ಪಂಚಕನ್ಯಾಸು ಮಧ್ಯೇ ॥
– ಗರುಡಪುರಾಣ (ಬ್ರಹ್ಮಕಾಂಡ, ಅ. ೩೫, ಶ್ಲೋ. ೩-೮)

೨. ಹರಿಪಾದವಿನಮ್ರಚಿತ್ತೇ = ಪಾಂಡೌ ವಿಷಯೇ । ಅತ್ರ = ಉತ್ತಮಾಧಿಕಾರಪ್ರಾಪ್ತೌ ॥ – (ವಾ.)

'ಪಾಂಡುಶ್ಚ ಪುತ್ರಕಗುಣೈಃ ಸ್ವಗುಣೈಶ್ಚ ಸಾಕ್ಷಾತ್ಕೃಷ್ಣಾತ್ಮಜಃ ಸತತಮಸ್ಯ ಪದೈಕಭಕ್ತಃ । ಲೋಕಾನವಾಪ ವಿಮಲಾನ್ಮಹಿತಾನ್ಮಹದ್ಭಿಃ ಕಿಂ ಚಿತ್ರಮತ್ರ ಹರಿಪಾದವಿನಮ್ರಚಿತ್ತೇ' ಇತ್ಯತ್ರೈಕಶಬ್ದೋ ವಿಶೇಷಾರ್ಥಃ । ಅಪರೇ ತು ನ ತ್ವರ್ಥಕಃ । ತಥಾ ಚ ಸ್ವರ್ಗೇ ಬಹವೋ ದೇವತಾಸಭಾ ವರ್ತಂತೇ । ತಾಸೂತ್ತಮಾಮೈಂದ್ರೀಂ ಸಭಾಂ ಪಾಂಡುರ್ನ ಪ್ರಾಪ । ಕಿಂತು ಯಮಸಭಾಂ ಯಾತೋ 'ಯಮಸ್ಯ ಸದನಂ ಹರಿಪಾದಸಂಗೀ' ಇತ್ಯುಕ್ತೇಃ (೧೪/೪೬) । ಯಮಸಭಾಯಾಂ ವಸನ್ ಪಾಂಡುಃ ಕದಾಚಿದ್ಭಗವತ್ಪೂಜಾಂ ಕರ್ತುಂ ಮಹದ್ಭಿರ್ಬ್ರಹ್ಮಾದಿಭಿಃ ಮಹಿತಾನ್ ಪೂಜಿತಾನ್ ಲೋಕಾನ್ ಶ್ವೇತದ್ವೀಪಾದೀನ್ ಪ್ರಾಪ । ತತ್ರ ಗಮನಶಕ್ತಿಂ ಪ್ರಾಪೇತಿ ಭಾವಃ । ಹರಿಪಾದವಿನಮ್ರಚಿತ್ತೇ ಅತ್ರ ಅಸ್ಮಿನ್ ಪಾಂಡವೇ ಏತಚ್ಚಿತ್ರಂ ನ । ಪಾಂಡೋರಿಂದ್ರಶಾಪಾತ್ ತದಾನೀಮೇವಾಂಶಿಪ್ರಾಪ್ತಿರ್ನಾಭೂದಿತಿ ಜ್ಞೇಯಮ್ । ತದುಕ್ತಮುತ್ತರತ್ರ ''ತಪಶ್ಚರನ್ ..... ಸ್ವಕಾಂ ತನುಮ್'(೨೧/೮೪-೮೭) ಇತಿ ॥ – (ರಾ.)

ಅ: ಸಾಕ್ಷಾತ್ ವೇದವ್ಯಾಸರ ಪುತ್ರನೂ, ಅವರ ಚರಣಗಳ ಮುಖ್ಯಭಕ್ತನೂ ಆದ ಪಾಂಡುವಾದರೊ ತನ್ನ ಮಕ್ಕಳಾದ ಪಾಂಡವರ ಗುಣಗಳಿಂದಲೂ, ತನ್ನ ಗುಣಗಳಿಂದಲೂ ದೊಡ್ಡವರಿಂದ ಆದರಿಸಲ್ಪಡುವ ಪವಿತ್ರಲೋಕಗಳನ್ನೇ ಹೊಂದಿದ. ಹರಿಪಾದಗಳಲ್ಲಿ ವಿಶೇಷವಾಗಿ ಮಗ್ನವಾದ ಮನಸ್ಸನ್ನುಳ್ಳ ಅವನಿಗೆ ಇದೇನು ಅಚ್ಚರಿಯ ಸಂಗತಿಯಲ್ಲ.

ವಿ: ೧) ಪಾಂಡುರಾಜನು ಸ್ವತಃ ಶ್ರೇಷ್ಠಹರಿಭಕ್ತ, ಅವನ ಮಕ್ಕಳಂತೂ ಭೀಮಾದಿದೇವ–ಶ್ರೇಷ್ಠರುಗಳು. ತಂದೆಯಂತೂ ಸಾಕ್ಷಾತ್ ಶ್ರೀಹರಿಯಾದ ವೇದವ್ಯಾಸರು. ಈ ಕಾರಣದಿಂದ ಪಾಂಡು ಉತ್ತಮಲೋಕಗಳನ್ನೇ ಪಡೆದ. ಸದ್ಗತಿಗೆ ತನ್ನ ಯೋಗ್ಯತೆಯಂತೆ, ತಂದೆತಾಯಿಗಳ ಹಿರಿಮೆ, ಮಕ್ಕಳ ಸಾಧನೆಯೂ ಸಹ ಕಾರಣವೆಂಬ ತತ್ತ್ವ ಇಲ್ಲಿ ಸೂಚಿತ.

೨) ರಾಮಾದಿಗಳನ್ನು ಪುತ್ರತ್ವೇನ ಪಡೆದ ದಶರಥನಂತೆ, ಭೀಮಾದಿಗಳನ್ನು ಪುತ್ರತ್ವೇನ ಪಡೆದ ಪಾಂಡುರಾಜ ಉತ್ತಮಗತಿಗೇ ತೆರಳಿದ ಎಂದರ್ಥ.

೩) ಇಲ್ಲಿಯ 'ಕಂ ಚಿತ್ರಮತ್ರ ಹರಿಪಾದವಿನಮ್ರಚಿತ್ತೇ' ಎಂಬ ಮಾತು 'ಹರಿಪಾದ–ವಿನಮ್ರಧಿಯಾ ಸತತಂ' ಎಂಬ ದ್ವಾದಶಸ್ತೋತ್ರದ ಮಾತಿನ ವಿವರಣೆಯಂತಿರುವುದು ಗಮನಾರ್ಹ.

೪) ಹರಿಪಾದದಲ್ಲಿ ಭಕ್ತಿಯಿಂದ ಮನಸ್ಸನ್ನು ತೊಡಗಿಸುವುದು ಸದ್ಗತಿಗೆ ಸಾಧನ ಎಂಬುದು ಮಥಿತಾರ್ಥ.

ಹಸ್ತಿನಾಪುರಕ್ಕೆ ಪಾಂಡವರು

ಪಾಂಡೋಃ ಸುತಾಶ್ಚ ಪೃಥಯಾ ಸಹಿತಾ ಮುನೀಂದ್ರೈ–
ರ್ನಾರಾಯಣಾಶ್ರಮತ ಆಶು ಪುರಂ ಸ್ವಕೀಯಮ್ ।
ಜಗ್ಮುಸ್ತಥೈವ ಧೃತರಾಷ್ಟ್ರಪುರೋ ಮುನೀಂದ್ರಾ
ವೃತ್ತಂ ಸಮಸ್ತಮವದನ್ನನುಜಂ ಮೃತಂ ಚ ॥ ೫೫ ॥

ಅ: ಅನಂತರ ಪಾಂಡುಪುತ್ರರು ತಾಯಿಯಾದ ಕುಂತಿಯೊಂದಿಗೂ, ಮುನಿಶ್ರೇಷ್ಠ–ರೊಂದಿಗೂ ಕೂಡಿ, ಬೇಗನೆ ನಾರಾಯಣಾಶ್ರಮದಿಂದ ತಮ್ಮ ಪಟ್ಟಣಕ್ಕೆ ತೆರಳಿದರು. ಅಲ್ಲಿ ಆ ಮುನಿಶ್ರೇಷ್ಠರು ನಡೆದದ್ದನ್ನೆಲ್ಲ ತಿಳಿಸಿ, ಅವನ ತಮ್ಮ ಪಾಂಡು ಮೃತನಾದದ್ದನ್ನು ಧೃತರಾಷ್ಟ್ರನ ಮುಂದೆ ಹೇಳಿದರು.

---

೧. ಪಾಂಡೋಃ ಶಾಪಪುತ್ರೋತ್ಪತ್ತ್ಯಾದಿಕಂ .... । – (ಜ.)

ವಿ: ೧) ಬೇಗನೆ ಎಂದರೆ ಪಾಂಡುವಿನ ಅಂತ್ಯಕ್ರಿಯೆಗಳು ಪೂರೈಸಿದ ಕೂಡಲೆ ಎಂದರ್ಥ. ಪಾಂಡುರಾಜ ಗತಿಸಿ, ಅಂದಿಗೆ [೧]ಹದಿನೇಳು ದಿನಗಳು ಕಳೆದಿವೆ ಎಂಬುದಾಗಿ ಋಷಿಗಳು ಧೃತರಾಷ್ಟ್ರನಿಗೆ ಹೇಳುವುದು ಇದಕ್ಕೆ ಗಮಕ :

೨) ಸಮಸ್ತವೃತ್ತಾಂತವನ್ನು ಎಂದರೆ ಪಾಂಡುವಿಗೆ ಶಾಪ ಒದಗಿದ್ದು, ಅವನಿಗೆ ಸಂತತಿಯಾದದ್ದು ಮೊದಲಾದ ಎಲ್ಲ ವಿವರಗಳನ್ನು ಎಂದರ್ಥ.

ತೂಷ್ಣೀಂ ಸ್ಥಿತೇ ತು ನೃಪತೌ ತನುಜೇ ಚ ನದ್ಯಾಃ
ಕ್ಷತ್ತುರ್ಯುತಾಪ್ತ ಉರುಮೋದಮತೀವ ಪಾಪಾಃ ।
ಊಚುಃ ಸುಯೋಧನಮುಖಾಃ ಸಹ ಸೌಬಲೇನ
ಪಾಂಡೋರ್ಮೃತಿಃ ಕಿಲ ಪುರಾ ತನಯಾಃ ಕ್ವ ತಸ್ಯ ॥ ೫೬ ॥

ಅ: ರಾಜನಾದ ಧೃತರಾಷ್ಟ್ರನು, ಭೀಷ್ಮನು ಸುಮ್ಮನಿದ್ದರು; ವಿದುರನು ಬಹಳ ಆನಂದಪಟ್ಟ; ಅತ್ಯಂತಪಾಪಿಗಳಾದ ದುರ್ಯೋಧನಾದಿಗಳು ಶಕುನಿಯೊಂದಿಗೆ ಕೂಡಿ, ''ಪಾಂಡು ಸತ್ತಿದ್ದು ಹಿಂದೆ; ಅವನಿಗೆಲ್ಲಿಯ ಪುತ್ರರು?'' ಎಂದರು.

ವಿ: ೧) ಧೃತರಾಷ್ಟ್ರಭೀಷ್ಮರು ಸುಮ್ಮನಿರಲು ಅವರಿಗೆ ದುರ್ಯೋಧನನ ಭಯ ಕಾರಣವೆನ್ನಬಹುದು. ವಿದುರನ ಆನಂದಕ್ಕೆ ಪಾಂಡವರಂತಹ ಧರ್ಮಾತ್ಮರು ಪಟ್ಟಣಕ್ಕೆ ಆಗಮಿಸಿದ್ದು ಕಾರಣ. ಧೃತರಾಷ್ಟ್ರಭೀಷ್ಮರ ಮೌನದ ದುರ್ಲಾಭವನ್ನು ಪಡೆದ ದುರ್ಯೋಧನಾದಿಗಳು ''ಪಾಂಡವರೆಲ್ಲ ಪಾಂಡುವಿನ ಮರಣದ ಅನಂತರ ಜನಿಸಿದವರು. ಆದರಿಂದ ಅವರು ಗ್ರಾಹ್ಯರಲ್ಲ'' ಎಂದು [೨]ವಾದಿಸಿದರು.

೨) ಮಹಾಭಾರತದ ಪ್ರಚಲಿತಪಾಠದಲ್ಲಿ ಧೃತರಾಷ್ಟ್ರಾದಿಗಳು ಪಾಂಡವರನ್ನು ಸಂತೋಷದಿಂದಲೇ ಸ್ವೀಕರಿಸಿದರು ಎಂಬಂತಿದೆ. ಆದರೆ ಶ್ರೀವಾದಿರಾಜರು ಲಕ್ಷಾಲಂಕಾರದಲ್ಲಿ ಗ್ರಹಿಸಿರುವ ಪಾಠದಲ್ಲಿ ನಿರ್ಣಯೋತ್ಕರ್ಷಕ್ರಮದಲ್ಲೇ ವಿವರಗಳು ಬಂದಿದೆ.

೩) ಬಲಾಢ್ಯರೂ, ಗುಣಾಢ್ಯರೂ ಆದ ಪಾಂಡವರು ನಿಶ್ಚಿತವಾಗಿಯೂ ತಮ್ಮನ್ನು ಪರಾಭವಗೊಳಿಸಿ, ರಾಜ್ಯಭಾರ ವಹಿಸಿಕೊಳ್ಳುವರು ಎಂಬ ಆತಂಕದಿಂದ ದುರ್ಯೋಧನಾದಿಗಳು ಆ ರೀತಿಯ ಕ್ಷುಲ್ಲಕ ಆರೋಪವನ್ನು ಮಾಡಿದರು ಎಂದು ತಿಳಿಯಬಹುದು.

---

೧. ಪಿತೃಲೋಕಂ ಗತಃ ಪಾಂಡುರಿತಃ ಸಪ್ತದಶೇऽಹನಿ । – ಭಾರತ(ಆದಿ. ೧೨೫/೨೯)

೨. ಆಹುಃ ಕೇಚಿನ್ನ ತಸ್ಯೈತೇ ತಸ್ಯೈತ ಇತಿ ಚಾಪರೇ ।
ಯದಾ ಚಿರಮೃತಃ ಪಾಂಡುಃ ಕಥಂ ತಸ್ಯೇತಿ ಚಾಪರೇ ॥ – ಭಾರತ (ಆದಿ. ೧/೧೧೯)

ನ ಕ್ಷೇತ್ರಜಾ[೧] ಅಪಿ ಮೃತೇ ಪಿತರಿ ಸ್ವಕೀಯೈಃ
ಸಮ್ಯಙ್ನಿಯೋಗಮನವಾಪ್ಯ ಭವಾಯ ಯೋಗ್ಯಾಃ ।
ತೇಷಾಮಿತೀರಿತವಚೋಽನುಜಗಾದ ವಾಯು-
ರಾಭಾಷ್ಯ ಕೌರವಗಣಾನ್ ಗಗನಸ್ಥ ಏವ ॥ ೫೭ ॥

ಅ: ''ಪತ್ನಿಯಲ್ಲೇ ಜನಿಸಿದ್ದರೂ, ತಂದೆ ಸತ್ತ ಮೇಲೆ ಬಂಧುಜನರಿಂದ ವಿಧ್ಯುಕ್ತವಾಗಿ ನಿಯೋಗ ಪಡೆಯದಿದ್ದಲ್ಲಿ, ಪುತ್ರರೆನ್ನಿಸಲು ಅರ್ಹರಾಗಲಾರರು''. ಅವರು ಈ ಮಾತನ್ನು ಹೇಳುತ್ತಿದ್ದಂತೆಯೇ ವಾಯು ಗಗನದಲ್ಲಿದ್ದೇ ಕೌರವರ ಗುಂಪುಗಳನ್ನು ಕುರಿತು ನುಡಿದ.

ವಿ: ೧) ''ಪಾಂಡವರು ತಂದೆಯಿಂದ ಜನಿಸಿದವರಂತೂ ಅಲ್ಲ; ಅವರು ತಂದೆಯ ಮರಣಾನಂತರ ಸಂಬಂಧಿಸಿದ ಬಂಧುಜನರ ಅನುಮತಿ ಪಡೆಯದೆ, ತಾಯಿಯಲ್ಲಿ ಜನಿಸಿದರೆ, ಅದಕ್ಕೆ ಮಾನ್ಯತೆ ಇಲ್ಲ'' ಎಂಬುದು ಕೌರವರ ವಾದ.

೨) ಪಾಂಡವರು ಪಾಂಡುವಿನ ಔರಸಪುತ್ರರಲ್ಲವೆಂಬಂತೆ, ಕ್ಷೇತ್ರಜಪುತ್ರರೂ ಅಲ್ಲ ಎಂದು ಅವರ ಭಾವ.

೩) ಧೃತರಾಷ್ಟ್ರಾದಿಗಳು ವಿಚಿತ್ರವೀರ್ಯನ ಮರಣಾನಂತರ ಜನಿಸಿದ್ದರೂ, ಸತ್ಯವತೀ ಮೊದಲಾದ ಬಂಧುಜನರ ಸಮ್ಮತಿಯಿಂದ ಜನಿಸಿದ್ದರಿಂದ ಅವರು ವಿಚಿತ್ರವೀರ್ಯನ ಸಂತತಿ ಎನಿಸಿದಂತೆ, ಯುಧಿಷ್ಠಿರಾದಿಗಳು ಪಾಂಡವರೆನ್ನಿಸಲಾರರು ಎಂಬುದು ಅವರ ಆರೋಪ.

೪) ಅವರ ಆರೋಪಕ್ಕೆ ಪ್ರತ್ಯುತ್ತರವಾಗಿ ಅಶರೀರವಾಣಿ ಮೊಳಗಿತು ಎಂದರ್ಥ.

೫) ಪಾಂಡುರಾಜ ಸತ್ತು ಹದಿನೇಳು ದಿವಸಗಳಷ್ಟೇ ಕಳೆದಿದೆ. ಯುಧಿಷ್ಠಿರಾದಿಪಾಂಡವರಿಗೆ ಕ್ರಮವಾಗಿ ಹದಿನಾರು, ಹದಿನೈದು, ಹದಿನಾಲ್ಕು ಹಾಗೂ ಹದಿಮೂರು ವರ್ಷಗಳು. ಯುಧಿಷ್ಠಿರ ದುರ್ಯೋಧನನಿಗಿಂತ ಒಂದು ವರ್ಷ ನಾಲ್ಕು ದಿವಸಗಳಷ್ಟು ಹಿರಿಯ. ಎಂದ ಮೇಲೆ ಅವರೆಲ್ಲ ಪಾಂಡುರಾಜನ ಮರಣಾನಂತರ ಜನಿಸಿದವರು ಎಂಬ ಅವರ ಆರೋಪ ಸಂಪೂರ್ಣ ಅನುಚಿತವಾದುದು ಎಂದರ್ಥ.

೬) ಆದರೂ ಕೌರವರು ಹಾಗೆ ಆರೋಪಿಸಲು ಅವರಿಗಿದ್ದ ದುರುದ್ದೇಶವೇ ಮುಖ್ಯಕಾರಣ ಎಂದು ತಿಳಿಯಬೇಕು.

---

೧. ತಸ್ಮಾತ್ ಕ್ಷೇತ್ರಜಾ ಅಪಿ ನೇತ್ಯರ್ಥಃ । ಅಥವಾ ಪಿತರಿ ಮೃತೇ ಜಾತಾಃ ಕ್ಷೇತ್ರ ಏವ ನ ಭವಂತಿ । ಯಸ್ಮಾತ್ ಸ್ವಕೀಯೈಃ ಸಮ್ಯಙ್ನಿಯೋಗಮನವಾಪ್ಯಸ್ಥಿತಾಯಾಂ ಭವಾಯೋತ್ಪತ್ತಯೇ ನ ಯೋಗ್ಯಾ ಇತ್ಯರ್ಥಃ । – (ತಾ.)

ಏತೇ ಹಿ ಧರ್ಮಮರುದಿಂದ್ರಭಿಷಗ್ವರೇಭ್ಯೋ
ಜಾತಾಃ ಪ್ರಜೀವತಿ ಪಿತರ್ಯುರುಧರ್ಮಸಾರಾಃ[೧] ।
ಶಕ್ಯಾಶ್ಚ ನೈವ ಭವತಾಂ ಕ್ವಚಿದಗ್ರಹಾಯ
ನಾರಾಯಣೇನ ಸತತಂ ಪರಿರಕ್ಷಿತಾ ಯತ್ ॥ ೫೮ ॥

ಅ: ''ಇವರೆಲ್ಲ ತಂದೆಯಾದ ಪಾಂಡುರಾಜ ಬದುಕಿದ್ದಾಗಲೇ ಯಮಧರ್ಮ, ವಾಯು, ಇಂದ್ರ ಹಾಗೂ ಅಶ್ವಿನಿದೇವತೆಗಳಿಂದ ಜನಿಸಿದ ಮಹಾಧರ್ಮಿಷ್ಠರು. ನಾರಾಯಣನಿಂದ ಸದಾ ಪಾಲಿತರಾದ ಇವರನ್ನು ನೀವು ತ್ಯಜಿಸುವುದು ಸರ್ವಥಾ ಅಶಕ್ಯ''.

ವಿ: ೧) ಬಂಧುಜನಗಳ ಸಮ್ಮತಿಯಿದ್ದಾಗ ಪತಿಯ ಮರಣದ ಅನಂತರವೂ ನಿಯೋಗ–ಪದ್ಧತಿಯಿಂದ ಜನಿಸುವ ಸಂತತಿ ಗ್ರಾಹ್ಯ. ಪಾಂಡವರಂತೂ ಪಾಂಡುರಾಜ ಬದುಕಿದ್ದಾಗಲೇ ಅವನ ಅನುಮತಿಯಿಂದಲೇ ಯಮಧರ್ಮಾದಿದೇವತೆಗಳಿಂದ ಜನಿಸಿದವರು. ಎಂದ ಮೇಲೆ ಅವರ ಗ್ರಾಹ್ಯತೆ ಶಂಕಾತೀತವಾದುದು ಎಂದು ತಾತ್ಪರ್ಯ.

೨) ಧರ್ಮದಿಂದ ಜನಿಸಿದ ಇವರನ್ನು ಸ್ವತಃ ಭಗವಂತನೇ ಪಾಲಿಸುತ್ತಿರುವಾಗ, ಇವರನ್ನು ತೊರೆಯಲು ನಿಮ್ಮಿಂದ ಎಂದೂ ಶಕ್ಯವಿಲ್ಲ ಎಂದು ಭಾವ.

ಶ್ರೀವೇದವ್ಯಾಸರಿಂದ ಪಾಂಡವರ ಸ್ವೀಕಾರ

ವಾಯೋರದೃಶ್ಯವಚನಂ ಪರಿಶಂಕಮಾನೇ–
ಷ್ವಾವಿರ್ಬಭೂವ ಭಗವಾನ್ ಸ್ವಯಮಬ್ಜನಾಭಃ ।
ವ್ಯಾಸಸ್ವರೂಪ ಉರುಸರ್ವಗುಣೈಕದೇಹ
ಆದಾಯ ತಾನಗಮದಾಶು ಚ ಪಾಂಡುಗೇಹಮ್ ॥ ೫೯ ॥

ಅ: ವಾಯುವಿನ ಅದೃಶ್ಯವಚನವನ್ನು ಕೌರವರು ಸಂದೇಹಿಸ ತೊಡಗಿದಾಗ, ಸ್ವತಃ ಭಗವಂತನೂ, ಶ್ರೇಷ್ಠವಾದ ಸರ್ವಗುಣಗಳನ್ನೇ ದೇಹವನ್ನಾಗಿ ಹೊಂದಿದವನೂ ಆದ ವ್ಯಾಸರೂಪದ ಪದ್ಮನಾಭ ನಾರಾಯಣ ಸ್ವತಃ ಕಾಣಿಸಿಕೊಂಡ; ಮತ್ತು ಅವರನ್ನೆಲ್ಲ ಕರೆದುಕೊಂಡು ಪಾಂಡುವಿನ ಮನೆಗೆ ತೆರಳಿದ.

---

೧. ಪ್ರಜೀವತಿ ಸತಿ ತದಾಜ್ಞಯೇತಿ ಶೇಷಃ । –(ವ.)

ವಿಃ ೧) ವೇದವ್ಯಾಸರು 'ಕಶ್ಚನ ಋಷಿಃ' – ಯಾವುನೋ ಒಬ್ಬ ಸಾಮಾನ್ಯ ಋಷಿ ಎಂಬ ತಪ್ಪು ತಿಳುವಳಿಕೆ ತುಂಬಾ ಜನಗಳಲ್ಲಿದೆ. ಆದರೆ ಅವರು ಮತ್ಸ್ಯಕೂರ್ಮಾದಿಗಳಂತೆ ಸಾಕ್ಷಾತ್ ಭಗವಂತನ ಅವತಾರ ಎಂಬುದನ್ನು ಸ್ಫುಟಪಡಿಸಲು ಅವರನ್ನು ಉಲ್ಲೇಖಿಸುವ ಪ್ರತಿಪ್ರಸಂಗದಲ್ಲೂ ಅವರು ನಾರಾಯಣ ಎಂಬುದನ್ನು ಖಚಿತಪಡಿಸುವ 'ಪದ್ಮನಾಭ' 'ಉರುಸರ್ವಗಣೈಕದೇಹ' ಮೊದಲಾದ ವಿಶೇಷಣಗಳನ್ನು ಶ್ರೀಮದಾಚಾರ್ಯರು ಈ ಗ್ರಂಥದುದ್ದಕ್ಕೂ ಬಳಸಿರುವರು, ಶ್ರೀಹರಿಯ ಕೆಲವು ವಿಶೇಷಗುಣಗಳನ್ನಾದರೂ ಸ್ತುತಿಸುವುದು ಹರಿಭಕ್ತಾಗ್ರೇಸರರಾದ ಶ್ರೀಮದಾಚಾರ್ಯರ ಉದ್ದೇಶ ಎಂಬ ವಿಶೇಷಾಂಶ [೧]ವಾದಿರಾಜೀಯದಲ್ಲಿದೆ.

೨) ವ್ಯಾಸರು ಯಾವ ಮಾತನ್ನೂ ಆಡದೆ, ಅವರನ್ನೆಲ್ಲ ಕರೆದುಕೊಂಡು ಪಾಂಡುರಾಜನ ಅರಮನೆಗೆ ತೆರಳಿದ ವಿವರ ಅವರಿಗಿದ್ದ ಶಂಕಾತೀತವಾದ ಅಪಾರವರ್ಚಸ್ಸಿಗೆ ದ್ಯೋತಕ.

ತತ್ಸ್ವೀಕೃತೇಷು ಸಕಲಾ ಅಪಿ ಭೀಷ್ಮಮುಖ್ಯಾ
ವೈಚಿತ್ರವೀರ್ಯಸಹಿತಾಃ ಪರಿಪೂಜ್ಯ ಸರ್ವಾನ್ ।
ಕುಂತ್ಯಾ ಸಹೈವ ಜಗೃಹುಃ ಸುಭೃಶಂ ತದಾऽऽರ್ತಾ
ವೈಚಿತ್ರವೀರ್ಯತನಯಾಃ ಸಹ ಸೌಬಲೇನ ॥ ೬೦ ॥

ಅ: ಅವರು ಸ್ವೀಕರಿಸುತ್ತಿದ್ದಂತೆಯೇ, ಭೀಷ್ಮ ಮೊದಲಾದ ಎಲ್ಲರೂ ಧೃತರಾಷ್ಟ್ರನೊಂದಿಗೆ ಕೂಡಿ, ಕುಂತಿಯೊಂದಿಗೆ ಅವರನ್ನೆಲ್ಲ ಗೌರವದಿಂದ ಸ್ವೀಕರಿಸಿದರು. ಆಗ ಶಕುನಿಯೊಂದಿಗೆ ಕೌರವರೆಲ್ಲ ತುಂಬಾ ಸಂಕಟಪಟ್ಟರು.

ವಿಃ ೧) ಶ್ರೀವ್ಯಾಸರ ನಿರ್ಣಯ ಭೀಷ್ಮಾದಿಗಳಿಗೆಲ್ಲ ಪರಮಮಾನ್ಯವಾಯಿತು ಎಂದರ್ಥ. ಶಾಸ್ತ್ರವಿಚಾರದಲ್ಲೂ, ಸಂದಿಗ್ಧಪ್ರಸಂಗಗಳಲ್ಲೆಲ್ಲ ವ್ಯಾಸರ ಬ್ರಹ್ಮಸೂತ್ರಾದಿವಾಣಿಯೇ ನಿರ್ಣಾಯಕ ಎಂಬುದು ಪ್ರಸಿದ್ಧ ('ತಸ್ಮಾತ್ ಸೂತ್ರಾರ್ಥಮಾಗೃಹ್ಯ ಕರ್ತವ್ಯಃ ಸರ್ವನಿರ್ಣಯಃ' ೧/೪೪). ಅವರ ಬ್ರಹ್ಮಸೂತ್ರಗಳನ್ನು ಸಕಲವೈದಿಕಪ್ರತಿವಾದಿಗಳೂ ಸಹ ಮಾನ್ಯಮಾಡಿರುವುದು ಇದಕ್ಕೆ ಶ್ರೇಷ್ಠ ನಿದರ್ಶನ. ಅವರು ಒಂದೆಡೆ ಧೃತರಾಷ್ಟ್ರಾದಿಗಳಿಗೆ ಜನ್ಮವಿತ್ತ ಕುರುಕುಲಪಿತಾಮಹರಾದರೆ, ಮತ್ತೊಂದೆಡೆ ಸಕಲಋಷಿಮುನಿಗಳಿಗೂ ಗುರುಗಳಾದ ವಿಶ್ವಗುರುಗಳು ಎಂಬುದೂ ಗಮನಾರ್ಹ.

---

೧. ಭಗವತೋऽನಂತಗುಣಾನಾಮುಪಾಸಕಃ ಆಚಾರ್ಯಃ ಯತ್ರ ಯತ್ರ ಸ್ವಗ್ರಂಥೇ ಭಗವತ್ಪಸಂಗಸ್ತತ್ರ ತತ್ರ ತದ್ಗುಣಾನಾಮಪಿ ಸ್ವಯೋಗ್ಯಾನ್ ಸಹೈವ ಸ್ಮರತಿ । ಇತಿ ವಸ್ತುತತ್ತ್ವಮ್ । ತಾವತಾಮಪಿ ಗ್ರಂಥೇ ನಿಬಂಧನೇ ಗ್ರಂಥಸ್ಯಾಪ್ಯನಂತತ್ವಪ್ರಸಂಗಭಯಾ ಪಂಚಾಷಾನ್ ದಿವ್ಯಾನ್ ಗುಣಾನ್ ಸ್ವಭಕ್ತಜನೇಷು ಸ್ವಸ್ವಭಾವಂ ದರ್ಶಯಿತುಂ ಯತ್ರ ಯತ್ರ ಶ್ಲೋಕೇ ವಿಶಿಷ್ಯ ಹರೇಃ ಪ್ರಸಂಗಸ್ತತ್ರ ತತ್ರ ನಿಯಮೇನಾನುವರ್ಣಯತೀತಿ ಸರ್ವತ್ರಾನುಸಂಧೇಯಮ್। – (ವಾ. ೧೧/೧೭೮)

೨) ಇದು ಇತರರಿಗೆ ಸಂತಸದ ಸಂಗತಿಯಾದರೂ, ಕೌರವರಿಗೆ ಮಾತ್ರ ಸಂಕಟದ ಸಂಗತಿಯೇ ಆಯಿತು. ಆದರೆ ಅವರಾರೂ ಶ್ರೀವ್ಯಾಸರ ನಿರ್ಣಯವನ್ನು ಪ್ರಶ್ನಿಸಲು ಸಾಧ್ಯವಿರಲಿಲ್ಲ. ಅಂದು ಮಾತ್ರವಲ್ಲದೆ ಮುಂದೂ ಸಹ ಅವರನ್ನು ಅಗ್ರಾಹ್ಯರೆಂದು ಬಹಿರಂಗವಾಗಿ ಕೆಣಕುವ ಸಾಹಸ ಮಾಡಲು ಅವರಿಂದ ಸಾಧ್ಯವಾಗಲಿಲ್ಲ ಎಂಬ ವಿಶೇಷಾಂಶವನ್ನು ಗಮನಿಸಬೇಕು.

ಭೀಮಸೇನನ ಬಾಲಲೀಲೆಗಳು

ವೈಚಿತ್ರವೀರ್ಯತನಯಾಃ ಕೃಪತೋ ಮಹಾಸ್ತ್ರ-
ಣ್ಯಾಪುಶ್ಚ ಪಾಂಡುತನಯೈಃ ಸಹ ಸರ್ವರಾಜ್ಞಾಮ್ ।
ಪುತ್ರಾಶ್ಚ ತತ್ರ ವಿವಿಧಾ ಅಪಿ ಬಾಲಚೇಷ್ಟಾಃ
ಕುರ್ವತ್ಸು ವಾಯುತನಯೇನ ಜಿತಾಃ ಸಮಸ್ತಾಃ ॥ ೬೧ ॥

ಅ: ಕೌರವರೊಂದಿಗೆ ಪಾಂಡವರು, ಹಾಗೆಯೇ ಸಕಲರಾಜಪುತ್ರರೂ [೨]ಕೃಪಾಚಾರ್ಯ-ರಿಂದ ಮಹಾಸ್ತ್ರಗಳನ್ನು ಹೊಂದಿದರು. ಅವರೆಲ್ಲ ಬಗೆಬಗೆಯ ಬಾಲಚೇಷ್ಟೆಗಳಲ್ಲಿ ತೊಡಗಿದ್ದಾಗ ಎಲ್ಲರೂ ಭೀಮನಿಂದ ಪರಾಭವಗೊಂಡರು.

ವಿ: ಕುರುಪಾಂಡವರ ಆರಂಭದ ಅಸ್ತ್ರವಿದ್ಯಾಭ್ಯಾಸ ನಡೆದದ್ದು ಕೃಪಾಚಾರ್ಯರ ಬಳಿ.

ಪಕ್ವೋರುಭೋಜ್ಯಫಲಸನ್ನಯನಾಯ ವೃಕ್ಷೇ-
ಷ್ವಾರೂಢರಾಜತನಯಾನಭಿವೀಕ್ಷ್ಯ ಭೀಮಃ ।
ಪಾದಪ್ರಹಾರಮುರುವೃಕ್ಷತಲೇ ಪ್ರದಾಯ
ಸಾಕಂ ಫಲೈರ್ವಿನಿಪತತ್ಸು ಫಲಾನ್ಯಭುಂಕ್ತ ॥ ೬೨ ॥

ಅ: ಮಾಗಿದ, ದೊಡ್ಡದಾದ, ತಿನ್ನಲು ಯೋಗ್ಯವಾದ ಹಣ್ಣುಗಳನ್ನು ತೆಗೆದುಕೊಳ್ಳಲೆಂದು ರಾಜಪುತ್ರರು ಮರಗಳನ್ನು ಏರಿದ್ದನ್ನು ಕಂಡು ಭೀಮಸೇನ ಆ ದೊಡ್ಡ ಮರಗಳ ಬುಡಕ್ಕೆ

---

೧. ಅನಿತ್ಯತ್ವಾತ್ಸಮಾಸಾಂತವಿಧೇಃ "ರಾಜಾಹಃಸಖಿಭ್ಯಷ್ಟಚ್" ಇತಿ ಟಚ್ಪ್ರತ್ಯಯೋ ನ ಭವತಿ । ಅತಃ ಸರ್ವರಾಜ್ಞಾಮಿತಿ ಸಾಧು ॥ –(ವಾ.)

೨. ಕುಮಾರಾನ್ ಕ್ರೀಡಮಾನಾಂಸ್ತಾನ್ ದೃಷ್ಟ್ವಾ ರಾಜಾऽತಿದುರ್ಮದಾನ್ ।
ಗುರುಂ ಶಿಕ್ಷಾರ್ಥಮನ್ವಿಷ್ಯ ಗೌತಮಂ ತಾನ್ ನ್ಯವೇದಯತ್ ॥
ಶರಸ್ತಂಬೇ ಸಮುದ್ಭೂತಂ ವೇದಶಾಸ್ತ್ರಾರ್ಥಪಾರಗಮ್ ।
ಅಧಿಜಗ್ಮುಶ್ಚ ಕುರವೋ ಧನುರ್ವೇದಂ ಕೃಪಾತ್ ತು ತೇ ॥ –ಭಾರತ (ಆದಿ. ೧೨೮/೪೨,೪೩)

ಕಾಲಿನಿಂದ ಒದ್ದು, ಹಣ್ಣುಗಳ ಸಮೇತ ಅವರೆಲ್ಲ ಕೆಳಕ್ಕೆ ಬೀಳುತ್ತಿದ್ದಂತೆ, ತಾನು ಆ ಹಣ್ಣುಗಳನ್ನು ತಿನ್ನುತ್ತಿದ್ದ.

ವಿಃ ೧) ಇಲ್ಲಿ ಮರಗಳನ್ನು ಏರುವುದು ಎಂದರೆ, ವೇದಾದಿಶಾಸ್ತ್ರಗಳನ್ನು ಓದುವುದು ಎಂದೂ, ಫಲಗಳು ಎಂದರೆ ಸ್ವರ್ಗಾದಿಕಾಮ್ಯಫಲಗಳೂ ಎಂದೂ, ಕೌರವರು ಎಂದರೆ ಸ್ವಾರ್ಥಿಗಳಾದ ದುರ್ಜನರು ಎಂದೂ ಅರ್ಥ. ದುಷ್ಟರು ವೇದಾದಿಶಾಸ್ತ್ರಗಳನ್ನು ಸ್ವರ್ಗಾದಿಫಲಗಳ ಅಪೇಕ್ಷೆಯಿಂದ ಅಧ್ಯಯನ ಮಾಡುವರು. ಆದರೆ ಭೀಮಸೇನ ಆ ಮರಗಳನ್ನು ಏರದೆ, ಫಲಕ್ಕೂ ಕೈಹಾಕದೆ, ಫಲಭಾಗಿಯಾದ. ಅದರ ಬುಡಕ್ಕೆ ಪಾದದಿಂದ ಒದ್ದದ್ದು ವೇದಮೂಲನೂ, ಜಗನ್ಮೂಲನೂ ಆದ ಪರಮಾತ್ಮನ ಸ್ವರೂಪವನ್ನು ತಿಳಿಯುವುದಕ್ಕೆ ಸಂಕೇತ ('ಬ್ರಹ್ಮ ತಲ್ಲಕ್ಷ್ಯಮುಚ್ಯತೇ', 'ಉತ್ತಮಾನಾಂ ಸ್ವರೂಪಂ ತು ಪಾದಶಬ್ದೇನ ಭಣ್ಯತೇ', 'ನಿಗಮಕಲ್ಪತರೋರ್ಗಲಿತಂ ಫಲಂ'). ಫಲಗಳು ಅವಾಗಿ ಬೀಳುವುದು 'ತೇನ ತ್ಯಕ್ತೇನ ಭುಂಜೀಥಾಃ' ಅವಾಗಿ ಬಂದ ಫಲಗಳನ್ನು 'ಯದೃಚ್ಛಾ ಲಾಭಸಂತುಷ್ಟ'ನಾಗಿ ಸ್ವೀಕರಿಸುವುದು ಎಂದರ್ಥ. ದುರ್ಯೋಧನಾದಿಗಳಿಗೆ ಫಲಗಳು ದೊರೆಯದೆ ಹೋದದ್ದು ದೇವರನ್ನು ಆರಾಧಿಸದವರಿಗೆ ಧರ್ಮಾದಿಫಲಗಳೂ ಸಹ ಸಾಕಲ್ಯೇನ ದೊರೆಯದೇ ಹೋಗುವುದಕ್ಕೆ ಸೂಚಕ. ಹೀಗೆ ಭೀಮನ ಬಾಲಲೀಲೆ ಕೃಷ್ಣನ ಬಾಲಲೀಲೆಯಂತೆ ತಾತ್ತ್ವಿಕ ಎಂಬುದನ್ನು ಗಮನಿಸಬೇಕು.

ಯುದ್ಧೇ[೧] ನಿಯುದ್ಧ ಉತ ಧಾವನ ಉತ್ಪ್ಲವೇ ಚ
ವಾರಿಪ್ಲವೇ[೨] ಚ ಸಹಿತಾನ್ ನಿಖಿಲಾನ್ ಕುಮಾರಾನ್ ।
ಏಕೋ ಜಿಗಾಯ ತರಸಾ ಪರಮಾರ್ಯಕರ್ಮಾ
ವಿಷ್ಣೋಃ ಸುಪೂರ್ಣಸದನುಗ್ರಹತಃ ಸುನಿತ್ಯಾತ್ ॥ ೬೩ ॥

---

೧. ಯುದ್ಧಂ ನಾಮ ಪುಂಜದ್ವಯೀಭೂಯ ಕಲಹಃ । ನಿಯುದ್ಧಂ = ದ್ವಂದ್ವಯುದ್ಧಮ್ । ಪುಂಜೀಭೂಯ ಮಧ್ಯಸ್ಥಿತೇಷು ಕುಮಾರೇಷು ಪರಿತಃ ಪ್ಲವನಂ ಪಾರಿಪ್ಲವಃ ಸ್ವಾರ್ಥಿಕೋऽಣ್ ॥ – (ವಾ.)

ಜವೇ ಲಕ್ಷ್ಯಭಿಹರಣೇ ಭೋಜ್ಯೇ ಪಾಂಸುವಿಕರ್ಷಣೇ ।
ಧಾರ್ತರಾಷ್ಟ್ರಾನ್ ಭೀಮಸೇನಃ ಸರ್ವಾನ್ ಸ ಪರಿಮರ್ದತಿ ॥ - ಇತಿ ಭಾರತೇ (ಆದಿ. ೧೨೭/೧೬)

ನ ತೇ ಯುದ್ಧೇ ನ ಜವೇ ನ ಯೋಗ್ಯಾಸು ಕದಾಚನ ।
ಕುಮಾರಾ ಉತ್ತರಂ ಚಕ್ರುಃ ಸ್ಪರ್ಧಮಾನಾ ವೃಕೋದರಮ್ ॥ - ಇತಿ ಭಾರತೇ (ಆದಿ. ೧೨೭/೨೩)

೨. ಪಾರಿಪ್ಲವೇ – (ಪಾಠಾಂತರ)

ಅ: ಯುದ್ಧದಲ್ಲಿ, ದ್ವಂದ್ವಯುದ್ಧದಲ್ಲಿ, ಓಡುವುದರಲ್ಲಿ, ಹಾರುವುದರಲ್ಲಿ, ಈಜುವುದರಲ್ಲಿ ಒಟ್ಟಾಗಿ ಎದುರಿಸಿದ ಸಕಲ ರಾಜಕುಮಾರರನ್ನು ಉತ್ತಮ ಪೂಜ್ಯಕರ್ಮಗಳನ್ನು ಮಾಡುವಂತಹ ಭೀಮಸೇನ, ವಿಷ್ಣುವಿನ ಪರಿಪೂರ್ಣವಾದ ಪರಮಾನುಗ್ರಹದಿಂದಾಗಿ, ಒಬ್ಬನೇ ಕೂಡಲೆ ಗೆಲ್ಲುತ್ತಿದ್ದ.

ವಿ: ೧) 'ಪಾರಿಪ್ಲವ' ಎಂದರೆ ರಾಜಕುಮಾರರುಗಳ ಮಧ್ಯದಲ್ಲಿ ನಿಂತು, ಎಲ್ಲೆಡೆಯೂ ಆಕ್ರಮಿಸುವ ಕೌಶಲ ಎಂದರ್ಥ.

೨) ಯುದ್ಧ ಎಂದರೆ ದಂಡಾದಿಗಳಿಂದ ಮಾಡುವ ಕ್ರೀಡಾಯುದ್ಧ ಅಥವಾ ವಾಗ್ಯುದ್ಧ, ನಿಯುದ್ಧ ಎಂದರೆ ಮುಷ್ಟಿಯುದ್ಧ ಎಂಬ ಅರ್ಥ ಜನಾರ್ದನೀಯದಲ್ಲಿದೆ.

೩) ಉಳಿದವರೆಲ್ಲ ಒಟ್ಟಾಗಿ ಪ್ರಯತ್ನಿಸಿದರೂ, ಭೀಮನೊಬ್ಬನೇ ಎಲ್ಲ ಬಗೆಯ ಕ್ರೀಡೆಗಳಲ್ಲೂ ಅನಾಯಾಸವಾಗಿ ಸದಾ ಗೆಲ್ಲುತ್ತಿದ್ದನೆಂಬುದು ವಿಶೇಷ. ಅದಕ್ಕೆ ಅವನ ಸ್ವರೂಪಸಾಮರ್ಥ್ಯದಂತೆ ಶ್ರೀಹರಿಯ ನಿತ್ಯಾನುಗ್ರಹ ಮುಖ್ಯಕಾರಣವಾಗಿತ್ತು. ವಾಯುದೇವರ ಹಿರಿಮೆ ಇಂತಹುದು. ಪ್ರತಿಯೊಂದು ಕಾರ್ಯದಲ್ಲೂ ಅನನ್ಯಸಾಧಾರಣವಾದಂತಹ ಹಿರಿಮೆ ಅವರದು ('ಪ್ರಾಣೋ ವೈ ಜ್ಯೇಷ್ಠಶ್ಚ ಶ್ರೇಷ್ಠಶ್ಚ'). ಇತರ ತಾತ್ತ್ವಿಕದೇವತಾವೃಂದವನ್ನೇ ಜಯಿಸುವ ವಾಯುದೇವರಿಗೆ ಈ ಕೌರವಾದಿಜಯದಲ್ಲಿ ಆಶ್ಚರ್ಯವೇನು? ಎಂದೂ ತಿಳಿಯಬೇಕು.

೪) ವಾಯುದೇವರು ಓಟದ ಸ್ಪರ್ಧೆಯಲ್ಲಿ ಇತರ ದೇವತೆಗಳನ್ನೆಲ್ಲ ಪರಾಭವಗೊಳಿಸಿ ಒಟ್ಟು ಮೂರು ಬಾರಿ ಪ್ರಪ್ರಥಮರಾಗಿ ಸೋಮಪಾನ ಮಾಡಿದ ವಿವರ ಐತರೇಯಬ್ರಾಹ್ಮಣ–ದಲ್ಲೂ (೧/೯/೧), ಋಗ್ವೇದದಲ್ಲೂ (೪/೪೬/೧) ಬಂದಿರುವುದನ್ನು ಗಮನಿಸಬೇಕು.

೫) ಹನುಮದ್ರೂಪ, ಮಧ್ವರೂಪಗಳಲ್ಲೂ ಹೀಗೆ ಜೊತೆಗಾರರನ್ನೆಲ್ಲ ಲೀಲಾಜಾಲವಾಗಿ ಸೋಲಿಸುತ್ತಿದ್ದ [೧]ವಿವರ ಬಂದಿದೆ.

ಸರ್ವಾನ್ ಪ್ರಗೃಹ್ಯ ವಿನಿಮಜ್ಜತಿ ವಾರಿಮಧ್ಯೇ
ಶ್ರಾಂತಾನ್ ವಿಸೃಜ್ಯ ಹಸತಿ ಸ್ಮ ಸ ವಿಷ್ಣುಪದ್ಯಾಮ್ ।
ಸರ್ವಾನುದೂಹ್ಯ ಚ ಕದಾಚಿದುರುಪ್ರವಾಹಾಂ
ಗಂಗಾಂ ಸುತಾರಯತಿ ಸಾರಸುಪೂರ್ಣಪೌಂಸ್ಯಃ ॥ ೬೪ ॥

---

೧. ಪ್ಲವನತೇಜಸಿ ಹಂತ ನ ಕೇವಲಂ ವಿಜಿತವಾನ್ ಸ ತದಾ ಸಕಲಾನ್ ಜನಾನ್ ।
ಪ್ರಭುನಿದೇಶಕರೋ ಹನುಮತ್ತನೌ ನನು ಜಿಗಾಯ ಸ ವಾಲಿಸುತಾದಿಕಾನ್ ॥ – ಮ.ವಿ. (೩/೪೫)

ಅ: ಪರಿಪೂರ್ಣವಾದ ಮಹಾಪೌರುಷದ ಆ ಭೀಮಸೇನ ಅವರೆಲ್ಲರನ್ನೂ ಹಿಡಿದುಕೊಂಡು, ಗಂಗೆಯಲ್ಲಿ ನೀರಿನ ಮಧ್ಯೆ ಮುಳುಗುಹಾಕುತ್ತಿದ್ದ. ಅವರು ಬಳಲಿದಾಗ ಬಿಡುಗಡೆ ಮಾಡಿ, ನಗಾಡುತ್ತಿದ್ದ. ಕೆಲವೊಮ್ಮೆ ಅವರನ್ನೆಲ್ಲ ಹೊತ್ತು ತುಂಬುಪ್ರವಾಹದ ಗಂಗೆಯನ್ನು ದಾಟಿಸಿಬಿಡುತ್ತಿದ್ದ.

ವಿ: ೧) ಭೀಮನ ನೀರಾಟದ ವರ್ಣನೆ ಇಲ್ಲಿದೆ. ಎಲ್ಲರನ್ನೂ ಒಟ್ಟಾಗಿ ಹಿಡಿದು ನೀರಲ್ಲಿ ದೀರ್ಘಕಾಲ ಮುಳುಗುವುದು, ಅವರೆಲ್ಲ ತುಂಬ ಬಳಲಿದಾಗ ಬಿಡುವುದು, ತುಂಬಿ ಹರಿಯುವ ಗಂಗೆಯನ್ನು ಎಲ್ಲರನ್ನು ಹೊತ್ತೇ ಈಜಿ ದಾಟುವುದು ಭೀಮನ ಜಲವಿಹಾರದ ವೈಭವವಾಗಿತ್ತು. ಸುಜೀವಿಗಳನ್ನೆಲ್ಲ ವಿರಜಾನದಿಯನ್ನೇ ದಾಟಿಸುವ ವಾಯುವಿನ ಅವತಾರವಾದ ಭೀಮನಿಗೆ ಇದು ಅಚ್ಚರಿಯ ಸಂಗತಿಯೇನಲ್ಲ ಎಂಬುದನ್ನು ಗಮನಿಸಬೇಕು.

ಬಾಲಲೀಲೆಗಳ ಉದ್ದೇಶ

ದ್ವೇಷಂ ಹ್ಯತೇ ನ ಹಿ ಹರೌ ತಮಸಿ ಪ್ರವೇಶಃ
ಪ್ರಾಣೇ ಚ ತೇನ ಜಗತೀಮನು ತೌ ಪ್ರಪನ್ನೌ ।
ತತ್ಕಾರಣಾನ್ಯಕುರುತಾಂ ಪರಮೌ ಕರಾಂಸಿ
ದೇವದ್ವಿಷಾಂ ಸತತವಿಸ್ಮೃತಸಾರಪೌಂಸ್ಯೈ ॥ ೬೫ ॥

ಅ: ಹರಿಯಲ್ಲೂ, ವಾಯುವಿನಲ್ಲೂ ದ್ವೇಷ ಮಾಡದ ಹೊರತು ಅಯೋಗ್ಯರಿಗೆ ತಮಸ್ಸು ಲಭಿಸದು. ಅದಕ್ಕೆಂದೇ ಅವರಿಬ್ಬರೂ ಭೂಮಿಯಲ್ಲಿ ಅವತರಿಸಿ, ಅಸುರರಿಗೆ ದ್ವೇಷಕ್ಕೆ ಕಾರಣವಾಗುವ ಅಹಹ ಕಾರ್ಯಗಳನ್ನು ಸೆದಾ ವ್ಯಾಪ್ತವಾದ ಉತ್ತಮಪೌರುಷಶಾಲಿಗಳಾದ ದೇವಶ್ರೇಷ್ಠರುಗಳಾದ ಅವರಿಬ್ಬರು ಮಾಡುತ್ತಿದ್ದರು.

ವಿ: ೧) ಮುಕ್ತಿಗೆ ಹರಿವಾಯುಗಳಲ್ಲಿನ ಭಕ್ತಿ ಖಚಿತಸಾಧನವಾಗಿರುವಂತೆ ತಮಸ್ಸಿಗೆ ಅವರಿಬ್ಬರಲ್ಲಿ ದ್ವೇಷ ಖಚಿತಸಾಧನ. ಶ್ರೀಕೃಷ್ಣಭೀಮರ ಲೀಲೆಗಳು ಭಕ್ತಿವೃದ್ಧಿಯ ಮೂಲಕ

---

೨. ಸಾರಂ ಶ್ರೇಷ್ಠಂ ಸುಪೂರ್ಣಂ ಪೌಸ್ನಂ ಪುಂಸೋ ಭಾವಃ ಪೌಸ್ನಂ ಪೌರುಷಂ ಯಸ್ಯ ಸ ತಥೋಕ್ತಃ॥– (ವಾ.)

೩. "ಶ್ರು ಶ್ರವಣ" ಇತಿ ಧಾತೋಃ ಶಿರಾಂಸೀತಿವತ್ "ಮನು ಅವಬೋಧನೇ" ಇತಿ ಧಾತೋಃ ಮನಾಂಸೀತಿವಚ್ಚ ಕರಾಂಸೀತ್ಯಪಿ ಭಾವಾರ್ಥಾತ್ "ಡುಕೃಞ್ ಕರಣ" ಇತಿ ಧಾತೋರಸುನ್ಪ್ರತ್ಯಯಾಂತಂ ಪದಮ್ ಕರ್ಮಾಣೀತ್ಯರ್ಥಃ॥ – (ವಾ.)

ಸುಜೀವಿಗಳಿಗೆ ಮೋಕ್ಷಸಾಧನವಾದಂತೆ ದ್ವೇಷವೃದ್ಧಿಯ ಮೂಲಕ ಅಯೋಗ್ಯರಿಗೆ ತಮಃಸಾಧನಗಳೂ ಆದವು ಎಂದರ್ಥ.

೨) ಹರಿವಾಯುಗಳಲ್ಲಿ ದ್ವೇಷದ ಹೊರತು, ಇತರ ಮಹಾಪಾಪಗಳಿಗೆ ರೌರವಾದಿ–ನರಕಗಳು ದೊರೆಯುವವೇ ಹೊರತು, ತಮಸ್ಸಲ್ಲ. ಆದ್ದರಿಂದ ಹರಿವಾಯುಗಳ ದ್ವೇಷ ಸಕಲಪಾತಕಗಳಿಗಿಂತಲೂ ಮಿಗಿಲಾದ [೧]ಮಹಾಪಾತಕ ಎಂದರ್ಥ.

ಭೀಮನಿಗೆ ಅಂಜಿದ ಕೌರವರ ಮಂತ್ರಾಲೋಚನೆ

ದೃಷ್ಟ್ವಾಽಮಿತಾನ್ಯಥ ಕರಾಂಸಿ ಮರುತ್ಸುತೇನ
ನಿತ್ಯಂ ಕೃತಾನಿ ತನಯಾ ನಿಖಿಲಾಶ್ಚ ರಾಜ್ಞಾಮ್ ।
ತಸ್ಯಾಮಿತಂ ಬಲಮುದೀಕ್ಷ್ಯ ಸದೋರುವೃದ್ಧ-
ದ್ವೇಷಾ ಬಭೂವುರಥ ಮಂತ್ರಮಮಂತ್ರಯಂಶ್ಚ ॥ ೬೬ ॥

ಅ: ವಾಯುಪುತ್ರನಾದ ಭೀಮ ಸದಾ ಮಾಡುತ್ತಿದ್ದ ಅಪರಿಮಿತಕಾರ್ಯಗಳನ್ನು ಕಂಡು, ಅವನ ಅಪರಿಮಿತವಾದ ಬಲವನ್ನು ಅರಿತು, ರಾಜಪುತ್ರರುಗಳ ದ್ವೇಷ ಸದಾ ಹೆಚ್ಚುತ್ತಲೇ ಹೋಯಿತು. ಅವರೆಲ್ಲ ರಹಸ್ಯವಾಗಿ ಸೇರಿ ಉಪಾಯವೊಂದನ್ನು ಯೋಜಿಸಿದರು.

ಯೇ ಯೇ ಹಿ ತತ್ರ ನರದೇವಸುತಾಃ ಸುರಾಂಶಾಃ
ಪ್ರೀತಿಂ ಪರಾಂ ಪವನಜೇ ನಿಖಿಲಾ ಅಕುರ್ವನ್ ।
ತಾಂಸ್ತಾನ್ ವಿಹಾಯ ದಿತಿಜಾ ನರದೇವವಂಶ-
ಜಾತಾ ವಿಚಾರ್ಯ ವಧನಿಶ್ಚಯಮಸ್ಯ ಚಕ್ರುಃ ॥ ೬೭ ॥

ಅ: ಯಾರು ಯಾರು ಅವರಲ್ಲಿ ದೇವಾಂಶರಾದ ರಾಜಕುಮಾರರಿದ್ದರೋ, ಅವರೆಲ್ಲ ಭೀಮನಲ್ಲಿ ಅತ್ಯಂತ ಹೆಚ್ಚು ಪ್ರೀತಿಯನ್ನು ಮಾಡಿದರು. ಅವರನ್ನು ಬಿಟ್ಟು ರಾಜವಂಶದಲ್ಲಿ ಜನಿಸಿದ್ದ ದೈತ್ಯರು ವಿಚಾರ ಮಾಡಿ, ಅವನನ್ನು ವಧಿಸುವ ನಿಶ್ಚಯವನ್ನೇ ಮಾಡಿದರು.

---

೧. ಅಸ್ಮಿನ್ನಸ್ಮದ್ಗುರೂಣಾಂ ಹರಿಚರಣಚರಧ್ಯಾನಸನ್ಮಂಗಲಾನಾಂ
ಯುಷ್ಮಾಕಂ ಪಾರ್ಶ್ವಭೂಮಿಂ ಧೃತರಣರಣಕಃ ಸ್ವರ್ಗಿಸೇವ್ಯಾಂ ಪ್ರಪನ್ನಃ ।
ಯಸ್ತೂದಾಸ್ತೇ ಸ ಆಸ್ತೇಽಧಿಭವಮಸುಲಭಕ್ಲೇಶನಿರ್ಮೋಕಮಸ್ತ-
ಪ್ರಾಯಾನಂದಂ ಕಥಂಚಿನ್ನ ವಸತಿ ಸತತಂ ಪಂಚಕಷ್ಟೇಽತಿಕಷ್ಟೇ ॥ –ವಾಯುಸ್ತುತಿ (ಶ್ಲೋ. ೧೨)

ವಿ: ಭೀಮನ ಕಾರ್ಯಗಳನ್ನು ಕಂಡು ಸಂತೋಷಿಸಿದವರೆಲ್ಲ ದೇವಾಂಶರಾದರೆ ದ್ವೇಷಿಸಿದವರೆಲ್ಲ ಅಸುರಾಂಶರಾಗಿದ್ದವರು ಎಂದರ್ಥ.

ಅಸ್ಮಿನ್ ಹತೇ ವಿನಿಹತಾ ನಿಖಿಲಾಶ್ಚ ಪಾರ್ಥಾಃ
ಶಕ್ಯೋ ಬಲಾಚ್ಚ ನ ನಿಹಂತುಮಯಂ ಬಲಾಢ್ಯಃ ।
ಛದ್ಮಪ್ರಯೋಗತ ಇಮಂ ವಿನಿಹತ್ಯ ವೀರ್ಯಾತ್
ಪಾರ್ಥಂ ನಿಹತ್ಯ ನಿಗಡೇ ಚ ವಿದಧ್ಮಹೇಽನ್ಯಾನ್ ॥ ೬೮ ॥

ವಿವಂ ಕೃತೇ ನಿಹತಕಂಟಕಮಸ್ಯ ರಾಜ್ಯಂ
ದುರ್ಯೋಧನಸ್ಯ ತು ಭವೇನ್ನ ತತೋಽನ್ಯಥಾ ಸ್ಯಾತ್ ।
ಅಸ್ಮಿನ್ ಹತೇ ನಿಪತಿತೇ ಚ ಸುರೇಂದ್ರಸೂನೌ
ಶೇಷಾ ಭವೇಯುರಪಿ ಸೌಬಲಿಪುತ್ರದಾಸಾಃ ॥ ೬೯ ॥

ಅ: ''ಇವನೊಬ್ಬ ಹತನಾದರೆ, ಉಳಿದೆಲ್ಲ ಪಾಂಡವರೂ ಸತ್ತಂತೆಯೇ. ಬಲಾಢ್ಯನಾದ ಇವನನ್ನು ಬಲದಿಂದ ಕೊಲ್ಲಲು ಸಾಧ್ಯವಾಗದು. ಕಪಟಪ್ರಯೋಗದಿಂದ ಇವನನ್ನು ಕೊಂದು, ಅರ್ಜುನನನ್ನು ಪರಾಕ್ರಮದಿಂದ ಕೊಂದು, ಇತರರನ್ನು ಬಂಧನದಲ್ಲಿರಿಸೋಣ (೬೮).

ಹೀಗೆ ಮಾಡಿದರೆ ಈ ದುರ್ಯೋಧನನ ರಾಜ್ಯ ನಿಷ್ಕಂಟಕವಾಗುವುದು. ಇಲ್ಲವಾದಲ್ಲಿ ಸಾಧ್ಯವಾಗದು. ಭೀಮನ ಕೊಲೆಯಾಗಬೇಕು; ಅರ್ಜುನ ಸಾಯಬೇಕು. ಆಗ ಉಳಿದವರು ದುರ್ಯೋಧನನ ದಾಸರಾಗುವರು''(೬೯).

ವಿ: ೧) ಭೀಮ ಜ್ಞಾನಾದಿ ಹತ್ತು ಗುಣಗಳಿಗೂ, ಅರ್ಜುನ ಶ್ರವಣಾದಿಗಳಿಗೂ, ಉಳಿದ ಮೂವರು ಕ್ರಮವಾಗಿ ಧರ್ಮ, ಶೀಲ, ವಿನಯಗಳಿಗೂ ಸಂಕೇತ (ಅಧ್ಯಾಯ ೨/೧೩೯). ಭೀಮನನ್ನು ಕೊಲೆ ಮಾಡುವುದು ಎಂದರೆ ಭಕ್ತಿಜ್ಞಾನಾದಿಗುಣಗಳನ್ನು ಮೋಸದಿಂದ ಹಾಳು ಮಾಡುವುದು. ಅರ್ಜುನನನ್ನು ಪರಾಕ್ರಮದಿಂದ ಕೊಲ್ಲುವುದು ಎಂದರೆ ಶ್ರವಣಾದಿಗಳನ್ನು ಬಲಾತ್ಕಾರದಿಂದ ನಿಲ್ಲಿಸುವುದು. ಯುಧಿಷ್ಠಿರಾದಿಗಳನ್ನು ಸಂಕೋಲೆಗಳಿಂದ ಬಿಗಿಯುವುದು ಎಂದರೆ ಧರ್ಮ, ಶೀಲೆ, ವಿನಯಗಳನ್ನು ತಮ್ಮ ಇಚ್ಛೆಗೆ ತಕ್ಕಂತೆ ಅರ್ಥೈಸಿ ನಡೆಸಿಕೊಳ್ಳುವುದು ಎಂದರ್ಥ. ಕಲಿಯುಗದಲ್ಲಿ ನಿತ್ಯ ನಡೆಯುವ ಸಂಗತಿ ಎಂದರೆ ಇದೇ ಅಲ್ಲವೆ!.

೨) ಭೀಮಾರ್ಜುನರಿರುವವರೆಗೂ ಕಲಿಯ ಸಾಮ್ರಾಜ್ಯ ನಡೆಯದು. ಜ್ಞಾನಶ್ರವಣಾದಿ–ಗಳು ಇರುವವರೆಗೂ ಕಲಿಯು ಕಾಲಿಡಲಾರ. ಮಧ್ವಜಯತೀರ್ಥರ ಪ್ರಭಾವಕ್ಕೆ ಕಲಿ ಮಣಿಯುವುದು ಉಚಿತ ಎಂದರ್ಥ.

ಭೀಮನಿಗೆ ಕಾಲಕೂಟಪ್ರಯೋಗ

ಏವಂ ವಿಚಾರ್ಯ ವಿಷಮುಲ್ಬಣಮಂತಕಾಭಂ
ಕ್ಷೀರೋದಧೇರ್ಮಥನಜಂ ತಪಸಾ ಗಿರೀಶಾತ್ ।
ಶುಕ್ರೇಣ ಲಬ್ಧಮಮುತಃ ಸುಬಲಾತ್ಮಜೇನ
ಪ್ರಾಪ್ತಂ ಪ್ರತೋಷ್ಯ ಮರುತಸ್ತನಯಾಯ ಚಾದುಃ ॥ ೭೦ ॥

ಅ: ಹೀಗೆ ವಿಚಾರ ಮಾಡಿ, ಅವರು ಮೃತ್ಯುವಿನಂತೆ ಭಯಂಕರವಾಗಿದ್ದ ಕ್ಷೀರಸಮುದ್ರಮಥನಕಾಲದಲ್ಲಿ ಹುಟ್ಟಿದ್ದ, ತಪಸ್ಸು ಮಾಡಿ ಶುಕ್ರಾಚಾರ್ಯರು ಶಿವನಿಂದ ಪಡೆದಿದ್ದ, ಶುಕ್ರಾಚಾರ್ಯರ ಮನವೊಲಿಸಿ ಶಕುನಿ ತಂದಿದ್ದ ಭಯಂಕರವಾದ [೧]ಕಾಲಕೂಟವಿಷವನ್ನು ವಾಯುಪುತ್ರನಾದ ಭೀಮನಿಗೆ ನೀಡಿದರು.

ವಿ: ೧) ಭೀಮನ ಕೊಲೆಗೆ ಅವರು ಯೋಜಿಸಿದ ಕಪಟೋಪಾಯ ಕಾಲಕೂಟವಿಷ–ಪ್ರಯೋಗ. ಸಮುದ್ರಮಥನಕಾಲದಲ್ಲಿ ಹುಟ್ಟಿದ ಆ ವಿಷದ ವಿಚಾರ ಈಗಾಗಲೇ ಬಂದಿದೆ (೧೦/೧೩). ತುಂಬಾ ಬಲಾಢ್ಯನಾದ ಭೀಮು ಬೇರೆ ಯಾವ ವಿಷಕ್ಕೂ ಒಳಗಾಗನು ಎಂಬ ಪರಿಜ್ಞಾನ ಅವರಿಗೆ ಉಂಟಾಗಿದ್ದಿತು ಎಂಬುದು ಇದರಿಂದ ಸೂಚಿತ. ಇದು ಶ್ರೀಕೃಷ್ಣನನ್ನು ಪೂತನಿಯ ವಿಷದಿಂದ ಕೊಲ್ಲಿಸ ಬಯಸಿದ ಕಂಸನ ಪ್ರಯತ್ನದಂತೆ ಇರುವುದನ್ನು ಗಮನಿಸಬೇಕು. ಅವನದು ಸರ್ವೋತ್ತಮನ ಕೊಲೆಯ ವಿಚಾರವಾದರೆ, ಇವರದು ಜೀವೋತ್ತಮನ ಕೊಲೆಯ ವಿಚಾರವಾಗಿತ್ತು ಎಂಬುದು ವಿಶೇಷ.

೨) ಜ್ಞಾನಿಗಳ ನಾಶಕ್ಕೆ ವಿಷಪ್ರಯೋಗದಂತಹ ಕಪಟೋಪಾಯ ಅನಂತರ ಕಾಲದಲ್ಲೂ ನಡೆದುಬಂದಿರುವುದಕ್ಕೆ ಇತಿಹಾಸದ ಪುಟಗಳಲ್ಲಿ ಅನೇಕ ನಿದರ್ಶನಗಳುಂಟು. ಅದಕ್ಕೆ ಆದ್ಯಪ್ರವರ್ತಕ ಈ ದುರ್ಯೋಧನಾದಿದುಷ್ಟಕೂಟ ಎಂಬುದು ಇದರಿಂದ ತಿಳಿಯುವುದು.

೩) ಕಾಲಕೂಟ ಕಲಿಯ ಸ್ವರೂಪ ಎಂಬ ವಿವರ ಈಗಾಗಲೇ ಬಂದಿದೆ (ಕಲೇಃ ಸ್ವರೂಪಂ ತದತೀವ ದುಃಸಹಮ್' ೧೦/೧೪). ಅದನ್ನು ಪ್ರಯೋಗಿಸಿದ ದುರ್ಯೋಧನ ಕಲಿಯ ಅವತಾರ.

೪) ವಿಷವು ಕಾಲಕೂಟ; ಪ್ರಯೋಗಿಸಿದವನು ಕಾಲಕೂಟಸ್ವರೂಪನಾದ ದುರ್ಯೋಧನ. ಎಂದರೆ ಅದು ಪೂರ್ಣಪ್ರಮಾಣದ ಕಾಲಕೂಟಪ್ರಯೋಗವಾಗಿತ್ತು ಎಂದರ್ಥ.

---

೧. ಭೋಜನೇ ಭೀಮಸೇನಸ್ಯ ಪುನಃ ಪ್ರಾಕ್ಷೇಪಯದ್ ವಿಷಮ್ ।
ಕಾಲಕೂಟಂ ನವಂ ತೀಕ್ಷ್ಣಂ ಸಂಭೃತಂ ಲೋಮಹರ್ಷಣಮ್ ॥ - ಇತಿ ಭಾರತೇ (ಆದಿ. ೧೨೮/೩೭)

ಕಾಲಕೂಟ ಗೆದ್ದ ಭೀಮನ ಪ್ರತಾಪ

ಸಮ್ಮಂತ್ರ್ಯ ರಾಜತನಯೈರ್ಧೃತರಾಷ್ಟ್ರಜೈಸ್ತು
ದತ್ತಂ ಸ್ವಸೂದಮುಖತೋಽಖಿಲಭಕ್ಷ್ಯಭೋಜ್ಯೇ ।
ಜ್ಞಾತ್ವಾ ಯುಯುತ್ಸುಗದಿತಂ ಬಲವಾನ್ ಸ ಭೀಮೋ
ವಿಷ್ಣೋರನುಗ್ರಹಬಲಾಜ್ಜರಯಾಂಚಕಾರ ॥ ೭೧ ॥

ಅ: ರಾಜಕುಮಾರರುಗಳೊಂದಿಗೆ ಸಮಾಲೋಚಿಸಿ, ಕೌರವರು ತಮ್ಮ ಅಡುಗೆಯವನ ಮೂಲಕ ಸಕಲಭಕ್ಷ್ಯಗಳಲ್ಲೂ ಭೋಜ್ಯಗಳಲ್ಲೂ ಆ ಕಾಲಕೂಟವಿಷವನ್ನು ಹಾಕಿದರು. ಯುಯುತ್ಸು ಅದನ್ನು ಭೀಮನಿಗೆ ತಿಳಿಸಿದ. ಸ್ವತಃ ತಾನಾಗಿಯೂ ಅದನ್ನು ತಿಳಿದಿದ್ದ ಬಲಶಾಲಿಯಾದ ಭೀಮ ವಿಷ್ಣುವಿನ ಅನುಗ್ರಹಬಲದಿಂದಾಗಿ ಅದನ್ನು ಜೀರ್ಣಿಸಿಕೊಂಡ.

ವಿ: ೧) ಕೌರವರು ವಿಷ ನೀಡುವ ವಿವರ ಪೂರ್ಣಪ್ರಜ್ಞನಾದ ಭೀಮನಿಗೆ ಸ್ವತಃ ತಿಳಿದಿತ್ತು, ಕೌರವರ ಸಹೋದರನಾದ ೧ಯುಯುತ್ಸುವೂ ಸಹ ಅದನ್ನು ತಿಳಿಸಿದ್ದ. ಅವನು ಹಾಗೆ ತಿಳಿಸಲು ಅವನು ಕೌರವರಂತೆ ದುಷ್ಟನಾಗಿರದೆ, ನಿರ್ಋತ ಎಂಬ ದೇವತೆಯ ಅಂಶವಾಗಿದ್ದುದೇ ಕಾರಣ (೧೨/೪೮) ಎಂದು ತಿಳಿಯಬೇಕು.

೨) ಹಾಗೆ ತಿಳಿದೂ ವಿಷವನ್ನು ಪಾನ ಮಾಡಿದ್ದು ಭೀಮನ ಹಿರಿಮೆಯ ಇನ್ನೊಂದು ಮುಖ. ಹಾಗೆ ತಿಂದ ವಿಷವನ್ನು ಭೀಮಸೇನ ಯಾವ ಪ್ರಯಾಸವೂ ಇಲ್ಲದೆ ಜೀರ್ಣಿಸಿಕೊಂಡ ; ಮಾತ್ರವಲ್ಲದೆ ಶಿವನಿಗಾದಂತೆ ನೀಲಕಂಠ ಮೊದಲಾದ ಯಾವ ವಿಕಾರವೂ ಆಗಲಿಲ್ಲ ಎಂಬ ಮಾತು ಮಹಾಭಾರತದಲ್ಲೂ ಬಂದಿದೆ :

ವೈಶ್ಯಾಪುತ್ರಸ್ತದಾಚಷ್ಟ ಪಾರ್ಥಾನಾಂ ಹಿತಕಾಮ್ಯಯಾ ।
ತಚ್ಚಾಪಿ ಭುಕ್ತ್ವಾಽಜರಯದವಿಕಾರಂ ವೃಕೋದರಃ ॥
ವಿಕಾರಂ ನ ಹ್ಯಜನಯತ್ ಸುತೀಕ್ಷ್ಣಮಪಿ ತದ್ವಿಷಮ್ ।
ಭೀಮಸಂಹನನೇ ಭೀಮೇ ಅಜೀರ್ಯತ ವೃಕೋದರೇ ॥

– ಭಾರತ (ಆದಿ. ೧೨೮/೩೮,೩೯)

೩) ವಾಯುವಿನ ಅವತಾರವಾದ ಭೀಮಸೇನ ಹೀಗೆ ಕಾಲಕೂಟವನ್ನು ಜೀರ್ಣಿಸಿ–ಕೊಂಡಿದ್ದು ಆತ ಮೂಲರೂಪದಿಂದಲೂ ಕಾಲಕೂಟವಿಷಪಾನ ಮಾಡಿ, ಜೀರ್ಣಿಸಿಕೊಂಡ ವಿವರಕ್ಕೆ ಪೋಷಕವಾಗಿರುವುದು ಗಮನಾರ್ಹ. ಶಿವ ಮೂಲರೂಪದಿಂದಲೂ ಜೀರ್ಣಿಸಿಕೊಳ್ಳ–ಲಾಗದ ಕಾಲಕೂಟವನ್ನು ವಾಯುದೇವರು ಅವತಾರರೂಪದಲ್ಲೂ ಜೀರ್ಣಿಸಿಕೊಂಡಿದ್ದು ಅವರ ಜೀವೋತ್ತಮತ್ವಕ್ಕೆ ಶ್ರೇಷ್ಠನಿದರ್ಶನ.

೪) ಕಂಸ ಪೂತನಿಯ ಮೂಲಕ ಮಾಡಿದ ವಿಷಪ್ರಯೋಗದ ಪ್ರಯತ್ನವನ್ನು ಕೃಷ್ಣ ವ್ಯರ್ಥಗೊಳಿಸಿದಂತೆ, ದುರ್ಯೋಧನನ ಈ ವಿಷಪ್ರಯೋಗದ ಪ್ರಯತ್ನವನ್ನು ವ್ಯರ್ಥಗೊಳಿಸಿದ್ದು ಭೀಮನ ಹಿರಿಮೆ. ಹೀಗೆ ವಿಷ ಜೀರ್ಣಿಸಿಕೊಳ್ಳುವ ಅಸಾಧಾರಣಹಿರಿಮೆ ಶ್ರೀಹರಿವಾಯುಗಳಲ್ಲಿ ಮಾತ್ರ ಕಂಡುಬಂದಿರುವ ವೈಶಿಷ್ಟ್ಯ.

೫) ಶ್ರೀಕೃಷ್ಣಭೀಮರಿಬ್ಬರು ಸ್ವಯಂಅಮೃತಸ್ವರೂಪರು ಎಂಬುದು ಗಮನಾರ್ಹ :
'ಅಮೃತಃ ಶಾಶ್ವತಃ ಸ್ಥಾಣುಃ' (ವಿಷ್ಣುಸಹಸ್ರನಾಮ);
'ವಾಯುರನಿಲಮಮೃತಮ್' (ಈಶಾವಾಸ್ಯೋಪನಿಷತ್).

ಪ್ರಮಾಣಕೋಟಿಯಿಂದ ಹೊರಬಂದ ಮುಖ್ಯಪ್ರಾಣ

ಜೀರ್ಣೇ ವಿಷೇ ಕುಮತಯಃ ಪರಮಾಭಿತಪ್ತಾಃ
ಪ್ರಾಸಾದಮಾಶು ವಿದಧುರ್ಹರಿಪಾದತೋಯೇ।
ಜ್ಞಾತ್ವಾ ಯುಯುತ್ಸುಮುಖಿತಃ ಸ್ವಯಮತ್ರ ಚಾಂತೇ
ಸುಷ್ವಾಪ ಮಾರುತಿರಮಾ ಧೃತರಾಷ್ಟ್ರಪುತ್ರೈಃ ॥ ೭೨ ॥

ಅ: ಹಾಗೆ ವಿಷ ಜೀರ್ಣವಾಗಲು ಬಹಳ ಸಂಕಟಪಟ್ಟ ದುರ್ಬುದ್ಧಿಯ ಕೌರವರು ಬೇಗನೆ ಗಂಗಾಪ್ರವಾಹದಲ್ಲಿ ಒಂದು ಸೌಧವನ್ನು ನಿರ್ಮಿಸಿದರು. ಅದನ್ನೂ ಯುಯುತ್ಸುಮುಖದಿಂದ ತಿಳಿದ ಭೀಮಸೇನ ಕೌರವರೊಂದಿಗೆ ಕೊನೆಯಲ್ಲಿ ತಾನೇ ಮಲಗಿದ.

ಎ: ೧) ವಿಷ ತಿಂದಿದ್ದು ಭೀಮಸೇನನಾದರೂ, ಸಂಕಟವಾಗಿದ್ದು ಕೌರವರಿಗೆ ಎಂಬುದು ಇಲ್ಲಿಯ ಸ್ವಾರಸ್ಯ. ಶ್ರೀಕೃಷ್ಣ ವಿಷಪಾನ ಮಾಡಿದರೂ, ಸತ್ತಿದ್ದು ಮಾತ್ರ ಪೂತನಿಯೇ ಅಲ್ಲವೆ!

೨) ಅವರು ಭೀಮನನ್ನು ಕೊಲ್ಲುವ ಮತ್ತೊಂದು ಪ್ರಯತ್ನವನ್ನಾಗಿ ಗಂಗೆಯಲ್ಲಿ ಸೌಧವೊಂದನ್ನು ನಿರ್ಮಿಸಿದರು. ಮಲಗಿದ್ದಾಗ ಅವನನ್ನು ಗಂಗೆಯಲ್ಲಿ ಬೀಳಿಸಿ ಕೊಲ್ಲುವುದು ಅವರ ಉದ್ದೇಶವಾಗಿತ್ತು. ಅದನ್ನು ತಿಳಿದ ಭೀಮಸೇನ ಅವರ ಆ ಪ್ರಯತ್ನಕ್ಕೆ ಅನುಕೂಲ–ವಾಗುವಂತೆ ಕೊನೆಯಲ್ಲೇ ತಾನು ಮಲಗಿದ. ಇದು ಭೀಮನ ಅಪಾರ ಆತ್ಮವಿಶ್ವಾಸಕ್ಕೂ ದ್ಯೋತಕ.

ದೋಷಾನ್ ಪ್ರಕಾಶಯಿತುಮೇವ ವಿಚಿತ್ರವೀರ್ಯ–
ಪುತ್ರಾತ್ಮಜೇಷು ನೃವರಂ ಪ್ರತಿಸುಪ್ತಮೀಕ್ಷ್ಯ।
ಬಧ್ವಾऽಭಿಮಂತ್ರಣದೃಢೈರಯಸಾ ಕೃತೈಸ್ತಂ
ಪಾಶೈರ್ವಿಚಿಕ್ಷಿಪುರುದೇ ಹರಿಪಾದಜಾಯಾಃ ॥ ೭೩ ॥

---

೧. ಅಮಾ ಸಹ ಸಮೀಪೇತ್ಯಭಿಧಾನಾತ್ ಧೃತರಾಷ್ಟ್ರಪುತ್ರೈರಮಾ = ಸಹ ॥ – (ವಾ.)

ಅ: ಕೌರವರಲ್ಲಿನ ದೋಷಗಳನ್ನು ಬಹಿರಂಗಪಡಿಸಲೆಂದೇ ಪುರುಷಶ್ರೇಷ್ಠನಾದ ಭೀಮಸೇನ ಹಾಗೆ ಮಲಗಿದ್ದ. ಅವರು ಅವನನ್ನು ಮಂತ್ರಗಳಿಂದ ಅಭಿಮಂತ್ರಿತವಾದ ಬಲವಾದ ಉಕ್ಕಿನ ಸರಪಳಿಗಳಿಂದ ಬಿಗಿದು, ಗಂಗಾಜಲದಲ್ಲಿ ಬೀಳಿಸಿದರು.

ಎ: ೧) ಎಲ್ಲ ತಿಳಿದಿದ್ದರೂ ಭೀಮಸೇನ ಹಾಗೆ ಮಾಡಿದ್ದು ಕೌರವರ ದೋಷಗಳು ಜಗತ್ತಿಗೆ ತಿಳಿಯಲಿ ಎಂಬ ಉದ್ದೇಶದಿಂದ ಮಾತ್ರ.

೨) ಭೀಮ ಮಲಗಿದ್ದು ಸಹ ನಟನೆಯೆಂದೇ ಭಾವಿಸಬೇಕು. ಪ್ರಳಯಕಾಲದಲ್ಲೂ ನಿದ್ರಿಸದ ವಾಯುವಿನ ಅವತಾರನಾದ ಆತನಿಗೆ ನಿಜವಾದ ನಿದ್ರೆ ಎಂದೂ ಇಲ್ಲ ('ಏವಂ ಪ್ರಲಯಕಾಲೇಽಪಿ ಪ್ರತಿಭಾತಪರಾವರಃ'). ಅವನು ನಿಜಕ್ಕೂ ನಿದ್ರಿಸಿದರೆ, ಜಗತ್ತು ಬದುಕುವುದೂ ಇಲ್ಲ ಎಂಬುದನ್ನು ಗಮನಿಸಬೇಕು.

೩) ಹಾಗೆ ಬೀಳಿಸಿದರೂ ಭೀಮ ಸಾಯುವ ನಂಬಿಕೆ ಅವರಿಗೆ ಇರಲಿಲ್ಲ. ಅದಕ್ಕೆಂದು ಅವನನ್ನು ಉಕ್ಕಿನ ಸರಪಳಿಗಳಿಂದ ಬಿಗಿದಿದ್ದರು. ಅವುಗಳ ಬಗ್ಗೆಯೂ ನಂಬಿಕೆ ಸಾಲದ ಅವರು ಬಿಚ್ಚಲಾಗದಂತೆ ಅವುಗಳನ್ನು ಮಂತ್ರಗಳಿಂದ ಅಭಿಮಂತ್ರಿಸಿದ್ದರೂ ಸಹ. ಇವೆಲ್ಲ ಭೀಮನ ಬಗ್ಗೆ ಅವರಿಗಿದ್ದ ಅಪಾರಭಯಕ್ಕೆ ಸೂಚಕ.

ತತ್ಕೋಟಿಯೋಜನಗಭೀರಮುದಂ ವಿಗಾಹ್ಯ[೩]
ಭೀಮೋ ವಿಜೃಂಭಣತ ಏವ ವಿವೃಶ್ಚ್ಯ ಪಾಶಾನ್ ।
ಉತ್ತೀರ್ಯ ಸಜ್ಜನಗಣಸ್ಯ ವಿಧಾಯ ಹರ್ಷಂ
ತಸ್ಥಾವನಂತಗುಣವಿಷ್ಣುಪದಾತಿಹಾರ್ದಃ[೪] ॥ ೭೪ ॥

---

೨. ದುರ್ಮಂತ್ರೈರಭಮಂತ್ರಣೇನ ದೃಢೈರಿತ್ಯರ್ಥಃ ॥ – (ವಾ.)

೩. ಗಂಗಾ ಕ್ವಚಿತ್ಕ್ವಚಿತ್ ಹ್ರದೇ ಭೂಮಿಂ ವಿದಾರ್ಯ ಸ್ವವೇಗಬಲಾತ್ ಘನೋದಕಂ ಪ್ರವಿಶ್ಯ ಕೂರ್ಮಪೃಷ್ಠಪರ್ಯಂತಂ ವಾಹಿನೀತಿ ಪೌರಾಣಿಕೀ ಪ್ರಥಾ । ಅತಃ ಕೋಟಿಯೋಜನಗಭೀರತಾಽಪಿ ದುರ್ಯೋಧನಕೃತಪ್ರಾಸಾದಸಮೀಪಸ್ಥಹ್ರದೇಽಪ್ಯಸ್ತಿ । ತೇನ ಕಾರಣೇನ ಲಕ್ಷಯೋಜನಪ್ರಮಾಣಗಭೀರಭೂಮೌ ಕಥಂ ಕೋಟಿಯೋಜನಪ್ರಮಾಣಗಭೀರತೇತಿ ಶಂಕಾಯಾ ನಾವಕಾಶ ಇತಿ ಜ್ಞೇಯಮ್ ॥ – (ವಾ.)

ಪ್ರಮಾಣಕೋಟ್ಯಾಂ ತಂ ದೇಶಂ ಸ್ಥಲಂ ಕಿಂಚಿದುಪೇತ್ಯ ಹ ॥ – ಭಾರತ (ಆದಿ. ೧೨೭/೩೩)

ಭುಕ್ತಂ ಚ ಜೀರ್ಣಂ ಪರಿಪಂಥಿ ದತ್ತಂ ವಿಷಂ ವಿಷಣ್ಣೋ ವಿಷಭೃದ್ಗಣತೋಽತಃ ।
ಪ್ರಮಾಣಕೋಟೀಃ ಸಹಿ ಹೇಲಯಾऽऽಗಾನ್ನೇದಂ ಜಗಜ್ಜೀವನದೇऽತ್ರ ಚಿತ್ರಮ್ ॥ – ಮ.ವಿ. (೧/೩೧)

೪. ವಿಷ್ಣುಪದಾತಿಹಾರ್ದಃ – (ಪಾಠಾಂತರ)

ಅ: ಕೋಟಿಯೋಜನ[೧] ಆಳದ ನೀರಿನಲ್ಲಿ ಹೊಕ್ಕ ಭೀಮಸೇನ ಮೈ ಅಗಲಿಸುವುದರಿಂದಲೇ ಉಕ್ಕಿನ ಸರಪಳಿಗಳನ್ನು ತುಂಡರಿಸಿದ. ಅನಂತಗುಣಗಳ ವಿಷ್ಣುವಿನ ಪಾದದಲ್ಲಿ ಸದಾ ಮನಸ್ಸಿಟ್ಟ ಅವನು ನೀರಿನಿಂದ ಮೇಲೆದ್ದು ಸಜ್ಜನವೃಂದಕ್ಕೆ ಆನಂದ ನೀಡುತ್ತಾ ನಿಂತ.

---

೧. ಯದ್ವಾ ಕೋಟಿಃ ಪ್ರಕೃಷ್ಟಂ ಯೋಜನಂ ಗಂಭೀರಂ ಯೋಜನಮಾತ್ರಗಂ ಹ್ರದಂ ಉದಂ ವಿಗಾಹ್ಯ । ಕೋಟಿರಗ್ರೇ ಪ್ರಕರ್ಷೇ ಚ ಸಂಖ್ಯಾಚಾಪಾಗ್ರಯೋರಪೀತ್ಯಭಿಧಾನಮ್ । – (ಜ.)

ಸ್ನಾನವಿಶೇಷಗತಗಂಗೋದಕಸ್ಯ ಗರ್ಭೋದಕೈಕ್ಯೈಕೀಭೂತತ್ವಾನ್ನಾನುಪಪತ್ತಿಃ । ಅತ ಏವ ಭಾರತೇ–

ಭೀಮೋ ನಾಗಲೋಕಂ ಗತ್ವಾ ತದ್ದತ್ತಮಮೃತಮ್ ।
ಪೀತ್ವಾ ಸುಪ್ತ್ವಾ ಪುನರಾಗತವಾನ್..... ॥

ಇತ್ಯುಕ್ತಮುಪಪನ್ನಂ ಜ್ಞೇಯಮ್ । ಅನ್ಯೇ ತತ್ಕೋಟಿನಾಮಕಂ ಚ ತದ್ಯೋಜನಗಭೀರಂ ಚೇತ್ಯರ್ಥಮಾಹುಃ । – (ತಾ.)

'ತತ್ಕೋಟಿಯೋಜನಗಭೀರಮುದಂ ವಿಗಾಹ್ಯ ಪಾಶಾನ್' ಇತ್ಯತ್ರ ತಸ್ಯಾಃ ಗಂಗಾಯಾಃ ಕೋಟಿಯೋಜನಗಭೀರಮುದಕಂ ವಿಗಾಹ್ಯೇತ್ಯರ್ಥಃ । ನ ಚ ವಾಚ್ಯಂ ಭೂಕಂದಸ್ಯ ಲಕ್ಷಮಿತತ್ವಾತ್ ಕಥಂ ಕೋಟಿಯೋಜನಗಭೀರಮಿತಿ । ಭಾಗವತಾದೌ ಭೂಕಂದಸ್ಯ ಲಕ್ಷಯೋಜನಮಿತಿ ಸ್ಪಷ್ಟಮನುಕ್ತತ್ವಾತ್ । ಗ್ರಂಥಾಂತರೇ ದಶಕೋಟಿಪರಿಮಿತ್ಯುಕ್ತೇಶ್ಚ । ತಥಾಹಿ –

ಪೃಥಿವೀ ಲೋಕತೋಽಧಸ್ತಾತ್ ಯಾವದ್ಬ್ರಹ್ಮಾಂಡಖರ್ಪರಮ್ ।
ಪಂಚವಿಂಶತಿಕೋಟ್ಯಸ್ತು ಯೋಜನಾನಾಂ ಪ್ರಕೀರ್ತನಮ್ ॥
ತತ್ರ ಪಂಚದಶಂ ತೋಯಂ ತದೂರ್ಧ್ವಂ ದಶಭೂತಲಮ್ ।
ತತ್ರ ಮಗ್ನಂ ಮೇರುಮೂಲಂ ಸಹಸ್ರಾಣಿ ತು ಷೋಡಶ ॥
ಸಮುದ್ರಾಸ್ತತ್ರ ಸಪ್ತಾಪಿ ಗಾಂಭೀರ್ಯೇ ವಿಸ್ತೃತೇ ಸಮಾಃ ।
ಕೋಟಿಯೋಜನಗಂಭೀರಂ ತತ್ಸೈವ ಚ ಘನೋದಕಮ್ ॥
ಘನೋದಕಾದಧಸ್ತಾತ್ ತು ಭೂದಲಂ ಕೋಟಿಯೋಜನಮ್ ।
ಕೋಟ್ಯೌ ಕೋಟ್ಯೌ ತತೋಽಧಸ್ತಾದೇವಂ ಪಾತಾಲಸಪ್ತಕಮ್ ॥
ತತೋಽಧಸ್ತಾತ್ ಸಪ್ತಾಪಿ ನರಕಾ ರೌರವಾಧಿಕಾಃ ।
ಲಕ್ಷದ್ವಾದಶಕಂ ತತ್ರ ಪ್ರತ್ಯೇಕಂ ನರಕಾಂತರಮ್ ॥
ಅಧಸ್ತಾತ್ ಸರ್ವತೋ ಭೂಮೇರ್ದಲಂ ಷೋಡಶಲಕ್ಷಕಮ್ ।
ತತೋಽಧೋಽಪ್ಯತಿಗಂಭೀರೇ ಜಲೇ ಸಾಕ್ಷಾದ್ಧರಿಃ ಸ್ವಯಮ್ ॥
ಆಧಾರಶಕ್ತಿಸಂಯುಕ್ತೋ ನಾನಾರೂಪೈಃ ಪ್ರದೀಪ್ಯತಿ ।
ಭೂದಲೇ ಲಕ್ಷತೋಽಧಸ್ತಾತ್ ತಿಷ್ಠಂತಿ ಜಲದೇವತಾಃ ॥
ತತ್ರಾಸ್ತಿ ವಾರುಣೋ ಲೋಕೋ ನಾನಾಭೋಗಸಮನ್ವಿತಃ ॥

ಇತಿ ವಿಷ್ಣುರಹಸ್ಯೇ ಚತ್ವಾರಿಂಶೇಽಧ್ಯಾಯೇ ॥ – (ರಾ.)

ಭುಕ್ತಂ ಚ ಜೀರ್ಣಂ ಪರಿಪಂಥಿದತ್ತಂ ವಿಷಂ ವಿಷಣ್ಣೋ ವಿಷಭೃದ್ಗಣೋಽತಃ।
ಪ್ರಮಾಣಕೋಟೀಃ ಸ ಹಿ ಹೇಲಯಾಽಗಾನ್ನೇದಂ ಜಗಜ್ಜೀವನದೇಽತ್ರ ಚಿತ್ರಮ್ ॥ – ಮ.ವಿ. (೧/೩೧)

ವಿಃ ೧) ಹಾಗೆ ಭೀಮನನ್ನು ಅವರು ಬೀಳಿಸಿದ್ದ ಗಂಗೆಯ ಮಡು ಕೋಟಿಯೋಜನದಷ್ಟು ಆಳವಾಗಿತ್ತು. ಗಂಗೆ ಅಲ್ಲಲ್ಲಿ ತನ್ನ ವೇಗದಿಂದ ನೆಲ ಕೊರೆದು, ಭೂಮಿಯಲ್ಲಿನ ಘನೋದಕದ-ವರೆಗೂ ಹೊಕ್ಕು ವಿಷ್ಣುಕೂರ್ಮದವರೆಗೂ ಹರಿಯುವುದು. ಅಂತಹ ಸ್ಥಳಗಳಲ್ಲಿ ಆ ಮಡುವೂ ಒಂದು. ಆದ್ದರಿಂದ ಅದು ಕೋಟಿಯೋಜನ ಆಳವಾಗಿದ್ದುದು ಅಸಾಧ್ಯವೇನಲ್ಲ ಎಂಬ ಭಾವ ವಾದಿರಾಜೀಯ ಮೊದಲಾದವುಗಳಲ್ಲಿದೆ.

ವಾರಾಹೇ ಚ–

ಪೃಥಿವ್ಯಾಂ ಊರ್ಧ್ವತಾಂ ಪ್ರಾಹುರ್ದಶಯೋಜನಕೋಟಯಃ।
ತತೋऽಧಸ್ತಾತ್ ಸಲಿಲಂ ದಶಪಂಚ ಚ ಕೋಟಯಃ॥
ಭೂಲೋಕಾದಧರಂ ಪ್ರೋಕ್ತಂ ಅತಲಂ ಪ್ರಥಮಂ ಬಿಲಮ್।
ಕೋಟಿದ್ವಯಂ ಯೋಜನಾನಾಂ ಬಿಲಷಟ್ಕಮುದಾಹೃತಮ್॥
ಬಿಲಸಪ್ತಕವಿಸ್ತಾರೋ ಯವದ್ಬ್ರಹ್ಮಾಂಡಖರ್ಪರಮ್।
ಕೋಟಿಯೋಜನತೋऽಧಸ್ತಾತ್ ಪಾತಾಲಾನ್ನರಕಾಃ ಸ್ಮೃತಾಃ॥
ಯೋಜನಾನಾಂ ತು ಲಕ್ಷಾಣಾಂ ದ್ವಾದಶದ್ವಾದಶೈವ ತು।
ಅಂತರೋ ನರಕಾಣಾಂ ಸ್ಯಾತ್ ಸಪ್ತಾನಾಂ ತು ಪರಸ್ಪರಮ್॥
ರೌರವಃ ಪ್ರಥಮಃ ಪ್ರೋಕ್ತೋ ಮಹಾರೌರವ ಏವ ಚ।
ಕುಂಭೀಪಾಕೋ ಸಿತಾಪಾಖ್ಯಃ ಪೂಯಶೋಣಿತಮುದ್ಗರೌ॥
ತಪ್ತವಾಲುಕ ಇತ್ಯೇತೇ ಸಪ್ತೈವ ನರಕಾ ಸ್ಮೃತಾಃ।
ತತಃ ಷೋಡಶಲಕ್ಷಾಣಿ ಭೂಕಂದಂ ಪರಿಕೀರ್ತಿತಮ್॥
ಚತುರ್ದಶಬಲಾನ್ಯೇವಂ ದಶಮೋ ಸಪ್ತಯೋಜನಃ।
ಪ್ರತ್ಯೇಕಮವಕಾಶಸ್ತು ತೇಷು ಸರ್ವೇಷು ಸರ್ವಶಃ॥
ಆಬ್ರಹ್ಮಾಂಡಕಟಾಹಂ ಸ್ಯಾದ್ವಿಸ್ತಾರೋऽಪಿ ಬಿಲೇ ಬಿಲೇ।
ಭೂಮಂಡಲಸ್ಯ ವಿಸ್ತಾರಃ ಪಂಚಾಶತ್ಕೋಟಿಯೋಜನಃ॥ ಇತಿ॥

ಯದ್ಯಪಿ ಪಂಚರಾತ್ರೇ ಜಯದ್ರಥಯಾಮಿಲೇ–

ಭೂಮೇರಧೋ ಲಕ್ಷಮಾತ್ರಂ ಭೂಕಂದಂ ಪರಿಕೀರ್ತಿತಮ್।
ದಶಸಾಹಸ್ರಸಂಖ್ಯಾಕಯೋಜನಾಯಾಮಸಂಯುತಃ॥
ದ್ವಿಸಹಸ್ರಂ ನರೋಪೇತಾ ಅತಲಾದ್ಯಾಃ ಪ್ರಕೀರ್ತಿತಾ॥

ಇತ್ಯನೇನ ಭೂಕಂದಂ ಲಕ್ಷಯೋಜನಪರಿಮಿತಮಿತ್ಯುಚ್ಯತೇ। ತಥಾಪಿ ತಸ್ಯ ಸಾವಕಾಶತ್ವಾದ್ಯುಕ್ತಿವಿರುದ್ಧತ್ವಾದೇಕತ್ವಾಚ್ಚ ದಶಕೋಟಿಪರಿಮಿತಮಿತ್ಯುಕ್ತೇನಾಂ ಬಹುತ್ವಾನ್ನಿರವಕಾಶತ್ವಾತ್ ಸಯುಕ್ತತ್ವಾಚ್ಚ ಗಂಗಾಯಾಃ ಕೋಟಿಯೋಜನಗಭೀರತ್ವಂ ಯುಕ್ತಮಿತಿ ಭಾವಃ। ಏವಂ ಸತಿ ಭೀಮಸ್ಯ ಮಹಿಮಾಧಿಕ್ಯಂ ಚ ಯುಜ್ಯತೇ॥ -(ರಾ.)

ತತ್ಕೋಟಿಯೋಜನಗಭೀರಮುದಂ ವಿಗಾಹ್ಯೇತ್ಯತ್ರ ಕೋಟಿಕೋಟಿನಾಮಕಂ ಯೋಜನಗಭೀರಮಿತ್ಯಪಿ ವದಂತಿ। ತಥಾ ಕೋಟಿಯೋಜನಗಭೀರಮಿತ್ಯಪಿ ವದಂತಿ। ಗಂಗಾಕೂರ್ಮವಾಹಿನೀತಿ ತೇಷಾಮಭಿಪ್ರಾಯಃ। -(ತಿ.)

೨) ಕೋಟಿಯೋಜನ ಎಂಬುದಕ್ಕೆ ಬಹುಯೋಜನ ಎಂಬ ಅರ್ಥ ಜನಾರ್ದನೀಯ–ದಲ್ಲಿದೆ. ಮಹಾಭಾರತದಲ್ಲಿ ಹಾಗೂ ಸುಮಧ್ವವಿಜಯದಲ್ಲಿ ಪ್ರಮಾಣಕೋಟಿ ಎಂಬ ಹೆಸರಿನಿಂದ ಅದನ್ನು ವ್ಯವಹರಿಸಲಾಗಿದೆ.

೩) ಸದಾ ವಿಷ್ಣುಪದದಲ್ಲಿ ಮನಸ್ಸಿಟ್ಟ ಭೀಮನಿಗೆ ಆ ವಿಷ್ಣುಪದಿಯಲ್ಲಿ ವಿಹರಿಸುವುದು ಯಾವ ಲೆಕ್ಕ ಎಂಬ ಧ್ವನಿ 'ವಿಷ್ಣುಪದಾತಿಹಾರ್ದಃ' ಎಂಬ ಪದದಲ್ಲಿದೆ.

೪) ಮಹಾಭಾರತದ ಕೆಲವು ಪಾಠಗಳಲ್ಲಿ ಭೀಮು ಅಲ್ಲಿಂದ ನಾಗಲೋಕಕ್ಕೆ ತೆರಳಿ, ಅಲ್ಲಿ ವಾಸುಕಿ ನೀಡಿದ ಹತ್ತು ಕೊಡ ಅಮೃತವನ್ನು ಪಾನ ಮಾಡಿ, ಭೂಲೋಕಕ್ಕೆ ಮರಳಿದ ಎಂಬ ವಿಷಯ ಬಂದಿದೆ. ನಿರ್ಣಯದಲ್ಲಿ ಅನುಕ್ತವಾದ ಅದು ಪ್ರಕ್ಷಿಪ್ತ ಎಂಬುದು ಸ್ಪಷ್ಟ. ಪೂನಾ ಭಂಡಾರ್‌ಕರ್ ಸಂಸ್ಥೆಯ ಪರಿಷ್ಕೃತ ಆವೃತ್ತಿಯಲ್ಲೂ ಅದನ್ನು ಪ್ರಕ್ಷಿಪ್ತ ಎಂದು ತಿಳಿಸಿರುವುದು ಗಮನಾರ್ಹ.

೫) ಆ ಪಾಠದಂತೆಯೂ ಭೀಮಸೇನ ತನ್ನ ಪರಾಕ್ರಮ ತೋರಿದ ಮೇಲೆ ಅಮೃತಪ್ರಾಶನ ಮಾಡಿದ್ದೇ ಹೊರತು, ಅಮೃತಪ್ರಾಶನ ಮಾಡಿದ ಅನಂತರ ಪರಾಕ್ರಮ ತೋರಿದ್ದಲ್ಲ. ಆದ್ದರಿಂದ ಭೀಮನ ಪರಾಕ್ರಮ ಸಹಜ ಎಂಬುದಕ್ಕೆ ಅದು ಸರ್ವಥಾ ಬಾಧಕವಾಗದು.

ದುರ್ಯೋಧನನ ವಿಷಸರ್ಪಪ್ರಯೋಗ

ತಂ ವೀಕ್ಷ್ಯ ದುಷ್ಟಮನಸೋಽತಿವಿಪನ್ನಚಿತ್ತಾಃ[೧]
ಸಮ್ಮಂತ್ರ್ಯ ಭೂಯ ಉರುನಾಗಗಣಾನಥಾಷ್ಟೌ।
ಶುಕ್ರೋಕ್ತಮಂತ್ರಬಲತಃ ಪುರ ಆಹ್ವಯಿತ್ವಾ
ಪಶ್ಚಾತ್ ಸುಪಂಜರಗತಾನ್ ಪ್ರದದುಃ ಸ್ವಸೂತೇ ॥ ೭೫ ॥

ಅ: ಭೀಮ ಹಾಗೆ ಸುರಕ್ಷಿತವಾಗಿದ್ದುದನ್ನು ಕಂಡು ದುಷ್ಟಮನಸ್ಸಿನ ಆ ಕೌರವರು ಅತ್ಯಂತ ವಿಷಣ್ಣಮನಸ್ಕರಾಗಿ ಮತ್ತೊಮ್ಮೆ ಮಂತ್ರಾಲೋಚನೆ ಮಾಡಿ, ಎಂಟು ಮಹಾನಾಗಗಣಗಳನ್ನು ಶುಕ್ರಾಚಾರ್ಯರು ಹೇಳಿದ ಮಂತ್ರಬಲದಿಂದ ಪಟ್ಟಣದ ಬಳಿಗೆ ತಂದು, ನಂತರ ಭದ್ರವಾದ ಪಂಜರದಲ್ಲಿ ಹಿಡಿದಿರಿಸಿ, ತಮ್ಮ ಸಾರಥಿಯ ವಶಕ್ಕೆ ನೀಡಿದರು.

ವಿ: ೧) ವಿಷದಿಂದ ಕೊಲ್ಲಲಾಗದ ಭೀಮನನ್ನು ಭಯಂಕರ ಸರ್ಪಗಳಿಂದ ಕಚ್ಚಿಸಿ, ಕೊಲ್ಲುವುದು ಅವರ ಮುಂದಿನ ಕಪಟೋಪಾಯವಾಗಿತ್ತು. ಅದಕ್ಕಾಗಿ ಅವರು ಎಂಟು

---

೧. **ವಿಷಣ್ಣಚಿತ್ತಾಃ** – (ಪಾಠಾಂತರ)

ಮಹಾಸರ್ಪಗಳನ್ನೂ, ಆ ಗುಂಪಿಗೆ ಸೇರಿದ ಇತರಸರ್ಪಗಳನ್ನೂ ಶುಕ್ರಾಚಾರ್ಯರು ಉಪದೇಶಿಸಿದ ಮಂತ್ರಬಲದಿಂದ ವಶಕ್ಕೆ ತೆಗೆದುಕೊಂಡು, ಭೀಮನ ಮೇಲೆ ಪ್ರಯೋಗಿಸಲೆಂದು ಸಾರಥಿಯ ವಶಕ್ಕೆ ನೀಡಿದರು.

೨) ಅವರು ವಿಷ ಹಾಕಿದ್ದು ಸೂದನ ಮೂಲಕವಾದರೆ, ವಿಷಸರ್ಪಗಳನ್ನು ಪ್ರಯೋಗಿಸಿದ್ದು ಸೂತನ ಮೂಲಕ ಎಂಬುದು ಗಮನಾರ್ಹ.

೩) ಅನಂತ, ವಾಸುಕಿ, ತಕ್ಷಕ, ಕರ್ಕೋಟಕ, ಪದ್ಮ, ಮಹಾಪದ್ಮ, ಶಂಖಪಾಲ ಮತ್ತು ಮಹಾಶಂಖ — ಇವು ಆ ಎಂಟು [೧]ಮಹಾಸರ್ಪಗಳು.

ಭೀಮನಿಂದ ವಿಷಸರ್ಪಮರ್ದನ

ದುರ್ಯೋಧನೇನ ಪೃಥುಮಂತ್ರಬಲೋಪಹೂತಾನ್
ತತ್ಸಾರಥಿಃ ಫಣಿಗಣಾನ್ ಪವನಾತ್ಮಜಸ್ಯ ।
[೨]ಸುಪ್ತಸ್ಯ ವಿಸ್ಮೃತ ಉರಸ್ಯಮುಚದ್ವಿಶೀರ್ಣ-
ದಂತಾ ಬಭೂವುರಮುಮಾಶು ವಿದಶ್ಯ ನಾಗಾಃ ॥ ೭೬ ॥

ಅ: ದುರ್ಯೋಧನನಿಂದ ಮಹಾಮಂತ್ರಬಲದ ಮೂಲಕ ತರಲ್ಪಟ್ಟಿದ್ದ ಆ ನಾಗಗಳ ಗುಂಪನ್ನು ಅವನ ಸಾರಥಿಯು ಮಲಗಿದ್ದ ಭೀಮನ ವಿಶಾಲವಾದ ವಕ್ಷಃಸ್ಥಳದ ಮೇಲೆ ಬಿಟ್ಟನು. ಅವು ಭೀಮನನ್ನು ಕಚ್ಚಿದೊಡನೆಯೇ ಅವುಗಳ ದಂತಗಳು ಪುಡಿಯಾದವು.

ವಿ: ೧) ಹಾವು ಕಚ್ಚಿದ್ದರಿಂದ ಭೀಮನಿಗೆ ಏನೂ ಆಗಲಿಲ್ಲ, ಆದರೆ ಆ ಹಾವುಗಳ ಹಲ್ಲುಗಳೆಲ್ಲ ಪುಡಿಪುಡಿಯಾದವು ಎಂಬುದು ಇಲ್ಲಿಯ ವಿಶೇಷಾಂಶ.

೨) ಭೀಮ ವಜ್ರದೇಹಿ ಎಂಬುದಕ್ಕೆ ಇದು ಮತ್ತೊಂದು ಅಪೂರ್ವನಿದರ್ಶನ.

೩) ಕಾಲಕೂಟದ ವಿಷ ಒಳಕ್ಕೆ ಇಳಿದು ಜೀರ್ಣವಾದರೆ, ಹಾವುಗಳ ವಿಷ ಒಳಕ್ಕೇ ಇಳಿಯದೆ ಅವುಗಳ ದಂತಗಳೇ ಜೀರ್ಣವಾದವು ಎಂಬುದನ್ನು ಗಮನಿಸಬೇಕು.

---

೧. 'ಅನಂತೋ ವಾಸುಕಿಃ ಪದ್ಮೋ ಮಹಾಪದ್ಮಶ್ಚ ತಕ್ಷಕಃ ।
ಕರ್ಕೋಟಕಃ ಶಂಖಪಾಲೋ ಮಹಾಶಂಖ'ಇತ್ಯಷ್ಟಸಂಖ್ಯಾನ್ ಉರೂನ್ ಶ್ರೇಷ್ಠಾನ್ ನಾಗಗಣಾನ್ ।– (ಜ.)

೨. ನಗರಾದ್ಬಹಿಃ ಸ್ವಕ್ರೀಡಾಸ್ಥಾನೇ ಶ್ರಾಂತತಯಾ ಸುಪ್ತಸ್ಯೇತಿ ಭಾವಃ । ಗೃಹಕೋಣೇ ಚೇತ್ಸುದೂರಂ ಕ್ಷಿಪ್ತ್ವೇತ್ಯಸ್ಯಾಯೋಗಾದಿತಿ ಜ್ಞೇಯಮ್ ॥ – (ವಾ.)

೩) ಕಾಲಿಯ ವಿಷಸರ್ಪವನ್ನು ಮರ್ದಿಸಿದ ಕೃಷ್ಣ ಶೇಷಶಾಯಿಯಾದ ನಾರಾಯಣ; ಈ ವಿಷಸರ್ಪಗಳನ್ನು ಮರ್ದಿಸಿದ ಭೀಮಸೇನ ಶೇಷನಿಗೆ ಉಪಜೀವ್ಯನಾದ ವಾಯು.

ಕ್ಷಿಪ್ತ್ವಾ[೧] ಸುದೂರಮುರುನಾಗವರಾನಥಾಷ್ಟೌ
ತದ್ವಂಶಜಾನ್ ಸ ವಿನಿಹತ್ಯ ಪಿಪೀಲಿಕಾವತ್ ।
ಜಘ್ನೇ ಚ ಸೂತಮಪಹಸ್ತ ಏವ ಭೀಮಃ
ಸುಷ್ಟಾಪ ಪೂರ್ವವದನುತ್ಥಿತ ಏವ ತಲ್ಪಾತ್ ॥ ೭೭ ॥

ಅ: ಬಳಿಕ ಭೀಮಸೇನ ಎಂಟು ಮಹಾನಾಗಗಳ ಗುಂಪನ್ನು ತುಂಬಾ ದೂರಕ್ಕೆ ಎಸೆದ; ಅವುಗಳ ವಂಶದಲ್ಲಿ ಜನಿಸಿದ್ದ ಸರ್ಪಗಳನ್ನು ಇರುವೆಗಳಂತೆ ಹೊಸಕಿ ಕೊಂದ; ಮತ್ತು ಸಾರಥಿ-ಯನ್ನು ಮುಂಗೈಯಿಂದಲೇ ಸಂಹರಿಸಿದ; ಹಾಸಿಗೆಯಿಂದ ಮೇಲೇಳದೆ ಮುಂಚಿನಂತೆಯೇ ಮಲಗಿದ.

ವಿ: ೧) ಎಂಟು ಮಹಾನಾಗಗಳನ್ನು ಭೀಮ ಸಂಹರಿಸದೆ, ದೂರಕ್ಕೆ ಎಸೆದ. ಹಾಗೆ ಮಾಡಲು ಅವು ಪ್ರಳಯಕಾಲದಲ್ಲಿ ಲೋಕಗಳನ್ನು ತಮ್ಮ ಉಸಿರಿನಿಂದಲೇ ಭಸ್ಮ ಮಾಡಲೆಂದು ಶ್ರೀಹರಿಯಿಂದ ನಿಯೋಜಿತವಾದ ಮಹಾಸರ್ಪಗಳಾಗಿದ್ದುದೇ ಕಾರಣ. ಉಳಿದವುಗಳನ್ನೂ, ಸಾರಥಿಯನ್ನೂ ಭೀಮ ಸಂಹರಿಸಿದ. ಹೀಗೆ ಪ್ರತಿಯೊಂದು ಕಾರ್ಯದಲ್ಲೂ ವಿವೇಕ ಮೆರೆಯುವುದು ಭೀಮಸೇನನ ಹಿರಿಮೆಯ ಮತ್ತೊಂದು ಮುಖ.

೨) ಇಷ್ಟೆಲ್ಲ ಮಾಡುವಾಗಲೂ ಭೀಮಸೇನ ಹಾಸಿಗೆಯಿಂದ ಮೇಲೆದ್ದೇ ಇರಲಿಲ್ಲ. ಮಲಗಿದ್ದೇ ಇಂತಹ ಅಪ್ರತಿಮಸಾಹಸ ಮಾಡಿದ ಭೀಮಸೇನ ಸರ್ವಜೀವೋತ್ತಮ ಎನ್ನಲು ಇದು ಮತ್ತೊಂದು ನಿದರ್ಶನ.

ಪ್ರಹ್ಲಾದನಿಗಿಂತ ಭೀಮ ಮಿಗಿಲು

ತತ್[೨] ತಸ್ಯ ನೈಜಬಲಮಪ್ರತಿಮಂ ನಿರೀಕ್ಷ್ಯ
ಸರ್ವೇ ಕ್ಷಿತೀಶತನಯಾ ಅಧಿಕಂ ವಿಷೇದುಃ ।
ನಿಶ್ವಾಸತೋ ದರ್ಶನಾದಪಿ ಭಸ್ಮ ಯೇಷಾಂ
ಭೂಯಾಸುರೇವ ಭುವನಾನಿ ಚ ತೇ ಮೃಷಾऽऽಸನ್ ॥ ೭೮ ॥

---

೧. ಸುದೂರ ಉರು.... – (ಪಾಠಾಂತರ)

೨. .... ಪ್ರತೀಪಂ ಪ್ರತಿಕೂಲಂ ಚಕ್ರುರಿತ್ಯುತ್ತರಪಂಚಮಶ್ಲೋಕೇನ(ಶ್ಲೋಕ. ೮೨) ಸಂಬಂಧಃ। – (ಜ.)

ಅ: ಭೀಮನ ಅನುಪಮವಾದ ಸಹಜಬಲವನ್ನು ಕಂಡು ರಾಜಪುತ್ರರುಗಳೆಲ್ಲ ಬಹಳವಾಗಿ ವಿಷಾದಿಸಿದರು. ''ಯಾವ ಹಾವುಗಳ ಉಸಿರುಬಿಟ್ಟರೆ, ಕಚ್ಚಿದರೆ ಲೋಕಗಳೇ ಭಸ್ಮವಾಗುವವೊ, ಅಂತಹ ಹಾವುಗಳೂ ಭೀಮನ ವಿಷಯದಲ್ಲಿ ವ್ಯರ್ಥವಾದವು''.

ದದ್ಭಿರ್ವಿದಸ್ಯ ನ ವಿಕಾರಮಮುಷ್ಯ ಕರ್ತುಂ
ಶೇಕುರ್ಭುಜಂಗಮವರಾ ಅಪಿ ಸುಪ್ರಯತ್ನಾಃ ।
[೧]
ಕಸ್ಯಾಪಿ ನೇದೃಶಬಲಂ ಶ್ರುತಪೂರ್ವಮಾಸೀತ್
ದೃಷ್ಟಂ ಕಿಮು ಸ್ಮ ತನಯೇಽಪಿ ಹಿರಣ್ಯಕಸ್ಯ ॥ ೭೯ ॥

ಅ: ಹಲ್ಲುಗಳಿಂದ ಮಹಾಪ್ರಯತ್ನಪಟ್ಟು ಕಚ್ಚಿಯೂ ಆ ಮಹಾಸರ್ಪಗಳು ಈ ಭೀಮನಿಗೆ ಯಾವುದೇ ವಿಕಾರವನ್ನೂ ಉಂಟುಮಾಡಲು ಸಮರ್ಥವಾಗಲಿಲ್ಲ. ಇಂತಹ ಬಲವನ್ನು ಈ ಮುಂಚೆ ಯಾರ ಬಗ್ಗೆಯೂ ಕೇಳಿರಲಿಲ್ಲ; ಇನ್ನು ಕಾಣುವುದೆಂತು? ಹಿರಣ್ಯಕಶಿಪುವಿನ ಮಗ ಪ್ರಹ್ಲಾದನಲ್ಲಿಯೂ ಇಂತಹ ಸಾಮರ್ಥ್ಯವಿರಲಿಲ್ಲ.

ವಿ: ೧) ಅಂತಹ ಮಹಾಸರ್ಪಗಳು ಸಹ ಸಂಪೂರ್ಣವ್ಯರ್ಥವಾದದ್ದು ಅವರಿಗೆ ಬಿಡಿಸಲಾರದ ಒಗಟಾಯಿತು. ಹಿರಣ್ಯಕಶಿಪುವಿನ ಪುತ್ರ ಪ್ರಹ್ಲಾದನ ಸಾಮರ್ಥ್ಯವೂ ಈ ಭೀಮಬಲದಷ್ಟು ಅಪಾರವಾಗಿರಲಿಲ್ಲ.

೨) ಒಬ್ಬನನ್ನು ಕೊಲ್ಲಲು ಇಂತಹ ಬಗೆಬಗೆಯ ಪ್ರಯತ್ನ ಮಾಡಿದ್ದ ದಾಖಲೆ ಹಿಂದೆ ಪ್ರಹ್ಲಾದನನ್ನು ಕೊಲ್ಲಹೊರಟ ಹಿರಣ್ಯಕಶಿಪುವಿನದಾಗಿತ್ತು. ಕೌರವರ ಈ ಪ್ರಯತ್ನ ಅದರ ಪುನರಾವರ್ತನೆಯಂತಾಯಿತು.ಭೀಮನ ಯಶಸ್ಸು ಪ್ರಹ್ಲಾದನ ಯಶಸ್ಸನ್ನೂ ಅಪಾರವಾಗಿ ಮೀರಿಸಿತ್ತು.

[೨]
ಸ್ವಾತ್ಮಾವನಾರ್ಥಮಧಿಕಾಂ ಸ್ತುತಿಮೇವ ಕೃತ್ವಾ
ವಿಷ್ಣೋಃ ಸ ದೈತ್ಯತನಯೋ ಹರಿಣಾಽವಿತೋಽಭೂತ್ ।
ನ ತ್ವೌರಸಂ ಬಲಮಮುಷ್ಯ ಸ ಕೃಷ್ಯತೇ ಹಿ
ಭೃತ್ಯೈರ್ಬಲಾತ್ ಸ್ವಪಿತುರೌರಸಮಸ್ಯ ವೀರ್ಯಮ್ ॥ ೮೦ ॥

---

೧. ಕಸ್ಯಾಪೀದೃಶಂ ಬಲಂ ಶ್ರುತಪೂರ್ವಂ ನ । ದೃಷ್ಟಂ ನೇತಿ ಕಿಂ ವಕ್ತವ್ಯಮ್ । ಹಿರಣ್ಯಕಸ್ಯ ಸುತೇ ಪ್ರಹ್ಲಾದೇಽಪಿ ಈದೃಶಂ ಬಲಂ ಶ್ರುತಪೂರ್ವಂ ನೇತಿ ಯೋಜನಾ । ತರ್ಹಿ ಪ್ರಹ್ಲಾದೇ ಕೀದೃಶಂ ಬಲಂ ಭೀಮೇ ಚ ಕೀದೃಶಂ ಬಲಮಿತ್ಯತಸ್ತದ್ವಿವೇಚಯತಿ ಸ್ವಾತ್ಮೇತ್ಯಾದಿನಾ । – (ವಾ.)

ಅ: ತನ್ನ ರಕ್ಷಣೆಗೋಸ್ಕರ ಶ್ರೀಹರಿಯನ್ನು ವಿಶೇಷವಾಗಿ ಸ್ತುತಿಸಿಯೇ ಆ ಪ್ರಹ್ಲಾದ ಶ್ರೀಹರಿಯಿಂದ ಪಾಲಿತನಾದ. ಅವನದೇನೂ ಔರಸಬಲವಾಗಿರಲಿಲ್ಲ. ಅವನ ತಂದೆ ಹಿರಣ್ಯಕಶಿಪುವಿನ ಭಟರು ಅವನನ್ನು ಬಲಾತ್ಕಾರದಿಂದ ಸೆಳೆದೊಯ್ಯುತ್ತಿದ್ದರಲ್ಲವೆ? ಈ ಭೀಮನ ಬಲವಾದರೊ ಸ್ವಾಭಾವಿಕವಾದದು.

ವಿ: ೧) ವಿಷಸರ್ಪ ಮೊದಲಾದ ಆಪತ್ತುಗಳು ಒದಗಿದಾಗ ಪ್ರಹ್ಲಾದ ರಕ್ಷಣೆಗಾಗಿ ಶ್ರೀಹರಿಯನ್ನು ಪ್ರಾರ್ಥಿಸಿ, ಅವುಗಳಿಂದ ಪಾರಾಗುತ್ತಿದ್ದ. ಆದರೆ ಭೀಮ ಸಹಜವಾಗಿಯೇ ಇಂತಹ ಆಪತ್ತುಗಳನ್ನು ಮೆಟ್ಟಿ ನಿಲ್ಲುತ್ತಿದ್ದ. ಆದ್ದರಿಂದ ಭೀಮಬಲ ಪ್ರಹ್ಲಾದನ ಬಲಕ್ಕಿಂತ ವಿಲಕ್ಷಣವೂ, ಅಪಾರವೂ ಆಗಿದ್ದಿತು ಎಂದರ್ಥ. [೨]ಪ್ರಹ್ಲಾದ ಆ ಸಾಧನೆ ಮಾಡಲು ಅವನೊಳಗಿದ್ದ ವಾಯು–ದೇವರ ಆವೇಶ ಕಾರಣವಾಗಿತ್ತು ಎಂಬ ವಿವರ ಈಗಾಗಲೇ ಬಂದಿದೆ ('ವಾಯುನಾ ಚ ಸಮಾವಿಷ್ಟಃ ೧೧/.....). ಭೀಮನಂತೂ ಆ ಪ್ರಹ್ಲಾದನಿಗೆ ಬಲ ನೀಡಿದ ವಾಯುವೇ ಆಗಿರುವನು. ಭೀಮ ಬಲ ಹೊಂದಿದ್ದಲ್ಲ. ಅವನೇ ಸಾಕ್ಷಾತ್ ಬಲಸ್ವರೂಪ ಎಂಬ ಮಾತು ಶ್ರುತಿಸಿದ್ಧವಾದುದು ('ಬಳಿತ್ಥಾ' – ಋಗ್ವೇದ, 'ಸೂತ್ರಂ ಸ ವಾಯುರ್ಬಭೂವ ಸಾಕ್ಷಾದ್ಬಲಸಂವಿದಾತ್ಮಾ' ೩/೧೧).

ಕೃಷ್ಣದ್ವೇಷದಲ್ಲಿ ಪರ್ಯವಸಾನಗೊಂಡ ಭೀಮದ್ವೇಷ

ನೈಸರ್ಗಿಕಂ ಪ್ರಿಯಮಿಮಂ ಪ್ರವದಂತಿ ವಿಪ್ರಾ
ವಿಷ್ಣೋರ್ನಿತಾಂತಮಪಿ ಸತ್ಯಮಿದಂ ಧ್ರುವಂ ಹಿ ।
ನೈವಾನ್ಯಥೌರಸಬಲಂ ಭವತೀದೃಶಂ ತ–
ದುತ್ಪಾದ್ಯ ಏಷ ಹರಿಣೈವ ಸಹೈಷ ನೋಽರ್ಥಃ ॥ ೮೧ ॥

ಅ: ''ಈ ಭೀಮನನ್ನು ವಿಷ್ಣುವಿಗೆ ಸ್ವಾಭಾವಿಕವಾಗಿ ಅತ್ಯಂತಪ್ರಿಯ ಎಂಬುದಾಗಿ ವಿಪ್ರರು ಸಾರುತ್ತಿರುವರು. ಅದು ನಿಶ್ಚಯವಾಗಿಯೂ ಸತ್ಯವೇ ಸರಿ. ಇಲ್ಲವಾದಲ್ಲಿ ಇಂತಹ ಸ್ವಾಭಾವಿಕಬಲ ಸರ್ವಥಾ ಇರುತ್ತಿರಲಿಲ್ಲ. ಆದ್ದರಿಂದ ಇವನನ್ನು ಹರಿಯೊಂದಿಗೇ ನಾಶ ಮಾಡಬೇಕು. ಇದೇ ನಮ್ಮ ಗುರಿ''.

---

೨. ಸ್ವಾತ್ಮೇತ್ಯಾದಿನಾ । ಹಿ= ಯಸ್ಮಾತ್ ಸ್ವಪಿತುರ್ಭರ್ತೃಃ ಸಃ= ಪ್ರಹ್ಲಾದಃ ಬಲಾತ್ಕೃಷ್ಯತೇ ತಸ್ಮಾತ್ ಅಮುಷ್ಯ= ಪ್ರಹ್ಲಾದಸ್ಯ ಬಲಮೌರಸಂ= ಸ್ವಸ್ಯ ಉರಃಸತ್ತ್ವಾಜ್ಜಾತಮೌರಸಂ ಸಹಜಂ ನ ತು । ಯದ್ಯಪಿ ಹರಿಸ್ತುತಿಕರಣೇ ಔರಸತ್ವಂ ಪ್ರಹ್ಲಾದಸ್ಯಾಪ್ಯಸ್ತಿ । ತಥಾಪಿ ಸ್ವಪ್ರಯೋಜನಾಯ ವಿದ್ಯೋಪಜೀವನಮಕುರ್ವತಃ ಸ್ವಶಕ್ತ್ಯೈವ ಸರ್ವನಿರೋಧಕೃತೋ ಭೀಮಸ್ಯೈವ ಸರ್ವತ್ರಾತಿಶಯಿತಶಕ್ತಿರ್ನಾಸ್ತೀತಿ ಸೂಚಿತಂ ತುಶಬ್ದೇನ ॥ – (ವಾ.)

ವಿ: ೧) ಕೊನೆಗೂ ಅವರ ಭೀಮದ್ವೇಷ ಕೃಷ್ಣದ್ವೇಷದಲ್ಲಿ ಕೊನೆಯಾಯಿತು. ಅವರು ಕೃಷ್ಣ-ಭೀಮರಲ್ಲಿ ಭಕ್ತಿಮಾಡುವ ಬದಲು ದ್ವೇಷ ಮಾಡತೊಡಗಿದ್ದು ಅವರ ಸ್ವರೂಪದ್ದೇ ಆದ ದೋಷ.

೨) ಯೋಗ್ಯರಿಗೆ ಜ್ಞಾನ ಭಕ್ತಿವರ್ಧಕವಾದರೆ, ಅಯೋಗ್ಯರಿಗೆ ದ್ವೇಷವರ್ಧಕವೆಂಬುದಕ್ಕೆ ಇದು ಅತ್ಯುತ್ತಮನಿದರ್ಶನ.

ಕೃಷ್ಣಃ ಕಿಲೈಷ ಚ ಹರಿರ್ಯದುಷು ಪ್ರಜಾತಃ
ಸೋಽಸ್ಯಾಶ್ರಯಃ ಕುರುತ ತಸ್ಯ ಬಹುಪ್ರತೀಪಮ್ ।
ಸಮ್ಮಂತ್ರ್ಯ ಚೈವಮತಿಪಾಪತಮಾ ನರೇಂದ್ರ-
ಪುತ್ರಾ ಹರೇಶ್ಚ ಬಹು ಚಕ್ರುರಥ ಪ್ರತೀಪಮ್ ॥ ೮೨ ॥

''ಆ ಹರಿಯೇ ಶ್ರೀಕೃಷ್ಣನಾಗಿ ಯಾದವರಲ್ಲಿ ಜನಿಸಿ, ಈ ಭೀಮನಿಗೆ ಆಸರೆಯಾಗಿರುವನು. ಆದ್ದರಿಂದ ಅವನಿಗೆ ಬಹುವಾಗಿ ವಿರೋಧವೆಸಗಿರಿ''. ಈ ರೀತಿಯಾಗಿ ಮಂತ್ರಾಲೋಚನೆ ಮಾಡಿ, ಆ ಪರಮಪಾಪಿಗಳಾದ ರಾಜಕುಮಾರರು ಶ್ರೀಕೃಷ್ಣನಿಗೂ ಬಹುವಿಧವಾದ ವಿರೋಧವನ್ನು ಮಾಡತೊಡಗಿದರು.

ವಿ: ಇಲ್ಲಿಯವರೆಗೂ ಕೌರವರು ಹಾಗೂ ಅವರ ಅನುಯಾಯಿಗಳು ಮಾಡಿದ ಭೀಮವಧೆಯ ದುರ್ವಿಚಾರದ ವಿವರಣೆಯಾಗಿದೆ.

ಶ್ರೀಕೃಷ್ಣನಿಂದ ದುರ್ಯೋಧನಪ್ರೇಷಿತರಾದ ರಾಜರ ಪರಾಭವ

ತೈಃ ಪ್ರೇರಿತಾ ನೃಪತಯಃ ಪಿತರಶ್ಚ ತೇಷಾಂ
ಸಾಕಂ ಬೃಹದ್ರಥಸುತೇನ ಹರೇಃ ಸಕಾಶಮ್ ।
ಯುದ್ಧಾಯ ಜಗ್ಮುರಮುನಾಽಷ್ಟದಶೇಷು[೧] ಯುದ್ಧೇ-
ಷ್ವತ್ಯಂತಭಗ್ನಬಲದರ್ಪಮದಾ ನಿವೃತ್ತಾಃ ॥ ೮೩ ॥

ಅ: ದುರ್ಯೋಧನಾದಿಗಳಿಂದ ಪ್ರೇರಿತರಾದ ರಾಜರೂ ಆ ರಾಜಕುಮಾರರ ಜನಕರೂ ಜರಾಸಂಧನೊಂದಿಗೆ ಸೇರಿ, ಶ್ರೀಹರಿಯ ಮೇಲೆ ೧೮ದಿನೆಂಟು ಬಾರಿ ಯುದ್ಧಕ್ಕೆಂದು ತೆರಳಿದರು. ಶ್ರೀಕೃಷ್ಣನಿಂದ ಬಲ, ದರ್ಪ, ಅಹಂಕಾರಗಳನ್ನು ಅತ್ಯಂತವಾಗಿ ಭಂಗಮಾಡಿ-ಕೊಂಡು ಮರಳಿದರು.

---

೧. ಅನಿತ್ಯತ್ವಾತ್ತಮಾಸಾಂತವಿಧೇಃ ಅಷ್ಟನ್‌ಶಬ್ದಸ್ಯಾಕಾರಾದೇಶೋ ನ ಭವತಿ । ಅಷ್ಟಚತ್ವಾರಿಂಶಚ್ಛಬ್ದವತ್ ವೈಕಲ್ಪಿಕೋ ವಾ ॥ – (ವಾ.)

ವಿ: ೧) ಆವರೆಗೂ ಜರಾಸಂಧನೊಂದಿಗೆ ತೆರಳಿ, ಶ್ರೀಕೃಷ್ಣನನ್ನು ವಿರೋಧಿಸುತ್ತಿದ್ದ ರಾಜರು–ಗಳ ಗುಂಪಿಗೆ ಇವರಿಂದ ಪ್ರೇರಿತರಾದ ಇತರರಾಜರು ಹಾಗೂ ಅವರ ಪಿತೃಗಳು ಸೇರಿಕೊಂಡರು. ಇದರಿಂದ ಸೋಲುವವರ ಸಂಖ್ಯೆ ಬೆಳೆಯಿತೇ ಹೊರತು, ಭಗವಂತನಾದ ಶ್ರೀಕೃಷ್ಣನಿಗೆ ಮಾತ್ರ ಯಾವುದೇ ತೊಂದರೆಯೂ ಆಗಲಿಲ್ಲ. ಜರಾಸಂಧ ಹಾಗೆ ಶ್ರೀಕೃಷ್ಣನ ಮೇಲೆ ಯುದ್ಧ ಮಾಡಿದ್ದು ಒಟ್ಟು ಹದಿನೆಂಟು ಬಾರಿ ಎಂಬ ಮತ್ತೊಂದು ಮುಖ್ಯವಿವರವೂ ಇಲ್ಲಿದೆ. ಆ ಹದಿನೆಂಟು ಶ್ರೀಕೃಷ್ಣನಿಗೆ ಜಯದ ಸಂಖ್ಯೆಯಾದರೆ, ಜರಾಸಂಧಾದಿಗಳಿಗೆಲ್ಲ ಪರಾಜಯದ ಸಂಖ್ಯೆಯಾದದ್ದು ವಿಶೇಷ. ಹರಿವಿರೋಧಿಗಳಿಗೆ ಜಯದ ಸುಳಿವೂ ಲಭಿಸದಲ್ಲವೆ!

೨) ಹೀಗೆ ದುರ್ಯೋಧನ ನೇರವಾಗಿ ಕೃಷ್ಣನನ್ನು ಎದುರಿಸದಿದ್ದರೂ, ಅವನ ವಿರೋಧಿಯಾದ ಜರಾಸಂಧನಿಗೆ ಬಲ ಕೊಡುವ ಮೂಲಕ ವೈರ ಸಾಧಿಸತೊಡಗಿದ. ಕಲಿಯ ಸ್ವಭಾವವೇ ಇಂತಹುದು; ಅವನು ಸಾಕ್ಷಾದ್ವಾಯುದ್ವೇಷಿ; ಪ್ರಚ್ಛನ್ನಭಗವದ್ದ್ವೇಷಿ.

ತೇನಾಗೃಹೀತರಥವಾಜಿಗಜಾ ನಿತಾಂತಂ
ಶಸ್ತ್ರೈಃ ಪರಿಕ್ಷತತನೂಭರಲಂ ವಮಂತಃ ।
ರಕ್ತಂ ವಿಶಸ್ತ್ರಕವಚಧ್ವಜವಾಜಿಸೂತಾಃ
ಸ್ರಸ್ತಾಂಬರಾಃ ಶ್ಲಥಿತಮೂರ್ಧಜಿನೋ ನಿವೃತ್ತಾಃ ॥ ೮೪ ॥

ಅ: ಅವರೆಲ್ಲ ಶ್ರೀಕೃಷ್ಣನಿಂದ ರಥ, ಕುದುರೆ, ಆನೆಗಳನ್ನೆಲ್ಲ ಕಳೆದುಕೊಂಡರು. ಅವನ ಶಸ್ತ್ರಗಳಿಂದ ಅವರ ದೇಹಗಳು ಬಹಳವಾಗಿ ಘಾಸಿಗೊಂಡವು. ಅವರೆಲ್ಲ ರಕ್ತಕಾರುತ್ತಾ ಹಿಂದಿರುಗಿದರು; ಶಸ್ತ್ರ ಕವಚ, ಧ್ವಜ, ಕುದುರೆ, ಸೂತರನ್ನು ಕಳೆದುಕೊಂಡರು; ವಸ್ತ್ರಗಳು ಜಾರಿದವು; ತಲೆಗೂದಲು ಬಿಚ್ಚಿ ಹರಡಿದವು.

ವಿ: ೧) ಶ್ರೀಕೃಷ್ಣದ್ವೇಷದಿಂದಾಗಿ ಅವರಿಗೊದಗಿದ ದುಸ್ಥಿತಿಯ ಅಪೂರ್ವ ವಿವರ ಇಲ್ಲಿದೆ. ಹರಿದ್ವೇಷಿಗಳಿಗೆ ಸಹಕಾರ ಕೊಡುವವರಿಗೂ ಸರ್ವನಾಶ ಖಚಿತ ಎಂಬುದು ಇದರಿಂದ ಸೂಚಿತ; ಇದು ಮತ್ತೊಂದು ರೀತಿಯಲ್ಲಿ ದುರ್ಯೋಧನಾದಿಗಳ ಪರಾಜಯವೂ ಆಯಿತು.

---

೨. ದಶ ಚಾಷ್ಟೌ ಚ ಸಂಗ್ರಾಮಾನೇವಮಸ್ಯಂತಂದುರ್ಮದಃ ।
ಯದುಭಿರ್ಮಾಗಧೋ ರಾಜಾ ಚಕ್ರೇ ಕೃಷ್ಣಪುರೋಗಮೈಃ ॥
ಸರ್ವೇಷ್ವೇತೇಷು ಯುದ್ಧೇಷು ಯಾದವೈಃ ಸ ಪರಾಜಿತಃ ।
ಅಪಕ್ರಾಂತೋ ಜರಾಸಂಧಃ ಸ್ವಲ್ಪಸೈನ್ಯೈರ್ಬಲಾಧಿಕಃ ॥
ನ ತದ್ಬಲಂ ಯಾದವಾನಾಂ ವಿಜಿತಂ ಯದನೇಕಶಃ ।
ತತ್ತು ಸನ್ನಿಧಿಮಾಹಾತ್ಮ್ಯಂ ವಿಷ್ಣೋರಂಶಸ್ಯ ಚಕ್ರಿಣಃ ॥ – ವಿಷ್ಣುಪುರಾಣ (೫/೨೨/೧೧೨/೧೧೪)

ಏವಂ ಬೃಹದ್ರಥಸುತೋಽಪಿ ಸುಶೋಚ್ಯರೂಪ
ಆರ್ತೋ ಯಯೌ ಬಹುಶ ಏವ ಪುರಂ ಸ್ವಕೀಯಮ್ ।
ಕೃಷ್ಣೇನ ಪೂರ್ಣಬಲವೀರ್ಯಗುಣೇನ ಮುಕ್ತೋ
ಜೀವೇತ್ಯತೀವ ವಿಜಿತಃ ಶ್ವಸಿತಾವಶೇಷಃ ॥ ೮೫ ॥

ಅ: ಹೀಗೆ ಜರಾಸಂಧನು ಸಹ ಅನೇಕಬಾರಿ ತುಂಬಾ ಶೋಚನೀಯ ಗತಿಗೆ ಸಿಲುಕಿ, ದುಃಖಿತನಾಗಿ ತನ್ನ ಪಟ್ಟಣಕ್ಕೆ ತೆರಳಿದ. ಪರಿಪೂರ್ಣವಾದ ಬಲವೀರ್ಯಗುಣಗಳನ್ನುಳ್ಳ ಶ್ರೀಕೃಷ್ಣ ಅವನನ್ನು ಸಂಪೂರ್ಣವಾಗಿ ಪರಾಭವಗೊಳಿಸಿ, ''ಬದುಕಿಕೊ'' ಎಂದು ಉಸಿರನ್ನು ಮಾತ್ರ ಉಳಿಸಿ, ಕಳಿಸುತ್ತಿದ್ದ.

ಶ್ರೀಕೃಷ್ಣವಿಜಯದ ಸಂಭ್ರಮ

ಏವಂ ಗತೇಷು ಬಹುಶೋ ನತಕಂಧರೇಷು
ರಾಜಸ್ವಜೋಽಪಿ ಮಧುರಾಂ ಸ್ವಪುರೀಂ ಪ್ರವಿಶ್ಯ ।
ರಾಮೇಣ ಸಾರ್ಧಮಖಿಲೈರ್ಯದುಭಿಃ ಸಮೇತೋ
ರೇಮೇ ರಮಾಪತಿರಚಿಂತ್ಯಬಲೋ ಜಯಶ್ರೀಃ ॥ ೮೬ ॥

ಅ: ಹೀಗೆ ಅನೇಕ ಸಲ ತಲೆ ತಗ್ಗಿಸಿ, ರಾಜರುಗಳು ಮರಳುತ್ತಿದ್ದಂತೆ ಚಿಂತನೆಗೆಟುಕದ ಬಲಶಾಲಿಯಾದ ಲಕ್ಷ್ಮೀಪತಿಯಾದ ಕೃಷ್ಣ ಜಯಲಕ್ಷ್ಮೀಸಂಪನ್ನನಾಗಿ ತನ್ನ ಪಟ್ಟಣವಾದ ಮಧುರೆಯನ್ನು ಪ್ರವೇಶಿಸಿ, ಬಲರಾಮನೊಂದಿಗೆ ಕೂಡಿ, ಸಕಲಯಾದವರ ಸಮೇತನಾಗಿ ಕ್ರೀಡಿಸಿದ.

ವಿ: ಸದಾ ಲಕ್ಷ್ಮೀಪತಿಯಾದ ಶ್ರೀಕೃಷ್ಣನಿಗೆ ಜಯಲಕ್ಷ್ಮಿ ಸದಾ ಲಭಿಸುತ್ತಿದ್ದುದರಲ್ಲಿ ಅಚ್ಚರಿ ಏನು? ಎಂದರ್ಥ.

ಭೀಮನ ಅಪೂರ್ವದಿಗ್ವಿಜಯ

ವ್ಯರ್ಥೋದ್ಯಮಾಃ ಪುನರಪಿ ಸ್ಮ ಸಧಾರ್ತರಾಷ್ಟ್ರಾ
ಭೀಮಂ ನಿಹಂತುಮುರುಯತ್ನಮಕುರ್ವತಾಜ್ಞಾಃ ।
ರಾಜ್ಞಾಂ ಸುತಾಸ್ತಮಖಿಲಂ ಸ ಮೃಷ್ಯೈವ ಕೃತ್ವಾ
ಚಕ್ರೇ ಜಯಾಯ ಚ ದಿಶಾಂ ಬಲವಾನ್ ಪ್ರಯತ್ನಮ್ ॥ ೮೭ ॥

ಅ: ಹೀಗೆ ವ್ಯರ್ಥಪ್ರಯತ್ನರಾದ ಆ ವಿವೇಕರಹಿತರಾದ ರಾಜಕುಮಾರರುಗಳು ದುರ್ಯೋಧನನೊಂದಿಗೆ ಕೂಡಿ, ಭೀಮನನ್ನು ಕೊಲ್ಲಲೆಂದು ಬಹಳಪ್ರಯತ್ನವನ್ನು ಮತ್ತೆಮತ್ತೆ

ಮಾಡಿದರು. ಬಲಶಾಲಿಯಾದ ಭೀಮಸೇನನು ಅವನ್ನೆಲ್ಲ ವ್ಯರ್ಥಗೊಳಿಸಿ, ದಿಕ್ಕುಗಳನ್ನು ಜಯಿಸುವ ಪ್ರಯತ್ನಕ್ಕೆ ತೊಡಗಿದ.

ವಿ: ೧) ತಮ್ಮ ಪ್ರಯತ್ನಗಳೆಲ್ಲ ಹಾಗೆ ಸಂಪೂರ್ಣ ವ್ಯರ್ಥವಾಗುತ್ತಿದ್ದರೂ, ಅದನ್ನು ಅರ್ಥಮಾಡಿಕೊಳ್ಳದ ಆ ಅವಿವೇಕಿಗಳೆಲ್ಲ ಭೀಮನ ವಧೆಗೆಂದು ಬಗೆಬಗೆಯ ಪ್ರಯತ್ನಗಳಲ್ಲಿ ತೊಡಗಿಯೇ ಇದ್ದರು.

೨) ಆದರೆ ಭೀಮಸೇನ ಅವನ್ನೆಲ್ಲ ಅನಾಯಾಸದಿಂದ ವಿಫಲಗೊಳಿಸಿದ್ದಲ್ಲದೆ, ದಿಕ್ಕುಗಳನ್ನು ಗೆದ್ದು ಬರುವ ಮತ್ತೊಂದು ವಿಶಿಷ್ಟಕಾರ್ಯದಲ್ಲಿ ತೊಡಗಿ ಅವರ ಇನ್ನೂ ಹೆಚ್ಚಿನ ನೋವಿಗೆ ಕಾರಣನಾದ ಎಂದರ್ಥ.

ಪ್ರಾಚೀಂ ದಿಶಂ ಪ್ರಥಮಮೇವ ಜಿಗಾಯ ಪಶ್ಚಾ-
ದ್ಯಾಮ್ಯಾಂ ಜಲೇಶಪರಿಪಾಲಿತಯಾ ಸಹಾನ್ಯಾಮ್ ।
ಯೌ ತೌ ಪುರಾತನದಶಾನನಕುಂಭಕರ್ಣೌ
ಮಾತೃಷ್ವಸಾತನಯತಾಂ ಚ ಗತೌ ಜಿಗಾಯ ॥ ೮೮ ॥[೧]

ಅ: ಮೊದಲಿಗೆ ಪೂರ್ವದಿಕ್ಕನ್ನು ಗೆದ್ದನು. ಅನಂತರ ಪಶ್ಚಿಮದಿಕ್ಕನ್ನೂ, ದಕ್ಷಿಣದಿಕ್ಕನ್ನೂ, ಉಳಿದ ಉತ್ತರದಿಕ್ಕನ್ನೂ ಗೆದ್ದ. ಹಿಂದೆ ರಾವಣಕುಂಭಕರ್ಣರಾಗಿದ್ದು ಈಗ ತನ್ನ ಚಿಕ್ಕಮ್ಮನ ಮಕ್ಕಳಾಗಿ ಜನಿಸಿದ್ದ ಶಿಶುಪಾಲದಂತವಕ್ರರನ್ನೂ ಜಯಿಸಿದ.

ವಿ: ೧) ಭೀಮಸೇನ ಪೂರ್ವದಿಕ್ಕಿನಿಂದ ಪ್ರಾರಂಭಿಸಿ, ಪ್ರದಕ್ಷಿಣಾಕಾರವಾಗಿ ದಿಗ್ವಿಜಯವನ್ನು ಪೂರೈಸಿದ. ಹಾಗೆ ಭೀಮಸೇನನಿಂದ ಪರಾಭವಗೊಂಡವರಲ್ಲಿ ಶಿಶುಪಾಲದಂತವಕ್ರರೂ ಸೇರಿದ್ದರು. ಹನುಮಂತನಾಗಿದ್ದಾಗ ರಾವಣಕುಂಭಕರ್ಣರನ್ನು ಜಯಿಸಿದ್ದ ಭೀಮಸೇನ, ಈಗ ಶಿಶುಪಾಲದಂತವಕ್ರರಾಗಿ ಜನಿಸಿದ್ದ ಅವರನ್ನು ಇಲ್ಲೂ ಜಯಿಸಿದ. ಎಲ್ಲ ಅವತಾರಗಳಲ್ಲೂ ಅವರನ್ನು ಕೊಂದವನು ಶ್ರೀಹರಿಯಾದರೆ, ಜಯಿಸಿದ್ದು ವಾಯುದೇವರು ಮಾತ್ರ ಎಂಬುದು ಮತ್ತೊಂದು ವಿಶೇಷ.

---

೧. ಯಾ ಮಾತೃಷ್ವಸಾ ತಸ್ಯಾಃ ತನಯತಾಂ ಚ ಗತೌ । ಮಾತೃಷ್ವಸೇತಿ ಜಾತ್ಯೇಕವಚನಮ್ । ದ್ವಯೋರ್ಮಾತೃಷ್ವಸ್ರೋರ್ದ್ವೌ ಪುತ್ರಾವಿತ್ಯರ್ಥಃ । ತಥಾ ಯಾ ಅನ್ಯಾ ಶಿಶುಪಾಲಮಾತುರನ್ಯಾ ಮಾತೃಷ್ವಸಾ ಯದ್ವಾ । ''ಸೃಜ ವಿಸರ್ಗ'' ಇತಿ ಧಾತೋಃ ಸ್ತ್ರಿಯಾಂ ಡಾಪಿ ಕೃತೇ ''ಡೋಽನ್ಯತ್ರಾಪಿ ದೃಶ್ಯತ'' ಇತಿ ವಚನಾತ್ ಡಪ್ರತ್ಯಯೇ ವಾ ಕೃತೇ ಸ್ವಯಾ ಸಹ ನಿಸೃಷ್ಟಾ ಮಾತೃಷ್ವಸಾ । ತಸ್ಮಾನ್ಮಹಾವ್ಯಾಕರಣಜ್ಞೈರ್ಮಹಾವೈದಿಕಶಿರೋಮಣಿಭಿರ್ಭಾಷ್ಯಯುಕ್ತಂ ಸ ಏವ ಪ್ರಯೋಗಃ ಸಾಧುಃ । ಕರೂಶನ್ಯಪಂ ದಂತವಕ್ರಂ ತಸ್ಯಾ ಏವ ತನಯಂ ವದಂತಿ ॥ – (ವಾ.)

೨) ಶಿಶುಪಾಲದಂತವಕ್ರರು ಕೃಷ್ಣನ ಸೋದರತ್ತೆಯ ಮಕ್ಕಳು. ಕುಂತಿಯೂ ಶ್ರೀಕೃಷ್ಣನಿಗೆ ಸೋದರತ್ತೆಯೇ. ಎಂದರೆ ಅವರು ಕುಂತಿಯ ಸಹೋದರಿಯ ಮಕ್ಕಳು; ಶೂರರಾಜನ ಪುತ್ರಿಯರು. ಆದ್ದರಿಂದ ಅವರು ಭೀಮಸೇನನಿಗೆ [೧]ಚಿಕ್ಕಮ್ಮನ ಮಕ್ಕಳು.

ಪೂರ್ವಸ್ತಯೋರ್ಹಿ ದಮಘೋಷಸುತಃ ಪ್ರಜಾತಃ
ಪ್ರಾಹುಶ್ಚ ಯಂ ನೃಪತಯಃ ಶಿಶುಪಾಲನಾಮ್ನಾ।
ಅನ್ಯಂ ವದಂತಿ ಚ ಕರೂಶನೃಪಂ ತಥಾಽನ್ಯಂ
ಮಾತೃಷ್ವಸಾತನಯಮೇವ ಚ ದಂತವಕ್ರಮ್ ॥ ೮೯ ॥

ಅ: ಅವರಲ್ಲಿ ಮೊದಲು ಜನಿಸಿದ್ದವನು ದಮಘೋಷನ ಮಗ. ಅವನನ್ನು ರಾಜರುಗಳು ಶಿಶುಪಾಲ ಎಂದು ಕರೆಯುವರು. ಮತ್ತೊಬ್ಬ ಚಿಕ್ಕಮ್ಮನ ಮಗನಾಗಿ ಜನಿಸಿದ್ದ ಇನ್ನೊಬ್ಬನನ್ನು ಕರೂಶರಾಜನಾದ ದಂತವಕ್ರ ಎಂದು ಕರೆಯುವರು.

ವಿ: ೧) ಹೀಗೆ ಜಯವಿಜಯರು ಮೂರು ಜನ್ಮ ಹೊಂದಿದ್ದು, ಆ ಮೂರು ಜನ್ಮಗಳಲ್ಲೂ ಜಯನು ಅಣ್ಣನಾಗಿಯೂ, ವಿಜಯನು ತಮ್ಮನಾಗಿಯೂ ಜನಿಸಿದ್ದ. ಹಿರಣ್ಯಕಶಿಪು ಹಿರಣ್ಯಾಕ್ಷರು ಯಮಳರು. ರಾವಣಕುಂಭಕರ್ಣರು ಯಮಳರಲ್ಲವಾದರೂ, ಒಬ್ಬ ತಾಯಿಯ ಮಕ್ಕಳು. ಶಿಶುಪಾಲದಂತವಕ್ರರು, ಒಬ್ಬ ತಾಯಿಯ ಮಕ್ಕಳಲ್ಲವಾದರೂ ಅಕ್ಕ ತಂಗಿಯರ ಮಕ್ಕಳು. ಹೀಗೆ ಮೂರು ಜನ್ಮಗಳಲ್ಲೂ ಅವರ ಸಂಬಂಧ ಒಂದರ್ಥದಲ್ಲಿ ಒಂದೇ ಆಗಿದ್ದರೂ, ಕ್ರಮವಾಗಿ ಸ್ವಲ್ಪ ಸ್ವಲ್ಪ ದೂರವಾಗುವುದರ ಮೂಲಕ ಅವರು ಶಾಪಮುಕ್ತರಾಗುವುದಕ್ಕೆ ಸಂಕೇತದಂತಿದೆ.

ಜಿತ್ವೈವ ತಾವಪಿ ಜಿಗಾಯ ಚ ಪೌಂಡ್ರಕಾಖ್ಯಂ
ಶೌರೇಃ ಸುತಂ ಸುತಮಜೈದಥ ಭೀಷ್ಮಕಸ್ಯ।
ಯಃ ಪೂರ್ವಮಾಸ ದಿತಿಜೋ ನರಹೇಲ್ವಲಾಖ್ಯೋ[೨]
ರುಗ್ಮೀತಿ ನಾಮ ಚ ಬಭೂವ ಸ ಕುಂಡಿನೇಶಃ ॥ ೯೦ ॥

---

೧. ತತಶ್ಚೇದಿಪುರಂ ಪ್ರಾಪ್ತೌ ಸಂಕರ್ಷಣಜನಾರ್ದನೌ।
ಯಾದವೌ ಯಾದವೀಂ ದ್ರಷ್ಟುಂ ಸ್ವಸಾರಂ ತೌ ಪಿತುಸ್ತದಾ ॥ – ಭಾರತ (ಸಭಾ. ೪೩/೧೫)

೨. ಇಲ್ವಲಾಖ್ಯೋ ದೈತ್ಯಃ ಸ್ವಾನುಜಂ ವಾತಾಪಿಂ ಶಾಕಂ ಕೃತ್ವಾ ನರಾನ್ಭೋಜಯಿತ್ವಾ ಪುನರಾಹ್ವಾನೇ ಸತಿ ತದುದರಂ ನಿರ್ಭಿದ್ಯ ಸ್ವಾನುಜಸ್ಯ ಯಥಾಪೂರ್ವಮಾಗಮನೇ ಸತಿ ತೇ ನರಾ ಮೃತಾ ಭವಂತೀತಿ ಕಥಾಸೂಚನಾಯ ನರಹೇತ್ಯುಕ್ತಮ್ ॥ – (ವಾ.)

ಅ: ಅವರಿಬ್ಬರನ್ನೂ ಗೆದ್ದು ಭೀಮಸೇನ ವಸುದೇವನ ಮಗನಾದ ಪೌಂಡ್ರಕನೆಂಬವನನ್ನು ಗೆದ್ದ. ಬಳಿಕ ಭೀಷ್ಮಕನ ಮಗನಾಗಿ ಜನಿಸಿದ್ದ ರುಗ್ಮಿಯನ್ನೂ ಗೆದ್ದ. ಅವನು ಹಿಂದೆ ನರಭಕ್ಷಕನಾಗಿದ್ದ ಇಲ್ವಲ ಎಂಬ ದೈತ್ಯ. ಅವನು ಈಗ ಕುಂಡಿನದೇಶಕ್ಕೆ ಒಡೆಯ.

ವಿ: ೧) ಶಿಶುಪಾಲದಂತವಕ್ರರು ಶ್ರೀಕೃಷ್ಣನ ಸೋದರತ್ತೆಯ ಮಕ್ಕಳಾಗಿದ್ದರೆ, ಪೌಂಡ್ರಕ–ವಾಸುದೇವ ಕೃಷ್ಣನಿಗೆ ಅಣ್ಣನೇ ಆಗಿದ್ದವನು. ಭೀಮನ ಅಣ್ಣ ದುರ್ಯೋಧನ ಮಹಾದುಷ್ಟನಾದ ಕಲಿಯಾಗಿದ್ದಂತೆ, ಶ್ರೀಕೃಷ್ಣನ ಅಣ್ಣ ಪೌಂಡ್ರಕವಾಸುದೇವ ಮಹಾದೈತ್ಯನಾಗಿದ್ದ. ಪೌಂಡ್ರಕನು ವಸುದೇವನ ಮಗನೇ ಆಗಿದ್ದರೆ, ದುರ್ಯೋಧನ ಭೀಮನಿಗೆ ತಂದೆಯ ಅಣ್ಣನ ಮಗನಾಗಿದ್ದ. ಪೌಂಡ್ರಕ ಕೃಷ್ಣನಿಂದ ಹತನಾಗುವನು; ಅದರಂತೆ ದುರ್ಯೋಧನ ಭೀಮನಿಂದ ಎಂಬುದೂ ವಿಶೇಷ. ಕೃಷ್ಣಭೀಮರು ದುಷ್ಟರೆಂಬ ಕಾರಣದಿಂದ ತಮ್ಮ ಅಣ್ಣಂದಿರನ್ನೇ ಕೊಂದ ಶ್ರೇಷ್ಠಧರ್ಮಪಾಲಕರು ಎಂಬುದನ್ನು ಗಮನಿಸಬೇಕು.

೨) ರುಗ್ಮಿ ರುಗ್ಮಿಣಿಯ ಅಣ್ಣ. ವಾತಾಪಿ, ಇಲ್ವಲ ಎಂಬ ರಾಕ್ಷಸರಲ್ಲಿ ಇಲ್ವಲನೇ ರುಗ್ಮಿಯಾಗಿ ಜನಿಸಿದ್ದ. ವಾಸ್ತವವಾಗಿ ಅವನ ತಂದೆ ಭೀಷ್ಮಕನೇ ಕುಂಡಿನದೇಶದ ರಾಜನಾಗಿದ್ದರೂ, ದುಷ್ಟನಾಗಿದ್ದ ರುಗ್ಮಿಯೇ ಅಧಿಕಾರಸೂತ್ರವನ್ನು ತನ್ನ ಕೈಯಲ್ಲಿ ಹಿಡಿದಿದ್ದನೆಂಬುದನ್ನು ಇಲ್ಲಿಯ **'ಕುಂಡಿನೇಶ'** ಎಂಬ ಪದದಿಂದ ಸೂಚಿಸಿರುವರು.

೩) ಇಲ್ವಲನ ಕಥೆ ಮಹಾಭಾರತದ ವನಪರ್ವದಲ್ಲಿ ಬಂದಿದೆ. ಇಲ್ವಲನ ತಮ್ಮ ವಾತಾಪಿ ಎಂಬವನು. ಇಂದ್ರನಂತಹ ಮಗನನ್ನು ನೀಡಬೇಕೆಂಬ ತನ್ನ ಪ್ರಾರ್ಥನೆಯನ್ನು ಒಬ್ಬ ಬ್ರಾಹ್ಮಣ ಮನ್ನಿಸಲಿಲ್ಲವೆಂಬ ಕಾರಣದಿಂದ ಬ್ರಾಹ್ಮಣರನ್ನೆಲ್ಲ ಸಂಹರಿಸುವ ಕಾಯಕದಲ್ಲಿ ಇಲ್ವಲ ತೊಡಗಿದ. ಕಾಮರೂಪಿಯಾದ ವಾತಾಪಿಯನ್ನು ಅವನು ಕುರಿಯ ರೂಪ ತಾಳುವಂತೆ ಮಾಡಿ, ಅವನನ್ನು ಕಡಿದು, ಬಾಹ್ಮಣರಿಗೆ ಮಾಂಸದಡುಗೆಯನ್ನು ತಿನ್ನಿಸಿ, ಭೋಜನವಾದ ಮೇಲೆ 'ವಾತಾಪಿ ಬಾ' ಎಂದು ಕರೆಯುತ್ತಿದ್ದ. ಅವನು ಆ ಬ್ರಾಹ್ಮಣರ ಹೊಟ್ಟೆ ಹೊಡೆದು, ಹೊರಗೆ ಬಂದ ಮೇಲೆ ಆ ಬ್ರಾಹ್ಮಣರನ್ನು ತಿನ್ನುವುದು ಇವರ ಜೀವನಕ್ರಮವಾಗಿತ್ತು. ಮುಂದೆ ಅಗಸ್ತ್ಯರು ವಾತಾಪಿಯನ್ನು ಜೀರ್ಣಮಾಡಿ ಸಂಹರಿಸಿ, ಇಲ್ವಲನನ್ನು ಹುಂಕಾರದಿಂದ ಕೊಂದು ಲೋಕವನ್ನು ಪಾಲಿಸಿದರು. ಇಲ್ವಲನ ಈ ದುಷ್ಟಚರಿತ್ರೆಯನ್ನೆಲ್ಲ 'ನರಹಾ' ಎಂಬ ಪದದಿಂದ ಸೂಚಿಸಿರುವರು ಎಂದು ತಿಳಿಯಬೇಕು.

ಭಾಗೇತ ಏವ ತನಯಸ್ಯ ಸ ಏವ ವಹ್ನೇ-
ರ್ನಾಮ್ನಾ ಶುಚೇಃ ಸ ತು ಪಿತಾऽಸ್ಯ ಹಿ ಮಿತ್ರಭಾಗಃ ।
ರಾಹ್ವಂಶಯುಕ್ತದನುಜೌ ಕ್ರಥಕೈಶಿಕಾಖ್ಯೌ
ಭಾಗೌ ತಥಾऽಗ್ನಿಸುತಯೋಃ ಪವಮಾನಶುಂಧ್ಯೋಃ ॥ ೯೦ ॥

ಅ: ಆ ರುಗ್ಮಿಯಲ್ಲಿ ಶುಚಿ ಎಂಬ ವಹ್ನಿಪುತ್ರನ ಅಂಶವೂ ಇತ್ತು. ಅವನ ತಂದೆಯಾದ ಭೀಷ್ಮಕ ಮಿತ್ರನಾಮಕ ಸೂರ್ಯನ ಅಂಶ; ಅವನು ರಾಹುವಿನ ಅಂಶವನ್ನೂ ಹೊಂದಿದ್ದ. ಅವನ ತಮ್ಮಂದಿರಾದ ಕ್ರಥ ಮತ್ತು ಕೈಶಿಕ ಎಂಬ ಇಬ್ಬರೂ ಪ್ರಧಾನಾಗ್ನಿಯ ಪುತ್ರರಾದ ಪವಮಾನ ಮತ್ತು ಶುಂಧಿ ಎಂಬವರ ಅಂಶ.

ವಿ: ೧) ರುಗ್ಮಿ ಸ್ವರೂಪತಃ ಕೃಷ್ಣದ್ವೇಷಿಯಾದ ದೈತ್ಯನಾದರೂ, ಅವನಿಗೆ ಕೃಷ್ಣನ ಮೈದುನನೆಂಬ ಹಿರಿಮೆ ಬರಲು ಅವನೊಳಗಿನ ಶುಚಿ ಎಂಬ ವಹ್ನಿಪುತ್ರನ ಅಂಶ ಕಾರಣವಾಗಿತ್ತು.

೨) ಅದರಂತೆ ಭೀಷ್ಮಕ ಪರಮಸಾತ್ತ್ವಿಕನಾಗಿದ್ದರೂ, ಅವನು ಕೃಷ್ಣವಿರೋಧಿಯಾದ ಶಿಶುಪಾಲನಿಗೆ ರುಗ್ಮಿಣಿಯನ್ನು ಕೊಡುವ ರುಗ್ಮಿ ಮೊದಲಾದವರ ಯೋಜನೆಗೆ ಸಮ್ಮತಿ ಸೂಚಿಸಲು ಅವನೊಳಗಿದ್ದ ರಾಹುವೆಂಬ ದೈತ್ಯನ ಅಂಶ ಕಾರಣವಾಯಿತು ಎಂಬ ವಿಶೇಷಾಂಶ ವಾದಿರಾಜೀಯದಲ್ಲಿದೆ.

೩) ಇದೇ ರೀತಿಯಾಗಿ ಸ್ವರೂಪಕ್ಕೆ ಅನುಗುಣವಲ್ಲದ ವರ್ತನೆ ಕಂಡುಬರುವ ಪ್ರಸಂಗಗಳಲ್ಲೆಲ್ಲ ವಿಭಿನ್ನಸ್ವಭಾವದ ಜೀವರ ಸಮಾವೇಶವನ್ನು ತಿಳಿಯಬೇಕು.

ಬಂಧೋರ್ನಿಜಸ್ಯ ತು ಬಲಂ ಸುಪರೀಕ್ಷಮಾಣಃ
ಶಲ್ಯೋಽಪಿ ತೇನ ಯುಯುಧೇ ವಿಜಿತಸ್ತಥೈವ ।
ಭೀಮೋ ಜಿಗಾಯ ಯುಧಿ ವೀರಮಥೈಕಲವ್ಯಂ
ಸರ್ವೇ ನೃಪಾಶ್ಚ ವಿಜಿತಾ ಅಮುನೈವಮೇವ ॥ ೯೨ ॥

ಅ: ತನ್ನ ಬಂಧುವಿನ ಬಲವನ್ನು ಚೆನ್ನಾಗಿ ಪರೀಕ್ಷಿಸಲೆಂದು ಶಲ್ಯರಾಜ ಭೀಮನೊಂದಿಗೆ ಹೋರಾಡಿ, ಸೋತುಹೋದ. ಬಳಿಕ ಭೀಮಸೇನ ಯುದ್ಧದಲ್ಲಿ ವೀರನಾದ ಏಕಲವ್ಯನನ್ನು ಗೆದ್ದ. ಇತರ ಎಲ್ಲ ರಾಜರೂ ಅವನಿಂದ ಹೀಗೆಯೇ ಪರಾಭವಗೊಂಡರು.

---

೧. ಸ ಏವ ಪೂರ್ವೋಕ್ತರುಗ್ಮ್ಯೇವ । ನಾಮ್ನಾ ಶುಚೇಃ= ಬಹ್ನೇಃ ಸುತಸ್ಯ ಭಾಗೇತ ಏವ= ಭಾಗೇನ ಅಂಶೇನ ಇತಃ= ಸಹಿತ ಏವ ನತು ಸ ಏವೇತ್ಯೇವಕಾರಾರ್ಥಃ । ದೈತ್ಯಸ್ಯ ಭಗವತ್ಸಂಬಂಧಿತ್ವಾಯೋಗಾತ್ । ಭಾಗೇತ ಇತ್ಯುಕ್ತಂ ಅಸ್ಯ ಪಿತಾ= ಭೀಷ್ಮಕಃ ಮಿತ್ರಭಾಗಃ ಮಿತ್ರಾಖ್ಯಸೂರ್ಯಾಂಶಃ । ಶಿಶುಪಾಲವಿವಾಹೋರಣೀಕರಣಾತ್ ರಾಹ್ವಂಶಯುಗಿತ್ಯುಕ್ತಮ್ ॥ – (ವಾ.)

೨. ಸರ್ವೇ ನೃಪಾಶ್ಚ ವಿಜಿತಾ ಇತ್ಯತ್ರ ಜರಾಸಂಧೋಽಪಿ ವಿಜಿತ ಇತಿ ಜ್ಞಾತವ್ಯಮ್ । ನ ಕೇವಲಮೇತಾವತ್ ಅಧಿರಥಂ ವಿಜಿತ್ಯ ಸರ್ವಮಂಗರಾಜ್ಯಂ ಜರಾಸಂಧೇನ ಗೃಹೀತಮಭೂತ್ ತನ್ಮಧ್ಯೇಕದೇಶಃ ಭೀಮೇನ ಗೃಹೀತ ಇತ್ಯಪಿ ಜ್ಞಾತವ್ಯಮ್ । – (ತಿ.)

ವಿ: ೧) ಶಲ್ಯ ಮಾದ್ರಿಯ ಅಣ್ಣನಾಗಿ, ಭೀಮನಿಗೆ ಸೋದರಮಾವ. ಆದರೂ ಅವನು ಭೀಮನೊಂದಿಗೆ ಯುದ್ಧಮಾಡಲು ಕಾರಣ ದ್ವೇಷಾದಿದೋಷಗಳಲ್ಲದೆ, ತನ್ನ ಬಂಧುವಾದ ಭೀಮಸೇನನ ಬಲದ ಪರೀಕ್ಷೆಯ ಸದುದ್ದೇಶ ಮಾತ್ರವೇ ಆಗಿತ್ತು ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ.

೨) ಇಲ್ಲಿ ಭೀಮನಿಂದ ಸೋಲುವ ವಿಕಲವ್ಯ ಮಣಿಮಂತ ದೈತ್ಯನ ಅವತಾರ. ಭೀಮ ಮೂಲರೂಪದ ಮಣಿಮಂತನನ್ನೂ ಸಂಹರಿಸುವ ವಿವರ ವನಪರ್ವದಲ್ಲಿ ಬರುವುದು. (ಅ. ೨೨, ಶ್ಲೋ. ೩೧೩)

೩) ಈ ದಿಗ್ವಿಜಯಕಾಲದಲ್ಲಿ ಹಾಗೆ ಭೀಮನಿಂದ ಪರಾಭವಗೊಂಡವರಲ್ಲಿ ಜರಾಸಂಧನೂ ಸೇರಿದ್ದ. ಅವನನ್ನು ಪರಾಭವಗೊಳಿಸಿದ ಭೀಮಸೇನ ಅವನ ವಶದಲ್ಲಿದ್ದ ಅಂಗರಾಜ್ಯದ ಅರ್ಧಭಾಗವನ್ನು ಗೆದ್ದು ಧೃತರಾಷ್ಟ್ರನಿಗೆ ನೀಡಿದ ಎಂಬ ವಿವರ ಮುಂದೆ ಬಂದಿದೆ.

ಅರ್ಜುನದಿಗ್ವಿಜಯ

ತದ್ಬಾಹುವೀರ್ಯಪರಿಪಾಲಿತ ಇಂದ್ರಸೂನುಃ
ಶೇಷಾನ್ನೃಪಾಂಶ್ಚ ಸಮಜೈದ್ಬಲವಾನಯತ್ನಾತ್ ।
ಸಾಲ್ವಂ ಚ ಹಂಸಡಿಭಕೌ ಚ ವಿಜಿತ್ಯ ಭೀಮೋ
ನಾಗಾಹ್ವಯಂ ಪುರಮಗಾತ್ ಸಹಿತೋಽರ್ಜುನೇನ ॥ ೯೩ ॥

ಅ: ಭೀಮನ ಬಾಹುಬಲದಿಂದ ಸುರಕ್ಷಿತನಾಗಿದ್ದ, ಬಲಶಾಲಿಯಾಗಿದ್ದ ಅರ್ಜುನ ಉಳಿದ ರಾಜರುಗಳನ್ನು ಅನಾಯಾಸದಿಂದ ಜಯಿಸಿದ. ಸಾಲ್ವನನ್ನೂ, ಹಂಸಡಿಭಿಕರನ್ನೂ ಭೀಮಸೇನ ಪರಾಭವಗೊಳಿಸಿ, ಅರ್ಜುನನೊಂದಿಗೆ ಹಸ್ತಿನಾಪುರಕ್ಕೆ ಮರಳಿದ.

ವಿ: ೧) ಇದರಿಂದ ಭೀಮಾರ್ಜುನರಿಬ್ಬರೂ ಒಟ್ಟಾಗಿಯೇ ದಿಗ್ವಿಜಯಕ್ಕೆ ತೆರಳಿದ್ದರೂ, ಭೀಮನ ಸಾಧನೆ ಅತ್ಯಂತಪ್ರಧಾನವಾಗಿದ್ದು ಅರ್ಜುನ ಆತನ ರಕ್ಷಣೆಯಲ್ಲಿ ಯಥೋಚಿತವಾಗಿ ಗೆಲುವು ಸಾಧಿಸಿದ ಎಂದಾಗುವುದು.

---

೧. ಭೀಮಸೇನಸಹಾಯಶ್ಚ ರಥಾನಾಮಯುತಂ ಚ ಸಃ ।
ಅರ್ಜುನಃ ಸಮರೇ ಪ್ರಾಚ್ಯಾನ್ ಸರ್ವಾನೇಕರಥೋಽಜಯತ್ ॥
ತಥೈವೈಕರಥೋ ಗತ್ವಾ ದಕ್ಷಿಣಾಮಜಯದ್ದಿಶಮ್ ।
ಧನೌಘಂ ಪ್ರಾಪಯಾಮಾಸ ಕುರುರಾಷ್ಟ್ರಂ ಧನಂಜಯಃ ॥
ಪರರಾಷ್ಟ್ರಾಣಿ ನಿರ್ಜಿತ್ಯ ಸ್ವರಾಷ್ಟ್ರಂ ವವೃಧುಃ ಪುರಾ । – ಭಾರತ (ಆದಿ. ೧೩೮/೨೪/೨೬)

ಭೀಮಾರ್ಜುನವಿಜಯದ ಪ್ರಭಾವ

ತದ್ಬಾಹುವೀರ್ಯಮಥ ವೀಕ್ಷ್ಯ ಮುಮೋದ ಧರ್ಮ-
ಸೂನುಃ ಸಮಾತೃಯಮಜೋ ವಿದುರಃ ಸಭೀಷ್ಮಃ ।
ಅನ್ಯೇ ಚ ಸಜ್ಜನಗಣಾಃ ಸಹಪೌರರಾಷ್ಟ್ರಾಃ
ಶ್ರುತ್ವೈವ ಸರ್ವಯದವೋ ಜಹೃಷುರ್ನಿತಾಂತಮ್ ॥ ೯೪ ॥

ಅ: ಅವರಿಬ್ಬರ [೧]ಬಾಹುಬಲವನ್ನು ಕಂಡು ಕುಂತಿ ನಕುಲಸಹದೇವರ ಸಮೇತ ಧರ್ಮರಾಜನೂ, ಭೀಷ್ಮರೊಂದಿಗೆ ವಿದುರನೂ ಆನಂದಿಸಿದರು. ಅದರಂತೆ ಇತರ ಸಜ್ಜನರ ಗುಂಪುಗಳೂ, ಪಟ್ಟಣಿಗರೂ, ದೇಶದ ಜನರೂ ನಲಿದರು. ಇದನ್ನು ಕೇಳಿಯೇ ಸಕಲಯಾದವರೂ ಬಹಳವಾಗಿ ಸಂತೋಷಪಟ್ಟರು.

ವಿ: ೧) ಇಲ್ಲಿಯ 'ತದ್ಬಾಹುವೀರ್ಯಂ' ಎಂಬುದಕ್ಕೆ, ನಕುಲಸಹದೇವರ ಸಮೇತ ಧರ್ಮರಾಜ ನಲಿದ ಎಂದು ಬಂದಿರುವುದರಿಂದ 'ಭೀಮಾರ್ಜುನರ ಬಾಹುವೀರ್ಯ' ಎಂದು ಅರ್ಥವಾಗುವುದು. ಅರ್ಜುನನ ಬಾಹುಬಲ ಭೀಮನ ಬಾಹುಬಲದಿಂದ ಪಾಲಿತವಾದ್ದರಿಂದ ಭೀಮನ ಬಾಹುವೀರ್ಯ ಎಂಬ ಭಾವವನ್ನೂ ಗ್ರಹಿಸಬಹುದು.

೨) ಧೃತರಾಷ್ಟ್ರ ಪಾಂಡವರ ಈ ಯಶಸ್ಸಿನಿಂದ ಖಿನ್ನನಾಗಿ ನಿದ್ರಗೆಟ್ಟ ಎಂಬ ಭಾವ ಇಲ್ಲಿದೆ.

ಕೃಷ್ಣನಿಂದ ಧೃತರಾಷ್ಟ್ರನ ಬಳಿಗೆ ಅಕ್ರೂರನ ಪ್ರೇಷಣೆ

[೨]ಕೃಷ್ಣಃ ಸುಯೋಧನಮುಖಾಕ್ರಮಮಾಂಬಿಕೇಯಂ
ಜಾನನ್ ಸ್ವಪುತ್ರವಶವರ್ತಿನಮೇವ ಗತ್ವಾ ।
ಶಾಪಲ್ಕಿನೋ ಗೃಹಮಮುಂ ಧೃತರಾಷ್ಟ್ರಶಾಂತ್ಯೈ
ಗಂತುಂ ದಿದೇಶ ಗಜನಾಮಪುರಂ ಪರೇಶಃ ॥ ೯೫ ॥

---

೧. ತತೋ ಬಲಮತಿಖ್ಯಾತಂ ವಿಜ್ಞಾಯ ದೃಢಧನ್ವಿನಾಮ್ ।
ದೂಷಿತಃ ಸಹಸಾ ಭಾವೋ ಧೃತರಾಷ್ಟ್ರಸ್ಯ ಪಾಂಡುಷು ॥
ಸ ಚಿಂತಾಪರಮೋ ರಾಜಾ ನ ನಿದ್ರಾಮಲಭನ್ನಿಶಿ ॥ - ಭಾರತೇ (ಆದಿ. ೧೩೮/೨೭)

೨. ಸುಯೋಧನಮುಖೈಃ ದುಷ್ಟೈರಾಕ್ರಮಃ= ಮನ ಆದಿಸರ್ವೇಂದ್ರಿಯಾಣಾಮಾಕ್ರಮಣಂ ಯಸ್ಯ ಸ ತಥೋಕ್ತಃ ಅತ ಏವ ಸ್ವಪುತ್ರವಶವರ್ತಿನಂ ಯದ್ವಾ । ಸುಯೋಧನಮುಖೈರ್ನಿಮಿತ್ತೈರಕ್ರಮಃ ಅಧರ್ಮೋಪೇಕ್ಷಕತ್ವಾಖ್ಯವಿಪರೀತಕ್ರಮೋ ಯಸ್ಯ ತಮ್ ॥ – (ವಾ.)

ಅ: ಧೃತರಾಷ್ಟ್ರ ದುರ್ಯೋಧನ ಮೊದಲಾದ ಮಕ್ಕಳ ಆಕ್ರಮಣಕ್ಕೊಳಗಾಗಿರುವನು; ತನ್ನ ಮಕ್ಕಳ ವಶವರ್ತಿಯಾಗಿರುವನು ಎಂದು ಅರಿತಿದ್ದ ಪರಮೇಶನಾದ ಶ್ರೀಕೃಷ್ಣ ಅಕ್ರೂರನ ಮನೆಗೆ ತೆರಳಿ, ಧೃತರಾಷ್ಟ್ರನ ದುಷ್ಟವೃತ್ತಿಯನ್ನು ತಡೆಯಲೆಂದು ಹಸ್ತಿನಾಪುರಕ್ಕೆ ತೆರಳಲು ಆದೇಶಿಸಿದ.

ವಿ: ೧) ಶ್ರೀಕೃಷ್ಣ ರಾಜನೀತಿಯನ್ನು ಈ ಮೂಲಕ ಜಗತ್ತಿಗೆ ತಿಳಿಸುತ್ತಿರುವನು ಎಂದು ತಿಳಿಯಬೇಕು. ಧೃತರಾಷ್ಟ್ರನು ಆಗಲೇ ಪುತ್ರವಶನಾಗಿ ಪಾಂಡವರ ಬಗ್ಗೆ ಮಲತಾಯಿ ಧೋರಣೆ–ಯನ್ನು ತಳೆದಿರುವುದು ಅವನಿಗೂ, ಜಗತ್ತಿಗೂ ತಿಳಿಯಬೇಕು. ಧೃತರಾಷ್ಟ್ರನಿಗೆ ತನ್ನ ತಪ್ಪಿನ ಅರಿವೂ ಆಗಬೇಕು ಎಂಬ ವಿಚಾರದಿಂದ ಶ್ರೀಕೃಷ್ಣ ಹಾಗೆ ಅಕ್ರೂರನನ್ನು ಕಳುಹಿಸಿದ ಎಂದರ್ಥ.

೨) ಶ್ರೀಕೃಷ್ಣ ಅಕ್ರೂರನನ್ನೇ ಹಾಗೆ ಕಳುಹಿಸಲು ಅವನೊಳಗಿದ್ದ ಸ್ಮೃತಿಪ್ರವರ್ತಕನಾದ ಸ್ವಾಯಂಭುವಮನುವಿನ ಅಂಶ ವಿಶೇಷಕಾರಣವಾಗಿತ್ತು ಎಂದು ತಿಳಿಯಬೇಕು.

೩) ಇಲ್ಲಿಯ 'ಸುಯೋಧನಮುಖಾಕ್ರಮಂ' ಎಂಬುದಕ್ಕೆ ದುರ್ಯೋಧನ ಮೊದಲಾದ ದುಷ್ಪುತ್ರರ ಆಕ್ರಮಣಕ್ಕೆ ಒಳಗಾದವನು. ದುರ್ಯೋಧನ ಮೊದಲಾದವರ ಕಾರಣದಿಂದ ಅಧರ್ಮೋಪೇಕ್ಷಣೆಯೆಂಬ ವಿಪರೀತಕ್ರಮಕ್ಕೆ ಗುರಿಯಾಗಿದ್ದವನು ಎಂಬ ವಿಶೇಷಾರ್ಥ ವಾದಿರಾಜೀಯದಲ್ಲಿದೆ.

ಸೋಽಯಾದ್ಗಜಾಹ್ವಯಮಮುತ್ರ ವಿಚಿತ್ರವೀರ್ಯ–
ಪುತ್ರೇಣ ಭೀಷ್ಮಸಹಿತೈಃ ಕುರುಭಿಃ ಸಮಸ್ತೈಃ ।
ಸಂಪೂಜಿತಃ ಕತಿಪಯಾನವಸಚ್ಚ ಮಾಸಾನ್
ಜ್ಞಾತುಂ ಹಿ ಪಾಂಡುಷು ಮನಃಪ್ರಸೃತಿಂ ಕುರೂಣಾಮ್ ॥ ೯೬ ॥

ಅ: ಅಕ್ರೂರ ಹಸ್ತಿನಾಪುರಕ್ಕೆ ತೆರಳಿ, ಅಲ್ಲಿ ಧೃತರಾಷ್ಟ್ರನಿಂದಲೂ, ಭೀಷ್ಮಸಮೇತರಾದ ಸಮಸ್ತಕೌರವರಿಂದ ವಿಶೇಷವಾಗಿ ಆದರಿಸಲ್ಪಟ್ಟ, ಅವನು ಪಾಂಡವರ ಬಗ್ಗೆ ಕೌರವರ ಮನಃಪ್ರವೃತ್ತಿಯನ್ನು ತಿಳಿಯಲೆಂದು ಕೆಲವು ತಿಂಗಳುಗಳ ಕಾಲ ವಾಸಮಾಡಿದ.

ವಿ: ೧) ಅಕ್ರೂರನನ್ನು ಕೃಷ್ಣ ಹೀಗೆ ಕಳುಹಿಸಿಕೊಟ್ಟ ಪ್ರಸಂಗ ಆಧುನಿಕಪರಿಭಾಷೆಯ 'ಏಕಸದಸ್ಯ ಆಯೋಗ'(One Man Commission)ದ ಪರಿಕಲ್ಪನೆಗೆ ಹತ್ತಿರವಾಗಿದೆ. ಹಾಗೆ ವಿಚಾರಣೆಗೆ ತೆರಳಿದ ವ್ಯಕ್ತಿ ಕೆಲವು ಕಾಲ ನೆಲೆಸಿ, ವಿಷಯವನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕಾದ ಪ್ರಕ್ರಿಯೆಯೂ ಇದರಲ್ಲಿ ಸೂಚಿತವಾಗಿದೆ.

ಜ್ಞಾತ್ವಾ ಸ ಕುಂತಿವಿದುರೋಕ್ತಿತ ಆತ್ಮನಾ ಚ
ಮಿತ್ರಾರಿಮಧ್ಯಮಜನಾಂಸ್ತನಯೇಷು ಪಾಂಡೋಃ ।
ವಿಜ್ಞಾಯ ಪುತ್ರವಶಗಂ ಧೃತರಾಷ್ಟ್ರಮಂಜಃ
ಸಾಮ್ನೈವ ಭೇದಸಹಿತೇನ ಜಗಾದ ವಿದ್ವಾನ್ ॥ ೯೭ ॥

ಅ: ಅವನು ಕುಂತಿ ಹಾಗೂ ವಿದುರರ ಮಾತಿನಿಂದಲೂ, ತನ್ನ ಅನುಭವದಿಂದಲೂ, ಪಾಂಡವರ ಬಗ್ಗೆ ಮಿತ್ರರು, ಶತ್ರುಗಳು ಹಾಗೂ ಮಧ್ಯವರ್ತಿಜನಗಳು ಯಾರು ಎಂಬುದನ್ನು ಅರಿತ. ಧೃತರಾಷ್ಟ್ರನು ಪುತ್ರರಿಗೆ ವಶನಾಗಿರುವುದನ್ನೂ ತಿಳಿದ. ಜ್ಞಾನಿಯಾದ ಅವನು ಭೇದಸಮೇತವಾದ ಸಾಮದಿಂದಲೇ ಅವನಿಗೆ ಚೆನ್ನಾಗಿ ತಿಳಿಹೇಳಿದ.

ವಿ: ೧) ಪಾಂಡವರ ವಿಷಯದಲ್ಲಿ ಯಾರ ಮನಃಪ್ರವೃತ್ತಿಯು ಯಾವ ತೆರನಾಗಿದೆ ಎಂಬುದನ್ನು ಅಕ್ರೂರ ಕುಂತಿವಿದುರರ ಮಾತಿನಿಂದಲೂ, ತನ್ನ ಸ್ವಂತ ಅನುಭವದಿಂದಲೂ ಅರ್ಥಮಾಡಿಕೊಂಡ ಎಂಬಲ್ಲಿ ವಿಚಾರಣೆಗೆ ಹೊರಟ ಅಧಿಕಾರಿ ವಿಷಯಸಂಗ್ರಹವನ್ನು ವಿವಿಧಮೂಲಗಳಿಂದ ಹೇಗೆ ಮಾಡಬೇಕು ಎಂಬುದು ಸೂಚಿತವಾಗಿದೆ.

೨) ಸಾಮ ಮತ್ತು ಭೇದ ಎಂಬವು ಸಾಮ, ದಾನ, ಭೇದ ಮತ್ತು ದಂಡ ಎಂಬ ನಾಲ್ಕು ಉಪಾಯಗಳಲ್ಲಿ ಸೇರಿವೆ.

ಅಕ್ರೂರ ತಿಳಿಸಿದ ಕೃಷ್ಣಸಂದೇಶ

ಪುತ್ರೇಷು ಪಾಂಡುತನಯೇಷು ಚ ಸಾಮ್ಯವೃತ್ತಿಃ
ಕೀರ್ತಿಂ ಚ ಧರ್ಮಮುರುಮೇಷಿ ತಥಾऽರ್ಥಕಾಮೌ ।
ಪ್ರೀತಿಂ ಪರಾಂ ತ್ವಯಿ ಕರಿಷ್ಯತಿ ವಾಸುದೇವಃ
ಸಾಕಂ ಸಮಸ್ತಯದುಭಿಃ ಸಹಿತಃ ಸುರಾದ್ಯೈಃ ॥ ೯೮ ॥

ಧರ್ಮಾರ್ಥಕಾಮಸಹಿತಾಂ ಚ ವಿಮುಕ್ತಿಮೇಷಿ
ತತ್ಪ್ರೀತಿತಃ ಸುನಿಯತಂ ವಿಪರೀತವೃತ್ತಿಃ ।
[೧]ಯಾಸ್ಯೇವ ರಾಜವರ ತತ್ಫಲವೈಪರೀತ್ಯ-
ಮಿತ್ಥಂ ವಚೋ ನಿಗದಿತಂ ತವ ಕಾರ್ಷ್ಣಮದ್ಯ ॥ ೯೯ ॥

---

೧. ಯಾಸೇ ಚ – (ಪಾಠಾಂತರ)

ಯಾಸೇ ಪ್ರಾಪ್ನೋಷಿ । ''ಯಾ ಪ್ರಾಪಣ'' ಇತಿ ಧಾತೋರ್ಲಟಿ ಆತ್ಮನೇಪದ್ಯಾಂ ಮಧ್ಯಮಪುರುಷೈಕ-ವಚನಮ್। ತವ ಕಾರ್ಷ್ಣಮದ್ಯೇತ್ಯತ್ರ । ಕಾರ್ಷ್ಣಂ ಕೃಷ್ಣಸಂಬಂಧೀತ್ಯರ್ಥಃ ॥ – (ವಾ.)

ಅ: ''ಎಲೈ ರಾಜಶ್ರೇಷ್ಠನೆ! ನೀನು ನಿನ್ನ ಮಕ್ಕಳಲ್ಲೂ, ಪಾಂಡುಪುತ್ರರಲ್ಲೂ ಸಮಾನವಾಗಿ ನಡೆದುಕೊಂಡಲ್ಲಿ ಕೀರ್ತಿಯನ್ನೂ, ಶ್ರೇಷ್ಠಧರ್ಮವನ್ನೂ ಹಾಗೆಯೇ ಅರ್ಥಕಾಮಗಳನ್ನೂ ಪಡೆಯುವಿ. ಕೃಷ್ಣನು ಸಮಸ್ತರಾದವರೊಂದಿಗೂ, ದೇವತೆಗಳೊಂದಿಗೂ ಕೂಡಿ ನಿನ್ನಲ್ಲಿ ವಿಶೇಷಪ್ರೀತಿಯನ್ನು ಮಾಡುವನು. ನೀನು ಕೃಷ್ಣನ ಒಲುಮೆಯಿಂದ ಧರ್ಮ, ಅರ್ಥ, ಕಾಮಗಳ ಸಮೇತವಾಗಿ ವಿಶೇಷಮುಕ್ತಿಯನ್ನೂ ಖಚಿತವಾಗಿ ಪಡೆಯುವಿ. ವಿರುದ್ಧವಾಗಿ ನಡೆದಲ್ಲಿ ಅದಕ್ಕೆ ವಿರುದ್ಧವಾದ ಫಲಗಳನ್ನೂ ತಪ್ಪದೇ ಹೊಂದುವಿ. ಈಗ ನಾನು ಹೇಳಿದ್ದು ಕೃಷ್ಣನ ಮಾತು''.

ವಿ: ೧) ಸರಿಯಾಗಿ ನಡೆದಲ್ಲಿ ಒಳಿತು ಎಂಬುದು ಸಾಮಾದ ಮಾತಾದರೆ, ತಪ್ಪಾಗಿ ನಡೆದಲ್ಲಿ ವಿನಾಶ ಹೊಂದುವಿ ಎಂಬುದು ಭೇದದ ಮಾತು. ಪಾಂಡವರು ಧರ್ಮದ ಸಂಕೇತವಾದ್ದರಿಂದ ಅವರೊಂದಿಗೆ ಸರಿಯಾಗಿ ನಡೆದರೆ, ಭಗವಂತನೊಂದಿಗೆ ಸಮಸ್ತದೇವತೆಗಳೂ, ಸಜ್ಜನರೂ ಸುಪ್ರೀತರಾಗುವರು. ಇಲ್ಲವಾದಲ್ಲಿ ಅಪ್ರೀತರೂ ಆಗುವರು.

೨) ಕೌರವರನ್ನೂ, ಪಾಂಡವರನ್ನೂ ಸಮವಾಗಿ ಕಾಣುವುದು ಎಂದರೆ ಕೌರವರನ್ನು ದುಷ್ಟರೆಂದೂ, ಪಾಂಡವರನ್ನು ಶಿಷ್ಟರೆಂದೂ ಅರಿತು ಅದಕ್ಕೆ [೧]ಅನುಗುಣವಾಗಿ ನಡೆದುಕೊಳ್ಳುವುದು ಎಂದರ್ಥ.

೩) ಧೃತರಾಷ್ಟ್ರ ಅಪರೋಕ್ಷಜ್ಞಾನಿಯಾದ್ದರಿಂದ ಅವನಿಗೆ ಮೋಕ್ಷ ನಿಶ್ಚಿತ. ಆದ್ದರಿಂದ ''ಮುಕ್ತಿ ಪಡೆಯುವಿ'' ಎನ್ನುವ ಬದಲು ''ವಿಮುಕ್ತಿಮೇಷಿ'' ಎಂದಿರುವರು. ವಿಮುಕ್ತಿ ಎಂದರೆ ಮೋಕ್ಷದಲ್ಲಿ ಆನಂದೋನ್ನಾಹರೂಪ ವಿಶೇಷಮುಕ್ತಿ ಎಂದರ್ಥ.

೪) 'ರಾಜವರ' ಎಂಬ ಪದದಲ್ಲಿ ನೀನು ರಾಜ ಮಾತ್ರವಲ್ಲದೆ, ಸ್ವರೂಪತಃ ಉತ್ತಮನೂ ಆಗಿರುವಿ ಎಂಬ ಸೂಚನೆಯೂ ಇದೆ.

೫) ಇದು ಧೃತರಾಷ್ಟ್ರನನ್ನು ನಿಮಿತ್ತಮಾಡಿಕೊಂಡು ಶ್ರೀಕೃಷ್ಣ ಸಮಸ್ತಸಜ್ಜನರಿಗೆ ನೀಡಿದ ಸಂದೇಶ ಎಂದು ತಿಳಿಯಬೇಕು. ಧರ್ಮದ ಬಗ್ಗೆ ಮಲತಾಯಿಧೋರಣೆ ಎಂದೂ ಸಲ್ಲದು ಎಂಬುದು ಇದರ ತಾತ್ಪರ್ಯ.

---

೧. 'ಗುಣಾನುಸಾರಿಣೀಂ ಪೂಜಾಂ ಸಮಾಂ ದೃಷ್ಟಿಂ ಚ ಯೋ ನರಃ ।
ಸರ್ವಭೂತೇಷು ಕುರುತೇ ತಸ್ಯ ವಿಷ್ಣುಃ ಪ್ರಸೀದತಿ॥
ವೈಷಮ್ಯಮುತ್ತಮತ್ವಂ ತು ದದಾತಿ ನರಸಂಚಯಾತ್ ।
ಪೂಜಾಯಾ ವಿಷಮಾ ದೃಷ್ಟಿಃ ಸಮಾ ಸಾಮ್ಯಂ ವಿದುಃಖಜಮ್ ॥ 'ಇತಿ ಬ್ರಹ್ಮವೈವರ್ತೇ।

– ಗೀತಾಭಾಷ್ಯ (೬/೯)

ಧೃತರಾಷ್ಟ್ರನ ಅವಿವೇಕದ ಉತ್ತರ

ಇತ್ಥಂ ಸಮಸ್ತಕುರುಮಧ್ಯ ಉಪಾತ್ತವಾಕ್ಯೋ
ರಾಜಾऽಪಿ ಪುತ್ರವಶಗೋ ವಚನಂ ಜಗಾದ ।
ಸರ್ವಂ ವಶೇ ಭಗವತೋ ನ ವಯಂ ಸ್ವತಂತ್ರಾ
ಭೂಭಾರಸಂಹೃತಿಕೃತೇ ಸ ಇಹಾವತೀರ್ಣಃ ॥ ೧೦೦ ॥

ಅ: ಹೀಗೆ ಸಮಸ್ತಕೌರವರ ಮಧ್ಯೆ ಕೇಳಿಸಿಕೊಂಡ ಧೃತರಾಷ್ಟ್ರರಾಜ ಪುತ್ರವಶವರ್ತಿಯಾಗಿ ಮಾತನಾಡಿದ: ''ಎಲ್ಲವೂ ಭಗವಂತನ ಅಧೀನ; ನಾವು ಸ್ವತಂತ್ರರಲ್ಲ. ಭೂಭಾರ-ಸಂಹಾರಕ್ಕೆಂದು ಅವನೇ ಈಗ ಅವತರಿಸಿರುವನಲ್ಲವೆ?''

ವಿ: ೧) ಅಕ್ರೂರನ ಮೂಲಕ ಬಂದ ಕೃಷ್ಣನ ಹಿತವಚನವನ್ನು ಗ್ರಹಿಸಲು ಧೃತರಾಷ್ಟ್ರನ ಪುತ್ರವ್ಯಾಮೋಹ ಅಡ್ಡಿಯಾಯಿತು ಎಂದರ್ಥ.

೨) ''ನಾವು ಅಸ್ವತಂತ್ರರು; ಹರಿಯೊಬ್ಬನೇ ಸ್ವತಂತ್ರ'' ಎಂಬ ತತ್ತ್ವವನ್ನು ಪಲಾಯನವಾದಕ್ಕೆ ಅನುಕೂಲವಾಗಿ ಅರ್ಥ ಮಾಡಿಕೊಳ್ಳುವ ಒಂದು ವರ್ಗದ ಜನತೆಯನ್ನು ಧೃತರಾಷ್ಟ್ರ ಪ್ರತಿನಿಧಿಸುತ್ತಿದ್ದಾನೆ ಎಂದು ತಿಳಿಯಬೇಕು. ನಾಸ್ತಿಕ ದೇವರನ್ನು ನಂಬದೇ ಕರ್ತವ್ಯ ಚ್ಯುತನಾದರೆ, ಧೃತರಾಷ್ಟ್ರನಂತಹ ಆಸ್ತಿಕ ದೇವರನ್ನು ಒಪ್ಪಿಯೂ ಕರ್ತವ್ಯಚ್ಯುತನಾಗುವನು ಎಂಬುದು ಇಲ್ಲಿಯ ವಿಶೇಷ. ಯುಧಿಷ್ಠಿರನು ಇಂತಹುದೇ ಮಾತನ್ನಾಡಿದಾಗ ಭೀಮದ್ರೌಪದಿಯರು ನೀಡುವ ಉತ್ತರ (ಅ. ೨೨, ಶ್ಲೋ. ೬೪–೧೧೫) ಇಂತಹ ಸೋಗಿನ ಮಾತುಗಳಿಗೆ ಸರಿಯಾದ ಪರಿಹಾರ.

ಅಕ್ರೂರ ಮರಳಿ ಮಧುರೆಗೆ

ಏವಂ ನಿಶಮ್ಯ ವಚನಂ ಸ ತು ಯಾದವೋ ಽಸ್ಯ
ಜ್ಞಾತ್ವಾ ಮನೋ ऽಸ್ಯ ಕಲುಷಂ ತವ ನೈವ ಪುತ್ರಾಃ[೧] ।
ಇತ್ಯೂಚಿವಾನ್ ಸಹ ಮರುತ್ತನಯಾರ್ಜುನಾಭ್ಯಾಂ
ಪ್ರಾಯಾತ್ ಪುರೀಂ ಚ ಸಹದೇವಯುತಃ ಸ್ವಕೀಯಾಮ್ ॥ ೧೦೧ ॥

ಅ: ಹೀಗೆ ಅವನ ಮಾತನ್ನು ಕೇಳಿ ಅಕ್ರೂರನಾದರೋ ''ಅವನ ಮನಸ್ಸು ಕೆಟ್ಟಿದೆ'' ಎಂದು ಅರಿತು ''ನಿನ್ನ ಮಕ್ಕಳು ಉಳಿಯಲಾರರು'' (ಅವರು ನಿನ್ನ ಮಕ್ಕಳಲ್ಲ; ಶತ್ರುಗಳು) ಎಂದು ನುಡಿದ. ಮತ್ತು ಭೀಮಾರ್ಜುನರೊಂದಿಗೆ ಸಹದೇವನನ್ನೂ ಕರೆದುಕೊಂಡು ತನ್ನ ಪಟ್ಟಣವಾದ ಮಧುರೆಗೆ ತೆರಳಿದ.

---

೧. ತವ ಪುತ್ರಾ ನೈವ ಕಿಂತು ಶತ್ರವ ಇತ್ಯೂಚಿವಾನಿತ್ಯರ್ಥಃ। –(ಸ.)

ವಿ: ೧) ಧರ್ಮದ ಬಗ್ಗೆ ಮಲತಾಯಿಧೋರಣೆ ತಳೆಯುವವರಿಗೆ ಎಂದೂ ಸುಖವಿಲ್ಲ– ವೆಂಬುದು ಈ ಸಂದೇಶದ ಭಾವ. ಯಾವ ಪುತ್ರರ ಮೇಲಿನ ವ್ಯಾಮೋಹದಿಂದಾಗಿ ಧೃತರಾಷ್ಟ್ರ ಧರ್ಮದ ಹಾದಿ ತಪ್ಪಿರುವನೋ, ಆ ಪುತ್ರರಾರೂ ಉಳಿಯಲಾರರೆಂಬುದು ಇದರ ತಾತ್ಪರ್ಯ. ಮುಂದೆ ಹಾಗೆ ನಡೆದದ್ದು ಇತಿಹಾಸ.

ಭೀಮಾರ್ಜುನರಿಗೆ ಕೃಷ್ಣೋಪದೇಶ

ಜ್ಞಾನಂ ತು ಭಾಗವತಮುತ್ತಮಮಾತ್ಮಯೋಗ್ಯಂ
ಭೀಮಾರ್ಜುನೌ ಭಗವತಃ ಸಮವಾಪ್ಯ ಕೃಷ್ಣಾತ್ ।
ತತ್ರೋಷತುರ್ಭಗವತಾ ಸಹ ಯುಕ್ತಚೇಷ್ಟೌ
ಸಂಪೂಜಿತೌ ಯದುಭಿರುತ್ತಮಕರ್ಮಸಾರೌ ॥ ೧೦೨ ॥

ಅ: ತಮಗೆ ಯೋಗ್ಯವಾದ ಉತ್ತಮಭಗವತ್ಸ್ವರೂಪಕಜ್ಞಾನವನ್ನು ಭೀಮಾರ್ಜುನರು ಭಗವಂತನಾದ ಕೃಷ್ಣನಿಂದ ಪಡೆಯುತ್ತಲೇ ಅಲ್ಲಿ ವಾಸ ಮಾಡಿದರು. ಉತ್ತಮಕರ್ಮಶೀಲರಾದ ಅವರಿಬ್ಬರೂ ತಮಗೆ ಯೋಗ್ಯವಾದ ಪ್ರವೃತ್ತಿಯಲ್ಲೇ ತೊಡಗಿ, ಯಾದವರಿಂದ ಪೂಜಿತರಾದರು.

ವಿ: ಭೀಮಾರ್ಜುನರು ಕೃಷ್ಣನ ಸಾಕ್ಷಾಚ್ಛಿಷ್ಯರಾಗಿ ತತ್ತ್ವೋಪದೇಶ ಪಡೆದ ವಿಶಿಷ್ಟ– ಪ್ರಸಂಗವಿದು.

ಪ್ರತ್ಯುದ್ಯಮೋ[೧] ಭಗವತೋಽಪಿ ಭವೇದ್ಗದಾಯಾಃ
ಶಿಕ್ಷಾ ಯದಾ ಭಗವತಾ ಕ್ರಿಯತೇ ನ ಚೇಮಮ್ ।
ಕುರ್ಯಾದಿತಿ ಸ್ಮ ಭಗವತ್ಸಮನುಜ್ಞಯೈವ
ರಾಮಾದಶಿಕ್ಷದುರುಗಾಯಪುರಃ ಸ ಭೀಮಃ ॥ ೧೦೩ ॥

ಅ: ''ಶ್ರೀಹರಿಯೊಂದಿಗೆ ಗದಾವಿದ್ಯೆಯನ್ನು ಕಲಿತಲ್ಲಿ ಭಗವಂತನ ಮೇಲೆ ಪ್ರತಿಯಾಗಿ ಗದೆ ಎತ್ತಬೇಕಾಗುವುದು. ಅದನ್ನು ನಾನು ಮಾಡಲಾರೆ'' ಎಂಬ ಭಾವನೆಯಿಂದ ಭೀಮಸೇನ ಕೃಷ್ಣನ ಸಮ್ಮತಿಯಿಂದಲೇ ಬಲರಾಮನೊಂದಿಗೆ ಅವನ ಸಮ್ಮುಖದಲ್ಲೇ ಶಿಕ್ಷಣ ಪಡೆದ.

---

೧. ಭಗವತಸ್ಸಕಾಶಾತ್ ಯದಾ ಯದಾ ಶಿಕ್ಷಾ ಕ್ರಿಯತೇ ತದಾ ಪ್ರತ್ಯುದ್ಯಮೋಽಪಿ ಭವೇತ್ । ಭಗವಂತಂ ಪ್ರತಿ ಮಯಾಽಪಿ ಗದಾಪ್ರಹಾರೋದ್ಯಮಃ ಕರ್ತವ್ಯಃ ಸ್ಯಾತ್ । ಅಭ್ಯಾಸಸ್ಯ ತಾಡನಪ್ರತಿತಾಡನರೂಪತ್ವಾದಿತಿ ಭಾವಃ । ಅತಃ ಭಗವತಾ ಸಹ ಇಮಂ ಪ್ರತ್ಯುದ್ಯಮಂ ನ ಕುರ್ಯಾಮ್ ॥ – (ವಾ.)

ವಿಃ ೧) ಭೀಮಸೇನನ [೧]ಶುದ್ಧಭಾಗವತಧರ್ಮಕ್ಕೆ ಇದೊಂದು ನಿದರ್ಶನ. ಗದಾಯುದ್ಧವನ್ನು ಕೃಷ್ಣನಿಂದ ಕಲಿಯುವುದೆಂದರೆ ಅವನೊಂದಿಗೆ ಪ್ರತಿಯಾಗಿ ಹೋರಾಡಿದಂತೆಯೂ ಆಗುವುದು. ಭಗವಂತನ ವಿರುದ್ಧ ಯಾವ ರೀತಿಯಲ್ಲಿ ನಡೆದರೂ ಅದು ಶುದ್ಧಧರ್ಮಕ್ಕೆ ಲೋಪವೇ ಎಂಬ ಕಾರಣದಿಂದ ಭೀಮಸೇನ ಕೃಷ್ಣನಿಂದ ಗದಾವಿದ್ಯೆಯನ್ನು ಕಲಿಯದೆ, ಬಲರಾಮನಿಂದ ಕಲಿತ ಎಂದು ಭಾವ.

೨) ಸರ್ವೋತ್ತಮನಾದ ಶ್ರೀಕೃಷ್ಣನಿದ್ದಾಗ ತನಗಿಂತ ಕಡಿಮೆ ಗುಣದ ಬಲರಾಮನಿಂದ ಭೀಮ ಗದಾವಿದ್ಯೆಯನ್ನೇಕೆ ಕಲಿತ? ಎಂಬ ಪ್ರಶ್ನೆಗೆ ಇದು ಉತ್ತರ.

೩) ಹಾಗೆ ಮಾಡುವಾಗಲೂ ಕೃಷ್ಣನ ಅನುಮತಿಯನ್ನು ಪಡೆಯುವ ಮೂಲಕ ಮತ್ತೊಂದು ರೀತಿಯಲ್ಲೂ ಧರ್ಮ ಪಾಲಿಸಿದ್ದು ಭೀಮನ ಹಿರಿಮೆ.

ಕೃಷ್ಣೋದ್ಧವರ ಬಳಿ ಅರ್ಜುನಸಹದೇವರ ವಿದ್ಯಾಭ್ಯಾಸ

ರಾಮೋಽಪಿ ಶಿಕ್ಷಿತಮರೀಂದ್ರಧರಾತ್ [೨] ಪುರೋಽಸ್ಯ
ಭೀಮೇ ದದಾವಥ ಪರಾಣಿ ಹರೇರವಾಪ ।
ಅಸ್ತ್ರಾಣಿ ಶಕ್ರತನಯಃ ಸಹದೇವ ಆರ
ನೀತಿಂ ತಥೋದ್ಧವಮುಖಾತ್ ಸಕಲಾಮುದಾರಾಮ್ ॥ ೧೦೪ ॥

ಅ: ಬಲರಾಮನೂ ಸಹ ತಾನು ಕೃಷ್ಣನಿಂದ ಕಲಿತದ್ದನ್ನೇ ಅವನ ಸಮ್ಮುಖದಲ್ಲೇ ಭೀಮನಿಗೆ ತಿಳಿಸಿದ. ಬಳಿಕ ಅರ್ಜುನ ಶ್ರೀಕೃಷ್ಣನಿಂದ ಅಸ್ತ್ರಗಳನ್ನು ಕಲಿತ. ಹಾಗೆಯೇ ಸಹದೇವನು ಉದ್ಧವನ ಮುಖದಿಂದ ಶ್ರೇಷ್ಠವಾದ [೩]ಸಕಲರಾಜನೀತಿಯನ್ನೂ ಅಧ್ಯಯನ ಮಾಡಿದ.

---

೧. ರಾಮಾದ್ಗದಾಭ್ಯಾಸಕಾಲೇ ಯಃ ಕೃಷ್ಣಂ ವೃಷ್ಣಿವಲ್ಲಭಮ್ ।
ಕ್ಷಣೇ ಕ್ಷಣೇ ಪ್ರಣಮತಿ ಮನುತೇ ಚ ಹರಿಂ ಗುರುಮ್ ॥ – ಸರಸಭಾರತೀವಿಲಾಸ (೬/೧೭)

೨. ಅಸಿಯುದ್ಧೇ ಗದಾಯುದ್ಧೇ ರಥಯುದ್ಧೇ ಚ ಪಾಂಡವಃ ।
ಸಂಕರ್ಷಣಾದಶಿಕ್ಷದ್ವೈ ಶಶ್ವಚ್ಛಿಕ್ಷಾಂ ವೃಕೋದರಃ ॥ – ಭಾರತ (ಆದಿ. ೧೩೮/೪)

ನ ಚ ರಾಮಸ್ಯಾಗ್ರತ್ವಾತ್ ಕಥಂ ಕೃಷ್ಣಾದ್ಗದಾಶಿಕ್ಷೇತಿ ಚೇನ್ನ । ಲೀಲಾಚ್ಛಲೇನೋಪಪತ್ತೇಃ । ವ್ಯಾಸತೀರ್ಥೀಯೇ ತು ಅರೀಂದ್ರಧರಾಧ್ಯಗವತ್ಕೃಸಾದಾದಿತ್ಯುಕ್ತಮ್ । – (ತಾ.)

೩. ನೀತಿಮಾನ್ ಸಕಲಾಂ ನೀತಿಂ ವಿಬುಧಾಧಿಪತೇಸ್ತದಾ ।
ಅವಾಪ್ಯ ಸಹದೇವೋಽಪಿ ಭ್ರಾತೄಣಾಂ ವರ್ತತೇ ವಶೇ ॥ – ಭಾರತ (ಆದಿ. ೧೩೮/೧೮)

ಏಃ ೧) ಬಲರಾಮನ ಮೂಲಕ ಬಂದ ವಿದ್ಯೆಯೂ ಕೃಷ್ಣನ ಉಪದೇಶದ್ದೇ ಎಂಬುದು ಮತ್ತೊಂದು ವಿಶೇಷ.

೨) ಬಲರಾಮ ಕೃಷ್ಣನಿಂದ ಗದಾವಿದ್ಯೆಯನ್ನು ಕಲಿತದ್ದು ಸಾಂದೀಪನಿಯ ಬಳಿ ಇದ್ದಾಗ ಎಂಬ ವಿಶೇಷಾಂಶ [೧]ವಾದಿರಾಜೀಯದಲ್ಲಿದೆ.

೩) ಬಲರಾಮನಿಂದ ಕಲಿಯಲು ಅವನೊಳಗೆ ಶುಕ್ಲಕೇಶರೂಪದ ಶ್ರೀಹರಿಯ ವಿಶೇಷ ಆವೇಶವಿದ್ದುದು ಮತ್ತೊಂದು ಕಾರಣ ಎಂಬ ಅಂಶ ಮುಂದೆ ಬಂದಿದೆ (೨೨/೨೪೬–೨೪೮).

೪) ಉದ್ಧವ ಬೃಹಸ್ಪತಿಯ ಅವತಾರ. ಅವನಿಂದ ಸಹದೇವ ಕಲಿತ ವಿದ್ಯೆ ಬೃಹಸ್ಪತಿನೀತಿ. ಅದು ದೇವನೀತಿ. ಇದರಿಂದಾಗಿ ಸಹದೇವ ವಿಶೇಷವಾಗಿ ನೀತಿಜ್ಞನೆನ್ನಿಸಿದ.

೫) ಭೀಮ ಸ್ವತಃ ಪೂರ್ಣಪ್ರಜ್ಞ. ಬಲರಾಮನಿಂದ ಕಲಿಯುವಂತಹದ್ದೇನೂ ಇರಲಿಲ್ಲ. ಆದರೂ ಹಾಗೆ ಮಾಡಿದ್ದು ಕೃಷ್ಣ ಸಾಂದೀಪಿನಿಗಳಲ್ಲಿ ಕಲಿತಂತೆ ಲೋಕಶಿಕ್ಷಣಕ್ಕಾಗಿ ಮಾಡಿದ ನಟನೆ ಮಾತ್ರ ಎಂಬ ತತ್ತ್ವವನ್ನೂ ಇಲ್ಲಿ ತಿಳಿಯಬೇಕು.

ನಂದಗೋಕುಲಕ್ಕೆ ಉದ್ಧವಪ್ರೇಷಣ

ಕೃಷ್ಣೋಽಥ ಚೌಪಗವಿಮುತ್ತಮನೀತಿಯುಕ್ತಂ
ಸಂಪ್ರೇಷಯನ್ನಿದಮುವಾಚ ಹ ಗೋಕುಲಾಯ ।
ದುಃಖಂ ವಿನಾಶಯ ವಚೋಭಿರರೇ ಮದೀಯೈ-
[೨]ರ್ನಂದಾದಿನಾಂ ವಿರಹಜಂ ಮಮ ಚಾಶು ಯಾಹಿ ॥ ೧೦೫ ॥

ಅಃ ಬಳಿಕ ಕೃಷ್ಣನು ಉತ್ತಮನೀತಿಕೋವಿದನಾದ ಉದ್ಧವನನ್ನು ನಂದಗೋಕುಲಕ್ಕೆ ಕಳುಹಿಸುತ್ತಾ ಹೀಗೆ ಹೇಳಿದ : ''ಎಲೈ ಉದ್ಧವ! ನನ್ನ ಮಾತುಗಳಿಂದ ನನ್ನ ವಿರಹದಿಂದಾದ ನಂದಾದಿಗಳ ದುಃಖವನ್ನು ಪರಿಹರಿಸು. ಬೇಗನೆ ನಡೆ.

---

೧. ಸಾಂದೀಪಿನಿಪುರತಃ ಲೀಲಯಾऽನ್ಯೋನ್ಯಂ ಗದಾಭ್ಯಾಸಕರಣಸಮಯೇ ಅರೀಂದ್ರಧರಶಿಕ್ಷಿತಂ ನೂತನತಯಾ ಶಿಕ್ಷಿತಂ ಅಭ್ಯಾಸಂ ಅಸ್ಯ ಕೃಷ್ಣಸ್ಯ ಪುರಃ ಭೀಮೇ ದದಾವಿತಿ ಸಂಬಂಧಃ । ಪರಾಣ= ಉತ್ತಮಾನಿ ॥ – (ವಾ.)

೨. ''ವ್ರೀಹ್ಯಾದಿಭ್ಯಶ್ಚ'' ಇತಿ ಸೂತ್ರಾತ್ ವ್ರೀಹಿಮಾನ್ ವ್ರೀಹೀತಿವತ್ ನಂದಃ ಆದಿರ್ಯೇಷಾಂ ವರ್ತತ ಇತಿ ನಂದಾದಿನಃ ಇತಿ । ಅಥವಾ ನಂದಃ ಆದಿರ್ಯೇಷಾಂ ಗೋಪಸ್ತ್ರೀವೃಂದಾನಾಂ ತಾನಿ ನಂದಾದೀನಿ ನಂದಃ ಆ ಸಮಂತಾತ್ ದಃ= ದಾತಾ ಅನ್ನಾದಿದಾತಾ ಏಷಾಂ ವರ್ತತ ಇತಿ ನಂದಾದಿನ ಇತಿ ಮತುಬಂತಂ ವಾ ॥ – (ವಾ.)

ಮತ್ತೋ ವಿಯೋಗ ಇಹ ಕಸ್ಯಚಿದಸ್ತಿ ನೈವ
ಯಸ್ಮಾದಹಂ ತನುಭೃತಾಂ ನಿಹಿತೋಽಂತರೇವ ।
ನಾಹಂ ಮನುಷ್ಯ ಇತಿ ಕುತ್ರ ಚ ವೋಽಸ್ತು ಬುದ್ಧಿ-
ರ್ಬ್ರಹ್ಮೈವ ನಿರ್ಮಲತಮಂ ಪ್ರವದಂತಿ ಮಾಂ ಹಿ ॥ ೧೦೬ ॥

ಅ: ನಾನು ಸಕಲದೇಹಿಗಳ ಒಳಗೆ ನೆಲೆಸಿರುವುದರಿಂದ ಯಾರಿಗೂ ಎಂದಿಗೂ ನನ್ನೊಂದಿಗೆ ವಿಯೋಗ ಸರ್ವಥಾ ಇರದು. ನಾನು ಮನುಷ್ಯ ಎಂಬ ಬುದ್ಧಿ ನಿಮಗೆ ಎಂದೂ ಇರಬಾರದು. ನನ್ನನ್ನು ಅತ್ಯಂತಪರಿಶುದ್ಧನಾದ ಬ್ರಹ್ಮನೆಂದೇ ಜ್ಞಾನಿಗಳು ಹೇಳುವರಲ್ಲವೆ.

ಕೃಷ್ಣನಿಂದ ನಂದಮೋಚನೆಯ ಕಥೆ

ಪೂರ್ವಂ ಯದಾ ಹ್ಯಜಗರೋ ನಿಜಗಾರ[೧] ನಂದಂ
ಸರ್ವೇ ನ ಶೇಕುರಥ ತತ್ಪ್ರವಿಮೋಕ್ಷಣಾಯ ।
ಮತ್ಪಾದಸಂಸ್ಪರ್ಶತಃ ಸ ತದಾಽತಿದಿವ್ಯೋ
ವಿದ್ಯಾಧರಸ್ತದುದಿತಂ ನಿಖಿಲಂ ಸ್ಮರಂತು ॥ ೧೦೭ ॥

ಅ: ಹಿಂದೆ ಅಜಗರನೊಂದು ನಂದನನ್ನು ನುಂಗಿದಾಗ ಅವನನ್ನು ಬಿಡಿಸಲು ಎಲ್ಲರಿಗೂ ಅಶಕ್ಯವೆನ್ನಿಸಿತು. ಆಗ ನನ್ನ ಪಾದಸ್ಪರ್ಶದಿಂದ ಅದು ಅತ್ಯಂತ ದಿವ್ಯವಾದ ವಿದ್ಯಾಧರನಾಯಿತು. ಆಗ ಅವನು ಹೇಳಿದ ಎಲ್ಲವನ್ನೂ ನೀವು ಸ್ಮರಿಸಿಕೊಳ್ಳಬೇಕು.

ವಿ: ೧) ಶ್ರೀಕೃಷ್ಣನಿನ್ನೂ ಗೋಕುಲದಲ್ಲಿದ್ದಾಗ ನಡೆದ ಘಟನೆಯನ್ನು ಈಗ ತಿಳಿಸುತ್ತಿರುವರು. ಆ ವಿದ್ಯಾಧರನ ಹಿನ್ನೆಲೆ ಹಾಗೂ ಅವನು ಹೇಳಿದ್ದನ್ನು ಮುಂದಿನ ಶ್ಲೋಕದಲ್ಲಿ ತಿಳಿಸಿರುವರು.

ಪೂರ್ವಂ ಸ ರೂಪಮದತಃ ಪ್ರಜಹಾಸ ವಿಪ್ರಾನ್
ನಿತ್ಯಂ ತಪಃಕೃಶತರಾಂಗಿರಸೋ ವಿರೂಪಾನ್ ।
ತೈಃ ಪ್ರಾಪಿತಃ ಸಪದಿ ಸೋಽಜಗರತ್ವಮೇವ
ಮತ್ತೋ ನಿಜಾಂ ತನುಮವಾಪ್ಯ ಜಗಾದ ನಂದಮ್ ॥ ೧೦೮ ॥

---

೧. ''ಗೃ ನಿಗರಣ'' ಇತಿ ಧಾತೋಃ ನಿಜಗಾರ= ಜಗ್ರಾಹ ॥ –(ವಾ.)

ಅ: ಹಿಂದೆ ಅವನು ರೂಪದ ಮದದಿಂದ, ನಿತ್ಯತಪಸ್ಸಿನಿಂದಾಗಿ ತುಂಬಾ ಕೃಶರಾಗಿ, ಕುರೂಪಿ-ಗಳಾಗಿದ್ದ ಆಂಗಿರಸರೆಂಬ ವಿಪ್ರರನ್ನು ಅಪಹಾಸ ಮಾಡಿದ. ಅವರಿಂದ ಆಗಲೇ ಹೆಬ್ಬಾವಿನ ರೂಪ ಹೊಂದಿದ; ಅವನು ನನ್ನಿಂದ ತನ್ನ ನಿಜರೂಪವನ್ನು ಪಡೆದು ನಂದನಿಗೆ ತಿಳಿಸಿದ.

ವಿ: ಗೋಪರೆಲ್ಲ ಒಮ್ಮೆ ಅಂಬಿಕಾವನಕ್ಕೆ ತೆರಳಿದ್ದಾಗ ರಾತ್ರಿಯಲ್ಲಿ ಒಂದು ಹೆಬ್ಬಾವು ನಂದಗೋಪನ ಕಾಲನ್ನು ಹಿಡಿದು ನುಂಗತೊಡಗಿತು. ಇತರರು ಎಷ್ಟು ಪ್ರಯತ್ನಿಸಿದರೂ ಅದರಿಂದ ಬಿಡಿಸಲು ಅಸಾಧ್ಯವಾದಾಗ, ಕೃಷ್ಣ ಕಾಲಿನಿಂದ ಒದ್ದೊಡನೆಯೇ ಹೆಬ್ಬಾವು ವಿದ್ಯಾಧರರೂಪ ತಳೆಯಿತು. ಆ ವಿದ್ಯಾಧರನ ಹೆಸರು ಸುದರ್ಶನ ಎಂದೂ [೧]ಭಾಗವತದಲ್ಲಿದೆ. ಕೃಷ್ಣನ ಅಪ್ಪಣೆಯಂತೆ ಅವನು ತನ್ನ ಶಾಪವೃತ್ತಾಂತವನ್ನು ತಿಳಿಸಿ, ಕೃಷ್ಣ ಭಗವಂತನೆಂಬುದನ್ನು ಅವರಿಗೆಲ್ಲ ತಿಳಿಸಿದ ಎಂಬ ವಿವರ ಭಾಗವತದಲ್ಲಿದೆ :

ಸ ವೈ ಭಗವತಃ ಶ್ರೀಮತ್ಪಾದಸ್ಪರ್ಶಹತಾಶುಭಃ ।
ಭೇಜೇ ಸರ್ಪವಪುರ್ಹಿತ್ವಾ ರೂಪಂ ವಿದ್ಯಾಧರಾರ್ಚಿತಮ್ ॥ – (೧೦/೩೪/೯)

೨) ಕೃಷ್ಣನ ಪಾದದ ಹೊಡೆತಕ್ಕೆ ಶಕಟಾಸುರ ಹತನಾಗಿ ತಮಸ್ಸಿಗೆ ನಡೆದ. ವಿದ್ಯಾಧರ ಹೆಬ್ಬಾವಿನ ರೂಪ ಕಳೆದುಕೊಂಡು [೨]ನಿಜರೂಪ ಪಡೆದ. ಭಗವಂತನ ಪಾದಸ್ಪರ್ಶ ಅವರವರ ನಿಜರೂಪ ಪ್ರಕಟಣೆಗೆ ಸಾಧಕ ಎಂದರ್ಥ ಎಂದು ಇದರಿಂದ ತಿಳಿಯುವುದು.

ನಾಯಂ ನರೋ ಹರಿರಯಂ ಪರಮಃ ಪರೇಭ್ಯೋ
ವಿಶ್ವೇಶ್ವರಃ ಸಕಲಕಾರಣ ಆತ್ಮತಂತ್ರಃ ।
ವಿಜ್ಞಾಯ ಚೈನಮುರುಸಂಸೃತಿತೋ ವಿಮುಕ್ತಾ
ಯಾಂತ್ಯಸ್ಯ ಪಾದಯುಗಲಂ ಮುನಯೋ ವಿರಾಗಾಃ ॥ ೧೦೯ ॥

ಅ: ಇವನು ಮಾನವನಲ್ಲ. ಸಾಕ್ಷಾತ್ ಶ್ರೀಹರಿ. ಉತ್ತಮರಿಗಿಂತ ಉತ್ತಮ; ವಿಶ್ವಕ್ಕೇ ಒಡೆಯ; ಎಲ್ಲಕ್ಕೂ ಕಾರಣ; ಸ್ವತಂತ್ರ. ಇವನನ್ನು ಅರಿತು ಮುನಿಗಳು ಅಗಾಧವಾದ ಸಂಸಾರದಿಂದ ಬಿಡುಗಡೆ ಹೊಂದಿ, ವಿರಕ್ತರಾಗಿ ಅವನ ಚರಣಯುಗಲವನ್ನು ಹೊಂದುವರು.

---

೧. ಅಹಂ ವಿದ್ಯಾಧರಃ ಕಶ್ಚಿತ್ ಸುದರ್ಶನ ಇತಿ ಶ್ರುತಃ ।
ಶ್ರಿಯಾ ಸ್ವರೂಪಸಂಪತ್ಯಾ ವಿಮಾನೇನಾಚರಂ ದಿಶಃ ॥
ಋಷೀನ್ ವಿರೂಪಾನಂಗಿರಸಃ ಪ್ರಾಹಸದ್ರೂಪದರ್ಪಿತಃ ।
ತೈರಿಮಾಂ ಪ್ರಾಪಿತಾಂ ಯೋನಿಂ ಪ್ರಲಬ್ಧೈಃ ಸ್ವೇನ ಪಾಪ್ಮನಾ ॥ - ಭಾಗವತೇ (೧೦/೩೪/೧೨,೧೩)

೧. ಪ್ರಾಪ್ತಂ ವೀಕ್ಷ್ಯ ಹೃಷೀಕೇಶಂ ಲೋಕಪಾಲಃ ಸಪರ್ಯಯಾ ।
ಮಹತ್ಯಾ ಪೂಜಯಿತ್ವಾ ೨ಽಹ ತದ್ದರ್ಶನಮಹೋತ್ಸವಃ ॥ - ಭಾಗವತೇ (೧೦/೨೮/೪)

ವಿ: ಇದು ವಿದ್ಯಾಧರ ಗೋಪರಿಗೆ ನೀಡಿದ ಸಂದೇಶ. ಮುನಿಗಳು ಬ್ರಹ್ಮಜ್ಞಾನದಿಂದ ವಿಷಯವಿರಕ್ತಿ ಹೊಂದಿ, ಅವನ ಪಾದ ಸೇರುವರು ಎಂದರೆ ಮುಕ್ತರಾಗುವರು ಎಂದರ್ಥ.

ವರುಣಬಂಧನದಿಂದ ನಂದನ ಮೋಚನೆ

ನಂದಂ ಯದಾ ಚ ಜಗೃಹೇ ವರುಣಸ್ಯ ದೂತ-
ಸ್ತತ್ರಾಪಿ ಮಾಂ ಜಲಪತೇರ್ಗೃಹಮಾಶು ಯಾಂತಮ್ ।
ಸಂಪೂಜ್ಯ ವಾರಿಪತಿರಾಹ ವಿಮುಚ್ಯ ನಂದಂ
ನಾಯಂ ಸುತಸ್ತವ ಪುಮಾನ್ ಪರಮಃ ಸ ಏಷಃ ॥ ೧೧೦ ॥

ಅ: ವರುಣನ ದೂತನೊಮ್ಮೆ ನಂದನನ್ನು ಹಿಡಿದಿದ್ದಾಗ ನಾನು ವರುಣನ ಗೃಹಕ್ಕೆ ತೆರಳಿದೆ. ಅಲ್ಲಿಯೂ ವರುಣ ನನ್ನನ್ನು ಬಹಳವಾಗಿ ಪೂಜಿಸಿ, ನಂದನನ್ನು ಬಿಡುಗಡೆ ಮಾಡಿ ಹೇಳಿದ : ''ಇವನು ನಿನ್ನ ಮಗನಲ್ಲ; ಸಾಕ್ಷಾತ್ ಪರಮಪುರುಷ''.

ವಿ: ೧) ಇದೂ ಸಹ ಕೃಷ್ಣ ಗೋಕುಲದಲ್ಲಿದ್ದಾಗ ನಡೆದ ಮತ್ತೊಂದು ನಂದಮೋಚನ ಪ್ರಸಂಗ. ಒಮ್ಮೆ ಸಾಧನೀದ್ವಾದಶಿಯಂದು ಏಕಾದಶೀಮಧ್ಯರಾತ್ರಿಯಲ್ಲೇ ಸ್ನಾನಕ್ಕೆಂದು ಯಮುನೆಯ ಜಲದಲ್ಲಿ ಮುಳುಗಿದ್ದಾಗ, ವರುಣನ ಭೃತ್ಯನೊಬ್ಬ ಅದು ಅಕಾಲವೆಂದು ಬಗೆದು, ಅವನನ್ನು ಹಿಡಿದು, ವರುಣಲೋಕಕ್ಕೆ ತೆರಳಿದ. ಆಗ ರಕ್ಷಣೆಗೆಂದು ಗೋಪರು ಪ್ರಾರ್ಥಿಸಿದಾಗ ಕೃಷ್ಣ ವರುಣಾಲಯಕ್ಕೆ ತೆರಳಿ, ಅಲ್ಲಿ ವರುಣನಿಂದ ಪೂಜೆ ಕೈಕೊಂಡು, ನಂದನನ್ನು ಬಿಡುಗಡೆ ಮಾಡಿಸಿದ. ವರುಣ ತನ್ನ ಭೃತ್ಯ ಮಾಡಿದ ತಪ್ಪಿಗೆ ಕ್ಷಮೆ ಯಾಚಿಸಿ, ನಂದನನ್ನು ಕಳುಹಿಸಿಕೊಟ್ಟ. ಈ ಕಥೆ ಭಾಗವತದಲ್ಲಿದೆ.

೨) ಭೀಮನನ್ನು ಹಿಡಿದ ಅಜಗರನಿಗೆ ಧರ್ಮದರ್ಶನವಾದಂತೆ, ನಂದನನ್ನು ಹಿಡಿದ ವರುಣಭೃತ್ಯನಿಗೂ, ಅವನ ಸ್ವಾಮಿಗೂ ಕೃಷ್ಣದರ್ಶನವಾಯಿತು. ಭಗವದ್ಭಕ್ತರನ್ನು ಹಿಡಿಯುವುದು ಭಗವದ್ದರ್ಶನಕ್ಕೆ ಸಾಧನ ಎಂಬುದಕ್ಕೆ ಇದು ಗಮಕ ('ಮುಕುಂದಭಕ್ಯೈ ಗುರುಭಕ್ತಿಜಾಯೈ'). ಗಜೇಂದ್ರನ ಪಾದ ಹಿಡಿದ ಮೊಸಳೆಗೂ ಸದ್ಗತಿ ಲಭಿಸಿದ್ದು ಇದಕ್ಕೆ ಮತ್ತೊಂದು ನಿದರ್ಶನ.

೩) ನಂದನ ಗ್ರಹಣ ವರುಣನಿಗೆ ಕೃಷ್ಣದರ್ಶನಕ್ಕೆ ಕಾರಣವಾದಂತೆ, ಆನಂದತೀರ್ಥರ ಗ್ರಹಣ ಬಿಂಬರೂಪದರ್ಶನಕ್ಕೆ ಸಾಧನ ಎಂಬ ಮುಖ್ಯತತ್ತ್ವವೂ ಇಲ್ಲಿರುವುದು ಗಮನಾರ್ಹ.

೪) ಕೃಷ್ಣ ತನ್ನ ಮಗನೆಂಬ ಭ್ರಮೆ ಹೊಂದಿದ್ದೇ ಅವನು ವರುಣಬಂಧನಕ್ಕೆ ಒಳಗಾಗಲು ಕಾರಣವಾಯಿತು. ಭಗವಂತನ ಬಗ್ಗೆ ಮಿಥ್ಯಾಜ್ಞಾನ ಬಂಧನಹೇತುವೆಂದರ್ಥ.

ಸಂದರ್ಶಿತೋ ನನು ಮಯೈವ ವಿಕುಂಠಲೋಕೋ
ಗೋಜೀವಿನಾಂ ಸ್ಥಿತಿರಪಿ ಪ್ರವರಾ ಮದೀಯಾ ।
ಮಾನುಷ್ಯಬುದ್ಧಿಮಪನೇತುಮಜೇ ಮಯಿ ಸ್ಮ
ತಸ್ಮಾನ್ಮಯಿ ಸ್ಥಿತಿಮವಾಪ್ಯ ಶಮಂ ಪ್ರಯಾಂತು ॥ ೧೧೧ ॥

ಅ: ನಾನು ಗೋಪರಿಗೆಲ್ಲ ವೈಕುಂಠಲೋಕವನ್ನು ತೋರಿಸಿದೆನಲ್ಲವೆ? ಪ್ರಾಕೃತಜನ್ಮ-ರಹಿತನಾದ ನನ್ನ ಬಗ್ಗೆ ಮನುಷ್ಯನೆಂಬ ಬುದ್ಧಿಯನ್ನು ತೊಡೆದುಹಾಕಲೆಂದು ನನ್ನ ಉತ್ತಮಸ್ವರೂಪವನ್ನು ತಿಳಿಸಿದೆನಲ್ಲವೆ? ಆದ್ದರಿಂದ ನನ್ನಲ್ಲಿ ನಿಷ್ಠೆಯನ್ನು ಹೊಂದಿ, ಶಾಂತಿ ಹೊಂದಿರಿ''.

ವಿ: ಇದೂ ಸಹ ಕೃಷ್ಣ ಗೋಕುಲದಲ್ಲಿದ್ದಾಗ ನಡೆದ ಮತ್ತೊಂದು ಅಪೂರ್ವಘಟನೆ.

ಶ್ರುತ್ವೋದ್ಧವೋ ನಿಗದಿತಂ ಪರಮಸ್ಯ ಪುಂಸೋ
ವೃಂದಾವನಂ ಪ್ರತಿಯಯೌ ವಚನೈಶ್ಚ ತಸ್ಯ ।
ದುಃಖಂ ವ್ಯಪೋಹ್ಯ ನಿಖಿಲಂ ಪಶುಜೀವನಾನಾ-
ಮಾಯಾತ್ ಪುನಶ್ಚರಣಸನ್ನಿಧಿಮೇವ ವಿಷ್ಣೋಃ ॥ ೧೧೨ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಉದ್ಧವಪ್ರತಿಯಾನಂ ನಾಮ ಚತುರ್ದಶೋಽಧ್ಯಾಯಃ ॥ ೧೪ ॥

ಅ: ಪರಮಪುರುಷನಾದ ಶ್ರೀಕೃಷ್ಣ ತಿಳಿಸಿದ್ದನ್ನೆಲ್ಲ ಕೇಳಿ, ಉದ್ಧವ ವೃಂದಾವನಕ್ಕೆ ತೆರಳಿದ; ಮತ್ತು ಅವನ ವಚನಗಳಿಂದ ಗೋಪಾಲಕರ ಸಕಲದುಃಖವನ್ನೂ ಪರಿಹರಿಸಿ, ಮರಳಿ ಕೃಷ್ಣನ ಸನ್ನಿಧಿಗೆ ಹಿಂದಿರುಗಿದ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಉದ್ಧವಪ್ರತಿಯಾನ'ವೆಂಬ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು ॥ ೧೪ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೧೫

(ಪಾಂಡವಾದೀನಾಮಸ್ತ್ರವಿದ್ಯಾಭ್ಯಾಸಃ)

(ದ್ರೋಣವೃತ್ತಾಂತ, ಕುರುಪಾಂಡವರ ಅಸ್ತ್ರಾಭ್ಯಾಸ, ಏಕಲವ್ಯಕರ್ಣರ ವೃತ್ತಾಂತ)

ಭೀಮಾದಿಗಳು ಮರಳಿ ಹಸ್ತಿನಾಪುರಕ್ಕೆ

ಏವಂ ಪ್ರಶಾಸತಿ ಜಗತ್ ಪುರುಷೋತ್ತಮೇಽಸ್ಮಿನ್
ಭೀಮಾರ್ಜುನೌ ತು ಸಹದೇವಯುತಾವನುಜ್ಞಾಮ್ ।
ಕೃಷ್ಣಾದವಾಪ್ಯ ವರ್ಷತ್ರಿತಯಾತ್ ಪುರಂ ಸ್ವ-
ಮಾಜಗ್ಮತುರ್ಹರಿಸುತೇನ ವಿಶೋಕನಾಮ್ನಾ ॥ ೧ ॥

ಅ: ಹೀಗೆ ಜಗತ್ತನ್ನು ಪುರುಷೋತ್ತಮನಾದ ಶ್ರೀಕೃಷ್ಣ ಪಾಲಿಸುತ್ತಿರಲು ಸಹದೇವನೊಂದಿಗೆ ಭೀಮಾರ್ಜುನರು ಅವನ ಬಳಿ ಮೂರು ವರ್ಷಗಳ ಕಾಲ ನೆಲೆಸಿದ್ದು ಅವನ ಸಮ್ಮತಿ ಪಡೆದು, ಕೃಷ್ಣಪುತ್ರನಾದ ವಿಶೋಕ ಎಂಬವನೊಂದಿಗೆ ತಮ್ಮ ಪಟ್ಟಣಕ್ಕೆ ಮರಳಿದರು.

ವಿ: ೧) ಹೀಗೆ ಅಕ್ರೂರನೊಂದಿಗೆ ಮಧುರೆಗೆ ತೆರಳಿದ ಭೀಮಾರ್ಜುನಸಹದೇವರು ಅಲ್ಲಿ ಕೃಷ್ಣನ ಬಳಿ ನೆಲೆಸಿದ್ದು ಒಟ್ಟು ಮೂರು ವರ್ಷಗಳ ಕಾಲ. ಅವರು ಹಾಗೆ ತೆರಳುವಾಗ ಕೃಷ್ಣ ತನ್ನ ಮಗನಾದ ವಿಶೋಕನನ್ನು ಅವರೊಂದಿಗೆ ಕಳುಹಿಸಿದನು. ಮುಂದೆ ಅರ್ಜುನನಿಗೆ ತಾನೇ ಸಾರಥಿಯಾಗುವ ಕೃಷ್ಣ ತನ್ನ ಪುತ್ರನಾದ ವಿಶೋಕನನ್ನು ಭೀಮಸೇನನಿಗೆ ಸಾರಥಿಯನ್ನಾಗಿ ಈಗಲೇ ನೀಡಿದ್ದು ಮತ್ತೊಂದು ವಿಶೇಷ. ತಾನು ಅಶೋಕ(**'ಅಶೋಕಸ್ತಾರಣಸ್ತಾರಃ'**)ನಾದರೆ, ತ್ರಿವಕ್ರೆಯ ಪುತ್ರನಾದ ಅವನು ವಿಶೋಕ ಎಂಬುದು ಗಮನಾರ್ಹ.

ತ್ರಿವಕ್ರೆಯ ಪೂರ್ವಾಪರ

ಸೈರಂಧ್ರಿ[೧]ಕೋದರಭವಃ ಸ ತು ನಾರದಸ್ಯ
ಶಿಷ್ಯೋ ವೃಕೋದರರಥಸ್ಯ ಬಭೂವ ಯಂತಾ ।
ಯಾ ಪಿಂಗಲಾಽನ್ಯಭವ ಆತ್ಮನಿ ಸಂಸ್ಥಿತಂ ತಂ
ಸಂಸ್ಮೃತ್ಯ ಕಾಂತಮುರುಗಾಯಮಭೂತ್ ತ್ರಿವಕ್ರಾ ॥ ೨ ॥

ಅ: ವಿಶೋಕ ಶ್ರೀಕೃಷ್ಣನಿಂದ ಸೈರಂಧ್ರಿಯಾದ ತ್ರಿವಕ್ರೆಯಲ್ಲಿ ಜನಿಸಿದವನು; ನಾರದರ ಶಿಷ್ಯ. ಅವನು ಭೀಮನ ರಥಕ್ಕೆ ಸಾರಥಿಯಾದ. ತ್ರಿವಕ್ರೆ ಹಿಂದಿನ ಜನ್ಮದಲ್ಲಿ ಪಿಂಗಳೆ ಎಂಬವಳಾಗಿದ್ದು ಕೃಷ್ಣನನ್ನು ಪತಿಯೆಂದು ಧ್ಯಾನಿಸಿ, ಈಗ ತ್ರಿವಕ್ರೆಯಾಗಿ ಜನಿಸಿದ್ದಳು.

---

೧. 'ಸೈರಂಧ್ರೀ ಪರವೇಶ್ಮಸ್ಥಾ ಸ್ವವಶಾ ಶಿಲ್ಪಕಾರಿಕೇ'ತ್ಯಮರಃ। – (ಜ.)

ವಿ: ೧) ವಿಶೋಕ ಕೃಷ್ಣತ್ರಿವಕ್ರೆಯರ ಮಗ. ತ್ರಿವಕ್ರೆ ಹಿಂದಿನ ಜನ್ಮದಲ್ಲಿ ಪಿಂಗಲಾ ಎಂಬ ವೇಶ್ಯೆಯಾಗಿದ್ದು, ತನ್ನ ಜೀವನದ ಉತ್ತರಕಾಲದಲ್ಲಿ ತನ್ನ ತಪ್ಪಿಗಾಗಿ ಮರುಗಿ, ಹರಿಯನ್ನೇ ಪತಿಯೆಂದು ಚಿಂತಿಸಿ, ದೇಹ ತೊರೆದಿದ್ದ ವಿವರ ಭಾಗವತಪುರಾಣದಲ್ಲಿದೆ (೧೧/೮/೩೪). ಆ ಪುಣ್ಯಫಲ ಅವಳಿಗೆ ಕೃಷ್ಣನ ಅಂಗಸಂಗದ ಭಾಗ್ಯ ಕರುಣಿಸಿತ್ತು. ಅವಳು ಗೂನಿಯಾಗಿ ಜನಿಸಿದ್ದು ಪ್ರಾರಬ್ಧಕರ್ಮದ ಫಲ ಎಂದು [೧]ಸತ್ಯಾಭಿನವತೀರ್ಥರು ಬರೆದಿರುವರು.

೨) ಅವಳು ರಮಾವೇಶದಿಂದಾಗಿ ಒಂದೊಮ್ಮೆ ಕೃಷ್ಣನ ಅಂಗಸಂಗ ಪಡೆಯುವ ಯೋಗ್ಯತೆ ಪಡೆದಿದ್ದ ಅಪ್ಸರೆಯರ ಗುಂಪಿಗೆ ಸೇರಿದ್ದವಳು ಎಂಬ ವಿವರ [೨]ಭಾಗವತತಾತ್ಪರ್ಯದಲ್ಲಿದೆ.

೩) ತನಗೆ ಅಂಗಸಂಗಭಾಗ್ಯ ಕರುಣಿಸಲು ತ್ರಿವಕ್ರೆ ಕೃಷ್ಣನನ್ನು ಬೇಡಿದಾಗ, ''ಮುಂದೊಮ್ಮೆ ಬರುವೆ'' ಎಂಬ ವಚನ ನೀಡಿದ್ದ ವಿವರ ಹಿಂದೆ ಬಂದಿದೆ (೧೩/೧೦೨). ಅದರಂತೆ ಕೃಷ್ಣನಿಂದ ಅವಳಲ್ಲಿ ಜನಿಸಿದವನು ವಿಶೋಕ. ಆದ್ದರಿಂದ ಅವನು ವಯಸ್ಸಿನಲ್ಲಿ ಆಗ ತುಂಬಾ ಚಿಕ್ಕವನೆಂಬುದು ಸ್ಪಷ್ಟ.

೪) ವಿಶೋಕ ನಾರದರ ಶಿಷ್ಯ; ನಾರದರು ವಾಯುದೇವರ ಶಿಷ್ಯರು; ಭೀಮಸೇನ ವಾಯುದೇವ. ಹೀಗೆ ಅವರ ಸಂಬಂಧ ಅಪೂರ್ವ ಎಂಬುದನ್ನು ಗಮನಿಸಬೇಕು.

ಭೀಮಸೇನನ ವ್ಯಾಸಶಿಷ್ಯತ್ವ

ತಂ ಪಂಚರಾತ್ರವಿದಮಾಪ್ಯ ಸುಸಾರಥಿಂ ಸ
ಭೀಮೋ ಮುಮೋದ ಪುನರಾಪ ಪರಾತ್ಮವಿದ್ಯಾಮ್ ।
ವ್ಯಾಸಾತ್ ಪರಾತ್ಮತ ಉವಾಚ ಚ ಫಲ್ಗುನಾದಿ-
ದೇವೇಷು ಸರ್ವವಿಜಯೀ ಪರವಿದ್ಯಯೈಷಃ ॥ ೩ ॥

ಅ: ಪಂಚರಾತ್ರವನ್ನು ತಿಳಿದಿದ್ದ ಅಂತಹ ಉತ್ತಮಸಾರಥಿಯನ್ನು ಪಡೆದು ಭೀಮಸೇನ ಆನಂದಿಸಿದ. ಶ್ರೀಹರಿಸ್ವರೂಪಿಯಾದ ವ್ಯಾಸರಿಂದ ಮತ್ತೊಮ್ಮೆ ಶ್ರೇಷ್ಠವಾದ ತತ್ತ್ವಜ್ಞಾನವನ್ನು ಪಡೆದು, ಆ ಪರವಿದ್ಯೆಯಿಂದ ಸರ್ವರನ್ನೂ ಜಯಿಸುವ ಹಿರಿಮೆಯ ಭೀಮಸೇನ ಆ ತತ್ತ್ವಜ್ಞಾನವನ್ನು ಅರ್ಜುನಾದಿದೇವತೆಗಳಿಗೆ ಉಪದೇಶಿಸಿದ.

---

೧. ದುಷ್ಕರ್ಮವಶಾತ್ ತ್ರಿವಕ್ರಾऽಭೂದಿತ್ಯರ್ಥಃ। –(ಸ.)

೨. ಭಗವದ್ಭಾರ್ಯತಾಯೋಗ್ಯಾಃ ಕಾಶ್ಚಿದಪ್ಸರಸಃ ಸ್ತ್ರಿಯಃ।
ರಮಾವೇಶಾತ್ ಕದಾಚಿತ್ ತಾಸ್ವೇಕಾ ಪಿಂಗಲಾऽಭವತ್ ॥
ತದನ್ಯಾಸಾಂಮಹಾನ್ ದೋಷೋ ಭಗವದ್ಭಾರ್ಯತಾ ಸ್ಮೃತೌ॥ಇತಿ ಸ್ವಭಾವ್ಯೇ।– ಭಾ.ತಾ.(೧೧/೮/೩೪)

ವಿ: ೧) ವಿಶೋಕ ಸೂತನಾದ್ದರಿಂದ ಅವನಿಗೆ ಪಂಚರಾತ್ರದಲ್ಲಿ ವಿಶೇಷ ಅಧಿಕಾರವಿದ್ದದ್ದರಿಂದ ಅವನು ಅದರಲ್ಲಿ ವಿಶೇಷವಾಗಿ ಪರಿಣತನಾಗಿದ್ದ ಎಂದರ್ಥ.

೨) ಸೂತಪುರಾಣಿಕನನ್ನು ವಿಶೇಷವಾಗಿ ಪಂಚರಾತ್ರಾದಿಗಳಿಗೆ ಪ್ರವರ್ತಕನನ್ನಾಗಿ ಮಾಡಿದ ಉಲ್ಲೇಖ ಈಗಾಗಲೇ ಬಂದಿದೆ (ಅ. ೧೦, ಶ್ಲೋ. ೭೯, ೮೦).

೩) ಭೀಮಸೇನ ವ್ಯಾಸರೂಪದ ಶ್ರೀಹರಿಯಿಂದ ವಿಶೇಷವಾಗಿ ತತ್ತ್ವಜ್ಞಾನವನ್ನು ಪಡೆದ ಇಲ್ಲಿಯ ಉಲ್ಲೇಖವೂ ಗಮನಾರ್ಹ. ಹಾಗೆ ಭೀಮಸೇನ ವ್ಯಾಸಶಿಷ್ಯನಾಗಿದ್ದುದು ಮಾತ್ರವಲ್ಲದೆ, ಅರ್ಜುನಾದಿಗಳಿಗೆ ಉಪದೇಶಿಸುವ ಮೂಲಕ ಅವರೆಲ್ಲರಿಗೂ ಗುರುವೂ ಆಗಿದ್ದ.

೪) ಹೀಗೆ ಸದಾ ಜ್ಞಾನಸ್ವರೂಪನಾದ್ದರಿಂದ ಆತ ಸರ್ವತ್ರ ವಿಜಯಿಯೂ ಆಗಿದ್ದ. ಆತನ ಸ್ಮರಣೆಯೇ ಸರ್ವತ್ರ ವಿಜಯಪ್ರದಾಯಕವಾಗಿರುವಾಗ ಆತ ಸರ್ವತ್ರ ವಿಜಯಿಯಾಗಿದ್ದು ಕೈಮುತ್ಯಸಿದ್ಧವೆಂದೂ ತಿಳಿಯಬೇಕು.

ಭೀಮನ ವೈಷ್ಣವ ಆಳ್ವಿಕೆ

ಸರ್ವಾನಭಾಗವತಶಾಸ್ತ್ರಪಥಾನ್ ವಿಧೂಯ
ಮಾರ್ಗಂ ಚಕಾರ ಸ ತು ವೈಷ್ಣವಮೇವ ಶುಭ್ರಮ್ ।
ಕ್ರೀಡಾರ್ಥಮೇವ ವಿಜಿಗಾಯ ತಥೋಭಯಾತ್ಮ-
ಯುದ್ಧೇ ಬಲಂ ಚ ಕರವಾಕ್ಕ್ಭವೇಽಮಿತಾತ್ಮಾ ॥ ೪ ॥

ಅ: ಭೀಮಸೇನ ಎಲ್ಲ ಅವೈಷ್ಣವಶಾಸ್ತ್ರದ ಪದ್ಧತಿಗಳನ್ನು ನಾಶ ಮಾಡಿ, ಶುದ್ಧವಾದ ವೈಷ್ಣವಮಾರ್ಗವನ್ನೇ ಪ್ರತಿಪಾದಿಸಿದ. ಹಾಗೆಯೇ ವಿನೋದಕ್ಕೆಂದು ಬಲಜ್ಞಾನಾದಿಗಳಲ್ಲಿ ಅಮಿತಸ್ವರೂಪನಾದ ಅವನು ಬಾಹುಯುದ್ಧವಾಗ್ಯುದ್ಧರೂಪವಾದ ಉಭಯವಿಧವಿದ್ಯೆಗಳಲ್ಲೂ ಬಲರಾಮನನ್ನೂ ಪರಾಭವಗೊಳಿಸಿದ.

ವಿ: ೧) ಭೀಮಸೇನ ತತ್ತ್ವಜ್ಞಾನಿ ಮಾತ್ರವಲ್ಲದೆ, ಕ್ಷತ್ರಿಯನಾದ್ದರಿಂದ ಅವೈಷ್ಣವಮಾರ್ಗ-ಗಳನ್ನು ವಾದದಲ್ಲೂ ಖಂಡಿಸಿ, ಶುದ್ಧವೈಷ್ಣವಮಾರ್ಗವನ್ನೇ ಜನರು ಜೀವನದಲ್ಲಿ ಅಳವಡಿಸಿ-ಕೊಳ್ಳುವಂತೆ ವ್ಯವಸ್ಥೆಗೊಳಿಸಿದ ಎಂದರ್ಥ.

೨) ಶೇಷಾವತಾರನಾದ ಬಲರಾಮನನ್ನು ಜಯಿಸಿದ ಎಂಬುದರಿಂದ ಭೀಮು ಶೇಷೋತ್ತಮ ಎಂಬುದು ಸ್ಪಷ್ಟ.

---

೧. ಕರೇಣ ವಾಚಾ ಪ್ರಭವೋ ಯಸ್ಯ ತಸ್ಮಿನ್ । ಉಭಯಾತ್ಮಕೇ = ವಾಗ್ಯುದ್ಧೇ ಬಾಹುಯುದ್ಧೇ ಚ । ಅರ್ಶವಾನರ್ಶ ಇತಿವತ್ ಬಲಂ = ಬಲವಂತಂ ಚ ಜಿಗಾಯ ॥ – (ವಾ.)

ರಮಾದಿಗಳೆಲ್ಲ ವಿಷ್ಣ್ವಾಶ್ರಿತರು

ನಿತ್ಯಪ್ರಭೂತಸುಶುಭಪ್ರತಿಭೋಽಪಿ [೧] ವಿಷ್ಣೋಃ
ಶ್ರುತ್ವಾ ಪರಾಂ ಪುನರಪಿ ಪ್ರತಿಭಾಮವಾಪ ।
ಕೋ ನಾಮ ವಿಷ್ಣ್ವನುಪಜೀವಕ ಆಸ್ತ ಯಸ್ಯ
ನಿತ್ಯಾಶ್ರಯಾದಭಿಹಿತಾಽಪಿ ರಮಾ [೨] ಸದಾ ಶ್ರೀಃ ॥ ೫ ॥

ಅ: ನಿತ್ಯವ್ಯಕ್ತವಾದ ಪರಿಪೂರ್ಣವೂ, ಶುದ್ಧವೂ ಆದ ಪ್ರತಿಭಾಸಂಪನ್ನನಾಗಿದ್ದರೂ, ಭೀಮಸೇನ ವ್ಯಾಸರೂಪದ ಹರಿಯಿಂದ ಮತ್ತೆ ಮತ್ತೆ ಕೇಳಿ ಇನ್ನೂ ಹೆಚ್ಚಿನ [೩] ಜ್ಞಾನವನ್ನು ಪಡೆದ.

---

೧. ಭೀಮಃ ವಿಷ್ಣೋಃ ಕೃಷ್ಣವ್ಯಾಸಾತ್ಮನೋ ಹರೇಃ ಸಕಾಶಾತ್ – (ಜ.)

೨. ರಮಾಽಪಿ ಯಸ್ಯ = ನಾರಾಯಣಸ್ಯ ನಿತ್ಯಾಶ್ರಯಾತ್ = ನಿತ್ಯಂ ವಕ್ಷಸಿ ಆಶ್ರಯಾತ್ ಸದಾ ಶ್ರೀರಿತ್ಯಭಿಹಿತಾ ಆಸ ತಸ್ಯೇತ್ಯನ್ವಯಃ ॥ – (ವಾ.)

೩. ಅನ್ಯತ್ಪತಿಭಾಯಾ ಅಪಿ ನಿತ್ಯತ್ವಮಸ್ತೀತ್ಯತೋ ಪ್ರಭೂತೇತ್ಯುಕ್ತಮ್ । ನಿತ್ಯವ್ಯಕ್ತೇತ್ಯರ್ಥಃ । ತದುಕ್ತಂ – 'ಅತಿರೋಹಿತವಿಜ್ಞಾನಾದ್ವಾಯುರಷ್ಟಮಮೃತಂ ಸ್ಮೃತ' ಇತಿ । ಯದ್ವಾ ಪ್ರಭೂತತ್ವಂ ನಾಮ ಪ್ರತಿಭಾ । ತಾರತಮ್ಯಕಾಷ್ಠಾತ್ವರೂಪಂ ಪೂರ್ಣತ್ವಮ್ । ತದುಕ್ತಂ–

ಋಷೀನ್ ರಾಜ್ಞಸ್ತಥಾರಭ್ಯ ಪ್ರತಿಭಾऽಭ್ಯಧಿಕಾ ಕ್ರಮಾತ್ ।
ಯಾವದ್ಬ್ರಹ್ಮಾ ಬ್ರಹ್ಮಣಸ್ತು ಪ್ರಾಯೋ ನಾಪ್ರತಿಭಾಸಿತಮ್ ॥ ಇತಿ ।

ನಿತ್ಯಪ್ರಭೂತಪ್ರತಿಭಾಯಾಃ ಸುತ್ವಂ ಸ್ವಜ್ಞಾತವ್ಯಯಾವದ್ಗುಣಕ್ರಿಯಾದಿವಿಷಯತ್ವಮ್ । ತದುಕ್ತಂ – 'ಪಾರೋಕ್ಷ್ಯಾತ್ ಪೂರ್ಣಂ ಜ್ಞಾನಂ ಸದೈವ ಹಿ' ಇತಿ । ಶುಭತ್ವಂ ನಾಮ ಸಂಶಯವಿಪರ್ಯಯಾ-ಸಮಾನಾಧಿಕರಣತ್ವಮ್ । ತದ್ವಕ್ಷ್ಯತಿ — 'ನ ಸಂಶಯಂ ಕದಾಷ್ಟೇಷ ಧರ್ಮೇ ಜ್ಞಾನೇऽಪಿ ವಾऽಕರೋತ್' ಇತಿ । ಅಪಿ ತಥಾಪಿ ಪರಾಮತಿಶಯಿತಾಮ್ । ಇದಮುಕ್ತಂ ಭವತಿ । ಯದ್ಯಪಿ ಭೀಮಃ ನಿತ್ಯಾಭವ್ಯಕ್ತಸರ್ವದೇವಾಧಿಕ-ಸರ್ವವಿಷಯಕಸಂಶಯವಿಪರ್ಯಯಗಂಧವಿಧುರಪ್ರತಿಭಾವಾನ್ । ತಥಾಪಿ ಜ್ಞಾತೇಷ್ವೇತೇಷ್ವೇವ ಗುಣಾದಿಷು ಭಗವದುಪದೇಶೇನ ವಿಶೇಷವಿಷಯಿಕಕ್ರಮಿಕಪ್ರತಿಭಾವಾನ್ ಭವತ್ಯೇವ । ತಥಾ ಚ ಗುಣಾದಿಷು ಭಗವದುಪದೇಶೋऽಪೇಕ್ಷಿತ ಏವೇತಿ ಅತ ಏವ ಕ್ರಮೇಣ ವರ್ಧಮಾನಮಿತ್ಯುಕ್ತಮ್ । ಪ್ರಾಯೋ ನಾಪ್ರತಿಭಾಸಿತಮಿತಿ ಚ ವಿಷ್ಣೋಃ ಪ್ರೀತ್ಯರ್ಥಮೇವಾಸ್ಯ ಶ್ರೋತವ್ಯಂ ಪ್ರಾಯಶೋ ಭವತಿ ಚ । ಉಕ್ತಂ ಚ ಮಧ್ವವಿಜಯೇ (೮/೩-೫) —

'ಪುರ ಏವ ಪೂರಿತಮಪೂರಯತ್ ಪುನರ್ನನು ಕೃಷ್ಣ ಏಷ ಪರಮಾರ್ಥಸಂಖ್ಯಯಾ ।
ಭಗವನ್ಮನಃ ಪುರಮಿವಾಯತಂ ಪುರಾ ನಿಜಧಾಮ ತಾಂ ಚ ಜಗೃಹೇ ತದದ್ಭುತಮ್ ॥
ಇತಿಹಾಸಸುಂದರಪುರಾಣಸೂತ್ರಸತ್ಕ್ರಿಯಪಂಚರಾತ್ರನಿಜಭಾವಸಂಯುತಮ್ ।
ಅಶ್ರಾಣೋದನಂತಹೃದನಂತತೋಚಿರಾತ್ತರಮಾರ್ಥಮಷ್ಟಗಣತಾಗಮಾವಲೀಃ ॥
ಋಜುಪುಂಗವಸ್ಯ ಪರಿಜಾನತಃ ಸ್ವಯಂ ಸಕಲಂ ತದಷ್ಟನಂತಜನ್ಮಸು ।
ಸ್ವಕೃತೋರ್ವನುಗ್ರಹಬಲಾದಮುಷ್ಯ ತಾಂ ವಿಶಿಶೇಷ ಶೇಷಶಯನಃ ಪುನರ್ಧಿಯಮ್ ॥ – (ತಾ.)

ಸಾಕ್ಷಾತ್ ಮಹಾಲಕ್ಷ್ಮಿಯೂ ಸಹ ಶ್ರೀಹರಿಯನ್ನು ಸದಾ ಅವಲಂಬಿಸಿರುವಳೆಂದು ಉಕ್ತವಾಗಿರುವಾಗ ವಿಷ್ಣುವನ್ನು ಅವಲಂಬಿಸದೆ ಇರಲು ಯಾರಿಗೆ ತಾನೆ ಸಾಧ್ಯ?

ಎ: ೧) ಭೀಮಸೇನ ಸದಾ ಪೂರ್ಣಪ್ರಜ್ಞನಾದರೂ, ವೇದವ್ಯಾಸರಿಂದ ಪುನಃಪುನಃ ಶ್ರವಣ ಮಾಡಿದ್ದು ನಿಜ; ಅದರಿಂದ ಪ್ರತಿಭಾವಿಶೇಷವನ್ನು ಹೊಂದಿದ್ದೂ ನಿಜ ಎಂದರ್ಥ. ಪೂರ್ಣನಾಗಿದ್ದೂ ಇನ್ನೂ ಪೂರ್ಣತೆಯನ್ನು ಪಡೆಯುವ ಬಗೆ ಮಧ್ವವಿಜಯದಲ್ಲಿದೆ (೮/೩).

ದ್ವಾರಕೆ ಸರ್ವಸಂಪದ್ಭರಿತವಾಗಿಯೇ ನಿರ್ಮಾಣವಾಗಿದ್ದರೂ, ನರಕಾಸುರ ಮೊದಲಾದವರನ್ನು ಸಂಹರಿಸಿ, ಅವರ ಅಪಾರ ಸಂಪತ್ತನ್ನು ಅದರಲ್ಲಿ ತುಂಬಿಸಿ, ಇನ್ನೂ ಸಮೃದ್ಧಗೊಳಿಸಿದ ಪರಿಯಂತೆ ಪರಿಪೂರ್ಣಪ್ರಮತಿಯಾದ ಭೀಮಸೇನನ ಪ್ರತಿಭೆಯೂ ಒಂದು ಬಗೆಯ ವಿಶೇಷತೆಯನ್ನು ಹೊಂದಿತು ಎಂದು ತಾತ್ಪರ್ಯ.

೨) ನಿತ್ಯಮುಕ್ತಳಾದ ಮಹಾಲಕ್ಷ್ಮಿಯೇ ಪರಮಾತ್ಮನ [೧]ಅನುಗ್ರಹವಿಶೇಷವನ್ನು ಅವಲಂಬಿಸಿರುವಾಗ ಇತರರ ಪಾಡೇನು?

ಪಂಚಪಾಂಡವರೂ ವ್ಯಾಸಶಿಷ್ಯರು

ವ್ಯಾಸಾದವಾಪ ಪರಮಾತ್ಮಸುತತ್ತ್ವವಿದ್ಯಾಂ
ಧರ್ಮಾತ್ಮಜೋಽಪಿ ಸತತಂ ಭಗವತ್ಪ್ರಪನ್ನಃ ।
ತೇ ಪಂಚ ಪಾಂಡುತನಯಾ ಮುಮುದುರ್ನಿತಾಂತಂ
ಸದ್ಧರ್ಮಚಾರಿಣ ಉರುಕ್ರಮಶಿಕ್ಷಿತಾರ್ಥಾಃ ॥ ೬ ॥

ಅ: ಸದಾ ಭಗವಂತನನ್ನು ಆಶ್ರಯಿಸಿದ ಯಮಪುತ್ರನಾದ ಯುಧಿಷ್ಠಿರನೂ ಸಹ ಶ್ರೀವೇದವ್ಯಾಸರಿಂದ ಪರಮಾತ್ಮಸುತತ್ತ್ವಜ್ಞಾನವನ್ನು ಪಡೆದ. ಆ ಪಂಚಪಾಂಡವರೂ ಉತ್ತಮಧರ್ಮಚಾರಿಗಳಾಗಿ ಶ್ರೀಹರಿಯಿಂದ ಶಾಸ್ತ್ರಾರ್ಥ ಉಪದೇಶ ಹೊಂದಿದವರಾಗಿ ಬಹಳವಾಗಿ ಆನಂದಿಸಿದರು.

---

೧. ಯಸ್ಮಾದ್ಬ್ರಹ್ಮೇಂದ್ರರುದ್ರಾದಿದೇವತಾನಾಂ ಶ್ರಿಯೋಽಪಿ ಚ ।
ಜ್ಞಾನಸ್ಫೂರ್ತಿಃ ಸದಾ ತಸ್ಮೈ ಹರಯೇ ಗುರವೇ ನಮಃ ॥ – ಇತಿ ಈಶಾವಾಸ್ಯಭಾಷ್ಯೇ ।

೨. ಯಥಾ ವ್ಯಾಸಾನುಶಿಷ್ಟಾನಾಂ ದೇವಾನಾಂ ಕ್ಷತ್ರಜನ್ಮನಾಮ್ ।
ಪಾರ್ಥಾನಾಮತಿರೋಧಾನಂ ಜ್ಞಾನಂ ಸುಸ್ಥಿರತಾಂ ಗತಮ್ ॥ – ಉಪೋದ್ಘಾತ (ಗೀತಾತಾತ್ಪರ್ಯ)

'ಬ್ರಹ್ಮರುದ್ರೇಂದ್ರಸೂರ್ಯಾಣಾಂ ಯದ್ದತ್ತಂ ವಿಷ್ಣುನಾ ಪುರಾ ।
ಪಂಚರಾತ್ರಾತ್ಮಕಂ ಜ್ಞಾನಂ ವ್ಯಾಸೋಽದಾತ್ಪಾಂಡವೇಷು ತತ್ । – ಗೀತಾತಾತ್ಪರ್ಯೇ (೪/೨)

ವಿ: ೧) ಶ್ರೀಹರಿಯು ನಾರಾಯಣನಾಗಿ ಯಮಪುತ್ರನೆನ್ನಿಸಿದ್ದ, ಯುಧಿಷ್ಠಿರನಂತೂ ಯಮಧರ್ಮನ ಅವತಾರವೇ. ಹೀಗೆ ಹರಿ–ಯಮರ ಸಂಬಂಧ ಬಹಳ ವಿಶೇಷವಾದದ್ದು ಎಂಬುದನ್ನು ಸಹ 'ಧರ್ಮಾತ್ಮಜಃ' ಎಂಬ ಪದದಿಂದ ಸೂಚಿಸಿರುವರು ಎಂದು ತಿಳಿಯಬಹುದು.

೨) ಅವರು ವಿಶೇಷವಾಗಿ ಧರ್ಮಪರಾಯಣರಾದ್ದರಿಂದಲೇ ಅವರು ಸಾಕ್ಷಾತ್ ಶ್ರೀಹರಿಯಿಂದ ಉಪದೇಶ ಪಡೆಯುವ ಯೋಗ ಲಭಿಸಿತ್ತು ಎಂದು ತಿಳಿಯಬೇಕು. ಶ್ರೀಹರಿಯಿಂದ ಉಪದೇಶ ಪಡೆಯುವ ವಿಶೇಷ ಅರ್ಹತೆ ಬ್ರಹ್ಮವಾಯುಗಳದು ಮಾತ್ರ. ಭೀಮಸೇನ ಸಾಕ್ಷಾತ್ ಮುಖ್ಯಪ್ರಾಣನಾಗಿದ್ದರೆ, ಇತರ ನಾಲ್ವರಲ್ಲಿ ವಾಯುದೇವರ ಆವೇಶವಿದ್ದ ವಿವರ ಈಗಾಗಲೇ ಬಂದಿದೆ(೧೨/೧೨೯).

ಅಶ್ವತ್ಥಾಮರು ಕುಡಿದ ಹಾಲು

ಯದಾ ಭರದ್ವಾಜಸುತಸ್ತ್ವಸಂಚಯೀ ಪ್ರತಿಗ್ರಹೋಜ್ಝೋ ನಿಜಧರ್ಮವರ್ತಿ೯ ।
ದ್ರೌಣಿಸ್ತದಾ ಧಾರ್ತರಾಷ್ಟ್ರೈಃ ಸಮೇತ್ಯ ಕ್ರೀಡನ್ ಪಯಃ ಪಾತುಮುಪೈತಿ ಸದ್ಮ।। ೭ ।।

ಅ: ಭರದ್ವಾಜಪುತ್ರರಾದ ದ್ರೋಣರು ಮುಂಚೆ ಮುಖ್ಯಬ್ರಾಹ್ಮಣಧರ್ಮವನ್ನು ಪಾಲನೆ ಮಾಡುತ್ತಾ ಬದುಕಿದ್ದವರು. ಸಂಪತ್ತನ್ನು ಕೂಡಿಡುತ್ತಲೂ ಇರಲಿಲ್ಲ. ಮತ್ತೊಬ್ಬರಿಂದ ದಾನವಾಗಿ ಸ್ವೀಕರಿಸುತ್ತಲೂ ಇರಲಿಲ್ಲ. ಆಗ ಅವರ ಮಗ ಅಶ್ವತ್ಥಾಮ ಕೌರವರೊಂದಿಗೆ ಕೂಡಿ, ಆಟವಾಡುತ್ತಾ ಹಾಲು ಕುಡಿಯಲೆಂದು ಮನೆಗೆ ಬರುತ್ತಿದ್ದ.

ವಿ: ೧) ಇದು ಪಾಂಡವರು ಹಸ್ತಿನಾಪುರಕ್ಕೆ ಆಗಮಿಸುವ ಮುನ್ನ ನಡೆದ ಪ್ರಸಂಗ. ದ್ರೋಣರದು ಆಗ ಶುದ್ಧ ವಿಪ್ರಧರ್ಮದ ಜೀವನವಾಗಿತ್ತು; ಈಗಾಗಲೇ ಹೇಳಿರುವಂತೆ ಅವರು ಬದುಕಿಗಾಗಿ ಬ್ರಾಹ್ಮಣರಿಗೆ ವಿಹಿತವಾದ, ತುಂಬಾ ನಿರ್ಮಲವಾದ ಶಿಲೋಂಛವೃತ್ತಿಯನ್ನು ಅವಲಂಬಿಸಿದ್ದರು.

೨) ಆಗ ಸಮವಯಸ್ಕರಾದ ಕೌರವರೊಂದಿಗೆ ಆಡಲೆಂದು ತೆರಳುತ್ತಿದ್ದ ಅಶ್ವತ್ಥಾಮ ಬಿಡುವಿನ ವೇಳೆಯಲ್ಲಿ ಅವರೆಲ್ಲ ಹಾಲು ಕುಡಿಯಲೆಂದು ಮನೆಗೆ ತೆರಳಿದಾಗ, ತಾನೂ ಹಾಗೆ ಮಾಡಲೆಂದು ತನ್ನ ಮನೆಗೆ ಬರುತ್ತಿದ್ದ ಎಂದರ್ಥ.

ತಸ್ಮೈ ಮಾತಾ ಪಿಷ್ಟಮಾಲೋಡ್ಯ ಪಾತುಂ ದದಾತಿ ಪೀತ್ವೈತಿ[೧] ತದೇಷ ನಿತ್ಯಮ್ ।
ಪೀತಕ್ಷೀರಾನ್ ಧಾರ್ತರಾಷ್ಟ್ರಾನ್ ಸಮೇತ್ಯ ಮಯಾ ಪೀತಂ ಕ್ಷೀರಮಿತ್ಯಾಹ ನಿತ್ಯಮ್ ।।

---

೧. ಪೀತ್ವಾ ಪಿಷ್ಟರಸಂ ಬಾಲಃ ಕ್ಷೀರಂ ಪೀತಂ ಮಯಾऽಪಿ ಚ । – ಭಾರತ (ಆದಿ. ೧೩೦/೫೪)

ಅ: ಅವನಿಗೆ ತಾಯಿ ಕೃಪಿ ಹಿಟ್ಟನ್ನು ಕಲಸಿ ಕುಡಿಯಲೆಂದು ನೀಡುತ್ತಿದ್ದಳು. ಅದನ್ನು ಕುಡಿದು ಅವನು ದಿನವೂ ಹಾಲು ಕುಡಿದು ಮರಳುತ್ತಿದ್ದ ಕೌರವರ ಬಳಿಗೆ ತೆರಳಿ, ''ನಾನೂ ಹಾಲು ಕುಡಿದೆ'' ಎಂದು ಸದಾ ಹೇಳುತ್ತಿದ್ದ.

ವಿ: ೧) ಮಕ್ಕಳ ಸ್ವಭಾವದಂತೆ ಅಂದು ತಾವು ಹಾಲು ಕುಡಿದು ಬಂದದ್ದನ್ನು ಅವರು ಹೇಳಿ–ಕೊಂಡಾಗ, ತಾನೂ ''ಹಾಲು ಕುಡಿದು ಬಂದೆ'' ಎಂದು ಅಶ್ವತ್ಥಾಮ ಹೇಳಿಕೊಳ್ಳುತ್ತಿದ್ದ. ಅವರು ಕುಡಿಯುತ್ತಿದ್ದದ್ದು ನಿಜವಾದ ಹಾಲಾದರೆ, ಇವನು ಕುಡಿಯುತ್ತಿದ್ದುದು ಮಾತ್ರ ಹಿಟ್ಟಿನ ಹಾಲು.

೨) ಕೃಪಿ ಅಶ್ವತ್ಥಾಮ ಹಾಲು ಬೇಡಿದಾಗ, ಏನೂ ಇಲ್ಲದ ಅವರ ಮನೆಯಲ್ಲಿ ಅದಕ್ಕೆ ಅವಕಾಶವೇ ಇರಲಿಲ್ಲ. ಆದರೂ ಇಲ್ಲವೆನ್ನದೆ, ಹಿಟ್ಟನ್ನು ನೀರಲ್ಲಿ ಬೆರೆಸಿ, ಹಾಲೆಂದು ನೀಡುವ ಅವಳ ಸಮಯಸ್ಫೂರ್ತಿ ವಿಶಿಷ್ಟವಾದದ್ದು. ಹಿಟ್ಟಿನಿಂದ ಹಾಲನ್ನು ತಯಾರಿಸುವ ಒಂದು ವಿಶಿಷ್ಟಪರಂಪರೆಗೇ ಇದು ನಾಂದಿ ಹಾಡಿತು ಎನ್ನಬಹುದು.

೧
ನೃತ್ಯಂತಮೇನಂ ಪಾಯಯಾಮಾಸುರೇತೇ ಪಯಃ ಕದಾಚಿದ್ರಸಮಸ್ಯ ಸೋಽವೈತ್ ।
ಪುನಃ ಕದಾಚಿತ್ ಸ ತು ಮಾತೃದತ್ತೇ ಪಿಷ್ಟೇ ನೇದಂ ಕ್ಷೀರಮಿತ್ಯಾರುರಾವ ॥ ೯ ॥

ಅ: ಕುಣಿಯುತ್ತಿದ್ದ ಅವನಿಗೆ ಆ ಕೌರವರು ಒಮ್ಮೆ ನಿಜವಾದ ಹಾಲನ್ನೇ ಕುಡಿಸಿದರು. ಅದರ ಸವಿ ಅವನಿಗೆ ತಿಳಿಯಿತು. ಮತ್ತೊಮ್ಮೆ ತಾಯಿ ಹಿಟ್ಟು ಕಲಸಿ ನೀಡಿದಾಗ, ''ಇದು ಹಾಲಲ್ಲ'' ಎಂದು ಜೋರಾಗಿ ಅಳತೊಡಗಿದ.

ವಿ: ೧) ಅಶ್ವತ್ಥಾಮರ ಮನೆಯ ಪರಿಸ್ಥಿತಿಯನ್ನು ಅರಿತಿದ್ದ ದುರ್ಯೋಧನ ಅವನು ನಿಜವಾಗಿಯೂ ಹಾಲನ್ನು ಕುಡಿಯಲು ಸಾಧ್ಯವಿಲ್ಲವೆಂದು ಅರ್ಥಮಾಡಿಕೊಂಡ. ಅದು ಅವನಿಗೂ ತಿಳಿಯಲಿ ಎಂದು ಒಮ್ಮೆ ತನ್ನೊಂದಿಗೆ ಕರೆದೊಯ್ದು ನಿಜವಾದ ಹಾಲನ್ನೇ ಕುಡಿಸಿದ.

೨) ದುರ್ಯೋಧನ ಕುಡಿಸಿದ್ದು ನಿಜವಾದ ಹಾಲಾದರೂ, ಅವನ ಮನೋಭಾವ ಮಾತ್ರ ಹಾಲಿನಂತಿರದೆ, ಹಾಲಾಹಲದಂತೆ ಕಲಂಕಿತವೇ ಆಗಿತ್ತು. ಅವನಂತೂ ಹಾಲಾಹಲಸ್ವರೂಪವಾಗಿದ್ದ ಸಾಕ್ಷಾತ್ ಕಲಿಯೇ ಆಗಿದ್ದವನು.

---

೧. ತಂ ದೃಷ್ಟ್ವಾ ನೃತ್ಯಮಾನಂ ..... ।
ನನರ್ತೋತ್ಥಾಯ ಕೌರವ್ಯ ಹೃಷ್ಟೋ ಬಾಲ್ಯಾದ್ ವಿಮೋಹಿತಃ ॥ – ಭಾರತ (ಆದಿ. ೧೩೦/೫೫)

ನೃತ್ಯತಿ ಸ್ಮ ಮುದಾ ऽऽವಿಷ್ಟಃ ಕ್ಷೀರಂ ಪೀತಂ ಮಯಾऽಪ್ಯುತ ॥ – ಭಾರತ (ಆದಿ. ೧೩೦/೫೭)

೩) ಅಶ್ವತ್ಥಾಮರಿಗೆ ಅಂದು ನಿಜವಾದ ಹಾಲಿನ ಸವಿ ತಿಳಿಯಿತು. ಅವರಿಗೆ ಹಾಲಿನ ಸವಿ ತಿಳಿದರೂ, ಅದನ್ನು ನೀಡಿದ ದುರ್ಯೋಧನನ ಮನಸ್ಸು ಹಾಲಾಹಲವೆಂದು ಮಾತ್ರ ತಿಳಿಯದಾಯಿತು. ಅದರ ಪರಿಣಾಮ ಅವರಲ್ಲಿ ಕ್ಷುದ್ರವಾದ ಕ್ಷೀರಪಾನದ ಆಸೆ ಕಾಣಿಸಿಕೊಳ್ಳಲು ಕಾರಣವಾಯಿತು. ಮೂಲರೂಪದಲ್ಲಿ ಹಾಲಾಹಲ ಜೀರ್ಣಿಸಿಕೊಳ್ಳಲಾಗದ ಅವರಿಗೆ ಈ ಅವತಾರರೂಪದಲ್ಲಿ ಆ ಕಲಿ ನೀಡಿದ ಹಾಲನ್ನು ಜೀರ್ಣಿಸಿಕೊಳ್ಳಲೂ ಸಾಧ್ಯವಾಗದಾಯಿತು. ದುರ್ಯೋಧನ ಮುಟ್ಟಿದ್ದೆಲ್ಲ ಹಾಲಾಹಲ ಎಂಬುದಕ್ಕೆ ಇದು ನಿದರ್ಶನವಾಯಿತು. ದುರ್ಜನ–ಸಂಗದ ದುರಂತವೆಂದರೆ ಇದೇ. ಮೂಲ ಹಾಗೂ ಅವತಾರ ಎರಡರಲ್ಲೂ ಕಾಲಕೂಟವನ್ನು ಜೀರ್ಣಿಸಿಕೊಂಡದ್ದು ಭೀಮನ ಹಿರಿಮೆಯಾದರೆ, ಜೀರ್ಣಿಸಿಕೊಳ್ಳಲಾಗದ್ದು ಶಿವನ ಮಿತಿಯಾಯಿತು. ಇದು ಒಂದು ಅರ್ಥದಲ್ಲಿ 'ಪತ್ಯುರಸಾಮಂಜಸ್ಯಾತ್' ಎಂಬ ಬ್ರಹ್ಮಸೂತ್ರಕ್ಕೆ ನಿದರ್ಶನವೂ ಆಯಿತು. ಸಮಸ್ತಶಾಸ್ತ್ರತತ್ತ್ವಗಳ ನಿದರ್ಶನರೂಪವೇ ಮಹಾಭಾರತವಲ್ಲವೆ! ('ನಿರ್ಣಯಃ ಸರ್ವಶಾಸ್ತ್ರಾಣಾಂ ಸದೃಷ್ಟ್ಯಾಂತೋ ಹಿ ಭಾರತೇ').

೪) ಮುಂದೆ ಎಂದಿನಂತೆ ತಾಯಿ ನೀಡಿದ ಹಿಟ್ಟಿನ ಹಾಲನ್ನು ಅಶ್ವತ್ಥಾಮ ಅದು ಹಾಲಲ್ಲವೆಂದು ತಿರಸ್ಕರಿಸಿದ. ಇಲ್ಲೂ ಹಾಗೆಯೇ. ಆ ಹಿಟ್ಟಿನ ಹಾಲು ಹಾಲಲ್ಲವಾದರೂ, ಅದನ್ನು ನೀಡಿದ ಮಾತೃಹೃದಯ ನಿಜವಾದ ಹಾಲೇ ಆಗಿತ್ತು ಎಂಬುದನ್ನು ಅವರು ಗುರುತಿಸದಾದರು ಎಂಬುದು ಗಮನಾರ್ಹ.

೫) ಅವರು ಹಾಗೆ ಅತ್ತಿದ್ದೂ ಸಹ 'ರುದ್ರ' ಎಂಬ ಅವರ ಮೂಲರೂಪದ ಹೆಸರಿಗೆ ಸ್ಮಾರಕ. ಅವರು ಅವತರಿಸುತ್ತಲೇ ತನಗೆ 'ಹೆಸರಿಡಿ' ಎಂದು ರೋದಿಸಿದ್ದು ಶ್ರುತಿಪ್ರಸಿದ್ಧವಾದ ವಿಚಾರ ('ಸೋಽರೋದೀತ್ ತದ್ರುದ್ರಸ್ಯ ರುದ್ರತ್ವಮ್'). ಅಲ್ಲಿ ರೋದಿಸಿದ್ದು ಜನ್ಮಿತ್ತ ಜನಕನ ಮುಂದಾದರೆ, ಇಲ್ಲಿ ರೋದಿಸಿದ್ದು ಜನ್ಮಿತ್ತ ಜನನಿಯ ಮುಂದೆ. ಹೀಗೆ ರುದ್ರಶಬ್ದ ಅವರಿಗೆ ಅವತಾರದಲ್ಲೂ ಸಾರ್ಥಕವಾಯಿತು ಎಂಬ ಧ್ವನಿ 'ಆರುರಾವ' ಎಂಬ ಪದದಲ್ಲಿದೆ ಎಂಬುದನ್ನು ಗಮನಿಸಬಹುದು.

ಗೋವಿಗಾಗಿ ಗೋವಿಂದನ ಬಳಿಗೆ

ದೃಷ್ಟ್ವಾ(ऽऽ)ರುವಂತಂ ಸುತಮಾತ್ಮಜಸ್ಯ ಸ್ನೇಹಾನ್ವಿಯತ್ಯೈವ ಜನಾರ್ದನಸ್ಯ ।
ಸಂಪ್ರೇರಿತಃ ಕೃಪಯಾ ಚಾರ್ತರೂಪೋ ದ್ರೋಣೋ ಯಯಾವಾರ್ಜಯಿತುಂ ತದಾ ಗಾಮ್ ೧೦

ಅ: ಹಾಗೆ ಬಹಳ ಅಳತೊಡಗಿದ ಮಗನನ್ನು ಕಂಡು ಮನಸ್ಸಿನಲ್ಲಿ ನೊಂದು ದ್ರೋಣರು ಗೋವನ್ನು ಸಂಪಾದಿಸಲೆಂದು ತೆರಳಿದರು. ಅದಕ್ಕೆ ಪುತ್ರನ ಮೇಲಿನ ಸ್ನೇಹ, ಶ್ರೀಹರಿಯ ಸಂಕಲ್ಪ ಹಾಗೂ ಪತ್ನಿಯಾದ ಕೃಪಿಯ ಬಹಳವಾದ ಪ್ರೇರಣೆ ಕಾರಣವಾದವು.

ವಿ: ೧) ಒಂದೆಡೆ ಅಳುವ ಮಗ; ಇನ್ನೊಂದೆಡೆ ಹೆಂಡತಿ ಕೃಪಿಯ ಪ್ರೇರಣೆ; ಎಲ್ಲಕ್ಕಿಂತ ಮಿಗಿಲಾಗಿ ಭಗವಂತನ ಸಂಕಲ್ಪ. ಇದೆಲ್ಲ ದ್ರೋಣರಿಗೆ ಗೋವೊಂದನ್ನು ಸಂಪಾದಿಸಲೆಂದು ತೆರಳಲು ಕಾರಣವಾದವು ಎಂದರ್ಥ.

೨) ಇಲ್ಲಿ 'ಕೃಪಯಾ' ಎಂಬುದಕ್ಕೆ ಕೃಪೆಯಿಂದ ಎಂಬ ಅರ್ಥದಂತೆ, ಪತ್ನಿಯಾದ ಕೃಪಿಯಿಂದ ಎಂಬ ಅರ್ಥವೂ ಧ್ವನಿತವಾಗಿದೆ ಎಂಬುದನ್ನು ಗ್ರಹಿಸಬೇಕು.

೩) ಹಾಲಿನ ಸಮಸ್ಯೆ ಶಾಶ್ವತ ಪರಿಹಾರವಾಗಲು ಗೋವನ್ನು ಸಂಪಾದಿಸುವುದೊಂದೇ ಉಪಾಯ ಎಂದು ತಿಳಿದು, ಹಾಗೆ ತೆರಳಿದರು ಎಂದರ್ಥ.

ಪ್ರತಿಗ್ರಹಾತ್ ಸನ್ನಿವೃತ್ತಃ ಸ ರಾಮಂ ಯಯೌ ನ ವಿಷ್ಣೋರ್ಹಿ ಭವೇತ್ ಪ್ರತಿಗ್ರಹಃ ।
ದೋಷಾಯ ಯಸ್ಮಾತ್ ಸ ಪಿತಾऽಖಿಲಸ್ಯ ಸ್ವಾಮೀ ಗುರುಃ ಪರಮಂ ದೈವತಂ ಚ ॥ ೧೧ ॥

ಅ: ದಾನ ಸ್ವೀಕರಿಸುವುದನ್ನು ಪೂರ್ಣ ತೊರೆದಿದ್ದ ದ್ರೋಣರು ಪರಶುರಾಮರ ಬಳಿಗೆ ತೆರಳಿದರು. ವಿಷ್ಣುವು ಸಕಲರಿಗೂ ತಂದೆ, ಸ್ವಾಮಿ, ಗುರು, ಪರದೇವತೆ. ಆದ್ದರಿಂದ ಅವನಿಂದ ಸ್ವೀಕರಿಸುವುದು ದೋಷಕರವಾಗದು ಅಲ್ಲವೆ!.

ವಿ: ೧) ಆಗಲೂ ಅಪ್ರತಿಗ್ರಹ ವ್ರತವನ್ನು ತೊರೆಯಲು ಅವರಿಂದ ಸಾಧ್ಯವಾಗಲಿಲ್ಲ. ಆದರೆ ಅದನ್ನು ತೊರೆಯದೆ ಗೋವು ಲಭಿಸುವಂತಿಲ್ಲ. ಅದಕ್ಕಾಗಿ ಅವರು ಮಾಡಿದ ಉಪಾಯ ಇದಾಗಿತ್ತು; ಪರಶುರಾಮ ಸಾಕ್ಷಾತ್ ಮಹಾವಿಷ್ಣುವಿನ ದಶಾವತಾರಗಳಲ್ಲಿ ಒಂದು. ಎಂದರೆ ಅವನು ಜಗತ್ತಿನ ಸರ್ವಸ್ವಾಮಿ. ಅವನ ಬಳಿ ಸ್ವೀಕರಿಸುವುದು ಸರ್ವಥಾ ದೋಷವಲ್ಲ. ತಂದೆತಾಯಿಗಳಿಂದ, ಗುರುಗಳಿಂದ ಪಡೆದದ್ದು ದಾನವೆನ್ನಿಸುವುದಿಲ್ಲವಷ್ಟೆ! ಅದಕ್ಕಾಗಿ ಪರಶುರಾಮರ ಬಳಿ ತೆರಳಿದರು ಎಂದು ತಿಳಿಯಬೇಕು.

೨) ಭಗವಂತನ ಬಳಿಗೆ ತೆರಳುವ ನಾಲ್ಕು ಬಗೆಯ ಭಕ್ತರಲ್ಲಿ ಆರ್ತರೂ ಒಂದು ಬಗೆ. ದ್ರೋಣರು ಈ ಪ್ರಸಂಗದಲಿ ಆರ್ತರಾಗಿ ತೆರಳಿದರು ಎಂಬ ಮಾತು ಹಿಂದಿನ ಶ್ಲೋಕದಲ್ಲಿನ 'ಆರ್ತರೂಪಃ' ಎಂಬ ಪದದಿಂದ ಸ್ಪಷ್ಟ.

೩) ಆಗ ವಿಷ್ಣುವಿನ ಪರಶುರಾಮ, ವೇದವ್ಯಾಸ ಹಾಗೂ ಕೃಷ್ಣ ಎಂಬ ಮೂರು ರೂಪಗಳು ಭೂಲೋಕದಲ್ಲಿ ವ್ಯಕ್ತವಾಗಿದ್ದವು. ಆದರೂ ಅವರು ಪರಶುರಾಮರೂಪದ ಬಳಿಗೆ ತೆರಳಲು ಕಾರಣವನ್ನು ಹೀಗೆ ಊಹಿಸಬಹುದು. ಕೃಷ್ಣರೂಪ ಕ್ಷತ್ರಿಯರೂಪ; ವೇದವ್ಯಾಸರೂಪ ವಿಪ್ರರೂಪವಾದರೂ, ಜ್ಞಾನ ನೀಡುವ ರೂಪ. ಪರಶುರಾಮರೂಪ ವಿಪ್ರರೂಪವಾದರೂ,

ದುಷ್ಟಕ್ಷತ್ರಿಯರನ್ನು ನಾಶಮಾಡಿ, ಕ್ಷಾತ್ರತೇಜಸ್ಸನ್ನು ಮೆರೆದ ರೂಪ. ದಾನ ಕ್ಷತ್ರಿಯರೂಪದ ವಿಶೇಷಕಾರ್ಯಗಳಲ್ಲೊಂದು ('ದಾನಮೀಶ್ವರಭಾವಶ್ಚ ಕ್ಷತ್ರಕರ್ಮಸ್ವಭಾವಜಮ್'). ಮೇಲಾಗಿ ಪರಶುರಾಮರೂಪ ದುಷ್ಟಕ್ಷತ್ರಿಯರನ್ನು ನಾಶ ಮಾಡಿ ಪಡೆದದ್ದನ್ನು ವಿಪ್ರರಿಗೆ ನೀಡುವ ಕಾರ್ಯದಲ್ಲಿ ಪ್ರವೃತ್ತವಾಗಿದ್ದ ವಿಶೇಷರೂಪ. ಆದ್ದರಿಂದ ಅವರು ಆ ರೂಪದ ಬಳಿಗೇ ತೆರಳಿದರು ಎಂದು ತಿಳಿಯಬೇಕು. ಭಗವಂತನ ರೂಪರೂಪಗಳಲ್ಲಿ ಭೇದವಿಲ್ಲವಾದರೂ, ಜ್ಞಾನಕಾರ್ಯರೂಪ, ಬಲಕಾರ್ಯರೂಪ ಎಂಬ ವಿಶೇಷವನ್ನು ತಿಳಿಸಿರುವುದು ಈ ಚಿಂತನೆಗೆ ಮೂಲ (ಅಧ್ಯಾಯ ೨, ಶ್ಲೋ. ೨೨–೨೮).

೪) ವಯಸ್ಸಿನಲ್ಲೂ ಪರಶುರಾಮರೂಪ ಇತರ ಎರಡುರೂಪಗಳಿಗಿಂತ ತುಂಬಾ ಮುಂಚಿತವಾಗಿ ಅಭಿವ್ಯಕ್ತವಾದ ರೂಪ ಎಂಬುದು ಆ ವೇಳೆಗಾಗಲೇ ಏಳುನೂರುವರ್ಷಗಳನ್ನು ದಾಟಿದ್ದ ದ್ರೋಣರಿಗೆ ಅನ್ನಿಸಿರುವ ಸಾಧ್ಯತೆಯೂ ಇತ್ತು. ಕೃಷ್ಣರೂಪದ ವಯಸ್ಸಂತೂ ಆಗ ಹತ್ತು ಹನ್ನೆರಡು ವರ್ಷಗಳು ಮಾತ್ರ.

ದ್ರೋಣರ ಅವತಾರಕಾರ್ಯ

ದೃಷ್ಟ್ವೈವ ತಂ ಜಾಮದಗ್ನ್ಯೋಽಪ್ಯಚಿಂತಯತ್ ದ್ರೋಣಂ ಕರ್ತುಂ ಕ್ಷಿತಿಭಾರಾಪನೋದೇ
ಹೇತುಂ ಸುರಾಣಾಂ ನರಯೋನಿಜಾನಾಂ ಹಂತಾ ಚಾಯಂ ಸ್ಯಾತ್ ಸಹ ಪುತ್ರೇಣ ಚೇತಿ ॥೧೨॥

ಅ: ಪರಶುರಾಮರು ದ್ರೋಣರನ್ನು ಕಾಣುತ್ತಲೇ, ಅವರನ್ನು ಭೂಭಾರಪರಿಹಾರ-ಕಾರ್ಯದಲ್ಲಿ ನಿಮಿತ್ತವಾಗಿಸಲೆಂದು ಯೋಚಿಸಿದರು : ''ಮನುಷ್ಯಯೋನಿಯಲ್ಲಿ ಜನಿಸಿದ ದೇವತೆಗಳನ್ನು ಈ ದ್ರೋಣ ಮಗನೊಂದಿಗೆ ಕೂಡಿಕೊಂಡು ಸಂಹರಿಸುವಂತಾಗಬೇಕು''.

ವಿ: ೧) ಕೌರವರ ಕಡೆಯ ದುಷ್ಟರ ಸಂಹಾರಕ್ಕೆಂದು ಕಾದುವ ಪಾಂಡವರ ಕಡೆಯ ಮಹಾವೀರರೆಲ್ಲ ಮೂಲತಃ ದೇವತೆಗಳು. ಅವತಾರಕಾರ್ಯ ಪೂರೈಸಿದ ಮೇಲೆ ಅವರೂ ದೇಹ ತೊರೆದು ತಮ್ಮ ಮೂಲರೂಪ ಸೇರಲೇಬೇಕು. ಹಾಗೆ ಅವರ ದೇಹ ತೊರೆಸುವ ಕಾರ್ಯವನ್ನು ದ್ರೋಣ ಹಾಗೂ ದ್ರೋಣಪುತ್ರರಾದ ಅಶ್ವತ್ಥಾಮರು ಮಾಡಬೇಕು ಎಂದರ್ಥ.

೨) ದ್ರೋಣರು ದೇವಗುರುಗಳಾದ ಬೃಹಸ್ಪತ್ಯಾಚಾರ್ಯರು. ಎಂದರೆ ದೇವತೆಗಳೆಲ್ಲ ಅವರ ಶಿಷ್ಯರು. ಅವತರಿಸಿಬಂದ ದೇವತೆಗಳನ್ನು ಮರಳಿ ಅವರ ಮೂಲರೂಪಕ್ಕೆ ಕಳುಹಿಸುವ ಕೆಲಸವನ್ನು ಗುರುಗಳಾದ ಅವರ ಕೈಯಿಂದಲೇ ಮಾಡಿಸಬೇಕು ಎಂಬುದು ಭಗವಂತನ ಸಂಕಲ್ಪ.

೩) ದ್ರೋಣರು ಹೀಗೆ ದೇವಗುರುಗಳಾದರೆ, ಅವರ ಪುತ್ರನಾಗಿ ಅವತರಿಸಿದ ಅಶ್ವತ್ಥಾಮರು ಲಯಕಾರಕನಾದ ಶಿವನ ಅವತಾರ. ಅವರಿಂದ ಪಾಂಡವಸೇನೆಯ ಲಯ ಪ್ರಧಾನವಾಗಿ ನಡೆಯಬೇಕು ಎಂಬಲ್ಲಿರುವ ಔಚಿತ್ಯವೂ ಗಮನಾರ್ಹ.

ತೇಷಾಂ ವೃದ್ಧಿಃ ಸ್ಯಾತ್ ಪಾಂಡವಾರ್ಥೇ ಹತಾನಾಂ ಮೋಕ್ಷೇಽಪಿ ಸೌಖ್ಯಸ್ಯ ನ ಸಂತತಿಶ್ಚ।
ಯೋಗ್ಯಾ ಸುರಾಣಾಂ ಕಲಿಜಾಃ ಸುಪಾಪಾಃ ಪ್ರಾಯೋ ಯಸ್ಮಾತ್ ಕಲಿಜಾಃ ಸಂಭವಂತಿ ॥ ೧೩ ॥

ಅ: ಪಾಂಡವರಿಗೋಸ್ಕರ ಹತರಾಗುವ ಅವರಿಗೆ ಮುಕ್ತಿಯಲ್ಲೂ ಆನಂದದ ವೃದ್ಧಿಯಾಗುವುದು. ಅವರಿಗೆ ಕಲಿಯುಗದಲ್ಲಿ ಸಂತತಿ ಆಗುವುದು ತರವಲ್ಲ. ಏಕೆಂದರೆ ಕಲಿಯುಗದಲ್ಲಿ ಹುಟ್ಟುವವರು ಸಾಮಾನ್ಯವಾಗಿ ಮಹಾಪಾಪಿಗಳಾಗಿರುವರು.

ಏ: ೧) ಹೀಗೆ ಹತರಾಗುವ ಪಾಂಡವವೀರರಿಗೆ ಅನರ್ಥವೆಂದೂ ಆಗದು. ಅವರೆಲ್ಲ ದೇವತೆಗಳಾದ್ದರಿಂದ ಅವರಿಗೆ ಮುಕ್ತಿ ನಿಶ್ಚಿತ. ಹೀಗೆ ಪಾಂಡವರಿಗೋಸ್ಕರ ಹತರಾಗುವುದರಿಂದ ಒದಗುವ ವಿಶೇಷಪುಣ್ಯ ಮುಕ್ತಿಯಲ್ಲಿನ ಆನಂದೋನ್ನತಿಗೂ ಮುಖ್ಯಸಾಧನ. ಹೀಗೆ ಕೊಲ್ಲುವ ಇವರಿಗೂ, ಕೊಲ್ಲಲ್ಪಡುವ ಅವರಿಗೂ ಪುಣ್ಯವಿಶೇಷವೇ ಫಲ ಎಂದರ್ಥ.

೨) ಇನ್ನು ಪಾಂಡವರ ಕಡೆಯ ಸಜ್ಜನರು ಬದುಕಿ ಸಂತತಿಯನ್ನು ಪಡೆಯುವುದು ಉಚಿತ–ವಲ್ಲ. ಏಕೆಂದರೆ ಕಲಿಯುಗದಲ್ಲಿ ಹುಟ್ಟುವವರೆಲ್ಲ ಸಾಮಾನ್ಯವಾಗಿ ಮಹಾಪಾಪಿಗಳು. ಆದ್ದರಿಂದ ಅವರಿಗೂ ಅಯೋಗ್ಯಸಂತತಿ ಹುಟ್ಟಿ, ಲೋಕನಾಶಕ್ಕೇ ಕಾರಣವಾಗುವುದು ಎಂದು ಭಾವ.

೩) ಕಲಿಯುಗದಲ್ಲೂ ಮಧ್ವಶಿಷ್ಯಸಂತತಿಗೆ ಸೇರಿದವರು ಪಾಪಿಗಳಾಗದೆ, ಯೋಗ್ಯರೇ ಆದವರು ಎಂಬುದನ್ನು ತಿಳಿಸಲು ಎಲ್ಲರೂ ಪಾಪಿಗಳು ಎಂದು ಹೇಳದೆ, 'ಪ್ರಾಯಃ' ಎಂಬ ಪದದಿಂದ ವಿಶೇಷಾಂಶವನ್ನು ತಿಳಿಸಿರುವರು ಎಂಬ ವಿಶೇಷಾರ್ಥ ವಾದಿರಾಜೀಯದಲ್ಲಿದೆ.

೪) ಕಲಿಯುಗದಲ್ಲಿ ಕ್ಷೇಮಕಾದಿಸಜ್ಜನರು ಜನಿಸಿರುವುದನ್ನು ಸೂಚಿಸಲು 'ಪ್ರಾಯಃ' ಎಂದಿರುವರು ಎಂಬುದಾಗಿ ಜನಾರ್ದನೀಯದಲ್ಲಿದೆ.

ನ ದೇವಾನಾಮಾಶತಂ ಪೂರುಷಾ ಹಿ ಸಂತಾನಜಾಃ ಪ್ರಾಯಶಃ ಪಾಪಯೋಗ್ಯಾಃ।
ನಾಕಾರಣಾತ್ ಸಂತತೇರಪ್ಯಭಾವೋ ಯೋಗ್ಯಃ ಸುರಾಣಾಂ ಸದಮೋಘರೇತಸಾಮ್ ॥ ೧೪ ॥

ಅ: ದೇವತೆಗಳ ಸಂತತಿಯಲ್ಲಿ ಜನಿಸುವವರು ನೂರುತಲೆಮಾರಿನವರೆಗೆ ಸಾಮಾನ್ಯವಾಗಿ ಪಾಪಯೋಗ್ಯರಾಗಿರುವುದಿಲ್ಲ. ಅದರಂತೆ ಅಮೋಘರೇತಸ್ಕರಾದ ಅವರಿಗೆ ನಿಷ್ಕಾರಣವಾಗಿ ಸಂತತಿ ಆಗದಿರುವುದೂ ಉಚಿತವೆನ್ನಿಸದು.

---

೧. ಸುರಾಣಾಂ ಕಲಿಜಾ ಸಂತತಿಃ ಯೋಗ್ಯಾ ನೇತಿ ಸಂಬಂಧಃ। ಕಲಾವಪಿ ಶುಭಾನಾಂ ಮಧ್ವಶಿಷ್ಯಸಂತತೀನಾಂ ವಿದ್ಯಮಾನತ್ವಾತ್ ಪ್ರಾಯ ಇತ್ಯುಕ್ತಮ್ ॥ – (ವಾ.)

೨. ಕ್ಷೇಮಕಾದಿವ್ಯಾವೃತ್ತ್ಯರ್ಥಂ ಪ್ರಾಯ ಇತ್ಯುಕ್ತಮ್। – (ಜ.)

ವಿ: ೧) ದೇವತೆಗಳ ಸಂತತಿ ಸಾಮಾನ್ಯವಾಗಿ ಯೋಗ್ಯವೇ ಆಗಿರಬೇಕಾದದ್ದು ಶಾಸ್ತ್ರವಿಧಿ; [೧]'ನಾಬ್ರಹ್ಮವಿತ್ ತಸ್ಯ ಕುಲೇ ಭವತಿ', ಅದೂ ನೂರು ತಲೆಯವರೆಗೆ. ಎಂದರೆ ದೇವತೆಗಳಿಗೆ ಅಯೋಗ್ಯಸಂತಾನವಾಗುವಂತಿಲ್ಲ. ಬರುವುದು ಕಲಿಯುಗವಾದ್ದರಿಂದ ಯೋಗ್ಯಸಂತತಿಯು ಆಗುವಂತೆಯೂ ಇಲ್ಲ. ಅಮೋಘರೇತಸ್ಕರಾದರ ಅವರು ಸಂತತಿಹೀನರಾಗುವುದೂ ಉಚಿತವಲ್ಲ. ಆದ್ದರಿಂದ ಅವರೆಲ್ಲ ಹತರಾಗುವುದೇ ಸೂಕ್ತ ಎಂದು ಭಾವ.

೨) ದುರ್ಯೋಧನಾದಿ ಅಯೋಗ್ಯರು ಸಹ ಕುರುವಂಶದಂತಹ ಶ್ರೇಷ್ಠದೇವವಂಶದಲ್ಲಿ ಜನಿಸಿರುವರು ಎಂದು ತಿಳಿಸಲು 'ಪ್ರಾಯಶಃ' ಎಂದಿರುವರು ಎಂದು [೨]ಜನಾರ್ದನೀಯದಲ್ಲಿದೆ.

ಅವ್ಯುಚ್ಛಿನ್ನೇ ಸಕಲಾನಾಂ ಸುರಾಣಾಂ ತಂತೌ ಕಲಿರ್ನೋ ಭವಿತಾ ಕಥಂಚಿತ್ ।
ತಸ್ಮಾದುತ್ಸಾದ್ಯಾಃ ಸರ್ವ ಏತೇ ಸುರಾಂಶಾ ಏತೇನ ಸಾಕಂ ತನಯೇನ ವೀರಾಃ ॥ ೧೫ ॥

ಅ: ಸಕಲ ದೇವತೆಗಳ ಸಂತತಿಯೂ ಅವಿಚ್ಛಿನ್ನವಾಗಿ ಮುಂದುವರೆದಲ್ಲಿ ಕಲಿಯುಗವೇ ಒದಗಲಾರದು. ಆದ್ದರಿಂದ ದೇವಾಂಶರಾದ ಪಾಂಡವಪಕ್ಷದ ವೀರರೆಲ್ಲ ದ್ರೋಣ ಹಾಗೂ ಅವರ ಪುತ್ರನಿಂದ ನಾಶ ಹೊಂದಬೇಕು.

ವಿ: ದೇವಸಂತತಿ ಮುಂದುವರೆಯದಿರಲು ಅವರ ಸಂಹಾರವೊಂದೇ ಪರಿಹಾರ. ಅಂತಹ ಸಂಹಾರಕಾರ್ಯಕ್ಕೆ ದ್ರೋಣ ಅಶ್ವತ್ಥಾಮರೇ ಪ್ರಧಾನನಿಮಿತ್ತರಾಗಬೇಕು ಎಂಬುದು ಅವರ ಸಂಕಲ್ಪವಾಗಿತ್ತು.

ಪರಶುರಾಮರ ಬಳಿ ದ್ರೋಣರ ಅಸ್ತ್ರಾಭ್ಯಾಸ

ಏವಂ ವಿಚಿಂತ್ಯಾಪ್ರತಿಮಃ ಸ ಭಾರ್ಗವೋ ಬಭಾಷ ಈಷತ್ಸ್ಮಿತಶೋಚಿಷಾ ಗಿರಾ ।
ಅನಂತಶಕ್ತಿಃ ಸಕಲೇಶ್ವರೋಽಪಿ ತ್ಯಕ್ತಂ ಸರ್ವಂ ನಾದ್ಯ ವಿತ್ತಂ ಮಮಾಸ್ತಿ ॥ ೧೬ ॥

ಅ: ಹೀಗೆ ಚಿಂತಿಸಿ ಅನಂತ ಶಕ್ತಿಯುಳ್ಳವನೂ, ಸರ್ವೇಶ್ವರನೂ, ಅಪ್ರತಿಮನೂ ಆದ ಶ್ರೀಪರಶುರಾಮ ಮಂದಹಾಸದಿಂದ ನುಡಿದ : ''ನಾನೀಗ ಎಲ್ಲವನ್ನೂ ಕೊಟ್ಟಾಗಿದೆ. ನನ್ನ ಬಳಿ ಈಗ ಧನವಿಲ್ಲ''.

---

೧. ನಾಸ್ಯಾಬ್ರಹ್ಮವಿದ್ ಕುಲೇ ಭವತಿ। – ಇತಿ ಆಥರ್ವಣೇ (೨/೩/೮)
ದೇವಾನಾಂ ಸಂತತೌ ಜಾತಾಃ ಪ್ರಾಯಶೋ ಜ್ಞಾನಿನಃ ಕೃತೇ।
ಬಲವದ್ಧೇತುತಶ್ಚಾನ್ಯೇ ಯಸ್ಮಾದ್ಬ್ರಹ್ಮವಿದಃ ಸುರಾಃ।
ನ ಸಂತತೌ ಬ್ರಹ್ಮವಿದೋ ನರಾಣಾಂ ಜ್ಞಾನಿನಾಮಪಿ ॥
ಪ್ರಾಯಶಃ ಸ್ಯುಃ ಸುರಾಣಾಂ ಚ ನಿಯಮೋಽಯಂ ಕೃತೇಯುಗೇ ॥ – ಇತ್ಯಾದಿ ಆಥರ್ವಣಭಾಷ್ಯೇ।

೨. ದುರ್ಯೋಧನಾದಿವ್ಯಾವೃತ್ಯರ್ಥಂ ಪ್ರಾಯಶ ಇತ್ಯುಕ್ತಮ್। – (ಜ.)

ವಿಃ ೧) ತನ್ನ ಸಂಕಲ್ಪವನ್ನು ಕಾರ್ಯರೂಪಕ್ಕೆ ಇಳಿಸಲು ಪರಶುರಾಮ ನೀಡಿದ ಪೀಠಿಕೆ ಇದಾಗಿತ್ತು.

೨) ಈ ಮಾತಿನಲ್ಲಿ ಪರಶುರಾಮರೂಪದ ಮತ್ತೊಂದು ವೈಶಿಷ್ಟ್ಯ ಪ್ರತಿಪಾದಿತವಾಗಿದೆ. ಆ ರೂಪದಿಂದ ದುಷ್ಟಕ್ಷತ್ರಿಯರನ್ನು ಸಂಹಾರಮಾಡಿ, ಅವರ ಸಂಪತ್ತನ್ನೆಲ್ಲ ಯೋಗ್ಯರಿಗೆ ದಾನ ಮಾಡಿದ್ದು ಅದರ ಹಿರಿಮೆ. ಬ್ರಾಹ್ಮಣರೂಪವಾದ್ದರಿಂದ ಅದರಿಂದ ರಾಜ್ಯಭಾರ ಮಾಡದೆ, ದಾನ ಮಾಡಿದ್ದು ಒಂದು ರೀತಿಯ ಧರ್ಮಶಿಕ್ಷಣವಾದರೆ, ಹಾಗೆ ಅಪಾರಸಂಪತ್ತನ್ನು ನೀಡುವ ಮೂಲಕ ತಾನು ಸಂಪತ್ತು ಅಥವಾ ಅಧಿಕಾರಕ್ಕೋಸ್ಕರ ಅವರನ್ನು ಹಾಗೆ ಕೊಂದದ್ದಲ್ಲ ಎಂಬ ತನ್ನ ಅವತಾರಕಾರ್ಯವನ್ನು ಸಾರಲು ಸಹ ಎಂದು ತಿಳಿಯಬೇಕು.

೩) ಬ್ರಾಹ್ಮಣನಿಗೆ ವಿಹಿತವಾದ ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ ಮತ್ತು ಪ್ರತಿಗ್ರಹ ಎಂಬ ಷಟ್ಕರ್ಮಗಳಲ್ಲಿ ಪ್ರಥಮಸ್ಥಾನ ಅಧ್ಯಯನಕ್ಕಾದರೆ, ಕೊನೆಯ ಸ್ಥಾನ ಪ್ರತಿಗ್ರಹಕ್ಕೆ. ಆದರೆ ಪ್ರತಿಗ್ರಹವಷ್ಟೆ ಬ್ರಾಹ್ಮಣಧರ್ಮ ಎಂಬ ಭ್ರಮೆ ಹುಟ್ಟಿದ್ದು ಒಂದು ದೊಡ್ಡ ವಿಪರ್ಯಾಸ. ಶ್ರೀಹರಿ ಸರ್ವಸ್ವವನ್ನೂ ದಾನ ಮಾಡುವ ಮೂಲಕ ದಾನ ಕಡ್ಡಾಯ; ಪ್ರತಿಗ್ರಹ ಐಚ್ಛಿಕ ಎಂಬ ಧರ್ಮಸೂಕ್ಷ್ಮವನ್ನು ತಿಳಿಸಿಕೊಟ್ಟಿರುವನು ಎಂದು ತಿಳಿಯಬೇಕು. ಪರಶುರಾಮನ ರೂಪದ ಈ ಮುಖ ಶ್ರೀಹರಿಯ ಅಪಾರ ಔದಾರ್ಯಕ್ಕೆ ಶ್ರೇಷ್ಠ ನಿದರ್ಶನ.

೪) ''ನನ್ನಲ್ಲಿ [೧]ವಿತ್ತವಿಲ್ಲ; ಆದರೆ ವಿತ್ತೇಶ್ವರಿಯಾದ ಮಹಾಲಕ್ಷ್ಮಿಯೇ ಇರುವಳು'' ಎಂಬ ಸೂಚನೆಯೂ ಇಲ್ಲಿದೆ.

[೨]ಆತ್ಮಾ ವಿದ್ಯಾ ಶಸ್ತ್ರಮೇತಾವದಸ್ತಿ
ತೇಷಾಂ ಮಧ್ಯೇ ರುಚಿತಂ ತ್ವಂ ಗೃಹಾಣ ।
ಉಕ್ತಃ ಸ ಇತ್ಥಂ ಪ್ರವಿಚಿಂತ್ಯ ವಿಪ್ರೋ
ಜಗಾದ ಕಸ್ತ್ವದ್ಗ್ರಹಣೇ ಸಮರ್ಥಃ ॥ ೧೭ ॥

---

೧. ಹಿರಣ್ಯಂ ಮಮ ಯಚ್ಚಾನ್ಯದ್ ವಸು ಕಿಂಚಿದಿಹ ಸ್ಥಿತಮ್ ।
ಬ್ರಾಹ್ಮಣೇಭ್ಯೋ ಮಯಾ ದತ್ತಂ ಸರ್ವಮೇತತ್ ತಪೋಧನ ॥
ಶರೀರಮಾತ್ರಮೇವಾದ್ಯ ಮಮೇದಮವಶೇಷಿತಮ್ ।
ಅಸ್ತ್ರಾಣಿ ಮಹಾರ್ಹಾಣಿ ಶಸ್ತ್ರಾಣಿ ವಿವಿಧಾನಿ ಚ ॥
ಅಸ್ತ್ರಾಣಿ ವಾ ಶರೀರಂ ವಾ ವರಯೈತರ್ನಮೋದ್ಯತಮ್ ॥
- ಇತಿ ದ್ರೋಣಂ ಪ್ರತಿ ಪರಶುರಾಮವಚನಂ ಭಾರತೇ (ಆದಿ. ೧೨೯/೬೦,೬೧)

೨. ಆತ್ಮಾ= ಸ್ವಯಂ, ವಿದ್ಯಾ= ಬ್ರಹ್ಮವಿದ್ಯಾ ॥ – (ವಾ.)

ಅ: ''ನಾನು, ನನ್ನ ವಿದ್ಯೆ ಮತ್ತು ಆಯುಧಗಳಷ್ಟೇ ಈಗ ನನ್ನ ಬಳಿ ಇರುವುದು. ಅವುಗಳ ಮಧ್ಯದಲ್ಲಿ ಬಯಸಿದ್ದನ್ನು ನೀವು ತೆಗೆದುಕೊಳ್ಳಬಹುದು''. ಅವರು ಹೀಗೆ ನುಡಿಯಲು ದ್ರೋಣರು ಚೆನ್ನಾಗಿ ಯೋಚಿಸಿ ಹೇಳಿದರು : ''ನಿನ್ನನ್ನು ತೆಗೆದುಕೊಳ್ಳಲು ಸಮರ್ಥನಾರು?''

ವಿ: ಪರಶುರಾಮರ ಮಾತಿನ ಅರ್ಥ ''ನಾನು ಬೇಕಾದರೆ ನನ್ನನ್ನೇ ನಿಮಗೆ ಕೊಟ್ಟು ಜೊತೆಗೆ ಬರುವೆ ಅಥವಾ ವಿದ್ಯೆಯನ್ನು ಉಪದೇಶಿಸುವೆ ಅಥವಾ ನನ್ನ ಆಯುಧಗಳನ್ನು ನೀಡುವೆ'' ಎಂದು.

ಸರ್ವೇಶಿತಾ ಸರ್ವಪರಃ ಸ್ವತಂತ್ರಸ್ತ್ವಮೇವ ಕೋಽನ್ಯಃ ಸದೃಶಸ್ತವೇಶ ।
ಸಾಮ್ಯಂ[೧] ತವೇಚ್ಛನ್ ಪ್ರತಿಯಾತ್ಯಧೋ ಹಿ ಯಸ್ಮಾನ್ನ ಚೋತ್ಥಾತುಮಲಂ ಕದಾಚಿತ್ ೧೮

ಅ: ''ಸ್ವಾಮಿ! ನೀನು ಎಲ್ಲರ ಒಡೆಯ; ಎಲ್ಲರಿಗಿಂತ ಮಿಗಿಲು; ಸ್ವತಂತ್ರ. ನಿನಗೆ ಸದೃಶರು ಬೇರಾರು ಇರುವರು? ನಿನ್ನ ಸಾಮ್ಯವನ್ನು ಬಯಸುವವನು ಮತ್ತೆಂದೂ ಮರಳಲಾಗದ ಅಧೋಗತಿಗೆ ತೆರಳುವನು''.

ವಿ: ಪರಶುರಾಮರನ್ನು ತೆಗೆದುಕೊಳ್ಳುವುದು ಎಂದರೆ ಅವರ ಮೇಲೆ ಸ್ವಾಮಿಭಾವವನ್ನು ಹೊಂದಿದಂತಾಗುವುದು. ಭಗವಂತನಿಗೆ ಸಮನೇ ಇಲ್ಲದಿರುವಾಗ ಅವನ ಮೇಲೆ ಸ್ವಾಮಿಭಾವ ಹೊಂದುವಂತಹ ಉತ್ತಮನು ಎಲ್ಲಿರುವನು? ಹಾಗೆ ಚಿಂತಿಸುವುದು ಸಾಕ್ಷಾತ್ ಅಧೋಗತಿಗೆ ಸಾಧನ. ಆದ್ದರಿಂದ ಅವರನ್ನು ಸ್ವೀಕರಿಸಿ ಕರೆದೊಯ್ಯುವುದು ಆಗದ ಮಾತು ಎಂದು ಭಾವ.

ಸರ್ವೋತ್ತಮಸ್ಯೇಶ ತವೋಚ್ಚಶಸ್ತ್ರೈಃ ಕಾರ್ಯಂ ಕಿಮಸ್ಮಾಕಮನುದ್ಧಲಾನಾಮ್[೨] ।
ವಿದ್ಯೈವ ದೇಯಾ ಭವತಾ ತತೋಽಜ ಸರ್ವಪ್ರಕಾಶಿನ್ಯಚಲಾ ಸುಸೂಕ್ಷ್ಮಾ ॥ ೧೯ ॥

ಅ: ''ಈಶನೆ! ಸರ್ವೋತ್ತಮನಾದ ನಿನ್ನ ಮಹತ್ತರವಾದ ಶಸ್ತ್ರಗಳಿಂದ ಬಲಹೀನರಾದ ನಾವು ಮಾಡುವುದೇನು? ಆದ್ದರಿಂದ ಅಜನೆ! ಎಲ್ಲವನ್ನೂ ಬೆಳಗುವಂತಹ ನಿರ್ಮಲವಾದ, ಅತ್ಯಂತಸೂಕ್ಷ್ಮವಾದ ವಿದ್ಯೆಯನ್ನೇ ನೀನು ನನಗೆ ನೀಡು''.

ವಿ: ೧) ಇನ್ನು ಪರಶುರಾಮರ ಶಾರ್ಙ್ಗಧನುಸ್ಸು, ಪರಶುಗಳನ್ನು ಬೇಡುವುದು. ಅದೂ ಸಲ್ಲದ ಮಾತು. ಏಕೆಂದರೆ ಅವೆಲ್ಲ ಮಹಾಲಕ್ಷ್ಮಿ ಮೊದಲಾದ ಶ್ರೇಷ್ಠದೇವತೆಗಳಿಂದ ಅಭಿಮನ್ಯ–

---

೧. ಸ್ವಾಮ್ಯಂ - (ಪಾಠಾಂತರ)

೨. ಅನುದ್ಧಲಾನಾಂ ಅನುತ್ಕೃಷ್ಟಬಲಾನಾಮ್ । – (ಜ.)

ಮಾನವಾದ, ಶ್ರೀಹರಿಗೆ ಮಾತ್ರ ಧರಿಸಲು ಸಾಧ್ಯವಾಗುವಂತಹ ಮಹತ್ತರವಸ್ತುಗಳು. ಆದ್ದರಿಂದ ಅವುಗಳನ್ನೂ ಬೇಡಿ ಪಡೆಯವುದು ತರವಲ್ಲ ಎಂದರ್ಥ.

೨) ದ್ರೋಣರು ಹೀಗೆ ಭಗವಂತನ ಮಹತ್ತರವಾದ ಆಯುಧಗಳನ್ನು ಬೇಡದೆ, ವಿವೇಕವನ್ನು ಮೆರೆದರೂ, ಅವರ ಪುತ್ರ ಅಶ್ವತ್ಥಾಮರು ದುರ್ಯೋಧನನ ಮೇಲಿನ ಮೋಹದಿಂದಾಗಿ ಅಸುರಾವೇಶಕ್ಕೊಳಗಾಗಿ ಕೃಷ್ಣನ ಆಯುಧವಾದ ಚಕ್ರವನ್ನೇ ತಮ್ಮ ಉಪಯೋಗಕ್ಕೆಂದು ಬೇಡುವ ದುಃಸಾಹಸಕ್ಕೇ ಕೈಹಾಕಿ ಶಕ್ತಿ ಸಾಲದೆ, ನಾಚಿಕೆಯಿಂದ ತಲೆಬಾಗುವ ಪ್ರಸಂಗದ ವಿವರ ಮುಂದೆ ಬಂದಿದೆ (ಅ. ೨೮, ಶ್ಲೋ. ೧೬೦).

೩) ಹೀಗೆ ಮೂರರಲ್ಲಿ ಇನ್ನು ಉಳಿದದ್ದು ವಿದ್ಯೆ ಮಾತ್ರ. ಅದನ್ನೇ ನೀಡಿ ಅನುಗ್ರಹಿಸಬೇಕೆಂದು ದ್ರೋಣರ ಆಶಯ. ಈ ರೀತಿಯಾದ ದ್ರೋಣರ ವಿವೇಚನಾಸಾಮರ್ಥ್ಯಕ್ಕೆ ಅವರ ಸ್ವರೂಪದಂತೆ, ಅವರು ಅವರೆಗೆ ಪಾಲಿಸಿದ್ದ ಶ್ರೇಷ್ಠಸ್ವಧರ್ಮವೂ ಕಾರಣವಾಗಿತ್ತೆಂದು ತಿಳಿಯಬಹುದು.

ಇತೀರಿತಸತ್ತ್ವವಿದ್ಯಾದಿಕಾಃ ಸ ವಿದ್ಯಾಃ[೧] ಸರ್ವಾಃ ಪ್ರದದೌ ಸಾಸ್ತ್ರಶಸ್ತ್ರಾಃ।
ಅಬ್ದದ್ವಿಷಟ್ಕೇನ ಸಮಾಪ್ಯ ತಾಃ ಸ ಯಯೌ ಸಖಾಯಂ ದ್ರುಪದಂ ಮಹಾತ್ಮಾ ॥ ೨೦ ॥

ಅ: ಅವರು ಹೀಗೆ ನುಡಿಯಲು ಪರಶುರಾಮರು ಶಸ್ತ್ರಾಸ್ತ್ರವಿದ್ಯೆಗಳೊಂದಿಗೆ ತತ್ತ್ವವಿದ್ಯೆ ಮೊದಲಾದ ಸಕಲವಿದ್ಯೆಗಳನ್ನೂ ಉಪದೇಶಿಸಿದರು. ಅವುಗಳನ್ನೆಲ್ಲ ಹನ್ನೆರಡು ವರ್ಷಗಳಲ್ಲಿ ಪೂರೈಸಿ, ಮಹಾತ್ಮರಾದ ಆ ದ್ರೋಣರು ಗೆಳೆಯನಾದ ದ್ರುಪದನ ಬಳಿಗೆ ತೆರಳಿದರು.

ವಿ: ೧) ದ್ರೋಣರ ಪ್ರಾರ್ಥನೆಯಂತೆ ಪರಶುರಾಮರು ಅವರಿಗೆ ವಿದ್ಯೆಯನ್ನು ಉಪದೇಶಿಸಿದರು. ಅವರು ಉಪದೇಶಿಸಿದ ವಿದ್ಯೆಯಲ್ಲಿ ತತ್ತ್ವವಿದ್ಯೆಯೊಂದಿಗೆ ಶಸ್ತ್ರಾಸ್ತ್ರವಿದ್ಯೆ ಮೊದಲಾದ ಇತರವಿದ್ಯೆಗಳೂ ಸೇರಿದ್ದವು. ಹಾಗೆ ಅವನ್ನೆಲ್ಲ ಉಪದೇಶಿಸಲು ಮುಂದೆ ಅವರು ಕುರುಕ್ಷೇತ್ರಸಮರದಲ್ಲಿ ಕೌರವಪಕ್ಷ ವಹಿಸಿ, ಪಾಂಡವವೀರರನ್ನು ಸಂಹರಿಸುವಂತಾಗಬೇಕು ಎಂದು ಅವರು ಈ ಹಿಂದೆ ಮಾಡಿದ ಸಂಕಲ್ಪವೇ ಕಾರಣ ಎಂದು ತಿಳಿಯಬೇಕು.

೨) ಮಗ ಅಶ್ವತ್ಥಾಮರಿಗೆ ಹಾಲು ಕುಡಿಯಲು ಅನುಕೂಲವಾಗಲೆಂದು ಬಂದಿದ್ದ ದ್ರೋಣರು, ಅದನ್ನು ಮರೆತು ಹನ್ನೆರಡು ವರ್ಷಗಳ ಕಾಲ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು

---

೧. ಸರ್ವಾವಿದ್ಯಾಃ ನೀತಿಸ್ತಂಭೋಚ್ಚಾಟನಾದಿವಿದ್ಯಾಃ ಪ್ರದದೌ। – (ಜ.)

ಅವರಿಗಿದ್ದ ವಿದ್ಯಾಲಾಲಸೆ ಕಾರಣವಾಗಿತ್ತು ಎಂದು ತಿಳಿಯಬೇಕು. ಸ್ವತಃ ವಿದ್ಯಾವಾಚಸ್ಪತಿ– (ಬೃಹಸ್ಪತಿ) ಯಾಗಿದ್ದ ಅವರಿಗೆ ಅದು ಯುಕ್ತವೂ ಆಗಿತ್ತು.

೩) ವಿದ್ಯೆ ಪೂರೈಸಿದ ಅವರು ಮರಳುತ್ತಾ ದ್ರುಪದ ತಮಗೆ ವಚನ ನೀಡಿದ್ದನ್ನು ಜ್ಞಾಪಿಸಿಕೊಂಡು, ಅವನಿಂದ ತಮ್ಮ ಕಾರ್ಯ ಸಾಧಿಸಿಕೊಳ್ಳಲು ಹಾಗೆ ತೆರಳಿದರು ಎಂಬ ವಿವರ ಮುಂದಿನ ಶ್ಲೋಕದಲ್ಲಿದೆ.

೪) ದ್ರೋಣರು ಬಯಸಿದ್ದು ಲೋಕದ ಗೋವು. ಆದರೆ ಪರಶುರಾಮರು ನೀಡಿದ್ದು ಶಾಸ್ತ್ರಗೋವು. ಅವರು ಬಯಸಿದ್ದು ಒಂದು ಗೋವಾದರೆ, ಪರಶುರಾಮರು ನೀಡಿದ್ದು ಅಸಂಖ್ಯಗೋವುಗಳನ್ನು. ಭಗವಂತ ನೀಡುವ ಪರಿ ಅಂತಹುದು.

ದ್ರುಪದನ ಬಳಿಗೆ ದ್ರೋಣರು

ದಾನೇಽರ್ಧರಾಜ್ಯಸ್ಯ ಹಿ ತತ್ಪ್ರತಿಜ್ಞಾಂ
ಸಂಸ್ಮೃತ್ಯ ಪೂರ್ವಾಮುಪಯಾತಂ ಸಖಾಯಮ್ ।
ಸಖಾ ತವಾಸ್ಮೀತಿ ತದೋದಿತೋಽಪಿ
ಜಗಾದ ವಾಕ್ಯಂ ದ್ರುಪದೋಽತಿದರ್ಪಾತ್ ॥ ೨೧ ॥

ಅ: ಅರ್ಧರಾಜ್ಯವನ್ನು ನೀಡುವೆನೆಂಬ ತನ್ನ ಹಿಂದಿನ ಪ್ರತಿಜ್ಞೆಯನ್ನು ಸ್ಮರಿಸಿಕೊಂಡು ತನ್ನ ಬಳಿಗೆ ಬಂದು, ''ನಾನು ನಿನ್ನ ಗೆಳೆಯ'' ಎಂದು ನುಡಿದ ಮಿತ್ರರಾದ ಅವರಿಗೆ ದ್ರುಪದ ಅತ್ಯಂತ ದರ್ಪದಿಂದ ಹೀಗೆ ಹೇಳಿದ.

ವಿ: ೧) ದ್ರೋಣರು ದ್ರುಪದನ ಬಳಿಗೆ ತೆರಳಲು ಅವನು ನೀಡಿದ್ದ ವಚನ ಕಾರಣವಾದಂತೆ, ದ್ರುಪದ ಅವರನ್ನು ಆ ಸೊಕ್ಕಿನಿಂದ ನಿರಾಕರಿಸಲು ಅವನು ಹಾಗೆ ನೀಡಿದ್ದ ಆ ವಚನವೇ ಕಾರಣವಾಯಿತೆಂದು ತಿಳಿಯಬೇಕು.

೨) ತಾನು ವಚನ ನೀಡದಿದ್ದರೂ, ತನ್ನ ಬಳಿಗೆ ಬಂದ ತನ್ನ ಬಾಲ್ಯದ ಗೆಳೆಯ ಸುಧಾಮ–ನನ್ನು ಶ್ರೀಕೃಷ್ಣ ಆದರಿಸಿ, ಅವನಿಗೆ ಸಕಲಸೌಭಾಗ್ಯಗಳನ್ನೂ ನೀಡಿದ ಪ್ರಸಂಗವನ್ನು ಇಲ್ಲಿ ಜ್ಞಾಪಿಸಿ–ಕೊಳ್ಳಬೇಕು. ಅರ್ಧರಾಜ್ಯವನ್ನು ನೀಡುವ ವಚನವನ್ನು ನೀಡಿಯೂ, ಅವರನ್ನು ದರ್ಪದಿಂದ ಅವಮಾನಿಸಿದ ದ್ರುಪದನೆಲ್ಲಿ? ಯಾವ ವಚನವನ್ನು ನೀಡದೆಯೂ, ತನ್ನ ಬಳಿ ಬಂದ ಮಿತ್ರನಿಗೆ ಸರ್ವಸ್ವವನ್ನೂ ನೀಡಿದ ಕೃಷ್ಣನೆಲ್ಲಿ? ಅದಕ್ಕೆಂದೇ 'ನಂಬಿ ಕೆಟ್ಟವರಿಲ್ಲವೊ ರಂಗಯ್ಯನ' ಎಂಬ ದಾಸವಾಣಿ ಹೊರಟಿರುವುದು. ದೇವರಂತೆ ಬೇರಾರೂ ಆಪತ್ತಿಗೆ ಒದಗರು ಎಂಬ ತತ್ತ್ವವೂ ಇಲ್ಲಿ ಸೂಚಿತ.

ನ ನಿರ್ಧನೋ [೧]ರಾಜಸಖೋ ಭವೇತ
ಯಥೇಷ್ಟತೋ ವಿಪ್ರ ಗಚ್ಛೇತಿ ದೈವಾತ್ ।
ಇತೀರಿತೇಽಸ್ಯಾಶು ಬಭೂವ ಕೋಪೋ
ಜಿತೇಂದ್ರಿಯಸ್ಯಾಪಿ ಮುನೇರ್ಹರೀಚ್ಛಯಾ ॥ ೨೨ ॥

ಅ: ''ದರಿದ್ರನೆಂತು ರಾಜನಿಗೆ ಗೆಳೆಯನಾದಾನು? ಎಲವೊ ವಿಪ್ರ! ನೀನು ಇಷ್ಟಬಂದಲ್ಲಿಗೆ ತೆರಳು'' ಎಂದು ದೈವಪ್ರೇರಣೆಯಿಂದ ದ್ರುಪದ ನುಡಿದ. ಕೂಡಲೇ ಜಿತೇಂದ್ರಿಯರಾದ ದ್ರೋಣಾಚಾರ್ಯರಿಗೆ ದೈವಸಂಕಲ್ಪದಿಂದ ಆ ಕ್ಷಣದಲ್ಲಿ ಕೋಪ ಉಂಟಾಯಿತು.

ವಿ: ೧) ಸೊಕ್ಕಿನಿಂದಾಗಿ ದ್ರುಪದ ದ್ರೋಣರನ್ನು ದರಿದ್ರ ಎಂದು ಅವಮಾನಿಸಿದ. ಅವರೊಂದಿಗಿದ್ದ ಗೆಳೆತನವನ್ನು ನಿರಾಕರಿಸಿದ; ವಚನಭ್ರಷ್ಟನಾದ. ಇಂತಹ ಕೃತಘ್ನತೆ ಸಾಮಾನ್ಯರ ಸ್ವಭಾವ. ಆದರೆ ದ್ರುಪದ ಹೂಹೂ ನಾಮಕ ಗಂಧರ್ವನ ಅವತಾರ, ಅಂತಹವನು ಹೀಗೆ ಮಾಡಲು ದೈವಪ್ರೇರಣೆಯೇ ಮುಖ್ಯಕಾರಣ ಎಂಬುದನ್ನು 'ದೈವಾತ್'; ಎಂಬ ಪದದಿಂದ ಸೂಚಿಸಿರುವರು.

೨) ಇಂತಹುದೇ ಅಂತರ ಕೃಷ್ಣಸುಧಾಮರಿಗಿದ್ದರೂ, ಕೃಷ್ಣ ಸುಧಾಮನನ್ನು ನಿರಾಕರಿಸಲಿಲ್ಲ ಎಂಬ ವಿಷಯದಿಂದ ಸಕಲಜೀವರ ಮುಖ್ಯಮಿತ್ರ ಶ್ರೀಹರಿಯೇ ಆಗಿರುವರನು ಎಂಬ ಅಂಶ ದೃಢಪಡುವುದು ಎಂದೂ ಸಹ ತಿಳಿಯಬೇಕು ('ದ್ವಾ ಸುಪರ್ಣಾ ಸಯುಜಾ ಸಖಾಯ', 'ವಿಷ್ಣುರ್ಮೇ ಪರಮಃ ಸುಹೃತ್' ಇತ್ಯಾದಿ.

ದ್ರುಪದನನ್ನು ಮಣಿಸಲು ದ್ರೋಣರ ಶಪಥ

ಪ್ರತಿಗ್ರಹಾತ್ ಸನ್ನಿವೃತ್ತೇನ ಸೋಽಯಂ ಮಯಾ ಪ್ರಾಪ್ತೋ ಮತ್ಪಿತುಃ ಶಿಷ್ಯಕತ್ವಾತ್ ।
ಪಿತುಃ ಶಿಷ್ಯೋ ಹ್ಯಾತ್ಮಶಿಷ್ಯೋ ಭವೇತ ಶಿಷ್ಯಸ್ಯಾರ್ಥಃ ಸ್ವೀಯ ಏವೇತಿ ಮತ್ವಾ ॥ ೨೩ ॥

ಅ: ''ತಂದೆಯ ಶಿಷ್ಯ ತನ್ನ ಶಿಷ್ಯನೂ ಆಗುವನು; ಶಿಷ್ಯನ ಸ್ವತ್ತು ತನ್ನ ಸ್ವತ್ತೇ ಆಗುವುದು ಎಂದು ಬಗೆದು ಪ್ರತಿಗ್ರಹವನ್ನು ತೊರೆದ ನಾನು ನನ್ನ ತಂದೆಯ ಶಿಷ್ಯನೆಂದು ಇವನ ಬಳಿ ಬಂದೆ.

---

೧. ನ ಹಿ ರಾಜ್ಞಾಮುದೀರ್ಣಾನಾಮೇವಂಭೂತನರೈಃ ಕ್ವಚಿತ್ ।
ಸಖ್ಯಂ ಭವತಿ ಮಂದಾತ್ಮನ್ ಶ್ರಿಯಾ ಹೀನೈರ್ಧನಚ್ಯುತೈಃ ॥
ಅಹಂ ತ್ವಯಾ ನ ಜಾನಾಮಿ ರಾಜ್ಯಾರ್ಥೀ ಸಂವಿದಂ ಕೃತಮ್ ॥
- ಇತಿ ದ್ರೋಣಂ ಪ್ರತಿ ದ್ರುಪದವಚನಮ್ ಭಾರತೇ (ಆದಿ. ೧೩೦/೫)

ಸೋಽಯಂ ಪಾಪೋ ಮಾಮವಜ್ಞಾಯ ಮೂಢೋ
ದುಷ್ಟಂ ವಚೋಽಶ್ರಾವಯದಸ್ಯ ದರ್ಪಮ್ ।
ಹನಿಷ್ಯ ಇತ್ಯೇವ ಮತಿಂ ನಿಧಾಯ
ಯಯೌ ಕುರೂನ್ ಶಿಷ್ಯತಾಂ ನೇತುಮೇತಾನ್ ॥ ೨೪ ॥

ಅ: ಆದರೆ ಪಾಪಿಯಾದ ಈ ಮೂರ್ಖ ನನ್ನನ್ನು ಅವಮಾನಿಸಿ ಕೆಟ್ಟ ನುಡಿಗಳನ್ನಾಡಿದ. ಇವನ ಸೊಕ್ಕನ್ನು ಮುರಿಯುವೆ'' ಎಂದು ನಿಶ್ಚಯಸಿ, ಶಿಷ್ಯರನ್ನಾಗಿ ಮಾಡಿಕೊಳ್ಳಲೆಂದು ಕೌರವರ ಬಳಿಗೆ ತೆರಳಿದರು.

ವಿ: ೧) ಅಪ್ರತಿಗ್ರಹ ದ್ರೋಣರ ವ್ರತವಾಗಿತ್ತು. ಕೇಳುವ ಅನಿವಾರ್ಯ ಪ್ರಸಂಗ ಬಂದಾಗ ಅವನು ನೀಡಿದ್ದ ವಚನಕ್ಕಿಂತ ಮಿಗಿಲಾಗಿ ಅವನು ತಂದೆಯ ಶಿಷ್ಯನಾದ್ದರಿಂದ ತನಗೂ ಶಿಷ್ಯ. ಶಿಷ್ಯನ ಸ್ವತ್ತು ಗುರುವಿನ ಸ್ವತ್ತೂ ಆಗುವುದು. ಅಂದರೆ ಅವನನ್ನು ಕೇಳುವುದು ಬೇಡಿಕೆಯಾಗದೆ ಆದೇಶವಾಗುವುದು ಎಂಬುದು ದ್ರೋಣರ ವಿಚಾರಧಾರೆ ಎಂದರ್ಥ.

೨) ಶಿಷ್ಯನ ಸಾಧನೆಯೆಲ್ಲ ಗುರುವಿನ ಉಪದೇಶದ ಹಿನ್ನೆಲೆಯಲ್ಲಿ ನಡೆಯುವುದರಿಂದ ಶಿಷ್ಯನ ಸ್ವತ್ತು ಗುರುವಿನ ಸ್ವತ್ತು ಎಂಬುದು ಶಾಸ್ತ್ರದ ಆದೇಶ ಎಂದರ್ಥ. ತಂದೆಯ ಶಿಷ್ಯ ತನ್ನ ಶಿಷ್ಯನೂ ಹೌದು ಎಂಬುದಕ್ಕೆ 'ಗುರುವತ್ ಗುರುಪುತ್ರಸ್ತು' ಎಂಬ ಶಾಸ್ತ್ರವಾಣಿ ಆಧಾರ.

೩) ದ್ರೋಣರು ಹೀಗೆ ಮಾತ್ರವಲ್ಲದೆ 'ಸ್ಮೋತ್ತಮಾ ಗುರವಃ ಪ್ರೋಕ್ತಾಃ' ಎಂಬ ಶಾಸ್ತ್ರವಾಣಿಯಂತೆ ಸಹ ದ್ರುಪದನಿಗೆ ಗುರುಗಳು ಎಂದು ತಿಳಿಯಬೇಕು. ದ್ರೋಣರು ದೇವಗುರು ಬೃಹಸ್ಪತಿಯ ಅವತಾರನಾಗಿದ್ದು, ಹುಹೂ ಎಂಬ ಗಂಧರ್ವನ ಅವತಾರನಾದ ಅವನಿಗೆ ಸ್ವರೂಪದಲ್ಲೂ ಶಿಷ್ಯನೇ ಎಂಬ ವಿಶೇಷಾಂಶವನ್ನು ತಿಳಿಯಬೇಕು.

೪) ಕೋಪದಿಂದ ಹಾಗೆ ಕೆರಳಿದಾಗಲೂ ದ್ರೋಣರ ಧರ್ಮಪ್ರಜ್ಞೆ ಜಾಗೃತವಾಗಿತ್ತು. ಅವರಿಗೆ ದ್ರುಪದನ ಸೊಕ್ಕನ್ನು ಆಗಲೇ ಮುರಿಯುವ ಸಾಮರ್ಥ್ಯ ಇದ್ದರೂ, ಬ್ರಾಹ್ಮಣರಾದ ತಾವು ಹಾಗೆ ಶಸ್ತ್ರಪ್ರಯೋಗವನ್ನು ಮಾಡುವುದು ಸ್ವಧರ್ಮವಲ್ಲ ಎಂದು ಭಾವಿಸಿ ಅದನ್ನು ಪ್ರಯೋಗಿಸುವ ಅರ್ಹತೆ ಇರುವ ಕ್ಷತ್ರಿಯರಾದ ಕೌರವ, ಪಾಂಡವರ ಬಳಿಗೇ ನಡೆದರು ಎಂಬ ವಿವರ ಮುಂದಿನ ಶ್ಲೋಕದಲ್ಲಿದೆ.

೫) ಬ್ರಾಹ್ಮಣನಿಗೆ ಅಸ್ತ್ರಶಸ್ತ್ರಗಳ ಪರಿಜ್ಞಾನ ವಿಹಿತವಾಗಿದ್ದರೂ, ಅವುಗಳ ಪ್ರಯೋಗ ಮಾತ್ರ ವಿಹಿತವಲ್ಲ ಎಂಬ ಧರ್ಮಸೂಕ್ಷ್ಮ ಇದರಿಂದ ನಿರೂಪಿತ ಎಂದೂ ತಿಳಿಯಬೇಕು.

ಕುರುಪಾಂಡವರ ಬಳಿಗೆ ದ್ರೋಣರು

ಪ್ರತಿಗ್ರಹಾದ್ವಿನಿವೃತ್ತಸ್ಯ ಚಾರ್ಥಃ ಸ್ಯಾಚ್ಛಿಷ್ಯೇಭ್ಯಃ ಕೌರವೇಭ್ಯೋ ಮಮಾತ್ರ ।
ಏವಂ ಮನ್ವಾನಃ ಕ್ರೀಡತಃ ಪಾಂಡವೇಯಾನ್ ಸಧಾರ್ತರಾಷ್ಟ್ರಾನ್ ಪುರಬಾಹ್ಯತೋಽಖ್ಯತ್ ೨೫

ಅ: ''ಪ್ರತಿಗ್ರಹವನ್ನು ಸಂಪೂರ್ಣವಾಗಿ ತೊರೆದ ನನಗೆ ಶಿಷ್ಯರಾದ ಕೌರವರಿಂದ ಕಾರ್ಯಸಿದ್ಧಿಯಾದೀತು'' ಎಂದು ಬಗೆದು ಧೃತರಾಷ್ಟ್ರಪುತ್ರರೊಂದಿಗೆ ಆಟವಾಡುತ್ತಿದ್ದ ಪಾಂಡುಪುತ್ರರನ್ನು ನಗರದ ಹೊರವಲಯದಲ್ಲಿ ಕಂಡರು.

ವಿ: ಶಿಷ್ಯರಿಂದ ಕಾರ್ಯವಾದಾಗ ಅಪ್ರತಿಗ್ರಹವ್ರತಕ್ಕೆ ಲೋಪವಿಲ್ಲ ಎಂದು ಭಾವ. ಇಲ್ಲಿ ಕೌರವರಿಂದ ಎಂದರೆ ಕುರುಪಾಂಡವರಿಂದ ಎಂದೂ, ಮುಖ್ಯವಾಗಿ ಪಾಂಡವರಿಂದ ಎಂದೂ ಅರ್ಥ. ಅದಕ್ಕಾಗಿಯೇ ಮುಂದೆ ಕೌರವಸಮೇತರಾದ ಪಾಂಡವರನ್ನು ಎಂದು ಪಾಂಡವರಿಗೇ ಪ್ರಾಧಾನ್ಯ ಬರುವಂತೆ ಹೇಳಿರುವುದನ್ನು ಗಮನಿಸಬೇಕು (ಸಹಯುಕ್ತೇಽಪ್ರಧಾನೇ ೨/೩/೧೯).

ಆಳದ ಬಾವಿಗೆ ಬಿದ್ದ ಚೆಂಡು ಮುದ್ರಿಕೆಗಳು

ವಿಕ್ರೀಡತೋ ಧರ್ಮಸೂನೋಸ್ತದೈವ ಸಹಾಂಗುಲೀಯೇನ ಚ ಕಂದುಕೋಽಪತತ್ ।
ಕೂಪೇ ನ ಶೇಕುಃ ಸಹಿತಾಃ ಕುಮಾರಾ ಉದ್ಧರ್ತುಮೇನಂ ಪವನಾತ್ಮಜೋಽವದತ್ ॥೨೬॥

ಅ: ಆ ವೇಳೆಗೆ ಅವರು ಆಟವಾಡುತ್ತಿದ್ದ ಚೆಂಡು ಯುಧಿಷ್ಠಿರನ ರಾಜಮುದ್ರಿಕೆಯ ಸಮೇತವಾಗಿ ಬಾವಿಯಲ್ಲಿ ಬಿದ್ದಿತ್ತು. ರಾಜಕುಮಾರರುಗಳೆಲ್ಲ ಒಟ್ಟಾದರೂ, ಅವುಗಳನ್ನು ಮೇಲೆತ್ತಲು ಶಕ್ತರಾಗದಾದರು. ಆಗ ವಾಯುಪುತ್ರನಾದ ಭೀಮ ನುಡಿದ.

ವಿ: ೧) ಅಂಗುಲೀಯ ಎಂದರೆ ಉಂಗುರ ಎಂದು ಸಾಮಾನ್ಯವಾಗಿ ಅರ್ಥವಾದರೂ, ಮುಂದಿನ ಶ್ಲೋಕದಲ್ಲಿ ಮುದ್ರಿಕೆ ಎಂದಿರುವುದರಿಂದ ರಾಜಮುದ್ರಿಕೆ ಎಂಬ ವಿಶೇಷಾರ್ಥವನ್ನೇ ತಿಳಿಯಬೇಕು.

೨) ರಾಜಪುತ್ರರುಗಳೆಲ್ಲ ಒಟ್ಟಾಗಿಯೂ ಅವುಗಳನ್ನು ಮೇಲೆತ್ತಲಾಗಲಿಲ್ಲ ಎಂಬ ಮಾತಿನಿಂದ ಆ ಬಾವಿ ತುಂಬಾ ಆಳವಾಗಿತ್ತು ಎಂಬ ಅಂಶವೂ ಸೂಚಿತ.

---

೧. ''ಚಕ್ಷಿಙ್ ದರ್ಶನ'' ಇತಿ ಧಾತೋಃ ''ಚಕ್ಷಿಂಕಃ ಖ್ಯಾಞ್'' ತಿ (೨/೪/೫೪) ಸೂತ್ರಾತ್ ಖ್ಯಾದೇಶೇ ಕೃತೇ ಲುಂಕಿ ಅಖ್ಯದಿತಿ ರೂಪಂ ಭವತಿ । ಅಪಶ್ಯದಿತ್ಯರ್ಥಃ ॥ – (ವಾ.)

ಅಖ್ಯತ್ ಅಪಶ್ಯತ್ । – (ತಾ.)

೩) ಇತರರಿಗಾಗದ ಕಾರ್ಯವನ್ನು ಮಾಡಲು ಹೊರಟ ಭೀಮನ ಹಿರಿಮೆ ಇಲ್ಲಿ ಗಮನಾರ್ಹವಾದುದು. 'ಭೀಮಸೇನಸಮೋ ನಾಸ್ತಿ ಸೇನಯೋರುಭಯೋರಪಿ' ಎಂಬುದಕ್ಕೂ ಇದು ಗಮಕ.

೪) ಇಲ್ಲಿ ಧರ್ಮರಾಜನ ಕೈಯಲ್ಲಿ ಇದ್ದ ರಾಜಮುದ್ರಿಕೆ ಬಿದ್ದಿತು ಎಂಬ ಮಾತಿನಿಂದ ಧರ್ಮರಾಜ ಆ ರಾಜ್ಯದ ಉತ್ತರಾಧಿಕಾರಿ ಎಂಬ ವಿಶೇಷಾಂಶವೂ ಸೂಚಿತ ಎಂದು ತಿಳಿಯಬೇಕು.

ನಿಷ್ಪತ್ಯ ಚೋದ್ಧೃತ್ಯ ಸಮುತ್ಪತಿಷ್ಯೇ ಕೂಪಾದಮುಷ್ಮಾತ್ ಭೃಶನೀಚಾದಪಿ ಸ್ಮ ।
ಸಕಂದುಕಾಂ ಮುದ್ರಿಕಾಂ ಪಶ್ಯತಾದ್ಯ ಸರ್ವೇ ಕುಮಾರಾ ಇತಿ ವೀರ್ಯಸಂಶ್ರಯಾತ್ ೨೭

ಅ: ಭೀಮಸೇನ ತನ್ನ ಸಾಮರ್ಥ್ಯವನ್ನು ಅವಲಂಬಿಸಿ ನುಡಿದ : ''ನಾನು ಈಗಲೇ ಹಾರಿ ತುಂಬ ಆಳವಾದ ಈ ಬಾವಿಯಿಂದ ಚೆಂಡಿನೊಂದಿಗೆ ರಾಜಮುದ್ರಿಕೆಯನ್ನು ತೆಗೆದುಕೊಂಡು ಮೇಲೆ ಬರುವೆ. ಕುಮಾರರೆ! ನೀವೆಲ್ಲ ನೋಡಿರಿ''.

ವಿ: 'ಸಕಂದುಕಾಂ ಮುದ್ರಿಕಾಂ' ಎಂಬ ಮಾತಿನಿಂದ ಮುದ್ರಿಕೆಯನ್ನೆತ್ತುವುದೇ ಪ್ರಧಾನವಾದ ಕಾರ್ಯ ಎಂಬ ಅಂಶವೂ ಸೂಚಿತ. ಚೆಂಡು ತೇಲುತ್ತಿದ್ದರೆ ಮುದ್ರಿಕೆ ಮುಳುಗಿಹೋಗಿತ್ತು ಚೆಂಡು ಗಾತ್ರದಲ್ಲಿ ದೊಡ್ಡದಾದರೆ, ಮುದ್ರಿಕೆ ಸಹಜವಾಗಿ ಚಿಕ್ಕದೇ ಆಗಿತ್ತು ಆಳವಾದ ಬಾವಿಯಿಂದ ಚಿಕ್ಕದಾದ ಮುದ್ರಿಕೆಯನ್ನು ಎತ್ತಿ ತರುವ ಸಾಹಸ ಭೀಮನಿಗೆ ಅಶಕ್ಯವಾಗಿರಲಿಲ್ಲ ಎಂಬುದು ಗಮನಾರ್ಹ.

ತದಾ ಕುಮಾರಾನವದತ್ ಸ ವಿಪ್ರೋ ಧಿಗಸ್ತ್ರಬಾಹ್ಯಾಂ[೧] ಭವತಾಂ ಪ್ರವೃತ್ತಿಮ್ ।
ಜಾತಾಃ ಕುಲೇ ಭರತಾನಾಂ[೨] ನ ವಿತ್ಥ ದಿವ್ಯಾನಿ ಚಾಸ್ತ್ರಾಣಿ ಸುರಾರ್ಚಿತಾನಿ ॥ ೨೮ ॥

ಅ: ಆಗ ಆ ರಾಜಕುಮಾರರುಗಳನ್ನು ಕುರಿತು ದ್ರೋಣರು ನುಡಿದರು : ''ಅಸ್ತ್ರಬಾಹಿರರಾದ ನಿಮ್ಮ ಪ್ರವೃತ್ತಿಗೆ ಧಿಕ್ಕಾರ. ಭರತರ ವಂಶದಲ್ಲಿ ಜನಿಸಿದ ನೀವು ದೇವಪೂಜಿತವಾದ ದಿವ್ಯಾಸ್ತ್ರಗಳನ್ನು ತಿಳಿದಿಲ್ಲವಲ್ಲ''.

ವಿ: ೧) ವಿಪ್ರರ ಸಕಲಕಾರ್ಯಸಾಧನೆ ಶಾಸ್ತ್ರವಿದ್ಯೆಯಿಂದಾದರೆ, ಕ್ಷತ್ರಿಯರದು ಅಸ್ತ್ರಗಳಿಂದ. ಪ್ರಕೃತ ಅಸ್ತ್ರವಿದ್ಯೆ ಬಳಸದೆ ಇದ್ದ ಅವರ ಬಗ್ಗೆ ದ್ರೋಣರ ಆಕ್ಷೇಪವಿದು.

---

೧. ಅಹೋ ವೋ ಧಿಗ್ ಬಲಂ ಕ್ಷಾತ್ರಂ ಧಿಗೇತಾಂ ವಃ ಕೃತಾರ್ಥತಾಮ್ ।
ಭರತಸ್ಯಾನ್ವಯೇ ಜಾತಾ ಯೇ ವೀಟಾಂ ನಾಧಿಗಚ್ಛಥ ॥ - ಭಾರತೇ (ಆದಿ. ೧೩೦/೨೩)

೨. ಭಾರತನಾಂ – (ಪಾಠಾಂತರ)

೨) 'ಭರತಾನಾಂ ಕುಲೇ' ಎನ್ನುವ ಮೂಲಕ ಭರತವಂಶದವರು ಶಸ್ತ್ರಾಸ್ತ್ರವಿದ್ಯೆಗೆ ಹೆಸರಾದವರು ಎಂಬುದೂ ಸೂಚಿತ. ಇದಕ್ಕೆ ಪರಶುರಾಮರ ಶಿಷ್ಯರಾದ ಭೀಷ್ಮರೇ ಆಗಿನ ಅತಿಶ್ರೇಷ್ಠ ನಿದರ್ಶನ.

ಇತೀರಿತಾ ಅಸ್ತ್ರವಿದಂ ಕುಮಾರಾ ವಿಜ್ಞಾಯ ವಿಪ್ರಂ ಸುರಪೂಜ್ಯಪೌತ್ರಮ್ ।
ಸಂಪ್ರಾರ್ಥಯಾಮಾಸುರಥೋದ್ಧೃತಿಂ ಪ್ರತಿ ಪ್ರಧಾನಮುದ್ರಾಯುತಕಂದುಕಸ್ಯ ॥ ೨೯ ॥

ಅ: ಅವರು ಹೀಗೆನ್ನಲು ರಾಜಕುಮಾರರುಗಳು ಬೃಹಸ್ಪತಿಯ ಮೊಮ್ಮಗನಾದ ಆ ಬ್ರಾಹ್ಮಣನನ್ನು ಅಸ್ತ್ರಬಲ್ಲವನೆಂದು ಅರಿತು, ಪ್ರಧಾನವಾದ ರಾಜಮುದ್ರಿಕೆಯನ್ನು, ಚೆಂಡನ್ನು ಮೇಲೆತ್ತಿ ಕೊಡಲು ಅವರನ್ನು ಕೋರಿದರು.

ವಿಳ ೧) ದ್ರೋಣರ ಆ ರೀತಿಯ ಆಕ್ಷೇಪದ ಮಾತಿನಿಂದ ಅವರಿಗೆ ಅವರು ಅಸ್ತ್ರಜ್ಞರು ಎಂಬ ವಿಷಯ ತಿಳಿಯಿತು ಎಂದರ್ಥ.

೨) 'ಸುರಪೂಜ್ಯಪೌತ್ರಂ' — ಸುರಪೂಜ್ಯ ಎಂದರೆ ದೇವಗುರುವಾದ ಬೃಹಸ್ಪತಿ, ಅವರ ಪುತ್ರ ಭರದ್ವಾಜಮುನಿ, ದ್ರೋಣ ಅವರ ಪುತ್ರ. ಆದ್ದರಿಂದ ಅವರು ಸುರಪೂಜ್ಯಪೌತ್ರ ಎಂದಾಗುವುದು.

ದ್ರೋಣರಿಂದ ಅವುಗಳ ಉದ್ಧರಣ

ಸ [೧]ಚಾಶ್ವಿಷೀಕಾಭಿರಥೋತ್ತರೋತ್ತರಂ
ಸಂಪ್ರಾಸ್ಯ ದಿವ್ಯಾಸ್ತ್ರಬಲೇನ ಕಂದುಕಮ್ ।
ಉದ್ಧೃತ್ಯ ಮುದ್ರೋದ್ಧರಣಾರ್ಥಿನಃ ಪುನ-
ರ್ಜಗಾದ [೨]ಭುಕ್ತಿರ್ಮಮ ಕಲ್ಪ್ಯತಾಮಿತಿ ॥ ೩೦ ॥

ಅ: ದ್ರೋಣರು ಬೇಗನೆ ದಿವ್ಯಾಸ್ತ್ರಬಲದಿಂದ, ಒಂದಾದ ಮೇಲೆ ಒಂದರಂತೆ ಹುಲ್ಲುಕಡ್ಡಿಗಳನ್ನು ಎಸೆದು ಚೆಂಡನ್ನು ಮೇಲೆತ್ತಿದರು. ರಾಜಪುತ್ರರು ಮುದ್ರಿಕೆಯನ್ನೂ ಎತ್ತಿ ಕೊಡಲು ಕೇಳಿಕೊಂಡಾಗ ಅವರು ''ನನಗೆ ಅನ್ನದ ವ್ಯವಸ್ಥೆ ಮಾಡಿ'' ಎಂದರು.

---

೧. ಇಷೀಕಾಭಿಃ ತೃಣಾವಿಶೇಷೈಃ । – (ಜ.)

೨. ವೀಟಾಂ ಚ ಮುದ್ರಿಕಾಂ ಚೈವ ಹ್ಯಹಮೇತದಪಿ ದ್ವಯಮ್ ।
ಉದ್ಧರೇಯಮಿಷೀಕಾಭಿಃ ಭೋಜನಂ ಮೇ ಪ್ರದೀಯತಾಮ್ ॥ – ಭಾರತ (ಆದಿ. ೧೩೦/೨೪)

ವಿ: ೧) ಒಂದಾದ ಮೇಲೆ ಮತ್ತೊಂದರಂತೆ ಹುಲ್ಲುಕಡ್ಡಿಗಳನ್ನು ಅಭಿಮಂತ್ರಿಸಿ ಪ್ರಯೋಗಿಸಿದ ಅವರು ಚೆಂಡನ್ನು ಮೇಲೆತ್ತಿಕೊಟ್ಟರು. ತೇಲುವ ಚೆಂಡನ್ನು ಎತ್ತಿ ಕೊಡುವ ಮೂಲಕ ಅವರು ತೋರಿದ ಜಾಣ್ಮೆಯೂ ಗಮನಾರ್ಹ. ವಿದ್ಯೆಯ ಸಾಮರ್ಥ್ಯವನ್ನು ಪ್ರದರ್ಶಿಸಿದ ಅವರು ಪ್ರಧಾನಕೌಶಲವನ್ನು ತೋರಲು ಬೇರೊಂದು ಆಶ್ವಾಸನೆಯನ್ನೇ ಬಯಸಿದ್ದರು.

೨) ಅನ್ನದ ವ್ಯವಸ್ಥೆ ಎಂದರೆ ಜೀವನೋಪಾಯದ ವ್ಯವಸ್ಥೆ ಎಂದರ್ಥ.

ಯಥೇಷ್ಟವಿತ್ತಾಶನಪಾನಮಸ್ಯ ಧರ್ಮಾತ್ಮಜಃ ಪ್ರತಿಜಜ್ಞೇ ಸುಶೀಘ್ರಮ್ ।
ತಥೈವ ತೇನೋದ್ಧೃತಮಂಗುಲೀಯಂ ತ್ರಿವರ್ಗಮುಖ್ಯಾತ್ಮಜವಾಕ್ಯತೋಽನು ॥ ೩೧ ॥

ಅ: ಯುಧಿಷ್ಠಿರ ತತ್ಕ್ಷಣ ಅವರಿಗೆ ಯಥೇಷ್ಟವಾಗಿ ಧನ, ಅನ್ನಪಾನಗಳ ವ್ಯವಸ್ಥೆಗೆ ಆಶ್ವಾಸನೆ ನೀಡಿದ. ಯುಧಿಷ್ಠಿರ ಹಾಗೆ ನುಡಿಯುತ್ತಲೇ ದ್ರೋಣರು ರಾಜಮುದ್ರಿಕೆಯನ್ನು ಮೇಲೆತ್ತಿಕೊಟ್ಟರು.

ವಿ: ೧) ಯುಧಿಷ್ಠಿರ ತತ್ಕ್ಷಣವೇ ವಚನ ನೀಡಿದ ಎಂಬ ಮಾತಿನಿಂದ ಧರ್ಮ ಬದುಕಿನ ದಾರಿ ತೋರಿಸುವುದು ಎಂಬ ಸೂಕ್ಷ್ಮವೂ ಇಲ್ಲಿ ಸೂಚಿತ.

೨) 'ತ್ರಿವರ್ಗಮುಖ್ಯಾತ್ಮಜ' ಎಂದರೆ ಧರ್ಮ, ಅರ್ಥ ಮತ್ತು ಕಾಮ ಎಂಬ ತ್ರಿವರ್ಗಗಳಲ್ಲಿ ಪ್ರಧಾನವಾದ ಧರ್ಮದ ಪುತ್ರನಾದ ಯುಧಿಷ್ಠಿರ ಎಂದರ್ಥ. ಧರ್ಮಾದಿಚತುರ್ವಿಧಪುರುಷಾರ್ಥಗಳಲ್ಲಿ ಧರ್ಮಾದಿ ಮೊದಲ ಮೂರನ್ನು ತ್ರಿವರ್ಗವೆಂದೂ, ಮೋಕ್ಷವನ್ನು ಅಪವರ್ಗವೆಂದೂ ಕರೆಯುವರು.

೩) ಹಾಗೆ ಅವರ ಪೋಷಣೆಯ ಜವಾಬ್ದಾರಿ ಹೊತ್ತದ್ದು ಧರ್ಮರಾಜನಾದ ಯುಧಿಷ್ಠಿರ ಎಂದು ತಿಳಿಸುವ ಮೂಲಕ ದ್ರೋಣರು ದುರ್ಯೋಧನನ ಅನ್ನದ ಹಂಗಿಗೆ ಬಿದ್ದಿಲ್ಲ ಎಂಬ ಸೂಕ್ಷ್ಮವನ್ನೂ ತಿಳಿಸಿರುವರು.

೨
ಪಪ್ರಚ್ಛುರೇನರಿ ಸಹಿತಾಃ ಕುಮಾರಾಃ ಕೋಽಸೀತಿ ಸೋಽಪ್ಯಾಹ ಪಿತಾಮಹೋ ವಃ ।
ವಕ್ತೇತಿ ತೇ ದುದ್ರುವುರಾಶು ಭೀಷ್ಮಂ ದ್ರೋಣೋಽಯಮಿತ್ಯೇವ ಸ ತಾಂಸ್ತದೋಚೇ ॥೨॥

---

೧. ಧರ್ಮಾರ್ಥಕಾಮಾಃ ತ್ರಿವರ್ಗಾಃ ತತ್ರ ಮುಖ್ಯೋ ಧರ್ಮಃ ತಸ್ಯಾತ್ಮಜಃ= ಯುಧಿಷ್ಠಿರ ಇತ್ಯರ್ಥಃ ॥ – (ವಾ.)

೨. ಗೋಯಾಚನಾರ್ಥಂ ಗತೇ ದ್ರೋಣೇ ರಾಮಾದ್ದ್ವಾದಶವರ್ಷಪರ್ಯಂತಂ ವಿದ್ಯಾಭ್ಯಾಸಂ ಕುರ್ವತಿ ಸತಿ ಶಿಲೋಂಛವೃತ್ತ್ಯಾ ಮಾತೃಪೋಷಣಂ ಕುರ್ವನ್ನಶ್ವತ್ಥಾಮಾ ಕುಮಾರೈಃ ಸಹ ನಾಯಾತಿ । ಅಶ್ವತ್ಥಾಮ್ನಃ ಸ್ವಪಿತೃಜ್ಞಾನಸಂಭವಾತ್ ಪ್ರಶ್ನೋ ನ ಘಟತ ಇತಿ ಜ್ಞೇಯಮ್॥ – (ವಾ.)

ಅ: ಅವರನ್ನು ಕುಮಾರರೆಲ್ಲ ಒಟ್ಟಾಗಿ ''ನೀವು ಯಾರು?'' ಎಂದು ಕೇಳಿದರು. ಅದಕ್ಕೆ ಅವರು ''ನಿಮ್ಮ ತಾತ ಅದನ್ನು ತಿಳಿಸುವರು'' ಎಂದರು. ಅವರೆಲ್ಲ ತತ್ಕ್ಷಣವೇ ಭೀಷ್ಮರ ಬಳಿಗೆ ಓಡಿದರು. ಭೀಷ್ಮ ಅವರಿಗೆ ''ಅವರು ದ್ರೋಣರು'' ಎಂದು ತಿಳಿಸಿದರು.

ವಿ: ತಾವಾರು ಎಂಬುದನ್ನು ತಾವಾಗಿಯೇ ತಿಳಿಸದೆ, ಭೀಷ್ಮರ ಮೂಲಕ ತಿಳಿಯಿರಿ ಎಂಬ ದ್ರೋಣರ ಮಾತಿನಲ್ಲಿ ಅವರ ವಿನಯದೊಂದಿಗೆ ಕೌಶಲವೂ ವ್ಯಕ್ತವಾಗುವುದು.

ನ ರಾಜಗೇಹಂ ಸ ಕದಾಚಿದೇತಿ ತೇನಾದೃಷ್ಟಃ[೩] ಸ ಕುಮಾರೈಃ ಪುರಾऽತಃ ।
ಭೀಷ್ಮೋ ವಿದ್ಯಾಸ್ತೇನ ಸಹೈವ ಚಿಂತಯನ್ನಸ್ತ್ರಪ್ರಾಪ್ತಿಂ ತಸ್ಯ ಶುಶ್ರಾವ ರಾಮಾತ್ ॥ ೩೩ ॥

ಅ: ದ್ರೋಣರು ಎಂದೂ ಅರಮನೆಗೆ ಹೋಗಿದ್ದವರಲ್ಲ. ಆದ್ದರಿಂದ ಕುಮಾರರು ಹಿಂದೆ ಅವರನ್ನು ಕಂಡಿರಲಿಲ್ಲ. ಭೀಷ್ಮರು ಅವರೊಂದಿಗೇ ಶಾಸ್ತ್ರಚಿಂತನೆ ನಡೆಸಿದ್ದವರು. ದ್ರೋಣರು ಪರಶುರಾಮರಿಂದ ಅಸ್ತ್ರಪಡೆದಿದ್ದನ್ನು ಅವರು ಕೇಳಿ ತಿಳಿದಿದ್ದರು.

ವಿ: ದ್ರೋಣರು ಅರಮನೆಯಿಂದ ದೂರವಿದ್ದದ್ದರಿಂದ ರಾಜಪುತ್ರರಿಗೆ ಅವರ ಪರಿಚಯ–ವಿರಲಿಲ್ಲ. ಆದರೆ ಅವರ ಸಮವಯಸ್ಕರಾಗಿದ್ದ ಭೀಷ್ಮರು ಅವರೊಂದಿಗೆ ಶಾಸ್ತ್ರಚಿಂತನೆಗೆ ತೊಡಗುತ್ತಿದ್ದುದುಂಟು. ಕೆಲವು ದಿನ ಅವರು ಕಾಣೆಯಾಗಿದ್ದಾಗ ಚಾರರ ಮೂಲಕ ಅವರು ಪರಶುರಾಮರ ಬಳಿ ಅಧ್ಯಯನ ಮಾಡುತ್ತಿದ್ದುದನ್ನು ತಿಳಿದುಕೊಂಡಿದ್ದರು ಸಹ.

ದ್ರೋಣಶಿಷ್ಯರಾಗಿ ಕುರುಪಾಂಡವರು

ಶ್ರುತ್ವಾ ವೃದ್ಧಂ ಕೃಷ್ಣವರ್ಣಂ ದ್ವಿಜಂ[೪] ತಂ
ಮಹಾಸ್ತ್ರವಿದ್ಯಾಮಪಿ ತಾಂ ಮಹಾಮತಿಃ ।
ದ್ರೋಣಂ ಜ್ಞಾತ್ವಾ ತಸ್ಯ ಶಿಷ್ಯತ್ವಏತಾನ್
ದದೌ ಕುಮಾರಾಂಸ್ತತ್ರ ಗತ್ವಾ ಸ್ವಯಂ ಚ ॥ ೩೪ ॥

ಗೋಯೋಜನಾರ್ಥಂ ಗತೇ ದ್ರೋಣೇ ರಾಮಾದ್ದ್ವಾದಶವರ್ಷಪರ್ಯಂತಂ ವಿದ್ಯಾಭ್ಯಾಸಂ ಕುರ್ವತಿ ಶಿಲೋಂಛವೃತ್ತ್ಯಾಮಾತೃಪೋಷಣಂ ಕುರ್ವನ್ ದ್ರೌಣಿರ್ಬಾಲೈಃ ಕ್ರೀಡಾರ್ಥಂ ನಾಗಚ್ಛತೀತಿ ಜ್ಞೇಯಮ್ । – (ತಾ.)

೩. ಅತಃ= ಇದಾನೀ ದರ್ಶನಕಾಲಾತ್ಪುರೇತಿ ಯೋಜನಾ । ಭೀಷ್ಮೋ ವಿದ್ಯಾಸ್ತೇನ ಸಹೈವ ಚಿಂತಯನ್ನಿತ್ಯತ್ರ ದ್ರೋಣಗೃಹಂ ಗತ್ವಾ ವಿದ್ಯಾಚಿಂತನಂ ಕುರ್ವನ್ಭೀಷ್ಮಃ ದ್ವಾದಶವರ್ಷಪರ್ಯಂತಂ ತದದರ್ಶನೇ ಸತಿ ಚಾರಮುಖೇನ ರಾಮಾತ್ತಸ್ಯಾಸ್ತ್ರಪ್ರಾಪ್ತಿಂ ಶುಶ್ರಾವೇತಿ ಜ್ಞೇಯಮ್ ॥ – (ವಾ.)

೪. ನನ್ವಜ್ಞಾತಪುರುಷಸ್ಯ ಲಕ್ಷಣಜ್ಞಾನೇನ ಕಥಂ ಪುರುಷವಿಶೇಷತ್ವನಿಶ್ಚಯ ಇತ್ಯತ ಉಕ್ತಂ ವಿದ್ಯಾ ಇತಿ । ಪ್ರಾಗಿತಿ ಶೇಷಃ । – (ತಾ.)

ಅ: ಆ ಬ್ರಾಹ್ಮಣ ಕಪ್ಪು ಬಣ್ಣದ ವೃದ್ಧ ಎಂಬುದನ್ನೂ, ಅವರ ಮಹಾಸ್ತ್ರವಿದ್ಯೆಯನ್ನೂ ಕೇಳಿ ಮಹಾಪ್ರಾಜ್ಞರಾದ ಭೀಷ್ಮರು ಅವರನ್ನು ದ್ರೋಣರೇ ಎಂದು ತಿಳಿದು ಸ್ವತಃ ಅವರ ಬಳಿಗೆ ತೆರಳಿ ಕುಮಾರರನ್ನು ಅವರ ಶಿಷ್ಯರನ್ನಾಗಿ ಒಪ್ಪಿಸಿದರು.

ವಿ: ೧) ಅವರ ಆಕೃತಿ ಹಾಗೂ ಮಹಾಕೃತಿ ಎರಡನ್ನೂ ತಿಳಿದ ಭೀಷ್ಮರಿಗೆ ಅವರು ದ್ರೋಣರೆಂಬುದು ಖಚಿತವಾಯಿತು. ಸ್ವತಃ ಅವರ ಬಳಿಗೆ ತೆರಳಿ, ಕುರುಪಾಂಡವರಿಗೆಲ್ಲ ಅಸ್ತ್ರವಿದ್ಯೆಯನ್ನು ತಿಳಿಸಿಕೊಡಲು ಅವರನ್ನು ಕೇಳಿಕೊಂಡರು ಎಂದರ್ಥ.

೨) ಭೀಷ್ಮರು ತಾವೂ ಸ್ವತಃ ಪರಶುರಾಮರ ಶಿಷ್ಯರಾಗಿದ್ದರೂ, ಅಸ್ತ್ರವಿದ್ಯೆಯನ್ನು ತಾವು ಕಲಿಸದೆ ದ್ರೋಣರಿಗೆ ಒಪ್ಪಿಸಲು ಅವರು ವಿಪ್ರರಾಗಿದ್ದುದೇ ಕಾರಣ. ಅಧ್ಯಾಪನ ಮೂಲತಃ ಬ್ರಾಹ್ಮಣರ ಕಾರ್ಯವಷ್ಟೆ!

೩) ಹಿಂದೆ ಪಾಂಡುರಾಜನಿಗೆ ಭೀಷ್ಮರೇ ಅಸ್ತ್ರಶಸ್ತ್ರಗಳನ್ನು ಉಪದೇಶಿಸಲು ಆಗಿನ್ನೂ ದ್ರೋಣರು ಅಸ್ತ್ರವಿದ್ಯೆಯನ್ನು ತಿಳಿಯದಿದ್ದದೇ ಕಾರಣವಾಗಿತ್ತು ಎಂದು ತಿಳಿಯಬೇಕು. ಅರ್ಹವಿಪ್ರರು ಇಲ್ಲದಾಗ ಕ್ಷತ್ರಿಯ ಶಸ್ತ್ರಾಸ್ತ್ರಗಳ ಅಧ್ಯಾಪನದ ಕಾರ್ಯ ಮಾಡಬಹುದೆಂಬ ಮಾತು ಮುಂದೆ ಬರುವುದು (ಅ. ೨೯, ಶ್ಲೋ. ೩೩).

ಗುರುದಕ್ಷಿಣೆ ನೀಡುವ ಅರ್ಜುನನ ಪ್ರತಿಜ್ಞೆ

ದ್ರೋಣೋऽಥ ತಾನವದದ್ಯೋ ಮದಿಷ್ಟಂ ಕರ್ತುಂ ಪ್ರತಿಜ್ಞಾಂ ಪ್ರಥಮಂ ಕರೋತಿ ।
ತಂ ಧನ್ವಿನಾಂ ಪ್ರವರಂ ಸಾಧಯಿಷ್ಯ ಇತ್ಯರ್ಜುನಸ್ತಾಮಕರೋತ್ ಪ್ರತಿಜ್ಞಾಮ್ ॥ ೩೫ ॥

ಅ: ಬಳಿಕ ದ್ರೋಣರು ಕುಮಾರರುಗಳಿಗೆ ನುಡಿದರು : ''ನನ್ನ ಅಪೇಕ್ಷೆಯನ್ನು ಪೂರೈಸಲು ಯಾರು ಮೊದಲಿಗೆ ವಚನ ನೀಡುವರೋ ಅವನನ್ನು ಧನುರ್ಧಾರಿಗಳಲ್ಲಿ ಅಪ್ರತಿಮನನ್ನಾಗಿಸುವೆ''. ಅರ್ಜುನ ಆ ಪ್ರತಿಜ್ಞೆಯನ್ನು ಮಾಡಿದ.

ವಿ: ೧) ವಿದ್ಯಾಭ್ಯಾಸ ಪ್ರಾರಂಭಿಸುವ ಮುನ್ನ ತಾವು ಬಯಸಿದ್ದನ್ನು ನೀಡುವ ಪ್ರತಿಜ್ಞೆ ಮಾಡುವವನನ್ನು ಧನ್ವಿಶ್ರೇಷ್ಠನನ್ನಾಗಿಸುವ ಆಶ್ವಾಸನೆ ಇತ್ತರು. ಅರ್ಜುನ ಆ ಪ್ರತಿಜ್ಞೆಯನ್ನು ಮಾಡಿ ಅವರ ವಿಶೇಷ ಒಲವಿಗೆ ಪಾತ್ರನಾದ ಎಂದರ್ಥ.

---

೪. ತಾಂ = ಮಂತ್ರಿತೈಷೀಕಪರಂಪರಯಾ ಕೂಪಾತ್ ಕಂದುಕೋದ್ಧರಣಾದಿಮಹಾಸ್ತ್ರವಿದ್ಯಾಂ ಚ ಶ್ರುತ್ವೇತಿ ಸಂಬಂಧಃ ॥ –(ವಾ.)

ತೇऽಪಶ್ಯನ್ ಬ್ರಾಹ್ಮಣಂ ಶ್ಯಾಮಮಾಪನ್ನಂ ಪಲಿತಂ ಕೃಶಮ್ ॥ –ಇತಿ ಭಾರತೇ (ಆದಿ. ೧೩೦/೨೦)

೨) ದ್ರೋಣರ ಅದ್ಭುತವಾದ ಶಸ್ತ್ರಕೌಶಲವನ್ನು ಕಣ್ಣಾರೆ ಕಂಡಿದ್ದ ಇತರರಿಗೆ ಅಂತಹವರು ಬಯಸುವ ಗುರುದಕ್ಷಿಣೆ ಅವರ ಸಾಮರ್ಥ್ಯಕ್ಕೂ ಮೀರಿದ್ದು ಎಂಬ ವಿಚಾರದಿಂದ ಇತರರು ಆ ರೀತಿಯ ಪ್ರತಿಜ್ಞೆಯನ್ನು ಮಾಡಲು ಮುಂದಾಗಲಿಲ್ಲ ಎಂದು ಭಾವಿಸಬಹುದು. ಭೀಮು ಪ್ರತಿಜ್ಞೆ ಮಾಡದಿರಲು ಕಾರಣ ಮುಂದೆ (ಶ್ಲೋ. ೩೭, ೩೮) ಬಂದಿದೆ.

ಉನ್ಮಾದನಾದೀನಿ ಸ ವೇದ ಕೃಷ್ಣಾದಸ್ತ್ರಾಣ್ಯನಾಪತ್ಸು ನ ತಾನಿ ಮುಂಚೇತ್ ।
ಇತ್ಯಾಜ್ಞಯಾ ಕೇಶವಸ್ಯಾಪರಾಣಿ ಪ್ರಯೋಗಯೋಗ್ಯಾನಿ ಸದೇಚ್ಛತಿ ಸ್ಮ ॥ ೩೬ ॥

ಅ: ಅರ್ಜುನನು ಉನ್ಮಾದನ ಮೊದಲಾದ ಅಸ್ತ್ರಗಳನ್ನು ಕೃಷ್ಣನಿಂದ ಕಲಿತಿದ್ದ. ''ಅವುಗಳನ್ನು ಆಪತ್ತುಗಳ ಹೊರತು ಬೇರೆ ಕಾಲದಲ್ಲಿ ಪ್ರಯೋಗಿಸತಕ್ಕದ್ದಲ್ಲ'' ಎಂಬ ಕೃಷ್ಣನ ಆದೇಶದಿಂದಾಗಿ ಪ್ರಯೋಗಕ್ಕೆ ಯೋಗ್ಯವಾದ ಅಸ್ತ್ರಗಳನ್ನು ಅವನು ಪಡೆಯಲು ಸದಾ ಕಾತರನಾಗಿದ್ದ.

ವಿ: ಅಕ್ರೂರನೊಂದಿಗೆ ತೆರಳಿ ಮಧುರೆಯಲ್ಲಿ ಮೂರು ವರ್ಷಗಳ ಕಾಲ ನೆಲೆಸಿದ್ದಾಗ ಅರ್ಜುನ ಕೃಷ್ಣನಿಂದ ಅಸ್ತ್ರಾಭ್ಯಾಸ ಮಾಡಿದ್ದ ವಿವರ ಹಿಂದೆ ಬಂದಿದೆ (೧೪/೧೦೪). ಆದರೆ ಅವೆಲ್ಲ ಆಪತ್ಕಾಲದಲ್ಲಿ ಮಾತ್ರ ಪ್ರಯೋಗಿಸಬಹುದಾಗಿದ್ದ ವಿಶಿಷ್ಟಬಗೆಯ ಅಸ್ತ್ರಗಳಾಗಿದ್ದವು. ಅದರಂತೆ ಆ ಮುನ್ನ ಕೃಪಾಚಾರ್ಯರಿಂದಲೂ ಅವರಿಗೆಲ್ಲ ಅಸ್ತ್ರಾಭ್ಯಾಸವಾಗಿದ್ದರೂ, ಅವೆಲ್ಲ ದ್ರೋಣರ ಬಳಿ ಇದ್ದಂತಹ ಪರಶುರಾಮಶಿಕ್ಷಿತವಾದ ಉನ್ನತಮಟ್ಟದ ಅಸ್ತ್ರಗಳಾಗಿರಲಿಲ್ಲ. ಹೀಗಾಗಿ ಅರ್ಜುನನಿಗೆ ಇತರ ವಿಶೇಷಸಂದರ್ಭಗಳಲ್ಲಿ ಬಳಸಲು ಯೋಗ್ಯವಾದಂತಹ ಅಸ್ತ್ರಗಳನ್ನು ಕಲಿಯುವ ಅಪೇಕ್ಷೆ ಹುಟ್ಟಿತ್ತು. ಅದೀಗ ದ್ರೋಣರಿಂದ ಈಡೇರುವ ಸಮಯ ಒದಗಿತು ಎಂದು ತಿಳಿಯಬೇಕು.

ಭೀಮನು ಪ್ರತಿಜ್ಞೆ ಮಾಡದಿರಲು ಕಾರಣ

ಭೀಷ್ಮಾದಿಭಿರ್ಭವಿತಾ ಸಂಗರೋ ನಸ್ತದಾ ನಾಹಂ ಗುರುಭಿರ್ನಿತ್ಯಯೋದ್ಧಾ[೧] ।
ಭವೇಯಮೇಕಃ ಫಲ್ಗುನೋಽಸ್ತ್ರಜ್ಞ ಏಷಾಂ ನಿವಾರಕಶ್ಚೇನ್ಮಮ ಧರ್ಮಲಾಭಃ ॥ ೩೭ ॥

---

೧. ನನು ಕ್ಷತ್ರಿಯಾಣಾಂ ವಿಶೇಷತೋಽಪಿ ಪರಮಧರ್ಮಂ ನಾರಾಯಣದ್ವಿಟ್‌ತದನುಬಂಧಿನಿಗ್ರಹಮಿತಿ ಗೀತಾತಾತ್ಪರ್ಯವಿರೋಧ ಇತಿ ಚೇನ್ನ। ತಾತ್ಪರ್ಯೇ ವಿಷ್ಣುದ್ವಿಟ್‌ತದನುಬಂಧಿನಿಗ್ರಹಮಾತ್ರಂ ಧರ್ಮ ಇತ್ಯುಕ್ತಮ್। ನತು ಸ್ವತ ಏವೇತಿ ನಿಯಮಃ। ನಿಗ್ರಹಸ್ಯ ಪರತೋಽಪಿ ಸಂಭವಾತ್ ಯಥಾ ದುಷ್ಟಸ್ತ್ರೀಕಿತವಾದೀನಾಂ ನಿಗ್ರಹಸ್ಯ ಪರತ ಏವ ಸಂಭವಾತ್ । ತಥಾ ನಾರಾಯಣದ್ವಿಟ್‌ತದನುಬಂಧಿನಿಗ್ರಹಣಂ ಅಸ್ತ್ರೈಃ ಸದಾನಿಗ್ರಹೋಽಪಿ ಪರತ ಏವ ಧರ್ಮಃ । ಅತ ಏವಾತ್ರ ಗುರುಭಿರ್ನಿತ್ಯಯೋದ್ಧಾ ಅಸ್ತ್ರಜ್ಞ ಇತಿ ವಿಶೇಷಣಾನಿ ತತ್ರ ತು ನಾರಾಯಣದ್ವಿಟ್‌ತದನುಬಂಧಿನಿಗ್ರಹಮಿತಿ ಸಾಮಾನ್ಯೋಕ್ತಿಃ ॥ – (ಜ.)

ಅ: ''ನಮಗೆ ಭೀಷ್ಮಾದಿಗಳೊಂದಿಗೆ ಮುಂದೆ ಯುದ್ಧ ಒದಗಲಿದೆ. ಆಗ ನಾನು ಅಂತಹ ಗುರುಹಿರಿಯರೊಡನೆ ಸದಾ ಕಾದುವವನಲ್ಲ. ಅರ್ಜುನ ಅಸ್ತ್ರಜ್ಞನಾಗಿ ಅವರನ್ನು ಇದಿರಿಸುವಂತಾದಲ್ಲಿ ನನಗೆ ಪುಣ್ಯ ಹೆಚ್ಚುವುದು''.

ವಿ: ೧) ಮಹಾಸಮರ್ಥನಾದ ಭೀಮನೇ ಏತಕ್ಕೆ ಹಾಗೆ ಪ್ರತಿಜ್ಞೆ ಮಾಡಲಿಲ್ಲ ಎಂಬ ಶಂಕೆಗೆ ಇಲ್ಲಿ ಉತ್ತರವಿದೆ. ಮುಂದೆ ಕುರುಕ್ಷೇತ್ರದಲ್ಲಿ ಭೀಷ್ಮಾದಿಗಳೊಂದಿಗೆ ಯುದ್ಧ ನಡೆಯಲಿದ್ದು ಅವರೊಂದಿಗೆ ಕಾದುವ ಪ್ರಸಂಗ ಒದಗುವುದು. ಸ್ವಭಾವತಃ ದುಷ್ಕರವಲ್ಲದ ಸಂಬಂಧದಲ್ಲಿ ಹಿರಿಯರೆನ್ನಿಸಿದ ಭೀಷ್ಮಾದಿಗಳೊಂದಿಗೆ ಕಾದುವುದು ಶ್ರೇಷ್ಠಧರ್ಮವಲ್ಲ. ಆದರೆ ಯುದ್ಧವಾದ್ದರಿಂದ ಕಾದದಿರುವುದೂ ತರವಲ್ಲ. ಅರ್ಜುನ ಈಗ ಅಸ್ತ್ರಜ್ಞನಾಗಿ ಆ ಕೆಲಸ ಮಾಡುವಂತಾದರೆ ತನಗೆ ಧರ್ಮಲಾಭ ಎಂಬುದು ಭೀಮನ ವಿಚಾರ. ಇದು ಭೀಮನ ಪೂರ್ಣಪ್ರಜ್ಞತ್ವಕ್ಕೂ ಶ್ರೇಷ್ಠ ನಿದರ್ಶನ.

೨) ಭೀಷ್ಮಾದಿಗಳು ನಾರಾಯಣದ್ವೇಷಿಗಳಲ್ಲವಾದರೂ, ನಾರಾಯಣದ್ವೇಷಿಗಳಾದ ಕೌರವರ ಪಕ್ಷ ಸೇರಿದ್ದರಿಂದ ನಿಗ್ರಹಯೋಗ್ಯರೇ. ಆದರೂ ನಾರಾಯಣದ್ವೇಷಿಗಳನ್ನು ಸಾಕ್ಷಾತ್ ಎದುರಿಸುವಂತೆ ಅವರನ್ನು ಸಾಕ್ಷಾತ್ ಎದುರಿಸಬೇಕಿಲ್ಲ. ಸ್ತ್ರೀಯರು, ವಂಚಕರನ್ನು ಹೇಗೋ ಹಾಗೆ ಅಂತಹವರನ್ನು ಇತರರಿಂದ ನಿಗ್ರಹ ಮಾಡಿಸುವುದೇ ಉಚಿತ ಎಂಬ ಧರ್ಮಸೂಕ್ಷ್ಮವನ್ನು ಸಹ ಭೀಮಸೇನ ಈ ಮೂಲಕ ಸೂಚಿಸಿರುವನು ಎಂಬ ವಿಶೇಷಾಂಶ ಜನಾರ್ದನೀಯದಲ್ಲಿದೆ.

೩) ಶ್ರೀರಾಮ ಶೂರ್ಪನಖಿ, ಇಂದ್ರಜಿತ್ ಮೊದಲಾದವರನ್ನು ತಾನೇ ನಿಗ್ರಹಿಸದೆ ಲಕ್ಷ್ಮಣಾದಿಗಳ ಮೂಲಕ ಶಿಕ್ಷಿಸಿದ ಪ್ರಸಂಗವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

೧
ನ ಬುದ್ಧಿಪೂರ್ವಂ ವರ ಇಂದಿರಾಪತೇರನ್ಯತ್ರ ಮೇ ಗ್ರಾಹ್ಯ ಇತಿ ಸ್ಮ ಜಿಷ್ಣುಃ ।
ಕರೋತು ಗುರ್ವರ್ಥಮಿತಿ ಸ್ಮ ಚಿಂತಯನ್ ಭೀಮಃ ಪ್ರತಿಜ್ಞಾಂ ನ ಚಕಾರ ತತ್ರ ॥ ೩೮ ॥

ಅ: ಲಕ್ಷ್ಮೀಪತಿಯಾದ ಶ್ರೀಹರಿಯ ಹೊರತು ಇತರರಿಂದ ವರವನ್ನು ಬುದ್ಧಿಪೂರ್ವಕ ಸ್ವೀಕರಿಸುವುದು ತನಗೆ ತರವಲ್ಲ. ಅದರಿಂದ ಅರ್ಜುನನೇ ಗುರುಗಳಿಗಾಗಿ ಆ ಪ್ರತಿಜ್ಞೆ ಮಾಡಲಿ ಎಂದು ಆಲೋಚಿಸಿ, ಭೀಮ ಪ್ರತಿಜ್ಞೆ ಮಾಡಲಿಲ್ಲ.

ವಿ: ಭೀಮನು ಪ್ರತಿಜ್ಞೆ ಮಾಡದಿರಲು ಮತ್ತೊಂದು ಕಾರಣ ಇಲ್ಲಿದೆ. ಅಸ್ತ್ರವಿದ್ಯೆ ಎಂದರೆ ಅಸ್ತ್ರಾಭಿಮಾನಿದೇವತೆಗಳನ್ನು ತಮ್ಮ ಕಾರ್ಯಸಾಧನೆಗಾಗಿ ಕೋರಿಕೊಳ್ಳುವುದು. ಅದು ಅಶಕ್ತರು

---

೧. ಕ್ಷುತಾದೌ ಶತಂ ಜೀವೇತಿ ಬ್ರಾಹ್ಮಣದತ್ತವರನಿವಾರಣಾಯ ಬುದ್ಧಿಪೂರ್ವಮಿತ್ಯುಕ್ತಮ್ ॥ – (ವಾ.)

ಮಾಡುವ ಕೆಲಸ. ತನ್ನಂತಹ ಮಹಾಸಮರ್ಥ ಹಾಗೆ ಬೇಡುವುದು ತರವಲ್ಲ. ಶ್ರೀಹರಿಯ ಹೊರತು ಇತರರಿಂದ ವರ ಪಡೆಯುವುದಂತೂ ಯಾರಿಗೂ ಮುಖ್ಯಧರ್ಮವಲ್ಲ. ಈ ರೀತಿಯ ಮತ್ತೊಂದು ಕಾರಣದಿಂದಲೂ ಭೀಮ ಪ್ರತಿಜ್ಞೆ ಮಾಡಲಿಲ್ಲ. ಅರ್ಜುನ ಅಷ್ಟು ಸಮರ್ಥನಲ್ಲವಾದ್ದರಿಂದ ಅವನು ಅಸ್ತ್ರಾಭಿಮಾನಿಗಳನ್ನು ಬೇಡಿ ಕಾರ್ಯ ಸಾಧಿಸಿಕೊಳ್ಳುವುದು ಅನಿವಾರ್ಯ. ಆದ್ದರಿಂದ ಅವನು ಅಸ್ತ್ರವಿದ್ಯೆಯನ್ನು ಕಲಿಯಬೇಕು ಎಂದು ಭಾವಿಸಿ ಹಾಗೆ ಮಾಡಿದ.

ದ್ರೋಣರಿಂದ ಅರ್ಜುನನಿಗೆ ವಿಶೇಷಶಿಕ್ಷಣ

ತತ್ಪ್ರೇರಿತೇನಾರ್ಜುನೇನ ಪ್ರತಿಜ್ಞಾ ಕೃತಾ ಯದಾ ವಿಪ್ರವರಸ್ತತಃ ಪರಮ್ ।
ಸ್ನೇಹಂ ನಿತಾಂತಂ ಸುರರಾಜಸೂನೌ ಕೃತ್ವಾ ಮಹಾಸ್ತ್ರಾಣಿ ದದೌ ಸ ತಸ್ಯ ॥ ೩೯ ॥

ಅ: ಭೀಮಸೇನನಿಂದ ಪ್ರೇರಿತನಾದ ಅರ್ಜುನ ಹಾಗೆ ಪ್ರತಿಜ್ಞೆ ಮಾಡಿದಾಗ ವಿಪ್ರೋತ್ತಮರಾದ ದ್ರೋಣರು ಅಂದಿನಿಂದ ಅರ್ಜುನನಲ್ಲಿ ಅತ್ಯಂತವಾದ ಪ್ರೀತಿಯನ್ನು ಹೊಂದಿ ಅವನಿಗೆ ಮಹಾಸ್ತ್ರಗಳನ್ನು ನೀಡಿದರು.

ವಿ: ೧) ಭೀಮನು ತಾನು ಪ್ರತಿಜ್ಞೆ ಮಾಡಲಿಲ್ಲವಾದರೂ, ಅರ್ಜುನನಿಗೆ ಪ್ರೇರೇಪಣೆ ಮಾಡಿ ಪ್ರತಿಜ್ಞೆ ಮಾಡಿಸಿದ. ಭೀಮನ ಪ್ರೇರೇಪಣೆ ಅರ್ಜುನನಿಗೆ ಅಂತಹ ಕಠಿನಪ್ರತಿಜ್ಞೆಯನ್ನು ಮಾಡಲು ಸ್ಫೂರ್ತಿ ನೀಡಿತು ಎಂದರ್ಥ. ಹಾಗೆ ಪ್ರೇರೇಪಣೆ ಮಾಡಿದ ಭೀಮ ಅದನ್ನು ನೆರವೇರಿಸಲು ನೆರವಾಗುವುದು ಖಚಿತ ಎಂಬ ವಿಶ್ವಾಸವೂ ಆತನಲ್ಲಿ ಮೂಡಿತು. ಮುಂದೆ ಆದದ್ದು ಹಾಗೆಯೇ.

೨) ದ್ರೋಣರು ಸುರಗುರುವಾದ ಬೃಹಸ್ಪತಿಯ ಅವತಾರ. ಅರ್ಜುನ ಸುರರಾಜನಾದ ಇಂದ್ರನ ಅವತಾರ. ಈ ಸಂಬಂಧ ಅವರಿಬ್ಬರಲ್ಲಿನ ವಿಶೇಷ ಅನುಬಂಧಕ್ಕೆ ಮತ್ತೊಂದು ಕಾರಣ ಎಂಬುದನ್ನು, ಅರ್ಜುನನನ್ನು 'ಸುರರಾಜಸೂನು'(ದೇವರಾಜನಾದ ಇಂದ್ರನ ಪುತ್ರ) ಎಂದು ಕರೆಯುವ ಮೂಲಕ ಸೂಚಿಸಿರುವರು ಎಂದು ತಿಳಿಯಬಹುದು.

ಸ ಪಕ್ಷಪಾತಂ ಚ ಚಕಾರ ತಸ್ಮಿನ್ ಕರೋತಿ ಚಾಸ್ಯೋರುತರಾಂ ಪ್ರಶಂಸಾಮ್ ।
ರಹಸ್ಯವಿದ್ಯಾಶ್ಚ ದದೌ ಸ ತಸ್ಯ ನಾನ್ಯಸ್ಯ ಕಸ್ಯಾಪಿ ತಥಾ ಕಥಂಚಿತ್ ॥ ೪೦ ॥

ಅ: ದ್ರೋಣರು ಅರ್ಜುನನಲ್ಲಿ ಪಕ್ಷಪಾತವನ್ನು ಮಾಡಿದರು; ಅವನನ್ನು ಬಹಳವಾಗಿ ಪ್ರಶಂಸಿಸುತ್ತಿದ್ದರು. ರಹಸ್ಯವಿದ್ಯೆಗಳನ್ನು ಅವನಿಗೆ ತಿಳಿಸಿದರು; ಹಾಗೆ ಇತರರಾರಿಗೂ ಅವರು ತಿಳಿಸಲಿಲ್ಲ.

ವಿ: ಅರ್ಜುನ ಮಾಡಿದ ಪ್ರತಿಜ್ಞೆಯಿಂದ ಸಂತುಷ್ಟರಾದ ದ್ರೋಣರು ಅವನ ಬಗ್ಗೆ ವಿಶೇಷಪ್ರೀತಿಯನ್ನು ಹೊಂದಿ ಇತರರಾರಿಗೂ ತಿಳಿಸದ ರಹಸ್ಯವಿದ್ಯೆಗಳನ್ನೆಲ್ಲ ತಿಳಿಸಿಕೊಟ್ಟರು ಎಂದರ್ಥ. ಎಲ್ಲರ ಸಮ್ಮುಖದಲ್ಲೇ ಅರ್ಜುನ ಆ ಪ್ರತಿಜ್ಞೆ ಮಾಡಿದ್ದರಿಂದ ಇತರರಾರೂ ದ್ರೋಣರ ಆ ಪಕ್ಷಪಾತವನ್ನು ದೂಷಿಸಲು ಅವಕಾಶವಾಗಲಿಲ್ಲ ಎಂದೂ ತಿಳಿಯಬೇಕು.

ಅರ್ಜುನನಿಗೆ ಭೀಮ ನೀಡಿದ ಅವಕಾಶ

ಭೀಮಃ ಸಮಸ್ತಂ ಪ್ರತಿಭಾಬಲೇನ ಜಾನನ್ ಸ್ನೇಹಂ ತ್ವದ್ವಿತೀಯಂ ಕನಿಷ್ಠೇ ।
ದ್ರೋಣಸ್ಯ ಕೃತ್ವಾ ಸಕಲಾಸ್ತ್ರವೇದಿನಂ ಕರ್ತುಂ ಪಾರ್ಥಂ ನಾರ್ಜುನವಚ್ಚಕಾರ॥ ೪೧ ॥

ಅ: ಭೀಮನು ಸಮಸ್ತವನ್ನೂ ತನ್ನ ಪ್ರತಿಭಾಸಾಮರ್ಥ್ಯದಿಂದಲೇ ಅರಿತವನಾಗಿದ್ದ; ತನ್ನ ತಮ್ಮನಾದ ಅರ್ಜುನನಲ್ಲಿ ದ್ರೋಣರಿಗೆ ಅನುಪಮಸ್ನೇಹವನ್ನು ಹುಟ್ಟಿಸಿ, ಅವನನ್ನು ಸಕಲ ಅಸ್ತ್ರಗಳನ್ನೂ ಬಲ್ಲವನನ್ನಾಗಿ ಮಾಡಲೆಂದು ಅವನಂತೆ ಗುರುಸೇವೆ ಮಾಡಲಿಲ್ಲ.

ವಿ: ೧) ಗುರುಗಳಿಗೆ ಪ್ರೀತಿ ಹುಟ್ಟಿಸುವಂತಹ ಕಾರ್ಯಗಳನ್ನು ಭೀಮ ಅರ್ಜುನನಂತೆ ಮಾಡಲಿಲ್ಲ ಎಂದರ್ಥ. ಅರ್ಜುನನಿಗೆ ಅಂತಹ ಅವಕಾಶವನ್ನು ನೀಡುವ ಮೂಲಕ ಅವನ ಬಗ್ಗೆ ಅವರಿಗೆ ವಿಶೇಷಪ್ರೀತಿ ಹುಟ್ಟುವಂತೆ ಮಾಡಿ, ಸಕಲವಿಧ ಅಸ್ತ್ರಗಳನ್ನೂ ಅವರು ಅವನಿಗೆ ಉಪದೇಶಿಸುವಂತಾಗಬೇಕು ಎಂಬುದು ಭೀಮನ ಆ ಕಾರ್ಯದ ಉದ್ದೇಶವಾಗಿತ್ತು ಎಂದು ತಿಳಿಯಬೇಕು.

೨) ಭೀಮ ಅಸ್ತ್ರವನ್ನು ದ್ರೋಣರ ಬಳಿ ಕಲಿಯಲಿಲ್ಲ ಎಂದ ಮಾತ್ರಕ್ಕೇ ಅಸ್ತ್ರಜ್ಞನಲ್ಲ ಎಂದರ್ಥವಲ್ಲ. ಭೀಮ ಪೂರ್ಣಪ್ರಜ್ಞ; ಸಕಲಾಸ್ತ್ರಗಳನ್ನೂ ತನ್ನ ಅಪಾರವಾದ ಸಹಜ ಪ್ರತಿಭೆಯಿಂದಲೇ ಅರಿತಿದ್ದ. ದ್ರೋಣರ ಉಪದೇಶದ ಆವಶ್ಯಕತೆ ಅವನಿಗೆ ಇರಲಿಲ್ಲ ಎಂದು ಭಾವ. ಶಸ್ತ್ರಾಸ್ತ್ರಗಳನ್ನು ಮಾತ್ರವಲ್ಲದೆ ಸಕಲವಿದ್ಯೆಗಳೂ ಭೀಮನಿಗೆ [೨]ಕರತಲಾಮಲಕ ಎಂಬುದು ಶಾಸ್ತ್ರಗಳ ನಿರೂಪಣೆ.

---

೧. ಕೃತ್ವಾ= ಕಾರಯಿತ್ವಾ । ತಥಾ ಅರ್ಜುನವತ್ ನ ಚಕಾರ= ಸೇವಾಂ ನ ಚಕಾರ ॥ ೪೧ ॥

೨. ಗಂಧರ್ವವಿದ್ಯಾನಿಪುಣಸ್ಯ ನಿತ್ಯಂ ಗಂಧರ್ವವರ್ಯೈರನುಗೀತಕೀರ್ತೇಃ ।
ಕಲಾಶ್ಚ ಶೇಷಾ ಹೃದಯೇ ಗುರೋರ್ನಃ **ಕರೋಲ್ಲಸತ್ಕಂದುಕವದ್ವಿಭಾಂತಿ** ॥
– ತ್ರಿವಿಕ್ರಮಪಂಡಿತಾಚಾರ್ಯರು(ತತ್ತ್ವಪ್ರದೀಪ ಶ್ಲೋ-೨೧)

ಕರತಲೇ ಖಲು ಕಂದುಕವತ್ ಸದಾ ಸಕಲಯಾ ಕಲಯಾ ಸಹ ವಿದ್ಯಯಾ ।
ಅರಿಧರೇಣ ಸಮಂ ಸ್ಫುರಿತಂ ಗುರೋರ್ಮನಸಿ ತಸ್ಯ ವಿಡಂಬಯತೋ ಜನಾನ್ ॥ – ಮ.ವಿ.(೩/೪೨)

ನೈವಾತಿಯತ್ನೇನ ದದರ್ಶ ಲಕ್ಷ್ಯಂ ಶುಶ್ರೂಷಾಯಾಂ ಪಾರ್ಥಮಗ್ರೇ ಕರೋತಿ ।
ಸ್ವಬಾಹುವೀರ್ಯಾದ್ಭಗವತ್ಪ್ರಸಾದಾನ್ನಿಹನ್ಮಿ ಶತ್ರೂನ್ ಕಿಮನೇನ ಚೇತಿ ॥ ೪೨ ॥

ಅ: ''ನನ್ನ ತೋಳ್ಬಲದಿಂದಲೂ, ಭಗವಂತನ ದಯೆಯಿಂದಲೂ ಶತ್ರುಗಳನ್ನು ಸದೆ ಬಡಿಯುವೆ. ಇದರಿಂದೇನು?'' ಎಂದು ಬಗೆದಿದ್ದ ಭೀಮ ಹೆಚ್ಚು ಪ್ರಯತ್ನದಿಂದ ಗುರಿಯನ್ನು ನೋಡುತ್ತಿರಲಿಲ್ಲ; ಸೇವಾಕಾರ್ಯದಲ್ಲೂ ಅರ್ಜುನನನ್ನೇ ಮುಂದೆ ಮಾಡುತ್ತಿದ್ದ.

ವಿ: ೧) ಅರ್ಜುನನಂತೆ ಮಾಡಲಿಲ್ಲ ಎಂಬ ಹಿಂದಿನ ಶ್ಲೋಕದ ಮಾತಿಗೆ ಇಲ್ಲಿ ವಿವರಣೆಯಿದೆ. ಅರ್ಜುನನಂತೆ ಹೆಚ್ಚು ಗಮನವಿರಿಸಿ ಗುರಿಯನ್ನು ನೋಡುತ್ತಿರಲಿಲ್ಲ. ಗುರುಸೇವೆಯ ಪ್ರಸಂಗ ಒದಗಿದಾಗಲೂ ಅರ್ಜುನನಿಗೆ ನೀಡಿ ತಾನು ಹಿಂದಾಗುತ್ತಿದ್ದ. ಇದರಿಂದಾಗಿ ಅರ್ಜುನನ ಬಗ್ಗೆ ದ್ರೋಣರಿಗೆ ಪ್ರೀತಿ ಹೆಚ್ಚುತ್ತಾ ಹೋಯಿತು ಎಂದರ್ಥ.

೨) ಅಪಾರತೋಳ್ಬಲದ ತನಗೆ ಅಸ್ತ್ರವಿದ್ಯೆಯೇಕೆ? ಸಾಕ್ಷಾತ್ ಶ್ರೀಹರಿಯ ಅನುಗ್ರಹವೇ ಇರುವಾಗ ಇವರ ಅನುಗ್ರಹವೇಕೆ? ಎಂಬುದು ಭೀಮನ ಮನೋಗತವಾಗಿತ್ತು ಎಂದು ಭಾವ.

೩) ಮಧ್ವಾವತಾರದಲ್ಲೂ ಹೀಗೆ ಗುರುಕುಲವಾಸಕಾಲದಲ್ಲಿ ಅನ್ಯಮನಸ್ಕನಾಗಿದ್ದರಿಂದ ಗುರುಗಳೊಮ್ಮೆ ಅಪ್ರೀತಿ ಹೊಂದಿದ ವಿವರ ಸುಮಧ್ವವಿಜಯದಲ್ಲಿದೆ(೩/೫೦). ಅದೂ ಇದರಂತೆ ಎಂದು ಭಾವಿಸಬಹುದು.

೪) ಭೀಮನೊಮ್ಮೆ ಲಕ್ಷ್ಯವನ್ನು ಸರಿಯಾಗಿ ಗುರುತಿಸುವ ಮುನ್ನವೇ ಬಾಣ ಹೊಡೆದಾಗ ದ್ರೋಣರು ಅಪ್ರೀತರಾಗಲು ತತ್ಕ್ಷಣವೇ ಧಾವಿಸಿದ ಅವನು ಗುರಿ ತಲುಪುವ ಮುನ್ನವೇ ಬಾಣವನ್ನು ಹಿಡಿದು ಮರಳಿ, ಮತ್ತೊಮ್ಮೆ ಹೂಡಿ ಗುರುಗಳಿಗೆ ದಿಗ್ವಿಜಯವೆಂಬ ಹುಟ್ಟಿಸಿದ ವಿವರ ಭಾಸಕವಿಯ [೨]ಪಂಚರಾತ್ರ ಎಂಬ ನಾಟಕದಲ್ಲಿ ನಿರೂಪಿತವಾಗಿದೆ.

ರಾಜಪುತ್ರರೆಲ್ಲ ದ್ರೋಣಶಿಷ್ಯರೇ

ತದಾ ಸಮೀಯುಃ ಸಕಲಾಃ ಕ್ಷಿತೀಶ-
ಪುತ್ರಾ ದ್ರೋಣಾತ್ ಸಕಲಾಸ್ತ್ರಜ್ಞವಾಪ್ತುಮ್ ।
ದದೌ ಸ ತೇಷಾಂ ಪರಮಾಸ್ತ್ರಜಾಲೇ ವಿಪ್ರೋ
ರಾಮಾದವಾಪ್ತಾನ್ಯಗತಾನಿ ಚಾನ್ಯೈಃ ॥ ೪೩ ॥

---

೧. ಅಯಂ ತು ದಕ್ಷಿಣೋ ಬಾಹುರಾಯುಧಂ ಸಹಜಂ ಮಮ ।
– ಭಾಸನ ಮಧ್ಯಮವ್ಯಾಯೋಗದಲ್ಲಿ ಬಂದಿರುವ ಭೀಮವಚನ (ಶ್ಲೋ. ೪೨)

೨. ಕರ್ಣಾಯತೇ ತೇನ ಶರೇ ವಿಮುಕ್ತೇ ವಿಕಂಪಿತಂ ತಸ್ಯ ಶಿರೋ ಮಯೋಕ್ತಮ್ ।
ಗತ್ವಾ ತದಾ ತೇನ ಚ ಬಾಣತುಲ್ಯಮಪ್ರಾಪ್ತಲಕ್ಷಃ ಸ ಶರೋ ಗೃಹೀತಃ ॥ – ಭಾಸಕೃತಪಂಚರಾತ್ರನಾಟಕ(೩/೧೨)

ಅ: ಆಗ ಸಕಲರಾಜಪುತ್ರರೂ ದ್ರೋಣರಿಂದ ಸಕಲ ಅಸ್ತ್ರಗಳನ್ನೂ ತಿಳಿಯಲೆಂದು ಅಲ್ಲಿಗೆ ಧಾವಿಸಿದರು. ಆ ದ್ರೋಣರು ಅವರಿಗೆಲ್ಲ ಬೇರಾರೂ ಅರಿತಿರದಿದ್ದ, ತಾವು ಪರಶುರಾಮನಿಂದ ಕಲಿತು ಬಂದಿದ್ದ ಮಹಾಸ್ತ್ರಗಳನ್ನು ಉಪದೇಶಿಸಿದರು.

ವಿ: ಕುರುಪಾಂಡವರು ಮಾತ್ರವಲ್ಲದೆ ಆ ಕಾಲದ ಸಮಸ್ತರಾಜಪುತ್ರರೂ ಅಸ್ತ್ರಾಭ್ಯಾಸ–ಕ್ಕೆಂದು ದ್ರೋಣರ ಬಳಿಗೆ ಧಾವಿಸಿದರು ಎಂದರ್ಥ. ಅದಕ್ಕೆ ಅವರ ಬಳಿ ಪರಶುರಾಮರು ಉಪದೇಶಿಸಿದ ಅಸ್ತ್ರಗಳಿರುವುದೇ ಕಾರಣವಾಗಿತ್ತು. ಆ ಮೊದಲು ಪರಶುರಾಮರ ಅಸ್ತ್ರಗಳನ್ನು ಪಡೆದಿದ್ದ ದಾಖಲೆ ಭೀಷ್ಮರದು ಮಾತ್ರ. ಆದರೆ ಅವರು ಕ್ಷತ್ರಿಯರಾದ್ದರಿಂದ ಇತರ ಕ್ಷತ್ರಿಯರಿಗೆ ಅವನ್ನು ಪಡೆಯಲು ಸಾಧ್ಯವಾಗಿರಲಿಲ್ಲ. ಆದರೆ ದ್ರೋಣರು ವಿಪ್ರರಾಗಿದ್ದು ಶಸ್ತ್ರಗಳ ಅಧ್ಯಾಪನಕಾರ್ಯವನ್ನೇ ಮುಖ್ಯಕಾಯಕವನ್ನಾಗಿಸಿಕೊಂಡಿದ್ದರಿಂದ ಅವರ ಬಳಿಗೆ ರಾಜಕುಮಾರ–ರುಗಳು ನೆರೆಯಲು ಕಾರಣವಾಗಿತ್ತು ಎಂದರ್ಥ. ಅಂತೂ ದುಷ್ಟಕ್ಷತ್ರಿಯರ ಪಾಲಿಗೆ ಸಿಂಹಸ್ವಪ್ನರಾಗಿದ್ದ ಪರಶುರಾಮರ ದಿವ್ಯಾಸ್ತ್ರಗಳನ್ನು ಕ್ಷತ್ರಿಯರೆಲ್ಲ ಕಲಿಯಲು ಲಭಿಸಿದ ಸುವರ್ಣಾವಕಾಶ ಅದಾಯಿತು ಎಂಬುದು ಇಲ್ಲಿಯ ವಿಶೇಷಾಂಶ. ಮುಂದೆ 'ಅಥಾಖಿಲಾನಾಂ ಪೃಥಿವೀಪತೀನಾಮಾಚಾರ್ಯಂ' (೨೬/೧) ಎಂಬ ಮಾತಿನಲ್ಲಿ ದ್ರೋಣರು ಸಕಲರಾಜರುಗಳಿಗೂ ಗುರುವಾಗಿದ್ದ ವಿವರ ಸ್ಫುಟವಾಗಿ ನಿರೂಪಿತವಾಗಿದೆ.

ಅಸ್ತ್ರಾಣಿ ಚಿತ್ರಾಣಿ ಮಹಾಂತಿ ದಿವ್ಯಾನ್ಯನ್ಯೈರ್ನರೈಪೈರ್ಮನಸಾऽಪ್ಯಕೃತಾನಿ ।
ಅವಾಪ್ಯ ಸರ್ವೇ ತನಯಾ ನೃಪಾಣಾಂ ಶಕ್ತಾ ಬಭೂವುರ್ನ ಯಥೈವ ಪೂರ್ವೇ ॥ ೪೪ ॥

ಅ: ಇತರ ರಾಜರುಗಳು ಮನಸ್ಸಿನಲ್ಲೂ ಯೋಚಿಸಲಾಗದಿದ್ದ ಮಹತ್ತರವಾದ ಚಿತ್ರವಿಚಿತ್ರವಾದ ದಿವ್ಯಾಸ್ತ್ರಗಳನ್ನು ರಾಜಪುತ್ರರುಗಳು ಪಡೆದು, ಹಿಂದಿನವರಾರೂ ಆಗದಿದ್ದಷ್ಟು ಸಮರ್ಥರಾದರು.

ವಿ: ಹೀಗೆ ಪ್ರಥಮಬಾರಿಗೆ ಪರಶುರಾಮರ ದಿವ್ಯಾಸ್ತ್ರಗಳನ್ನು ಪಡೆದ ರಾಜಪುತ್ರರುಗಳು ತಮ್ಮ ಮುಂಚಿನವರಿಗಿಂತ ಮಹಾಸಮರ್ಥರೆನ್ನಿಸಿದರು ಎಂದರ್ಥ.

ನೈತಾದೃಶಾಃ ಪೂರ್ವಮಾಸನ್ ನರೇಂದ್ರಾ ಅಸ್ತ್ರೇ ಬಲೇ ಸರ್ವವಿದ್ಯಾಸು ಚೈವ ।
ದೌಷ್ಯಂತಿಮಾಂಧಾತೃಮರುತ್ತಪೂರ್ವಾಶ್ಚೈತತ್ಸಮಾನಾಃ ಸ್ಯುರುದಾರವೀರ್ಯಾಃ ॥ ೪೫ ॥

---

೧. ಏತತ್ಪೂರ್ವಾಃ ನೃಪಾಃ ಉದಾರವೀರ್ಯಾಶ್ಚ ಉತೃಷ್ಟವೀರ್ಯಾ ಅಪಿ ತ ಏತೈರ್ದ್ರೋಣಶಿಷ್ಯೈಃ ಸಮಾಃ ತುಲ್ಯಾಃ ನಾಸುಃ । – (ಜ.)

ಏತತ್ಸಮಾ ನಾಸುರುದಾರವೀರ್ಯಾಃ – (ಪಾಠಾಂತರ)

ಅ: ಅಸ್ತ್ರದಲ್ಲಿ, ಬಲದಲ್ಲಿ ಹಾಗೆಯೇ ಸಕಲವಿದ್ಯೆಗಳಲ್ಲಿ ಇವರಂತಹ ರಾಜರುಗಳು ಹಿಂದೆ ಆಗಿರಲಿಲ್ಲ. ಮಹಾಬಲಶಾಲಿಗಳಾದ ದುಷ್ಮಂತಪುತ್ರನಾದ ಭರತ, ಮಾಂಧಾತೃ, ಮರುತ್ತ ಮೊದಲಾದವರು ಈ ರಾಜರುಗಳಿಗೆ ಸಮಾನರಾಗಿದ್ದರು.

ವಿ: ೧) ಹಿಂದಿನ ಯಾವ ರಾಜರೂ ಈ ರಾಜರುಗಳಂತೆ ಅಸ್ತ್ರಾದಿಪಾರಂಗತರಾಗಿರಲಿಲ್ಲ ಎಂದರ್ಥ. ಭರತಮಾಂಧಾತಾದಿಗಳು ಮಹಾಸತ್ತ್ವಶಾಲಿಗಳಾದ್ದರಿಂದ ಅವರಿಗೆ ಮಾತ್ರ ಇವರಿಗೆ ಸಮಾನರಾಗಿರಲು ಸಾಧ್ಯವಾಗಿತ್ತು.

೨) '...ಸಮಾ ನಾಸುರುದಾರವೀರ್ಯಾಃ' ಎಂಬುದಾಗಿ ಜ. ಪಾಠ. ಅದರಂತೆ ಭರತ ಮೊದಲಾದವರು ಸಹ ಅಸ್ತ್ರಾದಿಗಳಲ್ಲಿ ಇವರ ಸಮಾನರಾಗಿರಲಿಲ್ಲ ಎಂದಾಗುವುದು.

ಕರ್ಣ ಮತ್ತು ಏಕಲವ್ಯರಿಗೆ ಅಸ್ತ್ರೋಪದೇಶ ಮಾಡದಿರಲು ಕಾರಣ

ತದಾ ಕರ್ಣೋ೭ಥೈಕಲವ್ಯಶ್ಚ ದಿವ್ಯಾನ್ಯಸ್ತ್ರಾಣ್ಯಾಪ್ತುಂ ದ್ರೋಣಸಮೀಪಮೀಯತುಃ।
ಸೂತೋ ನಿಷಾದ ಇತಿ ನೈತಯೋರದಾದಸ್ತ್ರಾಣಿ ವಿಪ್ರಃ ಸ ತು ರಾಮಶಿಷ್ಯಃ ॥ ೪೬ ॥

ಅ: ಆಗ ಕರ್ಣ ಮತ್ತು ಏಕಲವ್ಯ ದಿವ್ಯಾಸ್ತ್ರಗಳನ್ನು ಪಡೆಯಲೆಂದು ದ್ರೋಣರ ಬಳಿಗೆ ಬಂದರು. (ಕರ್ಣ) ಸೂತ, (ಏಕಲವ್ಯ) ಬೇಡ ಎಂಬ ಕಾರಣದಿಂದ ಅವರಿಬ್ಬರಿಗೂ ಪರಶುರಾಮಶಿಷ್ಯರಾದ ದ್ರೋಣರು ಅಸ್ತ್ರಗಳನ್ನು ನೀಡಲಿಲ್ಲ.

ವಿ: ೧) ಕರ್ಣ ಕುಂತೀಪುತ್ರನಾಗಿ ಹುಟ್ಟಿನಿಂದ ಕ್ಷತ್ರಿಯನಾದರೂ, ಕ್ಷತ್ರಿಯೋಚಿತಸಂಸ್ಕಾರ–ಗಳನ್ನು ಹೊಂದದೆ, ಸೂತಜಾತಿಯ ಸಂಸ್ಕಾರಗಳನ್ನೇ ಹೊಂದಿದ ಕಾರಣದಿಂದ ಅವನು ಸೂತನೆನ್ನಿಸಿದ ಎಂಬ ವಿವರ ಮುಂದೆ ಬಂದಿದೆ (೧೮/೩೮, ೩೯).

೨) ಏಕಲವ್ಯನೂ ಸಹ ಹುಟ್ಟಿನಿಂದ ಕ್ಷತ್ರಿಯ; ದೇವಶ್ರವನೆಂಬ ವಸುದೇವಾನುಜನ ಪುತ್ರ. ಆದರೆ ಹಿರಣ್ಯಧನುಷ್ ಎಂಬ ಬೇಡನಿಗೆ ಸಾಕುಮಗನಾಗಿ ನೀಡಲ್ಪಟ್ಟದ್ದರಿಂದ ನಿಷಾದಸಂಸ್ಕಾರಗಳನ್ನೇ ಹೊಂದಿ, ನಿಷಾದನೆನ್ನಿಸಿದವನು.

೩) ಹೀಗೆ ಕರ್ಣ, ಏಕಲವ್ಯ ಇಬ್ಬರೂ ಜನ್ಮತಃ ಕ್ಷತ್ರಿಯರಾದರೂ, ಕ್ಷತ್ರಿಯೋಚಿತ ಸಂಸ್ಕಾರ ಹೊಂದದೆ ಕ್ರಮವಾಗಿ ಸೂತ, ನಿಷಾದರ ಸಂಸ್ಕಾರಗಳನ್ನು ಹೊಂದಿ, ಆ ಜಾತಿಗಳಿಗೆ ಸೇರಿದವರಾದರು.

೪) ಅಸ್ತ್ರಗಳು ಮೂಲತಃ ವೇದಮಂತ್ರಗಳು. ವೇದಾಧಿಕಾರವಿಲ್ಲದವರಿಗೆ ಅಸ್ತ್ರಾ–ಧಿಕಾರಗಳೂ ಇಲ್ಲ. ನಿಷಾದಜಾತಿಯ ಏಕಲವ್ಯ ಈ ಕಾರಣದಿಂದ ಅಸ್ತ್ರೋಪದೇಶಕ್ಕೆ

ಅನರ್ಹನೆನ್ನಿಸಿದ. ಕರ್ಣ ಸೂತ; ಸೂತನದು ಕ್ಷತ್ರಿಯನ ಅನಂತರದ ವೈಶ್ಯಜಾತಿಗಿಂತ ಮಿಗಿಲಾದ ಸ್ಥಾನ. ಎಂದರೆ ಅವನಿಗೆ ವೇದಾಧಿಕಾರವಿದೆ. ಆದರಿಂದಲೇ ಕರ್ಣನ ಬಗ್ಗೆ ಹಿಂದೆ ಉಲ್ಲೇಖಿಸುವಾಗ 'ಅವನು ಸಕಲವೇದಗಳನ್ನೂ ಅಧ್ಯಯನ ಮಾಡಿದ' (ನಿಖಿಲಾಃ ಶ್ರುತೀರಧಿಜಗೌ') ಎಂಬ ಮಾತು ಬಂದಿದೆ. ಆದರೆ ಕ್ಷತ್ರಿಯರಿಗೆ ಮಾತ್ರವೇ ವಿಶೇಷ ಅಸ್ತ್ರಾಧಿಕಾರ. ಸೂತರಿಗೆ ಸಾಮಾನ್ಯಶಸ್ತ್ರಾಧಿಕಾರವಷ್ಟೆ ವಿಹಿತ. ಬ್ರಾಹ್ಮಣನಿಗೆ ಅಸ್ತ್ರಪರಿಜ್ಞಾನ ವಿಹಿತವಾಗಿದ್ದರೂ, ಆದರ ಪ್ರಯೋಗ ನಿಷಿದ್ಧ. ಹೀಗೆ ಅಸ್ತ್ರವಿದ್ಯೆಯ ಅಧಿಕಾರದಲ್ಲಿ ವಿಶೇಷವಿದೆ. ಆದ್ದರಿಂದ ಕರ್ಣನಿಗೆ ಅವರು ಅಸ್ತ್ರೋಪದೇಶ ಮಾಡಲಿಲ್ಲ ಎಂದರ್ಥ.

೫) ಏಕಲವ್ಯ ನಿಷಾದನಾದ್ದರಿಂದ ಮೃಗಪಕ್ಷಿಗಳನ್ನು ಬೇಟೆಯಾಡಿ ಬದುಕುವವನು. ಅವನಿಗೆ ಅಸ್ತ್ರವಿದ್ಯೆಯನ್ನು ಉಪದೇಶಿಸುವುದರಿಂದ ಪ್ರಾಣಿಸಂಕುಲಕ್ಕೇ ಅಪಾಯ ಎಂಬುದು ಈ ನಿಷೇಧದ ಹಿನ್ನೆಲೆ. ಆದ್ದರಿಂದಲೇ ದ್ರೋಣರು ಅವನಿಗೆ ಅಸ್ತ್ರೋಪದೇಶವನ್ನು ಸರ್ವಥಾ ನಿರಾಕರಿಸಿದರು.

೬) ಕರ್ಣನ ಪ್ರಸಂಗ ಹಾಗಲ್ಲ. ಅವನಿಗೆ ಸಾಮಾನ್ಯಶಸ್ತ್ರಾಧಿಕಾರವಿದ್ದದ್ದರಿಂದ ಒಂದು ಹಂತದ ವರೆಗೆ ದ್ರೋಣರು ಅಸ್ತ್ರವಿದ್ಯೆಯನ್ನು ನೀಡಿದರೂ, ಬ್ರಹ್ಮಾಸ್ತ್ರ ಮೊದಲಾದ ವಿಶೇಷಾಸ್ತ್ರಗಳನ್ನು ಮಾತ್ರ ಉಪದೇಶಿಸಲಿಲ್ಲ ಎಂಬ ವಿಶೇಷಾಂಶ [೧]ಮಹಾಭಾರತದಲ್ಲಿದೆ.

೭) ದ್ರೋಣರು ಹೀಗೆ ಧರ್ಮಪ್ರಜ್ಞೆಯನ್ನು ಹೊಂದಿರಲು ಅವರು ಪರಶುರಾಮರ ಸಾಕ್ಷಾಚ್ಛಿಷ್ಯರಾಗಿದ್ದೇ ಕಾರಣ ಎಂಬುದನ್ನು 'ಸ ತು ರಾಮಶಿಷ್ಯಃ' ಎಂಬ ಮಾತಿನಿಂದ ತಿಳಿಸಿರುವರು.

ಪರಶುರಾಮನ ಬಳಿ ಕರ್ಣನ ಅಸ್ತ್ರಾಭ್ಯಾಸ

ಕರ್ಣೋ೭ನವಾಪ್ಯ ನಿಜಮೀಪ್ಸಿತಮುಚ್ಚಮಾನೋ
ಯಸ್ಮಾದವಾಪ ಪುರುಷೋತ್ತಮತೋ೭ಸ್ತ್ರವೃಂದಮ್ ।
ವಿಪ್ರೋ೭ಪ್ಯಯಂ ತಮಜಮೇಮಿ ಭೃಗೋಃ ಕುಲೋತ್ಥ-
ಮಿತ್ಥಂ ವಿಚಿಂತ್ಯ ಸ ಯಯೌ ಭೃಗುಪಾಶ್ರಮಾಯ ॥ ೪೭ ॥

ಅ: ಸ್ವಾಭಿಮಾನಿಯಾಗಿದ್ದ ಕರ್ಣ ತನ್ನ ಅಪೇಕ್ಷೆ ಈಡೇರದಾಗ ''ಈ ಬ್ರಾಹ್ಮಣ ಯಾವ ಪುರುಷೋತ್ತಮನಾದ ಶ್ರೀಹರಿಯಿಂದ ಅಸ್ತ್ರಸಮುದಾಯವನ್ನು ಪಡೆದನೊ, ಆ ಭೃಗುವಂಶದ

---

೧. ಬ್ರಹ್ಮಾಸ್ತ್ರಂ ಬ್ರಾಹ್ಮಣೋ ವಿದ್ಯಾದ್ಯಥಾವಚ್ಚರಿತವ್ರತಃ ।
ಕ್ಷತ್ರಿಯೋ ವಾ ತಪಸ್ವೀ ಯೋ ನಾನ್ಯೋ ವಿದ್ಯಾತ್ ಕಥಂಚನ ॥ – ಭಾರತ (ಶಾಂತಿ. ೨/೧೩))

ಪರಶುರಾಮರೂಪದ ಶ್ರೀಹರಿಯನ್ನೇ ಆಶ್ರಯಿಸುವೆನು'' ಎಂದು ಚಿಂತಿಸಿ, ಪರಶು-ರಾಮಾಶ್ರಮಕ್ಕೆ ತೆರಳಿದ.

ವಿ: ಕರ್ಣ ದ್ರೋಣರ ನಿಷೇಧದ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳುವ ಬದಲು ಅದನ್ನು ಕಲಿಯಲೇಬೇಕೆಂಬ ಛಲಕ್ಕೆ ಒಳಗಾಗಲು ಅವನೊಳಗಿದ್ದ ಸಹಸ್ರವರ್ಮನೆಂಬ ಅಸುರನ ಆವೇಶವೇ ಕಾರಣವೆಂದು ಭಾವಿಸಬೇಕು.

ಸ ಸರ್ವವೇತ್ತುಶ್ಚ ವಿಭೋರ್ಭಯೇನ ವಿಪ್ರೋ೭ಹಮಿತ್ಯವದದಸ್ತ್ರವರಾತಿಲೋಭಾತ್।
ಜಾನನ್ನಪಿ ಪ್ರದದಾವಸ್ಯ ರಾಮೋ ದಿವ್ಯಾನ್ಯಸ್ತ್ರಾಣ್ಯಖಿಲಾನ್ಯವ್ಯಯಾತ್ಮಾ ॥ ೪೮ ॥

ಅ: ಆ ಕರ್ಣನು ಸರ್ವಜ್ಞನಾದ ಪ್ರಭು ಶ್ರೀಪರಶುರಾಮನ ಭಯದಿಂದಾಗಿ ಶ್ರೇಷ್ಠಅಸ್ತ್ರಗಳ ಮೇಲಿನ ಅತಿಯಾಸೆಯಿಂದಾಗಿ ''ನಾನು ಬ್ರಾಹ್ಮಣ'' ಎಂದು ನುಡಿದ. ದೇಹಕ್ಕೂ ನಾಶವಿರದ ಪರಶುರಾಮ ಅವನು ಸೂತನೆಂಬುದನ್ನು ತಿಳಿದೂ ದಿವ್ಯಾಸ್ತ್ರಗಳನ್ನು ಉಪದೇಶಿಸಿದ.

ವಿ: ೧) ಪರಶುರಾಮಶಿಷ್ಯರಾದ ದ್ರೋಣರೇ ಧರ್ಮಕ್ಕನುಗುಣವಾಗಿ ತನಗೆ ಅಸ್ತ್ರೋಪದೇಶ ನಿರಾಕರಿಸಿರುವಾಗ, ಸರ್ವಜ್ಞನಾದ ಪರಶುರಾಮನು ನಿರಾಕರಿಸುವುದು ಅತ್ಯಂತ ಸಹಜ ಎಂಬ ಭಯದಿಂದ ಕರ್ಣ ತಾನು ಬ್ರಾಹ್ಮಣ ಎಂದು ಸುಳ್ಳು ಹೇಳಿದ.

೨) ಪರಶುರಾಮ ಸಾಕ್ಷಾದ್ಭಗವಂತನಾದ್ದರಿಂದ ಅವನು ಯಾರೆಂದು ಪೂರ್ಣವಾಗಿ ತಿಳಿದಿದ್ದರೂ ಸಹ ದಿವ್ಯಾಸ್ತ್ರಗಳನ್ನು ನೀಡಿದರು.

ಕರ್ಣನಿಗೆ ಅಸ್ತ್ರನೀಡಲು ಕಾರಣ

ಅಸಜ್ಜ್ಞಚೂಡಾಮಣಿಮಿಂದ್ರಸೂನುಂ ವಿಶ್ವಸ್ಯ ಹಂತುಂ ಧೃತರಾಷ್ಟ್ರಪುತ್ರಃ ।
ಏನಂ ಸಮಾಶ್ರಿತ್ಯ ದೃಢೋ ಭವೇತೇತ್ಯದಾಜ್ಞಾಜ್ಞತ್ವೈವಾಸ್ತ್ರಮಸ್ಮೈ ರಮೇಶಃ[೧] ॥ ೪೯ ॥

ಅ: ಅಸಜ್ಜ್ಞಶಿರೋಮಣಿಯಾದ ಅರ್ಜುನನನ್ನು ಕೊಲ್ಲಲು ದುರ್ಯೋಧನನು ಈ ಕರ್ಣನನ್ನು ಆಶ್ರಯಿಸಿ ದೃಢನಾಗಲಿ ಎಂದು ಅವನ ಬಗ್ಗೆ ತಿಳಿದೇ ಶ್ರೀಹರಿಯಾದ ಪರಶುರಾಮರು ಅವನಿಗೆ ಅಸ್ತ್ರಗಳನ್ನು ನೀಡಿದರು.

---

೧. ರಮೇಶಃ ಏನಂ= ಕರ್ಣಂ ಜ್ಞಾತ್ವೈವ= ಸೂತಮೇವ ಜ್ಞಾತ್ವಾ೭ಪಿ ಧೃತರಾಷ್ಟ್ರಪುತ್ರಃ ಏನಂ ಸಮಾಶ್ರಿತ್ಯ ಇಂದ್ರಸೂನುಂ ಹಂತುಂ ವಿಶ್ವಸ್ಯ= ವಿಶ್ವಾಸಂ ಕೃತ್ವಾ ದೃಢೋ ಭವೇತೇತಿ ಅಸ್ಮೈ ಕರ್ಣಾಯ ಅಸ್ತ್ರಮದಾದಿತಿ । ಏನಮಿತಿ ಪದಸ್ಯ ಸೂತಮಿತಿ ಪದಾಧ್ಯಾಹಾರೇಣ ಏವೇತ್ಯಸ್ಯಾವಧಾರಣಾರ್ಥತ್ವಂ ಅಪಿಶಬ್ದಾರ್ಥತ್ವಂ ಚಾಶ್ರಿತ್ಯ ಯೋಜನಾ ॥ – (ವಾ.)

ಎ: ಕರ್ಣನನ್ನು [೧]ಸೂತನೆಂದು ತಿಳಿದೂ, ಅವನಿಗೆ ಅಸ್ತ್ರೋಪದೇಶವನ್ನು ಮಾಡಲು ಮುಖ್ಯಕಾರಣವನ್ನು ಇಲ್ಲಿ ತಿಳಿಸಿರುವರು. ಅರ್ಜುನನ ಅಪಾರ ಅಸ್ತ್ರನೈಪುಣ್ಯವನ್ನು ಕಂಡು ದುರ್ಯೋಧನ ನಿರಾಶನಾಗಿ ತನ್ನ ಪಾಂಡವವಿರೋಧಕಾರ್ಯದಲ್ಲಿ ಹಿನ್ನಡೆ ಹೊಂದುವಂತಾಗ–ಬಾರದು. ಬದಲಿಗೆ ಅಪಾರಶಕ್ತಿಶಾಲಿಯಾದ ಕರ್ಣನನ್ನು ನಂಬಿ, ತನ್ನ ದ್ವೇಷಕಾರ್ಯದಲ್ಲಿ ದೃಢಬುದ್ಧಿ ಹೊಂದುವಂತಾಗಬೇಕು ಎಂಬ ಮುಖ್ಯಕಾರಣದಿಂದ ಪರಶುರಾಮರು ಕರ್ಣನನ್ನು ಅಸ್ತ್ರಜ್ಞನನ್ನಾಗಿ ರೂಪಿಸಲೆಂದು ಅಸ್ತ್ರಗಳನ್ನು ನೀಡಿದರು ಎಂದರ್ಥ.

ಜ್ಞಾನಂ ಚ ಭಾಗವತಮಾಪ್ಯ ವರಾಶ್ಚ ವಿದ್ಯಾ
ರಾಮಾದವಾಪ್ಯ ವಿಜಯಂ ಧನುರಗ್ರ್ಯಯಾನಮ್ ।
ಅಬ್ದೈಶ್ಚತುರ್ಭಿರಥ ಚ ನ್ಯವಸತ್ ತದಂತೇ
ಹಾತುಂ ನ ಶಕ್ತ ಉರುಗಾಯಮಿಮಂ ಸ ಕರ್ಣಃ ॥ ೫೦ ॥

ಅ: ಪರಶುರಾಮರಿಂದ ಕರ್ಣ ಭಗವದ್ವಿಷಯಕವಾದ ಜ್ಞಾನವನ್ನು, ಶ್ರೇಷ್ಠವಾದ ಇತರವಿದ್ಯೆಗಳನ್ನು, ವಿಜಯ ಎಂಬ ಧನುಸ್ಸನ್ನು, ಶ್ರೇಷ್ಠವಾದ ರಥವನ್ನು ನಾಲ್ಕು ವರ್ಷಗಳ ಕಾಲದಲ್ಲಿ ಪಡೆದ; ಅವನು ಆ ಶ್ರೀಹರಿಯನ್ನು ಬಿಟ್ಟಿರಲಾಗದೆ, ಅವನ ಬಳಿಯೇ ವಾಸಮಾಡಿಕೊಂಡಿದ್ದ.

ಎ: ೧) ಕರ್ಣನು ಒಟ್ಟು ನಾಲ್ಕು ವರ್ಷಗಳ ಕಾಲ ಪರಶುರಾಮರ ಬಳಿಯಲ್ಲಿ ವಾಸಮಾಡಿ, ತತ್ತ್ವಜ್ಞಾನವನ್ನೂ, ಇತರ ಸಕಲವಿದ್ಯೆಗಳನ್ನೂ, ವಿಜಯ ಎಂಬ ಧನುಸ್ಸನ್ನೂ, ಉತ್ತಮರಥವನ್ನೂ ಪಡೆದುಕೊಂಡ. ತನ್ನ ಕಾರ್ಯ ಪೂರೈಸಿದ್ದರೂ, ಶ್ರೀಹರಿಯನ್ನು ಬಿಡಲಾಗದೆ ಇನ್ನೂ ಅಲ್ಲಿಯೇ ತನ್ನ ವಾಸವನ್ನು ಮುಂದುವರೆಸಿದ್ದ ಎಂದು ಭಾವ.

---

೧. ತಂ ಸ್ವರ್ಗಂ ಕಥಂ ಗಚ್ಛೇಚ್ಛಸ್ತ್ರಪೂತಮಿತಿ ಪ್ರಭೋ ।
ಸಂಘರ್ಷಜನನಸ್ತಸ್ಮಾತ್ ಕನ್ಯಾಗರ್ಭೋ ವಿನಿರ್ಮಿತಃ ॥

ತತ್ರಾಯಂ ಭಾವಃ । ಕರ್ಣಸ್ಯ ಕ್ಷತ್ರಿಯಾಯಾಂ ಜನಾನಾಭಾವೇ ಕ್ಷತ್ರಂ ಶಸ್ತ್ರಪೂತಂ ಸ್ವರ್ಗಂ ಗಚ್ಛೇದಿತಿ ಪ್ರಮೇಯಂ ನ ತದ್ಧೇತ್ । ಅತಃ ಕ್ಷತ್ರಿಯಾಯಾಂ ಜನನಮಾವಶ್ಯಕಮ್ । ತಚ್ಚಾರ್ಜುನಾದಿವತ್ ಸ್ವಪ್ನಂ ಕುಂತ್ಯಾಂ ಜನನೇ ಕ್ಷತ್ರಿಯತ್ವಸ್ಯ ಸುಪ್ರಸಿದ್ಧತ್ವಾತ್ ದ್ರೋಣಾದ್ವಾ ಪರಶುರಾಮಾದ್ವಾ ಬ್ರಹ್ಮಕ್ಷತ್ರಿಯೋರುಭಯೋರಪಿ ಯೋಗ್ಯಂ ಬ್ರಹ್ಮಾಸ್ತ್ರಂ ಲಭೇತೈವ । ಬ್ರಹ್ಮಾಸ್ತ್ರಲಾಭೇ ಚ ಕರ್ಣಸ್ಯ ನ ಕುತಶ್ಚಿತ್ ಶಸ್ತ್ರಘಾತಃ ಸ್ಯಾತ್ । ಪ್ರತ್ಯುತ ಸ್ವಶತ್ರುಮೇವ ತೇನ ಹನ್ಯಾತ್ । ಅತಶ್ಚ ಕರ್ಣಸ್ಯ ಶಸ್ತ್ರಘಾತಸಾಧ್ಯಸ್ವರ್ಗೋ ऽಪಿ ನ ಸ್ಯಾತ್ । ಕನ್ಯಾಗರ್ಭಜನನೇ ತು ಕ್ಷತ್ರಜಾತಿರಪಿ ಜಾತಾ, ಪುನಃ ಸೂತಪುತ್ರತ್ವಪ್ರಸಿದ್ಧೌ ಬ್ರಹ್ಮಾಸ್ತ್ರಲಾಭೋ ऽಪಿ ನಾಭೂತ್ । ಅತಃ ಕ್ಷತ್ರಜಾತಿಮತಃ ಕರ್ಣಸ್ಯ ಶಸ್ತ್ರಪೂತಂ ಮರಣಮಪಿ ನ್ಯಾಯಪ್ರಾಪ್ತಂ ಇತ್ಯುಭಯಲಾಭಾಯ ಕನ್ಯಾಯಾಂ ಜನನಂ ದೇವೈರ್ನಿರ್ಮಿತಂ ಇತಿ ವಕ್ತುರ್ವಾರದಸ್ಯ ಹೃದಯಮಿತಿ । – ಲಕ್ಷ್ಮಾಲಂಕಾರ

೨) ಹಾಗೆ ಕರ್ಣ ಅವರ ಬಳಿಯಲ್ಲೇ ವಾಸವನ್ನು ಮುಂದುವರೆಸಲು ಶ್ರೀಹರಿಯ ಸನ್ನಿಧಾನದ ಆಕರ್ಷಣೆ ಮುಖ್ಯಕಾರಣವಾಗಿತ್ತು. ಕರ್ಣ ಹಿಂದಿನ ಜನ್ಮದಲ್ಲಿ ಸುಗ್ರೀವನಾಗಿದ್ದಾಗ ಶ್ರೀರಾಮನಿಂದ ರಾಜ್ಯಾದಿಸಕಲಸೌಭಾಗ್ಯವನ್ನೂ ಪಡೆದು ಕೃತಕೃತ್ಯನಾಗಿದ್ದವನು ಎಂಬುದನ್ನು ಗಮನಿಸಬೇಕು.

೩) ಕರ್ಣನ ಈ ರೀತಿಯ ವಿಶೇಷವಾದ ಹರಿಭಕ್ತಿಗೆ ಅವನು ಉತ್ತಮ ದೇವಾಂಶ–ನಾಗಿದ್ದುದೇ ಕಾರಣ.

ಕೀಟದ ಮೂಲಕ ಇಂದ್ರ ತೀರಿಸಿದ ಸೇಡು

ಅಂಕೇ ನಿಧಾಯ ಸ ಕದಾಚಿದಮುಷ್ಯ ರಾಮಃ
ಶಿಶ್ಯೇ ಶಿರೋ ವಿಗತನಿದ್ರ ಉದಾರಬೋಧಃ ।
ಸಂಸುಪ್ತವತ್ ಸುರವರಃ ಸುರಕಾರ್ಯಹೇತೋ-
ರ್ದಾತುಂ ಚ ವಾಲಿನಿಧನಸ್ಯ ಫಲಂ ತದಸ್ಯ ॥ ೫೧ ॥

ಅ: ಒಮ್ಮೆ ಜ್ಞಾನಸ್ವರೂಪಿಯೂ, ಸುರಶ್ರೇಷ್ಠನೂ ಆದ ಪರಶುರಾಮ ಅವನ ತೊಡೆಯ ಮೇಲೆ ತಲೆಯಿರಿಸಿ, ನಿದ್ರೆ ಇಲ್ಲದವನಾದರೂ ನಿದ್ರಿಸುವವನಂತೆ ಮಲಗಿದ್ದ. ವಾಲಿಯನ್ನು ಕೊಲ್ಲಿಸಿದಕ್ಕೆ ಅವನಿಗೆ ಉಚಿತಶಿಕ್ಷೆಯನ್ನು ನೀಡುವ ದೇವಕಾರ್ಯ ಆದಕ್ಕೆ ಮುಖ್ಯಕಾರಣ-ವಾಗಿತ್ತು.

ವಿ: ೧) ಪರಶುರಾಮ ಸಾಕ್ಷಾತ್ ಶ್ರೀಹರಿ. ಅವರಿಗೆ ನಿದ್ರಾದಿ ಯಾವ ದೋಷವೂ ಇಲ್ಲ. ಆದರೂ ಹಾಗೆ ಮಲಗಲು ದೇವಕಾರ್ಯವನ್ನು ಪೂರೈಸುವ ಉದ್ದೇಶ ಕಾರಣವಾಗಿತ್ತು. ಕರ್ಣ ಸುಗ್ರೀವನಾಗಿದ್ದಾಗ ವಾಲಿಯನ್ನು ಕೊಲ್ಲಿಸಿದ್ದಕ್ಕೆ [೨]ಪ್ರತಿಫಲ ನೀಡುವುದೇ ಆ ಸುರಕಾರ್ಯವಾಗಿತ್ತು.

೨) ಬಲಿಚಕ್ರವರ್ತಿ ಆಗಮಿಸಿದಾಗಲೂ ನಿದ್ರೆಯ ನಾಟಕವಾಡಿ ಅವನು ಕಿರೀಟ ಕದಿಯಲು ಅವಕಾಶ ಕಲ್ಪಿಸಿದ ಎಂಬ ಮುಂದೆ ಬರುವ ಪ್ರಸಂಗ ಸಹ ಇಂತಹುದೇ ಎಂದು ತಿಳಿಯಬೇಕು (ಅ. ೧೬, ಶ್ಲೋ. ೫).

---

೧. 'ದಾತುಂ ಹಿ ವಾಲಿನಿಧನಸ್ಯ' – (ಪಾಠಾಂತರ)

೨. 'ದಾತುಂ ಹಿ ವಾಲಿನಿಧನಸ್ಯ ಫಲಂ ತದಸ್ಯ' ಇತ್ಯತ್ರ ವಾಲಿಮಾರಣಪ್ರಭೂತದೋಷಕಾರಣಾದಿತ್ಯಾದಿನಾ ಮುಖ್ಯಂ ಫಲಮುಕ್ತಮ್ । ಅನೇನ ತು ಐಹಿಕಮನಃಖೇದರೂಪಂ ಅವಾಂತರಫಲಮುಚ್ಯತ ಇತಿ ಜ್ಞೇಯಮ್ ।–(ರಾ.)

ತತ್ರಾಸ ರಾಕ್ಷಸವರಃ ಸ ತು ಹೇತಿನಾಮಾ
[೧]
ಕಾಲೇ ಮಹೇಂದ್ರಮನುಪಾಸ್ಯ ಹಿ ಶಾಪತೋಽಸ್ಯ ।
ಕೀಟಸ್ತಮಿಂದ್ರ ಉತ ತತ್ರ ಸಮಾವಿವೇಶ
ಕರ್ಣಸ್ಯ ಶಾಪಮುಪಪಾದಯಿತುಂ ಸುತಾರ್ಥೇ ॥ ೫೨ ॥

ಅ: ಅಲ್ಲೊಬ್ಬ ಹೇತಿ ಎಂಬ ಉತ್ತಮರಾಕ್ಷಸ ಮಹೇಂದ್ರನನ್ನು ಸಕಾಲದಲ್ಲಿ ಸೇವಿಸದ ಕಾರಣದಿಂದಾಗಿ ಅವನ ಶಾಪದಿಂದ ಕೀಟವಾಗಿ ಜನಿಸಿದ್ದ. ತನ್ನ ಮಗನಾದ ಅರ್ಜುನನಿಗಾಗಿ ಕರ್ಣನಿಗೆ ಶಾಪ ಕೊಡಿಸಲೆಂದು ಇಂದ್ರ ಅವನೊಳಗೆ ಪ್ರವೇಶಿಸಿದ.

ವಿ: ೧) ಹೇತಿಯು ಪ್ರಹ್ಲಾದ ಮೊದಲಾದವರಂತೆ ರಾಕ್ಷಸನಾಗಿದ್ದ ವೈಷ್ಣವಜೀವ ಎಂದು ವಾದಿರಾಜೀಯ ಹಾಗೂ [೨]ಜನಾರ್ದನೀಯದಲ್ಲಿದೆ. ಇದು 'ರಾಕ್ಷಸವರಃ' ಎಂಬಲ್ಲಿನ 'ವರ'ಶಬ್ದ–ದಿಂದ ಸೂಚಿತ.

೨) ದಂಶನೆಂಬ ರಾಕ್ಷಸ ಭೃಗುಮುನಿಯ ಪತ್ನಿಯನ್ನು ಕೆಣಕಿ, ಅವನ ಶಾಪದಿಂದ ಅಲರ್ಕ–ವೆಂಬ ಕೀಟವಾಗಿ ಹುಟ್ಟಿ,, ಪರಶುರಾಮನ ದೃಷ್ಟಿಗೆ ಬಿದ್ದು ಶಾಪಮುಕ್ತಿ ಪಡೆದ ಎಂದು ಶಾಂತಿ–ಪರ್ವದಲ್ಲಿದೆ; ಇದು ಅವನ ಕೀಟಜನ್ಮಕ್ಕೆ ಅವಾಂತರಕಾರಣ ಎಂದು ತಿಳಿಯಬಹುದು.

೩) ವಾಲಿಯಾಗಿದ್ದಾಗ ತನ್ನನ್ನು ಕೊಲ್ಲಿಸಿದ್ದಕ್ಕೆ ಸೇಡು ತೀರಿಸಿಕೊಳ್ಳುವ ಉದ್ದೇಶದೊಂದಿಗೆ ಇಂದ್ರನಿಗೆ ಕರ್ಣನಿಗೆ ಪರಶುರಾಮರಿಂದ ಶಾಪ ನೀಡಿಸುವ ಮೂಲಕ ಅವನ ಶಕ್ತಿಯನ್ನು ಕುಂದಿಸಿ, ತನ್ನ ಮಗನಾದ ಅರ್ಜುನನಿಗೆ ಅವನನ್ನು ಕೊಲ್ಲಲು ಅನುಕೂಲ ಮಾಡಿಕೊಡುವ ಮತ್ತೊಂದು ಮುಖ್ಯ ಉದ್ದೇಶವೂ ಇಂದ್ರನಿಗೆ ಹಾಗೆ ಮಾಡುವಲ್ಲಿ ಇದ್ದಿತು ಎಂದರ್ಥ.

೪) ಆ ಕೀಟ ಸೂಜಿಯಂತೆ ತೀಕ್ಷ್ಣವಾದ ರೋಮಗಳುಳ್ಳ ಮುಳ್ಳುಹಂದಿಯಂತಹ ಕೀಟ. ಎಂಟು ಕಾಲಿನ ಅದು ರಕ್ತಮಾಂಸಗಳನ್ನು ಹೀರುವ ಭಯಂಕರ ಸ್ವಭಾವದ್ದು ಎಂಬ ವಿವರ ಮಹಾಭಾರತದಲ್ಲಿದೆ (ಶಾಂತಿಪರ್ವ, ಅ. ೩, ಶ್ಲೋ. ೧೩).

---

೧. ಮಹೇಂದ್ರಂ ಕಾಲೇ ಅನುಪಾಸ್ಯ = ಸೇವಾಕಾಲೇ ಸೇವಾಯಾ ಅಕರಣಾದಿತ್ಯರ್ಥಃ। ಅಸ್ಯ = ಇಂದ್ರಸ್ಯ ಶಾಪತಃ। ತತ್ರ = ರಾಮಾಶ್ರಮೇ । ಕೀಟಃ ಆಸ । ಹೀತಿ ಹಿಶಬ್ದೇನ ಸಾಕ್ಷಾದಿಂದ್ರ ಏವ ಕೀಟೋ ನೇತಿ ಪುರಾಣಪ್ರಸಿದ್ಧಿಂ ಸೂಚಯತಿ । – (ವಾ.)

೨. ರಾಕ್ಷಸವರಃ ಸ ತು ಹೇತಿನಾಮೇತ್ಯತ್ರ ರಾಕ್ಷಸವರಃ = ರಾಕ್ಷಸೇಷು ವರಃ = ಶ್ರೇಷ್ಠಃ, ಪ್ರಹ್ಲಾದಾದಿವತ್ ಸಜ್ಜೀವ ಇತಿ ಭಾವಃ ॥ – (ವಾ.)

ಹೇತಿನಾಮಾ ಸ ತು ವೈಷ್ಣವ ಇತಿ ಪ್ರಸಿದ್ಧೋ ರಾಕ್ಷಸವರಃ । – (ಜ.)

ಹೇತಿನಾಮಾ ರಾಕ್ಷಸೋ ವರೋ ಮುಕ್ತಿಯೋಗ್ಯಃ । ಅಸ್ಯ ಸ್ವರ್ಗಪ್ರಾಪ್ತಿಕಥನೇನೋತ್ತಮಾಧಿಕಾರಿತ್ವಂ ಸೂಚಿತಮಿತಿ ॥ – (ರಾ.)

ಪರಶುರಾಮನಿಂದ ಕರ್ಣನ ಭರ್ತ್ಸನೆ

ಕರ್ಣಃ ಸಕೀಟತನುಗೇನ ಕಿರೀಟಿನೈವ
ಹ್ಯೂರೋರಧಸ್ತಲತ ಔಪರಿಗಾತ್ವಚಶ್ಚ।
ವಿದ್ಧಃ ಶರೇಣ ಹಿ ಯಥಾ ರುಧಿರಸ್ಯ ಧಾರಾಂ
ಸುಸ್ರಾವ ತಂ ವಿಗತನಿದ್ರ ಇವಾಹ ರಾಮಃ ॥ ೫೩ ॥

ಅ: ಕೀಟದ ದೇಹದಲ್ಲಿದ್ದ ಹೇತಿಯಿಂದಲೂ, ಇಂದ್ರನಿಂದಲೂ ತೊಡೆಯ ಕೆಳಭಾಗದಿಂದ ಪ್ರಾರಂಭಿಸಿ, ಮೇಲ್ಭಾಗದ ಚರ್ಮದ ವರೆಗೆ ಬಾಣದಿಂದ ಹೇಗೋ, ಹಾಗೆ ಕೊರೆಯಲ್ಪಟ್ಟಾಗ ರಕ್ತದ ಧಾರೆ ಹರಿಯಿತು. ನಿದ್ರಿಸಿದವರಂತಿದ್ದ ಪರಶುರಾಮರು ಆಗ ಎಚ್ಚೆತ್ತವರಂತೆ ಮಾಡಿ ಅವನನ್ನು ಕೇಳಿದರು.

ವಿ: ಕೀಟವು ಕರ್ಣನ ತೊಡೆಯ ಕೆಳಕ್ಕೆ ಸೇರಿ, ಅಲ್ಲಿಂದ ಮೇಲ್ಭಾಗದ ವರೆಗೆ ಕೊರೆಯತೊಡಗಿತು. ಆಗ ರಕ್ತದ ಧಾರೆ ಸುರಿಯತೊಡಗಿತು. ಕೀಟ ತೊಡೆಯ ಕೆಳಗಿದ್ದುದರಿಂದ

---

೧. ಊರೋರಧಸ್ತನತಃ = ಅಧೋಭಾಗೇ ವಿದ್ಯಮಾನಾಚ್ಚರ್ಮಣಃ ಆ = ಆರಭ್ಯ ಉಪರಿ = ಊರೋರುಪರಿ ಗಾ = ಗತಾ ಆ ತ್ವಕ್ = ಸಮೀಚೀನಾ ತ್ವಕ್ ಸಾ ಔಪರಿಗಾ ತ್ವಕ್ ತಾಂ ಮರ್ಯಾದೀಕೃತ್ಯ ಔಪರಿಗಾತ್ವಚಃ। ಅಧೋಭಾಗಮಾರಭ್ಯ ಉಪರಿತನತ್ವಕ್ಪರ್ಯಂತಮಿತ್ಯರ್ಥಃ। ಯದ್ವಾ 'ಗಮ್ಲೃ ಸೃಪ್ಲೃ ಗತಾ'ವಿತಿ ಧಾತೋಃ ಸ್ವಾರ್ಥೇ ಅಣ್ ಪ್ರತ್ಯಯೇ ಕೃತೇ 'ಣಿತಿ ಚೇ'ತಿ ಉಕಾರಸ್ಯ ಚ ಬುದ್ಧೌ ಕೃತಾಯಾಂ ಉಪರಿಗೈವ ಔಪರಿಗಾ ಸಾ ಚ ಸಾ ತ್ವಕ್ಚ ಔಪರಿಗಾತ್ವಕ್ ತಾಂ ಮರ್ಯಾದೀಕೃತ್ಯ ಔಪರಿಗಾತ್ವಚಃ ಶರೇಣ ಯಥಾ ವಿದ್ಧಃ ಕರ್ಣಃ ರುಧಿರಸ್ಯ ಧಾರಾಂ ಸುಸ್ರಾವ = 'ಅಂತರ್ಣೀತೋ ಣಿಚ್' ಸ್ರಾವಯಾಮಾಸ ॥ – (ವಾ.)

ಆ ಉಪರಿಗತ್ವಚ ಇತಿ ಛೇದಃ । ಉಪರಿಗಚ್ಛತೀತ್ಯುಪರಿಗಾ ಉಪರಿಗಾ ಚಾಸೌ ತ್ವಕ್ ಉಪರಿಗಾತ್ವಕ್ ತಸ್ಯಾ ಇತಿ ವಿಗ್ರಹಃ । ಗಾ ತ್ವಗಿತ್ಯತ್ರ ಜ್ಯಾಪೋಃ ಸಂಜ್ಞಾಚ್ಛಂದಸೋರ್ಬಹುಲಮಿತಿ ಹ್ರಸ್ವಭಾವಃ । ಕೇಚಿತ್ ಉಪರಿಗಚ್ಛತೀತ್ಯುಪರಿ ಗಾಆಈಪದುಪರಿ ಗಾಓಪರಿಗಾ ಸಾ ಆ ಸಾಮಸ್ತ್ಯೇನ ಮರ್ಯಾದಯಾ ವಾ ತ್ವಕ್ ಯಸ್ಯಾ ಇತ್ಯಾಹುಸ್ತನ್ನ । ತ್ವಕ್‌ವಿಶೇಷಣಸ್ಯ ಸಾಮಸ್ತ್ಯಮರ್ಯಾದಾರ್ಥಕಸ್ಯಾಜ್ ಓಪರೀತ್ಯಪೇಕ್ಷಾಯಾ ಪೂರ್ವನಿಪಾತೋ ನ ಸ್ಯಾತ್ । ಉಪಸರ್ಜನಂ ಪೂರ್ವಮಿತ್ಯನ್ವರ್ಥಸಂಜ್ಞಾಶ್ರಯಣೇನ ಯತ್ಪ್ರತಿಪದುಪಸರ್ಜನಂ ತಂ ಪ್ರತಿ ತಸ್ಯೈವ ಪೂರ್ವನಿಪಾತಸ್ಯ ಸ್ಥಾಪಿತತ್ವಾತ್ ಕಿಂಚ ಔಪರಿಗತ್ವಗಿತಿ ಸ್ಯಾತ್ । ನನು ಅತ ಏವ ಆತ್ವಕ್ ಯಸ್ಯಾ ಇತ್ಯುಚ್ಯತ ಇತಿ ಚೇತ್, ತರ್ಹಿ ಓಪರಿಗಾತ್ವಚ ಇತಿ ಸ್ಯಾನ್ನ ತ್ವೌಪರಿಗೇತಿ । ಸ ರಾಮಃ ವಿಗತನಿದ್ರ ಇವ ಸನ್ ತಂ ಕರ್ಣಂಪ್ರತಿ ಆಹ । – (ಜ.)

ಔಪರಿಗಾದಿತಿ । ಆ ಆ ಉಪರಿಗಾದಿತಿ । ಪದಚ್ಛೇದಃ ಊರೋರಧಸ್ತನತ ಆ ಆರಭ್ಯ ಉಪರಿಗಾತ್ವಚಃ ಆ ಪರ್ಯಂತಂ ಶರೇಣ ಯಥಾಶರೇಣೇವ ವಿದ್ಧಃ ಸನ್ ರುಧಿರಸ್ಯ ಧಾರಾಂ ಸುಸ್ರಾವ ಶ್ರಾವಯಾಮಾಸೇತ್ಯರ್ಥಃ । ಉಪರಿಗಾತ್ವಚ ಇತಿ ಲಿಂಗವ್ಯತ್ಯಾಸಃ । ಛಾಂದಸಃ । **'ಧಾರಾ'** ಇತಿ ಪಾಠೇ ವಿದ್ಧೋ ಬಭೂವೇತಿ ಶೇಷಃ । – (ತಾ.)

ಕರ್ಣನಿಗೆ ಅದನ್ನು ಓಡಿಸಲು ಸಾಧ್ಯವಾಗದಂತಿತ್ತು ಎಂದು ತಿಳಿಯಬೇಕು. ನಿದ್ರೆಯ ನಾಟಕ ಮಾಡಿದ್ದ ಪರಶುರಾಮ, ಈಗ ನಿದ್ರೆಯಿಂದೆದ್ದಂತೆ ನಟಿಸುತ್ತಾ ಅವನನ್ನು ಕೇಳಿದರು ಎಂದರ್ಥ.

ಕಿಂ ತ್ವಂ ನ ಚಾಲಯಸಿ ಮಾಂ ರುಧಿರಪ್ರಸೇಕೇ
ಪ್ರಾಪ್ತೇಽಪಿ ಪಾವನವಿರೋಧಿನಿ ಕೋಽಸಿ ಚೇತಿ ।
ತಂ ಪ್ರಾಹ ಕರ್ಣ ಇಹ ನೈವ ಮಯಾ ವಿಧೇಯೋ
ನಿದ್ರಾವಿರೋಧ ಇತಿ ಕೀಟ ಉಪೇಕ್ಷಿತೋ ಮೇ ॥ ೫೪ ॥

ಜಾತ್ಯಾಽಸ್ಮಿ ಸೂತ ಉತ ತೇ ತನಯೋಽಸ್ಮಿ ಸತ್ಯಂ
ತೇನಾಸ್ಮಿ ವಿಪ್ರ ಇತಿ ಭಾರ್ಗವವಂಶಜೋಽಹಮ್ ।
ಅಗ್ರೇಽಬ್ರುವಂ ಭವತ ಈಶ ನ ಹಿ ತ್ವದನ್ಯೋ
ಮಾತಾ ಪಿತಾ ಗುರುತರೋ ಜಗತೋಽಪಿ ಮುಖ್ಯಃ ॥ ೫೫ ॥

ಆ: ''ಅಪವಿತ್ರವಾದ ರಕ್ತದ ಧಾರೆ ಉಂಟಾದಾಗಲೂ ನೀನೇಕೆ ನನ್ನನ್ನು ಎಬ್ಬಿಸಲಿಲ್ಲ? ನೀನಾರು?'' ಅವರನ್ನು ಕುರಿತು ಕರ್ಣ ನುಡಿದ : ''ನಿಮಗೆ ನನ್ನಿಂದ ನಿದ್ರಾಭಂಗವಾಗದಿರಲೆಂದು ನಾನು ಕೀಟವನ್ನು ಉಪೇಕ್ಷಿಸಿದೆ''.

''ನಾನು ಜಾತಿಯಿಂದ ಸೂತನಾದರೂ, ನಿಮ್ಮ ಪುತ್ರನಾಗಿರುವುದರಿಂದ ಭೃಗುವಂಶದಲ್ಲಿ ಜನಿಸಿದ ವಿಪ್ರನಾಗಿರುವೆ ಎಂದು ಈ ಮುಂಚೆ ಹೇಳಿದ್ದೆ. ಸ್ವಾಮಿ! ನಿನ್ನ ಹೊರತು ಜಗತ್ತಿಗೆ ಮುಖ್ಯವಾದ ತಾಯಿ, ತಂದೆ, ಶ್ರೇಷ್ಠಗುರು ಮತ್ತೊಬ್ಬನಿಲ್ಲವಷ್ಟೆ! ಆದ್ದರಿಂದ ಅದೂ ನಿಜವೇ.''

ವಿ: ೧) ಅಪವಿತ್ರವಾದ ರಕ್ತ ಸುರಿದರೂ, ನನ್ನನ್ನು ಎಬ್ಬಿಸಲಿಲ್ಲವೆಂದರೆ ನೀನು ಬ್ರಾಹ್ಮಣನಲ್ಲವೆಂದೇ ಅರ್ಥ. ಬ್ರಾಹ್ಮಣನ ಬುದ್ಧಿ ಪ್ರಬಲವಾದರೂ, ದೇಹ ದುರ್ಬಲ ಎಂಬುದು ಪರಶುರಾಮರ ಮಾತಿನ ಆಂತರ್ಯ.

---

೧. ಕೋಽಸೀತಿ ತಮಾಹೇತಿ ಪೂರ್ವೇಣಾನ್ವಯಃ ॥ – (ವಾ.)

೨. ಹೇ ಭಾರ್ಗವ ಉತ ಯಸ್ಮಾತ್ ತೇ ತನಯೋಽಸ್ಮಿ ಅತೋ ಭವತಃ ವಂಶಜಃ ವಿಪ್ರೋಽಸ್ಮೀತ್ಯಬ್ರುವಮ್। ತದಪಿ ಸತ್ಯಮ್। ಹೇ ಈಶ ಜಗತಃ ತ್ವದನ್ಯಃ ಮಾತಾ ಪಿತಾ ಗುರುತಮಶ್ಚನಹೀತಿ ಯೋಜನಾ ॥ – (ವಾ.)

೩. ಹರಿರೇವ ಪರೋ ಹರಿರೇವ ಗುರುರ್ಹರಿರೇವ ಜಗತ್ತ್ರಿತಯಮಾತೃಗತಿಃ । – ದ್ವಾದಶಸ್ತೋತ್ರ (೩/೧)

೨) ತಾನು ನಿಜಕ್ಕೂ ಸೂತ. ಆದ್ದರಿಂದ ಅದನ್ನು ತಡೆದುಕೊಳ್ಳಲು ಸಾಧ್ಯವಾಯಿತು. ಆದರೂ, ಹರಿಯೇ ಜಗತ್ತಿನ ತಂದೆ, ತಾಯಿ ಎಲ್ಲವೂ ಆದ್ದರಿಂದ, ತಾನು ಅವನ ಪುತ್ರನಾದ್ದರಿಂದ ಭೃಗುವಂಶದ ಬ್ರಾಹ್ಮಣ ಎಂದು ಹೇಳಿಕೊಂಡಿದ್ದು ಸಹ ಸರಿ ಎಂಬುದು ಕರ್ಣನ ವಾದ.

೩) ಶ್ರೀಹರಿಯು ಜಗತ್ತಿನ ತಂದೆತಾಯಿ ಮೊದಲಾಗಿ ಎಲ್ಲವೂ ಆಗಿರುವನು ಎಂಬುದು ಸತ್ಯವೇ ಆದರೂ, ಕರ್ಣನು ಅದನ್ನೀಗ ದುರುದ್ದೇಶಕ್ಕೆ ಬಳಸಿಕೊಳ್ಳುತ್ತಿರುವುದರಿಂದ ಅವನ ವಾದ ಒಪ್ಪುವಂತಹುದಲ್ಲ ಎಂದು ತಿಳಿಯಬೇಕು.

೪) ಪರಶುರಾಮ ಇದನ್ನೆಲ್ಲ ಬಲ್ಲ ಸಾಕ್ಷಾದ್ಭಗವಂತ. ಕರ್ಣನ ಕವಚಕುಂಡಲಗಳೇ ಅವನ ಸ್ವರೂಪವನ್ನು ಸಾರುವಂತಿದ್ದುದು ಲೋಕಕ್ಕೆಲ್ಲ ತಿಳಿದಿದ್ದ ವಿಚಾರ. ಹೀಗಿದ್ದೂ ಈ ಪ್ರಸಂಗದಿಂದ ಅವನ ಜಾತಿಯನ್ನು ತಾವು ತಿಳಿಯದಂತೆ ವರ್ತಿಸಿದ್ದು ಅಸುರಮೋಹನಕ್ಕೆಂದು ತಿಳಿಯಬೇಕು.

೫) ಪರಶುರಾಮನನ್ನು ಸಾಕ್ಷಾತ್ ಪರದೈವವೆಂದು ಕರೆಯುವ ಕರ್ಣ, ಅವರಿಗೆ ನಿದ್ರೆ ಬಂದಿತ್ತು; ಅದಕ್ಕೆ ಭಂಗವಾದೀತು ಎಂದೆಲ್ಲ ಭಾವಿಸುವುದು ಅವನ ಒಳಗಿದ್ದ ಅಸುರಾವೇಶದ ಫಲ ಎಂದು ತಿಳಿಯಬೇಕು. ಆದ್ದರಿಂದ ಕರ್ಣನದು ಆಗ ಅಸದುಪಾಸನೆಯೆಂದೇ ತಿಳಿಯಬೇಕು.

ಸ್ವರ್ಗವೇರಿದ ಕೀಟ

ಇತ್ಯುಕ್ತಮಾತ್ರವಚನೇ ಸ ತು ಕೀಟಕೋಽಸ್ಯ ರಾಮಸ್ಯ ದೃಷ್ಟಿವಿಷಯತ್ವತ ಏವ ರೂಪಮ್ ।
ಸಂಪ್ರಾಪ್ಯ ನೈಜಮತಿಪೂರ್ಣಗುಣಸ್ಯ ತಸ್ಯ ವಿಷ್ಣೋರನುಗ್ರಹತ ಆಪ ವಿಮಾನಗಃ ಸ್ವಃ ೫೬

ಅ: ಅವನು ಹೀಗೆನ್ನುತ್ತಿದ್ದಂತೆಯೇ ಆ ಕೀಟ ಪರಶುರಾಮರ ಕಣ್ಣಿಗೆ ಬಿದ್ದು, ಅತ್ಯಂತಗುಣಪೂರ್ಣನಾದ ಆ ವಿಷ್ಣುವಿನ ಅನುಗ್ರಹದಿಂದಾಗಿ ತನ್ನ ನಿಜರೂಪವನ್ನು ಪಡೆದು, ವಿಮಾನವನ್ನೇರಿ ಸ್ವರ್ಗವನ್ನು ಪಡೆಯಿತು.

ವಿ: ೧) ಆ ವೇಳೆಗೆ ಪರಶುರಾಮರ ಕಣ್ಣಿಗೆ ಬಿದ್ದ ಕೀಟ ಶಾಪದಿಂದ ಮುಕ್ತಿ ಪಡೆದು, ನಿಜರೂಪ ಹೊಂದಿ ಸದ್ಗತಿ ಪಡೆಯಿತು. ಇದು ವಿಷ್ಣುನೋಟದ ಅದ್ಭುತಸಾಮರ್ಥ್ಯದ ಚಿತ್ರ.

೨) ವೇದವ್ಯಾಸರ ದೃಷ್ಟಿಗೆ ಬಿದ್ದ ಕೀಟ, ಆ ದೇಹದಿಂದಲೇ ರಾಜ್ಯವಾಳಿದ ಪ್ರಸಂಗ ಹಿಂದೆ ಬಂದಿದೆ(ಅ. ೧೦, ಶ್ಲೋ. ೬೪). ಅಂತೂ ಭಗವಂತನ ನೋಟದ [೧]ಪ್ರಭಾವ ಎಷ್ಟು ಅದ್ಭುತ ಎಂಬುದನ್ನು ಈ ಪ್ರಸಂಗ ಸಾರುವುದು.

೩) ಪರಶುರಾಮರ ದಿವ್ಯದೃಷ್ಟಿಗೆ ಆ ಕೀಟದ ಸ್ವರೂಪವೇ ಗೋಚರವಾದಾಗ, ಕರ್ಣನ ಸ್ವರೂಪ ಸ್ಪಷ್ಟ ತಿಳಿದಿತ್ತು ಎಂಬುದನ್ನು ಸ್ಫುಟಪಡಿಸುವುದು ಎಂಬುದನ್ನು ಗಮನಿಸಬೇಕು.

---

೧. ನಿಖಿಲಾಘೌಘವಿನಾಶಕಪರಸೌಖ್ಯಪ್ರದದೃಷ್ಟೇ । – ದ್ವಾದಶಸ್ತೋತ್ರ (೧೦/೧೮)

ಕರ್ಣನಿಗೆ ಪರಶುರಾಮರ ನಿಗ್ರಹ ಅನುಗ್ರಹ

ಅಥಾಹ ರಾಮಸ್ತಮಸತ್ಯವಾಚೋ[೧] ನ ತೇ ಸಕಾಶೇ ಮಮ ವಾಸಯೋಗ್ಯತಾ ।
ತಥಾऽಪಿ ತೇ ನೈವ ವೃಥಾ ಮದೀಯಾ ಭಕ್ತಿರ್ಭವೇಜ್ಜೇಷ್ಯಸಿ ಸರ್ವಶತ್ರೂನ್ ॥ ೫೭ ॥

ಅಸ್ಪರ್ಧಮಾನಂ[೨] ನ ಕಥಂಚನ ತ್ವಾಂ ಜೇತಾ ಕಶ್ಚಿತ್ ಸ್ಪರ್ಧಮಾನಸ್ತು[೩] ಯಾಸಿ ।
ಪರಾಭೂತಿಂ ನಾತ್ರ ವಿಚಾರ್ಯಮಸ್ತಿ ಪ್ರಮಾದೀ ತ್ವಂ ಭವಿತಾ ಚಾಸ್ತ್ರಸಂಖ್ಯೇ[೪] ॥ ೫೮ ॥

ಅ: ಆಗ ಪರಶುರಾಮ ನುಡಿದ : ''ಸುಳ್ಳು ನುಡಿದ ನಿನಗೆ ನನ್ನ ಬಳಿ ನೆಲೆಸುವ ಅರ್ಹತೆ ಇಲ್ಲ. ಆದರೂ ನೀನು ನನ್ನಲ್ಲಿ ಮಾಡಿದ ಭಕ್ತಿ ವ್ಯರ್ಥವಾಗದು. ನೀನು ಸಕಲಶತ್ರುಗಳನ್ನೂ ಜಯಿಸುವಿ.

''ಸ್ಪರ್ಧೆ ಮಾಡದ ನಿನ್ನನ್ನು ಯಾವನೂ, ಯಾವ ರೀತಿಯಲ್ಲೂ ಜಯಿಸಲಾರ. ಆದರೆ ಸ್ಪರ್ಧಿಸಿದಾಗ ನೀನು ಪರಾಜಯ ಹೊಂದುವುದು ನಿಶ್ಚಿತ. ಇದರ ಬಗ್ಗೆ ವಿಚಾರಬೇಕಿಲ್ಲ. ನೀನು ಅಸ್ತ್ರಯುದ್ಧದಲ್ಲಿ ಸ್ಪರ್ಧಿಸುವಾಗ ವಿಸ್ಮರಣೆ ಹೊಂದುವಿ.

ವಿ: ೧) ಈ ಎರಡು ಶ್ಲೋಕಗಳಲ್ಲಿ ಪರಶುರಾಮ ಕರ್ಣನಿಗೆ ನೀಡಿದ ವರ ಹಾಗೂ ಶಾಪಗಳ ನಿರೂಪಣೆ ಇದೆ. ಸ್ಪರ್ಧಿಸದಿದ್ದಾಗ ಯಾರೂ ಅವನನ್ನು ಗೆಲ್ಲರು ಎಂಬುದು ಅವನ ಪಾಲಿಗೆ ವರವಾದರೆ, ಸ್ಪರ್ಧಿಸಿದಾಗ ಸೋಲು ಖಚಿತ ಎಂಬುದು ಅವರು ನೀಡಿದ ಶಾಪವಾಯಿತು. ಅದರಂತೆ ಅಸ್ತ್ರಯುದ್ಧದಲ್ಲಿ ಅಸ್ತ್ರಗಳ ಮರೆವು ಸಹ.

೨) ಕರ್ಣನಿಗೆ ಅಸ್ತ್ರಗಳು ಮರೆಯಲಿ ಎಂಬ ಶಾಪವನ್ನಷ್ಟೆ ಪರಶುರಾಮರು ಕೊಟ್ಟರೆಂದು ಬಂದಿರುವ ಜನಪ್ರವಾದ ನಿರ್ಮೂಲವಾದುದು. ನಿಷ್ಕಾರಣವಾಗಿ ಅವರ ಮೇಲೆ ದೋಷಾ–ರೋಪಣೆಗೆ ಕಾರಣವಾಗುವಂತಹುದು.

---

೧. ಅಸತ್ಯವಾಚಂ ... – (ಜ. ಪಾಠ)
'ನೈತದವ್ರಾಹ್ಮಣೋ ವಿವಕ್ತುಮರ್ಹತಿ' ಇತಿ ಛಾಂದೋಗ್ಯೇ ।
ಆರ್ಜವಂ ಬ್ರಾಹ್ಮಣೇ ಸಾಕ್ಷಾತ್ ಶೂದ್ರೋऽನಾರ್ಜವಲಕ್ಷಣಃ । – ಇತಿ ಛಾಂದೋಗ್ಯಭಾಷ್ಯೇ

೨. ಅಸ್ಪರ್ಧಮಾನಂ ಪಾಂಡವೇಷ್ವನಸೂಯಾವಂತಮ್ – (ತಾ.)

೩. ಭವಿತೇತಿ ಋಕಾರಾಂತಂ ಪದಮ್ । ನ ತು ಲೃಟ್ । ತ್ವಂಪದಪ್ರಯೋಗಾದೇವ ಅಸೀತಿ ಲಭ್ಯತೇ ॥ –(ವಾ.)

೪. ಅಸ್ತ್ರಸಂಖ್ಯೇ ಅಸ್ತ್ರಯುದ್ಧೇ । – (ಜ.)
ಅಸ್ತ್ರಸಂಘೇತಿ ಪಾಠೇ ಅಸ್ತ್ರಸಮೂಹೇ । – (ಜ.)

೩) ಅವರು ಹಾಗೆ ಶಾಪ ನೀಡಿದ್ದು ಸಹ ಅತ್ಯಂತ ಉಚಿತವೇ ಆಗಿದೆ. ಸುಳ್ಳು ಹೇಳಿ ಪಡೆಯುವ ವಿದ್ಯೆ ಎಂದೂ ದಕ್ಕದು ಎಂಬುದೇ ಅದರ ಆಂತರ್ಯ.

೪) ಇಂದಿಗೂ ಸುಳ್ಳುವಿವರಗಳನ್ನು ನೀಡಿ ಪ್ರವೇಶ ಪಡೆಯುವ ವಿದ್ಯಾರ್ಥಿಗೆ ಸರಕಾರ ಸಂಪೂರ್ಣಶಿಕ್ಷೆಯನ್ನೇ ನೀಡುವುದು ಕಂಡಿದೆ.

೫) ಸತ್ಯ ಹೇಳಿದ ಸತ್ಯಕಾಮನಿಗೆ ಬ್ರಹ್ಮವಿದ್ಯೆ ಸಿದ್ಧಿಸಿದ ವಿವರ ಛಾಂದೋಗ್ಯೋಪ–ನಿಷತ್ತಿನಲ್ಲಿ ಬಂದಿದೆ. ತನಗೆ ತನ್ನ ಗೋತ್ರ ತಿಳಿಯದು ಎಂಬ ಸತ್ಯವಚನದಿಂದ ತನ್ನ ಬ್ರಾಹ್ಮಣ್ಯವನ್ನು ನಿರೂಪಿಸಿದ ಅಪೂರ್ವಹಿರಿಮೆ ಅವನದು. ಬ್ರಾಹ್ಮಣನೆಂದು ಬಾಯಲ್ಲಿ ಹೇಳಿಕೊಂಡರೂ, ಕೃತಿಯಿಂದ ಅದನ್ನು ಕಳೆದುಕೊಂಡ ದುರಂತ ಕರ್ಣನದು. ಇದಕ್ಕೆಲ್ಲ ಅವನೊಳಗಿದ್ದ ಸಹಸ್ರವರ್ಮ ಎಂಬ ಅಸುರನ ಆವೇಶವೇ ಮುಖ್ಯಕಾರಣ ಎಂದು ತಿಳಿಯಬೇಕು.

೬) ಅಸತ್ಯವಾಡುವವರಿಗೆ ಭಗವಂತನ ಬಳಿ ವಾಸಿಸುವ ಅವಕಾಶ ಲಭಿಸದು ಎಂಬುದು ಇದರಿಂದ ಸೂಚಿತ.

ಯಾಹೀತಿ ತೇನೋಕ್ತ ಉದಾರಕರ್ಮಣಾ
ಕರ್ಣೋ ಯಯೌ ತಂ ಪ್ರಣಮ್ಯೇಶಿತಾರಮ್।
ತಥೈಕಲವ್ಯೋಽಪಿ ನಿರಾಕೃತೋಽಮುನಾ
ದ್ರೋಣೇನ ತಸ್ಯ ಪ್ರತಿಮಾಂ ವನೇಽರ್ಚಯತ್ ॥ ೫೯ ॥

ಅ: ''ತೆರಳು'' ಎಂದು ಉತ್ಕೃಷ್ಟಕರ್ಮನಾದ ಶ್ರೀಪರಶುರಾಮರು ನುಡಿಯಲು ಕರ್ಣ ಸರ್ವೇಶನಾದ ಅವರಿಗೆ ನಮಸ್ಕರಿಸಿ ತೆರಳಿದ. ಹಾಗೆಯೇ ದ್ರೋಣರಿಂದ ನಿರಾಕೃತನಾದ ಏಕಲವ್ಯ ಅರಣ್ಯದಲ್ಲಿ ಅವರ ಪ್ರತಿಮೆಯನ್ನು ಪೂಜಿಸತೊಡಗಿದ.

ವಿ: ದ್ರೋಣರಿಂದ ನಿರಾಕೃತರಾದ ಕರ್ಣ, ಏಕಲವ್ಯರಲ್ಲಿ ಕರ್ಣನ ಬಗ್ಗೆ ವಿವರಗಳನ್ನು ನೀಡಿ, ಈಗ ಏಕಲವ್ಯನ ಬಗ್ಗೆ ತಿಳಿಸುತ್ತಿರುವರು. ಏಕಲವ್ಯ ಕಾಡಿಗೆ ಹಿಂದಿರುಗಿದವನೇ ದ್ರೋಣರ ಮಣ್ಣಿನ ಪ್ರತಿಮೆಯೊಂದನ್ನು ಮಾಡಿ ಪೂಜಿಸತೊಡಗಿದ.

ಬೇಟೆಗಾಗಿ ಕುರುಪಾಂಡವರು

ತತಃ ಕದಾಚಿದ್ಧೃತರಾಷ್ಟ್ರಪುತ್ರೈಃ ಪಾಂಡೋಃ ಸುತಾ ಮೃಗಯಾಂ ಸಂಪ್ರಯಾತಾಃ।
ಅಗ್ರೇ ಗಚ್ಛನ್ ಸಾರಮೇಯೋ ರುರಾವ ಧರ್ಮಾತ್ಮಜಸ್ಯಾತ್ರ ವನೇ ಮೃಗಾರ್ಥೀ ॥ ೬೦ ॥

ಅ: ಬಳಿಕ ಒಮ್ಮೆ ಕೌರವರೊಂದಿಗೆ ಪಾಂಡವರು ಬೇಟೆಗೆಂದು ತೆರಳಿದರು. ಮುಂದೆ ಸಾಗುತ್ತಿದ್ದ ಯುಧಿಷ್ಠಿರನ ನಾಯಿ ಮೃಗಾರ್ಥಿಯಾಗಿ ಬೊಗಳತೊಡಗಿತು.

ಏಕಲವ್ಯನ ಅಸ್ತ್ರಕೌಶಲ

ಶ್ರುತ್ವಾ ರಾವಂ ಸಾರಮೇಯಸ್ಯ ದೂರಾಚ್ಛರೈರ್ಮುಖಂ ಶಬ್ದವೇಧೀ ಪುಪೂರೇ ।
ಸ ಏಕಲವ್ಯೋ ವ್ರಣಮಸ್ಯ ನಾಕರೋಚ್ಛ್ವಾ ಪೂರಿತಾಸ್ಯಃ ಪಾಂಡವಾನಭ್ಯಯಾತ್ ಸಃ ॥೬೧

ಅ: ನಾಯಿಯ ಬೊಗಳುವ ಧ್ವನಿ ಕೇಳಿ ಶಬ್ದವೇಧಿಯಾಗಿದ್ದ ಏಕಲವ್ಯ ದೂರದಿಂದಲೇ ಅದರ ಬಾಯನ್ನು ಬಾಣಗಳಿಂದ ತುಂಬಿಸಿದ. ಅದಕ್ಕೆ ಗಾಯವನ್ನು ಉಂಟುಮಾಡಲಿಲ್ಲ. ಬಾಯಲ್ಲಿ ಬಾಣ ತುಂಬಿದ ನಾಯಿ ಪಾಂಡವರ ಬಳಿಗೆ ಧಾವಿಸಿತು.

ವಿ: ನಾಯಿಯ ಬಾಯೊಳಗೆ ಅದರ ಬೊಗಳುವ ಧ್ವನಿಯನ್ನೇ ಗುರಿಯಾಗಿಸಿಕೊಂಡು, ಶಬ್ದವೇಧಿಯಾಗಿದ್ದ ಏಕಲವ್ಯ ಬಾಣಗಳನ್ನು ಪ್ರಯೋಗಿಸಿ, ಅದರ ಬಾಯನ್ನು ಮುಚ್ಚಿದ. ಬಾಯೊಳಗೆ ಬಾಣಗಳು ತುಂಬಿದ್ದರಿಂದ ನಾಯಿ ಬೊಗಳದಾಯಿತು. ಆದರೆ ಅಷ್ಟು ಬಾಣಗಳನ್ನು ಅದರಲ್ಲಿ ತುಂಬಿಸಿದ ಏಕಲವ್ಯ ಅದಕ್ಕೆ ಸ್ವಲ್ಪವೂ ಗಾಯವಾಗದಂತೆ ತನ್ನ ಜಾಣ್ಮೆಯನ್ನು ಪ್ರದರ್ಶಿಸಿದ್ದ. ಇದು ಅವನ ಅಸ್ತ್ರವಿದ್ಯೆಯ ಮತ್ತೊಂದು ಹಿರಿಮೆಯಾಯಿತು.

ದೃಷ್ಟ್ವಾ ಚಿತ್ರಂ ಕುರವಃ ಪಾಂಡವಾಶ್ಚ ದ್ರಷ್ಟುಂ ಕರ್ತಾರಂ ಮಾರ್ಗಯಾಮಾಸುರತ್ರ ।
ದ್ರೋಣಾಕೃತಿಂ ಮಾರ್ತಿಕೀಂ ಪೂಜಯಂತಂ ದದೃಶುಶ್ಚೈನಂ ಧನುರೇವಾಭ್ಯಸಂತಮ್ ೬೨

ಅ: ಆ ಅಚ್ಚರಿಯನ್ನು ಕಂಡು ಕೌರವರೂ, ಪಾಂಡವರೂ ಹಾಗೆ ಮಾಡಿದವನನ್ನು ಆ ಕಾಡಿನಲ್ಲಿ ಹುಡುಕತೊಡಗಿದರು. ಮಣ್ಣಿನ ದ್ರೋಣಾಕೃತಿಯನ್ನು ಮಾಡಿ, ಅದನ್ನು ಪೂಜಿಸುತ್ತಾ ಬಿಲ್ವಿದ್ಯೆಯನ್ನು ಅಭ್ಯಸಿಸುತ್ತಿದ್ದ ಆ ಏಕಲವ್ಯನನ್ನು ಕಂಡರು ಸಹ.

ಏಕಲವ್ಯನ ಗುರುಭಕ್ತಿ

ಪೈಶಾಚಮೇವೈಷ ಪಿಶಾಚಕೇಭ್ಯಃ ಪೂರ್ವಂ ವಿವೇದಾಸ್ತ್ರವೃಂದಂ ನಿಷಾದಃ ।
ದಿವ್ಯಾನ್ಯಸ್ತ್ರಾಣ್ಯಾಪ್ತುಮೇತಾಂ ಚ ಶಿಕ್ಷಾಂ ದ್ರೋಣಂ ಸದಾ ಪೂಜಯತಿ ಸ್ಮ ಭಕ್ತ್ಯಾ ॥ ೬೩ ॥

ಅ: ಅವನು ಆ ಮುನ್ನ ಪಿಶಾಚಿಗಳಿಂದ ಪಿಶಾಚಸಂಬಂಧಿಯಾದ ಅಸ್ತ್ರಸಮುದಾಯವನ್ನು ತಿಳಿದಿದ್ದ. ದಿವ್ಯಾಸ್ತ್ರಗಳನ್ನು ಪಡೆಯಲೆಂದು ಅದರ ಶಿಕ್ಷಣಕ್ಕಾಗಿ ದ್ರೋಣರನ್ನು ಭಕ್ತಿಯಿಂದ ಸದಾ ಪೂಜಿಸುತ್ತಿದ್ದ.

ವಿ: ಏಕಲವ್ಯ ಈಗಾಗಲೇ ಜರಾಸಂಧನೊಡಗೂಡಿ, ಶ್ರೀಕೃಷ್ಣನ ಮೇಲೆ ಯುದ್ಧಕ್ಕೆ ತೆರಳಿದ್ದ ವಿವರ ಈಗಾಗಲೇ ಬಂದಿದೆ. ಇದರಿಂದ ಅವನಿಗೆ ಅಸ್ತ್ರವಿದ್ಯೆ ತಿಳಿದಿತ್ತು ಎಂದಾಗುವುದು. ಆದರೆ ಆ ಅಸ್ತ್ರವಿದ್ಯೆ ಪಿಶಾಚಿಗಳಿಂದ ಅವನು ಕಲಿತಿದ್ದ ಪೈಶಾಚಿಕ ಅಸ್ತ್ರವಿದ್ಯೆಯಾಗಿತ್ತೇ ಹೊರತು,

ದಿವ್ಯಾಸ್ತ್ರವಿದ್ಯೆಯಲ್ಲ. ಅದನ್ನು ಪಡೆಯಬಯಸಿದ ಅವನು, ದ್ರೋಣರು ನಿರಾಕರಿಸಿದ್ದರಿಂದ ಅವರ ಮಣ್ಣಿನ ಮೂರ್ತಿಯನ್ನು ಮಾಡಿ, ಅವರನ್ನು ಆರಾಧಿಸುವುದರಿಂದ ದಿವ್ಯಾಸ್ತ್ರವಿದ್ಯೆಯನ್ನು ಪಡೆಯಬಯಸಿದ್ದ ಎಂದರ್ಥ.

ದೃಷ್ಟ್ವಾವಿಶೇಷಂ ತಮಮುಷ್ಯ ಪಾರ್ಥೋ ದ್ರೋಣಾಯೋಚೇ ತ್ವದ್ಭಕೋ ಮೇ ಮೃಷಾऽऽಸೀತ್
ಇತ್ಯುಕ್ತ ಏನಂ ತ್ವಭಿಗಮ್ಯ ದಕ್ಷಿಣಾಂ ವಿಪ್ರೋ ಯಯಾಚೇ ದಕ್ಷಿಣಾಂಗುಷ್ಠಮೇವ ॥ ೬೪ ॥

ಅ: ಅವನ ಆ ವಿಶೇಷವನ್ನು ಗಮನಿಸಿದ ಅರ್ಜುನ ದ್ರೋಣರಿಗೆ ನುಡಿದ : ''ನೀವು ನನಗೆ ನೀಡಿದ್ದ ವಚನ ಸುಳ್ಳಾಯಿತು''. ಅವನು ಹೀಗೆನ್ನಲು ದ್ರೋಣರು ಏಕಲವ್ಯನ ಬಳಿ ತೆರಳಿ, ಅವನ ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯನ್ನಾಗಿ ಕೇಳಿದರು.

ವಿ: ೧) ಏಕಲವ್ಯನ ಅಸ್ತ್ರವಿದ್ಯಾಕೌಶಲವನ್ನು ಕಂಡ ಅರ್ಜುನ ಅದು ದ್ರೋಣರ ಅನುಗ್ರಹಫಲವೆಂದರಿತು ಅವರನ್ನು ಪ್ರಶ್ನಿಸಿದ. ಆ ವಿಶೇಷವಿದ್ಯೆ ಅವನಿಗೂ ತಿಳಿದಿರುವುದರಿಂದ ತನ್ನನ್ನು ಎಲ್ಲರಿಗಿಂತ ಮಿಗಿಲಾಗಿ ಮಾಡುವೆನೆಂದು ನೀಡಿದ್ದ ಅವರ ವಚನ ಸುಳ್ಳಾಯಿತು ಎಂಬುದು ಅವನ ಆಕ್ಷೇಪ.

೨) ಏಕಲವ್ಯನಿಗೆ ಬರುತ್ತಿದ್ದ ಅಸ್ತ್ರವಿದ್ಯೆ ಅರ್ಜುನನಿಗೆ ತಿಳಿದಿರಲಿಲ್ಲ ಎಂಬುದು ಸರಿಯಲ್ಲ. ವಾಸ್ತವವಾಗಿ ಅರ್ಜುನ ಆ ವಿದ್ಯೆಯನ್ನು ಸ್ವತಃ ತಾನೇ ಅಭ್ಯಾಸ ಮಾಡಿ ತಿಳಿದಿದ್ದ ಎಂಬ ವಿವರ ಮಹಾಭಾರತದಲ್ಲಿದೆ. ಒಮ್ಮೆ ರಾತ್ರಿ ಭೋಜನಕಾಲದಲ್ಲಿ ದ್ರೋಣರ ಆದೇಶದಂತೆ ಬಡಿಸುವವನು ದೀಪ ಆರಿಸಿಬಿಟ್ಟ. ಆಗ ಕತ್ತಲೆಯಲ್ಲೂ ಎಲೆಯಿಂದ ತುತ್ತನ್ನೆತ್ತಿಕೊಂಡು ತಿಂದ ಅರ್ಜುನ ಆಲೋಚಿಸಿದ. ''ಕತ್ತಲೆಯಲ್ಲೂ ಹೀಗೆ ಸರಾಗವಾಗಿ ಊಟ ಮಾಡಲು ಅಭ್ಯಾಸಬಲವೇ ಕಾರಣ. ಹೀಗೆ ಅಭ್ಯಾಸ ಮಾಡಿದಲ್ಲಿ ಕತ್ತಲೆಯಲ್ಲೂ ಬಾಣಪ್ರಯೋಗ ಮಾಡಿ ಗುರಿಯನ್ನು ಹೊಡೆಯಬಹುದಲ್ಲ''. ಹೀಗೆ ಯೋಚಿಸಿದವನೇ ಮೇಲೆದ್ದು ಆ ಕತ್ತಲಲ್ಲೇ ಬಯಲಲ್ಲಿ ಅಸ್ತ್ರಾಭ್ಯಾಸಕ್ಕೆ ತೊಡಗಿ, ಶಬ್ದದಿಂದಲೇ ಗುರಿ ಹೊಡೆಯುವ ವಿದ್ಯೆಯನ್ನು ಸಾಧಿಸಿದ. ರಾತ್ರಿ ಕಳೆಯುವುದರಲ್ಲಿ ಆ ವಿದ್ಯೆ ಅವನಿಗೆ ಕರಗತವಾಗಿತ್ತು. ಹೀಗೆ ಆ ವಿದ್ಯೆ ಇಬ್ಬರಿಗೂ ತಿಳಿದಿದ್ದುದು ಸ್ಪಷ್ಟ. ಎಂದರೆ ಆ ಮಟ್ಟಿಗೆ ಅವರಿಬ್ಬರೂ ಸಮಾನ ಎಂದಾಗುವುದು. ಅದರಿಂದ ಅರ್ಜುನನಿಗೆ ಅಜ್ಞಾತವಾದ ವಿದ್ಯೆ ಏಕಲವ್ಯನಿಗೆ ತಿಳಿದಿದ್ದಿತೆಂದು ವಾದಿಸುವುದು ಉಚಿತವಾಗದು.

೩) ಹಾಗೆ ಏಕಲವ್ಯನಿಗೆ ಮಾತ್ರ ಆ ವಿದ್ಯೆ ತಿಳಿದಿದ್ದಲ್ಲಿ ಹೆಬ್ಬೆರಳು ಕತ್ತರಿಸಿಕೊಟ್ಟ ಮೇಲೆ ಅವನ ವಿದ್ಯೆ ಅರ್ಜುನನ ವಿದ್ಯೆಗೆ ಸಮವಾಯಿತು ಎಂದು ಹೇಳಬೇಕಿತ್ತು; ಸಮನಾಗಲಿಲ್ಲ ಎಂದಲ್ಲ. ಇಲ್ಲಿ ಸ್ಪಷ್ಟವಾಗಿ ಸಮನಾಗಲಿಲ್ಲ ಎಂಬ ಮಾತೇ ಇರುವುದರಿಂದ ಅರ್ಜುನನಿಗೂ ಆ ವಿದ್ಯೆ ತಿಳಿದಿದ್ದುದು ಸ್ಫುಟಪಡುವುದು.

೪) ಅರ್ಜುನ ಹೀಗೆ ಮಾಡಿದ್ದು ಖಂಡಿತ ಅಸೂಯೆಯಲ್ಲ; ಉತ್ತಮರಲ್ಲದವರಲ್ಲಿ ಆ ರೀತಿ ಮಾಡುವುದು ಗುಣವೆಂಬ ಮಾತು [೧]ಭಾಗವತತಾತ್ಪರ್ಯದಲ್ಲಿದೆ.

೫) ಭಗವದ್ಗೀತೆಯಲ್ಲಿ ಅರ್ಜುನನಿಗೆ ಕೃಷ್ಣ — ''ನೀನು ಅಸೂಯೆ ಪಡುವ ಸ್ವಭಾವದವನಲ್ಲ ಎಂಬ ಕಾರಣಕ್ಕೇ ನಿನಗೆ ಈ ರಹಸ್ಯವಿದ್ಯೆಯನ್ನು ಉಪದೇಶಿಸುತ್ತಿರುವೆನು'' ('...ಪ್ರವಕ್ಷ್ಯಾಮ್ಯನಸೂಯವೇ') ಎಂದು(೯/೧) ಸ್ಪಷ್ಟವಾಗಿ ನುಡಿದಿರುವುದು ಅರ್ಜುನ ಅಸೂಯಾಶೀಲನಲ್ಲ ಎಂಬುದಕ್ಕೆ ಅತ್ಯುತ್ತಮಪುರಾವೆ.

ತಸ್ಯ ಪ್ರಸಾದೋಪಚಿತೋರುಶಿಕ್ಷೋ ನಿಷಾದೋಽದಾದ್ದಕ್ಷಿಣಾಂಗುಷ್ಠಮಸ್ಯೈ ।
ತತಃ ಪರಂ ನಾಸ್ಯ ಬಭೂವ ಶಿಕ್ಷಾ ಸನ್ಮುಷ್ಟಿಹೀನಸ್ಯ ಸಮಾಽರ್ಜುನೇನ ॥ ೬೫ ॥

ಅ: ಅವರ ಪ್ರಸಾದದಿಂದ ಶ್ರೇಷ್ಠವಿದ್ಯೆ ಸಂಪಾದಿಸಿದ್ದ ಏಕಲವ್ಯ ಅವರಿಗೆ ತನ್ನ ಬಲಗೈ ಹೆಬ್ಬೆರಳನ್ನು ನೀಡಿದ. ಅಂದಿನಿಂದ ಮುಷ್ಟಿಯ ಬಲ ಕುಗ್ಗಿದ ಅವನ ವಿದ್ಯೆ ಅರ್ಜುನನಿಗೆ ಸಮವೆನ್ನಿಸದಾಯಿತು[೨].

ವಿ: ೧) ಏಕಲವ್ಯ ದ್ರೋಣರ ಮೂರ್ತಿಯನ್ನು ಆರಾಧಿಸಿ ವಿದ್ಯೆ ಪಡೆದಿದ್ದರೂ, ಅಂತಹ ಆರಾಧನೆಗೆ ಅವರಿಂದಲೇ ಅನುಮತಿಯನ್ನು ಹೊಂದಿದ್ದ ಎಂಬುದನ್ನು ಶ್ರೀಮದಾಚಾರ್ಯರು 'ತಸ್ಯ ಪ್ರಸಾದೋಪಚಿತೋರುಶಿಕ್ಷಃ' ಎಂಬ ಮಾತಿನಿಂದ ತಿಳಿಸಿರುವರು.

೨) ದ್ರೋಣರು ಅವನಿಗೆ ಹಾಗೆ ಅನುಮತಿ ನೀಡಿದ್ದ ವಿವರ ಮಹಾಭಾರತದಲ್ಲಿದೆ.

> ಶಿಷ್ಯೋಽಸಿ ಮಮ ನೈಷಾದೇ ಪ್ರಯೋಗೇ ಬಲವತ್ತರಃ ।
> ನಿವರ್ತ ಸ್ವಗೃಹಾನೇವ ಅನುಜ್ಞಾತೋಽಸಿ ಹಿ ನಿತ್ಯಶಃ ॥

೩) ದ್ರೋಣರು ಬಲಗೈ ಹೆಬ್ಬೆರಳನ್ನು ದಕ್ಷಿಣೆಯಾಗಿ ಕೇಳುವ ಮೂಲಕ ಅವನ ಬಗ್ಗೆ ಕ್ರೂರವಾಗಿ ನಡೆದುಕೊಂಡದ್ದು, ವಿದ್ಯಾಸಾಮರ್ಥ್ಯವನ್ನು ಕುಂದಿಸಿದ್ದು ಅನ್ಯಾಯದಂತೆ ತೋರುವುದು. ಆದರೆ ಮಹಾಭಾರತ ಸ್ಪಷ್ಟಪಡಿಸಿರುವಂತೆ ಏಕಲವ್ಯ ಮಣಿಮಂತ ಎಂಬ ಅಸುರನ ಅವತಾರ. ಅವನು ಜರಾಸಂಧನೊಂದಿಗೆ ಸೇರಿ, ಕೃಷ್ಣನ ಮೇಲೆ ದ್ವೇಷ ಸಾಧಿಸುತ್ತಾ ಸಮರಕ್ಕೂ

---

೧. ಸತಾಂ ಚ ಮಾತ್ಸರ್ಯಮರ್ಜುನಸ್ಯ ಏಕಲವ್ಯ ಇವ ಕುತ್ರಚಿದ್ದೃಶ್ಯತೇ। ತದ್ವರ್ಜನೀಯಮುತ್ತಮೇಷು ಜ್ಞಾನಾರ್ಥಿನಾ। ಮಹಾಸಂಹಿತಾಯಾಂ ಚ —

> 'ಉತ್ತಮೇ ಸ್ವಾತ್ಮನೋ ನಿತ್ಯಂ ಮಾತ್ಸರ್ಯಂ ಪರಿವರ್ಜಯೇತ್ ।
> ಕುರುತೇ ಯತ್ರ ಮಾತ್ಸರ್ಯಂ ತತ್ತತ್ತಸ್ಯ ವಿಹೀಯತೇ' ಇತಿ ॥ — ಭಾ.ತಾ. (೧/೧/೨)

೨. ಯದ್ವಾ ಮುಷ್ಟಿಹೀನಸ್ಯ ಅಸ್ಯ ಶಿಕ್ಷಾ ಅರ್ಜುನೇನ ಸಮಾ ನ ಬಭೂವೇತ್ಯರ್ಥಃ। — (ಜ.)

ತೆರಳಿದ್ದ ವಿವರ ಈಗಾಗಲೇ ಬಂದಿದೆ. ಇದು ಅವನ ದುಷ್ಟತನಕ್ಕೆ ಗಮಕ. ಅಲ್ಲದೆ ಮುಂದೆಯೂ ಅವನು ಕೃಷ್ಣನ ಮೇಲೆ ಯುದ್ಧಕ್ಕೆ ತೆರಳಿ, ಕೊನೆಗೆ ಅವನಿಂದಲೇ ಹತನಾಗುವನು. ಇದು ಅವನು ಅಯೋಗ್ಯನೆಂಬುದಕ್ಕೆ ಸ್ಪಷ್ಟ ಪುರಾವೆ. ಅಂತಹವನು ಸಂಪಾದಿಸಿದ್ದ ಅಯೋಗ್ಯವಿದ್ಯೆಯನ್ನು ನಾಶಪಡಿಸಿದ್ದು ಅವರ ಪಾಲಿಗೆ ಪುಣ್ಯವೃದ್ಧಿಯ ಕಾರ್ಯವಾಯಿತೆಂಬುದನ್ನು ಗಮನಿಸಬೇಕು.

ಏಕಾಂತದಲ್ಲಿ ಏಕಲವ್ಯನಿಗೆ ದ್ರೋಣರಿಂದ ಅಸ್ತ್ರೋಪದೇಶ

ಪುನಃ ಕೃಪಾಳೂ ರೈವತಪರ್ವತೇ ತಂ ದ್ರೋಣಃ ಪ್ರಾಪ್ಯಾದಾದಸ್ತ್ರವರಾಣಿ ತಸ್ಮೈ ।
ಏಕಾಂತ ಏವಾಸ್ಯ ಭಕ್ತ್ಯಾ ಸುತುಷ್ಟೋ ಧನ್ವಿಶ್ರೇಷ್ಠಂ ಕೃತವಾನರ್ಜುನಂ ಚ ॥ ೬೬ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಪಾಂಡವಾದೀನಾಮಸ್ತ್ರವಿದ್ಯಾಭ್ಯಾಸೋ ನಾಮ ಪಂಚದಶೋಽಧ್ಯಾಯಃ ॥ ೧೫ ॥

ಅ: ಮತ್ತೆ ಕೃಪಾಳುವಾದ ದ್ರೋಣರು ಆ ಏಕಲವ್ಯನ ಭಕ್ತಿಗೆ ಸಂತೋಷಪಟ್ಟವರಾಗಿ, ರೈವತಪರ್ವತದಲ್ಲಿ ಅವನಿಗೆ ರಹಸ್ಯವಾಗಿ ಉತ್ತಮಅಸ್ತ್ರಗಳನ್ನು ಉಪದೇಶಿಸಿದರು. ಹಾಗೂ ಅರ್ಜುನನನ್ನು ಧನುರ್ಧಾರಿಗಳಲ್ಲಿ ಶ್ರೇಷ್ಠನನ್ನಾಗಿ ರೂಪಿಸಿದರು ಸಹ.

ವಿ: ಏಕಲವ್ಯನ ಗುರುಭಕ್ತಿಗೆ ಮೆಚ್ಚಿದ ದ್ರೋಣರು ಮುಂದೊಮ್ಮೆ ಏಕಾಂತದಲ್ಲಿ ಅವನಿಗೆ ಅಸ್ತ್ರೋಪದೇಶವನ್ನು ಮಾಡಿದರು. ಮುಂಚೆ ಧರ್ಮವನ್ನು ಪಾಲಿಸಿದ್ದ ಅವರು ಅವನ ಭಕ್ತಿಯ ವ್ಯಾಮೋಹಕ್ಕೊಳಗಾಗಿ ಧರ್ಮವನ್ನು ತೊರೆದು, ಅಸ್ತ್ರೋಪದೇಶವನ್ನು ಮಾಡಿಯೇ ಬಿಟ್ಟರು ಎಂದರ್ಥ. ಅಸುರರ ಆಕರ್ಷಣಶಕ್ತಿ ಇಂತಹುದು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಪಾಂಡವಾದೀನಾಮಸ್ತ್ರವಿದ್ಯಾಭ್ಯಾಸ'ವೆಂಬ ಹದಿನೈದನೆಯ ಅಧ್ಯಾಯ ಮುಗಿಯಿತು ॥ ೧೫ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೧೬

(ಸೃಗಾಲವಧಃ)

(ಗೋಮಂತದಲ್ಲಿ ಕೃಷ್ಣಬಲರಾಮರ ಪರಾಕ್ರಮ, ಸೃಗಾಲವಧೆ)

ಮರಳಿ ಜರಾಸಂಧನ ಆಕ್ರಮಣ, ಮಧುರೆಯಿಂದ ಕೃಷ್ಣನ ನಿರ್ಗಮನ

ಕಾಲೇ ತ್ವೇತಸ್ಮಿನ್ ಭೂಯ ಏವಾಖಿಲೈಶ್ಚ
ನೃಪೈರ್ಯುಕ್ತೋ ಮಾಗಧೋ ಯೋದ್ಧುಕಾಮಃ ।
ಪ್ರಾಯಾದ್ಯದೂಂಸ್ತತ್ರ ನಿತ್ಯಾವ್ಯಯಾತಿ-
ಬಲೈಶ್ವರ್ಯೋಽಪೀಚ್ಛಯಾಽಗಾತ್ ಸ ಕೃಷ್ಣಃ ॥ ೧ ॥

ಅ: ಆ ಸಮಯದಲ್ಲಿ ಜರಾಸಂಧನು ಕಾದಲು ಬಯಸಿದವನಾಗಿ ಸಕಲರಾಜರೊಂದಿಗೆ ಕೂಡಿಕೊಂಡು, ಯಾದವರನ್ನು ಮತ್ತೊಮ್ಮೆ ಆಕ್ರಮಿಸಿದ. ಶ್ರೀಕೃಷ್ಣನು ನಿತ್ಯವೂ, ಅವ್ಯಯವೂ, ಅತ್ಯಂತಹಿರಿದಾದ ಬಲ ಸಂಪತ್ತಿನಿಂದ ಕೂಡಿದವನಾದರೂ, ಸ್ವೇಚ್ಛೆಯಿಂದಲೇ ಅಲ್ಲಿಂದ ದೂರಕ್ಕೆ ತೆರಳಿದ.

ವಿ: ಹಾಗೆ ಅನೇಕಬಾರಿ ಇನ್ನಿಲ್ಲದಂತೆ ಪರಾಭವಗೊಂಡು ಪಲಾಯನ ಮಾಡುತ್ತಿದ್ದರೂ, ಜರಾಸಂಧ ಕೃಷ್ಣನ ಮೇಲಿನ ದ್ವೇಷದಿಂದ ಮತ್ತೊಮ್ಮೆ ಮಧುರೆಯ ಮೇಲೆ ಧಾಳಿ ಮಾಡಿದ ಎಂದರ್ಥ. ಆಗ ಶ್ರೀಕೃಷ್ಣ ಪಲಾಯನ ಮಾಡುವವನಂತೆ ನಟಿಸಿ,ಪಟ್ಟಣದಿಂದ ದೂರಕ್ಕೆ ತೆರಳಿದ.

ಕೃಷ್ಣನ ನಿರ್ಗಮನಕ್ಕೆ ಕಾರಣ

ಸಂದರ್ಶಯನ್ ಬಲಿನಾಮಲ್ಪಸೇನಾ-
ದ್ಯುಪಸ್ಕರಾಣಾಂ ಬಹುಲೋಪಸ್ಕರೈಶ್ಚ[೧] ।
ಪ್ರಾಪ್ತೇ ವಿರೋಧೇ ಬಲಿಭಿರ್ನೀತಿಮಗ್ರ್ಯಾಂ
ಯಯೌ ಸರಾಮೋ ದಕ್ಷಿಣಾಶಾಂ ರಮೇಶಃ ॥ ೨ ॥

ಅ: ಬಲಿಷ್ಠರಾಗಿದ್ದರೂ ಸೇನೆ ಮೊದಲಾದ ಯುದ್ಧಸಾಧನಗಳು ಅಲ್ಪರಾಗಿರುವವವರು ಬಹಳವಾದ ಯುದ್ಧಸಾಮಗ್ರಿಯಿಂದ ಕೂಡಿದ ಬಲಿಷ್ಠಶತ್ರುಗಳೊಂದಿಗೆ ವಿರೋಧ ಒದಗಿದಾಗ ಪಾಲಿಸಬೇಕಾದ ಶ್ರೇಷ್ಠವಾದ ರಾಜನೀತಿಯನ್ನು ತಿಳಿಸಿಕೊಡಲೆಂದು ಕೃಷ್ಣ ಬಲರಾಮ-ಸಮೇತನಾಗಿ ಹಾಗೆ ದಕ್ಷಿಣದಿಕ್ಕಿನತ್ತ ತೆರಳಿದ.

---

೧ ಉಪಸ್ಕರಾಣಿ ಯುದ್ಧಸಾಧನಾನಿ ಯೇಷಾಂ ತೇ ತಥಾ । –(ಜ.)

ವಿಃ ೧) ತಾನು ಎಷ್ಟೇ ಪ್ರಬಲನಾಗಿದ್ದರೂ, ಸೇನಾದಿಸಾಮಗ್ರಿ ಅಷ್ಟಾಗಿ ಇಲ್ಲದಿದ್ದಾಗ ಪ್ರಬಲಶತ್ರುವು ಅಪಾರಸೇನಾದಿಸಾಮಗ್ರಿಯೊಂದಿಗೆ ಧಾಳಿ ನಡೆಸಿದಾಗ, ನೇರವಾಗಿ ಮೂಲಸ್ಥಳ–ದಿಂದಲೇ ಕಾದುವ ಬದಲು ತಾನು ಪಲಾಯನ ಮಾಡಿದಂತೆ ನಟಿಸಿ, ಬಹುದೂರಕ್ಕೆ ತೆರಳಿ ಶತ್ರುಗಳು ತನ್ನನ್ನು ಹಿಂಬಾಲಿಸುವಂತೆ ಮಾಡುವ ಮೂಲಕ ತನ್ನ ಕೇಂದ್ರಸ್ಥಾನವನ್ನು ಸುರಕ್ಷಿತ–ವಾಗಿರುವಂತೆ ನೋಡಿಕೊಳ್ಳುವುದು, ಹಾಗೆ ಬೆನ್ನಟ್ಟಿ ಬರುವ ಶತ್ರುವನ್ನು ಪರಾಭವಗೊಳಿಸಿ ಓಡಿಸುವುದು ಅನುಸರಿಸಬೇಕಾದ ಆಪತ್ಕಾಲದ ರಾಜನೀತಿ. ಇದನ್ನು ಕೃಷ್ಣ ಹಾಗೆ ತೆರಳುವ ಮೂಲಕ ರಾಜವೃಂದಕ್ಕೆ ತೋರಿಸಿಕೊಟ್ಟ ಎಂದರ್ಥ. ಜರಾಸಂಧನ ಸೇನೆ ಇಪ್ಪತ್ತಮೂರು ಅಕ್ಷೋಹಿಣಿಯಷ್ಟು ಅಪಾರವಾಗಿದ್ದುದು, ಅವನೊಂದಿಗೆ ಅವನ ಜೊತೆಗಿದ್ದ ಶಿಶುಪಾಲ ಮೊದಲಾದವರಿಗೆ ಅನೇಕವಿಧವಾದ ವರಗಳಿದ್ದುದೂ ಅವನ ಪ್ರಾಬಲ್ಯಕ್ಕೆ ಕಾರಣವಾಗಿತ್ತು. ಭಗವಂತನಾದ ಕೃಷ್ಣನಿಗೆ ಇದಾವುದೂ ಲೆಕ್ಕಕ್ಕೆ ಬರುವ ವಿಚಾರವಲ್ಲವಾದರೂ, ಇತರರಿಗೆ ಇದು ಸಾಮಾನ್ಯಸಮಸ್ಯೆಯೇನೂ ಅಲ್ಲ. ಅಂತಹವರಿಗೆ ಶ್ರೀಕೃಷ್ಣ ತೋರಿದ ದಾರಿ ಇದು ಎಂದು ತಿಳಿಯಬೇಕು.

೨) ಹಾಗೆ ದಕ್ಷಿಣದಿಕ್ಕಿಗೆ ತೆರಳುವ ಮೂಲಕ ಜರಾಸಂಧನ ಅನುಯಾಯಿಗಳೆಲ್ಲ ದಕ್ಷಿಣ–ದಿಕ್ಕಿನ ಅಧಿಪತಿಯಾದ ಯಮಲೋಕದ ಹಾದಿ ಹಿಡಿಯುವವರೇ ಎಂಬುದನ್ನು ಸೂಚಿಸಿದ ಎಂದು ತಿಳಿಯಬೇಕು.

೩) ಕೃಷ್ಣ ದಕ್ಷಿಣಭಾರತಕ್ಕೆ ಆಗಮಿಸಿದ ಅಪೂರ್ವಪ್ರಸಂಗವಿದು ಎಂಬುದನ್ನು ಗಮನಿಸಬೇಕು.

ಪರಶುರಾಮಸಂದರ್ಶನ, ಗೋಮಂತಗಮನ

ಸೋಽನಂತವೀರ್ಯಃ ಪರಮೋಽಭಯೋಽಪಿ
ನೀತ್ಯೈ ಗಚ್ಛನ್ ಜಾಮದಗ್ನ್ಯಂ ದದರ್ಶ ।
ಕ್ರೀಡಾರ್ಥಮೇಕೋಽಪಿ ತತೋಽತಿದುರ್ಗಂ
ಶ್ರುತ್ವಾ ಗೋಮಂತಂ ತತ್ರ ಯಯೌ ಸಹಾಗ್ರಜಃ ॥ ೩ ॥

ಅ: ಶ್ರೀಕೃಷ್ಣನು ಅನಂತಶಕ್ತಿಸಂಪನ್ನ, ಸರ್ವೋತ್ತಮ, ಸದಾ ನಿರ್ಭೀತ; ಆದರೂ ರಾಜನೀತಿಯನ್ನು ತಿಳಿಸಲೆಂದು ಹಾಗೆ ತೆರಳಿ, ದಾರಿಯಲ್ಲಿ ಪರಶುರಾಮರೂಪವನ್ನು ಕಂಡ. ತಾವಿಬ್ಬರೂ ಒಂದೇ ಆದರೂ, ಕ್ರೀಡೆಗಾಗಿ ಬೇರೆ ಬೇರೆ ಎಂಬಂತೆ ತೋರಿಸಿಕೊಳ್ಳುತ್ತಾ ಗೋಮಂತಪರ್ವತವು ಶತ್ರುಗಳಿಗೆ ದುರ್ಗಮವಾದ ಸ್ಥಳ ಎಂದು ಅವರಿಂದ ಕೇಳಿ ತಿಳಿದು, ಅಣ್ಣನಾದ ಬಲರಾಮನೊಂದಿಗೆ ಅಲ್ಲಿಗೆ ತೆರಳಿದ.

ವಿ: ೧) ಶ್ರೀಕೃಷ್ಣ ಹಾಗೆ ಬರುತ್ತಾ ಮಾರ್ಗಮಧ್ಯದಲ್ಲಿ ತನ್ನದೇ ಪರಶುರಾಮರೂಪವನ್ನು ಕಂಡ. ಅದೂ ಆಕಸ್ಮಿಕವೇನಲ್ಲ. ಅವನೇ ಮಾಡಿಕೊಂಡ ಯೋಜನೆ. ಅವರೊಂದಿಗೆ ಬೇರೆಯವರೊಂದಿಗೆಂಬಂತೆ ವ್ಯವಹರಿಸಿದ. ಆ ಮೂಲಕ ಸುರಶಿಕ್ಷಣವನ್ನೂ, ಅಸುರಮೋಹನ–ವನ್ನೂ ಮಾಡಿದ.

೨) ಇಂತಹ ಕೃಷ್ಣಪರಶುರಾಮರ ಸಮಾಗಮ, ಹಿಂದೆ ತ್ರೇತಾಯುಗದಲ್ಲಿ ನಡೆದಿದ್ದ ಶ್ರೀರಾಮಪರಶುರಾಮರ ಸಮಾಗಮದಂತೆಯೂ, ಮುಂದೆ ನಡೆಯುವ ಭೀಮಹನುಮಂತರ ಸಮಾಗಮದಂತೆಯೂ ಎಂದು ತಿಳಿಯಬೇಕು. ಅಲ್ಲಿ ನೀಡುವ ವಿಶೇಷನಿರ್ಣಯವನ್ನು ಇಲ್ಲಿಯೂ, ಇಂತಹ ಇತರಪ್ರಸಂಗಗಳಲ್ಲೂ ಅನುಸಂಧಾನ ಮಾಡಿಕೊಳ್ಳಬೇಕು.

೩) ಶ್ರೀಕೃಷ್ಣ ಮಧುರೆಯಿಂದ ಅಲ್ಲಿಗೆ ಬಂದಿದ್ದರೆ, ಪರಶುರಾಮ ಶೂರ್ಪಾರಕ ಎಂಬ ಕ್ಷೇತ್ರದಿಂದ ಅಲ್ಲಿಗೆ ಬಂದಿದ್ದ ಎಂಬ ವಿವರವೂ ಅಲ್ಲಿದೆ.

ಬಲಿಚಕ್ರವರ್ತಿಯಿಂದ ಕಿರೀಟಾಪಹರಣದ ಕಥೆ[೧]

ತದಾ ದುಗ್ಧಾಬ್ಧೌ ಸಂಸೃತಿಸ್ಥೈಃ ಸುರಾದ್ಯೈಃ
ಪೂಜಾಂ ಪ್ರಾಪ್ತುಂ ಸ್ಥಾನಮೇಷಾಂ ಚ ಯೋಗ್ಯಮ್ ।
ಮುಕ್ತಸ್ಥಾನಾದಾಪ ನಾರಾಯಣೋಽಜೋ
ಬಲಿಶ್ಚಾಗ್ಗಾತ್ ತತ್ರ ಸಂದ್ರಷ್ಟುಮೀಶಮ್ ॥ ೪ ॥

ಅ: ಆಗ ಕ್ಷೀರಸಮುದ್ರದಲ್ಲಿ ಅಮುಕ್ತರಾದ ದೇವತೆಗಳು ಮೊದಲಾದವರಿಂದ ಪೂಜೆ ಕೈಗೊಳ್ಳಲು, ಅವರಿಗೆ ಯೋಗ್ಯವಾದ ಸ್ಥಳಕ್ಕೆ ಮುಕ್ತಸ್ಥಾನದಿಂದ ಅಜನಾದ ನಾರಾಯಣ ಆಗಮಿಸಿದ್ದ. ಸರ್ವಸ್ವಾಮಿಯಾದ ಅವನನ್ನು ಕಾಣಲೆಂದು ಅಲ್ಲಿಗೆ ಬಲಿಯೂ ತೆರಳಿದ್ದ.

---

೧. 'ಬಹೂನಿ ಸ್ಥಾನಜಾತಾನಿ ಕೃಷ್ಣಸ್ಯ ಕ್ಷೀರಸಾಗರೇ।
ಕಾನಿಚಿನ್ಮುಕ್ತಗಮ್ಯಾನಿ ನಾಮುಕ್ತೈಸ್ತಿದಶೈರಪಿ।
ಗಂತುಂ ಶಕ್ಯಾನ್ಯಥಾನ್ಯಾನಿ ಗಮ್ಯಾನ್ಯನ್ಯೈರಪಿ ಕ್ವಚಿತ್ ।
ತತ್ರ ದೇವಾಶ್ಚ ಯೋಗೀಂದ್ರಾ ಭಕ್ತಾಶ್ಚಾನ್ಯೇ ಜನಾರ್ದನಮ್।
ಗತ್ವಾऽರ್ಚಯಂತಿ ದೇವೇಶಂ ಬಲಿಸ್ತತ್ರಾಗಮತ್ ಕ್ವಚಿತ್ ।
ತಸ್ಯ ತತ್ರಾಸುರಾವೇಶಾತ್ಪಬುದ್ಧಿರಜಾಯತ।
ತದ್ವ್ಯಕ್ತಾರ್ಥಂ ಜಗನ್ನಾಥಃ ಶಿಕ್ಷೇ ಸುಪ್ತವದವ್ಯಯಃ।
ತದಾ ಸ ಪಾಪಯಾ ಬುದ್ಧ್ಯಾ ಕಿರೀಟಮಹರದ್ವಿಭೋಃ।
ತಂ ಜಿತ್ವಾ ಗರುಡಸ್ತತ್ತು ಹೃತ್ವಾ ಗೋಮಂತಮಾವ್ರಜತ್ ।
ತತ್ರ ಕೃಷ್ಣಸ್ಯ ಶಿರಸಿ ಕಿರೀಟಮಮುಚತ್ಪಭೋಃ' ಇತಿ ಮಾತ್ಸ್ಯೇ ॥ – ಭಾ.ತಾ.(೧೦/೫೩/೮)

ವಿ: ಶ್ರೀಕೃಷ್ಣ ಹಾಗೆ ತೆರಳುತ್ತಿದ್ದ ಸಮಯದಲ್ಲಿ ಕ್ಷೀರಸಮುದ್ರದ ಅಮುಕ್ತಸ್ಥಾನದಲ್ಲೊಂದು ಅಪೂರ್ವಘಟನೆ ನಡೆದಿತ್ತು. ಮುಕ್ತಸ್ಥಾನದಿಂದ ದೇವಾದಿಗಳನ್ನು ಅನುಗ್ರಹಿಸಲೆಂದು ನಾರಾಯಣ ಅಲ್ಲಿಗೆ ಆಗಮಿಸಿದ್ದ. ಅಲ್ಲಿಗೆ ಬಲಿಚಕ್ರವರ್ತಿಯೂ ತೆರಳಿದ್ದ. ಇದು ದ್ವಾಪರಯುಗದ ಅಂತ್ಯಭಾಗದ ಪ್ರಸಂಗವಾದ್ದರಿಂದ ಈಗಾಗಲೇ ಬಲಿಚಕ್ರವರ್ತಿ ವಾಮನರೂಪಿಪರಮಾತ್ಮನಿಂದ ಅನುಗೃಹೀತ-ನಾಗಿ ಅವನು ಸುತಳಲೋಕದಲ್ಲಿ ನೆಲಸಿದ್ದ ಎಂಬುದೂ ಸ್ಪಷ್ಟ.

ತತ್ಸಾಸುರಾವೇಶಮಮುಷ್ಯ ವಿಷ್ಣುಃ
ಸಂದರ್ಶಯನ್ ಸುಪ್ತಿಹೀನೋಽಪಿ ನಿತ್ಯಮ್ ।
ಸಂಸುಪ್ತವಚ್ಚಿಶ್ಯ ಉದಾರಕರ್ಮಾ
ಸಂಜ್ಞಾಯೈ[೧] ದೇವಾನಾಂ ಮುಖಮೀಕ್ಷ್ಯಾಪ್ರಮೇಯಃ ॥ ೫ ॥

ಅ: ಅಲ್ಲಿ ಬಲಿಗೆ ಆಗ ಅಸುರಾವೇಶವಿದ್ದುದನ್ನು ತೋರಿಸಿಕೊಡಲೆಂದು ಉತ್ಕೃಷ್ಟಕಾರ್ಯ-ವನ್ನು ಮಾಡುವ ಅಪ್ರಮೇಯನಾದ ವಿಷ್ಣುವು ತಾನು ಸದಾ ಸುಪ್ತಿಹೀನನಾದರೂ, ಆಗ ದೇವತೆಗಳ ಮುಖವನ್ನೊಮ್ಮೆ ಸನ್ನೆಗಾಗಿ ನೋಡಿ, ಗಾಢನಿದ್ರೆಯಲ್ಲಿರುವವನಂತೆ ಮಲಗಿಬಿಟ್ಟ.

ವಿ: ೧) ಸಂದರ್ಶನಕ್ಕಾಗಿ ಅಲ್ಲಿ ಆಗಮಿಸಿದ್ದ ಬಲಿಯಲ್ಲಿ ಆಗ ಅಸುರಾವೇಶವಿದ್ದುದನ್ನು ತೋರಿಸಿಕೊಡಲೆಂದು ಶ್ರೀಹರಿ ಹಾಗೆ ಮಾಡಿದ ಎಂದರ್ಥ. ಬಲಿಯಲ್ಲಿ ಬಲಿ ಎಂಬ ಅವನದೇ ಹೆಸರಿನ ಅಸುರನೊಬ್ಬನ ಆವೇಶವಿದ್ದ ವಿವರ [೨]ಈಗಾಗಲೇ ಬಂದಿದೆ (೧೧/೨೧೩).

೨) ಶ್ರೀಹರಿ ಹಾಗೆ ಇತರದೇವತೆಗಳ ಮುಖವನ್ನು ನೋಡಿದ್ದು ಅವರೂ ಸಹ ನಿದ್ರೆ ಬಂದವರಂತೆ ನಟಿಸಬೇಕೆಂಬ ಸೂಚನೆ ನೀಡಲು ಎಂದು ತಿಳಿಯಬೇಕು.

ದೇವಾಶ್ಚ ತದ್ಭಾವವಿದೋಽಖಿಲಾಶ್ಚ
ನಿಮೀಲಿತಾಕ್ಷಾಃ ಶಯನೇಷು ಶಿಶ್ಯಿರೇ ।
ತದಾ ಬಲಿಸ್ತಸ್ಯ ವಿಷ್ಣೋಃ ಕಿರೀಟ-
ಮಾದಾಯಾಗಾಜ್ಜಹಸುಸ್ತತ್ರ ದೇವಾಃ[೩] ॥ ೬ ॥

---

೧. ಸಂಜ್ಞಾಯೈ= ಯೂಯಮಪಿ ನಿದ್ರಾಂ ಕುರುಧ್ವಮಿತಿ ಸಂಜ್ಞಾಯೈ ಮುಖಮೀಕ್ಷ್ಯೇತ್ಯರ್ಥ ॥ – (ವಾ.)

೨. ಆವಿಶ್ಯ ಯೋ ಬಲಿಮಂಜಶ್ಚಕಾರ.. ಸ ಚಾಸುರೋ ಬಲಿನಾಮೈವ। (೧೧/೨೧೨)

ಅ: ಹರಿಯ ಅಭಿಪ್ರಾಯವನ್ನು ಅರಿತ ದೇವತೆಗಳೆಲ್ಲರೂ ಕಣ್ಣುಗಳನ್ನು ಮುಚ್ಚಿಕೊಂಡು, ಹಾಸಿಗೆಗಳಲ್ಲಿ ಒರಗಿದರು. ಆಗ ಬಲಿ ಆ ವಿಷ್ಣುವಿನ ಕಿರೀಟವನ್ನು ತೆಗೆದುಕೊಂಡು ತೆರಳಿದ. ದೇವತೆಗಳೆಲ್ಲ ನಗಾಡಿದರು.

ವಿ: ಶ್ರೀಹರಿಯ ಸಂದರ್ಶನಕ್ಕೆಂದು ಅಲ್ಲಿಗೆ ಆಗಮಿಸಿದ ಬಲಿ, ಅಸುರಾವೇಶದಿಂದಾಗಿ ಯಾರೂ ಗಮನಿಸುತ್ತಿಲ್ಲ ಎಂದು ಭ್ರಮಿಸಿ, ನಾರಾಯಣನ ಕಿರೀಟವನ್ನೇ ಕದ್ದೊಯ್ದುಬಿಟ್ಟ ಎಂದರ್ಥ. ಅವನು ಅಲ್ಲಿಂದ ತೆರಳುತ್ತಲೇ ನಡೆದದ್ದನ್ನು ಗಮನಿಸಿ, ದೇವತೆಗಳು ನಕ್ಕರು. ವಾಮನರೂಪಿ ಭಗವಂತನಿಗೆ ಸರ್ವಸ್ವವನ್ನೂ ದಾನ ಮಾಡಿ ವಿಖ್ಯಾತನಾಗಿದ್ದ ಬಲಿಚಕ್ರವರ್ತಿ, ಭಗವಂತನಿಗೆ ನಿದ್ರೆ ಎಂದು ಭ್ರಮಿಸಿದ್ದು, ಭಗವಂತನ ಕಿರೀಟವನ್ನೇ ಕದ್ದೊಯ್ಯುವಷ್ಟು ಅವಿವೇಕ ತೋರಿಸಿದ್ದು ನಗೆಪಾಟಲಿನ ವಿಷಯವೇ ಅಲ್ಲವೆ!

ಗರುಡನಿಂದ ಬಲಿಯ ಪರಾಭವ

ನಾರಾಯಣೇ ಸರ್ವದೇವೈಃ ಸಮೇತೇ
ಬ್ರಹ್ಮಾದಿಭಿರ್ಹಾಸಮಾನೇ[೪] ಸುಪರ್ಣಃ।
ಗತ್ವಾ ಪಾತಾಲಂ ಯುಧಿ ಜಿತ್ವಾ ಬಲಿಂ ಚ
ಕಿರೀಟಮಾದಾಯಾಭ್ಯಯಾದ್ಯತ್ರ ಕೃಷ್ಣಃ ॥ ೭ ॥

ಅ: ನಾರಾಯಣನೊಂದಿಗೆ ಬ್ರಹ್ಮಾದಿಸಮಸ್ತದೇವತೆಗಳೂ ನಗುತ್ತಿರಲು ಗರುಡನು ಪಾತಾಳಕ್ಕೆ ತೆರಳಿ ಯುದ್ಧದಲ್ಲಿ ಬಲಿಯನ್ನು ಪರಾಭವಗೊಳಿಸಿ, ಕಿರೀಟವನ್ನು ತೆಗೆದುಕೊಂಡು ಶ್ರೀಕೃಷ್ಣನಿರುವಲ್ಲಿಗೆ ಬಂದ.

ವಿ: ೧) ಹಾಗೆ ಕಿರೀಟ ಕದ್ದ ಬಲಿಯನ್ನು ಅಟ್ಟಿಸಿಕೊಂಡು ತೆರಳಿದ ಗರುಡ, ಬಲಿ ವಾಸಿಸುತ್ತಿದ್ದ ಸುತಳಲೋಕಕ್ಕೆ ತೆರಳಿ, ಅಲ್ಲಿ ಅವನೊಂದಿಗೆ ಯುದ್ಧ ಮಾಡಿ ಅವನನ್ನು ಸೋಲಿಸಿ, ಕಿರೀಟವನ್ನು ಮರಳಿ ಹರಿಗೆ ಸಮರ್ಪಿಸಲೆಂದು ಬರುವಾಗ ಮಾರ್ಗಮಧ್ಯದಲ್ಲಿ ಕೃಷ್ಣ ಗೋಮಂತಪರ್ವತದಲ್ಲಿ ಇದ್ದುದನ್ನು ಕಂಡ ಎಂದರ್ಥ.

೨) ಬಲಿ ನೆಲೆಸಿದ್ದ ಲೋಕ ಸುತಲವಾದ್ದರಿಂದ ಇಲ್ಲಿ ಪಾತಾಲ ಎಂದರೆ ಸುತಲ ಎಂದೇ ಅರ್ಥ.

---

೩. 'ಜಹಾರ ದೇವದೇವಸ್ಯ ಕಿರೀಟಂ ರತ್ನಚಿತ್ರಿತಂ' ಇತಿ ಭಾಗವತೇ । 'ಚೂಡಾರತ್ನೇ ಮರುದ್ದೇವಃ' ಇತಿ ಬ್ರಹ್ಮಾಂಡಪುರಾಣೇ। – (ರಾ.)

೪. ಬ್ರಹ್ಮಾದಿಭಿಃ ಸರ್ವದೇವೈಃ ಸಮೇತೇ ಬ್ರಹ್ಮಾದಿಭಿರ್ಹಾಸಮಾನೇ ಸತೀತ್ಯನ್ವಯಃ ॥ – (ವಾ.)

೩) ಬ್ರಹ್ಮವರವಿದ್ದ ಬಲಿಯನ್ನು ಹಾಗೆ ಸೋಲಿಸಲು ಗರುಡನಿಗೆ ಸಾಧ್ಯವಾದದ್ದು ಅವನೊಳಗಿದ್ದ ಹರಿಯ ವಿಶೇಷ ಆವೇಶದಿಂದಾಗಿಯೂ, ಅವನು ಸರ್ವರಿಂದ ಅಜೇಯನಾಗಲಿ ಎಂಬುದಾಗಿ ಅವನಿಗಿದ್ದ ಶ್ರೀಹರಿಯ ವರದಿಂದಾಗಿಯೂ ಎಂದು ತಿಳಿಯಬೇಕು ಎಂಬ ವಿಶೇಷಾಂಶ ಜನಾರ್ದನೀಯದಲ್ಲಿದೆ[೧].

ಗರುಡನಿಂದ ಕೃಷ್ಣನಿಗೆ ಕಿರೀಟದ ಸಮರ್ಪಣೆ

ತತ್ ತಸ್ಯ ಶೀರ್ಷ್ಣಿ ಪ್ರತಿಮುಚ್ಯ ನತ್ವಾ
ಖಗಃ ಸ್ತುತ್ವಾ ದೇವದೇವಂ ರಮೇಶಮ್ ।
ಸ್ಮೃತ ಆಗಚ್ಛೇತ್ಯೇವ ವಿಸರ್ಜಿತೋಽಮುನಾ
ಯಯೌ ದುಗ್ಧಾಬ್ಧಿಂ ಯತ್ರ ನಾರಾಯಣೋಽಸೌ ॥ ೮ ॥

ಅ: ಗರುಡ[೨] ಅದನ್ನು ಶ್ರೀಕೃಷ್ಣನ ಶಿರಸ್ಸಿನ ಮೇಲಿರಿಸಿ, ದೇವದೇವನೂ, ಲಕ್ಷ್ಮೀಪತಿಯೂ ಆದ ಅವನನ್ನು ಸ್ತುತಿಸಿ, ''ನೆನೆದಾಗ ಬಾ'' ಎಂದು ಕೃಷ್ಣನಿಂದ ಕಳುಹಿಸಲ್ಪಟ್ಟವನಾಗಿ, ಕ್ಷೀರಸಮುದ್ರಕ್ಕೆ ನಾರಾಯಣನಿದ್ದಲ್ಲಿಗೆ ತೆರಳಿದ.

ವಿ: ಶ್ರೀಕೃಷ್ಣನನ್ನು ಹಾಗೆ ಕಂಡ ಗರುಡ ಶ್ರೀಕೃಷ್ಣ ಸಾಕ್ಷಾತ್ ನಾರಾಯಣನೇ ಎಂಬುದನ್ನು ಗಮನಿಸಿ, ಆ ಕಿರೀಟವನ್ನು ಅವನಿಗೇ ಸಮರ್ಪಿಸಿದ. ಇದು ಗರುಡನ ವಿಶೇಷಜ್ಞಾನಕ್ಕೂ ದ್ಯೋತಕ.

ಕಿರೀಟಪ್ರಸಂಗದ ಅಂತರಾರ್ಥ

ಕಿರೀಟಂ ತತ್ ಕೃಷ್ಣಮೂರ್ಧ್ನಿ ಪ್ರವಿಷ್ಟಂ
ತತ್ತುಲ್ಯಮಾಸೀತ್ ತಸ್ಯ ರೂಪೇಷ್ವಭೇದಾತ್ ।
ತದಿಚ್ಛಯಾ ಚೈವ ನಾರಾಯಣಸ್ಯ
ಶೀರ್ಷ್ಣ್ಯಪ್ಯಾಸೀದ್ಯುಗಪದ್ದುಗ್ಧವಾರ್ಧೌ ॥ ೯ ॥

---

೧. ನನು ಬ್ರಹ್ಮವರಸತ್ವಾದ್ಗರುಡಃ ಕಥಂ ಬಲಮಜಯದಿತಿ ಚೇತ್, ಸತ್ಯಮ್ । ಯಥಾ ಜರಾಸಂಧಜಯೇ ರಾಮಗೇಣೇತ್ಯುಕ್ತಂ ತಥಾ ವಿಶೇಷಾವೇಶಾತ್ ಹರಿವರಾದ್ವಾ ವರಶ್ಚೋಕ್ತೋ ಸ್ಕಾಂದೇ ಬದರೀಮಾಹಾತ್ಮ್ಯೇ —

ಅಜೇಯೋ ದೇವದೈತ್ಯಾನಾಂ ಸ್ಯಾಮಹಂ ತೇ ಪ್ರಸಾದತಃ ।
ಓಮಿತ್ಯುಕ್ತ್ವಾ ತದಾ ವಿಷ್ಣುರುವಾಚ ಚ ಹಿತಂ ವಚ ಇತಿ ॥ – (ಜ.)

೨. ಸರ್ವದೇವೇಷು ಸತ್ಸು ಸುಪರ್ಣಸ್ಯೈವ ಕಿರೀಟಾನಯನೇ ಕೋ ಹೇತುರಿತ್ಯಾಶಂಕಾ 'ನಿರೀಕ್ಷ್ಯ ಪುರಪಾಲಿತ' ಇತಿ ದಶಮವಾಕ್ಯೇನ ಗರುಡಸ್ಯ ಪುರಪಾಲಕತ್ವೋಕ್ತ್ಯಾಪರಿಹೃತಾ ಜ್ಞಾತವ್ಯಾ ಇತಿ । – (ತಿ.)

ಅ: ಶ್ರೀಹರಿಯ ರೂಪಗಳಲ್ಲಿ ಭೇದವಿಲ್ಲವಾದ್ದರಿಂದ ಶ್ರೀಕೃಷ್ಣನ ತಲೆಯ ಮೇಲೆ ಇರಿಸಲ್ಪಟ್ಟ ಆ ಕಿರೀಟ, ಅದಕ್ಕೆ ಸರಿಯಾಗಿ ಹೊಂದಿಕೊಂಡಿತು. ಆ ಕೃಷ್ಣನ ಇಚ್ಛೆಯಿಂದಾಗಿಯೇ ಅದು ಕ್ಷೀರಸಾಗರದಲ್ಲಿನ ನಾರಾಯಣನ ತಲೆಯ ಮೇಲೂ ಅದೇ ಕಾಲದಲ್ಲಿ ಕುಳಿತುಕೊಂಡಿತು.

ಎ: ೧) ಶ್ರೀಹರಿಯ ರೂಪರೂಪಗಳಿಗೂ, ಮೂಲರೂಪಅವತಾರರೂಪಗಳಿಗೂ ಪರಸ್ಪರ ಭೇದ ಎಷ್ಟು ಮಾತ್ರಕ್ಕೂ ಇಲ್ಲವೆಂಬ [೪]ವಿಶೇಷಪ್ರಮೇಯವನ್ನೂ ಸಹ ಮೂಲರೂಪದ ಕಿರೀಟ ಅವತಾರರೂಪಕ್ಕೂ ಪರಿಪೂರ್ಣವಾಗಿ, ಸರಿಯಾಗಿ ಹೊಂದಿಕೊಂಡ ಈ ಪ್ರಸಂಗ ಸಾರುವುದು ಎಂದರ್ಥ.

೨) ಶ್ರೀಕೃಷ್ಣನ ತಲೆಯ ಮೇಲೆ ಇರಿಸಲ್ಪಟ್ಟ ಆ ಕಿರೀಟ, ಮತ್ತೊಂದು ರೂಪದಿಂದ ಅವನ ಮೂಲರೂಪದ ತಲೆಯ ಮೇಲೂ ಅದೇ ಸಮಯದಲ್ಲಿ ಕಾಣಿಸಿಕೊಂಡಿತು.

೩) ಇದು ಕೃಷ್ಣನಂತೆ ಅವನ ಆಭರಣ ಆಯುಧಾದಿಗಳೂ ಸಾಂಶ ಎಂಬ ವಿಶೇಷಪ್ರಮೇಯವನ್ನು ತಿಳಿಸುವುದು. ಸೀತಾಕೃತಿಯ ಮೇಲಿನ ಆಭರಣಗಳು ಮೂಲಸೀತೆಯ ಮೇಲೂ ಅದೇ ತೆರನಾಗಿ ನೆಲೆಸಿದ್ದ ವಿವರ ಈಗಾಗಲೇ ಬಂದಿದೆ (೭/೧೩).

೪) ಭಗವಂತನ ಅವತಾರರೂಪಗಳಿಗೆ ಸಮರ್ಪಿಸಿದ ಪೂಜೆ ಮೂಲರೂಪಕ್ಕೂ ಸಲ್ಲುವುದೆಂಬ ಮತ್ತೊಂದು ವಿಶೇಷಪ್ರಮೇಯ ಇದರಿಂದ ಸೂಚಿತ ಎಂದು ತಿಳಿಯಬೇಕು.

---

೩. ಉಪೇಂದ್ರಮೂರ್ಧ್ನಿ ಸಾ ಮೌಲಿರಪಿನದ್ಧಾ ಇವಾಪತತ್ ।
ಶಿರಸಃ ಸ್ಥಾನನಿರ್ಮುಕ್ತಾ ಕೃಷ್ಣಂ ಚೈವಾನ್ವಶೋಭಯತ್ ॥ – ಹರಿವಂಶ (೨/೪೧/೪೪)

ಕಿರೀಟಂ ತತ್ಕೃಷ್ಣಮೂರ್ಧ್ನಿಪ್ರವಿಷ್ಟಂ ತತ್ತುಲ್ಯಮಾಸೀತ್, ತಸ್ಯ ರೂಪೇಷ್ವಭೇದಾತ್ । ತದಿಚ್ಛಯಾ ಚೈವ ನಾರಾಯಣಸ್ಯೇತ್ಯತ್ರ ತಸ್ಯ ರೂಪೇಷ್ವಭೇದಾತ್ ತದಿಚ್ಛಯಾ ಚೇತಿ ಹೇತುದ್ವಯಮಸ್ತಿ । ಕೃಷ್ಣಮೂರ್ಧ್ನಿವಿಷ್ಟಂ ತತ್ಕಿರೀಟಂ ತತ್ತುಲ್ಯಮಾಸೀತ್ ಶೀರ್ಷ್ಣ್ಯಪೀತ್ಯಪಿಶಬ್ದಾತ್। ತಥಾ ನಾರಾಯಣಸ್ಯ ಶೀರ್ಷ್ಣ್ಯಪಿ ದುರ್ಗ್ರಹಾರ್ಧ್ಯೋ ಯುಗಪದಾಸೀತ್ । ತತ್ರ ಹೇತ್ವಪೇಕ್ಷಾಯಾಂ ತಸ್ಯ ರೂಪೇಷ್ವಭೇದಾತ್ ತದಿಚ್ಛಯಾ ಚೇತ್ಯನಯೋರ್ಮಧ್ಯೇ ಏಕೇನೈವ ಚರಿತಾರ್ಥತ್ವಾದೇಕಸ್ಯ ವೈಯರ್ಥ್ಯಮಿತಿ ಚೇನ್ನ । ಅಭೇದಾದಿತ್ಯೇವೋಕ್ತೌ ವ್ಯಾಸಾದ್ಯನಂತರೂಪೇಷು ಅಭೇದಸ್ಯ ಸತ್ವಾತ್ ಏಕದೈವ ಕಿರೀಟಾವಾಪ್ತಿಃ ಸ್ಯಾತ್ । ಸಾ ಮಾ ಭೂದಿತಿ ತದಿಚ್ಛಯೇತ್ಯುಕ್ತಂ ನ ಚ ತಥಾತ್ವೇತದಿಚ್ಛಯೇತ್ಯೇತಾವದೇವಾಸ್ತ್ವಿತಿ ವಾಚ್ಯಮ್ । ಇಚ್ಛಾಯಾಃ ಸ್ವಭಿನ್ನಸಾಸಾತ್ತ್ವಿಕಪ್ರವೃತಿಷು ಸಾತ್ತ್ವಿಕಯೇ ಸತ್ಸು ತಮಿತ್ಯನೇನ ಸ್ವರಥದಾನೇ ದೃಷ್ಟತ್ವೇನ ತಾವನ್ಮಾತ್ರಸ್ಯಾಂಗೀಕರ್ತುಮಶಕ್ಯತ್ವಾತ್ ತಥಾ ಚೇಚ್ಛಾಸಹಿತ ಅಭೇದ ಏಕದಾ ಕಿರೀಟಪ್ರಾಪ್ತೌ ಕಾರಣಂ ಇದಮತ್ರಾಕೂತಮ್ । ಅಭೇದಾತ್ ಸರ್ವರೂಪೇಷು ಏಕದೈವ ಕಿರೀಟಾವಾಪ್ತಿರ್ವಾಚ್ಯಾ । ತತ್ರೇಚ್ಛಾಭಾವತ್ ಯತ್ರೇಚ್ಛಾ ತತ್ರಾಭೇದಾತ್ ಕಿರೀಟಾವಾಪ್ತಿರಿತಿ ನಾತಿಪ್ರಸಂಗಃ । ತಸ್ಯ ಗರುಡಸ್ಯೇಚ್ಛಯಾ ವಾ ಕಿರೀಟಾನಯನಾರ್ಥಮಾಗತೇನ ಮಯಾ ಕೃಷ್ಣಮೂರ್ಧ್ನಿ ಪ್ರಕ್ಷಿಪ್ತಮೇತತ್ಕಿರೀಟಂ ಯುಗಪತ್ ಕ್ಷೀರಾಬ್ಧೌ ನಾರಾಯಣಶೀರ್ಷ್ಣ್ಯಪಿ ಭವತ್ವಿತ್ಯನ್ಯಥಾ ಕಾರ್ಯಕರ್ತಾ ನ ಸ್ಯಾಮಿತಿ ಗರುಡೇಚ್ಛಯೇತ್ಯರ್ಥಃ । – (ತಿ.)

೪. ಯದ್ವಾ 'ಪೂರ್ಣಮದಃ ಪೂರ್ಣಮಿದಮ್....' ಇತ್ಯುಕ್ತರೀತ್ಯಾ ಇಂದ್ರಾರ್ಜುನಾದಿವದ್ವಿಶೇಷಹೀನಾಭೇದಾದಿತ್ಯರ್ಥಃ । – (ತಾ.)

೫) ಶ್ರೀಹರಿಯ ಇಚ್ಛೆಗನುಗುಣವಾಗಿ ಆ ಕಿರೀಟ ಕೃಷ್ಣನ ಶಿರಸ್ಸಿನ ಮೇಲೂ, ಮೂಲರೂಪದ ಶಿರಸ್ಸಿನ ಮೇಲೂ ಕಾಣಿಸಿಕೊಂಡಿತು.

ಮರಳಿ ದಿವ್ಯಾಯುಧಗಳ ಆಗಮನ, ಪತ್ನಿಯರೊಂದಿಗೆ ಬಲರಾಮನ ವಿಹಾರ

ಪೂರ್ವಂ ಪ್ರಾಪ್ತಾನ್ಯೇವ ದಿವ್ಯಾಯುಧಾನಿ
ಪುನರ್ವೈಕುಂಠಂ ಲೋಕಮಿತಾನಿ ಭೂಯಃ ।
ತದಾऽವತೇರೂ ರೌಹಿಣೇಯಸ್ಯ ಚೈವಂ
ಭಾರ್ಯಾऽಪ್ಯಾಯಾದ್ವಾರುಣೀನಾಮ ಪೂರ್ವಾ ॥ ೧೦ ॥

ಅ: ಮರಳಿ ವೈಕುಂಠಕ್ಕೆ ತೆರಳಿದ್ದ ಹಿಂದೆ ಬಂದಿದ್ದ ಕೃಷ್ಣನ ದಿವ್ಯಾಯುಧಗಳೇ ಆಗ ಪುನಃ ಇಳಿದು ಬಂದವು. ಹಾಗೆಯೇ ಬಲರಾಮನ ಆಯುಧಗಳೂ ಸಹ. ಹಿಂದೆ ಅವನ ಪತ್ನಿಯಾಗಿದ್ದ ವಾರುಣಿಯೂ[೧] ಸಹ ಆಗಮಿಸಿದಳು.

ಎ: ೧) ಈ ಹಿಂದೆ ಜರಾಸಂಧನೊಡನೆ ಯುದ್ಧ ನಡೆದಾಗ(೧೪/೨೧,೨೨), ಧರೆಗಿಳಿದು ಬಂದಿದ್ದ ಬಲರಾಮಕೃಷ್ಣರ ಮೂಲರೂಪದ ಆಯುಧಗಳೇ ಈಗ ಪುನಃ ಬಂದವು ಎಂದರ್ಥ.

೨) ಮೂಲರೂಪದಲ್ಲಿ ಪತ್ನಿಯಾಗಿದ್ದ ವಾರುಣೀದೇವಿಯೇ ಈಗ ಅದೇ ಮೂಲರೂಪದಿಂದ ಬಲರಾಮನ ಬಳಿಗೆ ಆಗಮಿಸಿದಳು ಎಂಬುದು ಇಲ್ಲಿಯ ವಿಶೇಷಾಂಶ.

---

೧. ಭಾರ್ಯಾऽಪ್ಯಾಗಾದ್ವಾರುಣೀ ನಾಮ ಪೂರ್ವೇತ್ಯತ್ರ ಕಾದಂಬರೀ ವಾರುಣೀ ಮದ್ಯರೂಪೇಣೇತ್ಯರ್ಥಃ । ಕದಂಬರಂ ನೀಲವಸ್ತ್ರಂ ಯಸ್ಯ ರಾಮಸ್ಯ ತಸ್ಯೇಯಂ ಕಾದಂಬರೀ ವಾರುಣೀದೇವೀ । ತಸ್ಯಾಃ ವಾರುಣ್ಯಾಃ ಪ್ರತಿಮಾಪೇಯರೂಪೇತ್ಯುತ್ತರವಾಕ್ಯಾತ್ ॥ – (ತಿ.)

೨. ಕದಂಬಕೋಟರೇ ಜಾತಾ ನಾಮ್ನಾ ಕಾದಂಬರೀತಿ ಸಾ ।
ರೂಪಿಣೀ ವಾರುಣೀ ತತ್ರ ದೇವಾನಾಮಮೃತಾರಿಣೀ ॥
ಕಾದಂಬರೀಮದಕಲಂ ವಿದಿತ್ವಾ ಕೃಷ್ಣಪೂರ್ವಜಮ್ ।
ತಿಸ್ರಸ್ತಿದಶನಾರ್ಯಸ್ತಮುಪತಸ್ಥುಃ ಪ್ರಿಯಂವದಾಃ ॥
ಮದಿರಾ ರೂಪಿಣೀ ಭೂತ್ವಾ ಕಾಂತಿಶ್ಚ ಶಶಿನಃ ಪ್ರಿಯಾ ।
ಶ್ರೀಶ್ಚ ದೇವೀ ವರಿಷ್ಠಾಸ್ತ್ರೀ ಸ್ವಯಮೇವಾಂಬುಜಧ್ವಜಾ ॥
ಸಾಂಜಲಿಪ್ರಗ್ರಹಾ ದೇವೀ ರೌಹಿಣೇಯಮುಪಸ್ಥಿತಾ ।
ವಾರುಣ್ಯಾ ಸಹಿತಂ ವಾಕ್ಯಮುವಾಚ ಮದವಿಕ್ಲವಮ್ ॥
ಬಲಂ ಜಯಸ್ವ ದೈತ್ಯಾನಾಂ ಬಲದೇವ ದಿವೀಶ್ವರ ।
ಅಹಂ ತೇ ದಯಿತಾ ಕಾಂತಾ ವಾರುಣೀ ಸಮುಪಸ್ಥಿತಾ ॥ ... – ಹರಿವಂಶ (೨/೪೧/೧೩-೧೭)

[೧]ಸೈವಾಪರಂ ರೂಪಮಾಸ್ಥಾಯ ಚಾಗಾ-
ಚ್ಛ್ರೀರಿತ್ಯಾಖ್ಯಂ ಸೇಂದಿರಾವೇಶಮಗ್ಯ್ರಮ್ ।
ಕಾಂತಿಶ್ಚಾಗಾತ್ ತಸ್ಯ ಸೋಮಸ್ಯ[೨] ಚಾನ್ಯಾ
ಭಾರ್ಯಾ ದ್ವಯೋಃ ಪೂರ್ವತನಾ ಸುರೂಪಾ ॥ ೧೧ ॥

---

೧. ಸೈವ = ವಾರುಣ್ಯೇವ । ಕಾಂತಿಶ್ಚಾಗಾದಿತ್ಯತ್ರ ತಸ್ಯ = ಬಲರಾಮಸ್ಯ ಕಾಂತಿಶ್ಚ = ಕಾಂತಿಸಂಜ್ಞಾ ಭಾರ್ಯಾ ಚಾಗಾತ್ = ನಾಗಲೋಕಾದಾಗಾತ್ । ಸೋಮಸ್ಯ ಭಾರ್ಯಾ ಕಾಂತಿರನ್ಯಾ ಪತ್ನೀ । ದ್ವಯೋಃ ಕಾಂತ್ಯೋರ್ಮಧ್ಯೇ ಇಯಂ ಕಾಂತಿಃ ಪೂರ್ವತನಾ ಜ್ಯೇಷ್ಠಾ ಸುರೂಪಾ ಚೇತ್ಯನ್ವಯಃ – (ವಾ.)

ಮದಿರಾರೂಪಿಣೀ ಭೂತ್ವಾ ಕಾಂತಿಶ್ಚ ಶಶಿನಃ ಪ್ರಿಯಾ ।
ಶ್ರೀಶ್ಚ ದೇವೀ ವರಿಷ್ಠಾ ಸ್ತ್ರೀ .... ॥ – ಹರಿವಂಶ (೨/೪೧/೧೫)

'ಶ್ರೀಶ್ಚ ದೇವೀ ವರಿಷ್ಠಾ ಸ್ತ್ರೀ ಸ್ವಯಮೇವಾಂಬುಜದ್ಯುಜಾ' ಇತಿ ಹರಿವಂಶೇ ವ್ಯಾಖ್ಯಾತಂ ..... ಕಾಂತಿಶ್ಚ ಶಶಿನಃ ಪ್ರಿಯೇತಿ ಹರಿವಂಶೇ। ಅತ್ರ ರಾಮಭಾರ್ಯೇತಿ ಕಥಮುಕ್ತೇತ್ಯತ ಆಹ ಸೋಮಸ್ಯೇತಿ । ಸೋಮಸ್ಯ ಭಾರ್ಯಾ ಕಾಂತಿರನ್ಯಾ। ರಾಮಭಾರ್ಯಾಯಾಃ ಕಾಂತ್ಯಾ ಭಿನ್ನಾ। ..... ದ್ವಯೋಃ ವಾರುಣೀಕಾಂತ್ಯೋರ್ಮಧ್ಯೇ ಪೂರ್ವತನಾ ಜ್ಯೇಷ್ಠಾ ವಾರುಣೀ ಸುರೂಪಾ ಸುಂದರರೂಪಾ । – (ಜ.)

ಕಾಂತಿಶ್ಚಂದ್ರಭಾರ್ಯೇತಿ ಪ್ರಸಿದ್ಧಿಃ ಅತ್ರ ರಾಮಭಾರ್ಯೇತಿ ಕಥಮುಕ್ತೇತ್ಯತ ಆಹ ಸೋಮಸ್ಯೇತಿ । ಸೋಮಸ್ಯ ಭಾರ್ಯಾ ಕಾಂತಿಃ ಅನ್ಯಾ ರಾಮಭಾರ್ಯಾಯಾಃ ಕಾಂತ್ಯಾ ಭಿನ್ನಾ ದ್ವಯೋರ್ವಾರುಣೀಕಾಂತ್ಯೋರ್ಮಧ್ಯೇ ಪೂರ್ವತನಾ ಜ್ಯೇಷ್ಠಾ ವಾರುಣೀ ಸುರೂಪಾ ಸುಂದರರೂಪಾ ॥ – (ವ.)

ಅತ ಏವ ಹರಿವಂಶೇ —

ಮದಿರಾನಂತರಂ ಕಾಂತಿಃ ಸಂಕರ್ಷಣಮುಪಸ್ಥಿತಾ ।
ಮದೇನಾಕುಲಿತಶ್ರೋಣೀ ಕಿಂಚಿದಾಘೂರ್ಣಿತೇಕ್ಷಣಾ ।
ಪ್ರೋವಾಚ ಪ್ರಣತಾ ಕಾಂತಿಃ ಸಂಕರ್ಷಣಮುಪಸ್ಥಿತಾ ।
ಜಯಪೂರ್ವೇಣ ಯೋಗೇನ ಸಸ್ಮಿತಂ ವಕ್ತುಮಿಚ್ಛತಾಮ್ ।
ಅಹಂ ಚಂದ್ರಾದಪಿ ಗುರುಂ ಸಹಸ್ರಶಿರಸಂ ಪ್ರಭುಮ್ ।
ಸ್ವೈರ್ಗುಣೈರುಪಗಚ್ಛೇ ತ್ವಾಂ ಯಥೈವ ಮದಿರಾ ತಥಾ ॥ ಇತ್ಯಾದಿನಾ ।

ಕಾಂತಿರಾಗತ್ಯಾಹಂ ಸೋಮಸ್ತ್ರೀ ತವ ಮಮ ಚ ಪೂರ್ವಯೋಗಶ್ಚ ವರ್ತತೇ । ಮಾನುಷೋಽಪಿ ಭವಾನ್ ಚಂದ್ರಾದಪಿ ಗುಣಾಢ್ಯ ಅತ ಸ್ವಾಮುಪಗಚ್ಛೇ ಇತ್ಯುಕ್ತಮುಪಪನ್ನಮಿತಿ ಜ್ಞೇಯಮ್ । ಕೇಚಿತ್ ತಸ್ಯ ರಾಮಸ್ಯ ಭಾರ್ಯಾ ಕಾಂತಿರಾಗಾತ್ । ನನು ಕಾಂತೇಃ ಸೋಮಸ್ತ್ರೀತ್ವಾದಿದಮಪ್ಯುಕ್ತಮಿತ್ಯತ ಆಹ – ಸೋಮಸ್ಯ ಚೇತಿ । ಸೋಮಸ್ಯ ಭಾರ್ಯಾ ಕಾಂತಿರನ್ಯಾऽತೋ ನ ವಿರೋಧಃ । ದ್ವಯೋಃ ಕಾಂತಿವಾರುಣ್ಯೋರ್ಮಧ್ಯೇ ಪೂರ್ವತನಾ ವಾರುಣೀರೂಪೇತ್ಯರ್ಥಮಾಹುಃ । ಅನ್ಯೇ ತು ದ್ವಯೋಃ ಕಾಂತ್ಯೋರ್ಮಧ್ಯೇ ಇಯಂ ಕಾಂತಿಃ ಪೂರ್ವತನಾ ಗುಣಜ್ಯೇಷ್ಠಾ ಸುರೂಪತ್ವಾದಿತ್ಯಾಹುಃ । ಕಾದಂಬರೀಂ ಕದಂಬಕೋಟರೇ ಜಾತಾಮ್ । ತದುಕ್ತಂ ಹರಿವಂಶೇ – 'ಕದಂಬಕೋಟರೇ ಜಾತಾ ನಾಮ್ನಾ ಕಾದಂಬರೀತಿ ಸಾ' ಇತಿ ॥ – (ತಾ.)

೨. ನೇಯಂ ಸೋಮಸ್ಯ ಭಾರ್ಯಾ ಕಾಂತಿರಿತಿ ಭ್ರಮಿತವ್ಯಮಿತ್ಯಾಹ ಸೋಮಸ್ಯೇತಿ । ಸೋಮಸ್ಯ ಭಾರ್ಯಾ ಕಾಂತಿರನ್ಯಾ । ಬಲಭದ್ರಭಾರ್ಯಾ ಕಾಂತಿರ್ಭಿನ್ನಾ। – (ವ.)

ಅ: ಅವಳೇ ಮಹಾಲಕ್ಷ್ಮಿಯ ಆವೇಶದಿಂದ ಕೂಡಿದ ಶ್ರೇಷ್ಠವಾದ ಶ್ರೀ ಎಂಬ ಹೆಸರಿನ ಮತ್ತೊಂದು ರೂಪದಿಂದಲೂ ಅಲ್ಲಿಗೆ ಬಂದಳು. ಕಾಂತಿ ಎಂಬ ಅವನ ಮತ್ತೊಬ್ಬಪತ್ನಿಯೂ ಅಲ್ಲಿಗೆ ಆಗಮಿಸಿದಳು. ಇನ್ನೊಬ್ಬ ಕಾಂತಿ ಸೋಮನ ಪತ್ನಿ. ಅವರಿಬ್ಬರಲ್ಲಿ ಶೇಷಪತ್ನಿಯಾದ ಕಾಂತಿ ಹೆಚ್ಚು ಸೌಂದರ್ಯವತಿ.

ವಿ: ೧) ಇದು ಹರಿವಂಶದಲ್ಲಿನ

'ಶ್ರೀಶ್ಚ ಪದ್ಮಾಲಯಾ ದೇವೀ ನಿಧೇಯಾ ವೈಷ್ಣವೋರಸಿ ।
ರೌಹಿಣೇಯೋರಸಿ ಶುಭಾ ಮಾಲೇವಾಮಲತಾಂ ಗತಾ ॥ – (೨/೪೧/೨೮)

ಎಂಬ ವಾಕ್ಯದಲ್ಲಿನ 'ಶ್ರೀಃ' ಎಂಬ ಪದಕ್ಕೆ ವಿವರಣೆ. ಮೇಲ್ನೋಟಕ್ಕೆ ಹರಿವಂಶದಲ್ಲಿ ಸಾಕ್ಷಾತ್ ಶ್ರೀದೇವಿಯೇ ಬಲರಾಮನ ಬಳಿ ಆಗಮಿಸಿದಳು ಎಂಬಂತೆ ತೋರುತ್ತದೆ. ಅದಕ್ಕೆ ಇಲ್ಲಿಯ ಶ್ರೀಯು ಸಾಕ್ಷಾತ್ ಮಹಾಲಕ್ಷ್ಮಿಯಲ್ಲ; ರಮಾವೇಶದಿಂದ ಕೂಡಿದ ಶ್ರೀ ಎಂಬ ಶೇಷಪತ್ನಿ ವಾರುಣಿಯ ಮತ್ತೊಂದು ರೂಪ ಎಂದು ತಿಳಿಯಬೇಕು ಎಂದರ್ಥ.

೨) ಅದರಂತೆ ಅಲ್ಲಿ ಕಾಂತಿ ಎಂಬ ಮತ್ತೊಬ್ಬ ಶೇಷಪತ್ನಿಯೂ ಆಗಮಿಸಿದಳು. ಅವಳು ವಾರುಣಿಗಿಂತ ಬೇರೆ. ಅದರಂತೆ ಕಾಂತಿ ಎಂಬ ಚಂದ್ರಪತ್ನಿಗಿಂತಲೂ ಬೇರೆಯಾದವಳು. ಶೇಷಪತ್ನಿ ಕಾಂತಿ ಚಂದ್ರಪತ್ನಿ ಕಾಂತಿಗಿಂತ ಹೆಚ್ಚು ಸುಂದರಿ; ಆದ್ದರಿಂದಲೇ ಅವಳಿಗಿಂತ ಶ್ರೇಷ್ಠಳು ಎಂಬುದು ವಿಶೇಷ.

೩) ಶೇಷಪತ್ನಿ ಕಾಂತಿಯೊಂದಿಗೆ ಚಂದ್ರಪತ್ನಿ ಕಾಂತಿಯೂ ಅಲ್ಲಿಗೆ ಆಗಮಿಸಿದಳು ಎಂಬ ವಿವರ ವರದರಾಜೀಯದಲ್ಲಿದೆ.

ತಾಭೀ[೧] ರಾಮೋ ಮುಮುದೇ ತತ್ರ ತಿಷ್ಠನ್
ಶಶಾಂಕಪೂಗೋದ್ರಿಕ್ತಕಾಂತಿಃ ಸುಧಾಮಾ ।
ತಸ್ಯಾ[೨] ವಾರುಣ್ಯಾಃ ಪ್ರತಿಮಾ ಪೇಯರೂಪಾ
ಕಾದಂಬರೀ ವಾರುಣೀ ತಾಂ ಪಪೌ ಸಃ ॥ ೧೨ ॥

ಅ: ಅವರೊಂದಿಗೆ ಬಲರಾಮನು ಅಲ್ಲಿದ್ದು ಕ್ರೀಡಿಸಿದ. ಅವನದು ಚಂದ್ರರ ಗುಂಪಿಗಿಂತಲೂ ಮಿಗಿಲಾದ ಕಾಂತಿ. ವಾರುಣಿಯ ಪ್ರತೀಕ ಪೇಯರೂಪವಾದ ಕಾದಂಬರೀ. ಬಲರಾಮ ಅದನ್ನು ಪಾನ ಮಾಡಿದ.

---

೧. ತಾಭಿಃ = ವಾರುಣೀಶ್ರೀಕಾಂತಿಭಿಃ ರಾಮೋ ಮುಮುದೇ । ತಸ್ಯಾಃ ವಾರುಣ್ಯಾಃ ಪ್ರತಿಮಾ = ಅಭಿಮನ್ಯ-ಮಾನತ್ವೇನ ದೇಹಸಮಾ ಕಾದಂಬರೀ = ಕದಂಬಕುಸುಮೋತ್ಪನ್ನತ್ವಾತ್ ಕಾದಂಬರೀ ಪೇಯರೂಪಾ ವಾರುಣೀ ಗೋಮಂತಶಿಖರಸ್ಥಕದಂಬವೃಕ್ಷಕೋಟರಾತ್ ಸುಸ್ರಾವ । ತಾಂ ಸಃ = ಬಲರಾಮಃ ಪಪೌ ॥ – (ವಾ.)

ವಿ: ಬಲರಾಮ ಅವರೊಂದಿಗೆ ವಿಹರಿಸುತ್ತಾ ವಾರುಣಿಯಿಂದ ಅಭಿಮನ್ಯಮಾನವಾದ ಕಾದಂಬರೀ ಎಂಬ ಮದ್ಯವನ್ನು ಪಾನ ಮಾಡಿದ. ಅದು ನಿಷಿದ್ಧಮದ್ಯವಾಗಿರದೆ, ಪಾನ ಮಾಡಬಹುದಾದ ಮದ್ಯವಾಗಿತ್ತು ಎಂಬುದು ವಿಶೇಷ. ಅದು ಸಮುದ್ರದಿಂದ ಉತ್ಪನ್ನವಾದ್ದರಿಂದ ವರುಣನ ಪುತ್ರಿ ಎನ್ನಿಸಿ, ವಾರುಣೀ ಎನ್ನಿಸಿತ್ತು.

ಜರಾಸಂಧನಿಂದ ಗೋಮಂತಕ್ಕೆ ಅಗ್ನಿಸ್ಪರ್ಶ

ಏವಂ ತಯೋಃ ಕ್ರೀಡತೋಃ ಸ್ವೈರಮತ್ರ
ರಾಜನ್ಯವೃಂದಾನುಗತೋ ಜರಾಸುತಃ ।
ಗಿರಿಂ ಗೋಮಂತಂ ಪರಿವಾರ್ಯಾದಹತ್ ತಂ
ದೃಷ್ಟ್ವಾ ದೇವೌ ಪುಪ್ಲುವತುರ್ಬಲಾಢ್ಯೌ ॥ ೧೩ ॥

ಅ: ಹೀಗೆ ಅವರಿಬ್ಬರೂ ಸ್ವೇಚ್ಛೆಯಾಗಿ ಕ್ರೀಡಿಸುತ್ತಿದ್ದಂತೆ, ರಾಜವೃಂದದಿಂದ ಒಡಗೂಡಿದ ಜರಾಸಂಧ ಗೋಮಂತಪರ್ವತವನ್ನು ಸುತ್ತುವರಿದು, ಅದಕ್ಕೆ ಬೆಂಕಿ ಇಟ್ಟ. ಅದನ್ನು ನೋಡಿ, ಬಲಾಢ್ಯರಾದ ಶ್ರೀಕೃಷ್ಣರಾಮರು ಬೆಟ್ಟವನ್ನು ಒತ್ತಿ ಮೇಲಕ್ಕೆ ನೆಗೆದರು.

---

೨. ತಸ್ಯಾಃ ಪೂರ್ವೋಕ್ತಾಯಾ ವಾರುಣ್ಯಾಃ ಪ್ರತಿಮಾ ಅಭಿಮನ್ಯಮಾನಸ್ವರೂಪಾ ಪೇಯರೂಪಾ ಪಾನಯೋಗ್ಯಮದ್ಯಸ್ವರೂಪಾ ಯಾ ಕಾದಂಬರೀ ಕದಂಬಕೋಟರಾದುತ್ಪನ್ನಾ ತಾಂ ವಾರುಣೀಂ ಸಮುದ್ರೋತ್ಪನ್ನತ್ವಾದ್ ವಾರುಣೀನಾಮ್ನೀಂ ವರುಣಾತ್ಮಜಾಮಿತ್ಯರ್ಥಃ। ಶೇಷಭಾರ್ಯಾಯಾ ವಾರುಣ್ಯಾ ಅಭಿಮನ್ಯಮಾನತ್ವಾತ್ ವಾರುಣೀನಾಮ್ನೀಂ ಕಾದಂಬರೀಂ ಪಪಾವಿತಿ ಯೋಜನಾ।

ಕದಂಬಕೋಟಿರಾಜ್ಞಾತಾ ನಾಮ್ನಾ ಕಾದಂಬರೀ ಸಾ।
ವಾರುಣೀ ರೂಪಿಣೀ ತತ್ರ ದೇವಾನಾಮಮೃತಾರಣೀ॥ - ಇತಿ ಹರಿವಂಶೇ
ಸುರಾ ಹಲಿಪ್ರಿಯಾ ಹಾಲಾ ಪರಿಸ್ರುದ್ವರುಣಾತ್ಮಜಾ ।
ಗಂಧೋತ್ತಮಾ ಪ್ರಸನ್ನೇರಾ ಕಾದಂಬರ್ಯಃ ಪರಿಸ್ರುತಾ॥ ಇತ್ಯಮರಃ ।
ಕುತ್ಸಿತಂ ಚ ತದಂಬರಂ ಚ ನೀಲವಸ್ತ್ರಮಿತ್ಯರ್ಥಃ। ತದಸ್ಯಾಸ್ತೀತಿ ಕದಂಬರಃ ।
ತಸ್ಯೇಯಂ ಕಾದಂಬರೀತಿ ಕ್ಷೀರಸ್ವಾಮಿನಾ ವ್ಯಾಖ್ಯಾತಮ್ ॥ – (ಜ.)

ವಾರುಣೀನಾಮ್ನೀಂ ವರುಣಾತ್ಮಜಾಮಿತ್ಯರ್ಥಃ । ಯದ್ವಾ ಶೇಷಭಾರ್ಯಾ ವಾರುಣ್ಯಾ ಽಭಿಮನ್ಯಮಾನತ್ವಾ-ದ್ವಾರುಣೀನಾಮ್ನೀಂ ಕಾದಂಬರೀಂ ಪಪಾವಿತಿ ಯೋಜನಾ । – (ವ.)

೩. ಕುತ್ಸಿತಂ ಚ ತತ್ ಅಂಬರಂ ಚ ನೀಲವಸ್ತ್ರಮಿತ್ಯರ್ಥಃ । ತದಸ್ಯಾಸ್ತೀತಿ ಕಾದಂಬರಃ । ತಸ್ಯೇಯಂ ಕದಾಂಬರೀತಿ ತೃತೀಯಾ ಸಹಾರ್ಥೇ ಕ್ಷೀರಸ್ವಾಮಿನಾ ವ್ಯಾಖ್ಯಾತಮ್ । 'ವಾರುಣೀ ಮದಿರಾ ಜ್ಞೇಯಾ' ಇತ್ಯನೇಕಧ್ವನಿಪದಮಂಜರ್ಯಾಮ್ । – (ಜ.)

ಕುತ್ಸಿತಂ ಚ ತತ್ ಅಂಬರಂ ಚ ನೀಲವಸ್ತ್ರಮಿತ್ಯರ್ಥಃ । ತದಸ್ಯಾಸ್ತೀತಿ ಕದಂಬರಃ । ತಸ್ಯೇಯಂ ಕಾದಂಬರೀತಿ ತೃತೀಯಾ ಸಹಾರ್ಥೇತಿ ಕ್ಷೀರಸ್ವಾಮಿನಾ ವ್ಯಾಖ್ಯಾತಮ್ । – (ವ.)

ವಿಃ ೧) ಆ ವೇಳೆಗೆ ಜರಾಸಂಧ ರಾಜವ್ಯಂದಸಮೇತವಾಗಿ ಅಲ್ಲಿಗೆ ಆಗಮಿಸಿ, ಶ್ರೀಕೃಷ್ಣರಾಮರಿಬ್ಬರೂ ಬೆಟ್ಟದಲ್ಲಿದ್ದುದನ್ನು ಕಂಡು, ಅವರಿಬ್ಬರನ್ನು ಸಜೀವವಾಗಿ ಸುಡುವ ಉಪಾಯವಾಗಿ ಇಡೀ ಬೆಟ್ಟಕ್ಕೇ ಬೆಂಕಿಯಿಟ್ಟ.

೨) ಆದರೆ ಶ್ರೀಕೃಷ್ಣರಾಮರು ಆ ಬೆಟ್ಟವನ್ನು ಒತ್ತಿ ಮೇಲಕ್ಕೆ ಹಾರಿದರು. ಈ ರೀತಿ ಬೆಟ್ಟವನ್ನು ಒತ್ತಿ ಮೇಲಕ್ಕೆ ಹಾರಿದ ಹಿರಿಮೆ ತೋರಿದ ವ್ಯಕ್ತಿತ್ವ ರಾಮಾಯಣದಲ್ಲಿ ಹನುಮಂತನದು. ಆತ ಜೀವೋತ್ತಮನಾದರೆ, ಇಲ್ಲಿ ಹೀಗೆ ಮಾಡಿದ್ದು ಸರ್ವೋತ್ತಮನಾದ ಕೃಷ್ಣ ಹಾಗೂ ಆತನ ವಿಶೇಷಾವೇಶವಿದ್ದ ಬಲರಾಮ.

೩) ಶ್ರೀಕೃಷ್ಣ ಗೋವರ್ಧನಪ್ರಸಂಗದಲ್ಲಿ ತಾನು ಬೆಟ್ಟವನ್ನು ಮೇಲಕ್ಕೆ ಎತ್ತಬಲ್ಲವನೆಂದು ತೋರಿಸಿದ್ದರೆ, ಗೋಮಂತಕವನ್ನು ಒತ್ತಿ ತಾನು ಬೆಟ್ಟವನ್ನು ಕೆಳಕ್ಕೆ ತುಳಿಯಬಲ್ಲವನು ಎಂಬುದನ್ನೂ ತೋರಿಸಿದ.

ಅಪೂರ್ವರೀತಿಯಲ್ಲಿ ಅಗ್ನಿಯ ಉಪಶಮನ

ಗಿರಿಸ್ತಾಭ್ಯಾಂ ಪೀಡಿತಃ ಸನ್ ನಿಮಗ್ನೋ
ಭೂಮೌ ಪದ್ಭ್ಯಾಂ ಯೋಜನೈಕಾದಶಂ ಸಃ ।
ನಿಷ್ಪೀಡಿತಾಜ್ಜಲಧಾರೋದ್ಗತಾಽಸ್ಮಾ-
ದ್ವಹ್ನಿಂ ವ್ಯಾಪ್ತಂ ಶಮಯಾಮಾಸ ಸರ್ವಮ್ ॥ ೧೪ ॥

ಅ: ಬೆಟ್ಟ ಅವರಿಬ್ಬರ ಪಾದಗಳ ತುಳಿತದಿಂದಾಗಿ ಭೂಮಿಯಲ್ಲಿ ಹನ್ನೊಂದು ಯೋಜನ-ಗಳಷ್ಟು ಕುಸಿಯಿತು. ಬೆಟ್ಟದ ಘರ್ಷಣೆಯಿಂದಾಗಿ ಜಲಧಾರೆ ಅದರಿಂದ ಮೇಲುಕ್ಕಿ ಎಲ್ಲೆಡೆ ಹರಡಿದ್ದ ಬೆಂಕಿಯನ್ನೆಲ್ಲ ಆರಿಸಿಬಿಟ್ಟಿತು.

ವಿಃ ೧) ಗೋವರ್ಧನವನ್ನು ಜಲಧಾರೆಯಿಂದ ತಡೆದಿದ್ದರೆ, ಗೋಮಂತದಿಂದ ಜಲಧಾರೆಯನ್ನು ಉಕ್ಕಿಸಿದ್ದು ಶ್ರೀಕೃಷ್ಣನ ಹಿರಿಮೆಯ ಮತ್ತೊಂದು ಮುಖ. ಭೂಮಿಯನ್ನು ಹೀಗೆ ಕೊರೆದಾಗ, ನೀರು ಮೇಲುಕ್ಕುವುದು ಕೊಳವೆ ಬಾವಿಗಳಲ್ಲಿ ಕಂಡಿದೆ. ಬೆಟ್ಟವನ್ನೇ ಕೊರೆತಕ್ಕೆ ಉಪಯೋಗಿಸಿದ್ದು ಕೃಷ್ಣನ ಹಿರಿಮೆ.

೨) ಬೆಟ್ಟದ ಬೆಂಕಿ ಶ್ರೀಕೃಷ್ಣರಾಮರನ್ನು ದಹಿಸೀತು ಎಂದು ಜರಾಸಂಧ ಊಹಿಸಿದ್ದರೆ, ಬೆಟ್ಟದ ಬೆಂಕಿ ಅವರಿಬ್ಬರಿಂದಲೇ ಆರಿತು ಎಂಬುದು ದೊಡ್ಡ ವಿಪರ್ಯಾಸವಾಯಿತು. ದುಷ್ಟರ ಬಯಕೆಗಳನ್ನು ಹೀಗೆ ವೋಫಗೊಳಿಸುವುದು ಭಗವಂತನ ಹಿರಿಮೆ (‘ವೋಫಾಶಾ ವೋಫಕರ್ಮಾಣಃ....’).

೩) ಹೀಗೆ ಬೆಟ್ಟದ ಬೆಂಕಿಯನ್ನು ನಂದಿಸುವ ಮೂಲಕ ಕೃಷ್ಣ ಪರಿಸರರಕ್ಷಣೆಯ ಮುಖವನ್ನೂ ತೋರಿಸಿದ ಎಂದು ತಿಳಿಯಬಹುದು. ತದ್ವಿರುದ್ಧವಾಗಿ ಜರಾಸಂಧ ಬೆಟ್ಟಕ್ಕೆ ಬೆಂಕಿಯಿಡುವ ಮೂಲಕ ಪರಿಸರನಾಶ ಮಾಡುವ ಮಹಾಪಾತಕಿ ಎಂಬುದು ಸೂಚಿತ.

೪) ಹನುಮಂತನಿಟ್ಟ ಬೆಂಕಿಯನ್ನು ರಾವಣಾದಿಗಳಿಗೆ ನಂದಿಸಲು ಸಾಧ್ಯವಾಗಲಿಲ್ಲ. ಅದಕ್ಕೆ ಅದು ಹನುಮಂತನ ಬಾಲದ ಬೆಂಕಿಯಾಗಿದ್ದೇ ಕಾರಣ. ಆದರೆ ಜರಾಸಂಧನಿಟ್ಟ ಬೆಂಕಿಯನ್ನು ಕೃಷ್ಣರಾಮರು ಆರಿಸಿಬಿಟ್ಟರು. ಇದು ಜರಾಸಂಧನಿಟ್ಟ ಸಾಮಾನ್ಯಬೆಂಕಿಯಲ್ಲವೆ!

೫) ನೀರಿನಿಂದ ಬೆಂಕಿಯನ್ನು ಆರಿಸುವ ಮೂಲಕ ಅದು ಬೆಂಕಿಯಿಂದ ಹುಟ್ಟಿದ್ದು ಎಂಬುದನ್ನು ಸಹ ಸೂಚಿಸಿದ ಎಂದೂ ತಿಳಿಯಬೇಕು ('ಅಗ್ನೇರಾಪಃ').

೬) ಮಾರ್ಗಮಧ್ಯದಲ್ಲಿ ಅಗ್ನ್ಯಂತರ್ಗತವಾದ ತನ್ನ ಪರಶುರಾಮರೂಪವನ್ನು ಸಂದರ್ಶಿಸಿ ಶ್ರೀಕೃಷ್ಣ ತನಗೆ ಅಗ್ನಿಯ ಭಯ ಎಲ್ಲಿಯದು! ಎಂಬುದನ್ನು ಆ ಮೂಲಕ ಸೂಚಿಸಿದನು ಎಂದೂ ತಿಳಿಯಬಹುದು.

ಕೃಷ್ಣನಿಂದ ಹಂಸಡಿಬಿಕಾದಿಸಕಲದೈತ್ಯರುಗಳ ಪರಾಭವ

ಸೇನಾಂ ಪ್ರವಿಷ್ಟೌ ಸರ್ವರಾಜನ್ಯವೃಂದಂ
ವ್ಯಮಥ್ನಾತಾಂ ದೇವವರೌ ಸ್ವಶಸ್ತ್ರೈಃ ।
ತತ್ರೈವ ಹಂಸೋ ಡಿಭಕಶ್ಚೈಕಲವ್ಯಃ
ಸಕೀಚಕಸ್ತೌ ಶಿಶುಪಾಲಪೌಂಡ್ರಕೌ ॥ ೧೫ ॥

ಭೌಮಾತ್ಮಜೋ ದಂತವಕ್ರಶ್ಚ ರುಗ್ಮೀ
ಸೌಭಾಧಿಪೋ ಮೈಂದಮೈಂದಾನುಜೌ ಚ ।
ಅನ್ಯೇ ಚ ಯೇ ಪಾರ್ಥಿವಾಃ ಸರ್ವ ಏವ
ಕ್ರೋಧಾತ್ ಕೃಷ್ಣಂ ಪರಿವಾರ್ಯಾಭ್ಯವರ್ಷನ್ ॥ ೧೬ ॥

ಅ: ಸೇನೆಯೊಳಗೆ ನುಗ್ಗಿದ ದೇವಶ್ರೇಷ್ಠರಾದ ಕೃಷ್ಣರಾಮರು ತಮ್ಮ ಶಸ್ತ್ರಗಳಿಂದ ಸಕಲ ಕ್ಷತ್ರಿಯವೃಂದವನ್ನು ನಾಶಗೈದರು. ಅಲ್ಲಿಯೇ ಹಂಸ, ಡಿಬಿಕ ಹಾಗೂ ಕೀಚಕನೊಂದಿಗೆ ಏಕಲವ್ಯ, ಆ ಶಿಶುಪಾಲ, ಪೌಂಡ್ರಕವಾಸುದೇವ, ನರಕಾಸುರನ ಮಗನಾದ ಭಗದತ್ತ, ದಂತವಕ್ರ, ರುಗ್ಮಿ, ಸೌಭರಾಜನಾದ ಸಾಲ್ವ, ಮೈಂದ ಹಾಗೂ ಅವನ ತಮ್ಮನಾದ ವಿವಿದ

ಹಾಗೂ ಇತರ ಎಲ್ಲ ರಾಜರುಗಳು ಕೋಪದಿಂದ ಕೃಷ್ಣನನ್ನು ಸುತ್ತುವರೆದು, ಬಾಣಗಳ ಮಳೆಗರೆದರು.

ವಿ: ಹಾಗೆ ಪರ್ವತದಿಂದ ಹಾರಿದ ಕೃಷ್ಣರಾಮರು ಜರಾಸಂಧನ ಸೇನೆಯೊಳಗೆ ನುಗ್ಗಿ ಅದನ್ನು ಸದೆಬಡಿಯತೊಡಗಿದರು. ಅದಕ್ಕೆ ಪ್ರತಿಯಾಗಿ ಹಂಸಡಿಬಿಕಾದಿ ರಾಜವೃಂದ ಕೃಷ್ಣರಾಮರ ಮೇಲೆ ಬಾಣಗಳ ಮಳೆಗರೆಯಿತು. ಈ ರಾಜರುಗಳಲ್ಲಿ ಹಂಸಡಿಬಿಕಾದಿಗಳು ಅಸುರರು. ಶಿಶುಪಾಲ ದಂತವಕ್ರರು ಜಯವಿಜಯರಿಂದ ಆವಿಷ್ಟರು. ಮೈಂದವಿವಿದರು ಮಾತ್ರ ಅಶ್ವಿನೀದೇವತೆಗಳ ಅವತಾರರಾಗಿದ್ದರೂ, ಅಸುರಾವೇಶದಿಂದಾಗಿ ಜರಾಸಂಧನ ಪಕ್ಷ ಸೇರಿದ್ದರು.

ದ್ರುಪದಾದಿಸಾತ್ವಿಕರಾಜರ ಪರಾಭವ

ಶಸ್ತ್ರೈರಸ್ತ್ರೈರ್ದ್ರುಮಪೂಗೈಃ ಶಿಲಾ-
ಭಿರ್ಭಕ್ತಾಶ್ಚ ಯೇ ಶಲ್ಯಬಾಹ್ಲೀಕಮುಖ್ಯಾಃ ।
ಸಸೋಮದತ್ತಃ ಸೌಮದತ್ತಿರ್ವಿರಾಟಃ
ಪಾಂಚಾಲರಾಜಶ್ಚ ಜರಾಸುತಸ್ಯ ।
[೧]ಭಯಾತ್ ಕೃಷ್ಣಂ ಶರವರ್ಷೈರವರ್ಷನ್
[೨]ಕಾರಾಗೃಹೇ ವಾಸಿತಾ ಮಾಗಧೇನ ॥ ೧೭ ॥

ಅ: ಮೂಲತಃ ಭಗವದ್ಭಕ್ತರೇ ಆಗಿದ್ದರೂ, ಜರಾಸಂಧನಿಂದ ಸೆರೆಮನೆಯಲ್ಲಿರಿಸಲ್ಪಟ್ಟಿದ್ದ ಶಲ್ಯ, ಬಾಹ್ಲೀಕ, ಸೋಮದತ್ತ, ಭೂರಿಶ್ರವಸ್ಸು, ವಿರಾಟ, ಪಾಂಚಾಲರಾಜನಾದ ದ್ರುಪದ ಇವರೆಲ್ಲ ಜರಾಸಂಧನ ಭಯದಿಂದಾಗಿ ಕೃಷ್ಣನ ಮೇಲೆ ಶಸ್ತ್ರಗಳ, ಅಸ್ತ್ರಗಳ, ವೃಕ್ಷಸಮೂಹಗಳ, ಬಂಡೆಗಳ ಮತ್ತು ಬಾಣಗಳ ಸುರಿಮಳೆ ಮಾಡಿದರು.

ವಿ: ೧) ಈ ಶ್ಲೋಕದಲ್ಲಿ ಕೃಷ್ಣಭಕ್ತರಾದ ಶಲ್ಯಬಾಹ್ಲೀಕಾದಿಗಳು ಕೃಷ್ಣನ ವಿರುದ್ಧ ಹೋರಾಡಿದ್ದನ್ನು ನಿರೂಪಿಸಿರುವರು. ಆದರೆ ಇವರಾರೂ ಕೃಷ್ಣನ ವಿರುದ್ಧ ದ್ವೇಷದಿಂದ ಹೋರಾಡಿದವರಲ್ಲ; ಅವರು ಹಾಗೆ ಕಾದಿದ್ದು ಜರಾಸಂಧನ ಭಯದಿಂದಾಗಿ ಮಾತ್ರ. ಅದರಿಂದಾಗಿ ಅವರಿಗೆ ಏಕಲವ್ಯ ಮೊದಲಾದವರಿಗೆ ಒದಗಿದಂತೆ ಮಹಾಪಾತಕ ಒದಗಲಿಲ್ಲ.

---

೧. ನತು ಕ್ರೋಧಾದಿತಿ ಭಾವಃ । – (ಜ.)
ಭಯಾತ್ ಅವರ್ಷನ್ । ನ ತು ಕ್ರೋಧಾದಿತಿ ಭಾವಃ । – (ವ.)

೨. ''ಅಯುತೇ ದ್ವೇ ಗಿರಿದ್ರೋಣ್ಯಾಮ್'' ಇತಿ ವಚನಾತ್ ಕಾರಾಗೃಹೇ ಮಾಗಧೇನ ವಾಸಿತಾ ಯೇ ನೃಪಾಃ ತೇ ಚ ಶಸ್ತ್ರವರ್ಷೈಃ ಕೃಷ್ಣಮವರ್ಷನ್ನಿತ್ಯನ್ವಯಃ ॥ – (ವಾ.)

೨) ಜರಾಸಂಧನಿಗೆ ಅವರೆಲ್ಲ ಹಾಗೆ ಭಯಗೊಳ್ಳಲು ಅವನಿಗಿದ್ದ ಬ್ರಹ್ಮ, ಶಿವ, ದುರ್ವಾಸ ಹಾಗೂ ಚಂಡಕೌಶಿಕರ ವರಗಳು ಕಾರಣವಾಗಿದ್ದವು ಎಂದು ತಿಳಿಯಬೇಕು.

೩) ಭೀಷ್ಮಾದಿಗಳು ದುರ್ಯೋಧನನ ವಶರಾಗಿ ಪಾಂಡವರ ವಿರುದ್ಧ ಕಾದಿದಂತೆ ಶಲ್ಯಾದಿಗಳು ಜರಾಸಂಧನ ವಶರಾಗಿ ಕಾದಿದರು ಎಂದು ತಿಳಿಯಬೇಕು.

ಸರ್ವಾನೇತಾನ್ ಶರವರ್ಷೇಣ ಕೃಷ್ಣೋ
ವಿಸೂತವಾಜಿಧ್ವಜಶಸ್ತ್ರವರ್ಮಣಃ ।
ಕೃತ್ವಾ ವಮಚ್ಛೋಣಿತಾನಾರ್ತರೂಪಾನ್
ವಿದ್ರಾವಯಾಮಾಸ ಹರಿರ್ಯಥಾ ಮೃಗಾನ್ ॥ ೧೮ ॥

ಅ: ಅವರೆಲ್ಲರನ್ನು ಬಾಣಗಳ ಮಳೆಯಿಂದ ಶ್ರೀಕೃಷ್ಣ ಸಾರಥಿ, ಕುದುರೆ, ಪತಾಕೆ, ಶಸ್ತ್ರ ಕವಚಗಳಿಂದ ರಹಿತರನ್ನಾಗಿ ಮಾಡಿದ. ರಕ್ತ ಕಾರುತ್ತಾ ನೋವಿನಿಂದ ನರಳುವಂತೆ ಮಾಡಿ, ಮೃಗಗಳನ್ನು ಸಿಂಹ ಓಡಿಸುವಂತೆ ಓಡಿಸಿದ.

ವಿ: ೧) ಶರವೃಷ್ಟಿಗೈದ ಅವರ ಮೇಲೆ ಕೃಷ್ಣ ಪ್ರತಿಯಾಗಿ ತಾನೂ ಶರವೃಷ್ಟಿಯನ್ನೇ ಮಾಡಿ, ಅವರೆಲ್ಲರ ಸಾರಥಿ, ಕುದುರೆ, ಧ್ವಜ, ಕವಚಗಳನ್ನು ತುಂಡರಿಸಿ, ರಕ್ತ ಕಾರುವಂತೆ ಹೊಡೆದಟ್ಟಿದ. ಸಿಂಹ ಜಿಂಕೆಗಳನ್ನು ಓಡಿಸುವಂತೆ ನರಸಿಂಹನಾದ ಶ್ರೀಕೃಷ್ಣ ಮೃಗಗಳಂತೆ ಜೀವಿಸಿದ್ದ ಅವರನ್ನು ಹೊಡೆದೋಡಿಸಿದ ಎಂಬ ಇಲ್ಲಿಯ ಭಾವ ತುಂಬಾ ರೋಚಕವಾದುದು. 'ಹರಿಃ' ಎಂಬ ಇಲ್ಲಿಯ ಪದ ಕೃಷ್ಣನಿಗೂ, ಸಿಂಹಕ್ಕೂ ಒಟ್ಟಾಗಿಯೇ ಅನ್ವಯಿಸುತ್ತಾ ಶ್ಲೇಷಾಲಂಕಾರವಾಗಿರುವುದನ್ನು ಗಮನಿಸಬೇಕು. ಪಾಪಹರನಾದ ಹರಿ ಪಾಪಿನಾಶಕನಾದದ್ದರಲ್ಲಿ ಆಶ್ಚರ್ಯವೇನು?

೨) ಕೃಷ್ಣನ ಈ ಕಾರ್ಯ ಗೀತೆಯಲ್ಲಿ ತಾನೇ ಹೇಳಿರುವಂತೆ, ಅವರಿಗೆ ನೀಡಿದ ಶಿಕ್ಷೆ ಎಂದು ತಿಳಿಯಬೇಕು:

'ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್'

– ಗೀತಾ (೧೬/೧೯) ಇತ್ಯಾದಿ

ಹತ್ವಾ ಸೇನಾಂ ವಿಂಶದಕ್ಷೌಹಿಣೀಂ ತಾಂ
ತ್ರಿಭಿರ್ಯುಕ್ತಾಂ [೧]ರುಗ್ಣಿಣಂ ನೈವ ಕೃಷ್ಣಃ ।
[೧] ರುಗ್ಣಿಣ್ಯರ್ಥೇ ಪೀಡಯಾಮಾಸ ಶಸ್ತ್ರ-
ಣ್ಯಸ್ಯ ಛಿತ್ವಾ ವಿರಥಂ ದ್ರಾವಯಾನಃ ॥ ೧೯ ॥

ಅ: ಇಪ್ಪತ್ತಮೂರು ಅಕ್ಷೋಹಿಣೀಸೇನೆಯನ್ನು ಸಂಹರಿಸಿದ ಕೃಷ್ಣ ರುಗ್ಮಿಯನ್ನು ಮಾತ್ರ ರುಗ್ಮಿಣಿಗೋಸ್ಕರವಾಗಿ ಹೆಚ್ಚಾಗಿ [೧]ಪೀಡಿಸಲಿಲ್ಲ. ಅವನ ಶಸ್ತ್ರಗಳನ್ನು ತುಂಡರಿಸಿ, ವಿರಥನನ್ನಾಗಿ ಮಾಡಿ, ಓಡಿಸಿಬಿಟ್ಟ.

ವಿ: ೧) ಜರಾಸಂಧನೊಂದಿಗೆ ಬಂದಿದ್ದ ಸಮಸ್ತಸೇನೆಯನ್ನೂ ಶ್ರೀಕೃಷ್ಣ ಸಂಹರಿಸಿದ. ಶಿಶು–ಪಾಲಾದಿಗಳನ್ನು ಬಹಳವಾಗಿ ಪೀಡಿಸಿ ಓಡಿಸಿದ. ಆದರೆ ರುಗ್ಮಿಯನ್ನು ಮಾತ್ರ ಅಷ್ಟಾಗಿ ಪೀಡಿಸದೆ ಓಡಿಸಿದ. ಇತರರಂತೆ ರಕ್ತಕಾರುವಷ್ಟು ಭಾರಿಪೆಟ್ಟನ್ನು ನೀಡಲಿಲ್ಲ ಎಂದರ್ಥ.

೨) ರುಗ್ಮಿಣಿಗೋಸ್ಕರ ಎಂದರೆ, ಮುಂದೆ ರುಗ್ಮಿಣಿಯನ್ನು ವಿವಾಹವಾಗಲಿಕ್ಕೋಸ್ಕರ ಎಂದರ್ಥ. ಎಂದರೆ ರುಗ್ಮಿಯನ್ನು ಈಗ ಬಹಳವಾಗಿ ಪೀಡಿಸಿದ್ದಲ್ಲಿ 'ಅದರ ಸೇಡಿಗಾಗಿ ರುಗ್ಮಿ ಕೃಷ್ಣರುಗ್ಮಿಣಿಯರ ವಿವಾಹಕ್ಕೆ ಅಡ್ಡಿ ಮಾಡಿದ. ಇಲ್ಲವಾಗಿದ್ದಲ್ಲಿ ಅವನು ಅಡ್ಡಿ ಮಾಡುತ್ತಿರಲಿಲ್ಲ' ಎಂಬ ಕೆಲವರ ಭ್ರಮೆಯನ್ನು ದೂರಮಾಡಿಕೊಳ್ಳುವುದಕ್ಕೋಸ್ಕರ ಎಂದೂ ಸಹ ಅರ್ಥ ಮಾಡಿಕೊಳ್ಳಬಹುದು. ಕೃಷ್ಣ ಇತರ ಎಲ್ಲರಿಗಿಂತಲೂ ಅವನಿಗೆ ಕಡಿಮೆ ಪೆಟ್ಟನ್ನು ಹಾಕಿದ್ದರೂ, ಕೃಷ್ಣನನ್ನು ದ್ವೇಷಿಸಲು ಅವನ ಅಸುರಸ್ವಭಾವವೇ ಮುಖ್ಯಕಾರಣ ಎಂದು ತೋರಿಸುವುದು ಕೃಷ್ಣನ ಅಭಿಪ್ರಾಯವಾಗಿತ್ತು ಎಂದೂ ತಿಳಿಯಬೇಕು.

ಬಲರಾಮ, ಜರಾಸಂಧರ ಘೋರಸಮರ

ಜರಾಸುತೋ ರೌಹಿಣೇಯೇನ ಯುದ್ಧಂ
ಚಿರಂ ಕೃತ್ವಾ ತನ್ಮುಸಲೇನ ಪೋಥಿತಃ ।
ವಿಮೋಹಿತಃ ಪ್ರಾಪ್ತಸಂಜ್ಞಶ್ಚಿರೇಣ
ಕ್ರುದ್ಧೋ ಗದಾಂ ತದುರಸ್ಯಭ್ಯಪಾತಯತ್ ॥ ೨೦ ॥

ಅ: ಜರಾಸಂಧನು ಬಲರಾಮನೊಂದಿಗೆ ಬಹುಕಾಲ ಯುದ್ಧ ಮಾಡಿ, ಅವನ ಮುಸಲದ ಪೆಟ್ಟಿಗೆ ಮೂರ್ಛಿತನಾದ. ಬಹುಕಾಲದ ಮೇಲೆ ಪ್ರಜ್ಞೆ ಮರಳಿದವನಾದ ಅವನು, ಕ್ರುದ್ಧನಾಗಿ ಬಲರಾಮನ ಎದೆಯ ಮೇಲೆ ತನ್ನ ಗದೆಯನ್ನು ಅಪ್ಪಳಿಸಿದ.

---

೧. ರುಗ್ಮಿಣಂ ನೈವ ಕೃಷ್ಣ ಇತ್ಯತ್ರ ಸೇನಾಂ ಹತ್ವಾऽಪಿ ರುಗ್ಮಿಣಂ ನೈವ ಜಘಾನೇತ್ಯರ್ಥಃ । ಕುತ ಇತ್ಯತೋ ರುಗ್ಮಿಣ್ಯರ್ಥ ಇತಿ । ರುಗ್ಮಿಣೇಂ ಶಿಶುಪಾಲಾಯ ದಾಸ್ಯೇ ನ ಕೃಷ್ಣಾಯೇತಿ ನಿಷೇಧಾರ್ಥಮಿತ್ಯರ್ಥಃ । ಅರ್ಥೋऽಭಿಧೇಯವಸ್ತುಪ್ರಯೋಜನನಿವೃತ್ತಿಷ್ವಿತ್ಯಭಿಧಾನಮ್ । ತತ್ರ ಕಿಂ ಚಕಾರೇತಿ ತತ್ರಾಹ – ಪೀಡಯಾಮಾಸೇತಿ । ಪೀಡಾಪ್ರಕಾರಮೇವಾಹ – ಶಸ್ತ್ರಾಣ್ಯಸ್ಯ ಛಿತ್ವಾ ವಿರಥಂ ಕೃತ್ವಾ ದ್ರಾವಯಾನ ಇತಿ । ಅತ ಏವೋಕ್ತಂ ಸಪ್ತದಶೇ 'ಸರುಗ್ಮಿನಾಮಕೋऽಗ್ರಜಃ ಶ್ರಿಯೋ ದ್ವಿಷನ್ ರಮಾಪತಿಮ್ । ಹರೇಃ ಪ್ರದಾತುಮುದ್ಯತಾಂ ನ್ಯವಾರಯದ್ಧರಿಪ್ರಿಯಾಮ್ ॥' ಇತಿ । ರುಗ್ಮಿಣ್ಯರ್ಥೇ ರುಗ್ಮಿಣ್ಯರ್ಥಮಿತ್ಯಪಿ ವದಂತಿ । ರುಗ್ಮಿಣ್ಯಾಂ ಪ್ರೀತಿರೂಪಪ್ರಯೋಜನಾರ್ಥಮಿತಿ ಭಾವಃ ॥ – (ತಿ.)

ತೇನಾಹತಃ ಸುಭೃಶಂ ರೌಹಿಣೇಯಃ
ಪಪಾತ ಮುರ್ಚ್ಛಾಭಿಗತಃ ಕ್ಷಣೇನ ।
ಅಜೇಯತ್ವಂ ತಸ್ಯ[೧] ದತ್ತಂ ಹಿ ಧಾತ್ರಾ[೨]
ಪೂರ್ವಂ ಗೃಹೀತೋ ವಿಷ್ಣುನಾ ರಾಮಗೇನ ॥ ೨೧ ॥

ಅ: ಅವನಿಂದ ಬಲವಾಗಿ ಹೊಡೆಯಲ್ಪಟ್ಟ ಬಲರಾಮ, ಆ ಕ್ಷಣದಲ್ಲೇ ಮೂರ್ಛಿತನಾಗಿ ಬಿದ್ದನು. ಜರಾಸಂಧನಿಗೆ ಬ್ರಹ್ಮನಿಂದ ಅಜೇಯತ್ವವರ ಲಭಿಸಿದ್ದುದೇ ಅದಕ್ಕೆ ಕಾರಣ. ಹಿಂದೆ ಅವನನ್ನು ಸೆರೆಹಿಡಿದಿದ್ದು ಬಲರಾಮನಲ್ಲಿ ಆವಿಷ್ಟನಾಗಿದ್ದ ವಿಷ್ಣು.

ವಿ: ಬ್ರಹ್ಮನ ವರದಿಂದಾಗಿ ಜರಾಸಂಧನ ಪೆಟ್ಟಿಗೆ ಬಲರಾನ ಮೂರ್ಛಿತನಾಗಿ ಬೀಳುವಂತಾಯಿತು ಎಂದರ್ಥ. ಹಿಂದೆ (೧೪/೩೮) ಬಲರಾಮನಿಗೆ ಜರಾಸಂಧನನ್ನು ಸೆರೆಹಿಡಿಯಲು ಸಾಧ್ಯವಾದ ಪ್ರಸಂಗ ಬಂದಿದೆ. ಅದಕ್ಕೆ ಕಾರಣ ಆಗ ಅವನೊಳಗಿದ್ದ ವಿಷ್ಣುವಿನ ಆವೇಶ ಎಂದು ಭಾವ. ಹಾಗೆ ಬಲರಾಮನಲ್ಲಿ ಶುಕ್ಲಕೇಶ ಆವೇಶ ಇರುತ್ತಿದ್ದ ವಿವರ ಈಗಾಗಲೇ ಬಂದಿದೆ.

ತಥಾ ಕೃತೇ ಬಲಭದ್ರೇ ತು ಕೃಷ್ಣೋ
ಗದಾಮಾದಾಯ ಸ್ವಾಮಗಾನ್ಮಾಗಧೇಶಮ್ ।
ತತಾಡ ಜತ್ರೌ[೩] ಸ ತಯಾऽಭಿತಾಡಿತೋ
ಜಗಾಮ ಗಾಂ ಮೂರ್ಛಯಾऽಭಿಪ್ಲುತಾಂಗಃ ॥ ೨೨ ॥

ಅ: ಬಲರಾಮನು ಹಾಗೆ ಮೂರ್ಛಿತನಾದಾಗ, ಕೃಷ್ಣ ತನ್ನ ಗದೆಯನ್ನು ತೆಗೆದುಕೊಂಡು ಜರಾಸಂಧನ ಮೇಲೆ ನುಗ್ಗಿದ. ಅವನ ಎದೆ ಮತ್ತು ಕತ್ತಿನ ಮಧ್ಯಭಾಗಕ್ಕೆ ಹೊಡೆದ. ಅದರಿಂದ ಬಹಳವಾಗಿ ಪೆಟ್ಟುತಿಂದ ಜರಾಸಂಧ ರಕ್ತಸೋರಿ ಮೂರ್ಛೆಯಿಂದ ನೆಲಕಚ್ಚಿದ.

ವಿ: ಶ್ರೀಕೃಷ್ಣನ ಪೆಟ್ಟಿಗೆ ಜರಾಸಂಧ ಬಹಳವಾಗಿ ನೊಂದು ಧರೆಗುರುಳಿದ. ಇದು ಬಲರಾಮ ಶ್ರೀಕೃಷ್ಣರಲ್ಲಿನ ಅಪಾರ ಅಂತರವನ್ನು ತೋರಿಸುವ ಪ್ರಸಂಗ. ಆದ್ದರಿಂದ ಬಲರಾಮನನ್ನು ಸಾಕ್ಷಾತ್ ಶ್ರೀಹರಿಯ ಅವತಾರ ಎಂಬ ಕೆಲವರ ವಾದ ಅಸಮಂಜಸ ಎಂಬುದು ಸಿದ್ಧವಾಗುವುದು.

---

೧. ತಸ್ಯ = ಜರಾಸಂಧಸ್ಯ । – (ವಾ.)

೨. ತರ್ಹಿ ಮಧುರಾಯಾಂ ಯುದ್ಧೇ ಬಲರಾಮೇಣ ಕಥಂ ಗೃಹೀತ ಇತ್ಯತ ಆಹ ಪೂರ್ವಮಿತಿ ॥ – (ವಾ.)

೩. ತತಾಡ ಜತ್ರಾವಿತ್ಯತ್ರ ಜತ್ರೌ = ಉರಃ ಕಂಠಯೋರ್ಮಧ್ಯಸ್ಥಿತಾಸ್ಥ್ನಿ ॥ –(ವಾ.)
ಜತ್ರೌ = ವಕ್ಷಃಕಂಠಯೋರ್ಮಧ್ಯಪ್ರದೇಶೇ ತತಾಡ । – (ಜ.)

ಅಥೋತ್ತಸ್ಥೌ ರೌಹಿಣೇಯಃ ಸಹೈವ
ಸಮುತ್ತಸ್ಥೌ ಮಾಗಧೋಽಪ್ಯಗ್ರ್ಯವೀರ್ಯಃ ।
ಕ್ರುದ್ಧೋ ಗೃಹೀತ್ವಾ ಮೌಲಿಮಸ್ಯಾಶು ರಾಮೋ
ವಧಾಯೋದ್ಯಚ್ಛನ್ಮುಸಲಂ ಬಾಹುಶಾಲೀ ॥ ೨೩ ॥

ಅ: ಅನಂತರ ಬಲರಾಮ ಮೇಲೆದ್ದ. ಅದರೊಂದಿಗೆ ಮಹಾಪರಾಕ್ರಮಿಯಾದ ಜರಾಸಂಧನೂ ಎಚ್ಚೆತ್ತ. ಬಾಹುಶಾಲಿಯಾದ ಬಲರಾಮ ಕೆರಳಿದವನಾಗಿ ಅವನ ತಲೆಯನ್ನು ಹಿಡಿದು, ಸಂಹರಿಸಲೆಂದು ಮುಸಲವನ್ನು ಮೇಲೆತ್ತಿದ.

ವಿ: ಬಲರಾಮ, ಜರಾಸಂಧ ಇಬ್ಬರೂ ಒಟ್ಟಿಗೇ ಎಚ್ಚೆತ್ತು ಮರಳಿ ಯುದ್ಧಕ್ಕೆ ತೊಡಗಿದರು. ಜರಾಸಂಧ ಅಂತಹ ಪೆಟ್ಟನ್ನು ಹಾಕಿದ್ದನ್ನು ನೋಡಿ, ಕೋಪಗೊಂಡ ಬಲರಾಮ ಅವನನ್ನು ಸಂಹರಿಸಿಯೇ ಬಿಡಬೇಕೆಂದು ಮುಸಲವನ್ನು ಕೈಗೆತ್ತಿಕೊಂಡ ಎಂದರ್ಥ.

ಜರಾಸಂಧನ ಮೃತ್ಯು ಭೀಮನಿಂದ ಎಂಬ ಅಶರೀರವಾಣಿಯ ಸೂಚನೆ

ಅಥಾಬ್ರವೀದ್ವಾಯುರೇನಂ ನ ರಾಮ
ತ್ವಯಾ ಹಂತುಂ ಶಕ್ಯತೇ ಮಾಗಧೋಽಯಮ್ ।
ವೃಥಾ ನ ತೇ ಬಾಹುಬಲಂ ಪ್ರಯೋಜ್ಯ-
ಮಮೋಘಂ[೧] ತೇ ಯದ್ಬಲಂ ತದ್ವದಸ್ತ್ರಮ್ ॥ ೨೪ ॥

ಅನ್ಯೋ[೨] ಹಂತಾ ಬಲವಾನಸ್ಯ ಚೇತಿ
ಶ್ರುತ್ವಾ ಯಯೌ ಬಲಭದ್ರೋ ವಿಮುಚ್ಯ ।
ಜರಾಸುತಂ ಪುನರುದ್ಯಚ್ಛಮಾನಂ
ಜಘಾನ[೩] ಕೃಷ್ಣೋ ಗದಯಾ ಸ್ವಯೈವ ॥ ೨೫ ॥

---

೧. ತವ ಯದಮೋಘಂ ಬಲಂ ತದ್ವದಸ್ತ್ರಂ ''ಅಸು ನಿರಸನ'' ಇತಿ ಧಾತೋಃ ಶತ್ರುಸಂಹಾರಕಂ ಮುಸಲಂ ಚಾಮೋಘಮ್ । ತತ್ ನ ಮೋಘೀಕುರ್ವಿತಿ ಭಾವಃ ॥ – (ವಾ.)

೨. ನ ತ್ವಯಾ ರಾಮ ವಧ್ಯೋಽಯಮಲಂ ಖೇದೇನ ಮಾನದ ।
ವಿದಿತೋಽಸ್ಯ ಮಯಾ ಮೃತ್ಯುಸ್ತಸ್ಮಾತ್ ಸಾಧು ವ್ಯಪಾರಮ ॥ – ಹರಿವಂಶ (೨/೩೬/೨೯)

ಅ: ಆ ವೇಳೆಗೆ ವಾಯು [೩]ನುಡಿದ : ''ಬಲರಾಮ! ಈ ಜರಾಸಂಧನನ್ನು ಕೊಲ್ಲಲು ನಿನ್ನಿಂದಾಗದು. ನಿನ್ನ ಬಾಹುಬಲವನ್ನು ವ್ಯರ್ಥ ಮಾಡಿಕೊಳ್ಳಬೇಡ. ನಿನ್ನ ಬಲದಂತೆ ನಿನ್ನ ಅಸ್ತ್ರವೂ ಅಮೋಘವಾದುದು (೨೪).

ಇವನನ್ನು ಕೊಲ್ಲುವ ಬಲವಂತ ಬೇರೊಬ್ಬನಿರುವನು''. ಅದನ್ನು ಕೇಳಿ ಬಲರಾಮ ಅವನನ್ನು ಬಿಟ್ಟು ತೆರಳಿದನು. ಮತ್ತೆ ಮೇಲೆರಗಲು ಬಂದ ಜರಾಸಂಧನನ್ನು ಕೃಷ್ಣ ತನ್ನ ಗದೆಯಿಂದ ಹೊಡೆದ (೨೫).

ವಿ: ೧) ಇಲ್ಲಿ ವಾಯು ನುಡಿದನು ಎಂದರೆ ಹಿಂದೆ ಹೇಳಿದಂತೆ ಅಶರೀರವಾಣಿಯಾಯಿತು ಎಂದರ್ಥ. ಇಲ್ಲಿ ಹಾಗೆ ಕೊಲ್ಲುವ ಬಲಿಷ್ಠ ಎಂದು ಬಂದಿರುವ ಉಲ್ಲೇಖ ಭೀಮಸೇನನದು ಎಂದು ತಿಳಿಯಬೇಕು. ಅಶರೀರವಾಣಿಯ ಈ ಮಾತು ಜರಾಸಂಧನ ಕಿವಿಗೂ ಬಿದ್ದಿತು ಎಂಬ ವಿವರ ಮುಂದೆ (೧೭/೯) ಬಂದಿದೆ.

೨) ಇದರಿಂದ ಮುಂದೆ ಜರಾಸಂಧನನ್ನು ಸಂಹರಿಸುವ ಭೀಮ ಬಲರಾಮನಿಗಿಂತ ಹೆಚ್ಚು ಬಲಶಾಲಿ ಎಂಬುದು ಸಹ ಸಿದ್ಧವಾಗುವುದು.

೩) ಬಲರಾಮನ ಪೆಟ್ಟಿಗೆ ಜರಾಸಂಧ ಹೇಗೂ ಸಾಯುತ್ತಿರಲಿಲ್ಲ ಎಂದ ಮೇಲೆ ಅಶರೀರ–ವಾಣಿಯ ಈ ಮಾತಿನಿಂದ ಪ್ರಯೋಜನವೇನು? ಎಂಬ ಶಂಕೆಗೆ ಇಲ್ಲಿ ಅವಕಾಶವಿದೆ. ಹಾಗೆ ಬಲ–ರಾಮ ಜರಾಸಂಧನಿಗೆ ಪೆಟ್ಟು ಹಾಕಿ, ಅದರಿಂದ ಜರಾಸಂಧ ಮೃತನಾಗದಿದ್ದಾಗ, ಬಲರಾಮನಿಗೂ, ಅವನ ಆಯುಧಕ್ಕೂ ಅಮೋಘ ಎಂಬ ಖ್ಯಾತಿ ತಪ್ಪಿಹೋಗುತ್ತಿತ್ತು. ಅಂತಹ ಅಪಖ್ಯಾತಿ ವಿಶೇಷಹರಿಭಕ್ತನಾದ ಅವನಿಗೂ, ಅವನ ಆಯುಧಕ್ಕೂ ಬಾರದಿರಲಿ ಎಂಬ ಕಾರಣದಿಂದ ವಾಯುದೇವರು ಹಾಗೆ ಎಚ್ಚರಿಸಿ, ಅನುಗ್ರಹಿಸಿದರು ಎಂಬ ಸಮಾಧಾನವನ್ನು ಹಿಂದಿನ ಪದದಲ್ಲಿನ 'ಅಮೋಘಂ ತೇ ಯದ್ಬಲಂ ತದ್ವದಸ್ತ್ರಂ' ಎಂಬ ಮಾತಿನಿಂದ ತಿಳಿಸಿರುವರು ಎಂದು ತಿಳಿಯಬೇಕು.

ಶ್ರೀಕೃಷ್ಣನಿಂದ ಜರಾಸಂಧಾದಿಸರ್ವರ ಪರಾಭವ

ತೇನಾಹತಃ ಸ್ರಸ್ತಸಮಸ್ತಗಾತ್ರಃ
ಪಪಾತ ಮೂರ್ಛಾಭಿಗತಃ ಸ ರಾಜಾ ।
ಚಿರಾತ್ ಸಂಜ್ಞಾಂ ಪ್ರಾಪ್ಯ ಚಾಂತರ್ಹಿತೋಽಸೌ
ಸಂಪ್ರಾದ್ರವದ್ಭೀತಭೀತಃ ಸಲಜ್ಜಃ ॥ ೨೬ ॥

---

೩. ಕೃಷ್ಣಃ ಸ್ವಯಾ ಗದಯಾ ಜಘಾನೈವ ತಾಡೈವ ಯಥಾ ನ ಮರಿಷ್ಯತಿ ತಥಾ ಲಾಘವೇನ ತಾಡನಮೇವಾಕರೋದಿತಿ ಭಾವಃ ॥ –(ವಾ.)

ಯಯೌ ಶಿಷ್ಟೈ ರಾಜಭಿಃ ಸಂಯುತಶ್ಚ
ಪುರಂ ಜೀವೇತ್ಯೇವ ಕೃಷ್ಣೇನ ಮುಕ್ತಃ ।
ಪುನರ್ಯುದ್ಧಂ ಬಹುಶಃ ಕೇಶವೇನ
ಕೃತ್ವಾ ಜಿತೋ ರಾಜಗಣೈಃ ಸಮೇತಃ ॥ ೨೭ ॥

ಅ: ಶ್ರೀಕೃಷ್ಣನ ಪೆಟ್ಟಿಗೆ ಜರಾಸಂಧನ ಇಡೀ ದೇಹ ನುಜ್ಜುಗುಜ್ಜಾಯಿತು; ಅವನು ಮೂರ್ಛೆಗೊಂಡು, ನೆಲಕ್ಕುರುಳಿದ. ಬಹುಕಾಲದ ಮೇಲೆ ಎಚ್ಚೆತ್ತು, ತುಂಬಾ ಭಯಪಟ್ಟು, ಲಜ್ಜೆಯಿಂದ ಕೂಡಿದವನಾಗಿ ಅಳಿದುಳಿದ ರಾಜರೊಂದಿಗೆ ಕೂಡಿಕೊಂಡು, ಕಾಣದಂತೆ ಪಲಾಯನ ಮಾಡಿದ. ''ಬದುಕಿಕೊ'' ಎಂದು ಕೃಷ್ಣನಿಂದ ಬಿಡಲ್ಪಟ್ಟಿದ್ದ ಅವನು, ತನ್ನ ಪಟ್ಟಣವನ್ನು ಸೇರಿಕೊಂಡ. ಮರಳಿ ಅನೇಕ ಬಾರಿ ರಾಜರೊಂದಿಗೆ ಕೂಡಿ, ಕೃಷ್ಣನೊಂದಿಗೆ ಯುದ್ಧಮಾಡಿ, ಪರಾಭವಗೊಂಡ.

ವಿ: ೧) ಬಲರಾಮ ಶ್ರಮವಹಿಸಿದರೂ ಆಗದ ಕಾರ್ಯ, ಕೃಷ್ಣನಿಂದ ಅನಾಯಾಸವಾಗಿ ಪೂರೈಸಿತು ಎಂಬುದು ಇಲ್ಲಿಯ ವಿಶೇಷ.

೨) ಜರಾಸಂಧ ಇಂತಹ ಪೆಟ್ಟು ತಿಂದರೂ, ಎಚ್ಚೆತ್ತುಕೊಳ್ಳದೆ, ಒಟ್ಟು ಹಾಗೆ ಕೃಷ್ಣನೊಂದಿಗೆ ಯುದ್ಧ ಮಾಡಿದ್ದು ಹದಿನೆಂಟು ಬಾರಿ ಎಂಬ ಮಾತು ಮುಂದೆ ಬಂದಿದೆ. ಹಾಗೆ ಪ್ರತಿ ಬಾರಿ ಅವನು ಕೃಷ್ಣನ ಮೇಲೆ ಕಾದ ಹೊರಟಾಗಲೂ ಇಪ್ಪತ್ತಮೂರು ಅಕ್ಷೋಹಿಣೀಸೈನ್ಯವನ್ನೇ ತೆಗೆದುಕೊಂಡು ಹೋಗುತ್ತಿದ್ದ ಎಂಬುದೂ ಗಮನಾರ್ಹ. ಜಯದ ಸಂಕೇತವಾದ ಹದಿನೆಂಟು ಎಂಬುದು ಅವನ ಪಾಲಿಗೆ ಪರಾಭವಕ್ಕೆ ಕಾರಣವಾದದ್ದು ಅವನ ಕೃಷ್ಣದ್ವೇಷದ ಫಲ ಎಂದೂ ತಿಳಿಯಬೇಕು.

ದಮಘೋಷನ ಪ್ರಾರ್ಥನೆಯಂತೆ ಕೊಲ್ಹಾಪುರಕ್ಕೆ ನಡೆದ ಕೃಷ್ಣ

ಕೃಷ್ಣೋ ಜಿತ್ವಾ ಮಾಗಧಂ ರೌಹಿಣೇಯ-
ಯುಕ್ತೋ ಯಯೌ ದಮಘೋಷೇಣ ಸಾರ್ಧಮ್ ।
ಪಿತೃಷ್ವಸಾಯಾಃ ಪತಿನಾ[೧] ತೇನ ಚೋಕ್ತಃ
ಪೂರ್ವಂ ಜಿತೇನಾಪಿ ಯುಧಿ ಸ್ಮ ಬಾಂಧವಾತ್ ॥ ೨೮ ॥

---

೧. ಯಾಃ ಪಿತೃಷ್ವಸಾರಃ ಸಂತಿ ತಾಸ್ವೇಕಾ ಯಾ ಪಿತೃಷ್ವಸಾ ಶಿಶುಪಾಲಮಾತಾ ತಸ್ಯಾಃ ಪತಿನೇತ್ಯರ್ಥಃ । 'ಸೃ ಗತೌ' ಇತಿ ಧಾತೋಃ ಔಣಾದಿಕೇ ಡಾಪ್ರತ್ಯಯೇ ಕೃತೇ ಸ್ವೇನ ಸಹ ನಿಸ್ಸೃತಾ ಸ್ವಸಾ ಸಹೋದರೀ ಪಿತೃಷ್ವಸಾ ತಸ್ಯಾಃ ಪತಿನೇತಿ ವಾ ॥ – (ವಾ.)

ಅ: ಶ್ರೀಕೃಷ್ಣ ಜರಾಸಂಧನನ್ನು ಸೋಲಿಸಿ, ಬಲರಾಮನೊಂದಿಗೆ ಕೂಡಿ, ದಮಘೋಷ-ನೊಂದಿಗೆ ಹೊರಟನು. ದಮಘೋಷ ಕೃಷ್ಣನ ಸೋದರತ್ತೆಯ ಗಂಡ. ಅವನು ಯುದ್ಧದಲ್ಲಿ ಕೃಷ್ಣನಿಂದ ಹಿಂದೆ ಸೋತಿದ್ದರೂ, ಬಂಧು ಎಂಬ ಕಾರಣದಿಂದ ಬಿಡಲ್ಪಟ್ಟಿದ್ದ.

ವಿ: ದಮಘೋಷ ಶಿಶುಪಾಲನ ತಂದೆ. ಅವನೂ ಸಹ ಜರಾಸಂಧನೊಂದಿಗೆ ಸೇರಿ, ಕೃಷ್ಣನೊಂದಿಗೆ ಯುದ್ಧ ಮಾಡಿ ಸೋತವನೇ. ಜರಾಸಂಧಾದಿಗಳು ಪಲಾಯನ ಮಾಡಿದ ಮೇಲೆ ಇವನು ಶ್ರೀಕೃಷ್ಣನನ್ನು ಪ್ರಾರ್ಥಿಸಿ ಕರೆದೊಯ್ದ ಎಂದು ತಿಳಿಯಬೇಕು.

ಯಾಮಃ ಪುರಂ ಕರವೀರಾಖ್ಯಮೇವ
ಮಹಾಲಕ್ಷ್ಮ್ಯಾಃ ಕ್ಷೇತ್ರಸಂದರ್ಶನಾಯ।
ಶ್ರುತ್ವಾ ವಾಕ್ಯಂ ತಸ್ಯ ಯುದ್ಧೇ ಜಿತಸ್ಯ
ಪ್ರೀತ್ಯಾ ಯುಕ್ತಸ್ತಾತ್ಮನಾ ತದ್ಯುತೋಽಗಾತ್ ॥ ೨೯ ॥

ಅ: ''ನಾವು ಮಹಾಲಕ್ಷ್ಮಿಯ ಕ್ಷೇತ್ರವನ್ನು ನೋಡಲೆಂದು, ಕರವೀರಪುರಕ್ಕೆ ತೆರಳೋಣ'' ಎಂಬ ಯುದ್ಧದಲ್ಲಿ ಪರಾಜಿತನಾದ ದಮಘೋಷ ಕೇಳಿಕೊಂಡ; ಶ್ರೀಕೃಷ್ಣ ತನ್ನ ಮೇಲೆ ಭಕ್ತಿಯಿಂದ ಕೂಡಿದ ಅವನೊಂದಿಗೆ ಹೊರಟ.

ವಿ: ೧) ಅವನಿಗೆ ಕೃಷ್ಣನಲ್ಲಿ ಭಕ್ತಿಯೊಂದಿಗೆ ಭಯವೂ ಇದ್ದಿತು ಎಂಬುದು ಜನಾರ್ದನೀಯದಲ್ಲಿ ಉಲ್ಲೇಖಿತವಾಗಿರುವ 'ಭೀತ್ಯಾ ಯುಕ್ತಸ್ಯ' ಎಂಬ ಪಾಠದಿಂದ ತಿಳಿಯಬಹುದು.

ಭರ್ತ್ಯಾ ಷಷ್ಠೀಯುಕ್ತಶ್ಛಂದಸಿ ವೇತಿ ಫಿಸಂಜ್ಞಾ। – (ಜ.)

ಪಿತೃಷ್ವಸಾಯಾಃ ಪತಿನಾ ತೇನ ಚೋಕ್ತ ಇತ್ಯತ್ರ ಯಾ ಸ್ತ್ರಿಯಃ ತಾಸು ಯಾ ಪಿತೃಷ್ವಸಾ ತಸ್ಯಾಃ ಯಃ ಪತಿನಾ ಪತಿಲಕ್ಷಣಃ ಪುರುಷಃ ತೇನ ಚೋಕ್ತ ಇತ್ಯರ್ಥಃ। ಏವಂ ಚ ನ ಚೋದ್ಯಾವಕಾಶಃ॥ – (ತಿ.)

ಸಂಬಂಧಕಾಮೋ ಗೋವಿಂದಮಿದಮಾಹ ಸ ಚೇದಿರಾಟ್।
ಅಹಂ ಪಿತೃಷ್ವಸುರ್ಭರ್ತಾ ತವ ಯಾದವನಂದನ॥
ಸಬಲಸ್ತ್ವಮುಪಾವೃತ್ತಸ್ತ್ವಂ ಹಿ ಮೇ ದಯಿತಃ ಪ್ರಭೋ।
ಕರವೀರಪುರಂ ಕೃಷ್ಣ ಗಚ್ಛಾಮಃ ಸಬಲಾನುಗಾಃ॥ ... ಇತಿ ಹರಿವಂಶೇ। –(ಮ.)

೨. ಕರವೀರಪುರಂ ಕೃಷ್ಣ ಗಚ್ಛಾಮ ಸಬಲಾನುಗಃ॥ - ಹರಿವಂಶೇ (೨/೪೩/೮೫)

೩. ಆತ್ಮನಾ ಸ್ವಭಾವೇನ ಪ್ರೀತ್ಯಾ ನ ತು ಭದ್ಧನಾ ಪ್ರೀತ್ಯೇತ್ಯರ್ಥಃ॥ – (ವಾ.)

ಭೀತ್ಯಾ ಯುಕ್ತಸ್ಯ – (ಪಾಠಾಂತರ)

ಭೀತ್ಯಾ ಯುಕ್ತಸ್ಯೇತಿ ಪಾಠೇ ಕೃಷ್ಣೇನ ಸಹಕೃತಯುದ್ಧರೂಪಾಪರಾಧಭಯೇನ ಯುಕ್ತಸ್ಯ। – (ವ.)

೨) ಕರವೀರಪುರ ಎಂದರೆ ಕೊಲ್ಹಾಪುರ ಎಂದರ್ಥ. ಭೃಗುಮುನಿಗಳು ಹರಿಸರ್ವೋತ್ತಮತ್ವ ಸ್ಥಾಪನೆಗೆಂದು ವೈಕುಂಠಕ್ಕೆ ತೆರಳಿದಾದ್ದಾಗ, ತಮ್ಮ ಪಾದದಿಂದ ಹರಿಯ ವಕ್ಷಃಸ್ಥಳಕ್ಕ ಒದ್ದಾಗ ಮಹಾಲಕ್ಷ್ಮಿಯು ಅಸುರಮೋಹನ ಹಾಗೂ ಲೋಕವಿಡಂಬನೆಗೆಂದು ಒಂದು ರೂಪದಿಂದ ಭೂಲೋಕದ ಕೊಲ್ಹಾಪುರಕ್ಕೆ ಆಗಮಿಸಿ, ನೆಲೆಸಿದ ವಿವರ [೧]ಭವಿಷ್ಯೋತ್ತರಪುರಾಣದಲ್ಲಿದೆ. ಶ್ರೀಮದಾಚಾರ್ಯರ ಈ ಮಾತು ಅದಕ್ಕೆ ಸಂವಾದಿಯಾಗಿರುವುದನ್ನು ಗಮನಿಸಬೇಕು. ಭವಿಷ್ಯೋತ್ತರಪುರಾಣಾದ ನಿರೂಪಣೆಯಂತೆ, ಆ ಪ್ರಸಂಗ ನಡೆದದ್ದು ಕಲಿಯುಗ ಪ್ರಾರಂಭಕ್ಕಿಂತ ಹತ್ತುಸಾವಿರವರ್ಷಗಳ ಮುಂಚೆ. ಎಂದರೆ ಕೃಷ್ಣಾವತಾರಕ್ಕಾಗಲೇ ಮಹಾಲಕ್ಷ್ಮಿಯು ಅಲ್ಲಿ ಬಂದು ನೆಲೆಸಿಯಾಗಿತ್ತು ಎಂಬುದು ನಿಶ್ಚಿತವಾಗುವ ವಿಚಾರ.

೩) ಕೃಷ್ಣನ ಸಂದರ್ಶನದ ಮತ್ತೊಂದು ಕಾರಣದಿಂದಾಗಿ ಸಹ ಕೊಲ್ಹಾಪುರವು ಅಪೂರ್ವಕ್ಷೇತ್ರ ಎಂಬ ವಿಷಯ ಸ್ಫುಟಪಡುವುದು. ಕೊಲ್ಹಾಪುರದ ಅಪೂರ್ವವರ್ಣನೆಯನ್ನು ಪದ್ಮಪುರಾಣದ ಹನ್ನೆರಡನೆಯ ಅಧ್ಯಾಯದ ಗೀತಾಮಾಹಾತ್ಮೆಯಲ್ಲೂ, ಶ್ರೀವಾದಿರಾಜಸ್ವಾಮಿಗಳ ತೀರ್ಥಪ್ರಬಂಧದಲ್ಲೂ ಕಾಣಬಹುದು.

ದಮಘೋಷನ ಸ್ವರೂಪ

ಗಂಧರ್ವೋಽಸೌ [೨]ದನುನಾಮಾ ನರೋಽಭೂತ್
ತಸ್ಮಾತ್ ಕೃಷ್ಣೇ ಭಕ್ತಿಮಾಂಶ್ಚಾಸ ರಾಜಾ ।
ಪುರಂ ಪ್ರಾಪ್ತಾಂಸ್ತಾನ್ ಸ ವಿಜ್ಞಾಯ ಪಾಪಃ
ಸೃಗಾಲಾಖ್ಯೋ ವಾಸುದೇವಃ ಕ್ರುಧಾಽಗಾತ್ ॥ ೩೦ ॥

ಸ್ಮರಿ

ಅ: ದಮಘೋಷ ದನುನಾಮ ಗಂಧರ್ವ; ಮನುಷ್ಯನಾಗಿ ಹುಟ್ಟಿಬಂದಿದ್ದ. ಅದರಿಂದಾಗಿ ಶ್ರೀಕೃಷ್ಣನಲ್ಲಿ ಭಕ್ತಿ ಹೊಂದಿದವನಾಗಿದ್ದ. ತನ್ನ ಪಟ್ಟಣಕ್ಕೆ ಅವರು ಬಂದಿದ್ದನ್ನು ತಿಳಿದು, ಪಾಪಿಯಾದ ಸೃಗಾಲವಾಸುದೇವನು ಕೋಪದಿಂದ ಅವರ ಮೇಲೆ ಯುದ್ಧಕ್ಕೆ ಬಂದ.

---

೧. ಇತಿ ಪ್ರೇಮ್ಣಾತು ಕಲಹಂ ಕೃತ್ವಾ ತು ಹರಿಣಾ ಸಹ ।
ರಮಾ ಜಗಾಮ ತತ್ಕ್ಷೇತ್ರಂ ಕರವೀರಪುರಾಹ್ವಯಮ್ ॥ – ಭವಿಷ್ಯೋತ್ತರಪುರಾಣ (ಅ. ೨, ಶ್ಲೋ. ೩೭)

೨. ಕಬಂಧೋ ದನು ಗಂಧರ್ವಃ ....
ದಮಘೋಷೋ ದನುರ್ನಾಮ ಗಂಧರ್ವಃ ಪ್ರಾಗುದಾಹೃತಃ ॥ – ಅಂಶಾವತಾರ
ದಮಘೋಷಕಬಂಧೌ ದ್ವೌ ದನುಗಂಧರ್ವ ಉಚ್ಯತೇ । – ಗರುಡಪುರಾಣ
ದಮಘೋಷಕಕಬಂಧದ್ವಯರು ಗಂಧರ್ವ ದನು – ಹರಿಕಥಾಮೃತಸಾರ (೨೧/೪೦)
ದನುನಾಮ ಗಂಧರ್ವ ದಮಘೋಷನು ಎನಿಸುವ ಕಬಂಧದ್ವಯ
– ಶ್ರೀಜಗನ್ನಾಥದಾಸರು (ಆವೇಶಅವತಾರಬೃಹತ್ತಾರತಮ್ಯ)

ಎ: ೧) ದಮಘೋಷ ದನುಗಂಧರ್ವನ ಅವತಾರ. ಅವನು ರಾಮಾಯಣಕಾಲದಲ್ಲಿ ಕಬಂಧನಾಗಿ ಜನಿಸಿದ್ದವನು.

ಆಪಿ [೧]ಜನಾರ್ದನೀಯ, ವರದರಾಜೀಯಗಳಲ್ಲಿ 'ತ್ರಿಜಟಾಪುತ್ರದನುರಾಕ್ಷಸ–ವ್ಯಾವೃತ್ಯರ್ಥಂ ಗಂಧರ್ವ ಇತ್ಯುಕ್ತಮ್' ಎಂದಿದೆ.

೨) ಸೃಗಾಲವಾಸುದೇವನೂ ವಸುದೇವನ ಮಗನೇ. ಅವನು ಮಧುದೈತ್ಯನ ಪುತ್ರನಾದ ಧುಂಧು ಎಂಬವನು. ವಸುದೇವನಿಂದ ಕರವೀರರಾಜನ ಮಗಳಾದ ದನು ಎಂಬ ಕಶ್ಯಪಪುತ್ರಿಯ ಅವತಾರಳಾದವಳಲ್ಲಿ ಪುತ್ರಿಕಾಪುತ್ರಧರ್ಮದಿಂದ ಹುಟ್ಟಿದವನು. ವಸುದೇವ ಅನಂತರ ದೇವಕಿ ಮೊದಲಾದವರನ್ನು ಮದುವೆಯಾದ ಮೇಲೆ ತನ್ನ ತಾಯಿಯ ಬಳಿಗೆ ಬರಲಿಲ್ಲ ಎಂಬ ಭಾವನೆಯಿಂದ ಯಾದವದ್ವೇಷಿಯಾದ. ಅವನು ದ್ವೇಷಿಯಾಗಿದ್ದಕ್ಕೆ ಅವನು ಸ್ವರೂಪತಃ ಅಸುರನಾಗಿದ್ದುದೇ ಮೂಲಕಾರಣ. ಉಳಿದದ್ದು ಅದಕ್ಕೆ ನೆಪ ಎಂದು ತಿಳಿಯಬೇಕು. ಹೀಗೆ ಯಾದವದ್ವೇಷಿಯಾಗಿದ್ದ ಅವನಿಗೆ ಶ್ರೀಕೃಷ್ಣ ತನ್ನ ಪುರಕ್ಕೆ ಬಂದದ್ದು ದ್ವೇಷದ ವೃದ್ಧಿಗೆ ಕಾರಣವಾಗಿ, ಯುದ್ಧಕ್ಕೆ ತೊಡಗಿದ ಎಂದರ್ಥ.

ಸೃಗಾಲವಾಸುದೇವನ ಸಂಹಾರ

[೨]ಸೂರ್ಯಪ್ರದತ್ತಂ ರಥಮಾರುಹ್ಯ ದಿವ್ಯಂ
ವರಾದವಧ್ಯಸ್ತಿಗ್ಮರುಚೇಃ ಸ ಕೃಷ್ಣಮ್ ।
ಯೋದ್ಧುಂ ಯಯಾವಮುಚಚ್ಚಾಸ್ತ್ರಸಂಘಾನ್
ಶಿರಸ್ತಸ್ಯಾಥಾಶು ಜಹಾರ ಕೃಷ್ಣಃ ॥ ೩೧ ॥

ಅ: ಸೂರ್ಯ ನೀಡಿದ್ದ ವರದಿಂದ ಅವಧ್ಯನಾಗಿದ್ದ ಆ ಸೃಗಾಲವಾಸುದೇವ, ಸೂರ್ಯ ನೀಡಿದ್ದ ದಿವ್ಯರಥವನ್ನು ಏರಿ, ಶ್ರೀಕೃಷ್ಣನೊಡನೆ ಕಾದಲೆಂದು ಆಗಮಿಸಿದ. ಅಸ್ತ್ರಗಳ ಸಮೂಹಗಳನ್ನೇ ಪ್ರಯೋಗಿಸಿದ. ಕೃಷ್ಣ ಕೂಡಲೆ ಅವನ ತಲೆಯನ್ನು ಕತ್ತರಿಸಿದ.

---

೧. ಯಸ್ಮಾದಸೌ ದಮಘೋಷಃ ಪೂರ್ವಂ ದನುನಾಮಾಗಂಧರ್ವಃ ತ್ರಿಜಟಾಪುತ್ರದನುರಾಕ್ಷಸವ್ಯಾವೃತ್ಯರ್ಥಂ – (ಜ.)

ಪೂರ್ವೇ ದನುನಾಮಗಂಧರ್ವಃ ತ್ರಿಜಟಾಯಾಃ ರಾಕ್ಷಸ್ಯಾಃ ಪುತ್ರೋ ದನೂ ರಾಕ್ಷಸೋ ನೈವೇತ್ಯವ-ಗಂತವ್ಯಮ್ । – (ವ.)

೨. ಸಾವಿತ್ರೇ ನಿಯಮೇ ಪೂರ್ಣೇ ಯಂ ದದೌ ಸವಿತಾ ಸ್ವಯಮ್ ।
ಆದಿತ್ಯರಶ್ಮಿಭಿರಿವ ರಶ್ಮಿಭಿರ್ಯೋ ನಿಮೃಷ್ಯತೇ ॥
ತೇನ ಸ್ಕಂದನಮುಖ್ಯೇನ ದ್ವಿಷತ್ಸ್ಕಂದನಘಾತಿನಾ ।
ಸ ಶೃಗಾಲೋಽಭ್ಯಯಾತ್ ಕೃಷ್ಣಂ ಶಲಭಃ ಪಾವಕಂ ಯಥಾ ॥ – ಹರಿವಂಶ (೨/೪೪/೬,೭)

ವಿ: ಸೃಗಾಲವಾಸುದೇವ ಸೂರ್ಯೋಪಾಸಕನಾಗಿದ್ದ ಒಬ್ಬ ಸೌರಮತಾನುಯಾಯಿ. ಅವನ ಪರಾಭವ ಸೌರಮತನಿರಾಕರಣೆಗೂ ಸಂಕೇತವಾಯಿತು. ವಾಸಿಷ್ಠಕೃಷ್ಣರೂಪದಿಂದ ಬ್ರಹ್ಮಸೂತ್ರಗಳ ಪತ್ಯುರಧಿಕರಣದಲ್ಲಿ ಪಾಶುಪತಮತದೊಂದಿಗೆ ಸೌರಮತವನ್ನೂ ನಿರಾಕರಿಸಿದ ನಾರಾಯಣ, ಈ ಯಾದವಕೃಷ್ಣರೂಪದಿಂದ ಸೌರಮತದ ಅನುಯಾಯಿಯನ್ನೂ ಸದೆಬಡಿದ. ಅದು ಜ್ಞಾನಕಾರ್ಯದ ರೂಪವಾದ್ದರಿಂದ ಸಮಯಪಾದದಲ್ಲಿ ವಾದರೂಪದಲ್ಲಿ ನಿರಾಕರಿಸಿದ್ದರೆ, ಬಲಕಾರ್ಯದ ಈ ರೂಪದಿಂದ ಸುದರ್ಶನಶಸ್ತ್ರದಿಂದ ನಾಶ ಮಾಡಿದ ಎಂದು ತಿಳಿಯಬೇಕು.

ಶಕ್ರದೇವನಿಗೆ ಪಟ್ಟಾಭಿಷೇಕ

ದ್ವಿಧಾ ಕೃತ್ವಾ ದೇಹಮಸ್ಯಾರಿಣಾ ಚ
ಪುತ್ರಂ ಭಕ್ತಂ ತಸ್ಯ ರಾಜ್ಯೇಽಭಿಷಿಚ್ಯ ।
ಸ ಶಕ್ರದೇವಂ ಮಣಿಭದ್ರಃ ಪುರಾ ಯೋ
ಯಯೌ ಪುರೀಂ ಸ್ವಾಂ ಸಹಿತೋಽಗ್ರಜೇನ ॥ ೩೨ ॥

ಅ: ಶ್ರೀಕೃಷ್ಣ ಅವನ ದೇಹವನ್ನು ಸುದರ್ಶನಚಕ್ರದಿಂದ ಎರಡುಭಾಗವಾಗಿ ಸೀಳಿದ. ತನ್ನ ಭಕ್ತನಾದ ಅವನ ಪುತ್ರ ಶಕ್ರದೇವನನ್ನು ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿ, ಬಲರಾಮನೊಂದಿಗೆ ಮಧುರೆಗೆ ತೆರಳಿದ. ಶಕ್ರದೇವ ಮೂಲರೂಪದಲ್ಲಿ ಮಣಿಭದ್ರ ಎಂಬ ದೇವತೆ.

ವಿ: ಸೃಗಾಲವಾಸುದೇವ ದಾನವನಾಗಿದ್ದರೆ, ಅವನ ಪುತ್ರನಾದ ಶಕ್ರದೇವ ದೇವತೆಯ ಅವತಾರವಾಗಿದ್ದ. ಹಿರಣ್ಯಕಶಿಪು ಹಾಗೂ ಪ್ರಹ್ಲಾದರಂತೆ ಎಂದು ತಿಳಿಯಬೇಕು. ಶಕ್ರದೇವ ದೇವತೆಯ ಅವತಾರವಾದ್ದರಿಂದಲೇ ಸಹಜವಾಗಿಯೇ ಕೃಷ್ಣಭಕ್ತನೂ ಆಗಿದ್ದ. ಆದ್ದರಿಂದ ಕೃಷ್ಣ ಅವನಿಗೆ ರಾಜ್ಯ ನೀಡಿ ಅನುಗ್ರಹಿಸಿದ.

ಪಲಾಯನನಾಟಕದ ರಾಜನೀತಿ

[೧]ನೀತಿಂ ಬಲಿಷ್ಠಸ್ಯ ವಿಹಾಯ ಸೇನಾಂ
ದೂರಾದ್ಯುದ್ಧಂ ದರ್ಶಯಿತ್ವೈವ ಗುಪ್ತ್ಯೈ ।
ಸ್ವಸೇನಾಯಾಃ ಸರ್ವಪೂರ್ಣಾತ್ಮಶಕ್ತಿಃ
ಪುನಃ ಪುರೀಂ ಪ್ರಾಪ್ಯ ಸುಪೂಜಿತೋಽವಸತ್ ॥ ೩೩ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಸೃಗಾಲವಧೋ ನಾಮ ಷೋಡಶೋಽಧ್ಯಾಯಃ ॥ ೧೬ ॥

ಅ: ಬಲಿಷ್ಠನ ಸೇನೆಯನ್ನು ಬಿಟ್ಟು, ತನ್ನ ಸೇನೆಯ ರಕ್ಷಣೆಗಾಗಿ ದೂರಕ್ಕೆ ತೆರಳಿ, ಅಲ್ಲಿಂದ ಯುದ್ಧ ಮಾಡಬೇಕು ಎಂಬುದೇ ರಾಜನೀತಿ ಎಂದು ತೋರಿಸಿ, ಸರ್ವತ್ರಪರಿಪೂರ್ಣವಾದ ಸಹಜಶಕ್ತಿಸಂಪನ್ನನಾದ ಶ್ರೀಕೃಷ್ಣ ಮತ್ತೆ ಮಧುರಾಪಟ್ಟಣವನ್ನು ಸೇರಿ, ಅಲ್ಲಿ ಎಲ್ಲರಿಂದ ಪೂಜಿತನಾಗಿ ನೆಲೆಸಿದ.

ವಿ: ಶ್ರೀಕೃಷ್ಣ ಜರಾಸಂಧ ಮಧುರೆಯನ್ನು ಆಕ್ರಮಿಸಿದಾಗ, ಅಲ್ಲಿಂದ ದೂರಕ್ಕೆ ತೆರಳಿ, ಗೋಮಂತಕ್ಕೆ ಆಗಮಿಸಿ, ಅವನನ್ನು ಪರಾಭವಗೊಳಿಸಿದ್ದು [೨]ರಾಜನೀತಿಯ ಪ್ರದರ್ಶನಕ್ಕಾಗಿ ಎಂದು ಈ ಅಧ್ಯಾಯದ ಪ್ರಾರಂಭದಲ್ಲಿ ತಿಳಿಸಿದ್ದ ಶ್ರೀಮದಾಚಾರ್ಯರು ದಾರ್ಢ್ಯಕ್ಕೆಂದು ಪುನಃ ತಿಳಿಸಿ, ಈ ಅಧ್ಯಾಯವನ್ನು ಪರಿಸಮಾಪ್ತಿಗೊಳಿಸಿರುವರು ಎಂದು ತಿಳಿಯಬೇಕು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಸೃಗಾಲವಧ'ವೆಂಬ ಹದಿನಾರನೆಯ ಅಧ್ಯಾಯ ಮುಗಿಯಿತು ॥ ೧೬ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

---

೧. ಸ್ವಸೇನಾಯಾಃ ಗುಪ್ತ್ಯೈ ಬಲಿಷ್ಠಸ್ಯ ಸೇನಾಂ ವಿಹಾಯ ದೂರಾದ್ದೂರಂ ಪ್ರಾಪ್ಯ ಯುದ್ಧಂ ಕಾರ್ಯಮಿತಿ ನೀತಿಂ ದರ್ಶಯಿತ್ವೇತಿ ಸಂಬಂಧಃ । ಬಲಿಷ್ಠಸ್ಯ ಸೇನಾಂ ವಿಹಾಯ ಸ್ವೇನ ದೂರಂ ಗತೇ ಸತಿ ಸೋಽಪಿ ಸೇನಯಾ ಸಹ ಸ್ವಾತ್ಮಾನಮನ್ವೇವ ಯಾತಿ ತದಾ ನಿಜಸೇನಾಯಾಃ ರಕ್ಷಾ ಭವತೀತಿ ಭಾವಃ ॥ – (ವಾ.)

೨. ಮನುಷ್ಯಧರ್ಮಶೀಲಸ್ಯ ಲೀಲಾ ಸಾ ಜಗತೀಪತೇಃ ।
ಅಸ್ತ್ರಾಣ್ಯನೇಕರೂಪಾಣಿ ಯದರಾತಿಷು ಮುಂಚತಿ ॥
ಮನಸೈವ ಜಗತ್ಸೃಷ್ಟಿಂ ಸಂಹಾರಂ ಚ ಕರೋತಿ ಯಃ ।
ತಸ್ಯಾರಿಪಕ್ಷಕ್ಷಪಣೇ ಕಿಯಾನುದ್ಯಮವಿಸ್ತರಃ ॥
ತಥಾಽಪಿ ಯೋ ಮನುಷ್ಯಾಣಾಂ ಧರ್ಮಸ್ತಮನುವರ್ತತೇ ।
ಕುರ್ವನ್ ಬಲವತಾ ಸಂಧಿಂ ಹೀನೈರ್ಯುದ್ಧಂ ಕರೋತ್ಯಸೌ ॥
ಸಾಮ ಚೋಪಪ್ರದಾನಂ ಚ ತಥಾ ಭೇದಂ ಚ ದರ್ಶಯನ್ ।
ಕರೋತಿ ದಂಡಪಾತಂ ಚ ಕ್ವಚಿದೇವ ಪಲಾಯನಮ್ ॥
ಮನುಷ್ಯದೇಹಿನಾಂ ಚೇಷ್ಟಾಮಿತ್ಯೇವಮನುವರ್ತತೇ ।
ಲೀಲಾ ಜಗತ್ಪತೇಸ್ತಸ್ಯ ಛಂದತಃ ಪರಿವರ್ತತೇ ॥ – ವಿಷ್ಣುಪುರಾಣ (೫/೨೨/೧೪-೧೮)

ಸಪ್ತದಶೋಽಧ್ಯಾಯಃ

(ಹಂಸಡಿಬಿಕವಧಃ)

(ರುಗ್ಮಿಣೀಸ್ವಯಂವರ, ಸ್ಯಮಂತಕೋಪಾಖ್ಯಾನ, ಹಂಸಡಿಬಿಕವಧ ಇತ್ಯಾದಿ)

ರುಗ್ಮಿಣೀಸ್ವಯಂವರದ ಸಿದ್ಧತೆ

ಗತೇಽಥ ಚೇದಿಪೇ ಸ್ವಕಂ ಪುರಂ ಜನಾರ್ದನೋಽಶೃಣೋತ್ ।
ರಮೈವ ರುಗ್ಮಿಣೀತಿ ಯೋದ್ಯತಾಂ ಸ್ವಯಂವರಾಯ ತಾಮ್ ॥ ೧ ॥

ಅ: ಚೇದಿಯರಸ ದಮಘೋಷ ತನ್ನ ಪುರಕ್ಕೆ ತೆರಳಲು, ಜನಾರ್ದನನಾದ ಶ್ರೀಕೃಷ್ಣ ಸ್ವತಃ ಮಹಾಲಕ್ಷ್ಮಿಯೇ ಆದ ರುಗ್ಮಿಣಿಯು ಸ್ವಯಂವರಕ್ಕೆ ಉದ್ಯುಕ್ತಳಾಗಿರುವ ವಿಷಯವನ್ನು ಕೇಳಿದ.

ವಿ: ೧) 'ರಮೈವ ರುಗ್ಮಿಣೀ' ಎಂಬ ಮಾತಿನಿಂದ ಮಹಾಲಕ್ಷ್ಮಿ ಹಾಗೂ ಅವರ ರೂಪಗಳು ನಾರಾಯಣನ ರೂಪದಂತೆ ಮೂಲರೂಪದಂತೆಯೇ ಪರಿಪೂರ್ಣ ಎಂಬ ವಿಶೇಷಾರ್ಥ ಸೂಚಿತ. ಮತ್ಸ್ಯ ಕೂರ್ಮಾದಿಗಳು ಸಾಕ್ಷಾತ್ ಶ್ರೀಹರಿಯೇ ಆಗಿರುವಂತೆ, ಸೀತಾರುಗ್ಮಿಣೀಸತ್ಯಭಾಮೆಯರು ಸಹ ಸಾಕ್ಷಾತ್ ಮಹಾಲಕ್ಷ್ಮಿಯೇ ಆಗಿರುವರು ಎಂಬುದನ್ನು **'ರಮೈವ ರುಗ್ಮಿಣೀ'** ಎಂಬ ಪದದಿಂದ ತಿಳಿಸಿರುವರು.

೨) ಹಿಂದಿನ ಅಧ್ಯಾಯವನ್ನು ಕೊಲ್ಹಾಪುರ ಲಕ್ಷ್ಮೀಕ್ಷೇತ್ರಸಂದರ್ಶನದಿಂದ ಮುಕ್ತಾಯ ಮಾಡಿ, ಈ ಅಧ್ಯಾಯದಲ್ಲಿ ಆ ಲಕ್ಷ್ಮಿಯೇ ಆದ ರುಗ್ಮಿಣಿಯ ಸ್ವಯಂವರವನ್ನು ವಿಶೇಷವಾಗಿ ವರ್ಣಿಸುತ್ತಿರುವರು. ಒಂದರ್ಥದಲ್ಲಿ ಅದು ಇದಕ್ಕೆ ಪೀಠಿಕೆಯಂತಿದೆ ಎಂಬುದು ಗಮನಾರ್ಹ.

ರುಗ್ಮಿಣೀಸ್ವಯಂವರಕ್ಕೆ ರುಗ್ಮಿಯ ವಿರೋಧ

ಸ [೧]ರುಗ್ಮಿನಾಮಕೋಽಗ್ರಜಃ [೨]ಶ್ರಿಯೋ ದ್ವಿಷನ್ ರಮಾಪತಿಮ್ ।
ಹರೇಃ ಪ್ರದಾತುಮುದ್ಯತಾಂ ನ್ಯವಾರಯದ್ಧರಿಪ್ರಿಯಾಮ್ ॥ ೨ ॥

ಅ: ರುಗ್ಮಿಣಿಯ ಅಣ್ಣನಾದ ರುಗ್ಮಿ ಎಂಬವನು ರಮಾಪತಿಯಾದ ಶ್ರೀಹರಿಯನ್ನು ದ್ವೇಷಿಸುತ್ತಾ ಹರಿಪ್ರಿಯೆಯಾದ ರುಗ್ಮಿಣಿಯನ್ನು ಶ್ರೀಹರಿಯೇ ಆದ ಶ್ರೀಕೃಷ್ಣನಿಗೆ ವಿವಾಹಮಾಡುವುದನ್ನು ತಡೆದನು.

---

೧. ಸ ರುಗ್ಮಿನಾಮಕೋಽಗ್ರಜ ಇತ್ಯತ್ರ ಶ್ರಿಯಃ = ಶ್ರೀರೂಪರುಗ್ಮಿಣ್ಯಾ ಅಗ್ರಜಃ। – (ವಾ.)

೨. ಶ್ರಿಯ ಇತ್ಯುಭಯತ್ರ ಸಂಬಧ್ಯತೇ। ತಥೋಕ್ತಂ ಭಾಗವತೇ–
'ಬಂಧೂನಾಮಿಚ್ಛತಾಂ ದಾತುಂ ಕೃಷ್ಣಾಯ ಭಗಿನೀಂ ನೃಪ।
ರುಗ್ಮೀ ನಿವಾರ್ಯ ಕೃಷ್ಣದ್ವಿಟ್ ಚೈದ್ಯಾಯ ಸಮಕಲ್ಪಯತ್ ॥' ಇತಿ। – (ಜ.)

ಶ್ರಿಯಾ ದ್ವಿಷನ್ನಿತಿ ಕ್ವಚಿತ್ ಪಾಠಃ। – (ತಾ.)

ವಿ: ೧) ರುಗ್ಮಿ ಇಲ್ವಲ ಎಂಬ ಅಸುರನ ಅವತಾರ(೧೪/೯೦). ಅವನಲ್ಲಿ ಶುಚಿ ಎಂಬ ವಹ್ನಿಪುತ್ರನ ಆವೇಶವಿದ್ದದ್ದರಿಂದಾಗಿ ರುಗ್ಮಿಣಿಯ ಅಣ್ಣನಾಗುವ ಭಾಗ್ಯ ಲಭಿಸಿತ್ತು ಎಂದು ತಿಳಿಯಬಹುದು. ಸ್ವಭಾವತಃ ಅಸುರನಾದ ಅವನು ಕೃಷ್ಣನ ಸಹಜದ್ವೇಷಿ. ಆದ್ದರಿಂದ ಭೀಷ್ಮಕ ರುಗ್ಮಿಣಿಯನ್ನು ಕೃಷ್ಣನಿಗೆ ಧಾರೆ ಎರೆಯಲು ಬಯಸಿದರೂ, ಅದಕ್ಕೆ ಅಡ್ಡಿಮಾಡಿ, ಶಿಶುಪಾಲನಿಗೆ ಕೊಡುವ ಉದ್ದೇಶದಿಂದ ಸ್ವಯಂವರದ ಏರ್ಪಾಟು ಮಾಡಿದ್ದ.

೨) ಹರಿಸೇವೆಗೆ ಸಂಪತ್ತಿನ ವಿನಿಯೋಗವನ್ನು ತಡೆಯುವವರೆಲ್ಲ ಇಂತಹ ಅಸುರರೇ ಎಂದು ತಿಳಿಯಬಹುದು. ಸಮುದ್ರಮಥನಕಾಲದಲ್ಲಿ ಅಲಕ್ಷ್ಮಿ ಅಗ್ರಜಳು; ಇಲ್ಲಿ ರುಗ್ಮಿ ಅಗ್ರಜ. ಅವರಿಬ್ಬರೂ ದುಷ್ಟರೇ.

ರುಗ್ಮಿಣೀಸ್ವಯಂವರಕ್ಕೆ ಜರಾಸಂಧಾದಿಗಳ ಪ್ರಯಾಣ

ಪ್ರಘೋಷಿತೇ ಸ್ವಯಂವರೇ೨ಥ ತೇನ ಮಾಗಧಾದಯಃ ।
ಸಮೀಯುರುಗ್ರಪೌರುಷಾಃ ಸಸಾಲ್ವಪೌಂಡ್ರಚೇದಿಪಾಃ ॥ ೩ ॥

ಅ: ಸ್ವಯಂವರವು ಘೋಷಿತವಾದಾಗ, ಜರಾಸಂಧ ಮೊದಲಾದ ಮಹಾಪರಾಕ್ರಮಿಗಳು ಸಾಲ್ವ, ಪೌಂಡ್ರಕ, ಶಿಶುಪಾಲರೊಂದಿಗೆ ಅಲ್ಲಿಗೆ ತೆರಳಿದರು.

ವಿ: ೧) 'ಉಗ್ರಪೌರುಷಾಃ' ಎಂಬ ಮಾತಿನಿಂದ 'ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೋ೨ಹಿತಾಃ' ಎಂಬ ಗೀತಾವಚನ(೧೬/೯)ದಂತೆ ಅವರೆಲ್ಲ ಲೋಕಕ್ಷಯಕಾರಕರಾದ ಉಗ್ರಗಾಮಿಗಳು ಎಂಬ ಅರ್ಥ ಸೂಚಿತ. 'ಉಗ್ರ' ಎಂದರೆ ಶಿವ ಎಂಬ ಅರ್ಥವಿರುವುದರಿಂದ, ಶಿವೋಪಲಕ್ಷಿತವಾದ ಅನ್ಯದೇವತೆಗಳ ವರದಿಂದ ಬಲಶಾಲಿಗಳಾಗಿದ್ದವರು ಎಂದೂ ಅರ್ಥ.

೨) ಸೀತಾಸ್ವಯಂವರಕ್ಕಾಗಿ ರಾಮಾಯಣದಲ್ಲಿ ರಾವಣಾದಿದೈತ್ಯವೃಂದ ಸಾಗಿದಂತೆ, ಆ ಸೀತೆಯೇ ಆದ ರುಗ್ಮಿಣಿಯ ಸ್ವಯಂವರಕ್ಕೆ ಜರಾಸಂಧಾದಿದೈತ್ಯವೃಂದ ಸಾಗಿತು ಎಂದು ತಿಳಿಯಬೇಕು.

ಶ್ರೀಕೃಷ್ಣನ ಆಗಮನ

ತದಾ ಜಗಾಮ ಕೇಶವೋ ಜವೇನ ಕುಂಡಿನಂ ಪುರಮ್ ।
ಸ್ಮೃತೋ೨ಥ ತೇನ ಪಕ್ಷಿರಾಟ್ ಸಮಾಜಗಾಮ ಕೇಶವಮ್ ॥ ೪ ॥

ಅ: ಆಗ ಶ್ರೀಕೃಷ್ಣ ವೇಗದಿಂದ ಕುಂಡಿನಪುರಕ್ಕೆ ನಡೆದ. ಅವನು ನೆನೆಯುತ್ತಲೇ ಪಕ್ಷಿರಾಜನಾದ ಗರುಡ ಅವನೆಡೆಗೆ ಬಂದ.

ವಿ: ಇಲ್ಲಿ 'ಕೇಶವ' ಎಂಬ ಪದದಿಂದ ಬ್ರಹ್ಮರುದ್ರಪ್ರವರ್ತಕನಾದ ಅವನು ಕರೆಯುತ್ತಲೇ ರುದ್ರನಿಗೆ ಸಮನಾದ ಗರುಡ ಆಗಮಿಸಿದ್ದು ಸಹಜ ಎಂಬುದು ಸೂಚಿತ ಎಂದು ತಿಳಿಯಬಹುದು.

ಗರುಡನ ರೆಕ್ಕೆಯ ಗಾಳಿಯಿಂದ ರಾಜರ ಪತನ; ಅವರ ಮಂತ್ರಾಲೋಚನೆ

ಪತತ್ರಿವಾಯುನಾऽಸ್ಯ ತೇ ನರೇಶ್ವರಾಃ ಪ್ರಪಾತಿತಾಃ ।
ಯದೀದೃಶಂ ಪತತ್ರಿಣೋ ಬಲಂ ಹರೇಃ ಕಿಮುಚ್ಯತೇ ॥ ೫ ॥

ಅ: ಆ ಗರುಡನ ರೆಕ್ಕೆಯ ಗಾಳಿಯಿಂದ ರಾಜರುಗಳು ಕೆಳಕ್ಕುರುಳಿದರು. ಗರುಡನ ಬಲವೇ ಹೀಗಿರುವಾಗ, ಹರಿಯ ಬಲವನ್ನು ಏನೆನ್ನುವುದು?

ವಿ: ೧) ಹಾಗೆ ಗರುಡನ ಮೇಲೇರಿ ಕೃಷ್ಣ ತೆರಳುವಾಗ, ಗರುಡನ ರೆಕ್ಕೆಯ ಗಾಳಿಯ ಹೊಡೆತಕ್ಕೆ ಕುಂಡಿನಪುರಕ್ಕೆ ಸಾಗುತ್ತಿದ್ದ ಜರಾಸಂಧನ ಜೊತೆಯಿದ್ದ ರಾಜರೆಲ್ಲ ಉರುಳಿಬಿದ್ದರು.

೨) ಶ್ರೀಕೃಷ್ಣನ ವಾಹನವಾದ ಗರುಡನ ಬಲವೇ ಹೀಗಿರುವಾಗ, ಅವನ ಮೇಲೇರಿ ಕುಳಿತ ಕೃಷ್ಣನ ಬಲ ಇನ್ನೆಷ್ಟಿರಬಹುದು? ಎಂಬ ಭಯ ಜರಾಸಂಧಾದಿಗಳನ್ನು ಕವಿಯಿತು ಎಂದರ್ಥ.

೩) ಗರುಡನ ಬಲವನ್ನು ಶ್ರೀಮದಾಚಾರ್ಯರು ಇಂದ್ರಾದಿಗಳಿಗೂ ಅಚಿಂತ್ಯವಾದ ಅಪೂರ್ವಬಲ ಎಂದು ದ್ವಾದಶಸ್ತೋತ್ರದಲ್ಲಿ ನಿರೂಪಿಸಿರುವುದನ್ನು ಇಲ್ಲಿ ಸ್ಮರಿಸಬಹುದು (೭/೮) :

ನಾಗಾರಿರುಗ್ರಬಲಪೌರುಷ ಆಪ ವಿಷ್ಣೋರ್ವಾಹತ್ವಮುತ್ತಮಜವೋ ಯದಪಾಂಗಲೇಶಮ್ ।
ಆಶ್ರಿತ್ಯ ಶಕ್ರಮುಖದೇವಗಣೈರಚಿಂತ್ಯಂ ಶ್ರೀರ್ಯತ್ಕಟಾಕ್ಷಬಲವತ್ಯಜಿತಂ ನಮಾಮಿ ॥

ಕಿಮತ್ರ ನಃ ಕೃತಂ ಭವೇತ್ ಸುಖಾಯ ಹೀತಿ ತೇऽಬ್ರುವನ್ ।
ಅಥಾಬ್ರವೀಜ್ಜರಾಸುತೋ ಜಯೀ ಪಯೋಬ್ಧಿಮಂದಿರಃ ॥ ೬ ॥

ಕಿಲೈಷ ಪಕ್ಷಿವಾಹನೋ ಯತಶ್ಚ[೧] ನಾನ್ಯಥಾ ಭವೇತ್ ।
ಜಿತಾ ವಯಂ ಚ ಸರ್ವಶೋऽಮುನೈಕಲೇನ ಸಂಯುಗೇ ॥ ೭ ॥

ಅನೇಕಶೋ ನ ಸಂಗತೈರ್ಜಿತಃ ಕದಾಚಿದೇಷ ಹಿ ।
ಅಮುಷ್ಯ ಚಾಗ್ರಜಃ ಪುರಾ ನಿಹಂತುಮುದ್ಯತೋ ಹಿ ಮಾಮ್ ॥ ೮ ॥

ಅದೃಶ್ಯವಾಕ್ಯತೋऽತ್ಯಜತ್ ಪ್ರತಾಡನಾತ್ ಸುಪೀಡಿತಮ್ ।
ಕಿಮಸ್ಯ ತೂಚ್ಯತೇ ಬಲಂ ವಯಂ ತೃಣೋಪಮಾಃ ಕೃತಾಃ ॥ ೯ ॥

---

೧. ಯತಶ್ಚ ನಾನ್ಯಥಾ ಭವೇದಿತ್ಯತ್ರ ಯತೋऽಯಂ ಪಕ್ಷಿವಾಹನಃ ಪಯೋಬ್ಧಿಮಂದಿರಃ ಕಿಲ ಅನ್ಯಥಾ = ಪಯೋಬ್ಧಿಮಂದಿರತ್ವಾಭಾವೇ ನ ಭವೇತ್ = ಪಕ್ಷಿವಾಹನತ್ವಂ ನ ಭವೇತ್ ॥ – (ವಾ.)

'ಗಗನದಲ್ಲಿಸಂಚರಿಪ ಗರುಡದೇವನೆ ತುರಗ' – ಶ್ರೀಪುರಂದರದಾಸರು

ಸಮಸ್ತಶೋ ಮೃಧೇ[೧] ಮೃಧೇ ಹಿ ಯೇನ ಚಾಕ್ಷತೇನ ಹಿ ।
ಕಿಮತ್ರ ಕುರ್ವತಾಂ ಸುಖಂ ಭವೇದುದೀರ್ಣಸಂಕಟೇ ॥ ೧೦ ॥

ಅ: ''ಈಗ ನಾವೇನು ಮಾಡಿದರೆ ಒಳಿತಾದೀತು?'' ಎಂದು ಅವರೆಲ್ಲ ಚಿಂತಿಸ-ತೊಡಗಿದರು. ಆಗ ಜರಾಸಂಧ ನುಡಿದ : ''ಸದಾ ಜಯಿಸುತ್ತಿರುವ ಈ ಕೃಷ್ಣ ವಿಷ್ಣುವೇ ಸರಿ. ಇಲ್ಲದಿದ್ದಲ್ಲಿ ಇವನು ಪಕ್ಷಿವಾಹನನೆಂತಾಗುತ್ತಿದ್ದ? ನಾವೆಲ್ಲರೂ ಇವನೊಬ್ಬನಿಂದಲೇ ಸಮರದಲ್ಲಿ ಪ್ರತಿಬಾರಿಯೂ ಸೋತಿದ್ದೇವೆ. ನಾವು ಅನೇಕಸಲ ಒಟ್ಟಾಗಿ ತೆರಳಿದರೂ, ಇವನನ್ನು ಒಮ್ಮೆಯೂ ಗೆಲ್ಲಲಾಗಿಲ್ಲ. ಇವನ ಅಣ್ಣ ಬಲರಾಮ ಹಿಂದೊಮ್ಮೆ ನನ್ನನ್ನು ಕೊಲ್ಲಲೆಂದೇ ಹೊರಟಿದ್ದ. ಪೆಟ್ಟುತಿಂದು ಬಳಲಿದ್ದ ನನ್ನನ್ನು ಅಶರೀರವಾಣಿಯ ಮಾತಿನಿಂದ ಬಿಟ್ಟುಬಿಟ್ಟ. ಇನ್ನು ಇವನ ಬಲವನ್ನು ಏನು ಹೇಳುವುದು? ಅವನು ತಾನು ಪೆಟ್ಟು ತಿನ್ನದೆ, ನಮ್ಮನ್ನೆಲ್ಲ ಪ್ರತಿಯುದ್ಧದಲ್ಲೂ ಹುಲ್ಲುಕಡ್ಡಿಯಂತಾಗಿಸುತ್ತಿರುವನು. ಇಂತಹ ಮಹಾಸಂಕಟದಲ್ಲಿ ನಾವು ಏನು ಮಾಡಿದರೆ ಹಿತವಾದೀತು?''.

ವಿ: ೧) ''ಈಗ ಏನು ಮಾಡುವುದು?'' ಎಂಬ ಇತರರ ಪ್ರಶ್ನೆಗೆ ''ಈಗ ಏನು ಮಾಡುವುದು?''ಎಂಬುದೇ ಜರಾಸಂಧನ ಉತ್ತರವಾಗಿತ್ತು ಎಂಬಲ್ಲಿ ಅವನಿಗಾಗಿದ್ದ ಹತಾಶೆ ವ್ಯಕ್ತ-ವಾಗುತ್ತದೆ. **'ಅಂಧೇನೈವ ನೀಯಮಾನಾ ಯಥಾऽಂಧಾಃ'** ಎಂಬ ಶ್ರುತಿವಾಕ್ಯಕ್ಕೆ ಇದು ನಿದರ್ಶನ.

೨) ಗರುಡ ಮತ್ತು ಬಲರಾಮರ ಬಲವನ್ನು ಸ್ಮರಿಸಿಕೊಂಡ ಅವನು ಶ್ರೀಕೃಷ್ಣ ಅವರಿಬ್ಬರಿಗಿಂತಲೂ ಮಿಗಿಲು ಎಂಬುದನ್ನು ಮನಗಂಡು, ಮತ್ತೂ ಹೆಚ್ಚಿನ ವ್ಯಥೆಗೆ ಒಳಗಾದನು. ಬಲರಾಮನ ಹೊಡೆತಕ್ಕೇ ಸಾಯಬಹುದಿದ್ದ ತಾನು, ಅಶರೀರವಾಣಿಯಿಂದ ಬದುಕಿದೆ ಎಂಬ ವಿಷಯವನ್ನೂ ಹೊರಹಾಕುತ್ತಾನೆ. ಇದು ಬಲರಾಮನಿಗೆ ಕೇಳಿಸಿದ್ದ ಅಶರೀರವಾಣಿ(೧೬/೨೪,೨೫), ಇವನಿಗೂ ಅರಿವಾದದ್ದಕ್ಕೆ ದ್ಯೋತಕ.

ಶಿಶುಪಾಲದಂತವಕ್ರರಿಂದ ಶರಣಾಗತಿಗೆ ಸಲಹೆ

ಇತಿ ಬ್ರುವನ್ನವಾಙ್ಮುಖಂ ನೃಪಶ್ಚಕಾರ ವಿಚ್ಛವಿಃ।
ಅಥಾಹ ಚೇದಿಭೂಪತಿಃ ಸದಂತವಕ್ರಕೋ ವಚಃ ।
ಪುರಾ ಹರೇರ್ಹಿ ಪಾರ್ಷದಃ ಪ್ರಸನ್ನಬುದ್ಧಿರೇಕದಾ ॥ ೧೧ ॥

---

೧. ಮೃಧೇಮೃಧೇ ಯುದ್ಧೇಯುದ್ಧೇ । – (ಜ.)

ಅ: ಹೀಗೆ ನುಡಿಯುತ್ತಾ ಜರಾಸಂಧ ಕಳಾಹೀನನಾಗಿ ಮುಖ ತಗ್ಗಿಸಿದ. ಆಗ ಚೇದಿರಾಜನಾದ ಶಿಶುಪಾಲ ಮಾತನಾಡಿದ; ಜೊತೆಗೆ ದಂತವಕ್ರ ಸಹ. ಅವರಿಬ್ಬರೂ ಹಿಂದೆ ಹರಿಯ ಪರಿಚಾರಕರಾಗಿದ್ದರಿಂದ ಒಮ್ಮೊಮ್ಮೆ ಅವರ ಬುದ್ಧಿ ತಿಳಿಯಾಗುತ್ತಿತ್ತು.

ಶೃಣುಷ್ವ ರಾಜಸತ್ತಮ ಪ್ರಭುಂ ಶಿವಸ್ವಯಂಭುವೋಃ ।
ಹರಿಂ ವದಂತಿ ಕೇಚಿದಪ್ಯದೋ ಭವೇನ್ನ ವೈ ಮೃಷಾ ॥ ೧೨ ॥

ತಥಾऽऽವಯೋಶ್ಚ ದರ್ಶನೇ ಭವೇತ್ ಕದಾಚಿದೂರ್ಜಿತಾ ।
ಅಮುಷ್ಯ ಭಕ್ತಿರನ್ಯಥಾ ಪುನಶ್ಚ ಜಾಯತೇ ಕ್ರುಧಾ ॥ ೧೩ ॥

ನ[೧] ಕಾರಣಂ ಚ ವಿದ್ಮಹೇ ನ ಸಂಶಯಃ ಪರೋ ಹರಿಃ ।
ವ್ರಜಾಮ ತಂ ಸುಖಾರ್ಥಿನೋ ವಯಂ ವಿಹಾಯ ಶತ್ರುತಾಮ್ ॥ ೧೪ ॥

ಇದಂ ಹಿ ನಃ ಶುಭಪ್ರದಂ ನ ಚಾನ್ಯಥಾ ಶುಭಂ ಕ್ವಚಿತ್ ।
ಇತೀರಿತೋ ಜರಾಸುತೋ ದದರ್ಶ ತೌ ದಹನ್ನಿವ ॥ ೧೫ ॥

ಅ: ''ರಾಜಶ್ರೇಷ್ಠನೆ! ಆಲಿಸು; ಕೆಲವರು ಶ್ರೀಕೃಷ್ಣನನ್ನು ಬ್ರಹ್ಮಶಿವರಿಗೂ ಪ್ರಭುವಾದ ಹರಿ ಎನ್ನುವರು. ಅದು ಸುಳ್ಳಿರಲಾರದು. ಅವನನ್ನು ಕಂಡಾಗ ನಮ್ಮಿಬ್ಬರಿಗೂ ಹಾಗೆಯೇ ಒಮ್ಮೊಮ್ಮೆ ಅವನಲ್ಲಿ ಬಹಳ ಭಕ್ತಿ ಹುಟ್ಟುವುದು. ಹಾಗಿಲ್ಲದಾಗ ಮರಳಿ ದ್ವೇಷ ಮೂಡುವುದು. ಕಾರಣವನ್ನು ನಾವು ಅರಿಯೆವು. ಶ್ರೀಕೃಷ್ಣ ಸರ್ವೋತ್ತಮನೆಂಬಲ್ಲಿ ಮಾತ್ರ ಸಂದೇಹವಿಲ್ಲ. ಒಳಿತು ಬಯಸುವ ನಾವು ಶತ್ರುತ್ವವನ್ನು ತೊರೆದು, ಅವನನ್ನು ಶರಣುಹೊಂದೋಣ. ಇದು ನಮಗೆ ಶುಭಕರ; ಇಲ್ಲವಾದಲ್ಲಿ ಎಲ್ಲೂ ಒಳಿತಾಗದು''. ಹೀಗೆ ನುಡಿದ ಅವರಿಬ್ಬರನ್ನು ಜರಾಸಂಧ ಸುಟ್ಟುಬಿಡುವಂತೆ ನೋಡಿದ.

ವಿ: ೧) ಶಿಶುಪಾಲದಂತವಕ್ರರಲ್ಲಿ ಆವಿಷ್ಟರಾಗಿದ್ದ ಜಯವಿಜಯರು ಮೂಲತಃ ಶ್ರೀಹರಿಯ ದ್ವಾರಪಾಲಕರಾಗಿದ್ದ ಹರಿಭಕ್ತರು. ಅದಕ್ಕೆಂದೇ ಅವರಿಗೆ ಇಂತಹ ಒಳ್ಳೆಯ ಬುದ್ಧಿ ಆಗಾಗ ಹುಟ್ಟುತ್ತಿತ್ತು ಎಂದರ್ಥ.

---

೧. ಶರಣಮಿತಿ ಶೇಷಃ । –(ವ.)

೨) ಜರಾಸಂಧ ಸ್ವಭಾವತಃ ಮಹಾಹರಿದ್ವೇಷಿಯಾದ್ದರಿಂದ ಅವನಿಗೆ 'ಕೃಷ್ಣನಿಗೆ ಶರಣಾಗಬೇಕು' ಎಂಬ ಅವರ ಮಾತು ಸಹಜವಾಗಿಯೇ ಅಪ್ರಿಯವೆನ್ನಿಸಿತ್ತು ಅದರಿಂದಾಗಿ ಅವರನ್ನು ಕೋಪದಿಂದ ಸುಟ್ಟುಬಿಡುವಂತೆ ನೋಡಿದ.

ಸಾಲ್ವನಿಂದ ಶಿಶುಪಾಲದಂತವಕ್ರರ ಭರ್ತ್ಸನೆ

ಅಥ ಪ್ರಹಸ್ಯ ಸೌಭರಾಟ್ ವಚೋ ಜಗಾದ ಮಾಗಧಮ್।
ವಿನಿಂದ್ಯ ತೌ ಕ್ರುಧಾ ಸ್ಫುರನ್ ಕ್ರುಧಾ ಸ್ಫುರಂತಮೀಕ್ಷ್ಯ ಚ ॥ ೧೬ ॥

ಅ: ಆಗ ಸಾಲ್ವ ಅವರಿಬ್ಬರನ್ನೂ ಅಪಹಾಸ ಮಾಡಿ, ಬೈದ. ಕೋಪದಿಂದ ಕೆರಳಿ, ಸಿಟ್ಟಿನಿಂದ ಕುದಿಯುತ್ತಿದ್ದ ಜರಾಸಂಧನನ್ನು ನೋಡಿ, ಅವನಿಗೆ ಈ ಮಾತನ್ನಾಡಿದ.

ವಿ: ಜರಾಸಂಧನಂತೆ ಸಾಲ್ವನೂ ಅಸುರನಾದ್ದರಿಂದ, ಅವನಿಗೂ ಅವರಿಬ್ಬರ ಮಾತು ಕೋಪ ಕೆರಳಿಸಿತು ಎಂದರ್ಥ. ಬಲಿ ಚಕ್ರವರ್ತಿಯೊಳಗೆ ಪ್ರವೇಶಿಸಿ, ಅವನ ಬುದ್ಧಿಯನ್ನು ಕೆಡಿಸಿದ್ದ ಬಲಿ ಎಂಬ ಅಸುರನೇ ಸಾಲ್ವನಾಗಿ ಜನಿಸಿದ್ದ ವಿವರ ಈ ಹಿಂದೆ ಬಂದಿದೆ (೧೧/೨೧೧).

ನ ತನ್ಮೃಷಾ ಹರಿಃ ಸ್ವಯಂ ಜನಾರ್ದನೋ ವಧಾಯ ನಃ।
ಪ್ರಜಾತ ಏಷ ಯಾದವೋ ವಯಂ ಚ ದಾನವೇಶ್ವರಾಃ ॥ ೧೭ ॥

ಅ: ''ಶ್ರೀಕೃಷ್ಣ ಸಾಕ್ಷಾತ್ ಜನಾರ್ದನನಾದ ಹರಿ; ನಮ್ಮ ವಧೆಗೆಂದೇ ಯಾದವನಾಗಿ ಹುಟ್ಟಿರುವನು ಎಂಬುದು ಸುಳ್ಳಲ್ಲ. ಆದರೆ ನಾವೆಲ್ಲ ಅಸುರಶ್ರೇಷ್ಠರಾದವರು.

ಸ್ವಧರ್ಮ ಏಷ ನಃ ಸದಾ ದೃಢಪ್ರತೀಪತಾ ಹರೌ।
ಸ್ವಧರ್ಮಿಣೋ ಹತಾ ಅಪಿ ಪ್ರಯಾಮ ಸದ್ಗತಿಂ ಧ್ರುವಮ್ ॥ ೧೮ ॥

ಅ: ಸದಾ ಸ್ಥಿರವಾಗಿ ಹರಿಯನ್ನು ದ್ವೇಷಿಸುವುದು ನಮಗೆ ಸ್ವಧರ್ಮ. ಸ್ವಧರ್ಮವನ್ನು ಪಾಲಿಸಿದರೆ, ಹತರಾದರೂ ನಾವು ಖಚಿತವಾಗಿ ಸದ್ಗತಿ ಹೊಂದುವೆವು.

ವಿ: 'ಸ್ವಧರ್ಮೇ ನಿಧನಂ ಶ್ರೇಯಃ' ಎಂಬ ಶಾಸ್ತ್ರವಚನವನ್ನು ವರ್ಣಾಶ್ರಮೋಚಿತವಾದ ಭಾಗವತಧರ್ಮ ಎಂದು ಅರ್ಥ ಮಾಡಿಕೊಳ್ಳದೆ, ಹರಿದ್ವೇಷಾದಿರೂಪಕರ್ತವ್ಯವೆಂದು ಭ್ರಮಿಸುವುದು ಇಂತಹ ಅಸುರರ ರೀತಿ. ಕಳ್ಳಸುಳ್ಳರ ಸ್ವಧರ್ಮ ಕಳ್ಳತನ, ಸುಳ್ಳುತನವೇ ಆದಲ್ಲಿ ಅದು ಸಮಾಜಕೆ ಹಿತಕರವೆಂತಾದೀತು? ಈ ಬಗ್ಗೆ ಕನಿಷ್ಠ ಚಿಂತನೆಯೂ ಇಲ್ಲದ ಮೂರ್ಖತನ ಅವರದು ಎಂದು ತಿಳಿಯಬೇಕು.

ಶಿವಶ್ಚ ನಃ ಪರಾ[೧] ಗತಿರ್ಗುರುರ್ಭವಾನರಿರ್ಹರಿಃ।
ಇತೀರಿತಃ ಸ ಮಾಗಧೋ ಜಗಾದ ಸಾಧು ಸಾಧ್ವಿತಿ ॥ ೧೯ ॥

ಅ: ನಮಗೆ ಶಿವನೇ ಪರದೈವ; ನೀನೇ ಗುರು; ಹರಿಯೇ ಶತ್ರು''. ಸಾಲ್ವ ಹೀಗೆನ್ನಲು ಆ ಜರಾಸಂಧ ''ಸರಿ, ಸರಿ'' ಎಂದ.

ವಿ: ಸಾತ್ತ್ವಿಕರಿಗೆ 'ಆಚಾರ್ಯಃ ಪವನೋಽಸ್ಮಾಕಂ ಆಚಾರ್ಯಾನೀ ಚ ಭಾರತೀ । ದೇವೋ ನಾರಾಯಣ ಶ್ರೀಶಃ ದೇವೀ ಮಂಗಲದೇವತಾ' ಎಂಬ ಸುದೀಕ್ಷೆ ಇರುವಂತೆ, ತಾಮಸರಿಗೆ ಸಾಲ್ವನಂತಹ ವಿಕೃತದೀಕ್ಷೆ ಇರುವುದು ಎಂದು ಇದರಿಂದ ತಿಳಿಯುವುದು.

ಜರಾಸಂಧಾದಿಗಳ ಯುದ್ಧನಿಶ್ಚಯ

ತಥೈವ ರುಗ್ಮಿಪೂರ್ವಕಾಃ ಕರೂಶಚೇದಿಪೌ ಚ ತೌ ।
ವಿನಿಶ್ಚಯಂ ಕುಬುದ್ಧಯೋ ಯುಧೇ ಚ ಚಕ್ರುರೂರ್ಜಿತಮ್ ॥ ೨೦ ॥

ಅ: ಅದರಂತೆ ದುರ್ಬುದ್ಧಿಯುಳ್ಳ ರುಗ್ಮಿ ಮೊದಲಾದವರು, ಆ ಶಿಶುಪಾಲದಂತವಕ್ರರು ಯುದ್ಧಕ್ಕೆಂದು ದೃಢನಿಶ್ಚಯ ಮಾಡಿದರು.

ವಿ: ರುಗ್ಮಿ ಮೊದಲಾದವರು ಸಾಲ್ವನ ಮಾತನ್ನು ಅಂಗೀಕರಿಸಿದಂತೆ, ಶಿಶುಪಾಲದಂತವಕ್ರರೂ ಅಂಗೀಕರಿಸಿಬಿಟ್ಟರು. ಅದಕ್ಕೆ ಅವರು ಸ್ವರೂಪತಃ ಹಿರಣ್ಯಕಶಿಪು, ಹಿರಣ್ಯಾಕ್ಷರೆಂಬ ಅಸುರರಾಗಿದ್ದುದೇ ಕಾರಣ. ಆ ವೇಳೆಗೆ ಅವರೊಳಗಿದ್ದ ಜಯವಿಜಯರ ಆವೇಶ ತಗ್ಗಿತ್ತು ಎಂದು ತಿಳಿಯಬೇಕು.

ಶಿಶುಪಾಲದಂತವಕ್ರರಿಂದ ಕ್ಷಮಾಯಾಚನೆ

ಸದಾ ಪ್ರತೀಪಕಾರಿಣೌ[೩] ಭವಾವ ಕೃಷ್ಣ ಇತ್ಯಪಿ ।
ಗುರೋಃ ಪ್ರಸಾದಮಾಪ್ನುತಾಂ ಕರೂಶಚೇದಿಭೂಭೃತೌ ॥ ೨೧ ॥

---

೧. ಪರಾ ಗತಿಃ ಪರದೈವಮಿತ್ಯರ್ಥಃ। – (ವ.)

೨. ಪ್ರತಿಜ್ಞಾಂ ಕೃತ್ವಾ ಇತ್ಯರ್ಥಃ – (ಜ.)

೩. ಯದಾ ಕರುಶಚೇದಿಭೂಭೃತಾವಪಿ ಕೃಷ್ಣೇ ಸದಾ ಪ್ರತೀಪಕಾರಿಣೌ ಭವಾವೇತಿ ನಿಶ್ಚಯಂ ಚಕ್ರತುಃ ತದಾ ಗುರೋರ್ಜರಾಸಂಧಸ್ಯ ಪ್ರಸಾದಮಾಪ್ನುತಾಂ= ಗತಾವಿತ್ಯನ್ವಯಃ। ಲಿಙ್ ದ್ವಿವಚನಮ್ ॥ – (ವಾ.)

ಅ: ''ನಾವಿಬ್ಬರೂ ಕೃಷ್ಣನಲ್ಲಿ ಸದಾ ವಿರೋಧಮಾಡುವವರಾಗುವೆವು'' ಎಂಬುದಾಗಿ ಶಿಶುಪಾಲದಂತವಕ್ರರು ಶಪಥಗೈದು, ಗುರುವಾದ ಜರಾಸಂಧನ ಪ್ರಸನ್ನತೆ ಗಳಿಸಿದರು.

ವಿ: ತಾವು ಆ ಮುಂಚೆ ನುಡಿದಿದ್ದ ಶ್ರೀಕೃಷ್ಣನಿಗೆ ಶರಣಾಗುವ ವಿಚಾರದ ಬಗ್ಗೆ ಪಶ್ಚಾತ್ತಾಪ ವ್ಯಕ್ತಪಡಿಸಿ, ಇನ್ನು ಮುಂದೆ ಹಾಗೆ ಮಾಡದೆ, ಶ್ರೀಕೃಷ್ಣನ ವಿರೋಧದಲ್ಲೇ ದೃಢನಿಶ್ಚಯ ಹೊಂದಿ, ಜರಾಸಂಧನಿಗೆ ಸಮ್ಮತವಾಗುವಂತೆ ನಡೆಯುವುದಾಗಿ ಶಪಥ ಮಾಡಿ, ಅವನ ಪ್ರೀತಿಗೆ ಪುನಃ ಪಾತ್ರರಾದರು ಎಂದರ್ಥ.

ಕೃಷ್ಣನನ್ನು ಅವಮಾನಿಸಲು ಜರಾಸಂಧಾದಿಗಳ ಯೋಜನೆ

ಪುನಶ್ಚ ತೇ ತ್ವಮಂತ್ರಯನ್ ಸಹೈವ ಪಾಪಬುದ್ಧಯಃ ।
ಧ್ರುವಂ ಸಮಾಗತೋ ಹರಿರ್ಲಭೇತ ರುಗ್ಮಿಣೀಮಿಮಾಮ್ ॥ ೨೨ ॥

ಅ: ಮತ್ತೆ ಆ ಪಾಪಬುದ್ಧಿಯ ಜರಾಸಂಧಾದಿಗಳು ಒಟ್ಟಾಗಿ ವಿಚಾರ ಮಾಡತೊಡಗಿದರು. ''ಕೃಷ್ಣ ಸ್ವಯಂವರಕ್ಕೆ ಆಗಮಿಸಿದರೆ, ಈ ರುಗ್ಮಿಣಿಯನ್ನು ಪಡೆಯುವುದು ನಿಶ್ಚಿತ.

ಅಯಂ ತ್ರಿಲೋಕಸುಂದರೋಽನುರೂಪಿಣೀ[೧] ಚ ರುಗ್ಮಿಣೀ।
ಮುಖೇನ[೨] ಬಾಹುನಾಽಪ್ಯಯಂ ಸಮಸ್ತಲೋಕಜಿದ್ವಶೀ ॥ ೨೩ ॥

ಅ: ಕೃಷ್ಣ ತ್ರಿಲೋಕಸುಂದರ; ರುಗ್ಮಿಣಿಯೂ ಅವನಿಗೆ ಅನುರೂಪಳಾದವಳು. ಇವನು ಮಾತಿನಿಂದಲೂ, ಶಕ್ತಿಯಿಂದಲೂ ಸಮಸ್ತಲೋಕಗಳನ್ನು ಗೆಲ್ಲಬಲ್ಲವ; ವಶದಲ್ಲಿರಿಸಿಕೊಳ್ಳಬಲ್ಲವ.

ವಿ: ೧) ಕೃಷ್ಣ ಸಾಕ್ಷಾನ್ಮನ್ಮಥಮನ್ಮಥ; ರುಗ್ಮಿಣಿಯೂ ಅದರಂತೆ ಸರ್ವೋತ್ಕೃಷ್ಟ ಸುಂದರಿ. ಅವರಿಬ್ಬರ ವಿವಾಹ ಉಚಿತ ಎಂದರ್ಥ.

೨) ಮುಖೇನ ಎಂಬುದಕ್ಕೆ 'ಮುಖದರ್ಶನಮಾತ್ರೇಣ' – ಅವನ ಮುಖ ನೋಡುತ್ತಲೇ ಜಗತ್ತು ಅವನ ವಶವಾಗುವುದು ಎಂಬ ಅರ್ಥವನ್ನೂ ಮಾಡಬಹುದು. ದರ್ಶನಮಾತ್ರೇಣ ಸಕಲಲೋಕಜಯ ಶ್ರೀಕೃಷ್ಣನ ಹಿರಿಮೆ. ಅದರಂತೆ ಅವನ ಬಾಹುಬಲವು ಸರ್ವಲೋಕವನ್ನು ಗೆಲ್ಲುವಂತಹುದು. ಮುಖದ ಕಾಂತಿಯಿಂದಲೇ ಸಕಲಲೋಕಗಳನ್ನು ಮೀರಿಸುವವನು ಶ್ರೀಕೃಷ್ಣ ಎಂದರ್ಥ.

---

೧. **ಸುರೂಪಿಣೀ** – (ಪಾಠಾಂತರ)

೨. ಮಖೇನ ಮುಖತೇಜಸಾ ... ಮುಖತೇಜಸಾ ತಿರಸ್ಕೃತಸಮಸ್ತಲೋಕಮುಖಕಾಂತಿರಿತಿ ಭಾವಃ। – (ವ.)

೩) 'ಮುಖೇನ' ಎಂಬುದಕ್ಕೆ 'ಮಾತಿನಿಂದ' ಎಂಬ ಅರ್ಥವೂ ಆಗುವುದು. ('ವಲ್ಗು–ವಾಕ್ಯಯಾ ಬುಧಮನೋಜ್ಞಯಾ' – ಗೋಪೀಗೀತ). ಅವನ ಮನೋಹರವಾದ ಮಾತು ಭಕ್ತರಿಗೆ ಆಕರ್ಷಕ; ದುಷ್ಟರಿಗೆ ಮಾರಕ. ಪ್ರತಿವಾದಿಗಳೆಂದೂ ಕೃಷ್ಣನ ಮುಂದೆ ಪ್ರತ್ಯುತ್ತರವಿಲ್ಲದಾಗುವರು ಎಂದರ್ಥ.

೪) 'ಮುಖೇನ' ಎಂಬುದು ವಾಗ್ಬುದ್ಧಕ್ಕೂ, 'ಬಾಹುನಾ' ಎಂಬುದು ಬಾಹುಯುದ್ಧಕ್ಕೂ ಸಂಕೇತವಾಗಿ, ಕೃಷ್ಣ ಸರ್ವಾತ್ಮನಾ ಸರ್ವಲೋಕಗಳನ್ನೂ ಗೆಲ್ಲುವ ಮಹಾಸಮರ್ಥ ಎಂದಾಗುವುದು.

ಸಮಸ್ತವೇದಿನಾಂ ವರಂ ಜಿತಾರಿಮಗ್ಯ್ರರೂಪಿಣಮ್ ।
ಸಮಸ್ತಯೋಷಿತಾಂ ವರಾ ವ್ರಜೇತ ರುಗ್ಮಿಣೀ ಧ್ರುವಮ್ ॥ ೨೪ ॥

ಅ: ಶ್ರೀಕೃಷ್ಣ ಎಲ್ಲ ಬಲ್ಲವರಲ್ಲಿ ಶ್ರೇಷ್ಠ; ಶತ್ರುಗಳನ್ನು ಜಯಿಸಿದವ; ಅತ್ಯಂತಸುರೂಪಿ; ಅವನನ್ನು ಸಮಸ್ತಸ್ತ್ರೀಯರಲ್ಲಿ ಉತ್ತಮಳಾದ ರುಗ್ಮಿಣಿ ಒಲಿಯುವುದು ನಿಶ್ಚಿತ.

ವಯಂ ಚ ಮಾನಸಂಕ್ಷಯಂ ನಿತಾಂತಮಾಪ್ನುಮಸ್ತದಾ।
ನ ಶಕ್ನುಮೋ ನಿವಾರಿತುಂ ಶರೈರಮುಂ ಕಥಂಚನ ॥ ೨೫ ॥

ಅ: ಆಗ ನಾವು ಬಹಳವಾಗಿ ಮಾನ ಕಳೆದುಕೊಳ್ಳುವೆವು. ಕೃಷ್ಣನನ್ನು ಬಾಣಗಳಿಂದ ತಡೆಯುವುದಂತೂ ನಮಗೆ ಸರ್ವಥಾ ಆಗದು.

ಅತಃ ಸ್ವಯಂವರೇ ಯಥಾ ನ ಸಂಗಮೋ ಹರೇರ್ಭವೇತ್।
ತಥಾ ವಿಧಾನಮೇವ ನಃ ಸುನೀತಿರೂರ್ಜಿತಾ ಧ್ರುವಮ್ ॥ ೨೬ ॥

ಅ: ಆದ್ದರಿಂದ ಸ್ವಯಂವರದಲ್ಲಿ ಕೃಷ್ಣನ ಸಂಗಮವಾಗದಿರುವಂತೆ ಮಾಡುವುದೇ ನಮಗೆ ವಿಹಿತವಾಗಿರುವ ಉತ್ತಮನೀತಿ ಎಂಬುದು ನಿಶ್ಚಿತ.

ವಿ: ಶ್ರೀಕೃಷ್ಣ ಸ್ವಯಂವರಕ್ಕೆ ಬಂದರೆ, ಕೃಷ್ಣ ರುಗ್ಮಿಣಿಯರ ಸಂಗಮವಾಗುವುದು. ಹಾಗಾದಲ್ಲಿ ಅವರಿಬ್ಬರ ವಿವಾಹ ನಿಶ್ಚಿತ. ಆದ್ದರಿಂದ ಶ್ರೀಕೃಷ್ಣ ಸ್ವಯಂವರಮಂಟಪಕ್ಕೆ ಬರದಿರುವಂತೆ ತಡೆ–ಯುವುದೇ ನಾವೀಗ ಕೈಗೊಳ್ಳಬೇಕಾದ ಸಮರನೀತಿ ಎಂದು ನಿಶ್ಚಯಿಸಿದರು. ಇದು ಶ್ರೀಮಧ್ವರನ್ನು ಸಭೆಗಳಿಗೆ ಬರದಂತೆ ತಡೆಯುವ ಪ್ರತಿವಾದಿಗಳ ಪ್ರಯತ್ನದಂತೆ ಎಂದು ತಿಳಿಯಬೇಕು (ಮ.ವಿ. ೧೨/೨೪).

ಅತೋ ನ ದೇಯಮಸ್ಯ ನಃ ಸುಭೂಭುಜಾಂ ಸಮಾಗಮೇ।
ಕ್ವಚಿತ್ ಕದಾಚಿದಾಸನಂ ನ ಚಾರ್ಘ್ಯಪೂರ್ವಕೋ ವಿಧಿಃ ॥ ೨೭ ॥

ಅ: ಆದ್ದರಿಂದ ರಾಜರಾದ ನಾವೆಲ್ಲ ಸೇರಿರುವಾಗ ಶ್ರೀಕೃಷ್ಣನಿಗೆ ಎಲ್ಲಿಯೂ, ಎಂದೂ ಆಸನ ನೀಡಕೂದು. ಅರ್ಘ್ಯ ಮೊದಲಾದ ಉಪಚಾರವನ್ನೂ ನೀಡಬಾರದು.

[೧]ನ ಚಾಸ್ಯತಿ ಕ್ಷಿತೌ ಕ್ವಚಿದ್ವಿಮಾನಿತಃ ಪುರೋ ಹಿ ನಃ।
ವರಾಸನಸ್ಥಭೂಭುಜಾಂ ಸ ಮಾನಿತೋ ಹಿ ದೈವತೈಃ ॥ ೨೮ ॥

ಅ: ರಾಜರುಗಳಾದ ನಾವೆಲ್ಲ ಉತ್ತಮ ಆಸನದಲ್ಲಿ ಕುಳಿತಾಗ, ದೇವತೆಗಳಿಂದಲೂ ಮಾನಿತನಾದ ಆ ಕೃಷ್ಣ ಅವಮಾನಕ್ಕೊಳಗಾಗಿ ನಮ್ಮೆದುರು ನೆಲದ ಮೇಲೆ ಕುಳ್ಳಿರಲಾರ.

ಸ ದರ್ಪಮಾನಸಂಯುತಃ ಕ್ರುಧಾ ಪ್ರಯಾಸ್ಯತಿ ಧ್ರುವಮ್।
ಪುರೀಂ ಸ್ವಕಾಂ ತತೋ ವಯಂ [೨]ವಿಧೇಮ ಚ ಸ್ವಯಂವರಮ್ ॥ ೨೯ ॥

ಅ: ದರ್ಪಮಾನಗಳಿಂದ ಕೂಡಿದ ಅವನು ಕೆರಳಿ ನಿಶ್ಚಿತವಾಗಿಯೂ ಅಲ್ಲಿಂದ ತನ್ನ ಪಟ್ಟಣಕ್ಕೆ ತೆರಳಿಬಿಡುವನು. ನಾವಾಗ ಸ್ವಯಂವರವನ್ನು ಮಾಡೋಣ''.

ವಿ: ಅವರೆಲ್ಲರೂ ಕೈಗೊಂಡ ಒಟ್ಟು ನಿಶ್ಚಯ ಕೃಷ್ಣರುಗ್ಮಿಣಿಯರ ಸಂಗಮ ಸರ್ವಥಾ ಆಗಕೂಡದು ಎಂದು. ಕೃಷ್ಣ ಸ್ವಯಂವರಮಂಟಪದಲ್ಲಿದ್ದರೆ, ಅವರ ಸಂಗಮ ತಪ್ಪಿದ್ದಲ್ಲ. ಅವನನ್ನು ಸ್ವಯಂವರಮಂಟಪಕ್ಕೆ ಬರದಂತೆ ಮಾಡುವ ಅವರ ಪ್ರಯತ್ನ ಈಗಾಗಲೇ ವ್ಯರ್ಥವಾಗಿದೆ. ಇನ್ನು ಸ್ವಯಂವರಮಂಟಪಕ್ಕೆ ಬಂದ ನಂತರ ಸ್ವಯಂವರ ಪ್ರಾರಂಭವಾಗುವ ಮುನ್ನವೇ ಅಲ್ಲಿಂದ ತೆರಳುವಂತೆ ಮಾಡುವುದು. ಅದಕ್ಕೆ ತುಂಬಾ ಶ್ರೇಷ್ಠವಾದ ಉಪಾಯ ಅವನಿಗೆ ಅವಮಾನ ಮಾಡುವುದೇ ಆಗಿದೆ. ರಾಜರಾದ ತಾವೆಲ್ಲ ಉನ್ನತ ಆಸನಗಳಲ್ಲಿ ಕುಳಿತು, ಕೃಷ್ಣನು ರಾಜನಲ್ಲವೆಂಬ ಕಾರಣವನ್ನು ಮುಂದಿಟ್ಟು, ಅವನಿಗೆ ಆಸನ ದೊರಕದಂತೆ ಮಾಡಿದರೆ, ಅವಮಾನಿತನಾದ ಅವನು ಅಲ್ಲಿಂದ ಹೊರಟುಬಿಡುವನು. ಬಳಿಕ ರುಗ್ಮಿಣೀಸ್ವಯಂವರ ಮಾಡಿದರಾಯಿತು ಎಂಬುದು ಅವರ ಒಟ್ಟು ವಿಚಾರಸರಣಿ.

---

೧. ನ ಚಾಸ್ಯತಿ ಕ್ಷಿತಾವಿತ್ಯತ್ರ 'ಆಸ ಉಪವೇಶನ'ಇತಿ ಧಾತೋಃ ದಾಸ್ಯತೀತಿವತ್ ಲೃಟ ರೂಪಮಿದಮ್॥ – (ವಾ.)

೨. ತತಃ ಕೃಷ್ಣಗಮನಾನಂತರಂ ವಿಧೇಮ ಕುರ್ಮಃ। – (ವ.)

ಕ್ರಥಕೈಶಿಕರ ಕೃಷ್ಣಭಕ್ತಿ

ಇತಿ ಸ್ಮ ಸರ್ವಭೂಭುಜಾಂ ವಿನಿಶ್ಚಯಂ ಸಕೈಶಿಕಃ।
ಕ್ರಥೋಽವಗಮ್ಯ ಭೀಷ್ಮಕಾನುಜೋಽಭ್ಯಯಾದ್ಧರಿಂ ದ್ರುತಮ್ ॥ ೩೦ ॥

ಅ: ಹೀಗೆ ಆ ಎಲ್ಲ ರಾಜರುಗಳು ನಿರ್ಣಯ ಕೈಕೊಂಡದ್ದನ್ನು ಕ್ರಥ ಮತ್ತು ಕೈಶಿಕ ಎಂಬ ಭೀಷ್ಮಕರಾಜನ ತಮ್ಮಂದಿರಿಬ್ಬರು ತಿಳಿದು, ತ್ವರೆಯಿಂದ ಶ್ರೀಕೃಷ್ಣನ ಬಳಿಗೆ ತೆರಳಿದರು.

ವಿ: ೧) ಆ ರಾಜಸಭೆಯಲ್ಲಿದ್ದ ಕ್ರಥಕೈಶಿಕರೆಂಬ ಭೀಷ್ಮಕನ ತಮ್ಮಂದಿರು ಕ್ರಮವಾಗಿ ಪವಮಾನ, ಶುಂಧಿ ಎಂಬ ವಹ್ನಿಪುತ್ರರ ಅವತಾರ. ಸ್ವಭಾವತಃ ದೇವತೆಗಳಾದ ಅವರು ಶ್ರೀಕೃಷ್ಣನ ಬಗ್ಗೆ ಇವರು ಕೈಗೊಂಡ ಕೆಟ್ಟ ಚಿಂತನೆಯನ್ನು ಸಹಿಸದೆ, ಅದನ್ನು ತಿಳಿಸಲೆಂದು ಶ್ರೀಕೃಷ್ಣನ ಬಳಿಗೆ ತೆರಳಿದರು ಎಂದರ್ಥ.

೨) ಕೌರವಸಭೆಯಲ್ಲಿ ಭೀಮನಿಗೆ ಅಪಚಾರ ಮಾಡುವ ದುಷ್ಟನಿರ್ಣಯಗಳನ್ನೆಲ್ಲ ಧೃತರಾಷ್ಟ್ರಪುತ್ರನಾದ ಯುಯುತ್ಸು ಸಹಿಸದೆ ಭೀಮಸೇನನಿಗೆ ವರದಿ ಸಲ್ಲಿಸುತ್ತಿದ್ದ ವಿವರವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಹೀಗೆ ಸರ್ವೋತ್ತಮ, ಜೀವೋತ್ತಮರಿಗೆ ಆಗುವ ಅಪಚಾರದ ವಿಚಾರಗಳನ್ನು ಸೂಕ್ತರೀತಿಯಲ್ಲಿ ಪ್ರತಿಭಟಿಸುವುದೇ ಸಾತ್ತ್ವಿಕಚೇತನರ ಮೂಲಭೂತಲಕ್ಷಣ ಎಂದು ತಿಳಿಯಬೇಕು.

ಪ್ರಣಮ್ಯ ಪಾದಪದ್ಮಯೋರ್ನಿಜಂ ಗೃಹಂ ಪ್ರವೇಶ್ಯ ಚ।
ಮಹಾಸನಂ ಪ್ರದಾಯ ತೌ ಪ್ರಚಕ್ರತುರ್ವರಾರ್ಚನಮ್ ॥ ೩೧ ॥

ಅ: ಕ್ರಥಕೈಶಿಕರು ಕೃಷ್ಣನ ಪಾದಕಮಲಗಳಿಗೆ ನಮಸ್ಕರಿಸಿ, ತಮ್ಮ ಮನೆಗೆ ಬರಮಾಡಿಕೊಂಡು, ಶ್ರೇಷ್ಠ ಆಸನವನ್ನು ನೀಡಿ, ಉತ್ತಮಪೂಜೆಯನ್ನು ಅವನಿಗೆ ಸಲ್ಲಿಸಿದರು.

ವಿ: ಅವರು ಶ್ರೀಕೃಷ್ಣನಿಗೆ ಅವರೆಲ್ಲ ಮಾಡುವ ಅಪಚಾರವನ್ನು ತಪ್ಪಿಸಲೆಂದು ತಾವು ಪ್ರತ್ಯೇಕಮನೆಗಳನ್ನು ನಿರ್ಮಿಸಿ, ಅಲ್ಲಿಗೆ ಕೃಷ್ಣನನ್ನು ಆಹ್ವಾನಿಸಿ, ಶಾಸ್ತ್ರೋಕ್ತಪೂಜೆಯನ್ನು ಸಲ್ಲಿಸಿ, ಧನ್ಯರಾದರೆಂಬ ವಿವರ ಹರಿವಂಶದಲ್ಲಿದೆ.

ಜರಾಸಂಧಾದಿಗಳಿಗೆ ಇಂದ್ರನ ಸಂದೇಶ

ಅಥಾಗಮಚ್ಛತಕ್ರತೋರ್ವಚಃ ಪ್ರಗೃಹ್ಯ ಭೂಭುಜಃ।
ಜರಾಸುತಾದಿಕಾನ್ ಪುಮಾನುವಾಚ ಚಾರ್ಥವದ್ವಚಃ ॥ ೩೨ ॥

ಅ: ಬಳಿಕ ಇಂದ್ರನ ಆದೇಶವನ್ನು ಹೊತ್ತು ಜರಾಸಂಧಾದಿರಾಜರುಗಳ ಬಳಿಗೆ ಒಬ್ಬ ದೇವದೂತ ಬಂದ; ಅರ್ಥಗರ್ಭಿತವಾದ ಮಾತನ್ನು ಅವರಿಗೆ ತಿಳಿಸಿದ.

ವಿ: ೧) ಇಂದ್ರನು ಲಿಖಿತರೂಪದಲ್ಲಿ ಚಿನ್ನದ ಹರಿವಾಣದಲ್ಲಿಟ್ಟು ಕಳುಹಿಸಿದ್ದ ಆದೇಶವನ್ನು ದೇವದೂತ ಕ್ರಥಕೈಶಿಕರಿಗೆ ತಲುಪಿಸಿದ್ದನ್ನು ಅವರಿಬ್ಬರೂ ಜರಾಸಂಧಾದಿ ರಾಜರುಗಳಿಗೆ ತಿಳಿಸಿದರು ಎಂಬ ವಿವರ ಹರಿವಂಶದಲ್ಲಿದೆ.

೨) ಇಂದ್ರ ಹಾಗೆ ಕಳುಹಿಸಿದ ದೇವದೂತ ಚಿತ್ರಾಂಗದನೆಂಬ ಒಬ್ಬ ಗಂಧರ್ವ ಎಂದು ಹರಿವಂಶದಲ್ಲಿದೆ[೧].

ಅಹಂ ಪ್ರಿಯಃ ಶಚೀಪತೇಃ ಸದಾಽಸ್ಯ ಚಾಕ್ಷಿಗೋಚರಃ ।
ಸುರೇಂದ್ರ ಆಜ್ಞಯಾಽವದನ್ನೃಪಾನ್ ವ ಈಶ್ವರೋ ಹಿ ಸಃ ॥ ೩೩ ॥

ಅ: ''ನಾನು ಇಂದ್ರನಿಗೆ ಪ್ರಿಯನಾದವನು. ಸದಾ ಅವನ ಕಣ್ಣ ಮುಂದಿರುವವನು. ಸುರೇಂದ್ರನು ರಾಜನಾದ ನಿಮಗೆ ಆದೇಶ ನೀಡಿರುವನು; ಅವನು ನಿಮ್ಮೆಲ್ಲರಿಗೂ ಪ್ರಭುವಷ್ಟೆ.

ಸಮಸ್ತರಾಜಸತ್ಪತಿರ್ಹರಿರ್ನ ಚಾನ್ಯ ಇತ್ಯಪಿ।
ವರಾಭಿಷೇಕಮೀಶಿತುಃ ಕುರುಧ್ವಮಾಶ್ವಸಂಶಯಮ್ ॥ ೩೪ ॥

ಅ: ಶ್ರೀಹರಿಯು ಸಮಸ್ತರಾಜರಿಗೂ ಪರಮಾಧಿಪತಿ; ಬೇರಾರೂ ಅಲ್ಲ ಎಂದು ನೀವೆಲ್ಲ ಶ್ರೇಷ್ಠವಾದ ಅಭಿಷೇಕವನ್ನು ಪ್ರಭುವಾದ ಅವನಿಗೆ ಕೂಡಲೆ ಮಾಡಿರಿ; ಸಂಶಯ ಬೇಡ.

ವಿ: ಶ್ರೀಹರಿ ರಾಜನೇ ಅಲ್ಲ ಎಂದು ಅವರೆಲ್ಲ ತಿಳಿದಿದ್ದರೆ, ಅವನು ರಾಜಾಧಿರಾಜ ಎಂದು ಖಚಿತವಾದ ನಿರ್ಧಾರದಿಂದಲೇ ಅವನಿಗೆ ಅಭಿಷೇಕ ಮಾಡಿ, ಗೌರವಿಸಲೇಬೇಕು ಎಂಬುದು ದೇವೇಂದ್ರನ ಆದೇಶವಾಗಿತ್ತು ಎಂದರ್ಥ.

ಇಂದ್ರನಿಂದ ವಜ್ರಾಯುಧಪ್ರಯೋಗದ ಎಚ್ಚರಿಕೆ

ಅತೋಽನ್ಯಥಾ ಶಿರಸ್ಯಹಂ ನಿಪಾತಯಾಮಿ ವೋಽಶನಿಮ್ ।
ಇತೀದಮಿಂದ್ರಶಾಸನಂ ಕುರುಧ್ವಮಿತ್ಯಸೌ ಯಯೌ ॥ ೩೫ ॥

---

೧. ಏವಮಾಜ್ಞಾಂ ಸುರೇಶಸ್ಯ ಶ್ರುತ್ವಾ ಚಿತ್ರಾಂಗದೇರಿತಮ್ ।
ಗಮನಾಯ ಮತಿಂ ಚಕ್ರುಃ ಸರ್ವ ಏವ ನೃಪೋತ್ತಮಾಃ ॥ – ಹರಿವಂಶ (೨/೫೦/೫೭).

ಅ: ಇದಕ್ಕೆ ತಪ್ಪಿದಲ್ಲಿ ನಿಮ್ಮ ತಲೆಯ ಮೇಲೆ ವಜ್ರಾಯುಧದಿಂದ ಅಪ್ಪಳಿಸುವೆ. ಹೀಗಿದೆ ಇಂದ್ರನ ಶಾಸನ. ಇದನ್ನು ನೀವು ಪಾಲಿಸತಕ್ಕದ್ದು'' ಎಂದು ನುಡಿದು, ಆ [೧]ದೇವದೂತ ತೆರಳಿದ.

ವಿ: ಶಾಸನವನ್ನು ಪಾಲಿಸದಿದ್ದಲ್ಲಿ ವಜ್ರಾಯುಧದ ಪೆಟ್ಟಿನ ಶಿಕ್ಷೆ ತಪ್ಪಿದ್ದಲ್ಲ ಎಂಬುದು ಇಂದ್ರ–ಸಂದೇಶದ ಮತ್ತೊಂದು ಮುಖ. ವಜ್ರಾಯುಧದಲ್ಲಿ ಕೃಷ್ಣನ [೨]ವಿಭೂತಿರೂಪವಿರುವುದರಿಂದ ಅದು ಅವೋಘ ಎಂಬ ಮತ್ತೊಂದು ಅಂಶವನ್ನೂ ಅವರು ತಿಳಿಸಿರುವರು ಎಂದು ತಿಳಿಯಬೇಕು.

ಇಂದ್ರಸಂದೇಶದಿಂದ ಜರಾಸಂಧಾದಿಗಳ ಚಿಂತೆ

ತದೀರಿತಂ ನಿಶಮ್ಯ ತೇ ಪುನಃ ಸುತಪ್ತಚೇತಸಃ ।
ಬಭೂವುರೂಚಿರೇ ವಚಃ ಸುಗರ್ವಿತೋ ಹಿ ವಾಸವಃ ॥ ೩೬ ॥

ಅ: ಅವನು ಹೇಳಿದ್ದನ್ನು ಕೇಳಿ, ಅವರೆಲ್ಲ ಪುನಃ ಬಹಳವಾಗಿ ಮನಸ್ಸಿನಲ್ಲಿ ನೊಂದರು; ''ಇಂದ್ರ ಬಹಳ ಕೊಬ್ಬಿಹೋಗಿದ್ದಾನೆ'' ಎಂದು ಮಾತನಾಡಿಕೊಂಡರು.

ಪುರಾ ಬಿಭೇತಿ ನಃ ಸದಾ ಪ್ರತಿ ಪ್ರತಿ ಸ್ಮ ವಾಸವಃ ।
ಉತಾದ್ಯ ಕೃಷ್ಣಸಂಶ್ರಯಾದ್ ದೃಢಂ ವಿಭೀಷಯತ್ಯಸೌ ॥ ೩೭ ॥

ಅ: ''ಹಿಂದೆ ಇಂದ್ರ ನಮ್ಮಲ್ಲಿ ಪ್ರತಿಯೊಬ್ಬರಿಗೂ ಸದಾ ಅಂಜುತ್ತಿದ್ದ. ಈಗ ಕೃಷ್ಣನ ನೆರವು ದೊರೆತಿರುವುದರಿಂದಾಗಿ ನಮ್ಮನ್ನು ಬಹಳವಾಗಿ ಅಂಜಿಸುತ್ತಿರುವನು.

ಅದೃಶ್ಯ ಏವ ದೇವರಾಡ್ ಯದಿ ಸ್ಮ ವಜ್ರಮುತ್ಸೃಜೇತ್ ।
ಭವೇಮ ಪೀಡಿತಾ ವಯಂ ವರಾದಮೃತ್ಯವೋಽಪಿ ಹಿ ॥ ೩೮ ॥

ಅ: ಅದೃಶ್ಯನಾಗಿದ್ದುಕೊಂಡೇ ದೇವರಾಜನಾದ ಇಂದ್ರ ವಜ್ರಾಯುಧವನ್ನು ಪ್ರಯೋಗಿಸಿದನೆಂದರೆ, ನಾವು ವರದಿಂದಾಗಿ ಸಾವಿಲ್ಲದವರಾಗಿದ್ದರೂ ನೋಯುವುದಂತೂ ಖಚಿತ.

---

೧. ತಸ್ಮೈ ದೇವಾಧಿದೇವಾಯ ಕೇಶವಾಯ ಮಹಾತ್ಮನೇ ।
ಅಭಿಷೇಕ್ತುಂ ಸುರೈಃ ಸಾರ್ದ್ಧಂ ಕಿಮಿಚ್ಛೇಯಮತಃ ಪರಮ್ ॥ – ಹರಿವಂಶ (೨/೫೦/೫೦)

೨. ಆಯುಧಾನಾಮಹಂ ವಜ್ರಃ – (ಗೀತಾ ೧೦/೨೮)

ಏ: ಶಿವಾದಿದೇವತೆಗಳ ಅವಧ್ಯತ್ವವರವಿರುವವರೆಗೆ ಇಂದ್ರನಿಂದ ಸಾವೇನೂ ಬಾರದು. ಆದರೆ ಪೆಟ್ಟು ಬೀಳಬಾರದೆಂದೇನೂ ಅಲ್ಲವಷ್ಟೆ! ಅದಕ್ಕೆಂದೇ ಅವರಿಗೆ ಅಂತಹ ಭಯ ಎಂದು ತಿಳಿಯಬೇಕು.

[೧]
ಪುರಾ ದಿವಿ ಸ್ಥಿತಸ್ಯ ಚ ಪ್ರಮರ್ದನೇ ವಯಂ ಕ್ಷಮಾಃ ।
ಉತಾದ್ಯ ಯದ್ಯಮುಂ ವಯಂ ವ್ರಜೇಮ ಕೃಷ್ಣ ಏಷ್ಯತಿ ॥ ೩೯ ॥

ಅ: ಹಿಂದೆ ನಾವು ಅವನು ಸ್ವರ್ಗದಲ್ಲಿದ್ದರೂ ಗೆಲ್ಲಲು ಸಮರ್ಥರಾಗಿದ್ದೆವು. ಈಗೇನಾದರೂ ನಾವು ಅವನ ಮೇಲೆ ಯುದ್ಧಕ್ಕೆ ಹೊರಟರೆ ಕೃಷ್ಣ ಬಂದುಬಿಡುವನು.

ಏ: ಇಂದ್ರನೊಬ್ಬನೇ ಸ್ವರ್ಗದಲ್ಲಿದ್ದರೂ ಅವನನ್ನು ನೋಯಿಸುವ ಸಾಮರ್ಥ್ಯ ವರಬಲದಿಂದಾಗಿ ಅವರಿಗಿತ್ತು. ಆದರೆ ಈಗ ಅವನೊಂದಿಗೆ ಯುದ್ಧಕ್ಕೆ ತೊಡಗಿದರೆ, ಕೃಷ್ಣ ಮತ್ತೊಂದೆಡೆಯಿಂದ ಅವರ ಮೇಲೆ ದಾಳಿ ಮಾಡುವನು. ಅದರಿಂದಾಗಿ ಹೋರಾಟ ಅಸಾಧ್ಯವೆನ್ನಿಸುವುದು ಎಂದರ್ಥ.

ಕೃಷ್ಣಾಭಿಷೇಕಕ್ಕೆ ಜರಾಸಂಧಾದಿಗಳ ನಿಶ್ಚಯ

ಅತೋಽಭಿಷೇಚನಾದ್ಯದೀಹ ಶಾರ್ಙ್ಗಿಣಃ ಶಚೀಪತಿಃ ।
ನ ವಜ್ರಮುತ್ಸೃಜೇತ್ ತದಾಽಭಿಷೇಚಯಾಮ ತಂ ವಯಮ್ ॥ ೪೦ ॥

ಅ: ಆದ್ದರಿಂದ ಕೃಷ್ಣನಿಗೆ ಅಭಿಷೇಕ ಮಾಡುವುದರಿಂದ ಶಚೀಪತಿಯಾದ ಇಂದ್ರ ವಜ್ರಾಯುಧವನ್ನು ಪ್ರಯೋಗಿಸುವುದಿಲ್ಲವೆಂದಾದಲ್ಲಿ, ನಾವು ಅವನಿಗೆ ಅಭಿಷೇಕ ಮಾಡಿಬಿಡೋಣ.

ಕಬಂಧನಂತಾಗದಿರಲು ದುಷ್ಟರಾಜರ ನಿಶ್ಚಯ

ಅತೋಽನ್ಯಥಾ ದನುರ್ಯಥಾ ವರಾದಮೃತ್ಯುಕೋಽಪಿ ಸನ್।
ಸುರೇಂದ್ರವಜ್ರತಾಡಿತೋ ಬಭೂವ ಕುಕ್ಷಿಗಾಸ್ಯಯುಕ್ ॥ ೪೧ ॥

ಅ: ಹಾಗೆ ಮಾಡದಿದ್ದರೆ, ಹಿಂದೆ ವರದಿಂದಾಗಿ ಸಾವಿಲ್ಲದವನಾಗಿದ್ದರೂ, ದನುವು ಇಂದ್ರ ವಜ್ರಾಯುಧದಿಂದ ಹೊಡೆದಾಗ ಹೊಟ್ಟೆಯಲ್ಲಿಯೇ ಮುಖ ಸೇರಿದವನಾಗಿ ಆಗಲಿಲ್ಲವೆ!

---

೧. ಪುರಾ ಕೃಷ್ಣೋತ್ತತ್ತೇಃ ಪೂರ್ವೇ । –(ಜ.)

ವಿ: ಇದು ಬ್ರಹ್ಮವರದಿಂದ ಅವಧ್ಯನಾಗಿದ್ದ ಕಬಂಧನ ಮೇಲೆ ಇಂದ್ರ ವಜ್ರಾಯುಧದಿಂದ ಅಪ್ಪಳಿಸಿದಾಗ ನಡೆದ ಘಟನೆ(೫/೪೨). ಇಲ್ಲಿ ದನು ಎಂದರೆ ಅವನ ಅವತಾರವಾದ ಕಬಂಧ ಎಂದರ್ಥ. ಅದರಂತೆ ತಮ್ಮ ಗತಿಯೂ ಆದೀತೆಂಬ ಭಯ ಅವರನ್ನು ಕಾಡತೊಡಗಿತು ಎಂದು ತಿಳಿಯಬೇಕು.

ತಥೈವ ಕೃಷ್ಣಸಂಶ್ರಯಾತ್ ಸ ನಃ ಶಚೀಪತಿರ್ನಯೇತ್ ।
ಇತಿ ಸ್ಮ ನಿಶ್ಚಿತಾ ನೃಪಾನಯಾತಯಂತ[೧] ಶೌರಯೇ ॥ ೪೨ ॥

ಅ: ಕೃಷ್ಣನ ರಕ್ಷಣೆಯಿಂದಾಗಿ ಇಂದ್ರ ನಮ್ಮನ್ನು ಹಾಗೆ ಮಾಡಿಯಾನು''. ಹೀಗೆ ನಿಶ್ಚಯಿಸಿದ ಅವರೆಲ್ಲ ಶ್ರೀಕೃಷ್ಣನ ಬಳಿಗೆ ರಾಜರನ್ನು ಕಳುಹಿಸಿಕೊಟ್ಟರು.

ಮರಳಿ ಇಂದ್ರಸಂದೇಶ

ಸಮಸ್ತಶೋ ಜರಾಸುತಾದಿಭಿಃ ಕೃತೇऽಭಿಷೇಚನೇ ।
ಅತೀವ ಭಗ್ನಮಾನಕಾನ್ ನ ಚಾನುಯಾತಿ ಕಶ್ಚನ ॥ ೪೩ ॥

ಅ: ಜರಾಸಂಧಾದಿಸಮಸ್ತರೂ ಅಭಿಷೇಕ ಮಾಡಿದರೆ, ಬಹಳವಾಗಿ ಅಪಮಾನಿತರಾಗುವ ಅವರನ್ನು ಯಾವೊಬ್ಬನೂ ಅನುಸರಿಸದಾಗುವನು.

ವಿ: ಜರಾಸಂಧಾದಿಗಳಂತೆ ಅವರ ಅನುಯಾಯಿಗಳಿಗೂ ಅಧೋಗತಿ ಆಗಲೇಬೇಕು. ಅದಕ್ಕಾಗಿ ಅವರೆಲ್ಲ ಶ್ರೀಕೃಷ್ಣದ್ವೇಷವನ್ನು ಮಾಡುತ್ತಲೇ ಇರಬೇಕು. ಜರಾಸಂಧಾದಿಗಳೆಲ್ಲ ಸೇರಿ ಈಗ ಅಭಿಷೇಕ ಮಾಡಿದರೆ, ಅವನ ಬಗ್ಗೆ ಅವನ ಅನುಯಾಯಿಗಳ ನಿಷ್ಠೆ ನಶಿಸಿ, ಅವರ ಶ್ರೀಕೃಷ್ಣದ್ವೇಷದ ಸಾಧನೆ ಭಂಗಗೊಳ್ಳುವುದು. ಅವನಲ್ಲಿ ಅವರಿಗೆ ನಿಷ್ಠೆ ಉಳಿಯಬೇಕಾದರೆ ಅವನ ಪ್ರತಿಷ್ಠೆಯನ್ನು ಸ್ವಲ್ಪವಾದರೂ ಉಳಿಸಬೇಕು. ಅದರಿಂದಾಗಿ ಅವನ ಅನುಯಾಯಿಗಳಿಗೆ ಅವನಲ್ಲಿ ಶ್ರದ್ಧೆ ಮುಂಚಿನಂತೆ ಉಳಿದು ಅವರ ಕೃಷ್ಣದ್ವೇಷದ ಕಾರ್ಯ ಮುಂದುವರೆದು ಅಧೋಗತಿಗೆ ತೆರಳಲು ಸಾಧ್ಯವಾಗುವುದು ಎಂದು ಭಾವ.

ಸಮಾಶ್ರಯಂ ಚ ಕೇಶವಂ ತದೈವ ಜೀವನಾರ್ಥಿನಃ ।
ಪ್ರಕುರ್ಯುರಾಸುರಾ ಅಪೀತಿ ದೇವಕಾರ್ಯಸಂಕ್ಷಯಃ ॥ ೪೪ ॥

---

೧. ಅಹಂಕಾರವಶಾತ್ ಸ್ವಯಂ ನ ಗತಾಃ ॥ – (ವಾ.)

ಅ: ಬದುಕಲೆಂದಾದರೂ ಆ ಅಸುರರೆಲ್ಲ ಕೃಷ್ಣನನ್ನು ಆಶ್ರಯಿಸಿಬಿಡುವರು. ಅದರಿಂದಾಗಿ ದೇವಕಾರ್ಯ ಈಡೇರದಾಗುವುದು.

ಎ: ೧) ಜರಾಸಂಧನಲ್ಲಿ ಶ್ರದ್ಧೆ ನಶಿಸಿದರೆ, ಅವನ ಅನುಯಾಯಿಗಳಾದ ಅಸುರರು ಅವನನ್ನು ತೊರೆಯುವುದು ಮಾತ್ರವಲ್ಲದೆ, ತಮ್ಮ ರಕ್ಷಣೆಗಾಗಿ ಮನಸ್ಸಿಲ್ಲದಿದ್ದರೂ ಬದುಕುವ ಆಸೆಯಿಂದ ಕೃಷ್ಣನನ್ನೇ ಶರಣುಹೊಂದುವರು. ಅದರಿಂದ ಶರಣು ಬಂದ ಅವರನ್ನು ಅಧೋಗತಿಗೆ ತಳ್ಳುವುದು ಸಲ್ಲದ ಕಾರ್ಯ. ಹೀಗೆ ಅಸುರರಿಗೆ ಅಧೋಗತಿ ಆಗಲೇಬೇಕೆಂಬ ದೇವಕಾರ್ಯ ಕೆಡುವುದು ಎಂದರ್ಥ. ಭೂಭಾರಹರಣವೆಂಬ ದೇವತೆಗಳ ಮುಖ್ಯಕಾರ್ಯಕ್ಕೆ ಅದರಿಂದ ಚ್ಯುತಿ ಒದಗುವುದು ಎಂದರ್ಥ.

೨) ಶಿಷ್ಟರಕ್ಷಣೆಯಂತೆ, ದುಷ್ಟಶಿಕ್ಷಣೆಯೂ ಸಹ ದೇವಕಾರ್ಯದ ಮತ್ತೊಂದು ಮುಖ ಎಂದು ಶಾಸ್ತ್ರಗಳ ನಿರೂಪಣೆ.

ಇತೀಕ್ಷ್ಯ ಪಾಕಶಾಸನೋ೽ವದಜ್ಜರಾಸುತಾದಿಕಾನ್ ।
ಸರುಗ್ಮಿಚೇದಿಸಾಲ್ವಪೋ ನ ಯಾತು ಮಾಗಧೋ ಹರಿಮ್ ॥ ೪೫ ॥

ಅ: ಹೀಗೆ ಯೋಚಿಸಿ ಇಂದ್ರ ಜರಾಸಂಧಾದಿಗಳಿಗೆ ಹೇಳಿ ಕಳುಹಿಸಿದ : ''ಜರಾಸಂಧ ಹಾಗೂ ರುಗ್ಮಿ, ಸಾಲ್ವ, ಶಿಶುಪಾಲರು ಶ್ರೀಕೃಷ್ಣನ [೧]ಅಭಿಷೇಕದಲ್ಲಿ ತೊಡಗುವುದು ಬೇಡ''.

ಎ: ಹೀಗೆ ಆಲೋಚಿಸಿದ ದೇವೇಂದ್ರ ಜರಾಸಂಧಾದಿಗಳ ಬಳಿಗೆ ಅವನು ಹಾಗೂ ಸಾಲ್ವಾದಿ–ಮೂವರು ಮಾತ್ರ ಕೃಷ್ಣಾಭಿಷೇಕ ಮಾಡಬೇಕಿಲ್ಲ ಎಂದು ಮತ್ತೊಂದು ಸಂದೇಶ ಕಳುಹಿಸಿದ.

---

೧. ಜರಾಸಂಧಃ ಸುನೀಥಶ್ಚ ರುಗ್ಮೀ ಚೈವ ಮಹಾರಥಃ ।
ಸಾಲ್ವಃ ಸೌಭಪತಿಶ್ಚೈವ ಚತ್ವಾರೋ ರಾಜಸತ್ತಮಾಃ ।
ರಂಗಸ್ಯಾಶೂನ್ಯಹೇತೋರ್ಹಿ ತಿಷ್ಠಂತು ಇಹ ಪಾರ್ಥಿವಾಃ ॥ – ಹರಿವಂಶ (೨/೫೦/೫೬)

ಅನ್ಯದ್ವಾರಾ೽ಭಿಷೇಚನೇ ಕೃತೇ ಸತಿ ಸರ್ವೈರ್ನ ಗತಮಿತಿ ಇಂದ್ರಃ ಕುತೋ ನ ಚುಕೋಪೇತ್ಯತಸ್ತಾತ್ಪರ್ಯ-ಮಾಹ। ಸಮಸ್ತ ಇತಿ। ಸರ್ವೈರ್ಗತ್ವಾ೽ಭಿಷೇಕೇ ಕೃತೇ ಸತಿ ಅತೀವ ಭಗ್ನಮಾನಕಾನ್ ಜರಾಸುತಾದೀನ್ ಕಶ್ಚನ ನಾನುಯಾತಿ। ಅಸುರಾ ಅಪಿ ಜೀವನಾರ್ಥಿನಃ ಕೇಶವಮೇವ ಸಮಾಶ್ರಯಂ ಕುರ್ಯುರಿತಿಹೇತೋಃ ಸರ್ವೇಷಾಮಸುರಾಣಾಮಪಿ ಕೃಷ್ಣಶರಣಪ್ರಾಪ್ತೌ ಶರಣಾಗತಾನಾಂ ಚ ಸಂಹರಣಾಯೋಗಾತ್ಸಾಖ್ಯಹೇತೋರಿತ್ಯರ್ಥಃ। ದೇವಕಾರ್ಯಸ್ಯ = ಭೂಭಾರಭೂತದೈತ್ಯಹನನಾಖ್ಯದೇವಕಾರ್ಯಸ್ಯ ಸಂಕ್ಷಯಃ= ನಾಶಃ ಸ್ಯಾತ್ ಇತೀಕ್ಷ್ಯ= ಇತ್ಥಂ ವಿಚಾರ್ಯ ಪಾಕಶಾಸನಃ ಸರುಕ್ಮಿಸಾಲ್ವಚೇದಿಪಃ = ರುಕ್ಮಿಸಾಲ್ವಚೇದಿಭಿಃ ಸಹಿತಃ ಮಾಗಧಃ ಹರಿಂ ನ ಯಾತ್ವಿತಿ ಜರಾಸುತಾದಿಕಾನವದತ್ = ದೂತಮುಖೇನಾವದದಿತ್ಯೇಕಾನ್ವಯಃ ॥ – (ವಾ.)

ಶ್ರೀಕೃಷ್ಣಾಭಿಷೇಕವೈಭವ

ತತಸ್ತು ತಾನ್ ವಿನಾ ಪರೇऽಧಿರಾಜರಾಜ ಇತ್ಯಮುಮ್ ।
ತದಾऽಭಿಷೇಕ್ತುಮುದ್ಯತಾ ನೃಪಾಃ ಸುರೇಶಶಾಸನಾತ್ ॥ ೪೬ ॥

ಅ: ಅನಂತರ ಇಂದ್ರನ ಆದೇಶದಂತೆ ಆ ಜರಾಸಂಧಾದಿಗಳನ್ನು ಹೊರತು ಇತರ ರಾಜರು ಶ್ರೀಕೃಷ್ಣನನ್ನು ರಾಜಾಧಿರಾಜನೆಂದು ಅಭಿಷೇಕ ಮಾಡಲು ತೊಡಗಿದರು.

ತತಃ ಶಚೀಪತಿರ್ನಿಜಂ ವರಾಸನಂ [೧]ಹರೇರದಾತ್ ।
ವಿವೇಶ ತತ್ರ ಕೇಶವೋ ನಭಸ್ತಲಾವತಾರಿತೇ ॥ ೪೭ ॥

ಅ: ಆಗ ಶಚೀಪತಿಯಾದ ಇಂದ್ರ ತನ್ನ ಶ್ರೇಷ್ಠ ಆಸನವನ್ನು ಶ್ರೀಕೃಷ್ಣನಿಗೋಸ್ಕರ ಕಳುಹಿಸಿಕೊಟ್ಟ, ಗಗನದಿಂದ ಇಳಿದು ಬಂದ ಆ ಆಸನದಲ್ಲಿ ಶ್ರೀಕೃಷ್ಣ ಕುಳಿತುಕೊಂಡ.

ವಿ: ಇವರು ಕುಳಿತ ಆಸನದ ಮೇಲೆ ಕೃಷ್ಣ ಕೂಡುವುದು ತರವಲ್ಲವೆಂದು ಇಂದ್ರ ದೇವಲೋಕದಿಂದ ವಿಶೇಷ ಆಸನವನ್ನು ಕಳುಹಿಸಿದ ಎಂದರ್ಥ.

ಕರೇ ಪ್ರಗೃಹ್ಯ ಕೇಶವೋ ನ್ಯವೇಶಯತ್ ಸಹಾಸನೇ ।
ಪತತ್ರಿಪುಂಗವಂ ಚ ತೌ ಸ ಭೀಷ್ಮಕಾನುಜೌ ಪ್ರಭುಃ ॥ ೪೮ ॥

ಅ: ಪ್ರಭುವಾದ ಕೃಷ್ಣ ಪಕ್ಷಿರಾಜನಾದ ಗರುಡನನ್ನು ಮತ್ತು ಭೀಷ್ಮಕನ ತಮ್ಮಂದಿರಾದ ಕ್ರಥಕೈಶಿಕರನ್ನು ಕೈಹಿಡಿದು, ತನ್ನೊಂದಿಗೆ ಆಸನದಲ್ಲಿ ಕುಳ್ಳಿರಿಸಿಕೊಂಡ.

ವಿ: ಅಭಿಷೇಕಕಾಲದಲ್ಲಿ ಶ್ರೀಕೃಷ್ಣ ಗರುಡನನ್ನು ತನ್ನ ಬಲಭಾಗದಲ್ಲಿಯೂ, ಕ್ರಥಕೈಶಿಕರನ್ನು ಎಡಭಾಗದಲ್ಲಿಯೂ ಕುಳ್ಳಿರಿಸಿಕೊಂಡನೆಂಬ ವಿವರ [೨]ಹರಿವಂಶದಲ್ಲಿದೆ.

ಅಥಾಖಿಲಾ ನರೇಶ್ವರಾ ಮುನೀಂದ್ರಸಂಯುತಾ ಹರಿಮ್ ।
ಸುಶಾತಕೌಂಭಕುಂಭಕೈಃ ಪ್ರಚಕ್ರುರಾಭಿಷೇಕಿಣಮ್ ॥ ೪೯ ॥

---

೧. ನ ಯುಕ್ತಮಾಸನಂ ದಾತುಂ ತ್ವಯಾऽऽಸೀನಂ ನರಾಧಿಪ ।
ಇದಮಸ್ಯಾಸನಂ ದಿವ್ಯಂ ಸರ್ವರತ್ನವಿಭೂಷಿತಮ್ ॥
ಜಾಂಬೂನದಮಯಂ ಶುಭ್ರಂ ರಚಿತಂ ವಿಶ್ವಕರ್ಮಣಾ ।
ಪ್ರೇಷಿತಂ ದೇವರಾಜೇನ ಸಿಂಹಲಕ್ಷಣಲಕ್ಷಿತಮ್ ॥ – ಹರಿವಂಶ ೨/೫೦/೨೮,೨೯)

೨. ಕ್ರಥಶ್ಚ ಕೈಶಿಕೋ ವೀರೋ ವಾಮಪಾರ್ಶ್ವೇ ತಥಾಸನೇ ।
ಉಪವಿಷ್ಟೌ ಮಹಾತ್ಮಾನೌ ದೇವಸ್ಯಾನುಮತೇ ನೃಪೌ ॥ – ಹರಿವಂಶ (೨/೫೦/೭೮)

ಅ: ಬಳಿಕ ಎಲ್ಲ ರಾಜರು ಮುನಿವರ್ಯರೊಂದಿಗೆ ಕೂಡಿಕೊಂಡು ಉತ್ತಮ ಸುವರ್ಣಕಲಶಗಳಲ್ಲಿನ ಜಲದಿಂದ ಶ್ರೀಕೃಷ್ಣನನ್ನು ವಿಶೇಷವಾಗಿ ಅಭಿಷೇಕಿಸಿದರು.

ವಿರಿಂಚಶರ್ವಪೂರ್ವಕೈರಭಿಷ್ಟುತಃ ಸುರಾದಿಭಿಃ ।
ಸಮಸ್ತದೇವಗಾಯಕೈಃ ಪ್ರಗೀತ ಆಸ ಕೇಶವಃ ॥ ೫೦ ॥

ಬ್ರಹ್ಮರುದ್ರಾದಿದೇವತೆಗಳು ಶ್ರೀಕೃಷ್ಣನನ್ನು ಬಹಳವಾಗಿ ಸ್ತುತಿಸಿದರು. ಸಮಸ್ತದೇವ-ಗಂಧರ್ವರುಗಳು ಬಗೆಬಗೆಯಲ್ಲಿ [೧]ಹಾಡಿದರು.

ಭೀಷ್ಮಕನಿಗೆ ಕೃಷ್ಣಸಂದೇಶ

ಅಥಾಹ ಭೀಷ್ಮಕಂ ಪ್ರಭುಃ ಸ್ವಯಂವರಃ[೨] ಕಿಲ ತ್ವಯಾ ।
ಅಭೀಪ್ಸಿತಃ ಸುತಾಕೃತೇ ಶುಭಾಯ ತೇ ಭವೇನ್ನ ಸಃ ॥ ೫೧ ॥

ಅ: ಬಳಿಕ ಪ್ರಭುವಾದ ಶ್ರೀಕೃಷ್ಣ ಭೀಷ್ಮಕನಿಗೆ ತಿಳಿಸಿದ. ''ನಿನ್ನ ಮಗಳಿಗೆ ನೀನೀಗ ಸ್ವಯಂವರ ನಡೆಸಲು ಬಯಸಿರುವೆಯಲ್ಲವೆ? ಅದು ನಿನ್ನ ಒಳಿತಿಗೆ ಕಾರಣವಾಗದು.

ವಿ: ಸ್ವಯಂವರವೆಂಬುದು ವರ ಯಾರು ಎಂದು ಖಚಿತವಾಗದಿದ್ದಾಗ ಯುಕ್ತವಾದದ್ದು. ಆದರೆ ರುಗ್ಮಿಣಿಗೆ ಸಾಕ್ಷಾತ್ ಕೃಷ್ಣನಿರುವಾಗ ಸ್ವಯಂವರ ಮಾಡಹೊರಟಿರುವುದು ಅನುಚಿತ. ಆದ್ದರಿಂದಲೇ ಅಮಂಗಲ ಎಂದರ್ಥ. ಅದು ಹೆಸರಿಗೆ ಸ್ವಯಂವರವಾಗಿದ್ದರೂ, ಶಿಶುಪಾಲನಿಗೆ ರುಗ್ಮಿಣಿಯನ್ನು ಕೊಡುವ ಹೇಯಚಿಂತನೆಯಿಂದ ಕೂಡಿದ್ದರಿಂದಾಗಿ ಸಹ ಅದು ಅಮಂಗಲ ಎಂದರ್ಥ.

---

೧. ಗಂಧರ್ವಾ ಮುನಯಶ್ಚೈವ ಕಿನ್ನರಾಶ್ಚಸಮಂತತಃ ।
ಉಪಗಾಯಂತಿ ದೇವೇಶಮಂಬರಾಂತರಮಾಶ್ರಿತಾಃ ॥
ಸ್ತುವಂತಿ ಮುನಯಶ್ಚೈವ ಸಿದ್ಧಾಶ್ಚ ಪರಮರ್ಷಯಃ ।
ದೇವದುಂದುಭಯಶ್ಚೈವ ಸ್ವಯಮೇವಾನದನ್ ದಿವಿ ॥
ಪಂಚಯೋನಿಸಮುತ್ಥಾನಿ ಗಂಧಚೂರ್ಣಾನ್ಯನೇಕಶಃ ।
ಸಮಂತಾತ್ ಪಾತ್ಯಮಾನಾನಿ ಚಾಕಾಶಸ್ಥೈರ್ದಿವೌಕಸೈಃ ॥
ಸ್ವಯಮಾಗತ್ಯ ದೇವೇಂದ್ರೋ ದೇವೈಃ ಸಹ ಶಚೀಪತಿಃ ।
ವಿಮಾನವರಮಾರುಹ್ಯ ಸಪ್ರಕಾಶಃ ಸ್ಥಿತೋಽಂಬರೇ ॥
ಅಷ್ಟೌಯೇ ಲೋಕಪಾಲಾಸ್ತೇ ಸ್ವಾಸು ದಿಕ್ಷು ಸಮಾಸ್ಥಿತಾಃ ।
ಉಪಗಾಯಂತಿ ನೃತ್ಯಂತಿ ಸ್ತುವಂತಿ ಚ ಸಮಂತತಃ ॥ – ಹರಿವಂಶ (೨/೫೦/೬೪,೬೫, ೬೬, ೬೭, ೬೮)

೨. ಸ್ವಯಂವರಃ ಕಿಲೇತ್ಯತ್ರ ಸ್ವಯಂವರಃ= ಚೈದ್ಯಂ ಪ್ರತಿ ಸ್ವಯಂವರಃ ॥ – (ವಾ.)

ಇಯಂ ರಮಾ ತವಾತ್ಮಜಾ ಬಭೂವ ತಾಂ ಹರೇರ್ನ [೧]ಚೇತ್ ।
ದದಾತಿ ಚೇತ್ ತದಾ ಪಿತಾ ನಿರಿಂದಿರೋ ವ್ರಜೇದಧಃ ॥ ೫೨ ॥

ಅ: ನಿನ್ನ ಮಗಳಾಗಿ ಜನಿಸಿರುವವಳು ಮಹಾಲಕ್ಷ್ಮಿ. ಅವಳನ್ನು ನಾರಾಯಣನಾದ ಶ್ರೀಕೃಷ್ಣನಿಗೆ ಧಾರೆ ಎರೆಯದಿದ್ದಲ್ಲಿ ಆಗ ತಂದೆಯಾದ ನೀನು ನಷ್ಟೈಶ್ವರ್ಯನಾಗಿ ಅಧೋಗತಿಗೆ ತೆರಳುವಿ.

ವಿ: ಇಂದಿರೆ ಹಾಗೂ ಇಂದಿರಾಪತಿಗೆ ವಿಯೋಗ ಮಾಡುವವನು ನಿರಿಂದಿರನಾಗುವುದು ಸಹಜ ಎಂದರ್ಥ. ಸಂಪತ್ತು ಎಂದಿದ್ದರೂ ದೇವರ ಸ್ವತ್ತು ಅದನ್ನು ಅವನ ಆರಾಧನೆಗೆ ಉಪಯೋಗಿಸದಿದ್ದವರೆಲ್ಲ ದರಿದ್ರರಾಗಿ ಅನರ್ಥ ಹೊಂದುವರು ಎಂಬುದು ಇಲ್ಲಿಯ ಸಂದೇಶ ಎಂದೂ ತಿಳಿಯಬಹುದು.

ಹಿತಾಯ ಚೈತದೀರಿತಂ ತವಾನ್ಯಥಾ ನ ಚಿಂತಯ ।
ನ ಯೋಷಿದಿಚ್ಛಯಾ ತ್ವಹಂ ಬ್ರವೀಮಿ ಪಶ್ಯ ಯಾದೃಶಃ ॥ ೫೩ ॥

ಅ: ಇದನ್ನು ತಿಳಿಸಿದ್ದು ನಿನ್ನ ಒಳಿತಿಗಾಗಿಯೇ; ಅನ್ಯಥಾ ಭಾವಿಸಬೇಡ. ನಾನು ನಿನ್ನ ಮಗಳ ಮೇಲಿನ ಬಯಕೆಯಿಂದಾಗಿ ಹೀಗೆ ಹೇಳುತ್ತಿಲ್ಲ. ನಾನು ಎಂಥವನೆಂದು ನೋಡು''.

ವಿ: ಶ್ರೀಹರಿಯು ತಾನು ರಮೆಯ ಮೇಲೆ ಬಯಕೆ ಹೊಂದದವನು ಎಂದು ಈ ಮೂಲಕ ತಿಳಿಸುತ್ತಾ ತಾನು ಸ್ವರಮಣ ಎಂಬುದನ್ನು ಸೂಚಿಸಿರುವನು — **'ಸ್ವರತೋಽಪಿ ಚಾಗ್ರೇ'** (೧/೨).

ಭೀಷ್ಮಕನಿಗೆ ವಿಶ್ವರೂಪದರ್ಶನ

ಉದೀರ್ಯ ಚೈವಮೀಶ್ವರಶ್ಚಕಾರ ಹಾವಿರಾತ್ಮನಃ ।
ಸ ವಿಶ್ವರೂಪಮುತ್ತಮಂ ವಿಸಂಖ್ಯಿಬಾಹುಶೀರ್ಷಕಮ್ ॥ ೫೪ ॥

ಅನಂತತೇಜ ಆತತಂ [೨]ವಿಸಂಖ್ಯಿರೂಪಸಂಯುತಮ್।
ವಿಚಿತ್ರಮೌಲಿಕುಂಡಲಾಂಗದೋರುಹಾರನೂಪುರಮ್ ॥ ೫೫ ॥

---

೧. ಹರೇರ್ನ ಚೇತಿ ಕ್ವಚಿತ್ ಪಾಠಃ। – (ತಾ.)

೨. ವಿಸಂಖ್ಯಾಃ ವಿಗತಸಂಖ್ಯಾಃ ಶೀರ್ಷಾಃ ಬಾಹವೋ ಯಸ್ಯ ತತ್। – (ಜ.)

ಜ್ವಲತ್ಸೌಸ್ತುಭಪ್ರಭಾಭಿಭಾಸಕಂ ಶುಭಾಂಬರಮ್।
ಪ್ರಪಶ್ಯ ಯಾದೃಶಾಃ ಸ್ತ್ರಿಯೋ ಮಮೇತ್ಯದರ್ಶಯಚ್ಛ್ರಿಯಮ್ ॥ ೫೬ ॥

ಅ: ಹೀಗೆ ಹೇಳಿ, ಸರ್ವೇಶ್ವರನಾದ ಶ್ರೀಕೃಷ್ಣ ತನ್ನ ಉತ್ತಮವಾದ [೪]ವಿಶ್ವರೂಪವನ್ನು ಪ್ರಕಟಿಸಿದ. ಅದಕ್ಕೆ ಅನಂತ ತಲೆಗಳು, ತೋಳುಗಳು, ಮಿತಿಯಿಲ್ಲದ ತೇಜಸ್ಸು, ಸರ್ವತ್ರವ್ಯಾಪ್ತಿ, ಅಸಂಖ್ಯರೂಪಗಳು, ತುಂಬಾ ಮನೋಹರವಾದ ಕಿರೀಟ, ಕುಂಡಲ, ಅಂಗದ, ಶ್ರೇಷ್ಠ ಹಾರ ಹಾಗೂ ಕಾಲ್ಗೆಜ್ಜೆಗಳು, ಹೊಳೆಯುವ ಕೌಸ್ತುಭದ ಕಾಂತಿಗೂ ಶೋಭೆ ನೀಡುವಂತಹುದು; ಉತ್ತಮವಸ್ತ್ರಬೇರೆ. ''ನನ್ನ ಪತ್ನಿಯರು ಎಂಥವರು ಎಂಬುದನ್ನು ನೋಡು'' ಎನ್ನುತ್ತಾ ಶ್ರೀಕೃಷ್ಣ ಮಹಾಲಕ್ಷ್ಮಿಯನ್ನೂ ತೋರಿಸಿದ.

ರುಗ್ಮಿಣಿಯ ಅನಂತರೂಪ

[೫]ಅನಂತರೂಪಿಣೀಂ ಪರಾಂ ಮನುಷ್ಯದೃಷ್ಟಿತೋಽಧಿಕಾಮ್।
ಸ ರುಗ್ಮಿಣೀತನೋರಪಿ ವ್ಯದರ್ಶಯಚ್ಚ ದೇವತಾಃ ॥ ೫೭ ॥

ಅ: ಮಹಾಲಕ್ಷ್ಮಿಯು ಅನಂತರೂಪಿಣಿ; ಸರ್ವೋತ್ತಮೆ; ಮನುಷ್ಯರೂಪದ ರುಗ್ಮಿಣಿಯ ರೂಪಕ್ಕಿಂತ ಮಿಗಿಲಾದ ರೂಪದಿಂದ ಕೂಡಿದ್ದವಳು. ಅವಳೊಂದಿಗೆ ಶ್ರೀಕೃಷ್ಣನು ತನ್ನ ಇತರ ದೇವತೆಗಳನ್ನೂ ತೋರಿದ.

---

೩. ಯೋಷಿದಿಚ್ಛಯಾ ನೇತಿ ಪ್ರಮಾಪಯಿತುಂ ಮತ್ಸ್ಯಕೂರ್ಮಾದ್ಯನಂತರೂಪಾಣ್ಯಪಿ ಸ್ವವಿಶ್ವರೂಪೇ ದರ್ಶಿತವಾನಿತಿ ಭಾವೇನ ವಿಸಂಖ್ಯರೂಪಸಂಯುತಮಿತ್ಯುಕ್ತಮ್ ॥ – (ವಾ.)

ವಿಸಂಖ್ಯರೂಪೈಃ ಅನಂತರೂಪೈಃ ಸಂಯುತಂ। – (ಜ.)

೪. ಆದ್ಯಂ ಸ್ವಾಯಂಭುವಂ ರೂಪಂ ಸುರಾಸುರನಮಸ್ಕೃತಮ್।
ಸಹಸ್ರಪಾತ್ ಸಹಸ್ರಾಕ್ಷಂ ಸಹಸ್ರಭುಜವಿಗ್ರಹಮ್ ॥
ಸಹಸ್ರಶಿರಸಂ ದೇವಂ ಸಹಸ್ರಮಕುಟೋಜ್ವಲಮ್।
ದಿವ್ಯಮಾಲ್ಯಾಂಬರಧರಂ ದಿವ್ಯಗಂಧಾನುಲೇಪನಮ್ ॥
ದಿವ್ಯಾಭರಣಸಂಯುಕ್ತಂ ದಿವ್ಯಾನೇಕೋದ್ಯಮಾಯುಧಮ್।
ಕೃಷ್ಣಂ ರಕ್ತಾರವಿಂದಾಕ್ಷಂ ಚಂದ್ರಸೂರ್ಯಾಗ್ನಿಲೋಚನಮ್ ॥ – ಇತಿ ಹರಿವಂಶೇ (೨/೫೨/೫೨-೫೫)

೫. ಅನಂತರೂಪಿಣೀಂ 'ರೂಪಂ ಸ್ವಭಾವೇ ಸೌಂದರ್ಯ' ಇತಿ ವಚನಾತ್ ಅನಂತಸೌಂದರ್ಯವತೀಂ ಸ್ವರುಗ್ಮಿಣೀತನೋರಪಿ ಮನುಷ್ಯದೃಷ್ಟಿತಃ ಅಧಿಕಾಂ ನತು ಸ್ವಭಾವತಃ ಉಭಯೋರೈಕ್ಯೇನ ನೀಚೋಚ್ಚಭಾವಾಯೋಗಾತ್ ಏತಾದೃಶೀಂ ಶ್ರಿಯಮದರ್ಶಯದಿತಿ ಪೂರ್ವೇಣಾನ್ವಯಃ। ಯದ್ವಾ ಯಾದೃಶಾಃ ಸ್ತ್ರಿಯಃ ಬಹುವಚನ-ಪ್ರಯೋಗಾತ್ ಉರಸಿ ಅಂಕಯೋಃ ಅಸಂಖ್ಯಾತಪಾದಸೇವಾರ್ಥಂ ಚ ಅನಂತರೂಪಿಣೀಮಿತ್ಯರ್ಥಃ॥ – (ವಾ.)

ವಿಶ್ವರೂಪವತ್ ರಮಾಯಾ ಯಾ ಅಪಿ ಅನಂತರೂಪಾಣ್ಯದರ್ಶಯದಿತಿ ಭಾವಃ। – (ಜ., ವ.)

ವಿ: ೧) ಶ್ರೀಹರಿಯ ವಿಶ್ವರೂಪದಲ್ಲಿ ಅನಂತರೂಪಗಳಿದ್ದಂತೆ, ಲಕ್ಷ್ಮಿಯ ರೂಪಗಳೂ ಅನಂತವೇ ಆಗಿದ್ದವು. ಮನುಷ್ಯದೃಷ್ಟಿಗೆ ಕಾಣುವ ರೂಪಕ್ಕಿಂತ ಅಲ್ಲಿ ಕಂಡ ಲಕ್ಷ್ಮೀರೂಪ ವಿಶೇಷಕಾಂತ್ಯಾದಿಗಳಿಂದ ಕೂಡಿತ್ತು. ಅದಕ್ಕೆ ಕಾರಣ ಆ ರೂಪಗಳಲ್ಲಿನ ವ್ಯತ್ಯಾಸವಲ್ಲ. ಭೀಷ್ಮಕರಾಜನಿಗೆ ಮಹಾಲಕ್ಷ್ಮಿಯ ಸ್ವರೂಪದ ಮಹಿಮೆ ಅರಿವಾಗಲೆಂದು ಮಾಡಿದ ವಿಶೇಷ ಅನುಗ್ರಹ ಮಾತ್ರ. ಮನುಷ್ಯದೃಷ್ಟಿ ಎಂಬುದಕ್ಕೆ ಸಾಮಾನ್ಯದೃಷ್ಟಿ ಎಂದೂ ಅರ್ಥ. ಅದರಂತೆ ರುಗ್ಮಿಣಿಯ ರೂಪವನ್ನು ನೋಡುತ್ತಿದ್ದ ದೃಷ್ಟಿಗಿಂತ ವಿಶೇಷದೃಷ್ಟಿಯನ್ನು ಕೃಷ್ಣ ಆಗ ನೀಡಿದ್ದರಿಂದ ಮೂಲರೂಪ ವಿಶೇಷವಾಗಿ ಗೋಚರಿಸಿತು ಎಂದು ತಿಳಿಯಬಹುದು. ತನ್ನ ಅನಂತರೂಪಗಳಲ್ಲೂ ಶ್ರೀಕೃಷ್ಣ ರುಗ್ಮಿಣೀಸಮೇತನಾಗಿಯೇ ಗೋಚರಿಸುತ್ತಾ ತಾನು ಸ್ತ್ರೀವ್ಯೋಹದಿಂದ ರುಗ್ಮಿಣಿಯನ್ನು ಕೇಳಿದ್ದಲ್ಲ ಎಂದು ಭೀಷ್ಮಕನಿಗೆ ಮನದಟ್ಟುಮಾಡಿಕೊಟ್ಟ ಎಂದು ತಿಳಿಯಬಹುದು.

೨) ಜಾಂಬವತಿ ಮೊದಲಾದ ತನ್ನ ಷಣ್ಮಹಿಷಿಯರನ್ನು ಅಥವಾ ತನ್ನ ವಿಮಲಾದಿನವಶಕ್ತಿ ರೂಪಗಳನ್ನು ಕೃಷ್ಣ ತನ್ನ ಆ ರೂಪಗಳಲ್ಲಿ ತೋರಿದ ಎಂಬ ಮತ್ತೊಂದು ಬಗೆಯ ಅರ್ಥ [೧]ಜನಾರ್ದನೀಯದಲ್ಲಿದೆ.

ತದದ್ಭುತಂ ಸಮೀಕ್ಷ್ಯ ತು ಪ್ರಭೀತ ಆಸ ಭೀಷ್ಮಕಃ ।
ಪಪಾತ ಪಾದಯೋರ್ವಿಭೋಃ ಕರೋಮಿ ತತ್ ತಥೇತಿ ಚ ॥ ೫೮ ॥

ಅ: ಆ ಅದ್ಭುತರೂಪವನ್ನು ಕಂಡು ಭೀಷ್ಮಕ ಬಹಳವಾಗಿ ಭಯಪಟ್ಟ. ಪ್ರಭುವಾದ ಶ್ರೀಕೃಷ್ಣನ ಪಾದಗಳಿಗೆ ಎರಗಿದ. ''ನೀನು ತಿಳಿಸಿದಂತೆಯೇ ಮಾಡುವೆ'' ಎಂದ.

ವಿ: ಗೀತೆ ಕೇಳುವ ಮುನ್ನ ಅರ್ಜುನ ಯುದ್ಧಕ್ಕೆ ಸಂದೇಹಿಸಿದ್ದಂತೆ, ಇಲ್ಲಿ ವಿಶ್ವರೂಪವನ್ನು ನೋಡುವ ಮುನ್ನ ಭೀಷ್ಮಕ ರುಗ್ಮಿಣಿಯನ್ನು ಶ್ರೀಕೃಷ್ಣನಿಗೆ ಕೊಡಲು ಸಂದೇಹಿಸಿದ್ದ. ಅಲ್ಲಿ ಅರ್ಜುನ ಬಳಿಕ ''ಕರಿಷ್ಯೇ ವಚನಂ ತವ'' ಎಂದು ಯುದ್ಧಕ್ಕೆ ಸಿದ್ಧನಾದಂತೆ, ಇಲ್ಲಿ ಭೀಷ್ಮಕ ''ಕರೋಮಿ ತತ್ ತಥೇತಿ ಚ'' ಎಂದು ರುಗ್ಮಿಣಿಯನ್ನು ಧಾರೆ ಎರೆಯಲು ಸಿದ್ಧನಾದ. ಈ ಎರಡು ಸಂದರ್ಭಗಳಲ್ಲೂ ವಿಶ್ವರೂಪದರ್ಶನದ ಪರಿಣಾಮ ಹೀಗೆ ಅಪೂರ್ವ ಎಂಬುದನ್ನು ಗ್ರಹಿಸಬೇಕು.

---

೧. ದೇವತಾಶ್ಚ ಸ್ವರೂಪಾಶ್ರಿತಬ್ರಹ್ಮಾದಿದೇವಾನಾಪಿವ್ಯದರ್ಶಯತ್। ದೇವತಾಃ ದೇವ್ಯಃ ಜಾಂಬವತ್ಯಾದಿ-ಷಣ್ಮಹಾಮಹಿಷ್ಯಶ್ಚೇತಿ ವಾ । ವಿಮಲಾದಿಸ್ವಸ್ವರೂಪಭೂತಶಕ್ತಯೋ ವಾ। – (ಜ.)

ದೇವತಾಃ– ದೇವ್ಯಃ ಜಾಂಬವತ್ಯಾದಿಷಣ್ಮಹಿಷ್ಯಶ್ಚೇತಿ ವಾ ವಿಮಲಾದಿಸ್ವಸ್ವರೂಪಭೂತಶಕ್ತಯೋ ವಾ ।– (ವ.)

ಪುನಶ್ಚ ವಿಶ್ವರೂಪತಾಂ ಪಿಧಾಯ ಪದ್ಮಲೋಚನಃ ।
ಜಗಾಮ ಪಕ್ಷಿವಾಹನಃ ಪುರೀಂ ಸ್ವಬಾಹುಪಾಲಿತಾಮ್ ॥ ೫೯ ॥

ಅ: ಬಳಿಕ ಪುಂಡರೀಕಾಕ್ಷನಾದ ಶ್ರೀಕೃಷ್ಣ ಆ ವಿಶ್ವರೂಪವನ್ನು ಮರೆಮಾಡಿ, ಪಕ್ಷಿವಾಹನನಾಗಿ ತನ್ನ ಬಾಹುಗಳಿಂದ ಪಾಲಿತವಾದ ಮಧುರಾಪಟ್ಟಣಕ್ಕೆ ತೆರಳಿದ.

ವರುಣ-ಜನಕರು ಮಾಡಿದ ಸ್ವಯಂವರದ ಮರ್ಮ

[೧]ಅಪಾಂಪತಿಶ್ಚ ಮೈಥಿಲಃ ಸ್ವಯಂವರಂಕೃತಾವಪಿ ।
ಹರಿಂ ವಿನಿಶ್ಚಯಾದಿಯಂ ವ್ರಜೇದಿತಿ ಸ್ಮ ಚಕ್ರತುಃ ॥ ೬೦ ॥

ಅ: ಜಲಾಧಿಪನಾದ ವರುಣ ಮತ್ತು ಮಿಥಿಲಾಧಿಪತಿಯಾದ ಜನಕ – ಇಬ್ಬರೂ ಸ್ವಯಂವರವನ್ನು ಏರ್ಪಡಿಸಿದ್ದವರೇ. ಆದರೆ ಅವರಿಬ್ಬರೂ ತಮ್ಮ ಕನ್ಯೆ ನಿಶ್ಚಯವಾಗಿ ಹರಿಯನ್ನೇ ಹೊಂದುವಳು ಎಂದು ಹಾಗೆ ಮಾಡಿದ್ದರು.

ವಿ: ಇಲ್ಲಿ ಭೀಷ್ಮಕ ರುಗ್ಮಿಣೀಸ್ವಯಂವರವನ್ನು ಹಮ್ಮಿಕೊಂಡಿದ್ದಂತೆ, ಹಿಂದೆ ವರುಣ, ಜನಕರು ಲಕ್ಷ್ಮೀಸ್ವಯಂವರ, ಸೀತಾಸ್ವಯಂವರಗಳನ್ನು ಹಮ್ಮಿಕೊಂಡಿದ್ದವರೇ ಆದವರು. ಆದರೆ ಅವರಿಗೆ ಶ್ರೀಹರಿಯನ್ನೇ ತಮ್ಮ ಕನ್ಯೆ ವರಿಸುವ ದೃಢನಿಶ್ಚಯವಿತ್ತು. ಆದ್ದರಿಂದ ಆ ಸ್ವಯಂವರಕಾರ್ಯ ಅವರಿಬ್ಬರಿಗೂ ದೋಷವಾಗಲಿಲ್ಲ. ಆದರೆ ಭೀಷ್ಮಕರಾಜನಿಗೆ ಸ್ವಯಂವರದಲ್ಲಿ ಶ್ರೀಕೃಷ್ಣನಿಗೆ ಬದಲಾಗಿ ಶಿಶುಪಾಲನಿಗೆ ಕೊಡುವ ದುರ್ವಿಚಾರ ಉಂಟಾಗಿತ್ತು. ಆದ್ದರಿಂದಲೇ ಇವನ ರುಗ್ಮಿಣೀಸ್ವಯಂವರದ ಕಾರ್ಯ ಶುಭಕಾರ್ಯವೆನ್ನಿಸಿರಲಿಲ್ಲ ಎಂಬುದನ್ನು ಇಲ್ಲಿ ವಿವರಿಸಿರುವರು.

ಸ್ವಯಂವರಃ [೨]ಕ್ಷಿತೇರ್ಭುಜಾಂ ಸ್ವಧರ್ಮ ಇತ್ಯತೋ ದ್ವಯೋಃ।
ನ ದೋಷ ಆಸ ಭೀಷ್ಮಕೋ ನ ಕೇಶವಾರ್ಥಮೈಚ್ಛತ ॥ ೬೧ ॥

---

೧. ಅನನ್ಯಯೋಗ್ಯಾ ಶ್ರೀಶ್ಚೇತ್ ಜ್ಞಾನಿನಾ ವರುಣೇನ ಮಿಥಿಲೇನ ಚ ದೇವಾನಾಂ ರಾಜ್ಞಾಂ ಚ ಮೇಲನಂ ಕೃತ್ವಾ ಲಕ್ಷ್ಮ್ಯಾಃ ಸೀತಾಯಾಶ್ಚ ಕುತಃ ಸ್ವಯಂವರಃ ಕೃತ ಇತ್ಯತ ಆಹ – ಅಪಾಂ ಪತಿರಿತಿ। ಸ್ವಯಂವರಂ ಕೃತಾವಪೀತ್ಯತ್ರ ಸ್ವಯಂವರಮುದ್ದಿಶ್ಯ ಕೃತೌ= ಪ್ರಯತ್ನೇಽಪಿ। ಯದ್ವಾ ಕೃಚ್ಛ್ರಾದ್ ಕೃತಾವಿತಿ ದ್ವಿವಚನಪ್ರಯೋಗಃ। ಸ್ವಯಂವರಂ ಕೃತೌ= ಕರ್ವಾಣಾವಪಿ ಇಯಂ ರಮಾ ಹರಿಂ ವ್ರಜೇದಿತಿ ವಿನಿಶ್ಚಯಾದೇವ ಚಕ್ರತುರಿತ್ಯನ್ವಯಃ ॥ – (ವಾ.)

ವರುಣಸ್ಯಾಪಿ ಕ್ಷತ್ರಿಯತ್ವೇನ ಪರಿಗಣನಾನ್ನಾನುಪಪತ್ತಿಃ । – (ತಾ.)

೨. ದೇವೇಷ್ವಪಿ ವಾಯುಸೋಮಾದಿತ್ಯಾನಾಂ ಕ್ಷತ್ರಿಯತ್ವಾದಾದಿತ್ಯಗಣಸ್ಥೋ ವರುಣೋಽಪಿ ಕ್ಷತ್ರಿಯ ಇತಿ ಭಾವೇನೋಕ್ತಂ ಸ್ವಯಂವರಃ ಕ್ಷಿತೇರ್ಭುಜಾಮಿತಿ ॥ – (ವಾ.)

ಅ: ಸ್ವಯಂವರ [೧]ರಾಜರಿಗೆ ಸ್ವಧರ್ಮ ಎಂದು ಅವರು ಹಾಗೆ ಮಾಡಿದ್ದರಿಂದ, ಅವರಿಬ್ಬರಿಗೂ ಅದು ದೋಷವಾಗಲಿಲ್ಲ. ಆದರೆ ಭೀಷ್ಮಕ ಕೃಷ್ಣನಿಗೆಂದು ಬಯಸಿದವನಾಗಿರಲಿಲ್ಲ.

ವಿ: ೧) ವರುಣ, ಜನಕರು ಹರಿಯನ್ನೇ ತಮ್ಮ ಕನ್ಯೆ ಸೇರುವಳು ಎಂದು ನಿಶ್ಚಯ ಹೊಂದಿದ್ದರೂ, ಹಾಗೆ ಸ್ವಯಂವರ ಮಾಡುವುದು ಕ್ಷತ್ರಿಯರಾದ ತಮಗೆ ಸ್ವಧರ್ಮ ಎಂಬುದು ಕಾರಣವಾಗಿತ್ತು; ಜನಕ ಕ್ಷತ್ರಿಯ; ದೇವತೆಗಳಲ್ಲಿ ವರುಣ ಕ್ಷತ್ರಿಯ ಎಂಬುದು ವಿಶೇಷ.

೨) ಆದರೆ ಭೀಷ್ಮಕನ ಸ್ವಯಂವರ ರುಗ್ಮಿಯಿಂದ ಪ್ರೇರಿತವಾಗಿ ರುಗ್ಮಿಣಿಯನ್ನು ಶಿಶುಪಾಲನಿಗೆ ಕೊಡುವ ದುರುದ್ದೇಶದ ಹಿನ್ನೆಲೆ ಹೊಂದಿತ್ತು, ಆದ್ದರಿಂದ ಇವನಿಗೆ ಅದು ದೋಷವೇ ಆಯಿತು ಎಂದರ್ಥ.

ಮತ್ತೊಮ್ಮೆ ಜರಾಸಂಧಾದಿಗಳ ದುರಾಲೋಚನೆ

ಅತೋ ಹರೌ ಪ್ರಬೋಧ್ಯ ತಂ ಗತೇ ಕೃಪಾಲುಸತ್ತಮೇ।
ವಶೀಕೃತೇ ಚ ಭೀಷ್ಮಕೇ ನೃಪಾಸ್ತ್ವಮಂತ್ರಯನ್ ಪುನಃ ॥ ೬೨ ॥

ಅ: ಆದ್ದರಿಂದ ಕರುಣಾಳುಗಳಲ್ಲಿ ಶ್ರೇಷ್ಠನಾದ ಶ್ರೀಕೃಷ್ಣ ಭೀಷ್ಮಕನನ್ನು ಎಚ್ಚರಿಸಿ ತೆರಳಿದ ಮೇಲೆ ಆ ಭೀಷ್ಮಕನು ಶ್ರೀಕೃಷ್ಣನ ವಶವರ್ತಿಯಾಗಿದ್ದನ್ನು ತಿಳಿದು, ರಾಜರುಗಳು ಮತ್ತೊಮ್ಮೆ ಮಂತ್ರಾಲೋಚನೆಗೆ ತೊಡಗಿದರು.

ವಿ: ಕೃಷ್ಣನ ಪ್ರಭಾವದಿಂದಾಗಿ ಭೀಷ್ಮಕನು ತಮ್ಮ ಪಕ್ಷ ತೊರೆದನೆಂದು ತಿಳಿದ ಜರಾಸಂಧಾದಿಗಳು ಮುಂದಿನ ಕಾರ್ಯತಂತ್ರವನ್ನು ರೂಪಿಸಲೆಂದು ಪುನಃ ಸಭೆ ಸೇರಿದರು ಎಂದರ್ಥ.

ಯಶಶ್ಚ ಧರ್ಮಮುತ್ತಮಂ ವಿಧಿತ್ಸತಾ ವೃಕೋದರೇ।
ನ ಕೇಶವೇನ ಸೂದಿತೋ ಜರಾಸುತೋ ಹಿ ಮನ್ಯತೇ ॥ ೬೩ ॥

ಅ: ಭೀಮನಿಗೆ ಉತ್ತಮ ಕೀರ್ತಿ ಹಾಗೂ ಪುಣ್ಯವನ್ನು ಒದಗಿಸಬಯಸಿ ಶ್ರೀಕೃಷ್ಣ ಜರಾಸಂಧನನ್ನು ಸಂಹರಿಸದೆ ಬಿಟ್ಟಿದ್ದ. ಆದರೆ ಜರಾಸಂಧ ಅದನ್ನು ಹೀಗೆ ತಿಳಿದಿದ್ದ :

---

೧. ವಾಯುಃ ಸದಾಶಿವೋಽನಂತೋ ಗರುಡಃ ಶಕ್ರ ಏವ ಚ।
ಕಾಮಶ್ಚ ವರುಣಶ್ಚೈವ ಸೋಮಸೂರ್ಯೌ ಯಮಸ್ತಥಾ ॥
ಏವಮಾದ್ಯಾಃ ಕ್ಷತ್ರಿಯಾಸ್ತು ದೇವಾನಾಂ ಬ್ರಹ್ಮನಿರ್ಮಿತಾಃ।
- ಇತಿ ಬೃಹದ್ಭಾಷ್ಯೋದ್ಧೃತ ವಾಮನಪುರಾಣವಚನಮ್ (೩/೫)

ವಿ: ಶಿವಭಕ್ತಾಗ್ರೇಸರನಾಗಿದ್ದ ಜರಾಸಂಧನನ್ನು ವಿಷ್ಣುಭಕ್ತಾಗ್ರೇಸರನಾದ ಭೀಮನಿಂದ ಕೊಲ್ಲಿಸುವ ಮೂಲಕ ಭೀಮನಿಗೆ ವಿಶೇಷ ಪುಣ್ಯ ಮತ್ತು ಕೀರ್ತಿಗಳನ್ನು ನೀಡಲೆಂದು, ತಾನು ಸರ್ವಶಕ್ತನಾಗಿದ್ದರೂ ಶ್ರೀಕೃಷ್ಣ ಜರಾಸಂಧನನ್ನು ಕೊಲ್ಲದೆ ಬಿಟ್ಟಿದ್ದ. ಆದರೆ ಜರಾಸಂಧ ಅದನ್ನು ಬೇರೊಂದು ರೀತಿಯಲ್ಲಿ ಅರ್ಥವಮಾಡಿಕೊಂಡಿದ್ದ ಎಂದರ್ಥ.

ವರಾಚ್ಛಿವಸ್ಯ ಮಾಮಯಂ ನ ಹಂತುಮೀಷ್ಟ ಉತ್ತಮಾತ್।
ಅತಃ ಶಿವಪ್ರಸಾದತೋ ಜಿತೋಽಪಿ ಜೇಷ್ಯ [೧]ಉತ್ತರಮ್ ॥ ೬೪ ॥

ಅ: ''ತನಗಿಂತ ಉತ್ತಮನಾದ ಶಿವನ ವರವಿರುವಾಗ ಇವನಿಗೆ ನನ್ನನ್ನು ಕೊಲ್ಲಲಾಗುತ್ತಿಲ್ಲ. ಆದ್ದರಿಂದ ನಾನೀಗ ಸೋತಿದ್ದರೂ, ಶಿವನ ಅನುಗ್ರಹದಿಂದಾಗಿ ಮುಂದೊಮ್ಮೆ ಗೆಲ್ಲುವೆ''.

ವಿ: ''ಶಿವ ಕೃಷ್ಣನಿಗಿಂತ ಉತ್ತಮ. ಆದರಿಂದಾಗಿ ಶಿವನ ವರವಿರುವ ನನ್ನನ್ನು ಕೊಲ್ಲಲು ಇವನಿಂದಾಗುತ್ತಿಲ್ಲ. ಈಗ ನನ್ನನ್ನು ಸಾಯದಂತೆ ಕಾಪಾಡಿರುವ ಶಿವ, ಮುಂದೊಮ್ಮೆ ಗೆಲ್ಲುವಂತೆಯೂ ಮಾಡಬಹುದು'' ಎಂಬುದು ಅವನ ಭ್ರಮೆಯ ರೀತಿಯಾಗಿತ್ತು ಎಂದು ತಿಳಿಯಬೇಕು.

ಮೃಧೇ[೨] ಮೃಧೇ ಜಿತೋಽಪಿ ಸನ್ ದೃಢಾಶಯಾ ಪುನಃ ಪುನಃ।
ಸಮೀಹತೇ ಯುಧೇ ಶಿವಂ ನ ಚಾವಮನ್ಯತೇ ಕ್ವಚಿತ್ ॥ ೬೫ ॥

ಅ: ಪ್ರತಿ ಯುದ್ಧದಲ್ಲೂ ಪರಾಭವಗೊಂಡಿದ್ದರೂ, ಬಲವಾದ ಆಶೆಯಿಂದ ಮತ್ತೆ ಮತ್ತೆ ಅವನು ಯುದ್ಧಕ್ಕೆ ತೊಡಗುತ್ತಿದ್ದ. ಶಿವನನ್ನು ಎಲ್ಲೂ ಕಡಿಮೆಯವನೆಂದು ತಿಳಿಯಲೇ ಇಲ್ಲ.

ವಿ: ೧) ಸೋಲಿನ ಮೇಲೆ ಸೋಲು ಉಂಟಾಗುತ್ತಿದ್ದರೂ, ಜರಾಸಂಧನಿಗೆ ಮೇಲೆ ಹೇಳಿದ ಭ್ರಮೆ ಅವನನ್ನು ಮರಳಿ ಮರಳಿ ಕೃಷ್ಣನ ಮೇಲೆ ಯುದ್ಧಕ್ಕೆ ಹೋಗುವಂತೆ ಮಾಡುತ್ತಿತ್ತು. ಶಿವನ ಮೇಲೆ ಗೌರವ ಕಡಿಮೆಯಾಗದಂತೆಯೂ ಮಾಡಿತ್ತು.

೨) ವಿಷ್ಣುಭಕ್ತರಿಗೆ ಎಂತಹ ಪ್ರಸಂಗದಲ್ಲೂ ವೈಷ್ಣವದೀಕ್ಷೆ ದೃಢವಾಗಿರುವಂತೆ, ಶೈವರೇ ಮೊದಲಾದವರಿಗೂ ತಮ್ಮ ತಮ್ಮ ದೇವತೆಗಳಲ್ಲಿ ಅಂತಹ ದೃಢವಾದ ದೀಕ್ಷೆ ಇದ್ದೇ ಇರುವುದು ಎಂಬುದು ವಿಶೇಷ. ಜರಾಸಂಧ ಅಂತಹ ಒಂದು ನಿದರ್ಶನ.

---

೧. ಉತ್ತರಂ= ಉತ್ತರಕಾಲಂ ''ಕಾಲಾಧ್ವನೋರತ್ಯಂತಸಂಯೋಗೇ'' ಇತಿ ದ್ವಿತೀಯಾ ॥ – (ವಾ.)

೨. ಮೃಧೇ ಮೃಧೇ ಪ್ರತಿಯುದ್ಧಂ ಇತ್ಯರ್ಥಃ – (ಜ.)

'ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಮ್ ।' – (ಗೀತಾ ೯/೧೧)

ಅತಃ ಪುನಶ್ಚ ಭೂಮಿಪಾನುವಾಚ ಬಾರುಹದ್ರಥಃ।
ಧಿಗೇವ ಪೌರುಷಂ ಹಿ ನೋ ಯದೇಷ ನೋಽಜಯತ್ ಸದಾ ॥ ೬೬ ॥

ಅ: ಆದ್ದರಿಂದ ಜರಾಸಂಧ ಮತ್ತೆ ರಾಜರುಗಳಿಗೆ ಹೇಳಿದ : ''ನಮ್ಮ ಪೌರುಷಕ್ಕೇ ಧಿಕ್ಕಾರ. ಈ ಕೃಷ್ಣ ನಮ್ಮನ್ನು ಸದಾ ಗೆಲ್ಲುತ್ತಲೇ ಇರುವನು.

ಅಭೂಪತೇರ್ನ ಚಾಸನಂ ಪ್ರದೇಯಮಿತ್ಯುದಾಹೃತಮ್।
ಅಮುಷ್ಯ ನಸ್ತದನ್ಯಥಾ ಬಭೂವ ಚಿಂತಿತಂ ನೃಪಾಃ ॥ ೬೭ ॥

ಅ: ರಾಜರೆ! ರಾಜನಲ್ಲದ ಕೃಷ್ಣನಿಗೆ ಆಸನ ನೀಡಕೂಡದೆಂದು ನಾವು ತೀರ್ಮಾನಿಸಿದ್ದೆವು. ಆದರೆ ಅಂದುಕೊಂಡಿದ್ದಕ್ಕೆ ವಿರುದ್ಧವಾದುದೇ ನಡೆಯಿತು.

ವಿ: ಶ್ರೀಕೃಷ್ಣನಿಗೆ ರಾಜರಾರೂ ಪೂಜೆ ಸಲ್ಲಿಸಕೂಡದು ಎಂದು ಇವರು ತೀರ್ಮಾನಿಸಿದ್ದರೆ, ಎಲ್ಲ ರಾಜರೂ ಸೇರಿಯೇ ಕೃಷ್ಣನಿಗೆ ಭಾರಿ ವೈಭವದ ಪೂಜೆಯನ್ನೇ ಮಾಡುವಂತಾಯಿತು ಎಂಬುದು ಅವನ ಮುಖ್ಯಕೊರಗಾಗಿತ್ತು.

ಅಯಂ ನೃಪೋತ್ತಮಾಂಗಣೇ ಮಹೇಂದ್ರಪೀಠಮಾರುಹತ್ ।
ಸಮಸ್ತರಾಜರಾಜತಾಮವಾಪ ನೋಽಪ್ಯನಿಚ್ಛತಾಮ್ ॥ ೬೮ ॥

ಅ: ಈ ಕೃಷ್ಣ ಮಹಾರಾಜರ ವೇದಿಕೆಯಲ್ಲಿ ಮಹೇಂದ್ರ ನೀಡಿದ ಸಿಂಹಾಸನವನ್ನೇರಿದ. ನಾವು ಬಯಸದಿದ್ದರೂ ಸಕಲರಾಜರಿಗೂ ರಾಜನೆನ್ನಿಸಿದ.

ವಿ: ಮಹಾಭಾರತದ ಮೊದಲ ಶ್ಲೋಕದ 'ಅಮರಾಸುರಸಿದ್ಧವಂದ್ಯಮ್' ಎಂಬ ಪದದ ವಿವರಣೆಯಂತೆ ಈ ಇಡೀ ಪ್ರಸಂಗ ಇದೆ ಎಂಬುದನ್ನು ಗಮನಿಸಬೇಕು. ಶ್ರೀಹರಿ ಸಮಸ್ತಸುರಾಸುರರಿಂದಲೂ ವಂದ್ಯ. ಸುರರಿಂದ ಭಕ್ತಿಪೂರ್ವಕವಾಗಿ ವಂದ್ಯನಾದರೆ, ಅಸುರರಿಂದ ಅನಿವಾರ್ಯವಾಗಿ ಜೀವನೇಚ್ಛೆಯಿಂದ ಪೂಜಿತನಾದ. ಇಲ್ಲಿ ಜರಾಸಂಧಾದಿಗಳಿಂದ ನಡೆದದ್ದೂ ಅದೇ. ತಾವೆಲ್ಲ ಶ್ರೀಕೃಷ್ಣನನ್ನು 'ರಾಜಾಧಿರಾಜ' ಎಂದು ಮನಸ್ಸಿಲ್ಲದೆ ಒಪ್ಪಿಕೊಂಡಿದ್ದನ್ನು ಸ್ವತಃ ಅವನೇ ಹೇಳುತ್ತಿರುವುದು ಗಮನಾರ್ಹ.

ಅತಃ ಪುನಃ ಕಥಂ ಹರಿಂ ವಯಂ ಜಯೇಮ ಚಿಂತ್ಯತಾಮ್।
ಯಥಾ ಚ ಭೀಷ್ಮಕಾತ್ಮಜಾಮವಾಪ್ನುಯಾಚ್ಚ ಚೇದಿರಾಟ್ ॥ ೬೯ ॥

ಅ: ಆದ್ದರಿಂದ ನಾವು ಕೃಷ್ಣನನ್ನು ಹೇಗೆ ಗೆಲ್ಲುವುದು? ಎಂದು ಮರಳಿ ಯೋಚಿಸಬೇಕಾಗಿದೆ. ಚೇದಿರಾಜನಾದ ಶಿಶುಪಾಲ ಭೀಷ್ಮಕಪುತ್ರಿಯಾದ ರುಗ್ಮಿಣಿಯನ್ನು ಹೇಗೆ ಪಡೆಯುವುದು ಎಂದು ಸಹ.

ವಿ: ೧) ಅವನಿಗೆ ಶಿಶುಪಾಲ ರುಗ್ಮಿಣಿಯನ್ನು ಪಡೆಯುವುದಕ್ಕಿಂತ, ಕೃಷ್ಣನನ್ನು ಹೇಗೆ ಜಯಿಸುವುದು ಎಂಬುದೇ ಪ್ರಧಾನಚಿಂತೆ ಎಂಬ ಇಲ್ಲಿಯ ಭಾವವನ್ನೂ ಗಮನಿಸಬೇಕು. ಅಸುರರದು ಸದಾ ಹರಿಯ ಮೇಲೆಯೇ ಪರಮದ್ವೇಷ ಎಂಬುದು ತತ್ತ್ವ.

೨) ಅವರೆಲ್ಲ ಇನ್ನು ರುಗ್ಮಿಣಿಯನ್ನು ಮಹಾಲಕ್ಷ್ಮಿಯೆಂದಾಗಲಿ, ಕೃಷ್ಣಪತ್ನಿಯೆಂದಾಗಲಿ ತಿಳಿದಿಲ್ಲ ಎಂಬುದನ್ನು 'ಭೀಷ್ಮಕಾತ್ಮಜಾಂ' ಎಂಬ ಪದದಿಂದ ತಿಳಿಯಬಹುದು.

[೧]ಅಯಂ ಹಿ ದತ್ತಪುತ್ರಕೋ ಮ ಔರಸಾದ್ವಿಶಿಷ್ಯತೇ।
ಅತೋ ನಿವೇಶ್ಯ ಏಷ ಮೇ ಸುರೂಪಿಣೇ ಚ ರುಗ್ಮಿಣೇ ॥ ೭೦ ॥

ಅ: ಈ ದತ್ತಪುತ್ರನಾದ ಶಿಶುಪಾಲ ನನಗೆ ದತ್ತಪುತ್ರ; ನನ್ನ ಸ್ವಂತ ಮಗನಿಗಿಂತಲೂ ಮಿಗಿಲು. ಆದ್ದರಿಂದ ಸುಂದರಿಯಾದ ರುಗ್ಮಿಣಿಯನ್ನು ಇವನಿಗೆ ವಿವಾಹ ಮಾಡಲೇಬೇಕಿದೆ.

ವಿ: ೧) ಜರಾಸಂಧನ ಔರಸಪುತ್ರ ಸಹದೇವ. ಅವನು ಏಕಾದಶರುದ್ರರಲ್ಲಿ ಪತ್ರತಾಪ ಎಂಬ ಒಬ್ಬ ರುದ್ರನ ಅವತಾರ; ಪರಮಸಾತ್ತ್ವಿಕ. ಆದರಿಂದಾಗಿಯೇ ಜರಾಸಂಧನಿಗೆ ಅವನ ಮೇಲೆ ಅಷ್ಟಾಗಿ ಪ್ರೀತಿ ಹುಟ್ಟಿರಲಿಲ್ಲ. ಆ ಕೊರತೆಯನ್ನು ತುಂಬಿಸಿಕೊಳ್ಳಲೆಂದೇ ಹರಿದ್ವೇಷಿಯಾದ ಶಿಶುಪಾಲನನ್ನು ತನ್ನ ದತ್ತಪುತ್ರನಾಗಿ ಸ್ವೀಕರಿಸಿದ್ದ ಎಂದು ತಿಳಿಯಬಹುದು.

೨) ರುಗ್ಮಿಣಿಯನ್ನು ಶಿಶುಪಾಲನಿಗೆ ಮದುವೆ ಮಾಡಿಸಿದಂತೆಯೂ ಆಯಿತು; ಕೃಷ್ಣನೊಂದಿಗೆ ಅವಳ ಮದುವೆಯನ್ನು ತಪ್ಪಿಸಿದಂತೆಯೂ ಆಯಿತು ಎಂಬುದು ಅವನ ದುರಾಲೋಚನೆ.

ಶಿವಾಗಮೇಷು ಶಿಷ್ಯಕಾಃ ಸರುಗ್ಮಿಸಾಲ್ವಪೌಂಡ್ರಕಾಃ ।
ಮಮಾಖಿಲಾ ನೃಪಾಸ್ತತಃ ಕುರುಧ್ವಮೇತದೇವ ಮೇ ॥ ೭೧ ॥

---

೧. ಅಯಂ ಹಿ ದತ್ತಪುತ್ರಕ ಇತ್ಯತ್ರ ಅಯಂ = ಶಿಶುಪಾಲಃ ಸ್ವಪಿತ್ರಾ = ದಮಘೋಷೇಣ ಪುತ್ರವದೇನಂ ಪರಿಪಾಲಯ ವಿವಾಹಂ ಚ ಕಾರಯೇತಿ ಮತ್ಕರೇ ದತ್ತತ್ವಾತ್ ದತ್ತಪುತ್ರಕ ಇತ್ಯರ್ಥಃ। ಮೇ ಔರಸಾತ್ ಪುತ್ರಾತ್ ಸಹದೇವಾದಪಿ ವಿಶಿಷ್ಯತೇ। ಅತೋ ನಿವೇಶ್ಯ ಇತ್ಯತ್ರ ನಿವೇಶ್ಯಃ= ಉದ್ವಾಹ್ಯಃ ॥ – (ವಾ.)

ಅ: ರುಗ್ಮಿ, ಸಾಲ್ವ, ಪೌಂಡ್ರಕ ಮೊದಲಾದ ನೀವೆಲ್ಲ ರಾಜರೂ ನನಗೆ ಶೈವಶಾಸ್ತ್ರದಲ್ಲಿ ಶಿಷ್ಯರು. ಆದ್ದರಿಂದ ನೀವು ನನಗೆ ಇದನ್ನು ನಡೆಸಿಕೊಡಲೇಬೇಕು''.

ವಿ: ಜರಾಸಂಧ ಅವರೆಲ್ಲ ತನ್ನ ಶಿಷ್ಯರು ಎಂಬುದನ್ನು ಒತ್ತಿ ಹೇಳುತ್ತಾ ಅವರು ಶ್ರೀಕೃಷ್ಣದ್ವೇಷವನ್ನು ಗುರುದಕ್ಷಿಣೆಯ ಕಾಣಿಕೆ ಎಂಬಂತೆ ನೀಡಲು ಆಜ್ಞಾಪಿಸುತ್ತಿರುವನು ಎಂಬುದನ್ನು ಗಮನಿಸಬೇಕು.

ಸಾಲ್ವ ನೀಡಿದ ಸಲಹೆ

ಇತೀರಿತೇ ತು ಸೌಭರಾಡ್ ಜಗಾದ ರುಗ್ಮಿಸಂವಿದಾ।
ಸ್ವಯಂವರೋ ನಿವರ್ತಿತಃ[೧] ಸ್ವಸಾರಮೇಷ ದಾಸ್ಯತಿ ॥ ೭೨ ॥

ಅ: ಜರಾಸಂಧ ಹೀಗೆನ್ನಲು ಸೌಭರಾಜನಾದ ಸಾಲ್ವ ರುಗ್ಮಿಯ ವಿಚಾರವನ್ನು ತಿಳಿಸಿದ: ''ಸ್ವಯಂವರವನ್ನು ಕೈಬಿಡಲಾಗಿದೆ. ಇವನು ತನ್ನ ತಂಗಿಯನ್ನು ನೀಡುವನು.

ನ ಚಾತಿವರ್ತಿತುಂ ಕ್ಷಮಃ ಪಿತಾಽಸ್ಯ ಚೇದಿಪಾಯ ತಾಮ್।
ಪ್ರದಾತುಕಾಮಮಾತ್ಮಜಂ ವಯೋಗತಸ್ತಥಾಽಬಲಃ ॥ ೭೩ ॥

ಅ: ಶಿಶುಪಾಲನಿಗೆ ಅವಳನ್ನು ಧಾರೆ ಎರೆಯಲು ಬಯಸುವ ಮಗನನ್ನು ಇವನ ತಂದೆ ಭೀಷ್ಮಕ ಮೀರಿ ನಡೆಯಲಾರ. ಅವನು ಮುದುಕ; ಜೊತೆಗೆ ದುರ್ಬಲ.

ವಿ: ರುಗ್ಮಿ ಸ್ವಭಾವತಃ ದೈತ್ಯನಾದ್ದರಿಂದ ರುಗ್ಮಿಣಿಯನ್ನು ತಂದೆಯ ಸಂಕಲ್ಪಕ್ಕೆ ವಿರುದ್ಧವಾಗಿ ಶಿಶುಪಾಲನಿಗೆ ಕೊಡಲು ಸನ್ನದ್ಧನಾದ. ಸ್ವಯಂವರದ ವಿಚಾರ ಕೈಬಿಟ್ಟ. ಸಾಲ್ವನ ಮೂಲಕ ತನ್ನ ನಿಶ್ಚಯವನ್ನು ತಿಳಿಸಿದ. ರುಗ್ಮಿಯ ನಿಶ್ಚಯವನ್ನು ಅವನ ವಯಸ್ಸಾದ ದುರ್ಬಲ ತಂದೆ ತಡೆಯಲಾರ ಎಂಬುದು ಇವರ ಮತ್ತೊಂದು ಕೆಟ್ಟವಿಚಾರ.

ಸ್ವಯಂ ತು ಕೃಷ್ಣ ಏತ್ಯ ನೋ ವಿಜಿತ್ಯ ಕನ್ಯಕಾಂ ಹರೇತ್।
ತತೋಽಸ್ಯ ಪೂರ್ವಮೇವ ನೋ ಹ್ಯಭಾವತಾ[೨] ಕೃತಾ ಶುಭಾ ॥ ೭೪ ॥

---

೧. ಸ್ವಯಂವರೋ ನಿವರ್ತಿತ ಇತ್ಯತ್ರ ಪ್ರತಾಪಾತಿಶಯಂ ದೃಷ್ಟ್ವಾ ಕನ್ಯಾ ಯತ್ರ ಸ್ವಯಮೇವ ವರಂ ವರಯತಿ ಸಃ ಸ್ವಯಂವರಃ ॥ – (ವಾ.)

೨. ಅಭಾವತಾ ಕೃತಾ ಶುಭೇತ್ಯತ್ರ ಅಸ್ಯ = ಕೃಷ್ಣಸ್ಯ ಪೂರ್ವಮೇವ ಯಾ ಅಭಾವತಾ ಕೃತಾ = ಗರ್ಗೇಣೈವ ಕೃತಾ ಸಾ ನಃ ಅಸ್ಮಾಕಂ ಶುಭಾ ಹಿ ॥ – (ವಾ.)

ಅ: ಇನ್ನು ಕೃಷ್ಣ ಸ್ವತಃ ಬಂದು ನಮ್ಮನ್ನು ಸೋಲಿಸಿ, ಕನ್ಯೆಯನ್ನು ಕರೆದೊಯ್ಯಬಹುದು. ನಾವು ಅದಕ್ಕಿಂತ ಮುಂಚೆಯೇ ಅವನನ್ನು ಇಲ್ಲವಾಗಿಸುವುದು ಒಳ್ಳೆಯದು.

ಕಾಲಯವನನ ಪೂರ್ವಾಪರ; ಗರ್ಗಾಚಾರ್ಯರ ಕೃಷ್ಣವೈರ

ಉಪಾಯ ಏಷ ಚಿಂತಿತೋ ಮಯಾऽತ್ರ ಮಾಗಧೇಶ್ವರ ।
[೧]ಮುನಿಂ ಹಿ ಗರ್ಗನಾಮಕಂ ಹ್ಯಮುಷ್ಯ ಶ್ಯಾಲ ಆಕ್ಷಿಪತ್ ೧೪\೪\೧೪॥ ೭೫ ॥

ಅ: ಮಗಧದ ದೊರೆಯಾದ ಜರಾಸಂಧನೆ! ಈ ವಿಷಯದಲ್ಲಿ ನಾನೊಂದು ಉಪಾಯವನ್ನು ಆಲೋಚಿಸಿರುವೆ. ಗರ್ಗ ಎಂಬ ಮುನಿಯನ್ನು ಅವನ ಹೆಂಡತಿಯ ಸೋದರ (ಸೋದರಿಯ ಗಂಡ) ಅಪಹಾಸ್ಯ ಮಾಡಿದ.

ವಿ: ಈ ಗರ್ಗಮುನಿ ಕೃಷ್ಣನಿಗೆ ನಾಮಕರಣಕ್ಕೆಂದು ವಸುದೇವನಿಂದ ಕಳುಹಿಸಲ್ಪಟ್ಟಿದ್ದ ಯಾದವಪುರೋಹಿತ. ಅವನನ್ನು ಅವನ ಮೈದುನ ಒಮ್ಮೆ ಗೇಲಿ ಮಾಡಿ ಕೆರಳಿಸಿದ್ದ. ಇಲ್ಲಿ 'ಶ್ಯಾಲಃ' ಎಂಬುದಕ್ಕೆ 'ಭಗಿನೀಪತಿಃ' (ಸೋದರೀಪತಿ) ಎಂಬ ಅರ್ಥ ತಾಮ್ರಪರ್ಣೀಯದಲ್ಲಿದೆ.

ಯದಾऽಸ್ಯ ಷಂಢತೋದಿತಾ ಮುನೇಃ ಪುರೋ ಹಿ ತಸ್ಯ ಚ ।
[೨]ಪರೇಣ ವೃಷ್ಣಯೋऽಹಸಂಶ್ಚುಕೋಪ ಗರ್ಗ ಏಷು ಹಿ ॥ ೭೬ ॥

ಅ: ಪುರೋಹಿತನಾದ ಗರ್ಗಮುನಿಗೆ ಅವನೆದುರೇ ಅವನು ನಪುಂಸಕನೆಂದು ನುಡಿದಾಗ, ಯಾದವರೆಲ್ಲ ನಕ್ಕರು. ಗರ್ಗಾಚಾರ್ಯ ಅವರ ಬಗ್ಗೆ ಕೋಪಗೊಂಡ.

---

೧. ತಾಮೇವ ಕಥಾಂ ಸಾಲ್ವಃ ವಿವಿಚ್ಯಾಹ । ಮುನಿಂ ಹೀತ್ಯಾದಿನಾ। ಅಮುಷ್ಯ ಗರ್ಗಸ್ಯ ಶ್ಯಾಲಃ ಭಾರ್ಯಾಸಹೋದರಃ ಕಶ್ಚಿದ್ಯಾದವಃ ॥ – (ವಾ.)

ಶ್ಯಾಲಃ = ಸ್ತ್ರಿಯಃ ಕನಿಷ್ಠಭ್ರಾತಾ । – (ಜ.)

ಶ್ಯಾಲಃ = ಸ್ತ್ರಿಯಃ ಕನಿಷ್ಠಭ್ರಾತಾ । – (ವ.)

ಅಮುಷ್ಯ ಶ್ಯಾಲ ಇತಿ ಗರ್ಗಸ್ಯ ಭಗಿನೀಪತಿರಿತ್ಯರ್ಥಃ । – (ತಾ.)

ಶ್ಯಾಲಾಃ ಸ್ಯುಃ ಭ್ರಾತರಃ ಪತ್ನ್ಯಾಃ । – (ಅಮರಕೋಶ)

ಸಾಲಃ – (ಪಾಠಾಂತರ)

೨. ಪರೇಣ=ಕೃಷ್ಣೇನ ಚೋದಿತಾ ವೃಷ್ಣಯಃ ಅಹಸನ್ನಿತಿ ಯೋಗ್ಯಪದಾಧ್ಯಾಹಾರಃ। ಪರೇಣ ಸಹ ಅಹಸನ್ನಿತಿ ವಾ। – (ವಾ.)

ವಿ: ೧) ಇಲ್ಲಿ 'ಪುರೋಹಿತಸ್ಯ' ಎಂಬುದನ್ನು 'ಪುರೋಹಿತಸ್ಯ ಮುನೇಃ' – ಪುರೋಹಿತನಾದ ಗರ್ಗ ಮುನಿಗೆ ಎಂದೂ, 'ಪುರೋ ಹಿ ತಸ್ಯ' – ಅವನ ಎದುರೇ ಎಂದೂ ಎರಡು ಬಗೆಯಲ್ಲೂ ಅರ್ಥಮಾಡಿಕೊಳ್ಳಬಹುದು. ಆಗ ಶ್ಲೇಷಯಮಕಗರ್ಭಿತವಾಗಿ ವಿಶೇಷಾರ್ಥವನ್ನು ಈ ಪದ ನೀಡುವುದು.

೨) ಯಾದವರೆಲ್ಲ ಇದ್ದಾಗ ಶ್ರೀಕೃಷ್ಣನೆದುರೇ ನಡೆದ ಪ್ರಸಂಗ ಇದು. ಇದರಿಂದಾಗಿ ಗರ್ಗಾಚಾರ್ಯರಿಗೆ ಕೃಷ್ಣನ ಮೇಲೆ ಪ್ರಾರಬ್ಧವಶಾತ್ ಕೋಪಹುಟ್ಟಿತು ಎಂದು ತಿಳಿಯಬಹುದು. ಈ ಪ್ರಸಂಗದ ವಿವರಗಳು ಹರಿವಂಶದಲ್ಲೂ [೧]ವಿಷ್ಣುಪುರಾಣದಲ್ಲೂ ಬಂದಿವೆ.

ಚಕಾರ ಹಿ ಪ್ರತಿಶ್ರವಂ ಸಮಾರ್ಜಯೇ ಸುತಂ ದ್ಯುತಮ್।
ಅಕೃಷ್ಣತಾಂ ಯ ಆನಯೇದ್ಭುವೋಽಪಿ ವೃಷ್ಣಿನಾಶಕಃ ॥ ೭೭ ॥

ಅ: ಗರ್ಗ ಶಪಥ ಮಾಡಿದ. ''ಭೂಮಿಯಲ್ಲಿ ಶ್ರೀಕೃಷ್ಣನಿಲ್ಲದಂತೆ ಮಾಡಬಲ್ಲ ವೃಷ್ಣಿಕುಲವನ್ನು ನಾಶಪಡಿಸಬಲ್ಲ ಮಗನೊಬ್ಬನನ್ನು ಬೇಗನೆ ಪಡೆಯುವೆ''.

ವಿ: ತಮ್ಮನ್ನು ನಪುಂಸಕನೆಂದು ಕರೆದ ಕೋಪಕ್ಕೆ ಪುತ್ರನನ್ನು ಪಡೆಯುವ ಶಪಥ. ಅಪಹಾಸ್ಯ ಮಾಡಿದವರ ಮೇಲೆ ಸೇಡಿಗಾಗಿ ಶ್ರೀಕೃಷ್ಣನನ್ನು ಕೊಲ್ಲುವ ಹಾಗೂ ಯಾದವಕುಲವನ್ನು ನಾಶಪಡಿಸುವ ಮಗನನ್ನು ಪಡೆಯುವ ಶಪಥ. ಹೀಗೆ ಎರಡನ್ನೂ ಅಂತಹ ಒಬ್ಬ ಪುತ್ರನನ್ನು ಪಡೆಯುವ ಮೂಲಕ ಸಾಧಿಸುವುದಾಗಿ ಗರ್ಗಶಪಥದ ಭಾವ.

ಯತೋ ಹಿ ಕೃಷ್ಣಸಂಶ್ರಯಾದ್ವಯಾಪಹಾಸಿತಾ ವಯಮ್ ।
ಇತಿ ಬ್ರುವನ್ ವನಂ ಯಯೌ ತಪಶ್ಚ ಶೈವಮಾಚರತ್ ॥ ೭೮ ॥

---

೧. ವೃಷ್ಣೀನಾಮಂಧಕಾನಾಂ ಚ ಗುರುರ್ಗಾರ್ಗ್ಯೋ ಮಹಾಮನಾಃ ।
ಬ್ರಹ್ಮಚಾರೀ ಪುರಾ ಭೂತ್ವಾ ನ ಸ್ಮ ದಾರಾನ್ ಸ ವಿಂದತಿ ॥
ತಥಾ ಹಿ ವರ್ತಮಾನಂ ತಮೂರ್ಧ್ವರೇತಸಮವ್ಯಯಮ್ ।
ಶ್ಯಾಲೋಽಭಿಶಸ್ತವಾನ್ ಗಾರ್ಗ್ಯಮಪುಮಾನಿತಿ ರಾಜನಿ ॥
ಸೋಽಭಿಶಸ್ತಸ್ತದಾ ರಾಜನ್ನಗರೇ ತ್ವಜಿತಂ ಜಯೇ ।
ಅಲಿಪ್ಸಂಸ್ತು ಸ್ತ್ರಿಯಂ ಚೈವ ತಪಸ್ತೇಪೇ ಸುದಾರುಣಮ್ ॥ – (ಹರಿವಂಶ ೨/೫೭/೭-೯)

ಗಾರ್ಗ್ಯಂ ಗೋಷ್ಠ್ಯಾಂ ದ್ವಿಜಂ ಶ್ಯಾಲಃ ಷಂಢ ಇತ್ಯುಕ್ತವಾನ್ ದ್ವಿಜ ।
ಯದೂನಾಂ ಸನ್ನಿಧೌ ಸರ್ವೇ ಜಹಸುರ್ಯಾದವಾಸ್ತದಾ ॥
ತತಃ ಕೋಪಪರೀತಾತ್ಮಾ ದಕ್ಷಿಣಾಪಥಮೇತ್ಯ ಸಃ ।
ಸುತಮಿಚ್ಛಂಸ್ತಪಸ್ತೇಪೇ ಯದುಚಕ್ರಭಯಾವಹಮ್ ॥ – ವಿಷ್ಣುಪುರಾಣ (೫/೨೩/೧೨)

ಅ: ಅವನು ಹಾಗೆ ನನ್ನನ್ನು ಅಪಹಾಸ ಮಾಡಲು ಕೃಷ್ಣನ ಬಲವೇ ಕಾರಣವಲ್ಲವೆ!'' ಎಂದು ನುಡಿಯುತ್ತಾ, ಗರ್ಗಮುನಿ ಕಾಡಿಗೆ ತೆರಳಿದ; ಶಿವನನ್ನು ಕುರಿತು ತಪಸ್ಸನ್ನೂ ಆಚರಿಸಿದ.

ವಿ: ನಕ್ಕಿದ್ದು ಯಾದವರಾದರೂ, ಅವರು ಹಾಗೆ ನಗಲು ಕೃಷ್ಣನ ಬಲವೇ ಕಾರಣ. ಅದಕ್ಕಾಗಿ ಕೃಷ್ಣನ ಮೇಲೆ ಸೇಡು ತೀರಿಸಿಕೊಳ್ಳುವ ತವಕ ಗರ್ಗಾಚಾರ್ಯರಿಗೆ ಎಂದರ್ಥ. ಮೂಲತಃ ವಿಷ್ಣುಭಕ್ತರಾದ ಅವರು ತಮ್ಮ ದುಷ್ಟ ಉದ್ದೇಶದ ಸಾಧನೆಗಾಗಿ ಶಿವನನ್ನು ಆರಾಧಿಸುವಂತಾಯಿತು. ಹರಿದ್ವೇಷ ಹರಾದಿ ಇತರದೇವತೆಗಳನ್ನು ಸರ್ವೋತ್ತಮರೆಂದು ತಿಳಿದು ಆರಾಧಿಸುವ ದುಷ್ಪ್ರೇರಣೆಗೆ ಕಾರಣವಾಗುವುದು ಎಂಬ ತತ್ತ್ವವೂ ಇಲ್ಲಿ ಸೂಚಿತ.

ಸ ಚೂರ್ಣಮಾಯಸಂ ತ್ವದನ್ ದದರ್ಶ ಚಾಬ್ದತಃ ಶಿವಮ್ ।
ವರಂ ತತೋಽಭಿಪೇದಿವಾನ್ ಸುತಂ ಹರೇರಭಾವದಮ್ ॥ ೭೯ ॥

ಅ: ಗರ್ಗಮುನಿ ಉಕ್ಕಿನ ಪುಡಿಯನ್ನು ತಿನ್ನುತ್ತಾ, ತಪಸ್ಸು ಮಾಡಿ, ಒಂದು ವರ್ಷದಲ್ಲಿ ಶಿವನನ್ನು ಸಾಕ್ಷಾತ್ಕರಿಸಿಕೊಂಡ. ಅವನಿಂದ ಕೃಷ್ಣನನ್ನು ಇಲ್ಲವಾಗಿಸುವ ಮಗನನ್ನು ಹೊಂದುವ ವರವನ್ನೂ ಪಡೆದುಕೊಂಡ.

ವಿ: ಗರ್ಗಮುನಿಯ ಉದ್ದೇಶ ತಾಮಸವಾಗಿದ್ದಂತೆ, ತಪಸ್ಸಿನ ಕ್ರಮವೂ ತಾಮಸವೇ ಆಗಿತ್ತು ಎಂಬುದನ್ನು ಉಕ್ಕಿನ [೧]ಪುಡಿಯನ್ನು ತಿನ್ನುತ್ತಾ ತಪಸ್ಸು ಮಾಡಿದ ಎಂದು ಹೇಳುವ ಮೂಲಕ ತಿಳಿಸಿರುವರು.

ಸ [೨]ವಿಷ್ಣುದೈವತೋಽಪಿ ಸನ್ ಪ್ರವಿಷ್ಟ ಉಲ್ಬಣಾಸುರೈಃ।
ವ್ಯಧಾದ್ಧರೇಃ ಪ್ರತೀಪಕಂ ವ್ರತಂ ತು ನೈಷ್ಠಿಕಂ ಜಹೌ ॥ ೮೦ ॥

ಅ: ಗರ್ಗಮುನಿ ವಿಷ್ಣುಭಕ್ತನೇ ಆಗಿದ್ದರೂ, ಕ್ರೂರರಾದ ಅಸುರರಿಂದ ಆವಿಷ್ಟನಾಗಿ ಕೃಷ್ಣನಿಗೆ ವಿರೋಧವೆಸಗಿದ; ಹಾಗೂ ತನ್ನ ನೈಷ್ಠಿಕವ್ರತವನ್ನು ತೊರೆದ.

---

೧. ತತೋ ದ್ವಾದಶವರ್ಷಾಣಿ ಸೋಽಯಶ್ಚೂರ್ಣಮಭಕ್ಷಯತ್ ।
ಆರಾಧಯನ್ ಮಹಾದೇವಮಚಿಂತ್ಯಂ ಶೂಲಪಾಣಿನಮ್ ॥ – ಹರಿವಂಶ (೨/೫೭/೧೦)

೨. ವಿಷ್ಣುಭಕ್ತೋ ಗರ್ಗಃ ಕಥಂ ತತ್ಪ್ರತೀಪಮಾಚರದಿತ್ಯತ ಆಹ। ಸ ವಿಷ್ಣುದೈವತ ಇತಿ। ಅಸ್ಮದಸುರಾಸ್ತಾದೃಶಾ ಇತಿ ಭಾವಃ ॥ – (ವಾ.)

ಎ: ವಿಷ್ಣುಭಕ್ತರಾದ ಅವರು ಹಾಗೆ ವಿಷ್ಣುದ್ವೇಷಕ್ಕೆ ತೊಡಗಲು ಅವರೊಳಗೆ ಆಗ ಅಸುರಾವೇಶ ಉಂಟಾಗಿದ್ದುದೇ ಕಾರಣ ಎಂದರ್ಥ. ಪರಬ್ರಹ್ಮನಾದ ಕೃಷ್ಣನನ್ನು ದ್ವೇಷಿಸಿದ ಫಲವಾಗಿ ಅವರ ನೈಷ್ಠಿಕಬ್ರಹ್ಮಚರ್ಯವ್ರತವೂ ಹಾಳಾಯಿತು ಎಂಬುದು ಇಲ್ಲಿಯ ವಿಶೇಷ.

ತಮಾರ ಚಾಸುರಾऽಪ್ಸರಾ ಬಲಿಷ್ಠಪುತ್ರಕಾಮ್ಯಯಾ।
ಪ್ರವಿಶ್ಯ ಗೋಪಿಕಾಂಗನಾಸಮೂಹಮಧ್ಯಮುಲ್ಬಣಾ ॥ ೮೧ ॥

ಅ: ಕ್ರೂರಳಾದ ಒಬ್ಬ ಅಸುರಜಾತಿಯ ಅಪ್ಸರೆ ಬಲಿಷ್ಠನಾದ ಪುತ್ರನನ್ನು ಪಡೆಯುವ ಆಸೆಯಿಂದ ಗೋಪಿಕಾಸ್ತ್ರೀಯರ ಮಧ್ಯದಲ್ಲಿ ಸೇರಿಕೊಂಡು ಗರ್ಗಮುನಿಯನ್ನು ಹೊಂದಿದಳು.

ವಿ: ಗರ್ಗಮುನಿಗೆ ವರವಿದ್ದ ವಿಷಯ ತಿಳಿದ ಒಬ್ಬ ದುಷ್ಟ ಅಪ್ಸರೆ ಗರ್ಗಾಚಾರ್ಯರ ಸಂಪರ್ಕ ಹೊಂದಿದಳು. ಶಾಪಾದಿಗಳಿಂದ ದೇವತೆಗಳು ಅಸುರರಾಗಿ ಜನಿಸುವಂತೆ ವರಾದಿಗಳಿಂದ ಅಪ್ಸರೆ–ಯರಾಗುವ ಒಂದು ಗುಂಪಿನ ರಾಕ್ಷಸಿ ಇವಳು ಎಂದರ್ಥ. ಅಲಕ್ಷ್ಮಿಯು ಸಹ ದುಂದುಭಿ ಎಂಬ ಅಪ್ಸರೆಯಾಗಿ, ಅನಂತರ ಮಂಥರೆಯಾಗಿ ಹುಟ್ಟಿದ ಉಲ್ಲೇಖ ಮಹಾಭಾರತ ಮತ್ತು ತಾತ್ಪರ್ಯ–ನಿರ್ಣಯ(೫/೧)ಗಳಲ್ಲಿ ಬಂದಿದೆ. ಅದರಂತೆ ಇವಳ ಪ್ರಸಂಗ ಎಂದು ತಿಳಿಯಬಹುದು. ಗೋಪಿಯರ ಮಧ್ಯೆ ಅವಳು ಗೋಪಾಂಗನೆಯರ ವೇಷದಲ್ಲೇ ಇದ್ದಳು. ಆಗ ಅವಳ ಹೆಸರು ಗೋಪಾಲೀ[೧] ಎಂದಾಗಿತ್ತು.

ಸ ಯಾವನೇನ ಭೂಭೃತಾ ಹಿ [೨]ಗೋಪಿಕಾಭಿರರ್ಚಿತಃ।
ಅಪುತ್ರಕೇಣ ಜಾನತಾ ಮುನೇರ್ಮನೋऽನುಚಿಂತಿತಮ್ ॥ ೮೨ ॥

ಅ: ಗರ್ಗಮುನಿ ಒಬ್ಬ ಯವನರಾಜನಿಂದಲೂ, ಗೋಪಿಕೆಯರಿಂದಲೂ ಪೂಜಿತನಾದ. ಸಂತತಿ ಇಲ್ಲದಿದ್ದ ಆ ರಾಜ ಮುನಿಯ ಮನಸ್ಸನ್ನು ತಿಳಿದು, ಹಾಗೆ ಯೋಜಿಸಿದ್ದ.

ವಿ: ಗರ್ಗಮುನಿಗೆ ಶಿವನ ವರ ಲಭಿಸಿದ್ದುದನ್ನು ಕೇಳಿ ತಿಳಿದಿದ್ದ ಅಪುತ್ರನಾಗಿದ್ದ ಯವನರಾಜನೊಬ್ಬ ಅವರಿಂದ ತನ್ನ ಮಗಳಲ್ಲಿ ಸಂತತಿ ಪಡೆಯಲೆಂದು ಹಾಗೆ ಅವರನ್ನು ಉಪಚರಿಸುವ ಮೂಲಕ ವಶೀಕರಿಸಿಕೊಂಡ ಎಂದರ್ಥ.

---

೧. 'ಗೋಪಾಲೀ ತ್ವಪ್ಸರಾಸ್ತತ್ರ ಗೋಪಸ್ತ್ರೀವೇಷಧಾರಿಣೀ' – ಹರಿವಂಶ (೨/೫೭/೧೪)

೨. ಗೋಪಿಕಾಭಿರರ್ಚಿತ ಇತ್ಯತ್ರ ಯಾವನೇನ ಭೂಭೃತಾ ಕರ್ತ್ರಾ ಗೋಪಿಕಾಭಿಃ ಕರಣೈಃ ಸ ಮುನಿರರ್ಚಿತಃ ಮುನೇಶ್ಚಿತ್ತವಶೀಕರಣಾಯ ಭವತೀಭಿರಾಗಂತವ್ಯಮಿತಿ ಪ್ರಾರ್ಥಯಿತ್ವಾ ತಾಭಿಃ ಸಹ ಪೂಜಿತ ಇತಿ ಭಾವಃ ॥ – (ವಾ.)

ಗೋಪಿಕಾಯಾಂ ಪುತ್ರಮುತ್ಪಾದ್ಯ ಮೇ ದೇಹೀತಿ ಯಾವನೇನ ಪ್ರಾರ್ಥಿತೋऽಭೂದಿತಿ ಕಥಾऽನು-ಸಂಧೇಯಾ। ಅಪ್ಸರಾ ಅಪಿ ತಮರ್ಚಿತುಂ ಗೋಪಿಕಾಮಧ್ಯೇ ಪ್ರವಿಷ್ಟೇತಿ ಭಾವಃ। – (ಜ.)

ಸ ಚಾಪ್ಸರಸ್ತನ್ಯೌ ಸುತಂ ನಿಷಿಚ್ಯ ಯಾವನಾಯ ಚ ।
ದದೌ ವಿಮೋಹಿತಃ ಕ್ರುಧಾ[1] ಕಿಮೇತದೀಶವೈರಿಣಃ[2] ॥ ೮೩ ॥

ಅ: ಕೋಪದಿಂದ ಮೈಮರೆತ ಗರ್ಗಮುನಿ ಆ ಅಪ್ಸರೆಯ ಶರೀರದಲ್ಲಿ ಸುತನನ್ನು ಹುಟ್ಟಿಸಿ, ಅವನನ್ನು ಯವನರಾಜನಿಗೆ ನೀಡಿದ. ಶಿವದ್ವೇಷಿಯಾದ ಅವನಿಗೆ ಇದೇನು ಆಚ್ಚರಿಯಲ್ಲ.

ವಿ: ೧) ಇಲ್ಲಿ 'ಕ್ರುಧಾ' ಎಂಬುದಕ್ಕೆ ಕ್ರೋಧಾಭಿಮಾನಿಯಾದ ಅಸುರನಿಂದ ಮೋಹಿತನಾಗಿ ಎಂಬ ಅರ್ಥ ಜನಾರ್ದನೀಯದಲ್ಲಿದೆ. ಸಾಲ್ವನ ಪಾಲಿಗೆ ಅದೊಂದು ಅಪೂರ್ವ ವರ; ಅದನ್ನು ಯವನರಾಜನಿಗೆ ನೀಡಿದ ಗರ್ಗಮುನಿಯ ರೀತಿ ಮಾತ್ರ ಸಾಲ್ವನ ಪಾಲಿಗೆ ದೊಡ್ಡ ಅವಿವೇಕ. ಶಿವದ್ವೇಷಿಯಾದ ವೈಷ್ಣವಗರ್ಗಮುನಿಗೆ ಆ ಭಾಗ್ಯ ತಪ್ಪಿದ್ದರಲ್ಲಿ ಆಶ್ಚರ್ಯವೇನಿಲ್ಲ ಎಂದು ಅವನ ಭಾವ.

೨) ವೈಷ್ಣವರು ವಿಷ್ಣುಸೇವೆಯ ಭಾಗ್ಯ ಕಳೆದುಕೊಂಡ ಶೈವರನ್ನು ಭಾಗ್ಯಹೀನರು ಎಂದು ಭಾವಿಸುವಂತೆ, ಶಿವಸೇವೆಯ ಭಾಗ್ಯ ಕಳೆದುಕೊಳ್ಳುವ ವೈಷ್ಣವರನ್ನು ಶೈವರು ಭಾಗ್ಯಹೀನರು ಎಂದು ಭಾವಿಸುವರು. ವೈಷ್ಣವರ ಚಿಂತನೆ ಶಾಸ್ತ್ರಸಮ್ಮತವಾದರೆ, ಶೈವರ ಚಿಂತನೆ ಶಾಸ್ತ್ರವಿರುದ್ಧ. ವಸ್ತುತಃ ಗರ್ಗಮುನಿಯಾಗಲಿ, ಇತರ ವೈಷ್ಣವರೇ ಆಗಲಿ, ಶಿವದ್ವೇಷಿಗಳು ಅಲ್ಲವೇ ಅಲ್ಲ; ತಾರತಮ್ಯ-ಕ್ರಮದಲ್ಲಿ ಅವರೆಲ್ಲ ಶಿವನನ್ನು ತಪ್ಪದೇ ಆರಾಧಿಸುವವರೇ ಆಗಿರುವರು.

ಗರ್ಗಾಚಾರ್ಯರ ಪಶ್ಚಾತ್ತಾಪ; ಶ್ರೀಕೃಷ್ಣನಲ್ಲಿ ಶರಣಾಗತಿ

ಸ ಆಶ್ರಮಾಚ್ಚ ನೈಷ್ಠಿಕಾದ್ವಿದೂಷಿತಃ ಪ್ರತೀಪಕೃತ್[3]।
ಹರೇಶ್ಚ ತಾಪಮೇಯಿವಾನ್ ಜಗರ್ಹ ಚಾತ್ಮಶೇಮುಷೀಮ್ ॥ ೮೪ ॥

---

೧. ಕ್ರುಧಾ ಕ್ರೋಧಾಭಿಮನ್ಯಮಾನೇನಾಸುರೇಣ । ....
ಮೋಹಿತಃ ಮೋಹಂ ಪ್ರಾಪಿತಃ ... ನಿಷಿಚ್ಯ ಉತ್ಪಾದ್ಯ। – (ಜ.)

೨. ಕಿಮೇತದೀಶವೈರಿಣ ಇತ್ಯತ್ರ ಈಶೇ= ಮಹಾದೇವೇ ವೈರಿಣಃ= ಕೃಷ್ಣಸ್ಯ ಏತತ್ ಸ್ವಪುರೋಹಿತೇನೈವ ಸ್ವಮೃತ್ಯುಸಂಪಾದನಾದಿವ್ಯಸನಂ ಕಿಂ= ಕಿಮಾಶ್ಚರ್ಯಮಿತಿ ಸಾಲ್ವವಚನಮ್ ॥ – (ವಾ.)

೩. ಯದ್ವಾ ಏತದಾಚಾರ್ಯವಚನಮ್ । ಈಶೇ ಭಗವತಿ ವೈರಿಣಃ ಕಿಂ ಚಿತ್ರಮಿತ್ಯರ್ಥಃ । ಸ ಆಶ್ರಮಾದಿತ್ಯಾದಿಕಂ ತು ಸಾಲ್ವವಚನಮ್ । ಕೇಚಿತ್ ಕಿಮೇತದಿತ್ಯಾರಭ್ಯ ವೈಷ್ಣವಮಿತಿಪರ್ಯಂತಮಾಚಾರ್ಯವಚನಮಿತ್ಯಾಹುಃ । ಅನ್ಯೇ ತು ಈಶೇ ರುದ್ರೇ ವೈರಿಣಃ ಕೃಷ್ಣಸ್ಯ ಏತತ್ ಸ್ವಪುರೋಹಿತೇನೈವ ಮೃತ್ಯುಸಂಪಾದನಂ ಕಿಮಾಶ್ಚರ್ಯಮಿತ್ಯಾಹುಃ । – (ತಾ.)

ಅ: ನೈಷ್ಠಿಕಬ್ರಹ್ಮಚರ್ಯವನ್ನು ಕಳೆದುಕೊಂಡು, ಕೃಷ್ಣನಿಗೂ ವಿರೋಧವೆಸಗಿದ ಗರ್ಗಮುನಿ ಬಳಿಕ ಬಹಳವಾಗಿ ಪರಿತಪಿಸಿದ. ತನ್ನ ಬುದ್ಧಿಯನ್ನು ಹಳಿದುಕೊಂಡ.

ವಿ: ೧) ಕೃಷ್ಣದ್ವೇಷ, ಅದರ ಫಲವಾಗಿ ನೈಷ್ಠಿಕಬ್ರಹ್ಮಚರ್ಯದ ಹಾನಿ. ಇವೆರಡರ ಪರಿವೆ ಗರ್ಗಮುನಿಗೆ ಹುಟ್ಟಿ, ಅದಕ್ಕಾಗಿ ಅವನು ಬಹಳ ಪಶ್ಚಾತ್ತಾಪ ಪಟ್ಟು, ತನ್ನ ಬುದ್ಧಿಯನ್ನು ತಾನೆ ಹಳಿದುಕೊಂಡ ಎಂದರ್ಥ.

೨) ಹರಿಭಕ್ತರು ಸಾಮಾನ್ಯವಾಗಿ ಹರಿದ್ರೋಹಾದಿಪಾತಕಗಳನ್ನು ಮಾಡುವುದಿಲ್ಲ. ಪ್ರಾರಬ್ಧವಶಾತ್ ಹಾಗೆ ಮಾಡಿದಲ್ಲಿ ಹೀಗೆ ಪಶ್ಚಾತ್ತಾಪ ಪಟ್ಟು, ಪುನಃ ಹರಿಭಕ್ತರೇ ಆಗುವರು ಎಂಬುದಕ್ಕೆ ಇದೊಂದು ಅಪೂರ್ವನಿದರ್ಶನ :

ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥ — ಗೀತಾ (೯/೩೦)

ಜಗಾಮ ಚಾರಣಂ ಹರಿಂ ಪ್ರಪಾಹಿ ಮಾಂ ಸುಪಾಪಿನಮ್।
ಇತಿ ಸ್ಮ ವಿಷ್ಣ್ವನುಜ್ಞಯಾ ಚಕಾರ ವೈಷ್ಣವಂ ತಪಃ ॥ ೮೫ ॥

ಅ: "ಮಹಾಪಾತಕಿಯಾದ ನನ್ನನ್ನು ರಕ್ಷಿಸು" ಎಂದು ಆ ಮುನಿ ಶ್ರೀಕೃಷ್ಣನನ್ನು ಶರಣುಹೊಕ್ಕ. ಕೃಷ್ಣನ ಆದೇಶದಂತೆ ವೈಷ್ಣವತಪಸ್ಸನ್ನು ಆಚರಿಸಿದ.

ವಿ: ಕೃಷ್ಣದ್ರೋಹ ಮಾಡಿದ ಪಾಪದ ಪರಿಹಾರಕ್ಕಾಗಿ ಗರ್ಗಮುನಿ ಕೃಷ್ಣನನ್ನೇ ಮೊರೆಹೊಕ್ಕ. ಶ್ರೀಕೃಷ್ಣ ತನ್ನನ್ನು ಕುರಿತ ತಪಸ್ಸೊಂದನ್ನು ಮಾಡಿ, ಪರಿಶುದ್ಧನಾಗಲು ಆದೇಶಿಸಿದ. ಅದರಂತೆ ಆ ಮುನಿ ತಪಸ್ಸು ಮಾಡಿದ ಎಂದರ್ಥ.

೧
ಕುತೋ ಹಿ ಭಾಗ್ಯಮಾಪತೇನ್ಮುನೇಃ ಶಿವಾರ್ಚನೇ(ऽ)ಸದಾ।
ಭವಾದೃಶಾ ಹಿ ದಾನವಾಃ ಸ್ಥಿರಾಃ ಶಿವಾರ್ಚನೇ ಸದಾ ॥ ೮೬ ॥

ಅ: ಸದಾ ಶಿವನನ್ನು ಆರಾಧಿಸುವ ಭಾಗ್ಯ ಆ ಮುನಿಗೆಂತು ಒದಗೀತು? ಶಿವನ ಆರಾಧನೆಯಲ್ಲಿ ಸದಾ ನಿರತರಾಗುವವರು ನಿನ್ನಂತಹ ದಾನವರು ಮಾತ್ರವಲ್ಲವೆ".

ವಿ: ೧) ಕೆಲವು ಕಾಲ ಶಿವನನ್ನು ಆರಾಧಿಸಿದ ಗರ್ಗಮುನಿ ಪುನಃ ಕೃಷ್ಣನನ್ನೇ ಮೊರೆಹೊಕ್ಕಿದ್ದು ಸಾಲ್ವನ ಪಾಲಿಗೆ ಹಿಂದೆ ಹೇಳಿದಂತೆ ಭಾಗ್ಯಹೀನತೆಯ ಮತ್ತೊಂದು ಪ್ರಸಂಗ. ಸದಾ ಶಿವನನ್ನೇ

---

೧. ಮಧ್ಯೇ ಶಿವಾರ್ಚನಸ್ಯ ತ್ಯಕ್ತತ್ವಾತ್ ಗರ್ಗಂ ದೂಷಯತಿ ಕುತೋ-ಹೀತಿ ಮುನೇಃ ಶಿವಾರ್ಚನೇ ಕೃತೇऽಪಿ ಸದಾ ಭಾಗ್ಯಂ ಕುತ ಆಪತೇತ್। ಮುನೇಃ ಶಿವಾರ್ಚನೇ ಸ್ಥೈರ್ಯಾಭಾವಾದಿತಿ ಭಾವಃ। ಯದ್ವಾ ಅಸದಾ= ಕದಾಚಿತ್ಯರ್ಥಃ ॥ — (ವಾ.)

ಸರ್ವೋತ್ತಮತ್ವೇನ ಆರಾಧಿಸುವುದು ದಾನವರಿಗಷ್ಟೇ ಸಾಧ್ಯ. ಆ ಮುನಿ ದಾನವನಲ್ಲವಾದ್ದರಿಂದ, ಆತನಿಗೆ ಸಾಧ್ಯವಾಗಲಿಲ್ಲ ಎಂದರ್ಥ.

೨) ಇದು ನಿಜಕ್ಕೂ ಶ್ರೇಷ್ಠ ತತ್ತ್ವ ಎಂಬುದನ್ನು ಗಮನಿಸಬೇಕು. ಆದರೆ ಸಾಲ್ವ ಇದನ್ನು ತಪ್ಪು ಎಂದು ಭ್ರಮಿಸಿದ್ದು ಆತನ ಆಸುರಸ್ವಭಾವಕ್ಕೆ ದ್ಯೋತಕ. ಭೀಮ ಶುದ್ಧಭಗವದ್ಭಕ್ತನಾಗಿದ್ದಂತೆ, ಕಲಿ ಜರಾಸಂಧ ಮೊದಲಾದವರು ಮಹಾಭಗವದ್ದ್ವೇಷಿಗಳಾಗಿದ್ದ ಮಹಾದಾನವರು ಎಂಬ ಸೂಚನೆಯೂ ಇಲ್ಲಿದೆ.

ಕಾಲಯವನನ ಹುಟ್ಟು; ಸೈನ್ಯಸಂಪತ್ತಿ

ಸುತೋಽಸ್ಯ ಕಾಲನಾಮಕೋ ಬಭೂವ ಕೃಷ್ಣಮರ್ದಿತುಮ್।
[೧]ಸದೈವ ಕಾಲಕಾಂಕ್ಷಣಾತ್ ಸ ಯಾವನಾಭಿಷೇಚಿತಃ ॥ ೮೭ ॥

ಅ: ಗರ್ಗಮುನಿಗೆ ಕಾಲ ಎಂಬ ಪುತ್ರ ಜನಿಸಿದ. ಸದಾ ಕೃಷ್ಣನನ್ನು ನಾಶಪಡಿಸಲೆಂದೇ ಸದಾಕಾಲವೂ ಸಮಯ ಕಾಯುತ್ತಿದ್ದರಿಂದ ಕಾಲ ಎಂಬ ಹೆಸರನ್ನೇ ಹೊಂದಿದ. ಯವನರಾಜ ಅವನಿಗೆ ಪಟ್ಟಾಭಿಷೇಕ ಮಾಡಿದ.

ವಿ: ಗರ್ಗಮುನಿಯಿಂದ ಗರ್ಭಾಧಾನ ಪಡೆದ ಯವನಸ್ತ್ರೀಯಲ್ಲಿ ಹುಟ್ಟಿದವನೇ ಕಾಲಯವನ. ಯವನ ಅವನು ಹುಟ್ಟಿದ ಜಾತಿಯನ್ನು ಸೂಚಿಸಿದರೆ, ಕಾಲ ಎಂಬುದು ಅವನು ಸದಾ ಕೃಷ್ಣನನ್ನು ಕೊಲ್ಲಲೆಂದು ಹೊಂಚುತ್ತಿದ್ದುದೇ ಕಾರಣವಾಯಿತು. ಯವನರಾಜ ಅವನಿಗೆ ಪಟ್ಟಾಭಿಷೇಕ ಮಾಡಿ ಕಾಡಿಗೆ ತೆರಳಿದ ಎಂದು [೨]ವಿಷ್ಣುಪುರಾಣದಲ್ಲಿದೆ. ಅವನು ಕಡುಕಪ್ಪು ಬಣ್ಣದವನು ಆಗಿದ್ದುದು ಸಹ ಆ ಹೆಸರು ಬರಲು ಇನ್ನೊಂದು ಕಾರಣ.

ತವೈವ ಶಿಷ್ಯ ಏಷ ಚಾತಿಭಕ್ತಿಮಾನ್ ಹಿ ಶಂಕರೇ।
ಪ್ರಭೂತಸೇನಯಾ ಯುತೋ ಬಲೋದ್ಧತಶ್ಚ ಸರ್ವದಾ ॥ ೮೮ ॥

ಅ: ''ಅವನೂ ನಿನ್ನ ಶಿಷ್ಯನೆ; ಶಿವನಲ್ಲಿ ಬಹಳ ಭಕ್ತಿ ಉಳ್ಳವನು; ಭಾರೀ ಸೇನೆಯಿಂದ ಕೂಡಿದವನು; ಸದಾ ಬಲದಿಂದ ಬೀಗುವವನು.

---

೧. ಸದೈವ ಕಾಲಕಾಂಕ್ಷಣಾದಿತ್ಯತ್ರ ಕೃಷ್ಣಮರ್ದಿತುಂ ಕಾಲಕಾಂಕ್ಷಣಾತ್ ಕಾಲನಾಮಕೋ ಬಭೂವೇತಿ ಪೂರ್ವೇಣಾನ್ವಯಃ ॥ – (ವಾ.)

೨. ತಂ ಕಾಲಯವನಂ ನಾಮ ರಾಜ್ಞೇ ಸ್ವೇ ಯಾವನೇಶ್ವರಃ।
ಅಭಿಷಿಚ್ಯ ವನಂ ಯಾತೋ ವಜ್ರಾಗ್ನಿಕರಿನೋರಸಮ್ ॥ – ವಿಷ್ಣುಪುರಾಣ (೫/೨೩/೫)

ವಿಃ ಕಾಲಯವನನ್ನು ಆಶ್ರಯಿಸಲು ಇಲ್ಲಿ ಸಾಲ್ವ, ''ಅವನು ಜರಾಸಂಧನ ಶಿಷ್ಯ; ಶಿವನ ಭಕ್ತ; ಭಾರಿ ದೊಡ್ಡ ಸೇನೆ ಉಳ್ಳವ ಹಾಗೂ ಬಲಿದಿಂದ ಉದ್ಧತ'' ಎಂಬ ನಾಲ್ಕು ಕಾರಣಗಳನ್ನು ನೀಡಿರುವನು.

ತಮೇವ ಯಾಮಿ ಶಾಸನಾತ್ ತವೋಪನೀಯ ಸತ್ವರಮ್।
ವಿಕೃಷ್ಣಕಂ ಕ್ಷಿತೇಸ್ತಲಂ ವಿಧಾಯ ಸಂರಮಾಮಹೇ ॥ ೮೯ ॥

ಅ: ನೀನು ಹೇಳಿದರೆ ನಾನು ಅವನ ಬಳಿಗೆ ಹೋಗುವೆ. ಅವನನ್ನೀಗಲೇ ನಿನ್ನ ಬಳಿಗೆ ಕರೆತರುವೆ. ಅವನ ಮೂಲಕ ಭೂಮಿಯ ಮೇಲೆ ಕೃಷ್ಣನಿಲ್ಲದಂತೆ ಮಾಡಿ, ಆರಾಮವಾಗಿರೋಣ.

ತತಶ್ಚ ರುಗ್ಮಿಣೀಂ ವಯಂ ಪ್ರದಾಪಯಾಮ ಚೇದಿಪೇ।
ವಿನಾಶ್ಯ ದೇವಪಕ್ಷಿಣೋ ಯಥೇಷ್ಟಮಾಸ್ಮ ಸರ್ವದಾ ॥ ೯೦ ॥

ಅ: ಬಳಿಕ ಶಿಶುಪಾಲನಿಗೆ ರುಗ್ಮಿಣಿಯನ್ನು ಧಾರೆ ಎರೆಸೋಣ. ದೇವತೆಗಳ ಪಕ್ಷದವರನ್ನು ಇಲ್ಲವಾಗಿಸಿ, ಸ್ವೇಚ್ಛೆಯಿಂದ ಬದುಕೋಣ''.

ಜರಾಸಂಧನ ಖಿನ್ನತೆ

ಇತೀರಿತೋ ಜರಾಸುತೋ ಬಭೂವ ದುರ್ಮನಾ ಭೃಶಮ್।
ಕಿರೀಟಮಂಡಿತಂ ಶಿರಶ್ಚಕಾರ ಚಾಶ್ವವಾಗ್ಭೃಶಮ್ ॥ ೯೧ ॥

ಅ: ಅವನು ಹೀಗೆ ಹೇಳಲು ಜರಾಸಂಧ ಬಹಳವಾಗಿ ಕೂಡಲೆ ಮನಸ್ಸಿನಲ್ಲಿ ವ್ಯಥೆಪಟ್ಟ. ಕಿರೀಟದಿಂದ ಅಲಂಕೃತವಾದ ತನ್ನ ತಲೆಯನ್ನು ಬಹಳವಾಗಿ ಕೆಳಕ್ಕೆ ಮಾಡಿದ.

ಕರಂ ಕರೇಣ ಪೀಡಯನ್ ನಿಶಾಮ್ಯ ಚಾತ್ಮನೋ ಭುಜೌ।
ಜಗಾದ ಕಾರ್ಯಸಿದ್ಧಯೇ ಕಥಂ ಪ್ರಯಾಚಯೇ ಪರಮ್ ॥ ೯೨ ॥

ಅ: ಕೈಯಿಂದ ಕೈಯನ್ನು ಹೊಸೆಯುತ್ತಾ, ತನ್ನ ಎರಡೂ ತೋಳುಗಳನ್ನು ನೋಡಿಕೊಳ್ಳುತ್ತಾ ''ಕಾರ್ಯಸಾಧನೆಗಾಗಿ ನಾನು ಬೇರೊಬ್ಬನನ್ನು ಯಾಚಿಸುವುದೆಂತು?'' ಎಂದು ನುಡಿದ.

ವಿ: ಸಾಲ್ವನ ಸಲಹೆ ಜರಾಸಂಧನನ್ನು ಚಿಂತೆಗೀಡುಮಾಡಿತು. ತನ್ನಂತಹ ಮಹಾವೀರ ಇನ್ನೊಬ್ಬನನ್ನು ಸಹಾಯಕ್ಕಾಗಿ ಹೇಗೆ ಯಾಚಿಸುವುದು ಎಂಬುದು ಅವನ ಕೊರಗಾಗಿತ್ತು. ಅವನು ಅದನ್ನು ಹಾಗೆ ಹೇಳಿಯೂ ಬಿಟ್ಟ ಎಂದರ್ಥ.

೧
ಸುದುರ್ಗಕಾರ್ಯಸಂತತಿಂ ಹ್ಯಗುಃ ಸ್ಮ ಮದ್ಭುಜಾಶ್ರಯಾಃ।
ಸಮಸ್ತಭೂತಲೇ ನೃಪಾಃ ಸ ಚಾಹಮೇಷ ಮಾಗಧಃ ॥ ೯೩ ॥

ಅ: ''ಇಡೀ ಭೂಮಿಯ ಮೇಲಿನ ರಾಜರುಗಳು ನನ್ನ ತೋಳುಗಳನ್ನು ಆಶ್ರಯಿಸಿ, ತಮ್ಮ ಅಸಾಧ್ಯಕಾರ್ಯಗಳನ್ನು ಸಾಧಿಸಿಕೊಂಡಿರುವರು. ಅಂತಹ ಜರಾಸಂಧ ನಾನು''.

ವಿ: ನನ್ನಿಂದ ಇತರ ರಾಜರುಗಳು ತಮ್ಮ ದುರ್ಗಮಕಾರ್ಯಗಳನ್ನು ಈಡೇರಿಸಿಕೊಳ್ಳುತ್ತಿರು–ವಾಗ, ನಾನು ಇತರರನ್ನು ತನ್ನ ಸಹಾಯಕ್ಕಾಗಿ ಹೇಗೆ ಯಾಚಿಸುವುದು? ಎಂದು ಅವನ ಭಾವ.

೨
ಕದಾಪ್ಯಚೀರ್ಣಮದ್ಯ ತತ್ ಕಥಂ ಕರೋಮಿ ಕೇವಲಮ್।
ಗಿರೀಶಪಾದಸಂಶ್ರಯಃ ಪ್ರಭುಃ ಸಮಸ್ತಭೂಭೃತಾಮ್ ॥ ೯೪ ॥

ಅ: ಹಿಂದೆಂದೂ ಮಾಡದ ಈ ಕಾರ್ಯವನ್ನು ನಾನೀಗ ಹೇಗೆ ಮಾಡಲಿ? ನಾನು ಕೇವಲ ಶಿವನ ಪಾದಗಳನ್ನು ಆಶ್ರಯಿಸಿದವನು. ಸಮಸ್ತರಾಜರುಗಳಿಗೂ ರಾಜನಾದವನು''.

ವಿ: ಶಿವನ ಹೊರತು ಬೇರೆಯವನನ್ನು ಬೇಡದ ದೀಕ್ಷೆ ಜರಾಸಂಧನದು ಎಂದರ್ಥ. ಅವನನ್ನು ಶಿಶುಪಾಲಾದಿಗಳು ಭಕ್ತಿಯಿಂದ ಅನುಸರಿಸಿದ್ದರೆ, ದ್ರುಪದಾದಿಗಳು ಭಯದಿಂದ ಅನುಸರಿಸಿದ್ದರು. ಜರಾಸಂಧ ಅವರಾರನ್ನೂ ಬೇಡಿ ತನ್ನೊಂದಿಗೆ ಸೇರಿಸಿಕೊಂಡಿರಲಿಲ್ಲ ಎಂಬುದು ಇದರಿಂದ ಸ್ಪಷ್ಟ ಪಡುವುದು. ಅವನು ಬ್ರಹ್ಮನನ್ನು ಬೇಡಿ ವರ ಪಡೆದವನು. ಆದರೂ ಕೇವಲ 'ಗಿರೀಶಪಾದಸಂಶ್ರಯಃ' ಎಂಬುದು ಮಿಥ್ಯಾವಚನವೇ ಸರಿ.

ಸಾಲ್ವನಿಂದ ಸಾಂತ್ವನ

ಇತೀರಿತಃ ಸ ಸೌಭರಾಡ್ ಜಗಾದ ವಾಕ್ಯಮುತ್ತರಮ್ ।
ಭವಾನಪಿ ಸ್ಮ ಮುಹ್ಯತೇ ಕಿಮಸ್ಮದಾದಯಃ ಪ್ರಭೋ ॥ ೯೫ ॥

---

೧. ಸುದುರ್ಗಕಾರ್ಯಸಂತತಿಮಿತ್ಯತ್ರ ಸುಷ್ಠು ದುರ್ಗಾ= ಪ್ರಾಪ್ತುಮಶಕ್ಯಾ ಯಾ ಕಾರ್ಯಸಂತತಿಃ ತಾಮಿತ್ಯರ್ಥಃ ॥ – (ವಾ.)

೨. ಕದಾಪ್ಯಚೀರ್ಣಮಿತ್ಯತ್ರ ಕದಾಪ್ಯಚೀರ್ಣಂ= ಅಕೃತಂ ತತ್= ಯಾಚನಮಿತ್ಯರ್ಥಃ ॥ – (ವಾ.)

ಅ: ಅವನು ಹೀಗೆನ್ನಲು ಸೌಭರಾಜನಾದ ಸಾಲ್ವ ಉತ್ತರವಾಗಿ ಈ ಮಾತನ್ನಾಡಿದ. ''ನೀನೂ ಹೀಗೆ ಮೋಹಗೊಳ್ಳುವುದಾದಲ್ಲಿ ನಮ್ಮಂತಹವರ ಬಗ್ಗೆ ಇನ್ನೇನು, ಪ್ರಭು!?

ಸ್ವಶಿಷ್ಯಕೈಃ ಕೃತಂ ತು ಯತ್ ಕಿಮನ್ಯಸಾಧಿತಂ ಭವೇತ್।
ಸ್ವಶಿಷ್ಯದಾಸವರ್ಗಕೈಃ ಸಮರ್ಥಯಂತಿ ಭೂಭುಜಃ ॥ ೯೬ ॥

ಅ: ತಮ್ಮ ಶಿಷ್ಯರಿಂದ ಆದದ್ದು ಮತ್ತೊಬ್ಬರಿಂದ ಸಾಧಿತವಾದಂತಾಗುವುದೆ? ರಾಜರುಗಳು ತಮ್ಮ ಶಿಷ್ಯರ ಹಾಗೂ ದಾಸರ ಸಾಲಿಗೆ ಸೇರಿದವರಿಂದಲೇ ತಮ್ಮ ಕಾರ್ಯಗಳನ್ನು ಸಾಧಿಸಿಕೊಳ್ಳುವರಲ್ಲವೆ!

ವಿ: ಶಿಷ್ಯನಿಂದ ನಡೆದದ್ದು ತಮ್ಮಿಂದಲೇ ನಡೆದಂತೆ ಎಂಬುದು ಲೋಕನ್ಯಾಯವೂ ಹೌದು. ಅದರಂತೆ ದಾಸಜನರಿಂದ ನಡೆದದ್ದು ಸಹ. ಮುಂದೆ ಅರ್ಜುನ 'ಶಿಷ್ಯಕೃತಂ ಗುರುಕೃತಂ ಭವೇತ್'. ಎನ್ನುವುದು ಈ ಅರ್ಥದಲ್ಲಿಯೇ. ಆದರೆ ಇದು ಸತ್ಕಾರ್ಯಸಾಧನೆಯಾಗಿರದೆ, ದುಷ್ಕಾರ್ಯ–ಸಾಧನೆಯಾಗಿದೆ ಎಂಬುದರಲ್ಲಿ ವ್ಯತ್ಯಾಸವಿದೆ.

ಅಪಿ ಸ್ಮ ತೇ ಬಲಾಶ್ರಯಪ್ರವೃತ್ತಯೋಽಸ್ಮದಾದಯಃ।
ಪುಮಾನ್ ಕುಠಾರಸಂಗ್ರಹಾದಶಕ್ತ ಈರ್ಯತೇ ಹಿ ಕಿಮ್ ॥ ೯೭ ॥

ಅ: ಅಲ್ಲದೆ ನಾನೇ ಮೊದಲಾದವರೆಲ್ಲ ನಿನ್ನ ಬಲದ ಆಶ್ರಯದಲ್ಲಿಯೇ ನಡೆದುಕೊಳ್ಳುವವರು. ಮರ ಕಡಿಯಲು ಮನುಷ್ಯ ಕೊಡಲಿ ಹಿಡಿದ ಮಾತ್ರಕ್ಕೆ ಅಶಕ್ತ ಎನ್ನಿಸಿಕೊಳ್ಳುವನೇನು?

ವಿ: ಮರವನ್ನು ಕಡಿಯಲು ಕೊಡಲಿಯನ್ನು ಉಪಯೋಗಿಸಿದರೂ, ಮರ ಕಡಿದ ಕೀರ್ತಿ ಪುರುಷನದೇ ಹೊರತು ಕೊಡಲಿಯದಲ್ಲ; ಅದು ಉಪಕರಣ ಮಾತ್ರ. ಅದರಂತೆ ಶಿಷ್ಯರು, ಸೇವಕರು ಕಾರ್ಯ ಸಾಧಿಸಿದಲ್ಲಿ ಅದರ ಕೀರ್ತಿ ಗುರುಗಳದು, ಒಡೆಯರದೇ ಹೊರತು, ಕೇವಲ ಆ ದಾಸಜನಗಳದಲ್ಲ ಎಂದು ಅವನ ಭಾವ.

ಕುಠಾರಸಮ್ಮಿತೋ ಹ್ಯಸೌ ತವೈವ ಯಾವನೇಶ್ವರಃ।
ವಿನಾ ಭವದ್ಬಲಂ ಕ್ವಚಿತ್ ಪ್ರವರ್ತಿತುಂ ನ ಹಿ ಕ್ಷಮಃ ॥ ೯೮ ॥

ಅ: ಈ ಕಾಲಯವನ ನಿನ್ನ ಪಾಲಿಗೆ ಕೊಡಲಿ ಇದ್ದಂತಷ್ಟೆ, ನಿನ್ನ ಬೆಂಬಲವಿಲ್ಲದೆ ಅವನೆಲ್ಲೂ ತಾನೇ ವರ್ತಿಸಲು ಶಕ್ತನಲ್ಲ.

ವರೋ ಹಿ ಕೃಷ್ಣಮರ್ದನೇ ವೃತೋಽಸ್ಯ ಕೇವಲಃ ಶಿವಾತ್ ।
ತದನ್ಯಶತ್ರುಪೀಡನಾತ್ ತ್ವಮೇವ ಚಾಸ್ಯ ರಕ್ಷಕಃ ॥ ೯೯ ॥

ಅ: ಇವನು ಶಿವನಿಂದ ಪಡೆದಿರುವುದು ಕೃಷ್ಣನನ್ನು ಕೊಲ್ಲುವ ವರವನ್ನಷ್ಟೆ. ಉಳಿದ ಶತ್ರುಗಳನ್ನು ಪೀಡಿಸುವ ಮೂಲಕ ಅವನಿಗೂ ನೀನೇ ರಕ್ಷಕನಲ್ಲವೆ?

ವಿ: ಶ್ರೀಕೃಷ್ಣನನ್ನು ಕೊಲ್ಲುವ ವರ ಸಾಲ್ವನ ಪಾಲಿಗೆ ತೀರ ಸಾಮಾನ್ಯವರವಿದ್ದಂತೆ ಎಂಬುದು ಇಲ್ಲಿಯ ವಿಪರ್ಯಾಸ. ಇತರ ಶತ್ರುಗಳನ್ನು ಗೆಲ್ಲುವ ವರ ಅವನಿಗಿಲ್ಲ; ಜರಾಸಂಧನಿಗಾದರೋ ಎಲ್ಲ ಶತ್ರುಗಳನ್ನು ಗೆಲ್ಲುವ ವರವಿದೆ. ಆದ್ದರಿಂದ ಕಾಲಯವನನಿಗೆ ಇವನ ರಕ್ಷಣೆ ಅಗತ್ಯ. ಆದ್ದರಿಂದ ಜರಾಸಂಧನ ಬೆಂಬಲದಲ್ಲೇ ಕಾಲಯವನ ಬದುಕಬೇಕು ಎಂಬುದು ಸಾಲ್ವನ ವಿಚಾರ.

ತವಾಖಿಲೈರಜೇಯತಾ ಶಿವಪ್ರಸಾದತೋಽಸ್ತಿ ಹಿ ।
ವಿಶೇಷತೋ ಹರೇರ್ಜಯೇ ವರಾದಯಂ ವಿಮೃಗ್ಯತೇ ॥ ೧೦೦ ॥

ಅ: ನಿನಗೆ ಶಿವನ ಅನುಗ್ರಹದಿಂದ ಯಾರಿಂದಲೂ ಸೋಲುಂಟಾಗದು. ವಿಶೇಷವಾಗಿ ಕೃಷ್ಣನ ಜಯದ ಬಗ್ಗೆ ವರವಿರುವುದರಿಂದಾಗಿ ಈ ಕಾಲಯವನನನ್ನು ನಾವೀಗ ಆಯ್ದುಕೊಳ್ಳಬೇಕಾಗಿದೆ ಅಷ್ಟೆ''.

ವಿ: ಕಾಲಯವನನ ಉಪಯೋಗ ಕೃಷ್ಣನನ್ನು ಗೆಲ್ಲುವ ಮಟ್ಟಿಗೆ ಮಾತ್ರ. ಇತರರನ್ನೆಲ್ಲ ಗೆಲ್ಲುವ ಶಿವನ ವರ ಅವನಿಗಿದ್ದದ್ದರಿಂದಾಗಿ ಜರಾಸಂಧನೇ ಅವರೆಲ್ಲರಿಗೂ ಆಸರೆ ಎಂಬುದು ಅವನ ಚಿಂತನೆ.

ಕಾಲಯವನನ ಬಳಿಗೆ ಸಾಲ್ವ

ಇತೀರಿತೇಽಪ್ಯತೃಪ್ತವತ್ ಸ್ಥಿತೇ ತು ಬಾರುಹದ್ರಥೇ।
ಜಗಾಮ ಸೌಭಮಾಸ್ಥಿತಃ ಸ ಸೌಭರಾಟ್ ಚ ಯಾವನಮ್ ॥ ೧೦೧ ॥

ಅ: ಹೀಗೆ ನುಡಿದಾಗಲೂ ಜರಾಸಂಧನು ಅತೃಪ್ತನಂತೆಯೇ ಉಳಿದ; ಸಾಲ್ವ ಸೌಭವಿಮಾನವನ್ನೇರಿ, ಕಾಲಯವನನ ಬಳಿಗೆ ತೆರಳಿದ.

ವಿ: ಹೀಗೆ ಸಾಲ್ವ ನುಡಿದಾಗ, ಜರಾಸಂಧನಿಗೆ ತೃಪ್ತಿಯಾಯಿತು. ಆದರೂ ಅವನು ಅತೃಪ್ತನಂತೆಯೇ ನಟಿಸಿದ. ಅದನ್ನು ಗ್ರಹಿಸಿದ ಸಾಲ್ವ ತನ್ನ ವಿಮಾನವನ್ನೇರಿ ಕಾಲಯವನನ ಬಳಿಗೆ ತೆರಳಿದ ಎಂದರ್ಥ. ಕಾಲಯವನನ ಬಳಿಗೆ ತೆರಳುವವರು ಗಗನಮಾರ್ಗದಲ್ಲೇ ಹೋಗಬೇಕು;

ಇಲ್ಲವಾದಲ್ಲಿ ಕೃಷ್ಣ ಅಡ್ಡಿ ಮಾಡುವ ಅಪಾಯ ತಪ್ಪಿದ್ದಲ್ಲ ಎಂದು ಜರಾಸಂಧ ಎಚ್ಚರಿಸಿದ್ದರಿಂದ, ಸಾಲ್ವನು ಹಾಗೆ ತನ್ನ ವಿಮಾನದಲ್ಲಿ ತೆರಳಬೇಕಾಯಿತೆಂದು [೧]ಹರಿವಂಶದಲ್ಲಿದೆ.

ಕಾಲಯವನನ ಜರಾಸಂಧಭಕ್ತಿ

ಸ [೨]ಕಾಲಯಾವನೋಽಥ ತಂ ಜರಾಸುತಾಂತಿಕಾಗತಮ್ ।
ನಿಶಮ್ಯ ಭಕ್ತಿಪೂರ್ವಕಂ ಪ್ರಣಮ್ಯ ಚಾರ್ಚಯದ್ದ್ರುತಮ್ ॥ ೧೦೨ ॥

ಅ: ಆ ಕಾಲಯವನ ಸಾಲ್ವನು ಜರಾಸಂಧನ ಬಳಿಯಿಂದ ಬಂದವನು ಎಂಬುದನ್ನು ಕೇಳಿ, ತ್ವರೆಯಿಂದ ಭಕ್ತಿಪೂರ್ವಕ ನಮಸ್ಕರಿಸಿ, ಗೌರವಿಸಿದನು.

ವಿ: ಕಾಲಯವನ ತನಗೆ ಶಿವವರ ಇದ್ದರೂ, ಬ್ರಹ್ಮಶಿವಾದಿವರಗಳಿಂದ ಕೂಡಿದ ಜರಾಸಂಧನನ್ನು ತನಗಿಂತ ಪ್ರಬಲ ಎಂದು ಭಾವಿಸಿದ್ದರಿಂದ,ಅವನ ಪ್ರತಿನಿಧಿಯಾಗಿ ಬಂದಿದ್ದ ಸಾಲ್ವನನ್ನು ವಿಶೇಷರೀತಿಯಲ್ಲಿ ಗೌರವಿಸಿದ ಎಂದರ್ಥ.

ಜರಾಸುತೋ ಹಿ ದೈವತಂ ಸಮಸ್ತಕೇಶವದ್ವಿಷಾಮ್।
ಇತಿ ಪ್ರಣಮ್ಯ ತಾಂ ದಿಶಂ ತದೀಯಮಾಶ್ವಪೂಜಯತ್ ॥ ೧೦೩ ॥

ಅ: ಸಮಸ್ತವಿಷ್ಣುದ್ವೇಷಿಗಳಿಗೆಲ್ಲ ಜರಾಸಂಧ ಆರಾಧ್ಯದೈವವೆನ್ನಿಸಿದ್ದ. ಆದರಿಂದಾಗಿ ಅವನಿದ್ದ ದಿಕ್ಕನ್ನೇ ವಂದಿಸಿ ಅವನ ಕಡೆಯವನಾದ ಸಾಲ್ವನನ್ನು ತ್ವರೆಯಿಂದ ಸತ್ಕರಿಸಿದ.

ವಿ: ಸಮಸ್ತ ಹರಿಭಕ್ತರಿಗೆ ಭೀಮಸೇನ ಗುರುವೆನ್ನಿಸಿದ್ದಂತೆ, ಆ ಕಾಲದಲ್ಲಿ ಸಮಸ್ತ ಹರಿದ್ವೇಷಗಳಿಗೆ ಜರಾಸಂಧ ಗುರುವೆನ್ನಿಸಿದ್ದ ಎಂದು ಭಾವ.

ಮಧುರೆಯ ಆಕ್ರಮಣ

ತದೀರಿತಂ ನಿಶಮ್ಯ ಚ ದ್ರುತಂ [೩]ತ್ರಿಕೋಟಿಸಂಖ್ಯಯಾ।
ಅಕ್ಷೌಹಿಣೀಕಯಾ ಯುತಃ ಸ್ವಸೇನಯಾ ನಿರಾಕ್ರಮತ್ ॥ ೧೦೪ ॥

---

೧. ವ್ಯೋಮಮಾರ್ಗೇಣ ಯಾತವ್ಯಂ ಯಥಾ ಕೃಷ್ಣೇ ನ ಬಾಧತೇ। – ಹರಿವಂಶ (೨/೫೩/೪೧)

೨. ಸ ಕಾಲಯಾವನ ಇತ್ಯತ್ರ ಯವನಪುತ್ರೋ ಯಾವನಃ ಕಾಲಶ್ಚಾಸೌ ಯಾವನಶ್ಚೇತಿ ವಿಗ್ರಹಃ। ಸ್ವನಿಷ್ಠಜಾತಿವಿವಕ್ಷಯಾ ಕಾಲಯಾವನ ಇತ್ಯಪಿ ತಸ್ಯೈವ ನಾಮ ॥ – (ವಾ.)

ಅ: ಅವನು ಹೇಳಿದ್ದನ್ನು ಕೇಳಿ ಕಾಲಯವನ ಬೇಗನೆ ಮೂರುಕೋಟಿ ಸಂಖ್ಯೆಯ ಅಕ್ಷೋಹಿಣೀಸೇನೆಯೊಂದಿಗೆ ಹೊರಟ.

ತದಶ್ವಮೂತ್ರವಿಷ್ಮಯಾ[೪] ಬಭೂವ ನಾಮತಃ ಶಕೃತ್।
ನದೀ ಸುವೇಗಗಾಮಿನೀ[೫] ಕಲೌ ಚ ಯಾ ವಹೇದ್ದ್ರುತಮ್ ॥ ೧೦೫ ॥

ಅ: ಆ ಸೇನೆಯಲ್ಲಿನ ಕುದುರೆಗಳ ಮಲಮೂತ್ರಗಳಿಂದ ಕಲಿಯುಗದಲ್ಲಿ ಬಹು ವೇಗದಿಂದ ಹರಿಯುವ ಶಕೃತ್ ಎಂಬ ನದಿ ಉಂಟಾಯಿತು.

ವಿ: ೧) ಆ ಸೇನೆಯಲ್ಲಿನ ಕೇವಲ ಅಶ್ವಗಳ ಮಲಮೂತ್ರದಿಂದಾಗಿಯೇ ಅಂತಹ ನದಿ ಹುಟ್ಟಿದಾಗ, ಇಡೀ ಸೇನೆಯ ಮಲಮೂತ್ರದಿಂದ ಹುಟ್ಟಿದ ಪ್ರವಾಹ ಎಷ್ಟು ಅಗಾಧ ಎಂಬುದನ್ನು ಊಹಿಸಬಹುದು. ಕಲಿಯುಗದಲ್ಲಿ, ವಿಶೇಷತಃ ನಗರಗಳಿಂದ ಹರಿಯುವ ಕೊಳಕು ನೀರಿಗೆ ಇದೇ ಮೂಲವೆನ್ನಿಸಿತು ಎನ್ನಬಹುದು.

೨) ಕಲಿಯುಗದಲ್ಲಿ ಮಹಾಪುಣ್ಯನದಿಗಳು ಒಣಗಿ, ಇಂತಹ ಕೊಳಕು ನೀರು ಮಾತ್ರ ಸದಾ ಹರಿಯುವುದು ದೊಡ್ಡ ಆಶ್ಚರ್ಯಗಳಲ್ಲೊಂದು. ಗಂಗಾಯಮುನಾದಿಪುಣ್ಯನದಿಗಳ ನೀರೂ ಸಹ ಇವುಗಳಿಂದಾಗಿ ಕಲುಷಿತಗೊಳ್ಳುವುದು ಕಲಿಗಾಲದ ಮಹಾಸಮಸ್ಯೆಗಳಲ್ಲೊಂದು.

ಪುನಃ ಪುನರ್ನದೀಭವಂ ನಿಶಾಮ್ಯ ದೇಶಸಂಕ್ಷಯಮ್।
ತದನ್ಯದೇಶಮೂತ್ರಿತಂ ವ್ಯಶೋಷಯದ್ಧಿ ಮಾರುತಃ ॥ ೧೦೬ ॥

ಅ: ಮತ್ತೆ ಮತ್ತೆ ಅಂತಹ ನದಿಗಳು ಹರಿದಿದ್ದರಿಂದಾಗಿ, ಉಂಟಾದ ದೇಶನಾಶವನ್ನು ಗಮನಿಸಿ, ವಾಯುದೇವರು ಬೇರೆಡೆ ಇದ್ದ ಆ ಕುದುರೆಗಳ ಮೂತ್ರಗಳನ್ನು ಒಣಗಿಸಿಬಿಟ್ಟರು.

---

೩. ತ್ರಿಕೋಟಿಸಂಖ್ಯಾಕಾಕ್ಷೌಹಿಣೀಸಂಖ್ಯಾಕಯಾ। – (ಜ.)

ತ್ರಿಕೋಟಿಸಂಖ್ಯಾಕ್ಷೋಹಿಣಕಯೇತಿ ಅನೇನ ರುರೋಧ ಮಧುರಾಮೇತ್ಯ ತಿಸೃಭಿರ್ಲಕ್ಷಕೋಟಿಭಿರಿತಿ ಭಾಗವತಕೋಟಿಶಬ್ದಸ್ಯ ಕೋಟ್ಯಕ್ಷೋಹಿಣೀಪರ್ಯವಸಾನಮಿತ್ಯುಕ್ತಂ ಭವತಿ ॥ – (ತಾ.)

೪. ತಸ್ಯ ಅಶ್ವಾನಾಂ ಮೂತ್ರಂ ಚ ವಿಷ್ಮಾ ಚ ತಯೋಃ ಸಮಾಹಾರತದಶ್ವಮೂತ್ರವಿಷ್ಮಾ ತಯಾಪರವಲ್ಲಿಂಗದ್ವಂದ್ವತತ್ಪುರುಷಯೋರಿತಿ ಸೂತ್ರೇಣ ಪರವಲ್ಲಿಂಗತಾ। – (ಜ.)

೫. ಯಾ ನದೀ ಕಲೌ ಯುಗೇ ದ್ರುತಂ ವೇಗೇನ ವೇಗಾತ್ ವಹೇತ್ ಪ್ರವಹತಿ। – (ಜ.)

ಎ: ಆ ರೀತಿ ಹರಿದ ಕೊಳಕು ನದಿಗಳಿಂದಾಗಿ ದೇಶಗಳು ಹಾಳಾಗುವುದನ್ನು ಕಂಡು ವಾಯುದೇವರು ಇತರ ಕಡೆ ಅವುಗಳು ಹುಟ್ಟುವುದನ್ನೇ ತಪ್ಪಿಸಿದರು ಎಂದರ್ಥ.

ದ್ವಾರಕಾನಿರ್ಮಾಣ

ಹರಿಶ್ಚ ವೈನತೇಯಯುಗ್ವಿಚಾರ್ಯ ರಾಮಸಂಯುತಃ ।
ಸದಾऽತಿಪೂರ್ಣಸಂವಿದಪ್ಯಜೋऽಥ ಲೀಲಯಾऽಸ್ಮರತ್ ॥ ೧೦೭ ॥

ಅ: ಶ್ರೀಕೃಷ್ಣನು ಗರುಡನೊಂದಿಗೆ ಕೂಡಿ, ಬಲರಾಮನೊಂದಿಗೆ ವಿಚಾರ ಮಾಡಿ, ತಾನು ಸದಾ ಅತ್ಯಂತಪರಿಪೂರ್ಣವಾದ ಜ್ಞಾನವುಳ್ಳವನಾದರೂ, ಲೀಲೆಯಿಂದ ಸ್ಮರಿಸಿದ.

ಎ: ಶ್ರೀಕೃಷ್ಣ ಸ್ವತಃ ಸರ್ವಜ್ಞ; ಆದರೂ ರಾಜನೀತಿಯನ್ನು ತಿಳಿಸಿಕೊಡಲೆಂದು ಗರುಡ, ಬಲರಾಮರೊಂದಿಗೆ ಮಂತ್ರಾಲೋಚನೆ ನಡೆಸಿದ. ಅನಂತರ ದೇವಶಿಲ್ಪಿಯಾದ ವಿಶ್ವಕರ್ಮನನ್ನು ಸ್ಮರಿಸಿದ.

ಯುಯುತ್ಸುರೇಷ ಯಾವನಃ ಸಮೀಪಮಾಗತೋऽದ್ಯ ನಃ ।
ಯುಯುತ್ಸತಾಮನೇನ ನೋ ಜರಾಸುತೋऽಭಿಯಾಸ್ಯತಿ ॥ ೧೦೮ ॥

ಅ: ''ಈ ಕಾಲಯವನ ಯುದ್ಧ ಮಾಡುವ ಬಯಕೆಯಿಂದ ನಮ್ಮ ಬಳಿಗೆ ಬಂದಿರುವನು. ನಾವು ಇವನೊಂದಿಗೆ ಯುದ್ಧಕ್ಕೆ ತೊಡಗಿದಾಗ, ನಮ್ಮ ಮೇಲೆ ಜರಾಸಂಧ ಆಕ್ರಮಣ ನಡೆಸುವನು.

ಸ ಯಾದವಾನ್ ಹನಿಷ್ಯತಿ ಪ್ರಭಂಗತಸ್ತು ಕೋಪತಃ ।
ಪುರಾ ಜಯಾಶಯಾ ಹಿ ನೋ ಯದೂನ್ ನ ಜಘ್ನಿವಾನಸೌ[೧] ॥ ೧೦೯ ॥

ಅ: ಜರಾಸಂಧ ತನಗಾದ ಸೋಲಿನಿಂದ ಕೋಪದಿಂದಾಗಿ ಯಾದವರನ್ನು ಕೊಲ್ಲುವನು. ಹಿಂದೆ ಜಯದ ಆಸೆಯಿಂದಾಗಿ ಅವನು ನಮ್ಮ ಯಾದವರನ್ನು ಕೊಂದಿರಲ್ಲ.

ಎ: ಕಾಲಯವನನೊಂದಿಗೆ ನೇರವಾಗಿ ಯುದ್ಧ ನಡೆಸಿದರೆ, ಅವನಿಗೆ ನೆರವು ನೀಡಲೆಂದು ಜರಾಸಂಧನು ಅವನೊಂದಿಗೆ ಸೇರಿಕೊಳ್ಳುವನು; ಮತ್ತು ಯಾದವರನ್ನು ಕೋಪದಿಂದ ನಾಶ

---

೧. ಯದುಪರ್ಯಾಂ ದೌಹಿತ್ರಸ್ಯ ಸಾಮ್ರಾಜ್ಯಾರ್ಥಮೇವ ನ ಜಘ್ನಿವಾನಿತಿ ಭಾವಃ। – (ಜ., ವ.?)

ಮಾಡತೊಡಗುವನು. ಮೊದಲು ಯಾದವರನ್ನು ಹಾಗೆ ಜರಾಸಂಧ ಕೊಲ್ಲದಿರಲು ಶ್ರೀಕೃಷ್ಣನ ಮೇಲೆ ಜಯ ಸಾಧಿಸಬಹುದೆಂಬ ಆಸೆ ಕಾರಣವಾಗಿತ್ತು. ಈಗ ಹತಾಶನಾಗಿರುವ ಅವನು ಶ್ರೀಕೃಷ್ಣನನ್ನು ಬಿಟ್ಟು ಯಾದವರನ್ನು ನಾಶ ಮಾಡತೊಡಗುವನು ಎಂದರ್ಥ.

ನಿರಾಶಕೋಽದ್ಯ ಯಾದವಾನಪಿ ಸ್ಮ ಪೀಡಯಿಷ್ಯತಿ।
ಅತಃ [೧]ಸಮುದ್ರಮಧ್ಯಗಾಪುರೀವಿಧಾನಮದ್ಯ ಮೇ ॥ ೧೧೦ ॥

ಅ: ಆಸೆ ಕಳೆದುಕೊಂಡಿರುವ ಅವನೀಗ ಯಾದವರನ್ನೂ ಸಹ ಪೀಡಿಸತೊಡಗುವನು. ಆದ್ದರಿಂದ ಸಮುದ್ರಮಧ್ಯದಲ್ಲಿ ಪಟ್ಟಣವೊಂದನ್ನು ನಿರ್ಮಿಸುವುದು ಉಚಿತವೆಂದು ನನಗೆ ತೋರುವುದು.

ಪ್ರರೋಚತೇ ನಿಧಾನಮಪ್ಯಮುತ್ರ ಸರ್ವಸಾತ್ತ್ವತಾಮ್ ।
ಉದೀರ್ಯ ಚೈವಮೀಶ್ವರೋಽಸ್ಮರತ್ [೨]ಸುರೇಶವರ್ಧಕಿಮ್ ॥ ೧೧೧ ॥

ಅ: ಬಳಿಕ ಎಲ್ಲ ಯಾದವರನ್ನೂ ಸಹ ಅಲ್ಲಿ ನೆಲೆಸುವಂತೆ ಮಾಡುವುದು ಉಚಿತವೆಂದು ತೋರುವುದು''. ಹೀಗೆ ನುಡಿದು, ಸರ್ವಸಮರ್ಥನಾದ ಕೃಷ್ಣ ಆ ದೇವಶಿಲ್ಪಿಯನ್ನು ನೆನೆದ.

ಸ ಭೌವನಃ ಸಮಾಗತಃ ಕುಶಸ್ಥಲೀಂ ವಿನಿರ್ಮಮೇ ।
ನಿರಂಬುಕೇ ತು ಸಾಗರೇ ಜನಾರ್ದನಾಜ್ಞಯಾ ಕೃತೇ ॥ ೧೧೨ ॥

ಅ: ಅಲ್ಲಿಗೆ ಆಗಮಿಸಿದ ವಿಶ್ವಕರ್ಮ, ಶ್ರೀಕೃಷ್ಣನ ಆಜ್ಞೆಯಂತೆ ಸಮುದ್ರ ನೀರಿಲ್ಲದಂತಾಗಿ ಮಾಡಲ್ಪಡಲು, ದ್ವಾರಕೆಯನ್ನು ನಿರ್ಮಿಸಿದ.

---

೧. ಸಮುದ್ರಮಧ್ಯಗಾಪುರೀವಿಧಾನಮಿತ್ಯತ್ರ ಸಮುದ್ರಮಧ್ಯಗಾ ಆ= ಸಮಂತಾದ್ವಿದ್ಯಮಾನಾ ಯಾ ಪುರೀ ತಸ್ಯಾಃ ವಿಧಾನಂ = ಅತಿವಿಸ್ತೃತಪುರೀವಿಧಾನಮಿತ್ಯರ್ಥಃ ॥ – (ವಾ.)

ವಿಧಾನಂ = ನಿರ್ಮಾಣಮ್ । – (ಜ.)

ಸಮುದ್ರಮಧ್ಯಗಾ ಚ ಸಾ ವಿಸ್ತೃತಾ ಪುರೀ ಚೇತಿ ವಿಗ್ರಹಃ । ದ್ವಿಷಟ್ಕೇತಿ ।
ತ್ರಿಂಶದ್ಯೋಜನವಿಸ್ತೀರ್ಣಂ ದದೌ ಕೃಷ್ಣಸ್ಯ ಸಾಗರಃ ।
ಅಸೃಜತ್ ಪಯಸಾಂ ಮಧ್ಯೇ ತತ್ರ ದ್ವಾರಾವತೀಪುರಮ್ ॥ ಇತಿ । – (ತಾ.)

೨. ಕೇಚಿತ್ ತು ಅಸ್ಯ ವರ್ಧಕಿನಃ ಸ ವಿಶ್ವಕರ್ಮಾ ಕೇಶವಾಯ ತಾಂ ಪ್ರದಾಯ ನಿಧೀನ್ ಸಮರ್ಪ್ಯ ಯಯಾವಿತ್ಯರ್ಥಮಾಹುಃ ॥ – (ತಾ.)

ವಿ: ೧) ಭುವನ ಎಂಬವನ ಪುತ್ರನಾದ್ದರಿಂದ ವಿಶ್ವಕರ್ಮನಿಗೆ ಭೌವನ ಎಂಬ ಹೆಸರೂ ಇದ್ದಿತು. ತ್ವಷ್ಟೃ ಎಂಬುದು ಅವನ ಮತ್ತೊಂದು ಹೆಸರು. ಶ್ರೀಕೃಷ್ಣನ ಆದೇಶದಂತೆ ಸಮುದ್ರಮಧ್ಯದಲ್ಲಿ ದ್ವೀಪವೊಂದು ಮೇಲೆದ್ದಿತು.ಅಲ್ಲಿ ವಿಶ್ವಕರ್ಮ ದ್ವಾರಕಾಪುರಿಯನ್ನು ನಿರ್ಮಿಸಿದ ಎಂದರ್ಥ.

೨) 'ಜನಾರ್ದನಾಜ್ಞಯಾ' ಎಂಬ ಪದದಿಂದ ಭಕ್ತಜನರ ಸಂಸಾರಸಮುದ್ರವನ್ನೇ ಪರಿಹರಿಸುವ ಕೃಷ್ಣನಿಗೆ, ಆ ಲವಣಸಮುದ್ರವನ್ನು ಸುತ್ತಲೂ ಹಿಂದಕ್ಕೆ ಸರಿಸಿ, ಒಂದು ದ್ವೀಪವನ್ನು ನಿರ್ಮಿಸಿದ್ದರಲ್ಲಿ ಆಶ್ಚರ್ಯವೇನಿದೆ ಎಂಬ ತತ್ತ್ವವನ್ನೂ ಸೂಚಿಸಿರುವರು.

೩) ವಿಶ್ವಕರ್ಮ ರಾಮಾಯಣದಲ್ಲಿ ನಳ ಎಂಬ ಕಪಿಯಾಗಿ ಜನಿಸಿ, ಶ್ರೀರಾಮನ ಆದೇಶದಂತೆ, ಸೇತುವೆಯ ನಿರ್ಮಾಣಕಾರ್ಯದ ನೇತೃತ್ವ ವಹಿಸಿದ್ದ. ಇಲ್ಲಿ ಶ್ರೀರಾಮನೇ ಆದ ಶ್ರೀಕೃಷ್ಣನ ಸೇವೆಗಾಗಿ ತನ್ನ ಮೂಲರೂಪದಿಂದಲೇ ಅಲ್ಲಿಗೆ ಆಗಮಿಸಿ, ಸಮುದ್ರಮಧ್ಯದಲ್ಲಿ ದ್ವಾರಕೆಯನ್ನು ನಿರ್ಮಿಸಿದ ಎಂಬ ವಿಶೇಷವನ್ನೂ ಗಮನಿಸಬೇಕು.

ದ್ವಾರಕೆಯ ವೈಭವ

ಮಹೋದಕಸ್ಯ ಮಧ್ಯತಶ್ಚಕಾರ ತಾಂ ಪುರೀಂ ಶುಭಾಮ್।
ದ್ವಿಷಟ್ಕಯೋಜನಾಯತಾಂ ಪಯೋಬ್ಧಿಮಧ್ಯಗೋಪಮಾಮ್ ॥ ೧೧೩ ॥

ಅ: ಜಲರಾಶಿಯ ಮಧ್ಯದಲ್ಲಿ ಅವನು ಹನ್ನೆರಡು ಯೋಜನ ವಿಸ್ತೀರ್ಣದ ಕ್ಷೀರಸಮುದ್ರ-ಮಧ್ಯದ ಶ್ವೇತದ್ವೀಪದಂತೆ ಕಂಗೊಳಿಸುವ ಮಂಗಳಕರವಾದ ಪಟ್ಟಣವನ್ನು ನಿರ್ಮಿಸಿದ.

ವಿ: ಹಾಗೆ ನಿರ್ಮಿತವಾದ ದ್ವಾರಕೆಯ ವರ್ಣನೆ ಶ್ರೀಮದ್ಭಾಗವತದಲ್ಲಿ ಬಂದಿದೆ:

ಇತಿ ಸಮ್ಮಂತ್ರ್ಯ ಭಗವಾನ್ ದುರ್ಗಂ ದ್ವಾದಶಯೋಜನಮ್ ।
ಅಂತಃಸಮುದ್ರೇ ನಗರಂ ಕೃತ್ಸ್ನಾದ್ಭುತಮಚೀಕರತ್ ॥
ದೃಶ್ಯತೇ ಯತ್ರ ಹಿ ತ್ವಾಷ್ಟ್ರಂ ವಿಜ್ಞಾನಂ ಶಿಲ್ಪನೈಪುಣಮ್ ।
ರಥ್ಯಾಚತ್ವರವೀಥೀಭಿರ್ಯಥಾವಾಸ್ತು ವಿನಿರ್ಮಿತಮ್ ॥
ಸುರದ್ರುಮಲತೋದ್ಯಾನವಿಚಿತ್ರೋಪವನಾನ್ವಿತಮ್ ।
ಹೇಮಶೃಂಗೈರ್ದಿವಿಸ್ಪೃಗ್ಭಿಃ ಸ್ಫಾಟಿಕಾಟ್ಟಾಲಗೋಪುರೈಃ ॥

---

೩. ಸ ಭೌವನಃ ಸಮಾಗತ ಇತ್ಯತ್ರ ಭೌವನಃ= ಭುವನಾಖ್ಯವರ್ಧಕಿಪುತ್ರಃ ವಿಶ್ವಕರ್ಮಾ ॥ –(ವಾ.)

ಭುವನಸ್ಯಾಪತ್ಯಂ ಭೌವನಃ ಸ ವಿಶ್ವಕರ್ಮಾ ಸಮಾಗತಃ ಸನ್ ಕುಶಸ್ಥಲೀಂ ದ್ವಾರಕಾಪುರೀಂ ವಿನಿರ್ಮಮೇ ರಚಿತವಾನ್। –(ಜ.)

ಭುವನಸ್ಯಾಪತ್ಯಂ ಭೌವನಃ ಸ ವಿಶ್ವಕರ್ಮಾ। –(ವ.)

ರಾಜತಾರಕುಟ್ಟೈಃ ಕೋಷ್ಠೈರ್ಹೇಮಕುಂಭೈರಲಂಕೃತೈಃ ।
ರತ್ನಕೂಟೈರ್ಗೃಹೈರ್ಹೈಮೈರ್ಮಹಾಮರಕತಸ್ಥಲೈಃ ॥
ವಾಸ್ತೋಷ್ಪತೀನಾಂ ಚ ಗೃಹೈರ್ವಲಭೀಭಿಶ್ಚ ನಿರ್ಮಿತಮ್ ।
ಚಾತುರ್ವರ್ಣ್ಯಜನಾಕೀರ್ಣಂ ಯದುದೇವಗೃಹೋಲ್ಲಸತ್॥

– ಭಾಗವತ (೧೦/೫೦/೫೦-೫೪)

ಹರಿವಂಶದಲ್ಲಿ [೧]ಇನ್ನೂ ವಿವರವಾಗಿ ದ್ವಾರಕೆಯ [೨]ವರ್ಣನೆ ಬಂದಿದೆ.

ಚಕಾರ ಲಾವಣೋದಕಂ ಜನಾರ್ದನೋಽಮೃತೋಪಮಮ್।
ಸಭಾಂ [೩]ಸುಧರ್ಮನಾಮಿಕಾಂ ದದೌ ಸಮೀರಣೋಽಸ್ಯ ಚ ॥ ೧೧೪ ॥

---

೧. ತತಃ ಸಾ ನಿರ್ಮಿತಾ ಕಾಂತಾ ಪುರೀ ದ್ವಾರಾವತೀ ತದಾ ।
ಮಾನಸೇನ ಪ್ರಯತ್ನೇನ ವೈಷ್ಣವೀ ವಿಶ್ವಕರ್ಮಣಾ ॥
ವಿಧಾನವಿಹಿತದ್ವಾರಾ ಪ್ರಾಕಾರವರಶೋಭಿತಾ ।
ಪರಿಖಾಚಯಸಂಗುಪ್ತಾ ಸಾಟ್ಟಪ್ರಾಕಾರತೋರಣಾ ॥
ಕಾಂತನಾರೀನರಗಣಾ ವಣಿಗ್ಭಿರುಪಶೋಭಿತಾ ।
ನಾನಾಪಣ್ಯಗಣಾಕೀರ್ಣಾ ಖೇಚರೀವ ಚ ಗಾಂ ಗತಾ ॥
ಪ್ರಪಾವಾಪೀಪ್ರಪನ್ನೋದಾ ಉದ್ಯಾನೈರುಪಶೋಭಿತಾ ।
ಸಮಂತತಃ ಸಂವೃತಾಂಗೀ ವನಿತೇವಾಯತೇಕ್ಷಣಾ ॥
ಸಮೃದ್ಧಚತ್ವರವತೀ ವೇಶ್ಮೋತ್ತಮಫನಾಚಿತಾ ।
ರಥ್ಯಾಕೋಟಿಸಹಸ್ರಾಢ್ಯಾ ಶುಭ್ರರಾಜಪಥೋತ್ತರಾ ॥
ಭೂಷಯಂತೀ ಸಮುದ್ರಂ ಸಾ ಸ್ವರ್ಗಮಿಂದ್ರಪುರೀ ಯಥಾ ।
ಪೃಥಿವ್ಯಾಂ ಸರ್ವರತ್ನಾನಾಮೇಕಾ ನಿಚಯಶಾಲಿನೀ ॥
ಸುರಾಣಾಮಪಿ ಸುಕ್ಷೇತ್ರಾ ಸಾಮಂತಕ್ಷೋಭಕಾರಿಣೀ ।
ಅಪ್ರಕಾಶಂ ತದಾಕಾಶಂ ಪ್ರಾಸಾದೈರುಪಕುರ್ವತೀ ॥
ಪೃಥಿವ್ಯಾಂ ಪೃಥುರಾಷ್ಟ್ರಾಯಾಂ ಜನೌಘಪ್ರತಿನಾದಿತಾ ।
ಓಘೈಶ್ಚ ವಾರಿರಾಜಸ್ಯ ಶಿಶಿರೀಕೃತಮಾರುತಾ ॥
ಅನೂಪೋಪವನೈಃ ಕಾಂತೈಃ ಕಾಂತ್ಯಾ ಜನಮನೋಹರಾ ।
ಸತಾರಕಾ ದ್ಯೌರಿವ ಸಾ ದ್ವಾರಕಾ ಪ್ರತ್ಯರಾಜತ ॥
ಪ್ರಾಕಾರೇಣಾರ್ಕವರ್ಣೇನ ಶಾತಕೌಂಭೇನ ಸಂವೃತಾ ।
ಹಿರಣ್ಯಪ್ರತಿವರ್ಣೈಶ್ಚ ಗೃಹೈರ್ಗಂಭೀರನಿಃಸ್ವನೈಃ ॥
ಶುಭ್ರಮೇಘಪ್ರತೀಕಾಶೈರ್ದ್ವಾರೈಃ ಸೌಧೈಶ್ಚ ಶೋಭಿತಾ ।
ಕ್ವಚಿತ್ಕ್ವಚಿದುದಗ್ರಾಗ್ರೈರುಪಾವೃತಮಹಾಪಥಾ ॥ – ಹರಿವಂಶ (೨/೫೮/೪೪-೫೪)

೨. ಸುಧರ್ಮಾಯ ಸುಧರ್ಮಾಂ ತಾಂ ಕೃಷ್ಣಾಯಾಕ್ಲಿಷ್ಟಕಾರಿಣೇ ।
ದೇವೋ ದೇವಸಭಾಂ ದತ್ವಾ ವಾಯುರಂತರಧೀಯತ ॥ – ಹರಿವಂಶ (೨/೫೮/೭೬)

ಅ: ಸುತ್ತಲೂ ಇದ್ದ (ಸಮುದ್ರದ)ಉಪ್ಪು ನೀರನ್ನು ಕೃಷ್ಣ ಅಮೃತದಂತಾಗಿಸಿದ್ದ. ಸುಧರ್ಮ ಎಂಬ ಸಭಾಮಂಟಪವನ್ನು ವಾಯುದೇವರು ಶ್ರೀಕೃಷ್ಣನಿಗೆ ನೀಡಿದರು.

ವಿ: ಸಮುದ್ರಮಧ್ಯ ನಿರ್ಮಾಣವಾದ ದ್ವಾರಕೆ ಸಹಜವಾಗಿಯೇ ಉಪ್ಪು ನೀರಿನಿಂದ ಕೂಡಿತ್ತು. ತನ್ನ ಭಕ್ತಜನರಿಗೆ ಅನುಕೂಲವಾಗಲೆಂದು ಕೃಷ್ಣ ಅದನ್ನು ಕೇವಲನೋಟದಿಂದಲೇ ಅಮೃತಮಯ-ವನ್ನಾಗಿಸಿದ. ಆ ಸಭೆ ಅಕ್ಷಯವೂ, ರಮ್ಯವೂ, ಕಾಮ್ಯರೂಪಿಯೂ ಆದ ಎಂದು ಹರಿವಂಶದಲ್ಲಿದೆ:

> ಯಾ ಹ್ಯಕ್ಷಯಾ ಸಭಾ ರಮ್ಯಾ ಕಾಮಗಾ ಕಾಮರೂಪಿಣೀ ।
> ಸಾ ಯದೂನ್ ಧಾರಯೇತ್ ಸರ್ವಾನ್ ಯಥೈವ ತ್ರಿದಶಾಂಸ್ತಥಾ ॥
>
> — ಹರಿವಂಶ (೨/೫೮/೭೩)

ಶತಕ್ರತೋಃ ಸಭಾಂ ತು ತಾಂ ಪ್ರದಾಯ ಕೇಶವಾಯ ಸಃ ।
ನಿಧೀನ್ ಸಮರ್ಪ್ಯ ಸರ್ವಶೋ [೧]ಯಯೌ ಪ್ರಣಮ್ಯ ತಂ ಪ್ರಭುಮ್ ೧೧೫

ಅ: ವಾಯುದೇವರು ಇಂದ್ರದೇವರ ಆ ಸಭೆಯನ್ನು ಕೃಷ್ಣನಿಗೆ ನೀಡಿ, ಸಕಲನಿಧಿಗಳನ್ನೂ ಒಪ್ಪಿಸಿ, ಅವನಿಗೆ ನಮಸ್ಕರಿಸಿ ತೆರಳಿದರು.

ವಿ: ವಾಯುದೇವರು ಅರ್ಪಿಸಿದ ಆ ಸಭಾಗೃಹ ಇಂದ್ರದೇವರದು. ಇದು ಒಂದರ್ಥದಲ್ಲಿ ಇತರದೇವತೆಗಳ ವಸ್ತುಗಳು ಸಹ ವಾಯುದೇವರ ಮೂಲಕವೇ ಶ್ರೀಹರಿಗೆ ಸಮರ್ಪಿತವಾಗಬೇಕು ಎಂಬ ತತ್ತ್ವಕ್ಕೆ ಸೂಚಕ. ವಾಯುದೇವರು ಅರ್ಪಿಸಿದ ನಿಧಿಗಳು ಮಹಾಪದ್ಮ, ಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ಕುಂದ, ನೀಲ ಮತ್ತು ಖರ್ವ ಎಂಬ ಕುಬೇರನ [೨]ನವನಿಧಿಗಳು.

---

೧. ಅಸ್ಯ ವರ್ಧಕೇಃ ದದೌ । ಸರ್ವಾಧಿಕಃ ಯಯಾವಿತಿ ವ್ಯಾಖ್ಯಾನಮನಾದರಣೀಯಮ್ । ಹರಿವಂಶಗತವಾಕ್ಯವಿರೋಧಾತ್ । ತಥಾಹಿ –

> 'ಗಚ್ಛ ಮಾರುತ ದೇವೇಶಮನುಮಾನ್ಯ ಸಹಾಮರೈಃ ।
> ಸಭಾಂ ಸುಧರ್ಮಮಾದಾಯ ದೇವೇಭ್ಯಸ್ತ್ವಮಿಹಾನಯ ॥' ಇತಿ ।

ತತ್ರೈವ– 'ವಾಯುರಾತ್ಮಾಪಿ ಜಗತೋ ಜಗಾಮ ತ್ರಿದಶಾಲಯಮ್ ।
ಸೋಽನುಮಾನ್ಯ ಸುರಾನ್ ಸರ್ವಾನ್ ಕೃಷ್ಣವಾಕ್ಯಂ ನಿವೇದ್ಯ ಚ ।
ಸಭಾಂ ಸುಧರ್ಮಮಾದಾಯ ಪುನರಾಯಾನ್ಮಹೀತಲಮ್ ।
ಸುಧರ್ಮಾಂ ತಾಂ ಸುಧರ್ಮಾಯ ಕೃಷ್ಣಾಯಾಕ್ಲಿಷ್ಟಕಾರಿಣೇ ।
ದೇವದೇವೋ ಸಭಾಂ ದತ್ತ್ವಾ ವಾಯುರಂತರಧೀಯತ ॥' ಇತಿ ॥ – (ಜ.)

೨. ಮಹಾಪದ್ಮಶ್ಚ ಪದ್ಮಶ್ಚ ಶಂಖೋ ಮಕರಕಚ್ಛಪೌ ।
ಮುಕುಂದಕುಂದನೀಲಾಶ್ಚ ಖರ್ವಶ್ಚ ನಿಧಯೋ ನವ ॥

ಸಮಸ್ತದೇವತಾಗಣಾಃ ಸ್ವಕೀಯಮರ್ಪಯನ್ ಹರೌ ।
ವಿಮುಚ್ಯ ಪಕ್ಷಿಪುಂಗವಂ ಸ ಯೋದ್ಧುಮೈಚ್ಛದಚ್ಯುತಃ ॥ ೧೧೬ ॥

ಅ: ಅದರಂತೆ ಸಮಸ್ತದೇವತೆಗಳ ಗುಂಪುಗಳೂ ತಮ್ಮ ವಸ್ತುಗಳನ್ನು ಶ್ರೀಕೃಷ್ಣನಿಗೆ ಸಮರ್ಪಿಸಿದರು. ಕೃಷ್ಣ ಗರುಡನನ್ನು ಬೀಳ್ಕೊಟ್ಟು ಕಾಲಯವನನೊಂದಿಗೆ ಯುದ್ಧ ಮಾಡಲು ಬಯಸಿದ.

ವಿ: ಹಾಗೆ ದೇವತೆಗಳು ಮೇಲ್ನೋಟಕ್ಕೆ ತಮ್ಮ ವಸ್ತುಗಳನ್ನು ಸಮರ್ಪಿಸಿದಂತೆ ಕಂಡರೂ, ವಾಸ್ತವವಾಗಿ ಅವರೆಲ್ಲ ಹಾಗೆ ಸಮರ್ಪಿಸಿದ್ದು ಶ್ರೀಹರಿ ತಮಗೆ ಅನುಗ್ರಹಿಸಿದ್ದ ಅವನ ವಸ್ತುಗಳನ್ನೇ ಎಂಬ ವಿಶೇಷಾಂಶ ಶ್ರೀಮದ್ಭಾಗವತಪುರಾಣದಲ್ಲಿದೆ. ಅದರಲ್ಲಿ ಇತರದೇವತೆಗಳು ಸಮರ್ಪಿಸಿದ ಪದಾರ್ಥಗಳ [೧]ವಿವರವೂ ಬಂದಿದೆ.

ಮಥುರೆಯಿಂದ ದ್ವಾರಕೆಗೆ

ಸಮಸ್ತಮಾಥುರಾನ್ ಪ್ರಭುಃ ಕುಶಸ್ಥಲೀಸ್ಥಿತಾನ್ ಕ್ಷಣಾತ್।
ವಿಹಾಯ ಬಾಹುಯೋಧಕಃ ಸ ಯಾವನಂ ಸಮಭ್ಯಯಾತ್ ॥ ೧೧೭ ॥

ಅ: ಸರ್ವಸಮರ್ಥನಾದ ಕೃಷ್ಣ ಕ್ಷಣಮಾತ್ರದಲ್ಲಿ ಮಥುರೆಯಲ್ಲಿದ್ದವರನ್ನೆಲ್ಲ ದ್ವಾರಕೆಯಲ್ಲಿರುವಂತೆ ಮಾಡಿದ. ಬಳಿಕ ಬಾಹುಯುದ್ಧವನ್ನು ಮಾಡುತ್ತಾ ಕಾಲಯವನನತ್ತ ತೆರಳಿದ.

ವಿ: ದ್ವಾರಕೆಯ ನಿರ್ಮಾಣ ಮಾತ್ರವಲ್ಲದೆ, ಮಥುರೆಯಲ್ಲಿನ ಜನಗಳನ್ನು ದ್ವಾರಕೆಗೆ ಸ್ಥಳಾಂತರಿಸಿದ ಬಗೆಯೂ ಅತ್ಯದ್ಭುತವಾಗಿತ್ತು. ಕ್ಷಣಮಾತ್ರದಲ್ಲಿ ಸಹಸ್ರಾರು ಮೈಲಿಗಳಷ್ಟು ದೂರಕ್ಕೆ ಸಮಸ್ತಮಥುರಾನಿವಾಸಿಗಳನ್ನು ಅವರವರ ಸಾಮಗ್ರಿಗಳೊಂದಿಗೆ ದ್ವಾರಕೆಗೆ ಸ್ಥಳಾಂತರಿಸಿದ್ದು ಕೃಷ್ಣನ ಅಚಿಂತ್ಯಾದ್ಭುತಶಕ್ತಿಗೆ ಮತ್ತೊಂದು ನಿದರ್ಶನ.

ಅನಂತಶಕ್ತಿರಪ್ಯಜಃ ಸುನೀತಿದೃಷ್ಟಯೇ ನೃಣಾಮ್ ।
ವ್ಯವಾಸಯನ್ ನಿಜಾನ್ ಜನಾನ್ ಸ ಲೀಲಯೈವ ಕೇವಲಮ್ ॥ ೧೧೮ ॥

---

೧. ಸುಧರ್ಮಾಂ ಪಾರಿಜಾತಂ ಚ ಮಹೇಂದ್ರಃ ಪ್ರಾಹಿಣೋದ್ಧರೇಃ ।
ಯತ್ರ ಚಾವಸ್ಥಿತೋ ಮರ್ತ್ಯೋ ಮರ್ತ್ಯಧರ್ಮೈರ್ನ ಯುಜ್ಯತೇ ॥
ಶ್ಯಾಮೈಕಕರ್ಣಾನ್ ವರುಣೋ ಹಯಾಂಚ್ಛುಕ್ಲಾನ್ ಮನೋಜವಾನ್ ।
ಅಷ್ಟೌ ನಿಧಿಪತಿಃ ಕೋಶಾನ್ ಲೋಕಪಾಲೋ ನಿಜೋದಯಾನ್ ॥
ಯದ್ ಯದ್ ಭಗವತಾ ದತ್ತಮಾಧಿಪತ್ಯಂ ಸ್ವಸಿದ್ಧಯೇ ।
ಸರ್ವಂ ಪ್ರತ್ಯರ್ಪಯಾಮಾಸುರ್ಹರೌ ಭೂಮಿಗತೇ ನೃಪ ॥ – (ಭಾಗವತ (೧೦/೫೦/೫೫-೫೭)

ಅ: ಅನಂತಶಕ್ತಿಸಂಪನ್ನನಾದರೂ, ಅಜನಾದ ಶ್ರೀಕೃಷ್ಣ ಜನರಿಗೆ ಉತ್ತಮರಾಜನೀತಿಯನ್ನು ತಿಳಿಸಿಕೊಡಲೆಂದು ತನ್ನ ಜನಗಳನ್ನು ಹಾಗೆ ಕೇವಲ ಲೀಲೆಯಿಂದ ದ್ವಾರಕೆಗೆ ವಲಸೆ ಮಾಡಿಸಿದ.

ವಿ: ೧) ಶ್ರೀಕೃಷ್ಣ ಅನಂತಶಕ್ತನಾದ ಶ್ರೀಹರಿ. ಅವನು ಮಧುರೆಯಲ್ಲಿದ್ದೇ ಸಮಸ್ತಶತ್ರುಗಳನ್ನು ನಿರ್ನಾಮ ಮಾಡಬಲ್ಲ ಭಗವಂತ. ಆದರೂ ಹೀಗೆ ಮಧುರೆಯಿಂದ ದ್ವಾರಕೆಗೆ ಜನರನ್ನು ವಲಸೆ ಮಾಡಿಸಿದ್ದು ರಾಜನೀತಿಯನ್ನು ತೋರಿಸಿಕೊಡಲೆಂದು. ಎಂದರೆ ಪ್ರಬಲಶತ್ರುಗಳು ಅಗಾಧಸೈನ್ಯ–ದೊಂದಿಗೆ ಸುತ್ತುವರಿದಾಗ ಅಲ್ಪಸಂಖ್ಯೆಯ ಸಾಮಗ್ರಿಯಿಂದ ಕೂಡಿದ ರಾಜರು ದೂರದ ಸ್ಥಳಕ್ಕೆ ವಲಸೆ ಹೋಗಿ ನೆಲೆಸುವುದು ರಕ್ಷಣೆಯ ಒಂದು ಬಗೆ ಎಂದು ತಿಳಿಸಿದ ಎಂದರ್ಥ.

೨) ಸಮುದ್ರದ ಮಧ್ಯದಲ್ಲಿ ಹಾಗೆ ಅತ್ಯಪೂರ್ವಪಟ್ಟಣವನ್ನು ನಿರ್ಮಿಸುವ ಮೂಲಕ ತಾನು ಸಾಕ್ಷಾತ್ ಭಗವಂತ ಎಂಬುದನ್ನೂ ನಿರೂಪಿಸಿದ. ಮತ್ತೊಂದೆಡೆ ಅಯೋಗ್ಯರು ಎಷ್ಟೆಲ್ಲ ಪ್ರಯತ್ನಪಟ್ಟರೂ, ತಾನು ಸಿಕ್ಕದೆ, ತನ್ನ ಪರಿವಾರಸಮೇತ ದೂರಕ್ಕೆ ಸಾಗುವವನೇ ಹೊರತು, ಎಟಕುವವನಲ್ಲ ಎಂಬ ತತ್ತ್ವವನ್ನೂ ಸಾರಿದ.

೩) ಹಿಂದೊಮ್ಮೆ ಕೃಷ್ಣ ಮಧುರೆಯಿಂದ ಗೋಮಂತಕ್ಕೆ ಬಲರಾಮನೊಂದಿಗೆ ಸಾಗುವ ಮೂಲಕ ಈ ಬಗೆಯ ಮತ್ತೊಂದು ನೀತಿಯನ್ನು ತೋರಿಸಿಕೊಟ್ಟ. ವಿವರ ಹದಿನಾರನೆಯ ಅಧ್ಯಾಯದಲ್ಲಿ ಬಂದಿದೆ. ಅಲ್ಲಿ ಬಲರಾಮನೊಂದಿಗೆ ಸಮುದ್ರದ ಬಳಿಗೆ ಸಾಗಿದ್ದ ಕೃಷ್ಣ ಇಲ್ಲಿ ಸಮಸ್ತಯಾದವರೊಂದಿಗೆ ಸಮುದ್ರದ ಮಧ್ಯದ ವಿನೂತನನಗರಿಗೆ ತೆರಳಿದ.

೪) ಕೃಷ್ಣ ತನ್ನವರನ್ನೆಲ್ಲ ಸಮುದ್ರದ ಮಧ್ಯದ ದ್ವಾರಕೆಗೆ ಕರೆದೊಯ್ದದ್ದು ತನ್ನ ಭಕ್ತರನ್ನೆಲ್ಲ ಹಾಗೆ ಕ್ಷೀರಸಮುದ್ರಮಧ್ಯದಲ್ಲಿನ ಶ್ವೇತದ್ವೀಪಕ್ಕೆ ಕರೆದೊಯ್ಯುವ ತತ್ತ್ವಕ್ಕೆ ಸೂಚಕವೂ ಆಗಿದೆ ಎಂದು ತಿಳಿಯಬಹುದು.

ಅನಾದ್ಯನಂತಕಾಲಗಂ ಸಮಸ್ತಲೋಕಮಂಡಲಮ್ ।
ಯದೀಕ್ಷಯೈವ ರಕ್ಷ್ಯತೇ ಕಿಮಸ್ಯ ವೃಷ್ಣಿರಕ್ಷಣಮ್ ॥ ೧೧೯ ॥

ಅ: ಅನಾದ್ಯನಂತಕಾಲದ ಸಮಸ್ತಲೋಕಸಮುದಾಯವನ್ನು ತನ್ನ ಸಂಕಲ್ಪಮಾತ್ರದಿಂದ ಪಾಲಿಸುವ ಕೃಷ್ಣನಿಗೆ ಯಾದವರ ರಕ್ಷಣೆ ಎಂತಹ ಮಹಾಕಾರ್ಯ!

ಕಾಲಯವನನಿಗೆ ಕೃಷ್ಣಸಂದೇಶ

ನಿರಾಯುಧಂ ಚ ಮಾಮಯಂ ವರಾಚ್ಛಿವಸ್ಯ ನ ಕ್ಷಮಃ ।
ಸಮಸ್ತಸೇನಯಾ ಯುತೋಽಪಿ ಯೋದ್ಧುಮಿತ್ಯದರ್ಶಯತ್ ॥ ೧೨೦ ॥

---

೨. ತತ್ರ ಯೋಗಪ್ರಭಾವೇಣ ನೀತ್ವಾ ಸರ್ವಜನಂ ಹರಿಃ । – ಭಾಗವತ (೧೦/೫೦/೫೮)

ಅ: ''ನಿರಾಯುಧನಾದ ನನ್ನೊಡನೆ, ಶಿವನ ವರವಿದ್ದರೂ ಕಾಲಯವನ ಸಮಸ್ತಸೇನೆಯೊಂದಿಗೆ ಸಮೇತನಾಗಿದ್ದರೂ, ಯುದ್ಧಮಾಡಲು ಸಮರ್ಥನಾಗಲಾರ''.

ವಿ: ೧) ''ನಾನು ನಿರಾಯುಧನಾದರೂ, ಒಬ್ಬನೇ ಬಂದರೂ, ಕಾಲಯವನನ ಯಾವುದೇ ವರ, ಸೇನೆಗಳೊಂದಿಗೆ ಕೂಡಿಯೂ, ನನ್ನನ್ನು ಸರ್ವಥಾ ಎದುರಿಸಲು ಸಮರ್ಥನಾಗಲಾರ'' ಎಂಬುದನ್ನು ತೋರಿಸಲು ಕೃಷ್ಣ ಹಾಗೆ ನಿರಾಯುಧನಾಗಿ ಅಪಾರಸಂಖ್ಯೆಯ ಆ ಕಾಲಯವನನ ಮೇಲೆ ಸಾಗಿದ್ದು ಎಂದು ತಿಳಿಯಬೇಕು.

೨) ಹೀಗೆ ಮಾಡುವ ಮೂಲಕ ಹಿಂದೆ ತಾನು ಜರಾಸಂಧನ ೨೩ ಅಕ್ಷೋಹಿಣೀಸೇನೆಯೊಂದಿಗೆ ಕಾದುವಾಗ ವೈಕುಂಠದಿಂದ ದಿವ್ಯ ಆಯುಧಗಳನ್ನು ತರಿಸಿದ್ದು ಕೇವಲ ಲೀಲೆಗೋಸ್ಕರ. ತನ್ನ ವೈಭವವನ್ನು ಜಗತ್ತಿಗೆ ಸಾರಲೋಸ್ಕರ ಎಂಬುದನ್ನು ಸೂಚಿಸಲು ಎಂದು ತಿಳಿಯಬೇಕು.

ಸ ಕೃಷ್ಣಪನ್ನಗಂ ಘಟೇ ನಿಧಾಯ ಕೇಶವೋಽರ್ಪಯತ್ ।
ನಿರಾಯುಧೋಽಪ್ಯಹಂ ಕ್ಷಮೋ ನಿಹಂತುಮಪ್ರಿಯಾನಿತಿ ॥ ೧೨೧ ॥

ಅ: ಕೃಷ್ಣ ''ನಾನು ನಿರಾಯುಧನಾಗಿದ್ದರೂ, ವೈರಿಗಳನ್ನು ಸಂಹರಿಸಲು ಸಮರ್ಥ'' ಎಂದು ಸೂಚಿಸಲು ಒಂದು ಕೃಷ್ಣಸರ್ಪವನ್ನು ಒಂದು ಘಟದಲ್ಲಿರಿಸಿ, ಅವನ ಬಳಿಗೆ ಕಳುಹಿಸಿಕೊಟ್ಟ.

ವಿ: ಕೃಷ್ಣ ಅದನ್ನು ಇನ್ನೂ ಸ್ಪುಟಗೊಳಿಸಲು ಒಂದು ಘಟದಲ್ಲಿ ಕೃಷ್ಣಸರ್ಪವನ್ನು ಇರಿಸಿ, ಕಾಲಯವನನ ಬಳಿಗೆ ಸಂದೇಶರೂಪದಲ್ಲಿ ಕಳುಹಿಸಿದನು. ಕೃಷ್ಣಸರ್ಪ ಒಂದೇ ಆದರೂ, ಅದು ಹೇಗೆ ಬಹುಜನರನ್ನು ಅಂಜಿಸಬಲ್ಲದೊ, ಅದರಂತೆ ತಾನು ಏಕಾಂಗಿಯಾಗಿಯೇ ಕಾಲಯವನನ ಅಪಾರಸೇನೆಯನ್ನು ನಾಶಪಡಿಸಬಲ್ಲ ಮಹಾಸಮರ್ಥ ಎಂದು ಸೂಚಿಸಿದ.

ಘಟಂ ಪಿಪೀಲಿಕಾಗಣೈಃ ಪ್ರಪೂರ್ಯ ಯಾವನೋಽಸ್ಯ ಚ ।
ಬಹುತ್ವತೋ ವಿಜೇಷ್ಯ ಇತ್ಯಹಿಂ ಮೃತಂ ವ್ಯದರ್ಶಯತ್ ॥ ೧೨೨ ॥

ಅ: ''ನನ್ನ ಸೇನೆ ದೊಡ್ಡದಿರುವುದರಿಂದ ನಿನ್ನನ್ನು ಜಯಿಸಬಲ್ಲೆ'' ಎಂದು ಸೂಚಿಸಲು ಕಾಲಯವನ ಆ ಘಟದೊಳಗೆ ಇರುವೆಗಳ ರಾಶಿಗಳನ್ನು ತುಂಬಿ, ಅವುಗಳಿಂದ ಹಾವು ಸತ್ತಿದ್ದನ್ನು ತೋರಿಸಿದ.

ವಿ: ೧) ಕಾಲಯವನ ಕೃಷ್ಣ ಕಳುಹಿಸಿದ ಸರ್ಪವಿದ್ದ ಘಟದೊಳಗೆ ಅಸಂಖ್ಯ ಇರುವೆಗಳನ್ನು ತುಂಬಿಸಿದ. ಅವುಗಳಿಂದ ಕೃಷ್ಣಸರ್ಪ ಸತ್ತುಹೋಯಿತು. ಆ ಘಟವನ್ನು ಮರಳಿ ಕೃಷ್ಣನ ಬಳಿಗೆ

ಕಳುಹಿಸುತ್ತಾ ಕಾಲಯವನ ಕೋಟಿಗಟ್ಟಲೆ ಇರುವೆಗಳಿಂದಾಗಿ ಒಂದು ಕೃಷ್ಣಸರ್ಪ ಹತವಾದಂತೆ, ತನ್ನ ಮೂರುಕೋಟಿಸಂಖ್ಯೆಯ ಅಕ್ಷೋಹಿಣೀಬಲದಿಂದಾಗಿ ಒಬ್ಬ ಕೃಷ್ಣನನ್ನು ಕೊಲ್ಲಲು ತನಗೆ ಸಾಧ್ಯ ಎಂದು ಪ್ರತಿಸಂದೇಶವನ್ನು ಕಳುಹಿಸಿದ ಎಂದರ್ಥ. ಶ್ರೀಕೃಷ್ಣ ಹಾಗೆ ಅವನ ಬಳಿಗೆ ಘಟವನ್ನು ಕಳುಹಿಸಿದ್ದು ಕಾಲಯವನನಿಗೆ ಅಂತಹ ದುರ್ಬುದ್ಧಿಯನ್ನು ಹೆಚ್ಚಿಸಲೆಂದೇ ಎಂಬ ವಿಶೇಷಾಂಶ ಸತ್ಯಾಭಿನವೀಯದಲ್ಲಿದೆ.

೨) ಕೃಷ್ಣ ಈ ಮೂಲಕ ಮತ್ತೊಂದು ಬಗೆಯ ವಿಶೇಷವನ್ನೂ ಸೂಚಿಸಿದ ಎಂದು ವಾದಿರಾಜೀಯ ಹಾಗೂ ತಾಮ್ರಪರ್ಣೀಯಗಳಲ್ಲಿದೆ. ಅದರಂತೆ ಕಾಲಯವನನಿಗೆ ಕೃಷ್ಣನನ್ನು ಕೊಲ್ಲುವ ವರ ಶಿವನಿಂದ ಲಭಿಸಿತ್ತಲ್ಲವೆ! ಹೀಗೆ ಕೃಷ್ಣಸರ್ಪವನ್ನು ಕಾಲಯವನನಿಂದ ಕೊಲ್ಲಿಸುವ ಮೂಲಕ ಶಿವನ ವರ ಆ ಅರ್ಥದಲ್ಲಿ ಮಾತ್ರ ಸತ್ಯವಾಗುವಂತೆ ಮಾಡಿ, ಶಿವನ ಮಾತಿಗೆ ಒಂದು ಎಧವಾದ ಮನ್ನಣೆಯನ್ನೂ ತಂದುಕೊಟ್ಟ. ಅದನ್ನು ಅರಿಯಲಾಗದ ಕಾಲಯವನ ಅವಿವೇಕಿ ಎಂಬುದನ್ನೂ ಜಗತ್ತಿಗೆ ಸಾರಿದ ಎಂದು ಭಾವ. ಜರಾಸಂಧನಿಗೆ ನಾರದರು ಮಧುರೆ ಏಕಶತಯೋಜನ ದೂರ

---

೧. ಸ ಕೃಷ್ಣಪನ್ನಗಮಿತ್ಯತ್ರ ನ ಚ ವಾಚ್ಯಂ ಕೃಷ್ಣಪ್ರೇಷಿತಸರ್ಪಸ್ಯ ಕಾಲಯಾವನೇನ ಪಿಪೀಲಿಕಾಪುಂಜೈರ್ನಾಶಿತತ್ವಾತ್ ತದೀಯಮೇವ ಕೌಶಲಮಧಿಕಮಿತಿ। ಸರ್ವಜ್ಞೋಽಪಿ ಭಗವಾನ್ ಶ್ರೀಕೃಷ್ಣಃ ನೀತಿವ್ಯಾಜೇನ ಭುವಃ ಅಕೃಷ್ಣತಾಂ ಯಃ ಆನಯೇತ್ ತಂ ಸುತಂ ಸಮಾರ್ಜಯ ಇತಿ ಮುನಿಸಂಕಲ್ಪಸ್ಯ ಹರಿಪದೋಕ್ತಕೃಷ್ಣಾಭಾವದಂ ಸುತಂ ಯಾಹೀತಿ ಶಿವವರಸ್ಯ ಚಾನ್ಯಥೀಕರಣಾಯ ಕೃಷ್ಣಸರ್ಪಂ ಪ್ರೇಷಿತವಾನ್। ಹರ್ಯಭಾವಸ್ಯ ಮುನಿನಾ ಅಪ್ರಾರ್ಥಿತತ್ವಾತ್ ಹರಿಪದೇನಾಪಿ ಕೃಷ್ಣ ಏವೋಚ್ಯತೇ। ಅತ ಏವ ''ವಿಕೃಷ್ಣಕಂ ಕ್ಷಿತೇಸ್ತಲ''ಮಿತಿ ಸಾಲ್ವಸ್ಯಾಪ್ಯುಕ್ತಿಃ। ಏವಂ ಚ ಕೃಷ್ಣಪನ್ನಗಮಿತ್ಯುಕ್ತಕೃಷ್ಣಸರ್ಪಸ್ಯಾಪಿ ಕೃಷ್ಣಪದವಾಚ್ಯತ್ವಾತ್ ಕಾಲಯವನೇನ ಪಿಪೀಲಿಕಾಭಿಸ್ತನ್ನಾಶೇ ಕಾರಿತೇ ಸತಿ ಭುವಿ ಕಸ್ಯಚಿತ್ಕೃಷ್ಣಾಭಾವಸ್ಯ ಚ ತೇನೈವ ಸಂಪಾದಿತತ್ವಾತ್ ಮುನಿಸಂಕಲ್ಪಃ ಶಿವವರಶ್ಚ ತತ ಏವ ಸಂಪಾದಿತೋ ಭವೇತ್। ವರದ್ವಯಾಭಾವಾತ್। ತಸ್ಯ ಪರಾಭವಂ ಚ ಪ್ರಾಗೇವ ಸ್ವಲೀಲಾಕೌಶಲೇನ ಶ್ರೀಕೃಷ್ಣಃ ಸಾಧಿತವಾನ್। ಅತಃ ಶ್ರೀಕೃಷ್ಣಸ್ಯೈವ ನೀತಿರಸದೃಶೀ। ಅನ್ಯಥಾ ಕ್ವಾಪ್ಯದರ್ಶಿತನೀತಿಮತ್ತೈವ ಕುತೋ ದರ್ಶಯೇತ್। ತಸ್ಮಾತ್ಸರ್ವಜ್ಞ-ಚೂಡಾಮಣಿರ್ಭಗವಾನೇವೇತಿ ಯುಕ್ತಮುತ್ಪಶ್ಯಾಮಃ॥ – (ವಾ.)

ಯದ್ಯಪಿ ಕೃಷ್ಣಃ ಕೃಷ್ಣಸರ್ಪಪ್ರೇಷಣಾನಂತರಂ ಕೃಷ್ಣಸರ್ಪಃ ಪಿಪೀಲಿಕಾಗಣೈಃ ಮೃತೋ ಭವಿಷ್ಯತೀತಿ ಜಾನಾತಿ। ತಥಾಪಿ ಕಾಲಯವನಸ್ಯ ಯಥಾ ಪಿಪೀಲಿಕಾಗಣೈಃ ಕೃಷ್ಣಸರ್ಪೋ ಮೃತೋ ಜಾತಃ, ಏವಂ ಮದೀಯ ಬಹುಸೇನಯಾ ಕೃಷ್ಣೋ ಮೃತೋ ಭವಿಷ್ಯತೀತಿ ದುರ್ಬುದ್ಧ್ಯುತ್ಪತ್ತ್ಯಾಯುದ್ಧೇ ನಿಃಶಂಕಪ್ರವೃತ್ಯರ್ಥಂ ಕೃಷ್ಣಸರ್ಪಪ್ರೇಷಣಂ ಕೃತವಾನಿತಿ ದ್ರಷ್ಟವ್ಯಮ್। – (ಸ.)

ಅಹಿಂ ಮೃತಂ ವ್ಯದರ್ಶಯದಿತಿ। ನನ್ವತ್ರ ಯಾವನಸ್ಯ ಕೃಷ್ಣಾಪೇಕ್ಷಯಾ ಕೌಶಲ್ಯಂ ಪ್ರತೀಯತ ಇತಿ ಚೇದತ್ರ ಕೇಚಿದಾಹುಃ। ಅಕೃಷ್ಣತಾಂ ಯ ಆವಯೇತ್ ಸುತಂ ಸಮಾರ್ಜಯ ಇತಿ ಮುನಿಸಂಕಲ್ಪಸ್ಯ ತಥಾ ಶಿವವರಸ್ಯ ಚಾವೈಯರ್ಥ್ಯಾಯ ಕೃಷ್ಣಃ ಕೃಷ್ಣಸರ್ಪಂ ಪ್ರೇಷಿತವಾನ್। ಪಿಪೀಲಿಕಾಭಿಸ್ತನ್ನಾಶೇ ಭುವಿ ಕಸ್ಯಚಿತ್ ಕೃಷ್ಣಸ್ಯಾಭಾವಸ್ಯ ಸಿದ್ಧೇರಿತಿ। ಅನ್ಯೇ ತು ಯಾವನೋಕ್ತಂ ಬಹುತ್ವಂ ಜಯೇ ನ ಪ್ರಯೋಜಕಂ ಸರ್ಪಸ್ಯ ಸವ್ರಣಸ್ಯೈವ ಪಿಪೀಲಿಕಾಭಿರ್ಮರಣಮ್। ನ ತ್ವವ್ರಣಸ್ಯ। ಅಹಂ ತ್ವವ್ರಣಃ। ಅತ ಅವ್ರಣಸರ್ಪವದೇಕ ಏವಾಪ್ರಿಯಾನ್ ಹಂತುಂ ಕ್ಷಮ ಇತಿ ಭಾವೇನ ಕೃಷ್ಣೇನೈವ ಕಿಮತ್ರ ಸತ್ಯಮಿತ್ಯಾದಿನಾ ಸ್ವಯಮೇವೋಕ್ತೇರ್ನ ದೋಷ ಇತ್ಯಾಹುಃ। – (ತಾ.)

ಎಂದು ಹೇಳಿದ ಮಾತು ಸತ್ಯವಾಗಿದ್ದರೂ, ಅವನು ಅದನ್ನು ನೂರೊಂದುಯೋಜನ ಎಂದು ಅರ್ಥಮಾಡಿಕೊಳ್ಳದೆ, ಒಂದುನೂರುಯೋಜನ ಎಂದು ಅಪಾರ್ಥಮಾಡಿಕೊಂಡು, ಶಿವ ತನಗೆ ನೀಡಿದ್ದ ಅಮೋಘಗದೆಯನ್ನು ವ್ಯರ್ಥಮಾಡಿಕೊಂಡಂತೆ, ಇಲ್ಲಿ ಅವನ ಶಿಷ್ಯನಾದ ಕಾಲಯವನ ಶಿವನ ವರವನ್ನು ವ್ಯರ್ಥವಾಗಿಸಿಕೊಂಡ ಎಂದು ತಿಳಿಯಬಹುದು. ಅಲ್ಲಿ ವ್ಯರ್ಥವಾಗಿದ್ದು ಶಿವನ ಗದೆಯಾದರೆ, ಇಲ್ಲಿ ವ್ಯರ್ಥವಾಗಿದ್ದು ಶಿವನ ವರ ಎಂಬುದು ವಿಶೇಷ. ಈ ಎರಡು ಪ್ರಸಂಗಗಳಲ್ಲೂ ಕೃಷ್ಣನಿಗೆ ಯಾವುದೇ ವಿಧವಾದ ಬಾಧಕ ಸರ್ವಥಾ ಇಲ್ಲ ಎಂಬ ಪ್ರಧಾನತತ್ತ್ವವನ್ನು ಮರೆಯಬಾರದು. ಅಂತೂ ಶ್ರೀಹರಿಯು ಶಿವಾದಿದೇವತೆಗಳು ಅಯೋಗ್ಯರಿಗೆ ನೀಡುವ ವರಗಳನ್ನು ಮುಖ್ಯಾರ್ಥದಲ್ಲಿ ವ್ಯರ್ಥಗೊಳಿಸಿದರೂ, ಯಾವುದೋ ಒಂದು ಅರ್ಥದಲ್ಲಿ ಸರಿ ಎನ್ನಿಸಿ, ಅವರಿಗೆ ಗೌರವವನ್ನೂ, ಇವರಿಗೆ ಭ್ರಮೆಯನ್ನೂ ನೀಡುವನು ಎಂದು ತಿಳಿಯಬೇಕು.

ಕಿಮತ್ರ[೧] ಸತ್ಯಮಿತ್ಯಹಂ ಪ್ರದರ್ಶಯಿಷ್ಯ ಇತ್ಯಜಃ ।
ಉದೀರ್ಯ ದೂತಮಭ್ಯಯಾತ್ ಸ ಯಾವನಂ ಪ್ರಬಾಧಿತುಮ್ ॥ ೧೨೩ ॥

ಅ: ''ಇವುಗಳಲ್ಲಿ ನಿಜ ಯಾವುದೆಂಬುದನ್ನು ನಾನು ತೋರಿಸಿಕೊಡುವೆ'' ಎಂದು ನುಡಿದು ಕೃಷ್ಣ, ಆ ದೂತನಿಗೆ ಹೇಳಿ, ಕಾಲಯವನನನ್ನು ಪೀಡಿಸಲು ಹೊರಟ.

ವಿ: ೧) ಕೃಷ್ಣ ದೂತನಿಗೆ ಹೀಗೆ ಹೇಳಿದ ಎನ್ನುವ ಮೂಲಕ ಈ ಬಗೆಯ ವ್ಯವಹಾರ ನಡೆದದ್ದು ದೂತರ ಮೂಲಕ ಎಂಬುದನ್ನು ತಿಳಿಸಿರುವರು. ನಿದರ್ಶನಕ್ಕೆ ಪ್ರತಿನಿದರ್ಶನ ಕಾಲಯವನ ನೀಡಿದಾಗ, ಕೃಷ್ಣ ತಾನು ಅದರಲ್ಲಿ ''ಯಾರ ಸಂದೇಶ ಸತ್ಯವಾದುದು ಎಂಬುದನ್ನು ಸ್ಫುಟಪಡಿಸುವೆ'' ಎಂದು ನುಡಿದು, ಯುದ್ಧಕ್ಕೆ ತೆರಳಿದ ಎಂದರ್ಥ. ಈ ಮೂಲಕ ಕೃಷ್ಣ 'ನ ದೃಷ್ಟಾಂತಮಾತ್ರೇಣಾರ್ಥಸಿದ್ಧಿಃ' ಎಂಬ ತತ್ತ್ವವನ್ನೂ ಸೂಚಿಸಿದ. ಕೃಷ್ಣ ನೀಡಿದ ದೃಷ್ಟಾಂತ ಸಮುಚಿತದೃಷ್ಟಾಂತ. ಕಾಲಯವನನ ದೃಷ್ಟಾಂತ ಅಂತಹುದಲ್ಲ ಎಂದು ಮುಂದೆ ನಡೆದ ಘಟನೆಗಳಿಂದ ಸ್ಫುಟವಾಯಿತು ಎಂದು ಭಾವ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ವಾದಿರಾಜೀಯದಲ್ಲಿ ಕಾಣಬಹುದು.

---

೧. ಕಿಮತ್ರ ಸತ್ಯಮಿತ್ಯತ್ರ ಅತ್ರ= ಬಹುಭಿಃ ಪ್ರಬಲಸ್ಯಾಷ್ಯೇಕಸ್ಯ ಹನನಂ ಕರ್ತುಂ ಶಕ್ಯತ ಇತಿ ತವ ಕಾಲಯವನೇನ ಕೃತೇ ಪಿಪೀಲಿಕಾಪೂರಣಾಖ್ಯೇ ಕರ್ಮಣಿ ಬಲವತ್ಯೈಕೇನ ಬಹೂನಾಂ ಹನನಂ ಕರ್ತುಂ ಶಕ್ಯತ ಇತಿ ಮಯಾ ಕೃತೇ ಚ ಕರ್ಮಣಿ ಕಿಂ ಸತ್ಯಮಿತ್ಯೇತದಹಂ ಪ್ರದರ್ಶಯಿಷ್ಯೇ= ಕರ್ಮಣೈವ ಪ್ರದರ್ಶಯಿಷ್ಯೇ। ದೂತಮುದೀರ್ಯೇತಿ ಸಂಬಂಧಃ। ಬಲವತ್ಯೈಕೇನೈವ ಮಯಾ ಕಾಲಯವನಸ್ಯ ಬಹುತರತತ್ಸೇನಾಯಾಶ್ಚ ಹನನೇ ಕೃತೇ ಮತ್ಕೃತಮೇವ ಸತ್ಯಂ ಭವಿಷ್ಯತಿ ಬಹುಸೇನಾವತಾ ತವ ಕಾಲಯವನೇನ ಮಮ ಪರಾಭವಃ ಕಾರಿತಶ್ಚೇತ್ತತ್ಕೃತಮೇವ ಸತ್ಯಂ ಭವಿಷ್ಯತೀತಿ ಭಾವಃ। ಇದಂ ತು ನಿದರ್ಶನಂ ಮಯಾ ಪ್ರಯೋಜನಾಂತರಸಂಪಾದನಾರ್ಥಮೇವ ಕೃತಮ್। ಅತಸ್ತವ ದೃಷ್ಟಾಂತಮಾತ್ರೇಣ ನಾರ್ಥಸಿದ್ಧಿರಿತಿ ಭಾವಃ ॥ – (ವಾ.)

೨) ಈ ಕೃಷ್ಣಸರ್ಪಪ್ರಸಂಗದ ಸಮಗ್ರವಿವರಗಳು [೧]ಹರಿವಂಶದಲ್ಲಿ ಬಂದಿವೆ.

ಶ್ರೀಕೃಷ್ಣನಿಂದ ಕಾಲಯವನನ ಸೇನೆಯ ನಾಶ

ಸ ಬಾಹುನೈವ ಕೇಶವೋ ವಿಜಿತ್ಯ ಯಾವನಂ ಪ್ರಭುಃ ।
ನಿಹತ್ಯ ಸರ್ವಸೈನಿಕಾನ್ ಸ್ವಮಸ್ಯ ಯಾಪಯತ್ ಪುರೀಮ್ ॥ ೧೨೪ ॥

ಅ: ಸರ್ವಸಮರ್ಥನಾದ ಶ್ರೀಕೃಷ್ಣ ಕೇವಲ ತೋಳುಗಳಿಂದಲೇ ಕಾಲಯವನನನ್ನು ಸೋಲಿಸಿ, ಅವನ ಎಲ್ಲ ಸೈನಿಕರನ್ನೂ ಸಂಹರಿಸಿ, ಅವನ ಸಂಪತ್ತನ್ನು ದ್ವಾರಕೆಗೆ ಕಳುಹಿಸಿದ.

ವಿ: ೧) ಶ್ರೀಕೃಷ್ಣ ಬಾಹುಯುದ್ಧದಲ್ಲಿ ಕಾಲಯವನನ್ನು ಗೆದ್ದು ಅವನ ಮೂರುಕೋಟಿ ಸೈನ್ಯವನ್ನು ಬರಿಕೈಯಿಂದಲೇ ನಾಶ ಮಾಡಿದ.

೨) ರಾವಣನ ಎಂಭತ್ತು ಕೋಟಿಸೇನಾಧಿಪತಿಗಳಿದ್ದ ಸೈನ್ಯವನ್ನು ಹನುಮಂತ ಅಶೋಕ-ವನದಲ್ಲಿ ಕೇವಲ ಅಂಗೈಯಿಂದ ಹೊಡೆದು ಕೊಂದ ಪ್ರಸಂಗ ರಾಮಾಯಣದಲ್ಲಿ ಪ್ರಸಿದ್ಧ-ವಾದುದು. ಹರಿಭಕ್ತನೇ ಅಂತಹ ಅದ್ಭುತಪರಾಕ್ರಮವನ್ನು ಮೆರೆದಿರುವಾಗ, ಸಾಕ್ಷಾತ್ ಶ್ರೀಹರಿ ಇಂತಹ ಪರಾಕ್ರಮವನ್ನು ತೋರುವುದರಲ್ಲಿ ಏನು ಆಶ್ಚರ್ಯ ಎಂಬುದನ್ನು ಗಮನಿಸಬೇಕು.

೩) ಹಾಗೆ ಮಾಡಿದ ಹನುಮಂತ ಜೀವೋತ್ತಮನಾದ ವಾಯುವಾದರೆ, ಹೀಗೆ ಮಾಡಿದ ಶ್ರೀಕೃಷ್ಣ ಸರ್ವೋತ್ತಮನಾದ ಶ್ರೀಹರಿ. ಇಬ್ಬರದೂ ಶಸ್ತ್ರಾಸ್ತ್ರನಿರಪೇಕ್ಷವಾದ ಸ್ವಾಭಾವಿಕಬಲ ಎಂದು ತಾತ್ಪರ್ಯ. ಹರಿ ಸ್ವತಂತ್ರ; ವಾಯುದೇವರು ಹರಿಯ ಭಕ್ತಾಗ್ರೇಸರ ಎಂಬುದು ವಿಶೇಷ.

---

೧. ತತಃ ಕುಂಭೇ ಮಹಾಸರ್ಪಂ ಭಿನ್ನಾಂಜನಚಯೋಪಮಮ್॥
ಘೋರಮಾಶೀವಿಷಂ ಕೃಷ್ಣಂ ಕೃಷ್ಣಃ ಪ್ರಾಕ್ಷೇಪಯತ್ ತದಾ ।
ತತಸ್ತಂ ಮುದ್ರಯಿತ್ವಾ ತು ಸ್ವೇನ ದೂತೇನ ಹಾರಯತ್ ॥
ನಿದರ್ಶನಾರ್ಥಂ ಗೋವಿಂದೋ ಭೀಷಯಾಮಾಸ ತಂ ನೃಪಮ್ ।
ಸ ದೂತಃ ಕಾಲಯವನೇ ದರ್ಶಯಾಮಾಸ ತಂ ಘಟಮ್ ॥
ಕಾಲಸರ್ಪೋಪಮಃ ಕೃಷ್ಣ ಇತ್ಯುಕ್ತ್ವಾ ಭರತರ್ಷಭ ।
ತತ್ಕಾಲಯವನೋ ಬುದ್ಧ್ವಾ ತ್ರಾಸನಂ ಯಾದವೈಃ ಕೃತಮ್ ॥
ಪಿಪೀಲಿಕಾನಾಂ ಚಂಡಾನಾಂ ಪೂರಯಾಮಾಸ ತಂ ಘಟಮ್ ।
ಸ ಸರ್ಪೋ ಬಹುಭಿಸ್ತೀಕ್ಷ್ಣೈಃ ಸರ್ವತಸ್ತೈಃ ಪಿಪೀಲಿಕೈಃ ॥
ಭಕ್ಷ್ಯಮಾಣಃ ಕಿಲಾಂಗೇಷು ಭಸ್ಮೀಭೂತೋSಭವತ್ ತದಾ ।
ತಂ ಮುದ್ರಯಿತ್ವಾ ತು ಘಟಂ ತಥೈವ ಯವನಾಧಿಪಃ ।
ಪ್ರೇಷಯಾಮಾಸ ಕೃಷ್ಣಾಯ ಬಾಹುಲ್ಯಮುಪವರ್ಣಯನ್ ॥ – ಹರಿವಂಶ (೨/೫೭/೩೨-೩೭)

ಮಹಾಸ್ತ್ರಶಸ್ತ್ರಸಂಚಯಾನ್ ಸೃಜಂತಮಾಶು ಯಾವನಮ್।
ನ್ಯಪಾತಯದ್ರಥೋತ್ತಮಾತ್ ತಲೇನ ಕೇಶವೋಽರಿಹಾ ॥ ೧೨೫ ॥

ಅ: ದೊಡ್ಡ ದೊಡ್ಡ ಅಸ್ತ್ರಶಸ್ತ್ರಗಳ ಗುಂಪನ್ನು ಪ್ರಯೋಗಿಸತೊಡಗಿದ ಕಾಲಯವನನನ್ನು ಶತ್ರುನಾಶಕನಾದ ಕೃಷ್ಣ ತ್ವರೆಯಿಂದ ತನ್ನ ಅಂಗೈಯಿಂದ ಹೊಡೆದು, ಅವನನ್ನು ಉತ್ತಮರಥದಿಂದ ಕೆಳಕ್ಕೆ ಬೀಳಿಸಿದ.

ವಿ: ಬ್ರಹ್ಮರುದ್ರಾದಿಪ್ರವರ್ತಕನಾದ ಕೃಷ್ಣನಿಗೆ ಕಾಲಯವನನ ಅಸ್ತ್ರಶಸ್ತ್ರಗಳಿಂದ ಏನಾದೀತು ಎಂಬುದನ್ನು 'ಕೇಶವಃ' ಎಂಬ ಪದದಿಂದ ಸೂಚಿಸಿರುವರು ಎಂದು ತಿಳಿಯಬೇಕು.

ವಿವಾಹನಂ ನಿರಾಯುಧಂ ವಿಧಾಯ ಬಾಹುನಾ ಕ್ಷಣಾತ್।
ವಿಮೂರ್ಛಿತಂ ನ ಚಾಹನತ್ [೧]ಸುರಾರ್ಥಿತಂ ಸ್ಮರನ್ ಹರಿಃ ॥ ೧೨೬ ॥

ಅ: ಕ್ಷಣಮಾತ್ರದಲ್ಲಿ ಶ್ರೀಕೃಷ್ಣ ಕಾಲಯವನನನ್ನು ಬಾಹುಬಲದಿಂದಲೇ ವಾಹನ ಹಾಗೂ ಆಯುಧಗಳಿಲ್ಲದವನಾಗಿ ಗಾಢಮೂರ್ಛೆಗೆ ಗುರಿಯಾಗಿಸಿದ. ದೇವತೆಗಳ ಪ್ರಾರ್ಥನೆಯನ್ನು ಸ್ಮರಿಸಿ, ಅವನನ್ನು ಕೊಲ್ಲದೇ ಬಿಟ್ಟ.

ವಿ: ಶ್ರೀಕೃಷ್ಣ ಕಾಲಯವನನ ರಥ ಹಾಗೂ ಆಯುಧಗಳನ್ನು ನಾಶಮಾಡಿ, ಪ್ರಜ್ಞೆ ತಪ್ಪುವಂತೆ ಹೊಡೆದರೂ, ಕೊಲ್ಲಲಿಲ್ಲ. ಅದಕ್ಕೆ ಕಾರಣ ದೇವತೆಗಳ ಪ್ರಾರ್ಥನೆ. ಅದರ ವಿವರಗಳನ್ನು ಮುಂದಿನ ಶ್ಲೋಕಗಳಲ್ಲಿ ನೀಡಿರುವರು.

ಮುಚುಕುಂದನಿಗೆ ಶ್ರೀಕೃಷ್ಣಾನುಗ್ರಹ

ಪುರಾ ಹಿ ಯೌವನಾಶ್ವಜೇ ವರಪ್ರದಾಃ ಸುರೇಶ್ವರಾಃ।
ಯಯಾಚಿರೇ ಜನಾರ್ದನಂ ವರಂ ವರಪ್ರದೇಶ್ವರಮ್ ॥ ೧೨೭ ॥

ಅ: ಮಾಂಧಾತರಾಜನ ಮಗನಾದ ಮುಚುಕುಂದನಿಗೆ ಹಿಂದೆ ವರ ನೀಡಿದ ದೇವತೆಗಳು ಬಳಿಕ ವರದಾಯಕರಿಗೆಲ್ಲ ಒಡೆಯನಾದ ಹರಿಯಲ್ಲಿ ವರವನ್ನು ಬೇಡಿಕೊಂಡಿದ್ದರು.

ವಿ: ೧) ಯುವನಾಶ್ವ ಎಂಬ ಇಕ್ಷ್ವಾಕು ವಂಶದ ಅರಸನ ಮಗ ಮಾಂಧಾತರಾಜ. ಅದಕ್ಕೆ ಅವನಿಗೆ ಯೌವನಾಶ್ವ ಎಂದು ಹೆಸರು. 'ಯೌವನಾಶ್ವಜ' ಎಂದರೆ ಆ ಮಾಂಧಾತನ ಮಗನಾದ ಮುಚುಕುಂದ ಎಂದರ್ಥ.

---

೧. ಪುರಾऽರ್ಥಿತಮಿತಿ ವಾ ಪಾಠಃ। – (ಜ., ವ.)

೨) ಹಿಂದೊಮ್ಮೆ ಶ್ರೀಹರಿಯ ವರಬಲದಿಂದ ಅಸುರರ ಮೇಲೆ ನಡೆದ ಯುದ್ಧದಲ್ಲಿ ಮುಚುಕುಂದ ಅಸುರರ ಮೇಲೆ ವಿಜಯ ಸಾಧಿಸಿದ. ದೇವತೆಗಳು ''ವಿಷ್ಣು ಮಾತ್ರ ಕೊಡಬಲ್ಲ ಮೋಕ್ಷದ ಹೊರತು ಬೇರೆ ಯಾವುದೇ ವರವನ್ನು ಕೇಳಿಕೊ'' ಎಂದು ಅವನಿಗೆ ನುಡಿದರು. ಆಗ ಮುಚುಕುಂದ ''ಹಾಗಿದ್ದರೆ ನನಗೆ ಗಾಢನಿದ್ರೆಯನ್ನು ಕೊಡಿ. ನಿದ್ರೆಭಂಗ ಮಾಡಿದವನು ನಾನು ನೋಡುತ್ತಲೇ ಬೂದಿಯಾಗುವಂತೆಯೂ ಆಗಲಿ'' ಎಂದು ವರ ಕೇಳಿದ.

೩) ಅವನು ಕೇಳಿದ ವರವನ್ನು ನೀಡಿದರೂ, ತುಂಬಾ ಸಾತ್ತ್ವಿಕನಾದ ಅವನು ಪ್ರಾರಬ್ಧವಶಾತ್ ಕೇಳಿದ ಅಂತಹ ಕೆಟ್ಟವರವೂ ಸಹ ಅವನ ಕಲ್ಯಾಣಕ್ಕೆ ಕಾರಣವಾಗುವಂತೆ ಅನುಗ್ರಹಿಸಬೇಕು ಎಂದು ಶ್ರೀಹರಿಯನ್ನು ಪ್ರಾರ್ಥಿಸಿಕೊಂಡಿದ್ದರು. ಅವನು ಅವರಿಗೆ ಹಾಗೆ ಅನುಗ್ರಹಿಸುವ ವಚನ ನೀಡಿದ್ದ. ಅದನ್ನು ಈಗ ಸ್ಮರಿಸಿಕೊಂಡ ಎಂದರ್ಥ. ಮುಚುಕುಂದನ ವಿವರಗಳು ಶ್ರೀಮದ್ಭಾಗವತಪುರಾಣದಲ್ಲಿ ಬಂದಿವೆ (೧೦/೫೧/೧೪–೨೨).

ಅನರ್ಥಕೋ ವರೋಽಮುನಾ ವೃತೋಽಪಿ ಸಾರ್ಥಕೋ ಭವೇತ್ ।
ಅರಿಂ ಭವಿಷ್ಯಯಾವನಂ ದಹತ್ವಯಂ ತವೇಶ್ವರ ॥ ೧೨೮ ॥

ಅ: ''ಸ್ವಾಮಿ! ಈ ಮುಚುಕುಂದ ಅನರ್ಥಕರವಾದ ವರವನ್ನು ಬೇಡಿರುವನು. ಆದರೂ ಅದು ಸಾರ್ಥಕವಾಗಬೇಕು. ಮುಂದೆ ಹುಟ್ಟುವ ನಿನ್ನ ಶತ್ರುವಾದ ಕಾಲಯವನನನ್ನು ಇವನು ಸುಟ್ಟುಹಾಕುವಂತಾಗಲಿ''.

ವಿ: ಮುಚುಕುಂದ ಕೇಳಿದ ವರ ದೀರ್ಘನಿದ್ರೆ, ಅದನ್ನು ಭಂಗಪಡಿಸುವವನಿಗೆ ವಿನಾಶ. ಇದು ಸರ್ವಥಾ ಅನರ್ಥಕರವೇ ಸರಿ. ಅಂತಹ ವರ ಕೇಳಿದ್ದ ಕುಂಭಕರ್ಣ ಸರ್ವನಾಶ ಹೊಂದಿದ್ದು ಇತಿಹಾಸ. ಅವನು ದೀರ್ಘನಿದ್ರೆಯನ್ನೆಷ್ಟೇ ಕೇಳಿದ್ದರೆ, ಇವನು ಅದರೊಂದಿಗೆ ನಿದ್ರಾಭಂಗ ಮಾಡುವವರ ವಿನಾಶವನ್ನೂ ಕೇಳಿದ್ದ. ಎಂದರೆ ಇದು ಅದಕ್ಕಿಂತಲೂ ಅನರ್ಥಕರವಾದ ವರ. ಇಂತಹ ಅನರ್ಥಕರವಾದ ವರವೂ ಸಹ ಇವನ ಪಾಲಿಗೆ ಸಾರ್ಥಕವಾದ ವರವೇ ಆಗಬೇಕು. ಎಂದರೆ ಒಂದರ್ಥದಲ್ಲಿ ಇವನು ಬೇಡಿದ್ದು ಶಾಪವೇ ಆಗಿದೆ; ಅದು ನಿಜವಾದ ವರವೇ ಆಗಬೇಕು. ಹಾಗಾಗಲು ಆ ವರದಿಂದ ಕಾಲಯವನನಂತಹ ಮಹಾಪಾಪಿ ಸುಟ್ಟು ಬೂದಿಯಾಗು–ವಂತಾಗಬೇಕು. ಕಾಲಯವನ ಹರಿದ್ವೇಷಿಯಾದ್ದರಿಂದ ಅವನ ಸಂಹಾರ ಹರಿಸೇವೆಯಾಗಿ ಅವನ ಉದ್ಧಾರಕ್ಕೆ ಕಾರಣವಾಗುವುದು ಎಂಬುದು ದೇವತೆಗಳ ಪ್ರಾರ್ಥನೆಯ ಆಶಯ.

ತಥಾಽಸ್ತ್ವಿತಿ ಪ್ರಭಾಷಿತಂ ಸ್ವವಾಕ್ಯಮೇವ ಕೇಶವಃ ।
ಋತಂ ವಿಧಾತುಮಭ್ಯಯಾತ್ ಸ ಯೌವನಾಶ್ವಜಾಂತಿಕಮ್ ॥ ೧೨೯ ॥

ಅ: ''ಹಾಗೆಯೇ ಆಗಲಿ'' ಎಂದು ನುಡಿದ ತನ್ನ ಮಾತನ್ನೇ ನಿಜ ಮಾಡಲೆಂದು, ಶ್ರೀಕೃಷ್ಣ ಆ ಮುಚುಕುಂದನ ಬಳಿಗೆ ತೆರಳಿದ.

ಸಸಂಜ್ಞಕೋಽಥ ಯಾವನೋ ಧರಾತಲಾತ್ ಸಮುತ್ಥಿತಃ ।
ನಿಪಾತ್ಯ ಯಾಂತಮೀಶ್ವರಂ ಸ ಪೃಷ್ಠತೋಽನ್ವಯಾತ್ ಕ್ರುಧಾ ॥ ೧೩೦ ॥

ಅ: ಪ್ರಜ್ಞೆ ಮರಳಿದ ಕಾಲಯವನ ಭೂಮಿಯಿಂದ ಮೇಲೆದ್ದು, ತನ್ನನ್ನು ಕೆಡವಿಹಾಕಿ, ಓಡಿಹೋಗುತ್ತಿದ್ದ ಶ್ರೀಕೃಷ್ಣನನ್ನು ಕೋಪದಿಂದ ಬೆನ್ನಟ್ಟಿ ಹೊರಟ.

ವಿ: ಹೀಗೆ ದೇವತೆಗಳಿಗೆ ನೀಡಿದ್ದ ವಚನವನ್ನು ಸತ್ಯಮಾಡಲೆಂದು ಕೃಷ್ಣ ಕಾಲಯವನನನ್ನು ತಾನು ಸ್ವತಃ ಸಂಹರಿಸದೆ, ಮುಚುಕುಂದನ ಮೂಲಕ ಸಂಹಾರ ಮಾಡಿಸಲೆಂದು, ಮಧುರೆಯಿಂದ ಆ ಮುಚುಕುಂದ ರಾಜ ಮಲಗಿದ್ದ ಬದರೀಕ್ಷೇತ್ರದ ಬಳಿಯ ಗುಹೆಯೊಂದರತ್ತ ಓಡತೊಡಗಿದನು ಎಂದರ್ಥ. ಕೃಷ್ಣನದು ಭಕ್ತೋದ್ಧಾರದ ಕಾತರ; ಅದಕ್ಕೆಂದೇ ಮುಚುಕುಂದನೆಡೆಗೆ ಅಂತಹ ಅದ್ಭುತಓಟ. ಆದರೆ ಕಾಲಯವನ ಅದನ್ನು ಶಿವನ ವರಕ್ಕೆ ಅಂಜಿದ ಕೃಷ್ಣ ಪಲಾಯನ ಮಾಡುತ್ತಿರುವನೆಂದು. ಇಂತಹ ಭ್ರಮೆಯಲ್ಲೇ ಅಸುರರ ವಿನಾಶದ ಮೂಲ ಅಡಗಿದೆ. ಕೃಷ್ಣ ಹಾಗೆ ಮಧುರೆಯಿಂದ ಬದರಿಗೆ ಸಾಗಿದ. ಮಧುರೆ ಭರತಖಂಡದ ಸಪ್ತಮಹಾಕ್ಷೇತ್ರಗಳಲ್ಲೊಂದು. ಬದರಿಯಂತೂ ಕ್ಷೇತ್ರರಾಜ. ಅಲ್ಲಿಗೆ ಕಾಲಯವನ ಮಾಡಿದ್ದು ಕೃಷ್ಣನೊಂದಿಗೆ ಪಾದಯಾತ್ರೆ. ಇಷ್ಟಾಗಿಯೂ ಅವನಿಗೆ ಕಾದಿದ್ದು ಅಮೃತವಾದ ಮೋಕ್ಷವಲ್ಲ; ಭಯಂಕರ ಮೃತ್ಯು. ಅದಕ್ಕೆ ಅವನ ಅಸದುಪಾಸನೆ ಕಾರಣವಾಯಿತು ಎಂದು ತಿಳಿಯಬೇಕು. ಶಾಸ್ತ್ರವಿಹಿತವಲ್ಲದ ಕ್ರಮದಲ್ಲಿ ತೀರ್ಥಯಾತ್ರೆ ಮಾಡುವುದು ಈ ಕಾಲಯವನನ ಓಟದಂತೆ ಅನರ್ಥಕರ ಎಂದರ್ಥ. ತನ್ನ ಹಿಂದೆ ಓಡಿಬಂದ ಯಶೋದೆಗೆ ಸಿಕ್ಕ ಕೃಷ್ಣ ಇಲ್ಲಿ ಕಾಲಯವನನಿಗೆ ಸಿಕ್ಕಲಿಲ್ಲ. ಯಶೋದೆ ಭಕ್ತಳಾಗಿದ್ದುದು ಅದಕ್ಕೆ ಕಾರಣವಾದರೆ, ಕಾಲಯವನ ದ್ವೇಷಿಯಾಗಿದ್ದುದು ಇದಕ್ಕೆ ಕಾರಣವಾಗಿತ್ತು.

ಹರಿರ್ಗುಹಾಂ ನೃಪಸ್ಯ ತು ಪ್ರವಿಶ್ಯ ಸಂವ್ಯವಸ್ಥಿತಃ ।
ಸ ಯಾವನಃ ಪದಾಽಹನನ್ನೃಪಂ ಸ ತಂ ದದರ್ಶ ಹ ॥ ೧೩೧ ॥

ಅ: ಶ್ರೀಕೃಷ್ಣನು ಮುಚುಕುಂದರಾಜನಿದ್ದ ಗುಹೆಯನ್ನು ಹೊಕ್ಕು, ಅದೃಶ್ಯನಾಗಿ ನಿಂತ. ಕಾಲಯವನ ಮುಚುಕುಂದನನ್ನು ಕಾಲಿಂದ ಒದ್ದ; ಮುಚುಕುಂದ ಕಾಲಯವನನನ್ನು ಕಣ್ತೆರೆದು ನೋಡಿದ.

ವಿ: ೧) ಕೃಷ್ಣ ಆ ಮುಚುಕುಂದನಿದ್ದ ಗುಹೆಗೆ ತೆರಳಿ, ಮಲಗಿದ್ದ ಅವನ ತಲೆಯ ಬಳಿ ಅದೃಶ್ಯನಾಗಿ ನಿಂತ ಎಂದು ಹರಿವಂಶದಲ್ಲಿದೆ :

ಶಿರಸ್ಥಾನೇ ತು ರಾಜರ್ಷೆರ್ಮುಚುಕುಂದಸ್ಯ ಕೇಶವಃ ।
ಸಂದರ್ಶನಪಥಂ ತ್ಯಕ್ತ್ವಾ ತಸ್ಥೌ ಬುದ್ಧಿಮತಾಂ ವರಃ ॥ – (೨/೫೭/೫೦)

೨) ಹಿಂದೆಯೇ ಬಂದ ಕಾಲಯವನ ಮಲಗಿದ್ದ ಮುಚುಕುಂದನನ್ನು ಮುಕುಂದ ಎಂದು ತಿಳಿದು ತನ್ನ ಕಾಲಿನಿಂದ ಒದ್ದ. ಅದರಿಂದ ಎಚ್ಚೆತ್ತ ಮುಚುಕುಂದ ಕ್ರೋಧದಿಂದ ಅವವನ್ನು ನೋಡಿದ.

೩) ಬದರಿಯಿಂದ ಮುಂದೆ ಸುಮಾರು ಇಪ್ಪತ್ತು ಕಿ.ಮೀ. ಗಳ ದೂರದಲ್ಲಿ ಮುಚುಕುಂದ ಮಲಗಿದ್ದನೆಂದು ಹೇಳಲಾಗುವ ಗುಹೆಯಿದೆ. ಅದು ಇಂದೂ ಮುಚುಕುಂದಗುಹೆ ಎಂದೇ ಪ್ರಸಿದ್ಧ.

೪) ವೈಕುಂಠದಲ್ಲಿ ಮಲಗಿದ್ದ ಮುಕುಂದನನ್ನು ಭೃಗುಮುನಿ ಪಾದದಿಂದ ಒದ್ದಿದ್ದರೆ, ಇಲ್ಲಿ ಮುಚುಕುಂದನನ್ನು ಕಾಲಯವನ ಪಾದದಿಂದ ಒದ್ದ ಎಂಬುದು ವಿಶೇಷ.

ಕಾಲಯವನ ಬೂದಿಯಾದ

ಸ ತಸ್ಯ ದೃಷ್ಟಿಮಾತ್ರತೋ ಬಭೂವ ಭಸ್ಮಸಾತ್ ಕ್ಷಣಾತ್ ।
ಸ ಏವ ವಿಷ್ಣುರವ್ಯಯೋ ದದಾಹ ತಂ ಹಿ ವಹ್ನಿವತ್ ॥ ೧೩೨ ॥

ಅ: ಅವನ ನೋಟಮಾತ್ರದಿಂದಲೇ ಕಾಲಯವನ ಆ ಕ್ಷಣದಲ್ಲೇ ಬೂದಿಯಾದ. ಅವ್ಯಯನಾದ ವಿಷ್ಣುವೇ ಅವನನ್ನು ಹಾಗೆ ಬೆಂಕಿಯಂತೆ ಸುಟ್ಟುಹಾಕಿದ.

ವಿ: ೧) ಮುಚುಕುಂದ ನೋಟಕ್ಕೆ ದೇವತೆಗಳು ನೀಡಿದ್ದ ವರದಂತೆ ಕಾಲಯವನ ಭಸ್ಮವಾದ. ಸ್ವತಃ ಕೃಷ್ಣ ಅವನನ್ನು ಬೆಂಕಿಯಾಗಿ ಸುಟ್ಟುಹಾಕಿದ.

೨) ತನ್ನನ್ನು ಅಜ್ಞಾನದಿಂದ ಒದ್ದದ್ದಕ್ಕಾಗಿ ಭೃಗುಮುನಿಯನ್ನು ಕೃಷ್ಣ ಉದ್ಧರಿಸಿದ್ದ. ಆದರೆ ಕಾಲಯವನನನ್ನು ಸುಟ್ಟುಹಾಕಿದ. ಶ್ರೀಹರಿ ತನ್ನ ಭಕ್ತರನ್ನು ಅವಮಾನಿಸುವವರನ್ನು ಸರ್ವಥಾ ಕ್ಷಮಿಸುವುದಿಲ್ಲ; ಬದಲಾಗಿ ಅವರನ್ನು ಸುಟ್ಟು ಬೂದಿ ಮಾಡುವನು ಎಂಬುದಕ್ಕೆ ಇದೊಂದು ಅಪೂರ್ವನಿದರ್ಶನ – 'ತದ್ಭಕ್ತ ದ್ವೇಷ ಏವ ಚ', 'ಛಿಂದ್ಯಾಂ ಸ್ವಬಾಹುಮಪಿ ವಃ ಪ್ರತಿಕೂಲವೃತ್ತಿಂ' (ಭಾಗವತ).

೩) ಹನುಮಂತ ತನ್ನ ಬಾಲದ ಬೆಂಕಿಯಿಂದ ಹರಿದ್ರೋಹಿಯಾದ ರಾವಣನ ಲಂಕೆಯನ್ನು ಸುಟ್ಟುಹಾಕಿದಂತೆ, ಕೃಷ್ಣ ತಾನೇ ಬೆಂಕಿಯಂತೆ ತನ್ನ ಭಕ್ತದ್ರೋಹಿಯಾದ ಕಾಲಯವನನನ್ನು ಸುಟ್ಟುಹಾಕಿದ ಎಂದು ತಿಳಿಯಬೇಕು.

ವರಾಚ್ಛಿವಸ್ಯ ದೈವತೈರವಧ್ಯದಾನವಾನ್ ಪುರಾ ।
ಹರೇರ್ವರಾನ್ನಿಹತ್ಯ ಸ ಪ್ರಪೇದ ಆಶ್ವಿಮಂ ವರಮ್ ॥ ೧೩೩ ॥

ಅ: ಶಿವನ ವರದಿಂದಾಗಿ ದೇವತೆಗಳಿಂದಲೂ ಅವಧ್ಯರಾಗಿದ್ದ ದಾನವರನ್ನು ಹಿಂದೆ ಶ್ರೀಹರಿಯ ವರದಿಂದಾಗಿ ಸಂಹರಿಸಿ, ಈ ಮುಚುಕುಂದ ಈ ರೀತಿ ವರ ಪಡೆದುಕೊಂಡಿದ್ದ.

ವಿ: ಮುಚುಕುಂದ ವರ ಪಡೆದ [೧]ಹಿನ್ನೆಲೆಯನ್ನು ಇಲ್ಲಿ ನೀಡಿರುವರು.

ಸುದೀರ್ಘಸುಪ್ತಿಮಾತ್ಮನಃ ಪ್ರಸುಪ್ತಿಭಂಗಕೃತ್ಕ್ಷಯಮ್ ।
ಸ್ವದೃಷ್ಟಿಮಾತ್ರತಸ್ತತೋ ಹತಃ ಸ ಯಾವನಸ್ತದಾ ॥ ೧೩೪ ॥

ಅ: ತನಗೆ ಸುದೀರ್ಘವಾದ ನಿದ್ರೆ ಹಾಗೂ ಆ ನಿದ್ರೆಗೆ ಭಂಗ ತರುವವನಿಗೆ ತನ್ನ ನೋಟದಿಂದಲೇ ವಿನಾಶ; ಅದರಿಂದಾಗಿ ಕಾಲಯವನ ಆಗ ನಾಶ ಹೊಂದಿದ.

ಮುಚುಕುಂದನಿಗೆ ಸದ್ಗತಿ

ಅತಶ್ಚ ಪುಣ್ಯಮಾಪ್ತವಾನ್ ಸುರಪ್ರಸಾದತೋಽಕ್ಷಯಮ್ ।
ಸ ಯೌವನಾಶ್ವಜೋ[೨] ನೃಪೋ ನ ದೇವತೋಷಣಂ ವೃಥಾ ॥ ೧೩೫ ॥

---

೧. ಮಾಂಧಾತುಸ್ತು ಸುತೋ ರಾಜಾ ಮುಚುಕುಂದೋ ಮಹಾಯಶಾಃ ।
ಪುರಾ ದೇವಾಸುರೇ ಯುದ್ಧೇ ಕೃತಕರ್ಮಾ ಮಹಾಬಲಃ ॥
ವರೇಣ ಚ್ಛಂದಿತೋ ದೇವೈರ್ನಿದ್ರಾಮೇವ ಗೃಹೀತವಾನ್ ।
ಶ್ರಾಂತಸ್ಯ ತಸ್ಯ ವಾಗೇವಂ ತದಾ ಪ್ರಾದುರಭೂತ್ ಕಿಲ ॥
ಪ್ರಸುಪ್ತಂ ಬೋಧಯೇದ್ಯೋ ಮಾಂ ತಂ ದಹೇಯಮಹಂ ಸುರಾಃ ।
ಚಕ್ಷುಷಾ ಕ್ರೋಧದೀಪ್ತೇನ ಏವಮಾಹ ಪುನಃ ಪುನಃ ॥ – ಹರಿವಂಶ ೨/೫೭/೪೩-೪೫)

ಸ ಇಕ್ಷ್ವಾಕುಕುಲೇ ಜಾತೋ ಮಾಂಧಾತೃತನಯೋ ಮಹಾನ್ ।
ಮುಚುಕುಂದ ಇತಿ ಖ್ಯಾತೋ ಬ್ರಹ್ಮಣ್ಯಃ ಸತ್ಯಸಂಗರಃ ॥
ಸ ಯಾಚಿತಃ ಸುರಗಣೈರಿಂದ್ರಾದ್ಯೈರಾತ್ಮರಕ್ಷಣೇ ।
ಅಸುರೇಭ್ಯಃ ಪರಿತ್ರಸ್ತೈಸ್ತದ್ರಕ್ಷಾಂ ಸೋಽಕರೋಚ್ಚಿರಮ್ ॥.....
ವರಂ ವೃಣೀಷ್ವ ಭದ್ರಂ ತೇ ಋತೇ ಕೈವಲ್ಯಮದ್ಯ ನಃ ।
ಏಕ ಏವೇಶ್ವರಸ್ತಸ್ಯ ಭಗವಾನ್ ವಿಷ್ಣುರವ್ಯಯಃ ॥
ಏವಮುಕ್ತಃ ಸ ವೈ ದೇವಾನಭವಂದ್ಯ ಮಹಾಯಶಾಃ ।
ಅಶಯಿಷ್ಟ ಗುಹಾವಿಷ್ಟೋ ನಿದ್ರಯಾ ದೇವದತ್ತಯಾ ॥
ಸ್ವಾಪಂ ಯಾತಂ ಯಸ್ತು ಮಧ್ಯೇ ಬೋಧಯೇತ್ತ್ವಾಮಚೇತನಃ ।
ಸ ತ್ವಯಾ ದೃಷ್ಟಮಾತ್ರಸ್ತು ಭಸ್ಮೀಭವತು ತತ್ಕ್ಷಣಾತ್ ॥ – ಭಾಗವತ (೧೦/೫೧/೧೪,೧೫,೨೦-೨೨)

೨. ಸ ಯೌವನಾಶ್ವಜ ಇತ್ಯತ್ರ ಯುವನಾಶ್ವಸ್ಯಾಪತ್ಯಂ ಪುಮಾನ್ ಯೌವನಾಶ್ವಃ= ಮಾಂಧಾತಾ ತಸ್ಮಾಜ್ಜಾತೋ ಯೌವನಾಶ್ವಜೋ= ಮುಚುಕುಂದಃ। ನ ದೇವತೋಷಣಂ ವೃಥೇತ್ಯತ್ರ ದೇವಾನಾಂ ತಾರತಮ್ಯಂ ಜ್ಞಾತ್ವಾ ಯತ್ತೋಷಣಂ ತದೇವ ದೇವತೋಷಣಮ್। ಹರಣ್ಯಕಶಿಪುರಾವಣಾದೀನಾಂ ಬ್ರಹ್ಮಶಿವಾದಿದೇವತೋಷಣಸ್ಯ ವೈಯರ್ಥ್ಯದರ್ಶನಾತ್ ಇತ್ಥಮೇವಾರ್ಥೋ ವಕ್ತವ್ಯಃ ॥ – (ವಾ.)

ಅ: ಆ ದೇವತಾನುಗ್ರಹದಿಂದಾಗಿಯೇ ಮುಚುಕುಂದರಾಜ ಅಕ್ಷಯಪುಣ್ಯವನ್ನು ಪಡೆದಿದ್ದ. ದೇವತಾನುಗ್ರಹ ಸರ್ವಥಾ ವ್ಯರ್ಥವಾಗದು.

ವಿ: ದೇವತೆಗಳನ್ನು ತಾರತಮ್ಯಕ್ರಮದಲ್ಲಿ ಆರಾಧಿಸಿದ ಪುಣ್ಯ ಎಂದೂ ವ್ಯರ್ಥವಾಗದು ಎಂದರ್ಥ. ಬ್ರಹ್ಮಾದಿದೇವತೆಗಳನ್ನು ಹಿರಣ್ಯಕಶಿಪು ಮೊದಲಾದವರು ಆರಾಧಿಸಿದ್ದರೂ, ಅದು ತಾರತಮ್ಯಕ್ರಮಕ್ಕೆ ಅನನುಗುಣವಾದ್ದರಿಂದ ಅವರು ಉದ್ಧಾರ ಕಾಣಲಿಲ್ಲ. ಕುಂಭಕರ್ಣ ಬ್ರಹ್ಮದೇವರಿಂದ ನಿದ್ರೆಯ ವರ ಪಡೆದು ವಿನಾಶ ಹೊಂದಲು ಇಂತಹ ಅಸದುಪಾಸನೆಯೇ ಕಾರಣ. ಆದರೆ ಮುಚುಕುಂದನ ನಿದ್ರೆಯ ವರ ಸದುಪಾಸನೆಯ ಹಿನ್ನೆಲೆಯಲ್ಲಿ ಲಭಿಸಿದ್ದರಿಂದ ಅದು ಸಾರ್ಥಕವಾಯಿತೆಂದು ತಿಳಿಯಬೇಕು.

ತತೋ ಹರಿಂ ನಿರೀಕ್ಷ್ಯ ಸ ಸ್ತುತಿಂ ವಿಧಾಯ ಚೋತ್ತಮಾಮ್ ।
ಹರೇರನುಜ್ಞಯಾ ತಪಶ್ಚಕ್ರಾರ ಮುಕ್ತಿಮಾಪ ಚ ॥೧೩೬॥

ಅ: ಅನಂತರ ಶ್ರೀಕೃಷ್ಣನನ್ನು ಕಂಡು ಮುಚುಕುಂದರಾಜ ಉತ್ತಮವಾದ ಸ್ತೋತ್ರವನ್ನು ಮಾಡಿ, ಅವನ ಅನುಜ್ಞೆಯಿಂದ ತಪಸ್ಸನ್ನು ಮಾಡಿದ; ಮುಂದೆ ಮುಕ್ತಿಯನ್ನೂ ಪಡೆದ.

ವಿ: ಮುಚುಕುಂದರಾಜ ಮಾಡಿದ ಸ್ತುತಿ ಉತ್ತಮ ಎನ್ನುವ ಮೂಲಕ ಶ್ರೀಮದಾಚಾರ್ಯರು ಭಾಗವತದಲ್ಲಿ ಬಂದಿರುವ ಆ ಸ್ತೋತ್ರದ ಹಿರಿಮೆಯನ್ನು ಸಾರಿರುವರು ಎಂದು ತಿಳಿಯಬೇಕು. ಶ್ರೀಹರಿ ಅವನ ಚರಮದೇಹ ಬ್ರಾಹ್ಮಣದೇಹವಾದ್ದರಿಂದ ''ಮುಂದೆ ಬ್ರಾಹ್ಮಣನಾಗಿ ಜನಿಸಿ, ಅನಂತರ ಮುಕ್ತಿ ಪಡೆ'' ಎಂದು ನುಡಿದು, ಅನುಗ್ರಹಿಸಿದ ಎಂಬ ವಿಶೇಷಾಂಶ ಶ್ರೀಮದ್ಭಾಗವತದಲ್ಲಿದೆ (೧೦/೫೧/೬೪):

ಜನ್ಮನ್ಯನಂತರೇ ರಾಜನ್ ಸರ್ವಭೂತಸುಹೃತ್ತಮಃ ।
ಭೂತ್ವಾ ದ್ವಿಜವರಸ್ತ್ವಂ ವೈ ಮಾಮುಪೈಷ್ಯಸಿ ಕೇವಲಮ್ ॥

ಶ್ರೀಕೃಷ್ಣನಿಂದ ಜರಾಸಂಧಾದಿಗಳ ಪರಾಜಯ

ತತೋ ಗುಹಾಮುಖಾದ್ಧರಿರ್ವಿನಿಃಸೃತೋ ಜರಾಸುತಮ್ ।
ಸಮಸ್ತಭೂಪಸಂಯುತಂ ಜಿಗಾಯ ಬಾಹುನೇಶ್ವರಃ ॥ ೧೩೭ ॥

ಅ: ಅನಂತರ ಪ್ರಭುವಾದ ಶ್ರೀಕೃಷ್ಣ ಆ ಗುಹೆಯ ದ್ವಾರದಿಂದ ಹೊರಬಂದು ಸಮಸ್ತರಾಜರುಗಳೊಂದಿಗೆ ಕೂಡಿದ್ದ ಜರಾಸಂಧನನ್ನು ಕೈಯಿಂದಲೇ ಪರಾಭವಗೊಳಿಸಿದ.

ವಿ: ಕಾಲಯವನನ ಸೈನ್ಯವನ್ನು ಕೇವಲ ಬಾಹುವಿನಿಂದ ನಾಶ ಮಾಡಿದ್ದಂತೆ, ಜರಾಸಂಧನನ್ನು ಅವನ ಅನುಯಾಯಿಗಳಾದ ರಾಜರುಗಳ ಸಮೇತ ಬಾಹುವಿನಿಂದಲೇ ಪರಾಭವಗೊಳಿಸಿದ ಎಂಬುದು ವಿಶೇಷ. ಆದ್ದರಿಂದ ಹಿಂದೆ ವೈಕುಂಠದಿಂದ ಬಂದ ಅಸ್ತ್ರಗಳನ್ನು ಉಪಯೋಗಿಸಿದ್ದು ಕೇವಲ ಲೀಲೆಯಿಂದ ಎಂಬುದು ಖಚಿತಪಡುವುದು. ಈ ಬಾರಿ ಕೃಷ್ಣ ಬಲರಾಮನನ್ನು ಸಹ ಜೊತೆಗೆ ಕರೆದುಕೊಂಡಿಲ್ಲ ಎಂಬುದು ಮತ್ತೊಂದು ವಿಶೇಷಾಂಶ. ಇದು 'ವಿಕಾಮೇವಾದ್ವಿತೀಯಂ' ಎಂಬ [೧]ತತ್ತ್ವಕ್ಕೂ ದ್ಯೋತಕ.

ತಲೇನ ಮುಷ್ಟಿಭಿಸ್ತಥಾ ಮಹೀರುಹೈಶ್ಚ ಚೂರ್ಣಿತಾಃ ।
ನಿಪೇತುರಸ್ಯ ಸೈನಿಕಾಃ ಸ್ವಯಂ ಚ ಮೂರ್ಛಿತೋಽಪತತ್ ॥ ೧೩೮ ॥

ಅ: ಶ್ರೀಕೃಷ್ಣನ ಅಂಗೈಯಿಂದಲೂ, ಮುಷ್ಟಿಗಳಿಂದಲೂ, ವೃಕ್ಷಗಳಿಂದಲೂ ಜರಾಸಂಧನ ಸೈನಿಕರು ಪುಡಿಯಾಗಿ ನೆಲಕ್ಕುರುಳಿದರು. ಸ್ವತಃ ಜರಾಸಂಧನೂ ಸಹ ಮೂರ್ಛಿತನಾಗಿ ಬಿದ್ದ.

ವಿ: ಬಲರಾಮನು ಅಮೋಘವಾದ ಆಯುಧಗಳನ್ನು ಹಿಡಿದೂ ಸಾಧಿಸಲಾಗದ ಜರಾಸಂಧಜಯವನ್ನು ಶ್ರೀಕೃಷ್ಣ ಹೀಗೆ ನಿರಾಯುಧನಾಗಿ ಅನಾಯಾಸದಿಂದ ಸಾಧಿಸಿದ್ದು ಅವನ ಸರ್ವೋತ್ತಮತ್ವಕ್ಕೆ ದ್ಯೋತಕ.

ಸ ಸಾಲ್ವಪೌಂಡ್ರಚೇದಿಪಾನ್ ನಿಪಾತ್ಯ ಸರ್ವಭೂಭುಜಃ ।
ಸ ಪುಪ್ಲುವೇ ಜನಾರ್ದನಃ ಕ್ಷಣೇನ ತಾಂ ಕುಶಸ್ಥಲೀಮ್ ॥ ೧೩೯ ॥

ಅ: ಶ್ರೀಕೃಷ್ಣ ಸಾಲ್ವ, ಪೌಂಡ್ರಕವಾಸುದೇವ, ಶಿಶುಪಾಲರನ್ನು ಇತರ ಸಕಲರಾಜರನ್ನೂ ಕ್ಷಣಮಾತ್ರದಲ್ಲಿ ನೆಲಕ್ಕೆ ಬೀಳಿಸಿ, ದ್ವಾರಕೆಗೆ ನೆಗೆದ.

ವಿ: ಶ್ರೀಕೃಷ್ಣ ದ್ವಾರಕೆಗೆ ಹಾರಿ ತೆರಳಿದ ಅಪೂರ್ವಪ್ರಸಂಗವಿದು.

ಸಸಂಜ್ಞಕಾಃ ಸಮುತ್ಥಿತಾಸ್ತತೋ ನೃಪಾಃ ಪುನರ್ಯಯುಃ ।
ಜಿಗೀಷವೋಽಥ ರುಗ್ಮಿಣೇಂ ವಿಧಾಯ ಚೇದಿಪೇ ಹರಿಮ್ ॥ ೧೪೦ ॥

---

೧. 'ತದನನ್ಯತ್ವಮಾರಂಭಣಶಬ್ದಾದಿಭ್ಯಃ' – ಬ್ರಹ್ಮಸೂತ್ರ(೨/೧/೧೫).

೨. ಜಿಗೀಷವೋಽಥ ರುಗ್ಮಿಣೇಮಿತ್ಯತ್ರ ಅಥ ಹರಿಂ ಜಿಗೀಷವ ಇತಿ ಸಂಬಂಧಃ। ವಿಧಾಯ= ಮನಸಿ ವಿಧಾಯ ॥ – (ವಾ.)

ಅ: ಪ್ರಜ್ಞೆ ಮರಳಿದ ರಾಜರುಗಳು ಅಲ್ಲಿಂದ ಕೃಷ್ಣನನ್ನು ಗೆಲ್ಲುವ ಬಯಕೆಯಿಂದ ರುಗ್ಮಿಣಿಯನ್ನು ಶಿಶುಪಾಲನಿಗೆ ಕೊಡಲೆಂದು ತೆರಳಿಬಿಟ್ಟರು.

ವಿ: ಹೀಗೆ ಕೃಷ್ಣನನ್ನು ಸೋಲಿಸಲಾಗದ ಅವರು, ರುಗ್ಮಿಣಿಯನ್ನು ಶಿಶುಪಾಲನಿಗೆ ಕೊಡುವ ಮೂಲಕವಾದರೂ ಪರಾಭವಗೊಳಿಸಬೇಕೆಂದು ರುಗ್ಮಿಣೀಕಲ್ಯಾಣಕ್ಕಾಗಿ ಕುಂಡಿನಪುರಕ್ಕೆ ತೆರಳಿದರು ಎಂದರ್ಥ.

ರುಗ್ಮಿಣಿಯ ಪ್ರೇಮಸಂದೇಶ

ಸಮಸ್ತರಾಜಮಂಡಲೇ ವಿನಿಶ್ಚಯಾದುಪಾಗತೇ ।
ಸಭೀಷ್ಮಕೇ ಚ ರುಗ್ಮಿಣೀ ಪ್ರದಾತುಮುದ್ಯತೇ[೧] ಮುದಾ ॥ ೧೪೧ ॥

ಅ: ಹೀಗೆ ನಿಶ್ಚಯಿಸಿಕೊಂಡು ಸಮಸ್ತರಾಜರ ಗುಂಪು ಭೀಷ್ಮಕನೊಂದಿಗೆ ಕೂಡಿಕೊಂಡು, ರುಗ್ಮಿಣಿಯನ್ನು ಶಿಶುಪಾಲನಿಗೆ ನೀಡಲೆಂದು ಸಂಭ್ರಮದಿಂದ ತೊಡಗಿತು.

ಸಮಸ್ತಲೋಕಯೋಷಿತಾಂ ವರಾ ವಿದರ್ಭನಂದನಾ ।
ದ್ವಿಜೋತ್ತಮಂ ಹರೇಃ ಪದೋಃ ಸಕಾಶಮಾಶ್ವಯಾತಯತ್[೨] ॥ ೧೪೨ ॥

ಅ: ಸಮಸ್ತಲೋಕಗಳ ಸ್ತ್ರೀಯರಲ್ಲಿ ಅತ್ಯುತ್ತಮಳಾದ ರುಗ್ಮಿಣಿಯು ಆಗ ಒಬ್ಬ ವಿಪ್ರೋತ್ತಮನನ್ನು ಶ್ರೀಕೃಷ್ಣನ ಚರಣಸನ್ನಿಧಿಗೆ ಕಳುಹಿಸಿಕೊಟ್ಟಳು.

ವಿ: ರುಗ್ಮಿಣಿ ಹಾಗೆ ಕಳುಹಿಸಿದ್ದು ಒಂದು ಪತ್ರವನ್ನು ಬರೆದು, ಅದನ್ನು ಕೃಷ್ಣನಿಗೆ ತುಲುಪಿಸ–ಲೆಂದು ಎಂಬ ವಿಶೇಷಾಂಶ ವಿಜಯಧ್ವಜೀಯಪಾಠದ [೩]ಭಾಗವತದಲ್ಲಿದೆ; ಶ್ರೀವಾದಿರಾಜರ ರುಗ್ಮಿಣೀಶವಿಜಯದಲ್ಲಿಯೂ ಹಾಗೆಯೇ ಇದೆ.

---

೧. ಶಿಶುಪಾಲಾಯೇತಿ ಶೇಷಃ । 'ಉದ್ಯತೇ ತದೇ'ತಿ ವಾ ಪಾಠಃ । – (ವ.)

೨. ತದೇತಿ ವಾ ಪಾಠಃ । ತದಾ ನಿಶ್ಚಯಸಮಯೇ ವಿದರ್ಭನಂದನಾ ರುಗ್ಮಿಣೀ ದ್ವಿಜೋತ್ತಮಂ 'ಪುರೋಹಿತಸುತಂ ವಿಪ್ರಂ ಪ್ರೇಷಯಾಮಾಸ ರುಗ್ಮಿಣೀ' ಇತಿ ಪಾದ್ಮೇ । – (ಜ.)

'ಉದ್ಯತೇ ತದಾ' ಇತಿ ವಾ ಪಾಠಃ । – (ವ.)

೩. ...ಏವಂ ಸಂಪೃಷ್ಟಸಂಪ್ರಶ್ನೋ ಬ್ರಾಹ್ಮಣಃ ಪರಮೇಷ್ಠಿನಾ ।
ವಿಧಾಯ **ಲಿಖಿತಂ ಪತ್ರಂ** ಪಾದಯೋಃ ಪ್ರಣನಾಮ ತಮ್ ॥ – ವಿ. ಭಾಗವತ (೧೦/೫೭/೩೪)

ನಿಜೈಃ ಸಹ ದ್ವಾರವತ್ಯಾಂ ನಿವಸತ್ಯಂಬುಜೇಕ್ಷಣೇ ।
ಅಜಯಾ ಪ್ರೇಷಿತಂ **ಪತ್ರಂ** ದ್ವಿಜಃ ಕಶ್ಚಿದುಪಾಹರತ್ ॥ – ರುಗ್ಮಿಣೀಶವಿಜಯ (೧೪/೩೮)

ವಿಪ್ರರ ಮೂಲಕ ಕನ್ಯಾಘಟನೆ ನಡೆಸುವ ಪ್ರವೃತ್ತಿಗೆ ರುಗ್ಮಿಣಿಯ ಈ ಕಾರ್ಯ ಮೂಲವಾಯಿತು ಎಂಬ ವಿಶೇಷವಿವರಣೆ [೧]ಸತ್ಯಧರ್ಮತೀರ್ಥರ ಭಾಗವತಟಿಪ್ಪಣಿಯಲ್ಲಿದೆ:

ವಿದರ್ಭಗೆ ಶ್ರೀಕೃಷ್ಣನ ಪ್ರಯಾಣ

ನಿಶಮ್ಯ ತದ್ವಚೋ ಹರಿಃ ಕ್ಷಣಾದ್ವಿದರ್ಭಕಾನಗಾತ್ ।
ತಮನ್ವಯಾದ್ಧಲಾಯುಧಃ ಸಮಸ್ತಯಾದವೈಃ ಸಹ ॥ ೧೪೩ ॥

ಅ: ಅವನ ಮಾತನ್ನು ಕೇಳಿ ಶ್ರೀಕೃಷ್ಣ ಕ್ಷಣಮಾತ್ರದಲ್ಲಿ ವಿದರ್ಭಕ್ಕೆ ತೆರಳಿದ. ಅವನನ್ನು ಸಮಸ್ತಯಾದವರೊಂದಿಗೆ ಬಲರಾಮ ಹಿಂಬಾಲಿಸಿದ.

ಶ್ರೀಕೃಷ್ಣನಿಂದ ರುಗ್ಮಿಣೀಹರಣ

ಸಮಸ್ತರಾಜಮಂಡಲಂ ಪ್ರಯಾಂತಮೀಕ್ಷ್ಯ ಕೇಶವಮ್ ।
ಸುಯತ್ತಮಾತ್ತಕಾರ್ಮುಕಂ ಬಭೂವ ಕನ್ಯಕಾವನೇ ॥ ೧೪೪ ॥

ಅ: ಕೃಷ್ಣನು ಹೊರಟುಬಂದ ವಿಚಾರವನ್ನು ತಿಳಿದು, ಎಲ್ಲ ರಾಜರ ಗುಂಪೂ ಕನ್ಯೆಯ ರಕ್ಷಣೆಗೆಂದು ಧನುಸ್ಸು ಹಿಡಿದು ಸನ್ನದ್ಧವಾಗಿ ನಿಂತಿತು.

ವಿ: [೨]ಗೂಢಚಾರರ ಮೂಲಕ ದ್ವಾರಕೆಯಿಂದ ವಿದರ್ಭಕ್ಕೆ ಶ್ರೀಕೃಷ್ಣ ತೆರಳಿದ ವಿಷಯವನ್ನು ತಿಳಿದುಕೊಂಡ ರಾಜರುಗಳು ರುಗ್ಮಿಣಿಯನ್ನು ಕೃಷ್ಣ ಅಪಹರಿಸಿಯಾನೋ ಎಂಬ ಶಂಕೆಯಿಂದ, ಅದನ್ನು ತಪ್ಪಿಸಲೆಂದು ಧನುರ್ಧಾರಿಗಳಾಗಿ ಸಿದ್ಧರಾಗಿ ನಿಂತರು ಎಂದರ್ಥ. ಆ ರಾಜರುಗಳೆಲ್ಲ ಆ ಮೊದಲೇ ಕುಂಡಿನಪುರದಲ್ಲಿ ನೆರೆದಿದ್ದರಿಂದ ತಾತ್ಪರ್ಯವನ್ನು ಹೀಗೆಯೇ ತಿಳಿಯಬೇಕು.

ಪುರಾ ಪ್ರದಾನತಃ ಸುರೇಕ್ಷಣಚ್ಛಲಾದ್ಬಹಿರ್ಗತಾಮ್ ।
ರಥೇ ನ್ಯವೇಶಯದ್ಧರಿಃ ಪ್ರಪಶ್ಯತಾಂ ಚ ಭೂಭೃತಾಮ್ ॥ ೧೪೫ ॥

---

೧. ಪ್ರಾಯೇಣ ತದಾರಭ್ಯ ವೈದಿಕೈರೇವ ಕನ್ಯಾಘಟನಾ ಕಾರ್ಯತೇ ಇತಿ ಮಂತವ್ಯಮ್ ॥
– ಸತ್ಯಧರ್ಮೀಯ (೧೦/೫೭/೨೪)

೨. 'ರಾಜಾನಶ್ಚಾರಚಕ್ಷುಷಃ....' ÷ (ವಿದುರನೀತಿ) ಭಾರತ

ಪ್ರಪಶ್ಯತಾಂ ಚ ಭೂಭೃತಾಮಿತ್ಯನಾದರೇ ಷಷ್ಠೀ । – (ತಾ.)

ಅ: ಕನ್ಯಾಪ್ರದಾನಕ್ಕಿಂತ ಮುಂಚಿತವಾಗಿ ಕುಲದೇವತೆಯಾದ ದುರ್ಗೆಯನ್ನು ದರ್ಶನ ಮಾಡುವ ನೆಪದಿಂದ ನಗರದಿಂದ ಹೊರಕ್ಕೆ ತೆರಳಿದ್ದ ರುಗ್ಮಿಣಿಯನ್ನು ರಾಜರುಗಳೆಲ್ಲ ನೋಡುತ್ತಿದ್ದಂತೆಯೇ ಶ್ರೀಕೃಷ್ಣ ತನ್ನ ರಥದಲ್ಲಿ ಕೂಡಿಸಿಕೊಂಡ.

ವಿ: ಶ್ರೀಕೃಷ್ಣ ರುಗ್ಮಿಣಿಯನ್ನು ರಥದಲ್ಲಿ ಕುಳ್ಳಿರಿಸಿಕೊಳ್ಳುತ್ತಿದ್ದುದನ್ನು ಕಣ್ಣಾರೆ ನೋಡುತ್ತಿದ್ದರೂ, ಹಾಗೆ ಮಾಡದಂತೆ ಕೃಷ್ಣನನ್ನು ತಡೆಯಲು ಆ ಸಮಸ್ತರಾಜರ ಗುಂಪಿಗೆ ಸಾಧ್ಯವಾಗಲಿಲ್ಲ ಎಂಬಲ್ಲಿ ಕೃಷ್ಣನ ಅಚಿಂತ್ಯಾದ್ಭುತವಾದ ಸಾಮರ್ಥ್ಯ ನಿರೂಪಿತವಾಗಿದೆ.

ಕೃಷ್ಣನಿಂದ ಜರಾಸಂಧಾದಿಗಳ ಪರಾಭವ

ಜರಾಸುತಾದಯೋ ರುಷಾ ತಮಭ್ಯಯುಃ ಶರೋತ್ತಮೈಃ ।
ವಿಧಾಯ ತಾನ್ ನಿರಾಯುಧಾನ್ ಜಗಾಮ ಕೇಶವಃ ಶನೈಃ ॥ ೧೪೬ ॥

ಅ: ಜರಾಸಂಧ ಮೊದಲಾದವರು ಕೋಪದಿಂದ ಉತ್ತಮಬಾಣಗಳನ್ನು ಪ್ರಯೋಗಿಸುತ್ತಾ ಕೃಷ್ಣನನ್ನು ಎದುರಿಸಿ ನಿಂತರು. ಕೃಷ್ಣ ಅವರನ್ನೆಲ್ಲ ನಿರಾಯುಧರನ್ನಾಗಿ ಮಾಡಿ ಮೆಲ್ಲನೆ ಅಲ್ಲಿಂದ ತೆರಳಿದ.

ವಿ: ಅವರೆಲ್ಲರ ಪ್ರಯತ್ನ ಶ್ರೀಕೃಷ್ಣನಿಂದ ಕ್ಷಣಮಾತ್ರದಲ್ಲಿ ವ್ಯರ್ಥವಾಯಿತು. ಅನಂತರ ಅಲ್ಲಿಂದ ಮೆಲ್ಲನೆ ತೆರಳುವ ಮೂಲಕ ಕೃಷ್ಣ ಅವರೆಲ್ಲ ತನ್ನನ್ನು ಯಾವ ರೀತಿಯಲ್ಲೂ ತಡೆಯಲು ಸಮರ್ಥರಾದವರಲ್ಲ ಎಂಬುದನ್ನು ಜಗತ್ತಿಗೆ ಸಾರಿದ.

ಬಲರಾಮನ ಅದ್ಭುತಪರಾಕ್ರಮ

ಪುನರ್ಗೃಹೀತಕಾರ್ಮುಕಾನ್ ಹರಿಂ ಪ್ರಯಾತುಮುದ್ಯತಾನ್ ।
ನ್ಯವಾರಯದ್ಬಲಾಯುಧೋ ಬಲಾದ್ಬಲೋರ್ಜಿತಾಗ್ರಣೀಃ ॥ ೧೪೭ ॥

ಅ: ಮತ್ತೆ ಬಿಲ್ಲು ಹಿಡಿದುಕೊಂಡು ಕೃಷ್ಣನನ್ನು ಆಕ್ರಮಿಸಲೆಂದು ಉದ್ಯುಕ್ತರಾದ ಆ ರಾಜರುಗಳನ್ನು ಬಲಶಾಲಿಗಳಲ್ಲಿ ಅಗ್ರಗಣ್ಯನೆನ್ನಿಸಿದ ಬಲರಾಮ ಬಲಾತ್ಕಾರದಿಂದ ಅಡ್ಡಗಟ್ಟಿದ.

ತದಾ ಸಿತಃ ಶಿರೋರುಹೋ ಹರೇರ್ಹಲಾಯುಧೇ ಸ್ಥಿತಃ[೧] ।
ಪ್ರಕಾಶಮಾವಿಶದ್ಬಲಂ ವಿಜೇತುಮತ್ರ ಮಾಗಧಮ್ ॥ ೧೪೮ ॥

---

೧. ಹಲಾಯುಧಸ್ಥಿತಃ ಹರೇಃ ಸಿತಃ= ಶುಕ್ಲಃ ಶಿರೋರುಹಃ= ಕೇಶಃ ಪ್ರಕಾಶಂ ವ್ಯಕ್ತಂ ಯಥಾ ಭವತಿ ತಥಾ ಬಲಂ= ಬಲರಾಮಮಾವಿಶತ್ = ಮಾಗಧಂ ಜೇತುಂ ವಿಶಿಷ್ಯ ಸನ್ನಿಧಾನಮಕರೋದಿತಿ ಭಾವಃ ॥ – (ವಾ.)

ಅ: ಆಗ ಶ್ರೀಹರಿಯ ಶುಕ್ಲಕೇಶರೂಪವು ಬಲರಾಮನಲ್ಲಿ ಸ್ಫುಟವಾಗಿ ಜರಾಸಂಧನನ್ನು ಗೆಲ್ಲಲೆಂದು ಪ್ರವೇಶಿಸಿತು.

ವಿ: ೧) ಅಷ್ಟೆಲ್ಲ ರಾಜರನ್ನು ಸಹ ಲೀಲಾಜಾಲವಾಗಿ ಪರಾಭವಗೊಳಿಸುವ ಶಕ್ತಿಯನ್ನು ಬಲರಾಮನಿಗೆ ನೀಡಲೆಂದು ಶ್ರೀಹರಿಯ ಶುಕ್ಲಕೇಶರೂಪ ಆಗ ಅವನಲ್ಲಿ ಪ್ರವೇಶಿಸಿತು ಎಂದರ್ಥ. ಅಂದಿನ ಅದ್ಭುತವಾದ ಬಲರಾಮನ ಜಯಕ್ಕೆ ಅದು ಮುಖ್ಯಕಾರಣವಾಯಿತು.

೨) ಶ್ರೀಹರಿಪ್ರೀತಿಗೆ ಕಾರಣವಾಗುವ ಕಾರ್ಯಗಳಲ್ಲಿ ತೊಡಗಿದಾಗ ಶ್ರೀಹರಿ ವಿಶೇಷಸನ್ನಿಧಾನವಿರಿಸಿ ಜಯ ತಂದುಕೊಂಡುವನು ಎಂಬ ತತ್ತ್ವವೂ ಇದರಿಂದ ಸೂಚಿತ ಎಂದು ತಿಳಿಯಬಹುದು.

ಸ ತಸ್ಯ ಮಾಗಧೋ ರಣೇ ಗದಾಪ್ರಹಾರಚೂರ್ಣಿತಃ ।
ಪಪಾತ ಭೂತಲೇ ಬಲೋ ವಿಜಿತ್ಯ ತಂ ಯಯೌ ಪುರೀಮ್ ॥ ೧೪೯ ॥

ಅ: ಯುದ್ಧದಲ್ಲಿ ಅವನ ಗದಾಪ್ರಹಾರದಿಂದ ನುಜ್ಜುಗುಜ್ಜಾಗಿ ಜರಾಸಂಧ ನೆಲದ ಮೇಲೆ ಒರಗಿದ. ಅವನನ್ನು ಜಯಿಸಿದ ಬಲರಾಮ ದ್ವಾರಕಾಪುರಿಗೆ ತೆರಳಿದ.

ವಿ: ಬ್ರಹ್ಮಶಿವಾದಿಗಳ ವರದಿಂದ ಕೂಡಿದ ಜರಾಸಂಧನಿಗೆ ಅಂತಹ ಪೆಟ್ಟನ್ನು ಹಾಕಲು ಬಲರಾಮನಿಗೆ ಸಾಧ್ಯವಾದದ್ದು ಆಗ ಅವನೊಳಗಿದ್ದ ಶ್ರೀಹರಿಯ ಶುಕ್ಲಕೇಶಾವೇಶದ ಬಲದಿಂದ.

ಸಾತ್ಯಕಿಯಿಂದ ಶಿಶುಪಾಲನ ಪರಾಭವ

[೦]ವರೋರುವೇಷಸಂವೃತೋಽಥ ಚೇದಿರಾಟ್ ಸಮಭ್ಯಯಾತ್ ।
ತಮಾಸಸಾದ ಸಾತ್ಯಕಿರ್ನದನ್ ಮೃಗಾಧಿಪೋ ಯಥಾ ॥ ೧೫೦ ॥

ಅ: ಮದುವಣಿಗನ ಚೆಂದದ ವೇಷದಿಂದ ಕೂಡಿ, ಚೇದಿರಾಜನಾದ ಶಿಶುಪಾಲನೂ ಯುದ್ಧಕ್ಕೆ ಬಂದ. ಸಿಂಹದಂತೆ ಗರ್ಜಿಸುತ್ತಾ ಸಾತ್ಯಕಿ ಅವನ ಮೇಲೆ ಏರಿಹೋದ.

ಚಿರಂ ಪ್ರಯುಧ್ಯತಾವುಭೌ ವರಾಸ್ತ್ರಶಸ್ತ್ರವರ್ಷಿಣೌ ।
ಕ್ರುಧಾ ನಿರೀಕ್ಷ್ಯ ತಸ್ಥತುಃ ಪರಸ್ಪರಂ ಸ್ಫುರತ್ತನೂ ॥ ೧೫೧ ॥

---

೦. ವರಸ್ಯ ಉರುವೇಷಃ – (ಜ.)

ಅ: ಉತ್ತಮವಾದ ಶಸ್ತಾಸ್ತ್ರಗಳ ಮಳೆಗರೆಯುತ್ತಾ ಬಹು ಕಾಲ ಯುದ್ಧ ಮಾಡಿ, ಹೊಳೆಯುವ ಶರೀರದ ಅವರಿಬ್ಬರೂ ಬಳಿಕ ಒಬ್ಬರನ್ನೊಬ್ಬರು ಕೋಪದಿಂದ ದುರುಗುಟ್ಟಿಕೊಂಡು ನೋಡುತ್ತಾ ನಿಂತರು.

ಸಮಾನಭಾವಮಕ್ಷಮೀ ಶಿನೇಃ ಸುತಾತ್ಮಜಃ ಶರಮ್ ।
ಅಥೋದ್ಬಬರ್ಹ ತಂ ಶರಂ ಬಲಾನ್ಮುಮೋಚ ವಕ್ಷಸಿ ॥ ೧೫೨ ॥

ಅ: ಶಿನಿಯ ಮೊಮ್ಮಗನಾದ ಸಾತ್ಯಕಿ ಶತ್ರುವು ತನಗೆ ಸಮನೆನ್ನಿಸಿದ್ದನ್ನು ಸಹಿಸದೆ, ಒಂದು ಬಾಣವನ್ನು ಕೈಗೆತ್ತಿಕೊಂಡು ಅದನ್ನು ಶಿಶುಪಾಲನ ಎದೆಯ ಮೇಲೆ ಬಲವಾಗಿ ಪ್ರಯೋಗಿಸಿದ.

ಸ ತೇನ ತಾಡಿತೋಽಪತದ್ವಿಸಂಜ್ಞಕೋ ನೃಪಾತ್ಮಜಃ ।
ವಿಜಿತ್ಯ ತಂ ಸ ಸಾತ್ಯಕಿರ್ಯಯೌ ಪ್ರಹೃಷ್ಟಮಾನಸಃ ॥ ೧೫೩ ॥

ಅ: ಅದರಿಂದ ಹೊಡೆಯಲ್ಪಟ್ಟ ಶಿಶುಪಾಲ ಎಚ್ಚರ ತಪ್ಪಿ ಬಿದ್ದ. ಅವನನ್ನು ಸಾತ್ಯಕಿಯು ಸೋಲಿಸಿ, ಸಂತೃಪ್ತಮನಸ್ಕನಾಗಿ ತೆರಳಿದ.

ಶ್ರೀಕೃಷ್ಣನಿಂದ ರುಗ್ಮಿ ಮೊದಲಾದವರ ಪರಾಭವ

ಅಥಾಪರೇ ಚ ಯಾದವಾ ವಿಜಿತ್ಯ ತದ್ಬಲಂ ಯಯುಃ ।
ಪುರೈವ ರುಗ್ಮಿಪೂರ್ವಕಾಃ ಪ್ರಜಗ್ಮುರಚ್ಯುತಂ ಪ್ರತಿ ॥ ೧೫೪ ॥

ಅ: ಅನಂತರ ಇತರ ಯಾದವರು ಅವನ ಸೈನ್ಯವನ್ನು ಸೋಲಿಸಿ, ತೆರಳಿದರು. ಆ ಮೊದಲೇ ರುಗ್ಮಿ ಮೊದಲಾದವರು ಕೃಷ್ಣನನ್ನು ಅಟ್ಟಿಸಿಕೊಂಡು ತೆರಳಿದ್ದರು.

ವಿ: ಈ ರೀತಿಯಾದ ಯುದ್ಧ ಇಲ್ಲಿ ನಡೆಯುತ್ತಿರುವಾಗ, ಇದಕ್ಕಿಂತ ಮುಂಚಿತವಾಗಿಯೇ ಕೃಷ್ಣನನ್ನು ಬೆನ್ನಟ್ಟಿ ರುಗ್ಮಿ ಏಕಲವ್ಯ ಮೊದಲಾದ ಕೆಲವರು ತಮ್ಮ ಸೇನೆಯೊಂದಿಗೆ ತೆರಳಿದ್ದರು ಎಂದರ್ಥ.

ಸಹೈಕಲವ್ಯಪೂರ್ವಕೈಃ ಸಮೇತ್ಯ ಭೀಷ್ಮಕಾತ್ಮಜಃ ।
ಹರಿಂ ವವರ್ಷ ಸಾಯಕೈಃ ಸ ಸಿಂಹವನ್ನ್ಯವರ್ತತ ॥ ೧೫೫ ॥

ಅ: ಏಕಲವ್ಯ ಮೊದಲಾದವರೊಂದಿಗೆ ಕೂಡಿಕೊಂಡು ರುಗ್ಮಿ ಕೃಷ್ಣನ ಮೇಲೆ ಬಾಣಗಳನ್ನು ಸುರಿಸಿದ. ಕೃಷ್ಣ ಸಿಂಹದಂತೆ ಹಿಂದಕ್ಕೆ ತಿರುಗಿ ನಿಂತ.

ಅಕ್ಷೌಹಿಣೀತ್ರಯಂ ಹರಿಸ್ತದಾ ನಿಹತ್ಯ ಸಾಯಕೈಃ ।
ಅವಾಹನಾಯುಧಂ ವ್ಯಧಾನ್ನಿಷಾದಪಂ ಶರೈಃ ಕ್ಷಣಾತ್ ॥ ೧೫೬ ॥

ಅ: ಆಗ ಶ್ರೀಕೃಷ್ಣನು ಮೂರು ಅಕ್ಷೋಹಿಣೀಸೈನ್ಯವನ್ನು ಬಾಣಗಳಿಂದ ಸಂಹರಿಸಿ, ಕ್ಷಣಮಾತ್ರದಲ್ಲಿ ಬಾಣಗಳಿಂದ ಏಕಲವ್ಯನನ್ನು ನಿರಾಯುಧನನ್ನಾಗಿಯೂ, ವಾಹನರಹಿತನನ್ನಾಗಿಯೂ ಮಾಡಿದ.

ಶರಂ ಶರೀರನಾಶಕಂ ಸಮಾದದಾನಮೀಶ್ವರಮ್ ।
ಸ ಏಕಲವ್ಯ ಆಶು ತಂ ವಿಹಾಯ ದುದ್ರುವೇ ಭಯಾತ್ ॥ ೧೫೭ ॥

ಅ: ದೇಹವನ್ನು ನಾಶಮಾಡುವಂತಹ ಬಾಣವೊಂದನ್ನು ಶ್ರೀಕೃಷ್ಣ ಕೈಗೆತ್ತಿಕೊಳ್ಳುವುದನ್ನು ಕಂಡ ಏಕಲವ್ಯ ಭಯದಿಂದ ಬೇಗನೆ ಅವನನ್ನು ಬಿಟ್ಟು ಓಡಿಹೋದ.

ಧನುರ್ಭೃತಾಂ ವರೇ ಗತೇ ರಣಂ ವಿಹಾಯ ಭೂಭೃತಃ ।
ಕರೂಶರಾಜಪೂರ್ವಕಾಃ ಕ್ಷಣಾತ್ ಪ್ರದುದ್ರುವುರ್ಭಯಾತ್ ॥ ೧೫೮ ॥

ಅ: ಧನುರ್ಧಾರಿಗಳಲ್ಲಿ ಮಿಗಿಲೆನ್ನಿಸಿದ್ದ ಏಕಲವ್ಯ ಹಾಗೆ ಯುದ್ಧವನ್ನು ಬಿಟ್ಟು ಓಡಲು, ದಂತವಕ್ರ ಮೊದಲಾದ ರಾಜರುಗಳು ತತ್ಕ್ಷಣವೇ ಭಯದಿಂದ ಓಡತೊಡಗಿದರು.

ವಿ: ಇದರಿಂದ ದಂತವಕ್ರಾದಿರಾಜರುಗಳಿಗಿಂತ ಏಕಲವ್ಯ ಧನುರ್ವಿದ್ಯೆಯಲ್ಲಿ ಹೆಚ್ಚು ನಿಪುಣನಾಗಿದ್ದ ಎಂದು ತಿಳಿಯುವುದು. ಶಬ್ದವೇಧಿ ಮೊದಲಾದ ವಿಶೇಷವಿದ್ಯೆಗಳು ಅವನಿಗೆ ತಿಳಿದಿದ್ದ ವಿವರ ಈಗಾಗಲೇ ಬಂದಿದೆ (೧೫/೬೧)

ಶ್ರೀಕೃಷ್ಣನಿಂದ ರುಗ್ಮಿಯ ವಿರೂಪಕರಣ

ಅಥಾಸಸಾದ ಕೇಶವಂ ರುಷಾ ಸ ಭೀಷ್ಮಕಾತ್ಮಜಃ ।
ಶರಾಂಬುಧಾರ ಆಶು ತಂ ವಿವಾಹನಂ ವ್ಯಧಾದ್ಧರಿಃ ॥ ೧೫೯ ॥

ಅ: ಬಳಿಕ ಭೀಷ್ಮಕಪುತ್ರನಾದ ರುಗ್ಮಿ ಕೋಪದಿಂದ ಬಾಣಗಳನ್ನು ಮಳೆಯಂತೆ ಸುರಿಸುತ್ತಾ ಶ್ರೀಕೃಷ್ಣನನ್ನು ಎದುರಿಸಿದ; ಶ್ರೀಕೃಷ್ಣ ಅವನನ್ನು ಬೇಗನೆ ವಿರಥನನ್ನಾಗಿ ಮಾಡಿದ.

ಚಕರ್ತ ಕಾರ್ಮುಕಂ ಪುನಃ ಸಖಿಡ್ಗಚರ್ಮಭೃದ್ಧರೇಃ ।
ರಥಂ ಸಮಾರುಹಚ್ಛರೈಶ್ಚಕರ್ತ ಖಡ್ಗಮೀಶ್ವರಃ ॥ ೧೬೦ ॥

ಅ: ಅವನ ಬಿಲ್ಲನ್ನೂ ಕತ್ತರಿಸಿದ; ರುಗ್ಮಿ ಪುನಃ ಖಡ್ಗ, ಗುರಾಣಿಗಳನ್ನು ಹಿಡಿದು ಶ್ರೀಕೃಷ್ಣನ ರಥವನ್ನೇ ಏರಿದ. ಪ್ರಭುವಾದ ಕೃಷ್ಣ ಅವನ ಖಡ್ಗವನ್ನು ಬಾಣಗಳಿಂದ ತುಂಡಾಗಿಸಿದ.

ಶರೈರ್ವಿತಸ್ತಿಮಾತ್ರಕೈರ್ವಿಧಾಯ ತಂ ನಿರಾಯುಧಮ್ ।
ಪ್ರಿಯಾವಚಃ ಪ್ರಪಾಲಯನ್ ಜಘಾನ ನೈನಮಚ್ಯುತಃ ॥ ೧೬೧ ॥

ಅ: ಶ್ರೀಕೃಷ್ಣ ಅವನನ್ನು ಗೇಣಳತೆಯ ಬಾಣಗಳಿಂದ ನಿರಾಯುಧನನ್ನಾಗಿ ಮಾಡಿದ. ಪ್ರಿಯೆಯಾದ ರುಗ್ಮಿಣಿಯ ಮಾತನ್ನು ನಡೆಸಲೆಂದು ಅವನನ್ನು ಸಂಹರಿಸದೆ ಬಿಟ್ಟ.

ವಿ: ರುಗ್ಮಿಣಿಯು ಆಗ ''ಕೊಲ್ಲಬೇಡ'' ಎಂದು ನುಡಿಯಲು ಲೋಕವಿಡಂಬನೆ ಕಾರಣ. ಅಸುರಮೋಹನವೆಂಬ ಕಾರಣವನ್ನೂ ಊಹಿಸಬಹುದು. ಅದರೊಂದಿಗೆ ರುಗ್ಮಿ ಮುಂದೆ ಬಲರಾಮನಿಂದ ಸಾಯಬೇಕಾದವನು ಎಂಬ ಮತ್ತೊಂದು ಮುಖ್ಯಕಾರಣವನ್ನೂ ಊಹಿಸಬಹುದು. ಕೃಷ್ಣನ ರೀತಿಯೂ ಅದರಂತೆಯೇ ಲೋಕವಿಡಂಬನೆ, ಅಸುರಮೋಹನ ಮತ್ತು ಅವನು ಬಲರಾಮನಿಗೆ ಮೀಸಲಾದವನು ಎಂಬ ಕಾರಣಕ್ಕೇ ಬಿಟ್ಟನು ಎಂದೂ ತಿಳಿಯಬೇಕು. ಅವರಿಬ್ಬರೂ ಲಕ್ಷ್ಮೀನಾರಾಯಣರು. ಅವರಿಬ್ಬರ ವರ್ತನೆ ಸದಾ ಒಂದೇ [೧]ಬಗೆಯದು ಎಂಬ ಮಾತು ಈಗಾಗಲೇ ಬಂದಿದೆ(೫/೩೫).

ನಿಬಧ್ಯ ಪಂಚಚೂಡಿನಂ ವಿಧಾಯ ತಂ ವ್ಯಸರ್ಜಯತ್ ।
ಜಗಜ್ಜನಿತ್ರ್ಯೋರಿದಂ ವಿಡಂಬನಂ ರಮೇಶಯೋಃ ॥ ೧೬೨ ॥

ಅ: ಶ್ರೀಕೃಷ್ಣ ಅವನನ್ನು ಹಿಡಿದು, ಪಂಚಚೂಡನನ್ನಾಗಿ ಮಾಡಿ, ಬಿಟ್ಟುಬಿಟ್ಟ. ಜಗತ್ತಿನ ತಂದೆತಾಯಿಗಳಾದ ಶ್ರೀಕೃಷ್ಣರುಗ್ಮಿಣಿಯರಿಗೆ ಇದು ಲೋಕವಿಡಂಬನೆ ಮಾತ್ರ.

ವಿ: ಶ್ರೀಕೃಷ್ಣ ಅವನನ್ನು ಹಿಡಿದು, ಗಡ್ಡ ಮೀಸೆಗಳನ್ನು ಮಾತ್ರ ಬಿಟ್ಟು ತಲೆ ಬೋಳಿಸಿದ ಎಂದು ಭಾಗವತದಲ್ಲಿದೆ :

---

೧. ಯಾಂ ಯಾಂ ಪರೇಶ ಉರುಧೈವ ಕರೋತಿ ಲೀಲಾಂ ತಾಂ ತಾಂ ಕರೋತ್ಯನು ತಥೈವ ರಮಾऽಪಿ ದೇವೀ ।
ನೈತಾವತಾऽಸ್ಯ ಪರಮಸ್ಯ ತಥಾ ರಮಾಯಾ ದೋಷೋऽಣುರಪ್ಯನುವಿಚಿಂತ್ಯ ಉರುಪ್ರಭೂ ಯತ್ ॥
(೫/೩೫)

ಚೈಲೇನ ಬದ್ಧ್ವಾ ತಮಸಾಧುಕಾರಿಣಂ ಸಶ್ಮಶ್ರುಕೇಶಂ ಪ್ರವಪನ್ ವ್ಯರೂಪಯತ್ ।
ತಾವನ್ಮಮರ್ದುಃ ಪರಸೈನ್ಯಮದ್ಭುತಂ ಯದುಪ್ರವೀರಾ ನಲಿನೀಂ ಯಥಾ ಗಜಾಃ ॥
– ಭಾಗವತ(೧೦/೫೪/೩೫)

ತಲೆಯಲ್ಲಿ ಐದು ಕಡೆ ಮಾತ್ರ ಕೂದಲುಗಳನ್ನು ಶಿಖೆಗಳಂತೆ ಉಳಿಸಿ, ಉಳಿದ ಭಾಗವನ್ನು ಬೋಳಿಸಿದ ಎಂದು ಭಾವ. ಹಾಗೆ ಐದು ಕಡೆ ಮಾತ್ರ ತಲೆಕೂದಲುಗಳನ್ನು ಉಳಿಸುವುದು ಅವರು ಅಕಾರ್ಯ ಮಾಡಿದವರು ಎಂದು ಜನತೆಗೆ ತಿಳಿಯುವುದಕ್ಕೆ ಸಂಕೇತ. ರುಗ್ಮಿಣೀಶವಿಜಯದಲ್ಲಿ ಬಂದಿರುವ 'ಅಚೀಕ್ಲೃಪನ್ ಮುಂಡಿತಮೂರ್ಧಜಂ ತಂ' ಎಂಬ ಮಾತಿಗೂ ಐದು ಕಡೆಯಲ್ಲಿ ಮಾತ್ರ ಕೂದಲು ಉಳಿಸಿ, ಉಳಿದಂತೆ ತಲೇ ಬೋಳಿಸಿದ ಎಂದು ಅರ್ಥ ಮಾಡಿಕೊಳ್ಳಬೇಕು. 'ಸಂಪತ್ತು ಕಳೆದುಕೊಂಡವನು ತಲೆ ಬೋಳಿಸಿಕೊಂಡವನು' ಎಂಬ ಮಾತು ಈ ಹಿನ್ನೆಲೆಯಲ್ಲೇ ರೂಢಿಯಲ್ಲಿ ಬಂದಿತೆಂದು ಭಾವಿಸಬಹುದು.

ರುಗ್ಮಿಯೊಂದಿಗೆ ಶ್ರೀಕೃಷ್ಣರುಗ್ಮಿಣಿಯರ ವಿನೋದ

ಸದೈಕಮಾನಸಾವಪಿ ಸ್ವಧರ್ಮಶಾಸಕೌ ನೃಣಾಮ್ ।
ರಮಾ ಹರಿಶ್ಚ ತತ್ರ ತೌ ವಿಜಹ್ರತುರ್ಹಿ ರುಗ್ಮಿಣಾ ॥ ೧೬೩ ॥

ಅ: ಲಕ್ಷ್ಮೀನಾರಾಯಣರು ಸದಾ ಒಂದೇ ಮನಸ್ಸಿನವರಾದರೂ, ಜನರಿಗೆ ಸ್ವಧರ್ಮವನ್ನು ತೋರಿಸುತ್ತಾ ಆ ರುಗ್ಮಿಯೊಂದಿಗೆ ವಿನೋದ ಮಾಡಿದರು.

ಶ್ರೀಕೃಷ್ಣನಿಂದ ಸಾಲ್ವಪರಾಭವ

ಅಥಾಸಸಾದ ಸೌಭರಾಟ್ ಹರಿಂ ಶರಾಂಬುವರ್ಷಣಃ ।
ಹರಿಃ ಶರಂ ಯಮೋಪಮಂ ಮುಮೋಚ ತಸ್ಯ ವಕ್ಷಸಿ ॥ ೧೬೪ ॥

ಅ: ಬಳಿಕ ಸೌಭರಾಜನಾದ ಸಾಲ್ವ ಬಾಣಗಳ ಮಳೆಗರೆಯುತ್ತಾ ಶ್ರೀಕೃಷ್ಣನನ್ನು ಎದುರಿಸಿದ. ಶ್ರೀಕೃಷ್ಣ ಯಮಸದೃಶವಾದ ಬಾಣವನ್ನು ಅವನ ಎದೆಗೆ ಪ್ರಯೋಗಿಸಿದ.

ಶರೇಣ ತೇನ ಪೀಡಿತಃ ಪಪಾತ ಮಂದಚೇಷ್ಟಿತಃ ।
ಚಿರಾತ್ತಸಂಜ್ಞಕೋಽಗಮತ್ ತ್ರಿನೇತ್ರತೋಷಣೇಚ್ಛಯಾ ॥ ೧೬೫ ॥

ಅ: ಆ ಬಾಣದಿಂದ ಪೆಟ್ಟು ತಿಂದ ಸಾಲ್ವ ನರಳುತ್ತಾ ನಿಶ್ಚೇಷ್ಟನಾಗಿ ಕೆಳಗೆ ಬಿದ್ದ. ಬಹುಹೊತ್ತಿನ ಮೇಲೆ ಎಚ್ಚೆತ್ತು ಶಿವನನ್ನು ಒಲಿಸುವ ಇಚ್ಛೆಯಿಂದ ತೆರಳಿದ.

ಸಮಸ್ತರಾಜಸನ್ನಿಧಾವಯಾದವೀಂ ಮಹೀಮಹಮ್ ।
ಕರಿಷ್ಯ ಇತ್ಯುದೀರ್ಯ ಸ ವ್ಯಧಾತ್ ತಪೋಽತಿದುಶ್ಚರಮ್ ॥ ೧೬೬ ॥

ಅ: ಸಕಲರಾಜರ ಎದುರು ''ನಾನು ಈ ಭೂಮಿಯ ಮೇಲೆ ಯಾದವರನ್ನು ಇಲ್ಲ-ವಾಗಿಸುವೆ'' ಎಂದು ನುಡಿದು, ಅವನು ಅತ್ಯಂತದುಷ್ಕರವಾದ ತಪಸ್ಸನ್ನು ಆಚರಿಸತೊಡಗಿದ.

ಶ್ರೀಕೃಷ್ಣರುಗ್ಮಿಣಿಯರ ದ್ವಾರಕಾಪ್ರವೇಶ

ಅಥೋ ವಿವೇಶ ಕೇಶವಃ ಪುರೀಂ ಕುಶಸ್ಥಲೀಂ ಪ್ರಭುಃ ।
ಪ್ರಿಯಾಯುತೋಽಬ್ಜಜಾದಿಭಿಃ ಸಮೀಡಿತಃ ಸುರೇಶ್ವರೈಃ ॥ ೧೬೭ ॥

ಅ: ಬಳಿಕ ಪ್ರಭುವಾದ ಶ್ರೀಕೃಷ್ಣ ಪ್ರಿಯೆಯಾದ ರುಗ್ಮಿಣಿಯೊಂದಿಗೆ ಕೂಡಿ, ಬ್ರಹ್ಮಾದಿದೇವಶ್ರೇಷ್ಠರುಗಳಿಂದ ಬಗೆಬಗೆಯಾಗಿ ಸ್ತುತಿಸಿಕೊಳ್ಳುತ್ತಾ ದ್ವಾರಕಾಪುರಿಯನ್ನು ಪ್ರವೇಶಿಸಿದ.

ಬಲರಾಮನೊಂದಿಗೆ ರೇವತಿಯ ವಿವಾಹ

ಪುರಾ ತತೋ ಹಲಾಯುಧಃ ಪ್ರಿಯಾಂ ನಿಜಾಂ ಪುರಾಽಪಿ ಹಿ ।
ಸ ವಾರುಣೀ ಸಮಾಹ್ವಯಾಮವಾಪ ರೇವತೀಂ ಪ್ರಭುಃ ॥ ೧೬೮ ॥

ಅ: ಅದಕ್ಕಿಂತ ಮುಂಚೆಯೇ ಪ್ರಭುವಾದ ಬಲರಾಮ ಮೊದಲಿಗೂ ತನಗೆ ವಾರುಣೀ ಎಂಬ ಹೆಸರಿನ ಪತ್ನಿಯೇ ಆಗಿದ್ದ ರೇವತಿಯನ್ನು ಮದುವೆಯಾಗಿದ್ದ.

ವಿ: ಕೃಷ್ಣನ ವಿವಾಹಕ್ಕಿಂತ ಮುಂಚೆ ಬಲರಾಮನ ವಿವಾಹ ರೈವತರಾಜನಾದ ಕಕುದ್ಮೀ ಎಂಬವನ ಮಗಳಾದ ರೇವತಿಯೊಂದಿಗೆ ನಡೆದಿತ್ತು. ಅವಳು ಸ್ವರೂಪದಲ್ಲೂ ಸಹ ಶೇಷಪತ್ನಿಯಾದ ವಾರುಣಿಯೇ.

ಪತಿಂ ಯಥಾಽನುರೂಪಿಣಂ ತದೀಯಮೇವ ಪೂರ್ವಕಮ್ ।
ಪಿತಾ ತದೀಯ[೧] ಐಚ್ಛತ ಪ್ರವೇತ್ತುಮಬ್ಜಸಂಭವಾತ್ ॥ ೧೬೯ ॥

---

೧. ತದೀಯಃ ರೇವತೀಸಂಬಂಧೀ ಪಿತಾ ಕಕುದ್ಮೀ । – (ಜ.)

ರೇವತೋ ರೇವತೀಂ ಕನ್ಯಾಂ ಸ್ವಾಮಾದಾಯ ವಿಭುಂ ಗತಃ ।
ಪುತ್ರ್ಯಾ ವರಂ ಪರಿಪ್ರಷ್ಟುಂ ಬ್ರಹ್ಮಲೋಕಮಪಾವೃತಮ್ ॥ (ಇತ್ಯಾದಿ) – ಭಾಗವತ (೯/೪/೨೯)

ಅ: ಹಿಂದೆ ಅವಳ ತಂದೆ ರೈವತರಾಜ ಅವಳಿಗೆ ಸ್ವರೂಪದಲ್ಲೂ ಪತಿಯೇ ಆದಂತಹ ಅನುರೂಪನಾದ ಪತಿಯನ್ನು ಬ್ರಹ್ಮದೇವರಿಂದ ತಿಳಿಯಲು ಅಪೇಕ್ಷಿಸಿದ.

ವಿ: ಅದು ಕೃತಯುಗದಲ್ಲಿ ನಡೆದ ಕಥೆ. ರೈವತರಾಜ ತನ್ನ ಪುತ್ರಿ ರೇವತಿಗೆ ಸ್ವನಿಯತಪತಿ ಯಾರು ಎಂಬುದನ್ನು ತಿಳಿಯಲು ಅವಳೊಂದಿಗೆ ಬ್ರಹ್ಮದೇವರ ಬಳಿಗೆ ತೆರಳಿದ. ವಿವಾಹ ಬ್ರಹ್ಮಘಟನೆ ಎಂಬ ಹಿನ್ನೆಲೆಯಲ್ಲಿ ಅವನು ಅದನ್ನು ತಿಳಿಯಲು ಬ್ರಹ್ಮದೇವರ ಬಳಿಗೆ ತೆರಳಿದ್ದರಲ್ಲಿ ಔಚಿತ್ಯವಿದೆ.

ಸ ತತ್ಸದೋಗತೋ[೧] ವರಾತ್ ತದೀಯತಃ ಪ್ರಗೀತಿಕಾಮ್ ।
ನಿಶಮ್ಯ ನಾವಿದದ್ಗತಂ ಯುಗೋರುಕಾಲಪರ್ಯಯಮ್ ॥ ೧೭೦ ॥

ಅ: ಅವನು ಬ್ರಹ್ಮನ ವರದಿಂದಾಗಿ ಬ್ರಹ್ಮಲೋಕಕ್ಕೆ ತೆರಳಿ, ಅಲ್ಲಿ ನಡೆದಿದ್ದ ಸಂಗೀತವನ್ನು ಶ್ರವಣಮಾಡುತ್ತಾ, ಯುಗಗಳಷ್ಟು ಹೆಚ್ಚಿನ ಕಾಲ ಸಂದುದನ್ನು ತಿಳಿಯಲೇ ಇಲ್ಲ.

ವಿ: ಅವನು ಬ್ರಹ್ಮನ ಸಭೆಗೆ ತೆರಳಲು ಸಾಧ್ಯವಾದದ್ದು ಬ್ರಹ್ಮದೇವರಿಂದ ಅವನು ಅದಕ್ಕಾಗಿ ಪಡೆದಿದ್ದ ವರ. ಮೇರುಶಿಖರದ ಬ್ರಹ್ಮಸಭೆಯಲ್ಲಿ ಹಾಹಾಹೂಹೂ ಗಂಧರ್ವರ ಗಾನ ಅವನು ಅಲ್ಲಿಗೆ ತೆರಳಿದ್ದಾಗ ನಡೆದಿತ್ತು, ಬ್ರಹ್ಮದೇವರ ಕಾಲಮಾನ ತುಂಬಾ ದೀರ್ಘವಾದ್ದರಿಂದ ಅಲ್ಲಿಯ ಸ್ವಲ್ಪಕಾಲ ಭೂಲೋಕದ ಯುಗಗಟ್ಟಲೆ ಕಾಲಕ್ಕೆ ಸಮಾನ. ಅದರಂತೆ ಇಲ್ಲಿಯ ಬಹುಕಾಲ ಅಲ್ಲಿಯ ಸ್ವಲ್ಪಕಾಲ ಮಾತ್ರ. ಅವನು ಅಲ್ಲಿ ಸ್ವಲ್ಪ ಕಾಲ ಸಂಗೀತದಲ್ಲಿ ತನ್ಮಯನಾಗಿದ್ದರೂ, ಭೂಲೋಕದಲ್ಲಿ ಹಲವು ಯುಗಗಳೇ ಕಳೆದುಹೋಗಿದ್ದವು ಎಂದರ್ಥ.

ನರಾನಯೋಗ್ಯಗೀತಿಕಾ ವಿಮೋಹಯೇತ್ ತತೋ ನೃಪಃ ।
ಸ ಮೂಢಬುದ್ಧಿರಂತತೋಽಲ್ಪಕಾಲ ಇತ್ಯಮನ್ಯತ ॥ ೧೭೧ ॥

---

೧. ಸದೋಗತ ಇತಿ । ಪುತ್ರ್ಯಾ ಸಹಿತೇತಿ ಶೇಷಃ । ತಥಾ ಚ ಭಾಗವತೇ –

ಕಕುದ್ಮೀ ರೇವತೀಂ ಕನ್ಯಾಂ ಸ್ವಾಮಾದಾಯ ವಿಭುಂ ಗತಃ ।
ಪುತ್ರ್ಯಾ ವರಂ ಪರಿಪ್ರಷ್ಟುಂ ಬ್ರಹ್ಮಲೋಕಮಪಾವೃತಮ್ ॥ ಇತಿ ।

– ಅತ್ರ ಸದಃಶಬ್ದೇನ ಮೇರುಗತಂ ಬ್ರಹ್ಮಸದೋ ವಿವಕ್ಷಿತಮ್ ।

ಕಥಂ ಬಹುತಿಥೇ ಕಾಲೇ ವ್ಯತೀತೇ ಸೂತನಂದನ ।
ನೋ ಜರಾ ರೇವತೀಂ ಪ್ರಾಪ ರೈವತಂ ವಾ ಕಕುದ್ಮಿನಮ್ ।
ಮೇರುಗತಸ್ಯ ವಾ ತಸ್ಯ ಸಂಜಾತಾ ಸಂಗತಿಃ ಕಥಮ್ ॥

– ಇತಿ ಪುರಾಣವಚನಾದಿತಿ ಜ್ಞೇಯಮ್ । – (ತಾ.)

ಅ: ಮನುಷ್ಯರನ್ನು ಅವರಿಗೆ ಅರ್ಹತೆಯಿಲ್ಲದ ಸಂಗೀತ ಮೈಮರೆಸುವುದು. ಅದರಿಂದಾಗಿ ರಾಜ ಬುದ್ಧಿಗೆ ಮೋಹ ಕವಿದವನಾಗಿ ಆ ಸಂಗೀತ ಮುಗಿದ ಮೇಲೆ ಕಳೆದದ್ದು ಸ್ವಲ್ಪಕಾಲ ಎಂದು ಭಾವಿಸಿದ.

ವಿ: ಇಲ್ಲಿ ಅಯೋಗ್ಯ ಎಂದರೆ ಯೋಗ್ಯತೆಗೆ ಮೀರಿದ ಎಂದರ್ಥ. ಯೋಗ್ಯತೆಗೆ ಮೀರಿದ ಗಾನ ಮೈಮರೆಸಿದ್ದರಿಂದ, ಅವನಿಗೆ ಆ ದೀರ್ಘಕಾಲವೂ ಅಲ್ಪಕಾಲದಂತೆ ತೋರಿತು ಎಂದು ಭಾವ. ಶ್ರೀಮದಾಚಾರ್ಯರು ಗೋವೆಯ ಬಳಿಯ ತುಂಬಿದ ಸಭೆಯೊಂದರಲ್ಲಿ ಜನರ ಅಪೇಕ್ಷೆಯಂತೆ ಹಾಡಿದಾಗ, ಶ್ರೋತೃಗಳೆಲ್ಲ ಕ್ಷಣಮಾತ್ರದಲ್ಲಿ ಮೈಮರೆತಿದ್ದರು ಎಂಬ ವಿವರ ಸುಮಧ್ವವಿಜಯದಲ್ಲಿ ಬಂದಿರುವುದನ್ನು ಸ್ಮರಿಸಬಹುದು :

'ಜನಸುಪ್ತಿದಾನುಪಮಗಾನಸಂಪದಾ' – (೧೦/೫೩)

ಸ ಮೂರ್ಛಿತಃ ಪ್ರಬೋಧಿತೋಽಬ್ಜಜೇನ ತಂ ತ್ವಪೃಚ್ಛತ ।
ಸುತಾಪತಿಂ ಬಲಂ ಚ ಸೋಽಬ್ರವೀದ್ಯುಗಾತ್ಯಯೇ ಬಹೌ ॥ ೧೭೨ ॥

ಅ: ಮೈಮರೆತಿದ್ದ ಅವನನ್ನು ಬ್ರಹ್ಮ ಎಚ್ಚರಗೊಳಿಸಿದ. ಅವನು ತನ್ನ ಮಗಳಿಗೆ ವರನಾರು ಎಂದು ಕೇಳಿದ. ಆಗ ಬಹುಯುಗಗಳು ಕಳೆದಿದ್ದರಿಂದ ಬ್ರಹ್ಮದೇವರು 'ಬಲರಾಮ' ಎಂದು ನುಡಿದರು.

ವಿ: ರೈವತ ಭೂಲೋಕದಿಂದ ತೆರಳಿದ್ದಾಗ ಇದ್ದ ರಾಜರುಗಳಿರಲಿ, ರಾಜಮನೆತನಗಳೂ ಸಹ ಇರಲಿಲ್ಲ. ಏಕೆಂದರೆ ಈವೇಳೆಗಾಗಲೇ ಇಪ್ಪತ್ತೆಂಟನೆಯ ದ್ವಾಪರಯುಗ ನಡೆಯುತ್ತಿತ್ತು. ಇದೆಲ್ಲ ಅವನಿಗೆ ತಿಳಿಯದಿದ್ದರೂ, ಸರ್ವಜ್ಞನಾದ ಬ್ರಹ್ಮದೇವರು ಮಾತ್ರ ಆಗ ಭೂಲೋಕದಲ್ಲಿ ಅವತರಿಸಿದ್ದ ಅವಳ ನಿಯತಪತಿಯಾದ ಬಲರಾಮನನ್ನೇ ಪತಿಯೆಂದು ತಿಳಿಸಿದರು.

ಸ [೧]ರೈವತೋ ಬಲಾಯ ತಾಂ ಪ್ರದಾಯ ಗಂಧಮಾದನಮ್ ।
ಗತೋಽತ್ರ ಚೀರ್ಣಸತ್ತಪಾ ಅವಾಪ ಕೇಶವಾಂತಿಕಮ್ ॥ ೧೭೩ ॥

ಅ: ಆ ರೈವತರಾಜ ಅವಳನ್ನು ಬಲರಾಮನಿಗೆ [೨]ಧಾರೆಯೆರೆದು, ಗಂಧಮಾದನಕ್ಕೆ ತೆರಳಿದ. ಅಲ್ಲಿ ತಪಸ್ಸನ್ನು ಆಚರಿಸಿ, ಹರಿಸನ್ನಿಧಿಯನ್ನು ತಲುಪಿದ.

---

೧. ರೈವತಃ ರೇವತಪುತ್ರಕಃ ಕಕುದ್ಮತೀ ತಾಮ್ । – (ವ.)

೨. ಸ್ವೋಚ್ಚಭಾರ್ಯಾ ನ ವಿವಾಹ್ಯೇತ್ಯುಕ್ತಧರ್ಮಶಾಸ್ತ್ರಾದಿತಿ ಭಾವಃ । – (ಜ.)

ಬಲೋಽಪಿ ತಾಂ ಪುರಾತನಪ್ರಮಾಣಸಂಮಿತಾಂ ವಿಭುಃ ।
ಹಲೇನ ಚಾತ್ಮನಾ ಸಮಾಂ ಚಕಾರ ಸತ್ಯವಾಂಛಿತಃ ॥ ೧೭೪ ॥

ಅ: ಸಮರ್ಥನೂ, ಸತ್ಯಸಂಕಲ್ಪನೂ ಆದ ಬಲರಾಮನು ಸಹ ಹಿಂದಿನಕಾಲದ ದೇಹಮಾನಕ್ಕೆ ತಕ್ಕಂತೆ ದೇಹಪ್ರಮಾಣ ಹೊಂದಿದ್ದ ಅವಳನ್ನು ತನ್ನ ನೇಗಿಲಿನಿಂದ ತನಗೆ ಅನುರೂಪಳನ್ನಾಗುವಂತೆ ಮಾಡಿಕೊಂಡನು.

ವಿ: ೧) ಶಾಸ್ತ್ರದ ನಿಯಮದಂತೆ ಪತ್ನಿ ಪತಿಗಿಂತ ಎತ್ತರದಲ್ಲಿ [೧]ಕಡಿಮೆಯಿರಬೇಕು. ಆದರೆ ರೇವತಿ ಕೃತಯುಗದವಳು. ಕೃತಯುಗದ ದೇಹದ ಎತ್ತರ ಇಪ್ಪತ್ತೆಂಟು ಮೊಳ. ಬಲರಾಮ ದ್ವಾಪರಯುಗದವನು. ದ್ವಾಪರಯುಗದಂತೆ ಅವನ ಎತ್ತರ ಏಳು ಮೊಳಗಳು. ಎಂದರೆ ಬಲರಾಮನಿಗಿಂತ ನಾಲ್ಕುಪಟ್ಟು ಎತ್ತರ ರೇವತಿಯದು. ಆದರೆ ಅವಳು ಅವರ ನಿಯತಪತ್ನಿ. ಸ್ವರೂಪದಲ್ಲಿ ಸರ್ವಥಾ ಅನುರೂಪಳೇ. ಅವಳ ದೇಹದ ಎತ್ತರವನ್ನು ಬಲರಾಮ ತನ್ನ ನೇಗಿಲಿನಿಂದ ತನ್ನ ದೇಹದ ಎತ್ತರಕ್ಕೆ ಹೊಂದುವಂತೆ ಚಿಕ್ಕದನ್ನಾಗಿಸಿದ. ಇದು ಬಲರಾಮನ ಅದ್ಭುತವಾದ ಸಾಮರ್ಥ್ಯಕ್ಕೆ ನಿದರ್ಶನ.

೨) ಆ ಮೂಲಕ ಬಲರಾಮ ಯೋಗ್ಯಪತಿಯಾದವನು ತನಗೆ ತಕ್ಕಂತೆ ಸತಿಯನ್ನು ಹೊಂದಿಸಿಕೊಳ್ಳಬೇಕೇ ಹೊರತು, ಅವಳಿಗೆ ತಕ್ಕಂತೆ ತಾನೇ ಬದಲಾಗಬಾರದೆಂಬ ಧರ್ಮಸೂಕ್ಷ್ಮವನ್ನು ಸಾರಿದ ಎಂದೂ ತಿಳಿಯಬಹುದು.

ರೇವತಿಯಲ್ಲಿ ಶಠ ಉಲ್ಮುಕರ ಜನನ

ತಯಾ ರತಃ ಸುತಾವುಭೌ ಶಠೋಲ್ಮುಕಾಭಿಧಾವಧಾತ್ ।
ಪುರಾರ್ಯಮಾಂಶಕೌ [೨] ಸುರಾವುದಾರಚೇಷ್ಟಿತೋ ಬಲಃ ॥ ೧೭೫ ॥

---

೧. ನೋದ್ವಹೇತ್ ಕಪಿಲಾಂ ಕನ್ಯಾಂ ನಾಧಿಕಾಂಗೀಂ ನ ರೋಗಿಣೀಮ್ । –ಮನುಸ್ಮೃತಿ (ಅ. ೩, ಶ್ಲೋ. ೮)

೨. ಆದಿತ್ಯಶ್ಚೋಕ್ತಾ ಹರಿವಂಶೇ –
'ಧಾತಾರ್ಯಮಾ ಚ ಮಿತ್ರಶ್ಚ ವರುಣಾಂಶೋ ಭಗಸ್ತಥಾ ।
ಇಂದ್ರೋ ವಿವಸ್ವಾನ್ ಪೂಷಾ ಚ ತ್ವಷ್ಟಾ ಚ ಸವಿತಾ ತಥಾ ॥
ಕಥಿತೋ ವಿಷ್ಣುರಿತ್ಯೇಷ ಕಾಶ್ಯಪೇಯೋ ಗಣಸ್ತಥಾ ।
ಇತ್ಯೇತೇ ದ್ವಾದಶಾದಿತ್ಯಾ ಜ್ವಲಂತಃ ಸೂರ್ಯವರ್ಚಸಃ ॥' –(ಜ.)

ಅರ್ಯಮಾ ಚಾಂಶಕಶ್ಚೇತ್ಯರ್ಯಮಾಂಶಕೌ ।
ಅಶ್ವಿನೌ ನಿರ್ಋತಿಶ್ಚೈವ ಕುವರಶ್ಚ ದಿಗೀಶ್ವರಾಃ ।
ಅರ್ಯಮ್ಣ್ಯಂಶಾದಿಚತುರ್ಥ ವಿಶೇಷಾವೇಶಸಂಯುತಾಃ ॥ ಇತಿ ಬೃಹದ್ಧಾಷ್ಯೇ ।
ಅಂಶನಾಮಕಾದಿತ್ಯಸ್ಯೋಕ್ತೇ ನ ಪ್ರಸಿದ್ಧಕಲ್ಪನೇತಿ ಜ್ಞೇಯಮ್ । –(ತಾ.)

ಅ: ಅವಳೊಂದಿಗೆ ರಮಿಸಿ, ಉತ್ಕೃಷ್ಟಮಹಿಮನಾದ ಬಲರಾಮ ಶಠ ಮತ್ತು ಉಲ್ಮುಕ ಎಂಬ ಹೆಸರಿನ ಇಬ್ಬರು ಪುತ್ರರನ್ನು ಪಡೆದ. ಅವರು ಹಿಂದೆ ಸೂರ್ಯರಾಗಿದ್ದ ಅರ್ಯಮಾ ಮತ್ತು ಅಂಶ ಎಂಬ ದೇವತೆಗಳು.

ವಿ: [೨]ದ್ವಾದಶಾದಿತ್ಯರಲ್ಲಿ ಅರ್ಯಮಾ ಮತ್ತು ಅಂಶ ಎಂಬ ಇಬ್ಬರು ಆದಿತ್ಯರು ಬಲರಾಮಪುತ್ರರಾಗಿ ಜನಿಸಿದರು ಎಂದರ್ಥ.

ಶ್ರೀಕೃಷ್ಣರುಗ್ಮಿಣಿಯರ ವಿವಾಹ

ಜನಾರ್ದನಶ್ಚ ರುಗ್ಮಿಣೀಕರಂ ಶುಭೇ ದಿನೇಽಗ್ರಹೀತ್ ।
ಮಹೋತ್ಸವಸ್ತದಾಽಭವತ್ ಕುಶಸ್ಥಲೀನಿವಾಸಿನಾಮ್ ॥ ೧೭೬ ॥

ಅ: ಶುಭದಿನದಲ್ಲಿ ಶ್ರೀಕೃಷ್ಣ ರುಗ್ಮಿಣಿಯ ಕೈಹಿಡಿದ. ಅದು ದ್ವಾರಕಾನಿವಾಸಿಗಳಿಗೆ ದೊಡ್ಡ ಹಬ್ಬವಾಯಿತು.

ವಿ: ಕೃಷ್ಣರುಗ್ಮಿಣಿಯರು ನಿತ್ಯದಂಪತಿಗಳು; ನಿತ್ಯಮುಕ್ತರು. ಅವರಿಗೆ ಅಶುಭದ ಹೆಸರೂ ಇಲ್ಲ. ಆದರೂ ಕೃಷ್ಣ ಶುಭದಿನದಲ್ಲಿ ವಿವಾಹವಾಗುವ ಮೂಲಕ ವಿವಾಹಕ್ಕೆ ಶುಭಮುಹೂರ್ತವನ್ನೇ ನಿಶ್ಚಯಿಸಬೇಕೆಂಬ ತತ್ತ್ವವನ್ನೂ ತಿಳಿಸಿದ ಎಂದು ತಿಳಿಯಬೇಕು. ಸಾಮಾನ್ಯವಿವಾಹವೇ ಹಬ್ಬವೆನ್ನಿ–ಸುವಾಗ, ಆ ಅಸಾಮಾನ್ಯವಿವಾಹ ಮಹೋತ್ಸವವೆನ್ನಿಸಿದ್ದರಲ್ಲಿ ಆಶ್ಚರ್ಯವೇನಿದೆ ಎಂದು ಭಾವ.

ಚತುರ್ಮುಖೇಶಪೂರ್ವಕಾಃ ಸುರಾ ವಿಯತ್ಯವಸ್ಥಿತಾಃ ।
ಪ್ರತುಷ್ಟುವುರ್ಜನಾರ್ದನಂ ರಮಾಸಮೇತಮವ್ಯಯಮ್ ॥ ೧೭೭ ॥

ಬ್ರಹ್ಮ ರುದ್ರ ಮೊದಲಾದ ದೇವತೆಗಳೆಲ್ಲ ಗಗನದಲ್ಲಿ ನಿಂತು, ಲಕ್ಷ್ಮೀಸಮೇತನಾದ ಅವ್ಯಯನಾದ ಶ್ರೀಕೃಷ್ಣನನ್ನು ವಿಶೇಷವಾಗಿ ಸ್ತುತಿಗೈದರು.

ಮುನೀಂದ್ರದೇವಗಾಯಕಾದಯೋಽಪಿ ಯಾದವೈಃ ಸಹ ।
ವಿಚೇರುರುತ್ತಮೋತ್ಸವೇ ರಮಾರಮೇಶಯೋಗಿನಿ ॥ ೧೭೮ ॥

ಮುನಿಶ್ರೇಷ್ಠರು, ದೇವಗಂಧರ್ವರು ಮೊದಲಾದವರು ಸಹ ಆ ಯಾದವರೊಂದಿಗೆ ಆ ರುಕ್ಮಿಣೀಕೃಷ್ಣರ ವಿವಾಹಸಂಭ್ರಮದಲ್ಲಿ ಓಡಾಡಿದರು.

ಸುರಾಂಶಕಾಶ್ಚ ಯೇ ನೃಪಾಃ ಸಮಾಹುತಾ ಮಹೋತ್ಸವೇ ।
ಸಪಾಂಡವಾಃ ಸಮಾಯಯುರ್ಹರಿಂ ರಮಾಸಮಾಯುತಮ್ ॥ ೧೭೯ ॥

ಅ: ದೇವತಾಂಶಸಂಭೂತರಾದ ರಾಜರುಗಳು ಪಾಂಡವರ ಸಮೇತವಾಗಿ ಆ ಮಹೋತ್ಸವಕ್ಕೆ ಆಹ್ವಾನಿತರಾಗಿ ರುಗ್ಮಿಣೀಸಮೇತನಾದ ಶ್ರೀಕೃಷ್ಣನ ಬಳಿಗೆ ಧಾವಿಸಿದರು.

ವಿ: ೧) ಆ ವಿವಾಹಮಹೋತ್ಸವಕ್ಕೆ ಬಂದ ರಾಜಮಹಾರಾಜರುಗಳೆಲ್ಲ ದೇವಾಂಶಸಂಭೂತ–ರಾದ ಉತ್ತಮಚೇತನರೇ ಆಗಿದ್ದರು ಎಂದರ್ಥ.

೨) ಹಾಗೆ ಯೋಗ್ಯಜನ ಸೇರಿದಾಗಲೇ ಅದು ಶಾಸ್ತ್ರೋಕ್ತವಿವಾಹ ಎನ್ನಿಸುವುದು ಎಂಬ ತತ್ತ್ವವನ್ನೂ ಇದರಿಂದ ತಿಳಿಯಬೇಕು.

ಸಮಸ್ತಲೋಕಸುಂದರೌ ಯುತೌ ರಮಾರಮೇಶ್ವರೌ ।
ಸಮೀಕ್ಷ್ಯ ಮೋದಮಾಯಯುಃ ಸಮಸ್ತಲೋಕಸಜ್ಜನಾಃ ॥ ೧೮೦ ॥

ಅ: ಸಮಸ್ತಲೋಕಮನೋಹರರಾದ ಲಕ್ಷ್ಮೀನಾರಾಯಣರಾದ ಕೃಷ್ಣರುಗ್ಮಿಣಿಯರು ಜೊತೆ ಇರುವುದನ್ನು ನೋಡಿ, ಸಮಸ್ತಲೋಕಗಳ ಸಜ್ಜನರೂ ಆನಂದಿಸಿದರು.

ವಿ: ಲಕ್ಷ್ಮೀನಾರಾಯಣರಿಬ್ಬರೂ ಎಂದೂ ಜೊತೆಯಾಗಿರುವವರೇ. ಆದರೂ ಸಾಮಾನ್ಯರಿಗೆ ಅಂತಹ ತತ್ತ್ವ ಮನವರಿಕೆಯಾಗುವುದು ಇಂತಹ ವಿಶೇಷಸಂದರ್ಭಗಳಲ್ಲಿ ಮಾತ್ರ ಎಂದರ್ಥ.

ಪ್ರದ್ಯುಮ್ನೋತ್ಪತ್ತಿ

ತಯಾ ರಮನ್ ಜನಾರ್ದನೋ ವಿಯೋಗಶೂನ್ಯಯಾ ಸದಾ ।
ಅಧತ್ತ ಪುತ್ರಮುತ್ತಮಂ ಮನೋಭವಂ ಪುರಾತನಮ್ ॥ ೧೮೧ ॥

ಅ: ನಿತ್ಯಾವಿಯೋಗಿನಿಯಾದ ರುಗ್ಮಿಣಿಯೊಂದಿಗೆ ರಮಿಸಿ, ಶ್ರೀಕೃಷ್ಣ ಹಿಂದೆ ಮನ್ಮಥನಾಗಿದ್ದ ಉತ್ತಮಪುತ್ರನನ್ನು ಹುಟ್ಟಿಸಿದ.

ವಿ: ಮಹಾಲಕ್ಷ್ಮಿ ಮಾತ್ರವಲ್ಲದೆ, ಮಹಾಲಕ್ಷ್ಮಿಯ ಸೀತಾ, ರುಗ್ಮಿಣಿ ಮೊದಲಾದ ಸಕಲ ರೂಪಗಳೂ ಶ್ರೀಹರಿಯೊಂದಿಗೆ ನಿತ್ಯಾವಿಯೋಗಿಯಾದರೂಪಗಳು ಎಂಬುದನ್ನು ಇಲ್ಲಿ ತಿಳಿಸಿರುವರು. ಶ್ರೀಕೃಷ್ಣ ರುಗ್ಮಿಣಿಯಲ್ಲಿ ಪಡೆದ ಪುತ್ರ ಕಾಮನ ಅವತಾರನಾದ ಪ್ರದ್ಯುಮ್ನ.

ಪ್ರದ್ಯುಮ್ನನ ಹಿರಿಮೆ

ಚತುಸ್ತನೋರ್ಹರೇಃ ಪ್ರಭೋಸ್ತೃತೀಯರೂಪಸಂಯುತಃ ।
ತತಸ್ತದಾಹ್ವಯೋಽಭವತ್ ಸ ರುಗ್ಮಿಣೀಸುತೋ ಬಲೀ ॥ ೧೮೨ ॥

ಅ: ವಾಸುದೇವಾದಿನಾಲ್ಕುರೂಪಗಳ ಶ್ರೀಹರಿಯ ಮೂರನೆಯ ರೂಪವಾದ ಪ್ರದ್ಯುಮ್ನನ ವಿಶೇಷಸನ್ನಿಧಾನದಿಂದ ಕೂಡಿದ್ದರಿಂದ ರುಗ್ಮಿಣೀಪುತ್ರನಾದ ಪ್ರದ್ಯುಮ್ನ ಆ ಹೆಸರನ್ನೇ ಹೊಂದಿದ.

ವಿ: ೧) ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಶ್ರೀಹರಿಯ ಚತುರ್ವ್ಯೂಹರೂಪಗಳಲ್ಲಿ ಮೂರನೆಯದು ಪ್ರದ್ಯುಮ್ನರೂಪ. ಆ ರೂಪದ ವಿಶೇಷ ಆವೇಶವನ್ನು ಹೊಂದಿದ್ದರಿಂದಾಗಿ ಅವನಿಗೆ ಆ ಹೆಸರಾಯಿತೆಂದು ಭಾವ.

೨) ಶ್ರೀಹರಿಯ ಚತುರ್ವ್ಯೂಹರೂಪದ ಪರಿಜ್ಞಾನವಿಲ್ಲದ ಜನ ಈ ಪ್ರದ್ಯುಮ್ನನನ್ನೇ ಸಾಕ್ಷಾತ್ ಶ್ರೀಹರಿಯ ಅವತಾರವೆಂದು ಭ್ರಮಿಸುವ ಅಪಾಯವನ್ನು ಈ ರೀತಿಯ ನಿರ್ಣಯದ ಮೂಲಕ ಶ್ರೀಮದಾಚಾರ್ಯರು ಪರಿಹರಿಸಿರುವರು.

ಶಂಬರಾಸುರನಿಂದ ಪ್ರದ್ಯುಮ್ನನ ಹರಣ

ಪುರೈವ ಮೃತ್ಯವೇಽವದತ್ ತಮೇವ ಶಂಬರಸ್ಯ ಹಿ ।
ಪ್ರಜಾತಮಬ್ಜಜಾಂಕಜಸ್ತವಾಂತಕೋಽಯಮಿತ್ಯಪಿ ॥ ೧೮೩ ॥

ಅ: ಬ್ರಹ್ಮಪುತ್ರರಾದ ನಾರದರು ಪ್ರದ್ಯುಮ್ನ ಹುಟ್ಟುವ ಮುನ್ನವೇ ಶಂಬರಾಸುರನಿಗೆ ಅವನು ಅವನಿಗೆ [೧]ಮೃತ್ಯುವಾಗುವನೆಂಬುದನ್ನು ತಿಳಿಸಿದ್ದರು. ಹುಟ್ಟಿದ ಅನಂತರವೂ ''ಇವನೇ ನಿನ್ನ ಮೃತ್ಯು'' ಎಂದು ತಿಳಿಸಿದರು.

ವಿ: ೧) ಶಂಬರಾಸುರ ದೇವಾಸುರಯುದ್ಧದಲ್ಲಿ ಇಂದ್ರನಿಂದ ಹತನಾದ ಮಹಾದಾನವ. ವಿಪ್ರಚಿತ್ತಿಯ ತಮ್ಮ. ಮಹಾಮಾಯಾವಿಯೆಂದು ಪ್ರಸಿದ್ಧನಾದವನು. ಇವನನ್ನು ಕೊಂದದ್ದರಿಂದ ಇಂದ್ರನಿಗೆ 'ಶಂಬರಾರಿ' ಎಂದು ಹೆಸರು.

೨) ಅವನು ಇಂದ್ರಸಮನಾದ ಕಾಮನ ಅವತಾರನಾದ ಈ ಪ್ರದ್ಯುಮ್ನನಿಂದ ಮತ್ತೊಮ್ಮೆ ಸಾಯಲಿ ಎಂಬ ಕಾರಣದಿಂದ ನಾರದರು ಅವನಿಗೆ ಆ ವಿಷಯ ತಿಳಿಸಿದರು ಎಂದು ಮುಂದಿನ ವಿವರಗಳಿಂದ ಸ್ಫುಟಪಡುವುದು.

---

೧. ಅಯಂ ರುಗ್ಮಿಣ್ಯಾಮುತ್ಪನ್ನೋಽಯಂ ಪ್ರದ್ಯುಮ್ನಃ ತವ ಮೃತ್ಯುರಿತಿ ಪುನರವದದಿತಿ ಪದ್ಯಸ್ಥಪದಾನ್ಯಾವೃತ್ಯ ಕಾನಿಚಿತ್ಪದಾನ್ಯಾಹಾರ್ಯ ಯೋಜ್ಯಮ್ । – (ಜ.)

ಸ ಮಾಯಯಾ ಹರೇಃ ಸುತಂ ಪ್ರಗೃಹ್ಯ ಸೂತಿಕಾಗೃಹಾತ್ ।
ಅವಾಕ್ಷಿಪನ್ಮಹೋದಧಾವುಪೇಕ್ಷಿತೋಽರಿಪಾಣಿನಾ ॥ ೧೮೪ ॥

ಅ: ಅವನು ಮಾಯೆಯಿಂದ ಪ್ರದ್ಯುಮ್ನನನ್ನು ಪ್ರಸವಗೃಹದಿಂದ ಅಪಹರಿಸಿ, ಸಮುದ್ರದಲ್ಲಿ ಎಸೆದ. ಕೃಷ್ಣ ಅವನು ಹಾಗೆ ಮಾಡಲಿ ಎಂದೇ ಸುಮ್ಮನಿದ್ದ.

ವಿ: ಅವನು ಮುಂದೆ ಪ್ರದ್ಯುಮ್ನನಿಂದಲೇ ಸಾಯಲಿ ಎಂದು ಸಂಕಲ್ಪಿಸಿದ್ದ ಶ್ರೀಕೃಷ್ಣ ಉದ್ದೇಶಪೂರ್ವಕವಾಗಿಯೇ ಹಾಗೆ ಉಪೇಕ್ಷಿಸಿದ ಎಂದು ತಿಳಿಯಬೇಕು. ಶಂಬರ ಪ್ರದ್ಯುಮ್ನನನ್ನು ಅಪಹರಿಸಿದಾಗ, ಪ್ರದ್ಯುಮ್ನ ಆಗಿನ್ನೂ [೧]ಏಳು ದಿನವೂ ತುಂಬದ ಮಗು.

ತಮಗ್ರಸಜ್ಜಲೇಚರಃ ಸ ದಾಶಹಸ್ತಮಾಗತಃ ।
ಕುಮಾರಮಸ್ಯ ತೂದರೇ ನಿರೀಕ್ಷ್ಯ ಶಂಬರೇ ದದುಃ ॥ ೧೮೫ ॥

ಅ: ಅವನನ್ನು ಒಂದು ಮೀನು ನುಂಗಿತು; ಅದು ಬೆಸ್ತನೊಬ್ಬನ ಕೈಸೇರಿತು. ಅದರ ಹೊಟ್ಟೆಯಲ್ಲಿ ಮಗುವನ್ನು ಕಂಡು ಬೆಸ್ತರು ಶಂಬರನಿಗೆ ಒಪ್ಪಿಸಿದರು.[೨]

ವಿ: ಪ್ರದ್ಯುಮ್ನ ಮತ್ಸ್ಯಕೇತನ ಎಂದು ಪ್ರಸಿದ್ಧ ('ಮದನೋ ಮನ್ಮಥೋ ಮಾರಃ ಪ್ರದ್ಯುಮ್ನೋ ಮೀನಕೇತನಃ' – ಅಮರಕೋಶ). ಈ ಮೀನು ಹೀಗೆ ಅವನನ್ನು ನುಂಗಿದ ಪ್ರಸಂಗ ಅದಕ್ಕೆ ಸ್ಮಾರಕದಂತಿದೆ ಎಂಬುದು ಗಮನಾರ್ಹ.

ವಿಪಾಟ್ಯ ಮತ್ಸ್ಯಕೋದರಂ ಸ ಶಂಬರಃ ಕುಮಾರಕಮ್ ।
ನ್ಯವೇದಯನ್ನನೋಭವಪ್ರಿಯಾಕರೇ ಸುರೂಪಿಣಮ್ ॥ ೧೮೬ ॥

ಅ: ಮೀನಿನ ಹೊಟ್ಟೆಯನ್ನು ಸೀಳಿ ಹೊರತೆಗೆದಿದ್ದ ಆ ಸುರೂಪಿಯಾದ ಮಗುವನ್ನು ಶಂಬರಾಸುರ ಕಾಮನ ಪತ್ನಿಯಾದ ರತಿಯ ಕೈಗೆ ನೀಡಿದ.

---

೧. ರುಕ್ಮಿಣ್ಯಾಂ ವಾಸುದೇವಸ್ಯ ಲಕ್ಷ್ಮ್ಯಾಂ ಕಾಮೋ ಧೃತವ್ರತಃ ।
ಶಂಬರಾಂತಕರೋ ಜಜ್ಞೇ ಪ್ರದ್ಯುಮ್ನಃ ಕಾಮದರ್ಶನಃ ।
ಸನತ್ಕುಮಾರ ಇತಿ ಯಃ ಪುರಾಣೇ ಪರಿಗೀಯತೇ ॥
ತಂ ಸಪ್ತರಾತ್ರೇ ಸಂಪೂರ್ಣೇ ನಿಶೀಥೇ ಸೂತಿಕಾಗೃಹಾತ್ ।
ಜಹಾರ ಕೃಷ್ಣಸ್ಯ ಸುತಂ ಶಿಶುಂ ವೈ ಕಾಲಶಂಬರಃ ॥ – ಹರಿವಂಶ (೨/೧೦೪/೨,೩)

೨. ಕುಮಾರಮಸ್ಯ ತೂದರೇ ನಿರೀಕ್ಷ್ಯೇತ್ಯತ್ರ ನಿರೀಕ್ಷ್ಯ = ಮೃತಿಕಾಲೇ ವಿವೃತವದನದ್ವಾರಾ ನಿರೀಕ್ಷ್ಯ ॥ – (ವಾ.)

ಶಂಬರಾಸುರನ ಬಳಿ ರತಿದೇವಿ

ಅನಂಗತಾಮುಪಾಗತೇ ಪುರಾ ಹರೇಣ ಸಾಂಗಜೇ ।
ವಶಂ ವಿರಿಂಚಶಾಪತೋ ಜಗಾಮ ಶಂಬರಸ್ಯ ಹಿ ॥ ೧೪೭ ॥

ಅ: ಶಿವನಿಂದ ಮನ್ಮಥ ಬೂದಿಯಾಗಿ ಅನಂಗನಾದಾಗ, ರತಿ ಬ್ರಹ್ಮಶಾಪದಿಂದಾಗಿ ಶಂಬರಾಸುರನ ವಶಕ್ಕೆ ಸಿಲುಕಿದ್ದಳು.

ಪುರಾ ಹಿ ಪಂಚಭರ್ತೃಕಾಂ ನಿಶಮ್ಯ ಕಂಜಜೋದಿತಾಮ್ ।
ಜಹಾಸ ಪಾರ್ಷತಾತ್ಮಜಾಂ ಶಶಾಪ ತಾಂ ತತಸ್ತ್ವಜಃ ॥ ೧೪೮ ॥

ಅ: ಹಿಂದೆ ದ್ರೌಪದಿಯು ಪಂಚಪತಿಯರನ್ನು ಹೊಂದಿದವಳು ಎಂದು ಬ್ರಹ್ಮ ಹೇಳಿದ್ದನ್ನು ಕೇಳಿ, ರತಿ ಅಪಹಾಸ್ಯ ಮಾಡಿದ್ದಳು. ಅದರಿಂದ ಬ್ರಹ್ಮ ಅವಳಿಗೆ ಶಾಪ ನೀಡಿದ.

ಭವಾಸುರೇಣ ದೂಷಿತೇತಿ ಸಾ ತತೋ ಹಿ ಮಾಯಯಾ ।
ಪಿಧಾಯ ತಾಂ ನಿಜಾಂ ತನುಂ ಜಗಾಮ ಚಾನ್ಯಯಾಽಸುರಮ್ ॥ ೧೪೯ ॥

ಅ: ''ನೀನು ಅಸುರನಿಂದ ದೂಷಿತಳಾಗು'' ಎಂದು. ಅದರಿಂದ ಅವಳು ಮಾಯೆಯಿಂದ ಶಂಬರನ ವಶವಾದಳು. ತನ್ನ ನಿಜರೂಪವನ್ನು ಮರೆಮಾಡಿಕೊಂಡು, ಮತ್ತೊಂದು ದೇಹದಿಂದ ಶಂಬರನ ವಶವಾದಳು.

ವಿ: ೧) ಅಸುರಸಂಗ ಮಹಾಪಾತಕ. ತನ್ನ ಆ ದೇಹ ಅಪವಿತ್ರವಾಗದಿರಲಿ ಎಂದು ಆ ದೇಹವನ್ನು ಅಡಗಿಸಿಟ್ಟು, ಮತ್ತೊಂದು ದೇಹವನ್ನು ಪಡೆದು ರತಿ ಶಂಬರನ ವಶವಾಗಿದ್ದಳು ಎಂದು ಭಾವ. ರತಿಯ ಆ ರೂಪಕ್ಕೆ ಮಾಯಾವತಿ ಎಂದು ಹೆಸರು.

೨) ಕಾಮಪತ್ನಿಯಾದ ರತಿಗೆ ಹೀಗೆ ಮತ್ತೊಂದು ದೇಹದ ಸೃಷ್ಟಿ ಸಾಧ್ಯವಿರುವಾಗ, ಸಾಕ್ಷಾತ್ ರಾಮಪತ್ನಿಯಾದ ಸೀತೆ ತನ್ನ ಪ್ರತಿಕೃತಿಯನ್ನು ನಿರ್ಮಾಣಮಾಡಿಸಿದ್ದರಲ್ಲಿ (ಅ. ೫, ಶ್ಲೋ.೩೭) ಆಶ್ಚರ್ಯವೇನಿದೆ!

ರತಿಯಿಂದ ಪ್ರದ್ಯುಮ್ನನ ಪೋಷಣೆ

ಗೃಹೇಽಪಿ ಸಾಽಸುರೇ ಸ್ಥಿತಾ ನಿಜಸ್ವರೂಪತೋಽಸುರಮ್ ।
ನ ಗಚ್ಛತಿ ಸ್ಮ ಸಾ ಪತಿಂ ನಿಜಂ ಸಮೀಕ್ಷ್ಯ ಹರ್ಷಿತಾ ॥ ೧೫೦ ॥

ಅ: ಶಂಬರನ ಮನೆಯಲ್ಲಿದ್ದಾಗಲೂ ಅವಳು ತನ್ನ ನಿಜರೂಪದಿಂದ ಎಂದೂ ಅಸುರನ ಬಳಿಗೆ ತೆರಳುತ್ತಿರಲಿಲ್ಲ. ಅವಳು ತನ್ನ ಪತಿಯನ್ನು ಕಂಡು, ಹರ್ಷಿಸಿದಳು.

ವಿ: ಶಂಬರಾಸುರ ನೀಡಿದ ಮಗುವನ್ನು ತನ್ನ ಪತಿ ಎಂದು ಗುರುತಿಸಿ, ಅವಳು ಸಂತೋಷಿಸಿದಳು ಎಂದರ್ಥ. ಆ ವಿಷಯ ಅವಳಿಗೆ ನಾರದರಿಂದ ತಿಳಿದಿತ್ತು.

ರಸಾಯನೈಃ[೧] ಕುಮಾರಕಂ[೨] ವ್ಯವರ್ಧಯದ್ರತಿಃ ಪತಿಮ್ ।
ಸ ಪೂರ್ಣಯೌವನೋಽಭವಚ್ಚತುರ್ಭಿರೇವ ವತ್ಸರೈಃ ॥ ೧೯೧ ॥

ಅ: ಮಗುವಾಗಿದ್ದ ತನ್ನ ಪತಿಯನ್ನು ಅವಳು ರಸಾಯನಗಳಿಂದ ಬೆಳೆಸಿದಳು. ಅವನು ನಾಲ್ಕೇ ವರ್ಷಗಳಲ್ಲಿ ಪೂರ್ಣಯೌವನದಿಂದ ಕೂಡಿದವನಾದ.

ವಿ: ೧) ಬೇಗನೆ ಬೆಳವಣಿಗೆ ನೀಡುವ ಹೊಸಬಗೆಯ ಮೂಲಿಕೆಯ ಬಗ್ಗೆ ಈ ವಿವರ ಬೆಳಕು ಚೆಲ್ಲುವುದು. ಇಂದು ವಿಜ್ಞಾನ ಕೃಷಿಯ ಮಟ್ಟಿಗೆ ಇಂತಹ ಪ್ರಯೋಗ ಮಾಡಿ ಯಶಸ್ಸು ಪಡೆದಿದೆ. ಅಲ್ಪಾವಧಿಯಲ್ಲಿಯೇ ಫಲ ಪಡೆಯುವ ತಂತ್ರಜ್ಞಾನವನ್ನು ಅದು ಅಭಿವೃದ್ಧಿಪಡಿಸಿದೆ. ಆದರೆ ಮಾನವರನ್ನು ಹೀಗೆ ಬೆಳೆಸುವ ಸಿದ್ಧಿ ವಿಜ್ಞಾನಕ್ಕಿನ್ನೂ ಎಟುಕಿಲ್ಲ. ವೃತ್ರಾಸುರನು ಸಹ ದಿನವೊಂದಕ್ಕೆ ಒಂದು ಬಾಣದುದ್ದ ಬೆಳೆಯುತ್ತಿದ್ದ ವಿವರ ಶ್ರೀಮದ್ಭಾಗವತಪುರಾಣದಲ್ಲಿದ್ದು ಇದಕ್ಕೆ ಪೋಷಕವಾಗಿದೆ :

ವಿಷ್ಣ್ವಿವರ್ಧಮಾನಂ ತಮಿಷುಮಾತ್ರಂ ದಿನೇ ದಿನೇ ।.... – ಭಾಗವತ (೬/೯/೧೩)

೨) ಇದೊಂದು ವಿಚಿತ್ರಪೌರಾಣಿಕಪ್ರಸಂಗ. ಮಗುರೂಪದ ತನ್ನ ಪತಿಯನ್ನು ಸತಿಯೊಬ್ಬಳು ವಿಶಿಷ್ಟರೀತಿಯಲ್ಲಿ ಪೋಷಿಸಿ, ಬೆಳೆಸಿದ ಇಂತಹ ಪ್ರಸಂಗ ಮತ್ತೊಂದು ದೊರೆಯದು. ಕಾರಣಾಂತರದಿಂದ ಶಿಷ್ಯ ಗುರುವಾಗುವ ಪ್ರಸಂಗವನ್ನು ಪುರಾಣಗಳು ದಾಖಲಿಸಿವೆ. ಬೃಹಸ್ಪತಿ ತಮ್ಮ ಮಗನಾದ ಭರದ್ವಾಜನಿಗೆ ಮಗನೂ, ಶಿಷ್ಯನೂ ಆದ ಪ್ರಸಂಗ ಮಹಾಭಾರತದಲ್ಲಿ ಬಂದಿದೆ. ದೇವತೆಗಳೇ ಮಕ್ಕಳಾದ ಪಿತೃದೇವತೆಗಳು ದೇವತೆಗಳಿಂದಲೇ ಹಾಗೆ ಕರೆಸಿಕೊಂಡದ್ದು ಹರಿವಂಶದಲ್ಲಿದೆ[೩]. ಆದರೆ ತನ್ನ ಪತಿಯನ್ನೇ ಪುತ್ರನಂತೆ ಬೆಳೆಸಿದ ಇಂತಹ ಪ್ರಸಂಗ ಮಾತ್ರ ಇದೊಂದೇ. ಒಂಭತ್ತು ಮಕ್ಕಳನ್ನು ಪಡೆದೂ, ಹತ್ತನೆಯ ಮಗುವನ್ನಾಗಿ ಗಂಡನನ್ನೇ ಭಾವಿಸು ಎಂಬ ವೇದಮಂತ್ರ ಉಂಟು. ಅಲ್ಲಿ ಹಾಗೆ ಭಾವಿಸುವ ಉಲ್ಲೇಖವಿದ್ದರೂ, ಇಲ್ಲಿ ಸ್ಪಷ್ಟವಾಗಿ ಮಗುವಾದ ಪತಿಯನ್ನೇ ಬೆಳೆಸಿದ್ದು ವಿಶೇಷ.

---

೧. ರಸಾಯನೈಃ ಕ್ಷೀರಘೃತಾದ್ಯೈಃ । – (ಜ., ವ.)
ರಸಾಯನಪ್ರಯೋಗೈಶ್ಚ ಶೀಘ್ರಮೇವ ವ್ಯವರ್ಧಯತ್ ॥ – ಹರಿವಂಶ (೨/೧೦೪/೧೩)

೨. ಕುಮಾರಕಂ ಸ್ಕಂದಸ್ವರೂಪಂ ಪತಿಂ ವಾ । – (ಜ.)

೩. ಗಮ್ಯತಾಂ ಪುತ್ರಕಾಶ್ಚೇತಿ ಪುತ್ರೈರುಕ್ತಾಶ್ಚ ತೇ ತದಾ । – ಹರಿವಂಶ (೧/೧೭/೨೮)

ಪತಿಂ ಸುಪೂರ್ಣಯೌವನಂ ನಿರೀಕ್ಷ್ಯ ತಾಂ ವಿಷಜ್ಜತೀಮ್[೧] ।
ಉವಾಚ ಕಾರ್ಷ್ಣಿರಂಬ ತೇ ಕುಚೇಷ್ಟಿತಂ[೨] ಕಥಂ ತ್ವಿತಿ ॥ ೧೯೨ ॥

ಅ: ಪತಿ ಪೂರ್ಣಯೌವನಭರಿತನಾದದ್ದನ್ನು ಕಂಡು ನಾಚತೊಡಗಿದ ಅವಳಿಗೆ ಪ್ರದ್ಯುಮ್ನ ಕೇಳಿದ : ''ಅಮ್ಮ! ನೀನು ಹೀಗೇಕೆ [೩]ಅನುಚಿತವಾಗಿ ನಡೆದುಕೊಳ್ಳುತ್ತಿರುವೆ?''.

ವಿ: ಇಲ್ಲಿ ಮತ್ತೊಂದು ಸ್ವಾರಸ್ಯವಿದೆ. ತನ್ನ ಪತಿ ಪ್ರದ್ಯುಮ್ನನ ಬಗ್ಗೆ ಪೂರ್ಣಪರಿಜ್ಞಾನವಿದ್ದರೆ, ಅವನಿಗೆ ಮಾತ್ರ ಅವಳ ಬಗ್ಗೆ ಯಾವ ತಿಳುವಳಿಕೆಯೂ ಇಲ್ಲ. ಈ ರೀತಿ ಪತ್ನಿಗೆ ಪರಿಜ್ಞಾನವಿದ್ದು ಪತಿಗೆ ಪರಿಜ್ಞಾನವಿಲ್ಲದಿರುವುದು ಸಂಪೂರ್ಣ ಹೊಸತಲ್ಲವಾದರೂ, ಈ ಪ್ರಮಾಣದಲ್ಲಿದ್ದದ್ದು ಮಾತ್ರ ವಿಶೇಷವೇ.

ಪ್ರದ್ಯುಮ್ನರತಿಯರ ಸಮಾಗಮ

ಜಗಾದ ಸಾऽಖಿಲಂ ಪತೌ ತದಾऽಸ್ಯ ಜನ್ಮ ಚಾಗತಿಮ್ ।
ತತೋऽಗ್ರಹೀತ್ ಸ ತಾಂ ಪ್ರಿಯಾಂ ರತಿಂ ರಮಾಪತೇಃ ಸುತಃ ॥ ೧೯೩ ॥

ಅ: ಅವಳು ಪತಿಯಾದ ಅವನಿಗೆ ಅವನ ಹುಟ್ಟು ಅಲ್ಲಿಗೆ ಬಂದದ್ದು, ಮೊದಲಾದ ಎಲ್ಲವನ್ನೂ ತಿಳಿಸಿದಳು. ಬಳಿಕ ಶ್ರೀಕೃಷ್ಣಪುತ್ರನಾದ ಆ ಪ್ರದ್ಯುಮ್ನ ತನ್ನ ಪತ್ನಿಯಾದ ಆ ರತಿಯನ್ನು ಸ್ವೀಕರಿಸಿದ.

ರತಿಯಿಂದ ಪ್ರದ್ಯುಮ್ನನಿಗೆ ಮಂತ್ರೋಪದೇಶ

ದದೌ ಚ ಮಂತ್ರಮುತ್ತಮಂ ಸಮಸ್ತಮಾಯಿನಾಶಕಮ್ ।
ಭೃಗೂತ್ತರಾಮದೈವತಂ ರತಿರ್ಹರೇಃ ಸುತಾಯ ಸಾ ॥ ೧೯೪ ॥

ಅ: ಎಲ್ಲ ಮಾಯಾವಿಗಳನ್ನು ಸದೆ ಬಡಿಯಬಲ್ಲ ಪರಶುರಾಮದೇವತಾಕವಾದ ಉತ್ತಮಮಂತ್ರವನ್ನು ಆ ರತಿಯು ಶ್ರೀಕೃಷ್ಣಪುತ್ರನಾದ ಪ್ರದ್ಯುಮ್ನನಿಗೆ ನೀಡಿದಳು.

---

೧. ವಿಷಜ್ಜತೀಂ ಭಾರ್ಯಾವದ್ವಿಕಾರವತೀಮ್ । – (ವ.)

೨. ಕುಚೇಷ್ಟಿತಂ ಲಜ್ಜಾದಿಕುತ್ಸಿತಾಚರಣಂ ಕಥಂ ಕಿಮರ್ಥಮಿತ್ಯುವಾಚೇತಿ ಸಂಬಂಧಃ । – (ಜ.)

೩. ಯದಿ ತೇऽಹಂ ಸುತಃ ಸೌಮ್ಯೇ ಯದಿ ವಾ ನಾತ್ಮಜಃ ಶುಭೇ ।
ಕಥಿತಂ ತತ್ತ್ವಮಿಚ್ಛಾಮಿ ಕಿಮಿದಂ ತೇ ಚಿಕೀರ್ಷಿತಮ್ ॥ – ಹರಿವಂಶ (೨/೧೦೪/೨೧)

ವಿ: ೧) ರತಿ ಪತಿಯನ್ನು ಅವರೆಗೂ ಪೋಷಿಸಿದ್ದು ಮಾತ್ರವಲ್ಲದೆ, ಒಂದು ಅಪೂರ್ವಮಂತ್ರವನ್ನು ಉಪದೇಶಿಸುವ ಮೂಲಕ ಗುರುವೂ ಆಗಿಬಿಟ್ಟಳು. ಇದು ಮತ್ತೊಂದು ವಿನೂತನಪ್ರಸಂಗ. ಪತ್ನಿಯೆ ಪತಿಗೆ ಮಂತ್ರ ನೀಡಿದ ಪ್ರಸಂಗ.

೨) ಕೆಲವೊಮ್ಮೆ ಕಾರಣಾಂತರದಿಂದ ಚಿಕ್ಕವರೂ ದೊಡ್ಡವರಿಗೆ ಗುರುವಾಗಬಹುದು ಎಂಬ ಮಾತಿದೆ ('ಸ್ವಾವರಾಣಾಂ ಗುರುತ್ವಂ ಚ ಭವೇತ್ ಕಾರಣತಃ ಕ್ವಚಿತ್ – ೧/೧೨೬). ಪತಿಗೆ ಅವರಳಾದ ಸತಿ ಹೀಗೆ ಮಂತ್ರೋಪದೇಶ ನೀಡಿದ್ದು ಸಹ ಆ ಪ್ರಸಂಗಕ್ಕೊಂದು ನಿದರ್ಶನ ಎಂದು ತಿಳಿಯಬೇಕು.

ಪ್ರದ್ಯುಮ್ನ ಶಂಬರರ ಯುದ್ಧ

ತತಃ ಸ್ವದಾರಧರ್ಷಕಂ ಸಮಾಹ್ವಯದ್ಯುಧೇಽಂಗಜಃ ।
ಸ ಶಂಬರಂ ಸಮೇತ್ಯ ತಂ ಯುಯೋಧ ಶಕ್ತಿತೋ ಬಲೀ ॥ ೧೯೫ ॥

ಅ: ಅನಂತರ ತನ್ನ ಪತ್ನಿಯನ್ನು ಬಲಾತ್ಕರಿಸಿದ ಶಂಬರನನ್ನು ಪ್ರದ್ಯುಮ್ನ ಸಮರಕ್ಕೆ ಆಹ್ವಾನಿಸಿದ. ಬಲಿಷ್ಠನಾದ ಅವನು ಬಂದು, ಇವನೊಂದಿಗೆ ತನ್ನೆಲ್ಲ ಬಲದೊಂದಿಗೆ ಕಾದಿದ.

ಸ ಚರ್ಮಖಡ್ಗಧಾರಿಣಂ ವರಾಸ್ತ್ರಶಸ್ತ್ರಪಾದಪೈಃ ।
ಯದಾ ನ ಯೋದ್ಧುಮಾಶಕದ್ಧರೇಃ ಸುತಂ ನ ದೃಶ್ಯತೇ[೧] ॥ ೧೯೬ ॥

ಅ: ಖಡ್ಗ, ಗುರಾಣಿಗಳನ್ನು ಹಿಡಿದ ಪ್ರದ್ಯುಮ್ನನೊಂದಿಗೆ ಶ್ರೇಷ್ಠವಾದ ಅಸ್ತ್ರ ಶಸ್ತ್ರ ವೃಕ್ಷ ಮೊದಲಾದವುಗಳೊಂದಿಗೆ ಎದುರಿಸಿಯೂ, ಕಾದಲು ಅಸಮರ್ಥನಾದಾಗ, ಕಾಣದಾಗಿಬಿಟ್ಟ.

ವಿ: ತನ್ನ ಇತರಶಕ್ತಿ ವ್ಯರ್ಥವಾದಾಗ, ಶಂಬರಾಸುರ ತನ್ನ ಮಾಯಾಶಕ್ತಿನ್ನು ಉಪಯೋಗಿಸಿ, ಅದೃಶ್ಯನಾದ ಎಂದರ್ಥ.

ಸಹಸ್ರ[೨]ಮಾಯಮುಲ್ಬಣಂ ತ್ವದೃಶ್ಯಮಂಬರಾದ್ಗಿರೀನ್ ।
ಸೃಜಂತಮೇತ್ಯ ವಿದ್ಯಯಾ ಜಘಾನ ಕೃಷ್ಣನಂದನಃ ॥ ೧೯೭ ॥

---

೧. ಹರೇಃ ಸುತಂ ನ ದೃಶ್ಯತ ಇತ್ಯತ್ರ ಹರೇಃ ಸುತಂ ಪ್ರತಿ ಯದಾ ಯೋದ್ಧುಂ ನಾಶಕತ್ ತದಾ ಸಃ ಶಂಬರಃ ನ ದೃಶ್ಯತೇ= ಕೇನಾಪಿ ನ ದೃಶ್ಯತೇ ಅದೃಶ್ಯೋಽಭೂದಿತ್ಯರ್ಥಃ ॥ – (ವಾ.)

೨. ಸಹಸ್ರಸಂಖ್ಯಾಕಾಃ ಮಾಯಾಃ ಐಂದ್ರಜಾಲಿಕವಿದ್ಯಾ ಯಸ್ಯ ಸ ತಥಾ । – (ಜ.)

ಅ: ಆ ಶಂಬರ ಕ್ರೂರಿ; ಸಾವಿರಾರು ಮಾಯೆಗಳನ್ನು ಹೊಂದಿದವನು. ಕಾಣದಂತೆ ಗಗನದಿಂದ ಬೆಟ್ಟಗಳನ್ನು ಸೃಷ್ಟಿಸಿ, ಎಸೆಯತೊಡಗಿದ. ಆದರೆ ಪ್ರದ್ಯುಮ್ನ ತನ್ನ ವಿದ್ಯೆಯ ಸಾಮರ್ಥ್ಯದಿಂದ ಅವನನ್ನು ಹೊಡೆದುಹಾಕಿದ.

ವಿ: ಶಂಬರಾಸುರನ ಮಾಯೆಗೆ ಕಪಟ ಎಂದೂ ಅರ್ಥ. ಅವನು ಸಾವಿರಾರು ಕಪಟಗಳನ್ನು ತಿಳಿದವನೂ ಸಹ. ಅದು ನಿಜಕ್ಕೂ ಪ್ರದ್ಯುಮ್ನನಿಗೆ ಸಮಸ್ಯೆ ಆಗಬಹುದಿದ್ದ ಪ್ರಸಂಗ. ಆದರೆ ರತಿ ತಿಳಿಸಿದ್ದ ಪರಶುರಾಮದೈವತಾಕವಾದ ಮಾಯಿನಾಶಕಮಂತ್ರದಿಂದಾಗಿ ಅವನು ಅವನ ಮಾಯೆಗಳನ್ನೆಲ್ಲ ನಾಶ ಮಾಡಿ, ಮಾಯಾವಿಯಾದ ಆ ಶಂಬರಾಸುರನನ್ನೂ ನಾಶ ಮಾಡಲು ಸಾಧ್ಯವಾಯಿತು ಎಂದರ್ಥ.

ಶಂಬರಾಸುರ ವಧೆ

ಸ ವಿದ್ಯಯಾ ವಿನಾಶಿತೋರುಮಾಯ ಆಶು ಶಂಬರಃ ।
ನಿಕೃತ್ತಕಂಧರೋಽಪತದ್ವರಾಸಿನಾಽಮುನಾ ಕ್ಷಣಾತ್ ॥ ೧೯೮ ॥

ಅ: ಪ್ರದ್ಯುಮ್ನನ ವಿದ್ಯೆಯಿಂದ ತನ್ನ ಎಲ್ಲ ದೊಡ್ಡ ಮಾಯೆಗಳನ್ನೂ ಕಳೆದುಕೊಂಡ ಶಂಬರಾಸುರ ಪ್ರದ್ಯುಮ್ನನ ಖಡ್ಗದಿಂದ ಛಿನ್ನಶಿರಸ್ಕನಾಗಿ ಕೆಳಗುರುಳಿದ.

ದ್ವಾರಕೆಗೆ ರತಿಮನ್ಮಥರ ಆಗಮನ

ನಿಹತ್ಯ ತಂ ಹರೇಃ ಸುತಸ್ತಯೈವ ವಿದ್ಯಯಾಽಂಬರಮ್ ।
ಸಮಾಸ್ಥಿತಃ ಸ ಭಾರ್ಯಯಾ ಸಮಂ ಕುಶಸ್ಥಲೀಂ ಯಯೌ ॥ ೧೯೯ ॥

ಅ: ಶ್ರೀಕೃಷ್ಣಪುತ್ರನಾದ ಪ್ರದ್ಯುಮ್ನ ಶಂಬರಾಸುರನನ್ನು ಸಂಹರಿಸಿ, ಅದೇ ವಿದ್ಯೆಯಿಂದಲೇ ಗಗನಕ್ಕೇರಿ, ಪತ್ನಿಯಾದ ಆ ರತಿಯೊಂದಿಗೆ ದ್ವಾರಕೆಗೆ ತೆರಳಿದ.

ಸಮಸ್ತವೇದಿನೋ ಮುನಿರ್ನರಾನ್ ವಿಡಂಬಮಾನಯೋಃ ।
ರಮಾರಮೇಶಯೋಃ ಸುತಂ ಜಗಾದ ತಂ ಸ್ಮ ನಾರದಃ ॥ ೨೦೦ ॥

ಅ: ಲಕ್ಷ್ಮೀನಾರಾಯಣರಾದ ರುಗ್ಮಿಣೀಕೃಷ್ಣರು ಸಕಲವನ್ನೂ ಬಲ್ಲವರು. ಆದರೂ ಮಾನವರನ್ನು ಅನುಕರಿಸುತ್ತಿದ್ದ ಅವರಿಗೆ ಅಲ್ಲಿಗೆ ಬಂದಿರುವುದು ಅವನ ಮಗ ಪ್ರದ್ಯುಮ್ನ ಎಂದು ನಾರದರು ತಿಳಿಸಿದರು.

ವಿ: ಸರ್ವಜ್ಞರಾದ ಕೃಷ್ಣರುಗ್ಮಿಣಿಯರು ಅದೆಲ್ಲವನ್ನು ಬಲ್ಲವರೇ. ಆದರೂ ಲೋಕವಿಡಂಬನೆಗಾಗೊ ಅವರ ಗುರುತು ಸಿಕ್ಕದಂತೆ ವರ್ತಿಸಿದಾಗ, ನಾರದರು ಬಂದು ಲೋಕದೃಷ್ಟಿಯಲ್ಲಿ ಅವರಿಗೆ ತಿಳಿಸಿಕೊಟ್ಟರು ಎಂದರ್ಥ. ಅಂತೂ ಏಳು ದಿನದ ಮಗುವಾಗಿದ್ದಾಗ ಮರೆಯಾಗಿದ್ದ ಪ್ರದ್ಯುಮ್ನ, ಮರಳಿ ಕಂಡಿದ್ದು ವಿವಾಹಿತನಾದ ತರುಣನಾಗಿಯೇ ಎಂಬುದು ಇಲ್ಲಿಯ ವಿಶೇಷ.

ಸ ರುಗ್ಮಿಣೀಜನಾರ್ದನಾದಿಭಿಃ ಸರಾಮಯಾದವೈಃ ।
ಪಿತಾಮಹೇನ ಚಾದರಾತ್ ಸುಲಾಲಿತೋಽವಸತ್ ಸುಖಿಮ್ ॥ ೨೦೧ ॥

ಅ: ಅವನು ಶ್ರೀಕೃಷ್ಣರುಗ್ಮಿಣಿ ಮೊದಲಾದವರಿಂದಲೂ, ಬಲರಾಮ ಮೊದಲಾದ ಯಾದವರಿಂದಲೂ, ತಾತನಾದ ವಸುದೇವನಿಂದಲೂ ಚೆನ್ನಾಗಿ ಲಾಲಿತನಾಗಿ ಸುಖವಾಗಿ ನೆಲೆಸಿದ.

ಸ್ಯಮಂತಕೋಪಾಖ್ಯಾನ

ತತಃ ಪುರಾ ಸ್ಯಮಂತಕಂ ಹ್ಯವಾಪ ಸೂರ್ಯಮಂಡಲೇ ।
ಸ್ಥಿತಾದ್ಧರೇಃ ಸ ಸತ್ರಜಿತ್ ಸದಾಽತ್ರ ಕೇಶವಾರ್ಚಕಃ ॥ ೨೦೨ ॥

ಅ: ಆ ಹಿಂದೆ ಸದಾ ವಿಷ್ಣುವಿನ ಆರಾಧನೆಯನ್ನು ಮಾಡುವ ಸತ್ರಜಿತ್ ರಾಜನು ಸೂರ್ಯಮಂಡಲದ ಅಂತರ್ಯಾಮಿಯಾದ ಶ್ರೀಹರಿಯಿಂದ ಸ್ಯಮಂತಕಮಣಿಯನ್ನು ಪಡೆದಿದ್ದ.

ವಿ: ಸತ್ರಜಿತ್ ರಾಜ ವಿಶೇಷವಾಗಿ ಸೂರ್ಯಮಂಡಲದಲ್ಲಿ ವಿಷ್ಣುವನ್ನು ಆರಾಧಿಸುವ ಶ್ರೇಷ್ಠವೈಷ್ಣವ. ಸೂರ್ಯನ ಮೂಲಕ ಶ್ರೀಹರಿ ಅವನಿಗೆ ಸ್ಯಮಂತಕಮಣಿಯನ್ನು ಕರುಣಿಸಿದ್ದ. ಪ್ರತಿನಿತ್ಯ ಎಂಟು ಭಾರ [೧]ಚಿನ್ನವನ್ನು ನೀಡುವುದು ಅದರ ವಿಶೇಷ. ಅದನ್ನು ಧರಿಸಿದವರಿಗೆ ಹಸಿವುಬಾಯಾರಿಕೆಗಳ, ರೋಗರುಜಿನಗಳ ಭಯವೂ ಇರುತ್ತಿರಲಿಲ್ಲ. ಅಷ್ಟೇ ಅಲ್ಲದೆ ಅದರ ಪೂಜೆ ನಡೆಯುವ ದೇಶದಲ್ಲಿ ದುರ್ಭಿಕ್ಷ, ರೋಗ ಮೊದಲಾದವುಗಳಿಗೂ ಅವಕಾಶವಿರುತ್ತಿರಲಿಲ್ಲ. ಅಂತಹ ಅಪೂರ್ವಮಣಿಯನ್ನು ಪಡೆದಿದ್ದ ಸತ್ರಾಜಿತನು ಅದರ ಮೇಲೆ ಸಹಜವಾಗಿಯೇ ವಿಶೇಷವಾದ ಅಭಿಮಾನವನ್ನು ಬೆಳೆಸಿಕೊಂಡಿದ್ದ.

---

೧. ದಿನೇ ದಿನೇ ಸ್ವರ್ಣಭಾರಾನಷ್ಟೌ ಸ ಸೃಜತಿ ಪ್ರಭೋ ।
ದುರ್ಭಿಕ್ಷಮಾರ್ಯರಿಷ್ಟಾನಿ ಸರ್ಪಾಧಿವ್ಯಾಧಯೋಽಶುಭಾಃ ।
ನ ಸಂತಿ ಮಾಯಿನಸ್ತತ್ರ ಯತ್ರಾಸ್ತೇಽಭ್ಯರ್ಚಿತೋ ಮಣಿಃ ॥ – ಭಾಗವತ (೧೦/೫೬/೧೧)

ಸತ್ರಾಜಿತನ ಲೋಭ

ಸದಾऽಸ್ಯ ವಿಷ್ಣುಭಾವಿನೋऽಪ್ಯತೀವ ಲೋಭಮಾಂತರಮ್ ।
ಪ್ರಕಾಶಯನ್ ರಮಾಪತಿರ್ಯಯಾಚ ಈಶ್ವರೋ ಮಣಿಮ್ ॥ ೨೦೩ ॥

ಅ: ಸತ್ರಾಜಿತನು ಸದಾ ವಿಷ್ಣುಭಕ್ತನೇ ಆಗಿದ್ದರೂ, ಅವನ ಮನಸ್ಸಿನಲ್ಲಿ ಲೋಭ ಬಹಳವಾಗಿ ತುಂಬಿತ್ತು. ಅದನ್ನು ಪ್ರಕಟಪಡಿಸಲೆಂದು ರಮಾಪತಿಯೂ, ಸರ್ವಶಕ್ತನೂ ಆದ ಶ್ರೀಕೃಷ್ಣ ಆ ಮಣಿಯನ್ನು ಬೇಡಿದ.

ವಿ: ಸ್ವತಃ ರಮಾಪತಿಯಾದ ಶ್ರೀಕೃಷ್ಣನಿಗೆ ಆ ಮಣಿ ಬೇಕಿರಲಿಲ್ಲ ಎಂಬುದನ್ನು **'ರಮಾಪತಿಃ'** ಎಂಬ ಪದದಿಂದಲೂ, ಸರ್ವಶಕ್ತನಾದ ಅವನು ಬೇಡುವ ಆವಶ್ಯಕತೆಯೂ ಇರಲಿಲ್ಲ ಎಂಬುದನ್ನು **'ಈಶ್ವರಃ'** ಎಂಬ ಪದದಿಂದಲೂ ಸೂಚಿಸಿರುವರು ಎಂದು ತಿಳಿಯಬೇಕು.

ಸಿಂಹದಿಂದ ಪ್ರಸೇನನ ವಧೆ

ಸ ತಂ ನ ದತ್ತವಾಂಸ್ತತೋऽನುಜೋ ನಿಬಧ್ಯ ತಂ ಮಣಿಮ್ ।
ವನಂ ಗತಃ ಪ್ರಸೇನಕೋ ಮೃಗಾಧಿಪೇನ ಪಾತಿತಃ ॥ ೨೦೪ ॥

ಅ: ಸತ್ರಾಜಿತನು ಅದನ್ನು ಶ್ರೀಕೃಷ್ಣನಿಗೆ ನೀಡಲಿಲ್ಲ; ಅವನ ತಮ್ಮ ಪ್ರಸೇನ ಅದನ್ನು ಧರಿಸಿ ಕಾಡಿಗೆ ತೆರಳಿದ್ದಾಗ ಮೃಗರಾಜನಾದ ಸಿಂಹನಿಂದ ಹತನಾದ.

ವಿ: ತಾನಾಗಿಯೇ ನೀಡಬೇಕಾಗಿದ್ದ ಮಣಿಯನ್ನು ಕೃಷ್ಣ ಕೇಳಿದರೂ ಕೊಡದಿದ್ದುದು ಸತ್ರಾಜಿತನ ಮನಸ್ಸಿನಲ್ಲಿ ವಿಶೇಷವಾಗಿ ಲೋಭ ತುಂಬಿದ್ದುದಕ್ಕೆ ದ್ಯೋತಕ. ಸರ್ವೋತ್ತಮನಾದ ಕೃಷ್ಣನಿಗೆ ಮಣಿಯನ್ನು ನೀಡದ ಅವನು ತಮ್ಮನೆಂಬ ಮೋಹದಿಂದ ಪ್ರಸೇನನಿಗೆ ನೀಡಿದ್ದುದು ಅವನ ದೋಷಕ್ಕೆ ಮತ್ತೊಂದು ನಿದರ್ಶನ. ಅಚ್ಯುತನಾದ ಕೃಷ್ಣನಿಗೆ ನೀಡದೆ, ಚ್ಯುತನಾಗುವ ಜೀವನೊಬ್ಬನಿಗೆ ನೀಡಿದ್ದು ಅವನು ಅದನ್ನು ಕಳೆದುಕೊಳ್ಳಲು ಕಾರಣವಾಯಿತು. ಶ್ರೀಹರಿಗೆ ಸಮರ್ಪಿಸದ ಎಲ್ಲವೂ ಹೀಗೆಯೇ ವ್ಯರ್ಥ ಎಂಬುದು ಇದರ ಆಂತರ್ಯ. ಅಂತಹ ಅಪೂರ್ವಮಣಿಯನ್ನು ಧರಿಸಿದ್ದರೂ, ಬೇಟೆಯ ಕಾಲದಲ್ಲಿ ಅಶುಚಿಯಾಗಿದ್ದರಿಂದ ಪ್ರಸೇನ ಸಿಂಹದಿಂದ ಹತನಾಗುವಂತಾಯಿತು. ಶೌಚಾಚಾರವಿಲ್ಲದವರಿಗೆ ರತ್ನಾದಿಭಾಗ್ಯ ಲಭಿಸದು ಎಂಬುದಕ್ಕೂ ಇದು ನಿದರ್ಶನ.

ಸ್ಯಮಂತಕಮಣಿ ತರಲು ಕೃಷ್ಣನ ಪ್ರಯಾಣ

ತದಾ ಸ ಸತ್ರಜಿದ್ಧರಿಂ ಶಶಂಸ ಸೋದರಾಂತಕಮ್ ।
ಉಪಾಂಶುವರ್ತ್ಮನಾ ತತೋ ಹರಿಃ ಸಯಾದವೋ ಯಯೌ ॥ ೨೦೫ ॥

ಅ: ಆಗ ಸತ್ರಾಜಿತನು ಮಣಿಗಾಗಿ ಪ್ರಸೇನನನ್ನು ಕೊಂದವನು ಕೃಷ್ಣನೇ ಇರಬೇಕೆಂದು ಮೆಲ್ಲನೆ ಹೇಳತೊಡಗಿದ. ಬಳಿಕ ಕೃಷ್ಣ ಯಾದವರೊಂದಿಗೆ ಆ ಮಣಿಯನ್ನು ತಂದುಕೊಡಲೆಂದು ಹೊರಟ.

ಎ: ಶ್ರೀಕೃಷ್ಣನ ಮೇಲೆ ಕಳ್ಳತನದ ಆರೋಪ ಮಾಡಿದ್ದು ಸತ್ರಾಜಿತನ ಮತ್ತೊಂದು ದೊಡ್ಡದೋಷವಾಯಿತು. ಅವನು ಹಾಗೆ ತಿಳಿದದ್ದು ಮಾತ್ರವಲ್ಲದೆ, ಹಾಗೆ ಪ್ರಚಾರವನ್ನೂ ಮಾಡಿದ; ಕೃಷ್ಣ ಆಗ ತಾನು ನಿರ್ದೋಷ ಎಂಬುದನ್ನು ಸಮರ್ಥಿಸಲೆಂದು ಆ ಮಣಿಯನ್ನು ತರಲು ತಾನೇ ಹೊರಟ. ಅವನು ಸರ್ವಜ್ಞನಾಗಿದ್ದರೂ, ಲೋಕದೃಷ್ಟಿಯಲ್ಲಿ ಅನ್ವೇಷಿಸುವಂತೆ ತೆರಳಿದ ಎಂದು ತಿಳಿಯಬೇಕು. ಇದು ಶ್ರೀರಾಮನು ಸೀತಾಕೃತಿಯನ್ನು ಅನ್ವೇಷಿಸಿ ಹೊರಟ ಪ್ರಸಂಗದಂತೆ ಲೋಕವಿಡಂಬಕ ಹಾಗೂ ಅಸುರಮೋಹಕ ಎಂದೂ ತಿಳಿಯಬೇಕು.

ವನೇ ಸ [೨]ಸಿಂಹಸೂದಿತಂ [೩]ಪದೈಃ ಪ್ರದರ್ಶ್ಯ ವೃಷ್ಣಿನಾಮ್ ।
ಪ್ರಸೇನಮೃಕ್ಷಪಾತಿತಂ ಸ ಸಿಂಹಮಪ್ಯದರ್ಶಯತ್ ॥ ೨೦೬ ॥

ಅ: ಕಾಡಿನಲ್ಲಿ ಪ್ರಸೇನ ಸಿಂಹದಿಂದ ಕೊಲ್ಲಲ್ಪಟ್ಟಿದ್ದನ್ನು ಹೆಜ್ಜೆಯ ಗುರುತುಗಳ ಮೂಲಕ ಯಾದವರಿಗೆಲ್ಲ ತೋರಿಸಿದ; ಆ ಸಿಂಹವು ಕರಡಿಯೊಂದರಿಂದ ಹತನಾಗಿದ್ದುದನ್ನೂ ತೋರಿಸಿದ.

---

೧. ವರ್ತ್ಮನಾ ತತೋ ಹರಿರಿತ್ಯತ್ರ ವರ್ತ್ಮನಾ= ಪ್ರಸೇನಸ್ಯ ವರ್ತ್ಮನಾ ॥ – (ವಾ.)

೨. ಇತಿ ಸಿಂಹಸೂದಿತಂ ಪ್ರಸೇನಮಿತ್ಯಾವರ್ತ್ಮಮುದ್ರಿತಾದಿಪದಾನ್ಯಾಹೃತ್ಯ ಯೋಜ್ಯಮ್ । – (ಜ.)

ಸಿಂಹಃ ಪ್ರಸೇನಮವಧೀತ್ ಸಿಂಹೋ ಜಾಂಬವತಾ ಹತಃ ।
ಸುಕುಮಾರಕ ಮಾ ರೋದೀಸ್ತವ ಹ್ಯೇಷ ಶಮಂತಕಃ ॥ – ಪುರಾಣವಾಕ್ಯ

೩. ಪದೈಃ ಪ್ರದರ್ಶ್ಯ ವೃಷ್ಣಿನಾಮಿತ್ಯತ್ರ ''ವ್ರೀಹ್ಯಾದಿಭ್ಯಶ್ಚೇ''ತಿ ಸೂತ್ರಾತ್ ವ್ರೀಹಿಮಾನ್ ವ್ರೀಹೀತಿವತ್ ವೃಷ್ಣಿಕುಲವಾನೇವ ವೃಷ್ಣೀ। ಅತೋ ವೃಷ್ಣಿನಾಮಿತಿ ಸಾಧುಃ। ಸ ಸಿಂಹಮಪ್ಯದರ್ಶಯದಿತ್ಯತ್ರ ಸ= ಕೃಷ್ಣಃ ಸಿಂಹಸೂದಿತಂ ಪ್ರಸೇನಂ ಪ್ರದರ್ಶ್ಯ ಸ ಏವ ಋಕ್ಷಪಾತಿತಂ ಸಿಂಹಮಪ್ಯದರ್ಶಯದಿತಿ ಏವಕಾರಾಧ್ಯಾಹಾರೇಣಾನ್ವಯಃ। ಅತೋ ನ ತಚ್ಛಬ್ದವೈಯರ್ಥ್ಯಮ್ ॥ – (ವಾ.)

ತಸ್ಯ ಋಕ್ಷತ್ವೇऽಪಿ ತತ್ಪತ್ನ್ಯಾದೀನಾಂ ತದಾಕಾರತ್ವಾಭಾನ್ನ ತತ್ಸುತಾಯಾಸ್ತದಾಕಾರತ್ವಂ ಶಂಕನೀಯಮ್ । ನ ಚಾತ್ರ ಪುನರುಕ್ತಿದೋಷಃ । ಸ ಸಿಂಹಸೂದಿತಂ ಸ ಸಿಂಹಮಿತಿ । ದ್ವಿಸ್ತಚ್ಛಬ್ದಶ್ರವಣಾದಿತಿ ವಾಚ್ಯಮ್ । ಪ್ರತಿಕ್ರಿಯಂ ಕರ್ತುರಾಕಾಂಕ್ಷಿತತ್ವಾತ್ । ಅತ್ರ ಚ ಸಿಂಹಸೂದಿತಂ ಪ್ರದರ್ಶ್ಯ ಋಕ್ಷಪಾತಿತಂ ಸಿಂಹಮಪ್ಯದರ್ಶಯದಿತಿ ಭಿನ್ನಕರ್ಮಕ-ದರ್ಶನಕ್ರಿಯಾಭೇದಶ್ರವಣಾತ್ । ದೇವದತ್ತಃ ಸ್ನಾತ್ವಾ ಭುಕ್ತ್ವಾ ಗಚ್ಛತೀತ್ಯಾದಾವಪಿ ದೇವದತ್ತಃ ಸ್ನಾತ್ವಾ ದೇವದತ್ತೋ ಭುಕ್ತ್ವಾ ದೇವದತ್ತೋ ಗಚ್ಛತೀತ್ಯೇವಂ ದೇವದತ್ತಪದಾನುವೃತ್ತೇಃ ಪ್ರಮಿತತ್ವಾತ್ । ಆಚಾರ್ಯೈಸ್ತು ಸ್ಪಷ್ಟಪ್ರತಿ-ಭಾಸಾರ್ಥಂ ಪ್ರತಿಕ್ರಿಯಂ ಕರ್ತೃಕೃಃ । ಇದಮೇವ ಸಮಾಧಾನಂ ಏಕವಿಂಶೇऽಧ್ಯಾಯೇ 'ತೇ ಚರ್ಮವಸನಾ ಭೂತ್ವಾ' ಇತ್ಯತ್ರ ದ್ರಷ್ಟವ್ಯಮ್ ॥ – (ತಾ.)

ಏಃ ಸ್ವತಃ ನರಸಿಂಹನಾದ ಶ್ರೀಕೃಷ್ಣ ಪ್ರಸೇನ ಸಿಂಹದಿಂದ ಹತನಾದದ್ದನ್ನು ಸಿಂಹದ ಹೆಜ್ಜೆಗುರುತುಗಳ ಮೂಲಕ ತೋರಿಸಿ, ಎಷ್ಟು ಬಲ್ಲವನಾಗಿದ್ದರೂ, ಸಾಕ್ಷ್ಯಾಧಾರಗಳ ಮೂಲಕ ವಿಷಯವನ್ನು ಮಂಡಿಸಬೇಕೆಂಬುದನ್ನು ಜಗತ್ತಿಗೆ ಸಾರಿದನು. ಹಾಗೆ ಸಿಂಹನನ್ನು ಕೊಂದ ಕರಡಿ ರಾಮಭಕ್ತನಾದ ಜಾಂಬವಂತ ಎಂಬ ವಿವರ ಮುಂದೆ ಬಂದಿದೆ.

ಶ್ರೀಕೃಷ್ಣನಿಂದ ಗುಹಾಪ್ರವೇಶ

ತತೋ ನಿಧಾಯ ತಾನ್ ಬಿಲಂ ಸ ಜಾಂಬವತ್ಪರಿಗ್ರಹಮ್ ।
ವಿವೇಶ ತತ್ರ ಸಂಯುಗಂ ಬಭೂವ ತೇನ ಚೇಶಿತುಃ ॥ ೨೦೭ ॥

ಅ: ಬಳಿಕ ಅವರನ್ನು ಬಿಲದ ಹೊರಗೆ ನಿಲ್ಲಿಸಿ, ಶ್ರೀಕೃಷ್ಣ ಜಾಂಬವಂತನ ನೆಲೆಯಾದ ಗುಹೆಯನ್ನು ಹೊಕ್ಕನು. ಅಲ್ಲಿ ಜಾಂಬವಂತನೊಂದಿಗೆ ಶ್ರೀಕೃಷ್ಣ ಯುದ್ಧಮಾಡಿದ.

ಶ್ರೀಕೃಷ್ಣ ಜಾಂಬವಂತರ ಯುದ್ಧ

ಯುಯೋಧ ಮಂದಮೇವ ಸ ಪ್ರಭುಃ ಸ್ವಭಕ್ತ ಇತ್ಯಜಃ ।
ಚಕಾರ ಚೋಗ್ರಮಂತತಃ ಪ್ರಕಾಶಯನ್ ಸ್ವಮಸ್ಯ ಹಿ ॥ ೨೦೮ ॥

ಅ: ಅವನು ಭಕ್ತನೆಂಬ ಕಾರಣದಿಂದ ಶ್ರೀಕೃಷ್ಣ ಮೊದಲಿಗೆ ಮೆಲ್ಲಗೆ ಯುದ್ಧ ಮಾಡಿದ. ಬಳಿಕ ಅವನಿಗೆ ತನ್ನ ಸ್ವರೂಪವನ್ನು ತೋರಿಸಲೆಂದು ಭಯಂಕರವಾಗಿ ಯುದ್ಧಮಾಡಿದ.

ಏಃ ಜಾಂಬವಂತನ ಸ್ವರೂಪ ಶ್ರೀಕೃಷ್ಣನಿಗೆ ತಿಳಿದಿದ್ದಂತೆ, ಜಾಂಬವಂತನಿಗೆ ಕೃಷ್ಣನ ಸ್ವರೂಪ ತಿಳಿದಿರಲಿಲ್ಲ ಎಂಬುದು ಇಲ್ಲಿಯ ವಿಶೇಷ. ನಿತ್ಯಜೀವನದಲ್ಲಿ ನಡೆಯುವುದೂ ಹಾಗೆಯೇ. ಸಕಲ ಜೀವರ ಸ್ವರೂಪ ಭಗವಂತನಿಗೆ ತಿಳಿದಿದ್ದರೂ, ಎಲ್ಲ ಜೀವರಿಗೂ ಅವನ ಸ್ವರೂಪ ತಿಳಿದಿರು-ವುದಿಲ್ಲ, ಅದರಿಂದಾಗಿಯೇ ಸಂಘರ್ಷ, ಸಂತಾಪ ಎಂದರ್ಥ.

ಸ ಮುಷ್ಟಿಪಿಷ್ಟವಿಗ್ರಹೋ ನಿತಾಂತಮಾಪದಂ ಗತಃ ।
ಜಗಾಮ ಚೇತಸಾ ಽರಣಂ ರಘೂತ್ತಮಂ ನಿಜಂ ಪತಿಮ್ ॥ ೨೦೯ ॥

ಅ: ಜಾಂಬವಂತ ಶ್ರೀಕೃಷ್ಣನ ಮುಷ್ಟಿಯಿಂದ ಮೈ ನುಗ್ಗಾದವನಾಗಿ ಬಹಳ ಆಪತ್ತಿಗೆ ಒಳಗಾದ; ಮನಸ್ಸಿನಲ್ಲಿಯೇ ತನ್ನ ಸ್ವಾಮಿಯಾದ ಶ್ರೀರಾಮನನ್ನು ಶರಣುಹೊಕ್ಕ.

ವಿ: ರಣದಲ್ಲಿ ಗೆಲುವಿಗಾಗಿ ಶ್ರೀರಾಮನಲ್ಲಿ ಅರಣ ಹೊಂದಿದನು ಎಂಬ ಇಲ್ಲಿಯ ನಿರೂಪಣೆಯ ಸ್ವಾರಸ್ಯವನ್ನು ಗಮನಿಸಬೇಕು. ಅದರಿಂದಾಗಿಯೇ ರಣಪರಿಹಾರವಾಗಿ ರಕ್ಷಣೆ ದೊರೆಯಿತು. ಇಲ್ಲಿ 'ಅರಣ' ಎಂಬುದಕ್ಕೆ 'ರಣದಿಂದ ಬಿಡುಗಡೆ, ಶಾಂತಿ' ಎಂಬ ಎರಡುರೀತಿಯ ಅರ್ಥವೂ ಎಹಿತ. ಜಾಂಬವಂತ ಯಮಧರ್ಮನ ಅವತಾರನಾದ್ದರಿಂದ, ಶ್ರೀರಾಮಜಾಂಬವಂತರ ಯುದ್ಧ ಶ್ರೀರಾಮಯಮರ ಯುದ್ಧವಾಯಿತು. ಯಮಸಭೆಯಲ್ಲಿ ಪೂಜಿತನಾಗುವ ದೈವ ಎರಡು ರಾಮರೂಪಗಳ ಶ್ರೀಹರಿ ಎಂಬ ವಿವರ ಮುಂದೆ ಬಂದಿದೆ (೨೧/೭೨). ಮೃತ್ಯುದೇವತೆಯೊಂದಿಗೆ ಹೋರಾಡಿ, ಜಯಿಸುವ 'ಮೃತ್ಯುಮೃತ್ಯು' (ನರಸಿಂಹ) ಶ್ರೀಹರಿ ಎಂಬುದು ಸ್ಫುಟಪಡುವುದು. ಕೃಷ್ಣ ಯುದ್ಧಮಾಡಿದ್ದು ಅದಕ್ಕಾಗಿಯೇ ಅಲ್ಲವೆ!

ಶ್ರೀಕೃಷ್ಣರಾಮರ ಅಭೇದ

ಸ್ಮೃತಿಂ[೧] ಗತೇ ತು ರಾಘವೇ ತದಾಕೃತಿಂ ಯದೂತ್ತಮೇ ।
ಸಮಸ್ತಭೇದವರ್ಜಿತಾಂ ಸಮೀಕ್ಷ್ಯ ಸೋಽಯಮಿತ್ಯವೈತ್ ॥ ೨೧೦ ॥

ಅ: ಜಾಂಬವಂತ ಶ್ರೀರಾಮನನ್ನು ಸ್ಮರಿಸಿದಾಗ ಅವನ ಸ್ವಗತಭೇದವಿವರ್ಜಿತವಾದ ರೂಪವನ್ನು ಕೃಷ್ಣನಲ್ಲಿ ಕಂಡು, ಆ ರಾಮನೇ ಈ ಕೃಷ್ಣನೆಂದು ತಿಳಿದ.

ವಿ: ಶ್ರೀಹರಿಯ ರೂಪರೂಪಗಳಲ್ಲಿನ ಅಭೇದಪರಿಜ್ಞಾನ ಹೀಗೆ ಜಿಜ್ಞಾಸೆಯಿಂದ ಸ್ಫುಟಪಡುವುದು ಎಂದರ್ಥ. ಅರ್ಜುನ ಕಿರಾತರೂಪದ ಶಿವನೊಂದಿಗೆ ಸೋತು, ಶಿವಪೂಜೆ ಮಾಡಿ, ಬಳಿಕ ಕಿರಾತನೇ ಶಿವನೆಂದು ಅರ್ಥ ಮಾಡಿಕೊಳ್ಳುವ ಪ್ರಸಂಗ ಇಂತಹುದೇ ಆಗಿದೆ ಎಂಬುದನ್ನು ಗಮನಿಸಬೇಕು. ಆದರೆ ಅಲ್ಲಿ ಕಿರಾತ ಶಿವನೆಂದು ಸ್ಫುಟಪಡುವುದೇ ಹೊರತು, ರೂಪರೂಪಗಳಲ್ಲಿನ ಅಭೇದಾದಿಗಳು ಅಲ್ಲ ಎಂಬುದು ವಿಶೇಷ. ಎರಡು ಪ್ರಸಂಗಗಳಲ್ಲೂ ಭಕ್ತರು ತಮ್ಮ ಆರಾಧ್ಯ ಮೂರ್ತಿಯೊಂದಿಗೇ ಘರ್ಷಣೆಗೆ ಇಳಿದು, ಪರಾಭವಗೊಂಡಿದ್ದು ಮಾತ್ರ ಸಮಾನವಾದ ಅಂಶ.

ಜಾಂಬವಂತನ ಶರಣಾಗತಿ; ಜಾಂಬವತೀ ಕಲ್ಯಾಣ

ತತಃ ಕ್ಷಮಾಪಯನ್ ಸುತಾಂ ಪ್ರದಾಯ ರೋಹಿಣೀಂ ಶುಭಾಮ್ ।
ಮಣಿಂ ಚ ತಂ ನುನಾವ ಸ ಪ್ರಪನ್ನ ಆಶು ಪಾದಯೋಃ ॥ ೨೧೧ ॥

ಅ: ಬಳಿಕ ಜಾಂಬವಂತನು ಕೂಡಲೇ ಕೃಷ್ಣನಲ್ಲಿ ಕ್ಷಮೆ ಬೇಡಿ, ಶುಭಸ್ವರೂಪಳಾದ ತನ್ನ ಪುತ್ರಿ ರೋಹಿಣಿಯನ್ನೂ, ಆ ಸ್ಯಮಂತಕಮಣಿಯನ್ನೂ ಸಮರ್ಪಿಸಿ, ಪಾದಗಳಿಗೆರಗಿ, ಸ್ತುತಿಸಿದ.

---

೧. ಸ್ಮೃತಿಂ ಗತೇ ಸತಿ ತೇನ ಸ್ಮೃತೇ ಸತೀತ್ಯರ್ಥಃ । – (ಜ.)

ವಿ: ಇಲ್ಲಿ ರೋಹಿಣಿ ಎಂದರೆ ಜಾಂಬವತಿ ಎಂದರ್ಥ. ಜಾಂಬವಂತನ ಪುತ್ರಿಯಾದ್ದರಿಂದ ಜಾಂಬವತಿ ಎಂದು ಅವಳಿಗೆ ಪ್ರಸಿದ್ಧಿ. ಕೃಷ್ಣನಿಗೆ ನೀಡಲೆಂದು, ಜಾಂಬವತಿಯನ್ನು ಪಡೆಯಲೆಂದೇ ಚಿರಂಜೀವಿಯಾಗಿದ್ದ ಜಾಂಬವಂತ, ಶ್ರೀರಾಮದೇವರ ಹಿಂದೆ ಸದ್ಗತಿಗೆ ತೆರಳದೆ, ತಪಸ್ಸಿನಲ್ಲಿ ನಿರತನಾಗಿದ್ದ ಎಂಬ ವಿವರ ಈಗಾಗಲೇ ಬಂದಿದೆ(೯/೧೧೫).

ಜಾಂಬವಂತನಿಗೆ ಯೌವನಪ್ರಾಪ್ತಿ

ವಿಧಾಯ ಚಕ್ರದಾರಿತಂ ಸುಜೀರ್ಣದೇಹಮಸ್ಯ ಸಃ ।
ಯುವಾನಮಾಶು ಕೇಶವಶ್ಚಕಾರ ವೇದನಾಂ ವಿನಾ ॥ ೨೧೨ ॥

ಅ: ಕೃಷ್ಣ ಅವನ ತುಂಬಾ ಹಣ್ಣಾಗಿದ್ದ ದೇಹವನ್ನು ಚಕ್ರದಿಂದ ಸೀಳಿ, ನೋವಾಗದಂತೆ ಅವನನ್ನು ಕೂಡಲೇ ಯುವಕನನ್ನಾಗಿ ಮಾಡಿದನು.

ವಿ: ತನ್ನ ಜೀರ್ಣದೇಹವನ್ನು ಪುನಃ ತರುಣದೇಹವನ್ನಾಗಿ ಮಾಡಲು ಜಾಂಬವಂತ ಪ್ರಾರ್ಥಿಸಿದಾಗ, ಕೃಷ್ಣ ಕೂಡಲೇ ತನ್ನ ಚಕ್ರದಿಂದ ಅವನ ಜೀರ್ಣದೇಹವನ್ನು ನೋವಾಗದಂತೆ ಕೊರೆದು, ತಾರುಣ್ಯನೀಡಿದ ಎಂದರ್ಥ. ಇದು ಆಧುನಿಕ ಪರಿಭಾಷೆಯ 'ಪ್ಲಾಸ್ಟಿಕ್ ಸರ್ಜರಿ' ಪರಿಕಲ್ಪನೆಗೆ ಸರಿಹೊಂದುವುದು ಎಂಬುದನ್ನು ಗಮನಿಸಬೇಕು. ಇಂತಹ ವೈಜ್ಞಾನಿಕಪರಿಕಲ್ಪನೆ–ಗಳಿಂದಾಗಿಯೂ ಮಹಾಭಾರತ, ಭಾಗವತಗಳು ಅತ್ಯಂತ ಮಾನ್ಯಕೃತಿಗಳಾಗುವವು ಎಂಬುದನ್ನು ತಿಳಿಯಬೇಕು. ಹಾಗೆ ಚಕ್ರದಿಂದ ಕೊರೆಯುವಾಗ ನೋವಾಗದಂತೆ ಮಾಡಿದ್ದೂ ಸಹ ಇಂದಿನ 'ಅರಿವಳಿಕೆ'ಯ ಪರಿಕಲ್ಪನೆಗೆ ಹತ್ತಿರವಾದ ವಿವರ ಎಂಬುದನ್ನೂ ಗಮನಿಸಬೇಕು. ಹನುಮಂತನೂ ಇದರಂತೆ ಜಾಂಬವಂತನ ಸಮಕಾಲೀನನೇ ಆಗಿದ್ದರೂ, ಈ ರೀತಿಯಾದ ವೃದ್ಧಾಪ್ಯವನ್ನು ಹೊಂದದೆ, ತರುಣನಾಗಿಯೇ ನೆಗೆದು ಮರೆಯಾದ ವಿವರ ಮಹಾಭಾರತದಲ್ಲಿ ಬಂದಿದೆ. ಇದು ಹನುಮಂತ ಮುಪ್ಪಿಲ್ಲದವನು ಎಂಬುದಕ್ಕೆ ಸೂಚಕ. ಇಬ್ಬರೂ ಚಿರಂಜೀವಿಗಳೇ ಆದರೂ, ಹನುಮಂತನ ಚಿರಂಜೀವಿತ್ವ ವಿಭಿನ್ನಬಗೆಯದು ಎಂಬುದಕ್ಕೆ ಇದು ಸೂಚಕ.

ವಿಧಾಯ ಭಕ್ತವಾಂಛಿತಂ ಪ್ರಿಯಾಸಹಾಯ ಈಶ್ವರಃ ।
ಪ್ರಗೃಹ್ಯ ತಂ ಮಹಾಮಣಿಂ ವಿನಿರ್ಯಯೌ ಗುಹಾಮುಖಾತ್ ॥ ೨೧೩ ॥

ಅ: ಭಕ್ತನ ಬಯಕೆಯನ್ನು ಪೂರೈಸಿ, ಸರ್ವೇಶ್ವರನಾದ ಶ್ರೀಕೃಷ್ಣ ಪ್ರಿಯೆಯಾದ ಜಾಂಬವತಿಯೊಂದಿಗೆ ಆ ಸ್ಯಮಂತಕಮಣಿಯೊಂದಿಗೆ ಆ ಗುಹೆಯಿಂದ ಹೊರ ನಡೆದ.

ವಿ: ಶ್ರೀಕೃಷ್ಣನನ್ನು **'ಪ್ರಿಯಾಸಹಾಯ'** ಎನ್ನುವ ಮೂಲಕ ಜಾಂಬವತಿ ಸ್ವರೂಪದಲ್ಲೂ ವಿಷ್ಣುಪತ್ನಿ ಎಂಬುದನ್ನು ಸೂಚಿಸಿರುವರು ಎಂದು ತಿಳಿಯಬೇಕು.

ಗುಹಾಂ

ಗುಹಾಂ ಪ್ರವಿಷ್ಟಮೀಶ್ವರಂ ಬಹೂನ್ಯಹಾನ್ಯನಿರ್ಗತಮ್ ।
ಪ್ರತೀಕ್ಷ್ಯ ಯಾದವಾಸ್ತು ಯೇ ಗತಾ ಗೃಹಂ ತದಾऽಹೃಷುಃ ॥ ೨೧೪ ॥

ಅ: ಗುಹೆಯನ್ನು ಹೊಕ್ಕ ಶ್ರೀಕೃಷ್ಣ ಅನೇಕ ದಿನಗಳಾದರೂ ಹೊರಬರದಿದ್ದನ್ನು ಕಂಡು, ಕಾದು, ಯಾದವರು ಮನೆಗೆ ಮರಳಿದ್ದರು. ಕೃಷ್ಣ ಮರಳಿ ಬಂದಾಗ, ಬಹಳವಾಗಿ ಸಂತೋಷಿಸಿದರು.

ವಿ: ಶ್ರೀಕೃಷ್ಣ ಹಾಗೆ ಜಾಂಬವಂತನೊಂದಿಗೆ ಯುದ್ಧಮಾಡಿದ್ದು [೨]ಭಾಗವತದಂತೆ ಒಟ್ಟು ಇಪ್ಪತ್ತೆಂಟು ದಿನಗಳು; [೩]ಹರಿವಂಶದಂತೆ ಇಪ್ಪತ್ತೊಂದು ದಿನಗಳು. ಶ್ರೀಸತ್ಯಧರ್ಮತೀರ್ಥ ಶ್ರೀಪಾದರು ಈ ವಿರೋಧವನ್ನು ಹೀಗೆ ಪರಿಹರಿಸಿರುವರು :

> ಜನಾ ದ್ವಾರಕಪ್ರಜಾಃ ಶೌರೇರ್ನಿಗಮನಮದೃಷ್ಟ್ವಾ ದ್ವಾದಶಾಹನಿ ಪ್ರತೀಕ್ಷ್ಯ ಸಾಪ್ತದಿನ್ಯಾ ಏವ ದ್ವಾದಶಾಹತಯಾ ಭಾನಂ ಶೋಕತೋ ಮಾಸಶಬ್ದೇನಾಹಾನ್ಯುಚ್ಯಂತೇ । ತಥಾ ಹಿ ಭಾರತ ಇತ್ಯಾದಿ ಪ್ರಥಮಸ್ಕಂಧೋಕ್ತರೀತ್ಯಾ ಜ್ಞೇಯಮ್ । ಅತ ಏವಾಚಾರ್ಯೈರ್ಬಹೂನ್ಯಹಾನೀತ್ಯುದೀರಣಂ ಕೃತಮ್ ।

ಸಮಸ್ತವೃಷ್ಣಿಸನ್ನಿಧೌ ಯದೂತ್ತಮಃ ಸ್ಯಮಂತಕಮ್ ।
ದದೌ ಚ ಸತ್ರಜಿತ್ಕರೇ ಸ ವಿಚ್ಛವಿರ್ಬಭೂವ ಹ ॥ ೨೧೫ ॥

ಅ: ಸಕಲಯಾದವರ ಸಮಕ್ಷಮದಲ್ಲಿ ಸರ್ವೋತ್ತಮನಾದ ಶ್ರೀಕೃಷ್ಣ ಸ್ಯಮಂತಕಮಣಿಯನ್ನು ಸತ್ರಾಜಿತನ ಕೈಗೆ ನೀಡಿದ. ಅವನು ಕಳೆಗುಂದಿದವನಾದ.

ವಿ: ಶ್ರೀಕೃಷ್ಣ ಸತ್ರಾಜಿತ ಮಾಡಿದ ಆರೋಪ ಮಿಥ್ಯೆ ಎಂಬುದನ್ನು ಸಕಲರಿಗೂ ತಿಳಿಸಿಕೊಡ–ಲೆಂದು, ಸಕಲಯಾದವರ ಸನ್ನಿಧಿಯಲ್ಲೇ ಎಲ್ಲ ವಿವರಗಳನ್ನು ತಿಳಿಸಿ, ಸ್ಯಮಂತಕಮಣಿಯನ್ನು ಕೊಟ್ಟ. ಆ ಮೂಲಕ ತನ್ನ ನಿರ್ದೋಷತ್ವವನ್ನು ಸಾರಿದ. ಹೀಗೆ ಈ ಕೃತಿಯ ಮೂಲಕ ಶ್ರೀಕೃಷ್ಣ ತನ್ನ ನಿರ್ದೋಷತ್ವವನ್ನು ಸಾರಿದರೆ, ತಮ್ಮ ಬ್ರಹ್ಮಸೂತ್ರಾದಿಕೃತಿಗಳ ಮೂಲಕ ವಾಸಿಷ್ಠಕೃಷ್ಣ ವೇದ–ವ್ಯಾಸರು ಶ್ರೀಹರಿಯ ನಿರ್ದೋಷತ್ವಸಮರ್ಥನರೂಪವಾದ ಅವಿರೋಧಾಧ್ಯಾಯದ ಸಾರವನ್ನು ನಿರೂಪಿಸಿರುವರು ಎಂದು ತಿಳಿಯಬೇಕು.

---

೧. **ಗತಾ ಗೃಹಂ ತು ಜಹೃಷುಃ** – (ಪಾಠಾಂತರ)

ತದಾऽಹೃಷುರಿತ್ಯತ್ರ ತದಾ= ಕೃಷ್ಣಾಗಮನೇ ಸತಿ ''ಹೃಷಿ ಹರ್ಷಣೇ'' ಇತಿ ಧಾತೋಃ ಲುಙ್ ಅಹೃಷುರಿತಿ ಬಹುವಚನಮ್ । ಹರ್ಷಂ ಕೃತವಂತ ಇತ್ಯರ್ಥಃ ॥ –(ವಾ.)

೨. ಆಸೀತ್ ತದಷ್ಟಾವಿಂಶಾಹಮಿತರೇತರಮುಷ್ಟಿಭಿಃ ।... – ಭಾಗವತ (೧೦/೫೬/೨೩)

೩. 'ಬಾಹುಭ್ಯಾಮೇವ ಗೋವಿಂದೋ ದಿವಸಾನೇಕವಿಂಶತಿಃ' ಇತಿ ಹರಿವಂಶೇ ॥ – (ಮ.)

ಸತ್ಯಭಾಮಾ ಕಲ್ಯಾಣ

ಸ ದುರ್ಯಶೋ ರಮಾಪತಾವನೂಚ್ಯ ಮಿಥ್ಯಯಾ[೧] ತಪನ್ ।
ಸ್ವಪಾಪಹಾನಕಾಂಕ್ಷಯಾ ದದೌ ಸುತಾಂ ಜನಾರ್ದನೇ ॥ ೨೧೬ ॥

ಅ: ಸತ್ರಾಜಿತನು ಲಕ್ಷ್ಮೀಪತಿಯಾದ ಶ್ರೀಕೃಷ್ಣನ ಮೇಲೆ ಅಪಕೀರ್ತಿ ಹೊರಿಸಿದ್ದಕ್ಕಾಗಿ ಪಶ್ಚಾತ್ತಾಪ ಹೊಂದಿ, ತನ್ನ ಪಾಪ ಕಳೆದುಕೊಳ್ಳುವ ಬಯಕೆಯಿಂದ ಮಗಳಾದ ಸತ್ಯಭಾಮೆಯನ್ನು ಶ್ರೀಕೃಷ್ಣನಿಗೆ ಸಮರ್ಪಿಸಿದ.

ವಿ: ಸತ್ಯಭಾಮೆ ಸಾಕ್ಷಾತ್ ಮಹಾಲಕ್ಷ್ಮಿಯ ಭೂರೂಪದ ಅವತಾರ ಎಂಬ ವಿವರ ಮುಂದೆ ಬಂದಿದೆ.

ಮಣಿಂ ಚ ತಂ ಪ್ರದಾಯ ತಂ ನನಾಮ ಚ ಕ್ಷಮಾಪಯನ್ ।
ಮಣಿಂ ಪುನರ್ದದೌ ಹರಿರ್ಮುಮೋದ ಸತ್ಯಭಾಮಯಾ ॥ ೨೧೭ ॥

ಅ: ಸತ್ರಾಜಿತನು ಆ ಮಣಿಯನ್ನು ಕೃಷ್ಣನಿಗೆ ಸಮರ್ಪಿಸಿ, ಕ್ಷಮಿಸಲೆಂದು ಪ್ರಾರ್ಥಿಸಿ ನಮಸ್ಕರಿಸಿದನು. ಶ್ರೀಕೃಷ್ಣನು ಮಣಿಯನ್ನು ಮರಳಿ ಸತ್ರಾಜಿತನಿಗೇ ನೀಡಿದ. ಸತ್ಯಭಾಮೆಯೊಂದಿಗೆ ಆನಂದಿಸಿದ.

ವಿ: ಶ್ರೀಕೃಷ್ಣ ಸ್ಯಮಂತಕಮಣಿಯನ್ನು ಹಾಗೆ ಸತ್ರಾಜಿತನಿಗೆ ಹಿಂದಿರುಗಿಸುವ ಮೂಲಕ ತಾನು ಮಣಿಯನ್ನು ಸರ್ವಥಾ ಅಪೇಕ್ಷಿಸಿದವನಲ್ಲ; ಸತ್ರಾಜಿತನ ಮನಸ್ಸಿನಲ್ಲಿ ಅಡಗಿದ್ದ ಲೋಭವನ್ನು ತೋರಿಸಿಕೊಡಲೆಂದು ಹಾಗೆ ಕೇಳಿದಂತೆ ನಟಿಸಿದ್ದ ಮಾತ್ರ ಎಂಬುದನ್ನು ಮತ್ತೊಮ್ಮೆ ನಿರೂಪಿಸಿದ ಎಂದು ತಿಳಿಯಬೇಕು.

ರುಗ್ಮಿಣೀ ಸತ್ಯಭಾಮೆಯರು ಸಾಕ್ಷಾತ್ ಮಹಾಲಕ್ಷ್ಮಿ

ರಮೈವ ಸಾ ಹಿ ಭೂರಿತಿ ದ್ವಿತೀಯಮೂರ್ತಿರುತ್ತಮಾ ।
ಬಭೂವ ಸತ್ರಜಿತ್ಸುತಾ ಸಮಸ್ತಲೋಕಸುಂದರೀ ॥ ೨೧೮ ॥

ಅ: ಮಹಾಲಕ್ಷ್ಮಿಯ ಭೂ ಎಂಬ ಮತ್ತೊಂದು ರೂಪವೇ ಸಮಸ್ತಲೋಕಸುಂದರಿಯಾದ ಸತ್ಯಭಾಮೆಯಾಗಿ ಸತ್ರಾಜಿತನ ಮಗಳಾಗಿ ಪ್ರಾದುರ್ಭವಿಸಿದ್ದಿತು.

---

೧. ಮಿಥ್ಯಯಾ ತಪನ್ನಿತ್ಯತ್ರ ಮಿಥ್ಯಯಾ = ಮಿಥ್ಯಾವಚನೇನೇತಿ ''ಉಪಸರ್ಗವಿಭಕ್ತಿಸ್ವರಪ್ರತಿರೂಪಕಾಶ್ಚ'' ಇತ್ಯವ್ಯಯವಿಧಾಯಕಸೂತ್ರಾತ್ ಜಾಯಯೇತ್ಯಾದಿವತ್ ವಿಭಕ್ತಿಪ್ರತಿರೂಪಕಮವ್ಯಯಮ್॥ – (ವಾ.)

ಮಿಥ್ಯಯಾ ವೃತೋ ವಿಭಕ್ತಿಪ್ರತಿರೂಪಕಮವ್ಯಯಮೇತತ್ ॥ – (ತಾ.)

ವಿ: ಮಹಾಲಕ್ಷ್ಮಿಯ ಶ್ರೀ, ಭೂ ಮತ್ತು ದುರ್ಗಾ ಎಂಬ ಮೂರುರೂಪಗಳಲ್ಲಿ ಶ್ರೀರೂಪ ರುಗ್ಮಿಣಿಯಾದರೆ, ಭೂರೂಪವೇ ಸತ್ಯಭಾಮಾ. ಆದ್ದರಿಂದ ಅವರಲ್ಲಿ ಅಣುಮಾತ್ರವೂ ವ್ಯತ್ಯಾಸವಿಲ್ಲ ಎಂದರ್ಥ. ದುರ್ಗಾರೂಪವಂತೂ ದುರ್ಗೆಯಾಗಿಯೇ ಅವತರಿಸಿದ್ದ ವಿವರ ಈಗಾಗಲೇ ಬಂದಿದೆ. ಹೀಗೆ ಮಹಾಲಕ್ಷ್ಮಿಯ ಮೂರೂ ರೂಪಗಳೂ ಶ್ರೀಕೃಷ್ಣಾವತಾರಕಾಲದಲ್ಲಿ ಅವತರಿಸಿದ ವಿವರ ಈಗಾಗಲೇ ಬಂದಿದೆ. ಈ ಮೂರು ರೂಪಗಳು ಕ್ರಮವಾಗಿ ಪ್ರಕೃತಿಯ ಸತ್ತ್ವಗುಣ, ರಜೋಗುಣ ಮತ್ತು ತಮೋಗುಣಗಳಿಗೆ ಅಭಿಮಾನಿರೂಪಗಳು ಎಂಬುದನ್ನು ಮೂರನೆಯ ಅಧ್ಯಾಯದಲ್ಲಿ ನಿರೂಪಿಸಿರುವರು (ಅ. ೩, ಶ್ಲೋ. ೧೮).

ತತೋ ಹಿ ಸಾ ಚ ರುಗ್ಮಿಣೀ ಪ್ರಿಯೇ ಪ್ರಿಯಾಸು ತೇಽಧಿಕಮ್[೧] ।
ಜನಾರ್ದನಸ್ಯ ತೇ ಹರೇಃ ಸದಾಽವಿಯೋಗಿನೀ ಯತಃ ॥ ೨೧೯ ॥

ಅ: ಆದ್ದರಿಂದ ಸತ್ಯಭಾಮೆ ಮತ್ತು ರುಗ್ಮಿಣಿ ಇಬ್ಬರೂ ಜನಾರ್ದನನಾದ ಶ್ರೀಕೃಷ್ಣನಿಗೆ ಸದಾ ಅವಿಯೋಗಿನಿಯಾದ ಮಹಾಲಕ್ಷ್ಮಿಯೇ ಆದ್ದರಿಂದ ಅವರು ಅವನ ಪತ್ನಿಯರಲ್ಲೆಲ್ಲ ಅವನಿಗೆ ಹೆಚ್ಚು ಪ್ರೀತಿಪಾತ್ರರಾಗಿದ್ದರು.

ವಿ: ರುಗ್ಮಿಣೀಸತ್ಯಭಾಮೆಯರಿಬ್ಬರೂ ಹೀಗೆ ಸಾಕ್ಷಾತ್ ಮಹಾಲಕ್ಷ್ಮಿಯ ರೂಪಗಳೇ ಆದ್ದರಿಂದ ಅವರಿಬ್ಬರಲ್ಲೂ ಸವತಿಮಾತ್ಸರ್ಯಾದಿಗಳ ಪ್ರಸಕ್ತಿ ಸರ್ವಥಾ ಇಲ್ಲ. ಆದರೂ ಅವರು ಪಾರಿಜಾತ–ಪುಷ್ಪ ಮೊದಲಾದ ಪ್ರಸಂಗಗಳಲ್ಲಿ ಹಾಗೆ ವರ್ತಿಸಿದ್ದು ಲೋಕವಿಡಂಬನೆ ಹಾಗೂ ಅಸುರ–ಮೋಹನಕ್ಕೆಂದು ಮಾತ್ರ; ಶ್ರೀಹರಿಯ ರಾಮಪರಶುರಾಮರೂಪಗಳು, ಯಜ್ಞವೃಷಭರೂಪಗಳು ಅವನ ಸಾಕ್ಷಾದ್ರೂಪಗಳೇ ಆದರೂ, ಪರಸ್ಪರ ಸ್ಪರ್ಧಿಸಿದಂತೆ ನಟಿಸಿದ ಪ್ರಸಂಗದಂತೆ ಇದು ಎಂದು ತಿಳಿಯಬೇಕು.

ಅಥಾಪ[೨] ಸಾಂಬನಾಮಕಂ ಸುತಂ ಚ ರೋಹಿಣೀ ಹರೇಃ ।
ಚತುರ್ಮುಖಾಂಶಸಂಯುತಂ ಕುಮಾರಮೇವ[೩] ಷಣ್ಮುಖಮ್ ॥ ೨೨೦ ॥

---

೧. ತೇಽಧಿಕಮಿತ್ಯತ್ರ 'ಮಣೀವಾದೇರ್ಣ್ಣೀ'ತಿ ವಚನಾತ್ ನ ಪ್ರಗೃಹ್ಯಸಂಜ್ಞಾ। ಯತಃ ಕಾರಣಾತ್ ಸಾ ರುಗ್ಮಿಣೀ ಚೇತ್ಯುಭೇ ಭಾರ್ಯೇ ಮೂಲರೂಪೇ ಅವಿಯೋಗಿನೀ ರಮೈವ ತತಃ ಜನಾರ್ದನಸ್ಯ ಹರೇಃ ಪ್ರಿಯಾಸು ತೇ ಅಧಿಕಂ ಪ್ರಿಯೇ ಇತ್ಯನ್ವಯಃ ॥ –(ವಾ.)

೨. 'ಹೃತೋ ಯದೈವ ಪ್ರದ್ಯುಮ್ನಃ ಶಂಬರೇಣಾತ್ಮಪಾತಿನಾ ।
ಮಾಸೇಽಸ್ಮಿನ್ನೇವ ಸಾಂಬಸ್ತು ಜಾಂಬವತ್ಯಾಮಜಾಯತ ॥' ಇತಿ ಚ । – (ಮ.)

೩. ಅಸೂತ ಯಂ ಜಾಂಬವತೀ ವ್ರತಾಢ್ಯಾ ದೇವಂ ಗುಹಂ ಯೋಽಂಬಿಕಯಾ ಧೃತೋಽಗ್ರೇ ॥
– ಭಾಗವತ (೩/೧/೯೦)

ಅ: ಜಾಂಬವತಿ ಶ್ರೀಕೃಷ್ಣನಿಂದ ಸಾಂಬನೆಂಬ ಪುತ್ರನನ್ನು ಪಡೆದಳು; ಅವನು ಸನತ್ಕುಮಾರರೂಪದ ಷಣ್ಮುಖನ ಅವತಾರ; ಚತುರ್ಮುಖನ ಅಂಶವನ್ನೂ ಹೊಂದಿದ್ದ.

ವಿ: ಸಾಂಬ ಪ್ರದ್ಯುಮ್ನ ಜನಿಸಿದ ಮಾಸದಲ್ಲೇ ಜನಿಸಿದ್ದ ಎಂದು ಭಾಗವತದಲ್ಲಿದೆ.

ಹಂಸಡಿಬಿಕರ ಸಂದೇಶ

ಇತಿ ಪ್ರಶಾಸತಿ ಪ್ರಭೌ ಜಗತ್ ಜನಾರ್ದನೇऽಖಿಲಮ್ ।
ಅಗಣ್ಯಸದ್ಗುಣಾರ್ಣವೇ ಕದಾಚಿದಾಯಯೌ ದ್ವಿಜಃ ॥ ೨೨೧ ॥

ಅ: ಅನಂತಸದ್ಗುಣಸಮುದ್ರನಾದ ಜನಾರ್ದನನಾದ ಪ್ರಭು ಶ್ರೀಕೃಷ್ಣ ಹೀಗೆ ಜಗತ್ತನ್ನು ಪಾಲಿಸುತ್ತಿದ್ದಾಗ, ಒಮ್ಮೆ ಬ್ರಾಹ್ಮಣನೊಬ್ಬ ಆಗಮಿಸಿದ.

ಜನಾರ್ದನಃ[೧] ಸ[+] ನಾಮತೋ ರಮೇಶಪಾದಸಂಶ್ರಯಃ ।
ಸ[+] ಮಾನಿತಶ್ಚ ವಿಷ್ಣುನಾ ಪ್ರಣಮ್ಯ ವಾಕ್ಯಮಬ್ರವೀತ್ ॥ ೨೨೨ ॥

ಅ: ಅವನ ಹೆಸರು ಜನಾರ್ದನ ಎಂದು; ಶ್ರೀಕೃಷ್ಣನ ಪಾದಗಳನ್ನೇ ಆಶ್ರಯಿಸಿದವನು. ಕೃಷ್ಣ ಅವನನ್ನು ಆದರಿಸಿದ; ಅವನು ಶ್ರೀಕೃಷ್ಣನಿಗೆ ನಮಸ್ಕರಿಸಿ ಮಾತನಾಡಿದ.

ವಿ: ಸಾಕ್ಷಾತ್ ಜನಾರ್ದನನಾದ ಶ್ರೀಕೃಷ್ಣನ ಬಳಿಗೆ ಜನಾರ್ದನನೆಂಬ ಹೆಸರಿನ ಬ್ರಾಹ್ಮಣ–ನೊಬ್ಬ ಹಂಸಡಿಬಿಕರ ಸಂದೇಶವನ್ನು ಹೊತ್ತು ಅಲ್ಲಿಗೆ ಬಂದ. ಇಲ್ಲಿ ಇಬ್ಬರ ಹೆಸರೂ ಜನಾರ್ದನ ಎಂದೇ ಆಗಿದ್ದರೂ, ಒಬ್ಬನು ದೇವನಾದ ಶ್ರೀಹರಿಯಾದರೆ, ಮತ್ತೊಬ್ಬನು ಜೀವ. ಇದರಂತೆ ಬ್ರಹ್ಮ ಶಬ್ದವೂ ಸಹ ಮುಖ್ಯವಾಗಿ ಮಹಾವಿಷ್ಣುವಿಗೂ, ಅಮುಖ್ಯವಾಗಿ ಜೀವನಿಗೂ ಅನ್ವಯಿಸುವುದು; ಅವರಲ್ಲಿ ಆತ್ಯಂತಿಕಭೇದವೇ ಸದಾ ಇದೆ ಎಂಬುದನ್ನು ಗಮನಿಸಬೇಕು. ಇವನು ಸಾಲ್ವರಾಜನಾದ ಬ್ರಹ್ಮದತ್ತನ ಮಿತ್ರನಾದ ಮಿತ್ರಸಹ ಎಂಬ ಬ್ರಾಹ್ಮಣನ ಪುತ್ರ(ಹರಿವಂಶ – ೩/೧೦೫/೪).

ಕ್ಷಮಸ್ವ ಮೇ ವಚಃ ಪ್ರಭೋ ಬ್ರವೀಮ್ಯತೀವ ಪಾತಕಮ್ ।
ಯತಃ ಸುಪಾಪದೂತಕಸ್ತತೋ ಹಿ ತಾದೃಶಂ ವಚಃ ॥ ೨೨೩ ॥

---

೧. ಜನಾರ್ದನಸ್ತು ಧರ್ಮಾತ್ಮಾ ನಿತ್ಯಂ ಗಂತುಂ ಸಮುದ್ಯತಃ ।
ಅದ್ಯ ಶ್ವೋ ವಾ ಪರಶ್ವೋ ವಾ ಗಚ್ಛಾಮೀತಿ ಯತೇತ ಸಃ ॥ – ಹರಿವಂಶ (೩/೧೧೩/೨೬)

\+ ಆದ್ಯಃ ಸ ಇತಿ ಶಬ್ದಃ ಪ್ರಸಿದ್ಧ್ಯರ್ಥಕಃ । ದ್ವಿತೀಯಃ ಕೃಷ್ಣಪರಾಮರ್ಶಾರ್ಥಕ ಇತ್ಯಭ್ಯುಪಗಮಾತ್ । – (ಸ.)

''ಪ್ರಭುವೆ! ನಾನು ಹೇಳುವುದನ್ನು ಮನ್ನಿಸು; ತುಂಬಾ ಕೆಟ್ಟಮಾತನ್ನು ನುಡಿಯುತ್ತಿರುವೆ. ನಾನು ಮಹಾಪಾಪಿಯ ದೂತನಾಗಿ ಬಂದಿರುವುದರಿಂದ ಮಾತು ಅಂತಹುದಾಗಿದೆ''.

ವಿ: ಅಕ್ರೂರನಂತಹ ಭಗವದ್ಭಕ್ತ ಕಂಸನ ದೂತನಾಗಿ ಬಂದಿದ್ದಂತೆ, ಜನಾರ್ದನನೆಂಬ ಈ ಸಾತ್ತ್ವಿಕಬ್ರಾಹ್ಮಣ ಹಂಸಡಿಬಿಕರ ದೂತನಾಗಿ ಬಂದಿರುವನು ಎಂದು ತಿಳಿಯಬೇಕು. ಅಸುರರು ಹೀಗೆ ಸಜ್ಜನರನ್ನು ತಮ್ಮ ಪಾಪಕಾರ್ಯಗಳಿಗೆ ಉಪಯೋಗಿಸಿಕೊಳ್ಳುವುದು ಅವರ ಪಾಪವೃದ್ಧಿಗೇ ಸಾಧನ. ಆ ಜನಾರ್ದನವಿಪ್ರ ಹಾಗೆ ಬರಲು ತನಗೆ ಕೃಷ್ಣದರ್ಶನ ಮಾಡುವ ಅವಕಾಶ ಲಭಿಸುವುದು ಎಂಬ ಭಾವನೆಯೂ ಇದ್ದಿತು. ಅವನು ಅಕ್ರೂರನಂತೆ ಕೃಷ್ಣನನ್ನು ಎಂದು ಕಾಣುವೆ ಎಂಬ ಹಂಬಲದಿಂದ ಕೂಡಿದ್ದ ಪರಮಭಕ್ತ ಎಂಬ ವಿವರ [೧]ಹರಿವಂಶದಲ್ಲಿದೆ.

ನ ತೇऽಸ್ಯಗೋಚರಂ ಕ್ವಚಿತ್ ತಥಾऽಪಿ ಚಾಜ್ಞಯಾ ವದೇ ।
ವದೇತಿ ಚೋದಿತೋऽಮುನಾ ದ್ವಿಜೋ ಜಗಾದ ಮಾಧವಮ್ ॥ ೨೨೪ ॥

ಅ: ''ನಿನಗೆ ತಿಳಿಯದ್ದು ಎಲ್ಲೂ ಇಲ್ಲ. ಆದರೂ ಅನುಮತಿ ನೀಡಿದರೆ ಹೇಳುವೆ'' ಎಂದ. ಶ್ರೀಕೃಷ್ಣ ''ಹೇಳು'' ಎಂದು ನುಡಿಯಲು, ಬ್ರಾಹ್ಮಣ ಕೃಷ್ಣನಿಗೆ ಹೀಗೆ ಹೇಳಿದ.

ವಿ: ಬ್ರಾಹ್ಮಣನ ಪ್ರತಿಯೊಂದು ನಡೆನುಡಿಯಲ್ಲೂ ಅವನ ಸಾತ್ತ್ವಿಕಪ್ರವೃತ್ತಿ ಗೋಚರಿಸುವುದು ಗಮನಾರ್ಹ.

ಸುತೌ ಹಿ [೨]ಸಾಲ್ವಭೂಪತೇರ್ಬಭೂವತುಃ ಶಿವಾಶ್ರಯೌ ।
ಶಿವಪ್ರಸಾದಸಂಭವೌ ಪಿತುಸ್ತಪೋಬಲೇನ ತೌ ॥ ೨೨೫ ॥

ಅ: ''ಸಾಲ್ವರಾಜನಿಗೆ ಇಬ್ಬರು ಗಂಡುಮಕ್ಕಳು ಜನಿಸಿದರು. ಅವರಿಬ್ಬರೂ ಶಿವಭಕ್ತರು; ತಂದೆಯ ತಪೋಬಲದಿಂದ ಶಿವನ ಅನುಗ್ರಹದಿಂದ ಜನಿಸಿದವರು.

[೩]ಅಜೇಯತಾಮವಧ್ಯತಾಂ ಶಿವಾದ್ವರಂ ಸಮಾಪತುಃ ।
ಜರಾಸುತಸ್ಯ ಶಿಷ್ಯಕೌ ತಪೋಬಲೇನ ಕೇವಲಮ್ ॥ ೨೨೬ ॥

---

೧. ಅಹಮೇವ ಸದಾ ಧನ್ಯೋ ಮತ್ತೋ ಹ್ಯಧ್ಯಧಿಕೋ ನ ಹಿ ।
ಯತೋ ದ್ರಕ್ಷ್ಯಾಮ್ಯಹಂ ವಿಷ್ಣುಂ ವಸಂತಂ ದ್ವಾರಕಾಪುರೇ ॥ .... —ಹರಿವಂಶ (೩/೧೪/೫)

೨. ಸಾಲ್ವಭೂಪತೇಃ ಸಾಲ್ವದೇಶಾಧಿಪತೇಃ ಬ್ರಹ್ಮದತ್ತಸ್ಯ ಕನಿಷ್ಠಪತ್ನೀಸುತೌ ಸೌಭಾಧಿಪಃ ಸಾಲ್ವಸ್ತು ಜ್ಯೇಷ್ಠಪತ್ನೀಪುತ್ರ ಇತಿ ಜ್ಞೇಯಮ್ ॥ – (ತಾ.)

ಮಹೋದರಂ ಚ ಕುಂಡಧಾರಿಣಂ ಚ ಭೂತಕಾವುಭೌ ।
ತಥಾऽಜಿತಾವವಧ್ಯಕೌ ದಿದೇಶ ಶಂಕರಸ್ತಯೋಃ ॥ ೨೨೭ ॥

ಅ: ಅವರು ಶಿವನಿಂದ ಅಜೇಯತ್ವ ಮತ್ತು ಅವಧ್ಯತ್ವವರವನ್ನು ಪಡೆದುಕೊಂಡರು. ಅವರಿಬ್ಬರೂ ಜರಾಸಂಧನ ಶಿಷ್ಯರು. ಅವರ ತಪೋಬಲದಿಂದಾಗಿಯೇ ಶಿವ ಅವರಂತೆ ಅಜೇಯರೂ, ಅವಧ್ಯರೂ ಆಗಿದ್ದ ಮಹೋದರ ಮತ್ತು ಕುಂಡಧಾರಿ ಎಂಬ ಎರಡು ಭೂತಗಳನ್ನು ನೀಡಿದ್ದ.

ತಯೋಃ ಸಹಾಯ ಏವ ತೌ ವರಾಚ್ಛಿವಸ್ಯ ಭೂತಕೌ ।
ಅಜೇಯತಾಮವಾಪತುರ್ನ ಚಾನ್ಯಥಾऽಮರಾವಪಿ ॥ ೨೨೮ ॥

ಅ: ಅವೆರಡೂ ಅವರಿಗೆ ಸಹಾಯಕವಾಗಿದ್ದವು. ಆ ಭೂತಗಳು ಸ್ವಭಾವತಃ ಅವಧ್ಯರಾಗಿದ್ದರೂ, ಶಿವನ ವರದಿಂದಾಗಿ ಅಜೇಯತ್ವವನ್ನು ಹೊಂದಿದರೆ ಹೊರತು, ಬೇರೆ ರೀತಿಯಿಂದಲ್ಲ.

ವಿ: ಶಿವಭೃತ್ಯರಾಗಿದ್ದ ಆ ಎರಡು ಭೂತಗಳು ಸ್ವಭಾವತಃ ಅಮರರಾದರೂ, ಶಿವನ ವರದಿಂದಾಗಿ ಅಜೇಯರೂ ಆಗಿದ್ದರು ಎಂದರ್ಥ.

ಸಾಲ್ವನ ರಾಜಸೂಯಸಿದ್ಧತೆ

ಅಜೇಯತಾಮವಧ್ಯತಾಮವಾಪ್ಯ ತಾವುಭೌ ಶಿವಾತ್ ।
ಪಿತುಶ್ಚ ರಾಜಸೂಯಿತಾಂ ಸಮಿಚ್ಛತೋ ಮದೋದ್ಧತೌ ॥ ೨೨೯ ॥

ಅ: ಶಿವನಿಂದಾಗಿ ಅಜೇಯತ್ವವನ್ನೂ, ಅವಧ್ಯತ್ವವನ್ನೂ ಹೊಂದಿ, ಹಂಸಡಿಬಿಕರು ಮದೋನ್ಮತ್ತರಾಗಿ ತಂದೆಯಿಂದ ರಾಜಸೂಯಯಾಗ ಮಾಡಿಸಲು ಬಯಸಿರುವರು.

---

೩. ಅಮರಾವಪಿ ದೇವಾನುಚರತ್ವಾತ್ ಸ್ವಭಾವತೋऽಮರಾವಪಿ ತಯೋಃ ಸಹಾಯ ಏವಾಜೇಯತಾ-ಮವಾಪತುರನ್ಯಥಾ ತತ್ಸಾಹಾಯ್ಯಾಭಾವೇऽಜೇಯತಾಂ ನಾವಾಪತುರಿತ್ಯನ್ವಯಃ। – (ತಾ.)

೪. ನ ಚಾನ್ಯಥಾऽಮರಾವಪೀತ್ಯತ್ರ ದೇವಯೋನಿತ್ವಾದೇವಾಮರೌ ಸ್ವಭಾವೇನ ಮರಣರಹಿತಾವಪಿ ತೌ ಭೂತಕೌ। ಅನ್ಯಥಾ ಶಿವವರಾಭಾವೇ ಅಜೇಯೌ ನೇತಿ ಯೋಗ್ಯಪದಾಧ್ಯಾಹಾರೇಣಾನ್ವಯಃ ॥ – (ವಾ.)

ಅನ್ಯಥಾ ತಯೋಃ ಸಹಾಯಾಭಾವೇನ ಚ ಅಜೇಯತ್ವವರಂ ನೈವಾಪತುರಿತ್ಯರ್ಥಃ। – (ವ.)

ವಿ: ಪಾಂಡವರು ತಮ್ಮ ತಂದೆಯಾದ ಪಾಂಡುರಾಜನಿಗಾಗಿ ರಾಜಸೂಯಯಾಗವನ್ನು ಮಾಡಲು ತೊಡಗುವ ವಿವರ ಮುಂದೆ ಬಂದಿದೆ(೨೧/೨೩). ಸ್ವಭಾವತಃ ವೈಷ್ಣವರಾದ ಅವರು ಹಾಗೆ ಮಾಡಿದ್ದು ವಿಶೇಷಕಾರಣದಿಂದ ವಿಹಿತವಾದುದು. ಆದರೆ ಶುದ್ಧವೈಷ್ಣವಯಾಗವಾದ ರಾಜಸೂಯ ಯಾಗವನ್ನು ಇವರು ತಂದೆಯಿಂದ ಮಾಡಿಸಲು ಹೊರಟದ್ದು ಕೇವಲ ಚಕ್ರವರ್ತಿಪದವಿಯ ಆಸೆಯಿಂದಲೇ ಹೊರತು, ವಿಷ್ಣುಪ್ರೀತಿಯ ಉದ್ದೇಶದಿಂದಲ್ಲ. ಇಂದ್ರಾದಿದೇವತೆಗಳಿಗೇ ಅದರಲ್ಲಿ ಮುಖ್ಯವಾದ ಅರ್ಹತೆ ಇಲ್ಲದಿರುವಾಗ, ಅವೈಷ್ಣವನಾದ ಬ್ರಹ್ಮದತ್ತನಿಗೆ ಆ ಅರ್ಹತೆ ಇರಲಿಲ್ಲ ಎಂಬುದು ಕೈಮುತ್ಯಸಿದ್ಧ.

ಜರಾಸುತೋ ಗುರುತ್ವತೋ ವಿರೋದ್ಧುಮತ್ರ ನೇಚ್ಛತಿ ।
ನೃಪಾಂಸ್ತು[೧] ದೇವಪಕ್ಷಿಣೋ ವಿಜಿತ್ಯ ಕರ್ತುಮಿಚ್ಛತಃ ॥ ೨೩೦ ॥

ಜರಾಸಂಧನು ಗುರುವಾದ್ದರಿಂದ ಇದರಲ್ಲಿ ವಿರೋಧ ಮಾಡಲು ಬಯಸುತ್ತಿಲ್ಲ. ಅವರು ದೇವಪಕ್ಷದ ರಾಜರುಗಳನ್ನು ಗೆದ್ದು ಆ ಯಾಗ ಮಾಡಲು ಬಯಸಿರುವಷ್ಟೆ!

ವಿ: ಮುಂದೆ ಸ್ಪಷ್ಟಪಡಿಸುವಂತೆ, ಸಕಲರಾಜರುಗಳನ್ನೂ ಪರಾಭವಗೊಳಿಸಿದಾಗ ಮಾತ್ರ ಸಾಧ್ಯವಾಗುವ ಯಾಗ ರಾಜಸೂಯಯಾಗ. ಜರಾಸಂಧನು ಬದುಕಿರುವವರೆಗೂ ಆ ಯಾಗವನ್ನು ಮಾಡಲು ಧರ್ಮರಾಜನಿಗೂ ಅಸಾಧ್ಯ ಎಂಬ ಮಾತು ಮುಂದೆ ಬರುವುದು. ಎಂದ ಮೇಲೆ ಇವರೆಂತು ಆ ಯಾಗಕ್ಕೆ ತೊಡಗಿದರು ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಜರಾಸಂಧ ತನ್ನ ಶಿಷ್ಯರು ಮಾಡುವ ಯಾಗ ಎಂಬ ಕಾರ್ಯದಿಂದ ಅದನ್ನು ವಿರೋಧಿಸಿರಲಿಲ್ಲ. ಆದ್ದರಿಂದ ಅವನಿಂದ ಇದಕ್ಕೆ ಅಪಾಯವಿಲ್ಲ ಎಂದರ್ಥ. ಅಲ್ಲದೆ, ಇವರು ಹೊರಟಿರುವುದು ದೇವಪಕ್ಷದವರನ್ನು ಗೆದ್ದು ಆ ಯಾಗವನ್ನು ಮಾಡಲೆಂದು. ಅದಂತೂ ಜರಾಸಂಧನಿಗೆ ಪ್ರಿಯವಾಗಿದ್ದ ವಿಚಾರವೇ. ಈ ಕಾರಣಗಳಿಂದ ಅವರು ವಿರೋಧಿಸಿರಲಿಲ್ಲ ಎಂದರ್ಥ.

ಸ್ವಯಂ ಚ ರಾಜಸೂಯಿತಾಂ ಜರಾಸುತೋ ನ ಮನ್ಯತೇ ।
ಯತೋ ಹಿ ವೈಷ್ಣವಂ ಕ್ರತುಂ ತಮಾಹುರೀಶ ವೈದಿಕಾಃ ॥ ೨೩೧ ॥

ಈಶನಾದ ಕೃಷ್ಣನೆ! ವೈದಿಕರು ರಾಜಸೂಯಯಾಗವನ್ನು ವೈಷ್ಣವಯಾಗವೆಂದು ಹೇಳುವುದರಿಂದ ಜರಾಸಂಧ ಸ್ವತಃ ರಾಜಸೂಯಯಾಗ ಮಾಡುವ ವಿಚಾರವನ್ನು ಹೊಂದಿಲ್ಲ.

---

೧. ... ದೇವಪಕ್ಷಸ್ಥಾನ್ ನೃಪಾನ್ ತು ವಿಶೇಷೇಣ ವಿಜಿತ್ಯೇತ್ಯುಪಲಕ್ಷಣಮ್ । ದೇವಾವತಾರಾಂಶ್ಚೇತಿ ದ್ರಷ್ಟವ್ಯಮ್। – (ಜ.)

ವಿಃ ೧) ಚಕ್ರವರ್ತಿಪದವಿ ನೀಡುವ ರಾಜಸೂಯಯಾಗದಂತಹ ಶ್ರೇಷ್ಠಯಾಗವನ್ನು ಬ್ರಹ್ಮ–ಶಿವಾದಿಗಳ ವರದಿಂದ ಅಪಾರಬಲಶಾಲಿ ಎನ್ನಿಸಿದ್ದ ಜರಾಸಂಧ ಸ್ವತಃ ಏಕೆ ಮಾಡಲಿಲ್ಲ ಎಂಬುದಕ್ಕೆ ಇಲ್ಲಿ ಉತ್ತರವಿದೆ. ರಾಜಸೂಯಯಾಗದ ಶುದ್ಧವೈಷ್ಣವಯಾಗವೆಂದು ವೈದಿಕರು ಪ್ರತಿಪಾದಿಸು–ವುದೇ ಅದಕ್ಕೆ ಕಾರಣ. ಮಹಾಶಿವಭಕ್ತನೆನ್ನಿಸಿದ್ದ ಅವನಿಗೆ ವಿಷ್ಣುಸಂಬಂಧಿ ಎನ್ನಿಸಿದ್ದ ಏನನ್ನೂ ಮಾಡಲು ಸಹ ಮನಸ್ಸಿರಲಿಲ್ಲ; ಭೀಮಸೇನ ಶುದ್ಧವೈಷ್ಣವಧರ್ಮನಿರತನಾಗಿದ್ದಂತೆ, ಜರಾಸಂಧ ಶುದ್ಧಶೈವಧರ್ಮನಿರತನಾಗಿದ್ದವನು ಎಂಬುದು ವಿಶೇಷಾಂಶ.

ಇಮೌ ಪಿತುರ್ಯಶೋಽರ್ಥಿನೌ ಪರಾಭವಾಯ ತೇ ತಥಾ ।
ಸಮಿಚ್ಛತೋಽದ್ಯ ತಂ ಕ್ರತುಂ ಭವಂತಮೂಚತುಶ್ಚ ತೌ ॥ ೨೩೨ ॥

ತಂದೆಯ ಕೀರ್ತಿಯನ್ನು ಬಯಸಿರುವ ಇವರಿಬ್ಬರೂ ನಿನ್ನನ್ನು ಸೋಲಿಸಲೆಂದು ಈ ಯಾಗವನ್ನು ಬಯಸಿರುವರು. ಅವರಿಬ್ಬರೂ ನಿನಗೆ ತಿಳಿಸಿರುವರು.

ಸಮುದ್ರಸಂಶ್ರಯೋ ಭವಾನ್ ಬಹೂನ್ ಪ್ರಗೃಹ್ಯ ಲಾವಣಾನ್[೧] ।
ಸುಭಾರಕಾನುಪೈಹಿ ನಾವಿತಿ ಕ್ಷಮಸ್ವ ಮೇ ವಚಃ ॥ ೨೩೩ ॥

ಅ: 'ನೀನು ಸಮುದ್ರದಲ್ಲಿ ನೆಲೆಸಿರುವವನು. ಆ ಲವಣಸಮುದ್ರದಲ್ಲಿನ ಬಹಳ ರತ್ನಭಾರಗಳನ್ನು ತೆಗೆದುಕೊಂಡು ನಮ್ಮ ಬಳಿಗೆ ಬಾ' ಎಂದು. ನನ್ನ ಮಾತನ್ನು ಮನ್ನಿಸು''.

ಸಾತ್ಯಕಿಯ ಮೂಲಕ ಶ್ರೀಕೃಷ್ಣನ ಸಂದೇಶ

ಇತೀರ್ಯ ತಂ ನನಾಮ ಸ ಪ್ರಚಾಹಸನ್ ಸ್ಮ ಯಾದವಾಃ ।
ಹರಿಸ್ತು ಸಾತ್ಯಕಿಂ ವಚೋ ಜಗಾದ ಮೇಘನಿಸ್ವನಃ ॥ ೨೩೪ ॥

ಅ: ಜನಾರ್ದನ ಹೀಗೆ ನುಡಿದು, ಕೃಷ್ಣನಿಗೆ ವಂದಿಸಿದ. ಯಾದವರೆಲ್ಲ ಗಟ್ಟಿಯಾಗಿ ನಕ್ಕರು. ಶ್ರೀಕೃಷ್ಣಮೇಘದಂತೆ ಗಂಭೀರಧ್ವನಿಯಿಂದ ಸಾತ್ಯಕಿಗೆ ಹೀಗೆ ತಿಳಿಸಿದ.

---

೧. ಲಾವಣಾನ್ ಲವಣಸಮುದ್ರಸಂಬಧಿನಃ ಬಹೂನ್ ಸುಭಾರಕಾನ್ ರತ್ನಾದೀನಾಂ ಸುಭಾರಾನ್। ಭಾರಃ ಸ್ಯಾದ್ವಿಂಶತಿಸ್ತುಲೇತ್ಯಮರಃ। – (ಜ.)

ಲಾವಣಾತ್ ಲವಣಸಮುದ್ರಸಂಬಂಧಿನಃ ಬಹೂನ್ ಸುಭಾರಕಾನ್ ರತ್ನಾದೀನಾಂ ಭಾರಾನ್। – (ವ.)

ಪ್ರಯಾಹಿ ಸಾತ್ಯಕೇ ವಚೋ ಬ್ರವೀಹಿ ಮೇ ನೃಪಾಧಮೌ ।
ಸಮೇತ್ಯ ವಾಂ ವರಾಯುಧೈಃ ಕರಂ ದದಾಮ್ಯಸಂಶಯಮ್ ॥ ೨೩೫ ॥

ಅ: ''ಸಾತ್ಯಕಿಯೆ! ತೆರಳು. ಆ ನೃಪಾಧಮರ ಬಳಿಗೆ ತೆರಳಿ, ನನ್ನ ಮಾತನ್ನು ತಿಳಿಸು. ಒಳ್ಳೆಯ ಆಯುಧಗಳೊಂದಿಗೆ ಬಂದು ನಿಮಗೆ ಕಪ್ಪ ನೀಡುವೆನು; ಸಂಶಯ ಬೇಡ''.

ಉಪೇತಮಾಶು ಸಂಯುಗಾರ್ಥಿನೌ ಚ ಪುಷ್ಕರಂ ಪ್ರತಿ ।
ಇತೀರಿತಃ ಶಿನೇಃ ಸುತೋ ಜಗಾಮ ವಿಪ್ರಸಂಯುತಃ ॥ ೨೩೬ ॥

ಅ: ''ಸಮರಾರ್ಥಿಗಳಾಗಿ ನೀವಿಬ್ಬರೂ ಕೂಡಲೇ ಪುಷ್ಕರಕ್ಕೆ ಬನ್ನಿ'' ಹೀಗೆನ್ನಲು ಶಿನಿಯ ಮಗನಾದ ಸಾತ್ಯಕಿ ಆ ಬ್ರಾಹ್ಮಣನೊಂದಿಗೆ ತೆರಳಿದ.

ವಿ: ಕೃಷ್ಣ ಬ್ರಾಹ್ಮಣನ ಮೂಲಕ ಸಂದೇಶ ನೀಡಿದಲ್ಲಿ ಆ ಪಾಪಿಗಳು ಕೇಡುಬಗೆದಾರೆಂದು ಸಾತ್ಯಕಿಯ ಮೂಲಕ ಕಳುಹಿಸಿದ ಎಂದು ತಿಳಿಯಬೇಕು. ಆ ಮೂಲಕ ಸಂದೇಶವನ್ನು ಕಳುಹಿಸುವಲ್ಲಿ ಸಹ ಕೌಶಲವನ್ನು ತೋರುವ ಬಗೆಯನ್ನು ಕೃಷ್ಣ ಜಗತ್ತಿಗೆ ತಿಳಿಸಿರುವನು. ಸಾತ್ಯಕಿಯು ಶಿನಿಯ ಮಗನಲ್ಲ; ಮೊಮ್ಮಗ. ಯದುವಂಶದವರೂ ಯದುಗಳೆನ್ನಿಸುವಂತೆ ಶಿನಿಪುತ್ರನೂ ಶಿನಿ ಎನ್ನಿಸಿದ್ದರಿಂದ ಹಾಗೆ ಕರೆದಿರುವರು ಎಂದು ತಿಳಿಯಬಹುದು.

ಉಪೇತ್ಯ ತೌ ಹರೇರ್ವಚೋ ಜಗಾದ ಸಾತ್ಯಕಿರ್ಬಲೀ ।
ವಿಧಾಯ ತೌ ತೃಣೋಪಮೌ ಗಿರಾ ಜಗಾಮ ಕೇಶವಮ್ ॥ ೨೩೭ ॥

ಅ: ಹಂಸಡಿಬಿಕರ ಬಳಿಗೆ ತೆರಳಿ, ಬಲಿಷ್ಠನಾದ ಸಾತ್ಯಕಿ ಶ್ರೀಕೃಷ್ಣನ ಮಾತನ್ನು ತಿಳಿಸಿದ. ಮಾತಿನಿಂದ ಅವರನ್ನು ತೃಣಸಮಾನರನ್ನಾಗಿಸಿ, ಕೃಷ್ಣನ ಬಳಿಗೆ ಮರಳಿದ.

ವಿ: ಶ್ರೀರಾಮಸಂದೇಶವನ್ನು ಹನುಮಂತ ರಾವಣನಿಗೆ ಮುಟ್ಟಿಸಿದಂತೆ, ಶ್ರೀಕೃಷ್ಣಸಂದೇಶ–ವನ್ನು ಸಾತ್ಯಕಿ ಹಂಸಡಿಬಿಕರಿಗೆ ತಲುಪಿಸಿದ. ಸಾತ್ಯಕಿಗೆ ಹನುಮತ್ಸಂದೇಶ ಸ್ಫೂರ್ತಿಯಾಗಿತ್ತೆಂದು ಭಾವಿಸಬಹುದು. ರಾಮಾಯಣ ಮಹಾಭಾರತಕ್ಕೆ ಮುನ್ನವೇ ನಡೆದದ್ದಲ್ಲವೆ!

ಹಂಸಡಿಬಿಕರಿಂದ ದುರ್ವಾಸರಿಗೆ ಅಪಚಾರ

ತತಃ ಪುರೈವ ತಾವುಭೌ ದ್ವಿಜಂ ಹರಸ್ವರೂಪಿಣಮ್ ।
ಸುದುಃಖವಾಸನಾಮಕಂ ಪ್ರಚಕ್ರತುಸ್ತೃಣೋಪಮಮ್ ॥ ೨೩೮ ॥

ಅ: ಅದಕ್ಕಿಂತ ಮುಂಚಿತವಾಗಿ ಆ ಹಂಸಡಿಬಿಕರು ಶಿವಸ್ವರೂಪರಾದ ದುರ್ವಾಸಮುನಿಯನ್ನು ತೃಣಸಮಾನನ್ನಾಗಿ ಭಾವಿಸಿ, ಅಪಹಾಸ ಮಾಡಿದ್ದರು.

[೨]ದಶತ್ರಿಕೈಃ ಶತೈರ್ವ್ಯತೋ ಯತೀಶ್ವರೈಃ ಸ ಸರ್ವವಿತ್ ।
[೩]ವಿಪಾಟಿತಾತ್ಮಕೌಪಿನಾದಿಸರ್ವಮಾತ್ರಕೋಽಭವತ್ ॥ ೨೩೯ ॥

ಅ: ಮೂರುಸಾವಿರ ಶಿಷ್ಯರೊಂದಿಗೆ ಕೂಡಿದ್ದ ಸರ್ವಜ್ಞರಾದ ದುರ್ವಾಸರ ಕೌಪೀನ ಮೊದಲಾದ ಸಕಲವಸ್ತುಗಳನ್ನು ಅವರು ಹಾಳು ಮಾಡಿದ್ದರು.

ವಿ: ದುರ್ವಾಸರು ತಮ್ಮ ಶಿಷ್ಯರೊಂದಿಗೆ ಆಗಮಿಸಿದ್ದಾಗ, ಅವರನ್ನು ಮಹಾಭೂತ ಎಂಬುದಾಗಿ ಹಾಸ್ಯ ಮಾಡಿ, ಅವರ ಕೌಪೀನಾದಿಗಳನ್ನು ಸೆಳೆದು, ಹರಿದುಹಾಕಿದ್ದ ಮಹಾಪಾಪಿಗಳು ಹಂಸಡಿಬಿಕರು. ಆಗ ಈ ಜನಾರ್ದನ ಬ್ರಾಹ್ಮಣನೂ ಹಂಸಡಿಬಿಕರೊಂದಿಗೇ ಇದ್ದವನು. ಅವನು ದುರ್ವಾಸರ ಪರವಾಗಿ ಮಾತನಾಡಲು ತೊಡಗಿದಾಗ, ಅವನನ್ನೂ ಹೀಯಾಳಿಸಿದ್ದರು. ದುರ್ವಾಸರು ಜನಾರ್ದನನಿಗೆ ಕೃಷ್ಣದರ್ಶನವಾಗಲೆಂದು ಹರಸಿದ್ದರು. ಜನಾರ್ದನನಿಗೆ ಕೃಷ್ಣದರ್ಶನವಾಗಲು ಶಿವನ ಅವತಾರರಾದ ದುರ್ವಾಸರ ಅನುಗ್ರಹವೂ ಹೀಗೆ ಒಂದು ಕಾರಣವಾಯಿತು. ಹಂಸ ಎಂಬ ಹೆಸರಿದ್ದ ಆ ಪಾಪಿ, ಪರಮಹಂಸರಾದ ದುರ್ವಾಸರನ್ನು ಅವಮಾನಿಸಿದ್ದು ಅವನ ಹಾಗೂ ಅವನ ಬಂಧುಬಾಂಧವರ ಸರ್ವನಾಶಕ್ಕೆ ಮುಖ್ಯಕಾರಣವಾಯಿತು. ಶಿವನಿಂದ ವರ ಪಡೆದಿದ್ದ ಅವರು ಶಿವಾವತಾರರಾದ ದುರ್ವಾಸರನ್ನೇ ಅವಮಾನಿಸಿದ್ದು, ಶಿವನಿಂದ ವರ ಪಡೆದು, ಶಿವನ ತಲೆಯ ಮೇಲೆಯೇ ಕೈಯಿಟ್ಟು ಕೊಲ್ಲಹೊರಟ ಭಸ್ಮಾಸುರನ ಪ್ರವೃತ್ತಿಗೆ ನಿದರ್ಶನ.

ದುರ್ವಾಸರ ಕೃಷ್ಣಶರಣಾಗತಿ

ವರಾತ್ ಸ್ವಸಂಭವಾದಸೌ ನ ಶಾಪಶಕ್ತಿಮಾನಭೂತ್ ।
ತತಃ ಸಮಸ್ತಭಂಜನೋರುಶಕ್ತಿಮಾಪ ಕೇಶವಮ್ ॥ ೨೪೦ ॥

---

೧. ಸುದುಃಖವಾಸನಾಮಕಮಿತ್ಯತ್ರ ''ದುರಶೋಭನದುಃಖಯೋ''ರಿತಿ ವಚನಾತ್ ಸು= ಶೋಭನಂ ದುಃಖವಾಚಕದುರ್‌ಶಬ್ದೋಪಪದವಾಸನಾಮ ಯಸ್ಯ ಸ ತಥೋಕ್ತಃ। ದುರ್ವಾಸನಾಮಕಮಿತ್ಯರ್ಥಃ ॥ – (ವಾ.)

೨. ತ್ರಿಸಹಸ್ರಸಂಖ್ಯಾಕೈಃ । – (ವ.)

೩. ವಿಪಾಟಿತಾ ಆತ್ಮಕೌಪೀನಾದಿಸರ್ವಮಾತ್ರಕಾಃ ಸನ್ನಾಹಾ ಯಸ್ಯ ಸ ತಥೋಕ್ತಃ। ಆದಿಪದೇನ ದಂಡಕಮಂಡಲ್ವಾದಿಕಂ ಗೃಹ್ಯತೇ। ಕು = ಕುತ್ಸಿತಸ್ಯ ಗುಹ್ಯೇಂದ್ರಿಯಸ್ಯ ವಿಷಯೇ ಪಿಃ = ಪಿಧಾನಂ ತಸ್ಯ ನಯನಂ = ಪ್ರಾಪಣಂ ಕುಪಿನಂ ತತ್ಸಂಬಂಧಿ ಕೌಪೀನಮ್। ಕೌಪೀನಮಿತಿ ತು ನಿರುಕ್ತ್ವಾದಿಕಾರಸ್ಯ ಈಕಾರಾಗಮಃ ॥ – (ವಾ.)

ಅ: ಮೂಲರೂಪದಿಂದ ತಾವೇ ನೀಡಿದ್ದ ವರದ ಕಾರಣದಿಂದಾಗಿ ಶಿವನ ಅವತಾರರಾದ ದುರ್ವಾಸರಿಗೆ ಶಾಪ ನೀಡುವ ಸಾಮರ್ಥ್ಯ ಇಲ್ಲವಾಗಿತ್ತು. ಬಳಿಕ ಅವರು ಸಮಸ್ತದುಷ್ಟರನ್ನೂ ನಾಶಮಾಡುವ ಮಹಾಸಮರ್ಥನಾದ ಕೃಷ್ಣನ ಬಳಿಗೆ ತೆರಳಿದರು.

ವಿ: ಶ್ರೀಕೃಷ್ಣನ ಬಳಿಗೆ ದುರ್ವಾಸರು ತೆರಳಿದ್ದನ್ನು ತಿಳಿದಿದ್ದರೂ, ಹಂಸಡಿಬಿಕರು ಉನ್ಮತ್ತರಾಗಿ ಕೃಷ್ಣನ ಬಳಿಗೆ ಕಪ್ಪ ನೀಡಲೆಂದು ಸಂದೇಶ ಕಳುಹಿಸಿದ್ದು ಅವರ ಪರಮತಾಮಸಪ್ರವೃತ್ತಿಗೆ ನಿದರ್ಶನ. ಶ್ರೀಕೃಷ್ಣನಿಗೆ ಯಾರ ವರದ ತಡೆಯೂ ಸರ್ವಥಾ ಇಲ್ಲ ಎಂಬುದನ್ನು 'ಸಮಸ್ತಭಂಜ–ನೋರುಶಕ್ತಿ' ಎಂಬ ವಿಶೇಷಣದಿಂದ ತಿಳಿಸಿರುವರು. ಅದಕ್ಕೆ ಕಾರಣವಾಗಿ 'ಕೇಶವಂ' – ಬ್ರಹ್ಮರುದ್ರಾದಿಪ್ರವರ್ತಕ – ಎಂಬ ಪದವನ್ನು ಪ್ರಯೋಗಿಸಿರುವರು ಎಂದು ತಿಳಿಯಬೇಕು.

ಸ ತಾನ್ ಸಮರ್ಚ್ಯ ಮಾಧವಃ ಪ್ರದಾಯ ಚೋರುಮಾತ್ರಕಾಃ ।
ಯಯೌ ಚ ತೈಃ ಸಮನ್ವಿತೋ ವಧಾಯ ಸಾಲ್ವಪುತ್ರಯೋಃ ॥ ೨೪೧ ॥

ಅ: ಲಕ್ಷ್ಮೀಪತಿಯಾದ ಶ್ರೀಕೃಷ್ಣ ಅವರನ್ನು ಆದರಿಸಿ, ಅವರಿಗೆ ಉತ್ತಮವಾದ ಕೌಪೀನ ಮೊದಲಾದವುಗಳನ್ನು ನೀಡಿ, ಅವರೊಂದಿಗೆ ಕೂಡಿಕೊಂಡು ಸಾಲ್ವಪುತ್ರರಾದ ಹಂಸಡಿಬಿಕರ ವಧೆಗಾಗಿ ತೆರಳಿದ.

ವಿ: ಇತರರಿಗೆ ವರ ನೀಡುವ ದುರ್ವಾಸರಿಗೆ ಹಾಗೆ ಕೌಪೀನಾದಿಗಳನ್ನು ನೀಡುವ ಮೂಲಕ ಶ್ರೀಕೃಷ್ಣ ತಾನು **'ವರದೇಶವರಪ್ರದ'** (ದ್ವಾದಶಸ್ತೋತ್ರ ೧/೧) ಎಂದು ನಿರೂಪಿಸಿದ ಎಂದು ತಿಳಿಯಬೇಕು.

ತಮತ್ರಿಜಂ ಹರಾತ್ಮಕಂ ಯತೋ ಹಿ ವೇದ ಮಾಗಧಃ ।
ತತೋಽತ್ಯಜತ್ ಸ್ವಶಿಷ್ಯಕೌ ನಿಶಮ್ಯ ತತ್ಪ್ರತೀಪಕೌ ॥ ೨೪೨ ॥

ಅ: ಅತ್ರಿಪುತ್ರರಾದ ದುರ್ವಾಸರು ರುದ್ರಾವತಾರರೆಂದು ಜರಾಸಂಧ ತಿಳಿದಿದ್ದ; ಅದರಿಂದ ಅವರಿಗೆ ವಿರೋಧ ಮಾಡಿದ ಅವರಿಬ್ಬರನ್ನು ತನ್ನ ಶಿಷ್ಯರಾಗಿದ್ದರೂ, ತೊರೆದ.

ವಿ: ಜರಾಸಂಧ ಹಂಸಡಿಬಿಕರಿಗೆ ಮೊದಲು ಸಹಕಾರ ನೀಡಿದ್ದರೂ, ಅವರು ಶಿವಾವತಾರರಾದ ದುರ್ವಾಸರಿಗೆ ಅವಮಾನ ಮಾಡಿದ್ದನ್ನು ತಿಳಿದ ಬಳಿಕ ಅವರು ಶಿವದ್ರೋಹಿಗಳೆಂಬ ಕಾರಣದಿಂದ ಕೈಬಿಟ್ಟ. ಅದರಿಂದಾಗಿ ಅವರು ಕೃಷ್ಣನೊಂದಿಗೆ ನಡೆಸಿದ ಯುದ್ಧದಲ್ಲಿ ಪಾಲ್ಗೊಳ್ಳದೆ ದೂರ ಉಳಿದ. ಅದರಿಂದಾಗಿ ಮತ್ತೊಮ್ಮೆ ಕೃಷ್ಣನಿಂದ ಪರಾಭವಗೊಳ್ಳುವ ಅವಮಾನದಿಂದ ಪಾರಾದ. ದೇವತೆಗಳ ಬಗ್ಗೆ ತೋರುವ ಸ್ವಲ್ಪ ಗೌರವವೂ ತಾರಕ ಎಂಬುದಕ್ಕೆ ಇದು ನಿದರ್ಶನ.

ಪುಷ್ಕರಕ್ಕೆ ಹಂಸಡಿಬಿಕರ ಪ್ರಯಾಣ

ಹರೌ ತು ಪುಷ್ಕರಂ ಗತೇ ಮುನೀಶ್ವರೈಃ ಸಮನ್ವಿತೇ ।
ಸಮೀಯತುಶ್ಚ ತಾವುಭಾವಥಾತ್ರ ಹಂಸಡೀಭಿಕೌ ॥ ೨೪೩ ॥

ಅ: ಮುನಿಶ್ರೇಷ್ಠರುಗಳೊಂದಿಗೆ ಕೂಡಿ ಕೃಷ್ಣನು ಪುಷ್ಕರಕ್ಕೆ ತೆರಳಲು, ಅಲ್ಲಿಗೆ ಹಂಸಡಿಬಿಕ-ರಿಬ್ಬರೂ ಬಂದರು.

ವಿ: ಡಿಭಿಕ ಎಂದೇ ಹಂಸನ ತಮ್ಮನ ಹೆಸರು; 'ಡೀಭಿಕ' ಎಂದಲ್ಲ. ಆದರೂ ಆಚಾರ್ಯರು 'ಡೀಭಿಕ' ಎಂದಿರುವುದು ಅವನು ಮಾತ್ರವಲ್ಲ; ಅವನ ಹೆಸರೂ ನಾಶ ಹೊಂದುವುದು ಎಂಬ ಪ್ರಮೇಯವನ್ನು ಸೂಚಿಸಲು ಎಂಬ ವಿವರಣೆ [೧]ವಾದಿರಾಜೀಯದಲ್ಲಿದೆ.

ಸ [೨]ಬ್ರಹ್ಮದತ್ತನಾಮಕೋಽತ್ರ ತತ್ಪಿತ್ರಾಽಪ್ಯುಪಾಯಯೌ ।
ಸಮಾಗತೌ ಚ ಭೂತಕೌ ಶಿವಸ್ಯ ಯೌ ಪುರಃಸರೌ ॥ ೨೪೪ ॥

ಅ: ಬ್ರಹ್ಮದತ್ತ ಎಂಬ ಹೆಸರಿನ ಅವರಿಬ್ಬರ ತಂದೆಯೂ ಅಲ್ಲಿಗೆ ಬಂದ. ಶಿವನ ಮುಂಭಾಗದಲ್ಲಿ ಸಂಚರಿಸುವ ಆ ಎರಡು ಭೂತಗಳು ಸಹ ಬಂದು ಸೇರಿದವು.

ವಿ: **'ಪುರಃಸರೌ'** ಎಂಬ ಪದದಿಂದ ಆ ಎರಡು ಭೂತಗಳು ಶಿವನ ಮುಂಭಾಗದಲ್ಲಿ ಸೇವಕರಾಗಿ ಸಂಚರಿಸುವ ಭೂತಗಳು ಎಂಬ ವಿಶೇಷಾಂಶ ಸೂಚಿತ.

ವಿಚಕ್ರ ಹಿಡಿಂಬಾಸುರರ ಪರಿಚಯ

ವಿಚಕ್ರನಾಮಕೋಽಸುರಃ ಪುರಾ ವಿರಿಂಚಿತೋ ವರಮ್ ।
ಅವಧ್ಯತಾಮಜೇಯತಾಮವಾಪ್ಯ ಬಾಧತೇ ಸುರಾನ್ ॥ ೨೪೫ ॥

---

೧. ಹಂಸಡೀಭಕಾವಿತ್ಯತ್ರ ''ಅಪಿ ಮಾಷಂ ಮಷಂ ಕುರ್ಯಾಚ್ಛಂದೋಭಂಗಂ ನ ಕಾರಯೇತ್'' ಇತಿ ವಚನಾತ್ ಡಿಭಕ ಏವ ಡೀಭಕಃ। ಇತಃ ಪರಂ ತಸ್ಯ ನಾಮ್ನೋಽಪಿ ನಾಶೋ ಭವಿಷ್ಯತೀತಿ ಸೂಚನಾಯ ಡಿಭಕನಾಮ್ನ ಏವ ವಿಕಾರಃ ಕೃತಃ ॥ – (ವಾ.)

೨. ಬ್ರಹ್ಮದತ್ತಸ್ಯ ಸಾಲ್ವೋ ಜ್ಯೇಷ್ಠಪತ್ನೀಸುತಃ ಇಮೌ ತು ಕನಿಷ್ಠಪತ್ನೀಸುತೌ ಜ್ಯೇಷ್ಠಾದ್ವಿಭಕ್ತರಾಜ್ಯೌ ಚೇತಿ ಭಾವೇನೋಕ್ತಂ ಬ್ರಹ್ಮದತ್ತನಾಮಕಸ್ತತ್ಪಿತೇತಿ। ಜ್ಯೇಷ್ಠಸ್ಯ ಸೌಭಾಧಿಪತೇಃ ಸಾಲ್ವವಿಷಯಾಧಿಪತ್ಯಮೇವ ನ್ಯಾಯಪ್ರಾಪ್ತ-ತ್ವಾದಾಗತಮ್। ಅತಸ್ತಸ್ಯಾಪಿ ಸಾಲ್ವನಾಮ। ಅನಯೋಸ್ತು ಸಾಲ್ವವಿಷಯಾಧಿಪತ್ಯಾಭಾವಾತ್ ತನ್ನಾಮಾಪಿ ನಾಸ್ತೀತಿ ಜ್ಞೇಯಮ್ ॥ – (ವಾ.)

ಅ: ವಿಚಕ್ರ ಎಂಬ ಅಸುರ ಹಿಂದೆ ಬ್ರಹ್ಮನಿಂದ ವರ ಪಡೆದು, ಅವಧ್ಯನೂ, ಅಜೇಯನೂ ಆಗಿ ದೇವತೆಗಳನ್ನು ಪೀಡಿಸುತ್ತಿದ್ದ.

ಸ ಚಾಭವತ್ ತಯೋಃ ಸಖಾ ಸಹಾಯಕಾಮ್ಯಯಾऽಭವತ್ ।
ಹಿಡಿಂಬರಾಕ್ಷಸೋऽಪಿ ಯಃ ಪುರಾऽऽಪ ಶಂಕರಾದ್ವರಮ್ ॥ ೨೪೬ ॥

ನ ಜೀಯಸೇ ನ ವಧ್ಯಸೇ ಕುತಶ್ಚನೇತಿ ತೋಷಿತಾತ್ ।
ಸ ಚೈತಯೋಃ ಸಖಾऽಭವತ್ ಸಮಾಜಗಾಮ ತತ್ರ ಚ ॥ ೨೪೭ ॥

ಅ: ಅವರಿಬ್ಬರಿಗೆ ಸ್ನೇಹಿತನಾಗಿದ್ದ ಆ ವಿಚಕ್ರನೂ ಸಹ ಸಹಾಯ ನೀಡಲೆಂದು ಆಗಮಿಸಿದ. ಪ್ರಸನ್ನನಾದ ಶಿವನಿಂದ ಹಿಂದೆ 'ನೀನು ಸೋಲಲಾರೆ, ಸಾಯಲಾರೆ' ಎಂದು ವರ ಪಡೆದಿದ್ದ ಹಿಡಿಂಬರಾಕ್ಷಸನೂ ಸಹ ಅವರಿಬ್ಬರಿಗೆ ಸ್ನೇಹಿತನಾಗಿದ್ದ. ಅವನೂ ಅಲ್ಲಿಗೆ ಬಂದ.

ಅಕ್ಷೌಹಿಣೀದಶಾತ್ಮಕಂ ಬಲಂ ತಯೋರ್ಬಭೂವ ಹ ।
ವಿಚಕ್ರಗಂ ಷಡಾತ್ಮಕಂ ತಥೈಕಮೇವ ರಾಕ್ಷಸಮ್ ॥ ೨೪೮ ॥

ಅ: ಹಂಸಡಿಬಿಕರ ಸೇನೆ ಹತ್ತು ಅಕ್ಷೋಹಿಣಿಯಷ್ಟಿತ್ತು; ಅದರಂತೆ ವಿಚಕ್ರನ ಸೇನೆ ಆರು ಅಕ್ಷೋಹಿಣಿ. ಹಿಡಿಂಬರಾಕ್ಷಸನ ಸೇನೆ ಒಂದು ಅಕ್ಷೋಹಿಣೀಸೇನೆ.

ಹಂಸಡಿಬಿಕರೊಂದಿಗೆ ಶ್ರೀಕೃಷ್ಣನ ಯುದ್ಧ

ದ್ವಿರಷ್ಟಸೇನಯಾ ಯುತೌ ಸಹೈಕಯೈವ ತೌ ನೃಪೌ ।
ಸಮೀಯತುರ್ಯುಧೇ ಹರಿಂ ಹರಿಶ್ಚ ತೌ ಸಸಾರ ಹ ॥ ೨೪೯ ॥

ಅ: ಒಟ್ಟು ಹದಿನೇಳು ಅಕ್ಷೋಹಿಣೀಸೇನೆಯೊಂದಿಗೆ ಆ ಹಂಸಡಿಬಿಕರು ಯುದ್ಧದಲ್ಲಿ ಶ್ರೀಕೃಷ್ಣನನ್ನು ಎದುರಿಸಿದರು; ಶ್ರೀಕೃಷ್ಣನೂ ಅವರನ್ನು ಎದುರಿಸಿದ.

ಅಥ ದ್ವಯೋರ್ದ್ವಯೋರಭೂದ್ರಣೋ ಭಯಾನಕೋ ಮಹಾನ್ ।
ಹರಿರ್ವಿಚಕ್ರಮೇಯಿವಾನ್ ಬಲಶ್ಚ ಹಂಸಮುದ್ಧತಮ್ ॥ ೨೫೦ ॥

---

೧. ತಥೈಕಮೇವ ರಾಕ್ಷಸಮಿತ್ಯತ್ರ ಹಿಡಿಂಬಾಖ್ಯರಕ್ಷಸ್ಸಂಬಂಧಿ ರಾಕ್ಷಸಂ ಏಕಂ= ಏಕಾಕ್ಷೌಹಿಣ್ಯಾತ್ಮಕಮ್ ॥ – (ವಾ.)

ಅ: ಬಳಿಕ ಮಹಾಭಯಂಕರವಾದ ದ್ವಂದ್ವಯುದ್ಧ ಉಭಯಸೇನೆಗಳ ಮಧ್ಯ ನಡೆಯಿತು. ಕೃಷ್ಣ ವಿಚಕ್ರನನ್ನೂ, ಬಲರಾಮ ಉದ್ಧತನಾದ ಹಂಸನನ್ನೂ ಎದುರಿಸಿದರು.

ತದಾಽಸ್ಯ ಚಾನುಜಂ ಯಯೌ ಶಿನಿಪ್ರವೀರ ಆಯುಧೀ ।
ಗದಶ್ಚ ನಾಮತೋಽನುಜೋ ಹರೇಃ ಸ ರೋಹಿಣೀಸುತಃ ॥ ೨೫೧ ॥

[೧]ಪುರಾ ಸ ಚಂಡಕೋ ಗಣೋ ಹರೇರ್ನಿವೇದಿತಾಶನಃ ।
ಸಮಾಹ್ವಯದ್ರಣಾಯ ವೈ ತಯೋಃ ಸ ತಾತಮೇವ ಹಿ ॥ ೨೫೨ ॥

ಅ: ಆಗ ಹಂಸನ ತಮ್ಮನಾದ ಡಿಬಿಕನನ್ನು ಆಯುಧ ಹಿಡಿದು, ಸಾತ್ಯಕಿ ಎದುರಿಸಿದ. ಗದ ಎಂಬ ಕೃಷ್ಣನ ತಮ್ಮನಾದ ರೋಹಿಣೀಪುತ್ರನು ಹಂಸಡಿಬಿಕರ ತಂದೆಯಾದ ಬ್ರಹ್ಮದತ್ತನನ್ನು ರಣಕ್ಕೆ ಆಹ್ವಾನಿಸಿದ. ಆ ಗದನು ಹಿಂದೆ ಚಂಡಗಣದ ದ್ವಾರಪಾಲಕ; ಶ್ರೀಹರಿಗೆ ಅನ್ನ ನಿವೇದಿಸುವ ಕಾರ್ಯ ಹೊಂದಿದ್ದವನು.

ವಿ: ಗದ ಕೃಷ್ಣನ ತಮ್ಮನಾದರೂ, ದೇವಕಿಯ ಮಗನಲ್ಲ; ರೋಹಿಣಿಯ ಮಗ ಎಂಬುದು ವಿಶೇಷ. ಅವನು ಶ್ರೀಹರಿಗೆ ದಧ್ಯನ್ನ ನಿವೇದಿಸುವ ಚಂಡಕಗಣದ ವಿಶೇಷಸೇವಕ ಎಂದು ವಾದಿರಾಜೀಯದಲ್ಲಿದೆ. ಗದನ ತಾಯಿ ದೇವರಕ್ಷಿತೆ ಎಂದೂ (ಭಾಗವತ ೯/೨೧/೫೧), ಭದ್ರಾ ಎಂದೂ (ವಿಷ್ಣುಪುರಾಣ ೪/೧೫/೨೪) ಉಲ್ಲೇಖಗಳುಂಟು. ಅವು ರೋಹಿಣಿಯ ನಾಮಾಂತರಗಳೆಂದು ತಿಳಿಯಬಹುದು.

---

೧. ಪುರಾ ಸ ಚಂಡಕೋ ಗಣಃ ಇತ್ಯತ್ರ ಸ = ಗದಃ 'ಸಂಘಾತೇ ಪ್ರಥಮೇ ಗಣ' ಇತಿ ವಚನಾತ್ ಚಂಡಪ್ರಚಂಡಜಯವಿಜಯಾದಿದ್ವಾರಪಾಲಕೇಷು ಪ್ರಥಮಂ ಗಣ್ಯತ ಇತಿ ಗಣಃ ಚಂಡಕಃ = ಚಂಡನಾಮಾ ಹರೇಃ ಪಾರ್ಷದಃ। ನಿವೇದಿತಾಶನಃ= ಕದಾಚಿದ್ವೈಕುಂಠನಗರಾತ್ ಬಹಿರ್ಗಮನೇ ಲೀಲಯಾ ಬುಭುಕ್ಷತೋ ಹರೇರ್ನಿವೇದಿತಸ್ವಸಂಗೃಹೀತದಧ್ಯೋದನಃ ॥ –(ವಾ.)

ಸಗದಃ ಪುರಾ ಚಂಡಕ ಇತಿ ಹರೇರ್ಗಣಃ ಗಣದೇವತಾ ಚಂಡಪ್ರಚಂಡಾದಿಪಾರ್ಷದೇಷು ಚಂಡಾಖ್ಯ ಇತ್ಯರ್ಥಃ। – (ಜ.)

ಗಣದೇವತಾ ಚಂಡಪ್ರಚಂಡಾದಿಪಾರ್ಷದೇಷು ಚಂಡಾಖ್ಯ ಇತ್ಯರ್ಥಃ। – (ವ.)

ಹರೇಶ್ಚಂಡಕೋ ಗಣೋ ನಿವೇದಿತಾಶನನಾಮಾ ಕಶ್ಚಿತ್ ಪಾರ್ಷದ ಇತಿ ತತ್ತ್ವಂ ಚಂಡಾದಿಗಣನಿರೂಪಣೇ ವಿಷ್ವಕ್ಸೇನಸಂಹಿತಾಯಾಂ ಸ್ಫುಟಮವಗಮ್ಯತೇ ॥ – (ಶ್ರೀ.)

.....ಗದೋಽಥ ಶೌರೇರಿವ ಕರ್ಮಕೃತ್ಪ್ರಿಯಃ ..... – ಸುಮಧ್ವವಿಜಯ (೪/೨೬)

ಅಕ್ಷೌಹಿಣೀತ್ರ್ಯಾನ್ವಿತಾಃ ಸಮಸ್ತಯಾದವಾಸ್ತದಾ ।
ತ್ರಿಲೋಚನಾನುಗೌ ಚ ತೌ ನ್ಯವಾರಯನ್ ಸ ರಾಕ್ಷಸೌ ॥ ೨೫೩ ॥

ಅ: ಸಕಲಯಾದವರೂ ಮೂರು ಅಕ್ಷೋಹಿಣೀಸೇನೆಯೊಂದಿಗೆ ಮುಕ್ಕಣ್ಣನಾದ ಶಿವನ ಆ ಎರಡು ಭೂತಗಳನ್ನು ಮತ್ತು ಹಿಡಿಂಬರಾಕ್ಷಸನನ್ನು ಎದುರಿಸಿದರು.

ಹರಿರ್ವಿಚಕ್ರಮೋಜಸಾ ಮಹಾಸ್ತ್ರಶಸ್ತ್ರವರ್ಷಿಣಮ್।
ವಿವಾಹನಂ ನಿರಾಯುಧಂ ಕ್ಷಣಾಚ್ಚಕಾರ ಸಾಯಕೈಃ ॥ ೨೫೪ ॥

ಅ: ಮಹಾಸ್ತ್ರಶಸ್ತ್ರಗಳ ಮಳೆಗರೆದ ವಿಚಕ್ರನನ್ನು ಶ್ರೀಕೃಷ್ಣ ಪರಾಕ್ರಮದಿಂದ ಬಾಣಗಳಿಂದ ಕ್ಷಣಮಾತ್ರದಲ್ಲಿ ವಿರಥನನ್ನಾಗಿಯೂ, ನಿರಾಯುಧನನ್ನಾಗಿಯೂ ಮಾಡಿದ.

ಪುನಶ್ಚ ಪಾದಪಾನ್ ಗಿರೀನ್ ಪ್ರಮುಂಚತೋಽರಿಣಾಽರಿಹಾ ।
ಶಿರೋ ಜಹಾರ ದೇವತಾ ವಿನೇದುರತ್ರ ಹರ್ಷಿತಾಃ ॥ ೨೫೫ ॥

ಅ: ಮತ್ತೆ ವೃಕ್ಷಗಳನ್ನು, ಬೆಟ್ಟಗಳನ್ನು ಪ್ರಯೋಗಿಸತೊಡಗಿದ ಆ ವಿಚಕ್ರನ ಶಿರಸ್ಸನ್ನು ಶತ್ರು-ನಾಶಕನಾದ ಕೃಷ್ಣ ತುಂಡರಿಸಿದ. ದೇವತೆಗಳು ಆಗ ಆನಂದಿತರಾಗಿ ಜಯಘೋಷ ಮಾಡಿದರು.

ಭೂತಗಳು ಮರಳಿ ಕೈಲಾಸಕ್ಕೆ

ಪ್ರಸೂನವರ್ಷಿಭಿಃ ಸ್ತುತಶ್ಚತುರ್ಮುಖಾದಿಭಿಃ ಪ್ರಭುಃ ।
ಸಸಾರ ತೌ ಹರಾನುಗೌ ಪ್ರಭಕ್ಷಕೌ ಸ ಸಾತ್ವತಾಮ್ ॥ ೨೫೬ ॥

ಅ: ಹೂಮಳೆಗರೆಯುತ್ತಾ ಬ್ರಹ್ಮರುದ್ರಾದಿದೇವತೆಗಳು ಕೃಷ್ಣನನ್ನು ಸ್ತುತಿಸಿದರು. ಪ್ರಭುವಾದ ಕೃಷ್ಣ ಬಳಿಕ ಯಾದವರನ್ನು ತಿನ್ನುತ್ತಿದ್ದ ಆ ಎರಡು ಭೂತಗಳನ್ನು ಎದುರಿಸಿದ.

ಸಮಸ್ತಯಾದವಾನ್ ರಣೇ ವಿಧೂಯ ತೌ ಜನಾರ್ದನಮ್ ।
ಉಪೇತ್ಯ ಚಾಂಸಗೌ ಹರೇರದಂಶತಾಂ ಸುಕರ್ಣಕೌ ॥ ೨೫೭ ॥

ಅ: ಆ ಎರಡು ಭೂತಗಳು ಸಕಲಯಾದವರನ್ನು ಯುದ್ಧದಲ್ಲಿ ಸದೆಬಡಿದು, ಶ್ರೀಕೃಷ್ಣನ ಮೇಲೆ ಸಾಗಿ, ಅವನ ಹೆಗಲ ಮೇಲೆ ಕುಳಿತು, ಅವನ ಸುಂದರವಾದ ಕಿವಿಗಳನ್ನು ಕಚ್ಚತೊಡಗಿದವು.

ವಿ: ಘಂಟಾಕರ್ಣ, ಕರ್ಣ ಎಂಬ ಪಿಶಾಚಿಗಳು ಕೃಷ್ಣನಾಮ ತಮ್ಮ ಕಿವಿಗೆ ಬೀಳದಿರಲೆಂದು ಘಂಟೆ ಕಟ್ಟಿಕೊಂಡಿದ್ದರೆ, ಈ ಎರಡು ಭೂತಗಳು ಕೃಷ್ಣನ ಕಿವಿಯನ್ನೇ ಕಚ್ಚ ಹೊರಟ ವಿಚಿತ್ರಭೂತಗಳು ಎಂಬುದು ಗಮನಾರ್ಹ. 'ಸುಕರ್ಣಕೌ' ಎಂಬ ಪದದಿಂದ ಅವುಗಳದು ಕಿವಿಕಚ್ಚುವ ಪ್ರಯತ್ನವೇ ಹೊರತು, ಅಚ್ಛೇದ್ಯ ಅಭೇದ್ಯವಾದ ಕೃಷ್ಣನ ಕಿವಿಯನ್ನು ಕಚ್ಚುವುದು ಸರ್ವಥಾ ಅಸಾಧ್ಯ ಎಂಬ ವಿಶೇಷಾಂಶ ಸೂಚಿತ ಎಂದು ತಿಳಿಯಬಹುದು.

ಸ ತೌ ಭುಜಪ್ರವೇಗತೋ ವಿಧೂಯ ಶಂಕರಾಲಯೇ ।
ನ್ಯಪಾತಯದ್ಬಲಾರ್ಣವೋಽಮಿತಸ್ಯ ಕಿಂ ತದುಚ್ಯತೇ ॥ ೨೫೮ ॥

ಅ: ಆ ಎರಡು ಭೂತಗಳನ್ನು ಕೃಷ್ಣ ತನ್ನ ಭುಜಗಳನ್ನು ವೇಗದಿಂದ ಕುಣಿಸಿ, ಕೈಲಾಸದಲ್ಲಿ ಬೀಳಿಸಿದ. ಬಲಸಾಗರನಾದ ಅಪರಿಮಿತಶಕ್ತಿಯ ಶ್ರೀಹರಿಗೆ ಇದೆಲ್ಲ ಏನು?

ವಿ: ಶ್ರೀಕೃಷ್ಣನು ಶಿವನ ಆ ಭೂತಗಳನ್ನು ಮರಳಿ ಶಿವನ ಬಳಿಗೆ ಹಾಗೆ ಭುಜ ಕುಣಿಸುವ ಮೂಲಕ ಕಳುಹಿಸಿಕೊಟ್ಟ ಎಂದರ್ಥ. ಪಾದ ಬೆಳೆಸಿ, ಮೂರು ಲೋಕಗಳನ್ನು ಅಳೆದ ಶ್ರೀಹರಿ, ಹೀಗೆ ಭುಜ ಕುಣಿಸಿ, ಅವುಗಳನ್ನು ಅಷ್ಟುದೂರ ಅಟ್ಟಿದ್ದು ಮತ್ತೊಂದು ಬಗೆಯ ಮಹಿಮೆ ಎಂದು ತಿಳಿಯಬೇಕು. ಶ್ರೀಕೃಷ್ಣನ ಮಹಿಮೆಗೆ ಆ ಭೂತಗಳೂ ಅಚ್ಚರಿಪಟ್ಟ ವಿವರ ಹರಿವಂಶದಲ್ಲಿದೆ.

ಬಲರಾಮನಿಂದ ಹಿಡಿಂಬಾಸುರ ಪರಾಭವ

ಪ್ರಭಕ್ಷಯಂತಮೋಜಸಾ ಹಿಡಿಂಬಮುದ್ಧತಂ ಬಲಮ್ ।
ಸಹೋಗ್ರಸೇನಕೋ ಯಯೌ ಪಿತಾ ಹರೇಃ ಶರಾನ್ ಕ್ಷಿಪನ್ ॥ ೨೫೯ ॥

ಅ: ಪರಾಕ್ರಮದಿಂದ ಯಾದವಸೇನೆಯನ್ನು ಹಿಡಿದು ತಿನ್ನುತ್ತಿದ್ದ ಉದ್ಧತನಾದ ಹಿಡಿಂಬನನ್ನು ಉಗ್ರಸೇನ ವಸುದೇವರು ಬಾಣಗಳನ್ನು ಎಸೆಯುತ್ತಾ ಎದುರಿಸಿದರು.

ತಯೋ ರಥೌ ಸಹಾಯುಧೌ ಪ್ರಭಕ್ಷ್ಯ ರಾಕ್ಷಸೋ ಬಲೀ ।
ಪ್ರಗೃಹ್ಯ ತಾವಭಾಷತ ಪ್ರಯಾತಮಾಶು ಮೇ ಮುಖಿಮ್ ॥ ೨೬೦ ॥

ಅ: ಬಲಿಷ್ಠನಾದ ಆ ಹಿಡಿಂಬನು ಅವರ ರಥಗಳನ್ನೂ, ಆಯುಧಗಳನ್ನೂ ತಿಂದು, ಅವರಿಬ್ಬರನ್ನೂ ಕೈಯಲ್ಲಿ ಹಿಡಿದುಕೊಂಡು ಹೇಳಿದ : ''ಕೂಡಲೇ ನನ್ನ ಬಾಯೊಳಗೆ ಪ್ರವೇಶಿಸಿರಿ''.

ತದಾ ಗದಾವರಾಯುಧಃ ಸಹೈವ ಹಂಸಭೂಭೃತಾ ।
ಪ್ರಯುಧ್ಯಮಾನ ಆಯಯೌ ವಿಹಾಯ ತಂ ಹಲಾಯುಧಃ ॥ ೨೬೧ ॥

ಅ: ಆಗ ಹಂಸನೊಂದಿಗೆ ಗದಾಪಾಣಿಯಾಗಿ ಬಲವಾದ ಯುದ್ಧ ಮಾಡುತ್ತಿದ್ದ ಬಲರಾಮ, ಅವನನ್ನು ಬಿಟ್ಟು ಅಲ್ಲಿಗೆ ಆಗಮಿಸಿದ.

ವಿ: ವಸುದೇವ ಉಗ್ರಸೇನರ ರಕ್ಷಣೆಗೆಂದು ಬಲರಾಮ ಧಾವಿಸಿದ ಎಂದರ್ಥ.

ತಮಾಗತಂ ಸಮೀಕ್ಷ್ಯ ತೌ ವಿಹಾಯ ರಾಕ್ಷಸಾಧಿಪಃ ।
ಉಪೇತ್ಯ ಮುಷ್ಟಿನಾऽಹನದ್ಬಲಂ ಸ ವಕ್ಷಸಿ ಕ್ರುಧಾ[೧] ॥ ೨೬೨ ॥

ಅ: ಬಲರಾಮ ಬಂದದ್ದನ್ನು ನೋಡಿ, ರಾಕ್ಷಸಾಧಿಪನಾದ ಹಿಡಿಂಬ ಅವರಿಬ್ಬರನ್ನು ಬಿಟ್ಟು ಬಲರಾಮನ ಬಳಿಗೆ ತೆರಳಿ, ಅವನ ಎದೆಯ ಮೇಲೆ ಕೋಪದಿಂದ ಮುಷ್ಟಿಯಿಂದ ಅಪ್ಪಳಿಸಿದ.

ಉಭೌ ಹಿ ಬಾಹುಶಾಲಿನಾವಯುಧ್ಯತಾಂ ಚ ಮುಷ್ಟಿಭಿಃ ।
ಚಿರಂ ಪ್ರಯುಧ್ಯ ತಂ ಬಲೋऽಗ್ರಹೀತ್ ಸ ಜಂಘಯೋರ್ವಿಭುಃ ॥ ೨೬೩ ॥

ಅ: ಬಾಹುಶಾಲಿಗಳಾದ ಅವರಿಬ್ಬರೂ ಮುಷ್ಟಿಗಳಿಂದ ಕಾದತೊಡಗಿದರು. ಬಹಳ ಹೊತ್ತು ಕಾದಿ, ಬಲರಾಮ ಅವನ ಎರಡು ಮೊಳಕಾಲುಗಳನ್ನು ಹಿಡಿದುಕೊಂಡ.

ವಿ: ಬಲರಾಮನೊಂದಿಗೆ ಹಾಗೆ ದೀರ್ಘಕಾಲ ಹೋರಾಡಲು ಹಿಡಿಂಬನಿಗೆ ಶಿವನ ವರದಿಂದ ಸಾಧ್ಯವಾಯಿತು ಎಂದು ತಿಳಿಯಬೇಕು.

ಅಥೈನಮುದ್ಧತಂ ಬಲಾದ್ಬಲಃ ಸುದೂರ ಆಕ್ಷಿಪತ್ ।
ಪಪಾತ ಪಾದಯೋಜನೇ[೨] ಸ ನಾಜಗಾಮ ತಂ ಪುನಃ ॥ ೨೬೪ ॥

---

೧. ಕ್ರುಧಾ ಕೋಪೇನ ಅಹನ್ನಿತ್ಯರ್ಥಃ । ಸ ರಾಕ್ಷಸಾಧಿಪಃ ಬಲಂ ವಕ್ಷಸಿ ಅಹನದಿತಿ ವಾ ಯೋಜ್ಯಮ್ । –(ವ.)

೨. ಪಾದಯೋಜನೇ= ಪಾದಯುಕ್ತೇ ಯೋಜನೇ ಕ್ರೋಶಪಂಚಕ ಇತ್ಯರ್ಥಃ ॥ –(ವಾ.)

ಯೋಜನೇ ಪಾದಃ ಪಾದಯೋಜನಃ, ಪಾದೇನ ಸಹಿತೋ ಯೋಜನೋ ವಾ ಕ್ರೋಶಮಾತ್ರೇ ವಾ।– (ತಿ.)

ಅ: ಬಲರಾಮ ಬಳಿಕ ಉದ್ಧತನಾದ ಆ ರಾಕ್ಷಸನನ್ನು ತನ್ನ ಶಕ್ತಿಯಿಂದ ದೂರಕ್ಕೆ ಎಸೆದನು. ಅವನು (ಒಂದೂ)ಕಾಲುಯೋಜನದಷ್ಟು ದೂರದಲ್ಲಿ ಬಿದ್ದ. ಹಾಗೆ ಬಿದ್ದ ಅವನು ಮರಳಿ ಬಲರಾಮನ ಮೇಲೆ ಕಾದಲು ತೊಡಗಲಿಲ್ಲ.

ವಿಹಾಯ ಸೈನಿಕಾಂಶ್ಚ ತೌ ನೃಪೌ ಯಯೌ ವನಾಯ ಸಃ ।
ನಿಹತ್ಯ ತಸ್ಯ ರಾಕ್ಷಸಾನ್ ಹಲಾಯುಧೋ ನನಾದ ಹ ॥ ೨೬೫ ॥

ಅ: ಹಿಡಿಂಬನು ತನ್ನ ಸೈನಿಕರನ್ನೂ, ಹಂಸಡಿಬಿಕರನ್ನೂ ಬಿಟ್ಟು ಕಾಡಿಗೆ ತೆರಳಿದ. ಬಲರಾಮ ಅವನ ಸೇನೆಯಲ್ಲಿದ್ದ ರಾಕ್ಷಸರನ್ನು ಸಂಹರಿಸಿ, ಸಿಂಹನಾದ ಮಾಡಿದ.

ವಿ: ಹಾಗೆ ತೆರಳುವ ಮೂಲಕ ಹಿಡಿಂಬ ಆಗ ಬದುಕಿಕೊಂಡರೂ, ಅವನ ಸೇನೆಯೆಲ್ಲ ಬಲರಾಮನಿಂದ ಹತವಾಯಿತು ಎಂದು ತಿಳಿಯಬೇಕು. ಹೀಗೆ ಬಲರಾಮನಿಗೆ ಸೋತ ಹಿಡಿಂಬ, ಭೀಮನಿಂದ ಹತನಾಗುವ ವಿವರ ಮುಂದೆ ಬಂದಿದೆ (೧೯/೫೬, ೫೭).

ಗದಸ್ತು ಸಾಲ್ವಭೂಭೃತಾ ವಯೋಗತೇನ ಯೋಧಯನ್ ।
ವಿವಾಹನಂ ನಿರಾಯುಧಂ ಚಕಾರ ಸೋಽಪ್ಯಪಾದ್ರವತ್ ॥ ೨೬೬ ॥

ಅ: ಗದ ವಯಸ್ಸಾದ ಸಾಲ್ವರಾಜ ಬ್ರಹ್ಮದತ್ತನೊಡನೆ ಯುದ್ಧ ಮಾಡುತ್ತಾ, ಅವನ ವಾಹನವನ್ನು ನಾಶಮಾಡಿದ; ನಿರಾಯುಧನನ್ನಾಗಿಸಿದ. ಅವನಾಗ ಪಲಾಯನ ಮಾಡಿದ.

ವಿ: ಸೌಭಪತಿಯಾದ ಸಾಲ್ವ ಈ ಬ್ರಹ್ಮದತ್ತನ ಹಿರಿಯರಾಣಿಯ ಮಗ. ಹಂಸಡಿಬಿಕರು ಕಿರಿಯರಾಣಿಯ ಮಕ್ಕಳು. ಸಾಲ್ವ ಉತ್ತರಾಧಿಕಾರಿಯಾಗಿ ಸಾಲ್ವದೇಶಕ್ಕೆ ಒಡೆಯನಾದ್ದರಿಂದ ಅವನಿಗೂ ಸಾಲ್ವನೆಂದೇ ಹೆಸರಾಯಿತು. ಹಂಸಡಿಬಿಕರಿಗೆ ಸಾಲ್ವರಾಜ್ಯ ಬರಲಿಲ್ಲವಾದ್ದರಿಂದ ಅವರಿಗೆ ಆ ಹೆಸರು ಬರಲಿಲ್ಲ ಎಂದು ವಾದಿರಾಜೀಯದಲ್ಲಿದೆ (೧೭/೨೪೪).

ಸುತೇನ ತಸ್ಯ ಕನ್ಯಸಾ[೧] ಯುಯೋಧ ಸಾತ್ಯಕೀ ರಥೀ ।
ವರಾಸ್ತ್ರಶಸ್ತ್ರಯೋಧಿನೌ ವಿಜಹ್ರತುಶ್ಚ ತಾವುಭೌ ॥ ೨೬೭ ॥

---

೧. ಸುತೇನ ತಸ್ಯ ಕನ್ಯಸೇತ್ಯತ್ರ ''ಯುವಾಲ್ಪಯೋಃ ಕನನ್ಯತರಸ್ಯಾ'' ಮಿತಿ (೫/೩/೬೪) ಸೂತ್ರಾತ್ ಅಲ್ಪಃ= ಅಲ್ಪವಯಸ್ಕಃ ಅನುಜಃ ಕನ್‌ಶಬ್ದೇನೋಚ್ಯತೇ ತತ ಈಯಸ್‌ಪ್ರತ್ಯಯೇ ಕೃತೇ ಕನೀಯಾನಿತಿವತ್ ಔಣಾದಿಕೇ ಯಸ್‌ಪ್ರತ್ಯಯೇ ಕೃತೇ ಕನ್ಯಸೇತಿಶಬ್ದೋ ಜ್ಞೇಯಃ। ಅತಃ ಕನ್ಯಸೇತಿ ಸಾಧುಃ ॥ –(ವಾ.)

ಅ: ಸಾತ್ಯಕಿಯು ರಥದಲ್ಲಿ ಕುಳಿತು, ಬ್ರಹ್ಮದತ್ತನ ಕಿರಿಯಮಗನಾದ ಡಿಬಿಕನೊಂದಿಗೆ ಯುದ್ಧ ಮಾಡಿದ. ಶ್ರೇಷ್ಠಶಸ್ತ್ರಾಸ್ತ್ರಗಳಿಂದ ಕಾದುತ್ತಾ ಅವರಿಬ್ಬರೂ ಕ್ರೀಡಿಸಿದರು.

ಚಿರಂ ಪ್ರಯುಧ್ಯ ಸಾತ್ಯಕಿಃ ಸ ಹಂಸಕನ್ಯಸಾ ಬಲೀ ।
ಶತಂ ಸಪಂಚಕಂ ರಣೇ ಚಕರ್ತ ತಸ್ಯ ಧನ್ವನಾಮ್ ॥ ೨೬೮ ॥

ಅ: ಬಲಿಷ್ಠನಾದ ಸಾತ್ಯಕಿಯು ಡಿಬಿಕನೊಂದಿಗೆ ದೊಡ್ಡ ಯುದ್ಧ ಮಾಡಿ, ಅವನ ಅನುಯಾಯಿಗಳಾಗಿದ್ದ ನೂರೈದು ಜನ ಬಿಲ್ಗಾರರನ್ನು ಕೊಂದುಹಾಕಿದ.

ಸಾತ್ಯಕಿಡಿಬಿಕರ ಖಡ್ಗಯುದ್ಧ

ಸ ಖಡ್ಗಚರ್ಮಭೃದ್ರಣೇऽಭ್ಯಯಾತ್ ಸುತಾತ್ಮಜಂ ಶಿನೇಃ ।
ಸ ಚೈನಮಭ್ಯಯಾತ್ ತಥಾ ವರಾಸಿಚರ್ಮಭೃದ್ವಿಭೀಃ ॥ ೨೬೯ ॥

ಅ: ಡಿಬಿಕ ಖಡ್ಗಗುರಾಣಿಗಳನ್ನು ಹಿಡಿದು, ಸಾತ್ಯಕಿಯ ಮೇಲೆ ಏರಿಹೋದ. ಅವನೂ ಸಹ ಹಾಗೆಯೇ ನಿರ್ಭೀತಿಯಿಂದ ಖಡ್ಗಗುರಾಣಿಗಳನ್ನು ಹಿಡಿದೇ ಅವನನ್ನು ಎದುರಿಸಿದ.

ದ್ವಿಷೋಡಶಪ್ರಭೇದಕಂ ವರಾಸಿಯುದ್ಧಮಶ್ರಮೌ ।
ಪ್ರದರ್ಶ್ಯ ನಿರ್ವಿಶೇಷಕಾವುಭೌ ವ್ಯವಸ್ಥಿತೌ ಚಿರಮ್ ॥ ೨೭೦ ॥

ಅ: ಅವರಿಬ್ಬರೂ ಮೂವತ್ತೆರಡು ಪ್ರಭೇದಗಳ ಶ್ರೇಷ್ಠಖಡ್ಗಯುದ್ಧವನ್ನು ಬಳಲಿಕೆಯಿಲ್ಲದೆ ಬಹುಹೊತ್ತು ಪ್ರದರ್ಶಿಸಿ, ಸರಿಸಾಟಿಯಾಗಿ ನಿಂತರು.

ವಿ: ಮೂವತ್ತೆರಡು ಪ್ರಭೇದಗಳ ಖಡ್ಗಯುದ್ಧದ ಉಲ್ಲೇಖ ಇಲ್ಲಿಯ ಅಪೂರ್ವತೆ. ಆ ಮೂವತ್ತೆರಡು ಬಗೆಗಳ ವಿವರಣೆ [೧]ಹರಿವಂಶದಲ್ಲಿ ಬಂದಿದೆ.

---

೧. ಭ್ರಾಂತಮುದ್ಭ್ರಾಂತಮಾವಿದ್ಧಂ ಪ್ರವಿದ್ಧಂ ಬಾಹುನಿಃಸೃತಮ್ ।
ಆಕರಂ ವಿಕರಂ ಭಿನ್ನಂ ನಿರ್ಮರ್ಯಾದಮಮಾನುಷಮ್ ॥
ಸಂಕೋಚಿತಂ ಕುಲಚಿತಂ ಸವ್ಯಜಾನು ವಿಜಾನು ಚ ।
ಆದ್ರಿಕಂ ಚಿತ್ರಕಂ ಕ್ಷಿಪ್ತಂ ಕುಸಂಬಂ ಲಂಬನಂ ಧೃತಮ್ ॥
ಸರ್ವಬಾಹು ವಿನಿರ್ಬಾಹು ಸವ್ಯೇತರಮಥೋತ್ತರಮ್ ।
ತ್ರಿಬಾಹುಸ್ತುಂಗಬಾಹುಶ್ಚ ಸವ್ಯೋನ್ನತಮುದಾಸಿ ಚ ॥
ಪೃಷ್ಠತಃ ಪ್ರಕ್ಷಿತಂ ಚೈವ ಯೌಧಿಕಂ ಪ್ರಥಿತಂ ತಥಾ ॥
ಇತಿ ಪ್ರಕಾರಾನ್ ದ್ವಾತ್ರಿಂಶಚ್ಚಕ್ರತುಃ ಖಡ್ಗಯೋಧಿನೌ ॥ – ಹರಿವಂಶ (೩/೧೨೫/೧೭-೨೦)

ಪರಸ್ಪರಾಂತರೈಷಿಣೌ[೧] ನ ಚಾಂತರಂ ವ್ಯಪಶ್ಯತಾಮ್ ।
ತತೋ ವಿಹಾಯ ಸಂಗರಂ ಗತೌ ನಿರರ್ಥಕಂ ತ್ವಿತಿ ॥ ೨೭೧ ॥

ಅ: ಒಬ್ಬರನ್ನೊಬ್ಬರು ಗೆಲ್ಲುವ ಅವಕಾಶಕ್ಕಾಗಿ ಹೊಂಚಿದರೂ, ಅಂತಹ ಅವಕಾಶವನ್ನು ಕಾಣದಾದರು. ಬಳಿಕ ನಿರರ್ಥಕವೆಂದು ಬಗೆದು, ಯುದ್ಧವನ್ನು ತೊರೆದುಹೋದರು.

ವಿ: ಅವರಿಬ್ಬರ ಯುದ್ಧ ನಿರ್ಣಾಯಕವಾಗದೇ ಹೋಗಿದ್ದು ಆಗಿನ ವಿಶೇಷವಾಗಿತ್ತು ಎಂದರ್ಥ.

ಹಂಸಡಿಬಿಕರ ಪಲಾಯನ

ತತಃ ಸ ಹಂಸಸಂಯುತೋ ಜಗಾಮ ಯೋದ್ಧುಮಚ್ಯುತಮ್ ।
ಕ್ಷಣೇನ ತೌ ನಿರಾಯುಧೌ ಚಕಾರ ಕೇಶವಃ ಶರೈಃ ॥ ೨೭೨ ॥

ಅ: ಬಳಿಕ ಡಿಬಿಕ ಹಂಸನೊಂದಿಗೆ ಯುದ್ಧಕ್ಕೆಂದು ಕೃಷ್ಣನ ಮೇಲೆ ಸಾಗಿದ. ಕೃಷ್ಣನು ಅವರಿಬ್ಬರನ್ನೂ ಕೂಡಲೇ ಬಾಣಗಳಿಂದ ನಿರಾಯುಧರನ್ನಾಗಿಸಿದ.

ವಿ: ಸಾತ್ಯಕಿಗೆ ಡಿಬಿಕನೊಬ್ಬನನ್ನೇ ಪರಾಭವಗೊಳಿಸಲು ಅಶಕ್ಯವೆನ್ನಿಸಿದ್ದರೆ, ಕೃಷ್ಣ ಹಂಸಡಿಬಿಕರಿಬ್ಬರನ್ನೂ ಏಕಕಾಲಕ್ಕೆ ನಿರಾಯುಧರನ್ನಾಗಿ ಮಾಡಿ ಸೋಲಿಸಿದ್ದು ಅವರಿಬ್ಬರಲ್ಲಿನ ಅಪಾರ ಅಂತರಕ್ಕೆ ದ್ಯೋತಕ.

ಹತಂ ಚ ಸೈನ್ಯಮೇತಯೋಶ್ಚತುರ್ಥಭಾಗಶೇಷಿತಮ್[೨] ।
ಕ್ಷಣೇನ ಕೇಶವೇನ ತದ್ಭಯಾದಪೇಯತುಶ್ಚ ತೌ ॥ ೨೭೩ ॥

ಅ: ಕೃಷ್ಣನಿಂದ ಕ್ಷಣಮಾತ್ರದಲ್ಲಿ ಹಂಸಡಿಬಿಕರ ಸೇನೆಯೆಲ್ಲ ಅಳಿದು, ಕಾಲು ಭಾಗ ಮಾತ್ರ ಉಳಿದುಕೊಂಡಿತು. ಅವರಿಬ್ಬರೂ ಕೃಷ್ಣನಿಗೆ ಅಂಜಿ ಓಡಿದರು.

ಪುಷ್ಕರದಲ್ಲಿ ಶ್ರೀಕೃಷ್ಣನ ರಾತ್ರಿವಾಸ

ಸ ಪುಷ್ಕರೇಕ್ಷಣಸ್ತದಾ ಸುರೈರ್ನುತೋಽಥ ಪುಷ್ಕರೇ ।
ಉವಾಸ ತಾಂ ನಿಶಾಂ ಪ್ರಭುಃ ಸಯಾದವೋಽಮಿತಪ್ರಭಃ ॥ ೨೭೪ ॥

---

೧. 'ಪರಸ್ಪರಾಂತರೇಷಿಣೌ' – (ಪಾಠಾಂತರ)

೨. ಚತುರ್ಥಭಾಗಶೇಷಿತೋ ಯಥಾ ಭವತಿ ತಥಾ ಚತುರ್ಥಭಾಗಶೇಷಿತಮ್ ॥ – (ವಾ.)

ಅ: ಅನಂತಕಾಂತಿ ಉಳ್ಳವನೂ, ಸರ್ವಸಮರ್ಥನೂ ಆದ ಪುಂಡರೀಕಾಕ್ಷ ಶ್ರೀಕೃಷ್ಣ ದೇವತೆಗಳಿಂದ ಸ್ತುತನಾಗಿ, ಆ ಪುಷ್ಕರಕ್ಷೇತ್ರದಲ್ಲಿ ಯಾದವರೊಂದಿಗೆ ಆ ರಾತ್ರಿ ನೆಲೆಸಿದನು.

ವಿ: ಪುಷ್ಕರ ಅಷ್ಟಮಹಾಸ್ವಯಂವ್ಯಕ್ತಕ್ಷೇತ್ರಗಳಲ್ಲಿ ಒಂದಾದ ವಿಶಿಷ್ಟಪುಣ್ಯಕ್ಷೇತ್ರ. ಬ್ರಹ್ಮದೇವರ ವರದಿಂದ ಅವಧ್ಯನಾದ ಒಬ್ಬ ರಾಕ್ಷಸನನ್ನು ಶ್ರೀಹರಿ ಕಮಲದಿಂದ ಹೊಡೆದು ಕೊಂದ ಸ್ಥಳವೆಂದು ಅದರ ಪ್ರಸಿದ್ಧಿ. ಕಮಲಕ್ಕೆ ಪುಷ್ಕರವೆಂದೂ ಹೆಸರು. ಅದಕ್ಕಾಗಿ ಪುಷ್ಕರ ಎಂಬ ಹೆಸರೇ ಅದಕ್ಕೆ ಉಂಟಾಯಿತು. ಮಹಾಭಾರತದಲ್ಲಿ ಹಾಗೂ ಶ್ರೀವಾದಿರಾಜರ [೧]ತೀರ್ಥಪ್ರಬಂಧದಲ್ಲಿ ಇದರ ವರ್ಣನೆ ಬಂದಿದೆ.

ಯಮುನಾತೀರದಲ್ಲಿ ಮುಂದುವರೆದ ಯುದ್ಧ

ಪರೇ ದಿನೇ ಜನಾರ್ದನೋ ನೃಪಾತ್ಮಜೌ ಪ್ರವಿದ್ರುತೌ ।
ಯಮಸ್ವಸುಸ್ತಟೇ ಪ್ರಭುಃ ಸಮಾಸಸಾದ ಪೃಷ್ಠತಃ ॥ ೨೭೫ ॥

ಅ: ಮಾರನೆಯ ದಿನ ಪಲಾಯನಗೈದಿದ್ದ ಅವರಿಬ್ಬರನ್ನೂ ಪ್ರಭುವಾದ ಕೃಷ್ಣ ಯಮುನಾತೀರದಲ್ಲಿ ಬೆನ್ನಟ್ಟಿ ಹಿಡಿದ.

ಸ ರೌಹಿಣೇಯಸಂಯುತಃ ಸಮನ್ವಿತಶ್ಚ ಸೇನಯಾ ।
ಸ್ವಶಿಷ್ಟಸೇನಯಾ ವೃತೌ ಪಲಾಯಿನಾವವಾರಯತ್ ॥ ೨೭೬ ॥

ಅ: ಶ್ರೀಕೃಷ್ಣ ಬಲರಾಮನೊಂದಿಗೂ, ಸೇನೆಯೊಂದಿಗೂ ಕೂಡಿದವನಾಗಿ ಪಲಾಯನ ಮಾಡುತ್ತಿದ್ದ ಹಂಸಡಿಬಿಕರನ್ನು ಅವರ ಅಳಿದುಳಿದ ಸೇನೆಯೊಂದಿಗೆ ತಡೆದು ನಿಲ್ಲಿಸಿದ.

---

೧. ದಶಕೋಟಿಸಹಸ್ರಾಣಿ ತೀರ್ಥಾನಾಂ ವೈ ಮಹಾಮತೇ ।
ಸಾಂನಿಧ್ಯಂ ಪುಷ್ಕರೇ ಯೇಷಾಂ ತ್ರಿಸಂಧ್ಯಂ ಕುರುನಂದನ ॥
ಜನ್ಮಪ್ರಭೃತಿ ಯತ್ಪಾಪಂ ಸ್ತ್ರಿಯಾ ವಾ ಪುರುಷೇಣ ವಾ ।
ಪುಷ್ಕರೇ ಸ್ನಾತಮಾತ್ರಸ್ಯ ಸರ್ವಮೇವ ಪ್ರಣಶ್ಯತಿ ॥
ಯಥಾ ಸುರಾಣಾಂ ಸರ್ವೇಷಾಮಾದಿಸ್ತು ಮಧುಸೂದನಃ ।
ತಥೈವ ಪುಷ್ಕರಂ ರಾಜನ್ ತೀರ್ಥಾನಾಮಾದಿರುಚ್ಯತೇ ॥
ದುಷ್ಕರಂ ಪುಷ್ಕರೇ ಗಂತುಂ ದುಷ್ಕರಂ ಪುಷ್ಕರೇ ತಪಃ ।
ದುಷ್ಕರಂ ಪುಷ್ಕರೇ ದಾನಂ ವಸ್ತು ಚೈವ ಸುದುಷ್ಕರಮ್ । – ಭಾರತ (ವನ. ೮೨/೨೧,೩೩,೩೪,೩೯)

ತೀರ್ಥಾನಾಮುತ್ತಮಂ ತೀರ್ಥಂ ಪುಷ್ಕರಂ ಮರ್ತ್ಯದುಷ್ಕರಮ್।
ವಿಹರನ್ನಪಿ ವಾರಾಶೌ ವರಾಹೋ ಯತ್ಸರೋಽವಿಶತ್ ॥ – ತೀರ್ಥಪ್ರಬಂಧ(೧/೯೯)

ನಿವೃತ್ಯ ತೌ ಸ್ವಸೇನಯಾ ಶರೋತ್ತಮೈರ್ವವರ್ಷತುಃ ।
ಸುಕೋಪಿತೌ ಸಮಸ್ತಶೋ ಯದೂನವಾರ್ಯಪೌರುಷೌ ॥ ೨೭೭ ॥

ಅ: ತಡೆಯಲಸಾಧ್ಯವಾದ ಪೌರುಷಶಾಲಿಗಳಾದ ಹಂಸಡಿಬಿಕರು ಬಹಳವಾಗಿ ಕ್ರುದ್ಧರಾಗಿ ತಮ್ಮ ಸೇನೆಯೊಂದಿಗೆ ಹಿಂತಿರುಗಿ ಸಮಸ್ತಯಾದವರ ಮೇಲೆ ಉತ್ತಮಬಾಣಗಳ ಮಳೆಯನ್ನು ಸುರಿಸಿದರು.

ಅಥಾಸಸಾದ ಹಂಸಕೋ ಹಲಾಯುಧಂ ಮಹಾಧನುಃ ।
ಅನಂತರೋಽಸ್ಯ ಸಾತ್ಯಕಿಂ ಗದಂ ಚ ಸರ್ವಸೈನಿಕಾನ್ ॥ ೨೭೮ ॥

ಅ: ಬಳಿಕ ಮಹಾಬಿಲ್ಲಾರನಾದ ಹಂಸ ಬಲರಾಮನನ್ನು ಎದುರಿಸಿದ. ಅವನ ತಮ್ಮನಾದ ಡಿಬಿಕ ಸಾತ್ಯಕಿ, ಗದ ಮತ್ತು ಸಕಲಸೈನಿಕರನ್ನು ಎದುರಿಸಿದ.

ಸ ಸಾತ್ಯಕಿಂ ನಿರಾಯುಧಂ ವಿವಾಹನಂ ವಿವರ್ಮಕಮ್ ।
ವ್ಯಧಾದ್ಗದಂ ಚ ತೌ ರಣಂ ವಿಹಾಯ ಹಾಪಜಗ್ಮತುಃ ॥ ೨೭೯ ॥

ಅ: ಅವನು ಸಾತ್ಯಕಿಯನ್ನು, ಗದನನ್ನು ನಿರಾಯುಧರನ್ನಾಗಿಯೂ, ವಿರಥರನ್ನಾಗಿಯೂ, ಕವಚಹೀನರನ್ನಾಗಿಯೂ ಮಾಡಿದ. ಅವರು ರಣವನ್ನು ತೊರೆದು ತೆರಳಿಬಿಟ್ಟರು.

ವಿಧೂಯ ಸೈನಿಕಾಂಶ್ಚ ಸ ಪ್ರಗೃಹ್ಯ ಚಾಪಮಾತತಮ್ ।
ಹರಿಂ ಜಗಾಮ ಚೋನ್ನದನ್ ಮಹಾಸ್ತ್ರಶಸ್ತ್ರವರ್ಷಣಃ ॥ ೨೮೦ ॥

ಅ: ಡಿಬಿಕ ಯಾದವಸೈನಿಕರನ್ನು ಹೊಡೆದೋಡಿಸಿ, ದೊಡ್ಡದಾದ ಬಿಲ್ಲನ್ನು ಕೈಗೆತ್ತಿಕೊಂಡು, ಸಿಂಹನಾದ ಮಾಡುತ್ತಾ, ಮಹಾಸ್ತ್ರಶಸ್ತ್ರಗಳನ್ನು ಸುರಿಸುತ್ತಾ, ಶ್ರೀಕೃಷ್ಣನ ಮೇಲೆ ತೆರಳಿದ.

ತಮಾಶು ಕೇಶವೋಽರಿಹಾ ಸಮಸ್ತಸಾಧನೋಜ್ಝಿತಮ್ ।
ಕ್ಷಣಾಚ್ಚಕಾರ ಸೋಽಪ್ಯಗಾದ್ವಿಸೃಜ್ಯ ತಂ ಹಲಾಯುಧಮ್ ॥ ೨೮೧ ॥

ಅ: ಕೂಡಲೇ ಶತ್ರುನಾಶಕನಾದ ಕೃಷ್ಣ ಅವನನ್ನು ಸಮಸ್ತಸಾಧನಹೀನನನ್ನಾಗಿ ಮಾಡಿದ. ಅವನು ಕೃಷ್ಣನನ್ನು ಬಿಟ್ಟು ಬಲರಾಮನ ಮೇಲೆ ತೆರಳಿದ.

ಹಲಾಯುಧೋ ನಿರಾಯುಧಂ ವಿಹಾಯ ಹಂಸಮೋಜಸಾ ।
ವಿಕೃಷ್ಟಚಾಪಮಾಗತಂ ದದರ್ಶ ತಸ್ಯ ಚಾನುಜಮ್ ॥ ೨೮೨ ॥

ಅ: ಹಲಾಯುಧನಾದ ಬಲರಾಮ ತನ್ನ ಸಾಮರ್ಥ್ಯದಿಂದ ಹಂಸನನ್ನು ನಿರಾಯುಧನನ್ನಾಗಿ ಮಾಡಿ, ಹೆದೆಯೇರಿಸಿದ ಬಿಲ್ಲನ್ನು ಹಿಡಿದುಕೊಂಡು ಬಂದಿದ್ದ ಡಿಬಿಕನನ್ನು ನೋಡಿದ.

ಸ ಹಂಸ ಆಶು ಕಾರ್ಮುಕಂ ಪುನಃ ಪ್ರಗೃಹ್ಯ ತಂ ಬಲಮ್ ।
ಯದಾऽऽಸಸಾದ ಕೇಶವೋ ನ್ಯವಾರಯತ್ ತಮೋಜಸಾ ॥ ೨೮೩ ॥

ಅ: ಹಂಸ ಕೂಡಲೇ ಬಿಲ್ಲನ್ನು ತೆಗೆದುಕೊಂಡು, ಮತ್ತೆ ಬಲರಾಮನನ್ನು ಎದುರಿಸಿದ. ಶ್ರೀಕೃಷ್ಣ ಅವನನ್ನು ಬಲವಾಗಿ ತಡೆದು ನಿಲ್ಲಿಸಿದ.

ಶಿನೇಃ ಸುತಾತ್ಮಜೋऽಪ್ಯಸೌ ವಿಹಾಯ ಹಂಸಕಾನುಜಮ್ ।
ರಥಾಂತರಂ ಸಮಾಸ್ಥಿತೋ ಜಗಾಮ ತಾತಮಸ್ಯ ಚ ॥ ೨೮೪ ॥

ಅ: ಡಿಬಿಕನನ್ನು ಬಿಟ್ಟು ತೆರಳಿದ ಸಾತ್ಯಕಿ, ಬೇರೊಂದು ರಥವನ್ನು ಏರಿ, ಅವನ ತಂದೆಯಾದ ಬ್ರಹ್ಮದತ್ತನ ಮೇಲೆ ಏರಿಹೋದ.

ಸಾತ್ಯಕಿಯಿಂದ ಬ್ರಹ್ಮದತ್ತನ ವಧೆ

ವಯೋಗತಃ ಪಿತಾ ತಯೋರ್ಯುಯೋಧ ತೇನ ವೃಷ್ಣಿನಾ।
ಶರಂ ಚ ಕಂಠಕೂಬರೇ ವ್ಯಸರ್ಜಯತ್ ಸ ಸಾತ್ಯಕೇಃ ॥ ೨೮೫ ॥

ಅ: ವಯಸ್ಸಾಗಿದ್ದ ಆ ಬ್ರಹ್ಮದತ್ತ ಆ ಸಾತ್ಯಕಿಯೊಂದಿಗೆ ಯುದ್ಧಕ್ಕೆ ತೊಡಗಿದ. ಅವನು ಸಾತ್ಯಕಿಯ ಕಂಠಕೂಬರಪ್ರದೇಶಕ್ಕೆ ಬಾಣವೊಂದನ್ನು ಪ್ರಯೋಗಿಸಿದ.

ಸ ಸಾತ್ಯಕಿರ್ದೃಢಾಹತೋ ಜಗಾಮ ಮೋಹಮಾಶು ಚ ।
ಸುಲಬ್ಧಸಂಜ್ಞ ಉತ್ಥಿತಃ ಸಮಾದದೇऽರ್ಧಚಂದ್ರಕಮ್ ॥ ೨೮೬ ॥

ಅ: ಬಲವಾದ ಏಟು ತಿಂದ ಆ ಸಾತ್ಯಕಿ ಕೂಡಲೇ ಮೂರ್ಛೆಗೊಂಡ. ತಕ್ಷಣವೇ ಎಚ್ಚೆತ್ತು ಎದ್ದುನಿಂತು, ಅರ್ಧಚಂದ್ರಾಕಾರದ ಬಾಣವನ್ನು ಕೈಗೆತ್ತಿಕೊಂಡ.

---

೧. ದೇವಸ್ತ್ರೀವಿವಾಹೋದ್ಯೋಗಕರಂ ಶಿರಃ ಪತಿತಮಿತಿ ಸೂಚನಾಯ ಯದಂಬಯಾऽಭಿಕಾಂಕ್ಷಿತಮಿತ್ಯುಕ್ತಮ್ ॥ – (ವಾ.)

ಯದಂಬಯಾऽಭಿಕಾಮಿತಮಿತ್ಯನೇನ ಸುಂದರಮಿತಿ ಸೂಚಯತಿ । ದೇವಸ್ತ್ರೀವಿವಾಹೋದ್ಯೋಗಕರಂ ಪತಿತಮಿತಿ ಸೂಚಿತುಮೇವಮುಕ್ತಮ್ । – (ತಾ.)

ಸ ತೇನ ತಚ್ಛಿರೋ ಬಲೀ ಚಕರ್ತ ಶುಕ್ಲಮೂರ್ಧಜಮ್ ।
ಯದಂಬಯಾ ऽಭಿಕಾಂಕ್ಷಿತಂ ಪುರಾ ಪಪಾತ ತತ್ ಕ್ಷಿತೌ ॥ ೨೮೭ ॥

ಅ: ಬಲಿಷ್ಠನಾದ ಸಾತ್ಯಕಿ ಆ ಬಾಣದಿಂದ ಕೂದಲು ಬೆಳ್ಳಗಾಗಿದ್ದ ಬ್ರಹ್ಮದತ್ತನ ತಲೆಯನ್ನು ಕತ್ತರಿಸಿಹಾಕಿದ; ಹಿಂದೆ ಅಂಬೆ ಬಯಸಿದ್ದ ಆ ತಲೆ ನೆಲದ ಮೇಲೆ ಬಿದ್ದಿತು.

ವಿ: ಭೀಷ್ಮರು ಕರೆತಂದ ಕಾಶಿರಾಜನ ಮೂವರು ಪುತ್ರಿಯರಲ್ಲಿ ಹಿರಿಯಳಾದ ಅಂಬೆ ತಾನು ವಿಚಿತ್ರವೀರ್ಯನನ್ನು ಮದುವೆಯಾಗಲು ಒಪ್ಪದೆ, ಬ್ರಹ್ಮದತ್ತನನ್ನು ಮೆಚ್ಚಿರುವುದಾಗಿ ತಿಳಿಸಿದ ಪ್ರಸಂಗವನ್ನು ಜ್ಞಾಪಿಸಿಕೊಳ್ಳಬೇಕು(೧೧/೯೦). ಆ ಬ್ರಹ್ಮದತ್ತನೇ ಈಗ ಸಾತ್ಯಕಿಯಿಂದ ಹತನಾದ– ವನು ಎಂದರ್ಥ. ಇಂತಹ ಪಾಪಿಯನ್ನು ದೇವತಾಸ್ತ್ರೀಯಾದ ಅಂಬೆ ಕಾಮಿಸಲು ಬ್ರಹ್ಮ– ಶಾಪ ಕಾರಣವಾಗಿತ್ತು. ತನ್ನ ಗಂಡನಾದ ದ್ಯುವಸುವನ್ನು ವಸಿಷ್ಠಧೇನುವನ್ನು ಅಪಹರಿಸಲು ಪ್ರೇರಿಸಿದ ಪಾಪದಿಂದಾಗಿ ವರಾಂಗಿ ಅಂಬೆಯಾಗಿ ಜನಿಸಿದ್ದಳು. ಗೋಬ್ರಾಹ್ಮಣದ್ರೋಹ ಇಂತಹ ಹೀನ– ಕಾಮಕ್ಕೆ ಕಾರಣವಾಗುವುದು ಎಂದು ಭಾವ. ಸಾತ್ಯಕಿ ದೇವತಾಸ್ತ್ರೀಯಾದ ಅಂಬೆಯನ್ನು ಕಾಮಿಸಿದ್ದ ಬ್ರಹ್ಮದತ್ತನನ್ನು ಸಂಹರಿಸಿದ್ದು ಅವನಿಗೆ ನೀಡಿದ ಶಿಕ್ಷೆಯಾಗಿತ್ತು ಎಂದು ವಾದಿರಾಜೀಯದಲ್ಲಿದೆ.

ನದಂಶ್ಚ ಸಾತ್ಯಕಿರ್ಹರೇರ್ಜಗಾಮ ಪಾರ್ಶ್ವಮುದ್ಧತಃ ।
ಬಲೋ ऽಪಿ ಹಂಸಕಾನುಜಂ ಯುಯೋಧ ಸೇನಯಾ ಯುತಮ್ ॥ ೨೮೮ ॥

ಅ: ಸಾತ್ಯಕಿ ಬೀಗುತ್ತಾ ಸಿಂಹನಾದ ಮಾಡುತ್ತಾ ಕೃಷ್ಣನ ಬಳಿಗೆ ತೆರಳಿದ. ಬಲರಾಮ ಸೇನಾಸಮೇತನಾಗಿದ್ದ ಡಿಬಿಕನೊಂದಿಗೆ ಯುದ್ಧಮಾಡಿದ.

ಹರಿಸ್ತು ಹಂಸಮುಲ್ಬಣೈಃ ಶರೈಃ ಸಮರ್ದಯನ್ ಬಲಮ್ ।
ಜಘಾನ ತಸ್ಯ ಸರ್ವಶೋ ನ ಕಶ್ಚಿದತ್ರ ಶೇಷಿತಃ ॥ ೨೮೯ ॥

ಅ: ಶ್ರೀಕೃಷ್ಣ ಹಂಸನನ್ನು ಕ್ರೂರವಾದ ಬಾಣಗಳಿಂದ ಬಹಳವಾಗಿ ನೋಯಿಸಿ, ಅವನ ಸೈನ್ಯವನ್ನೆಲ್ಲ ಕೊಂದುಹಾಕಿದ; ಅದರಲ್ಲಿ ಯಾರೊಬ್ಬನೂ ಬದುಕುಳಿಯಲಿಲ್ಲ.

ಶ್ರೀಕೃಷ್ಣನಿಂದ ಹಂಸನ ಪರಾಭವ

ಸ ಏಕ ಏವ ಕೇಶವಂ ಮಹಾಸ್ತ್ರಮುಕ್ ಸಸಾರ ಹ ।
ನಿವಾರ್ಯ ತಾನಿ ಸರ್ವಶೋ ಹರಿರ್ನಿಜಾಸ್ತ್ರಮಾದದೇ ॥ ೨೯೦ ॥

ಅ: ಹಂಸ ಏಕಾಂಗಿಯಾಗಿಯೇ ಮಹಾಸ್ತ್ರಗಳನ್ನು ಸುರಿಸುತ್ತಾ ಶ್ರೀಕೃಷ್ಣನನ್ನು ಎದುರಿಸಿದ. ಶ್ರೀಕೃಷ್ಣ ಅವುಗಳನ್ನೆಲ್ಲ ತಡೆದು, ತನ್ನ ಅಸ್ತ್ರವನ್ನು ಕೈಗೆತ್ತಿಕೊಂಡ.

ಸ ವೈಷ್ಣವಾಸ್ತ್ರಮುದ್ಯತಂ ನಿರೀಕ್ಷ್ಯ ಯಾನತೋ ಮಹೀಮ್ ।
ಗತಃ ಪರಾದ್ರವದ್ಭಯಾತ್ ಪಪಾತ ಯಾಮುನೋದಕೇ ॥ ೨೯೧ ॥

ಅ: ವೈಷ್ಣವಾಸ್ತ್ರಪ್ರಯೋಗವನ್ನು ಕಂಡು ಭಯದಿಂದ ಅವನು ರಥದಿಂದ ಕೆಳಗೆ ಧುಮುಕಿ, ಓಡುತ್ತಾ ಯಮುನೆಯ ನೀರಿನಲ್ಲಿ ಬಿದ್ದುಬಿಟ್ಟ.

ವಿ: ವೈಷ್ಣವಾಸ್ತ್ರದಿಂದ ಹತನಾಗುವ ಬದಲು, ಯಮುನೆಯಲ್ಲಿ ಬಿದ್ದು ದುರ್ಮರಣ ಹೊಂದಿದ ಪಾಪಿ ಅವನು. ಯುದ್ಧ ನಡೆದ ಗೋವರ್ಧನಪರ್ವತಪ್ರದೇಶದಿಂದ ಯಮುನೆಯವರೆಗೂ ಓಡಿ, ಕೃಷ್ಣ ಕಾಲಿಯಮರ್ಧನ ಮಾಡಿದ ಮಡುವಿನಲ್ಲಿ ನೀರಿನಲ್ಲಿ ಬಿದ್ದ. ಶ್ರೀಕೃಷ್ಣನನ್ನು ದ್ವೇಷಿಸಿ, ಸೇವಾದಿಕಾರ್ಯಗಳಿಂದ ವಿಮುಖರಾಗುವ ಜನರಿಗೆ ಸಂಸಾರಸಮುದ್ರದಲ್ಲಿಯೇ ಪತನ ಎಂಬುದಕ್ಕೆ ಇದು ಸೂಚಕ.

ಹಂಸನ ದುರಂತ

ವರಾಸ್ತ್ರಪ್ರಾಣೈರೀಶ್ವರಃ ಪದಾಽಹನಚ್ಛಿರಸ್ಯಮುಮ್[೧] ।
ಸ ಮೂರ್ಛಿತೋ ಮುಖೇಽಪತನ್ಮಹಾಭುಜಂಗಮಸ್ಯ ಹಿ ॥ ೨೯೨ ॥

---

೧. ಪಾದಪ್ರಹಾರಂ ದದಾವಿತ್ಯರ್ಥಃ । –(ವ.)

೨. ಅಥ ಭೀತೋ ಮಹಾರೌದ್ರಮಸ್ತ್ರಂ ದೃಷ್ಟ್ವಾ ನೃಪೋತ್ತಮ ।
ಹಂಸೋ ರಾಜಾ ಮಹಾರಾಜ ನಿಶ್ಚೇಷ್ಟ ಇವ ಸಂಬಭೌ ॥
ಉತ್ಪ್ಲುತ್ಯ ಸ ರಥಾತ್ ತಸ್ಮಾದ್ಯಮುನಾಮಭ್ಯಧಾವತ ।
ಯತ್ರ ಕೃಷ್ಣೋ ಹೃಷೀಕೇಶಃ ಕಾಲಿಯಾಹಿಂ ಮಮರ್ದ ಹ ॥
ಮಹಾಹ್ರದಂ ಮಹಾರೌದ್ರಂ ಯಾವತ್ತಾಲಸಂಸ್ಥಿತಮ್ ।
ತಾವದ್ದೀರ್ಘಂ ಮಹಾನೀಲಂ ಕಾಲಾಂ ಜನನಿಭಂ ಹಿ ಯತ್ ॥
ತಸ್ಮಿನ್ ಹ್ರದೇ ಮಹಾಘೋರೇ ಪಪಾತಾಥ ಸ ಹಂಸಕಃ ।
ಹಂಸೇ ಪತಿತೇ ತಸ್ಮಿಂಸ್ತು ಮಹಾನ್ ರಾವೋ ಬಭೂವ ಹ ॥
ಗಿರೀಣಾಂ ಪಾತ್ಯಮಾನಾನಾಂ ಸಮುದ್ರ ಇವ ವಜ್ರಿಣಾ ।
ರಥಾದುತ್ಪ್ಲುತ್ಯ ಕೃಷ್ಣೋಽಪಿ ತಸ್ಯೋಪರಿ ಪಪಾತ ಹ ॥
ದೇವದೇವೋ ಜಗನ್ನಾಥೋ ಜಗದ್ವಿಸ್ಮಾಪಯನ್ನಿವ ।
ಪ್ರಾಹರತ್ ತಂ ಮಹಾಬಾಹುಃ ಪಾದಾಭ್ಯಾಮಥ ಕೇಶವಃ ॥
ಪಾದಕ್ಷೇಪಂ ನೃಪಸ್ತಸ್ಮಾಲ್ಲಬ್ಧ್ವಾ ಹಂಸೋ ನೃಪೋತ್ತಮ ।
ಮಮಾರ ಚ ನೃಪಶ್ರೇಷ್ಠ ಕೇಚಿದೇವಂ ವದಂತಿ ಹಿ ॥
ಅನ್ಯೇ ಪಾತಾಲಮಾಯಾತೋ ಭಕ್ಷಿತಃ ಪನ್ನಗೈರಿತಿ ।
ಅದ್ಯಾಪಿ ನೈವ ರಾಜೇಂದ್ರ ದೃಷ್ಟ ಇತ್ಯನುಶುಶ್ರುಮ ॥ –ಹರಿವಂಶ (೩/೧೨೮/೧-೮)

ಅ: ಶ್ರೀಕೃಷ್ಣ ಶ್ರೇಷ್ಠವಾದ ವೈಷ್ಣವಾಸ್ತ್ರವನ್ನು ಕೈಯಲ್ಲಿ ಹಿಡಿದುಕೊಂಡೇ ಅವನ ತಲೆಯನ್ನು ಪಾದದಿಂದ ಒದ್ದ. ಮೂರ್ಛಿತನಾದ ಹಂಸ ದೊಡ್ಡ ಸರ್ಪವೊಂದರ ಬಾಯಲ್ಲಿ ಬಿದ್ದುಬಿಟ್ಟ.

ಸ ಧಾರ್ತರಾಷ್ಟ್ರಕೋದರೇ[1] ಯಥಾ ತಮೋಽಂಧಮೇಯಿವಾನ್ ।
ತಥಾ ಸುದುಃಖಸಂಯುತೋ ವಸನ್ಮನೋಃ ಪರಂ ಮ್ರಿಯೇತ್[2] ॥ ೨೯೩ ॥

ಅ: ಅವನು ಧೃತರಾಷ್ಟ್ರನೆಂಬ ಮಹಾಸರ್ಪದ ಉದರದಲ್ಲಿ ತಮಸ್ಸನ್ನು ಸೇರಿದವನಂತೆ ಬಹಳವಾಗಿ ದುಃಖಪಡುತ್ತಾನೆಲೆಸಿ, ಮನ್ವಂತರದ ಕೊನೆಯಲ್ಲಿ ಮರಣಹೊಂದುವನು.

ವಿ: ಹಂಸ ಆ ಮಹಾಸರ್ಪದ ಉದರದಲ್ಲಿ ತಮಸ್ಸಿನಲ್ಲಿ ಅನುಭವಿಸುವಂತಹ ಉಲ್ಬಣದುಃಖವನ್ನು ಅನುಭವಿಸುತ್ತಾ ಈಗಲೂ ನೆಲೆಸಿದ್ದು ಈ ಮನ್ವಂತರದ ಕೊನೆಯಲ್ಲಿ ಸಾಯುವನು ಎಂದರ್ಥ. ಧೃತರಾಷ್ಟ್ರ ಎಂಬುದು ಮಹಾನಾಗಗಳಲ್ಲಿ ಒಂದು ಎಂಬ ಉಲ್ಲೇಖ ಮಹಾಭಾರತದಲ್ಲಿದೆ — **'ಕೌರವ್ಯೋ ಧೃತರಾಷ್ಟ್ರಶ್ಚ ಶಂಖಪಿಂಡಶ್ಚ ವೀರ್ಯವಾನ್'**.

ಡಿಬಿಕನ ಅಂತ್ಯ

ತತೋಽಂಧಮೇವ ತತ್ತಮೋ ಹರೇರ್ದ್ವಿಡೇತಿ ನಿಶ್ಚಯಾತ್ ।
ತದಾಽಸ್ಯ ಚಾನುಜೋಽಗ್ರಜಂ ವಿಮಾರ್ಗಯನ್ ಜಲೇಽಪತತ್ ॥ ೨೯೪ ॥

ಅ: ಬಳಿಕ ಹರಿದ್ವೇಷಿಯಾದ ಅವನು ನಿಶ್ಚಿತವಾಗಿ ಅಂಧಂತಮಸ್ಸನ್ನೇ ಹೊಂದುವನು. ಆಗ ಅವನ ತಮ್ಮನಾದ ಡಿಬಿಕ ಅಣ್ಣನಾದ ಹಂಸನನ್ನು ಹುಡುಕುತ್ತಾ ನೀರಿನಲ್ಲಿ ಬಿದ್ದ.

ವಿ: ಅಣ್ಣನಾದ ಹಂಸನಂತೆ, ತಮ್ಮನಾದ ಡಿಬಿಕನೂ ಸಹ ಯಮುನೆಯ ಜಲದಲ್ಲೇ ಬಿದ್ದದ್ದು ವಿಶೇಷ; ಇದು 'ಅಂಧೇನೈವ ನೀಯಮಾನಾ ಯಥಾಂಧಾಃ' ಎಂಬುದಕ್ಕೆ ನಿದರ್ಶನ.

ವಿಹಾಯ ರೋಹಿಣೀಸುತಂ ಜಲೇ ನಿಮಜ್ಯ ಮಾರ್ಗಯನ್ ।
ಅಪಶ್ಯಮಾನ[3] ಆತ್ಮನೋ ವ್ಯಪಾಟಯಚ್ಚ ಕಾಕುದಮ್ ॥ ೨೯೫ ॥

---

೧. ಧೃತರಾಷ್ಟ್ರಾಖ್ಯೋ ಮಹಾನಾಗಃ ತಸ್ಯ ಸಂಬಂಧಿನ್ಯುದರ ಇತ್ಯರ್ಥಃ ॥ – (ವಾ.)

೨. ಮ್ರಿಯೇತ್ ಮರಿಷ್ಯತೀತ್ಯರ್ಥಃ । – (ವ.)

೩. ಅಪಶ್ಯಮಾನ ಇತಿ ಛಾಂದಸಃ । – (ಜ.)

ಅ: ಬಲರಾಮನನ್ನು ಬಿಟ್ಟು, ನೀರಿನಲ್ಲಿ ಮುಳುಗಿ, ಹಂಸನನ್ನು ಹುಡುಕಿ, ಅಲ್ಲಿ ಅವನನ್ನು ಕಾಣದೇ, ಅವನು ತನ್ನ ಕಿರುನಾಲಿಗೆಯನ್ನೇ [೫]ಕಿತ್ತುಕೊಂಡ.

ವಿ: ಅಣ್ಣನಾದ ಹಂಸ ಆ ಮಹಾನಾಗದ ಉದರದಲ್ಲಿದ್ದುದರಿಂದ ಅವನಿಗೆ ಸಿಕ್ಕಲಿಲ್ಲ. ಆ ನೋವಿನಲ್ಲಿ ಅವನು ತನ್ನ ಕಿರುನಾಲಿಗೆಯನ್ನು ಕಿತ್ತುಕೊಂಡು, [೬]ಸತ್ತುಹೋದ ಎಂದರ್ಥ.

ವಿಹಾಯ ದೇಹಮುಲ್ಬಣಂ ತಮೋಽವತೀರ್ಯ ಚಾಗ್ರಜಮ್ ।
ಪ್ರತೀಕ್ಷಮಾಣ ಉಲ್ಬಣಂ ಸಮತ್ತಿ ತತ್ಸುಖೇತರಮ್ ॥ ೨೯೬ ॥

ಅ: ಡಿಬಿಕ ದೇಹವನ್ನು ಬಿಟ್ಟು ತಮಸ್ಸಿಗೆ ಬೀಳುವನು. ಅಲ್ಲಿ ಅಣ್ಣನಾದ ಹಂಸನನ್ನು ಪ್ರತೀಕ್ಷಿಸುತ್ತಾ ಭಯಂಕರವಾದ ದುಃಖವನ್ನು ಅನುಭವಿಸುತ್ತಿರುವನು.

ಬ್ರಹ್ಮಾದಿಗಳಿಂದ ಶ್ರೀಕೃಷ್ಣಜಯದ ಸಂಸ್ತುತಿ

ತತೋ ಹರಿರ್ಬಲೈರ್ಯುತೋ ಬಲಾನ್ವಿತೋ ಮುನೀಶ್ವರೈಃ ।
ಸಮಂ ಕುಶಸ್ಥಲೀಂ ಯಯೌ ಸ್ತುತಃ ಕಶಂಕರಾದಿಭಿಃ ॥ ೨೯೭ ॥

---

೪. 'ತಾಲುಃ ಕಾಕುದಮುಚ್ಯತೇ' ಇತ್ಯಭಿಧಾನಾತ್ ಜಿಹ್ವಾಮೂಲಸ್ಥಿತಸೂಕ್ಷ್ಮಜಿಹ್ವಾಂ ವ್ಯಪಾಟಯತ್ ॥ – (ವಾ.)

ತಾಲು ತು ಕಾಕುದಮಿತ್ಯಮರಃ । – (ಜ.)

ಕಾಕುದಂ ಜಿಹ್ವಾಮ್ । 'ಉರ್ವೀರಾಪೋ ನ ಕಾಕುದಃ' ಇತಿ ಶ್ರುತೇಃ । ಕೇಚಿತ್ ತು 'ತಾಲುಃ ಕಾಕುದಮುಚ್ಯತೇ' ಇತ್ಯಭಿಧಾನಾತ್ ತಾಲುಮೂಲಸ್ಥಿತಸೂಕ್ಷ್ಮಜಿಹ್ವಾಮಿತ್ಯರ್ಥಮಾಹುಃ ॥ – (ತಾ.)

೫. ವ್ಯಪಾಟಯಚ್ಚ ಕಾಕುದಮಿತಿ —

ಹಸ್ತೇನ ಜಿಹ್ವಾಮಾಕೃಷ್ಯ ಭೂಯೋ ಭೂಯೋ ವಿಲಷ್ಯ ಚ ।
ತತಃ ಸಮೂಲಮಾಕೃಷ್ಯ ಜಿಹ್ವಾಂ ಸಾಹಸಕೃತ್ ಸ್ವಯಮ್ ।
ಮಮಾರಾಂತರ್ಜಲೇ ರಾಜನ್ ಡಿಬಿಕೋ ನರಕಾಯ ವೈ ॥
ಇತಿ ಚ ಹರಿವಂಶೇಷು (೩/೧೨೯/೧೨, ೧೩) । – (ಮ.)

೬. ಹಂಸಡಿಬಿಕಯೋರಶಸ್ತ್ರಮರಣೇ ನಿಮಿತ್ತಂ —

ಆಸ್ತಾಂ ಹ್ಯಮರಸಂಕಾಶೌ ಬಲೇನ ಬಲಿನಾಂ ವರೌ ।
ಹಂಸಡೀಬಿಕ ಇತಿ ಖ್ಯಾತೌ ಅಶಸ್ತ್ರನಿಧನಾವುಭೌ ॥ ಇತಿ ಸಭಾಪರ್ವಣಿ ಬ್ರಹ್ಮವರಃ ॥ – (ಮ.)

ಅ: ಬಳಿಕ ಶ್ರೀಕೃಷ್ಣ ಸೇನೆಯೊಂದಿಗೂ, ಬಲರಾಮನೊಂದಿಗೂ, ಮುನೀಂದ್ರ-ರೊಂದಿಗೂ ಕೂಡಿ, ಬ್ರಹ್ಮಶಿವಾದಿಗಳಿಂದ ಸ್ತುತಿಸಲ್ಪಡುತ್ತಾ ದ್ವಾರಕೆಗೆ ತೆರಳಿದ.

ದ್ವಾರಕೆಯಲ್ಲಿ ಶ್ರೀಕೃಷ್ಣವೈಭವ

ಸ್ವಕೀಯಪಾದಪಲ್ಲವಾಶ್ರಯಂ ಜನಂ ಪ್ರಹರ್ಷಯನ್ ।
ಉವಾಸ ನಿತ್ಯಸತ್ಸುಖಾರ್ಣವೋ ರಮಾಪತಿರ್ಗೃಹೇ ॥ ೨೯೮ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಹಂಸಡಿಭಕವಧೋ ನಾಮ ಸಪ್ತದಶೋಽಧ್ಯಾಯಃ ॥೧೭॥

ಅ: ತನ್ನ ಪಾದಪಲ್ಲವಗಳನ್ನು ಆಶ್ರಯಿಸಿದ ಜನಗಳನ್ನು ಬಹಳವಾಗಿ ನಲಿಸುತ್ತಾ ಲಕ್ಷ್ಮೀಪತಿಯೂ, ನಿತ್ಯನಿರ್ದುಷ್ಟಾನಂದಸಮುದ್ರನೂ ಆದ ಶ್ರೀಕೃಷ್ಣ ತನ್ನ ಮನೆಯಲ್ಲಿ ವಾಸಮಾಡಿದ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಹಂಸಡಿಭಕವಧ'ವೆಂಬ ಹದಿನೇಳನೆಯ ಅಧ್ಯಾಯ ಮುಗಿಯಿತು ॥ ೧೭ ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಇಲ್ಲಿಗೆ ದ್ವಿತೀಯಸಂಪುಟ ಮುಕ್ತಾಯವಾಯಿತು ॥

ಸಮರ್ಪಿತಂ ಮಯಾ ಭವೇತ್ ಸುಮಧ್ವನುತ್ತವಾಣಿನಾ ।
ರಮಾರಮೇಶಪಾದಯೋಃ ಪ್ರಭಂಜನಾಭಿಧಾಯುಜಾ ॥

❋❋❋❋❋❋

ಇತರ ವ್ಯಾಖ್ಯಾನಗಳಲ್ಲಿನ ವಿಶೇಷಾಂಶಗಳು

೧. 'ಅತಿವಿಶದವಾಕ್ಯವಿವೃತಿ'ಯಲ್ಲಿ ಬಂದಿರುವ ವಿಶೇಷಾಂಶಗಳು

ಅಧ್ಯಾಯ - ೧೭

ಅಧ್ಯಾಯ ೧೭, ಶ್ಲೋ. ೫೨

'ಇಯಂ ರಮಾ ತವಾತ್ಮಜಾ ಬಭೂವ ತಾಂ ಹರೇರ್ನ ಚೇತ್ । ದದಾತಿ ಚೇತ್ ಪಿತಾ ತದಾ ನಿರಿಂದಿರೋ ವ್ರಜೇದಧ ಇತ್ಯತ್ರ' ಚೇತ್ ಚೇದಿತಿ ಪದದ್ವಯಮಸ್ತಿ । ತತ್ರ ಏಕೇನೈವ ಚರಿತಾರ್ಥತ್ವಾದೇಕಂ ವ್ಯರ್ಥಮಿತಿ ಚೇನ್ನ। ಇಯಂ ತವಾತ್ಮಜಾ ರಮಾ ಚೇತ್ ಬಭೂವ ತಾಂ ಪಿತಾ ಹರೇರ್ನ ದದಾತಿ ಚೇತ್ ತದಾ ತರ್ಹಿ ನಿರಿಂದಿರೋಽಧಃ ವ್ರಜೇದಿತ್ಯನ್ವಯೇ ದ್ವಯೋರಪ್ಯವೈಯರ್ಥ್ಯಾತ್ ಇದಂ ವಾಕ್ಯಂ ತರ್ಕರೂಪಂ ಚೇತ್ ಇತ್ಯಾದಿ ತಲ್ಲಕ್ಷಣಾತ್ ತಥಾ ಚಾತ್ರ ತಾಂ ಪಿತಾ ಹರೇರ್ನ ದದಾತಿ ಚೇತ್ ಇತ್ಯಾಪಾದಕಪರಂ ತರ್ಹಿ ನಿರಿಂದಿರೋ ವ್ರಜೇದಧ ಇತ್ಯಾದ್ಯಪರಂ ತರ್ಕೇ ಚಾಪಾದಕಸ್ಯಾದ್ಯೇನ ವ್ಯಾಪ್ತಿರವಶ್ಯಾ । ಯದ್ಯತ್ರ ಇಯಂ ತವಾತ್ಮಜಾ ರಮಾ ಚೇತ್ ಬಭೂವೇತ್ಯೇತದ್ವಿನಾ ತಾಂ ಪಿತಾ ಹರೇರ್ನ ದದಾತಿ ಚೇತ್ ತರ್ಹಿ ನಿರಿಂದಿರೋಽಧಃ ವ್ರಜೇದಿತ್ಯೇವೋಕ್ತೌ ನ ವ್ಯಾಪ್ತಿಃ । ಯಾ ಸುತಾ ಸಾ ಹರೇರ್ದಾತವ್ಯಾ ಅನ್ಯಥಾ ತತ್ಪಿತುರನರ್ಥ ಇತ್ಯೇತಸ್ಯ ಕುತ್ರಾಪ್ಯದೃಷ್ಟತ್ವಾತ್ ಇಯಂ ತವಾತ್ಮಜಾ ರಮಾ ಚೇತ್ ಬಭೂವ ತಾಂ ಪಿತಾ ಹರೇರ್ನ ದದಾತಿ ಚೇತ್ ಇತ್ಯುಕ್ತಾವೇತಸ್ಯೋಪಪಾದಕವಾಕ್ಯೇನ ಯಾ ಸುತಾ ರಮಾ ತಾಂ ಹರೇರ್ನ ದದಾತಿ ಚೇತ್ ಪಿತಾ ನಿರಿಂದಿರಃ ಸನ್ ಅಧೋ ವ್ರಜೇದಿತಿ ವ್ಯಾಪ್ತೇಃ ಜ್ಯೇಷ್ಠಭ್ರಾತಾ ಪಿತುಃ ಸಮ ಇತ್ಯಾದಿನಾ ಪಿತೃಸಮೇಷು ರುಗ್ಮಿಪ್ರಭೃತಿಷು ರುಗ್ಮಿಣ್ಯಾಃ ಹರೇರದಾನದೋಷಾದಿನಾಽಧಃಪಾತಾದೇಃ ಸ್ಮೃತ್ಯಾದಿಸಿದ್ಧತ್ವೇನ ತೇಷ್ವೇವ ಸಿದ್ಧತ್ವಾದಧೋವ್ರಜೇದಿತ್ಯಾದಿನಾಽಽಪಾದ್ಯಸ್ಯಾನಿಷ್ಟತ್ವಮುಕ್ತಮೇವ । ಪ್ರತಿತರ್ಕೇಣ ಪ್ರತಿಘಾತಾದ್ಯಂಗತ್ರಯಮಪಿ ಜ್ಞಾತವ್ಯಮಿತಿ ಅನ್ಯಯೋಜನಾಯಾಂ ಅನ್ಯಸ್ಮೈ ದದಾತಿ ಚೇದಿತ್ಯಧ್ಯಾಹಾರಾದಿದೋಷಃ । ಹರೇರ್ನ ದದಾತಿ ಚೇದಿತ್ಯನೇನಾದಾತುರಧೋಗಮನಸಂಭವೇ ಪುನಃ ಅನ್ಯಸ್ಮೈ ದದಾತಿ ಚೇದಿತ್ಯಾದೇರ್ವೈಯರ್ಥ್ಯಮೇವ ಅಥವಾ ಯತ್ತದೋರ್ನಿತ್ಯಸಂಬಂಧಾತ್ ತಾಮಿತಿ ಶ್ರೂಯಮಾಣತ್ವಾತ್ ಯಾ ರಮಾ ಬಭೂವ ತಾಂ ಹರೇರ್ನ ದದಾತಿ ಚೇತ್ ತದಾ ಪಿತಾ ನಿರಿಂದಿರಃ ಸನ್ ಅಧೋವ್ರಜೇದಿತಿ ಲುಪ್ತೋಪಮಾ ಯಥಾಽಧ್ಯಾಹಾರೋ ವಾ । ತವಾತ್ಮಜಾ ಇಯಂ ಚೇತ್ ರಮಾ ಚೇತ್ ತವಾಪಿ ತಥೇತಿ ॥ – (ತಿ.)

ಅಧ್ಯಾಯ ೧೭, ಶ್ಲೋ. ೧೦೫ :

ತದಶ್ವಮೂತ್ರವಿಷ್ಠಯೇತ್ಯತ್ರ ಸಮಾಹಾರದ್ವಂದ್ವಃ ಇತರೇತರದ್ವಂದ್ವೋ ವಾ ? । ನಾದ್ಯಃ । ಸಮಾಹಾರಸ್ಯ ನಪುಂಸಕತ್ವನಿಯತತ್ವೇನ ಮೂತ್ರವಿಷ್ಠಮಿತಿ ಸ್ಯಾತ್ । ನ ದ್ವಿತೀಯಃ । ಮೂತ್ರವಿಷ್ಠಾಭ್ಯಾಮಿತಿ ಸ್ಯಾತ್ । ಮೂತ್ರವಿಷ್ಠಯೇತಿ ಕಥಮುಕ್ತಮಿತಿ ಚೇನ್ನ। ಪರವಲ್ಲಿಂಗಂ ದ್ವಂದ್ವತತ್ಪುರುಷಯೋರಿತ್ಯನೇನ ಪರಲಿಂಗತ್ವೋಪಪತ್ತೇಃ। ಮೂತ್ರಸಹಿತವಿಷ್ಠಯೇತಿ ವಾ। – (ತಿ.)

ಅಧ್ಯಾಯ ೧೭, ಶ್ಲೋ. ೧೨೧ :

ಸ ಕೃಷ್ಣಪನ್ನಗಂ ಘಟೇ ನಿಧಾಯ ಕೇಶವೋಽರ್ಪಯದಿತ್ಯತ್ರ ಕೇಶವಯುಕ್ತೇಃ ಸರ್ಪಸ್ಯ ನಷ್ಟತ್ವೇನ ಕಾಲಯವನಯುಕ್ತಪೇಕ್ಷಯಾ ಕನಿಷ್ಠತ್ವಂ ಪ್ರತೀಯತೇ । ತತ್ರ ಕಾರಣಂ ಕಿಮಿತಿ ಶಂಕಾಯಾಂ ವರದಾತುಃ ರುದ್ರಸ್ಯ ವರಂ ಗೃಹೀತುರ್ಗರ್ಗಸ್ಯ ಕೃಷ್ಣವಧಾರ್ಥಮುತ್ಪನ್ನಸ್ಯ ಕಾಲಯವನಸ್ಯಾಪಿ ಕೃಷ್ಣಸರ್ಪನಾಶಕತ್ವೇನ ಸಾರ್ಥಕ್ಯಂ

ಭವತ್ವಿತ್ಯಭಿಪ್ರಾಯೇಣ ಕೃಷ್ಣೇನೈತತ್ಕೃತಮಿತ್ಯಾಹುಃ । ಅನ್ಯಥಾ ಅಘಟಿತಘಟಕಶಕ್ತಿಮತಃ ಕೃಷ್ಣಸ್ಯೈತಾದೃಶರೀತಿ-ಪ್ರದರ್ಶನಾನುಪಪತ್ತೇಃ । ಅನೇನ ರುದ್ರಾದಯ ಏತೇ ಕೀಟನಾಶನಾರ್ಥಂ ಮಹಾಪ್ರಯತ್ನಕರ್ತಾರ ಇತ್ಯಪಹಾಸಃ ಸೂಚಿತಾ ಭವತಿ । ಆಪಾತತಃ ಸರ್ಪಸ್ಯ ನಷ್ಟತ್ವೇಽಪಿ ಕಾಲಯವನನಾಶಕತ್ವಕಾರ್ಯೇಣ ಹರಿನೀತೇರೇವ ಪ್ರಾಬಲ್ಯಂ ಜ್ಞಾತವ್ಯಮ್ । – (ತಿ.)

ಅಧ್ಯಾಯ ೧೭, ಶ್ಲೋ. ೧೭೩

ಸ ರೈವತೋ ಬಲಾಯ ತಾಂ ಪ್ರದಾಯ ಗಂಧಮಾದನಮಿತ್ಯತ್ರ ರೈವತಃ ಬಲಾಯ ರೇವತೀಂ ಪ್ರದಾಯೇತ್ಯನೇನ ರೈವತಸ್ಯ ರೇವತೀಪ್ರದಾನಂ ಪ್ರತೀಯತೇ । ತದಯುಕ್ತಮ್ । ತಸ್ಯ ರಾಮಶ್ವಶುರಪಿತೃತ್ವಾತ್ ।

..... ಆನರ್ತಾದ್ರೇವತೋಽಭವತ್ ।
ಸೋಽಂತಃಸಮುದ್ರೇ ನಗರೀಂ ವಿನಿರ್ಮಾಯ ಕುಶಸ್ಥಲೀಮ್ ॥
ಅಸ್ಥಿತೋ ಭುಕ್ತವಿಷಯಾನಾನರ್ತಾದೀನರಿಂದಮಃ ।
ತಸ್ಯ ಪುತ್ರಶತಂ ಜಜ್ಞೇ ಕಕುದ್ಮೀ ಜ್ಯೇಷ್ಠಮುತ್ತಮಮ್ ॥
ಕಕುದ್ಮೀ ರೇವತೀಂ ಕನ್ಯಾಂ ಸ್ವಾಮಾದಾಯ ವಿಭುಂ ಗತಃ ।
ಪುತ್ರ್ಯಾ ವರಂ ಪರಿಪ್ರಷ್ಟುಂ ಬ್ರಹ್ಮಲೋಕಮಪಾವೃತಮ್ ॥'

ಇತ್ಯಾದಿನಾ ನವಮವಾಕ್ಯೇನ (೯/೩/೨೭-೩೦) ತಥಾಽಽವಗಮಾತ್ ತಥಾ 'ವರಾತ್ ತದೀಯತಃ ಪ್ರಗೀತಿಕಾಮ್ । ನಿಶಮ್ಯ ನಾವದದ್ಗತಂ ಯುಗೋರುಕಾಲಪರ್ಯಯಮ್' ಇತಿ ಬಹುಯುಗಪರಿವರ್ತನಂ ಪ್ರತೀಯತೇ । ಅತ್ರ ಬಹುಶಬ್ದಸ್ಯ ಕುತ್ರಾವಸ್ಥಾನಂ ತದಪಿ ನ ಪ್ರತೀಯತೇ । ರಾಜೋವಾಚ –

'ಆನರ್ತಾಧಿಪತಿಃ ಶ್ರೀಮಾನ್ ರೈವತೋ ರೇವತೀಸುತಾಮ್ ।
ಬ್ರಹ್ಮಣಾ ಚೋದಿತಃ ಪ್ರಾದಾದ್ಬಲಾಯೇತಿ ಪುರೋದಿತಮ್ ॥'

ಇತಿ ದಶಮ ಉಕ್ತತ್ವೇನ ದಶಮನವಮಯೋರ್ವಿರೋಧಾಚ್ಚ ತಸ್ಮಾತ್ ಕಥಮೇತದಿತಿ ಚೇನ್ನ । ರೇವತಸ್ಯಾಪತ್ಯಂ ಪುಮಾನ್ ರೈವತಮಿತ್ಯುಪಪತ್ತೇಃ ಯೌಗಿಕಂ ನಾಮೈತತ್ । ಏತೇನ ನವಮದಶಮಯೋರ್ವಿರೋಧಶ್ಚ ಪರಿಹೃತಃ । ನಿರ್ಣಯೇ ದಶಮೇ ಚ ಯೌಗಿಕನಾಮ್ನೋಕ್ತತ್ವಾತ್ । ಮುಹೂರ್ತಂ ಶೃಣ್ವತೋ ಶ್ರಾವ್ಯಂ ಪ್ರತಿಯಾತಸ್ಯ ತೇಽನಘ । ಕಾಲೋಽಭಿಯಾತಸ್ತ್ರಿನವಚತುರ್ಯುಗವಿಕಲ್ಪಿತಃ ।' ಇತಿ ನವಮವಚನೇನ ಸಪ್ತವಿಂಶನ್ಮಹಾಯುಗಪರಿಮಿತತ್ವಸ್ಯಾಪಿ ಜ್ಞಾತುಂ ಶಕ್ಯತ್ವಾತ್ ತಥಾ ಚ ಯುಗೋರುಕಾಲಪರ್ಯಯಮಿತ್ಯಸ್ಯ ಸಪ್ತವಿಂಶನ್ಮಹಾಯುಗಪರ್ಯಯಮಿತ್ಯರ್ಥಃ । ಏವಂ ಚ ನಾನುಪಪತ್ತಿಃ ಕುತ್ರಾಪಿ । – (ತಿ.)

ಅಧ್ಯಾಯ ೧೭, ಶ್ಲೋ. ೧೭೫ :

ಪುರಾರ್ಯಮಾಂಶಕೌ ಸುರಾವಿತ್ಯತ್ರ ಅರ್ಯಮಾ ಪೂರ್ವಃ ಅಂಶಕೋ ಪರ ಇತಿ ದ್ವಯೋಃ ದ್ವಿಸೂರ್ಯರೂಪತ್ವಂ ನ ತು ದ್ವಯೋರೇಕಾಂಶತ್ವಮ್ । ಯಥೋಕ್ತಂ ಹರಿವಂಶೇ–

ಧಾತಾಽರ್ಯಮಾ ಚ ಮಿತ್ರಶ್ಚ ವರುಣಾಂಶೋ ಭಗಸ್ತಥಾ ।
ಇಂದ್ರೋ ವಿವಸ್ವಾನ್ ಪೂಷಾ ಚ ತ್ವಷ್ಟಾ ಚ ಸವಿತಾ ತಥಾ ॥
ಕಥಿತೋ ವಿಷ್ಣುರೇವೇತಿ ..... ॥

ಅಧ್ಯಾಯ ೧೭, ಶ್ಲೋ. ೨೦೬ :

ಆಹೂಯ ಸಿಂಹಸೂದಿತಂ ಪದ್ಯೈಃ ಪ್ರದರ್ಶ್ಯ ವೃಷ್ಣಿನಾಮ್ । ಪ್ರಸೇನಮೃಕ್ಷಪಾತಿತಂ ಸ ಸಿಂಹಮಪ್ಯದರ್ಶಯ'ದಿತ್ಯತ್ರ ಸ ಸ ಇತಿ ಪದದ್ವಯಮ್ । ಏಕಂ ತ್ವತ್ರಾಪೇಕ್ಷಿತಂ ಅಪರಮನಪೇಕ್ಷಿತಮಿತ್ಯಾಶಂಕಾ ಸಃ

ಕೃಷ್ಣಃ ವನೇ ಸ ಸಿಂಹಂ ಪ್ರಸೇನಂ ಪ್ರದೃಶ್ಯ ಪದೈರ್ವೃಷ್ಣೀನಾಂ ಪ್ರಸೇನಮೃಕ್ಷಪಾತಿತಂ ಸ ಸಿಂಹಮಪ್ಯದರ್ಶಯದಿತ್ಯೇಕಾನ್ವಯೇನ ಪರಿಹರಣೀಯೇತಿ । ಅಯಂ ಭಾವಃ । ಕೃಷ್ಣಃ ಯಾದವೈಃ ಸಹ ವನಂ ಗತ್ವಾ ತೇಭ್ಯಃ ಪೂರ್ವನಿಪತಿತೌ ಪ್ರಸೇನಸಿಂಹೌ ದರ್ಶಯಿತ್ವಾ ಅನಂತರಂ ವಿಶೇಷಾಕಾರೇಣ ಏಕಂ ಸಿಂಹಂ ಸೂದಿತಂ ಅಪರಂ ಋಕ್ಷಪಾತಿತಮದರ್ಶಯದಿತಿ ಸರ್ವನಾಮಪ್ರಸಿದ್ಧಾರ್ಥಮಿತಿ ವಚನಾತ್ ಸಃ ಪ್ರಸಿದ್ಧ ಇತಿ ವಾ ಸಃ ಸಾರರೂಪ ಇತಿ ವಾ ಪಕ್ಷದ್ವಯೇಽಪಿ ವಿಶೇಷಣಪರಂ ನ ವಿಶೇಷ್ಯಮಿತಿ ಅಕ್ಷರಯೋಜನಾ ಸಃ ಸಾರಃ ಪ್ರಸಿದ್ಧೋ ವಾ ಕೃಷ್ಣಃ ವನೇ ಸಿಂಹಸೂದಿತಂ ಪ್ರಸೇನಂ ಪದೈಃ ವೃಷ್ಣೀನಾಂ ಪ್ರದೃಶ್ಯ ಋಕ್ಷಪಾತಿತಂ ಸಿಂಹಮಪ್ಯದರ್ಶಯದಿತಿ । – (ತಿ.)

ಅಧ್ಯಾಯ ೧೭, ಶ್ಲೋ. ೨೧೬ :

'ಸ ದುರ್ಯಶೋ ರಮಾಪತಾವನೂಚ್ಚ ಮಿಥ್ಯಯಾ ತಪನ್' ಇತ್ಯತ್ರ ಮಿಥ್ಯಯೇತಿ ವಿಭಕ್ತಿ-ಪ್ರತಿರೂಪಕಾಮವ್ಯಯಮ್ । – (ತಿ.)

ಅಧ್ಯಾಯ ೧೭, ಶ್ಲೋ. ೨೧೯ :

'ತತೋ ಹಿ ಸಾ ಚ ರುಗ್ಮಿಣೀ ಪ್ರಿಯೇ ಪ್ರಿಯಾಸು ತೇಽಧಿಕಮ್ । ಜನಾರ್ದನಸ್ಯ ತೇ ಹರೇಃ ಸದಾಽವಿಯೋಗಿನೀ ಯತಃ ' ಇತ್ಯತ್ರ ತೇ ತೇ ಇತಿ ಪದದ್ವಯಮಸ್ತಿ । ತತ್ಪೂರ್ವಮಕ್ಷರಯೋಜನಾ । ಹಿ ಯಸ್ಮಾತ್ ರುಗ್ಮಿಣೀ ಸಾ ಚ ಸತ್ಯಭಾಮಾ ಚ ಯತಸ್ತೇ ತತೇ ವ್ಯಾಪ್ತೇ ತಸ್ಮಾಜ್ಜನಾರ್ದನಸ್ಯ ಸದಾವಿಯೋಗಿನೀ ಪ್ರಿಯಾಸು ಅಧಿಕಂ ತೇ ಉಭೇಽಪಿ ಯೇ ಇತಿ । ಯತಃ ಜನಾರ್ದನಸ್ಯ ಪ್ರಿಯಾಸು ತೇ ಉಭೇ ಪ್ರಸಿದ್ಧಂ ಸರ್ವನಾಮಪ್ರಸಿದ್ಧಾರ್ಥಮಿತಿ ವಚನಾತ್ ಅತಃ ರುಗ್ಮಿಣೀಸತ್ಯಭಾಮೇ ಅಧಿಕಂ ಪ್ರಿಯ ಇತಿ ವಾ । – (ತಿ.)

ಅಧ್ಯಾಯ ೧೭, ಶ್ಲೋ. ೨೬೪ :

'ಪಪಾತ ಪಾದಯೋಜನ' ಇತ್ಯತ್ರ ಯೋಜನೇ ಪಾದಃ ಪಾದಯೋಜನಃ, ಪಾದೇನ ಸಹಿತೋ ಯೋಜನೋ ವಾ, ಕ್ರೋಶಮಾತ್ರೇ ವಾ । – (ತಿ.)

೨. 'ಪ್ರಮಾಣಸಂಗ್ರಹ'ದಲ್ಲಿ ಬಂದಿರುವ ವಿಶೇಷಾಂಶಗಳು

ಅಧ್ಯಾಯ ೧೭, ಶ್ಲೋ. ೭೦ :

ಅಯಂ ಹಿ ದತ್ತಪುತ್ರಕ ಇತಿ ।–

ವಸೋರೇವ ಮಹಾವಂಶೇ ದಮಘೋಷೋಽಪಿ ಚೇದಿರಾಟ್ ।
ಚೇದಿರಾಜ..... ವಸೋರಾಸೀತ್ ಪುತ್ರೋ ಬೃಹದ್ರಥಃ ।
ಜರಾಸಂಧಃ ಸ್ವಸುತವತ್ ದದ್ಯಶೇ ತಂ ಜುಗೋಪ ಚ ॥ ಇತಿ ಚ ॥ – (ಮ.)

ಅಧ್ಯಾಯ ೧೭, ಶ್ಲೋ. ೧೧೪ :

ಚಕಾರ ಲಾವಣೋದಕಮಿತಿ–

ಉವಾಹ ಸರ್ವಗಂಧಾಢ್ಯಂ ಸ್ವಚ್ಛಂ ವಾರಿ ಮಹೋದಧಿಃ ।
ತೋಯಂ ಚ ಲವಣೋ ವೀರ ವಾಸುದೇವಸ್ಯ ಶಾಸನಾತ್ ॥
ಉಲ್ಕದಧ್ನಂ ಜಾನುದಧ್ನಂ ಮುಚುದಧ್ನಮಥಾಪಿ ವಾ ।
ನಾರ್ಯಾಶ್ಚ ಸ್ತನದಧ್ನಂ ಚ ಜಲಂ ಸಮಭಿಕಾಂಕ್ಷಿತಮ್ ॥' ಇತಿ ಚ ॥

ನಾರಾಯಣೋ ಲೋಕಹಿತಾರ್ಥಂ ವಡಬಾಮುಖೋ ನಾಮ ಪುರಾ ಮಹರ್ಷಿರ್ಬಭೂವ ಹ । ತಸ್ಯ ಮೇರೌ ತಪಸ್ತಪ್ಯತಃ ಸಮುದ್ರ ಆಹೂತೋ ನಾಗತಃ । ತೇನಾಮರ್ಷಿತೇನಾತ್ಮಗಾತ್ರೋಷ್ಣಾ ಸಮುದ್ರಃ

ಪರಿಮಿತಜಲಃ ಕೃತಃ । ಪ್ರಸ್ಪಂದನಸದೃಶಶ್ಚಾಸ್ಯ ಲವಣಭಾವೋ ಜನಿತಃ । ಉಕ್ತಶ್ಚಾಪ್ಯಪೇಯೋ ಭವಿಷ್ಯಸೀತ್ಯುತ ತೇ ತೋಯಂ ವಡಬಾಮುಖಸಂಜ್ಞಿತೇನ ಪೀಯಮಾನಂ ಮಧುರಂ ಭವಿಷ್ಯತಿ । ತದೇತದ್ಯಾಪಿ ವಡಬಾಮುಖಸಂಜ್ಞಿತೇನಾನುವೃತ್ತಿನಾ ತೋಯಂ ಸಮುದ್ರಾತ್ ಪೀಯತೇ' ಇತಿ ಮೋಕ್ಷಧರ್ಮೇ ।

ಅಹಿಂ ಮೃತಮಿತಿ । ನನು ಯುಕ್ತಿಬಾಧಿತೋಪಾಯದರ್ಶನೇ ಕೃಷ್ಣಸ್ಯ ಕಿಂ ನಿಮಿತ್ತಮಿತಿ ಚೇನ್ನ । ಮಧುರಾಯಾ ಅನಿರ್ಗತಾನಾಂ ಯಾದವಾನಾಂ ಭಯಪ್ರದರ್ಶನೇನ ವಿವಾಸಮಿತಿ ಬ್ರೂಮಃ । ತತ್ರ ಪ್ರಮಾಣಂ ವಾಸುದೇವಸ್ತು ತಂ ದೃಷ್ಟ್ವಾ ವಿಹಿತಂ ಯೋಗಮಾತ್ಮನಃ । ಉತ್ಸೃಜ್ಯ ಮಧುರಾಮಾಶು ದ್ವಾರಕಾಮಭಿಜಗ್ಮಿವಾನ್' ಇತಿ ಹರಿವಂಶೇ ।

ದೃಷ್ಟ್ವಾ ದರ್ಶಯಿತ್ವಾ ಉತ್ಸರ್ಜ ಉತ್ಸರ್ಜಯಿತ್ವಾ ಅಭಿಜಗ್ಮಿವಾನ್ ಪ್ರಾಪಿತವಾನ್ ಯಾದವಾನಿತಿ ಶೇಷಃ ।

ಸುದೀರ್ಘಸುಪ್ತಿಮಿತಿ–

ತ್ರೇತಾಯುಗೇ ಪ್ರಸುಪ್ತೋಽಸಿ ವಿದಿತೋ ಮೇ ಸ ನಾರದಾತ್ ।
ಇದಂ ಕಲಿಯುಗಂ ವಿದ್ಧಿ ಕಿಮನ್ಯತ್ ಕರವಾಣಿ ತೇ ॥ ಇತಿ ಕೃಷ್ಣವಾಕ್ಯಂ ಹರಿವಂಶೇ ॥ – (ಮ.)

ಅಧ್ಯಾಯ ೧೭, ಶ್ಲೋ. ೧೪೫ :

ಇಂದ್ರಾಣೀಮರ್ಚಯಿಷ್ಯಂತೀ ಕೃತಕೌತುಕಮಂಗಲಾ ।
ಕೇಶವೋ ಮೇ ಭವೇದ್ಭರ್ತಾ ನಾನ್ಯಃ ಕಶ್ಚಿದ್ಧರೇರ್ಭವೇತ್ ॥ ಇತಿ । – (ಮ.)

ಅಧ್ಯಾಯ ೧೭, ಶ್ಲೋ. ೧೭೦ :

ಯುಗೋರುಕಾಲಪರ್ಯಯಮಿತ್ಯಾದಿ–

'ಥಾಲಿಕ್ಯಗಾಂಧರ್ವಮುದಾರಕೀರ್ತಿರ್ಮೇನೇ ಕಿಲೈಕಂ ದಿವಸಂ ಸಹಸ್ರಮ್ ।
ಚತುರ್ಯುಗಾಣಾಂ ನೃಪ ರೈವತಂ.....' ಇತಿ । – (ಮ.)

ಅಧ್ಯಾಯ ೧೭, ಶ್ಲೋ. ೧೭೫ :

'ಪುರಾರ್ಯಮಾಂಶಕೌ ಸುರೌ' ಇತಿ । ಬೃಹದಾರಣ್ಯಕಭಾಷ್ಯೇ–

ಅಶ್ವಿನೌ ನಿರ್ಋತಿಶ್ಚೈವ ಕುಬೇರಶ್ಚ ವಿನಾಯಕಃ ।
ಅರ್ಯಮಾಂಶಾದಿಚತುರ್ಷು ವಿಶೇಷಾವೇಶಸಂಯುತಾಃ ॥ ಇತಿ ।

ಧಾತಾಽರ್ಯಮಾ ಮಿತ್ರಶ್ಚ ವರುಣೋಽಂಶೋ ಭಗಸ್ತಥಾ ।
ಇಂದ್ರೋ ವಿವಸ್ವಾನ್ ಪೂಷಾ ಚ ತ್ವಷ್ಟಾ ಚ ಸವಿತಾ ತಥಾ ॥
ಕಥಿತೋ ವಿಷ್ಣುರಿತ್ಯೇಷಃ ಕಾಶ್ಯಪೇಯೋ ಗಣಸ್ತಥಾ ।
ಇತ್ಯೇತೇ ದ್ವಾದಶಾದಿತ್ಯಾ ಜಗತಃ ಸೂರ್ಯವರ್ಚಸಃ ॥' ಇತಿ ಹರಿವಂಶೇ ॥ – (ಮ.)

ಅಧ್ಯಾಯ ೧೭, ಶ್ಲೋ. ೧೮೪ :

ಸುಪ್ತಂ ಪ್ರಗೃಹ್ಯ ಸೂತಿಕಾಗೃಹಾದಿತಿ–

ತಂ ಸಪ್ತರಾತ್ರೇ ಸಂಪೂರ್ಣೇ ನಿಶೀಥೇ ಸೂತಿಕಾಗೃಹಾತ್ ।
ಜಹಾರ ಕೃಷ್ಣಸ್ಯ ಸುತಂ ಶಿಶುಂ ವೈ ಕಾಲಶಂಬರಃ ॥ ಇತಿ ಚ ।

ಷಷ್ಠೇಽಹನಿ ಜಾತಮಾತ್ರಂ ಪ್ರದ್ಯುಮ್ನಂ ಸೂತಿಕಾಗೃಹಾತ್ ।
ಮಮೈಷ ಹಂತೇತಿ ಮುನೇರ್ಹೃತವಾನ್ ಕಾಲಶಂಬರಃ ॥ ಇತಿ ಚ ।

ವಿಷ್ಣುಪುರಾಣೇ ಚ–

'ಪಿಧಾಯ ತಾಂ ನಿಜಾಂ ತನುಮ್' ಇತಿ ।

ಶಂಬರಂ ಮೋದಯತ್ಯೇಷಾ ಮಾಯಾರೂಪೇಣ ರೂಪಿಣೀ ।
ವಿಹಾರಾದ್ಯುಪಭೋಗೇಷು ರೂಪಂ ಮಾಯಾಮಯಂ ಶುಭಮ್ ॥
ದರ್ಶಯಾಮಾಸ .....॥ ಇತಿ ಚ ॥ – (ಮ.)

ಅಧ್ಯಾಯ ೧೭, ಶ್ಲೋ. ೨೦೮ :

ಯುಯೋಧ ಮಂದಮೇವೇತಿ–

'ಬಾಹುಭ್ಯಾಮೇವ ಗೋವಿಂದೋ ದಿವಸಾನೇಕವಿಂಶತಿಃ' ಇತಿ ಹರಿವಂಶೇ ॥

ಭಾಗವತೇ ಅಷ್ಟಾವಿಂಶತಿದಿವಸಾಃ ಕಥಿತಾಃ । – (ಮ.)

ಅಧ್ಯಾಯ ೧೭, ಶ್ಲೋ. ೨೨೦ :

ಅಥಾಪ ಸಾಂಬನಾಮಾನಮಿತಿ ।

'ಹೃತೋ ಯದೈವ ಪ್ರದ್ಯುಮ್ನಃ ಶಂಬರೇಣಾತ್ಮಪಾತಿನಾ ।
ಮಾಸೇ ऽಸ್ಮಿನ್ನೇವ ಸಾಂಬಸ್ತು ಜಾಂಬವತ್ಯಾಮಜಾಯತ ॥' ಇತಿ ಚ । – (ಮ.)

ಅಧ್ಯಾಯ ೧೭, ಶ್ಲೋ. ೨೪೦ :

ಉತ್ತರಪಾದೇ ತ್ವಿಯಂ ಯೋಜನಾ ।

ಯದ್ಯಪಿ ತಥಾಪೀತ್ಯುಪಸ್ಕರ್ತವ್ಯಮ್ । ಯದ್ಯಪಿ ಅಸೌ ಶಾಪಶಕ್ತಿಮಾನಭೂತ್ ತಥಾ ನ ದದೌ ಶಾಪಂ ಯತಿತ್ವಾದಿತಿ ಶೇಷಃ । – (ಮ.)

ಅಧ್ಯಾಯ ೧೭, ಶ್ಲೋ. ೨೭೦ :

ದೌಃಶಾಸನಿರ್ಮಹಾರಾಜ ಸೌಮದತ್ತಿಸ್ತಥೈವ ಚ ।
ಅಭಿಮನ್ಯುಶ್ಚ ವಿಕ್ರಾಂತೋ ನಕುಲಶ್ಚ ತಥೈವ ಚ ॥
ಏತೇ ಖಡ್ಗವಿದಾಂ ಶ್ರೇಷ್ಠಾಃ ಕೀರ್ತಿತಾ ಯುಧಿಸತ್ತಮ ॥ ಇತಿ ಚ ॥ – (ಮ.)

ಅಧ್ಯಾಯ ೧೭, ಶ್ಲೋ. ೨೯೫ :

ವ್ಯಪಾಟಯಚ್ಚ ಕಾಕುದಮಿತಿ–

ಹಸ್ತೇನ ಜಿಹ್ವಾಮಾಕೃಷ್ಯ ಭೂಯೋ ಭೂಯೋ ವಿಲಪ್ಯ ಚ ।
ತತಃ ಸಮೂಲಮಾಕೃಷ್ಯ ಜಿಹ್ವಾಂ ಸಾಹಸಕೃತ್ತ್ವಯಮ್ ।
ಮಮಾರಾಂತತರ್ಜಲೇ ರಾಜನ್ ಡಿಬಿಕೋ ನರಕಾಯ ವೈ ॥ ಇತಿ ಚ ಹರಿವಂಶೇಷು ॥

ಹಂಸಡಿಬಿಕಯೋರಶಸ್ತ್ರಮರಣೇ ನಿಮಿತ್ತಂ

ಆಸ್ತಾಂ ಹ್ಯಮರಸಂಕಾಶೌ ಬಲೇನ ಬಲಿನಾಂ ವರೌ ।
ಹಂಸಡಿಬಿಕ ಇತಿ ಖ್ಯಾತೌ ಅಶಸ್ತ್ರನಿಧನಾವುಭೌ ॥ ಇತಿ ಸಭಾಪರ್ವಣಿ ಬ್ರಹ್ಮವರಃ ॥ – (ಮ.)

★★★★★

ಶ್ರೀವೇದಾಂಗತೀರ್ಥರ ವ್ಯಾಖ್ಯಾನದಲ್ಲಿನ ಕೆಲವು ವಿಶೇಷಾಂಶಗಳು

ಅಧ್ಯಾಯ - ೧೦

ಕೃತಶ್ಚ ಕದ್ರೋಸ್ತನಯೋಽತ್ರ ..... ದಿವ್ಯಪಯೋಽಮೃತಾಧಿಕಮ್ ॥ ೯ ॥

..... ದಿವ್ಯಪಯಃ ವಿಕಾರರಹಿತತ್ವಾದ್ದಿವ್ಯಕ್ಷೀರಮಬ್ಧಿರೂಪಮ್ ।

ಸ ತತ್ ಪಿಬನ್ ಕಂಠಗತೇನ ತೇನ ನಿಪಾತಿತೋ ಮೂರ್ಧಿತ ಆಶು ರುದ್ರಃ ।.... ॥ ೧೫ ॥

ತದ್ವಿಷಂ ಪಿಬಂತಂ ಕಂಠಂ ಗತೇನ ವಿಷೇಣ । ಪಿಬದಿತಿ ಶತ್ರಂತಂ ಭನ್ನಂ ವಾ ಪದಮ್ । ನುಮಭಾವಶ್ಛಾಂದಸಃ ।

ಅಧ್ಯಾಯ - ೧೧

ನ ಮಾನುಷಂ ಗರ್ಭಮವಾಪ್ನುಮೋ ವಯಂ ಭವತ್ವಯಂ ಸರ್ವವಿತ್ ಕೀರ್ತಿಮಾಂಶ್ಚ ॥ ೨೯ ॥

ಗರ್ಭಮವಾಪ್ನುಮಃ । ಕಿಂತು ಮಾನುಷೀಂ ಯೋನಿಂ ನಾಪ್ನುಮಃ ।

ಅಪ್ರತ್ಯುತ್ಥಾಯಿನಂ ತಂತುಲೀಯಮಾನಂ ವಿಲಜ್ಜಯಾ ।... ॥ ೧೧೭ ॥

ತಂತುಷು ಗುಲ್ಫೇಷು ಲೀಯಮಾನಮ್ । 'ತಂತುಃ ಸ್ತಂಬೇ ತಥೋರ್ಣಾಯಾಂ ಸತ್ರೇ (ಸೂತ್ರೇ) ಸಂಘೇ ಚ ಸಂತತೌ' ಇತ್ಯಭಿಧಾನಮ್ ।

ವಿಚಿತ್ರವೀರ್ಯಸ್ಯ ಸ ಸೂತಪುತ್ರಃ ಸಖಾ ಚ ತೇಷಾಮಭವತ್ ಪ್ರಿಯಶ್ಚ ... ॥ ೧೪೪ ॥

ವಿಚಿತ್ರವೀರ್ಯಸ್ಯ ಸೂತ್ರೋ ಗವದ್ಗಣಃ । ತಸ್ಯ ಪುತ್ರ ಇತಿ ಭಾವಃ ।

ಸರ್ವೈರಜೇಯತ್ವಮಜೋಽಸುರಃ ಸ ಸಹಸ್ರಶೀರ್ಷೋ ದ್ವಿಸಹಸ್ರಬಾಹುಯುಕ್ ॥೧೯೦॥

ಸ ಅಸುರಃ ಸಹಸ್ರಶೀರ್ಷಃ ಇತ್ಯಾದಿರೂಪಕಥನಮ್ ।

ಅಧ್ಯಾಯ - ೧೨

ವಿನಾಽಪರಾಧಾದ್ಧಿ ನ ತತೋ ಗರೀಯಸೋ ನ ಮಾತುಲೋ ವಧ್ಯತಾಮೇತಿ ವಿಷ್ಣೋಃ ।
ಲೋಕಸ್ಯ ಧರ್ಮಾನನುವರ್ತತೋಽತಃ ಪಿತ್ರೋರ್ವಿರೋಧಾರ್ಥಮುವಾಚ ವಾಯುಃ ॥೪॥

ಮಾತುಲವಧಃ ಕಸ್ಯಾಪಿ ನ ಧರ್ಮೋ ಯಸ್ಮಾದತಸ್ತಸ್ಮಾದ್ವಿಷ್ಣೋರ್ವಿಧಿನಿಷೇಧಬಂಧರಹಿತಸ್ಯಾಪಿ ಲೋಕಸ್ಯ ಧರ್ಮಾನನುವರ್ತತೋ ಲೋಕಸಂಗ್ರಹಾರ್ಥಂ ಲೋಕಧರ್ಮಾನನುವರ್ತಮಾನಸ್ಯ । ಹೇತುಗರ್ಭಮಿದಂ ವಿಶೇಷಣಮ್ । ಲೋಕಧರ್ಮಾನನುವರ್ತಮಾನತ್ವಾತ್ ತತಃ ಮಾತುಲಾದ್ಗರೀಯಸಃ ಅತಿಶಯಿತಗುರೋಃ ಅಪರಾಧಂ ವಿನಾ ವಧ್ಯತಾಂ ನೈತಿ ॥

ತದಾऽಸ್ಯ ಸೋऽನುಜೋऽಶೃಣೋನ್ಮುನೀಂದ್ರಭಾಷಿತಂ ಚ ತತ್ ।... ॥ ೨೦ ॥

ಅಸ್ಯ ಧೃತರಾಷ್ಟ್ರಸ್ಯಾನುಜಃ ಪಾಂಡುಸ್ತ ತೇಷಾಂ ಗರ್ಭಗತತ್ವಮಶ್ರುಣೋತ್ ।

ಕೃತೇ ಪುರಾ ಸುರಾಸ್ತಥಾ ಸುರಾಂಗನಾಶ್ಚ ಕೇವಲಮ್ ।
ನಿಮಿತ್ತತೋऽಪಿ ತಾಃ ಕ್ವಚಿನ್ನ ತಾನ್ ವಿಹಾಯ ರೇಮಿರೇ ॥ ೨೫ ॥

ರೇಮಿರೇ — ಮೇನಿರೇ (ಪಾಠಾಂತರ)

ಸ್ವಪತೀನ್ ವಿಹಾಯ ನ ಮೇನಿರೇ ಅನ್ಯಾನ್ (ಭೋಗಾರ್ಥಾನ್) ಇತಿ ಶೇಷಃ ।

ಸುವರ್ಣರತ್ನಾಂಬರಭೂಷಣಾನಾಂ ಬಹೂನಿ ಗೋಜೀವಿಗಣಾಧಿನಾಥಃ ।... ॥ ೭೮ ॥

ಸುವರ್ಣರತ್ನಾಂಬರಭೂಷಣಾನಾಂ ಬಹೂನಿ ಪುಂಜಾನಿ ।

ಕ್ರಮಾತ್ ಸಂಸ್ಕಾರಾನ್ ಕ್ಷತ್ರಿಯಾಣಾಮವಾಪ್ಯ ತೇऽವರ್ಧಂತ ಸ್ವತವಸೋ ಮಹಿತ್ವನಾ।
ಸರ್ವೇ ಸರ್ವಜ್ಞಾಃ ಸರ್ವಧರ್ಮೋಪಪನ್ನಾಃ ಸರ್ವೇ ಭಕ್ತಾಃ ಕೇಶವೇऽತ್ಯಂತಯುಕ್ತಾಃ ॥೧೩೬॥

ಇಯಂ ಶ್ರುತಿರುಕ್ತಾರ್ಥೇ ಸಮ್ಮತಿತ್ವೇನೋದಾಹೃತೇತಿ ವೇದಿತವ್ಯಮ್ ।

ಅಧ್ಯಾಯ - ೧೩

ಕದಾಚಿದೀಶ್ವರಃ ... ಶೃತಂ ನಿಧಾತುಮುಜ್ಜಿತೋ ಬಭಂಜ ದಧ್ಯಮತ್ರಕಮ್ ॥ ೭ ॥

ಸೃತಂ — ಶೃತಂ (ಪಾಠಾಂತರ)

ಶೃತಂ ಪಕ್ವಮ್ । 'ಶೃ ಪಾಕ' ಇತಿ ಧಾತುಃ ।

ಸಾರ್ಪಹ್ರದಃ .... ಪರ್ಯಕ್ಪ್ಲುತೋ ವಿಷಕಷಾಯವಿಭೀಷಣೋರ್ಮಿಭೀಮೋ ... ॥ ೩೭ ॥

ಪರ್ಯಕ್ ಪ್ಲುತೋ – ಪರ್ಯುತ್ಪ್ಲುತೋ (ಪಾಠಾಂತರ)

ಪರಿತಃ ಉತ್ಪ್ಲುತಃ ಊರ್ಧ್ವಂ ಗತಃ ।

ಭೀತೇನ ರೋಹಿಣಿಸುತೇನ ಹರಿಃ ಸ್ತುತೋऽಸೌ ಸ್ವಾವಿಷ್ಟತಾಮುಪದಿದೇಶ ... ॥ ೫೬ ॥

ಉಪದಿದೇಶ ಆವಿಶ್ಚಕಾರ ।

ತಾಃ ಷಡ್ವಿಧಾನ್ನಪರಿಪೂರ್ಣಕರಾಃ ... ಪತಿಪ್ರವಿಧೃತಾ ಪದಮಾಪ ವಿಷ್ಣೋಃ ॥ ೬೦ ॥

ಪತಿಪ್ರವಿಧೃತಾ — ಪತಿಪ್ರವಿಧುತಾ (ಪಾಠಾಂತರ)

ಪತಿಪ್ರವಿಧುತಾ ನ ಯಾಹೀತಿ ಪತ್ಯಾ ನಿರುದ್ಧಾ।

ತುಷ್ಟಾವ .... ಸಹಸ್ರಗುರಗಾಧಗುಮಗ್ಯಮಗ್ಯಾತ್ ॥ ೬೭ ॥

ಅಗಾಧಗುರಗಾಧಜ್ಞಾನಃ ನಿರವಧಿಕಜ್ಞಾನಃ ।

ಗೋವಿಂದಮೇನಮಭಿಷಿಚ್ಯ ... ಗೋವರ್ಧನೋದ್ಧರಣಸಂಗತಸಂಶಯ್ಯೈಃ ಸಃ ॥ ೭೦ ॥

ಸಂಗತಸಂಶಯ್ಯೈಃ ಸಮ್ಯಗ್ಗತಸಂದೆಹೈಃ।

ತಾಸತ್ರ ಪೂರ್ವವರದಾನಕೃತೇ ರಮೇಶೋ .... ॥ ೭೫ ॥

ವರದಾನಕೃತೇಃ ವರಸ್ಯ ದತ್ತತ್ವಾತ್ ।

ಅಧ್ಯಾಯ - ೧೪

ಶ್ರುತ್ವೈವ ... ಬ್ರಹ್ಮೇಶಚಂಡಮುನಿದತ್ತವರೈರಜೇಯೋ .... ॥ ೧೦ ॥

ಚಂಡಮುನಿಃ ದುರ್ವಾಸಾಃ।

ಸೋಽಹಂ ಹಿ ದುರ್ಬಲತಮೋ .... ಯಾಸ್ಯೇ ತಪೋವನಮಥೋ ಸಹಿತಃ ಸುತಾಭ್ಯಾಂ ...॥೧೮॥

ತಪಃ ವನಮಿತಿ ಭಿನ್ನೇ ಪದೇ ಇತಿ ಕೃತ್ವಾ ತಪ ಉದ್ದಿಶ್ಯ ವನಂ ಯಾಸ್ಯೇ।

ಭರ್ತುರ್ಗುಣೈರನಧಿಕೌ ತನಯಾರ್ಥಮೇವ ಮಾದ್ರ್ಯಾಽಽಕೃತೌ ಸುರವರಾವಧಿಕೌ ... ॥ ೫೨ ॥

ಮಾದ್ರ್ಯಾಽಽಕೃತೌ — ಮಾದ್ರ್ಯಾಕೃತೌ (ಪಾಠಾಂತರ)

ಮಾದ್ರ್ಯಾ ಕೃತೌ ಅಂಗೀಕೃತೌ।

ಅಧ್ಯಾಯ - ೧೫

ಕರ್ಣಃ ಸಕೀಟತನುಗೇನ ಕಿರೀಟನೈವ ಹ್ಯೂರೋರಧಸ್ತಲತ ಓಪರಿಗಾತ್ವಚಶ್ಚ।... ॥ ೫೩ ॥

ಹ್ಯೂರೋರಧಸ್ತನತ ಓಪರಿಗಾತ್ವಚಶ್ಚ।

ಓಪರಿಗಾತ್ವಚಃ ಉಪರಿಗಾತ್ವಕ್ಪರ್ಯಂತಮ್ ।

ಅಧ್ಯಾಯ - ೧೬

ಅಥೋತ್ತಸ್ಥೌ ರೌಹಿಣೇಯಃ ... ರಾಮೋ ವಧಾಯೋದ್ಯಚ್ಛನ್ಮುಸಲಂ ಬಾಹುಶಾಲೀ ॥ ೨೩ ॥

ಉದ್ಯಚ್ಛತ್ ಉದಯಚ್ಛತ್ ।

ಹರೌ ತು ... ಸಮೀಯತುಶ್ಚ ತಾವುಭಾವಥಾತ್ರ ಹಂಸಡೀಭಕೌ ॥ ೨೪೩ ॥

ಗಾಂಡೀವಂ ಗಾಂಡಿವಮಿತಿವತ್ ಡಿಭಕೋ ಡೀಭಕಶ್ಚೇತಿ ನಾಮ ತಸ್ಯ ಭವತಿ।

★★★★★

ಸಪ್ತೇಂದ್ರರ ಉಲ್ಲೇಖಿದ ಶ್ಲೋಕದ ವಿವರಣೆಗೆ ಉಪಯುಕ್ತವಾದ ಮನು ಇಂದ್ರಾದಿಗಳ ಮಾಹಿತಿ

(ಅತೀತೇಂದ್ರಾ ಏವ ತೇ ವಿಷ್ಣುಷಷ್ಠಾಃ ಪೂರ್ವೇಂದ್ರೋಽಸೌ ಯಜ್ಞನಾಮಾ ರಮೇಶಃ।
ಸ ವೈ ಕೃಷ್ಣೇ ವಾಯುರಥ ದ್ವಿತೀಯಃ ಸ ಭೀಮಸೇನೋ ಧರ್ಮ ಆಸೀತ್ ತೃತೀಯಃ ॥

ಯುಧಿಷ್ಠಿರೋಽಸಾವಥ ನಾಸತ್ಯದಸ್ರೌ ಕ್ರಮಾತ್ ತಾವೇತೌ ಮಾದ್ರವತೀಸುತೌ ಚ ।
ಪುರಂದರಃ ಷಷ್ಠ ಉತಾತ್ರ ಸಪ್ತಮಃ ಸ ಏವೈಕಃ ಫಲ್ಗುನೋ ಹ್ಯೇತ ಇಂದ್ರಾಃ ॥)

–(ಅಧ್ಯಾಯ ೧೨, ಶ್ಲೋ. ೧೩೪, ೧೩೫)

ಚತುರ್ದಶಮನವಸ್ತು। ಸ್ವಾಯಂಭುವಃ ಸ್ವಾರೋಚಿಷಃ ಉತ್ತಮಃ ತಾಪಸಃ ರೈವತಃ ಚಾಕ್ಷುಷಃ ವೈವಸ್ವತಃ ಸಾವರ್ಣಿಃ ದಕ್ಷಸಾವರ್ಣಿಃ ಬ್ರಹ್ಮಸಾವರ್ಣಿಃ ಧರ್ಮಸಾವರ್ಣಿಃ ರುದ್ರಸಾವರ್ಣಿಃ ದೇವಸಾವರ್ಣಿಃ ಇಂದ್ರಸಾವರ್ಣಿರಿತಿ। ತದುಕ್ತಮಷ್ಟಮಸ್ಕಂಧಭಾಗವತೇ–

ಸ್ವಾಯಂಭುವಸ್ಯೇಹಮನೋರ್ವಂಶೋಽಯಂ ವಿಸ್ತರಾಚ್ಛ್ರುತಃ।
ಆದ್ಯಸ್ತು ಕಥಿತೋ ಯತ್ರ ದೇವಾದೀನಾಂ ಚ ಸಂಭವಃ।
ಸ್ವಾರೋಚಿಷೋ ದ್ವಿತೀಯಸ್ತು ಮನುರಗ್ನೇಃ ಸುತೋಽಭವತ್।
ತೃತೀಯ ಉತ್ತಮೋ ನಾಮ ಪ್ರಿಯವ್ರತ ಸುತೋಽಭವತ್।
ಚತುರ್ಥ ಉತ್ತಮಭ್ರಾತಾ ಮನುರ್ನಾಮ್ನಾ ಚ ತಾಪಸಃ।
ಪಂಚಮೋ ರೈವತೋ ನಾಮ ಮನುಸ್ತಾಪಸಸೋದರಃ।
ಷಷ್ಠಸ್ತು ಚಕ್ಷುಷಃ ಪುತ್ರಶ್ಚಾಕ್ಷುಷೋ ನಾಮ ವೈ ಮನುಃ।
ಮನುರ್ವಿವಸ್ವತಃ ಪುತ್ರಃ ಶ್ರಾದ್ಧದೇವ ಇತಿ ಶ್ರುತಃ।
ಸಪ್ತಮೋ ವರ್ತಮಾನೋ ಯಸ್ತದಪತ್ಯಾನಿ ಮೇ ಶೃಣು।
ಮನೋರ್ವೈವಸ್ವತಸ್ಯೇತೇ ತದಾ ಪುತ್ರಾಃ ಪರಂತಪ।
ಅಷ್ಟಮೇಽಂತರ ಆಯಾತೇ ಸಾವರ್ಣಿರ್ಭವಿತಾ ಮನುಃ।
ನವಮೋ ದಕ್ಷಸಾವರ್ಣಿರ್ಮನುರ್ವರುಣಸಂಭವಃ।
ಭವಿತಾ ದಕ್ಷಸಾವರ್ಣೀ ರಾಜನ್ ದ್ವಾದಶಮೋ ಮನುಃ।
ಮನುಸ್ತ್ರಯೋದಶೋ ಭಾವ್ಯೋ ದೇವಸಾವರ್ಣಿರಾತ್ಮವಾನ್।
ಮನುರ್ವಾ ಇಂದ್ರಸಾವರ್ಣಿಶ್ಚತುರ್ದಶಮ ಇಷ್ಯತೇ।
ರಾಜಂಶ್ಚತುರ್ದಶೈತಾತಿತ್ರಿಕಾಲಾನುಗತಾನಿ ತೇ।
ಪ್ರೋಕ್ತಾನ್ಯೇಭಿರ್ಮಿತಃ ಕಲ್ಪೋ ಯುಗ ಸಾಹಸ್ರಪರ್ಯಯಃ ॥' ಇತಿ।

ಗೀತಾಭಾಷ್ಯೇಽಪಿ–

ಚತ್ವಾರಃ ಪ್ರಥಮಾಃ ಸ್ವಾಯಂಭುವಾದ್ಯಾಃ। ಸ್ವಾಯಂಭುವಂ ರೋಚಿಷಂ ಚ ರೈವತಂ ಚ ತಥೋತ್ತಮಮಿತಿ।

ಪ್ರಮೇಯದೀಪಿಕಾಯಾಮಪಿ – ಬ್ರಹ್ಮಸಾವರ್ಣೇ ರುದ್ರಸಾವರ್ಣಿರ್ಧರ್ಮಸಾವರ್ಣಿರ್ದಕ್ಷಸಾವರ್ಣಿರಿತಿ ಚತ್ವಾರಃ।

ಸ್ವಾಯಂಭುವಸ್ವಾರೋಚಿಷರೈವತೋತ್ತಮಾಃ ಪ್ರಥಮಾಃ । ಮೇರುಸಾರ್ಣಿರಪಿ । ತಾಪಸಸ್ಯ ಭಗವದವತಾರತ್ವಮ್ । ಚತುರ್ದಶಮನವ ಇತ್ಯಾದಿ ।

ಚತುರ್ದಶ ಮನೂನಾಂ ಪ್ರತ್ಯೇಕಂ ಭುಕ್ತಿಕಾಲಮರ್ಯಾದಾಮಾಹ – ಏಕೈಕಸ್ಯ ಮನೋರಿತಿ । ತದುಕ್ತಂ ತೃತೀಯಸ್ಕಂಧಭಾಗವತೇ –

ಯಾವದ್ದಿನಂ ಭಗವತೋ ಮನೂನ್ ಭುಂಜಂಶ್ಚತುರ್ದಶ ।
ಸ್ವಂ ಸ್ವಂ ಕಾಲಂ ಮನುರ್ಭುಂಕ್ತೇ ಸಾಧಿಕಾಮೇಕಸಪ್ತತಿಮ್ ॥ ಇತಿ ।

ತೃತೀಯತಾತ್ಪರ್ಯೇಽಪಿ – 'ಯುಗೈಕಸಪ್ತತೇರೂರ್ಧ್ವಂ ಸಾರ್ಧಾಷ್ಟದಶಲಕ್ಷಕಂ ವತ್ಸರಾಣಾಂ ಮನೋರ್ಭುಕ್ತಿರಿತಿ । .....

ಚತುರ್ದಶೇತ್ಯುಪಲಕ್ಷಣಮ್ । ಭುಕ್ತಿಕಾಲಾಃ ಪ್ರಲಯಕಾಲಾಶ್ಚ ಮನುವದೇವೇತಿ ದ್ರಷ್ಟವ್ಯಮ್ । ಅತ್ರೈಕಸ್ಮಿನ್ ಮನ್ವಂತರ ಏಕೈಕ ಏವೇಂದ್ರ ಇತಿ ದ್ರಷ್ಟವ್ಯಮ್ । ಏವಮಿಂದ್ರಾದೀನಾಂ ಭವೇದಿತಿ ತಾತ್ಪರ್ಯೋಕ್ತೇರಿತಿ ಭಾವಃ । ಚತುರ್ದಶೇಂದ್ರಾಶ್ಚ । ಯಜ್ಞನಾಮಾ ಭಗವಾನಿಂದ್ರಃ ಸ್ವಾಯಂಭುವಮನ್ವಂತರೇ । ರೋಚನನಾಮ ಇಂದ್ರಃ ಸ್ವಾರೋಚಿಷಮನ್ವಂತರೇ ॥ ಸತ್ರಜನ್ನಾಮಕ ಇಂದ್ರ ಉತ್ತಮಮನ್ವಂತರೇ । ತಾಪಸಮನ್ವಂತರೇ ತಾಪಸನಾಮ ಭಗವಾನ್ ಇಂದ್ರಃ । ರೈವತಮನ್ವಂತರೇ ವಿಭುರಿಂದ್ರಃ । ಚಾಕ್ಷುಷಮನ್ವಂತರೇ ಮಂದ್ರದ್ಯುಮ್ನ ಇಂದ್ರಃ । ವೈವಸ್ವತಮನ್ವಂತರೇ ಪುರಂದರ ಇಂದ್ರಃ । ಸಾವರ್ಣಿಮನ್ವಂತರೇ ಬಲಿರಿಂದ್ರಃ । ದಕ್ಷಸಾವರ್ಣಿಮನ್ವಂತರೇ ಅದ್ಭುತನಾಮೇಂದ್ರಃ । ಬ್ರಹ್ಮಸಾವರ್ಣಿಮನ್ವಂತರೇ ಶಂಭುರಿಂದ್ರಃ । ಧರ್ಮಸಾವರ್ಣಿಮನ್ವಂತರೇ ವೈಧೃತಿನಾಮೇಂದ್ರಃ । ರುದ್ರಸಾವರ್ಣಿಮನ್ವಂತರೇ ಋತುಧಾಮೇಂದ್ರಃ । ದೇವಸಾವರ್ಣಿಮನ್ವಂತರೇ ದಿವಸ್ಪತಿರಿಂದ್ರಃ । ಇಂದ್ರಸಾವರ್ಣಿಮನ್ವಂತರೇ ಶುಚಿರಿಂದ್ರಃ। ಇದಂ ಚಾಷ್ಟಮಸ್ಕಂಧಭಾಗವತ ಏವೋಕ್ತಮನುಸಂಧೇಯಮ್ । ಅತ್ರ ಮಂದ್ರದ್ಯುಮ್ನಃ ಪುರಂದರ ಏವ । ತಸ್ಯ ದ್ವಿವಾರಮಿಂದ್ರಪದಮ್ । ತದುಕ್ತಮೈತರೇಯಭಾಷ್ಯೇ –

'ಇಂದ್ರೋ ಹಿ ಪ್ರಥಮೋ ವಿಷ್ಣುರ್ಯಜ್ಞನಾಮಾ ಜಗತ್ಪತಿಃ ॥
ತತ್ಪ್ರಸಾದಾದಥೇಂದ್ರತ್ವಂ ದ್ವಾದಶಾನ್ಯೇ ಪ್ರಪೇದಿರೇ।
ಪುರಂದರಸ್ತ್ವೇಕ ಏವ ವಾಸುದೇವಪ್ರಸಾದತಃ ॥
ದ್ವಿವಾರಮಿಂದ್ರತಾಮಾಪ ತಸ್ಮಾತ್ ದ್ವಾದಶ ತೇ ಪರೇ।' ಇತಿ ।

ನ ಚ 'ಅತೀತೇಂದ್ರಾ ಏವ ತೇ ವಿಷ್ಣುಷಷ್ಠಾಃ ಪೂರ್ವೇಂದ್ರೋಽಸೌ ಯಜ್ಞನಾಮಾ ರಮೇಶಃ' ಇತಿ ನಿರ್ಣಯೇ । ವಾಯ್ವಾದೀನಾಮಿಂದ್ರಪದೋಕ್ತೇಸ್ತದ್ವಿರೋಧ ಇತಿ ವಾಚ್ಯಮ್ । ವಾಯ್ವಾದೀನಾಂ ರೋಚನಾದಿಶಬ್ದವಾಚ್ಯತ್ವೋಪಪತ್ತೇಃ । ಇಂದ್ರಾದೀನಾಂ ಮನ್ವಂತರಕಾಲ ಏವ ಸ್ವರ್ಗಾಧಿಪತ್ಯಮಿತ್ಯತ್ರ ಛಾಂದೋಗ್ಯಭಾಷ್ಯಂ ಮಾನಮ್ । ಇಂದ್ರಾದಯೋ ಹಿ ಮನ್ವಂತರಮಾತ್ರಂ ತಿಷ್ಠಂತೀತಿ ।

– ಮಧ್ವಸಿದ್ಧಾಂತಸಾರ(ಸೃಷ್ಟಿಪ್ರಕರಣ)

★★★★★